ಜನಪ್ರಿಯ ಪುಸ್ತಕ ಮಾಲೆ

ಪುರಾಣ ಭಾರತ ಕೋಶ

ಯಜ್ಞನಾರಾಯಣ ಉಡುಪ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦ ೦೦೨

ಪುರಾಣ
ಭಾರತ ಕೋಶ

ಸಮಗ್ರ ಭರತವರ್ಷದ ಪುರಾಣ ವಸ್ತು - ವ್ಯಕ್ತಿ ನಿಘಂಟು

ಜನಪ್ರಿಯ ಪುಸ್ತಕ ಮಾಲೆ

ಪುರಾಣ - ಭಾರತ ಕೋಶ

ಸಮಗ್ರ ಭರತವರ್ಷದ ಪುರಾಣ ವಸ್ತು - ವ್ಯಕ್ತಿ ನಿಘಂಟು

ಪಂಡಿತ ಐರೋಡಿ ಯಜ್ಞನಾರಾಯಣ ಉಡುಪ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

PURANA-BHARATHA KOSHA

A reference work on Indian Mythology

Writer

Pandit Irodi Yagnanarayana Udupa

Publisher

Ashok N. Chalavadi

Administrative Officer

Kannada Pustaka Pradhikara

Kannada Bhavan, J.C. Road

Bangalore-560 002.

Cover Page Design

Manjunath S.

First Print : 1974

Second Print : Kannada Pustaka Pradhikara 1994

Third Print : Kannada Pustaka Pradhikara 1997

Fourth Print : Kannada Pustaka Pradhikara 2003

Fifth Print : Kannada Pustaka Pradhikara 2008

Pages : xxiv + 756

***Price :* Rs.200/-**

ISBN No-81-77-13-238-5

Printed at :

PRINT PARK

#1496/4, III^rd Cross, II^nd Main

M.K.K Road, M.Palya,

Srirampuram Post

Bangalore-560 021.

Ph : 080-2342 2838.

*

ಒಂದು ದಿನ ಒಳಕೊಂಡಿತ್ತು ನೋಡಾ

ಪ್ರೊ. ಎಸ್. ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು–ಜನಾಂಗಿಕ ಸಂಸ್ಕೃತಿಯ ಸ್ಮೃತಿಸಂಚಯಗಳಂತಿರುವ ಜನಪದ ಪುರಾಣಕಥೆಗಳನ್ನು ತಲೆಮಾರಿನಿಂದ ತಲೆಮಾರಿಗೆ, ಬಾಯಿಯಿಂದ ಬಾಯಿಗೆ, ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು–ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿಭಂಡಾರವನ್ನು ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತ, ಮನಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯಸಾಧನೆಯನ್ನು ಮೆರೆಯುತ್ತಿರುವ ಗಣಕಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನಜಗತ್ತು.

ಮೌಖಿಕ ಸೃಜನಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ; ಅದೊಂದು ಸೃಜನಪ್ರತಿಭೆ. ಅದು ಭೂತವಲ್ಲ, ವರ್ತಮಾನ, ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ಶಕ್ತಿಯಲ್ಲ, ಅದೊಂದು ಸಮುದಾಯಪ್ರಜ್ಞೆ, ಶಕುಂತಲಾದೇವಿ ಯವರ ಜ್ಞಾನಶಕ್ತಿ ೨x೨=೪ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹುಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರತಿಭೆಯ ಸೃಜನೆಯ ಫಲ. ಎರಡನೆಯದು

ಬುದ್ಧಿಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರಲೋಕದ ಚಲನೆ ಹಲವು ಸವಾಲುಗಳಿಗೆ, ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ಇಂದು ನಾವು ಕೇಳಿಕೊಳ್ಳಬೇಕಾದ ಪ್ರಮುಕ ಪ್ರಶ್ನೆ. ಭಾಷೆಯೆಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕಮಾಧ್ಯಮಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದು ಬಂದ ಕನ್ನಡ ಭಾಷೆ, ಕನ್ನಡ ಬದುಕಿಗೆ ಆತಂಕ, ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಹಿತಮಿತಮೃದು ವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ, ಹಲವು ನಿಟ್ಟಿನ ನುಡಿಸಾಧಕರ ಮಾರ್ಗ ದೇಸಿಗಳ

ಸಮಾಹಿತದಲ್ಲಿ ತನಗೆದುರಾದ ಆತಂಕ, ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದದ್ದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಾಗಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಾಗಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರಲೋಕಕ್ಕಿದೆ. ಆದ್ದರಿಂದ ಅಕ್ಷರಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ, ವೈಜ್ಞಾನಿಕ ವಿಚಾರಗಳಿಗೆ, ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಮಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಮಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪಾರಿಭಾಷಿಕ ಶಬ್ದಸಂಪತ್ತನ್ನು ಸ್ವೀಕರಿಸುತ್ತಾ, ತನ್ಮೂಲಕ

ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡ ಜ್ಞಾನಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾಗುವ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ–

> ಹಿಂದಿನ ಅನಂತವನು ಮುಂದಣ ಅನಂತವನು
> ಒಂದುದಿನ ಒಳಕೊಂಡಿತ್ತು ನೋಡಾ
> ಒಂದುದಿನವನೊಳಕೊಂಡು ಮಾತಾಡುವ ಮಹಾಂತನ
> ಕಂಡು ಬಲ್ಲವರಾರಯ್ಯ
> ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
> ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ, ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣ ದಾರಿಯಲ್ಲಿ ಏಕಸಂಸ್ಕೃತಿ, ಏಕಜೀವನ ಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ,

ಜೀವನವೈವಿಧ್ಯತೆಯ ಬಹುಮುಖಿಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕ ದಾರಿತೋರಿ, ಅತಿರೇಕಕ್ಕೆ ಕಡಿವಾಣವನ್ನು ಹಾಕಿ, ಸಂಸ್ಕೃತಿಯನ್ನು ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪಿಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕ್ಕಿಂತ ಬಹುರೂಪಿಗುಣದ ಪ್ರತಿಭಾಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ, ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಕ್ಷರಲೋಕದ ಮೂರ್ತರೂಪಗಳು; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿ ಭಾವಗಳ ವಿದ್ಯುದಾಲಿಂಗನಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತುದ್ರವ್ಯಗಳು.

ಕನ್ನಡ ಪುಸ್ತಕಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ, ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಾಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನಾಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು

ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

* * *

ಪುರಾಣಗಳು ಜನಾಂಗೀಯ ಬದುಕಿನ ಸ್ಮೃತಿಕೋಶಗಳು. ಆ ಸ್ಮೃತಿಗಳು ಕಥನ ಮಾದರಿಯಲ್ಲಿ ರೂಪಕಗಳ ಆಶಯದಲ್ಲಿ ಅಭಿವ್ಯಕ್ತವಾಗಿರುತ್ತವೆ. ಯಾವುದೇ ಪುರಾಣವು ಮೊದಲಿಗೆ ಮೌಖಿಕ ಪರಂಪರೆಯಲ್ಲಿ ಜನಮನದಲ್ಲಿ ಹುಟ್ಟಿ ಬೆಳೆದಿರುತ್ತವೆ. ಸಹಜವಾಗಿ ಈ ಪುರಾಣಗಳಿಗೆ ಏಕ ಪಠ್ಯವೆಂಬುದು ಇರುವುದಿಲ್ಲ. ಪ್ರತಿಯೊಂದು ಪಠ್ಯವೂ ಸ್ವತಂತ್ರ ಘಟಕವಾದಷ್ಟೇ ಸಮುದಾಯದ ಆಶಯಕ್ಕೆ ಹೊಂದಿಕೊಳ್ಳುವಂತೆ ಬಹು ಪಠ್ಯಕ್ಕೆ ಪೂರಕವಾಗಿಯೂ ಇರುತ್ತದೆ. ಕಾಲಾಂತರದಲ್ಲಿ ಅನೇಕ ಪಠ್ಯಗಳು ಸಂಕಲಿತಗೊಂಡೋ ಸಂಪಾದಿತವಾಗಿಯೋ ಒಂದು ಏಕಪಠ್ಯ ಮಾದರಿಗೆ ಇಳಿಯುತ್ತವೆ. ಇದು ಅಕ್ಷರ ಜಗತ್ತಿನ ವಿದ್ಯಮಾನ.

ಆನಂತರದಲ್ಲಿ ಈ ಏಕಪಠ್ಯವೇ ಬಹುಮಾನ್ಯತೆಗೆ ಒಳಗಾಗುತ್ತ ಪ್ರಮಾಣುವಿನ ಮಾದರಿಯಲ್ಲಿ ಅಂಗೀಕೃತವಾಗುತ್ತದೆ. ರಾಮಾಯಣ ಮಹಾಭಾರತಗಳು ಚರಿತ್ರೆ ಈ ಮಾತುಗಳಿಗೆ ಭಿನ್ನವಾದುದೇನಲ್ಲ. ಮೂಲದಲ್ಲಿ ಮೌಖಿಕ ರೂಪದಲ್ಲಿದ್ದ ರಾಮಾಯಣ ಮಹಾಭಾರತದ ಕತೆಗಳು ಕಾಲಾಂತರದಲ್ಲಿ ವ್ಯಾಸ ವಾಲ್ಮೀಕಿಗಳೆಂಬ ಏಕವ್ಯಕ್ತಿ ರಚನೆಯ ಅಧಿಕೃತತ್ವಕ್ಕೆ ಒಳಗಾಗಿವೆ. ಇಷ್ಟಾಗಿಯೂ ಮೌಖಿಕ ಪರಂಪರೆಯಲ್ಲಿ ರಾಮಾಯಣ ಮಹಾಭಾರತಗಳಿಗೆ ಸಂಬಂಧಿಸಿದಂತೆ ಇಂದಿಗೂ ಬಹುಪಠ್ಯಗಳು ಪ್ರಚಾರದಲ್ಲಿವೆ.

ಮಾನ್ಯ ಐರೋಡಿ ಯಜ್ಞನಾರಾಯಣ ಉಡುಪ ಅವರು ಮಹಾಭಾರತದ ಕಥನ ಪ್ರಪಂಚದಲ್ಲಿ ಬರುವ ವ್ಯಕ್ತಿಗಳು, ಪ್ರಾಣಿ, ಪಕ್ಷಿಗಳು, ನದಿಗಳು ಇತ್ಯಾದಿ ಜೀವ ವಿಶೇಷಗಳಿಗೆ, ಘಟನೆಗಳಿಗೆ ಸಂಬಂಧಿಸಿದಂತೆ ವಿವರಣಾತ್ಮಕ ಪರಿಚಯ ನೀಡಿರುತ್ತಾರೆ. ಇದು ಮಹಾಭಾರತಕ್ಕೆ ಸಂಬಂಧಿಸಿದ ವಿಷಯ ವಿಶ್ವಕೋಶ. ಈ ಮಹಾ ಕಥಾ ಪ್ರಪಂಚದ ಸೂಕ್ಷ್ಮಾತಿಸೂಕ್ಷ್ಮ ವಿವರಗಳು ತಿಳಿಯದವರಿಗೆ ಇದೊಂದು ಅಪರೂಪದ

ಆಕರ ಗ್ರಂಥ. ಭರತ ಖಂಡದ ಜನಮಾನಸದಲ್ಲಿ ಪರಂಪರೆಯ ಉಸಿರಿನಂತೆ ಮಹಾಭಾರತ ಜೀವಂತವಾಗಿದೆ. ಭೌಗೋಳಿಕ ವ್ಯಾಪ್ತಿಯಲ್ಲಿ ಮಹಾಭಾರತದ ಘಟನೆಗಳು ಇಂದಿಗೂ ಸಾಕ್ಷಿ ರೂಪದೊಳಗೆ ಐತಿಹ್ಯ, ನಂಬಿಕೆಗಳ ಮಾದರಿಯಲ್ಲಿ ಸಂಚಲನದಲ್ಲಿವೆ. ಆದರೆ, ಆಧುನಿಕತೆ ಬೆಳೆದಂತೆ ಕಾಲ ಕಳೆದಂತೆ ಮಹಾಭಾರತದ ಕತೆ ಮುಂದಿನ ಜನಾಂಗದಲ್ಲಿ ಪರಂಪರೆಯ ಉಸಿರಾಗಿ ಉಳಿಯುವುದರ ಬಗ್ಗೆ, ಬೆಳೆಯುವುದರ ಬಗ್ಗೆ ನಂಬಿಕೆಯೇ ಕಳೆದುಹೋಗುತ್ತಿದೆ. ಕಾರಣ ಈ ಹೊತ್ತು ಕತೆ ಹೇಳುವ, ಕತೆ ಕೇಳುವ ಪರಂಪರೆ ನಮ್ಮ ನಡುವೆ ಉಳಿದಿಲ್ಲ. ಎಲ್ಲದಕ್ಕೂ ಅಕ್ಷರ ಮಾಧ್ಯಮವನ್ನೇ ಅವಲಂಬಿಸಬೇಕಾಗಿದೆ. ಇದರ ಮಧ್ಯೆ ದೃಶ್ಯ ಮಾಧ್ಯಮಗಳು ಪ್ರಬಲವಾಗುತ್ತಿವೆ. ಇಂಥ ಸನ್ನಿವೇಶಗಳಲ್ಲಿ ಮಹಾಭಾರತದ ಸೂಕ್ಷ್ಮಗಳು ಕಳೆದುಹೋಗದಂತಿರಬೇಕಾದರೆ, ಪುರಾಣ ಭಾರತ ಕೋಶದಂಥ ಕೃತಿಗಳು ಹೆಚ್ಚು ಸಹಾಯಕವಾಗುತ್ತವೆ.

ಈ ಕೃತಿಯನ್ನು ಪ್ರಾಧಿಕಾರವು ಈ ಹಿಂದೆಯೇ ೩ ಬಾರಿ ಮರು ಮುದ್ರಣ ಮಾಡಿದ್ದು, ಈ ಕೃತಿಗೆ ಇಂದಿಗೂ ಅಪಾರ ಬೇಡಿಕೆಯಿರುವುದು ಆಶಾದಾಯಕ ಬೆಳವಣಿಗೆಯೆಂದು ಭಾವಿಸುತ್ತೇನೆ. ಇದರ ಮರು ಮುದ್ರಣಕ್ಕೆ ಅನುವು ಮಾಡಿಕೊಟ್ಟ ಶ್ರೀಮತಿ ರುಕ್ಮಿಣಿ ಯಜ್ಞನಾರಾಯಣ ಉಡುಪ ಅವರಿಗೆ ಪ್ರಾಧಿಕಾರದ ಆತ್ಮೀಯ ಕೃತಜ್ಞತೆಗಳು.

ಪ್ರೊ।ಎಸ್.ಜಿ.ಸಿದ್ಧರಾಮಯ್ಯ

ಬೆಂಗಳೂರು ಅಧ್ಯಕ್ಷರು

ದಿನಾಂಕ :೧೧-೦೧-೨೦೦೮

■

ಅಕ್ಷರ ಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್ ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ. ಈ ನಿಧಿಯ ರಕ್ಷಣೆ-ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶ್ಯವಲ್ಲ. ಪ್ರಕಟಣೆಯ ಜೊತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯವಲ್ಲವೆ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ-ಗ್ರಾಮಾಂತರಗಳಿಗೂ ತಾಲ್ಲೂಕು - ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು

ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ 'ಕನ್ನಡ ಪುಸ್ತಕ ಪ್ರಾಧಿಕಾರ' ಎಂಬ ಮಾತಿಗೆ ಬೆಲೆ ಬರುತ್ತದೆ; ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು!

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು! ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು' ಎಂದು ಬಸವಣ್ಣನವರು ಹೇಳಿದ್ದುಂಟು! ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಮಗೆ ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ನಾವಿದ್ದೇವೆ. ಒಂದು ಕಡೆ ಇಪ್ಪತ್ತನೆಯ ಶತಮಾನ ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ ಕಾಲವೂ ಆಗಿದೆ! ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲ! ಅನೇಕ ತಳವರ್ಗದ ಜನಸ್ತಾನಗಳು ಮೊದಲಬಾರಿಗೆ ಅಕ್ಷರಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೊ, ರೂಪಕಗಳಲ್ಲೊ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ-ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದುವು. **1820**ರಲ್ಲಿ ಅತ್ಯುತ್ತಮ ತಾಂತ್ರಿಕ ಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆ್ಯಡಂ ವರದಿಗಳು ತಿಳಿಸುತ್ತವೆ. ಆದರೆ ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ, ಜ್ಞಾನ ಸಂಪತ್ತನ್ನು - ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ, ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೊ ಬರುವ ಕಾಲ ಈ ನಿರ್ವಾತವನ್ನು ತುಂಬುವ

ಹಂಬಲವನ್ನು ಹೊತ್ತಿರುವುದೆಂದೂ ತಿಳಿಯುವ ಕ್ಲೈಬ್ಯದಲ್ಲಿ ನಾವು ಮುಳುಗಬೇಕಾಗುತ್ತದೆ! ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿ ಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. ನಮ್ಮ ಹೊಸ ಓದು, ಹೊಸ ನುಡಿಗಟ್ಟು, ಹೊಸ ಸಂವೇದನೆಗಳು ಸಹಸ್ರಮಾನದ ಉದಯಕ್ಕೆ ಸಜ್ಜುಗೊಳ್ಳುವ ಅಗತ್ಯವಿದೆಯೆಂದು ಪುಸ್ತಕ ಪ್ರಾಧಿಕಾರವು ತಿಳಿಯುತ್ತದೆ!

ದಿ|| ಪಂಡಿತ ಐರೋಡಿ ಯಜ್ಞನಾರಾಯಣ ಉಡುಪರು ದಕ್ಷಿಣಕನ್ನಡ ಕಂಡ ಅಪುರೂಪ ವಿದ್ವಾಂಸರಲ್ಲಿ ಒಬ್ಬರು. ಅವರು ಪ್ರಾಚೀನ ಪುರಾಣಗಳ, ಭಾರತ-ರಾಮಾಯಣಗಳ ಅನುಸಂಧಾನವನ್ನು ತಮ್ಮ ಜೀವಮಾನವಿಡೀ ಮಾಡಿದವರು. ಅವರು ಪುರಾಣಗಳಾಧ್ಯಯನಕ್ಕೆ ತಮ್ಮನ್ನೆ ತೊಡಗಿಸಿಕೊಂಡವರಾಗಿದ್ದರು. ಅವರ 'ಪುರಾಣ-ಭಾರತಕೋಶ'ವು ಪ್ರಕಟವಾದಂದಿನಿಂದ ಇಂದಿನವರೆಗೂ ವಿದ್ವಾಂಸರ, ಆಸಕ್ತರ, ಶಿಕ್ಷಕರ, ವಿದ್ಯಾರ್ಥಿಗಳ ಜ್ಞಾನ ಕುತೂಹಲಿಗಳ ಕೈಪಿಡಿಯಾಗಿಯೇ ಉಳಿದಿದೆ. ಇದು ಪುಸ್ತಕ ಪ್ರಾಧಿಕಾರದ ಮೂಲಕ ಮೂರನೆಯ ಮುದ್ರಣವಾಗಿ ಬೆಳಕು ಕಾಣುತ್ತಿದೆ ಹೀಗೆ ಬೆಳಕು ಕಾಣಲು ಐರೋಡಿ ಕುಟುಂಬ ವರ್ಗದವರು ಕಾರಣರಾಗಿದ್ದಾರೆ. ಅವರಿಗೆ ಪುಸ್ತಕ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳು. ಸದಸ್ಯ ಮಿತ್ರರು ಪ್ರಕಟಣೆಗೆ ಒಪ್ಪಿಗೆಯನ್ನು ಸೂಚಿಸಿದ್ದಾರೆ.

ಪ್ರೊ. ಎಲ್. ಎಸ್. ಶೇಷಗಿರಿರಾಯರು ಪುಸ್ತಕ ಪ್ರಾಧಿಕಾರದ ಪ್ರಥಮಾಧ್ಯಕ್ಷರಾಗಿದ್ದಾಗ ಇದು ಎರಡನೆಯ ಮುದ್ರಣ ಕಂಡಿತು. ಮೂರನೆಯ ಮುದ್ರಣ ಪ್ರೊ. ನೆಲಮನೆ ದೇವೇಗೌಡರ ಕಾಲದಲ್ಲಿ ಬೆಳಕು ಕಂಡಿತು. ಈಗ ನಾಲ್ಕನೆಯ ಮುದ್ರಣವಾಗಿ ಈ ಮಹಾಸಂಪುಟವು ಹೊರಬರುತ್ತಿದೆ. ಕನ್ನಡ ಜನದ ಜ್ಞಾನಕುತೂಹಲಕ್ಕೆ ಈ ಮಹಾ ಸಂಪುಟವು ಕಾರಣವಾಗಲೆಂದು ಆಶಿಸುತ್ತೇನೆ. ಅಂದವಾಗಿ ಅಲ್ಪ ಕಾಲದಲ್ಲೆ ಮುದ್ರಿಸಿ ಕೊಟ್ಟ ಮುದ್ರಣಾಲಯ ಬಂಧುಗಳಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಲೇಖಕನ ವಿನಂತಿ

ಭಾರತ ಸಂಸ್ಕೃತಿಯ ದೀರ್ಘಾಯುಷ್ಯಕ್ಕೆ ಪುರಾಣಪುರುಷರ ವಿಚಾರ ಪ್ರಸಾರವು ಒಂದು ಪ್ರಬಲ ಸಾಧನ. ಭಾರತೀಯ ಸಂಸ್ಕೃತಿಯು ಜಗತ್ತಿನಲ್ಲೇ ಉತ್ತಮವಾದದ್ದು - ಉನ್ನತವಾದದ್ದೆಂದು ಎತ್ತಿ ಹಿಡಿದು ಸಾರಿದ ನಮ್ಮ ವರ ಮಧುರ-ಕಟು ಜೀವನಗಳು, ವ್ಯಾಪಾರ ವ್ಯವಹಾರಗಳು, ಪ್ರತಿಭಾ ಪ್ರವಾಸಗಳು, ಸಾಹಿತ್ಯಕಲಾ ಸೇವೆಗಳು - ಇವುಗಳನ್ನರಿಯುವ ಮೊದಲು ಅವರ ಸಂಸ್ಕಾರಕ್ಕೆ ಪ್ರೋತ್ಸಾಹಕರಾದ ರಾಜವರೇಣ್ಯರ, ಋಷಿಪುಂಗವರ ಜೀವನದ ಸಿಹಿ-ಕಹಿ ತುಣುಕುಗಳ ರಸಾನುಭವವು ಭಾರತೀಯರಾದ ನಮಗಿರಬೇಕೆಂಬ ಸದ್ಧ್ಯೇಯದಿಂದ ಈ ಬೃಹದ್ಗ್ರಂಥವು ಬರೆಯಲ್ಪಟ್ಟಿತು. ಯಕ್ಷಗಾನ ಸಾಹಿತ್ಯಕ್ಕೆ ಪೋಷಕರಾದ ನಮ್ಮ ಪುರಾಣಪುರುಷರ ಪರಿಜ್ಞಾನವು ಜನತೆಯಲ್ಲಿ ಹೆಚ್ಚಬೇಕೆಂಬ ಉಚ್ಚಧ್ಯೇಯದಿಂದ ಈ ಗ್ರಂಥವು ರೂಪಿತವಾಯಿತು.

ಶಿಕ್ಷಣ ಪ್ರಪಂಚದಲ್ಲಿ ಕನ್ನಡ ಮತ್ತು ಇತರ ಅಧ್ಯಾಪಕರಿಗೆ ಪುರಾಣವ್ಯಕ್ತಿಗಳ ಜ್ಞಾನವು ಹೆಚ್ಚಿ ಮೆಚ್ಚುಗೆಯಾಗಲಿ - ಎಂಬ ಧ್ಯೇಯದಿಂದ ಈ ಸದ್ಗ್ರಂಥವು ಜನ್ಮವೆತ್ತಿತು. ಹಳೆಯ ಕಾಲದಲ್ಲಿ ಹೊನ್ನಿನಂಥವರು ಹಲವರಿದ್ದರು-ಎಂದು ಜನತೆಗೆ ಮನದಟ್ಟು ಮಾಡುವುದು ಇದರ ಹುಟ್ಟಿನ ಹಿರಿಯಾಸೆ.

ವಿದ್ಯಾರ್ಥಿಗಳಿಗೆ ಗೂಢವಾಗಿದ್ದ, ಅಧ್ಯಾಪಕರಿಗೆ ಸಮಸ್ಯೆಗಳಾಗಿದ್ದ ಮಹಾಭಾರತದ ಪುರುಷಾಮೃಗ, ನೂರ್ವರು ಕೌರವರ ಪರಿವಿಡಿ, ಶಾಲ್ಮಲಿ, ಶಕ, ಕ್ರೌಂಚ ಮೊದಲಾದ ದ್ವೀಪಗಳ ಪರಿಚಯ, ಎಷ್ಟೋ ಮಂದಿ ಸಮಸ್ಯಾ ಪುರುಷರ ಜೀವನದ ಲಘು ಚಿತ್ರ, ಕೆಲವು ಹಬ್ಬಗಳ ತಿಳಿವಳಿಕೆ, ಕ್ಷೇತ್ರಗಳ ಸ್ಪಷ್ಟ ಧೋರಣೆ, ಸುಂದರ ನದಿಗಳ ಲಲಿತವರ್ಣನೆ - ಇವು ಈ ಅಪೂರ್ವ ಗ್ರಂಥದ ಬೆಲೆಬಾಳುವ ವಿಚಾರಗಳು.

ಈ ಪುಸ್ತಕವು ಎಡೆಬಿಡದ ಹತ್ತು ವರ್ಷಗಳ ಪ್ರಯತ್ನದ ಫಲವಾಗಿ ರೂಪಿತಗೊಂಡಿದೆ. ಇದನ್ನು ಕಂಡು ಗೊಡ್ಡು ಪುರಾಣ ವ್ಯಕ್ತಿಗಳ ವಿಚಾರ ಸಂಗ್ರಹ - ಎಂದು ಗಹಗಹಿಸಿ ನಕ್ಕವರು ಕೆಲವರು; ಮುಗುಳುನಗುತ್ತಾ ಮುಖ ಸೊಟ್ಟಮಾಡಿಕೊಂಡವರು ಕೆಲವರು. ಇದು ತಂದೆ ತಾಯಿಗಳಿಗೂ ತಲೆಬಾಗದ ಭೀಭತ್ಸ ಭೀಷಣಯುಗ! ಪುರಾಣಪುರುಷರಿಗೆ ಅಗೌರವವೇ ಭೂಷಣವೆನ್ನುವ ನಾಸ್ತಿಕ ಚರ್ಚಾಯುಗ!

ರತ್ನಗಳಿಗೆ ಮರ್ಕಟಗಳ ಪ್ರಪಂಚದಲ್ಲಿ ಬೆಲೆ-ಗೌರವ ಸಲ್ಲದಿದ್ದರೆ ರತ್ನ ಪರೀಕ್ಷಕರಾದ ವಿಚಕ್ಷಣರು ಮಾನವ ಪ್ರಪಂಚದಲ್ಲಿ ಬೆಲೆ ಘೋಷಿಸಲಾರರೆ? ಶ್ರೀ ಅಮ್ಮೆಂಬಳ ಶಂಕರನಾರಾಯಣ ನಾವಡರು ಇದನ್ನು ಸಂಪೂರ್ಣ ಬರೆಯಿರಿ. ಕನ್ನಡಿಗರಿಗೆ ಇದು ಇಂದು ಬೇಕಾದ ಗ್ರಂಥ ಎಂದು ಲೇಖಕನ ಸಪ್ಪೆಬಿದ್ದ ಹೃದಯಕ್ಕೆ ಸಂತಸವನ್ನುಂಟುಮಾಡಿದರು. ಇಂದಿನ ಪ್ರಸಿದ್ಧ ತರುಣ ಲೇಖಕರಲ್ಲೊಬ್ಬರಾದ ಶ್ರೀ ವಿಶುಕುಮಾರರು ತಮಗೆ ಪುರಾಣ ವಿಚಾರಗಳ ಕುರಿತು ಬಂದ ಸಂದೇಹವನ್ನು 'ನನ್ನ ಪುರಾಣ-ಭಾರತಕೋಶ'ವು ಪರಿಹರಿಸಿತೆಂಬ ಹರ್ಷದಿಂದ ನನ್ನ ಗ್ರಂಥ ಮತ್ತು ನನ್ನ ಪರಿಚಯವನ್ನು ೧೯.೯.೭೧ರ 'ಉದಯವಾಣಿ'ಯಲ್ಲಿ ಸಾಹಿತ್ಯ ಪ್ರಪಂಚಕ್ಕೆ ಮಾಡಿಸಿ, ನನ್ನ ಬೆನ್ನನ್ನು ತಟ್ಟಿದರು. ಮುಂಬಯಿಯ ಶ್ರೀ ಸಂತೋಷಕುಮಾರ ಗುಲ್ವಾಡಿಯವರು ನನ್ನ ಬಿಡಾರಕ್ಕೆ ಬಂದಾಗ - 'ಇದನ್ನು ಸಂಪೂರ್ಣ ಬರೆಯಲೇಬೇಕು' ಎಂದು ನನ್ನನ್ನು ಒತ್ತಾಯಿಸಿದರು. ಮಂಗಳ ಗಂಗೋತ್ರಿಯ ಪ್ರಿನ್ಸಿಪಾಲರಾದ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ನನ್ನ ಈ ಕಾರ್ಯವನ್ನು ಕಂಡಾಗ ನನ್ನೊಡನೆ - 'ಮುದ್ರಣ ಪ್ರತಿಯನ್ನು ಬೇಗ ಸಿದ್ಧಗೊಳಿಸಿ' ಎಂದು ಹುರಿದುಂಬಿಸಿದರು. ಶ್ರೀ ಶಿವರಾಮಕಾರಂತರಿಗೆ ಈ ಗ್ರಂಥವನ್ನು ತೋರಿಸಿ ಮುನ್ನುಡಿಯೊಂದನ್ನು ನಾನು ಯಾಚಿಸಿದಾಗ ಅವರು ತಲೆಯಲ್ಲಾಡಿಸಿ ತಮ್ಮ ಸಮ್ಮತಿಯನ್ನಿತ್ತರು. ಇವರೆಲ್ಲರ ಪ್ರೋತ್ಸಾಹ-ಬೆಂಬಲದಿಂದ 'ಪುರಾಣ-ಭಾರತ ಕೋಶ' ಮುದ್ರಣ ಕಂಡಿದೆ. ಮುಂದಿನ ಸಹಾಯವು ಸಂಪೂರ್ಣವಾಗಿ ವಾಚಕರ ಕೈಯಲ್ಲಿದೆ.

ಈ ಗ್ರಂಥದಲ್ಲಿ ಹೆಚ್ಚಿನ ಪುರಾಣಗಳ, ರಾಮಾಯಣ, ಭಾರತ, ಹರಿವಂಶ ಮೊದಲಾದ ಗ್ರಂಥಗಳ ವ್ಯಕ್ತಿ ಮೊದಲಾದವುಗಳ ಸಂಗ್ರಹವೇ ಈ

ಗ್ರಂಥವಾಗಿರುವುದರಿಂದಲೂ ಇದಕ್ಕೆ 'ಪುರಾಣ-ಭಾರತ ಕೋಶ'ವೆಂದು ನಾಮಕರಣ ಮಾಡಿದ್ದೇನೆ.

'ಕೋಶ'ವೆಂಬ ಶಬ್ದರೂಪವು ಕೆಲವರಿಗೆ ತಪ್ಪಾಗಿ ಕಾಣಿಸಬಹುದು. ಆದರೆ, ಪ್ರಸಿದ್ಧ ನಿಘಂಟುಕಾರನಾದ ಅಮರಸಿಂಹನು ತನ್ನ ಗ್ರಂಥಕ್ಕೆ 'ಅಮರ ಕೋಷ' ಎಂದೇ ನಾಮಕರಣ ಮಾಡಿದ್ದಾನೆ. ಮತ್ತೊಬ್ಬ ನಿಘಂಟುಕಾರನಾದ ಶಾಶ್ವತನು 'ಕೋಶ'ವೆಂಬ ರೂಪವನ್ನು ಪ್ರಯೋಗಿಸಿದ್ದಾನೆ. ಈ ಎರಡು ರೂಪಗಳೂ ಶುದ್ಧ; ಅಮರಸಿಂಹನೇ ನನಗೆ ಗೌರವಾರ್ಹ ವ್ಯಕ್ತಿಯಾದರೂ ಇಂದು ವಿದ್ವಾಂಸರಲ್ಲೂ ಜನಸಾಮಾನ್ಯರಲ್ಲೂ ವಿಶೇಷವಾಗಿ 'ಕೋಶ' ಎಂಬ ಶಬ್ದವೇ ಬಳಕೆಯಲ್ಲಿರುವುದರಿಂದ 'ಕೋಶ'ರೂಪವನ್ನೇ ಬಳಸಿದ್ದೇನೆ.

'ಪುರಾಣನಾಮ ಚೂಡಾಮಣಿ'ಯು ನನಗೆ ಸಹಾಯಕ ಗ್ರಂಥವಾದುದರಿಂದ ನಾನು ಆಗ ಗ್ರಂಥದ ಲೇಖಕರಿಗೆ ಚಿರಋಣಿ. ಆ ಗ್ರಂಥಕ್ಕಿಂತ ಇದು ದೊಡ್ಡದು; ವಿಷಯ ನಿರೂಪಣೆಯ ಮಾರ್ಗದಲ್ಲಿ ವ್ಯತ್ಯಾಸವಿದೆ - ಇವು ಮರೆಯತಕ್ಕುವಲ್ಲ.

ಈ ಮುದ್ರಣದ ಮಹಾ ಸಂಪುಟವನ್ನು ತಯಾರಿಸುವುದರಲ್ಲಿ ನನ್ನ ಮಕ್ಕಳು ಸಂಪೂರ್ಣ ನೆರವಾಗಿದ್ದಾರೆಂದು ತಿಳಿಸಲು ನನಗೆ ಸಂತೋಷವಾಗುತ್ತದೆ.

ಇತಿ,

ಕುಂದಾಪುರ — ವಿದ್ವಜ್ಜನ ವಿಧೇಯ,

ಮೇ. ೨೫, ೧೯೭೭ — **ಯ.ನಾ. ಉಡುಪ**

ಮುನ್ನುಡಿ

ಪ್ರಥಮ ಮುದ್ರಣಕ್ಕೆ ಬರೆದುದು

ಈ ವಿಶಿಷ್ಟ ಗ್ರಂಥಕ್ಕೆ ಮುನ್ನುಡಿಯನ್ನು ಬರೆಯಬಹುದಾದ ಹಕ್ಕು ಇಲ್ಲವೆ ಪಾಂಡಿತ್ಯ ನನಗಿಲ್ಲ. ಇದನ್ನು ದೀರ್ಘಕಾಲದ ಶ್ರಮದಿಂದ ತಮ್ಮ ಆಯುಷ್ಯದ ಕಾಣಿಕೆ ಎಂಬಂತೆ ಕನ್ನಡ ಜನದ ಮುಂದಕ್ಕೆ ಒಪ್ಪಿಸುತ್ತಿರುವ ಶ್ರೀ ಯಜ್ಞನಾರಾಯಣ ಉಡುಪರು, ನನ್ನಲ್ಲಿ ಕನ್ನಡದ ಅಭಿರುಚಿಯನ್ನು ಬೆಳೆಯಿಸಲು ಕಾರಣರಾದ ಐರೋಡಿ ಶಿವರಾಮಯ್ಯನವರ ಮಕ್ಕಳು. ಅದೊಂದೇ ಕಾರಣದಿಂದ ನಾನು ನಾಲ್ಕುಮಾತುಗಳನ್ನು ಮುನ್ನುಡಿಯ ರೂಪದಲ್ಲಿ ಬರೆಯಲು ಒಪ್ಪಿದೆ.

ಈ ಬರೆಹ ಶ್ರೀ ಉಡುಪರ ಅವಿಶ್ರಾಂತ ಶ್ರಮದ ಫಲ ಎಂದೆ. ಅವರ ತಂದೆಯ ಹೆಜ್ಜೆಯ ಜಾಡಿನಲ್ಲಿಯೇ ಇವರು ಸಹ ನಡೆದರು. ಅವರಂತೆ ತಮ್ಮ ಕೈಗೆ ಎಟುಕಿದ ಹಳಗನ್ನಡ ಸಾಹಿತ್ಯವನ್ನು ತಿರುವಿ ಹಾಕಿದವರು. ದೀರ್ಘಕಾಲದ ಉಪಾಧ್ಯಾಯ ವೃತ್ತಿಯನ್ನು ಅವರ ತಂದೆಯಂತೆಯೇ ನಡೆಯಿಸಿದವರು. ಹೀಗಾಗಿ, ಕನ್ನಡ ವೃತ್ತಿಯನ್ನು ಅವರ ತಂದೆಯಂತೆಯೇ ನಡೆಸಿದವರು. ಹೀಗಾಗಿ ಕನ್ನಡ ಸಾಹಿತ್ಯದಲ್ಲಿರುವ ಅನೇಕ ಹೋಲಿಕೆಗಳಲ್ಲಿ. ನೇರಾದ ಕಥನಗಳಲ್ಲಿ - ನಮ್ಮ ಪುರಾಣ, ಇತಿಹಾಸಾದಿ ಗ್ರಂಥಗಳಲ್ಲಿ ಬರುವ ಅನೇಕ ಅರಸರ, ದೇವಾನುದೇವತೆಗಳ, ಇನ್ನಿತರ, ಹೆಸರುಗಳನ್ನು ಓದಿ ಅವರ ಹಿಂದುಮುಂದನ್ನು ತಿಳಿದವರು. ಆ ವ್ಯಕ್ತಿಗಳು ಯಾರು ಏನು ಎಂಬ ವಿಷಯ ಸಾಮಾನ್ಯ ಓದುಗರಿಗೆ ತಿಳಿಯದೆ ಹೋಗುತ್ತದೆ. ಈ ಕಾರಣದಿಂದ ಭಾರತೀಯ ಪುರಾಣಪುರುಷರ ಒಂದು ನಾಮಕೋಶ ಅನಿವಾರ್ಯವಾಗುತ್ತದೆ.

ಹಿಂದೊಮ್ಮೆ ಮೈಸೂರು ವಿಶ್ವವಿದ್ಯಾನಿಲಯವು 'ಕನ್ನಡ ಗ್ರಂಥಮಾಲೆ' ಯಲ್ಲಿ 'ಪುರಾಣನಾಮ ಚೂಡಾಮಣಿ' ಎಂಬ ಹೆಸರಿನಿಂದ ಅಂಥ ಒಂದು ಗ್ರಂಥವನ್ನು ಪ್ರಕಟಿಸಿದ್ದುಂಟು. ಹಾಗಿದ್ದರೆ - ಈ ಬರಹ ಪುನರಾವೃತ್ತಿ

ಯಾಗಲಿಲ್ಲವೇ-ಎನ್ನಬಹುದು ಕೆಲವರು. ನಿಜ; ಪುರಾಣೇತಿಹಾಸಗಳ, ವೇದೋಪನಿಷತ್ತುಗಳ, ಖ್ಯಾತನಾಮರ ಹೆಸರುಗಳು ಒಂದು ಕೋಶದಲ್ಲಿ ಬಂದ ಮಾತ್ರದಿಂದ - ಅವರನ್ನು ಕುರಿತು ತಿಳಿಸುವ ವಿವರಣೆಗಳು ಒಂದೇ ಆಗಬೇಕಿಲ್ಲ. ಹೇಳುವ ವಿಷಯಗಳಲ್ಲಿನ ಒತ್ತು ಒಂದೇ ತೆರನಾಗಿರಬೇಕಾಗಿಲ್ಲ. ಈ ವಸ್ತು ವಿವರಗಳು ಗ್ರಂಥಕರ್ತರು ಆಕರವಾಗಿರಿಸಿಕೊಂಡ ಗ್ರಂಥಗಳನ್ನು ಹೊಂದಿರುತ್ತವೆ. ದೊರಕಿದ ವಿಷಯಗಳ ಮುಖ್ಯಾಮುಖ್ಯತೆಯನ್ನು ತೂಗುವ ಮನಸ್ಸನ್ನು ಹೊಂದಿರುತ್ತದೆ; ತಿಳಿಸುವ ರೀತಿಯೂ ಕೊಡುವ ಆಧಾರಗಳೂ ಅಷ್ಟೇ ಮುಖ್ಯವಾಗುತ್ತವೆ.

ಹಿಂದೆ ಮೊನಿಯರ್ ವಿಲಿಯಮ್ಸ್ ಮಹಾಶಯ - ಸಂಸ್ಕೃತ ಆಕರಗಳಿಂದ ಈ ಬಗೆಯ ವಿವರಗಳನ್ನು ತನ್ನ ಶಬ್ದಕೋಶವೊಂದರಲ್ಲಿ ಸೊಗಸಾಗಿ ಕೊಟ್ಟಿದ್ದ. ಆ ರೀತಿಯ ಶ್ರಮ, ಬಂದ ವಿಷಯಗಳನ್ನು ಸ್ವತಂತ್ರ ರೀತಿಯಿಂದ ತಿಳಿಸುವ ಸಾಹಸ, ಸಂಶೋಧನೆಗಳು ಮತ್ತೂ ಮುಂದುವರಿಯಬೇಕಾಗಿದೆ. ಅದನ್ನು ಒಬ್ಬಂಟಿಗರಾಗಿ ಶ್ರೀ ಯಜ್ಞ ನಾರಾಯಣ ಉಡುಪರು ಮಾಡಿರುವುದು ಸ್ತುತ್ಯ ಕಾರ್ಯ.

ಆದರೆ, ಇಂಥ ಒಂದು ಬೃಹತ್ ಹೊತ್ತಿಗೆಯನ್ನು ಪ್ರಕಟಿಸುವ ಸಾಹಸ ಅವರ ಶಕ್ತಿಗೆ ಮೀರಿದ್ದು. ಮಾಡಿದ ದುಡಿಮೆ ಪುಸ್ತಕ ರೂಪದಲ್ಲಿ ಅಚ್ಚಾಗದೆ ಹೋದರೆ ಒಬ್ಬನ ಆಯುರ್ಮಾನದ ದುಡಿಮೆಯೇ ವ್ಯರ್ಥವಾದಂತೆ. ಹಾಗಾಗದಂತೆ ನೋಡಿಕೊಳ್ಳಲು ಮೈಸೂರಿನ ಗೀತಾ ಬುಕ್ ಹೌಸ್ ಸಂಸ್ಥೆಯವರು ಪ್ರಕಟಣ ಕಾರ್ಯಕ್ಕೆ ಮುಂದೆ ಬಂದುದು ನನಗೆ ತುಂಬ ಸಂತೋಷವನ್ನು ಕೊಟ್ಟಿದೆ.

ಶ್ರೀ ಯಜ್ಞನಾರಾಯಣ ಉಡುಪರು ತಮ್ಮ ಮುಪ್ಪಿನಲ್ಲಿ, ದೇಹಾಸ್ವಸ್ಥ್ಯದ ಸ್ಥಿತಿಯಲ್ಲಿ ತಮ್ಮ ಶ್ರಮ ಸಾರ್ಥಕವಾಯಿತಲ್ಲ - ಎಂಬ ಸಂತಸ ತಾಳುವಂತಾದುದು ನನಗಂತೂ ಬಲು ಹೆಚ್ಚಿನ ಆನಂದ ಕೊಟ್ಟಿದೆ.

ಅವರ ದುಡಿಮೆಯ ಫಲ ಕನ್ನಡ ನಾಡಿನ ವಿದ್ವಜ್ಜನರಿಗೆ ಒಂದಿಷ್ಟಾದರೂ ಬೆಳಕನ್ನು ಕೊಡಲಿ - ಎಂದು ಹಾರೈಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಆಗಸ್ಟ್ ೩, ೧೯೭೪ ಇತಿ
ಸಾಲಿಗ್ರಾಮ, ದಕ್ಷಿಣ ಕನ್ನಡ **ಶಿವರಾಮ ಕಾರಂತ**

ಸಂಕ್ಷೇಪ ಪದಸೂಚಿ

ಅಮರಪ್ರ - ಅಮರಪ್ರಕಾಂಡ

ಅದ್ಭು. ರಾಮಾ - ಅದ್ಭುತ ರಾಮಾಯಣ

ಅಧ್ಯಾ. ರಾಮಾ. - ಅಧ್ಯಾತ್ಮ ರಾಮಾಯಣ

ಅ.ಶಾಕುಂ. - ಅಭಿಜ್ಞಾನ ಶಾಕುಂತಲ

ಆದಿ.ಹೃ - ಆದಿತ್ಯ ಹೃದಯ

ಆನಂ.ರಾ. - ಆನಂದ ರಾಮಾಯಣ

ಋ - ಋಗ್ವೇದ

ಐ.ಬ್ರಾ. - ಐತರೇಯ ಬ್ರಾಹ್ಮಣ

ಕ.ಕೋ. - ಕಸ್ತೂರಿ ಕೋಶ

ಕನ್ಯ.ಪು. - ಕನ್ಯಕಾ ಪುರಾಣ

ಕಾ.ಮ - ಕಾರ್ತಿಕ ಮಹಾತ್ಮೆ

ಕಾಳಿ. ಪು. - ಕಾಳಿಕಾ ಪುರಾಣ

ಕುಂ. ಮ. - ಕುಂಭಕಾಸಿ ಮಹಾತ್ಮೆ

ಕು.ವ್ಯಾ.ಭಾ - ಕುಮಾರವ್ಯಾಸ ಭಾರತ

ಕೃ.ಯ. - ಕೃಷ್ಣಯಜುರ್ವೇದ

ಕೊ. ಕ್ಷೇತ್ರ.ಮ. - ಕೊಲ್ಲೂರು ಕ್ಷೇತ್ರ ಮಹಾತ್ಮೆ

ಕ್ಷೇತ್ರ.ದ. - ಕ್ಷೇತ್ರದರ್ಶನ

ಗರುಡ.ಪು. - ಗರುಡ ಪುರಾಣ

ಗಾ.ಕ. - ಗಾಯತ್ರೀ ಕವಚ

ಗೋ. ಮ. - ಗೋಕರ್ಣ ಮಹಾತ್ಮೆ ಅಥವಾ ಗೋಕರ್ಣ ಸ್ಥಳಪುರಾಣ

ಚಂ.ವಂ. - ಚಂದ್ರವಂಶ

ಜೈ. ಭಾ. - ಜೈಮಿನಿ ಭಾರತ

ಜೈ. ರಾಮಾ - ಜೈನ ರಾಮಾಯಣ

ತಂತ್ರ - ತಂತ್ರರಾಜ

ತುರಂ. ಭಾ. - ತುರಂಗ ಭಾರತ

ತು. ರಾ. - ತುಲಸೀ ರಾಮಾಯಣ

ತೈ. ಬ್ರಾ. - ತೈತ್ತರೀಯ ಬ್ರಾಹ್ಮಣ

ತ್ರಿ. ಶೇ. - ತ್ರಿಕಾಂಡ ಶೇಷ

ದ.ಕ.ಇ. - ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ

ದೇವೀಭಾ. - ದೇವೀಭಾಗವತ

ನಾ.ಶ. - ನಾನಾರ್ಥ ಶಬ್ದಕೋಶ

ಪದ್ಮಪು. - ಪದ್ಮ ಪುರಾಣ

ಪಂ. ಭಾ. - ಪಂಪ ಭಾರತ

ಬುದ್ಧ. ಚ. - ಬುದ್ಧ ಚರಿತೆ

ಬೃ.ನಾ.ಪು. - ಬೃಹನ್ನಾರದೀಯ ಪುರಾಣ

ಬ್ರ.ಖಂ. - ಬ್ರಹ್ಮೋತ್ತರಖಂಡ

ಬ್ರ. ಪು. - ಬ್ರಹ್ಮ ಪುರಾಣ

ಬ್ರ. ವೈ. - ಬ್ರಹ್ಮ ವೈವರ್ತ ಪುರಾಣ

ಬ್ರಹ್ಮಾ. ಪು. - ಬ್ರಹ್ಮಾಂಡ ಪುರಾಣ

ಭಗ. ಸಾ. - ಭಗವದ್ಗೀತಾಸಾರ ವಿಚಾರ

ಭವಿ. ಪು. - ಭವಿಷ್ಯ ಪುರಾಣ

ಭ.ಸಾ.ವಿ. - ಭಗವತ್ ಸಾಕ್ಷಾತ್ಕಾರ ವಿಚಾರ

ಭಾಗ. - ಭಾಗವತ

ಭಾಗ. ತಾ.ನಿ. - ಭಾಗವತ ತಾತ್ಪರ್ಯ ನಿರ್ಣಯ

ಭಾ.ಸ್ಮೃ. - ಭಾರದ್ವಾಜ ಸ್ಮೃತಿ

ಮ. - ಮಹಾಭಾರತ

ಅನು. - ಅನುಶಾಸನ ಪರ್ವ

ಅರ. - ಅರಣ್ಯ ಪರ್ವ

ಅಶ್ವ. - ಅಶ್ವಮೇಧಯಾಗ ಪರ್ವ

ಆ - ಆದಿಪರ್ವ
ಆಶ್ರ. - ಆಶ್ರಮವಾಸಿ ಪರ್ವ
ಉ. - ಉದ್ಯೋಗಪರ್ವ
ಕ. - ಕರ್ಣಪರ್ವ
ದ್ರೋ. - ದ್ರೋಣಪರ್ವ
ಭೀ. - ಭೀಷ್ಮಪರ್ವ
ಮಹಾಪ್ರ. - ಮಹಾಪ್ರಸ್ಥಾನ ಪರ್ವ
ರಾಜ್ಯ. - ರಾಜ್ಯಲಾಭ ಪರ್ವ
ವ. - ವನಪರ್ವ
ಸೌ. - ಸೌಪ್ತಿಕ ಪರ್ವ
ಸ್ವ. - ಸ್ವರ್ಗಾರೋಹಣ ಪರ್ವ
ಸ್ತ್ರೀ - ಸ್ತ್ರೀಪರ್ವ
ಮತ್ಸ್ಯಪು, - ಮತ್ಸ್ಯ ಪುರಾಣ
ಮನುಸ್ಮೃ. - ಮನುಸ್ಮೃತಿ
ಮಾರ್ಕಂ. ಪು. - ಮಾರ್ಕಂಡೇಯ ಪುರಾಣ
ಯಾಜ್ಞಸ್ಮೃ. - ಯಾಜ್ಞವಲ್ಕ್ಯಸ್ಮೃತಿ
ಯೋಗವಾ. - ಯೋಗವಾಸಿಷ್ಠ
ರ.ವಂ. - ರಘುವಂಶ
ವಾ.ರಾ. - ವಾಲ್ಮೀಕಿ ರಾಮಾಯಣ
ಉತ್ತರ - ಉತ್ತರಕಾಂಡ
ಕಿಷ್ಕಿಂ - ಕಿಷ್ಕಿಂಧಾಕಾಂಡ
ಬಾಲ. - ಬಾಲಕಾಂಡ
ಸುಂದರ. - ಸುಂದರಕಾಂಡ
ಲಲಿತಾಸ. - ಲಲಿತಾಸಹಸ್ರನಾಮ
ಲಿಂಗಪು. - ಲಿಂಗ ಪುರಾಣ
ವರಾಹಪು. - ವರಾಹ ಪುರಾಣ
ವಾಮ. ತಂತ್ರ - ವಾಮಕೇಶ್ವರತಂತ್ರ
ವಾಮನ.ಪು. - ವಾಮನ ಪುರಾಣ
ವಾಯು.ಪು. - ವಾಯು ಪುರಾಣ
ವಾಸಿ. ರಾ. - ವಾಸಿಷ್ಠ ರಾಮಾಯಣ
ವಿ. ಚಿಂ. - ವಿವೇಕ ಚಿಂತಾಮಣಿ
ವಿ. ರಾ. - ವಿವೇಕಾನಂದ ರಾಜಯೋಗ
ವಿಷ್ಣು. ಪು. - ವಿಷ್ಣು ಪುರಾಣ
ವೆಂ. ಮ. - ವೆಂಕಟೇಶಮಹಾತ್ಮೆ
ಶತ. ಬ್ರಾ. - ಶತಪಥ ಬ್ರಾಹ್ಮಣ
ಶಿ.ಕುಖಂ. - ಶಿವಕುಮಾರ ಖಂಡ
ಶಿ.ಪು - ಶಿವ ಪುರಾಣ
ಶಿವಶತ. - ಶಿವಶತರುದ್ರ
ಶಿ. ಸ. - ಶಿವಸಹಸ್ರನಾಮ
ಸೂ. ವಂ. - ಸೂರ್ಯವಂಶ
ಸಾಲಿ. ಮ. - ಸಾಲಿಗ್ರಾಮ ಮಹಾತ್ಮೆ
ಸ್ಕಾಂ. ಪು. - ಸ್ಕಾಂದ ಪುರಾಣ
ಹರಿ. - ಹರಿವಂಶ

ಪುರಾಣ ಭಾರತ ಕೋಶ

ಅ

ಅಂಶ – ೧. ಕಶ್ಯಪ ಋಷಿಯ ಮಗ; ಈತನ ತಾಯಿ ಅದಿತಿ (ಮ.ಆ.). ೨. ದ್ವಾದಶಾದಿತ್ಯರಲ್ಲೊಬ್ಬ (ಮ.ಆ.)

ಅಂಶುಮಾನ್ (ಅಂಶುಮಂತ) – ೧. ಸೂರ್ಯವಂಶ; ಅಸಮಂಜಸನ ಮಗ; ಸಗರನ ಮೊಮ್ಮಗ (ಮ.ವ.) ೨. ದ್ರೌಪದಿಯ ಸ್ವಯಂವರಕ್ಕಾಗಿ ಬಂದ ಒಬ್ಬ ರಾಜ (ಮ.ಆ.). ೩. ಪಾಂಡವ ಪಕ್ಷೀಯನಾದ ರಾಜನೊಬ್ಬ ; ಇವನು ದ್ರೋಣಾಚಾರ್ಯರಿಂದ ಹತನಾದನು (ಮ.ಕ.).

ಅಕಂಪನ – ೧. ಇವನಿಗೆ ಅನುಕಂಪಕನೆಂಬ ಇನ್ನೊಂದು ಹೆಸರೂ ಇದೆ; ಕ್ಷತ್ರಿಯ; ಈತನ ಮಗ ಹರಿ ಎಂಬುವನು ಯುದ್ಧಭೂಮಿಯಲ್ಲಿ ಮೃತನಾದಾಗ ಅಕಂಪನನು ಗೋಳಾಡುತ್ತಿದ್ದನು. ಆಗ ನಾರದನು ಬಂದು ಆತನ ದುಃಖವನ್ನು ಸಮಾಧಾನ ಮಾಡಿದನು. (ಮ.ದ್ರೋ.,ಶಾಂ.). ೨. ಸುಮಾಲಿಯ ಮಗ; ನೋ. – ಮಾಲಿ. ಜನಸ್ಥಾನದ ಖರದೂಷಣತ್ರಿಶಿರರ ವಧೆಯನ್ನು ರಾವಣನಿಗೆ ತಿಳಿಸಿದವನು. ಈತನು ಮುಂದೆ ಹನುಮಂತನಿಂದ ಹತನಾದನು. (ವಾ.ರಾ.ಅರ.)

ಅಕೃತವ್ರಣ – ೧. ಬ್ರಹ್ಮರ್ಷಿ; ಇವನು ಪರಶುರಾಮನ ಸ್ನೇಹಿತ; ಈತನ ತಂದೆ ಶಾಂತನೆಂಬ ಮುನಿ; ತೀರ್ಥಯಾತ್ರೆ ಮಾಡುತ್ತಿದ್ದ ಈತನು ಒಂದು ಕಾಡಿನಲ್ಲಿ ಹುಲಿಯ ಬಾಯಿಗೆ ಬೀಳಲಿದ್ದಾಗ ಪರಶುರಾಮನು ದೈವಯೋಗದಿಂದ ಅಲ್ಲಿಗೆ ಬಂದು ಈತನನ್ನು ರಕ್ಷಿಸಿದನು. ಅಂಬೆಯು ಭೀಷ್ಮನಿಂದ ತಿರಸ್ಕೃತೆಯಾಗಿ, ಆತನನ್ನು ವಿವಾಹವಾಗಲು ಈ ಮುನಿಯ ಮೊರೆಹೊಕ್ಕಳು. ಈ ಮುನಿಯು ಅಂಬೆಯನ್ನು ಪರಶುರಾಮನ ಆಶ್ರಮಕ್ಕೆ ಕರೆತಂದನು. ಪಾಂಡವರ ರಾಜಸೂಯಯಾಗದಲ್ಲಿ ಇವನು ಋತ್ವಿಜನಾಗಿದ್ದ (ಮ.ವ.,ಉ.) ನೋ. – ಹೋತ್ರವಾಹನ. ೨. ಕ್ಷತ್ರಿಯ ಯುಗದ ಈ ಬ್ರಾಹ್ಮಣನು ಒಂದು ಸರೋವರದಲ್ಲಿಳಿದು ಅಘಮರ್ಷಣವನ್ನು ಜಪಿಸುತ್ತಿರುವಾಗ ಒಂದು ಮೊಸಳೆ ಹಿಡಿಯಲು ಅದರಿಂದ ತಪ್ಪಿಸಿಕೊಂಡು ಮುಂದೆ ಆ ಸರೋವರದಲ್ಲಿ ನೀರು ಕುಡಿದವರೆಲ್ಲ ಹುಲಿಗಳಾಗುವಂತೆ ಶಾಪವಿತ್ತನು.

ಅಕೋಪ – ದಶರಥನ ಒಬ್ಬ ಮಂತ್ರಿ; ಇವನಿಗೆ ಅಶೋಕನೆಂಬ ಹೆಸರೂ ಇದೆ. ನೋ. – ಅಶೋಕ.

ಅಕ್ರೂರ – ಕ್ಷತ್ರಿಯ, ಚಂ. ವಂ.; ನಹುಷನ ವಂಶಕ್ಕೆ ಸೇರಿದ ಸಾತ್ವತನ ಮನೆತನದ ಶ್ವಫಲ್ಕನ ಮಗ; ಇವನ ತಾಯಿ ಗಾಂಧಿನಿ; ಇವನ ಪತ್ನಿ ಆಹುಕನ ಮಗಳಾದ ಸುತನು. ಇವನು ದ್ರೌಪದಿಯ ಸ್ವಯಂವರಕ್ಕಾಗಿ ಬಂದಿದ್ದನು. (ಮ.ಆ.,ಸ.). ಒಮ್ಮೆ ಶಿಶುಪಾಲನು ಈತನ ಪತ್ನಿಯನ್ನು ಅಪಹರಿಸಿದ್ದ; ಇವನಿಗೆ ಬಭ್ರು ಎಂಬ ಹೆಸರೂ ಇದೆ; ಕಂಸನ ಅಪ್ಪಣೆಯಂತೆ ಈತನೂ ರಾಮ ಮತ್ತು ಕೃಷ್ಣರನ್ನು ಮಥುರೆಗೆ ಕರೆದುಕೊಂಡು ಹೋಗುವಾಗ ಮಾರ್ಗದಲ್ಲಿದ್ದ ಯಮುನಾ ನದಿಯಲ್ಲಿ ಶ್ರೀ ಕೃಷ್ಣನು ಇವನಿಗೆ ತನ್ನ ದಿವ್ಯರೂಪವನ್ನು ತೋರಿಸಿದನು. (ಭಾಗ., ಹರಿ., ವಿಷ್ಣು ಪು.).

ಅಕ್ರೋಧನ – ಕ್ಷತ್ರಿಯ, ಚಂದ್ರವಂಶ; ಆಯುತಾನಾಯಿಯ ಮಗ; ಇವನ ತಾಯಿ ಭಾಸೆ; ಹೆಂಡತಿ ಕಂಡು; ಮಗ ದೇವಾತಿಥಿ (ಮ.ಆ.)

ಅಕ್ಷಕುಮಾರ – ರಾಕ್ಷಸ; ರಾವಣ ಮತ್ತು ಮಂಡೋದರಿಯ ಮಗ; ಸೀತಾ ಶೋಧನೆಗೆ ಬಂದ ಹನುಮಂತನನ್ನೆದುರಿಸಿ ಯುದ್ಧಮಾಡಿ ಆತನಿಂದ ಹತನಾದನು (ವಾ. ರಾ. ಸುಂದ).

ಅಕ್ಷಮಾಲೆ – ವಸಿಷ್ಠನ ಪತ್ನಿಯಾದ ಅರುಂಧತಿಯ ಹೆಸರು (ಮ.ಉ.)

ಅಕ್ಷಯ ಪಾತ್ರೆ – ಸೂರ್ಯನಿಂದ ಯುಧಿಷ್ಠಿರನಿಗೆ ಪ್ರಾಪ್ತವಾದ ಆಹಾರ ಪಾತ್ರೆ; ಊಟದ ಕಾಲದಲ್ಲಿ ಈ ಭೋಜನಪಾತ್ರೆಯಿಂದ ಎಲ್ಲಾ ಬಗೆಯ ಆಹಾರ ವಸ್ತುಗಳೂ ಉತ್ಪತ್ತಿಯಾಗುತ್ತಿದ್ದವು; ದ್ರೌಪದಿಯು ಉಂಡೊಡನೆ ಆ ಕಾಲದಲ್ಲಿ ಬರತಕ್ಕ ಆಹಾರ ಸಾಮಗ್ರಿಗಳು ನಿಲ್ಲುತ್ತಿದ್ದವು. (ಮ.ವ.).

ಅಕ್ಷಯವಟ – ಗಯಾ ಕ್ಷೇತ್ರದಲ್ಲಿರುವ ಒಂದು ಆಲದ ಮರ. ಇದರ ಅಡಿಯಲ್ಲಿ ಪಿತೃಗಳಿಗಿಟ್ಟ ಪಿಂಡವು ಅಕ್ಷಯವಾಗುವುದು.

ಅಕ್ಷಸೂತ್ರ – ಆಪಸ್ತಂಭ ಮಹರ್ಷಿಯ ಹೆಂಡತಿ. ನೋ. – (ಆಪಸ್ತಂಭ.)

ಅಕ್ಷಹೃದಯ – ದ್ಯೂತಶಾಸ್ತ್ರ; ಇದು ಋತುಪರ್ಣನಿಂದ ನಳನಿಗೆ ಪ್ರಾಪ್ತವಾಯಿತು. ಬೃಹದಶ್ವನಿಂದ ಯುಧಿಷ್ಠಿರನಿಗೆ ತಿಳಿಯಿತು (ಮ.ವ.)

ಅಕ್ಷೀಣ – ೧. ಒಬ್ಬ ಋಷಿ. ೨. ವಿಶ್ವಾಮಿತ್ರನ ಒಬ್ಬ ಮಗ. (ಮ.ಅನು)

ಅಕ್ಷೌಹಿಣಿ – ಒಂದು ರಥ, ಒಂದು ಆನೆ, ಮೂರು ಕುದುರೆಗಳು, ಐದು ಮಂದಿ ಕಾಲಾಳುಗಳಿಗೆ ಒಂದು ಪತ್ತಿ ಎಂದು ಹೆಸರು. ಇಂತಹ ಮೂರು ಪತ್ತಿಗೆ ಒಂದು ಸೇನಾಮುಖ. ಮೂರು ಸೇನಾಮುಖಗಳಿಗೆ ಒಂದು ಗುಲ್ಮ, ಮೂರು

ಗುಲ್ಮಗಳಿಗೊಂದು ಗಣ, ಮೂರು ಗಣಗಳು ಸೇರಿ ಒಂದು ವಾಹಿನಿ, ಮೂರು ವಾಹಿನಿಗಳಿಗೆ ಒಂದು ಪೃತನೆ, ಮೂರು ಪೃತನೆಗೆ ಒಂದು ಚಮು, ಮೂರು ಚಮುಗಳಿಗೆ ಒಂದು ಅನೀಕಿನಿ, ಹತ್ತು ಅನೀಕಿನಿಗೆ ಒಂದು ಅಕ್ಷೌಹಿಣಿ, ಒಂದು ಅಕ್ಷೌಹಿಣಿಗೆ ೨೧,೮೭೦ ಆನೆ; ಅಷ್ಟೇ ರಥ; ಇದರ ಮೂರರಷ್ಟು ಕುದುರೆ, ಐದರಷ್ಟು ಕಾಲಾಳು (ಮ.ಆ.).

ಅಗಸ್ತ್ಯ - ೧. ಬ್ರಹ್ಮರ್ಷಿ; ಪುಲಸ್ತ್ಯನ ಮಗ; ಇವನ ತಾಯಿ ಕರ್ದಮಪ್ರಜಾಪತಿಯ ಮಗಳಾದ ಹವಿರ್ಭುಕ್ಕು. ಇವನು ಸ್ವಾಯಂಭೂ ಮನ್ವಂತರದವನು. ಇವನ ಶಿಷ್ಯ ಅಗ್ನಿವೇಶ್ಯಮುನಿ. ಅಗ್ನಿವೇಶ್ಯನು ಈತನಿಂದ ಧನುರ್ವಿದ್ಯಾಭ್ಯಾಸ ಮಾಡಿದನು. ೨. ಮಿತ್ರವರುಣರ ಮಗ (ಮ. ಸ., ಶಾಂ.); ಮಿತ್ರವರುಣರಿಗೆ ಊರ್ವಶಿಯ ದರ್ಶನದಿಂದ ವೀರ್ಯಪಾತವಾಗಿ ಕುಂಭದಲ್ಲಿ ಬೀಳಲು ಅಲ್ಲಿಂದ ಉತ್ಪತ್ತಿಯಾಗಿ ಕುಂಭಜನೆನಿಸಿದನು (ಭಾಗ., ಮತ್ಸ್ಯಪು.) ವಸಿಷ್ಠನು ಇವನ ಸಹೋದರನು. ಇವನು ವೈವಸ್ವತ ಮನ್ವಂತರದವನು. ಇವನಿಗೆ ವಿದರ್ಭರಾಜಪುತ್ರಿಯಾದ ಲೋಪಾಮುದ್ರೆಯೊಡನೆ ವಿವಾಹವಾಯಿತು (ಮ.ವ) ಇವನಿಗೆ ದೃಢಸ್ಯು ಅಥವಾ ದೃಢಾಸ್ಯನೆಂಬ ಮಗನಿದ್ದನು (ಮ.ವ). ಈ ಮಗನು ಆರಣ್ಯದಿಂದ ಬಾಲ್ಯದಲ್ಲೇ ಸಾವಿರಾರು ಮಂದಿ ಹೊತ್ತು ತರುವಷ್ಟು ಇಧ್ಮವನ್ನು ತರುತ್ತಿದ್ದುದರಿಂದ ಇಧ್ಮವಾಹನನೆಂಬ ಹೆಸರೂ ಈತನಿಗಾಯಿತು. ಅಗಸ್ತ್ಯನು ರಾಕ್ಷಸರ ನಾಶಕ್ಕಾಗಿ ಸಮುದ್ರಜಲವನ್ನು ಪಾನಮಾಡಿ ಅದನ್ನು ಜೀರ್ಣಿಸಿಕೊಂಡನು. (ಮ.ವ.). ಇವನು ಧನಾರ್ಜನೆಗಾಗಿ ತ್ರಸದಸ್ಯ ಮತ್ತು ವಾತಾಪಿ, ಇಲ್ವಲರ ಸಮೀಪಕ್ಕೆ ಹೋದನು. ಅಲ್ಲಿ ಇಲ್ವಲನು ಅಗಸ್ತ್ಯನ ನಾಶಕ್ಕಾಗಿ ವಾತಾಪಿಯನ್ನು ಕೊಂದು ಅಡುಗೆ ಮಾಡಿ ಬಡಿಸಿ, ಅಗಸ್ತ್ಯನು ಉಂಡಮೇಲೆ ವಾತಾಪಿಯನ್ನು ಕರೆಯಲು ಅಗಸ್ತ್ಯನು ತನ್ನ ತಪೋಮಹಿಮೆಯಿಂದ ವಾತಾಪಿಯನ್ನು ಜೀರ್ಣಿಸಿಕೊಂಡನು. ದುಷ್ಟ ಇಲ್ವಲನನ್ನು ಸುಟ್ಟು ಬೂದಿ ಮಾಡಿದನು (ಮ.ವ.). ಅಗಸ್ತ್ಯನು ಗರ್ವಿಷ್ಠನಾದ ನಹುಷನಿಗೆ ಹೆಬ್ಬಾವಾಗುವಂತೆ ಶಾಪವಿತ್ತನು (ಮ.ವ.,ಉ.) ಸೂರ್ಯನ ಗತಿಗೆ ವಿಘ್ನವನ್ನುಂಟುಮಾಡಿದ ವಿಂಧ್ಯಪರ್ವತವನ್ನು ಕುಗ್ಗಿಸಿದನು (ಮ.ವ.,ದೇವಿಭಾ.) ನೋ. -ತ್ರಸದಸ್ಯು. ಹಿಂದೆ ಇವನು ದೇವತೆಗಳ ಪ್ರೀತಿಗಾಗಿ ಸತ್ರಯಾಗ ನಡೆಸುತ್ತಿದ್ದಾಗ ಮಂತ್ರಜಲಪ್ರೋಕ್ಷಣದಿಂದ ಮೃಗಗಳನ್ನು ನಿರ್ಮಾಣ ಮಾಡಿಕೊಂಡು ಬೇಟೆಯಾಡಿದನು. (ಮ.ಅಶ್ವ.). ಆರಣ್ಯವಾಸಕ್ಕೆ ಬಂದ ರಾಮಾದಿಗಳು ಇವನ ಆಶ್ರಯದಲ್ಲಿ ಎರಡು ದಿನಗಳವರೆಗೆ ಇದ್ದರು. ಮುಂದೆ ಇವರ ಪ್ರಯಾಣ ಕಾಲದಲ್ಲಿ ಅಗಸ್ತ್ಯನು ಇಂದ್ರನಿಂದ ಕಳುಹಿಸಲ್ಪಟ್ಟ ದಿವ್ಯಾಸ್ತ್ರಗಳನ್ನೂ, ಅಕ್ಷಯಬಾಣಗಳನ್ನೂ, ಎರಡು ಉತ್ತಮವಾದ

ಧನುಸ್ಸುಗಳನ್ನೂ ಶ್ರೀರಾಮನಿಗೆ ಕೊಟ್ಟನು (ಆನಂ. ರಾ).

ಅಗಸ್ತ್ಯತೀರ್ಥ - ದಕ್ಷಿಣ ಸಮುದ್ರತೀರದಲ್ಲಿರುವ ಒಂದು ತೀರ್ಥ. ಅರ್ಜುನನು ತೀರ್ಥಯಾತ್ರೆಯ ಕಾಲದಲ್ಲಿ ಇಲ್ಲಿಗೆ ಬಂದಿದ್ದನು (ಮ.ಆ.).

ಅಗಸ್ತ್ಯಪರ್ವತ - ಕಾಲಂಜರ ಪರ್ವತದ ಒಂದು ಉಪ ಪರ್ವತ (ಮ.ವ.).

ಅಗಸ್ತ್ಯಭ್ರಾತ - ಮಹರ್ಷಿ; ಇವನಿಗೆ ಸುದರ್ಶನ ಎಂಬ ಹೆಸರಿದ್ದರೂ ತಾಯಿಯ ಗರ್ಭದಲ್ಲಿದ್ದಾಗಲೇ ಮಹಾಜ್ಞಾನವನ್ನು ಸಂಪಾದಿಸಿದವನಾದುದರಿಂದ ಈತನ ಹೆಸರನ್ನು ಗೌರವಾರ್ಥವಾಗಿ ಯಾರೂ ಹೇಳುವುದಿಲ್ಲ.

ಅಗಸ್ತ್ಯವಟ - ಹಿಮಾಲಯ ಪರ್ವತದ ಒಂದು ಪಾರ್ಶ್ವದಲ್ಲಿದ್ದ ಒಂದು ಪುಣ್ಯ ಕ್ಷೇತ್ರ. ಅರ್ಜುನನು ತೀರ್ಥಯಾತ್ರೆಯ ಕಾಲದಲ್ಲಿ ಇಲ್ಲಿಗೆ ಬಂದಿದ್ದನು. (ಮ.ಆ.)

ಅಗಸ್ತ್ಯಾಶ್ರಮ - ನಾಸಿಕದಿಂದ ೨೪ ಮೈಲು ಆಗ್ನೇಯದಲ್ಲಿದ್ದ ಒಂದು ಪುಣ್ಯಕ್ಷೇತ್ರ. ಇದಕ್ಕೆ ಸಮೀಪದಲ್ಲಿ ಪಂಚವಟಿ ಇದೆ. ಶ್ರೀರಾಮನು ಅರಣ್ಯವಾಸ ಕಾಲದಲ್ಲಿ ಇಲ್ಲಿಗೆ ಬಂದಿದ್ದ (ವಾ.ರಾ.ಅರ.). ಯುಧಿಷ್ಠಿರನು ಲೋಮಶ ಮುನಿಯೊಡನೆ ಇಲ್ಲಿಗೆ ಬಂದಿದ್ದನು (ಮ.ವ.) ಇದಕ್ಕೆ ಈಗ ಅಗಸ್ತ್ಯಪುರಿ ಎನ್ನುತ್ತಾರೆ.

ಅಗ್ನಿ - ಪಂಚಭೂತಗಳಲ್ಲಿ ಮೂರನೆಯದಾದ ತೇಜಸ್ಸಿನ ಅಭಿಮಾನದೇವತೆ (ಮ.ಅಶ್ವ). ಇವನು ಭಗವಂತನ ಮುಖದಿಂದ ಉತ್ಪತ್ತಿಯಾದವನು (ಮ.ಉ.) ಇವನ ಪತ್ನಿಯು ದಕ್ಷಪ್ರಜಾಪತಿಯ ಮಗಳಾದ ಸ್ವಾಹೆ. ಇವನ ಮಗ ಸ್ಕಂಧ (ಮ.ವ.). ಇವನ ಇನ್ನೊಬ್ಬಳು ಪತ್ನಿ ಇಕ್ಷ್ವಾಕುವಂಶದ ದುರ್ಯೋಧನನ ಮಗಳು ಸುದರ್ಶನೆ. ಇವಳ ಮಗ ಸುದರ್ಶನ (ಮ.ಅನು.). ಪಕ್ಷಿರೂಪದಲ್ಲಿದ್ದ ಋಷಿಯಾದ ಮಂದಪಾಲನೂ, ಮಾಹಿಷ್ಮತೀ ನಗರದಲ್ಲಿ ಪಾಂಡವರ ಕಿರಿಯನಾದ ಸಹದೇವನೂ ಅಗ್ನಿಯನ್ನೂ ಪ್ರಾರ್ಥಿಸಿದ್ದಾರೆ (ಮ.ಸ.). ಇವನು ೧೫ ದಿನಗಳವರೆಗೆ (೨೧ ದಿನಗಳ ವರೆಗೂ ಎಂದು ಕೆಲವು ಕಡೆ ಇದೆ) ಅರ್ಜುನನ ಆಶ್ರಯದಲ್ಲಿ ಖಾಂಡವವನವನ್ನು ದಹಿಸಿದನು. ಇವನಿಂದ ಅರ್ಜುನನಿಗೆ ಕಪಿಧ್ವಜ ಉಳ್ಳ ರಥ, ಗಾಂಡೀವ ಧನುಸ್ಸು, ಅಕ್ಷಯ ಬತ್ತಳಿಕೆಯೂ ಕೊಡಲ್ಪಟ್ಟಿತ್ತು. ಇವನೇ ಶ್ರೀಕೃಷ್ಣನಿಗೆ ಚಕ್ರಾಯುಧವನ್ನಿತ್ತನು (ಮ.ಆ.). ಇವನಿಗೆ ಭೃಗುಮುನಿಯು ಸರ್ವಭಕ್ಷಕನಾಗುವಂತೆ ಶಾಪವನ್ನಿತ್ತನು (ಮ.ಆ.). ಇವನು ಇಂದ್ರನಿಗೆ ಪ್ರಾಪ್ತವಾದ ಬ್ರಹ್ಮಹತ್ಯಾದೋಷದ ನಾಲ್ಕನೇ ಒಂದು ಪಾಲನ್ನು ಸ್ವೀಕರಿಸಿದನು (ಮ.ಶಾಂ.). ಜಗತ್ತಿಗೂ ಶ್ರೀರಾಮನಿಗೂ ಸೀತೆಯು ಮಹಾಪತಿವ್ರತೆ ಎಂದು ತಿಳಿಸಿದವನು (ಮ.ವ.). ಅಗ್ನಿಯ ಮೂಲಕ

ಅಮಾವಾಸ್ಯೆಗಳಲ್ಲಿ ಪಿತೃಗಳಿಗೂ, ಪೂರ್ಣಿಮೆಯಲ್ಲಿ ದೇವತೆಗಳಿಗೂ ಹೋಮ ಮಾಡುವರು.

ಭೃಗುಮುನಿಯ ಶಾಪದಿಂದ ಅಗ್ನಿಯು ಅಡಗಲು ಬ್ರಹ್ಮನು ಅವನನ್ನು ಕರೆದು, 'ನಿನ್ನ ಅಪಾನದಲ್ಲಿರುವ (ಹಿಂಭಾಗ) ಅಗ್ನಿಜ್ವಾಲೆಗಳೂ, ಮಾಂಸಭಕ್ಷಕ ಪ್ರಾಣಿ ದೇಹದ ಅಗ್ನಿಯೂ ಸರ್ವಭಕ್ಷಕನಾಗಲಿ. ನಿನ್ನ ಜ್ವಾಲೆಯಿಂದ ದಹಿಸಲ್ಪಟ್ಟ ಮಾತ್ರಕ್ಕೇ ಎಲ್ಲವೂ ಶುದ್ಧವಾಗುವುವು. ನೀನೇ ಎಲ್ಲರ ವಾಕ್ಕುಗಳಲ್ಲೂ ನೆಲೆಗೊಂಡಿರುವೆ. ಆ ಮುನಿಯ ಶಾಪವಾಕ್ಯವೂ ನಿನ್ನಿಂದಲೇ ಪ್ರೇರಿತವಾಗಿ ಬಂದುದು. ನೀನು ಅದನ್ನು ಸತ್ಯಮಾಡಿ ಗೌರವಿಸಬೇಕು' ಎನ್ನಲು ಅಗ್ನಿ ಒಪ್ಪಿದನು. ಅಗ್ನಿಯು ರುದ್ರರೂಪನು. ಇವನ ರಥವನ್ನು ಹೇಸರಗತ್ತೆಗಳು ಎಳೆಯುವುದರಿಂದ ಅಗ್ನಿಯ ರೂಪದ ರುದ್ರನಿಗೆ ಹಯಗರ್ದಭಿ ಎನ್ನುತ್ತಾರೆ. ಹಯ ಅಂದರೆ ಕುದುರೆ, ಗರ್ದಭಿ ಅಂದರೆ ಹೆಣ್ಣು ಕತ್ತೆ - ಇವುಗಳ ಸಂಪರ್ಕದಿಂದ ಜನಿಸಿದ ಹೇಸರಗತ್ತೆಗೆ ಹಯಗರ್ದಭ ಎನ್ನುತ್ತಾರೆ. ಇವನು ತಿನ್ನುವಾಗ ಸಾಕೆನ್ನುವುದಿಲ್ಲವಾದುದರಿಂದ ಇವನಿಗೆ ಅನಲ ಎಂದು ಹೆಸರು (ನಾಸ್ತಿ ಅಲಂ ಪೂರ್ತಿಃ ಯಸ್ಯ ಭುಂಜಾನಸ್ಯ ಸಃ ಅನಲಃ, ಅಗ್ನಿಃ). ಈತನು ಸಪ್ತರ್ಷಿಗಳ ಪತ್ನಿಯರಲ್ಲಿ ಬಹಳ ಕಾಲ ಕಾಮುಕನಾಗಿ ವರ್ತಿಸಿದ (ಮ.ವ.).

ಅಗ್ನಿಕುಂಡ - ಒಂದು ನರಕವಿಶೇಷ (ಮ.ಅನು.)

ಅಗ್ನಿತೀರ್ಥ - ಯಮುನಾ ನದಿಯ ದಕ್ಷಿಣದಲ್ಲಿರುವ ಒಂದು ತೀರ್ಥ. ಹಿಂದೆ ಮುನಿಗಳು ನಡೆಸಿದ ಒಂದು ಯಜ್ಞದಲ್ಲಿ ಹವಿಸ್ಸನ್ನು ಒಯ್ಯುತ್ತಿದ್ದ ಅಗ್ನಿಯ ಅಣ್ಣನಾದ ಜಾತವೇದನನ್ನು ಮಧು ಎಂಬ ರಾಕ್ಷಸನು ಕೊಂದು, ಹವಿಸ್ಸನ್ನು ಅಪಹರಿಸಲು, ಅಗ್ನಿಯು ಈ ತೀರ್ಥದಲ್ಲಿ ಅಡಗಿದನು. ಆಗ ದೇವತೆಗಳು ಈ ತೀರ್ಥದ ದಡದಲ್ಲೇ ಅಗ್ನಿಯನ್ನು ಪ್ರಾರ್ಥಿಸಿ ಮೆಚ್ಚಿಸಿದರು. (ಮ.ವ.,ಶ).

ಅಗ್ನಿದ್ಯೋತನ - ಸ್ವಯಂವರ ಕಾಲದಲ್ಲಿ ರುಕ್ಮಿಣಿಯ ಪತ್ರವನ್ನು ಶ್ರೀಕೃಷ್ಣನಿಗೆ ಮುಟ್ಟಿಸಿದ ಬ್ರಾಹ್ಮಣ (ಭಾಗ.).

ಅಗ್ನಿಧಾರೆ - ಗೌತಮ ವನದ ಸಮೀಪ ಹರಿಯುವ ನದಿ (ಮ.ವ.)

ಅಗ್ನಿಮಂತ - ಪ್ರಾಯಶ್ಚಿತ್ತದ ಅಗ್ನಿ ವಿಶೇಷ (ಮ.ವ.).

ಅಗ್ನಿವರ್ಣ - ಸೂರ್ಯವಂಶದ ಸುದರ್ಶನನೆಂಬ ರಾಜನ ಮಗ: ಸ್ತ್ರೀಲೋಲನಾಗಿ ಅಂತಃಪುರದಲ್ಲೇ ಇರುತ್ತಾ ಮಂತ್ರಿಗಳ ಒತ್ತಾಯದಿಂದ ಪ್ರಜೆಗಳಿಗೆ ತನ್ನ ಪಾದಗಳನ್ನು ಮಾತ್ರ ತೋರಿಸುತ್ತಿರಲು ಕ್ರಮೇಣ ಇವನಿಗೆ ಕ್ಷಯರೋಗ ಪ್ರಾಪ್ತವಾಗಿ ಆದರಲ್ಲೇ ನರಳಿ ತೀರಿಕೊಂಡನು (ರ.ವಂ.).

ಅಗ್ನಿವೇಶ್ಯ - ಬ್ರಹ್ಮರ್ಷಿ. ದ್ರೋಣನ ತಂದೆಯಾದ ಭರದ್ವಾಜನ ತಮ್ಮ. ದ್ರೋಣ ಮತ್ತು ದ್ರುಪದರ ಅಸ್ತ್ರವಿದ್ಯಾಗುರು. ಅಗಸ್ತ್ಯನ ಶಿಷ್ಯ (ಮ.ಆ.). ಭರದ್ವಾಜನು ಅಗ್ನಿವೇಶ್ಯಮುನಿಗೆ ಆಗ್ನೇಯಾಸ್ತ್ರ ಕೊಟ್ಟನು. ಈ ಅಗ್ನಿವೇಶ್ಯನು ದ್ರೋಣನ ಸ್ನೇಹಿತನಾದುದರಿಂದ ಆ ಆಗ್ನೇಯಾಸ್ತ್ರವನ್ನು ಈತನಿಗೆ ಕೊಟ್ಟನು (ಮ.ಆ.).

ಅಗ್ನಿಷೋಮೌ - ಅಗ್ನಿಯ ವಂಶದಲ್ಲಿ ಹುಟ್ಟಿದವ; ಅಗ್ನಿ ಮತ್ತು ಸೋಮ (ಮ.ಸ.,ವ.)

ಅಗ್ನಿಷ್ವಾತ್ತಾ - ೧. ಪಿತೃಗಣದಲ್ಲೊಬ್ಬನು (ಮ.ಸ.) ೨. ಕಶ್ಯಪಪುತ್ರನೊಬ್ಬ (ಮತ್ಸ್ಯಪು., ಹರಿ.).

ಅಗ್ನೀಧ್ರ - ನೋ. - ಕುರು.

ಅಗ್ರಪೂಜೆ - ರಾಜಸೂಯ ಯಾಗಾಂತ್ಯದಲ್ಲಿ ಶ್ರೀಕೃಷ್ಣನಿಗೆ ಸಂದ ಪೂಜೆ. ಅದನ್ನು ಪ್ರತಿಭಟಿಸಿದ ಶಿಶುಪಾಲನು ಶ್ರೀಕೃಷ್ಣನ ಚಕ್ರಾಯುಧಕ್ಕೆ ಆಹುತಿಯಾದನು. ನೋ. - ಶಿಶುಪಾಲ (ಮ.ಸ.).

ಅಗ್ರಯಾಯಿ - ಕ್ಷತ್ರಿಯ; ಚಂದ್ರವಂಶದವನು. ಧೃತರಾಷ್ಟ್ರನ ಮಗನೊಬ್ಬ (ಮ.ಆ.).

ಅಘಮರ್ಷಣ - ೧. ಒಂದು ತೀರ್ಥ. ಇಲ್ಲಿ ತಪಸ್ಸು ಮಾಡುತ್ತಿದ್ದ ದಕ್ಷನಿಗೆ ವಿಷ್ಣುವು ಅಸಿಕ್ನಿ ಎಂಬುವಳನ್ನು ಕೊಟ್ಟು ಮದುವೆ ಮಾಡಿದನು (ಭಾಗ.). ೨. ವಿಶ್ವಾಮಿತ್ರಮುನಿಯ ವಂಶದಲ್ಲಿ ಹುಟ್ಟಿದ ಮಂತ್ರಪ್ರವರ್ತಕನೊಬ್ಬ.

ಅಘಾಸುರ - ಬಕ ಮತ್ತು ಪೂತನಿಯರ ಸೋದರನಾದ ರಾಕ್ಷಸನೊಬ್ಬ; ಇವನು ಕಂಸನಿಂದ ಪ್ರೇರಿತನಾಗಿ ಸರ್ಪದೇಹವನ್ನು ಧರಿಸಿ ಶ್ರೀಕೃಷ್ಣನನ್ನು ನುಂಗಲು ಆತನು ಇವನ ಹೊಟ್ಟೆಯನ್ನು ಸೀಳಿ ಹೊರಬಂದನು (ಭಾಗ.)

ಅಂಗ - ೧. ದುರ್ಯೋಧನನ ಪಕ್ಷದ ಮ್ಲೇಚ್ಛರಾಜ; ಇವನು ಭೀಮನಿಂದ ಕೊಲ್ಲಲ್ಪಟ್ಟನು (ಮ.ದ್ರೋ.). ಇವನ ಮಗನನ್ನು ನಕುಲನು ಕೊಂದನು (ಮ.ಕ.). ೨. ಕ್ಷತ್ರಿಯ; ಇವನು ಮಾಂಧಾತರಾಜರೊಡನೆ ಯುದ್ಧಮಾಡಿ ಪರಾಜಿತನಾದನು. ಇವನಿಗೆ ಬೃಹದ್ರಥ ಮತ್ತು ಪೌರವ ಎಂಬ ಹೆಸರಿತ್ತು. ಇವನ ಕಥೆಯನ್ನು ನಾರದನು ಸಂಜಯನಿಗೆ ಹೇಳಿದನು. ೩. ಕ್ಷತ್ರಿಯ; ಇವನು ಬಲಿಯೆಂಬ ರಾಜನ ಹೆಂಡತಿಯಾದ ಸುದೇಷ್ಣೆಯಲ್ಲಿ ದೀರ್ಘತಮಸನೆಂಬ ಋಷಿಯಿಂದ ಹುಟ್ಟಿದವನು. ಇವನಿಗೆ ವಂಗ, ಕಳಿಂಗ, ಪುಂಡ್ರ, ಮೊದಲಾದ ಸಹೋದರರಿದ್ದರು. ೪. ಇಂದಿನ ಭಾಗಲ್ಪುರ; ಗಂಗಾ-ಸರಯೂ ನದಿಗಳ ನಡುಪ್ರದೇಶ; ಇಲ್ಲಿ ಶಿವನು ಮನ್ಮಥನನ್ನು ದಹಿಸಿದನು. ಆತನಿಗೆ ಪುನಃ ಇಲ್ಲೇ

ಅಂಗಗಳುಂಟಾದುದರಿಂದ ಅಂಗದೇಶವಾಯಿತು. ಇಲ್ಲಿ ರೋಮ ಪಾದ ರಾಜನು ಆಳುತ್ತಿದ್ದಾಗ ದೀರ್ಘಕ್ಷಾಮ ಬರಲು ಋಷ್ಯಶೃಂಗಮುನಿಯಿಂದ ಪರಿಹಾರವಾಯಿತು. ಕರ್ಣನೂ ಇಲ್ಲಿಯೇ ರಾಜ್ಯಭಾರ ಮಾಡಿದನು. ನೋ. - ಋಷ್ಯಶೃಂಗ.

ಅಂಗದ - ೧. ವಾಲಿಪುತ್ರನಾದ ವಾನರ; ಈತನ ತಾಯಿ ತಾರೆ (ಮ.ವ.). ಇವನು ರಾವಣನ ಬಳಿಗೆ ಸಂಧಾನಕ್ಕಾಗಿ ಹೋಗಿದ್ದ; ಮುಂದೆ ಇವನು ಕಿಷ್ಕಿಂದೆಯ ರಾಜನಾದ (ವಾ.ರಾ.). ಈತನು ಶ್ರೀರಾಮನ ಬಳಿಗೆ ರಾವಣನ ಸಭೆಯನ್ನೇ ಎತ್ತಿಕೊಂಡು ತಂದ. ಮುಂದೆ ಶ್ರೀರಾಮನ ಅಪ್ಪಣೆಯಂತೆ ಅದನ್ನು ಬಾಲದಿಂದ ಆ ಸಭೆಯಿದ್ದಲ್ಲೇ ಎಸೆದನು. (ಆನಂ.ರಾ.) ೨. ಲಕ್ಷ್ಮಣ ಮತ್ತು ಊರ್ಮಿಳೆಯರ ಮಗ; ಇವನ ರಾಜಧಾನಿಗೂ ಈತನ ಹೆಸರೇ; ಇದು ಕಾರಪಥವೆಂಬ ದೇಶಕ್ಕೆ ರಾಜಧಾನಿ. ನೋ. - ಪಂಚಾಕ್ಷರ (ಆನಂ.ರಾ). ೩. ಕ್ಷತ್ರಿಯ, ಧೃತರಾಷ್ಟ್ರನ ಮಗ; ಚಂದ್ರವಂಶ. ಇವನಿಗೂ ಉತ್ತಮೌಜಸನಿಗೂ ಯುದ್ಧವಾಯಿತು.

ಅಂಗನೆ - ಸಾರ್ವಭೌಮನೆಂಬ ದಿಗ್ಗಜನ ಪತ್ನಿ.

ಅಂಗಮಲಜ - ಒಂದು ದೇಶ.

ಅಂಗಾ - ಅಂಗರಾಜನಿಂದ ನಿರ್ಮಿತವಾದ ದೇಶ (ಮ.ಆ., ಭೀ). ಇದರ ರಾಜಧಾನಿ ಚಂಪಾಪುರಿ. ಇಲ್ಲಿಯೇ ದುರ್ಯೋಧನನು ಕರ್ಣನಿಗೆ ಪಟ್ಟಾಭಿಷೇಕವನ್ನು ಮಾಡಿದನು. ನೋ. - ಅಂಗ.

ಅಂಗಾರ - ಮಾಂಧಾತನಿಂದ ಪರಾಜಿತನಾದ ಕ್ಷತ್ರಿಯನೊಬ್ಬ (ಮ.ಶಾಂ.).

ಅಂಗಾರಕ - ೧. ನವಗ್ರಹಗಳಲ್ಲೊಬ್ಬ; ಮಂಗಳನೆಂಬ ಹೆಸರೂ ಇವನಿಗಿದೆ (ಮ.ಸ.). ಈತನು ವಿಷ್ಣುವಿನ ಅನುಗ್ರಹದಿಂದ ಭೂದೇವಿಯಲ್ಲಿ ಹುಟ್ಟಿದನು. ಇವನು ತಪಸ್ಸಿನಿಂದ ನವಗ್ರಹಗಳಲ್ಲಿ ಒಬ್ಬನಾದ (ಬ್ರ.ವೈ.). ೨. ಕ್ಷತ್ರಿಯ; ದಾಕ್ಷಾಯಣಿಯ ವಿರಹ ಪೀಡಿತನಾದ ಶಿವನ ಮೈಬೆವರಿನಿಂದ ಹುಟ್ಟಿ ಭೂದೇವಿಯಿಂದ ರಕ್ಷಿಸಲ್ಪಟ್ಟನು. ೩. ಜಯದ್ರಥನ ಸಹೋದರ (ಮ.ವ.).

ಅಂಗಾರಪರ್ಣ (ಅಂಗಾರವರ್ಣ) - ನೋ. - ಚಿತ್ರರಥ. ಇವನ ಪತ್ನಿ ಕುಂಭೀನಸಿ. ದ್ರೌಪದೀಸ್ವಯಂವರಕ್ಕೆ ತೆರಳುತ್ತಿದ್ದ ಪಾಂಡವರನ್ನು ಕೆರಳಿಸಿ, ಯುದ್ಧದಲ್ಲಿ ಅವರಿಗೆ ಶರಣಾದನು; ಅಲ್ಲದೆ ಅರ್ಜುನನ ಅಗ್ನಿಬಾಣದಿಂದ ದಗ್ಧವಾದ ತನ್ನ ರಥವನ್ನು ಗಂಧರ್ವಶಕ್ತಿಯಿಂದ ಚಿತ್ರರತ್ನಮಯವಾಗಿ ಮಾಡಿಕೊಂಡು ಆ ರಥಕ್ಕೂ ತನಗೂ ಚಿತ್ರರಥವೆಂದೇ ಹೆಸರಿಟ್ಟುಕೊಂಡನು (ಮ.ಆ.). ಇವನು ಪತ್ನಿಯರೊಡನೆ ಅಂಗಾರಪರ್ಣವೆಂಬ ವನದಲ್ಲಿ ಜಲಕ್ರೀಡೆಯಾಡುತ್ತಿದ್ದನು.

ಇವನು ಕುಬೇರನ ಸ್ನೇಹಿತನು (ಮ.ಆ.). ಅಂಗಾರಪರ್ಣ = ಬೆಂಕಿಯಂತೆ ಪ್ರಕಾಶಿಸುವ ವಾಹನವುಳ್ಳವನು (ಮ.ಆ.). ವಿಚಿತ್ರವಾದ ರಥವುಳ್ಳ ಇವನಿಗೆ ಚಿತ್ರರಥನೆಂಬ ಹೆಸರಿದೆ. ಇವನು ತಪಸ್ಸುಮಾಡಿ ಚಾಕ್ಷುಷಿ ಎಂಬ ವಿದ್ಯೆಯನ್ನು ಪಡೆದಿದ್ದನು. ಇದನ್ನು ಮನುವು ಚಂದ್ರನಿಗೂ, ಆತನು ವಿಶ್ವಾವಸುವೆಂಬ ಗಂಧರ್ವನಿಗೂ ಕೊಟ್ಟನು. ವಿಶ್ವಾವಸುವು ಅಂಗಾರಪರ್ಣನಿಗೆ ಉಪದೇಶ ಮಾಡಿದನು. ಇದರಿಂದ ಮೂರು ಲೋಕಗಳ ಅಮೂಲ್ಯವಾದ ವಸ್ತುಗಳನ್ನು ತಾನು ತೋರಿದಾಗಲೇ ಪಡೆಯಬಹುದಾಯಿತು. ಆರು ತಿಂಗಳ ಕಾಲ ಒಂದೇ ಕಾಲಿನಲ್ಲಿ ನಿಂತು ತಪಸ್ಸು ಮಾಡಿ ಈ ವಿದ್ಯೆಯನ್ನು ಪಡೆಯಬೇಕಿತ್ತು. ಆದರೆ ಚಿತ್ರರಥನು, ಈ ವಿದ್ಯೆಯು ಅರ್ಜುನನ ಸ್ವಾಧೀನ ಆಗಲೇ ಆಗುವಂತೆ ಮಾಡಿದನು; ಅಲ್ಲದೆ ಪಾಂಡವರಲ್ಲಿ ಪ್ರತಿಯೊಬ್ಬನಿಗೂ ಗಂಧರ್ವಲೋಕದಲ್ಲಿ ಹುಟ್ಟಿದ ನೂರು ನೂರು ಕುದುರೆಗಳನ್ನು ಕೊಟ್ಟನು. ಅರ್ಜುನನಿಂದ ಆತನು ಕಲಿತಿದ್ದ ಆಗ್ನೇಯಾಸ್ತ್ರವನ್ನು ಆತನಿಂದ ಉಪದೇಶ ಹೊಂದಿದನು. ಪಾಂಡವರಿಗೆ ಧೌಮ್ಯರನ್ನು ಪುರೋಹಿತರನ್ನಾಗಿ ಸೂಚಿಸಿದವನೂ ಈತನೇ (ಮ.ಆ.).

ಅಂಗಿರ (ಅಂಗಿರಸ್ಸು) - ೧. ಬ್ರಹ್ಮರ್ಷಿ; ಬ್ರಹ್ಮನ ಮಾನಸಪುತ್ರ (ಮ.ಆ.). ರುದ್ರ ಯಜ್ಞಾಗ್ನಿಯಲ್ಲಿ ಜಾರಿದ ಬ್ರಹ್ಮನ ರೇತಸ್ಸಿನಿಂದ ಹುಟ್ಟಿದವ (ಮ.ಅನು.). ಇವನ ಪತ್ನಿ ವಸುಧಾ ಅಥವಾ ಸುಭಾ (ಮ.ವ.). ಇವನಿಗೆ ವಸುಧೆಯಲ್ಲಿ ಬೃಹತ್ ಕೀರ್ತಿ, ಬೃಹತ್ ಜ್ಯೋತಿ, ಬೃಹತ್ ಬ್ರಹ್ಮ, ಬೃಹನ್ಮನ, ಬೃಹನ್ಮಂತ್ರ, ಬೃಹದ್ಭಾಸ, ಬೃಹಸ್ಪತಿ - ಎಂಬ ಏಳು ಮಕ್ಕಳು (ಮ.ವ.). ಇವುಗಳಲ್ಲಿ ಬೃಹತ್ ಕೀರ್ತಿ ಮೊದಲಾದ ಆರು ಹೆಸರುಗಳೂ ಬೃಹಸ್ಪತಿಯ ವಿಶೇಷವೆಂದು ನೀಲಕಂಠಾಚಾರ್ಯರು ಹೇಳಿದ್ದಾರೆ. ಅಂಗಿರ ಮುನಿಗೆ ಬೃಹಸ್ಪತಿ, ಉಚಥ್ಯ, ಸಂವರ್ತರೆಂಬ ಮೂವರು ಮಕ್ಕಳು (ಮ.ಆ.). ಬೃಹಸ್ಪತಿ, ಉಚಥ್ಯ, ವಯಸ್ಯ (ಪಯಸ್ಯ), ಶಾಂತಿ, ಘೋರ, ವಿರೂಪ, ಸಂವರ್ತ, ಸುಧನ್ವರೆಂಬ ಎಂಟು ಮಂದಿ ಮಕ್ಕಳು (ಮ.ಅನು.). ಭಾನುಮತಿ, ರಾಕಾ (ರಾಗಾ) ಸೀನಿವಾಲಿ, ಏಕಾನೇಕಾ (ಕುಹೂ), ಅರ್ಚಿಷ್ಮತಿ (ಹವಿಷ್ಮತಿ). ಮಹಿಷ್ಮತಿ, ಮಹಾಮತಿ ಎಂಬ ಏಳು ಮಂದಿ ಹೆಣ್ಣುಮಕ್ಕಳಿದ್ದರೆಂದೂ ಹೇಳುತ್ತಾರೆ (ಮ.ವ.). ಇವನ ಪತ್ನಿ ಕರ್ದಮಪ್ರಜಾಪತಿಯ ಪುತ್ರಿ - ಶ್ರದ್ಧೆ, ಇವರ ಮಕ್ಕಳೇ ಬೃಹಸ್ಪತಿ ಮತ್ತು ಉಚಥ್ಯರು (ಭಾಗ.) ಈತನಿಗೆ ಸ್ವಧಾ ಮತ್ತು ಸತಿ ಎಂಬ ಇಬ್ಬರು ಹೆಂಡಿರು. ಸ್ವಧಾಪುತ್ರನೇ ಪಿತರ: ಸತಿಯ ಪುತ್ರರೇ ಅಥರ್ವ ಮತ್ತು ಆಂಗಿರ (ಭಾಗ.). ಇವನು ಸ್ವಾಯಂಭೂ ಮನ್ವಂತರದಲ್ಲಿ ವರುಣ ಯಜ್ಞದಲ್ಲಿಯೂ

ಉತ್ಪತ್ತಿಯಾದನು. ಅಗ್ನಿಯು ಹಿಂದೊಮ್ಮೆ ದೇವತೆಗಳ ಮೇಲಿನ ಸಿಟ್ಟಿನಿಂದ ಅಡಗಲು, ಬ್ರಹ್ಮನ ಅಪ್ಪಣೆಯಂತೆ ಈತನೇ ಅಗ್ನಿಯಾದ. ಅಗ್ನಿಯನ್ನು ಮೊದಲು ಕಂಡುಹಿಡಿದ ಮುನಿ (ಹರಿ.).

ಅಂಗಿರಸಾಂವರ - ದ್ರೋಣಾಚಾರ್ಯ (ಮ.ಆ.)

ಅಚಲ - ಗಾಂಧಾರರಾಜನಾದ ಶಕುನಿಯ ಸೋದರ; ಅರ್ಜುನನಿಂದ ಸತ್ತ. ಏಕರಥ; ಇವನಿಗೆ ಹನ್ನೆರಡು ಮಂದಿ ಸೋದರರು (ಮ.ಉ.,ದ್ರೋ).

ಅಚ್ಛೋದ - ಕಾಶ್ಮೀರ ದೇಶದ ಸಿದ್ಧಾಶ್ರಮದ ಸಮೀಪವಿರುವ ಸರೋವರ (ಮ.ಆ.). ಇದು ಈಗ ಮಾರ್ತಾಂಡವೆಂಬ ಪ್ರದೇಶದ ಹತ್ತಿರವಿದೆ. ಇದರಿಂದ ಅಚ್ಛೋದೆಯೆಂಬ ನದಿ ಹರಿಯುತ್ತದೆ. ಬರ್ಹಿಷದನೆಂಬ ಪಿತೃವಿನ ಮಗಳಾದ ಅಚ್ಛೋದೆಯಿಂದ ಈ ಸರೋವರ ಉತ್ಪನ್ನವಾಯಿತು.

ಅಚ್ಛೋದೆ - ಬರ್ಹಿಷದನೆಂಬ ಪಿತೃವಿನ ಮಗಳು. ನೋ. - ಅಚ್ಛೋದ. ಇವಳೇ ಸತ್ಯವತಿಯಾಗಿ ಜನಿಸಿದಳು. (ಮ.ಆ.). ಈಕೆಗೆ ಪರಾಶರನಿಂದ ವೇದವ್ಯಾಸ, ಶಂತನು ರಾಜನಿಂದ ಚಿತ್ರಾಂಗದ ಮತ್ತು ವಿಚಿತ್ರವೀರ್ಯರು ಮಕ್ಕಳಾಗಿ ಹುಟ್ಟಿದರು. ನೋ. - ಸತ್ಯವತಿ.

ಅಚ್ಯುತ - ಶ್ರೀಕೃಷ್ಣ. ಕ್ಷತ್ರಿಯ (ಮ.ಶಾಂ.). ನೋ. - ವಾಸುದೇವ.

ಅಚ್ಯುತಾಯು - ಕ್ಷತ್ರಿಯ; ಭಾರತಯುದ್ಧದಲ್ಲಿ ಅರ್ಜುನನಿಂದ ಹತನಾದ. ಇವನ ಮಗನ ಹೆಸರು ದೀರ್ಘಾಯು. (ಮ.ದ್ರೋ).

ಅಜ - ಜನ್ಮವಿಲ್ಲದವನು. ನ ಜಾಯತೇ ಇತಿ ಅಜಃ. ಭಕ್ತರ ಹೃದಯವನ್ನು ಪ್ರವೇಶಿಸುವವನು; ಅಜತಿ ಗಚ್ಛತಿ ಭಕ್ತಾನಾಂ ಹೃದಯಾನಿ ಇತಿ. ಅಸುರಾದಿ ದುಷ್ಟರನ್ನು ಎಸೆಯುವವನು; ಅಜತಿ ಕ್ಷಿಪತಿ ಅಸುರಾದೀನ್ ದುಷ್ಟಾನ್ ಇತಿ. ಶಿವ, ಬ್ರಹ್ಮ, ವಿಷ್ಣು. ೧. ಇಕ್ಷ್ವಾಕು ವಂಶದ ಕ್ಷತ್ರಿಯ; ಸೂರ್ಯವಂಶದಿಂದ ರಘುಮಹಾರಾಜನ ಮಗನಾದನು. ಇವನು ಬ್ರಾಹ್ಮ ಮುಹೂರ್ತದಲ್ಲಿ ಜನಿಸಿದುದರಿಂದ ಅಜನೆಂಬ ಹೆಸರು ಬಂತು. ವಿದರ್ಭದೇಶದ ರಾಜನ ಪುತ್ರಿ ಇಂದುಮತಿ ಈತನ ಪತ್ನಿ. ನೋ. - ಇಂದುಮತಿ. ೨. ಪಾಂಡವಪಕ್ಷದ ಕ್ಷತ್ರಿಯನೊಬ್ಬ (ಮ.ಉ.)

ಅಜಗರ - ದೊಡ್ಡ ದೇಹವುಳ್ಳ ಹೆಬ್ಬಾವು; ನಹುಷನು ಅಗಸ್ತ್ಯಶಾಪದಿಂದ ಹೆಬ್ಬಾವಾಗಿ ಭೀಮಸೇನನನ್ನು ಹಿಡಿದು ಧರ್ಮರಾಜನ ಉತ್ತರಗಳನ್ನು ಕೇಳಿ ಶಾಪವಿಮೋಚನೆ ಹೊಂದಿದನು. (ಮ.ವ.). ದಮಯಂತಿಯನ್ನು ಹಿಡಿದ ಹೆಬ್ಬಾವು ಬೇಡನೊಬ್ಬನಿಂದ ನಾಶವಾಯಿತು (ಮ.ವ.). ನಂದನನ್ನೂ ಒಂದು ಹೆಬ್ಬಾವು ಹಿಡಿದಿತ್ತು. (ಭಾಗ.). ಈ ಹೆಬ್ಬಾವು ಪೂರ್ವಜನ್ಮದಲ್ಲಿ

ಸುದರ್ಶನನೆಂಬ ವಿದ್ಯಾಧರನಾಗಿದ್ದು, ಅಂಗಿರಸನೆಂಬ ತಪಸ್ವಿಗಳನ್ನು ಹಾಸ್ಯ ಮಾಡಿ, ಅವರಿಂದ ಶಾಪಹೊಂದಿ ಸರ್ಪಜನ್ಮ ಪಡೆಯಿತು. ಯಾತ್ರಾರ್ಥಿಯಾಗಿ ಹೊರಟ ನಂದನನ್ನು ಅಂಬಿಕಾವನದಲ್ಲಿ ಈ ಹೆಬ್ಬಾವು ಹಿಡಿಯಲು, ಶ್ರೀಕೃಷ್ಣನು ಅದನ್ನು ತನ್ನ ಪಾದಾಗ್ರದಿಂದ ಮೆಟ್ಟಿ ಶಾಪವಿಮೋಚನೆಗೊಳಿಸಿದುದಲ್ಲದೆ, ತನ್ನ ಸಾಕು ತಂದೆಯಾದ ನಂದನನ್ನೂ ಅದರಿಂದ ಬಿಡಿಸಿದನು (ಭಾಗ.).

ಅಜಮೀಢ - ೧. ಕ್ಷತ್ರಿಯ; ಚಂದ್ರವಂಶದವ. ಭುಮನ್ಯುಪುತ್ರನಾದ ಸುಹೋತ್ರನ ಮಗ; ಇವನ ತಾಯಿ ಐಕ್ಷ್ವಾಕಿ; ಇವನ ಸಹೋದರರು ಸುಮೀಢ ಮತ್ತು ಪುರುಮೀಢರು. ಇವನಿಗೆ ಮೂವರು ಪತ್ನಿಯರು. ಇವರಲ್ಲಿ ಮೊದಲನೆಯವಳಾದ ಧೂಮಿನಿಗೆ ಋಕ್ಷ, ಎರಡನೆಯ ನೀಲಿಗೆ ದುಷ್ಯಂತ ಮತ್ತು ಪರಮೇಷ್ಠಿ, ಮೂರನೆಯ ಕೇಶಿನಿಗೆ ಜಹ್ನುವೆಂಬ ಮಗನೂ ಇದ್ದರು. ಈ ಜಹ್ನುವೇ ಭಗೀರಥನು ತಂದ ಗಂಗೆಯನ್ನು ಕುಡಿದವ (ಮ.ಆ.). ನೋ. - ಜಹ್ನು, ಭಗೀರಥ. ೨. ಕ್ಷತ್ರಿಯ; ಚಂದ್ರವಂಶ. ವಿಕುಂಜರಾಜನ ಪುತ್ರ. ಇವನ ತಾಯಿಯ ಹೆಸರು ಸುಂದರಿ; ಪತ್ನಿಯರು ಕೇಕಯಿ, ನಾಗಾ, ಗಾಂಧಾರಿ, ವಿಮಲ ಮತ್ತು ಋಕ್ಷಾ ಎಂಬ ಐವರು; ಇವರಲ್ಲಿ ಋಕ್ಷೆಯ ಮಗ ಸಂವರಣ; ಇವನು ಸೂರ್ಯಪುತ್ರಿ ತಪತಿಯನ್ನು ವಿವಾಹವಾದ (ಮ.ಆ.). ೩. ಇಂದಿನ ಅಜಮೀರಿಗೆ ಈ ಹೆಸರೂ ಇದೆ. ನೋ - ತಪತಿ.

ಅಜಾತಶತ್ರು - ಧರ್ಮರಾಜ. ನೋ. - ಯುದಿಷ್ಠಿರ (ಮ.ಭೀ.).

ಅಜಾಮಿಳ - ಕನೂಜಿನ ಒಬ್ಬ ಬ್ರಾಹ್ಮಣ. ಈತ ಹೊಲತಿಯೊಬ್ಬಳನ್ನು ಕಂಡು ಮೋಹಿಸಿ, ಅವಳೊಡನೆ ಸಂಸಾರಿಯಾಗಿದ್ದು ಹಲವು ಮಕ್ಕಳನ್ನು ಪಡೆದ. ಈತನು ಸಾಯುವ ಕಾಲದಲ್ಲಿ ಯುಮದೂತರನ್ನು ಕಂಡು ಭಯದಿಂದ ನಾರಾಯಣನೆಂಬ ತನ್ನ ಕಿರಿಯ ಮಗನ ಹೆಸರನ್ನು ಹಿಡಿದು ಕೂಗಲು, ಆ ಹರಿನಾಮಸ್ಮರಣೆಯಿಂದಲೇ ಇವನು ವೈಕುಂಠವನ್ನು ಪಡೆದನು (ಭಾಗ.)

ಅಜಾಮುಖಿ - ನಾಗಕನ್ಯೆಯೊಬ್ಬಳು. ಈಕೆಯ ತಂದೆ ಕಶ್ಯಪ ಮುನಿ; ತಾಯಿ ಸುರಸೆ. ಶೂರ ಪದ್ಮಾಸುರನು ಈಕೆಯ ಸಹೋದರ. ದುರ್ವಾಸರಿಂದ ಈಕೆ ಇಲ್ವಲ ಮತ್ತು ವಾತಾಪಿ ಎಂಬ ಇಬ್ಬರು ಮಾಯಾವಿಗಳಾದ ಮಕ್ಕಳನ್ನು ಪಡೆದಳು (ಸ್ಕಾಂ.ಪು.)

ಅಜೀಗರ್ತ - ಭೃಗುವಂಶದ ಋಷಿ. ಈತನು ಕ್ಷಾಮಕಾಲದಲ್ಲಿ ತನ್ನ ಮಕ್ಕಳನ್ನು ಕಾಪಾಡಲಾರದೆ, ಹರಿಶ್ಚಂದ್ರನು ಹವಣಿಸಿದ್ದ ವರುಣಯಜ್ಞಕ್ಕಾಗಿ ತನ್ನ ಮಧ್ಯದ ಮಗ ಶುನಶ್ಶೇಫನನ್ನು ಮಾರಿ ಮರಣಾನಂತರ ಪಿಶಾಚಿಯಾದರೂ ಶುನಶ್ಶೇಫನ ತಪಸ್ಸಿನ ಫಲದಿಂದ ಸದ್ಗತಿ ಪಡೆದನು. ಇವನಿಗೆ ಋಚೀಕ ಮತ್ತು ದೇವರಾತ

ಎಂಬ ಹೆಸರುಗಳಿವೆ. ನೋ. ಶುನಶ್ಶೇಫ, ಋಚೀಕ (ಮ.ಅನು., ದೇವಿಭಾ., ಬ್ರ.ವೈ.), ದೇವರಾತ.

ಅಜೈಕಪಾತ್ - ಏಕಾದಶರುದ್ರರಲ್ಲೊಬ್ಬ (ಮ.ಆ.)

ಅಂಜನ - ೧. ದಿಗ್ಗಜವೊಂದು (ಮ.ಉ.). ೨. ಒಂದು ಪರ್ವತ; ಅಸಿತಮುನಿಯು ಇಲ್ಲಿ ತಪಸ್ಸು ಮಾಡಿದನು. ನೋ. -ಅಸಿತ.

ಅಂಜನಪರ್ವ - ಘಟೋತ್ಕಚನ ಮಗನಾದ ರಾಕ್ಷಸನೊಬ್ಬ (ಮ.ಉ.) ಭಾರತ ಯುದ್ಧದಲ್ಲಿ ಇವನು ಅಶ್ವತ್ಥಾಮನಿಂದ ಸತ್ತನು (ಮ.ದ್ರೋ.). ನೋ. - ಘಟೋತ್ಕಚ.

ಅಂಜಾನಾಚಲ - ಕೇಸರಿ ಎಂಬ ಕಪಿಶ್ರೇಷ್ಠನ ಪತ್ನಿಗೆ ಬಹುಕಾಲ ಮಕ್ಕಳಾಗದಿರಲು, ಆಕೆಯು ಮತಂಗಮುನಿಗಳ ಪಾದದ ಮೇಲೆ ಬಿದ್ದು, ತನ್ನ ಸಂಕಟವನ್ನು ಬಿನ್ನಯಿಸಿದಳು. ಮತಂಗ ಮುನಿಗಳು ಆಕೆಗೆ ಪಂಪಾಸರೋವರಕ್ಕೆ ಪೂರ್ವದಲ್ಲಿರುವ ಆಕಾಶ ಗಂಗೆ ಎಂಬ ತೀರ್ಥದಲ್ಲಿ ಮಿಂದು, ಭಕ್ತಿಯಿಂದ ಹನ್ನೆರಡು ವರ್ಷಕಾಲ ತಪಸ್ಸನ್ನಾಚರಿಸಿದರೆ ನಿನ್ನ ಸಂಕಲ್ಪ ನೆರವೇರುವುದೆಂದರು. ಆಕೆಯು ಪತಿಯಾಜ್ಞೆಯನ್ನು ಪಡೆದು ಅಲ್ಲಿಗೆ ಹೊರಟು, ಕಠಿನ ತಪಸ್ಸನ್ನಾಚರಿಸುತ್ತಿರಲು, ನಿತ್ಯವೂ ವಾಯುದೇವನು ಒಂದು ಹಣ್ಣನು ಗಾಳಿಯ ಮೂಲಕ ತಂದುಕೊಡುತ್ತಿದ್ದನು. ಹೀಗೆ ವಾಯುವಿನ ಅನುಗ್ರಹದಿಂದ ಆಕೆ ಗರ್ಭಿಣಿಯಾಗಿ ಒಂದು ಶುಭದಿವಸದಲ್ಲಿ ಆದರ್ಶಪುತ್ರನೊಬ್ಬನನ್ನು ಹಡೆದಳು. ಅವನೇ ಆಂಜನೇಯ (ವೆಂ.ಮ.); ನೋಡು - ಹನುಮಂತ; ಮಾರುತಿ; ಬಲಭೀಮ.

ಅಂಜನೆ - ವಾನರಸ್ತ್ರೀಯೊಬ್ಬಳು. ಈಕೆಯ ಪತಿಯು ಕೇಸರಿ ಎಂಬ ವರನಾಯಕ. ಪುಂಜಿಕಸ್ಥಲಿ ಎಂಬ ಅಪ್ಸರೆಯ ಶಾಪದಿಂದ ಕುಂಜರನ ಮಗಳಾಗಿ ಅಂಜನೆಯೆಂಬ ಹೆಸರಿನಿಂದ ಹುಟ್ಟಿ, ವಾಯುವಿನಿಂದ ಆಂಜನೇಯನೆಂಬ ಮಗನನ್ನು ಪಡೆದಳು. (ವಾ.ರಾ.) ಆಕೆಯ ತಂದೆ ಗೌತಮ; ತಾಯಿ ಅಹಲ್ಯೆ. ಆಕೆ ಸೂರ್ಯ ಮತ್ತು ಇಂದ್ರರಿಂದ ಪಡೆದ ಮಕ್ಕಳೇ ಸುಗ್ರೀವ ಮತ್ತು ವಾಲಿ. ಮಗಳಾದ ಅಂಜನೆಯು ಈ ಮಕ್ಕಳ ವಿಚಾರವನ್ನು ಗೌತಮನಿಗೆ ತಿಳಿಸಲು ಅವನು ''ಇವರು ನನ್ನ ಮಕ್ಕಳಲ್ಲದಿದ್ದರೆ ಕಪಿಮುಖರಾಗಲಿ' ಎನಲು, ವಾಲಿಸುಗ್ರೀವರು ಕಪಿಮುಖರಾದರು. ಅಹಲ್ಯೆಯು ಈ ಗುಟ್ಟನ್ನು ರಟ್ಟುಮಾಡಿದ ಮಗಳಿಗೆ ಕಪಿಯನ್ನು ಮಗನನ್ನಾಗಿ ಪಡೆಯುವಂತೆ ಶಾಪವಿತ್ತಳು. ಇದರಿಂದಲೇ ಹನುಮಂತನು ಕಪಿಮುಖನಾಗಿ ಈಕೆಯಲ್ಲಿ ಜನ್ಮವೆತ್ತಿದನು (ಅನಂ.ರಾ.).

ಅಂಜನಾಭ - ಒಂದು ಪರ್ವತ (ಮ.ಅನು.).

ಅಂಜನಾವತಿ - ಸುಪ್ರತೀಕವೆಂಬ ದಿಗ್ಗಜದ ಹೆಂಡತಿ.

ಅಟವೀಶಿಖರ - ಕಳಿಂಗದ ದಕ್ಷಿಣದಲ್ಲಿರುವ ದೇಶ (ಮ.ಭೀ.).

ಅಣಿಮಾಂಡವ್ಯ - ಬ್ರಹ್ಮರ್ಷಿ (ಮ.ಸ.). ಇವನು ಬಾಲ್ಯದಲ್ಲಿ ನಿಷ್ಕಾರಣವಾಗಿ ಒಂದು ನೊಣವನ್ನು ಕೊಂದನು. ಅದರ ಫಲವಾಗಿ ಮುಂದೆ ತಾರುಣ್ಯದಲ್ಲಿ ನಿರಪರಾಧಿಯಾದರೂ ಈತನನ್ನು ಕಳ್ಳತನದ ಆಪಾದನೆಯಿಂದ ಶೂಲಕ್ಕೇರಿಸಿದರು. ಅಲ್ಲಿ ಇವನು ಮರಣಪಡದಿರಲು, ರಾಜನು ಈತನನ್ನು ಶೂಲದಿಂದ ಕೆಳಗಿಳಿಸಿದನು. ಈತನನ್ನು ಶೂಲದಿಂದ ಇಳಿಸಿದರೂ ಶೂಲವನ್ನು ದೇಹದಿಂದ ಕಿತ್ತುಹಾಕಲು ಸಾಧ್ಯವಾಗಲಿಲ್ಲ. ಆ ಶೂಲವು ದೇಹದೊಳಗೆ ನಾಟಿಕೊಂಡಿದ್ದ ಹಾಗೆಯೇ ಅವನು ಸಂಚರಿಸುತ್ತಿದ್ದನು. ಅವನು ಮುಂದೆ ಮರಣಾನಂತರ ಯಮಲೋಕದಲ್ಲಿ ನರಕವನ್ನು ಹೊಂದಿ, ಬಾಲ್ಯದಲ್ಲಿ ಮಾಡಿದ ಅಪರಾಧಕ್ಕಾಗಿ ತನಗೆ ನರಕಪ್ರಾಪ್ತವಾಗುವಂತೆ ಮಾಡಿದ ಯಮನ ಮೇಲೆ ಕೋಪಗೊಂಡು, ಬಾಲ್ಯದಲ್ಲಿ ಮಕ್ಕಳು ಪಾಪಕ್ಕೆ ಗುರಿಯಾಗತಕ್ಕವರಲ್ಲ; ಅಂದಿನ ಅವರ ಪಾಪವೆಲ್ಲಾ ಹೆತ್ತವರಿಗೇ ಸೇರಿದುದು. ಇಷ್ಟು ಧರ್ಮಸೂಕ್ಷ್ಮವನ್ನು ತಿಳಿಯದೆ ನನ್ನನ್ನು ಶಿಕ್ಷಿಸಿದ ನೀನು ಶೂದ್ರನಾಗಿ ಜನಿಸು - ಎಂದು ಶಾಪವಿತ್ತನು. ಇವನ ಶಾಪದಿಂದಲೇ ಮುಂದೆ ಯಮನು ವಿದುರನಾಗಿ ಕುರುವಂಶದಲ್ಲಿ ಜನಿಸಿದನು. ನೋ. - ವಿದುರ. (ಮ.ಆ., ಪದ್ಮಪು., ಮಾರ್ಕಂಪು., ಸ್ಕಾಂ.ಪು). ಇವನ ಕುತ್ತಿಗೆಗೂ ಎರಡು ಪಕ್ಕೆಗಳಿಗೂ ನಡುವೆ ನೀಡಿರುವ ಶೂಲದ ಮೊನೆಗೆ ಹೂಬುಟ್ಟಿಯನ್ನು ತೂಗಿಸಿಕೊಳ್ಳಬಹುದೆಂದು ಯೋಚಿಸಿದನು. ಹದಿನಾಲ್ಕು ವರ್ಷ ಕಳೆಯುವವರೆಗೆ ಪಾಪ ಮಾಡಿದವರೂ ಅದರ ಫಲವನ್ನು ಪಡೆಯಲಾರರು - ಎಂದು ಈ ಮುನಿ ಹೇಳಿದ್ದನು (ಮ.ಆ.).

ಅಣುಹ - ಚಂದ್ರವಂಶದ ವಿಭ್ರಾಜರಾಜನ ಮಗ; ಈತನ ಪತ್ನಿ ಶುಕಮುನಿಯ ಮಗಳಾದ ಕೃತ್ವಿ; ಮಗ ಬ್ರಹ್ಮದತ್ತ (ಭಾಗ., ಹರಿ.).

ಅತಿಕಾಯ - ರಾಕ್ಷಸ; ರಾವಣನ ಮಗ; ತಾಯಿ ಧಾನ್ಯಮಾಲಿನಿ ಎಂಬ ರಾಕ್ಷಸಿ; ಕುಂಭಕರ್ಣನ ಮರಣಾನಂತರ ಮಹಾಪರಾಕ್ರಮಿಯೂ ಧರ್ಮಿಷ್ಠನೂ ಆದ ಈತನು ಎರಡನೆಯ ಕುಂಭಕರ್ಣನಂತೆ ಹೋರಾಡಿ ಲಕ್ಷ್ಮಣನ ಬ್ರಹ್ಮಾಸ್ತ್ರದಿಂದ ಮಡಿದನು (ವಾ.ರಾ.ಯು.).

ಅತಿಥಿ - ಶ್ರೀರಾಮನ ಮೊಮ್ಮಗ; ಕುಶ ಮತ್ತು ಕುಮುದ್ವತಿಯರ ಮಗ; ಇವನು ಅಶ್ವಮೇಧ ಯಾಗವನ್ನು ಮಾಡಿದನು; ಇವನ ಪತ್ನಿಯಾದ ನಿಷಧ ರಾಜಪುತ್ರಿಯಲ್ಲಿ ಸಮರ್ಥನಾದ ನಿಷಧನೆಂಬ ಮಗನು ಹುಟ್ಟಿದನು. (ರ.ವಂ.). ನೋ. - ಕುಶ. ನಿಷಧ.

ಅತಿಬಲಾ - ರಾಮಲಕ್ಷ್ಮಣರಿಗೆ ಹಸಿವು ಬಾಯಾರಿಕೆಗಳುಂಟಾಗದಂತೆ ವಿಶ್ವಾಮಿತ್ರನು ಅವರಿಗೆ ಉಪದೇಶಿಸಿದ ಮಂತ್ರ. ಇದನ್ನು ಆ ಮುನಿಯು ಯಜ್ಞರಕ್ಷಣೆಗಾಗಿ ಅವರನ್ನು ಸಿದ್ಧಾಶ್ರಮಕ್ಕೆ ಕರೆದುಕೊಂಡು ಹೋಗುವ ದಾರಿಯಲ್ಲಿ ಉಪದೇಶಿಸಿದನು (ವಾ.ರಾ.).

ಅತಿಬಾಹು - ಒಬ್ಬ ಅಪ್ಸರೆ; ಇವಳು ಅರಿಷ್ಟೆಯೆಂಬ ಅಪ್ಸರೆಯ ಮಗಳು (ಮ.ಆ.).

ಅತಿರಥ - ೧. ಹನ್ನೊಂದು ಸಾವಿರ ಮಂದಿ ವೀರರೊಡನೆ ತನ್ನ ರಥ, ಕುದುರೆ, ಸಾರಥಿಯನ್ನು ರಕ್ಷಿಸಿಕೊಂಡು ಹೋರಾಡಿ ಗೆಲ್ಲಬಲ್ಲ ವೀರ. ಅರ್ಜುನ, ಅಭಿಮನ್ಯು, ಭೀಷ್ಮ, ದ್ರೋಣ ಮೊದಲಾದವರು ಅತಿರಥರು. ೨. ಕ್ಷತ್ರಿಯ. ಮತಿನಾರನ ಮಗ, ಚಂದ್ರವಂಶ, ನೋ. - ಮತಿನಾರ.

ಅತ್ರಿ - ಬ್ರಹ್ಮರ್ಷಿ; ಬ್ರಹ್ಮನ ಮಾನಸಪುತ್ರ (ಮ.ಆ.,ಸ.); ಈತನು ಕೆಲಕಾಲ ಬ್ರಹ್ಮನ ಅಧಿಕಾರದಲ್ಲಿದ್ದ (ಬ್ರ.ಪು.). ಈತನೇ ಚಂದ್ರನಾಗಿ ಕೆಲವು ಕಾಲ ಇದ್ದನು. ಇವನಿಗೆ ಅನೇಕ ಮಹರ್ಷಿಗಳು ಮಕ್ಕಳಾಗಿದ್ದರು. ಇವನ ಪತ್ನಿ ಕರ್ದಮನ ಪುತ್ರಿಯಾದ ಅನಸೂಯೆ; ಮಕ್ಕಳು ದುರ್ವಾಸ, ದತ್ತಾತ್ರೇಯ, ಚಂದ್ರರೆಂಬ ಮೂವರು. ಅತ್ರಿಯ ನೇತ್ರದಿಂದ ಚಂದ್ರನು ಹುಟ್ಟಿದನು (ಭಾಗ.). ನೋ. - ಅನಸೂಯೆ. ಅಸುರರು ಅತ್ರಿಯನ್ನು ನೂರು ದ್ವಾರಗಳುಳ್ಳ ಯಂತ್ರಗಳಲ್ಲಿ ಹಾಕಿ ತುಷಾಗ್ನಿಯಿಂದ ಸುಡುವಾಗ, ಅತ್ರಿಯು ಅಶ್ವಿನೀ ದೇವತೆಗಳನ್ನು ಸ್ತುತಿಸಲು, ಅವರು ಬಂದು ನೀರಿನಿಂದ ಬೆಂಕಿಯನ್ನು ನಂದಿಸಿ ಅವನನ್ನು ಬದುಕಿಸಿದರು (ಋ). ಧ್ರುವನ ತಂದೆಯಾದ ಉತ್ತಾನಪಾದನನ್ನು ಅತ್ರಿಮುನಿಯು ದತ್ತಕ್ಕೆ ತೆಗೆದುಕೊಂಡನು (ಹರಿ.). ಅತ್ರಿಗೋತ್ರಕ್ಕೆ ಸೇರಿದ ಬುಧನು.

ಅಥರ್ವ (ಅಥರ್ವಾಂಗಿರಸ) - ೧. ಮಹರ್ಷಿ; ಅಂಗಿರಸನ ಮಗ; ಇವನ ತಾಯಿ ಸತಿ. ಇವನ ಪತ್ನಿ ಕರ್ದಮಪುತ್ರಿಯಾದ ಶಾಂತಿ; ಇವಳಿಗೆ ಚಿತ್ತಿ ಎಂಬ ಹೆಸರೂ ಇದೆ. ಇವನ ಮಗ ಅಶ್ವಶಿರ ಅಥವಾ ದಧೀಚಿ (ಮ.ಸ.ಉ.). ೨. ನಾಲ್ಕನೆಯ ವೇದದ ಹೆಸರು; ಇದಕ್ಕೆ ಬ್ರಹ್ಮವೇದ, ಭೈಷಜ್ಯವೇದ, ಕ್ಷತ್ರವೇದ, ಭೃಗ್ವಂಗೀರಸ ವೇದ ಮೊದಲಾದ ಹೆಸರುಗಳೂ ಇವೆ. ಭಾರತೀಯ ವೈದ್ಯಶಾಸ್ತ್ರಕ್ಕೆ ಅಥರ್ವವೇದವೇ ಮೂಲ. ಇದರಲ್ಲಿ ರಾಜಕೀಯ ವಿಷಯಗಳಿಗೆ ಸಂಬಂಧಪಟ್ಟ ಮಂತ್ರಗಳಿರುವುದರಿಂದ ಕ್ಷಾತ್ರವೇದ ಎನ್ನುತ್ತಾರೆ. ಈ ವೇದದಲ್ಲಿ ಇಪ್ಪತ್ತು ಕಾಂಡಗಳಿವೆ. ಇದರ ಹದಿನೇಳನೆಯ ಕಾಂಡದಲ್ಲಿ ಒಂದೇ ಸೂಕ್ತ, ಇಪ್ಪತ್ತನೆಯ ಕಾಂಡದಲ್ಲಿ ನೂರನಲವತ್ತೂರು ಸೂಕ್ತಗಳಿವೆ. ಇದು ಹೆಚ್ಚು ಸೂಕ್ತಗಳಿರುವ ಕಾಂಡ. ಈ ವೇದದಲ್ಲಿ ಒಟ್ಟು ಸುಮಾರು ಆರುಸಾವಿರ ಮಂತ್ರಗಳಿವೆ. ಇದರ ಐದ[illegible] [illegible] ಭಾಗದ ಸೂಕ್ತಗಳನ್ನು

ಋಗ್ವೇದದಿಂದಲೇ ಉದ್ಧರಿಸಿದ್ದಾರೆ. ಇದರ ಆರನೆಯ ಒಂದು ಭಾಗವು ಗದ್ಯದಲ್ಲಿರುವುದು ಇದರ ಇನ್ನೊಂದು ವೈಶಿಷ್ಟ್ಯ. ಅರ್ಥಶಾಸ್ತ್ರವು ಇದರ ಉಪವೇದ. ಕೌಶಿಕ, ವೈತಾನ ಮುಂತಾದ ಕಲ್ಪಸೂತ್ರಗಳೂ ಮುಂಡಕ, ಮಾಂಡೂಕ್ಯಾದಿ ಉಪನಿಷತ್ತುಗಳೂ ಗೋಪಥವೆಂಬ ಬ್ರಾಹ್ಮಣವೂ ಅಥರ್ವ ವೇದದ್ದಾಗಿದೆ. ಇದಕ್ಕೆ ಅಥರ್ವಣವೇದವೆಂಬ ಹೆಸರೂ ಇದೆ. ಈ ವೇದದಲ್ಲಿ ಶಾಂತಿಕ - ಪೌಷ್ಟಿಕಾದಿ ಕರ್ಮಗಳನ್ನು ಮಾರಣ, ಉಚ್ಚಾಟನ, ಸ್ತಂಭನ, ಮೋಹನ, ಅಭಿಚಾರ ಮುಂತಾದ ಕ್ರಿಯೆಗಳನ್ನೂ ಆಗ್ನೇಯ, ವಾಯುವ್ಯ, ಮುಂತಾದ ಅಸ್ತ್ರಗಳ ಪ್ರಯೋಗಕ್ಕೆ ಬೇಕಾದ ಯಂತ್ರಗಳನ್ನೂ ನಿರೂಪಿಸಲಾಗಿದೆ. ಅಥರ್ವನ್, ಭೃಗು, ಅಂಗೀರಸರು ಅಗ್ನಿಸಂಪ್ರದಾಯದ ಪುರಾತನರು. ಇವರು ಋಷಿಗಳು, ಕವಿಗಳು, ಪುರೋಹಿತರು ಮತ್ತು ಯಾಜಕರು.

ಅದಿತಿ - ದಕ್ಷಪ್ರಜಾಪತಿಯ ಮಗಳು; ಕಶ್ಯಪಮುನಿಯ ಪತ್ನಿ. ಈಕೆಗೆ ಋ ಎಂಬ ಹೆಸರಿದೆ (ತ್ರಿ.ಶೇಷ). ಇಂದ್ರ ಮೊದಲಾದ ದೇವತೆಗಳೂ ದ್ವಾದಶಾದಿತ್ಯರೂ ಈಕೆಯ ಮಕ್ಕಳು. ನೋ. - ಕಶ್ಯಪ (ಮ.ಆ.). ಶ್ರೀಕೃಷ್ಣನು ನರಕಾಸುರನನ್ನು ಕೊಂದು ಸತ್ಯಭಾಮೆಯೊಡನೆ ಸ್ವರ್ಗಕ್ಕೆ ಹೋಗಿ, ಅದಿತಿಗೆ ಆಕೆಯ ಕುಂಡಲವನ್ನು ಒಪ್ಪಿಸಿದಾಗ, ಅದಿತಿಯು ಸತ್ಯಭಾಮೆಗೆ - 'ಶ್ರೀ ಕೃಷ್ಣನು ಭೂಮಿಯಲ್ಲಿರುವವರೆಗೆ ನಿನಗೆ ಮುಪ್ಪೇ ಬಾರದಿರಲಿ! ಸುಗಂಧವತಿಯಾಗಿರು' ಎಂದು ವರವಿತ್ತಳು (ಮ.ಸ.).

ಅದೃಶ್ಯಂತಿ - ಈಕೆಯ ತಂದೆ ಮೊದಲು ವೈಶ್ಯನಾಗಿದ್ದು ಆಮೇಲೆ ತಪಸ್ಸಿನಿಂದ ಬ್ರಾಹ್ಮಣನಾದ ಚಿತ್ರಮುಖನು. ಈಕೆಯ ಪತಿ ವಸಿಷ್ಠನ ಮಗನಾದ ಶಕ್ತಿ. ಈಕೆಯ ಮಗ ಪರಾಶರ. ಪರಾಶರನು ಅದೃಶ್ಯಂತಿಯ ಗರ್ಭದಲ್ಲಿರುವಾಗಲೇ ವಸಿಷ್ಠಶಾಪದಿಂದ ರಾಕ್ಷಸನಾದ ಕಲ್ಮಾಷಪಾದರಾಜನು ಶಕ್ತಿಯನ್ನು ಕೊಂದನು. ನೋ., - ಶಕ್ತಿ, ಕಲ್ಮಾಷಪಾದ (ಮ.ಆ., ಅನು.), ಪರಾಶರ.

ಅದ್ರಿ - ರಾಕ್ಷಸ; ಇವನ ಮಗ ಬಲಾಕನು ಸುಶರ್ಮನೆಂಬ ಬ್ರಾಹ್ಮಣನ ಪತ್ನಿಯನ್ನು ಅಪಹರಿಸಲು, ಉತ್ತಾನಪಾದ ರಾಜನ ಮಗ ಉತ್ತಮನು ಆ ಬ್ರಾಹ್ಮಣನ ಪ್ರಾರ್ಥನೆಯ ಮೇರೆಗೆ ಉತ್ಪಲಾವತ ವನವನ್ನು ಸೇರಿ ಆಕೆಯನ್ನು ತಂದು ಸುಶರ್ಮನಿಗೆ ಒಪ್ಪಿಸಿದನು. ನೋ. - ಬಲಾಕ.

ಅದ್ರಿಕಾ - ಅಪ್ಸರೆ; ಈಕೆಯು ಬ್ರಹ್ಮನ ಶಾಪದಿಂದ ಮೀನಾಗಿ ಯಮುನಾ ನದಿಯಲ್ಲಿ ಸಂಚರಿಸುತ್ತಿರುವಾಗ, ಹದ್ದೊಂದರ ಕೊಕ್ಕಿನಿಂದ ಉಪರಿಚರವಸುವಿನ ರೇತಸ್ಸು ಕೆಳಗೆ ಬೀಳಲು ಈ ಮೀನು ನುಂಗಿತು. ಆಗ ಇದರ ಗರ್ಭದಿಂದಲೇ ವಿರಾಟ ಮತ್ತು ಮತ್ಸ್ಯಗಂಧಿ ಅಥವಾ ಸತ್ಯವತಿಯು

ಹುಟ್ಟಿದರು. ನೋ. - ಉಪರಿಚರವಸು, ವಿರಾಟ, ಸತ್ಯವತಿ.

ಅದ್ಭುತ - ಅಗ್ನಿವಿಶೇಷ; ಈತನ ಹೆಂಡತಿಯೇ ಪ್ರಿಯೆ; ಮಗ ವಿಡೂರಥ (ಮ.ವ.).

ಅಧರ್ಮ - ಜ್ಯೇಷ್ಠಾದೇವಿಯ ಮಗ; ಇವನ ಹೆಂಡತಿ ನಿರತಿ (ಮ.ಆ.). ಮಗಳು ಮಹಾಭಯ ಮತ್ತು ಮೃತ್ಯು (ಮ.ಆ.).

ಅಧಿರಥ - ಸೂತನೊಬ್ಬ. ಇವನು ಚಂದ್ರವಂಶದ ಸತ್ಯಕರ್ಮನೆಂಬ ಅಂಗರಾಜನಿಗೆ ಬ್ರಾಹ್ಮಣ ಸ್ತ್ರೀಯಲ್ಲಿ ಹುಟ್ಟಿದ ಮಗ. ಇವನ ಪತ್ನಿ ರಾಧೆ, ಇವನ ಸಾಕುಮಗ ಕರ್ಣ. ಅಧಿರಥ ಮತ್ತು ರಾಧೆಯರಿಗೆ ಶತ್ರುಂತಪ, ದ್ರುಮ, ವೃತರಥ, ಶತ್ರುಂಜಯ, ವಿಪಾಠ ಮೊದಲಾದ ಮಕ್ಕಳಿದ್ದರು. ಇವನು ಕೌರವನ ಸಾರಥಿ (ಮ.ಆ.).

ಅಧಿರಾಜ - ರಾಜಸೂಯಯಾಗ ಕಾಲದಲ್ಲಿ ಸಹದೇವನು ಜಯಿಸಿದ ದೇಶ; ಇದರ ರಾಜ ದಂತವಕ್ತ್ರನಾಗಿದ್ದನು. ಇದು ಇಂದಿನ ಗ್ವಾಲೇರದ ಒಂದು ಭಾಗ. ಇಂದು ಇದಕ್ಕೆ ದತಿಹವೆನ್ನುತ್ತಾರೆ. (ಮ.ಸ.).

ಅಧಿಷ್ಠಾನಪುರ - ಚೇದಿ ದೇಶದ ರಾಜಧಾನಿ. ಇಲ್ಲಿ ಶಿಶುಪಾಲನು ರಾಜ್ಯಭಾರ ಮಾಡುತ್ತಿದ್ದನು.

ಅಧೂರ್ತರಜ - ಕ್ಷತ್ರಿಯ; ಸೂರ್ಯವಂಶ; ಗಯನ ತಂದೆ; ಇವನಿಗೆ ಅಮೂರ್ತರಯ ಎಂಬ ಹೆಸರೂ ಇದೆ (ಮ.ವ.). ನೋ. - ಗಯ.

ಅಧೃಷ್ಯಾ - ಒಂದು ನದಿ (ಮ.ಭೀ.).

ಅಧೋಲೋಕ - ಭೂಮಿಯಿಂದ ಕೆಳಗೆ ಇರುವ ಅತಳ ಮೊದಲಾದ ಏಳು ಲೋಕಗಳು.

ಅನಘ - ದೇವ ಗಂಧರ್ವನೊಬ್ಬ (ಮ.ಆ.).

ಅನಂಗ - ೧. ಮನ್ಮಥ. ೨. ಋಷಿಯೊಬ್ಬ; ಕರ್ದಮಪ್ರಜಾಪತಿಯ ಪುತ್ರ (ಮ.ಶಾಂ.).

ಅನಂತ - ಸರ್ಪರಾಜ; ಕಶ್ಯಪನ ಮಗ; ಈತನ ತಾಯಿ ಕದ್ರು (ಮ.ಆ.,ಸ.); ಇವನು ನಾರಾಯಣನ ಹಾಸಿಗೆಯಾಗಿದ್ದು ಭೂಮಿಯನ್ನು ಹೊತ್ತಿದ್ದಾನೆ. ಲಕ್ಷ್ಮಣ ಮತ್ತು ಬಲರಾಮರು ಈತನ ಅಂಶದಿಂದ ಜನಿಸಿದರು. ಇವನಿಗೆ ಮಹಾಶೇಷನೆಂಬ ಹೆಸರೂ ಇದೆ. ನೋ. - ಕದ್ರು.

ಅನಂತವಿಜಯ - ಯುಧಿಷ್ಠಿರನ ಶಂಖದ ಹೆಸರು (ಮ.ಭೀ.).

ಅನಂತಸೇನ - ೧. ಒಬ್ಬ ದೇವ; ಸ್ಕಂದನ ಹೆಸರು. ೨. ಭೀಷ್ಮನಿಂದ ತಿರಸ್ಕೃತಳಾದ ಅಂಬೆ ಅನಂತಸೇನನನ್ನು ತಪಸ್ಸಿನಿಂದೊಲಿಸಿ ಭೀಷ್ಮನನ್ನು ಕೊಲ್ಲಲು ಒಂದು ಮಾಲೆ ಪಡೆದಳು (ಮ.ಆ.).

ಅನಮಿತ್ರ - ವೃಷ್ಣಿವಂಶದ ಮೂಲಪುರುಷ (ವಿಷ್ಣುಪು).

ಅನರಣ್ಯ - ಕ್ಷತ್ರಿಯ; ಸೂರ್ಯವಂಶ; ಇಕ್ಷ್ವಾಕುವಂಶದ ಪುರುಕುತ್ಸನ ಮೊಮ್ಮಗ. (ಮ.ಅನು.). ಇವನ ತಂದೆ ತ್ರಸದಸ್ಯು; ಹರ್ಯಶ್ವ ಮತ್ತು ಬೃಹದಶ್ವರು ಇವನ ಮಕ್ಕಳು. ದಿಗ್ವಿಜಯಕ್ಕೆ ಹೊರಟ ರಾವಣನು ಈತನೊಡನೆ ಯುದ್ಧಮಾಡಿ ಇವನನ್ನು ಕೊಂದನು. ಆಗ ಅನರಣ್ಯನ ರುಂಡವು - 'ನಿನಗೆ ನನ್ನ ವಂಶಜನಿಂದಲೇ ಮರಣ' ಎಂದು ಶಾಪ ಕೊಟ್ಟಿತು. ಶ್ರೀರಾಮನು ಈತನ ವಂಶದವ (ಮ.ಆ.).

ಅನಲ - ೧. ಅಷ್ಟವಸುಗಳಲ್ಲೊಬ್ಬ. ೨. ಗರುಡನ ಮಗ. ೩. ಯಮಸಭೆಯಲ್ಲಿದ್ದ ರಾಜನೊಬ್ಬ (ಮ.ಸ.). ೪. ರಾಕ್ಷಸನೊಬ್ಬ. ನೋ. - ಮಾಲಿ. ಮಾಲಿ ಮತ್ತು ವಸುಧರೆಯರ ಮಗ.

ಅನಲೆ - ೧. ಕಾಮಧೇನುವಿನ ಮೊಮ್ಮಗಳು; ಈಕೆಯ ತಾಯಿ ರೋಹಿಣಿ; ಈಕೆಯ ಮಗಳು ಶುಕಿ (ಮ.ಆ.). ೨. ವಿಶ್ವಾವಸು ಎಂಬ ರಾಕ್ಷಸನ ಪತ್ನಿ; ಈಕೆಯ ತಂದೆ ಮಾಲ್ಯವಂತ; ತಾಯಿಯ ಹೆಸರು ಸುಂದರಿ; ಮಗಳು ಕುಂಭೀನಸಿ (ರಾ.ಉ.).

ಅನವದ್ಯೆ - ಪ್ರಾಧೆಯ ಮಗಳಾದ ಅಪ್ಸರಸೆ (ಮ.ಆ.).

ಅನಶ್ವಾನ್ - ಕ್ಷತ್ರಿಯ; ಚಂದ್ರವಂಶ; ಪುರುವಂಶೋದ್ಭವನಾದ ವಿಡೂರಥನ ಮಗ; ಈತನ ತಾಯಿ ಸಂಪ್ರಿಯೆ; ಪತ್ನಿ ಅಮೃತಾ; ಮಗ ಪರಿಕ್ಷಿತ್ತು (ಮ.ಆ.).

ಅನಸೂಯೆ - ಅತ್ರಿಮುನಿಯ ಪತ್ನಿ; ಈಕೆಯ ತಂದೆ ಕರ್ದಮಮುನಿ; ತಾಯಿ ದೇವಹೂತಿ. ಅನಸೂಯೆಗೆ ಎಂಟು ಮಂದಿ ಸೋದರಿಯರು. ಈಕೆಯ ಪಾತಿವ್ರತ್ಯದ ಪರೀಕ್ಷೆಗೆ ಬಂದ ತ್ರಿಮೂರ್ತಿಗಳನ್ನು ಈಕೆ ಮೆಚ್ಚಿಸಿ ಅವರಿಂದಲೇ ದತ್ತಾತ್ರೇಯ, ಚಂದ್ರ ಮತ್ತು ದುರ್ವಾಸರೆಂಬ ಮೂವರು ಮಕ್ಕಳನ್ನು ಪಡೆದಳು. ಶ್ರೀರಾಮನ ಅರಣ್ಯವಾಸದ ಕಾಲದಲ್ಲಿ ಈಕೆಯು ಸ್ತ್ರೀಯರ ಸೌಮಾಂಗಲ್ಯವನ್ನು ವೃದ್ಧಿಗೊಳಿಸುವ ವಸ್ತ್ರ, ಭೂಷಣ, ಗಂಧಮಾಲ್ಯಾದಿಗಳನ್ನು ಸೀತೆಗೆ ಕೊಟ್ಟು ಆಶೀರ್ವದಿಸಿದಳು. ಈಕೆ ಸೀತೆಗೆ ಎರಡು ವಜ್ರದ ಓಲೆಗಳನ್ನಿತ್ತಳು ಮತ್ತು ಪತಿವ್ರತೆಯಾಗೆಂದು ಹರಸಿದಳು. (ಅನಂ.ರಾ.) ನೋ. - ಅತ್ರಿ. ಶಕುಂತಳೆಯ ಒಬ್ಬಳು ಗೆಳತಿ. ಈಕೆಗೆ ಅತ್ರೀ ಎಂಬ ಹೆಸರು (ವಾ.ರಾ.)

ಅನಾಧೃಶ್ಯ - ಕ್ಷತ್ರಿಯ; ಚಂದ್ರವಂಶ; ಧೃತರಾಷ್ಟ್ರನ ಮಗ (ಮ.ಆ.).

ಅನಾಧೃಷ್ಟಿ - ೧. ಕ್ಷತ್ರಿಯ; ಚಂದ್ರವಂಶ; ಪುರುವಂಶೋದ್ಭವನಾದ ರೌದ್ರಾಶ್ವನ ಮಗ. ಋಚೇಯ ಎಂಬುದು ಇವನ ಇನ್ನೊಂದು ಹೆಸರು. ಇವನು ವಿದ್ಯಾವಂತ ಮತ್ತು ಪ್ರಸಿದ್ಧ ಚಕ್ರವರ್ತಿ. ಇವನ ತಾಯಿ ಕಾಚನೆ ಎಂಬ ಅಪ್ಸರೆ. ಇವನ ಮಗ ಮತಿನಾರ (ಮ.ಆ.). ೨. ಶ್ರೀಕೃಷ್ಣನ ಅನುಯಾಯಿಯಾದ ಯಾದವನೊಬ್ಬ. ನೋ. - ಮತಿನಾರ, ಮನಸ್ಸು (ಮ.ಆ., ವಿಷ್ಣುಪು.).

ಅನಾವೃಷ್ಟಿ - ಸಂವರಣನ ರಾಜ್ಯದಲ್ಲಿ ಬಂದ ಬರಗಾಲ. ಅಂಗದೇಶದ ರೋಮಪಾದನ ಮತ್ತು ಗೌತಮಾಶ್ರಮದಲ್ಲಿ ಬಂದ ಕ್ಷಾಮಗಳು (ಮ.ಆ.,ವ.,ಶಿವಪು).

ಅನಿಕೇತ - ಯಕ್ಷನೊಬ್ಬ (ಮ.ಸ.).

ಅನಿಮಿಷ - ದೇವತೆ. ಗರುಡಪುತ್ರ (ಮ.ಉ.).

ಅನಿರುದ್ಧ - ಶ್ರೀ ಕೃಷ್ಣ ಮತ್ತು ರುಕ್ಮಿಣಿಯರ ಮೊಮ್ಮಗ; ಪ್ರದ್ಯುಮ್ನನ ಪುತ್ರ. ಇವನ ತಾಯಿ ರುಕ್ಮವತಿ; ಪತ್ನಿ ರುಕ್ಮಿಯ ಮಗಳಾದ ರೋಚನೆ ಮತ್ತು ಬಾಣಾಸುರನ ಮಗಳಾದ ಉಷೆ. ಉಷೆಯ ಮಗನೇ ವಜ್ರ. ನೋ. - ಉಷಾ (ಮ.ಆ.,ಸ.,ದ್ರೋ.).

ಅನಿಲ - ೧. ವಾಯುವಿನ ಹೆಸರು (ಮ.ಆ.). ೨. ಮಾಲಿ ಮತ್ತು ವಸುಧೆಯ ಮಗ. ನೋ. - ಮಾಲಿ. ೩. ಗರುಡನ ಮಗ (ಮ.ಉ.). ೪. ಅಷ್ಟವಸುಗಳಲ್ಲೊಬ್ಬ; ಇವನ ಪತ್ನಿ ಶಿವೆ. ಮಕ್ಕಳು ಮನೋಜವ ಮತ್ತು ಅವಿಜ್ಞಾತಗತಿ (ಮ.ಆ.). ೫. ಕ್ಷತ್ರಿಯ; ವೃಷಾದರ್ಭಿಯ ಮಗ. ವೃಷಾದರ್ಭಿಯ ಯಜ್ಞದಲ್ಲಿ ಋತ್ವಿಜರಾದ ಸಪ್ತರ್ಷಿಗಳಿಗೆ ದಕ್ಷಿಣೆಯ ಬದಲು ತನ್ನ ಮಗನ ಶವವನ್ನು ದಕ್ಷಿಣೆಯಾಗಿ ಕೊಡಲು ಅವರು ಅದನ್ನೇ ತಿನ್ನತೊಡಗಿದರು. (ಮ.ಅನು.).

ಅನೀಕವಿದಾರಣ - ಕ್ಷತ್ರಿಯ. ಜಯದ್ರಥನ ಸಹೋದರ (ಮ.ವ.).

ಅನು - ಕ್ಷತ್ರಿಯ; ಚಂದ್ರವಂಶ; ಯಯಾತಿಯ ಮಗ. ಈತನ ತಾಯಿ ವೃಷಪರ್ವನ ಮಗಳಾದ ಶರ್ಮಿಷ್ಠೆ ; ಇವನಿಗೆ ದ್ರುಹು ಮತ್ತು ಪೂರು ಎಂಬುವರು ಸೋದರರು. ಈತನು ತಂದೆಯ ಮುಪ್ಪನ್ನು ತೆಗೆದುಕೊಳ್ಳದಿರಲು- 'ನಿನ್ನ ಸಂತತಿಯವರು ಯೌವನಪ್ರಾಪ್ತವಾದೊಡನೆ ಸಾಯಲಿ; ಅಗ್ನಿಕಾರ್ಯಗಳು ನಿನ್ನನ್ನು ಬಿಟ್ಟು ಹೋಗಲಿ' ಎಂದು ಅವನಿಂದ ಶಾಪಹೊಂದಿ ರಾಜ್ಯಕ್ಕೆ ಅನರ್ಹನಾಗಲು, ಮ್ಲೇಚ್ಛ ರಾಜ್ಯಾಧಿಪತಿಯಾದನು (ಮ.ಆ.). ನೋ. - ದೇವಯಾನಿ, ಶರ್ಮಿಷ್ಠೆ, ಯಯಾತಿ.

ಅನುಕಂಪನ - ನೋ. - ಅನುಕಂಪನ.

ಅನುಗೀತೆ - ಶ್ರೀ ಮಹಾಭಾರತದ ಅಶ್ವಮೇಧಿಕ ಪರ್ವದ ೧೭ನೆಯ

ಅಧ್ಯಾಯದಿಂದ ೯೫ನೆಯ ಅಧ್ಯಾಯದವರೆಗೆ ಅನುಗೀತಾಪರ್ವವೆಂಬ ಹೆಸರಿದೆ. ಇದನ್ನು ಸಿದ್ಧನು ಕಶ್ಯಪನಿಗೆ ಹೇಳಿದನೆಂದು ಶ್ರೀಕೃಷ್ಣನು ಅರ್ಜುನನಿಗೆ ಹೇಳುತ್ತಾನೆ. ಇದು ಬ್ರಾಹ್ಮಣ ದಂಪತಿಗಳ ಸಂಭಾಷಣ ರೂಪದಲ್ಲಿದೆ. ಇದರಲ್ಲಿ - ಜನನ ಮರಣತತ್ತ್ವ, ಜೀವನ ಗರ್ಭಪ್ರವೇಶಾದಿ ವ್ಯಾಪಾರಗಳು, ಮೋಕ್ಷಸಾಧನ ಮಾರ್ಗ, ಭೂತಗಳಲ್ಲಿ ಪ್ರಾಣಾದಿ ಸೃಷ್ಟಿಕ್ರಮ, ಪ್ರಾಣಾಪಾನಾದಿಗಳ ಮೇಲ್ಮೆ, ಯಾಗದಲ್ಲಿ ಪಶುಹಿಂಸೆಯು ಅಧರ್ಮವಲ್ಲ, ಪತ್ನಿಯರನ್ನು ಪತಿಯು ಹಿಂಸಿಸಬಾರದು - ಈ ಕುರಿತು, ಪರಶುರಾಮಚರಿತ್ರೆ, ಪರಶುರಾಮನಿಗೆ ಆತನ ಪಿತೃಗಳು ಹೇಳಿದ ಆಲರ್ಕನೆಂಬ ರಾಜರ್ಷಿಯ ಚರಿತ್ರೆ - ಇತ್ಯಾದಿಗಳು ಬರುವುವು (ಮ.ಅಶ್ವ).

ಅನುಪಮೆ - ಕುಮುದವೆಂಬ ದಿಗ್ಗಜದ ಪತ್ನಿ.

ಅನುಮತಿ - ಅಂಗಿರಸ ಮಹರ್ಷಿಯ ಮಗಳು; ಈಕೆಯ ತಾಯಿ ಶ್ರದ್ಧೆ; ಈಕೆಗೆ ಮೂವರು ಸೋದರಿಯರು (ಭಾಗ.).

ಅನುವಿಂದ - ೧. ಕ್ಷತ್ರಿಯ; ಆವಂತಿಯ ರಾಜ; ಈತನ ತಂದೆ ಜಯಸೇನ; ತಾಯಿ ವಸುದೇವನ ತಂಗಿ ರಾಜಾಧಿದೇವಿ. ಈತನಿಗೆ ವಿಂದನೆಂಬ ಸಹೋದರನೂ. ಮಿತ್ರವಿಂದೆ ಎಂಬ ಸೋದರಿಯೂ ಇದ್ದರು. ಮಿತ್ರವಿಂದೆ ಶ್ರೀಕೃಷ್ಣನ ಪತ್ನಿ. ಈತ ದುರ್ಯೋಧನನ ಪಕ್ಷದವ. ಅರ್ಜುನನಿಂದ ಕೊಲ್ಲಲ್ಪಟ್ಟನು (ಮ.ದ್ರೋ.). ೨. ಕೇಕಯ ದೇಶದ ಕ್ಷತ್ರಿಯ; ದುರ್ಯೋಧನನ ಪಕ್ಷದವ. ಸಾತ್ಯಕಿಯಿಂದ ಕೊಲ್ಲಲ್ಪಟ್ಟನು. ೩. ಧೃತರಾಷ್ಟ್ರನ ಪುತ್ರ ; ಭೀಮನಿಂದ ಕೊಲ್ಲಲ್ಪಟ್ಟನು. (ಮ.ದ್ರೋ.).

ಅನುಷ್ಣಾ - ಒಂದು ನದಿ (ಮ.ಭೀ.).

ಅನುಸಾಲ್ವ - ಸಾಲ್ವರಾಜನ ತಮ್ಮ; ಸೌಭದೇಶದ ರಾಜ; ಅಣ್ಣನನ್ನು ಕೊಂದ ಸಿಟ್ಟಿನಿಂದ ಪಾಂಡವರ ಅಶ್ವಮೇಧದ ಕುದುರೆಯನ್ನು ಅಡಗಿಸಿ ಕೊನೆಗೆ ಪಾಂಡವರಿಗೆ ಶರಣು ಬಂದನು (ಜೈ.ಭಾ.).

ಅನುಹ್ಲಾ(ಹಾ)ದ - ರಾಕ್ಷಸ; ಹಿರಣ್ಯಕಶಿಪುವಿನ ಮಗ. ಜಂಭಾಸುರನ ಮಗಳು ಕಯಾಧು ಈತನ ತಾಯಿ; ಪ್ರಹ್ಲಾದ, ಸಂಹ್ಲಾದ, ಶಿಬಿ, ಬಾಷ್ಕಲರು ಈತನ ಸೋದರರು (ಮ.ಆ.,ಭಾಗ). ನೋ. - ಹಿರಣ್ಯಕಶಿಪು, ಕಯಾಧು, ಪ್ರಹ್ಲಾದ.

ಅನೂಚಾನೆ - ಅಪ್ಸರೆಯೊಬ್ಬಳು (ಮ.ಆ.).

ಅನೂಪ - ಕಾರ್ತವೀರ್ಯಾರ್ಜುನನ ದೇಶ. ಇದರ ರಾಜಧಾನಿ ಮಾಹಿಷ್ಮತಿ. ಇದನ್ನು ಈಗ ಮಾಳವದಲ್ಲಿ ಮೋಹೋ (Mhow) ಎನ್ನುತ್ತಾರೆ. ನೀಲನೆಂಬ ರಾಜನು ಇಲ್ಲಿ ಆಳುತ್ತಿದ್ದನು (ಮ.ವ.).

ಅನೂರು - ಅರುಣನ ಇನ್ನೊಂದು ಹೆಸರು; ತೊಡೆ ಮೊದಲಾದ ದೇಹದ ಕೆಳಗಣ ಭಾಗಗಳು ಬೆಳೆಯದೆ ಹುಟ್ಟಿದವನು. ಇವನ ತಾಯಿ ವಿನತೆ; ತಂದೆ ಕಶ್ಯಪ. ವಿನತೆಯು ತನ್ನನ್ನು ಪೂರ್ಣ ಬೆಳೆಯಗೊಡದೆ ಹೆತ್ತದ್ದಕ್ಕಾಗಿ ಆಕೆಗೆ ದಾಸಿಯಾಗುವಂತೆ ಶಾಪಕೊಟ್ಟನು (ಮ.ಆ.,ಅನು.) ನೋ. - ಅರುಣ.

ಅನೇನಾ (ಅನೇನಸ) - ೧. ಕ್ಷತ್ರಿಯ; ಸೂರ್ಯವಂಶ; ಇಕ್ಷ್ವಾಕು ವಂಶದ ಕಕುತ್ಸನ ಮಗ (ಮ.ವ.). ೨. ಪುರೂರವ ಪುತ್ರನಾದ ಆಯುವಿನ ಕಿರಿಯ ಮಗ. ನಹುಷಾದಿಗಳು ನಾಲ್ಕು ಮಂದಿ ಈತನ ಹಿರಿಯ ಸೋದರರು; ತಾಯಿ ಸ್ವರ್ಭಾನವಿ (ಮ.ಆ.,ಹರಿ.).

ಅನೌಪಮೆ - ಬಾಣಾಸುರನ ಪತ್ನಿ; ಈ ಬಾಣಾಸುರನು ಗಗನಮಂಡಲದಲ್ಲಿ ಚರಿಸುವ ತ್ರಿಪುರಗಳನ್ನು ನಿರ್ಮಿಸಿಕೊಂಡನು.

ಅಂತರ್ಗಿರಿ - ಒಂದು ದೇಶ; ರಾಜಸೂಯದ ಮೊದಲು ಅರ್ಜುನನು ಇದನ್ನು ಜಯಿಸಿದನು. (ಮ.ಸ.).

ಅಂತರ್ದ್ವೀಪ - ದ್ವಾರಕೆಯ ಉಪದ್ವೀಪ; ಇಲ್ಲಿ ಯಾದವರು ಮಹಾದೇವನ ಕುರಿತು ಮಹೋತ್ಸವವನ್ನು ಆಚರಿಸಿದರು (ಮ.ಆ.).

ಅಂತರ್ಧಾನ - ಉತ್ತಾನಪಾದನ ವಂಶದ ಪೃಥುಚಕ್ರವರ್ತಿಯ ಮಗ; ಇವನು ಅದೃಶ್ಯನಾಗಿ ಸಂಚರಿಸುವ ಶಕ್ತಿಯುಳ್ಳವನು; ವಿಜಿತಾಶ್ವನೆಂಬುದು ಇವನ ಇನ್ನೊಂದು ಹೆಸರು; ಇವನ ಪತ್ನಿಯರು ಶಿಖಂಡಿ ಮತ್ತು ನಭಸ್ವತಿ. ಶಿಖಂಡಿಗೆ ಪಾವಕ, ಪವಮಾನ, ಶುಚಿ ಎಂಬ ಮೂವರು ಮಕ್ಕಳು. ನಭಸ್ವತಿಗೆ ಹವಿರ್ಧಾನನೆಂಬ ಒಬ್ಬ ಮಗ (ಭಾಗ.).

ಅಂತ್ಯನಾರ - ಚಂದ್ರವಂಶ; ಪುರುವಂಶದ ರಚಪುತ್ರನಾದ ಋಕ್ಷನ ಮಗ; ಇವನ ತಾಯಿ ಜ್ವಲಂತಿ; ಹೆಂಡತಿ ಸರಸ್ವತೀ ನದಿ; ಪುತ್ರ ತ್ರಸ್ನು (ಮ.ಆ.).

ಅಂಧಕ - ೧. ಒಬ್ಬ ಅಸುರ; ದ್ವಿತೀಯ ಪುತ್ರ. ತಂದೆ ಕಶ್ಯಪ. ಶಿವನಿಂದ ಹತನಾದ. (ಮ.ದ್ರೋ., ಹರಿ.). ೨. ಯದುವಂಶದ ಕ್ರೋಷ್ಟನ ಮೊಮ್ಮಗ; ಅನುವಿನ ಮಗ (ಹರಿ). ೩. ಒಬ್ಬ ದಾನವ. ತಂದೆ ಕಶ್ಯಪ. ತಾಯಿ ದನು. ಒಮ್ಮೆ ಶಿವನಿಗೂ ಇವನಿಗೂ ಭಯಂಕರ ಹೋರಾಟವಾಗಿ ಈತನ ಮೈಯಿಂದ ಹಾರಿದ ಒಂದೊಂದು ಹನಿ ರಕ್ತಕ್ಕೂ ಒಬ್ಬೊಬ್ಬ ರಾಕ್ಷಸನು ಹುಟ್ಟಿಬರಲು ಇದನ್ನು ಕಂಡು ವಿಷ್ಣುವು ಶುಷ್ಕ ರೇವತಿಯೆಂಬ ರಾಕ್ಷಸಿಯನ್ನು ಸೃಷ್ಟಿಸಿ ಅಂಧಕನ ದೇಹದ ರಕ್ತವೆಲ್ಲಾ ಒಣಗುವಂತೆ ಮಾಡಿದನು. ಮುಂದೆ ಅಂಧಕನು ಶಿವನಿಗೆ ಪರಾಜಿತನಾಗಿ ಶರಣುಹೋದನು. ಇವನು ಶಿವನ ಪ್ರಥಮಗಣಗಳಲ್ಲಿ ಒಬ್ಬನಾದನು (ಮತ್ಸ್ಯಪು). ೪. ಮಹಿಷಾಸುರನ ಒಬ್ಬ ಸೇನಾಪತಿ. ತ್ರಿಪುರಸುಂದರಿಯನ್ನು ಮೋಹಿಸಿದ ಮಹಿಷಾಸುರನ ಪಕ್ಷದಲ್ಲಿ ನಿಂತು

ದೇವಿಯೊಂದಿಗೆ ಯುದ್ಧಮಾಡಿ ಆಕೆಯಿಂದ ಹತನಾದ (ಮಾರ್ಕಂ.ಪು., ಮತ್ಸ್ಯಪು, ದೇವೀಭಾ.). ೫. ರಾಕ್ಷಸನೊಬ್ಬ; ಈತನ ತಂದೆ ವಿಪ್ರಚಿತ್ತಿ ಎಂಬ ರಾಕ್ಷಸ; ಹಿರಣ್ಯಕಶಿಪುವಿನ ತಂಗಿ ಸಿಂಹಿಕೆ ಈತನ ತಾಯಿ; ವಾತಾಪಿ, ನಮುಚಿ, ಇಲ್ವಲ, ನರಕ, ಕಾಲನಾಭ, ಸ್ವರ್ಭಾನು ಮೊದಲಾದ ಹನ್ನೊಂದು ಮಂದಿ ಈತನ ಸಹೋದರರು. ಇವನು ಪಾರ್ವತಿಯನ್ನು ಮೋಹಿಸಿ ಶಿವನಿಂದ ಹತನಾದನು (ವಿಷ್ಣುಪು.).

ಅಂಧಕಾರಕ - ಕ್ರೌಂಚ ಪರ್ವತದ ಸಮೀಪವಿದ್ದ ಒಂದು ಪರ್ವತ (ಮ.ಭೀ.).

ಅನ್ನಪೂರ್ಣೆ - ಕಾಶೀಕ್ಷೇತ್ರದ ಶಕ್ತಿದೇವತೆ; ಶಿವನ ಪತ್ನಿ; ಕಾಶಿಯಲ್ಲಿ ವಿಶ್ವನಾಥನ ಮಂದಿರದಿಂದ ಈಕೆಯ ದೇವಾಲಯ ತುಸು ದೂರದಲ್ಲಿದೆ. ಅಲ್ಲಿ ಬೆಳ್ಳಿಯ ಸಿಂಹಾಸನದ ಮೇಲೆ ಅನ್ನಪೂರ್ಣೆಯ ಮೂರ್ತಿ ಇದೆ.

ಶ್ರೀರಾಮನು ವನವಿಹಾರಕ್ಕೋಸ್ಕರ ದಂಡಕಾರಣ್ಯಕ್ಕೆಂದು ಬಂದು ಅಗಸ್ತ್ಯಮಹರ್ಷಿಗಳ ಆಶ್ರಮವನ್ನು ಪ್ರವೇಶಿಸಿದನು. ಅಗಸ್ತ್ಯನು ಶ್ರೀರಾಮನನ್ನೂ ಅವನ ಕುಟುಂಬ ಪರಿವಾರವನ್ನೂ ಸಂತೋಷದಿಂದ ಸ್ವಾಗತಿಸಿದನು. ಅವನು ಈ ರಾಜಪರಿವಾರದವರ ಉಪಚಾರಕ್ಕಾಗಿ ಅನ್ನಪೂರ್ಣೆಯನ್ನು ಧ್ಯಾನಮಾಡಲು ಅವಳು ಪ್ರಸನ್ನಳಾಗಿ ಅಗಸ್ತ್ಯನಿಗೆ ಒಂದು ಸುವರ್ಣದ ಪಾತ್ರೆಯನ್ನಿತ್ತು 'ಲೋಪಾಮುದ್ರೆಯು ಭೋಜನ ಮಾಡುವವರೆಗೂ ಎಷ್ಟು ಸಾವಿರ ಜನ ಬಂದರೂ ಈ ಪಾತ್ರೆಯಲ್ಲಿ ಅನ್ನ, ಭಕ್ಷ್ಯ, ಭೋಜ್ಯಗಳು ಸಿದ್ಧವಾಗಿರಲಿ' ಎಂದು ವರ ಕೊಟ್ಟು ಅಂತರ್ಹಿತಳಾದಳು. ಅಗಸ್ತ್ಯನು ಈ ಅಕ್ಷಯ ಪಾತ್ರೆಯ ಸಹಾಯದಿಂದ ಶ್ರೀರಾಮನ ಪರಿವಾರವನ್ನು ಸಂತೋಷಪಡಿಸಿದನು. (ಆನಂ.ರಾ.).

ಅನ್ವಗ್ಭಾನು - ಕ್ಷತ್ರಿಯ; ಚಂದ್ರವಂಶ; ಇವರ ತಂದೆ ಪುರುವಿನ ಪೌತ್ರನಾದ ಮನ; ತಾಯಿ ಮಿಶ್ರಕೇಶಿ ಎಂಬ ಅಪ್ಸರೆ (ಮ.ಆ.).

ಅಪರನಂದೆ - ಋಷಭಕೂಟ ಪರ್ವತದಲ್ಲಿ ಹುಟ್ಟುವ ನದಿ; ಇದರ ಹೆಸರು ಶುಕ್ರೀ ಎಂದು. ಇದು ಗಯಾ ಮತ್ತು ಪಾಟ್ನಾ ಜಿಲ್ಲೆಯಲ್ಲಿ ಹರಿದು ಗಂಗಾನದಿಗೆ ಸೇರುತ್ತದೆ (ಮ.ವ.).

ಅಪರಬಲ್ಲವ - ಒಂದು ದೇಶ (ಮ.ಭೀ).

ಅಪರಸೇಕ - ಸೇಕದೇಶದ ಸಮೀಪ ಪ್ರಾಂತ; ರಾಜಸೂಯ ಯಾಗದ ಕಾಲದಲ್ಲಿ ಸಹದೇವನು ಇದನ್ನು ಗೆದ್ದನು (ಮ.ಸ.).

ಅಪರಾಚೀನ - ಕ್ಷತ್ರಿಯ; ಪುರುವಂಶದ ಜಯತ್ಸೇನನ ಮಗ; ಇವನ ತಾಯಿ ಸುಶ್ರವೆ; ಹೆಂಡತಿ ಮರ್ಯಾದೆ ; ಮಗ ಅರಿದ (ಮ.ಆ.).

ಅಪರಾಜಿತ - ೧. ಕ್ಷತ್ರಿಯ; ಚಂದ್ರವಂಶ; ಧೃತರಾಷ್ಟ್ರನ ಮಗ; ಭೀಮನಿಂದ ಹತನಾದ (ಮ.ಭೀ.). ೨. ಒಂದು ಸರ್ಪ (ಮ.ಆ.). ೩. ಕಾಲೇಯಾಂಶದ ಕ್ಷತ್ರಿಯ (ಮ.ಆ.).

ಅಪರಾಂತ - ಪಶ್ಚಿಮ ಕರಾವಳಿಯ ಕರ್ನಾಟಕದ ಉತ್ತರ ಭಾಗ; ಕೊಂಕಣ ಪ್ರಾಂತ (ಮ.ಭೀ.).

ಅಪರ್ಣೆ - ಪಾರ್ವತಿ; ಈಕೆಯು ಶಿವನನ್ನು ವಿವಾಹವಾಗಲು ಪರ್ಣ (ಎಲೆ)ಗಳನ್ನೂ ತಿನ್ನದೆ ಘೋರತಪಸ್ಸನ್ನು ಮಾಡಿ ಶಿವನನ್ನೊಲಿಸಿದಳು (ಹರಿ.ಮತ್ಸ್ಯಪು.).

ಅಪಾನ - ಪಂಚಪ್ರಾಣಗಳಲ್ಲಿ ಗುದಪ್ರದೇಶದಲ್ಲಿರುವ ವಾಯು.

ಅಪಾಂತರತಮ - ೧. ನಾರಾಯಣನ ಅವತಾರ ವಿಶೇಷ. ೨. ಸಾರಸ್ವತವೆಂಬ ಹೆಸರಿನ ಬ್ರಹ್ಮರ್ಷಿ; ಇವನಿಗೆ ಪ್ರಾಚೀನಗರ್ಭ ಮತ್ತು ವೇದಾಚಾರ್ಯನೆಂಬ ಹೆಸರಿದೆ.

ಅಪಾಂಡವೇಯಾಸ್ತ್ರ - ಅಶ್ವತ್ಥಾಮನಿಂದ ಪಾಂಡವರ ಮೇಲೆ ಪ್ರಯೋಗಿಸಲ್ಪಟ್ಟ ಅಸ್ತ್ರ (ಮ.ಶಾಂ.). ಐಷೀಕಾಸ್ತ್ರ (ಮ.ಸೌ.).

ಅಪ್ಸರಸೆ - ದೇವಲೋಕದ ವೇಶ್ಯೆ; ಇವಳು ಸಮುದ್ರಮಥನಕಾಲದಲ್ಲಿ ಜನಿಸಿದವಳು (ಮ.ಆ.,ಸ.,ವ.,ಅನು.). ಅನೂಚಾನೆ, ಅನವದ್ಯೆ, ಗುಣಮುಖ್ಯೆ, ಗುಣಾವರೆ, ಅಧಿಕೆ, ಸೋಮೆ, ಮಿಶ್ರಕೇಶಿ, ಅಲಂಬುಸೆ, ಮರೀಚಿ, ಶುಚಿಕೆ, ವಿದ್ಯುತ್ಪರ್ಣೆ, ತಿಲೋತ್ತಮೆ, ಅಂಬಿಕೆ, ಲಕ್ಷಣೆ, ಕ್ಷೇಮೆ, ದೇವಿ, ರಂಭೆ, ಮನೋರಮೆ, ಅಸಿತೆ, ಸುಬಾಹು, ಸುಪ್ರಿಯೆ, ವಪುಸ್ಸು, ಪುಂಡರೀಕೆ, ಸುಗಂಧೆ, ಸುರಸೆ, ಪ್ರಮಾಥಿನಿ, ಸೌಮ್ಯೆ, ಶಾರದ್ವತೆ, ಮೇನಕೆ, ಸಹಜನ್ಯೆ, ಕರ್ಣಿಕೆ, ಪುಂಜಿಕಸ್ಥಲೆ, ಋತುಸ್ಥಲೆ, ಘೃತಾಚಿ, ವಿಶ್ವಾಚಿ, ಪೂರ್ವಚಿತ್ತಿ, ಉಮ್ಲೋಚೆ, ಪ್ರಮ್ಲೋಚೆ, ಊರ್ವಶಿ - ಇವರೆಲ್ಲಾ ಅಪ್ಸರೆಯರು (ಮ.ಆ.). ಅವರು ಬ್ರಹ್ಮನ ಅಂಗೈಯಿಂದ ಜನಿಸಿದವರೆಂದು ಹೇಳುತ್ತಾರೆ. ಇಂದ್ರನ ಸಭೆಯಲ್ಲಿ ನರ್ತಿಸುವುದೇ ಅವರ ಮುಖ್ಯ ಕರ್ತವ್ಯ. ನೋ. - **ಊರ್ವಶಿ, ತಿಲೋತ್ತಮೆ, ರಂಭೆ.**

ಅಪ್ಸುಹೋಮ್ಯ - ಒಬ್ಬ ಋಷಿ (ಮ.ಸ.).

ಅಭಯ - ಒಬ್ಬ ಕ್ಷತ್ರಿಯ; ಚಂದ್ರವಂಶ; ಧೃತರಾಷ್ಟ್ರನ ಮಗ (ಮ.ಆ.). ಭೀಮನಿಂದ ಹತನಾದ (ಮ.ದ್ರೋ.).

ಅಭಿಚಾರ - ನೋ. -ಕೃತ್ಯ. ಸೋಮಕ ರಾಜನ ಋತ್ವಿಜನು, ಅಭಿಚಾರಕ್ರಿಯೆಯಿಂದ ನರಕವನ್ನು ಪಡೆದನು.

ಅಭಿಜಿತ್ತು - ದಕ್ಷಬ್ರಹ್ಮನ ಮಗಳು, ಯಾವಾಗಲೂ ರೋಹಿಣಿಯ ಪಕ್ಕದಲ್ಲಿರುವ ನಕ್ಷತ್ರ; ಚಂದ್ರನ ಪತ್ನಿ.

ಅಭಿಭೂ - ಕಾಶೀರಾಜನ ಮಗ; ಭಾರತ ಯುದ್ಧದಲ್ಲಿ ಪಾಂಡವ ಪಕ್ಷದಲ್ಲಿ ನಿಂತು ಹೋರಾಡಿ ವಸುದಾನನೆಂಬ ರಾಜನಿಂದ ಹತನಾದನು (ಮ.ಉ., ದ್ರೋ.,ಕ.).

ಅಭಿಮನ್ಯು - ಒಬ್ಬ ಕ್ಷತ್ರಿಯ; ಚಂದ್ರವಂಶ, ಅರ್ಜುನ ಮತ್ತು ಸುಭದ್ರೆಯರ ಮಗ. ಶ್ರೀಕೃಷ್ಣನ ಸೋದರಳಿಯ (ಭಾಗ., ಮ.ಆ.,ಉ.). ಇವನ ಸಾರಥಿ ಸುಮಿತ್ರ; ಹೆಂಡತಿ ವಿರಾಟರಾಜನ ಪುತ್ರಿಯಾದ ಉತ್ತರೆ ಮತ್ತು ಬಲರಾಮನ ಮಗಳಾದ ಶಶಿರೇಖೆ; ಮಗ ಪರೀಕ್ಷಿತ; ಅಭಿಮನ್ಯುವಿನ ವಿದ್ಯಾಗುರುಗಳು ಶ್ರೀಕೃಷ್ಣಾರ್ಜುನರು; ಇವನು ದ್ರೋಣಾಚಾರ್ಯನು ನಿರ್ಮಿಸಿದ ಚಕ್ರವ್ಯೂಹದಲ್ಲಿ ಷಡುರಥಿಕರನ್ನು ಪರಾಜಯಗೊಳಿಸಿದನು: ಇವನಿಂದ ಅಂಬಷ್ಟ ಮತ್ತು ಅಲುಂಬಸರ ಪರಾಜಯವಾಯಿತು (ಮ.ಭೀ). ಕರ್ಣನು ಕಪಟಯುದ್ಧದಲ್ಲಿ ಇವನ ಹಸ್ತಗಳನ್ನು ಕತ್ತರಿಸಿದನು. ದುಶ್ಶಾಸನನ ಮಗನಿಂದ ಸಾಯುವಾಗ ಅವನನ್ನು ಕೊಂದು ತಾನು ಪ್ರಾಣಬಿಟ್ಟನು. (ಮ.ದ್ರೋ.). ಇವನು ಅತಿರಥಾಗ್ರಣಿ; ಚಂದ್ರನ ಅಂಶದಿಂದ ಜನಿಸಿದವ (ಮ.ಸ್ವ.).

ಸೋಮಪುತ್ರನಾದ ವರ್ಚಸ್ಸಿನ ಅಂಶದಿಂದ ಹುಟ್ಟಿದವ (ಮ.ಆ.). ಇವನ ಧ್ವಜ ಸುವರ್ಣದಿಂದ ಚಿತ್ರಿಸಲ್ಪಟ್ಟ ಕರ್ಣಿಕಾರ ವೃಕ್ಷದ್ದು (ಮ.ಭೀ.).

ವರ್ಚಸ್ಸೆಂಬುವನು ಚಂದ್ರನಿಗೆ ಪ್ರೇಮಪಾತ್ರನಾದ ಮಗನು. ದೇವತೆಗಳೆಲ್ಲಾ ತಮ್ಮ ತಮ್ಮ ಅಂಶದಿಂದ ಹುಟ್ಟಿದಾಗ ಚಂದ್ರನು ತನ್ನ ಪ್ರಾಣಕ್ಕಿಂತ ಪ್ರಿಯನಾದ ಮಗನನ್ನು ಕಳುಹಿಸಲು ಇಷ್ಟವಿಲ್ಲದೆ ಸ್ವಲ್ಪ ಕಾಲ ಮಾತ್ರ ಭೂಮಿಗೆ ಹೋಗಲು ಅಪ್ಪಣೆ ಕೊಟ್ಟನು. ಇವನು ತನ್ನ ಅರ್ಧ ದಿನದ ಯುದ್ಧದಲ್ಲಿ ಕುರುಸೇನೆಯ ಕಾಲು ಭಾಗವನ್ನು ನಾಶಮಾಡಿದನು. (ಮ.ಆ.).

ಅಭಿಷ್ಯಂತ - ಕ್ಷತ್ರಿಯ; ಚಂದ್ರವಂಶ; ಕುರುರಾಜನ ಪುತ್ರ. ಇವನ ತಾಯಿ ವಾಹಿನಿ (ಮ.ಆ.).

ಅಭಿಸಾರ (ಅಭಿಸಾರಿ) - ತಕ್ಷಶಿಲೆಯ ಉತ್ತರದಲ್ಲಿರುವ ದೇಶ. ಇಲ್ಲಿಯ ರಾಜ ಚಿತ್ರಸೇನ; ಇವನು ರಾಜಸೂಯಯಾಗ ಕಾಲದಲ್ಲಿ ಅರ್ಜುನನಿಂದ ಪರಾಜಿತನಾದನು. ಇದು ಇಂದಿನ ಹಯಾರಾ (Hayara) ಪ್ರಾಂತ (ಮ.ಸ.,ಭೀ.).

ಅಭೀರು - ರಾಜರ್ಷಿಯೊಬ್ಬ (ಮ.ಆ.).

ಅಭೀಷಾಹ - ಒಂದು ದೇಶ (ಮ.ಭೀ.).

ಅಭ್ರಮು - ಐರಾವತ ಎಂಬ ದಿಗ್ಗಜದ ಪತ್ನಿ.

ಅಮರನಾಥ - ಹಿಮಾಲಯದ ಗಿರಿಶಿಖರಗಳ ನಡುವೆ ಸಮುದ್ರಮಟ್ಟಕ್ಕಿಂತ ೧೨,೭೨೯ ಅಡಿ ಎತ್ತರದಲ್ಲಿರುವ ಒಂದು ಪ್ರಸಿದ್ಧ ಶಿವಕ್ಷೇತ್ರ. ಇಲ್ಲಿರುವ ಅಮರನಾಥ ಗುಹೆ ೫೦ ಅಡಿ ಅಗಲ, ೫೫ ಅಡಿ ಉದ್ದ, ೪೫ ಅಡಿ ಎತ್ತರವಿದೆ. ಇದರೊಳಗೆ ನಡುವೆ ಅಮರನಾಥ, ಬಲದಲ್ಲಿ ಗಣಪತಿ, ಪಾರ್ವತಿಯ ಮಂಜಿನ ಲಿಂಗಗಳಿವೆ. ಈ ಗುಹೆಯೊಳಗೆ ನೀರು ತೊಟ್ಟಿಕ್ಕುತ್ತಿದ್ದರೂ ಮಂಜುಗಡ್ಡೆ ಆಗದೆ ಈ ಮೂರು ಮಾತ್ರ ಹಿಮಲಿಂಗವಾಗಿ ಶುಕ್ಲಪಕ್ಷದಲ್ಲಿ ವೃದ್ಧಿಯಾಗುವುದೂ, ಕೃಷ್ಣಪಕ್ಷದಲ್ಲಿ ಕ್ಷಯಿಸುತ್ತಿರುವುದೂ ಪರಮ ಆಶ್ಚರ್ಯದ ವಿಷಯವಾಗಿದೆ.

ಅಮರಬಾಹು - ಸೂರ್ಯವಂಶದ ಅನರಣ್ಯನ ಮಗ; ರಾವಣನು ತನ್ನ ತಂದೆಯನ್ನು ಕೊಂದ ಸೇಡನ್ನು ತೀರಿಸಲು ವಿಷ್ಣುವನ್ನು ಕುರಿತು ಘೋರ ತಪಸ್ಸು ಮಾಡಿದನು. ಆಗ ವಿಷ್ಣುವು ಅಮರಬಾಹುವಿಗೆ ಪ್ರತ್ಯಕ್ಷನಾಗಿ, 'ರಾವಣನು ನಿನ್ನಿಂದ ಹತನಾಗಲಾರ. ನಾನೇ ನಿನ್ನ ವಂಶದಲ್ಲಿ ಹುಟ್ಟಿ ಬಂದು ಕೊಲ್ಲುತ್ತೇನೆ.' ಎಂದು ಸಮಾಧಾನ ಮಾಡಿ ಅದೃಶ್ಯನಾದನು (ವಾ.ರಾ.ಉ.,ಮ.ಅನು.).

ಅಮರಾವತಿ - ಇಂದ್ರನ ರಾಜಧಾನಿ; ಸ್ವರ್ಗ; ಇದು ಪೂರ್ವದಿಕ್ಕಿನಲ್ಲಿದೆ.

ಅಮರ್ಕ - ಶುಕ್ರಾಚಾರ್ಯರ ಮಗ; ಶಂಡನ ತಮ್ಮ. ಶಂಡ, ಅಮರ್ಕರಿಬ್ಬರೂ ಪ್ರಹ್ಲಾದನ ಗುರುಗಳು. ನೋ. - ಶಂಡ (ಭಾಗ.,ಮತ್ಸ್ಯಪು.).

ಅಮಾವಸು - ಕ್ಷತ್ರಿಯ; ಪುರೂರವನ ಮೊಮ್ಮಗ; ಆಯುರಾಜನ ಮಗ; ಇವನು ತನ್ನ ರಾಜ್ಯದಲ್ಲಾರೂ ಮಾಂಸಾಹಾರ ಮಾಡಬಾರದೆಂದು ಡಂಗೂರ ಸಾರಿದ್ದನು. ಇವನು ಕೊನೆಗೆ ಧ್ಯಾನದಿಂದಲೇ ದಿವ್ಯಲೋಕ ಸೇರಿದನು. ಒಮ್ಮೆ ದೇವತೆಗಳು ಯಜ್ಞದಲ್ಲಿ ಪಶು ಹಿಂಸೆ ಮಾಡಬೇಕೆಂದು ಇರುವಾಗ ಕೆಲವು ಮಹರ್ಷಿಗಳು 'ಹಿಂಸೆಯು ತಕ್ಕದಲ್ಲ' ಎಂದು ನಿಷೇಧಿಸಿದರು. ಆದರೂ ಇಂದ್ರನು ತನ್ನ ಹಟವನ್ನು ಬಿಡದುದರಿಂದ ಅಮಾವಸುವು ಮಧ್ಯಸ್ಥನಾಗಿ ದೇವತೆಗಳ ಪರವಾಗಿ ಮಾತನಾಡಿ ಪಾತಾಳಕ್ಕೆ ಉರುಳಿ, ಭಗವಂತನ ನಾಮಸ್ಮರಣೆಯಿಂದ ಪುನಃ ಸ್ವರ್ಗವನ್ನು ಹೊಂದಿದನು (ಸ್ಕಾಂ.ಪು.,ಬ್ರಹ್ಮ.).

ಅಮಿತೌಜ - ಪಾಂಡವಪಕ್ಷೀಯನಾದ ಪಾಂಚಾಲನೊಬ್ಬ (ಮ.ಉ.).

ಅಮೂರ್ತರಯ - ನೋ. - ಅಧೂರ್ತರಜ.

ಅಮೃತ - ೧. ಸಮುದ್ರಮಥನದಲ್ಲಿ ಹುಟ್ಟಿದ ದಿವ್ಯಪಾನ. ವಿನತೆಯ ದಾಸ್ಯ ಬಿಡಿಸಲು ಇದು ಗರುಡನಿಂದ ಭೂಮಿಗೆ ತರಲ್ಪಟ್ಟಿತು. ೨. ಶ್ರೀಕೃಷ್ಣನು ಉದಂಕ

ಋಷಿಗೆ ಇದನ್ನು ಕೊಟ್ಟದ್ದು (ಮ.ಆ.,ಭಾಗ.,ವಾ.ರಾ.ಬಾ.).

ಅಮೋಘ - ೧. ಸ್ವಾಹೆಯ ಮಗ; ಅಗ್ನಿವಿಶೇಷ (ಮ.ವ., ವಿಷ್ಣುಪು.,ಪದ್ಮಪು.,ಮ.ವ.) ೨. ಯಕ್ಷನೊಬ್ಬ.

ಅಂಬರೀಷ - ೧. ಕ್ಷತ್ರಿಯ; ಸೂರ್ಯವಂಶ; ವೈವಸ್ವತ ಮನುವಿನ ಮೊಮ್ಮಗ; ನಾಭಾಗನ ಮಗ. ಇವನು ಏಕಾದಶೀ ವ್ರತ ಮತ್ತು ದ್ವಾದಶೀ ಪಾರಣೆಯಲ್ಲಿ ನಿಷ್ಠೆ ಉಳ್ಳವನು. ಒಮ್ಮೆ ದುರ್ವಾಸನು ದ್ವಾದಶೀ ಪಾರಣೆಯ ಕಾಲದಲ್ಲಿ ಬಾರದಿದ್ದುದರಿಂದ ಅಂಬರೀಷನು ತೀರ್ಥಸೇವನೆಯನ್ನು ಮಾಡಿಬಿಟ್ಟ. ಇದರಿಂದ ದುರ್ವಾಸನಿಗೆ ಕ್ರೋಧ ಉಂಟಾಗಿ ಅಂಬರೀಷನ ನಾಶಕ್ಕಾಗಿ ಕೃತ್ಯೆಯೊಂದನ್ನು ನಿರ್ಮಾಣಮಾಡಿಬಿಡಲು, ಭಕ್ತರಕ್ಷಕನಾದ ಭಗವಂತನು ತನ್ನ ಚಕ್ರಾಯುಧದಿಂದ ಕೃತ್ಯೆಯನ್ನು ಸಂಹರಿಸಿ ಅಂಬರೀಷನನ್ನು ಕಾಪಾಡಿದನು. ಇವನಿಗೆ ವಿರೂಪ, ಕೇತುಮಂತ ಮತ್ತು ಶಂಭು ಎಂಬ ಮೂವರು ಮಕ್ಕಳಿದ್ದರು (ಭಾಗ., ಮ.ಸ.,ಅನು.,ದ್ರೋ.,ಶಾಂ.). ೨. ಕ್ಷತ್ರಿಯ; ಸೂರ್ಯವಂಶದ ಮಾಂಧಾತನ ಮಗ. ಇವನ ತಾಯಿ ಯದುವಂಶದ ಶಶಬಿಂದುರಾಜನ ಮಗಳಾದ ಬಿಂದುಮತಿ. ಇವನಿಗೆ ಪುರುಕುತ್ಸ ಮತ್ತು ಮುಚುಕುಂದರೆಂಬ ಸೋದರರಿದ್ದರು. ಇವನಿಗೆ ೫೦ ಮಂದಿ ಸೋದರಿಯರು. ಇವರನ್ನು ಸೌಭರಿಮುನಿಯು ಮದುವೆಯಾಗಿದ್ದ. ಅಂಬರೀಷನು ಯಜ್ಞವೊಂದರಲ್ಲಿ ಯಾಗಪಶುವನ್ನು ಕಳೆದುಕೊಳ್ಳಲು ಲಕ್ಷಗೋವುಗಳನ್ನು ಕೊಟ್ಟು ಶುನಶ್ಶೇಫನನ್ನು ಯಜ್ಞಪಶುವಾಗಿ ಪಡೆದು ಯಜ್ಞ ಪೂರೈಸಿದನು (ಭಾಗ.,ವಾ.ರಾ.ಬಾ.). ೩. ಇಕ್ಷ್ವಾಕುವಂಶದ ರಾಜ. ನಾರದ ಪರ್ವತರು ಈತನ ಮಗಳಾದ ಶ್ರೀಮತಿಯನ್ನು ಮದುವೆಯಾಗಲು ಸ್ಪರ್ಧಿಸಲು ವಿಷ್ಣುವು ತಾನೇ ಆಕೆಯನ್ನು ವಿವಾಹವಾದ. ಈ ಸ್ಪರ್ಧೆಯಲ್ಲಿ ನಾರದ ಪರ್ವತರ ಮುಖವು ಕಪಿಕೋಡಗಗಳ ಮುಖವಾಯಿತು. ನೋ. - ನಾರದ, ಪರ್ವತ (ಅಧ್ಯ.ರಾ.).

ಅಂಬರೀಷ ಗೀತೆ - ಇದು ಭಾರತದ ಆಶ್ವಮೇಧಿಕ ಪರ್ವತದ ಅನುಗೀತಾಪರ್ವದ ೩೨ನೆಯ ಅಧ್ಯಾಯ. ರಾಜದ್ವೇಷಾದಿ ಬಾಧೆಗಳಿಂದ ಲೋಕಕ್ಕೇ ಕೇಡುಂಟಾದಾಗ ಅಂಬರೀಷನು ರಾಜ್ಯಕ್ಕೆ ಬಂದು ವೈರಿಗಳನ್ನು ಅಡಗಿಸಿ, ಸಾಧುಗಳನ್ನು ಆದರಿಸಿ, ದೊಡ್ಡ ಸಿದ್ಧಿಯನ್ನು ಪಡೆದಮೇಲೆ ಸ್ವಾನುಭವದಿಂದ ಹಾಡಿದ ಗೀತೆಯೇ ಇದು. ಇದರಲ್ಲಿ 'ಲೋಭ ಮತ್ತು ಅರ್ಥಾಶೆಯಿಂದ ನಾನಾ ವಿಧದ ಚಿಂತೆಗಳು ಹುಟ್ಟುವುವು. ಈ ದುರ್ಗುಣಗಳಿಂದ ಮನುಷ್ಯನಿಗೆ ಪುನರ್ಜನ್ಮವಾಗುವುದು. ಇದರಿಂದ ಈ ದುರ್ಗುಣಗಳನ್ನು ಕಿತ್ತು ಮನಸ್ಸನ್ನು ನಿಗ್ರಹಿಸಬೇಕು' ಎಂದಿರುವನು (ಮ.ಅಶ್ವ.).

ಅಂಬಷ್ಠ (ಅಂಬಷ್ಠಕ) - ೧. ದುರ್ಯೋಧನಪಕ್ಷೀಯನಾದ ಕ್ಷತ್ರಿಯ. ಇವನು ಭಾರತ ಯುದ್ಧದಲ್ಲಿ ಅಭಿಮನ್ಯುವಿನೊಂದಿಗೆ ಯುದ್ಧ ಮಾಡಿದನು (ಮ.ಭೀ.). ಅರ್ಜುನನಿಂದ ಹತನಾದನು (ಮದ್ರೋ.). ೨. ಪಾಂಡವ ಪಕ್ಷೀಯನಾದ ಕ್ಷತ್ರಿಯ; ಇವನ ಮಗನನ್ನು ಕೌರವನ ಪುತ್ರ ಲಕ್ಷ್ಮಣನು (ಲಕ್ಷಣ) ಕೊಂದನು (ಮ.ಕ.). ೩. ಕುವಲಯಾಪೀಡವೆಂಬ ಆನೆಯ ಮಾವುತ; ಶ್ರೀಕೃಷ್ಣ ಬಲರಾಮರಿಂದ ಕುವಲಯಾ ಪೀಡದ ವಧೆಯಾಗುವಾಗ ಈತನೂ ಹತನಾದ. (ಭಾಗ.).

ಅಂಬಾ - ೧. ಕಾಶೀರಾಜನ ಹಿರಿಯ ಮಗಳು; ಅಂಬಿಕೆ ಮತ್ತು ಅಂಬಾಲಿಕೆಯರು ಈಕೆಯ ಸೋದರಿಯರು. ಸ್ವಯಂವರಕಾಲದಲ್ಲಿ ಇವರನ್ನು ಭೀಷ್ಮನು ವಿಚಿತ್ರವೀರ್ಯನಿಗಾಗಿ ಬಲಾತ್ಕಾರದಿಂದ ಹಸ್ತಿನಾವತಿಗೆ ಕೊಂಡೊಯ್ದನು. ಅಂಬೆಯು ಭೀಷ್ಮನನ್ನೇ ವಿವಾಹವಾಗುವೆನೆಂದು ಛಲತೊಡಲು, ಭೀಷ್ಮನು ಆಕೆಯನ್ನು ಬಿಟ್ಟು ಉಳಿದಿಬ್ಬರನ್ನು ವಿಚಿತ್ರವೀರ್ಯನಿಗೆ ವಿವಾಹ ಮಾಡಿದನು. ಅಂಬೆಯು ಭೀಷ್ಮನಿಗೆ ಬುದ್ಧಿಯನ್ನು ಹೇಳಲು ಪರಶುರಾಮನನ್ನೇ ಕರೆತಂದಳು. ಭೀಷ್ಮನು ಪರಶುರಾಮನ ಮಾತನ್ನು ತಿರಸ್ಕರಿಸಲು, ಗುರು-ಶಿಷ್ಯರಿಗೆ ಯುದ್ಧವಾಗಿ ಪರಶುರಾಮನು ಅಜೇಯನಾದ ಭೀಷ್ಮನನ್ನು ಗೆಲ್ಲಲಾರದೆ ಹೋದನು. ಇದರಿಂದ ಅಂಬೆಯು ಗಂಗಾತೀರದಲ್ಲಿ ಅಗ್ನಿಕುಂಡವನ್ನು ಮಾಡಿ ಹಾರಿ ಆತ್ಮಹತ್ಯೆ ಮಾಡಿಕೊಂಡು, ಮರುಜನ್ಮದಲ್ಲಿ ಶಿಖಂಡಿಯಾಗಿ ಜನ್ಮಿಸಿ ಭೀಷ್ಮನ ಮರಣಕ್ಕೆ ಕಾರಣಳಾದಳು (ಮ.ಆ.,ಉ.). ಅಂಬೆಯು ಸ್ವಯಂವರಕಾಲದ ಪುಷ್ಪ ಮಾಲಿಕೆಯನ್ನು ತಂದು ಪಾಂಚಾಲರಾಜನಾದ ಸೋಮಕನಿಗೆ (ದ್ರುಪದ) ಕೊಡ ಹೋಗಲು, ಅವನು ಭೀಷ್ಮನ ಭಯದಿಂದ ಆ ಮಾಲಿಕೆಯನ್ನು ಸ್ಪರ್ಶಿಸಲೂ ಬೆದರಿದನು. ಮುಂದೆ ಅಂಬೆಯು ಆ ಮಾಲಿಕೆಯನ್ನು ರಾಜದ್ವಾರದಲ್ಲಿ ತಗಲಿಸಿ ಓಡಿ ಹೋದಳು. ಆಮೇಲೆ ದ್ರುಪದನ ಮಗಳಾದ ಶಿಖಂಡಿ ಆ ಮಾಲೆಯನ್ನು ಕೊರಳಲ್ಲಿ ಧರಿಸಿದಳು (ಮ.ಆ.). ನೋ. - ಶಿಖಂಡಿ, ಭೀಷ್ಮ. ಅಂಬೆಯು ವಿವಾಹಕ್ಕಾಗಿ ಸಾಲ್ವ ಮತ್ತು ಭೀಷ್ಮರ ಬಳಿಗೆ ಅಲೆದಾಡುತ್ತಾ ಆರು ವರ್ಷ ಕಳೆದಳು. ಹನ್ನೆರಡು ವರ್ಷಕಾಲ ಹಿಮಾಲಯದ ಪಕ್ಕದಲ್ಲಿರುವ ಬಾಹುದಾ ನದೀತೀರದಲ್ಲಿ ತಪಸ್ಸು ಮಾಡಿದಳು. ಅವಳ ತಪಸ್ಸಿಗೆ ಮೆಚ್ಚಿದ ಕುಮಾರಸ್ವಾಮಿಯು ಆಕೆಗೊಂದು ಪುಷ್ಪಮಾಲಿಕೆಯನ್ನಿತ್ತು 'ಇದನ್ನು ಧರಿಸಿದವನು ಭೀಷ್ಮನ ಮರಣಕ್ಕೆ ಕಾರಣನಾಗುವನು' ಎಂದನು.

ಅಂಬಾಲಿಕೆ - ೧. ಕಾಶೀರಾಜನ ಮಗಳು; ಅಂಬೆಯ ತಂಗಿ; ವಿಚಿತ್ರವೀರ್ಯನ ಪತ್ನಿ. ಈಕೆಗೆ ಕೌಸಲ್ಯೆಯೆಂಬ ಹೆಸರಿದೆ (ಮ.ಆ.). ಈಕೆಯಲ್ಲಿ ವ್ಯಾಸನಿಂದ

ಧೃತರಾಷ್ಟ್ರನ ಜನನವಾಯಿತು. ಈಕೆಯು ಸತ್ಯವತಿ ಮತ್ತು ಅಂಬಿಕೆಯರೊಡನೆ ತಪೋವನವನ್ನು ಸೇರಿ ಅಲ್ಲೇ ದೇಹಬಿಟ್ಟಳು (ಮ.ಅನು.). ೨. ಅಪ್ಸರೆಯೊಬ್ಬಳು (ಮ.ಆ.).

ಅಂಬುಮತಿ - ನದಿಯೊಂದು (ಮ.ವ.).

ಅಂಬುವಾಹಿನಿ - ಒಂದು ನದಿ (ಮ.ಭೀ.)

ಅಂಬುವೀಚ - ಮಗಧ ರಾಜ; ಇವನ ಮಂತ್ರಿ ಮಹಾಕರ್ಣ. ಅಂಬುವೀಚನಿಗೆ ಉಸಿರಾಡುವ ಇಂದ್ರಿಯ ಮಾತ್ರ ಕೆಲಸ ಮಾಡುತ್ತಿತ್ತು; ಉಳಿದವೆಲ್ಲಾ ನಿಶ್ಚೇತನವಾಗಿದ್ದವು. ಇವನು ರಾಜ್ಯದ ಸಮಸ್ತ ಸೌಭಾಗ್ಯವನ್ನು ಅನುಭವಿಸುತ್ತಿದ್ದರೂ ರಾಜ್ಯವನ್ನು ಸಾಧೀನ ಮಾಡಿಕೊಳ್ಳಲಾರದೆ ಹೋದನು (ಮ.ಆ.).

ಅಂಬೋರುದ - ವಿಶ್ವಾಮಿತ್ರ ಋಷಿಯ ಮಗ (ಮ.ಅನು.).

ಅಂಶುಮಂತ - ಸೂರ್ಯವಂಶದ ಸಗರ ಚಕ್ರವರ್ತಿಯ ಮೊಮ್ಮಗ; ಅಸಮಂಜನ ಪುತ್ರ. ಈತನು ಕಪಿಲಮಹರ್ಷಿಯ ಸೂಚನೆಯಂತೆ ಪಿತೃಗಳಾದ ಸಾಗರರ ಸದ್ಗತಿಗಾಗಿ ಗಂಗೆಯನ್ನು ಭೂಲೋಕಕ್ಕೆ ತರಲು ತಪಸ್ಸು ಮಾಡಿ ಹಾಗೇ ಸ್ವರ್ಗಸ್ಥನಾದನು (ವಾ.ರಾ.ಬಾ.,ಮ.ವ.).

ಅಯತಿ - ಕ್ಷತ್ರಿಯ; ಚಂದ್ರವಂಶ; ನಹುಷನ ಮಗ; ಯಾಯಾತಿಯ ಸೋದರ (ಮ.ಆ.).

ಅಯಶಿಶಿರ - ರಾಕ್ಷಸ; ಇವನ ತಾಯಿ ದನು (ಮ.ಆ.)

ಅಯುತನಾಯಿ - ಕ್ಷತ್ರಿಯ. ಚಂದ್ರವಂಶ; ಪುರುವಂಶದ ಮಹಾಭೌಮನ ಮಗ; ಇವನ ತಾಯಿ ಸುಯಜ್ಞೆ. ಹೆಂಡತಿ ಭಾಸೆ; ಮಗ ಅಕ್ರೋಧನ (ಮ.ಆ).

ಅಯುತಾಯು - ಅಯೋಧ್ಯೆಯ ರಾಜ; ಋತುಪರ್ಣನ ತಂದೆ (ಮ.ವ.).

ಅಯೋಧ್ಯಾ - ಸರಯೂ ನದಿ ತೀರದಲ್ಲಿದ್ದ ಕೋಸಲ ದೇಶದ ರಾಜಧಾನಿ. ಭಾರತದ ಸಪ್ತಕ್ಷೇತ್ರಗಳಲ್ಲೊಂದು. ಇಲ್ಲಿ ಔಧ್ (Oudh) ಎಂಬುದು ಶ್ರೀರಾಮನ ಜನ್ಮಸ್ಥಾನ (ಮ.ವ.).

ಅಯೋಬಾಹು - ಕ್ಷತ್ರಿಯ, ಧೃತರಾಷ್ಟ್ರ ಪುತ್ರ (ಮ.ಆ.).

ಅಯೋಭುಜ - ಕ್ಷತ್ರಿಯ; ಧೃತರಾಷ್ಟ್ರಪುತ್ರ (ಮ.ಆ.). ಭೀಮನಿಂದ ಹತನಾದನು (ಮ.ದ್ರೋ.).

ಅಯೋಮುಖಿ - ಸೀತಾಪಹರಣದ ಅನಂತರ ಮಾತಂಗ ಮುನಿಯ ಆಶ್ರಮದ ಬಳಿ ಈಕೆ ರಾಮಲಕ್ಷ್ಮಣರನ್ನು ಸಂಧಿಸಿ ಶೂರ್ಪನಖಿಯ ಶಿಕ್ಷೆಯನ್ನೇ ಹೊಂದಿದಳು

(ವಾ.ರಾ.ಅರಣ್ಯ.). ಈಕೆಯೂ ರಾಕ್ಷಸಿ. ಜಿತೇಂದ್ರಿಯನಾದ ಲಕ್ಷ್ಮಣನನ್ನು ಮೋಹಿಸಲು ಅವನ ಖಡ್ಗಕ್ಕೆ ಕಿವಿಮೂಗುಗಳನ್ನಿತ್ತು ಓಡಿಹೋದಳು (ಹರಿ).

ಅರಜೆ - ಶುಕ್ರಾಚಾರ್ಯರ ಹಿರಿಯ ಮಗಳು. ನೋ. - ದಂಡಕ. ಈಕೆ ಅರಣ್ಯದಲ್ಲಿ ಒಬ್ಬಳೇ ಸಂಚರಿಸುತ್ತಿದ್ದಾಗ ದಂಡಕ ಎಂಬ ರಾಜನಿಂದ ಬಲಾತ್ಕರಿಸಲ್ಪಟ್ಟು ಶುಕ್ರಾಚಾರ್ಯನ ಬಳಿಗೆ ಹೋಗಿ ತನಗಾದ ಅವಮಾನವನ್ನು ತಿಳಿಸಲು ಅವನು ದಂಡಕನ ರಾಜ್ಯವನ್ನೇ ಅರಣ್ಯವಾಗುವಂತೆ ಶಾಪವಿತ್ತನು. ಇದೇ ಮುಂದೆ ದಂಡಕಾರಣ್ಯವಾಯಿತು (ವಾ.ರಾ.ಉ.).

ಅರಣೀಹರಣ - ಮೃಗರೂಪಿನ ಯಮನು ಪಾಂಡವರ ಕ್ಷೇಮಾರ್ಥವಾಗಿ ಮುನಿಗಳ ಯಜ್ಞಸಾಧನವಾದ ಅರಣಿಯನ್ನು ಹೊತ್ತುಕೊಂಡು ಹೋಗಲು ಪಾಂಡವರು ಅದನ್ನು ತಂದುಕೊಟ್ಟು ಅಜ್ಞಾತವಾಸದ ಕುರಿತು ಯೋಚಿಸತೊಡಗಿದರು (ಮ.ವ.).

ಅರಾಲಿ - ವಿಶ್ವಾಮಿತ್ರನ ಮಗನೊಬ್ಬ (ಮ.ಅನು.).

ಅರಿಮರ್ದನ - ನೋ. - ಸತ್ಯಕೇತು, ಪ್ರತಾಪಭಾನು. ಸತ್ಯಕೇತುರಾಜನ ಕಿರಿಯ ಮಗ; ಇವನೇ ಮುಂದೆ ಶಾಪದಿಂದ ಕುಂಭಕರ್ಣನಾದನು (ತು.ರಾ.).

ಅರಿಮೇಜಯ - ಕ್ಷತ್ರಿಯ; ಚಂದ್ರವಂಶ; ವೃಷ್ಣಿಕುಲೋತ್ಪನ್ನನು (ಮ.ದ್ರೋ.).

ಅರಿಷ್ಟ - ೧. ಯಮನ ಸಭೆಯಲ್ಲಿದ್ದ ಕ್ಷತ್ರಿಯನೊಬ್ಬ (ಮ.ಸ.). ೨. ತಾರ್ಕ್ಷ್ಯ ಎಂಬ ಹೆಸರಿನ ಮುನಿ (ಮ.ವ.). ೩. ವೃಷಭರೂಪದ ರಾಕ್ಷಸ. ಇವನು ಕಂಸನಿಂದ ಕಳುಹಿಸಲ್ಪಟ್ಟು ನಂದಗೋಕುಲದಲ್ಲಿ ಹಾವಳಿಯನ್ನೆಬ್ಬಿಸಿದನು. ಇದರಿಂದ ಶ್ರೀಕೃಷ್ಣನು ಇವನನ್ನು ಕೊಂದನು (ಭಾಗ.,ಹರಿ.,ವಿಷ್ಣುಪು.). ೪. ಮುನಿಯೊಬ್ಬ; ಹೈಹಯ ರಾಜಕುಮಾರನು ಈ ಮುನಿಯ ಮಗನನ್ನು ತಿಳಿಯದೇ ಕೊಲ್ಲಲಾಗಿ ಈ ಮುನಿಯು ತನ್ನ ತಪೋ ಮಹಿಮೆಯಿಂದ ಬಾಲಕನನ್ನು ಬದುಕಿಸಿಕೊಂಡನು. (ಮ.ವ.). ೫. ಪಾಂಡವರು ಅರಗಿನ ಮನೆಗೆ ಹೋಗುವ ಮೊದಲು ವಿದುರನ ಅಪ್ಪಣೆಯಂತೆ ಅರಿಷ್ಟ ಎಂಬ ಕಾಡಿಗೆ ಬಂದರು (ಮ.ಆ.).

ಅರಿಷ್ಟನೇಮಿ - ೧. ವಿನತೆಯ ಮಗ (ಮ.ಆ.). ೨. ಯಮಸಭೆಯ ಕ್ಷತ್ರಿಯನೊಬ್ಬ (ಮ.ಸ.). ೩. ಪಾಂಡುಪುತ್ರ ಸಹದೇವನು ವಿರಾಟನಗರದಲ್ಲಿಟ್ಟುಕೊಂಡ ಹೆಸರು. ಈತನ ಇನ್ನೊಂದು ಹೆಸರು ತಂತಿಪಾಲ (ಮ.ವಿ.). ೪. ಕಶ್ಯಪಮುನಿಯ ಮತ್ತೊಂದು ಹೆಸರು. ಇವನು ಸಗರ ರಾಜನೊಂದಿಗೆ ಮೋಕ್ಷಸಾಧನದ ವಿಷಯವಾಗಿ ಸಂಭಾಷಣೆ ನಡೆಸಿದ (ಮ.ಶಾಂ.).

ಅರಿಷ್ಟಸೇನ - ದುರ್ಯೋಧನ ಪಕ್ಷದ ಕ್ಷತ್ರಿಯನೊಬ್ಬ (ಮ.ಶಾಂ.).

ಅರಿಷ್ಟೆ - ಕಶ್ಯಪನ ಒಬ್ಬಳು ಪತ್ನಿ. ಹಾಹಾ ಮತ್ತು ಹೂಹೂ ಮೊದಲಾದ ಗಂಧರ್ವರ ಮತ್ತು ಅಲುಂಬುಷೆ ಮೊದಲಾದ ಅಪ್ಸರೆಯರ ತಾಯಿ (ಮ.ಆ.).

ಅರಿಹ - ಕ್ಷತ್ರಿಯನೊಬ್ಬ; ಚಂದ್ರವಂಶದ ಅಪರಾಚೀನನ ಪುತ್ರ. ಇವನ ತಾಯಿ ಮರ್ಯಾದೆ, ಪತ್ನಿ ಅಂಗಿ, ಮಗ ಮಹಾಭೌಮ (ಮ.ಆ.).

ಅರುಜ - ರಾಕ್ಷಸ; ರಾವಣನ ಅನುಚರ; ವಿಭೀಷಣನಿಂದ ಹತನಾದ (ಮ.ವ.).

ಅರುಣ - ೧. ವಿನತೆಯ ಮಗ. ಗರುಡನ ಅಣ್ಣ; ಸೂರ್ಯಸಾರಥಿ; ಇವನ ಪತ್ನಿ ತಾಮ್ರೆಯ ಮಗಳು ಶ್ಯೇನಿ ಮಕ್ಕಳು ಸಂಪಾತಿ ಮತ್ತು ಜಟಾಯು (ಮ.ಆ.). ನೋ. - ಅನೂರು. ೨. ಕಶ್ಯಪಮುನಿಯಿಂದ ದನು ಎಂಬ ಸ್ತ್ರೀಯಲ್ಲಿ ಹುಟ್ಟಿದ ವಿಪ್ರಚಿತ್ತಿ ಎಂಬ ದಾನವ ವಂಶದವ. ಈತನು ಗಾಯತ್ರೀಮಂತ್ರದ ಪುನರುಶ್ಚರಣೆಯಿಂದ ಯಾರಿಂದಲೂ ಸಾವು ಬಾರದ ವರವನ್ನು ಪಡೆದು ಲೋಕಕಂಟಕನಾಗಿದ್ದನು. ಆಗ ಬೃಹಸ್ಪತಿಯು ಆತನಿಗೆ ಗಾಯತ್ರೀಮಂತ್ರದಲ್ಲಿ ತಿರಸ್ಕಾರ ಹುಟ್ಟುವಂತೆ ಮಾಡಿದನು. ಇದರಿಂದ ಅರುಣನು ಶಕ್ತಿಹೀನನಾದನು. ಆಗ ದೇವತೆಗಳ ಪ್ರಾರ್ಥನೆಯಂತೆ ದುರ್ಗೆಯು ಭ್ರಮರಳಾಗಿ ಈತನನ್ನು ಮುತ್ತಿಕೊಂಡಳು (ದೇವಿಭಾ.).

ಅರುಣಾ - ೧. ಅರಿಷ್ಟೆಯ ಪುತ್ರಿಯಾದ ಅಪ್ಸರಸೆ (ಮ.ಆ.). ೨. ಸರಸ್ವತೀ ನದಿಯ ಬಳಿಯಲ್ಲಿ ಹರಿಯುವ ಒಂದು ನದಿ. ನೋ. ನಮುಚಿ. ಇದು ಕುರುಕ್ಷೇತ್ರದ ಸಮೀಪದಲ್ಲಿದೆ (ಮ.ಶ.). ೩. ಒಬ್ಬ ಮುನಿ (ಮ.ಶಾಂ.).

ಅರುಣಾಚಲ - ಅರುಣಾಚಲದ ತಮಿಳು ಹೆಸರು ತಿರುವಣಮಲೈ ಎಂದು. ನಂದೀಶ್ವರನು ಪೃಥ್ವಿಯ ಮೇಲೆ ಕೈಲಾಸದ ಮೂರು ಶಿಖರಗಳನ್ನು ಸ್ಥಾಪಿಸಿರುವನೆಂದೂ ಅವುಗಳೊಳಗೆ ಇದೂ ಒಂದೆಂದೂ ಹೇಳುತ್ತಾರೆ. ಇಲ್ಲಿ ಅರುಣಾಚಲೇಶ್ವರನ ಮಂದಿರ ಮತ್ತು ಸುಬ್ರಮಣ್ಯನ ದೇವಾಲಯಗಳು ಪ್ರಸಿದ್ಧವಾಗಿವೆ. ಸಾಹಿತ್ಯರತ್ನಾಕರದಲ್ಲಿ ಅರುಣಾಚಲವನ್ನು ಸೋಣಾಚಲ ಎಂದು ಕರೆದಿದ್ದಾರೆ.

ಒಮ್ಮೆ ಬ್ರಹ್ಮವಿಷ್ಣು ಅವರಲ್ಲಿ 'ಯಾರು ಶ್ರೇಷ್ಠರು?' ಎಂಬ ಪ್ರಶ್ನೆ ಉದ್ಭವಿಸಲು ಅವರು ಇದರ ತೀರ್ಮಾನಕ್ಕಾಗಿ ಶಿವನ ಮರೆಹೊಕ್ಕರು. ಶಿವನು ಜ್ಯೋತಿಯಾಕಾರವನ್ನು ತಾಳಿ 'ಈ ಜ್ಯೋತಿಯ ಬುಡವನ್ನು ಕಂಡವರು ಶ್ರೇಷ್ಠರು' ಎನ್ನಲು ಬ್ರಹ್ಮವಿಷ್ಣುಗಳು ಆ ಸಾಹಸಕ್ಕೆ ತೊಡಗಿ ಅನೇಕ ಯುಗಗಳು ಕಳೆದರೂ ತಮ್ಮ ಸಾಹಸದಲ್ಲಿ ವಿಫಲರಾಗಿ ಶಿವನಿಗೆ ಶರಣುಹೋದರು. ಆಗ ಶಿವನು ಜ್ಯೋತಿರೂಪದ ಬೆಟ್ಟದ ಬುಡದಲ್ಲಿ ಲಿಂಗಾಕಾರವನ್ನು ಹೊಂದಿದನು. ಈ ಬೆಟ್ಟವನ್ನೇ ಈಗ ಅರುಣಾಚಲ ಎನ್ನುತ್ತಾರೆ. ಈ ಲಿಂಗವೇ

ಅರುಣಾಚಲೇಶ್ವರ. ಶಿವನು ಜ್ಯೋತಿಯ ಆಕಾರವನ್ನು ಕಾರ್ತಿಕಮಾಸದ ಕೃತ್ತಿಕೆಯೆಂದು ಪಡೆದುದರಿಂದ ಅರುಣಾಚಲದಲ್ಲಿ ಈ ಮಾಸದಲ್ಲಿ ದೊಡ್ಡ ಉತ್ಸವವನ್ನು ಆಚರಿಸುತ್ತಾರೆ. ಶಿವನು ಪ್ರತಿವರ್ಷ ಆ ದಿನ ಜ್ಯೋತಿಯ ಆಕಾರದಲ್ಲಿ ಭಕ್ತರನ್ನು ಅನುಗ್ರಹಿಸುತ್ತಾನೆಂದು ಭಕ್ತರ ನಂಬಿಕೆ. ಇಲ್ಲಿ ಶಿವನು ಅರ್ಧನಾರೀಶ್ವರನಾಗಿದ್ದಾನೆ.

ಶಿವಪಾರ್ವತಿಯರಿಗೊಮ್ಮೆ ಕಲಹವಾಗಿ ಪಾರ್ವತಿಯು ಶಿವನನ್ನು ಬಿಟ್ಟು ಕಾಂಚೀಪುರಕ್ಕೆ ಹೋಗಿ ಅಲ್ಲಿದ್ದ ಶಿವಲಿಂಗವನ್ನು ಪೂಜಿಸುತ್ತ ಕಾಲಕಳೆಯತೊಡಗಿದಳು. ಇವಳ ಭಕ್ತಿಗೆ ಮೆಚ್ಚಿದ ಶಿವನು ಪುನಃ ಆಕೆಯನ್ನು ಅರುಣಾಚಲಕ್ಕೇ ಕರೆಸಿದನು. ಅಂದಿನಿಂದ ಅವಳನ್ನು ಅಗಲಲಿಚ್ಛಿಸದ ಶಿವನು ಅರ್ಧನಾರೀಶ್ವರನಾದನು. ಈ ಅವತಾರವೂ ಕಾರ್ತಿಕ ಮಾಸದ ಕೃತ್ತಿಕಾನಕ್ಷತ್ರದಂದೇ ನಡೆಯಿತು. ಈ ದಿನ ಇಲ್ಲಿ ಅಸಂಖ್ಯ ದೀಪಗಳನ್ನೆಲ್ಲೆಡೆಯಲ್ಲೂ ಬೆಳಗುವರು.

ಇಲ್ಲಿ ಪ್ರಸಿದ್ಧ ತಮಿಳು ಕವಿಯಾದ ಅರುಣಗಿರಿಯು ಜನಿಸಿದನು. ಇವನು ಯಾವುದೋ ಕಾರಣಕ್ಕಾಗಿ ಇಲ್ಲಿಯ ಗೋಪುರವೊಂದನ್ನೇರಿ ಕೆಳಗೆ ಹಾರಿದರೂ ಸಾಯದೆ ಮುರುಗನಿಂದ (ಸುಬ್ರಮಣ್ಯ) ರಕ್ಷಿಸಲ್ಪಟ್ಟು ಮುಕ್ತಿಹೊಂದಿದನು. ಇವನ ಭಕ್ತಿಪೂರ್ಣವಾದ ಅನೇಕ ಅಮರಗೀತೆಗಳಿವೆ. ಈ ಬೆಟ್ಟದ ಮೂರು ಭಾಗದಲ್ಲಿದ್ದ ಸುಬ್ರಮಣ್ಯಸ್ವಾಮಿಯೊಡನೆ ಅರುಣಗಿರಿಯ ಸುಂದರ ಮೂರ್ತಿಗಳಿವೆ. ಈ ಅರುಣಗಿರಿಯು ಗಿಳಿರೂಪದಿಂದ ದೇವತಾಸ್ತುತಿಯನ್ನು ಮಾಡಿದನೆನ್ನುತ್ತಾರೆ. ರಮಣ ಮಹರ್ಷಿಗಳ ಆಶ್ರಮ ಇಲ್ಲೇ ಇದೆ.

ಅರುಣಿ - ಒಬ್ಬ ತಪಸ್ವಿ; ಈತನನ್ನು ಹುಲಿಯಿಂದ ಬದುಕಿಸಿದ ಬೇಡನಿಗೆ 'ಸತ್ಯವನ್ನು ಬಿಡದಿರು' ಎಂದು ಉಪದೇಶಿಸಿದನು (ವರಾಹಪು) ನೋ. - ಉದ್ದಾಲಕ (ಮ.ಆ.).

ಅರುಂತಕ - ಒಂದು ತೀರ್ಥ (ಮ.ವ.,ಶ.).

ಅರುಂಧತಿ - ವಸಿಷ್ಠನ ಪತ್ನಿ; ಈಕೆಯ ಮಗ ಶಕ್ತಿಋಷಿ (ಮ.ಸ). ಈಕೆಗೆ ಅಕ್ಷಮಾಲೆ ಎಂಬ ಹೆಸರಿದೆ (ಮ.ಉ.). ಇವಳು ಕರ್ದಮಪ್ರಜಾಪತಿಯ ಪುತ್ರಿ. ಈಕೆಯ ತಾಯಿ ಸ್ವಾಯಂಭೂಮನು ಪುತ್ರಿಯಾದ ದೇವಹೂತಿ. ಈಕೆಯ ಸೋದರಿಯರು ಮರೀಚಿಮುನಿಯ ಪತ್ನಿ ಕಲೆ; ಅಂಗೀರಸನ ಪತ್ನಿ ಶ್ರದ್ಧೆ; ಪುಲಸ್ತ್ಯನ ಪತ್ನಿ ಹವಿರ್ಭುಕ್; ಪುಲಹನ ಪತ್ನಿ ಗತಿ; ಕೃತುವಿನ ಪತ್ನಿ ಕ್ರಿಯೆ; ಭೃಗುವಿನ ಪತ್ನಿ ಖ್ಯಾತಿ; ಅಥರ್ವಾಂಗಿರಸನ ಪತ್ನಿ ಶಾಂತಿ; ಅತ್ರಿಯ ಪತ್ನಿ ಅನುಸೂಯೆ; ಈಕೆಯ ಸೋದರ ಕಪಿಲಮಹರ್ಷಿ (ಭಾಗ.). ಈಕೆಗೆ ಊರ್ಜೆ ಎಂಬ ಹೆಸರೂ ಇದೆ (ಭಾಗ, ಮತ್ಸ್ಯಪು.). ವಸಿಷ್ಠ ಅರುಂಧತಿಯರು ಆದರ್ಶ

ದಂಪತಿಗಳು. ವಸಿಷ್ಠನ ಇದಿರಿಗೆ ಅರುಂಧತಿ ನಕ್ಷತ್ರ ಬಂದರೆ ಭೂಮಿಗೆ ಕೇಡು ಸಂಭವಿಸುವುದು (ಮ.ಭೀ.). ಮನುಷ್ಯರಿಗೆ ಅರುಂಧತಿ ನಕ್ಷತ್ರ ಕಾಣಿಸದಿದ್ದರೆ ಮರಣ ಚಿಹ್ನೆ ಎಂದು ತಿಳಿಯಬೇಕು (ಮ.ಶಾಂ.). ಅಗ್ನಿಯೊಮ್ಮೆ ಸಪ್ತರ್ಷಿಗಳ ಪತ್ನಿಯನ್ನು ಮೋಹಿಸಲು ಸ್ವಾಹಾದೇವಿ ಅರುಂಧತಿಯ ರೂಪವನ್ನು ಮಾತ್ರ ಧರಿಸಲಾರದೆ ಉಳಿದವರ ಆಕಾರದಿಂದ ಅಗ್ನಿಯನ್ನು ಸಂತೋಷಪಡಿಸಿದಳು (ಮ.ವ.). ಮದುವೆಯ ದಿನ ದಂಪತಿಗಳಿಗೆ ವಸಿಷ್ಠಾರುಂಧತಿಯರನ್ನು ತೋರಿಸುವರು; ವಸಿಷ್ಠಾರುಂಧತಿಯರ ಜೀವನವೇ ಗೃಹಸ್ಥಾಶ್ರಮಿಗಳ ಗುರಿ (ಶಿವಪು.).

ಅರೂಪ - ಪ್ರಾಧೆಯಪುತ್ರಿ (ಮ.ಆ.). ಈಕೆಯ ತಂದೆ ಕಶ್ಯಪ. ನೋ. - ಪ್ರಾಧಾ.

ಅರ್ಕಪರ್ಣ - ಕಶ್ಯಪನ ಪತ್ನಿ ಮುನಿಯೆಂಬುವಳ ಮಗ; ದೇವಗಂಧರ್ವ (ಮ.ಆ.). ನೋ. - ಮುನಿ.

ಅರ್ಚಿ - ಪೃಥು ಚಕ್ರವರ್ತಿಯ ಪತ್ನಿಯೊಬ್ಬಳು; ಈಕೆಯ ಮಗ ದ್ರವಿಣ.

ಅರ್ಚಿಷ್ಮತಿ - ಅಂಗಿರಸ ಮುನಿಯ ಪುತ್ರಿ; ಪೂರ್ಣಿಮೆಯ ಅಭಿಮಾನದೇವತೆ (ಮ.ವ.).

ಅರ್ಚಿಷ್ಮಂತ - ಒಬ್ಬ ಪಿತೃ (ಮ.ಶಾಂ.).

ಅರ್ಜುನ-೧. ಕ್ಷತ್ರಿಯ; ಚಂದ್ರವಂಶ; ಪುರುವಂಶೋತ್ಪನ್ನನಾದ ವಿಚಿತ್ರವೀರ್ಯನ ಮೊಮ್ಮಗ. ಪಾಂಡುವಿನ ಮಗ; ಇಂದ್ರನ ಅಂಶದಿಂದ ಜನಿಸಿದವ; ಇವನ ತಾಯಿ ಕುಂತಿ; ಇವನ ಪತ್ನಿಯರು - ದ್ರೌಪದಿ, ಸುಭದ್ರೆ, ಉಲೂಪಿ ಮತ್ತು ಚಿತ್ರಾಂಗದೆ; ಮಕ್ಕಳು - ದ್ರೌಪದಿಯಲ್ಲಿ ಶ್ರುತಕೀರ್ತಿ, ಸುಭದ್ರೆಯಲ್ಲಿ ಅಭಿಮನ್ಯು, ಉಲೂಪಿಯಲ್ಲಿ ಇರಾವಂತ, ಚಿತ್ರಾಂಗದೆಯಲ್ಲಿ ಬಭ್ರುವಾಹನ. ಇವನು ಅತಿರಥಾಗ್ರಣಿ (ಮ.ಉ.). ಬಾಲ್ಯದಿಂದಲೇ ಇವನು ಮಹಾಮೇಧಾವಿ; ಸಾಹಸಿ. ಇವನು ತನ್ನ ಗುರುವಾದ ದ್ರೋಣಾಚಾರ್ಯನನ್ನು ಮೊಸಳೆಯು ಹಿಡಿಯಲು ಗುರುವನ್ನು ಅದರ ಬಂಧನದಿಂದ ಬಿಡಿಸಿದನು (ಮ.ಆ.). ಅಭ್ಯಾಸದಿಂದ ಯಾವ ಕಾರ್ಯವನ್ನೂ ಸಾಧಿಸಿಕೊಳ್ಳಬಹುದೆಂಬುದರಲ್ಲಿ ವಿಶ್ವಾಸವಿದ್ದ ಪಾರ್ಥನು ಶಬ್ದವೇಧಿ ಎಂಬ ವಿದ್ಯೆಯನ್ನು ಅಭ್ಯಾಸ ಮಾಡಿದನು. ಗುರುದಕ್ಷಿಣೆಗಾಗಿ ದ್ರುಪದನನ್ನು ಸೆರೆಹಿಡಿದನು; ಸ್ವಯಂವರದಲ್ಲಿ ಲಕ್ಷ್ಯವನ್ನು ಭೇದಿಸಿ ದ್ರೌಪದಿಯನ್ನು ವಿವಾಹವಾದನು. ತೀರ್ಥಯಾತ್ರೆಗೆಂದು ಮಣಲೂರಿಗೆ ಬಂದವನು ಚಿತ್ರಾಂಗದೆ ಮತ್ತು ಉಲೂಪಿಯರನ್ನು ಮದುವೆಯಾದನು. ಖಾಂಡವವನ ದಹನಕಾಲದಲ್ಲಿ ಅರ್ಜುನನಿಂದ

ಉಪಕೃತನಾದ ಮಯಾಸುರನು ಅರ್ಜುನನಿಗೆ ದೇವದತ್ತವೆಂಬ ಶಂಖವನ್ನೂ ಪಾಂಡವರಿಗೆ ಒಂದು ಸುಂದರವಾದ ಸಭಾಭವನವನ್ನೂ ನಿರ್ಮಿಸಿಕೊಟ್ಟನು. ಅಲ್ಲದೆ ಆ ಕಾಲದಲ್ಲಿ ಅಗ್ನಿಯು ಅರ್ಜುನನಿಗೆ ಗಾಂಡೀವ ಧನುಸ್ಸನ್ನೂ, ರಥವನ್ನೂ, ಅಕ್ಷಯಬತ್ತಳಿಕೆಯನ್ನೂ ಕೊಟ್ಟನು (ಮ.ಆ.). ಭೀಮನ ಪ್ರಾರ್ಥನೆಯಂತೆ ಹನುಮನು ಅರ್ಜುನನ ಧ್ವಜದಲ್ಲಿ ಕುಳಿತನು (ಮ.ಆ.,ವ.,ಉ.). ರಾಜಸೂಯ ಯಾಗ ಕಾಲದಲ್ಲಿ ಭಗದತ್ತನ ಪಟ್ಟಣವಾದ ಪ್ರಾಗ್ಜ್ಯೋತಿಷವನ್ನೂ, ಕಿಂಪುರುಷ, ಇಲಾವೃತ ಮೊದಲಾದ ಖಂಡಗಳನ್ನೂ ಜಯಿಸಿ, ಹೇರಳ ಧನವನ್ನೂ ತಂದು ಧನಂಜಯನೆಂಬ ಬಿರುದನ್ನು ಪಡೆದನು (ಮ.ಸ.). ಇವನ ಸಾರಥಿ ಪುರು. (ಮ.ಸ.). ಇವನಿಗೆ ಇಂದ್ರಕೀಲದಲ್ಲಿ ಶಿವನಿಂದ ಪಾಶುಪತಾಸ್ತ್ರ ಪ್ರಾಪ್ತವಾಯಿತು. ಇವನು ಸ್ವರ್ಗದಲ್ಲಿ ಇಂದ್ರನಿಂದ ಅಮೂಲ್ಯವಾದ ಕಿರೀಟವನ್ನು ಪಡೆದು ಕಿರೀಟಿ ಎಂಬ ಹೆಸರನ್ನು ಪಡೆದನು. ಅಲ್ಲೇ ಚಿತ್ರಸೇನನೆಂಬ ಗಂಧರ್ವನಿಂದ ನರ್ತನ ವಿದ್ಯೆಯನ್ನು ಕಲಿತು ಊರ್ವಶಿಯಿಂದ ನಪುಂಸಕನಾಗುವಂತೆ ಶಾಪ ಪಡೆದನು. ಆ ಕಾಲದಲ್ಲಿ ಯಮ, ಕುಬೇರ ಮೊದಲಾದ ದೇವತೆಗಳು ತಮ್ಮಲ್ಲಿದ್ದ ಮಹಾಸ್ತ್ರಗಳನ್ನು ಈತನಿಗೆ ಉಪದೇಶಿಸಿದರು. ಈತನು ಸ್ವರ್ಗದಿಂದ ಭೂಮಿಗೆ ಬರುವಾಗ ನಿವಾತಕವಚ, ಹಿರಣ್ಯಪುರ ವಾಸಿಗಳಾದ ಪೌಲೋಮಕಾಲಕೇಯಾದಿ ರಾಕ್ಷಸರನ್ನು ಏಕಾಂಗಿಯಾಗಿ ನಾಶ ಮಾಡಿದನು (ಮ.ವ.). ಊರ್ವಶಿಯ ಶಾಪವನ್ನು ಅಜ್ಞಾತವಾಸಕಾಲದಲ್ಲಿ ಬೃಹನ್ನಳೆಯಾಗಿ ಕಳೆದನು; ಇವನ ಹತ್ತು ಹೆಸರುಗಳು - ಅರ್ಜುನ, ಫಲ್ಗುಣ, ಜಿಷ್ಣು, ಕಿರೀಟಿ, ಶ್ವೇತವಾಹನ, ಭೀಭತ್ಸು, ವಿಜಯ, ಪಾರ್ಥ, ಸವ್ಯಸಾಚಿ, ಧನಂಜಯ; ಇವನ ಹನ್ನೊಂದನೆಯ ಹೆಸರೇ ಕೃಷ್ಣ. ಇವನು ಉತ್ತರಗೋಗ್ರಹಣದಲ್ಲಿ ಒಬ್ಬನೇ ಸಮಸ್ತ ಕುರುಸೇನೆಯನ್ನು ಗೆದ್ದನು. ಈ ಕಾಲದಲ್ಲಿ ಕರ್ಣನ ಸೋದರನ ಮರಣ ಅರ್ಜುನನಿಂದಾಯಿತು. ಕರ್ಣದ್ರೋಣಾಶ್ವತ್ಥಾಮರ ಪರಾಜಯವೂ ಆಯಿತು (ಮ.ವಿ.). ಭೀಷ್ಮನಿಗೆ ಶರಮಂಚವನ್ನು ನಿರ್ಮಾಣ ಮಾಡಿದನು. ಆಗ ಪರ್ಜನ್ಯಾಸ್ತ್ರದಿಂದ ಭೀಷ್ಮನ ಬಾಯಾರಿಕೆಯನ್ನು ಪರಿಹರಿಸಿದನು (ಮ.ಭೀ.). ಸಂಶಪ್ತಕರನ್ನೂ ಭಗದತ್ತನನ್ನೂ ವೃಷಭಸೇನನನ್ನೂ ವಧಿಸಿದನು (ಮ.ದ್ರೋ.). ಕರ್ಣನ ಸರ್ಪಾಸ್ತ್ರನಿವಾರಣೆಗಾಗಿ ಶ್ರೀಕೃಷ್ಣನು ಅರ್ಜುನನ ರಥವನ್ನು ಐದು ಅಂಗುಲ ಕುಗ್ಗುವಂತೆ ಮಾಡಿದನು. ಕರ್ಣನನ್ನು ಅಂಜಲಿಕಾಸ್ತ್ರದಿಂದ (ಅಂಜನಾಸ್ತ್ರದಿಂದ) ವಧಿಸಿದನು (ಮ.ಕ.). ಅಶ್ವಮೇಧದ ಅಶ್ವರಕ್ಷಣೆಗಾಗಿ ಹೊರಟು ಈತನು ಹಲವು ರಾಜರನ್ನು ಗೆದ್ದನು (ಮ.ಆ.). ಶ್ರೀಕೃಷ್ಣನು ವೈಕುಂಠಕ್ಕೆ ತೆರಳಿದ ಮೇಲೆ

ಯಾದವಸ್ತ್ರೀಯರನ್ನು ಅರ್ಜುನನು ಹಸ್ತಿನಾವತಿಗೆ ಕರೆದುಕೊಂಡು ಬರುವಾಗ ಮ್ಲೇಚ್ಛರಿಂದ ಪರಾಜಿತನಾದನು. (ಮ.ಮು.) ಮಹಾಪ್ರಸ್ಥಾನಕಾಲದಲ್ಲಿ ಮಾರ್ಗದಲ್ಲೇ ಈತನು ಶರೀರವನ್ನು ತ್ಯಜಿಸಿದನು (ಮ.ಸ್ವ.).

ಅರ್ಜುನನು ಧನುಷ್ಕೋಡಿಯಲ್ಲಿ ಹನುಮಂತನನ್ನು ಕಂಡು ಶ್ರೀರಾಮನ ಸೇತುಬಂಧನ ಕಾರ್ಯವನ್ನು ಅಪಹಾಸ್ಯ ಮಾಡಿದನು. ಆಗ ಹನುಮಂತನು ಅವನೊಡನೆ ಬಾಣದ ಸೇತುವೆಯನ್ನು ನಿರ್ಮಿಸಲು ಹೇಳಿ, ತಾನು ಒಂದು ಬೆರಳೂರಿದೊಡನೆ ಅರ್ಜುನನ ಬಾಣದ ಸೇತುವೆ ತುಂಡಾಯಿತು. ಅರ್ಜುನನು ಅಗ್ನಿಪ್ರವೇಶದ ಸಿದ್ಧತೆಯಲ್ಲಿದ್ದಾಗ ಕೃಷ್ಣನು ಬ್ರಾಹ್ಮಣರೂಪಿನಿಂದ ಬಂದು ಅರ್ಜುನನೊಡನೆ ಪುನಃ ಬಾಣದ ಸೇತುವೆಯನ್ನು ರಚಿಸಲು ಹೇಳಿದನು. ಶ್ರೀ ಕೃಷ್ಣನು ಆ ಸೇತುವೆಯ ನಡುವೆ ಸುದರ್ಶನ ಚಕ್ರವನ್ನಿಟ್ಟುದರಿಂದ ಹನುಮನು ಶಕ್ತಿಯೆಲ್ಲಾ ಉಪಯೋಗಿಸಿದರೂ ಮುರಿಯದಾದನು. ಕೊನೆಗೆ ಆ ಬ್ರಾಹ್ಮಣನೇ ಶ್ರೀರಾಮನೆಂದು ಹನುಮನಿಗೆ ತಿಳಿಯಿತು. ಅಂದಿನಿಂದ ಸೋತ ಹನುಮನು ಅರ್ಜುನನ ಧ್ವಜದಲ್ಲಿ ಕುಳಿತಿರುವನು (ಆನಂ.ರಾ.).

ಮೂರು ವರ್ಷಗಳವರೆಗೆ ಯಜ್ಞಕಾರ್ಯವನ್ನು ನಡೆಯಿಸಿದ ಪಾಂಡುವು ಕೂಡ ನಿಗ್ರಹಿಸಲಾರದ ಸೌವೀರನೆಂಬ ಯವನ ದೇಶದ ರಾಜನನ್ನು ಅರ್ಜುನನೇ ಮೊದಲಾದ ಪಾಂಡವರು ಕೊಂದರು. ಈ ಸೌವೀರರಾಜನಿಗೆ ವಿಪುಲನೆಂದು ಹೆಸರು. ಇವನಿಗೆ ದತ್ತಾಮಿತ್ರ, ಸುಮಿತ್ರನೆಂಬ ಹೆಸರೂ ಇದೆ. ಈ ಸಾಹಸಕಾರ್ಯವನ್ನು ಅರ್ಜುನನು ತನ್ನ ಹದಿನೈದು ವಯಸ್ಸಿನಲ್ಲೇ ಮಾಡಿದನು (ಮ.ಆ.). ನೋ. - ಭಗದತ್ತ. ಅರ್ಜುನನಿಗೆ ಇಂದ್ರನು ಸ್ವರ್ಗದಲ್ಲಿ ಕೊಟ್ಟ ಹತ್ತು ಹೆಸರುಗಳು.

ಶ್ಲೋಕ : ಅರ್ಜುನಃ ಫಲ್ಗುನಃ ಪಾರ್ಥಃ ಕಿರೀಟೀ ಶ್ವೇತವಾಹನಃ ।

ಭೀಭತ್ಸುರ್ವಿಜಯೋ ಜಿಷ್ಣುಸ್ಸವ್ಯಸಾಚೀ ಧನಂಜಯಃ ||

ಬೀಭತ್ಸು = ರಣರಂಗದಲ್ಲಿ ಯುದ್ಧಮಾಡುವಾಗ ಅಸಹ್ಯವಾದ ಜಿಗುಪ್ಸಾವಹವಾದ ಯಾವ ಕಾರ್ಯವನ್ನೂ ಮಾಡುವವನಲ್ಲ. ಜಿಷ್ಣು = ಎಲ್ಲವನ್ನೂ ಜಯಿಸಬಲ್ಲವನು. ೨. ಧರ್ಮವ್ಯಾಧನ ಮಗ. ನೋ. - ಧರ್ಮವ್ಯಾಧ. ೩. ಕಾರ್ತವೀರ್ಯಾರ್ಜುನ. ನೋ. -ಕಾರ್ತವೀರ್ಯ.

ಅರ್ಜುನಕ - ಬೇಡನೊಬ್ಬ (ಮ.ಅನು.).

ಅರ್ಧನಾರೀಶ್ವರ - ೧. ಪ್ರಜಾವೃದ್ಧಿಗಾಗಿ ಬ್ರಹ್ಮನ ಪ್ರಾರ್ಥನೆಯಂತೆ ಶಕ್ತಿಯಿಂದ ಕೂಡಿದ ಶಿವ (ಶಿವಪು). ೨. ಭೃಂಗಿ ಎಂಬ ಗಣನಾಯಕನಿಗೆ ಪಾರ್ವತಿಯಲ್ಲಿ ಅಸಡ್ಡೆಯುಂಟಾಗಲು ಆಕೆಯು ಸಿಟ್ಟಿನಿಂದ ಭೃಂಗಿಯ ತೇಜಸ್ಸನ್ನು ಕುಗ್ಗಿಸಿದಳು. ಆಗ ಶಿವನು ಭಕ್ತನ ತಪಶ್ಶಕ್ತಿಯು ಕುಗ್ಗದಂತೆ ತನ್ನ ದಂಡವನ್ನು ಆತನ ರಕ್ಷಣೆಗೆ ಇಡಲು ಪಾರ್ವತಿಯು ಸಿಟ್ಟಿನಿಂದ ಕೇದಾರಕ್ಷೇತ್ರದಲ್ಲಿ ತಪಸ್ಸುಮಾಡಿ, ಶಿವನ ಅರ್ಧಾಂಗವನ್ನೇ ವಶಪಡಿಸಿಕೊಂಡಳು (ಶಿವಪು). ನೋ. - ಅರುಣಾಚಲ.

ಅರ್ಧಚಂದ್ರವ್ಯೂಹ - ಅರ್ಧಚಂದ್ರಾಕಾರದಲ್ಲಿ ನಿಲ್ಲಿಸಿದ ಸೇನೆ; ಪಾಂಡವರು ಅನೇಕ ದಿನಗಳ ಯುದ್ಧದಲ್ಲಿ ಈ ವ್ಯೂಹದಿಂದಲೇ ಕುರುಸೇನೆಯನ್ನು ಇದಿರಿಸಿದರು (ಮ.ಭೀ.,ಕ.). ಇದು ಗರುಡವ್ಯೂಹಕ್ಕೆ ಪ್ರತಿವ್ಯೂಹ.

ಅರ್ಯಮಾ - ೧. ದ್ವಾದಶಾದಿತ್ಯರಲ್ಲೊಬ್ಬ (ಮ.ಆ.). ೨. ಅತ್ರಿ ಋಷಿಯ ಮಗ (ಮ.ಶಾಂ.).

ಅರ್ವಾವಸು - ರೈಭ್ಯ ಋಷಿಯ ದ್ವಿತೀಯ ಪುತ್ರ; ಪರಾವಸು ಇವನ ತಮ್ಮ (ಮ.ಸ.ವ.). ಒಂದು ದಿನ ಪರಾವಸುವು ತನ್ನ ಪತ್ನಿಯನ್ನು ನೋಡಲೆಂದು ಬೆಳಗಿನ ಜಾವದಲ್ಲೇ ಆಶ್ರಮಕ್ಕೆ ಬರುತ್ತಿರುವಾಗ ಕೃಷ್ಣಾಜಿನವನ್ನು ಮೈತುಂಬಾ ಸುತ್ತಿಕೊಂಡು ಸಂಚರಿಸುತ್ತಿರುವ ರೈಭ್ಯ ಮಹರ್ಷಿಯನ್ನು ಮೃಗವೆಂದೇ ಭಾವಿಸಿ ಹೊಡೆದು ಕೊಂದನು. ಕಡೆಗೆ ಸೂರ್ಯೋಪಾಸನೆಯಿಂದ ತಂದೆಯನ್ನು ಅರ್ವಾವಸುವು ಬದುಕಿಸಿದನು. ಅಲ್ಲದೆ, ಪರಾವಸುವಿನ ಪತ್ನಿಯನ್ನು ಕೆಡಿಸಿ, ರೈಭ್ಯಮಹರ್ಷಿಯಿಂದ ನಿರ್ಮಿತವಾದ ಒಂದು ಸ್ತ್ರೀಭೂತ ಮತ್ತು ಗಂಡು ರಾಕ್ಷಸನೊಬ್ಬನಿಂದ ಕೊಲ್ಲಲ್ಪಟ್ಟ ಯವಕ್ರೀತ ಮಹರ್ಷಿ - ಈ ಯವಕ್ರೀತನ ಮರಣದಿಂದ ಸತ್ತ ಭರದ್ವಾಜ ಇವರನ್ನೆಲ್ಲಾ ಅರ್ವಾವಸುವು ಸೂರ್ಯನ ಅನುಗ್ರಹದಿಂದ ಬದುಕಿಸಿದನು. (ಮ.ವ.).ನೋ. - ಯವಕ್ರೀತ, ಪರಾವಸು.

ಅಲಕನಂದೆ - ಹಿಮಾಲಯದಿಂದ ಹರಿಯುವ ಒಂದು ಪುಣ್ಯನದಿ (ಮ.ಆ.). ಭಾಗೀರಥಿ ಮತ್ತು ಅಲಕನಂದಾ ಸಂಗಮದಲ್ಲಿ ದೇವಪ್ರಯಾಗವಿದೆ. ಶ್ರೀರಾಮನು ರಾವಣನನ್ನು ಸಂಹರಿಸಿದ ಮೇಲೆ ಅನೇಕ ವರ್ಷ ಇಲ್ಲಿ ತಪಸ್ಸು ಮಾಡಿಕೊಂಡಿದ್ದನು. ಅಲಕನಂದೆಯ ದಡದಲ್ಲಿ ಬದರೀನಾಥಕ್ಕೆ ಹೋಗುವ ಮಾರ್ಗವಿದೆ. ವಿಷ್ಣುಗಂಗೆ ಮತ್ತು ಅಲಕನಂದ ಸೇರುವಲ್ಲಿ ವಿಷ್ಣುಪ್ರಯಾಗವಿದೆ. ಇಲ್ಲೇ ನಾರದರ ತಪಸ್ಸಿಗೆ ವಿಷ್ಣು ಪ್ರತ್ಯಕ್ಷನಾದುದು.

ಅಲಕಾ - ಕುಬೇರನ ರಾಜಧಾನಿ; ಉತ್ತರದಿಕ್ಕಿನಲ್ಲಿದೆ (ಮ.ಆ.,ಸ.,ವ.). ರಾವಣನು ಕುಬೇರನಿಂದ ಲಂಕೆಯನ್ನು ಗೆದ್ದುಕೊಂಡ ಬಳಿಕ ಅವನು ತಂದೆಯ ಅಪ್ಪಣೆಯಂತೆ ಕೈಲಾಸಕ್ಕೆ ಹೋಗಿ ಶಂಕರನನ್ನು ತಪಸ್ಸಿನಿಂದ ಮೆಚ್ಚಿಸಿದನು. ಶಿವನು ವಿಶ್ವಕರ್ಮನಿಂದ ಅಲಕಾನಗರಿಯನ್ನು ಕಟ್ಟಿಸಿ ಕುಬೇರನಿಗೊಪ್ಪಿಸಿದನು. (ಅನಂ.ರಾ.).

ಅಲಂಬಲ - ಜಟಾಸುರನ ಮಗ. ಅವನು ಭಾರತ ಯುದ್ಧದಲ್ಲಿ ಕೌರವ ಪಕ್ಷದಿಂದ ಹೋರಾಡಿ ಘಟೋತ್ಕಚನಿಂದ ಮೃತನಾದನು (ಮ.ದ್ರೋ.).

ಅಲಂಬು - ಕ್ಷತ್ರಿಯ; ಚಂದ್ರವಂಶ; ಧೃತರಾಷ್ಟ್ರ ಪುತ್ರ; ಭೀಮನಿಂದ ಹತನಾದನು (ಮ.ಕ.).

ಅಲಂಬುಷೆ (ಅಲಂಬುಸಾ) - ೧. ಕಶ್ಯಪನ ಪತ್ನಿಯಾದ ಅರಿಷ್ಟೆಯ ಮಗಳು. ಇವಳು ಅಪ್ಸರಸೆ (ಮ.ಆ.,ಅನು.); ಈಕೆಯ ದರ್ಶನದಿಂದ ದಧೀಚಿಮಹರ್ಷಿಗೆ ವಿಕಾರ ಉಂಟಾಗಿ ಸರಸ್ವತೀ ನದಿಯಲ್ಲಿ ಈತನ ರೇತಸ್ಸು ಬೀಳಲು ಸಾರಸ್ವತ ಎಂಬ ಮಹರ್ಷಿ ಜನಿಸಿದನು (ಮ.ಶಾಂ.). ನೋ. - ಸ್ವಾರಸ್ವತ ೨. ಇಕ್ಷ್ವಾಕು ರಾಜನ ಪ್ರಿಯಳು; ಈಕೆ ಅಪ್ಸರಸೆ ನೋ. - ವಿಶಾಲ. ೩. ಈಕೆ ಒಮ್ಮೆ ಬ್ರಹ್ಮಸಭೆಯಲ್ಲಿ ನರ್ತಿಸುತ್ತಿರುವಾಗ ಗಾಳಿಯಿಂದ ಈಕೆಯ ಸೀರೆಯ ನಿರಿಗೆ ಹಾರಲು ಎಲ್ಲರೂ ತಲೆ ತಗ್ಗಿಸಿದರು. ಆಗ ವಿಧೂಮನೆಂಬ ವಸುವು ಮಾತ್ರ ಆಕೆಯನ್ನು ಕಾಮದೃಷ್ಟಿಯಿಂದ ನೋಡುತ್ತಿದ್ದನು. ಇದರಿಂದ ಸಿಟ್ಟುಗೊಂಡ ಬ್ರಹ್ಮನು ಇಬ್ಬರಿಗೂ ಭೂಮಿಯಲ್ಲಿ ದಂಪತಿಗಳಾಗಿ ಹುಟ್ಟುವಂತೆ ಶಾಪವಿತ್ತನು. ಇದರಿಂದ ಭಯಗೊಂಡ ಅಲಂಬುಷೆ ಮತ್ತು ವಿಧೂಮರು ಬ್ರಹ್ಮನನ್ನು ಪ್ರಾರ್ಥಿಸಲು 'ಮಗನಿಗೆ ಪಟ್ಟಗಟ್ಟಿ ದಕ್ಷಿಣಸಮುದ್ರ ತೀರದ ಚಕ್ರತೀರ್ಥದಲ್ಲಿ ಮಿಂದರೆ ಶಾಪವಿಮೋಚನೆ ಆಗುವುದೆಂದು' ಬ್ರಹ್ಮನು ಹೇಳಲು ವಿಧೂಮನು ಸಹಸ್ರಾನೀಕ ರಾಜನಾಗಿಯೂ, ಅಲಂಬುಷೆ ಅಯೋಧ್ಯೆಯ ರಾಜನಾದ ಕೃತವರ್ಮನ ಮಗಳಾದ ಮೃಗಾವತಿಯಾಗಿಯೂ ಹುಟ್ಟಿ ದಂಪತಿಗಳಾದರು. ನೋ. - ವಿಧೂಮ.

ಅಲಂಬುಸ (ಆರ್ಶ್ಯರ್ಶೃಂಗಿ) - ೧. ದುರ್ಯೋಧನನ ಪಕ್ಷದ ಕ್ಷತ್ರಿಯ; ಸಾತ್ಯಕಿಯಿಂದ ಕೊಲ್ಲಲ್ಪಟ್ಟನು (ಮ.ದ್ರೋ.). ೨. ದುರ್ಯೋಧನನ ಪಕ್ಷದ ರಾಕ್ಷಸನೊಬ್ಬ ಇರಾವಂತನನ್ನು ಇವನು ಕೊಂದನು (ಮ.ಭೀ.). ಇವನು ಮಹಾರಥ ಕಿಮ್ಮೀರನ ಮಗ; ಬಕನ ಸಹೋದರ (ಮ.ದ್ರೋ.). ಅಭಿಮನ್ಯು ಮತ್ತು ಭೀಮನಿಂದ ಪರಾಜಯ ಹೊಂದಿ ಘಟೋತ್ಕಚನಿಂದ ಹತನಾದ (ಮ.ದ್ರೋ.ಭೀ.). ನೋ. - ಇರಾವಂತ. ೩. ಇವನು ಉಪಪಾಂಡವರೈವರನ್ನು ಪರಾಜಿತಗೊಳಿಸಿ

ಕೊಲ್ಲಬೇಕೆಂದಿರುವಾಗ ಅಭಿಮನ್ಯುವು ಈತನನ್ನು ಇದಿರಿಸಿದನು. ಅಭಿಮನ್ಯುವು ಈತನ ಮಾಯೆಯನ್ನೆಲ್ಲಾ ಹೋಗಲಾಡಿಸಲು ಈತನು ಓಡಿಹೋದನು. (ಮ.ಭೀ.).

ಅಲರ್ಕ - ೧. ಯಮಸಭೆಯ ರಾಜರ್ಷಿಯೊಬ್ಬ; ಇವನು ಕುರುಡು ಬ್ರಾಹ್ಮಣನಿಗೆ ಕಣ್ಣು ಕೊಟ್ಟನು (ವಾ.ರಾ.ಅಯೋ.). ೨. ವತ್ಸನ ಮಗನಾದ ಕಾಶೀರಾಜ; ಇವನ ಮಗನ ಹೆಸರು ಸನ್ನತಿ (ವಾಯುಪು.,ಹರಿ.). ೩. ಕರ್ಣನ ತೊಡೆಯ ಮೇಲೆ ಪರಶುರಾಮನು ತಲೆಯಿಟ್ಟು ನಿದ್ರಿಸಿರುವಾಗ ಕರ್ಣನ ತೊಡೆಯನ್ನು ಕೊರೆದ ತುಂಬಿ (ಮ.ಶಾಂ.). ೪. ಒಬ್ಬ ರಾಜರ್ಷಿ. ಇವನು ಸಮಸ್ತ ಭೂಮಿಯನ್ನೂ ತನ್ನ ಧನುಸ್ಸಿನಿಂದ ಜಯಿಸಿದ ಮೇಲೆ ಅವನಿಗೆ ಮೋಕ್ಷಮಾರ್ಗದ ಮೇಲೆ ಮನಸ್ಸು ಹುಟ್ಟಿತು. ಅವನು ಕೊನೆಗೆ ತನ್ನ ಇಂದ್ರಿಯ ಜಯ ಮತ್ತು ಮನೋನಿಗ್ರಹವೇ ನಿಜವಾದ ಜಯವೆಂದು ನಿರ್ಧರಿಸಿ, ಮಹಾತಪಸ್ಸು ಮಾಡಿ ತನ್ನ ಗುರಿಯನ್ನು ಸೇರಿದನು (ಮ.ಅಶ್ವ.). ನೋ. - ಅನುಗೀತೆ.

ಅಲಾಯುಧ - ಬಕರಾಕ್ಷಸನ ಸಹೋದರ; ದುರ್ಯೋಧನನ ಪಕ್ಷದವ. ಅರ್ಜುನ ಮತ್ತು ಭೀಮರಿಂದ ಪರಾಜಯ ಹೊಂದಿ ಘಟೋತ್ಕಚನಿಂದ ಮರಣಹೊಂದಿದನು (ಮ.ದ್ರೋ.,ಶ.).

ಅಲೋಲುಪ - ಕ್ಷತ್ರಿಯ; ಚಂದ್ರವಂಶ; ಧೃತರಾಷ್ಟ್ರನ ಮಗ (ಮ.ಆ.,ಭೀ.).

ಅವಂತಿ - ಮಾಲವದ ಒಳಗಿದ್ದ ಒಂದು ಪ್ರಾಂತ. ಇದು ನರ್ಮದೆಯ ದಕ್ಷಿಣದಲ್ಲಿದೆ. ಇಲ್ಲಿಯ ರಾಜರು ವಿಂದಾನುವಿಂದರು; ಇವರನ್ನು ಸಹದೇವನು ರಾಜಸೂಯಯಾಗ ಕಾಲದಲ್ಲಿ ಜಯಿಸಿದನು. ಇದಕ್ಕೆ ಉಜ್ಜಯಿನಿಯು ರಾಜಧಾನಿ (ಮ.ವ.,ಸ.). ಇಲ್ಲೇ ಬಲರಾಮಕೃಷ್ಣರು ಸಾಂದೀಪಿನ್ಯಾಚಾರ್ಯರಲ್ಲಿ ವಿದ್ಯಾಭ್ಯಾಸ ಮಾಡಿದರು. ಪುರಾಣ ಯುಗದ ಪ್ರಸಿದ್ಧ ಪಟ್ಟಣ ಮತ್ತು ಕ್ಷೇತ್ರ (ಭಾಗ.,ಹರಿ.,ವಿಷ್ಣುಪು.).

ಅವಾಕೀರ್ಣ - ಸರಸ್ವತೀ ನದಿಯ ತೀರದ ಒಂದು ತೀರ್ಥ (ಮ.ಭಾ.ಶ.).

ಅವಿಕ್ಷಿತ (ಅವಿಕ್ಷಿತ) - ೧. ಕ್ಷತ್ರಿಯ; ಚಂದ್ರವಂಶ. ಇವನಿಗೆ ಅಶ್ವವಂತನೆಂಬ ಪ್ರಸಿದ್ಧ ಹೆಸರಿದೆ. ಇವನು ಕುರುರಾಜನ ಪುತ್ರ. ಇವನ ತಾಯಿ ವಾಹಿನಿ; ಇವನಿಗೆ ಮಕ್ಕಳು ಎಂಟು ಮಂದಿ. ಪರೀಕ್ಷಿತ, ಶಬಲಾಶ್ವ, ಆದಿರಾಜ, ವಿರಾಜ, ಶಾಲ್ಮಲಿ, ಉಚ್ಚೈಶ್ರವ, ಭಂಗಕಾರಕ. ಜಿತಾರಿ (ಮ.ಆ.). ೨. **ಸೂರ್ಯವಂಶ.** ಕರಂಧಮನ ಪುತ್ರ. ಇವನು ವಿಶಾಲತನಯೆಯ ಸ್ವಯಂವರಕ್ಕೆ ಹೋಗಿ ಅಲ್ಲಿದ್ದ ರಾಜರಿಂದ ಸೆರೆಹಿಡಿಯಲ್ಪಟ್ಟು ಕರಂಧಮನಿಂದ ಬಿಡುಗಡೆ ಹೊಂದಿದನು. ಮುಂದೆ ಇವನು ವಿವಾಹದಲ್ಲಿ ವೈರಾಗ್ಯ ಹೊಂದಿ ಬ್ರಹ್ಮಚರ್ಯೆಯಲ್ಲಿ ಬಾಳಲು

ನಿಶ್ಚಯಿಸಿದಾಗ ಈತನ ತಾಯಿಯಾದ ವೀರೆಯು ಯಾರು ಏನನ್ನು ಬೇಡಿದರೂ ಕೊಡುವ ವ್ರತವನ್ನು ಕೈಗೊಂಡಳು. ತಾಯಿಯ ವ್ರತವನ್ನು ಸಂಪೂರ್ಣ ಮಾಡಿಸುವೆನೆಂದು ಡಂಗುರವ ಹೊಯ್ಸಿದ ಅವಿಕ್ಷಿತನೊಡನೆ ಕರಂಧಮನು 'ನಾನು ಪೌತ್ರನನ್ನು ಬೇಡುವೆನು; ಕೊಡು' ಎನ್ನಲು, ಅವಿಕ್ಷಿತನು ತನ್ನ ಮಾತನ್ನು ಮೀರಲಾಗದೆ ಆ ವಿಶಾಲತನಯೆಯನ್ನು ಮದುವೆಯಾಗಿ ಕೀರ್ತಿಶಾಲಿಯಾದನು. ಇವನ ಮಗ ಮರುತ್ತರಾಜ (ಮಾರ್ಕಂಪು.,ಮ.ಆಶ್ವ.). ಇವನು ೧೦೦ ಅಶ್ವಮೇಧಯಾಗಗಳನ್ನು ಮಾಡಿದನು. ಮಹರ್ಷಿಯಾದ ಅಂಗೀರಸನು ಇವನ ಪುರೋಹಿತನು (ಮ.ಆಶ್ವ.).

ಅವಿಜ್ಞಾತಗತಿ - ಅನಿಲ ಎಂಬ ವಸುವಿನ ಮಗ; ಇವನ ತಾಯಿ ಶಿವೆ (ಮ.ಆ.).

ಅವಿಂಧ್ಯ - ವಿಭೀಷಣನ ಮಂತ್ರಿ. ರಾಕ್ಷಸನಾದರೂ ಶ್ರೀರಾಮನ ಭಕ್ತ (ಮ.ವ.)

ಅವಿಮುಕ್ತ - ಪುಣ್ಯಕ್ಷೇತ್ರವೊಂದು (ಮ.ಪ.).

ಅವಿಸ್ಥಲ - ಯುಧಿಷ್ಠಿರನಿಂದ ಪ್ರಾರ್ಥಿಸಲ್ಪಟ್ಟ ಐದು ಗ್ರಾಮಗಳಲ್ಲೊಂದು (ಮ.ಉ.).

ಅವೀಚಿ - ಒಂದು ನರಕ (ಮ.ಅನು.).

ಅವೀಕ್ಷಿತ - ಸೂರ್ಯವಂಶದ ಅವಿಕ್ಷಿತ ರಾಜನ ಮಗ. ಇವನಿಗೆ ಮರುತ್ತ ಎಂದು ಹೆಸರಿದೆ. ನೋ. - ಮರುತ್ತ.

ಅಶೋಕ - ೧. ಭೀಮಸೇನನ ಸಾರಥಿ. ೨. ಶ್ರೀಮನ್ನಾರಾಯಣ. ೩.ಕ್ಷತ್ರಿಯನೊಬ್ಬ. ೪. ದಶರಥನ ಒಬ್ಬ ಮಂತ್ರಿ (ರಾಮಾ.ಬಾಲ.). ೫.ಕಾಮ್ಯಕವನದ ದಕ್ಷಿಣದಲ್ಲಿದ್ದ ಒಂದು ತೀರ್ಥ. ೬. ರಾವಣನ ಒಬ್ಬ ಮಂತ್ರಿ (ರಾಮಾ. ಯುದ್ಧ.).

ಅಶೋಕವನ - ೧. ಲಂಕೆಯಲ್ಲಿದ್ದ ರಾವಣನ ಸುಂದರ ಉದ್ಯಾನ. ಇಲ್ಲೇ ರಾವಣನು ಸೀತೆಯನ್ನು ಸೆರೆಯಲ್ಲಿಟ್ಟನು (ರಾಮಾ.ಸುಂ.). ೨.ಅಯೋಧ್ಯೆಯಲ್ಲಿದ್ದ ಶ್ರೀರಾಮನ ಉದ್ಯಾನ (ರಾಮಾ.ಉತ್ತ.). ೩.ಯಯಾತಿಯು ದೇವಯಾನಿಯೊಂದಿಗೆ ವಾಸವಾಗಿದ್ದ ವನ (ಮತ್ಸ್ಯಪು).

ಅಶೋಕಸುಂದರಿ - ಪಾರ್ವತಿಯ ಮಗಳು; ಷಣ್ಮುಖನ ತಂಗಿ; ಪಾರ್ವತಿಯು ಶಿವನೊಡನೆ ನಂದನವನದಲ್ಲಿ ವಿಹರಿಸುತ್ತಿದ್ದಾಗ ಕಲ್ಪವಕ್ಷದ ನೆರಳಿಗೆ ಬಂದಳು. ಆಗ ಶಿವೆಗೆ ತನ್ನಂತಹ ಸುಂದರಿಯಾದ ಮಗಳ ಬಯಕೆಯಾಗಲು ತಕ್ಷಣವೇ ಆಕೆ ಒಂದು ಹೆಣ್ಣು ಕೂಸನ್ನು ಹೆತ್ತಳು. ಆ ಮಗುವೇ ಅಶೋಕಸುಂದರಿ. ಈಕೆಯನ್ನು ನಹುಷ ರಾಜನು ವಿವಾಹವಾಗುವನೆಂದು ಪಾರ್ವತಿಯು ಭವಿಷ್ಯ

ಹೇಳಿದ್ದಳು. ಅಶೋಕಸುಂದರಿಯು ದೊಡ್ಡವಳಾಗಿ ಒಬ್ಬಳೇ ಉದ್ಯಾನವನದಲ್ಲಿ ವಿಹರಿಸುತ್ತಿರುವಾಗ ವಿಪ್ರಚಿತ್ತಿ ದಾನವನ ಮಗನಾದ ಹುಂಡನು ಈಕೆಯನ್ನು ಮಾಯೆಯಿಂದ ಅಪಹರಿಸಿದನು. ಮುಂದೆ ಗಂಗಾತೀರದಲ್ಲಿ ಅಶೋಕಸುಂದರಿಯು ಈ ದಾನವನ ವಧೆಗಾಗಿ ತಪಸ್ಸು ಮಾಡುತ್ತಿದ್ದು ರಂಭೆಯ ಸಹಾಯದಿಂದ ನಹುಷನನ್ನು ವಿವಾಹವಾದಳು. (ಪದ್ಮಪು.).

ಅಶ್ಮ-ಬ್ರಾಹ್ಮಣನೊಬ್ಬ. ಇವನು ಕ್ಷತ್ರಿಯ ಧರ್ಮದ ವಿಷಯವಾಗಿ ಜನಕನೊಡನೆ ಸಂಭಾಷಣೆ ಮಾಡಿದನು. ಈ ಬ್ರಾಹ್ಮಣನು ಬಂಧುಗಳಾಗಲಿ ಧನವಾಗಲಿ ತನ್ನಲ್ಲಿ ಬಂದು ಸೇರಿದಾಗ ಮತ್ತು ಅವು ಕೈಬಿಟ್ಟು ಹೋದಾಗ ಶ್ರೇಯಃಕಾಂಕ್ಷಿಯಾದ ಪುರುಷನು ಹೇಗೆ ವರ್ತಿಸಬೇಕೆಂದು ಜನಕನಿಗೆ ತಿಳಿಸಿದನು (ಮ.ಶಾಂ.).

ಅಶ್ಮಕ-೧. ಕ್ಷತ್ರಿಯ; ಕಲ್ಮಾಷಪಾದನ (ಸೌದಾಸ) ಭಾರ್ಯೆಯಾದ ಮದಯಂತಿಯಲ್ಲಿ ವಸಿಷ್ಠನಿಂದ ಹುಟ್ಟಿದ ಮಗ. ಇವನು ತಾಯಿಯ ಗರ್ಭದಲ್ಲಿ ಏಳು ವರ್ಷವಿದ್ದು ಆಮೇಲೆ ಅಶ್ಮ (ಕಲ್ಲು)ದಿಂದ ವಸಿಷ್ಠನು ಸೀಳಿ ಶಿಶುವನ್ನು ಹೊರತೆಗೆದನು. (ಸ್ಕಾಂಪು.,ರಾಮಾ.,ವಿಷ್ಣುಪು.,ಭಾಗ.,ಮ.ಆ.). ೨. ಅಶ್ಮಕದೇಶದ ರಾಜ; ಅಭಿಮನ್ಯುವಿನಿಂದ ಹತನಾದ (ಮ.ದ್ರೋ.). ೩. ವಿದೇಹದ ರಾಜ. ಜನಕನಿಗೆ ವೈರಾಗ್ಯವನ್ನು ಬೋಧಿಸಿದ ಬ್ರಾಹ್ಮಣ (ಮ.ದ್ರೋ.).

ಅಶ್ಮಕುಟ್ಟ - ಒಬ್ಬ ಋಷಿ (ಮ.ಅನು.).

ಅಶ್ರುತಾಯ (ಅಚ್ಯುತಾಯ) - ಕ್ಷತ್ರಿಯನೊಬ್ಬ; ದುರ್ಯೋಧನನ ಪಕ್ಷದವ. ಮಾಗಧನ ಮಗ; ಅಭಿಮನ್ಯುವಿನಿಂದ ಹತನಾದ. ಅಶ್ರುತಾಯನ ಮಗನಾದ ನಿಯುತಾಯುವು ಅರ್ಜುನನಿಂದ ಹತನಾದ (ಮ.ದ್ರೋ.).

ಅಶ್ವ - ದನುಪುತ್ರನಾದ ರಾಕ್ಷಸ (ಮ.ಆ.)

ಅಶ್ವಕೇತು -ಕ್ಷತ್ರಿಯ; ದುರ್ಯೋಧನನ ಪಕ್ಷದವ; ಜರಾಸಂಧನ ಮಗ, ಅಭಿಮನ್ಯುವಿನಿಂದ ಕೊಲ್ಲಲ್ಪಟ್ಟ (ಮ.ದ್ರೋ.).

ಅಶ್ವಕ್ರಂದ - ಅಮೃತವನ್ನು ರಕ್ಷಿಸುವ ದೇವನೊಬ್ಬ.

ಅಶ್ವಗ್ರೀವ - ರಾಕ್ಷಸ; ಕಶ್ಯಪನ ಮಗಳ ಮಗ (ಮ.ಆ.).

ಅಶ್ವಚಕ್ರ - ಸಾಂಬನಿಂದ ಹತನಾದ ಕ್ಷತ್ರಿಯ (ಮ.ವ.).

ಅಶ್ವತರ - ಒಂದು ಸರ್ಪ; ಇವನು ತನ್ನ ಮಕ್ಕಳಿಗೆ ಸ್ನೇಹಿತನಾಗಿದ್ದ ಕುವಲಾಶ್ವನ ಪತ್ನಿ ಮದಾಲಸೆಯು ತೀರಿಹೋಗಲು, ಈತನು ತನ್ನ ಸಂಗೀತವಿದ್ಯೆಯಿಂದ ಶಿವನನ್ನು ಮೆಚ್ಚಿಸಿ ಮದಾಲಸೆಯನ್ನು ಬದುಕಿಸಿದನು (ಮ.ಆ.,ಉ.).

ಅಶ್ವತೀರ್ಥ - ತೀರ್ಥವಿಶೇಷ. ಇದು ಕನೂಜ್ ಜಿಲ್ಲೆಯಲ್ಲಿ ಗಂಗಾಯಮನೆಗಳ ಸಂಗಮದಲ್ಲಿದ್ದ ಒಂದು ತೀರ್ಥ; ಈ ನದಿಯಿಂದ ಋಚೀಕ ಮುನಿಯು ಒಂದು ಕಿವಿ ಕಪ್ಪಗೆ ಮತ್ತು ಮೈಯೆಲ್ಲಾ ಬಿಳುಪಾಗಿರುವ ಒಂದು ಸಾವಿರ ಕುದುರೆಗಳನ್ನು ಪಡೆದು ಕನ್ಯಾಶುಲ್ಕವಾಗಿ ಗಾಧಿರಾಜನಿಗೆ ಕೊಟ್ಟು ಆತನ ಪುತ್ರಿ ಸತ್ಯವತಿಯನ್ನು ಮದುವೆಯಾದನು. ಕುದುರೆಗಳು ಹೊರಟುಬಂದ ನದಿಯ ಭಾಗವೇ ಅಶ್ವತೀರ್ಥ (ಮ.ವ.).

ಅಶ್ವತ್ಥ-೧. ಒಂದು ದೈವಿಕ ವೃಕ್ಷ; ಪಾರ್ವತೀಪರಮೇಶ್ವರರು ಭೋಗಾಸಕ್ತರಾಗಿರಲು ಅದಕ್ಕೆ ಭಂಗ ಬಾರದಂತೆ ಪಾರ್ವತಿಯು ಎಲ್ಲಾ ದೇವತೆಗಳಿಗೂ ಮರವಾಗುವಂತೆ ಶಾಪವಿತ್ತಳು. ಆಗ ವಿಷ್ಣುವು ಅಶ್ವತ್ಥವೃಕ್ಷವಾದನು (ಮ.ಅಶ್ವ.). ೨. ಒಬ್ಬ ರಾಕ್ಷಸ. ಅವನು ತನ್ನ ತಮ್ಮನಾದ ಪಿಪ್ಪಲನೊಡನೆ ವೃಕ್ಷರೂಪವನ್ನು ಹೊಂದಿ ತಮ್ಮ ನೆರಳಿಗೆ ಬರುವವರನ್ನೆಲ್ಲಾ ನುಂಗುತ್ತಾ ಬರಲು ಬ್ರಾಹ್ಮಣರು ಸೂರ್ಯಪುತ್ರನಾದ ಶನೈಶ್ಚರನ ಸಹಾಯದಿಂದ ಅವರಿಬ್ಬರನ್ನೂ ಕೊಂದರು (ಬ್ರಹ್ಮಪು.).

ಅಶ್ವತ್ಥಾಮ - ೧. ದ್ರೋಣಾಚಾರ್ಯರ ಪುತ್ರ; ಕೃಪಾಚಾರ್ಯರ ಅಳಿಯ; ಇವನ ತಾಯಿ ಗೌತಮೀಕೃಪಿ. ಇವನು ಹುಟ್ಟಿದ ಕೂಡಲೇ ಉಚ್ಚೈಶ್ರವಸ್ಸೆಂಬ ಕುದುರೆಯಂತೆ ಕೆನೆದುದರಿಂದ, ಈತನಿಗೆ ಅಶ್ವತ್ಥಾಮನೆಂದು ಹೆಸರಿಡಬೇಕೆಂದು ಆಕಾಶವಾಣಿ ಸೂಚಿಸಿತು. ಇವನು ಬಾಲ್ಯದಲ್ಲಿ ಹಾಲಿನ ಅಭಾವದಿಂದ ಹಿಟ್ಟಿನ ನೀರನ್ನು ಕುಡಿದನು. ಇವನನ್ನು ಶಿವನ ಅವತಾರಿಯೆನ್ನುವ ವಾಡಿಕೆ ಇದೆ. ಇವನು ಉತ್ತರ ಗೋಗ್ರಹಣದಲ್ಲಿ ಕರ್ಣನನ್ನು ನಿಂದಿಸಿ ಅರ್ಜುನನನ್ನು ಹೊಗಳಿದನು. ಇವನಿಂದ ಮಾಹಿಷ್ಮತಿಯ ರಾಜ ನಿಷ್ಮಲನ ವಧೆಯಾಯಿತು. ಘಟೋತ್ಕಚನೊಡನೆ ಯುದ್ಧ ಮಾಡಿ ಪರಾಜಯ ಹೊಂದಿದನು (ಮ.ವಿ.,ಕ.). ಈತನಿಂದ ಪಾಂಡವರ ಮೇಲೆ ನಾರಾಯಣಾಸ್ತ್ರವು ಪ್ರಯೋಗಿಸಲ್ಪಟ್ಟು ಶ್ರೀ ಕೃಷ್ಣನಿಂದ ಶಾಂತವಾಯಿತು. ದುರ್ಯೋಧನನ ಸನ್ನಿಧಿಯಲ್ಲಿ ಪಾಂಡವರನ್ನು ಕೊಲ್ಲುವೆನೆಂದು ಪ್ರತಿಜ್ಞೆಮಾಡಿ ಪಾಂಡವರು ಶಿಬಿರದಲ್ಲಿಲ್ಲದಿದ್ದಾಗ ಶಿಬಿರ ಪ್ರವೇಶಮಾಡಿ, ಧೃಷ್ಟದ್ಯುಮ್ನ, ಉತ್ತಮೌಜ, ಯುಧಾಮನ್ಯು, ದ್ರೌಪದಿಯ ಐವರು ಮಕ್ಕಳು, ಶಿಖಂಡಿ ಮುಂತಾದವರನ್ನು ಕೊಂದನು. ಪಾಂಡವರ ವಧೆಗಾಗಿ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದರೂ ಹತಾಶನಾದನು. ಇವನಿಗೆ ಶ್ರೀಕೃಷ್ಣನಿಂದ ಶಾಪ ಪ್ರಾಪ್ತವಾಯಿತು. ಪಾಂಡವರಿಗೆ ತನ್ನ ತಲೆಯಲ್ಲಿದ್ದ ಅಮೂಲ್ಯ ರತ್ನವನ್ನರ್ಪಿಸಿದನು. ಇವನು ಸಪ್ತಚಿರಂಜೀವಿಗಳಲ್ಲೊಬ್ಬ (ಮ.ಶ.,ಕ.,ದ್ರೋ.,ಸೌ.). ೨. ಮಾಲವದ ರಾಜನಾದ ಇಂದ್ರವರ್ಮನ ಆನೆ. ಭೀಮಸೇನನಿಂದ ಕೊಲ್ಲಲ್ಪಟ್ಟಿತು (ಮ.ದ್ರೋ.).

ಅಶ್ವನದಿ - ಯಮುನಾ ನದಿಯ ಉಪನದಿಯಾದ ಚರ್ಮಣ್ವತಿಯ ಉಪನದಿ. ಈ ನದಿಯಲ್ಲೇ ಕಾನೀನನಾದ ಕರ್ಣನನ್ನು ಆಭರಣಗಳ ಪೆಟ್ಟಿಗೆಯಲ್ಲಿಟ್ಟು ಕುಂತಿ ತೇಲಿ ಬಿಟ್ಟಳು (ಮ.ವ.).

ಅಶ್ವಪತಿ - ೧. ದನುಪುತ್ರನಾದ ರಾಕ್ಷಸನೊಬ್ಬ (ಮ.ಆ.). ಕ್ಷತ್ರಿಯನೊಬ್ಬ; ಸಾವಿತ್ರಿಯ ತಂದೆಯಾದ ಮದ್ರರಾಜ ಇವನು ೧೮ ವರ್ಷ ಸಾವಿತ್ರಿಯ ಉಪಾಸನೆ ಮಾಡಿ ಸಾವಿತ್ರಿ ಎಂಬ ಮಗಳನ್ನು ಪಡೆದನು. ಇವನ ಪತ್ನಿ ಮಾಲತಿ (ಮ.ವ.). ೩. ಕೇಕಯ ದೇಶದ ರಾಜ; ದಶರಥನ ಪತ್ನಿ ಕೈಕೆ ಈತನ ಮಗಳು. ಯುಧಾಜಿತ್ತು ಈತನ ಮಗ. ಈ ಅಶ್ವಪತಿಯು ಪಶುಪಕ್ಷಿಗಳ ಭಾಷೆಯನ್ನು ತಿಳಿದಿದ್ದನು (ಮ.ವ.,ವಾ.ರಾ.ಅಯೋ.)

ಅಶ್ವಮೇಧ-ಯಜ್ಞವಿಶೇಷ; ಇದು ಶ್ರೀರಾಮ, ಸಗರ, ಯುಧಿಷ್ಠಿರ-ಮೊದಲಾದವರಿಂದ ಮಾಡಲ್ಪಟ್ಟಿತು. ಇದು ಬ್ರಹ್ಮಹತ್ಯಾದೋಷ ನಿವಾರಕವಾದುದು (ಮ.ವ.,ಅಶ್ವ.,ಶಾಂ).

ಅಶ್ವಮೇಧದತ್ತ - ಕ್ಷತ್ರಿಯ; ಶತಾನೀಕನ ಮಗ, ಜನಮೇಜಯನ ಮೊಮ್ಮಗ; ಇವನ ತಾಯಿ ವೈದೇಹಿ (ಮ.ಆ.).

ಅಶ್ವರಥೆ - ನದಿಯೊಂದು; ಆರ್ಷ್ಟಿಷೇಣ ಎಂಬ ರಾಜರ್ಷಿಯ ಆಶ್ರಮದ ಪಕ್ಕದಲ್ಲಿ ಹರಿಯುತ್ತಿತ್ತು (ಮ.ವ.).

ಅಶ್ವವಂತ - ಕ್ಷತ್ರಿಯ; ಕುರುರಾಜನ ಪುತ್ರ (ಮ.ಆ.).

ಅಶ್ವಶಂಕು - ರಾಕ್ಷಸನೊಬ್ಬ; ದನುಪುತ್ರ (ಮ.ಆ.).

ಅಶ್ವಶಿರ - ಅಥರ್ವಾಂಗಿರಸನ ಮಗ; ಬದರಿಕಾಶ್ರಮದ ವಾಸಿಯಾದ ಈತನು ನಿತ್ಯವೂ ಒಮ್ಮೆ ಸಂಪೂರ್ಣ ವೇದಪಾರಾಯಣವನ್ನು ಮಾಡುತ್ತಿದ್ದ (ಮ.ಶಾಂ.).

ಅಶ್ವಸೇನ - ಒಂದು ಸರ್ಪ, ಸರ್ಪಕನ ಮಗ; ಖಾಂಡವವನ ದಹನ ಕಾಲದಲ್ಲಿ ಅಗ್ನಿಯಿಂದ ತಪ್ಪಿಸಿಕೊಂಡವ. ಇವನು ಅರ್ಜುನನ ಮೇಲಿನ ಸೇಡು ತೀರಿಸಿಕೊಳ್ಳಲು ಕರ್ಣನ ಬತ್ತಳಿಕೆಯಲ್ಲಿ ಆಶ್ರಯಪಡೆದನು. ಕೊನೆಗೆ ಅರ್ಜುನನಿಂದ ಹತನಾದನು (ಮ.ಆ.,ಶ.,ಕ.).

ಅಶ್ವಹೃದಯ - ಅಶ್ವಗಳ ಕುರಿತಾದ ಶಾಸ್ತ್ರ; ಇದನ್ನು ಋತುಪರ್ಣರಾಜನು ನಳನಿಂದ ವಿದ್ಯಾಭ್ಯಾಸ ಮಾಡಿದನು. ಸಮರ್ಥ ಸಾರಥಿಗಳಾದ ಶ್ರೀಕೃಷ್ಣ ಮತ್ತು ಶಲ್ಯರಿಗೆ ಈ ಶಾಸ್ತ್ರದ ಪರಿಚಯವಿತ್ತು (ಮ.ವ.).

ಅಶ್ವಿನಿ - ದಕ್ಷನ ಮಗಳು; ಚಂದ್ರನ ಪತ್ನಿಯರಲ್ಲಿ ಒಬ್ಬಳು; ಇಪ್ಪತ್ತೇಳು ನಕ್ಷತ್ರಗಳಲ್ಲಿ ಮೊದಲನೆಯದು.

ಅಶ್ವಿನೀಕುಮಾರರು - ದೇವವೈದ್ಯರು; ಇವರ ತಂದೆ ಸೂರ್ಯ; ತಾಯಿ ಸಂಜ್ಞಾದೇವಿ; ಇವರು ಚ್ಯವನಮಹರ್ಷಿಗೆ ತಾರುಣ್ಯ ಮತ್ತು ಸೌಂದರ್ಯವನ್ನಿತ್ತರು. ಇದರಿಂದ ಸಂತಸಗೊಂಡ ಚ್ಯವನನು ಶರ್ಯಾತಿ ಮಹಾರಾಜನ ಯಜ್ಞದಲ್ಲಿ ಇವರಿಗೆ ಹವಿರ್ಭಾಗವನ್ನು ಕೊಡಿಸಿದನು (ಮ.ಆ.,ಭಾಗ.) ಇವರು ಪಾಂಡು ಪತ್ನಿಯಾದ ಮಾದ್ರಿಯಲ್ಲಿ ನಕುಲಸಹದೇವರೆಂಬ ಹೆಸರಿನಿಂದ ಹುಟ್ಟಿದರು (ಮ.ಶಾ.,ವ.,ಆ.,ವರಾಹಪು., ವಾಯುಪು., ಹರಿ., ಬ್ರಹ್ಮಪು., ಪದ್ಮಪು.,ವಿಷ್ಣುಪು., ಶಿವಪು.). ಎಕ್ಕೆ ಎಲೆ ತಿಂದು ಕುರುಡನಾದ ಉಪಮನ್ಯು ಎಂಬ ಋಷಿಯು ಗುರುವಾದ ಧೌಮ್ಯನ ಆಜ್ಞೆಯಂತೆ ಅಶ್ವಿನೀದೇವತೆಗಳನ್ನು ಪ್ರಾರ್ಥಿಸಿ ಕಣ್ಣು ಪಡೆದನು.

ಹೆಣ್ಣು ಕುದುರೆಯ ರೂಪವನ್ನು ತಾಳಿದ ತನ್ನ ಪಟ್ಟದ ಮಹಿಷಿಯಾದ ಸಂಜ್ಞಾದೇವಿಯೊಡನೆ ಸೂರ್ಯನು ಗಂಡುಕುದುರೆಯ ಆಕಾರವನ್ನು ತಾಳಿ ಕೂಡಿದುದರಿಂದ ಹುಟ್ಟಿದವರು ಈ ಅಶ್ವಿನಿದೇವತೆಗಳು.

ಇವರು ದೇವತೆಗಳ ಪ್ರಖ್ಯಾತ ವೈದ್ಯರು. ಇವರಿಬ್ಬರೂ ಸೂರ್ಯನ ಮಕ್ಕಳಾದುದರಿಂದ ಅತೀ ಸುಂದರರು. ಇವರು ಯಾವಾಗಲೂ ಜೊತೆಯಾಗಿಯೇ ಇರುವವರು. ಇವರು ಸ್ವರ್ಗದಲ್ಲಿ ವಾಸಿಸುತ್ತಿದ್ದರೂ ಆಗಾಗ ಪೃಥ್ವಿಗೆ ಬಂದು ಇಲ್ಲಿಯ ಗಿರಿಗಹ್ವರಗಳಲ್ಲಿಯೂ ವಾಸಿಸುತ್ತಿದ್ದರು. ಕೆಲವು ಸಮಯಗಳಲ್ಲಿ ಇವರು ನೇಗಿಲನ್ನು ಹಿಡಿದು ಭೂಮಿ ಉಳುತ್ತಿದ್ದರು. ಕೆಲವು ಸಮಯ ಇವರು ಜನತೆಗಾಗಿ ಬಿತ್ತಿ ಬೆಳೆಯುವುದಕ್ಕೂ ಹಿಂಜರಿಯುತ್ತಿದ್ದಿಲ್ಲ. ಸುರರಲ್ಲಿ ಅಶ್ವಿನೀಕುಮಾರರೇ ಚಿಕ್ಕವರು. ಇವರು ಸುವರ್ಣಮಯ ರಥಕ್ಕೆ ಒಂದು ಸಾರಿ ಹಂಸಗಳನ್ನು ಹೂಡಿದರೆ ಮತ್ತೊಂದು ಸಾರಿ ಗರುಡನನ್ನೂ, ಮಗದೊಂದು ಸಾರಿ ಕತ್ತೆಗಳನ್ನೂ ಹೂಡುತ್ತಿದ್ದರು. ಇವರು ತಮ್ಮ ನಲುಮೆಯ ಭಕ್ತರಿಗಾಗಿ ಏನನ್ನು ಮಾಡಲೂ ಹಿಂಜರಿಯುತ್ತಿದ್ದಿಲ್ಲ. ವಿಮದನೆಂಬ ಋಷಿಯ ಮೇಲೆ ಇವರಿಗೆ ಯಾರಲ್ಲಿಲ್ಲದ ವಿಶ್ವಾಸವಿತ್ತು. ಇವರಿಗೆ ಮೋದು ಎಂಬ ರಾಜನಲ್ಲಿ ಬಹಳ ಪ್ರೀತಿ. ಇವನು ಶೂರನಾಗಿದ್ದರೂ ಯುದ್ಧದಲ್ಲಿ ಮಾತ್ರ ಪರಾಭವ ಹೊಂದುತ್ತಿದ್ದನು. ಅದಕ್ಕಾಗಿ ಅಶ್ವಿನೀಕುಮಾರರು ಅವನಿಗೆ ಶುಭ್ರವರ್ಣದ ನೂರು ಕುದುರೆಗಳನ್ನಿತ್ತರು. ಅವುಗಳ ಪ್ರಭಾವದಿಂದ ಮೋದುವು ಜಯಶಾಲಿಯಾಗತೊಡಗಿದನು. ಬಾಹುಷನೂ ಅಶ್ವಿನೀಕುಮಾರರ ಪ್ರೀತಿಪಾತ್ರನೇ ಆಗಿದ್ದನು.

ಒಂದು ಸಲ ಅಸುರರು ರೇಭನೆಂಬ ಒಬ್ಬ ಋಷಿಯನ್ನು ಹಿಡಿದು ಅವನ ಕೈ ಕಾಲುಗಳನ್ನು ಮುರಿದು ಒಂದು ಹಾಳುಭಾವಿಯಲ್ಲಿ ಹಾಕಿದರು. ಆ ಭಾವಿಯಲ್ಲಿ ಅವನು ಹತ್ತು ರಾತ್ರಿಗಳನ್ನು ಅತೀ ಪ್ರಯಾಸದಿಂದ ಕಳೆದನು.

ಇದು ಅಶ್ವಿನೀಕುಮಾರರಿಗೆ ಗೊತ್ತಾಗಿ, ಬೆಣ್ಣೆಯೊಳಗಿನ ಕೂದಲನ್ನು ತೆಗೆದಂತೆ, ಅವನನ್ನು ಬಾವಿಯಿಂದ ತೆಗೆದು ಆತನ ಕೈಕಾಲುಗಳನ್ನು ಸರಿಮಾಡಿದರು. ಒಮ್ಮೆ ಬಾಯಾರಿದ ಗೌತಮನೆಂಬ ಋಷಿಗೆ ಅಶ್ವಿನೀಕುಮಾರರು ಆಳದಲ್ಲಿದ್ದ ನೀರು ಮೇಲೆ ಬರುವಂತೆ ಮಾಡಿ ಅವನ ದಾಹವನ್ನು ಹಿಂಗಿಸಿದರು. ಖೇಲನೆಂಬ ಒಬ್ಬ ಹಿಂದೂ ರಾಜನು ತನ್ನ ಪತ್ನಿಯೊಂದಿಗೆ ಕೂಡಿ ಯುದ್ಧದಲ್ಲಿ ಹೋರಾಡಿದಾಗ ಅಶ್ವಿನೀಕುಮಾರರು ಅವರಿಗೆ ಸಹಾಯ ಮಾಡಿದರು (ಋ.).

ಅಷ್ಟಕ-ಋಷಿಯೊಬ್ಬ; ವಿಶ್ವಾಮಿತ್ರನ ಪುತ್ರ; ಯಯಾತಿಪುತ್ರಿಯಾದ ಮಾಧವಿಯಲ್ಲಿ ಹುಟ್ಟಿದವನು. ಇವನ ಮಗನೇ ಲೌಹಿ. ಇವನೊಬ್ಬ ಮಂತ್ರ ಪ್ರವರ್ತಕ.

ಯಯಾತಿಯು ಸ್ವರ್ಗದಿಂದ ಭೂಮಿಗೆ ಬೀಳುವಾಗ ಅವನ ಮಗಳಾದ ಮಾಧವಿಯ ಮಗನಾದ ಅಷ್ಟಕನು ಬ್ರಹ್ಮದೇವರಿಂದ ವಿಧಿಸಲ್ಪಟ್ಟ ಅಶ್ವಮೇಧ ಎಂಬ ಮಹಾಯಾಗವನ್ನು ಮಾಡುತ್ತಿದ್ದನು. ಆ ಸಮಯದಲ್ಲಿ ಅಷ್ಟಕನ ತಾಯಿ ಮಾಧವಿಯು ತಪಸ್ವಿನಿಯಾಗಿ ಮೃಗಚರ್ಮವನ್ನುಟ್ಟು, ಮೃಗಚರ್ಮವನ್ನು ಹೊದೆದು ಆಹಾರ ಮತ್ತು ಕಾರ್ಯಗಳಲ್ಲಿ ಮೃಗವನ್ನೇ ಹೋಲುತ್ತಾ ಮೃಗಸಮೂಹದೊಡನೆ ಬಂದು ತನ್ನ ಮಕ್ಕಳು ನಡೆಸುವ ಯಜ್ಞವನ್ನು ನೋಡಿ ಆನಂದಿಸುತ್ತಿದ್ದಳು. ಇವಳು ಅಂತರಿಕ್ಷದಲ್ಲಿ ನಿಂತು ಭೂಮಿಯನ್ನು ಸ್ಪರ್ಶಿಸದಿರುವ ತಂದೆ ಯಯಾತಿಯನ್ನು ಕಂಡು ಭಕ್ತಿಯಿಂದ ನಮಸ್ಕರಿಸಿದಳು. ಇವಳು ತನ್ನ ಮತ್ತು ತನ್ನ ಮಕ್ಕಳ ತಪಸ್ಸಿನ ಪುಣ್ಯವನ್ನು ತಂದೆಗೆ ಕೊಟ್ಟಳು. ಯಯಾತಿಯು ಇನ್ನು ಮುಂದೆ ದೌಹಿತ್ರ, ಎಳ್ಳು ಮತ್ತು ಕುತಪಕಾಲ - ಈ ಮೂರಕ್ಕೂ ಶ್ರಾದ್ಧದಲ್ಲಿ ಸಮಾನವಾದ ಪವಿತ್ರತೆ ಉಂಟಾಗಲಿ (ಹಗಲಿನ ಎಂಟನೇ ಭಾಗದಲ್ಲಿ ಬಿಸಿಲು ತಣಿಯುತ್ತ ಬರುವ ಕಾಲಕ್ಕೆ ಕುತಪಕಾಲ ಎನ್ನುವರು) ಎಂದನು. ಆಗಲೇ ಅಷ್ಟಕ, ಶಿಬಿ, ಕಾಶ್ಮೀರದ ರಾಜನಾದ ಪ್ರತರ್ದನ, ಇಕ್ಷ್ವಾಕು ಕುಲದ ವಸುಮಂತರು ತಮ್ಮ ಪುಣ್ಯದ ಬಲದಿಂದ ಸ್ವರ್ಗಲೋಕಕ್ಕೆ ಹೊರಟುಹೋದರು. ಯಯಾತಿಯು ತನ್ನ ದೌಹಿತ್ರರಿಂದ ಉದ್ಧರಿಸಲ್ಪಟ್ಟವನಾಗಿ ಭೂಮಿಯನ್ನು ಬಿಟ್ಟು ಸದ್ಗತಿ ಹೊಂದಿದನು. (ಮ.ಆ., ಉ., ಮತ್ಸ್ಯಪು., ಮ.ಅನು., ಹರಿ., ಮ.ಭೀ.) ನೋ. - ಯಯಾತಿ.

ಅಷ್ಟಮೂರ್ತಿ - ಶರ್ವ, ಭವ, ರುದ್ರ, ಉಗ್ರ, ಭೀಮ, ಪಶುಪತಿ, ಈಶಾನ, ಮಹಾದೇವ; ಪೃಥ್ವಿ, ಜಲ, ತೇಜ, ವಾಯು, ಆಕಾಶ, ಯಜಮಾನ (ಧಾರ್ಮಿಕ ಬ್ರಾಹ್ಮಣ), ಸೂರ್ಯ ಮತ್ತು ಚಂದ್ರ - ಇವು ಶಿವನ ಎಂಟು ಮೂರ್ತಿಗಳೆಂದೂ, ಎಂಟು ಸ್ಥಾನಗಳೆಂದೂ ಹೇಳುತ್ತಾರೆ.

ಅಷ್ಟವಸುಗಳು - ಧರ್ಮಪ್ರಜಾಪತಿಯಿಂದ ವಸು ಎಂಬ ದಕ್ಷಪುತ್ರಿಯಲ್ಲಿ ಹುಟ್ಟಿದ ಎಂಟು ಮಂದಿ ಮಕ್ಕಳು. ಹೆಸರು - ಧರ, ಧ್ರುವ, ಸೋಮ, ಅಹ, ಅನಿಲ, ಅನಲ, ಪ್ರತ್ಯೂಷ, ಪ್ರಭಾಸ; ಅಹನಿಗೆ ಸಾವಿತ್ರನೆಂಬ ಹೆಸರೂ ಇದೆ; ದ್ರೋಣ, ಪ್ರಾಣ, ಧ್ರುವ, ಅರ್ಕ, ಅಗ್ನಿ, ದೋಷ, ವಸು, ವಿಭಾವವಸು, ಹೀಗೆ ಎಂಟು ಮಂದಿ (ಭಾ.). ಆಪ, ಧ್ರುವ, ಸೋಮ, ಧರ್ಮ, ಅನಿಲ, ಅನಲ, ಪ್ರತ್ಯೂಷ, ಪ್ರಭಾವ - ಹೀಗೆ ಎಂಟು ಮಂದಿ (ವಿಷ್ಣುಪು); ಆಪ, ಧರ, ಧ್ರುವ, ಸೋಮ, ಅನಿಲ, ಅನಲ, ಪ್ರತ್ಯೂಷ, ಪ್ರಭಾವ - ಹೀಗೆ ಎಂಟು ಮಂದಿ (ಹರಿ). ಇವರಿಗೆ ವಸಿಷ್ಠನಿಂದ ಶಾಪ ಬಂದು ಶಂತನುರಾಜನ ಪತ್ನಿಯಾದ ಗಂಗಾದೇವಿಯಲ್ಲಿ ಜನಿಸಿದರು. ಇವರಲ್ಲಿ ಮುಳ್ಳುಕೋಲಿನಿಂದ ಕಾಮಧೇನುವಿಗೆ ಹೊಡೆದು ವಸಿಷ್ಠನ ಶಾಪಕ್ಕೆ ಮೂಲಕಾರಣನಾದ ಆಪನೆಂಬವನು ಮಾತ್ರ ಭೀಷ್ಮನಾಗಿ ಭೂಮಿಯಲ್ಲಿ ಬಹುಕಾಲ ಬಾಳಿ ಶರಮಂಚದಲ್ಲಿ ಮಲಗಿ ಪ್ರಾಣತ್ಯಾಗ ಮಾಡಿದನು (ಮ.ಆ.,ಅನು.,ಭಾಗ.,ವಿಷ್ಣುಪು.).

ಅಷ್ಟಸಿದ್ಧಿಗಳು - ಅಣಿಮಾ (ಸೂಕ್ಷ್ಮ ರೂಪವನ್ನು ಧರಿಸುವುದು), ಮಹಿಮಾ (ದೊಡ್ಡ ರೂಪವನ್ನು ಧರಿಸುವುದು), ಗರಿಮಾ (ಭಾರವಾಗುವುದು), ಲಘಿಮಾ (ಹಗುರವಾಗುವುದು), ಪ್ರಾಪ್ತಿ (ಅಸಾಧ್ಯವಾದುದನ್ನು ಪಡೆಯುವುದು), ಪ್ರಾಕಾಮ್ಯ (ನಿರ್ವಿಘ್ನವಾದ ಸಂಚಾರಶಕ್ತಿ), ಈಶತ್ವ (ಎಲ್ಲಾ ಕಡೆಯಲ್ಲೂ ಪ್ರಭಾವ ಬೀರುವುದು), ವಶತ್ವ (ಇಂದ್ರಿಯಗಳ ಸ್ವಾಧೀನತೆ) (ಅಮರಪ್ರ).

ಅಷ್ಟಾಂಗ - ಆಯುರ್ವೇದಕರ್ತನಾದ ಋಷಿ (ಮ.ಸ.).

ಅಷ್ಟಾವಕ್ರ - ೧. ಕಹೋಳ ಋಷಿಯ ಮಗ. ಉದ್ದಾಲಕನ ಮಗಳಾದ ಸುಜಾತೆಯ ಮಗ; ಶ್ವೇತಕೇತುಮಹರ್ಷಿ ಈತನ ಸೋದರಮಾವ. ಈತನ ಪತ್ನಿ ಸುಪ್ರಭಾ. ಕಹೋಳಮುನಿಯು ವೇದಾಧ್ಯಯನ ಮಾಡುವಾಗ ಅಪಸ್ವರವನ್ನು ನುಡಿದುದರಿಂದ ಗರ್ಭದಲ್ಲಿದ್ದ ಮಗು ನಕ್ಕಿತು. ಇದರಿಂದ ಕಹೋಳನು ಸಿಟ್ಟುಗೊಂಡು ಗರ್ಭಸ್ಥ ಶಿಶುವಿಗೆ ಅಷ್ಟಾವಕ್ರನಾಗುವಂತೆ ಶಾಪವಿತ್ತನು. ಕಹೋಳನು ಜನಕನೊಡನೆ ವಾದಮಾಡಿ ಸೋತು ಜಲಾಧಿವಾಸವನ್ನು ಮಾಡುತ್ತಿರಲು ಅಷ್ಟಾವಕ್ರನು ಜನಕರಾಜನನ್ನು ಗೆದ್ದು ತಂದೆಯನ್ನು ಕರೆದುಕೊಂಡು ಬಂದನು. ಇವನು ಮುಂದೆ ತನ್ನ ತಂದೆಯ ಸೂಚನೆಯಂತೆ ಸಮಂಗಾನದಿಯಲ್ಲಿ ಸ್ನಾನ ಮಾಡಿ ತನ್ನ ದೇಹದ ವಿಕಾರವನ್ನು ಕಳೆದುಕೊಂಡನು. ಇವನ ಮನೋನಿಗ್ರಹದ ಶಕ್ತಿಗೆ ಬೆರಗಾದ ವದಾನ್ಯಮುನಿಯು ತನ್ನ ಮಗಳಾದ ಸುಪ್ರಭೆಯನ್ನು ಈತನಿಗೆ ಮದುವೆ ಮಾಡಿಕೊಟ್ಟನು.

ಅಷ್ಟಾವಕ್ರನು ತನ್ನ ತಂದೆಯಾದ ಕಹೋಳನು ಜನಕರಾಜನ ಆಸ್ಥಾನ ಪಂಡಿತನಾದ - ವರುಣ ಪುತ್ರನಾದ ಬಂದಿಯಿಂದ ವಾದದಲ್ಲಿ ಸೋಲಲು ಆತನು ಕಹ್ಹೋಳನನ್ನು ಸಮುದ್ರದಲ್ಲಿ ಮುಳುಗಿಸಿ ಕೊಂದನೆನ್ನುವುದನ್ನು ಕೇಳಿ, ಕೋಪದಿಂದ ಜನಕರಾಜನ ಆಸ್ಥಾನ ಸೇರಿ ಬಂದಿಯೊಡನೆ ವಾದಮಾಡಿ ಗೆದ್ದನು. ಇದರಿಂದ ಬಂದಿಯು ವರುಣನ ಯಾಗಶಾಲೆಗೆ ಕಳುಹಿಸಿದ್ದ ಕಹೋಳನನ್ನು ಪುನಃ ಕರೆಸಿ ಅಷ್ಟಾವಕ್ರನಿಗೆ ಕೊಟ್ಟು ತಾನು ವರುಣನ ಬಳಿಗೆ ಹೊರಟುಹೋದನು. ಮುಂದೆ ಅಷ್ಟಾವಕ್ರನು ತಂದೆಯ ಆಜ್ಞೆಯಂತೆ ಮಧುವಿಲಾ ನದಿಯಲ್ಲಿ ಸ್ನಾನ ಮಾಡಲು ಅವನ ಶರೀರದ ವಕ್ರತೆಯೆಲ್ಲಾ ನಷ್ಟವಾಯಿತು. ಅಂದಿನಿಂದ ಮಧುವಿಲಾ ನದಿಗೆ ಸಮಂಗಾ ಎಂದು ಹೆಸರಾಯಿತು (ಮ.ವ.). ೨. ಸರ್ಪವೊಂದು (ಮ.ಆ.,ವ.,ಅನು.).

ಅಸಮಂಜ - ಕ್ಷತ್ರಿಯ; ಸಗರನ ಪುತ್ರ; ಇವನ ತಾಯಿ ಅರಿಷ್ಟನೇಮಿಯ ಮಗಳಾದ ಸುಮತಿ ಅಥವಾ ಕೇಶಿನಿ. ಇವನ ಮಗ ಅಂಶುಮಂತ; ಅಸಮಂಜನು ಪ್ರಜೆಗಳ ಮಕ್ಕಳನ್ನೂ ಸರಯೂ ನದಿಯಲ್ಲಿ ತಳ್ಳಿ ಆನಂದಿಸುತ್ತಿದ್ದುದರಿಂದ ಸಗರನು ಇವನನ್ನು ರಾಜ್ಯದಿಂದ ಹೊರಡಿಸಿದನು (ಮ.ಸ.)

ಅಸಿಕ್ನಿ - ೧. ದಕ್ಷಬ್ರಹ್ಮನ ಪತ್ನಿ; ದಕ್ಷನು ತಪಸ್ಸು ಮಾಡುತ್ತಿದ್ದಾಗ ವಿಷ್ಣುವು ಪಂಚಜನನೆಂಬ ಬ್ರಹ್ಮನ ಮಗಳಾದ ಈಕೆಯನ್ನು ದಕ್ಷನಿಗೆ ಮದುವೆ ಮಾಡಿಸಿದನು. ಈಕೆಗೆ ವೀರಿಣಿ ಎಂಬ ಹೆಸರಿದೆ (ಭಾಗ.) ೨. ನದಿಯೊಂದು; ಚೀನಾಬ್ ನದಿ (ಚಂದ್ರ ಭಾಗ) (ಮ.ಭೀ.)

ಅಸಿತ - ೧. ಋಷಿಯೊಬ್ಬ; ಯೋಗಾಚಾರ್ಯ; ಇವನಿಗೆ ದೇವಲ ಎಂಬ ಹೆಸರಿದೆ. ಇವನ ಸ್ಮರಣೆಯಿಂದ ಸರ್ಪಭಯವು ಪರಿಹಾರವಾಗುವುದು. ಇವನ ಹೆಂಡತಿ ಹಿಮವಂತನ ಮಗಳಾದ ಏಕಪರ್ಣೆ (ಭಾಗ.,ಮ.ಆ.).

೨. ಮಾಂಧಾತನಿಂದ ಪರಾಜಿತನಾದ ಕ್ಷತ್ರಿಯನೊಬ್ಬ (ಮ.ಆ.,ಸ.,ಶ., ಶಾಂ.,ಹರಿ.).

೩. ಪಿತೃಗಳಿಗೆ ಮಹಾಭಾರತವನ್ನು ಹೇಳಿದವನು.

ಅಸಿಪತ್ರ - ನರಕಗಳಲ್ಲೊಂದು.

ಅಸಿಲೋಮ - ರಾಕ್ಷಸನೊಬ್ಬ; ದನುಪುತ್ರ. ವಾಮನಾವತಾರದಲ್ಲಿ ವಿಷ್ಣು ಇವನನ್ನು ಕೊಂದನು (ಮ.ಆ.).

ಅಸೀ - ಕಾಶಿಯ ಹತ್ತಿರ ಗಂಗಾನದಿಯನ್ನು ಸೇರುವ ಒಂದು ನದಿ.

ಅಸುರಾ - ೧. ಪ್ರಾಧೆಯ ಮಗಳಾದ ಅಪ್ಸರೆ. ೨. ದೈತ್ಯರು (ಮ.ಆ.).

ಅಸುರಾಯಣ - ಋಷಿಯೊಬ್ಬ; ವಿಶ್ವಾಮಿತ್ರನ ಮಗ (ಮ.ಅನು.).

ಅಸುರ್ಯಾ - ಕತ್ತಲೆಯಿಂದ ಆವೃತ್ತವಾದ ಪಾಪಿಗಳ ಲೋಕ (ಮ.ಅನು.).

ಅಸ್ತಿ - ಜರಾಸಂಧನ ಪುತ್ರಿ; ಕಂಸನ ಹೆಂಡತಿ; ಈಕೆಯ ತಂಗಿ ಪ್ರಾಸ್ತಿ (ಪ್ರಾಪ್ತಿ) (ಮ.ಸ.).

ಅಹ - ೧. ತೀರ್ಥವಿಶೇಷ. ೨. ಅಷ್ಟವಸುಗಳಲ್ಲೊಬ್ಬ; ಧರ್ಮಪ್ರಜಾಪತಿಯಪುತ್ರ; ಇವನ ತಾಯಿ ರತೆ. ಈತನಿಗೆ ಸಾವಿತ್ರನೆಂಬ ಹೆಸರಿದೆ; ಇವನಿಗೆ ಜ್ಯೋತಿ, ಶಮ, ಶಾಂತ ಮತ್ತು ಮುನಿ ಎಂಬ ನಾಲ್ವರು ಮಕ್ಕಳು. ನೋ. - ಅಷ್ಟವಸು. (ಮ.ವ.,ಆ.,ಅನು.).

ಅಹಲ್ಯಾಹ್ರದ - ಒಂದು ತೀರ್ಥವಿಶೇಷ (ಮ.ವ.).

ಅಹಲ್ಯೆ - ಗೌತಮ ಋಷಿಯ ಪತ್ನಿ. ಈಕೆಯು ಗುರುದಕ್ಷಿಣೆಗಾಗಿ ಉದಂಕನೊಡನೆ ಸೌದಾಸನ ಪತ್ನಿಯಾದ ಮದಯಂತಿಯು ಧರಿಸಿದ ಕುಂಡಲಗಳನ್ನು ತರಲು ಹೇಳಿದಳು. ಈಕೆಯ ತಂದೆ ಕುರುಕ್ಷೇತ್ರದ ಬಳಿ ವಾಸಮಾಡುತ್ತಿದ್ದ ಮುದ್ಗಲ ಮಹರ್ಷಿ; ದಿವೋದಾಸನು ಈಕೆಯ ಸಹೋದರ. ಈಕೆಯು ಬ್ರಹ್ಮನ ಮಾನಸಪುತ್ರಿ (ರಾ.ಮಾ.). ಗೌತಮರು ಪತ್ನಿಯು ಬಿಸಿಲಿನಲ್ಲಿ ದೂರದಿಂದ ನೀರನ್ನು ಹೊತ್ತು ತರುವುದನ್ನು ಕಂಡು ಛತ್ರ ಮತ್ತು ಪಾದುಕೆಗಳನ್ನು ನಿರ್ಮಿಸಿದರು. ಈಕೆ ವಿಂಧ್ಯಾಶ್ವ ಅಥವಾ ಭದ್ರ್ಯಶ್ವನಿಂದ ಮೇನಕೆಯಲ್ಲಿ ಹುಟ್ಟಿದಳು (ಹರಿ). ಈಕೆಯ ಸೌಂದರ್ಯಕ್ಕೆ ಮರುಳಾದ ದೇವೇಂದ್ರನು ಗೌತಮರು ಆಶ್ರಮದಲ್ಲಿಲ್ಲದಿರುವ ಸಮಯದಲ್ಲಿ ಗೌತಮರಂತೆ ಕಪಟವೇಷ ತಾಳಿ ಬಂದು ಆಕೆಯ ಪಾತಿವ್ರತ್ಯವನ್ನು ಕೆಡಿಸಿದುದರಿಂದ ಗೌತಮರು ಇಂದ್ರನಿಗೆ ಸಹಸ್ರಾಕ್ಷನಾಗುವಂತೆಯೂ, ಅಹಲ್ಯೆಗೆ ಶಿಲೆಯಾಗಿ ಬೀಳುವಂತೆಯೂ ಶಾಪವಿತ್ತರು. ಮುಂದೆ ಶಿಲೆಯಾದ ಅಹಲ್ಯೆಯು ಶ್ರೀರಾಮನ ಪಾದಸ್ಪರ್ಶದಿಂದ ಶಾಪವಿಮೋಚನೆಯನ್ನು ಹೊಂದಿದಳು. ಪಂಚಕನ್ಯೆಯರಲ್ಲಿ ಅಹಲ್ಯೆ ಒಬ್ಬಳು. ಇಂದ್ರನು ಗೌತಮನ ವೇಷದಿಂದ ಅಹಲ್ಯೆಯೊಡನೆ ಸುಖಾನುಭೋಗದಿಂದಿರುವಾಗ ಗೌತಮನು ಬಂದು ಬಾಗಿಲು ತಟ್ಟಲು ಅಹಲ್ಯೆಯು ಇಂದ್ರನನ್ನು ಬೆಕ್ಕಿನ ರೂಪದಿಂದ ತಪ್ಪಿಸಿಕೊಳ್ಳುವಂತೆ ಹೇಳಿದಳು (ಹರಿ.,ಮ.,ಅಶ್ವ.,ಭಾಗ.,ಮಂ. ಶಾಂ.,ಬ್ರಹ್ಮಪು.).

ಅಹಂಯಾತಿ - ಕ್ಷತ್ರಿಯ; ಶರ್ಯಾತಿಯ ಪುತ್ರ. ಚಂದ್ರವಂಶ. ಇವನ ತಾಯಿಯು ತ್ರಿಶಂಕುವಿನ ಮಗಳಾದ ವರಾಂಗಿ; ಹೆಂಡತಿ. ಕೃತವೀರ್ಯನ ಮಗಳಾದ ಭಾನುಮತಿ; ಮಗನ ಹೆಸರು ಸಾರ್ವಭೌಮ (ಮ.ಆ.).

ಅಹಿದಂಷ್ಟ್ರ - ಚಂದ್ರವಂಶದ ಶತಾನೀಕ ರಾಜನೊಂದಿಗೆ ಸ್ವರ್ಗದಲ್ಲಿ ಹೋರಾಡಿದ ರಾಕ್ಷಸನೊಬ್ಬ. ನೋ. - ವಿಧೂಮ, ಶತಾನೀಕ.

ಅಹಿಚ್ಛತ್ರ (ಅಹಿಛತ್ರ) - ಉತ್ತರ ಪಾಂಚಾಲದೇಶ; ದ್ರೋಣನು ದ್ರುಪದನಿಂದ ಇದನ್ನು ಕಿತ್ತುಕೊಂಡನು ; ಇಂದು ಇದು ಬರೇಲಿಯಿಂದ ೨೦ ಮೈಲು ಪಶ್ಚಿಮದಲ್ಲಿರುವ ರಾಮನಗರ; ಇದು ರೋಹಿಲಖಂಡದಲ್ಲಿದ್ದು ಉತ್ತರ ಪಾಂಚಾಲದ ರಾಜಧಾನಿ. ಅರ್ಜುನನು ಗುರುಕಾಣಿಕೆಯಾಗಿ ದ್ರೋಣನಿಗೆ ಅರ್ಪಿಸಿದ ರಾಜ್ಯ (ಮ.ಆ.).

ಅಹಿರ್ಬುಧ್ನ್ಯ - ಏಕಾದಶರುದ್ರರಲ್ಲೊಬ್ಬ (ಮ.ಆ.).

ಅಹಿರಾವಣ - ಇವನ ತಮ್ಮ ಮಹಿರಾವಣ. ಇವರಿಬ್ಬರೂ ಅಶ್ವಿನೀಕುಮಾರರ ಅವತಾರ (ಅನಂ.ರಾ.). ನಾರಾಯಣನೊಮ್ಮೆ ಲಕ್ಷ್ಮಿಯೊಡನೆ ಏಕಾಂತಗೃಹದಲ್ಲಿ ಇದ್ದನು. ಆಗ ಶ್ರೇಷ್ಠರಾದ ಅಶ್ವಿನೀದೇವತೆಗಳು ಮಹಾವಿಷ್ಣುವನ್ನು ನೋಡಲು ಬಂದರು. ಆಗ ವೈಕುಂಠದ ದ್ವಾರಪಾಲಕರಾದ ಜಯವಿಜಯರು ಹರಿಯು ಪತ್ನಿಯೊಡನೆ ಏಕಾಂತದಲ್ಲಿದ್ದುದರಿಂದ ಈ ದೇವತೆಗಳನ್ನು ಒಳಹೋಗಲು ಬಿಡಲಿಲ್ಲ. ಆಗ ದೇವತೆಗಳು ಮೂರು ಸಲ 'ವಿಷ್ಣುವಿನೊಡನೆ ತಾವು ಬಂದುದನ್ನು ಹೇಳಿ' ರೆಂದರೂ ಅವರು ಮೌನವಾಗಿರಲು ಅಶ್ವಿನೀಕುಮಾರರು ಸಿಟ್ಟಿನಿಂದ 'ನೀವು ಮೂರು ಸಾರಿ ಭೂಮಿಯಲ್ಲಿ ಜನಿಸಿರಿ' ಎಂದು ಶಾಪ ಕೊಟ್ಟರು. ಜಯವಿಜಯರು ಇದರಿಂದ ಮುಳಿದು 'ನೀವೂ ಒಂದು ಸಾರಿ ಭೂಮಿಯಲ್ಲಿ ಜನಿಸಿರಿ' ಎಂದರು. ಜಯವಿಜಯರು ಹಿರಣ್ಯಾಕ್ಷ, ಹಿರಣ್ಯಕಶಿಪು, ರಾವಣ, ಕುಂಭಕರ್ಣ, ಶಿಶುಪಾಲ, ದಂತವಕ್ತ್ರ(ಕ್ರ)ರಾಗಿ ಹುಟ್ಟಿ ಹರಿಯಿಂದಲೇ ಇವರು ವಧಿಸಲ್ಪಟ್ಟರು. ಅಶ್ವಿನೀದೇವತೆಗಳೂ ಅಹಿರಾವಣ ಮಹಿರಾವಣರಾಗಿ ಹುಟ್ಟಿ ಹರಿಯಿಂದಲೇ ಹತರಾದರು (ಅನಂ.ರಾ.).

ರಾವಣನಿಗೆ ಯುದ್ಧದಲ್ಲಿ ಅಪಜಯವಾಗಲು ಅವನು ತನ್ನ ಸ್ನೇಹಿತರಾದ ಪಾತಾಳ ಲೋಕವಾಸಿಗಳಾದ ಅಹಿರಾವಣ ಮಹಿರಾವಣರನ್ನು ಕರೆಸಿ - 'ನೀವು ರಾಮಲಕ್ಷ್ಮಣರನ್ನು ಕೊಂದು ನನಗೆ ಸಹಾಯ ಮಾಡಿರಿ' ಎಂದು ಹೇಳಲು ಆ ರಾಕ್ಷಸರು ಒಪ್ಪಿ ಶ್ರೀರಾಮನ ಶಿಬಿರದ ಬಳಿಗೆ ಬಂದು ಸೂಕ್ಷ್ಮ ರೂಪದಿಂದ ಆಕಾಶಮಾರ್ಗವಾಗಿ ರಾಮನ ಪಾಳೆಯವನ್ನು ಹೊಕ್ಕು ರಾಮಲಕ್ಷ್ಮಣರು ಮಲಗಿದ್ದ ಕಲ್ಲಿನೊಂದಿಗೆ ಅವರನ್ನೆತ್ತಿಕೊಂಡು ಪಾತಾಳಲೋಕವನ್ನು ಸೇರಿದರು. ಪ್ರಾತಃಕಾಲವಾಗಲು ಶ್ರೀರಾಮ ಲಕ್ಷ್ಮಣರು ಪಾಳೆಯದಿಂದ ಅದೃಶ್ಯರಾದುದನ್ನು ಆಂಜನೇಯನು ಕಂಡು ಅವರನ್ನು ಹುಡುಕುತ್ತಾ ಲಂಕೆಯ

ದಕ್ಷಿಣದಲ್ಲಿದ್ದ ನಿಕುಂಭಿಯ ಬಳಿಗೆ ಬಂದನು. ಆಗ ಅಲ್ಲಿದ್ದ ಗಂಡು ಹೆಣ್ಣು ಪಕ್ಷಿಗಳು, ನಾಳೆ ಶ್ರೀರಾಮ ಲಕ್ಷ್ಮಣರನ್ನು ರಾಕ್ಷಸರು ಪಾತಾಳದ ಕಾಮಾಕ್ಷೀದೇವಿಗೆ ಬಲಿಯಾಗಿ ಅರ್ಪಿಸುವ ವಿಚಾರ ಸಂಭಾಷಣೆ ನಡೆಸಿರಲು ಮಾರುತಿಯು ಪಾತಾಳದ ಮಾರ್ಗವನ್ನು ಹಿಡಿದನು. ಆಗ ಮಾರ್ಗದಲ್ಲಿದ್ದ ಮೊಸಳೆಯು (ಇದನ್ನೇ ಕೆಲವೆಡೆ ಮತ್ಸ್ಯ ಹನುಮಂತನೆಂದೂ ಕರೆದಿದ್ದಾರೆ) ಹನುಮಂತನನ್ನು ತಡೆಯಲು ಆತನು ತಾನು ರಾಮಕಾರ್ಯಕ್ಕಾಗಿ ಹೊರಟಿರುವೆನೆನ್ನಲು ಆ ಮಕರವು - 'ನಿನಗೆ ಶ್ರೀರಾಮ ಪಾಳೆಯದ ಹನುಮಂತನ ಗುರುತುಂಟೋ? ಅವನು ನನ್ನ ತಂದೆ' ಎನ್ನಲು ಹನುಮನಿಗೆ ಆ ಮಾತಿನಿಂದ ಆಶ್ಚರ್ಯವಾಗಲು ಆ ಮಕರವು - 'ಎಲೈ ಕಪಿಶ್ರೇಷ್ಠನೇ, ಲಂಕೆಯನ್ನು ದಹಿಸಿದ ಮಾರುತಿಯು ಆಕಾಶ ಮಾರ್ಗವಾಗಿ ಹಾರಿಹೋಗುತ್ತಿರುವಾಗ ಅವನ ಮುಖದಿಂದ ಶ್ಲೇಷ್ಮವು ಸಮುದ್ರಕ್ಕೆ ಬಿತ್ತು. ಅದನ್ನು ನನ್ನ ತಾಯಿಯು ನುಂಗಿ ನಾನು ಜನಿಸಿದೆ' ಎಂದಿತು. ಆಗ ಹನುಮಂತನು ಅದಕ್ಕೆ ತನ್ನ ಪರಿಚಯವನ್ನು ಹೇಳಲು 'ಅಹಿರಾವಣ, ಮಹಿರಾವಣರು ನಾಳೆ ಸೂರ್ಯೋದಯಕ್ಕೆ ರಾಮಲಕ್ಷ್ಮಣರನ್ನು ದೇವಿಗೆ ಬಲಿ ಕೊಡುವರು. ಬೇಗ ಹೋಗು' ಎನ್ನಲು, ಹನುಮನು ವೇಗವಾಗಿ ಆ ರಕ್ಕಸರ ರಾಜಧಾನಿಯ ಕಾಮಾಕ್ಷಿ ದೇವಾಲಯವನ್ನು ಸೇರಿ ಸೂರ್ಯೋದಯವನ್ನು ನಿರೀಕ್ಷಿಸುತ್ತಿದ್ದನು. ಆ ರಾಕ್ಷಸರು ಮರುದಿನ ಸೂರ್ಯೋದಯಕ್ಕೆ ಸರಿಯಾಗಿ ಬಲಿಗಾಗಿ ರಾಮಲಕ್ಷ್ಮಣರನ್ನು ಆ ದೇವಾಲಯಕ್ಕೆ ತರಲು ವೀರನಾದ ಮಾರುತಿಯು ಅವರಿಬ್ಬರನ್ನೂ ವಶಪಡಿಸಿಕೊಂಡನು. ಮುಂದೆ ಈ ಮೂವರೂ ಅಹಿರಾವಣ, ಮಹಿರಾವಣ ಸೇನೆಯನ್ನು ಧೂಳಾಗಿ ಹಾರಿಸತೊಡಗಿದರು. ಈ ರಾಕ್ಷಸರ ರಕ್ತ ಬಿದ್ದಲ್ಲೆಲ್ಲಾ ಪ್ರತಿ ಅಹಿರಾವಣ ಮಹಿರಾವಣರು ಹುಟ್ಟಿ ಬರತೊಡಗಲು ಮಾರುತಿಯು ಇದರ ಗೂಢವನ್ನು ತಿಳಿಯಲು ಅಹಿರಾವಣನ ಪತ್ನಿಯ ಬಳಿಗೆ ಬರಲು ಅವಳು - 'ನಾನು ನಾಗೇಂದ್ರನ ಮಗಳು. ಅಹಿರಾವಣನು ನನ್ನನ್ನು ಬಲಾತ್ಕಾರದಿಂದ ಇಲ್ಲಿಗೆ ತಂದಿದ್ದಾನೆ. ನನಗೆ ಈ ಇಬ್ಬರು ರಾಕ್ಷಸರಲ್ಲೂ ಪ್ರೀತಿಯಿಲ್ಲ. ನೀನು ಶ್ರೀರಾಮನಿಗೆ ನನ್ನನ್ನು ವಿವಾಹ ಮಾಡಿಸುವುದಾದರೆ ನಾನು ಆ ದುಷ್ಟರಿಬ್ಬರ ಮರಣದ ಗುಟ್ಟನ್ನು ತಿಳಿಸುವೆನು' ಎಂದಳು. ಹನುಮನು 'ನಿನ್ನ ಮಂಚದ ಮೇಲೆ ರಾಮಚಂದ್ರನು ಮಲಗಿದಾಗ ಅದು ಮುರಿಯದಿದ್ದರೆ ನಿನ್ನನ್ನು ವಿವಾಹವಾಗುವನು' ಎನ್ನಲು ಆಕೆ ಒಪ್ಪಿ 'ಐದು ತುಂಬಿಗಳನ್ನು ಈ ರಾಕ್ಷಸನು ಪೂರ್ವದಲ್ಲಿ ಉಳಿಸಿದ್ದರಿಂದ, ಅವು ಇವರು ಮರಣಪಟ್ಟೊಡನೆ ಅಮೃತದ ಹನಿಗಳನ್ನು ಇವರ ದೇಹದ ಮೇಲೆ ಚಿಮುಕಿಸುವುದರಿಂದ ಪ್ರತಿರಾಕ್ಷಸರು ಹುಟ್ಟುವರು' ಎನಲು ಮಾರುತಿಯು ಆ ಭ್ರಮರಗಳನ್ನು

ಕೊಲ್ಲತೊಡಗಲು ಒಂದು ಭ್ರಮರವು ಹನುಮನೊಡನೆ ಜೀವದಾನಕ್ಕಾಗಿ ಪ್ರಾರ್ಥಿಸಲು 'ನೀನು ಅಹಿರಾವಣನ ಮಂಚವನ್ನು ಗುಪ್ತವಾಗಿ ಕೊರೆದುಬಿಡು' ಎನ್ನಲು ಅದು ಒಪ್ಪಿದುದರಿಂದ ಉಳಿಯಿತು. ತುಂಬಿಗಳ ಮರಣದೊಂದಿಗೆ ಅಹಿರಾವಣ ಮಹಿರಾವಣರೂ ಮರಣಪಟ್ಟರು. ಮುಂದೆ ಶ್ರೀರಾಮನು ಆ ಪಟ್ಟಣಕ್ಕೆ ಮಕರನನ್ನು ರಾಜನನ್ನಾಗಿ ಮಾಡಿದನು (ಅನಂ.ರಾ.).

ನಾಗಕನ್ಯೆಯ ಮಂಚವು ಶ್ರೀರಾಮನು ಮುಟ್ಟಿದೊಡನೆಯೇ ಮುರಿದು ಬೀಳಲು ಅವನು ಆಕೆಗೆ - 'ಮುಂದೆ ಕೃಷ್ಣಾವತಾರದಲ್ಲಿ ನಿನ್ನನ್ನು ಮದುವೆಯಾಗುವೆನು' ಎಂದು ಭರವಸೆ ಕೊಟ್ಟನು. ನೋ. - ಜಯ (ಅನಂ.ರಾ.).

ಅಹೀನಗು - ಕ್ಷತ್ರಿಯ; ಶ್ರೀರಾಮನಿಂದ ಹತ್ತು ತಲೆ ಮುಂದಿನವನು; ಇವನು ಚೆನ್ನಾಗಿ ಮಾತನಾಡಬಲ್ಲವನಾದ್ದರಿಂದ ಶತ್ರುಗಳಿಗೂ ಪ್ರಿಯನಾಗಿದ್ದನು.

ಆ

ಆಕರ್ಷ - ಒಂದು ದೇಶ; ಆ ದೇಶದ ಜನರು.

ಆಕಾಶಗಂಗೆ - ಬದರಿಯಲ್ಲಿ ಹುಟ್ಟಿದ ನದಿಯೊಂದು. ಆಕಾಶದಲ್ಲಿ ಬೆಳ್ಳಗೆ ಕಾಣುವ ತಾರಾಪಥ.

ಆಕಾಶರಾಜ - ಸುಧರ್ಮರಾಜನ ಮಗ; ಈತನು ತನ್ನ ಮಗಳನ್ನು ತಿರುಪತಿಯ ಶ್ರೀನಿವಾಸನಿಗೆ ತುಂಬಾ ಬಳುವಳಿಯೊಡನೆ ಮದುವೆ ಮಾಡಿಕೊಟ್ಟನು. ನೋ.- ಪದ್ಮಾವತಿ (ಮ.ಸ.).

ಕಾಳಹಸ್ತಿಯೆಂಬ ಪಟ್ಟಣದಲ್ಲಿ ಪುರಂದರ ಎಂಬ ಬ್ರಾಹ್ಮಣನಿದ್ದನು. ಇವನಿಗೆ ಮಾಧವ ಎಂಬ ಮಗನಿದ್ದನು. ಚಂದ್ರಲೇಖೆ ಎಂಬುವಳೇ ಈತನ ಪತ್ನಿ. ಈತನು ಅವಳನ್ನು ಬಿಟ್ಟು ಕುಂತಳೆ ಎಂಬುವಳನ್ನು ಇಟ್ಟುಕೊಂಡನು. ಅವನು ಮುಂದೆ ಗೋಮಾಂಸಭಕ್ಷಣೆಯನ್ನು ಮಾಡಿಕೊಂಡಿರುವಾಗ ಕುಂತಳೆ ತೀರಿಕೊಂಡಳು. ಅವನು ದುಃಖದಿಂದ ಹುಚ್ಚನಂತೆ ತಿರುಗುತ್ತಾ ವರಾಹಪರ್ವತಕ್ಕೆ ಬಂದನು. ಅಲ್ಲಿ ಕಪಿಲ ತೀರ್ಥದಲ್ಲಿ ಸ್ನಾನಮಾಡಿ ಪಿಂಡಪ್ರಧಾನ ಮಾಡಿದ ರಾಜನನ್ನು ನೋಡಿ ತಾನೂ ಆ ತೀರ್ಥದಲ್ಲಿ ಸ್ನಾನ ಮಾಡಿ ಮಣ್ಣಿನಿಂದ ಪಿಂಡಗಳನ್ನು ಮಾಡಿ ತನ್ನ ಪಿತೃಗಳಿಗೆ ಅರ್ಪಿಸಿದನು. ಆಮೇಲೆ ಪರ್ವತವನ್ನು ಹತ್ತಿದನು. ಅಲ್ಲಿ ತಾನು ಮಾಡಿದ ಪಾಪಗಳನ್ನೆಲ್ಲಾ ವಾಂತಿ ಮಾಡಿದನು. ಆ ಪಾಪವು ಬೆಂಕಿಯಾಗಿ ಸುತ್ತಲಿನ ಪ್ರಾಂತಗಳನ್ನು ಸುಡಲು ತೊಡಗಿತು. ದೇವತೆಗಳು ಅದನ್ನು ಕಂಡು ಹೂ ಮಳೆಗರೆದರು. ಆಗ ಬ್ರಹ್ಮನು ಪ್ರತ್ಯಕ್ಷನಾಗಿ 'ಸ್ವಾಮಿತೀರ್ಥದಲ್ಲಿ ಮಿಂದು ವರಾಹಸ್ವಾಮಿಯ

ಸನ್ನಿಧಿಯಲ್ಲಿ ಶರೀರತ್ಯಾಗ ಮಾಡಿದರೆ ಮುಂದೆ ಸುಧರ್ಮರಾಜನ ಪುತ್ರನಾಗಿ ಆಕಾಶರಾಜನೆಂಬ ಹೆಸರಿನಿಂದ ಪ್ರಸಿದ್ಧನಾಗುವಿ, ಎಂದು ಹೇಳಿ ಅಂತರ್ಧಾನನಾದನು. ಮುಂದೆ ಆ ಬ್ರಾಹ್ಮಣ ಹೊಲೆಯನೇ ಮುಂದಿನ ಜನ್ಮದಲ್ಲಿ ಆಕಾಶರಾಜನಾಗಿ ಜನಿಸಿದನು (ವೆಂ.ಮು).

ಆಕಾಶವಾಣಿ - ಅಶರೀರವಾಣಿ; ಆಕಾಶದಿಂದ ಕೇಳಿಬರುವ ಮಾತು; ಶಕುಂತಲೆಯ ಮಗ ಭರತ, ಕುಂತೀಪುತ್ರ ಯುಧಿಷ್ಠಿರ, ಅರ್ಜುನ, ಕೃಪಿಯ ಮಗ ಅಶ್ವತ್ಥಾಮ, ಅಗ್ನಿಯ ಪುತ್ರಿ ದ್ರೌಪದಿ - ಇವರ ಜನ್ಮಕಾಲದಲ್ಲಿ ಅಶರೀರವಾಣಿ ಕೇಳಿಸಿತ್ತು. ರಾಜಸೂಯಯಾಗದಲ್ಲಿ ಶ್ರೀಕೃಷ್ಣನ ಅಗ್ರಪೂಜೆಯ ಕಾಲದಲ್ಲೂ ಈ ಬಾನುಲಿ ಕೇಳಿಸಿತ್ತು. (ಮ.ಆ.,ವ.,ಸ.).

ಆಕೂತಿ - ೧. ರುಚಿ ಎಂಬ ಬ್ರಹ್ಮನ ಪತ್ನಿ; ಸ್ವಾಯಂಭುವ ಮನುವಿನ ಹಿರಿಯ ಮಗಳು; ದೇವಹೂತಿಯ ಸಹೋದರಿ (ಭಾಗ.). ೨. ಉತ್ತಾನಪಾದ ರಾಜನ ವಂಶದ ಸರ್ವತೇಜಸ್ಸೆಂಬ ರಾಜನ ಪತ್ನಿ; ಆಕೆಯ ಮಗನಾದ ಚಕ್ಷುಸ್ ಎಂಬುವನು ಆರನೆಯ ಮನು (ಭಾಗ.).

ಆಖುರಥ - ಇಲಿದೇರು; ಗಣಪತಿ (ಆ = ಎಲ್ಲಾ ಕಡೆಯಲ್ಲಿ + ಖು = ಅಗೆಯುವುದು - ಇಲಿ).

ಆಗ್ನೀಧ್ರ - ಪ್ರಿಯವ್ರತ ರಾಜನ ಮಗ; ತಾಯಿ ಬರ್ಹಿಷ್ಮತಿ; ಈತನಿಗೆ ಪೂರ್ವಚಿತ್ತಿ ಎಂಬ ಅಪ್ಸರೆಯಲ್ಲಿ ನಾಭಿ, ಕಿಂಪುರುಷ, ಹರಿ, ಇಲಾವೃತ, ರಮ್ಯಕ, ಹಿರಣ್ಮಯ, ಕುರು, ಭದ್ರಾಶ್ವ, ಕೇತುಮಂತರೆಂಬ ಒಂಬತ್ತು ಮಂದಿ ಮಕ್ಕಳು. ಇವರಿಗೆ ಇವನು ತನ್ನ ರಾಜ್ಯವನ್ನು ಹಂಚಿದನು. ಇವೇ ಭೂಮಿಯಲ್ಲಿ ಒಂಬತ್ತು ಖಂಡಗಳಾದವು (ಭಾಗ.,ವಿಷ್ಣುಪು.).

ಆಗ್ನೇಯ - ಷಣ್ಮುಖ; ಶಿವಪುತ್ರ; ಇವನು ತಾರಕಾಸುರನನ್ನು ನಾಶಮಾಡಿದನು (ಮ.ವ.). ನೋ. - ಷಣ್ಮುಖ. ಅಗ್ನಿಗೆ ಸಂಬಂಧಿಸಿದ, ತೆಂಕುಮೂಡಲ ನಡುವಣ ದಿಕ್ಕು.

ಆಗ್ನೇಯಾಸ್ತ್ರ - ಅಗ್ನಿದೇವತೆಗೆ ಸಂಬಂಧಪಟ್ಟ ಬಾಣ; ಅಂಗಾರಪರ್ಣನ ಮೇಲೆ ಅರ್ಜುನನು ಪ್ರಯೋಗಿಸಿದನು; ಸುಧನ್ವಾರ್ಜುನರ ಯುದ್ಧದಲ್ಲಿ ಅರ್ಜುನನಿಂದ ಪ್ರಯೋಗಿಸಲ್ಪಟ್ಟಿತು (ಮ.ದ್ರೋ.,ಆ.,ಜೈ.ಭಾ.).

ಆಗ್ರಯಣ - ಅಗ್ನಿವಿಶೇಷ (ಮ.ವ.).

ಆಗ್ರಾ - ಇದು ಯಮುನಾ ತೀರದಲ್ಲಿರುವ ಐತಿಹಾಸಿಕ ಪಟ್ಟಣ. ಇಲ್ಲಿನ ತಾಜಮಹಲು ರಸಿಕರ ಸ್ವರ್ಗಸ್ವಪ್ನವೆನ್ನಿಸಿದೆ. ಇಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ.

ಆಂಗಿಕ - ವಿಶ್ವಾಮಿತ್ರಮುನಿಯ ಮಗ (ಮ.ಅನು.)

ಆಂಗೀ - ಚಂದ್ರವಂಶ. ಅರಿಹನ ಪತ್ನಿ, ಇವನ ಮಗ ಮಹಾಭೌಮ (ಮ.ಆ.).

ಆಂಗೀರಸ - ಅಂಗೀರಸನ ಮಗ; ಬೃಹಸ್ಪತಿ ನೋ. - ಬೃಹಸ್ಪತಿ.

ಆಂಗೀರಸಿ - ಒಬ್ಬ ಬ್ರಾಹ್ಮಣೆ; ಕಲ್ಮಾಷಪಾದನ ಶಾಪಕ್ಕೆ ಕಾರಣಳು.

ಅಂಗೀರಸಿಯು ತನ್ನ ಪತಿಯೊಡನೆ ಕ್ರೀಡಾಸಕ್ತಳಾಗಿರುವಾಗ ರಾಕ್ಷಸನಾಗಿರುವ ಕಲ್ಮಾಷಪಾದನು ಈಕೆಯ ಪತಿಯನ್ನು ತಿಂದ ಕಾರಣ ಅಂಗೀರಸಿಯು ಕಲ್ಮಾಷಪಾದನಿಗೆ 'ನೀನೂ ನಿನ್ನ ಪತ್ನಿಯೊಡನೆ ಕೂಡಿಕೊಂಡಿದ್ದಾಗ ಮರಣ ಪ್ರಾಪ್ತವಾಗಲಿ' ಎಂದು ಶಾಪವಿತ್ತಳು (ಮ.ಆ.).

ಆಂಜನೇಯ - ನೋ. - ಹನುಮಂತ. ಅಂಜನಾದೇವಿಯ ಮಗ.

ಆಚಾರ್ಯ - ಗುರು; ದ್ರೋಣಾಚಾರ್ಯ (ಮ.ಆ.,ಅಶ್ವ); ಧರ್ಮಗುರು. ಉಪಾಧ್ಯಾಯ.

ಆಚಾರ್ಯ ಪುತ್ರ - ದ್ರೋಣಪುತ್ರನಾದ ಅಶ್ವತ್ಥಾಮ. ನೋ. - ಅಶ್ವತ್ಥಾಮ (ಮ.ಆ.).

ಆಜಗರ - ಪ್ರಹ್ಲಾದನೊಡನೆ ಸಂಭಾಷಣೆ ಮಾಡಿದ ಬ್ರಾಹ್ಮಣ (ಮ.ಶಾಂ.).

ಆಜಗರ ಪ್ರಶ್ನೆ - ಅಗಸ್ತ್ಯರ ಶಾಪದಿಂದ ಹೆಬ್ಬಾವಾದ ನಹುಷನು ಅರಣ್ಯದಲ್ಲಿ ಭೀಮನನ್ನು ಹಿಡಿಯಲು, ಭೀಮನು ಅವನ ಹಿಡಿತದಿಂದ ತಪ್ಪಿಸಿಕೊಳ್ಳಲಾರದೆ ಪೇಚಾಡುತ್ತಿರಲು ಅಲ್ಲಿಗೆ ಬಂದ ಧರ್ಮರಾಜನಿಗೂ, ನಹುಷನಿಗೂ ನಡೆದ ಸಂಭಾಷಣೆ. ಉದಾ: ನಹುಷ - 'ಎಲೈ ರಾಜನೆ, ಯಾವನು ಬ್ರಾಹ್ಮಣನೆನ್ನಿಸಿ ಕೊಳ್ಳುವನು? ಮತ್ತು ತಿಳಿಯತಕ್ಕದ್ದು ಯಾವುದು?' ಧರ್ಮರಾಜ - 'ಎಲೈ ಸರ್ಪಶ್ರೇಷ್ಠನೇ, ಸತ್ಯ, ದಾನ, ಕ್ಷಮೆ, ಒಳ್ಳೆಯ ನಡತೆ, ನಿಷ್ಠುರವಾಗಿ ನುಡಿಯದೆ ಇರೋಣ, ಸ್ವಧರ್ಮದಲ್ಲಿ ಆಸಕ್ತಿ, ಕೃಪೆ - ಈ ಗುಣಗಳಿರುವ ಮನುಷ್ಯನೇ ಬ್ರಾಹ್ಮಣ. ಯಾವನಿಗೆ ಸುಖವೂ ದುಃಖವೂ ಇಲ್ಲವೋ ಅಂತಹ ಪರಬ್ರಹ್ಮನು ತಿಳಿಯತಕ್ಕವನು (ಮ.ವ.).

ಆಜಗವಂ - ಪೃಥುರಾಜನ ಬಿಲ್ಲು (ಮ.ದ್ರೋ.).

ಆಟವಿನ್ - ಯಾಜ್ಞವಲ್ಕನ ವಾಜಪೇಯ ಶಿಷ್ಯ.

ಆಡಿ - ರಾಕ್ಷಸ; ಅಂಧಕಾಸುರನ ಮಗ; ಇವನು ಬ್ರಹ್ಮನನ್ನು ತಪಸ್ಸಿನಿಂದ ಮೆಚ್ಚಿಸಿ, ವೇಷ ಪಲ್ಲಟಿಸಿಕೊಂಡಾಗ ಮಾತ್ರ ನನಗೆ ಮರಣ ಬರಲೆಂದು ವರಪಡೆದ. ಕಾಳಿಯಾದ ಪಾರ್ವತಿಯು ಗೌರಿಯಾಗಲು ತಪಸ್ಸು ಮಾಡುತ್ತಿದ್ದಾಗ ಆಡಿಯು ಪಾರ್ವತಿಯ ಆಕಾರದಿಂದ ಶಿವನ ಸಮೀಪ ಸೇರಲು ಶಿವನು ಅವನನ್ನು ಕೊಂದನು. ಇವನು ತಂದೆಯನ್ನು ಕೊಂದ ಶಿವಗಣದ ಸೇಡನ್ನು ತೀರಿಸಿಕೊಳ್ಳಲು ವೇಷಾಂತರದಿಂದ ಶಿವನೊಡನಿದ್ದು ಆತನಿಂದ ಹತನಾದನು (ಸ್ಕಾಂ.ಪು.).

ಆತತಾಯಿ - ಕೊಲೆ ಮಾಡುವವ (೧. ಮನೆಗೆ ಬೆಂಕಿ ಹಚ್ಚುವವನು. ೨. ವಿಷ ಕೊಡುವವನು. ೩. ಬೇರೆಯವರನ್ನು ಕೊಲ್ಲಲಿಕ್ಕಾಗಿ ಆಯುಧ ಎತ್ತುವವನು. ೪. ಪರರ ಸೊತ್ತನ್ನು ಅಪಹರಿಸುವವನು. ೫. ಬೇರೆಯವರ ಹೆಂಡಿರು ಮತ್ತು ಭೂಮಿಯನ್ನು ಅಪಹಾರ ಮಾಡುವವನು) (ಮ.ಭೀ.,ಶಾಂ.).

ಆತ್ಮದೇವ - ಒಬ್ಬ ಬ್ರಾಹ್ಮಣ; ತುಂಗಭದ್ರಾ ತೀರ ನಿವಾಸಿ. ಈತನ ಪತ್ನಿಯ ಹೆಸರು ಧುಂಧುಲಿ; ಈಕೆಗೆ ಬಹಳ ಕಾಲ ಮಕ್ಕಳಾಗದುದರಿಂದ ಆತ್ಮದೇವನು ಒಬ್ಬ ಮುನಿಯ ಅನುಗ್ರಹದಿಂದ ಒಂದು ಹಣ್ಣನ್ನು ಪಡೆದು ಪತ್ನಿಗೆ ತಿನ್ನಲು ಕೊಟ್ಟನು. ಆಕೆಯು ಅದನ್ನು ತನ್ನ ಮನೆಯ ದನವೊಂದಕ್ಕೆ ತಿನ್ನಲು ಕೊಟ್ಟು, ತನ್ನ ತಂಗಿಯು ಹೆತ್ತ ಮಗುವನ್ನು ಗುಪ್ತವಾಗಿ ತಂದು, ಅದನ್ನು ತಾನೇ ಹೆತ್ತೆನೆಂದು ಗಂಡನೊಡನೆ ಹೇಳಲು ಆ ಮಗುವಿಗೆ ಧುಂಧುಕಾರಿ ಎಂದು ಹೆಸರಿಟ್ಟು, ಅದನ್ನು ಅತ್ಯಂತ ಪ್ರೀತಿಯಿಂದ ರಕ್ಷಿಸಿಕೊಂಡಿದ್ದನು. ಮುನಿಯ ಹಣ್ಣನ್ನು ತಿಂದ ದನವೂ ಒಂದು ಸುಂದರವಾದ ಗಂಡು ಕೂಸನ್ನು ಹೆರಲು ಆತ್ಮದೇವನು ಅಚ್ಚರಿಪಟ್ಟು ಆ ಶಿಶುವಿಗೆ ಗೋಕರ್ಣ ಎಂದು ಹೆಸರಿಟ್ಟು ಧುಂಧುಕಾರಿಯೊಂದಿಗೆ ರಕ್ಷಿಸಿಕೊಂಡಿದ್ದನು. ಧುಂಧುಕಾರಿಗೆ ತಾರುಣ್ಯ ಬಂತು. ಅವನು ವ್ಯಭಿಚಾರಕ್ಕೆ ತೊಡಗಿ ತಂದೆತಾಯಿಗಳನ್ನು ಬಹಳ ಪೀಡಿಸಲು, ಅವರು ಅದೇ ವ್ಯಸನದಿಂದ ಸ್ವರ್ಗಸ್ಥರಾದರು. ಅವರ ಮರಣಾನಂತರ ಧುಂಧುಕಾರಿಯು ಮನೆಯಲ್ಲಿಯೇ ಐವರು ವೇಶ್ಯಾ ಸ್ತ್ರೀಯರನ್ನಿಟ್ಟುಕೊಂಡು ವಿಷಯ ಸುಖಗಳನ್ನನುಭವಿಸುತ್ತಿರುವಾಗ, ಆ ಸ್ತ್ರೀಯರಿಗೂ ಇವನ ನಡತೆಯಲ್ಲಿ ಜುಗುಪ್ಸೆ ಹುಟ್ಟಿ, ಅವರೆಲ್ಲಾ ಕೂಡಿ ಇವನನ್ನು ಕೊಂದರು. ಮರಣಾನಂತರ ಧುಂಧುಕಾರಿಯು ಬ್ರಹ್ಮರಾಕ್ಷಸನಾದನು. ತೀರ್ಥಯಾತ್ರೆಗೆ ಹೋಗಿದ್ದ ಗೋಕರ್ಣನು ಊರಿಗೆ ಬಂದು ಈತನಿಗಾದ ಅವಸ್ಥೆಯನ್ನು ತಿಳಿದು ಭಾಗವತ ಸಪ್ತಾಹವನ್ನಾರಂಭಿಸಿ, ಆ ವ್ರತದಿಂದ ಇವನಿಗೆ ಸದ್ಗತಿಯನ್ನು ದಯಪಾಲಿಸಿದನು (ಪದ್ಮ.ಪು.).

ಆತ್ರೇಯ - ೧. ಋಷಿಯೊಬ್ಬ; ವಾಮದೇವನ ಶಿಷ್ಯ; ಜನಮೇಜಯನ ಸರ್ಪಯಜ್ಞದ ಸದಸ್ಯನಾದ ಬ್ರಹ್ಮರ್ಷಿ. ಇವನಿಂದ ವಿದುರನಿಗೆ ಜ್ಞಾನೋಪದೇಶವಾಯಿತು (ಮ.ವ.,ಆ.,ಶಾಂ.,ಭಾಗ.). ೨. ಹಂಸರೂಪದಿಂದ ಸಂಚರಿಸುವ ಒಬ್ಬ ಋಷಿ. ೩. ಒಂದು ದೇಶ (ಮ.ಉ.,ಭೀ.,ಸ.).

ಆತ್ರೇಯಿ - ಒಂದು ನದಿ (ಮ.ಸ.).

ಆದಿತ್ಯ - ಸೂರ್ಯ; ದ್ವಾದಶಾದಿತ್ಯರು. ನೋ. - ಸೂರ್ಯ. ಹನ್ನೆರಡು ಮಂದಿ ಆದಿತ್ಯರು ಕಶ್ಯಪ ಮತ್ತು ಅದಿತಿಯ ಮಕ್ಕಳು. ಇವರ ಹೆಸರು - ಧಾತ, ಮಿತ್ರ, ಆರ್ಯಮ, ಶಕ್ರ, ವರುಣ, ಅಂಶ, ಭಗ, ವಿವಸ್ವಾನ್, ಪೂಷ, ಸವಿತಾ, ತ್ವಷ್ಟಾ, ವಿಷ್ಣು (ಭಾರತ). ಅಂಶ, ಭಗ, ಮಿತ್ರ, ವರುಣ, ಧಾತ, ಆರ್ಯಮ, ಜಯಂತ, ಭಾಸ್ಕರ, ತ್ವಷ್ಟಾ, ಪೂಷ, ಇಂದ್ರ, ವಿಷ್ಣು (ವಿಷ್ಣುಪು.). ನೋ - ವಿವಸ್ವಾನ್, ಮಾರ್ತಾಂಡ, ಸೂರ್ಯ. (ಮ.ಆ.,ಶಾಂ., ಅನು.,ವಿಷ್ಣುಪು.,ಭಾಗ.).

ಆದಿತ್ಯಕೇತು - ಕ್ಷತ್ರಿಯ; ಧೃತರಾಷ್ಟ್ರನ ಪುತ್ರ; ಭೀಮನಿಂದ ಹತನಾದನು

ಆದಿತ್ಯಾಯಶ್ರಮ - ಕ್ಷೇತ್ರ ವಿಶೇಷ (ಮ.ವ.).

ಆದಿರಾಜ - ಕ್ಷತ್ರಿಯ; ಅವಿಕ್ಷಿತನ ಪುತ್ರ (ಮ.ಆ.).

ಆದಿಶೇಷ - ಕದ್ರುಪುತ್ರನಾದ ನಾಗ. ನೋ. - ಶೇಷ.

ಆಧಿರಥಿ - ಕರ್ಣ. ನೋ. - ಕರ್ಣ.

ಆಧೂರ್ತರಜಸ್ಸು (ಅಮೂರ್ತರಯ) - ಕ್ಷತ್ರಿಯ; ಕುಶಿಕ ರಾಜನ ಎರಡನೆಯ ಮಗ. ಗಯನ ತಂದೆ (ಮ.ವ.).

ಆನರ್ತ - ೧. ಒಂದು ದೇಶ (ಮ.ಭೀ.). ಗುಜರಾತು ಮತ್ತು ಮಾಳವದ ಒಂದು ಭಾಗ. ೨. ಇಕ್ಷ್ವಾಕುವಿನ ಪುತ್ರನಾದ ಶರ್ಯಾತಿಯ ಮಗ; ದ್ವಾರಕೆಯ ಸಮೀಪದಲ್ಲಿ ಈತನು ಕುಶಸ್ಥಲಿ ಎಂಬ ನಗರವನ್ನು ನಿರ್ಮಿಸಿದನು. ದ್ವಾರಕೆಗೂ ಕುಶಸ್ಥಲಿ ಎಂಬ ಹೆಸರಿದೆ (ಮ.ಸ.).

ಆನು - ಕ್ಷತ್ರಿಯ; ಯಯಾತಿಯ ಪುತ್ರ. ಇವನ ತಾಯಿ ಶರ್ಮಿಷ್ಠೆ. ನೋ. - ಅನು.

ಆಂಧ್ರ (ಆಂಧ್ರಕ) - ೧. ಕೃಷ್ಣಾ, ಗೋದಾವರಿಗಳ ನಡುವಿನ ಪ್ರದೇಶ. ತೆಲುಗುನಾಡು. ೨. ಆಂಧ್ರದೇಶದ ಒಬ್ಬ ವೀರ. ಶ್ರೀಕೃಷ್ಣನಿಂದ ಹತನಾದನು.

ಆಪ - ೧. ಅಗ್ನಿವಿಶೇಷ; ಈತನ ಪತ್ನಿ ಮುದಿತಾ. ೨. ಅಷ್ಟವಸುಗಳಲ್ಲೊಬ್ಬ (ಮ.ವ.).

ಆಪಗಾ - ಪಂಜಾಬಿನ ರಾವೀ ನದಿಯ ಪಶ್ಚಿಮದಲ್ಲಿರುವ ಆಯುಕ್ ನದಿ; ಕಾಚನ ನದಿ (ಮ.ವ.,ಕ.).

ಆಪವ - ವಸಿಷ್ಠ; ಸೂರ್ಯವಂಶದ ಗುರು. ನೋ. ವಸಿಷ್ಠ (ಅಪಃ= ಜಲ. ಇದಕ್ಕೆ ಅಧಿಪತಿಯಾದ ವರುಣ. ಆತನ ಪುತ್ರನಾದ್ದರಿಂದ ವಸಿಷ್ಠನು ಆಪವ.) (ಮ.ಆ.)

ಆಪಸ್ತಂಭ - ಮಹರ್ಷಿ; ಭೃಗುವಂಶೋತ್ಪನ್ನನು; ಈತನ ಪತ್ನಿ ಅಕ್ಷಸೂತ್ರೆ; ಮಗ ಕರ್ಕಿ. ಕಶ್ಯಪ ಮತ್ತು ದಿತಿಯು ಮಾಡಿದ ಪುತ್ರಕಾಮೇಷ್ಟಿಯಲ್ಲಿ ಆಪಸ್ತಂಭನು ಆಚಾರ್ಯನಾಗಿದ್ದ. ಈತನು ಹದಿನೆಂಟು ಸ್ಮೃತಿಕಾರರಲ್ಲೊಬ್ಬ. ತೈತ್ತರೀಯ

ಶಾಖಾವಲಂಬಿಗಳಿಗೆ ಬೇಕಾದ ಧರ್ಮ, ಗೃಹ್ಯ, ಶ್ರೌತಸೂತ್ರಗಳನ್ನು ಬರೆದವನು.

ಇವನಿಗೆ ಯೋಗಸಾಧನೆಯ ಹಂಬಲ ಬಹಳ. ಅವನು ನರ್ಮದಾ, ಮಚ್ಛಾಕ್ಯ ನದಿಯ ಸಂಗಮಸ್ಥಳದಲ್ಲಿ ನೀರೊಳಗೆ ಜಲಸ್ತಂಭನವಿದ್ಯೆಯ ಬಲದಿಂದ ಯೋಗ ಸಾಧನೆಯಲ್ಲಿ ತೊಡಗಿದನು. ಅವನಿಗೆ ಶ್ರೀಮನ್ನಾರಾಯಣನ ಸಾಕ್ಷಾತ್ಕಾರವೂ ಆಯಿತು. ಅವನ ಉಜ್ವಲ ತಪಸ್ಸಿನ ಪ್ರಭಾವಕ್ಕೆ ಸೋತ ಮೀನು ಮೊಸಳೆಗಳು ಗುಂಪುಗುಂಪಾಗಿ ಅವನ ಬಳಿಗೆ ಬಂದು ಪ್ರದಕ್ಷಿಣೆ ಹಾಕುತ್ತಾ ಆನಂದದಿಂದಿದ್ದವು. ಇದರಿಂದ ಬೆಸ್ತರಿಗೆ ಮೀನುಗಳ ಅಭಾವವಾಗಲು ನರ್ಮದಾ-ಮಚ್ಛಾಕ್ಯನದಿಯ ಸಂಗಮಸ್ಥಳದಲ್ಲಿ ಬಲೆ ಹಾಕಲು ಆಪಸ್ತಂಭನೊಡನೆ ಮೀನುಗಳೂ ಸಿಕ್ಕಿದವು. ಮುನಿಗಳು ಮೀನುಗಳನ್ನೆಲ್ಲಾ ತಪ್ಪಿಸಿದರು. ಆಪಸ್ತಂಭ ಮುನಿಗಳು ಬಲೆಯಲ್ಲಿ ಸಿಕ್ಕಿದರೆಂದು ಆ ಊರಿನ ರಾಜರಾದ ನಾಭಾಗರಿಗೆ ಗೊತ್ತಾಗಲು ಅವರು ಲೋಮಮುನಿಗಳ ಅಭಿಪ್ರಾಯದಂತೆ ಅವರ ತೂಕದ್ದೆನಿಸುವ ಒಂದು ಕರುಸಹಿತ ಆಕಳನ್ನರ್ಪಿಸಿದರು. ಆಪಸ್ತಂಭರು ತೃಪ್ತರಾದರು. ಇವರು ಅನೇಕ ಅಮೂಲ್ಯ ವೈದಿಕ ಗ್ರಂಥಗಳನ್ನು ಬರೆದಿದ್ದಾರೆ (ಮ.ವ.,ಮತ್ಸ್ಯಪು.,ಬ್ರಹ್ಮಪು.).

ಆಪೋದ (ಅಯೋದ) - ಧೌಮ್ಯನೆಂಬ ಬ್ರಹ್ಮರ್ಷಿ ; ಈತನಿಗೆ ಉಪಮನ್ಯು, ಆರುಣಿ ಮತ್ತು ಬೈದರೆಂಬ ಮೂವರು ಶಿಷ್ಯರಿದ್ದರು (ಮ.ಆ.).

ಆಭೀರಾ - ಒಂದು ದೇಶ (ಮ.ಭೀ.).

ಆಂಬಿಕೇಯ - ಧೃತರಾಷ್ಟ್ರ. ನೋ. - ಧೃತರಾಷ್ಟ್ರ.

ಆಯತಿ - ಕ್ಷತ್ರಿಯನೊಬ್ಬ; ಈತನ ತಂದೆ ನಹುಷ; ತಾಯಿ ವಿರಜೆ; ಯಯಾತಿಯ ಸಹೋದರ; ಚಂದ್ರವಂಶ (ಮ.ಆ.).

ಆಯು - ೧. ಕ್ಷತ್ರಿಯನೊಬ್ಬ; ತಂದೆ ಪುರೂರವ; ತಾಯಿ ಊರ್ವಶಿ; ಇವನಿಗೆ ಧೀಮಂತ, ಅಮಾವಸು, ಧೃಡಾಯು, ವನಾಯು, ಶತಾಯು, ಎಂಬ ಐವರು ಸಹೋದರರು. ಈತನ ಪತ್ನಿ ಸ್ವರ್ಭಾನವಿ; ಈಕೆಗೆ ಇಂದುಮತಿ ಎಂಬ ಹೆಸರೂ ಉಂಟು. ಈಕೆಯ ಮಕ್ಕಳು ನಹುಷ, ವೃದ್ಧಶರ್ಮ, ರಜಿ, ಗಯ, ಅನೇನ; ನಹುಷನು ದತ್ತಾತ್ರೇಯನ ವರದಿಂದ ಹುಟ್ಟಿದವನು (ಮ.ಆ.). ೨. ಮಂಡೂಕ ರಾಜನೊಬ್ಬ; ಈತನ ಮಗಳು ಸುಶೋಭನೆ. ನೋ. - ಪರೀಕ್ಷಿತ, ಸುಶೋಭನೆ (ಮ.ಆ.,ಹರಿ.,ಬ್ರಹ್ಮಪು.,ವಾಯುಪು., ಭಾಗ.,ಮ.ವ.).

ಆಯುರ್ವೇದ - ೧. ಒಬ್ಬ ಋಷಿ (ಮ.ಸ.). ೨. ವೈದ್ಯಶಾಸ್ತ್ರ; ಋಗ್ವೇದದ ಉಪವೇದ.

ಆಯೋದ - ನೋ. - ಆಪೋದ (ಮ.ಆ.).

ಆರಟ್ಟ - ಒಂದು ದೇಶ; ಇಂದಿನ ಪಂಜಾಬು. ನೋ. - ಭಾಹ್ಲೀಕ (ಮ.ಭೀ.,ದ್ರೋ.).

ಆರಣೇಯ - ಶುಕ್ರಾಚಾರ್ಯ. ನೋ. - ಶುಕ್ರಾಚಾರ್ಯ.

ಆರಣ್ಯಕ - ಉಪನಿಷತ್ ವಿಶೇಷ (ಮ.ಉ.).

ಆರುಣಿ - ೧. ಒಬ್ಬ ಋಷಿ; ಆಪೋದನ ಶಿಷ್ಯ; ಇವನಿಗೆ ಉದ್ದಾಲಕನೆಂಬ ಹೆಸರೂ ಇದೆ (ಮ.ಆ.). ೨. ಸರ್ಪವೊಂದು. ೩. ವಿನತೆಯ ಮಗ (ಮ.ಆ.).

ಆರುಷಿ - ಭೃಗುಪುತ್ರನಾದ ಚ್ಯವನನ ಪತ್ನಿ; ಮನುಚಕ್ರವರ್ತಿಯ ಸುತೆ; ಈಕೆಯ ಮಗ ಔರ್ವ. ಕಾರ್ತವೀರ್ಯಾರ್ಜುನನ ವಂಶದವರು ಭೃಗುವಂಶದವರನ್ನು ಪೀಡಿಸತೊಡಗಿದಾಗ ಈಕೆ ಗರ್ಭಿಣಿಯಾಗಿದ್ದಳು. ಇವಳು ಭಯವಿಹ್ವಲಳಾಗಲು ಹೊಟ್ಟೆಯಲ್ಲಿದ್ದ ಗರ್ಭವು ಚಲಿಸಿ ತೊಡೆಯನ್ನು (ಊರು) ಸೇರಿತು. ಮುಂದೆ ಊರುವಿನಿಂದ ಜನಿಸಿದುದರಿಂದ ಔರ್ವನೆನ್ನಿಸಿದನು. ನೋ. - ಔರ್ವ (ಮ.ಆ.).

ಆರ್ಚಿಕ - ಪರ್ವತವೊಂದು (ಮ.ವ.).

ಆಜ್ಯಪ - ಇವನು ಪಿತೃಗಣದಲ್ಲೊಬ್ಬ. ಬ್ರಹ್ಮನ ಮಾನಸಪುತ್ರನಾದ ಪುಲಹನ ವಂಶಸ್ಥನು. ಇವನು ಯಜ್ಞಮಧ್ಯದಲ್ಲೇ ಆಜ್ಯವನ್ನು ಕುಡಿಯುತ್ತಿದ್ದುದರಿಂದ ಆಜ್ಯಪನೆಂಬ ಹೆಸರು ಬಂತು. ಇವನಿಗೆ ಸುಸ್ವಧನೆಂಬ ಹೆಸರೂ ಇದೆ. ಇವನ ಮಗಳು ನಹುಷನ ಪತ್ನಿಯಾದ ವಿರಜೆ (ಮ.ಆ.).

ಆರ್ಜವ (ಆರ್ಜವ) - ಕ್ಷತ್ರಿಯ; ಶಕುನಿಯ ಸಹೋದರ; ಧೃತರಾಷ್ಟ್ರನ ಭಾವ ನೆಂಟ. ಇವನು ಇರಾವಂತನಿಂದ ಹತನಾದ (ಮ.ಭೀ.).

ಆರ್ಜುನಿ - ಅಭಿಮನ್ಯು. ನೋ. - ಅಭಿಮನ್ಯು (ಮ.ಭೀ.).

ಆರ್ಜುನಿಕೆ - ನೋ. - ಧರ್ಮವ್ಯಾಧ. ಧರ್ಮವ್ಯಾಧನ ಮಗಳು; ಈಕೆಯ ಸಹೋದರನೇ ಅರ್ಜುನ. ಧರ್ಮವ್ಯಾಧನು ತನ್ನ ಮಗಳಾದ ಆರ್ಜುನಿಕಿಯನ್ನು ಮತಂಗಮುನಿಯ ಪುತ್ರ ಪ್ರಸನ್ನನಿಗೆ ಮದುವೆ ಮಾಡಿಕೊಟ್ಟಿದ್ದನು. ಈಕೆ ಸಕಲ – ನೀತಿಶಾಸ್ತ್ರಗಳನ್ನೂ ಅಭ್ಯಾಸ ಮಾಡಿದ್ದಳು.

ಆರ್ತಾಯನಿ - ಋತಾಯನನೆಂಬ ಮದ್ರರಾಜನ ಮಗನಾದ ಶಲ್ಯ (ಮ.ಭೀ.).

ಆರ್ತಿಮಾನ್ - ಋಷಿಯೊಬ್ಬ; ಈತನ ಸ್ಮರಣೆಯಿಂದ ಸರ್ಪಬಾಧೆಯು ಪರಿಹಾರವಾಗುತ್ತದೆ (ಮ.ಆ.).

ಆರ್ದ್ರಕ - ಕ್ಷತ್ರಿಯ; ಈತನ ತಂದೆ ಇಕ್ಷ್ವಾಕು ವಂಶದ ವಿಶ್ವಗಶ್ವ; ಮಗ ಯುವನಾಶ್ವ (ಮ.ವ.).

ಆರ್ದ್ರ - ದಕ್ಷನ ಮಗಳು; ಚಂದ್ರನ ಒಬ್ಬಳು ಪತ್ನಿ; ಒಂದು ನಕ್ಷತ್ರ (ಮ.ಆ.).

ಆರ್ಯಕ - ಸರ್ಪರಾಜ; ಕದ್ರುವಿನ ಮಗ; ಈತನ ಮಗಳು ಮಾರಿಷೆ; ಈಕೆಯ ಗಂಡ ಯದುವಂಶದ ಶೂರರಾಜ; ವಸುದೇವ ಮತ್ತು ಕುಂತಿಯು ಮಾರಿಷೆಯ ಮಕ್ಕಳು. ಪಾಂಡವರ ಅಜ್ಜನ ಮಾವನಾದ ಆರ್ಯಕನು ಭೀಮನಿಗೆ ದುರ್ಯೋಧನನು ವಿಷದ ಕಜ್ಜಾಯವನ್ನು ತಿನ್ನಿಸಿ ನದಿಗೆ ನೂಕಿದಾಗ ಮರಿಮಗನೆಂಬ ಪ್ರೀತಿಯಿಂದ ನಾಗಲೋಕಕ್ಕೊಯ್ದು ಅಲ್ಲಿ ಅವನಿಗೆ ಅಮೃತಪಾನ (ಸಿದ್ಧರಸ) ಮಾಡಿಸಿ ಹತ್ತುಸಾವಿರ ಆನೆಗಳ ಬಲಬರುವಂತೆ ಮಾಡಿ ಹಸ್ತಿನಾವತಿಗೆ ಕಳುಹಿಸಿದನು (ಮ.ಆ.,ಉ.). ಸಿದ್ಧರಸವು ನೂರು ಆನೆಗಳ ಬಲಕೊಡುವ ಶಕ್ತಿಯುಳ್ಳದ್ದು.

ಆರ್ಯಾವರ್ತ - ವಿಂಧ್ಯ - ಹಿಮಾಲಯಗಳ ನಡುವಣ ಪ್ರದೇಶ; ಇದಕ್ಕೆ ಪುಣ್ಯಭೂಮಿ ಎನ್ನುತ್ತಾರೆ (ಮ.ಶಾಂ.).

ಆರ್ಶ್ಯಶೃಂಗಿ - ಬಕನ ದಾಯಾದಿಯಾದ ರಾಕ್ಷಸ; ದುರ್ಯೋಧನನ ಪಕ್ಷದವ; ಇವನು ಇರಾವಂತನನ್ನು ಕೊಂದ; ಇವನಿಗೆ ಆಲಂಬುಸನೆಂಬ ಇನ್ನೊಂದು ಹೆಸರಿದೆ (ಮ.ಭೀ,ದ್ರೋ.,ಶ.).

ಆರ್ಷ್ಟಿಷೇಣ - ೧. ಕೃತಯುಗದಲ್ಲಿ ಹುಟ್ಟಿದ ಒಬ್ಬ ರಾಜರ್ಷಿ; ಮುಂದೆ ಈತನು ತಪಸ್ಸಿನಿಂದ ಬ್ರಾಹ್ಮಣನಾದನು. ಪಾಂಡವರು ಅರಣ್ಯವಾಸ ಕಾಲದಲ್ಲಿ ಈತನ ಆಶ್ರಮದಲ್ಲಿ ನಾಲ್ಕು ವರ್ಷ ಕಾಲವಿದ್ದರು; ಲೋಮಶ ಮಹರ್ಷಿಯು ಈ ಆಶ್ರಮದಲ್ಲೇ ಪಾಂಡವರಿಗೆ ಅನೇಕ ಪುಣ್ಯಕಥೆಗಳನ್ನು ಹೇಳಿದನು (ಮ.ಶ.).

ಕೃತಯುಗದ ಈ ಬ್ರಾಹ್ಮಣನು ಗುರುಕುಲವಾಸ ಮಾಡಿ ವೇದಾಧ್ಯಯನದಲ್ಲಿ ನಿರತನಾದರೂ, ವೇದಗಳು ಮನದಟ್ಟಾಗದಿರಲು ಅವನು ಅದೇ ವ್ಯಸನದಿಂದ ಮಹಾ ತಪಸ್ವಿಯಾಗಿ ಆ ತಪೋಬಲದಿಂದ ಎಲ್ಲಾ ವೇದಗಳನ್ನು ಸ್ವಾಧೀನಪಡಿಸಿಕೊಂಡು ಜ್ಞಾನಿಯೆನಿಸಿದನು. ಅವನು 'ಸರಸ್ವತೀ ನದಿಯ ಪೃಥೂದಕ ತೀರ್ಥದಲ್ಲಿ ಮಿಂದವನಿಗೆ ಅಶ್ವಮೇಧಯಾಗದ ಫಲ ಉಂಟಾಗಲಿ; ಇಲ್ಲಿ ಯಾರಿಗೂ ಸರ್ಪಭಯ ಇಲ್ಲದಿರಲಿ; ಸ್ವಲ್ಪ ತಪಸ್ಸು ಇಲ್ಲಿ ಮಹಾಫಲವನ್ನು ಕೊಡಲಿ' ಎಂದು ವರಗಳನ್ನು ಕೊಟ್ಟು ತಾನು ಸ್ವರ್ಗಕ್ಕೆ ಹೊರಟು ಹೋದನು (ಮ.ಶ.). ೨. ಚಂದ್ರವಂಶದ ರಾಜನೊಬ್ಬ; ಈತನ ಪತ್ನಿ ಜಯೆ; ಗಂಗಾತೀರದಲ್ಲಿ ಈತನು ಯಜ್ಞ ಮಾಡುತ್ತಿದ್ದಾಗ ಮಿಥು ಎಂಬ ರಕ್ಕಸನು ಈತನ ಪುರೋಹಿತವನ್ನೂ, ಪತ್ನಿಯಾದ ಜಯೆಯನ್ನೂ ಅಪಹರಿಸಲು ದೇವಾಪಿಮುನಿಯು ತನ್ನ ತಪಶ್ಶಕ್ತಿಯಿಂದ ಅವರನ್ನು ರಕ್ಕಸರಿಂದ ಬಿಡಿಸಿ ತಂದು ರಾಜನಿಗೆ ಒಪ್ಪಿಸಿದನು (ಬ್ರಹ್ಮಪು.).

ಆಲಂಬ - ಋಷಿಯೊಬ್ಬ; ಯುಧಿಷ್ಠಿರನ ಸಭೆಯಲ್ಲಿದ್ದನು (ಮ.ಸ.).

ಆಲಂಬಾಯನ - ಇಂದ್ರನ ಗೆಳೆಯನೊಬ್ಬ (ಮ.ಅನು.).

ಆಲಂಬಿ - ಕಶ್ಯಪ ಮತ್ತು ಋತಿಯ ಮಗಳು.

ಆಲಂಬೀಪುತ್ರ - ಇವನು ಜಯಂತೀಪುತ್ರನ ಶಿಷ್ಯ ಮತ್ತು ಕೌಶಿಕೀಪುತ್ರನ ಗುರು.

ಆಲುಕೀ - ಭೃಗುಕುಲದ ಒಬ್ಬ ಗೋತ್ರಗಾರ.

ಆಲೇಖನ - ಒಬ್ಬ ಆಚಾರ್ಯ.

ಆವಸಥ್ಯ - ಅಗ್ನಿ ವಿಶೇಷ (ಮ.ವ.).

ಆವಿಕ್ಷಿತ್ - ನೋ. ಅವಿಕ್ಷಿತ್.

ಆವಿಕ್ಷಿತ - ಕ್ಷತ್ರಿಯ; ಮರುತ್ತ (ಮ.ಶಾಂ.).

ಆಶಾವಹ - ೧. ವಿವಸ್ವತನ ಮಗ. ೨. ದ್ರೌಪದಿಯ ಸ್ವಯಂವರಕ್ಕಾಗಿ ಬಂದ ಯಾದವ (ಮ.ಆ.).

ಆಶ್ಮಕಿ - ಪ್ರಾಚೀನ್ವತದ ಹೆಂಡತಿ ಯಾದವಿ; ಮಗ ಶಯ್ಯಾತಿ; (ಮ.ಆ.).

ಆಶ್ರಾವ್ಯ - ಋಷಿಯೊಬ್ಬ; ಇಂದ್ರನ ಸಭೆಯಲ್ಲಿದ್ದವ (ಮ.ಸ.).

ಆಶ್ಲೇಷ - ದಕ್ಷನ ಮಗಳು; ಚಂದ್ರನ ಪತ್ನಿ; ಒಂದು ನಕ್ಷತ್ರ.

ಆಶ್ವಲಾಯನ - ವಿಶ್ವಾಮಿತ್ರ ಪುತ್ರನಾದ ಬ್ರಹ್ಮರ್ಷಿ; ಅಶ್ವಲಾಯನ ಶಾಖೆಯವರಿಗೆ ಗೃಹ್ಯಧರ್ಮ ಶ್ರೌತಸೂತ್ರಗಳನ್ನು ಬರೆದವ; ಸ್ಮೃತಿಕಾರ; ಇವನು ಶೌನತಕನ ಶಿಷ್ಯ; ಇವನ ಗುರು ಬರೆದ ಸಾವಿರ ಭಾಗಗಳುಳ್ಳ ಸೂತ್ರಗ್ರಂಥಕ್ಕಿಂತ ಸಮರ್ಪಕವಾದ ಅಶ್ವಲಾಯನ ಸೂತ್ರಗಳನ್ನು ಬರೆದು ಹೆಸರು ಪಡೆದನು (ಮ.ಅನು.).

ಆಶ್ವಸೂಕ್ತಿ - ಸಾಮಗಳ ದ್ರಷ್ಟಾರ.

ಆಶ್ವಾಯಿನಿ - ೧. ಭೃಗುಕುಲದ ಒಬ್ಬ ಗೋತ್ರಗಾಕಾರ. ೨. ಅಂಗೀರಕುಲದ ಒಬ್ಬ ಗೋತ್ರಗಾಕಾರ.

ಆಸುರವ್ಯೂಹ - ಭೀಷ್ಮಾಚಾರ್ಯರಿಂದ ಕೌರವಸೇನೆಯಲ್ಲಿ ನಿರ್ಮಾಣವಾದ ವ್ಯೂಹ (ಮ.ಭೀ.).

ಆಸುರಾಯಣ - ಋಷಿಯೊಬ್ಬ. ವಿಶ್ವಾಮಿತ್ರನ ಮಗ (ಮ.ಅನು.).

ಆಸುರಿ - ಋಷಿಯೊಬ್ಬ; ಕಪಿಲನ ಶಿಷ್ಯ (ಮ.ಶಾಂ.).

ಆಸಂಗಪ್ಲಾಯೋಗಿ - ೧. ಒಬ್ಬ ಸೂಕ್ತ ದೃಷ್ಟ. ೨. ಒಬ್ಬ ದಾನಶೂರ ರಾಜ; ಇವನ ಪುರುಷತ್ವ ನಷ್ಟವಾಗಿ ಸ್ತ್ರೀತ್ವ ಹೊಂದಿ ಮುಂದೆ ವಿಲೀಷ್ಯಾತಿಥಿಯ ಕೃಪೆಯಿಂದ

ಮತ್ತೆ ಪುರುಷತ್ವವನ್ನು ಹೊಂದಿದನು. ಇದರಿಂದ ಇವನ ಪತ್ನಿ ಶಾಶ್ವತಿಗೆ ಬಹಳ ಆನಂದವಾಯಿತು (ಋ).

ಆರ್ಷ - ವರನಿಂದ ಒಂದು ಗೋವನ್ನೂ ಎತ್ತನ್ನೂ ತೆಗೆದುಕೊಂಡು ಕನ್ಯೆಯನ್ನು ಕೊಡುವ ಮದುವೆ.

ಆಸ್ತೀಕ (ಆಸ್ತಿಕ) - ೧. ಜರತ್ಕಾರುವೆಂಬ ಹೆಸರುಳ್ಳ ಋಷಿಯಿಂದ ಅದೇ ಹೆಸರುಳ್ಳ ವಾಸುಕಿಯ ಸೋದರಿಯಲ್ಲಿ ಹುಟ್ಟಿದ ಮಗ. ಈತನು ಸರ್ಪಯಜ್ಞದಲ್ಲಿದ್ದ ಜನಮೇಜಯನನ್ನು ಹೊಗಳಿ ಆತನು ಮಾಡುತ್ತಿದ್ದ ಸರ್ಪಯಾಗವನ್ನು ನಿಲ್ಲಿಸಿದವನು. ಇವನ ಸ್ಮರಣೆಯಿಂದ ಸರ್ಪಭಯವು ಪರಿಹಾರವಾಗುವುದು. ನೋ. ಜರತ್ಕಾರು, ಮನಸಾ (ಮ.ಆ.).
ಪತಿಯು ತನ್ನನ್ನು ಅಗಲುವಾಗ ಜರತ್ಕಾರುವು ತನ್ನ ಹೊಟ್ಟೆಯಲ್ಲಿದ್ದ ಗರ್ಭದ ವಿಷಯ ಕೇಳಲು ಅವನು 'ಆಸ್ತಿ' 'ಸಂತಾನವಿದೆ' ಎಂದು ಹೊರಟುಹೋದನು. ಆ ಆಸ್ತಿ ಶಬ್ದದಿಂದ ಅವನಿಗೆ ಆಸ್ತಿಕನೆಂಬ ಹೆಸರಾಯಿತು (ಮ.ಆ.). ೨. ತಪಸ್ಸು ಮಾಡುತ್ತಿದ್ದ ರೋಮಶಮುನಿಯ ಮೇಲೆ ಮುತ್ತಿನ ಸರಗಳನ್ನೂ ಹೂಗಳನ್ನೂ ಚೆಲ್ಲಿ ಬ್ರಹ್ಮರಾಕ್ಷಸನಾಗುವಂತೆ ಶಾಪ ಪಡೆದ ಗಂಧರ್ವ. ಇವನು ಮುಂದೆ ಸುಮೇಧಸನೆಂಬ ಬ್ರಾಹ್ಮಣನಿಂದ ವಿಷ್ಣುವಿನ ನಾಮ ಮತ್ತು ತುಲಸಿಯ ಮಹಿಮೆ ಕೇಳಿ ಶಾಪ ವಿಮೋಚನೆ ಹೊಂದಿದನು.

ಆಹಿಚ್ಛತ್ರ - ನೋ. - ಅಹಿಚ್ಛತ್ರ.

ಆಹುಕ - ೧. ಉಗ್ರಸೇನರಾಜನ ತಂದೆ; ಇವನಿಗೆ ನೂರು ಮಂದಿ ಮಕ್ಕಳು; ಇವರು ಸಾಲ್ವನ ಯುದ್ಧಕಾಲದಲ್ಲಿ ದ್ವಾರಕಿಯನ್ನು ರಕ್ಷಿಸಿದರು (ಭಾಗ, ವಿಷ್ಣುಪು.). ೨. ಶಿವ ಭಕ್ತನಾಗಿದ್ದ ಬೇಡನೊಬ್ಬ; ಇವನು ಮುಂದಿನ ಜನ್ಮದಲ್ಲಿ ನಳರಾಜನಾಗಿ ಜನ್ಮಿಸಿದ (ಲಿಂಗಪು.).

ಆಹುಕಿ - ಆಹುಕನ ತಂಗಿ; ಯದುವಂಶದ ಅರಿದ್ಯೋತರಾಜನ ಮಗಳು.

ಇ

ಇಕ್ಷುಲಾ - ನದಿಯೊಂದು (ಮ.ಭೀ.).

ಇಕ್ಷುಮತಿ - ರೋಹಿಲ ಖಂಡದಲ್ಲಿದ್ದ ಕಾಳೀ ನದಿ; ಇದರ ದಡದಲ್ಲೇ ಜನಕನ ತಮ್ಮನಾದ ಕುಶಧ್ವಜನ ರಾಜಧಾನಿ ಸಾಂಕಾಶ್ಯ ನಗರವಿತ್ತು (ಮ.ಆ.).

ಇಕ್ಷ್ವಾಕು - ೧. ಕ್ಷತ್ರಿಯ, ವೈವಸ್ವತ ಮನುವಿನ ಪುತ್ರ; ಸೂರ್ಯವಂಶದ ರಾಜ; ಇವನಿಗೆ ಶಶಾದ, ವಿಕುಕ್ಷಿ, ದಂಡಕ ಮೊದಲಾದ ಹಲವು ಗಂಡುಮಕ್ಕಳೂ,

ಸುವರ್ಣೆ ಎಂಬ ಮಗಳೂ ಇದ್ದರು (ಮ.ಆ.). ೨. ಮಹಾಪಾಪಿಯಾದ ಬ್ರಾಹ್ಮಣನೊಬ್ಬ ಯಮನ ಸೂಚನೆಯಂತೆ ಜಾಬಾಲಿಮುನಿಯನ್ನಾಶ್ರಯಿಸಿ ಭಗವಂತನನ್ನು ಸೇವಿಸಿ ಸದ್ಗತಿ ಪಡೆದನು. (ಭಾಗ.,ಹರಿ., ವಾ.ರಾ.,ಮ.ವ.,ಅನು.,ಅಶ್ವ.,ವಿಷ್ಣುಪು.,ಬ್ರಹ್ಮಪು.,ಶಿವಪು.,ಮ.ಶಾಂ.)

ಇಧ್ಮಾನ - ಅಗಸ್ತ್ಯ - ಲೋಪಾಮುದ್ರೆಯರ ಮಗ; ಇವನಿಂದ ಪಿತೃಗಳು ಸದ್ಗತಿ ಪಡೆದರು.

ಇಂದೀವರಾಕ್ಷ - ಗಂಧರ್ವನೊಬ್ಬ; ಇವನ ತಂದೆ ನಲನಾಭ; ಬ್ರಹ್ಮಮಿತ್ರನೆಂಬ ಮುನಿಯನ್ನು ಹಾಸ್ಯಮಾಡಿ, ಅವನ ಶಾಪದಿಂದ ರಾಕ್ಷಸನಾದನು. ಮುಂದೆ ಸ್ವಾರೋಚಿಯ ಆಗ್ನೇಯಾಸ್ತ್ರದಿಂದ ಈತನ ಶಾಪವಿಮೋಚನೆಯಾಯಿತು (ಮಾರ್ಕಂ.ಪು.).

ಇಂದುಮತಿ - ೧. ಸೂರ್ಯವಂಶದ ಅಜರಾಜನ ಪತ್ನಿ; ದಶರಥನ ತಾಯಿ; ತೃಣಬಿಂದು ರಾಜನ ತಪಸ್ಸಿಗೆ ಭಂಗವನ್ನುಂಟುಮಾಡಿದ ಹರಿಣಿ ಎಂಬ ದೇವಾಂಗನೆಯು ಶಾಪದಿಂದ ಇಂದುಮತಿಯಾದಳು. ನಾರದರ ಮೈಮೇಲೆ ಇದ್ದ ಹೂಮಾಲೆಯು ಈಕೆಯ ಮೇಲೆ ಬಿದ್ದು ಶಾಪವಿಮೋಚನೆ ಹೊಂದಿದಳು (ರ.ವಂ.). ೨. ಚಂದ್ರವಂಶದ ಆಯುರಾಜನ ಪತ್ನಿ; ಸ್ವರ್ಭಾನವಿ ಎಂದೂ ಈಕೆಗೆ ಹೆಸರಿದೆ (ಮ.ಆ.). ೩. ಸಿಂಹಳ ದ್ವೀಪದ ರಾಜನ ಕಿರಿಯ ಮಗಳು; ಈಕೆಯ ಅಕ್ಕ ಮಂದೋದರಿ; ಮಂದೋದರಿಯು ಮೊದಲು ವಿವಾಹವನ್ನೇ ತಿರಸ್ಕರಿಸಿದ್ದರೂ, ತಂಗಿಯಾದ ಇಂದುಮತಿಯ ಸ್ವಯಂವರದ ಕಾಲದಲ್ಲಿ ಚಾರುದೇಷ್ಣನೆಂಬುವನನ್ನು ತಾನು (ವರಿಸಿ) ವಿವಾಹವಾದಳು.

ಇಂದ್ರ - ಸ್ವರ್ಗಾಧಿಕಾರದ ಹೆಸರು; ನೋ. - ಪುರಂದರ, ತ್ರಿಶಿಖ ದೇವರಾಜನೊಬ್ಬ; ಇಂದ್ರರು ಹದಿನಾಲ್ಕು ಮಂದಿ. ಇವನ ಪತ್ನಿ ಶಚಿ; ಮಗ ಜಯಂತ; ಇಂದ್ರನನ್ನು ಕದ್ರು ಮತ್ತು ಉತ್ತಂಕರು ಪ್ರಾರ್ಥಿಸಿದರು. ಇವನು ವಾಲಖಿಲ್ಯ ಋಷಿಗಳ ಕೋಪಕ್ಕೆ ಪಾತ್ರನಾದನು. ದುರ್ವಾಸನ ಮಂತ್ರಶಕ್ತಿಗೆ ಒಳಪಟ್ಟು ಕುಂತಿಗೆ ಪುತ್ರನನ್ನು ದಯಪಾಲಿಸಿದನು; ಕರ್ಣನೊಡನೆ ಕವಚಕುಂಡಲಗಳನ್ನು ಪ್ರಾರ್ಥಿಸಿದನು; ಅರ್ಜುನನು ಇಂದ್ರಕೀಲದಲ್ಲಿ ತಪಸ್ವಿಯಾಗಿದ್ದಾಗ ಆತನ ಬಳಿಗೆ ಬಂದನು. ಅರ್ಜುನನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗಿ ಅವನ ತಲೆಯ ಮೇಲೆ ದಿವ್ಯವಾದ ಕಿರೀಟವನ್ನಿಟ್ಟು ಉಪಚರಿಸಿದನು. ಖಾಂಡವವನ ದಹನ ಕಾಲದಲ್ಲಿ ಅರ್ಜುನನನ್ನು ಪ್ರತಿಭಟಿಸಿ ಸೋತನು. ಶ್ರೀಕೃಷ್ಣನ ಮಹಿಮೆಯನ್ನು ತಿಳಿಯದೆ ನಂದಗೋಕುಲವನ್ನು ಮುಳುಗಿಸಲು ಮುಸಲಧಾರೆಯಲ್ಲಿ ಮಳೆಗರೆದನು. ಗಂಧಮಾದನ ಪರ್ವತದಲ್ಲಿ ಪಾಂಡವರ ಬಳಿಗೆ ಬಂದನು.

ಸ್ತ್ರೀತ್ವವನ್ನು ಪಡೆದ ಋಕ್ಷರಜಸ್ಸೆಂಬ ವಾನರಿಗೆ ಮೋಹಿಸಲು, ಬ್ರಹ್ಮ ಸಂದರ್ಶನಕ್ಕಾಗಿ ಹೋಗುತ್ತಿದ್ದ ಇಂದ್ರನ ತೇಜಸ್ಸು ಆಕೆಯ ಬಾಲದ ಮೇಲೆ ಬೀಳಲು ವಾಲಿಯು ಜನಿಸಿದನು. ರಾಮರಾವಣರ ಯುದ್ಧಕಾಲದಲ್ಲಿ ಶ್ರೀರಾಮನಿಗೆ ಮಾತಲಿಯೊಡನೆ ತನ್ನ ರಥವನ್ನು ಕಳುಹಿಸಿದನು. ದಮಯಂತಿಯ ಸ್ವಯಂವರಕ್ಕೆ ದೇವತೆಗಳೊಡನೆ ಹೋಗಿದ್ದನು. ವಿರೂಪಾಕ್ಷಾಚಾರ್ಯನನ್ನು ಕೊಂದುದರಿಂದ ಇವನಿಗೆ ಬ್ರಹ್ಮಹತ್ಯಾದೋಷವು ಪ್ರಾಪ್ತಿಯಾಯಿತು. ವೃತ್ರಾಸುರನ ವಧೆಯಿಂದಲೂ, ಬ್ರಹ್ಮಹತ್ಯೆಯ ದೋಷ ಬಂತು. ದುರ್ವಾಸನು ಕೊಟ್ಟ ಶಿವಪ್ರಸಾದವನ್ನೊಗೆದು ಅವನ ಶಾಪದಿಂದ ರಾಜ್ಯವನ್ನು ಕಳೆದುಕೊಂಡನು. ಚ್ಯವನ ಮತ್ತು ಸಂವರ್ತರು, ಈತನು ಹೊಡೆಯಲೆತ್ನಿಸಿದ ವಜ್ರಾಯುಧ ಹಿಡಿದ ತೋಳನ್ನೇ ಸ್ತಂಭಿಸಿದರು. ದೇವತೆಗಳನ್ನೂ ದಾನವರನ್ನೂ ಕೂಡಿಕೊಂಡು ಸಮುದ್ರಮಥನ ಮಾಡಿ ಅಮೃತ ಮೊದಲಾದ ವಸ್ತುಗಳನ್ನು ಪಡೆದ. ನಮುಚಿಯನ್ನು ಕೊಂದನು. ಬೃಹಸ್ಪತಿಗೆ ಅವಮಾನ ಮಾಡಿ ರಾಜ್ಯ ಕಳೆದುಕೊಂಡನು. ಅಮೃತದಾನದ ವಿಷಯದಲ್ಲಿ ಉದಂಕ ಋಷಿಗೆ ವಂಚನೆ ಮಾಡಿದನು. ಗೌತಮ ಋಷಿಯ ಪತ್ನಿಯಾದ ಅಹಲ್ಯೆಯ ಪಾತಿವ್ರತ್ಯ ಭಂಗ ಮಾಡಿ ಶಾಪಗ್ರಸ್ತನಾದನು. ಪ್ರಹ್ಲಾದನ ಶಿಷ್ಯನಾಗಿದ್ದನು. ವೇದದಲ್ಲಿ ಶ್ರೇಷ್ಠ ದೇವತೆಯಾಗಿದ್ದನು. ಮೇನಕೆಯಿಂದ ವಿಶ್ವಾಮಿತ್ರನ ತಪೋಭಂಗಕ್ಕೆ ಕಾರಣನಾದ. ಶಿವನ ತಪೋಭಂಗಕ್ಕೆ ಮನ್ಮಥನನ್ನು ಪ್ರೇರಿಸಿದನು. ಈತನ ವಾಹನವಾದ ಆನೆಗೆ ಐರಾವತವೆಂದೂ, ಕುದುರೆಗೆ ಉಚ್ಚೈಶ್ರವಸ್ಸು ಎಂದೂ, ಸಭೆಗೆ ಸುಧರ್ಮಾ ಎಂದೂ, ಉಪ್ಪರಿಗೆಗೆ ವೈಜಯಂತವೆಂದೂ, ಆಯುಧಕ್ಕೆ ವಜ್ರಾಯುಧವೆಂದೂ ಹೇಳುತ್ತಾರೆ (ಮ.ಆ., ಸ.,ವ., ಉ., ಶಾಂ., ಅಶ್ವ., ಬ್ರಹ್ಮ.ವೈ., ಪದ್ಮಪು., ಮ.ಶ., ಭಾಗ., ಮ.ಅನು.).

ಇಂದ್ರಕೀಲ - ಹಿಮಾಲಯ ಪ್ರಾಂತದ ಒಂದು ಪರ್ವತ; ಇಲ್ಲಿ ಅರ್ಜುನನು ಶಿವನನ್ನು ಕುರಿತು ತಪಸ್ಸು ಮಾಡಿ ಪಾಶುಪತಾಸ್ತ್ರ ಪಡೆದನು (ಮ.ವ.).

ಇಂದ್ರಜಿತು - ರಾಕ್ಷಸ; ಈತನ ತಂದೆ ರಾವಣ; ತಾಯಿ ಮಂಡೋದರಿ; ಇವನು ಇವನು ಬಹು ಮಾಯಾವಿ; ಇವನು ತನ್ನ ವಧೆ ಹನ್ನೆರಡು ವರ್ಷ ಬ್ರಹ್ಮಚರ್ಯೆ ಪಾಲನೆ ಮಾಡಿದವನಿಂದಲೇ ಆಗಬೇಕೆಂದು ಬ್ರಹ್ಮನಿಂದ ವರ ಪಡೆದುದರಿಂದ ಲಕ್ಷ್ಮಣನಿಂದ ಹತನಾದನು. ಇವನು ಹುಟ್ಟಿದಾಗ ಮೇಘದಂತೆ ಗುಡುಗಿದುದರಿಂದ ಈತನಿಗೆ ಮೇಘನಾದನೆಂಬ ಹೆಸರು ಬಂತು. ಮುಂದೆ ಇಂದ್ರನನ್ನು ಯುದ್ಧದಲ್ಲಿ ಗೆದ್ದು ಇಂದ್ರಜಿತು ಎನ್ನಿಸಿದನು. ಸೀತಾಶೋಧಕ್ಕಾಗಿ ಲಂಕೆಗೆ ಬಂದ ಹನುಮಂತನನ್ನು ಬ್ರಹ್ಮಾಸ್ತ್ರದಿಂದ ಬಂಧಿಸಿದನು. ಇವನು ಕೈಗೊಂಡ ನಿಕುಂಬಿಳಾಯಾಗವನ್ನು ಪೂರೈಸಗೊಡದೆ ರಾಮಲಕ್ಷ್ಮಣರು

ಈತನನ್ನು ಕೆಣಕಿದರು. ಈತನು ಕಪಿಸೇನೆಯ ಮುಂದೆ ಮಾಯಾಸೀತೆಯನ್ನು ವಧಿಸಿ ಸುಗ್ರೀವಾದಿಗಳಿಗೆ ವ್ಯಸನವನ್ನುಂಟುಮಾಡಿದನು. ಇವನ ಪತ್ನಿ ಸುಲೋಚನೆ.

ಇವನು ಯುದ್ಧ ರಂಗದಲ್ಲಿ ಕಪಿಗಳ ಹಾವಳಿಯನ್ನು ತಡೆಯಲಾರದೆ ನಾಗಾಸ್ತ್ರವನ್ನು ಪ್ರಯೋಗಿಸಿದನು. ಇದರ ಶಕ್ತಿಯಿಂದ ಕಪಿಗಳೂ ರಾಮಲಕ್ಷ್ಮಣರೂ ಎಚ್ಚರ ತಪ್ಪಿದರು. ಆಮೇಲೆ ಗರುಡನು ಯುದ್ಧರಂಗಕ್ಕೆ ಬರಲು ಸರ್ಪಗಳೆಲ್ಲಾ ಓಡಿಹೋದವು. ಎಲ್ಲರಿಗೂ ಎಚ್ಚರವಾಯಿತು (ಅನಂ.ರಾ.).

ನಾಗಾಸ್ತ್ರದಿಂದ ಕಪಿಗಳು ವಿಮೋಚನೆ ಹೊಂದಲು ಇಂದ್ರಜಿತುವು ಬ್ರಹ್ಮಾಸ್ತ್ರವನ್ನು ಗುಪ್ತವಾಗಿ ಪ್ರಯೋಗಿಸಿದನು. ಇದರಿಂದ ಕಪಿಸೇನೆಯೆಲ್ಲಾ ಮೃತವಾಗಲು ಶ್ರೀರಾಮನು ರಾಕ್ಷಸನ ಬ್ರಹ್ಮಾಸ್ತ್ರಕ್ಕೆ ಬದಲಾಗಿ ಬ್ರಹ್ಮಾಸ್ತ್ರವನ್ನೇ ಪ್ರಯೋಗಿಸುವೆ ಎನ್ನಲು ಇಂದ್ರಜಿತುವು ಭಯದಿಂದ ಲಂಕೆಗೆ ಓಡಿಹೋದನು. ಶ್ರೀರಾಮನು ಜಾಂಬವಂತನ ಸೂಚನೆಯಂತೆ ಕ್ಷೀರಸಮುದ್ರದ ನಡುವಿರುವ ದ್ರೋಣಗಿರಿಯಿಂದ ಶ್ರೇಷ್ಠವಾದ ಮೂಲಿಕೆಗಳನ್ನು ತರಲು ಆಂಜನೇಯನು ಹೋಗಿ ಆ ಗಿರಿಯಲ್ಲಿ ಗಿಡಮೂಲಿಕೆಗಳನ್ನು ಹುಡುಕುತ್ತ ಇದ್ದರೆ ವೇಳೆಯಾಗುವುದೆಂದು ಆ ಗಿರಿಯನ್ನೇ ರಣರಂಗದಲ್ಲಿ ತಂದಿಟ್ಟನು. ಜಾಂಬವನು ಆ ಪರ್ವತದಿಂದ ಅಮೂಲ್ಯ ಮೂಲಿಕೆಗಳನ್ನು ತಂದು ಕಪಿಸೇನೆಯನ್ನು ಬದುಕಿಸಿದನು. ಆಮೇಲೆ ತನ್ನ ಬಾಲವನ್ನು ಆ ಗಿರಿಗೆ ಸುತ್ತಿ ಅದನ್ನು ಮೊದಲಿದ್ದಲ್ಲಿಗೇ ಎಸೆದನು (ಅನಂ.ರಾ.,ಮ.ವ.).

ಇಂದ್ರತಾಪಸ (ಇಂದ್ರತಾಪನ) - ದೈತ್ಯನೊಬ್ಬ (ಮ.ಸ.).

ಇಂದ್ರದೇಶ - ಇಂದ್ರಪರ್ವತದ ಸಮೀಪವಿದ್ದ ದೇಶ; ಇದರ ರಾಜಧಾನಿ ಸಾಂಕಾಶ್ಯ ನಗರ; ಅರಸ ಸುಧನ್ವ. ಈತನು ಜನಕನೊಡನೆ ಸೀತೆಯನ್ನು ತನಗೆ ವಿವಾಹ ಮಾಡಿಕೊಡಬೇಕೆಂದು ಕೇಳಲು ಜನಕನು ತಿರಸ್ಕರಿಸಿದನು; ಇದರಿಂದ ಇಬ್ಬರಿಗೂ ಯುದ್ಧವಾಗಿ ಸುಧನ್ವನು ಹತನಾದನು. ನೋ. - ಸುಧನ್ವ.

ಇಂದ್ರದ್ಯುಮ್ನ - ೧. ಕ್ಷತ್ರಿಯ; ಶ್ರೀಕೃಷ್ಣನಿಂದ ಹತನಾದ. ೨. ಪಾಂಡವರೊಡನೆ ವಾಸಮಾಡಿದ ಋಷಿಯೊಬ್ಬ. ೩. ಕ್ಷತ್ರಿಯ; ಭೂಮಿಯಲ್ಲಿ ಈತನ ಕೀರ್ತಿ ಅದೃಶ್ಯವಾಗಿದೆಯೆಂದು ಸ್ವರ್ಗದಿಂದ ಪತನಹೊಂದಿದ. ಕೊನೆಗೆ ಈತನು ಅಕೂಪಾರನೆಂಬ ಆಮೆಗಳ ರಾಜನಿಂದ ತನ್ನ ಕೀರ್ತಿ ಭೂಮಿಯಲ್ಲಿ ಇನ್ನೂ ಉಂಟೆಂದು ತಿಳಿದೊಡನೆ ದೇವದೂತರು ಪುನಃ ಈತನನ್ನು ಸ್ವರ್ಗಕ್ಕೆ ಒಯ್ದರು.

೪. ಪಾಂಡ್ಯ ದೇಶದ ವೈಷ್ಣವರಾಜನಾದ ಈತನು ಅಗಸ್ತ್ಯನ ಶಾಪದಿಂದ ಗಜರಾಜನಾದ; ಇವನು ಒಂದು ಕೊಳದಲ್ಲಿ ನೀರು ಕುಡಿಯುತ್ತಿರಲು ಮೊಸಳೆಯಿಂದ ಎಳೆಯಲ್ಪಡಲು ಇವನು ಶ್ರೀಹರಿಗೆ ಮೊರೆಯಿಟ್ಟು ವಿಪತ್ತನ್ನು ಪರಿಹರಿಸಿಕೊಂಡನಲ್ಲದೆ ಸದ್ಗತಿ ಪಡೆದನು. ೫. ಇಂದ್ರದ್ಯುಮ್ನ ಎಂಬ ರಾಜನು ದಾನಮಾಡಿದ ಲಕ್ಷಗಟ್ಟಲೆ ದನಗಳ ದಾನಧಾರೆಯಿಂದ ಉಂಟಾದ ಸರೋವರ. ಇದರಲ್ಲಿ ಅಕೂಪಾರನೆಂಬ ವಯೋವೃದ್ಧನಾದ ಕೂರ್ಮರಾಜ ವಾಸವಾಗಿದ್ದ. ನೋ. - ಅಕೂಪಾರ, ತ್ರಿಕೂಟ (ಮ.ಸ., ವ., ಭಾಗ.).

ಇಂದ್ರದ್ವೀಪ - ಭರತಚಕ್ರವರ್ತಿಯ ಮೊಮ್ಮಗ. ನೋ. - ಶತಶೃಂಗ.

ಇಂದ್ರದ್ರುಮಿ - ಋಷಿಯೊಬ್ಬ (ಮ.ಶಾಂ.).

ಇಂದ್ರಧ್ವಜೋತ್ಸವ - ಉಪರಿಚರ ವಸುವು ಆರಂಭಿಸಿದ ಉತ್ಸವ (ಮ.ಆ.).

ಇಂದ್ರಪ್ರಮಿತಿ - ವ್ಯಾಸ ಮಹರ್ಷಿಯ ಶಿಷ್ಯನಾದ ಪೈಲ ಮುನಿಯ ಶಿಷ್ಯ. ಈತನು ಐತರೇಯ ಸಂಹಿತೆಯನ್ನು (ಋಗ್ವೇದ) ವಿಭಾಗಮಾಡಿ ತನ್ನ ಶಿಷ್ಯರಾದ ಬಾಷ್ಕಲ, ಯಾಜ್ಞವಲ್ಕ, ಪರಾಶರ, ಅಗ್ನಿಮತಿ, ಮಾಂಡುಕೇಯರೆಂಬ ಶಿಷ್ಯರಿಗೆ ಉಪದೇಶ ಮಾಡಿದನು (ವಿಷ್ಣುಪು).

ಇಂದ್ರಪ್ರಸ್ಥ - ಹಸ್ತಿನಾಪುರದ ಹತ್ತಿರ ಇದ್ದ ಪಾಂಡವರ ರಾಜಧಾನಿ; ಇದು ಶ್ರೀ ಕೃಷ್ಣನ ಅಪ್ಪಣೆಯಂತೆ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿತು. ಇದು ಯಮುನಾ ನದಿಯ ತೀರದಲ್ಲಿದ್ದ ಹಳೆಯ ದೆಹಲಿ. ಇಲ್ಲೇ ಶ್ರೀಕೃಷ್ಣನ ಅವತಾರ ಸಮಾಪ್ತಿ ಆದ ಮೇಲೆ ಆತನ ಮೊಮ್ಮಗನಾದ ವಜ್ರನಿಗೆ ಪಟ್ಟಾಭಿಷೇಕವಾಯಿತು. (ಮ.ಆ.,ಮೌ.ಸ.). ನೋ. ಖಾಂಡವಪ್ರಸ್ಥ (ವೃಜಿನನಗರ).

ಇಂದ್ರಮಾರ್ಗ - ಕ್ಷೇತ್ರವೊಂದು (ಮ.ವ.).

ಇಂದ್ರವರ್ಮ - ಕ್ಷತ್ರಿಯ; ಮಾಳವದ ರಾಜ; ಇವನ ಅಶ್ವತ್ಥಾಮನೆಂಬ ಹೆಸರಿನ ಆನೆಯನ್ನು ಭೀಮನು ಕೊಂದನು (ಮ.ದ್ರೋ).

ಇಂದ್ರವಾಹ - ಕ್ಷತ್ರಿಯ; ಇಕ್ಷ್ವಾಕುವಂಶದ ಶಶಾದನ ಮಗ ಪುರಂಜಯ. ಈತನು ಇಂದ್ರನ ಸಹಾಯಾರ್ಥವಾಗಿ ಸ್ವರ್ಗದಲ್ಲಿ ರಾಕ್ಷಸನೊಡನೆ ಹೋರಾಡುತ್ತಿದ್ದಾಗ ಇಂದ್ರನು ಇವನಿಗೆ ಎತ್ತಿನ ರೂಪದಿಂದ ವಾಹನವಾದನು. ಪುರಂಜಯ ಅದರ ಹಿಣಿಲ (ಕಕುತ್) ಮೇಲೆ ಕುಳಿತು ಯುದ್ಧ ಮಾಡಿದುದರಿಂದ ಮುಂದೆ ಈತನಿಗೆ ಕಕುತ್ಸ್ಥನೆಂಬ ಹೆಸರೂ ಇಂದ್ರನು ವಾಹನವಾದುದರಿಂದ ಇಂದ್ರವಾಹನನೆಂಬ ಹೆಸರೂ ಬಂತು. ಈ ವಂಶದ ಮುಂದಿನ ಅರಸರಿಗೆ ಕಾಕುತ್ಸ್ಥರೆಂದು ಹೆಸರು ಬರಲು ಇವನೇ ಕಾರಣ (ಮ.ವ., ದೇವಿಭಾ.).

ಇಂದ್ರಸೇನ - ೧. ಪಾಂಡವರ ದೂತ (ಮ.ವ.). ೨. ನಳರಾಜನ ಮಗ. ಈತನ ಸೋದರಿ ಇಂದ್ರಸೇನೆ (ಮ.ವ.). ೩. ಕ್ಷತ್ರಿಯ; ಜನಮೇಜಯನ ಮೂರನೇ ಮಗ (ಮ.ಆ.). ೪. ಕೌರವರ ಪಕ್ಷದ ಒಬ್ಬ ರಾಜ (ಮ.ಸ.,ವ.ಸ್ತ್ರೀ.,ವಿ., ಆ.,ದ್ರೋ.,).

ಇಂದ್ರಸೇನೆ - ೧. ಮೌದ್ಗಲ್ಯ ಋಷಿಯ ಪತ್ನಿ ನಾಲಾಯಣಿ. ಈಕೆಗೆ ನಾರಾಯಣಿ ಎಂಬ ಹೆಸರೂ ಇದೆ. ಈಕೆ ಮಹಾಪತಿವ್ರತೆ. ಈಕೆ ಶಿವನ ಅನುಗ್ರಹದಿಂದ ಮುಂದೆ ದ್ರುಪದನ ಪುತ್ರಿ ದ್ರೌಪದಿಯಾಗಿ ಹುಟ್ಟಿ ಪಂಚಪಾಂಡವರನ್ನು ವಿವಾಹವಾದಳು. ೨. ನಳರಾಜನ ಪುತ್ರಿ; ಈಕೆಯ ಸೋದರ ಇಂದ್ರಸೇನ, ತಾಯಿ ದಮಯಂತಿ (ಮ.ವ.). ೩. ಬಾಭ್ರವ್ಯ ಎಂಬ ರಾಜನ ಮಗಳು. ಮರುತ್ತ ರಾಜನ ಮಗ ನರಿಷ್ಯಂತನು ಈಕೆಯ ಪತಿ; ಮಗ ದಮ; ದಮನು ತನ್ನ ತಾಯಿಯ ಗರ್ಭದಲ್ಲಿ ಒಂಬತ್ತು ವರ್ಷ ಇದ್ದ. ನೋ. - ದಮ, ನರಿಷ್ಯಂತ (ಮ.ವ.).

ಇಂದ್ರಾಣಿ - ಇಂದ್ರನ ಪತ್ನಿಯಾದ ಶಚಿ. ಈಕೆಯನ್ನು ಹೊಂದಲು ನಹುಷನು ಪ್ರಯತ್ನನಡೆಸಿ ಅಗಸ್ತ್ಯನಿಂದ ಹೆಬ್ಬಾವಾಗುವ ಶಾಪ ನಡೆದ. ನೋ. ನಹುಷ (ಮ.ಉ.).

ಇಂದ್ರಾಭ - ಕ್ಷತ್ರಿಯ; ಧೃತರಾಷ್ಟ್ರನ ಮಗ (ಮ.ಆ.).

ಇಂದ್ರೋತ - ಶೌನಕನೆಂಬ ಋಷಿಯ ನಾಮಾಂತರ; ಚಂದ್ರವಂಶದ ಪುರುರಾಜನ ಮಗ ಜನಮೇಜಯನು. ಗಾರ್ಗ್ಯಮುನಿಯ ಮಗನನ್ನು ಕೊಂದು ಬ್ರಹ್ಮಹತ್ಯೆಗೆ ಗುರಿಯಾಗಲಾಗಿ ಈ ಮುನಿಯು ಈತನಿಂದ ಅಶ್ವಮೇಧ ಯಜ್ಞವನ್ನು ಮಾಡಿಸಿದನು. (ಮ.ಶಾಂ.).

ಇರಾ - ೧. ಅಪ್ಸರೆಯೊಬ್ಬಳು. ೨. ಕಶ್ಯಪ ಪ್ರಜಾಪತಿಯ ಒಬ್ಬಳು ಹೆಂಡತಿ; ಈಕೆಗೆ ಮರಗಿಡಗಳೂ ಬಳ್ಳಿಗಳೂ ಮಕ್ಕಳಾಗಿದ್ದವು (ಮ.ಸ., ಆ.).

ಇರಾವತಿ - ನದಿಯೊಂದು; ಇದು ಬ್ರಹ್ಮದೇಶದಲ್ಲಿ ಹರಿಯುತ್ತಿದೆ (ಮ.ಸ.,ಭೀ.,ಕ.).

ಇರಾವಂತ - ನಾಗಕನ್ಯೆಯಾದ ಉಲೂಪಿಯಲ್ಲಿ ಅರ್ಜುನನಿಂದ ಹುಟ್ಟಿದ ಮಗ. ಇವನು ಭಾರತ ಯುದ್ಧದಲ್ಲಿ ಶಕುನಿಯ ಆರು ಮಂದಿ ಸಹೋದರರನ್ನು ಕೊಂದು ಕೌರವ ಪಕ್ಷದ ಆರ್ಷ್ಯಶೃಂಗಿ ಎಂಬ ರಾಕ್ಷಸನಿಂದ ಹತನಾದನು. ನೋ - ಉಲೂಪಿ (ಮ.ಆ.,ಭೀ.).

ಇವನು ನಾಗಲೋಕದಲ್ಲಿ ತನ್ನ ತಾಯಿಯಿಂದ ಬೆಳೆಸಲ್ಪಟ್ಟನು. ಇವನ ಚಿಕ್ಕತಂದೆಯಾದ ಅಶ್ವಸೇನನು ತನಗೆ ಅರ್ಜುನನಲ್ಲಿದ್ದ ದ್ವೇಷದಿಂದ ಇವನನ್ನು ಮನೆಯಿಂದ ಹೊರಡಿಸಿಬಿಟ್ಟನು. ಆಗ ಸ್ವರ್ಗದಲ್ಲಿದ್ದ ಅರ್ಜುನನ ಬಳಿಗೆ

ಇರಾವಂತನು ಹೋಗಿ ತನ್ನ ಪರಿಚಯವನ್ನು ಅವನಿಗೆ ಹೇಳಿ ತನ್ನ ಕಷ್ಟವನ್ನು ತಿಳಿಸಿದನು. ಅರ್ಜುನನು ಅವನನ್ನು ಸ್ವರ್ಗಲೋಕದಲ್ಲೇ ಇರುವಂತೆ ಮಾಡಿದನು. ಮುಂದೆ ಯುದ್ಧ ಕಾಲದಲ್ಲಿ ಇಷ್ಟಬಂದ ವರ್ಣ, ರೂಪ ವೇಗವನ್ನು ತಳೆಯಬಲ್ಲ ಲಕ್ಷೋಪಲಕ್ಷ ಕುದುರೆಗಳ ಸೇನೆಯನ್ನು ಪಾಂಡವರ ಸಹಾಯಕ್ಕೆ ಕರೆತಂದನು. ಇವನಿಂದ ಶಕುನಿಯ ಅನೇಕ ಸೋದರರು ಮೃತರಾಗಲು ವೃಷಕನೆಂಬವನು ಮಾತ್ರ ಓಡಿಹೋದನು. ಆಗ ಅರ್ಷ್ಯಶೃಂಗಿ ಎಂಬ, ಬಕನ ಸ್ನೇಹಿತನಾದ ಒಬ್ಬ ಮಾಯಾವಿ ರಕ್ಕಸನು ದುರ್ಯೋಧನನ ಆಜ್ಞೆಯಂತೆ ಇರಾವಂತನನ್ನು ತನ್ನ ಮಾಯಾಯುದ್ಧದಲ್ಲಿ ಖಡ್ಗದಲ್ಲಿ ಛೇದಿಸಿ ಕೊಂದನು. ನೋ. - ಅಶ್ವಸೇನ, ಅರ್ಷ್ಯಶೃಂಗಿ.

ಇಲಬಿಲಾ - ಪುಲಸ್ತ್ಯಮುನಿಯ ಮಗನಾದ ವಿಶ್ರವಸುವಿನ ಪತ್ನಿ. ಕುಬೇರನ ತಾಯಿ (ಭಾಗ.ದ ಮ.ವ.ವ ವಾ.ರಾ.ಉ.).

ಇಲಾ - ವೈವಸ್ವತ ಮನುವಿನ ಮಗಳು. ಈಕೆ ಮೊದಲು ಪುರುಷನಾಗಿದ್ದಳು. ಆಗ ಈಕೆಗೆ ಸುದ್ಯುಮ್ನನೆಂಬ ಹೆಸರಿತ್ತು. ಒಮ್ಮೆ ಶಿವಪಾರ್ವತಿಯರು ಶರವಣ ವನದಲ್ಲಿ ಕ್ರೀಡಿಸುತ್ತಿದ್ದಾಗ ಆ ವನವನ್ನು ಪುರುಷರು ಪ್ರವೇಶಿಸಿದುದರಿಂದ ಪಾರ್ವತಿಯು ಕೋಪಗೊಂಡು - 'ಇನ್ನು ಈ ವನವನ್ನು ಪುರುಷರು ಪ್ರವೇಶಿಸಿದರೆ ಸ್ತ್ರೀಯರಾಗಲಿ' ಎಂದು ಶಾಪವಿತ್ತಳು; ವೈವಸ್ವತ ಮನು ಪುತ್ರನಾದ ಇಲನು ಬೇಟೆಯ ನಿಮಿತ್ತ ಈ ವನವನ್ನು ಹೊಕ್ಕು ಸ್ತ್ರೀಯಾಗಿ ಚಂದ್ರನ ಮಗ ಬುಧನಿಂದ ಪುರೂರವನೆಂಬ ಪುತ್ರನನ್ನು ಪಡೆದನು. ಮುಂದೆ ಇವಳು ಪರಮೇಶ್ವರನ ಅನುಗ್ರಹದಿಂದ ಒಂದು ತಿಂಗಳು ಸ್ತ್ರೀಯಾಗಿಯೂ, ಒಂದು ತಿಂಗಳು ಪುರುಷನಾಗಿಯೂ ಇರತೊಡಗಿದಳು (ಮ.ಆ., ಹರಿ.ದ ಬ್ರಹ್ಮಪು., ಮತ್ಸ್ಯಪು.ದ ಭಾಗ.).

ಇಲಾವೃತ - ಜಂಬೂದ್ವೀಪದ ಒಂದು ಖಂಡ; ಇದು ಇಲಾವೃತ ಎಂಬ ಹೆಸರಿನ ರಾಜನು ಆಳುತ್ತಿದ್ದ ಖಂಡದ ಹೆಸರು; ಈತನ ತಂದೆ ಪ್ರಿಯವ್ರತರಾಜನ ಮಗ ಆಗ್ನೀಧ್ರ. ಇವನಿಗೆ ನಾಭಿ, ಕಿಂಪುರುಷ, ಹರಿ ಮೊದಲಾದವರು ಸೋದರರು ರಾಜಸೂಯಯಾಗ ಕಾಲದಲ್ಲಿ ಅರ್ಜುನನು ಇದನ್ನು ಗೆದ್ದನು (ಮ.ಸ.ದಭೀ.).

ಇಲಿಲಾ (ಇವಿಲಾ, ಈಲಿನಾ) - ಕ್ಷತ್ರಿಯ; ಚಂದ್ರವಂಶದ ತ್ರಸ್ನು ರಾಜನ ಮಗ; ಇವನ ತಾಯಿ ಕಾಳಿಂದಿ; ಹೆಂಡತಿ ರಥಂತರಿ. ಇವನಿಗೆ ದುಷ್ಯಂತ, ಶೂರ, ಭೀಮ, ಪ್ರವಸು, ವಸು ಎಂಬ ಐವರು ಮಕ್ಕಳಿದ್ದರು (ಮ.ಆ.).

ಇಲ್ವಲ - ದೈತ್ಯನೊಬ್ಬ. ವಾತಾಪಿಯ ಅಣ್ಣ; ಹಿರಣ್ಯಕಶಿಪುವಿನ ಸೋದರಿಯ ಮಗ (ಮತ್ಸ್ಯಪು). ಹಿರಣ್ಯಕಶಿಪುವಿನ ಮಗನಾದ ಪ್ರಹ್ಲಾದನ ಮಗ (ಭಾಗ.). ಅಗಸ್ತ್ಯನಿಂದ ಇವನ ನಾಶವಾಯಿತು; ಇವನ ಪುರ ಮಣಿಮತಿ; ಮಗ ಬಲ್ವಲ.

ಬಲ್ವಲನು ಬಲರಾಮನಿಂದ ಹತನಾದ; ಅಗಸ್ತ್ಯನು ದ್ರವ್ಯಾಪೇಕ್ಷೆಯಿಂದ ಶ್ರುತರ್ವ, ಬ್ರಧ್ನಶ್ವ, ತ್ರಸದಸ್ಯುರಾಜರ ಬಳಿಗೆ ಹೋಗಿ ಹಣ ದೊರೆಯದುದರಿಂದ ಇವರ ಸೂಚನೆಯಂತೆ ಇಲ್ವಲನ ಬಳಿಗೆ ಹೋಗಿ ಹಣವನ್ನು ಪಡೆದನು. ನೋ. - ವಾತಾಪಿ (ಮ.ವ.,ವಾ.ರಾ.,ಮತ್ಸ್ಯಪು.,ಭಾಗ.)

ಇಷೀಕ - ಬ್ರಾಹ್ಮಣನೊಬ್ಬ; ಗಂಗಾತೀರ ವಾಸಿಯಾದ ಈತನನ್ನು ಶಿಖಂಡಿಯು ಪುರುಷತ್ವಕ್ಕಾಗಿ ಸೇವಿಸಿದನು (ಮ.ಆ.).

ಇಷೀಕಾಸ್ತ್ರ (ಐಷೀಕಾಸ್ತ್ರ) - ನೋ. - ಅಪಾಂಡವೇಯಾಸ್ತ್ರ (ಮ.ಸೌ.).

ಇಷುಪಾತ್ - ದಾನವನೊಬ್ಬ; ಈತನ ತಂದೆ ಕಶ್ಯಪ; ತಾಯಿ ದನು (ಮ.ಆ).

ಈ

ಈಜಿಕಾ - ದೇಶ (ಮ.ಭೀ.).

ಈಲಿನ - ನೋ - ಇಲಿಲ. ಇವನಿಗೆ ತ್ರಸ್ರ, ತ್ರಸ್ನು ಎಂಬ ಹೆಸರೂ ಇದೆ. ಚಂದ್ರವಂಶ (ಮ.ಆ.).

ಈಲಿನಿ - ಈಕೆ ಬ್ರಹ್ಮವಾದಿನಿ. ಈಕೆಯ ಪತಿ ತಂಸುಕುಮಾರ (ಹರಿ.).

ಈಶ್ವರ - ೧. ಏಕಾದಶರುದ್ರರಲ್ಲೊಬ್ಬ. ೨. ಕ್ಷತ್ರಿಯ. ಚಂದ್ರವಂಶದವನು. ಪುರುವಿನ ಪುತ್ರ. ಇವನ ತಾಯಿ ಪೌಷ್ಟಿ (ಮ.ಆ.).

ಈಶಾವಾಸ್ಯ - ಶುಕ್ಲಯಜುರ್ವೇದದ ಒಂದು ಉಪನಿಷತ್ತು.

ಉ

ಉಕ್ಥ್ಯ - **ಅಗ್ನಿವಿಶೇಷ** (ಮ.ವ.).

ಉಗ್ರ - ೧. ಕ್ಷತ್ರಿಯ; ಧೃತರಾಷ್ಟ್ರನ ಮಗ; ಭೀಮನಿಂದ ಹತನಾದ (ಮ.ದ್ರೋ.). ಸೂರ್ಯ (ಆ.ಹೃ.).

ಉಗ್ರಕರ್ಮ - ಸಾಲ್ವರಾಜ; ಭಾರತಯುದ್ಧದಲ್ಲಿ ಭೀಮನಿಂದ ಹತನಾದ (ಮ.ಶ.).

ಉಗ್ರಪಾಂಡ್ಯ - ಮಲಯಧ್ವಜ ಮತ್ತು ಕಾಂಚನಮಾಲೆಯಲ್ಲಿ ಪಾರ್ವತಿಯ ಅಂಶದಿಂದ ಹುಟ್ಟಿದ ತಟಾತಕೆಯು ಈತನ ತಾಯಿ. ಪಾಂಡ್ಯದೇಶದ ಸೋಮಸುಂದರ ರಾಜನು ಈತನ ತಂದೆ. ಈತನು ದಕ್ಷಿಣ ಮಧುರೆಯ ರಾಜ; ಈತನ ಪತ್ನಿ ಕಾಂತಿಮತಿ; ಮಗ ವೀರಪಾಂಡ್ಯ. ಉಗ್ರಪಾಂಡ್ಯನು ನೂರನೆಯ ಯಜ್ಞವನ್ನು ಕೈಗೊಂಡಾಗ, ಮತ್ಸರದಿಂದ ಇಂದ್ರನು ಸಮುದ್ರರಾಜನೊಡನೆ ಈತನ ಪಟ್ಟಣವನ್ನು ಕೊಚ್ಚಿಕೊಂಡು ಹೋಗುವಂತೆ ಹೇಳಿದನು. ಆದರೆ

ಸುಂದರೇಶ್ವರನ ಅನುಗ್ರಹದಿಂದ ಸಮುದ್ರರಾಜನು ಈ ಕೆಲಸವನ್ನು ಮಾಡಲಾರದಾದನು. ಕೊನೆಗೆ ಇಂದ್ರನು ಮಳೆ ಸುರಿಯುವಂತೆ ಮಾಡಲು, ಉಗ್ರಪಾಂಡ್ಯನು ಇಂದ್ರನನ್ನು ಗೆದ್ದು ತನ್ನ ರಾಜ್ಯದಲ್ಲಿ ಮಳೆ ಕರೆಸಿದನು (ಸ್ಕಾಂ.ಪು.).

ಉಗ್ರವೀರ್ಯ - ರಾಕ್ಷಸನೊಬ್ಬ; ಮಹಿಷಾಸುರನ ಸೇನಾಪತಿ; ಲಕ್ಷ್ಮೀದೇವಿಯಿಂದ ಹತನಾದನು (ಮಾರ್ಕಂ.ಪು.).

ಉಗ್ರಶ್ರವ (ಉಗ್ರಶ್ರವಸ್ಸು) - ೧. ಕ್ಷತ್ರಿಯ; ಧೃತರಾಷ್ಟ್ರನ ಮಗ (ಮಾರ್ಕಂ.ಪು.). ೨. ಪೌರಾಣಿಕನಾದ ರೋಮಹರ್ಷಣಮುನಿಯ ಮಗ; ಇವನು ಸೂತಮುನಿಯ ಪುತ್ರನಾದುದರಿಂದ ಸೌತಿಯೆನ್ನುತ್ತಾರೆ. ೩.. ಉಗ್ರನೆಂದರೆ ನರಸಿಂಹ - ಆವನ ಕಥಾಶ್ರವಣವುಳ್ಳವನು (ಮ.ಆ.).

ಉಗ್ರಸೇನ - ೧. ಕ್ಷತ್ರಿಯ; ಧೃತರಾಷ್ಟ್ರನ ಮಗ. ೨. ಸ್ವರ್ಭಾನುವಿನ (ರಾಹು) ಅಂಶದ ಕ್ಷತ್ರಿಯ. ೩. ಕ್ಷತ್ರಿಯನೊಬ್ಬ; ಪಾಂಡವರ ಮೊಮ್ಮಗನಾದ ಪರೀಕ್ಷಿತನ ಮಗ; ಜನಮೇಜಯನ ಸೋದರ. ೪. ಕಂಸನ ತಂದೆ; ಇವನಿಗೆ ಭೋಜರಾಜನೆಂಬ ಹೆಸರೂ ಇದೆ; ಆಹುಕನ ಮಗ; ಸಹೋದರ ದೇವಕ (ಭಾಗ.). ಕಂಸನ ಮರಣಾನಂತರ ಶ್ರೀಕೃಷ್ಣನಿಂದ ಈತನಿಗೆ ರಾಜ್ಯಾಭಿಷೇಕವಾಯಿತು. ೫. ಕಶ್ಯಪಭಾರ್ಯೆಯಾದ ಮುನಿಯ ಮಗ; ಇವನು ಗಂಧರ್ವ (ಮ.ಆ.).

ಉಗ್ರಸೇನೆ - ಶ್ವಫಲ್ಕ ಮತ್ತು ಗಾಂಧಿನಿಯರ ಮಗನಾದ ಅಕ್ರೂರನ ಪತ್ನಿ; ಈಕೆಯಲ್ಲಿ ಪ್ರಸೇನ ಮತ್ತು ಉಪದೇವರೆಂಬಿಬ್ಬರು ಮಕ್ಕಳಿದ್ದರು (ಹರಿ.).

ಉಗ್ರಾಯುಧ - ೧. ಕ್ಷತ್ರಿಯ (ಚಂದ್ರವಂಶ); ಧೃತರಾಷ್ಟ್ರನ ಮಗ. ಶಂತನು ತೀರಿದ ಮೇಲೆ ಆತನ ಪತ್ನಿ ಸತ್ಯವತಿಯನ್ನು ಕಾಮಿಸಿ ಈತನು ಭೀಷ್ಮನಿಂದ ಹತನಾದನು (ಮ.ಆ.).

ಉಗ್ರಾಸ್ಯ - ಮಹಿಷಾಸುರನ ಸೇನಾಪತಿ; ಮಹಾಲಕ್ಷ್ಮಿಯಿಂದ ಮೃತನಾದನು. (ಮಾರ್ಕಂ.ಪು.).

ಉಚಥ್ಯ (ಉತಥ್ಯ) - ಋಷಿ; ಅಂಗಿರಸನ ಪುತ್ರ; ಇವನ ಸಹೋದರರು ಬೃಹಸ್ಪತಿ ಮತ್ತು ಸಂವರ್ತ. ಇವನ ಹೆಂಡತಿ ಮಮತೆ; ಪುತ್ರನು ದೀರ್ಘತಮ. ಮಮತೆಯು ಗರ್ಭಿಣಿಯಾಗಿದ್ದಾಗ ಬೃಹಸ್ಪತಿಯು ಈಕೆಯನ್ನು ಅಪಹರಿಸಿದ. ಈಕೆಯಲ್ಲಿ ಉಚಥ್ಯನಿಂದ ಹುಟ್ಟಿದವ ದೀರ್ಘತಮ. ಬೃಹಸ್ಪತಿಯಿಂದ ಹುಟ್ಟಿದವ ಭರದ್ವಾಜಮುನಿ. ಉಚಥ್ಯನ ಮತ್ತೊಬ್ಬಳು ಪತ್ನಿಯಾದ ಭದ್ರೆಯನ್ನು ವರುಣನು ಅಪಹರಿಸಲು ಆತನು ಕೋಪದಿಂದ ಸಮುದ್ರವನ್ನು

ಬತ್ತಿಸಿ ಪತ್ನಿಯನ್ನು ಪುನಃ ಪಡೆದನು. ಈ ಮುನಿಯು ಮಾಂಧಾತರಾಜನ ಕಾಲದಲ್ಲಿದ್ದನು. (ಮ.ಆ.,ಶಾಂ., ಭಾಗ.,ವಿಷ್ಣುಪು.,ಮತ್ಸ್ಯಪು.).

ಉಚ್ಚೈಶ್ರವಸ್ಸು - ೧. ಕ್ಷೀರಸಮುದ್ರದಲ್ಲಿ ಅಮೃತಕ್ಕಾಗಿ ಮಥನಕಾರ್ಯ ನಡೆದಾಗ ಹುಟ್ಟಿದ ಕುದುರೆ; ಇದು ಇಂದ್ರವಾಹನ; ಕಶ್ಯಪನ ಪತ್ನಿಯರಾದ ಕದ್ರು, ವಿನತೆಯರು ಸಮುದ್ರತೀರದಲ್ಲಿ ಮೇಯುತ್ತಿದ್ದ ಇದನ್ನು ಕಂಡು ಇದರ ಬಾಲ ಕಪ್ಪೆಂದು ಕದ್ರುವೂ, ಬಿಳುಪೆಂದು ವಿನತೆಯೂ ಚರ್ಚೆ ಮಾಡಿಕೊಂಡರು. ಕೊನೆಗೆ ಕದ್ರುಪುತ್ರನಾದ ಕರ್ಕೋಟಕನಿಂದ ಇದರ ಬಾಲ ಕಪ್ಪಾಗಿ ಕಂಡಿತು (ಮ.ಆ.). ೨. ದಾಶರಾಜ; ಸತ್ಯವತಿಯ ಸಾಕುತಂದೆ (ಮ.ಆ.). ೩. ಕ್ಷತ್ರಿಯ; ಚಂದ್ರವಂಶದ ಅವಿಕ್ಷಿತನ ಮಗ. ಈತನ ತಾಯಿ ವಾಹಿನಿ. ಇವನಿಗೆ ಪರೀಕ್ಷಿತ, ಶಬಲಾಶ್ವ, ಆದಿರಾಜ ಮೊದಲಾದ ಏಳು ಮಂದಿ ಸೋದರರು. ನೋ. - ಅವಿಕ್ಷಿತ. (ಮ.ಆ., ವಿಷ್ಣುಪು., ಭಾಗ., ಮತ್ಸ್ಯಪು., ಮ.ಆ.).

ಉಜ್ಜಯನ - ಋಷಿ. ವಿಶ್ವಾಮಿತ್ರನ ಪುತ್ರ (ಮ.ಅನು.).

ಉಜ್ಜಯಂತ - ಸೌರಾಷ್ಟ್ರದ ಪ್ರಭಾಸಕ್ಷೇತ್ರದ ಸಮೀಪದ ಪರ್ವತ; ಕಾತಿಯಾವಾರದ ಜುನಾಗರಿನ ಹತ್ತಿರವಿರುವ ಗಿರಿನಾರಪರ್ವತ (ಮ.ವ.).

ಉಜ್ಜಯಿನಿ (ಅವಂತಿಕಾ) - ಮಾಲವ ದೇಶದ ರಾಜಧಾನಿ; ಅವಂತಿಯ ರಾಜಧಾನಿ; ಇದು ಹದಿನೆಂಟು ಶಕ್ತಿಪೀಠಗಳಲ್ಲೊಂದು; ಇದನ್ನು ಅವಂತಿಕಾ ಎನ್ನುತ್ತಾರೆ. ಇದರ ಸಮೀಪ ವಿಷ್ಣುದೇಹದಿಂದ ಉತ್ಪತ್ತಿಯಾದ ಪಾವನೆಯಾದ ಶಿಪ್ರಾನದಿಯು ಹರಿಯುತ್ತಿದೆ. ಚಂದ್ರಸೇನ ರಾಜನು ಇಲ್ಲಿ ರಾಜ್ಯವಾಳುತ್ತಿದ್ದಾಗ ಶಿವಾರ್ಚನೆಯನ್ನು ಮಾಡುವುದನ್ನು ಒಬ್ಬ ಬಾಲಕನು ಕಂಡು ಅವನೂ ಚಿಕ್ಕ ಕಲ್ಲೊಂದನ್ನಿಟ್ಟುಕೊಂಡು ಭಕ್ತಿಯಿಂದ ತನ್ಮಯನಾಗಿ ಪೂಜಿಸಲು ಅವನ ಭಕ್ತಿಗೆ ಮೆಚ್ಚಿ ಶಂಕರನು ಮಹಾಕಾಲೇಶ್ವರ ಜ್ಯೋತಿರ್ಲಿಂಗ ರೂಪದಿಂದ ಆವಿರ್ಭವಿಸಿದನು. ಇಲ್ಲಿಯ ಅಧಿಷ್ಠಾತ್ರಿಯು ಶಕ್ತಿ ದೇವತೆ; ಸಾಂದೀಪನಿ ಗುರುವಿನ ಆಶ್ರಮ ಇಲ್ಲಿದೆ. ಇಲ್ಲೇ ಶ್ರೀಕೃಷ್ಣಸುಧಾಮರು ವಿದ್ಯಾಭ್ಯಾಸ ಮಾಡಿದರು (ಭಾಗ., ಕ್ಷೇತ್ರದ.).

ಉಜ್ಞಾನಕ - ತೀರ್ಥವೊಂದು; ಕಾಶ್ಮೀರದಿಂದ ಪಶ್ಚಿಮಕ್ಕಿರುವ ಸಿಂಧೂನದಿಯಲ್ಲಿದ್ದ ತೀರ್ಥ (ಮ.ವ.).

ಉಂಛವೃತ್ತಿ - ೧. ಆಯ್ದುಕ್ಕಿಯಿಂದ ಜೀವಿಸುವಿಕೆ. ೨. ಋಷಿಯೊಬ್ಬ. ೩.ಬ್ರಾಹ್ಮಣನೊಬ್ಬ. ಇವನಿಗೆ ಸಕ್ತುಪ್ರಸ್ಥ ಎಂಬ ಹೆಸರಿದೆ (ಮ.ಶಾ., ಅಶ್ವ.).

ಉಡುಪಿ - ಪಡುಕರಾವಳಿಯ ಪ್ರಸಿದ್ಧ ವೈಷ್ಣವ ಕ್ಷೇತ್ರ. ಇದಕ್ಕೆ ರಜತಪೀಠವೆಂಬ ಹೆಸರೂ ಇದೆ. ಇದು ದಕ್ಷಿಣ ಕನ್ನಡ ಜಿಲ್ಲೆಯ ಸಪ್ತಕ್ಷೇತ್ರಗಳಲ್ಲೊಂದು.

ದಕ್ಷನಿಂದ ಶಾಪಗ್ರಸ್ತನಾದ ಚಂದ್ರನು (ಉಡುಪ) ಶಿವನನ್ನು ಮೆಚ್ಚಿಸಲು ಅಬ್ಜಾರಣ್ಯದಲ್ಲಿ (ಅಜ್ಜರಕಾಡು) ತಪಸ್ಸುಮಾಡಿ ಶಿವನನ್ನು ಪ್ರತ್ಯಕ್ಷ ಮಾಡಿಕೊಂಡನು. ಇಲ್ಲಿ ಶ್ರೀಕೃಷ್ಣನ ದೇವಸ್ಥಾನ ಮತ್ತು ಅಷ್ಟಮಠಗಳಿವೆ. ನೋ. ರಜತಪೀಠ (ಕ್ಷೇತ್ರದ).

ಉತಥ್ಯ - ನೋ. - ಉಚಥ್ಯ

ಉತ್ಕಲ - ೧. ಕಳಿಂಗದ ಉತ್ತರದಲ್ಲಿರುವ ದೇಶ: ಒರಿಸ್ಸಾ. ೨. ಧ್ರುವನ ಮೊಮ್ಮಗ; ಇವನು ಬಾಲ್ಯದಲ್ಲಿಯೇ ವೈರಾಗ್ಯಹೊಂದಿ ರಾಜ್ಯವನ್ನು ತ್ಯಜಿಸಿದನು. ಇವನ ತಮ್ಮ ವತ್ಸರ (ಭಾಗ.) ೩. ವೃತ್ರಾಸುರನ ಪರಿವಾರದ ಒಬ್ಬ ರಾಕ್ಷಸ. (ಮ.ಭೀ., ಭಾಗ.).

ಉತ್ಕೋಚಕ - ತೀರ್ಥ; ಧೌಮ್ಯನು ಇಲ್ಲೇ ತಪಸ್ಸು ಮಾಡುತ್ತಿದ್ದನು. ದ್ರೌಪದೀ ಸ್ವಯಂವರಕ್ಕೆ ಹೊರಟ ಪಾಂಡವರು ಇಲ್ಲಿಗೆ ಬಂದು ಧೌಮ್ಯರನ್ನು ಪುರೋಹಿತರನ್ನಾಗಿ ಸ್ವೀಕರಿಸಿದರು (ಮ.ಆ.).

ಉತ್ತಂಕ (ಉತಂಕ, ಉದಂಕ) - ಋಷಿ; ಬೈದನೆಂಬವನ ಶಿಷ್ಯ; ಇವನು ಪೌಷನ (ಧ್ರುವಸಂಧಿ) ಹೆಂಡತಿಯ ಕುಂಡಲವನ್ನು ತರುವಾಗ ನಾಗರಿಂದ ವಂಚಿಸಲ್ಪಟ್ಟನು. ಮುಂದೆ ತಕ್ಷಕನ ಪ್ರತೀಕಾರಾರ್ಥ ಜನಮೇಜಯನಿಂದ ಸರ್ಪಯಾಗ ಮಾಡಿಸಿದನು. ಗೌತಮ ಋಷಿಯ ಶಿಷ್ಯನಾದ ಈತನು ಗುರುದಕ್ಷಿಣೆಗಾಗಿ ಕಲ್ಮಾಷಪಾದನಲ್ಲಿಗೆ ಹೋಗಿ ಆತನ ಒಪ್ಪಿಗೆಯಿಂದ ಆತನ ರಾಣಿಯಾದ ಮದಯಂತಿಯ ಕುಂಡಲಗಳನ್ನು ಬೇಡಿ ತಂದನು. ಈತನು ವಿಷ್ಣುವನ್ನು ಆರಾಧಿಸಿ, ಆತನನ್ನು ಒಲಿಸಿಕೊಂಡು ಅವನ ಅಪ್ಪಣೆಯಂತೆ ಇಕ್ಷ್ವಾಕುವಂಶದಲ್ಲಿ ಹುಟ್ಟಿದ ಬೃಹದಶ್ವದನ ಮಗ ಕುವಲಾಶ್ವನಿಗೆ ಧುಂಧು ಎಂಬ ರಾಕ್ಷಸನನ್ನು ಕೊಲ್ಲುವಂತೆ ಅಪ್ಪಣೆ ಮಾಡಿದನು. ನೋ. - ಬೈದ, ತಕ್ಷಕ (ಮ.ಆ., ಉ., ದ್ರೋ., ಸೌ.).

ಉತ್ತಮ - ಉತ್ತಾನಪಾದರಾಜನ ಮಗ; ತಾಯಿ ಸುರುಚಿ; ಹೆಂಡತಿ ಬಾಭ್ರವ್ಯನ ಪುತ್ರಿಯಾದ ಬಹುಳೆ; ಉತ್ತಮನು ಸ್ವಲ್ಪ ಕಾಲ ಈಕೆಯನ್ನು ತ್ಯಜಿಸಿ ನಾಗರಾಜನ ಮಗಳು ಸಾರಸ್ವತೇಷ್ಟಿಯಿಂದ ತಂದೆಯ ಮೂಕತ್ವವನ್ನು ಹೋಗಲಾಡಿಸಿ, ಆಕೆಯಿಂದ ಅನೇಕ ವರಗಳನ್ನು ಪಡೆದು ಬಹುಳೆಯನ್ನು ಪುನಃ ಸ್ವೀಕರಿಸಿದನು. ಇವನು ಹಿಮಾಲಯದ ಸಾನುಪ್ರದೇಶಕ್ಕೆ ಬೇಟೆಗೆ ಹೋಗಿದ್ದಾಗ ಯಕ್ಷರು ಈತನನ್ನು ಕೊಂದರು; ಇದನ್ನು ಕೇಳಿ ಧ್ರುವನು ಸೇನೆಯೊಂದಿಗೆ ಹೋಗಿ ಕುಬೇರನೊಂದಿಗೆ ಯುದ್ಧ ಮಾಡಿದನು. ಇಬ್ಬರೂ ಬಹಳ ಕಾಲ ಹೋರಾಡಿದರೂ ಸೋಲು-ಗೆಲುವು ಇಲ್ಲದಿರಲು ಸ್ವಾಯಂಭುವ ಮನುವು ಇಲ್ಲಿಗೆ ಬಂದು ಧ್ರುವನಿಗೆ ಶಾಂತಿ ಉಪದೇಶಮಾಡಿ ಯುದ್ಧವನ್ನು ನಿಲ್ಲಿಸಿದನು.

ಉತ್ತಮನ ಮಗ ಔತ್ತಮ. ನೋ. - ಧ್ರುವ (ಭಾಗ).

ಉತ್ತಮಸ್ - ೨೧ನೇ ಪರ್ಯಾಯದ ದ್ವಾಪರ ಯುಗದ ವೇದವ್ಯಾಸನು. ಇವನಿಗೆ ಹರಿಯಾತ್ಮನೆಂಬುದು ಇನ್ನೊಂದು ಹೆಸರು (ದೇವೀಭಾ.).

ಉತ್ತಮೌಜ - ಕ್ಷತ್ರಿಯ; ಪಾಂಚಾಲದ ದ್ರುಪದನ ಮಗ. ಅಶ್ವತ್ಥಾಮನಿಂದ ಭಾರತ ಯುದ್ಧವು ಮುಗಿದ ರಾತ್ರಿ ಹತನಾದನು (ಮ.ಉ.,ದ್ರೋ.,ಸೌ.).

ಉತ್ತರ - ೧. ಕ್ಷತ್ರಿಯ; ಉತ್ತರಕುಮಾರನೆಂಬುದು ಈತನ ಪೂರ್ಣ ಹೆಸರು; ಇವನು ಸಿಂಹಧ್ವಜನು; ಇವನಿಗೆ ಭೂಮಿಂಜಯನೆಂಬ ಹೆಸರಿದೆ (ಮ.ವಿ.). ಈತನು ವಿರಾಟನ ಪುತ್ರ; ಇವನ ತಾಯಿ ಸುದೇಷ್ಣೆ; ಸಹೋದರಿ ಉತ್ತರೆ; ಸಹೋದರ ಶ್ವೇತ; ದ್ರೌಪದಿಯ ಸ್ವಯಂವರಕ್ಕಾಗಿ ಈತನು ಪಾಂಚಾಲ ದೇಶಕ್ಕೆ ಹೋಗಿದ್ದನು. ಉತ್ತರ ಗೋಗ್ರಹಣ ಕಾಲದಲ್ಲಿ ಕುರುಸೇನೆಯನ್ನು ಕಂಡು ಓಡಿದ ವೀರ. ಶಲ್ಯನಿಂದ ಇವನ ವಧೆಯಾಯಿತು (ಮ.ಭೀ.). ೨. ಚಂದ್ರನ ಪತ್ನಿ; ಒಂದು ನಕ್ಷತ್ರ. ೩. ಯದು ವಂಶದ ಶಶಿಬಿಂದುವಿನ ಮಗ; ಇವನಿಗೆ ಪೃಥುಶ್ರವ ಎಂಬ ಹೆಸರಿದ್ದರೂ ಪಂಡಿತರು ಉತ್ತರನೆಂದೇ ಕರೆಯುತ್ತಿದ್ದರು. ಇವನ ಮಗನೇ ಸುಯಜ್ಞ (ಮ.ವಿ.,ಭೀ.,ಆ.). ೪. ಬಡಗು ದಿಕ್ಕು. ದಾಟುವಿಕೆ, ಎತ್ತರ.

ಉತ್ತರಕುರು - ಮೇರುವಿನ ಉತ್ತರ ಭಾಗದ ಹೆಸರು; ಇದು ಸ್ವರ್ಗಸಮಾನವಾದ ದೇಶ; ರಾಜಸೂಯಯಾಗಕಾಲದಲ್ಲಿ ಅರ್ಜುನನು ದಿಗ್ವಿಜಯಕ್ಕಾಗಿ ಇಲ್ಲಿಯವರೆಗೆ ಹೋಗಿದ್ದನು (ಮ.ಭೀ.,ಅನು.).

ಉತ್ತರ ಗೋಗ್ರಹಣ - ವಿರಾಟನಗರದ ಉತ್ತರ ದಿಕ್ಕಿನ ದನಗಳನ್ನು ಕೌರವರು ಸೆರೆ ಹಿಡಿದ ವಿಚಾರ. ಇದು ನವಮಿಯಂದು ಆರಂಭ (ಮ.ವಿ.).

ಉತ್ತರೆ - ವಿರಾಟನ ಮಗಳು. ಅಭಿಮನ್ಯುವಿನ ಪತ್ನಿ. ಶಶಿರೇಖೆಯ ತಂಗಿ. ಉತ್ತರೆಗೆ ಅರ್ಜುನನು ಬೃಹನ್ನಳೆ ಎಂಬ ಹೆಸರಿನಿಂದ ನರ್ತನಶಾಸ್ತ್ರವನ್ನು ಕಲಿಸಿದ್ದನು. ಈಕೆಯ ಮಗ ಪರೀಕ್ಷಿತ. ಈತನು ಉತ್ತರೆಯ ಗರ್ಭದಲ್ಲಿದ್ದಾಗ ಅಶ್ವತ್ಥಾಮನು ಬಿಟ್ಟ ಐಷೀಕಾಸ್ತ್ರವು ಆಕೆಯ ಗರ್ಭವನ್ನು ಪ್ರವೇಶಿಸಿ ಹಿಂಸಿಸಲು ಆ ಗರ್ಭವನ್ನು ಶ್ರೀಕೃಷ್ಣನು ರಕ್ಷಿಸಿದನು (ಮ.ಆ.,ಅಶ್ವ.,ಸೌ.,ಸ್ತ್ರೀ.).

ಉತ್ತರಾಭಾದ್ರ - ದಕ್ಷನ ಮಗಳು; ಚಂದ್ರನ ಪತ್ನಿ; ಒಂದು ನಕ್ಷತ್ರ (ಮ.ಆ.,ಭಾಗ.).

ಉತ್ತರಾಷಾಢ - ದಕ್ಷನ ಮಗಳು; ಚಂದ್ರನ ಪತ್ನಿ; ಒಂದು ನಕ್ಷತ್ರ (ಮ.ಆ.,ಭಾಗ.).

ಉತ್ಪಲಾವತ - ಅದ್ರಿರಾಕ್ಷಸನ ಮಗ ಬಲಾಕನು ವಾಸಿಸುತ್ತಿದ್ದ ಅರಣ್ಯ. ಇದು ಹಿಮಾಲಯದ ತಪ್ಪಲಿನಲ್ಲಿದ್ದ ಕಾಡು. ಈ ಬಲಾಕನನ್ನು ಉತ್ತಾನಪಾದರಾಜನ ಮಗ ಉತ್ತಮನು ಕೊಂದನು (ಭಾಗ.).

ಉತ್ಪಲಿನಿ - ನೈಮಿಷಾರಣ್ಯದ ಸಮೀಪವಿದ್ದ ಒಂದು ನದಿ (ಮ.ಆ.).

ಉತ್ತಾನಪಾದ - ಸ್ವಾಯಂಭುವ ಮನುವಿನ ಕಿರಿಯ ಮಗ. ಸ್ವಾಯಂಭುವ ಮನು ಮತ್ತು ಶತರೂಪೆಯರ ಮಗನೇ ವೀರ; ಇವನಿಗೆ ಕಾಮ್ಯಾ ಎಂಬ ಪತ್ನಿಯಲ್ಲಿ ಹುಟ್ಟಿದ ಕಿರಿಯ ಮಗನೇ ಉತ್ತಾನಪಾದ (ಹರಿ.). ಈತನ ಅಣ್ಣ ಪ್ರಿಯವ್ರತ; ಉತ್ತಾನಪಾದನಿಗೆ ಸುನೀತಿ ಮತ್ತು ಸುರುಚಿಯರೆಂಬ ಇಬ್ಬರು ಪತ್ನಿಯರು. ಸುನೀತಿಗೆ ಸೂನೃತೆ ಎಂಬ ಹೆಸರೂ ಇದೆ. ಸುನೀತಿಯ ಮಗನೇ ಧ್ರುವ; ಸುರುಚಿಯ ಮಗನೇ ಉತ್ತಮ. ಉತ್ತಾನಪಾದರಾಜನು ಧ್ರುವನನ್ನು ತುಂಬಿದ ಸಭೆಯಲ್ಲಿ ತಿರಸ್ಕರಿಸಿದುದರಿಂದ ಅವನು ಶ್ರೀಮನ್ನಾರಾಯಣನ ಒಲುಮೆಗಾಗಿ ತಪಸ್ಸು ಮಾಡಿ, ಆತನನ್ನು ಸಾಕ್ಷಾತ್ಕರಿಸಿಕೊಂಡನು. ನೋ. ಧ್ರುವ, ಉತ್ತಮ, ಸೂನೃತೆ (ಭಾಗ., ವಿಷ್ಣುಪು., ಮತ್ಸ್ಯಪು.).

ಉದಗ್ರ - ಮಹಿಷಾಸುರನ ಸೇನಾಪತಿ; ಮಹಾಲಕ್ಷ್ಮಿಯು ಈತನನ್ನು ಕೊಂದಳು (ಮಾರ್ಕಂ.ಪು.).

ಉದಂಕ (ಉತ್ತಂಕ) - ಮರುಧನ್ವವಾಸಿಯಾದ ಒಬ್ಬ ಮಹರ್ಷಿ; ಈತನು ಮಹಾಭಾರತ ಯುದ್ಧಕ್ಕೆ ಶ್ರೀಕೃಷ್ಣನೇ ಕಾರಣನೆಂದು ಆತನಿಗೆ ಶಾಪಕೊಡುವಾಗ ಶ್ರೀಕೃಷ್ಣನು ವಿಶ್ವರೂಪ ಪ್ರದರ್ಶನ ಮಾಡಿದನು. ನೋ. ಉತ್ತಂಕ.

ಕುರುಕ್ಷೇತ್ರದಲ್ಲಿ ದುರ್ಯೋಧನಾದಿಗಳು ನಾಶವಾದುದನ್ನು ಕೇಳಿ ಉದಂಕನು ಶ್ರೀಕೃಷ್ಣನಿಗೆ ಶಾಪಕೊಡಲು ಸಿದ್ಧನಾದಾಗ ಶ್ರೀಕೃಷ್ಣನು ಅವನಿಗೆ ವಿಶ್ವರೂಪವನ್ನು ತೋರಿದುದಲ್ಲದೆ ಅವನು ಕೋರಿದ ಸ್ಥಳದಲ್ಲಿ ನೀರು ದೊರೆಯುವಂತೆ ಅನುಗ್ರಹಿಸಿದನು. ಶ್ರೀಕೃಷ್ಣನ ಆಜ್ಞೆಯಿಂದ ಇಂದ್ರನು ಬಾಯಾರಿದ ಉದಂಕನಿಗೆ ಅಮೃತವನ್ನು ಕೊಡಲು ಚಂಡಾಲ ವೇಷದಿಂದ ಬಂದಾಗ ಉದಂಕನು ಅವನನ್ನು ಚಂಡಾಲನೆಂದು ತಿರಸ್ಕರಿಸಲು ಶ್ರೀಕೃಷ್ಣನು ಇಂದ್ರನ ತಂತ್ರವನ್ನು ಅವನಿಗೆ ತಿಳಿಸಿದನು. ಅವನಿಗೆ ನೀರಿನಲ್ಲಿರುವ ಅಪಾರವಾದ ಆಸೆಯನ್ನು ತಿಳಿದು ಶ್ರೀಕೃಷ್ಣನು - 'ನಿನಗೆ ನೀರಿನಲ್ಲಿ ಅಪೇಕ್ಷೆಯುಂಟಾದ ದಿನಗಳಲ್ಲಿ ನೀನು ಮರುಭೂಮಿಯಲ್ಲಿದ್ದರೂ ಅಲ್ಲಿ ನೀರಿನಿಂದ ತುಂಬಿದ ಮೇಘಗಳು ತಲೆದೋರುವುವು. ಅವು ರುಚಿಕರವಾದ ಜಲವನ್ನು ಕೊಡುವುವು. ಆ ಮೇಘಗಳು ಉದಂಕಮೇಘಗಳೆಂದು ಪ್ರಸಿದ್ಧವಾಗುವುವು. (ಮ.ಆಶ್ವ.,ವ.)..

ಉದಯನ - ಚಂದ್ರವಂಶದ ಸಹಸ್ರಾನೀಕರಾಜನ ಮಗ; ತಾಯಿ ಮೃಗಾವತಿ; ಪತ್ನಿ ಧೃತರಾಷ್ಟ್ರನ ಮಗಳು ಲಲಿತೆ; ಈಕೆಯೂ ಸದ್ಯೋಗರ್ಭದಿಂದ ಒಬ್ಬ ಪುತ್ರನನ್ನು ಪಡೆದು, ಮಗನನ್ನೂ ಘೋಷವತಿ ಎಂಬ ವೀಣೆಯನ್ನೂ ಬಾಡದ ಹೂಮಾಲೆಯನ್ನೂ ಪತಿಗೆ ಕೊಟ್ಟು, ತಾನು ಮೊದಲು ಸುಕರ್ಣೆ ಎಂಬ ವಿದ್ಯಾಧರಿ ಎಂದೂ, ಶಾಪದಿಂದ ನಾಗಕನ್ಯೆಯಾದೆನೆಂದೂ, ಈಗ ತನಗೆ ಶಾಪ

ವಿಮೋಚನೆಯಾಯಿತೆಂದೂ ಹೇಳಿ ಆಕಾಶಮಾರ್ಗವಾಗಿ ಹೊರಟು ಹೋದಳು (ಸ್ಕಾಂ.ಪು, ಬ್ರಹ್ಮಪು.).

ಉದರಶಾಂಡಿಲ್ಯ - ಬ್ರಹರ್ಷಿಯೊಬ್ಬ.

ಉದಾನ - ಪಂಚಪ್ರಾಣಗಳಲ್ಲಿ ಒಂದು. ಇದು ಕಂಠಪ್ರದೇಶದಲ್ಲಿರುವ ವಾಯು (ಅಮರಪ್ರ).

ಉದಾಪೇಕ್ಷಿ - ಋಷಿ; ವಿಶ್ವಾಮಿತ್ರಪುತ್ರ.

ಉದ್ದಾಲಕ - ೧. ಋಷಿ; ಧೌಮ್ಯ ಋಷಿಯ ಪ್ರಥಮ ಶಿಷ್ಯ; ಇವನಿಗೆ ಅರುಣಿ ಎಂಬ ಹೆಸರಿದೆ; ಶ್ವೇತಕೇತು ಮತ್ತು ನಚಿಕೇತರು ಈತನ ಮಕ್ಕಳು. ಸುಜಾತೆ ಉದ್ದಾಲಕನ ಮಗಳು; ಅಷ್ಟಾವಕ್ರನು ಮಗಳ ಮಗ. ಉದ್ದಾಲಕನ ಹೆಂಡತಿಯು ಕುಶಿಕರಾಜನ ಮಗಳು. ಆ ಕಾಲದ ಕ್ರಮದಂತೆ ಈತನ ಪತ್ನಿಯನ್ನು ಸಂತಾನಕ್ಕಾಗಿ ಪರಪುರುಷನು ಯಾಚಿಸಲು ಅದನ್ನು ಕೇಳಿ ಕೋಪಗೊಂಡ ಶ್ವೇತಕೇತುವು ಸ್ತ್ರೀಯರು ಸಂತಾನಕ್ಕಾಗಿ ಪರಪುರುಷರನ್ನು ಆಶ್ರಯಿಸುವ ಕ್ರಮವನ್ನು ನಿಲ್ಲಿಸಿದನು. ಸ್ತ್ರೀ ಪುರುಷರ ಮರ್ಯಾದೆಯ ಜೀವನಕ್ರಮವನ್ನು ನಿರ್ಧರಿಸಿದನು. ಉದ್ದಾಲಕನು ಗುರುವಿನ ಹೊಲದಿಂದ ವೇಗವಾಗಿ ಹರಿಯುವ ನೀರನ್ನು ತಡೆಯಲಾಗದೆ ತಾನೇ ಆ ಬಿರುಕಿಗೆ ಅಡ್ಡವಾಗಿ ಮಲಗಿರುವಾಗ ಗುರುವಿನ ಕರೆಯನ್ನು ಕೇಳಿ ನೀರಿನಿಂದ ಎದ್ದು ಬಂದುದರಿಂದ ಮುಂದೆ ಜನರಿಂದ ಉದ್ದಾಲಕನೆಂದು ಕರೆಯಲ್ಪಟ್ಟನು.

ಪಾಂಡುರಾಜನು ಕುಂತಿಯೊಡನೆ ಹಿಂದಿನ ಸಂತಾನದ ಕ್ರಮವನ್ನೇ ಅವಳಿಗೆ ಬೋಧಿಸಿದನು (ಮ.ಆ.). ೨. ಋಷಿಯೊಬ್ಬ. ಇವನ ಪತ್ನಿ ಚಂಡಿಯೆಂಬ ಹಟವುಳ್ಳ ಸ್ತ್ರೀ. ಈತನು ಕೌಂಡಿನ್ಯನೆಂಬ ಮುನಿಯ ಸೂಚನೆಯಂತೆ ಪತ್ನಿಯೊಡನೆ ವಿರುದ್ಧವಾಗಿ ಹೇಳಿ ಕೆಲಸ ಮಾಡಿಸಿಕೊಳ್ಳುತ್ತಿದ್ದನು. ಒಮ್ಮೆ ಉದ್ಧಾಲಕನು ಪಿತೃಶ್ರಾದ್ಧದ ದಿನ ಪತ್ನಿಯೊಡನೆ ಪಿಂಡವನ್ನು ನದಿಗೆ ಹಾಕೆನ್ನಲು ಆಕೆ ಆ ಪಿಂಡವನ್ನು ತೆಗೆದು ಬೀದಿಗೆ ಬಿಸುಡಲು ಮುನಿಯು ಸಿಟ್ಟಿನಿಂದ ಚಂಡಿಗೆ ಶಿಲೆಯಾಗಿ ಬೀಳುವಂತೆ ಶಾಪವಿತ್ತನು. ಇದರಿಂದ ಚಂಡಿಗೆ ಭಯವಾಗಿ ಪತಿಯನ್ನು ಶಾಪವಿಮೋಚನೆಗಾಗಿ ಪುನಃ ಪುನಃ ಪ್ರಾರ್ಥಿಸಲು ಆತನು ಅರ್ಜುನನ ಅಶ್ವಮೇಧದ ಕುದುರೆಯ ಪಾದ ಸ್ಪರ್ಶದಿಂದ ಶಾಪವು ಪರಿಹಾರವಾಗುವುದೆಂದು ನುಡಿದು, ತಾನು ಸಂನ್ಯಾಸ ಸ್ವೀಕಾರಕ್ಕಾಗಿ ಮನೆ ಬಿಟ್ಟು ನಡೆದನು (ಮ.ಆ.,ವ.,ಜೈ.ಬಾ.).

ಉದ್ಧತ - ಮಹಿಷಾಸುರನ ಒಬ್ಬ ಸೇನಾಪತಿ; ದೇವಿಯಿಂದ ಈತನು ಹತನಾದ (ಮಾರ್ಕಂ.ಪು.).

ಉದ್ಧವ - ಯಾದವನೊಬ್ಬ; ಶ್ರೀಕೃಷ್ಣನ ಮಂತ್ರಿ; ವಸುದೇವನ ತಮ್ಮ; ದೇವಭಾಗನ ಮಗ; ಈತನ ತಾಯಿ ಕಂಸನ ತಂಗಿಯಾದ ಕಂಸೆ; ಈತನಿಗೆ ಚಿತ್ರಕೇತು ಮತ್ತು ಬೃಹದ್ಬಲರೆಂಬ ಸೋದರರಿದ್ದರು. ಈತನು ಶ್ರೀಕೃಷ್ಣನಿಂದ ಜ್ಞಾನೋಪದೇಶವನ್ನು ಪಡೆದು, ಆತನ ಭಕ್ತನಾಗಿದ್ದು, ಆತನು ವೈಕುಂಠಕ್ಕೆ ತೆರಳಿದ ಮೇಲೆ ತಾನು ಬದರಿಕಾಶ್ರಮಕ್ಕೆ ತಪಸ್ಸಿಗಾಗಿ ತೆರಳಿದನು (ಮ.ಆ., ಭಾಗ.).

ಉನ್ಮುಖಿ - ನೋ. ಜ್ವಾಲೆ (ಜೈ. ಭಾ.).

ಉಪಕೀಚಕ - ಕೀಚನ ಸಹೋದರರು; ಕೇಕಯನೆಂಬ ಸೂತಾಧಿಪನ ಮಕ್ಕಳು. ಇವನ ತಾಯಿ ಮಾಲವಿ; ಇವರೆಲ್ಲಾ ಭೀಮನಿಂದ ಹತರಾದರು. ನೋ. ಕೀಚಕ (ಮ.ವಿ.).

ಉಪಗಹನ - ಋಷಿ; ವಿಶ್ವಾಮಿತ್ರನ ಮಗ (ಮ.ಅನು.).

ಉಪಗಿರಿ - ಉತ್ತರದಿಕ್ಕಿನಲ್ಲಿದ್ದ ಪರ್ವತ; ರಾಜಸೂಯಯಾಗ ಕಾಲದಲ್ಲಿ ದಿಗ್ವಿಜಯಾರ್ಥವಾಗಿ ಅರ್ಜುನನು ಇಲ್ಲಿಗೆ ಹೋಗಿದ್ದನು (ಮ.ಸ.).

ಉಪಚಿತ್ರ - ಕ್ಷತ್ರಿಯ; ಚಂದ್ರವಂಶ; ಧೃತರಾಷ್ಟ್ರನ ಪುತ್ರ; ಭೀಮನಿಂದ ಹತನಾದನು (ಮ.ಆ., ದ್ರೋ.).

ಉಪದಾನ - ಪುಣ್ಯತೀರ್ಥವೊಂದು (ಮ.ವ.).

ಉಪದಾನವಿ - ೧. ಮಯಾಸುರನ ಮಗಳು; ತಾಯಿ ಹೇಮೆಯೆಂಬ ಅಪ್ಸರಸಿ. ಈಕೆಯ ಪತಿ ಹಿರಣ್ಯಾಕ್ಷ; ಒಡಹುಟ್ಟಿದವರು ದುಂದುಭಿ, ಮಾಯಾವಿ ಮತ್ತು ಮಂಡೋದರಿ (ರಾ.ಉ.). ೨. ಜ್ಯಾಮಘನು ದಿಗ್ವಿಜಯಕ್ಕೆ ಹೋದಾಗ ಸ್ಫುರದ್ರೂಪಿಣಿಯಾದ ಈಕೆಯನ್ನು ಪತ್ನಿಯನ್ನಾಗಿ ಮಾಡಲು ಸೆರೆಹಿಡಿದು ತಂದನು. ಇವನ ಮೊದಲಿನ ಪತ್ನಿ ಶೈಬ್ಯೆಗೆ ಮಕ್ಕಳಿರಲಿಲ್ಲ. ಈಕೆ ಪತಿವ್ರತೆಯಾಗಿದ್ದರೂ ಸ್ವಾಭಿಮಾನಿಯಾದ ಮಾನಿನಿಯಾಗಿದ್ದಳು. ಇವಳು ಪತಿಯು ಕರೆದುಕೊಂಡು ಬಂದ ಉಪದಾನವವಿಯನ್ನು ಕಂಡು ಪತಿಯೊಡನೆ - 'ಇವಳಾರು?' ಎಂದು ಕೇಳಲು, ಜ್ಯಾಮಘನು ಪತ್ನಿಯ ಪ್ರಶ್ನೆಗೆ ಬೆದರಿ - 'ನಿನ್ನ ಸೊಸೆ' ಎಂದನು. ಇದನ್ನು ಕೇಳಿದ ಉಪದಾನವಿಯು ವೈರಾಗ್ಯದಿಂದ ದೇವರನ್ನು ಕುರಿತು ತಪಸ್ಸುಮಾಡಿ ಮುದುಕಿಯಾದ ಶೈಬ್ಯೆಗೆ ತಾರುಣ್ಯವನ್ನು ತಂದುಕೊಟ್ಟು ಆಕೆಯಲ್ಲಿ ಹುಟ್ಟಿದ ವಿದರ್ಭನೆಂಬ ರಾಜಕುಮಾರನನ್ನು ಮದುವೆಯಾದಳು. ಈಕೆಯ ಮಕ್ಕಳೇ ರಣಧೀರರಾದ ಕ್ರಥ, ಕೈಶಿಕ ಮತ್ತು ಲೋಮಪಾದರು (ಮತ್ಸ್ಯಪು).

ಉಪದೇವಿ - ವಸುದೇವನ ಒಬ್ಬಳು ಪತ್ನಿ; ದೇವಕಿಯ ತಂಗಿ; ಆಹುಕನ ಮಗಳು (ಹರಿ., ಭಾಗ).

ಉಪನಂದಕ - ೧. ಒಂದು ಸರ್ಪ; ೨. ಕ್ಷತ್ರಿಯ; ಧೃತರಾಷ್ಟ್ರನ ಪುತ್ರ (ಮ.ಉ.,ಆ.).

ಉಪನಿಷತ್ತು - ಬ್ರಹ್ಮವಿದ್ಯೆಯನ್ನು ಬೋಧಿಸುವ ಗ್ರಂಥ; ಮುಕ್ತಿಕೋಪನಿಷತ್ತಿನ ಪ್ರಕಾರ ಉಪನಿಷತ್ತುಗಳು ನೂರೆಂಟು. ಮ್ಯಾಕ್ಸ್‌ಮುಲ್ಲರರ ಹೇಳಿಕೆಯಂತೆ ಉಪನಿಷತ್ತುಗಳು ನೂರನಲ್ವತ್ತೊಂಭತ್ತು. ಡಾ|| ಬರ್ನೆಟ್ ಮಹಾಶಯರು ಇವುಗಳ ಸಂಖ್ಯೆ ನೂರ ಐವತ್ತನಾಲ್ಕು ಎಂದೂ, ಪ್ರೊ|| ಹೌಗ್‌ರು ನೂರ ಎಪ್ಪತ್ತೆಂದೂ ಹೇಳುತ್ತಾರೆ. ದಾರಾಷುಕೋ ಐವತ್ತು ಉಪನಿಷತ್ತುಗಳನ್ನು ಪರ್ಷಿಯನ್ ಭಾಷೆಗೆ ಭಾಷಾಂತರಿಸಿದ್ದಾನೆ. ಶಂಕರಾಚಾರ್ಯರು ಕೇಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕವೆಂಬ ದಶೋಪನಿಷತ್ತುಗಳಿಗೆ ವ್ಯಾಖ್ಯಾನ ಬರೆದಿದ್ದಾರೆ. ಮಧ್ವಾಚಾರ್ಯರೂ ಈ ದಶೋಪನಿಷತ್ತುಗಳಿಗೆ ವ್ಯಾಖ್ಯಾನ ಬರೆದಿದ್ದಾರೆ. ಇವಲ್ಲದೆ ಶ್ರೀರುದ್ರ, ಕೈವಲ್ಯ, ಶ್ವೇತಾಶ್ವತರ, ಕಾಲಾಗ್ನಿರುದ್ರ, ಕಠವಲ್ಲಿ, ಕಾತ್ಯಾಯನ, ಬ್ರಹ್ಮನಾರಾಯಣ, ಹಂಸ, ಪರಮಹಂಸ, ಭಾಷ್ಕಳ, ಬ್ರಹ್ಮಬಿಂದು, ಅರುಣ, ಅಮೃತಬಿಂದು, ಚರ್ಚೆ, ಪಂಚಬ್ರಹ್ಮ, ಜಾಬಾಲ, ತೇಜೋಬಿಂದು, ವಾಜಸನೇಯ, ಬೋಧಾಯನೀಯ, ಆಶ್ವಲಾಯನೀಯ, ಮೈತ್ರಾಯಣೀಯ, ಸಾಂಖ್ಯಾಯಣೀಯ, ಭಾಗುರಾಯಣೀಯ, ಶೌನಕೀಯ, ಶಿವಸಂಕಲ್ಪಶ್ರವಣ, ಈಶಾವಾಸ್ಯ, ತಳವಕಾರ, ನಿರಾಲಂಬ, ಕೌಷೀತಕಿ, ಮುದ್ಗಲ, ಮುಂಡಕ ಮೊದಲಾದ ಹಲವು ಉಪನಿಷತ್ತುಗಳಿವೆ (ವಿ.ಚಂ.).

ಉಪಪಾಂಡವರು - ಕ್ಷತ್ರಿಯರು; ಚಂದ್ರವಂಶ; ಪಂಚಪಾಂಡವರಿಂದ ದ್ರೌಪದಿಯಲ್ಲಿ ಹುಟ್ಟಿದ ಪ್ರತಿವಿಂಧ್ಯ, ಶ್ರುತಸೋಮ, ಶ್ರುತಕೀರ್ತಿ, ಶತಾನೀಕ, ಶ್ರುತಸೇನರೆಂಬ ಐವರು ಮಕ್ಕಳು. ಇವರೆಲ್ಲಾ ಯುದ್ಧಮುಗಿದ ರಾತ್ರಿ ಅಶ್ವತ್ಥಾಮನಿಂದ ಹತರಾದರು. ಹರಿಶ್ಚಂದ್ರನ ಪತ್ನಿಯಾದ ಚಂದ್ರಮತಿಯನ್ನು ವಿಶ್ವಾಮಿತ್ರನು ಪೀಡಿಸುವುದನ್ನು ಕಂಡು ವ್ಯಸನಗೊಂಡ ವಿಶ್ವೇದೇವತೆಗಳು ಆ ಮುನಿಯನ್ನು ನಿಂದಿಸಿದರು. ಇದರಿಂದ ಕೋಪಗೊಂಡ ಮುನಿಯು ಅವರಿಗೆ ಭೂಲೋಕದಲ್ಲಿ ಜನಿಸುವಂತೆ ಶಾಪವಿತ್ತನು. ಇವರೇ ದ್ರೌಪದಿಗೆ ಮಕ್ಕಳಾಗಿ ಹುಟ್ಟಿದರು (ಮ.ಆ., ಸೌ., ಮಾರ್ಕಂ.ಪು.).

ಉಪಪ್ಲಾವ್ಯ - ವಿರಾಟನಗರಕ್ಕೆ ಸಮೀಪವಿದ್ದ ಪಟ್ಟಣ; ಇಲ್ಲಿಂದಲೇ ಪಾಂಡವರು ಹಸ್ತಿನಾವತಿಗೆ ರಾಯಭಾರಿಯನ್ನು ಕಳುಹಿಸಿದರು. ಈ ಪಟ್ಟಣವು ವಿರಾಟನಿಗೆ ಸೇರಿತ್ತು. ಇಲ್ಲೇ ಅಭಿಮನ್ಯುವಿಗೆ ವಿವಾಹವಾಯಿತು. ಇಲ್ಲಿಂದಲೇ ಶ್ರೀಕೃಷ್ಣನು ಸಂಧಾನಕ್ಕಾಗಿ ಹಸ್ತಿನಾವತಿಗೆ ಹೋದನು (ಮ.ಉ.).

ಉಪಮನ್ಯು - ೧. ಧೌಮ್ಯ ಮಹರ್ಷಿಯ ಶಿಷ್ಯ; ಇವನ ಹೊಟ್ಟೆಬಾಕತನವನ್ನು ಬಿಡಿಸಲು ಗುರುವು ದನ ಮೇಯಿಸಲು ಕಳುಹಿಸಿದಾಗ ಇವನು ಅಲ್ಲಿ ಎಕ್ಕೆ ಎಲೆ ತಿಂದು ಕ್ರಮೇಣ ಕುರುಡನಾಗಿ ಒಂದು ದಿನ ದನಗಳನ್ನು ಗುರುಗಳ ಮನೆಗೆ ಮುಸ್ಸಂಜೆಯಲ್ಲಿ ಅಟ್ಟಿಕೊಂಡು ಬರುವಾಗ ದಾರಿ ಕಾಣದೆ ಬಾವಿಯಲ್ಲಿ ಬಿದ್ದನು. ಅಲ್ಲಿ ಅಶ್ವಿನೀದೇವತೆಗಳನ್ನು ಪ್ರಾರ್ಥಿಸಿ ಕಣ್ಣು ಪಡೆದನು (ಮ.ಆ.). ೨. ಒಬ್ಬ ಶಿವಭಕ್ತ; ಋಷಿ; ವ್ಯಾಘ್ರಪಾದನ ಮಗ. ಇವನ ಸಹೋದರ ಧೌಮ್ಯ; ಉಪಮನ್ಯುವು ಶಿವಸಹಸ್ರ ನಾಮವನ್ನು ರಚಿಸಿದನು. ೩. ಬಡತನದಿಂದ ಈತನಿಗೆ ಆಕಳ ಹಾಲನ್ನು ಕೊಡಲಾರದೆ ಈತನ ತಾಯಿಯು ಅಕ್ಕಿಹಿಟ್ಟನ್ನು ಕಲಕಿ ಹಾಲೆಂದು ಕೊಡುತ್ತಿರಲು ಹಾಲುಗಡಲಿನ ಒಡೆಯನಾದ ಶ್ರೀಮನ್ನಾರಾಯಣನನ್ನು ಒಲಿಸಿಕೊಂಡು ಹಾಲಿನ ಕಡಲಿಗೆ ಒಡೆಯನಾದನು. (ಮ.ಆ., ಅನು., ಲಿಂಗಪು., ಶಿವಪು.).

ಉಪಯಾಜ - ಒಬ್ಬ ಋಷಿ; ಕಾಶ್ಯಪಗೋತ್ರದವನು; ಇವನ ಸಹೋದರ ಯಾಜ; ಈ ಸಹೋದರರು ದ್ರುಪದನಿಂದ ಪುತ್ರಕಾಮೇಷ್ಟಿಯನ್ನು ಮಾಡಿಸಿ ದೃಷ್ಟದ್ಯುಮ್ನ ಮತ್ತು ದ್ರೌಪದಿಯನ್ನು ಪಡೆದರು. ಅಣ್ಣನು ಯಾಜಕನಾಗಿ (ಯಜ್ಞಮಾಡಿಸುವವ) ಯಾಜನೆಂಬ ಹೆಸರನ್ನೂ, ತಮ್ಮನು ಉಪಯಾಜಕನಾಗಿ ಉಪಯಾಜ ಎಂಬ ಹೆಸರನ್ನೂ ಪಡೆದರು (ಮ.ಆ.).

ಉಪರಿಚರ (ಉಪರಿಚರವಸು) - ೧. ಕ್ಷತ್ರಿಯ; ಈತನ ತಂದೆ ಪುರುಕುಲೋತ್ಪನ್ನನಾದ ಕೃತಿರಾಜ; ಇವನು ಇಂದ್ರನೊಡನೆ ಸ್ನೇಹ ಬೆಳೆಸಿಕೊಂಡು ಇಂದ್ರನ ವಿಮಾನದಲ್ಲಿ ಚಲಿಸುತ್ತಿದ್ದುದರಿಂದ ಉಪರಿಚರನಾದ. ಒಂದು ಮೀನು ಇವನ ವೀರ್ಯವನ್ನು ಕುಡಿಯಲು ಅದರ ಹೊಟ್ಟೆಯಿಂದ ಮತ್ಸ್ಯ ಎಂಬ ಮಗನೂ, ಮತ್ಸ್ಯಗಂಧೆ ಎಂಬ ಮಗಳೂ ಹುಟ್ಟಿದರು. ನೋ. - ವಿರಾಟ, ಮತ್ಸ್ಯಗಂಧೆ, ಮತ್ಸ್ಯ (ಮ.ವಿ.). ೨. ೨೮ನೇ ದ್ವಾಪರಯುಗದಲ್ಲಿ ಅಮಾವಸು (ಉಪರಿಚರ) ಮಹಾರಾಜನಿಂದ ಅದ್ರಿಕ ಎಂಬ ಅಪ್ಸರೆಯಲ್ಲಿ ಸತ್ಯವತಿ ಜನಿಸಿದಳು (ಹರಿ.). ೩. ಚೇದಿ ದೇಶಾಧಿಪತಿ; ಇವನ ಪತ್ನಿ ಗಿರಿಕಾ. ಇವನಿಗೆ ಬೃಹದ್ರಥ. ಕುಶಾಂಬ, ಪ್ರತ್ಯಗ್ರಹ, ಮತ್ಸಿಲ್ಲಾ (ವಸು), ಯದು ಎಂಬ ಐವರು ಮಕ್ಕಳು (ಮ.ಆ., ಸ., ಶಾಂ.).

ಇಂದ್ರನು ಇವನಿಗೆ ವಿಮಾನವನ್ನು ಕೊಟ್ಟಿದ್ದಲ್ಲದೆ ಯುದ್ಧದಲ್ಲಿ ವಿಜಯಪ್ರದವಾದ ಪದ್ಮಮಾಲಿಕೆಯನ್ನೂ, ಶಿಷ್ಟರನ್ನು ಕಾಪಾಡತಕ್ಕ ವೇಣುದಂಡವನ್ನೂ ಕೊಟ್ಟನು. ಇವನು ಚೇದಿದೇಶದ ರಾಜ. ಇವನ ವೇಣು ದಂಡದಲ್ಲಿ ಇಂದ್ರನ ವಾಸ್ತವ್ಯವಿತ್ತು. ಈ ರಾಜನ ಪಟ್ಟಣಕ್ಕೆ ಸಮೀಪದಲ್ಲಿ

ಶುಕ್ತಿಮತಿ ಎಂಬ ನದಿ ಪ್ರವಹಿಸುತ್ತಿರುವುದು. ಒಂದು ಕಾಲದಲ್ಲಿ ಪುರುಷರೂಪದಿಂದ ಕೋಲ್ಲಾಹಲವೆಂಬ ಪರ್ವತವು ಈ ನದಿಯನ್ನು ಅಡ್ಡಗಟ್ಟಿ ನಿಂತಿತು. ಉಪರಿಚರವಸುರಾಜನು ಈ ಪರ್ವತವನ್ನು ಕಾಲಿನಿಂದ ಚಿಮ್ಮಲು ಆ ಸ್ಥಳದಲ್ಲಿ ಪರ್ವತದಲ್ಲಿ ರಂಧ್ರ ಬಿದ್ದು ಆ ನದಿಯ ಮುಂದೆ ಹರಿದು ಹೋಯಿತು. ಆ ಪರ್ವತ ಸಂಬಂಧದಿಂದ ನದಿಯಲ್ಲಿ ಒಂದು ಗಂಡು ಮತ್ತು ಹೆಣ್ಣು ಮಗು ಹುಟ್ಟಿದವು. ಅವರೆಡನ್ನೂ ನದಿಯು ರಾಜನಿಗೆ ಒಪ್ಪಿಸಿತು. ಈ ಗಂಡು ಮಗುವು ಅವನ ಸೇನಾಪತಿಯಾದನು. ಹೆಣ್ಣು ಪಟ್ಟಮಹಿಷಿಯಾದಳು. ಆ ಕನ್ಯೆಯ ಹೆಸರು ಗಿರಿಕೆ. ಪಿತೃಗಳ ಅಪ್ಪಣೆಯಿಂದ ಬೇಟೆಗೆ ಹೋದ ರಾಜನಿಗೆ ಕಾಮವುಂಟಾಗಿ ವೀರ್ಯ ಪತನವಾಯಿತು. ಅದನ್ನು ರಾಜನು ಗಿರಿಕೆಗೆ ಹದ್ದಿನ ಮೂಲಕ ಕಳುಹಿಸಿದಾಗ ಅದು ನೀರಿಗೆ ಬಿದ್ದು ಮೀನು ನುಂಗಿತು (ಮ.ಆ.).

ಉಪವೇದ - ಋಗ್ವೇದಕ್ಕೆ ಆಯುರ್ವೇದವೂ, ಯಜುರ್ವೇದಕ್ಕೆ ಧನುರ್ವೇದವೂ, ಸಾಮವೇದಕ್ಕೆ ಗಾಂಧರ್ವವೇದವೂ, ಅಥರ್ವವೇದಕ್ಕೆ ಅರ್ಥಶಾಸ್ತ್ರವೂ ಉಪವೇದವು. ಆಯುರ್ವೇದವು ವ್ಯಾಧಿನಿದಾನ, ವ್ಯಾಧಿಚಿಹ್ನೆ ಮತ್ತು ಮಂತ್ರೌಷಧ ಚಿಕಿತ್ಸೆಗಳಿಂದ ಆರೋಗ್ಯವನ್ನು ಉಂಟುಮಾಡುವುದು. ಧನುರ್ವೇಧವು ಶತ್ರುಜಯಾರ್ಥವಾಗಿ ಮಂತ್ರಾಸ್ತ್ರಪ್ರಯೋಗಾದಿಗಳನ್ನು ಕಲಿಸುವುದು. ಗಾಂಧರ್ವವೇದವು ಸಾಮವೇದಾದಿಗಳಲ್ಲಿ ಸರಿಗಮಪದನಿ ಎಂಬ ಸಪ್ತಸ್ವರಗೀತ ಪ್ರಬಂಧಗಳನ್ನು ಸೂಚಿಸುವುದು. ಅರ್ಥಶಾಸ್ತ್ರವು ಹಣಕ್ಕೆ ಸಂಬಂಧಪಟ್ಟ ವಿವಿಧ ವ್ಯವಹಾರಗಳನ್ನು ಬೋಧಿಸುವುದು (ಭಾಗ., ಬ್ರಹ್ಮಪು.).

ಉಪಶ್ರುತಿ - ರಾತ್ರಿಯ ಅಭಿಮಾನ ದೇವತೆಯಾದ ದುರ್ಗಾದೇವಿ. ಈಕೆಯೇ ಉತ್ತರ ದಿಕ್ಕಿನ ದೇವತೆ.

ಉಪಸುಂದ - ದೈತ್ಯ; ಸುಂದನ ತಮ್ಮ; ಇವನ ತಂದೆ ನಿಕುಂಭ ನೋ. - ಸುಂದ (ಮ.ಆ.).

ಉಪಾವೃತ್ತ - ದೇಶವೊಂದು.

ಉಪೇಂದ್ರ - ೧. ಇಂದ್ರನ ತಮ್ಮ; ಬಲಿಯಿಂದ ಭಯಪಟ್ಟ ದೇವತೆಗಳಿಗೆ ಅಭಯ ಪ್ರಧಾನ ಮಾಡಿದ್ದರಿಂದ ಈತನನ್ನು ಇಂದ್ರನ ತಮ್ಮನೆನ್ನುತ್ತಾರೆ (ಮ.ಸ.). ವಾಮನನ ಇನ್ನೊಂದು ಹೆಸರು. ೨. ಒಂದು ನದಿ.

ಉಮಾ - ನೋ. - ಪಾರ್ವತಿ (ಸ್ಕಾಂ.ಪು.).

ಉಮ್ಲೋಚೆ - ಒಬ್ಬಳು ಅಪ್ಸರೆ.

ಉರಗಾಪುರಿ - ತಂಜಾವೂರು ಜಿಲ್ಲೆಯ ನಾಗಪಟ್ಟಣ ಎಂಬ ಬಂದರು. ಇದು ಹಿಂದೆ ಪಾಂಡ್ಯದೇಶದ ರಾಜಧಾನಿಯಾಗಿತ್ತು. ಅರ್ಜುನನು ಅಶ್ವಮೇಧದ ಕಾಲದಲ್ಲಿ ಇಲ್ಲಿಗೆ ಬಂದವನು ಇಲ್ಲಿಯ ರಾಜನಾದ ರೋಚಮಾನನನ್ನು ಪರಾಜಯಗೊಳಿಸಿದನು (ಮ.ಸ.).

ಉರ್ವರೆ - ಅಪ್ಸರೆಯೊಬ್ಬಳು.

ಉರ್ವಶಿ (ಊರ್ವಶಿ) - ಅಪ್ಸರೆ, ಈಕೆಯು ನಾರಾಯಣ ಮುನಿಯ ತೊಡೆಯ (ಊರು) ಪ್ರದೇಶದಿಂದ ಜನಿಸಿದುದರಿಂದ ಊರ್ವಶಿ ಎಂಬ ಹೆಸರನ್ನು ಪಡೆದಳು. ನರನಾರಾಯಣರ ತಪೋಭಂಗಕ್ಕಾಗಿ ಇಂದ್ರನಿಂದ ಕಳುಹಿಸಲ್ಪಟ್ಟ ಅಪ್ಸರೆಯರು ಪ್ರಯತ್ನಪಡುತ್ತಿರಲು ನಾರಾಯಣಮುನಿಯು ತನ್ನ ತೊಡೆಯನ್ನು ಕೆರೆಯಲು ಅಲ್ಲಿಂದ ಈಕೆ ಉತ್ಪತ್ತಿಯಾದಳು. ಈಕೆಯ ಸೌಂದರ್ಯವನ್ನು ಕಂಡು ದೇವವಿಲಾಸಿನಿಯರು ನಾಚಿಕೆಯಿಂದ ಸ್ವರ್ಗಕ್ಕೆ ಹಿಂದಿರುಗಿದರು. (ದೇವಿಭಾ.) ನೋ. - ಬದರಿ.

ಒಮ್ಮೆ ಕ್ಷೀರಸಮುದ್ರದಲ್ಲಿ ಕ್ರೀಡಿಸುತ್ತಿದ್ದ ಊರ್ವಶಿಯನ್ನು ಕಂಡು ವರುಣನು ಮೋಹಿಸಿದನು. ವರುಣನಿಂದ ಊರ್ವಶಿಗೆ ಅಗಸ್ತ್ಯನು ಜನಿಸಿದನು (ರಾಮಾ.ಉ). ಈಕೆಯು ಮಿತ್ರನೆಂಬ ಸೂರ್ಯನಿಂದ ಶಾಪಹೊಂದಿ ಭೂಮಿಯಲ್ಲಿ ಪುರೂರವನೊಂದಿಗೆ ವಾಸಮಾಡಿದಳು. ಈಕೆಯಲ್ಲಿ ಆತನಿಗೆ ಆಯು ಮೊದಲಾದ ಆರು ಮಂದಿ ಮಕ್ಕಳು ಹುಟ್ಟಿದರು. ನೋ - ವರುಣ. ಈಕೆಯು ಸ್ವರ್ಗಕ್ಕೆ ಬಂದ ಅರ್ಜುನನ್ನು ಮೋಹಿಸಿದರೂ, ಅರ್ಜುನನು ಈಕೆಯನ್ನು ಪವಿತ್ರಭಾವನೆಯಿಂದ ಕಂಡುದರಿಂದ ಈಕೆಯು ಕೋಪಗೊಂಡು ಅರ್ಜುನನಿಗೆ ಷಂಡನಾಗುವಂತೆ ಶಾಪವಿತ್ತಳು. ನೋ. ಪೂತನೆ (ಮ.ಆ., ಸ, ಅನು., ಪದ್ಮಪು., ಭಾಗ., ವ.).

ಉರ್ವೀ (ಉರ್ವಿ) - ನೋ - ಕಶ್ಯಪ.

ಉಲೂಕ - ೧. ಅಮೃತಕಲಶರಕ್ಷಕನಾದ ದೇವನೊಬ್ಬ. ೨. ಋಷಿ; ವಿಶ್ವಾಮಿತ್ರನ ಮಗ. ೩. ಕ್ಷತ್ರಿಯ; ಶಕುನಿಯ ಮಗ; ಈತನು ದುರ್ಯೋಧನ ಮತ್ತು ಯುಧಿಷ್ಠಿರರು ಜೂಜಾಡುವಂತೆ ಪ್ರೋತ್ಸಾಹಿಸಿದವ. ಈತನ ವಧೆ ಸಹದೇವನಿಂದಾಯಿತು. ೪. ಒಂದು ದೇಶ; ಬೃಹಂತನು ಇದರ ರಾಜನಾಗಿದ್ದ. ೫. ಒಂದು ಗೂಗೆ; ದುರ್ಯೋಧನನ ಪತನಾನಂತರ ಅಶ್ವತ್ಥಾಮನು ಪಾಂಡವರ ಪ್ರತೀಕಾರಕ್ಕಾಗಿ ಕೃಪ, ಕೃತವರ್ಮರೊಡನೆ ಯೋಚಿಸುತ್ತಿರುವಾಗ ರಾತ್ರಿ ಅವನ ಕಣ್ಣಮುಂದೆ ಅನೇಕ ಕಾಗೆಗಳನ್ನು ಕೊಂದಿತು. ೬. ಭುವನೇಶನೆಂಬ ರಾಜನು ಹರಿಮಿತ್ರನೆಂಬ ಹರಿಭಕ್ತ ಬ್ರಾಹ್ಮಣನ ಸಂಪತ್ತನ್ನೆಲ್ಲಾ ಕಸಿದುಕೊಂಡು

ರಾಜ್ಯದಿಂದ ಹೊರಗೆ ಹಾಕಿದುದರಿಂದ ಆ ರಾಜನು ಮುಂದಿನ ಜನ್ಮದಲ್ಲಿ ಉಲೂಕನಾಗಿ (ಗೂಗೆ) ಜನಿಸಿ, ಯಮನ ಆಜ್ಞೆಯಂತೆ ತನ್ನ ಶವವನ್ನೇ ಸ್ವಲ್ಪ ಸ್ವಲ್ಪ ತಿನ್ನುತ್ತಿರುವಾಗ ಒಬ್ಬ ಬ್ರಾಹ್ಮಣನ ಅನುಗ್ರಹದಿಂದ ಸದ್ಗತಿ ಪಡೆದನು. ಈ ರಾಜನು ಉಲೂಕ ಜನ್ಮದಲ್ಲಿರುವಾಗ ಸಂಗೀತದಲ್ಲಿ ಮಹಾವಿದ್ವಾಂಸನಾಗಿದ್ದು, ನಾರದನ ಸಂಗೀತದ ಗುರುವಾಗಿದ್ದನು (ಅದ್ಭು.ರಾ., ಮ.ಆ.ಅನು.,ಉ.,ಕ., ಸೌ., ಸ.).

ಉಲೂಪಿ - ನಾಗಕನ್ಯೆ ; ಅರ್ಜುನನ ಪತ್ನಿ; ಈಕೆಯನ್ನು ಅರ್ಜುನನು ತೀರ್ಥಯಾತ್ರಾಕಾಲದಲ್ಲಿ ವಿವಾಹವಾದನು. ಈಕೆಯ ತಂದೆ ಕೌರವ್ಯನೆಂಬ ಹೆಸರುಳ್ಳ ಸರ್ಪರಾಜ. ಈಕೆಯಲ್ಲಿ ಅರ್ಜುನನಿಂದ ಇರಾವಂತನೆಂಬ ಮಗನಾದನು. ಬಭ್ರುವಾಹನನಿಂದ ಹತನಾದ ಅರ್ಜುನನು ಈಕೆಯು ತಂದ ಸಂಜೀವನ ಮಣಿಯಿಂದಲೇ ಬದುಕಿದನು. ಈಕೆಯು ಪಾಂಡವರ ಅಶ್ವಮೇಧಯಾಗಕ್ಕೆ ಹಸ್ತಿನಾಪುರಕ್ಕೆ ಬಂದಳು. ಇವಳು ಪಾಂಡವರ ಮಹಾಪ್ರಸ್ಥಾನಕಾಲದಲ್ಲಿ ಗಂಗೆಯಲ್ಲಿ ಮುಳುಗಿ ಸ್ವರ್ಗವನ್ನು ಪಡೆದಳು.

ಈಕೆ ಐರಾವತನೆಂಬ ನಾಗರಾಜನ ಮಗಳು. ಇವಳಿಗೆ ವಿವಾಹವಾದಾಗಲೇ ಇವಳ ಗಂಡನನ್ನು ಗರುಡನು ಕೊಂದುದರಿಂದ ಈಕೆಗೆ ವೈಧವ್ಯ ಪ್ರಾಪ್ತಿಯಾಯಿತು. ಆಮೇಲೆ ಐರಾವತನು ಈಕೆಯನ್ನು ಅರ್ಜುನನಿಗೆ ವಿವಾಹ ಮಾಡಿದನು. (ಮ.ಭೀ.) ನೋ. ಇರಾವಂತ (ಮ.ಆ.,ಅಶ್ವ.,ಸ್ವ.).

ಉಶಂಗು (ರುಶಂಗು) - ಋಷಿ; ಥಾನೇಶ್ವರಕ್ಕೆ ಹದಿನಾಲ್ಕು ಮೈಲು ದೂರದಲ್ಲಿರುವ ಪೃಥೂದಕ ತೀರ್ಥದಲ್ಲಿ ಈತನು ದೇಹವಿತ್ತು ವಿಷ್ಣುಪದವನ್ನು ಹೊಂದಿದನು. ಈತನ ಆಶ್ರಮದಲ್ಲೇ ಆರ್ಷ್ಟಿಷೇಣ, ವಿಶ್ವಾಮಿತ್ರ, ಸಿಂಧುದ್ವೀಪ, ದೇವಾಪಿಗಳು ತಪಸ್ಸು ಮಾಡಿ ಬ್ರಾಹ್ಮಣರಾದರು. ಇಲ್ಲಿಗೆ ಬಲರಾಮನು ತೀರ್ಥಯಾತ್ರಾನಿಮಿತ್ತ ಬಂದನು. ಇದು ಸರಸ್ವತೀ ನದೀ ತೀರಪ್ರದೇಶ (ಮ.ಶ.).

ಉಶನಸ್ಸು - ಶುಕ್ರಾಚಾರ್ಯನ ಇನ್ನೊಂದು ಹೆಸರು; ಇವನು ಈಗಿನ ವೈವಸ್ವತ ಮನ್ವಂತರದ ವ್ಯಾಸ; ಹಿರಣ್ಯಕಶಿಪು, ವೃಷಪರ್ವ ಮೊದಲಾದ ರಾಜರ ಪುರೋಹಿತ. ಸ್ವಾಯಂಭುವ ಮನ್ವಂತರದಲ್ಲಿ ಭೃಗು ಮತ್ತು ಪುಲೋಮೆಯರ ಏಳು ಮಂದಿ ಮಕ್ಕಳಲ್ಲಿ ಈತನು ನಾಲ್ಕನೆಯವನು; ಚ್ಯವನ, ವಜ್ರಶೀರ್ಷ, ಶುಚಿ ಮತ್ತು ಔರ್ವ ಈತನ ಅಣ್ಣಂದಿರು; ವರೇಣ್ಯ ಮತ್ತು ಸವನ ಎಂಬಿಬ್ಬರು ಈತನ ತಮ್ಮಂದಿರು. ನೋ. ಶುಕ್ರ, ವೃಷಪರ್ವ (ಭಾಗ., ದೇವೀಭಾ., ವಿಷ್ಣುಪು.).

ಉಶೀನರ - ೧. ಕ್ಷತ್ರಿಯ; ವೃಷ್ಣಿವಂಶದವ; ಚಂದ್ರವಂಶದ ಅನುವಿನ ಕುಲದಿಂದ ಉತ್ಪತ್ತಿಯಾದವ; ಭೋಜದೇಶದ ರಾಜ; ಈತನಿಗೆ ಯಯಾತಿಯ ಪುತ್ರಿಯಾದ

ಮಾಧವಿಯಲ್ಲಿ ಹುಟ್ಟಿದ ಮಗನೇ ಶಿಬಿ (ಮ.ಉ.). ೨. ಚಂದ್ರವಂಶದ ಸೃಂಜಯನ ಪುತ್ರನಾದ ಮಹಾಮನಸನ ಮಗ (ಭಾಗ.).

ಉಶೀರಬೀಜ - ಹಿಮಾಲಯದ ಸಮೀಪದ ಕ್ಷೇತ್ರ; ಇಲ್ಲೇ ಮರುತ್ತರಾಜನು ಯಜ್ಞಮಾಡಿದನು. ಜೀಮೂತನೆಂಬ ವಿಪ್ರ ಋಷಿಯ ಆಶ್ರಮವಿದೆ. ಇಲ್ಲೇ ಸುವರ್ಣಸರೋವರವಿದೆ. (ಮ.ಉ.).

ಉಷಸ್ಸು - ಸೂರ್ಯನ ಹಿರಿಯ ಹೆಂಡತಿ.

ಉಷಾ (ಊಷಾ) - ಬಾಣಾಸುರನ ಮಗಳು; ಉಷೆಯೊಡನೆ ಗುಪ್ತವಾಗಿ ವಾಸಿಸಿದ್ದ ಅನಿರುದ್ಧನನ್ನು ಬಾಣಾಸುರನು ಸೆರೆಯಲ್ಲಿಟ್ಟನು. ಇದನ್ನು ತಿಳಿದ ಶ್ರೀಕೃಷ್ಣನು ಬಾಣನನ್ನು ಜಯಿಸಿ ಉಷಾ - ಅನಿರುದ್ಧರನ್ನು ದ್ವಾರಕೆಗೆ ಒಯ್ದನು. ಅಲ್ಲೇ ಇವರಿಗೆ ವಿವಾಹವಾಯಿತು (ಮ.ಸ.,ಭಾಗ.,ಹರಿ.,ವಿಷ್ಣುಪು.).

ಉಷಿಕ್ - ಅಂಗರಾಜನ ಪತ್ನಿಯ ದಾಸಿ. ದೀರ್ಘತಮನೆಂಬ ಮುನಿಯಿಂದ ಈಕೆಯಲ್ಲಿ ಕಕ್ಷಿವಾನನೆಂಬ ಋಷಿ ಹುಟ್ಟಿದನು. ಇವನ ಯಜ್ಞದಿಂದ ತುಷ್ಟನಾದ ಇಂದ್ರನು ಇವನಿಗೆ ವೃಚಯಾ ಎಂಬ ಹುಡುಗಿಯನ್ನು ಮದುವೆ ಮಾಡಿಕೊಟ್ಟನು (ಋ).

ಉಷ್ಣತೋಯವಹಾ - ಬದರಿಯಲ್ಲಿ ಹರಿಯುವ ಒಂದು ನದಿ.

ಉಷ್ಮಾ - ಒಂದು ಅಗ್ನಿವಿಶೇಷ.

ಊ

ಊರ್ಜಯೋಗಿ - ಋಷಿ; ವಿಶ್ವಾಮಿತ್ರನ ಮಗ (ಮ.,ಅನು.).

ಊರ್ಜಸ್ವತಿ - ದೇವಯಾನಿಯ ತಾಯಿ; ಶುಕ್ರಾಚಾರ್ಯನ ಹೆಂಡತಿ (ಭಾಗ.).

ಊರ್ಜಾ - ಸ್ವಾಯಂಭುವ ಮನ್ವಂತರದ ವಸಿಷ್ಠಮಹರ್ಷಿಯ ಎರಡನೆಯ ಹೆಂಡತಿ. ಈಕೆಗೆ ಚಿತ್ರಕೇತು, ಉಲ್ಬಣ ಮೊದಲಾದ ಆರು ಮಂದಿ ಮಕ್ಕಳಿದ್ದರು (ಭಾಗ.).

ಊರ್ಣನಾಭ - ಕ್ಷತ್ರಿಯ; ಧೃತರಾಷ್ಟ್ರನ ಮಗ (ಮ.ಆ.).

ಊರ್ಣೆ - ೧. ಸ್ವಾಯಂಭುವ ಮನ್ವಂತರದ ಮರೀಚಿಋಷಿಯ ಎರಡನೆಯ ಹೆಂಡತಿ. ಇವಳ ಆರು ಮಂದಿ ಮಕ್ಕಳು ಬ್ರಹ್ಮನ ಕೋಪಕ್ಕೆ ಪಾತ್ರರಾಗಿ ಹಿರಣ್ಯ ಕಶಿಪು, ಕಾಲನೇಮಿ ಮತ್ತು ದೇವಕಿಗೆ ಮೂರು ಜನ್ಮದಲ್ಲಿ ಕ್ರಮವಾಗಿ ಮಕ್ಕಳಾಗಿ ಜನಿಸಿದರು. ದೇವಕಿಯ ಆರು ಮಂದಿ ಮಕ್ಕಳನ್ನು ಕಂಸನು, ಜನಿಸಿದೊಡನೆಯೇ ಕೊಂದನು. ೨. ಚಿತ್ರರಥನೆಂಬ ರಾಜನ ಪತ್ನಿ; ಈ ರಾಜನು ಸ್ವಾಯಂಭುವ ಮನ್ವಂತರದ ಋಷಭ ದೇವನ ವಂಶದವ; ಈಕೆಯ ಮಗನ

ಹೆಸರು ಸಮ್ರಾಜ (ದೇವೀಭಾ.,ಭಾಗ.).

ಊರ್ಣಾಯು - ದೇವಗಂಧರ್ವ; ಇವನ ಪತ್ನಿ ಮೇನಕೆ; ತಾಯಿತಂದೆಗಳು ಪ್ರಾಧೆ ಮತ್ತು ಕಶ್ಯಪ (ಮ.ಉ.).

ಊರ್ಧ್ವಭಾಕ್ - ಅಗ್ನಿವಿಶೇಷ; ಈ ಅಗ್ನಿಗೆ ಬಡಬಾಗ್ನಿ ಎಂಬ ಹೆಸರಿದೆ (ಮ.ವ.).

ಊರ್ವಶಿ - ನೋ -.ಉರ್ವಶಿ.

ಊಷೆ - ನೋ -. ಉಷೆ

ಊಷ್ಮ - ನೋ - .ಉಷ್ಮ

ಋ

ಋಕ್ಷ - ೧. ಕ್ಷತ್ರಿಯ; ಚಂದ್ರವಂಶದ ಋಚನ ಪುತ್ರ; ಈತನ ತಾಯಿ ಮಿಶ್ರಕೇಶಿ ಎಂಬ ಅಪ್ಸರೆ; ಹೆಂಡತಿ ಜ್ವಲನೆ (ಜ್ವಲಂತಿ); ಮಗ ಅಂತ್ಯನಾರ (ಅಂತಿನಾರ). ೨. ಚಂದ್ರವಂಶದ ಅಜಮೀಢನ ಮಗ; ತಾಯಿ ಧೂಮಿನಿ; ಹೆಂಡತಿ ರಥಂತರಿ; ಮಗ ಸಂವರಣ; ಅಜಮೀಢನ ಐವರು ಪತ್ನಿಯರಲ್ಲಿ ಋಕ್ಷೆಯು ಮೂರನೆಯವಳೆಂದೂ, ಈಕೆಯ ಮಗ ಸಂವರಣನೆಂದೂ ಇದೆ. ರಥಂತರಿಯು ಚಂದ್ರವಂಶದ ಇಲಿಲ ರಾಜನ ಹೆಂಡತಿಯೆಂದೂ ಇದೆ. ನೋ-ರಥಂತರಿ (ಮ.ಆ.). ೩. ಚಂದ್ರವಂಶದ ಜಹ್ನುರಾಜನ ವಂಶದವ; ಈತನ ತಾಯಿ ಅಂಗರಾಜನ ಮಗಳು ವಾಮದೇವಿಯೆಂದೂ, ವಿದರ್ಭರಾಜಪುತ್ರಿಯಾದ ಮರ್ಯಾದೆಯೆಂದೂ ಇದೆ; ಇವನಿಗೆ ಋಚನೆಂಬ ಹೆಸರೂ ಇದೆ (ಮ.ಆ.).

ಋಕ್ಷದೇವ - ಕ್ಷತ್ರಿಯ; ಈತನ ತಂದೆ ಶಿಖಂಡಿ; ಇವನು ಚಂದ್ರವಂಶದ ಧ್ರುಪದನ ಮೊಮ್ಮಗ; ಕ್ಷತ್ರದೇವನು ಈತನ ಅಣ್ಣ (ಮ.ದ್ರೋ.).

ಋಕ್ಷರಜಸ್ಸು - ವಾನರವಂಶಕ್ಕೆ ಮೂಲಪುರುಷ; ಬ್ರಹ್ಮನು ತಪಸ್ಸು ಮಾಡುತ್ತಿದ್ದಾಗ ಆತನ ಕಣ್ಣೀರಿನಿಂದ ಜನಿಸಿದವ; ಈತನು ಒಂದು ಸರೋವರದಲ್ಲಿ ಮುಳುಗಿ ಸ್ತ್ರೀಯಾದಾಗ ಬ್ರಹ್ಮಸಂದರ್ಶನಕ್ಕೆ ಹೋಗುತ್ತಿದ್ದ ಸೂರ್ಯ ಮತ್ತು ಇಂದ್ರರ ತೇಜಸ್ಸು ಈಕೆಯ ಬಾಲ ಮತ್ತು ಕಂಠದ ಮೇಲೆ ಬಿದ್ದು ವಾಲಿಸುಗ್ರೀವರು ಜನಿಸಿದರು. ಮುಂದೆ ಈಕೆ ಗಂಡುಸಾಗಿ ಬ್ರಹ್ಮನ ಅಪ್ಪಣೆಯಂತೆ ಕಿಷ್ಕಿಂಧೆಯ ಅರಸನಾಗಿ ಸ್ವಲ್ಪ ಸಮಯ ರಾಜ್ಯಭಾರ ಮಾಡುತ್ತಿದ್ದು ಆಮೇಲೆ ವಾಲಿಸುಗ್ರೀವರನ್ನು ರಾಜ ಯುವರಾಜರನ್ನಾಗಿ ಮಾಡಿ ತಾನು ತಪಸ್ಸಿಗೆ ಹೊರಟುಹೋದನು (ರಾ.ಉ).

ಋಕ್ಷವಂತ - ಕುಲಪರ್ವತ; ವಿಂಧ್ಯಪರ್ವತದ ಪೂರ್ವಭಾಗ; (ಮ.ಭೀ.).

ಋಗ್ವೇದ - ನಾಲ್ಕು ವೇದಗಳಲ್ಲಿ ಮೊದಲನೆಯದು; ಪಾದಬದ್ಧವಾದ,

ಛಂದೋಬದ್ಧವಾದ ಮಂತ್ರಗಳೇ ಋಗ್ವೇದ. ಇದರಲ್ಲಿ ಇಪ್ಪತ್ತೊಂದು ಶಾಖೆಗಳಿದ್ದು ಪ್ರತಿ ಶಾಖೆಗೂ ಒಂದೊಂದು ಉಪನಿಷತ್ತು ಇದೆ. ಈ ವೇದದ ಅರ್ಧದಷ್ಟು ಋಕ್ಕುಗಳೂ ಯಜುರ್ವೇದದಲ್ಲಿವೆ. ಸಾಮವೇದದಲ್ಲಿ ಎಪ್ಪತ್ತೈದು ಋಕ್ಕುಗಳನ್ನು ಬಿಟ್ಟು ಉಳಿದವೆಲ್ಲಾ ಋಗ್ವೇದವೇ ಆಗಿವೆ. ಅಥರ್ವವೇದದಲ್ಲಿ ಋಗ್ವೇದದ ಐದು ಭಾಗದಷ್ಟು ಋಕ್ಕುಗಳಿವೆ. ಆಯುರ್ವೇದವು ಋಗ್ವೇದದ ಉಪವೇದ. ವ್ಯಾಸರು ಋಗ್ವೇದವನ್ನು ತಮ್ಮ ಶಿಷ್ಯನಾದ ಪೈಲನಿಗೆ ಉಪದೇಶಿಸಿದರು. ಯಜ್ಞಯಾಗಾದಿಗಳಲ್ಲಿ ಮಂತ್ರವನ್ನು ಪಠಿಸುವ ಹೋತೃವಿಗೆ ಋಗ್ವೇದವು ಉಪಯುಕ್ತವಾಗಿದೆ. ಈ ವೇದದಲ್ಲಿ ಮುಖ್ಯವಾಗಿ ಹತ್ತು ವಿಭಾಗಗಳಿದ್ದು ಈ ವಿಭಾಗಗಳಿಗೆ ಮಂಡಲವೆನ್ನುತ್ತಾರೆ. ಋಗ್ವೇದದಲ್ಲಿ ೧೦ ಮಂಡಲ, ಎಂಟು ಅಷ್ಟಕ, ಅರುವತ್ತನಾಲ್ಕು ಅಧ್ಯಾಯ, ಎಂಬತ್ತೈದು ಅನುವಾಕು, ಸಾವಿರದ ಇಪ್ಪತ್ತೆಂಟು ಸೂಕ್ತ, ಎರಡು ಸಾವಿರದ ಇಪ್ಪತ್ತನಾಲ್ಕು ವರ್ಗ, ಹತ್ತುಸಾವಿರದ ಐನೂರ ಎಂಬತ್ತೊಂಬತ್ತು ಮಂತ್ರ, ೧,೫೩,೮೨೬ ಶಬ್ದಗಳಿವೆ. ಈ ವೇದಕ್ಕೆ ಶಾಕಲ್ಯರು ಪದಪಾಠವನ್ನೂ, ಪಾಂಚಲ ಮತ್ತು ಬಾಭ್ರವ್ಯರು ಕ್ರಮಪಾಠವನ್ನೂ ರಚಿಸಿದ್ದಾರೆ. ಇದಕ್ಕೆ ಐತರೇಯ ಮತ್ತು ಸಾಂಖ್ಯಾಯನವೆಂಬೆರಡು ಬ್ರಾಹ್ಮಣಗಳೂ, ಐತರೇಯ ಮತ್ತು ಕೌಷಿತಕಿ ಎಂಬೆರಡು ಅರಣ್ಯಕಗಳೂ ಇವೆ. ಇದಕ್ಕೆ ಅಶ್ವಲಾಯನ ಮತ್ತು ಸಾಂಖ್ಯಾಯನ ಎಂಬ ಶ್ರೌತಸೂತ್ರ ಮತ್ತು ಗೃಹ್ಯಸೂತ್ರಗಳೂ ಇವೆ. ಋಗ್ವೇದದ ಪ್ರತಿಯೊಂದು ಸೂಕ್ತದಲ್ಲಿಯೂ ಯಾವುದಾದರೊಂದು ದಿವ್ಯ ಈಶ್ವರೀಯ ವಿಭೂತಿಯ ಸ್ತುತಿ ಇದೆ. ಅಲ್ಲದೆ ಸೃಷ್ಟಿಯ ಅನೇಕ ರಹಸ್ಯ ಮತ್ತು ತತ್ವಗಳ ವರ್ಣನೆ ಇದೆ. ಋಗ್ವೇದದ ಅರ್ಥವನ್ನು ತಿಳಿಯಲು ನಿಘಂಟು ಮತ್ತು ಯಾಸ್ಕರ ನಿರುಕ್ತವಿದೆ (ಭಾಗ.,ವಿಷ್ಣುಪು., ಋಗ್ವೇದ - ಪ್ರಚಾರೋಪನ್ಯಾಸಮಾಲೆ.).

ಋಚ - ಕ್ಷತ್ರಿಯ; ಪುರುವಂಶೀಯನಾದ ದೇವತಿಥಿಯ ಮಗ; ತಾಯಿ ವಿದರ್ಭರಾಜನ ಮಗಳಾದ ಮರ್ಯಾದೆ; ಹೆಂಡತಿ ಅಂಗರಾಜ ಕನ್ಯೆಯಾದ ವಾರುದೇವಿ; ಮಗ ಋಕ್ಷ.

ಋಚೀಕ - ೧. ಋಷಿ; ಔರ್ವನ ಮಗ. ೨. ಈತನಿಗೆ ಅಶ್ವತೀರ್ಥದಲ್ಲಿ ಒಂದು ಕಿವಿ ಕಪ್ಪಾದ ಸಾವಿರ ಕುದುರೆಗಳು ಪ್ರಾಪ್ತಿಯಾಗಲು ಅವನ್ನು ಗಾಧಿಮಹಾರಾಜನಿಗೊಪ್ಪಿಸಿ ಅವನ ಮಗಳಾದ ಸತ್ಯವತಿಯನ್ನು ಮದುವೆಯಾದನು. ಈತನು ಈಕೆಯ ಪಾತಿವ್ರತ್ಯಕ್ಕೆ ಮೆಚ್ಚಿ ವರವನ್ನು ಬೇಡೆನ್ನಲು, ತನಗೂ ತನ್ನ ತಂದೆಗೂ ಪುತ್ರರು ಹುಟ್ಟುವಂತೆ ವರವನ್ನು ಪ್ರಾರ್ಥಿಸಿದಳು. ಋಚೀಕನು ಇಬ್ಬರಿಗೂ ಮಂತ್ರಿಸಿ ಕೊಟ್ಟ ಚರುವನ್ನು ಈಕೆ ಬದಲಾಯಿಸಿ ತಿನ್ನಲು ಇಬ್ಬರೂ ಗರ್ಭಿಣಿಯರಾದರು. ಆಗ ಸತ್ಯವತಿಯ

ಮುಖದಲ್ಲಿ ಕ್ಷಾತ್ರತೇಜಸ್ಸೂ ಗಾಧಿಯ ಪತ್ನಿಯ ಮುಖದಲ್ಲಿ ಬ್ರಹ್ಮತೇಜಸ್ಸೂ ಹೊಳೆಯಲಾರಂಭವಾಗಲು ಮುನಿಯು ನಡೆದ ವಿಚಾರವನ್ನು ಕೇಳಿ ಸತ್ಯವತಿಯ ಪ್ರಾರ್ಥನೆಯಂತೆ ಆಕೆಗೆ ಬ್ರಾಹ್ಮಣಪುತ್ರನೂ, ಆತನ ಪುತ್ರನು ಕ್ಷಾತ್ರವೃತ್ತಿಯವನಾಗುವಂತೆಯೂ ಅನುಗ್ರಹಿಸಿದನು. ಮುಂದೆ ಸತ್ಯವತಿಯು ಜಮದಗ್ನಿಯನ್ನೂ, ಗಾಧಿಯ ಪತ್ನಿಯು ವಿಶ್ವಾಮಿತ್ರನನ್ನೂ ಪಡೆದಳು. ಋಚೀಕ ಮುನಿಯ ವರದಂತೆ ಜಮದಗ್ನಿಯು ಬ್ರಾಹ್ಮಣನಾಗಿಯೂ, ಪರಶುರಾಮನು ಕ್ಷಾತ್ರ ವೃತ್ತಿಯವನೂ ಆದರು. ವಿಶ್ವಾಮಿತ್ರನು ಮೊದಲು ಕ್ಷತ್ರಿಯನಾಗಿದ್ದು ಕೊನೆಗೆ ಬ್ರಾಹ್ಮಣನಾದನು. ಋಚೀಕನ ಇನ್ನೊಬ್ಬ ಮಗ ಶುನಶ್ಯೇಫ. ಇವನನ್ನು ಋಚೀಕನು ಹರಿಶ್ಚಂದ್ರನಿಗೆ ಯಜ್ಞಪಶುವಾಗಿ ಮಾರಿದನು. ನೋ -. ಶುನಶ್ಯೇಫ. ೩. ವಿವಸ್ವತನ ಪುತ್ರ. ೪. ಕ್ಷತ್ರಿಯ. ದುಷ್ಯಂತನ ಮೊಮ್ಮಗನಾದ ಭುಮನ್ಯುವಿನ ಪುತ್ರ. ಈತನ ತಾಯಿ ಪುಷ್ಕರಿಣಿ. ೫. ಋಚೀಕನಿಗೆ ಜಮದಗ್ನಿಯಲ್ಲದೆ ಶುನಶ್ಯೇಫ ಮತ್ತು ಶುನಃಪುಚ್ಛ ಎಂಬ ಇನ್ನಿಬ್ಬರು ಮಕ್ಕಳಿದ್ದರು (ಹರಿ,ಮ ಆ.,ವ.,ಶಾಂ., ಅನು.,ಬ್ರಹ್ಮಪು., ಭಾಗ.,ರಾಮಾ.).

ಋಚೇಯು (ಅನಾಧೃಷ್ಟಿ) - ಕ್ಷತ್ರಿಯ; ಚಂದ್ರವಂಶದ ರೌದ್ರಾಶ್ವನಿಗೆ ಮಿಶ್ರಕೇಶಿ ಎಂಬ ಅಪ್ಸರೆಯಲ್ಲಿ ಹುಟ್ಟಿದ ಮಗ, ಇವನ ಸಹೋದರರು ಕಕ್ಷೇಯು ಮೊದಲಾದ ಒಂಬತ್ತು ಮಂದಿ. ಇವನ ಮಗ ಮತಿನಾರ (ಮ.ಆ.).

ಋಜ್ರಾಶ್ವ - ರಾಜನೊಬ್ಬ; ವೃಷಾಗಿರನ ಮಗ; ಇವನ ಅರಮನೆಯಲ್ಲಿ ಅಶ್ವಿನೀದೇವತೆಗಳ ವಾಹನವಾದ ಕತ್ತೆಯು ನಾಯಿಯಾಗಿರಲು ಇವನು ಅದಕ್ಕೆ ಆಹಾರವಾಗಿ ತನ್ನ ಪ್ರಜೆಗಳ ನೂರೊಂದು ಕುರಿಗಳನ್ನು ತುಂಡು ಮಾಡಿಕೊಟ್ಟನು. ಹೀಗೆ ಪ್ರಜೆಗಳಿಗೆ ಅಹಿತವನ್ನುಂಟುಮಾಡಿದುದರಿಂದ ಈತನ ತಂದೆಯು ಕುರುಡಾಗೆಂದು ಶಾಪವಿತ್ತನು. ಆಗ ಋಜ್ರಾಶ್ವನು ಅಶ್ವಿನೀದೇವತೆಗಳನ್ನು ಪ್ರಾರ್ಥಿಸಿ ಕಣ್ಣುಗಳನ್ನು ಪಡೆದನು (ಋ).

ಋತಧಾಮ - ಶ್ರೀಮನ್ನಾರಾಯಣ (ಮ.ಶಾಂ.).

ಋತಧ್ವಜ - ಕ್ಷತ್ರಿಯ; ಈತನ ತಂದೆ ಸೂರ್ಯವಂಶದ ಶತ್ರುಜಿತ. ಈತನಿಗೆ ಕುವಲಾಶ್ವ ಧುಂಧುಮಾರನೆಂಬ ಹೆಸರೂ ಇದೆ. ನೋ. - ಕುವಲಾಶ್ವ (ಮ.ವ.).

ಋತವಾಕ್ - ಮಹರ್ಷಿಯೊಬ್ಬ. ಇವನಿಗೆ ರೇವತಿ ನಕ್ಷತ್ರದ ಅಂತ್ಯದ ಅರಿಷ್ಟಾಂಶದಲ್ಲಿ ದುಷ್ಪುತ್ರನೊಬ್ಬನು ಜನಿಸಲು ಈ ಮಹರ್ಷಿಯು ಸಿಟ್ಟಿನಿಂದ ರೇವತಿ ನಕ್ಷತ್ರವನ್ನೇ ಭೂಮಿಯ ಮೇಲೆ ಬೀಳಿಸಿದ. ಇದೇ ಪರ್ವತದಂತಿದ್ದುದರಿಂದ ಇದಕ್ಕೆ ರೈವತಕ ಪರ್ವತವೆನ್ನುತ್ತಾರೆ.

ಪ್ರಮುಚಮುನಿಯು ತನ್ನ ಮಗಳಾದ ರೇವತಿಯ ವಿವಾಹಕಾಲದಲ್ಲಿ ರೇವತಿ ನಕ್ಷತ್ರವನ್ನು ಪುನಃ ನಕ್ಷತ್ರಮಂಡಲಕ್ಕೆ ಕಳುಹಿಸಿದ (ದೇವೀಭಾ., ಮಾರ್ಕಂ.ಪು.).

ಋತುಪರ್ಣ - ಕ್ಷತ್ರಿಯ; ಅಯೋಧ್ಯಾಧಿಪತಿ; ಕಲಿಪುರುಷನ ಮಹಿಮೆಯಿಂದ ಬಾಹುಕನೆಂದು ಹೆಸರಿಟ್ಟುಕೊಂಡು ನಳರಾಜನನ್ನು ಇವನು ಸಾರಥಿಯಾಗಿ ಮಾಡಿಕೊಂಡನು. ಇವನೇ ನಳರಾಜನಿಗೆ ಅಕ್ಷಹೃದಯವನ್ನು ಕಲಿಸಿ ಅವನಿಂದ ಅಶ್ವಹೃದಯವನ್ನು ತಿಳಿದುಕೊಂಡನು. ಇವನು ಸಿಂಧುದ್ವೀಪನ ಮೊಮ್ಮಗ; ಇವನ ಮಗ ಸುದಾಸ (ಹರಿ, ಭಾಗ.). ಋತುಪರ್ಣನ ಸಾರಥಿ ಜೀವಲ (ಮ.ವ.).

ಋತುಸ್ಥಲ - ಅಪ್ಸರೆಯೊಬ್ಬಳು (ಮ.ಆ.).

ಋದ್ಧಿ - ಕುಬೇರನ ಪತ್ನಿ. ನೋ-. ಕುಬೇರ (ಮ.ಸ.).

ಋದ್ಧಿಮಂತ - ಸರ್ಪರಾಜನೊಬ್ಬ; ಪಾಂಡವರು ಆರ್ಷ್ಟಿಷೇಣನೆಂಬ ರಾಜರ್ಷಿಯ ಆಶ್ರಮದಲ್ಲಿದ್ದಾಗ ಸಮೀಪದ ಮಡುವಿನಲ್ಲಿದ್ದ ಈ ಸರ್ಪರಾಜನನ್ನು ಗರುಡನು ಅಪಹರಿಸಿದನು (ಮ.ವ.).

ಋಭು - ಮಹರ್ಷಿ; ಬ್ರಹ್ಮನ ಮಾನಸಪುತ್ರ; ಸನಕ, ಸನಂದನ ಮೊದಲಾದ ಮಹರ್ಷಿಗಳ ಸಹೋದರ (ಭಾಗ.).

ಋಷ್ಯಮೂಕ (ಋಶ್ಯಮೂಕ) - ಪರ್ವತವೊಂದು; ಇಲ್ಲಿ ಮತಂಗಮುನಿಯ ಆಶ್ರಮವಿತ್ತು. ವಾಲಿಯು ದುಂದುಭಿಯೆಂಬ ರಾಕ್ಷಸನೊಡನೆ ಹೋರಾಡಿ ಕೊಂದು ಅವನ ತಲೆಯನ್ನು ಕಿತ್ತು ಬಿಸುಡಲು ಅದು ಮತಂಗ ಋಷಿಯ ಆಶ್ರಮಪ್ರದೇಶದಲ್ಲಿ ಬಿದ್ದು ಈ ಸ್ಥಳವನ್ನೇ ಕೊಳಕು ಮಾಡಿತು. ಇದರಿಂದ ಮಂತಗಮುನಿಯು ಕೆರಳಿ 'ಈ ಪ್ರದೇಶಕ್ಕೆ ವಾಲಿಯು ಬಂದರೆ ಅವನ ತಲೆ ಒಡೆದು ಚೂರಾಗಲಿ' ಎಂದು ಶಾಪವಿತ್ತನು. ಇದರಿಂದ ವಾಲಿಯಲ್ಲಿ ಹಗೆತನ ಕಟ್ಟಿಕೊಂಡ ಸುಗ್ರೀವನ ವಾಸ್ತವ್ಯಕ್ಕೆ ಈ ಪ್ರದೇಶವು ಅನುಕೂಲವಾಯಿತು. ಇಲ್ಲೇ ಸುಗ್ರೀವನು ಹನುಮಾದಿಗಳೊಡನೆ ವಾಸಿಸುತ್ತಿದ್ದನು. ಶ್ರೀರಾಮ ಮತ್ತು ಸುಗ್ರೀವರಿಗೆ ಪ್ರಥಮ ಪರಿಚಯವಾದುದು ಇಲ್ಲೇ. ಇದು ಬಳ್ಳಾರಿ ಜಿಲ್ಲೆಯಲ್ಲಿ ಆನೆಗೊಂದಿಯಿಂದ ಸು. ೮. ಮೈಲುಗಳು ದೂರದಲ್ಲಿ ತುಂಗಭದ್ರಾ ನದಿಯ ದಡದಲ್ಲಿದೆ. ಈ ಪರ್ವತಕ್ಕೆ ಸಮೀಪದಲ್ಲೇ ಪಂಪಾಸರೋವರವಿದೆ. ಇಲ್ಲೇ ಪಂಪಾನದಿಯು ಹರಿದು ತುಂಗಭದ್ರೆಗೆ ಸೇರುತ್ತಿದೆ (ಮ.ವ., ವಾ.ರಾ. ಕಿಷ್ಕಿಂ.).

ಋಷಭ - ೧. ಮಹರ್ಷಿ; ಇವನು ಋಷಭಕೂಟ ಪರ್ವತದಲ್ಲಿ ತಪಸ್ಸು ಮಾಡುತ್ತಿದ್ದನು; ಇವನು ಬಹಳ ಕೋಪಿಷ್ಠ. ಈ ಪರ್ವತಕ್ಕೆ ಬಂದವರೆಲ್ಲಾ ಈ ಮುನಿಯನ್ನು ಮಾತನಾಡಿಸುತ್ತಿರಲು ಇವನು ಕೋಪಗೊಂಡು - 'ಈ

ಪರ್ವತದಲ್ಲಿ ಮಾತನಾಡುವವರ ಮೇಲೆ ಈ ಪರ್ವತವು ಕಲ್ಲುಬಂಡೆಗಳನ್ನುರುಳಿಸಲಿ. ವಾಯುವು ನಿಶ್ಯಬ್ದವಾಗಿ ಬೀಸಲಿ' ಎಂದು ಶಾಪವಿತ್ತನು. ಇದರಿಂದ ಆ ಪರ್ವತದಲ್ಲಿದ್ದ ದೇವತೆಗಳು ಭಯಗೊಂಡು ಈ ಪರ್ವತವನ್ನೇ ಬಿಟ್ಟು ನಂದಾನದಿಯ ತೀರಕ್ಕೆ ಬಂದರು. ೨. ವೃಷಭ; ಪಾಂಡ್ಯ ದೇಶದ ಪರ್ವತ; ಯುಧಿಷ್ಠಿರನು ತೀರ್ಥಯಾತ್ರೆಯ ಕಾಲದಲ್ಲಿ ಇಲ್ಲಿಗೆ ಬಂದನು. ಇಂದು ಇದು ಮಧುರೆ ಜಿಲ್ಲೆಯಲ್ಲಿದೆ. ಇದಕ್ಕೆ ಅಳಗಿರಿ ಪರ್ವತವೆನ್ನುತ್ತಾರೆ. ೩. ಮಗಧ ದೇಶದ ಪರ್ವತ (ಋಷಭಕೂಟ); ಉತ್ತರಸಾಗರದ ಸಮೀಪವಿದ್ದ ಪರ್ವತ. ಇಲ್ಲಿ ಶಾಂಡಿಲಿ ಎಂಬ ಹೆಸರುಳ್ಳ ಬ್ರಾಹ್ಮಣಿಯು ತಪಸ್ಸು ಮಾಡಿದಳು. ೪. ಬ್ರಾಹ್ಮಣನೊಬ್ಬ; ಈತನು ಯುದ್ಧಿಷ್ಠಿರನ ಸಭೆಗೆ ಬಂದನು. ೫. ಕೋಸಲ ದೇಶದ ಒಂದು ತೀರ್ಥ. ೬. ಸರ್ಪವೊಂದು (ಮ.ವ.,ಸ.,ಸ್ಕಾಂ.ಪು.).

ಋಷ್ಯಶೃಂಗ - ಬ್ರಹ್ಮರ್ಷಿ; ಅಪ್ಸರೆಯಾದ ಊರ್ವಶಿಯ ದರ್ಶನದಿಂದ ವಿಭಾಂಡಕ ಮುನಿಯು ಕ್ಷುಭಿತನಾಗಿ ಕೊಳದ ನೀರಿಗೆ ಆತನ ವೀರ್ಯವು ಜಾರಿ ಬೀಳಲು ಅದನ್ನು ಕುಡಿದ ಹೆಣ್ಣುಜಿಂಕೆಯಿಂದ ಜನಿಸಿದವ. ಅಂಗದೇಶಕ್ಕೊಮ್ಮೆ ಅನಾವೃಷ್ಟಿಯಿಂದ ಬರಗಾಲ ಪ್ರಾಪ್ತವಾಗಲು ಅಲ್ಲಿಯ ರಾಜನಾದ ರೋಮಪಾದನು ಯುಕ್ತಿಯಿಂದ ಈ ಮುನಿಯನ್ನು ತನ್ನ ರಾಜ್ಯಕ್ಕೆ ಕರೆಸಲು ಆ ರಾಜ್ಯಕ್ಕೆ ಸುಭಿಕ್ಷ ಪ್ರಾಪ್ತವಾಯಿತು. ಮುಂದೆ ರೋಮಪಾದನು ಈ ಮುನಿಗೆ ತನ್ನ ಸಾಕುಮಗಳಾದ ಶಾಂತೆಯನ್ನು ಕೊಟ್ಟು ವಿವಾಹ ಮಾಡಿದನು. ಈತನು ದಶರಥನ ಪುತ್ರಕಾಮೇಷ್ಟಿಗೆ ಹೋಗಿದ್ದನು. ಇಂದಿನ ತುಂಗಾನದಿಯ ತೀರದ ಶೃಂಗೇರಿಯು ಈ ಮುನಿಯ ಆಶ್ರಮವಿದ್ದ ಸ್ಥಳವೆನ್ನುತ್ತಾರೆ. ಕೌಶಿಕೀ ನದೀತೀರದ ಋಶ್ಯಶೃಂಗಾಶ್ರಮವೆಂಬಲ್ಲಿಗೆ ತೀರ್ಥಯಾತ್ರಾಕಾಲದಲ್ಲಿ ಯುಧಿಷ್ಠಿರನು ಲೋಮಶ ಮುನಿಯೊಂದಿಗೆ ಬಂದನು. ಇಲ್ಲೇ ಈ ಮುನಿಯ ಆಶ್ರಮವಿತ್ತೆಂದೂ ಹೇಳುತ್ತಾರೆ. ಇದು ಈಗ ಭಾಗಲ್ಪುರ ಜಿಲ್ಲೆಯ ಸಿಂಘೇಶ್ವರದಲ್ಲಿದ್ದ ಕೂಸಿ ನದಿಯ ದಡದಲ್ಲಿದೆ (ಮ.ವ.,ವಾ.ರಾ.ಬಾಲ.).

ಋಷಿಕ - ಏಶ್ಯಾ ಖಂಡದ ಉತ್ತರ ದಿಕ್ಕಿನಲ್ಲಿ ಕಾಂಭೋಜದ ಸಮೀಪವಿರುವ ದೇಶ; ಇದನ್ನೇ ರಶ್ಯಾ ಎನ್ನುತ್ತಾರೆ (ಮ.ಸ.,ಭೀ.).

ಋಷಿಕುಲ್ಯ - ಕಳಿಂಗ ದೇಶದ ಒಂದು ನದಿ; ಇದು ಇಂದಿನ ಗಂಜಾಂ ಜಿಲ್ಲೆಯಲ್ಲಿರುವ ಮಹೇಂದ್ರ ಜಿಲ್ಲೆಯಲ್ಲಿ ಹುಟ್ಟಿ ಹರಿಯುತ್ತದೆ (ಮ.ವ.,ಭೀ.).

ಋಷಿಗಿರಿ - ಮಗಧ ದೇಶದ ಒಂದು ಪರ್ವತ.

ಏ

ಏಕಚಕ್ರ - ೧. ಒಬ್ಬ ದಾನವ. ೨. ಬಕಾಸುರನ ಪೀಡೆಗೊಳಗಾದ ನಗರಿ. (ಒಂದು ಅಗ್ರಹಾರ.) ಇಲ್ಲಿ ಪಾಂಡವರು ವಾಸಮಾಡಿದ್ದರು. ಇಲ್ಲಿಯೇ ಭೀಮನು ಬಕಾಸುರನನ್ನು ಕೊಂದನು. ಪಾಂಡವರೆಲ್ಲಾ ಇಲ್ಲಿ ಭಿಕ್ಷೆ ಬೇಡಿ ತಂದ ಅನ್ನವನ್ನು ಎರಡು ಪಾಲುಮಾಡಿ ಕುಂತಿ ಮತ್ತು ನಾಲ್ವರು ಮಕ್ಕಳು ಅರ್ಧಪಾಲನ್ನೂ, ಭೀಮನು ಅರ್ಧಪಾಲನ್ನೂ ಉಣ್ಣುತ್ತಿದ್ದರು (ಮ.ಆ.).

ಏಕಜಟೆ - ಸೀತೆಯನ್ನು ಅಶೋಕವನದಲ್ಲಿ ಕಾಯುತ್ತಿದ್ದ ರಾಕ್ಷಸಿ (ವಾ.ರಾ.ಸುಂ.).

ಏಕತ - ಗೌತಮನ ಪುತ್ರ; ಋಷಿ. ೨. ಬ್ರಹ್ಮನ ಮಾನಸಪುತ್ರ; ದ್ವಿತ ಮತ್ತು ತ್ರಿತ ಎಂಬುವರು ಈತನ ಸಹೋದರರು. ಇವನು ಈ ಸಹೋದರರೊಡನೆ ಕೂಡಿ ಉಪರಿಚರವಸುವಿನ ಯಜ್ಞದಲ್ಲಿ ಸದಸ್ಯನಾಗಿದ್ದ (ಮ.ಶಾಂ.). ನೋ.- ತ್ರಿತ.

ಏಕಪರ್ವತ - ಇಂದ್ರಪ್ರಸ್ಥದಿಂದ ಮಗಧಪುರಕ್ಕೆ ಹೋಗುವ ಮಾರ್ಗದಲ್ಲಿರುವ ಪರ್ವತ.

ಏಕಪರ್ಣೆ - ಹಿಮವಂತನ ಪುತ್ರಿ; ಈಕೆಯ ತಾಯಿ ಮೇನೆ; ಪಾರ್ವತಿಯು ಸಹೋದರಿ; ಅಸಿತಮಹರ್ಷಿ ಈಕೆಯ ಪತಿ; ಈಕೆಯ ಪುತ್ರ ದೇವಲಮುನಿ; ಈಕೆ ಒಂದು ಎಲೆ ತಿಂದುಕೊಂಡು ತಪಸ್ಸುಮಾಡಿದಳು. ಈಕೆಯ ಇನ್ನೊಬ್ಬ ಸಹೋದರಿ ಏಕಪಾಟಲೆ (ಹರಿ.,ಮ.).

ಏಕಪಾಟಲೆ - ಪಾರ್ವತಿಯ ಸಹೋದರಿ; ಜೈಗೀಷವ್ಯ ಮುನಿಯ ಪತ್ನಿ (ಹರಿ.).

ಏಕರಾತ್ರ - ಒಂದು ತೀರ್ಥ.

ಏಕಲವ್ಯ - ೧. ಹಿರಣ್ಯಧನು ಎಂಬ ಬೇಡನ ಮಗ. ಈತನು ದ್ರೋಣಾಚಾರ್ಯರ ಪ್ರತಿಮೆಯನ್ನು ಮಾಡಿಕೊಂಡು ಅದನ್ನು ಗುರುವೆಂದೇ ಭಾವಿಸಿ ಅದರ ಮುಂದೆ ಬಿಲ್ಲು ವಿದ್ಯೆ ಕಲಿತು ಅಸ್ತ್ರವಿದ್ಯಾವಿಶಾರದನೆನ್ನಿಸಿದ್ದನು. ಮುಂದೆ ದ್ರೋಣಾಚಾರ್ಯರು ಅರ್ಜುನನ ಶ್ರೇಯಸ್ಸಿಗಾಗಿ ಏಕಲವ್ಯನ ಬಲಗೈಯ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಕೇಳಿದರು. ಇವನು ಕುರುಕ್ಷೇತ್ರದ ಯುದ್ಧದಲ್ಲಿ ಕೌರವಪಕ್ಷದಲ್ಲಿ ನಿಂತು ಹೋರಾಡಿದ. ಇವನ ವಧೆ ಶ್ರೀಕೃಷ್ಣನಿಂದಾಯಿತು. ಇವನ ಮಗ ಕೇತುಮಾನ್. ಇವನು ಭೀಮನಿಂದ ಹತನಾದ. ೨. ದೇವಶ್ರವನ ಪುತ್ರ. ನೋ. ಶತ್ರುಘ್ನ. (ಮ.ಸ.,ಆ.,ಭೀ., ದ್ರೋ.,ಕ.,ವ.,ಹರಿ.,ಭವಿ.ಪು.).

ಏಕಲಿಂಗಜಿ - ಉದಯಪುರದಿಂದ ಇಲ್ಲಿಗೆ ಹನ್ನೆರಡು ಮೈಲಿ ದೂರವಿದೆ. ಏಕಲಿಂಗ ಮೂರ್ತಿಗೆ ನಾಲ್ಕು ದಿಕ್ಕಿಗೂ ಮುಖಗಳಿವೆ. ಈತನು ಮೇವಾಡದ ರಾಣಾನ

ಆರಾಧ್ಯ ದೇವತೆ. ಬಾಪ್ಪಾರಾವಳನು ಈತನ ನಿಸ್ಸೀಮ ಭಕ್ತ (ಕ್ಷೇತ್ರದ.).

ಏಕಶಯ - ಒಂದು ಸರ್ಪ; ತಕ್ಷಕನ ಪುತ್ರನಾದ ಅಶ್ವಸೇನ (ಮ.ಕ.).

ಏಕಹಂಸ - ಒಂದು ತೀರ್ಥ (ಮ.ವ.).

ಏಕಾಕ್ಷ - ದಾನವನೊಬ್ಬ (ಮ.ಆ.).

ಏಕಾದಶರುದ್ರ - ಮೃಗವ್ಯಾಧ, ಸರ್ಪ, ನಿಋತಿ, ಅಜೈಕಪಾತ್, ಅಹಿರ್ಬುದ್ಧ್ಯ, ಪಿನಾಕಿ, ದಹನ, ಈಶ್ವರ, ಕಪಾಲಿ, ಸ್ಥಾಣು, ಭಗ (ಅ.ಪ.). ಅಜೈಕಪಾತ್, ಅಹಿರ್ಬುದ್ಧ್ಯ, ವಿರೂಪಾಕ್ಷ, ರೈವತ, ಹರ, ಬಹುರೂಪ, ತ್ರ್ಯಂಬಕ, ಸುರೇಶ್ವರ, ಸಾವಿತ್ರ, ಜಯಂತ, ಪಿನಾಕಿ (ಮ.ಶಾಂ.).ಅಜೈಕಪಾತ್, ಅಹಿರ್ಬುದ್ಧ್ಯ, ಪಿನಾಕಿ, ಋತ, ಪಿತೃರೂಪ, ತ್ರ್ಯಂಬಕ, ಮಹೇಶ್ವರ, ವೃಷಾಕಪಿ, ಶಂಭು, ಹವನ, ಈಶ್ವರ (ವಿಷ್ಣುಪು., ಭಾಗ., ಹರಿ.).

ಏಕಾಂಗಿ - ಈಕೆಯು ಋಷೀಕೇಶನೆಂಬ ಗೊಲ್ಲನ ಮಗಳು; ದುಂದುಭಿ ಎಂಬ ಒಕ್ಕಣ್ಣ ಬ್ರಾಹ್ಮಣನು ಋಷೀಕೇಶನ ಪುರೋಹಿತ. ಇವನಿಗೆ ಏಕಾಂಗಿಯ ಮೇಲೆ ಮತ್ತು ಋಷಿಕೇಶನ ಗೋಧನದ ಮೇಲೆ ಕಣ್ಣಿತ್ತು. ಮುಂದೆ ದುಂದುಭಿಯು ಏಕಾಂಗಿಯ ಮೇಲೆ ನಿಷ್ಕಾರಣವಾಗಿ ಅಪವಾದವನ್ನು ಹೇಳಲು ಋಷಿಕೇಶನು ಅದನ್ನು ನಂಬಿ ಮಗಳನ್ನು ಬಿಟ್ಟುಬಿಟ್ಟನು. ಮುಂದೆ ಏಕಾಂಗಿಯು ನಿರಪರಾಧಿ ಎಂದು ತಂದೆಗೆ ಗೊತ್ತಾಯಿತು. ಈಕೆಯು 'ಒಕ್ಕಣ್ಣನನ್ನು ನಂಬಿದವರು ಹಾಳಾಗಲಿ' ಎಂದು ಶಾಪವಿತ್ತಳು (ಸ್ಕಾಂದಪು.).

ಏಕನಂಗಾ - ಯಶೋದೆಯ ಪುತ್ರಿ; ಶ್ರೀಕೃಷ್ಣನ ಸಹೋದರಿ.

ಏಕಾನೇಕಾ - ಅಂಗೀರಸನ ಪುತ್ರಿ; ಈಕೆಗೆ 'ಕುಹೂ' ಎಂಬ ಹೆಸರಿದೆ.

ಏಕಾವಳಿ - ರೈಭ್ಯರಾಜನ ಮಗಳು; ಹೈಹಯ ಮಥವಾ ಏಕವೀರ ರಾಜನಿಗೆ ಈಕೆಯನ್ನು ವಿವಾಹಮಾಡಿಕೊಡಬೇಕೆಂದಿದ್ದಾಗ ಕಾಲಕೇತು ಎಂಬ ರಾಕ್ಷಸ ಈಕೆಯನ್ನಪಹರಿಸಲು ಆ ರಾಕ್ಷಸನನ್ನು ಕೊಂದು ಏಕಾವಳಿಯನ್ನು ಲಗ್ನವಾದನು (ದೇವಿಭಾ.).

ಏಲಾಪತ್ರ - ಸರ್ಪರಾಜನೊಬ್ಬ; ಕದ್ರುವಿನ ಮಗ; ಕದ್ರುವಿನಿಂದ ಸರ್ಪಗಳಿಗೆ ಶಾಪಬಂದೊಡನೆ - ' ಸರ್ಪಯಾಗವು ನಡೆಯಲಾರದು; ಇದನ್ನು ನಾನು ಬ್ರಹ್ಮಲೋಕದಲ್ಲಿ ಹೇಳಿದ್ದೇನೆ' ಎಂದು ಈತನು ಸರ್ಪಗಳನ್ನು ಸಮಾಧಾನಪಡಿಸಿದನು (ಮ.ಆ.).

ಐ

ಐತರೇಯ - ಒಬ್ಬ ಋಷಿ; ಋಗ್ವೇದದ ಐತರೇಯಶಾಖೆಯು ಈತನಿಂದ

ಪ್ರಸಿದ್ಧವಾಗಿದೆ. ಇವನ ತಂದೆ ಮಾಂಡೂಕಿ; ತಾಯಿ ಇತರೆ. ಇವನು ತನ್ನ ಜೀವನದಲ್ಲೆಲ್ಲಾ ದ್ವಾದಶಾಕ್ಷರಿ ಮಂತ್ರವನ್ನು ಜಪಿಸಿ, ವಾಸುದೇವನ ಅನುಗ್ರಹಕ್ಕೆ ಪಾತ್ರನಾಗಿ ಗೃಹಸ್ಥಾಶ್ರಮಿಯಾಗಬೇಕೆಂದು ಹರಿಮೇಧನೆಂಬ ಬ್ರಾಹ್ಮಣನ ಮಗಳನ್ನು ಮದುವೆಯಾಗಿ ಅನೇಕ ಯಜ್ಞಗಳನ್ನು ಮಾಡಿ, ಪುತ್ರರನ್ನು ಪಡೆದು ಲೋಕವಿಖ್ಯಾತನಾದನು. ಇವನ ಹೆಸರಿನ ಪ್ರಸಿದ್ಧ ಉಪನಿಷತ್ತು ಒಂದಿದೆ.

ಐಕ್ಷ್ವಾಕಿ - ಚಂದ್ರವಂಶದ ಸುಹೋತ್ರನ ಪತ್ನಿ. ಈಕೆಗೆ ಜಯಂತಿ ಎಂಬ ಹೆಸರೂ ಇದೆ. ಈಕೆಗೆ ಅಜಮೀಢ ಮುಂತಾದ ಮಕ್ಕಳಿದ್ದರು (ಮ.ಆ.).

ಐಂದ್ರಿ - ಇಂದ್ರನ ಮಗನಾದ ಅರ್ಜುನ. ನೋ. - ಅರ್ಜುನ.

ಐರಾವತ - ೧. ಇಲಾವೃತ್ತದ ಸಮೀಪದಲ್ಲಿದ್ದ ದೇಶ. ನೋ. - ಹರ್ಯಂಗ. ೨. ಒಂದು ಸರ್ಪ; ತಕ್ಷಕನ ಮಗನಾದ ಅಶ್ವಸೇನನನ್ನು ಕಾಪಾಡಿದವ. ೩. ದೇವಗಜ; ಇಂದ್ರನ ವಾಹನ; ಭದ್ರಮನಸನೆಂಬ ಗಜದ ಮಗ. ೪. ಶ್ರೀಕೃಷ್ಣನು ಕೊಂದ ಒಬ್ಬ ರಾಕ್ಷಸ (ಮ.ಸ.,ಭೀ.,ಆ.,ಉ.).

ಐಲ - ಕ್ಷತ್ರಿಯ; ಇಲೆಯ ಮಗನಾದ ಪುರೂರವ. ಈತನ ತಂದೆ ಬುಧ (ಮ.ಆ.,ಷ.).

ಐಲಬಿಲ - ಕುಬೇರ; ಇಲಬಿಲೆಯ ಮಗ; ತಂದೆ ವಿಶ್ರವಸು. ಕುಬೇರನಿಗೆ ವೈಶ್ರವಣನೆಂಬ ಹೆಸರೂ ಇದೆ (ಮ.ಸ.).

ಐಷೀಕಾಸ್ತ್ರ - ಇದಕ್ಕೆ ಅಪಾಂಡವೇಯಾಸ್ತ್ರ ಅಥವಾ ಬ್ರಹ್ಮಾಸ್ತ್ರವೆಂಬ ಹೆಸರಿದೆ. ಪಾಂಡವರ ವಧೆಗಾಗಿ ಅಶ್ವತ್ಥಾಮನು ಈ ಅಸ್ತ್ರವನ್ನು ಪ್ರಯೋಗಿಸಿದನು. ಕೊನೆಗೆ ಆತನಿಂದ ಈ ಅಸ್ತ್ರವನ್ನು ಉಪಸಂಹರಿಸಲು ಆಗದುದರಿಂದ ಅದು ಉತ್ತರೆಯ ಗರ್ಭದಲ್ಲಿದ್ದು ಶಿಶುವನ್ನು ಹಿಂಸಿಸತೊಡಗಿತು. ಶ್ರೀಕೃಷ್ಣನು ಈ ಬಾಣದಿಂದ ಶಿಶುವನ್ನು ರಕ್ಷಿಸಿದನು. ನೋ. - ಪರೀಕ್ಷಿತ (ಮ.ಶಾಂ.,ಸೌ.).

ಓ

ಓಘರಥ - ಕ್ಷತ್ರಿಯ; ಸೂರ್ಯವಂಶದ ಓಘವತನ ಮಗ; ಇವನ ಮಗ ನೃಗ (ಮ.ಅನು.).

ಓಘವತಿ - ೧. ಸೂರ್ಯವಂಶದ ಓಘವತನ ಮಗಳು; ಈಕೆ ಸುದರ್ಶನನ ಪತ್ನಿ. ಈಕೆ ಅರ್ಧಶರೀರದಿಂದ ಪತಿಸೇವೆ ಮಾಡುತ್ತಿದ್ದಳು; ಉಳಿದರ್ಧ ಶರೀರದಿಂದ ನದಿಯಾಗಿ ಹರಿದಳು. ಈಕೆ ಅತಿಥಿಸತ್ಕಾರ ಪ್ರಿಯಳು. ೨. ಸರಸ್ವತಿ ನದಿಯ ಉಪನದಿ; ಭಾರತ ಯುದ್ಧವು ಇದರ ಹತ್ತಿರವೇ ನಡೆಯಿತು (ಮ.ಅನ.).

ಓಘವಂತ (ಓಘವತ) - ನೋ. - ಓಘರಥ, ಓಘವತಿ. ಕ್ಷತ್ರಿಯ; ಸೂರ್ಯವಂಶದ ಪ್ರತೀಕರಾಜನ ಮಗ.

ಓಂಕಾರೇಶ್ವರ (ಮಾಂಧಾತಾ) - ಇದು ಇಂದೂರಿನಿಂದ ೪೭ ಮೈಲು ದೂರದಲ್ಲಿದೆ. ಇದು ಅಲೌಕಿಕತೀರ್ಥ. ಇದು ದ್ವಾದಶ ಜ್ಯೋತಿರ್ಲಿಂಗಗಳಲ್ಲೊಂದು. ನರ್ಮದೆಯಲ್ಲಿ ಮಾಂಧಾತಾ ಎಂಬ ನಡುಗಡ್ಡೆಯಿದೆ. ಈ ದ್ವೀಪದಲ್ಲಿ ಮಾಂಧಾತಾ ಚಕ್ರವರ್ತಿಯು ಶಿವನ ಆರಾಧನೆ ಮಾಡಿದನೆನ್ನುತ್ತಾರೆ. ಈ ದ್ವೀಪದ ಆಕಾರ ಪ್ರಣವರೂಪದ್ದು. ನರ್ಮದಾತೀರದಲ್ಲಿ ಇದು ಇರುವ ಗ್ರಾಮಕ್ಕೆ ವಿಷ್ಣುಪುರವೆಂದು ಹೆಸರು.

ಓಢ್ರ - ದೇಶವೊಂದು (ಮ.ಭೀ.).

ಓಂ - ಪ್ರಣವ; ಪರಮಾತ್ಮ; ಒಂದು ಮಂತ್ರ. ಮನನ ಮಾಡುವವರನ್ನು ಕಾಪಾಡುವುದಾದುದರಿಂದ ಮಂತ್ರ ('ಮನನಾತ್‌ತ್ರಾಯತೇ ಇತಿ ಮಂತ್ರಃ')

ಓಸ್ಪ್ಯಾನಿಯಾ - ನೋ. - ಕುಶ, ಶಕ.

ಔ

ಔತ್ತಮ - ಉತ್ತಾನಪಾದ ರಾಜನ ಮೊಮ್ಮಗ; ಉತ್ತಮ ಮತ್ತು ಬಹುಳೆಯಲ್ಲಿ ಹುಟ್ಟಿದ ಸತ್ಪುತ್ರ (ಮಾರ್ಕಂ.ಪು.).

ಔದುಂಬರ - ದೇಶವೊಂದು. ಗುಜರಾತು ಪ್ರಾಂತದ ಕಚ್ಛ; ಇದರ ಪ್ರಾಚೀನ ರಾಜಧಾನಿ ಕೋಟೇಶ್ವರ (Koteswara) ಅಥವಾ ಕಚ್ಛೇಶ್ವರ; ಇದಕ್ಕೆ ಈಗ ಕಚ್ಛವೆನ್ನುತ್ತಾರೆ (ಕ್ಷೇತ್ರದ.).

ಔದ್ದಾಲಕ - ತೀರ್ಥವೊಂದು (ಮ.ವ.).

ಔದ್ಭಿದ - ಕ್ರೌಂಚದ್ವೀಪದ ದೇಶ (ಮ.ಭೀ.).

ಔರ್ವ - ಚ್ಯವನನ ಪುತ್ರ. ಈತನ ತಾಯಿ ಮನುಕನ್ಯೆಯಾದ ಆರುಷಿ. ಈತನು ತಾಯಿಯ ಊರುವಿನಿಂದ ಹುಟ್ಟಿದವ. ಇವನು ತನ್ನ ವಂಶದ ಶತ್ರುಗಳಾದ ಕಾರ್ತವೀರ್ಯನ ಕುಲದವರನ್ನು ನಾಶಮಾಡಲು ಯತ್ನ ಮಾಡಿದನು. ಕೊನೆಗೆ ಈತನು ತನ್ನ ಪಿತೃದೇವತೆಗಳ ಹೇಳಿಕೆಯಂತೆ ಕೋಪವನ್ನು ಸಮುದ್ರದಲ್ಲಿ ಬಿಟ್ಟನು. ಇದೇ ಬಡಬಾಗ್ನಿ. ಇವನ ಮಗನೇ ಋಚೀಕ; ಮಗಳೇ ಅಯೋನಿಜೆಯಾದ ಕಂದಳಿ. ಕಂದಳಿಯ ಪತಿಯೇ ದೂರ್ವಾಸಮುನಿ (ಮ.ಆ.).

ಔಶೀನರಿ - ಉಶೀನರ ರಾಜನ ಪುತ್ರನಾದ ಶಿಬಿ. ಈತನ ತಾಯಿ ಮಾಧವಿ. ನೋ. ಶಿಬಿ (ಮ.ಸ.,ಶಾಂ.).

ಔಷನಸ - ಒಂದು ತೀರ್ಥ. ಇದಕ್ಕೆ ಕಪಾಲಮೋಚನ ಎಂದು ಹೆಸರಿದೆ. ಷಣ್ಮುಖನಿಗೆ ಅಭಿಷೇಕ ನಡೆದ ಪುಣ್ಯತೀರ್ಥ (ಮ.ಶ.).

ಔಷನಸವ್ಯೂಹ - ರಾವಣನು ಸೇನೆ ನಿಲ್ಲಿಸಿದ ಕ್ರಮ (ಮ.ವ.)

ಔಷಿಜ - ಉಶಿಕ್ ಎಂಬ ಋಷಿಯ ಮಗ; ಕಕ್ಷೀವಾನ್ ಎಂಬ ಹೆಸರೂ ಈತನಿಗಿದೆ (ಮ.ಸ., ಅನು.).

ಕ

ಕಂಸ - ಯದುವಂಶದ ರಾಜ; ಈತನ ತಂದೆ ಉಗ್ರಸೇನ. ಈತನು ದ್ರುಮಿಲನೆಂಬ ದಾನವನಿಂದ ಉಗ್ರಸೇನನ ಪತ್ನಿಯಲ್ಲಿ ಹುಟ್ಟಿದ ಪುತ್ರ (ಹರಿ.). ಉಗ್ರಸೇನನ ರಾಣಿಗೆ ತನ್ನನ್ನು ಕೂಡಿದವನು ತನ್ನ ಪತಿಯಲ್ಲವೆಂದು ತಿಳಿದು ಕೋಪದಿಂದ - ನಿನ್ನ ದುರ್ಬೀಜದಿಂದ ಹುಟ್ಟಿದವನು ಯದುವಂಶೀಯರಿಂದಲೇ ಸಾಯಲಿ ಎಂಬ ಶಾಪವಿತ್ತಳು. ಈ ಶಾಪದ ಫಲವಾಗಿಯೇ ಈತನ ಮರಣವು ಶ್ರೀಕೃಷ್ಣನಿಂದಾಯಿತು. ಈತನಿಗೆ ಜರಾಸಂಧನ ಪುತ್ರಿಯರಾದ ಆಸ್ತಿಪ್ರಾಸ್ತಿಯರು ಪತ್ನಿಯರು. ಇವನು ಕಾಲನೇಮಿ ಎಂಬ ರಾಕ್ಷಸನ ವಂಶದವನು. ಇವನು ತನ್ನ ತಂಗಿಯಾದ ದೇವಕಿಯ ವಿವಾಹ ಕಾಲದಲ್ಲಿ ಆಕಾಶವಾಣಿಯನ್ನು ಕೇಳಿ ದೇವಕಿಯ ಕೊಲೆಗೆ ಸಿದ್ಧನಾಗಲು ದೇವಕಿಯ ಪತಿಯಾದ ವಸುದೇವನು ಕಂಸನನ್ನು ಸಮಾಧಾನಪಡಿಸುತ್ತಾ, ಈಕೆಯಲ್ಲಿ ಹುಟ್ಟಿದ ಮಕ್ಕಳನ್ನೆಲ್ಲಾ ಆತನಿಗೆ ಒಪ್ಪಿಸುತ್ತೇನೆಂದು ಭರವಸೆಕೊಟ್ಟು ಪತ್ನಿಯನ್ನು ಕೊಲೆಯಿಂದ ತಪ್ಪಿಸಿದನು. ಮುಂದೆ ಶ್ರೀಕೃಷ್ಣನು ಗೋಕುಲದಲ್ಲಿ ವೃದ್ಧಿಹೊಂದುತ್ತಿರುವನೆಂದು ತಿಳಿದು ಆತನ ಕೊಲೆಗೆ ಪೂತನಿ, ಧೇನುಕ, ಕೇಶಿ, ಬಕ, ಅಘ ಮೊದಲಾದ ರಾಕ್ಷಸರನ್ನು ಕಳುಹಿಸಿ, ಸಫಲನಾಗದೆ ತರುಣರಾಗಿದ್ದ ಬಲರಾಮಕೃಷ್ಣರನ್ನು ತನ್ನ ಮಂತ್ರಿಯಾದ ಅಕ್ರೂರನ ಮೂಲಕ ಮಧುರೆಗೆ ಆಮಂತ್ರಿಸಲು, ಅವರು ಮಾವ ಕಂಸನ ಆಮಂತ್ರಣವನ್ನು ಸ್ವೀಕರಿಸಿ ತಮ್ಮ ವಧೆಗಾಗಿ ನಿಯೋಜಿಸಿದ್ದ ಕುವಲಯಾಪೀಡವೆಂಬ ಮದ್ದಾನೆಯನ್ನೂ, ಚಾಣೂರ ಮುಷ್ಟಿಕರೆಂಬ ಜಟ್ಟಿಗಳನ್ನೂ ಸಂಹರಿಸಿ, ಕಂಸನನ್ನು ಕೊಂದು ಉಗ್ರಸೇನನಿಗೆ ಮಧುರೆಯಲ್ಲಿ ಪಟ್ಟಾಭಿಷೇಕವನ್ನು ಮಾಡಿದರು. ಕಂಸನು ಕಕುರ ವಂಶದವನು (ಹರಿ.,ಮ.ಆ.,ಭಾಗ.,ವಿಷ್ಣುಪು).

ಕಂಸಾ - ಕಂಸನ ತಂಗಿ. ವಸುದೇವನ ತಮ್ಮನಾದ ದೇವಶ್ರವನ (ದೇವಭಾಗನ) ಪತ್ನಿ. ಈಕೆಗೆ ಚಿತ್ರಕೇತು, ಬೃದದ್ಬಲ ಮತ್ತು ಉದ್ಧವರು ಮಕ್ಕಳು. ನೋ. ಉದ್ಧವ (ಭಾಗ.).

ಕಂಸಾವತಿ - ಈಕೆಯು ವಸುದೇವನ ತಮ್ಮನಾದ ದೇವಶ್ರವನ ಪತ್ನಿ. ಈಕೆಗೆ ಸುವೀರ ಮತ್ತು ಇಷುವಂತರು ಮಕ್ಕಳು (ಭಾಗ.).

ಕಕುತ್ಸ್ಥ - ಕ್ಷತ್ರಿಯ; ಸೂರ್ಯವಂಶದ ಶಶಾದರಾಜನ ಮಗ. ಈತನು ಇಕ್ಷ್ವಾಕುವಿಗೆ ಮೊಮ್ಮಗ. ಅನೇನನು ಇವನ ಮಗ. ನೋ. ಇಂದ್ರವಾಹ (ಮ.ವ.). ಕಕುತ್ = ಎತ್ತಿನ ಹಿಣಿಲು - ಇದರ ಮೇಲೆ ಕುಳಿತು ಯುದ್ಧ ಮಾಡಿದ ರಾಜ ಶಶಾದನು.

ಕಕುದ್ಮಾನ್ - ಹಿಮಾಲಯದ ಒಂದು ಶಿಖರ; ಇಲ್ಲೇ ಶಿವನ ವಾಹನವಾದ ನಂದಿಯು ಜನಿಸಿದನು (ಮತ್ಸ್ಯಪು.).

ಕಕುದ್ಮಿ - ಸೂರ್ಯವಂಶದ ರಾಜ. ಈತನಿಗೆ ರೇವತ ಎಂಬ ಹೆಸರೂ ಇದೆ. ಈತನು ತನ್ನ ಮಗಳಾದ ರೇವತಿಗೆ ಪತಿ ಯಾರೆಂದು ತಿಳಿಯಲು ಮಗಳನ್ನು ಕೂಡಿಕೊಂಡು ಬ್ರಹ್ಮಲೋಕಕ್ಕೆ ಹೋದನು. ಆಗ ಅಲ್ಲಿ ದೇವತೆಗಳು ಶಾಸ್ತ್ರದ ಕುರಿತು ವಿವಾದದಲ್ಲಿದ್ದರು. ರೇವತನು ಅಲ್ಲೇ ಕಾದು ಸಮಯನೋಡಿ ಬ್ರಹ್ಮನನ್ನು ವಿಚಾರಿಸಲು ಬ್ರಹ್ಮನು 'ಯದುವಂಶದ ಬಲರಾಮನೇ ಈಕೆಯ ಪತಿ' ಎಂದನು. ಇಷ್ಟರಲ್ಲಿ ಎಷ್ಟೋ ಯುಗಗಳು ಕಳೆದಿದ್ದವು. ಕಕುದ್ಮಿಯು ಭೂಮಿಗೆ ಬಂದು ಬಲರಾಮನಿಗೆ ತನ್ನ ಮಗಳನ್ನು ವಿವಾಹ ಮಾಡಿಕೊಟ್ಟು ತಾನು ತಪಸ್ಸಿಗೆ ಹೋದನು. ನೋ. - ರೇವತಿ (ಭಾಗ.,ಹರಿ.).

ಕಕ್ಷಸೇನ - ೧. ಯುಧಿಷ್ಠಿರನ ಸಭೆಯ ಕ್ಷತ್ರಿಯ (ಮ.ಸ.). ೨. ಯಮನ ಸಭೆಯಲ್ಲಿದ್ದ ಕ್ಷತ್ರಿಯ. ೩. ಒಬ್ಬ ರಾಜ ಋಷಿ (ಮ.ಸ.,ಅನು.).

ಕಕ್ಷಾ - ಒಂದು ದೇಶ (ಮ.ಭೀ.)

ಕಕ್ಷೀವತ್ - ಒಬ್ಬ ಋಷಿ; ಅಂಗಿರಸನ ವಂಶದವ. ಈತನು ಅಶ್ವಿನೀ ದೇವತೆಗಳನ್ನು ಸ್ತುತಿಸಿ ದಿವ್ಯಜ್ಞಾನ ಪಡೆದನು (ಋ).

ಕಕ್ಷೀವಂತ - ೧. ಉಷಿಕ್ ಋಷಿಯ ಮಗ; ಇವನಿಗೆ ಔಷಿಜನೆಂಬ ಹೆಸರೂ ಇದೆ. ೨. ಕಳಿಂಗ ರಾಜನಾದ ಬಲಿಯು ಮಕ್ಕಳಿಲ್ಲದುದರಿಂದ ಪತ್ನಿಯಾದ ಸುದೇಷ್ಣೆಯನ್ನು ದೀರ್ಘತಮನೆಂಬ ಋಷಿಯ ಬಳಿಗೆ ಕಳುಹಿಸಲು ಆಕೆಯು ಆ ಮುನಿಯ ಬಳಿಗೆ ತಾನು ಹೋಗದೆ ತನ್ನ ದಾಸಿಯನ್ನು ಕಳುಹಿಸಿದಳು. ಈ ದಾಸಿಯಲ್ಲಿ ಆ ಮುನಿಯಿಂದ ಹುಟ್ಟಿದ ಮಗನೇ ಕಕ್ಷೀವಂತ. ೩. ಗುರುಕುಲದಲ್ಲಿ ಕಕ್ಷೀವಂತನು ಬ್ರಹ್ಮಚರ್ಯವ್ರತವನ್ನು ಮುಗಿಸಿ ಮನೆಗೆ ಹಿಂದಿರುಗಿ ಬರುವಾಗ ರಾತ್ರಿಯಾದುದರಿಂದ ಒಂದೆಡೆ ಮಲಗಿದನು. ಆಗ ಭಾವಯವ್ಯನ ಮಗನಾದ ಸ್ವನಯನೆಂಬ ರಾಜನು ತನ್ನ ಮಿತ್ರರೊಡನೆ ಆಡುತ್ತಾ ಅಲ್ಲಿಗೆ ಬಂದು ಮಲಗಿದ್ದ ಕಕ್ಷೀವಂತನನ್ನು ಕಂಡು ಆತನ ಸೌಂದರ್ಯ ಮತ್ತು ತೇಜಸ್ಸಿಗೆ ಮರುಳಾಗಿ ಸ್ವಕನ್ಯಾಪ್ರದಾನದ ಮನಸ್ಸಿನಿಂದ ಆತನನ್ನು

ಎಬ್ಬಿಸಿ ಕುಲಗೋತ್ರಾದಿಗಳನ್ನು ಕೇಳಿ ತನ್ನ ರಥಸಹಿತವಾದ ಹತ್ತು ಮಂದಿ ಕನ್ಯೆಯರನ್ನೂ, ನೂರು ನಿಷ್ಕಗಳನ್ನೂ (ನಿಷ್ಕ= ಎಂಟು ರತಿ ತೂಕದ ಬಂಗಾರ), ನೂರು ಕುದುರೆಗಳನ್ನೂ, ನೂರು ಎತ್ತುಗಳನ್ನೂ, ಸಾವಿರದ ಅರವತ್ತು ಗೋವುಗಳನ್ನೂ, ಹನ್ನೊಂದು ರಥಗಳನ್ನೂ ಕೊಟ್ಟನು. ಕಕ್ಷೀವಂತನು ಆ ಕನ್ಯಾಶುಲ್ಕಗಳನ್ನೆಲ್ಲ ಸ್ವೀಕರಿಸಿದನು (ಋ.).

ಕಂಕ - ೧. ಕ್ಷತ್ರಿಯ; ಚಂದ್ರವಂಶದ ವೃಷ್ಣಿಯ ಕುಲದವ. ೨. ಅಜ್ಞಾತವಾಸದಲ್ಲಿ ವೇಷಧಾರಿಯಾಗಿದ್ದ ಯುಧಿಷ್ಠಿರನ ಹೆಸರು. ಇವನು ವಿರಾಟನ ಸಭಾನಾಯಕ; ಅಶ್ವ ವಿದ್ಯೆಯನ್ನು ಕಲಿತವನು; ಪಗಡೆಯಾಟವನ್ನು ತಿಳಿದವನು. ಇವನು ಸಂನ್ಯಾಸಿವೇಷದಲ್ಲಿದ್ದು ಜ್ಯೋತಿಷ್ಯ, ಪಕ್ಷಿಶಕುನ, ವೇದ, ವೇದಾಂಗ, ಪುರುಷಾರ್ಥಗಳಲ್ಲೂ, ನೀತಿಶಾಸ್ತ್ರಗಳಲ್ಲೂ ಪಾರಂಗತನಾಗಿ ವಿರಾಟನು ಕೇಳುವ ಪ್ರಶ್ನೆಗೆ ತೃಪ್ತಿಕರವಾಗಿ ಉತ್ತರವನ್ನು ಕೊಟ್ಟು, ಅವನನ್ನು ಸಂತೋಷಪಡಿಸುತ್ತಿದ್ದನು. (ಮ.ವಿ.). ೩. ಕಂಸನ ಸಹೋದರ. ಇವನನ್ನು ಬಲರಾಮನು ಕೊಂದನು.

ಕಂಕಣಾದೇವಿ - ಅಹಿರಾವಣ, ಮಹಿರಾವಣರ ಇಷ್ಟದೇವತೆ. ಈಕೆಗೆ ಕಾಮಾಕ್ಷಿ ಎನ್ನುತ್ತಾರೆ. ನೋ. ಅಹಿರಾವಣ.

ಕಂಕಾ - ವಸುದೇವನ ತಮ್ಮನಾದ ಅನಕನ ಪತ್ನಿ. ಕಂಸನ ತಂಗಿ. ಈಕೆಗೆ ಸತ್ಯಜಿತು ಮತ್ತು ಪುರುಜಿತರು ಮಕ್ಕಳು (ಭಾಗ.).

ಕಚ - ಬೃಹಸ್ಪತಿಯ ಮಗ; ಇವನು ಶುಕ್ರಾಚಾರ್ಯರಲ್ಲಿ ಮೃತಸಂಜೀವಿನಿ ಮಂತ್ರಕ್ಕಾಗಿ ಗುರುಕುಲವಾಸವನ್ನು ಮಾಡುತ್ತಿದ್ದಾಗ ಆಚಾರ್ಯರ ಮಗಳಾದ ದೇವಯಾನಿಯು ಕಚನನ್ನು ಕಂಡು ಮೋಹಿಸಿದಳು. ಈತನು ರಾಕ್ಷಸರ ತಂತ್ರದಿಂದ ಕಪ್ಪೆಯಂತೆ ಸತ್ತು ಹುಟ್ಟಿ ಸತ್ತು ಕೊನೆಗೊಮ್ಮೆ ಗುರುಗಳಾದ ಶುಕ್ರಾಚಾರ್ಯರ ಹೊಟ್ಟೆಯೊಳಗೇ ಸೇರಲು ಈತನು ಅವರಿಂದ ಸಂಜೀವಿನಿ ವಿದ್ಯೆಯನ್ನು ಪಡೆದು ಅವರ ಹೊಟ್ಟೆಯಿಂದ ಹೊರಬಂದು ಮತ್ತು ಅದೇ ವಿದ್ಯೆಯಿಂದ ಅವರನ್ನು ಬದುಕಿಸಿದನು (ಹಂ.). ಆಗ ದೇವಯಾನಿಯು ತನ್ನನ್ನು ವಿವಾಹಮಾಡಿಕೊಳ್ಳಬೇಕೆಂದು ಕಚನನ್ನು ಪ್ರಾರ್ಥಿಸಲು ಅವನು - ' ನೀನು ಗುರುಪುತ್ರಿ; ಪತ್ನಿಯ ಸ್ಥಾನ ನಿನಗೆ ಸಲ್ಲದು' ಎಂದು ತಿರಸ್ಕರಿಸಲು, ಆಕೆಯು 'ನನ್ನ ಅಪ್ಪನಿಂದ ಕಲಿತ ವಿದ್ಯೆಯು ನಿನಗೆ ಮರೆಯಲಿ' ಎಂದು ಶಾಪವಿತ್ತಳು. ಕಚನು - 'ನನಗೆ ಆ ವಿದ್ಯೆಯು ಫಲಿಸದಿದ್ದರೂ ನನ್ನಿಂದ ಉಪದೇಶ ಪಡೆದವರಿಗೆ ಫಲಿಸುವುದು; ನೀನು ಮಾತ್ರ ಕ್ಷತ್ರಿಯನನ್ನು ವಿವಾಹವಾಗು' ಎಂದು ಪ್ರತಿಶಾಪವಿತ್ತು ಹೊರಟುಹೋದನು. ಇದರಿಂದ ಮುಂದೆ ದೇವಯಾನಿಯು

ಯಯಾತಿಯ ಪತ್ನಿಯಾದಳು. ನೋ. ದೇವಯಾನಿ. ಬೃಹಸ್ಪತಿಯ ಹಿರಿಯ ಮಗ ಕಚ. ಬೃಹಸ್ಪತಿಯು - 'ನೀನು ಶುಕ್ರನಲ್ಲಿರುವ ಮೃತಸಂಜೀವಿನಿ ವಿದ್ಯೆಯನ್ನು ಕಲಿತು ಬಂಧರೆ ನಮ್ಮೊಡನೆ ನಿನಗೂ ಯಜ್ಞದಲ್ಲಿ ಹವಿರ್ಭಾಗ ಸಿಕ್ಕುವುದು. ನೀನು ಶುಕ್ರಾಚಾರ್ಯರ ಮಗಳಾದ ದೇವಯಾನಿಯನ್ನು ಸಂತೋಷಪಡಿಸಿದರೆ ನಿನಗೆ ಆ ವಿದ್ಯೆ ಸುಲಭವಾಗಿ ಲಭಿಸುವುದು' ಎಂದನು. ಕಚನು ಶುಕ್ರಾಚಾರ್ಯರ ಶಿಷ್ಯನಾಗಿ ಬ್ರಹ್ಮಚರ್ಯವ್ರತದಲ್ಲಿದ್ದನು. ಇವನು ಶುಕ್ರಾಚಾರ್ಯರ ಸೇವೆ ಮಾಡುತ್ತಿದ್ದುದಲ್ಲದೆ ದೇವಯಾನಿಯನ್ನು ಸಂತಸಪಡಿಸುವುದಕ್ಕಾಗಿ ಹೂ ಕೊಯ್ದು ತರುವುದು, ಹೂಗಳನ್ನು ಕಟ್ಟುವುದು, ಆಕೆ ಹೇಳಿದ ಕೆಲಸಗಳನ್ನು ಮಾಡುವುದು - ಹೀಗೆ ಆಕೆಯ ಸಂತೋಷವನ್ನು ಹೆಚ್ಚಿಸುತ್ತಿದ್ದನು. ಅವಳು ಏಕಾಂತದಲ್ಲಿ ಆಡುವುದು, ಹಾಡುವುದು ಅಲ್ಲದೆ ಅವನ ಸೇವೆಯನ್ನು ಮಾಡುತ್ತಿದ್ದಳು. ಕಚನು ಶುಕ್ರಾಚಾರ್ಯರಿಂದ ಮೃತ ಸಂಜೀವಿನಿ ವಿದ್ಯೆ ತಿಳಿಯಬಾರದೆಂದು ಅಸುರರೂ ಸಮಯ ನಿರೀಕ್ಷಣೆಯಲ್ಲಿದ್ದರು. ಒಂದು ದಿನ ಕಚನು ಏಕಾಕಿಯಾಗಿ ದನಗಳನ್ನು ಮೇಯಿಸುತ್ತಿರುವಾಗ ಅಸುರರು ಆತನನ್ನು ಕೊಂದು ಆತನ ದೇಹವನ್ನು ತುಂಡುತುಂಡಾಗಿ ಕತ್ತರಿಸಿ ನಾಯಿಗಳಿಗೆ ಹಾಕಿದರು. ಸಾಯಂಕಾಲವಾದಾಗ ದನಗಳು ಮಾತ್ರ ಆಶ್ರಮಕ್ಕೆ ಬಂದುದನ್ನು ಕಂಡು ದೇವಯಾನಿಯು ಕಚನು ಕೊಲ್ಲಲ್ಪಟ್ಟಿರಬೇಕೆಂದು - 'ಅವನನ್ನು ಬಿಟ್ಟು ನಾನು ಬದುಕಿರಲಾರೆ' ಎಂದಳು. ಶುಕ್ರಾಚಾರ್ಯರು ಸಂಜೀವಿನಿ ವಿದ್ಯೆಯನ್ನು ಉಪಯೋಗಿಸಿ ಕಚನನ್ನು ಕರೆದರು. ಆ ವಿದ್ಯೆಯ ಬಲದಿಂದ ಆಚಾರ್ಯರು ಕರೆದೊಡನೆ ಅವನು ನಾಯಿಗಳ ದೇಹವನ್ನು ಭೇದಿಸಿಕೊಂಡು ಜೀವಂತನಾಗಿ ಸಂತೋಷದಿಂದ ಬಂದನು. ಅವನು ರಾಕ್ಷಸರು ಮಾಡಿದ ದುಷ್ಕಾರ್ಯವನ್ನು ಆಕೆಯೊಡನೆ ಹೇಳಿದನು. ಇನ್ನೊಂದು ಸಾರಿ ಕಚನು ಹೂ ಕೊಯ್ದು ತರಲು ಅರಣ್ಯಕ್ಕೆ ಹೋದಾಗ ಅಸುರರು ಅವನನ್ನು ತುಂಡು ಮಾಡಿ ಸಮುದ್ರಕ್ಕೆಸೆದರು. ದೇವಯಾನಿಯ ಸೂಚನೆಯಂತೆ ಶುಕ್ರಾಚಾರ್ಯರು ಆತನನ್ನು ಪುನಃ ಕರೆಯಲು ಕಚನು ಅವರಿದಿರು ಬಂದು ನಿಂತನು. ಮೂರನೆಯ ಸಾರಿ ರಾಕ್ಷಸರು ಅವನನ್ನು ಕೊಂದು ಸುಟ್ಟು, ಬೂದಿ ಮಾಡಿ ಮದ್ಯದಲ್ಲಿ ಹಾಕಿ ಶುಕ್ರಾಚಾರ್ಯರಿಗೇ ಕುಡಿಸಿದರು. ಶುಕ್ರಾಚಾರ್ಯರಿಗೆ ಅವನು ತನ್ನ ಹೊಟ್ಟೆಯಲ್ಲಿರುವುದು ತಿಳಿಯದೆ ಮಂತ್ರೋಚ್ಚಾರ ಮಾಡುತ್ತಿರಲು, ಅವರ ಹೊಟ್ಟೆಯಿಂದಲೇ ಕಚನು - 'ನಾನು ನಿಮ್ಮ ಹೊಟ್ಟೆಯಲ್ಲಿದ್ದೇನೆ, ಹೇಗೆ ಸೀಳಿಕೊಂಡು ಬರಲಿ?' ಎನ್ನಲು ಹೊಟ್ಟೆಯೊಳಗಿದ್ದ ಆತನಿಗೆ ಆಚಾರ್ಯರು ಮಂತ್ರೋಪದೇಶ ಮಾಡಿದರು. ಕಚನು ಆಚಾರ್ಯರ ದೇಹದಿಂದ ಹೊರಬಂದು ಅವರನ್ನು ಬದುಕಿಸಿದನು.

ಕಚನು ದೇವಲೋಕಕ್ಕೆ ಹೊರಡಲು ದೇವಯಾನಿಯು ತನ್ನನ್ನು ಪಾಣಿಗ್ರಹಣ ಮಾಡಿಕೊಳ್ಳಬೇಕೆನಲು - ' ನೀನು ಗುರುಪುತ್ರಿ. ನನಗೆ ಪೂಜ್ಯಳು' ಎಂದು ಹೊರಟೇಬಿಟ್ಟನು. ಆಗ ದೇವಯಾನಿಯು - 'ನಿನಗೆ ಮಂತ್ರವಿದ್ಯೆ ಫಲಿಸದಿರಲಿ' ಎಂದು ಶಾಪವಿತ್ತಳು. ಕಚನು 'ನಾನು ಕಲಿತ ವಿದ್ಯೆ ನನಗೆ ಫಲಿಸದಿದ್ದರೂ ಕಲಿತವರಿಗೆ ಫಲಿಸುವುದು. 'ನೀನು ಕ್ಷತ್ರಿಯರನ್ನು ವಿವಾಹವಾಗು' ಎಂದು ಶಪಿಸಿ ಸ್ವರ್ಗಕ್ಕೆ ಹೊರಟನು (ಮ.ಆ.,ಅನು.,ಮತ್ಸ್ಯಪು.).

ಕಂಚಿ - ಕಂಚಿಪುರದಲ್ಲಿ ಶಿವಕಂಚಿ ಮತ್ತು ವಿಷ್ಣುಕಂಚಿ ಎಂಬ ಎರಡು ಭಾಗಗಳಿವೆ. ಇದು ಮೋಕ್ಷದಾಯಕವಾದ ಸಪ್ತಪುರಿಗಳಲ್ಲೊಂದು. ಇದು ಐವತ್ತೊಂದು ಶಕ್ತಿಪೀಠಗಳಲ್ಲೊಂದು. ಕಂಚಿಯ ಕಾಮಾಕ್ಷಿ ಮತ್ತು ಮಧುರೆಯ ಮೀನಾಕ್ಷಿ ಇವು ಪುರಾಣ ಪ್ರಸಿದ್ಧ ಸ್ಥಳಗಳು (ಕ್ಷೇತ್ರದ.).

ಕಚ್ಛ - ಒಂದು ದೇಶ. ಇದು ಅಹಮ್ಮದಾಬಾದು ಮತ್ತು ಕೇಂಬೆಯ ನಡುವಿದೆ. ಇದಕ್ಕೆ ಖೇಡದೇಶವೆಂದು ಹೇಳುತ್ತಾರೆ (ಮ.ಭೀ.).

ಕಚ್ಛಪ - ಕುಬೇರನ ನವನಿಧಿಗಳಲ್ಲಿ ಐದನೆಯದು. ಇದನ್ನು ಪಡೆದವನು ಆಮೆಯು ತನ್ನ ಅಂಗಗಳನ್ನು ಗೌಪ್ಯವಾಗಿಟ್ಟುಕೊಳ್ಳುವಂತೆ ಸಂಪತ್ತನ್ನು ಹಾಗೆಯೇ ರಕ್ಷಿಸಿಟ್ಟುಕೊಳ್ಳಬಲ್ಲನು (ಮಾರ್ಕಂ.ಪು.).

ಕಚ್ಛಪಿ - ವಿದ್ಯಾದೇವತೆಯಾದ ಸರಸ್ವತಿಯ ಕೈಯಲ್ಲಿದ್ದ ವೀಣೆಯ ಹೆಸರು (ಮ.ಶಾಂ.,ಲಲಿತಾಸ.).

ಕಟ - ೧. ಒಂದು ದೇಶ; ಇದು ಬರ್ದ್ವಾನ್ ಜಿಲ್ಲೆಯಲ್ಲಿದೆ; ಇದಕ್ಕೆ ಈಗ ಕಟ್ವಾ ಎಂಬ ಹೆಸರಿದೆ. ರಾಜಸೂಯಯಾಗಕಾಲದಲ್ಲಿ ಇದರ ರಾಜನು ಸುನಾಭ; ಇವನು ಅರ್ಜುನನನ್ನು ಯುದ್ಧದಲ್ಲಿ ಇದಿರಿಸಿ ಮಡಿದ. ೨. ಭರಧ್ವಾಜ ಮುನಿಯ ಶಿಷ್ಯನೊಬ್ಬ. ಈತನು ಭರದ್ವಾಜ ಮುನಿಯ ತಂಗಿಯನ್ನು ವಿವಾಹವಾದನು. ನೋ. - ರೇವತಿ (ಮ.ಸ.,ಆ.).

ಕಠ - ವಸಿಷ್ಠಗಣದ ಋಷಿಯೊಬ್ಬ (ಮ.ಆ.).

ಕಣಿಕ - ಧೃತರಾಷ್ಟ್ರನ ಬ್ರಾಹ್ಮಣ ಮಂತ್ರಿ; ಇವನಿಗೆ ಕಳಿಂಗ ಮತ್ತು ಕುಳಿಂಗನೆಂಬ ಹೆಸರೂ ಇದೆ. ಇವನೇ ಪಾಂಡವರನ್ನು ನಾಶಮಾಡಬೇಕೆಂದು ಕೌರವನಿಗೆ ಬೋಧಿಸಿದನು (ಮ.ಆ.). ಇವನು ಸೌಬಲರಾಜನ ಮಂತ್ರಿ. ಇವನು ಭರದ್ವಾಜ ಗೋತ್ರದವನು. ಕಣಿಕನ ನೀತಿಯ ಸಾರಾಂಶ: - 'ರಾಜನು ಕ್ಷೇಮವನ್ನು ಬಯಸಬೇಕಾದರೆ ದಂಡೋಪಾಯಕ್ಕೆ ಸಿದ್ಧನಾಗಿರಬೇಕು. ತನ್ನ ಪೌರುಷವನ್ನು ಹೊರಪಡಿಸುತ್ತಲೂ, ಇತರರ ಹುಳುಕನ್ನು ಕಂಡುಹಿಡಿಯುವುದರಲ್ಲೂ ಆಸಕ್ತನಾಗಬೇಕು. ಇತರರು ಅಶಕ್ತರಾಗಿರುವಾಗಲೇ ಅವರನ್ನು ಅಡಗಿಸಬೇಕು.

ತನ್ನ ಲೋಪಗಳು ಇತರರಿಗೆ ತಿಳಿಯಬಾರದು. ಬ್ರಹ್ಮಕ್ಷತ್ರಗಳು ಒಂದಾದಾಗಲೇ ಧರ್ಮ ವೃದ್ಧಿಹೊಂದುವುದು. ಒಂದು ಕಾರ್ಯವನ್ನು ಆರಂಭಿಸಿದ ಮೇಲೆ ಅದನ್ನು ಪೂರ್ಣ ಮುಗಿಸಬೇಕು. ವಿರಕ್ತವೇಷಗಳಿಂದ ಶತ್ರುಗಳನ್ನು ವಂಚಿಸಿ ಅವರು ಎಚ್ಚರ ತಪ್ಪಿದ್ದಾಗಲೇ ಅವರನ್ನು ತೀರಿಸಬೇಕು. ಶತ್ರುವು ಎಷ್ಟೇ ನಯವಾದ ಮಾತುಗಳನ್ನಾಡಿದರೂ ಅವನನ್ನು ನಂಬಬಾರದು ಧನದಿಂದಾಗಲೀ, ನಯವಾದ ಮಾತಿನಿಂದಾಗಲೀ, ಅವನನ್ನು ನಾಶಮಾಡಬೇಕು. ಭಯಸ್ವಭಾವದವನನ್ನು ಹೆದರಿಸಿ ಕಾರ್ಯ ಮಾಡಿಕೊಳ್ಳಬೇಕು. ಶೂರನಾದವನಿಗೆ ಕೈ ಮುಗಿಯಬೇಕು. ಹಣದಾಸೆಯುಳ್ಳವನನ್ನು ಹಣ ಕೊಟ್ಟು ವಶಪಡಿಸಿಕೊಳ್ಳಬೇಕು. ಸಮಾನಬಲಶಾಲಿ ಮತ್ತು ದುರ್ಬಲನನ್ನು ಪರಾಕ್ರಮದಿಂದ ಗೆಲ್ಲಬೇಕು. ಶತ್ರುಪಕ್ಷದಲ್ಲಿರುವವನು ಮಗನಾದರೂ ಅವನನ್ನು ಕೊಲ್ಲಬೇಕು; ವಿಷದಿಂದಾಗಲೀ, ವಂಚನೆಯಿಂದಾಗಲೀ, ಶತ್ರುವನ್ನು ಕೊಲ್ಲಬೇಕು; ಉಪೇಕ್ಷೆ ಯಾವಾಗಲೂ ಕೂಡದು. ಶತ್ರುವಿನೊಡನೆ ವ್ಯವಹರಿಸುವಾಗಲೂ, ಶಿಕ್ಷಿಸುವಾಗಲೂ ಪ್ರಿಯವಾದ ಮಾತನ್ನೇ ಆಡಬೇಕು. ಯಾರನ್ನೂ ಸಂಪೂರ್ಣ ನಂಬಬಾರದು. ರಾಜನು ಸ್ವಾಮಿಭಕ್ತರಾದ ಗೂಢಚಾರರನಿಟ್ಟುಕೊಳ್ಳಬೇಕು. ಸಮಯಕ್ಕೆ ಸರಿಯಾಗಿ ವರ್ತಿಸುವವನೇ ಜೀವನದಲ್ಲಿ ಮುಂದೆ ಬರುವನು. ಮಂತ್ರಾಲೋಚನೆಯನ್ನು ಏಕಾಂತಪ್ರದೇಶದಲ್ಲಿ ಮಾಡಬೇಕು. ಯಾರ ಕೆಲಸವನ್ನಾದರೂ ಪೂರ್ತಿಯಾಗಿ ಮುಗಿಸದೆ ಸ್ವಲ್ಪ ಅವಶಿಷ್ಟವಾಗಿ ಬಿಟ್ಟಿರಬೇಕು. ಐಶ್ವರ್ಯವನ್ನು ಕೋರತಕ್ಕವನು ಕೋಪವನ್ನು ಬಿಟ್ಟು ಮಿತ್ರಸಂಗ್ರಹ ಶತ್ರುಮರ್ದನ ಕಾರ್ಯದಲ್ಲಿ ತತ್ಪರನಾಗಬೇಕು. ಪಾಂಡವರಲ್ಲಿ ವ್ಯವಹರಿಸುವಾಗ ನಿನಗೆ ಹಾನಿಯಾಗದ ನೀತಿಯನ್ನು ಎತ್ತಿಹಿಡಿದು ನಡೆ, ಎಂದನು. ಇದಕ್ಕೆ ಕಳಿಂಗನೀತಿಯೆಂದೂ ಹೇಳುತ್ತಾರೆ. (ಮ.ಆ.).

ಕಂಟಕಾವನ - ಮಹಾ ರೌರವಕ್ಕಿಂತ ದೊಡ್ಡ ನರಕ (ಮ.ಅನು.).

ಕಂಡು - ೧. ಗೋಮತೀ ತೀರದಲ್ಲಿ ತಪಸ್ಸು ಮಾಡುತ್ತಿದ್ದ ಒಬ್ಬ ಋಷಿ. ಇವನಿಗೆ ಕಂಧ ಎಂಬ ಹೆಸರೂ ಇದೆ. ನೋ. - ಪ್ರಮ್ಲೋಚೆ. ೨. ಕಳಿಂಗರಾಜಪುತ್ರಿ; ಪುರುವಂಶದ ಆಯುತಾನಾಯಿಯ ಮಗನಾದ ಅಕ್ರೋಧನ ಹೆಂಡತಿ. ಈಕೆಯ ಮಗ ದೇವತಿಥಿ; ಸೊಸೆ ಮರ್ಯಾದೆಯೆಂಬ ರಾಜಕುಮಾರಿ (ಮ.ಆ.).

ಕಣ್ವ - ಕಶ್ಯಪಗೋತ್ರೋತ್ಪನ್ನನಾದ ಋಷಿಯೊಬ್ಬ. ಈತನ ತಂದೆ ಮೇಧಾತಿಥಿ. ಇವನ ಸಾಕುಮಗಳು ಶಕುಂತಲೆ; ಇವಳನ್ನು ದುಷ್ಯಂತಮಹಾರಾಜನು ವಿವಾಹವಾದನು. ಈ ಮುನಿಯು ಕುಲಪತಿಯಾಗಿದ್ದ; ಇವನೇ ಪಾಂಡವರೊಡನೆ ಸಂಧಾನಕ್ಕೊಪ್ಪದ ಕೌರವನಿಗೆ ಭೀಮನಿಂದ ತೊಡೆ

ಮುರಿದುಕೊಂಡು ಸಾಯುವಂತೆ ಶಾಪವಿತ್ತ. ಇವನ ಆಶ್ರಮವು ಅಯೋಧ್ಯೆಯ ಪಶ್ಚಿಮದಲ್ಲಿರುವ ಲಕ್ನೋವಿನ ಬಿಜನೂರಿನಲ್ಲಿತ್ತು; ಇದು ಅರಣ್ಯಪ್ರದೇಶ. ನೋ. - ಶಕುಂತಲೆ, ದುಷ್ಯಂತ (ಮ.ಆ.,ಉ.). ಇವನು ಸ್ತ್ರೀಸಂಬಂಧವಿಲ್ಲದ ಉರ್ಧ್ವರೇತಸುಳ್ಳವನು (ಮ.ಆ.).

ಕಣ್ವನು ಸ್ನಾನಾರ್ಥವಾಗಿ ಮಾಲಿನೀ ನದಿಗೆ ಬರುತ್ತಿರುವಾಗ ಅಲ್ಲಿ ಮಲಗಿರುವ ಮಗುವನ್ನೂ, ಅದರ ಸುತ್ತಲೂ ನಿಂತಿದ್ದ ಪಕ್ಷಿಗಳನ್ನೂ ಕಂಡನು. ಆ ಪಕ್ಷಿಗಳು ಹಲವು ಕಣ್ವನ ಪಾದದ ಮೇಲೆ ಬಿದ್ದು ಇಂಪಾದ ಸ್ವರದಿಂದ ಕಿಲಕಿಲನೆ ಧ್ವನಿಮಾಡುತ್ತಾ ಶಕುಂತಲೆಯ ಜನ್ಮವೃತ್ತಾಂತವನ್ನು ಕಣ್ವನಿಗೆ ತಿಳಿಸಿದವು. ಕಣ್ವನಿಗೆ ಪಕ್ಷಿಭಾಷೆಯ ಸಂಪೂರ್ಣ ಪರಿಚಯವಿತ್ತು (ಮ.ಆ.). ನೃಪದನೆಂಬ ತಪಸ್ವಿಯ ಮಗ. ಇವನು ಅಸುರ (ಶೂದ್ರ) ಕನ್ಯೆಯನ್ನು ಮದುವೆಯಾದನು. ಈತನ ಜೀವನವು ಅಶಾಂತಮಯವಾಗಿತ್ತು. ಇವನಿಗೆ ಆ ಶೂದ್ರಕನ್ಯೆಯಲ್ಲಿ ತ್ರಿಲೋಕ ಮತ್ತು ನಭಾಕರೆಂಬ ಇಬ್ಬರು ಮಕ್ಕಳಿದ್ದರು. ಆತನ ಪತ್ನಿಯು ಪತಿಯನ್ನು ಕೇಳದೆ ತೌರುಮನೆಗೆ ಹೋದಳು. ಅವಳನ್ನು ಕರೆಯಲು ಕಣ್ವನು ಹೋದಾಗ ಆ ಅಸುರರು ಆತನ ಕಣ್ಣಿಗೆ ಕಾಡಿಗೆ ತುಂಬಿ ಆತನನ್ನು ಒಂದು ಕೋಣೆಯಲ್ಲಿ ಸೆರೆಯಿಟ್ಟರು. ಆಗ ಆತನಿಗೆ ಹಗಲು ರಾತ್ರಿಯು ಗೊತ್ತಾಗುತ್ತಿರಲಿಲ್ಲ. ಇದು ಅಶ್ವಿನೀಕುಮಾರರಿಗೆ ಗೊತ್ತಾಗಿ ಕಣ್ವನಿಗೆ - 'ನೀನು ಭಯಪಡಬೇಡ. ಬೆಳಗಾಗುತ್ತಲೆ ನಾವು ವೀಣೆಯನ್ನು ಬಾರಿಸುತ್ತಾ ಇಲ್ಲಿಂದ ಹೋಗುವೆವು. ವೀಣೆಯ ನಾದದಿಂದಲೇ ಬೆಳಗಾಯಿತೆಂದು ತಿಳಿದುಕೊ' ಎಂದರು. ಒಮ್ಮೆ ಅಸುರರೆಲ್ಲಾ (ಶೂದ್ರರು) ಕೂಡಿ ಅವನನ್ನು ಬಂಗಾರದ ಪೀಠದಲ್ಲಿ ಸೆರೆಯಿಡಲು, ಆತನು ತನ್ನ ಪತ್ನಿ ಮತ್ತು ಇಬ್ಬರು ಮಕ್ಕಳ ಸಹಾಯದಿಂದ ವಿಮೋಚನೆ ಹೊಂದಿದನು (ಋ.).

ಕತ (ಕಥ) - ಒಬ್ಬ ಬ್ರಾಹ್ಮಣ; ಅರ್ಜುನನ ತೀರ್ಥಯಾತ್ರಾ ಕಾಲದಲ್ಲಿ ಸುಭದ್ರೆಯನ್ನು ದುರ್ಯೋಧನನಿಗೆ ಬಲರಾಮನು ವಿವಾಹ ಮಾಡಿಕೊಡಲು ನಿಷ್ಕರ್ಷಿಸಿರುವನೆಂದು ಅರ್ಜುನನಿಗೆ ತಿಳಿಸಿದ ಬ್ರಾಹ್ಮಣ (ಮ.ಆ.).

ಕದಲೀವನ - ಇದಕ್ಕೆ ಕದಳೀಷಂಡವೆಂಬ ಹೆಸರಿದೆ; ಹನುಮಂತನು ವಾಸವಾಗಿದ್ದ ವನ; ಸೌಗಂಧಿಕಾಪುಷ್ಪಹರಣಕ್ಕಾಗಿ ಹೊರಟ ಭೀಮನು ಇಲ್ಲೇ ಹನುಮನ ದರ್ಶನ ಪಡೆದು ಆತನ ಶಕ್ತಿಗಾಗಿ ಬೆರಗಾದನು (ಮ.ವ.).

ಕದ್ರು - ದಕ್ಷಪ್ರಜಾಪತಿಯ ಪುತ್ರಿ; ಕಶ್ಯಪನ ಹದಿಮೂರು ಮಂದಿ ಪತ್ನಿಯರಲ್ಲಿ ಒಬ್ಬಳು; ಸರ್ಪಗಳ ತಾಯಿ; ಈಕೆಗೆ ಶೇಷಾ, ವಾಸುಕಿ, ಧನಂಜಯ, ಕರ್ಕೋಟಕ ಮೊದಲಾದ ಮಕ್ಕಳೂ, ಜರತ್ಕಾರುವೆಂಬ ಮಗಳೂ ಇದ್ದರು. ಈಕೆಯು

ವಿನತೆಯೊಡನೆ ಉಚ್ಚೈಶ್ರವಸ್ಸು ಎಂಬ ದೇವಲೋಕದ ಕುದುರೆಯ ಬೆನ್ನಮೇಲೆ ಕಪ್ಪು ರೋಮಗಳ ರೇಖೆಯುಂಟೆಂದು ಸುಳ್ಳುವಾದವನ್ನು ಹೂಡಿ, ಕೊನೆಗೆ ತನ್ನ ಸರ್ಪ ಪುತ್ರರ ಸಹಾಯದಿಂದ ವಿನತೆಯನ್ನು ಗೆದ್ದು, ಆಕೆಯನ್ನು ದಾಸಿಮಾಡಿಕೊಂಡಳು. ಮುಂದೆ ಗರುಡನು ಸ್ವರ್ಗಲೋಕದಿಂದ ಅಮೃತವನ್ನು ತಂದು ಸರ್ಪಗಳಿಗೆ ಕೊಟ್ಟು, ತನ್ನ ತಾಯಿಯನ್ನು ದಾಸ್ಯದಿಂದ ಬಿಡುಗಡೆ ಮಾಡಿದನು. ಈಕೆ ತನ್ನ ಮಕ್ಕಳಿಗೆ, 'ಜನಮೇಜಯನ ಯಾಗದಲ್ಲಿ ಅಗ್ನಿಯಿಂದ ದಗ್ಧರಾಗಿರಿ' ಎಂದು ಶಾಪವಿತ್ತಳು (ಮ.ಆ.). ಸವತಿಯಾದ ವಿನತೆಯೊಂದಿಗೆ ಈಕೆ ಪಣತೊಟ್ಟು ಚರ್ಚೆಯಲ್ಲಿ ಜಯಿಸಿದ ಪಾಪ ಪರಿಹಾರಕ್ಕೆ ಪತಿಯಾದ ಕಶ್ಯಪನ ಆಜ್ಞೆಯಂತೆ ಕ್ಷೀರಕುಂಡದಲ್ಲಿ ಸ್ನಾನಮಾಡಿ ಪಾಪದಿಂದ ಬಿಡುಗಡೆಹೊಂದಿದಳು (ಸ್ಕಾಂ.ಪು.).

ಕನಕ - ಕೌರವನ ಸೂಚನೆಯಂತೆ ಪಾಂಡವರ ನಾಶಕ್ಕಾಗಿ ಮಾರಣಹೋಮ ಮಾಡಿದವನು. ಕೊನೆಗೆ ಈತನು ಪಾಂಡವರ ನಾಶಕ್ಕಾಗಿ ನಿರ್ಮಿಸಿದ ಭೂತವೇ ಕನಕನನ್ನು ತಿಂದಿತು. ಇದು ಅರಣ್ಯಪರ್ವದ ಕೊನೆಯ ಯಕ್ಷಪ್ರಶ್ನೆಯ ಸಂದರ್ಭದ ಕಥೆ (ಮ.ಅ.).

ಕನಕವರ್ಮ - ಪಾಂಡವರಿಗೆ ಅರಗಿನ ಮನೆಯ ಗುಪ್ತಮಾರ್ಗವನ್ನು ತೋರಿಸಿದವನು (ಮ.ಅ.).

ಕನಕಧ್ವಜ - ಕ್ಷತ್ರಿಯ; ಧೃತರಾಷ್ಟ್ರನ ಮಗ; ಇವನು ದ್ರೌಪದಿಯ ಸ್ವಯಂವರಕ್ಕಾಗಿ ಹೋಗಿದ್ದ. ಭೀಮನಿಂದ ಇವನ ವಧೆ ಆಯಿತು (ಮ.ಭೀ.).

ಕನಕಾಂಗದ - ಕ್ಷತ್ರಿಯ; ಧೃತರಾಷ್ಟ್ರನ ಪುತ್ರ, ಚಂದ್ರವಂಶ (ಮ.ಆ.).

ಕನಕಾಯು - ಕ್ಷತ್ರಿಯ; ಚಂದ್ರವಂಶ; ಧೃತರಾಷ್ಟ್ರನ ಪುತ್ರ, (ಮ.ಆ.).

ಕನಖಲ - ಸಪ್ತಗಂಗೆಯ ಸಮೀಪದ ತೀರ್ಥ; ಹರಿದ್ವಾರದಿಂದ ಎರಡು ಮೈಲಿ ಪೂರ್ವದಲ್ಲಿರುವ ಸಣ್ಣ ಗ್ರಾಮ (ಮ.ವ.).

ಕಂದ (ಕಂಡು) - ಗೋಮತೀತೀರದಲ್ಲಿ ತಪಸ್ಸು ಮಾಡುತ್ತಿದ್ದ ಈತನ ತಪೋಭಂಗಕ್ಕೆ ಇಂದ್ರನಲ್ಲಿ ಪ್ರಮ್ಲೋಚನೆ ಎಂಬ ಅಪ್ಸರೆಯನ್ನು ಕಳುಹಿಸಿದನು. ಕಂದನು ಆಕೆಗೆ ಮೋಹಿಸಿ ಅವಳೊಡನಿರಲು ಅವಳು ಗರ್ಭಿಣಿಯಾದಳು. ಕಂದನು ಅಪ್ಸರೆಯ ಮೋಹದಲ್ಲಿ ಸಂಧ್ಯಾವಂದನೆಯನ್ನೂ ಮರೆತನು. ಇವನು ಒಂದು ದಿನ ತನ್ನ ಅಧೋಗತಿಯನ್ನು ನೆನೆದು ಮರುಗಿ, ಸಂಧ್ಯಾವಂದನೆಗೆ ಹೊರಡಲು ಪ್ರಮ್ಲೋಚನೆಯು ಮುನಿಯನ್ನು ಆಕ್ಷೇಪಿಸಿದಳು. ಮುನಿಯು ಆಕೆಯನ್ನು ಗದರಿಸಲು ಅಪ್ಸರೆಗೆ ಗರ್ಭಸ್ರಾವವಾಯಿತು. ಆಕೆಯು ಗರ್ಭದ ನೀರನ್ನು ಮರಗಳಿಗೆ ಒರಸುತ್ತ ಹೋದಳು. ವಾಯುವು ಆ ನೀರನ್ನೆಲ್ಲಾ

ಒಟ್ಟುಮಾಡಲು ಮಾರಿಷೆ ಎಂಬ ಕುಮಾರಿಯು ಜನಿಸಿದಳು. ಇವಳನ್ನು ಮರಗಳು ಕಾಪಾಡಿದುದರಿಂದ ಈಕೆಗೆ ವಾರ್ಕ್ಷೀ ಎಂದು ಹೆಸರಾಯಿತು. ಈಕೆಯು ಪಿತೃದೇವತೆಗಳ ಪತ್ನಿ (ವಿಷ್ಣುಪು.).

ಕಂದಳಿ - ಔರ್ವ ಮುನಿಯ ಮಗಳು; ದುರ್ವಾಸ ಋಷಿಯ ಪತ್ನಿ. ಈಕೆಯು ಸಿಟ್ಟಿನಲ್ಲಿ ದುರ್ವಾಸಮುನಿಗಿಂತ ಮಿಗಿಲು (ಮ.ಆ.).

ಕನ್ಯಕಾಪರಮೇಶ್ವರಿ - ವೈಶ್ಯರ ದೇವಿ; ಬ್ರಹ್ಮನ ಸೂಚನೆಯಂತೆ ಕುಬೇರನ ಮಗನಾದ ನಳಕೂಬರನು ಶತಜಿಹ್ವನೆಂಬ ರಾಕ್ಷಸನನ್ನು ಕೊಲ್ಲಲು ಹಿಂಜರಿದುದರಿಂದ ಬ್ರಹ್ಮನು ಆತನಿಗೆ ಭೂಮಿಯಲ್ಲಿ ಕುಸುಮಶ್ರೇಷ್ಠಿ ಎಂಬ ಹೆಸರಿನಿಂದ ಹುಟ್ಟುವಂತೆ ಹೇಳಿದನು. ಇವನ ಪತ್ನಿ ಕುಸುಮೆ; ಪುತ್ರಕಾಮೇಷ್ಠಿಯಿಂದ ಇವರಿಗೆ ವಿರೂಪಾಕ್ಷನೆಂಬ ಮಗನೂ ವಾಸವಾಂಬೆ ಎಂಬ ಮಗಳೂ ಜನಿಸಿದರು. ವಾಸವಾಂಬೆಯ ತಾರುಣ್ಯದಲ್ಲಿ ವಿಷ್ಣುವರ್ಧನನೆಂಬ ರಾಜನು ಆಕೆಯನ್ನು ಬಲಾತ್ಕಾರದಿಂದ ವಿವಾಹವಾಗಲು ಯತ್ನಿಸಿ ಆಕೆಯು ಬಂಧುಬಾಂಧವರೊಡನೆ ಅಗ್ನಿಪ್ರವೇಶಮಾಡಿ ಶಚೀದೇವಿಯಾಗಿ ಸ್ವರ್ಗವನ್ನು ಸೇರಿದಳು. ಅಂದಿನಿಂದ ವಾಸವಾಂಬೆಯು ವೈಶ್ಯರ ಕುಲದೇವತೆಯಾಗಿ ಕನ್ಯಕಾಪರಮೇಶ್ವರಿ ಎಂಬ ಹೆಸರಿನಿಂದ ಪೂಜೆ ಸ್ವೀಕರಿಸತೊಡಗಿದಳು. ನೋ. - ಶಚೀದೇವಿ (ಕನ್ಯ.ಪು.).

ಕನ್ಯಾಕುಬ್ಜ - ಚಂದ್ರವಂಶದ ಕುಶನಾಭನ ನೂರು ಮಂದಿ ಹೆಣ್ಣುಮಕ್ಕಳನ್ನು ಕಂಡು ವಾಯುವು ಮೋಹಿಸಿದನು. ಆದರೆ ಕುಶನಾಭನ ಕುಮಾರಿಯರು ವಾಯುವನ್ನು ತಿರಸ್ಕರಿಸಲು ಅವನು ಎಲ್ಲಾ ಕುಮಾರಿಯರನ್ನೂ ಕುಬ್ಜೆಯರನ್ನಾಗಿ ಮಾಡಿದನು. ಮುಂದೆ ಅವರನ್ನೆಲ್ಲಾ ಬ್ರಹ್ಮದತ್ತನೆಂಬ ಮುನಿಯು ಮದುವೆಯಾಗಿ ಅವರ ಕುಬ್ಜತ್ವವನ್ನು ಹೋಗಲಾಡಿಸಿದನು. ಕನ್ಯೆಯರು ಕುಬ್ಜರಾದ ಊರೇ ಕನ್ಯಾಕುಬ್ಜ (ವಾ.ರಾ.ಬಾಲ.).

ಕನ್ಯಾಕುಮಾರಿ - ಭಾರತದ ದಕ್ಷಿಣ ತುದಿಯ ಕ್ಷೇತ್ರ; ಇಲ್ಲಿ ಬಾಣಾಸುರನು ಶಂಕರನನ್ನು ಕುರಿತು ತಪಸ್ಸು ಮಾಡಿ ಅಮರತ್ವವನ್ನು ಬೇಡಿದನು. ಶಿವನು ಅವನಿಗೆ ಅಮರತ್ವವನ್ನು ಅನುಗ್ರಹಿಸುವ ಬದಲು - ಕುಮಾರಿ ಕನ್ಯೆಯಿಂದಲ್ಲದೆ ಉಳಿದವರಿಂದ ಮರಣಪಡದಿರು - ಎಂದು ವರವಿತ್ತನು. ಮುಂದೆ ಮೂರು ಲೋಕಗಳೂ ಬಾಣಾಸುರನ ಹಾವಳಿಯಿಂದ ನಡುಗಲು ದೇವತೆಗಳೆಲ್ಲಾ ವಿಷ್ಣುವಿನ ಮರೆಹೊಕ್ಕರು. ಆಗ ವಿಷ್ಣುಕೊಟ್ಟ ಸೂಚನೆಯಂತೆ ದೇವತೆಗಳೆಲ್ಲಾ ಅಸುರನ ವಿನಾಶಕ್ಕಾಗಿ ಯಜ್ಞವನ್ನು ಮಾಡಲು ಯಜ್ಞಕುಂಡದಿಂದ ದುರ್ಗಾಂಶದ ಕನ್ಯಾಕುಮಾರಿಯು ಜನ್ಮವೆತ್ತಿಬಂದಳು. ಅವಳು ಶಂಕರನ ಪ್ರೀತ್ಯರ್ಥವಾಗಿ

ದಕ್ಷಿಣಸಮುದ್ರತೀರದಲ್ಲಿ ತಪಸ್ಸು ಮಾಡತೊಡಗಿದಳು. ಶಂಕರನು ಅವಳ ತಪಸ್ಸಿಗೆ ಮೆಚ್ಚಿ ವಿವಾಹಾರ್ಥವಾಗಿ ಶುಚೀಂದ್ರಕ್ಕೆ ಬಂದನು. ಈ ವಿವಾಹವಾದರೆ ಬಾಣಾಸುರನ ವಧೆಯಾಗದೆಂದು ತಿಳಿದು ದೇವತೆಗಳ ಪರವಾಗಿ ನಾರದನು ಶಂಕರನನ್ನು ತಡೆದನು. ವಿವಾಹದ ಮುಹೂರ್ತ ತಪ್ಪಿತು. ಕನ್ಯಾಕುಮಾರಿ ಇಟ್ಟುಕೊಂಡ ಮಂತ್ರಾಕ್ಷತೆ ಕಾಳುಗಳು ಕೆಂಪು ಬಿಳಿ ಮರಳಾದವು. ಅಲ್ಲಿ ಕುಮಾರಿ ಈಗಲೂ ವರನ ಕೊರಳಿಗೆ ಮಾಲೆ ಹಾಕಲು ನಿಂತಂತಿದೆ. ಬಾಣಾಸುರನು ಈಕೆಯ ಸೌಂದರ್ಯದ ವಿಚಾರವನ್ನು ಕೇಳಿ ವಿವಾಹ ಮಾಡಿಕೊಳ್ಳಲು ಬರಲು ಕುಮಾರಿಯು ಅವನನ್ನು ಯುದ್ಧದಲ್ಲಿ ಕೊಂದು ಜಗತ್ತಿಗೆ ಸುಖವನ್ನುಂಟುಮಾಡಿದಳು. ಈ ಸ್ಥಳವನ್ನು ಕನ್ಯಾತೀರ್ಥವೆಂದು ಕರೆಯುತ್ತಾರೆ (ಕ್ಷೇತ್ರದ.).

ಈಕೆಯೊಬ್ಬ ಬ್ರಾಹ್ಮಣನ ಮಗಳು. ಮೊದಲು ನಾಗರಾಜನ ಪುತ್ರಿಯಾಗಿದ್ದಳು. ಅಹಿರಾವಣನ ಮನೆಯಲ್ಲಿರುವಾಗ ಈಕೆಗೆ ಶ್ರೀರಾಮನ ದರ್ಶನವಾಗಿತ್ತು. ಈಕೆಯನ್ನು ಸುರೇಂದ್ರನಿಗೆ ಲಗ್ನಮಾಡಿಕೊಡಲು ಈಕೆಯನ್ನು ತಂದೆಯು ಕರೆತಂದಾಗ ಶ್ರೀರಾಮನನ್ನು ಕಂಡು ಅವನನ್ನೇ ಲಗ್ನವಾಗುವೆನೆಂದು ಹಟ ಹಿಡಿದಳು. ಇದನ್ನು ತಿಳಿದ ಈಕೆಯ ತಂದೆಯು ಮದುವೆಗಾಗಿ ತಯಾರಿಸಿದ ಎಲ್ಲ ವಸ್ತುಗಳನ್ನು ಸಮುದ್ರಕ್ಕೆಸೆದನು. ಆಗ ರಾಮನು ತನ್ನ ಏಕಪತ್ನೀವ್ರತವನ್ನು ಕುರಿತು ಹೇಳಿ, ಕೃಷ್ಣಾವತಾರದಲ್ಲಿ ಲಗ್ನವಾಗುವೆನೆಂದನು. ಆಕೆಯೇ ಮುಂದಿನ ಯುಗದಲ್ಲಿ ಜಾಂಬವಂತನ ಮಗಳಾದ ಜಾಂಬವತಿಯಾಗಿ ಹುಟ್ಟಿ ಶ್ರೀಕೃಷ್ಣನನ್ನು ವಿವಾಹವಾದಳು (ಆನಂ.ರಾ.).

ಕನ್ಯಾಗರ್ಭ - ಕರ್ಣ. ನೋ. - ಕರ್ಣ (ಮ.ಆ.).

ಕನ್ಯಾಭರ್ತ - ಷಣ್ಮುಖ, ಶಿವಪುತ್ರ. ನೋ. - ಕುಮಾರ (ಮ.ವ.).

ಕನ್ಯಾಶ್ರಮ - ಒಂದು ಕ್ಷೇತ್ರ (ಮ.ವ.).

ಕಪ - ದೇವತೆಯೊಬ್ಬ (ಮ.ಅನು.).

ಕಪಾಲಮೋಚನ - ೧. ಇದಕ್ಕೆ ಔಷನಸತೀರ್ಥವೆಂಬ ಹೆಸರುಂಟು. ಇದು ಶುಕ್ರಾಚಾರ್ಯರು ತಪಸ್ಸು ಮಾಡಿದ ಸ್ಥಳ. ೨. ಶ್ರೀರಾಮನು ಕೊಂದ ಮಹೋದರನೆಂಬ ರಾಕ್ಷಸನ ತಲೆಯು ಮಹೋದರನೆಂಬ ಮುನಿಯ ಕೈಗೆ ಅಂಟಲು ಅವನು ಈ ತೀರ್ಥದಲ್ಲಿ ಸ್ನಾನ ಮಾಡಿದಾಗ ಈ ಕಪಾಲವು ಕಳಚಿಬಿತ್ತು (ಮ.ವ.,ಶ.).

ಕಪಾಲಿ - ಏಕಾದಶರುದ್ರರಲ್ಲೊಬ್ಬ (ಮ.ಆ.).

ಕಪಿಂಜಲತೀರ್ಥ - ಒಂದು ತೀರ್ಥ ವಿಶೇಷ (ಮ.ವ.).

ಕಪಿಂಜಲಾ - ಒಂದು ನದಿ (ಮ.ಭೀ.).

ಕಪಿಂಜಲಾದ - ಚಂಡಾಲರಲ್ಲಿ ಉತ್ಪನ್ನನಾದ ಬ್ರಹ್ಮರ್ಷಿ (ಮ.ಅನು.).

ಕಪಿಲ - ೧. ಶ್ರೀಮನ್ನಾರಾಯಣನೇ ಅವತಾರ ಮಾಡಿದ ಮಹರ್ಷಿ. ಸಾಂಖ್ಯಸೂತ್ರಗಳನ್ನು ಬರೆದವ. ಈತನು ಕರ್ದಮ ಪ್ರಜಾಪತಿಯ ಪುತ್ರ. ಇವನ ತಾಯಿ ಸ್ವಾಯಂಭು ಮನುವಿನ ಪುತ್ರಿ ದೇವಹೂತಿ. ಈಕೆಗೆ ಅರುಂಧತಿ ಮೊದಲಾದ ಒಂಬತ್ತು ಮಂದಿ ಸೋದರಿಯರು. ೨. ಒಬ್ಬ ಯತಿ. ೩.ಅಗ್ನಿವಿಶೇಷ. ೪. ವಿಶ್ವಾಮಿತ್ರನ ಪುತ್ರ. ೫. ಗೌತಮನಶಿಷ್ಯ. ನೋ. - ಗೌತಮ (ಮ.ವ.,ಉ.,ಶಾಂ.,ಅನು.,ಭಾಗ.).

ಕಪಿಲತೀರ್ಥ - ಒಂದು ತೀರ್ಥ (ಮ.ವ.).

ಕಪಿಲಾವಟ - ಒಂದು ಕ್ಷೇತ್ರ (ಮ.ವ.).

ಕಪಿಲಾಶ್ವ - ಕ್ಷತ್ರಿಯ; ಸೂರ್ಯವಂಶ. ಕುವಲಾಶ್ವನ ಪುತ್ರ (ಮ.ವ.).

ಕಪೋತ - ಗರುಡನ ಮಗ (ಮ.ಉ.).

ಕಪೋತರೋಮ - ಶಿಬಿರಾಜನ ಮಗ (ಮ.ಸ.,ವ.).

ಕಪೋತಕ - ಪಾತಾಳವಾಸಿಯಾದ ನಾಗರಾಜ. ಈತನ ಪತ್ನಿ ಮನೋರಮೆ. ಈತನಿಗೆ ಸಾಲಕಪೋತಕನೆಂಬ ಹೆಸರುಂಟು. ಇವನ ಮಗಳು ನಂದೆ (ಮಾರ್ಕಂ.ಪು.).

ಕಬಂಧ - ರಾಕ್ಷಸನೊಬ್ಬ; ಈತನು ಶ್ರೀರಾಮನಿಂದ ಹತನಾದ. ವಿಶ್ವಾವಸುವೆಂಬ ಗಂಧರ್ವನು ಸ್ಥೂಲಶಿರನೆಂಬ ಬ್ರಾಹ್ಮಣನ ಶಾಪದಿಂದ ಕಬಂಧರಾಕ್ಷಸನಾದ. ಈತನಿಗೆ ಇಂದ್ರನ ವಜ್ರಾಯುಧದ ಹೊಡೆತದಿಂದ ತಲೆಯು ಹೊಟ್ಟೆಯೊಳಗೆ ಸೇರಿತು. ಮುಂದೆ ಇಂದ್ರನೇ ಇವನ ಉಪಕಾರಕ್ಕಾಗಿ ಈತನ ತೋಳು ಯೋಜನದಷ್ಟು ಉದ್ದವಾಗುವಂತೆ ವರವಿತ್ತ. ಶ್ರೀರಾಮನು ಈತನ ಸಂಸ್ಕಾರ ಮಾಡಿದ ಬಳಿಕ ಈತನು ಗಂಧರ್ವ ರೂಪದಿಂದ - 'ಸೀತಾಪಹಾರವು ರಾವಣನಿಂದಾಯಿತೆಂದೂ, ಸುಗ್ರೀವ ಸಖ್ಯದಿಂದ ಶ್ರೇಯಸ್ಸಾಗುವುದೆಂದೂ' ಹೇಳಿ ಸ್ವರ್ಗಕ್ಕೆ ತೆರಳಿದ (ವಾ.ರಾ.ಅರ.,ಮ.ವ.,ಸ.).

ಕಮಠ - ಹಾರೀತ ಮುನಿಯ ಮಗ. ಇವನಿಗೆ ಬಾಲಾದಿತ್ಯನೆಂಬ ಹೆಸರೂ ಇದೆ. ಇವನು ತಾನು ಸ್ಥಾಪಿಸಿದ ಅಗ್ರಹಾರದ ಬ್ರಾಹ್ಮಣರ ಮಹಿಮೆಯನ್ನು ಸೂರ್ಯನ ಮುಂದೆ ಹೊಗಳಲು, ಸೂರ್ಯನು ಹಾರೀತನ ಮನೆಗೆ ಬಂದನು. ಅಲ್ಲಿ ಆತನು ಕಮಠನ ಪಾಂಡಿತ್ಯಕ್ಕೆ ಬೆರಗಾದನು (ಸ್ಕಾಂ.ಪು.).

ಕಮಲಪಾಲಿಕೆ - ಭೀಮಸೇನನ ಪತ್ನಿಯಾದ ಹಿಡಿಂಬೆಯೆಂಬ ರಾಕ್ಷಸಿ; ಈಕೆಗೆ ಭೀಮನಿಂದ ಘಟೋತ್ಕಚನೆಂಬ ಮಗನಾದನು (ಮ.ಆ.).

ಕಮಲಾಕ್ಷ - ತ್ರಿಪುರಗಳಲ್ಲೊಂದರ ಅಧಿಕಾರಿ; ಚಿನ್ನದ ಪಟ್ಟಣದೊಡೆಯ; ತಾರಕಾಸುರನ ಸೋದರ. ಇವನು ತ್ರಿಪುರದಹನಕಾಲದಲ್ಲಿ ರುದ್ರನಿಂದ ಕೊಲ್ಲಲ್ಪಟ್ಟ. ನೋ. ತಾರಾಕಾಕ್ಷ, ವಿದ್ಯುನ್ಮಾಲಿ (ಮ.ದ್ರೋ.,ಕ.).

ಕಂಪನ - ಯುಧಿಷ್ಠಿರನ ಸಭೆಯಲ್ಲಿದ್ದ ಕ್ಷತ್ರಿಯ (ಮ.ಸ.).

ಕಂಬಲ - ೧. ಸರ್ಪ; ಕದ್ರುವಿನ ಮಗ; ಈತನ ತಮ್ಮ ಸಂಗೀತವಿದ್ಯಾ ನಿಪುಣನಾದ ಅಶ್ವತರ. ೨. ಕುಶದ್ವೀಪದ ಒಂದು ಭಾಗ (ಮ.ಆ.,ಭೀ.).

ಕಂಬುಕಂಠ - ನೋ. - ಮದನಸುಂದರಿ.

ಕಯಾದು - ಹಿರಣ್ಯಕಶಿಪುವಿನ ಹೆಂಡತಿ; ಪ್ರಹ್ಲಾದನ ತಾಯಿ; ಜಂಭಾಸುರನ ಮಗಳು. ಹಿರಣ್ಯಕಶಿಪು ತಪಸ್ಸಿನಲ್ಲಿದ್ದಾಗ ಇಂದ್ರನು ಗರ್ಭಿಣಿಯಾದ ಈಕೆಯನ್ನು ಸೆರೆಹಿಡಿದು ನಾರದನಿಗೊಪ್ಪಿಸಲು, ಅವನು ಆಕೆಗೆ ಹರಿಯ ಮಂತ್ರೋಪದೇಶವನ್ನು ಮಾಡಿದನು. ಮುಂದೆ ನಾರದನು ಹಿರಣ್ಯಕಶಿಪುವಿಗೆ ಈಕೆಯನ್ನು ಒಪ್ಪಿಸಿದನು. ಈಕೆಗೆ ಪ್ರಹ್ಲಾದ, ಸಂಹ್ರಾದ, ಅನುಹ್ರಾದ, ಶಿಬಿ, ಭಾಷ್ಕಲರೆಂಬ ಐವರು ಮಕ್ಕಳಿದ್ದರು (ಭಾಗ.).

ಕರಕಾಕ್ಷ - ದುರ್ಯೋಧನನ ಪಕ್ಷದ ಒಬ್ಬ ಕ್ಷತ್ರಿಯ (ಮ.ದ್ರೋ.).

ಕರಕಾಯು - ಕ್ಷತ್ರಿಯ; ಧೃತರಾಷ್ಟ್ರನ ಮಗ; ಚಂದ್ರವಂಶ (ಮ.ಆ.).

ಕರಟಾ - ಒಂದು ದೇಶ. (ಮ.ಭೀ.).

ಕರಣ - ನೋ. - ಧೃತರಾಷ್ಟ್ರ. ವೈಶ್ಯನಿಂದ ಶೂದ್ರಳಲ್ಲಿ ಹುಟ್ಟಿದವ.

ಕರತೋಯ - ಒಂದು ನದಿ; ಇದು ಕಾಮರೂಪ ಮತ್ತು ಬಂಗಾಲದ ಮೇರೆಯಾಗಿ ರಂಗಪುರ ಮತ್ತು ದಿನಾಜಪುರ ಜಿಲ್ಲೆಯಲ್ಲಿ ಹರಿಯುವ ಒಂದು ಪವಿತ್ರ ನದಿ (ಮ.ಭೀ.).

ಕರಂಧಮ - ೧. ಕ್ಷತ್ರಿಯ; ಸೂರ್ಯವಂಶದ ರಾಜ; ಈತನ ತಂದೆ ಖನೀನೇತ್ರ; ಖನೀನೇತ್ರನು ತನ್ನ ಮಗನಿಗೆ ಸುವರ್ಚನೆಂದು ನಾಮಕರಣ ಮಾಡಿದರೂ ಒಮ್ಮೆ ಪ್ರಬಲನಾದ ಶತ್ರುವಿನೊಡನೆ ಹೋರಾಡುವಾಗ ಅಪಜಯವಾಗುವ ಸಂದರ್ಭ ಬಂದಾಗ ತನ್ನ ಹಸ್ತಗಳನ್ನು ಶಂಖದಂತೆ ಮಾಡಿ ಊದಿದನು. ಆ ಧ್ವನಿ ಹೊರಟೊಡನೆಯೇ, ಹೊಸ ಸೈನ್ಯಗಳನ್ನು ನಿರ್ಮಾಣಮಾಡಿ ಶತ್ರುವನ್ನು ಬಗ್ಗುಬಡಿದು ಜಯಶೀಲನಾದುದರಿಂದ ಈತನಿಗೆ ಕರಂಧಮನೆಂಬ ಹೆಸರು ಪ್ರಾಪ್ತವಾಯಿತು (ಮ.ಅಶ್ವ.). ಇವನಿಗೆ ಸುವರ್ಚನೆಂಬ ಹೆಸರೂ ಇತ್ತು. ಈತನ ಪತ್ನಿ ವೀರ್ಯ-ಚಂದ್ರನ ಮಗಳಾದ ವೀರೆ. ಈಕೆಯ ಪುತ್ರ ಅವಿಕ್ಷಿತ; ಇವನು ವಿಶಾಲತನಯೆಯ ಸ್ವಯಂವರಕ್ಕೆ ಹೋಗಿ ಅಲ್ಲಿನ ರಾಜರಿಂದ

ಸೆರೆಹಿಡಿಯಲ್ಪಟ್ಟು ತಂದೆಯಾದ ಕರಂಧಮನಿಂದ ಬಿಡುಗಡೆಹೊಂದಿದನು. ಇದರಿಂದ ವೈರಾಗ್ಯಹೊಂದಿದ ಅವಿಕ್ಷಿತನು ಬ್ರಹ್ಮಚರ್ಯವ್ರತವನ್ನು ಸ್ವೀಕರಿಸಿದ್ದನು. ಮುಂದೆ ವೀರೆಯು - ಯಾರೂ ಏನನ್ನು ಕೇಳಿದರೂ ಕೊಡುವ ವ್ರತವನ್ನು ಕೈಗೊಳ್ಳಲು ಅವಿಕ್ಷಿತನು ತಾಯಿಯ ವ್ರತವನ್ನು ಪಾಲಿಸುವೆನೆಂದು ನಗರದಲ್ಲಿ ಡಂಗುರ ಹೊಯಿಸಲು ಕರಂಧಮನು ಮಗನ ಬಳಿಗೆ ಬಂದು- 'ನನಗೆ ಪೌತ್ರನನ್ನು ಕೊಡು' ಎಂದು ಬೇಡಿದನು. ಇದರಿಂದ ಈತನು ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಮರುತ್ತನೆಂಬ ಮಗನನ್ನು ಪಡೆದನು. ೨.ಯಯಾತಿಯ ಪುತ್ರನಾದ ತುರ್ವಸುವಿನ ವಂಶೀಯನಾದ ರಾಜನೊಬ್ಬ (ಸ್ಕಾಂ.ಪು.).

ಕರಂಬ - ರಾಕ್ಷಸನೊಬ್ಬ; ಇವನು ದೇವತೆಗಳಿಂದ ಹತನಾದನು (ಭಾಗ.). ನೋ-ರಂಭ

ಕರಭಂಜಕ - ಒಂದು ದೇಶ (ಮ.ಭೀ.).

ಕರವೀರ - ೧. ಒಂದು ಸರ್ಪ. ಮೇರುವಿನ ದಕ್ಷಿಣ ಪರ್ವತ. ೩. ಭಾರತದ ಹದಿನೆಂಟು. ಶಕ್ತಿಪೀಠಗಳಲ್ಲೊಂದಾದ ಕೊಲ್ಹಾಪುರ; ಇದು ಶ್ರೀಕೃಷ್ಣನ ದಾಯಾದಿಯಾದ ಶೃಗಾಲನೆಂಬ ವಸುದೇವಪುತ್ರನ ರಾಜಧಾನಿ (ಹರಿ.,ಮ.ಶಾಂ.).

ಕರಹಾಟಕ - ಒಂದು ದೇಶ (ಮ.ಸ.).

ಕರಾಲ - ೧. ಮಹಿಷಾಸುರನ ಸೇನಾಪತಿ; ಮಹಾಲಕ್ಷ್ಮಿಯಿಂದ ಹತನಾದ. ಜನಕನ ವಂಶದ ರಾಜನೊಬ್ಬ (ಮಾರ್ಕಂ.ಪು.).

ಕರಾಲಜನಕ - ಜನಕವಂಶದ ರಾಜನೊಬ್ಬ; ಈತನು ನಿತ್ಯಾನಿತ್ಯವಿಚಾರಗಳ ಕುರಿತು ವಸಿಷ್ಠಮುನಿಯೊಂದಿಗೆ ವಾದಮಾಡಿದನು (ಮ.ಶಾಂ.).

ಕರೀಷಕ (ಕರೂಶಾ) - ಒಂದು ದೇಶ. ಬಿಹಾರಿನ ಶಹಬಾದ್ ಜಿಲ್ಲೆಯ ಪೂರ್ವಭಾಗ. ಇಂದ್ರನು ವೃತ್ತನನ್ನು ಕೊಂದಾಗ ಆತನಿಗೆ ಬಂದ ಬ್ರಹ್ಮಹತ್ಯೆಯನ್ನು ಧರಿಸಿದ ಭೂಭಾಗ. ದಂತವಕ್ರನು ಇದರ ಅರಸನಾಗಿದ್ದ (ಮ.ಸ.,ಭೀ.).

ಕರೇಣುಮತಿ - ಪಾಂಡುಪುತ್ರನಾದ ನಕುಲನ ಪತ್ನಿ; ಈಕೆಯು ಶಿಶುಪಾಲನ ಮಗಳು; ನಿರಮಿತ್ರನು ಈಕೆಯ ಮಗ (ಮ.ಆ.).

ಕರ್ಕರ - ಒಂದು ಸರ್ಪ (ಮ.ಆ.).

ಕರ್ಕೋಟಕ - ೧. ಒಂದು ಸರ್ಪ. ಈತನು ಹಿಂದೆ ಬ್ರಹ್ಮರ್ಷಿಯಾದ ನಾರದನನ್ನು ವಂಚಿಸಿದ್ದಕ್ಕಾಗಿ ಆತನು ಅಧಿಕವಾಗಿ ಕೋಪಿಸಿಕೊಂಡು 'ನೀನು

ಚಲನರಹಿತನಾಗಿ ಇಲ್ಲೇ ಬಿದ್ದಿರು. ಯಾವಾಗ ನಳಮಹಾರಾಜರು ನಿನ್ನನ್ನು ಇಲ್ಲಿಂದ ಆಚೆಗೆ ತೆಗೆದುಕೊಂಡು ಹಾಕುವನೋ ಆಗ ನಿನಗೆ ಶಾಪವಿಮೋಚನೆಯಾಗುವುದು, ಎಂದು ಶಾಪಕೊಟ್ಟನು. ಮುಂದೆ ಈತನು ಕಾಡುಕಿಚ್ಚಿಗೆ ಸಿಕ್ಕಿ ಸುಟ್ಟು ಹೋಗುವುದರಲ್ಲಿದ್ದಾಗ, ನಳಮಹಾರಾಜನನ್ನು ಕಾಪಾಡುವಂತೆ ಪ್ರಾರ್ಥಿಸಿ, ಅವನು ಬಂದೊಡನೆ ತಾನೊಂದು ಅಂಗುಷ್ಠಪ್ರಮಾಣವುಳ್ಳವನಾದನು. ನಳನು ಕಾರ್ಕೋಟಕನನ್ನು ಕಾಳ್ಗಿಚ್ಚಿಲ್ಲದ ಪ್ರದೇಶಕ್ಕೆ ಕೊಂಡುಹೋಗುತ್ತಿರುವಾಗ ಸರ್ಪರಾಜನು, 'ಎಲೈ, ರಾಜನೇ, ನೀನು ಹೆಜ್ಜೆಗಳನ್ನು ಎಣಿಸಿಕೊಂಡು ನಡೆ, ನಿನಗೆ ಶ್ರೇಯಸ್ಸಾಗುತ್ತದೆ' ಎನ್ನಲು, ರಾಜನು, 'ಏಕಂ, ದ್ವೇ, ತ್ರೀಣಿ, ಚತ್ವಾರಿ, ಪಂಚ, ಷಟ್, ಸಪ್ತ, ಅಷ್ಟ, ನವ, ಎಂದು ಒಂಬತ್ತು ಹೆಜ್ಜೆಗಳವರೆಗೂ ಎಣಿಸಿ ಹತ್ತನೆಯ ಹೆಜ್ಜೆಗೆ 'ದಶ' ಎಂದು ಎಣಿಸಿದೊಡನೆ ಕಾರ್ಕೋಟಕನು ನಳನನ್ನು ಕಚ್ಚಿದನು. ಇದರಿಂದ ನಳನು ಆಶ್ಚರ್ಯ ಹೊಂದಿ ಕಾರ್ಕೋಟಕನನ್ನು ನೋಡುತ್ತಿರುವಾಗ ಆತನು ರಾಜನನ್ನು ಸಮಾಧಾನಪಡಿಸುತ್ತಾ, 'ರಾಜನೇ, ನೀನು ನಳನೆಂದು ಜನಗಳಿಗೆ ತಿಳಿಯಬಾರದೆಂದು ನಿನ್ನ ರೂಪು ವ್ಯತ್ಯಾಸ ಮಾಡಿದೆನು. ನನ್ನ ಘೋರ ವಿಷದಿಂದುಂಟಾಗತಕ್ಕ ಬಾಧೆಯು ನಿನಗೇನೂ ಆಗದೆ ಪಿಶಾಚಿ ಹಿಡಿದಿರತಕ್ಕ ದೇಹಕ್ಕಾಗುವ ಹಿಂಸೆಯನ್ನು ಪಿಶಾಚನೇ ಅನುಭವಿಸುವಂತೆ ನಿನ್ನ ಶರೀರದಲ್ಲಿ ಹೊಕ್ಕಿರುವ ಕಲಿಯು ಆ ವೇದನೆಯನ್ನು ಅನುಭವಿಸಿಕೊಂಡಿರುವುದು. ಕಲಿಯ ಕಾರ್ಯದಿಂದ ಕೋಪಗೊಂಡ ನಾನು ನಿನ್ನ ರಕ್ಷಣೆಗಾಗಿ ಈ ಕಾರ್ಯವನ್ನು ಮಾಡಿರುವೆನು' ಎಂದನು. ೨. ಕದ್ರು ಮತ್ತು ವಿನತೆಯರ ಜಗಳದಲ್ಲಿ ತಾಯಿಯ ಪಕ್ಷ ಹಿಡಿದು ಉಚ್ಚೈಶ್ರವಸ್ಸು ಎಂಬ ಕುದುರೆಯ ದೇಹದಲ್ಲಿ ಕಪ್ಪುರೇಖೆ ಕಾಣುವಂತೆ ಮಾಡಿದವ. ನೋ. - ಕದ್ರು (ಮ.ಸ.,ವ.,ಉ.).

ಕರ್ಣ - ೧. ಸೂರ್ಯನಿಂದ ಕನ್ನಿಕಾವಸ್ಥೆಯ ಕುಂತಿಯಲ್ಲಿ ದುರ್ವಾಸನ ಮಂತ್ರಮಹಿಮೆಯಿಂದ ಹುಟ್ಟಿದ ಮಗ; ಇವನಿಗೆ ಕಾನೀನ, ಅಧಿರಥಿ, ರಾಧೇಯ, ವಸುಷೇಣ ಮತ್ತು ಅರ್ಧರಥಿ ಎಂಬ ಹೆಸರುಗಳಿವೆ. ಕನ್ಯೆಯಾಗಿದ್ದ ಕುಂತಿಯು ಕರ್ಣನು ಜನಿಸಿದೊಡನೆ ನಾಚಿಕೆಯಿಂದ ಮಗುವನ್ನು ಒಂದು ಪೆಟ್ಟಿಗೆಯಲ್ಲಿಟ್ಟು ರತ್ನಗಳನ್ನು ಹಾಕಿ ನದಿಯಲ್ಲಿ ತೇಲಿಬಿಟ್ಟಳು. ದ್ರೋಣನಿಂದ ಬಿಲ್ಲುವಿದ್ಯಾಭ್ಯಾಸವು ಸಾಗಿದಮೇಲೆ ಕೌರವನು ಅಂಗರಾಜ್ಯದಲ್ಲಿ ಇವನಿಗೆ ಅಭಿಷೇಕ ಮಾಡಿದನು. ಇವನ ಸಾಕುತಾಯಿ ಸೂತಜಾತಿಯ ರಾಧೆ; ತಂದೆ ಅಧಿರಥ; ಇವನಿಗೆ ಸೂತಕನ್ಯೆಯೊಡನೆ ವಿವಾಹವಾಯಿತು. ಈತನು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪರಶುರಾಮನನ್ನು ಸೇರಿದನು. ಅಲ್ಲಿಯೇ ಇವರ ಗುಟ್ಟು ಹೊರಬಿದ್ದು, 'ಅರ್ಜುನನೊಡನೆ ಯುದ್ಧ ಮಾಡುವಾಗ ನಿನ್ನ ಅಸ್ತ್ರಗಳೆಲ್ಲ ವಿಫಲವಾಗಲಿ' ಎಂದು ಶಾಪಹೊಂದಿದನು. ದುರ್ಯೋಧನನಿಗಾಗಿ ದಿಗ್ವಿಜಯ

ಮಾಡಿದನು. ಘೋಷಯಾತ್ರೆಯಲ್ಲಿ ಚಿತ್ರಸೇನನಿಂದಲೂ, ಉತ್ತರಗೋಗ್ರಹಣದಲ್ಲಿ ಅರ್ಜುನನಿಂದಲೂ ಪರಾಜಿತನಾದನು. ಈತನು ಕುರುಸೇನಾಪತಿಯಾಗಿ ಎರಡು ದಿನ ಯುದ್ಧಮಾಡಿದನು. ಈತನಿಂದ ದ್ರೌಪದಿಯ ಸ್ವಯಂವರಕಾಲದಲ್ಲಿ ದ್ರುಪದಪುತ್ರನಾದ ಪ್ರಿಯದರ್ಶನನ ವಧೆಯಾಯಿತು. ಇಂದ್ರನಿಗೆ ತನ್ನ ಕವಚಕುಂಡಲಗಳನ್ನು ದಾನ ಮಾಡಿದನು. ಯುದ್ಧಕಾಲದಲ್ಲಿ ಶಲ್ಯನು ಸಾರಥಿಯಾಗಿ ಈತನನ್ನು ನಿಂದಿಸಿ ಉತ್ಸಾಹ ಕುಂದಿಸಿದನು. ಇವನಿಗೆ ಇಂದ್ರನಿಂದ ಕೊಡಲ್ಪಟ್ಟ ಶಕ್ತಿಯಿಂದ ಘಟೋತ್ಕಚನನ್ನು ವಧಿಸಿದನು. ಹಿಂದೆ ಬಿಲ್ಲುವಿದ್ಯಾಭ್ಯಾಸ ಕಾಲದಲ್ಲಿ ಬ್ರಾಹ್ಮಣನೊಬ್ಬನ ಕಡಸನ್ನು (ದನದ ಕರು) ಕೊಂದುದರಿಂದ ಯುದ್ಧಕಾಲದಲ್ಲಿ ಭೂಮಿಯಲ್ಲಿ ರಥದ ಚಕ್ರವು ಹೂತುಹೋಗಲೆಂಬ ಶಾಪವನ್ನು ಪಡೆದನು. ಕರ್ಣನ ಸರ್ಪಾಸ್ತ್ರವು ಅರ್ಜುನನಲ್ಲಿ ನಿರರ್ಥಕವಾಯಿತು. ಅರ್ಜುನನಿಂದ ಕರ್ಣನ ವಧೆಯಾಯಿತು. ದ್ರೌಪದಿಯ ಸ್ವಯಂವರ ಕಾಲದಲ್ಲಿ ಕರ್ಣಪುತ್ರನಾದ ಸುಧಾಮನೂ ಕರ್ಣನು ಸೇನಾಪತಿಯಾಗಿದ್ದಾಗ ವೃಷಸೇನನೂ, ಉತ್ತರಗೋಗ್ರಹಣಕಾಲದಲ್ಲಿ ಕರ್ಣನ ಸೋದರನಾದ ಶತ್ರುಂತಪನೂ ದ್ರೋಣನು ಸೇನಾಧಿಪತಿಯಾಗಿದ್ದಾಗ ಕುರುಕ್ಷೇತ್ರದಲ್ಲಿ ಈತನ (ಕರ್ಣನ) ಮಕ್ಕಳಾದ ಶತ್ರುಂಜಯ ದ್ವಿಪಾಟರೆಂಬಿಬ್ಬರೂ ಅರ್ಜುನನಿಂದ ಹತರಾದರು. ದ್ರುಮ, ವೃತರಥರೆಂಬ ಕರ್ಣನ ಸೋದರರೂ ಸುಷೇಣನೆಂಬ ಕರ್ಣಪುತ್ರನೂ ಭೀಮನಿಂದ ಹತರಾದರು. ಕರ್ಣಪುತ್ರರಾದ ಸತ್ಯಸೇನ, ಚಿತ್ರಸೇನ, ಸುಶರ್ಮರೆಂಬ ಮೂವರು ನಕುಲನಿಂದ ಮಡಿದರು. ಅಭಿಮನ್ಯುವಿನಿಂದ ಒಬ್ಬ ಸೋದರನು ಹತನಾದನು.

ವಸುಷೇಣನೆಂದು ಪ್ರಸಿದ್ಧನಾಗಿದ್ದ ಇವನು ಜನ್ಮತಃ ಪಡೆದ ಕವಚಕುಂಡಲಗಳನ್ನು ದೇಹದಿಂದ ಕೊಯ್ದುಕೊಟ್ಟುದರಿಂದ ಕರ್ಣನೆಂದೂ, ವಿಕರ್ತನೆಂದೂ ಹೆಸರಾದನು (ಮ.ಆ.,ಅ.). ಕವಚಕುಂಡಲರೂಪವಾದ ವಸು (ಧನ) ಸಹಿತನಾಗಿ ಹುಟ್ಟಿದುದರಿಂದ ಇವನು ವಸುಷೇಣನೆಂದು ಪ್ರಖ್ಯಾತನಾದನು. (ಮ.ಆ.). ಮಿಂಚಿನಂತೆ ಹೊಳೆಯುವ ಧ್ವಜ ಸುವರ್ಣಮಯವಾದ ಶಂಖಗಳಿಂದಲೂ, ಆನೆಗಳನ್ನು ಬಿಗಿಯುವ ಕಕ್ಷೆಗಳಿಂದಲೂ ಅಲಂಕೃತವಾದ ಧ್ವಜವೇ ಕರ್ಣನದು (ಮ.ವಿ.). ಭಾರ್ಗವಾಸ್ತ್ರ ಎಂಬುದು ಕರ್ಣನ ಬಳಿಯಲ್ಲಿದ್ದ ಒಂದು ಮಹಾಸ್ತ್ರ (ಮ.ಕ.).

ಕರ್ಣನು ಶಲ್ಯನೊಡನೆ ಮಿತ್ರ ಮತ್ತು ಶತ್ರು ಎಂಬ ಶಬ್ದದ ಅರ್ಥವನ್ನು ಹೀಗೆ ವಿವರಿಸಿದನು. ಮಿಂದತಿ (ಸ್ನೇಹಿಸುವುದು). ನಂದಯತಿ (ಸಂತೋಷಗೊಳಿಸುವುದು). ಪ್ರೀಯತೇ (ಪ್ರೀತಿಸುವುದು). ಸಂತ್ರಾಯತೇ

(ರಕ್ಷಿಸುವುದು), ಮಿನುತೇ (ಗೌರವಿಸುವುದು), ಮೋದತೇ (ಸಂತೋಷಿಸುವುದು). ಶತ್ರು-ಶದಿ (ಕೆಡಿಸುವುದು), ಶಾಸ್ತಿ (ಅಧಿಕಾರ ಮಾಡುವುದು), ಶೃತಿ (ಕುಗ್ಗಿಸುವುದು), ಶೃಗಾತಿ (ಹಿಂಸೆಗೊಳಿಸುವುದು), ಶ್ವಸತಿ (ನಿಟ್ಟುಸಿರು ಬಿಡುವಂತೆ ಮಾಡುವುದು), ಸೀದತಿ (ಸಂಕಟಗೊಳಿಸುವುದು), ಶ್ರಮ್ (ಕಷ್ಟಪಡಿಸುವುದು), ಶುಚ್ (ದುಃಖಪಡಿಸುವುದು), ಸೂದತೇ (ಸಂಪೂರ್ಣ ನಾಶಗೊಳಿಸುವುದು) (ಮ.ಆ.,ಶಾಂ.,ವ.,ವಿ.,ಉ.,ಭೀ.,ದ್ರೋ.,ಕ., ಸ್ತ್ರೀ.,ಅಶ್ರ.)

ಕರ್ಣಪ್ರಯಾಗ - ಒಂದು ಪವಿತ್ರ ಕ್ಷೇತ್ರ. ಇದು ರುದ್ರಪ್ರಯಾಗದಿಂದ ಇಪ್ಪತ್ತೊಂದು ಮೈಲುಗಳ ದೂರದಲ್ಲಿದೆ. ಇಲ್ಲಿಯೇ ಪಿಂಡಾನದಿಯು ಅಲಕನಂದೆಯನ್ನು ಸೇರುವುದು. ಕರ್ಣನು ಇಲ್ಲಿಯೇ ತನ್ನ ತಂದೆಯಾದ ಸೂರ್ಯನನ್ನು ಕುರಿತು ತಪಸ್ಸು ಮಾಡಿದನೆಂಬ ಐತಿಹ್ಯವಿದೆ (ಕ್ಷೇತ್ರದ.).

ಕರ್ಣಾಟಕ (ಕರ್ನಾಟಕ) - ಕನ್ನಡ ಮಾತನಾಡುವ ಪ್ರದೇಶ. ಪ್ರಾಚೀನ ಕಾಲದ ಕುಂತಳ. ಈಗಿನ ವಿಶಾಲ ಮೈಸೂರು.

ಕರ್ಣಿಕೆ - ೧. ಒಬ್ಬಳು ಅಪ್ಸರೆ. ೨. ವಸುದೇವನ ತಮ್ಮನಾದ ಕಂಕನ ಹೆಂಡತಿ; ಈಕೆಗೆ ಋತಧಾಮ ಮತ್ತು ಜಯ ಎಂಬ ಇಬ್ಬರು ಮಕ್ಕಳು (ಮ.ಆ.).

ಕರ್ದಮ - ೧. ಬ್ರಹ್ಮರ್ಷಿ; ಈತನು ಸಂತಾನಾರ್ಥವಾಗಿ ವಿಷ್ಣುವಿನೊಡನೆ ಪತ್ನಿಯನ್ನು ಬೇಡಿ ಸ್ವಾಯಂಭು ಮನುವಿನ ಪುತ್ರಿಯಾದ ದೇವಹೂತಿಯನ್ನು ವಿವಾಹವಾದನು. ಈತನಿಗೆ ಕಪಿಲನೆಂಬ ಒಬ್ಬ ಮಗನೂ, ಅರುಂಧತಿ ಮೊದಲಾದ ಒಂಬತ್ತು ಮಂದಿ ಪುತ್ರಿಯರೂ ಇದ್ದರು. ಕಪಿಲನು ಸಾಂಖ್ಯಸೂತ್ರಗಳನ್ನು ಬರೆದ ಮಹಾವ್ಯಕ್ತಿ. ಅರುಂಧತಿ ಮೊದಲಾದ ಪುತ್ರಿಯರು ವಸಿಷ್ಠ ಮೊದಲಾದ ಒಂಬತ್ತು ಮಂದಿ ಮಹರ್ಷಿಗಳನ್ನು ಲಗ್ನವಾದರು. ನೋ. - ಅರುಂಧತಿ (ಮ.ಸ.,ಶಾಂ.,ಭಾಗ.,ಆ.). ೨. ಒಂದು ಸರ್ಪ. ೩. ಪುಲಹ ಮುನಿಯ ಮಗ; ಈತನ ತಾಯಿ ಕರ್ದಮ ಬ್ರಹ್ಮನ ಮಗಳಾದ ಗತಿ; ಈತನ ಹೆಂಡತಿ ಸಿನೀವಾಲಿ (ಭಾಗ.,ಮತ್ಸ್ಯಪು.).

ಕರ್ವಟ - ವಂಗದೇಶ ಸಮೀಪವಿದ್ದ ದೇಶ; ಇದಕ್ಕೆ ತಾಮ್ರಲಿಪ್ತನೆಂಬುವನು ರಾಜನಾಗಿದ್ದನು (ಮ.ಸ.).

ಕಲಹೆ - ಸೌರಾಷ್ಟ್ರದೇಶದ ಭಿಕ್ಷುವೆಂಬ ಬ್ರಾಹ್ಮಣನ ಪತ್ನಿ; ಈಕೆ ಗಂಡನನ್ನು ಅಲಕ್ಷ್ಯ ಮಾಡಿ ತಾನು ಮೃಷ್ಟಾನ್ನವನ್ನುಂಡುಕೊಂಡು ಸುಖವಾಗಿದ್ದಳು. ಭಿಕ್ಷು ಇವಳೊಡನೆ ಸಂಸಾರ ಸಾಗಿಸಲಾರದೆ ಮತ್ತೊಂದು ಮದುವೆಯ ಪ್ರಯತ್ನದಲ್ಲಿದ್ದಾಗ ಈಕೆ ವಿಷಕುಡಿದು ಸತ್ತು ಪಿಶಾಚಿಯಾದಳು. ಮುಂದೆ

ಒಂದು ದಿನ ಧರ್ಮದತ್ತನೆಂಬ ಬ್ರಾಹ್ಮಣನು ಮಿಂದು ವಿಷ್ಣುವಿನ ಪೂಜೆಗಾಗಿ ಹೋಗುತ್ತಿದ್ದಾಗ ಈ ಪಿಶಾಚಿ ಆತನಿಗೆ ಕಾಣಿಸಿಕೊಳ್ಳಲು ಅವನು ಹೆದರಿ ಕೈಯಲ್ಲಿದ್ದ ಪೂಜಾಪಾತ್ರಗಳನ್ನು ಈ ಪಿಶಾಚಿಯ ಮೇಲೆ ಎಸೆಯಲು ಆಕೆಗೆ ಆಗ ಪಿಶಾಚಿ ಜನ್ಮವು ಹೋಗಿ ರಾಕ್ಷಸಿಯ ಜನ್ಮವು ಪ್ರಾಪ್ತವಾಯಿತು. ಆಗ ಆಕೆ ಗೋಳಿಡುತ್ತಾ ತನ್ನನ್ನು ಉದ್ಧರಿಸಬೇಕೆಂದು ಆ ಬ್ರಾಹ್ಮಣನನ್ನು ಬೇಡಲು ಅವನು ಕನಿಕರವುಳ್ಳವನಾಗಿ ತಾನು ಅಂದಿನವರೆಗೆ ಮಾಡಿದ ಕಾರ್ತಿಕ ವ್ರತದ ಅರ್ಧಪುಣ್ಯವನ್ನು ಆಕೆಗೆ ಧಾರೆಯೆರೆಯಲು ಆಕೆಗೆ ಇದರಿಂದ ರಾಕ್ಷಸಜನ್ಮ ಪರಿಹಾರವಾಗಿ ದಿವ್ಯಲೋಕವನ್ನು ಹೊಂದಿ ಪುಣ್ಯ ಮುಗಿದ ಮೇಲೆ ಕೇಕಯ ರಾಜನಪುತ್ರಿಯಾದ ಕೈಕೆಯಾಗಿ ಜನಿಸಿ, ದಶರಥನನ್ನು ವಿವಾಹವಾದಳು (ಸ್ಕಾಂ.ಪು., ಕಾವೇ.ಮ.).

ಸಹ್ಯಾದ್ರಿಪ್ರಾಂತದ ಕರವೀರಪುರದ ಧರ್ಮದತ್ತನೆಂಬ ಬ್ರಾಹ್ಮಣನು ಪಿಶಾಚಿಯಾದ ಈಕೆಗೆ ತನ್ನ ಕಾರ್ತಿಕವ್ರತದ ಪುಣ್ಯದ ಅರ್ಧಫಲವನ್ನು ಕೊಡಲು ಈಕೆಯು ವಿಷ್ಣುಲೋಕವನ್ನು ಹೊಂದಿದಳು. ಮುಂದಿನ ಜನ್ಮದಲ್ಲಿ ಧರ್ಮದತ್ತನು ದಶರಥನಾಗಿ, ಅವನ ಇಬ್ಬರು ಪತ್ನಿಯರು ಕೌಸಲ್ಯೆ ಮತ್ತು ಸುಮಿತ್ರೆಯರಾಗಿಯೂ ಕಾರ್ತಿಕಮಾಸ ವ್ರತದ ಅರ್ಧಪುಣ್ಯದಿಂದ ಉದ್ಭವಿಸಿದ ಕಲಹೆಯೇ ಕೈಕೆಯಾಗಿಯೂ ಹುಟ್ಟಿ ದಶರಥನನ್ನು ಪಾಣಿಗ್ರಹಣವಾದಳು. ನೋ. - ಕೈಕೆ, ಚಂಡಿ, ಉದ್ದಾಲಕ (ಅನಂ.ರಾ.).

ಕಲಾವತಿ - ೧. ತುಂಬುರನ ವೀಣೆಯ ಹೆಸರು. ೨. ಚಂದ್ರವಂಶದ ದಾಶಾರ್ಹ ರಾಜನ ಪತ್ನಿ. ಈಕೆ ವಿವಾಹದ ಮೊದಲು ದುರ್ವಾಸನ ಸೇವೆ ಮಾಡಿ ಆತನಿಂದ ಮಂತ್ರೋಪದೇಶ ಪಡೆದಳು. ಮದುವೆಯಾದ ದಿನ ದಾಶಾರ್ಹ ರಾಜನು ಈಕೆಯ ಶರೀರವನ್ನು ಮುಟ್ಟಿದೊಡನೆ ರಾಜನ ದೇಹದಲ್ಲೆಲ್ಲಾ ಬೊಕ್ಕೆಗಳೆದ್ದವು. ಇದಕ್ಕೆ ರಾಜನ ಅಪರಿಶುದ್ಧತೆಯೇ ಕಾರಣವೆಂದು ಕಲಾವತಿಯು ಹೇಳಲು ರಾಜನು ಗರ್ಗಮುನಿಗಳಿಂದ ಪಂಚಾಕ್ಷರೀ ಮಂತ್ರೋಪದೇಶವನ್ನು ಪಡೆದು ಪರಿಶುದ್ಧನಾಗಿ ಪತ್ನಿಯೊಂದಿಗೆ ಸುಖವಾಗಿದ್ದನು. ಇದರಿಂದ ಮುಂದೆ ಆತನಿಗೆ ಕ್ಷೇಮವಾಯಿತು (ಸ್ಕಾಂ.ಪು.ಬ್ರಹ್ಮೋತ್ತರಖಂಡ). ೩. ಈಕೆ ಸ್ವಾರೋಚಿಷ ಮನುವಿನ ಪತ್ನಿ. ತಾಯಿ ಪುಂಜಿಕಸ್ಥಲೆಯೆಂಬ ಅಪ್ಸರಸೆ. ತಂದೆ ಪಾಲನೆಂಬ ಮುನಿ. ಪುಂಜಿಕಸ್ಥಲೆಯು ಹೆಣ್ಣುಶಿಶುವನ್ನು ಹೆತ್ತು ಅದನ್ನು ಬಿಟ್ಟು ಸ್ವರ್ಗಲೋಕಕ್ಕೆ ನಡೆದುಬಿಟ್ಟಳು. ಬಾಲೆಯು ಮುಂದೆ ಚಂದ್ರನ ಕಲೆಗಳಿಂದಲೇ ವೃದ್ಧಿ ಹೊಂದಿ ಕಲಾವತಿ ಎಂಬ ಹೆಸರನ್ನು ಪಡೆದಳು. ಈಕೆಯು ಪಾರ್ವತೀದೇವಿಯಿಂದ ಪದ್ಮಿನೀ ವಿದ್ಯೆಯನ್ನು ಉಪದೇಶ ಹೊಂದಿ ಇಂದೀವರಾಕ್ಷನೆಂಬ ಗಂಧರ್ವರಾಜನ ಮಗಳಾದ

ಮನೋರಮೆಯ ಗೆಳೆತನವನ್ನು ಸಂಪಾದಿಸಿ ಸ್ವರೋಚಿಯನ್ನು ವಿವಾಹವಾದಳು (ಮಾರ್ಕಂ.ಪು.).

ಕಲ್ಯಾಣ - ಇದು ಬಿಜ್ಜಳನ ರಾಜಧಾನಿ. ಬಸವಣ್ಣನವರು ವೀರಶೈವ ಮತವನ್ನು ಇಲ್ಲೇ ಪ್ರಚಾರ ಮಾಡಿದರು. ಇಲ್ಲಿ ಬಸವೇಶ್ವರರ ಅನುಭವಮಂಟಪವಿದೆ.

ಕಲಿ - ೧. ನಾಲ್ಕನೇ ಯುಗ; ಸಪ್ತರ್ಷಿಮಂಡಲವು ಮಖಾ ನಕ್ಷತ್ರದಲ್ಲಿರುವಾಗ ಕಲಿಯುಗ ಪ್ರಾರಂಭ. ಈ ಯುಗಕ್ಕೆ ಮನುಷ್ಯಮಾನದ ನಾಲ್ಕು ಲಕ್ಷದ ೩೨,೦೦೦ ವರ್ಷಗಳು. ಈ ವರ್ಷಗಳಲ್ಲಿ ೫,೦೬೩ ವರ್ಷಗಳು ಮಾತ್ರ ಸಂದಿವೆ. ೨. ಶನಿಯ ಹೆಸರು. ದಮಯಂತಿಯು ನಳನನ್ನು ವರಿಸಿದುದನ್ನು ಕೇಳಿ, ಈತನು ಕೋಪಾವಿಷ್ಟನಾಗಿ ರಾಜನ ದೇಹವನ್ನು ಪ್ರವೇಶಮಾಡಿ ಅನೇಕ ಕಷ್ಟಗಳನ್ನು ಕೊಟ್ಟು ಕೊನೆಗೆ ತಾನು ಅವನನ್ನು ಬಿಟ್ಟು ತಾರೆಯ ಮರವೊಂದನ್ನು (ಬಭೀತಕದ್ರುಮ) ಪ್ರವೇಶಿಸಿದನು. ೩. ಶ್ರೀಕೃಷ್ಣನ ಅವತಾರ ಸಮಾಪ್ತಿಯಾದಮೇಲೆ ಅಧರ್ಮವು ಜಗತ್ತಿನಲ್ಲಿ ವ್ಯಾಪಿಸಿತು. ಆಗ ಕಲಿಪುರುಷನು ಕೃಶನಾಗಿದ್ದ ಧರ್ಮಪುರುಷನನ್ನು ಕಾಲಿನಿಂದ ಒದೆದು ಪರೀಕ್ಷಿದ್ರಾಜನ ರಾಜ್ಯದಲ್ಲಿ ಹಾವಳಿಯನ್ನೆಬ್ಬಿಸಲು, ಪರೀಕ್ಷಿದ್ರಾಜನು ಕಲಿಯನ್ನು ಶಿಕ್ಷಿಸುವುದಕ್ಕಾಗಿ ಆಯುಧವನ್ನೆತ್ತಲು ಕಲಿಯು ಹೆದರಿ ಪರೀಕ್ಷಿತನನ್ನು ಮರೆಹೊಕ್ಕು ಆತನ ರಾಜ್ಯಭಾರದವರೆಗೆ ಅವನ ರಾಜ್ಯವನ್ನು ಕಣ್ಣೆತ್ತಿಯೂ ನೋಡಲಿಲ್ಲ. ೪. ಕಲಿಯ ಹಾವಳಿಯನ್ನು ಸಹಿಸಲಾರದೆ ಭೂದೇವಿ ಶೋಕಗ್ರಸ್ತೆಯಾಗಲು ಶ್ರೀಮನ್ನಾರಾಯಣನು ಕಲ್ಕಿ ಎಂಬ ಹೆಸರಿನಿಂದ ಅವತಾರ ಮಾಡಿ ಕಲಿಯನ್ನು ನಿಗ್ರಹಿಸಿ ಧರ್ಮವನ್ನು ಪುನರುತ್ಥಾನಗೊಳಿಸಿದನು. ನೋ. - ಕಲ್ಕಿ. ೫. ವರೂಥಿನಿ ಎಂಬ ಗಂಧರ್ವಕನ್ಯೆಯ ತಂದೆ. ಈಕೆಯು ಕಲಿ ಎಂಬ ಗಂಧರ್ವನು ಬ್ರಾಹ್ಮಣವೇಷದಿಂದ ಬಂದಾಗ ಮೋಹಿಸಿ ಅವನನ್ನು ವಿವಾಹವಾಗಿ ಮಹಾತೇಜಸ್ವಿಯಾದ ಸ್ವರೋಚಿ ಎಂಬ ಮಗನನ್ನು ಪಡೆದಳು (ಮಾರ್ಕಂ.ಪು.). ೬. ದಕ್ಷಪುತ್ರಿಯಾದ ಮುನಿಯ ಒಬ್ಬ ಮಗ; ಇವನು ದೇವಗಂಧರ್ವ (ಮ.ಸ.,ವ.,ಭಾಗ.).

ಕಲೆ - ೧. ಕಶ್ಯಪ ಮುನಿಯ ತಾಯಿ; ಮರೀಚಿ ಮುನಿಯ ಪತ್ನಿ. ತಂದೆ ಕರ್ದಮ ಮಹರ್ಷಿ; ತಾಯಿ ದೇವಹೂತಿ. ೨. ರಾವಣನ ತಮ್ಮನಾದ ವಿಭೀಷಣನ ಹಿರಿಯ ಮಗಳು. ಇವಳು ಅಶೋಕವನದಲ್ಲಿದ್ದ ಸೀತೆಗೆ ಆಗಾಗ ಶ್ರೀರಾಮನ ವಾರ್ತೆಯನ್ನು ತಿಳಿಸುತ್ತಿದ್ದಳು. (ಭಾಗ., ವಾ.ರಾ.ಸುಂ.).

ಕಲಿಂಗ (ಕಳಿಂಗ) - ೧. ಕ್ಷತ್ರಿಯ; ಯಯಾತಿಯ ಪುತ್ರನಾದ ಅನುವಿನ ವಂಶೋತ್ಪನ್ನನಾದ ಬಲಿರಾಜನ ಪತ್ನಿಯಲ್ಲಿ ದೀರ್ಘತಮನೆಂಬ ಮುನಿಯಿಂದ

ಹುಟ್ಟಿದ ಮಗ; ಈತನ ಸೋದರರು ಅಂಗ, ವಂಗ, ಪುಂಡ್ರ, ಸುಂಹ ಮೊದಲಾದವರು. ೨. ದ್ರೌಪದಿಯ ಸ್ವಯಂವರಕ್ಕೆ ಬಂದ ಕ್ಷತ್ರಿಯನೊಬ್ಬ. ೩. ಆಂಧ್ರಪ್ರದೇಶ; ಈಗಿನ ಗಂಜಾಂ, ವಿಶಾಖಪಟ್ಟಣ ಪ್ರಾಂತ. ಇಲ್ಲಿಯ ರಾಜರಾಗಿದ್ದ ಶ್ರುತಾಯು, ಶಕ್ರದೇವ, ಸತ್ಯದೇವ, ಸತ್ಯ, ಕೇತುಮಾನ್ ಮೊದಲಾದವರು ಕೌರವರ ಪಕ್ಷದಲ್ಲಿ ನಿಂತು ಹೋರಾಡಿ ಭೀಮಸೇನನಿಂದ ಹತರಾದರು. ೪. ದುರ್ಯೋಧನನ ಮಾವನಾದ (?) ಚಿತ್ರಾಂಗದನ ರಾಜ್ಯ; ಇದರ ಅಂದಿನ ರಾಜಧಾನಿ ರಾಜಪುರ. ೫. ಗಾಂಧಾರಿಯ ತಮ್ಮನಾದ ಶಕುನಿಯ ರಾಜ್ಯ. ಶಕುನಿಗೂ ಕಳಿಂಗನೆಂಬ ಹೆಸರುಂಟು (ಮ.ಆ.,ಭೀ.,ಶಾಂ.).

ಕಲ್ಕಿ - ವಿಷ್ಣುವಿನ ದಶಾವತಾರಗಳಲ್ಲಿ ಕೊನೆಯದು; ಕಲಿಯುಗದ ಅಂತ್ಯದಲ್ಲಿ ಸಂಬಲನೆಂದು ಗ್ರಾಮದ ಬ್ರಾಹ್ಮಣನಾದ ವಿಷ್ಣುಯಶ ಮತ್ತು ಸುಮತಿಯರಿಗೆ ಮಗನಾಗಿ ಈತನು ಹುಟ್ಟಿ ಪರಶುರಾಮನಿಂದ ವಿದ್ಯಾಭ್ಯಾಸ ಮಾಡಿದನು. ಮುಂದೆ ಶಿವನ ಅನುಗ್ರಹಕ್ಕೆ ಪಾತ್ರನಾಗಿ ಒಂದು ಖಡ್ಗ, ಒಂದು ಉತ್ತಮ ಕುದುರೆ ಮತ್ತು ಒಂದು ಗಿಳಿಯನ್ನು ಆತನಿಂದ ಪಡೆದನು. ಇವನು ಸಿಂಹಳದ್ವೀಪದ ರಾಜನಾದ ಬೃಹದ್ರಥನ ಮಗಳಾದ ಪದ್ಮಾವತಿಯನ್ನು ಲಗ್ನವಾದನು. ಇವನೇ ಕಲಿಯನ್ನೂ, ದುಷ್ಟರನ್ನೂ ನಾಶಮಾಡಿ, ದೇಶದಲ್ಲಿ ಪುನಃ ಧರ್ಮಸಂಸ್ಥಾಪನೆಯನ್ನು ಮಾಡಿದನು (ಮ.ಸ.,ಅ,ಭಾಗ.).

ಕಲ್ಪ - ಬ್ರಹ್ಮನ ಒಂದು ಹಗಲಿನಷ್ಟು ಕಾಲ; ಸೌರಮಾನದ ಒಂದು ವರ್ಷ; ದೇವತೆಗಳಿಗೆ ಒಂದು ಹಗಲು ಮತ್ತು ಒಂದು ರಾತ್ರಿ. ಇಂತಹ ಹನ್ನೆರಡು ಸಾವಿರ ವರ್ಷಗಳು ಮುಗಿಯುವಾಗ ಮನುಷ್ಯರ ಒಂದು ಚತುರ್ಯುಗ ಅಥವಾ ಒಂದು ದೇವಯುಗವಾಗುವುದು. ಒಂದು ಚತುರ್ಯುಗಕ್ಕೆ ೪೩ ಲಕ್ಷದ ೨೦ ಸಾವಿರ ಸೌರ ವರ್ಷಗಳು; ಇವು ಒಂದು ಸಾರಿ ಆದರೆ ಬ್ರಹ್ಮನ ಒಂದು ಹಗಲಾಗುವುದು. ರಾತ್ರಿಯೂ ಇಷ್ಟೇ ದೀರ್ಘವಾದದ್ದು. ಹೀಗೆ ಬ್ರಹ್ಮನ ಒಂದೊಂದು ರಾತ್ರಿಯಲ್ಲಿಯೂ ಒಂದೊಂದು ಪ್ರಳಯ ನಡೆಯುವುದು. (ಭಾಗ., ಮತ್ಸ್ಯಪು.).

ಕಲ್ಮಾಷಪಾದ - ನೋ. - ಸೌದಾಸ. ಈ ಮಿತ್ರಸಹ ಅಥವಾ ಸೌದಾಸರಾಜನು ವಸಿಷ್ಠನಿಗೆ ಶಾಪವನ್ನು ಕೊಡುವುದಕ್ಕಾಗಿ ನೀರನ್ನು ತೆಗೆದುಕೊಳ್ಳಲು ಆಗ ಆತನ ಪತ್ನಿ ಮದಯಂತಿಯು ಅಡ್ಡಬರಲು ಆ ಶಾಪೋದಕವನ್ನು ತನ್ನ ಕಾಲಿನ ಮೇಲೆಯೇ ಸುರಿದುಕೊಂಡನು. ಇದರಿಂದ ಈತನ ಕಾಲು ಕಪ್ಪಾಗಿ ಕಲ್ಮಾಷಪಾದನೆಂಬ ಹೆಸರನ್ನು ಪಡೆದನು. ಇವನು ಗೋಕರ್ಣಕ್ಷೇತ್ರಕ್ಕೆ ಹೋಗಿ ಅಲ್ಲಿ ಸಮಸ್ತ ತೀರ್ಥಗಳಲ್ಲೂ ಸ್ನಾನಮಾಡಿ ಶಿವರಾತ್ರಿ ಉಪವಾಸ ಮಾಡಿ ಬಿಲ್ವಪತ್ರೆಯಿಂದ ಮಹಾಬಲೇಶ್ವರನನ್ನು ಪೂಜಿಸಿ, ರಾತ್ರಿಯಲ್ಲಿ ಜಾಗರಣೆ

ಮಾಡಿ ಬ್ರಹ್ಮಹತ್ಯಾದಿ ದೋಷಗಳನ್ನು ಕಳೆದುಕೊಂಡು ಕೃತಾರ್ಥನಾದನು (ಸ್ಕಾಂಪು.,ವಾ.ರಾ.,ವಿಷ್ಣುಪು.,ಭಾಗ.,ಹರಿ., ಮ.ಆ.,ಅಶ್ವ.).

ಕವಚಿ - ಧೃತರಾಷ್ಟ್ರನ ಮಗ; ಇವನು ಭೀಮನಿಂದ ಹತನಾದನು (ಮ.ಆ.,ಕ.).

ಕವಿ - ೧. ಭೃಗಮುನಿಯ ಮಗ; ಈತನ ಮಗ ಶುಕ್ರಾಚಾರ್ಯ. ಶುಕ್ರಾಚಾರ್ಯ ಮತ್ತು ವಾಲ್ಮೀಕಿಗೆ ಈ ಹೆಸರಿದೆ. ಕವಿಯ ತಾಯಿ ಖ್ಯಾತಿ. ೨. ವೈವಸ್ವತ ಮನುವಿನ ಮಗ; ಮಹಾಜ್ಞಾನಿ. ೩. ಪ್ರಿಯವ್ರತ ಮತ್ತು ವಿಶ್ವಕರ್ಮನ ಮಗಳಾದ ಬರ್ಹಿಷ್ಮತಿಯಲ್ಲಿ ಹುಟ್ಟಿದ ಅಗ್ನೀಧ್ರ, ಇಧ್ಮಜಿಹ್ವ ಮೊದಲಾದ ಹತ್ತು ಮಂದಿ ಮಕ್ಕಳಲ್ಲಿ ಈತನು ಕಿರಿಯವನು. ಇವರಲ್ಲಿ ಮಹಾವೀರ, ಸವನ, ಕವಿ ಎಂಬವರು ವೈರಾಗ್ಯಹೊಂದಿ ಅರಣ್ಯಕ್ಕೆ ಹೋದರು. ೪. ಕುರುಕ್ಷೇತ್ರದಲ್ಲಿದ್ದ ಕೌಶಿಕನೆಂಬ ಮುನಿಯ ಸ್ವಸೃಪ ಮೊದಲಾದ ಏಳು ಮಂದಿ ಮಕ್ಕಳಲ್ಲಿ ಈತನು ಐದನೆಯವ. ಇವನ ಗುರುವಾದ ಗರ್ಗಮುನಿಯು ಗೋವನ್ನು ಕ್ಷಾಮಕಾಲದಲ್ಲಿ ಕೊಂದು 'ಆಕಳನ್ನು ಹುಲಿ ತಿಂದಿತು' ಎಂದು ಸುಳ್ಳು ಹೇಳಿದುದರಿಂದ ದಶಾರ್ಣ ದೇಶದಲ್ಲಿ ಬೇಡನಾಗಿ ಜನ್ಮವೆತ್ತಿದನು. ನೋ. - ಪಿತೃವರ್ತಿ. (ಮ.ಆ.,ಭಾಗ.).

ಕವೇರ - ಕಾವೇರಿಯ ತಂದೆ; ಶಿವಭಕ್ತ; ಕಾವೇರಿಯು ಅಗಸ್ತ್ಯನನ್ನು ವಿವಾಹವಾದ ಮೇಲೆ ನದಿಯಾಗುತ್ತಾಳೆ. ನೋ. ಕಾವೇರಿ, ಅಗಸ್ತ್ಯ. (ಕಾವೇ.ಮ.).

ಕಶೇರುಕ - ಶ್ರೀಕೃಷ್ಣನಿಂದ ಹತನಾದ ಕ್ಷತ್ರಿಯ (ಮ.ಸ.).

ಕಶ್ಯಪ - ೧. ಬ್ರಹ್ಮರ್ಷಿ; ಮರೀಚಿ ಮುನಿಯ ಮಗ; ಕಶ್ಯಪನ ತಾಯಿ ಕರ್ದಮ ಪುತ್ರಿಯಾದ ಕಲೆ. ಈತನ ಹೆಂಡಿರು ದಕ್ಷನ ಹದಿಮೂರು ಮಂದಿ ಪುತ್ರಿಯರಾದ ಅದಿತಿ, ದಿತಿ, ಮುನಿ, ಕದ್ರು ಎಂಬುವರು. ಈತನಿಗೆ ಹದಿನೇಳು ಮಂದಿ ಪತ್ನಿಯರೆಂದು ಭಾಗವತದಲ್ಲಿ ಹೇಳಿದೆ. ವೈಶ್ವಾನರನ ಪುತ್ರಿಯರಾದ ಕಾಲಾ ಮತ್ತು ಪುಲೋಮಾ ಎಂಬವರೂ ಕಶ್ಯಪನ ಮಡದಿಯರು. ಪರಶುರಾಮನಿಂದ ಈತನಿಗೆ ಭೂಮಿಯು ದಾನವಾಗಿ ಕೊಡಲ್ಪಟ್ಟಿತು. ಇದರಿಂದ ಭೂಮಿಗೆ ಕಾಶ್ಯಪಿ ಎಂಬ ಹೆಸರಿದೆ. ವರುಣನ ಗೋವುಗಳನ್ನು ಈ ಮುನಿಯು ಎರವಲು ತಂದು ಇಬ್ಬರು ಪತ್ನಿಯರ ಮಾತು ಕೇಳಿ ಹಿಂದೆ ಕೊಡದುದರಿಂದ ವರುಣನ ಶಾಪಕ್ಕೆ ಗುರಿಯಾಗಿ ವಸುದೇವ ಮತ್ತು ದೇವಕಿ, ರೋಹಿಣಿಯರಾಗಿ ದ್ವಾಪರಯುಗದಲ್ಲಿ ಜನ್ಮವೆತ್ತಿದರು. ದನಗಳನ್ನು ವಸುದೇವನು ನಿರ್ಬಂಧಿಸಿದುದರಿಂದ ವಸುದೇವನಿಗೆ ಕಾರಾಗೃಹವಾಸ ಪ್ರಾಪ್ತವಾಯಿತು. ಕಶ್ಯಪನು ಗೋತ್ರಪ್ರವರ್ತರಾದ ಮಹರ್ಷಿಗಳಲ್ಲಿ ಮೊದಲನೆಯವನು. ಗೋತ್ರ ಗೊತ್ತಿಲ್ಲದವರು ತಮ್ಮದು ಕಾಶ್ಯಪ ಗೋತ್ರವೆಂದೇ ತಿಳಿಯಬೇಕೆಂದು

ಧರ್ಮಶಾಸ್ತ್ರಗಳು ಹೇಳುತ್ತವೆ (ಲಿಂಗಪು.). ಪರ್ವತನೆಂಬ ದೇವರ್ಷಿ ಮತ್ತು ವಿಭಂಡಕನೆಂಬ ಬ್ರಹ್ಮರ್ಷಿಯು ಈತನ ಮಗ. ಕಶ್ಯಪನಿಗೆ ಅದಿತಿಯಲ್ಲಿ ದೇವತೆಗಳೂ, ದಿತಿಯಲ್ಲಿ ದೈತ್ಯರೂ, ದನುವಿನಲ್ಲಿ ದಾನವರೂ, ಕಾಲೆಯಲ್ಲಿ ಕಾಲಕೇಯರೂ, ದನಾಯುವಿನಲ್ಲಿ ಸಿದ್ಧರೂ, ಕ್ರೋಧೆಯಲ್ಲಿ ಮಾಂಸಾಹಾರಿ ಪ್ರಾಣಿಗಳೂ, ಪ್ರಾಧೆಯಲ್ಲಿ ಗಂಧರ್ವರೂ, ವಿನತೆಯಲ್ಲಿ ಅರುಣ ಗರುಡರೂ, ಕಪಿಲೆಯಲ್ಲಿ ಗೋವುಗಳೂ, ಮುನಿಯಲ್ಲಿ ಅಪ್ಸರೆಯರೂ, ಕದ್ರುವಿನಲ್ಲಿ ಸರ್ಪಗಳೂ, ಸುರಸೆಯಲ್ಲಿ ಯಕ್ಷರೂ, ನಾಗರೂ, ಇಲೆಯಲ್ಲಿ ಮರ, ಬಳ್ಳಿ, ಹುಲ್ಲುಗಳೂ, ತಾಮ್ರೆಯಲ್ಲಿ ಅಶ್ವ, ಗರ್ದಭ, ಹದ್ದುಗಳೂ ಮಕ್ಕಳಾಗಿ ಹುಟ್ಟಿದರು. ನೋ. - ವಸುದೇವ.

ಭೂಮಿಯು ದುರಾತ್ಮರಿಂದ ಪೀಡಿತವಾಗಿ ರಸಾತಳಕ್ಕೆ ಇಳಿಯುತ್ತ ಬರಲು, ಉದಾರಬುದ್ಧಿಯುಳ್ಳ ಕಶ್ಯಪನು ಭೂಮಿಯನ್ನೆತ್ತಿ ತನ್ನ ತೊಡೆಯಲ್ಲಿ ಧರಿಸಿದನು. ಇದರಿಂದ ಭೂಮಿಗೆ ಉರ್ವಿ ಎಂದು ಹೆಸರಾಯಿತು (ಮ.ಶಾಂ.).

೨. ಶಮೀಕ ಋಷಿಯ ಪುತ್ರನಾದ ಶೃಂಗಿಯಿಂದ ಸರ್ಪದಷ್ಟನಾಗಿ ಸಾಯುವಂತೆ ಶಾಪ ಪಡೆದ ಪರೀಕ್ಷಿದ್ರಾಜನನ್ನು ಆ ಶಾಪದಿಂದ ಉಳಿಸುವುದಕ್ಕಾಗಿ ಹೋಗುತ್ತಿದ್ದ ಬ್ರಾಹ್ಮಣನೊಬ್ಬ. ಈತನ ಮಂತ್ರಶಕ್ತಿಯನ್ನರಿಯಲು ತಕ್ಷಕನು ಒಂದು ದೊಡ್ಡ ಆಲದ ಮರವನ್ನು ಕಚ್ಚಲು ಅದು ಒಡನೆಯೇ ಬೂದಿಯಾಗಿ ಬಿತ್ತು. ಕಶ್ಯಪನೆಂಬ ಈ ಮಾಂತ್ರಿಕ ಬ್ರಾಹ್ಮಣನು ತನ್ನ ಮಂತ್ರಶಕ್ತಿಯಿಂದ ಆ ಮರವನ್ನು ಮೊದಲಿನಂತೆ ಮಾಡಲು ತಕ್ಷಕನು ಆ ಬ್ರಾಹ್ಮಣನನ್ನು ಹೊಗಳಿ ಹಿಂದಕ್ಕೆ ಕಳುಹಿಸಿದನು.

ಪರಶುರಾಮನಿಂದ ಕಶ್ಯಪನು ಭೂಮಿಯನ್ನು ದಾನವಾಗಿ ಪಡೆದಮೇಲೆ ಮುಂದೆ ಭೂಮಿಯು ಪಾಪಿಗಳಿಂದ ಪಾತಾಳಕ್ಕೆ ಕುಸಿಯಲು ಕಶ್ಯಪನು ತನ್ನ ಊರುಗಳ ಬಲದಿಂದ ಭೂಮಿಯನ್ನು ಉದ್ಧರಿಸಿದನು. ಇದರಿಂದ ಭೂಮಿಗೆ ಉರ್ವಿ ಮತ್ತು ಕಾಶ್ಯಪಿ ಎಂಬ ಹೆಸರುಗಳು ಬಂದವು (ಮ.ಆ., ಶಾಂ., ಅನು., ಅಶ್ವ.).

ಕಸೇರು - ಭರತಚಕ್ರವರ್ತಿಯ ಮೊಮ್ಮಗ. ನೋ - ಶತಶೃಂಗ.

ಕಸ್ತೂರಿ - ನೋ. - ಪುಲಕ.

ಕಹೋಳ - ಉದ್ದಾಲಕ ಮಹರ್ಷಿಯ ಶಿಷ್ಯ ಮತ್ತು ಅಳಿಯ. ಈತನ ಪತ್ನಿ ಸುಜಾತೆ. ಈತನ ಮಗ ಅಷ್ಟಾವಕ್ರ. ಕಹೋಳನು ಜನಕನ ಆಸ್ಥಾನದಲ್ಲಿ ವರುಣಪುತ್ರನಾದ ವಂದಿಯೊಡನೆ ವಾದಮಾಡಿ ಸೋತು ಸೆರೆಸಿಕ್ಕಿದ್ದು, ಮುಂದೆ

ಮಗನಾದ ಅಷ್ಟಾವಕ್ರನಿಂದ ಬಿಡುಗಡೆಹೊಂದಿದನು (ಮ.ವ.).

ಕಾಂಸ್ಯಕುಟ್ಟ - ಒಂದು ದೇಶ (ಮ.ಸ.).

ಕಾಕಭುಶುಂಡಿ - ೧. ಮಾನಸ ಸರೋವರದ ಹತ್ತಿರವಿರುವ ದೊಡ್ಡ ಕಾಗೆ. ೨.ಗರುಡನಿಗೆ ರಾಮಾಯಣವನ್ನು ಹೇಳಿದ ಕಾಗೆ. ಇದು ಮೊದಲು ಹರಿದ್ವೇಷಿಯಾಗಿದ್ದು ಗುರುವನ್ನು ಅಲಕ್ಷ್ಯ ಮಾಡಿದುದರಿಂದ ಹೆಬ್ಬಾವಾಗಿ ಹುಟ್ಟಿ ಶಾಪವಿಮೋಚನೆ ಹೊಂದಿದಮೇಲೆ ಲೋಮಶನೆಂಬ ಮುನಿಯೊಡನೆ ಚರ್ಚೆಮಾಡಿ ಅವನ ಕೋಪಕ್ಕೆ ಗುರಿಯಾಗಿ ಕಾಗೆಯಾಯಿತು (ತು.ರಾ.).

ಕಾಕಾಸುರ - ಒಬ್ಬ ರಾಕ್ಷಸ. ಚಿತ್ರಕೂಟ ಪರ್ವತದ ಸಿದ್ಧಾಶ್ರಮವೊಂದರಲ್ಲಿ ಒಂದು ದಿನ ಶ್ರೀರಾಮನು ಸೀತೆಯ ತೊಡೆಯ ಮೇಲೆ ತಲೆಯಿಟ್ಟುಕೊಂಡು ಮಲಗಿದ್ದ. ಆಗ ಕಾಗೆಯ ರೂಪದಲ್ಲಿದ್ದ ಇಂದ್ರನ ಮಗನಾದ ಜಯಂತನು - ಕಾಕರೂಪದಲ್ಲಿದ್ದ ಇಂದ್ರನ ಮಗನೊಬ್ಬನೆಂದು ಕೆಲವರು ಹೇಳುತ್ತಾರೆ- ಸೀತೆಯ ಸ್ತನಗಳ ಮಧ್ಯೆ ಕುಕ್ಕಿ ಗಾಯವನ್ನುಂಟುಮಾಡಲು ಇದನ್ನು ಕಂಡು ಕೆರಳಿದ ಶ್ರೀರಾಮನು ಒಂದು ದರ್ಭೆಯನ್ನು ಬ್ರಹ್ಮಾಸ್ತ್ರವನ್ನಾಗಿ ಮಾಡಿ ಕಾಗೆಯ ಮೇಲೆಸೆಯಲು ಆ ಕಾಗೆಯು ಇಂದ್ರ ಮೊದಲಾದ ಯಾವ ದೇವತೆಗಳಲ್ಲೂ ರಕ್ಷಣೆಪಡೆಯದೆ ಪುನಃ ರಾಮನನ್ನೇ ಮರೆಹೊಕ್ಕು ತನ್ನ ಬಲಗಣ್ಣೊಂದನ್ನು ಆ ಅಸ್ತ್ರಕ್ಕೆ ಬಲಿಯಾಗಿ ತೆತ್ತು ಬದುಕಿಕೊಂಡನು (ರಾಮಾ.ಅ.).

ಕಾಕಿ - ಕಶ್ಯಪಮುನಿ ಮತ್ತು ತಾಮ್ರೆಯರ ಮಗಳು. ಈಕೆ ಗೂಬೆ ಜಾತಿಯ ಪಕ್ಷಿಗಳ ತಾಯಿ (ಮ.ಆ.).

ಕಾಕ್ಷೀವಂತ - ಶಿಬಿ ಚಕ್ರವರ್ತಿಯ ಪತ್ನಿಯ ದಾಸಿಯಾದ ಶೂದ್ರೆಯಲ್ಲಿ ದೀರ್ಘತಮನೆಂಬ ಮುನಿಯಿಂದ ಹುಟ್ಟಿದ ಮಗ.

ಪ್ರದ್ವೇಷಿಣಿಯು ತನ್ನ ಗಂಡನಾದ ದೀರ್ಘತಮನು ಕುರುಡನಾದುದರಿಂದ ತನ್ನ ಮಕ್ಕಳ ಸಹಾಯದಿಂದ ಗಂಗಾನದಿಯಲ್ಲಿ ಪತಿಯನ್ನು ತೇಲಿಬಿಟ್ಟಳು. ನೀರಿನಲ್ಲಿ ತೇಲಿಕೊಂಡು ಹೋಗುತ್ತಿರುವ ಮುನಿಯನ್ನು ಆ ನದಿಯಲ್ಲಿ ಸ್ನಾನಮಾಡುತ್ತಿದ್ದ ಚಂದ್ರವಂಶದ ಶಿಬಿ ಚಕ್ರವರ್ತಿಯ ಮಗನಾದ ಬಲಿಯು ಕಂಡು ಆತನನ್ನು ನದಿಯಿಂದೆತ್ತಿ ತನ್ನ ಅರಮನೆಗೆ ಕರೆದುಕೊಂಡು ಬಂದು ರಕ್ಷಿಸಿದನು. ಈತನು ರಾಜನ ಪತ್ನಿ ಸುದೇಷ್ಣೆಯ ದಾಸಿಯಾದ ಶೂದ್ರೆಯಲ್ಲಿ ಕಕ್ಷೀವಂತ ಮೊದಲಾದ ಹನ್ನೊಂದು ಮಂದಿ ಪುತ್ರರನ್ನು ಪಡೆದನು. ನೋ-. ದೀರ್ಘತಮ, ಕಕ್ಷೀವಂತ (ಮ.ಆ.,ಸ.).

ಕಾಂಚನಾಕ್ಷಿ - ನೈಮಿಷಾರಣ್ಯದಲ್ಲಿ ಹರಿಯುವ ಸರಸ್ವತೀ ನದಿ (ಮ.ಶ.).

ಕಾಂಚಿ - ದ್ರಾವಿಡದೇಶದ ಪ್ರಾಚೀನ ರಾಜಧಾನಿ; ಮದ್ರಾಸು ಪಟ್ಟಣದಿಂದ

ನಲವತ್ತು ಮೈಲು ದೂರದಲ್ಲಿದ್ದು ಚಂಗಲ್ಪಟ್ಟು ಜಿಲ್ಲೆಗೆ ಸೇರಿದೆ. ಈ ಊರಿಗೆ ಕಂಚೀಪುರ ಅಥವಾ ಕಂಜೀವರಂ ಎಂಬ ಹೆಸರಿದೆ. ಈ ಒಂದೇ ನಗರದಲ್ಲಿ ಶಿವಕಂಚಿ ಮತ್ತು ವಿಷ್ಣುಕಂಚಿ ಎಂಬೆರಡು ಭಾಗಗಳಿವೆ. ಶಿವಕಂಚಿಯಲ್ಲಿ ಕಾಮಾಕ್ಷಿದೇವಿಯ ಮಂದಿರ ಮತ್ತು ಏಕಾಮ್ರೇಶ್ವರ ದೇವಸ್ಥಾನವಿದೆ. ವಿಷ್ಣುಕಂಚಿಯಲ್ಲಿ ವರದರಾಜಸ್ವಾಮಿಯ ದೇವಾಲಯವಿದೆ. ವರದರಾಜನ ಕೊರಳಲ್ಲಿ ಸಾಲಿಗ್ರಾಮಗಳ ಮಾಲೆಯಿದೆ. ಈ ದೇವಾಲಯದ ಪ್ರದಕ್ಷಿಣೆಯ ಮಾರ್ಗದಲ್ಲಿ ಬಂಗಾರದ ಹಲ್ಲಿಯೊಂದಿದೆ. ಇದರ ಸ್ಪರ್ಶದಿಂದ ಹಲ್ಲಿಯು ಮುಟ್ಟಿದ ದೋಷಗಳೆಲ್ಲಾ ಪರಿಹಾರವಾಗುತ್ತವೆಂದು ಹೇಳುತ್ತಾರೆ. ಇದು ಚೋಳರ ರಾಜಧಾನಿಯಾಗಿತ್ತು. ಭಾರತದ ಮೋಕ್ಷದಾಯಕ ಕ್ಷೇತ್ರಗಳಲ್ಲಿ ಇದೊಂದು. ಬ್ರಹ್ಮನ ಯಜ್ಞಕಾಲದಲ್ಲಿ ವಿಶ್ವಕರ್ಮನು ನಿರ್ಮಿಸಿದ ಪಟ್ಟಣ (ಕ್ಷೇತ್ರದ).

ಕಾತ್ಯಾಯನ - ಇವನಿಗೆ ಕತನೆಂಬ ಹೆಸರೂ ಇದೆ. ಈತನ ಮಗಳೇ ಕಾತ್ಯಾಯಿನಿ (ಕಾತ್ಯಾಯನಿ) ಎಂಬ ದೇವಿ (ಲಲಿತಾಸ).

ಕಾತ್ಯಾಯನಿ - ನೋ. - ಕಾತ್ಯಾಯನ. ದೇವಿಯ ಅದ್ಭುತ ತೇಜಸ್ಸಿನ ಹೆಸರು. ಕಂ ಎಂದರೆ ಬ್ರಹ್ಮ, ತಲೆ, ಸ್ಪರ್ಶಮಣಿ; ದೇವಿಯು ಇವುಗಳಲ್ಲಿ ವಾಸಿಸುವುದರಿಂದ ಕಾತ್ಯಾಯನಿ ಎನ್ನಿಸಿದಳು (ಲಲಿತಾಸ).

ಕಾನ್ಯಕುಬ್ಜ - ದೇಶವೊಂದು; ವಿಶ್ವಾಮಿತ್ರನ ತಂದೆಯಾದ ಗಾಧಿಯ ರಾಜಧಾನಿ; ರೋಹಿಲ ಖಂಡದಲ್ಲಿರುವ ಗಂಗಾ ಮತ್ತು ಕಾಳಿ ನದಿಯ (ಇಕ್ಷುಮತಿ) ಸಂಗಮದಲ್ಲಿರುವ ಕನೂಜ್.

ಚಂದ್ರವಂಶದ ಕುಶನಾಭದ ನೂರು ಮಂದಿ ಕನ್ಯೆಯರ ಕುಬ್ಜತ್ವವನ್ನು (ಕುಳ್ಳ) ಬ್ರಹ್ಮದತ್ತನು ಹೋಗಲಾಡಿಸಿ ಮದುವೆಯಾದ ಸ್ಥಳ. ನೋ. - ಕನ್ಯಾಕುಬ್ಜ, ಕುಶನಾಭ (ವಾ.ರಾ.ಬಾ.).

ಕಾಪಚ್ಯ - (**ಕಾಯವ್ಯ**) ಬೇಡರ ಜಾತಿಯ ಅಧಿಪತಿ (ಮ.ಶಾಂ.).

ಕಾಪಿಲಂ - ಕ್ರೌಂಚದ್ವೀಪದ ಒಂದು ಪ್ರಾಂತ (ಮ.ಭೀ.).

ಕಾಪೀ - ಒಂದು ನದಿ (ಮ.ಭೀ.).

ಕಾಮ - ಮನ್ಮಥ; ಈತನ ಪತ್ನಿ ರತಿ; ಶಿವನನ್ನು ಸಂಸಾರ ವ್ಯಾಪಾರಕ್ಕೆಳೆಯುವ ಸಾಹಸ ಮಾಡಿ ಅವನಿಂದ ಭಸ್ಮವಾದನು. ಈತನ ಸಹೋದರಿ ಸಂಧ್ಯೆ. ಈತನ ತಂದೆ ಚತುರ್ಮುಖ; ಜಗತ್ತನ್ನು ಮೋಹಿಸುವ ವರವನ್ನು ಈತನು ಬ್ರಹ್ಮನಿಂದ ಪಡೆದು, ಆತನ ಮೇಲೆಯೇ ತನ್ನ ಶಕ್ತಿಯನ್ನು ಪ್ರಯೋಗಿಸಿ ಮಗಳಾದ ಸಂಧ್ಯೆಯನ್ನೇ ಮೋಹಿಸುವಂತೆ ಮಾಡಿ, ಆತನಿಂದ ಶಿವನ ಹಣೆಗಣ್ಣಿನಿಂದ

ಭಸ್ಮವಾಗುವಂತೆ ಶಾಪಹೊಂದಿದನು. ನೋ. - ಮದನ, ಮನ್ಮಥ, ರತಿ (ಮ.ಆ.,ಶಾಂ.). ಭಂಡಾಸುರ ವಧೆಯಾದ ಮೇಲೆ ಬ್ರಹ್ಮಾದಿಗಳಿಂದ ಪ್ರಾರ್ಥಿತಳಾದ ಲಲಿತಾಂಬಿಕೆಯು ಮನ್ಮಥನನ್ನು ಬದುಕಿಸಿದಳು (ಬ್ರಹ್ಮಾಂಡಪು). ಈತನನ್ನು ಮದನ ಮೊದಲಾದ ಹೆಸರುಗಳಿಂದಲೂ, ಕಾಮದೇವ ಎಂಬ ಗೌರವ ವಾಚಕದಿಂದಲೂ ಕರೆಯುತ್ತಾರೆ.

ಕಾಮಕಟಂಕಟಾ- ಮುರನೆಂಬ ರಾಕ್ಷಸನ ಮಗಳು; ಮುರನು ಪ್ರಾಗ್ಜ್ಯೋತಿಷದ ರಾಜನಾದ ನರಕಾಸುರನ ಸೇನಾಪತಿ. ಶ್ರೀಕೃಷ್ಣನು ಮುರನನ್ನು ಕೊಂದಾಗ ಈಕೆಯೂ ಶ್ರೀಕೃಷ್ಣನೊಡನೆ ಮೂರು ದಿನಗಳವರೆಗೆ ಹೋರಾಡಿದಳು. ಈಕೆಯು ಕಾಮಾಂಬಿಕೆಯ ಉಪಾಸನೆಯಿಂದ ಅಸಮಸಾಹಸ ಸೌಂದರ್ಯಗಳಿಂದ ಕೂಡಿದ್ದು ತಾನು ಕೊಟ್ಟ ಒಗಟನ್ನು ಬಿಡಿಸಿ ತನ್ನನ್ನು ಯುದ್ಧದಲ್ಲಿ ಗೆದ್ದವನನ್ನು ಮಾತ್ರ ವಿವಾಹವಾಗುವೆನೆಂದು ಪ್ರತಿಜ್ಞೆಮಾಡಿದ್ದಳು. ಮುಂದೆ ಶ್ರೀಕೃಷ್ಣನಿಂದ ಮುರ ನರಕಾಸುರರು ಹತರಾದ ಮೇಲೆ ಈಕೆ ನರಕಾಸುರನ ಮಗನಾದ ಭಗದತ್ತನ ಆಶ್ರಯದಲ್ಲಿದ್ದಳು. ಈಕೆಯನ್ನು ಘಟೋತ್ಕಚನು ಗೆದ್ದು ವರಿಸಿ ಬರ್ಬರಕನೆಂಬ ಕುಮಾರನನ್ನು ಪಡೆದನು. ಮುಂದೆ ಈಕೆಯು ಹಿಡಿಂಬನ ರಾಜ್ಯದಲ್ಲಿ ವಾಸಮಾಡಿಕೊಂಡಿದ್ದಳು (ಸ್ಕಾಂಪು.).

ಕಾಮದಹನ - ನೋ. - ಹೋಳಿ. ಕಾಮದಹನದ ದಿನದ ಓಕುಳಿ, ಕಾಮನ ಹಬ್ಬ.

ಕಾಮಧೇನು - ಸ್ವರ್ಗಲೋಕದ ದನ; ಇದು ಬ್ರಹ್ಮನ ಮುಖದಿಂದ ಜನಿಸಿತು. ಇದು ರಸಾತಲದಲ್ಲಿ ವಾಸಿಸುತ್ತಿದೆ. ಇದಕ್ಕೆ ಸುರೂಪಾ, ಹಂಸಿಕಾ, ಸುಭದ್ರಾ, ಸರ್ವಕಾಮದುಘ ಎಂಬ ನಾಲ್ವರು ಮಕ್ಕಳು.

ಅಮೃತಮಥನ ಕಾಲದಲ್ಲಿ ಕಲ್ಪವೃಕ್ಷ ಮೊದಲಾದವುಗಳೊಡನೆ ಇದೂ ಜನಿಸಿ ದೇವೇಂದ್ರನ ಸ್ವಾಧೀನವಾಯಿತು. ನಂದಿನಿಯೆಂಬ ಹೆಸರುಳ್ಳ ವಸಿಷ್ಠನ ದನ; ಇದು ದಿಲೀಪ ಮಹಾರಾಜನಿಗೆ ಪುತ್ರನಾಗುವಂತೆ ಅನುಗ್ರಹಿಸಿತು. ವಿಶ್ವಾಮಿತ್ರನು ಈ ಆಕಳನ್ನು ತನ್ನ ಪಟ್ಟಣಕ್ಕೆ ಬಲತ್ಕಾರದಿಂದ ಒಯ್ಯಲೆತ್ನಿಸಿ ವಸಿಷ್ಠನಿಂದ ಪರಾಜಿತನಾದನು. ನೋ. ವಿಶ್ವಾಮಿತ್ರ, ದಿಲೀಪ.

ಶಿವನ ಆದಿ - ಅಂತ್ಯವನ್ನು ವಿಷ್ಣುಬ್ರಹ್ಮರಿಗೆ ನೋಡುವ ಆಸೆಯಾಗಿ ಹೊರಟರು. ಬ್ರಹ್ಮನು ತಾನು ಶಿವನ ಶಿರಸ್ಸನ್ನು ಕಂಡಿದ್ದೆನೆಂದು ಹೇಳಿದುದಲ್ಲದೆ, ಕಾಮಧೇನುವಿನಿಂದ ಸಾಕ್ಷಿ ಹೇಳಿಸಿದನು. ಇದರಿಂದ ಸುಳ್ಳು ಹೇಳಿದ ಬ್ರಹ್ಮನಿಗೆ, 'ನಿನ್ನನ್ನು ಯಾರೂ ಪೂಜಿಸದಿರಲಿ' ಎಂದೂ, ಕಾಮಧೇನುವಿಗೆ, 'ನೀನು ಸುಳ್ಳು ಹೇಳಿದುದರಿಂದ ನಿನ್ನ ಸಂತತಿಯು

ಅಮೇಧ್ಯವನ್ನು ತಿನ್ನಲಿ' ಎಂದು ಶಾಪಕೊಟ್ಟನು (ಮ.ಅ.).

ಕಾಮಂದ - ಮಹರ್ಷಿಯೊಬ್ಬ; ಈತ ನೀತಿಶಾಸ್ತ್ರವನ್ನು ಬರೆದನು (ಮ.ಶಾಂ.).

ಕಾಮಾಕ್ಷಿ - ಶಿವಕಂಚೀ ಕ್ಷೇತ್ರದ ಅಧಿದೇವತೆ. ದಶರಥನು ಕಾಮಾಕ್ಷಿಯ ಅನುಗ್ರಹವನ್ನು ಪಡೆದಮೇಲೆ ಋಷ್ಯಶೃಂಗ ಮುನಿಯ ಸಹಾಯದಿಂದ ಪುತ್ರಕಾಮೇಷ್ಟಿಯನ್ನು ಮಾಡಿ ನಾಲ್ಕು ಮಕ್ಕಳನ್ನು ಪಡೆದನು. ಒಮ್ಮೆ ಪಾರ್ವತಿಯು ಶಿವನ ಕಣ್ಣುಗಳನ್ನು ಮುಚ್ಚಲು ಲೋಕಕ್ಕೇ ಅಂಧಕಾರವು ವ್ಯಾಪಿಸಿತು. ಇದರಿಂದ ಲೋಕಕ್ಕೆ ಬಾಧೆಯಾಗಲು ಶಿವನು ಅದರ ಪರಿಹಾರಕ್ಕಾಗಿ ಪಾರ್ವತಿಯೊಡನೆ 'ಕಾಶಿಯಲ್ಲಿ ತಪಸ್ಸು ಮಾಡಿ ಆಮೇಲೆ ಕಂಚಿಯ ಕಾಮಾಕ್ಷಿಯ ಅನುಗ್ರಹ ಪಡೆದು ನನ್ನನ್ನು ಬಂದು ಸೇರು' ಎಂದನು. ಪಾರ್ವತಿಯು ಹಾಗೇ ಮಾಡಿ ಪುನಃ ಶಿವನ ಅನುಗ್ರಹಕ್ಕೆ ಪಾತ್ರಳಾದಳು (ಬ್ರಹ್ಮಾಂಡಪು.).

ಕಾಮಾರಪುಕುರ - ಜಯರಾಮವಾಡೆಯಿಂದ ಮೂರು ಮೈಲುಗಳ ದೂರದಲ್ಲಿದೆ. ಇದು ಶ್ರೀ ರಾಮಕೃಷ್ಣ ಪರಮಹಂಸರ ಜನ್ಮಭೂಮಿ. ಇಲ್ಲಿ ಅವರ ಸ್ಮೃತಿಮಂದಿರವಾದ ದೇವಾಲಯವಿದೆ.

ಕಾಮಾಶ್ರಮ- ಯಜ್ಞ ರಕ್ಷಣೆಗೆ ರಾಮಲಕ್ಷ್ಮಣರನ್ನು ಕರೆದೊಯ್ಯುವ ವಿಶ್ವಾಮಿತ್ರರು ಈ ಆಶ್ರಮದಲ್ಲೇ ಅವರಿಗೆ ತಮಗೆ ಗೊತ್ತಿದ್ದ ಎಲ್ಲ ವಿದ್ಯೆಗಳನ್ನು ಉಪದೇಶ ಮಾಡಿದರು (ಅನಂ.ರಾ.).

ಕಾಂಪಿಲ್ಯ - ಮಾಕತಂದೀ ಸಮೀಪದ ನಗರ; ಇದು ದಕ್ಷಿಣ ಪಾಂಚಾಲದ ರಾಜಧಾನಿ; ಇದರ ರಾಜ ದ್ರುಪದ. ಫರೂಕಾಬಾದ್ ಜಿಲ್ಲೆಯ ಇಪ್ಪತ್ತೆಂಟು ಮೈಲು ಈಶಾನ್ಯದಲ್ಲಿರುವ ಪಟ್ಟಣ.

ಕಾಂಭೋಜ - ದೇಶವೊಂದು; ಇದು ನಿಷಧ ಪರ್ವತದ ದಕ್ಷಿಣದಲ್ಲಿದೆ. ರಾಜಸೂಯಯಾಗ ಕಾಲದಲ್ಲಿ ಅರ್ಜುನನು ಇಲ್ಲಿಗೆ ಬಂದಿದ್ದನು. ಕುದುರೆಗಳು ಇಲ್ಲಿ ವಿಶೇಷವಾಗಿ ದೊರೆಯುತ್ತಿದ್ದುದರಿಂದ ಈ ದೇಶಕ್ಕೆ ಅಶ್ವಸ್ಥಾನವೆಂಬ ಹೆಸರು ಬಂದಿದ್ದು ಮುಂದೆ ಇದೇ ಆಫ್‌ಘಾನಿಸ್ಥಾನವೆಂಬ ಹೆಸರಾಯಿತೆಂದು ಹೇಳುತ್ತಾರೆ. ಭಾರತ ಯುದ್ಧದಲ್ಲಿ ಇಲ್ಲಿಯ ರಾಜನಾದ ಸುದಕ್ಷಿಣನು ಅರ್ಜುನನಿಂದ ಪರಾಜಿತನಾಗಿ ಹತನಾದನು (ಮ.ದ್ರೋ.). ಛಪ್ಪನ್ನ (೫೬) ದೇಶಗಳಲ್ಲೊಂದು.

ಕಾಮ್ಯಕ - ಇಂದ್ರಪ್ರಸ್ಥದ (ಖಾಂಡವಪ್ರಸ್ಥ) ಪಶ್ಚಿಮದಲ್ಲಿರುವ ಪುಣ್ಯವನ. ಪಾಂಡವರು ವನವಾಸಕ್ಕೆ ಹೊರಟವರು ಪರಿವಾರದೊಡನೆ ಗಂಗಾತೀರದಿಂದ

ಕುರುಕ್ಷೇತ್ರಕ್ಕೆ ಹೋಗಿ ಸರಸ್ವತಿ, ದೃಷದ್ವತಿ ಮತ್ತು ಯಮುನೆಯೆಂಬ ಪುಣ್ಯನದಿಗಳಲ್ಲಿ ಸ್ನಾನ ಮಾಡಿಕೊಂಡು, ಸರಸ್ವತೀನದೀ ತೀರದಲ್ಲಿರುವ ಋಷಿಗಳಿಗೆ ಪ್ರಿಯವಾದ ಈ ವನದಲ್ಲೇ ವಾಸಮಾಡತೊಡಗಿದರು. ಮಾರ್ಕಂಡೇಯ ಮಹರ್ಷಿಯು ಇದೇ ವನದಲ್ಲಿ ಪಾಂಡವರನ್ನು ಕಂಡನು. ದ್ವೈತವನದಲ್ಲಿ ಇಪ್ಪತ್ತು ತಿಂಗಳಿಂದ ವಾಸಮಾಡುತ್ತಿದ್ದ ಪಾಂಡವರು ಆ ಅರಣ್ಯದ ಮೃಗಗಳ ಪ್ರಾರ್ಥನೆಯಂತೆ ತೃಣಕಾಷ್ಠ ಜಲಸಮೃದ್ಧವಾಗಿರುವ ತೃಣಬಿಂದುಸರಸ್ಸಿಗೆ ಸಮೀಪವಿರುವ ಕಾಮ್ಯಕವನಕ್ಕೆ ಪುನಃ ಕೆಲವು ಕಾಲ ವಾಸಮಾಡಲು ಬಂದರು (ಮ.ವ.).

ಕಾಮ್ಯಾ - ೧. ಅಪ್ಸರೆಯೊಬ್ಬಳು. ೨. ನೋ. - ವೀರ. ಸ್ವಾಯಂಭುಮನುವಿನ ಸೊಸೆ; ವೀರನ ಪತ್ನಿ. ೩. ಪ್ರಿಯವ್ರತನ ಪತ್ನಿ (ಮ.ಆ.,ಹರಿ.).

ಕಾಯವ್ಯ - ನೋ. - ಕಾಪಚ್ಯ. ಇವನಿಗೆ ಕಾಪಚ್ಯನೆಂಬ ಹೆಸರೂ ಇದೆ. ಇವನು ಕಳ್ಳನಾಗಿದ್ದರೂ ವೀರನಾಗಿ ಧರ್ಮಿಷ್ಠನಾಗಿದ್ದನು. ಇವನ ಜೀವನದ ಉದ್ದೇಶವೇ ಬ್ರಹ್ಮ ದ್ವೇಷಿಗಳನ್ನು ನಾಶಮಾಡಿ ಜಗತ್ತಿನಲ್ಲಿ ಶಾಂತಿಸ್ಥಾಪನೆ ಮಾಡುವುದಾಗಿತ್ತು.

ಕಾಯಶೋಧನ - ಒಂದು ತೀರ್ಥವಿಶೇಷ (ಮ.ವ.).

ಕಾರಂಧಮ - ಕ್ಷತ್ರಿಯ; ಕರಂಧಮನ ಪುತ್ರನಾದ ಅವಿಕ್ಷಿತನ ಹೆಸರು. ನೋ. - ಅವಿಕ್ಷಿತ (ಮ.ಅಶ್ವ.).

ಕಾರಂಧಮತೀರ್ಥ - ದಕ್ಷಿಣ ಸಮುದ್ರತೀರದ ತೀರ್ಥ ವಿಶೇಷ. ನೋ. ನಾರೀತೀರ್ಥ (ಮ.ಆ.).

ಕಾರೀಷಿ - ಋಷಿಯೊಬ್ಬ; ವಿಶ್ವಾಮಿತ್ರನ ಪುತ್ರ (ಮ.ಅನು.).

ಕಾರೂಷ - ೧. ಕ್ಷತ್ರಿಯ; ಮನುಪುತ್ರ. ೨. ಒಂದು ದೇಶ; ಬಿಹಾರ ಪ್ರಾಂತ್ಯದ ಶಹಬಾದ ಜಿಲ್ಲೆಯ ಪೂರ್ವ ಭಾಗ. ೩. ವಸುದೇವನ ತಂಗಿಯಾದ ಶ್ರುತದೇವಿಯ ಪತಿ ವೃದ್ಧಶರ್ಮರಾಜನು ಇಲ್ಲಿಯ ರಾಜನಾಗಿದ್ದ ; ಈತನ ಮಗನೇ ದಂತವಕ್ರ (ಮ.ಆ.).

ಕಾರೂಷಕಾ - ಕರೂಷದೇಶವಾಸಿಗಳಾದ ಜನರು (ಮ.ಸ.).

ಕಾರ್ಕೋಟಕ - ನೋ. ಕರ್ಕೋಟಕ.

ಕಾರ್ತವೀರ್ಯ - ಕ್ಷತ್ರಿಯ; ಚಂದ್ರವಂಶದ ಕೃತವೀರ್ಯನ ಮಗ; ಇವನಿಗೆ ಮಾಹಿಷ್ಮತಿ ನಗರ ರಾಜಧಾನಿ; ಇವನ ಹೆಸರು ಅರ್ಜುನ; ಈತನಿಗೆ

ದತ್ತಾತ್ರೇಯನಿಂದ ಯುದ್ಧಕಾಲದಲ್ಲಿ ಮಾತ್ರ ಸಹಸ್ರಬಾಹುಗಳ ಉತ್ಪತ್ತಿಯ ವರ ಪ್ರಾಪ್ತವಾಯಿತು. ಒಮ್ಮೆ ಅಗ್ನಿಯು ಕಾರ್ತವೀರ್ಯನ ಬಳಿಗೆ ಬಂದು 'ಹಸಿವೆ ಬಹಳ ಆಗಿದೆ; ಏನಾದರೂ ಭಿಕ್ಷೆ ಕೊಡು' ಎಂದು ಕೇಳಿದನು. ಅದಕ್ಕೆ ಉದಾರಹೃದಯನಾದ ರಾಜನು ಸಮಗ್ರ ಭೂಮಿಯನ್ನೇ ಅಗ್ನಿಗೆ ಭಿಕ್ಷೆಯಾಗಿ ಕೊಟ್ಟನು. ಇದರಿಂದ ಉತ್ಸಾಹಗೊಂಡ ಅಗ್ನಿಯು ಭೂಮಿಯು ಎಲ್ಲಾ ವಸ್ತುಗಳನ್ನು ಸುಡುತ್ತ ವರುಣಪುತ್ರನಾದ ವಸಿಷ್ಠನ ಆಶ್ರಮವನ್ನೂ ಸುಟ್ಟುಹಾಕಲು, ಆ ಮುನಿಯು ಸಿಟ್ಟಿಗೆದ್ದು ಕಾರ್ತವೀರ್ಯನಿಗೆ - 'ಪರಶುರಾಮನು ನಿನ್ನ ಸಹಸ್ರತೋಳುಗಳನ್ನು ಕತ್ತರಿಸಿ, ಸಂಹರಿಸಲಿ' ಎಂದು ಶಾಪವಿತ್ತನು. (ಹರಿ.). ಒಮ್ಮೆ ಜಮದಗ್ನಿ ಮುನಿಯ ಐದು ಮಂದಿ ಕುಮಾರರೂ ಆಶ್ರಮದಿಂದ ಹೊರಕ್ಕೆ ಹೋಗಿರಲು ಅನೂಪದೇಶಾಧಿಪತಿಯಾದ ಕಾರ್ತವೀರ್ಯಾರ್ಜುನನು ಜಮದಗ್ನಿಯ ಆಶ್ರಮಕ್ಕೆ ಬಂದು ಆಶ್ರಮದ ಹೋಮಧೇನುವಿನ ಕರುವನ್ನು ಅದರ ತಾಯಿಯು ಅರಚಿಕೊಳ್ಳುತ್ತಿದ್ದರೂ ಬಲಾತ್ಕಾರದಿಂದ ಅಪಹರಿಸಿಕೊಂಡು ಆಶ್ರಮದ ವೃಕ್ಷಗಳನ್ನೆಲ್ಲ ಮುರಿದು ಹಾಕಿ, ಹೊರಟುಹೋದನು. ಬಳಿಕ ಪರಶುರಾಮನು ಆಶ್ರಮಕ್ಕೆ ಬಂದು ಕರುವಿಗಾಗಿ ಅರಚಿಕೊಳ್ಳುತ್ತಿರುವ ಹೋಮಧೇನುವನ್ನು ಕಂಡು ಕ್ರೋಧಾವೇಶವುಳ್ಳವನಾಗಿ ಕಾರ್ತವೀರ್ಯಾರ್ಜುನನನ್ನು ಅಟ್ಟಿಕೊಂಡು ಹೋಗಿ ಅವನ ಸಾವಿರ ತೋಳುಗಳನ್ನು ಕಡಿದು ರಾಜನನ್ನು ನಾಶಮಾಡಿದನು.

ಒಮ್ಮೆ ರಾವಣನು ಕಾರ್ತವೀರ್ಯನೊಡನೆ ಯುದ್ಧಮಾಡಿ ಸೋತು, ಅವನ ಸೆರೆಯಲ್ಲಿ ಹಲವು ಕಾಲ ನರಳುತ್ತಿದ್ದು ಕೊನೆಗೆ ಪುಲಸ್ತ್ಯಮುನಿಯ ಪ್ರಾರ್ಥನೆಯಂತೆ ಬಿಡುಗಡೆ ಹೊಂದಿದನು.

ವಿಷ್ಣುವಿನ ಚಕ್ರಾಯುಧಕ್ಕೆ ತಾನು ಪರಾಕ್ರಮದಲ್ಲಿ ವಿಷ್ಣುವಿಗಿಂತ ಹಿರಿಯನೆಂಬ ಗರ್ವ ಉಂಟಾಗಲು ಶ್ರೀವಿಷ್ಣುವು ಅದನ್ನು ಪರೀಕ್ಷಿಸಿ ಸ್ಪಷ್ಟಪಡಿಸಲು ಚಕ್ರಾಯುಧಕ್ಕೆ ಕಾರ್ತವೀರ್ಯನಾಗಿ ಹುಟ್ಟುವಂತೆ ಹೇಳಿ, ತಾನು ಪರಶುರಾಮನಾಗಿ ಹುಟ್ಟಿ, ಕಾರ್ತವೀರ್ಯನನ್ನು ಕೊಂದು, ಚಕ್ರಾಯುಧಕ್ಕಿಂತ ತನ್ನ ಬಲವೇ ಹಿರಿದು ಎಂಬುದನ್ನು ತೋರಿಸಿ, ಅದರ ಗರ್ವವನ್ನು ಹೋಗಲಾಡಿಸಿದನು (ಮ.ಸ.,ಅನು.,ಶಾಂಸಿ., ರಾಮಾ.ಉ.,ಮ.ವ.,ಭಾಗ.,ದೇವೀಭಾ. ವಾಯುಪು.,ಮತ್ಸ್ಯಪು., ಮಾರ್ಕಂ.ಪು.).

ಇವನು ಹೈಹಯ ನಗರದ ರಾಜನು. ಇವನು ಧ್ಯಾನನಿಷ್ಠನಾಗಿರುವಾಗ ರಾವಣನೊಡನೆ ಯುದ್ಧಮಾಡಿ ಸೆರೆಹಿಡಿದನು (ಆನಂ.ರಾ.). ಕಾರ್ತವೀರ್ಯನು ದತ್ತಾತ್ರೇಯನನ್ನು ಮೆಚ್ಚಿಸಿ, ಸಾವಿರ ತೋಳು ಮತ್ತು ಐಶ್ವರ್ಯ

ಬಲಗಳುಂಟಾಗಬೇಕೆಂದೂ ಜಗತ್ತನ್ನು ಧರ್ಮದಿಂದ ಪಾಲಿಸುವ ಶಕ್ತಿಬೇಕೆಂದೂ ಸತ್ಪುರುಷರನ್ನು ಯೋಗ್ಯ ಕರ್ಮದಿಂದಲೂ ಶತ್ರುಗಳನ್ನು ತೀಕ್ಷ್ಣಬಾಣಗಳಿಂದ ಗೆಲ್ಲುವ ಶಕ್ತಿಯನ್ನೂ, ಭಗವಂತನಿಂದ ತನಗೆ ಮರಣವಾಗಬೇಕೆಂದೂ ನಾಲ್ಕು ವರಗಳನ್ನು ಕೇಳಿದನು. (ಮ.ಸ.).

ಕಾರ್ತಿಕೇಯ - ಕುಮಾರಸ್ವಾಮಿ, ಷಣ್ಮುಖ ಮೊದಲಾದ ಹೆಸರುಗಳಿದ್ದ ಶಿವಪುತ್ರನು; ಅಗ್ನಿಯ ಪತ್ನಿಯಾದ ಸ್ವಹಾದೇವಿಯು ಅಂಗಿರಸ್ಸಿನ ಪತ್ನಿಯಾದ ಶಿವಾದೇವಿಯ ರೂಪವನ್ನು ಹೊಂದಿ, ಅಗ್ನಿಯೊಂದಿಗೆ ಭೋಗಿಸುತ್ತಿರಲು, ಆತನ ವೀರ್ಯ ಸ್ಖಲನವಾಗಲು ಸ್ವಹಾದೇವಿಯು ಅದನ್ನು ಕೈಯಲ್ಲಿ ಹಿಡಿದುಕೊಂಡು ಪಕ್ಷಿರೂಪದಿಂದ ಶ್ವೇತ ಪರ್ವತಕ್ಕೆ ಹೋಗಿ ಅಲ್ಲಿ ದುರ್ಗಮವಾದ ಪ್ರದೇಶದಲ್ಲಿ ಒಂದು ಚಿನ್ನದ ಕುಂಭದಲ್ಲಿ ಆ ರೇತಸ್ಸನ್ನು ಇಟ್ಟಳು; ಮುಂದೆ ಸಪ್ತ ಋಷಿಗಳ ಪತ್ನಿಯರ ರೂಪದಿಂದ ಹೋಗಿ ಅಗ್ನಿಯೊಡನೆ ಕ್ರೀಡಿಸಿದರೂ ವಸಿಷ್ಠಪತ್ನಿಯಾದ ಆರುಂಧತಿಯ ವೇಷವನ್ನು ಧರಿಸಲು ಅಸಾಧ್ಯವಾಯಿತು. ಮುಂದೆ ಸ್ವಹಾದೇವಿಯು ಅಗ್ನಿಯ ರೇತಸ್ಸನ್ನು ಚಿನ್ನದ ಕುಂಭದಲ್ಲಿ ಪಾಡ್ಯದ ದಿವಸ ಆರು ಭಾಗ ಮಾಡಲು ಅದು ಬಿದಿಗೆಯ ದಿನ ಆಕಾರ ಹೊಂದಿ, ತದಿಗೆ ದಿನ ಶಿಶುವಾಗಿ, ಚೌತಿಯ ದಿನ ಅಂಗ ಪ್ರತ್ಯಂಗಗಳಿಂದ ಕೂಡಿ ಆರು ಶಿರಸ್ಸುಗಳುಳ್ಳ ಕುಮಾರಸ್ವಾಮಿಯು ಜನ್ಮಿಸಿದನು. ಇವನು ಬಾಲ್ಯದಲ್ಲೇ ಹಿಮವತ್ ಪರ್ವತದ ಮಗನಾದ ಕ್ರೌಂಚಪರ್ವತವನ್ನು ಭೇದಿಸಿದನು. ವಿಶ್ವಾಮಿತ್ರನು ಈತನಿಗೆ ಜಾತಕರ್ಮ ಮೊದಲಾದ ಕರ್ಮಗಳನ್ನು ನೆರವೇರಿಸಿದುದರಿಂದ ಷಣ್ಮುಖನಿಗೆ ಈ ಮುನಿಯು ಪ್ರಿಯನಾದನು. ಮುಂದೆ ಲೋಕಮಾತೃಕೆಯರು ಷಣ್ಮುಖನನ್ನು ಸಂಹರಿಸಲು ಬಂದವರು ಅವನಿಗೆ ಶರಣಾಗತರಾಗಿ ಆ ಬಾಲಕನನ್ನು ರಕ್ಷಿಸಿಕೊಂಡಿದ್ದರು. ವೇದಜ್ಞರಾದವರು ರುದ್ರನನ್ನೇ ಅಗ್ನಿಯೆಂದು ಹೇಳುವುದರಿಂದ ಷಣ್ಮುಖನು ರುದ್ರನ ಮಗನೆಂದೂ ಪ್ರಸಿದ್ಧನಾದನು. ಕುಮಾರನ ರಥದ ಗುರುತಿಗಾಗಿ ಅಗ್ನಿಯು ಒಂದು ದಿವ್ಯವಾದ ಕೋಳಿಯನ್ನು ಕೊಟ್ಟನು. ಈತನ ಪತ್ನಿಯೇ ದಕ್ಷಬ್ರಹ್ಮನ ಮಗಳಾದ ದೇವಸೇನೆ. ಈಕೆಗೂ ಷಣ್ಮುಖನಿಗೂ ವಿವಾಹವಾದ ದಿನವನ್ನೇ ಇಂದು ಸುಬ್ರಹ್ಮಣ್ಯ ಷಷ್ಠಿ ಎಂದು ಹೇಳುವರು. ಈ ಷಷ್ಠಿಗೆ ಸಿನೀವಾಲಿ, ಕುಹೂ, ಸದ್ವೃತ್ತಿ ಮತ್ತು ಅಪರಾಜಿತೆಯೆಂಬ ಹೆಸರಿದೆ. ಇವನಿಗೆ ಪಟ್ಟಾಭಿಷೇಕವಾದ ದಿನವನ್ನು ಶ್ರೀಪಂಚಮಿ ಎನ್ನುತ್ತಾರೆ. ಮುಂದೆ ಈತನು ದೇವತೆಗಳ ಸೇನಾಪತಿಯಾಗಿ, ತಾರಾಕಾಸುರನನ್ನು ನಾಶಮಾಡಿ, ದೇವತೆಗಳಿಗೆ ಹಿತವನ್ನುಂಟುಮಾಡಿದನು. ನೋ. - ವಿಶಾಖ (ಮಾ.ವ., ವಿಷ್ಣುಪು.,)

ಕಾರ್ಷ್ಣಿ - ೧. ಶ್ರೀಕೃಷ್ಣನ ಮಗನಾದ ಪ್ರದ್ಯುಮ್ನ. ೨. ಅರ್ಜುನನ ಮಗನಾದ ಅಭಿಮನ್ಯು (ಮ.ಭೀ.,ಭಾಗ,.).

ಕಾಲ - ೧. ಮೃತ್ಯುವೆಂಬ ಕಾಲಾಭಿಮಾನದೇವತೆ. ೨. ಮಹಿಷಾಸುರನ ಪರಿವಾರದವ. ಈತನು ಕಾಲರಾತ್ರಿಯೆಂಬ ದೇವಿಯಿಂದ ಹತನಾದನು (ಮ.ಶಾಂ.,ವಿ.,ಭಾಗ.).

ಕಾಲಕಲಿ - ವಿರೋಚನನ ಮಗ; ಬಲಿಚಕ್ರವರ್ತಿಯ ಅಣ್ಣ; ಇವನು ದೇವತೆಗಳಿಗೆ ಹೆದರಿ, ಗೋಕುಲದಲ್ಲಿ ಬೇಲದ ಮರವಾಗಿದ್ದ. ಇದರ ಹಣ್ಣುಗಳು ನೆಲಕ್ಕೆ ಉದುರಿ, ಕೊಳೆತು ನಾರುತ್ತಿದ್ದುದರಿಂದ ಗೋಪರೂ, ಪಶುಗಳೂ ಆಗಾಗ ಕಾಹಿಲೆಬೀಳುತ್ತಿದ್ದುವು. ಇದನ್ನು ಬಲರಾಮಕೃಷ್ಣರು ತಿಳಿದು ಆ ಮರವನ್ನು ಕತ್ತರಿಸಿದರು (ಹರಿ.).

ಕಾಲಕವೃಕ್ಷೀಯ (ಕಾಲವೃಕ್ಷೀಯ) - ಒಬ್ಬ ಋಷಿ; ಈತನಿಗೆ ಒಂದು ಪಕ್ಷಿಯಲ್ಲಿ (ಶಕುಂತಿಯಲ್ಲಿ) ಹಿರಣ್ಯಹಸ್ತನೆಂಬ ಮಹರ್ಷಿಯು ಜನಿಸಿದನು. ನೋ. ಹಿರಣ್ಯಹಸ್ತ, ಕೋಸಲದೇಶದ ಕ್ಷೇಮದರ್ಶಿ ರಾಜನಿಗೆ ಈ ಮುನಿಯು ಒಂದು ಪಕ್ಷಿಯನ್ನು ತಂದುಕೊಟ್ಟು 'ಇದು ದುಷ್ಟರು ಮತ್ತು ಕಳ್ಳ ಕಾಕರನ್ನು ಕಂಡುಹಿಡಿಯುವುದರಲ್ಲಿ ಸಮರ್ಥವಾದುದು' - ಎನ್ನಲು ರಾಜನು ಅದನ್ನು ಸ್ವೀಕರಿಸಿದನು. ರಾಜನ ಪರಿವಾರದವರು ಈ ಪಕ್ಷಿಯಿಂದ ಕೆಡಕಾಗಬಹುದೆಂಬ ಭಯದಿಂದ ಅವರೆಲ್ಲಾ ಕೂಡಿ ಈ ಪಕ್ಷಿಯನ್ನು ಕೊಂದರು (ಮ.ಶಾಂ., ಅನು., ಸಭಾ.).

ಕಾಲಕೆ - ೧. ಅಸುರಸ್ತ್ರೀ. ೨. ಕಶ್ಯಪ ಮಹರ್ಷಿಯ ಪತಿ; ಈಕೆಯ ಮಕ್ಕಳೇ ಕಾಲಕೆಯರು (ಮ.ವನ.).

ಕಾಲಕಾರ್ಮುಕ - ನೋ. ಮಾಲಿ.

ಕಾಲಕೀರ್ತಿ - ಕ್ಷತ್ರಿಯನೊಬ್ಬ (ಮ.ಆ.).

ಕಾಲಕೂಟ - ೧. ಆನರ್ತದೇಶದ ಉತ್ತರದಲ್ಲಿರುವ ಪರ್ವತ. ೨. ಒಂದು ಭಯಂಕರ ವಿಷ (ಮ.ಸ.).

ಕಾಲಕೇಯ - ಇವರು ಹಿರಣ್ಯಪುರವಾಸಿಗಳಾದ ರಾಕ್ಷಸರು; ಇವರು ಸ್ವರ್ಗದಿಂದ ಹಿಂದೆ ಬರುತ್ತಿದ್ದ ಅರ್ಜುನನಿಂದ ಕೊಲ್ಲಲ್ಪಟ್ಟರು (ಮ.ವ.).

ಈ ರಕ್ಕಸರು ಕಶ್ಯಪ ಮತ್ತು ಕಾಲೆಯಲ್ಲಿ ಜನಿಸಿದವರು. ಇವರು ಸತ್ಪುರುಷರನ್ನು ತುಂಬಾ ಪೀಡಿಸುತ್ತಿರಲು ಇವರನ್ನು ಕೊಲ್ಲಲು ದೇವತೆಗಳೂ

ಮಾನವರೂ ಅಗಸ್ತ್ಯನನ್ನು ಪ್ರಾರ್ಥಿಸಿದರು. ಆಗ ಅಗಸ್ತ್ಯನು ಸಮುದ್ರದ ನೀರನ್ನೆಲ್ಲಾ ಕುಡಿದುಬಿಡಲು, ಅಲ್ಲಿ ಅಡಗಿದ್ದ ಕಾಲಕೇಯರನ್ನು ದೇವತೆಗಳು ಬೆನ್ನಟ್ಟಿ ಕೊಂದರು (ಮ.ವ.).

ಕಾಲಕೌಶಿಕ - ಹರಿಶ್ಚಂದ್ರನ ರಾಣಿ ಚಂದ್ರಮತಿಯನ್ನು ಕಾಶಿಯಲ್ಲಿ ಕ್ರಯಕ್ಕೆ ಪಡೆದ ಬ್ರಾಹ್ಮಣ. ಕಲಿಪುರುಷನು ವಿಶ್ವಾಮಿತ್ರನಿಗಾಗಿ ಬ್ರಾಹ್ಮಣ ರೂಪದಿಂದ ಬಂದನು. ನೋ. - ಹರಿಶ್ಚಂದ್ರ.

ಕಾಲಕಂಜ - ರಾಕ್ಷಸನೊಬ್ಬ; ಇವನು ಸ್ವರ್ಗವನ್ನು ಸೇರುವಾಗ ಇಂದ್ರನು ಇವನನ್ನು ಕೆಳಗೆ ಕೆಡವಿದನು (ಋ),

ಕಾಲಘಾಟ - ಜನಮೇಜಯನ ಸರ್ಪಯಜ್ಞದಲ್ಲಿ ಸದಸ್ಯನಾಗಿದ್ದ ಒಬ್ಬ ಬ್ರಾಹ್ಮಣ (ಮ.ಆ.).

ಕಾಲಂಜರ - ೧. ಪರ್ವತ ಒಂದು; ಇದರ ಸಮೀಪದಲ್ಲಿ ಮೇಧಾವಿ ತೀರ್ಥವಿತ್ತು. ೨. ಕುರುಕ್ಷೇತ್ರದ ಕೌಶಿಕನೆಂಬ ಬ್ರಾಹ್ಮಣನ ಮಕ್ಕಳು. ಗೋಹತ್ಯೆ ಮತ್ತು ಸುಳ್ಳಿನ ಪ್ರಭಾವದಿಂದ ಎರಡನೆಯ ಜನ್ಮದಲ್ಲಿ ಜಿಂಕೆಗಳಾಗಿ ಕಾಲಂಜರ ಪರ್ವತ ಪ್ರಾಂತದಲ್ಲಿ ಹುಟ್ಟಿದರು (ಮ.ವ.).

ಕಾಲನೇಮಿ - ೧. ಮಾಯಾವಿಯಾದ ರಾಕ್ಷಸನೊಬ್ಬ; ಮಾರೀಚನ ಮಗ; ಲಕ್ಷ್ಮಣನು ರಾವಣನ ಶಕ್ತ್ಯಾಯುಧದಿಂದ ಸಂಜೀವಿನಿ ಲತೆಯನ್ನು ತರಲು ಚಂದ್ರದ್ರೋಣ ಪರ್ವತಕ್ಕೆ ಹನುಮಂತನನ್ನು ಕಳುಹಿಸಿದನು. ಇದನ್ನು ತಿಳಿದ ರಾವಣನು ಕಾಲನೇಮಿಯನ್ನು ಮುನಿವೇಷದಿಂದ ಮುಂದಾಗಿ ಚಂದ್ರದ್ರೋಣ ಪರ್ವತಕ್ಕೆ ಕಳುಹಿಸಿದನು. ಇವನು ಹನುಮನ ಕಾರ್ಯಕ್ಕೆ ವಿಘ್ನ ತರುವುದಕ್ಕಾಗಿ -' ಲಕ್ಷ್ಮಣನು ಈಗಾಗಲೇ ಬದುಕಿರುವನು. ನೀನು ವಿಶ್ರಾಂತಿಯನ್ನು ಹೊಂದಿದ ಬಳಿಕ ಸಂಜೀವಿನಿ ಲತೆಯನ್ನು ಕೊಂಡುಹೋಗಬಹುದು. ಸಮೀಪದಲ್ಲಿದ್ದ ಕೊಳದಲ್ಲಿ ಕೈಕಾಲು ಮುಖಗಳನ್ನು ತೊಳೆದುಕೊಂಡು ದಣಿವನ್ನಾರಿಸಿಕೊ' - ಎನ್ನಲು ಮುನಿಯ ಮಾತಿನಂತೆ ಆಯಾಸ ಪರಿಹಾರಕ್ಕಾಗಿ ಆ ಕೊಳದಲ್ಲಿ ಇಳಿಯಲು ನೀರಿನಲ್ಲಿದ್ದ ಮೊಸಳೆಯು ಹನುಮನನ್ನು ಹಿಡಿಯಿತು. ಅವನು ಅದನ್ನು ಕೊಂದನು. ಅದು ಶಾಪಹೊಂದಿದ ಗಂಧರ್ವನಾದುದರಿಂದ ಆಂಜನೇಯನಿಂದ ಶಾಪವಿಮೋಚನೆ ಹೊಂದಿ ಹೋಗುವಾಗ ಆ ಮಾಯಕದ ಮುನಿಯ ವಿಚಾರ ತಿಳಿಸಿಹೋದನು. ಇದರಿಂದ ಹನುಮನು ಕೂಡಲೇ ಚಂದ್ರದ್ರೋಣ ಪರ್ವತವನ್ನೇ ಯುದ್ಧರಂಗಕ್ಕೆ ತಂದಿಟ್ಟನು. ೨. ತಾರಕಾಸುರನ ಮರಣಾನಂತರ ನೂರು ತಲೆಗಳುಳ್ಳ ಕಾಲನೇಮಿಯು ದೇವತೆಗಳನ್ನೆಲ್ಲಾ ಗೆದ್ದು, ಇಂದ್ರಪದವಿಯನ್ನನುಭವಿಸುತ್ತಿದ್ದನು. ಇವನು ಮುಂದೆ ವೈಕುಂಠಕ್ಕೆ

ದಾಳಿಯಿಟ್ಟು, ವಿಷ್ಣು ಮತ್ತು ಗರುಡರಿಗೆ ತನ್ನ ಮಹಾಗದೆಯಿಂದ ಹೊಡೆಯಲು ವಿಷ್ಣುವು ತನ್ನ ಚಕ್ರಾಯುಧದಿಂದ ಈ ರಾಕ್ಷಸನನ್ನು ನಾಶಮಾಡಿದನು. ನೋ. ದೇವಲ, ಕಂಸ. (ಮತ್ಸ್ಯಪು., ಮ.ಸ., ಸ್ಕಾಂಪು.,ಹರಿ).

ಕಾಲಪಥ - ವಿಶ್ವಾಮಿತ್ರನ ಪುತ್ರ (ಮ.ಅನು.).

ಕಾಲಯವನ - ಗರ್ಗ ಮುನಿಯು ಶಿವನ ಅನುಗ್ರಹದಿಂದ ಒಬ್ಬ ಅಪ್ಸರೆಯಲ್ಲಿ ಈತನನ್ನು ಪಡೆದನು. ಯಾದವರು ತಮ್ಮ ಪುರೋಹಿತನಾದ ಗರ್ಗನನ್ನು ಹಾಸ್ಯಮಾಡಿದುದರಿಂದ ಆತನು ಕೋಪಾವಿಷ್ಟನಾಗಿ ಯಾದವರನ್ನು ಹಿಂಸಿಸುವ ಮಗನನ್ನು ಶಿವನನ್ನು ಪ್ರಾರ್ಥಿಸಿ ಪಡೆದನು. ಇವನನ್ನು ಶ್ರೀಕೃಷ್ಣನೂ ಇದಿರಿಸಲಾರದೆ ಓಡಿಹೋಗಿ, ಒಮ್ಮೆ ಒಂದು ಗವಿಯಲ್ಲಿ ಅಡಗಿದನು. ಕೃಷ್ಣನನ್ನು ಬೆನ್ನಟ್ಟಿಬಂದ ಕಾಲಯವನನು ಇಂದ್ರನ ಸೂಚನೆಯಂತೆ ನಿದ್ರೆಯಲ್ಲಿದ್ದ ಮುಚುಕುಂದನನ್ನು ಕೃಷ್ಣನೆಂದೇ ಭಾವಿಸಿ, ಕಾಲಿನಿಂದ ತುಳಿಯಲು ಎಚ್ಚೆತ್ತ ಆ ರಾಜರ್ಷಿಯ ದೃಷ್ಟಿಯಿಂದ ಕಾಲಯವನನು ಬೂದಿಯಾಗಿ ಬಿದ್ದನು. ನೋ. ಮುಚುಕಂದ (ಮ.ಶಾಂ.,ಭಾಗ.,ಹರಿ.).

ಕಾಲಾ (ಕಲಿಕಾ) - ದಕ್ಷಪ್ರಜಾಪತಿಯ ಮಗಳು; ಕಶ್ಯಪ ಋಷಿಯ ಪತ್ನಿ ಈಕೆಯ ಮಕ್ಕಳು ಕಾಲಕೇಯರು; ಇವರನ್ನು ಹಿರಣ್ಯಪುರದ ದೈತ್ಯರೆಂದು ಕರೆಯುವುದೂ ಉಂಟು. ನೋ. ಕಾಲಕೇಯರು (ಮ.ಆ.,ವ.).

ಕಾಲಾಪ - ಋಷಿಯೊಬ್ಬ (ಮ.ಸ.).

ಕಾಲಿಕಾ - ನೋ. - ಕಾಲಾ.

ಕಾಲಿಂಗ - ನೋ. ಕಲಿಂಗ.

ಕಾಲಿಂಜರ - ನೋ. - ಕಲಿಂಜರ.

ಕಾಲಿಂದಿ (ಕಾಳಿಂದಿ) - ೧. ಯಮುನಾ ನದಿ; ಸೂರ್ಯಪುತ್ರಿ. ೨. ಶ್ರೀಕೃಷ್ಣನ ಅಷ್ಟ ಮಹಿಷಿಯರಲ್ಲಿ ಒಬ್ಬಳು. ಶ್ರೀಕೃಷ್ಣನ ಪತ್ನಿ ಆಗಬೇಕೆಂದು ಈಕೆ ತಪಸ್ಸು ಮಾಡಿದಳು. ಈಕೆ ಯಮುನೆಯ ತಂಗಿ. ೩. ಯಮುನಾನದಿಯ ಮಡುವಿನಲ್ಲಿ ಮೀನುಗಳನ್ನೆಲ್ಲ ಗರುಡನು ತಿನ್ನುತ್ತ ಬರಲು ಅವು ಅಲ್ಲೇ ದಡದಲ್ಲಿ ತಪಸ್ಸು ಮಾಡುತ್ತಿದ್ದ ಸೌಭರಿ ಮುನಿಯ ಮರೆಹೊಕ್ಕವು. ಆಗ ಸೌಭರಿಯು - 'ಇನ್ನು ಗರುಡನು ಇಲ್ಲಿಗೆ ಬಂದರೆ ಆತನ ತಲೆಯು ಒಡೆದು ಚೂರಾಗಲಿ'- ಎಂದು ಶಾಪವಿತ್ತನು. ಇದನ್ನು ತಿಳಿದ ಕಾಳಿಯನು ತನ್ನ ಸಂಸಾರದೊಂದಿಗೆ ಇಲ್ಲಿಗೆ ಬಂದು ಸುಖವಾಗಿದ್ದ (ಮ.ಸ.ವಿ.,ಭಾಗ.).

ಕಾಲಿ (ಕಾಳಿ) - ೧. ಒಂದು ನದಿ; ಇದು ಹಿಮಾಲಯದಲ್ಲಿ ಹರಿಯುತ್ತಿದೆ. ೨.

ವೇದವ್ಯಾಸನ ತಾಯಿಯಾದ ಸತ್ಯವತಿಯ ಹೆಸರು. ಈಕೆಗೆ ಯೋಜನಗಂಧಿ ಎಂಬ ಹೆಸರೂ ಇತ್ತು. ೩. ಪಾರ್ವತಿ, ಭಯಂಕರ ರೂಪಿಯಾದ ಶಿವನ ಪತ್ನಿ. ೪. ದಾರಕನೆಂಬ ರಾಕ್ಷಸನನ್ನು ಕೊಲ್ಲಲು ಶಿವನ ಕಂಠದ ಕಪ್ಪಿನಿಂದ ಪಾರ್ವತಿಯು ನಿರ್ಮಾಣ ಮಾಡಿದ ದೇವತೆ. ಈಕೆಯು ದಾರಕನನ್ನು ಅಟ್ಟಹಾಸದಿಂದಲೇ ಕೊಂದಳು. ಈಕೆಯ ಕ್ರೋಧವನ್ನು ತಗ್ಗಿಸಲು ಶಿವನು ಈಕೆಯ ಬಾಲಕನಾಗಿ ಸ್ತನ್ಯಪಾನ ಮಾಡುವ ನೆವದಿಂದ ಈಕೆಯ ಕೋಪವನ್ನು ಹೀರಿದನು (ಮ.ಆ.,ಭೀ.,ದೇವೀಭಾ.,ಮತ್ಸ್ಯಪು.).

ಕಾಲಿಯ (ಕಾಳಿಯ) - ಸರ್ಪ; ಈತನು ಗೋಪರ ಗೋವುಗಳಿಗೂ, ಗೋಪರಿಗೂ ತನ್ನ ವಿಷಜ್ವಾಲೆಯಿಂದ ಹಿಂಸಿಸಲು ಅವರ ಪ್ರಾರ್ಥನೆಯಂತೆ ಶ್ರೀಕೃಷ್ಣನು ಕಾಳಿಯನನ್ನು ಮರ್ದಿಸಿ ಪಾತಾಳಕ್ಕಟ್ಟಿದನು. ನೋ. ಸೌಭರಿ, ಕಾಳಿಂದಿ (ಭಾಗ., ಹರಿ., ಮ.ವ, ಉ., ವಿಷ್ಣುಪು.).

ಕಶ್ಯಪ ಮತ್ತು ಕದ್ರುವಿನ ಮಗನಾದ ಸರ್ಪರಾಜ. ಗರುಡನು ಸರ್ಪಗಳನ್ನೆಲ್ಲ ಒಂದೇ ಸಾರಿ ನಾಶ ಮಾಡಿದಂತೆ ಸರ್ಪಗಳು ಗರುಡನೊಡನೆ - 'ದಿನಕ್ಕೊಂದು ಸರ್ಪವನ್ನು ಕಳುಹಿಸುವೆವು' - ಎಂದು ಒಪ್ಪಂದ ಮಾಡಿಕೊಂಡವು. ಆ ಒಪ್ಪಂದದಂತೆ ಗರುಡನ ಆಹಾರಕ್ಕೆಂದು ದಿನಕ್ಕೊಂದು ಸರ್ಪ ಕಳುಹಿಸಬೇಕಾಯಿತು. ಒಂದು ಸಾರಿ ಕಾಳಿಯನ ಸರತಿ ಬಂದಾಗ ಅವನು ತಪ್ಪಿಸಿಕೊಂಡುದರಿಂದ ಗರುಡನು ಅವನನ್ನು ಕಬಳಿಸಲು ಬೆನ್ನಟ್ಟಿಬಂದನು. ಆಗ ಕಾಳಿಯನು ಕಾಳಿಂದಿಮಡುವನ್ನು ಸೇರಿ ಗರುಡನ ಬಾಧೆಯಿಂದ ತಪ್ಪಿಸಿಕೊಂಡನು (ಮ.ಆ.).

ಕಾವೇರಿ - ಕರ್ನಾಟಕದಲ್ಲಿ ಹುಟ್ಟಿ ಹರಿಯುವ ಪವಿತ್ರ ನದಿ; ಈಕೆಯು ಕವೇರನೆಂಬ ಮುನಿಯ ಮಗಳು; ಅಗಸ್ತ್ಯಮುನಿಯ ಪತ್ನಿ; ಬ್ರಹ್ಮನು ತನ್ನ ಮಗಳಾದ ಲೋಪಾಮುದ್ರೆಯನ್ನೇ ಕವೇರನಿಗೆ ಸಾಕುಮಗಳಾಗಿ ಕೊಟ್ಟನು. ಅವಳೇ ಕಾವೇರಿ ಎಂಬ ಹೆಸರಿನಿಂದ ಬೆಳೆದಳು. ಒಂದು ದಿನ ಅಗಸ್ತ್ಯರು ಕವೇರಮುನಿಯ ಆಶ್ರಮಕ್ಕೆ ಬಂದು ಆಕೆಯೊಡನೆ ತನ್ನನ್ನು ವಿವಾಹವಾಗುವಂತೆ ಬಲಾತ್ಕರಿಸಿದರು. ಆಗ ಕಾವೇರಿಯು - 'ನೀನು ಅಗಲಿದ ದಿನ ನಾನು ನದಿಯಾಗಿ ಹರಿದು ಹೋಗುವೆನು' ಎಂದು ಶಪಥ ಹಾಕಿ ಅಗಸ್ತ್ಯರನ್ನು ವಿವಾಹವಾದಳು. ಒಂದು ದಿನ ಮುಂಜಾನೆ ಅಗಸ್ತ್ಯರು ತಮ್ಮ ಪತ್ನಿ ಏಳುವ ಮೊದಲೇ ಭೃಗುಂಡ ಋಷಿಗಳ ಆಶ್ರಮದ ಬಳಿ ಇರುವ ತೀರ್ಥದಲ್ಲಿ ಸ್ನಾನಮಾಡಿ ಹಿಂತಿರುಗಬೇಕೆಂದು ಹೊರಟುಹೋದರು. ಕಾವೇರಿಯು ಪತಿ ಬರುವ ಮೊದಲೇ ಎಚ್ಚೆತ್ತು ಸಮೀಪದಲ್ಲಿ ಪತಿ ಇಲ್ಲದಿರುವುದನ್ನು ಕಂಡು ನದಿಯಾಗಿ ಹರಿದಳು. ಇದೇ ಸ್ಥಳವನ್ನೇ ತಲಕಾವೇರಿ ಎನ್ನುತ್ತಾರೆ. ಇದು ಮೂರು ಮೈಲಿ ದೂರವಿದೆ.

ಈ ಬೆಟ್ಟಪ್ರದೇಶವನ್ನು ಬ್ರಹ್ಮಗಿರಿ ಎನ್ನುತ್ತಾರೆ. ಭಾಗಮಂಡಲದಲ್ಲಿ ಕಾವೇರಿ, ಕನ್ನಿಕಾ ಮತ್ತು ಸುಜ್ಯೋತಿ ಎಂಬ ಮೂರು ನದಿಗಳು ಹುಟ್ಟಿ ಹರಿಯುತ್ತವೆ. ಕಾವೇರಿಗೆ ದಕ್ಷಿಣಗಂಗೆ ಎಂಬ ಹೆಸರಿದೆ. ತುಲಾಮಾಸದಲ್ಲಿ ಸಮಸ್ತಭಾರತದಿಂದ ಕಾವೇರಿಯಲ್ಲಿ ಸ್ನಾನಕ್ಕಾಗಿ ಜನರು ಸಾವಿರಗಟ್ಟಲೆ ನೆರೆಯುತ್ತಾರೆ.

ಅರ್ಜುನನು ತೀರ್ಥಯಾತ್ರೆಯ ಕಾಲದಲ್ಲಿ ಈ ನದಿಯಲ್ಲಿ ಮಿಂದಿದ್ದನು. ನಕುಲನು ರಾಜಸೂಯಯಾಗದಲ್ಲಿ ದಿಗ್ವಿಜಯಕ್ಕೆ ಹೊರಟವನು ಈ ನದಿಯ ದಡಕ್ಕೆ ಬಂದಿದ್ದನು (ಮ.ಆ.,ಸ.,ವ.,ಭೀ.,ಸ್ಕಾಂ.ಪು.).

ಕಾಶಯ - ಒಂದು ದೇಶ (ಮ.ಭೀ.).

ಕಾಶಿ (ವಾರಣಾಶಿ, ಬನಾರಸ) - ಇದನ್ನು ವಾರಣಾಸಿ ಕ್ಷೇತ್ರವೆನ್ನುತ್ತಾರೆ. ಗಂಗಾ ತೀರದಲ್ಲಿದೆ. ಗಂಗಾನದಿಯಿಂದಲೂ ವಿಶ್ವೇಶ್ವರನ ಸಾನ್ನಿಧ್ಯದಿಂದಲೂ ಪವಿತ್ರವಾದುದು. ಭಾರತದ ಮೋಕ್ಷದಾಯಕ ಸಪ್ತಕ್ಷೇತ್ರಗಳಲ್ಲಿ ಇದು ಪ್ರಥಮಸ್ಥಾನವನ್ನು ಪಡೆದ ಕ್ಷೇತ್ರ. ಇಲ್ಲಿ ವಿಶ್ವೇಶ್ವರ, ಅನ್ನಪೂರ್ಣೆ, ಕಾಲಭೈರವ, ಬಿಂದುಮಾಧವ ಮೊದಲಾದ ಪ್ರಸಿದ್ಧ ದೇವಾಲಯಗಳೂ, ಮಣಿಕರ್ಣಿಕಾ, ವ್ಯಾಸ, ಹರಿಶ್ಚಂದ್ರ, ಮೊದಲಾದ ಘಟ್ಟಗಳಿವೆ. ಕಾಶಿಯಲ್ಲಿ ಮರಣಪಟ್ಟರೆ ಸದ್ಗತಿಯಾಗುತ್ತದೆಂದು ಶ್ರೀರಾಮಕೃಷ್ಣಪರಮಹಂಸರೂ ಹೇಳುತ್ತಿದ್ದರು. ಇಲ್ಲಿ ಆಶೀತೀರ್ಥ (ಸಂಗಮೇಶ್ವರ) ದಶಾಶ್ವಮೇಧ ತೀರ್ಥ (ರುದ್ರತೀರ್ಥ), ವರುಣತೀರ್ಥ (ಆದಿಕೇಶವ), ಪಂಚಗಂಗಾ (ಬಿಂದುಮಾಧವ) ಮಣಿಕರ್ಣಿಕಾತೀರ್ಥ (ಮಹೇಶ್ವರ) - ಹೀಗೆ ಪಂಚತೀರ್ಥಗಳಿದ್ದು ಈ ಸ್ಥಳಗಳಲ್ಲಿ ಪಿತೃಶ್ರಾದ್ಧವನ್ನು ಮಾಡುವರು. ಈ ತೀರ್ಥಗಳಿಗೆಲ್ಲಾ ನಾವೆಯಲ್ಲೇ ಹೋಗಬೇಕು. ಕಾಶಿಗೆ ಹೋದವರು ನಾವೆಯಲ್ಲಿ ವ್ಯಾಸಕಾಶಿಗೆ ಹೋಗಲೇಬೇಕು. ಇಲ್ಲಿ ಈಗಲೂ ಕಾಶಿಯ ರಾಜನಿದ್ದಾನೆ. ಕಾಶಿಯಲ್ಲಿ ವಿಶ್ವೇಶ್ವರ ಮತ್ತು ಬಿಂದು ಮಾಧವ ದೇವಾಲಯಗಳು ಮುಖ್ಯವಾದವು. ಕಾಶಿಯ ರಾಜನಾದ ದಿವೋದಾಸನನ್ನು ಅಲ್ಲಿಂದ ಹೊರಡಿಸಿದ ಮೇಲೆ ಶಿವನು ತನ್ನ ಗಣಗಳೊಡನೆ ಸದಾ ಅಲ್ಲಿ ವಾಸಮಾಡತೊಡಗಿದನು. ಕಾಶಿಯ ನಳಗ್ರಾಮದಲ್ಲಿ ಜಗತ್ಪ್ರಸಿದ್ಧವಾದ ಹಿಂದೂ ವಿಶ್ವವಿದ್ಯಾಲಯ ಇದೆ. ಇದನ್ನು ಧರ್ಮಾತ್ಮರಾದ ಪಂಡಿತ ಮದನ ಮೋಹನ ಮಾಲವೀಯ ಸ್ಥಾಪಿಸಿದರು. ಇದರಲ್ಲಿ ಭವ್ಯವಾದ ಕಲಾಶಾಲೆಗಳೂ, ವೈಜ್ಞಾನಿಕ ಕಲಾಶಾಲೆಗಳು ಔದ್ಯಮಿಕ ಯಾಂತ್ರಿಕ ಕೃಷಿಕಶಾಲೆಗಳೂ ವೈದಿಕ, ಬೌದ್ಧ, ಜೈನ, ಸಿಕ್ಖ ಸಂಸ್ಕೃತಿಗಳ ಸಂಶೋಧನಾಕೇಂದ್ರಗಳೂ, ಸಾಹಿತ್ಯ ಸಂಶೋಧನಾಕೇಂದ್ರವೂ,

ಆಯುರ್ವೇದ ಮತ್ತು ಸಂಸ್ಕೃತ ಕಲಾಶಾಲೆ, ಅಲ್ಲದೆ ಸ್ತ್ರೀವಿದ್ಯಾಕಲಾಶಾಲೆಯೂ ಇದೆ. ಈ ಕ್ಷೇತ್ರವು ವರುಣ ಮತ್ತು ಅಸಿ ನದಿಗಳ ಸಂಗಮ ಸ್ಥಾನದಲ್ಲಿದೆ (ಮ.ಅ.,ಕ್ಷೇತ್ರದ). ೨. ಭೀಮಸೇನನ ಪತ್ನಿ. ಈಕೆಯ ಮಗ ಸರ್ವಗ (ವಿಷ್ಣುಪು.).

ಕಾಶ್ಮೀರ - ಒಂದು ದೇಶ. ಇದರ ಮುಖ್ಯಪಟ್ಟಣ ಶ್ರೀನಗರ. ಝೀಲಂ ನದಿಯ ಎರಡೂ ಪಾರ್ಶ್ವಗಳಲ್ಲಿ ಐದ್ಯೆದು ಮೈಲು ದೂರದವರೆಗೆ ಶ್ರೀನಗರ ಹಬ್ಬಿದೆ. ಹೆಚ್ಚಾಗಿ ಇಲ್ಲಿ ಮನೆಗಳೆಲ್ಲ ಮರದಿಂದ ರಚಿಸಲಾಗಿದೆ. ಶ್ರೀನಗರದಲ್ಲಿ ಬಹಳ ಉದ್ಯಾನಗಳಿವೆ. ದೊಡ್ಡ ಉದ್ಯಾನಗಳಲ್ಲಿ ಶಾಲಿಮಾರ್‌ಬಾಗ್, ನಿಷಾತ್‌ಬಾಗ್, ದಿಲಾವರ್‌ಬಾಗ್ - ಮೊದಲಾದವು ಮುಖ್ಯವಾಗಿವೆ. ಶ್ರೀಶಂಕರಾಚಾರ್ಯರ ಕಾಲದಲ್ಲಿ ಕಾಶ್ಮೀರದಲ್ಲಿ ಸರ್ವಜ್ಞಪೀಠವಿತ್ತು. ಇದು ಶ್ರೀನಗರದಿಂದ ೧೪೦ ಮೈಲುಗಳ ಮೇಲೆ ಶಾರದಾ ಎಂಬ ಗ್ರಾಮದಲ್ಲಿದೆ. ಈಗ ಇಲ್ಲಿಗೆ ಪಾಕಿಸ್ತಾನದ ಮೇಲಿನಿಂದ ಹೋಗಬೇಕಾಗಿರುವುದರಿಂದ ಅದು ದುರ್ಗಮವಾಗಿದೆ. ಕಾಶ್ಮೀರವು ಮಧುರ, ಶೀತಲಜಲದ ಬುಗ್ಗೆಗಳಿಂದಲೂ, ಗಗನಚುಂಬಿತ ಚೀನಾರೂ ಬೇಡವೆಂಬ ಸಾಲು ಮರಗಳಿಂದಲೂ ಎಂತಹ ಉದಾಸೀನ ಮನುಷ್ಯನನ್ನೂ ಆನಂದಸಾಗರದಲ್ಲಿ ತೇಲಾಡಿಸಬಲ್ಲ ಭೂಸ್ವರ್ಗ (ಮ.ಸ.,ಭೀ.,ವ.,ಕ್ಷೇತ್ರದ.).

ಕಾಶ್ಯ - ಪಾಂಡವಪಕ್ಷದ ರಾಜನೊಬ್ಬ. ಮಹಾಪರಾಕ್ರಮಶಾಲಿ (ಮ.ಉ.).

ಕಾಶ್ಯಪ - ೧. ಒಬ್ಬ ಪ್ರಜಾಪತಿ. ನೋ. - ಕಶ್ಯಪ. ೨. ವಸುದೇವನ ಪುರೋಹಿತ; ಅರಣ್ಯದಲ್ಲಿ ಈತನೇ ಪಾಂಡವರಿಗೆ ನಾಮಕರಣ ಮಾಡಿದನು. ೩. ಒಬ್ಬ ಮುನಿ; ಈತನು ದೇಹವು ನಶ್ವರವಾದುದೆಂದು ಆತ್ಮಹತ್ಯೆಗೆ ಯತ್ನಿಸಿದಾಗ ಇಂದ್ರನು ನರಿಯ ರೂಪದಿಂದ ಬಂದು ಮಾನವದೇಹದ ಮಹತ್ವವನ್ನು ತಿಳಿಸಿದನು (ಮ.ಆ,ಶಾಂ.,ಮತ್ಸ್ಯಪು.).

ಕಾಶ್ಯಪಿ - ಭೂಮಿ. ನೋ. - ಕಶ್ಯಪ.

ಕಿಂಕರ - ೧. ರಾಕ್ಷಸನೊಬ್ಬ ಇವನು ವಸಿಷ್ಠನ ಶಾಪದಿಂದ ರಾಕ್ಷಸನಾಗಿದ್ದ ಕಲ್ಮಾಷಪಾದ ರಾಜನ ದೇಹವನ್ನು ವಿಶ್ವಾಮಿತ್ರನ ಸೂಚನೆಯಂತೆ ಪ್ರವೇಶಿಸಿ ವಸಿಷ್ಠ ಮುನಿಯ ಮಗನಾದ ಶಕ್ತಿಯ ನಾಶಕ್ಕೆ ಕಾರಣನಾದ. ನೋ-ಕಲ್ಮಾಷಪಾದ. ೨. ಹನುಮಂತನೊಡನೆ ಹೋರಾಡಿದ ರಾಕ್ಷಸರ ಒಂದು ಪಂಗಡ; ಸೀತಾಸಂಶೋಧನೆಗೆ ಹೊರಟ ಹನುಮನು ಲಂಕೆಯಲ್ಲಿ ಈ ರಾಕ್ಷಸರನ್ನು ಕೊಂದನು. ಇವರು ಎಂಬತ್ತು ಸಾವಿರ ಮಂದಿ ಇದ್ದರು. ಇವರು

ಹನುಮನೊಡನೆ ಮೊತ್ತಮೊದಲು ಹೋರಾಟಕ್ಕೆ ಹೊರಟವರು. (ರಾಮ.ಸು.).

ಕಿಂದಮ - ಒಬ್ಬ ಋಷಿ; ಪಾಂಡು ಬೇಟೆಗೆ ಅರಣ್ಯಕ್ಕೆ ಬಂದಾಗ ಮೃಗರೂಪದಲ್ಲಿ ಈತನು ತನ್ನ ಪತ್ನಿಯೊಡನೆ ಕ್ರೀಡಿಸುತ್ತಿದ್ದ. ಪಾಂಡು ಈತನನ್ನು ಜಿಂಕೆ ಎಂದೇ ಭಾವಿಸಿ ಬಾಣದಿಂದ ಹೊಡೆದನು. ಆ ಬಾಣವು ಕಿಂದಮನಿಗೆ ತಗಲಿ, ಆತನಿಗೆ ಪ್ರಾಣೋತ್ಕ್ರಮಣ ಆಗುವಾಗ - 'ರಾಜಾ, ನೀನೂ ನಿನ್ನ ಪತ್ನಿಯೊಡನೆ ಸಂಭೋಗ ಮಾಡುತ್ತಿದ್ದಾಗ ಮೃತನಾಗು' ಎಂದು ಶಾಪವಿತ್ತು ಮೃತನಾದನು. ಮುಂದೆ ಆ ಪತಿ ಪತ್ನಿಯರಿಬ್ಬರೂ ಮೃತರಾದರು (ಮ.ಆ.).

ಕಿಂಧುರ - ದ್ರೌಪದೀಸ್ವಯಂವರ ಕಾಲದಲ್ಲಿ ಲಕ್ಷ್ಯವನ್ನು ಭೇದಿಸಲಿಟ್ಟ ಮಹಾಧನಸ್ಸು (ಮ.ಆ.).

ಕಿನ್ನರ - ೧. ಕುಬೇರನ ಪ್ರಜೆಗಳು; ಮನುಷ್ಯದೇಹ ಮತ್ತು ಕುದುರೆಯ ಮುಖವುಳ್ಳ ದೇವತೆಗಳಲ್ಲಿ ಒಂದು ಭೇದದವರು. ಇವರಿಗೆ ಕಶ್ಯಪಮುನಿ ಮತ್ತು ಸುರಸೆಯರು ತಂದೆ ತಾಯಿಯರು. ಯಕ್ಷರು ಮತ್ತು ನಾಗರು ಕಿನ್ನರರ ಸಹೋದರರು (ಮ.ಆ.). ೨. ನಾಗರಾಜನಾದ ಧೃತರಾಷ್ಟ್ರನ ಮಗ: ಬೇಡನ ಕೈಗೆ ಸಿಕ್ಕಿ ನರಳುತ್ತಿದ್ದ ಹಾವೊಂದನ್ನು ಉದಯನನು ತನ್ನ ಕೈಕಡಗವನ್ನಿತ್ತು ಬಿಡಿಸಲು ನಾಗರಾಜನ ಪುತ್ರ ಕಿನ್ನರನು ಇದರಿಂದ ಸಂತೋಷಹೊಂದಿ ಉದಯನನ್ನು ಗೆಳೆಯನನ್ನಾಗಿ ಮಾಡಿಕೊಂಡು ಪಾತಾಳಕ್ಕೆ ಅವನನ್ನು ಕರೆದೊಯ್ದನು. ಅಲ್ಲಿ ಕಿನ್ನರನ ತಂಗಿಯಾದ ಲಲಿತೆಯನ್ನು ಉದಯನನಿಗೆ ಕೊಟ್ಟು ವಿವಾಹವಾಯಿತು. ನೋ. - ವಿಧೂಮ (ಮ.ಆ.).

ಕಿಂಪುರುಷ - ೧. ಹಿಮಾಲಯದ ಉತ್ತರ ದಿಕ್ಕಿನಲ್ಲಿದ್ದ ಒಂದು ಖಂಡ; ಇದನ್ನು ಅಗ್ನೀಧ್ರರಾಜನ ಮಕ್ಕಳಲ್ಲಿ ಒಬ್ಬನಾದ ಕಿಂಪುರುಷನು ಆಳಿದನು. ಈತನ ತಾಯಿ ಪೂರ್ವಚಿತ್ತಿ ಎಂಬ ಅಪ್ಸರೆ; ನಾಭಿ, ಹರಿ, ಇಲಾವೃತ ಮುಂತಾದ ಎಂಟು ಮಂದಿ ಈತನಿಗೆ ಸಹೋದರರು. ಮೇರುಪುತ್ರಿಯಾದ ಪೃಥುರೂಪೆಯು ಈತನ ಪತ್ನಿ. ರಾಜಸೂಯಯಾಗ ಕಾಲದಲ್ಲಿ ಅರ್ಜುನನು ಇಲ್ಲಿಗೆ ಬಂದು ಕಪ್ಪಕಾಣಿಕೆಗಳನ್ನು ಪಡೆದನು. ೨. ಇವರೂ ದೇವತೆಗಳ ಒಂದು ಭೇದ. ಇವರಿಗೆ ದೇಹ ಕುದುರೆಯಂತೆ, ಮುಖ ಮನುಷ್ಯರಂತೆ (ಮ.ಆ.,ಸ.,ಭೀ.).

ಕಿರಾತ - ೧. ಒಂದು ದೇಶ. ಇದು ಬಂಗಾಳದಲ್ಲಿದೆ; ಇದು ಪರ್ವತಪ್ರದೇಶ. ೨. ಪಾಶುಪತಾಸ್ತ್ರವನ್ನು ಪಡೆಯಲು ತಪಸ್ವಿಯಾದ ಅರ್ಜುನನಿಗೆ ಶಿವನು ಕಿರಾತ ರೂಪದಿಂದ ಪ್ರತ್ಯಕ್ಷನಾಗಿ ಆತನ ಪರಾಕ್ರಮವನ್ನು ತೂಗಿ ಮೆಚ್ಚಿ - ಪಾಶುಪತಾಸ್ತ್ರವನ್ನಿತ್ತನು (ಮ.ಭೀ.,ಆ.).

ಕಿರೀಟ (ಕಿರೀಟಮಾಲಿ) - ಅರ್ಜುನ; ಪಾಶುಪತಾಸ್ತ್ರವನ್ನು ಪಡೆದ ಅರ್ಜುನನನ್ನು

ಇಂದ್ರನು ಸ್ವರ್ಗಕ್ಕೆ ಕರೆದುಕೊಂಡು ಹೋಗಿ, ಸುಧರ್ಮೆ ಎಂಬ ತನ್ನ ಸಭೆಯಲ್ಲಿ ತನ್ನ ಸಿಂಹಾಸನದ ಮೇಲೆ ಕುಳ್ಳಿರಿಸಿಕೊಂಡು ದಿವ್ಯವಾದ ಒಂದು ಕಿರೀಟವನ್ನು ಆತನ ತಲೆಯ ಮೇಲಿಟ್ಟು ಗೌರವಿಸಿದನು. ಅಂದಿನಿಂದ ಅರ್ಜುನನಿಗೆ ಕಿರೀಟಿ ಎಂಬ ಹೆಸರು ಪ್ರಾಪ್ತವಾಯಿತು (ಮ.ಅ.,ಪಿ.).

ಕಿರ್ಮೀರ (ಕಿಮ್ಮೀರ) - ಬಕನ ಸಹೋದರನಾದ ರಾಕ್ಷಸ. ಪಾಂಡವರು ಕಾಮ್ಯಕ ವನದಲ್ಲಿದ್ದಾಗ ಅರ್ಜುನನು ಪಾಶುಪತಾಸ್ತ್ರ ಸಂಪಾದನೆಗೆ ಹೋಗಿದ್ದ; ಆಗ ಭೀಮನು ಬೇಟೆಗೆ ಹೋಗಿದ್ದ. ಈ ವಿಷಯವನ್ನು ತಿಳಿದ ರಾಕ್ಷಸನು ಪಾಂಡವರನ್ನು ಅಡ್ಡಗಟ್ಟಿ ಹೊತ್ತುಕೊಂಡು ಹೋಗುವಾಗ ಬೇಟೆಗೆ ಹೋಗಿದ್ದ ಭೀಮನಿಗೆ ಅಪಶಕುನಗಳು ಕಾಣಿಸಲು ಅವನು ತಿರುಗಿ ಆಶ್ರಮಕ್ಕೆ ಬರುವಾಗ ದಾರಿಯಲ್ಲಿ ಸಹೋದರರನ್ನು ಹೊತ್ತ ಕಿಮ್ಮೀರನನ್ನು ಸಂಧಿಸಿ, ಆತನೊಡನೆ ಹೋರಾಡಿ ವಧಿಸಿ, ಸಹೋದರರು ಮತ್ತು ಪತ್ನಿಯೊಂದಿಗೆ ಆಶ್ರಮಕ್ಕೆ ಬಂದನು (ಮ.ವ.).

ಕಿಷ್ಕಿಂಧೆ - ಋಕ್ಷರಜನ ರಾಜಧಾನಿ; ವಾಲಿಸುಗ್ರೀವರು ವಾಸವಾಗಿದ್ದ ನಗರ; ಬಳ್ಳಾರಿ ಜಿಲ್ಲೆಯ ಹಂಪೆಯ ಸಮೀಪ ಹರಿಯುವ ತುಂಗಭದ್ರಾ ನದಿಯ ಉತ್ತರ ದಡದಲ್ಲಿರುವ ಒಂದು ಹಳ್ಳಿ. ಇದರ ಬಳಿಯಲ್ಲೇ ಪಂಪಾಕ್ಷೇತ್ರವಿದೆ. ಇಲ್ಲಿ ವಿರೂಪಾಕ್ಷ ಮಂದಿರ, ಹಜಾರರಾಮಸ್ವಾಮಿಯ ಗುಡಿ, ಕೋದಂಡರಾಮನ ಗುಡಿ ಮೊದಲಾದ ಪ್ರಸಿದ್ಧ ದೇವಾಲಯಗಳಿವೆ. ಇಲ್ಲಿರುವ ಸಂನ್ಯಾಸಿದಿಬ್ಬದಲ್ಲೇ ವಿದ್ಯಾರಣ್ಯರು ಭುವನೇಶ್ವರಿಯ ಕುರಿತು ತಪಸ್ಸುಮಾಡಿ ಮೂರುವರೆಗಳಿಗೆ ಚಿನ್ನದ ಮಳೆ ಸುರಿಸಿದ್ದರು. ವಿರೂಪಾಕ್ಷ ದೇವಾಲಯದಿಂದ ನೆಟ್ಟಗೆ ಹೋದರೆ ಋಷ್ಯಮೂಕ ಪರ್ವತವು ಸಿಕ್ಕುವುದು. ಇದರ ಶಿಖರದ ಮೇಲೆ ಮತಂಗ ಋಷಿಯ ಆಶ್ರಮವಿತ್ತು. ಹರಿಗೋಲಿನಿಂದ ತುಂಗಭದ್ರಾ ನದಿಯನ್ನು ದಾಟಿದರೆ ಆಚೆ ದಡದಲ್ಲೇ ಆನೆಗೊಂದಿ ಎಂಬ ಐತಿಹಾಸಿಕ ಪಟ್ಟಣವಿದೆ. ಇಲ್ಲೇ ಸಮೀಪದಲ್ಲೇ ಶಬರಿಯ ಆಶ್ರಮವಿದೆ. ಆನೆಗೊಂದಿಯಿಂದ ಎರಡು ಮೈಲು ದೂರದಲ್ಲಿ ಪಂಪಾಸರೋವರವಿದೆ. ಇಲ್ಲೇ ಶ್ರೀರಾಮಲಕ್ಷ್ಮಣರನ್ನು ಆಂಜನೇಯನು ಕಂಡದ್ದು. ಈ ಸರೋವರದ ಉತ್ತರಕ್ಕೆ ಅಂಜನಾಪರ್ವತವಿದೆ. ಇಲ್ಲೇ ಹಾಳುಬಿದ್ದ ವಿಜಯನಗರವನ್ನೂ ಕಾಣಬಹುದು (ಕ್ಷೇತ್ರದ ಮ.ಸ.,ವಾ.ರಾ.ಕಿಷ್ಕಿಂ.).

ಕೀಚಕ - ವಿರಾಟನ ಮೈದುನ; ಸುದೇಷ್ಣೆಯ ಸೋದರ; ಇವನ ಇನ್ನೊಂದು ಹೆಸರು ಸಿಂಹಬಲ. ಈತನ ತಂದೆಯ ಹೆಸರು ಕೇಕಯ; ತಾಯಿ ಮಾಲವಿ; ಸಹೋದರರು ನೂರೈದು ಮಂದಿ. ಇವರಿಗೆ ಉಪಕೀಚಕರೆಂದು ಹೆಸರು. ಈತನು ಬಾಣಾಸುರನ ಅಂಶದವನು. ಮಾಲಿನಿಯನ್ನು (ದ್ರೌಪದಿ) ಕಾಮಿಸಿ ಭೀಮನಿಂದ

ಹತನಾದವನು. ಉತ್ತಮವರ್ಣದ ಸ್ತ್ರೀಯಲ್ಲಿ ಕ್ಷತ್ರಿಯನಿಂದ ಹುಟ್ಟಿದ ಸೂತರ ಜಾತಿಯವನು. ಇವರ ದೇಶಕ್ಕೆ ಸೂತರ ದೇಶವೆನ್ನುತ್ತಾರೆ. ಈ ವಂಶದವರಲ್ಲಿ ಕೇಕಯ ರಾಜನು ಪ್ರಸಿದ್ಧನು. ಇವನಿಗೆ ಮಾಲವಿಯಲ್ಲಿ ಕೀಚಕರೆಂದು ಹೆಸರುಗೊಂಡ ನೂರಾರು ಮಂದಿ ಮಕ್ಕಳು ಹುಟ್ಟಿದರು. ಈ ಮಾಲವಿಯ ತಂಗಿಯ ಮಗಳೇ ಸುದೇಷ್ಣೆ. ಈ ಕೀಚಕನು ತನ್ನ ಸಹೋದರರೊಡನೆ ಸುದೇಷ್ಣೆಯ ಆಶ್ರಯದಲ್ಲಿದ್ದನು. (ಮ.ವಿ.).

ಪೂರ್ವದಲ್ಲಿದ್ದ ಕಾಲಕೇಯರೆಂಬ ದೈತ್ಯರೇ ಕೀಚಕರು. ಅವರಲ್ಲಿ ಬಾಣನೆಂಬ ದೈತ್ಯನೇ ಹಿರಿಯನಾದ ಕೀಚಕ. ಇವನ ಬಲಕ್ಕೆ ಮೆಚ್ಚಿದ ವಿರಾಟನು ಇವನನ್ನು ಸೇನಾಪತಿಯಾಗಿ ಮಾಡಿಕೊಂಡಿದ್ದನು. ಕೀಚಕನು ಮಹಾಪರಾಕ್ರಮಿಯಲ್ಲದೆ, ಹತ್ತುಸಾವಿರ ಆನೆಗಳಿಗೆ ಸಾಟಿಯಾಗಿದ್ದನು. ಇವನು ತ್ರಿಗರ್ತದೇಶದಲ್ಲಿ ಜನಿಸಿ, ಭೋಜನೆಂದೂ ಕರೆಯಲ್ಪಡುತ್ತಿದ್ದನು (ಮ.ವಿ.).

ಕೀರಘಂಡರಪುರ (ಮಚ್ಛಲೀಪಟ್ಟಣ) - ಇದು ಮಚ್ಛಲೀಪಟ್ಟಣದ ನಿಲ್ದಾಣದ ಒಂದು ಅಂಗ. ಚಿಕಲಾಪುಡಿ ನಿಲ್ದಾಣದಿಂದ ಅರ್ಧ ಮೈಲಿ ಮೇಲೆ ಸಮುದ್ರತೀರದಲ್ಲಿ ಈ ಕ್ಷೇತ್ರವಿದೆ. ಇಲ್ಲಿ ನರಸಿಂಹದಾಸಜೀ ಎಂಬ ಭಕ್ತನ ಭಕ್ತಿಗೆ ಮೆಚ್ಚಿ ಪಾಂಡುರಂಗನು ಪ್ರಸನ್ನನಾದನು (ಕ್ಷೇತ್ರದ.).

ಕೀರ್ತಿ - ದಕ್ಷಪ್ರಜಾಪತಿಯ ಪುತ್ರಿ; ಧರ್ಮನ ಹೆಂಡತಿ (ಮ.ಆ.).

ಕೀರ್ತಿಮತಿ - ವ್ಯಾಸಪುತ್ರನಾದ ಶುಕದೇವನ ಮಗಳು; ಈಕೆಯ ಪತಿ ಅಣೆಹರಾಜ; ಮಗ ಬ್ರಹ್ಮದತ್ತನೆಂಬ ಮಹರ್ಷಿ (ಹರಿ.,ಮತ್ಸ್ಯಪು.).

ಕೀರ್ತಿಧರ್ಮ - ಪಾಂಡವಪಕ್ಷೀಯನಾದ ಕ್ಷತ್ರಿಯ (ಮ.ದ್ರೋ.).

ಕೀರ್ತಿಮಂತ - ೧. ಉತ್ತಾನಪಾದ ಸುನೀತಿಯರ ಮಗ; ಧ್ರುವನ ತಮ್ಮ. ೨. ಕಂಸನಿಂದ ಹತನಾದ ವಸುದೇವನ ಹಿರಿಯ ಮಗ; ಕೃಷ್ಣನ ಅಣ್ಣ (ಭಾಗ.,ಹರಿ.).

ಕೀರ್ತಿಮಾಲಿನಿ - ಭದ್ರಾಯುವಿನ ಹೆಂಡತಿ; ಭದ್ರಾಯುವಿನ ತಂದೆ ಚಿತ್ರಬಾಹು. ಈತನು ದಶಾರ್ಣದೇಶದ ರಾಜ. ನೋ-ಮಂದ (ಸ್ಕಾಂ.ಪು., ಬ್ರಹ್ಮೋ.).

ಕುಚೇಲ - ಸಾಂದೀಪನಿಯ ಗುರುಕುಲದಲ್ಲಿ ಶ್ರೀಕೃಷ್ಣನ ಸಹಪಾಠಿಯಾಗಿದ್ದ ಬ್ರಾಹ್ಮಣ; ಇವನಿಗೆ ಸುದಾಮ ಮತ್ತು ಶ್ರೀದಾಮವೆಂಬ ಹೆಸರಿದೆ; ಕುಚೇಲನು ಸಂಸಾರಿಯಾದಮೇಲೆ ಬಡತನದಿಂದ ತುಂಬಾ ಬಳಲುತ್ತಿದ್ದ. ಆಗ ಅವನು ಹೆಂಡತಿಯ ಸೂಚನೆಯಂತೆ ಒಂದು ಮುಷ್ಟಿ ಅವಲಕ್ಕಿಯನ್ನು ಗಂಟುಕಟ್ಟಿ, ಕಂಕುಳಲ್ಲಿಟ್ಟುಕೊಂಡು ಶ್ರೀಕೃಷ್ಣನ ದರ್ಶನಕ್ಕೆ ಹೋದನು. ಶ್ರೀಕೃಷ್ಣನು

ಕುಚೇಲನು ತಂದ ಅವಲಕ್ಕಿಯನ್ನು ತಿಂದು ಕುಚೇಲನಿಗೆ ಹೇರಳ ಸಂಪತ್ತನ್ನು ಕೊಟ್ಟನು. ನೋ. - ಸುದಾಮ, ತಾರಣ (ಭಾಗ.).

ಕುಜ - ಅಂಗಾರಕ ಮತ್ತು ನರಕಾಸುರ; ಇವರಿಬ್ಬರೂ ಭೂಮಿಯ ಮಕ್ಕಳು (ಭಾಗ.).

ಕುಂಜರ - ೧. ಜಯದ್ರಥನ ಸೋದರ (ಮ.ವ.). ೨. ಅಂಜನಾದೇವಿಯ ತಂದೆ (ರಾಮಾ.ಕಿಷ್ಕಿಂ.).

ಕುಣಿಗಾರ್ಗ್ಯ - ಬ್ರಹ್ಮ ಋಷಿ; ಇವನ ಮಗಳಾದ ಸುಲಭಾಮೈತ್ರೇಯಿ ಬ್ರಹ್ಮಚಾರಿಣಿಯಾಗಿಯೇ ಜೀವನ ಕಳೆದು ನಾರದನು ಸಂಸಾರಹೀನೆಯಾದ ಸ್ತ್ರೀಗೆ ಉತ್ತಮಗತಿಯಿಲ್ಲವೆನ್ನಲು, ಈಕೆಯು ತನ್ನ ತಪಸ್ಸಿನ ಅರ್ಧಭಾಗವನ್ನಿತ್ತು ಗಾಲವಮುನಿಯ ಮಗ ಶೃಂಗವಂಗ ಮುನಿಯನ್ನು ವಿವಾಹವಾದಳು. ಈಕೆಯು ಕೆಲವು ಕಾಲ ತನ್ನ ತಪಸ್ಸಿನಿಂದ ಸುಂದರ ತರುಣಿಯಾಗಿ ಪತಿಯೊಂದಿಗಿದ್ದು ಸದ್ಗತಿ ಪಡೆದಳು (ಮ.ಶ.).

ಕುಂಡಕ - ಕ್ಷತ್ರಿಯ; ಧೃತರಾಷ್ಟ್ರನ ಮಗ (ಮ.ಶ.).

ಕುಂಡಜ - ಕ್ಷತ್ರಿಯ; ಧೃತರಾಷ್ಟ್ರನ ಮಗ (ಮ.ಆ.).

ಕುಂಡಧಾರ - ೧. ಕ್ಷತ್ರಿಯ; ಧೃತರಾಷ್ಟ್ರನ ಮಗ; ಭೀಮನಿಂದ ಹತನಾದ. ೨. ಮೇಘರಾಜನು ಹಣವನ್ನು ಬೇಡಿದ ಒಬ್ಬ ಬ್ರಾಹ್ಮಣನಿಗೆ 'ಧರ್ಮವೇ ಮುಖ್ಯ, ಧನದಿಂದ ಅನರ್ಥಗಳು ಒದಗುವುವು' ಎಂದು ಸೂಚಿಸಿ, ತನ್ನ ಸ್ನೇಹಿತನಾದ ಮಾಣಿಭದ್ರನೆಂಬ ಯಕ್ಷನಿಂದ ಆತನಿಗೆ ಹಣ ಕೊಡಿಸಿದ (ಮ.ಶಾಂ.).

ಕುಂಡಭೇದಿ - ಧೃತರಾಷ್ಟ್ರನ ಮಗನೊಬ್ಬ; ಕ್ಷತ್ರಿಯ; ಇವನ ವಧೆ ಭೀಮನಿಂದ ಆಯಿತು (ಮ.ಆ.,ಭೀ.,ದ್ರೋ.).

ಕುಂಡಲಾಹರಣ - ಕರ್ಣನ ಕುಂಡಲವನ್ನು ಬ್ರಾಹ್ಮಣನ ರೂಪದಿಂದ ಬಂದ ಇಂದ್ರನು ಬೇಡಿ ಪಡೆದನು (ಮ.ವ.).

ಕುಂಡಲಿ - ೧. ಕ್ಷತ್ರಿಯ; ಧೃತರಾಷ್ಟ್ರನ ಮಗ; ಭೀಮನಿಂದ ಹತನಾದ. ೨. ಗರುಡನ ಮಗ. ೩. ಒಂದು ನದಿ (ಮ.ಭೀ.,ವಿ.).

ಕುಂಡಶಾಯಿ - ಧೃತರಾಷ್ಟ್ರನ ಮಗ; ಕ್ಷತ್ರಿಯ (ಮ.ಆ.).

ಕುಂಡಾಶಿ - ಕ್ಷತ್ರಿಯ; ಧೃತರಾಷ್ಟ್ರನ ಮಗ (ಮ.ಆ.).

ಕುಂಡಿ - ಕ್ಷತ್ರಿಯ; ಧೃತರಾಷ್ಟ್ರನ ಮಗ (ಮ.ಆ.).

ಕುಂಡಿಕ - ಕ್ಷತ್ರಿಯ; ಚಂದ್ರವಂಶದ ಮೂರನೆಯ ಜನಮೇಜಯನ ಮಗನಾದ ಧೃತರಾಷ್ಟ್ರನ ಮಗ (ಮ.ಆ.).

ಕುಂಡಿನ - ೧. ದಮಯಂತಿಯ ಮತ್ತು ರುಕ್ಮಿಣಿಯ ತಂದೆಯಾದ ಭೀಷ್ಮಕನ ಕಾಲದ ವಿದರ್ಭದ ರಾಜಧಾನಿ; ವಿದರ್ಭದೇಶವೆಂದರೆ ಇಂದಿನ ಬಿಹಾರು. ಇದು ಮಧ್ಯ ಹಿಂದೂದೇಶದ ಅಮರಾವತಿಯ ಪೂರ್ವಕ್ಕೆ ನಲವತ್ತು ಮೈಲು ದೂರದಲ್ಲಿತ್ತು. ೨. ಕೌಂಡಿನ್ಯ ಮಹರ್ಷಿಯ ತಂದೆ (ಮ.ವ.).

ಕುಂಡೋದ - ಒಂದು ಪರ್ವತ (ಮ.ವ.).

ಕುಂಡೋದರ - ೧. ಕ್ಷತ್ರಿಯ; ಧೃತರಾಷ್ಟ್ರನ ಮಗ (ಮ.ಆ.). ೨. ಒಂದು ಸರ್ಪ (ಮ.ಆ.).

ಕುತಪ - ಶ್ರಾದ್ಧಕ್ಕೆ ಯೋಗ್ಯವಾದ ಕಾಲ. ಸುಮಾರು ಅಪರಾಹ್ಣ ಒಂದು ಯಾ ಎರಡು ಗಂಟೆಯ ಸಮಯ (ಕು= ಭೂಮಿ, ತಪ= ಬಿಸಿಯಾಗಿರುವ ಕಾಲ) (ಮ.ಆ.).

ಕುಂತಯ - ದೇಶವೊಂದು; ಕುಂತಿಯು ಹುಟ್ಟಿದ ಮಾಳವದ ಹಳೆಯ ರಾಜಧಾನಿ; ಇದು ಅಶ್ವನದಿಯ ದಡದಲ್ಲಿದೆ (ಮ.ಭೀ.).

ಕುಂತಲ - ದೇಶವೊಂದು; ಬಳ್ಳಾರಿ ಜಿಲ್ಲೆಯ ಒಂದು ಭಾಗ; ಇದನ್ನೀಗ ಕುರುಗೋಡು ಎನ್ನುತ್ತಾರೆ. ಇದು ಚಂದ್ರಹಾಸನ ರಾಜಧಾನಿಯಾಗಿತ್ತು (ಮ.ಭೀ.).

ಕುಂತಿ - ಯದುವಂಶದ ಶೂರರಾಜನ ಮಗಳು; ಈಕೆಗೆ ಮೊದಲು ಪೃಥೆ ಎಂದು ಹೆಸರಿತ್ತು. ಶೂರರಾಜನ ಸೋದರತ್ತೆಯ ಮಗನಾದ ಕುಂತಿಭೋಜನು ಈಕೆಯನ್ನು ದತ್ತಕ್ಕೆ ತೆಗೆದುಕೊಂಡನು. ಈಕೆಗೆ ಶ್ರುತದೇವ, ಶ್ರುತಕೀರ್ತಿ, ರಾಜಾಧಿದೇವಿ ಮತ್ತು ಶ್ರುತಶ್ರದೆ ಎಂಬ ನಾಲ್ವರು ಸೋದರಿಯರಿದ್ದರು. ವಸುದೇವನು ಈಕೆಯ ಒಡಹುಟ್ಟಿದವನು. ಕುಂತಿಯು ಬಾಲ್ಯದಲ್ಲಿ ದೂರ್ವಾಸನನ್ನು ಸೇವೆಯಿಂದ ಮೆಚ್ಚಿಸಿ, ಐದು ವರಗಳನ್ನು ಪಡೆದಿದ್ದಳು. ಒಮ್ಮೆ ಈಕೆಯು ಗಂಗಾನದಿಯ ತೀರದಲ್ಲಿ ಗೆಳತಿಯರೊಡನೆ ಆಡುತ್ತಿದ್ದಾಗ ಬೊಂಬೆಯಾಟಕ್ಕಾಗಿ ಒಂದು ಮಗುವು ಬೇಕೆಂದು, ದೂರ್ವಾಸನು ಉಪದೇಶಿಸಿದ ಒಂದು ಮಂತ್ರದಿಂದ ಸೂರ್ಯನನ್ನು ಕರೆದಳು, ಆ ಮುನಿಯ ಮಂತ್ರದ ಮಹಿಮೆಯಿಂದ ಕುಂತಿಯು ಆಗಲೇ ಒಂದು ತೇಜಸ್ವಿಯಾದ ಮಗುವನ್ನು ಹೆತ್ತು, ನಾಚಿಕೆಯಿಂದ ಅದನ್ನು ಗಂಗಾನದಿಯಲ್ಲಿ ತೇಲಿಬಿಟ್ಟಳು. ಮುಂದೆ ಇವನೇ ಕರ್ಣನೆಂದು ಹೆಸರುಪಡೆದ ವೀರನಾದನು. ನೋ. - ಕರ್ಣ. ಬಳಿಕ ಭೀಷ್ಮನು ಈಕೆಯನ್ನು ತಂದು ಪಾಂಡುರಾಜನಿಗೆ ವಿವಾಹ ಮಾಡಿದನು. ಪಾಂಡುರಾಜನು ಕಿಂದಮನ ಮುನಿಯಿಂದ ಶಾಪವನ್ನು ಪಡೆದು, ರಾಜ್ಯವನ್ನು ತ್ಯಜಿಸಿ, ಕುಂತಿ, ಮಾದ್ರಿಯರೊಂದಿಗೆ ಅರಣ್ಯದಲ್ಲಿ ವಾಸಮಾಡುತ್ತಿದ್ದಾಗ,

ಕುಂತಿಗೆ ಯಮ, ವಾಯು, ಇಂದ್ರರಿಂದ ಕ್ರಮವಾಗಿ ಯುಧಿಷ್ಠಿರ, ಭೀಮ ಮತ್ತು ಅರ್ಜುನರೆಂಬ ಮಕ್ಕಳು ಹುಟ್ಟಿದರು. ಮಾದ್ರಿಗೆ ಅಶ್ವಿನೀದೇವತೆಗಳಿಂದ ನಕುಲಸಹದೇವರೆಂಬ ಅವಳಿ ಮಕ್ಕಳು ಹುಟ್ಟಿದರು. ಪಾಂಡುವು ವಸಂತಕಾಲದ ಒಂದು ದಿನ ವನದೇವಿಯಂತೆ ಅಲಂಕರಿಸಿಕೊಂಡಿದ್ದ ಮಾದ್ರಿಯನ್ನು ಕಂಡು ಮೋಹಿಸಿ, ಆಕೆಯು 'ಬೇಡ ಬೇಡ' ಎನ್ನುತ್ತಿದ್ದರೂ ಕೇಳದೆ, ಒತ್ತಾಯದಿಂದ ಭೋಗಿಸಲು, ಮುನಿಶಾಪದ ಫಲದಿಂದ ಆತನು ಪ್ರಾಣವನ್ನು ನೀಗಿದನು. ಮಾದ್ರಿಯು ಪತಿಯೊಂದಿಗೆ ಸಹಗಮನವಾದಳು. ಆಗ ಅನಾಥರಾದ ಪಾಂಡವರನ್ನು ಮತ್ತು ಕುಂತಿಯನ್ನು ಮುನಿಗಳು ಹಸ್ತಿನಾವತಿಗೆ ಕರೆದುಕೊಂಡು ಬಂದು ಭೀಷ್ಮನ ವಶ ಒಪ್ಪಿಸಿದರು. ಅರಗಿನ ಮನೆಯ ದಹನದ ಅನಂತರ ಪಾಂಡವರೊಡನೆ ಕುಂತಿಯೂ ಏಕಚಕ್ರ ಅಗ್ರಹಾರಕ್ಕೆ ಬಂದು ಅಲ್ಲಿ ಸ್ವಲ್ಪ ಸಮಯ ವೇಷ ಮರೆಸಿಕೊಂಡಿದ್ದು, ಅಲ್ಲಿ ಭೀಮನಿಂದ ಬಕಾಸುರನನ್ನು ಕೊಲ್ಲಿಸಿ, ದ್ರೌಪದಿಯ ಸ್ವಯಂವರಾನಂತರ ಎಲ್ಲರೂ ಇಂದ್ರಪ್ರಸ್ಥದಲ್ಲಿ ವಾಸಮಾಡತೊಡಗಿದರು. ಪುನಃ ಪಾಂಡವರು ಜೂಜಾಡಿ ಸೋತು ಅರಣ್ಯಕ್ಕೆ ಹೋದಾಗ ಕುಂತಿಯು ವಿದುರನ ಮನೆಯಲ್ಲಿದ್ದಳು. ಯುದ್ಧ ನಿರ್ಧಾರವಾದಾಗ ಕುಂತಿಯು ಸೂರ್ಯೋಪಾಸನೆಯಲ್ಲಿದ್ದ ಕರ್ಣನ ಬಳಿಗೆ ಹೋಗಿ ಅವನ ಜನ್ಮವೃತ್ತಾಂತವನ್ನು ತಿಳಿಸಿದಳು. ಆತನಿಂದ ಪಾಂಡವರಿಗೆ ಹಿತವಾಗುವ ವರವನ್ನು ಪಡೆದಳು. ಯುದ್ಧಾನಂತರ ಧರ್ಮರಾಜನೊಡನೆ ಕರ್ಣನು ತನ್ನ ಹಿರಿಯ ಮಗನೆಂದೂ, ಆತನಿಗೆ ಮೊದಲು ತಿಲೋದಕವನ್ನು ಕೊಡಬೇಕೆಂದೂ ಹೇಳಿದಳು. ಯುಧಿಷ್ಠಿರನು ರಾಜ್ಯಾಭಿಷಿಕ್ತನಾದರೂ, ಕರ್ಣನ ವಧೆಗಾಗಿ ಮನಸ್ಸಿನಲ್ಲೇ ಕೊರಗುತ್ತ ವಾನಪ್ರಸ್ಥಾಶ್ರಮಕ್ಕೆ ಹೊರಟ ಧೃತರಾಷ್ಟ್ರ ಗಾಂಧಾರಿ ಮತ್ತು ವಿದುರರೊಡನೆ ತಾನೂ ಹೊರಟು ಅರಣ್ಯವನ್ನು ಸೇರಿದಳು. ಅಲ್ಲಿ ವ್ಯಾಸ ಮಹರ್ಷಿಯ ಮಹಿಮೆಯಿಂದ ಸ್ವರ್ಗಸ್ಥರಾದ ಕರ್ಣಾದಿ ವೀರರನ್ನೆಲ್ಲ ಕಂಡು ಕೆಲವು ದಿನಗಳಲ್ಲೇ ದಾವಾಗ್ನಿಗೆ ಸಿಕ್ಕಿ ಮೃತಳಾದಳು (ಮ.ಆ., ವ., ಉ., ಭೀ., ದ್ರೋ., ಕ. ಆಶ್ರಮ., ಸ್ತ್ರೀ.).

ಕುಂತಿಯು ಸಿದ್ಧಿ ಎಂಬ ದೇವತಾಸ್ತ್ರೀಯ ಅಂಶ (ಮ.ಆ.). ಮಾದ್ರಿಯು ಕೃತಿ ಎಂಬ ದೇವತಾಸ್ತ್ರೀಯ ಅಂಶ (ಮ.ಆ.).

ಕುಂತಿಭೋಜ - ಯದುವಂಶದ ಶೂರರಾಜನ ಸೋದರತ್ತೆಯ ಮಗ: ಅತಿರಥ; ಶೂರರಾಜನ ಪುತ್ರಿ ಪೃಥೆಯನ್ನು ಈತನು ಮಗಳಾಗಿ ಸ್ವೀಕರಿಸಿದನು. ಕುಂತಿಭೋಜನ ಸಾಕುಮಗಳಾದ ಈಕೆಗೆ ಮುಂದೆ ಕುಂತಿ ಎಂಬ ಹೆಸರಾಯಿತು. ಕುಂತಿದೇಶದ ಭೋಜರಾಜನಿಗೆ ಕುಂತಿಭೋಜನೆಂದು ಹೆಸರು. ಈತನ ಹತ್ತು ಮಕ್ಕಳು ಅಶ್ವತ್ಥಾಮನಿಂದ ಹತರಾದರು. ಇವನ ವಧೆ ದ್ರೋಣನಿಂದಾಯಿತು.

(ಮ.ಆ.,ಉ.,ವ.,ದ್ರೋ.).

ಕುಂದಾಪರಾಂತ - ಒಂದು ದೇಶ (ಮ.ಭೀ.).

ಕುಪಟ - ದನು ಮತ್ತು ಕಶ್ಯಪರ ಮಗ (ಮ.ಆ.).

ಕುಬೇರ (ವೈಶ್ರವಣ) - ವಿಶ್ರವಸಮುನಿಯಿಂದ ಇಲೆಬಿಲೆ ಎಂಬ ಸ್ತ್ರೀಯಲ್ಲಿ ಜನ್ಮಿಸಿದವ. ಈತನು ಪುಲಸ್ಯ ಮಹರ್ಷಿಯಿಂದ ಗೋ ಎಂಬಾಕೆಯಲ್ಲಿ ಜನಿಸಿದವನೆಂದೂ, ವಿಶ್ರವಸ ಮುನಿಯಿಂದ ಭರಧ್ವಾಜಪುತ್ರಿ ದೇವವರ್ಣಿಯಲ್ಲಿ ಹುಟ್ಟಿದವನೆಂದೂ ಹೇಳುತ್ತಾರೆ. ಇವನ ಮೊದಲನೇ ಹೆಸರು ಸೋಮನೆಂದು. (ಕು= ಕುತ್ಸಿತವಾದ. ಬೇರ= ದೇಹವುಳ್ಳವನು.) ಇವನು ಉತ್ತರ ದಿಕ್ಕಿನ ಒಡೆಯ. ಇವನಿಗೆ ಮೊದಲು ವಿಕಾರವಾದ ದೇಹವಿದ್ದು ಸೋಮನೆಂದು ಕರೆದಮೇಲೆಯೇ ಸೌಮ್ಯವಾದ ಶರೀರವುಳ್ಳವನಾದನು. ಇದರಿಂದ ಉತ್ತರ ದಿಕ್ಕಿಗೂ ಸೌಮ್ಯವೆಂದು ಹೆಸರಿದೆ. ಈತನ ಪತ್ನಿ ಋದ್ಧಿ; ಸ್ಥಾನ ಕೈಲಾಸ; ನಗರ ಅಲಕಾ; ಮಗ ಅತ್ಯಂತ ಸುಂದರನಾದ ನಳಕೂಬರ. ಕುಬೇರನಿಗೆ ಭದ್ರೆ ಎಂಬ ಹೆಂಡತಿ ಇದ್ದಳು (ಮ.ಆ.). ನವನಿಧಿಗಳು ಈತನ ಸ್ವಾಧೀನದಲ್ಲಿದ್ದವು. ಈತನು ನರವಾಹನನು. ಈತನ ಪ್ರಜೆಗಳು ಯಕ್ಷರು, ಕಿನ್ನರರು ಮತ್ತು ಕಿಂಪುರುಷರು ಮೊದಲಾದವರು. ನೋ. - **ಕೌಶಿಕ, ಪದ್ಮಾಕ್ಷ.** ಕುಬೇರನ ಪಟ್ಟಣ ವೈರಾಜವೆಂದೂ ಉಂಟು. ರಾವಣ ಕುಂಭಕರ್ಣರು ಈತನ ಮಲತಾಯಿಯ ಮಕ್ಕಳು. ಇವರು ಕುಬೇರನನ್ನು ಲಂಕೆಯಿಂದ ಓಡಿಸಿ, ಆ ನಗರವನ್ನೂ, ಆತನ ಪುಷ್ಪಕ ವಿಮಾನವನ್ನೂ ತಮ್ಮ ಸ್ವಾಧೀನಪಡಿಸಿಕೊಂಡರು. ರಾವಣನ ವಧೆಯ ಅನಂತರ ಪುಷ್ಪಕ ವಿಮಾನವು ಶ್ರೀರಾಮನ ವಶವಾಗಿ, ಆಮೇಲೆ ಅವನಿಂದಲೇ ಕುಬೇರನ ಸ್ವಾಧೀನಕ್ಕೆ ಹೋಯಿತು. ಶಿವನ ಅನುಗ್ರಹದಿಂದ ಕೈಲಾಸದಲ್ಲಿ ಅಲಕಾನಗರವನ್ನು ನಿರ್ಮಿಸಿಕೊಂಡನು. ಇವನ ಮಂತ್ರಿ ಪ್ರಹಾಸ; ಮಣಿಮಂತ, ಮಣಿಭದ್ರ, ಮಣಿಕಂಧರ, ಮಣಿಭೂಷ ಮೊದಲಾದವರೆಲ್ಲ ಈತನ ಅನುಚರರು. ಪಾಶುಪತಾಸ್ತ್ರ ಪಡೆದ ಅರ್ಜುನನಿಗೆ ಈತನು ದಿವ್ಯಾಸ್ತ್ರಗಳನ್ನು ಕೊಟ್ಟನು. ಪಾಂಡವರು ಬದರೀಕಾಶ್ರಮದಲ್ಲಿ ಆರು ರಾತ್ರಿ ವಾಸ ಮಾಡಿದ ಮೇಲೆ ಒಂದು ದಿನ ಈಶಾನ್ಯದಿಕ್ಕಿನಿಂದ ಗಾಳಿಯು ಒಂದು ದಿವ್ಯಕಮಲವನ್ನು ಹೊತ್ತು ತಂದು ದ್ರೌಪದಿಯ ಮುಂದೆ ಕೆಡೆಯಲು ಭೀಮನು ಪತ್ನಿಯ ಸಂತೋಷಕ್ಕಾಗಿ ಆ ಸುಗಂಧ ಪುಷ್ಪವನ್ನು ಕುಬೇರನ ಅನುಚರರಿಂದ ರಕ್ಷಿಸಲ್ಪಟ್ಟ ಸರೋವರದಿಂದ ಕಿತ್ತು ತಂದುಕೊಟ್ಟನು. ಈ ಸಂದರ್ಭದಲ್ಲಿ ಅಗಸ್ತ್ಯನ ಶಾಪದಿಂದ ಕುಬೇರನ ಪಕ್ಷಕ್ಕೆ ಅಪಜಯವಾಯಿತು. (ರಾಮಾ.ಉ.,ದೇವಿಭಾ.,ಮ.ಆ.,ಸ.,ವ., ಭೀ.,ಶಾಂ.).

ಕುಬೇರತೀರ್ಥ - ಈ ತೀರ್ಥದಲ್ಲೇ ಕುಬೇರನಿಗೆ ಧನವೂ, ನಿಧಿಗಳೂ ಲಬ್ಧವಾದವು. ಇಲ್ಲೇ ಅವನಿಗೆ ಧನಾಧಿಪತ್ಯವೂ, ಶಿವನ ಸ್ನೇಹವೂ, ದಿಕ್ಪಾಲಕತ್ವವೂ ದೊರೆತುದಲ್ಲದೆ ನಳಕೂಬರನೆಂಬ ಪುತ್ರನನ್ನೂ ಪಡೆದನು. ಇಲ್ಲೇ ಇವನಿಗೆ ದಿವ್ಯ ಪುಷ್ಪಕ ವಿಮಾನವೂ, ರಾಕ್ಷಸಾಧಿಪತ್ಯವೂ ಕೊಡಲ್ಪಟ್ಟಿತು (ಮ.ಶ.).

ಕುಬ್ಜೆ - ೧. ಕಂಸನ ಅಂತಃಪುರದ ದಾಸಿ. ಬಲರಾಮ ಶ್ರೀಕೃಷ್ಣರು ಕಂಸನ ಆಮಂತ್ರಣದಂತೆ ಮಥುರೆಗೆ ಬಂದಾಗ ಈಕೆ ಮಾರ್ಗದಲ್ಲಿ ಗಂಧದ ಬಟ್ಟಲನ್ನು ಹಿಡಿದುಕೊಂಡು ಹೋಗುತ್ತಿದ್ದಳು. ಬಲರಾಮ ಶ್ರೀಕೃಷ್ಣರು ಆ ಗಂಧವನ್ನು ಆಕೆಯಿಂದ ಪಡೆದು, ಆಕೆಯ ಗೂನು ಬೆನ್ನನ್ನು ಹೋಗಲಾಡಿಸುವುದಕ್ಕಾಗಿ, ಆಕೆಯ ಪಾದವನ್ನು ಮೆಟ್ಟಿ, ಗದ್ದವನ್ನು ಮೇಲೆತ್ತಲು, ಶ್ರೀಕೃಷ್ಣನ ಹಸ್ತಸ್ಪರ್ಶದಿಂದ ಆಕೆಯ ದೇಹದ ಡೊಂಕುಗಳೆಲ್ಲ ಸರಿಯಾದವು. ಈಕೆಗೆ ತ್ರಿವಕ್ರೆ ಎಂಬ ಹೆಸರಿದೆ (ಭಾಗ.). ೨. ಶ್ರೀರಾಮನು ಸೀತೆಯೊಡನೆ ಅಂತಃಪುರದಲ್ಲಿ ಮಲಗಿರಲು ಪಿಂಗಳೆ ಎಂಬ ವೇಶ್ಯೆಯು ಸದ್ದು ಮಾಡದೆ ಅಂತಃಪುರವನ್ನು ಪ್ರವೇಶಿಸಿ, ಶ್ರೀರಾಮನ ಪಾದದ ಬಳಿಯಲ್ಲಿ ನಿಂತಳು. ಶ್ರೀರಾಮನು ಎಚ್ಚರಹೊಂದಿದೊಡನೆ ಈ ವೇಶ್ಯೆಯು ತನ್ನನ್ನು ಸಂರಕ್ಷಣೆ ಮಾಡಬೇಕೆಂದು ಪಾದಾಕ್ರಾಂತಳಾದಳು. ಆಗ ಶ್ರೀರಾಮನು ಪಿಂಗಳೆಗೆ ಮುಂದಿನ ಜನ್ಮದಲ್ಲಿ ಕಂಸನ ಅರಮನೆಯಲ್ಲಿ ಕುಬ್ಜಾ ಎಂಬ ದಾಸಿಯಾಗಿರುವಂತೆಯೂ, ಆಗ ಆಕೆಯನ್ನು ಸಂರಕ್ಷಣೆ ಮಾಡುವುದಾಗಿಯೂ ಹೇಳಿದನು. ಅಂತಃಪುರವನ್ನು ನಿಶ್ಶಬ್ದವಾಗಿ ಪ್ರವೇಶಿಸಿದುದರಿಂದ ಸೀತೆಯು ಕೋಪಗೊಂಡು 'ಮುಂದಿನ ಜನ್ಮದಲ್ಲಿ ನಿನ್ನ ದೇಹ ಮೂರು ಡೊಂಕಾಗಲಿ' ಎಂದು ಶಾಪವಿತ್ತಳು. ಇದರಿಂದ ದುಃಖಿಗೊಂಡ ಪಿಂಗಳೆಯು ಸೀತೆಯನ್ನು ಬಹುವಿಧವಾಗಿ ಪ್ರಾರ್ಥಿಸಿದುದರಿಂದ ಆಕೆಯು - 'ಶ್ರೀಕೃಷ್ಣನು ನಿನ್ನನ್ನು ಉದ್ಧರಿಸುವನು' ಎಂದಳು (ಅನಂ.ರಾ.).

ಕುಮಾರ - ನೋ. ಕಾರ್ತಿಕೇಯ. ೧. ಭಾರತಭೂಮಿಯ ಒಂದು ದೇಶ; ಪಾಂಡವರ ಕಾಲದಲ್ಲಿ ಶ್ರೇಣಿಮಂತನೆಂಬ ರಾಜನು ಇಲ್ಲಿ ಆಳುತ್ತಿದ್ದನು. ರಾಜಸೂಯಯಾಗ ಕಾಲದಲ್ಲಿ ಇಲ್ಲಿಗೆ ಬಂದ ಭೀಮನು ಇವನನ್ನು ಗೆದ್ದನು. (ಮ.ಸ.). ೨. ಗರುಡನ ಒಬ್ಬ ಮಗ. ೩. ಅಂಗಾರಕ ಗ್ರಹದ ಇನ್ನೊಂದು ಹೆಸರು. (ಮ.ಸ.,ಉ.).

ಕುಮಾರಧಾರೆ - ದಕ್ಷಿಣ ಕನ್ನಡದ ಒಂದು ಪುಣ್ಯನದಿ; ಇದು ಪಶ್ಚಿಮಘಟ್ಟದ ಕುಮಾರಪರ್ವತದಲ್ಲಿ ಹುಟ್ಟಿ, ಉಪ್ಪಿನಂಗಡಿಯಲ್ಲಿ ನೇತ್ರಾವತಿ ನದಿಯನ್ನು ಸೇರಿ ಮುಂದೆ ಅರಬೀಸಮುದ್ರಕ್ಕೆ ಸಂಗಮವಾಗುವುದು. ಇದು ಹುಟ್ಟುವ ಸ್ಥಳದ ಸಮೀಪದಲ್ಲೇ ಸುಬ್ರಹ್ಮಣ್ಯ ಕ್ಷೇತ್ರವಿದೆ. ದೇವತೆಗಳ ಸೇನಾನಿಯಾದ

ಕುಮಾರಸ್ವಾಮಿಯ ಪಟ್ಟಾಭಿಷೇಕದ ಪವಿತ್ರ ಜಲದಿಂದ ಉತ್ಪತ್ತಿಯಾದ ನದಿ. ಈ ನದಿಯಲ್ಲಿ ಶ್ರೀಕೃಷ್ಣನ ಪುತ್ರನಾದ ಸಾಂಬನು ಮಿಂದು ತನ್ನ ಕುಷ್ಠರೋಗವನ್ನು ಪರಿಹರಿಸಿಕೊಂಡನು (ಮ.ವ.,ಕ್ಷೇತ್ರದ.).

ಕುಮಾರವನ - ಕುಮಾರಸ್ವಾಮಿ ಹುಟ್ಟಿದ ವನ. ಇದು ಗಂಗಾತೀರದಲ್ಲಿದೆ. ಪಾರ್ವತೀಪರಮೇಶ್ವರರ ವಿಲಾಸಗಳಿಗೆ ಕೆಲವು ಋಷಿಗಳು ತೊಂದರೆ ಯನ್ನುಂಟುಮಾಡಿದುದರಿಂದ ಪಾರ್ವತಿಯು, ಈ ವನ ಹೊಕ್ಕವರೆಲ್ಲಾ ಸ್ತ್ರೀಯರಾಗುವಂತೆ ಶಾಪವಿತ್ತಳು (ಹರಿ., ವಾಯುಪು., ಮತ್ಸ್ಯಪು., ಭಾಗ.). ಊರ್ವಶಿಯನ್ನಗಲಿದ ಪುರೂರವನು ಈ ವನದಲ್ಲಿ ಬಹಳ ಕಾಲದವರೆಗೆ ಅಲೆದಾಡುತ್ತಿದ್ದನು (ವಾಯುಪು.).

ಕುಮಾರಿ - ೧. ಒಂದು ನದಿ. ೨. ಭರತಚಕ್ರವರ್ತಿಯ ಮಗಳು; ಮಹಾಕಾಲನೆಂಬ ಸಿದ್ಧನ ಪತ್ನಿ; ಈಕೆ ತನ್ನ ಎಂಟು ಮಂದಿ ಅಣ್ಣಂದಿರ ಎಪ್ಪತ್ತೆರಡು ಮಂದಿ ಮಕ್ಕಳಿಗೆ ಅವರ ರಾಜ್ಯವನ್ನು ಚಿತ್ರದಲ್ಲಿ ಬಿಡಿಸಿದಂತೆ ಕ್ರಮವಾಗಿ ಹಂಚಿದುದರಿಂದ ಪಾರ್ವತೀದೇವಿಯು ಈಕೆಯ ಚಾತುರ್ಯಕ್ಕೆ ಮೆಚ್ಚಿ ಈಕೆಯನ್ನು ತನ್ನ ಗೆಳತಿಯನ್ನಾಗಿ ಮಾಡಿಕೊಂಡಳು. ೩. ಕನ್ಯಾಕುಮಾರಿ ಭೂಶಿರದ ಹೆಸರು (ಮತ್ಸ್ಯಪು.). ೪. ದುರ್ಗಿ.

ಕುಮುದ - ಸರಯೂ ನದಿಯಲ್ಲಿದ್ದ ಒಂದು ಸರ್ಪ. ಶ್ರೀರಾಮನ ಮಗನಾದ ಕುಶನ ಆಭರಣವು ನೀರಿಗೆ ಬೀಳಲು, ಅದನ್ನು ಈ ಸರ್ಪವು ಅಪಹರಿಸಲು, ಕುಶನು ಗರುಡ ಬಾಣವನ್ನೆಸೆಯಲು ಸಿದ್ಧನಾದಾಗ ಸರ್ಪವು ಆ ಬಾಣಕ್ಕೆ ಹೆದರಿ ಆಭರಣಗಳನ್ನು ತಂದುಕೊಟ್ಟಿತು. ಈ ಸರ್ಪನು ತಕ್ಷಕನ ಐದನೆಯ ಮಗ; ಇವನು ಕುಶನಿಗೆ ತನ್ನ ಸೋದರಿಯಾದ ಕುಮುದ್ವತಿಯನ್ನು ವಿವಾಹ ಮಾಡಿಕೊಟ್ಟನು (ರ.ವಂ.). ೨. ನೈಋತ್ಯ ದಿಕ್ಕಿನ ದಿಗ್ಗಜ. ೩. ಸುಗ್ರೀವನ ಒಬ್ಬ ಸೇನಾಪತಿ. ೪. ಒಂದು ಪರ್ವತ. ೫. ಗರುಡನ ಒಬ್ಬ ಮಗ. ನೋ. - ರೇವತಿ (ರಾಮಾ. ಯುದ್ಧ.,ಭಾಗ.).

ಕುಮುದ್ವತಿ - ೧. ಕುಮುದನೆಂಬ ಸರ್ಪನ ಸೋದರಿ; ಕುಶನ ಹೆಂಡತಿ: ನೋ. - ಕುಮುದ. ಈಕೆಯ ಮಗನೇ ಅತಿಥಿ (ರ.ವಂ.). ೨. ಮಯೂರಧ್ವಜನ ಹೆಂಡತಿ. ತಾಮ್ರಧ್ವಜನ ತಾಯಿ (ಜೈ.ಭಾ.).

ಕುಂಭ - ೧. ಪ್ರಹ್ಲಾದನ ಮಗ. ೨. ಕುಂಭಕರ್ಣನ ಮಗ; ಭಯಂಕರನಾದ ಮೇನೆಯಿಂದ -- ದರಿದ್ರನು, ಮನೆಯಿಲ್ಲದವನೆಂದು ಅವಹೇಳನವಾಗಲು, ಪಾರ್ವತಿಗೆ ಇದನ್ನು ಕೇಳಿ ಬೇಸರವಾಗಿ ಗಂಡನೊಡನೆ ಹೇಳಿದಳು. ಶಿವನು

ಕಾಶೀರಾಜನಾದ ದಿವೋದಾಸನನ್ನು ಅಲ್ಲಿಂದ ಯುಕ್ತಿಯಿಂದ ಹೊರಡಿಸುವಂತೆ ಸೂಚಿಸಿದನು. ಕುಂಭನು ಉಪಾಯದಿಂದ ಆ ರಾಜನನ್ನು ಆ ಪಟ್ಟಣದಿಂದ ಹೊರಡಿಸಲು ಶಿವನು ಕಾಶಿಯಲ್ಲಿ ಬಂದು ನಿಂತನು. ಆಮೇಲೆ ಕಾಶಿಯು ಪ್ರಸಿದ್ಧ ಕ್ಷೇತ್ರವಾಯಿತು (ಕ್ಷೇತ್ರದ.). ೪. ದಕ್ಷಿಣಕನ್ನಡದ ಸಪ್ತಕ್ಷೇತ್ರಗಳಲ್ಲಿ ಒಂದಾದ ಕುಂಭಾಸಿಯಲ್ಲಿದ್ದ (ಕುಂಭಕಾಸಿ) ರಾಕ್ಷಸನೊಬ್ಬ. ಈತನನ್ನು ಗಣಪತಿಯ ಅನುಗ್ರಹದಿಂದ ಭೀಮನು ಕೊಂದನು. ಈಗಲೂ ಇಲ್ಲಿ ಪ್ರಸಿದ್ಧವಾದ ಗಣಪತಿಯ ದೇವಾಲಯವಿದ್ದು, ಈ ಸ್ಥಳವನ್ನು ಆನೆಗುಡ್ಡ ಎನ್ನುತ್ತಾರೆ. (ರಾಮಾ.ಯುದ್ಧ.,ಹರಿ.,ಕುಂ.ಮ.).

ಕುಂಭಕರ್ಣ - ರಾವಣನ ಸಹೋದರನಾದ ರಾಕ್ಷಸನೊಬ್ಬ; ಈತನ ತಂದೆ ಪುಲಸ್ತ್ಯನ ಮಗನಾದ ವಿಶ್ರವಸು; ತಾಯಿ ಕೈಕಸೆ; ರಾವಣ ಮತ್ತು ವಿಭೀಷಣರು ಈತನ ಸಹೋದರರು; ಈತನ ಪತ್ನಿ ಬಲಿಚಕ್ರವರ್ತಿಯ ಮಗಳಾದ ವೃತ್ರಜ್ವಾಲೆ; ಮಕ್ಕಳು ಕುಂಭ, ನಿಕುಂಭರು; ಕುಂಭನು ಸುಗ್ರೀವನಿಂದಲೂ, ನಿಕುಂಭನು ಆಂಜನೇಯನಿಂದಲೂ ಹತರಾದರು. ಕುಂಭಕರ್ಣನು ಗೋಕರ್ಣದಲ್ಲಿ ಬ್ರಹ್ಮನನ್ನು ಕುರಿತು ಘೋರ ತಪಸ್ಸುಮಾಡಿ ನಿರ್ದೇವತ್ವನನ್ನು ಆತನಿಂದ ಕೇಳುವ ಬದಲಾಗಿ ದೇವತೆಗಳ ಯುಕ್ತಿಯಿಂದ ನಿದ್ರೆಯನ್ನು ಪ್ರಾರ್ಥಿಸಿದನು. ಆ ವರದಂತೆ ಈತನಿಗೆ ಹನುಮಂತನಿಂದ ಲಂಕಾದಹನವಾದ ಮೇಲೆ ಎಚ್ಚರವಾಯಿತು. ಮುಂದೆ ರಾವಣನ ಬಂಧುಬಳಗದವರಲ್ಲಿ ಹೆಚ್ಚಿನ ಮಂದಿ ಯುದ್ಧರಂಗದಲ್ಲಿ ಹತರಾಗಲು ಆತನು ಕುಂಭಕರ್ಣನನ್ನು ಪ್ರಯಾಸದಿಂದ ಎಚ್ಚರಗೊಳಿಸಿದನು. ಅವನು ಸೀತಾಪಹರಣಮಾಡಿದ ಅಣ್ಣನನ್ನು ತಿರಸ್ಕರಿಸಿ, ಯುದ್ಧರಂಗದಲ್ಲಿ ಶ್ರೀರಾಮನಿಂದ ಹತನಾದನು (ರಾಮಾ.ಯುದ್ಧ.).

ಕುಂಭಕರ್ಣನು ಪುಷ್ಪೋತ್ಕಟೆಯ ಮಗ; ಲಕ್ಷ್ಮಣನಿಂದ ಹತನಾದ (ಮ.ಅ.).

ಕುಂಭಕಾರ - ಮಡಕೆ ಮಾಡುವ ಕುಂಬಾರ; ಏಕಚಕ್ರನಗರದ ಈತನು ಭೀಮನಿಗೆ ಒಂದು ದೊಡ್ಡ ಮಣ್ಣಿನ ಹರವಿಯೊಂದನ್ನು ಮಾಡಿಕೊಟ್ಟನು. ಭೀಮನು ಇದನ್ನು ಹಿಡಿದುಕೊಂಡೇ ಭಿಕ್ಷಾಟನೆ ಮಾಡುತ್ತಿದ್ದನು. ದ್ರೌಪದಿಯ ಸ್ವಯಂವರದ ಕಾಲದಲ್ಲೂ ಪಾಂಡವರು ಕುಂಬಾರಕೊಟ್ಟಿಗೆಯಲ್ಲೇ ವಾಸ್ತವ್ಯವಿಟ್ಟಿದರು (ಮ.ಆ.).

ಕುಂಭೋದರ - ಶ್ರೀರಾಮನನ್ನು ಯಾತ್ರಾರ್ಥಿಯಾಗುವಂತೆ ಮಾಡಿದ ಬ್ರಾಹ್ಮಣ (ಆನಂ.ರಾ.).

ಕುಂಭಯೋನಿ - ಅಗಸ್ತ್ಯ. ನೋ. - ವಸಿಷ್ಠ, ದ್ರೋಣ.

ಕುಂಭರೇತ - ಅಗ್ನಿವಿಶೇಷ (ಮ.ವ.).

ಕುಂಭಾಂಡ - ಬಾಣಾಸುರನ ಮಂತ್ರಿ; ಈತನ ಮಗಳಾದ ಚಿತ್ರಲೇಖೆಯು ಬಾಣಾಸುರನ ಮಗಳಾದ ಉಷೆಯ ಗೆಳತಿ. ಚಿತ್ರಲೇಖೆಯು ಗುಪ್ತವಾಗಿ ಶ್ರೀಕೃಷ್ಣನ ಮೊಮ್ಮಗನಾದ ಅನಿರುದ್ಧನನ್ನು ಉಷೆಯ ಅಂತಃಪುರಕ್ಕೆ ತಂದಳು. ನೋ. - ಉಷೆ, ಅನಿರುದ್ಧ (ಭಾಗ.).

ಕುಂಭೀನಸಿ - ೧. ಚಿತ್ರರಥನೆಂಬ ಗಂಧರ್ವನ ಪತ್ನಿ; ವಿಶ್ವಾವಸು ಗಂಧರ್ವನ ಪುತ್ರಿ; ಮಧುವೆಂಬ ರಾಕ್ಷಸನು ಇವಳನ್ನು ಕದ್ದೊಯ್ದು ಪತ್ನಿಯನ್ನಾಗಿ ಮಾಡಿಕೊಂಡನು. ಪಾಂಡವರು ಪಾಂಚಾಲಕ್ಕೆ ಹೋಗುತ್ತಿರುವಾಗ ಈಕೆಯೊಡನೆ ಚಿತ್ರರಥನು ಜಲಕ್ರೀಡೆಯಾಡುತ್ತಿದ್ದನು (ಮ.ಆ.). ೨.ವಿರೋಚನನ ಮಗನಾದ ಬಲಿಯ ಮಗಳು; ಬಾಣಾಸುರನ ಸಹೋದರಿ. ೩.ವಿಶ್ರವಸು, ಪುಷ್ಪೋತ್ಕಟೆಯರ ಮಗಳು; ರಾವಣ, ಕುಂಭಕರ್ಣರ ಸಹೋದರಿ. ೪. ಲವಣಾಸುರನ ತಾಯಿ; ಮಧುವೆಂಬ ರಾಕ್ಷಸನ ಪತ್ನಿ; ವಿಶ್ವಾವಸು ಮತ್ತು ಅನತಿಯರು ಈಕೆಯ ತಂದೆತಾಯಿಗಳು. ಮಧುವು ವಾಸಮಾಡಿದ ಅರಣ್ಯ ಮಧುವನ. ೫. ರಾವಣನ ತಾಯಿಯಾದ ಕೈಕಸೆಯ ತಂಗಿ. ನೋ. - ಮಾಲಿ (ಲಿಂಗಪು., ಮ.ಆ., ರಾಮಾ.ಉ., ಮತ್ಸ್ಯಪು.).

ಕುಂಭೀಪಾಕ - ನರಕವಿಶೇಷ (ಭಾಗ., ಮಾರ್ಕಂಪು.).

ಕುರು - ೧. ಕ್ಷತ್ರಿಯ; ಚಂದ್ರವಂಶದ ಸಂವರಣನ ಮಗ. ಈತನ ತಾಯಿ ತಪತಿ. ಪತ್ನಿ ಶುಭಾಂಗಿ; ಮಗ ವಿಡೂರಥ; ಇನ್ನೊಬ್ಬಳು ಪತ್ನಿ ವಾಹಿನಿ; ಈಕೆಗೆ ಅಶ್ವವಂತ, ಅಭಿಷ್ಯಂತ, ಚೈತ್ರರಥ, ಮುನಿ, ಜನಮೇಜಯರೆಂಬ ಐವರು ಮಕ್ಕಳು. ೨. ಆಗ್ನೀಧ್ರರಾಜ ಮತ್ತು ಪೂರ್ವಚಿತ್ತಿ ಎಂಬ ಅಪ್ಸರೆಯ ಮಗ. ಆಗ್ನೀಧ್ರರಾಜನು ತನ್ನ ರಾಜ್ಯವನ್ನು ಒಂಬತ್ತು ಖಂಡಗಳಾಗಿ ಮಾಡಿ ಒಂಬತ್ತು ಮಕ್ಕಳಿಗೆ ಕ್ರಮವಾಗಿ ಹಂಚಿದನು. ಏಳನೆಯವನಾದ ಕುರುವಿನ ರಾಜ್ಯಕ್ಕೆ ಕುರುವರ್ಷವೆಂದು ಹೆಸರು. ಇದಕ್ಕೆ ಉತ್ತರಕುರು ಎಂದೂ ಹೇಳುತ್ತಾರೆ. ೩.ಚಂದ್ರವಂಶದ ರಾಜರಾಳಿದ ದೇಶ ಹಸ್ತಿನಾವತಿ ಮತ್ತು ಇಂದ್ರಪ್ರಸ್ಥಗಳು ಇದರ ಮುಖ್ಯಪಟ್ಟಣಗಳು (ಮ.ಆ.,ವಿ., ಮತ್ಸ್ಯಪು.).

ಕುರುಕ್ಷೇತ್ರ - ಸರಸ್ವತೀ ಮತ್ತು ದೃಷದ್ವತೀ ನದೀತೀರದಲ್ಲಿ ಕುರುರಾಜನಿಂದ ನಿರ್ಮಿತವಾದ ಕ್ಷೇತ್ರ. ಇಲ್ಲಿ ಈತನ ಯಾಗಶಾಲೆಯಿತ್ತು. ಭಾರತ ಯುದ್ಧವು ಇಲ್ಲೇ ನಡೆಯಿತು. ತರಂತುಕ, ಆರಂತುಕ, ರಾಮಹ್ರದ ಮತ್ತು

ಮಚುಕ್ರಕಗಳೆಂಬ ನಾಲ್ಕು ಗಡಿಗಳ ನಡುವೆ ಈ ಕ್ಷೇತ್ರವಿದೆ. ಇದು ಎಪ್ಪತ್ತು ಮೈಲು ಉದ್ದ, ಮೂವತ್ತು ಮೈಲು ಅಗಲವಿದೆ. ದೆಹಲಿಯಿಂದ ನೂರು ಮೈಲು ಉತ್ತರದಲ್ಲಿರುವ ಕರ್ನಾಲು ಜಿಲ್ಲೆಯಲ್ಲಿ ಈಗ ಇದು ಒಂದು ರೈಲ್ವೆ ನಿಲ್ದಾಣವಾಗಿದೆ. ಸ್ವಾಯಂಭುವ ಮನುವಿನ ಕಾಲದಲ್ಲಿ ಇದಕ್ಕೆ ಬ್ರಹ್ಮಾವರ್ತವೆಂಬ ಹೆಸರಿತ್ತು. ಈ ಕ್ಷೇತ್ರದಲ್ಲಿ ಸುಮಾರು ೩೫೦ ರವರೆಗೆ ದೇವಸ್ಥಾನಗಳಿವೆ. ಈ ದೇವಸ್ಥಾನಗಳೆಲ್ಲ ಭಾರತಯುದ್ಧದ ಸ್ಮಾರಕಗಳಾಗಿವೆ. ಇಲ್ಲಿಯ ಮುಖ್ಯದೇವತೆ ಸ್ಥಾನೇಶ್ವರ. ಆದುದರಿಂದ ಈಗ ಸ್ಥಾನೇಶ್ವರದ ಬಯಲು ಎನ್ನುವುದೂ ಇದೆ. ಇಲ್ಲಿ ಧರ್ಮಕ್ಷೇತ್ರ ಮತ್ತು ಕುರುಕ್ಷೇತ್ರಗಳೆಂಬ ಎರಡು ಭಾಗಗಳಿವೆ. ಧರ್ಮಕ್ಷೇತ್ರದಲ್ಲಿ ಪಾಂಡವ, ಕೌರವ ಶಿಬಿರಗಳಿದ್ದು ಕುರುಕ್ಷೇತ್ರವಿಭಾಗದಲ್ಲಿ ಮಾತ್ರ ಯುದ್ಧ ನಡೆಯಿತು. ಧರ್ಮಕ್ಷೇತ್ರದಲ್ಲಿ ಸ್ಯಮಂತ, ಪಂಚಕಗಳೆಂಬ ಸರೋವರಗಳಿವೆ. ಇಲ್ಲೇ ಪಾಂಡವರು ಯುದ್ಧದಲ್ಲಿ ಮಡಿದ ತಮ್ಮ ಬಂಧುಗಳಿಗೆ ತಿಲಾಂಜಲಿಯನ್ನಿತ್ತರು. ಸ್ಯಮಂತ ಪಂಚಕದಲ್ಲಿ ಒಂದು, ಒಂದು ಮೈಲು ಉದ್ದ ಮುಕ್ಕಾಲು ಮೈಲು ಅಗಲವಾಗಿದ್ದು, ಅದರ ಮೂರು ದಿಕ್ಕಿಗೆ ಘಾಟುಗಳಿದ್ದು ಸುತ್ತಲೂ ದೊಡ್ಡ ದೊಡ್ಡ ದೇವಮಂದಿರಗಳಿವೆ. ಇದರ ನಡುವೆ ಶ್ರೀಕೃಷ್ಣನ ಭವ್ಯಮಂದಿರವಿದೆ. ಮಂದಿರಕ್ಕೆ ಹೋಗಲು ಕೆರೆಯ ನಡುವೆ ಪೂಲು ಇದೆ. ಇಲ್ಲಿರುವ ಲಕ್ಷ್ಮೀತೀರ್ಥದ ಹತ್ತಿರವೇ ಶ್ರೀಕೃಷ್ಣನು ಅರ್ಜುನನಿಗೆ ಗೀತೋಪದೇಶವನ್ನು ಮಾಡಿದನೆನ್ನುತ್ತಾರೆ. ಈ ಸ್ಥಳದಲ್ಲೇ ಯೋಗೀಶ್ವರ ದೇವಾಲಯವಿದೆ (ಕ್ಷೇತ್ರದ).

ಇಲ್ಲಿ ಭಾರತಯುದ್ಧವು ಹೇಮಂತ ಋತುವಿನ ಪ್ರಥಮ ಮಾಸವಾದ ಮಾರ್ಗಶೀರ್ಷದಲ್ಲಿ ತ್ರಯೋದಶಿ ತಿಥಿಯೊಡಗೂಡಿದ ಚತುರ್ದಶಿಯಲ್ಲಿ ಯುದ್ಧಾರಂಭವಾಗಿ ಅದಕ್ಕೆ ಹತ್ತನೇ ದಿನವಾದ ಅಷ್ಟಮಿಯಲ್ಲಿ ಭೀಷ್ಮವಧವೂ, ಹದಿನೈದನೆಯದಾದ ತ್ರಯೋದಶಿಯಲ್ಲಿ ದ್ರೋಣವಧವೂ, ಅಲ್ಲಿಂದಾಚೆಗೆ ಮೂರು ದಿನಗಳಿಗೆ ಅಂದಿನ ಪಾದ್ಯದೊಡಗೂಡಿದ ಅಮಾವಾಸ್ಯೆಯಲ್ಲಿ ದುರ್ಯೋಧನ ವಧವೂ ನಡೆಯಿತು (ಮ.ಭೀ.,ವ.,ಆ.).

ಕುರುಜಾಂಗಲ - ಕುರುದೇಶದ ಪಶ್ಚಿಮದಲ್ಲಿ ಅರಣ್ಯಗಳಿರುವ ಪ್ರಾಂತ; ಇದು ಹಸ್ತಿನಾಪುರದ ವಾಯುವ್ಯದಲ್ಲಿದೆ. ಇದು ದಿಲ್ಲಿಯ ಈಶಾನ್ಯಕ್ಕಿದೆ. ಇದು ಕುರುಗಳ ರಾಜಧಾನಿಯಾಗಿತ್ತು (ಮ.ಆ.).

ಕುರುಪಾಂಚಾಲ - ಕುರುದೇಶಕ್ಕೆ ಪಶ್ಚಿಮದಲ್ಲಿದ್ದ ಪ್ರಾಂತ. ಇದು ದ್ರುಪದನ ಆಳುವಿಕೆಗೆ ಒಳಪಟ್ಟಿತ್ತು (ಮ.ಭೀ.).

ಕುರುವರ್ಷ - ನೋ. ಕುರು.

ಕುಲಪತಿ - ೧. ಹತ್ತು ಸಾವಿರ ಮಂದಿ ವಿದ್ಯಾರ್ಥಿಗಳಿಗೆ ಅನ್ನಬಟ್ಟೆಗಳನ್ನು ಕೊಟ್ಟು ವಿದ್ಯಾಭ್ಯಾಸ ಮಾಡಿಸುವವನು. ಮಾಲಿನೀ ನದೀತೀರದ ಕಣ್ವಮಹರ್ಷಿಯೊಬ್ಬ ಕುಲಪತಿ. ಕಣ್ವನು ಹಿಮವತ್ಪಾರ್ಶ್ವದ ಬ್ರಹ್ಮಾಶ್ರಮದಲ್ಲಿದ್ದ ಒಬ್ಬ ಋಷಿ. ೨.ಶೌನಕ ಮಹರ್ಷಿಯೂ ಒಬ್ಬ ಕುಲಪತಿಯಾಗಿದ್ದ (ಮ.ಆ.,ಅನು.).

ಕುಲಪರ್ವತ - ಮಹೇಂದ್ರ, ವಲಯ, ಸಹ್ಯ, ಶುಕ್ತಿಮಾನ್, ಋಕ್ಷವಾನ್, ವಿಂಧ್ಯ, ಪಾರಿಯಾತ್ರ ಎಂಬ ಏಳು ಪರ್ವತಗಳು (ಮ.ಭೀ.).

ಕುಲಿಂಗ - ೧. ದುರ್ಯೋಧನನ ಬ್ರಾಹ್ಮಣ ಮಂತ್ರಿಯೊಬ್ಬ; ಈತನಿಗೆ ಕಣಿಕನೆಂಬ ಹೆಸರಿದೆ. ೨. ಒಂದು ದೇಶ; ಅರ್ಜುನನು ರಾಜಸೂಯಯಾಗ ಕಾಲದಲ್ಲಿ ಇದನ್ನು ಜಯಿಸಿದನು (ಮ.ಆ.,ಸ.).

ಕುಳಿಂಗಶಕುನಿ - ನುಡಿಯನ್ನು ಮೀರಿದ ಸಾಹಸವುಳ್ಳ ಪಕ್ಷಿ. ಇದು 'ಸಾಹಸಕಾರ್ಯವನ್ನು ಮಾಡಬೇಡ' ಎಂದು ಎಲ್ಲರಿಗೂ ಕೂಗಿ ಹೇಳುತ್ತಿದ್ದರೂ, ತಾನು ಸಿಂಹದ ಕೋರೆಹಲ್ಲುಗಳಲ್ಲಿ ಸಿಕ್ಕಿದ್ದ ಮಾಂಸದ ಚೂರುಗಳನ್ನು ಕಿತ್ತು ತಿನ್ನುವುದು (ಮ.ಸ.).

ಕುಳಿಂದ - ೧. ಕೇಕಯದೇಶದ ದಕ್ಷಿಣದಲ್ಲಿ, ಕುರುಕ್ಷೇತ್ರದ ಉತ್ತರದಲ್ಲೂ ಇರುವ ಸರಸ್ವತೀ ನದೀತೀರದ ದೇಶ. ದಿಲ್ಲಿಯ ಉತ್ತರಕ್ಕಿರುವ ಈಗಿನ ಶಹರಾನ್‌ಪುರ ಜಿಲ್ಲೆ (ಮ.ಸ., ಭೀ .). ೨. ಬೇಡರ ದೊರೆ; ಚಂದ್ರಹಾಸನ ಸಾಕುತಂದೆ. ಈತನ ಪತ್ನಿ ಮೇಧಾವಿನಿ; ಪಟ್ಟಣ ಚಂದನಾವತಿ. ಇವನು ಬೇಟೆಗೆ ಹೋಗಿದ್ದಾಗ ಕಾಡಿನಲ್ಲಿ ಚಂಡಾಲರು ಬಿಟ್ಟುಹೋಗಿದ್ದ ಬಾಲಕನು ಈತನ ಪುಣ್ಯದಿಂದ ದೊರೆತನು. ನೋ. - ಚಂದ್ರಹಾಸ (ಜೈ. ಭಾ.).

ಕುವಲಯಾಪೀಡ - ಸಾವಿರ ಆನೆಗಳಷ್ಟು ಬಲವುಳ್ಳ ಕಂಸನ ಒಂದು ಆನೆ. ಕಂಸನು ಬಲರಾಮಕೃಷ್ಣರನ್ನು ಮಧುರೆಗೆ ಬರಲು ಆಮಂತ್ರಿಸಿ, ಅವರಿಬ್ಬರನ್ನೂ ಕೊಲ್ಲಲು ಆ ಆನೆಯ ಮಾವುತನಿಗೆ ಸೂಚಿಸಿದ್ದ. ಶ್ರೀಕೃಷ್ಣನು ಇದರೊಡನೆ ಹೋರಾಡಿ ಕೊಂದನು (ಭಾಗ.).

ಕುವಲಾಶ್ವ (ಕುವಲಯಾಶ್ವ) - ೧. ಕ್ಷತ್ರಿಯ; ಸೂರ್ಯವಂಶದ ಬೃಹದಶ್ವನ ಮಗ. ಇವನಿಗೆ ಧುಂಧುಮಾರನೆಂಬ ಹೆಸರಿದೆ. ಈತನಿಗೆ ದೃಢಾಶ್ವ, ಕಪಿಲಾಶ್ವ, ಭದ್ರಾಶ್ವರೆಂಬ ಮೂವರು ಮಕ್ಕಳು. ಮಧುಕೈಟಭರ ಮಗನಾದ ಧುಂಧು ಬ್ರಹ್ಮನಿಂದ ವರ ಪಡೆದು ದೇವತೆಗಳನ್ನೂ, ಉತ್ತಂಕ ಮಹರ್ಷಿಯನ್ನೂ ಬಾಧಿಸುತ್ತಾ ಅವನ ಆಶ್ರಮದ ಸಮೀಪವಿದ್ದ ವಿಜ್ವಾಲಕವೆಂಬ ಮರಳುಭೂಮಿಯಲ್ಲಿ ಅಡಗಿರಲು ಕುವಲಾಶ್ವರಾಯನು ಉತ್ತಂಕನ

ಪ್ರೇರಣೆಯಿಂದ ತನ್ನ ಇಪ್ಪತ್ತೊಂದು ಸಾವಿರ ಮಕ್ಕಳೊಡನೆ ಭೂಮಿಯನ್ನು ಅಗೆದು ಆ ರಾಕ್ಷಸನನ್ನು ಕೊಂದನು (ಮ.ವನ.). ೨. ಗಾಲವ ಮುನಿಯನ್ನು ಪಾತಾಳಕೇತುವೆಂಬ ರಕ್ಕಸನು ಬಾಧಿಸುತ್ತಿರಲು ಅವನು ಬೃಹದಶ್ವನ ಮಗ ಋತಧ್ವಜನಿಗೆ ತಿಳಿಸಲು ಅವನು ದೇವತೆಗಳಿತ್ತ ಕುವಲಯಾಶ್ವವನ್ನು (ಕುವಲಯ ಬಣ್ಣದ ಕುದುರೆ) ಹತ್ತಿ ಪಾತಾಳಕೇತುವನ್ನು ಬೆನ್ನಟ್ಟಿದನು. ಆ ರಾಕ್ಷಸನು ಹಂದಿಯ ರೂಪದಿಂದ ಓಡಿಹೋಗಲು ರಾಜನು ಅವನನ್ನು ಬೆನ್ನಟ್ಟಿದನು. ಮಾರ್ಗದಲ್ಲಿ ಆ ರಾಕ್ಷಸನು ಸೆರೆಯಿಟ್ಟ ಕುಂಡಲೆ ಮತ್ತು ಆಕೆಯ ತಂಗಿ ಮದಾಲಸೆಯನ್ನು ವಿವಾಹವಾದನು (ಮಾರ್ಕಂ.ಪು.,ಮ.ವ.,ಹರಿ.,ಬ್ರಹ್ಮಪು., ವಾಯುಪು.,ಭಾಗ.).

ಕುಶ - ೧. ನೋ. - ಕುಶಿಕ. ಇಂದಿನ ಓಸ್ಕಾನಿಯಾ ಪ್ರದೇಶ; ಸಪ್ತದ್ವೀಪಗಳಲ್ಲೊಂದು. ಹಿರಣ್ಯರೇತನು ಆಳುತ್ತಿದ್ದ ದ್ವೀಪ. ನೋ. - ಶಕ. ೨.ಗರ್ಭಿಣಿಯಾದ ಸೀತೆಯನ್ನು ಶ್ರೀರಾಮನು ಮಡಿವಾಳನ ಮಾತಿಗೆ ಬೇಸತ್ತು ಅರಣ್ಯಕ್ಕಟ್ಟಲು, ಅಲ್ಲಿ ಆಕೆಯು ವಾಲ್ಮೀಕಿ ಮುನಿಯ ಆಶ್ರಮವನ್ನು ಸೇರಿ ಕುಶಲವರೆಂಬ ಇಬ್ಬರು ಮಕ್ಕಳನ್ನು ಪಡೆದಳು. ಆ ಮಕ್ಕಳಿಗೆ ವಾಲ್ಮೀಕಿಯೇ ನಾಮಕರಣಮಾಡಿ ೨೪,೦೦೦ ಶ್ಲೋಕಗಳುಳ್ಳ ರಾಮಾಯಣವನ್ನು ಚೆನ್ನಾಗಿ ಹಾಡಲು ಹೇಳಿಕೊಟ್ಟನು. ಇತ್ತ ಶ್ರೀರಾಮನು ಅಶ್ವಮೇಧ ದೀಕ್ಷೆಯನ್ನು ಕೈಗೊಂಡು ಕುದುರೆಯು ವಾಲ್ಮೀಕಿಯ ಆಶ್ರಮಕ್ಕೆ ಬಂದಾಗ ಲವನು ಅದನ್ನು ಕಟ್ಟಿದನು. ಆಗ ವಾಲ್ಮೀಕಿ ಮಹರ್ಷಿಗಳು ವರುಣನ ಯಜ್ಞವೊಂದಕ್ಕೆ ಪಾತಾಳಕ್ಕೆ ಹೋಗಿದ್ದರು. ಶತ್ರುಘ್ನನು ಲವನನ್ನು ಮೂರ್ಛೆ ಕೆಡಹಿ, ಕುದುರೆ ಮತ್ತು ಲವನೊಂದಿಗೆ ಅಯೋಧ್ಯೆಯ ಕಡೆಗೆ ತಿರುಗಿದನು. ಆಗ ಸಮಿತ್ತು ಫಲಪುಷ್ಪಗಳಿಗೆ ಹೋಗಿದ್ದ ಕುಶನು ಹಿಂದಿರುಗಿ, ಶತ್ರುಘ್ನನನ್ನು ತಡೆದು, ಅವನನ್ನು ನೆಲಕ್ಕೆ ಕೆಡವಿ, ತಮ್ಮನನ್ನು ಬಿಡಿಸಿಕೊಂಡನು. ಮುಂದೆ ಕುದುರೆಯನ್ನು ಬಿಡಿಸಲು ಬಂದ ಲಕ್ಷ್ಮಣ, ಭರತ, ಶ್ರೀರಾಮರು ಮಕ್ಕಳ ಪರಾಕ್ರಮಕ್ಕೆ ಸೋತು ನೆಲಕ್ಕೊರಗಿದರು. ಅಷ್ಟರಲ್ಲಿ ವಾಲ್ಮೀಕಿಯು ಪಾತಾಳದಿಂದ ಬಂದು ಶ್ರೀರಾಮಾದಿಗಳನ್ನು ಬದುಕಿಸಿ, ಸೀತೆ ಮತ್ತು ಕುಶಲವರನ್ನು ಅವನ ವಶ ಒಪ್ಪಿಸಲು, ಶ್ರೀರಾಮನು ಅವನೊಡನೆ ಅಯೋಧ್ಯೆಗೆ ಬಂದು ಅಶ್ವಮೇಧವನ್ನು ಸಾಂಗಗೊಳಿಸಿದನು (ಜೈ.ಭಾ.).

ಶ್ರೀರಾಮನ ಅಶ್ವಮೇಧಯಾಗವು ಸಾಂಗವಾಯಿತು. ನೈಮಿಷಾರಣ್ಯದಲ್ಲಿ ನಡೆಯುತ್ತಿದ್ದ ಯಜ್ಞಕ್ಕೆ ವಾಲ್ಮೀಕಿಯು ಕುಶಲವರೊಂದಿಗೆ ಬಂದು ಸೀತಾಪರಿತ್ಯಾಗದವರೆಗಿನ ರಾಮಾಯಣದ ಕಥೆಯನ್ನು ಆ ಬಾಲಕರಿಂದ ಹಾಡಿಸಿದನು. ಮರುದಿನ ಶ್ರೀರಾಮನಿಗೆ ವಾಲ್ಮೀಕಿಯು ಸೀತೆ ಮತ್ತು ಕುಶಲವರನ್ನು

ಒಪ್ಪಿಸಿದನು. ಮುಂದೆಯೂ ಶ್ರೀರಾಮನು ಸೀತೆಯನ್ನು ಸಂದೇಹ ದೃಷ್ಟಿಯಿಂದಲೇ ಕಂಡದ್ದರಿಂದ ಆಕೆ ಭೂಮಿಯಲ್ಲಿ ಐಕ್ಯಳಾದಳು. ಮುಂದೆ ಲಕ್ಷ್ಮಣನು ನಿರ್ಯಾಣಹೊಂದಿದ ಮೇಲೆ ಶ್ರೀರಾಮನು ವಿಂಧ್ಯಪರ್ವತದ ಬಳಿಯ ಕುಶಾವತಿಯಲ್ಲಿ ಕುಶನನ್ನೂ, ಶ್ರಾವಸ್ತಿ ಎಂಬ ಪಟ್ಟಣದಲ್ಲಿ ಲವನನ್ನೂ ರಾಜನನ್ನಾಗಿ ಮಾಡಿದನು. ಕುಶನಿಗೆ ಚಂಪಕಾ, ಕುಮುದ್ವತಿಯರೆಂಬ ಇಬ್ಬರು ಹೆಂಡಿರೂ, ಚಂಪಕೆಗೆ ಚಂಪಕಮಾಲಿನಿ ಮೊದಲಾದ ಒಂಬತ್ತು ಮಂದಿ ಹೆಣ್ಣುಮಕ್ಕಳೂ, ಕಿರಿಯವಳಾದ ಕುಮುದ್ವತಿಗೆ ಅತಿಥಿ ಮುಂತಾದ ಎಂಟು ಮಂದಿ ಗಂಡುಮಕ್ಕಳೂ ಆದರು (ರಾಮಾ.).

ಕುಶನ ರಾಜ್ಯಭಾರ ಕಾಲದಲ್ಲಿ ಅಯೋಧ್ಯಾಭೀಮಾನಿದೇವತೆಯು ಕುಶನನ್ನು ಅಯೋಧ್ಯೆಗೇ ಬರುವಂತೆ ಪ್ರಾರ್ಥಿಸಿದಳು. ಅಯೋಧ್ಯೆಯಲ್ಲಿ ಕುಶನು ಆಳುತ್ತಿರುವಾಗ ಸರಯೂನದಿಗೆ ನೀರಾಟಕ್ಕೆ ಹೋಗಿದ್ದನು. ಆಗ ಶ್ರೀರಾಮನಿಂದ ರಾಜ್ಯದೊಡನೆ ಕೊಡಲ್ಪಟ್ಟ ಆಭರಣವೊಂದು ನದಿಯಲ್ಲಿ ಬೀಳಲು ಕುಮುದನೆಂಬ ಸರ್ಪರಾಜನು ಅದನ್ನಪಹರಿಸಿ ಕೊನೆಗೆ ಕುಶನ ಗರುಡಾಸ್ತ್ರಕ್ಕೆ ಭಯಪಟ್ಟು ಆಭರಣವನ್ನು ಕೊಟ್ಟು ತನ್ನ ತಂಗಿ ಕುಮುದ್ವತಿಯನ್ನೂ ಆತನಿಗೆ ವಿವಾಹಮಾಡಿ ಕೊಟ್ಟನು. ಮುಂದೊಂದು ಸಾರಿ ಇಂದ್ರನ ಸಹಾಯಕ್ಕಾಗಿ ಈತನು ಸ್ವರ್ಗಕ್ಕೆ ಹೋಗಿ ಅಲ್ಲಿ ರಾಕ್ಷಸರೊಡನೆ ಹೊಡೆದಾಡುತ್ತಾ ಅವರನ್ನು ಕೊಂದು ತಾನೂ ಸ್ವರ್ಗಸ್ಥನಾದನು (ರ.ವಂ.). ನೋ. - ರಾಮ, ಸೀತೆ, ಲವ.

ಲವನು ಶ್ರೀರಾಮನಿಗೆ ಸೆರೆಸಿಕ್ಕಿದ ವಾರ್ತೆಯನ್ನು ಕೇಳಿ ಕುಶನು ಧನುರ್ಧಾರಿಯಾಗಿ ಲಕ್ಷ್ಮಣನನ್ನು ಇದಿರಿಸಿ ಭಯಂಕರ ಹೋರಾಟ ನಡೆಸಿದರೂ, ಅವನನ್ನು ಜಯಿಸಲಾರದೆ ಹೋಗಲು, ಲಕ್ಷ್ಮಣನು ಶೇಷಾವತಾರಿಯೆಂದು ತಿಳಿದು ಅವನ ಮೇಲೆ ಗರುಡಾಸ್ತ್ರವನ್ನು ಬಿಡಲು ಲಕ್ಷ್ಮಣನು ಮೂರ್ಛೆ ಹೋದನು. ಶ್ರೀರಾಮನು ಬ್ರಹ್ಮಾಸ್ತ್ರದಿಂದ ಗರುಡಾಸ್ತ್ರವನ್ನು ನಾಶಮಾಡಿ, ಈ ಬಾಲಕನು ಸೀತಾಪುತ್ರನೆಂದು ತಿಳಿದು ಸಂತೋಷಹೊಂದಿದನು. (ಅನಂ.ರಾ.). ನೋ. - ಭೂರಿಕೀರ್ತಿ.

ಭೂರಿಕೀರ್ತಿಯ ಮೊಮ್ಮಗಳಾದ ಚಂಪಕೆಯೊಂದಿಗೂ, ಕುಮದನೆಂಬ ನಾಗೇಂದ್ರನ ತಂಗಿಯಾದ ಕುಮುದ್ವತಿಯೊಡನೆಯೂ ಕುಶನ ವಿವಾಹವಾಯಿತು. ಕುಶನು ತನ್ನ ಪತ್ನಿಯಾದ ಚಂಪಕೆಯೊಡನೆ ಸರಯೂನದಿಯಲ್ಲಿ ಜಲಕ್ರೀಡೆಯಾಡುವಾಗ ಚಂಪಕೆಯ ಕಂಕಣವು ನದಿಯ ನೀರಲ್ಲಿ ಬೀಳಲು, ಕುಮುದನೆಂಬ ನಾಗರಾಜನ ತಂಗಿ ಕುಮುದ್ವತಿಯು ಅದನ್ನು ಅಪಹರಿಸಿದಳು. ಇದರಿಂದ ಕುಶನು ಕೋಪೋದ್ರಿಕ್ತನಾಗಿ, ಸರಯೂ

ನದಿಯನ್ನು ತನ್ನ ಬಾಣಗಳಿಂದ ಶೋಷಿಸಲುದ್ಯುಕ್ತನಾಗಲು, ಸರಯೂ ನದಿಯು ಭಯದಿಂದ ಆ ಕಂಕಣವನ್ನು ಕುಶನಿಗೆ ಕೊಡಿಸಿದುದಲ್ಲದೆ, ಕುಮುದ್ವತಿಯನ್ನು ಆತನಿಗೆ ಸಮರ್ಪಿಸುವಂತೆ ಆಜ್ಞೆಮಾಡಿದಳು. ಈಕೆಯ ಉದರದಲ್ಲಿ ಅತಿಥಿಯೆಂಬ ಮಗನು ಹುಟ್ಟಿದನು. ನೋ. - ಅತಿಥಿ. ಚಂಪಕೆಯು ಒಂದು ಹೆಣ್ಣು ಮಗುವನ್ನು ಮಾತ್ರ ಪಡೆದಳು (ಅನಂ.ರಾ.).

ಕುಶಧ್ವಜ - ೧. ಹ್ರಸ್ವರೋಮ ಜನಕರಾಜನ ಕಿರಿಯ ಮಗ; ಸೀರಧ್ವಜ ಜನಕನ ತಮ್ಮ. ಇವನಿಗೆ ಮಾಂಡವಿ ಮತ್ತು ಶ್ರುತಕೀರ್ತಿಯರೆಂಬ ಇಬ್ಬರು ಹೆಣ್ಣುಮಕ್ಕಳು. ಇವರನ್ನು ಸೀತಾಸ್ವಯಂವರದ ಕಾಲದಲ್ಲಿ ಭರತ, ಶತ್ರುಘ್ನರು ವಿವಾಹವಾದರು.

ಕುಶಧ್ವಜನಿಗೆ ಮೂವರು ಗಂಡು ಮೂವರು ಹೆಣ್ಣುಮಕ್ಕಳಿದ್ದರು (ಸ್ಕಾಂ.ಪು.,ಬ್ರ.ಖಂ.). ೨. ವಿದೇಹವಂಶದ ರಥಧ್ವಜ ಜನಕನ ಮಗ; ಲಕ್ಷ್ಮೀದೇವಿಯು ಇವನ ಮಗಳಾಗಿ ವೇದವತಿಯೆಂಬ ಹೆಸರಿನಿಂದ ಅವತರಿಸಿದಳು. ಈತನು ವೇದವನ್ನೋದುವಾಗ ವೇದವತಿಯು ಜನಿಸಿದಳು. ಈಕೆಯು 'ಮುಂದಿನ ಜನ್ಮದಲ್ಲಿ ಸೀತೆಯಾಗಿ ಅವತರಿಸಿ ನಿನ್ನನ್ನು ನಾಶಮಾಡುವೆ'ನೆಂದು ರಾವಣನಿಗೆ ಶಾಪವಿತ್ತಳು (ರಾಮ.ಉ.,ದೇವೀಭಾ). ೩.ಒಂದು ಕಪಿಯು ಕಾಶಿಯ ವಿಶ್ವೇಶ್ವರನ ಮಂದಿರವನ್ನು ಹೊಕ್ಕು ರಾತ್ರಿಯೆಲ್ಲಾ ಶಿವನನ್ನು ಪೂಜಿಸಿತು. ಈ ಪುಣ್ಯದ ಬಲದಿಂದ ಅದು ಮುಂದಿನ ಜನ್ಮದಲ್ಲಿ ಕಾಶೀರಾಜನ ಮಗನಾಗಿ ಕುಶಧ್ವಜನೆಂಬ ಹೆಸರಿನಿಂದ ಪ್ರಸಿದ್ಧನಾದನು. ಇವನು ಪೂರ್ವಜನ್ಮದ ಡೋಲೋತ್ಸವದ ಪ್ರಭಾವದಿಂದ ಕ್ಷತ್ರಿಯನಾದುದನ್ನು ಮರೆಯದೆ ತನ್ನ ರಾಜ್ಯಭಾರ ಕಾಲದಲ್ಲಿ ತನ್ನ ದೇಶದಲ್ಲೆಲ್ಲಾ ಡೋಲೋತ್ಸವವನ್ನು ನಡೆಯಿಸಿದನು. ಈತನು ತಪೋವನದ ಕೊಳದಲ್ಲಿ ಜಲಕ್ರೀಡೆಯಾಡುತ್ತಿದ್ದ ಅಗ್ನಿವೇಶ್ಯ ಮುನಿಯ ಮಗಳನ್ನು ಕಂಡು ಮೋಹಿಸಿ ಆಕೆಯನ್ನು ಬಲಾತ್ಕಾರದಿಂದ ಎತ್ತಿಕೊಂಡು ಹೋಗುವ ಪ್ರಯತ್ನ ನಡೆಸಲು, ಇದನ್ನು ತಿಳಿದ ಮುನಿಯು ಈತನಿಗೆ ಹದ್ದಾಗಿ ಹುಟ್ಟುವಂತೆ ಶಾಪವಿತ್ತು, ಕೊನೆಗೆ ಮುನಿಯನ್ನು ಮೊರೆಹೊಕ್ಕ. ಈ ರಾಜನಿಗೆ ಇಂದ್ರದ್ಯುಮ್ನ ರಾಜನ ಕೀರ್ತಿಯನ್ನು ಬೆಳಗಿಸಲು ಸಹಾಯ ಮಾಡಿದಾಗ ಶಾಪವಿಮೋಚನೆ ಹೊಂದುವೆಯೆಂದು ಅನುಗ್ರಹಿಸಿದನು (ಸ್ಕಾಂ.ಪು.).

ಕುಶನಾಭ - ಚಂದ್ರವಂಶದ ಕುಶಿಕರಾಜನ ಮಗ. ಈತನು ಘೃತಾಚಿ ಎಂಬ ಅಪ್ಸರೆಯಲ್ಲಿ ನೂರು ಮಂದಿ ಕನ್ಯೆಯರನ್ನು ಪಡೆದನು. ಇವರನ್ನು ವಾಯುವು ಮೋಹಿಸಿ, ನಿರಾಶನಾಗಿ ಅವರಿಗೆಲ್ಲಾ ಕುಬ್ಜೆಯರಾಗುವಂತೆ ಶಾಪವಿತ್ತನು. ಆಮೇಲೆ ಬ್ರಹ್ಮದತ್ತನೆಂಬ ಮಹರ್ಷಿ ಇವರ ಕುಬ್ಜತ್ವವನ್ನು ಹೋಗಲಾಡಿಸಿ

ಅವರನ್ನೆಲ್ಲಾ ಮದುವೆಯಾದನು. ಈ ಪ್ರದೇಶವನ್ನೇ ಕನ್ಯಾಕುಬ್ಜ ಅಥವಾ ಕನೂಜ್ ಎನ್ನುತ್ತಾರೆ (ರಾಮಾ.ಬಾಲ.).

ಕುಶಪ್ಲವ - ಒಂದು ವನ; ಇಲ್ಲಿ ಕಶ್ಯಪನ ಪತ್ನಿಯು ಇಂದ್ರನನ್ನು ಸೋಲಿಸುವ ಮಗನನ್ನು ಪಡೆಯುವುದಕ್ಕಾಗಿ ತಪಸ್ಸು ಮಾಡಿದಳು. ಇದೇ ಸ್ಥಳದಲ್ಲೇ ಮುಂದೆ ವಿಶಾಲವೆಂಬ ರಾಜನು ವಿಶಾಲನಗರವನ್ನು ನಿರ್ಮಾಣಮಾಡಿದನು (ರಾಮಾ.ಬಾಲ.).

ಕುಶಲ - ಕ್ರೌಂಚದ್ವೀಪದ ಒಂದು ದೇಶ; ಆಫ್ರಿಕದ ಒಂದು ಪ್ರಾಂತ (ಮ.ಭೀ.).

ಕುಲಸ್ಥಲಿ - ೧. ದ್ವಾರಕೆ; ಗುಜರಾತಿನಲ್ಲಿರುವ ಶ್ರೀಕೃಷ್ಣನ ಮುಖ್ಯ ರಾಜಧಾನಿ. ಇಲ್ಲಿ ಮೊದಲು ಶ್ರೀರಾಮನು ಕುಶನಿಗಾಗಿ ಒಂದು ಪಟ್ಟಣವನ್ನು ನಿರ್ಮಿಸಿಕೊಟ್ಟಿದ್ದನು. ರೇವತನೆಂಬ ರಾಜನು ಇಲ್ಲಿ ಬಹಳ ಕಾಲ ರಾಜ್ಯಭಾರ ಮಾಡುತ್ತಿದ್ದನು. ಇದೇ ಪ್ರದೇಶದಲ್ಲೇ ಶ್ರೀಕೃಷ್ಣನು ವಿಶ್ವಕರ್ಮನಿಂದ ದ್ವಾರಕಾನಗರಿಯನ್ನು ನಿರ್ಮಿಸಿಕೊಂಡನು. ಇದು ಅವನು ನಿರ್ಯಾಣವಾದ ಏಳನೆಯ ದಿನ ಸಮುದ್ರದಲ್ಲಿ ಮುಳುಗಿತು (ರಾಮಾ.ಉ.,ಭಾಗ.,ಮ.ಸ.,ಮೌ.). ೨. ಧರ್ಮರಾಜನು ಶ್ರೀಕೃಷ್ಣನೊಡನೆ - ಕೊನೆಯ ಪಕ್ಷ ಐದು ಗ್ರಾಮಗಳನ್ನಾದರೂ ದುರ್ಯೋಧನನು ಕೊಟ್ಟರೆ ಸಾಕು - ಎಂದ ಗ್ರಾಮಗಳಲ್ಲೊಂದು (ಮ.ಉ.).

ಕುಶಾಂಬ - ಕ್ಷತ್ರಿಯ; ಚಂದ್ರವಂಶದ ಕುರುಕುಲದಲ್ಲಿ ಹುಟ್ಟಿದ ಉಪರಿಚರವಸುವಿನ ಮಗ. ಈತನಿಗೆ ಮಣಿವಾಹನನೆಂಬ ಹೆಸರೂ ಇದೆ. ಕೌಶಾಂಬಿನಗರವನ್ನು ಈತನೇ ಸ್ಥಾಪಿಸಿದನು (ಮ.ಆ.).

ಕುಶಾವತಿ - ನೋ. - ಕುಶಸ್ಥಲಿ.

ಕುಶಾವರ್ತ - ಪ್ರಿಯವ್ರತರಾಜನ ವಂಶದವ; ನವಖಂಡಾಧಿಪತಿಗಳಲೊಬ್ಬ. ಈತನ ತಂದೆ ಋಷಭಚಕ್ರವರ್ತಿ; ತಾಯಿ ಜಯಂತಿ. ಇವನು ಕುಶಾವರ್ತದ ರಾಜ (ಭಾಗ.).

ಕುಶಿಕ - ಚಂದ್ರವಂಶದ ಪುರೂರವ ರಾಜ ವಂಶೋತ್ಪನ್ನನು; ಜಹ್ನುವು ಇದೇ ವಂಶದವನು. ಈತನ ತಂದೆ ಕುಶ; ಮಗ ಗಾಧಿ. ಈತನು ತಪಸ್ಸಿನಿಂದ ಮಗನನ್ನು ಪಡೆದನು. ಚ್ಯವನ ಮುನಿಯು ಕುಶಿಕ ವಂಶವನ್ನು ನಾಶಮಾಡಬೇಕೆಂದು ಕುಶಿಕನ ಅರಮನೆಗೆ ಬಂದು ಆತನ ಶುಶ್ರೂಷೆಗೆ ಮೆಚ್ಚಿ 'ಬ್ರಹ್ಮತೇಜಸ್ಸಿನಿಂದ ಮೆರೆಯುವ ಮಗನು ನಿನ್ನ ವಂಶದಲ್ಲಿ ಹುಟ್ಟಲಿ' ಎಂದು ವರವಿತ್ತ. ಮುಂದೆ ಇದೇ ವಂಶದಲ್ಲೇ ವಿಶ್ವಾಮಿತ್ರನು ಜನ್ಮವೆತ್ತಿದನು. (ಮ.ಅನು.,ಶಾಂ.,ಹರಿ.).

ಕುಸುಮಾಮೋದಿನಿ - ಪಾರ್ವತಿಯ ಸಖಿ, ಈಕೆಯನ್ನು ಮೇನೆಯು ಪಾರ್ವತಿಯ ವಿವಾಹಕಾಲದಲ್ಲಿ ಆಕೆಗೆ ಬಳುವಳಿಯಾಗಿ ಕೊಟ್ಟಳು. ಈಕೆಯು ಪಾರ್ವತಿಯು ತಪಸ್ವಿನಿಯಾಗಿದ್ದ ಕಾಲದಲ್ಲಿ ಶಿವನ ವೃತ್ತಾಂತವನ್ನು ವಾಯುವಿನ ಮೂಲಕ ಕಳುಹಿಸುತ್ತಿದ್ದಳು (ಸ್ಕಾಂ.ಪು.).

ಕುಸ್ತುಂಬುರು - ಒಬ್ಬ ಯಕ್ಷ (ಮ.ಸ.).

ಕುಹನ - ಕ್ಷತ್ರಿಯ; ಜಯದ್ರಥನ ಸಹೋದರ (ಮ.ವ.).

ಕುಹೂ - ಈಕೆಯು ಅಮಾವಾಸ್ಯೆಯ ಅಭಿಮಾನದೇವತೆ; ಮಹರ್ಷಿ ಅಂಗೀರಸ ಮತ್ತು ಶ್ರದ್ಧೆಯ ಪುತ್ರಿ. ಈಕೆಗೆ ಸಿನೀವಾಲಿ, ರಾಕಾ ಮತ್ತು ಅನುಮತಿಯರೆಂಬ ಮೂವರು ಸಹೋದರಿಯರು. ಹವಿಷ್ಮಂತನೆಂಬ ಪಿತೃದೇವತೆ ಈಕೆಯ ಪತಿ (ವಿಷ್ಣುಪು).

ಕುಳಿಂಗ - ದುರ್ಯೋಧನನ ಬ್ರಾಹ್ಮಣ ಮಂತ್ರಿ (ಮ.ಆ.).

ರಾಜಸೂಯಯಾಗ ಕಾಲದಲ್ಲಿ ದಿವ್ಯವಾದ ಒಂದು ಶಂಖವನ್ನು ಪಾಂಡವರಿಗೆ ತಂದುಕೊಟ್ಟ ಬ್ರಾಹ್ಮಣ. ಇದನ್ನು ಪಾಂಡವರೆಲ್ಲಾ ಕೂಡಿ ಅರ್ಜುನನಿಗೆ ಕೊಟ್ಟರು. ಇದು ನೂರಾರು ವರಹಗಳ ಬಂಗಾರದಿಂದ ಚಿತ್ರಿತವಾಗಿ ತೇಜಸ್ಸಿನಿಂದ ಜ್ವಲಿಸುತ್ತಿತ್ತು. ವಿಶ್ವಕರ್ಮನ ಕೈಯಿಂದ ಪೂಜಿತವಾಯಿತು. ಬಾಯಿಂದ ಊದುವುದಕ್ಕೆ ಮೊದಲೇ ಇದು ಗರ್ಜಿಸುವುದು. ಅರ್ಜುನನು ಈ ಶಂಖಕ್ಕೆ ಪ್ರತಿಯಾಗಿ ಕಳಿಂಗನಿಗೆ ಸುವರ್ಣಶೃಂಗವುಳ್ಳ ಐನೂರು ಎತ್ತುಗಳನ್ನುಕೊಟ್ಟನು. (ಮ.ಸ.).

ಕೂಪಕರ್ಣ - ಬಾಣಾಸುರನ ಪಕ್ಷದ ರಾಕ್ಷಸ; ಇವನು ಬಲರಾಮನಿಂದ ಹತನಾದನು (ಭಾಗ.).

ಕೂಟ - ಬಲರಾಮನಿಂದ ಹತನಾದ ಕಂಸನ ಜಟ್ಟಿಯೊಬ್ಬ; ಬಿಲ್ಲಹಬ್ಬಕ್ಕೆ ಕಂಸನ ಆಮಂತ್ರಣದಂತೆ ಮಧುರೆಗೆ ಹೋದ ಶ್ರೀಕೃಷ್ಣನು ಚಾಣೂರ ಮುಷ್ಟಿಕರೆಂಬ ಜಟ್ಟಿಗಳನ್ನು ಕೊಂದಮೇಲೆ ಬಲರಾಮನಿಂದ ಈತನು ಹತನಾದನು. (ಭಾಗ).

ಕೂರ್ಚಾಮುಖ - ವಿಶ್ವಾಮಿತ್ರ ಋಷಿಯ ಮಗ (ಮ.ಅನು.).

ಕೂರ್ಮ - ೧. ಒಂದು ಸರ್ಪ. ೨. ಶ್ರೀಮನ್ನಾರಾಯಣನ ಎರಡನೆಯ ಅವತಾರ. ಸಮುದ್ರಮಥನ ಕಾಲದಲ್ಲಿ ದೇವತೆಗಳ ಪ್ರಾರ್ಥನೆಯಂತೆ ಮಂದರ ಪರ್ವತವನ್ನು ಸಮುದ್ರದಲ್ಲಿ ಮುಳುಗದಂತೆ ಕೂರ್ಮನಾಗಿ ಹರಿಯು ಎತ್ತಿಹಿಡಿದ. ೩. ದೇಹದಲ್ಲಿ ಇರುವ ಒಂದು ಉಪವಾಯು. ಇದು ದೇಹದಲ್ಲಿ ತೆರೆಯುವ ಕಾರ್ಯವನ್ನು ನಡೆಸುವುದು. (ಮ.ಆ.,ಪದ್ಮಪು.,ಭಾಗ.).

ಕೂರ್ಮವ್ಯೂಹ - ಸೇನೆಯನ್ನು ಆಮೆಯ ಆಕಾರದಲ್ಲಿ ನಿಲ್ಲಿಸುವ ಕ್ರಮ. ಭೀಷ್ಮನು ಈ ವ್ಯೂಹದಲ್ಲಿ ಸೇನೆಯನ್ನು ನಿಲ್ಲಿಸಿ, ಪಾಂಡವರೊಡನೆ ಕಾದಿದನು. (ಮ.ಭೀ.).

ಕೂಷ್ಮಾಂಡಕ - ೧. ಒಂದು ಸರ್ಪ ೨. ಒಬ್ಬ ರಾಕ್ಷಸ; ಈತನು ವಿಷ್ಣುವಿನಿಂದ ಹತನಾದನು. ಈತನ ಮೈ ಕೂದಲೇ ವಿಷ್ಣುವಿನ ಅನುಗ್ರಹದಿಂದ ಕುಂಬಳಬಳ್ಳಿಯಾಯಿತು. (ಮ.ಆ.).

ಕೃಕಣೇಯು - ಕ್ಷತ್ರಿಯನೊಬ್ಬ; ಚಂದ್ರವಂಶದ ರೌದ್ರಾಶ್ವನ ಮಗ. ಈತನ ತಾಯಿ ಮಿಶ್ರಕೇಶಿಯೆಂಬ ಅಪ್ಸರಸೆ; ಕಕ್ಷೇಯು, ಸ್ಥಂಡಿಲೇಯು ಮೊದಲಾದವರು ಈತನ ಸಹೋದರರು (ಮ.ಆ.ಹರಿ.).

ಕೃಕರ - ದೇಹದ ಒಂದು ಉಪವಾಯು; ಇದು ದೇಹದಲ್ಲಿ ಹಸಿವನ್ನುಂಟುಮಾಡುವುದು (ಅಮರಪ್ರ).

ಕೃತ - ೧. ವಸುದೇವ ರೋಹಿಣಿಯರ ಕಿರಿಯ ಮಗ; ಬಲರಾಮನ ತಮ್ಮ. ೨.ದೇವಯುಗ; ಮೊದಲನೇ ಯುಗ; ಜನ್ಮದಿಂದಲೇ ಪ್ರಜೆಗಳು ಕೃತಕೃತ್ಯರಾಗುವ ಯುಗ. ಸೂರ್ಯ, ಚಂದ್ರ, ಶುಕ್ರ, ಬೃಹಸ್ಪತಿಗಳು ಒಂದೇ ರಾಶಿಯಲ್ಲಿ ಕೂಡಿದಾಗ ಕೃತಯುಗ ಬರುವುದು (ವಿಷ್ಣುಪು). ಈ ಯುಗಕ್ಕೆ ಮನುಷ್ಯಮಾನದಲ್ಲಿ ಹದಿನೇಳು ಲಕ್ಷದ ಇಪ್ಪತ್ತೆಂಟು ಸಾವಿರ ವರ್ಷಗಳು. ಈ ಯುಗದಲ್ಲಿ ನಾಲ್ಕು ವರ್ಣಗಳೂ ತಮ್ಮ ಆಶ್ರಮಧರ್ಮವನ್ನು ಪಾಲಿಸುವುವು. ಕಾಲಕಾಲಕ್ಕೆ ಮಳೆ ಬರುವುದು. ಭಿಕ್ಷುಕರೇ ಈ ಯುಗದಲ್ಲಿಲ್ಲ. ದಾನ ಮಾಡಬೇಕಾದರೂ ದಾನ ಪಡೆಯುವವರನ್ನು ಹುಡುಕಬೇಕಿತ್ತು. (ಭಾಗ., ಹರಿ, ಮತ್ಸ್ಯಪು.,ಮ.ವ.,ಶಾಂ.).

ಕೃತದ್ಯುತಿ - ಶೂರಸೇನದೇಶದ ರಾಜನಾದ ಚಿತ್ರಕೇತುವಿನ ಹೆಂಡತಿ; ಈಕೆ ಅಂಗರಾಜನ ಮಗಳು; ಈಕೆಗೆ ಹಲವು ಮಂದಿ ಸವತಿಯರಿದ್ದರು. ಇವರಲ್ಲಿ ಯಾರಿಗೂ ಮಕ್ಕಳಾಗದುದರಿಂದ ಆಂಗಿರಸ ಋಷಿಯ ಸಹಾಯದಿಂದ ಆದಿತ್ಯೇಷ್ಟಿಯನ್ನು ಮಾಡಿ ತೇಜಸ್ವಿಯಾದ ಮಗನನ್ನು ಪಡೆದಳು. ಇದರಿಂದ ಸವತಿಯರಿಗೆ ಮತ್ಸರವುಂಟಾಗಿ, ಈ ಮಗುವಿಗೆ ವಿಷವುಣ್ಣಿಸಿ ಕೊಂದರು. ನೋ. - ಚಿತ್ರಕೇತು (ಭಾಗದ. ಸ್ಕಾಂಪು.).

ಕೃತಧ್ವಜ - ವಿದೇಹದ ರಾಜ; ಧರ್ಮಧ್ವಜ ಜನಕನ ಹಿರಿಯ ಮಗ; ಈತನ ತಮ್ಮನೇ ಖಾಂಡಿಕ್ಯ. ನೋ. - ಕೇಶಿಧ್ವಜ (ರಾಮಾ.ಬಾಲ.).

ಕೃತಪ್ರಜ್ಞ - ಪ್ರಾಗ್ಜ್ಯೋತಿಷದ ರಾಜನಾದ ಭಗದತ್ತನ ಮಗ. ಇವನು ಭಾರತ ಯುದ್ಧದಲ್ಲಿ ನಕುಲನಿಂದ ಹತನಾದನು (ಮ.ಕ.).

ಕೃತವರ್ಮ - ೧. ಕ್ಷತ್ರಿಯ; ಚಂದ್ರವಂಶದ ಯದುವಂಶೀಯನಾದ ಸಾತ್ವತನ ವಂಶದಲ್ಲಿ ಹುಟ್ಟಿದ ಹೃದಿಕನ ಮಗ; ಇವನಿಗೆ ಹಾರ್ದಿಕನೆಂಬ ಹೆಸರೂ ಇದೆ. ಇವನು ಮರುದ್ಗಣಾಂಶದಿಂದ ಜನಿಸಿದವ; ಅತಿರಥ, ಬಲರಾಮನು ಒಂದು ಅಕ್ಷೋಹಿಣೀಸೇನೆಯೊಡನೆ ಈತನನ್ನು ಕೌರವನ ಸಹಾಯಕ್ಕೆ ಕಳುಹಿಸಿದ್ದನು. ಶಿಖಂಡಿಯು ಈತನಿಂದ ಪರಾಜಿತನಾದನು. ಅಶ್ವತ್ಥಾಮನು ಪಾಂಡವರ ಪಾಳಯವನ್ನು ಪ್ರವೇಶಿಸುವಾಗ ಈತನೂ ಅವರೊಡನಿದ್ದನು. ಪಾಂಡವರು ಅಶ್ವಮೇಧ ಮಾಡಿದಾಗ ಆ ಯಜ್ಞಾಶ್ವದ ರಕ್ಷಣೆಗಾಗಿ ಈತನೂ ಅರ್ಜುನನೊಡನೆ ಹೋಗಿದ್ದನು. ಈತನು ಯಾದವರ ಸ್ವಯುದ್ಧಕಲಹದಲ್ಲಿ ಸಾತ್ಯಕಿಯಿಂದ ಮೃತನಾದನು. ೨. ಅಯೋಧ್ಯೆಯ ರಾಜ; ಈತನ ಮಗಳೇ ಸಹಸ್ರಾನೀಕ ರಾಜನ ಪತ್ನಿಯಾದ ಮೃಗಾವತಿ. ಬ್ರಹ್ಮನ ಸಭೆಯಲ್ಲಿ ನರ್ತನ ಮಾಡುತ್ತಿದ್ದ ಈಕೆ ಬ್ರಹ್ಮನಿಂದ ಶಾಪಹೊಂದಿ ಅಯೋಧ್ಯೆಯ ರಾಜನಾದ ಕೃತವರ್ಮನ ಮಗಳಾಗಿ ಜನಿಸಿದಳು. ನೋ. - ಅಲಂಬುಸೆ, ವಿಧೂಮ (ಮ.ಸ್ತ್ರೀ.,ಮೌ.,ಆ.,ಸ.,ದ್ರೋ.,ಕ.,ಶ.).

ಕೃತವೀರ್ಯ - ಯದುವಂಶದ ಜನಕರಾಜನ ಹಿರಿಯ ಮಗ; ಇವನಿಗೆ ಕೃತಾಗ್ನಿ, ಕೃತವರ್ಮ, ಕೃತೌಜರೆಂಬ ಮೂವರು ಸಹೋದರರಿದ್ದರು. ಈತನ ಮಗನೇ ಕಾರ್ತವೀರ್ಯಾರ್ಜುನ (ಮ.ಆ.,ಸ.,ಭಾಗ.).

ಕೃತಿ - ೧. ಪ್ರಹ್ಲಾದನ ತಮ್ಮನಾದ ಸಂಹ್ಲಾದನ ಹೆಂಡತಿ. ಪಂಚಜನನೆಂಬ ರಕ್ಕಸನು ಈಕೆಯಮಗ. ಈತನು ಶ್ರೀಕೃಷ್ಣನ ಗುರುವಾದ ಸಾಂದೀಪನಿಯ ಮಗನನ್ನು ಅಪಹರಿಸಿದನು. ಮುಂದೆ ಗುರುದಕ್ಷಿಣೆಗಾಗಿ ಪ್ರಭಾಸಕ್ಷೇತ್ರದಲ್ಲಿ ಮೃತನಾದ ಮಗನನ್ನು ಸಾಂದೀಪನಿಯು ತಂದುಕೊಡುವಂತೆ ಹೇಳಲು ಶ್ರೀಕೃಷ್ಣ ಬಲರಾಮರು ಸಮುದ್ರದಲ್ಲಡಗಿದ್ದ ಪಂಚಜನ ರಾಕ್ಷಸನನ್ನು ಕೊಂದು ಅವನ ಮೂಳೆಯಿಂದ ಪಾಂಚಜನ್ಯ ಶಂಖವನ್ನು ಮಾಡಿಕೊಂಡು ಗುರುಪುತ್ರನನ್ನು ಅಲ್ಲಿ ಕಾಣದೆ ಯಮಲೋಕಕ್ಕೆ ಹೋಗಿ ತಂದುಕೊಟ್ಟರು. ನೋ. - ಪಂಚಜನ, ಸಾಂದೀಪನಿ (ಭಾಗ.). ೨. ಕ್ಷತ್ರಿಯ; ಚಂದ್ರವಂಶದ ಸನ್ನತಿಮಂತನೆಂಬ ರಾಜನ ಮಗ; ಇವನ ಗುರು ಜೈಮಿನಿ ಮಹರ್ಷಿ; ಈತನು ವಿದ್ವಾಂಸ. ೩. ಚಂದ್ರವಂಶದ ಪುರುಕುಲೋತ್ಪನ್ನನಾದ ಚ್ಯವನ ರಾಜನ ಮಗ; ಈತನು ಚೇದಿದೇಶದ ರಾಜ. ಇವನ ಮಗನು ಇಂದ್ರನಿಂದ ಕೊಡಲ್ಪಟ್ಟ ವಿಮಾನದಲ್ಲಿ ಸದಾ ತಿರುಗುತ್ತಿದ್ದ ಉಪರಿಚರವಸುವು. ನೋ. - ಉಪರಿಚರ (ಭಾಗ.).

ಕೃತ್ತಿಕಾ - ೧. ದಕ್ಷನ ಮಗಳು; ಚಂದ್ರನ ಒಬ್ಬಳು ಪತ್ನಿ. ಒಂದು ನಕ್ಷತ್ರ. ೨.ಅಗ್ನಿಯ ಪತ್ನಿಯಾದ ಸ್ವಾಹಾದೇವಿಯು ಸಪ್ತರ್ಷಿಗಳ ಪತ್ನಿಯರಲ್ಲಿ ಅರುಂಧತಿಯನ್ನು ಬಿಟ್ಟು ಉಳಿದವರ ದೇಹದಿಂದ ಅಗ್ನಿಯನ್ನು ತೃಪ್ತಿಪಡಿಸಲು,

ಸಪ್ತರ್ಷಿಗಳಲ್ಲಿ ವಸಿಷ್ಠನನ್ನು ಹೊರತು ಉಳಿದವರೆಲ್ಲಾ ಅಪವಾದ ಹೊಂದಿದ ತಮ್ಮ ಪತ್ನಿಯರನ್ನು ತ್ಯಜಿಸಿದರು. ಅವರು ಕುಮಾರಸ್ವಾಮಿಯನ್ನು ಪ್ರಾರ್ಥಿಸಲು ಆತನು ಅವರನ್ನು ತಾಯಿಯಂತೆ ಗೌರವಿಸಿ ಅವರಿಗೆ ನಕ್ಷತ್ರಮಂಡಲದಲ್ಲಿ ಸ್ಥಾನಕೊಟ್ಟನು (ಮ.ವ.).

ಕೃತ್ಯ - ೧. ಒಂದು ನದಿ. ೨. ಅಭಿಚಾರ ಪ್ರಯೋಗದಲ್ಲಿ ಉತ್ಪನ್ನವಾಗುವ ಒಂದು ದುರ್ದೇವತೆ. ಇಂದ್ರನನ್ನು ಕೊಲ್ಲುವುದಕ್ಕಾಗಿ ಚ್ಯವನನೂ, ಪಾಂಡವರ ನಾಶಕ್ಕಾಗಿ ದುರ್ಯೋಧನನೂ, ಶ್ರೀಕೃಷ್ಣನ ವಧೆಗಾಗಿ ಪೌಂಡ್ರಕ ವಾಸುದೇವನೂ ಈಕೆಯನ್ನು ನಿರ್ಮಿಸಿದರು (ಮ.ವ.,ಅನು.,ಭಾಗ.).

ಕೃತ್ವೀ - ಈಕೆಯ ತಂದೆ ಶುಕಮುನಿ; ವ್ಯಾಸನ ಮೊಮ್ಮಗಳು. ಈಕೆಗೆ ಕೀರ್ತಿಮತಿಯೆಂಬ ಹೆಸರೂ ಇದೆ. ಈಕೆಯ ಮಗ ಬ್ರಹ್ಮದತ್ತಮುನಿ. ಚಂದ್ರವಂಶದ ಅಣುಹನೆಂಬ ರಾಜನು ಆಕೆಯ ಪತಿ; ಈತನಿಗೆ ನೀಪನೆಂಬ ಹೆಸರೂ ಇದೆ. ನೋ. ಕೀರ್ತಿಮತಿ (ಹರಿ.,ಮತ್ಸ್ಯಪು.).

ಕೃಪ - ಗೌತಮಕುಲೋತ್ಪನ್ನನಾದ ಶರದ್ವಂತನು ಜಾಲವತಿ (ಜಾನಪದಿ) ಎಂಬ ಅಪ್ಸರೆಯ ದರ್ಶನದಿಂದ ಶರಸ್ತಂಭದಲ್ಲಿ ರೇತಸ್ಸು ಸ್ರವಿಸಿದಾಗ ಹುಟ್ಟಿದ ಮಗನೇ ಈತ. ಅದೇ ಕಾಲದಲ್ಲಿ ಹುಟ್ಟಿದ ಈತನ ತಂಗಿ ಕೃಪಿಯೇ ದ್ರೋಣಾಚಾರ್ಯರ ಪತ್ನಿ. ಇವರಿಬ್ಬರೂ ಬಾಲ್ಯದಿಂದಲೂ ಶಂತನುವಿನಿಂದ ಪೋಷಿಸಲ್ಪಟ್ಟವರು. ಮುಂದೆ ಉಪನಯನ ಕಾಲ ಬಂದಾಗ ಶರದ್ವಂತನು ಕೃಪ, ಕೃಪಿಯರನ್ನು ಆಶ್ರಮಕ್ಕೊಯ್ದು, ಕೃಪನಿಗೆ ಉಪನಯನ ಮಾಡಿ, ಧನುರ್ವಿದ್ಯೆಯಲ್ಲಿ ಸಮರ್ಥನಾಗುವಂತೆ ಮಾಡಿದನು. ಇವನೇ ಕೌರವಪಾಂಡವರ ಬಿಲ್ಲುವಿದ್ಯೆಯ ಪ್ರಾಥಮಿಕ ಗುರುವಾದನು. ಈತನು ಮುಂದೆ ಕೌರವಪಕ್ಷದಲ್ಲಿ ನಿಂತು ಪಾಂಡವರೊಡನೆ ಕಾದಾಡಿದನು. ಇವನು ನಿದ್ರಾವಸ್ಥೆಯಲ್ಲಿದ್ದ ಪಾಂಡವ ಶಿಬಿರವನ್ನು ಅಶ್ವತ್ಥಾಮನೊಡನೆ ಪ್ರವೇಶಿಸಿ, ಅನೇಕ ಕೊಲೆಗಳಿಗೆ ಕಾರಣನಾದನು. ಈತನು ಅಭಿಮನ್ಯುವಿನ ಮಗನಾದ ಪರೀಕ್ಷಿತನ ಅಸ್ತ್ರ ವಿದ್ಯಾ ಗುರು. ಶಾರದ್ವತ, ಗೌತಮನೆಂಬ ಹೆಸರೂ ಈತನಿಗಿದೆ. ಈತನು ಚಿರಂಜೀವಿ. ಶಂತನುರಾಜನ ಕೃಪೆಯಿಂದ ಬೆಳೆಸಲ್ಪಟ್ಟವರು ಕೃಪ ಮತ್ತು ಕೃಪಿ. ಈತನ ಧ್ವಜ ಎತ್ತು (ಮ.ವಿ.,ಆ.,ದ್ರೋ.,ಸೌ.,ಸ್ತ್ರೀ.,ಭಾಗ.).

ಕೃಪಿ (ಗೌತಮಿ) - ನೋ. ಕೃಪ. ಈಕೆ ದ್ರೋಣಾಚಾರ್ಯರ ಪತ್ನಿ. ಅಶ್ವತ್ಥಾಮನು ಈಕೆಯ ಮಗ (ಮ.ಆ.).

ಕೃಶ - ೧. ಋಷಿಯೊಬ್ಬ; ಶೃಂಗಿ ಋಷಿಯ ಸ್ನೇಹಿತ. ಪರೀಕ್ಷಿತ್ ರಾಜನು ಶಮೀಕ ಋಷಿಯ ಕೊರಳಿಗೆ ಹಾವು ಸುತ್ತಿ ಹೋದ ವಿಚಾರವನ್ನು ಶೃಂಗಿಗೆ ತಿಳಿಸಿದವ

(ಮ.ಆ.,ಭಾಗ.). ೨. ಒಬ್ಬ ಮಹರ್ಷಿ. ಭೂರಿದ್ಯುಮ್ನರಾಜನಿಗೆ ಆಸೆಯ ಅನರ್ಥಗಳನ್ನು ತಿಳಿಸಿದವನು (ಮ.ಶಾಂ.).

ಕೃಶಾತ್ವ - ೧. ಕ್ಷತ್ರಿಯನೊಬ್ಬ; ಯಮನ ಸಭೆಯವ (ಮ.ಸ.). ೨. ಮಹರ್ಷಿ; ಈತನು ಪ್ರಾಚೇತಸ ದಕ್ಷನ ಮಗಳಾದ ಅರ್ಚಿ ಮತ್ತು ಧಿಷಣಾ ಎಂಬ ಕನ್ಯೆಯರನ್ನು ವಿವಾಹವಾಗಿದ್ದ. ಈತನಿಗೆ ಅರ್ಚಿಯಲ್ಲಿ ಧೂಮ್ರಕೇಶನೆಂಬ ಮಗನೂ, ಕಿರಿಯವಳಲ್ಲಿ ವೇದಶಿರಸ್ಸು, ವಯುನ ಮತ್ತು ದೇವಲರೆಂಬ ಮಕ್ಕಳೂ ಇದ್ದರು. ಜಯ ಮತ್ತು ಸುಪ್ರಭಾ ಎಂಬ ಈತನ ಕನ್ಯೆಯರಿಗೆ ನೂರೈವತ್ತು ಮಂದಿ ಮಕ್ಕಳಿದ್ದರು. ಇವರೆಲ್ಲ ಅಸ್ತ್ರರೂಪರಾಗಿದ್ದುದರಿಂದ ಕೃಶಾತ್ವನು ಇವರನ್ನೆಲ್ಲ ತನ್ನ ಶಿಷ್ಯನಾದ ವಿಶ್ವಾಮಿತ್ರನಿಗೆ ಕೊಟ್ಟನು (ರಾಮಾ.ಬಾಲ.).

ಶ್ರೀಕೃಷ್ಣ - ೧. ಭಗವಂತನಾದ ನಾರಾಯಣನ ಎಂಟನೇ ಅವತಾರ. ಯದು ವಂಶೋತ್ಪನ್ನನಾದ ವಸುದೇವನ ಕಿರಿಯ ಮಗ. ಈತನ ತಾಯಿ ದೇವಕಿ; ಈತನ ಬಾಲ್ಯವೆಲ್ಲಾ ನಂದಗೋಕುಲದಲ್ಲಿ ಕಳೆಯಿತು. ಈತನ ಸಾಕುತಂದೆತಾಯಿಗಳು ನಂದ- ಯಶೋದೆಯರು. ಬಾಲ್ಯದಲ್ಲಿ ಕಂಸನಿಂದ ಕಳುಹಿಸಲ್ಪಟ್ಟ ಪೂತನಿ, ಧೇನುಕ, ವತ್ಸ, ಅಘ, ತೃಣಾವರ್ತ - ಮೊದಲಾದ ರಾಕ್ಷಸರನ್ನು ಕೃಷ್ಣನು ಕೊಂದನು. ಕಾಳಿಯಮರ್ದನ, ಗೋವರ್ಧನೋದ್ಧಾರವು ಕೃಷ್ಣನ ಎರಡು ಲೀಲೆಗಳು. ಬಿಲ್ಲುಹಬ್ಬಕ್ಕಾಗಿ ಮಾವಕಂಸನಿಂದ ಕೃಷ್ಣನಿಗೆ ಕರೆ ಬರಲು ಬಲರಾಮನೊಡನೆ ಮಧುರೆಗೆ ಹೋಗಿ ಕಂಸನನ್ನು ಕೊಂದು ವಸುದೇವ ದೇವಕಿಯರನ್ನು ಸೆರೆಯಿಂದ ಬಿಡಿಸಿದನು.

ಶ್ರೀಕೃಷ್ಣನಿಗೆ ಜಾತಕರ್ಮವನ್ನು ನಡೆಸಿದವನು ಗರ್ಗಾಚಾರ್ಯನೆಂಬ ಪುರೋಹಿತ. ಅವನಿಗೆ ಭೀಷ್ಮಕರಾಜನ ಮಗಳಾದ ರುಕ್ಮಿಣಿ, ಸತ್ರಾಜಿತನ ಮಗಳಾದ ಸತ್ಯಭಾಮೆ, ನಗ್ನಜಿತನ ಮಗಳಾದ ನೀಲಾ (ಸತ್ಯಾ), ಸೋದರತ್ತೆ ಶ್ರುತಕೀರ್ತಿಯ ಮಗಳಾದ ಭದ್ರೆ, ಸೋದರತ್ತೆ ರಾಜಾಧಿದೇವಿಯ ಮಗಳು ಮಿತ್ರವಿಂದೆ, ಸೂರ್ಯನ ಮಗಳು ಕಾಳಿಂದಿ, ಮದ್ರಾಧಿಪತಿಯ ಮಗಳು ಲಕ್ಷ್ಮಣಾ (ಲಕ್ಷಣಾ), ಜಾಂಬವಂತನೆಂಬ ಕರಡಿಗಳ ರಾಜನ ಮಗಳು ಜಾಂಬವತಿ ಎಂಬ ಅಷ್ಟಮಹಿಷಿಯರಿದ್ದರು. ನರಕಾಸುರನ ಸೆರೆಯಿಂದ ಬಿಡಿಸಿತಂದ ಹದಿನಾರುಸಾವಿರ ಸಂಖ್ಯೆಯ ಅಪ್ಸರೆಯರೂ ಈತನ ಹೆಂಡಿರು (ಭಾಗ.,ವಿಷ್ಣುಪು.). ಕಂಸನನ್ನು ಕೊಂದದ್ದರಿಂದ ಜರಾಸಂಧನಿಗೆ ಕೃಷ್ಣನ ಮೇಲೆ ಅತಿಶಯ ದ್ವೇಷ ಬೆಳೆಯಿತು. ಯಶೋದೆಯ ಪುತ್ರಿ ಏಕಾನಂಗೆಯು ಈತನ ಸಹೋದರಿ; ಅಣ್ಣ ಬಲರಾಮ. ಸಾರಥಿ ದಾರುಕ. ಶಂಖ ಪಾಂಚಜನ್ಯ. ರಥದ ನಾಲ್ಕು ಕುದುರೆಗಳ ಹೆಸರು - ಶೈಬ್ಯ, ಸುಗ್ರೀವ, ಮೇಘಪುಷ್ಪ ಮತ್ತು

ಬಲಾಹಕಗಳು. ಸಾಲ್ವನೊಡನೆ ಯುದ್ಧಮಾಡಿ ಕೃಷ್ಣನು ಆತನನ್ನು ಕೊಂದನು. ಅಕ್ಷಯಪಾತ್ರೆಯ ಮೂಲಕ ದೂರ್ವಾಸನ ಗರ್ವವನ್ನು ಭಂಗಿಸಿದನು. ಸಂಧಾನಕ್ಕಾಗಿ ಹೋದ ಶ್ರೀಕೃಷ್ಣನನ್ನು ದುರ್ಯೋಧನನು ಸೆರೆಹಿಡಿಯಲು ಯತ್ನಿಸಲು ಆತನ ವಿಶ್ವರೂಪದರ್ಶನದಿಂದ ಬೆರಗಾದನು. ಯುದ್ಧಭೂಮಿಯಲ್ಲಿ ಪಾಂಡವರ ಮೇಲೆ ಭಗದತ್ತನಿಂದ ಪ್ರಯೋಗಿಸಲ್ಪಟ್ಟ ವೈಷ್ಣವಾಸ್ತ್ರವನ್ನು ತಾನೇ ಧರಿಸಿ ಪಾಂಡವರನ್ನು ರಕ್ಷಿಸಿದನು. 'ನಿನ್ನ ಕುಲವೂ ನಾಶವಾಗಲಿ' ಎಂದ ಗಾಂಧಾರಿಯ ಶಾಪದಂತೆ ಯಾದವರೆಲ್ಲಾ ಹೊಡೆದಾಡಿಕೊಂಡು ನಾಶವಾದಮೇಲೆ ಜರನೆಂಬ ಹೆಸರಿನ ಬೇಡನು ಕಾಡಿನಲ್ಲಿ ಮಲಗಿದ್ದ ಈತನ ಪ್ರಾಣಕ್ಕೆ ಬಾಣಪ್ರಯೋಗಮಾಡಿ ಇವನ ನಿರ್ವಾಣಕ್ಕೆ ಕಾರಣನಾದನು. ಸಾಂದೀಪನಿಯೆಂಬ ಗುರುವಿನಲ್ಲಿ ಅರುವತ್ತನಾಲ್ಕು ಕಲೆಗಳ ಅಭ್ಯಾಸವಾಗಿತ್ತು ಈತನಿಗೆ. ಪಾರಿಜಾತವನ್ನು ಸತ್ಯಭಾಮೆಗಾಗಿ ಸ್ವರ್ಗದಿಂದ ತಂದನು. ಕುಚೇಲನ ಬಡತನವನ್ನು ಹೋಗಲಾಡಿಸಿದನು. ಶ್ರೀಕೃಷ್ಣನಿಗೆ ಸಾಂದೀಪನಿ ಮುನಿಯೇ ಪುರೋಹಿತ; ಅನಾಧೃಷ್ಟಿ ಸೇನಾಪತಿ; ವಿಕದ್ರು ಮುಖ್ಯಮಂತ್ರಿ; ಉದ್ಧವ, ವಸುದೇವ, ಕಂಕ, ವಿಪ್ರಥು, ಶ್ವಫಲ್ಕ, ಚಿತ್ರಾಂಗದ, ಸತ್ಯಕ, ಬಲ, ಭದ್ರ, ಪೃಥರೆಂಬ ಹತ್ತುಮಂದಿ ಮಂತ್ರಿಗಳು. ಸಾತ್ಯಕಿಯು ಯೋಧಮುಖ್ಯ (ಹರಿ.). ನೋ. - ವಾಸುಕಿ. ೨. ಶುಕನ ಮಗ. ೩. ವೇದವ್ಯಾಸ. ೪. ಅರ್ಜುನ.

ಕೃಷ್ ಎಂಬುದು ಇರುವಿಕೆಯನ್ನೂ, 'ಣ್' ಎಂಬುದು ಆನಂದವನ್ನೂ ಹೇಳುತ್ತದೆ. ಇವರೆಡು ಕೂಡಿದ ಪರಬ್ರಹ್ಮವೇ ಕೃಷ್ಣ. ನೋ. - ಅರ್ಜುನ. ಅರ್ಜುನನಿಗಿಂತ ಶ್ರೀಕೃಷ್ಣನು ಮೂರು ತಿಂಗಳು ಹಿರಿಯನು. ಶ್ರೀಕೃಷ್ಣನ ಆಯುರ್ಮಾನ ೧೦೬ ವರ್ಷ ೩ ತಿಂಗಳು (ಮ.ಆ.). ಶ್ರೀಕೃಷ್ಣನು ಕ್ರಿ.ಪೂ. ೩೧೧೩ ರಲ್ಲಿ ವೈಕುಂಠವಾಸಿಯಾದನು. ಇದರಿಂದ ಇವನು ೧೨೪ ವರ್ಷಗಳವರೆಗೆ ಬದುಕಿರುವನೆಂದು ಗರ್ಗಸಂಹಿತೆಯಿಂದ ಗೊತ್ತಾಗುವುದು.

ಗಾಂಧಾರಿ, ಶಿಂಶುಮೆ, ವಿಶೋಕೆ, ಸುಮಿತ್ರೆ, ಕೇತುಮತಿಯೆಂಬ ಹೆಸರಿನ ಹೆಂಡಿರೂ ಶ್ರೀಕೃಷ್ಣನಿಗಿದ್ದರು (ಮ.ಸ.). ಕೃಷ್ಣನು ಕುಂತಿಯ ಇದಿರಿನಲ್ಲೇ ಅರ್ಜುನನ್ನು ವಿನೋದಾರ್ಥವಾಗಿ ಸೋಲಿಸಿದ್ದನು (ಭಾಗ., ಮ.ಆ., ಉ., ವಿಷ್ಣುಪು., ಹರಿ., ಪದ್ಮಪು., ಬ್ರಹ್ಮಪು., ದೇವೀಭಾ., ಲಿಂಗಪು., ಮ.ಸ್ತ್ರೀ., ಸೌ., ಅನು., ಅಶ್ವ., ಮೌ.).

ಕೃಷ್ಣದ್ವೈಪಾಯನ - ನೋ. - ವ್ಯಾಸ.

ಕೃಷ್ಣವೇಣಿ - ಕೃಷ್ಣಾನದಿ. ಇದು ಕೃಷ್ಣಾ ಮತ್ತು ಗುಂಟೂರು ಜಿಲ್ಲೆಗಳಲ್ಲಿ ಹರಿಯುತ್ತಿದೆ. ತುಂಗಭದ್ರಾ ನದಿಯು ಇದರ ಮುಖ್ಯ ಶಾಖೆ. ಇದೊಂದು

ಪುಣ್ಯನದಿ (ಮ.ಸ.,ಭೀ.).

ಕೇಕಯ - ೧. ಸೂತರಾಜ್ಯಾಧಿಪ; ಹೆಂಡತಿ ಮಾಲವಿ. ಈಕೆಯ ಮಕ್ಕಳೇ ಕೀಚಕ ಮೊದಲಾದವರು. ಇವನ ಎರಡನೆಯ ಹೆಂಡತಿಯಾದ ಮಾಲವಿಯ ತಂಗಿಯಲ್ಲಿ ಹುಟ್ಟಿದವಳೇ ಸುದೇಷ್ಣೆ. ಈಕೆಯು ವಿರಾಟನ ಪತ್ನಿ. ಇವನು ಪಾಂಡವಪಕ್ಷೀಯನಾಗಿದ್ದನು. ೨. ದುರ್ಯೋಧನನ ಪಕ್ಷದ ಕ್ಷತ್ರಿಯನೊಬ್ಬ. ೩. ಬಿಯಾಸ್ ಮತ್ತು ಸಟ್ಲೆಜ್ ನದಿಗಳ ನಡುವಿನ ಪ್ರದೇಶ. ಇಲ್ಲೇ ದಶರಥನ ಪತ್ನಿಯಾದ ಕೈಕೆಯ ತಂದೆಯು ರಾಜ್ಯಭಾರ ಮಾಡುತ್ತಿದ್ದನು. ಪಾಂಡವರ ಕಾಲದಲ್ಲಿ ಕೇಕಯ ದೇಶಕ್ಕೆ ಗಿರಿವ್ರಜವೆಂಬುದು ರಾಜಧಾನಿಯಾಗಿತ್ತು (ಭಾಗ.,ಮ.ಆ.,ಶಾಂ.,ವಿ.).

ಕೇತುಮತಿ - ಈಕೆಯ ತಾಯಿ ನರ್ಮದೆಯೆಂಬ ಗಂಧರ್ವಸ್ತ್ರೀ. ಪತಿಯು ಸುಮಾಲಿ ಎಂಬ ರಾಕ್ಷಸ. ರಾವಣನ ತಾಯಿ ಕೈಕಸಿಯು ಈಕೆಯ ಮಗಳು. ನೋ. - ಸುಮಾಲಿ, ವಿಶ್ರವಸು, ಕೈಕಸಿ.

ಕೇತುಮಂತ - ೧. ಕ್ಷತ್ರಿಯನೊಬ್ಬ. ೨. ದನುಪುತ್ರನಾದ ರಾಕ್ಷಸ. ನಮುಚಿ, ನರಕ, ಹಿರಣ್ಯಕಶಿಪು, ಬಾಣ ಇವರೆಲ್ಲಾ ಈತನ ಸಹೋದರರು. ೩. ಬೇಡನೊಬ್ಬ; ಏಕಲವ್ಯನ ಮಗ. ಭಾರತಯುದ್ಧದಲ್ಲಿ ಭೀಮನಿಂದ ಹತನಾದ (ಮ.ಭೀ.).

ಕೇತುಮಾನ್ - ಶ್ರೀಕೃಷ್ಣನ ಪತ್ನಿಯೊಬ್ಬಳ ಅರಮನೆ (ಮ.ಸ.).

ಕೇತುಮಾಲ - ೧. ಒಂದು ಖಂಡ. ಪುಣ್ಯವಂತರು ಸುಖವನ್ನು ಭೋಗಿಸುವ ಸ್ಥಳ. ೨. ಜಂಬೂದ್ವೀಪದ ಅಗ್ನೀಧ್ರ ಮಹಾರಾಜನ ಒಬ್ಬ ಮಗ; ಇವನ ರಾಜ್ಯಕ್ಕೂ ಇದೇ ಹೆಸರು. ೩. ಕಾಮ್ಯಕವನದ ಪಶ್ಚಿಮದಲ್ಲಿ ಹರಿಯುವ ಒಂದು ನದಿ. ನೋ. - ದೇವವೀಥಿ (ಮ.ವ.).

ಕೇತುವರ್ಮ - ತ್ರಿಗರ್ತದೇಶದ ರಾಜನ ತಮ್ಮ. ಇವನ ಅಣ್ಣನ ಹೆಸರು ಸೂರ್ಯವರ್ಮ. ಅಶ್ವಮೇಧ ಕಾಲದಲ್ಲಿ ಪಾಂಡವರ ಅಶ್ವಮೇಧದ ಕುದುರೆಯನ್ನು ಕಟ್ಟಿ, ಅರ್ಜುನನೊಡನೆ ಹೋರಾಡಿ ಸ್ವರ್ಗಸ್ಥನಾದನು (ಮ.ಅಶ್ವ.). ನೋ. - ಸೂರ್ಯವರ್ಮ.

ಕೇದಾರ - ೧. ಗಂಗಾದ್ವಾರದಿಂದ ತಮಸಾ ನದಿಯವರೆಗೆ ಇರುವ ತೀರ್ಥ. ಕಾಲಿ ಗಂಗೆಯೆಂಬ ಪುಣ್ಯನದಿ ಇಲ್ಲಿ ಹುಟ್ಟುತ್ತದೆ. ಇದು ಹರಿದ್ವಾರದಿಂದ ನೂರನಲವತ್ತಾರು ಮೈಲು ಉತ್ತರದಲ್ಲಿದೆ. ಇದು ಸಮುದ್ರತಳದಿಂದ ೧೧,೭೬೦ ಅಡಿ ಎತ್ತರವಿದೆ. ಇಲ್ಲಿ ಪಂಚಪಾಂಡವರ, ದ್ರೌಪದಿ, ಕುಂತಿ, ಲಕ್ಷ್ಮಿ ಮೊದಲಾದವರ ಮೂರ್ತಿಗಳಿವೆ. ಮಹಾದೇವನು ಪಾಂಡವರಿಂದ ತಪ್ಪಿಸಿಕೊಂಡು ಮಹಿಷರೂಪದಿಂದ ಇಲ್ಲಿಗೆ ಬಂದು ಭೂಮಿಯಲ್ಲಿ ಅಡಗಿ

ಕುಳಿತನೆಂದೂ, ನಾಲ್ಕು ಮೊಳ ಉದ್ದ, ಒಂದೂವರೆ ಮೊಳ ಗುಂಡಾಗಿರುವ ಲಿಂಗವೇ ಈ ಮಹಿಷನೆಂದೂ ಹೇಳುತ್ತಾರೆ. ಪಾಂಡವರು ಈ ಲಿಂಗವೇ ಮಹಿಷರೂಪಿಯಾದ ಶಿವನೆಂದು ತಿಳಿದು ಇಲ್ಲೊಂದು ಮಂದಿರವನ್ನು ಕಟ್ಟಿಸಿದರೆಂದು ಹೇಳುತ್ತಾರೆ. ಕೇದಾರನಾಥಮಂದಿರವು ಏಪ್ರಿಲ್ ಕೊನೆಯ ಭಾಗದಲ್ಲಿ ತೆರೆದು ಅಕ್ಟೋಬರ್ ಕೊನೆಯಲ್ಲಿ ಹಿಮದಿಂದ ಮುಚ್ಚಲ್ಪಡುವುದು. ನಡುವೆ ಆರು ತಿಂಗಳು ಈ ಪ್ರದೇಶವು ಹಿಮಾಚ್ಛಾದಿತವಾಗಿರುವುದು. ಬದರೀನಾಥದಂತೆ ಮಂದಿರವನ್ನು ಮುಚ್ಚಿ ಹೋಗುವಾಗ ಅರ್ಚಕರು ದೀಪವನ್ನು ಹಚ್ಚಿ ಹೋಗುವರು. ಆರು ತಿಂಗಳ ಅನಂತರ ಬಾಗಿಲು ತೆಗೆದಾಗ ಜನರಿಗೆ ಜ್ಯೋತಿದರ್ಶನವಾಗುವುದು. ೨. ಒಬ್ಬ ರಾಜರ್ಷಿ (ಮ.ವ.,ದೇವೀಭಾ.).

ಕೇರಳ - ೧. ಇಂದಿನ ಮಲಬಾರು ದೇಶ. ಇದು ಪಶ್ಚಿಮ ಘಟ್ಟಗಳ ಮಲೆಯ ಹೊಡೆಯಲ್ಲಿರುವುದರಿಂದ ಮಲೆಯಾಳವೆಂದೂ ಹೇಳುತ್ತಾರೆ. ಚಂದ್ರಹಾಸನ ತಂದೆಯಾದ ಸುಧರ್ಮನು ಇಲ್ಲಿ ರಾಜ್ಯಭಾರಮಾಡಿದ್ದ. ೨. ಸೂರ್ಯವಂಶದ ನರನೆಂಬ ರಾಜನ ಮಗ; ಈತನ ರಾಜ್ಯಕ್ಕೂ ಈತನ ಹೆಸರೇ - ಕೇರಳ ದೇಶವೆಂದು (ಮ.ಸ.,ಭೀ.).

ಕೇಶಿ - ೧. ವಸುದೇವ - ಕೌಸಲ್ಯೆಯರ ಮಗ. ೨. ದಕ್ಷಪ್ರಜಾಪತಿಯ ಮಗಳಾದ ದೇವಸೇನೆಯನ್ನು ಅಪಹರಿಸಿದ ರಾಕ್ಷಸನೊಬ್ಬ. ಇವನನ್ನು ಇಂದ್ರನು ಕೊಂದು ದೇವಸೇನೆಯನ್ನೂ, ಈಕೆಯ ಸೋದರಿಯಾದ ದೈತ್ಯಸೇನೆಯನ್ನೂ ಆತನಿಂದ ಬಿಡಿಸಿಕೊಂಡು ಬಂದನು. ಮುಂದೆ ಇಂದ್ರನು ಬ್ರಹ್ಮನ ಅಪ್ಪಣೆಯಂತೆ ದೇವಸೇನೆಯನ್ನು ಶಿವನ ಮಗನಾದ ಷಣ್ಮುಖನಿಗೆ ವಿವಾಹ ಮಾಡಿಕೊಟ್ಟನು. ೩. ಕಂಸನ ಪರಿವಾರದ ರಾಕ್ಷಸರಲ್ಲಿ ಒಬ್ಬ. ಕುದುರೆಯಾಕಾರದ ಈತನು ಗೋಕುಲವನ್ನೇ ಪೀಡಿಸುತ್ತಿರಲು ಶ್ರೀಕೃಷ್ಣನು ಈತನನ್ನು ಕೊಂದು ಕೇಶವನೆಂಬ ಹೆಸರನ್ನು ಪಡೆದನು. ೪. ಊರ್ವಶಿಯೆಂಬ ಅಪ್ಸರೆಯನ್ನು ಅಪಹರಿಸಿದ ರಾಕ್ಷಸನೊಬ್ಬ. ಈತನನ್ನು ಪುರೂರವನು ಕೊಂದು ಆ ಅಪ್ಸರೆಯನ್ನು ಬಿಡಿಸಿದನು (ಮತ್ಸ್ಯಪು.,ಮ.ವ.,ಸ.,ಭಾಗ.,ಹರಿ.,ವಿಷ್ಣುಪು.).

ಕೇಶಿಧ್ವಜ - ನೋ. - ಕೃತಧ್ವಜ . ಈತನು ಕೃತಧ್ವಜನ ಮಗ. ಈತನು ಚಿಕ್ಕಪ್ಪನಾದ ಖಾಂಡಿಕ್ಯನ ರಾಜ್ಯವನ್ನು ಕಿತ್ತುಕೊಂಡು ಅವನನ್ನು ಅರಣ್ಯಕ್ಕಟ್ಟಿದನು. ಮುಂದೆ ಈತನ ಯಜ್ಞಪಶುವನ್ನು ಹುಲಿಯು ಕೊಲ್ಲಲು ಕೇಶಿಧ್ವಜನು ಅದಕ್ಕೆ ಪ್ರತೀಕಾರವನ್ನು ಕೇಳಲು ಖಾಂಡಿಕ್ಯನ ಬಳಿಗೆ ಬಂದನು. ಖಾಂಡಿಕ್ಯನು ಅವನಿಗೆ ಮುಂದಿನ ಕರ್ತವ್ಯವನ್ನು ತಿಳಿಸಿದನು (ರಾಮಾ.ಬಾಲ.).

ಕೇಶಿನಿ - ೧. ಕ್ಷತ್ರಿಯಕುಮಾರಿ. ಈಕೆಯ ವಿವಾಹಕ್ಕಾಗಿ ಪ್ರಹ್ಲಾದನ ಪುತ್ರ

ವಿರೋಚನನಿಗೂ, ಅಂಗಿರಸ್ ಎಂಬ ಋಷಿಯ ಕುಮಾರ ಸುಧನ್ವನಿಗೂ 'ಯಾರು ಶ್ರೇಷ್ಠರು?' - ಎಂಬ ಕುರಿತು ಚರ್ಚೆಯಾಗಿ, ಇಬ್ಬರೂ ಈ ವ್ಯವಹಾರವನ್ನು ರಾಜನಾದ ಪ್ರಹ್ಲಾದನ ಬಳಿಗೆ ಕೊಂಡುಹೋದರು. ಪ್ರಹ್ಲಾದನು ಬ್ರಾಹ್ಮಣನಾದ ಸುಧನ್ವನೇ ಶ್ರೇಷ್ಠನೆಂದು ತೀರ್ಮಾನ ಮಾಡಿದನು. ಆಗ ರಾಜಕುಮಾರಿಯು ಸುಧನ್ವನನ್ನೇ ವಿವಾಹವಾದಳು. ೨. ಸಗರಚಕ್ರವರ್ತಿಯ ಒಬ್ಬಳು ಹೆಂಡತಿ - ಈಕೆಗೆ ಸುಮತಿ, ಭಾನುಮತಿ, ಶೈಬ್ಯೆ ಮೊದಲಾದ ಹೆಸರುಗಳೂ ಇವೆ. ಈಕೆಯ ತಂದೆ ಅರಿಷ್ಟನೇಮಿ. ಈಕೆಯ ಮಗನೇ ದುಷ್ಟನಾದ ಅಸಮಂಜ. ೩. ದಮಯಂತಿಯ ಸೇವಕಿ;-ಋತುಪರ್ಣನ ಸಂಗಡ ಬಂದ ನಳನನ್ನು ಈಕೆಯೇ ಗುರುತಿಸಿದವಳು. ೪. ಒಬ್ಬಳು ಅಪ್ಸರೆ. ಈಕೆಯ ತಂದೆ ಕಶ್ಯಪ; ತಾಯಿ ಪ್ರಾಧೆ. ಈಕೆಗೆ ಸಿದ್ಧ, ಪೂರ್ಣ - ಮೊದಲಾದ ಹತ್ತು ಮಂದಿ ಸಹೋದರರೂ ಅನುವದ್ಯಾ, ಮನು ಎಂಬ ಎಂಟು ಮಂದಿ ಸಹೋದರಿಯರೂ ಇದ್ದರು. ಊರ್ವಶಿ, ಮೇನಕೆ ಮೊದಲಾದ ಮೂವತ್ತೊಂದು ಮಂದಿ ಅಪ್ಸರೆಯರು ಈಕೆಯ ಸಹೋದರಿಯರೇ. ೫. ಚಂದ್ರವಂಶದ ರಾಜನಾದ ಭುಮನ್ಯುವಿನ ಮೂರನೆಯ ಪತ್ನಿ. ಈಕೆಗೆ ಜಹ್ನುವೆಂಬ ಗಂಗೆಯನ್ನು ಪಾನಮಾಡಿದ ತಪಸ್ವಿಯಾದ ಮಗನಿದ್ದ. ಈ ಜಹ್ನುವೇ ಕುಶಿಕ ವಂಶದ ಮೂಲಪುರುಷ (ರಾಮಾ. ಉ., ಮ. ಆ., ಉ., ವ.).

ಕೈಕಯೀ (ಕೈಕೆ) - ೧. ಸೂರ್ಯವಂಶದ ದಶರಥನ ಪತ್ನಿ; ಭರತನ ತಾಯಿ. ನೋ. - ಕಲಹಾ. ಈಕೆಯ ತಂದೆ ಕೇಕಯದೇಶದ ಅಶ್ವಪತಿರಾಜ. ಈಕೆಯು ಮಂಥರೆಯ ದುರ್ಬೋಧನೆಗೆ ಒಳಗಾಗಿ ಶ್ರೀರಾಮನ ಹದಿನಾಲ್ಕು ವರ್ಷದ ವನವಾಸಕ್ಕೆ ಕಾರಣಳಾದಳು. ಒಮ್ಮೆ ಶಂಬನೆಂಬ (ತಿಮಿಧ್ವಜ) ರಾಕ್ಷಸನು ಇಂದ್ರನನ್ನು ತುಂಬಾ ಪೀಡಿಸಲು ಇಂದ್ರನು ದಶರಥನ ಸಹಾಯದಿಂದ ತಿಮಿಧ್ವಜನೊಡನೆ ಹೋರಾಡಿ ಆತನನ್ನು ಕೊಂದನು. ಈ ಯುದ್ಧಕ್ಕೆ ದಶರಥನು ಕೈಕೆಯನ್ನು ಕರೆದುಕೊಂಡು ಹೋಗಿದ್ದನು. ಅಲ್ಲಿ ತಿಮಿಧ್ವಜನ ಬಾಣದ ಹೊಡೆತದಿಂದ ಎಚ್ಚರತಪ್ಪಿದ ದಶರಥನ ರಥವನ್ನು ಸುರಕ್ಷಿತ ಸ್ಥಳಕ್ಕೆ ಕೊಂಡುಹೋದ ಆಕೆಯ ಸಾಹಸಕ್ಕೆ ಮೆಚ್ಚಿ, ಎರಡು ವರಗಳನ್ನು ಕೇಳುವಂತೆ ರಾಜನು ಹೇಳಿದನು. ಕೈಕೆಯು ಮುಂದೆ ಈ ವರವನ್ನು ಶ್ರೀರಾಮನ ಪಟ್ಟಾಭಿಷೇಕದ ಕಾಲದಲ್ಲಿ ಕೇಳಿ ಆತನ ಅರಣ್ಯವಾಸಕ್ಕೆ ಕಾರಣಳಾದಳು. ನೋ. - ಸೀತೆ. ೨. ಮತ್ಸ್ಯದೇಶದ ರಾಜನಾದ ವಿರಾಟನ ಪತ್ನಿ ಸುದೇಷ್ಣೆಯೂ ಕೇಕೆಯರಾಜನಾದ ರಥಕಾರನ ಕಿರಿಯ ಹೆಂಡತಿಯ ಮಗಳು. ಇವಳಿಗೂ ಕೈಕಯೀ ಎಂಬ ಹೆಸರಿದೆ. ೩. ಶಿಬಿ ದೇಶದ ರಾಜನಾದ ಸೃಂಜಯನ ಪತ್ನಿಯೂ ಕೇಕಯ ರಾಜಪುತ್ರಿ. ಇವಳ

ಮಗನೇ ಸುವರ್ಣಷ್ಠೀವಿ; ಮಗಳು ದಮಯಂತಿ ಅಥವಾ ಸುಕುಮಾರಿ. ನೋ. - ಸೃಂಜಯ (ಮ.ವ.,ವಿ.,ಶಾಂ.,ದೇವೀಭಾ.,ರಾಮಾ.ಅಯೋ.).

ಪುತ್ರಕಾಮೇಷ್ಟಿಯಲ್ಲಿ ಯಜ್ಞಪುರುಷನು ಪ್ರತ್ಯಕ್ಷನಾಗಿ ಸುವರ್ಣ ಪಾತ್ರೆಯಲ್ಲಿ ಪಾಯಸವನ್ನು ದಶರಥನಿಗೆ ಕೊಟ್ಟು 'ಇದನ್ನು ನಿನ್ನ ಪತ್ನಿಯರಿಗೆ ಕೊಡು' ಎಂದು ಅದೃಶ್ಯನಾದನು. ದಶರಥನು ತನ್ನ ಮೂವರು ಪತ್ನಿಯರಿಗೆ ಆ ಪಾಯಸವನ್ನು ಸಮವಾಗಿ ಹಂಚಿದನು. ಆಗ ಬ್ರಹ್ಮನ ಶಾಪದಿಂದ ಹದ್ದಿನ ರೂಪವನ್ನು ಹೊಂದಿದ್ದ ಒಬ್ಬ ಅಪ್ಸರಾಸ್ತ್ರೀಯು ಕೈಕೆಯ ಕೈಯಲ್ಲಿದ್ದ ಪಾಯಸವನ್ನು ಕಿತ್ತುಕೊಂಡು ಶೇಷಾಚಲದಲ್ಲಿ ತಪಸ್ಸು ಮಾಡುತ್ತಿದ್ದ ಅಂಜನಾದೇವಿಯ ಕೈಯಲ್ಲಿ ಹಾಕಿ, ಶಾಪವಿಮೋಚನೆ ಹೊಂದಿ ಸ್ವರ್ಗಲೋಕವನ್ನು ಸೇರಿದಳು. ಆಗ ಕೌಸಲ್ಯೆ ಮತ್ತು ಸುಮಿತ್ರೆಯರು ತಮ್ಮ ಪಾಲಿನ ಪಾಯಸದಿಂದ ಸ್ವಲ್ಪ ತೆಗೆದು ಕೈಕೆಗೆ ಕೊಟ್ಟರು. ಮುಂದೆ ಗರ್ಭಿಣಿಯರಾದ ರಾಜಪತ್ನಿಯರು ಈ ಪಾಯಸದ ಪಾಲಿನಂತೆಯೇ ನಾಲ್ವರು ಮಕ್ಕಳನ್ನು ಹೆತ್ತರು (ಆನಂ.ರಾ.).

ಕೇಕಯರಾಜನು ಹೆಂಡತಿಯೊಡನೆ ಮಲಗಿರುವಾಗ ಒಂದು ದಿನ ನಕ್ಕನು. ಹೆಂಡತಿಯು 'ಏಕೆ ನಕ್ಕೆ ಹೇಳು?' ಎಂದಳು. 'ಕಾರಣವನ್ನು ಹೇಳಿದರೆ ನಾನು ಸಾಯಬೇಕು' ಎಂದನು ರಾಜ. 'ನೀನು ಸತ್ತರೂ ಚಿಂತೆಯಿಲ್ಲ, ಹೇಳು' ಎನ್ನಲು ರಾಜನು ಇವಳನ್ನು ಬಿಟ್ಟನು. ಈಕೆಯ ಪುತ್ರಿಯೇ ಕೈಕೆ. ಇವಳು ಪತಿಯ ಮರಣಕ್ಕೆ ಕಾರಣವಾದಳು (ವಾ.ರಾ.).

ಕೈಕಸಿ - ಸುಕೇಶನೆಂಬ ರಾಕ್ಷಸನ ಮೊಮ್ಮಗಳು; ಈಕೆಯ ತಂದೆ ಸುಮಾಲಿ. ಈತನು ಮಗಳನ್ನು ವಿಶ್ರವಸುವೆಂಬ ಮುನಿಯ ಆಶ್ರಮದಲ್ಲಿ ಬಿಟ್ಟು 'ಈತನೇ ನಿನಗೆ ತಕ್ಕ ಪತಿ' ಎಂದು ಹೊರಟುಹೋದನು. ಈಕೆಯು ಸಂಧ್ಯಾಕಾಲದಲ್ಲಿ ವಿಶ್ರವಸುವಿನಿಂದ ಪುತ್ರಾರ್ಥಿಯಾದುದರಿಂದ ಈಕೆಯಲ್ಲಿ ರಾವಣ, ಕುಂಭಕರ್ಣ, ವಿಭೀಷಣ, ಶೂರ್ಪನಖಿಯರೆಂಬ ರಕ್ಕಸಮಕ್ಕಳು ಜನಿಸಿದರು. ಆಗ ಕೈಕಸೆಯು ತನಗೆ ತತ್ವಜ್ಞಾನ ಸಂಪನ್ನನಾದ ಮಗನು ಬೇಕೆಂದು ಪ್ರಾರ್ಥಿಸಲು ವಿಶ್ರವಸು (ಪೌಲಸ್ತ್ಯ) ಮುನಿಯು 'ಆಗಲಿ, ನಿನ್ನ ನಾಲ್ಕನೇ ಮಗನು ಧರ್ಮಾತ್ಮನೂ, ದೈವಭಕ್ತನೂ ಆಗುವನೆಂದು ವರವಿತ್ತನು. ಇಲಬಲೆಯು ವಿಶ್ರವಸುವಿನ ಇನ್ನೊಬ್ಬಳು ಪತ್ನಿ. ಈಕೆಯಲ್ಲೇ ಕುಬೇರನು ಜನಿಸಿದನು (ರಾಮಾ.). ಕೈಕಸೆಗೆ ಪುಷ್ಪೋತ್ಕಟೆ ಎಂಬ ಹೆಸರೂ ಇದ್ದಂತೆ ತೋರುತ್ತದೆ. ರಾವಣ, ಕುಂಭಕರ್ಣರು ವಿಶ್ರವಸುವಿನ ಪತ್ನಿಯಾದ ಪುಷ್ಪೋತ್ಕಟೆಯ ಮಕ್ಕಳು. ಶೂರ್ಪನಖಿಯು ರಾಕೆ ಎಂಬವಳ ಮಗಳು.

ವಿಭೀಷಣನ ತಾಯಿಯ ಹೆಸರು ಮಾಲಿನಿ (ಮ.ವ.).

ಕೈಕಸೆಯು ವಿಶ್ರವಸುವಿನ ಪತ್ನಿ. ಈಕೆಗೆ ರಾವಣ, ಕುಂಭಕರ್ಣ, ಕ್ರೌಂಚಿ. ಶೂರ್ಪನಖಿ, ಕುಂಭೀನಸ, ವಿಭೀಷಣರೆಂಬ ಆರು ಮಕ್ಕಳು.

ತಾಯಿಯಾದ ಈಕೆಗೆ ಆತ್ಮಲಿಂಗವನ್ನು ತರಲು ಪಾತಾಳಕ್ಕೆ ಹೋದ ರಾವಣನು ತನ್ನ ಮಸ್ತಕವನ್ನು ಒಡೆದು, ದೇಹವನ್ನು ವೀಣೆ ಮಾಡಿಕೊಂಡು, ಶರೀರದಲ್ಲಿರುವ ನರಗಳನ್ನೆಲ್ಲಾ ತಂತ್ರಿಯ ತಂತುಗಳನ್ನಾಗಿ ಮಾಡಿಕೊಂಡು, ಷಡ್ಜಸ್ವರದಿಂದ ಪರಮೇಶ್ವರನ ಮಹಿಮೆಯನ್ನು ಗಾನಮಾಡಲಾರಂಭಿಸಲು ಶಂಕರನು ನಂದಿಯನ್ನು ರಾವಣನ ಬಳಿಗೆ ಕಳುಹಿಸಿ 'ವೃಥಾ ಶ್ರಮಪಡಬೇಡ' ವೆಂದು ಹೇಳಿ ಕಳುಹಿಸಲು, ರಾವಣನಿಗೂ ನಂದಿಗೂ ಹತ್ತು ದಿನಗಳವರೆಗೆ ಸಂವಾದವಾದರೂ, ರಾವಣನು ತನ್ನ ಕಾರ್ಯದಿಂದ ಹಿಂಜರಿಯದಿರಲು ಸಾಂಬಶಿವನು ಪ್ರತ್ಯಕ್ಷನಾಗಿ ರಾವಣನಿಗೆ ಹತ್ತು ಶಿರಸ್ಸುಗಳನ್ನೂ, ಇಪ್ಪತ್ತು ಭುಜಗಳನ್ನೂ ದಯಪಾಲಿಸಿದನು. ನೋ. - ರಾವಣ, ಗೋಕರ್ಣ (ಆನಂ.ರಾ.).

ಕೈಂಕಿಲ - ಕಿಲಕಿಲರೆಂಬ ಯವನರು. ಇವರು ಮೂರ್ಧಾಭಿಷೇಕವಿಲ್ಲದೆ ಆಳಿದವರು (ವಿಷ್ಣುಪು.).

ಕೈಟಭ - ವಟಪತ್ರಶಾಯಿಯಾದ ವಿಷ್ಣುವಿನ ಕಿವಿಯ ಮಲದಿಂದ ಜನಿಸಿದವ. ಇವನ ಅಣ್ಣನ ಹೆಸರು ಮಧು. ಮಧುಕೈಟಭರು ಬ್ರಹ್ಮನನ್ನು ಪೀಡಿಸತೊಡಗಿದುದರಿಂದ ಅವನು ವಿಷ್ಣುವನ್ನು ಪ್ರಾರ್ಥಿಸಲು ಶ್ರೀಮಹಾವಿಷ್ಣುವು ಪರಾಶಕ್ತಿಯಿಂದ ಶಕ್ತಿ ಪಡೆದು ಆ ರಕ್ಕಸರೊಡನೆ ಹೋರಾಡತೊಡಗಿದನು. ಆ ರಾಕ್ಷಸರು ವಿಷ್ಣುವಿನ ಪರಾಕ್ರಮಕ್ಕೆ ಮೆಚ್ಚಿ ವರವನ್ನು ಬೇಡುವಂತೆ ಹೇಳಲು ವಿಷ್ಣುವು 'ನೀವು ನನ್ನಿಂದ ವಧ್ಯರಾಗಬೇಕು' ಎನ್ನಲು ರಾಕ್ಷಸರು, 'ನೀರಿಲ್ಲದ ಭೂಮಿಯಲ್ಲಿ ನಮ್ಮನ್ನು ಕೊಲ್ಲು' ಎಂದರು. ಎಲ್ಲಾ ಕಡೆಯಲ್ಲೂ ಜಲವು ಆವರಿಸಿದುದರಿಂದ ವಿಷ್ಣುವು ಅವರನ್ನು ತನ್ನ ತೊಡೆಯ ಮೇಲೆ ಕಡೆದುಕೊಂಡು ಕೊಂದನು (ಶಿವಪು.,ದೇವೀಭಾ.,ಮ.ವ., ಮಾರ್ಕಂ.ಪು.,ಕಾಳಿಕಾಪು.).

ಕೈತವ - ಶಕುನಿ. ನೋ. - ಶಕುನಿ.

ಕೈಲಾಸ - ಟಿಬೇಟಿನಲ್ಲಿದ್ದ, ವನಸ್ಪತಿಗಳೇನೂ ಬೆಳೆಯದ ಒಂದು ಪರ್ವತಶಿಖರ. ಇದರ ನಾಲ್ಕೂ ಕಡೆಗೆ ನದಿಗಳು ಹರಿಯುತ್ತವೆ. ಕೈಲಾಸದ ಹತ್ತಿರ ಈ ಶುಭ್ರ ಶಿಖರವು ಸೂರ್ಯಪ್ರಕಾಶದಿಂದ ಥಳಥಳಿಸುವುದನ್ನು ನೋಡಿದರೆ ಸೃಷ್ಟಿದೇವಿಯು ವಜ್ರದ ಕಿರೀಟವನ್ನು ಧರಿಸಿರುವಂತೆ ತೋರುತ್ತದೆ. ಈ ಶಿಖರವು ೨೨.೦೦೦

ಅಡಿಗಿಂತ ಎತ್ತರವಿದೆ. ಇದರ ನಾಲ್ಕೂ ದಿಕ್ಕುಗಳನ್ನು ಮಂಜು ಆವರಿಸಿರುವುದರಿಂದಲೂ, ಈ ಶಿಖರವು ನೆಟ್ಟಗೆ ಬೆಳೆದಿರುವುದರಿಂದಲೂ ಇದನ್ನೇರುವುದು ಅಸಾಧ್ಯವಾಗಿದೆ. ದರಚನದಿಂದ ಆರು ಮೈಲಿನ ಮೇಲೆ ಶುಕ್ರಿಗುಹೆ ಇದೆ. ಇಲ್ಲಿಂದ ಆರು ಮೈಲಿ ಮೇಲಿನ ಡಿರಪುಗುಹೆ ಇದೆ. ಈ ಗುಹೆಗಳೇ ಯಾತ್ರಿಕರ ವಿಶ್ರಾಂತಿಸ್ಥಾನಗಳು. ಈ ಪ್ರದೇಶದಲ್ಲಿ ನೊಣ, ಇರುವೆಗಳೂ ಇಲ್ಲ. ಯಾತ್ರಿಕರು ಡಿರಪು ಗುಹೆಯಿಂದ ಕೈಲಾಸದ ದರ್ಶನವನ್ನು ತೆಗೆದುಕೊಳ್ಳುತ್ತಾರೆ. ಈ ಪರ್ವತಕ್ಕೆ ಹಿಂದುಗಳು ಎಡದಿಂದ ಬಲಕ್ಕೆ ಪ್ರದಕ್ಷಿಣೆ ಹಾಕಿದರೆ, ಬೌದ್ಧರು ಬಲದಿಂದ ಎಡಕ್ಕೆ ಪ್ರದಕ್ಷಿಣೆ ಹಾಕುತ್ತಾರೆ. ಹಿಮಾಚ್ಛಾದಿತವಾದ ಲಿಂಗಾಕಾರದ ಕೈಲಾಸಪರ್ವತವು ಒಂದು ನಿಮಿಷಕ್ಕೆ ಮುನ್ನೂರು ಅಡಿಗಳಿಗಿಂತ ವೇಗವಾಗಿ ಹರಿಯುವ ಜಲಪಾತಗಳಿಂದ ಗಂಗಾಧರವಾಗಿಯೋ ಶೋಭಿಸುತ್ತಿದೆ. ಈ ಶಿಖರವು ಸಂಜೆಯ ಸಮಯದಿಂದ ರಾತ್ರಿ ಒಂಬತ್ತರವರೆಗೆ ಬೆಳದಿಂಗಳಲ್ಲಿ ಬೆಳ್ಳಿಯಂತೆ ಹೊಳೆಯುತ್ತಿರುವುದರಿಂದ ಇದಕ್ಕೆ ಬೆಳ್ಳಿಬೆಟ್ಟ ಅಥವಾ ರಜತಗಿರಿಯೆಂಬ ಹೆಸರೂ ಅನ್ವರ್ಥವಾಗಿದೆ. ಈ ಶಿಖರದಲ್ಲಿರುವ ಹಿಮಾಚ್ಛಾದಿತ ಕೊಳಕ್ಕೆ ಗೌರೀಕುಂಡವೆನ್ನುತ್ತಾರೆ. ಕೈಲಾಸಪರ್ವತವನ್ನು ಒಮ್ಮೆ ಪ್ರದಕ್ಷಿಣೆ ಬರಲು ಎರಡೂವರೆ ದಿನಗಳು ಬೇಕಾಗುವುವು. ಭಕ್ತರು ಈ ಪರ್ವತಕ್ಕೆ ನಮಸ್ಕಾರ ಹಾಕುತ್ತಾ ಹೋಗುವುದುಂಟು. ಹೀಗೆ ಪ್ರದಕ್ಷಿಣೆ ಮಾಡಲು ಒಂದು ತಿಂಗಳು ಬೇಕಾಗುವುದು. ಈ ಪ್ರದಕ್ಷಿಣವು ಶುಕ್ರಿಗುಹೆಯಿಂದ ಆರಂಭವಾಗುವುದು. ಶ್ರೀಕೃಷ್ಣನು ಪುತ್ರಾರ್ಥಿಯಾಗಿ ಇಲ್ಲಿ ಶಿವನ ತಪಸ್ಸು ಮಾಡಿದನು. ಕುಬೇರನ ರಾಜಧಾನಿಯಾದ ಅಲಕಾನಗರವು ಹೇಮಕೂಟಪರ್ವತದ ಕೈಲಾಸವೆಂಬ ಶಿಖರದಲ್ಲಿತ್ತು (ಕ್ಷೇತ್ರದ.).

ರಾವಣನು ದಿಗ್ವಿಜಯ ಕಾಲದಲ್ಲಿ ಕೈಲಾಸವನ್ನು ಎತ್ತಲು ಹೋಗಿ ಅದರಡಿಯಲ್ಲಿ ಸಿಕ್ಕಿಬಿದ್ದನು (ಮ.ಭೀ.,ವ.,ದ್ರೋ.,ಅ.,ಶಿವಪು.).

ಕೈಶಿಕ - ಚೇದಿದೇಶದ ಸ್ಥಾಪಕನಾದ ಚಿದಿರಾಜನ ತಂದೆ. ಇವನು ಯದುವಂಶಕ್ಕೆ ಸೇರಿದವನು (ಭಾಗ.).

ಕೊಲ್ಲಾಪುರ (ಕರವೀರಕ್ಷೇತ್ರ) - ಈ ಕ್ಷೇತ್ರವು ಮಿರಜದಿಂದ ಮೂವತ್ತು ಮೈಲಿ ದೂರದಲ್ಲಿದೆ. ಇದಕ್ಕೆ ಪುರಾಣದಲ್ಲಿ ಕರವೀರಕ್ಷೇತ್ರವೆಂದು ಹೆಸರುಂಟು. ಈ ಕ್ಷೇತ್ರದ ಮಹಾಲಕ್ಷ್ಮಿಗೆ ಅಂಬಾಬಾಯಿ ಎನ್ನುತ್ತಾರೆ. ಐವತ್ತೊಂದು ಶಕ್ತಿಪೀಠಗಳಲ್ಲಿ ಒಂದು. ವೈಕುಂಠದಲ್ಲಿ ಶ್ರೀಮನ್ನಾರಾಯಣನು ಶೇಷಶಯ್ಯೆಯಲ್ಲಿ ಮಲಗಿರಲು ಲಕ್ಷ್ಮಿ ಆತನ ಪಾದಸೇವೆಯನ್ನು

ಮಾಡುತ್ತಿದ್ದಳು. ಆಗ ಅಲ್ಲಿಗೆ ಬಂದ ಭೃಗುಮುನಿಯು ವಿಷ್ಣುವು ತನ್ನನ್ನು ಗೌರವಿಸಲಿಲ್ಲವೆಂದು ಆತನ ವಕ್ಷವನ್ನು ಒದೆದನು. ಈ ಅಪಮಾನವನ್ನು ಸಹಿಸಲಾರದೆ ಲಕ್ಷ್ಮಿಯು ವೈಕುಂಠವನ್ನು ತೊರೆದು ಕೊಲ್ಲಾಪುರಕ್ಕೆ ಬಂದು ನೆಲೆಸಿದಳು. ಈ ಕ್ಷೇತ್ರವು ಶಿವ, ಭದ್ರ, ಭೋಗವತಿ, ಕುಂಭ, ಸರಸ್ವತಿ - ಎಂಬ ಪಂಚಗಂಗಾನದೀತೀರದಲ್ಲಿದೆ (ದೇವೀಭಾ.).

ಕೊಂಕಣ - ಇದಕ್ಕೆ ಪರಶುರಾಮಕ್ಷೇತ್ರವೆನ್ನುತ್ತಾರೆ. ಪರಶುರಾಮನು ಯಜ್ಞಮಾಡಿ, ತಾನು ಕ್ಷತ್ರಿಯರಿಂದ ಕಿತ್ತುಕೊಂಡ ಭೂಮಿಯನ್ನು ಕಶ್ಯಪಮುನಿಗೆ ದಾನವಾಗಿ ಕೊಟ್ಟನು. ತಾನು ಕೊಟ್ಟ ಭೂಮಿಯಲ್ಲಿ ಇರಬಾರದೆಂದು ಸಮುದ್ರದಿಂದ ಪಶ್ಚಿಮ ಕರಾವಳಿಯ ಕೆಲವು ಭಾಗಗಳನ್ನು ಪಡೆದನು. ಇದನ್ನೇ ಕೊಂಕಣ ಅಥವಾ ಪರಶುರಾಮ ಕ್ಷೇತ್ರವೆನ್ನುತ್ತಾರೆ. ಇದಕ್ಕೆ ಉತ್ತರದಲ್ಲಿ ಗುಜರಾತು, ದಕ್ಷಿಣದಲ್ಲಿ ಗೋಕರ್ಣ, ಪಶ್ಚಿಮಕ್ಕೆ ಸಮುದ್ರ, ಪೂರ್ವಕ್ಕೆ ಸಹ್ಯಾದ್ರಿ ಇದೆ.

ಕೋಕಾಮುಖ - ಒಂದು ತೀರ್ಥ. ಇದಕ್ಕೆ ವರಾಹಕ್ಷೇತ್ರವೆಂದು ಹೆಸರುಂಟು (ಮ.ವ.).

ಕೋಟರಾ - ಬಲಿಚಕ್ರವರ್ತಿಯ ಹೆಂಡತಿ; ಬಾಣಾಸುರನ ತಾಯಿ (ಭಾಗ.).

ಕೋಟಿಕಾ (ಕೋಟಿಕಾಸ್ಯ) - ಒಬ್ಬ ಕ್ಷತ್ರಿಯ; ಸುರಥನ ಪುತ್ರ. ಶಿಬಿವಂಶದವ. ಪಾಂಡವರ ಅರಣ್ಯವಾಸಕಾಲದಲ್ಲಿ ಜಯದ್ರಥಮ ದ್ರೌಪದಿಯನ್ನು ಒಲಿಸಿಕೊಳ್ಳಲು ಈತನನ್ನು ಅವಳ ಬಳಿಗೆ ಕಳುಹಿಸಿದನು. ಮುಂದೆ ಭೀಮನೊಡನೆ ಯುದ್ಧಮಾಡುವಾಗ ಈತನು ಅವನಿಂದ ಹತನಾದನು (ಮ.ವ.).

ಕೋಟಿತೀರ್ಥ - ೧. ಬುಂದೇಲಖಂಡ ಜಿಲ್ಲೆಯ ಕಾಲಿಂಜಾರಿನಲ್ಲಿರುವ ಒಂದು ಕೊಳ. ೨. ಗೋಕರ್ಣದ ಒಂದು ದೊಡ್ಡ ಕೆರೆ. ೩. ಮಧುರೆಯ ಒಂದು ಕೊಳ. ೪. ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನ ಕೋಟೇಶ್ವರದ (ಧ್ವಜೇಶ್ವರ) ಒಂದು ದೊಡ್ಡ ಕೆರೆ. ಇದನ್ನು ಬಸರೂರಿನ ವಸುರಾಜನು ಕಟ್ಟಿಸಿದನೆನ್ನುತ್ತಾರೆ. ೫. ರಾಮೇಶ್ವರದಲ್ಲಿದ್ದ ಒಂದು ತೀರ್ಥ (ಮ.ವ.,ದ.ಕ.ಇ.).

ಕೋಟೀಶ್ವರ - ದಕ್ಷಿಣಕನ್ನಡ ಜಿಲ್ಲೆಯ ಸಪ್ತಕ್ಷೇತ್ರಗಳಲ್ಲೊಂದು. ಇದಕ್ಕೆ ಧ್ವಜೇಶ್ವರ ಎನ್ನುತ್ತಾರೆ. ಇದರ ಒಂದು ಮೈಲು ದಕ್ಷಿಣದಲ್ಲಿ ಕುಂಭಕಾಸಿ ಅಥವಾ ಕುಂಭಾಸಿ ಎಂಬ ಇನ್ನೊಂದು ಕ್ಷೇತ್ರವಿದೆ. ಕೋಟೇಶ್ವರಕ್ಕೆ ಕೋಟಿಲಿಂಗೇಶ್ವರ ಕ್ಷೇತ್ರವೆನ್ನುತ್ತಾರೆ. ಇಲ್ಲಿಯ ಹಬ್ಬಕ್ಕೆ ಕೊಡಿ (ಕುಡಿ) ಹಬ್ಬವೆನ್ನುತ್ತಾರೆ. ಬಸರೂರಿನ ವಸುರಾಜನು ಈ ದೇವಾಲಯವನ್ನು

ನಿರ್ಮಿಸಿದನು (ದ.ಕ.ಇ.).

ಕೋಣಾರ್ಕ - ಪುರಿಯಿಂದ ಇಪ್ಪತ್ತು ಮೈಲು ದೂರದಲ್ಲಿದ್ದ ಒಂದು ಸೂರ್ಯಕ್ಷೇತ್ರ. ಶ್ರೀಕೃಷ್ಣಪುತ್ರನಾದ ಸಾಂಬನಿಗೆ ಕುಷ್ಠರೋಗ ಪ್ರಾಪ್ತವಾಗಲು ಅವನು ಕೃಷ್ಣನ ಸೂಚನೆಯಂತೆ ಇಲ್ಲಿ ಕೋಣಾದಿತ್ಯನನ್ನು ಆರಾಧಿಸಿ ಕ್ಷೇಮಹೊಂದಿದನು (ಕ್ಷೇತ್ರದ.).

ಕೋಲಾಹಲ - ಒಂದು ಪರ್ವತ. ಮಾಲವ ಮತ್ತು ಬುಂದೇಲಖಂಡವನ್ನು ಪ್ರತ್ಯೇಕ ಮಾಡುವ ಚಂದೇರಿ ಸಮೀಪದ ಪರ್ವತಾವಳಿ (ಮ.ಆ.).

ಕೋಲ - ಮೂಕಾಸುರನನ್ನು ದೇವಿಯಿಂದ ಕೊಲ್ಲಿಸಿದ ಮುನಿಯೊಬ್ಬ. ಇವನಿದ್ದ ಊರನ್ನು ಮೊದಲ ಮಹಾರಣ್ಯಪುರವೆಂದೂ ಈಗ ಕೊಲ್ಲೂರು ಎಂದೂ ಹೇಳುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಸಪ್ತಕ್ಷೇತ್ರಗಳಲ್ಲಿ ಇದೊಂದು. ಇದಕ್ಕೆ ಮೂಕಾಂಬಾಕ್ಷೇತ್ರ ಎನ್ನುತ್ತಾರೆ. ಈ ಕ್ಷೇತ್ರದಲ್ಲಿ ಮಲೆಯಾಳಿಗಳಿಲ್ಲದ ದಿನವೊಂದನ್ನೂ ಕಾಣಲಾರೆವು (ದ.ಕ.ಇ.).

ಕೋಶೇಶ್ವರ - ಒಂದು ತೀರ್ಥವಿಶೇಷ (ಮ.ವ.).

ಕೋಷ - ಒಂದು ನದಿ (ಮ.ಭೀ.).

ಕೋಸಲ - ೧. ಒಂದು ನದಿ. ೨. ಸೂರ್ಯವಂಶೀಯ ರಾಜರು ಆಳಿದ ದೇಶ. ಸರಯೂ ನದಿಯ ಉತ್ತರಭಾಗದ ಪ್ರದೇಶಕ್ಕೆ ಉತ್ತರಕೋಸಲವೆಂದೂ, ದಕ್ಷಿಣಭಾಗದ ಪ್ರದೇಶಕ್ಕೆ ದಕ್ಷಿಣಕೋಸಲವೆಂದೂ ಹೇಳುತ್ತಾರೆ. ಈ ದೇಶಕ್ಕೆ ಅಯೋಧ್ಯೆಯೆನ್ನುವುದು ರಾಜಧಾನಿ (ಮ.ಭೀ.).

ಕೋಹಲ - ೧. ಜನಮೇಜಯನ ಸರ್ಪಯಾಗದಲ್ಲಿ ಸದಸ್ಯನಾಗಿದ್ದ ಒಬ್ಬ ಋಷಿ. ೨. ಸಂಗೀತಶಾಸ್ತ್ರವನ್ನು ಬರೆದ ಒಬ್ಬ ಮಹರ್ಷಿ (ಮ.ಆ.).

ಕೌಂಡಿನ್ಯ - ಕುಂಡಿನನೆಂಬ ಮಹರ್ಷಿಯ ಮಗ. ಇವನು ವಸಿಷ್ಠಮುನಿಯ ವಂಶದವನು. ಗೋತ್ರಪ್ರವರ್ತಕನು. ನೋ-ಕುಂಡಿನ (ಮ.ಸ.,ಜೈ.ಭಾ.).

ಕೌಂಡ್ರಕ - ಕುಂಭಕರ್ಣನ ಮೊಮ್ಮಗ ನಿಕುಂಭನ ಮಗ. ಈತನು ಮಾಯಾನಗರಿಯಲ್ಲಿ ವಾಸಮಾಡುತ್ತಿದ್ದ ಶತಮುಖರಾವಣನ ಸಹಾಯದಿಂದ ವಿಭೀಷಣನನ್ನು ಲಂಕೆಯಿಂದೋಡಿಸಲು ಶ್ರೀರಾಮನು ಪುಷ್ಪಕವಿಮಾನದಲ್ಲಿ ಕುಳಿತು, ಲಂಕೆಗೆ ಬಂದು, ಕೌಂಡ್ರಕನನ್ನು ರಾಮನೂ, ಶತಮುಖ ರಾವಣನನ್ನು ಸೀತೆಯೂ ಕೊಂದರು (ಆನಂ.ರಾ.).

ಕೌತ್ಸ - ಋಷಿಯೊಬ್ಬ. ಈತನು ಭಗೀರಥನ ಅಳಿಯ; ಭೃಂಗುವಂಶದ ಮಹರ್ಷಿ; ಈತನ ಪತ್ನಿ ಭಗೀರಥನ ಮಗಳಾದ ಹಂಸಿ. ವಿಶ್ವಾಮಿತ್ರನ ಶಿಷ್ಯನಾದ ಈತನು

ಗುರುದಕ್ಷಿಣೆಗಾಗಿ ರಘುಮಹಾರಾಜನಿಂದ ಹದಿನಾಲ್ಕು ಕೋಟಿ ಸುವರ್ಣಗಳನ್ನು ತಂದುಕೊಟ್ಟನು (ಮ.ಅನು.,ರ.ವಂ.).

ಕೌಮೋದಕಿ - ಶ್ರೀಕೃಷ್ಣನ ಗದೆ. ಖಾಂಡವವನ ದಹನಕಾಲದಲ್ಲಿ ಅಗ್ನಿಯು ವರುಣನಿಂದ ಈ ಗದೆಯನ್ನು ತಂದು ಶ್ರೀಕೃಷ್ಣನಿಗೆ ಕೊಟ್ಟನು (ಮ.ಆ.).

ಕೌರವ್ಯ - ಅರ್ಜುನನ ಪತ್ನಿಯಾದ ಉಲೂಪಿಯ ತಂದೆ. ಇವನು ಐರಾವಂತನೆಂಬ ಸರ್ಪರಾಜನ ವಂಶದವನು. ಭೀಷ್ಮನ ಮರಣದಿಂದ ಕೋಪಗೊಂಡ ವಸುಗಳು ಅರ್ಜುನನಿಗೆ ನರಕಪ್ರಾಪ್ತವಾಗುವಂತೆ ಶಾಪಕೊಡಲು, ಗಂಗೆಯಲ್ಲಿ ಸ್ನಾನ ಮಾಡುತ್ತಿದ್ದ ಉಲೂಪಿಯು ಇದನ್ನು ಕೇಳಿ ತನ್ನ ತಂದೆಗೆ ಬಂದು ಹೇಳಿದಳು. ಕೌರವ್ಯನು ವಸುಗಳ ಸಮೀಪಕ್ಕೆ ಹೋಗಿ, ತನ್ನ ಅಳಿಯನನ್ನು ಈ ಶಾಪದಿಂದ ವಿಮೋಚನೆಗೊಳಿಸಬೇಕೆನ್ನಲು - 'ಅರ್ಜುನನು ತನ್ನ ಮಗನಿಂದ ಸೋತರೆ ಈ ಶಾಪವಿಮೋಚನೆಯಾಗುತ್ತದೆ' ಎಂದರು. ವಸುಗಳ ಮಾತಿನಂತೆ ಮುಂದೆ ಬಭ್ರುವಾಹನನಿಂದ ಅರ್ಜುನನು ಪರಾಜಿತನಾದುದರಿಂದ ಈ ಶಾಪದಿಂದ ವಿಮೋಚನೆ ಹೊಂದಿದನು. ನೋ. - ಅರ್ಜುನ, ಉಲೂಪಿ (ಮ.ಅಶ್ವ.,ಜೈ.ಭಾ.).

ಕೌಶಿಕ - ೧. ಕುರುಕ್ಷೇತ್ರದ ಒಬ್ಬ ಬ್ರಾಹ್ಮಣ; ಶ್ರೇಷ್ಠನಾದ ಬ್ರಾಹ್ಮಣ. ಇವನಿಗೆ ಸ್ವಸೃಪ, ಕ್ರೋಧನ, ಹಿಂಸ್ರ, ಪಿಶುನ, ಕವಿ, ವಾಗ್ದುಷ್ಟ, ಪಿತೃವರ್ತಿ - ಎಂಬ ಏಳು ಮಂದಿ ಮಕ್ಕಳಿದ್ದರು. ಈ ಮಕ್ಕಳ ಕಾಲದಲ್ಲಿ ಭಯಂಕರ ಕ್ಷಾಮ ತಲೆದೋರಲು ಗರ್ಗ ಋಷಿಯ ಶಿಷ್ಯರಾದ ಇವರು ಪಿತೃಶ್ರಾದ್ಧಕ್ಕಾಗಿ ತಾವು ಸಾಕುತ್ತಿದ್ದ ಕಪಿಲ ಗೋವನ್ನು ಕೊಂದು ತಿಂದರು. ಹೀಗೆ ಶ್ರಾದ್ಧವನ್ನು ಇವರು ಕ್ರೂರ ರೀತಿಯಿಂದ ಮಾಡಿದುದರಿಂದ ಮುಂದೆ ದಶಪುರದಲ್ಲಿ (ದಶಾರ್ಣದೇಶ) ಕ್ರೂರಕರ್ಮಿಗಳಾದ ಏಳು ಮಂದಿ ವ್ಯಾಧರಾಗಿ ಹುಟ್ಟಿದರು. ಆಗಲೂ ಇವರು ನಿಯಮದಲ್ಲಿದ್ದುದರಿಂದ ಕಾಲಂಜರಗಿರಿಯಲ್ಲಿ ಏಳು ಮೃಗಗಳಾಗಿ ಹುಟ್ಟಿದರು (ಮತ್ಸ್ಯಪು.). ೨. ವಸುದೇವನ ಒಬ್ಬ ಮಗ. ಇವನನ್ನು ಮಕ್ಕಳಿಲ್ಲದ ವತ್ಸಾವತನೆಂಬ ತನ್ನ ತಮ್ಮನಿಗೆ ದತ್ತಕ್ಕೆ ಕೊಟ್ಟನು (ಹರಿ.). ೩. ಒಬ್ಬ ಋಷಿ. ಈತನು ತಪಸ್ಸು ಮಾಡುತ್ತಿದ್ದಾಗ ತನ್ನಮೇಲೆ ಹಿಚಿಕೆ ಹಾಕಿದ ಕೊಕ್ಕರೆಯನ್ನು ಕ್ರೂರದೃಷ್ಟಿಯಿಂದ ಕಂಡನು. ಆಗ ಅದು ನೆಲಕ್ಕೆ ಬಿದ್ದು ಪ್ರಾಣಬಿಟ್ಟಿತು. ಆಗ ಕೌಶಿಕನು ತಾನು ದೊಡ್ಡ ತಪಸ್ವಿಯಾದನೆಂದು ಭಿಕ್ಷಾರ್ಥಿಯಾಗಿ ಒಂದು ಮನೆಗೆ ಹೋಗಿ 'ಭಿಕ್ಷಾಂ ದೇಹಿ' ಎಂದನು. ಆ ಮನೆಯ ಗೃಹಿಣಿಯು ಭಿಕ್ಷೆ ತರುವುದಕ್ಕಾಗಿ ಒಳಗೆ ಹೋದಾಗ ದೂರ ಹೋಗಿದ್ದ ಪತಿಯು ಒಳಗೆ ಬರಲು ಆತನ ಸೇವೆಯಲ್ಲೇ ತತ್ಪರಳಾಗಿದ್ದಳು. ಇತ್ತ ಕೌಶಿಕನು ಸಿಟ್ಟಿನಿಂದ ಶಾಪಕೊಡಲು ಸಿದ್ಧನಾದಾಗ ಆ ಬ್ರಾಹ್ಮಣಿಯು 'ನಾನು ವೃಕ್ಷದ ಮೇಲಿದ್ದ

ಬಕ ಪಕ್ಷಿಯಲ್ಲ' ಎನ್ನಲು, ಬ್ರಾಹ್ಮಣನು ಗಾಬರಿಯಾಗಿ, ಆಕೆಗೆ ಆ ವಿಚಾರ ಹೇಗೆ ತಿಳಿಯಿತೆಂದು ಪ್ರಶ್ನಿಸಲು, ಆಕೆ ಕ್ರೋಧದ ದುಷ್ಪರಿಣಾಮ, ಬ್ರಾಹ್ಮಣಧರ್ಮದ ಕುರಿತು ತಿಳಿಸಿ, ಆತನನ್ನು ಮಿಥಿಲಾ ಪಟ್ಟಣದ ಧರ್ಮವ್ಯಾಧನೆಂಬ ಬೇಡನ ಬಳಿಗೆ ಧರ್ಮ ಸೂಕ್ಷ್ಮವನ್ನರಿಯಲು ಕಳುಹಿಸಿದಳು. ಧರ್ಮವ್ಯಾಧನು ನಾಲ್ಕು ವರ್ಣಗಳ ಧರ್ಮ, ರಾಜಧರ್ಮ, ತಾನು ಪಾಲಿಸುತ್ತಿರುವ ಧರ್ಮ, ಮಾತಾ ಪಿತೃಗಳ ಸೇವೆಯ ಮಹತ್ವ ಮೊದಲಾದ ಧರ್ಮವಿಚಾರಗಳನ್ನು ವಿಸ್ತಾರವಾಗಿ ಕೌಶಿಕನಿಗೆ ತಿಳಿಸಿ, ಆತನನ್ನು ಅವನ ಮನೆಗೇ ಕಳುಹಿಸಿದನು (ಮ.ವ.). ೪. ಒಬ್ಬ ಬ್ರಾಹ್ಮಣ. ಇವನು ಸತ್ಯ ಹೇಳುವೆನೆಂದು ತನ್ನ ಆಶ್ರಮದಲ್ಲಿ ಅಡಗಿದ್ದ ಪ್ರಯಾಣಿಕರನ್ನು ಕಳ್ಳರಿಗೆ ತೋರಿಸಿ ನರಕಕ್ಕೆ ಹೋದನು. ೫. ಕುಶಿಕರಾಜನ ವಂಶದವರಿಗೆಲ್ಲಾ ಈ ಹೆಸರು ಸಲ್ಲುತ್ತದೆ. ವಿಶ್ವಾಮಿತ್ರನಿಗೆ ಈ ಹೆಸರು ರೂಢಿಯಾಗಿದೆ. ನೋ. - ವಿಶ್ವಾಮಿತ್ರ ೬. ಜರಾಸಂಧನ ಒಬ್ಬ ಸೇನಾಪತಿ. ಇವನಿಗೆ ಹಂಸನೆಂದು ಪರ್ಯಾಯನಾಮ (ಮ.ಸ.).

ಇವನು ತ್ರೇತಾಯುಗದ ಒಬ್ಬ ಬ್ರಾಹ್ಮಣ. ಇವನು ಹರಿಭಕ್ತನಾಗಿದ್ದು ಹರಿಕೀರ್ತನೆಯನ್ನು ಮಾಡುತ್ತಾ ಪುಣ್ಯಕ್ಷೇತ್ರಗಳಲ್ಲಿ ಸಂಚರಿಸುತ್ತಿರಲು ಕಳಿಂಗ ದೇಶದ ರಾಜನೊಬ್ಬನು ಕೌಶಿಕನಿಂದ ತನ್ನನ್ನು ಹೊಗಳಿಸಿಕೊಳ್ಳಬೇಕೆಂದು ಪ್ರಯತ್ನಪಡಲು, ಅದು ವ್ಯರ್ಥವಾಗಿ ಕೌಶಿಕನು ತನ್ನ ನಾಲಗೆಯನ್ನು ಕತ್ತರಿಸಿಕೊಂಡು ಸ್ವರ್ಗಸ್ಥನಾದನು. ಇವನು ಸತ್ಯಲೋಕವನ್ನು ಹೊಂದಿ ಬಹಳ ಸಮಯವಿದ್ದು ಆಮೇಲೆ ದಿಗ್ಬಲನೆಂಬ ಗಣಾಧಿಪನಾಗಿದ್ದು ಸಾಲೋಕ್ಯಪದವನ್ನು ಹೊಂದಿದನು. ಇವನ ಸ್ನೇಹಿತನಾದ ಪದ್ಮಾಕ್ಷನಿಗೆ ಮಾಲತಿಯೆಂಬ ಹೆಂಡತಿಯಿದ್ದಳು. ಈ ಪದ್ಮಾಕ್ಷನೇ ಮುಂದೆ ಕುಬೇರನಾದನು (ಅಧ್ಯ.ರಾ.).

ಕುಶಿಕಗೋತ್ರದ ಗಾಧಿರಾಜನ ಮಗ. ಇವನ ರಾಜ್ಯಭಾರಕಾಲದಲ್ಲಿ ಈತನ ರಾಜ್ಯಕ್ಕೆ ರಾಕ್ಷಸರ ಬಾಧೆ ಹೆಚ್ಚಲು ಇವನು ತನ್ನ ಸೇನೆಯಿಂದ ರಾಕ್ಷಸರನ್ನೂ, ದುಷ್ಟರನ್ನೂ ನಿಗ್ರಹಿಸಿ ವಸಿಷ್ಠಾಶ್ರಮಕ್ಕೆ ಬಂದನು. ಅಲ್ಲಿ ಅವನ ಸೈನಿಕರು ಆಶ್ರಮದ ತರುಗಳನ್ನು ಮುರಿದು ಹಾವಳಿಯೆಬ್ಬಿಸಲು ಮುನಿಯು ಕಾಮಧೇನುವಿನ ಸಹಾಯದಿಂದ ಭಯಂಕರ ರೂಪದ ಶಬರರನ್ನು ನಿರ್ಮಾಣ ಮಾಡಿ ಕೌಶಿಕನನ್ನು ಸೋಲಿಸಿ ಅಪಮಾನ ಮಾಡಲು ಅವನು ತಪಸ್ಸಿಗೆ ತೊಡಗಿದನು (ಮ.ಶ.).

ಕೌಶಿಕಿ - ೧. ವಿಶ್ವಾಮಿತ್ರನ ಸಹೋದರಿ. ಈಕೆ ಜಮದಗ್ನಿಮುನಿಯ ತಾಯಿ. ಈಕೆಗೆ

ಸತ್ಯವತಿಯೆಂಬ ಹೆಸರಿದೆ. ಇವಳು ಹಿಮವತ್ಪರ್ವತದಿಂದ ನದಿಯಾಗಿ ಹರಿದು ಗಂಗೆಯನ್ನು ಸೇರಿ ಬಂಗಾಳ ಕೊಲ್ಲಿಯನ್ನು ಸೇರಿದಳು. ಈ ನದಿಗೆ ಕೌಶಿಕೀ ಅಥವಾ ಕುಸಿ ನದಿಯೆಂದು ಹೆಸರು. ಈ ನದಿಯ ಒಂದು ಭಾಗಕ್ಕೂ ಕೌಶಿಕೀ ಎನ್ನುತ್ತಾರೆ. ಈ ನದಿಯ ತೀರದಲ್ಲೇ ವಿಶ್ವಾಮಿತ್ರಾಶ್ರಮ ಮತ್ತು ವಿಭಾಂಡಕಮುನಿಯ ಆಶ್ರಮವಿತ್ತು. ೨. ವಿಶ್ವಾಮಿತ್ರನ ಹೆಂಡತಿ (ಹರಿ.). ೩. ಶುಂಭನಿಶುಂಭರೆಂಬ ರಾಕ್ಷಸರನ್ನು ಕೊಂದ ದೇವಿ. ಪಾರ್ವತಿಯ ದೇಹಕೋಶದಿಂದ ಈ ಶಕ್ತಿದೇವತೆಯು ಹೊರಗೆ ಬಂದುದರಿಂದ ಕೌಶಿಕೀ ಎಂಬ ಹೆಸರಾಯಿತು.

ವಿಶ್ವಾಮಿತ್ರನು ತನ್ನ ಸ್ನಾನಕ್ಕಾಗಿ ನಿಯಮಿಸಿಕೊಂಡ ನದಿ. (ಮ.ಆ.). ವಿಶ್ವಾಮಿತ್ರನು ತಪಸ್ಸಿನಿಂದ ಹಿಂದಿರುಗಿದ ಮೇಲೆ ಈ ನದಿಗೆ ಪಾರೆ (ತುಂಬಿದುದು) ಎಂದು ಹೆಸರಿಟ್ಟನು. (ಮ.ಆ.).

ಕೌಸಲ್ಯ - ಕೋಸಲದೇಶದ ಅರಸನಾದ ಕ್ಷೇಮದರ್ಶಿ. ನೋ. - ಕಾಲಕವೃಕ್ಷೀಯ.

ಕೌಸಲ್ಯೆ - ೧. ಅಂಬಿಕೆ. ಈಕೆ ವಿಚಿತ್ರವೀರ್ಯನ ಪತ್ನಿ. ಇವಳ ಮಗನೇ ಧೃತರಾಷ್ಟ್ರ. ೨. ಕೋಸಲದೇಶದ ರಾಜನಾದ ಭಾನುಮಂತನ ಮಗಳು. ಈಕೆಯು ದಶರಥನ ಪಟ್ಟದ ರಾಣಿ. ಈಕೆಯ ಮಗನೇ ಶ್ರೀರಾಮಚಂದ್ರ. ಕೌಸಲ್ಯೆಯು ಪೂರ್ವಜನ್ಮದಲ್ಲಿ ಅದಿತಿಯಾಗಿಯೂ, ಮುಂದಿನ ಜನ್ಮದಲ್ಲಿ ದೇವಕಿಯಾಗಿಯೂ ಹುಟ್ಟಿದಳು. ದಶರಥನು ಮೊದಲು ಕಶ್ಯಪಮುನಿಯಾಗಿದ್ದು ಕಡೆಗೆ ವಸುದೇವನಾಗಿ ಜನಿಸಿದನು. ೩. ಯಯಾತಿ ಮತ್ತು ಶರ್ಮಿಷ್ಠೆಯರ ಮಗನಾದ ಪುರುವಿನ ಹೆಂಡತಿ. ಈಕೆಯ ಮಗನೇ ಜಯಮೇಜಯ. ೪. ಶ್ರೀಕೃಷ್ಣನ ತಂದೆಯಾದ ವಸುದೇವನ ಹದಿನಾಲ್ಕು ಮಂದಿ ಹೆಂಡಿರಲ್ಲೊಬ್ಬಳು. ಈಕೆಯ ಮಗನೇ ಕೇಶಿ (ಮ.ಆ.,ಭಾಗ.,ಹರಿ.).

ರಾವಣನು ತನಗೆ ಯಾರಿಂದ ಮರಣವಾಗುವುದೆಂದು ಬ್ರಹ್ಮನನ್ನು ಕೇಳಲು ಆತನು 'ಅಯೋಧ್ಯೆಯ ರಾಜನಾದ ದಶರಥ ಮತ್ತು ಕೌಸಲ್ಯೆಯರಲ್ಲಿ ಹುಟ್ಟಿದ ಶ್ರೀರಾಮನಿಂದ ಆಗುತ್ತದೆ' ಎಂದೆನ್ನಲು ರಾವಣನು ತಕ್ಷಣ ದಶರಥನನ್ನು ಹುಡುಕುತ್ತ ಪುಷ್ಪಕವಿಮಾನದಲ್ಲಿ ಅಯೋಧ್ಯೆಗೆ ಬರಲು ಸರಯೂ ನದಿಯಲ್ಲಿ ನೌಕಾರೂಢನಾಗಿದ್ದ ದಶರಥನನ್ನು ಕಂಡು ಅವನೊಡನೆ ಘೋರವಾದ ಯುದ್ಧ ಮಾಡಿ ನೌಕೆಯನ್ನೊಡೆಯಲು ದಶರಥ ಮತ್ತು ಸುಮಂತ್ರರು ನೀರುಪಾಲಾಗಲು ರಾವಣನು ಅಲ್ಲಿಂದ ಕೋಸಲದೇಶದ ಕಡೆಗೆ ತಿರುಗಿದನು. ಇತ್ತ ದಶರಥ ಸುಮಂತ್ರರು ಒಂದು ಹಲಗೆಯ ಸಹಾಯದಿಂದ ತೇಲುತ್ತಾ ಸಮುದ್ರವನ್ನು

ಸೇರಿದರು. ರಾವಣನು ಕೋಸಲೇಂದ್ರನೊಡನೆ ಹೋರಾಡಿ, ಸೋಲಿಸಿ, ಅವನ ಕನ್ಯಾರತ್ನವಾದ ಕೌಸಲ್ಯೆಯನ್ನಪಹರಿಸಿ ಲಂಕಾಭಿಮುಖನಾದನು. ಅವನು ಕೌಸಲ್ಯೆಯನ್ನು ಒಂದು ಪೆಟ್ಟಿಗೆಯೊಳಗೆ ಹಾಕಿ ಒಂದು ಮೊಸಳೆ ಹತ್ತಿರ ಕೊಟ್ಟು ಹೊರಟುಹೋದನು. ಆ ಮೊಸಳೆಗೆ ಒಂದು ದಿನ ಪ್ರಬಲವಾದ ಶತ್ರುವಿನೊಡನೆ ಹೋರಾಡುವ ಸಮಯ ಬರಲು ಅದು ಪೆಟ್ಟಿಗೆಯನ್ನು ಸಮುದ್ರದಡದಲ್ಲಿಟ್ಟು ಹೋರಾಟಕ್ಕೆ ಹೋಯಿತು. ಇತ್ತ ತೇಲುತ್ತ ಬಂದ ದಶರಥ ಸುಮಂತ್ರರು ಆ ಪೆಟ್ಟಿಗೆಯ ಬಳಿಗೆ ಬಂದರು. ಜನರಹಿತವಾದ ಸ್ಥಳದಲ್ಲಿದ್ದ ಆ ಪೆಟ್ಟಿಗೆಯನ್ನು ಕಂಡು ದಶರಥನು ಅದರ ಬಾಯಿಯನ್ನು ತೆಗೆಯಲು ಅಲ್ಲೇ ದಶರಥ - ಕೌಸಲ್ಯೆಯರಿಗೆ ಗಾಂಧರ್ವವಿವಾಹವಾಯಿತು.

ರಾವಣನು ಬ್ರಹ್ಮನ ಬಳಿ ತನ್ನ ಪೌರುಷವನ್ನು ಕೊಚ್ಚುತ್ತಿರುವಾಗ ಆತನು 'ಓಂ ಪುಣ್ಯಾಹಂ ಓಂ ಪುಣ್ಯಾಹಂ' ಎಂದು ಮಂಗಲವಚನವನ್ನು ಗಟ್ಟಿಯಾಗಿ ಅನ್ನ ಹತ್ತಲು ರಾವಣನು ಅದರ ಕಾರಣವನ್ನು ಕೇಳಿದನು. ಆಗ ಬ್ರಹ್ಮನು ಕೌಸಲ್ಯಾಪರಿಣಯದ ವಿಚಾರ ಹೇಳಲು, ರಾವಣನು ಕೋಪದಿಂದ ಮೊಸಳೆಯ ವಶವಿದ್ದ ಪೆಟ್ಟಿಗೆಯನ್ನು ಲಂಕೆಗೆ ತಂದು ದಶರಥ ಕೌಸಲ್ಯೆಯರನ್ನು ಈಗಲೇ ಕೊಲ್ಲುತ್ತೇನೆಂದು ಖಡ್ಗವೆತ್ತಲು 'ಈಗಲೇ ರಾಮಾವತಾರವಾಗಿ ನಿನ್ನ ವಧೆಯಾಗುವುದು' ಎಂದು ಬ್ರಹ್ಮನು ಹೇಳಲು, ರಾವಣನು ಆ ಮೂವರನ್ನು ಅಯೋಧ್ಯೆಯ ಬಳಿ ತಂದುಬಿಟ್ಟುಹೋದನು. ದೈವಸಂಕಲ್ಪವು ಮೀರಲಸಾಧ್ಯವಾದುದು (ಆನಂ.ರಾ.).

ಕೌಸವಿ (ಕೌಸಲಿ) - ದ್ರುಪದರಾಜನ ಪತ್ನಿ. ಈಕೆಗೆ ಪೃಶತೀ ಎಂಬ ಹೆಸರಿದೆ (ಮ.ಆ.). ಸೌತ್ರಾಮಣಿಯೆಂಬ ಯಜ್ಞದ ಪೂರ್ಣಾಹುತಿಯ ಕಾಲದಲ್ಲಿ ಪುರೋಹಿತನಾದ ಯಾಜನು ರಾಣಿಯನ್ನು ಕರೆಸಿಕೊಂಡು- 'ಈ ಯಜ್ಞದ ಹವಿಸ್ಸನ್ನು ಭುಜಿಸು. ನಿನಗೆ ವಂಶೋದ್ಧಾರಕರಾದ ಒಂದು ಗಂಡು ಒಂದು ಹೆಣ್ಣು ಮಗು ಹುಟ್ಟುವುವು. ಇಲ್ಲಿ ಬಾ' ಎನ್ನಲು ಅವಳು 'ನಾನು ಮುಖ ತೊಳೆದಿಲ್ಲ. ಸ್ನಾನಮಾಡಿ ಮುಖಕ್ಕೆ ಅರಸಿನ ಪೂಸಲಿಲ್ಲ. ನನ್ನ ಇಷ್ಟವಿದ್ದಾಗ ಬರುವೆನು. ಈಗ ಬರಲಾರೆ' ಎನ್ನಲು ಮಂತ್ರ ಸಂಸ್ಕೃತವಾದ ಆ ಹವಿಸ್ಸನ್ನು ಆ ಯಜ್ಞಾಗ್ನಿಯಲ್ಲಿ ಹೋಮ ಮಾಡಲು ಒಬ್ಬ ತೇಜಸ್ವಿಯಾದ ಕುಮಾರನೂ, ಒಬ್ಬಳು ಕುಮಾರಿಯೂ ಹುಟ್ಟಿ ಬಂದರು. ಕುಮಾರನೇ ಧೃಷ್ಟದ್ಯುಮ್ನ; ಕುಮಾರಿಯೇ ಕೃಷ್ಣೆ ಅಥವಾ ದ್ರೌಪದಿ (ಮ.ಆ.). ಧೃಷ್ಟಧ್ಯುಮ್ನ- ಅಪ್ರಧೃಷ್ಯನೂ, ತೇಜಸ್ವಿಯೂ, ಸುವರ್ಣಾಭರಣಗಳೊಡನೆ (ದ್ಯುಮ್ನ) ಹುಟ್ಟಿದವನು.

ಕೌಸ್ತುಭ - ಶ್ರೀಮನ್ನಾರಾಯಣನು ಎದೆಯಲ್ಲಿ ಧರಿಸಿದ ರತ್ನ. ಇದು ಸಮುದ್ರಮಥನ ಕಾಲದಲ್ಲಿ ಜನಿಸಿತು (ಮ.ಆ.).

ಕ್ರತು - ೧. ಬ್ರಹ್ಮನ ಮಾನಸಪುತ್ರ. ಈತನ ಮಕ್ಕಳು ಸೂರ್ಯನ ಅನುಚರರಾದ ವಾಲಖಿಲ್ಯರು. ಈತನ ಹೆಂಡತಿ ಕ್ರಿಯೆ (ಭಾಗ.). ಮತ್ತು ಸನ್ನತಿ (ವಿಷ್ಣುಪು). ೨. ಪಾಂಚಾಲದ ಕ್ಷತ್ರಿಯನೊಬ್ಬ. ಈತನು ಕರ್ಣನಿಂದ ಹತನಾದನು (ಮ.ಕ.). ೩. ಶ್ರೀಕೃಷ್ಣ ಮತ್ತು ಜಾಂಬವತಿಯರ ಒಬ್ಬ ಮಗ. ಇವನಿಗೆ ಸಾಂಬ, ಸುಭಾನು, ಪ್ರಭಾನು, ಚಂದ್ರಭಾನು ಮೊದಲಾದವರು ಸಹೋದರರು. (ಭಾಗ.,ಮ.ಸ.,ಆ.). ನೋ. - ಕೃಷ್ಣ.

ಕ್ರತು - ೧. ದಕ್ಷಪ್ರಜಾಪತಿಯ ಪುತ್ರಿ; ಧರ್ಮನ ಪತ್ನಿ. ಈಕೆಯ ಮಗನ ಹೆಸರು ಯೋಗ. ೨. ಕರ್ದಮಪ್ರಜಾಪತಿಯ ಮಗಳು (ಮ.ಕ.,ಭಾಗ.,ವಿಷ್ಣುಪು.).

ಕ್ರಥ - ೧. ಯದುವಂಶದ ವಿದರ್ಭನ ಮಗ. ಈತನಿಗೆ ಕೈಶಿಕ, ರೋಮಪಾದರೆಂಬ ಇಬ್ಬರು ತಮ್ಮಂದಿರಿದ್ದರು. ನೋ. - ವಿದರ್ಭ, ಉಪದಾನವಿ (ಮತ್ಸ್ಯಪು). ೨. ಅಮೃತವನ್ನು ಕಾಪಾಡುವ ಒಬ್ಬ ದೇವತೆ. (ಮ.ಆ.).

ಕ್ರಥಕೈಶಿಕ - ವಿದರ್ಭದೇಶದ ಒಂದು ಭಾಗ. ಈಗ ಬೀಹಾರಿನಲ್ಲಿದೆ. ಹಿಂದೆ ಇದು ವಿದರ್ಭದ ರಾಜಧಾನಿಯಾಗಿತ್ತು (ಮ.ಸ.).

ಕ್ರಥನ - ೧. ಅಮೃತರಕ್ಷಕನಾದ ಒಬ್ಬ ದೇವ. ೨. ಒಬ್ಬ ಅಸುರ. ೩. ಧೃತರಾಷ್ಟ್ರನ ಮಗ. ೪. ಒಬ್ಬ ಕಪಿನಾಯಕ; ಸುಗ್ರೀವನ ಸೇನಾಪತಿ (ರಾಮಾ. ಯುದ್ಧ).

ಕ್ರಾಥ - ಧೃತರಾಷ್ಟ್ರನ ಮಗ; ಇವನು ಭೀಮನಿಂದ ಹತನಾದ (ಮ.ಕ.).

ಕ್ರೋಧ - ಕ್ರೋಧೆಯೆಂಬವಳ ಮಗ; ಈತನು ಸರ್ಪರೂಪದಿಂದ ಜಮದಗ್ನಿಯು ಪಿತೃಕಾರ್ಯಕ್ಕೆ ಸಿದ್ಧಗೊಳಿಸಿದ ಪಾಯಸದಲ್ಲಿ ವಿಷವನ್ನು ಕಾರಿ ಆ ಪಿತೃಗಳ ಶಾಪದಿಂದ ಬಹುಕಾಲ ಮುಂಗುಸಿಯಾಗಿದ್ದ. (ಮ.ಆ.).

ಕ್ರೋಧನ - ೧. ಸೀತೆಯ ಮೇಲೆ ಅಪವಾದ ಹೇಳಿ ಆಕೆಯ ಅರಣ್ಯವಾಸಕ್ಕೆ ಕಾರಣನಾದ ಅಗಸ (ಪದ್ಮಪು.). ನೋ. - ಸೀತಾ. ೨. ಒಂದು ಸಂವತ್ಸರ.

ಕ್ರೋಧವಶ - ೧. ಸೌಗಂಧಿಕಾಪುಷ್ಪವಿದ್ದ ಸರೋವರವನ್ನು ಕಾಯುತ್ತಿದ್ದ ರಾಕ್ಷಸರು. ಇವರು ಕಶ್ಯಪ ಮುನಿಯಿಂದ ಕ್ರೋಧೆಯಲ್ಲಿ ಜನಿಸಿದರು. ಭೀಮನು ಸೌಗಂಧಿಕಾ ಪುಷ್ಪವನ್ನು ತರಲು ಹೋದಾಗ ಅವನನ್ನು ಪ್ರತಿಭಟಿಸಿ ಸೋತು ಕುಬೇರನ ಬಳಿಗೆ ಹೋಗಿ ದೂರಿಕೊಂಡರು. ೨. ಇಂದ್ರಜಿತುವಿನ ಅನುಯಾಯಿಯಾದ ರಾಕ್ಷಸ (ಮ.ಆ.).

ಕ್ರೋಧವಶಾ - ಕ್ರೋಧೆಯೆಂಬುದು ಈಕೆಯ ಇನ್ನೊಂದು ಹೆಸರು. ಈಕೆಯ ತಂದೆ

ದಕ್ಷಬ್ರಹ್ಮ; ಪತಿ ಕಶ್ಯಪ. ಈಕೆಯ ಮಕ್ಕಳು ಕ್ರೂರವಾದ ಮೃಗಪಕ್ಷಿಗಳು. ಈಕೆಗೆ ಮೃಗಿ, ಮೃಗಮಂದೆ, ಹರಿ, ಭದ್ರಮನೆ, ಮಾತಂಗಿ, ಶಾರ್ದೂಲಿ, ಶ್ವೇತೆ, ಸುರಭಿ, ಸುರಸೆಯರೆಂಬ ಒಂಬತ್ತು ಮಂದಿ ಹೆಣ್ಣುಮಕ್ಕಳು (ಮ.ಆ.).

ಕ್ರೋಧೆ - ನೋ. - ಕ್ರೋಧವಶಾ.

ಕ್ರೋಷ್ಟುಕಿ - ಒಬ್ಬ ಮಹರ್ಷಿ; ಮಾರ್ಕಂಡೇಯ ಮುನಿಯಿಂದ ಈತನು ಅನೇಕ ಧರ್ಮರಹಸ್ಯಗಳನ್ನು ತಿಳಿದನು (ಮಾರ್ಕಂ.ಪು.)

ಕ್ರೌಂಚ - ೧. ಪರ್ವತವೊಂದು; ಹಿಮಾಲಯನ ಮೊಮ್ಮಗ; ಮೈನಾಕನ ಮಗ (ಹರಿ.). ಸುಬ್ರಹ್ಮಣ್ಯನು ಈ ಕ್ರೌಂಚಪರ್ವತವನ್ನು ಭೇದಿಸಿ ಅದರಲ್ಲಿ ಮಹತ್ತಾದ ರಂಧ್ರವನ್ನು ಮಾಡಿದನು. (ಮ.ಭೀ.,ಶ.,ಹರಿ.). ೨. ಇಂದಿನ ಆಫ್ರಿಕಾ ಖಂಡ. ಇದರ ಸುತ್ತಲೂ ಹಿಂದೆ ಘೃತ ಸಮುದ್ರವಿತ್ತಂತೆ. ಪ್ರಿಯ ವ್ರತರಾಜನ ಮಗನಾದ ಘೃತಪೃಷ್ಠನು ಇಲ್ಲಿ ರಾಜ್ಯಭಾರಮಾಡಿದ್ದನು. ಸಪ್ತದ್ವೀಪಗಳಲ್ಲೊಂದು (ಭಾಗ., ದೇವೀಭಾ.,ವಿಷ್ಣುಪು.,ಶಿವಪು.).

ಕ್ರೌಂಚವ್ಯೂಹ - ಪಾಂಡವರು ಕೌರವರು ಯುದ್ಧಕಾಲದಲ್ಲಿ ತಮ್ಮ ಸೇನೆಯನ್ನು ಕ್ರೌಂಚಪಕ್ಷಿಯ (ಕೊಕ್ಕರೆಜಾತಿಯ ಹಕ್ಕಿಯ) ಆಕಾರದಲ್ಲಿ ನಿಲ್ಲಿಸಿ ಹೋರಾಡಿದರು. ಇದಕ್ಕೆ ಕ್ರೌಂಚಾರುಣವೆಂದು ಹೆಸರಿದೆ. ಬೃಹಸ್ಪತಿಯು ದೇವೇಂದ್ರನಿಗೆ ಸೂಚಿಸಿದ ವ್ಯೂಹವಿದು (ಮ.ಭೀ.).

ಕ್ರೌಂಚಾರಣ್ಯ (ಕ್ರೌಂಚಾವಟ) - ದಂಡಕಾರಣ್ಯದ ದಕ್ಷಿಣ ದಿಕ್ಕಿಗಿದ್ದ ಕಾಡು. ಶ್ರೀರಾಮನು ಈ ಅರಣ್ಯದಲ್ಲೇ ಕಬಂಧನನ್ನು ಕೊಂದನು. ಈ ಅರಣ್ಯಕ್ಕೆ ಸಮೀಪದಲ್ಲೇ ಋಷ್ಯಮೂಕ ಪರ್ವತವಿತ್ತು. (ರಾಮಾ.ಅರ.).

ಕ್ರೌಂಚಿ - ರಾವಣನ ತಂಗಿ. ಈಕೆಯ ಪತಿ ಖಡ್ಗಜಿಹ್ವ. ಈಕೆ ಶೂರ್ಪನಖಿಯ ತಂಗಿ.

ಕ್ಷತ್ತಾ - ವಿದುರನ ಇನ್ನೊಂದು ಹೆಸರು (ಮ.ಆ.).

ಕ್ಷತ್ರಂಜಯ - ಪಾಂಚಾಲದ ದೃಷ್ಟದ್ಯುಮ್ನನ ಮಗ. ಇವನು ದ್ರೋಣನಿಂದ ಹತನಾದನು. (ಮ.ದ್ರೋ.).

ಕ್ಷತ್ರದೇವ - ಶಿಖಂಡಿಯ ಮಗ. ಇವನು ದುರ್ಯೋಧನನ ಪುತ್ರನಾದ ಲಕ್ಷ್ಮಣನಿಂದ ಹತನಾದನು. (ಮ.ಉ.,ದ್ರೋ.,). ಈತನಿಗೆ ಬಾಲ್ಯದಿಂದಲೂ ಯುದ್ಧಪರಿಶ್ರಮವಿಲ್ಲದುದರಿಂದ ಅರ್ಧರಥಿಕ.

ಕ್ಷತ್ರಬಂಧು - ಒಬ್ಬ ರಾಜ. ಪೂರ್ವದಲ್ಲಿ ಒಬ್ಬ ಬ್ರಾಹ್ಮಣನು ಇನ್ನೊಬ್ಬ ಬ್ರಾಹ್ಮಣನ ಸೊತ್ತನ್ನಪಹರಿಸಿ ಮರುಜನ್ಮದಲ್ಲಿ ಚಂಡಾಲನಾದನು. ಇವನು

ಕ್ಷತ್ರಬಂಧು ರಾಜನ ದರ್ಶನದಿಂದ ಶಾಪವಿಮೋಚನೆಯನ್ನು ಹೊಂದಿದನು (ಮ.ಅನು.).

ಕ್ಷತ್ರವೃದ್ಧ - ಇವನಿಗೆ ವೃದ್ಧಶರ್ಮನೆಂಬ ಹೆಸರೂ ಇದೆ. ಈತನ ತಾಯಿ ಸ್ವರ್ಭಾನವಿ. ತಂದೆ ಚಂದ್ರವಂಶದ ಆಯುಮಹಾರಾಜ. ಆಯುರಾಜನು ದತ್ತಾತ್ರೇಯನಿಂದ ವರಪಡೆದ. ನಹುಷನು ಈತನ ಸಹೋದರ. ರಜಿ, ಗಯ, ಅನೇನಸರು ಈತನ ತಮ್ಮಂದಿರು. (ಮ.ಅ.).

ಕ್ಷೀರಕುಂಡ - ರಾಮೇಶ್ವರದ ಬಳಿಯ ಒಂದು ತೀರ್ಥ. ಕುರುಕ್ಷೇತ್ರದಲ್ಲಿ ವಾಸಮಾಡುತ್ತಿದ್ದ ಮುದ್ಗಲನೆಂಬ ಮಹರ್ಷಿಯು ರಾಮಸೇತುವಿನ ಬಳಿ ವಿಷ್ಣುಪ್ರೀತ್ಯರ್ಥವಾಗಿ ಒಂದು ಯಜ್ಞ ಮಾಡಿದನು. ಯಜ್ಞಸ್ವರೂಪನಾದ ಶ್ರೀವಿಷ್ಣುವು ಯಾಗಶಾಲೆಯಲ್ಲಿ ಪ್ರತ್ಯಕ್ಷನಾಗಿ ವರವನ್ನು ಕೇಳುವಂತೆ ಹೇಳಿದನು. ಮುದ್ಗಲನು 'ದೇವಾ, ನಿನ್ನ ಪ್ರೀತ್ಯರ್ಥವಾಗಿ ಕಾಮಧೇನುವಿನ ಹಾಲಿನಿಂದ ಯಜ್ಞಮಾಡುವ ಮನಸ್ಸಿದೆ. ಅದನ್ನು ಪೂರೈಸಬೇಕು' ಎಂದು ಪ್ರಾರ್ಥಿಸಲು ಭಗವಂತನು ವಿಶ್ವಕರ್ಮನಿಂದ ಅಲ್ಲೇ ಕೊಳವನ್ನು ಮಾಡಿಸಿ, ಕಾಮಧೇನುವನ್ನು ಕರೆದು, ಮುದ್ಗಲನ ಯಜ್ಞಕಾರ್ಯವು ಮುಗಿಯುವವರೆಗೆ ಪ್ರಾತಃಸಾಯಂಕಾಲಗಳಲ್ಲಿ ಈ ಕೊಳದ ತುಂಬಾ ಹಾಲು ಕರೆಯಬೇಕೆಂದು ಅಪ್ಪಣೆ ಮಾಡಿ ಅದೃಶ್ಯನಾದನು. ಮುದ್ಗಲನು ಈ ಹಾಲಿನಿಂದ ಕ್ಷೀರಸಾಗರ ಶಾಯಿಯ ಕೃಪೆಗೆ ಪಾತ್ರನಾದನು. ಈ ಕೊಳಕ್ಕೆ ಮುಂದೆ ಕ್ಷೀರಕುಂಡತೀರ್ಥವೆಂದು ಹೆಸರು ಬಂತು (ಕ್ಷೇತ್ರದ.).

ಕ್ಷೀರವತಿ - ದಕ್ಷಿಣ ಹಿಂದುಸ್ಥಾನದಲ್ಲಿ ಹರಿಯುವ ಪಾಲಾರು ನದಿ.

ಕ್ಷೀರಸಮುದ್ರ (ಕ್ಷೀರೋದ) - ೧. ಹಾಲಿನ ಸಮುದ್ರ; ಸಪ್ತಸಮುದ್ರಗಳಲ್ಲಿ ಆರನೇ ಸಮುದ್ರ. ಇದನ್ನೇ ಸುರಾಸುರರು ಮಥಿಸಿ ಅಮೃತ ಮೊದಲಾದ ಅಮೂಲ್ಯ ವಸ್ತುಗಳನ್ನು ಪಡೆದರು. ವ್ಯಾಘ್ರಪಾದನೆಂಬ ಋಷಿಪುತ್ರನು ತಾಯಿಯಿಂದ ಹಾಲು ಪಡೆಯಲಾರದೆ ಶಿವನನ್ನು ಕುರಿತು ತಪಸ್ಸುಮಾಡಿ ಕ್ಷೀರಸಾಗರವನ್ನೇ ಪಡೆದನು. ೨. ಶಿವನು ಒಂದು ದಿನ ಹಿಮಗಿರಿಯ ಪಕ್ಕದ ಋಷ್ಯಾಶ್ರಮಗಳನ್ನು ನೋಡುತ್ತಾ ಬರುತ್ತಿರಲು ಮುನಿಕುಮಾರರು ಶಿವನನ್ನು ಕಂಡು ಹಾಸ್ಯಮಾಡಲು, ಅವನು ಸಿಟ್ಟಿನಿಂದ ಮೂರನೇ ಕಣ್ಣನ್ನು ತೆರೆದನು. ಆಗ ಋಷ್ಯಾಶ್ರಮಗಳೆಲ್ಲಾ ಬೆಂದುಹೋದುವು. ಇದರಿಂದ ಸಿಟ್ಟುಗೊಂಡ ಮುನಿಗಳು ಶಿವನಿಗೆ ಸುಟ್ಟು ಹೋಗುವಂತೆ ಶಾಪವೀಯಲು ಅವನು ಬೇಯುತ್ತಿರುವಾಗ ಕಾಮಧೇನುವಿನ ಹಾಲಿನಿಂದ ಅವನ ತಾಪ ಆರಿಸಿದರು. ಅದೇ ಕ್ಷೀರಸಾಗರವಾಯಿತು. (ಮ.ಭೀ., ಆ., ಅನು., ಭಾಗ., ರಾಮಾ., ವಿಷ್ಣುಪು., ಪದ್ಮಪು.).

ಕ್ಷುಪ - ಕ್ಷತ್ರಿಯ. ಭೂಮಿಯು ಅರಾಜಕವಾಗಿ ಪ್ರಜೆಗಳು ಸ್ವೇಚ್ಛಾಚಾರಿಗಳಾಗಿರಲು ಅವರ ಕ್ಷೇಮಕ್ಕಾಗಿ ಬ್ರಹ್ಮನೊಂದು ದಿನ ಸೀನಿದನು. ಆಗ ಅವನ ಮೂಗಿನಿಂದ ಒಬ್ಬ ವೀರನು ಹುಟ್ಟಿಬಂದನು. ಇವನಿಗೆ ಕ್ಷುಪನೆಂದು ಹೆಸರು. (ಕ್ಷುತದಿಂದ ಹುಟ್ಟಿದವ) (ಮ.ಶಾಂ.).

ಕ್ಷೇತ್ರಪಾಲ - ದಾರಕನೆಂಬ ರಾಕ್ಷಸನ ನಾಶಕ್ಕಾಗಿ ಪಾರ್ವತಿಯು ಶಿವನ ಕೊರಳಿನ ಕಪ್ಪಿನಿಂದ ಒಂದು ಮಹಾದೇವತೆಯನ್ನು ಸೃಷ್ಟಿಸಿ ಆಕೆಗೆ ಕಾಳಿಕೆಯೆಂದು ಹೆಸರಿಟ್ಟು ಕಳುಹಿಸಲು ಕಾಳಿಕೆಯು ತನ್ನ 'ಹೂಂ' ಕಾರದಿಂದಲೇ ಆ ರಾಕ್ಷಸನನ್ನು ಕೊಂದಳು. ಮುಂದೆ ಕಾಳಿಕೆಯು ಅವಂತೀಪಟ್ಟಣದ ಸ್ಮಶಾನವನ್ನು ಸೇರಿ ಭಯಂಕರವಾಗಿ ಅಟ್ಟಹಾಸ ಮಾಡಲು ಇದರಿಂದ ಮೂರು ಲೋಕವೂ ನಡುಗಿತು. ಆಗ ಶಿವನು ಬಾಲಕನಾಗಿ ಆಕೆಯ ತೊಡೆಯ ಮೇಲೆ ಕುಳಿತು ಸ್ತನ್ಯಪಾನಮಾಡಿ ಆಕೆಯ ಕೋಪವನ್ನು ತಣಿಸಿದನು. ಮುಂದೆ ಈಕೆಯ ಬಾಲಕರಾಗಿ ಅರುವತ್ತನಾಲ್ಕು ಮಂದಿ ಶಿಶುಗಳನ್ನು ನಿರ್ಮಿಸಿ ಶಿವನು ಅವರಿಗೆ ಕ್ಷೇತ್ರಪಾಲರೆಂದು ಹೆಸರಿಟ್ಟನು. ಮುಂದೆ ಈ ಕ್ಷೇತ್ರಪಾಲರನ್ನು ಸಮಸ್ತರೂ ಶುಭಕಾರ್ಯಾರಂಭದಲ್ಲಿ ಪೂಜಾ ನೈವೇದ್ಯ ಬಲಿಗಳಿಂದ ಪ್ರಸನ್ನಗೊಳಿಸಬೇಕೆಂದೂ, ಹಾಗೆ ಪೂಜಿಸದವರ ಕ್ಷೇಮಕಾರ್ಯಗಳೂ ಕೈಗೂಡದಿರಲೆಂದೂ ವರವಿತ್ತನು. ನೋ. - ದಾರಕ. ೨. ದೈವಸ್ಥಾನಗಳಲ್ಲಿರುವ ಪ್ರಸಿದ್ಧ ದೈವ.

ಕ್ಷೇಮಂತರ - ಕ್ಷತ್ರಿಯ; ತ್ರಿಗರ್ತ (ಮ.ವ.).

ಕ್ಷೇಮದರ್ಶಿ - ಕ್ಷತ್ರಿಯ; ಕೌಸಲ್ಯರಾಜನ ಮಗ. ನೋ. - ಕಾಲಕವೃಕ್ಷೀಯ (ಮ.ಶಾಂ.).

ಕ್ಷೇಮಧೂರ್ತಿ - ೧. ಸಾಲ್ವನ ಮಂತ್ರಿ ಮತ್ತು ಸೇನಾಪತಿ. ಸಾಂಬನಿಂದ ಇವನು ಪರಾಜಿತನಾದ (ಮ.ವ.). ೨. ಕರೂಶದೇಶಾಧಿಪತಿ. ಇವನು ಭೀಮನಿಂದ ಹತನಾದನು (ಮ.ಕ.). ೩. ಧೃತರಾಷ್ಟ್ರನ ಮಗ (ಮ.ಆ.). ೪. ಕ್ಷತ್ರಿಯ; ಬೃಹಂತನ ಸಹೋದರ. ಇವನು ಸಾತ್ಯಕಿಯೊಡನೆ ಯುದ್ಧಮಾಡಿ ಗೆಲ್ಲಲಾರದೆ ತಳಮಳ ಹೊಂದಿದಾಗ ಭೀಮನು ಇವನನ್ನು ಜಯಸಿ ಕೊಂದನು. (ಮ.ದ್ರೋ.ಕ.).

ಕ್ಷೇಮಶರ್ಮ - ಕ್ಷತ್ರಿಯ. ದುರ್ಯೋಧನನ ಪಕ್ಷದ ರಾಜ (ಮ.ದ್ರೋ.).

ಕ್ಷೇಮೆ - ಅಪ್ಸರೆಯೊಬ್ಬಳು. (ಮ.ಆ.).

ಕ್ಷೇಮವೃದ್ಧಿ - ಸಾಲ್ವನ ಸೇನಾಪತಿಯೊಬ್ಬ; ಇವನು ಸಾಲ್ವನೊಡನೆ ದ್ವಾರಕಿಯನ್ನು ಮುತ್ತಿದಾಗ ಸಾಂಬನು ಈತನೊಡನೆ ಭಯಂಕರವಾಗಿ ಹೋರಾಡಿದನು. ಆಗ ಕ್ಷೇಮವೃದ್ಧಿಯು ಮಾಯಾಯುದ್ಧಕ್ಕೆ ತೊಡಗಲು

ಸಾಂಬನು ಅವನ ಮಾಯೆಯನ್ನು ಹೋಗಲಾಡಿಸಿ ಯುದ್ಧ ಭೂಮಿಯಿಂದ ಓಡಿಸಿದನು. ನೋ. - ಸಾಲ್ವ (ಮ.ವ.).

ಖ

ಖಗಮ (ಖಗಮುಖ) - ಒಬ್ಬ ಬ್ರಾಹ್ಮಣ. ಸಹಸ್ರಪಾದನೆಂಬ ಇನ್ನೊಬ್ಬ ಬ್ರಾಹ್ಮಣನು ಈತನ ಮೇಲೆ ಹಗ್ಗವನ್ನು ಚೆಲ್ಲಿ ಹಾವೆಂದು ಭಯಪಡಿಸಿದುದರಿಂದ ಖಗಮನು ಕೋಪದಿಂದ - 'ನೀನು ನೀರೊಳ್ಳೆಯಾಗು' ಎಂದು ಶಾಪವಿತ್ತನು. ಮುಂದೆ ಸಹಸ್ರಪಾದನು ಖಗಮನೊಡನೆ ಕ್ಷಮಾಯಾಚನೆಮಾಡಲು 'ರುರು ಎಂಬ ಮುನಿಯಿಂದ ಪೆಟ್ಟು ತಿಂದು ಶಾಪವಿಮೋಚನೆಯನ್ನು ಹೊಂದು' ಎಂದು ಅನುಗ್ರಹಿಸಿದನು. ನೋ. - ಸಹಸ್ರಪಾದ (ಮ.ಆ.,ಅನು.).

ಖಟ್ವಾಂಗ - ೧. ಸೂರ್ಯವಂಶದ ಅಂಶುಮಂತನ ಮಗ. ದಿಲೀಪನು ತನ್ನ ಅಜ್ಜಂದಿರ ಸದ್ಗತಿಗಾಗಿ ಗಂಗೆಯನ್ನು ಭೂತಳಕ್ಕೆ ತರುವುದಕ್ಕಾಗಿ ಪ್ರಯತ್ನಿಸಿದನು. ಇವನ ಮಗನೇ ಭಗೀರಥ. ೨. ಸೂರ್ಯವಂಶದ ವಿಶ್ವಸಹನ ಮಗ. ಇವನಿಗೆ ದಿಲೀಪನೆಂಬ ಹೆಸರಿದೆ. ಒಮ್ಮೆ ಇವನು ಇಂದ್ರನ ಸಹಾಯಾರ್ಥವಾಗಿ ಸ್ವರ್ಗಕ್ಕೆ ಹೋಗಿ ಹಿಂದೆ ಬರುವಾಗ ಕಾಮಧೇನುವನ್ನು ತಿರಸ್ಕರಿಸಿದುದರಿಂದ ಆತನಿಗೆ ಹಲವು ಕಾಲ ಕಳೆದರೂ ಮಕ್ಕಳಾಗದುದರಿಂದ, ಮುಂದೆ ವಸಿಷ್ಠಮುನಿಯ ಸೂಚನೆಯಂತೆ ಕಾಮಧೇನುವಿನ ಮಗಳಾದ ನಂದಿನಿಯನ್ನು ಸೇವೆಯಿಂದ ಸಂತುಷ್ಟಿಗೊಳಿಸಿ, ಪತ್ನಿಯಾದ ಸುದಕ್ಷಿಣೆಯಲ್ಲಿ ರಘುವೆಂಬ ಮಹಾ ಯಶೋವಂತನಾದ ಬಾಲಕನನ್ನು ಪಡೆದನು. ದಿಲೀಪನು ದೇವತೆಗಳಿಂದ ತನ್ನ ಆಯುಃಪರಿಮಿತಿಯು ಇನ್ನೊಂದು ಮುಹೂರ್ತವೆಂದು ತಿಳಿದು ಪರಮೇಶ್ವರನಲ್ಲಿ ಮನಸ್ಸಿಟ್ಟು ಸದ್ಗತಿಯನ್ನು ಪಡೆದನು. (ಮ.ದ್ರೋ.,ವ.,ಸ.,ಶಾಂ.,ಪದ್ಮಪು.).

ಖಡ್ಗಿ - ಕ್ಷತ್ರಿಯ; ಚಂದ್ರವಂಶದ ಧೃತರಾಷ್ಟ್ರನ ಮಗ; ಇವನು ಭೀಮನಿಂದ ಹತನಾದನು. (ಮ.ಕ.).

ಖನಕ (ಕನಕ) - ವಿದುರನ ಸ್ನೇಹಿತ; ದುರ್ಯೋಧನನ ಮಂತ್ರಿಗಳಲ್ಲಿ ಒಬ್ಬನಾದ ಪುರೋಚನನ ಜೊತೆಯಲ್ಲಿದ್ದು ವಾರಣಾವತದ ಅರಗಿನ ಮನೆಯ ನಿರ್ಮಾಣದಲ್ಲೂ ಅದರ ಮೇಲ್ವಿಚಾರಣೆಯಲ್ಲೂ ಇದ್ದವನು. ಇವನು ವಿದುರನ ಸೂಚನೆಯಂತೆ ಅರಗಿನ ಮನೆಯಿಂದ ಪಾಂಡವರು ಹೊರಗೆ ಹೋಗಲು ಗುಪ್ತವಾದ ಸುರಂಗವನ್ನು ಕೊರೆದನು. ಭೀಮನು ಅರಗಿನ ಮನೆಗೆ ಬೆಂಕಿಯಿತ್ತು ತನ್ನ ಸಹೋದರರನ್ನು ಮತ್ತು ತಾಯಿಯನ್ನು ಈ

ಮಾರ್ಗವಾಗಿಯೇ ಹೊರಗೆ ಸಾಗಿಸಿದನು (ಮ.ಆ.).

ಖನಿ - ಸುಲಭಾಮೈತ್ರೇಯಿಯ ತಂದೆಯಾದ ಕುಣಿಗಾರ್ಗ್ಯನ ಇನ್ನೊಂದು ಹೆಸರು. ನೋ. - ಕುಣಿಗಾರ್ಗ್ಯ.

ಖನೀನೇತ್ರ - ಒಬ್ಬ ಕ್ಷತ್ರಿಯ; ಇವನ ತಂದೆ ಸೂರ್ಯವಂಶದ ವಿವಿಂಶ. ಇವನಿಗೆ ಮಕ್ಕಳಾಗದಿರಲು ಪಿತೃಗಳ ತೃಪ್ತಿಗಾಗಿ ಶ್ರಾದ್ಧವನ್ನು ಮಾಡಬೇಕೆಂದು ನಿರ್ಧರಿಸಿ ಮಾಂಸವನ್ನು ತರಬೇಕೆಂದು ಅರಣ್ಯಕ್ಕೆ ಹೋಗಲು ಅಲ್ಲಿ ಒಂದು ಜಿಂಕೆಯು - 'ನನಗೆ ಮಕ್ಕಳಿಲ್ಲ. ನನ್ನನ್ನು ಕೊಲ್ಲು' ಎಂದೂ, ಇನ್ನೊಂದು - 'ನನಗೆ ರಕ್ಷಿಸಲಾರದಷ್ಟು ಮಕ್ಕಳಿವೆ. ಅವುಗಳ ವಿಪತ್ತಿನ ಭಯವೇ ಯಾವಾಗಲೂ ನನ್ನ ಮನಸ್ಸಿನಲ್ಲಿ ಸುಳಿಯುತ್ತಿರುತ್ತದೆ. ಆದುದರಿಂದ ನನ್ನನ್ನು ತಿನ್ನು' ಎಂದೂ ಒತ್ತಾಯ ಮಾಡಲು ರಾಜನು ಪ್ರಾಣಿಹಿಂಸೆಯನ್ನು ಮಾಡಲಾರದೆ ಪುನಃ ಅರಮನೆಗೇ ಬಂದನು. ಇವನು ಮುಂದೆ ಪ್ರಜೆಗಳ ಅನುರಾಗವನ್ನು ಕಳೆದುಕೊಂಡುದರಿಂದ ಇವನ ಮಗನಾದ ಖರಂಧಮನು ಸಿಂಹಾಸನವೇರಬೇಕಾಯಿತು. ನೋ. ಖರಂಧಮ (ಮಾರ್ಕಂ.ಪು.).

ವಿವಿಂಶನ ಹದಿನೈದು ಮಕ್ಕಳಲ್ಲಿ ಇವನು ಹಿರಿಯವನು. ಇವನು ಇತರ ಸಹೋದರರನ್ನು ಪೀಡಿಸುತ್ತಿದ್ದನು. ಇವನು ರಾಜ್ಯಗಳನ್ನು ಜಯಿಸಿ ಶತ್ರುಬಾಧೆಯಿಲ್ಲದಂತೆ ಮಾಡಿದರೂ ರಾಜ್ಯವನ್ನು ರಕ್ಷಿಸಲು ಅಸಮರ್ಥನಾದನು. ಆದ್ದರಿಂದ ಪ್ರಜೆಗಳು ಅವನನ್ನು ರಾಜ್ಯಾಧಿಕಾರದಿಂದ ತಪ್ಪಿಸಿ ಸುವರ್ಚಸ ಎಂಬ ಆತನ ಮಗನಿಗೆ ಪಟ್ಟಾಭಿಷೇಕ ಮಾಡಿದರು. (ಮ.ಅಶ್ವ.).

ಖರ - ಒಬ್ಬ ರಾಕ್ಷಸ. ಈತನ ತಂದೆ ವಿಶ್ರವಸು ಮುನಿ. ತಾಯಿ ರಾಕೆಯೆಂಬ ರಾಕ್ಷಸಿ; ಶೂರ್ಪನಖಿ ಮತ್ತು ದೂಷಣನ ಸಹೋದರ. ರಾವಣನು ದಿಗ್ವಿಜಯಕಾಲದಲ್ಲಿ ತನ್ನನ್ನು ಪ್ರತಿಭಟಿಸಿದ ಶೂರ್ಪನಖಿಯ ಗಂಡನಾದ ವಿದ್ಯುಜಿಹ್ವನೆಂಬ ಮಾಯಾವಿಯಾದ ರಕ್ಕಸನನ್ನು ಕೊಂದನು. ಕೊನೆಗೆ ರಾವಣನು ಆಕೆಯ ಸಮಾಧಾನಕ್ಕಾಗಿ ಖರನನ್ನು ದಂಡಕಾರಣ್ಯದ ಒಡೆಯನನ್ನಾಗಿ ಮಾಡಿ ಹದಿನಾಲ್ಕು ಸಾವಿರ ಸೇನೆಯೊಡನೆ ಕಳುಹಿಸಿದನು. ಇವರೆಲ್ಲಾ ಸಜ್ಜನರನ್ನು ಪೀಡಿಸುತ್ತಿರಲು ಶೂರ್ಪನಖಿಯು ರಾಮ ಲಕ್ಷ್ಮಣರನ್ನು ನೋಯಿಸಲು ಲಕ್ಷ್ಮಣನು ಆಕೆಯ ಕಿವಿಮೂಗುಗಳನ್ನು ಕತ್ತರಿಸಿ ಬಿಡಲು ಆಕೆಯು ತನ್ನ ಅಣ್ಣನಾದ ಖರನಲ್ಲಿ ದೂರಿಕೊಳ್ಳಲು, ಖರನು ಸೇನಾಸಮೇತನಾಗಿ ರಾಮಾಶ್ರಮದ ಹತ್ತಿರ ಬರಲು ಶ್ರೀರಾಮನು ಖರನೊಡನೆ ಆತನ ಸೈನ್ಯವನ್ನು ಕೊಂದನು. (ರಾಮಾ.ಅರ.,ಮ.ವ.).

ಶ್ರೀರಾಮನು ತನ್ನ ಭುಜಬಲದಿಂದ ಖರ, ದೂಷಣ, ತ್ರಿಶಿರರನ್ನೂ ಅವರ ಹದಿನಾಲ್ಕು ಸಾವಿರ ಸೇನೆಯನ್ನೂ ನಾಶಮಾಡಿದನು. ಈ ಸ್ಥಳಕ್ಕೆ ತ್ರ್ಯಂಬಕಕ್ಷೇತ್ರವೆಂದು ಹೆಸರುಬಂತು. (ಆನಂ.ರಾ.).

ಖಾಂಡವ - ಸರಸ್ವತೀ ದೃಷದ್ವತೀ ನದಿಗಳ ಪೂರ್ವದಿಕ್ಕಿನಲ್ಲಿರುವ ಒಂದು ವನ. ಒಮ್ಮೆ ಅಗ್ನಿಯು ವರುಣಲೋಕದಲ್ಲಿ ಹನ್ನೆರಡು ವರ್ಷ ನಡೆದ ಯಜ್ಞದಿಂದ ಅಜೀರ್ಣವನ್ನು ಹೊಂದಿ ಅಶ್ವಿನೀದೇವತೆಗಳ ಸೂಚನೆಯಂತೆ ಖಾಂಡವವನವನ್ನು ಸುಟ್ಟು 'ಆರೋಗ್ಯಹೊಂದಲು ಅರ್ಜುನನ ಬಳಿಗೆ ಬ್ರಾಹ್ಮಣರೂಪದಿಂದ ಬಂದನು. ಆ ವನದ ಒಡೆಯನು ಇಂದ್ರನಾದುದರಿಂದ ಅದನ್ನು ಸುಡುವಾಗ ಆತನಿಗೆ ತಡೆಯಾಗದಂತೆ ಅರ್ಜುನನಿಂದ ಅಭಯವನ್ನು ಪಡೆದು ಅಗ್ನಿಯು ಹದಿನೈದು ದಿನಗಳವರೆಗೆ ಆ ವನವನ್ನು ದಹಿಸಿದನೆಂದೂ, (ಇಪ್ಪತ್ತೊಂದು ದಿನಗಳವರೆಗೆ ದಹಿಸಿದನೆಂದೂ) ಹೇಳುತ್ತಾರೆ. ಖಾಂಡವವನ ದಹನಕಾಲದಲ್ಲಿ ಆ ವನದಲ್ಲಿ ವಾಸವಾಗಿದ್ದ ತಕ್ಷಕನ ಮನೆಯಲ್ಲಿ ಉಳಿದುಕೊಂಡ ಮಯನೆಂಬ ರಾಕ್ಷಸ ಶಿಲ್ಪಿಯು ಅರ್ಜುನನ ಮರೆಹೊಕ್ಕು ತನ್ನ ಪ್ರಾಣವನ್ನುಳಿಸಿಕೊಂಡನು. ಅದೇ ಮೇರೆಗೆ ಋಷಿಕುಲಕ್ಕೆ ಸೇರಿದ ನಾಲ್ಕು ಸಾರಂಗಗಳೆಂಬ ಪಕ್ಷಿಗಳೂ ಅಗ್ನಿಯನ್ನು ಪ್ರಾರ್ಥಿಸಿ ಬಿಡುಗಡೆ ಹೊಂದಿದರು. ಸರ್ಪರಾಜನಾದ ತಕ್ಷಕನ ಮಗ ಅಶ್ವಸೇನನು ಅಗ್ನಿಯಿಂದ ತಪ್ಪಿಸಿಕೊಂಡು ಆಕಾಶಮಾರ್ಗವಾಗಿ ಹೋಗುತ್ತಿರುವಾಗ ಅಗ್ನಿಯ ಸೂಚನೆಯಂತೆ ಅರ್ಜುನನು ಅದರ ಮೇಲೆ ಬಾಣಪ್ರಯೋಗಮಾಡಿ ಅದರ ಬಾಲವನ್ನು ತುಂಡರಿಸಿದನು. ಉಳಿದ ಭಾಗವು ತಪ್ಪಿಸಿಕೊಂಡು ಹೋಗಿ ಕರ್ಣನ ಬತ್ತಳಿಕೆಯಲ್ಲಿ ಸರ್ಪಾಸ್ತ್ರವಾಗಿ ಸೇರಿಕೊಂಡು ಅರ್ಜುನನ ಅವಸಾನವನ್ನು ನಿರೀಕ್ಷಿಸುತ್ತಿತ್ತು. ಇದೇ ಕಾಲದಲ್ಲಿ ಇಂದ್ರನು ಅರ್ಜುನನಿದ್ದಲ್ಲಿಗೆ ಬಂದು - 'ನಿನಗೆ ಪರಮೇಶ್ವರನ ಅನುಗ್ರಹವಾಗುವುದೆಂದು ವರವಿತ್ತು, ಕೃಷ್ಣನಿಗೆ ಕೂಡ ಅರ್ಜುನನ ಮೇಲಿನ ನಿನ್ನ ಪ್ರೇಮವು ಸ್ಥಿರವಾಗಿರಲಿ' ಎಂದು ಹೇಳಿ ಹೊರಟುಹೋದನು. ಅಗ್ನಿಯ ಜಾಡ್ಯವು ಪರಿಹಾರವಾಯಿತು. ಖಾಂಡವವನವಿದ್ದ ಸ್ಥಳದಲ್ಲಿಯೇ ಶ್ರೀಕೃಷ್ಣನು ದೇವಶಿಲ್ಪಿಯಾದ ವಿಶ್ವಕರ್ಮನ ಮೂಲಕ ಇಂದ್ರಪ್ರಸ್ಥವನ್ನು ರಚಿಸಿದನು. (ಮ.ಆ.).

ಖಾಂಡವಪ್ರಸ್ಥ - ಖಾಂಡವವನವಿದ್ದ ಪ್ರದೇಶ. ಹಿಂದೆ ಇಲ್ಲೇ ಆಯು, ಪುರೂರವ, ನಹುಷ, ಯಯಾತಿಗಳೆಲ್ಲಾ ಆಳಿದರು. ಬುಧನ ಪುತ್ರನಾದ ಪುರೂರವನ ಲೋಭಕ್ಕಾಗಿ ಋಷಿಗಳು ಇದನ್ನು ನಾಶಮಾಡಿದರು (ಮ.ಆ.,ರಾಜ್ಯಲಾಭ ಪರ್ವ). ಇದೇ ಇಂದ್ರಪ್ರಸ್ಥ. ಈಗ ಈ ನಗರವನ್ನು ದೆಹಲಿಯೆನ್ನುತ್ತಾರೆ. ದ್ರೌಪದೀ ಸ್ವಯಂವರಾನಂತರ ಪಾಂಡವರು ತಮ್ಮ

ಪಾಲಿಗೆ ಬಂದ ರಾಜ್ಯಕ್ಕೆ ಇಂದ್ರಪ್ರಸ್ಥವನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡರು. ಆಗ ಮಯನು ಶ್ರೀಕೃಷ್ಣನ ಸೂಚನೆಯಂತೆ ಅಲ್ಲೇ ಒಂದು ಸಭೆಯನ್ನು ನಿರ್ಮಿಸಿಕೊಡುವೆನೆಂದು ಒಪ್ಪಿಕೊಂಡು ಕೈಲಾಸದ ಉತ್ತರಕ್ಕಿರುವ ಒಂದು ಸರದಲ್ಲಿದ್ದ ವೃಷಪರ್ವನ ಸಭೆಯ ಫಲಕ, ಸ್ತಂಭಾದಿ ಉತ್ತಮ ಪದಾರ್ಥಗಳನ್ನೆಲ್ಲಾ ಸಂಗ್ರಹಿಸಿ ದಿವ್ಯವಾದ ಒಂದು ಸಭಾಮಂಟಪವನ್ನು ನಿರ್ಮಾಣಮಾಡಿದನು. ಈ ಪಟ್ಟಣದಲ್ಲೇ ಈ ಕಾಲದಲ್ಲಿ ಅವನು ಭೀಮನಿಗೆ ದಿವ್ಯವಾದ ಒಂದು ಗದೆಯನ್ನೂ, ಅರ್ಜುನನಿಗೆ ದೇವದತ್ತವೆಂಬ ಶಂಖವನ್ನೂ ಕೊಟ್ಟು ತಾನು ಬಿಂದು ಸರೋವರದ ಕಡೆಗೆ ಹೊರಟುಹೋದನು. ಇಂದ್ರಪ್ರಸ್ಥವನ್ನು ವಿಶ್ವಕರ್ಮನು ರಚಿಸಿದನು (ಮ.ಆ.).

ಖಾಂಡಿಕ್ಯ - ನೋ. - ಕೃತಧ್ವಜ. ವಿದೇಹರಾಜವಂಶದ ಧರ್ಮಧ್ವಜ ಜನಕನ ಕಿರಿಯ ಮಗ. ಇವನು ಮುಂದೆ ತನ್ನ ಅಣ್ಣನ ಮಗ ಕೇಶಿಧ್ವಜನು ರಾಜ್ಯವನ್ನು ಅಪಹರಿಸಿದುದರಿಂದ ಮುನಿಯಾದನು.

ಖ್ಯಾತಿ - ಕರ್ದಮಪ್ರಜಾಪತಿಯ ಒಬ್ಬಳು ಮಗಳು; ಈಕೆಯ ಪತಿ ಭೃಗು ಮಹರ್ಷಿ. ಮಗಳು ಲಕ್ಷ್ಮೀದೇವಿ ; ಈಕೆಯೇ ಶ್ರೀಮನ್ನಾರಾಯಣನ ಪತ್ನಿ. ಭೃಗುವಿನ ಮಗಳಾದುದರಿಂದ ಈಕೆಗೆ ಭಾರ್ಗವಿಯೆಂಬ ಹೆಸರಿದೆ. ಶುಕ್ರಾಚಾರ್ಯರು ಮೃತಸಂಜೀವಿನಿ ವಿದ್ಯೆಯ ಪ್ರಾಪ್ತಿಗಾಗಿ ತಪಸ್ಸಿನಲ್ಲಿರಲು ದೇವತೆಗಳಿಗೂ ದೈತ್ಯರಿಗೂ ಯುದ್ಧ ನಡೆದು ದೈತ್ಯರು ಸೋತು, ಭೃಗುಋಷಿಯ ಆಶ್ರಮವನ್ನು ಹೊಕ್ಕು ಖ್ಯಾತಿದೇವಿಗೆ ಮೊರೆಯಿಟ್ಟರು. ಆಗ ಖ್ಯಾತಿದೇವಿಯು ದೇವತೆಗಳನ್ನು ತಡೆದರೂ ಕೇಳದಿರಲು ಆಕೆ ದೇವತೆಗಳಿಗೆಲ್ಲಾ ಮೂರ್ಛೆ ಬರುವಂತೆ ಶಾಪವಿತ್ತಳು. ಆಗ ವಿಷ್ಣುವು ಎಚ್ಚರ ತಪ್ಪಿ ಬಿದ್ದ ಇಂದ್ರನನ್ನು ತನ್ನಲ್ಲಡಗಿಸಿಕೊಂಡು ಖ್ಯಾತಿದೇವಿಯ ರುಂಡವನ್ನು ತನ್ನ ಚಕ್ರಾಯುಧದಿಂದ ಕತ್ತರಿಸಿದನು. ಇದರಿಂದ ಭೃಗುವು ವಿಷ್ಣುವಿಗೆ ಭೂಮಿಯಲ್ಲಿ ಹುಟ್ಟುವಂತೆ ಶಾಪವಿತ್ತನು. ಶುಕ್ರಾಚಾರ್ಯನು ಖ್ಯಾತಿ ಮತ್ತು ಭೃಗು ಮುನಿಗಳ ಮಗ. (ಮ.ಆ.,ಭಾಗ.,ವಿಷ್ಣುಪು.,ದೇವೀಭಾ.).

ಗ

ಗಗನಮೂರ್ಧ - ದನುವಿನ ನಲವತ್ತು ಮಂದಿಗಳಲ್ಲಿ ಒಬ್ಬ (ಮ.ಆ.).

ಗಂಗಾ - ಹಿಮವತ್ಪರ್ವತದಲ್ಲಿ ಗಂಗೆಯು ಗಂಗಾ, ಯಮುನಾ, ಸರಸ್ವತಿ, ರಥಸ್ಥೆ, ಸರಯು, ಗೋಮತಿ, ಗಂಡಕಿ ಎಂಬ ಏಳುಶಾಖೆಗಳಾಗಿ ಸಮುದ್ರ ಸಂಗಮವಾಗುತ್ತದೆ (ಮ.ಆ.). ಒಮ್ಮೆ ದೇವಸಭೆಯಲ್ಲಿ ಎಲ್ಲರೂ ತಲೆತಗ್ಗಿಸಿದ್ದರೂ. ಇಕ್ಷ್ವಾಕುವಂಶದ ಮಹಾಭಿಷ ಎಂಬ ರಾಜನು ಮಾತ್ರ

ಈಕೆಯನ್ನು ನಟ್ಟದೃಷ್ಟಿಯಿಂದ ನೋಡುತ್ತಿರಲು ಗಂಗೆಯೂ ಈತನನ್ನು ಮೋಹಿಸಿದಳು. ಇದರಿಂದ ಚತುರ್ಮುಖನು ಇವರಿಬ್ಬರಿಗೂ ಭೂಲೋಕದಲ್ಲಿ ಜನಿಸುವಂತೆ ಶಾಪವಿತ್ತನು. ಮಹಾಭಿಷನು ಶಂತನುರಾಜನಾಗಿ ಹುಟ್ಟಿದನು. ಒಮ್ಮೆ ಇವನು ತಾರುಣ್ಯದಲ್ಲಿ ಬೇಟೆಯಾಡಲು ಕಾಡಿಗೆ ಹೋದಾಗ ಗಂಗೆಯನ್ನು ಕಂಡು ಪತ್ನಿಯಾಗೆಂದು ಹೇಳಿದನು. ಆಕೆಯು, ತನ್ನ ವರ್ತನೆಯನ್ನು ಖಂಡಿಸಿದಾಗ ರಾಜನನ್ನು ಬಿಟ್ಟುಹೋಗುವೆನೆಂದಳು. ಶಂತನು ಒಪ್ಪಿ ಆಕೆಯನ್ನು ವಿವಾಹವಾದನು. ಮುಂದೆ ಅಷ್ಟವಸುಗಳು ಕ್ರಮವಾಗಿ ಗಂಗೆಯಲ್ಲಿ ಹುಟ್ಟುತ್ತಾ ಬಂದರು. ಗಂಗೆಯು ಒಂದೊಂದು ಮಗು ಹುಟ್ಟಿದೊಡನೆ ಅದನ್ನು ಗಂಗಾನದಿಗೆ ಎಸೆಯುತ್ತ ಬಂದಳು. ಹೀಗೆ ಏಳು ಮಕ್ಕಳು ನಾಶವಾದವು. ಗಂಗೆಯು ಎಂಟನೆಯ ಸಾರಿ ಗರ್ಭಿಣಿಯಾಗಿ ಹೆತ್ತು ಆ ಮಗುವನ್ನು ಗಂಗಾನದಿಗೆ ಚೆಲ್ಲಲು ಕೊಂಡು ಹೋಗುತ್ತಿರಲು ಶಂತನು ರಾಜನು ಶಿಶುವಧೆಯನ್ನು ಆಕ್ಷೇಪಿಸಿದನು. ಇದರಿಂದ ರಾಜನ ಪ್ರತಿಜ್ಞಾಭಂಗವಾಯಿತೆಂದು ಗಂಗೆಯು ಆ ಪುತ್ರನನ್ನು ಎತ್ತಿಕೊಂಡು ಸ್ವರ್ಗಲೋಕಕ್ಕೆ ನಡೆದುಬಿಟ್ಟಳು.

ಸಗರನ ಮಕ್ಕಳ ಸದ್ಗತಿಗಾಗಿ ಭಗೀರಥನು ಗಂಗೆಯನ್ನು ಭೂಮಿಗೆ ತಂದುದರಿಂದ ಆಕೆಗೆ ಭಾಗೀರಥಿ ಎಂಬ ಹೆಸರಾಯಿತು. ಆಕೆಯು ಪಾತಾಳಲೋಕಾಭಿಮುಖವಾಗಿ ಹರಿಯುತ್ತಿದ್ದಾಗ ಜಹ್ನು ಮುನಿಯ ಆಶ್ರಮವು ಅಡ್ಡ ಬರಲು ಗಂಗೆಯು ಆಶ್ರಮವನ್ನೇ ತೇಲಿಸಿಕೊಂಡು ನಡೆದುಬಿಟ್ಟಳು. ಇದರಿಂದ ಕೋಪಗೊಂಡ ಜಹ್ನು ಮುನಿಯು ಆಕೆಯನ್ನು ತನ್ನ ತಪಶ್ಶಕ್ತಿಯಿಂದ ಸಂಪೂರ್ಣ ಹೀರಿಬಿಟ್ಟನು. ಇದರಿಂದ ವ್ಯಸನಗೊಂಡ ಭಗೀರಥನು ಜಹ್ನುಮುನಿಯನ್ನು ಪ್ರಾರ್ಥಿಸಲು ಅವನು ಸಂತುಷ್ಟನಾಗಿ, ನುಂಗಿದ ಆಕೆಯನ್ನು ತನ್ನ ಕಿವಿಯಿಂದ ಹೊರಗೆ ಬಿಟ್ಟುದರಿಂದ ಮುಂದೆ ಗಂಗೆಗೆ ಜಾಹ್ನವಿ ಎಂದು ಹೆಸರಾಯಿತು.

ಕಾಶಿರಾಜನ ಮಗಳಾದ ಅಂಬೆಯು - ಗಂಗೆಯು, ಅಪುತ್ರವಂತೆಯೆಂದು ತಿರಸ್ಕರಿಸಿ ಭೀಷ್ಮನ ಮರಣವು ಅರ್ಜುನನಿಂದಾಯಿತೆಂದು ಆಕೆಯನ್ನು ಕೆರಳಿಸಿ -- ಅರ್ಜುನನ ಮಗನೇ ಆತನನ್ನು ಕೊಲ್ಲುವಂತೆ ಶಾಪ ಕೊಡಿಸಿದಳು. ಇದರಿಂದಾಗಿ ಬಭ್ರುವಾಹನನಿಂದ ಅರ್ಜುನನಿಗೆ ಮರಣವಾಯಿತು. ಗಂಗೆಗೆ ಸ್ವರ್ಗದಲ್ಲಿ ಮಂದಾಕಿನಿಯೆಂದೂ, ಭೂಮಿಯಲ್ಲಿ ಗಂಗೆ, ಭಾಗೀರಥಿ ಎಂದೂ, ಪಾತಾಳದಲ್ಲಿ ವೈತರಣಿಯೆಂದೂ ಹೆಸರುಗಳಿವೆ. ಗಂಗಾನದಿಯ ದಡದಲ್ಲೇ ಋಷಿಕೇಶ, ಹರಿದ್ವಾರ, ಪ್ರಯಾಗ, ಕಾಶಿ ಮುಂತಾದ ಕ್ಷೇತ್ರಗಳಿವೆ. ಕಾಶಿಯೊಂದರಲ್ಲೇ ಗಂಗಾನದಿಗೆ ಮೂನ್ನೂರ ಅರುವತ್ತು ಘಾಟುಗಳಿವೆ.

ಗಂಗೆಯ ತಾಯ್ತಂದೆಗಳು ಮೇನೆ ಮತ್ತು ಹಿಮಾಲಯ. ಈಕೆಯ ಸಹೋದರಿ ಪಾರ್ವತಿ. ಭೂಮಿಯನ್ನು ಅಳೆದಮೇಲೆ ತ್ರಿವಿಕ್ರಮನು ತನ್ನ ಪಾದದಿಂದ ಆಕಾಶವನ್ನಳೆಯಲು ಎತ್ತಲು ಆಗ ಬ್ರಹ್ಮನು ತನ್ನ ಕಮಂಡಲದ ನೀರಿನಿಂದ ಆತನ ಪಾದಗಳನ್ನು ತೊಳೆದ ನೀರೇ ಗಂಗೆ.

ಗಂಗಾನದಿಯು ಒಂದು ಉತ್ತಮತೀರ್ಥ. ಸಂಸಾರಸಾಗರವನ್ನು ದಾಟುವಂತೆ ಮಾಡುವುದೇ ತೀರ್ಥ. ಈ ದೃಷ್ಟಿಯಿಂದ ಸಾಧುಸಂತರು, ಮಹಾತ್ಮರು, ಗುರುಗಳು, ಆಚಾರ್ಯರು, ಮೋಕ್ಷಶಾಸ್ತ್ರಗಳು - ಇವೆಲ್ಲ ತೀರ್ಥಗಳೇ. ಶಿವನೊಬ್ಬ ಸುತೀರ್ಥನು.

ಅಷ್ಟವಸುಗಳು ಸಂಧ್ಯಾವಂದನೆಯಲ್ಲಿದ್ದ ವಸಿಷ್ಠ ಮುನಿಯನ್ನು ಅಜ್ಞಾನದಿಂದ ದಾಟಿದುದರಿಂದ ಮುನಿಯು ಇವರಿಗೆ ಮನುಷ್ಯಗರ್ಭದಲ್ಲಿ ಹುಟ್ಟುವಂತೆ ಶಪಿಸಿದನು. ಅವರು ಮುಂದೆ ಗಂಗೆಯಲ್ಲಿ ಹುಟ್ಟಿದರು. ನೋ.-ಶಂತನು (ಮ.ಭೀ.,ಆ.,ದ್ರೋ.,ವ.,ಉ.,ಅನು.,ಶಾಂ.,ರಾಮಾ.,ಭಾಗ., ಮಾರ್ಕಂ.ಪು.ಸ್ಕಾಂ.ಪು.).

ಗಂಗಾದ್ವಾರ - ಹರಿದ್ವಾರದ ಇನ್ನೊಂದು ಹೆಸರು. ಇದನ್ನು ಮಾಯಪುರಿಯೆನ್ನುತ್ತಾರೆ. ಚಂದ್ರವಂಶದ ಪ್ರತೀಪ ರಾಜನು ಇಲ್ಲೇ ತಪಸ್ಸು ಮಾಡಿದನು. ಭರದ್ವಾಜಮುನಿಯು ಇಲ್ಲೇ ತಪಸ್ಸುಮಾಡುತ್ತಿದ್ದಾಗ ಘೃತಾಚಿಯೆಂಬ ಅಪ್ಸರೆಯನ್ನು ಕಂಡು ಮೋಹಿಸಲು ಈತನ ದೇಹದಿಂದ ವೀರ್ಯವು ಪತನವಾಯಿತು. ಅದನ್ನು ಮುನಿಯು ಒಂದು ದ್ರೋಣದಲ್ಲಿ ರಕ್ಷಿಸಲು ಇದರಿಂದಲೇ ದ್ರೋಣಾಚಾರ್ಯನು ಜನಿಸಿದನು. ಇಲ್ಲಿ ಸ್ನಾನಕ್ಕಿಳಿದ ಅರ್ಜುನನನ್ನು ನಾಗಕನ್ಯೆಯಾದ ಉಲೂಪಿಯ ಪಾತಾಳಕ್ಕೆ ಕೊಂಡುಹೋಗಿ ವಿವಾಹವಾದಳು. ಗಂಗಾದ್ವಾರವನ್ನು ಹರಿದ್ವಾರವೆಂದೂ ಕರೆಯುತ್ತಾರೆ. ಇದು ಬದರಿ, ಕೇದಾರ ಮತ್ತು ಗಂಗೋತ್ರಿಯೆಂಬ ಮೂರು ಕ್ಷೇತ್ರಗಳಿಗೆ ಹೋಗುವ ಮಹಾದ್ವಾರವಾಗಿದೆ. ದಕ್ಷಿಣ ದೇಶದ ಯಾತ್ರಿಕರು ಪ್ರಯಾಗ, ಕಾಶಿ, ಗಯಾ ಮತ್ತು ಅಯೋಧ್ಯೆಯ ಯಾತ್ರೆಯನ್ನು ಮುಗಿಸಿಕೊಂಡು ಹರಿ (ಹರ) ದ್ವಾರಕ್ಕೆ ಹೋಗುತ್ತಾರೆ. ದಿಲ್ಲಿಯಿಂದ ಹರಿದ್ವಾರಕ್ಕೆ ೧೪೩ ಮೈಲು ದೂರವಿದೆ. ಇಲ್ಲಿ ಗಂಗೆಯು ಬಹಳ ವೇಗವಾಗಿ ಹರಿಯುತ್ತಿದೆ. ಗಂಗೆಯ ನೀರಿನಲ್ಲಿ ವಿಶೇಷ ಮಹತ್ವವಿದೆ. ಇದಕ್ಕೆ ಕ್ರಿಮಿನಾಶಕ ಶಕ್ತಿಯಿದೆ. (ಮ.ಆ.,ಕ್ಷೇತ್ರದ.).

ಗಂಗಾಹ್ರದ - ಒಂದು ತೀರ್ಥವಿಶೇಷ (ಮ.ವ.).

ಗಜ - ೧. ವಾನರ; ಸುಗ್ರೀವನ ಸೇನಾಪತಿ. ೨. ಶಕುನಿಯ ಸಹೋದರನಾದ ಕ್ಷತ್ರಿಯ; ಇವನನ್ನು ಅರ್ಜುನನ ಮಗನಾದ ಇರಾವಂತನು ಕೊಂದನು. ೩.ಮಹಿಷಾಸುರನ ಮಗ. ಶಿವನು ಈತನ ಬಯಕೆಯಂತೆ ಈತನನ್ನು ಕೊಂದು

ಇವನ ಚರ್ಮವನ್ನು ಧರಿಸಿದನು. ೪. ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲೂಕಿನ ಸಾಲಿಗ್ರಾಮದಲ್ಲಿದ್ದ ಪ್ರಾಚೀನಕಾಲದ ರಾಕ್ಷಸ. ಇವನನ್ನು ನರಸಿಂಹನು ಕೊಂದನು (ಸ್ಕಾ.ಪು.). ೫. ಅಗಸ್ತ್ಯನಿಂದ ಗಜವಾಗುವಂತೆ ಶಾಪಪಡೆದ ಇಂದ್ರದ್ಯುಮ್ನನೆಂಬ ರಾಜನೊಬ್ಬ. (ಮ.ಭೀ.,ಆ.).

ಗಜಕರ್ಣ - ಯಕ್ಷನೊಬ್ಬ (ಮ.ಸ.).

ಗಜಪುರ - ನೋ. - ಹಸ್ತಿನಾಪುರ. ಉಡುಪಿ ತಾಲ್ಲೂಕಿನ ಸಾಲಿಗ್ರಾಮ ಕ್ಷೇತ್ರಕ್ಕಿದ್ದ ಪ್ರಾಚೀನಕಾಲದ ಹೆಸರು.

ಗಜಾನನ (ಗಣೇಶ) - ಪಾರ್ವತಿದೇವಿಯ ಮಗ. ವೇದವ್ಯಾಸನು ಹೇಳಿದ ಭಾರತ ಕಥೆಯನ್ನು ಈತನು ಬರೆದನು. ಒಮ್ಮೆ ಮೂಷಿಕಾರೂಢನಾದ ಗಣಪತಿಯನ್ನು ಕಂಡು ಚಂದ್ರನು ನಗಲು ಆತನು ಕೋಪದಿಂದ- 'ಚೌತಿದಿನ ನಿನ್ನನ್ನು ಕಂಡವರಿಗೆ ಅಪವಾದ ಬರಲಿ' ಎಂದು ಶಾಪವಿತ್ತನು. ಚಂದ್ರನು ಶಾಪಕ್ಕೆ ಹೆದರಿ ಗಣಪತಿಯನ್ನು ಪ್ರಾರ್ಥಿಸಲು - 'ಚೌತಿಯ ದಿನ ನನ್ನ ವ್ರತವನ್ನು ಮಾಡದವರಿಗೆ ಅಪವಾದವು ತಟ್ಟದಿರಲಿ' - ಎಂದು ಅನುಗ್ರಹಿಸಿದನು. ಶ್ರೀಕೃಷ್ಣನು ಚೌತಿಯ ಚಂದ್ರನನ್ನು ಕಂಡುದಕ್ಕೆ ಸ್ಯಮಂತರತ್ನವನ್ನು ಪ್ರಸೇನನಿಂದ ಅಪಹರಿಸಿದನೆಂದು ಅಪವಾದ ಬರಲು ಶ್ರೀಕೃಷ್ಣನು ಜಾಂಬವಂತನಿಂದ ಆ ರತ್ನವನ್ನು ಸತ್ರಾಜಿತನಿಗೆ ತಂದೊಪ್ಪಿಸಿ ಅಪವಾದದಿಂದ ಬಿಡುಗಡೆ ಹೊಂದಿದನು (ಭಾಗ.). ದಕ್ಷಯಜ್ಞದ ನಾಶದ ಕಾಲದಲ್ಲಿ ವೀರಭದ್ರನು ವಿನಾಯಕನ ತಲೆಯನ್ನು ಅರಿದನು. ಮುಂದೆ ವಿಘ್ನರಾಜನ ಅಭಾವಕ್ಕೆ ವ್ಯಸನಪಟ್ಟ ಬ್ರಹ್ಮಾದಿಗಳ ಪ್ರಾರ್ಥನೆಯಂತೆ ಶಿವನು ಉತ್ತರ ದಿಕ್ಕಿಗೆ ತಲೆಹಾಕಿ ಮಲಗಿದ ಮದ್ದಾನೆಯೊಂದರ ತಲೆಯನ್ನು ಕತ್ತರಿಸಿ ವಿನಾಯಕನ ಮುಂಡಕ್ಕೆ ಜೋಡಿಸಲು ಅಂದಿನಿಂದ ವಿನಾಯಕನು ಗಜಾನನನಾದನು. (ಲಿಂಗಪು.). ಪಾರ್ವತಿ ತನ್ನ ಮೈಯ ಅಂಗರಾಗದಿಂದ ಒಂದು ಮೂರ್ತಿಯನ್ನು ಮಾಡಿ ಗಂಗೆಗೆ ಎಸೆದಳು. ಗಂಗೆಯೂ ಪಾರ್ವತಿಯೂ ಅದನ್ನು ಮಗುವೆಂದು ಕರೆದುದರಿಂದ ಆ ಬೊಂಬೆಯು ಜೀವಂತವಾಯಿತು. ಇಬ್ಬರು ತಾಯಂದಿರುಳ್ಳ ಈ ಮಗು ದ್ವೈಮಾತುರನೆಂದು ಕರೆಯಲ್ಪಟ್ಟಿತು (ಮತ್ಸ್ಯಪು.). ಗಣಪತಿಯಲ್ಲಿ ಸುಮುಖಗಣಪತಿ, ಪಂಚಾಸ್ಯಗಣಪತಿ, ಗಜಾಸ್ಯಗಣಪತಿ, ಶಕ್ತಿಗಣಪತಿ, ಪ್ರಮಥಗಣಪತಿ, ಕಾಮಿತಾರ್ಥಪ್ರದಗಣಪತಿ, ಬ್ರಹ್ಮಗಣಪತಿ, ವಿಷ್ಣುಗಣಪತಿ, ಈಶಗಣಪತಿ, ಸರ್ವಸಿದ್ಧಿಗಣಪತಿ ಮೊದಲಾದ ಇಪ್ಪತ್ತೊಂದು ವಿಧಗಳಿವೆ. ಕಲಿಯುಗದಲ್ಲಿ ಶಕ್ತಿ ಮತ್ತು ಗಣಪತಿಯ ಮಂತ್ರಗಳು ಬೇಗ ಸಿದ್ಧಿಯಾಗುತ್ತವೆ ಎನ್ನುತ್ತಾರೆ. ಪ್ರಾಚೀನಕಾಲದಿಂದಲೂ ಗಣಪತಿಗೆ ಅಗ್ರಪೂಜೆ ಸಲ್ಲುತ್ತಿತ್ತು. ನೋ. - ವಿಘ್ನೇಶ್ವರ. ಸಂಘಾಧ್ಯಕ್ಷ ಎಂಬ ಅರ್ಥದಲ್ಲಿ

ಋಗ್ವೇದದಲ್ಲಿ ಗಣಪತಿಯ ಉಲ್ಲೇಖವಿದೆ. ಕವಿಗಣದ ಅಧ್ಯಕ್ಷನಾದ 'ಬ್ರಹ್ಮಣ ಸ್ಪತಿ'ಯನ್ನು 'ಗಣಾನಾಂ ತ್ವಾ ಗಣಪತಿಂ' ಎಂದು ವರ್ಣಿಸಿರುವಲ್ಲಿ ಗಣಪತಿಯ ಮಾತು ಬರುತ್ತದೆ. ಗಣಪತಿಯನ್ನು ವಿವಾಹಿತನೆಂದೂ, ಅವಿವಾಹಿತನೆಂದೂ ಹೇಳುತ್ತಾರೆ. ನೋ. - ರಾವಣ, ಗೋಕರ್ಣ.

ಗಜೇಂದ್ರ - ನೋ. - ಇಂದ್ರದ್ಯುಮ್ನ; ಗಜೇಂದ್ರಮೋಕ್ಷದ ಕಥೆ.

ಗಂಡಕ - ಒಂದು ದೇಶ; ಪಾಂಚಾಲದ ಪೂರ್ವದಲ್ಲಿದ್ದ ದೇಶ (ಮ.ಸ.).

ಗಂಡಕಂಡು - ಒಬ್ಬ ಯಕ್ಷ (ಮ.ಸ.).

ಗಂಡಕಿ - ೧. ಒಂದು ನದಿ. ಹಿಮಾಲಯದಲ್ಲಿ ಹುಟ್ಟಿ ದಕ್ಷಿಣ ದಿಕ್ಕಿಗೆ ಹರಿದು ಗಂಗಾ ನದಿಗೆ ಸೇರುವ ಉಪನದಿ. ಈ ನದಿಯಲ್ಲಿ ಸಾಲಿಗ್ರಾಮಗಳೆಂಬ ದಿವ್ಯಶಿಲೆಗಳು ಸಿಕ್ಕುತ್ತವೆ. ೨. ಜಯವಿಜಯರು ಕರ್ದಮಪ್ರಜಾಪತಿ ಮತ್ತು ದೇವಹೂತಿಯ ಮಕ್ಕಳು. ಮರುತ್ತನು ಮಾಡಿದ ಯಜ್ಞದಲ್ಲಿ ಬ್ರಹ್ಮ ಮತ್ತು ಋತ್ವಿಜರಾಗಿದ್ದ ಈ ಸೋದರರು ವಿಪುಲ ಸಂಪತ್ತನ್ನು ಸಂಗ್ರಹಿಸಿ ಪಾಲುಮಾಡಿಕೊಳ್ಳುವಾಗ ಜಗಳಕ್ಕಾರಂಭಿಸಿದರು. ಈ ದಾಯಾದ್ಯಕಲಹವು ಪರಮಾವಧಿಗೆ ಮುಟ್ಟಿ ಜಯನು ವಿಜಯನಿಗೆ ಮೊಸಳೆಯಾಗುವಂತೆಯೂ, ವಿಜಯನು ಜಯನಿಗೆ ಆನೆಯಾಗುವಂತೆಯೂ ಶಾಪವಿತ್ತನು. ಈ ಶಾಪ ಪ್ರಭಾವದಿಂದ ವಿಜಯನು ಗಂಡಕಿ ನದಿಯಲ್ಲಿ ಮೊಸಳೆಯಾದ. ಜಯನು ಆ ನದಿಯ ದಡದ ಕಾಡಿನಲ್ಲಿ ಆನೆಯಾಗಿ ಜನಿಸಿದ. ಒಮ್ಮೆ ಆನೆಯು ನೀರು ಕುಡಿಯಲು ಗಂಡಕಿ ನದಿಗೆ ಇಳಿದಾಗ ಮೊಸಳೆಯು ಆನೆಯನ್ನು ನೀರೊಳಗೆ ಎಳೆಯತೊಡಗಿತು. ಆನೆಯು ಪೂರ್ವಪುಣ್ಯ ಪ್ರಭಾವದಿಂದ ಶ್ರೀಮಹಾವಿಷ್ಣುವಿಗೆ ಮೊರೆಯಿಡಲು ಭಗವಂತನು ಮೊಸಳೆಯನ್ನು ತನ್ನ ಸುದರ್ಶನ ಚಕ್ರದಿಂದ ಸೀಳಿ ಆನೆಯನ್ನು ರಕ್ಷಿಸಿದನು. ಸುದರ್ಶನ ಚಕ್ರವು ನದಿಯಲ್ಲಿ ಗರಗರನೆ ಸುತ್ತಿದಾಗ ಅದರಲ್ಲಿದ್ದ ಕಲ್ಲುಗಳೆಲ್ಲ ಚಕ್ರದ ಗುರುತನ್ನು ಹೊಂದಿದವು. ಇವೇ ಸಾಲಿಗ್ರಾಮಶಿಲೆಗಳಾದವು. ಜಯವಿಜಯರು ವಿಷ್ಣುವಿನ ದರ್ಶನದಿಂದ ಶಾಪವಿಮೋಚನೆಹೊಂದಿ, ಸಾಲೋಕ್ಯ ಪದವಿಯನ್ನು ಹೊಂದಿ ಅಲ್ಲಿ ದ್ವಾರಪಾಲಕರಾದರು. (ಸ್ಕಾಂಪು, ಮತ್ಸಪು.).

ಗತಿ - ಈಕೆಯ ತಂದೆ ಕರ್ದಮಪ್ರಜಾಪತಿ. ತಾಯಿ ಸ್ವಾಯಂಭುವ ಮನುವಿನ ಮಗಳಾದ ದೇವಹೂತಿ. ಕರ್ದಮ ದೇವಹೂತಿಯರು ಭೂಪ್ರದಕ್ಷಿಣೆ ಮಾಡಿ ಸರಸ್ವತೀ ನದಿಯಲ್ಲಿ ಮಿಂದಮೇಲೆ ಅನಸೂಯೆ, ಗತಿ ಮೊದಲಾದ ಒಂಬತ್ತು ಮಂದಿ ಕುಮಾರಿಯರನ್ನು ಪಡೆದರು. ಗತಿಯ ಪತಿಯೇ ಪುಲಹನೆಂಬ

ಬ್ರಹ್ಮರ್ಷಿ. ಇವರಿಗೆ ಕರ್ಮಶ್ರೇಷ್ಠ, ವರೀಯಸ ಮತ್ತು ಸಹಿಷ್ಣು ಎಂಬ ಮೂರು ಮಕ್ಕಳಿದ್ದರು. ಇವರೆಲ್ಲಾ ಶಿವನ ಶಾಪಕ್ಕೆ ಗುರಿಯಾಗಿ ಬ್ರಹ್ಮಪುತ್ರಾನದಿಯಲ್ಲಿ ಬಿದ್ದು ಮೃತರಾದರು. ನೋ. - ಕರ್ದಮ (ಮತ್ಸ್ಯಪು.).

ಗದ - ಬಲರಾಮನ ಸಹೋದರ. ಈತನ ತಾಯಿತಂದೆಗಳು ದೇವಕಿ ವಸುದೇವರು. ಈತನಿಗೆ ಬಲರಾಮನೇ ಮೊದಲಾದ ಎಂಟು ಮಂದಿ ಸಹೋದರರೂ, ಸುಭದ್ರೆ (ಚಿತ್ರ) ಎಂಬ ಸಹೋದರಿಯೂ ಇದ್ದರು. ಈತನ ತಾಯಿ ಪುರುರಾಜನ ಮಗಳು. ಈತನು ಅರ್ಜುನನಂತೆ ಎರಡು ಕೈಗಳಿಂದಲೂ (ಸವ್ಯಸಾಚಿತ್ವ) ಬಾಣಗಳನ್ನು ಬಿಡಲ್ಪಡುವ ಶೂರನಾಗಿದ್ದನು. ಇವನು ಪಾಂಡವಪಕ್ಷದಲ್ಲಿ ನಿಂತು ಕೌರವರೊಡನೆ ಹೋರಾಡಿ, ಯಾದವರ ನಾಶದ ಕಾಲದಲ್ಲಿ ಇವನೂ ಮೃತನಾದನು. (ಮ.ಆ.,ಮೌ.,ಭಾಗ.).

ಗದಾಯುದ್ಧ - ಕಾರ್ತಿಕ ಶುದ್ಧ ಪಾಡ್ಯದಿಂದ ಹನ್ನೊಂದು ದಿನಗಳವರೆಗೆ ಭೀಮಜರಾಸಂಧರಿಗೆ ಗದಾಯುದ್ಧ ನಡೆದು ಜರಾಸಂಧನ ಅಂತ್ಯವು ಭೀಮನಿಂದಾಯಿತು. ಭೀಮದುರ್ಯೋಧನರ ಗದಾಯುದ್ಧವು ಭಾರತಯುದ್ಧದ ಹದಿನೆಂಟನೆಯ ದಿನದ ಅಪರಾಹ್ಣ ನಡೆದು ದುರ್ಯೋಧನನ ಊರುಭಂಗ ಮುಂತಾದ ಮಾನಭಂಗ ಕಾರ್ಯಗಳು ನಡೆದು ಭೀಮನಿಂದ ದುರ್ಯೋಧನನ ಅವಸಾನವಾಯಿತು. (ಮ.ಸ.,ಶ.).

ಗದಾವಸಾನ - ಗಿರಿವ್ರಜದಲ್ಲಿ ಜರಾಸಂಧನು ನಿಂತು ಶ್ರೀಕೃಷ್ಣನ ಮೇಲಿನ ದ್ವೇಷದಿಂದ ತನ್ನ ಗದೆಯನ್ನು ತೊಂಬತ್ತೊಂಬತ್ತು ಸಾರಿ ಗರಗರನೆ ತಿರುಗಿಸಿ ಅವನಿದ್ದ ಮಧುರಾಪುರಿಯ ಕಡೆಗೆ ಎಸೆದನು. ಆ ಮಹಾಗದೆಯು ಮಧುರಾಪುರಿಯ ಸಮೀಪಕ್ಕೆ ಬಂದುಬಿತ್ತು. ಆ ಪ್ರದೇಶಕ್ಕೆ ಮುಂದೆ ಗದಾವಸಾನ ಎನ್ನತೊಡಗಿದರು. (ಮ.ಸ.).

ಗಂಧಮಾದನ - ೧. ಬದರಿಕಾಶ್ರಮದ ಸಮೀಪದ ಪರ್ವತ. ರಾಜಸೂಯ ಯಾಗ ಕಾಲದಲ್ಲಿ ಅರ್ಜುನನೂ, ತೀರ್ಥಯಾತ್ರನಿಮಿತ್ತ ಪಾಂಡವರೂ ಇಲ್ಲಿಗೆ ಬಂದಿದ್ದರು. ಸೌಗಂಧಿಕಾಪುಷ್ಪಹರಣಾರ್ಥವಾಗಿ ಭೀಮನೂ ಈ ಪುಣ್ಯಕರವಾದ ಪ್ರದೇಶದಲ್ಲಿ ಸಂಚರಿಸಿದ್ದನು. ಈ ಪರ್ವತದ ಪಕ್ಕದಲ್ಲೇ ನರಕಾಸುರನನ್ನು ಶ್ರೀಮಹಾವಿಷ್ಣುವು ಕೊಂದನು. ವರಾಹವತಾರವನ್ನು ಶ್ರೀಮನ್ನಾರಾಯಣನು ಇದೇ ಪ್ರದೇಶದಲ್ಲೇ ಕೈಗೊಂಡನು. ಈ ದುರ್ಗಮಪ್ರದೇಶದಲ್ಲಿ ದ್ರೌಪದಿಯು ನಡೆಯಲಾರದೆ ಮೂರ್ಛೆಹೊಂದಲು ಘಟೋತ್ಕಚನು ಆಕೆಯನ್ನು ಹೊತ್ತುಕೊಂಡು ನಡೆದನು. ಈ ಪ್ರದೇಶದಲ್ಲಿ ಅಶುಚಿಯಾದವರು ಪ್ರವೇಶಿಸಿದರೆ ಅವರನ್ನು ಕಾಡುಕೋಣಗಳೂ, ಜೇನು

ಹುಳುಗಳೂ, ವ್ಯಾಘ್ರ, ಸರ್ಪ ಮುಂತಾದ ಕ್ರೂರಜಂತುಗಳೂ ಬಾಧಿಸುವುವು ಎಂದೂ ಲೋಮಶ ಮುನಿಗಳು ಧರ್ಮರಾಜನಿಗೆ ಹೇಳಿದರು (ಮ.ವ.). ೨.ರಾಮೇಶ್ವರದಿಂದ ಒಂದೂವರೆ ಮೈಲು ದೂರದಲ್ಲಿ ಈ ಪರ್ವತವಿದೆ. ಇಲ್ಲಿ ಬಾಲಹನುಮಂತನ ಗುಡಿಯಿದೆ. ನೋ. - ರಾಮೇಶ್ವರ (ಕ್ಷೇತ್ರದ.). ೨. ಸುಗ್ರೀವನ ಕಪಿಸೇನೆಯ ಒಬ್ಬ ಸೇನಾಪತಿ. ಇವನು ಕುಂಭಕರ್ಣನೊಡನೆ ಹೋರಾಡಿದನು. ೨. ಯದುವಂಶದ ಶ್ವಫಲ್ಕ ಮತ್ತು ಗಾಂದಿನಿಯ ಒಬ್ಬ ಮಗ. ಇವನಿಗೆ ಹನ್ನೆರಡು ಮಂದಿ ಸೋದರರು. ಕೃಷ್ಣಭಕ್ತನಾದ ಅಕ್ರೂರನು ಈತನ ಹಿರಿಯ ಸೋದರ. (ಭಾಗ., ರಾಮಾ.ಯುದ್ಧ.,ಮ.ಸ.,ಭೀ.,ವ.).

ಗಂಧರ್ವ - ೧. ಕಶ್ಯಪನಿಂದ ಪ್ರಾಧಾ ಎಂಬುವಳಲ್ಲಿ ಹುಟ್ಟಿದ ಮಕ್ಕಳು. ೨. ಭರತ ಚಕ್ರವರ್ತಿಯ ಮೊಮ್ಮಗ. ನೋ. ಶತಶೃಂಗ (ಮ.ಆ.).

ಗಂಧವತಿ - ಉಪರಿಚರವಸುವಿನ ಮಗಳಾದ ಮತ್ಸ್ಯಗಂಧಿಯ ಹೆಸರು. ಈಕೆಗೆ ಕಾಳಿ ಮತ್ತು ಯೋಜನಗಂಧಿ ಮೊದಲಾದ ಹೆಸರುಗಳಿವೆ. ಈಕೆ ಪರಾಶರ ಮುನಿಯಿಂದ ಮೊದಲು ವೇದವ್ಯಾಸನನ್ನು ಪಡೆದು ಆಮೇಲೆ ಶಂತನುರಾಜನ ಪತ್ನಿಯಾಗಿ ಚಿತ್ರಾಂಗದ ಮತ್ತು ವಿಚಿತ್ರವೀರ್ಯರೆಂಬ ಮಕ್ಕಳನ್ನು ಪಡೆದಳು. (ಮ.ಆ.).

ಗಯ - ೧. ಗಂಧರ್ವನೊಬ್ಬ. ಕೈಲಾಸದಿಂದ ಶಿವಪೂಜೆ ಮಾಡಿ ಬರುವ ಇವನು ತಾಂಬೂಲವನ್ನು ಕೆಳಗೆ ಉಗುಳಲು ಅದು ಅರ್ಘ್ಯವನ್ನು ಕೊಡುತ್ತಿದ್ದ ಶ್ರೀಕೃಷ್ಣನ ಅಂಜಲಿಯ ಮೇಲೆ ಬೀಳಲು ಅವನು ಅಪರಾಧಿಯನ್ನು ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದನು. ಇದನ್ನು ತಿಳಿದ ಗಯನು ತನಗೆ ಯಾರೂ ಆಶ್ರಯ ಕೊಡದುದರಿಂದ ಅರ್ಜುನನ ಮರೆಹೊಕ್ಕನು. ಈ ಪರಿಣಾಮವಾಗಿ ಕೃಷ್ಣ ಮತ್ತು ಅರ್ಜುನರಿಗೆ ಯುದ್ಧವಾಗಿ ಜಯಾಪಜಯಗಳು ನಿರ್ಧಾರವಾಗದಿರಲು, ದೇವತೆಗಳು ಈ ಯುದ್ಧವನ್ನು ನಿಲ್ಲಿಸಿ ಕೃಷ್ಣಾರ್ಜುನರಲ್ಲಿ ಸಂಧಾನವನ್ನು ಮಾಡಿದರು. ಗಯನು ಕೃಷ್ಣನನ್ನು ಪ್ರಾರ್ಥಿಸಿ ಬದುಕಿದನು. ಈ ಕಥೆಯನ್ನು ಹದಿನೆಂಟನೆಯ ಶತಮಾನದ ಕೋನಯ್ಯ ಎಂಬ ಕನ್ನಡ ಕವಿಯು ಯಾವ ಗ್ರಂಥದ ಆಧಾರದಿಂದ ಬರೆದನೆಂದು ಗೊತ್ತಾಗುವುದಿಲ್ಲ. ಭಾಗವತ, ಭಾರತಾದಿಗ್ರಂಥಗಳಲ್ಲಿ ಇದಕ್ಕೆ ಆಧಾರವಿಲ್ಲ. ಶ್ರೀರಾಮಾಂಜನೇಯ ಮಾದರಿಯ ಕಲ್ಪಿತ ಕಥೆಯೆಂದು ತೋರುತ್ತದೆ. ಶ್ರೀಕೃಷ್ಣಾರ್ಜುನರ ವಿನೋದದ ಯುದ್ಧ ಮತ್ತು ಅರ್ಜುನನ ಪರಾಜಯ ಮಹಾಭಾರತದ ಆದಿಪರ್ವದಲ್ಲಿದೆ. ನೋ. ಶ್ರೀಕೃಷ್ಣ. ೨. ಋಷಭದೇವನ ಸಂತತಿಯ ನಕ್ತರಾಜನ (ಪೃಥುಷೇಣ) ಹೆಂಡತಿಯಾದ ದ್ಯುತಿಯೆಂಬವಳಲ್ಲಿ ಹುಟ್ಟಿದವನು. ೩. ಅಧೂರ್ತರಜನ ಮಗ. ಈ ಮಹಾರಾಜನಿಂದ

ನಿರ್ಮಿತವಾದ ಪರ್ವತಕ್ಕೆ ಗಯಶಿರಸ್ಸೆಂದು ಹೇಳುತ್ತಾರೆ. ಇಲ್ಲಿಯೇ ಪುಣ್ಯತಮವಾದ ಫಲ್ಗು ನದಿಯು ಹರಿಯುತ್ತದೆ. ಇಲ್ಲಿಯೇ ಮಹಾರಾಜನು ಯಜ್ಞವನ್ನು ಮಾಡಿ ಪ್ರತಿದಿನವೂ ಅನ್ನವನ್ನು ಪರ್ವತಾಕಾರವಾಗಿಯೂ, ತುಪ್ಪವನ್ನು ಕಾಲುವೆಯಾಗಿಯೂ, ಮೊಸರನ್ನು ನದಿಯಾಗಿಯೂ, ಉತ್ತಮವಾದ ವ್ಯಂಜನವನ್ನು ರಾಶಿರಾಶಿಯಾಗಿ ಮಾಡಿಸಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸುತ್ತಿದ್ದನು. ಇವನು ಕೊಟ್ಟ ದಕ್ಷಿಣೆಗಳು ಭೂಮಿಯ ಮರಳಿನಂತೆಯೂ, ಆಕಾಶದ ನಕ್ಷತ್ರಗಳಂತೆಯೂ, ಮೇಘಗಳ ವೃಷ್ಟಿಧಾರೆಯಂತೆಯೂ ಅಸಂಖ್ಯವಾಗಿದ್ದವು. ಈ ಪ್ರದೇಶದಲ್ಲಿಯೇ ಬ್ರಹ್ಮಸರಸ್ಸೆಂಬ ತೀರ್ಥವಿದೆ. ೪. ಚಂದ್ರವಂಶದ ಆಯುರಾಜನ ಮಗ. ಈತನ ತಾಯಿ ಸ್ವರ್ಭಾನವಿ. ಈ ದಂಪತಿಗಳಿಗೆ ಗಯನೆಂಬ ಮಗನಲ್ಲದೆ ನಹುಷ, ವೃದ್ಧಶರ್ಮ, ರಜಿ, ಅನೇನಸರೆಂಬ ಇನ್ನೂ ನಾಲ್ವರು ಪುತ್ರರಿದ್ದರು. ಸ್ವರ್ಭಾನವಿಗೆ ಇಂದುಮತಿಯೆಂಬ ಹೆಸರೂ ಉಂಟು. ೫. ಗಯಾ ಕ್ಷೇತ್ರದಲ್ಲಿದ್ದ ರಾಕ್ಷಸನೊಬ್ಬ. ಬ್ರಹ್ಮನು ಈ ರಾಕ್ಷಸನಿಂದ ಆತನ ಎದೆಯ ಮೇಲೆಯೇ ಯಜ್ಞವೇದಿಕೆಯನ್ನು ರಚಿಸುವಂತೆ ವರ ಪಡೆದು ಆ ರಾಕ್ಷಸನನ್ನು ಚಲಿಸದಂತೆ ವಿಷ್ಣುವು ಆ ದೇಹದ ಮೇಲೆ ನಿಂತು ಆ ರಾಕ್ಷಸನಿಗೆ ಸದ್ಗತಿಕೊಟ್ಟುದಲ್ಲದೆ ಈ ಪ್ರದೇಶದಲ್ಲಿ ಪಿತೃಗಳಿಗೆ ಪಿಂಡದಾನವನ್ನು ಮಾಡಿದರೆ ಅವರಿಗೆ ಅಕ್ಷಯ ಸುಖವು ಪ್ರಾಪ್ತವಾಗುವುದೆಂದು ವರವಿತ್ತನು. (ಕ್ಷೇತ್ರದ.).

ಗಯಾಸುರನು ಮರಣಪಟ್ಟ ಪ್ರದೇಶವನ್ನೇ ಈಗ ಗಯಾಕ್ಷೇತ್ರವೆನ್ನುತ್ತಾರೆ. ಯಾತ್ರಿಕರು ಕ್ರಮವಾಗಿ ಪ್ರಯಾಗ ಮತ್ತು ಕಾಶೀಯಾತ್ರೆಯನ್ನು ಮುಗಿಸಿಕೊಂಡೇ ಗಯೆಗೆ ಬರುವರು. ಗಯೆಯಲ್ಲಿ ವಿಷ್ಣುಪಾದದ ಮೇಲೆ ಒಮ್ಮೆ ಪಿಂಡ ಹಾಕಿದ ಬಳಿಕ ಪುನಃ ಶ್ರಾದ್ಧ ಮಾಡುವ ಅವಶ್ಯಕತೆ ಸಹ ಉಳಿಯುವುದಿಲ್ಲ. ಕಾಶಿಯಿಂದ ಗಯೆಗೆ ೧೩೭ ಮೈಲು ದೂರ. ಇಲ್ಲಿ ಮುಖ್ಯವಾಗಿರುವುದು ವಿಷ್ಣುಮಂದಿರ. ಇದು ಫಲ್ಗು ನದಿಯ ತೀರದಲ್ಲಿದೆ. ಈ ನದಿಯಲ್ಲಿ ಮಳೆಗಾಲದ ಹೊರತು ನೀರಿರುವುದಿಲ್ಲ. ಉಳಿದ ಸಮಯದಲ್ಲಿ ಇಲ್ಲಿ ಮರಳಿನಲ್ಲಿ ಹೊಂಡ ಮಾಡಿ ಆ ನೀರಿನಲ್ಲಿ ಮೀಯಬೇಕಾಗುವುದು. ಸೀತಾದೇವಿಯ ಪಾಪದಿಂದ ಈ ನದಿಯಲ್ಲಿ ನೀರುಳಿಯುವುದಿಲ್ಲವೆನ್ನುತ್ತಾರೆ. ಇಲ್ಲಿದ್ದ ವಟವೃಕ್ಷದ ಬುಡವು ಪ್ರಯಾಗದಲ್ಲೂ ನಡುಭಾಗವು ಕಾಶಿಯಲ್ಲೂ, ಕೊನೆಯಭಾಗವು ಗಯಾದಲ್ಲೂ ಇದೆಯೆನ್ನುತ್ತಾರೆ. ಫಲ್ಗುನದಿಯ ಆಚೆಯ ದಡದಲ್ಲಿ ಸೀತಾಕುಂಡವಿದೆ. ಇಲ್ಲಿ ಕರಿಯ ಕಲ್ಲಿನ ದಶರಥನ ಹಸ್ತವಿದೆ.

ವಿಷ್ಣುಪಾದಮಂದಿರದಿಂದ ಸ್ವಲ್ಪ ದೂರದಲ್ಲೇ ಗದಾಧರನ ಮಂದಿರವಿದೆ. ಬುದ್ಧಗಯೆಯು ಇಲ್ಲಿಂದ ಏಳು ಮೈಲು ದೂರದಲ್ಲಿದೆ (ಮ.ವ.,ಸ.,ದ್ರೋ.,ಶ.,ಆ.,ಭಾಗ.,ವಾಯುಪು.).

ಗಯಾ - ರಾವಣನು ಮಂಡೋದರಿಯ ಮಂಚದಲ್ಲಿ ಗಯಗಂಧರ್ವನ ವಸ್ತ್ರವನ್ನು ನೋಡಿ ಸಂದೇಹದಿಂದ ಅವನನ್ನು ಕೊಲ್ಲಲು ಅಪ್ಪಣೆ ಮಾಡಿದನು. (ಅನಂ.ರಾ.). ನೋ. - ಗಯ (ಮ.ವ.,ಸ.,ದ್ರೋ.,ಶ.,ಆ.,ಭಾಗ. ವಾಯುಪು.).

ಗಯಾಶಿರ (ಗಯಾಶೀರ್ಷ) - ಗಯಾಸುರನ ತಲೆ ಇದ್ದ ಭಾಗ. ಈ ಪ್ರದೇಶದಲ್ಲೇ ಪಿತೃಪ್ರೀತ್ಯರ್ಥವಾಗಿ ಪಿಂಡದಾನ ಮಾಡುತ್ತಾರೆ. ಇಲ್ಲಿಯ ಸ್ಟೇಶನ್ನಿನಿಂದ ಅರ್ಧ ಮೈಲಿನ ಮೇಲೆ ಮತ್ತೊಂದು ದಿನ್ನೆ ಇದೆ. ಇದರಲ್ಲೊಂದು ದೊಡ್ಡ ಬಿರುಕು ಇದೆ. ಇದಕ್ಕೆ ಬ್ರಹ್ಮಯೋನಿ ಎನ್ನುತ್ತಾರೆ. ಇಲ್ಲಿ ಪ್ರವೇಶಮಾಡಿದ ಮನುಷ್ಯನು ಜನ್ಮಮರಣದಿಂದ ಮುಕ್ತನಾಗುತ್ತಾನೆನ್ನುತ್ತಾರೆ (ಮ.ವ.).

ಗರಿಷ್ಠ - ಇಂದ್ರಸಭೆಯಲ್ಲಿ ಒಬ್ಬ ಋಷಿ (ಮ.ಸ.).

ಗರುಡ - ಕಶ್ಯಪ ಮುನಿಯ ಪುತ್ರ. ಈತನ ತಾಯಿ ವಿನತೆ. ಈತನು ಪಕ್ಷಿಗಳ ರಾಜ. ಸೂರ್ಯನ ಸಾರಥಿಯಾದ ಅರುಣನು ಈತನ ಅಣ್ಣ. ಒಮ್ಮೆ ಕದ್ರುವಿನತೆಯರೆಂಬ ಸಹೋದರಿಯರು ಸಮುದ್ರತೀರದಲ್ಲಿ ಮೇಯುತ್ತಿದ್ದ ಉಚ್ಚೈಶ್ರವಸ್ಸು ಎಂಬ ದೇವಲೋಕದ ಕುದುರೆಯನ್ನು ಕಂಡು ವಿನತೆಯು ಅದರ ಬಣ್ಣ ಬೆಳ್ಳಗೆಂದೂ, ಕದ್ರು ಬಾಲ ಮಾತ್ರ ಕಪ್ಪೆಂದೂ ಹೇಳಿ ತಮ್ಮ ಮಾತನ್ನು ಸಾಧಿಸುವುದಕ್ಕಾಗಿ - 'ನಾಳೆ ಬಂದು ನೋಡುವ. ಈ ಪಂಥದಲ್ಲಿ ಗೆದ್ದವರ ದಾಸಿಯಾಗಿ ಸೋತವಳು ಬಾಳಬೇಕೆಂದು' ನಿರ್ಧಾರ ಮಾಡಿ ಹೊರಟುಹೋದರು. ಮರುದಿನ ಕದ್ರುವಿನ ಮಗನಾದ ಕಾರ್ಕೋಟನ ಸಹಾಯದಿಂದ ಕದ್ರುವೇ ಪಂಥದಲ್ಲಿ ಗೆಲ್ಲಲು ವಿನತೆಯು ಅಂದಿನಿಂದ ಕದ್ರುವಿನ ದಾಸಿಯಾದಳು. ಮುಂದೆ ಗರುಡನೂ ತನ್ನ ತಾಯಿಯಂತೆ ಕದ್ರು ಮತ್ತು ಸರ್ಪಗಳಿಗೆ ಸೇವೆ ಮಾಡಬೇಕಾದುದರಿಂದ ಆತನು ಬೇಸರಪಟ್ಟು ಕದ್ರುವಿನೊಡನೆ - 'ತಾಯಿ, ಈ ದಾಸ್ಯದಿಂದ ನಮಗೆ ಹೇಗೆ ವಿಮೋಚನೆಯಾದೀತು?' ಎನ್ನಲು ಆಕೆಯು 'ಅಮೃತವನ್ನು ತಂದುಕೊಟ್ಟಲ್ಲಿ ಮಾತ್ರ ಬಿಡುಗಡೆಹೊಂದುವೆ' ಎಂದಳು. ಗರುಡನು ತಂದೆಯ ಆಶೀರ್ವಾದವನ್ನು ಪಡೆದು ದೇವಲೋಕಕ್ಕೆ ಹೋಗಿ ಅಮೃತರಕ್ಷಕರನ್ನು ಕೊಂದು ಅಮೃತಕಲಶದ ಸುತ್ತಲೂ ಸಂಚರಿಸುತ್ತಿದ್ದ ಚಕ್ರಾಯುಧದಿಂದ ತಪ್ಪಿಸಿಕೊಂಡು ಒಳಹೊಕ್ಕು ಇಂದ್ರನ ವಜ್ರಾಯುಧದ ಹೊಡೆತವನ್ನೂ ಲಕ್ಷ್ಯಮಾಡದೆ, ಅಗ್ನಿಯ ಜ್ವಾಲೆಯನ್ನು ಮೀರಿ ಸೂಕ್ಷ್ಮರೂಪದಿಂದ ಒಳಹೊಕ್ಕು ಅಲ್ಲಿ ಕಾವಲಿದ್ದ ಘಟಸರ್ಪಗಳನ್ನು ಕೊಂದು ಅಮೃತಕಲಶವನ್ನು

ಕೊಂಡುಬರುತ್ತಿರುವಾಗ ಇಂದ್ರನು ವಜ್ರಾಯುಧವನ್ನೆಸೆಯಲು ಅದಕ್ಕೆ ಗೌರವಕೊಡುವುದಕ್ಕಾಗಿ ಗರುಡನು ತನ್ನ ಒಂದು ಗರಿಯನ್ನು ಎಸೆದು ಮುಂದುವರಿಸಿದಾಗ ಇಂದ್ರನು ಅವನ ಪರಾಕ್ರಮಕ್ಕೆ ಮೆಚ್ಚಿ - 'ಅಮೃತವನ್ನು ದುಷ್ಟರಾದ ಸರ್ಪಗಳ ವಶಮಾಡಬೇಡ' ಎನ್ನಲು ಗರುಡನು ತನ್ನ ದಾಸ್ಯವಿಮೋಚನೆಯಾದ ಮೇಲೆ ಅಮೃತವನ್ನು ಕೊಂಡುಹೋಗಬಹುದೆಂದು ದೇವರಾಜನಿಗೆ ಹೇಳಿದನು. ಇಂದ್ರನು ಗರುಡನಿಗೆ -'ಸರ್ಪಗಳೆಲ್ಲ ನಿನ್ನ ಆಹಾರವಾಗಲಿ' ಎಂದು ವರವಿತ್ತು ಕಳುಹಿಸಿದನು. ಗರುಡನು ಅಮೃತವನ್ನು ತಂದು ಕದ್ರುವಿನ ಮುಂದಿದ್ದ ದರ್ಭಾಸ್ತರಣದ ಮೇಲಿಡಲು ಆಕೆ 'ನೀನು ನಿನ್ನ ತಾಯಿಯೂ ಇಂದಿನಿಂದ ದಾಸ್ಯದಿಂದ ಬಿಡುಗಡೆ ಹೊಂದಿದ್ದೀರಿ' ಎಂದು ಮಕ್ಕಳಾದ ಸರ್ಪಗಳೊಡನೆ ಅಮೃತವನ್ನು ಕುಡಿಯಲು ಸ್ನಾನಮಾಡಿ ಬರುವಂತೆ ಹೇಳಿದಳು. ಆ ಸರ್ಪಗಳು ಸ್ನಾನಕ್ಕೆ ಹೋದಾಗ ಇಂದ್ರನು ಆ ಅಮೃತಕಲಶವನ್ನಪಹರಿಸಿದನು. ಸರ್ಪಗಳು ಮಿಂದು ಬರುವಾಗ ಅಮೃತವಿಲ್ಲದುದರಿಂದ ಅಮೃತದಾಸೆಯಿಂದ ಆ ದರ್ಭಾಸ್ತರಣವನ್ನು ನೆಕ್ಕಲು ಸರ್ಪಗಳ ನಾಲಿಗೆಯು ಸೀಳಾಯಿತು. ಗರುಡನ ಸಾಮರ್ಥ್ಯವನ್ನು ಕಂಡು ವಿಷ್ಣುವು ಈತನಿಗೆ ಸುಪರ್ಣನೆಂಬ ಹೆಸರನ್ನು ಕೊಟ್ಟು ತನ್ನ ವಾಹನವನ್ನಾಗಿ ಮಾಡಿಕೊಂಡನು. ಅವನನ್ನು ತನ್ನ ಧ್ವಜದಲ್ಲಿಟ್ಟುಕೊಂಡು ಗರುಡಧ್ವಜನಾದನು. ಗಂಧಮಾದನಪರ್ವತದ ಗುಹೆಯಲ್ಲಿ ಗರುಡನ ಸಾವಿರ ಮಂದಿ ಮಕ್ಕಳು ವಾಸಿಸುತ್ತಿದ್ದರು. ಇವರನ್ನು ತಾರಕಾಸುರನು ಗೆದ್ದು ಇವರನ್ನೆಲ್ಲ ತನ್ನ ರಥದ ಕುದುರೆಗಳನ್ನಾಗಿ ಮಾಡಿಕೊಂಡನು. ಶಾಂಡಿಲಿ ಎಂಬ ಬ್ರಾಹ್ಮಣಿಗೆ ಗರುಡನು ದ್ರೋಹವನ್ನು ಬಗೆದು ತನ್ನ ರೆಕ್ಕೆಗಳನ್ನೆಲ್ಲ ಕಳೆದುಕೊಂಡು ಪುನಃ ಆಕೆಯ ಅನುಗ್ರಹದಿಂದ ತನ್ನ ರೆಕ್ಕೆಗಳನ್ನು ಪಡೆದು ಹಾರುವ ಶಕ್ತಿಯನ್ನು ಪಡೆದನು. ಒಮ್ಮೆ ಕಶ್ಯಪನು ಮಾಡಿದ ಯಜ್ಞದಲ್ಲಿ ೬೦,೦೦೦ ಮಂದಿ ವಾಲಖಿಲ್ಯ ಮುನಿಗಳು ನೆರವಾಗಿ ತುಂಬಾ ಬಳಲಿದ್ದರು. ಆಗ ಇವರನ್ನು ಕಂಡು 'ಕುಳ್ಳರು' ಎಂದು ಇಂದ್ರನು ಅಪಹಾಸ್ಯ ಮಾಡಿದುದರಿಂದ ಈ ಮುನಿಗಳು ಸಿಟ್ಟಿಗೆದ್ದು 'ಕಶ್ಯಪ ಮುನಿಯಿಂದ ಜನಿಸಿದ ಗರುಡನು ನಿನ್ನ ಗರ್ವವನ್ನು ಮುರಿಯಲೆಂದು' ಶಾಪವಿತ್ತು, ಗರುಡನು ಅವತರಿಸುವುದಕ್ಕಾಗಿ ತಪಸ್ಸಿಗೆ ತೊಡಗಿದರು. ನೋ. - ವಾಲಖಿಲ್ಯ, ಕಾಲಿಯ, ಗರುಡತೀರ್ಥ. ಗರುಡನಿಗೆ ಸುಮುಖ, ಸುನಾಮ, ಸುನೇತ್ರ, ಸುವರ್ಚ, ಸುರುಕ್, ಸುಬಲರೇ ಮೊದಲಾದ ಮಕ್ಕಳಿದ್ದರು (ಮ.ಆ.,ಸ.,ಉ,ಅನು.,ಸ್ಕಾಂ.ಪು).

ಗರುಡಕಲ್ಪ - ಬ್ರಹ್ಮನ ಒಂದು ಹಗಲಿನಷ್ಟು ಕಾಲಕ್ಕೆ ಕಲ್ಪವೆಂದು ಹೆಸರು. ಈ ವೈವಸ್ವತ ಮನ್ವಂತರದಲ್ಲಿ ಬ್ರಹ್ಮನ ತಿಂಗಳಿಂದ ಹದಿನಾಲ್ಕನೇ ದಿನದಲ್ಲಿ

ಗರುಡನು ಜನಿಸಿದನು. ಈ ದಿನಕ್ಕೆ ಗರುಡಕಲ್ಪವೆನ್ನುತ್ತಾರೆ (ಮತ್ಸ್ಯಪು.).

ಗರುಡತೀರ್ಥ - ೧. ಗೌತಮೀ ನದಿಯ ಒಂದು ಭಾಗ. ಆದಿಶೇಷನ ಮಗ ಮಣಿನಾಗನನ್ನು ಗರುಡನು ಆಕಾಶಮಾರ್ಗವಾಗಿ ಕಚ್ಚಿಕೊಂಡು ಹೋಗುತ್ತಿರುವಾಗ ಮಣಿನಾಗನು ತನ್ನನ್ನುಳಿಸುವಂತೆ ಶಿವನನ್ನು ಪ್ರಾರ್ಥಿಸಿದನು. ಶಿವನು ಮಣಿನಾಗನನ್ನು ಬಿಡುವಂತೆ ಗರುಡನಿಗೆ ಅಪ್ಪಣೆಮಾಡಲು ಆತನು ಶಿವನ ಮಾತನ್ನು ತಿರಸ್ಕರಿಸಲು ಅವನು ಗರುಡನ ಶಕ್ತಿಯನ್ನೆಲ್ಲಾ ಸೆಳೆದು ಹಾರಲಾರದವನನ್ನಾಗಿ ಮಾಡಲು ಗರುಡನು ವಿಷ್ಣುವನ್ನು ಮರೆಹೊಕ್ಕನು. ವಿಷ್ಣುವು ಶಿವನನ್ನು ಪ್ರಾರ್ಥಿಸುವಂತೆ ಹೇಳಿದನು. ಶಿವನು ಗರುಡನಿಗೆ ಗೌತಮೀನದಿಯಲ್ಲಿ ಮಿಂದು ಬರುವಂತೆ ಹೇಳಿದನು. ಗರುಡನು ಗೌತಮೀನದಿಯಲ್ಲಿ ಮಿಂದು ಕಳೆದುಕೊಂಡ ಶಕ್ತಿಯನ್ನು ಪುನಃ ಸಂಪಾದಿಸಿದನು. ಗರುಡನು ಮಿಂದ ಗೌತಮೀನದಿಯ ಭಾಗಕ್ಕೆ ಗರುಡತೀರ್ಥವೆನ್ನುತ್ತಾರೆ (ಬ್ರ.ವೈ.).

ಗರುಡವ್ಯೂಹ - ಭಾರತಯುದ್ಧದ ಮೂರನೆಯ ದಿನ ಭೀಷ್ಮನು ಕುರುಸೇನೆಯನ್ನು ನಿಲ್ಲಿಸಿದ ಒಂದು ರೀತಿ. ಗರುಡಪಕ್ಷಿಯ ಆಕಾರದಲ್ಲಿ ಸೈನ್ಯವನ್ನು ನಿಲ್ಲಿಸುವ ಕ್ರಮ (ಮ.ಭೀ.).

ಗರುಡಾಚಲ - ಇಂದಿನ ತಿರುಪತಿ ಬೆಟ್ಟ. ಶ್ರೀಮಹಾವಿಷ್ಣುವು ವರಾಹಾವತಾರ ಮಾಡಿ ಹಿರಣ್ಯಾಕ್ಷನನ್ನು ಕೊಂದಮೇಲೆ, ಅದೇ ಆಕಾರದಿಂದ ವೈಕುಂಠಕ್ಕೆ ಹೋಗಲಾರದೆ ಈಗಿನ ತಿರುಪತಿ ಬೆಟ್ಟವಿದ್ದಲ್ಲಿ ಗರುಡನಿಂದ ವೈಕುಂಠದಲ್ಲಿದ್ದ ತನ್ನ ಕ್ರಿಡಾ ಪರ್ವತವನ್ನು ತರಿಸಿ ಅಲ್ಲೇ ನಿಂತುಬಿಟ್ಟನು. ವೈಕುಂಠದಲ್ಲಿ ಲಕ್ಷ್ಮಿಯು ಬಹಳ ಕಾಲ ಪತಿಗಾಗಿ ನಿರೀಕ್ಷಿಸಿದರೂ ಆತನು ಬಾರದಿರಲು ಆಕೆಯು ಆಕಾಶರಾಜನಿಗೆ ಪದ್ಮಾವತಿಯೆಂಬ ಹೆಸರಿನಿಂದ ಮಗಳಾಗಿ ಹುಟ್ಟಿ ಅಲ್ಲಿ ಶ್ರೀನಿವಾಸನಾಗಿ ನಿಂತ ವಿಷ್ಣುವನ್ನು ವಿವಾಹವಾದಳು. (ಸ್ಕಾಂ.ಪು.,ವೆಂ.ಮ.).

ಗರ್ಗ - ಒಬ್ಬ ಮಹರ್ಷಿ. ಯಾದವರ ಪುರೋಹಿತ. ಈತನನ್ನು ಯಾದವರು ಪರಿಹಾಸ ಮಾಡಿದುದರಿಂದ ಕೋಪಗೊಂಡು ಶಿವನ ಅನುಗ್ರಹದಿಂದ ಕಾಲಯವನನೆಂಬ ಮಗನನ್ನು ಪಡೆದನು. ನೋ. - ಕಾಲಯವನ. ಶ್ರೀಕೃಷ್ಣಬಲರಾಮರಿಗೆ ವಸುದೇವನ ಸೂಚನೆಯಂತೆ ಈತನು ಜಾತಕರ್ಮವನ್ನು ಮಾಡಿಸಿದನು (ಭಾಗ., ಮ.ಅನು.,ವಾಯುಪು.). ಒಬ್ಬ ಸಾಮಾನ್ಯ ಬ್ರಾಹ್ಮಣ ದಂಪತಿಗಳ ಮಗ. ಮಹಾವಿದ್ವಾಂಸ ಮತ್ತು ತಪಸ್ವಿ. ಇವನು ಆದರ್ಶಬ್ರಹ್ಮಚಾರಿಯಾಗಿದ್ದರೂ ಷಂಡನೆಂಬ ಅಪವಾದ

ಬಂದುದರಿಂದ ಯೋಗ್ಯ ಗೃಹಸ್ಥನಾಗಲು ತಪಸ್ಸುಮಾಡಿದನು. ಇಂದ್ರನು ಅವನ ತಪಸ್ಸಿಗೆ ಮೆಚ್ಚಿ - 'ದ್ವಾರಕಿಗೆ ಹೋಗು. ನಿನಗೆ ಅಲ್ಲಿ ಮೊದಲು ಕಾಣಿಸಿದವಳೇ ನಿನ್ನ ಪತ್ನಿ'ಯೆಂದನು. ಗರ್ಗನು ದ್ವಾರಕಿಯನ್ನು ಪ್ರವೇಶಿಸುವಾಗ ಅವನಿಗೆ ಒಬ್ಬ ಗೋಪಕನ್ಯೆ ಇದಿರಾದಳು. ಅವಳೇ ಅವನ ಪತ್ನಿಯಾದಳು. ಈ ಗರ್ಗನೇ ಯಾದವರ ಪುರೋಹಿತ (ಭಾಗ.).

ಗರ್ಗಸ್ರೋತ್ರ - ಒಂದು ತೀರ್ಥವಿಶೇಷ. ಗರ್ಗಮುನಿಯು ಕಾಲಜ್ಞಾನ ಬಲ್ಲವನಾದುದರಿಂದ ಆ ತಪಸ್ವಿಯ ಹೆಸರಿನಿಂದ ಈ ತೀರ್ಥ ಕರೆಯಲ್ಪಟ್ಟಿತು (ಮ.ಶ.).

ಗರ್ದಭಿ - ನೋ. ಗಾರ್ದಭಿ.

ಗವಯ - ವಾನರನೊಬ್ಬ. ಸುಗ್ರೀವನ ಸೇನಾಪತಿ (ವಾ.ರಾ.).

ಗವಲ್ಗಣ - ಧೃತರಾಷ್ಟ್ರನ ಸಾರಥಿ ಮತ್ತು ಮಂತ್ರಿ. ಇವನ ಮಗನೇ ಸಂಜಯ (ಮ.ಆ.).

ಗವಾಕ್ಷ - ೧. ಕ್ಷತ್ರಿಯ; ಶಕುನಿಯ ಸಹೋದರ. ಗಾಂಧಾರದೇಶದ ಸುಬಲನು ಈತನ ತಂದೆ. ಈತನಿಗೆ ಗಜ, ಚರ್ಮವಂತ, ಆರ್ಜಯ, ಶುಕ ಮೊದಲಾದ ತಮ್ಮಂದಿರು ಇದ್ದರು. ಗಾಂಧಾರಿ, ಸತ್ಯವ್ರತೆ, ಸತ್ಯಸೇನೆ, ಸುದೇಷ್ಣೆ ಮೊದಲಾದ ಸೋದರಿಯರಿದ್ದರು. ಭಾರತಯುದ್ಧದಲ್ಲಿ ಇವನನ್ನೂ, ಇವನ ಐವರು ಸೋದರರನ್ನೂ ಅರ್ಜುನನ ಮಗನಾದ ಇರಾವಂತನು ಕೊಂದನು. ೨.ಕಪಿಸೇನಾನಾಯಕನೊಬ್ಬ (ರಾಮಾ.ಯುದ್ಧ.,ಮ.ದ್ರೋ.).

ಗವಿಜಾತ - ಒಬ್ಬ ಮುನಿ. ಚ್ಯವನಮುನಿಯು ನೀರಿನಲ್ಲಿ ಮುಳುಗಿ ತಪಸ್ಸು ಮಾಡುತ್ತಿದ್ದಾಗ ಒಮ್ಮೆ ಬೆಸ್ತರ ಬಲೆಗೆ ಸಿಕ್ಕಿಬಿದ್ದನು. ಇದನ್ನು ಕಂಡ ನಹುಷರಾಜನು ಆ ಬೆಸ್ತರಿಗೆ ಆತನ ತೂಕದ ಚಿನ್ನವನ್ನು ಕೊಡುತ್ತೇನೆಂದು ಬಿಡಿಸಿದನು. ಆದರೆ ನಹುಷನ ರಾಜ್ಯದ ಎಲ್ಲ ವಸ್ತುಗಳನ್ನು ಹಾಕಿದರೂ ಚ್ಯವನಮುನಿಯ ತೂಕಕ್ಕೆ ಸರಿಬಾರದಿರಲು ರಾಜನು ಚಿಂತಾಮಗ್ನನಾದನು. ಆಗ ಗವಿಜಾತನೆಂಬ ಮುನಿಯು ಅಲ್ಲಿಗೆ ಬಂದು ಬ್ರಾಹ್ಮಣನ ತೂಕಕ್ಕೆ ಸರಿಬರುವಂತಹ ವಸ್ತು ಆಕಳು ಮಾತ್ರ ಎಂದು ಸಮಾಧಾನಪಡಿಸಿದನು (ಮ.ಅನು.).

ಗಾಂಗೇಯ - ಗಂಗೆಯ ಮಗ. ನೋ. - ಭೀಷ್ಮ, ಕಾರ್ತಿಕೇಯ.

ಗಾಣಗಾಪುರ - ಸೊಲ್ಲಾಪುರದಿಂದ ೫೩ ಮೈಲು ದೂರದಲ್ಲಿ ಗಾಣಗಾಪುರ

ಸ್ಟೇಷನ್ನು ಇದೆ. ಇಲ್ಲಿಂದ ೧೪ ಮೈಲು ದೂರದಲ್ಲಿ ಗಾಣಗಾಪುರ ಗ್ರಾಮವಿದೆ. ಇಲ್ಲಿ ಭೀಮಾನದಿ ಹರಿಯುತ್ತದೆ. ದತ್ತಾತ್ರೇಯನ ಅವತಾರವಾದ ಶ್ರೀನರಸಿಂಹಸ್ವಾಮಿಗಳ ಮಠವು ಇಲ್ಲಿದೆ. ಇದು ಭೀಮಾ ಮತ್ತು ಅಮರಜಾ ನದಿಗಳ ಸಂಗಮಸ್ಥಳ. ಇಲ್ಲಿ ದತ್ತಮಹಾರಾಜರು ಅನೇಕ ಲೀಲೆಗಳನ್ನು ತೋರಿಸುತ್ತಿದ್ದಾರೆ. ಅವರ ಸಗುಣ ಪಾದುಕೆಗಳು ಇಲ್ಲಿವೆ. ಇಲ್ಲಿ ಪ್ರತಿ ಹುಣ್ಣಿಮೆಗೆ ಉತ್ಸವ ನಡೆಯುತ್ತದೆ (ಕ್ಷೇತ್ರದ.).

ಗಾಂಡೀವ (ಗಾಂಡೀವ) - ಅರ್ಜುನನ ಬಿಲ್ಲು. ಈ ಬಿಲ್ಲಿನಿಂದಲೇ ಅರ್ಜುನನಿಗೆ ಗಾಂಡೀವಿ ಎಂಬ ಹೆಸರು ಬಂತು. ಇದು ಮೊದಲು ಕ್ರಮವಾಗಿ ಬ್ರಹ್ಮ, ಇಂದ್ರ, ವರುಣರ ಕೈಯಲ್ಲಿದ್ದು ಆಮೇಲೆ ವರುಣನಿಂದ ಅಗ್ನಿಯು ಪಡೆದು ಖಾಂಡವವನ ದಹನವಾದ ಮೇಲೆ ಅದನ್ನು ಅರ್ಜುನನಿಗೆ ಬಹುಮಾನವಾಗಿ ಕೊಟ್ಟನು. ಅರ್ಜುನನ ಮಹಾ ಯಶಸ್ಸಿಗೆ ಈ ಬಿಲ್ಲೂ ಒಂದು ಕಾರಣ. ಇದರಲ್ಲೇ ಅರ್ಜುನನು ಶಿವನಿಗೆ ಹೊಡೆದು, ಅವನ ಹಣೆಯಲ್ಲಿ ಗಾಯವನ್ನು ಮಾಡಿದನು. ಮಹಾಪ್ರಸ್ಥಾನ ಕಾಲದಲ್ಲಿ ಅಗ್ನಿಯು ಅರ್ಜುನನ ಬಳಿಗೆ ಬಂದು ತಾನು ಕೊಟ್ಟಿರುವ ಗಾಂಡೀವವೆಂಬ ಬಿಲ್ಲನ್ನೂ, ಅಕ್ಷಯ ಬಾಣದ ಬತ್ತಳಿಕೆಯನ್ನೂ ಅವನಿಂದ ತೆಗೆದುಕೊಂಡನು. ಅರ್ಜುನನು ಈ ಬಿಲ್ಲನ್ನು ಕೆಂಪುಸಮುದ್ರದಲ್ಲಿ ಬಿಸಾಡಿದನೆಂದು ಹೇಳುತ್ತಾರೆ.

ಈ ಧನಸ್ಸು ಬ್ರಹ್ಮನಲ್ಲಿ ಒಂದು ವರ್ಷ, ರುದ್ರನಲ್ಲಿ ಅರವತ್ನಾಲ್ಕು ವರ್ಷ, ಇಂದ್ರನಲ್ಲಿ ಎಂಬತ್ತೈದು ವರ್ಷ, ಚಂದ್ರನಲ್ಲಿ ಐದು ಸಾವಿರ ವರ್ಷ, ವರುಣನಲ್ಲಿ ನೂರು ವರ್ಷ ಇತ್ತು. ಇದನ್ನು ಅಗ್ನಿ ಪಡೆದು ಅರ್ಜುನನಿಗೆ ಕೊಟ್ಟನು (ಮ.ವಿ.,ಆ.,ಉ.ವ.,ಮಹಾ.).

ಗಾಂದಿನಿ - ಈಕೆ ಕಾಶೀರಾಜನ ಮಗಳು. ಈಕೆಯು ತಾಯಿಯ ಗರ್ಭದಲ್ಲಿ ಹನ್ನೆರಡು ವರ್ಷವಿದ್ದರೂ ಹೊರಬಾರದಿರಲು ಕಾಶೀರಾಜನು ತನ್ನ ಪುರೋಹಿತನ ಸೂಚನೆಯಂತೆ ಕಂಸನ ಮಂತ್ರಿಗಳಲ್ಲೊಬ್ಬನಾದ ಯದುವಂಶದ ಶ್ವಫಲ್ಕನನ್ನು ಕರೆಸಿದನು. ಅವನು ರಾಣಿಯ ಗರ್ಭದಲ್ಲಿ ಹೆಣ್ಣುಕೂಸಿರುವುದೆಂದು ತಿಳಿದು - 'ಯಾಕೆ ತಾಯಿಯನ್ನು ಪೀಡಿಸುತ್ತೀಯೆ? ಹೊರಬಾ' ಎನ್ನಲು ಆ ಕೂಸು - 'ನಾನು ಹೊರಬಂದಂದಿನಿಂದ ಪ್ರತಿದಿನವೂ ಒಂದೊಂದು ಗೋದಾನ ಮಾಡಬೇಕು' ಎಂದು ಗರ್ಭದಿಂದಲೇ ಉತ್ತರಿಸಲು, ರಾಜನು ಅದಕ್ಕೆ ಒಪ್ಪಿದನು. ಶಿಶುವು ಗರ್ಭದಿಂದ ಹೊರಬಂತು. ಈಕೆಯ ಜನನದಿಂದ ಕಾಶೀರಾಜ್ಯವು ಸುಭಿಕ್ಷವಾಯಿತು. ಈಕೆಯು ಮುಂದೆ ಶ್ವಫಲ್ಕನನ್ನೇ ವಿವಾಹವಾಗಿ ಕೃಷ್ಣಭಕ್ತರಲ್ಲಿ ಅಗ್ರೇಸರನಾದ ಅಕ್ರೂರನನ್ನು ಪಡೆದಳು (ಭಾಗ.). ಈಕೆಯ ತಂದೆಯು ಇವಳ ಅಭಿಪ್ರಾಯದಂತೆ ದಿನಕ್ಕೊಂದು

ಗೋದಾನ ಮಾಡುತ್ತಿದ್ದುದರಿಂದ ಈಕೆಗೆ ಗಾಂದಿನಿ ಎಂದು ಹೆಸರಾಯಿತು. ಈಕೆಗೆ ಅಕ್ರೂರನೆಂಬ ಜ್ಞಾನಿಯೂ, ಯೋಗಿಯೂ ಆದ ಮಗನಲ್ಲದೆ ಉಪಾಸಾಂಗ, ಮಧು, ಮೃದುರ, ಮೊದಲಾದ ಹದಿನಾಲ್ಕು ಮಂದಿ ಗಂಡುಮಕ್ಕಳೂ, ಸುಂದರಿ ಎಂಬ ರೂಪವತಿಯಾದ ಕನ್ಯೆಯೂ ಇದ್ದರು (ಹರಿ.).

ಗಾಧಿ - ಚಂದ್ರವಂಶದ ಕನ್ಯಾಕುಬ್ಜದೇಶಾಧಿಪತಿ. ಜಹ್ನು ವಂಶದಲ್ಲಿ ಹುಟ್ಟಿದ ಕುಶಿಕನ ಮಗ. ಪುರುಕುತ್ಸನ ಪುತ್ರಿಯು ಈತನ ತಾಯಿ. ಈತನ ಮಗನೇ ವಿಶ್ವಾಮಿತ್ರ. ಮಗಳೇ ಸತ್ಯವತಿ. ಈಕೆಯು ಅತ್ಯಂತ ಸುಂದರಿಯಾಗಿದ್ದಳು. ಋಚೀಕನೆಂಬ ಮುನಿಯು ಗಾಧಿಗೆ ಕನ್ಯಾಶುಲ್ಕವನ್ನಿತ್ತು ಆಕೆಯನ್ನು ವಿವಾಹವಾದನು. ಮುಂದೆ ಸತ್ಯವತಿಯ ಪ್ರಾರ್ಥನೆಯಂತೆ ಋಚೀಕನು ಸತ್ಯವತಿಗೂ ಗಾಧಿಗೂ ಒಂದೊಂದು ಗಂಡುಮಕ್ಕಳಾಗುವಂತೆ ಅನುಗ್ರಹಿಸಿದನು. ಗಾಧಿಗೆ ವಿಶ್ವಾಮಿತ್ರನೂ, ಸತ್ಯವತಿಗೆ ಜಮದಗ್ನಿ ಮತ್ತು ಶುನಶ್ಶೇಫರೆಂಬವರೂ ಮಕ್ಕಳಾದರು. ನೋ. - ಋಚೀಕ (ಮ.ಆ.ಅನು.,ಶಾಂ.,ಭಾಗ.,ಹರಿ.).

ಗಾಂಧರ್ವವೇದ - ಸಾಮವೇದದ ಉಪವೇದ. ಸಂಗೀತಶಾಸ್ತ್ರದ ಕುರಿತು ಇದರಲ್ಲಿ ಹೇಳಿದೆ (ಭಾಗ.,ಬ್ರ.ಪು.).

ಗಾಂಧಾರ - ಸಿಂಧೂ ನದಿಯ ಸಮೀಪದ ದೇಶ. ಇದರ ರಾಜಧಾನಿ ಪುರುಷಪುರ (ಪೇಷಾವರ). ಶ್ರೀರಾಮನ ಕಾಲದಲ್ಲಿ ಇದಕ್ಕೆ ತಕ್ಷಶಿಲೆಯು ರಾಜಧಾನಿಯಾಗಿತ್ತು. ಕೈಕೆಯ ಮಗ ಭರತನ ಪುತ್ರನಾದ ತಕ್ಷನು ನಿರ್ಮಾಣ ಮಾಡಿದ ಪಟ್ಟಣ. ಈ ಪ್ರಾಂತಕ್ಕೆ ಮೊದಲು ಅಶ್ವಗಣವೆಂದು ಹೆಸರಿದ್ದು ಅದೇ ಕೊನೆಗೆ ಅಫ್‌ಘಾನಿಸ್ಥಾನವಾಯಿತೆಂದು ಹೇಳುತ್ತಾರೆ. ಇಲ್ಲಿಯ ಜನರು ಅಪಿವಂಶದ ನಾಗಕುಲಕ್ಕೆ ಸೇರಿದವರು. ಕಂದಹಾರವು ಗಾಂಧಾರವಾಯಿತು. ಇದು ಪುರಾಣಕಾಲದಲ್ಲಿ ಹಿಂದುಸ್ಥಾನದ ಭಾಗವಾಗಿತ್ತು. ಇದು ಕಾಬುಲ್ ನದಿಯ ತೀರದ ಪ್ರದೇಶ (ರಾಮಾ.ಉ.,ಮ.ಭೀ.).

ಗಾಂಧಾರಿ - ೧. ಚಂದ್ರವಂಶದ ವಿಕುಂಜನ ಮತ್ತು ಸುಂದರಿಯ ಮಗನಾದ ಅಜಮೀಢನ ಐವರು ಪತ್ನಿಯರಲ್ಲಿ ಒಬ್ಬಳು. ಈಕೆಗೆ ಕೇಕಯಿ, ಋಕ್ಷ, ನಾಗ, ವಿಮಲ ಎಂಬ ನಾಲ್ವರು ಸವತಿಯರು. ೨. ಯದುರಾಜನ ಮೂರನೇ ಮಗನಾದ ಕ್ರೋಷ್ಟುವಿನ ಪತ್ನಿ. ಈಕೆಯ ಮಗ ಅನಮಿತ್ರ (ಹರಿ.). ೩.ಸುಬಲರಾಜನ ಮಗಳು. ಧೃತರಾಷ್ಟ್ರನ ಪತ್ನಿ. ಈಕೆಯ ಮಕ್ಕಳು ದುರ್ಯೋಧನ ಮೊದಲಾದ ನೂರು ಮಂದಿ. ಮಗಳು ದುಶ್ಶಳೆ. ಈ ಮಕ್ಕಳೆಲ್ಲರ ಹೆಸರನ್ನು ಧೃತರಾಷ್ಟ್ರ ಶಬ್ದದಲ್ಲಿ ನೋಡಿ. ಈಕೆಯ ಸಹೋದರರು ಶಕುನಿ ಮುಂತಾದ

ಹದಿಮೂರು ಮಂದಿ. ಗಾಂಧಾರಿಗೆ ನೂರು ಮಂದಿ ಸಹೋದರರಿದ್ದರೆಂಬ ಹೇಳಿಕೆಯೂ ಇದೆ. ಈ ಸಹೋದರರ ಹೆಸರನ್ನು ಶಕುನಿ ಶಬ್ದದಲ್ಲಿ ನೋಡಿ. ಈಕೆಯ ತಂಗಿಯರು ಹತ್ತು ಮಂದಿ ಧೃತರಾಷ್ಟ್ರನ ಪತ್ನಿಯರು. ಇವರ ಹೆಸರು - ಸತ್ಯವ್ರತೆ, ಸತ್ಯಸೇನೆ, ಸುದೇಷ್ಣೆ, ಸಂಹಿತೆ, ತೇಜಶ್ರವೆ, ಸುಶ್ರವೆ, ನಿಕೃತಿ, ಶುಭಾ, ಶಂಬರೆ, ದಶಾರ್ಣ. ಗಾಂಧಾರಿಯು ಧರ್ಮಹಂತೃವೆಂಬ ದೇವತಾಂಶದಿಂದ ಹುಟ್ಟಿದವಳು. ಈಕೆಯು ಬಾಲ್ಯದಿಂದಲೇ ಶಿವಾರಾಧನೆಯನ್ನು ಮಾಡಿ ನೂರು ಮಂದಿ ಮಕ್ಕಳಾಗುವಂತೆ ವರ ಪಡೆದಳು (ಮ.ಆ.). ಈಕೆಯು ಕುಂತಿಯು ಪ್ರಸವಿಸಿದ ವರ್ತಮಾನವನ್ನು ಕೇಳಿ ಗರ್ಭಿಣಿಯಾದ ತಾನು ತನ್ನ ಹೊಟ್ಟೆಯನ್ನು ಹೊಡೆದುಕೊಂಡಳು. ಇದರಿಂದ ಮೃತಪ್ರಾಯವಾಗಿದ್ದ ಅಂಗುಷ್ಠ ಪ್ರಮಾಣದ ನೂರು ಚೂರುಗಳು ಹೊಟ್ಟೆಯಿಂದ ಹೊರಬಿದ್ದವು. ಒಡನೆಯೇ ವ್ಯಾಸಮುನಿಯು ಅಲ್ಲಿಗೆ ಬಂದು ಗಾಂಧಾರಿಯನ್ನು ಸಮಾಧಾನಪಡಿಸಿ ನೂರು ತುಪ್ಪದ ಗಡಿಗೆಗಳಲ್ಲಿ ಆ ಪಿಂಡಗಳನ್ನಿರಿಸಿದನು. ದುರ್ಯೋಧನನು ಜನಿಸಿದ ದಿನವೇ ಭೀಮನು ಕುಂತಿಗೆ ಅರಣ್ಯದಲ್ಲಿ ಜನಿಸಿದನು. ಗಾಂಧಾರಿಯು ತನ್ನ ಮಕ್ಕಳಿಗೆ ಪಾಂಡವರೊಡನೆ ದ್ವೇಷ ಕೂಡದೆಂದರೂ ಮಕ್ಕಳು ತಾಯಿಯ ಮಾತನ್ನು ತಿರಸ್ಕರಿಸಿದರು. ಮುಂದೆ ಪುತ್ರಶೋಕಕ್ಕಾಗಿ ಅಳುವ ಗಾಂಧಾರಿಯು ಕೃಷ್ಣನೊಡನೆ - 'ಕುರುಕುಲವಿನಾಶಕ್ಕೆ ಮೂಲಕಾರಣ ನೀನೇ. ಇಂದಿಗೆ ಇಪ್ಪತ್ತಾರನೇ ವರ್ಷದಲ್ಲಿ ನೀನು ನಿನ್ನ ಕುಟುಂಬದೊಡನೆ ನಾಶವಾಗು' ಎಂದು ಶಾಪವಿತ್ತಳು. ಇವಳು ವ್ಯಾಸಮಹರ್ಷಿಯ ಅನುಗ್ರಹದಿಂದ ಗಂಗಾನದಿಯಿಂದೆದ್ದು ಬಂದ ತನ್ನ ಮಕ್ಕಳು ಮತ್ತು ಸಂಬಂಧಿಕರನ್ನೆಲ್ಲಾ ಕಣ್ಣು ತುಂಬಾ ಕಂಡ ಮೇಲೆ ಅವರೆಲ್ಲಾ ಅದೃಶ್ಯರಾದರು. ಒಮ್ಮೆ ಭೀಮಸೇನನು ಹೇಳುತ್ತಿದ್ದ ಕೌರವರ ದುಶ್ಚೇಷ್ಟೆಯ ಕುರಿತಾದ ಉಪನ್ಯಾಸವನ್ನು ಕೇಳಿ ಜೀವನದಲ್ಲೇ ವೈರಾಗ್ಯಹೊಂದಿ ಗಾಂಧಾರಿ - ಧೃತರಾಷ್ಟ್ರರು ಅರಣ್ಯಕ್ಕೆ ಹೊರಡಲು ಕುಂತಿ, ವಿದುರ ಮತ್ತು ಸಂಜಯರೂ ಇವರನ್ನು ಅನುಸರಿಸಿದರು. ಇವರೆಲ್ಲ ಅರಣ್ಯದಲ್ಲಿ ಶತಯೂಪನೆಂಬ ರಾಜರ್ಷಿಯ ಆಶ್ರಮದಲ್ಲಿ ವಾಸವಾಗಿದ್ದರು. ಒಮ್ಮೆ ಗಾಂಧಾರಿಯು ವಾಸವಾಗಿದ್ದ ಆಶ್ರಮವನ್ನು ಕಾಡುಕಿಚ್ಚು ಸಮೀಪಿಸಿ ಗಾಂಧಾರಿ, ಕುಂತಿ, ಧೃತರಾಷ್ಟ್ರರನ್ನು ಉರಿಸಿಬಿಟ್ಟಿತು. ನೋ. - ಧೃತರಾಷ್ಟ್ರ, ದುರ್ಯೋಧನ (ಮ.ಆ.,ಉ.,ಶ.,ಸ್ತ್ರೀ.,ಆಶ್ರಮ.).

ಗಾಯತ್ರಿ - ಈ ಮಂತ್ರವು ಋಗ್ವೇದದಲ್ಲಿ (೩-೬೨-೧೦) ಋಕ್ ಸ್ವರೂಪದಿಂದಲೂ ಶುಕ್ಲ ಯಜುರ್ವೇದದಲ್ಲಿ (೩-೩೫) (೩೦-೨) (೩೬-೩) ಯಾಜುಷಮೂರ್ತಿಯಾಗಿಯೂ ವಿರಾಜಮಾನವಾಗಿದೆ. ತೈತ್ತಿರೀಯ

ಕೃಷ್ಣಯಜುಸ್ಸಂಹಿತೆಯಲ್ಲಿ (೪.೧), ಸಾಮವೇದದ ಉತ್ತರಾರ್ಚಿಕದಲ್ಲಿ (೧೩-೩) ಗಾನಮೂರ್ತಿಯಾಗಿ ಸಾಮಸ್ವರೂಪದಿಂದಲೂ ಶೋಭಿಸುತ್ತದೆ. ಅಥರ್ವವೇದದಲ್ಲಿ ಅಥರ್ವಣ ಮಂತ್ರವಾಗಿ ಪ್ರಸಿದ್ಧವಾಗಿದೆ. ಈ ಮಂತ್ರದಲ್ಲಿ ಓಂ (ಪರಮಾತ್ಮ, ಪರಬ್ರಹ್ಮ) ಭೂರ್ (ಭೂಲೋಕ) ಭುವಃ (ಅಂತರಿಕ್ಷ) ಸ್ವಃ (ಸ್ವರ್ಗಲೋಕ) ತತ್ (ಪರಮಾತ್ಮ) ಸವಿತುರ್ (ಈಶ್ವರ, ಸೂರ್ಯ) ವರೇಣ್ಯಂ (ಪೂಜೆಗರ್ಹನಾದ) ಭರ್ಗೋ (ಪಾಪನಾಶಕನಾದ) ದೇವಸ್ಯ (ಜ್ಞಾನಸ್ವರೂಪನ ಮಹಿಮೆ) ಧೀಮಹಿ (ಧ್ಯಾನ ಮಾಡುತ್ತೇನೆ) ಧೀಯೋ (ಬುದ್ಧಿಯು) ಯೋ (ಯಾವ) ನಃ (ನಮ್ಮ) ಪ್ರಚೋದಯಾತ್ (ಜ್ಞಾನಪ್ರಕಾಶ ಮಾಡಲಿ). ಹೀಗೆಯೇ ಈ ಮಂತ್ರದಲ್ಲಿ ಹದಿನಾಲ್ಕು ಪದಗಳಿವೆ. ಈ ಮಂತ್ರದ ತಾತ್ಪರ್ಯ - 'ಜಗತ್ತುಗಳ ಸೃಷ್ಟಿಕರ್ತನೂ, ಪರಮಾತ್ಮನೂ, ಈಶ್ವರನೂ, ಪೂಜಾರ್ಹನೂ, ಪಾಪನಾಶಕನೂ, ಜ್ಞಾನಸ್ವರೂಪನೂ ಆದವನನ್ನು ಧ್ಯಾನ ಮಾಡುತ್ತೇನೆ. ಅವನು ನಮ್ಮ ಬುದ್ಧಿಯನ್ನು ಜ್ಞಾನಜ್ಯೋತಿಯಿಂದ ಬೆಳಗಲಿ.' ಈ ಮಂತ್ರಕ್ಕೆ ಪರಬ್ರಹ್ಮ, ಶಕ್ತಿ, ಸೂರ್ಯ, ಚಂದ್ರ, ನಾರಾಯಣ, ಶಿವ ಮೊದಲಾದ ದೇವತೆಗಳ ಪರವಾಗಿ ಅರ್ಥವಾಗುವುದು. ಈ ಮಂತ್ರಕ್ಕೆ ಋಷಿಗಳು ವಿಶ್ವಾಮಿತ್ರರು. ವಿದ್ಯಾರಣ್ಯರು ಈ ಮಂತ್ರದ ಪ್ರಭಾವದಿಂದ ವಿಜಯನಗರ ಸಾಮ್ರಾಜ್ಯಸ್ಥಾಪಕರಾದರು. ಗಾನಮಾಡುವವರನ್ನು ಈ ಗಾಯತ್ರಿ ಮಂತ್ರ ದೇವತೆಯು ರಕ್ಷಿಸುವುದರಿಂದ ಗಾಯತ್ರಿ ಎಂದು ಹೆಸರು ಬಂತು. ಈ ಮಂತ್ರವನ್ನು ಪ್ರತಿದಿನ ಒಂದು ಸಾವಿರದಂತೆ ಅರ್ಥವತ್ತಾಗಿ ಮೂರು ತಿಂಗಳವರೆಗೆ ಕ್ರಮವಾಗಿ ನಿಯಮದಿಂದ ಜಪಿಸುವುದರಿಂದ ಮನುಷ್ಯನು ಒಂದು ಮಹಾಪಾಪದಿಂದ ಬಿಡುಗಡೆ ಹೊಂದುತ್ತಾನೆಂದು ಮನುಸ್ಮೃತಿಯಲ್ಲಿ ಹೇಳಿದೆ. ಗಾಯತ್ರಿಗೆ ಸಾವಿತ್ರಿ ಸರಸ್ವತಿ ಎಂಬ ಹೆಸರುಗಳೂ ಇವೆ. (ಮ.ಅಶ್ವ.,ದೇವೀಭಾ.,ಗಾ.ಕ.).

ಗಾರ್ಗ್ಯ - ೧. ಪರೀಕ್ಷಿತ ರಾಜನ ಮಗನಾದ ಜನಮೇಜಯನು ಗಾರ್ಗ್ಯಮುನಿಯ ವಾಕ್ರೂರ ಎಂಬ ವಾಚಾಳಿಯಾದ ಮಗನನ್ನು ಕೊಲೆ ಮಾಡಿದನು. ಇದರಿಂದ ಗಾರ್ಗ್ಯನು ಸಿಟ್ಟಿಗೆದ್ದು 'ನಿನ್ನ ಇಂದ್ರದತ್ತವಾದ ರಥವು ನಾಶವಾಗಲಿ' ಎಂದು ಶಾಪವಿತ್ತನು. ಆ ಪಾಪದ ಫಲದಿಂದ ಜನಮೇಜಯನ ದೇಹವು ನಾರಹತ್ತಲು ಅವನು ಇಂದ್ರೋತಮುನಿಯಿಂದ ಅಶ್ವಮೇಧಯಾಗ ಮಾಡಿಸಿಕೊಂಡು ದುರ್ವಾಸನೆಯನ್ನು ಹೋಗಲಾಡಿಸಿಕೊಂಡನು (ಹರಿ.). ೨. ಕೇಕಯ ದೇಶದ ರಾಜನಾದ ಯುಧಾಜಿತ್ತಿನ ಪುರೋಹಿತ. ಇವನು ಅಂಗೀರಸ ಋಷಿಯ ವಂಶದವನು. ೩. ವೇಣಹೋತ್ರನೆಂಬ ಮುನಿಯ ಮಗ. ಚಂದ್ರವಂಶದ ಪೂರು ರಾಜನಿಂದ ಕೌಸಲ್ಯೆಯಲ್ಲಿ ಜನಿಸಿದ ಜನಮೇಜಯನು ಈ ಮುನಿಯ ಮಗನನ್ನು

ಹಿಂಸೆಮಾಡಿ ಕೊಂದು ಅಶ್ವಮೇಧಯಾಗವನ್ನು ಮಾಡಿ ಪಾಪದಿಂದ ನಿವೃತ್ತನಾದನು. ೪. ನೋ. - ಗೋಪಾಲಿ. ೫. ಯಾದವರ ಪುರೋಹಿತ. ಕಾಲಯವನನ ತಂದೆ (ರಾಮಾ.ಉ.,ಮ.ಅನು.,ಶಾಂ.,ವಾಯುಪು.).

ಗಾರ್ದಭಿ - ವಿಶ್ವಾಮಿತ್ರಮುನಿಯ ಮಗ (ಮ.ಅನು.).

ಗಾಲವ - ೧. ವಿಶ್ವಾಮಿತ್ರನ ಶಿಷ್ಯನೊಬ್ಬ. ಈತನು ಇಂದ್ರಸಭೆ ಮತ್ತು ಯುಧಿಷ್ಠಿರನ ಸಭೆಯಲ್ಲಿದ್ದನು. ಈತನು ವಿಶ್ವಾಮಿತ್ರನಿಗೆ ಗುರುದಕ್ಷಿಣೆಯನ್ನು ಕೊಡಲು, ಒಂದು ಕಿವಿ ಕಪ್ಪಾದ, ಮೈಯೆಲ್ಲಾ ಬಿಳುಪಾದ ಎಂಟುನೂರು ಕುದುರೆಗಳನ್ನು ತರುವುದಕ್ಕಾಗಿ ಗರುಡನನ್ನು ಹತ್ತಿ ನಾನಾ ದೇಶಗಳಲ್ಲಿ ಸಂಚರಿಸಿದನು. ಗಾಲವರು ವಿಷ್ಣುವನ್ನು ಕುರಿತು ತಪಸ್ಸುಮಾಡಿದಾಗ ವಿಷ್ಣುವು ಪ್ರತ್ಯಕ್ಷನಾಗಿ ಗಾಲವನ ಕಾರ್ಯಕ್ಕೆ ಸಹಾಯ ಮಾಡುವಂತೆ ಗರುಡನನ್ನು ಕಳುಹಿಸಿದ್ದನು. ಗರುಡನು ಗಾಲವನನ್ನು ಪ್ರತಿಷ್ಠಾನಪುರದ ಯಯಾತಿರಾಜನಲ್ಲಿಗೆ ಕರೆದುತಂದು ಆತನಿಗೆ ಗಾಲವನ ಗುರುದಕ್ಷಿಣೆಯ ವಿಚಾರವನ್ನು ಹೇಳಲು ಆತನು ತನ್ನ ಮಾಧವಿಯೆಂಬ ಮಗಳನ್ನು ಗಾಲವನಿಗೆ ಒಪ್ಪಿಸಿ 'ಬೇಕಾದಷ್ಟು ಕುದುರೆಗಳನ್ನು ಪಡೆದುಕೋ' ಎಂದನು. ಗಾಲವನು ಆ ಕನ್ಯೆಯನ್ನು ಇಕ್ಷ್ವಾಕು ರಾಜನಿಗೆ ಕೊಟ್ಟು ಇನ್ನೂರು ಕುದುರೆಗಳನ್ನು ಪಡೆದನು. ಇವನು ಮಾಧವಿಯಲ್ಲಿ ವಸುಮಾನನೆಂಬ ಮಗನನ್ನು ಪಡೆದಮೇಲೆ ಗಾಲವನು ಆಕೆಯನ್ನು ದಿವೋದಾಸನೆಂಬ ಕಾಶೀರಾಜನಿಗೆ ಕೊಟ್ಟು ಇನ್ನೂರು ಕುದುರೆಗಳನ್ನು ಪಡೆದನು. ಈ ರಾಜನಿಂದ ಆಕೆಗೆ ಪ್ರತರ್ದನನೆಂಬ ಮಗನು ಹುಟ್ಟಿದಮೇಲೆ ಮಾಧವಿಯನ್ನು ಅಲ್ಲಿಂದ ಕರೆದುಕೊಂಡು ಭೋಜರಾಜನಾದ ಉಷೀನರನಿಗೆ ಕೊಟ್ಟು ಇನ್ನೂರು ಕುದುರೆಗಳನ್ನು ಸಂಪಾದಿಸಿದನು. ಆಕೆಯಲ್ಲಿ ಈತನಿಗೆ ಶಿಬಿ ಎಂಬ ಮಗನು ಜನಿಸಿದ ಮೇಲೆ ಈ ಆರುನೂರು ಕುದುರೆಗಳನ್ನೂ, ಉಳಿದ ಇನ್ನೂರು ಕುದುರೆಗಳ ಬದಲಾಗಿ ಮಾಧವಿಯನ್ನೇ ವಿಶ್ವಾಮಿತ್ರನಿಗೊಪ್ಪಿಸಿದನು. ವಿಶ್ವಾಮಿತ್ರನು ಈಕೆಯಲ್ಲಿ ಅಷ್ಟಕನೆಂಬ ಮಗನನ್ನು ಪಡೆದನು. ೨. ಒಂದು ಕಾಲದಲ್ಲಿ ದೀರ್ಘಕ್ಷಾಮದಿಂದ ವಿಶ್ವಾಮಿತ್ರನು ಹೆಂಡತಿ ಮತ್ತು ಮಕ್ಕಳನ್ನು ರಕ್ಷಿಸಲಾರದೆ ಅವರ ಪಾಡಿಗೇ ಅವರನ್ನು ಬಿಟ್ಟುಹೋದನು. ಆಗ ಅವರ ಪತ್ನಿ ಮಗನೊಬ್ಬನ ಕುತ್ತಿಗೆಗೆ ಬಟ್ಟೆಯನ್ನು (ದರ್ಭೆ) ಕಟ್ಟಿಕೊಂಡು ಮಾರಹೊರಟಿದ್ದರಿಂದ (ಗಲ= ಕುತ್ತಿಗೆ) ಗಾಲವನೆಂದು ಈತನಿಗೆ ಹೆಸರಾಯಿತು.

ಸತ್ಯವ್ರತನೆಂಬ ರಾಜನು ವಿಶ್ವಾಮಿತ್ರನ ಪತ್ನಿಯಾದ ಕೌಶಿಕಿಯ ಕಷ್ಟಗಳನ್ನು ತಿಳಿದು ಕ್ಷಾಮ ಕಳೆಯುವವರೆಗೆ ವಿಶ್ವಾಮಿತ್ರನ ಕುಟುಂಬವನ್ನು ರಕ್ಷಿಸಿದನು. ಈ ಸತ್ಯವ್ರತನೇ ಹರಿಶ್ಚಂದ್ರನ ತಂದೆಯಾದ ತ್ರಿಶಂಕು. ಮಾರಾಟಕ್ಕೆಂದು ಕುತ್ತಿಗೆಗೆ ಗಾಳ ಹಾಕಿದವನೇ ಗಾಲವನಾದನು. ೩. ಕುಂತಳರಾಜನ ಒಬ್ಬ ಪುರೋಹಿತ. ಈತನು ಕುಂತಳರಾಜನ ಮರಣವನ್ನು ಮೊದಲೇ ಸೂಚಿಸಿದುದರಿಂದ ಚಂಪಕಮಾಲಿನಿ ಎಂಬ ತನ್ನ ಮಗಳನ್ನು ಚಂದ್ರಹಾಸನಿಗೆ ಮದುವೆ ಮಾಡಿಕೊಟ್ಟು ತನ್ನ ರಾಜ್ಯವನ್ನು ಅವನಿಗೊಪ್ಪಿಸಿದನು. (ಮ.ಉ., ಶ.,ಶಾಂ.,ಅನು.,ದೇವೀಭಾ., ಹರಿ, ವಾಯುಪು, ಬ್ರಹ್ಮಪು.).

ಗಾವಲ್ಗಣಿ - ಧೃತರಾಷ್ಟ್ರನ ಸಾರಥಿ ಮತ್ತು ಮಂತ್ರಿಯಾದ ಗವಲ್ಗಣನ ಮಗ ಸಂಜಯ. ಇವನು ಧೃತರಾಷ್ಟ್ರನ ಮಂತ್ರಿ. ಇವನು ವ್ಯಾಸನ ಅನುಗ್ರಹದಿಂದ ಭಾರತ ಯುದ್ಧಕಾಲದ ಕಥೆಯನ್ನು ಧೃತರಾಷ್ಟ್ರನಿಗೆ ಕ್ರಮವಾಗಿ ಹೇಳಿದ. ಯುದ್ಧಾನಂತರ, ಈ ಶಕ್ತಿ ಈತನಿಂದ ಅದೃಶ್ಯವಾಯಿತು. ಮುಂದೆ ಧೃತರಾಷ್ಟ್ರ, ಕುಂತಿ, ಗಾಂಧಾರಿಯರು ಕಾಡುಗಿಚ್ಚಿಗೆ ಸಿಕ್ಕಿ ಸ್ವರ್ಗಸ್ಥರಾದ ಮೇಲೆ ಈತನು ಹಿಮಾಲಯದ ಕಡೆಗೆ ತಪಸ್ಸಿಗೆ ಹೊರಟುಹೋದನು. (ಮ.ಆ.,ಉ.,ಸೌ.).

ಗಿರಿಕಾ - ಉಪರಿಚರವಸುವಿನ ಪತ್ನಿ. ಕೋಲಾಹಲ ಪರ್ವತದಿಂದ ಹುಟ್ಟಿ ಹರಿಯುತ್ತಿದ್ದ ಶುಕ್ತಿಮತಿ ನದಿಯ ಮಗಳು. ನೋ. - ಉಪರಿಚರ. ಈಕೆಯ ಮಕ್ಕಳು ಬೃಹದ್ರಥಾದಿಗಳು (ಮ.ಆ.). ಮತ್ಸ್ಯಗಂಧೆಯೆಂಬುವಳು ಮಗಳು. ಇವಳೇ ಸತ್ಯವತಿ.

ಗಿರಿಭದ್ರಾ - ಮಿತ್ರರಾಜನ ಪತ್ನಿ. ಈಕೆಯ ಮಗುವನ್ನು ಜಾತಹಾರಿಣಿಯೆಂಬ ರಾಕ್ಷಸಿ ಅಪಹರಿಸಿದಳು. ಮಿತ್ರನೆಂಬ ರಾಜನಿಗೆ ಅನಮಿತ್ರನೆಂಬುದೂ ನಾಮಾಂತರ. ನೋ. - ಚಾಕ್ಷುಷ (ಮಾರ್ಕಂ.ಪು.).

ಗಿರಿವ್ರಜ - ೧. ಮಗಧ ದೇಶದಲ್ಲಿದ್ದ ಜರಾಸಂಧನ ಪಟ್ಟಣ. ಮಗಧದ ಹಳೆಯ ರಾಜಧಾನಿ. ಬಿಹಾರದ ರಾಜಗೃಹವೆಂಬ ಪಟ್ಟಣ. ಜರಾಸಂಧನು ಭೀಮನಿಂದ ಹತನಾದ ಮೇಲೆ ಇವನ ಮಗ ಸಹದೇವನು ಇಲ್ಲಿಯೇ ಅರಸನಾದನು. ೨.ಕೇಕಯ ದೇಶದ ರಾಜಧಾನಿಯಾಗಿತ್ತು. ಭರತನ ಮಾವನಾದ ಯುಧಾಜಿತನು ಇಲ್ಲಿಯೇ ರಾಜನಾಗಿದ್ದ. (ರಾಮಾ. ಅಯೋ., ಬಾಲ., ಮ.ಸ.).

ಗಿರಿಹ್ರದ - ಗೋಲೋಕದಿಂದ ಇಳಿದುಬಂದು ಸ್ತ್ರೀರೂಪದಿಂದ ಗೋವುಗಳು ಸಂಚರಿಸಿದ ಸ್ಥಳ. ಇದೊಂದು ತೀರ್ಥ (ಮ.ಅನು.).

ಗುಡಾಕೇಶ - ನಿದ್ರೆಯನ್ನು ಅಥವಾ ಆಲಸ್ಯವನ್ನು ಗೆದ್ದ ಅರ್ಜುನ (ಮ.ಆ.)

ಗುಣಕೇಶಿ - ಇಂದ್ರನ ಸಾರಥಿಯಾದ ಮಾತಲಿಯ ಪುತ್ರಿ. ಈಕೆಯ ಸಹೋದರ ಗೊ...ಮುಖ. ತಾಯಿ ಸುಧರ್ಮೆ. ಈಕೆಯ ಪತಿ ಸುಮುಖನೆಂಬ ನಾಗ. ಮಾತಲಿಯು ವಿಷ್ಣುವನ್ನು ಪ್ರಾರ್ಥಿಸಿ, ಮತ್ತು ಇಂದ್ರನಿಂದ ಅಮೃತವನ್ನು ಕುಡಿಸಿ, ಗರುಡನ ಭಯ ಮತ್ತು ಮರಣಭಯವಿಲ್ಲದಂತೆ ಮಾಡಿ ತನ್ನ ಮಗಳಾದ ಗುಣಕೇಶಿಯನ್ನು ವಿವಾಹ ಮಾಡಿಕೊಟ್ಟನು. (ಮ.ಉ.).

ಗುಣಬರಾ - ಒಬ್ಬಳು ಅಪ್ಸರೆ (ಮ.ಆ.)

ಗುಣಮುಖ್ಯಾ - ಒಬ್ಬಳು ಅಪ್ಸರೆ (ಮ.ಆ.)

ಗುಣವತಿ - ಬ್ರಾಹ್ಮಣ ಸ್ತ್ರೀ. ಈಕೆಯ ತಂದೆ ಹರಿದ್ವಾರಕ್ಷೇತ್ರದ ಬಳಿ ವಾಸಿಸುತ್ತಿದ್ದ ದೇವಶರ್ಮನೆಂಬ ಬ್ರಾಹ್ಮಣ. ಈಕೆಯ ಪತಿ ಚಂದ್ರಶರ್ಮನೆಂಬ ಬ್ರಾಹ್ಮಣ. ಒಮ್ಮೆ ಮಾವ ಮತ್ತು ಅಳಿಯನು ಅಡವಿಗೆ ಹೋದಾಗ ಒಬ್ಬ ರಾಕ್ಷಸನು ಇಬ್ಬರನ್ನೂ ತಿಂದುಬಿಟ್ಟನು. ಗಂಡನನ್ನು ಕಳೆದುಕೊಂಡ ಗುಣವತಿ ಮುಂದೆ ಕಾರ್ತಿಕ ಮತ್ತು ಏಕಾದಶಿ ವ್ರತವನ್ನು ಕ್ರಮವಾಗಿ ಮಾಡುತ್ತಾ, ಮರಣಾನಂತರ ವಿಷ್ಣುಲೋಕವನ್ನು ಹೊಂದಿದಳು. ಈಕೆಯು ಪುನರ್ಜನ್ಮದಲ್ಲಿ ಸತ್ರಾಜಿತನ ಮಗಳು ಸತ್ಯಭಾಮೆಯಾಗಿ ಹುಟ್ಟಿ ಆ ವ್ರತದ ಮಹಿಮೆಯಿಂದ ಶ್ರೀಕೃಷ್ಣನನ್ನು ವಿವಾಹವಾದಳು. ಸತ್ಯಭಾಮೆಗಾಗಿ ಶ್ರೀಕೃಷ್ಣನು ದೇವಲೋಕದಿಂದ ಪಾರಿಜಾತವನ್ನು ತಂದಾಗ ಆಕೆಯು ತನ್ನ ಪುಣ್ಯಕ್ಕಾಗಿ ಹಿಗ್ಗುತ್ತಿರಲು, ಶ್ರೀಕೃಷ್ಣನು ಆಕೆಯ ಪೂರ್ವಜನ್ಮದ ಕಥೆಯನ್ನು ಹೇಳಿದನು (ಸ್ಕಾಂ.ಪು.).

ಗುಪ್ತಕ - ಕ್ಷತ್ರಿಯ; ಜಯದ್ರಥನ ಸೋದರ (ಮ.ವ.).

ಗುರು - ನೋ. - ಬೃಹಸ್ಪತಿ

ಗುರುಭಾರ - ಗರುಡನ ಮಗ (ಮ.ಉ.).

ಗುರುವಾಯೂರು - ತ್ರಿಚೂರಿನಿಂದ ಇಪ್ಪತ್ತೊಂದು ಮೈಲು ದೂರದಲ್ಲಿರುವ ಕ್ಷೇತ್ರ. ದೇವಗುರುವಾದ ಬೃಹಸ್ಪತಿಯು ಶ್ರೀಕೃಷ್ಣನ ತಾಯಿತಂದೆಗಳು ಪೂಜಿಸುತ್ತಿದ್ದ ಮೂರ್ತಿಯನ್ನು ವಾಯುವಿನ ಸಹಾಯದಿಂದ ಇಲ್ಲಿಗೆ ತಂದು ಸ್ಥಾಪಿಸಿದನು. ಇದರಿಂದ ಈ ಊರಿಗೆ ಗುರುವಾಯೂರು ಎಂದು ಹೆಸರಾಯಿತು. ಇದು ಪೂರ್ವದಲ್ಲಿ ಶಿವ ಪಾರ್ವತಿಯರು ಜಲಕ್ರೀಡೆಯಾಡಿದ ಸ್ಥಳ (ಕ್ಷೇತ್ರದ.).

ಗುರ್ವಕ - ಬಲಿಚಕ್ರವರ್ತಿಯ ಮಗ (ಭಾಗ.).

ಗುಹ - ೧. ಶಿವಪುತ್ರನಾದ ಷಣ್ಮುಖ. ೨. ರಾಮಲಕ್ಷ್ಮಣರನ್ನು ಗಂಗಾನದಿ ದಾಟಿಸಿದ ಬೇಡರ ದೊರೆ. ಇವನಿಗೆ ಶೃಂಗಬೇರಪುರವು ರಾಜಧಾನಿ (ರಾಮಾ. ಅಯೋ.).

ಗುಹ್ಯಕಾಸ್ತ್ರ - ಅಂಬೆಯನ್ನು ಭೀಷ್ಮನಿಗೆ ವಿವಾಹ ಮಾಡಿಸುವೆನೆಂದು ಕರೆತಂದ ಪರಶುರಾಮನು ಆ ಕಾರ್ಯವನ್ನು ಮಾಡಲಾರದೆ ಹತಾಶನಾಗಿ, ಅವನೊಡನೆ ಯುದ್ಧಕ್ಕೆ ತೊಡಗಿ ಈ ಅಸ್ತ್ರವನ್ನು ಆತನ ಮೇಲೆ ಪ್ರಯೋಗಿಸಿದನು. ಆದರೂ ಭೀಷ್ಮನ ಬ್ರಹ್ಮಚರ್ಯಕ್ಕೆ ಭಂಗತರಲಾರದೆ ಹಿಂದೆ ತೆರಳಿದನು (ಮ.ಉ.) ನೋ. - ಅಂಬಾ.

ಗೃತ್ಸಮದ - ಒಬ್ಬ ಮಹರ್ಷಿ. ಸೂರ್ಯವಂಶದ ಶರ್ಯಾತಿರಾಜನ ಮಗನಾದ ವೀತಹವ್ಯನೆಂಬ ರಾಜನು ತಪಸ್ಸಿನಿಂದ ಬ್ರಾಹ್ಮಣನಾದನು. ಆಮೇಲೆ ಜನಿಸಿದ ಮಗನೇ ಗೃತ್ಸಮದನೆಂಬ ಮಹರ್ಷಿ. ನೋ. - ಪ್ರತರ್ದನ (ಮ.ಅನು.).

ಗೃಧ್ರಜಂಬುಕಸಂವಾದ - ಒಬ್ಬ ಬ್ರಾಹ್ಮಣಪುತ್ರನು ಸಾಯಲು ಆತನ ಸಂಬಂಧಿಕರು ಆತನನ್ನು ಸುಡಲು ಸ್ಮಶಾನಕ್ಕೆ ತಂದರು. ಈ ಶವವನ್ನು ತಿನ್ನಬೇಕೆಂದು ರಾತ್ರಿಯವರೆಗೆ ನಿರೀಕ್ಷಿಸಬೇಕೆಂದಿತು ನರಿಯು. ಕತ್ತಲಾಗುವುದರೊಳಗೆ ಶವವನ್ನು ಸುಟ್ಟು ಹೋಗಬೇಕೆಂದು ಹದ್ದೂ, ತಮ್ಮ ತಮ್ಮ ಲಾಭಕ್ಕಾಗಿ ಯುಕ್ತಿಯ ಮಾತುಗಳನ್ನಾಡುತ್ತಿರಲು, ಶಿವನು ಅವುಗಳ ಸಂಭಾಷಣೆಗೆ ಮೆಚ್ಚಿ ಆ ಬ್ರಾಹ್ಮಣಪುತ್ರನನ್ನು ಬದುಕಿಸಿದನು (ಮ.ಶಾಂ.).

ಗೃಧ್ರರಾಜ - ಜಟಾಯುವೆಂಬ ಪಕ್ಷಿ. ಅರುಣ ಮತ್ತು ಶ್ಯೇನಿಯರಲ್ಲಿ ಜನಿಸಿದ ಕಿರಿಯ ಮಗ. ಇವನ ಅಣ್ಣ ಸಂಪಾತಿ. ಒಮ್ಮೆ ಜಟಾಯು ಮತ್ತು ಸಂಪಾತಿಯರು ಅತ್ಯುನ್ನತದಲ್ಲಿ ಹಾರುತ್ತಿರುವಾಗ ಸಂಪಾತಿಯು ಸೂರ್ಯನ ಬಿಸಿಲಿನಿಂದ ರೆಕ್ಕೆ ಸುಟ್ಟುಕೊಂಡು ಸಮುದ್ರತೀರದಲ್ಲಿ ಬಿದ್ದ. ಈತನು ಸೀತೆಯನ್ನು ಅಪಹರಿಸಿದ ರಾವಣನನ್ನು ಪ್ರತಿಭಟಿಸಿ, ಅವನ ಹೊಡೆತದಿಂದ ಸ್ವರ್ಗಸ್ಥನಾದನು (ಮ.ವ.).

ಗೋ (ಗೌ) - ೧. ಪುಲಸ್ತ್ಯಮುನಿಯ ಪತ್ನಿ. ಈಕೆಯ ತಂದೆ ತೃಣಬಿಂದು ಮುನಿ. ಈಕೆಯೂ ಪುಲಸ್ತ್ಯಮುನಿಯೂ - 'ಸ್ತ್ರೀಯರು ತನ್ನ ಆಶ್ರಮದ ಬಳಿ ಸುಳಿದೊಡನೆ ಗರ್ಭಿಣಿಯರಾಗಲಿ' ಎಂದು ಸ್ತ್ರೀಯರಿಗೆ ಶಾಪವಿತ್ತುದನ್ನು ತಿಳಿಯದೆ ಆತನ ಆಶ್ರಮಕ್ಕೆ ಹೋಗಿ ಗರ್ಭಿಣಿಯಾಗಲು ತೃಣಬಿಂದು ಮುನಿಯು ಈಕೆಯನ್ನು ಪುಲಸ್ತ್ಯಮುನಿಯ ಸೇವೆಗಾಗಿ ಆತನ ಬಳಿಯಲ್ಲೇ ಬಿಟ್ಟನು. ಈಕೆಯ ಮಗನೇ ವಿಶ್ರವಸ್ಸು. ೨. ದುಷ್ಟರ ಪೀಡೆಯನ್ನು ಭಗವಂತನಿಗೆ ಸೂಚಿಸಲು ಹೋಗುತ್ತಿದ್ದ ಭೂಮಿದೇವಿಯು ಧರಿಸುತ್ತಿದ್ದ ಆಕೃತಿ (ಮ.ವನ., ಆ.,ಅನು., ಅಶ್ವ.).

ಗೋಕರ್ಣ - ದಕ್ಷಿಣ ಕನ್ನಡ ಜಿಲ್ಲೆಯ ಸಪ್ತಕ್ಷೇತ್ರಗಳಲ್ಲೊಂದು. ಈಗ ಇದು ಉತ್ತರ ಕನ್ನಡ ಜಿಲ್ಲೆಯಲ್ಲಿದೆ. ಕುಂದಾಪುರದಿಂದ ಸುಮಾರು ನೂರು ಮೈಲು ದೂರದಲ್ಲಿದೆ. ಅರ್ಜುನನು ತೀರ್ಥಯಾತ್ರೆಗಾಗಿ ಇಲ್ಲಿಗೆ ಬಂದಿದ್ದನು. ಇದು

ಪರಶುರಾಮಕ್ಷೇತ್ರಕ್ಕೆ ಸೇರಿದೆ. ದಂಡಕಾರಣ್ಯದ ಒಂದು ಪುಣ್ಯಕ್ಷೇತ್ರ. ಕುಂಭಕರ್ಣನು ಬ್ರಹ್ಮನನ್ನು ಕುರಿತು ಇಲ್ಲೇ ತಪಸ್ಸು ಮಾಡಿದನು. ಹಿಮಾಲಯದ ಪಕ್ಕದಲ್ಲೂ ಒಂದು ಗೋಕರ್ಣವಿತ್ತು. ರಾವಣನು ತನ್ನ ತಾಯಿಯು, ಮಳಲ ಲಿಂಗವನ್ನು ಮಾಡಿಕೊಂಡು ಪೂಜಿಸುತ್ತಿರುವುದನ್ನು ಕಂಡು ಶಿವನ ತಪಸ್ಸುಮಾಡಿ, ಆತ್ಮಲಿಂಗವನ್ನು ಪಡೆದು, ಲಂಕೆಗೆ ಬರುತ್ತಿರುವಾಗ ಸಂಜೆಯಾಗಲು ಸಂಧ್ಯಾವಂದನೆಯನ್ನು ಮಾಡಬೇಕಾಯಿತು. ಆ ಕಾಲದಲ್ಲೂ ಲಿಂಗವನ್ನು ನೆಲದ ಮೇಲೆ ಇಡುವಂತಿಲ್ಲವಾದುದರಿಂದ ಅಲ್ಲೇ ಸುಳಿದಾಡುತ್ತಿದ್ದ ವಟುರೂಪದ ಗಣಪತಿಯ ಕೈಯಲ್ಲಿ ಕೊಟ್ಟು ತನ್ನ ಆಹ್ನಿಕಕ್ಕೆ ತೆರಳಿದನು. ಲಿಂಗವು ಭಾರವಾಗಿದ್ದುದರಿಂದ ಗಣಪತಿಯು ಅದನ್ನು ಹೊತ್ತುಕೊಂಡು ಹಿಡಿದಿರಲಾರದೆ ರಾವಣನನ್ನು ಕೂಗಿ ಕರೆದರೂ ಆತನು ಬಾರದಿರಲು ಅದನ್ನು ಅಲ್ಲೇ ನೆಲದ ಮೇಲಿಟ್ಟನು. ಆ ಆತ್ಮಲಿಂಗವು ಅಲ್ಲೇ ಸ್ಥಿರವಾಯಿತು. ರಾವಣನು ಸಾಯಂಸಂಧ್ಯೆಯನ್ನು ಮುಗಿಸಿ ಬಂದು ನೆಲದ ಮೇಲಿದ್ದ ಲಿಂಗವನ್ನು ಬಲವಾಗಿ ಎತ್ತಲು ಭೂಮಿ ನಡುಗಿತಲ್ಲದೆ ಲಿಂಗ ನೆಲ ಬಿಡಲಿಲ್ಲ. ಇವನ ಶಕ್ತಿಯ ಪರಿಣಾಮವಾಗಿ ಲಿಂಗವು ಗೋಕರ್ಣದ ರೂಪವನ್ನು ತಾಳಿತು. ರಾವಣನ ಶಕ್ತಿಯನ್ನು ಮೀರಿಸಿದ ಬಲವುಳ್ಳ ಆ ಲಿಂಗಕ್ಕೆ ಮಹಾಬಲೇಶ್ವರ ಲಿಂಗವೆಂದು ಹೆಸರಾಯಿತು. ಇಲ್ಲಿ ನೆಲದ ಮೇಲೆ ಲಿಂಗ ಇಟ್ಟ ಗಣಪತಿಯ ಮೇಲೆ ಕೋಪಗೊಂಡ ರಾವಣನು ಆತನ ತಲೆಗೆ ಕುಟ್ಟಿದ ಚಿಹ್ನೆಯು ಇಂದೂ ಅಲ್ಲಿನ ಗಣಪತಿ ಮೂರ್ತಿಯ ತಲೆಯ ಮೇಲೆ ಕಾಣಸುತ್ತದೆ. ಗಣಪತಿಯ ಪೆಟ್ಟಿನಿಂದ ರಾವಣನು ರಕ್ತ ಕಾರಿದ ಕೊಳವು ಗಣಪತಿಮಂದಿರದ ಹತ್ತಿರ ಇದೆ. ಇಲ್ಲಿ ಕೋಟಿ ತೀರ್ಥವೆಂಬ ಪ್ರಸಿದ್ಧವಾದ ಕೊಳವಿದೆ. ಇಲ್ಲಿಯ ಒಂದು ದೇವಿಯ ಮೂರ್ತಿಯು, ಕಾಶಿ ಮತ್ತು ಗೋಕರ್ಣಗಳನ್ನು ಒಂದು ತಕ್ಕಡಿಯಲ್ಲಿ ತೂಗಿ ಗೋಕರ್ಣವೇ ಮಿಗಿಲಾದುದೆಂದು ತೋರುವ ದೃಶ್ಯವಿದೆ (ಕ್ಷೇತ್ರದ.).

ಸಂನ್ಯಾಸಿಯು ಕೊಟ್ಟ ಫಲವನ್ನು ದುಂಧುಲಿಯು ದನಕ್ಕೆ ತಿನ್ನಿಸಿದಳು. ಆ ಬಂಜೆದನವು ಗರ್ಭಿಣಿಯಾಗಿ, ನವಮಾಸ ತುಂಬಿ ಒಂದು ಪುತ್ರರತ್ನವನ್ನು ಹೆತ್ತಿತು. ಆ ಮಗುವಿನ ಕಿವಿ ಮಾತ್ರ ದನದಂತಿತ್ತು. ಆದಕ್ಕೆ ಗೋಕರ್ಣನೆಂದು ನಾಮಕರಣ ಮಾಡಿದರು. ಗೋಕರ್ಣನೂ, ಧುಂಧುಕಾರಿಯೂ ಬೆಳೆಯುತ್ತಾ ಬಂದರು. ಗೋಕರ್ಣನು ಸಕಲಶಾಸ್ತ್ರಭ್ಯಾಸಮಾಡಿ ಶ್ರೇಷ್ಠ ಬ್ರಾಹ್ಮಣನೆಂದೆನ್ನಿಸಿಕೊಂಡನು. ಧುಂಧುಕಾರಿಯು ಮೂರ್ಖನೂ ಮಂದಮತಿಯೂ ಆಗಿದ್ದನು. ಕಳವು ಮೊದಲಾದ ದುಶ್ಚಟಗಳು ಇವನಲ್ಲಿ ಮನೆಮಾಡಿದವು. ಅವನು ಪರಸ್ತ್ರೀಸಂಗ, ಪರಧನಾಪಹರಣ, ಪರರ ಮನೆಗೆ

ಬೆಂಕಿಕೊಡುವುದು - ಇವುಗಳಿಂದಲೇ ಆನಂದಿಸತೊಡಗಿದನು. ತಂದೆಯನ್ನು ಧನಕ್ಕಾಗಿ ಚಿತ್ರಹಿಂಸಿಸಲೂ ಹಿಂಜರಿಯದಾದನು. ಇದರಿಂದ ಆತ್ಮದೇವನು ಭಿಕಾರಿಯಾಗಿ ಬೀದಿ ಬೀದಿ ಅಲೆಯತೊಡಗಿದನು. ಆದರೆ ಗೋಕರ್ಣನು ತಂದೆಗೆ ಸಂಸಾರದ ಅಸ್ಥಿರತೆಯನ್ನು ಮಂದಟ್ಟುಮಾಡಿ, ದೇವರ ಸ್ಮರಣೆ, ಜಪ, ತಪಶ್ಚರ್ಯೆಗಳೇ ಇಹಪರಗಳಲ್ಲಿ ಸುಖಸಾಧನಗಳೆಂದು ವಿವರಿಸಲು ಆತ್ಮದೇವನು ಸಂಸಾರದಲ್ಲಿ ವೈರಾಗ್ಯಹೊಂದಿ ಅರಣ್ಯಕ್ಕೆ ಹೊರಟುಹೋದನು. ಗೋಕರ್ಣನು ನರಕಕೂಪದಂತಹ ಸಂಸಾರದಲ್ಲಿರಲಾರದೆ ತೀರ್ಥಯಾತ್ರೆಗೆ ತೆರಳಿದನು.

ಇತ್ತ ಧುಂಧುಕಾರಿಯು ಸ್ವೇಚ್ಛಾಚಾರಿಯಾದನು. ಸುರಾಪಾನ, ವೇಶ್ಯೆಯರ ಸಂಗವನ್ನೂ ಬಹಿರಂಗವಾಗಿ ನಡೆಸತೊಡಗಿದನು. ಮುಂದೆ ಈ ವೇಶ್ಯೆಯರೇ ಅವನ ಕೊಲೆಗೆ ಕಾರಣರಾದರು. ತಾಯಿ ದುಂಧುಲಿಯು ಬಾವಿಗೆ ಹಾರಿ ಆತ್ಮಹತ್ಯೆಮಾಡಿಕೊಂಡಳು. ಧುಂಧುಕಾರಿಯು ಪಿಶಾಚಿಯಾದನು. ಗೋಕರ್ಣನು ಸೂರ್ಯದೇವನ ಅನುಗ್ರಹದಿಂದ ಅವನ ಪಿಶಾಚಜನ್ಮವನ್ನು ಹೋಗಲಾಡಿಸಿದನು. ಶ್ರೀಮದ್ಭಾಗವತ ಶ್ರವಣವು ದುಂಧುಕಾರಿಯ ಪಾಪಗಳನ್ನೆಲ್ಲ ನಿವಾರಿಸಿತು. ನೋ. - ಧುಂಧುಕಾರಿ, ಆತ್ಮದೇವ.

ಗೋಕುಲ - ಮಥುರೆಯಿಂದ ಆರು ಮೈಲು ದೂರವಿರುವ ಗೋಕುಲದಲ್ಲಿ ಇಂದು ದೊಡ್ಡ ಹುಲ್ಲುಗಾವಲಿದೆ. ನಂದಗೋಪನ ಮನೆ, ಪೂತನಿಯನ್ನು ಕೊಂದ ಸ್ಥಳವನ್ನೆಲ್ಲ ಇಲ್ಲಿಯ ಜನರು ತೋರಿಸುವರು (ಕ್ಷೇತ್ರದ.).

ಗೋದಾವರಿ - ಕೃಷ್ಣಾನದಿಯ ಉತ್ತರದ ಒಂದು ದೊಡ್ಡನದಿ. ಇದು ದಕ್ಷಿಣಭಾರತದ ಪಶ್ಚಿಮದಲ್ಲಿ ಬ್ರಹ್ಮಪುರಿ ಪರ್ವತದ ತ್ರ್ಯಂಬಕವೆಂಬಲ್ಲಿ ಹುಟ್ಟುತ್ತದೆ. ಇದು ಸುಮಾರು ಒಂಬೈನೂರು ಮೈಲು ಉದ್ದವಿದೆ. ಈ ನದಿಯು ಸಂತಾನಪ್ರದಾಯಿನಿಯೆಂದು ಹೇಳುತ್ತಾರೆ. ಈ ನದಿಯು ಕೃಷ್ಣೆಯಂತೆ ಅನೇಕ ಮುಖದಿಂದ ಸಮುದ್ರವನ್ನು ಕೂಡುತ್ತದೆ. ಗೋದಾವರಿ ಸ್ಟೇಶನ್ನಿನಿಂದ ಕೋಟಿಪಲ್ಲಿತನಕ ಸಪ್ತಗೋದಾವರಿ ತೀರ್ಥವೆನ್ನುತ್ತಾರೆ. ಈ ನಿಲ್ದಾಣದಿಂದ ಒಂದು ಮೈಲಿನ ಮೇಲೆ ಕೋಟಿ ತೀರ್ಥವಿದೆ. ಅಲ್ಲಿ ಕೋಟಿ ಶಿವಲಿಂಗಗಳಿವೆ. ಅಲ್ಲಿ ಹನ್ನೆರಡು ವರ್ಷಕ್ಕೊಮ್ಮೆ ದೊಡ್ಡಜಾತ್ರೆಯಾಗುತ್ತದೆ. ಅದಕ್ಕೆ ಪುಷ್ಕರವೆನ್ನುತ್ತಾರೆ. ಒಮ್ಮೆ ದೇಶದಲ್ಲೆಲ್ಲ ಮಹಾಕ್ಷಾಮವು ಆವರಿಸಿದಾಗ ಮುನಿಗಳೆಲ್ಲ ಗೌತಮನ ಆಶ್ರಮವನ್ನು ಸೇರಿದರು. ಗೌತಮನ ಪುಣ್ಯಬಲದಿಂದ ಇವನ ಆಶ್ರಮದ ಭೂಮಿಗಳೆಲ್ಲ ಸುಭಿಕ್ಷವಾಗಿತ್ತು. ಇದನ್ನು ಕಂಡ ಕೆಲವು ಮುನಿಗಳು ಕೃತ್ರಿಮ ಗೋವು ಒಂದನ್ನು ರಚಿಸಿ ಈತನ ಸ್ಪರ್ಶದಿಂದಲೇ ಅದಕ್ಕೆ ಪ್ರಾಣೋತ್ಕ್ರಮಣವಾಗುವಂತೆ ಮಾಡಿದರು. ತನಗೆ ಗೋಹತ್ಯೆಯ ಪಾಪವು

ಸಂಭವಿಸಿತೆಂದು ಅದರ ನಿವಾರಣಕ್ಕಾಗಿ ಗೌತಮನು ಶಿವನನ್ನು ತಪಸ್ಸುಮಾಡುವುದಕ್ಕಾಗಿ ಮೆಚ್ಚಿ ಆತನ ಜಡೆಯ ಸ್ವಲ್ಪ ಕೂದಲುಗಳನ್ನು ಪಡೆದು ಅದರಲ್ಲಿರುವ ಗಂಗಾಜಲವನ್ನು ದನದ ಮೇಲೆ ಹಿಂಡಲು ಅದು ಬದುಕಿತು. ಆ ನೀರು ಗಂಗಾಪ್ರವಾಹವಾಗಿ ಹರಿದು ಗೋದಾವರಿ ನದಿಯಾಯಿತು. ಇದಕ್ಕೆ ವೃದ್ಧಗಂಗೆಯೆನ್ನುತ್ತಾರೆ. ನೋ.-ಗೌತಮ (ಮ.ಆ., ಸ., ವ., ಭೀ., ಶಿವಪು., ದೇವಿಭಾ., ಮತ್ಸ್ಯಪು.).

ಗೋತುಮ - ಬ್ರಾಹ್ಮಣನೊಬ್ಬ. ಇವನು ಮರುಭೂಮಿಯಲ್ಲಿ ನೀರಿಲ್ಲದೆ ಸಂಕಟಪಡುತ್ತಿರುವಾಗ ಅಶ್ವಿನೀದೇವತೆಗಳು ದೂರದಲ್ಲಿರುವ ಬಾವಿಯನ್ನು ಕಿತ್ತುತಂದು ಗೋತುಮನ ಸಮೀಪದಲ್ಲಿ ಬುಡಮೇಲಾಗಿ ಇಟ್ಟರು. ಇದರಿಂದ ಅವನಿಗೆ ಸಾಕಷ್ಟು ನೀರು ದೊರಕಿತಲ್ಲದೆ ತುಂಬಾ ಧನವನ್ನು ಸಂಪಾದಿಸಲಿಕ್ಕೆ ಸಾಧ್ಯವಾಯಿತು (ಋ).

ಗೋಪತಿ - ೧. ಶಿಬಿಚಕ್ರವರ್ತಿಯ ಮಗ; ಮೊಮ್ಮಗನೆಂದೂ ಉಂಟು. ಇವನು ಚಂದ್ರವಂಶದವನು. ಪರಶುರಾಮನು ಕ್ಷತ್ರಿಯವಂಶ ನಿರ್ಮೂಲನಕ್ಕಾಗಿ ದೇಶವನ್ನು ಸುತ್ತುತ್ತಿದ್ದಾಗ ಇವನು ಅರಣ್ಯದಲ್ಲಿ ಗೋಪಾಲಕನ ವೇಷದಿಂದ ತಲೆತಪ್ಪಿಸಿಕೊಂಡು ಮುಂದೆ ಶ್ರೀಕೃಷ್ಣನಿಂದ ಹತನಾದ. ಈತನಿಗೆ ಕಾಲಕೇತು ಎಂಬ ಹೆಸರೂ ಇತ್ತು ಇವನು ಅಕ್ಷಪ್ರ ಎಂಬ ಪಟ್ಟಣದ ರಾಜ. ಇವನ ಸ್ನೇಹಿತ ಕಾಲಕೇತು. ಇವನು ಶ್ರೀಕೃಷ್ಣನನ್ನು ಯಾವಾಗಲೂ ಪರಿಹಾಸ ಮಾಡುತ್ತಿದ್ದುದರಿಂದ ಅವನ ದೇಶದಲ್ಲೇ ಶ್ರೀಕೃಷ್ಣನು ಕೊಂದನು (ಮ.ಸ.). ೨.ದೇವಗಂಧರ್ವನೊಬ್ಬ. ಈತನ ತಂದೆ ಕಶ್ಯಪ; ತಾಯಿ ಮುನಿಯೆಂಬ ದಕ್ಷಪ್ರಜಾಪತಿಯ ಮಗಳು. ಪ್ರಾಧೆಯು ಗಂಧರ್ವನ ತಾಯಿಯಾದಂತೆ ಮುನಿಯೂ ಹೌದು. ೩. ಪಾಂಚಾಲದೇಶದ ರಾಜ. ಈತನು ಪಾಂಡವಪಕ್ಷದಲ್ಲಿ ನಿಂತು ಭಾರತಯುದ್ಧದಲ್ಲಿ ಹೋರಾಡಿದನು. ಇವನ ಮಗ ಸಿಂಹಸೇನನು ಭಾರತಯುದ್ಧದ ಹೋರಾಡಿದನು. ಇವನು ಮಗ ಸಿಂಹಸೇನನು ಭಾರತಯುದ್ಧದ ಹನ್ನೊಂದನೇ ದಿನ ದ್ರೋಣನಿಂದ ಮಡಿದನು. ೪. ವಿಶ್ವಭುಕ್ ಎಂಬ ಒಂದು ಅಗ್ನಿವಿಶೇಷ (ಮ.ಆ.,ದ್ರೋ.,ವ.,ಶಾಂ.).

ಗೋಪಾಲಕಕ್ಷ - ಒಂದು ದೇಶ. ಕೋಸಲಕ್ಕೆ ಸಮೀಪವಿದ್ದ ರಾಷ್ಟ್ರ. ರಾಜಸೂಯಯಾಗ ಕಾಲದಲ್ಲಿ ಭೀಮಸೇನನು ಇದನ್ನು ಜಯಿಸಿದನು (ಮ.ಸ.).

ಗೋಪಾಲೀ - ಒಬ್ಬಳು ಅಪ್ಸರೆ. ಗಾರ್ಗ್ಯ ಮುನಿಯು ವಿವಾಹವಾದರೂ ಊರ್ಧ್ವರೇತಸ್ಕನಾಗಿಯೇ ಇದ್ದನು. ಮುಂದೆ ಇವನು ಗೋಪಿಕಾವೇಷದಿಂದಿದ್ದ ಗೋಪಾಲೀ ಎಂಬ ಅಪ್ಸರೆಯನ್ನು ಮೋಹಿಸಿ ಅವಳಲ್ಲಿ ಕಾಲಯವನನೆಂಬ

ಮಗನನ್ನು ಪಡೆದನು. ನೋ.-ಗಾರ್ಗ್ಯ, ಕಾಲಯವನ. ಈ ಕಾಲಯವನನ್ನು ಯವನರಾಜನು ರಕ್ಷಿಸಿದನು.

ಗೋಪ್ರತಾರ - ಸರಯೂ ನದಿಗೆ ಸಂಬಂಧಿಸಿದ ತೀರ್ಥ. ಇದು ಫೈಜಾಬಾದಿನಲ್ಲಿದೆ. ಶರೀರವನ್ನು ಬಿಡಲು ಹೊರಟ ಶ್ರೀರಾಮನನ್ನು ಅನುಸರಿಸಿದ ಕಪಿಗಳು ಮತ್ತು ರಾಕ್ಷಸರು ದನಗಳ ಗುಂಪಿನಂತೆ ಸರಯೂ ನದಿಯಲ್ಲಿ ಮುಳುಗಿ ಎದ್ದು ದಾಟಿದ ಸ್ಥಳ. (ಮ.ವ.).

ಗೋಬಿಲ - ಒಬ್ಬ ಮಹರ್ಷಿ. ದೇವದತ್ತನೆಂಬ ಮುನಿಯು ಮಾಡಿದ ಯಜ್ಞದಲ್ಲಿ ಸಾಮವೇದದ ಮಂತ್ರಗಳನ್ನು ಪಠಿಸತಕ್ಕ ಉದ್ಗಾತೃವಾಗಿದ್ದ. ಇವನು ಮಂತ್ರವನ್ನು ಉಚ್ಚರಿಸುವಾಗ ಸ್ವರವನ್ನು ವ್ಯತ್ಯಾಸಮಾಡಿದುದರಿಂದ ದೇವದತ್ತ ಸಿಟ್ಟುಗೊಂಡು 'ಮೂರ್ಖ' ಎಂದು ಹೇಳುವ ಮೊದಲೇ 'ನಿನಗೆ ಮೂರ್ಖನಾದ ಮಗನು ಹುಟ್ಟಲಿ' ಎಂದು ಶಾಪವಿತ್ತನು. ಇದರಿಂದ ದೇವದತ್ತನು ಭಯಗೊಂಡು ಈತನ ಮೊರೆಹೋಗಲಾಗಿ 'ಕೆಲವು ಕಾಲ ಮಾತ್ರ ಮೂರ್ಖನಾಗಿದ್ದು ಮುಂದೆ ಕವಿಯಾಗುವ ಮಗನನ್ನು ಪಡೆ' ಎಂದು ವರವಿತ್ತನು (ದೇವಿಭಾ.)

ಗೋಮತಿ - ಅಯೋಧ್ಯೆಯ ಸಮೀಪ ಹರಿಯುವ ಒಂದು ನದಿ. ಇದು ಹಿಮವತ್ ಪರ್ವತದಲ್ಲಿ ಹುಟ್ಟಿ ಗಂಗಾನದಿಯನ್ನು ಸೇರುವ ಒಂದು ಉಪನದಿ. (ಮ.ಸ., ವ., ಭೀ.).

ಗೋಮಂತ - ೧. ಕ್ರೌಂಚದ್ವೀಪದ ಒಂದು ಪರ್ವತ. ೨. ದ್ವಾರಕೆಯ ಸಮೀಪದ ಪರ್ವತ; ಪಶ್ಚಿಮ ಘಟ್ಟದ ಉತ್ತರ ಭಾಗ. ೩. ಒಂದು ದೇಶ; ಈಗಿನ ಗೋವೆ (ಮ.ಭೀ.,ಸ.,ಹರಿ.).

ಗೋಮುಖ - ಮಾತಲಿಯ ಪುತ್ರ. ಗುಣಕೇಶಿಯು ಈತನ ಸಹೋದರಿ. ಇಂದ್ರಪುತ್ರನಾದ ಜಯಂತನ ಸಾರಥಿ (ಮ.ಸ.).

ಗೋರಥ - ಮಗಧ ದೇಶದ ರಾಜಧಾನಿಯಾದ ಗಿರಿವ್ರಜನ ಸುತ್ತಲಿದ್ದ ನಾಲ್ಕು ಪರ್ವತಗಳಲ್ಲೊಂದು ನೋ. - ಗಿರಿವ್ರಜ (ಮ.ಸ.).

ಗೋಲಾಂಗೂಲ - ಕಪಿಗಳಲ್ಲಿ ಒಂದು ಭೇದ. ದನದ ಬಾಲದಂತಹ ಬಾಲವುಳ್ಳ ಕಪಿಗಳು. ಇವುಗಳ ತಾಯಿ ಹರಿಯೆಂಬವಳು. ಹರಿ ಎಂಬವಳು ಕಶ್ಯಪ ಮತ್ತು ದುಷ್ಪಪ್ರಾಣಿಗಳನ್ನು ಹೆತ್ತ ಕ್ರೋಧವಶೆಯ ಮಗಳು (ಮ.ಆ.).

ಗೋಲೋಕ - ಬ್ರಹ್ಮಲೋಕಕ್ಕಿಂತ ಮೇಲೆ ಇರುವ ಲೋಕ. ಗೋದಾನ ಮಾಡಿದವರು ಪಡೆಯುವ ಲೋಕ (ಮ.ಅನು.).

ಗೋವರ್ಧನ - ೧. ಯಮುನಾತೀರದ ಪರ್ವತ. ಗೋಪಾಲಕರ ಗೋವುಗಳಿಗೆ ಹುಲ್ಲನ್ನೊದಗಿಸುವ ಪರ್ವತ. ಇಂದ್ರಯಜ್ಞವನ್ನು ತಪ್ಪಿಸಿ ಗೋವರ್ಧನ ಯಜ್ಞವನ್ನು ಹವಣಿಸಿದ ಶ್ರೀಕೃಷ್ಣನು ಈ ಪರ್ವತವನ್ನೇ ಎತ್ತಿಹಿಡಿದು ಮಳೆಯಿಂದ ಗೋವಳರನ್ನು ರಕ್ಷಿಸಿದನು. ಮಥುರೆಯಿಂದ ಗೋವರ್ಧನವು ಹದಿನಾರು ಮೈಲು ದೂರದಲ್ಲಿದೆ. ಈ ಬೆಟ್ಟದ ಎತ್ತರವು ತೀರಾ ಕಡಿಮೆಯಿದ್ದು ನಾಲ್ಕು ಮೈಲು ಉದ್ದವಿದೆ. ಇದರ ಮಧ್ಯದಲ್ಲಿ ಮಾನಸೀಗಂಗಾ ಎಂಬ ಹೆಸರಿನ ದೊಡ್ಡ ಸರೋವರವಿದೆ. ಎಷ್ಟೋ ಜನರು ಈ ಪರ್ವತಕ್ಕೆ ಪ್ರದಕ್ಷಿಣೆ ಹಾಕುವರು. ಪ್ರದಕ್ಷಿಣೆಯ ದೂರ ಸುಮಾರು ಹದಿನಾಲ್ಕು ಮೈಲು ಆಗುವುದು. ಈ ಮಾರ್ಗದಲ್ಲಿ ಗೋವಿಂದಕುಂಡ, ರಾಧಾಕುಂಡ, ಕೃಷ್ಣಕುಂಡ, ಕುಸುಮಸರೋವರ ಮುಂತಾದ ಅನೇಕ ಸುಂದರ ತೀರ್ಥಗಳೂ ಸಿಕ್ಕುತ್ತವೆ. ೨. ಬಾಹ್ಲೀಕದೇಶದ ಒಂದು ಆಲದ ಮರ (ಹರಿ., ವಿಷ್ಣುಪು., ಭಾಗ., ಮ.ಸ.).

ಗೋವಾಸನ - ದುರ್ಯೋಧನನ ಪಕ್ಷದ ಕ್ಷತ್ರಿಯನೊಬ್ಬ (ಮ.ದ್ರೋ.).

ಗೋವಿತತ - ಅಶ್ವಮೇಧದಲ್ಲಿ ಒಂದು ಭೇದ (ಮ.ಆ.).

ಗೋವೃಷಧ್ವಜ - ಕೃಪಾಚಾರ್ಯ. ಈತನು ವೃಷಭಧ್ವಜವುಳ್ಳವನು (ಮ.ದ್ರೋ.).

ಗೋಶೃಂಗ - ನಿಷಾದಭೂಮಿಯ ಸಮೀಪದ ಪರ್ವತ. ಈ ಪರ್ವತವೇ ಶ್ರೇಣಿಮಂತನ ರಾಜಧಾನಿ. ಈತನು ಪಾಂಡವಪಕ್ಷದಲ್ಲಿ ಹೋರಾಡಿದ ಅತಿರಥ (ಮ.ಸ.).

ಗೌತಮ - ೧. ಒಬ್ಬ ಮಹರ್ಷಿ. ಈತನ ತಂದೆ ದೀರ್ಘತಮನೆಂಬ ಮುನಿ. ನೋ. ದೀರ್ಘತಮ. ತಾಯಿ ಪ್ರದ್ವೇಷಿಣಿ. ಈತನಿಗೆ ಅನೇಕ ಮಂದಿ ಸೋದರರಿದ್ದರು. ಈತನ ಪತ್ನಿ ಅಹಲ್ಯೆ. ಇವನೊಬ್ಬ ಕುಲಪತಿ. ನೋ.-ಅಹಲ್ಯೆ, ಗೋದಾವರಿ. ಈತನ ಶಿಷ್ಯ ಮತ್ತು ಅಳಿಯ ಉದಂಕ. ಅನಾವೃಷ್ಟಿ ಕಾಲದಲ್ಲಿ ಗೌತಮನು ಅನ್ನದಾನಾದಿಗಳಿಂದ ಬ್ರಾಹ್ಮಣರನ್ನು ರಕ್ಷಿಸಿದನು. ಬ್ರಾಹ್ಮಣರು ಗೌತಮನಿಗೆ ಗೋಹತ್ಯೆ ಬರುವಂತೆ ಮಾಡಲು ಶಿವನ ಅನುಗ್ರಹದಿಂದ ಆ ಪಾಪವನ್ನು ಪರಿಹರಿಸಿಕೊಂಡನು. ೨. ಋಷಿಯೊಬ್ಬ. ಈತನು ಭಾಗೀರಥಿ ತೀರದ ಸಿದ್ಧಾಶ್ರಮದಲ್ಲಿ ವಾಸಿಸುತ್ತಿದ್ದನು. ಇವನಿಗೆ ಮೇಧಾವಿ, ಕಪಿಲ ಮತ್ತು ಸುಮತಿ - ಈ ಮೂವರು ಶಿಷ್ಯರು. ಒಮ್ಮೆ ಗುರುವಿನಾಜ್ಞೆಯಂತೆ ಸಮಿತ್ ಕುಶಫಲಗಳನ್ನು ತರಲು ಅರಣ್ಯಕ್ಕೆ ಹೋಗಿ ಹುಲ್ಲು ಮುಚ್ಚಿದ ಒಂದು ಬಾವಿಯಲ್ಲಿ ಬಿದ್ದರು. ಆಗ ಅಲ್ಲಿದ್ದ ಹಾವುಗಳು ಅವರನ್ನು ಕಡಿಯಲು ಅವರು ಸ್ವರ್ಗಸ್ಥರಾದರು. ಇತ್ತ ಗೌತಮನು ತನ್ನ ಪತ್ನಿಯೊಡನೆ ಬಾಲಕರನ್ನು ಹುಡುಕುತ್ತಾ ಬಂದು ಬಾವಿಯಲ್ಲಿ ಬಿದ್ದು ಸತ್ತ ಅವರನ್ನು ಕಂಡು ಯಮನಿಂದ

ಅವರಿಗೆ ಕಾಲಮೃತ್ಯುವಾಯಿತೆಂದು ತಿಳಿದರೂ ತನ್ನ ಪುಣ್ಯದಿಂದ ಅವರನ್ನು ಬದುಕಿಸಿದನು (ಕಾ.ಮ.) ೩. ಗೌತಮ ಋಷಿಯ ಮಗನ ಹೆಸರೂ ಗೌತಮನೆಂದೇ. ಇವನಿಗೆ ಹುಟ್ಟುವಾಗ ಮೂಗೇ ಇರಲಿಲ್ಲ. ಅಲ್ಲೇ ಸಮೀಪವಿದ್ದ ಪರ್ವತದ ಗುಹೆಯೊಂದರಲ್ಲಿ ಒಬ್ಬಳು ಮುದುಕಿಯು ತಪಸ್ಸು ಮಾಡುತ್ತಿದ್ದಳು. ಈಕೆಗೆ ಬ್ರಹ್ಮನು - 'ಈ ಗವಿಯೊಳಗೆ ಬಂದವನು ನಿನ್ನ ಪತಿಯು' ಎಂದು ವರವಿತ್ತಿದ್ದನು. ಒಂದು ದಿನ ತರುಣ ಗೌತಮನು ತಿರುಗಾಡುತ್ತ ಈ ತಪಸ್ವಿನಿಯ ಗುಹೆಯೊಳಗೆ ಬಂದನು. ಆಕೆಯು ಆಗ ಆತನನ್ನು ವಿವಾಹವಾಗಲು ಬಯಸಲು ತರುಣ ಗೌತಮನು ಆ ಮುದಿ ತಪಸ್ವಿನಿಯನ್ನು ವಿವಾಹವಾಗಲು ಒಪ್ಪಲಿಲ್ಲ. ಆಗ ಅಗಸ್ತ್ಯಮುನಿಯ ಸೂಚನೆಯಂತೆ ಅವರಿಬ್ಬರೂ ಗೋದಾವರಿ ನದಿಯಲ್ಲಿ ಮಿಂದು ಸುಂದರ ತರುಣ ತರುಣಿಯರಾದರು. ಆಮೇಲೆ ಅವರಿಬ್ಬರೂ ದಂಪತಿಗಳಾಗಿ ಬಾಳಿದರು. ೪. ಮಧ್ಯದೇಶದ ಕೃತಘ್ನನಾದ ಒಬ್ಬ ಬ್ರಾಹ್ಮಣ. ಈತನು ರಾಜಧರ್ಮವೆಂಬ ಬಕಪಕ್ಷಿಯನ್ನು ಕೊಂದನು. ೫. ಗೌತಮ ಗೋತ್ರದ ಮೇದಾತಿಥಿಗೂ ಗೌತಮನೆಂಬ ಹೆಸರಿದೆ. ಈತನು ಹೆಂಡತಿಯ ಮೇಲೆ ನಿಷ್ಕಾರಣವಾಗಿ ಕೋಪಗೊಂಡು ಆಕೆಯ ತಲೆ ಕಡಿಯುವಂತೆ ಮಗನಾದ ಚಿರಕಾರಿಗೆ ಅಪ್ಪಣೆಮಾಡಿ ಕೊನೆಗೆ ತನ್ನ ತಪ್ಪನ್ನು ತಿಳಿದು ಪತ್ನಿಯನ್ನು ಅನುಗ್ರಹಿಸಿದನು. ಗೌತಮನು ತರ್ಕಶಾಸ್ತ್ರವನ್ನು ರಚಿಸಿದ ಮುನಿ. ನೋ. ಚಿರಕಾರಿ.

ಗೌತಮ ಮುನಿಯು ಉಶೀನರಪುತ್ರಿಯಾದ ಶೂದ್ರಸ್ತ್ರೀಯನ್ನು ವಿವಾಹವಾಗಿ ಕಾಕ್ಷೀವಂತನೇ ಮೊದಲಾದ ಅನೇಕ ಪುತ್ರರನ್ನು ಪಡೆದನು. ಈ ಗೌತಮನು ಈ ದೇಶದಲ್ಲಿ - ಮಗಧದಲ್ಲಿ ಇದ್ದುಕೊಂಡು ಮಗಧ ರಾಜವಂಶವನ್ನು ವಿಶೇಷವಾಗಿ ಅಭಿವೃದ್ಧಿಗೊಳಿಸಿದನು (ಮ.ಸ.). ನೋ.-ಕಾಕ್ಷೀವಂತ. ೬. ಕೃಪಾಚಾರ್ಯನೂ ಗೌತಮ ಗೋತ್ರದಲ್ಲಿ ಜನಿಸಿದುದರಿಂದ ಈತನಿಗೂ ಗೌತಮನೆಂಬ ಹೆಸರಿದೆ. ೭. ಕೌಶಿಕಮುನಿಯ ಒಬ್ಬ ಶಿಷ್ಯ. ಶ್ರೀರಾಮಚಂದ್ರನ ಆಸ್ಥಾನದಲ್ಲಿ ಈತನಿದ್ದನು. ೮. ಈ ಮನ್ವಂತರದ ವ್ಯಾಸ. ಮುಂದಿನ ಇಪ್ಪತ್ತೊಂಬತ್ತನೇ ದ್ವಾಪರಯುಗದಲ್ಲಿ ಅಶ್ವತ್ಥಾಮನು ವ್ಯಾಸನಾಗುವನು. (ಮ.ವ.,ಅನು.,ಶಾಂ.,ಆ.,ಉ., ಸ್ಕಾಂ.ಪು., ದೇವೀಭಾ.,ಭಾಗ.,ರಾಮಾ.ಬಾಲ., ಉತ್ತರರಾಮ.).

ಗೌತಮೀ - ೧. ದ್ರೋಣಾಚಾರ್ಯನ ಪತ್ನಿಯಾದ ಕೃಪಿ. ೨. ಗೋದಾವರಿ ನದಿ (ಮ.ಅನು.,ಆ.).

ಗೌರಪ್ರಭ - ಶುಕಮಹರ್ಷಿಗೆ ಪೀವರಿಯಲ್ಲಿ ಹುಟ್ಟಿದ ಮಗ. ನೋ. - ಪೀವರಿ.

ಗೌರಪ್ರಷ್ಠ - ಯಮಸಭೆಯಲ್ಲಿದ್ದ ಕ್ಷತ್ರಿಯನೊಬ್ಬ (ಮ.ಸ.).

ಗೌರಮುಖ - ೧. ಶಮಿಕ ಋಷಿಯ ಶಿಷ್ಯ. ಶೃಂಗಿಯ ಸ್ನೇಹಿತ. ಶೃಂಗಿಯ ಶಾಪದ ವಿಚಾರವನ್ನು ಪರೀಕ್ಷಿತ್ ರಾಜನಿಗೆ ಹೇಳಿದವನು. ನೋ. ಶೃಂಗಿ (ಮ.ಸ.). ೨. ವಿಷ್ಣುವಿನ ಅನುಗ್ರಹರೂಪವಾಗಿ ಈ ರತ್ನವನ್ನು ಪಡೆದ ಮುನಿಯು ಇದರ ಮಹಿಮೆಯಿಂದ ದುರ್ಜಯರಾಜನಿಗೂ, ಅವನ ಪರಿವಾರಕ್ಕೂ ಮೃಷ್ಟಾನ್ನವನ್ನು ಮಾಡಿ ಬಡಿಸಲು ರಾಜನು ಈ ರತ್ನದ ಮಹಿಮೆಯನ್ನರಿತು ಇದನ್ನು ಅಪಹರಿಸಲು ಯತ್ನಿಸಿದನು. ಮುನಿಯು ಆ ರತ್ನದೊಡನೆ ಗಂಗೆಯಲ್ಲಿ ಮುಳುಗಿದೊಡನೆ ಆ ನದಿಯಿಂದ ದೊಡ್ಡ ಸೇನೆಯೆದ್ದು ರಾಜನ ಸೇನೆಯನ್ನು ನಾಶಮಾಡಿತು (ವರಾಹಪು.). ನೋ. - ದುರ್ಜಯ.

ಗೌರವಾಹನ - ಕ್ಷತ್ರಿಯನೊಬ್ಬ (ಮ.ಸ.).

ಗೌರಾಶ್ವಾ - ಯಮಸಭೆಯಲ್ಲಿದ್ದ ಕ್ಷತ್ರಿಯನೊಬ್ಬ (ಮ.ಸ.).

ಗೌರಿಶಿರ - ಋಷಿಯೊಬ್ಬ (ಮ. ಸ.)

ಗೌರಿ - ೧. ಪಾರ್ವತಿ. ಶಿವನು ಪಾರ್ವತಿಯನ್ನು ಕಾಳಿಯೆಂದು ಕರೆಯಲು ಆಕೆಯು ತಪಸ್ಸು ಮಾಡಿ ಗೌರ ದೇಹವನ್ನು ಪಡೆದು ಗೌರಿಯಾದಳು. ೨. ವರುಣದ ಹೆಂಡತಿಯಾದ ವಾರುಣೀದೇವಿ. ೩. ಒಂದು ನದಿ. ಕಾಬೂಲ್ ನದಿಯ ಉಪನದಿಯೊಂದು. ೪. ಪ್ರಸೇನನ ಹೆಂಡತಿ. ಈಕೆಯು ಪತಿಯ ಶಾಪದಿಂದ ಬಾಹುದಾ ಎಂಬ ನದಿಯಾದಳು. (ಹರಿ., ಮ.ಸ., ಭೀ., ಉ., ಮತ್ಸ್ಯಪು.).

ಗೌರೀಶಿಖರ - ಪಾರ್ವತಿಯು ಶಿವನನ್ನು ವಿವಾಹವಾಗಲು ತಪಸ್ಸು ಮಾಡಿದ ಸ್ಥಳ.

ಗ್ರಂಥಗ್ರಂಥಿ - ಮಹಾಭಾರತ ಬರೆಯುತ್ತಿದ್ದ ಗಣೇಶನು ಬರೆಯುವ ವೇಗವನ್ನು ತಪ್ಪಿಸುವುದಕ್ಕಾಗಿ ವ್ಯಾಸನಿಂದ ವ್ಯಾಸನಿಂದ ಹೇಳಲ್ಪಟ್ಟ ಕಠಿನ ಶ್ಲೋಕಗಳು (ಮ.ಆ.).

ಗ್ರಂಥಿಕ - ಅಜ್ಞಾತವಾಸಕಾಲದಲ್ಲಿ ವಿರಾಟನಗರದಲ್ಲಿದ್ದ ನಕುಲನ ಹೆಸರು. (ಗ್ರಂಥಿಕ= ಆಯುರ್ವೇದವೆಂಬ ಗ್ರಂಥವನ್ನರಿತವನು.). ನೋ. - ನಕುಲ (ಮ.ವಿ.).

ಗ್ರಸನ - ತಾರಕಾಸುರನ ಸೇನಾಪತಿಯೊಬ್ಬ. ವಿಷ್ಣುವಿನಿಂದ ಹತನಾದ (ಮತ್ಸ್ಯಪು.).

ಗ್ರಹ - ಸೂರ್ಯನೇ ಮುಂತಾದ ಒಂಬತ್ತು ಮಂದಿಗಳು. ಗ್ರಹಗಳ ಪತಿಯು ಮಂಗಳನಾದುದರಿಂದ ಇವನಿಗೆ ಗ್ರಹಪತಿಯೆಂಬ ಹೆಸರುಂಟು (ಮ.ಸ.,ವ.,ಭಾಗ.).

ಗ್ರಾಮಣಿ - ಗಂಧರ್ವನೊಬ್ಬ, ಈತನ ಮಗಳು ದೇವವತಿ. ವಿದ್ಯುತ್ಕೇಶನ ಮಗನಾದ ಸುಕೇಶನೇ ದೇವವತಿಯ ಪತಿ. ನೋ. - ಮಾಲಿ.

ಗ್ರಾಹ - ಮೊಸಳೆಯೊಂದು. ಸ್ನಾನಮಾಡುತ್ತಿದ್ದ ದ್ರೋಣಾಚಾರ್ಯನನ್ನು ಮೊಸಳೆಯು ಹಿಡಿಯಲು ಅರ್ಜುನನು ಬಿಡಿಸಿದನು. ಸೌರಭೇಯಿ, ವಂದೇ, ಸಮೀಚಿ ಮೊದಲಾದ ಐವರು ಅಪ್ಸರೆಯರು ಒಬ್ಬ ಮುನಿಯ ವೇದಾಧ್ಯಯನಕ್ಕೆ ತೊಂದರೆಕೊಟ್ಟು ಶಾಪಹೊಂದಿ ಮೊಸಳೆಗಳಾದರು. ಇವರು ನಾರೀತೀರ್ಥದಲ್ಲಿದ್ದು ಅರ್ಜುನನಿಂದ ಶಾಪವಿಮೋಚನೆ ಹೊಂದಿದರು. ನೋ. - ನಾರೀತೀರ್ಥ (ಮ.ಸ.).

ಘ

ಘಟೋತ್ಕಚ - ಭೀಮಸೇನನ ಮಗ. ಇವನಿಗೆ ಭೈಮಸೇನಿ, ಹೈಡಿಂಬಿ ಎಂಬ ಹೆಸರುಗಳಿವೆ. ಈತನು ರಾಕ್ಷಸ. ಈತನ ತಾಯಿಗೆ ಹಿಡಿಂಬೆ ಅಥವಾ ಕಮಲಪಾಲಿಕೆ ಎಂಬ ಹೆಸರಿದೆ. ಈತನ ಪತ್ನಿಯ ಹೆಸರು ಕಾಮಕಟಂಕಟೆ. ಮಗನ ಹೆಸರು ಬರ್ಬರೀಕ. ನೋ. - ಕಾಮಕಟಂಕಟೆ, ಬರ್ಬರೀಕ. ರಾಜಸೂಯಯಾಗಕಾಲದಲ್ಲಿ ದಿಗ್ವಿಜಯಕ್ಕಾಗಿ ದಕ್ಷಿಣಕ್ಕೆ ತೆರಳಿದ ಸಹದೇವನಿಗೆ ಸಹಾಯಕನಾಗಿ ಲಂಕೆಗೆ ಹೋಗಿ ವಿಭೀಷಣನಿಂದ ಕಪ್ಪವನ್ನು ತಂದುಕೊಟ್ಟನು. ಪಾಂಡವರು ಗಂಧಮಾದನಪರ್ವತದಲ್ಲಿ ಸಂಚರಿಸುತ್ತಿದ್ದಾಗ - ಅರಣ್ಯವಾಸಕಾಲದಲ್ಲಿ ಆತನ ಸಹಾಯವನ್ನು ಕೋರಿದ್ದರು. ಈತನಿಗೆ ಮೇಘನಾದ ಮತ್ತು ಅಂಜನಪರ್ವರೆಂಬ ಮಕ್ಕಳಿದ್ದರು. ಭಾರತಯುದ್ಧದಲ್ಲಿ ಅಂಜನಪರ್ವನು ಅಶ್ವತ್ಥಾಮನಿಂದ ಹತನಾದನು. ಅರ್ಜುನನ ವಧೆಗಾಗಿ ಇಟ್ಟಿದ್ದ ಇಂದ್ರನು ಕೊಟ್ಟ ಶಕ್ತ್ಯಾಯುಧದಿಂದ ಕರ್ಣನು ಈತನನ್ನು ಕೊಂದನು. ಬಲರಾಮನ ಮಗಳಾದ ವತ್ಸಲೆಯನ್ನು ಅಭಿಮನ್ಯುವಿಗೆ ಕೊಡಲು ಮೊದಲು ನಿರ್ಧಾರವಾಗಿತ್ತು. ಪಾಂಡವರಿಗೆ ವನವಾಸಪ್ರಾಪ್ತವಾದ್ದರಿಂದ ಆಕೆಯನ್ನು ದುರ್ಯೋಧನನ ಮಗ ಲಕ್ಷ್ಮಣನಿಗೆ ಕೊಡುವುದೆಂದು ಆಮೇಲೆ ನಿರ್ಧಾರವಾಯಿತು. ಇದರಿಂದ ಸುಭದ್ರೆಯು ದುಃಖಿತೆಯಾಗಲು ಘಟೋತ್ಕಚನು ಮಾಯೆಯಿಂದ ವತ್ಸಲೆಯನ್ನು ಪಾಂಡವರ ಬಳಿಗೆ ಕರೆದುತಂದನು. ಇಲ್ಲಿ ಅಭಿಮನ್ಯುವಿಗೂ ವತ್ಸಲೆಗೂ ವಿವಾಹವಾಯಿತು. ನೋ.- ಹೈಡಿಂಬಿ (ಮ.ದ್ರೋ.,ಭೀ.,ಉ.,ವ.,ಸ.,ಆ.).

ಘೊಂಟ - ಬ್ರಾಹ್ಮಣನೊಬ್ಬ. ಈತನು ಭೃಗುವಂಶದ ಪುತ್ರಿಯಾದ ಸುದರ್ಶನೆಯನ್ನು ಅಪಹರಿಸಿ ಆ ಕನ್ಯೆಯ ತಂದೆಯಿಂದ ಗೂಬೆಯಾಗುವಂತೆ ಶಾಪಪಡೆದನು. ಮುಂದೆ ಅವನು ಶಾಪಾವಸಾನಕ್ಕಾಗಿ ಪ್ರಾರ್ಥಿಸಿದಾಗ,

ಇಂದ್ರದ್ಯುಮ್ನರಾಜನನ್ನು ಸಂಧಿಸಿದಾಗ ಶಾಪ ಪರಿಹಾರವಾಗುವುದೆಂದನು. ಈ ಗೂಬೆಗೆ ಪ್ರಾವಾರಕರ್ಣವೆಂದು ಹೆಸರಿತ್ತು. ನೋ. ಪ್ರಾವಾರಕರ್ಣ, ಇಂದ್ರದ್ಯುಮ್ನ.

ಘಂಟಾಕರ್ಣ - ೧. ಷಣ್ಮುಖನ ಪಾರಿಷದನೊಬ್ಬ. ೨. ಒಬ್ಬ ಶಿವಭಕ್ತ. ಇವನು ಶಿವನ ನಾಮವಲ್ಲದೆ ಉಳಿದ ವಿಚಾರಗಳು ಕಿವಿಗೆ ಬೀಳಬಾರದೆಂದು ತನ್ನ ಕಿವಿಗೆ ಘಂಟೆ ಕಟ್ಟಿಕೊಂಡಿದ್ದನು (ಮ.ಶ.,ಹರಿ.,ಭವಿ.ಪು.).

ಘೂರ್ಣಿಕಾ - ದೇವಯಾನಿಯ ದಾಸಿಯೊಬ್ಬಳು. ವೃಷಪರ್ವರಾಜನ ಮಗಳಾದ ಶರ್ಮಿಷ್ಠೆಯು ದೇವಯಾನಿಯೊಡನೆ ವಾಕ್ಕಲಹ ಹೂಡಿ ಕುಪಿತಳಾಗಿ ಆಕೆಯನ್ನು ಒಂದು ಹಾಳುಬಾವಿಯಲ್ಲಿ ನೂಕಿ ಹೋದಮೇಲೆ ಈಕೆಯು ತನ್ನ ಒಡತಿಯನ್ನು ಕಂಡುಹಿಡಿದಳು (ಮ.ಆ.).

ಘೃತಪೃಷ್ಠ - ಪ್ರಿಯವ್ರತರಾಜನ ಆರನೆಯ ಮಗ. ಇವನಿಗೆ ಅಗ್ನೀಧ್ರ, ಇಧ್ಮಜಿಹ್ವ, ಯಜ್ಞಬಾಹು, ಮಹಾವೀರ, ಹಿರಣ್ಯರೇತರೆಂಬ ಅಣ್ಣಂದಿರೂ, ಸವನ, ಮೇಧಾತಿಥಿ, ವೀತಿಹೋತ್ರ, ಕವಿಯೆಂಬ ತಮ್ಮಂದಿರೂ ಇದ್ದರು. ಇವನ ತಾಯಿ ವಿಶ್ವಕರ್ಮನ ಮಗಳಾದ ಬರ್ಹಿಷಷ್ಮತಿ. ಈತನು ಕ್ರೌಂಚದ್ವೀಪದ ಅರಸನಾಗಿದ್ದು ತನ್ನ ರಾಜ್ಯವನ್ನು ಆಮ, ಮಧುರುಹ, ಮೇಘಪೃಷ್ಠ, ಸುಧಾಮ, ಭ್ರಾಜಿಷ್ಠ, ಲೋಹಿತಾರ್ಣ, ವನಸ್ಪತಿಗಳೆಂಬ ಏಳು ಮಂದಿ ಮಕ್ಕಳಿಗೆ ಹಂಚಿಕೊಟ್ಟನು (ಭಾಗ.).

ಘೃತಾಚಿ - ಅಪ್ಸರಾಸ್ತ್ರೀ. ಈಕೆಯ ತಂದೆ ಕಶ್ಯಪಮುನಿ. ತಾಯಿ ಪ್ರಾಧೆ ಎಂಬ ದಕ್ಷನ ಕುಮಾರಿ. ಭರಧ್ವಾಜಮುನಿಯು ಈಕೆಯ ಸೌಂದರ್ಯಕ್ಕೆ ಮೋಹಿಸಲು ಆತನ ವೀರ್ಯ ಸ್ಖಲಿಸಿತು. ಈ ರೇತಸ್ಸಿನಿಂದ ಜನಿಸಿದವನೇ ದ್ರೋಣಾಚಾರ್ಯ. ಒಮ್ಮೆ ಆಕೆ ಶುಕರೂಪದಲ್ಲಿ ಸಂಚರಿಸುತ್ತಿದ್ದಾಗ ವ್ಯಾಸಮುನಿ ಈಕೆಗೆ ಮೆಚ್ಚಿ ಶುಕನೆಂಬ ಮಗನನ್ನು ಪಡೆದನು. ಪ್ರಮಿತಿಯೆಂಬ ಮುನಿಯು ಈಕೆಯಿಂದಲೇ ರುರು ಎಂಬ ಬಾಲಕನನ್ನು ಪಡೆದನು. ಒಮ್ಮೆ ವಿಶ್ವಕರ್ಮನು ಇವಳನ್ನು ಕಂಡು ಮೋಹಿಸಿದನು. ಆದರೆ ಘೃತಾಚಿಯು ಅವನನ್ನು ತಿರಸ್ಕರಿಸಲು ಆಕೆಯನ್ನು ಭೂಲೋಕದಲ್ಲಿ ಜನಿಸುವಂತೆ ಶಾಪವಿತ್ತನು. ಘೃತಾಚಿಯೂ ವಿಶ್ವಕರ್ಮನಿಗೆ ಹಾಗೆಯೇ ಶಾಪವಿತ್ತಳು. ಮುಂದೆ ಘೃತಾಚಿಯು ಪ್ರಯಾಗದಲ್ಲಿ ಒಬ್ಬ ಗೊಲ್ಲನ ಮಗಳಾಗಿ ಹುಟ್ಟಿದಳು. ಈಕೆ ತಾರುಣ್ಯದಲ್ಲಿ ವಿಶ್ವಕರ್ಮನನ್ನು ಕಂಡು ಮೋಹಿಸಿ, ಪರಸ್ಪರ ಕಲೆತು ಸುಖದಿಂದಿದ್ದರು. ಈ ದಂಪತಿಗಳಲ್ಲಿ ಜನಿಸಿದವರೇ ಬಡಗಿಗಳು, ಕಮ್ಮಾರರು, ಅಕ್ಕಸಾಲಿಗಳು (ಮ.ಆ.,ಸ.,ಅನು.,ಶಾಂ.,ಬ್ರ.ವೈ.).

ಘೋರ - ೧. ಋಷಿಯೊಬ್ಬ; ಈತನು ಆಂಗೀರಸ ಮುನಿಯ ಪುತ್ರನು. ೨. ಬ್ರಹ್ಮನ ತಿಂಗಳಲ್ಲಿ ಇಪ್ಪತ್ತೈದನೇ ದಿನದ ಹೆಸರು (ಮ.ಅನು.).

ಘೋಷೆ - ಬ್ರಹ್ಮವಾಹಿನಿಯಾದ ಸ್ತ್ರೀ. ಈಕೆ ಕಕ್ಷಿವಂತನ ಮಗಳು. ಇವಳು ಕುಷ್ಠರೋಗ ಪೀಡಿತಳಾದುದರಿಂದ ಮದುವೆಯಾಗದೆ ತವರುಮನೆಯಲ್ಲೇ ಬಹುಕಾಲ ವಾಸಮಾಡಿದಳು. ಅಶ್ವಿನೀದೇವತೆಗಳು ಇವಳ ರೋಗವನ್ನು ಗುಣಪಡಿಸಿ ಪತಿ ಪ್ರಾಪ್ತಿಯಾಗುವಂತೆ ಮಾಡಿದರು (ಮ.ಆ.,ಮತ್ಸ್ಯಪು.).

ಚ

ಚಕ್ರ - ೧. ಕುಶದ್ವೀಪದ ಒಂದು ಪರ್ವತ. ೨. ವಿಷ್ಣುವಿನ ಆಯುಧವಾದ ಸುದರ್ಶನ. ವಿಷ್ಣುವು ಶಿವನನ್ನು ಕುರಿತು ತಪಸ್ಸು ಮಾಡಿ ಆತನಿಂದ ಪಡೆದನು. ಒಮ್ಮೆ ದಧೀಚಿಮುನಿಯೂ ಹರಿಭಕ್ತನಾದ ಕ್ಷುಪರಾಜನೂ ಪಗಡೆಯಾಡಲು ಕ್ಷುಪರಾಜನು ಸೋತನು. ಇದರಿಂದ ಶಿವಭಕ್ತನಾದ ದಧೀಚಿಮುನಿಗೂ ಹರಿಭಕ್ತನಾದ ಕ್ಷುಪರಾಜನಿಗೂ ಯುದ್ಧವಾಗಿ ಕ್ಷುಪನು ಸೋತು ಹರಿಯ ಮರೆಹೊಕ್ಕನು. ಹರಿಯು ದಧೀಚಿಮುನಿಯ ಮೇಲೆ ಚಕ್ರಾಯುಧ ಪ್ರಯೋಗಿಸಲು ಅವನು ಅದನ್ನು ಕೈಯಲ್ಲಿ ಹಿಡಿದು ಪುಡಿಮಾಡಿಬಿಟ್ಟನು. ಇದರಿಂದ ಚಿಂತೆಗೊಂಡ ಹರಿಯು ಸಾವಿರ ಕಮಲಗಳಿಂದ ಶಿವನನ್ನು ಪೂಜಿಸತೊಡಗಿದನು. ಶಿವನು ಆ ಕಮಲಗಳಲ್ಲಿ ಒಂದನ್ನು ಅಡಗಿಸಲು ಹರಿಯು ತನ್ನ ಒಂದು ಕಣ್ಣನ್ನೇ ಕಮಲದ ಬದಲಿಗೆ ಶಿವನ ಪಾದಗಳಿಗೆ ಅರ್ಪಿಸಲು ಆತನು ಮೆಚ್ಚಿ ಪುನಃ ಚಕ್ರಾಯುಧವನ್ನು ಹರಿಗೆ ಅರ್ಪಿಸಿ ಅದೃಶ್ಯನಾದನು. ನೋ. ಕ್ಷುಪ, ಸುದರ್ಶನ.

ಅಂಬರೀಷನನ್ನು ಬೆನ್ನಟ್ಟಿದ ದುರ್ವಾಸನ ತಮೋಜ್ವವನ್ನು ಹರಿಯು ಈ ಚಕ್ರಾಯುಧದಿಂದಲೇ ಪರಿಹರಿಸಿ ಆತನನ್ನು ರಕ್ಷಿಸಿದನು. ಶ್ರೀಕೃಷ್ಣನ ಆಯುಧವೂ ಚಕ್ರವಾಗಿತ್ತು. ಶಿಶುಪಾಲ ಮುಂತಾದ ರಾಕ್ಷಸರನ್ನು ಈ ಆಯುಧದಿಂದಲೇ ಆತನು ಕೊಂದನು. ೩. ಸೂರ್ಯನ ಹೆಚ್ಚಿನ ತೇಜಸ್ಸಿನಿಂದ ತ್ವಷ್ಟಾರನು ನಿರ್ಮಾಣ ಮಾಡಿದ ಆಯುಧ (ದೇವೀಭಾ., ಭಾಗ.,ಮ.ದ್ರೋ., ಮತ್ಸ್ಯಪು., ಶಿವಪು., ಮಾರ್ಕಂ.ಪು.,ರಾಮಾ.ಯುದ್ಧ.).

ಚಕ್ರಕ - ವಿಶ್ವಾಮಿತ್ರನ ಮಗ (ಮ.ಆ.).

ಚಕ್ರದೇವ - ಒಬ್ಬ ಯಾದವ (ಮ.ಸ.).

ಚಕ್ರಧರ್ಮ - ಒಬ್ಬ ವಿದ್ಯಾಧರ (ಮ.ಸ.).

ಚಕ್ರವ್ಯೂಹ - ಚಕ್ರಾಕಾರದಲ್ಲಿ ನಿಲ್ಲಿಸಿದ ಸೇನೆ. ಪದ್ಮವ್ಯೂಹವೆಂದೂ ಹೇಳುತ್ತಾರೆ. ಜಯದ್ರಥನ ವಧೆಯ ದಿನ ಗುರುವು ಚಕ್ರವ್ಯೂಹದೊಳಗೆ ಶಕಟವ್ಯೂಹ, ಆದರೊಳಗೆ ಪದ್ಮವ್ಯೂಹವನ್ನು ನಿರ್ಮಿಸಿದ್ದರಿಂದ ಚಕ್ರವ್ಯೂಹ

ಮತ್ತು ಪದ್ಮವ್ಯೂಹಗಳಿಗೆ ವ್ಯತ್ಯಾಸವಿದ್ದಂತೆಯೂ ತೋರುತ್ತದೆ (ಮ.ದ್ರೋ.).

ಚಂಡ - ೧. ಮುಂಡನೆಂಬ ರಾಕ್ಷಸನ ಅಣ್ಣ. ಇವನು ಶುಂಭ - ನಿಶುಂಭರ ಸೇನಾಪತಿ. ಈತ ಮತ್ತು ಈತನ ತಮ್ಮ ಕಾಳಿಯಿಂದ ಹತರಾದರು. ಇದರಿಂದ ದೇವಿಗೆ ಚಾಮುಂಡಾ ಎಂಬ ಹೆಸರು ಬಂತು. ಚಂಡವೆಂದರೆ ಕೋಪ. ಭಕ್ತರಲ್ಲದವರಲ್ಲಿ ಕೋಪವುಳ್ಳವಳಾದುದರಿಂದ ಚಂಡಿಕೆಯೆಂಬ ಹೆಸರೂ ಈಕೆಗೆ ಇದೆ (ಲಲಿತಾಸ.). ೨. ಶಿವನ ಪಾರಿಷದರಲ್ಲಿ ಒಬ್ಬ. ವೀರಭದ್ರನು ದಕ್ಷನ ಯಜ್ಞವನ್ನು ನಾಶಮಾಡುವ ಕಾಲದಲ್ಲಿ ಈತನು ಅಲ್ಲಿದ್ದು ಪೂಷನೆಂಬ ಋತ್ವಿಜನನ್ನು ಹಿಂಗಟ್ಟು ಕಟ್ಟಿ ಕೆಡೆದನು. ೩. ಶ್ರೀರಾಮನ ಕಪಿಸೇನೆಯಲ್ಲಿದ್ದ ಒಬ್ಬ ವಾನರ. ಗೌತಮಕುಲದಲ್ಲಿ ಹುಟ್ಟಿದ ಕಕ್ಷಿವಂತನು ಈತನ ತಂದೆ (ಭಾಗ., ಶಿವಪು.,ದೇವೀಭಾ., ಮಾರ್ಕಂ.ಪು. ರಾಮಾ.ಯುದ್ಧ.).

ಚಂಡಕೌಶಿಕ - ೧. ಒಬ್ಬ ಮಹರ್ಷಿ. ಈತನು ಮಾವಿನಹಣ್ಣೊಂದನ್ನು ಮಂತ್ರಿಸಿ ಬೃಹದ್ರಥ ರಾಜನಿಗೊಪ್ಪಿಸಿದನು. 'ಇದರಿಂದ ನೀನು ಪಡೆಯುವ ಮಗನು ಬ್ರಾಹ್ಮಣ ಭಕ್ತಿ, ಯುದ್ಧದಲ್ಲಿ ಯಾರಿಗೂ ಸೋಲದ ಪರಾಕ್ರಮ, ಅಪಾರ ಬುದ್ಧಿ, ಅತಿಥಿಗಳಲ್ಲಿ ಪ್ರೀತಿ, ದೀನರಕ್ಷಣೆ, ಎಣೆಯಿಲ್ಲದ ದೇಹಬಲ, ಶಾಶ್ವತವಾದ ಕೀರ್ತಿ, ಪ್ರಜಾನುರಾಗವೆಂಬ ಎಂಟು ಗುಣಗಳುಳ್ಳವನಾಗುವನು' ಎಂದನು. ಈ ಫಲದ ಶಕ್ತಿಯಿಂದ ಹುಟ್ಟಿದವನೇ ಜರಾಸಂಧ. (ಮ.ಸ.). ೨. ವಿಶ್ವಾಮಿತ್ರ.

ಚಂಡತುಂಡಕ - ಗರುಡಪುತ್ರ (ಮ.ಉ.).

ಚಂಡಬಲ - ಒಬ್ಬ ಕಪಿನಾಯಕ. ಕುಂಭಕರ್ಣನಿಂದ ಹತನಾದ (ರಾಮಾ.ಯುದ್ಧ.).

ಚಂಡಭಾರ್ಗವ - ಚ್ಯವನವಂಶದ ಮಹರ್ಷಿ. ಈತನು ಜನಮೇಜಯನ ಸರ್ಪಯಾಗದಲ್ಲಿ ಹೋತೃವಾಗಿದ್ದ (ಋಗ್ವೇದದ ಮಂತ್ರಗಳನ್ನು ಹೇಳುವವನು). ಇವನ ಜೊತೆಯಲ್ಲಿ ಆ ಯಜ್ಞದಲ್ಲಿಯ ಪಿಂಗಳನು ಅಧ್ವರ್ಯುವಾಗಿಯೂ (ಯಜುರ್ವೇದದ ಮಂತ್ರಗಳನ್ನು ಹೇಳುವವನು). ಜೈಮಿನಿಯು ಉದ್ಗಾತೃವಾಗಿಯೂ (ಸಾಮಮಂತ್ರವನ್ನು ಹೇಳುವನು) ಅಂಗೀರಸನು ಬ್ರಹ್ಮನಾಗಿಯೂ ಇದ್ದರು. ನೋ.ಜನಮೇಜಯ (ಮ.ಆ.). ಚಂಡ ಮುಂಡ ಇಬ್ಬರು ರಾಕ್ಷಸ ಸಹೋದರರು. ನೋ.ಚಂಡ ಚಂಡಾಶ್ವ. ಸೂರ್ಯವಂಶದ ಶತ್ರುಜಿತನೆಂಬ ರಾಜನ ಮಗ. ಇವನು ಗಾಲವ ಮುನಿಯು ಕೊಟ್ಟ ಶಕ್ತಿಶಾಲಿಯಾದ ಕುದುರೆಯನ್ನು ಹತ್ತಿ ಪಾತಾಳಕೇತುವನ್ನು ಕೊಂದನು. ಇದರಿಂದ ಚಂಡಾಶ್ವನೆಂದೂ ಅದು ಕುವಲಯ ಬಣ್ಣದ ಕುದುರೆಯಾದ್ದರಿಂದ ಇವನಿಗೆ ಕುವಲಯಾಶ್ವ ಅಥವಾ

ಕುವಲಾಶ್ವನೆಂದೂ, ಧುಂಧು ಎಂಬ ರಾಕ್ಷಸನನ್ನು ಕೊಂದುದರಿಂದ ಧುಂಧುಮಾರನೆಂಬ ಹೆಸರೂ ಇದೆ. ನೋ.ಕುವಲಾಶ್ವ (ಮ.ವ.).

ಚಂಡಿ - ೧. ಚಂಡ ಅಂದರೆ ಕೋಪ. ಅದುಳ್ಳವಳು ಚಂಡಿ; ಪಾರ್ವತಿ ೨. ನೋ. ಉದ್ದಾಲಕ. ಈಕೆಯು ಉದ್ದಾಲಕಮುನಿಯ ಪತ್ನಿ. ಚಂಡಿಸ್ವಭಾವದವಳು. ಈಕೆಯು ಉದ್ದಾಲಕನಿಗೆ ವಿರೋಧವಾಗಿ ನಡೆದು ಶಾಪಹೊಂದಿ ಶಿಲೆಯಾಗಿ ಬಿದ್ದಳು. ಮುಂದೆ ಅರ್ಜುನನ ಅಶ್ವಮೇಧದ ಕುದುರೆಯಿಂದ ಈಕೆಯು ಶಾಪವಿಮೋಚನೆ ಹೊಂದಿದಳು. ನೋ. - ಕಲಹ (ಜೈ.ಭಾ.).

ಚಂಡೋದರಿ - ಅಶೋಕವನದಲ್ಲಿ ಸೀತೆಯನ್ನು ಕಾಯುತ್ತಿದ್ದ ಒಬ್ಬಳು ರಕ್ಕಸಿ. ಈಕೆಯು ಸೀತೆಗೆ ಭಯ ಹುಟ್ಟಿಸಲು ಸೀತೆಯ ಶರೀರದ ಬಲಗಡೆಯ ಕೃತ್ಥನ್ನೂ, ಎಡದ ಪ್ಲೀಹವನ್ನೂ, ಹೃದಯವನ್ನೂ, ಕರುಳುಗಳನ್ನೂ ತನಗೆ ತಿನ್ನಲು ಆಸೆಯಾಗುತ್ತದೆ ಎಂದವಳು (ರಾಮಾ.ಸುಂ.).

ಚತುರ್ಧಾಮಗಳು - ಪೂರ್ವಕ್ಕೆ ಜಗನ್ನಾಥಪುರಿ, ದಕ್ಷಿಣಕ್ಕೆ ರಾಮೇಶ್ವರ, ಪಶ್ಚಿಮಕ್ಕೆ ದ್ವಾರಕಾ, ಉತ್ತರಕ್ಕೆ ಬದರಿ - ಇವುಗಳಿಗೆ ಈ ಹೆಸರಿದೆ. ಹಿಮಾಲಯದ ಚತುರ್ ಧಾಮಗಳು - ಯಮುನೋತ್ರಿ, ಗಂಗೋತ್ರಿ, ಬದರಿ, ಕೇದಾರ.

ಚತುಶ್ಶೃಂಗ - ಸಪ್ತದ್ವೀಪಗಳಲ್ಲಿ ನಾಲ್ಕನೆಯದಾದ ಕುಶದ್ವೀಪದ ಒಂದು ಪರ್ವತ. ಈ ದ್ವೀಪದಲ್ಲಿ ಇಂತಹ ಇನ್ನೂ ಆರು ಪರ್ವತಗಳಿವೆ. ನೋ. - ಕುಶ (ಭಾಗ., ದೇವೀಭಾ.).

ಚಂದನಾವತಿ - ಬೇಡರ ದೊರೆಯಾದ ಕುಳಿಂದನ ರಾಜಧಾನಿ. ಚಂದ್ರಹಾಸನಿಂದ ಇದು ಬಹಳ ಅಭಿವೃದ್ಧಿಯನ್ನು ಹೊಂದಿತು. ನೋ. - ಚಂದ್ರಹಾಸ (ಜೈ.ಭಾ.).

ಚಂದ್ರ - ೧. ಬಲಿಚಕ್ರವರ್ತಿಯ ಮಗ. ೨. ನವಗ್ರಹಗಳಲ್ಲೊಬ್ಬ. ಸ್ವಾಯಂಭುವ ಮನ್ವಂತರದಲ್ಲಿ ಅತ್ರಿಋಷಿಯ ಮಗ. ಈಗ ನಡೆವ ವೈವಸ್ವತ ಮನ್ವಂತರದಲ್ಲಿ ಧರ್ಮ ಪ್ರಜಾಪ್ರತಿಯಿಂದ ವಸುಘ್ನಿ ಎಂಬ ಒಬ್ಬ ಪತ್ನಿಯಲ್ಲಿ ಜನಿಸಿದವ. ಈತನ ಮಗನೇ ವರ್ಚನು. ದಕ್ಷಪ್ರಜಾಪತಿಯ ಇಪ್ಪತ್ತೇಳು ಮಂದಿ ಹೆಣ್ಣುಮಕ್ಕಳು ಚಂದ್ರನ ಪತ್ನಿಯರು. ಈತನು ರೋಹಿಣಿಯೆಂಬ ಒಬ್ಬಳು ಪತ್ನಿಯನ್ನು ಮಾತ್ರ ಅತಿಶಯವಾಗಿ ಪ್ರೇಮಿಸುತ್ತಿದ್ದುದರಿಂದ ದಕ್ಷನಿಂದ ಈತನಿಗೆ ಕ್ಷಯರೋಗವು ಪ್ರಾಪ್ತಿಯಾಗುವಂತೆ ಶಾಪ ಬಂತು. ಇದರ ಪರಿಹಾರಕ್ಕೆ ಈತನು ಪ್ರಭಾಸತೀರ್ಥದಲ್ಲಿ ಮುಳುಗಿದನು. ಈತನು ಬೃಹಸ್ಪತಿಯ ಪತ್ನಿ ತಾರೆಯನ್ನು ಪರಿಗ್ರಹಿಸಿ ಬುಧನನ್ನು ಪಡೆದನು. (ಭಾಗ.,ಹರಿ.,ಪದ್ಮ.ಪು.). ಸಮುದ್ರಮಥನ ಕಾಲದಲ್ಲಿ ಜನಿಸಿದವ. ಇವನನ್ನು

ಶಿವನು ತನ್ನ ತಲೆಯಲ್ಲಿ ಧರಿಸಿ ಚಂದ್ರಶೇಖರನೆನ್ನಿಸಿದನು. ಅಮೃತಪ್ರಾಶನ ಮಾಡುವ ರಾಹುವನ್ನು ಇವನು ವಿಷ್ಣುವಿಗೆ ಸೂಚಿಸಲು ವಿಷ್ಣುವು ತನ್ನ ಚಕ್ರಾಯುಧದಿಂದ ರಾಹುವಿನ ತಲೆ ಕತ್ತರಿಸಿದನು. ಆದರೂ ಅಮೃತದ ಪ್ರಭಾವದಿಂದ ಆತನು ಸಾಯದೆ ಮುಂಡವು ರಾಹುವಾಗಿಯೂ ರುಂಡವು ಕೇತುವಾಗಿಯೂ ಇಬ್ಬರಾದರು. ಹನ್ನೊಂದು ಮಂದಿ ಪ್ರಚೇತಸರು ತಪಸ್ಸಿನಿಂದ ಹಿಂದಿರುಗುವಾಗ ಊರೆಲ್ಲಾ ಕಾಡುಗಳಿಂದ ತುಂಬಿತ್ತು. ಆಗ ಇವರು ಮರಗಳನ್ನೆಲ್ಲ ಕಡಿಯತೊಡಗಲು ಓಷಧೀಶನಾದ ಚಂದ್ರನು ಪ್ರಚೇತಸರ ಬಳಿಗೆ ಬಂದು ಮರ ಕಡಿಯಬಾರದೆಂದು ಹೇಳಿ ಅವರಿಗೆ ವೃಕ್ಷಪುತ್ರಿಯಾದ ಮಾರಿಷೆಯನ್ನು ವಿವಾಹ ಮಾಡಿಸಿದನು. ಚಂದ್ರನಿಗೆ ಪೂಷಾ, ಯಶಾ, ಸುಮನಸಾ ಮೊದಲಾದ ಹದಿನಾರು ಕಲೆಗಳಿವೆ. ೩. ದನುವಿನ ಮಗನಾದ ರಾಕ್ಷಸನೊಬ್ಬ. ೪. ಅಷ್ಟವಸುಗಳಲ್ಲೊಬ್ಬ (ಮ.ಆ.,ಶಿವಪು.,ಲಿಂಗಪು.,ಬ್ರಹ್ಮಪು., ಭಾಗ.,ಹರಿ.,ಪದ್ಮಪು., ವಾಯುಪು., ಮತ್ಸ್ಯಪು., ದೇವೀಭಾ., ವಿಷ್ಣುಪು., ಕಾಳಿಕಾಪು.).

ಚಂದ್ರಕಲೆ - ಪೂಷಾ, ಯಶಸ್, ಸುಮನಸಾ, ರತಿ ಮುಂತಾದ ಹದಿನಾರು ಕಲೆಗಳು. ಅಮೃತಾ, ಮನದಾ, ಪೂಷಾ, ಪುಷ್ಟಿ, ತುಷ್ಟಿ, ರತಿ, ಧೃತಿ, ಶಶಿನಿ ಮೊದಲಾದ ಹದಿನಾರು ಕಲೆಗಳೆಂದು ಮಂತ್ರಶಾಸ್ತ್ರಗಳಲ್ಲಿ ಹೇಳಿದೆ.

ಚಂದ್ರಕಾಂತ - ೧. ಶಿವನಿಂದ ಶಾಪಹೊಂದಿದ ಯಾಜ್ಞವಲ್ಕ್ಯನ ಹಿರಿಯ ಮಗನಾದ ಇವನ ತಮ್ಮಂದಿರಾದ ಮಹಾಮೇಘ, ವಿಜಯರೂ, ಖರ, ದೂಷಣ, ತ್ರಿಶಿರಸ್ಸುಗಳಾಗಿ ಹುಟ್ಟಿದರು. ಇವರ ಶಿಷ್ಯರು ಹದಿನಾಲ್ಕು ಸಾವಿರ ಮಂದಿ ರಾಕ್ಷಸರಾಗಿ ಜನಿಸಿದರು. ೨. ಕಾರೂಪಥದೇಶದ ಉತ್ತರದಲ್ಲಿದ್ದ ಈ ಪಟ್ಟಣವು ಲಕ್ಷ್ಮಣನ ಎರಡನೆಯ ಮಗನಾದ ಚಂದ್ರಕೇತುವಿನ ರಾಜಧಾನಿಯಾಗಿತ್ತು. ಈ ಪುರಕ್ಕೆ ಧನರತ್ನವೆಂಬ ಹೆಸರೂ ಇದ್ದಂತೆ ತೋರುತ್ತದೆ (ರಾಮಾ.ಅರ.,ಉತ್ತರರಾಮ.).

ಚಂದ್ರಕೇತು - ೧. ಲಕ್ಷ್ಮಣನ ಎರಡನೆಯ ಮಗ. ಈತನ ಅಣ್ಣ ಅಂಗದ. ತಾಯಿ ಊರ್ಮಿಳೆ. ಭರತನು ಚಂದ್ರಕಾಂತಪುರಿಯಲ್ಲಿ ಒಂದು ವರ್ಷವಿದ್ದು ಆಮೇಲೆ ಅಯೋಧ್ಯೆಗೆ ಶ್ರೀರಾಮನ ಬಳಿಗಾಗಿ ಬಂದನು (ಉತ್ತರರಾಮ). ೨.ದುರ್ಯೋಧನನ ಪಕ್ಷೀಯನಾದ ಒಬ್ಬ ಕ್ಷತ್ರಿಯ. ಎಂಟನೆಯ ದಿನದ ಭಾರತಯುದ್ಧದಲ್ಲಿ ಅಭಿಮನ್ಯುವಿನಿಂದ ಹತನಾದ (ಮ.ದ್ರೋ.). ೩.ಹಂಸಧ್ವಜನ ಒಬ್ಬ ಸಹೋದರ. ಈತನಿಗೆ ಹಂಸಧ್ವಜ, ಧನಬಲ, ಚಂದ್ರಸೇನರೆಂಬ ಅಣ್ಣಂದಿರೂ, ಚಂದ್ರದೇವ, ವಿಡೂರಥ, ಧರ್ಮವಾಹ, ನ್ಯಾಯವರ್ತಿ ಎಂಬ ತಮ್ಮಂದಿರೂ ಇದ್ದರು (ಮ.ಐ.).

ಚಂದ್ರಗಿರಿ - ಕಾರ್ತವೀರ್ಯನ ಮಂತ್ರಿ. ಇವನು ಜಮದಗ್ನಿಯಲ್ಲಿದ್ದ ಕಾಮಧೇನುವನ್ನು ಅಪಹರಿಸಬೇಕೆಂದು ಆತನಿಗೆ ಬೋಧಿಸಿದನು. ನೋ.-ಕಾರ್ತವೀರ್ಯ.

ಚಂದ್ರದೇವ - ಕ್ಷತ್ರಿಯ; ಪಾಂಚಾಲನೊಬ್ಬ. ಕರ್ಣನಿಂದ ಹತನಾದ. ಚಂದ್ರದೇವ ಮತ್ತು ದಂಡಧರರು ಯುಧಿಷ್ಠಿರನ ಚಕ್ರರಕ್ಷಕರು (ಮ.ಆ.). ೨. ಹಂಸಧ್ವಜನ ತಮ್ಮ. ನೋ. - ಚಂದ್ರಕೇತು.

ಚಂದ್ರಪ್ರಭ - ೧. ಇಲರಾಜನು ಪಾರ್ವತಿಯ ಶಾಪಕ್ಕೆ ಗುರಿಯಾಗಿದ್ದ ಶರವಣವನವನ್ನು ಈ ಕುದುರೆಯ ಮೇಲೇರಿಕೊಂಡು ಹೋಗಿಯೇ ಹೆಣ್ಣಾಗಿ ಇಲೆ ಎಂಬ ಹೆಸರನ್ನು ಪಡೆದನು. ಇಲರಾಜನ ಉತ್ತಮ ಜಾತಿಯ ಒಂದು ಕುದುರೆ ಚಂದ್ರಪ್ರಭ. ೨. ಮೇರುಪರ್ವತದ ಒಂದು ಸರೋವರ. ಇಲ್ಲಿಂದಲೇ ಜಂಬೂನದಿಯು ಹುಟ್ಟುತ್ತದೆ. ಜಂಬೂನದಿಯ ತೀರಪ್ರದೇಶಗಳು ಸ್ವರ್ಗಸಮಾನವಾದವುಗಳು. ಚಿನ್ನವು ಇಲ್ಲಿ ಹೇರಳವಾಗಿ ದೊರೆಯುವುದರಿಂದಲೇ ಇದಕ್ಕೆ ಜಾಂಬೂನದವೆಂದು ಹೆಸರಾಯಿತು. ೩. ಕೈಲಾಸದ ಈಶಾನ್ಯದ ಒಂದು ಶಿಖರ. ಇಲ್ಲಿ ಮಣಿಭದ್ರನೆಂಬ ಶಿವಭಕ್ತನಾದ ಯಕ್ಷನು ವಾಸವಾಗಿದ್ದನು (ಮತ್ಸ್ಯಪು.,ಮ.ಭೀ.).

ಚಂದ್ರಪ್ರಮರ್ದನ - ಇವನಿಗೆ ಚಂದ್ರಮರ್ದನನೆಂಬ ಹೆಸರೂ ಇದೆ. ಇವನು ರಾಕ್ಷಸ. ಕಶ್ಯಪ ಮತ್ತು ಸಿಂಹಿಕೆಯರ ಮಗ. ಈತನಿಗೆ ರಾಹು, ಸುಚಂದ್ರ, ಚಂದ್ರಹರ್ತರೆಂಬ ಮೂವರು ಸಹೋದರರಿದ್ದರು (ಮ.ಆ.).

ಚಂದ್ರಭಾಗಾ - ೧. ಬ್ರಹ್ಮನು ಹಿಮಾಲಯದಲ್ಲಿ ಚಂದ್ರನನ್ನು ಶಿವನಿಗೂ ನಕ್ಷತ್ರಗಳಿಗೂ ಭಾಗಮಾಡಿ ಕೊಟ್ಟ ಸ್ಥಳ. ಈ ಪ್ರದೇಶದಲ್ಲಿ ಹುಟ್ಟಿದ ನದಿಯು ಬಂಗಾಳಕೊಲ್ಲಿಗೆ ಸೇರುತ್ತದೆ. ೨. ಬಂಗಾಳ ಕೊಲ್ಲಿಗೆ ಸೇರುವ ಒಂದು ನದಿ. ಇದರ ದಡದಲ್ಲಿ ಕೋಣಾರ್ಕವು ಪ್ರಸಿದ್ಧ ಬಂದರಾಗಿತ್ತು. ೩. ಸಿಂಧೂನದಿಯ ಉಪನದಿಯಾದ ಚೀನಾಬ್ ನದಿಗೆ ಈ ಹೆಸರಿತ್ತು. ೪. ದಕ್ಷಿಣ ಹಿಂದುಸ್ಥಾನದ ಪ್ರಸಿದ್ಧ ಕ್ಷೇತ್ರವಾದ ಪಂಡರಾಪುರದಲ್ಲಿ ಹರಿಯುವ ಭೀಮಾನದಿಗೆ ಈ ಹೆಸರಿದೆ. ಇದು ಈ ಕ್ಷೇತ್ರದಲ್ಲಿ ಚಂದ್ರಾಕಾರದಲ್ಲಿ ಹರಿಯುವುದರಿಂದ ಇದನ್ನು ಚಂದ್ರಬಾಗಾ ಎನ್ನುತ್ತಾರೆ. ಈ ನದಿಯಿಂದ ಎರಡು ಫರ್ಲಾಂಗ್ ದೂರದಲ್ಲಿ ವಿಠೋಬನ ಮಂದಿರವಿದೆ. ಇದರ ಎಡಗಡೆಗೆ ಸಿದ್ಧಿವಿನಾಯಕನ ಮಂದಿರವೂ, ಇದರ ಮುಂದಿನ ಮಂಟಪದಲ್ಲಿ ಹನುಮಂತ ಮತ್ತು ಗರುಡನ ಮೂರ್ತಿಗಳಿವೆ. ಇಲ್ಲಿ ಯಾವಾಗಲೂ ಭಜನೆ ನಡೆಯುತ್ತಿರುತ್ತದೆ (ಮ.ಸ.,ಭೀ.,ಕಾಳಿಕಾಪು.)

ಚಂದ್ರಭಾನು - ಈತನ ತಂದೆ ಶ್ರೀಕೃಷ್ಣ; ತಾಯಿ ಸತ್ಯಭಾಮೆ; ಭಾನು, ಸುಭಾನು, ಸ್ವರ್ಭಾನು, ಪ್ರಭಾನು, ಭಾನುಮಂತ, ಬೃಹದ್ಭಾನು, ಅತಿಭಾನು, ಶ್ರೀಭಾನು, ಪ್ರತಿಭಾನು - ಇವರು ಈತನ ಸಹೋದರರು. ಒಬ್ಬಳು ಸಹೋದರಿಯೂ ಇದ್ದಳು (ಭಾಗ.,ಹರಿ.).

ಚಂದ್ರಮತಿ - ಹರಿಶ್ಚಂದ್ರನ ಪತ್ನಿ. ವಿಶ್ವಾಮಿತ್ರನ ದಕ್ಷಿಣೆಯ ಹಣಕ್ಕಾಗಿ ಹರಿಶ್ಚಂದ್ರನು ಈಕೆಯನ್ನೂ, ಮಗನಾದ ರೋಹಿತಾಶ್ವನನ್ನೂ ಕಾಶಿಯ ಬ್ರಾಹ್ಮಣನಿಗೆ ಮಾರಿದನು. ವಿಶ್ವಾಮಿತ್ರನ ಮಾಯೆಯಿಂದ ಕಾಡಿಗೆ ಕಟ್ಟಿಗೆ ತರಲು ಹೋದ ರೋಹಿತಾಶ್ವನನ್ನು ಹಾವು ಕಚ್ಚಲು ಆತನು ಮೃತನಾದನು. ಇದನ್ನು ತಿಳಿದ ಚಂದ್ರಮತಿಯು ಆ ಶವವನ್ನು ಸುಡುಗಾಡಿಗೆ ತಂದು ಸ್ಮಶಾನದ ಕಾವಲುಗಾರನಾದ ಹರಿಶ್ಚಂದ್ರನ ಅಪ್ಪಣೆಯಂತೆ ಹೆಣ ಸುಡುವ ಹಣವನ್ನು ತರಲು ತಾನಿದ್ದ ಬ್ರಾಹ್ಮಣನ ಮನೆಗೆ ಬರುತ್ತಿರಲು ಕೊಲೆಪಾತಕಿಯೆಂದು ಈಕೆಯು ರಾಜದೂತರಿಂದ ಹಿಡಿಯಲ್ಪಟ್ಟು ರಾಜಾಜ್ಞೆಯಂತೆ ಕೊಲೆಗಾಗಿ ಪುನಃ ಹರಿಶ್ಚಂದ್ರನ ವಶಕ್ಕೇ ಒಪ್ಪಿಸಲು, ಅವನು ಸ್ವಾಮಿಕಾರ್ಯಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟು ಪತ್ನಿಯನ್ನು ಕೊಲ್ಲುತ್ತಿರುವಾಗ ಕಾಶಿಯ ವಿಶ್ವೇಶ್ವರನು ಪ್ರತ್ಯಕ್ಷನಾಗಿ ಚಂದ್ರಮತಿಯನ್ನು ಬದುಕಿಸಿದನು (ಮ.ಆ.).

ಚಂದ್ರಮಾ - ೧. ನದಿಯೊಂದು. ೨. ದನುಪುತ್ರನಾದ ರಾಕ್ಷಸನೊಬ್ಬ (ಮ.ಆ.).

ಚಂದ್ರವಂಶ - ಚಂದ್ರನಿಂದ ಅಭಿವೃದ್ಧಿಯಾದ ವಂಶ. ಅತ್ರಿಯಿಂದ ಚಂದ್ರ, ಅವನಿಂದ ಬುಧ, ಆತನಿಂದ ಪುರೂರವ ಮೊದಲಾದವರು ಹುಟ್ಟಿದರು (ಮ.ಆ.,ವಿಷ್ಣುಪು.,ಭಾಗ.,ವಾಯುಪು.,ಮತ್ಸ್ಯಪು.).

ಚಂದ್ರವರ್ಮ - ಕ್ಷತ್ರಿಯ; ಕಾಂಭೋಜರಾಜ (ಮ.ಆ.).

ಚಂದ್ರಶುಕ್ರ - ಒಂದು ದ್ವೀಪ. ಜಂಬೂದ್ವೀಪದ ದಕ್ಷಿಣದ ಲವಣ ಸಮುದ್ರದಲ್ಲಿದೆ. ಸಿಂಹಳದ್ವೀಪದ ಪಕ್ಕದ ಒಂದು ದ್ವೀಪ (ಭಾಗ., ದೇವೀಭಾ.).

ಚಂದ್ರಸೇನ - ೧. ಉಜ್ಜಯಿನಿಯ ರಾಜ. ಇವನು ಶಿವಪೂಜೆ ಮಾಡುವುದನ್ನು ಕಂಡು ಹುಡುಗನೊಬ್ಬನು ತಾನೂ ಒಂದು ಕಲ್ಲನ್ನಿಟ್ಟುಕೊಂಡು ಭಕ್ತಿಯಿಂದ ಶಿವನೆಂದೇ ಪೂಜಿಸಲು ಶಿವನು ಮಹಾಕಾಲೇಶ್ವರ ಜ್ಯೋತಿರ್ಲಿಂಗವಾಗಿ ಪ್ರತ್ಯಕ್ಷನಾದನು. ನೋ.ಮಹಾಕಾಲೇಶ್ವರ (ಮ.ಸ.,ಉ.,ದ್ರೋ.,ಶ.,ಆ.). ೨.ಸಿಂಹಳ ದ್ವೀಪದ ರಾಜ. ಈತನ ಪತ್ನಿಯು ಗುಣವತಿ. ಪುತ್ರಿಯರು ಮಂಡೋದರಿ ಮತ್ತು ಇಂದುಮತಿ. ಮಂಡೋದರಿಯು-ಪುರುಷರು ನಂಬಿಕೆಗೆ ಅಯೋಗ್ಯರು; ಪರಸ್ತ್ರೀರತರಾಗುತ್ತಾರೆ - ಎಂದು ಅವಿವಾಹಿತೆಯಾಗಿರಲು

ನಿರ್ಧರಿಸಿರಲು, ಕಿರಿಯವಳಾದ ಇಂದುಮತಿಯ ಸ್ವಯಂವರಕಾಲದಲ್ಲಿ ಆಕೆ ಮದ್ರದೇಶದ ಚಾರುದೇಷ್ಣನ ರೂಪಕ್ಕೆ ಮೋಹಿಸಿ ಆತನನ್ನು ವಿವಾಹವಾದಳು. ಹೀಗೆ ಇಂದುಮತಿಯ ವಿವಾಹಕಾಲದಲ್ಲಿ ಮಂಡೋದರಿಗೂ ವಿವಾಹವಾಯಿತು. ೩. ಶಲ್ಯನ ಸೇನಾಚಕ್ರರಕ್ಷಕ. ಈತನು ಯುಧಿಷ್ಠಿರನಿಂದ ಹತನಾದನು ೪. ಸಮುದ್ರಸೇನನೆಂಬ ರಾಜನ ಮಗ ಈತನು ಅಶ್ವತ್ಥಾಮನಿಂದ ಹತನಾದನು (ದೇವೀಭಾ.,ಮದ್ರೋ.,ಶ.,ಆ.).

ಚಂದ್ರಹರ್ತ (ಚಂದ್ರಪ್ರಮರ್ದನ) - ಈತನ ತಂದೆ ಕಶ್ಯಪಮುನಿ; ತಾಯಿ ಸಿಂಹಿಕೆ ರಾಹುವು ಈತನ ಒಡಹುಟ್ಟಿದವ (ಮ.ಆ.).

ಚಂದ್ರಹಾಸ - ೧. ಕೇರಳದೇಶದ ರಾಜನಾದ ಸುಧಾರ್ಮಿಕನ ಮಗ. ಈತನು ಮೂಲಾ ನಕ್ಷತ್ರದ ಅರಿಷ್ಟಾಂಶದಲ್ಲಿ ಜನಿಸಿದುದರಿಂದ ಅದರ ಫಲವಾಗಿ ರಾಜನು ಶತ್ರುಗಳೊಡನೆ ಹೋರಾಡಿ ಮೃತನಾದನು. ಆಗ ರಾಣಿಯು ಅಗ್ನಿಪ್ರವೇಶ ಮಾಡಿದಳು. ಬಾಲಕನನ್ನು ದಾದಿಯೊಬ್ಬಳು ಕುಂತಳನಗರಕ್ಕೆ ತಂದು ರಕ್ಷಿಸುತ್ತಿರಲು, ಆಕೆಗೆ ರೋಗವಾರಂಭವಾಗಿ ಅಕಸ್ಮಾತ್ ಮೃತಳಾದಳು ಒಂದು ದಿನ ದುಷ್ಟಬುದ್ಧಿಯೆಂಬ ಆ ರಾಜ್ಯದ ಮಂತ್ರಿಯ ಮನೆಗೆ ವಿಶೇಷ ಕಾರ್ಯವೊಂದಕ್ಕಾಗಿ ಬಂದ ಬ್ರಾಹ್ಮಣರು ಕಂಡು - ಈತನು ಈ ರಾಜ್ಯದ ಚಕ್ರವರ್ತಿಯಾಗುವನೆಂದು ಭವಿಷ್ಯ ಹೇಳಲು, ದುಷ್ಟಬುದ್ಧಿಯು ತನ್ನ ಮಗನಿಗೆ ರಾಜ್ಯವು ತಪ್ಪುವುದೆಂದು ಚಂಡಾಲರಿಂದ ಆತನನ್ನು ಕೊಲ್ಲಿಸುವ ಏರ್ಪಾಡು ಮಾಡಿದನು. ಆದರೆ ಆತನು ಬಾಯೊಳಗಿಟ್ಟುಕೊಂಡಿದ್ದ ಸಾಲಿಗ್ರಾಮಶಿಲೆಯ ಪ್ರಭಾವದಿಂದ ಆ ಕಟುಕರಿಗೂ ಆತನಲ್ಲಿ ಕರುಣೆ ಹುಟ್ಟಿ, ಆತನ ಎಡಗಾಲಿನಲ್ಲಿದ್ದ ಹೆಚ್ಚಿನ ಬೆರಳೊಂದನ್ನು ಕತ್ತರಿಸಿಕೊಂಡು ಆ ಬಾಲಕನನ್ನು ಅರಣ್ಯದಲ್ಲೇ ಬಿಟ್ಟು, ಹೊರಟುಹೋದರು. ಬಾಲಕನು ಈ ನೋವಿನ ಬಾಧೆಯಿಂದ ಅಳುತ್ತಿರಲು ಬೇಟೆಗಾಗಿ ಆಗ ಅರಣ್ಯಕ್ಕೆ ಬಂದಿದ್ದ ಬೇಡರ ದೊರೆ ಕುಳಿಂದನು ಇವನನ್ನು ಪ್ರೀತಿಯಿಂದ ಎತ್ತಿಕೊಂಡು ತನ್ನ ಪಟ್ಟಣಕ್ಕೆ ತೆರಳಿ ಅಲ್ಲಿ ಮೇಧಾವಿನಿಯೆಂಬ ತನ್ನ ಪತ್ನಿಯ ಕೈಯಲ್ಲಿಟ್ಟನು. ಈ ಬಾಲಕನಿಗೆ ಚಂದ್ರನನ್ನು ಹಾಸ್ಯಮಾಡುವಷ್ಟು ಸೌಂದರ್ಯವಿದ್ದುದರಿಂದ ಈತನಿಗೆ ಚಂದ್ರಹಾಸನೆಂದೇ ಹೆಸರಿಟ್ಟು ಆ ಬೇಡರ ದೊರೆಯು ರಕ್ಷಿಸುತ್ತಿದ್ದನು. ಇವನು ಅಲ್ಲೇ ಯುವರಾಜನಾದ ಮೇಲೆ ಹೇರಳ ಧನಸಂಗ್ರಹಿಸಿದನು. ಇದನ್ನು ಕೇಳಿದ ದುಷ್ಟಬುದ್ಧಿಯು ಚಂದ್ರಹಾಸನ ನಗರಿಗೆ ತಾನೇ ಬಂದು ವಿಚಾರವನ್ನು ತಿಳಿದು ಚಂಡಾಲರು ಈತನನ್ನು ಕೊಲ್ಲದೇ ಹೋದರೆಂದು ಭಾವಿಸಿಕೊಂಡನು. ಚಂದ್ರಹಾಸನಿಗೆ ವಿಷವನ್ನು ಕೊಡುವಂತೆ ತನ್ನ ಮಗನಿಗೆ ಒಂದು ಪತ್ರವನ್ನು

ಬರೆದು ಚಂದ್ರಹಾಸನ ಕೈಯಲ್ಲೇ ಕಳುಹಿಸಿದನು. ಅಲ್ಲಿ ಈತನ ಮಗಳಾದ ವಿಷಯೆಯು ವಿಷವೆಂಬ ಪದವನ್ನು ವಿಷಯೆ ಎಂದು ತಿದ್ದಿ ರಾಜಕುಮಾರನನ್ನು ವಿವಾಹವಾದಳು. ದುಷ್ಟಬುದ್ಧಿಯು ರಾಜಧಾನಿಗೆ ಬಂದು ಈ ವಿಚಾರವನ್ನು ತಿಳಿದು ಅವನನ್ನು ಕಾಳಿಯ ಗುಡಿಗೆ ಹಣ್ಣುಕಾಯಿ ಮಾಡಿಕೊಂಡು ಬರಲು ಕಳುಹಿಸಿ ಅಲ್ಲಿ ಚಂಡಾಲರಿಂದ ಕೊಲ್ಲಿಸಲು ಏರ್ಪಾಡುಮಾಡಿದನು. ಚಂದ್ರಹಾಸನು ರಾಜಕುಮಾರಿಯಾದ ಚಂಪಕಮಾಲಿನಿಯನ್ನು ವಿವಾಹವಾಗಿ ತನ್ನ ಭಾವನಾದ ಮದನನನ್ನು ಕಾಳಿಯಗುಡಿಗೆ ಕಳುಹಿಸಿದನು. ಮದನನು ಕಾಳಿಯ ಗುಡಿಯಲ್ಲಿ ಚಂಡಾಲರಿಂದ ಸತ್ತನು. ಕೊನೆಗೆ ಕಾಳಿಯ ಅನುಗ್ರಹದಿಂದ ಮದನನು ಬದುಕಿಸಿದನು. ಚಂದ್ರಹಾಸನು ಕುಂತಳ ದೇಶದ ಚಕ್ರವರ್ತಿಯಾದನು. ಮುಂದೆ ಈತನಿಗೆ ಚಂಪಕಮಾಲಿನಿಯಲ್ಲಿ ಪದ್ಮಾಕ್ಷನೂ, ವಿಷಯೆಯಲ್ಲಿ ಮಕರಾಕ್ಷನೂ ಮಗನಾಗಿ ಹುಟ್ಟಿದರು. ಈ ಮಕ್ಕಳು ಯುಧಿಷ್ಠಿರನ ಅಶ್ವಮೇಧದ ಕುದುರೆಯನ್ನು ಕಟ್ಟಿ ಈ ವಿಚಾರವನ್ನು ಚಂದ್ರಹಾಸನಿಗೆ ತಿಳಿಸಿದರು. ಚಂದ್ರಹಾಸನು ಯುಧಿಷ್ಠಿರನ ಅಶ್ವಮೇಧಯಾಗಕ್ಕೆ ವಿಪುಲಸಂಪತ್ತನ್ನೂ, ಕುದುರೆಯನ್ನೂ, ಅಧಿಕಸೇನೆಯನ್ನೂ ಕೊಟ್ಟು ಯಾಗದಲ್ಲಿ ನೆರವಾದನು (ಜೈ.ಭಾ.). ೨. ರಾವಣನ ಕೈಖಡ್ಗ. ಇದರಿಂದಲೇ ಜಟಾಯುವಿನೊಡನೆ ಹೋರಾಡಿದನು (ಉತ್ತರರಾಮ.).

ಚ(ಛ)ಪ್ಪನ್ನದೇಶಗಳು - ಪ್ರಸಿದ್ಧ ಸಂಸ್ಕೃತ ಶಬ್ದಕೋಶಗಳು ೫೬ ದೇಶಭೇದಗಳನ್ನು ಗುರುತಿಸಿಲ್ಲ. ದಾಕ್ಷಿಣಾತ್ಯ ದೇಶಭಾಷೆಯ ಗ್ರಂಥಗಳಲ್ಲಿ ಈ ದೇಶಭೇದಗಳನ್ನು ಉದಾಹರಿಸಿರುವುದನ್ನು ಗಮನಿಸಿದರೆ ದಾಕ್ಷಿಣಾತ್ಯರೇ ಈ ದೇಶಗಣನೆಯ ರೂಢಿಯನ್ನು ಪ್ರಚಾರಕ್ಕೆ - ಅದರಲ್ಲೂ ಕನ್ನಡಿಗರೇ ಅಧಿಕತಃ ಇದರ ಪ್ರಸಾರಕರಾದರೆಂದು ಭಾವಿಸುವುದು ಯುಕ್ತವಾಗಿದೆ.

ಯಾಜುಷ ಪೂರ್ವಪ್ರಯೋಗ ರತ್ನಾಕರದಲ್ಲಿ (೧೯೩೪) ಶ್ರೀ. ಕೆ. ವೆಂಕಟರಾಮಾವಧಾನಿಗಳು ಕೊಟ್ಟ ವಿವರ ಹೀಗಿವೆ:

ಅಂಗ, ವಂಗ, ಕಳಿಂಗ, ಕಾಶ್ಮೀರ, ಕಾಂಬೋಜ, ಕಾಮರೂಪ, ಕೇರಳ, ಕೇಕಯ, ಕೋಸಲ, ಮೈಥಿಲ, ಕುಂತಲ, ಕುರಂಗ, ಕುರವಕ, ಸೌವೀರ, ಸೌರಾಷ್ಟ್ರ, ಮಹಾರಾಷ್ಟ್ರ, ಮತ್ಸ್ಯ, ಮಾಗಧ, ಮಾಳವ, ಮರಾಳ, ಸಿಂಹಳ, ಮಲಯಾಳ, ಚೋಳ, ಬಂಗಾಳ, ಪಾಂಚಾಲ, ಸಾಳ್ವ, ಪುಳೀಂದ್ರ, ಕರ್ಣಾಟಕ, ವರಾಟಕ, ಸಿಕ್ಕ, ಸಿಂಧ, ಪಂಜಾವಿಕಾ, ಪಾವಕಾ, ಪಾಂಡ್ಯ, ದ್ರವಿಡ, ಯವನ, ಶೂರಸೇನ, ಘೂರ್ಜರ, ಕುಕ್ಕುರ, ಪರಾಶರ, ಗಾಂಧಾರ, ವಿದರ್ಭ, ಬರ್ಬರ, ಬರಮಾ, ಭೋಜ, ಬಾಹ್ಲೀಕ, ಕೊಂಕಣ, ಟೆಂಕಣ, ಚೀಣಾ, ಹೂಣ, ದಶಾರ್ಣ, ಸೌರ, ನೇಪಾಳ, ಆಂಧ್ರ ಆವಂತಿ.

ನಿಜಗುಣಶಿವಯೋಗಿಯ ವಿವೇಕಚಿಂತಾಮಣಿಯಲ್ಲಿ (೧೫೦೦) ಬಂದ ಐವತ್ತಾರು ಪ್ರಾಂತಗಳು:

ಅಂಗ, ವಂಗ, ಕಳಿಂಗ, ತೆಲುಂಗ, ಕೊಂಗ, ಲಾಟ, ಬಂಗಾಳ, ಚೋಳ, ಕೇರಳ, ಗೌಳ, ಪಾಂಚಾಳ, ಸಿಂಹಳ, ಕುಂತಳ, ನೇಪಾಳ, ಮಲಯಾಳ, ತುಳುವ, ಸೈಂಧವ, ಕೊಂಕಣ, ಕುರು, ಮಗಧ, ಮತ್ಸ್ಯ, ವಿದರ್ಭ, ಕೋಸಲ, ಶೂರಸೇನ, ಕಾಶ್ಮೀರ, ಮಹಾರಾಷ್ಟ್ರ, ಕರ್ಣಾಟ, ಕಿರಾತ, ತುರುಷ್ಕ, ಶಂಕರ, ಬರಮಾ, ತ್ರಿಗರ್ತ, ನಿಷಧ, ಮಧ್ಯ, ಜೈನ, ಬರ್ಬರ, ಬಾಹ್ಲೀಕ, ಲಾಟ (?), ಚೈನ, ಕರಾಳ, ಓಢ್ರ, ಘೂರ್ಜರ, ಕಾಂಭೋಜ, ಸೌರಾಷ್ಟ್ರ, ಸೌವೀರ, ಪಾಂಡ್ಯ, ಹೂಣ, ಯವನ, ಮ್ಲೇಚ್ಛ, ಹೈಹಯ, ಆರ್ಯಾವರ್ತ, ಭೋಜ, ದ್ವೈಪ, ಅಮರಕ, ಉತ್ತರಕುರು, ಗ್ರೈಟಿ.

ರೆ॥ ಕಿಟ್ಟೆಲ್ಲರು ಅಕಾರಾದಿಯಾಗಿ ಜೋಡಿಸಿದ ೫೬ ದೇಶಗಳ ಪಟ್ಟಿಗೂ ಮೇಲಿನ ೫೬ ದೇಶಗಳ ಹೆಸರಿಗೂ ಅಲ್ಲಲ್ಲಿ ತುಂಬಾ ವ್ಯತ್ಯಾಸವಿದೆ. ವಿನಯಚಂದ್ರನು ತನ್ನ ಕಾವ್ಯಾಶಿಕ್ಷಾಗ್ರಂಥದಲ್ಲಿ 'ಚತುರಶೀತಿರ್ದೇಶಾಃ' ಎಂದು ೮೪ ದೇಶಗಳ ಪಟ್ಟಿಯನ್ನು ಹೇಳಿದ್ದರೂ ಅದರ ವಿವರವಿಲ್ಲ. ಮಹಾಭಾರತ ಭೀಷ್ಮಪರ್ವದಲ್ಲೂ (ಅಧ್ಯಾಯ ೯) ಬೃಹತ್ಸಂಹಿತೆಯಲ್ಲೂ (ಅಧ್ಯಾಯ ೧೪-೧೬), ಬ್ರಹ್ಮಾಂಡ, ಮತ್ಸ್ಯ, ವಿಷ್ಣು, ವಾಯು, ಮಾರ್ಕಂಡೇಯ, ಬ್ರಹ್ಮಪುರಾಣಗಳಲ್ಲಿ ಅನೇಕ ದೇಶಗಳ ಹೆಸರಿದ್ದರೂ ಕ್ರಮವಾಗಿ ಚಪ್ಪನ್ನದೇಶಗಳ ಹೆಸರಿಲ್ಲ.

ಚಂದ್ರಾಂಶು - ಬಲಿಚಕ್ರವರ್ತಿಯ ಮಗ.

ಚಂದ್ರೋದಯ - ವಿರಾಟನ ಸಹೋದರನಾದ ಕ್ಷತ್ರಿಯ.

ಚಂಪಕಮಾಲಿನಿ - ೧. ಕುಂತಳದ ರಾಜನ ಮಗಳು. ಚಂದ್ರಹಾಸನ ಎರಡನೆಯ ಹೆಂಡತಿ. ಈಕೆಯ ಮಗನೇ ಪದ್ಮಾಕ್ಷ. ನೋ.-ಚಂದ್ರಹಾಸ (ಜೈ.ಭಾ.). ೨. ಈಕೆಯು ಶ್ರೀರಾಮನ ಮಗನಾದ ಕುಶನ ಪತ್ನಿ. ಈಕೆಗೆ ಚಂಪಿಕಾ ಎಂಬ ಹೆಸರಿದೆ. ಈಕೆ ಒಂಬತ್ತು ಮಂದಿ ಹೆಣ್ಣುಮಕ್ಕಳನ್ನು ಪಡೆದಳು. ನೋ.-ಕುಶ.

ಚಂಪಕಾ (ಚಂಪಕಾವತಿ) - ಇದು ಹಂಸಧ್ವಜನ ರಾಜಧಾನಿ (ಜೈ.ಭಾ.).

ಚಂಪಾ (ಚಂಪಕಾವತಿ) - ೧. ಅಂಗದೇಶದ ರಾಜಧಾನಿ. ಇದನ್ನು ಹರಿಶ್ಚಂದ್ರನ ಮೊಮ್ಮಗನಾದ ಚಂಪರಾಜನು ನಿರ್ಮಿಸಿದನು. ಭಾಗಲ್ಪುರದ ಹತ್ತಿರವಿದ್ದ ಇಂದಿನ ಚಂಪನಗರವು ಅಂದಿನ ಚಂಪಾ ಎಂಬ ಪಟ್ಟಣದಾಗಿತ್ತು. ೨. ಪಾಂಡವರ ಕಾಲದಲ್ಲಿ ಇದು ದುರ್ಯೋಧನನಿಂದ ಕರ್ಣನಿಗೆ ಕೊಡಲ್ಪಟ್ಟಿತು. ಇದು ಆಗ ಅಂಗದೇಶದ ರಾಜಧಾನಿಯಾಗಿತ್ತು (ಮ.ವ., ಶಾಂ.ಭಾಗ.).

ಚಮಸ - ಋಷಭದೇವನ ಒಬ್ಬ ಮಗ. ಈತನಿಗೆ ಕವಿ, ಹರಿ, ಅಂತರಿಕ್ಷ, ಪ್ರಬುದ್ಧ, ಪಿಪ್ಪಲಾಯನ, ಆವಿಹೋತ್ರ, ದ್ರುಮಿಲ, ಕರಭಾಜನರೆಂಬ ಎಂಟು ಮಂದಿ ಸಹೋದರರಿದ್ದರು. ಇವರೆಲ್ಲಾ ಬ್ರಹ್ಮವಿದ್ಯೆಯನ್ನು ತಿಳಿದ ಸತ್ಪುರುಷರಾಗಿದ್ದರು (ಭಾಗ.).

ಚಮಸೋದ್ಭೇದ - ಸರಸ್ವತೀನದಿಯ ಒಂದು ತೀರ್ಥ. ನಿಷಾಧದೇಶದ ದುಷ್ಟ ಬೇಡರು ತನ್ನನ್ನು ಮುಟ್ಟಬಾರದೆಂದು ನೆಲದಲ್ಲಿ ಅದೃಶ್ಯವಾಗಿ ಪುನಃ ಈ ಕ್ಷೇತ್ರದಲ್ಲಿ ಕಾಣಿಸಿಕೊಂಡಿತು.

ಚರ್ಮಣ್ವತಿ - ದಕ್ಷಿಣ ಪಾಂಚಾಲದಲ್ಲಿ ಹರಿಯುವ ಒಂದು ನದಿ. ಇದು ಚಂಪಾನಗರದ ಹತ್ತಿರ ಗಂಗೆಗೆ ಸೇರುತ್ತದೆ. ಇದನ್ನು ಈಗ ಚಂಬಲ್ ನದಿಯೆನ್ನುತ್ತಾರೆ. ಇದು ರಂತಿದೇವನೆಂಬ ಮಹಾಪುರುಷನ ಪಶು ಯಜ್ಞದಲ್ಲಿ ರಾಶಿಬಿದ್ದ ಚರ್ಮಗಳ ರಾಶಿಯಿಂದ ಉತ್ಪತ್ತಿಯಾಯಿತು (ಮ.ವ.ದ್ರೋ.,ಅನು.).

ಚರ್ಮವಂತ - ಶಕುನಿಯ ಒಬ್ಬ ಸಹೋದರ. ಈತನು ಉಲೂಪಿ-ಅರ್ಜುನರ ಮಗನಾದ ಇರಾವಂತನಿಂದ ಹತನಾದನು (ಮ.ಭೀ.).

ಚಕ್ಷು - ಉತ್ತಾನಪಾದರಾಜನ ವಂಶದ ಸರ್ವತೇಜನೆಂಬ ರಾಜರ್ಷಿಯ ಮಗ. ಈತನ ತಾಯಿ ಆಕೂತಿ; ಚಾಕ್ಷುಷ ಮನ್ವಂತರದವ. ಇದೇ ಕಾಲದಲ್ಲಿ ವೈರಾಜ ಮತ್ತು ಸಂಭೂತಿಗೆ ವಿಷ್ಣುವು ಅಜಿತನೆಂಬ ಮಗನಾಗಿ ಅವತರಿಸಿದನು (ಭಾಗ.,ಹರಿ.,ವಿಷ್ಣುಪು.,ಬ್ರಹ್ಮಪು.,ಬ್ರ.ವೈ.,ಮಾರ್ಕಂ.ಪು.).

ಚಾಕ್ಷುಷಿ - ದ್ರೌಪದಿಯ ಸ್ವಯಂವರಕ್ಕೆ ಹೋಗುತ್ತಿದ್ದ ಅರ್ಜುನನೊಡನೆ ಹೋರಾಡಿ ಸೋತ ಚಿತ್ರರಥನೆಂಬ ಗಂಧರ್ವನು ಆತನಿಗೆ ಉಪದೇಶಿಸಿದ ಒಂದು ವಿದ್ಯೆ (ಮ.ಆ.).

ಚಾಣೂರ - ೧. ಕಂಸನ ಸೇವಕನಾದ ಮಲ್ಲನೊಬ್ಬ. ಈತನು ಬಿಲ್ಲಹಬ್ಬಕ್ಕೆ ಮಧುರೆಗೆ ಹೋದ ಶ್ರೀಕೃಷ್ಣನೊಡನೆ ಕಂಸನ ಸೂಚನೆಯಂತೆ ಹೋರಾಡಿ ಸ್ವರ್ಗಸ್ಥನಾದನು. ಇವನ ಸ್ನೇಹಿತನು ಪುಷ್ಟಿಕನೆಂಬ ಜಟ್ಟಿ. ೨. ಯುಧಿಷ್ಠಿರನ ಕಡೆಯಲ್ಲಿದ್ದ ಕ್ಷತ್ರಿಯನೊಬ್ಬ (ಮ.ಸ.,ಭಾಗ.).

ಚಾಂದ್ರಾಯಣ - ಪಾಪಪರಿಹಾರ್ಥವಾಗಿ ಮಾಡುವ ಒಂದು ಶರೀರದಂಡನೆಯ ವ್ರತ. ಇದು ಚಂದ್ರನ ಕ್ಷಯ - ವೃದ್ಧಿಯನ್ನವಲಂಬಿಸಿದ ವ್ರತ. ಇದರಲ್ಲಿ ಪಿಪೀಲಿಕಾ ಮಧ್ಯಚಾಂದ್ರಾಯಣ ಮತ್ತು ಯವಮಧ್ಯಚಾಂದ್ರಾಯಣವೆಂದು ಎರಡು ವಿಧ. ಹುಣ್ಣಿಮೆಯ ದಿನ ಹದಿನೈದು ತುತ್ತುಗಳನ್ನುಂಡು ಅಮಾವಾಸ್ಯೆಯವರೆಗೆ ಕ್ರಮವಾಗಿ ಒಂದೊಂದು ತುತ್ತನ್ನು ಕಡಿಮೆ ಮಾಡುತ್ತಾ ಬಂದು ಪುನಃ ಹುಣ್ಣಿಮೆಯವರೆಗೆ ದಿನಕ್ಕೊಂದು ತುತ್ತನ್ನು ಹೆಚ್ಚಿಸುತ್ತ

ಬರುವುದಕ್ಕೆ ಪಿಪೀಲಿಕಾ ಮಧ್ಯಚಾಂದ್ರಾಯಣ ವ್ರತವೆನ್ನುವರು. ಇರುವೆಯಂತೆ ಈ ವ್ರತದ ಆದಿ ಅಂತ್ಯವು ಸ್ಥೂಲವಾಗಿ, ನಡವು ಸೂಕ್ಷ್ಮವಾಗಿರಬೇಕು. ಅಮಾವಾಸ್ಯೆಯ ದಿನ ಒಂದು ತುತ್ತಿನಿಂದ ಕವಳವನ್ನು ಹೆಚ್ಚಿಸುತ್ತ ಹುಣ್ಣಿಮೆಯ ದಿನ ಹದಿನೈದು ತುತ್ತುಗಳನ್ನುಂಡು ಪುನಃ ಅಮಾವಾಸ್ಯೆಯವರೆಗೆ ಒಂದೊಂದು ತುತ್ತನ್ನು ಕಡಿಮೆ ಮಾಡುತ್ತಾ ಬರುವುದಕ್ಕೆ ಯವಮಧ್ಯ ಚಾಂದ್ರಾಯಣವೆನ್ನುವರು. ಗೋದಿಯ ಕಾಳಿನಂತೆ ಆದಿ ಮತ್ತು ಅಂತ್ಯ ಸೂಕ್ಷ್ಮವಾಗಿರುವುದರಿಂದ ಇದನ್ನು ಯವಮಧ್ಯಚಾಂದ್ರಾಯಣ ಎಂದು ಕರೆಯುತ್ತಾರೆ (ಮ.ಅನು.,ಅಶ್ವ.).

ಚಾಂಪೇಯ - ವಿಶ್ವಾಮಿತ್ರನ ಮಗ (ಮ.ಅನು.).

ಚಾಮರ - ಮಹಿಷಾಸುರನ ಸೇನಾಪತಿ. ಶಕ್ತಿದೇವತೆಯಿಂದ ಮಡಿದ (ಮಾರ್ಕಂ.ಪು.).

ಚಾಮುಂಡಾ - ಶಕ್ತಿದೇವತೆ. ನೋ.-ಚಂಡಮುಂಡ (ದೇವೀಭಾ.,ಮಾರ್ಕಂ.ಪು.).

ಚಾರಿಣಿ - ಬದರಿಕಾಶ್ರಮದ ಪಕ್ಕದಲ್ಲಿ ಹರಿಯುವ ನದಿಯೊಂದು. ಇದರ ದಡದಲ್ಲಿ ಸೂರ್ಯಪುತ್ರನಾದ ವೈವಸ್ವತ ಮನುವು ಹತ್ತುಸಾವಿರವರ್ಷ ಘೋರವಾದ ತಪಸ್ಸನ್ನು ಮಾಡಿದನು (ಮ.ವ.).

ಚಾರು - ಧೃತರಾಷ್ಟ್ರನ ಮಗ (ಮ.ಆ.)

ಚಾರುಚಿತ್ರ - ಧೃತರಾಷ್ಟ್ರನ ಮಗ; ಭೀಮನಿಂದ ಹತನಾದ (ಮ.ಆ.,ದ್ರೋ.).

ಚಾರುಚಿತ್ರಾಂಗದ - ಧೃತರಾಷ್ಟ್ರನ ಮಗ (ಮ.ಆ.).

ಚಾರುದೇಷ್ಣ - ೧. ಶ್ರೀಕೃಷ್ಣನ ಪುತ್ರ. ಇವನು ರುಕ್ಮಿಣಿಯ ಕಿರಿಯ ಮಗ. ಇವನು ಪರಾಕ್ರಮಿಯಾಗಿ ಯುದ್ಧರಂಗದಲ್ಲಿ ಶತ್ರುಗಳನ್ನು ನಿಶ್ಚಿತವಾಗಿ ಕೊಂದು ಬಗೆಯುತ್ತಿದ್ದುದರಿಂದ ತಮಗೆ ಅಲ್ಲೇ ಮೃಷ್ಟಾನ್ನ ದೊರೆಯುವುದೆಂದು ಅವನು ಯುದ್ಧಕ್ಕೆ ಹೊರಟ ಕೂಡಲೇ ಹದ್ದುಕಾಗೆಗಳು ಗುಂಪುಕಟ್ಟಿ ಆತನ ಬೆನ್ನು ಹತ್ತುತ್ತಿದ್ದವು. ವಸುದೇವನ ಒಬ್ಬ ತಮ್ಮನಿಗೆ ಮಕ್ಕಳಿಲ್ಲದುದರಿಂದ ಶ್ರೀಕೃಷ್ಣನು ಚಾರುದೇಷ್ಣ, ಸುಚಾರು, ಪಂಚಾಲ, ಕೃತಲಕ್ಷಣರೆಂಬ ನಾಲ್ವರು ಮಕ್ಕಳನ್ನು ಆತನಿಗೆ ದತ್ತಕ್ಕೆ ಕೊಟ್ಟನು (ಹರಿ). ಈತನ ತಂಗಿ ಚಾರುಮತಿ. ಈಕೆಯು ಕೃತವರ್ಮನ ಮಗನಾದ ಬಲನ ಪತ್ನಿ (ಭಾಗ.,ವಿಷ್ಣುಪು.) ೨. ಈತನು ಮದ್ರರಾಜನ ಪುತ್ರನು. ಇವನು ಸಿಂಹಳ ರಾಜನಾದ ಚಂದ್ರಸೇನ ಮತ್ತು ಗುಣವತಿಯರ ಮಗಳಾದ ಮಂಡೋದರಿಯನ್ನು ವಿವಾಹವಾದನು. ನೋ.- ಮಂಡೋದರಿ. (ಮ.ಆ.,ಸ.,ವ.,ಮೌ.).

ಚಾರುನೇತ್ರೆ - ಅಪ್ಸರೆಯೊಬ್ಬಳು (ಮ.ಸ.).

ಚಾರುಮತ್ಸ್ಯ - ವಿಶ್ವಾಮಿತ್ರನ ಮಗ (ಮ.ಅನು.).

ಚಾರುವರ್ಮ - ದಾಶಾರ್ಣದೇಶದ ರಾಜ. ಈತನ ಮಗಳಾದ ಸುಮನೆಯು ತ್ರಿಲೋಕ ಸುಂದರಿಯಾಗಿದ್ದಳು. ಈಕೆಯನ್ನು ನರಿಷ್ಯಂತನ ಮಗನಾದ ದಮನು ವಿವಾಹವಾದನು. ನೋ.-ದಮ.

ಚಾರ್ವಾಕ - ೧. ಸಂನ್ಯಾಸ ವೇಷಧಾರಿಯಾದ ದುರ್ಯೋಧನನ ಮಿತ್ರನಾದ ರಾಕ್ಷಸ. ಬ್ರಹ್ಮನು ತಪಸ್ವಿಯಾದ ಈತನ ಅಪೇಕ್ಷೆಯಂತೆ ಅಮರತ್ವವನ್ನು ಕೊಟ್ಟು - 'ಬ್ರಾಹ್ಮಣರನ್ನು ಮಾತ್ರ ಅವಮಾನಿಸಬೇಡ' ಎಂದು ಹೇಳಿದ್ದನು. ಇವನು ಬ್ರಹ್ಮನ ಸೂಚನೆಯನ್ನು ಮೀರಿ ಯುಧಿಷ್ಠಿರನ ಸಭೆಯಲ್ಲಿ ಬ್ರಾಹ್ಮಣರ ಕುರಿತು ಅಸಂಬದ್ಧ ಮಾತಾಡಿ, ಅವರ ಹೂಂಕಾರದಿಂದ ಇವನು ಭಸ್ಮವಾದನು (ಮ.ಶಾಂ.,ಶ.). ೨. ಭಾರತೀಯ ತತ್ತ್ವಜ್ಞಾನವನ್ನು ಹನ್ನೆರಡು ದರ್ಶನಶಾಸ್ತ್ರಗಳಲ್ಲಿ ವಿಭಜಿಸಲಾಗಿದೆ. ಇವುಗಳಲ್ಲಿ ಆರು ವೇದಪ್ರಮಾಣಗಳನ್ನು ಮಾನ್ಯಮಾಡಿ ಆಸ್ತಿಕ ವಿಚಾರದ ಮೀಮಾಂಸೆ ಮಾಡುವುವು. ಉಳಿದ ಆರು ವೇದಪ್ರಮಾಣವನ್ನು ಅಮಾನ್ಯಮಾಡಿ ನಾಸ್ತಿಕ ವಿಚಾರದ ಮೀಮಾಂಸೆ ಮಾಡುವುವು. ಚಾರ್ವಾಕದರ್ಶನವು ನಾಸ್ತಿಕದರ್ಶನಗಳಲ್ಲಿ ಒಂದಾಗಿದೆ. ಈ ಎಲ್ಲಾ ದರ್ಶನ ಶಾಸ್ತ್ರಗಳ ವಿಚಾರವನ್ನು ಸರ್ವದರ್ಶನಸಂಗ್ರಹ ಎಂಬ ಸಂಸ್ಕೃತಗ್ರಂಥದಲ್ಲಿ ವಿದ್ಯಾರಣ್ಯರು ಸಂಕ್ಷೇಪವಾಗಿ ಹೇಳಿದ್ದಾರೆ. ಇದರಲ್ಲಿ ಪ್ರಾರಂಭದಲ್ಲಿ ಚಾರ್ವಾಕದರ್ಶನ ವಿಚಾರವನ್ನೂ ತೆಗೆದುಕೊಂಡಿದ್ದಾರೆ.

ಚಾರ್ವಾಕರ ವಿಚಾರಸರಣಿಯು ಬಹುಜನರ ಮನೋಭೂಮಿಕೆಯನ್ನಾಕರ್ಷಿಸಲು ಸಮರ್ಥವಾಯಿತು. ಅವನ ಕೆಲವು ವಿಶಿಷ್ಟ ತರ್ಕಗಳ ತುಣುಕನ್ನು ಕೆಳಗೆ ಕೊಡಲಾಗಿದೆ:

೧. ಅಗ್ನಿಹೋತ್ರ, ವೇದ, ಭಸ್ಮಲೇಪನ ಇತ್ಯಾದಿ ವಿಷಯಗಳು ಪೌರುಷಹೀನ, ಮೂರ್ಖ ಜನರ ಉಪಜೀವಿಕೆಯ ಸಾಧನಗಳಾಗಿವೆ.

೨. ಜ್ಯೋತಿಷ್ಟೋಮ ಯಜ್ಞದಲ್ಲಿ ಬಲಿಯಾದ ಪಶುವು ಸ್ವರ್ಗ ಗಾಮಿಯಾಗುವುದಾಗಿದ್ದರೆ ಯಜ್ಞಕರ್ತನು ತನ್ನ ತಂದೆಯನ್ನು ಬಲಿಕೊಟ್ಟು ಏಕೆ ಸ್ವರ್ಗಕ್ಕೆ ಕಳುಹಿಸಬಾರದು?

೩. ಶ್ಲೋ॥ ಯಾವಜ್ಜೀವಂ ಸುಖಂ ಜೀವೇತ್ ನಾಸ್ತಿ ಮೃತ್ಯುರಗೋಚರಃ।

ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ॥

ಬದುಕಿರುವವರೆಗೆ ಸುಖದಿಂದ ಜೀವನ ನಡೆಸಬೇಕು. ಪುನರ್ಜನ್ಮವನ್ನು

ಯಾರು ಕಂಡಿರುವರು? ಒಮ್ಮೆ ಸುಟ್ಟು ಬೂದಿಯಾದ ಈ ದೇಹವು ಪುನಃ ಹೇಗೆ ಬಂದೀತು?

೪. 'ಋಣಂ ಕೃತ್ವಾ ಘೃತಂ ಪಿಬೇತ್' - ಜಗತ್ತಿನಲ್ಲಿರುವವರೆಗೆ ಸುಖದಿಂದಿರಬೇಕು. ಸಾಲ ಮಾಡಿಯಾದರೂ ತುಪ್ಪವನ್ನು ಸೇವಿಸಬೇಕು.

೫. ವಿಷಯಜನ್ಯ ಸುಖವು ದುಃಖ ಮಿಶ್ರಿತವಾದುದರಿಂದ ತ್ಯಾಜ್ಯವೆಂಬುದು ಮೂರ್ಖರ ಅಪಲಾಪವಾಗಿರುತ್ತದೆ. ಬತ್ತದಿಂದ ಆವೃತವಾಗಿದೆಯೆಂದು ತಿಳಿದು ಉತ್ಕೃಷ್ಟ ಸಣ್ಣ ಅಕ್ಕಿಯನ್ನು ಯಾರು ಬಿಡುವರು?

ಚಾರ್ವಾಕದರ್ಶನದ ಪ್ರಣೇತಾರನಾದ ಚಾರ್ವಾಕ ಮಹಾನಾಸ್ತಿಕನಾಗಿದ್ದರೂ ಇವನ ವಿಚಾರಸರಣಿಯು ಬಹಳ ಸುಂದರವಾಗಿದ್ದು ಜನರ ಮನಸ್ಸನ್ನು ಬೇಗನೆ ಸೆರೆಹಿಡಿಯುತ್ತಿದ್ದುದರಿಂದ ಇವನಿಗೆ ಚಾರ್ವಾಕ ಬೇಗನೆ ಸೆರೆಹಿಡಿಯುತ್ತಿದ್ದುದರಿಂದ ಇವನಿಗೆ ಚಾರ್ವಾಕ (ಚಾರು= ಮನೋಹರವಾದ, ವಾಕ್= ಮಾತುಳ್ಳವನು) ಎಂಬ ಹೆಸರು ಬಂತು. ಇವನು ಅವಂತಿ ಪ್ರದೇಶದ ಶಂಖೋದ್ಧಾರವೆಂಬ ಹೆಸರಿನ ನಗರದಲ್ಲಿ ಕ್ರಿ.ಪೂ. ೨೪೫೯ ರಲ್ಲಿ ಜನಿಸಿದನು. ಇವನ ಮರಣವು ಕ್ರಿ. ಪೂ. ೧೩೭೩ ರಲ್ಲಾಯಿತು. ಪದ್ಮಪುರಾಣದಲ್ಲಿ ಚಾರ್ವಾಕನು ಬೃಹಸ್ಪತಿಯ ಅವತಾರವೆಂದು ಹೇಳಿದೆ. ವೇಣೀಸಂಹಾರ ನಾಟಕದಲ್ಲಿ ಚಾರ್ವಾಕನೊಬ್ಬ ರಾಕ್ಷಸನೆಂದಿದೆ. ಚಾರ್ವಾಕನು ಪೃಥ್ವೀ, ಅಪ್, ತೇಜ, ವಾಯುಗಳೆಂಬ ನಾಲ್ಕು ಭೂತಗಳನ್ನು ನಂಬುತ್ತಾನೆ. ಈ ನಾಲ್ಕು ಭೂತಗಳನ್ನು ನಂಬುತ್ತಾನೆ. ಈ ನಾಲ್ಕು ಭೂತಗಳಿಂದ ಸೃಷ್ಟಿಯು ತನ್ನಷ್ಟಕ್ಕೇ ನಿರ್ಮಾಣವಾಯಿತೆನ್ನುತ್ತಾನೆ ಚಾರ್ವಾಕ. ಮರಣವೆಂದರೆ ಮೋಕ್ಷ. ಈ ಚಾರ್ವಾಕಮತವು ಇಂದಿನ ಸಾಮ್ಯವಾದವನ್ನು (ಕಮ್ಯೂನಿಸಂ) ಬಹಳ ಮಟ್ಟಿಗೆ ಹೋಲುವುದು.

ಚಿಕುರ - ಆರ್ಯಕನೆಂಬ ಸರ್ಪರಾಜನ ಮಗ. ಇವನ ಮಗನೇ ಸುಮುಖನೆಂಬ ನಾಗ. ನೋ.-ಆರ್ಯಕ (ಮ.ಉ.).

ಚಿತ್ರ - ೧. ಒಂದು ಸರ್ಪ. ೨. ದುರ್ಯೋಧನನ ಪಕ್ಷದ ಕ್ಷತ್ರಿಯನೊಬ್ಬ. ಈತನು ದ್ರೌಪದಿಯ ಪುತ್ರನಾದ ಪ್ರತಿವಿಂಧ್ಯನಿಂದ ಹತನಾದನು. ೩. ಕ್ಷತ್ರಿಯನೊಬ್ಬ. ಪಾಂಡವಪಕ್ಷದ ಚೇದಿದೇಶದ ರಾಜ. ಇವನು ಕರ್ಣನಿಂದ ಹತನಾದನು. ಧೃತರಾಷ್ಟ್ರನ ಮಗ. ಇವನು ಭೀಮನಿಂದ ಹತನಾದನು (ಮ.ಕ.,ಆ.,ದ್ರೋ.).

ಚಿತ್ರಕುಂಡಲ - ಧೃತರಾಷ್ಟ್ರನ ಮಗ (ಮ.ಆ.).

ಚಿತ್ರಕೂಟ - ಪ್ರಯಾಗಕ್ಷೇತ್ರದ ಸಮೀಪದ ಪರ್ವತ. ಇದರ ಸಮೀಪ ಮಂದಾಕಿನೀ ನದಿಯು ಹರಿಯುತ್ತಿದೆ. ಬುಂದೇಲ ಖಂಡದಲ್ಲಿರುವ ಬಾಂದಾದ ಆಗ್ನೇಯಕ್ಕೆ ಐವತ್ತು ಮೈಲು ದೂರದಲ್ಲಿರುವ ಪಯೋಷ್ಣಿ ಅಥವಾ

ಮಂದಾಕಿನೀ ನದಿಯ ದಡದಲ್ಲಿ ಈ ಪರ್ವತವಿದೆ. ಝಾಂಸಿ - ಮಾಣಿಕಪುರ ಮಾರ್ಗದಲ್ಲಿ ಕರವಿ ಸ್ಟೇಶನ್ ಹತ್ತೊಂಬತ್ತು ಮೈಲು ದೂರದಲ್ಲಿದೆ. ಇಲ್ಲಿಂದ ಚಿತ್ರಕೂಟಕ್ಕೆ ಹೋಗಲು ಒಳ್ಳೆಯ ಮಾರ್ಗವಿದೆ. ಕರವಿಯಿಂದ ಐದು ಮೈಲು ದೂರದಲ್ಲಿ ಸೀತಾಪುರ ಎಂಬ ಊರು ಇದೆ. ಇಲ್ಲಿ ಪಯಸ್ವಿನೀ ನದಿಗೆ ೨೪ ಘಾಟುಗಳಿವೆ. ಅರಣ್ಯವಾಸಕಾಲದಲ್ಲಿ ಶ್ರೀರಾಮನು ಮೊತ್ತ ಮೊದಲು ಈ ಪರ್ವತದಲ್ಲಿ ಆಶ್ರಮ ಕಟ್ಟಿಕೊಂಡು ವಾಸವಾಗಿದ್ದನು ಭರತನು ಶ್ರೀರಾಮನಿಂದ ಇಲ್ಲಿಯೇ ಪಾದುಕೆಗಳನ್ನು ಪಡೆದು ಹಿಂದಿರುಗಿದನು. ಚಿತ್ರಕೂಟದ ಸಮೀಪವಿದ್ದ ಒಂದು ಗುಡ್ಡದ ಬಳಿ ಸೀತಾದೇವಿಯು ಶ್ರೀರಾಮಚಂದ್ರನೊಡನೆ ಸಂಚರಿಸುತ್ತಿದ್ದಾಗ ಕಾಕಾಸುರನು ದೇವಿಯನ್ನು ಹಿಂಸಿಸಿ ಶ್ರೀರಾಮನಿಂದ ಶಿಕ್ಷೆ ಹೊಂದಿದನು. ಅತ್ರಿಮಹರ್ಷಿಯ ಆಶ್ರಮವು ಇಲ್ಲೇ ಇತ್ತು (ವ.ವ., ರಾಮಾ. ಅಯೋ.). ಕುಶದ್ವೀಪದ ಒಂದು ಪರ್ವತ (ದೇವೀಭಾ.,ಭಾಗ.).

ಚಿತ್ರಕೇತು - ೧. ದ್ರುಪದನ ಮಗ. ಈತನು ದ್ರೋಣನಿಂದ ಹತನಾದ. ಈತನ ಮಗ ಸುಕೇತನು ಕೃಪಾಚಾರ್ಯನಿಂದ ಹತನಾದ. ೨. ಗರುಡನ ಮಗ. ೩.ಲಕ್ಷ್ಮಣನ ಮಗ ಚಂದ್ರಕೇತುವಿನ ಇನ್ನೊಂದು ಹೆಸರು. ನೋ.--ಪಂಚಾಕ್ಷರ. ೪. ಶ್ರೀಕೃಷ್ಣ ಮತ್ತು ಜಾಂಬವತಿಯರ ಮಗ. ಸಾಂಬ, ಸುಮಿತ್ರ ಮೊದಲಾದವರು ಈತನ ಸೋದರರು. ೫. ಶೂರಸೇನದೇಶದ ರಾಜ. ಈತನಿಗೆ ಹಲವು ಹೆಂಡಿರಿದ್ದರೂ ಸಂತಾನವಾಗದುದರಿಂದ ಈತನು ಅಂಗಿರಸಮುನಿಯ ಸಹಾಯದಿಂದ ಪುತ್ರಕಾಮೇಷ್ಟಿಯನ್ನು ಮಾಡಲು ಪಟ್ಟದರಸಿ ಕೃತದ್ಯುತಿಯಲ್ಲಿ ಒಬ್ಬ ಮಗನನ್ನು ಪಡೆದನು. ಆದರೆ ಆತನ ಉಳಿದ ಪತ್ನಿಯರು ಗುಪ್ತವಾಗಿ ಆ ಬಾಲಕನಿಗೆ ವಿಷ ಕೊಟ್ಟು ಕೊಂದರು. ಇದರಿಂದ ಆ ರಾಜನು ವೈರಾಗ್ಯ ಹೊಂದಿ ಕಾಡಿಗೆ ತಪಸ್ಸು ಮಾಡಲು ತೆರಳಿದನು. ಮುಂದೆ ಇವನು ದೇವವಿಮಾನದಲ್ಲಿ ಕುಳಿತು ಕೈಲಾಸಕ್ಕೆ ಹೋಗುತ್ತಿದ್ದಾಗ ಪಾರ್ವತಿಯನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡ ಶಿವನನ್ನು ಕಂಡು ಆಕ್ಷೇಪಿಸಲು, ಶಿವೆಯು ಕೋಪಗೊಂಡು ಈತನಿಗೆ ಶಾಪಕೊಡಲು ಇವನೇ ಮುಂದೆ ವೃತ್ರಾಸುರನಾಗಿ ಜನಿಸಿದನು (ಭಾಗ.). ದೇವಭಾಗ ಮತ್ತು ಕಂಸೆಯರ ಹಿರಿಯ ಮಗ. ಇವನ ಸೋದರ ಉದ್ಧವ (ವಿಷ್ಣುಪು., ಮ.ದ್ರೋ.).

ಚಿತ್ರಗುಪ್ತ - ಪ್ರಾಣಿಗಳ ಪಾಪಪುಣ್ಯಗಳ ವಿಚಾರವನ್ನು ದಾಖಲೆಯಲ್ಲಿಡುವ ಯಮನ ಕರಣಿಕನೊಬ್ಬ. ಮೊದಲು ಈತನು ಸೂರ್ಯವಂಶದ ರಾಜನಾಗಿದ್ದು ಸೂರ್ಯೋಪಾಸನೆಯಿಂದ ಸರ್ವಜ್ಞನಾಗಿದ್ದ. ಒಮ್ಮೆ ಈತನು ಸಮುದ್ರಸ್ನಾನಕ್ಕೆ ಹೋಗಿದ್ದಾಗ ಸಮುದ್ರನು ಈತನನ್ನು ಸಶರೀರವಾಗಿ ತನ್ನ ಲೋಕಕ್ಕೆ ಕರೆಸಿಕೊಂಡು ಪ್ರಾಣಿಗಳ ಪಾಪಪುಣ್ಯಗಳ ವಿಚಾರವನ್ನು ಬರೆಯುವ ಕೆಲಸವನ್ನು

ಈತನಿಗೆ ಒಪ್ಪಿಸಿದನು. ಗೌರವಕ್ಕೆ ಚಿತ್ರಗುಪ್ತರೆಂದು ರೂಢಿಯಲ್ಲಿದ್ದರೂ ಇವರು ಇಬ್ಬರಲ್ಲ; ಒಬ್ಬ (ಮ.ಅನು.)

ಚಿತ್ರಚಾಪ - ಧೃತರಾಷ್ಟ್ರನ ಮಗ (ಮ.ಆ.).

ಚಿತ್ರದರ್ಶನ - ಧೃತರಾಷ್ಟ್ರಪುತ್ರ (ಮ.ಭೀ.)

ಚಿತ್ರಧರ್ಮ - ಒಬ್ಬ ಕ್ಷತ್ರಿಯ (ಮ.ಆ.)

ಚಿತ್ರಬರ್ಹ - ಗರುಡ ಪುತ್ರ (ಮ.ಉ.).

ಚಿತ್ರಬಾಣ - ಧೃತರಾಷ್ಟ್ರನ ಮಗ (ಮ.ಆ.)

ಚಿತ್ರಬಾಹು - ಧೃತರಾಷ್ಟ್ರನ ಮಗ (ಮ.ಆ.)

ಚಿತ್ರಮುಖ - ಇವನು ಮೊದಲು ವೈಶ್ಯನಾಗಿದ್ದು ತಪಸ್ಸಿನಿಂದ ಬ್ರಾಹ್ಮಣನಾದನು. ಈತನು ಬ್ರಾಹ್ಮಣನಾದಮೇಲೆ ಉದ್ದಿಶ್ಯಂತಿ ಅಥವಾ ಅದೃಶ್ಯಂತಿಯು ಮಗಳಾಗಿ ಹುಟ್ಟಿದಳು. ಈಕೆಯೇ ವಸಿಷ್ಠಮುನಿಯ ಸೊಸೆ; ಶಕ್ತಿಋಷಿಯ ಪತ್ನಿ (ಮ.ಅನು.).

ಚಿತ್ರರಥ - ೧. ಈತನ ತಂದೆ ಕಶ್ಯಪಮುನಿ; ತಾಯಿ ಮುನಿ. ಈತನು ದೇವಗಂಧರ್ವ. ಇವನಿಗೆ ಅಂಗಾರಪರ್ಣನೆಂಬ ಹೆಸರೂ ಇದೆ. ಈತನ ಪತ್ನಿ ಕುಂಭೀನಸಿ. ದ್ರೌಪದೀ ಸ್ವಯಂವರಕ್ಕೆ ಹೊರಟ ಪಾಂಡವರಲ್ಲಿ ಅರ್ಜುನನಿಗೆ ಈತನು ಸೋತು ಚಾಕ್ಷುಷೀ ವಿದ್ಯೆಯನ್ನು (ಸಮ್ಮೋಹನಾಸ್ತ್ರ) ಉಪದೇಶ ಮಾಡಿದನು. ರಾಜಸೂಯಯಾಗ ಕಾಲದಲ್ಲಿ ಪಾಂಡವರಿಗೆ ಅನೇಕ ದಿವ್ಯಾಸ್ತ್ರಗಳನ್ನಿತ್ತನು. ೨. ಪಾಂಚಾಲದ ದ್ರುಪದನ ಮಗನೊಬ್ಬ; ದೃಷ್ಟದ್ಯುಮ್ನನ ಸೋದರ. ಇವನು ಭಾರತಯುದ್ಧದಲ್ಲಿ ದ್ರೋಣನಿಂದ ಹತನಾದನು. ೩. ನರ್ಮದಾನದಿಯಲ್ಲಿ ಈತನು ತನ್ನ ಸ್ತ್ರೀಯರೊಡನೆ ಜಲಕ್ರೀಡೆಯಾಡುತ್ತಿದ್ದಾಗ ನೀರಿಗಾಗಿ ಬಂದ ಜಮದಗ್ನಿಯ ಪತ್ನಿ ರೇಣುಕೆಯು ಆ ಗಂಧರ್ವನ ರೂಪಕ್ಕೆ ಭ್ರಾಂತಳಾಗಿ ನೋಡುತ್ತಿದ್ದು ಆಶ್ರಮಕ್ಕೆ ಹಿಂದಿರುಗುವುದು ತಡವಾದುದರಿಂದ ಜಮದಗ್ನಿಯು ಇದರ ಕಾರಣವನ್ನು ತಿಳಿದು ಪತ್ನಿಯನ್ನು ಕೊಲ್ಲುವಂತೆ ತನ್ನ ಮಗನಾದ ಪರಶುರಾಮನಿಗೆ ಆಜ್ಞಾಪಿಸಿದನು. ಪರಶುರಾಮನು ತಂದೆಯ ಆಜ್ಞೆಯನ್ನು ಪಾಲಿಸಿ ಪುನಃ ತಾಯಿಯು ಬದುಕುವಂತೆ ತಂದೆಯಿಂದಲೇ ವರ ಪಡೆದು ಆಕೆಯನ್ನು ಬದುಕಿಸಿಕೊಂಡನು. ೪. ಅಂಗದೇಶದ ರಾಜನೊಬ್ಬ. ಈತನ ಪತ್ನಿಯು ಭರದ್ವಾಜಮುನಿಪುತ್ರಿಯಾದ ಪ್ರಭಾವತಿ. ಈಕೆಯ ಸೋದರಿಯಾದ ರುಚಿಯು ದೇವಶರ್ಮನೆಂಬ ಬ್ರಾಹ್ಮಣನ ಪತ್ನಿ. ೫. ಪಾಂಡವಪಕ್ಷದ ಒಬ್ಬ ಕ್ಷತ್ರಿಯ (ಮ.ಆ.,ಸ.,ದ್ರೋ.,ವ.,ಅನು.).

ಚಿತ್ರರೇಖಾ (ಚಿತ್ರಲೇಖಾ) - ೧. ಒಬ್ಬಳು ಅಪ್ಸರೆ. ಈಕೆಯು ಇಂದ್ರನ ಸಭೆಯಲ್ಲಿ ಇಂದ್ರನ ಮುಖ ನೋಡದೆ ಒಂದು ಜಿಂಕೆಯನ್ನು ನೋಡುತ್ತಾ

ನರ್ತಿಸುತ್ತಿದ್ದುದರಿಂದ ಇಂದ್ರನು ಕೋಪಗೊಂಡು ಈಕೆಗೆ ಜಿಂಕೆಯಾಗಿ ಜನಿಸುವಂತೆ ಶಾಪವಿತ್ತು, 'ಋಷ್ಯ ಶೃಂಗಮುನಿಯ ಜನ್ಮವಾದೊಡನೆ ನಿನಗೆ ಶಾಪವಿಮೋಚನೆಯಾಗಲಿ' - ಎಂದು ಅನುಗ್ರಹಿಸಿದನು. ಮುಂದೆ ಈಕೆಯು ವಿಭಾಂಡಕ ಮುನಿಯ ವೀರ್ಯವನ್ನು ಕುಡಿದು ಗರ್ಭಿಣಿಯಾಗಿ ಋಷ್ಯಶೃಂಗನೆಂಬ ತಪಸ್ವಿಯಾದ ಮಗನನ್ನು ಪಡೆದು ಶಾಪವಿಮೋಚನೆ ಹೊಂದಿದಳು. ನೋ.-ಋಷ್ಯಶೃಂಗ, ವಿಭಾಂಡಕ ೨. ಬಾಣಾಸುರನ ಮಂತ್ರಿಯಾದ ಕುಂಭಾಂಡನ ಮಗಳು. ಬಾಣಾಸುರನ ಮಗಳಾದ ಉಷೆಯು ಸ್ವಪ್ನದಲ್ಲಿ ಅನಿರುದ್ಧನನ್ನು ಕಂಡು ವಿರಹದಿಂದ ಸಂಕಟಪಡುತ್ತಿರಲು, ಈಕೆ ಹಲವರ ಚಿತ್ರಗಳನ್ನು ಉಷೆಗೆ ತೋರಿಸಿ ಕೊನೆಗೆ ಶ್ರೀಕೃಷ್ಣನ ಮೊಮ್ಮಗನಾದ ಅನಿರುದ್ಧನೇ ತನ್ನ ಸಖಿಯ ವಿರಹಕ್ಕೆ ಕಾರಣನೆಂದು ತಿಳಿದು ತನ್ನ ಮಾಯಾಶಕ್ತಿಯಿಂದ ಆತನನ್ನು ದ್ವಾರಕಿಯಿಂದ ಉಷೆಗೆ ತಂದುಕೊಟ್ಟಳು. ನೋ.-ಉಷೆ, ಬಾಣಾಸುರ. ೩. ಊರ್ವಶಿಯ ಸಖಿಯಾದ ಅಪ್ಸರೆಯೊಬ್ಬಳು. ಕೇಶಿಯೆಂಬ ರಾಕ್ಷಸನಿಂದ ಅಪಹೃತಳಾದ ಈಕೆ ಮತ್ತು ಊರ್ವಶಿಯನ್ನು ಪುರೂರವನು ಬಿಡಿಸಿದನು. ೪. ಪಾರ್ವತಿಯ ವೇಷದಿಂದ ಶಿವನನ್ನು ಮರಳುಗೊಳಿಸತೊಡಗಿದ ಅಪ್ಸರೆಯೊಬ್ಬಳು. ಈಕೆಯು ಶಿವನ ಶಾಪದಿಂದ ಬಾಣಾಸುರನ ಮಗಳಾದ ಉಷೆಯಾಗಿ ಹುಟ್ಟಿದಳು. ಈಕೆಗೆ ಪಾರ್ವತಿಯು - 'ವೈಶಾಖ ಶುದ್ಧ ದ್ವಾದಶಿಯ ದಿನ ರಾತ್ರಿ ಸ್ವಪ್ನದಲ್ಲಿ ಕಾಣಿಸಿದವನೇ ನಿನ್ನ ಪತಿ' ಎಂದು ಸೂಚಿಸಿದ್ದಳು. ಇದರಿಂದ ಮುಂದೆ ಆ ದಿನ ರಾತ್ರಿಯ ಸ್ವಪ್ನದಲ್ಲಿ ಕಂಡ ಅನಿರುದ್ಧನನ್ನೇ ಪತಿಯನ್ನಾಗಿ ಸ್ವೀಕರಿಸಿದಳು. ೫. ಭರತಚಕ್ರವರ್ತಿಯ ಮಗನಾದ ಶತಶೃಂಗನ ಮಗಳು. ನೋ.-ಶತಶೃಂಗ (ಮ.ವ.,ಹರಿ., ವಿಷ್ಣುಪು.,ಮತ್ಸ್ಯಪು.).

ಚಿತ್ರವರ್ಮ - ೧. ದ್ರುಪದರಾಜನ ಪುತ್ರ. ಇವನು ದ್ರೋಣನಿಂದ ಹತನಾದನು (ಮ.ದ್ರೋ.). ೨. ಧೃತರಾಷ್ಟ್ರನ ಮಗ; ಭೀಮನಿಂದ ಹತನಾದನು (ಮ.ಆ.,ದ್ರೋ.). ೩. ಪಾಂಚಾಲದ ಸುಚಿತ್ರನೆಂಬ ರಾಜ ಪುತ್ರ. ಇವನು ಭಾರತ ಯುದ್ಧದಲ್ಲಿ ದ್ರೋಣನಿಂದ ಮಡಿದನು (ಮ.ಕ). ೪. ಕ್ಷತ್ರಿಯನೊಬ್ಬ. ಈತನ ಸ್ನೇಹಿತನೊಬ್ಬ ಪಾತಾಳವಾಸಿಯಾದ ತಕ್ಷಕನೆಂಬ ಸರ್ಪರಾಜ. ಈ ರಾಜನ ಮಗಳೇ ಸೀಮಂತಿನಿ. ಈಕೆಗೆ ಹದಿನಾಲ್ಕನೆಯ ವಯಸ್ಸಿನಲ್ಲೇ ವೈಧವ್ಯವು ಪ್ರಾಪ್ತವಾಗುವುದೆಂದು ಜ್ಯೋತಿಷ್ಕರು ಹೇಳಿದ್ದರು. ಈ ವಿಚಾರವನ್ನು ತಿಳಿದ ಸೀಮಂತಿನಿ ಬಾಲ್ಯದಲ್ಲೇ ಸೋಮವಾರ ವ್ರತವನ್ನು ಯಾಜ್ಞವಲ್ಕ್ಯರ ಪತ್ನಿಯಾದ ಮೈತ್ರೇಯಿಯ ಸೂಚನೆಯಂತೆ ತಪ್ಪದೆ ಆಚರಿಸುತ್ತಿದ್ದಳು. ಚಿತ್ರವರ್ಮನು ತನ್ನ ಮಗಳನ್ನು ನಿಷಧದೇಶಾಧಿಪತಿಯಾದ ಇಂದ್ರಸೇನರಾಜನ

ಮಗ ಚಂದ್ರಾಂಗದನಿಗೆ ವಿವಾಹ ಮಾಡಿಕೊಟ್ಟನು. ಒಂದು ದಿನ ಚಂದ್ರಾಂಗದನು ಹಡಗಿನಲ್ಲಿ ಕುಳಿತು ವಿಹರಿಸುತ್ತಿದ್ದಾಗ ಬಿರುಗಾಳಿಗೆ ಸಿಕ್ಕಿ ಹಡಗು ನದಿಯಲ್ಲಿ ಮುಳುಗಿ ಹೋಯಿತು. ಆಗ ಜಲಕೇಳಿಗಾಗಿ ಬಂದಿದ್ದ ನಾಗಕನ್ಯೆಯರು ಚಂದ್ರಾಂಗದನನ್ನು ಪಾತಾಳಕ್ಕೆ ಒಯ್ದು ತಕ್ಷಕನಿಗೆ ಅರ್ಪಿಸಿದರು. ಅಲ್ಲಿ ರಾಜಕುಮಾರ ಮೂರು ವರ್ಷವಿದ್ದು ಪುನಃ ಭೂಮಿಗೆ ಬಂದು ಸೀಮಂತಿನಿಯನ್ನು ಸ್ವೀಕರಿಸಿ ಸುಖವಾಗಿದ್ದನು. ಸೀಮಂತಿನಿಯು ತನ್ನ ಸೋಮವಾರ ವ್ರತದ ಮಹಿಮೆಯಿಂದ ಪತಿಯನ್ನು ಮರಣ ಸಂಕಟದಿಂದ ತಪ್ಪಿಸಿದಳು. ನೋ - ಸೀಮಂತಿನಿ (ಸ್ಕಾಂ.ಪು.).

ಚಿತ್ರವಾಹನ - ಮಣಲೂರಿನ ರಾಜ. ಈತನು ಪಾಂಡ್ಯವಂಶದವನು. ಇವನ ಮಗಳೇ ಚಿತ್ರಾಂಗದೆ. ತೀರ್ಥಯಾತ್ರಾನಿಮಿತ್ತ ಬಂದ ಅರ್ಜುನನು ಈಕೆಯನ್ನು ವಿವಾಹವಾಗಿ ಬಭ್ರುವಾಹನನೆಂಬ ಮಗನನ್ನು ಪಡೆದನು. ಚಿತ್ರವಾಹನನಿಗೆ ಮಲಯಧ್ವಜ ಮತ್ತು ಪ್ರವೀರನೆಂಬ ಹೆಸರುಗಳಿವೆ. ಈತನು ಮಹಾಭಾರತ ಯುದ್ಧದಲ್ಲಿ ಪಾಂಡವರ ಪಕ್ಷದಲ್ಲಿ ನಿಂತು ಹೋರಾಡಿ ಅಶ್ವತ್ಥಾಮನಿಂದ ಹತನಾದನು (ಮ.ಆ ಸ.,ಕ.).

ಅರ್ಜುನನು ತೀರ್ಥಯಾತ್ರೆಯ ೧೩ನೆಯ ತಿಂಗಳಲ್ಲಿ ಪುತ್ರಿಕಾಧರ್ಮವೆಂಬ ಶಾಸ್ತ್ರವಿಧಿಯಿಂದ (ತನ್ನ ಮಗಳ ಗರ್ಭದಲ್ಲಿ ಜನಿಸಿದ ಪುತ್ರನನ್ನು ತನಗೇ ಪುತ್ರನನ್ನಾಗಿ ಕೊಟ್ಟುಬಿಡಬೇಕೆಂಬ ಒಡಂಬಡಿಕೆಯಿಂದ ಕನ್ಯಾದಾನ ಮಾಡಿಕೊಡುವ ಪದ್ಧತಿ) ಚಿತ್ರಾಂಗದೆಯನ್ನು ವಿವಾಹವಾದನು (ಮ.ಆ.). ಭಾರತದ ಮತದಂತೆ ಮಣಲೂರು (ಮಣಿಪುರ) ಕಾವೇರಿ ನದಿಯು ಸಮುದ್ರಕ್ಕೆ ಸೇರುವಲ್ಲಿಂದ ದಕ್ಷಿಣಕ್ಕಿದ್ದ ಒಂದು ಪಟ್ಟಣ. ಇದು ಕೇರಳದಲ್ಲಿತ್ತೆಂದು ಹೇಳುವುದೂ ಇದೆ.

ಇವನು ಪಾಂಡ್ಯರಾಜನು. ಮಲಯಧ್ವಜನೆಂಬ ಹೆಸರು ಇವನಿಗೆ ಇದೆ. ಇವನ ಮಗಳೇ ಅರ್ಜುನನ ಪತ್ನಿಯಾದ ಚಿತ್ರಾಂಗದೆ. ರಾಜಸೂಯಯಾಗಕಾಲದ ವಿಜಯ ಯಾತ್ರೆಯಲ್ಲಿ ಸಹದೇವನನ್ನು ಈ ಮಲಯಧ್ವಜನು ಅಮೂಲ್ಯ ವಸ್ತುರತ್ನಗಳಿಂದ ಸತ್ಕರಿಸಿದನು. ಸಹದೇವ ತನ್ನ ಅಣ್ಣನ ಮಗನಾದ ಬಭ್ರುವಾಹನನ್ನು ಅನೇಕ ರತ್ನಗಳಿಂದ ಬಹುಮಾನಿಸಿದನು (ಮ.ಸ.).

ಚಿತ್ರಸೇನ - ೧. ಧೃತರಾಷ್ಟ್ರನ ಮಗ (ಮ.ಆ.).ಭೀಮನಿಂದ ಹತನಾದನು. ೨.ಗಂಧರ್ವನೊಬ್ಬ. ಅಮರಾವತಿಯಲ್ಲಿ ಅರ್ಜನನಿದ್ದಾಗ ಇಂದ್ರನ ಸೂಚನೆಯಂತೆ ಅರ್ಜುನನಿಗೆ ನಾಟ್ಯ ವಿದ್ಯೆಯನ್ನು ಕಲಿಸಿದನು. ಅಲ್ಲದೆ

ಊರ್ವಶಿಯನ್ನು ಅರ್ಜುನನ ಬಳಿಗೆ ಹೋಗುವಂತೆ ಸೂಚಿಸಿದನು. ಘೋಷಯಾತ್ರೆಯ ಕಾಲದಲ್ಲಿ ಪರಿವಾರ ಸಮೇತ ದ್ವೈತವನಕ್ಕೆ ಬಂದ ದುರ್ಯೋಧನಾದಿಗಳನ್ನು ಈತನು ಸೆರೆಹಿಡಿದನು. ಕರ್ಣನು ಗಂಧರ್ವನೊಡನೆ ಹೋರಾಡಲಾರದೆ ಪಲಾಯನಮಾಡಿದನು. ಆಗ ಕೌರವನ ರಾಣಿಯರು ಧರ್ಮರಾಯರೊಡನೆ ಪತಿಭಿಕ್ಷೆಯನ್ನು ಬೇಡಲು ಯುಧಿಷ್ಠಿರನ ಆಜ್ಞೆಯಂತೆ ಚಿತ್ರಸೇನನಿಂದ ಕೌರವಾದಿಗಳನ್ನು ಬಿಡಿಸಿದನು (ಮ.ವ.). ೩. ಅಭಿಸಾರದೇಶದ ರಾಜ. ರಾಜಸೂಯಯಾಗಕಾಲದಲ್ಲಿ ಈತನು ಅರ್ಜುನನಿಂದ ಪರಾಜಿತನಾದನು (ಮ.ಸ.). ಭಾರತಯುದ್ಧದಲ್ಲಿ ಈತನು ದುರ್ಯೋಧನನ ಪಕ್ಷದಲ್ಲಿ ನಿಂತು ಹೋರಾಡಿ ಸಹದೇವ ಮತ್ತು ದ್ರೌಪದಿಯ ಮಗನಾದ ಶ್ರುತಕರ್ಮನಿಂದ ಹತನಾದನು (ಮ.ಕ.). ೪. ಪಾಂಡವಪಕ್ಷದ ರಾಜ. ಇವನು ಸಮುದ್ರಸೇನನೆಂಬ ರಾಜನಿಂದ ಹತನಾದನು (ಮ.ಶ.). ೬. ದ್ರುಪದನ ಪುತ್ರ. ಇವನು ಕರ್ಣನಿಂದ ಹತನಾದನು ೭. ಜರಾಸಂಧನ ಸೇನಾಪತಿ. ಇವನಿಗೆ ಡಿಂಭಕನೆಂದು ಪರ್ಯಾಯನಾಮ (ಮ.ಸ.). ೮. ಸೂರ್ಯವಂಶದ ವೈವಸ್ವತಮನುವಿನ ಮಗನಾದ ನರಿಷ್ಯಂತ ಪುತ್ರ. ೯. ದೇವಸಾವರ್ಣಿ ಎಂಬ ಮನುವಿನ ಮಗ.

ಕೌರವ ಪಕ್ಷದ ರಾಜ. ಇವನು ಅಸ್ತ್ರವಿದ್ಯಾನಿಪುಣ. ಕರ್ಣನ ಮಗ. ಇವನಿಗೆ ಸುಶರ್ಮ, ಸತ್ಯಸೇನ ಮುಂತಾದ ಸಹೋದರರಿದ್ದರು. ಇವನನ್ನು ನಕುಲನು ಕೊಂದನು (ಮ.ಶ.,ದ್ರೋ.,ಭಾಗ).

ಚಿತ್ರಾ - ೧. ಅಪ್ಸರೆಯೊಬ್ಬಳು. ಇವಳೇ ಮುಂದೆ ಅರ್ಜುನನ ಪತ್ನಿಯಾದ ಸುಭದ್ರೆಯಾಗಿ ಹುಟ್ಟಿದಳು. ನೋ - ಸುಭದ್ರೆ (ಮ.ಆ.). ೨. ದಕ್ಷನ ಒಬ್ಬಳು ಮಗಳು. ಚಂದ್ರನ ಹೆಂಡತಿ.

ಚಿತ್ರಾಕ್ಷ - ಧೃತರಾಷ್ಟ್ರನ ಮಗ (ಮ.ಆ.). ಭೀಮನಿಂದ ಹತನಾದನು (ಮ.ಆ.,ಭೀ).

ಚಿತ್ರಾಂಗದ - ೧. ಶಂತನು ಚಕ್ರವರ್ತಿಯಿಂದ ದಾಶರಾಜನ ಸಾಕುಮಗಳಾದ ಸತ್ಯವತಿಯಲ್ಲಿ ಹುಟ್ಟಿದ ಹಿರಿಯ ಮಗನು. ಈತನ ಸೋದರನೇ ವಿಚಿತ್ರವೀರ್ಯನು. ಚಿತ್ರಾಂಗದನು ತನ್ನ ಹೆಸರಿನ ಗಂಧರ್ವನೊಡನೆ ಹೋರಾಡಿ ಸ್ವರ್ಗಸ್ಥನಾದನು. ೨. ದಶಾರ್ಣದೇಶದರಾಜ. ಈತನು ಅರ್ಜುನನಿಂದ ಪರಾಜಿತನಾದನು (ಮ.ಅಶ್ವ). ೩. ಕಳಿಂಗರಾಜ. ದುರ್ಯೋಧನನ ಮಾವ. ಈತನ ರಾಜಧಾನಿ ರಾಜಪುರ (ಮ.ಶಾಂ.). ೪. ಒಬ್ಬ ಗಂಧರ್ವ. ಸತ್ಯವತಿಯ ಮಗನಾದ ಚಿತ್ರಾಂಗದನನ್ನು ಯುದ್ಧದಲ್ಲಿ ಕೊಂದನು.

ಈತನು ಬುದ್ಧಿಶಾಲಿ; ವೀರ. ಇವನು ತನ್ನ ಬಾಹುಬಲದಿಂದ ಸಮಸ್ತ ರಾಜರನ್ನು ಸೋಲಿಸಿ ತಾನು ಅಸಮಾನನೆಂದೆನಿಸಿದನು. ಇವನ ಪರಾಕ್ರಮವನ್ನು ಕೇಳಿದ ಚಿತ್ರಾಂಗದನೆಂಬ ಗಂಧರ್ವ ರಾಜನೊಬ್ಬನು ಆತನ ಬಳಿಗೆ ಬಂದು - 'ರಾಜಕುಮಾರ, ನೀನು ನನ್ನ ಹೆಸರನ್ನಿಟ್ಟುಕೊಂಡಿರುವೆ. ನೀನು ಯುದ್ಧಮಾಡು ನೀನು ಗೆದ್ದರೆ ನಿನ್ನ ಹೆಸರು ಸ್ಥಿರವಾಗುವುದು, ಸೋತರೆ ನೀನು ಬೇರೆ ಹೆಸರನ್ನಿಟ್ಟುಕೊಳ್ಳಬೇಕೆಂದು' ಹಿರಣ್ಮನದಿ ತೀರದ ಕುರುಕ್ಷೇತ್ರದಲ್ಲಿ ಮೂರು ವರ್ಷಗಳವರೆಗೆ ಕಾದಿದರು. ಕೊನೆಗೆ ಗಂಧರ್ವನು ಮಾಯಾ ಯುದ್ಧದಿಂದ ಚಿತ್ರಾಂಗದನನ್ನು ಕೊಂದನು.

ಚಿತ್ರಾಂಗದೆ. - ಒಬ್ಬಳು ಅಪ್ಸರೆ ೨. ಮಣಲೂರಿನ ರಾಜನಾದ ಮಲಯಧ್ವಜನ (ಚಿತ್ರವಾಹನನ) ಮಗಳು. ನೋ.- ಚಿತ್ರವಾಹನ. ಅರ್ಜುನನ ಪತ್ನಿ; ರಾಜಸೂಯಯಾಗ ಕಾಲದಲ್ಲಿ ದಕ್ಷಿಣದಿಕ್ಕಿಗೆ ದಿಗ್ವಿಜಯಕ್ಕಾಗಿ ಹೊರಟ ಸಹದೇವನನ್ನು ತನ್ನ ಪತಿಯ ತಮ್ಮನೆಂದು ತಿಳಿದು ಆತನಿಗೆ ಕಪ್ಪವನ್ನು ತೆತ್ತಳು.. ಅಶ್ವಮೇಧಕಾಲದಲ್ಲಿ ಕುದುರೆಯ ರಕ್ಷಕನಾಗಿ ಸೈನ್ಯದೊಂದಿಗೆ ತೆರಳಿದ ಅರ್ಜುನನನ್ನು ಈಕೆಯ ಮಗ ಬಭ್ರುವಾಹನನು ಗಂಗೆಯ ಶಾಪದಂತೆ ಕೊಲ್ಲಲು ಚಿತ್ರಾಂಗದೆಯ ಗೋಳಾಟಕ್ಕೆ ಪಾರವಿಲ್ಲದಂತಾಯಿತು. ಆಗ ನಾಗಕನ್ಯೆಯಾದ ಉಲೂಪಿಯು ಈಕೆಯನ್ನು ಸಂತೈಸಿ ನಾಗಲೋಕದಿಂದ ಸಂಜೀವಿನಿರತ್ನವನ್ನು ತರಿಸಿ ಅರ್ಜುನನ ಹೃದಯಕ್ಕೆ ತಗುಲಿಸಲು ಈ ರತ್ನದ ಮಹಿಮೆಯಿಂದ ಅವನು ಚೇತರಿಸಿ ಎದ್ದು ಕುಳಿತನು. ಮುಂದೆ ಚಿತ್ರಾಂಗದೆಯು ಮಗನೊಡನೆ ಹಸ್ತಿನಾವತಿಗೆ ಅಶ್ವಮೇಧಯಾಗಕ್ಕಾಗಿ ಬಂದಳು. ಪಾಂಡವರು ಮಹಾಪ್ರಸ್ಥಾನಕ್ಕೆ ಹೊರಟಾಗ ಅರ್ಜುನನ ಅಪ್ಪಣೆಯಂತೆ ಈಕೆಯು ತನ್ನ ತಂದೆಯ ಮನೆ ಸೇರಿಕೊಂಡಳು (ಮ.ಆ.,ಸ.,ಅಶ್ವ.,ಮಹಾಪ್ರ.).

ಚಿತ್ರಾಯುಧ - ೧. ಪಾಂಚಾಲನೊಬ್ಬ. ಮಹಾರಥ. ಈತನ ರಥ ಮತ್ತು ಕುದುರೆಗಳು ಚಿತ್ರವರ್ಣವಾದವು. ಇವನು ಕರ್ಣನಿಂದ ಹತನಾದ (ಮ.ಆ.,ಉ.,ದ್ರೋ.,ಕ.).

ಚಿತ್ರಾಶ್ವ - ಸಾಳ್ವದೇಶದ ರಾಜನಾದ ದ್ಯುಮತ್ಸೇನನ ಮಗ; ಸಾವಿತ್ರಿಯ ಪತಿ. ಇವನು ಬಾಲ್ಯದಲ್ಲಿ ಕುದುರೆಗಳ ಚಿತ್ರ ಬಿಡಿಸುವುದರಲ್ಲಿ ತುಂಬಾ ಆಸಕ್ತಿಯುಳ್ಳವನಾದುದರಿಂದ ಇವನಿಗೆ ಸತ್ಯವಂತನೆಂದು ಹೆಸರು ಬಂತು. ಇವನಿಗೆ ಸತ್ಯವಂತನೆಂಬ ಹೆಸರೇ ರೂಢಿಯಲ್ಲಿದೆ. ನೋ- ಸತ್ಯವಂತ ಸಾವಿತ್ರಿ (ಮ.ವ.).

ಚಿತ್ರೋಪಚಿತ್ರ - ಧೃತರಾಷ್ಟ್ರನ ಮಗ. ಭೀಮನಿಂದ ಹತನಾದನು. (ಮ.ದ್ರೋ.).

ಚಿತ್ರೋಪಲಾ - ಒರಿಸ್ಸಾದಲ್ಲಿ ಹರಿಯುವ ಒಂದು ನದಿ (ಮ.ಭೀ.).

ಚಿರಕಾರಿಕ (ಚಿರಕಾರಿ) - ಋಷಿಯೊಬ್ಬ. ಗೌತಮ ಮುನಿಯ ವಂಶದವ. ಇವನ ತಂದೆಯು ಮೇಧಾತಿಥಿ. ಚಿರಕಾರಿಯು ಈತನ ಕಿರಿಯ ಮಗ. ಮೇಧಾತಿಥಿಯು ಒಮ್ಮೆ ಕೋಪದಿಂದ ತನ್ನ ಪತ್ನಿಯನ್ನು ಕೊಲ್ಲುವಂತೆ ಚಿರಕಾರಿಗೆ ಅಪ್ಪಣೆ ಮಾಡಿದನು. ಚಿರಕಾರಿಯು ಯಾವ ಕಾರ್ಯವನ್ನೂ ತುಂಬಾ ಯೋಚಿಸಿ ಮಾಡುವವನಾದುದರಿಂದ ತಾಯಿಯ ವಧೆಯ ಕುರಿತು ಯೋಚಿಸುತ್ತಿರುವಾಗ ಮೇಧಾತಿಥಿಗೆ ತನ್ನ ತಪ್ಪು ತಿಳಿದು ಮಗನ ಬಳಿಗೆ ಓಡಿ ಬಂದನು. ಆಗ ಚಿರಕಾರಿಯು ತಾಯಿಯನ್ನು ಕೊಂದಿರಲಿಲ್ಲ. ಇದರಿಂದ ಮೇಧಾತಿಥಿಗೆ ತುಂಬಾ ಸಂತೋಷವಾಯಿತು. ಆತನು ಮಗನಿಗೆ ತುಂಬಾ ವರಗಳನ್ನಿತ್ತನು (ಮ.ಶಾಂ.,ಸ್ಕಾಂ.ಪು.).

ಚಿರಾಂತಕ - ಗರುಡನ ಮಗ (ಮ.ಉ.).

ಚೀರಿಣಿ - ಬದರಿಕಾಶ್ರಮದಲ್ಲಿ ಹರಿಯುವ ಒಂದು ನದಿ. ವೈವಸ್ವತ ಮನುವು ಇದರ ದಡದಲ್ಲೇ ಹತ್ತುಸಾವಿರ ವರ್ಷ ತಪಸ್ಸು ಮಾಡಿದನು. ಈ ನದಿಗೆ ಚಾರಿಣಿ ಎಂಬ ಹೆಸರೂ ಇದೆ (ಮ.ವ.). ಈ ನದಿಯಲ್ಲೇ ದೊರೆತ ಮೀನು - 'ಪ್ರಳಯಕಾಲವು ಸಮೀಪಿಸಿತು. ನೀನು ಮಾಡಬೇಕಾದ ಕರ್ತವ್ಯಗಳಾವುವು? ಎಂಬುದನ್ನೆಲ್ಲಾ ಮನುವಿಗೆ ಬೋಧಿಸಿತು (ಮ.ವ.).

ಚೂಡಾಲೆ - ಶಿಖಿಧ್ವಜನೆಂಬ ರಾಜನ ಹೆಂಡತಿ. ಈಕೆ ಸ್ವಪ್ರಯತ್ನದಿಂದ ಆತ್ಮಜ್ಞಾನವನ್ನು ಸಂಪಾದಿಸಿಕೊಂಡು ತನ್ನ ಪತಿಯನ್ನೂ ಆ ಮಾರ್ಗಕ್ಕೆ ಹಿಡಿಸಿಕೊಂಡಳು (ಯೋಗವಾ.) ನೋ.- ಶಿಖಿಧ್ವಜ.

ಚೂಲಿ - ಒಬ್ಬ ತಪಸ್ವಿ. ಈತನು ತಪಸ್ಸುಮಾಡುತ್ತಿದ್ದ ಕಾಲದಲ್ಲಿ ಸೋಮದೆ ಎಂಬ ಗಂಧರ್ವಸ್ತ್ರೀ ಈತನನ್ನು ಸೇವಿಸುತ್ತಿದ್ದಳು. ಇದರಿಂದ ಮುನಿಯು ಸಂತೃಪ್ತನಾಗಿ ಆಕೆಯ ಬಯಕೆ ಏನೆಂದು ಕೇಳಲು ಅವಳು ಪುತ್ರಾರ್ಥಿಯಾಗಿ ತನ್ನ ಆಸೆಯಂತೆ ಆ ಮುನಿಯಿಂದ ಆಕೆಗೆ ಬ್ರಹ್ಮದತ್ತನೆಂಬ ಮಗನಾದನು (ರಾಮಾ.ಬಾಲ.).

ಚೇಕಿತಾನ - ವೃಷ್ಣಿವಂಶದ ಕ್ಷತ್ರಿಯ. ಪಾಂಡವಪಕ್ಷದಲ್ಲಿ ಭಾರತಯುದ್ಧದಲ್ಲಿ ಹೋರಾಡುತ್ತಿರುವಾಗ ಈತನನ್ನು ದುರ್ಯೋಧನನು ಕೊಂದನು (ಮ.ಶ.).

ಚೇದಯ (ಚೇದಿ) - ಈ ದೇಶವನ್ನು ಯದುವಂಶದ ಚಿದಿ ಎಂಬುವನು ಸ್ಥಾಪಿಸಿದನು. ಇವನ ಮಗನೇ ಕುಶಿಕರಾಜನು. ಇವನ ವಂಶದಲ್ಲೇ ವಿಶ್ವಾಮಿತ್ರನು ಜನಿಸಿದನು. ಈ ದೇಶವು ಬುಂದೇಲಖಂಡದ ದಕ್ಷಿಣಭಾಗದಲ್ಲೂ, ಜಬ್ಬಲಪುರದ ಉತ್ತರಭಾಗದಲ್ಲೂ ಇತ್ತು. ಇದು ಶಿಶುಪಾಲನ ರಾಜ್ಯವಾಗಿತ್ತು. ಶುಕ್ತಿಮತಿಯು ಇದರ ರಾಜಧಾನಿ (ಮ.ಸ.).

ಚೈತಕ (ಚೈತ್ರಕ) - ಮಗಧ ದೇಶದ ಪರ್ವತ. ಗಿರಿವ್ರಜದ ಸುತ್ತಲಿನ ನಾಲ್ಕು ಪರ್ವತಗಳಲ್ಲೊಂದು. ಜರಾಸಂಧನ ಕಾಲದಲ್ಲಿ ಶತ್ರುಗಳು ಇವನ ರಾಜಧಾನಿಯನ್ನು ಪ್ರವೇಶಿಸಿದೊಡನೆ ಈ ಪರ್ವತ ಶೃಂಗಗಳಲ್ಲಿದ್ದ ನಗಾರಿಗಳು ತಾವಾಗಿಯೆ ಶಬ್ದಮಾಡಿ ಜರಾಸಂಧನಿಗೆ ಶತ್ರುಗಳ ಆಗಮನದ ಮೊದಲಿನ ಸೂಚನೆಯನ್ನು ಕೊಡುತ್ತಿದ್ದವು. ಈ ಪರ್ವತಕ್ಕೆ ಚೈತ್ರಕ ಪರ್ವತವೆಂಬ ಹೆಸರೂ ಇದೆ.

ಚೈತ್ರಮಾಸ - ವರ್ಷದ ಹನ್ನೆರಡು ತಿಂಗಳಲ್ಲಿ ಚೈತ್ರಮಾಸವು ಶ್ರೇಷ್ಠವಾದದ್ದು. ಅನ್ನದಿಂದ ಪ್ರಾಣವು ತೃಪ್ತವಾಗುವಂತೆ ಚೈತ್ರಮಾಸದ ಪ್ರಾತಃಸ್ನಾನದಿಂದ ನಾರಾಯಣನು ಪ್ರಸನ್ನನಾಗುತ್ತಾನೆ. ಕೃತಯುಗದಂತಹ ಯುಗವಿಲ್ಲ. ಚೈತ್ರಸ್ನಾನದಂತ ಸ್ನಾನವಿಲ್ಲ. ಚೈತ್ರಕ್ಕೆ ಸಮಾನವಾದ ಕಾಲವಿಲ್ಲ. ವೇದಕ್ಕೆ ಸಮಾನವಾದ ಜ್ಞಾನವಿಲ್ಲ. ಗಂಗೆಗೆ ಸಮಾನವಾದ ತೀರ್ಥವಿಲ್ಲ. ಜಲದಾನಕ್ಕೆ ಸಮಾನವಾದ ದಾನವಿಲ್ಲ. ಈ ಮಾಸದಲ್ಲಿ ಶ್ರೀರಾಮನು ಅವತಾರ ಮಾಡಿರುವನು (ಆನಂ.ರಾ.). ನೋ. -ರಂಭಾ.

ಚೈತ್ರರಥ - ೧. ಕುಬೇರನ ಉದ್ಯಾನವನ. ಇದು ಕೈಲಾಸಪರ್ವತದಲ್ಲಿದೆ. ಇಲ್ಲೇ ಕುಬೇರನು ಪಟ್ಟಾಭಿಷಿಕ್ತನಾದನು. ಈ ಉದ್ಯಾನದ ಸಮೀಪದಲ್ಲಿ ವೈಖಾನಸ ಆಶ್ರಮವೂ, ಮಂದಾಕಿನಿಯೂ, ಮಂದರಪರ್ವತವೂ, ಸೌಗಂಧಿಕವನವೂ ಇವೆ. ಇಲ್ಲೇ ಹಿಮವತ್ಪರ್ವತದಲ್ಲಿ ಚಂದ್ರನು ಬ್ರಾಹ್ಮಣರಿಗೆ ಅರಸನಾಗಿ ಪಟ್ಟಾಭಿಷಿಕ್ತನಾದನು. ವಿದ್ಯುತ್ಪ್ರಭೆಗಳೆಂಬ ಹೆಸರುಳ್ಳ ಹತ್ತು ಮಂದಿ ಅಪ್ಸರೆಯರು ಇಲ್ಲೇ ಜನಿಸಿದರು. ೨. ಚಂದ್ರವಂಶದ ಕುರುರಾಜನ ಎರಡನೆ ಹೆಂಡತಿಯಾದ ವಾಹಿನಿಯಲ್ಲಿ ಹುಟ್ಟಿದ ಐವರು ಮಕ್ಕಳಲ್ಲಿ ಇವನು ಮೂರನೆಯವನು (ಮ.ಉ.,ಆ.).

ಚೋಳ (ಚೋಲ, ಚೋರ) - ದ್ರವಿಡ ದೇಶಾಧಿಪತಿಯೊಬ್ಬ. ದಕ್ಷಿಣ ಹಿಂದುಸ್ಥಾನದ ಒಂದು ಭಾಗ. ಸಹದೇವನು ರಾಜಸೂಯಯಾಗಕಾಲದಲ್ಲಿ ಇಲ್ಲಿಯ ರಾಜನನ್ನು ಜಯಿಸಿ ಕಪ್ಪಪಡೆದಿದ್ದನು. (ಮ.ಸ.).

ಚ್ಯವನ - ಮಹರ್ಷಿಯೊಬ್ಬ. ವರುಣಪುತ್ರನಾದ ಭೃಗುವು ಇವನ ತಂದೆ. ಪುಲೋಮೆ ಎಂಬುವಳು (ಪುಲೋಮಾ) ಈತನ ತಾಯಿ. ಈ ಮುನಿಯು ತಾಯಿಯ ಗರ್ಭದಲ್ಲಿರುವಾಗ ಒಬ್ಬ ರಾಕ್ಷಸನು ಪುಲೋಮೆಯನ್ನು ಅಪಹರಿಸಲು ಆಕೆ ಭಯಗ್ರಸ್ತೆಯಾಗಲು, ಗರ್ಭದಿಂದ ಈ ಬಾಲಕನು ಚ್ಯುತನಾಗಿ ಹೊರಬಂದು ಚ್ಯವನನೆಂದು ಕರೆಯಲ್ಪಟ್ಟನು. ಈ ಬಾಲಕನ ತೇಜಸ್ಸಿನಿಂದಲೇ ಆ ರಾಕ್ಷಸನು ಭಸ್ಮವಾದನು. ಶುಕ್ರಾಚಾರ್ಯನು ಈತನ

ಸಹೋದರ. ಮನು ಪುತ್ರಿಯಾದ ಆರುಷಿಯು ಚ್ಯವನನ ಹಿರಿಯ ಹೆಂಡತಿ. ಈಕೆಯ ಮಗನೇ ಊರುವಿನಿಂದ ಜನಿಸಿದ ಔರ್ವ. ಚ್ಯವನನ ಎರಡನೆ ಹೆಂಡತಿಯೇ ಶರ್ಯಾತಿರಾಜನ ಮಗಳಾದ ಸುಕನ್ಯೆ. ಒಮ್ಮೆ ಶರ್ಯಾತಿರಾಜನು ಬೇಟೆಯಾಡಲು ಮಗಳೊಡನೆ ಅರಣ್ಯಕ್ಕೆ ಬಂದಿದ್ದನು. ಹುತ್ತದೊಳಗೆ ತಪೋನಿರತನಾಗಿದ್ದ ಚ್ಯವನ ಮುನಿಯ ಕಣ್ಣುಗಳು ಮಾತ್ರ ಹೊಳೆಯುತ್ತಿರಲು ಸುಕನ್ಯೆಯು ಅದೇನೆಂದು ತಿಳಿಯದೆ ಒಂದು ಕಡ್ಡಿಯಿಂದ ಚುಚ್ಚಲು ಆ ಮುನಿಯ ಕಂಗಳಿಂದ ರಕ್ತದ ಪ್ರವಾಹವು ಹರಿಯತೊಡಗಲು ಇತ್ತ ಶರ್ಯಾತಿರಾಜನ ಸೇನೆ ಮತ್ತು ಪರಿವಾರಕ್ಕೆ ಮಲ ಮೂತ್ರ ಬದ್ಧವಾಗಲು ಕೊನೆಗೆ ರಾಜನು ಇದರ ಕಾರಣವನ್ನು ತಿಳಿದು ಮುನಿಯ ಪ್ರಸನ್ನತೆಗಾಗಿ ಸುಕನ್ಯೆಯನ್ನು ಆತನಿಗೆ ವಿವಾಹ ಮಾಡಿಕೊಟ್ಟನು. ಸುಕನ್ಯೆಯು ಮುಂದೆ ಅಶ್ವಿನಿ ದೇವತೆಗಳ ಸಹಾಯದಿಂದ ತನ್ನ ಪತಿಗೆ ತಾರುಣ್ಯವನ್ನಿತ್ತಳು. ಇದರ ಪ್ರತಿಫಲವಾಗಿ ಶರ್ಯಾತಿರಾಜನು ಮಾಡಿದ ಯಜ್ಞದಲ್ಲಿ ಚ್ಯವನನು ಅಶ್ವಿನಿದೇವತೆಗಳಿಗೆ ಹವಿರ್ಭಾಗವನ್ನು ಕೊಡಿಸಿದನು. ಇದರಿಂದ ಇಂದ್ರನು ಕೋಪಭರಿತನಾಗಿ ಚ್ಯವನನಿಗೆ ವಜ್ರಾಯುಧದಿಂದ ಹೊಡೆಯಲು ಬರಲು ಚ್ಯವನನು ತನ್ನ ತಪೋಮಹಿಮೆಯಿಂದ ಇಂದ್ರನ ಬಾಹುಗಳನ್ನು ಸ್ತಂಭಿಸಿದನು. ಈತನು ಕುಶಿಕನ ವಂಶದಲ್ಲಿ ಬ್ರಾಹ್ಮಣನು ಜನಿಸುವಂತೆ ವರವಿತ್ತನು (ಮ.ವ.). ಚ್ಯವನನು ತೀರಾ ಮುದುಕನಾದುದರಿಂದ ಈತನು ಹೆಂಡತಿ ಮಕ್ಕಳಿಂದ ಹೊರಹಾಕಲ್ಪಟ್ಟು ಅಶ್ವಿನಿ ದೇವತೆಗಳನ್ನು ಸ್ತುತಿಸಿ ತಿರುಗಿ ಆರೋಗ್ಯವನ್ನು ಪಡೆದನು (ಋ). ನೋ. - ವಧೂಸರ.

ಶ್ರೀರಾಮನು ಯಾತ್ರಾರ್ಥಿಯಾಗಿ ಸರಯೂತೀರದಲ್ಲಿದ್ದಾಗ ಇಲ್ಲಿಯ ಮುನಿಗಳು ಬಂದು ತಾವು ಕೀಟಕದೇಶದಲ್ಲಿ ವಾಸಿಸುವೆವೆಂದೂ, ಮಗದ ದೇಶದ ಪ್ರಾಣಿಗಳು ತಮಗೆ ತುಂಬಾ ತೊಂದರೆ ಕೊಡುತ್ತಿರುವುದೆಂದೂ ಶ್ರೀರಾಮನಿಗೆ ಹೇಳಲು, ಶ್ರೀರಾಮನು ಚ್ಯವನಾಶ್ರಮದ ಸುತ್ತಲೂ ಕಂದಕವನ್ನು ತನ್ನ ಬಾಣದಿಂದ ತೋಡಿ ಮಗಧದ ಯಾವ ಪ್ರಾಣಿಗಳು ಆಶ್ರಮಕ್ಕೆ ಬರದಂತೆ ಮಾಡಿದನು. ಇಲ್ಲೇ ಮುಂದೆ ರಾಮರೇಖಾನಗರ ನಿರ್ಮಾಣವಾಯಿತು (ಆನಂ.ರಾ.).

ಛ

ಛತ್ರವತಿ - ದ್ರುಪದರಾಜನ ನಗರ. ದ್ರೋಣನಿಂದ ಪರಾಜಿತನಾದ ಮೇಲೆ ದ್ರುಪದನು ಇದನ್ನು ಹೊಸದಾಗಿ ಕಟ್ಟಿಸಿದನು (ಮ.ಆ.)

ಛತ್ರೋತ್ಪತ್ತಿ - ಜಮದಗ್ನಿಯು ತನ್ನ ಪತ್ನಿಯಾದ ರೇಣುಕೆಯು ಬಿಸಿಲಲ್ಲಿ ನಡೆಯುವುದನ್ನು ಸಹಿಸಲಾರದೆ ಪ್ರಥಮವಾಗಿ ಕೊಡೆ ಮತ್ತು ಪಾದುಕೆಗಳನ್ನು ನಿರ್ಮಿಸಿದನು. ಇದೇ ಕಾರಣದಿಂದಲೂ ಕೊಡೆಗೆ ಆತಪತ್ರವೆಂಬ ಹೆಸರು ಬಂತು (ಮ.ಅನು.).

ಛಾಯೆ - ಸೂರ್ಯನ ಪತ್ನಿ ಸಂಜ್ಞೆಯು ನಿರ್ಮಾಣಮಾಡಿದ ತನ್ನ ಪ್ರತಿಬಿಂಬ. ಈಕೆಯು ಸೂರ್ಯನ ತೇಜಸ್ಸನ್ನು ಸಹಿಸಲಾರದೆ ತನ್ನಂತಿರುವ ತರುಣಿಯನ್ನು ಸೃಷ್ಟಿಸಿ ಆಕೆಗೆ ಛಾಯೆ ಎಂದು ಹೆಸರಿಟ್ಟು ಸೂರ್ಯನೊಡನೆ ಸಂಸಾರ ಮಾಡಿಕೊಂಡಿರುವಂತೆಯೂ, ಈ ಗುಟ್ಟನ್ನು ರಟ್ಟು ಮಾಡದಿರುವಂತೆಯೂ ಹೇಳಿ, ತನ್ನ ತಂದೆಯಾದ ತ್ವಷ್ಟಾರನು ಇದ್ದಲ್ಲಿಗೆ ಹೋಗಲು ಅವನು ಆಶ್ರಯ ಕೊಡದಿದ್ದುದರಿಂದ ತಪಸ್ಸಿಗೆ ಹೊರಟುಹೋದಳು. ಸೂರ್ಯನು ರೈವತನ ಮಗಳಾದ ರಾಜ್ಞೀ ಎಂಬ ಹೆಂಡತಿಯಲ್ಲಿ ಉತ್ತಮ ಸವಾರನಾದ ರೇವತನನ್ನೂ, ಪ್ರಭೆಯೆಂಬ ಪತ್ನಿಯಲ್ಲಿ ಪ್ರಭಾತನನ್ನು , ಸಂಜ್ಞೆಯಲ್ಲಿ ವೈವಸ್ವತಮನು, ಯಮ ಮತ್ತು ಯಮುನೆಯರೆಂಬ ಮಕ್ಕಳನ್ನು ಪಡೆದನು. ಛಾಯೆಯಲ್ಲಿ ಸೂರ್ಯನಿಂದ ಸಾವರ್ಣಿಮನು, ಶನೈಶ್ಚರ ಮತ್ತು ತಪತಿಯೆಂಬ ಮೂವರು ಮಕ್ಕಳು ಹುಟ್ಟಿದರು. ಕ್ರಮೇಣ ಛಾಯೆಯು ಸಂಜ್ಞೆಯ ಮಕ್ಕಳನ್ನು ತಿರಸ್ಕರಿಸುತ್ತ ಬಂದಳು. ಯಮನು ಇದನ್ನು ಸಹಿಸಲಾರದೆ ಸಿಟ್ಟಿನಿಂದ ತನ್ನ ಬಲಗಾಲನ್ನೆತ್ತಿ ಆಕೆಯನ್ನು ತುಳಿಯಲು ಹೋದನು. ಆಗ ಛಾಯೆಯು ಯಮನಿಗೆ - 'ನಿನ್ನ ಕಾಲಿನಲ್ಲಿ ಹುಳುವಾಗಲಿ ' ಎಂದು ಶಾಪವಿತ್ತಳು. ಇದರಿಂದ ಯಮನು ಈಕೆಯು ತನ್ನ ತಾಯಿಯಲ್ಲವೆಂದು ಸೂರ್ಯನಲ್ಲಿ ದೂರಿದನು. ಸೂರ್ಯನು ಒಂದು ಕೋಳಿಯನ್ನು ನಿರ್ಮಿಸಿ ಅದರಿಂದ ಯಮನ ಕಾಲಿನಲ್ಲಾದ ಹುಳುವನ್ನೆಲ್ಲಾ ಹೆಕ್ಕಿಸಿದನು. ಸೂರ್ಯನು ಸಂಜ್ಞೆಯು ತನ್ನ ಮಕ್ಕಳನ್ನು ಚೆನ್ನಾಗಿ ನೋಡುತ್ತಿಲ್ಲವೆಂದು ಮಾವನಾದ ತ್ವಷ್ಟಾರನಲ್ಲಿ ದೂರಲು ಆತನು ಸೂರ್ಯನ ಅಧಿಕ ತೇಜಸ್ಸನ್ನು ಕುಗ್ಗಿಸಿ ಸೂರ್ಯನಿಂದ ತೆಗೆದ ಆ ಅಧಿಕ ತೇಜಸ್ಸಿನಿಂದ ವಿಷ್ಣುವಿಗೊಂದು ಚಕ್ರಾಯುಧ, ಶಿವನಿಗೊಂದು ತ್ರಿಶೂಲ ಮತ್ತು ಇಂದ್ರನಿಗೆ ವಜ್ರಾಯುಧವನ್ನು ಮಾಡಿಕೊಟ್ಟನು. ಇವನು ಮುಂದೆ ಉತ್ತರ ಕುರುವಿನಲ್ಲಿ ಕುದುರೆಯ ಆಕಾರದಿಂದ ಮೇಯುತ್ತಿದ್ದ ಸಂಜ್ಞೆಯನ್ನು ಗುರುತಿಸಿ, ಆಕೆಯನ್ನು ಕೂಡಲು ಅವಳು ಪತಿಯೆಂದು ತಿಳಿಯದೆ ಪರಪುರುಷನೆಂಬ ಭಾವನೆಯಿಂದ ಆ ತೇಜಸ್ಸನ್ನು ಮೂಗಿನ ಮೂಲಕ ಹೊರಬಿಡಲು ಆ ತೇಜಸ್ಸಿನಿಂದಲೇ ಅಶ್ವಿನಿ ದೇವತೆಗಳು ಹುಟ್ಟಿದರು. ಅನಂತರ ಸಂಜ್ಞೆಯು ಪತಿಯನ್ನು ಗುರುತಿಸಿ ಸಂತೋಷ ಹೊಂದಿದಳು (ಭಾಗ.,ಮತ್ಸ್ಯಪು.,ಶಿವಪು.).

ಛಂದೋದೇವ - ಮತಂಗನ ಜನ್ಮಾಂತರದ ಹೆಸರು. ಇವನು ಮಂತ್ರ ರಹಸ್ಯವನ್ನು ತಿಳಿದ ಮಹರ್ಷಿಯಾಗಿದ್ದ. ನೋ. - ಮಾತಂಗ (ಮ.ಅನು.).

ಜ

ಜಗನ್ನಾಥಪುರಿ - ಭಾರತದ ಪೂರ್ವ ಸಮುದ್ರತೀರ ಒಂದು ಪ್ರಸಿದ್ಧ ಕ್ಷೇತ್ರ. ಇದು ಕಟಕದಿಂದ ಐವತ್ತೇಳು ಮೈಲಿ ದೂರದಲ್ಲಿದೆ. ಕೃತಯುಗದಲ್ಲಿ ಬದರೀನಾಥವೂ, ತ್ರೇತೆಯಲ್ಲಿ ರಾಮೇಶ್ವರವು, ದ್ವಾಪರದಲ್ಲಿ ದ್ವಾರಕೆಯೂ, ಕಲಿಯುಗದಲ್ಲಿ ಜಗನ್ನಾಥ ಪುರಿಯು ಪ್ರಸಿದ್ಧ ಕ್ಷೇತ್ರಗಳು. ಇಲ್ಲಿ ಸ್ನಾನಕ್ಕೆ ಸಮುದ್ರವು, ರೋಹಿಣಿಕುಂಡ, ಇಂದ್ರದ್ಯುಮ್ನ ಸರೋವರ, ಮಾರ್ಕಂಡೇಯ ಸರೋವರ, ಚಕ್ರತೀರ್ಥ, ಮೊದಲಾದ ತೀರ್ಥಗಳಿವೆ. ಜಗನ್ನಾಥದಿಂದ ಹತ್ತು ಮೈಲಿಗಳ ಮೇಲೆ ಸಾಕ್ಷಿಗೋಪಾಲಮಂದಿರವಿದೆ. ಯಾತ್ರಿಕರು ಪುರಿಯ ಯಾತ್ರೆಯನ್ನು ಮಾಡಿದುದಕ್ಕೆ ಸಾಕ್ಷಿಯನ್ನು ಈ ಗೋಪಾಲನು ನುಡಿಯುತ್ತಾನೆಂಬ ಭಾವನೆಯಿಂದ ಜಗನ್ನಾಥ ಪುರಿಯ ಯಾತ್ರೆ ಮಾಡಿದ ಮೇಲೆ ಇಲ್ಲಿಗೆ ಬಂದು ಹೋಗುತ್ತಾರೆ. ಜಗನ್ನಾಥದಲ್ಲಿದ್ದ ಒಂದು ವಟವೃಕ್ಷಕ್ಕೆ ಕಲ್ಪವೃಕ್ಷವೆನ್ನುತ್ತಾರೆ. ದ್ವಾಪರದಲ್ಲಿ ಶ್ರೀ ಕೃಷ್ಣನ ರಾಣಿಯರು ರೋಹಿಣಿಯ ಮಂದಿರಕ್ಕೆ ಹೋಗಿ ಶ್ರೀಕೃಷ್ಣನ ವಜ್ರಲೀಲೆಗಳನ್ನು ವರ್ಣಿಸಲು ಒತ್ತಾಯ ಮಾಡಿದರು. ಆಗ ರೋಹಿಣಿಯು ಸುಭದ್ರೆಯನ್ನು ಬಾಗಿಲಲ್ಲಿ ನಿಲ್ಲಿಸಿ ಯಾರನ್ನು ಒಳಗೆ ಬಿಡಬಾರದೆಂದು ಆಜ್ಞೆ ಇತ್ತು ತಾನು ಅವರಿಗೆ ಕಥೆಯನ್ನು ಹೇಳಲು ಆರಂಭಿಸಿದಳು. ಆಗ ಅಲ್ಲಿಗೆ ಬಲರಾಮಕೃಷ್ಣರು ಬರಲು ಸುಭದ್ರೆಯು ಅವರನ್ನು ತಡೆದಳು. ಆಗ ನಾರದರು ಅಲ್ಲಿಗೆ ಬಂದು ' ಇದೇ ಸ್ಥಳದಲ್ಲಿಯೇ ನೀವು ಮೂವರೂ ವಿರಾಜರಾಗಬೇಕು' ಎನ್ನಲು ಶ್ರೀಕೃಷ್ಣನು ' ತಥಾಸ್ತು ' ಎಂದನು. ವಿಶ್ವಕರ್ಮನು ವಿಷ್ಣುಭಕ್ತನಾಗಿದ್ದ ಇಂದ್ರದ್ಯುಮ್ನ ರಾಜನಿಗೆ ಸಮುದ್ರದಲ್ಲಿ ಸಿಕ್ಕಿದ ಮರದ ತುಂಡಿನಿಂದ ಶ್ರೀಕೃಷ್ಣನ ಮೂರ್ತಿಯನ್ನು ಒಂದು ಮಂದಿರದಲ್ಲಿ ಬಾಗಿಲು ಹಾಕಿಕೊಂಡು ಕುಳಿತು ಕೆತ್ತತೊಡಗಿದನು. ಮುಂದೆ ಕೆಲವು ದಿನಗಳಾದರೂ ಶಿಲ್ಪಿಯು ಬಾಗಿಲು ತೆರೆಯದುದರಿಂದ ಅವನು ಸತ್ತನೆಂದು ಮಹಾರಾಣಿಯು ಮಂದಿರದ ಬಾಗಿಲನ್ನು ತೆರೆಸಿ ನೋಡುವಾಗ ಮೂರ್ತಿಯ ರಚನೆಯು ಅಪೂರ್ಣವಾಗಿತ್ತು. ಆಗ ಆಕಾಶವಾಣಿಯು 'ಚಿಂತೆಮಾಡಬೇಡ ಇದೇ ರೂಪದಲ್ಲಿ ನನ್ನನ್ನು ಸ್ಥಾಪಿಸು' ಎಂದು ನುಡಿಯಲು ಅಪೂರ್ಣವಾಗಿದ್ದ ಮೂರ್ತಿಗಳನ್ನೇ ದೇವಮಂದಿರದಲ್ಲಿ ಸ್ಥಾಪಿಸಿದನು. ಇಂದೂ ಜಗನ್ನಾಥನ ಮೂರ್ತಿ ಅಪೂರ್ಣವಾಗಿಯೇ ಇದೆ (ಕ್ಷೇತ್ರದ).

ಜಂಘಾಬಂಧು - ಯುಧಿಷ್ಠಿರನ ಸಭೆಯ ಒಬ್ಬ ಋಷಿ (ಮ.ಸ.).

ಜಂಘಾರಿ - ವಿಶ್ವಾಮಿತ್ರನ ಪುತ್ರ (ಮ.ಅನು.)

ಜಟಾಕುಂಡ - ರಾಮಲಕ್ಷ್ಮಣರು ಗುಹನಿಂದ ಆಲದ ಹಾಲನ್ನು ತರಿಸಿ ಜಡೆ ಮಾಡಿಕೊಂಡ ಸ್ಥಳ. ಅದಕ್ಕಾಗಿ ಚೈತ್ರ ಶುದ್ದ ಹದಿನಾಲ್ಕನೆಯ ದಿನ ಇಲ್ಲಿ ಜಾತ್ರೆ ಜರಗುತ್ತದೆ. (ಸ್ಕಾಂ.ಪು.).

ಜಟಾಯು - ಸೂರ್ಯ ಸಾರಥಿಯಾದ ಅರುಣಪುತ್ರನಾದ ಪಕ್ಷಿರಾಜ ನೋ. -ಗೃಧ್ರರಾಜ. ಈತನ ತಾಯಿ ಶ್ಯೇನಿ. ಸಹೋದರ ಸಂಪಾತಿ. ಜಟಾಯುವಿನ ವಧೆ ಸೀತಾಪರಹರಣ ಮಾಡುತ್ತಿದ್ದ ರಾವಣನಿಂದಾಯಿತು. ಈತನ ಮಕ್ಕಳು ಕರ್ಣಿಕಾರ, ಶತಗಾಮಿ, ಸಾರಸ, ರಜ್ಜುಬಾಲ ಭೇರುಂಡರೆಂಬ ಐವರು (ಮ.ವ.,ಆ.,ರಾಮಾ.ಅರ.).

ಜಟಾಯುತೀರ್ಥ - ಗೋಕರ್ಣದಲ್ಲಿ ಉನ್ನತವಾದ, ಕಡಿದಾದ ಶೈಲಗಳ ನಡುವೆ ಶಿವಲಿಂಗವಿದ್ದ ಪ್ರದೇಶ . ಗೋಕರ್ಣದಲ್ಲಿ ಸಮುದ್ರತೀರದ ರುದ್ರಸುಂದರ ಪ್ರದೇಶವಿದು. ಇಲ್ಲಿ ಸಮುದ್ರವು ನೋಡುಗರಿಗೆ ಭಯವನ್ನುಂಟು ಮಾಡುವುದು. ಇದರ ಸಮೀಪದಲ್ಲೊಂದು ಆಶ್ರಮವಿತ್ತು.

ಜಟಾಸುರ - ೧. ರಾಕ್ಷಸನೊಬ್ಬ. ಅರಣ್ಯವಾಸದಲ್ಲಿದ್ದ ಯುಧಿಷ್ಠಾರಾದಿಗಳನ್ನು ಇವನು ಬಲಾತ್ಕಾರದಿಂದ ಹೊತ್ತುಕೊಂಡು ಹೋದನು. ಆಗ ಭೀಮನು ಬೇಟೆಯಾಡಲು ಹೋಗಿದ್ದನು. ಅರ್ಜುನನು ಪಾಶುಪತಾಸ್ತ್ರವನ್ನು ಪಡೆದು ಸ್ವರ್ಗದಲ್ಲಿದ್ದನು. ಭೀಮನು ಬೇಟೆಯಿಂದ ಹಿಂದಿರುಗಿ ಸಹೋದರರನ್ನು, ಪತ್ನಿಯನ್ನು ಆಶ್ರಮದಲ್ಲಿ ಕಾಣದೆ, ರಾಕ್ಷಸನು ಅವರನ್ನು ಹೊತ್ತುಕೊಂಡು ಹೋದ ದಿಕ್ಕನ್ನೇ ಅನುಸರಿಸಿ, ಮಾರ್ಗದಲ್ಲೇ ಆ ರಕ್ಕಸನನ್ನು ಸಂಧಿಸಿ ಅವನೊಡನೆ ಹೋರಾಡಿ, ಆತನನ್ನು ಕೊಂದು ಎಲ್ಲರೊಡನೆ ತಾವು ಮೊದಲಿದ್ದ ನರನಾರಾಯಣರ ಆಶ್ರಮಕ್ಕೆ ಹಿಂದಿರುಗಿದನು. ಈತನ ಮಗ ಆಲಂಬಲ ಇವನು ಘಟೋತ್ಕಚನಿಂದ ಹತನಾದನು. (ಮ.ವ.). ೨. ಮದ್ರದೇಶದ ಒಬ್ಬ ರಾಜ (ಮ.ಸ.).

ಜಟಿಲಾ - ಗೌತಮ ಮುನಿಯ ವಂಶದಲ್ಲಿ ಹುಟ್ಟಿದ ಸ್ತ್ರೀ. ಪೂರ್ವಜನ್ಮದಲ್ಲಿ ಈಕೆಯು ಏಳು ಮಂದಿ ಮುನಿಗಳನ್ನು ವಿವಾಹವಾಗಿದ್ದಳು. ದ್ರೌಪದಿಯನ್ನು ಐವರು ಪಾಂಡವರು ವಿವಾಹವಾಗಲು ಸಿದ್ಧರಾದಾಗ ದ್ರುಪದನು ಪಾಂಡವರ ವರ್ತನೆಗೆ ಅಸಹ್ಯ ಪಟ್ಟು ಮೌನವಾಗಿರುವಾಗ ವ್ಯಾಸಮುನಿಯು ಅಲ್ಲಿಗೆ

ಬಂದು ದ್ರೌಪದಿಯು ಐವರು ಪಾಂಡವರ ಪತ್ನಿಯಾಗಲು ಜನಿಸಿದಳೆಂದೂ, ಈಕೆಯು ಪೂರ್ವಜನ್ಮದಲ್ಲಿ ಜಟಿಲೆಯಾಗಿದ್ದಳೆಂದೂ ಅವಳ ಕಥೆಯನ್ನು ಹೇಳಿದನು.

ವ್ಯಾಸ, ದ್ರುಪದ ಮೊದಲಾದವರ ಮುಂದೆ ಯುಧಿಷ್ಠಿರನು - ' ಜಟಿಲೆಯು ಹಿಂದೆ ಸಪ್ತಋಷಿಗಳ ಪತ್ನಿಯಾಗಿದ್ದಳು ಎಂದನು (ಮ.ಆ.).

ಜಟೀ -ನಾಗರಾಜನೊಬ್ಬ. ರಾವಣನು ಈತನನ್ನು ದಿಗ್ವಿಜಯ ಕಾಲದಲ್ಲಿ ಗೆದ್ದನು! (ರಾಮಾ.ಯುದ್ಧ.).

ಜಡಭರತ - ರಾಜನೊಬ್ಬ. ಋಷಭದೇವನೆಂಬ ರಾಜರ್ಷಿ ಈತನ ತಂದೆ. ಜಯಂತಿ ತಾಯಿ. ಈ ದಂಪತಿಗಳಿಗೆ ಭರತನಲ್ಲದೆ ಇಲಾವರ್ತ, ಆರ್ಯಾವರ್ತ, ಕುಶಾವರ್ತ, ಭದ್ರಸೇನ, ಮಲಯಕೇತುವೆಂಬ ಐವರು ಮಕ್ಕಳಿದ್ದರು. ಋಷಭದೇವನ ತರುವಾಯ ಈತನು ಭಾರತವರ್ಷವನ್ನು (ಅಜನಾಭವರ್ಷ) ಸ್ವಲ್ಪಕಾಲ ಆಳಿ ಆಮೇಲೆ ತನ್ನ ಮಕ್ಕಳಾದ ಸುಮತಿ, ಸುದರ್ಶನ ರಾಷ್ಟ್ರಭುಜ, ಧೂಮ್ರಕೇತು ಮತ್ತು ಆದರ್ಶರೆಂಬ ಐವರಿಗೆ ತನ್ನ ರಾಜ್ಯವನ್ನು ಹಂಚಿಕೊಟ್ಟು ಅರಣ್ಯಕ್ಕೆ ಹೊರಟು ಹೋದನು. ಅಲ್ಲಿ ಒಂದು ನದಿಯಲ್ಲಿ ಈತನು ಸ್ನಾನ ಮಾಡುತ್ತಿದ್ದಾಗ ಸಿಡಿಲಿನ ಶಬ್ದವನ್ನು ಕೇಳಿ ನೀರು ಕುಡಿಯುತ್ತಿದ್ದ ಗರ್ಭಿಣಿ ಜಿಂಕೆಗೆ ಗರ್ಭಸ್ರಾವವಾಗಿ ಅದು ಮೃತಪಡಲು ಭರತನು ಜಿಂಕೆಯ ಮರಿಯನ್ನು ತನ್ನ ಆಶ್ರಮಕ್ಕೊಯ್ದು ಪ್ರೀತಿಯಿಂದ ಸಾಕುತ್ತಿದ್ದನು. ಅವನು ಮುಂದೆ ಸಾಯುವ ಕಾಲದಲ್ಲೂ ಆ ಮರಿಯನ್ನೇ ಸ್ಮರಿಸುತ್ತಾ ದೇಹವನ್ನು ಬಿಟ್ಟುದರಿಂದ ಮುಂದಿನ ಜನ್ಮದಲ್ಲಿ ಜಿಂಕೆಯಾಗಿಯೇ ಜನಿಸಿದನು. ಇವನು ಮೂರನೇ ಜನ್ಮದಲ್ಲಿ ಅಂಗಿರಸನೆಂಬ ಬ್ರಾಹ್ಮಣನ ಮಗನಾಗಿ ಹುಟ್ಟಿ ಹುಚ್ಚನಂತೆ ವೈರಾಗ್ಯದಿಂದ ತಿರುಗುತ್ತಿದ್ದನು. ಆಗ ವೃಷಲನೆಂಬ ರಾಜನ ಭಟರು ಕಾಳಿದೇವಿಗೆ ನರಬಲಿಯನ್ನು ಅರ್ಪಿಸಲು ಜನರನ್ನು ಹುಡುಕುತ್ತಾ ತಿರುಗುತ್ತಿದ್ದಾಗ ಈ ಬ್ರಾಹ್ಮಣಪುತ್ರನು ಕಾಣಿಸಲು ಅವನನ್ನು ಹಿಡಿದು ಕಾಳಿಗೆ ಅರ್ಪಿಸಲು ದೇವಿಯು ವೃಷಲ ಮತ್ತು ಆತನ ಪರಿವಾರವನ್ನೇ ಬಲಿಯಾಗಿ ತೆಗೆದುಕೊಂಡುಬಿಟ್ಟಳು. ಇವನು ಸಿಂಧೂದೇಶಕ್ಕೆ ಹೋದಾಗ ಬಲಿಷ್ಠನಾಗಿದ್ದ ಈತನನ್ನು ಅಲ್ಲಿಯ ರಾಜನು ಪಲ್ಲಕ್ಕಿ ಹೊರುವುದಕ್ಕಾಗಿ ಇಟ್ಟುಕೊಂಡನು. ಒಮ್ಮೆ ಸಿಂಧೂದೇಶದ ರಾಜನಾದ ರಹುಗಣನು ಭರತನಿಂದ ಪಲ್ಲಕ್ಕಿಯನ್ನು ಹೊರಿಸಿಕೊಂಡು ಹೋಗುತ್ತಿದ್ದಾಗ ಏರುತಗ್ಗುಗಳ ಕಡೆಗೆ ಲಕ್ಷ್ಯವಿಲ್ಲದೆ ನಡೆಯುತ್ತಿರಲು ರಾಜನು ಜಡಭರತನನ್ನು ನಿಂದಿಸಿದನು. ಆಗ ವೇದಾಂತಿಯಾದ ಈತನು - ' ಬಯ್ಗುಳೆಲ್ಲಾ ದೇಹಕ್ಕಲ್ಲದೆ ಆತ್ಮಕ್ಕಲ್ಲ ' ಎನ್ನಲು ರಾಜನು ಪಲ್ಲಕ್ಕಿಯಿಂದಿಳಿದು ಈತನ ಕ್ಷಮೆಯನ್ನು ಯಾಚಿಸಿದನು. ಇವನು

ಜಿಂಕೆಯಮರಿಯ ಪ್ರೀತಿಯಿಂದ ಮೂರುಜನ್ಮಗಳನ್ನು ಎತ್ತಬೇಕಾಯಿತು (ಭಾಗ.,ಸ್ಕಾಂ.ಪು.).

ಜತುಗೃಹ - ಪಾಂಡವರನ್ನು ಸುಡಲು ದುರ್ಯೋಧನನಿಂದ ನಿರ್ಮಾಣವಾದ ಅರಗಿನ ಮನೆ. ಇದನ್ನು ವಾರಣಾವತದಲ್ಲಿ ಪುರೋಚನನು ಅರಗು, ಸಜ್ಜರಸ, ಘೃತ ಮೊದಲಾದ ಮಿಶ್ರಣದಿಂದ ಸಜ್ಜುಗೊಳಿಸಿದನು. ವಿದುರನಿಂದ ನೇಮಿಸಲ್ಪಟ್ಟ ಕನಕನು ಪಾಂಡವರ ಶಯ್ಯಾಗೃಹದಿಂದ ತಪ್ಪಿಸಿಕೊಳ್ಳಲು ಒಂದು ಸುರಂಗ ಮಾರ್ಗವನ್ನು ಗುಪ್ತವಾಗಿ ಏರ್ಪಡಿಸಿದನು. ಭೀಮನು ಒಂದು ದಿನ ಈ ಅರಗಿನ ಮನೆಗೆ ಬೆಂಕಿಯನ್ನಿತ್ತು ಸಹೋದರರನ್ನು ತಾಯಿಯನ್ನು ಕೂಡಿಕೊಂಡು ದೂರ ಹೊರಟುಹೋದನು (ಮ.ಆ.).

ಜನ - ವೃಷನೆಂಬ ಮಹರ್ಷಿಯ ತಂದೆ ನೋ.- ವೃಶ, ತ್ರ್ಯೆವೃಷ್ಣ - ತ್ರ್ಯರುಣ.

ಜನಕ - ಇಕ್ಷ್ವಾಕು ರಾಜನ ಒಬ್ಬ ಮಗನಾದ ನಿಮಿ ಎಂಬ ವಂಶದವನು. ಇವನನ್ನು ವಿದೇಹರಾಜ, ಮಿಥಿಲ, ಜನಕ, ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ನಿಮಿಯು ವಸಿಷ್ಠನ ಶಾಪದಿಂದ ದೇಹತ್ಯಾಗಮಾಡಿದ ತರುವಾಯ ವಿದೇಹ ದೇಶವು ಅರಾಜಕವಾಗಲು ಅಲ್ಲಿಯ ಪ್ರಜೆಗಳೆಲ್ಲಾ ಒಟ್ಟುಗೂಡಿ ನಿಮಿಯ ಬಲತೋಳನ್ನು ಮಥಿಸಲು ಹುಟ್ಟಿದವನೇ ಜನಕನು. ಮುಂದೆ ಈ ವಂಶದವರಿಗೆಲ್ಲಾ ಜನಕ, ಮಿಥಿಲ ಎಂಬ ಹೆಸರುಗಳೇ ಶಾಶ್ವತವಾದವು. ಇವರಲ್ಲಿ ಮೊದಲನೆಯ ಜನಕನೇ ಯಜ್ಞಪ್ರಿಯನಾದ ಸೀರಧ್ವಜ ಜನಕನು. ಇವನೊಮ್ಮೆ ಯಾಗಕ್ಕಾಗಿ ಭೂಮಿಯನ್ನು ಉಳುತ್ತಿರುವಾಗ ಭೂಮಿಯಲ್ಲಿ ದೊರೆತ ಸ್ತ್ರೀ ಶಿಶುವೇ ಸೀತೆ. ಇವಳು ದೊರೆತ ಮೇಲೆ ಸೀರಧ್ವಜನ ಪತ್ನಿ ಗರ್ಭಿಣಿಯಾಗಿ ಹೆತ್ತ ಮಗುವಿಗೆ ಊರ್ಮಿಳೆ ಎಂದು ನಾಮಕರಣಮಾಡಿದರು. ಸೀತೆಯನ್ನು ವಿವಾಹವಾಗಲು ಸಾಂಕಾಶ್ಯದ ರಾಜನು ದಂಡೆತ್ತಿ ಬಂದು ಜನಕನಿಂದ ಪರಾಜಿತನಾಗಿ ಸ್ವರ್ಗಸ್ಥನಾದನು. ಮುಂದೆ ಶ್ರೀರಾಮನು ಸ್ವಯಂವರಕ್ಕೆ ಪಣವಾಗಿಟ್ಟ ಶಿವಧನುಸ್ಸನ್ನು ಮುರಿದು ಸೀತೆಯನ್ನು ವರಿಸಿದನು. ಅದೇ ಕಾಲದಲ್ಲಿ ಜನಕನು ತನ್ನಮಗಳಾದ ಊರ್ಮಿಳೆಯನ್ನು ಲಕ್ಷ್ಮಣನಿಗೂ ತಮ್ಮನಾದ ಕುಶಧ್ವಜನ ಮಕ್ಕಳಾದ ಮಾಂಡವಿ, ಶ್ರುತಕೀರ್ತಿಯರನ್ನು ಭರತ ಶತೃಘ್ನರಿಗೂ ವಿವಾಹ ಮಾಡಿಕೊಟ್ಟನು. ಶುಕಮುನಿಯೂ ಜನಕನಿಂದ ಜ್ಞಾನೋಪದೇಶ ಪಡೆದುಕೊಂಡನು (ಬೃಹನ್ನಾರದೀಯ.). ಜನಕನ ಪತ್ನಿಯ ಹೆಸರು ಸುಮೇಧೆ. ಇವನು ಅತ್ರಿ, ಕಹೋಳ, ಮಾಂಡವ್ಯ, ಪರಾಶರಾ, ಯಾಜ್ಞವಲ್ಕ್ಯ ಮುಂತಾದ ತಪಸ್ವಿ ಬ್ರಾಹ್ಮಣರೊಡನೆ ಧರ್ಮದ ವಿಷಯವಾಗಿ

ಚರ್ಚಿಸಿದನು. ಮಿಥಿಲೆಯು ಸುಡುವಾಗಲು ಜನಕನು ನಿಶ್ಚಿಂತನಾಗಿದ್ದನು. ಜನಕ ಮತ್ತು ಪರಾಶರಮುನಿಗಳ ಸಂಭಾಷಣೆಯೆ ಪರಾಶರ ಗೀತೆ. ನೋ.- ಸೀತ (ರಾಮಾ.ಬಾಲ.,ಮ.ವ.,ಶಾಂ.,ಅಶ್ವ.,ಭಾಗ.,ವಾಯುಪು.).

ಜನದೇವ - ಜನಕವಂಶದ ಜ್ಞಾನಿಯಾದ ಒಬ್ಬರಾಜ. ಈತನು ಆತ್ಮನ ವಿಚಾರವಾಗಿ ಹಲವರೊಡನೆ ಪ್ರಶ್ನಿಸಿದರೂ ಉತ್ತರವು ಬಾರದಿರಲು ರಾಜನು ಚಿಂತಾಕ್ರಾಂತನಾಗಿರುವಾಗ ಕಪಿಲೆ ಎಂಬವಳ ಮಗನಾದ ಬ್ರಹ್ಮಜ್ಞಾನಿ ಪಂಚಶಿಖನು ರಾಜನೊಂದಿಗೆ ಸಂವಾದಮಾಡಿ ನಾಸ್ತಿಕ ಮತಗಳನ್ನೆಲ್ಲಾ ಖಂಡಿಸಿ ಆತನಿಗೆ ತತ್ತ್ವೋಪದೇಶ ಮಾಡಿದನು. ಈತನಿಗೂ ಜನಕನೆಂಬ ಹೆಸರಿದೆ (ಮ.ಶಾಂ.,ಬೃಹನ್ನಾರದೀಯ).

ಜನಮೇಜಯ - ಸುಭದ್ರಾರ್ಜುನರ ಪುತ್ರನಾದ ಅಭಿಮನ್ಯುವಿನ ಮೊಮ್ಮಗ. ಈತನ ತಂದೆ ಪರೀಕ್ಷಿದ್ರಾಜ ; ತಾಯಿ ಭದ್ರವತಿ. ಕಾಶೀರಾಜನಾದ ಸುವರ್ಮನ ಮಗಳಾದ ವಪುಷ್ಟಮೆ ಈತನ ಪತ್ನಿ. ಶತಾನೀಕ ಮತ್ತು ಶಂಕುಕರ್ಣರು ಈತನ ಮಕ್ಕಳು. ಸುವರ್ಮನಿಗೆ ಸುವರ್ಣವರ್ಮನೆಂಬ ಹೆಸರೂ ಇದೆ. ಭದ್ರವತಿಗೆ ಇರಾವತಿ ಎಂಬ ಹೆಸರಿದೆ. ಜನಮೇಜಯನಿಗೆ ಶ್ರುತಸೇನ, ಉಗ್ರಸೇನ, ಭೀಮಸೇನರೆಂಬ ಮೂವರು ಸಹೋದರರಿದ್ದರು. ಈತನಿಗೆ ಶ್ರುತಶ್ರವಸನೆಂಬ ಋಷಿಯ ಮಗನಾದ ಸೋಮಶ್ರವನು ಪುರೋಹಿತನಾಗಿದ್ದನು. ತಕ್ಷಕನ ಮೇಲಿನ ಸೇಡನ್ನು ತೀರಿಸಿಕೊಳ್ಳಲು ಈತನಿಂದ ಉತ್ತಂಕನು ಸರ್ಪಯಾಗ ಮಾಡಿಸಿದನು. ತನ್ನ ತಂದೆಯು ತಕ್ಷಕನಿಂದ ಮೃತನಾದುದರಿಂದ ಸರ್ಪಗಳ ವಂಶವನ್ನೇ ನಾಶಮಾಡಬೇಕೆಂದು ಚಂಡಭಾರ್ಗವ ಮುನಿಯನ್ನು ಹೋತೃವಾಗಿಯೂ (ಋಗ್ವೇದ ಮಂತ್ರಗಳನ್ನು ಹೇಳುವವ), ಪಿಂಗಳ ಮುನಿಯನ್ನು ಅಧ್ವರ್ಯುತವಾಗಿಯೂ, ಜೈಮಿನಿ ಮಹರ್ಷಿಯನ್ನು ಉದ್ಗಾತೃವಾಗಿಯೂ, (ಸಾಮವೇದ ಮಂತ್ರಗಳನ್ನು ಹೇಳುವವನು), ಅಂಗಿರಸ ಮುನಿಯನ್ನು ಬ್ರಹ್ಮನಾಗಿಯೂ, ಅಸಿತ, ದೇವಲ, ವ್ಯಾಸ, ಉದ್ದಾಲಕ ಶ್ವೇತಕೇತು, ಪರ್ವತ, ನಾರದ, ಕಹೋಳ ಮೊದಲಾದವರೆಲ್ಲ ಸದಸ್ಯರಾಗಿದ್ದ ಸರ್ಪಯಜ್ಞವನ್ನು ಪ್ರಾರಂಭಿಸಿ, ಸರ್ಪಗಳ ಅಳಿಯನಾದ ಆಸ್ತೀಕ ಮಹರ್ಷಿಯಿಂದ ಯಾಗವು ತಡೆಯಲ್ಪಟ್ಟಿತು. ನೋ. - ಜರತ್ಕಾರು, ಆಸ್ತೀಕ. ಮುಂದೆ ಈ ಸರ್ಪಯಾಗದಿಂದ ಜನಮೇಜಯನಿಗೆ ಕುಷ್ಠರೋಗವು ಪ್ರಾಪ್ತವಾಗಲು ರಾಜನು ವ್ಯಾಸಮಹರ್ಷಿಯ ಸೂಚನೆಯಂತೆ ಆತನ ಶಿಷ್ಯನಾದ ವೈಶಂಪಾಯನ ಮುನಿಯಿಂದ ಮಹಾಭಾರತ ಕಥೆಯನ್ನು ಕೇಳಿದನು. ಆಗಲೂ ರಾಜನು ಭಾರತ

ಕಥಾಭಾಗದಲ್ಲಿ ಬಂದಿದ್ದ ಸಂದೇಹಗಳನ್ನು ಪರಿಹಾರ ಮಾಡಿಕೊಳ್ಳದುದರಿಂದ ದೇಹದ ಒಂದು ಭಾಗದಲ್ಲಿ ಮಾತ್ರ ಆ ಚಿಹ್ನೆ ಉಳಿಯಿತು. ಆಗ ಪುನಃ ವ್ಯಾಸರ ಸೂಚನೆಯಂತೆ ಅವರ ಶಿಷ್ಯನಾದ ಜೈಮಿನಿ ಮುನಿಯಿಂದ ಭಾರತಕಥೆಯನ್ನು ಕೇಳಿ ಆ ರೋಗವನ್ನು ಪರಿಹರಿಸಿಕೊಂಡನು (ಜನಂ= ಜನರಿಗೆ ವಿಜಯ= ಜಯವನ್ನು ಕೊಡಿಸುವವನು).

ಒಮ್ಮೆ ಇವನು ಸತ್ರಯಾಗವನ್ನು ನಡೆಸುತ್ತಿದ್ದಾಗ ಶ್ರುತಸೇನ, ಉಗ್ರಸೇನ, ಭೀಮಸೇನರೆಂಬ ಜನಮೇಜಯನ ತಮ್ಮಂದಿರು ಸರಮೆಯೆಂಬ ದೇವಶುನಿಯ (ದೇವ ಲೋಕದ ಹೆಣ್ಣುನಾಯಿ). ಮರಿಯಾದ ಒಂದು ಶುನಕವು ಯಾಗಶಾಲೆಯನ್ನು ಪ್ರವೇಶಿಸಲು ಅದನ್ನು ಹೊಡೆದಟ್ಟಿದರು. ಇದನ್ನು ಕೇಳಿ ಕೆರಳಿದ ಸರಮೆಯು - 'ನಿರಪರಾಧಿಯಾದ ತನ್ನ ಮಗುವನ್ನು ಹೊಡೆದುದರಿಂದ ನಿನಗೆ ಆಕಸ್ಮಿಕವಾದ ಭಯವೊಂದು ಸಂಭವಿಸಲಿ' ಎಂದು ಶಾಪವಿತ್ತಳು. ಜನಮೇಜಯನು ಶ್ರುತವರ್ಮನ ಮಗನಾದ ಸೋಮಶ್ರವನ ಪೌರೋಹಿತ್ಯದಲ್ಲಿ ಈ ಶಾಪವನ್ನು ಪರಿಹರಿಸಿಕೊಂಡನು (ಮ.ಆ.). ೨. ಚಂದ್ರ ವಂಶದ ದುಷ್ಯಂತ ರಾಜನ ಹಿರಿಯ ಹೆಂಡತಿಯಾದ ಲಾಕ್ಷಿ ಅಥವಾ ಲಕ್ಷಣೆಯ ಮಗ. ೩. ಸೂರ್ಯ ವಂಶದ ಸುಮತಿರಾಜನ ಮಗ. ಈತನು ಮೂರೇದಿನಗಳಲ್ಲಿ ಜಗತ್ತನ್ನೆಲ್ಲಾ ಜಯಿಸಿದ ಚಕ್ರವರ್ತಿ. ೪. ಚಂದ್ರವಂಶದ ಕುರುರಾಜನ ಮಗ ಈತನ ತಾಯಿ ವಾಹಿನಿ. ಈತನಿಗೆ ಧೃತರಾಷ್ಟ್ರ ಮೊದಲಾದವರು ಮಕ್ಕಳಾಗಿದ್ದರು. ೫. ಚಂದ್ರ ವಂಶದ ಪುರುರಾಜನ ಮಗ. ಈತನ ತಾಯಿ ಕೌಸಲ್ಯೆ; ಹೆಂಡತಿ ಸುನಂದೆ; ಮಗ ಪ್ರಾಚೀನ್ವಂತ. ಈತನಿಗೆ ಗಾರ್ಗ್ಯಮುನಿಯ ಮಗನನ್ನು ಹಿಂಸಿಸಿದುದರಿಂದ ಬ್ರಹ್ಮಹತ್ಯಾದೋಷವು ಪ್ರಾಪ್ತವಾಯಿತು. (ಹರಿ.,ಬ್ರಹ್ಮಪು.). ೬. ಪರ್ವತದೇಶದ ಒಬ್ಬರಾಜ . ಈತನು ಪಾಂಡವ ಪಕ್ಷದವನು. ದುರ್ಯೋಧನನ ತಮ್ಮನಾದ ದುರ್ಮುಖನಿಂದ ಹತನಾದನು. ೭.ಪಾಂಚಾಲದ ಒಬ್ಬ ಕ್ಷತ್ರಿಯ. ೮. ಈ ರಾಜನಿಗೆ ಮುಂದೆ ಒಂದು ಕುದುರೆಯಿಂದ ಬರತಕ್ಕ ಕಷ್ಟಗಳನ್ನು ವೇದವ್ಯಾಸರು ತಿಳಿಸಿದ್ದರೂ ಈತನು ಆ ಮಾತನ್ನು ಅಲಕ್ಷ್ಯ ಮಾಡಲು ಒಂದು ದಿನ ಆ ಕುದುರೆ ಮಂದರಾಚಲಕ್ಕೆ ಈತನನ್ನು ಹೊತ್ತು ತಂದಿತು. ರಾಜನು ಅಲ್ಲಿದ್ದ ದೇವತಾ ಸ್ತ್ರೀಯನ್ನು ಅರಮನೆಗೆ ತಂದು ಪುಕಾಮೇಷ್ಟಿಯಾಗವನ್ನು ಮಾಡಿದನು. ಅದರಲ್ಲಿ ಋತ್ವಿಜರು ಸಾಯಲು ರೀಜನು ಆ ಬ್ರಹ್ಮಹತ್ಯೆಯ ಪರಿಹಾರಕ್ಕಾಗಿ ಭಾರತ ಕಥೆಯನ್ನು ಕೇಳಿದನು (ಮಶಾಂ.,ಅನು.,ಕ., ದೇವಿಭಾ.ಥೆ., ಬ್ರಹ್ಮಪು.).

ಜನಸ್ಥಾನ - ರಾಕ್ಷಸರು ವಾಸಮಾಡುತ್ತಿದ್ದ ದಂಡಕಾರಣ್ಯದ ಒಂದು ಭಾಗ. ಈಗಿನ ಔರಂಗಾಬಾದಿನಲ್ಲಿ ಹಿಂದೆ ಇದ್ದ ಅರಣ್ಯ. ಇಲ್ಲಿ ಖರದೂಷಣತ್ರಿಶಿರರು ಹದಿನಾಲ್ಕು ಸಾವಿರ ಮಂದಿ ರಾಕ್ಷಸರೊಡನೆ ವಾಸವಾಗಿದ್ದರು. ಶೂರ್ಪನಖಿಯ ಮಾನಭಂಗವಾದ ಮೇಲೆ ಶ್ರೀರಾಮನು ಇಲ್ಲೇ ರಾಕ್ಷಸರನ್ನೆಲ್ಲಾ ಕೊಂದು ಆ ಅರಣ್ಯವನ್ನು ಧರ್ಮಾರಣ್ಯವನ್ನಾಗಿ ಮಾಡಿದನು (ಮ.ವ.ಶ.,ರಾಮಾ.ಅರ.).

ಜನಲೋಕ - ೧. ಭೂ,ಭುವ,ಸುವ, ಮಹ ಎಂಬ ಲೋಕಗಳಿಗಿಂತ ಮೇಲೆ ಇರುವ ಒಂದು ಲೋಕ. ಇಲ್ಲಿ ಸನಕಾದಿಮುನಿಗಳು ವಾಸಮಾಡುತ್ತಾರೆ (ದೇವಿಭಾ.).

ಜಂತು - ಸೋಮಕರಾಜನ ಪುತ್ರ. ಈತನನ್ನು ಒಮ್ಮೆ ಇರುವೆ ಕಚ್ಚಲು ಅದಕ್ಕಾಗಿ ತುಂಬಾ ಅತ್ತನು. ಇದರಿಂದ ಇವನು ನಿಷ್ಪ್ರಯೋಜಕನೆಂದು ರಾಜನು ಪುರೋಹಿತನ ಮಾತಿನಂತೆ ಈತನನ್ನೇ ಯಜ್ಞಪಶುವನ್ನಾಗಿ ಅಗ್ನಿಗೆ ಆಹುತಿ ಕೊಡಲು ಮುಂದೆ ಸೋಮಕರಾಜನಿಗೆ ಆತನ ಪತ್ನಿಯರಲ್ಲಿ ನೂರು ಮಂದಿ ಮಕ್ಕಳು ಹುಟ್ಟಿದರು. ಇವರಲ್ಲಿ ಹಿರಿಯವನೇ ಮೃತಪಟ್ಟ ಜಂತುಕುಮಾರನು. ಇವನ ದೇಹದ ಎಡಪಾರ್ಶದಲ್ಲಿ ಸುವರ್ಣರೇಖೆಯಿತ್ತು. ಮುಂದೆ ಆಭಿಚಾರಿಕ ಪ್ರಯೋಗದಿಂದ ಇಷ್ಟಿಮಾಡಿ ಶಿಶುಹತ್ಯೆಗೆ ಕಾರಣವಾದ ಆ ಬ್ರಾಹ್ಮಣನು ಸೋಮಕರಾಜನೊಡನೆ ಸ್ವಲ್ಪಕಾಲ ನರಕವನ್ನು ಅನುಭವಿಸಿದನು (ಮ.ವ.).

ಜಮದಗ್ನಿ - ಋಷಿಯೊಬ್ಬ. ಈತನ ಪತ್ನಿ ಪ್ರಸೇನಜಿತ್ತಿನ ಮಗಳಾದ ರೇಣುಕೆ. ಈತನು ಋಚೀಕನೆಂಬ ಮುನಿಯ ಮಗ. ಈತನ ತಾಯಿ ಗಾಧಿರಾಜನ ಮಗಳಾದ ಸತ್ಯವತಿ. ಜಮದಗ್ನಿಯು ವಿಶ್ವಾಮಿತ್ರನ ಸೋದರಳಿಯ. ಈ ಮುನಿಗೆ ರುಮಣ್ವಂತ, ಸುಷೇಣ, ವಸು, ವಿಶ್ವಾವಸು, ಪರುಶುರಾಮರೆಂಬ ಐವರು ಮಕ್ಕಳು. ನೋ.-ಋಚೀಕ. ರೇಣುಕೆ ಒಮ್ಮೆ ಸ್ನಾನಕ್ಕಾಗಿ ನದೀತೀರಕ್ಕೆ ಹೋಗಿರಲು ಅಲ್ಲಿ ಜಲಕ್ರೀಡೆಯಲ್ಲಿ ತೊಡಗಿದ್ದ ಚಿತ್ರರಥನನ್ನು ಕಂಡು ಮೋಹಿಸಿದಳು. ಇದನ್ನು ಕಂಡ ಜಮದಗ್ನಿಯು ರೇಣುಕೆಯನ್ನು ಕೊಲ್ಲುವಂತೆ ಮಕ್ಕಳಿಗೆ ಆಜ್ಞಾಪಿಸಲು ಉಳಿದ ಸೋದರರು ಸುಮ್ಮನಿರುವುದನ್ನು ಕಂಡು ಪರುಶುರಾಮನು ತಾಯಿಯನ್ನು ಕೊಂದು, ತಂದೆಯನ್ನು ಮೆಚ್ಚಿಸಿ ಪುನಃ ತಾಯಿಯನ್ನು ಬದುಕಿಸುವಂತೆ ಪ್ರಾರ್ಥಿಸಿದನು. ಮುನಿಯ ಅನುಗ್ರಹದಿಂದ ರೇಣುಕೆಯು ಬದುಕಿದಳು. ಮುಂದೆ ಪರುಶುರಾಮನು ಕಾರ್ತವೀರ್ಯನನ್ನು ಕೊಂದ ರೊಚ್ಚನ್ನು ತೀರಿಸಲು ಪರುಶುರಾಮನು ಇಲ್ಲದೆ ಇರುವಾಗ ಆ ರಾಜನ ಮಕ್ಕಳು ಆಶ್ರಮಕ್ಕೆ ಬಂದು ಜಮದಗ್ನಿಯನ್ನು ಕೊಂದರು. ಈತನು ವಿಶ್ವಾಮಿತ್ರ ವಸಿಷ್ಠರಂತೆ ಗೋತ್ರಪ್ರವರ್ತಕನಾದ ಮಹರ್ಷಿ. ನೋ.- ನಕುಲ, ಕಾರ್ತವೀರ್ಯಾರ್ಜುನ (ಮ.ಆ.,ಅನು.,ವ.).

ಜಂಬೂ - ೧. ಮೇರು ಪರ್ವತದಲ್ಲಿ ಹುಟ್ಟಿದ ನದಿ. ೨. ಮೇರುವಿನ ದಕ್ಷಿಣ ಪಾರ್ಶ್ವದಲ್ಲಿದ್ದ ಜಂಬೂವೃಕ್ಷ; ಏಷ್ಯಾಖಂಡ. ಜಂಬೂದ್ವೀಪವನ್ನು ಮೊದಲು ಪ್ರಿಯವ್ರತನ ಮಗನಾದ ಅಗ್ನೀಧ್ರನು ಪಾಲಿಸುತ್ತಿದ್ದನು. ಈತನು ತನ್ನ ಒಂಬತ್ತು ಮಕ್ಕಳಿಗೆ ಜಂಬೂದ್ವೀಪವನ್ನು ಹಂಚಿಕೊಟ್ಟನು. ಈ ಒಂಬತ್ತು ಖಂಡಗಳು ಆಗ ಅಜನಾಬ ವರ್ಷ (ಭಾರತವರ್ಷ). ಕಿಂಪುರುಷವರ್ಷ, ಹರಿವರ್ಷ, ಭದ್ರಾಶ್ವವರ್ಷ, ರಮ್ಯಕವರ್ಷ, ಹಿರಣ್ಮಯವರ್ಷ, ಕುರುವರ್ಷ, ಕೇತುಮಾಲವರ್ಷ, ಇಲಾವೃತವರ್ಷಗಳೆಂಬ ಹೆಸರಿನಿಂದ ಪ್ರಸಿದ್ಧವಾಗಿದ್ದವು. ಜಂಬೂದ್ವೀಪವನ್ನು ಸುದರ್ಶನದ್ವೀಪವೆಂದೂ ಹೇಳುತ್ತಾರೆ (ಮ.ಭಿ.,ಭಾಗ.,ವಾಯುಪು.,ವಿಷ್ಣುಪು.). ನೋ. - ಶಕ.

ಜಂಬೂನದಿ - ಜಂಬೂಫಲದ (ನೇರಳೇ ಹಣ್ಣಿನ)ರಸದಿಂದ ಹರಿಯುವ ನದಿ. ಇದರ ತೀರದಲ್ಲಿ ಚಿನ್ನ ದೊರೆಯುತಿತ್ತು. ಚಿನ್ನಕ್ಕೆ ಜಾಂಬೂನದವೆನ್ನುತ್ತಾರೆ (ಮ.ಅನು.).

ಜಂಬೂಮಾರ್ಗ - ಒಂದು ಕ್ಷೇತ್ರ. ಪುಷ್ಕರ ಕ್ಷೇತ್ರದ ಸಮೀಪದಲ್ಲಿದೆ. ಪಾಂಡವರು ಅರಣ್ಯವಾಸಕಾಲದಲ್ಲಿ ಇಲ್ಲಿಗೂ ಬಂದಿದ್ದರು. (ಮ.ವ.)

ಜಂಬೂವನ- ಮೇರುಪರ್ವತದಲ್ಲಿದ್ದ ಅರಣ್ಯ. ಜಂಬೂನದಿಯ ದಡದಲ್ಲಿದೆ. ಇದು ಸ್ವರ್ಗಕ್ಕೆ ಸಮಾನವಾದ ಪ್ರದೇಶ.

ಜಂಬ - ೧. ರಾಕ್ಷಸನೊಬ್ಬ. ತಾರಕಾಸುರನ ಮಂತ್ರಿ. ಹಿರಣ್ಯಕಶಿಪುವಿನ ಪತ್ನಿ ಕಯಾಧು ಈತನ ಮಗಳು. ಈ ರಾಕ್ಷಸನು ವಿಷ್ಣುವಿನಿಂದ ಹತನಾದನು. ೨.ಒಬ್ಬ ರಾಜ. ಇವನು ಯಜ್ಞ ಮಾಡುವಾಗ ಇವನ ಯಜ್ಞವನ್ನು ಕೆಡಿಸಿ ಋತ್ವಿಕ್ಕುಗಳನ್ನು ಓಡಿಸಿ, ಪರುಶುರಾಮನು ಇವನನ್ನು ಕೊಂದನು. (ಮ.ವ.,ಭಾಗ.).

ಜಯ - ಮಹಾಭಾರತದ ಹೆಸರು (ಮ.ಆ.). ೨. ಧೃತರಾಷ್ಟ್ರನ ಮಗ. ಇವನು ಭೀಮನಿಂದ ಹತನಾದನು (ಮ.ಆ.). ಅಜ್ಞಾತವಾಸಕಾಲದಲ್ಲಿ ಯುಧಿಷ್ಠರನ ಗುಪ್ತನಾಮ (ಮ.ವಿ.). ೪. ಯಮನ ಸಭೆಯಲ್ಲಿದ್ದ ಕ್ಷತ್ರಿಯನೊಬ್ಬ. ೫.ಪಾಂಡವರ ಪಕ್ಷದಿಂದ ಭಾರತ ಯುದ್ಧದಲ್ಲಿ ಹೋರಾಡಿದ ಕ್ಷತ್ರಿಯನೊಬ್ಬ ಇವನು ಕರ್ಣನಿಂದ ಮಡಿದನು. ೬. ಶುಕಮಹರ್ಷಿಗೆ ಪೀವರಿ ಎಂಬ ಕನ್ಯೆಯಲ್ಲಿ ಜನಿಸಿದ ಕಿರಿಯ ಮಗ. ಪೀವರಿಯು ವಿಭ್ರಾಜರೆಂಬ ಪಿತೃದೇವತೆಗಳ ಮಗಳು. ಈಕೆಗೆ ಕೃಷ್ಣ, ಗೌರಪ್ರಭ, ಶಂಭು, ಭೂರಿಶ್ರುತ ಮತ್ತು ಜಯತೆಂಬ ಐವರು ಮಕ್ಕಳು. ನೋ.- ಪೀವರಿ ೭. ಕರ್ದಮ ಪ್ರಜಾಪತಿಯ ಮಗ. ಈತನ ತಾಯಿ ತೃಣಬಿಂದುವಿನ ಮಗಳಾದ್ದ ದೇವಹೂತಿ. ಈಕೆಗೆ ಜಯ ಮತ್ತು ವಿಜಯರೆಂಬ ಇಬ್ಬರು ಮಕ್ಕಳು. ಮುಂದೆ ಇವರೇ ವಿಷ್ಣುವಿನ 'ಅರಮನೆಯ'

ದ್ವಾರಪಾಲಕರಾದರು. ನೋ.- ಗಂಡಕಿ. ಕಪಿಲ ಮುನಿಯು ಇವರ ಸಹೋದರ. ದೇವಹೂತಿಯ ಸಹೋದರಿಯಾದ ಗೋ ಎಂಬುವಳು ಕುಬೇರನ ತಾಯಿ. ಗಜೇಂದ್ರ ಮೋಕ್ಷಕಾಲದಲ್ಲಿ ಮೊಸಳೆಗೂ ಸದ್ಗತಿಯಾದುದು ಮಾತ್ರವಲ್ಲದೆ ಜಯವಿಜಯರಾದ ಇಬ್ಬರಿಗೂ ಹರಿಯು ಸಾರೂಪ್ಯ ಮುಕ್ತಿಯನ್ನನುಗ್ರಹಿಸಿ ತನ್ನ ಅರಮನೆಯ ದ್ವಾರಪಾಲಕರಾಗಿಟ್ಟುಕೊಂಡನು. ಇವರಿಬ್ಬರು ದ್ವಾರಪಾಲಕರಾಗಿರುವಾಗ ಸನಕ ಸನಂದನ ಮೊದಲಾದ ಮುನಿಗಳು ಶ್ರೀಮನ್ನಾರಾಯಣನ ಸಂದರ್ಶನಕ್ಕೆ ಬರಲು ಜಯವಿಜಯರು ದೇವದೇವನ ಸಾನಿಧ್ಯಕ್ಕೆ ಅವರನ್ನು ಬಿಡದೆ ತಡೆದರು. ಇದರಿಂದ ಕೋಪಗೊಂಡ ಮುನಿಗಳು ಅವರಿಬ್ಬರಿಗೂ ರಾಕ್ಷಸರಾಗಿ ಹುಟ್ಟುವಂತೆ ಶಾಪವಿತ್ತು, ದೇವದರ್ಶನಮಾಡಿ ನಡೆದುಬಿಟ್ಟರು. ಇವರಿಬ್ಬರು ಮೊದಲನೇಜನ್ಮದಲ್ಲಿ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪುಗಳಾಗಿ ಹುಟ್ಟಿ ವರಾಹಸ್ವಾಮಿ ಮತ್ತು ನರಸಿಂಹನಿಂದ ಮೃತರಾದರು. ಎರಡನೇ ಜನ್ಮದಲ್ಲಿ ರಾವಣ ಕುಂಭಕರ್ಣರಾಗಿ ಹುಟ್ಟಿ ಶ್ರೀರಾಮನಿಂದ ವಧಿಸಲ್ಪಟ್ಟರು. ಮೂರನೇ ಜನ್ಮದಲ್ಲಿ ಶಿಶುಪಾಲ ದಂತವಕ್ರರಾಗಿ ಶ್ರೀಕೃಷ್ಣನಿಂದ ಕೊಲ್ಲಲ್ಪಟ್ಟು ಶಾಪವಿಮೋಚನೆ ಹೊಂದಿ ವೈಕುಂಠವನ್ನು ಸೇರಿದರು. ೮. ಉತ್ತಾನರಾಜನ ಮಗನಾದ ಶಿಷ್ಟರಾಜನಿಂದ ಅಗ್ನಿಪುತ್ರಿಯಾದ ಸುಚ್ಛಾಯೆಯಲ್ಲಿ ಜನಿಸಿದವನು. ಇವನಿಗೆ ಐವರು ಸಹೋದರರು ಇದ್ದರು (ಮತ್ಸ್ಯಪು.). ೯. ಯದುವಂಶದ ಸಾತ್ಯಕಿಯ ಹಿರಿಯ ಮಗ. ಇವನಿಗೆ ಒಂಬತ್ತು ಮಂದಿ ಸಹೋದರರಿದ್ದರು. ಇವರೆಲ್ಲಾ ಭೀಷ್ಮನ ಸೇನಾಧಿಪತ್ಯದಕಾಲದಲ್ಲಿ ಭೂರಿಶ್ರವನಿಂದ ಹತರಾದರು. ೧೦. ವಸುದೇವನ ಸಹೋದರರಲ್ಲಿ ಒಬ್ಬನಾದ ಕಂಕನಿಂದ ಕರಣಿಕೆ ಎಂಬುವಳಲ್ಲಿ ಜನಿಸಿದ ಕಿರಿಯ ಮಗ. ೧೧. ಶ್ರೀಕೃಷ್ಣನ ಒಬ್ಬ ಮಗ. ಇವನ ತಾಯಿ ಭದ್ರೆ. ಇವನಿಗೆ ಸಂಗ್ರಾಮಜಿತ್ತು, ಬೃಹತ್ಸೇನ, ಶೂರ, ಪ್ರಹರಣ, ಅರಿಜಿತ ಎಂಬ ಅಣ್ಣಂದಿರೂ, ಸುಭದ್ರ, ರಾಮ , ಆಯು, ಸತ್ಯಕರ ಎಂಬ ತಮ್ಮಂದಿರೂ ಒಬ್ಬಳು ಸಹೋದರಿಯೂ ಇದ್ದರು.

ವೈಕುಂಠಕ್ಕೆ ಅಶ್ವಿನಿ ದೇವತೆಗಳು ಬಂದಾಗ ಜಯವಿಜಯರು ನಾರಾಯಣನ ಸಾನಿಧ್ಯಕ್ಕೆ ಹೋಗದಂತೆ ತಡೆಯಲು ಅವರು ಜಯವಿಜಯರನ್ನು ರಾಕ್ಷಸರಾಗಿ ಹುಟ್ಟುವಂತೆ ಶಾಪವಿತ್ತರು. ಜಯವಿಜಯರು ಅಶ್ವಿನಿ ದೇವತೆಗಳಿಗೆ ಒಂದು ಜನ್ಮದಲ್ಲಿ ರಾಕ್ಷಸರಾಗುವಂತೆ ಶಾಪ ಕೊಡಲು ಅವರು ಅಹಿರಾವಣ ಮತ್ತು ಮಹಿರಾವಣರಾಗಿ ಹುಟ್ಟಿ ಶ್ರೀರಾಮನಿಂದ ಕೊಲ್ಲಲ್ಪಟ್ಟರು. (ಆನಂ.ರಾ.ಸ್ಕಾಂಪು., ಭಾಗ.,ಮ.ಸ್ವ.,ವಿ.,ಭೀ.,ದ್ರೋ.,ಕ., ಆ., ಮತ್ಸ್ಯಪು., ದೇವಿಭಾ.).

ಜಯತ್ಸೇನ - ೧. ಅಜ್ಞಾತವಾಸ ಕಾಲದಲ್ಲಿ ನಕುಲನ ಗುಪ್ತನಾಮ. ಇವನಿಗೆ ಆ ಕಾಲದಲ್ಲಿ ದಾಮಗ್ರಂಥಿ ಎಂಬ ಹೆಸರಿತ್ತು. ಇವನು ಆಗ ಅಶ್ವಶಾಲಾಧ್ಯಕ್ಷನಾಗಿದ್ದನು. ಗ್ರಂಥಿಕನೆಂದರೂ ಇವನೇ (ಮ.ವಿ.). ೨.ಚಂದ್ರವಂಶದ ಸಾರ್ವಭೌಮರಾಜನಿಂದ ಕೇಕಯ ರಾಜಪುತ್ರಿಯಾದ ಸುಂದರಿಯಲ್ಲಿ ಜನಿಸಿದವ. ಈತನ ಪತ್ನಿ ಸುಶ್ರವೆ. ಮಗ ಅಪರಾಚೀನ. ೩.ಧೃತರಾಷ್ಟ್ರನ ಮಗ (ಮ.ಆ.). ಇವನು ಭೀಮನಿಂದ ಹತನಾದ. ೪.ಮಗಧದೇಶದ ರಾಜ. ಇವನು ಕೌರವಪಕ್ಷದಲ್ಲಿ ಹೋರಾಡಿ ಅಭಿಮನ್ಯುವಿನಿಂದ ಹತನಾದನು (ಮ.ಭೀ.).

ಜಯದತ್ತ - ಬ್ರಾಹ್ಮಣ. ಇವನು ಆಟಕ್ಕಾಗಿ ಶಿವಪೂಜೆಯನ್ನು ಮಾಡಿ ಮುಂದಿನ ಜನ್ಮದಲ್ಲಿ ವಿದಿಶಾನಗರಿಯಲ್ಲಿ ಪುನಃ ಬ್ರಾಹ್ಮಣನಾಗಿ ಹುಟ್ಟಿದನು. ಆಗ ಶ್ರದ್ಧೆಯಿಂದ ಶಿವಪೂಜೆಯನ್ನು ಮಾಡಿ ಮೂರನೇ ಜನ್ಮದಲ್ಲಿ ಜಯದತ್ತನೆಂಬ ಹೆಸರಿನಿಂದ ಪ್ರತಿಷ್ಠಾನಪುರದ ಚಕ್ರವರ್ತಿಯಾದನು. ಆ ಕಾಲದಲ್ಲಿ ಅನೇಕ ಸ್ತ್ರೀಯರ ಪಾತಿವ್ರತ್ಯಭಂಗಮಾಡಿ ಶಿವನಿಂದ ಆಮೆಯಾಗುವಂತೆ ಶಾಪ ಪಡೆದ. ಮುಂದೆ ಇಂದ್ರದ್ಯುಮ್ನನೆಂಬ ರಾಜನ ಮಾಸಿದ ಕೀರ್ತಿಯನ್ನು ಅಕೂಪಾರವೆಂಬ ಈ ಆಮೆಯು ಹೊಗಳಿ ಶಾಪವಿಮೋಚನೆಯನ್ನು ಹೊಂದಿತು. ಈ ಆಮೆಗೆ ಮಂಥರಕವೆಂಬ ಹೆಸರೂ ಇದೆ (ಸ್ಕಾಂ.ಪು.). ಬ್ರಾಹ್ಮಣನಿಗೆ ಶಾಂಡಿಲ್ಯನೆಂಬ ಹೆಸರು ಇತ್ತು. ನೊ. - ಮಂಥರಕ. ಶಾಂಡಿಲ್ಯ.

ಜಯದ್ಬಲ - ಅಜ್ಞಾತವಾಸ ಕಾಲದಲ್ಲಿ ಸಹದೇವನ ಗುಪ್ತವಾದ ಹೆಸರು. ಇವನು ಆ ಕಾಲದಲ್ಲಿ ತಂತಿಪಾಲನೆಂಬ ಹೆಸರಿನಿಂದ ವಿರಾಟನಗರಿಯಲ್ಲಿ ಗೋರಕ್ಷಕನಾಗಿದ್ದ (ಮ.ವಿ.).

ಜಯದ್ರಥ - ಸಿಂಧೂದೇಶಾಧಿಪನಾದ ವೃದ್ಧಕ್ಷತ್ರನ ಮಗ. ಈತನ ಪತ್ನಿ ಧೃತರಾಷ್ಟ್ರನ ಮಗಳಾದ ದುಶ್ಶಳೆ. ಈತನ ಮಕ್ಕಳಲ್ಲಿ ಒಬ್ಬನನ್ನು ಅರ್ಜುನನು ದ್ರೌಪದಿಯ ಸ್ವಯಂವರ ಕಾಲದಲ್ಲಿ ಕೊಂದನು. ಇನ್ನೊಬ್ಬನಾದ ಸುರಸನು ಅಶ್ವಮೇಧಯಾಗಾರ್ಥವಾಗಿ ಕಪ್ಪ ಪಡೆಯಲು ಅರ್ಜುನನು ದಂಡೆತ್ತಿಬಂದಿರುವನೆಂಬುದನ್ನು ಕೇಳಿ ಭಯದಿಂದಲೇ ಮೃತಿಹೊಂದಿದನು. ಪಾಂಡವರು ಕಾಮ್ಯಕವನದಲ್ಲಿ ಇರುವಾಗ ಒಮ್ಮೆ ಬೇಟೆಗೆ ಹೋಗಿರುವ ವೇಳೆ ಸಾಳ್ವರಾಜನ ಪುತ್ರಿಯ ಸ್ವಯಂವರಕ್ಕಾಗಿ ಹೊರಟ ಜಯದ್ರಥನು ತೃಣಬಿಂದು ಋಷಿಗಳ ಆಶ್ರಮಕ್ಕೆ ಬಂದು ಅಲ್ಲಿದ್ದ ದ್ರೌಪದಿಯನ್ನು ಕಂಡು ಮೋಹಿಸಿ ಆಕೆಯನ್ನು ಅಪಹಾರ ಮಾಡುತ್ತಿರಲು ಭೀಮಾರ್ಜುನರ ಕೈಗೆ ಸಿಕ್ಕಿ ಸೋತು ಅಪಮಾನಿತನಾದನು. ಇದರಿಂದ ಕ್ರೋಧಗೊಂಡ ಜಯದ್ರಥನು ಗಂಗಾದ್ವಾರದಲ್ಲಿ ಕೈಲಾಸನಾಥನನ್ನು ಕುರಿತು ತಪಸ್ಸು ಮಾಡಿ ಅರ್ಜುನನನ್ನು

ಬಿಟ್ಟು ಉಳಿದ ಪಾಂಡವರನ್ನು ಒಂದು ದಿನ ಯುದ್ಧರಂಗದಲ್ಲಿ ತಡೆಯುವ ಶಕ್ತಿಯನ್ನು ಅವನಿಂದ ವರವಾಗಿ ಪಡೆದನು. ಜಯದ್ರಥನು ಸ್ವಯಂವರಕ್ಕೆ ಹೊರಟಾಗ ಸುರಸೆಯ ಪುತ್ರನಾದ ಕೋಟಿಕಾಸ್ಯನೆಂಬ ರಾಜನೂ, ತ್ರಿಗರ್ತದೇಶಾಧಿಪನಾದ ಕ್ಷೇಮಂಕರನೂ, ಇಕ್ಷ್ವಾಕು ವಂಶದ ಸುಬಲ ರಾಜಪುತ್ರನೂ ಆತನನ್ನು ಅನುಸರಿಸಿದ್ದರು. ಅಲ್ಲದೆ ಅಂಗಾರಕ, ಕುಂಜರ, ಗುಪ್ತಕ, ಶತ್ರುಂಜಯ, ಸುಪ್ರವೃದ್ಧ, ಭಯಂಕರ, ಭ್ರಮರ, ರವಿ, ಪ್ರತಾಪ, ಕುಹನ, ಶೂರ ಮೊದಲಾದ ಹನ್ನೆರಡು ಮಂದಿ ಮಹಾರಥಿಕರು ಹೊರಟಿದ್ದರು. ಬಲಾಹಕ ಮೊದಲಾದವರು ಈತನ ತಮ್ಮಂದಿರು. ಭಾರತ ಯುದ್ಧದ ಹದಿಮೂರನೆಯ ದಿನ ದ್ರೋಣಾಚಾರ್ಯರು ಒಡ್ಡಿದ ಚಕ್ರವ್ಯೂಹವನ್ನು ಭೀಮಾದಿಗಳು ಪ್ರವೇಶಿಸಲಾರದೆ ಬಾಗಿಲಲ್ಲಿ ನಿಂತ ಜಯದ್ರಥನಿಂದ ಪರಾಜಿತರಾದರು. ಒಳಗೆ ಪ್ರವೇಶಿಸಿದ್ದ ಅಭಿಮನ್ಯುವನ್ನು ಷಡುರಥಿಕರು ಮುತ್ತಿ ಸೋತು ಪಲಾಯನ ಮಾಡಲು, ಕರ್ಣನು ಮೋಸದಿಂದ ಅಭಿಮನ್ಯುವಿನ ಬಿಲ್ಲು ಮತ್ತು ಹಸ್ತಗಳನ್ನು ಖಂಡಿಸಿದರು. ಮುಂದೆ ಅಭಿಮನ್ಯುವಿನ ಮರಣವಾಗಲು ಈ ಅಪರಾಧವು ಜಯದ್ರಥನ (ಸೈಂಧವನ) ತಲೆಯ ಮೇಲೆ ಬಿತ್ತು. ಮರುದಿನ ಅರ್ಜುನನು ಯುದ್ಧರಂಗದಲ್ಲಿ ಅವನನ್ನು ಕೊಂದನು (ಮ.ಆ.,ದ್ರೋ.,ವ.,ಅಶ್ವ.).

ಜಯಂತ - ೧. ಪಾಂಚಾಲರಲ್ಲೊಬ್ಬ. ಕ್ಷತ್ರಿಯ. ಇವನು ಮಹಾರಥ. ೨. ಇಂದ್ರನ ಮಗ. ಈತನ ತಾಯಿ ಪೌಲೋಮಿ ಅಥವಾ ಶಚಿ. ಕುದುರೆಗಳ ಏರಾಟದಲ್ಲಿ ಇವನು ಸಮರ್ಥನು. ಈತನ ಸೋದರಿಯ ಹೆಸರು ಜಯಂತಿ (ಮ.ಆ.,ಉ.).

ಜಯಂತಿ - ಶುಕ್ರಾಚಾರ್ಯನ ಪತ್ನಿ; ದೇವೇಂದ್ರನ ಮಗಳು. ಶುಕ್ರನು ದೈತ್ಯರ ಉದ್ಧಾರಕ್ಕಾಗಿ ಶಿವನಿಂದ ಮೃತಸಂಜೀವಿನಿ ವಿದ್ಯೆಯನ್ನು ಪಡೆಯಲು ಕೈಲಾಸಕ್ಕೆ ಹೊರಟುಹೋದನು. ಅಲ್ಲಿ ಶಿವನನ್ನು ಪ್ರಾರ್ಥಿಸಿ ಮೆಚ್ಚಿಸಲು ಅವನು ಶುಕ್ರನೊಡನೆ 'ನೀನು ಸಾವಿರ ವರ್ಷಕಾಲ ಧೂಮಪಾನ ಮಾಡುತ್ತ ತಪಸ್ಸು ಮಾಡಿದರೆ ನಿನ್ನ ಮನೋಭೀಷ್ಟವು ಸಂಪೂರ್ಣವಾಗುವುದು' ಎಂದನು. ಶುಕ್ರನು ಆ ವಿದ್ಯೆಯ ಸಿದ್ಧಿಗಾಗಿ ತಪಸ್ಸಿಗೆ ಆರಂಭಿಸಿದನು. ಇತ್ತ ದೇವ - ದೈತ್ಯರಿಗೆ ಯುದ್ಧವು ಆರಂಭವಾಯಿತು. ದೈತ್ಯರು ದೇವತೆಗಳ ಹೊಡೆತವನ್ನು ಸಹಿಸಲಾರದೆ ಭೃಗುಮಹರ್ಷಿಯ ಆಶ್ರಮವನ್ನು ಹೊಕ್ಕರು. ದೇವತೆಗಳು ಅವರನ್ನು ಬೆನ್ನಟ್ಟುತ್ತ ಆಶ್ರಮವನ್ನು ಹೊಕ್ಕು ಸಂಹಾರಕಾರ್ಯ ನಡೆಸಿದರು. ಆಗ ಭೃಗು ಮಹರ್ಷಿಯ ಪತ್ನಿ ಖ್ಯಾತಿಯು ದೇವತೆಗಳನ್ನು ತಡೆದಳು. ವಿಷ್ಣುವು ತನ್ನ ಚಕ್ರಾಯುಧದಿಂದ ಖ್ಯಾತಿಯ ತಲೆಯನ್ನು ಕತ್ತರಿಸಿದನು. ಇದರಿಂದ ಭೃಗುಮುನಿಯು ಕೋಪಗೊಂಡು ವಿಷ್ಣುವಿಗೆ ಗರ್ಭವಾಸದ ದುಃಖವು

ಪ್ರಾಪ್ತವಾಗುವಂತೆಯೂ, ಪತ್ನಿವಿಯೋಗದ ದುಃಖವನ್ನು ಅನುಭವಿಸುವಂತೆಯೂ ಶಾಪವಿತ್ತನು. ಇತ್ತ ದೇವೇಂದ್ರನು ಶುಕ್ರನ ತಪಸ್ಸಿಗೆ ವಿಘ್ನವನ್ನೊದಗಿಸುವಂತೆ ತನ್ನ ಮಗಳಾದ ಜಯಂತಿಗೆ ತಿಳಿಸಿ ಶುಕ್ರನ ಬಳಿಗೆ ಕಳುಹಿಸಿದನು. ಆಕೆಯು ಶುಕ್ರನನ್ನು ಮೆಚ್ಚಿಸಿ ಆತನ ಪತ್ನಿಯಾದಳು. ಮುಂದೆ ಶುಕ್ರನು ತನ್ನ ಯೋಗ ಮಹಿಮೆಯಿಂದ ಅದೃಶ್ಯನಾಗಿ ಆಕೆಯೊಡನೆ ಪ್ರಾಪಂಚಿಕ ಸುಖವನ್ನು ಅನುಭವಿಸುತ್ತಿದ್ದನು. ಇತ್ತ ಬೃಹಸ್ಪತಿಯು ತಾನೇ ಶುಕ್ರನ ವೇಷದಿಂದ ದೈತ್ಯರಿಗೆಲ್ಲ ನಾಸ್ತಿಕ ಮತವನ್ನು ಬೋಧಿಸುತ್ತ ಅವರನ್ನು ದುರ್ಬಲರನ್ನಾಗಿ ಮಾಡಿಬಿಟ್ಟನು. ಇತ್ತ ಶುಕ್ರನು ಮಂತ್ರಸಿದ್ಧಿಯನ್ನು ಪಡೆದು ರಾಕ್ಷಸರ ಬಳಿಗೆ ಬಂದು ತಾನು ಶುಕ್ರಾಚಾರ್ಯನೆಂದರೂ ಅವರು ಒಪ್ಪದೆ ತಿರಸ್ಕರಿಸಲು ಶುಕ್ರನು ಕೋಪಗೊಂಡು ರಾಕ್ಷಸರನ್ನು ಶಪಿಸಿದನು. ಪ್ರಹ್ಲಾದನು ದೈತ್ಯರ ದುರ್ದೆಶೆಯನ್ನು ತಿಳಿದು ಪುನಃ ಶುಕ್ರನನ್ನು ಮೆಚ್ಚಿಸಿ, ದೈತ್ಯರೆಲ್ಲ ಆತನ ಅನುಗ್ರಹಕ್ಕೊಳಗಾಗುವಂತೆ ಮಾಡಿದನು. ಶುಕ್ರನಿಗೆ ಮೃತ ಸಂಜೀವಿನಿ ವಿದ್ಯೆಯು ಕೈಸೇರಿತು (ದೇವೀಭಾ.).

ಜಯರಾತ - ದುರ್ಯೋಧನನ ಪಕ್ಷದ ಕ್ಷತ್ರಿಯನೊಬ್ಬ. ಇವನು ಭೀಮನಿಂದ ಹತನಾದನು (ಮ.ದ್ರೋ.).

ಜಯರಾಮವಾಟಿ - ವಿಷ್ಣುಪುರದಿಂದ ಇಪ್ಪತ್ತೇಳು ಮೈಲಿ ದೂರದಲ್ಲಿದೆ. ಇದು ಶ್ರೀರಾಮಕೃಷ್ಣಪರಮಹಂಸರ ಪತ್ನಿಯಾದ ಶ್ರೀಶಾರದಾಮಾತೆಯ ಜನ್ಮಭೂಮಿ. ಇಲ್ಲಿ ಶಾರದಾದೇವಿಯ ಸ್ಮೃತಿಮಂದಿರವಿದೆ.

ಜಯವಿಜಯ - ನೋ. ಜಯ. ಇವರು ಮರುತ್ತರಾಜನ ಯಜ್ಞಕ್ಕೆ ಹೋಗಿ ಜಯನು ಬ್ರಹ್ಮನಾಗಿಯೂ, ವಿಜಯನು ಮುಖ್ಯ ಋತ್ವಿಜನಾಗಿಯೂ ಆಗಿ ಮರುತ್ತನಿಂದ ವಿಪುಲ ಸಂಪತ್ತನ್ನು ಸಂಗ್ರಹಿಸಿ ಅದನ್ನು ತಮ್ಮಲ್ಲೇ ವಿಭಾಗಿಸಿಕೊಳ್ಳುವಾಗ ಲೋಭವಶರಾಗಿ ಜಯನು ವಿಜಯನಿಗೆ ಮೊಸಳೆಯಾಗುವಂತೆಯೂ, ವಿಜಯನು ಜಯನಿಗೆ ಮದೋನ್ಮತ್ತ ಆನೆಯಾಗುವಂತೆಯೂ ಶಾಪವಿತ್ತರು.

ಜಯಸೇನ - ೧. ಅವಂತಿದೇಶದ ಕ್ಷತ್ರಿಯ. ಇವನು ವಸುದೇವನ ತಂಗಿಯಾದ ರಾಜಾಧಿದೇವಿಯನ್ನು ಮದುವೆಯಾಗಿ ವಿಂದ ಮತ್ತು ಅನುವಿಂದರೆಂಬ ಪುತ್ರರನ್ನೂ, ಮಿತ್ರವಿಂದೆ ಎಂಬ ಕನ್ಯೆಯನ್ನೂ ಪಡೆದನು. ರಾಜಾಧಿದೇವಿಗೆ ಮಿತ್ರವಿಂದೆಯನ್ನು ಶ್ರೀಕೃಷ್ಣನಿಗೆ ವಿವಾಹ ಮಾಡಿಕೊಡಬೇಕೆಂಬ ಮನಸ್ಸಿತ್ತು. ಮಿತ್ರವಿಂದೆ ಶ್ರೀಕೃಷ್ಣನಲ್ಲೇ ಅನುರಕ್ತಳಾಗಿದ್ದಳು. ಆದರೆ ವಿಂದ ಮತ್ತು ಅನುವಿಂದರಿಗೆ ಈ ಸಂಬಂಧದಲ್ಲಿ ಆಸಕ್ತಿ ಇರದಿದ್ದರೂ ಕೃಷ್ಣನು ರಾಜರೆಲ್ಲ

ನೋಡುತ್ತಿರುವಾಗಲೇ ಬಲಾತ್ಕಾರದಿಂದ ಆಕೆಯನ್ನು ಅಪಹರಿಸಿಕೊಂಡು ಹೋಗಿ ವಿವಾಹವಾದನು. ಮುಂದೆ ವಿಂದಾನುವಿಂದರು ಭಾರತಯುದ್ಧದಲ್ಲಿ ಕೌರವರ ಪಕ್ಷದಲ್ಲಿ ನಿಂತು ಹೋರಾಡಿ ಅರ್ಜುನನ ಬಾಣಕ್ಕೆ ಬಲಿಯಾದರು. (ಭಾಗ.). ೨. ಚಂದ್ರವಂಶದ ಸಾರ್ವಭೌಮ ರಾಜನ ಮಗ. ಇವನಿಗೆ ಜಯತ್ಸೇನನೆಂದೂ ಹೆಸರುಂಟು. ನೋ. - ಜಯತ್ಸೇನ, ಶ್ರೀಕೃಷ್ಣ (ಮ.ಆ.,ಭಾಗ.).

ಜಯಾ - ೧. ಈಕೆಯ ತಂದೆ ಕೃಶಾಶ್ವಮುನಿ; ತಾಯಿ ದಕ್ಷಪುತ್ರಿಯಾದ ಧಿಷಣೆ. ಸುಪ್ರಭೆಯು ಈಕೆಯ ಸೋದರಿ. ವೇದಶಿರಸ್ಸು, ವಯುನ ಮತ್ತು ದೇವಲರು ಈಕೆಯ ಸಹೋದರರು. ಇವರೆಲ್ಲ ಅಸ್ತ್ರರೂಪರಾಗಿದ್ದುದರಿಂದ ಕೃಶಾಶ್ವನು ಇವರನ್ನೆಲ್ಲ ತನ್ನ ಶಿಷ್ಯನಾದ ವಿಶ್ವಾಮಿತ್ರನಿಗೆ ಕೊಟ್ಟನು. ನೋ. - ಕೃಶಾಶ್ವ. ೨.ವಿಶ್ವಾಮಿತ್ರನ ಮಗಳು. ವಿಜಯೆಯು ಇವಳ ಸೋದರಿ. ಇವರಿಬ್ಬರನ್ನೂ ವಿಶ್ವಾಮಿತ್ರನು ಹರಿಶ್ಚಂದ್ರನಿಗೆ ಲಗ್ನ ಮಾಡಬೇಕೆಂದಿದ್ದ (ರಾಮಾ.ಬಾಲ.).

ಜಯಾನೀಕ - ೧. ವಿರಾಟನ ಸಹೋದರ. ಇವನು ಭಾರತಯುದ್ಧದಲ್ಲಿ ಅಶ್ವತ್ಥಾಮನಿಂದ ಹತನಾದ (ಮ.ದ್ರೋ.). ಪಾಂಚಾಲನೊಬ್ಬ. ಇವನು ಭಾರತಯುದ್ಧದಲ್ಲಿ ಅಶ್ವತ್ಥಾಮದಿಂದ ಸ್ವರ್ಗಸ್ಥನಾದ (ಮ.ದ್ರೋ.).

ಜಯಾಶ್ವ - ೧. ವಿರಾಟರಾಜನ ಒಬ್ಬ ಸೋದರ. ಜಯನೀಕನ ತಮ್ಮ. ಇವನೂ ಅಶ್ವತ್ಥಾಮನಿಂದಲೇ ಮೃತನಾದನು (ಮ.ದ್ರೋ.). ಪಾಂಚಾಲದ ರಾಜಕುಮಾರನೊಬ್ಬ. ಇವನು ಅಶ್ವತ್ಥಾಮನಿಂದ ಹತನಾದ (ಮ.ದ್ರೋ.).

ಜಯೇಶ - ಅಜ್ಞಾತವಾಸಕಾಲದಲ್ಲಿ ಭೀಮಸೇನನ ಗೂಢವಾದ ಹೆಸರು. ಆಗ ಭೀಮನಿಗೆ ಜಯಂತನೆಂಬ ಹೆಸರೂ ಇದ್ದಂತೆ ತೋರುತ್ತದೆ. ಈತನು ಆಗ ವಲಲನೆಂಬ ಹೆಸರಿನಿಂದ ವಿರಾಟನ ಪಾಕಶಾಲೆಯ ಅಧ್ಯಕ್ಷನಾಗಿದ್ದನು (ಮ.ವಿ.).

ಜರ - ಬೇಡನೊಬ್ಬ. ಯಾದವರೆಲ್ಲ ಪ್ರಭಾಸತೀರ್ಥದ ಬಳಿ ಪರಸ್ಪರ ಹೊಡೆದಾಡಿಕೊಂಡು ಮೃತರಾದ ಮೇಲೆ ಶ್ರೀಕೃಷ್ಣನು ತಾನು ಅವತಾರ ಬಿಡುವ ಸಮಯ ಬಂದಿತೆಂದು ಯೋಚಿಸುತ್ತ ಒಂದು ಆಲದ ಮರದಡಿ ಮಲಗಿರುವಾಗ ಒಬ್ಬ ಬೇಡನು ಶ್ರೀಕೃಷ್ಣನ ಪಾದವನ್ನು ಕಂಡು ಒಂದು ಮೃಗವೆಂಬ ಭ್ರಾಂತಿಯಿಂದ ಬಾಣಬಿಟ್ಟನು. ಅದು ಶ್ರೀಕೃಷ್ಣನ ಪಾದವನ್ನು ಭೇದಿಸಿತು. ಬೇಡನು ಶ್ರೀಕೃಷ್ಣನ ಸಮೀಪಕ್ಕೆ ಬಂದು ತನ್ನಿಂದ ಅಪರಾಧವಾಯಿತೆಂದು ಪ್ರಾರ್ಥಿಸಿದರೂ ಶ್ರೀಕೃಷ್ಣನು ಸ್ವರ್ಗಸ್ಥನಾದನು. ಈ ಬೇಡನೇ ತ್ರೇತಾಯುಗದಲ್ಲಿ ವಾಲಿಯಾಗಿದ್ದನೆಂದೂ, ಅವನು ಮುಂದಿನ ಜನ್ಮದಲ್ಲಿ

ಬೇಡನಾಗಿ ಹುಟ್ಟಿ ತನ್ನ ಪೂರ್ವದ ಸೇಡನ್ನು ತೀರಿಸಿಕೊಂಡನೆಂದೂ ಹೇಳುತ್ತಾರೆ (ಮ.ಮೌ.).

ಜರತ್ಕಾರು - ಭೃಗುವಂಶಕ್ಕೆ ಸೇರಿದ ಯಾಯಾವರ ವಂಶೋತ್ಪನ್ನನಾದ ಋಷಿ. ತಪಸ್ಸಿನಿಂದ ದೇಹವನ್ನು ತುಂಬ ಜೀರ್ಣಗೊಳಿಸಿಕೊಂಡುದರಿಂದ ಜರತ್ಕಾರುವೆಂಬ ಹೆಸರು ಬಂತು. ಈತನು ಬ್ರಹ್ಮಚರ್ಯ ಆಶ್ರಮದಿಂದಲೇ ಜೀವನವನ್ನು ಕೊನೆಗೊಳಿಸಲು ಬಯಸಿದ್ದ. ಇವನೊಂದು ದಿನ ಕಾಡಿನಲ್ಲಿ ಅಲೆಯುತ್ತಿದ್ದಾಗ ಕೆಲವು ಬಳ್ಳಿಗಳನ್ನು ಅವಲಂಬಿಸಿ ತಲೆಕೆಳಗಾಗಿ ಜೋತಾಡುತ್ತಿದ್ದ ತನ್ನ ಪಿತೃಗಳನ್ನು ಕಂಡು ಅವರ ಉದ್ಧಾರಕ್ಕಾಗಿ ತಾನು ವಿವಾಹವಾಗುವೆನೆಂದು ಒಪ್ಪಿಕೊಂಡು, ತನ್ನ ಹೆಸರಿನ ಕನ್ಯೆಯನ್ನು ಹುಡುಕುತ್ತಾ ಸಂಚರಿಸುತ್ತಿದ್ದಾಗ ವಾಸುಕಿಯೆಂಬ ಸರ್ಪರಾಜನಿಗೆ ಜರತ್ಕಾರುವೆಂಬ ಸೋದರಿ ಇರುವಳೆಂದು ಕೇಳಿ ಅಲ್ಲಿಗೆ ಹೋದನು. ನಾಗರಾಜನು ಜರತ್ಕಾರುವೆಂಬ ತನ್ನ ಸೋದರಿಯನ್ನು ಆ ಮುನಿಗೆ ಮದುವೆ ಮಾಡಿಕೊಟ್ಟನು. ಹೀಗೆ ಈ ದಂಪತಿಗಳು ಸಂಸಾರಿಗಳಾಗಿ ಇರುವಾಗ ಒಂದು ಸಂಧ್ಯಾಕಾಲ ಆ ಮುನಿಯು ತನ್ನ ಪತ್ನಿಯ ತೊಡೆಯ ಮೇಲೆ ತಲೆಯಿರಿಸಿಕೊಂಡು ಮಲಗಿರುವಾಗ ಸೂರ್ಯಾಸ್ತಮಾನವಾಯಿತು. ಜರತ್ಕಾರುವು ಪತಿಯ ಸಂಧ್ಯಾವಂದನೆಯ ವೇಳೆಯು ತಪ್ಪುವುದೆಂದು ಆತನನ್ನು ಎಬ್ಬಿಸಲು ಮುನಿಯು ತನ್ನ ನಿದ್ರೆಗೆ ಭಂಗತಂದಳೆಂಬ ಸಿಟ್ಟಿನಿಂದ ಪತ್ನಿಯನ್ನು ಬಿಟ್ಟು ತಪಸ್ಸಿಗೆ ನಡೆದನು. ಆಗ ಜರತ್ಕಾರುವು ಗರ್ಭಿಣಿಯಾಗಿದ್ದಳು. ಮುಂದೆ ಇವಳು ನಾಗಕುಲವನ್ನು ಉದ್ಧರಿಸಿದ ಆಸ್ತೀಕನೆಂಬ ಮಗನನ್ನು ಪಡೆದಳು. ನೋ. - ಆಸ್ತೀಕ (ಮ.ಆ.).

ಜರಶಸ್ತ್ರ - ನೋ. - ಸುಚಿಹ್ವ, ಜರಶಸ್ತ್ರ.

ಜರಾ - ಹುಟ್ಟುವಾಗ ಎರಡು ಹೋಳಾಗಿದ್ದ ಜರಾಸಂಧನ ದೇಹವನ್ನು ಜೋಡಿಸಿ ಜೀವಂತನಾಗುವಂತೆ ಮಾಡಿದ ರಕ್ಕಸಿ. ಜರಾಸಂಧನು ಮುಂದೆ ಅಜೇಯನಾದ ಶ್ರೀಕೃಷ್ಣನನ್ನು ಕೊಲ್ಲುವುದಕ್ಕಾಗಿ ಈ ರಕ್ಕಸಿಯನ್ನು ಕಳುಹಿಸಲು ಬಲರಾಮನು ಸ್ಥೂಣಾಕರ್ಣಾಸ್ತ್ರದಿಂದ ಇವಳನ್ನು ಕೊಂದನು. ಮಗಧ ದೇಶದ ಅರಸನಾಗಿದ್ದ ಬೃಹದ್ರಥನು ಚಂಡಕೌಶಿಕನೆಂಬ ಮುನಿಯ ಅನುಗ್ರಹದಿಂದ ಪಡೆದ ಮಗು ಎರಡು ಸೀಳಾಗಿರಲು ರಾಜನು ಆ ಹೋಳುಗಳನ್ನು ಸ್ಮಶಾನದಲ್ಲಿ ಒಗೆದುಬಿಡುವಂತೆ ಹೇಳಿದನು. ರಾತ್ರಿ ಸಂಚರಿಸುತ್ತ ಅಲ್ಲಿಗೆ ಬಂದ ಈ ರಕ್ಕಸಿಯು ಆ ಹೋಳುಗಳನ್ನೆತ್ತಿ ಜೋಡಿಸಲು ಮಗು ಜೀವಂತವಾಗಿ ಚೀರಿತು. ರಕ್ಕಸಿಯು ಸುಂದರ ಸ್ತ್ರೀಯಾಗಿ ಆ ಮಗುವನ್ನು ರಾಜನಿಗೊಪ್ಪಿಸಿ ಜರಾಸಂಧನೆಂಬ ಹೆಸರನ್ನಿಡುವಂತೆ ರಾಜನಿಗೆ ಸೂಚಿಸಿ ಹೋದಳು. ನೋ. - ಚಂಡಕೌಶಿಕ.

ಬೃಹದ್ರಥನ ಅರಮನೆಯಲ್ಲಿ ವಿಶೇಷ ಪೂಜೆ ಪಡೆಯುತ್ತಿದ್ದ ರಾಕ್ಷಸಿ. ಮೊದಲು ಬ್ರಹ್ಮದೇವನು ಈಕೆಯನ್ನು ಗೃಹದೇವಿ ಎಂಬ ಹೆಸರಿನಿಂದ ಸೃಷ್ಟಿಸಿದನು. ಈಕೆಯನ್ನು ಮನೆಯ ಗೋಡೆಯಲ್ಲಿ ಬರೆದಿಟ್ಟರೆ, ಪೂಜಿಸಿದರೆ ಆ ಮನೆಗೆ ಏಳಿಗೆಯಾಗುವುದು (ಮ.ಸ.,ಆ.,ದ್ರೋ.).

ಜರಾಸಂಧ - ಬೃಹದ್ರಥನೆಂಬ ರಾಜನ ಮಗ. ಚೇದಿದೇಶದ ಅರಸನಾದ ಉಪರಿಚರವಸುವಿನ ಮೊಮ್ಮಗ. ನೋ. - ಉಪರಿಚರವಸು. ಬೃಹದ್ರಥನಿಗೆ ಇಬ್ಬರು ಹೆಂಡಿರಿದ್ದರೂ ಮಕ್ಕಳಾಗದುದರಿಂದ ಅರಣ್ಯದಲ್ಲಿದ್ದು ಚಂಡ ಕೌಶಿಕನೆಂಬ ಮುನಿಯನ್ನು ಸೇವಿಸತೊಡಗಿದನು. ಆ ಮುನಿಯು ಒಂದು ಮಾವಿನಹಣ್ಣನ್ನು ರಾಜನಿಗೆ ಮಂತ್ರಿಸಿಕೊಟ್ಟು ಮಕ್ಕಳಾಗುವರೆಂದು ರಾಜನನ್ನು ಆಶೀರ್ವದಿಸಿದನು. ಅರಮನೆಗೆ ಬಂದ ಅರಸನು ಆ ಹಣ್ಣನ್ನು ಎರಡು ಪಾಲು ಮಾಡಿ ಇಬ್ಬರು ಹೆಂಡಿರಿಗೆ ಕೊಟ್ಟನು. ಆ ಹಣ್ಣಿನ ಮಹಿಮೆಯಿಂದ ಇಬ್ಬರು ರಾಣಿಯರೂ ಒಂದೊಂದು ಹೋಳನ್ನು ಹೆತ್ತರು. ನೋ. - ಜರಾ. ಜರೆಯೆಂಬ ರಕ್ಕಸಿಯು ಆ ಹೋಳುಗಳನ್ನು ಜೋಡಿಸಿ ಜೀವಂತ ಬಾಲಕನನ್ನಾಗಿ ಮಾಡಿ ರಾಜನಿಗೆ ಒಪ್ಪಿಸಿ ಹೋದಳು. ಇವನು ಪ್ರಾಯ ಸಮರ್ಥನಾದಮೇಲೆ ಬೃಹದ್ರಥನು ಮಗನಿಗೆ ರಾಜ್ಯವನ್ನೊಪ್ಪಿಸಿ ಅರಣ್ಯಕ್ಕೆ ಹೋದನು. ಜರಾಸಂಧನು ಗಿರಿವ್ರಜವನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡು ದಿಗ್ವಿಜಯಮಾಡಿ ಪ್ರಬಲನಾಗಿದ್ದನು. ಇವನು ವಿಪ್ರಚಿತ್ತಿ ಎಂಬ ರಾಕ್ಷಸನ ವಂಶದಿಂದ ಜನಿಸಿದವನಾದುದರಿಂದ ಶ್ರೀಕೃಷ್ಣನನ್ನು ಜನ್ಮತಃ ದ್ವೇಷಿಸತೊಡಗಿದನು. ಇವನು ಹದಿನೆಂಟು ಸಾರಿ ಮಧುರೆಯನ್ನು ಮುತ್ತಿ ಕೊನೆಯ ಸಾರಿ ಆ ನಗರವನ್ನು ಸುಟ್ಟನು. ಶ್ರೀಕೃಷ್ಣನು ಇವನ ಪೀಡೆಯನ್ನು ಸಹಿಸಲಾರದೆ ಆನರ್ತದೇಶದಲ್ಲಿ ದ್ವಾರಕೆಯೆಂಬ ನಗರವನ್ನು ನಿರ್ಮಿಸಿ ಅಲ್ಲೇ ಸಮಸ್ತ ಯಾದವರೊಡನೆ ಇರತೊಡಗಿದನು. ಇವನ ಹೆಣ್ಣುಮಕ್ಕಳಾದ ಅಸ್ತಿ ಮತ್ತು ಪ್ರಾಸ್ತಿ ನೋ. - ಮಾಷ ಎಂಬುವರನ್ನು ಕಂಸನಿಗೆ ವಿವಾಹಮಾಡಿಕೊಟ್ಟಿದ್ದನು. ಶ್ರೀಕೃಷ್ಣನು ಕಂಸನನ್ನು ಕೊಂದಮೇಲೆ ಈತನ ದ್ವೇಷಾಗ್ನಿಗೆ ತುಪ್ಪವನ್ನು ಹೊಯ್ದಂತಾಗಿತ್ತು. ಇವನು ಭೈರವನ ಸಂಪ್ರೀತಿಗಾಗಿ ಪುರುಷಮೇಧವನ್ನು ಮಾಡಬೇಕೆಂದು ಎಂಬತ್ತಾರು ಸಾವಿರ ಮಂದಿ ರಾಜಪುತ್ರರನ್ನು ಸೆರೆಯಲ್ಲಿಟ್ಟಿದ್ದನು. ಇವನ ಎರಡು ಭುಜಗಳಂತಿದ್ದ ಹಂಸ ಮತ್ತು ಡಿಬಿಕರನ್ನು ಶ್ರೀಕೃಷ್ಣನು ಮೊದಲೇ ಕೊಂದಿದ್ದನು. ಮುಂದೆ ರಾಜಸೂಯಯಾಗಕಾಲದಲ್ಲಿ ಶ್ರೀಕೃಷ್ಣ ಮತ್ತು ಭೀಮಾರ್ಜುನರು ಬ್ರಾಹ್ಮಣರ ವೇಷದಲ್ಲಿ ಗಿರಿವ್ರಜವನ್ನು ರಾತ್ರಿಕಾಲದಲ್ಲಿ ಪ್ರವೇಶಿಸಿ, ಜರಾಸಂಧನು ರಾಜರನ್ನು ಮಾಹೇಶ್ವರಯಾಗಕ್ಕಾಗಿ ಸೆರೆಯಿಟ್ಟ ತಪ್ಪನ್ನು ಅವನ

ಮೇಲೆ ಹೊರಿಸಿ ಅವನನ್ನು ಯುದ್ಧಕ್ಕೆ ಆಮಂತ್ರಿಸಿದರು. ಜರಾಸಂಧನ ಅಪೇಕ್ಷೆಯಂತೆ ಭೀಮ ಮತ್ತು ಆತನಿಗೆ ಯುದ್ಧವು ಕಾರ್ತಿಕ ಶುದ್ಧ ಪಾಡ್ಯಮಿಯ ದಿನ ಆರಂಭವಾಗಿ ಹನ್ನೊಂದು ದಿನ ಯುದ್ಧ ನಡೆದು ಕೊನೆಗೆ ಜರಾಸಂಧನನ್ನು ಭೀಮನು ಸರ‍್ರನೆ ಎರಡು ಸೀಳಾಗಿ ಸೀಳಿ ಎಸೆದನು. ಮುಂದೆ ಬಂಧನಾಲಯದಲ್ಲಿದ್ದ ರಾಜರಿಗೆಲ್ಲ ಬಿಡುಗಡೆಯಾಯಿತು. ಜರಾಸಂಧನ ಮರಣಾನಂತರ ಆತನ ಮಗನಾದ ಸಹದೇವನಿಗೆ ಆಗಲೇ ಪಟ್ಟಾಭಿಷೇಕವಾಯಿತು. ಜರಾಸಂಧನ ಒಬ್ಬಳು ಮಗಳು ಪಾಂಡವರಲ್ಲಿ ಕಿರಿಯವನಾದ ಸಹದೇವನ ಪತ್ನಿಯಾಗಿದ್ದಳು (ಭಾಗ.,ಮ.ಆ.,ದ್ರೋ.,ಅಶ್ವ., ಆಶ್ರಮ.,ಶಾಂ.,ಗರುಡಪು.).

ದನುವಿನ ಮಗನಾದ ವಿಪ್ರಚಿತ್ತಿಯೇ ಜರಾಸಂಧನಾಗಿ ಜನಿಸಿದನು. ಕಾರ್ತಿಕ ಮಾಸದ ಮೊದಲನೇ ದಿನ ಆರಂಭವಾದ ಜರಾಸಂಧ -ಭೀಮರ ಯುದ್ಧವು ಹದಿನೈದು ದಿನಗಳವರೆಗೆ ಹಗಲೂ ರಾತ್ರಿ ವಿರಾಮವಿಲ್ಲದೆ ನಡೆಯಿತು (ಮ.ಸ.).

ಜರಿತಾ - ಮಂದಪಾಲನೆಂಬ ಮಹರ್ಷಿಯ ಪತ್ನಿ. ನೋ. - ಮಂದಪಾಲ. ಈತನು ಪುತ್ರರಿಲ್ಲದುದರಿಂದ ಶಾರ್ಙ್ಗಕ ಪಕ್ಷಿಯ ರೂಪವನ್ನು ಹೊಂದಿ ಜರಿತೆಯೆಂಬ ಶಾರ್ಙ್ಗಕ ಹೆಣ್ಣುಹಕ್ಕಿಯೊಡನೆ ಸ್ವಲ್ಪ ಕಾಲ ಸಂಸಾರಿಯಾಗಿದ್ದು ಜರತಾರಿ, ಸಾರಿಸೃಕ್ಕ, ದ್ರೋಣ, ಸ್ತಂಬಮಿತರೆಂಬ ನಾಲ್ವರು ಪುತ್ರರನ್ನು ಪಡೆದನು. ಮುಂದೆ ಈ ಮುನಿಯು ಸದ್ಗತಿಯನ್ನು ಹೊಂದಿದನು (ಮ.ಆ.).

ಜರಿತಾರಿ (ಜರತಾರಿ) - ನೋ. - ಜರಿತಾ, ಮಂದಪಾಲ (ಮ.ಆ.,ಅನು.).

ಜಲಂಧರ - ರಾಕ್ಷಸನೊಬ್ಬ. ಇಂದ್ರನ ಮೇಲೆ ಕೋಪಗೊಂಡ ಶಿವನು ಬೃಹಸ್ಪತಿಯ ಪ್ರಾರ್ಥನೆಯಂತೆ ತನ್ನ ಕ್ರೋಧಾಗ್ನಿಯನ್ನು ಲವಣಸಮುದ್ರದಲ್ಲಿ ಬಿಡಲು ಅಲ್ಲೇ ಒಂದು ಶಿಶು ಉತ್ಪತ್ತಿಯಾಯಿತು. ಈ ಶಿಶುವಿಗೆ ಸಾಗರನು ಜಲಂಧರನೆಂದು ಹೆಸರಿಟ್ಟು ರಕ್ಷಿಸಿದನು. ಇವನ ಜಾತಕವನ್ನು ಪರೀಕ್ಷಿಸಿದ ಬ್ರಹ್ಮನನ್ನು ಈತನು ದೀರ್ಘಾಯುಷ್ಮಂತನಲ್ಲವೆಂದೂ, ಶಿವನಿಂದಲೇ ಈತನಿಗೆ ಮರಣವೆಂದೂ ಸೂಚಿಸಿದನು. ಈತನಿಗೆ ಯುಕ್ತಕಾಲದಲ್ಲಿ ಕಾಲನೇಮಿಯ ಮಗಳಾದ ವೃಂದೆಯೆಂಬುವಳೊಡನೆ ಮದುವೆಯಾಯಿತು. ಮುಂದೆ ಶುಕ್ರಾಚಾರ್ಯನ ಅಭಿಪ್ರಾಯದಂತೆ ತನ್ನ ತಂದೆಯಾದ ಸಾಗರನಿಂದ ಇಂದ್ರನು ಪಡೆದ ವಸ್ತುಗಳನ್ನೆಲ್ಲ ತನಗೆ ಕೊಡಬೇಕೆಂದು ಜಲಂಧರನು ಇಂದ್ರನೊಡನೆ ಕೇಳಲು ಅವನು ತಿರಸ್ಕರಿಸಿದನು. ಆಗ ದೇವದಾನವರಿಗೆ ಭಯಂಕರ ಯುದ್ಧವು ಪ್ರಾಪ್ತವಾಯಿತು. ಜಲಂಧರನು ಶಿವನ ಪತ್ನಿಯಾದ

ಪಾರ್ವತಿಯನ್ನು ಕಳುಹಿಸುವಂತೆ ಕೇಳಲು ಈ ರಾಕ್ಷಸನ ನಾಶಕ್ಕೆ ವಿಷ್ಣು, ಶಿವರು ಸೊಂಟಕಟ್ಟಿದರು. ವಿಷ್ಣುವು ವೃಂದೆಯ ಪಾತಿವ್ರತ್ಯವನ್ನು ಹಾಳುಮಾಡಿದನು. ಶಿವನು ಜಲಂಧರನನ್ನು ಕೊಂದನು. ಪಂಜಾಬಿನ ಜಲಂಧರವೆಂಬ ಪಟ್ಟಣವೇ ಈ ದೈತ್ಯನ ರಾಜಧಾನಿಯಾಗಿತ್ತೆಂದು ಹೇಳುತ್ತಾರೆ. ಇದನ್ನು ಪ್ರಾಚೀನಕಾಲದಲ್ಲಿ ತ್ರಿಗರ್ತ ತೀರ್ಥವೆನ್ನುತ್ತಿದ್ದರು. (ಶಿವಪು.,ಶತರುದ್ರ.). ನೋ. - ವೃಂದಾ.

ಜಲಂಧರಾ - ಕಾಶಿರಾಜನ ಮಗಳು. ಭೀಮಸೇನನ ಪತ್ನಿ. ಈಕೆಯ ಮಗ ಶರ್ವತ್ರಾತ (ಮ.ಆ.).

ಜಲಸಂಧ - ೧. ಧೃತರಾಷ್ಟ್ರನ ಮಗ. ಭೀಮನಿಂದ ಹತನಾದ (ಮ.ಆ.,ದ್ರೋ.). ೨.ಮಗಧದೇಶದ ರಾಜ. ಈತನು ಭಾರತಯುದ್ಧದಲ್ಲಿ ಕೌರವನ ಪಕ್ಷದಲ್ಲಿ ನಿಂತು ಹೋರಾಡಿ ಸಾತ್ಯಕಿಯಿಂದ ಹತನಾದನು (ಮ.ಭೀ.,ಕ.).

ಜಲಸ್ತಂಭನ - ನೀರಿನಲ್ಲಿ ಬಹಳ ಸಮಯ ಮುಳುಗಿರುವ ವಿದ್ಯೆ. ದುರ್ಯೋಧನನು ಈ ವಿದ್ಯೆಯ ಬಲದಿಂದ ದ್ವೈಪಾಯನ ಕೊಳದಲ್ಲಿ ಅಡಗಿದ್ದನು. ಈ ವಿದ್ಯೆಯನ್ನು ದೈತ್ಯ ಮಾಯಾವಿದ್ಯೆಯೆಂದೂ ಹೇಳುತ್ತಾರೆ (ಮ.ಉ.,ಶ.).

ಜಲೇಯು - ಚಂದ್ರವಂಶದ ರೌದ್ರಾಶ್ವನ ಮಗ. ಈತನ ತಾಯಿ ಮಿಶ್ರಕೇಶಿ ಎಂಬ ಅಪ್ಸರಸೆ. ಋಚೇಯು, ಕಕ್ಷೇಯು, ಸ್ಥಂಡಿಲೇಯು ಮೊದಲಾದ ಒಂಬತ್ತು ಮಂದಿ ಈತನ ಸಹೋದರರು (ಮ.ಆ.).

ಜಹ್ನು - ೧. ಚಂದ್ರವಂಶದ ಸಹೋತ್ರ ರಾಜನ ಮಗ (ವಿಷ್ಣುಪು.). ಈ ಜಹ್ನು ರಾಜನ ಮಗ ಸುಮಂತ. ೨. ಚಂದ್ರವಂಶದ ರಾಜನಾದ ಅಜಮೀಢ ಮತ್ತು ಕೇಶಿನಿಯರ ಮಗ. ಭಗೀರಥನು ಪಿತೃಗಳಾದ ಸಾಗರರ ಉದ್ಧಾರಕ್ಕಾಗಿ ಸ್ವರ್ಗದಿಂದ ಇಳಿಸಿದ ಗಂಗೆಯು ಆತನನ್ನು ಹಿಂಬಾಲಿಸುತ್ತ ಬರುವ ದಾರಿಯಲ್ಲಿ ಸಿಕ್ಕಿದ ಜಹ್ನುಮುನಿಯ ಆಶ್ರಮವನ್ನು ತೇಲಿಸಿಕೊಂಡು ಹೋಗಲು ಮುನಿಯು ಕೋಪದಿಂದ ಗಂಗೆಯನ್ನೇ ಕುಡಿದುಬಿಟ್ಟನು. ಆಗ ಭಗೀರಥನು ಗಂಗೆಯನ್ನು ದಯಪಾಲಿಸಬೇಕೆಂದು ಮುನಿಯನ್ನು ಪುನಃಪುನಃ ಪ್ರಾರ್ಥಿಸಲು ಆತನು ಗಂಗೆಯನ್ನು ತನ್ನ ಕಿವಿಯಿಂದ ಹೊರಬಿಟ್ಟನು. ಅಂದಿನಿಂದ ಗಂಗೆಯು ಜಾಹ್ನವಿಯಾದಳು. ನೋ. - ಭಗೀರಥ, ಗಂಗೆ. ೩. ಚಂದ್ರವಂಶದ ಮಿಥಿಲರಾಜನ ಮಗ. ಈತನ ಮಗನು ತಪಸ್ಸಿನಿಂದ ಬ್ರಾಹ್ಮಣನಾದ ಸಿಂಧುದ್ವೀಪ. ೪.ಗಂಗೆಯು ಅದ್ಭುತವಾದ ಶೀಲಶಕ್ತಿಗಳುಳ್ಳ ಜಹ್ನುವನ್ನು ಮೋಹಿಸಿ ಪ್ರಣಯಭಿಕ್ಷೆ ಬೇಡಲು ಅವನು ತಿರಸ್ಕರಿಸಿದನು (ಹರಿ.).

ಜಹ್ನುವಿನ ಮಗ ಅಜ. ಇವನ ಮಗ ಬಲಕಾಶ್ವ. ಇವನ ಮಗ ಕುಶಿ. ಇವನ ಮಗನಾಗಿ ದೇವೇಂದ್ರನು ಗಾಧಿ ಎಂಬ ಹೆಸರಿನಿಂದ ಹುಟ್ಟಿದನು (ಮ.ಶಾಂ.,ಆ.,ಅನು.,ರಾಮಾ.ಬಾಲ.,ವಾಯುಪು.).

ಜಾಂಗಲ - ೧. ಒಂದು ದೇಶ. ೨. ಶಾಕಲ್ಯಮಹರ್ಷಿಯ ಮಗ. ಶಾಕಲ್ಯನು ಹುಲಿಯ ತೊಗಲನ್ನು ಹೊದ್ದುಕೊಂಡು ತಪಸ್ಸು ಮಾಡುತ್ತಿರುವಾಗ ಶಂಕರ ಪಾಂಡ್ಯನೆಂಬ ರಾಜನು ಹುಲಿಯೆಂದೇ ಭಾವಿಸಿ ಮುನಿಯನ್ನು ಬಾಣಪ್ರಯೋಗಿಸಿ ಕೊಂದ. ಜಾಂಗಲನು ತಂದೆಯ ಅಸ್ತಿಗಳನ್ನು ಹಿಡಿದುಕೊಂಡು, ಸೇತುವಿನಲ್ಲಿ ಹಾಕಿ, ಅಲ್ಲೇ ತಪಸ್ಸು ಮಾಡುತ್ತಿದ್ದು ಪಿತೃಗಳಿಗೆ ಸದ್ಗತಿಯನ್ನುಂಟುಮಾಡಿದನು. ನೋ. - ಶಂಕರಪಾಂಡ್ಯ.

ಜಾಜಲಿ - ಒಬ್ಬ ಬ್ರಾಹ್ಮಣ. ಈತನಿಗೆ ಕಾಶೀಕ್ಷೇತ್ರದ ತುಲಾಧಾರನೆಂಬ ವೈಶ್ಯನು ಜ್ಞಾನೋಪದೇಶವನ್ನು ಮಾಡಿ ಆತನ ಅಭಿಮಾನವನ್ನು ಹೋಗಲಾಡಿಸಿದನು. ನೋ. - ತುಲಾಧಾರ (ಮ.ಶಾಂ.,ಪದ್ಮಪು.).

ಜಾತಹಾರಿಣಿ - ಒಬ್ಬಳು ರಾಕ್ಷಸಿ. ಈಕೆ ಮಿತ್ರನೆಂಬ (ಅನಮಿತ್ರ) ರಾಜ ಮತ್ತು ಗಿರಿಭದ್ರೆಯೆಂಬ ರಾಣಿಯಲ್ಲಿ ಹುಟ್ಟಿದ ಮಗುವನ್ನು ಅಪಹರಿಸಿದಳು. ಗಿರಿಭದ್ರೆಯು ತನ್ನ ಶಿಶುವನ್ನು ನೋಡಿ ಸಂತೋಷಪಡುತ್ತಿರುವಾಗ ಮಗುವು ತಾಯಿಯೊಡನೆ 'ಅಮ್ಮಾ ಜಾತಹಾರಿಣಿಯೆಂಬ ರಕ್ಕಸಿಯು ನನ್ನನ್ನು ಅಪಹರಿಸಿಕೊಂಡು ಹೋಗುತ್ತಾಳೆ. ನಾನು ನಿನಗೆ ಮಗುವಾಗಿ ಹುಟ್ಟಿ ವ್ಯರ್ಥವಾಯಿತಲ್ಲ' ಎಂದಿತು. ಗಿರಿಭದ್ರೆಯು 'ರಾಕ್ಷಸಿ' ಎಂಬ ಪದವನ್ನು ಕೇಳಿ ಹಿಂದೆ ಸರಿದಾಗ ಆ ರಕ್ಕಸಿಯು ಅಲ್ಲಿಗೆ ಬಂದು ಮಗುವನ್ನು ಅಪಹರಿಸಿಕೊಂಡು ಹೋದಳು (ಮಾರ್ಕಂ.ಪು.).

ಜಾನಪದಿ - ಅಪ್ಸರೆಯೊಬ್ಬಳು. ಇವಳಿಗೆ ಜಾಲವತಿಯೆಂಬ ಹೆಸರೂ ಇದೆ. ಶರದ್ವಂತ ಮುನಿಯ ತಪೋಭಂಗಕ್ಕಾಗಿ ಈಕೆ ಇಂದ್ರನಿಂದ ಕಳುಹಿಸಲ್ಪಟ್ಟಳು. ಮುನಿಗೆ ಈಕೆಯನ್ನು ಕಂಡು ವೀರ್ಯಪಾತವಾಗಲು ಜನಿಸಿದವರೇ ಕೃಪ ಮತ್ತು ಕೃಪಿ ಎಂಬ ಮಕ್ಕಳು. ನೋ. - ಕೃಪ, ಕೃಪಿ (ಮ.ಆ.,ಭಾಗ.).

ಜಾನಶ್ರುತಿ - ರಾಜನೊಬ್ಬ. ಈತನ ತಂದೆಯ ಹೆಸರು ಪೌತ್ರ; ಅಜ್ಜನ ಹೆಸರು ಪುತ್ರ. ಈತನು ಪೌತ್ರನ ಮಗನಾದುದರಿಂದ ಪೌತ್ರಾಯಣನೆಂದೂ ಶ್ರದ್ಧೆಯಿಂದ ಸಕಲ ದಾನಗಳನ್ನು ಮಾಡುತ್ತಿದ್ದುದರಿಂದ ಶ್ರದ್ಧಾದೇಯನೆಂದೂ ಕರೆಯಲ್ಪಡುತ್ತಿದ್ದನು. ಇವನೊಂದು ಸಂಜೆ ಅರಮನೆಯ ಉಪ್ಪರಿಗೆಯ ಕಿಟಕಿಯ ಬಳಿಯಲ್ಲಿ ಕುಳಿತಿರುವಾಗ ದೇವರ್ಷಿಗಳು ಹಂಸಗಳ ರೂಪದಿಂದ ಆಕಾಶಮಾರ್ಗವಾಗಿ ಹಾರಿಹೋಗುತ್ತಿದ್ದರು. ಅವರಲ್ಲಿ ಒಬ್ಬ ದೇವರ್ಷಿಯು

ಜಾನಶ್ರುತಿಯನ್ನು ಪುಣ್ಯಪುರುಷನೆಂದು ಹೊಗಳಲು ಮತ್ತೊಬ್ಬ ದೇವರ್ಷಿಯು - 'ರೈಕ್ವಮುನಿಯ ಪುಣ್ಯಕ್ಕೆ ಇವನ ಪುಣ್ಯವು ಸರಿತೂಗಲಾರದು. ಆ ಮುನಿಯು ತನ್ನ ತಪೋಮಹಿಮೆಯಿಂದ ಗಂಗಾ ಯಮುನಾ ಮೊದಲಾದ ತೀರ್ಥಗಳನ್ನು ತನ್ನ ಆಶ್ರಮಕ್ಕೆ ತಂದ ಮಹಾಮಹಿಮ' ನೆನ್ನಲು ಜಾನಶ್ರುತಿಯು ರಾಜ್ಯಭಾರದಲ್ಲಿ ಬೇಸರಹೊಂದಿ ರೈಕ್ವಮುನಿಯ ಸನ್ನಿಧಾನಕ್ಕೆ ಹೋಗಿ ತನಗೆ ಜ್ಞಾನೋಪದೇಶ ಮಾಡಬೇಕೆಂದು ಪ್ರಾರ್ಥಿಸಿದನು. ಆಗ ರೈಕ್ವಮುನಿಯು ಮಂತ್ರಬಲದಿಂದ ತನ್ನ ಆಶ್ರಮಕ್ಕೆ ತಂದ ತೀರ್ಥಗಳಲ್ಲಿ ಸ್ನಾನಮಾಡಿ ಬರುವಂತೆ ರಾಜನಿಗೆ ಹೇಳಿದನು. ಜಾನಶ್ರುತಿಯು ಆ ತೀರ್ಥಸ್ನಾನದಿಂದಲೇ ಮನಶ್ಶಾಂತಿ ಹೊಂದಿ ಮುಂದೆ ಆ ಮುನಿಯಿಂದ ಜ್ಞಾನೋಪದೇಶ ಹೊಂದಿ ಬ್ರಹ್ಮೈಕ್ಯನಾದನು (ಸ್ಕಾಂ.ಪು.).

ಜಾಬಾಲಿ - ೧. ಇವನಿಗೆ ಜಾಜಲಿ ಎಂಬ ಹೆಸರೂ ಇದೆ. ವಿಶ್ವಾಮಿತ್ರಮುನಿಯ ಮಗ. ನೋ. - ಜಾಜಲಿ. ೧. ದಶರಥನ ಎಂಟು ಮಂದಿ ಪ್ರಧಾನ ಋತ್ವಿಜರಲ್ಲೊಬ್ಬ. ಅರಣ್ಯವಾಸಿಯಾದ ಶ್ರೀರಾಮನನ್ನು ಕರೆತರಲು ಭರತನೊಂದಿಗೆ ಚಿತ್ರಕೂಟ ಪರ್ವತಕ್ಕೆ ಹೋಗಿ ಅಲ್ಲಿ - 'ಕಾಮುಕನಾದ ದಶರಥನ ಮಾತಿಗೆ ಬೆಲೆಕೊಡಬಾರದು. ಪರಲೋಕವೆಂದರೇನು? ಪುಣ್ಯಪಾಪಗಳೆಲ್ಲ ನಂಬತಕ್ಕವುಗಳಲ್ಲ' ಎಂದು ನಾಸ್ತಿಕ ವಾದವನ್ನು ಹೂಡಿ ಸೋತು ಶ್ರೀರಾಮನನ್ನು ಅಯೋಧ್ಯೆಗೆ ಹಿಂದೆ ಕರೆತರಲಾರದೇ ನಿರಾಶನಾದ. ೩. ಶ್ರೀರಾಮನು ಪಂಚವಟಿಯಲ್ಲಿದ್ದು ಕೌಸಲ್ಯಾದಿ ಮಾತೆಯರನ್ನೂ, ವಸಿಷ್ಠಾದಿ ಗುರುಗಳನ್ನೂ ನೆನೆದು ಚಿಂತಿಸುತ್ತಿರುವಾಗ ಅಯೋಧ್ಯೆಯಿಂದ ಬಂದ ಈ ಮುನಿಯು ನಳ ಹರಿಶ್ಚಂದ್ರಾದಿ ರಾಜರ ಕತೆಗಳನ್ನು ಹೇಳಿ ಆತನ ದುಃಖವನ್ನು ಶಮನಗೊಳಿಸಿದನು (ಮ.ಶಾಂ.,ರಾಮಾ.ಅಯೋ.).

ಜಾಂಬವತಿ - ಶ್ರೀಕೃಷ್ಣನ ಎಂಟು ಮಂದಿ ಪ್ರಧಾನ ಪತ್ನಿಯರಲ್ಲೊಬ್ಬಳು. ಈಕೆಯ ತಂದೆ ಜಾಂಬವಂತ. ಸ್ಯಮಂತಕ ರತ್ನವನ್ನು ಶ್ರೀಕೃಷ್ಣನಿಗೆ ಒಪ್ಪಿಸುವಾಗ ಜಾಂಬವಂತನು ಈ ಕನ್ಯಾರತ್ನವನ್ನೂ ಆತನಿಗರ್ಪಿಸಿದನು. ಈಕೆಯ ಮಕ್ಕಳೇ ಸಾಂಬ, ಸುಮಿತ್ರ, ಪುರುಜಿತ್, ಶತಜಿತ್, ಸಹಸ್ರಜಿತ್, ವಿಜಯ, ಚಿತ್ರಕೇತು, ವಸುಮಾನ, ದ್ರವಿಡ, ಕ್ರತು ಎಂಬ ಹತ್ತು ಮಂದಿಯಲ್ಲದೆ ಒಬ್ಬಳು ಕನ್ಯೆಯೂ ಇದ್ದಳು. ಶ್ರೀಕೃಷ್ಣನ ನಿರ್ಯಾಣಾನಂತರ ಜಾಂಬವತಿಯು ಅಗ್ನಿಪ್ರವೇಶಮಾಡಿದಳು (ಭಾಗ.,ವಿಷ್ಣುಪು.,ಮ.ಮೌ.,ಸ.). ನೋ. - ಸ್ಯಮಂತಕ.

ಜಾಂಬವಂತ (ಜಾಂಬವ) - ಕರಡಿಗಳ ರಾಜ. ಬ್ರಹ್ಮನ ಬಾಯಿಂದ ಆತನು ಹೊರಬಂದನು. ಕ್ಷೀರಸಾಗರದ ಮಥನದ ಮೊದಲೇ ಇದ್ದವ. ಇವನು ದೇವತೆಗಳೊಡನೆ ಅಮೃತಪಾನವನ್ನು ಮಾಡಿದ್ದ. ಯೌವನದಲ್ಲಿ ಹಲವು ಸಾರಿ

ಭೂಪ್ರದಕ್ಷಿಣೆ ಮಾಡಿದವ. ಬಲಿಚಕ್ರವರ್ತಿಯ ಯಜ್ಞಶಾಲೆಯಲ್ಲಿ ಈತನು ಓಷಧಿಗಳ ಮೇಲ್ವಿಚಾರಕನಾಗಿದ್ದ. ಪ್ರತಿದಿನ ಕೈಲಾಸಕ್ಕೆ ಹೋಗಿ ಶಿವನ ಸಂದರ್ಶನ ಮಾಡುತ್ತಿದ್ದವ. ವಾಲಿಯ ಮುಖ್ಯ ಸೇನಾಪತಿಯಾಗಿದ್ದ. ಸೀತಾನ್ವೇಷಣಕ್ಕಾಗಿ ಸಮುದ್ರವನ್ನು ದಾಟಿ ಲಂಕೆಗೆ ಹೋಗಿ ಸಾಹಸಕಾರ್ಯಗಳನ್ನು ಮಾಡಿ ಹಿಂತಿರುಗಲು ಹನುಮನೇ ಕಪಿಸೇನೆಯಲ್ಲಿ ಸಮರ್ಥನೆಂದು ಮೊತ್ತಮೊದಲು ಸೂಚಿಸಿದವ. ಯುದ್ಧಕಾಲದಲ್ಲಿ ರಾಮಲಕ್ಷ್ಮಣರಿಗೆ ಬಂದ ವಿಪತ್ತನ್ನು ಪರಿಹರಿಸಲು ಸೂಚನೆ ಇತ್ತವ. ದ್ವಾಪರಯುಗದಲ್ಲಿ ಸ್ಯಮಂತಕ ರತ್ನವನ್ನು ಸಿಂಹನಿಂದ ಪಡೆದು ಶ್ರೀಕೃಷ್ಣನೊಡನೆ ಹೋರಾಡಿ ಸೋತು ಆ ರತ್ನವನ್ನೂ, ತನ್ನ ಮಗಳನ್ನೂ ಶ್ರೀಕೃಷ್ಣನಿಗೆ ಕೊಟ್ಟವ. ನೋ. - ಸತ್ರಾಜಿತ, ಸ್ಯಮಂತಕ, ಇಂದ್ರಜಿತು, ಜಾಂಬವತಿ.

ರಾವಣನು ವಿಭೀಷಣನಿಗೆ ಹೊಡೆದ ಶಕ್ತ್ಯಾಯುಧವು ಗುರಿತಪ್ಪಿ ಲಕ್ಷ್ಮಣನಿಗೆ ತಗಲಲು ಆತನು ಅದರ ವೇದನೆಯನ್ನು ಸಹಿಸಲಾರದೆ ಎಚ್ಚರತಪ್ಪಿ ಭೂಮಿಯ ಮೇಲೆ ಬಿದ್ದನು. ರಾವಣನು ಭೂಮಿಯ ಮೇಲೊರಗಿದ ಲಕ್ಷ್ಮಣನನ್ನು ಲಂಕಾನಗರಿಗೆ ಒಯ್ಯುವ ಪ್ರಯತ್ನ ಮಾಡಿದಾಗ ಮಾರುತಿಯು ಕಂಡು ರಾವಣನ ಎದೆಯ ಮೇಲೆ ಬಲವಾಗಿ ಗುದ್ದಲು ಅವನು ರಕ್ತ ಕಾರಲಾರಂಭಿಸಿದನು. ಆಗ ಆಂಜನೇಯನು ಲಕ್ಷ್ಮಣನನ್ನು ಹೊತ್ತು ಶ್ರೀರಾಮನ ಬಳಿಗೆ ಬಂದನು. ಬಳಿಕ ಜಾಂಬವಂತನ ಸೂಚನೆಯಂತೆ ದ್ರೋಣಪರ್ವತದಿಂದ ಸಂಜೀವಿನಿ ಮೂಲಿಕೆಯನ್ನು ತರಿಸಿ ಲಕ್ಷ್ಮಣನನ್ನು ಬದುಕಿಸಿದರು. ನೋ.-ಕಾಲನೇಮಿ (ರಾಮಾ.ಕಿಷ್ಕಿಂ.,ಯುದ್ಧ.,ಅನಂ.ರಾ.,ಭಾಗ., ವಿಷ್ಣುಪು.).

ಜಾರೂಥಿ - ಒಂದು ನಗರ. ಇದರ ಅಧಿಪತಿಯಾದ ಆಹುತಿಯು ಶ್ರೀಕೃಷ್ಣನಿಂದ ಪರಾಜಿತನಾದ (ಮ.ವ.).

ಜಾಲವತಿ - ಒಬ್ಬಳು ಅಪ್ಸರೆ. ನೋ. - ಜಾನಪದಿ (ಮ.ಆ.).

ಜ್ಯಾಮಘ - ನೋ. - ಉಪದಾನವಿ.

ಜಿತವತಿ - ಭೋಜರಾಜನಾದ ಉಶೀನರನ ಮಗಳು. ಅಷ್ಟವಸುಗಳಲ್ಲಿ ದ್ಯು ಎಂಬುವನ ಪತ್ನಿಯ ಗೆಳತಿ. ಈಕೆಗಾಗಿಯೇ ದ್ಯು ಎಂಬ ಹೆಸರುಳ್ಳ ವಸುವು ವಸಿಷ್ಠನ ನಂದಿನಿಯೆಂಬ ದನವನ್ನು ಅಪಹರಿಸಲು ಹೋಗಿ, ವಸಿಷ್ಠನಿಂದ ಶಾಪಹೊಂದಿ ಮುಂದೆ ಭೀಷ್ಮನಾಗಿ ಹುಟ್ಟಿದನು. ಈ ವಸುಗಳಲ್ಲಿ ಆತನು ಹಿರಿಯನು. ಈತನೇ ಶಾಪದಿಂದ ಭೀಷ್ಮನಾಗಿ ಹುಟ್ಟಿದನೆಂಬ ಹೇಳಿಕೆಯೂ ಇದೆ (ಮ.ಆ.). ನೋ. - ಆಪ, ಅಷ್ಟವಸು.

ಜಿತಾರಿ - ಚಂದ್ರವಂಶದ ಅವಿಕ್ಷಿತನ ಮಗ. ಈತನಿಗೆ ಪರೀಕ್ಷಿತ, ಶಬಲಾಶ್ವ, ಆದಿರಾಜ, ವಿರಾಜ, ಶಾಲ್ಮಲಿ, ಉಚ್ಚೈಶ್ರವ, ಭಂಗಕಾರಕರೆಂಬ ಏಳು ಜನ ಸಹೋದರರಿದ್ದರು (ಮ.ಆ.).

ಜೀಮೂತ - ೧. ಕೌರವನ ಆಸ್ಥಾನದ ಪ್ರಬಲನಾದ ಒಬ್ಬ ಜಟ್ಟಿ. ಈತನನ್ನು ಕೌರವನು ಪಾಂಡವರ ಸುಳಿವನ್ನು ತಿಳಿಯುವುದಕ್ಕಾಗಿ ವಿರಾಟನ ಆಸ್ಥಾನಕ್ಕೆ ಕಳುಹಿಸಿದನು. ಜೀಮೂತನು ತನ್ನ ಜತೆಯವರಾದ ಸಿಂಧುರ ಮತ್ತು ಪಿಂಗಳ ಮೊದಲಾದವರೊಡನೆ ವಿರಾಟನ ಆಸ್ಥಾನದ ಜಟ್ಟಿಗಳನ್ನೆಲ್ಲಾ ಗೆದ್ದಾಗ ರಾಜನು ಕಂಕನ ಸೂಚನೆಯಂತೆ ವಲಲನನ್ನು ಕೌರವನ ಜಟ್ಟಿಗಳೊಡನೆ ಕಾದಾಡಲು ಬಿಡುತ್ತಾನೆ. ವಲಲನು ಸುಲಭದಲ್ಲಿ ಜೀಮೂತ ಮೊದಲಾದವರನ್ನೆಲ್ಲಾ ಗೆದ್ದು ನಾಶ ಮಾಡಿದನು. ಕೌರವನಿಗೆ ಈ ವಾರ್ತೆಯನ್ನು ತಿಳಿಸುವ ಜನರೂ ಇಲ್ಲವಾದರು.

ವಿರಾಟನಗರದ ಶಂಕರನ ಉತ್ಸವದಲ್ಲಿ ಬಂದ ಈ ಜಟ್ಟಿಯನ್ನು ಭೀಮನು ಕೊಂದನು (ಮ.ವಿ.). ೨. ಒಬ್ಬ ಮಹರ್ಷಿ. ಇವನು ಹಿಮವತ್ಪರ್ವತದ ಪಕ್ಕದಲ್ಲಿದ್ದ ಉಶೀರ ಬೀಜಕ್ಷೇತ್ರದಲ್ಲಿದ್ದವನು. ಇಲ್ಲೇ ಮರುತ್ತರಾಜನು ಯಜ್ಞಮಾಡಿದನು (ಮ.ಉ.).

ಜೀವ - ೧. ಮನುಷ್ಯ ಮತ್ತು ಪ್ರಾಣಿಗಳ ದೇಹದಲ್ಲಿದ್ದ ಶಕ್ತಿ. ಇದು ದೇಹಕ್ಕಿಂತ ಭಿನ್ನವಾದುದು. ೨. ಬೃಹಸ್ಪತಿ; ದೇವತೆಗಳ ಗುರು. ಇಂದ್ರನೊಮ್ಮೆ ಗುರುವಿನೊಡನೆ ಕೈಲಾಸಕ್ಕೆ ಶಿವದರ್ಶನಕ್ಕೆಂದು ಹೋದಾಗ ಬಾಗಿಲಲ್ಲಿ ಅವದೂತನ ವೇಷದಿಂದಿದ್ದ ಶಿವನನ್ನು ತಿರಸ್ಕರಿಸಲು ಶಿವನ ಹಣೆಯಿಂಬ ಕ್ರೋಧಾಗ್ನಿ ಹುಟ್ಟಲು ಬೃಹಸ್ಪತಿಯು ಇಂದ್ರನ ರಕ್ಷಣೆಗಾಗಿ ಶಿವನನ್ನು ಪ್ರಾರ್ಥಿಸಿ ಪ್ರಸನ್ನೀಕರಿಸಿಕೊಂಡನು. ಹೀಗೆ ಇಂದ್ರನ ಜೀವವನ್ನು ಬದುಕಿಸಿದ ಬೃಹಸ್ಪತಿಗೆ ಮುಂದೆ ಜೀವನೆಂಬ ಹೆಸರೇ ಶಾಶ್ವತವಾಯಿತು. ಮುಂದೆ ಶಿವನು ಈ ಮೂರನೇ ಕಣ್ಣಿನ ಬೆಂಕಿಯನ್ನು ಸಮುದ್ರದಲ್ಲಿ ಬಿಡಲು ಅಲ್ಲೇ ಜಲಂಧರನೆಂಬ ಮಹಾರಾಕ್ಷಸನ ಜನ್ಮವಾಯಿತು. ನೋ. - ಜಲಂಧರ, ವೃಂದೆ. (ಸ್ಕಾಂ,ಪು.,ಮ.,ಅನು.,ಆ.,ಸ್ತ್ರೀ.,ಅಶ್ವ.,ಶಾಂ.,ಭಾಗ.,ಶಿವಪು.).

ಜೀವಲ - ಋತುಪರ್ಣನ ಅಶ್ವಶಾಲೆಯ ಮುಖ್ಯಾಧಿಪತಿಯೊಬ್ಬ. ಈತನ ಸ್ನೇಹಿತನೇ ವಾರ್ಷ್ಣೇಯ. ಮುಂದೆ ನಳನು ಬಾಹುಕನೆಂಬ ಹೆಸರಿನಿಂದ ಅಯೋಧ್ಯೆಗೆ ಬಂದು ಅಶ್ವಶಾಲೆಯ ಅಧ್ಯಕ್ಷನಾದನು. ಈತನು ಅಯೋಧ್ಯೆಯಲ್ಲಿದ್ದಾಗ ದಮಯಂತಿಯ ಕುರಿತು ಚಿಂತಿಸುವುದನ್ನು ಕಂಡು

ಜೀವಲನು ಈತನ ದುಃಖದ ಕಾರಣವನ್ನು ಕೇಳುತ್ತ ಸಮಾಧಾನಪಡಿಸುತ್ತಿದ್ದನು (ಮ.ವ.).

ಜ್ಯಾಮಘ - ಈತನ ತಂದೆ ಪರಾಜಿತ. ರುಕ್ಮೇಷು, ಪೃಥುರುಕ್ಮ, ಫಲಿತ, ಹರಿ ಎಂಬ ನಾಲ್ವರು ಈತನ ಸಹೋದರರು. ಇವನ ಸಹೋದರರು ಇವನನ್ನು ದೇಶದಿಂದ ಹೊರಗೆ ಹಾಕಿಸಿದರು. ಕ್ಷಾತ್ರವೃತ್ತಿಯಿಂದ ನರ್ಮದಾತೀರದ ಪರಿಸರಗಳನ್ನು ಗೆದ್ದುಕೊಂಡನು. ಇವನ ರಾಜಧಾನಿ ಮೃತ್ತಿಕಾವತಿ; ಪತ್ನಿ ಶೈಬ್ಯೆ. ನೋ. - ಉಪದಾನವಿ (ಹರಿ.).

ಜೈಗೀಷವ್ಯ - ಇವನೊಬ್ಬ ಮಹರ್ಷಿ. ಈತನ ಪತ್ನಿ ಹಿಮವಂತನ ಮಗಳಾದ ಏಕಪಾಟಲೆ (ಹರಿ.). ಈ ಮುನಿಯೂ, ಕಪಿಲಮಹರ್ಷಿಯೂ ಕೂಡಿ ಒಮ್ಮೆ ಅಶ್ವಶಿರನೆಂಬ ರಾಜನ ಯಜ್ಞಶಾಲೆಗೆ ಹೋದರು. ಅಲ್ಲಿ ರಾಜನು ಮುನಿಗಳೊಡನೆ ತನಗೆ ಶ್ರೀಮನ್ನಾರಾಯಣನನ್ನು ಕಾಣಬೇಕೆಂದು ಪ್ರಾರ್ಥಿಸಲು ಕಪಿಲನು ವಿಷ್ಣುವಾದನು. ಜೈಗೀಷವ್ಯನು ಗರುಡನಾದನು. ಆಗ ರಾಜನಿಗೆ ವಿಶ್ವಾಸ ಹುಟ್ಟದಿರಲು ಮುನಿಗಳಿಬ್ಬರೂ ಅದೃಶ್ಯರಾದರು. ಯಾಗಶಾಲೆಯು ಒಮ್ಮೆಗೇ ಕ್ರೂರಮೃಗಗಳಿಂದ ತುಂಬಿಕೊಂಡಿತು. ಆಗ ರಾಜನು ಮುನಿಗಳಿಬ್ಬರನ್ನೂ ಪ್ರಾರ್ಥಿಸಲು ಮುನಿಗಳು ಮೈದೋರಿ - 'ರಾಜಾ, ಜಗನ್ನಿಯಾಮಕನಿಂದ ನಿರ್ಮಿತವಾದ ಸ್ಥಾವರ ಜಂಗಮಗಳನ್ನು ಸಮಾನ ದೃಷ್ಟಿಯಿಂದ ನೋಡುವುದೇ ಭಗವಂತನನ್ನು ನೋಡುವ ಮಾರ್ಗ' ಎಂದು ಉಪದೇಶಿಸಿದರು. ಜೈಗೀಷವ್ಯನ ಪತ್ನಿ ಏಕಪಾಟಲೆಯು ಪಾಟಲಪುಷ್ಪವನ್ನು ತಿಂದು ಘೋರ ತಪಸ್ಸನ್ನು ಮಾಡಿದಳು (ಹರಿ.,ಮತ್ಸ್ಯಪು.,ಮ.ಅನು.,ಶ.,ಶಾಂ., ದೇವೀಭಾ.).

ಜೈತ್ರ - ೧. ಧೃತರಾಷ್ಟ್ರನ ಮಗ. ಭೀಮನಿಂದ ಹತನಾದ (ಮ.ಆ.). ಜರಾಸಂಧನಲ್ಲಿ ಸೆರೆಬಿದ್ದಿದ್ದ ರಾಜರು ಶ್ರೀಕೃಷ್ಣಭಕ್ತನಾದ ಈತನ ಮೂಲಕ ತಮ್ಮನ್ನು ಬೇಗ ಬಿಡುಗಡೆ ಮಾಡಬೇಕೆಂದು ಪ್ರಾರ್ಥನೆಯನ್ನು ಕಳುಹಿಸಿದರು (ಭಾಗ.).

ಜೈಮಿನಿ - ಈತನು ಕುತ್ಸಋಷಿಯ ವಂಶದವನಾದುದರಿಂದ ಈತನಿಗೆ ಕೌತ್ಸಮುನಿ ಎಂಬ ಹೆಸರೂ ಇದೆ. ಜನಮೇಜಯನ ಸರ್ಪಯಾಗದಲ್ಲಿ ಉದ್ಗಾತೃವಾಗಿದ್ದನು (ಸಾಮಮಂತ್ರಗಳನ್ನು ಹೇಳುವವ). ಈತನು ಒಂದು ಭಾರತವನ್ನು ರಚಿಸಿದ್ದನಂತೆ. ಆದರೆ ಆ ಭಾರತದ ಅಶ್ವಮೇಧಪರ್ವ ಮಾತ್ರ ಜೈಮಿನಿಭಾರತವೆಂಬ ಹೆಸರಿನಿಂದ ಈಗ ರೂಢಿಯಲ್ಲಿದೆ. ಈತನು ವೇದವ್ಯಾಸನ ಒಬ್ಬ ಪ್ರಸಿದ್ಧ ಶಿಷ್ಯ. ವ್ಯಾಸನ ಶಿಷ್ಯರಲ್ಲಿ ಋಗ್ವೇದವನ್ನು ಪೈಲಮುನಿಯೂ, ಯಜುರ್ವೇದವನ್ನು ವೈಶಂಪಾಯನನೂ, ಅಥರ್ವವೇದವನ್ನು ಸುಮಂತುವೂ

ಸಾಂಗೋಪಾಂಗವಾಗಿ ಅಭ್ಯಾಸಮಾಡಿದ್ದರು. ಇವರೆಲ್ಲ ಜೈಮಿನಿಯ ಸಹಪಾಠಿಗಳು. ಜೈಮಿನಿಯು ಕರ್ಮಕಾಂಡವನ್ನು ಪ್ರತಿಪಾದಿಸುವ ಪೂರ್ವಮೀಮಾಂಸ ಶಾಸ್ತ್ರವನ್ನು ರಚಿಸಿದ್ದ; ನ್ಯಾಯಮಾಲಾವಿಸ್ತಾರವನ್ನೂ ಈತನೇ ಬರೆದನು (ಮ.ಆ.,ಸ.,ಶಾಂ.).

ಜ್ಯೇಷ್ಠಾ - ೧. ಸಮುದ್ರಮಥನದ ಲಕ್ಷ್ಮಿಗಿಂತ ಈಕೆ ಮೊದಲು ಜನಿಸಿದ್ದಳು; ವಿಷದ ಅನಂತರ ಜನಿಸಿದಳು. ಈಕೆಯನ್ನು ದುಸ್ಸಹನೆಂಬ ಬ್ರಹ್ಮರ್ಷಿಯೊಬ್ಬನು ಮದುವೆಯಾದನು. ಜ್ಯೇಷ್ಠಾದೇವಿಯ ಪತಿ ಮೃತ್ಯುದೇವತೆಯೆನ್ನುವುದೂ ಇದೆ. ಜ್ಯೇಷ್ಠಾದೇವಿಯೆಂದರೂ ಲಕ್ಷ್ಮಿ ಎಂದರೂ ಒಬ್ಬಳೇ. ಈಕೆಯ ಮಗ ಅಧರ್ಮ. ಈಕೆ ದಕ್ಷಬ್ರಹ್ಮನ ಮಗಳು. ಚಂದ್ರನ ಹೆಂಡತಿ. ೨೭ ನಕ್ಷತ್ರಗಳಲ್ಲೊಂದು (ಮ.ಆ.).

ಜೈಗೀಷವ್ಯ - ದೇವಲಋಷಿಯ ಆಶ್ರಮದಲ್ಲಿ ತಪಸ್ಸು ಮಾಡಿ ಸಿದ್ಧಿಹೊಂದಿದ ಮಹರ್ಷಿ (ಮ.ಶ.,ಸ.,ಅನು.,ಶಾಂ.,ಹರಿ.).

ಜೈಮೂತ - ಹಿಮವತ್ಪರ್ವತದ ಒಂದು ವನ. ಜೀಮೂತನೆಂಬ ಮುನಿಯು ತನ್ನ ಸಂಪತ್ತನ್ನೆಲ್ಲ ಬ್ರಾಹ್ಮಣರಿಗೆ ದಾನಮಾಡಿ ಇಲ್ಲಿ ತಪಸ್ಸುಮಾಡಿದನು (ಮ.ಉ.).

ಜ್ಯೋತಿರ್ಲಿಂಗಗಳು - ಶಿವಪುರಾಣದಲ್ಲಿ ಹನ್ನೆರಡು ಜ್ಯೋತಿರ್ಲಿಂಗಗಳನ್ನು ವರ್ಣಿಸಿದ್ದಾರೆ. ಸೌರಾಷ್ಟ್ರದಲ್ಲಿ ಸೋಮನಾಥ, ಶ್ರೀಶೈಲದಲ್ಲಿ ಮಲ್ಲಿಕಾರ್ಜುನ, ಉಜ್ಜಯಿನಿಯಲ್ಲಿ ಮಹಾಕಾಲೇಶ್ವರ, ನರ್ಮದಾತೀರದ ಅಮಲೇಶ್ವರದಲ್ಲಿ ಓಂಕಾರೇಶ್ವರ, ಹಿಮವತ್ಪರ್ವತದಲ್ಲಿ ಕೇದಾರನಾಥ, ಡಾಕಿನಿಯಲ್ಲಿ ಭೀಮಾಶಂಕರ, ಕಾಶಿಯಲ್ಲಿ ವಿಶ್ವೇಶ್ವರ, ಗೋದಾವರಿಯ ಉಗಮಸ್ಥಳದಲ್ಲಿ ತ್ರ್ಯಂಬಕೇಶ್ವರ, ಪರಲಿಯಲ್ಲಿ ವೈದ್ಯನಾಥ, ದಾರುಕಾವನದಲ್ಲಿ ನಾಗೇಶ್ವರ, ಸೇತುಬಂಧದಲ್ಲಿ ರಾಮೇಶ್ವರ, ಶಿವಾಲಯದಲ್ಲಿ ಘುಸ್ಮೇಶ್ವರ, ಈ ಪುಣ್ಯಕ್ಷೇತ್ರ ಮತ್ತು ಲಿಂಗಗಳ ಸಂದರ್ಶನವು ಪುಣ್ಯಕರವಾದುದೆಂದೂ ಹಿಂದೂಶಾಸ್ತ್ರಗಳು ಸಾರುತ್ತಿವೆ. (ಶಿವಪು.).

ಜ್ಯೋತಿಷ್ಮಂತ - ಪ್ರಿಯವ್ರತ ಮಹಾರಾಜನ ಕಿರಿಯ ಮಗ. ಕರ್ದಮ ಮಹರ್ಷಿಯ ಪುತ್ರಿಯಾದ ಕುಕ್ಷಿ ಈತನ ತಾಯಿ, ಅಗ್ನೀಧ್ರ, ಅಗ್ನಿಬಾಹು ಮೊದಲಾದ ಒಂಬತ್ತು ಮಂದಿ ಈತನ ಅಣ್ಣಂದಿರು. ಸಮ್ರಾಟ್ ಮತ್ತು ಕುಕ್ಷಿ ಎಂಬವರು ಸೋದರಿಯರು (ವಿಷ್ಣುಪು.). ಇವನಿಗೆ ಹಿರಣ್ಯರೇತನೆಂಬ ಹೆಸರೂ ಇದೆ. ಇವನು ಕುಶದ್ವೀಪದ ರಾಜ (ಭಾಗ.).

ಜ್ಯೋತ್ಸ್ನಾಕಾಲೀ - ಚಂದ್ರನ ಮಗಳ ಎರಡು ಹೆಸರುಗಳು (ಜ್ಯೋತ್ಸ್ನಾ ಮತ್ತು ಕಾಳಿ). ಇವಳು ವರುಣಪುತ್ರನಾದ ಪುಷ್ಕರನನ್ನು ಸ್ವಯಂವರಿಸಿರುವಳು (ಮ.ಉ.).

ಜ್ವಲಂತಿ (ಜ್ವಲನಾ) - ತಕ್ಷಕನ ಪುತ್ರಿ. ಖಾಂಡವನ ದಹನಕಾಲದಲ್ಲಿ ಈಕೆಯ ತಾಯಿ ಅಗ್ನಿಯಿಂದ ತಪ್ಪಿಸಿಕೊಂಡು ಹೋಗುತ್ತಿದ್ದಾಗ ಅರ್ಜುನನು ಈಕೆಯ ತಲೆಯನ್ನು ಕತ್ತರಿಸಿದ. ಜ್ವಲಂತಿಯ ಪತಿಯು ಚಂದ್ರವಂಶದ ಋಚನೆಂಬವನ ಪುತ್ರನಾದ ಋಕ್ಷ. ಮಗನು ಅಂತಿನಾರ (ಅಂತ್ಯನಾರ) (ಮ.ಆ.).

ಜ್ವಾಲೆ - ಮಾಹಿಷ್ಮತಿ ನಗರದ ರಾಜನಾದ ನೀಲಧ್ವಜನ ಪತ್ನಿ. ಈಕೆಯ ಮಗಳು ಸ್ವಾಹೆ; ಅಳಿಯ ಅಗ್ನಿ. ಧರ್ಮರಾಜನ ಅಶ್ವಮೇಧದ ಕುದುರೆಯನ್ನು ನೀಲಧ್ವಜನು ಕಟ್ಟಿ, ಕುದುರೆಯ ರಕ್ಷಣೆಗೆ ಬಂದ ಅರ್ಜುನನೊಡನೆ ಹೋರಾಡಿ ಸೋತನು. ನೀಲಧ್ವಜನ ಪುತ್ರನಾದ ಪ್ರವೀರನು ಯುದ್ಧದಲ್ಲಿ ಅರ್ಜುನನಿಂದ ಸತ್ತನು. ಇದರಿಂದ ಯುದ್ಧಕ್ಕೆ ಜ್ವಾಲೆಯಿಂದ ಪ್ರೇರಿತನಾದ ನೀಲಧ್ವಜನು ಪತ್ನಿಗೆ ಮುಳಿದು ಆಕೆಯನ್ನು ಮನೆಯಿಂದ ಹೊರನೂಕಿದನು. ಅವಳು ತನ್ನ ತಮ್ಮನಾದ ಉನ್ಮುಖನಲ್ಲಿಗೆ ಬಂದು ಅವನನ್ನು ಅರ್ಜುನನ ಇದಿರಾಗಿ ಎತ್ತಿಕಟ್ಟಲು ಪ್ರಯತ್ನಿಸಿ ವಿಫಲಳಾಗಿ ಗಂಗಾತೀರವನ್ನು ಸೇರಿ, ಗಂಗೆಗೆ ಕೋಪ ಬರುವಂತೆ ಮಾಡಿ ಆಕೆಯಿಂದ ಅರ್ಜುನನಿಗೆ ಶಾಪಕೊಡಿಸಿದಳು. ಜ್ವಾಲೆಯು ಅಷ್ಟಕ್ಕೂ ತೃಪ್ತಳಾಗದೆ ಗಂಗಾನದಿಯ ತೀರದಲ್ಲಿ ಅಗ್ನಿ ಪ್ರವೇಶ ಮಾಡಿ ಅರ್ಜುನನ ತಲೆ ತೆಗೆಯುವ ಬಾಣವಾಗಿ ಬಭ್ರುವಾಹನನ ಬತ್ತಳಿಕೆಯಲ್ಲಿ ಸೇರಿಕೊಂಡಳು (ಜೈ.ಭಾ.).

ಝ

ಝಿಲ್ಲಿಕಾ - ಒಂದು ದೇಶ (ಮ.ಭೀ.).

ಝಿಲ್ಲಿ - ವೃಷ್ಣಿವಂಶದ ಕ್ಷತ್ರಿಯನೊಬ್ಬ (ಮ.ಆ.).

ಡ

ಡಂಭೋದ್ಭವ - ದುರಭಿಮಾನಿಯಾದ ಕ್ಷತ್ರಿಯನೊಬ್ಬ. ಇವನು ಭೂಮಂಡಲವನ್ನೆಲ್ಲ ಏಕಚ್ಛತ್ರವಾಗಿ ಆಳುತ್ತ ಪ್ರತಿದಿನ ನಾಲ್ಕು ವರ್ಣದವರನ್ನೂ ತನ್ನ ಅರಮನೆಗೆ ಕರೆಸಿ ತನಗೆ ಸಮಾನವಾದ ಅಥವಾ ಅಧಿಕನಾದ ಶಸ್ತ್ರಧಾರಿಯು ಲೋಕದಲ್ಲಿರುವನೇ? ಎಂದು ಎಲ್ಲರನ್ನೂ ಕೇಳುತ್ತ ಯಾರನ್ನೂ ಲಕ್ಷ್ಯಮಾಡದೆ ಇದ್ದನು. ಒಂದು ದಿನ ತಪಸ್ಸಂಪನ್ನರಾದ ಬ್ರಾಹ್ಮಣರು ರಾಜನೊಡನೆ - 'ರಾಜನೇ, ಯುದ್ಧದಲ್ಲಿ ನಿನ್ನನ್ನು ಮೀರಿದ

ಇಬ್ಬರು ಪುರುಷಶ್ರೇಷ್ಠರಿರುವರು. ಅವರು ನರನಾರಾಯಣರೆಂದು ಪ್ರಸಿದ್ಧರಾಗಿ ಗಂಧಮಾದನಪರ್ವತದಲ್ಲಿ ಘೋರವಾದ ತಪಸ್ಸು ಮಾಡುತ್ತಿರುವರು' ಎನ್ನಲು ಡಂಭೋದ್ಭವನು ಚತುರಂಗಸೈನ್ಯದೊಡನೆ ಗಂಧಮಾದನಪರ್ವತಕ್ಕೆ ಹೋಗಿ ಆ ಮುನಿಗಳನ್ನು ಆಕ್ರಮಿಸಿದನು. ಆಗ ನರನಾರಾಯಣರು ಈ ರಾಜನಿಗೆ ಬುದ್ಧಿ ಹೇಳಿದರೂ ಕೇಳದೆ ಯುದ್ಧವನ್ನೇ ಬಯಸಲು ಅವರಲ್ಲಿ ನರನೆಂಬ ಮಹರ್ಷಿಯು ಕೆಲವು ಹಂಚೀಕಡ್ಡಿಗಳನ್ನು ಹಿಡಿದುಕೊಂಡು 'ಸಕಲ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸು. ನಿನ್ನ ಯುದ್ಧದ ಬಾಯಾರಿಕೆಯನ್ನು ಹೋಗಲಾಡಿಸುವೆನು' ಎಂದನು. ರಾಜನು ತನ್ನಲ್ಲಿದ್ದ ಮಹಾಸ್ತ್ರಗಳನ್ನು ಮುನಿಯ ಮೇಲೆ ಪ್ರಯೋಗಿಸುತ್ತ ಬಂದಂತೆ ಆ ಹಂಚೀಕಡ್ಡಿಗಳು ಅವನ್ನು ಮುರಿದುಹಾಕುತ್ತ ಬಂದವು. ಕೊನೆಗೆ ಮುನಿಯು ಒಂದು ಹಂಚೀಕಡ್ಡಿಯನ್ನು ಐಷಿಕವೆಂಬ ಮಹಾಸ್ತ್ರದ ಮಂತ್ರದಿಂದ ಅಭಿಮಂತ್ರಿಸಿ ರಾಜನ ಮೇಲೆ ಬಿಡಲು ಆ ಅಸ್ತ್ರವು ಅನೇಕ ಮಹಾಸ್ತ್ರಗಳನ್ನು ಹೊರಬಿಡುತ್ತ ರಾಜನ ಸೈನಿಕರ ಕಣ್ಣು, ಬೆನ್ನು, ನಡು, ಕಾಲು, ಕೈ, ತಲೆ., ಬಾಹುಗಳನ್ನು ಛೇದಿಸಿಕೊಂಡು ಹೊರಬಂದು ಆಕಾಶವನ್ನೆಲ್ಲ ಬಾಣಮಯವನ್ನಾಗಿ ಮಾಡಿತು. ಆಗ ಭಯಭ್ರಾಂತನಾದ ರಾಜನು ನರ ಮಹರ್ಷಿಯ ಪಾದಕಮಲಗಳ ಮೇಲೆ ತನ್ನ ಶಿರಸ್ಸನ್ನಿರಿಸಿ ಆತನಿಗೆ ಶರಣಾಗತನಾದನು. ಮುಂದೆ ನರಮಹರ್ಷಿಯ ಉಪದೇಶದಂತೆ ಧರ್ಮಮಾರ್ಗದಲ್ಲೇ ರಾಜನು ನಡೆಯತೊಡಗಿದನು (ಮ.ವಿ.,ಉ.).

ಡಿಬಿಕ (ಡಿಂಭಕ) - (ಮ.ಸ.) ಸಾಳ್ವರಾಜನಾದ ಬ್ರಹ್ಮದತ್ತನ ಮಗ; ಹಂಸನ ಸಹೋದರ; ಜರಾಸಂಧನ ಪ್ರಧಾನಮಂತ್ರಿ. ಈ ಸಹೋದರರಿಬ್ಬರೂ ಶಿವನನ್ನು ಕುರಿತು ತಪಸ್ಸಮಾಡಿ ಶಸ್ತ್ರಗಳಿಂದ ಮರಣವಾಗದಂತೆ ವರ ಪಡೆದಿದ್ದರು. ಶ್ರೀಕೃಷ್ಣನೊಡನೆ ಹಂಸನು ಯುದ್ಧಮಾಡಿ ಮೂರ್ಛಿತನಾದಾಗ ಡಿಬಿಕನು ಹಂಸನು ಸತ್ತನೆಂದೇ ಭಾವಿಸಿ ತಾನು ಯಮುನಾ ನದಿಗೆ ಹಾರಿ ಪ್ರಾಣತ್ಯಾಗ ಮಾಡಿದನು. ಹಂಸನು ಎಚ್ಚರಗೊಂಡಮೇಲೆ ಡಿಬಿಕನ ಮರಣವಾರ್ತೆಯನ್ನು ಕೇಳಿ ನಾಲಗೆ ಕಿತ್ತುಕೊಂಡು ಯಮುನಾ ನದಿಗೆ ಹಾರಿ ತಾನು ಪ್ರಾಣತ್ಯಾಗ ಮಾಡಿದನು (ಮ.ವ.,ಹರಿ.). ನೋ. - ಹಂಸ.

ಡುಂಡುಭ - ಶಾಪದಿಂದ ಸಹಸ್ರಪಾದನೆಂಬ ಬ್ರಾಹ್ಮಣನು ಡುಂಡುಭವಾಗಿದ್ದ (ಕೆರೆಹಾವು). ನೋ. - ಖಗಮ. ಸಹಸ್ರಪಾದನೆಂಬ ಬ್ರಾಹ್ಮಣ ಖಗಮನೆಂಬ ಬ್ರಾಹ್ಮಣ ಸ್ನೇಹಿತನನ್ನು ಹುಲ್ಲುಹಗ್ಗವನ್ನು ಸರ್ಪದಂತೆ ಮಾಡಿ ಹೆದರಿಸಲು ಖಗಮನು ಇವನಿಗೆ ಕೆರೆಹಾವಾಗುವಂತೆ ಶಾಪವಿತ್ತನು. ಸಹಸ್ರಪಾದನು ಅಪರಾಧವನ್ನು ಕ್ಷಮಿಸುವಂತೆ ಖಗಮನನ್ನು ಪ್ರಾರ್ಥಿಸಲು ಅವನು 'ರುರುಮಹರ್ಷಿಯಿಂದ ಹೊಡೆತ ತಿಂದಾಗ ನಿನ್ನ ಶಾಪವಿಮೋಚನೆಯಾಗುತ್ತದೆ'

ಎಂದನು. ಮುಂದೆ ರುರುವು ಸರ್ಪ ಕಚ್ಚಿ ಮಡಿದ ಪ್ರಮದ್ವರೆಗೆ ತನ್ನ ಅರ್ಧಾಯುಷ್ಯವನ್ನು ಕೊಟ್ಟು ಬದುಕಿಸಿದ ಮೇಲೆ ಹಾವುಗಳನ್ನು ಕಂಡಾಗಲೆಲ್ಲ' ಕೊಲ್ಲುತ್ತ ಬಂದನು. ಒಂದು ದಿನ ರುರುವು ಅರಣ್ಯದಲ್ಲಿ ಸಂಚರಿಸುವಾಗ ದೊಡ್ಡ ಕೆರೆಹಾವನ್ನು ಕಂಡು ಕೊಲ್ಲಲು ಸಿದ್ಧನಾಗಲು ಅದು - 'ಮುನಿಯೇ, ನಿನ್ನ ಪತ್ನಿಯನ್ನು ಕೊಂದ ಹಾವು ನಾನಲ್ಲ. ನಾನು ನಿರ್ವಿಷವುಳ್ಳ ಹಾವು. ನಿನ್ನ ದರ್ಶನದಿಂದ ನನ್ನ ಶಾಪ ಪರಿಹಾರವಾಯಿತೆಂದು ಬ್ರಾಹ್ಮಣನಾಗಿ ಕಾಣಿಸಿಕೊಂಡು ರುರುವಿಗೆ - 'ಬ್ರಾಹ್ಮಣನಿಗೆ ಹಿಂಸೆ ಸಲ್ಲದು. ಮುಂದೆ ಜನಮೇಜಯನು ಸರ್ಪಯಾಗವನ್ನು ಮಾಡಿ ಸರ್ಪಗಳ ಕುಲವನ್ನು ನಾಶಮಾಡುವನು' ಎಂದು ಸಹಸ್ರಪಾದನು ಜನಮೇಜಯನ ಕತೆಯನ್ನು ಹೇಳಿ ಹೊರಟುಹೋದನು (ಮ.ಆ.).

ಡಿಲ್ಲಿ - ಇದು ಪ್ರಾಚೀನಕಾಲದಿಂದಲೂ ಭಾರತದ ರಾಜಧಾನಿ. ಪಾಂಡವರ ಕಾಲದಲ್ಲಿ ಇದೇ ಹಸ್ತಿನಾವತಿ. ಇಲ್ಲಿ ಹಳೆ ದಿಲ್ಲಿ, ಹೊಸ ದಿಲ್ಲಿ ಎಂಬೆರಡು ಭಾಗಗಳಿವೆ. ಕುತುಬ್‌ಮಿನಾರದ ಹತ್ತಿರ ಪಾಂಡವರ ಇಂದ್ರಪ್ರಸ್ಥವಿತ್ತು. ಮೀರತ್ - ಡಿಲ್ಲಿಗಳ ನಡುವೆ ಹಸ್ತಿನಾಪುರವಿತ್ತೆಂದು ಹೇಳುತ್ತಾರೆ (ಕ್ಷೇತ್ರದ).

ತ

ತಕ್ಷ - ಶ್ರೀರಾಮನ ತಮ್ಮನಾದ ಭರತನ ಹಿರಿಯ ಮಗ. ನೋ. ಪಂಚಾಕ್ಷರ. ಪುಷ್ಕರನು (ಪುಷ್ಕಲ) ಇವನ ತಮ್ಮ; ಮಾಂಡವಿಯು ಈತನ ತಾಯಿ. ಇವನಿಗೆ ಕಾಳಿಕಾ ಮತ್ತು ಚಪಲಾ ಎಂಬ ಇಬ್ಬರು ಹೆಂಡಿರು. ಈತನ ರಾಜಧಾನಿ ತಕ್ಷಶಿಲಾ. ನೋ. - ತಕ್ಷಶಿಲಾ (ಮ.ಆ.,ಉತ್ತರರಾಮ.).

ತಕ್ಷಕ - ೧. ಕದ್ರುವಿನ ಪುತ್ರ; ಇಪ್ಪತ್ತೇಳು ನಾಗಕುಲಗಳಿಗೆ ರಾಜನಾಗಿದ್ದ. ಈತನ ತಂದೆ ಕಶ್ಯಪ. ಉತ್ತಂಕಮುನಿಯು ಗುರುದಕ್ಷಿಣೆಗಾಗಿ ಮದಯಂತಿಯ ಕುಂಡಲಗಳನ್ನು ತರುತ್ತಿದ್ದಾಗ ಸನ್ಯಾಸಿವೇಷದಿಂದ ಬಂದು ಅವುಗಳನ್ನು ಅಪಹರಿಸಿದರೂ, ಆ ಕುಂಡಲಗಳನ್ನು ಪುನಃ ಉತ್ತಂಕನಿಗೇ ಒಪ್ಪಿಸಬೇಕಾಯಿತು. ಆದರೂ ಉತ್ತಂಕನು ತಕ್ಷಕನ ಮೇಲಿನ ದ್ವೇಷವನ್ನು ಮರೆಯದೆ ಜನಮೇಜಯ ರಾಜನನ್ನು ಪ್ರೇರೇಪಿಸಿ ಸರ್ಪಯಾಗವನ್ನು ಮಾಡಿ ಹದಿನೆಂಟು ನಾಗಕುಲಗಳನ್ನು ನಾಶಮಾಡಿದ. ಆಗ ಆಸ್ತೀಕನ ಪ್ರಭಾವದಿಂದ ತಕ್ಷಕನು ಉಳಿದುಕೊಂಡ. ನೋ. - ಆಸ್ತೀಕ. ಅಶ್ವಸೇನ ಮತ್ತು ಶ್ರುತಸೇನರು ಈತನ ಮಕ್ಕಳು. ಇವನು ಪರೀಕ್ಷಿದ್ರಾಜನಿಗೆ ಕಚ್ಚಲಿಕ್ಕೆ ಬರುವ ದಾರಿಯಲ್ಲಿ ಈತನನ್ನು ಉಳಿಸಲು ಹೋಗುತ್ತಿದ್ದ ಕಶ್ಯಪನೆಂಬ ಬ್ರಾಹ್ಮಣನ ಶಕ್ತಿ ಪರೀಕ್ಷೆಗೆ ಚಿಗುರಿದ್ದ ಒಂದು ದೊಡ್ಡ ಆಲದ ಮರವನ್ನು ಕಚ್ಚಲು ಅದು ಬೂದಿರಾಶಿಯಾಗಿ ಬಿತ್ತು.

ಕಶ್ಯಪನು ತನ್ನ ಮಂತ್ರಶಕ್ತಿಯಿಂದ ಅದನ್ನು ಮೊದಲಿನಂತೆ ಮಾಡಲು ತಕ್ಷಕನು ಅವನಿಗೆ ವಿಪುಲ ದ್ರವ್ಯವನ್ನಿತ್ತು ಹಿಂದೆ ಕಳುಹಿಸಿ ತಾನು ರಾಜನನ್ನು ಕಚ್ಚಿ ಕೊಂದನು. ಖಾಂಡವವನ ದಹನಕಾಲದಲ್ಲಿ ಈತನು ಕುರುಕ್ಷೇತ್ರದಲ್ಲಿದ್ದುದರಿಂದ ಬದುಕಿಕೊಂಡನು. ಆ ವೇಳೆ ಅಗ್ನಿಯಿಂದ ತಪ್ಪಿಸಿಕೊಂಡು ಹೋಗುತ್ತಿದ್ದ ಪತ್ನಿಯ ಶಿರಶ್ಛೇಧವನ್ನು ಅರ್ಜುನನು ಮಾಡಿದನು. ಜನಮೇಜಯನ ಸರ್ಪಯಾಗದಲ್ಲಿ ಈತನು ಇಂದ್ರನ ಮೊರೆಹೊಕ್ಕಿದ್ದ. ಈತನು ಭಯಂಕರ ವಿಷವುಳ್ಳವ.

ಉತ್ತಂಕನ ಗುರುಪತ್ನಿಯು, ಆತನೊಡನೆ ಪೌಷ್ಯನೆಂಬ ರಾಜನ ಪತ್ನಿಯ ಕಿವಿಯಲ್ಲಿದ್ದ ಕುಂಡಲಗಳನ್ನು ತಂದುಕೊಡಬೇಕೆಂದೂ, ಅವನ್ನು ತಾರದಿದ್ದರೆ ನೀನು ಓದಿದ ವಿದ್ಯೆಯು ಫಲಿಸುವುದಿಲ್ಲವೆಂದೂ ಹೇಳಲು ಆತನು ಆ ರಾಣಿಯಿಂದ ಕುಂಡಲಗಳನ್ನು ಪಡೆದು ಬರುವಾಗ ತಕ್ಷಕನು ಕ್ಷಪಣಕನ ವೇಷದಿಂದ ಉತ್ತಂಕನನ್ನು ಹಿಂಬಾಲಿಸಿದನು. ಉತ್ತಂಕನು ಮಾರ್ಗದಲ್ಲಿ ಶೌಚಾಚಮನವನ್ನು ಮಾಡಿಕೊಂಡು ಬರಲು ಕುಂಡಲವನ್ನು ನೆಲದ ಮೇಲಿಟ್ಟು ನೀರಿಗಿಳಿಯಲು ಕ್ಷಪಣಕನು ಸಮಯವನ್ನು ಕಾಯುತ್ತಿದ್ದು ಕುಂಡಲಗಳನ್ನೆತ್ತಿಕೊಂಡು ಓಡತೊಡಗಿದನು. ಮೇಲೆ ಬಂದು ಉತ್ತಂಕನು ಆ ಕ್ಷಪಣಕನನ್ನು ಹಿಂಬಾಲಿಸಿ ಹಿಡಿದುಬಿಟ್ಟನು. ಋಷಿಯ ಸ್ಪರ್ಶವಾದೊಡನೆ ಕ್ಷಪಣಕನು ತಕ್ಷಕನಾಗಿ ಅಲ್ಲೇ ಇದ್ದ ಒಂದು ಬಿಲವನ್ನು ಪ್ರವೇಶಮಾಡಿ ನಾಗಲೋಕವನ್ನು ಸೇರಿಬಿಟ್ಟನು. ಆದರೂ ಉತ್ತಂಕನು ಬಿಡದೆ ತನ್ನ ದಂಡದಿಂದ ಬಿಲವನ್ನು ಅಗೆಯತೊಡಗಲು ಇಂದ್ರನ ಅನುಗ್ರಹದಿಂದ ಆತನ ದಂಡಕ್ಕೆ ವಜ್ರಾಯುಧದ ಶಕ್ತಿ ಬಂದು ಆತನು ನಾಗಲೋಕವನ್ನು ಸೇರಲು ಸಮರ್ಥನಾದನು. ಮುಂದೆ ಇಂದ್ರನ ಸೂಚನೆಯಂತೆ ಆತನು ಏರಿಕೊಂಡು ಬಂದ ಕುದುರೆಯ ಪೃಷ್ಠಭಾಗವನ್ನೂದಲು ಆ ಕುದುರೆಯ ರೋಮರಂಧ್ರಗಳಿಂದ ಅಗ್ನಿಜ್ವಾಲೆ ಹೊರಟು ನಾಗಲೋಕವನ್ನು ಸುಡತೊಡಗಲು ತಕ್ಷಕನು ಅಗ್ನಿಭಯದಿಂದ ಉತ್ತಂಕನಿಗೆ ಶರಣುಬಂದು ಕುಂಡಲಗಳನ್ನೊಪ್ಪಿಸಿದನು. ಆಗ ಉತ್ತಂಕನು ಇಂದ್ರನ ವಾಹನವಾದ ಕುದುರೆಯನ್ನು ಏರಿ ಗುರುಪತ್ನಿಯ ಬಳಿಗೆ ಬಂದು ಆ ಕುಂಡಲಗಳನ್ನೊಪ್ಪಿಸಿದನು. ನೋ. - ಉತ್ತಂಕ, ಬೈದ (ಮ.ಆ.,ಸ.,ಉ.,ಭಾಗ., ದೇವಿಭಾ.). ೨. ಒಬ್ಬ ಕ್ಷತ್ರಿಯ. ಸೂರ್ಯವಂಶದ ಪ್ರಸೇನಜಿತನು ಈತನ ತಂದೆ. ಪರಶುರಾಮನ ತಾಯಿಯಾದ ರೇಣುಕೆಯು ಈತನ ಸಹೋದರಿ. ಈತನ ಮಗನಾದ ಬೃಹದ್ಬಲನು ಕೌರವಪಕ್ಷದಲ್ಲಿ ನಿಂತು ಹೋರಾಡಿ ಅಭಿಮನ್ಯುವಿನಿಂದ ಮೃತನಾದನು (ಮ.ದ್ರೋ.).

ತಕ್ಷಶಿಲೆ - ಇದು ಸಿಂಧು ಮತ್ತು ವಿತಸ್ತಾ (ಜೀಲಂ) ನದಿಗಳ ನಡುವೆ ಇದೆ. ಅಟಕ್ ಮತ್ತು ರಾವಲ್‌ಪಿಂಡಿಗಳ ನಡುವೆ ಈ ನಗರವಿದೆ. ಇದು ಶ್ರೀರಾಮಚಂದ್ರನ ಸಹೋದರನಾದ ಭರತನ ಪುತ್ರ ತಕ್ಷನಿಂದ ನಿರ್ಮಾಣ ಹೊಂದಿದ ನಗರ. ಪಾಂಡವರ ಕಾಲದಲ್ಲಿ ಇದು ಗಾಂಧಾರದೇಶದ ರಾಜಧಾನಿಯಾಗಿತ್ತು (ಮ.ಆ.,ಉತ್ತರರಾಮ.).

ತಟಾತಕೆ - ಮಲಯಧ್ವಜರಾಜನು ಈಕೆಯ ತಂದೆ; ಕಾಂಚನಮಾಲೆಯು ತಾಯಿ. ಈಕೆಯು ಪಾಂಡ್ಯದೇಶದ ಸೋಮಸುಂದರನನ್ನು ಲಗ್ನವಾಗಿ ಉಗ್ರಪಾಂಡ್ಯನೆಂಬ ಮಗನನ್ನು ಪಡೆದು ಆತನು ಪ್ರಾಪ್ತವಯಸ್ಕನಾದ ಮೇಲೆ ಆತನಿಗೆ ಪಟ್ಟಕಟ್ಟಿ ತಾನು ಸೋಮಸುಂದರ ಮಂದಿರದಲ್ಲೇ ಅದೃಶ್ಯಳಾದಳು. ಈಕೆಯನ್ನು ಪಾರ್ವತಿಯ ಅವತಾರವೆನ್ನುತ್ತಾರೆ (ಸ್ಕಾಂ.ಪು.).

ತಂಜಾವರ - ತಿರುಚನಾಪಳ್ಳಿಯಿಂದ ೩೧ ಮೈಲು ದೂರವಿದ್ದ ಪಟ್ಟಣ. ಇದು ಪರಾಶರ ಕ್ಷೇತ್ರ. ಇದು ತಂಜನ್ ಎಂಬ ರಾಕ್ಷಸನ ವಾಸಸ್ಥಳ. ವಿಷ್ಣುವು ಆತನನ್ನು ಸಂಹರಿಸಲು ಅವನು ಸಾಯುವ ಕಾಲದಲ್ಲಿ ಈ ಪಟ್ಟಣವು ಪವಿತ್ರಸ್ಥಳವಾಗಿ, ತನ್ನ ಹೆಸರಿನಿಂದ ಪ್ರಸಿದ್ಧ ಸ್ಥಳವಾಗಬೇಕೆಂದು ಪ್ರಾರ್ಥಿಸಿಕೊಂಡನು. ಮುಂದೆ ಇದು ತಂಜಪುರವಾಯಿತು. ಚೋಳವಂಶದ ರಾಜ ರಾಜೇಶ್ವರನೆಂಬ ರಾಜನು ರಾಜ್ಯವಾಳುತ್ತಿದ್ದಾಗ ಶಿವನು ಅವನಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು 'ನರ್ಮದಾ ನದಿಯಲ್ಲಿ ನನ್ನದೊಂದು ವಿಗ್ರಹವಿದೆ. ಅದನ್ನು ತಂದು ಸ್ಥಾಪಿಸು' ಎಂದು ಅಪ್ಪಣೆಮಾಡಿದನು. ರಾಜರಾಜನು ಆ ಲಿಂಗವನ್ನು ಅಲ್ಲಿಂದ ತರಿಸಿ ಏಳು ವರ್ಷಗಳಲ್ಲಿ ಒಂದು ಭವ್ಯವಾದ ದೇವಾಲಯವನ್ನು ಕಟ್ಟಿ ಮುಗಿಸಿ ಈ ಲಿಂಗವನ್ನಲ್ಲಿ ಸ್ಥಾಪಿಸಿದನು (ಕ್ಷೇತ್ರದ.).

ತಂಡಿ - ಬ್ರಾಹ್ಮಣನೊಬ್ಬ; ಶಿವಭಕ್ತ (ಮ.ಶಾಂ.,ಅನು.,ಲಿಂಗಪು.).

ತಂಡುಲಪ್ರಸ್ಥ - ಜರಾಸಂಧನು ರುದ್ರೋಪಾಸನೆಯನ್ನು ಮಾಡಿದ ಸ್ಥಳ. ಇಲ್ಲಿಯ ಶಿವಾಲಯದಲ್ಲಿ ಸಾಮಾನ್ಯ ಜಂತುಗಳಂತೆ ನೂರಾರು ಮಂದಿ ರಾಜರನ್ನು ಬಲಿಗಾಗಿ ಸೆರೆಹಿಡಿದಿಟ್ಟಿದ್ದನು. (ಮ.ಸ.).

ತನು - ಮಹರ್ಷಿ. ಇವನಿಗೆ ಕೃಶನೆಂಬ ಹೆಸರೂ ಇದೆ. ಈತನು ಮಹಾಜ್ಞಾನಿ. ಋಷಭಕೂಟಪರ್ವತದಲ್ಲಿ ವಾಸವಾಗಿದ್ದ ಋಷಭನೆಂಬ ಒಬ್ಬ ಮುನಿಯೊಂದಿಗೆ 'ಆಸೆ ಆಕಾಶಕ್ಕಿಂತಲೂ ದೊಡ್ಡದು' ಎಂಬ ವಿಷಯವಾಗಿ ವಿವಾದ ಮಾಡಿದವ (ಮ.ಶಾಂ.).

ತಂತ್ರೀಪಾಲ - ಅಜ್ಞಾತವಾಸಕಾಲದಲ್ಲಿ ವಿರಾಟನಗರಿಯಲ್ಲಿ ಗೋಪಾಲಕನ ವೇಷದಿಂದಿದ್ದ ಸಹದೇವನ ಹೆಸರು. ಇವನಿಗೆ ಆಗ ಜಯದಲನೆಂಬುದು

ಗುಪ್ತನಾಮ. ಇವನಿಗೆ ತಂತಿಪಾಲನೆಂಬ ಹೆಸರೂ ಇದೆ (ತಂತಿ= ವಿಸ್ತಾರವಾದ ಪ್ರತಿಜ್ಞೆಯನ್ನು+ ಪಾಲ= ಪಾಲಿಸುವವನು) (ಮ.ವಿ.).

ತಪತಿ - ೧. ಸೂರ್ಯಪುತ್ರಿ; ಈಕೆಯ ತಾಯಿ ಛಾಯಾದೇವಿ. ಚಂದ್ರವಂಶದ ಸಂವರಣ ರಾಜನು ಈಕೆಯ ಪತಿ. ಈಕೆಯ ಮಗ ಕುರು; ಸಹೋದರರು ಶನೈಶ್ಚರ ಮತ್ತು ಸಾವರ್ಣಿ ಎಂಬ ಮನುಗಳು. ಸಾವಿತ್ರಿಯು ಈಕೆಯ ಅಕ್ಕ (ಮ.ಆ.,ಭಾಗ.). ೨. ತಪತಿ ನದಿ. ಈ ನದಿಯ ದಡದ ಮೇಲೆ ದೇವವೈದ್ಯರಾದ ಅಶ್ವಿನೀಕುಮಾರರು ತಪವನ್ನು ಆಚರಿಸಿದ್ದರು. ಆ ನದಿಗೆ ತಾಪಿ ಎಂದೂ ಹೆಸರುಂಟು. ಈ ನದಿಯಿಂದ ಸುರತಪಟ್ಟಣಕ್ಕೆ ಮೂರು ಮೈಲು ದೂರವಿದೆ. ಸೂರತ ಬಂದರದ ಮೊದಲಿನ ಹೆಸರು ಸೂರ್ಯಪುರವೆಂದು (ಕ್ಷೇತ್ರದ.).

ತಪನ - ೧. ಅಮೃತರಕ್ಷಕನಾದ ದೇವತೆಯೊಬ್ಬ (ಮ.ಆ.). ೨. ಪಾಂಚಾಲನೊಬ್ಬ. ಈ ರಾಜನು ಭಾರತಯುದ್ಧದಲ್ಲಿ ಕರ್ಣನಿಂದ ಮಡಿದನು (ಮ.ಕ.). ೩. ಒಬ್ಬ ರಾಕ್ಷಸ. ಸುಗ್ರೀವನ ಸೇನಾಪತಿಯಾದ ಗಜನಿಂದ ಹತನಾದನು (ರಾಮಾ.ಯುದ್ಧ.). ೪. ಸೂರ್ಯ; ದಿನವ್ಯಾಪಾರಗಳನ್ನು ಪ್ರೇರೇಪಿಸುವವನು, ತಪಿಸುವವನು.

ತಪೋದ - ಕಾಕ್ಷೀವಂತನೆಂಬ ಮಹರ್ಷಿಯ ತಪೋಬಲದಿಂದುಂಟಾದ ಪುಣ್ಯತೀರ್ಥ (ಮ.ಸ.).

ತಪ್ತಸೂರ್ಮಿ - ಅಗಮ್ಯಗಮನ ಮಾಡುವವರಿಗೆ ಪ್ರಾಪ್ತವಾಗುವ ಒಂದು ನರಕ (ಭಾಗ.,ಶಿವಪು.).

ತಮ - ೧. ದುರ್ಗುಣ. ರಜೋಗುಣವು ಇದಕ್ಕಿಂತ ಮೇಲಿನದು. ಸತ್ತ್ವಗುಣವು ಉತ್ತಮವಾದ ಗುಣ (ಮ.ಶಾಂ.,ಅಶ್ವ.). ೨. ಗೃತ್ಸಮದ ವಂಶೋತ್ಪನ್ನನಾದ ಶ್ರವಸನ ಕಿರಿಯ ಮಗನಾದ ಬ್ರಾಹ್ಮಣನೊಬ್ಬ. ಇವನ ಪೂರ್ವಿಕನಾದ ಗೃತ್ಸಮದನನ ತಂದೆಯಾದ ವೀತಹವ್ಯನು ಮೊದಲು ಕ್ಷತ್ರಿಯನಾಗಿದ್ದು ಭೃಗುಮಹರ್ಷಿಯ ಅನುಗ್ರಹದಿಂದ ಬ್ರಾಹ್ಮಣನಾದನು. ನೋ. - ವೀತಹವ್ಯ (ಮ.ಅನು.). ೩. ಬ್ರಹ್ಮನ ತಿಂಗಳಿನ ಹನ್ನೊಂದನೆಯ ದಿನದ ಹೆಸರು.

ತಮಸಾ - ನದಿಯೊಂದು. ಸರಯೂ ಮತ್ತು ಗೋಮತಿ ನದಿಗಳ ಮಧ್ಯೆ ಹರಿಯುವ ನದಿ. ಇದು ಗಂಗಾನದಿಗೆ ಸೇರುತ್ತದೆ. ಇದರಲ್ಲೇ ವಾಲ್ಮೀಕಿ ಮುನಿಯ ಆಶ್ರಮವಿತ್ತು. ಚ್ಯವನ, ಗೌತಮ, ಪರಾಶರರು ಈ ನದಿಯ ದಡದಲ್ಲೇ ತಪಸ್ಸು ಮಾಡಿದರು. ಮಾರ್ಗಶಿರ ಶುಕ್ಲ ಹುಣ್ಣಿಮೆಯ ದಿನ ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ಇದರ ಬಳಿ ಗಯಾಕೂಪ, ಪಿಶಾಚಮೋಚನ, ಮಾನಸತೀರ್ಥ ಮೊದಲಾದ ಪುಣ್ಯತೀರ್ಥಗಳಿವೆ (ಮ.ಭೀ., ರಾಮಾ.ಬಾಲ.,ಅಯೋ.,ಸ್ಕಾಂ.ಪು.).

ತರಂತುಕ - ಒಂದು ತೀರ್ಥ. ಪರಶುರಾಮನು ಕ್ಷತ್ರಿಯರನ್ನು ಕೊಂದು ಅವರ ರಕ್ತದಿಂದ ಏರ್ಪಡಿಸಿದ ಒಂದು ಮಡು. ಭಾರತಯುದ್ಧಭೂಮಿಯ ಗಡಿಯಲ್ಲಿದ್ದ ಒಂದು ತೀರ್ಥ. ನೋ. - ಕುರುಕ್ಷೇತ್ರ (ಮ.ಶ.).

ತಲಕಾವೇರಿ - ಕೊಡಗು ಪ್ರಾಂತದ ಒಂದು ಕ್ಷೇತ್ರ. ಇಲ್ಲಿ ಬ್ರಹ್ಮಗಿರಿಯಲ್ಲಿ ವಾಸವಾಗಿದ್ದ ಕವೇರನೆಂಬ ಋಷಿಗೆ ಬ್ರಹ್ಮನು ತನ್ನ ಮಗಳಾದ ಲೋಪಾಮುದ್ರೆಯನ್ನು ಸಾಕುಮಗಳಾಗಿ ಅನುಗ್ರಹಿಸಿದನು. ಇವಳೇ ಕಾವೇರಿ. ಇವಳು ತರುಣಿಯಾದಾಗ ಅಗಸ್ತ್ಯಋಷಿಯು ಬಂದು ಕವೇರಮುನಿಯೊಡನೆ ಕಾವೇರಿಯನ್ನು ತನಗೆ ವಿವಾಹಮಾಡಿಕೊಡುವಂತೆ ಪ್ರಾರ್ಥಿಸಿ ಲಗ್ನವಾದನು. ಕಾವೇರಿಯು ತಾನು ವಿವಾಹವಾಗುವಾಗ ಮೊದಲೇ ಅಗಸ್ತ್ಯರೊಡನೆ - 'ನೀವು ನನ್ನನ್ನು ಅಗಲಿದರೆ ನದಿಯಾಗಿ ಹರಿಯುವೆ' ಎಂದು ಸೂಚಿಸಿದಳು. ಒಂದು ದಿನ ಅಗಸ್ತ್ಯನು ಕಾವೇರಿಯು ಹಾಸಿಗೆಯನ್ನು ಬಿಟ್ಟೇಳುವ ಮೊದಲೇ ಕನ್ನಿಕಾತೀರ್ಥದಲ್ಲಿ ಮಿಂದುಬರಲು ಹೋಗಿರಲು ಕಾವೇರಿಯು ಎದ್ದು ಪತಿಯನ್ನು ಕಾಣದೆ ನದಿಯಾಗಿ ಹರಿದುಹೋದಳು. ಕಾವೇರಿಯು ನದಿಯಾಗಿ ಹರಿಯಲು ಆರಂಭಿಸಿದ ಸ್ಥಳವೇ ತಲಕಾವೇರಿ. ಇಲ್ಲಿ ತುಲಾಸಂಕ್ರಮಣದಂದು ದೊಡ್ಡ ಜಾತ್ರೆಯು ಜರುಗುತ್ತದೆ. ಇದು ಮಡಿಕೇರಿಯಿಂದ ಇಪ್ಪತ್ತೈದು ಮೈಲು ದೂರದಲ್ಲಿದೆ; ಭಾಗಮಂಡಲದಿಂದ ಮೂರು ಮೈಲು ದೂರದಲ್ಲಿದೆ. ಭಾಗಮಂಡಲದಲ್ಲಿ ಕಾವೇರಿ, ಕನ್ನಿಕಾ ಮತ್ತು ಸುಜ್ಯೋತಿ ಎಂಬ ಮೂರು ನದಿಗಳು ಸಂಗಮವಾಗುತ್ತವೆ. ಇಲ್ಲಿ ಪಿತೃಗಳಿಗೆ ಪಿಂಡವನ್ನರ್ಪಿಸುತ್ತಾರೆ. ಇಲ್ಲಿ ಶಿವ, ವಿಷ್ಣು, ಸುಬ್ರಹ್ಮಣ್ಯ ಮೊದಲಾದ ದೇವಮಂದಿರಗಳಿವೆ.

ತಂಸು - ಚಂದ್ರವಂಶದ ಮತಿನಾರನೆಂಬ ರಾಜನ ಹಿರಿಯ ಮಗ. ಮಹಂತ ಮತ್ತು ದ್ರುಹ್ಯು ಎಂಬವರು ಈತನ ತಮ್ಮಂದಿರು. ಈತನ ಮಗ ಈಲಿನ. ತಂಸುವಿಗೆ ತ್ರಸು ಎಂದೂ ಹೆಸರುಂಟು. ಇವನು ಪೂರುವಂಶದ ಉದ್ಧಾರಕನು (ಮ.ಆ.).

ತಾಟಕಾ - ಸುಕೇತುವೆಂಬ ಯಕ್ಷನ ಮಗಳು. ಈಕೆಗೆ ಸಾವಿರ ಆನೆಗಳಷ್ಟು ಬಲವಿತ್ತು. ಈಕೆಯು ಸುಂದನೆಂಬ ಯಕ್ಷನನ್ನು ಮದುವೆಯಾಗಿ ಸುಬಾಹು ಮತ್ತು ಮಾರೀಚರೆಂಬ ಮಕ್ಕಳನ್ನು ಪಡೆದಳು. ಕೆಲವು ಕಾಲಾನಂತರ ಸುಂದನು ಕಾಲಗತಿಯನ್ನೈದಲು, ತಾಟಕೆಯು ಅಲಂಕರಿಸಿಕೊಂಡು ತರುಣರಿಗಾಗಿ ಅಲ್ಲಲ್ಲಿ ತಿರುಗಾಡುತ್ತಿರಲು ಒಮ್ಮೆ ಅಗಸ್ತ್ಯಮುನಿಯು ಅವಳನ್ನು ಕಂಡು ಅವಳ ಭಾವವನ್ನರಿತು - ' ಕಾಮುಕರಾದ ತರುಣರಿಗೆ ನೀನು ಭಯಂಕರಾಕಾರೆಯಾಗಿ ಕಾಣಿಸು. ನಿನ್ನ ಮಕ್ಕಳು ರಾಕ್ಷಸರಾಗಲಿ' ಎಂದು ಶಾಪವಿತ್ತರು. ಮುಂದೆ ವಿಶ್ವಾಮಿತ್ರಮುನಿಯು ಈ ತಾಯಿಮಕ್ಕಳ ಪೀಡೆಯನ್ನು ಸಹಿಸಲಾರದೆ ಅಯೋಧ್ಯೆಗೆ ಹೋಗಿ ಶ್ರೀರಾಮಚಂದ್ರ ಮತ್ತು ಲಕ್ಷ್ಮಣನನ್ನು ತನ್ನ ಆಶ್ರಮದ

ಮತ್ತು ಯಜ್ಞರಕ್ಷಣೆಗೆ ಕರೆದುಕೊಂಡು ಬಂದನು. ದಾರಿಯಲ್ಲಿ ಸರಯೂ ನದೀ ತೀರದಲ್ಲಿದ್ದ ಕಲುಷವನವನ್ನು ದಾಟಿ ಬರುತ್ತಿರುವಾಗ ಆ ವನದಲ್ಲಿದ್ದ ತಾಟಕೆಗೆ ಆಗಮನದ ಸೂಚನೆಯು ವಾಸನೆಯಿಂದಲೇ ತಿಳಿಯಲು, ವಿಶ್ವಾಮಿತ್ರ ಮುನಿಯನ್ನು ಅಡ್ಡಗಟ್ಟಲು, ಮುನಿಯ ಅಪ್ಪಣೆಯಂತೆ ಶ್ರೀರಾಮನು ಆಕೆಯನ್ನು ಕೊಂದನು. ಸುಬಾಹುವೆಂಬ ಆಕೆಯ ಮಗನನ್ನು ಆಗ್ನೇಯಾಸ್ತ್ರದಿಂದ ವಧಿಸಿದನು. ಮಾರೀಚನನ್ನು ವಾಯವ್ಯಾಸ್ತ್ರದಿಂದ ದೂರದ ಸಮುದ್ರದಲ್ಲಿ ಕೆಡೆದನು (ರಾಮಾ.ಬಾಲ.).

ತಾಂಡಕಾಯನ - ಋಷಿ; ವಿಶ್ವಾಮಿತ್ರನ ಮಗ (ಮ.ಅನು.).

ತಾಂಡವ - ಇವನು ವೈಶ್ಯರ ಜಾತಿಯವನು. ತಂದೆತಾಯಿಗಳನ್ನು ಕಾವಡಿಯಲ್ಲಿಟ್ಟು ಕೊಂಡು ಯಾತ್ರಾರ್ಥಿಯಾಗಿ ತಿರುಗುತ್ತಿದ್ದನು. ಒಂದು ರಾತ್ರಿ ತಂದೆತಾಯಿಗಳ ಕಾವಡಿಯನ್ನು ಒಂದು ಮರದಡಿಯಲ್ಲಿಟ್ಟು ನೀರು ತರುವುದಕ್ಕಾಗಿ ಕಮಂಡಲುವಿನೊಡನೆ ಕೊಳವೊಂದಕ್ಕೆ ಬಂದು ನೀರಲ್ಲಿ ಅದನ್ನು ಮುಳುಗಿಸಲು ರಾತ್ರಿಯ ಬೇಟೆಗಾಗಿ ಕಾಡಿನಲ್ಲಿ ಅಡಗಿದ್ದ ದಶರಥನು ಮುನಿಯ ಕಮಂಡಲುವಿನ ಶಬ್ದ ಕೇಳಿ ಹಂದಿಯೆಂದು ಭಾವಿಸಿ ಗುರಿಯಿಟ್ಟು ಬಾಣ ಹೊಡೆದನು. ಆಗ ಆ ಮುನಿಕುಮಾರನು ಸ್ವರ್ಗಸ್ಥನಾದನು. ಇದನ್ನು ತಿಳಿದ ಆ ವೃದ್ಧಮುನಿಗಳು 'ನಿನಗೂ ಕೊನೆಯ ಕಾಲದಲ್ಲಿ ಪುತ್ರವಿಯೋಗವುಂಟಾಗಲಿ' ಎಂದು ಶಾಪವಿತ್ತು ಸ್ವರ್ಗಸ್ಥರಾದರು (ಆನಂ.ರಾ.).

ತಾಪನ - ಬಲಿಚಕ್ರವರ್ತಿಯ ಮಗ.

ತಾಮಸ - ಪ್ರಿಯವ್ರತರಾಜನ ಎರಡನೇ ಹೆಂಡತಿಯಲ್ಲಿ ಜನಿಸಿದ ಮೂವರು ಮಕ್ಕಳಲ್ಲಿ ಇವನು ಎರಡನೆಯನು. ಉತ್ತಮನು ಈತನ ಅಣ್ಣ. ರೈವತನು ತಮ್ಮ. ಈತನು ಶ್ವೇತವರಾಹಕಲ್ಪದಲ್ಲಿ ನಾಲ್ಕನೆಯ ಮನುವಾಗಿ ರಾಜ್ಯಭಾರ ಮಾಡಿದನು. ಇವನ ಕಾಲದಲ್ಲಿ ಸ್ವರ್ಗದಲ್ಲಿ ತ್ರಿಶಿಖನೆಂಬ ಇಂದ್ರನು ರಾಜ್ಯಭಾರ ಮಾಡುತ್ತಿದ್ದನು. ಇವನ ಕಾಲದಲ್ಲಿ ಕವಿ, ಪೃಥು, ಅಗ್ನಿ, ಅಕಪಿ, ಕಪಿ, ಜಲ್ಪ, ಧೀಮಂತರೆಂಬುವರು ಸಪ್ತರ್ಷಿಗಳಾಗಿದ್ದರು. ಆಗ ಹರಿಮೇಧನೆಂಬ ಬ್ರಾಹ್ಮಣನಿಗೆ ಹರಿಣಿಯೆಂಬ ಸ್ತ್ರೀಯಲ್ಲಿ ಹುಟ್ಟಿದ ಹರಿಯೇ ಅಂದಿನ ವಿಷ್ಣುವಾಗಿದ್ದನು. ಗಜೇಂದ್ರಮೋಕ್ಷವು ಈ ಹರಿಯ ಕಾಲದಲ್ಲೇ ನಡೆಯಿತು. ಲೋಕದಲ್ಲಿ ಕತ್ತಲೆ ಕವಿದಾಗ ಈತನು ಜನಿಸಿದುದರಿಂದ ಈತನಿಗೆ ತಾಮಸನೆಂದು ಹೆಸರಾಯಿತು. (ಭಾಗ., ಮತ್ಸ್ಯಪು.). ತಾಮಸನು ಕಾಡಿನಲ್ಲಿ ವಾಸಮಾಡಲು ಶತ್ರುಗಳು ಆತನ ರಾಜ್ಯವನ್ನು ಕಿತ್ತುಕೊಂಡುದೇ ಕಾರಣವಾಯಿತು. ಆತನು ಮರಳಿ ಅನಂತರ ತನ್ನ ರಾಜ್ಯವನ್ನು

ಸಂಪಾದಿಸಿದನು. ಈತನು ಮನುವಾದನು. ಈತನ ಕಾಲದಲ್ಲಿ ಶಿಬಿಯೂ ಇಂದ್ರನಾಗಿದ್ದನು.

ತಾಮಿಸ್ರ - ಒಂದು ನರಕ ವಿಶೇಷ. ಪರದ್ರವ್ಯವನ್ನು ಅಪಹರಿಸಿದವರಿಗೆ ಇದು ಪ್ರಾಪ್ತವಾಗುತ್ತದೆ. ಈ ನರಕದಲ್ಲಿ ಬೆಳಕೆಂಬುದು ಇರದೆ ಗಾಢಾಂಧಕಾರವು ವ್ಯಾಪಿಸಿರುವುದು. ಧರ್ಮರಾಜನನ್ನು ದೇವದೂತನು ಈ ಮಾರ್ಗವಾಗಿ ಕರೆದುಕೊಂಡು ಹೋಗಿದ್ದನು (ಭಾಗ.,ಶಿವಪು., ದೇವಿಭಾ.).

ತಾಮ್ರ - ೧. ಮಹಿಷಾಸುರನ ಕೋಶಾಧಿಕಾರಿ; ಮಹಾಲಕ್ಷ್ಮಿಯಿಂದ ಈತನು ಹತನಾದನು (ದೇವಿಭಾ.). ೨. ಮುರಾಸುರನ ಒಬ್ಬ ಮಗ; ಇವನು ನರಕಾಸುರನ ಆಶ್ರಯದಲ್ಲಿದ್ದ. ಶ್ರೀಕೃಷ್ಣನು ಪ್ರಾಗ್ಜ್ಯೋತಿಷ ನಗರಕ್ಕೆ ಮುತ್ತಿಗೆ ಹಾಕಿದಾಗ ಜಲದಲ್ಲಿ ಮಲಗಿದ್ದ ಮುರನೂ, ಅವನ ಏಳು ಮಂದಿ ಮಕ್ಕಳೂ ಯುದ್ಧಕ್ಕೆ ಬರಲು ಶ್ರೀಕೃಷ್ಣ ಅವರನ್ನೆಲ್ಲ ಕೊಂದನು (ಭಾಗ.). ೩. ಒಂದು ದ್ವೀಪ. ರಾಜಸೂಯಯಾಗ ಕಾಲದಲ್ಲಿ ದಕ್ಷಿಣಕ್ಕೆ ಹೋದ ಸಹದೇವನು ಈ ದ್ವೀಪವನ್ನು ಗೆದ್ದನು (ಮ.ಸ.). ೪. ಭರತ ಚಕ್ರವರ್ತಿಯ ಮಗ. ಶತಶೃಂಗನ ಎಂಟು ಮಂದಿ ಪುತ್ರರಲ್ಲಿ ಈತನು ಮೂರನೆಯವನು. ನೋ. - ಶತಶೃಂಗ (ಮತ್ಸ್ಯಪು., ಮಾರ್ಕಂ.ಪು.).

ತಾಮ್ರಧ್ವಜ - ರತ್ನಪುರದ ಅರಸನಾದ ಮಯೂರಧ್ವಜನ ಮಗ. ಈತನು ಧರ್ಮರಾಜನ ಅಶ್ವಮೇಧ ಕುದುರೆಯನ್ನು ಕಟ್ಟಿ ಕೃಷ್ಣಾರ್ಜುನರನ್ನು ಯುದ್ಧದಲ್ಲಿ ಸೋಲಿಸಿದನು. ಆಗ ಕೃಷ್ಣಾರ್ಜುನರು ಬ್ರಾಹ್ಮಣ ಮತ್ತು ಶಿಷ್ಯನ ವೇಷದಿಂದ ರತ್ನಪುರವನ್ನು ಹೊಕ್ಕು ಮಯೂರಧ್ವಜನ ದೇಹದ ಅರ್ಧಭಾಗವನ್ನು ಯಾಚಿಸಿ ಅದನ್ನೂ ಕೊಡಲು ರಾಜನು ಮತ್ತು ಅವನ ಪತ್ನಿ ಕುಮುದ್ವತಿಯು ಹಿಂದಾಗದಿರಲು ಅವನ ಚಿತ್ತಸ್ಥೈರ್ಯಕ್ಕೆ ಮೆಚ್ಚಿ ಪ್ರತ್ಯಕ್ಷನಾದನು. ಮಯೂರನೂ, ತಾಮ್ರಧ್ವಜನೂ ಅರ್ಜುನನ ಕುದುರೆಯನ್ನು ಆತನಿಗೊಪ್ಪಿಸಿ ಧರ್ಮರಾಜನ ಯಜ್ಞಕ್ಕೆ ನೆರವಾದರು (ಜೈ.ಭಾ.).

ತಾಮ್ರಪರ್ಣಿ - ೧. ದಕ್ಷಿಣ ಹಿಂದುಸ್ಥಾನದ ತಿನ್ನವೆಲ್ಲಿ ಜಿಲ್ಲೆಯಲ್ಲಿ ಹರಿಯುವ ಒಂದು ನದಿ. ಇದರಲ್ಲಿ ಮುತ್ತುಗಳು ದೊರೆಯುತ್ತಿವೆ. ಈ ನದಿಯ ದಡದ ಮೇಲೆ ತಿರುನಲ್ವೇಲಿ ನಗರವಿದೆ. ಈ ನದಿಯ ದಡದಲ್ಲೇ ಭಗವಾನ್ ಶಂಕರನ ಮಂದಿರವಿದೆ. ಈ ನಗರದ ಇನ್ನೊಂದು ಭಾಗದಲ್ಲಿ ನೀಲಪ್ಪೇಶ್ವರನ ಮಂದಿರವಿದೆ. ಇಲ್ಲಿ ತೆಪ್ಪಾಕುಲಂ ಸರೋವರವಿದೆ. ತೆಂಕಾಶಿಯಿಂದ ತಿನ್ನವೆಲ್ಲಿಗೆ ನಲವತ್ತಮೂರು ಮೈಲುಗಳಿವೆ (ಮ.ಸ.,ಮತ್ಸ್ಯಪು.). ಪಶ್ಚಿಮ ದಿಕ್ಕಿನಲ್ಲಿರುವ ಅಂಜನವೆಂಬ ದಿಗ್ಗಜದ ಪತ್ನಿಯು ತಾಮ್ರಪರ್ಣಿ.

ತಾಮ್ರಲಿಪ್ತ - ೧. ಕ್ಷತ್ರಿಯನೊಬ್ಬ (ಮ.ಆ.,ಸ.). ೨. ಹುಗ್ಲಿನದಿಯು ಸಮುದ್ರಕ್ಕೆ ಸಂಗಮವಾಗುವಲ್ಲಿ ಇರುವ ಒಂದು ಪ್ರಾಂತ. ಇದನ್ನು ದಾಮಲಿಪ್ತವೆಂದೂ ಕರೆಯುತ್ತಾರೆ (ಮ.ಭೀ.).

ತಾಮ್ರಾ - ೧. ಕಶ್ಯಪನ ಹದಿಮೂರು ಮಂದಿ ಪತ್ನಿಯರಲ್ಲೊಬ್ಬಳು. ಈಕೆಗೆ ಕಾಕಿ, ಶ್ಯೇನಿ, ಭಾಸಿ, ಧೃತರಾಷ್ಟ್ರಿ, ಶುಕಿ ಎಂಬ ಐವರು ಪುತ್ರಿಯರಿದ್ದರು. ಈಕೆ ಪಕ್ಷಿ ಜಾತಿಗಳ ತಾಯಿ (ಮ.ಆ.). ೨. ನದಿಯೊಂದು. ೩. ವಸುದೇವನ ಒಬ್ಬಳು ಹೆಂಡತಿ (ಭಾಗ.).

ತಾರ - ಸುಗ್ರೀವನ ಮಾವ; ರುಮೆಯ ತಂದೆ. ಸುಷೇಣನೂ ಸುಗ್ರೀವನ ಮಾವನೆಂದಿದೆ (ಮ.ವ., ಮತ್ಸ್ಯಪು.).

ತಾರಕ - ಒಬ್ಬ ರಾಕ್ಷಸ. ವರಾಂಗಿ ಮತ್ತು ವರಾಂಗರ ಮಗ. ಈತನಿಗೆ ತಾರಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿ ಎಂಬ ಮೂವರು ಮಕ್ಕಳು. ನೋ. - ತ್ರಿಪುರ. ಶುಂಭ, ನಿಶುಂಭ, ಮಹಿಷಾಸುರ, ಕಾಲನೇಮಿ, ಜಂಭ - ಇವರೆಲ್ಲ ಈತನ ಸೇನಾಪತಿಗಳು (ಮ.ಕ.). ಕಶ್ಯಪ ಮಹರ್ಷಿಗೆ ದಿತಿ ಎಂಬ ಪತ್ನಿಯಲ್ಲಿ ಜನಿಸಿದ ಅನೇಕ ದೈತ್ಯರಲ್ಲಿ ಅಸುರೇಂದ್ರನೆಂಬ ಮಗನು ಎಲ್ಲರಿಗಿಂತ ಹಿರಿಯವನು. ಮಂಗಳಕೇಶಿಯು ಈತನ ಹೆಂಡತಿಯು. ಈ ದಂಪತಿಗಳಿಗೆ ಸುರಸಿಯೆಂಬ ಒಬ್ಬಳೇ ಮಗಳು. ಈ ದನುಜಾಂಗನೆಯು ಕುಲಗುರುಗಳಾದ ಶುಕ್ರಾಚಾರ್ಯರಲ್ಲಿ ಮಾಯಾವಿದ್ಯೆ ಮೊದಲಾದ ಎಲ್ಲ ವಿದ್ಯೆಗಳನ್ನು ಕಲಿತು ಮಾತಾಮಹನಾದ ಕಾಶ್ಯಪಮುನಿಯನ್ನೇ ವಿವಾಹವಾದಳು. ಆತನಿಂದ ಶೂರಪದ್ಮಾಸುರ, ಸಿಂಹವಕ್ತ್ರ, ತಾರಕರೆಂಬ ಗಂಡುಮಕ್ಕಳೂ, ಅಜವಕ್ತ್ರೆ ಎಂಬ ಹೆಣ್ಣುಮಗಳೂ ಹುಟ್ಟಿದರು. ಇವರಲ್ಲಿ ತಾರಕನಿಗೆ ಗಜಮುಖವಿತ್ತು. ಈತನಿಗೆ ಗೌರಿ ಎಂಬ ಪತ್ನಿಯಿದ್ದಳು. ತಾರಕಾಸುರನೇ ಮೊದಲಾದ ಸಹೋದರರು ಶಿವನನ್ನು ಕುರಿತು ತಪಸ್ಸು ಮಾಡಿ ಅಜೇಯರಾದರು. ತಾರಕನು ಪಾಶುಪತಾಸ್ತ್ರದ ಬಲದಿಂದ ಸಮಸ್ತ ದೇವತೆಗಳನ್ನೂ ಗೆದ್ದನು. ಆಗ ದೇವತೆಗಳ ಪ್ರಾರ್ಥನೆಯಂತೆ ಷಣ್ಮುಖನು ವೀರಬಾಹುಕ ಮೊದಲಾದ ತಮ್ಮಂದಿರೊಡನೆಯೂ, ಇಂದ್ರಾದಿ ದೇವತೆಗಳೊಡನೆಯೂ ತಾರಕನ ಮೇಲೆ ದಂಡೆತ್ತಿ ಬಂದನು. ಆಗ ತಾರಕನ ಮಾಯಾನಗರವು ಕ್ರೌಂಚ ಪರ್ವತದ ಪಕ್ಕದಲ್ಲಿತ್ತು. ಕ್ರೌಂಚಾಸುರನೂ, ತಾರಕನೂ, ಕುಮಾರನನ್ನು ಗೆಲ್ಲಬೇಕೆಂದು ಹಲವು ಅಸ್ತ್ರಗಳಿಂದ ಹೋರಾಡಿದರೂ ಷಣ್ಮುಖನು ತನ್ನ ಮಹೋಗ್ರಶಕ್ತಿಯಿಂದ ಈ ರಾಕ್ಷಸನನ್ನೂ ಅವನ ಅನುಯಾಯಿಗಳನ್ನೂ ನಾಶಮಾಡಿದನು. ತಾರಕನ ಸತಿಗಳೆಲ್ಲ ಸಹಗಮನವಾದರು (ಸ್ಕಾಂ.ಪು., ಮ.ಕ., ಶ., ಅನು., ಮತ್ಸ್ಯಪು.).

ಇವನ ಸೇನಾಪತಿಗಳಲ್ಲೆಲ್ಲ ಶುಂಭನೇ ಮುಖ್ಯನಾಯಕ. ಆಗ ಷಣ್ಮುಖನು ಅವತರಿಸಿ, ಹುಟ್ಟಿದ ಏಳನೇ ದಿನ ಇವನೊಡನೆ ಯುದ್ಧಮಾಡಿ ಇವನನ್ನು ಕೊಂದನು.

ತಾರಣ - ಕುಚೇಲನ ಪೂರ್ವಜನ್ಮದ ಹೆಸರು. ಇವನು ಬಡವನಾಗಿದ್ದು ಬ್ರಾಹ್ಮಣ ಸೇವೆಯಿಂದ ಶ್ರೀಮಂತನಾಗಿ, ಗರ್ವದಿಂದ ಬ್ರಾಹ್ಮಣರ ಕೋಪಕ್ಕೆ ಗುರಿಯಾಗಿ ಸತ್ತನು. ಮುಂದಿನ ಜನ್ಮದಲ್ಲಿ ಕುಚೇಲನಾಗಿ (ಸುದಾಮ, ಸುಧಾಮ) ಶ್ರೀಕೃಷ್ಣನ ಅನುಗ್ರಹ ಪಡೆದನು. ನೋ. - ಕುಚೇಲ.

ತಾರಾ - ೧. ಸುಷೇಣನೆಂಬ ಕಪಿಸೇನಾಪತಿಯ ಮಗಳು. ಈತನು ವಾಲಿಯ ಮಾವ. ಈಕೆಯು ಮೊದಲು ವಾಲಿಯ ಪತ್ನಿಯಾಗಿದ್ದು ಅವನ ಮರಣಾನಂತರ ಸುಗ್ರೀವನ ಆಶ್ರಯವನ್ನು ಸೇರಿದಳು. ಈಕೆ ಪಂಚಕನ್ಯೆಯರಲ್ಲೊಬ್ಬಳು; ಅಂಗದನ ತಾಯಿ. ಈಕೆಯು ವಾಲಿಯೊಡನೆ 'ಶ್ರೀರಾಮನೊಡನೆ ದ್ವೇಷವು ತರವಲ್ಲ' ಎಂದು ಹಲವು ವಿಧದಿಂದ ಹೇಳಿದರೂ ಕೇಳದೆ ರಾಮಬಾಣಕ್ಕೆ ಬಲಿಯಾದನು. ಈಕೆ ಎಲ್ಲ ಕಪಿನಾಯಕರೊಡನೆ ಶ್ರೀರಾಮಪಟ್ಟಾಭಿಷೇಕಕ್ಕೆ ಅಯೋಧ್ಯೆಗೆ ಹೋಗಿದ್ದಳು (ರಾಮಾ.ಕಿಷ್ಕಿಂ.,ಯುದ್ಧ.). ಹರಿಶ್ಚಂದ್ರನ ಪತ್ನಿಯಾದ ಚಂದ್ರಮತಿಯ ಹೆಸರು. ೩. ಬೃಹಸ್ಪತ್ಯಾಚಾರ್ಯನ ಪತ್ನಿ. ಈಕೆಗೆ ಶಂಯು, ನಿಶ್ಚವನ, ವಿಶ್ವಜಿತ್, ವಿಶ್ವಭುಕ್, ಬಡಬಾಗ್ನಿ, ಸ್ವಿಷ್ಟಕೃತ್ ಎಂಬ ಆರು ಮಂದಿ ಮಕ್ಕಳಿದ್ದರು. ಇವಳು ವಿದ್ಯಾಭ್ಯಾಸಕ್ಕೆ ಬಂದ ಚಂದ್ರನನ್ನು ಮೋಹಿಸಿ ಆತನಿಂದ ಬುಧನೆಂಬ ಮಗನನ್ನು ಪಡೆದಳು. ನೋ. - ಚಂದ್ರ. ಕೊನೆಗೆ ದೇವತೆಗಳ ತೀರ್ಮಾನದಂತೆ ಬುಧನನ್ನು ಈಕೆ ಚಂದ್ರನಿಗೊಪ್ಪಿಸಿ ತಾನು ಬೃಹಸ್ಪತಿಯ ಹೆಂಡತಿಯಾಗಿಯೇ ಇದ್ದಳು (ಮ.ವ., ಸ., ಭಾಗ., ದೇವೀಭಾ.).

ತಾರಾಕ್ಷ - ರಾಕ್ಷಸ; ತಾರಕಾಸುರನ ಹಿರಿಯ ಮಗ. ಕಮಲಾಕ್ಷ, ವಿದ್ಯುನ್ಮಾಲಿಗಳು ಈತನ ತಮ್ಮಂದಿರು. ಬ್ರಹ್ಮದೇವನ ಅನುಗ್ರಹದಿಂದ ಇವರು ತ್ರಿಪುರದ ಒಡೆಯರಾಗಿ ಮಹಾಪರಾಕ್ರಮಿಗಳಾಗಿದ್ದರು. ನೋ. - ತ್ರಿಪುರ, ತಾರಕ.

ತಾರ್ಕ್ಷ್ಯ - ೧. ಒಬ್ಬ ಋಷಿ. ಈತನು ಸರಸ್ವತಿಯೊಡನೆ ಶ್ರೇಯಸ್ಕರವಾದ ಕಾರ್ಯ, ಅಗ್ನಿಹೋತ್ರವನ್ನು ಆಚರಿಸುವ ಕ್ರಮ - ಇತ್ಯಾದಿ ವಿಷಯಗಳೊಡನೆ ಚರ್ಚೆ ನಡೆಸಿದನು. ದುಂಧುಮಾರನು ಕಾಡಿನಲ್ಲಿ ಬೇಟೆಯಾಡುವಾಗ ಅಜಾಗರೂಕತೆಯಿಂದ ಇವನ ಮಗನನ್ನು ಕೊಂದು ಆಮೇಲೆ ಈತನ ಬಳಿಗೆ ಬಂದು ಕ್ಷಮೆ ಯಾಚಿಸಿದನು. ಬ್ರಾಹ್ಮಣನು ತನ್ನ ಮಗನನ್ನು ಹೆಸರು ಹೇಳಿ ಕರೆಯಲು ಅವನು ಆಶ್ರಮದ ಒಳಗಿನಿಂದ ಹೊರಗೆ ಓಡಿಬಂದನು.

ಸದ್ವರ್ತನೆಯುಳ್ಳವರ ಬಳಿಗೆ ಅಕಾಲಮೃತ್ಯುವು ಬರಬಾರದೆಂದು ಬ್ರಾಹ್ಮಣನು ಹೇಳಿದನು (ಮ.ವ.). ೨. ಗರುಡನ ಇನ್ನೊಂದು ಹೆಸರು. ನೋ. - ಗರುಡ.

ತಾರ್ಕ್ಷಿ - ಅಪ್ಸರೆಯೊಬ್ಬಳು. ಈಕೆ ದುರ್ವಾಸಮುನಿಯ ತಪೋಭಂಗಕ್ಕೆ ಯತ್ನಿಸಿ, ಅವನಿಂದ ಶಾಪ ಪಡೆದು ಪಕ್ಷಿಯಾದಳು. ಖಾಂಡವವನ ದಹನಕಾಲದಲ್ಲಿ ಅರ್ಜುನನ ಬಾಣಸ್ಪರ್ಶದಿಂದ ಈಕೆ ಶಾಪವಿಮೋಚನೆ ಹೊಂದಿದಳು. ಈ ಕಾಲದಲ್ಲಿ ಈ ಪಕ್ಷಿ ಗರ್ಭಿಣಿಯಾಗಿದ್ದು ಇದರಿಂದ ಜನಿಸಿದ ಮೊಟ್ಟೆಗಳನ್ನು ಶಮೀಕ ಮುನಿಯು ರಕ್ಷಿಸಿದನು. ನೋ. - ಧರ್ಮಪಕ್ಷಿ.

ತಾಲಕೇತು (ತಾಲಧ್ವಜ) - ೧. ತಾಲವೇ ಧ್ವಜವಾಗುಳ್ಳ ಭೀಷ್ಮ (ತಾಲವೃಕ್ಷ). (ಮ.ವಿ.). ೨. ಒಬ್ಬ ರಾಕ್ಷಸ. ಪಾತಾಳಕೇತುವಿನ ತಮ್ಮ. ಪಾತಾಳಕೇತುವು ಗಾಲವನೆಂಬ ಮುನಿಯನ್ನು ಪೀಡಿಸುತ್ತಿದ್ದುದರಿಂದ ಕುವಲಯಾಶ್ವನೆಂಬ (ಕುವಲಾಶ್ವ) ರಾಜನು ಆತನನ್ನು ಕೊಂದನು. ತಾಲಕೇತುವು ತಾನು ಮಾಡುವ ಯಜ್ಞಕ್ಕೆ ಸಹಾಯ ಮಾಡಬೇಕೆಂದು ಪ್ರಾರ್ಥಿಸಿ ಅವನ ಕೊರಳಿನ ರತ್ನಹಾರವನ್ನು ಪಡೆದು ಅದನ್ನು ಪಟ್ಟಣದಲ್ಲಿದ್ದ ಆತನ ಪತ್ನಿ ಮದಲಸೆಗೆ ತೋರಿಸಲು ಆಕೆಯು ತನ್ನ ಪತಿಯು ಮೃತನಾದನೆಂದು ಅಗ್ನಿಗೆ ಹಾರಿದಳು. ತಾಲಕೇತುವು ತನ್ನ ದ್ವೇಷವನ್ನು ಹೀಗೆ ತೀರಿಸಿಕೊಂಡನು. ನೋ. - ಕುವಲಯಾಶ್ವ (ಮ.ಉ., ಭೀ., ಅರ.).

ತಾಲಜಂಘ - ಕಾರ್ತವೀರ್ಯಾರ್ಜುನನ ಮೊಮ್ಮಗ. ಇವನಿಗೆ ನೂರು ಮಂದಿ ಮಕ್ಕಳು. ಇವರೆಲ್ಲ ಬಡಬಾಗ್ನಿಯಿಂದ ಸುಟ್ಟುಹೋದರು ನೋ. - ಕಾರ್ತವೀರ್ಯ (ಮ.ಅನು.).

ತಿತ್ತಿರಿ - ೧. ಅಂಗಿರಸಕುಲೋತ್ಪನ್ನನಾದ ಒಬ್ಬ ಋಷಿ. ೨. ಯಾಜ್ಞವಲ್ಕನು ಗುರುವಾದ ವೈಶಂಪಾಯನ ಮುನಿಯ ಕೋಪಕ್ಕೆ ಪಾತ್ರನಾಗಿ ಅವನಿಂದ ಕಲಿತ ಯಜುರ್ವೇದ ಮೊದಲಾದ ವಿಚಾರಗಳನ್ನೆಲ್ಲ ಅವನಿಗೇ ಕೊಡಬೇಕಾಯಿತು. ಆಗ ಯಜ್ಞವಲ್ಕನು ತಾನು ಅಭ್ಯಾಸಮಾಡಿದುದನ್ನೆಲ್ಲ ಕಾರಲು ಯಜುರ್ವೇದ ಶಾಖಾಧಿದೇವತೆಗಳು ತಿತ್ತಿರಿ ಪಕ್ಷಿಯ ರೂಪದಿಂದ ಅವನ್ನು ಸ್ವೀಕರಿಸಿದವು. ಮುಂದೆ ವೈಶಂಪಾಯನ ಮುನಿಯು ತಿತ್ತಿರಿ ಎಂಬ ಮುನಿಯ ಮೂಲಕ ಯಜುರ್ವೇದವನ್ನು ಪ್ರಚಾರ ಮಾಡಿದನು. ತಿತ್ತಿರಿ ಮುನಿಯಿಂದ ಪ್ರಚಾರವಾದ ಯಜುರ್ವೇದದ ಭಾಗಕ್ಕೆ ತೈತ್ತಿರೀಯವೆಂದು ಹೆಸರು. ಇದಕ್ಕೆ ಕೃಷ್ಣಯಜುರ್ವೇದವೆನ್ನುತ್ತಾರೆ. (ಮ.ಸ.).

ತಿತಿಕ್ಷಾ - ದಕ್ಷನ ಮಗಳು. ಧರ್ಮಪ್ರಜಾಪತಿಯ ಪತ್ನಿ. ಈಕೆಯ ಹನ್ನೆರಡು ಮಂದಿ ಸಹೋದರಿಯರೂ ಈತನನ್ನೇ ಮದುವೆಯಾದರು. ಈಕೆಯ ಮಗನೇ

ಕ್ಷೇಮನೆಂಬವನು. ನರನಾರಾಯಣರು ಈತನ ಮಲತಾಯಿಯಾದ ಮೂರ್ತಿಯ ಮಕ್ಕಳು. ಸ್ವಾಯಂಭುವ ಮನ್ವಂತರದಲ್ಲಿ ಬ್ರಹ್ಮನ ಮಾನಸಪುತ್ರರಲ್ಲಿ ಧರ್ಮನೊಬ್ಬ (ಮ.ಶಾಂ.,ಭಾಗ.,ದೇವೀಭಾ.).

ತಿಮಿಂಗಿಲ - ೧. ಪಾಂಡವರ ಕಾಲದಲ್ಲಿ ರಾಮಕ ಪರ್ವತದ ಬಳಿ ಈತನು ರಾಜ್ಯಭಾರ ಮಾಡುತ್ತಿದ್ದ. ೨. ವೈವಸ್ವತ ಮನುವು ಬದರಿಕಾಶ್ರಮದ ಹತ್ತಿರವಿರುವ ಚಾರಿಣಿ ಎಂಬ ನದೀತೀರದಲ್ಲಿ ನಿಯಮದಲ್ಲಿ ತಪಸ್ಸು ಮಾಡುತ್ತಿರುವಾಗ ಒಂದು ಮೀನು ಮನುವಿನೊಡನೆ - 'ನನಗೆ ದೊಡ್ಡ ಮೀನುಗಳಿಂದ ಭಯವು ಸಂಭವಿಸಲಿದೆ. ನೀನು ನನ್ನನ್ನು ರಕ್ಷಿಸಿದರೆ ಮುಂದೆ ನಿನಗೆ ಉಪಕಾರ ಮಾಡುತ್ತೇನೆ' ಎಂದಿತು. ಮನುವು ಅದನ್ನು ನದಿಯಿಂದೆತ್ತಿ ಉದಕಪಾತ್ರೆಯಲ್ಲಿಟ್ಟನು. ಮುಂದೆ ಅದು ಬೆಳೆಯುತ್ತಾಹೋದಂತೆ ಅದನ್ನು ಬಾವಿ, ಗಂಗಾನದಿಯಲ್ಲಿ ಬಿಟ್ಟನು. ಕ್ರಮೇಣ ಆ ನದಿಯೂ ಅದರ ಸಂಚಾರಕ್ಕೆ ಕಿರಿದಾಗಲು ಮನುವು ಅದನ್ನು ಸಮುದ್ರದಲ್ಲಿ ಬಿಟ್ಟನು. ಆಗ ತಿಮಿಂಗಿಲವಾಗಿದ್ದ ಆ ಮೀನು - 'ಮಹಾರಾಜನೇ, ಪ್ರಪಂಚಕ್ಕೆ ಸದ್ಯವೇ ಪ್ರಳಯ ಪ್ರಾಪ್ತಿಯಾಗಲಿರುವುದು. ಆಗ ನೀನೊಂದು ನಾವೆಯನ್ನು ಕಟ್ಟಿ ಎಲ್ಲ ಬೀಜಗಳನ್ನು ಸಂಗ್ರಹಿಸಿಕೊಂಡು, ಸಪ್ತರ್ಷಿಗಳೊಡನೆ ಕುಳಿತುಕೊಂಡು ನನ್ನನ್ನು ನಿರೀಕ್ಷೆ ಮಾಡುತ್ತಿರು. ಆ ಪ್ರಳಯೋದಕವನ್ನು ನನ್ನ ಸಹಾಯವಿಲ್ಲದೆ ದಾಟುವುದು ಅಶಕ್ಯ' ಎಂದು ಅದೃಶ್ಯವಾಯಿತು. ಮುಂದೆ ಮನುವು ತಿಮಿಂಗಿಲವು ಹೇಳಿದಂತೆ ಸಪ್ತರ್ಷಿಗಳೊಡನೆ ಸಿದ್ಧನಾಗಿರಲು ಆ ಮಹಾಮತ್ಸ್ಯವು ಪ್ರಳಯೋದಕದಲ್ಲಿ ತೇಲುತ್ತ ಬಂದು ಆ ನೌಕೆಯ ಹಗ್ಗವನ್ನು ತನ್ನ ಕೊಂಡಿಗೆ ಸಿಕ್ಕಿಸಿಕೊಂಡು ಹಿಮಾಲಯದ ಶಿಖರಕ್ಕೆ ತಂದು ಕಟ್ಟಿಹಾಕಿತು. ಮುಂದೆ ಹಿಮಾಲಯಕ್ಕೆ ಇದೇ ಕಾರಣದಿಂದ ನೌಕಾಬಂಧ ಎಂಬ ಹೆಸರಾಯಿತು. ಮುಂದೆ ಆ ಮನುವಿಗೇ ಸೃಷ್ಟಿಕಾರ್ಯದ ಶಕ್ತಿಯನ್ನು ಮಹಾ ಮತ್ಸ್ಯರೂಪದಲ್ಲಿದ್ದ ಶ್ರೀವಿಷ್ಣುವು ದಯಪಾಲಿಸಿದನು (ಮ.ವ.).

ತಿಮಿಧ್ವಜ - ರಾಕ್ಷಸನೊಬ್ಬ; ಶಂಬರನೆಂಬುದು ಈತನ ಇನ್ನೊಂದು ಹೆಸರು. ಶಂಬರನಿಗೂ ಇಂದ್ರನಿಗೂ ಆದ ಯುದ್ಧದಲ್ಲಿ ದೇವತೆಗಳೇ ಪರಾಜಿತರಾಗಲು ಇಂದ್ರನು ದಶರಥನ ಸಹಾಯವನ್ನು ಪಡೆದು ಆ ರಾಕ್ಷಸನನ್ನು ಗೆದ್ದನು. ಆಗ ದಶರಥನು ಕೈಕೆಯನ್ನೂ ಸ್ವರ್ಗಕ್ಕೆ ಕರೆದುಕೊಂಡು ಹೋಗಿದ್ದ. ಅಲ್ಲಿ ತಿಮಿಧ್ವಜನೊಡನೆ ಯುದ್ಧ ಮಾಡುವಾಗ ಆ ರಕ್ಕಸನ ಹೊಡೆತದಿಂದ ಎಚ್ಚರತಪ್ಪಿಬಿದ್ದ ರಾಜನನ್ನು ಕೈಕೆಯು ಸುರಕ್ಷಿತವಾದ ಜಾಗಕ್ಕೆ ಕೊಂಡುಹೋದಳು. ಎಚ್ಚರವಾದ ಮೇಲೆ ದಶರಥನು ಕೈಕೆಯ ಕಾರ್ಯಕ್ಕೆ ಮೆಚ್ಚಿ ಎರಡು ವರಗಳನ್ನು ಕೊಡುವೆನೆಂದಿದ್ದ (ರಾಮಾ.ಅಯೋ.) ನೋ. - ಕೈಕೆಯಿ, ದಶರಥ.

ತಿರುಪತಿ - ಇದೊಂದು ಕ್ಷೇತ್ರ. ಇದು ಚಿತ್ತೂರು ಜಿಲ್ಲೆಯ ಚಂದ್ರಗಿರಿ ತಾಲೂಕಿಗೆ ಸೇರಿದೆ. ಈ ಕ್ಷೇತ್ರವು ಪೂರ್ವಘಟ್ಟಕ್ಕೆ ಸೇರಿದ ಶೇಷಾಚಲವೆಂಬ ನಯನಮನೋಹರವಾದ ಶೈಲಗಳ ಬುಡದಲ್ಲಿ ಕಂಗೊಳಿಸುತ್ತಿರುವ ದೊಡ್ಡ ಊರು; ಬೆಟ್ಟದ ಮೇಲೆ ತಿಮ್ಮಪ್ಪ - ವೆಂಕಟರಮಣನ ದೇವಸ್ಥಾನವಿದೆ. ದೇವಸ್ಥಾನದವರ ಆಡಳಿತದಲ್ಲಿ ಎರಡು ಛತ್ರಗಳಿವೆ. ತಿರುಪತಿ ಬೆಟ್ಟಕ್ಕೆ ತಿರುಮಲೆ ಎನ್ನುತ್ತಾರೆ.

ವಿಷ್ಣುವು ದುಷ್ಟಶಿಕ್ಷಣ ಹಾಗೂ ಶಿಷ್ಟಪರಿಪಾಲನಾರ್ಥವಾಗಿ ಭೂಲೋಕದಲ್ಲೇ ಇರಬೇಕೆಂದು ವೈಕುಂಠವನ್ನು ಭೂಲೋಕಕ್ಕೆ ತಂದು ಅದನ್ನು ಸ್ವಾಮಿಪುಷ್ಕರಿಣಿ ತೀರದಲ್ಲಿ ಸ್ಥಾಪಿಸುವಂತೆ ತನ್ನ ವಾಹನವಾದ ಗರುಡನಿಗೆ ಅಪ್ಪಣೆ ಮಾಡಿದನು. ಶ್ರೀವಿಷ್ಣುವು ಸ್ವಾಮಿಪುಷ್ಕರಿಣಿ ಬಳಿಯ ಒಂದು ಮೂಲೆಯಲ್ಲಿರುವ ಹುತ್ತದಲ್ಲಿ ನೆಲೆಸಿದನು. ಅವನ ಪತ್ನಿಯಾದ ಲಕ್ಷ್ಮೀದೇವಿಯು ಪದ್ಮಸರೋವರದ ಬಳಿ ಅವತರಿಸಿ ಪದ್ಮಾವತಿ ಎಂಬ ನಾಮದಿಂದ ತಿರುಚಾನೂರು ಎಂಬಲ್ಲಿ ನೆಲೆಸಿದಳು.

ಶ್ರೀವೆಂಕಟೇಶ್ವರ ವಿಗ್ರಹವು ಉದ್ಭವಮೂರ್ತಿ. ನಿತ್ಯ ಮುಂಜಾನೆ ಏಳು ಗಂಟೆಯಿಂದ ಸಾಯಂಕಾಲ ಏಳು ಗಂಟೆಯವರೆಗೆ ಇಲ್ಲಿ ದೇವರ ದರ್ಶನ ದೊರೆಯುತ್ತದೆ. ಗುರುವಾರ ಸಾಯಂಕಾಲ ಹಾಗೂ ಶುಕ್ರವಾರ ಪ್ರಾತಃಕಾಲ, ಮಧ್ಯಾಹ್ನ ಕಾಲಗಳಲ್ಲಿ ಮಾತ್ರ ದೇವರ ದರ್ಶನವಿರುವುದಿಲ್ಲ. ದೇವರ ಕಿರೀಟವು ಹತ್ತುಲಕ್ಷ ರೂಪಾಯಿ ಬೆಲೆಯದಿದ್ದು ಬಂಗಾರ ಮತ್ತು ರತ್ನಖಚಿತವಾಗಿದೆ.

ಪದ್ಮಸರೋವರವಿದ್ದ ತಿರುಚಾನೂರು, ತಿರುಪತಿಗೆ ಮೂರು ಮೈಲಿ ದೂರದ ಒಂದು ಊರು. ಶುಕಮುನಿಯು ಈ ಪ್ರದೇಶದಲ್ಲಿ ತಪಸ್ಸುಮಾಡುತ್ತಿದ್ದನು. ಇಲ್ಲಿ ಪದ್ಮಾವತಿ ಅಮ್ಮನ ದೇವಸ್ಥಾನವಿದ್ದು ಆಕೆಯನ್ನು ಅಲಮೇಲು ಮಂಗಮ್ಮನೆನ್ನುತ್ತಾರೆ. ಈ ಅಮ್ಮನವರ ದರ್ಶನಪಡೆದ ವಿನಹ ತಿರುಪತಿಯ ಯಾತ್ರೆ ಪೂರೈಸಿದಂತಾಗುವುದಿಲ್ಲ (ಕ್ಷೇತ್ರದ.).

ತಿರುವಣ್ಣಾಮಲೆ - ದಕ್ಷಿಣಭಾರತದ ಪ್ರಸಿದ್ಧವಾದ ಪುಣ್ಯಕ್ಷೇತ್ರ. ಇದನ್ನು ಅರುಣಾಚಲ ಎಂದು ಕರೆಯುತ್ತಾರೆ. ಸೋಣಾಚಲವೆಂದರೂ ಇದೇ ಕ್ಷೇತ್ರ. ಈ ಬೆಟ್ಟವು ಮೂರು ಸಾವಿರ ಅಡಿಗಳ ಎತ್ತರವಿದ್ದು ದೇವಾಲಯವು ಇದರ ಬುಡದಲ್ಲಿದೆ. ಒಮ್ಮೆ ಬ್ರಹ್ಮ ಮತ್ತು ವಿಷ್ಣುಗಳಲ್ಲಿ ನಾನು ಮೇಲು ತಾನು ಮೇಲು ಎಂದು ಕಲಹವುಂಟಾಯಿತು. ಇವರಿಬ್ಬರೂ ಶಿವನೊಡನೆ ತೀರ್ಪನ್ನು

ಹೇಳಲು ಪ್ರಾರ್ಥಿಸಲು ಶಿವನು - 'ನಾನೊಂದು ಜ್ಯೋತಿಯ ಆಕಾರವನ್ನು ತಾಳುವೆ. ಬ್ರಹ್ಮನು ಅದರ ತುದಿಯನ್ನೂ, ವಿಷ್ಣುವು ಅದರ ಬುಡವನ್ನೂ ಶೋಧಿಸಬೇಕು. ಯಾರು ಮೊದಲು ಹುಡಕುವರೋ ಅವರೇ ಶ್ರೇಷ್ಠರು' ಎಂದನು. ಯುಗಗಳೇ ಕಳೆದರೂ ಬ್ರಹ್ಮವಿಷ್ಣುಗಳಿಂದ ಈ ಕಾರ್ಯವಾಗದಿರಲು ಶಿವನು ಒಂದು ಜ್ಯೋತಿರೂಪದ ಪರ್ವತವಾಗಿ ಅದರ ಬುಡದಲ್ಲಿ ಲಿಂಗಾಕಾರವಾಗಿ ಕಾಣಿಸಿಕೊಂಡು ಬ್ರಹ್ಮವಿಷ್ಣುಗಳನ್ನು ಅನುಗ್ರಹಿಸಿದನು. ಇದೇ ಅರುಣಾಚಲ (ಕ್ಷೇತ್ರದ.).

ತಿರುವನಂತಪುರ (ತ್ರಿವೇಂದ್ರಮ್) - ಈ ಪಟ್ಟಣದ ಶುದ್ಧ ಹೆಸರು ತಿರುಅನಂತಪುರವೆಂದು. ಈ ಸ್ಥಾನಕ್ಕೆ ಅನಂತವನವೆಂಬ ಹೆಸರು ಪುರಾಣದಲ್ಲಿದೆ. ಇದು ಕೇರಳದ ರಾಜಧಾನಿ. ಇಲ್ಲಿ ಪದ್ಮನಾಭ ದೇವಾಲಯವಿದೆ. ಇಲ್ಲಿ ಪದ್ಮನಾಭನು ಶೇಷಶಾಯಿಯಾಗಿರುವನು (ಕ್ಷೇತ್ರದ.).

ತಿಲ - ವಿಷ್ಣುವಿನ ದೇಹದಿಂದ ಹೊರಬಂದ ಒಂದು ಧಾನ್ಯ. ಇದು ಶ್ರಾದ್ಧದಲ್ಲಿ ಪರಮ ಪವಿತ್ರವಾದ ಪ್ರಾಮುಖ್ಯವಾದ ಧಾನ್ಯ. ಇದನ್ನು ಗಾಣಕ್ಕೆ ಹಾಕಬಾರದು. ತೈಲವೆಂಬ ಪದವು ಇದರಿಂದಲೇ ಉತ್ಪತ್ತಿಯಾಯಿತು. (ಮ.ಶಾಂ., ಅನು., ಅಶ್ವ.).

ತಿಲೋತ್ತಮೆ - ಅಪ್ಸರೆಯೊಬ್ಬಳು. ವಿಶ್ವಕರ್ಮನು ಅರಿಷ್ಟೆಯಲ್ಲಿ ಈಕೆಯನ್ನು ಸೃಷ್ಟಿಸಿದನು. ಇಂದ್ರನ ಸೂಚನೆಯಂತೆ ಈಕೆಯು ಸುಂದೋಪಸುಂದರರೆಂಬ ರಾಕ್ಷಸ ಸಹೋದರರ ಬಳಿಗೆ ತಾನಾಗಿ ಬಂದಳು. ವಿಶ್ವಕರ್ಮನು ಜಗತ್ತಿನ ಸುಂದರ ವಸ್ತುಗಳಿಂದ ಒಂದೊಂದು ತಿಲದಷ್ಟು ಸೌಂದರ್ಯವನ್ನು ಪ್ರತ್ಯೇಕಿಸಿ ಈಕೆಯನ್ನು ನಿರ್ಮಾಣ ಮಾಡಿದನು. ಜಗತ್ತಿನ ಅತ್ಯಂತ ಸುಂದರ ವಸ್ತುಗಳಿಗಿಂತ ಈಕೆ ಒಂದು ತಿಲದಷ್ಟು ಹೆಚ್ಚು ಸೌಂದರ್ಯವುಳ್ಳವಳು. ಈಕೆಯ ಸೌಂದರ್ಯದ ಅಮಲಿನಿಂದ ಬುದ್ಧಿಗೆಟ್ಟ ಸುಂದ ಮತ್ತು ಉಪಸುಂದರು ತನ್ನನ್ನು ವಿವಾಹವಾಗಬೇಕು ಎಂದು ಸೌಂದರ್ಯದ ಅಧಿದೇವತೆಯಾದ ಈಕೆಯನ್ನು ಪ್ರಾರ್ಥಿಸಿದರು. ಅದಕ್ಕೆ ತಿಲೋತ್ತಮೆ 'ನಿಮ್ಮಿಬ್ಬರಲ್ಲಿ ಶೂರರಾದವರನ್ನು ವಿವಾಹವಾಗುತ್ತೇನೆ' ಎಂದಳು. ಆಗ ಆ ಸಹೋದರರಲ್ಲಿ ಭಯಂಕರವಾದ ಕಾದಾಟಕ್ಕೆ ಆರಂಭವಾಯಿತು. ಆಗ ಅವರಿಬ್ಬರೂ ಪರಸ್ಪರ ಹೊಡೆದುಕೊಂಡು ಮೃತರಾದರು. ತಿಲೋತ್ತಮೆಯ ಜನ್ಮದ ಉದ್ದೇಶವು ಪೂರೈಸಿತು. ಒಮ್ಮೆ ಈಕೆಯು ದುರ್ವಾಸನ ತಪೋಭೂಮಿಯ ಸಮೀಪದಿಂದಲೇ ಚಂದ್ರನ ಬಳಿಗೆ ಹೋಗುವಾಗ ಸಾಹಸ್ರಿಕನೆಂಬವನು ಆಕೆಯನ್ನು ಬಲಾತ್ಕಾರದಿಂದ ತಡೆದು ಕ್ರೀಡಿಸುವುದನ್ನು ದೂರ್ವಾಸನು ಕಂಡು ನೀವಿಬ್ಬರೂ ರಾಕ್ಷಸರಾಗಿ ಜನಿಸಿ ಎಂದು ಶಾಪವಿತ್ತನು. ಇದರಿಂದ ತಿಲೋತ್ತಮೆಯು ಬಾಣಾಸುರನ ಮಂತ್ರಿಯ

ಮಗಳಾದ ಚಿತ್ರಲೇಖೆಯಾಗಿ ಹುಟ್ಟಿದಳು. ನೋ. - ಚಿತ್ರಲೇಖ, ಉಷಾ (ಹರಿ., ವಿಷ್ಣುಪು.). ಕಶ್ಯಪನಿಂದ ಪ್ರಾಥೆ ಎಂಬವಳಲ್ಲಿ ಜನಿಸಿದ ಅಪ್ಸರೆಯಲ್ಲೊಬ್ಬಳು (ಮ.ಅನು.). ನೋ. - ಅನಿರುದ್ಧ.

ತಿಷ್ಯ - ೧. ಪುಷ್ಯನಕ್ಷತ್ರ ಮತ್ತು ಪುಷ್ಯಮಾಸದ ಹೆಸರು ೨. ಕಲಿಯುಗ. ನಾಲ್ಕು ಲಕ್ಷದ ಮೂವತ್ತೆರಡು ಸಾವಿರ ಸೌರ ವರ್ಷಗಳು ಇದರ ಅವಧಿ. ಈ ಯುಗದಲ್ಲಿ ಮೂರು ಪಾದ ಅಧರ್ಮ, ಒಂದು ಪಾದ ಧರ್ಮ ನಡೆಯುತ್ತದೆ. ವರ್ಣಾಶ್ರಮ ಧರ್ಮಗಳು ಕೆಟ್ಟು, ಈ ಕಾಲದಲ್ಲಿ ವರ್ಣಸಂಕರವಾಗುವುದು. ಯಜ್ಞಾದಿ ಕ್ರಿಯೆಗಳು ನಿಲ್ಲುವುವು. ಸ್ತ್ರೀಯರು ವ್ಯಭಿಚಾರದಿಂದ ಜೀವಿಸುವರು. ಜನರಿಗೆ ಗೋರಕ್ಷಣೆಯಲ್ಲಿ ಬೇಸರ ಬಂದು ಎಮ್ಮೆಗಳನ್ನು ಸಾಕುವರು. ಕ್ರಮೇಣ ಆಡುಗಳನ್ನು ಸಾಕುವುದೇ ಲಾಭಕರವಾಗಿ ತೋರತೊಡುಗುವುದು (ಮ.ವ.).

ತುಗ್ರ - ರಾಜನೊಬ್ಬ. ಇವನು ದ್ವೀಪಾಂತರಗಳಲ್ಲಿದ್ದ ಶತ್ರುಗಳ ಉಪದ್ರವವನ್ನು ಸಹಿಸಲಾರದೆ ಅವರನ್ನು ಜಯಿಸಲು ತನ್ನ ಮಗನಾದ ಭುಜ್ಯುವನ್ನು ಸೇನಾಸಮೇತನಾಗಿ ದೋಣಿಯಲ್ಲಿ ಕಳುಹಿಸಿದನು. ಆಗ ಸಮುದ್ರಮಧ್ಯದಲ್ಲಿ ಬಿರುಗಾಳಿ ಎದ್ದು ದೋಣಿ ಒಡೆಯಿತು. ಆಗ ಭುಜ್ಯುವು ಅಶ್ವಿನೀದೇವತೆಗಳನ್ನು ಸ್ತುತಿಸಿದನು. ಆ ದೇವತೆಗಳು ಅವನನ್ನೂ, ಅವನ ಸೇನೆಗಳನ್ನೂ ತಮ್ಮ ದೋಣಿಗಳಲ್ಲಿ ಕೂಡಿಸಿಕೊಂಡು ಅವನ ತಂದೆಯ ಸಮೀಪಕ್ಕೆ ಮೂರು ದಿನಗಳಲ್ಲಿ ತಂದು ಮುಟ್ಟಿಸಿದರು (ಋ.).

ತುಂಬುರು - ಕಶ್ಯಪ ಮತ್ತು ಅರಿಷ್ಟೆಯರ ಮಗನಾದ ಗಂಧರ್ವನೊಬ್ಬ. ಈತನು ಕುಬೇರನ ಬಳಿಗೆ ಹೋಗುವ ರಂಭೆಯನ್ನು ತಡೆದು ಮಾನಭಂಗ ಮಾಡಿದುದರಿಂದ ಕುಬೇರನಿಂದ ರಾಕ್ಷಸನಾಗುವಂತೆ ಶಾಪಪಡೆದ. ಇವನೇ ವಿರಾಧನೆಂಬ ರಾಕ್ಷಸನಾಗಿ ಹುಟ್ಟಿ ರಾಮಲಕ್ಷ್ಮಣರನ್ನು ಅರಣ್ಯದಲ್ಲಿ ತಡೆದು ರಾಮನಿಂದ ಹತನಾಗಿ ಶಾಪವಿಮೋಚನೆಯನ್ನು ಹೊಂದಿದನು (ಮ.ಆ.,ಸ.,ವಿ.,ರಾಮಾ.ಅರ.). ನೋ. - ವಿರಾಧ.

ತುರ - ಮಹರ್ಷಿಯೊಬ್ಬ; ಕವಷೆ ಎಂಬವಳ ಮಗ. ಜನಮೇಜಯನ ಸರ್ಪಯಾಗದಲ್ಲಿ ಪ್ರಧಾನ ಋತ್ವಿಜನಾಗಿದ್ದ. ನೋ. - ಜನಮೇಜಯ.

ತುರ್ವಸು - ಚಂದ್ರವಂಶದ ಯಯಾತಿಯು ಈತನ ತಂದೆ. ಶುಕ್ರಾಚಾರ್ಯರ ಮಗಳಾದ ದೇವಯಾನಿಯು ಈತನ ತಾಯಿ; ಯದುವು ಈತನ ಅಣ್ಣ. ತಂದೆಯ ವೃದ್ಧಾಪ್ಯವನ್ನು ತೆಗೆದುಕೊಳ್ಳದುದರಿಂದ ಸಿಂಹಾಸನಕ್ಕೆ ಅನರ್ಹನಾಗುವಂತೆ ಶಾಪ ಪಡೆದ. ಮುಂದೆ ಯದು ಮತ್ತು ತುರ್ವಸುವಿನ ವಂಶದವರಾರೂ

ಅರಸರಾಗಲಿಲ್ಲ (ಮ.ಆ.,ವ.,ಭಾಗ.,ಹರಿ.,ಬ್ರಹ್ಮ ಪು.,ಮತ್ಸ್ಯಪು.,ಉತ್ತರರಾಮ., ವಿಷ್ಣುಪು.).

ಇವನು ತಂದೆಯ ಮುದಿತನವನ್ನು ಸ್ವೀಕರಿಸದುದರಿಂದ 'ನಿನಗೆ ಸಂತಾನವು ವಿಚ್ಛಿನ್ನವಾಗಲಿ; ನೀನು ಮ್ಲೇಚ್ಛರಿಗೆ ರಾಜನಾಗು' ಎಂದು ಶಪಿಸಿದನು (ಮ.ಆ.).

ತುಲಜಾಪುರ - ಮಹಾರಾಷ್ಟ್ರದ ಪ್ರಸಿದ್ಧ ಶಕ್ತಿಕ್ಷೇತ್ರ. ಇಲ್ಲಿಯ ಪ್ರಸಿದ್ಧ ದೇವತೆಯಾದ ತುಳಜಾಭವಾನಿಯು ಎಷ್ಟೋ ಜನರ ಕುಲಸ್ವಾಮಿನಿಯಾಗಿರುವಳು. ಈ ಮಂದಿರವು ತಗ್ಗಿನಲ್ಲಿದ್ದು ಪಾವಟಿಗೆಗಳನ್ನು ಇಳಿದು ಹೋಗಬೇಕಾಗುತ್ತದೆ. ಇಲ್ಲಿದ್ದ ಕಲ್ಲೋಲ ತೀರ್ಥದಲ್ಲಿಳಿದು, ಸ್ನಾನಮಾಡಿ ಯಾತ್ರಿಕರು ದೇವಿಯ ದರ್ಶನಕ್ಕೆ ಹೋಗುತ್ತಾರೆ. ಮಂದಿರದಲ್ಲಿ ಸ್ವರ್ಣಮಂಟಪವಿದ್ದು ಅದರಲ್ಲಿ ದೇವಿಯ ಶ್ಯಾಮವರ್ಣದ ವಿಗ್ರಹವಿದೆ. ಇದರ ಇದಿರಿನಲ್ಲಿ ಹಿತ್ತಾಳೆಯ ಸಿಂಹಮೂರ್ತಿ ಇದೆ (ದೇವೀಭಾ., ಕ್ಷೇತ್ರದ.).

ತುಲಸಿ - ೧. ಧರ್ಮಧ್ವಜ ಮತ್ತು ಮಾಧವಿಯರ ಪುತ್ರಿ. ದಂಭಾಸುರನ ಮಗನಾದ ಶಂಖಚೂಡನು ಈಕೆಯ ಪತಿ. ಈಕೆ ಲಕ್ಷ್ಮಿಯ ಅಂಶದಿಂದ ಹುಟ್ಟಿದವಳು. ಇವಳು ಬಾಲ್ಯದಲ್ಲೇ ಬದರಿಕಾಶ್ರಮಕ್ಕೆ ಹೋಗಿ ಬ್ರಹ್ಮನನ್ನು ಕುರಿತು ತಪಸ್ಸುಮಾಡಿ ವಿಷ್ಣುವನ್ನು ಪತಿಯಾಗುವ ವರ ಪಡೆದರೂ, ಗಿಡವಾಗುವೆಯೆಂದು ಬ್ರಹ್ಮನು ಹೇಳಿದನು. ಈಕೆ ಮುಂದೆ ನಾರದನ ಸೂಚನೆಯಂತೆ ತಪಸ್ಸಿನಲ್ಲಿ ಸಿದ್ಧಿಪಡೆದ ಶಂಖಚೂಡನನ್ನು ವಿವಾಹವಾದಳು. ಈತನು ದೇವತೆಗಳೊಡನೆ ಹೋರಾಡಿ ಮಡಿಯಲು, ವಿಷ್ಣುವು ಶಂಖಚೂಡನ ಆಕಾರದಿಂದ ತುಲಸಿಯ ಸಮೀಪ ಬರಲು ಈಕೆಯು ವಿಷ್ಣುವೆಂದು ತಿಳಿದು ಗಿಡವಾದಳು. ೨. ಸಮುದ್ರಮಥನಕಾಲದಲ್ಲಿ ಅಮೃತಕಲಶವು ಹುಟ್ಟಿಬರಲು ವಿಷ್ಣುವು ಅದನ್ನು ಹಿಡಿದುಕೊಂಡಾಗ ಅವನ ಕಣ್ಣುಗಳಿಂದ ಆನಂದಬಾಷ್ಪವು ಉದುರಿ ಈ ಕಲಶದಲ್ಲಿ ಬೀಳಲು ಅದರಿಂದ ಒಂದು ಸಣ್ಣ ಗಿಡ ಹುಟ್ಟಿತು. ಇದೇ ತುಲಸಿ. ತುಲನೆಯಿಲ್ಲದ ಈ ಗಿಡವನ್ನು ಲಕ್ಷ್ಮಿಯೊಂದಿಗೆ ಶ್ರೀವಿಷ್ಣುವು ವಿವಾಹವಾದನು (ದೇವೀಭಾ., ಸ್ಕಾಂ.ಪು., ವಿಷ್ಣುಪು.).

ತುಲ್ಯ - ಗೋದಾವರಿ ನದಿಯ ಒಂದು ಉಪನದಿ. ಚಂದ್ರನಿಗೆ ಮಾವನಾದ ದಕ್ಷನ ಶಾಪದಿಂದ ಕ್ಷಯರೋಗ ಆರಂಭವಾಗಿ ಕೊನೆಗೆ ಈ ನದಿಯಲ್ಲಿ ಮಿಂದು ತನ್ನ ಶಾಪವಿಮೋಚನೆ ಹೊಂದಿದನು.

ತುಲಾಧಾರ - ವಾರಣಾಸಿಯಲ್ಲಿದ್ದ ಜ್ಞಾನಿಯಾದ ವೈಶ್ಯನೊಬ್ಬ. ಈತನು ಜಾಜಲ್ಕ ಋಷಿಗಳಿಂದ ಧರ್ಮೋಪದೇಶಮಾಡಿಕೊಂಡು ದುರಭಿಮಾನವನ್ನು ಕಳೆದುಕೊಂಡ (ಮ.ಶಾಂ.,ಪದ್ಮಪು.).

ತುಷಿತ - ೧. ಸ್ವಾಯಂಭುವ ಮನ್ವಂತರದ ದೇವತೆಗಳು. ೨. ಸ್ವಾಯಂಭುವ ಮನ್ವಂತರದ ಯಜ್ಞಪುರುಷನಿಂದ ದಕ್ಷಿಣಾದೇವಿಯಲ್ಲಿ ಜನಿಸಿದವ. ತೋಷ, ಪ್ರತೋಷ, ಸಂತೋಷ, ಭದ್ರ, ಶಾಂತಿ, ಇಡಸ್ಪತಿ, ಇಧ್ಮ, ಕವಿ, ವಿಭು, ಸ್ವಹ್ನ, ಸುದೇವ, ರೋಚನರೆಂಬ ಹನ್ನೆರಡು ಮಂದಿ ಈಕೆಯ ಮಕ್ಕಳು. ಇವರೆಲ್ಲ ತುಷಿತನ ಸೋದರರು (ಭಾಗ.).

ತುಷಿತಾ - ವೇದಶಿರ ಮಹರ್ಷಿಯ ಹೆಂಡತಿ. ಸ್ವಾರೋಚಿಷ ಮನ್ವಂತರದಲ್ಲಿ ವಿಷ್ಣುವು ವಿಭುವೆಂಬ ಹೆಸರಿನಿಂದ ಈಕೆಯ ಮಗನಾಗಿ ಜನಿಸಿದ (ಭಾಗ.).

ತುಷ್ಟ - ಚಂಪಕಾವತಿಯ ರಾಜನಾದ ಹಂಸಧ್ವಜನ ಒಬ್ಬ ಮಂತ್ರಿ (ಜೈ.ಭಾ.).

ತುಷ್ಟಿ - ಸ್ವಾಯಂಭುವ ಮನ್ವಂತರದಲ್ಲಿ ಬ್ರಹ್ಮನ ಮಾನಸಪುತ್ರರಲ್ಲೊಬ್ಬನಾದ ಧರ್ಮನ ಪತ್ನಿ. ಈಕೆ ದಕ್ಷಬ್ರಹ್ಮನ ಮಗಳು. ಈತನಿಗೆ ಶ್ರದ್ಧಾ, ಮೈತ್ರಿ, ದಯಾ, ಶಾಂತಿ ಮೊದಲಾದ ಹದಿನೈದು ಮಂದಿ ತುಷ್ಟಿಯಂತೆ ಧರ್ಮಪತ್ನಿಯರು. ನೋ. - ಧರ್ಮ. ತುಷ್ಟಿಯು ಧರ್ಮನಿಂದ ಸಂತೋಷನೆಂಬ ಮಗನನ್ನು ಪಡೆದಳು (ಭಾಗ., ದೇವೀಭಾ.).

ತುಷ್ಟಿಮಂತ - ಉಗ್ರಸೇನನ ಕಿರಿಯ ಮಗ. ಕಂಸ, ಸುನಾಮ, ನ್ಯಗ್ರೋಧ, ಕಂಕ, ಶಂಕು, ಸುಹು, ರಾಷ್ಟ್ರಪಾಲ, ಸೃಷ್ಟಿ - ಎಂಬುವರು ಈತನ ಅಣ್ಣಂದಿರು. ಕಂಸಾ, ಕಂಸಾವತಿ, ಕಂಕಾ, ಶರಭೂ, ರಾಷ್ಟ್ರಪಾಲಿಕಾ ಎಂಬುವರು ಈತನ ಸಹೋದರಿಯರು (ಭಾಗ.).

ತುಹುಂಡ - ೧. ದನುಪುತ್ರನಾದ ಅಸುರ. ೨. ಚಂದ್ರವಂಶದ ಧೃತರಾಷ್ಟ್ರನ ಮಗ.

ತೃಣಬಿಂದು - ೧. ಮಹರ್ಷಿಯೊಬ್ಬ. ಈತನ ಆಶ್ರಮದ ಪಕ್ಕದಲ್ಲಿ ಬ್ರಹ್ಮಪುತ್ರನಾದ ಪುಲಸ್ತ್ಯನು ಪರ್ಣಶಾಲೆಯನ್ನು ಕಟ್ಟಿಕೊಂಡು ತಪಸ್ಸುಮಾಡುತ್ತಿದ್ದನು. ಈತನ ಆಶ್ರಮದ ಸಮೀಪಕ್ಕೆ ಗಂಧರ್ವ ಅಪ್ಸರೆ ಮೊದಲಾದ ದೇವಸ್ತ್ರೀಯರು ಬಂದು ನರ್ತನ ಸಂಗೀತ ಮೊದಲಾದವುಗಳಿಂದ ತಪೋಭಂಗವನ್ನು ಮಾಡುತ್ತಿದ್ದರು. ಇದರಿಂದ ಕೆರಳಿದ ಮುನಿಯು 'ಈ ಆಶ್ರಮ ಪ್ರದೇಶವನ್ನು ಪ್ರವೇಶಮಾಡಿದ ಸ್ತ್ರೀಯರೆಲ್ಲಾ ಗರ್ಭಿಣಿಯರಾಗಲಿ!' ಎಂದು ಶಾಪಕೊಟ್ಟನು. ಇದನ್ನು ತಿಳಿಯದ ತೃಣಬಿಂದು ಮುನಿಯ ಮಗಳಾದ ಗೋ ಎಂಬವಳು ಪುಲಸ್ತ್ಯನ ಆಶ್ರಮವನ್ನು ಪ್ರವೇಶಿಸಿ ಗರ್ಭಿಣಿಯಾದಳು. ತೃಣಬಿಂದು ಮುನಿಯು ಇದನ್ನು ತನ್ನ ತಪಶ್ಶಕ್ತಿಯಿಂದ ತಿಳಿದು ಆ ಮುನಿಗೆ ಆಕೆಯನ್ನು ವಿವಾಹಮಾಡಿಕೊಟ್ಟನು. ಮುಂದೆ ಈಕೆಯಲ್ಲೇ ವಿಶ್ರವಸು ಎಂಬ ಮುನಿಯು ಹುಟ್ಟಿದನು. ೨. ಇಪ್ಪತ್ತನಾಲ್ಕನೆಯ ಚತುರ್ಯುಗದ ದ್ವಾಪರದಲ್ಲಿ

ತೃಣಬಿಂದು ಮುನಿಯು ವ್ಯಾಸನಾಗಿದ್ದ. ಇಂದಿಗೆ ಇಪ್ಪತ್ತೇಳು ಮಹಾಯುಗಗಳು ಕಳೆದವು. ಇಪ್ಪತ್ತೆಂಟನೆಯ ಮಹಾಯುಗದ ದ್ವಾಪರದಲ್ಲಿ ಪರಾಶರಪುತ್ರನು ವ್ಯಾಸನು. ಮುಂದಿನ ಮಹಾಯುಗದಲ್ಲಿ ದ್ರೋಣಪುತ್ರನಾದ ಅಶ್ವತ್ಥಾಮನು ವ್ಯಾಸ. ತ್ರಯ್ಯಾರುಣನು ೧೫ನೆಯ ದ್ವಾಪರಯುಗದ ವ್ಯಾಸ. ೩. ಸೂರ್ಯವಂಶದ ರಾಜನೊಬ್ಬ. ಈತನು ತನ್ನ ಹೆಸರಿನಿಂದ ಒಂದು ಸರೋವರವನ್ನು ನಿರ್ಮಿಸಿದನು. ಇದನ್ನು ತೃಣಬಿಂದು ಸರೋವರವೆನ್ನುತ್ತಾರೆ.

ತೃಣಾವರ್ತ - ಕಂಸನಿಂದ ಶ್ರೀಕೃಷ್ಣನ ಕೊಲೆಗೆ ಪ್ರೇರಿತನಾದ ರಾಕ್ಷಸನೊಬ್ಬ. ಯಶೋದೆಯು ಮಗುವನ್ನು ಮಲಗಿಸಿ ತನ್ನ ಕೆಲಸಕ್ಕೆ ಹೋಗಿರುವಾಗ ಕಂಸನಿಂದ ಪ್ರೇರಿತನಾದ ಈ ರಾಕ್ಷಸನು ಸುಳಿಗಾಳಿಯ ರೂಪದಿಂದ ಬಂದು, ಮಗುವನ್ನು ತರಗೆಲೆಯಂತೆ ಆಕಾಶಕ್ಕೆ ಹಾರಿಸಿಕೊಂಡು ಹೋದನು. ಕೊನೆಕೊನೆಗೆ ಶ್ರೀಕೃಷ್ಣನ ಭಾರವನ್ನು ತಡೆಯಲಾರದೆ ಅವನ ವೇಗ ತಗ್ಗಿತು. 'ಇದು ಸಾಮಾನ್ಯ ಶಿಶುವಲ್ಲ. ಇದೊಂದು ದೊಡ್ಡ ಕಲ್ಲುಗುಂಡಾಗಿರಬೇಕು' ಎಂದು ರಕ್ಕಸನು ಮಗುವನ್ನು ಕೆಳಗೆ ಬಿಸಾಡುವುದಕ್ಕೆ ಯತ್ನಿಸಿದನು. ಆದರೆ ಕೃಷ್ಣನು ರಾಕ್ಷಸನ ಕುತ್ತಿಗೆಯನ್ನು ಬಲವಾಗಿ ಹಿಡಿದುಬಿಟ್ಟಿದ್ದನು. ಇದರಿಂದ ರಾಕ್ಷಸನ ಉಸಿರಾಟವು ನಿಂತುಹೋಗಿ ಮೃತನಾದನು (ಭಾಗ.).

ತೇಜಶ್ರವಾ - ಗಾಂಧಾರಿಯ ಸಹೋದರಿ. ಈಕೆಯೂ ಧೃತರಾಷ್ಟ್ರನನ್ನೇ ಮದುವೆಯಾಗಿದ್ದಳು. ನೋ. - ಶಕುನಿ. (ಮ.ಆ.).

ತೇಜೇಯು - ಚಂದ್ರವಂಶದ ರೌದ್ರಾಶ್ವನ ಮಗ; ಈತನ ತಾಯಿ ಮಿಶ್ರಕೇಶಿಯೆಂಬ ಅಪ್ಸರಸಿ. ಇವನಿಗೆ ಒಂಬತ್ತು ಮಂದಿ ಸೋದರರಿದ್ದರು. ಋಚೇಯು, ಕಕ್ಷೇಯು, ಸ್ಥಂಡಿಲೇಯು ಮೊದಲಾದವರೆಲ್ಲ ಇವನ ಸೋದರರು (ಮ.ಆ.).

ತೈತ್ತಿರಿ - ಅಂಗಿರಸ ಮುನಿಯ ವಂಶೋತ್ಪನ್ನವಾದ ತಿತ್ತಿರಿ ಮಹರ್ಷಿಯ ಮಗ. ನೋ. - ತಿತ್ತಿರಿ (ಮ.ಸ.).

ತೈತ್ತಿರೀಯ - ತಿತ್ತಿರಿ ಮುನಿಯಿಂದ ಪ್ರಚಾರಕ್ಕೆ ಬಂದ ಯಜುರ್ವೇದದ ಭಾಗ. ಇದಕ್ಕೆ ಕೃಷ್ಣಯಜುರ್ವೇದವೆನ್ನುತ್ತಾರೆ (ಮ.ಸ.).

ತೋಶಲರ - ಶ್ರೀಕೃಷ್ಣನಿಂದ ಹತನಾದ ಕಂಸನ ಆಸ್ಥಾನದಲ್ಲಿದ್ದ ಒಬ್ಬ ಮಲ್ಲ. ಮುಷ್ಟಿಕ, ಚಾಣೂರರನ್ನು ಕೊಂದಮೇಲೆ ಕೃಷ್ಣನು ಇದಿರಿಸಿದ ಶಲ ಮತ್ತು ತೋಶಲಕರೆಂಬ ಜಟ್ಟಿಗಳನ್ನು ಕಾಲಿನಿಂದ ಮೆಟ್ಟಿ ಅವರ ದೇಹವನ್ನು ಎರಡು ತುಂಡಾಗಿ ಮಾಡಿ ಬಿಸಾಡಿದನು (ಭಾಗ.).

ತ್ರಯ್ಯಾರುಣ - ವೈವಸ್ವತ ಮನ್ವಂತರದ ಹದಿನೈದನೆಯ ದ್ವಾಪರಯುಗದಲ್ಲಿ ಈತನು ವ್ಯಾಸನಾಗಿದ್ದ. ನೋ. - ತೃಣಬಿಂದು (ದೇವೀಭಾ.).

ತ್ರಯ್ಯಾರುಣಿ - ಪೂರು ವಂಶದ ರಾಜನು ತಪಸ್ಸಿನಿಂದ ಬ್ರಾಹ್ಮಣನಾದ (ಭಾಗ., ಹರಿ., ವಿಷ್ಣುಪು.).

ತ್ರಸದಸ್ಯು - ಸೂರ್ಯವಂಶದ ರಾಜ. ಮಾಂಧಾತ ಚಕ್ರವರ್ತಿಯ ಮೊಮ್ಮಗ; ಪುರುಕುತ್ಸ ಚಕ್ರವರ್ತಿಯ ಮಗ. ಅಗಸ್ತ್ಯ ಮಹರ್ಷಿಯೊಮ್ಮೆ ಹಣಕ್ಕಾಗಿ ಈತನ ಬಳಿಗೆ ಬಂದ. ಅಗಸ್ತ್ಯನ ಪತ್ನಿ ಲೋಪಾಮುದ್ರೆಯು ಗಂಡನೊಡನೆ ವಿಲಾಸಜೀವನ ನಡೆಸಲು ಅಪೇಕ್ಷೆಪಡಲು ಮುನಿಯು ಆಕೆಯ ತೃಪ್ತಿಗಾಗಿ ಹಣವನ್ನು ಸಂಗ್ರಹಿಸಲು ಶ್ರುತರ್ವರಾಯ, ಬೃದ್ರಶ್ವರಾಜ, ತ್ರಸದಸ್ಯುರಾಜರ ಬಳಿಗೆ ಹೋಗಿ ಆ ದೇಶಗಳ ಆಯವ್ಯಯಗಳು ಸಮಾನವಾಗಿದ್ದುದರಿಂದ ಧನಿಕ ದಾನವನಾದ ಇಲ್ವಲನ ಬಳಿಗೆ ಹೋದರು. ಇಲ್ವಲನು ಇವರ ನಾಶಕ್ಕಾಗಿ ಪ್ರಯತ್ನಿಸಲು, ಮುನಿಯು ವಾತಾಪಿಯನ್ನು ಕೊಂದು, ಇಲ್ವಲನಿಂದ ತನ್ನೊಡನಿದ್ದ ಮೂವರು ರಾಜರ್ಷಿಗಳಿಗೆ ಒಂದೊಂದು ಲಕ್ಷ ಗೋವುಗಳನ್ನೂ ಒಂದೊಂದು ಲಕ್ಷ ಹೊನ್ನುಗಳನ್ನೂ, ತನಗೆ ಅದಕ್ಕೆ ಇಮ್ಮಡಿಯಾದ ಧನವನ್ನೂ, ಗೋವುಗಳನ್ನೂ, ಮನೋವೇಗವುಳ್ಳ ವಿರಾದ ಮತ್ತು ಸುರಾದವೆಂಬ ಹೆಸರುಳ್ಳ ಕುದುರೆಗಳನ್ನು ಕಟ್ಟಿದ ಚಿನ್ನದ ರಥದಲ್ಲಿ ಆ ಸಂಪತ್ತನ್ನೆಲ್ಲ ಇಟ್ಟುಕೊಂಡು ತನ್ನ ಆಶ್ರಮಕ್ಕೆ ಬಂದನು. ಮೂವರು ರಾಜರ್ಷಿಗಳೂ ತಮ್ಮ ಪಾಲಿನ ಸಂಪತ್ತಿನೊಡನೆ ತಮ್ಮ ಪಟ್ಟಣಕ್ಕೆ ತೆರಳಿದರು. ಅಗಸ್ತ್ಯನು ಲೋಪಾಮುದ್ರೆಯ ಮನೋರಥವನ್ನು ನೆರವೇರಿಸಿದನು (ಭಾಗ., ಮ.ವ.).

ತ್ರಸ್ನು (ತಂಸು) - ಚಂದ್ರವಂಶದ ಅಂತ್ಯನಾರನೆಂಬ ರಾಜನ ಮಗ. ಈತನ ತಾಯಿ ಸರಸ್ವತೀನದಿ; ಈತನ ಪತ್ನಿ ಕಾಳಿಂದಿ; ಮಗ ಇಲಿಲ; ಮೊಮ್ಮಗ ಭರತಚಕ್ರವರ್ತಿಯ ತಂದೆಯಾದ ದುಷ್ಯಂತ (ಮ.ಆ.).

ತ್ರಿಕೂಟ - ಲಂಕೆಯಲ್ಲಿದ್ದ ಒಂದು ಪರ್ವತ. ನೋ. - ಇಂದ್ರದ್ಯುಮ್ನ. ಒಂದು ದಿನ ಗರುಡನು ಹಸಿವೆಯ ಪರಿಹಾರಕ್ಕಾಗಿ ಹರಿಯನ್ನು ಪ್ರಾರ್ಥಿಸಲು ಅವನು ತ್ರಿಕೂಟ ಪರ್ವತದಲ್ಲಿದ್ದ ನಕ್ರ ಮತ್ತು ಗಜೇಂದ್ರರ ದೇಹಗಳನ್ನು ತಿನ್ನುವಂತೆ ಅಪ್ಪಣೆಮಾಡಲು ಗರುಡನು ಅಲ್ಲಿಗೆ ತೆರಳಿ ನಕ್ರ - ಗಜೇಂದ್ರರ ದೇಹದ ಮೇಲೆ ಕುಳಿತಿದ್ದ ಭ್ರೂಭಂಗವೆಂಬ ಹದ್ದನ್ನು ಕೊಂದು, ಆ ಎರಡು ದೇಹಗಳನ್ನೆತ್ತಿಕೊಂಡು ಒಂದು ನೇರಿಲ ಗೆಲ್ಲಿನ ಮೇಲೆ ಹೋಗಿ ಕುಳಿತನು. ಆ ಮರದ ಗೆಲ್ಲು ಇವರ ಭಾರದಿಂದ ಮುರಿಯಿತು. ಆ ಕೊಂಬೆಯಲ್ಲಿ ಹಲವು

ಸಾವಿರ ಮಂದಿ ವಾಲಿಖಿಲ್ಯರೆಂಬ ತಪಸ್ವಿಗಳು ಜೋತಾಡುತ್ತ ತಪಸ್ಸು ಮಾಡುತ್ತಿರುವುದನ್ನು ಕಂಡು ಕೊಂಬೆಯು ಕೆಳಗೆ ಬಿದ್ದಲ್ಲಿ ಅವರ ಆಗ್ರಹಕ್ಕೆ ಪಾತ್ರನಾಗುವೆನೆಂದು ಗರುಡನು ಆ ಕೊಂಬೆಯನ್ನೇ ಕಚ್ಚಿಕೊಂಡೇ ತಂದೆಯ ಬಳಿಗೆ ಬರಲು, ಅವರು 'ಲಂಕೆಗೆ ಹೋಗಿ ತಿನ್ನು' ಎಂದು ಆಜ್ಞಾಪಿಸಲು ಗರುಡನು ಆ ಕೊಂಬೆಯನ್ನು ಬೆನ್ನಮೇಲಿಟ್ಟುಕೊಂಡು, ಗಜನಕ್ರಗಳನ್ನು ತಿಂದು ಅವುಗಳ ಮೂಳೆಯನ್ನು ಮೂರು ರಾಶಿ ಹಾಕಲು ಅವೇ ತ್ರಿಕೂಟಶಿಖರಗಳಾದವು. ಇಲ್ಲೇ ಗರುಡನು ಆ ಕೊಂಬೆಯ್ನನ್ನಿಟ್ಟನು. ವಾಲಖಿಲ್ಯರು ತಪಸ್ಸು ಮುಗಿದೊಡನೆ ವೈಕುಂಠವನ್ನು ಸೇರಿದರು. ಈ ಕೊಂಬೆಯ ಕೆಳಭಾಗದಲ್ಲಿ ಒಂದು ಸುವರ್ಣಶಿಖರವಿತ್ತು. ನೋ. - ಲಂಕೆ, ವಾಲಖಿಲ್ಯರು (ಅನಂ.ರಾ.).

ತ್ರಿಗರ್ತ - ಇಂದಿನ ಲಾಹೋರು ಜಿಲ್ಲೆಯ ಜಲಂಧರ. ಇದು ವಿಪಾಶಾ ನದಿಯ ದಡದಲ್ಲಿದೆ (ಮ.ಭೀ.).

ತ್ರಿಗರ್ತರಾಜ - ಸುಶರ್ಮ. ಇವನು ದುರ್ಯೋಧನನ ಆಪ್ತಮಿತ್ರ. ಪಾಂಡವರು ಅಜ್ಞಾತವಾಸದಲ್ಲಿದ್ದಾಗ ಈತ ದಕ್ಷಿಣಗೋಗ್ರಹಣಕ್ಕೆ ಹೋಗಿ ಪಾಂಡವರಿಗೆ ಸೆರೆಸಿಕ್ಕಿದ. ಭಾರತಯುದ್ಧದಲ್ಲಿ ಈತನು ಅರ್ಜುನನಿಂದ ಮಡಿದ. ನೋ. - ಸುಶರ್ಮ.

ತ್ರಿಜಟ - ಗರ್ಗವಂಶದ ಬ್ರಾಹ್ಮಣ. ಈತನು ತೀರಾ ಬಡವನಾಗಿದ್ದ. ಮನೆ ತುಂಬ ಮಕ್ಕಳಿದ್ದರು. ವನವಾಸಕ್ಕೆ ಹೊರಟ ಶ್ರೀರಾಮನಿಂದ ಈತ ಸಂಪತ್ತನ್ನು ಪಡೆದು ತನ್ನ ಬಡತನವನ್ನು ಹೋಗಲಾಡಿಸಿಕೊಂಡ (ರಾಮಾ.ಅಯೋ.).

ತ್ರಿಜಟೆ - ರಾಕ್ಷಸಿ; ಅಶೋಕವನದಲ್ಲಿದ್ದ ಸೀತೆಯ ರಕ್ಷಣೆಯು ಈಕೆಯ ಕೈಯಲ್ಲಿತ್ತು. ವಿಭೀಷಣನ ಪತ್ನಿಯಾದ ಸರಮೆಯಂತೆ ಈಕೆಯೂ ಸೀತೆಯ ಹಿತಚಿಂತಕಳಾಗಿದ್ದಳು. ಆಕೆಯು ಕಂಡ ಕನಸಿನಂತೆ ರಾವಣನ ವಧೆಯು ಸಧ್ಯವೇ ಶ್ರೀರಾಮನಿಂದಾಗುವುದೆಂದು ಆಕೆಗೆ ಗೊತ್ತಿತ್ತು. ಇದರಿಂದ 'ಶ್ರೀರಾಮನು ಬೇಗನೆ ಲಂಕೆಗೆ ಬಂದು, ರಾಕ್ಷಸರನ್ನೆಲ್ಲ ಕೊಂದು ನಿನ್ನನ್ನು ಕರೆದುಕೊಂಡು ಹೋಗುವನು, ಎಂದು ಸೀತೆಗೆ ಧೈರ್ಯ ಹೇಳುತ್ತಿದ್ದಳು (ರಾಮಾ.ಸುಂ., ಮ.ವ.).

ತ್ರಿತ - ಗೌತಮ ಮುನಿಯ ಕಿರಿಯ ಮಗ. ಏಕತಾ ಮತ್ತು ದ್ವಿತರು ಈತನ ಅಣ್ಣಂದಿರು. ಈ ಮೂವರಲ್ಲಿ ತ್ರಿತನು ಕರ್ಮಗಳಲ್ಲಿಯೂ, ವೇದಾಧ್ಯಯನದಲ್ಲಿಯೂ ವಿದ್ವಾಂಸನಾಗಿದ್ದನು. ಒಂದು ಸಾರಿ ಈ ಮೂವರು ಒಂದು ಯಜ್ಞಶಾಲೆಗೆ ಹೋದರು. ಅಲ್ಲಿ ತ್ರಿತನಿಗೆ ಹೇರಳ ಸಂಭಾವನೆ ದೊರೆಯಲು ಮೂವರು ತಮಗೆ ದೊರೆತ ಸಂಪತ್ತಿನೊಡನೆ ಊರಿಗೆ ಹಿಂದಿರುಗಿ ಹೋಗುವಾಗ ತ್ರಿತನು ಕಾಲು ಜಾರಿ ಒಂದು ಬಾವಿಗೆಬಿದ್ದನು. ಆಗ

ಉಳಿದಿಬ್ಬರು ಆತನ ಸಹೋದರರು ಆತನನ್ನು ಬಾವಿಯಿಂದೆತ್ತದೆ ಅವನ ಸಂಪತ್ತನ್ನು ತಾವಿಬ್ಬರೂ ಹೊತ್ತುಕೊಂಡು ಹೋಗಿ, ಪಾಲುಮಾಡಿಕೊಂಡು ಸುಖವಾಗಿದ್ದರು. ಇತ್ತ ತ್ರಿತನು ದೇವತೆಗಳನ್ನು ಪ್ರಾರ್ಥಿಸಿ ಆ ಬಾವಿಯಿಂದ ಮೇಲೆ ಬಂದನು. ದೇವತೆಗಳ ಪ್ರಭಾವದಿಂದ ಅವನು ಬಿದ್ದ ಬಾವಿಯು ನೀರಿನಿಂದ ತುಂಬಿ ಒಂದು ತೀರ್ಥವಾಯಿತು. ಬಲರಾಮನು ತೀರ್ಥಯಾತ್ರೆಗೆ ಹೊರಟಿದ್ದಾಗ ಈ ತೀರ್ಥಕ್ಕೆ ಬಂದಿದ್ದನು (ಮ.ಶ.).

ಈ ತ್ರಿತನು ತನ್ನ ಸಹೋದರರಿಗೆ ಕೋರೆಹಲ್ಲುಗಳುಳ್ಳ ತೋಳಗಳಾಗುವಂತೆಯೂ, ಇವರ ಸಂತಾನವೆಲ್ಲವೂ ಕಪಿ, ಕರಡಿ ಗೋಲಾಂಗೂಲಗಳು (ಸಿಂಗಲೀಕ) ಆಗುವಂತೆಯೂ ಶಾಪವಿತ್ತನು (ಮ.ಶ.).

ತ್ರಿಧನ್ವ (ತ್ರಿಬಂಧನ) - ಸೂರ್ಯವಂಶದ ತ್ರಿಶಂಕುವಿನ ತಂದೆ. ಇವನಿಗೆ ನಿಬಂಧನನೆಂಬ ಹೆಸರೂ ಇತ್ತು. ನೋ. - ತ್ರಿಶಂಕು (ಮ.ಸ.,ವ.,ಭಾಗ.,ಬ್ರಹ್ಮಪು., ವಿಷ್ಣುಪು., ಹರಿ., ವಾಯುಪು., ದೇವೀಭಾ., ರಾಮಾ.ಬಾಲ.).

ತ್ರಿಧಾಮ - ಈಗ ನಡೆಯುವ ವೈವಸ್ವತ ಮನ್ವಂತರದ ಹತ್ತನೆಯ ದ್ವಾಪರದ ವ್ಯಾಸನೀತ (ದೇವೀಭಾ.).

ತ್ರಿಪುರ - ಮೂರು ಪಟ್ಟಣಗಳು. ತಾರಕಾಸುರನ ಮಕ್ಕಳಾದ ತಾರಾಕ್ಷ. ಕಮಲಾಕ್ಷ, ವಿದ್ಯುನ್ಮಾಲಿಗಳು ಪ್ರಯಾಗಕ್ಷೇತ್ರದಲ್ಲಿ ಬ್ರಹ್ಮನನ್ನು ಕುರಿತು ತಪಸ್ಸುಮಾಡಿ ಆತನನ್ನು ಮೆಚ್ಚಿಸಿ ಯಾರಿಂದಲೂ ಭೇದಿಸಲು ಅಸಾಧ್ಯವಾದ ಮೂರು ಪಟ್ಟಣಗಳನ್ನೂ, ಅಮರತ್ವವನ್ನೂ ಬೇಡಿದರು. ಬ್ರಹ್ಮನು ಅವರಿಗೆ ಅಮರತ್ವವನ್ನು ಕೊಡಲು ನಿರಾಕರಿಸಿ ಮೂವರಿಗೆ ಮೂರು ಪಟ್ಟಣಗಳನ್ನು ನಿರ್ಮಿಸುವ ಶಕ್ತಿಯನ್ನು ಕೊಟ್ಟು ಅದೃಶ್ಯನಾದನು. ಮುಂದೆ ರಾಕ್ಷಸಶಿಲ್ಪಿಯಾದ ಮಯನು ಭೂಮಿಯಲ್ಲಿ ಕಬ್ಬಿಣದ ಪಟ್ಟಣವನ್ನು ರಚಿಸಿ ವಿದ್ಯುನ್ಮಾಲಿಗೂ, ಅಂತರಿಕ್ಷದಲ್ಲಿ ಬೆಳ್ಳಿಯ ಪಟ್ಟಣವನ್ನು ರಚಿಸಿ ಕಮಲಾಕ್ಷನಿಗೂ, ಸ್ವರ್ಗದಲ್ಲಿ ಸುವರ್ಣನಗರಿಯನ್ನು ರಚಿಸಿ ತಾರಾಕ್ಷನಿಗೂ ಕೊಟ್ಟನು. ಈ ಮೂವರೂ ರಾಕ್ಷಸರು ತಮ್ಮ ತಮ್ಮ ಪಟ್ಟಣದಲ್ಲಿ ಇಷ್ಟಬಂಧುಮಿತ್ರರೊಡನೆ ಸುಖವಾಗಿದ್ದು ಲೋಕಕಂಟಕರಾಗಿದ್ದರು. ದೇವತೆಗಳೆಲ್ಲ ಇವರ ಹಾವಳಿಯನ್ನು ತಡೆಯಲಾರದೆ ಕೈಲಾಸನಾಥನನ್ನು ಮರೆಹೊಕ್ಕರು. ಶಿವನು ಬ್ರಹ್ಮನ ವರದಂತೆ ಆ ಮೂರು ಪಟ್ಟಣಗಳೂ ಒಟ್ಟಿಗೆ ಕೂಡುವುದನ್ನು ನಿರೀಕ್ಷಿಸುತ್ತಿದ್ದು ಕೂಡಲೇ ಭೂಮಿಯನ್ನು ರಥವನ್ನಾಗಿ ಮಾಡಿಕೊಂಡು, ನಾಲ್ಕು ವೇದಗಳನ್ನು ನಾಲ್ಕು ಕುದುರೆಗಳನ್ನಾಗಿಯೂ, ಬ್ರಹ್ಮನನ್ನು ಸಾರಥಿಯನ್ನಾಗಿಯೂ, ಸೂರ್ಯಚಂದ್ರರನ್ನು ರಥದ ಚಕ್ರಗಳನ್ನಾಗಿಯೂ, ಮೇರುಪರ್ವತವನ್ನು

ಬಿಲ್ಲಾಗಿಯೂ, ವಿಷ್ಣುವನ್ನು ಬಾಣವನ್ನಾಗಿಯೂ ಸಮುದ್ರವನ್ನು ಬತ್ತಳಿಕೆಯನ್ನಾಗಿಯೂ, ಮಹಾಶೇಷನನ್ನು ಬಿಲ್ಲಿನ ಹೆದೆಯನ್ನಾಗಿಯೂ ಮಾಡಿಕೊಂಡು ಪುಷ್ಯನಕ್ಷತ್ರದ ಯೋಗದಲ್ಲಿ ತ್ರಿಪುರಗಳನ್ನು ನಾಶಮಾಡಿ ತ್ರಿಪುರಾರಿ ಎಂಬ ಹೆಸರನ್ನು ಪಡೆದನು. ಕಾರ್ತಿಕ ಶುದ್ಧ ಪೂರ್ಣಿಮೆಯ ದಿನ ತ್ರಿಪುರಸಂಹಾರವಾಯಿತು. ಅಂದು ದೀಪೋತ್ಸವವು ನಡೆಯುವುದು (ಮ.ಕ.ದ್ರೋ. ಅನು., ಭಾಗ., ಮತ್ಸ್ಯಪು., ಸ್ಕಾಂ. ಪು.).

ತ್ರಿಪುಷ್ಕರ - ಒಂದು ತೀರ್ಥ. ಸೂರ್ಯವಂಶದ ಬ್ರಹ್ಮಿಷ್ಠರಾಜನು ಈ ತೀರ್ಥದಲ್ಲಿ ಸ್ನಾನ ಮಾಡಿ ಸ್ವರ್ಗವನ್ನು ಪಡೆದನು.

ತ್ರಿರಾವ - ಗರುಡನ ಮಗ (ಮ.ಉ.).

ತ್ರಿವಕ್ರಾ - ಕಂಸನಿಗೆ ಪರಿಮಳಭರಿತವಾದ ಚಂದನವನ್ನು ತರುತ್ತಿದ್ದ ದಾಸಿ. ಈಕೆಗೆ ಕುಬ್ಜೆ ಎಂದೂ ಹೆಸರಿತ್ತು. ಮುಷ್ಟಿಕ, ಚಾಣೂರರನ್ನು ಕೊಲ್ಲಲು ಹೊರಟ ಶ್ರೀಕೃಷ್ಣನು ದಾರಿಯಲ್ಲಿ ಈಕೆಯನ್ನು ಸಂಧಿಸಿ, ಅವಳ ಹತ್ತಿರ ಇದ್ದ ಪರಿಮಳದ್ರವ್ಯಗಳನ್ನು ಬಲತ್ಕಾರದಿಂದ ಕಿತ್ತುಕೊಂಡು ತನ್ನ ಮೈಗೆ ಚೆನ್ನಾಗಿ ಪೂಸಿಕೊಂಡು, ಆಕೆಯ ಗೂನುಬೆನ್ನನ್ನು ಸರಿಪಡಿಸಿ, ಸುಂದರ ತರುಣಿಯನ್ನಾಗಿ ಮಾಡಿದನು. ಆಗ ಅವಳು ಮಂದಹಾಸವನ್ನು ಬೀರುತ್ತ ಶ್ರೀಕೃಷ್ಣನನ್ನು ತನ್ನ ಮನೆಗೆ ಆಮಂತ್ರಿಸಿದಳು. ಅವನು ಕಂಸನ ವಧೆಯ ಅನಂತರ ಬರುತ್ತೇನೆಂದು ಆಕೆಗೆ ಭರವಸೆಯಿತ್ತನು. ರಾಮಾವತಾರ ಕಾಲದಲ್ಲಿ ಈಕೆಯು ಶೂರ್ಪನಖಿಯಾಗಿ ಲಕ್ಷ್ಮಣನಿಂದ ಅಪಮಾನಿತಳಾಗಿದ್ದಳು. ನೋ. - ಕುಬ್ಜಾ (ಭಾಗ.).

ತ್ರಿವರ್ಗ - ಧರ್ಮಾರ್ಥಕಾಮಗಳೆಂಬ ಚತುರ್ವಿಧ ಪುರುಷಾರ್ಥಗಳ ಮೊದಲಿನ ಮೂರು ವಿಷಯಗಳು (ಮ.ಅನು.). ಕೊನೆಯದು - ನಾಲ್ಕನೆಯದು ಮೋಕ್ಷ.

ತ್ರಿವಿಕ್ರಮಾವತಾರ-ಶುಕ್ರಾಚಾರ್ಯರು ಬಲಿಚಕ್ರವರ್ತಿಯಿಂದ ವಿಶ್ವಜಿತ್ ಯಾಗವನ್ನು ಮಾಡಿಸಿದರು. ಆಗ ಅಗ್ನಿಕುಂಡದಿಂದ ದಿವ್ಯವಾದ ಧನುರ್ಬಾಣದ ಮಾಲೆ, ಬರಿದಾಗದ ಬತ್ತಳಿಕೆ, ಭಿನ್ನವಾಗದ ಕವಚ, ಬಂಗಾರದ ಕಲಶ ಮತ್ತು ರಥ, ಆಯಾಸಗೊಳ್ಳದ ಅಶ್ವಗಳು ಹಾಗೂ ಸಿಂಹಕೇತನಗಳು ಹೊರಬಂದವು. ಇವುಗಳ ಬಲದಿಂದ ಬಲಿಯು ಅಮರಾವತಿಯನ್ನು ಗೆದ್ದು ಇಂದ್ರನಾದನು. ಇತ್ತ ದೇವತೆಗಳ ಗೋಳಾಟಕ್ಕೆ ಅದಿತಿದೇವಿಯು ಮರುಗಿ ಕಶ್ಯಪರ ಸೂಚನೆಯಂತೆ ಹನ್ನೆರಡು ದಿನ ನಿಯಮಬದ್ಧಳಾಗಿ ಹಾಲಿನ ವ್ರತವನ್ನು ನಡೆಸಲು ಜಗದೀಶ್ವರನೇ ವಾಮನರೂಪದಿಂದ ಆಕೆಯ ಮಗನಾಗಿ ಜನಿಸಿದನು. ಮುಂದೆ ವಾಮನನ ಉಪನಯನ ಕಾಲದಲ್ಲಿ ಆ ಬ್ರಹ್ಮಚಾರಿಗೆ ಕಶ್ಯಪರು

ಉಡಿದಾರವನ್ನು ಕಟ್ಟಿದರು. ತಾಯಿಯಾದ ಅದಿತಿಯು ಲಂಗೋಟಿಯನ್ನು ಕೊಟ್ಟಳು. ಬ್ರಹ್ಮನು ಜನಿವಾರ ಹಾಕಿದನು. ಸೂರ್ಯನು ಗಾಯತ್ರಿಯನ್ನು ಉಪದೇಶಿಸಿದನು. ಸಪ್ತರ್ಷಿಗಳು ಕುಶಾಜಿನಗಳನ್ನಿತ್ತರು. ಸರಸ್ವತಿಯು ಜಪಮಾಲೆಯನ್ನಿತ್ತಳು. ಪಾರ್ವತಿಯು ಮಾತೃಭಿಕ್ಷೆಯನ್ನು ಹಾಕಿದಳು. ಆಗ ಯಜ್ಞದೀಕ್ಷಿತನಾಗಿದ್ದನು ಬಲಿಚಕ್ರವರ್ತಿ. ವಾಮನನು ಬಲಿಯೊಡನೆ ಮೂರು ಅಡಿ ಸ್ಥಳವನ್ನು ಬೇಡಿ ಪಡೆದು ಅದನ್ನಳೆಯುವಾಗ ತ್ರಿವಿಕ್ರಮನಾದನು. ಎರಡು ಅಡಿಗಳಿಂದ ಎಲ್ಲ ಲೋಕಗಳನ್ನಳೆದು ಮೂರನೆ ಅಡಿ ಇಡಲು ಬಲಿಯು ತನ್ನ ತಲೆಯನ್ನೇ ಮುಂದಕ್ಕೆ ಕೊಡಲು, ತ್ರಿವಿಕ್ರಮನು ಅವನನ್ನು ಸುತಲಲೋಕಕ್ಕೆ ಕಳುಹಿಸಿ, ಅಲ್ಲಿ ರಾಜ್ಯಭಾರ ಮಾಡಿಕೊಂಡಿರುವಂತೆಯೂ, ತಾನು ಆತನ ಅರಮನೆಯ ಬಾಗಿಲನ್ನು ಸದಾ ಗಧಾಪಾಣಿಯಾಗಿ ಕಾಯುತ್ತಿರುವೆನೆಂದೂ, ಮುಂದಿನ ಕಲ್ಪದಲ್ಲಿ ನೀನೇ ಇಂದ್ರನಾಗುವೆಯೆಂದೂ ಹೃದಯತುಂಬಿ ಹರಸಿದನು. ಮೂರು ಪಾದ ವಿನ್ಯಾಸಗಳಿಂದಲೇ ಜಗತ್ತನ್ನು ಆವರಿಸಿದುದರಿಂದ ವಾಮನನು ತ್ರಿವಿಕ್ರಮನಾದನು. ಜಗತ್ತನ್ನು ಅಳೆಯುವಾಗ ತ್ರಿವಿಕ್ರಮನ ಎಡಗಾಲಿನ ಹೆಬ್ಬೆರಳಿನ ಉಗುರಿನ ತುದಿ ತಾಗಿ ಬ್ರಹ್ಮಾಂಡವು ತೂತು ಬಿದ್ದು ನೀರು ಸೋರಹತ್ತಿತು. ಆ ನೀರನ್ನು ತೀರ್ಥೋದಕವೆಂದು ಬ್ರಹ್ಮನು ತನ್ನ ಕಮಂಡಲದಲ್ಲಿ ಹಿಡಿದಿಟ್ಟುಕೊಂಡನು. ಪುಣ್ಯೋದಕವೆಂದು ಶಿವನು ತನ್ನ ಜಟಾಜೂಟದಲ್ಲಿ ಧರಿಸಿದನು. ವಿಷ್ಣುಪಾದೋದಕವೆಂದು ಧ್ರುವ ಮತ್ತು ಸಪ್ತರ್ಷಿಗಳು ಶಿರಸಾ ಧಾರಣ ಮಾಡಿದರು. ಸಗರ ರಾಜನ ಅರವತ್ತು ಸಾವಿರ ಮಕ್ಕಳು ಈ ನೀರಿನ ಸ್ಪರ್ಶದಿಂದ ಸದ್ಗತಿಹೊಂದಿದರು (ಹರಿ., ಮ.ವ., ಭಾಗ., ಪದ್ಮ.ಪು.).

ತ್ರಿವೃಷ - ಈಗಿನ ವೈವಸ್ವತ ಮನ್ವಂತರದಲ್ಲಿ ಹನ್ನೊಂದನೆಯ ದ್ವಾಪರದ ವ್ಯಾಸ (ದೇವೀಭಾ.).

ತ್ರಿವೇಣಿ - ೧. ಗಂಗಾ - ಯಮುನಾ - ಸರಸ್ವತೀ ನದಿಗಳು ಕೂಡುವ ಪವಿತ್ರ ಸ್ಥಳ; ಪ್ರಯಾಗ; ಇಂದಿನ ಅಲಹಾಬಾದ್. ಇಲ್ಲಿ ಗಂಗಾ - ಯಮುನೆಗಳು ಕೂಡಿದುದು ಪ್ರತ್ಯಕ್ಷ ಕಾಣುತ್ತದೆ. ಸರಸ್ವತೀ ನದಿಯು ಗುಪ್ತಗಾಮಿನಿಯಾಗಿ ಹರಿಯುತ್ತಿದೆ ಎನ್ನುತ್ತಾರೆ. ಕೆಲವರು ಹಿಮಾಲಯದ ಒಂದು ಶಿಖರವು ಜರಿದು ಸರಸ್ವತಿಯ ಪ್ರವಾಹಕ್ಕೆ ತಡೆಯಾಗಿ ಅದು ಅಲ್ಲೇ ಇಂಗಿತು ಎನ್ನುತ್ತಾರೆ. ಅಲಹಾಬಾದಿನಿಂದ ತ್ರಿವೇಣಿ ಸಂಗಮಕ್ಕೆ ನಾಲ್ಕು ಮೈಲಿ ದೂರವಿದೆ. ಇದೇ ಸ್ಥಳದಲ್ಲಿ ಪಂಡಾ ಜನರು ಚೆಲ್ಲಿದ ವೇಣೀ ದಾನದ ಕೂದಲು ಕೂಡಲೇ ಮುಳುಗುತ್ತದೆ. ಇಲ್ಲೇ ನದಿಯ ದಡದ ಮೇಲೆ ಅಕ್ಷಯವಟವಿದೆ. ಇಲ್ಲಿ ಇದರ ಬೇರು ಇದ್ದು ಕಾಶಿಯಲ್ಲಿ ಇದರ ಮಧ್ಯ ಭಾಗವೂ, ಗಯೆಯಲ್ಲಿ ಇದರ

ಕೊನೆಯೂ ಇದೆಯೆಂದು ಹೇಳುತ್ತಾರೆ. ಈ ಸ್ಥಳವನ್ನು ಪಾತಾಲಪುರಿಯೆನ್ನುತ್ತಾರೆ. ಇಲ್ಲಿ ತುಂಬಾ ಮೂರ್ತಿಗಳ ದೇವಾಲಯವಿದೆ (ಕ್ಷೇತ್ರದ.). ೨. ಕಲ್ಕತ್ತೆಯ ಸಮೀಪದ ಚಕ್ರದಹದಿಂದ ಐದು ಮೈಲಿನ ಮೇಲೆ ಈ ಸ್ಥಳವಿದೆ. ಪ್ರಯಾಗದಲ್ಲಿ ಗಂಗಾ-ಯಮುನಾ- ಸರಸ್ವತೀ ನದಿಗಳು ಒಂದಾದರೆ ಇಲ್ಲಿ ಈ ನದಿಗಳು ಬೇರೆಯಾಗಿ ಹರಿದು ಸಮುದ್ರಸಂಗಮವಾಗುತ್ತವೆ. ಇಲ್ಲಿ ಗಂಗೆಯು ಭಾಗೀರಥಿ ಎಂಬ ಹೆಸರಿನಿಂದ ಸಮುದ್ರಕ್ಕೆ ಸೇರುತ್ತದೆ. ಪ್ರಯಾಗದ ತ್ರಿವೇಣಿಗೆ ಯುಕ್ತತ್ರಿವೇಣಿ ಎನ್ನುತ್ತಾರೆ; ಇದನ್ನು ಮುಕ್ತತ್ರಿವೇಣಿಯೆನ್ನುತ್ತಾರೆ. ಇಲ್ಲಿ ಮಕರ ಸಂಕ್ರಮಣ, ಮಾಘಪೂರ್ಣಿಮೆ, ಗ್ರಹಣ ಮುಂತಾದ ದಿನಗಳಲ್ಲಿ ಜಾತ್ರೆ ಸೇರುತ್ತದೆ (ಕ್ಷೇತ್ರದ.).

ತ್ರಿಶಂಕು - ಇಕ್ಷ್ವಾಕುವಂಶದ ಕ್ಷತ್ರಿಯ. ಸೂರ್ಯವಂಶದ ನಿಬಂಧನ ಈತನ ತಂದೆ; ಮಗ ಹರಿಶ್ಚಂದ್ರ. ತ್ರಿಶಂಕುವಿಗೆ ಸತ್ಯವ್ರತನೆಂಬ ಹೆಸರೂ ಇತ್ತು. ಈತನ ಪತ್ನಿಯ ಹೆಸರು ಸತ್ಯವ್ರತೆ (ಭಾಗ.). ತ್ರಿಶಂಕುವಿನ ತಂದೆಯ ಹೆಸರು ತ್ರೈಯ್ಯಾರುಣಿ; ತ್ರಿಧನ್ವನು ಈತನ ಅಜ್ಜ. ತ್ರಿಶಂಕುವು ತಾನು ಪಡೆದ ಚಂಡಾಲತ್ವದ ಪರಿಹಾರಾರ್ಥವಾಗಿ ಹನ್ನೆರಡು ವರ್ಷಗಳ ಕ್ಷಾಮದಲ್ಲಿ ಪ್ರತಿದಿನವೂ ಮೃಗಮಾಂಸವನ್ನು ವಿಶ್ವಾಮಿತ್ರನ ಕುಟುಂಬ ರಕ್ಷಣಾರ್ಥವಾಗಿ ಸಂಪಾದಿಸಿಕೊಟ್ಟ ಕಾರಣ ಸಂತುಷ್ಟನಾದ ವಿಶ್ವಾಮಿತ್ರನು ಸಶರೀರವಾಗಿ ಸ್ವರ್ಗಕ್ಕೆ ಕಳುಹಿಸಲ್ಪಟ್ಟನು. ಇವನೊಮ್ಮೆ ಮದುವೆಯಾಗಿದ್ದ ಹುಡುಗಿಯನ್ನು ಅಪಹರಿಸಲು ಅವನ ತಂದೆಯು 'ಶ್ವಪಾಕರಲ್ಲಿ ಸೇರು' ಎಂದು ಈತನಿಗೆ ಶಾಪವಿತ್ತನು. ಮುಂದೆ ಸಿಂಹಾಸನಕ್ಕೆ ಯೋಗ್ಯರಾದ ರಾಜಪುತ್ರರನ್ನು ಪಡೆಯುವುದಕ್ಕಾಗಿ ಅರಣ್ಯಕ್ಕೆ ತಪಸ್ಸಿಗೆ ಹೋದನು. ಆಗ ರಾಜ್ಯದಲ್ಲಿ ಅರಾಜಕದ ಫಲವು ತೋರಿ ಒಂಬತ್ತು ವರ್ಷ ಮಳೆ ಬೀಳದೆ ದೊಡ್ಡ ದುರ್ಭಿಕ್ಷವು ಪ್ರಾಪ್ತವಾಯಿತು. ತನ್ನನ್ನು ತಂದೆಯು ಶಪಿಸುವಾಗ ವಸಿಷ್ಠನು ಮೌನವಾಗಿದ್ದುದರಿಂದ ಆತನಲ್ಲಿ ಬೇಸರಹೊಂದಿ ಆ ಕ್ಷಾಮಕಾಲದಲ್ಲಿ ವಿಶ್ವಾಮಿತ್ರನ ಕುಟುಂಬರಕ್ಷಣೆಯ ಭಾರವನ್ನು ಹೊತ್ತನು. ಇನ್ನೊಮ್ಮೆ ವಸಿಷ್ಠನಮೇಲಿನ ಬೇಸರದಿಂದ ಅವನ ದನವನ್ನು ಕೊಂದು ಆ ಮಾಂಸವನ್ನು ಸಂಸ್ಕರಿಸದೆ ತಿಂದುಬಿಟ್ಟ. ತಂದೆಗೆ ಅಸಮ್ಮತವಾದ ಕಾರ್ಯವನ್ನು ಮಾಡಿದುದರಿಂದ, ಗುರುವಿನ ಹೋಮಧೇನುವನ್ನು ಕೊಂದುದರಿಂದ, ಆ ಮಾಂಸವನ್ನು ಸಂಸ್ಕರಿಸದೆ ತಿಂದುದರಿಂದ - ಈ ಮೂರು ಶಂಕುಗಳನ್ನು (ಪಾಪ) ಮಾಡಿದುದರಿಂದ ಈತನು ತ್ರಿಶಂಕು ಎಂದು ಕರೆಯಲ್ಪಟ್ಟನು (ಬ್ರಹ್ಮಪು.). ಈತನು ತಾನು ಸಶರೀರವಾಗಿ ಸ್ವರ್ಗವೇರಬೇಕೆಂದು, ಅದಕ್ಕಾಗಿ ತನ್ನಿಂದ ಯಜ್ಞಮಾಡಿಸಬೇಕೆಂದು ವಸಿಷ್ಠನನ್ನು ಪ್ರಾರ್ಥಿಸಲು ಅವನು ತಿರಸ್ಕರಿಸಿದನು.

ಆಗ ತ್ರಿಶಂಕುವು ವಸಿಷ್ಠನ ಪುತ್ರರನ್ನು ಪ್ರಾರ್ಥಿಸಲು· ಅವರು ಸಿಟ್ಟಿನಿಂದ ಚಂಡಾಲನಾಗುವಂತೆ ಈತನಿಗೆ ಶಾಪವಿತ್ತರು. ಮುಂದೆ ಈತನು ವಿಶ್ವಾಮಿತ್ರನ ಸಹಾಯದಿಂದ ಸಶರೀರನಾಗಿ ಸ್ವರ್ಗವನ್ನು ಸೇರಿದರೂ ಇಂದ್ರನು ಚಂಡಾಲನಿಗೆ ಸ್ವರ್ಗಪ್ರವೇಶದ ಹಕ್ಕು ಇಲ್ಲವೆಂದು ಕೆಳಗೆ ನೂಕಲು ವಿಶ್ವಾಮಿತ್ರನು ಈತನಿಗೆ ಪ್ರತ್ಯೇಕ ಒಂದು ಸ್ವರ್ಗವನ್ನು ನಿರ್ಮಿಸಿ ಅದರ ಆಡಳಿತವನ್ನು ಕೊಟ್ಟನು. ಅದನ್ನೇ ಈಗ ತ್ರಿಶಂಕುಸ್ವರ್ಗವೆನ್ನುತ್ತಾರೆ (ಭಾಗ., ಮ.ಸ.ವ., ರಾಮಾ.ಬಾಲ., ಹರಿ.,ವಾಯುಪು., ದೇವೀಭಾ.).

ತ್ರಿಶಿಖ - ಚತುರ್ಮುಖನ ಒಂದು ಹಗಲಿನಲ್ಲಿ ಸ್ವರ್ಗವನ್ನು ೧೪ ಮಂದಿ ಇಂದ್ರರು ಆಳುತ್ತಾರೆ. ಇಂದ್ರ ಎಂಬುದು ಒಂದು ಅಧಿಕಾರದ ಹೆಸರಲ್ಲಿದೆ; ಒಂದು ವ್ಯಕ್ತಿಯ ಹೆಸರಲ್ಲ. ತ್ರಿಶಿಖನು ಹದಿನಾಲ್ಕು ಮಂದಿ ಇಂದ್ರರಲ್ಲಿ ನಾಲ್ಕನೆಯವನು; ಈಗ ಏಳನೆಯ ಇಂದ್ರನು ಸ್ವರ್ಗಾಧಿಪತಿಯಾಗಿದ್ದಾನೆ. ಇವನ ಹೆಸರು ಪುರಂದರನೆಂದು. ಈ ಇಂದ್ರರು ಕ್ಲುಪ್ತಕಾಲ ಅಧಿಕಾರಮಾಡಿ ಆಮೇಲೆ ನಿವೃತ್ತರಾಗುತ್ತಾರೆ. (ಭಾಗ., ವಿಷ್ಣುಪು., ಮತ್ಸ್ಯಪು.).

ತ್ರಿಶಿರ (ತ್ರಿಶಿರಸ್) - ಇವನ ತಂದೆ ತ್ವಷ್ಟ್ರನೆಂಬ ಬ್ರಹ್ಮ; ತಾಯಿ ಪ್ರಹ್ಲಾದನ ಮಗಳಾದ ವಿರೋಚನೆ. ಈತನಿಗೆ ಮೂರು ಮುಖಗಳಿದ್ದವು. ಇವನು ಒಂದನೇ ಮುಖದಿಂದ ವೇದಾಧ್ಯಯನ, ಎರಡನೇ ಮುಖದಿಂದ ಸೋಮಪಾನ, ಮೂರನೇ ಮುಖದಿಂದ ಸುರಾಪನ ಮಾಡುತ್ತಿದ್ದ. ನೋ. - ವಿಶ್ವರೂಪ. ತ್ವಷ್ಟ್ರನೆಂಬ ಬ್ರಹ್ಮನು ದೇವೇಂದ್ರನ ನಾಶಕ್ಕಾಗಿಯೇ ತ್ರಿಶಿರನನ್ನು ಪಡೆದನು. ಮುಂದೆ ತಕ್ಷನ ಸಹಾಯದಿಂದ ತ್ರಿಶಿರನ ತಲೆಗಳನ್ನು ಕತ್ತರಿಸಿದನು. ಇದರಿಂದ ಇಂದ್ರನಿಗೆ ಬ್ರಹ್ಮಹತ್ಯಾದೋಷ ಪ್ರಾಪ್ತವಾಯಿತು. ತ್ರಿಶಿರನನ್ನು ಇಂದ್ರನು ಕೊಂದ ವಿಚಾರವನ್ನು ತಿಳಿದು ತ್ವಷ್ಟ್ರನು ಪುನಃ ಆತನ ನಾಶಕ್ಕಾಗಿ ವೃತ್ರಾಸುರನೆಂಬ ಮಗನನ್ನು ಪಡೆದನು (ಮ.ಉ., ಶಾಂ.). ೨. ಖರನ ಸೇನಾಪತಿ. ನೋ. - ಖರ. ಈತನು ಶ್ರೀರಾಮನಿಂದ ಹತನಾದ (ರಾಮಾ.).

ತ್ರಿಶೋಕ - ಬ್ರಾಹ್ಮಣನೊಬ್ಬ. ಕಣ್ವಋಷಿಯ ಮಗನಾದ ಮೇಧಾತಿಥಿಗೂ ತ್ರಿಶೋಕನಿಗೂ ಬ್ರಾಹ್ಮಣ್ಯದ ಕುರಿತು ಚರ್ಚೆಯಾಯಿತು. 'ತ್ರಿಶೋಕನು ಬ್ರಾಹ್ಮಣನಲ್ಲ' ಎಂದನು ಮೇಧಾತಿಥಿ. ಆಗ ತ್ರಿಶೋಕನಿಗೆ ಸಿಟ್ಟುಂಟಾಗಲು ಮೇಧಾತಿಥಿಯ ಸೂಚನೆಯಂತೆ ಅಗ್ನಿಜಲಪರೀಕ್ಷೆಯನ್ನು ನಡೆಸಿ ತ್ರಿಶೋಕನು ಬ್ರಾಹ್ಮಣನೆಂದೇ ಆಯಿತು. ತ್ರಿಶೋಕನು ಶ್ರೇಷ್ಠನೆಂದು ಮೇಧಾತಿಥಿಯು ಒಪ್ಪಿಕೊಂಡನು. ನೋ. - ಕಣ್ವ (ಋ).

ತ್ರೇತಾ - ಎರಡನೆಯ ಯುಗ. ಈ ಯುಗಕ್ಕೆ ೧೨,೯೬,೦೦೦ ಸೌರವರ್ಷಗಳು. ವಾಮನ, ಪರಶುರಾಮ ಮತ್ತು ರಾಮಾವತಾರಗಳು ಈ ಯುಗದ ಮುಖ್ಯ ವಿಶೇಷಗಳು.

ತ್ರೈವೃಷ್ಣ (ತ್ರ್ಯರುಣ) - ಇಕ್ಷ್ವಾಕುವಂಶದ ಪ್ರಸಿದ್ಧ ರಾಜ. ಇವನು ಶಸ್ತ್ರಶಾಸ್ತ್ರಗಳಲ್ಲಿ ನಿಪುಣನಾಗಿ, ಶತ್ರುಗಳನ್ನು ಜಯಿಸಿ, ರಾಜ್ಯದಲ್ಲಿ ನೆಮ್ಮದಿಯನ್ನುಂಟುಮಾಡಿದನು. ಇವನ ಪುರೋಹಿತನ ಹೆಸರು ವೃಶ. ಬ್ರಾಹ್ಮಣ್ಯದ ಬೆಲೆ ತಿಳಿಯದೇ ಇವನನ್ನೊಮ್ಮೆ ಸಾರಥಿಯನ್ನಾಗಿ ಮಾಡಿಕೊಂಡು ಹೋಗಿ ಶತ್ರುಗಳನ್ನು ಗೆದ್ದುಬರುವಾಗ ಬ್ರಾಹ್ಮಣ ಬಾಲಕನೊಬ್ಬ ಈತನ ರಥದ ಚಕ್ರದಡಿ ಬಿದ್ದು ತೀರಿಹೋದನು. ಈ ವಿಚಾರಣೆಯಲ್ಲಿ ರಾಜನು ಈ ಅಪರಾಧಕ್ಕೆ ಸಾರಥಿಯಾದ ವೃಶನೇ ಕಾರಣನೆನ್ನಲು ಆತನು ಆಥರ್ವಣಿಕ ಅಭಿಚಾರವನ್ನು ಪ್ರಯೋಗ ಮಾಡಿ 'ವಾರ್ಶಸಾಮ' ವನ್ನು ಮಂಜುಲವಾಗಿ ಹಾಡಿ ಆ ಬಾಲಕನನ್ನು ಬದುಕಿಸಿದನು. ಇದರಿಂದ ಕ್ಷಾತ್ರತೇಜಕ್ಕಿಂತ ಬ್ರಹ್ಮತೇಜವೇ ಮಿಗಿಲಾದುದೆಂದು ಬ್ರಹ್ಮನು ತಿಳಿದುಕೊಂಡನು (ಋ).

ತ್ವಷ್ಟೃ - ೧. ಶುಕ್ರಾಚಾರ್ಯನ ಮಗ. ೨. ಈತನ ಮಗ ವಿಶ್ವರೂಪ ಅಥವಾ ತ್ರಿಶಿರ; ಪತ್ನಿ ಪ್ರಹ್ಲಾದನ ಮಗಳಾದ ವಿರೋಚನೆ. ಈತನ ಮಗಳು ಸೂರ್ಯನ ಪತ್ನಿಯಾದ ಸಂಜ್ಞೆ. ಈತನನ್ನು ದೇವಶಿಲ್ಪಿಯಾದ ವಿಶ್ವಕರ್ಮನೆನ್ನುತ್ತಾರೆ. ನೋ. - ತ್ರಿಶಿರ (ಮ.ಆ., ಶಾಂ., ಅನು., ಉ., ಭಾಗ.).

ತ್ವಾಷ್ಟ್ರೀ - ತ್ವಷ್ಟೃವಿನ ಮಗಳು; ಹೆಸರು ಸಂಜ್ಞಾದೇವಿ ದೇವವೈದ್ಯರಾದ ಅಶ್ವಿನೀಕುಮಾರರು ಈಕೆಯ ಮಕ್ಕಳು. ನೋ. - ಛಾಯ. ಇವರು ಸುಂದರರು ಆದರೆ ದೇವತೆಗಳು ಜಾತಿಯಲ್ಲಿ ಶೂದ್ರವರ್ಗದವರು. ಈಕೆಗೆ ಮೊದಲು ಸೂರ್ಯನಿಂದ ಮನು, ಆಮೇಲೆ ಯಮ ಮತ್ತು ಯಮುನೆಯರು ಜನಿಸಿದರು. ದಿನ ಹೋದಂತೆ ಸೂರ್ಯನು ತೇಜಸ್ವಿಯಾಗುತ್ತ ಬರಲು ಸಂಜ್ಞೆಯು ಅವನ ಸಮೀಪಕ್ಕೂ ಹೋಗಲಾರದಾದಳು. ಪತಿಯ ಜೊತೆಯ ಸರಸಾಟವೆಂದರೆ ಆಕೆಗೆ ಅಗ್ನಿಚುಂಬನವಾಯಿತು. ಆದಕ್ಕಾಗಿ ಸಂಜ್ಞೆಯು ತನ್ನ ಪ್ರತಿಕೃತಿಯನ್ನು ನಿರ್ಮಾಣಮಾಡಿ, ಅವಳಿಗೆ ಸವರ್ಣೆಯೆಂದು ಹೆಸರನ್ನಿಟ್ಟು ತಾನು ತವರುಮನೆಗೆ ನಡೆದಳು. ಈ ಸವರ್ಣೆಯ ಹಿರಿಯ ಮಗನೇ ಸಾವರ್ಣಮನು. ಎರಡನೆಯ ಮಗನೇ ಶನೀಶ್ವರ (ಹರಿ., ಮ.ಆ.).

ದ

ದಕ್ಷ - ಪ್ರಾಚೀನ ಬರ್ಹಿಯ ಮಕ್ಕಳಿಂದ ಹುಟ್ಟಿದವನೇ ದಕ್ಷ. ಆದುದರಿಂದ ಇವನಿಗೆ ಪ್ರಾಚೇತಸನೆಂಬ ಹೆಸರಿದೆ. ದಕ್ಷನ ಪತ್ನಿ ವೀರಣನ ಮಗಳಾದ ವೀರಿಣಿ (ಮ.ಆ.).

ಸ್ವಾಯಂಭುವ ಮನ್ವಂತರದ ದಕ್ಷನೊಬ್ಬ; ಚಾಕ್ಷುಷ ಮನ್ವಂತರದ ದಕ್ಷನೊಬ್ಬ - ಹೀಗೆ ದಕ್ಷರಿಬ್ಬರು. ಸ್ವಾಯಂಭುವ ಮನ್ವಂತರದ ದಕ್ಷನು ಬ್ರಹ್ಮನ ಮಗ. ಈತನ ಹೆಂಡತಿಯಾದ ಪ್ರಸೂತಿಯೂ ಬ್ರಹ್ಮನ ಮಗಳೇ. ಈಕೆಗೆ ಹದಿನಾರು ಮಂದಿ ಕನ್ಯೆಯರು. ಇವರಲ್ಲಿ ಶ್ರದ್ಧಾ, ಮೈತ್ರಿ, ದಯಾ, ಶಾಂತಿ, ತುಷ್ಟಿ, ಪುಷ್ಟಿ, ಕ್ರಿಯಾ, ಉನ್ನತಿ, ಬುದ್ಧಿ, ಮೇದಾ, ತಿತಿಕ್ಷಾ, ಹ್ರೀ, ಮೂರ್ತಿ - ಈ ಹದಿಮೂರು ಮಂದಿ ಧರ್ಮಪ್ರಜಾಪತಿಯ ಪತ್ನಿಯರು. ಹದಿನಾಲ್ಕನೆಯ ಸ್ವಾಹ ಎಂಬುವಳು ಅಗ್ನಿಯ ಪತ್ನಿ. ಹದಿನೈದನೆಯ ಸ್ವಧಾ ಎಂಬುವಳು ಅಗ್ನಿಶ್ವಾತ್ತನೆಂಬ ಪಿತೃವಿನ ಪತ್ನಿ. ಹದಿನಾರನೆಯ ಸತಿ ಎಂಬುವಳು ಶಿವನ ಪತ್ನಿ (ಭಾಗ.).

ಎರಡನೆಯ ದಕ್ಷನು ಚಾಕ್ಷುಷ ಮನ್ವಂತರದವನು. ಈತನ ಪತ್ನಿ ಪಂಚಜನ ಪ್ರಜಾಪತಿಯ ಪುತ್ರಿಯಾದ ಅಸಿಕ್ನೀ. ಇವಳಿಗೆ ವೀರಿಣಿ ಎಂಬ ಹೆಸರು ಇದೆ. ಪಂಚಜನಪ್ರಜಾಪತಿಯನ್ನು ವೀರಣನೆನ್ನುತ್ತಾರೆ. ಈ ದಂಪತಿಗಳಿಗೆ ಹರಿಯಶ್ವ-ಶಬಲಾಶ್ವರೆಂಬ ಇಬ್ಬರು ಗಂಡು ಮಕ್ಕಳು. ಹೆಣ್ಣು ಮಕ್ಕಳಲ್ಲಿ ಧರ್ಮಪ್ರಜಾಪತಿಗೆ ಹತ್ತು, ಕಶ್ಯಪನಿಗೆ ಹದಿಮೂರು, ಚಂದ್ರನಿಗೆ ಇಪ್ಪತ್ತೇಳು, ಅಂಗೀರಸನಿಗೆ ಎರಡು, ಕೃಶಾಶ್ವನಿಗೆರಡು - ಹೀಗೆ ಕನ್ಯೆಯರನ್ನು ವಿವಾಹಮಾಡಿಕೊಟ್ಟನೆಂದಿದೆ (ಭಾಗ.).

ದಕ್ಷನು ಬ್ರಹ್ಮನ ಬಲಗೈ ಹೆಬ್ಬೆಟ್ಟಿನಿಂದ ಉತ್ಪನ್ನನಾದನು. ಈತನ ಪತ್ನಿ ಬ್ರಹ್ಮನ ಎಡಗೈ ಹೆಬ್ಬೆಟ್ಟಿನಿಂದ ಉತ್ಪತ್ತಿಯಾದಳು. ಪತ್ನಿ ವೀರಿಣಿ. ಈತನಿಗೆ ಐವತ್ತು ಮಂದಿ ಕನ್ಯೆಯರು. ಈತನ ಯಜ್ಞವು ವೀರಭದ್ರನಿಂದ ನಾಶವಾಯಿತು. ಈತನು ಚಂದ್ರನಿಗೆ ಕ್ಷಯರೋಗ ಬರುವಂತೆ ಶಾಪವಿತ್ತನು. ಈತನ ಮಗ ಹರ್ಯಶ್ವ (ಹರಿ., ಭಾಗ.).

ಪ್ರಾಚೇತಸರ ಪತ್ನಿಯಿಂದ ಎರಡು ಮತ್ತು ನಾಲ್ಕು ಕಾಲಿನ ಮಕ್ಕಳನ್ನು ಪಡೆದರು ಸೃಷ್ಟಿಯು ಅಭಿವೃದ್ಧಿಯಾಗದಿರಲು ಅಶ್ವಿನಿ, ಭರಣಿ ಮೊದಲಾದ ಅನೇಕ ಕನ್ಯೆಯರನ್ನು ಪಡೆದನು (ಹರಿ.). ಸ್ತ್ರೀ ಪುರುಷರ ಮೈಥುನ ಕಾರ್ಯದಿಂದ ಮಕ್ಕಳನ್ನು ಪಡೆಯುವಂತೆ ಮಾಡಿದವನು ದಕ್ಷನು (ವಿಷ್ಣುಪು., ಮತ್ಸ್ಯಪು). ದಕ್ಷನ ನಿರೀಶ್ವರ ಯಾಗಕ್ಕೆ ಸತಿದೇವಿಗೆ ಆಮಂತ್ರಣವಿಲ್ಲದಿದ್ದರು ಯಾಗಶಾಲೆಗೆ ಹೋಗಲು ಅಲ್ಲಿ ಆಕೆ ತಂದೆಯ ತಿರಸ್ಕಾರಕ್ಕೆ ಗುರಿಯಾಗಿ ಯೋಗಾಗ್ನಿಯಲ್ಲಿ ದೇಹ ತ್ಯಾಗ ಮಾಡಿದಳು. ಇದನ್ನು ಕೇಳಿದ ಶಿವನು ಕೋಪದಿಂದ ವೀರಭದ್ರನನ್ನು, ದಕ್ಷನನ್ನು ಶಿಕ್ಷಿಸಲು ಕಳುಹಿಸಿದನು. ವೀರಭದ್ರನು ಆ ಯಾಗಶಾಲೆಯನ್ನೇ ನಾಶಮಾಡಿ ದಕ್ಷನ ತಲೆಯನ್ನೇ ಕತ್ತರಿಸಿ ಪುನಃ ದೇವತೆಗಳ

ಪ್ರಾರ್ಥನೆಯಂತೆ ಒಂದು ಟಗರಿನ ತಲೆಯನ್ನು ದಕ್ಷನ ಮುಂಡಕ್ಕೆ ಜೋಡಿಸಿದನು (ಶಿವ.ಪು.). ಶಿವನು ದಕ್ಷನ ಯಜ್ಞವನ್ನು ನಾಶಮಾಡಿದಾಗ ಯಜ್ಞವು ಮೃಗದ ಅಂದರೆ ಜಿಂಕೆಯ ರೂಪದಿಂದ ಓಡಿಹೋಗಲು ಯತ್ನಿಸಲು ಶಿವನು ಅದನ್ನು ಬಾಣದಿಂದ ಹೊಡೆದು ಕೊಂದನು. ಇದರಿಂದ ಶಿವನಿಗೆ ಮೃಗಬಾಣಾರ್ಪಣ ಎಂದು ಹೆಸರು ಬಂತು.

ದಕ್ಷಸಾವರ್ಣಿ - ಹದಿನಾಲ್ಕು ಮನುಗಳಲ್ಲಿ ಈತನು ಒಂಬತ್ತನೆಯವನು. ಈತನ ತಂದೆ ವರುಣ. ಇವನ ಕಾಲದಲ್ಲಿ ಸ್ವರ್ಗದಲ್ಲಿ ಅದ್ಭುತವೆಂಬ ಇಂದ್ರನಿದ್ದ. ಆಗ ದ್ಯುತಿಮಂತರೇ ಮೊದಲಾದವರು ಸಪ್ತರ್ಷಿಗಳು. ಋಷಭನೆಂಬವನು ಅಂದಿನ ವಿಷ್ಣುವು (ಭಾಗ.).

ದಕ್ಷಿಣಗೋಗ್ರಹಣ - ಅಜ್ಞಾತವಾಸಕಾಲದಲ್ಲಿ ಪಾಂಡವರ ಸಂಶೋಧನೆಗೆ ದುರ್ಯೋಧನನು ಮಾಡಿದ ಏರ್ಪಾಡು. ಆಗ ತ್ರಿಗರ್ತರಾಜನಾದ ಸುಶರ್ಮನು ಮತ್ಸ್ಯನಗರದಲ್ಲಿದ್ದ ದನಗಳನ್ನು ಸೆರೆಹಿಡಿದು ವಿರಾಟನನ್ನು ಯುದ್ಧಕ್ಕೆ ಆಮಂತ್ರಿಸಿದನು. ಈ ಯುದ್ಧಹಗಲೆಲ್ಲ ನಡೆದು ರಾತ್ರಿಯೂ ಮುಂದುವರಿಯಿತು. ಸುಶರ್ಮನು ವಿರಾಟನನ್ನು ಸೆರೆಹಿಡಿದನು. ಆಗ ಭೀಮನು ನಕುಲಸಹದೇವರೊಡನೆ ಶತ್ರುಗಳ ಮೇಲೆ ಬಿದ್ದು ಯುದ್ಧಮಾಡುತ್ತಾ ವಿರಾಟನನ್ನು ಸೆರೆಯಿಂದ ಬಿಡಿಸಿ ಸುಶರ್ಮನನ್ನು ಸೆರೆ ಹಿಡಿದನು. ಭೀಮನು ಅವನ ಬಾಯಿಂದ ಮೂರು ಸಲ 'ನಾನು ನಿನ್ನ ದಾಸನು' ಎಂದು ಹೇಳಿಸಿಬಿಟ್ಟನು. ವಿರಾಟನಿಗೆ ಜಯವಾದುದಕ್ಕೆ ನಗರಿಯಲ್ಲಿ ವಿಜಯೋತ್ಸವ ನಡೆಯಿತು. (ಮ.ವಿ.).

ದಕ್ಷಿಣ - ಸೂರ್ಯನು ಶ್ರೌತವಿಧಾನದಿಂದ ಈ ದಿಕ್ಕನ್ನು ಗುರುವಿಗೆ ದಕ್ಷಿಣೆಯಾಗಿ ಕೊಟ್ಟುದರಿಂದ ದಕ್ಷಿಣ ದಿಕ್ಕಾಯಿತು (ಮ.ಉ.).

ದಕ್ಷಿಣಾ - ರುಚಿಯೆಂಬ ಋಷಿ ಈಕೆಯ ತಂದೆ. ಸ್ವಾಯಂಭು ಮನುವಿನ ಮಗಳಾದ ಆಕೂತಿಯು ಈಕೆಯ ತಾಯಿ. ದಕ್ಷಿಣೆಯು ತನ್ನ ಸೋದರನಾದ ಯಜ್ಞನನ್ನೇ ಮದುವೆಯಾದಳು. ಈ ಯಜ್ಞನೇ ಮೊದಲನೆಯ ಇಂದ್ರ (ಭಾಗ.).

ದಗ್ಧರಥ - ನೋ. ಚಿತ್ರರಥ. ಸೋಮಶ್ರಮವೆಂಬ ತೀರ್ಥದಲ್ಲಿ ಜಲಕ್ರೀಡೆಯಾಡುತ್ತಿದ್ದ ಅಂಗಾರಪರ್ಣನ ರಥವನ್ನು ಅರ್ಜುನನು ಆಗ್ನೇಯಾಸ್ತ್ರದಿಂದ ಸುಟ್ಟನು. ಅಂದಿನಿಂದ ಆ ಗಂಧರ್ವನಿಗೆ ದಗ್ಧರಥನೆಂಬ ಹೆಸರಾಯಿತು. (ಮ.ಆ.).

ದಂಡ - ೧. ಚತುರೋಪಾಯಗಳಲ್ಲಿ ನಾಲ್ಕನೆಯದು. ೨. ಮಗಧದೇಶದ ರಾಜ; ಭೀಮಸೇನನು ರಾಜಸೂಯಯಾಗ ಕಾಲದಲ್ಲಿ ಈತನನ್ನು ಗೆದ್ದನು. ಇವನು ಭಾರತ ಯುದ್ಧದಲ್ಲಿ ಕೌರವನ ಪಕ್ಷದಲ್ಲಿ ನಿಂತು ಹೋರಾಡಿ ಅರ್ಜುನನಿಂದ ಸ್ವರ್ಗಸ್ಥನಾದನು. ನೋ. - ದಂಡಧಾರ (ಮ.ಕ.,ಶಾಂ.).

ದಂಡಕ - ೧. ಸುದ್ಯುಮ್ನನ ಹಿರಿಯ ಮಗನಾದ ಉತ್ಕಲನಿಗೆ ಧೃಷ್ಟಕ, ಅಂಬರೀಷ ಮತ್ತು ದಂಡರೆಂಬ ಪ್ರಸಿದ್ಧರಾದ ಮಕ್ಕಳಾದರು. ಇವರಿಂದ ದಂಡನೆಂಬುವನಿಂದಲೇ ದಂಡಕಾರಣ್ಯವೆಂಬ, ತಪಸ್ವಿಗಳಿಗೆಲ್ಲ ಆಶ್ರಯಸ್ಥಾನವಾದ, ಪುಣ್ಯಭೂಮಿಯು ನಿರ್ಮಾಣವಾಯಿತು. ೨. ಇಕ್ಷ್ವಾಕು ವಂಶದ ರಾಜನಾದ ದಂಡಕನು ಬೇಟೆಯಾಡಲು ಅರಣ್ಯಕ್ಕೆ ಬಂದಾಗ ಭೃಗುಮಹರ್ಷಿಗಳ ಆಶ್ರಮಕ್ಕೆ ಹೋಗಿ ಬಲತ್ಕಾರದಿಂದ ಮುನಿಪುತ್ರಿಯನ್ನು ಭೋಗಿಸಿದನು. ಭೃಗುಮಹರ್ಷಿಗಳು ಇದರಿಂದ ಕೋಪಗೊಂಡು ದಂಡಕನೊಡನೆ 'ಇಲ್ಲಿಯ ನೂರು ಯೋಜನ ಪ್ರದೇಶ ಸುಟ್ಟು ಬೂದಿಯಾಗಲಿ!' ಎಂದು ಶಾಪಕೊಟ್ಟು, 'ಕಾಶಿಯಿಂದ ಅಗಸ್ತ್ಯರು ಇಲ್ಲಿಗೆ ಬಂದಮೇಲೆ ಈ ಪ್ರದೇಶ ಮಂಗಳಕರವಾಗಲಿ! ಶ್ರೀರಾಮನಿಂದ ಈ ಅರಣ್ಯ ಪಾವನವಾಗಲಿ!' ಎಂದರು (ಅನಂ.ರಾ.). ೩. ಅರಣ್ಯವೊಂದು. ಇದು ದಕ್ಷಿಣ ಹಿಂದುಸ್ಥಾನದ ಮಧ್ಯ ಭಾಗದಲ್ಲಿತ್ತು. ದಂಡಕನ ರಾಜ್ಯವೇ ದಂಡಕಾರಣ್ಯವಾಯಿತು. ದಂಡಕನು ಸೂರ್ಯ ವಂಶದ ಇಕ್ಷ್ವಾಕುರಾಜನ ಮಗನು. ಇವನು ಬಾಲ್ಯದಿಂದಲೂ ಮಹಾಮೂರ್ಖನಾಗಿದ್ದನು. ಈತನು ಶಾಪದಂಡವನ್ನು ಹೊಂದದಿರಲೆಂದು ತಂದೆಯು ದಂಡಕನೆಂದು ಕರೆಯುತ್ತಿದ್ದನು. ಇಕ್ಷ್ವಾಕುವು ಇವನಿಗೆ ವಿಂಧ್ಯ ಮತ್ತು ಶೈವಲ ಪರ್ವತಗಳ ನಡುವಿನ ರಾಜ್ಯವನ್ನು ಕೊಟ್ಟಿದ್ದನು. ಈ ರಾಜ್ಯಕ್ಕೆ ಮಧುಮಂತವೆಂಬುದು ರಾಜಧಾನಿಯಾಗಿತ್ತು. ಈತನು ತನ್ನ ಕುಲಗುರುಗಳನ್ನು ಬಿಟ್ಟು ಶುಕ್ರಾಚಾರ್ಯರನ್ನು ಪುರೋಹಿತರನ್ನಾಗಿ ಮಾಡಿಕೊಂಡಿದ್ದನು. ಇವನೊಮ್ಮೆ ಆಚಾರ್ಯರಿಲ್ಲದಿದ್ದಾಗ ಅವರ ಆಶ್ರಮವನ್ನು ಪ್ರವೇಶಿಸಿ ಅವರ ಹಿರಿಯ ಮಗಳಾದ ಅರಜೆಯನ್ನು ಬಲಾತ್ಕಾರದಿಂದ ಮಾನಭಂಗ ಮಾಡಿದ. ಇದನ್ನು ಕೇಳಿದ ಶುಕ್ರಾಚಾರ್ಯರು ಕೆರಳಿ ಅವನ ರಾಜ್ಯವೆಲ್ಲ ಭಯಂಕರ ಅರಣ್ಯವಾಗುವಂತೆ ಶಾಪವಿತ್ತರು. ಅರಜೆಯಿರುವ ಪ್ರಾಂತವು ಸದಾ ಫಲ ಮೂಲಗಳಿಂದ ತುಂಬಿರಲೆಂದೂ, ಇಲ್ಲಿಯೇ ಆಕೆಯು ವಾಸವಾಗಿರಲೆಂದೂ ಆಕೆಗೆ ಅನುಕೂಲವಾದ ವರ ಕೊಟ್ಟು ತಮ್ಮ ಶಿಷ್ಯರೊಂದಿಗೆ ಆ ಆಶ್ರಮವನ್ನು ಬಿಟ್ಟು ಹೊರಟುಹೋದರು. ದಂಡಕನ ರಾಜ್ಯದಲ್ಲಿ ಏಳು ದಿನ ಧೂಳು ಸುರಿದು

ನೆಲವೆಲ್ಲ ಬೆಂಗಾಡಾಗಿ ಅರಣ್ಯವಾಯಿತು. ಇದೇ ದಂಡಕಾರಣ್ಯ. ಇದನ್ನು ರಾಮಾಯಣ ಕಾಲದಲ್ಲಿ ಜನಸ್ಥಾನವೆಂದೂ ಕರೆಯುತ್ತಿದ್ದರು.

ದಂಡಕಾರಣ್ಯ - ನೋ. - ದಂಡಕ.

ದಂಡಕೇತು - ಪಾಂಡವಪಕ್ಷದ ಪಾಂಡ್ಯ ರಾಜ (ಮ.ದ್ರೋ.).

ದಂಡಧಾರ - ೧. ಮಗಧದ ಕ್ಷತ್ರಿಯ. ಇವನಿಗೆ ದಂಡಧರನೆಂಬ ಹೆಸರೂ ಇತ್ತು. ಇವನು ಏಕರಥನು. ರಾಜಸೂಯಯಾಗ ಕಾಲದಲ್ಲಿ ಭೀಮನಿಂದ ಪರಾಜಿತನಾದನು. ಭಾರತ ಯುದ್ಧದಲ್ಲಿ ಇವನೂ, ಇವನ ಅಣ್ಣನಾದ ದಂಡನೂ ಕೌರವನ ಪರವಾಗಿ ಹೋರಾಡಿ ಅರ್ಜುನನಿಂದ ಹತರಾದರು. ದಂಡಧಾರನು ಭಗದತ್ತನಿಗೆ ಸಮಾನನು. ಗಿರಿವ್ರಜದ ಅರಸನು (ಮ.ಕ.). ೨.ಧೃತರಾಷ್ಟ್ರನ ಮಗ. ಭೀಮನಿಂದ ಹತನಾದನು (ಮ.ಆ.). ೩. ಪಾಂಚಾಲದ ಕ್ಷತ್ರಿಯನೊಬ್ಬ. ಪಾಂಡವಸೇನೆಯ ಒಬ್ಬ ಸೇನಾಪತಿ (ಮ.ಉ.). ೪. ಪಾಂಡವ ಪಕ್ಷದ ಒಬ್ಬ ಚೇದಿರಾಜ. ಇವನು ದ್ರೋಣನಿಂದ ಹತನಾದನು. (ಮ.ದ್ರೋ.).

ದತ್ತಾತ್ರೇಯ (ದತ್ತ) - ವಿಷ್ಣುವಿನ ಅವತಾರ. ಅತ್ರಿಪತ್ನಿಯಾದ ಅನಸೂಯೆಯ ಮಗ. ಈತನ ಮಗ ನಿಮಿ ಎಂಬ ಹೆಸರಿನ ಮುನಿ. ದತ್ತಾತ್ರೇಯನು ಸ್ವಾರೋಚಿಷ ಮನ್ವಂತರದ ಸಪ್ತರ್ಷಿಗಳಲ್ಲೊಬ್ಬನಾಗಿದ್ದ. ಅತ್ರಿ - ಅನಸೂಯೆಯರು ಪುತ್ರನಿಗಾಗಿ ವಿಷ್ಣುವಿನ ಕುರಿತು ತಪಸ್ಸು ಮಾಡಲು ವಿಷ್ಣುವು ಪ್ರತ್ಯಕ್ಷನಾದನು. ಅವನು ತನ್ನನ್ನೇ ಅತ್ರಿ ದಂಪತಿಗಳಿಗೆ ಕೊಟ್ಟದ್ದರಿಂದ (ದತ್ತ+ ಅತ್ರೇಯ) ದತ್ತಾತ್ರೇಯನೆಂದು ಪ್ರಸಿದ್ಧನಾದನು (ಹರಿ.). ವೈವಸ್ವತ ಮನ್ವಂತರದಲ್ಲಿ ಅತ್ರಿ ಮುನಿಯು ಸತ್ಪುತ್ರನಿಗಾಗಿ ತಪಸ್ಸು ಮಾಡುತ್ತಿರಲು ತ್ರಿಮೂರ್ತಿಗಳು ಆತನಿಗೆ ಪ್ರಸನ್ನರಾಗಿ ಪುತ್ರನಾಗುವಂತೆ ಅನುಗ್ರಹಿಸಿದರು. ಮುಂದೆ ಅನಸೂಯೆಯಲ್ಲಿ ಬ್ರಹ್ಮನ ಅಂಶದಿಂದ ಚಂದ್ರನೂ, ವಿಷ್ಣುವಿನ ಅಂಶದಿಂದ ದತ್ತನೂ, ಶಿವನ ಅನುಗ್ರಹದಿಂದ ದುರ್ವಾಸಮುನಿಯೂ ಹುಟ್ಟಿದರು. ಈತನು ಕಾರ್ತವೀರ್ಯ, ಪ್ರಹ್ಲಾದ ಮೊದಲಾದವರಿಗೆ ಜ್ಞಾನೋಪದೇಶ ಮಾಡಿದನು (ಭಾಗ., ಮಾರ್ಕಂ.ಪು.).

ದೇವತೆಗಳು ರಾಕ್ಷಸರ ಹಾವಳಿಯನ್ನು ತಡೆಯಲಾರದೆ ದತ್ತನಿಗೆ ಮೊರೆ ಇಡಲು ಆತನು ರಾಕ್ಷಸರನ್ನೆಲ್ಲ ತನ್ನ ಆಶ್ರಮದ ಬಳಿಗೆ ಬರಮಾಡಿಕೊಂಡನು. ಆ ರಾಕ್ಷಸರು ಒಂದು ದಿನ ಈತನ ಆಶ್ರಮದಲ್ಲಿದ್ದ ಲಕ್ಷ್ಮಿಯನ್ನು ಅಪಹರಿಸಿಕೊಂಡು ಹೋಗುತ್ತಿರುವಾಗ ಈತನ ತಪೋಮಹಿಮೆಯಿಂದ ತಾವಾಗಿಯೇ ನಾಶವಾದರು (ಮಾರ್ಕಂ.ಪು.). ಮುಂಬೈ - ಮದ್ರಾಸು ರೈಲ್ವೆ

ಮಾರ್ಗದಲ್ಲಿರುವ ಗಾಣಗಾಪುರವು ಸುಪ್ರಸಿದ್ಧ ದತ್ತ ಕ್ಷೇತ್ರ. ಈ ಕ್ಷೇತ್ರದ ಪಕ್ಕದಲ್ಲಿ ಭೀಮಾನದಿಯು ಹರಿಯುತ್ತಿದೆ. ಇಲ್ಲಿ ದತ್ತನ ಸಗುಣ ಪಾದುಕೆಗಳಿವೆ. ಇಲ್ಲಿ ದತ್ತಮಹಾರಾಜರ ಅನೇಕ ಲೀಲೆಗಳು ನಡೆಯುತ್ತವೆ. ಇಲ್ಲಿ ಪ್ರತಿ ಹುಣ್ಣಿಮೆಗೂ ಉತ್ಸವವಿದೆ (ಮ.ಸ., ಅನು., ಭಾಗ., ಮಾರ್ಕಂಪು., ದೇವೀಭಾ., ಮತ್ಸ್ಯಪು., ಕ್ಷೇತ್ರದ.).

ದಧಿಮತಿದೇವಿ - ಈಕೆಯು ಮಹರ್ಷಿ ದಧೀಚಿಯ ಆರಾಧ್ಯದೇವತೆ. ದಧೀಚಿಯ ಆಶ್ರಮವು ನೈಮಿಷಾರಣ್ಯದಲ್ಲಿದೆ. ನೋ. - ದಧೀಚಿ.

ದಧಿಮುಖ - ೧. ಒಂದು ಸರ್ಪ. ೨. ವಾನರನೊಬ್ಬ. ಇವನು ಸುಗ್ರೀವನ ಮಧುವನದ ಪಾಲಕನಾಗಿದ್ದ. ಈತ ಚಂದ್ರನ ಮಗ. ಸುಮುಖ, ದುರ್ಮುಖ, ವೇಗದರ್ಶಿಗಳೆಂಬ ಕಪಿಶ್ರೇಷ್ಠರು ಈತನ ಸಹೋದರರು. ಲಂಕೆಯಿಂದ ಹಿಂತಿರುಗಿದ ಸುವಾರ್ತೆಯನ್ನು ತಂದ ಹನುಮನೊಡನೆ ಕಪಿಗಳೆಲ್ಲ ಮಧುವನವನ್ನು ಹೊಕ್ಕು ಲೂಟಿ ಮಾಡಲು ಈತನು ಅವರನ್ನು ತಡೆದು ಪರಾಜಿತನಾದನು (ರಾ.ಮಾ.ಯುದ್ಧ).

ದಧೀಚಿ - ಮೊದಲನೇ ಸ್ವಾಯಂಭವ ಮನ್ವಂತರದ ಬ್ರಹ್ಮಮಾನಸ ಪುತ್ರನಾದ ಅಥರ್ವಣ ಋಷಿಯ ಮಗ; ಈತನ ತಾಯಿಯು ಕರ್ದಮನ ಪುತ್ರಿಯಾದ ಶಾಂತಿ ಅಥವಾ ಚಿತ್ತಿ. ಧೃತವ್ರತ ಮತ್ತು ಅಥರ್ವಶಿರರು ಈತನ ಸೋದರರು. ಈತನ ಪತ್ನಿಯು ಪ್ರಾತೀಥ್ಯೇಯಿ. ಮಗ ಪಿಪ್ಪಲಾದ (ಬ್ರಹ್ಮಪು.). ಈತನ ಪತ್ನಿ ಸುವರ್ಚಾ (ಸ್ಕಾಂ.ಪು.). ಈತನ ಪುತ್ರ ಸಾರಸ್ವತ ಋಷಿ; ದಧೀಚಿಯು ಅಲುಂಬಷೆ ಎಂಬ ಅಪ್ಸರೆಯ ದರ್ಶನದಿಂದ ಕಾಮವಿಕಾರಹೊಂದಿ ಈತನ ರೇತಸ್ಸು ಸರಸ್ವತೀ ನದಿಯಲ್ಲಿ ಬೀಳಲು ಅಲ್ಲಿ ಉತ್ಪತ್ತಿಯಾದ ಬಾಲಕನಾದುದರಿಂದ ಅವನಿಗೆ ಸಾರಸ್ವತನೆಂದು ಹೆಸರಾಯಿತು. ಸಾರಸ್ವತನು ವಾಸವಾಗಿದ್ದ ಪ್ರದೇಶದಲ್ಲಿ ಅನಾವೃಷ್ಟಿಯ ಭಯವಿಲ್ಲವೆಂದು ದಧೀಚಿಯು ಅನುಗ್ರಹಿಸಿದ್ದನು. ಇಂದ್ರನು ದಧೀಚಿಗೆ ಪ್ರವರ್ಗವಿದ್ಯೆಯನ್ನೂ, ಮಧುವಿದ್ಯೆಯನ್ನೂ ಉಪದೇಶ ಮಾಡಿ, 'ಇದನ್ನು ಬೇರೆಯವರಿಗೆ ತಿಳಿಸಿದರೆ ನಿನ್ನ ತಲೆಯನ್ನು ಕಡಿಯುತ್ತೇನೆ' ಎಂದನು. ಇದನ್ನು ತಿಳಿದ ಅಶ್ವಿನೀ ದೇವತೆಗಳು ದಧೀಚಿಯ ತಲೆಯನ್ನು ಛೇದಿಸಿ ಬೇರೆ ಇಟ್ಟು ಕುದುರೆಯ ರುಂಡವನ್ನು ಆ ಮುಂಡಕ್ಕೆ ಜೋಡಿಸಿ ಆ ವಿದ್ಯೆಯನ್ನು ಕಲಿತರು. ಇಂದ್ರನು ಇದನ್ನು ತಿಳಿದು ದಧೀಚಿಯ ತಲೆ ಹಾರಿಸಲು ಅಶ್ವಿನೀದೇವತೆಗಳು ಅವನ ಅಡಗಿಸಿಟ್ಟ ತಲೆಯನ್ನು ಆ ಮುಂಡಕ್ಕೆ ಜೋಡಿಸಿದರು (ಋ).

ದೇವತೆಗಳೆಲ್ಲ ಈತನಲ್ಲಿ ಶಸ್ತ್ರಗಳನ್ನಿಟ್ಟು ಹೋಗಿ ಬಹಳ ಕಾಲವಾದರೂ ಕೊಂಡು ಹೋಗಲು ಬಾರದ್ದುದರಿಂದ ಅವೆಲ್ಲ ಹಾಳಾಗುವುದನ್ನು ಕಂಡು ಅವನ್ನೆಲ್ಲ ಜಲದಲ್ಲಿ ಅಭಿಮಂತ್ರಿಸಿ ಪಾನಮಾಡಿಬಿಟ್ಟನು. ಕೆಲವು ಕಾಲ ಕಳೆದಮೇಲೆ ದೇವತೆಗಳೆಲ್ಲ ಪುನಃ ತಮ್ಮ ಶಸ್ತ್ರಗಳನ್ನು ಕೊಂಡುಹೋಗಲು ಬರಲು 'ಆ ಶಸ್ತ್ರಗಳೆಲ್ಲ ನನ್ನ ಬೆನ್ನು ಮೂಳೆಯಲ್ಲಿವೆ' ಎಂದು ದಧೀಚಿಯು ಯೋಗಬಲದಿಂದ ತನ್ನ ದೇಹ ತ್ಯಾಗ ಮಾಡಿದನು. ದೇವತೆಗಳು ಅವನ ಬೆನ್ನುಮೂಳೆಗಳಿಂದ ತಮಗೆ ಬೇಕಾದ ಅಸ್ತ್ರಗಳನ್ನೆಲ್ಲ ವಿಶ್ವಕರ್ಮನಿಂದ ಮಾಡಿಸಿಕೊಂಡರು. ಇಂದ್ರನ ವಜ್ರಾಯುಧವೂ ಇವನ ಬೆನ್ನುಮೂಳೆಯಿಂದಾಯಿತು (ಭಾಗ., ಬ್ರಹ್ಮಪು., ಮ.ವ., ಶ., ದೇವಿಭಾ., ಶಿವಪು., ಸ್ಕಾಂಪು.). ಈತನ ಹೆಂಡತಿ ಸುವರ್ಚೆ ಎಂಬುವಳು ದಧೀಚಿ ಸಾಯುವಾಗ ಗರ್ಭಿಣಿಯಾಗಿದ್ದು ಅನಂತರ ಪಿಪ್ಪಲಾದನೆಂಬ ಮಗನನ್ನು ಹೆತ್ತಳು.

ದನಾಯು - ದಕ್ಷ ಮತ್ತು ವೀರಿಣಿಯ ಪುತ್ರಿ, ಕಶ್ಯಪನ ಪತ್ನಿ. ಈಕೆಗೆ ವೀಕ್ಷರ, ಬಲ, ವೀರ, ವೃತ್ರರೆಂಬ ನಾಲ್ವರು ಮಕ್ಕಳು (ಮ.ಆ.).

ದನು - ದಕ್ಷ ಮತ್ತು ಧರಣಿಯ ಮಗಳು. ಈಕೆ ಕಶ್ಯಪನ ಭಾರ್ಯೆ. ಈಕೆಗೆ ವಿಪ್ರಚಿತ್ತಿ, ನಮುಚಿ, ನಿಕುಂಭ, ಬಾಣ, ಶಂಬರ, ಹಿರಣ್ಯಕಶಿಪು - ಮೊದಲಾದ ನಲವತ್ತು ಮಂದಿ ಮಕ್ಕಳಿದ್ದರು (ಮ.ಆ., ಮತ್ಸ್ಯಪು.).

ದಂತವಕ್ತ್ರ (ದಂತವಕ್ರ) - ಕರೂಶ ದೇಶಾಧಿಪತಿಯಾದ ವೃದ್ಧಶರ್ಮನು ಈತನ ತಂದೆ; ವಸುದೇವನ ಸೋದರಿಯಾದ ಶ್ರುತದೇವಿಯು ಈತನ ತಾಯಿ. ಕರೂಶವು ಕಲಿಂಗದೇಶದ ಒಂದು ಭಾಗ. ರಾಜಸೂಯದ ಕಾಲದಲ್ಲಿ ಈತನು ಸಹದೇವನಿಂದ ಪರಾಜಿತನಾದ (ಮ.ಸ.). ಶಿಶುಪಾಲನ ಮರಣಾನಂತರ ಸಾಳ್ವನೂ ಪೌಂಡ್ರಕನೇ ಮೊದಲಾದ ದಂತವಕ್ತ್ರನ ಇಷ್ಟ ಮಿತ್ರರೆಲ್ಲ ಶ್ರೀಕೃಷ್ಣನಿಂದ ಸಂಹೃತರಾದುದನ್ನು ನೋಡಿ ತಾನೊಬ್ಬನೇ ಗದೆಯನ್ನು ಹಿಡಿದು ಕಾಲುನಡೆಯಿಂದ ಕೃಷ್ಣನ ಸಮೀಪಕ್ಕೆ ಬಂದು ತನ್ನ ಗದೆಯಿಂದ ಆತನ ತಲೆಯ ಮೇಲೆ ಬಲವಾಗಿ ಹೊಡೆದನು. ಶ್ರೀಕೃಷ್ಣನು ಆ ಹೊಡೆತಕ್ಕೆ ಚಲಿಸದೆ ತನ್ನ ಕೌಮೋದಿಕಿ ಗದೆಯಿಂದ ಆತನ ಎದೆಯ ಮೇಲೆ ಹೊಡೆಯಲು ರಕ್ಕಸನು ರಕ್ತ ಕಾರುತ್ತ ಭೂಮಿಯ ಮೇಲೆ ಬಿದ್ದು ಪ್ರಾಣ ಬಿಟ್ಟನು (ಭಾಗ.). ಆಗ ಅಣ್ಣನ ಮರಣದಿಂದ ಕೆರಳಿದ ವಿಡೂರಥನು ಶ್ರೀಕೃಷ್ಣನನ್ನು ಕತ್ತಿ ಗುರಾಣಿಗಳಿಂದ ಎದುರಿಸಲು ಕೃಷ್ಣನು ಚಕ್ರಾಯುಧದಿಂದ ಅವನ ತಲೆಯನ್ನು ಕತ್ತರಿಸಿದನು, ನೋ. - ಜಯವಿಜಯ.

ದಮ - ೧. ದಮಯಂತಿಯ ಒಬ್ಬ ಸಹೋದರ. ಈತನಿಗೆ ದಮನ ಮತ್ತು ದಾಂತರೂ ಸೋದರರು. ನೋ. - ದಮಯಂತಿ. ೨. ಒಬ್ಬ ಋಷಿ. ಭೀಮರಾಜನಿಗೆ

(ಭೀಷ್ಮಕ) ಪುತ್ರರಾಗುವಂತೆ ಅನುಗ್ರಹಿಸಿದ ಮಹರ್ಷಿ. ೩. ಮರುತ್ತರಾಜನ ಮೊಮ್ಮಗ. ಈತನ ತಂದೆ ನರಿಷ್ಯಂತ. ತಾಯಿ ಇಂದ್ರಸೇನೆ. ಈತ ತಾಯಿಯ ಗರ್ಭದಲ್ಲಿ ಒಂಬತ್ತು ವರ್ಷವಿದ್ದ. ಈತನಿಗೆ ರಾಜನಾದ ವೃಷಪರ್ವನಿಂದ ಶಸ್ತ್ರವಿದ್ಯಾಭ್ಯಾಸವೂ, ವಸಿಷ್ಠ ಪುತ್ರನಾದ ಶಕ್ತಿಮಹರ್ಷಿಯಿಂದ ಶಾಸ್ತ್ರವಿದ್ಯಾಭ್ಯಾಸವೂ, ಆರ್ಷ್ಟಿಷೇಣ ಮುನಿಯಿಂದ ಯೋಗವಿದ್ಯಾಭ್ಯಾಸವೂ ಆಯಿತು. ಈತನನ್ನು ದಶಾರ್ಣದೇಶಾಧಿಪತಿ ಚಾರುವರ್ಮನ ಮಗಳು ಸುಮನೆಯು ವಿವಾಹವಾದಳು. ಮದ್ರರಾಜಪುತ್ರ ಮಹಾನಂದ ಮತ್ತು ವಿದರ್ಭರಾಜಪುತ್ರ ವಪುಷ್ಮಂತರು ಸುಮನೆಯನ್ನು ಅಪಹರಿಸಲು ಪ್ರಯತ್ನಪಟ್ಟು ದಮನಿಂದ ಪರಾಜಿತರಾದರು. ಆದರೂ ಆ ದ್ವೇಷವನ್ನು ಬಿಡದೆ ವಪುಷ್ಮಂತನು ವಾನಪ್ರಸ್ಥಾಶ್ರಮವನ್ನು ಕೈಗೊಂಡು ಅರಣ್ಯದಲ್ಲಿದ್ದ ನರಿಷ್ಯಂತನನ್ನು ಕೊಲ್ಲಲು ದಮನು ತಂದೆಯನ್ನು ಕೊಂದ ಶತ್ರುಗಳನ್ನು ನಾಶಮಾಡಿ ಅವರ ರಕ್ತದಿಂದ ತಾಯಿತಂದೆಗಳಿಗೆ ತರ್ಪಣಬಿಟ್ಟನು (ಮಾರ್ಕಂ.ಪು.).

ದಮಘೋಷ - ಯದುವಂಶೋತ್ಪನ್ನನಾದ ಚೇದಿರಾಜನ ಮಗ; ಇವನು ಶಿಶುಪಾಲನ ತಂದೆ. ಈತನ ಪತ್ನಿ ಶ್ರೀಕೃಷ್ಣನ ಒಬ್ಬಳು ಅತ್ತೆಯಾದ ಶ್ರುತಶ್ರವಾದೇವಿ (ಮ.ವ., ಹರಿ., ಭಾಗ.).

ದಮನ - ೧. ದಮಯಂತಿಯ ಸಹೋದರ. ೨. ಒಬ್ಬ ಋಷಿ. ಈತನ ಅನುಗ್ರಹದಿಂದಲೇ ವಿದರ್ಭರಾಜನಾದ ಭೀಮನಿಗೆ ದಮಯಂತಿಯೇ ಮೊದಲಾದ ಮಕ್ಕಳು ಹುಟ್ಟಿದರು. ನೋ. - ದಮಯಂತಿ., ದಮ, (ವ.ಮ.). ೩.ಪೌರವರಾಜನ ಮಗ; ಕೌರವಪಕ್ಷದಲ್ಲಿದ್ದು ಭಾರತ ಯುದ್ಧದಲ್ಲಿ ಹೋರಾಡಿದನು. (ಮ.ಭೀ.).

ದಮಯಂತಿ - ವಿದರ್ಭದೇಶಾಧಿಪನಾದ ಭೀಮರಾಜನ ಮಗಳು. ಈಕೆ ನಿಷಧ ದೇಶದ ರಾಜನಾದ ವೀರಸೇನನ ಪುತ್ರ ನಳನ ಪತ್ನಿ. ಈಕೆಗೆ ಇಂದ್ರಸೇನನೆಂಬ ಮಗನೂ, ಇಂದ್ರಸೇನೆಯೆಂಬ ಮಗಳೂ ಇದ್ದರು. ದಮ, ದಮನ, ದಾಂತರು ಈಕೆಯ ಸಹೋದರರು. ದಮ ಋಷಿಯ ಅನುಗ್ರಹದಿಂದ ಈಕೆ ಹುಟ್ಟಿದವಳು. ಈಕೆಯ ಮಗಳೇ ಮೌದ್ಗಲ್ಯಮುನಿಯ ಪತ್ನಿಯಾದ ಮಹಾಪತಿವ್ರತೆ ನಾಲಾಯಣಿ. ನೋ. - ನಾಲಾಯಣಿ (ಮ.ಆ., ವೈವಾ.). ನಳನು ಕಲಿಯ ಪ್ರೇರಣೆಯಿಂದ ಪುಷ್ಕರನೊಡನೆ ಜೂಜಾಡಿ ಸೋತು ಪತ್ನಿಯೊಡನೆ ಅರಣ್ಯ ಸೇರಿ ಅಲ್ಲಿ ದಮಯಂತಿಯನ್ನಗಲಿ, ಮುಂದೆ ಹೋಗುವಾಗ ಕಾಡುಕಿಚ್ಚಿಗೆ ಸಿಕ್ಕಿದ ಕಾರ್ಕೋಟಕನನ್ನು ಸುರಕ್ಷಿತವಾದ ಸ್ಥಳಕ್ಕೆ ಸಾಗಿಸಬೇಕೆಂದು ಯೋಚಿಸುವಾಗ

ಕಾರ್ಕೋಟಕನು ನಳನೊಡನೆ - 'ನಿನ್ನ ಹೆಜ್ಜೆಗಳನ್ನು ಎಣಿಸಿಕೊಂಡು ನಡೆ. ನಿನಗೆ ಶ್ರೇಯಸ್ಸಾಗುವುದು' ಎಂದನು. ಆಗ ರಾಜನು 'ಏಕಂ, ದ್ವೇ, ತ್ರೀಣಿ, ಚತ್ವಾರಿ, ಪಂಚ, ಷಟ್, ಸಪ್ತ, ಅಷ್ಟಾ, ನವ' ಎಂದು ಒಂಬತ್ತು ಹೆಜ್ಜೆಗಳವರೆಗೂ ಎಣಿಸಿ ಹತ್ತನೆಯ ಹೆಜ್ಜೆಗೆ ದಶ ಎಂದು ಎಣಿಸಿದೊಡನೆಯೇ ಕಾರ್ಕೋಟಕನು ಆತನನ್ನು ಕಚ್ಚಲು, ನಳನು ಆ ವಿಷದ ಪ್ರಭಾವದಿಂದ ವಿಕಾರನಾದನು. ಮುಂದೆ ಅವನು ಬಾಹುಕನೆಂಬ ಹೆಸರಿನಿಂದ ಅಯೋಧ್ಯೆಯ ರಾಜನಾದ ಋತುಪರ್ಣನಲ್ಲಿ ಸೇರಿಕೊಂಡನು. ಇತ್ತ ಅರಣ್ಯದಲ್ಲಿ ದಮಯಂತಿಯು ಹೆಬ್ಬಾವಿನ ಬಾಯಿಗೆ ಸಿಕ್ಕಿ ಒಬ್ಬ ಬೇಡನಿಂದ ಬಿಡಿಸಲ್ಪಟ್ಟು, ಕೊನೆಗೆ ಚೇದಿದೇಶದ ರಾಜನ ಆಶ್ರಯವನ್ನು ಸೇರಿ ಅಲ್ಲಿ ರಾಜಪುತ್ರಿ ಸುನಂದೆಯ ಸಖಿಯಾಗಿದ್ದಳು. ಇತ್ತ ಭೀಮ ಭೂಪಾಲಕನು ಮಗಳು ಮತ್ತು ಅಳಿಯನನ್ನು ಬ್ರಾಹ್ಮಣರ ಮೂಲಕ ಹುಡುಕಿಸುತ್ತಿರುವುದಾಗಿ ಅವರಲ್ಲಿ ಸುದೇವನೆಂಬ ಬ್ರಾಹ್ಮಣನು ಚೇದಿರಾಜನ ಅರಮನೆಯಲ್ಲಿ ದಮಯಂತಿಯನ್ನು ಎರಡು ಹುಬ್ಬುಗಳ ನಡುವಿರುವ ಕೆಂಬಣ್ಣದ ಮಚ್ಚೆಯಿಂದ ತಿಳಿದು, ಆಕೆಯನ್ನು ಕುಂಡಿನ ನಗರಕ್ಕೆ ಕರೆದುಕೊಂಡು ಬಂದನು. ಇತ್ತ ಪರ್ಣಾದನೆಂಬ ಬ್ರಾಹ್ಮಣನು ಋತುಪರ್ಣನಲ್ಲಿದ್ದ ಬಾಹುಕನು ನಳನಾಗಿರಬೇಕೆಂಬ ಸೂಚನೆಯನ್ನು ದಮಯಂತಿಗೆ ತಿಳಿಸಲು, ಭೀಮನು ದಮಯಂತಿಗೆ ಪುನಃ ಸ್ವಯಂವರವೆಂದು ಬಾಹುಕನಿಗೆ ತಿಳಿಸಿ, ಅವನನ್ನು ಕುಂಡಿನ ನಗರಕ್ಕೆ ಕರೆಸಿದಾಗ ಆತನೇ ನಳನೆಂದು ದಮಯಂತಿಯು ತಿಳಿದಳು. ಮುಂದೆ ನಳನು ಪುಷ್ಕರನೊಡನೆ ಜೂಜಾಡಿ ತನ್ನ ರಾಜ್ಯಗಳನ್ನೆಲ್ಲ ಗೆದ್ದನು. (ಮ.ವ.).

ಪೂರ್ವಜನ್ಮದಲ್ಲಿ ದಮಯಂತಿಯು ಒಬ್ಬ ಬೇಡಿತಿಯಾಗಿದ್ದಳು. ಆಗ ಈಕೆಯು ಯತಿವೇಷದಿಂದ ಬಂದ ಶಿವನನ್ನು ಚೆನ್ನಾಗಿ ಸತ್ಕರಿಸಿದಳು. ರಾತ್ರಿ ಆ ಯತಿಯನ್ನು ಗುಡಿಸಿಲೊಳಗೆ ಮಲಗಿಸಿದಳು. ಆಕೆಯ ಪತಿಯು ರಾತ್ರಿ ಅಂಗಳದಲ್ಲೇ ಮಲಗಿದನು. ಅಂದು ರಾತ್ರಿ ಹುಲಿಯೊಂದು ಬಂದು ಬೇಡನನ್ನು ತಿಂದುಕೊಂಡು ಹೋಯಿತು. ಬೆಳಿಗ್ಗೆ ಬೇಡಿತಿ ಎದ್ದು ಪತಿಯೊಡನೆ ಸಹಗಮನವಾಗುವ ಪ್ರಯತ್ನ ನಡೆಸಿದಾಗ ಶಿವನು ಪ್ರತ್ಯಕ್ಷನಾದನು. ಮುಂದೆ ಈ ಬೇಡಿತಿಯೇ ದಮಯಂತಿಯಾಗಿ ಹುಟ್ಟಿದಳು (ಶಿವಪು.).

ದಂಭೋದ್ಭವ - ನೋ. - ಡಂಭೋದ್ಭವ. ನರನಾರಾಯಣರು ಈತನ ದುರಭಿಮಾನವನ್ನು ಹೋಗಲಾಡಿಸಿದರು (ಮ.ಉ.).

ದರದ - ೧. ಬಾಹ್ಲಿಕ ದೇಶ. ಕಾಶ್ಮೀರದ ಉತ್ತರದಲ್ಲಿರುವ ಡಾರ್ಡಿಸ್ಥಾನ. ಇದು ಸಿಂಧೂ ನದಿಯ ಉತ್ತರದಲ್ಲಿದೆ. (ಮ.ಸ.,ಭೀ.). ೨. ಜರಾಸಂಧನ ಪಕ್ಷದ ರಾಜ. ಇವನನ್ನು ಬಲರಾಮನು ಕೊಂದನು.

ದರಿ - ಸರ್ಪವೊಂದು (ಮ.ಆ.).

ದರ್ದಾ - ದೇಶವೊಂದು (ಮ.ಸ.).

ದರ್ದುರ - ಪರ್ವತ. ಪೂರ್ವಘಟ್ಟಗಳ ಭಾಗ.

ದರ್ಬಿ (ದರ್ಭಿ) - ಬ್ರಹ್ಮರ್ಷಿಯೊಬ್ಬ. ಇವನು ಅರ್ಧಕೀಲವೆಂಬ ತೀರ್ಥವನ್ನು ನಿರ್ಮಾಣ ಮಾಡಿದನು. ಇದು ಸಪ್ತಸಮುದ್ರಗಳ ಪ್ರಭಾವವುಳ್ಳದ್ದು (ಮ.ವ.).

ದರ್ಭಶಯನ - ರಾಮನಾಡದಿಂದ ಆರು ಮೈಲು ದೂರವಿರುವ ಕ್ಷೇತ್ರ. ಇಲ್ಲಿಂದ ಮೂರು ಮೈಲು ದೂರದಲ್ಲಿ ಸಮುದ್ರವಿದೆ. ಹನುಮಂತನು ಲಂಕೆಯನ್ನು ಸುಟ್ಟ ಬಳಿಕ ಮೊದಲು ಇಲ್ಲಿ ಬಂದಿಳಿದನು. ಸಮುದ್ರರಾಜನು ಲಂಕೆಗೆ ದಾರಿ ಕೊಡದುದಕ್ಕಾಗಿ ಶ್ರೀರಾಮಚಂದ್ರನು ಚಿಂತಾಕ್ರಾಂತನಾಗಿ ದರ್ಭೆಯ ಮೇಲೆ ಮಲಗಿದ ಸ್ಥಳವಿದು. ಇಲ್ಲಿ ಶ್ರೀರಾಮನ ದರ್ಭಶಯನ ಮಂದಿರವಿದೆ.

ದರ್ವೀಸಂಕ್ರಮಣ - ಒಂದು ತೀರ್ಥ.

ದಲ - ಕ್ಷತ್ರಿಯ. ಇವನು ಇಕ್ಷ್ವಾಕುವಂಶದ ರಾಜನಾದ ಪರೀಕ್ಷಿತನ ಮಗನು. ಈತನ ರಾಜಧಾನಿ ಅಯೋಧ್ಯೆ. ದಲನ ತಾಯಿ ಮಂಡೂಕರಾಜಕನ್ಯೆಯಾದ ಸುಶೋಭನೆ. ಈತನಿಗೆ ಶಲನೆಂಬ ಅಣ್ಣನೂ, ಬಲನೆಂಬ ತಮ್ಮನೂ ಇದ್ದರು. ಒಮ್ಮೆ ಶಲನು ಬೇಟೆಯಾಡಿ ಬಳಲಿದ್ದ ತನ್ನ ಕುದುರೆಗಳ ಬದಲಿಗೆ ಅಲ್ಲಿದ್ದ ವಾಮದೇವನೆಂಬ ಮುನಿಯಿಂದ ಉತ್ತಮಾಶ್ವಗಳನ್ನು ಹಿಂದೆ ಕೊಡುವ ಶರತದಿಂದ ಪಡೆದು, ಮುಂದೆ ಅವನ್ನು ಹಿಂದಕ್ಕೊಪ್ಪಿಸದೆ ತಾನೇ ಇಟ್ಟುಕೊಂಡನು. ವಾಮದೇವನೇ ಕೇಳಿದರೂ, ಬ್ರಾಹ್ಮಣನಿಗೆ ಕುದುರೆಗಳೇಕೆ? ಎತ್ತುಗಳನ್ನು ಕೊಡುತ್ತೇನೆಂದು ಹಾಸ್ಯಮಾಡಿದನು. ಆಗ ವಾಮದೇವನು ತನ್ನ ತಪೋಮಹಿಮೆಯಿಂದ ಉಕ್ಕಿನ ಶರೀರವುಳ್ಳ ರಾಕ್ಷಸರನ್ನು ನಿರ್ಮಾಣ ಮಾಡಿ ಶಲನ ಮೇಲೆ ಬಿಡಲು ಅವರು ಶಲನನ್ನು ಕೊಂದರು. ಕೊನೆಗೆ ದಲನು ಮುನಿಗೆ ಕುದುರೆಗಳನ್ನೊಪ್ಪಿಸಿ ಸುಖಿಯಾದನು. (ಮ.ವ.).

ದಶಗ್ರೀವ (ದಶಕಂಠ) - ನೋ. - ರಾವಣ.

ದಶಜ್ಯೋತಿ - (ದಶಜ್ಯೋತೀಸ್) ೧. ಮುನಿಯೊಬ್ಬ; ಸುಭ್ರಾಜನ ಮಗ (ಮ.ಆ.). ೨. ಅಗ್ನಿಯ ಜ್ವಲಿನೀ, ಜ್ವಾಲಿನೀ, ವಿಸ್ಫುಲಿಂಗಿನೀ, ಕಪಿಲಾ ಮೊದಲಾದ ಹತ್ತು ಕಲೆಗಳು (ಮ.ಆ.).

ದಶರಥ - ಸೂರ್ಯವಂಶದ ಶ್ರೀರಾಮಚಂದ್ರನ ತಂದೆ; ಅಜರಾಜನ ಪುತ್ರ. ಈತನಿಗೆ ಕೌಸಲ್ಯಾ, ಕೈಕೆ ಮತ್ತು ಸುಮಿತ್ರೆಯರೆಂಬ ಮೂವರು ಹೆಂಡಿರಿದ್ದರು. ಇವರಿಗೆ ರಾಮ, ಭರತ ಮತ್ತು ಲಕ್ಷ್ಮಣ, ಶತ್ರುಘ್ನರೆಂಬ ನಾಲ್ವರು ಮಕ್ಕಳು ಹುಟ್ಟಿದರು. ದಶರಥನಿಗೆ ಧೃಷ್ಟಿ, ಜಯಂತ, ವಿಜಯ, ಸುರಾಷ್ಟ್ರ, ರಾಷ್ಟ್ರವರ್ಧನ, ಅಶೋಕ (ಅಕೋಪ), ಮಂತ್ರಪಾಲ ಮತ್ತು ಸುಮಂತ್ರರೆಂಬ ಎಂಟು ಮಂದಿ ಪ್ರಧಾನರಿದ್ದರು. ಇವರಲ್ಲಿ ಸುಮಂತ್ರನು ಮಂತ್ರಿ ಮತ್ತು ಸಾರಥಿಯಾಗಿದ್ದ. ವಸಿಷ್ಠ, ವಾಮದೇವ, ಜಾಬಾಲಿ, ಕಶ್ಯಪ, ಗೌತಮ, ಮಾರ್ಕಂಡೇಯ ಮತ್ತು ಕಾತ್ಯಾಯನರೆಂಬ ಏಳು ಮಂದಿ ಈತನ ಪುರೋಹಿತರಾಗಿದ್ದರು. ಇವನ ಪತ್ನಿಯರಲ್ಲಿ ಕೌಸಲ್ಯೆಯು ಕೋಸಲದ ಭಾನುಮಂತರಾಜನ ಮಗಳಾಗಿದ್ದಳು. ಸುಮಿತ್ರೆಯು ಮಗಧದೇಶದ ಶೂರಸೇನರಾಜನ ಮಗಳು. ಕೈಕೆಯು ಕೇಕಯ ದೇಶದ ಅಶ್ವಪತಿ ರಾಜನ ಮಗಳು. ರಾಜನು ವಸಿಷ್ಠನ ಸೂಚನೆಯಂತೆ ಲಲಿತಾದೇವಿಯನ್ನು ಆರಾಧಿಸಿ ಆಕೆಯ ಅನುಗ್ರಹ ಪಡೆದಿದ್ದನು. ದಶರಥನು ತನ್ನ ಮಗಳಾದ ಶಾಂತೆಯನ್ನು ಅಂಗದೇಶದ ರೋಮಪಾದರಾಯನಿಗೆ ಕೊಟ್ಟಿದ್ದ. ಶಾಂತೆಯ ಪತಿಯಾದ ಋಷ್ಯಶೃಂಗ ಮುನಿಯು ದಶರಥನಿಂದ ಪುತ್ರಕಾಮೇಷ್ಟಿಯನ್ನು ಮಾಡಿಸಿದ. ಶ್ರೀರಾಮ, ಲಕ್ಷ್ಮಣ ಮೊದಲಾದ ಮಕ್ಕಳಿಗೆ ಜನಕನು ಸೀತೆ, ಊರ್ಮಿಳೆ ಮೊದಲಾದ ಮಕ್ಕಳನ್ನು ಮದುವೆಮಾಡಿಕೊಟ್ಟ. ಯೌವನದಲ್ಲಿ ದಶರಥನು ಇಂದ್ರನಿಗೆ ಯುದ್ಧದಲ್ಲಿ ಸಹಾಯಮಾಡಲು ಅಮರಾವತಿಗೆ ಹೋಗಿದ್ದ. ಇವನು ಬೇಟೆಯಾಡುವಾಗ ತಾಂಡವಮುನಿಯನ್ನು ಮೃಗವೆಂದೇ ಭಾವಿಸಿ ಕೊಂದುಬಿಟ್ಟನು. ಇದರಿಂದ ಅವನ ತಂದೆತಾಯಿಗಳು ದಶರಥನಿಗೆ ಪುತ್ರಶೋಕವು ಪ್ರಾಪ್ತವಾಗುವಂತೆಯೂ, ಅದೇ ಅವನ ಮರಣಕ್ಕೆ ಕಾರಣವಾಗುವಂತೆಯೂ ಶಾಪವಿತ್ತು ಸ್ವರ್ಗಸ್ಥರಾದರು. ಶ್ರೀರಾಮ ಮೊದಲಾದ ಮಕ್ಕಳಿಗೆ ವಿವಾಹವಾದ ಮೇಲೆ ರಾಮನಿಗೆ ಯುವರಾಜ ಪಟ್ಟವನ್ನು ಕಟ್ಟಬೇಕೆಂದು ಯತ್ನ ನಡೆಸಿರಲು ಕೈಕೆಯು ಮಂಥರೆಯೆಂಬ ದಾಸಿಯ ಸೂಚನೆಯಂತೆ ಶ್ರೀರಾಮನ ಅರಣ್ಯವಾಸಕ್ಕೆ ಕಾರಣಳಾದಳು. ಶ್ರೀರಾಮನ ವಿಯೋಗ ದುಃಖವನ್ನು ಸಹಿಸಲಾರದೆ ದಶರಥನು ಸ್ವರ್ಗಸ್ಥನಾದನು. ದಶರಥ-ಕೌಸಲ್ಯೆಯರೆಂದರೆ ಕಶ್ಯಪ ಅದಿತಿಯರು. ರಾವಣನ ವಧೆಯ ಅನಂತರ ಸೀತಾದೇವಿಯನ್ನು ಪುನಃ ಸ್ವೀಕಾರ ಮಾಡಲು ಶ್ರೀರಾಮನು ಒಪ್ಪದಿದ್ದುದರಿಂದ ಆಕೆ ಅಗ್ನಿಪ್ರವೇಶಮಾಡಿ ತನ್ನ ಪಾವಿತ್ರ್ಯವನ್ನು ಸ್ಥಾಪಿಸಿದಳು. ಆ ಕಾಲದಲ್ಲಿ ದಶರಥನು ಬಂದು ಸೀತೆಯ

ಪಾವನತ್ವವನ್ನು ಹೊಗಳಿದ್ದನು. ನೋ. - ಶ್ರೀರಾಮ, ಶಿಮಿಧ್ವಜ (ರಾಮಾ.ಬಾಲ., ಅಯೋ.).

ದಶಾರ್ಣ - ದಕ್ಷಿಣ ಕೋಸಲದಲ್ಲಿರುವ ಒಂದು ದೇಶ (ಮ.ಭೀ.). ಇಲ್ಲಿಯ ರಾಜರು ಪಾಂಡವರ ಕಾಲದಲ್ಲಿ ಸುಧರ್ಮ ಮತ್ತು ಹಿರಣ್ಯವರ್ಮರು. ಹಿರಣ್ಯವರ್ಮನು ದ್ರುಪದಪುತ್ರನಾದ ಶಿಖಂಡಿಯ ಮಾವ. ಈಗ ಇದು ಛತೀಸ್‌ಗಢ (Chhatisgarh District) ಜಿಲ್ಲೆಯ ಒಂದು ಭಾಗ. ಹಿರಣ್ಯವರ್ಮನು ತನ್ನ ಅಳಿಯನು ಸ್ತ್ರೀ ಎಂಬುದನ್ನು ಕೇಳಿ ದ್ರುಪದನ ಮೇಲೆ ದಂಡೆತ್ತಿ ಬರುವ ಸನ್ನಾಹ ಮಾಡಿದನು (ಮ.ಉ.). ನೋ.. - ಶಿಖಂಡಿ.

ದಶಾರ್ಣೆ - ಗಾಂಧಾರಿಯ ಒಬ್ಬಳು ತಂಗಿ. ಈಕೆ ಗಾಂಧಾರ ರಾಜನಾದ ಸುಬಲನ ಮಗಳು. ನೋ. ಗಾಂಧಾರಿ (ಮ.ಆ.).

ದಶಾರ್ಹ - ಪರಶುರಾಮನಿಗೆ ಹೆದರಿ ವಂಶವನ್ನುಳಿಸಲು ಕಾಡಿನಲ್ಲಿ ಅವಿತುಕೊಂಡ ಚಂದ್ರವಂಶದ ಕುರುರಾಜನ ಮಗ. ಯದುವಂಶದ ಒಬ್ಬ ಮೂಲಪುರುಷ. ಯದುವಂಶದ ವಿದೂರಥನು ಈತನ ತಂದೆಯೆಂದು ಹೇಳುತ್ತಾರೆ. ಇವನಿಂದಲೇ ಯಾದವರಿಗೆಲ್ಲ ದಾಶಾರ್ಹರೆಂದು ಹೆಸರು ಬಂತು (ಮ.ಆ.).

ದಶಾಶ್ವ - ಸೂರ್ಯವಂಶದ ಇಕ್ಷ್ವಾಕುವಿನ ಹತ್ತನೇ ಮಗ. ಇವನು ಮಾಹಿಷ್ಮತೀಪುರದ ರಾಜನಾಗಿದ್ದ. ಈತನ ಮಗನೇ ಮದಿರಾಶ್ವನು (ಮ.ಆ.).

ದಹನ - ಏಕಾದಶರುದ್ರರಲ್ಲೊಬ್ಬ (ಮ.ಆ.).

ದಾಕ್ಷಾಯಣಿ - ಶಿವನ ಪತ್ನಿ. ಈಕೆಯ ತಂದೆ ದಕ್ಷ. ತಾಯಿಯು ಸ್ವಾಯಂಭು ಮನುವಿನ ಮಗಳಾದ ಪ್ರಸೂತಿ. ಒಮ್ಮೆ ದೇವಲೋಕದಲ್ಲಿ ನಡೆದ ಯಜ್ಞಕ್ಕೆ ದಕ್ಷನು ಬರಲು ಎಲ್ಲ ದೇವತೆಗಳೂ ಎದ್ದು ಆತನನ್ನು ಗೌರವಿಸಿದರು. ಆದರೆ ಆ ಸಭೆಯಲ್ಲಿದ್ದ ಶಿವನು ಗೌರವಿಸದುದರಿಂದ ದಕ್ಷನು ಅದಕ್ಕೆ ಪ್ರತೀಕಾರ ಮಾಡುವುದಕ್ಕೆ ಬೃಹಸ್ಪತಿ ಸವವೆಂಬ ಯಜ್ಞವನ್ನು ಆರಂಭಿಸಿ, ಅದಕ್ಕೆ ದೇವತೆಗಳಿಗೂ, ಪಿತೃಗಳಿಗೂ, ಬ್ರಹ್ಮರ್ಷಿಗಳಿಗೂ ದಂಪತಿಯುಕ್ತರಾಗಿ ಬರಬೇಕೆಂದು ಆಮಂತ್ರಣ ಕಳುಹಿಸಿದನು. ಅವನ ಎಲ್ಲ ಅಳಿಯಂದಿರಿಗೂ ಹೇಳಿಕೆ ಹೋಗಿತ್ತು. ಆದರೆ ಶಿವನಿಗೆ ಆಮಂತ್ರಣ ಕಳುಹಿಸಲಿಲ್ಲ. ಆದರೆ ಆಕಾಶ ಮಾರ್ಗವಾಗಿ ಹೋಗುತ್ತಿರುವ ದೇವಗಣಗಳನ್ನೂ, ತನ್ನ ಸಹೋದರಿಯರನ್ನು ಕಂಡು ಆಕೆಗೂ ತವರುಮನೆಗೆ ಹೋಗುವ ಬಯಕೆಯಾಯಿತು. ಶಿವನು ಪತ್ನಿಗೆ ಅಲ್ಲಿಗೆ ಹೋಗುವುದು ಯುಕ್ತವಲ್ಲವೆಂದರೂ ದಾಕ್ಷಾಯಣಿಯು ಆ ಯಜ್ಞಶಾಲೆಗೆ ಹೋದಳು. ಅಲ್ಲಿ ಆಕೆಗೆ ತಕ್ಕಷ್ಟು ಗೌರವ ಸಿಕ್ಕದುದರಿಂದ

ದಾಕ್ಷಾಯಣಿಗೆ ಬಹು ದುಃಖವಾಗಿ - 'ಶಿವದ್ವೇಷಿಯಾದ ನಿನ್ನ ಮೂಲಕ ಉಂಟಾದ ಈ ದೇಹವನ್ನು ಇನ್ನು ಹೊತ್ತಿರಲಾರೆನು' ಎಂದು ಪರಮೇಶ್ವರನ ಪಾದಕಮಲಗಳನ್ನು ಧ್ಯಾನಿಸುತ್ತ ಯೋಗಾಗ್ನಿಯಿಂದ ದೇಹ ಬಿಟ್ಟಳು. ಈ ವರ್ತಮಾನವನ್ನು ತಿಳಿದ ಶಿವನು ಕೋಪದಿಂದ ತನ್ನ ಜಟಾಜೂಟದಿಂದ ಒಂದು ಹಿಡಿ ಕೂದಲನ್ನು ಕಿತ್ತು ನೆಲದ ಮೇಲೆ ಎಸೆಯಲು ಕೂಡಲೇ ಭಯಂಕರಾಕಾರದ ವೀರಭದ್ರನು ಹುಟ್ಟಿ ಶಿವನ ಅಪ್ಪಣೆಯಂತೆ ದಕ್ಷನ ಯಜ್ಞಶಾಲೆಯನ್ನು ಹೊಕ್ಕು, ಭಗನ ಕಣ್ಣುಗಳನ್ನು ಕಿತ್ತು, ಸೂರ್ಯನ ಹಲ್ಲುಗಳನ್ನುದುರಿಸಿ, ಚಂದ್ರನನ್ನು ಅಂಗಾಲಿನಿಂದ ಪುಡಿಮಾಡಿ, ಇಂದ್ರನ ಯಜ್ಞಶಾಲೆಯನ್ನು ಕೆಡಹಿ, ಅಗ್ನಿಯ ಎರಡು ಕೈಗಳನ್ನೂ ನಾಲಿಗೆಯನ್ನೂ ಕತ್ತರಿಸಿ, ಯಮನ ದಂಡಾಯುಧವನ್ನು ಮುರಿದು, ದಕ್ಷನ ತಲೆಯನ್ನು ಕತ್ತರಿಸಿ, ಆ ಯಜ್ಞದ ಬೆಂಕಿಗೆ ಹಾಕಿದನು. ಕೊನೆಗೆ ದೇವತೆಗಳನ್ನು ಕೂಡಿಕೊಂಡ ಬ್ರಹ್ಮನು ಬಂದು - 'ಎಲ್ಲ ದೇವತೆಗಳ ಕುಂದನ್ನು ಹೋಗಲಾಡಿಸಬೇಕೆಂದು' ಪ್ರಾರ್ಥಿಸಲು, ಎಲ್ಲ ದೇವತೆಗಳಿಗೂ ಹೋದ ಕಣ್ಣು, ಕೈ, ನಾಲಿಗೆ ಮೊದಲಾದವುಗಳೆಲ್ಲ ಬಂದವು. ದಕ್ಷನಿಗೆ ಕುರಿಯ ಮುಖವಾಯಿತು. ಮುಂದೆ ದಕ್ಷನು ಪರಮೇಶ್ವರನಿಗೂ ಹವಿರ್ಭಾಗವನ್ನು ಕೊಟ್ಟು ಎಲ್ಲರನ್ನೂ ಸತ್ಕರಿಸಿ ಕಳುಹಿಸಿದನು (ಭಾಗ., ಸ್ಕಾಂ. ಪು., ಶಿವಪು.) ನೋ. - ದಕ್ಷ.

ದಾನಪತಿ - ಕಂಸನ ಮಂತ್ರಿಯಾದ ಅಕ್ರೂರ; ಇವನು ಶ್ರೀ ಕೃಷ್ಣ ಭಕ್ತನಾಗಿದ್ದನು. ನೋ. - ಅಕ್ರೂರ (ಭಾಗ.).

ದಾಂತ - ದಮಯಂತಿಯ ಸಹೋದರ. ನೋ. - ದಮ, ದಮಯಂತಿ (ಮ.ವ.).

ದಾಂತೆ - ಒಬ್ಬಳು ಅಪ್ಸರೆ (ಮ.ಅನು.).

ದಾಮಗ್ರಂಥಿ - ಅಜ್ಞಾತವಾಸಕ್ಕಾಲದಲ್ಲಿ ವಿರಾಟನಗರಿಯಲ್ಲಿ ಅಶ್ವಶಾಲಾಧ್ಯಕ್ಷನಾಗಿದ್ದ ನಕುಲನ ಹೆಸರು. ಆಗ ಜನತ್ಸೇನನೆಂಬುದು ಈತನ ಗೂಢವಾದ ಹೆಸರು (ಮ.ವಿ.).

ದಾಮಚಂದ್ರ - ಪಾಂಡವಪಕ್ಷದ ಕ್ಷತ್ರಿಯನೊಬ್ಬ (ಮ.ದ್ರೋ.).

ದಾಮಲಿಪ್ತ - (ತಾಮ್ರಲಿಪ್ತ) - ಒಂದು ದೇಶ.

ದಾಮೋದರ - ದಾನವ ಸಂಹಾರವನ್ನು ಮಾಡಿ ದೇವತೆಗಳಿಗೆ ಸುಖವನ್ನು ಕಲ್ಪಿಸುವವನಾದುದರಿಂದ ಶ್ರೀಕೃಷ್ಣನು ದಾಮೋದರನೆನ್ನಿಸಿಕೊಂಡನು (ಮ.ಉ.). ಶ್ರೀಕೃಷ್ಣನ ತಂಟೆಯನ್ನು ಸಹಿಸಲಾರದೆ ಯಶೋದೆಯು ಆತನ

ಸೊಂಟಕ್ಕೆ ಹಗ್ಗ ಹಾಕಿ ಒರಳಿಗೆ ಕಟ್ಟಿಹಾಕಿದಳು. ಇದರಿಂದ ದಾಮೋದರನಾದನು (ಭಾಗ.).

ದಾರಕ - ರಾಕ್ಷಸನೊಬ್ಬ. ಇವನನ್ನು ಕೊಲ್ಲಲು ಪಾರ್ವತಿಯು ಶಿವನ ಕೊರಳಿನಿಂದ ಕಪ್ಪನ್ನು ತೆಗೆದು ಭಯಂಕರಾಕಾರದ ದೇವತೆಯನ್ನು ನಿರ್ಮಿಸಿ ಆಕೆಗೆ ಕಾಳಿ ಎಂದು ಹೆಸರಿಟ್ಟಳು. ಇವಳು ದಾರಕನನ್ನು ತನ್ನ ಅಟ್ಟಹಾಸದಿಂದಲೇ ಕೊಂದಳು (ಸ್ಕಾಂ.ಪು.).

ದಾರುಕ - ಇವನಿಗೆ ಕಶ್ಯಪೇಯನೆಂಬ ಹೆಸರಿದೆ. ಪ್ರಭಾಕ್ಷೇತ್ರದಲ್ಲಿ ಯಾದವರೆಲ್ಲ ಹೊಡೆದಾಡಿಕೊಂಡು ತೀರಿದ ಬಳಿಕ ಶ್ರೀಕೃಷ್ಣನು ಈ ವಾರ್ತೆಯನ್ನು ದಾರುಕನ ಮೂಲಕ ಅರ್ಜುನನಿಗೆ ಹೇಳಿಕಳುಹಿಸಿದನು (ಮ.ಮೌ., ವ., ದ್ರೋ.). ೨.ಮಹಿಷಾಸುರನ ಸಾರಥಿ. (ದೇವಿಭಾ.).

ದಾರುಕಿ - ದಾರುಕನ ಪುತ್ರ; ಪ್ರದ್ಯುಮ್ನನ ಸಾರಥಿ. ಸಾಲ್ವನು ದ್ವಾರಕಾ ನಗರಿಯನ್ನು ಮುತ್ತಿದಾಗ ಪ್ರದ್ಯುಮ್ನನು ಇವನನ್ನು ಸಾರಥಿಯನ್ನಾಗಿ ಮಾಡಿಕೊಂಡು ಸಾಲ್ವನನ್ನು ಗೆದ್ದನು. (ಮ.ವ.).

ದಾರುಣ - ಗರುಡನ ಮಗ (ಮ.ಉ.).

ದಾಲ್ಭ್ಯ - ೧. ಇವನಿಗೆ ಬಕ, ದಾಲ್ಭ್ಯ, ಬಕದಾಲ್ಭ್ಯನೆಂಬ ಹೆಸರುಗಳೂ ಇವೆ. (ಮ.ಶ.). ಒಮ್ಮೆ ನೈಮಿಷಾರಣ್ಯವಾಸಿಗಳಾದ ಮುನಿಗಳು ಹನ್ನೆರಡು ವರ್ಷಗಳ ಸತ್ರಯಾಗವನ್ನು ನಡೆಸುತ್ತಿರುವಾಗ, ವಿಶ್ವಜಿತ್ತನೆಂಬ ಇಷ್ಟಿಯನ್ನು ಮುಗಿಸಿದ ಮೇಲೆ ಯಾಗದ ದಕ್ಷಿಣಾದ್ರವ್ಯವನ್ನು ಸಂಪಾದಿಸುವುದಕ್ಕಾಗಿ ಪಾಂಚಾಲದೇಶಕ್ಕೆ ಹೋದರು. ಅಲ್ಲಿಯ ರಾಜ ಧೃತರಾಷ್ಟ್ರ. ಇವನು ಆ ಮುನಿಗಳಿಗೆ ಪುಷ್ಟಿ ಮತ್ತು ಆರೋಗ್ಯದಿಂದ ಕೂಡಿದ ಎಳೆವಯಸ್ಸುಳ್ಳ ಇಪ್ಪತ್ತೇಳು ಕಡಸುಗಳನ್ನು ಕೊಟ್ಟನು. ಆಗ ಅವರಲ್ಲಿದ್ದ ಬಕದಾಲ್ಭ್ಯನು ಇತರ ಮುನಿಗಳನ್ನು ಕುರಿತು - 'ಕರುಗಳನ್ನು ನಿಮ್ಮೊಳಗೆ ಹಂಚಿಕೊಳ್ಳಿರಿ. ನಾನು ನನಗಾಗಿ ಆ ರಾಜನಲ್ಲಿ ಯಾಚಿಸಿ ಬೇರೆ ಕರುಗಳನ್ನು ತೆಗೆದುಕೊಳ್ಳುವೆನು' ಎಂದು ಪುನಃ ರಾಜನನ್ನು ಯಾಚಿಸಲು, ಅವನು-ಅಲ್ಲಿ ಸತ್ತು ಬಿದ್ದಿರುವ ಕರುಗಳನ್ನು ತೋರಿಸಿ ಕೊಂಡುಹೋಗಲು ಹೇಳಿದನು. ಇದರಿಂದ ಬಕದಾಲ್ಭ್ಯನು ಕೋಪಗೊಂಡು ಅವಕೀರ್ಣಕ್ಷೇತ್ರದಲ್ಲಿ ಆ ಸತ್ತ ದನಗಳ ಮಾಂಸಗಳನ್ನು ಕತ್ತರಿಸಿ, ಆ ಮಾಂಸದ ಪಿಂಡಗಳನ್ನೇ ಆ ಧೃತರಾಷ್ಟ್ರನ ರಾಜ್ಯಗಳನ್ನಾಗಿ ಸಂಕಲ್ಪಿಸಿ ಹೋಮ ಮಾಡತೊಡಗಿದನು. ಹೋಮಕಾರ್ಯವು ನಡೆಯುತ್ತಾ ಬಂದ ಹಾಗೆ ಪಾಂಚಾಲ ರಾಜ್ಯವು ಕ್ಷೀಣವಾಗುತ್ತ ಬಂತು.

ಇದರಿಂದ ರಾಜನಿಗೆ ಭೀತಿ ಹತ್ತಿ, ಅವನು ಸರಸ್ವತೀ ನದಿ ತೀರಕ್ಕೆ ಹೋಗಿ ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಂಡನು. ಇದರಿಂದ ಮಹರ್ಷಿಗೆ ಕನಿಕರವುಂಟಾಗಿ, ಅವನ ರಾಜ್ಯವನ್ನು ಅಪಾಯದಿಂದ ತಪ್ಪಿಸುವುದಕ್ಕಾಗಿ ಬೇರೆ ವಿಧದ ಆಹುತಿಯನ್ನು ಮಾಡತೊಡಗಿ ರಾಜ್ಯವನ್ನು ಉಳಿಸಿದನು (ಮ.ಶ.). ೨.ಬಕನೆಂಬ ಋಷಿಯ ತಮ್ಮ. ನೋ. - ಬಕ.

ದಾಶರಾಜ - ೧. ಬೆಸ್ತರ ರಾಜ. ಇವನಿಗೆ ಉಚ್ಚೈಶ್ರವಸ್ಸು ಎಂಬ ಹೆಸರೂ ಇದೆ. ನೋ. ಉಪರಿಚರ. ಉಪರಿಚರನೆಂಬ ಚೇದಿರಾಜನು ಇಂದ್ರನು ಕೊಟ್ಟ ವಿಮಾನದಲ್ಲಿ ಸಂಚರಿಸುತ್ತಿರುವಾಗ ಆತನ ವೀರ್ಯಸ್ಖಲನವಾಗಿ ಅದನ್ನು ಒಂದು ಮೀನು ನುಂಗಿ ಗರ್ಭಿಣಿಯಾಯಿತು. ಬೆಸ್ತರ ರಾಜನು ಬಲೆ ಬೀಸಿದಾಗ ಆ ಗರ್ಭಿಣಿ ಮೀನು ಅವನ ಬಲೆಗೆ ಸಿಕ್ಕಿಬಿತ್ತು. ಅದನ್ನು ಅವನು ಸೀಳಿದಾಗ ಅದರ ಹೊಟ್ಟೆಯೊಳಗೆ ಒಂದು ಗಂಡು ಮತ್ತು ಒಂದು ಹೆಣ್ಣುಮಗುವು ದೊರಕಿತು. ಬೆಸ್ತನು ಆ ಗಂಡು ಮಗುವನ್ನು ಆ ದೇಶದ ರಾಜನಿಗೆ ಕೊಟ್ಟು ಹೆಣ್ಣುಮಗುವನ್ನು ತಾನೇ ರಕ್ಷಿಸಿದನು. ಆ ಗಂಡುಮಗುವೇ ಮುಂದೆ ವಿರಾಟನೆಂದು ಪ್ರಸಿದ್ಧನಾದನು; ಹೆಣ್ಣುಶಿಶುವು ಮತ್ಸ್ಯಗಂಧಿನಿ, ಸತ್ಯವತಿ, ಯೋಜನಗಂಧಿ ಮೊದಲಾದ ಹೆಸರುಗಳಿಂದ ಪ್ರಸಿದ್ಧಳಾದಳು. ಒಮ್ಮೆ ಪರಾಶರಮುನಿಯು ಯಮುನಾ ನದಿಯನ್ನು ದಾಟುವಾಗ ಮತ್ಸ್ಯಗಂಧಿಯ ದೇಹದ ದುರ್ವಾಸನೆಯನ್ನು ಹೋಗಲಾಡಿಸಿ, ಯೋಜನಗಂಧಿಯಾಗುವಂತೆ ಮಾಡಿ, ಅವಳನ್ನು ಕೂಡಲು ಒಡನೆಯೇ ತೇಜಸ್ವಿಯಾದ ಕೃಷ್ಣದ್ವೈಪಾಯನ ಮುನಿಯು ಹುಟ್ಟಿ, ಒಡನೆಯೇ ದೊಡ್ಡವನಾಗಿ, ವಿಪತ್ಕಾಲದಲ್ಲಿ ನೆನೆಯುವಂತೆ ತಾಯಿಗೆ ಹೇಳಿ ತಪಸ್ಸಿಗೆ ಹೋದನು. ಮುಂದೆ ಚಂದ್ರವಂಶದ ಶಂತನು ರಾಜನು ಈಕೆಯನ್ನು ವಿವಾಹವಾದನು (ಮ.ಆ.). ೨. ಗುಹ; ಬೇಡರ ರಾಜ. ಸರಯೂ ತೀರದ ಶೃಂಗಬೇರಪುರವೇ ಇವನ ರಾಜಧಾನಿ. ಶ್ರೀರಾಮ, ಲಕ್ಷ್ಮಣ, ಸೀತೆಯರನ್ನು ಗಂಗಾ ನದಿ ದಾಟಿಸಿದ ರಾಮಭಕ್ತನೀತ. ನೋ. - ಗುಹ (ರಾಮಾ. ಅಯೋ).

ದಾಶಾರ್ಹ - ಚಂದ್ರವಂಶದ ರಾಜ. ಇವನು ದಶಾರ್ಹವಂಶೋತ್ಪನ್ನನಾದ ಕ್ಷತ್ರಿಯನು. ನೋ. - ಕಲಾವತಿ. ಕಾಶೀರಾಜನ ಮಗಳಾದ ಕಲಾವತಿಯನ್ನು ದಾಶಾರ್ಹರಾಜನು ವಿವಾಹವಾದರೂ ಅವಳನ್ನು ಸ್ಪರ್ಶಿಸಲಾರದೆ ಗುರುಗಳಿಂದ ಪಂಚಾಕ್ಷರಿ ಮಂತ್ರವನ್ನು ಉಪದೇಶ ಪಡೆದು ಪರಿಶುದ್ಧನಾದ ಮೇಲೆಯೇ ಕಲಾವತಿಯ ಸ್ಪರ್ಶದಿಂದ ಸುಖ ಹೊಂದಿದನು (ಬ್ರ.ಖಂ.).

ದಾಶಾರ್ಹಿ - ಚಂದ್ರವಂಶದ ಕುರುರಾಜನ ಪತ್ನಿಯಾದ ಶುಭಾಂಗಿ. ಈಕೆ ದಶಾರ್ಹ ರಾಜನ ಮಗಳು. ಈಕೆಯ ಮಗನೇ ವಿದೂರಥ (ಮ.ಆ.).

ದಾಶೇಯಿ - ನೋ. - ಸತ್ಯವತಿ.

ದಿಗ್ದೇವತೆ - ರಾತ್ರಿಯ ಅಭಿಮಾನದೇವತೆ. ಉಪಶ್ರುತಿಯೆಂಬುದು ಈಕೆಯ ಹೆಸರು. ಈಕೆ ಸ್ತ್ರೀಯರ ಗುಣದೋಷಸ್ವಭಾವಗಳ ವಿಷಯವಾಗಿ ಅಷ್ಟಾವಕ್ರ ಮುನಿಯೊಂದಿಗೆ ವಾದಮಾಡಿದಳು (ಮ.ಅನು.).

ದಿತಿ - ದಕ್ಷಪ್ರಜಾಪತಿಗೆ ಧರಣಿ ಎಂಬವಳಲ್ಲಿ ಹುಟ್ಟಿದ್ದ ಮಗಳು (ಮ.ಆ.). ಈಕೆಯು ದಕ್ಷನಿಗೆ ವೀರಣಿ ಎಂಬ ಪತ್ನಿಯಲ್ಲಿ ಹುಟ್ಟಿದ ಅರವತ್ತು ಮಂದಿ ಹೆಣ್ಣುಮಕ್ಕಳಲ್ಲಿ ಒಬ್ಬಳು (ಹರಿ.). ಈಕೆಯ ಪತಿ ಕಶ್ಯಪ. ಮಕ್ಕಳು ಹಿರಣ್ಯಕಶಿಪು ಮತ್ತು ಹಿರಣ್ಯಾಕ್ಷ ಮೊದಲಾದವರು (ಭಾಗ.). ದೇವ-ದೈತ್ಯರ ಯುದ್ಧದಲ್ಲಿ ದೈತ್ಯರೆಲ್ಲ ನಾಶವಾಗಲು ದಿತಿಯು ಕಶ್ಯಪರನ್ನು ಉತ್ತಮ ಪುತ್ರರನ್ನು ದಯಪಾಲಿಸಬೇಕೆಂದು ಪ್ರಾರ್ಥಿಸತೊಡಗಿದಳು. ಬ್ರಹ್ಮರ್ಷಿಗಳಾದ ಕಶ್ಯಪರಿಗೆ ಆಕೆಯ ದುರಭಿಸಂಧಿ ತಿಳಿದು 'ನಾನು ಹೇಳಿದಂತೆ ನೀನು ನೂರು ವರ್ಷಗಳವರೆಗೆ ಶುಚಿರ್ಭೂತಳಾಗಿ ಯಾವುದೇ ಲೋಪದೋಷಗಳು ಬಾರದಂತೆ ಈ ವ್ರತವನ್ನು ಪಾಲಿಸಿದರೆ ಇಂದ್ರನನ್ನು ಕೊಲ್ಲುವ ಮಗನು ಜನಿಸುವನು. ಇಲ್ಲದಿದ್ದರೆ ನಿನ್ನ ಪರಿಶ್ರಮವೆಲ್ಲ ವ್ಯರ್ಥವಾಗುವುದು' ಎಂದು ಹೇಳಿದರು. ದಿತಿಯು ಒಪ್ಪಿದಳು. ಮಹರ್ಷಿಗಳ ಪ್ರಭಾವದಿಂದ ಗರ್ಭಿಣಿಯೂ ಆದಳು. ಕಶ್ಯಪರು ತಪಸ್ಸಿಗೆ ಹೊರಟುಹೋದರು. ಇತ್ತ ದಿತಿಯು ಶುಚಿರ್ಭೂತಳಾಗಿ, ನಿಯಮಕ್ಕೆ ಚ್ಯುತಿಬಾರದಂತೆ ಎಚ್ಚರವಹಿಸಿದ್ದಳು. ಇದನ್ನು ತಿಳಿದ ಇಂದ್ರನು ಅವಳಲ್ಲಿ ವ್ರತಲೋಪವನ್ನು ಹುಡುಕುತ್ತಿದ್ದನು ಹೀಗೆ ಕೆಲವು ಕಾಲ ಕಳೆಯಿತು. ಒಂದು ದಿನ ದಿತಿಯು ರಾತ್ರಿ ಮಲಗುವಾಗ ಪಾದಪ್ರಕ್ಷಾಲನೆಯನ್ನು ಮಾಡಿಕೊಳ್ಳದೆ ಮಲಗಿದಳು. ಇದನ್ನು ತಿಳಿದ ಇಂದ್ರನು ತಕ್ಷಣ ಆಕೆಯ ಗರ್ಭವನ್ನು ಪ್ರವೇಶಿಸಿ ತನ್ನ ವಜ್ರಾಯುಧದಿಂದ ಆಕೆಯ ಗರ್ಭವನ್ನು ಏಳು ಭಾಗವಾಗುವಂತೆ ಒಡೆದುಹಾಕಿದನು. ಅವನ ಏಟಿಗೆ ಗರ್ಭವು ಅಳಹತ್ತಿತು. 'ಅಳಬೇಡ' ಎಂದು ಇಂದ್ರನು ಅದರ ಒಂದೊಂದು ಭಾಗವನ್ನು ಮತ್ತೆ ಏಳೇಳು ಹೋಳಾಗುವಂತೆ ಸೀಳಿದನು. ಇಂದ್ರನು 'ಮಾ ರುತಃ'- ಅಳಬೇಡಿರಿ, ಅಳಬೇಡಿರಿ' ಎಂದು ಹೇಳುತ್ತ ಹೊಡೆದುದರಿಂದ ಆ ಮಕ್ಕಳಿಗೆ ಮಾರುತರೆಂಬ ಹೆಸರು ಬಂತು. ಈ ನಲವತ್ತೊಂಬತ್ತು ಭಾಗಗಳು ಮರುದ್ಗಣಗಳೆಂಬ ಹೆಸರಿನಿಂದ ಪ್ರಸಿದ್ಧರಾಗಿ ದೇವೇಂದ್ರನಿಗೆ ಸಹಾಯಕರಾದ ದೇವತೆಗಳಾದರು (ಹರಿ.,ಭಾಗ.,ರಾಮಾ.ಬಾಲ.).

ದಿಲೀಪ - ೧. ಸೂರ್ಯವಂಶದ ಸಗರಪುತ್ರನಾದ ಅಂಶುಮಂತನ ಮಗ. ಈತನೂ ತಂದೆಯ ಮರಣಾನಂತರ ಸಾಗರರ ಸದ್ಗತಿಗಾಗಿ ಗಂಗೆಯನ್ನು ಭೂತಳಕ್ಕೆ ತರುವುದಕ್ಕಾಗಿ ಅನೇಕ ವರ್ಷಗಳವರೆಗೆ ತಪಸ್ಸು ಮಾಡಿದನು. ಈತನ ಮನೋರಥವು ನೆರವೇರದೆ ಹೋಯಿತು. ಈತನ ಮಗನೇ ಧರ್ಮಾತ್ಮನಾದ ಭಗೀರಥನು. ಈತನು ಸ್ವರ್ಗದಿಂದ ಗಂಗೆಯನ್ನು ಭೂಮಿಗೆ ತಂದ ಮಹಾಸಾಹಸಿ. ದಿಲೀಪನು ಇಕ್ಷ್ವಾಕುವಿನಿಂದ ನಲವತ್ತನೆಯವನು. ೨. ಇಕ್ಷ್ವಾಕುವಿನಿಂದ ಐವತ್ತೇಳನೆಯ ತಲೆಯವನು. ವಿಶ್ವಮಹಾನ್ ಎಂಬುವನು ಈತನ ತಂದೆ. ಮಗನ ಹೆಸರು ದೀರ್ಘಬಾಹು; ಮೊಮ್ಮಗ ರಘು (ವಾಯುಪು). ಸೂರ್ಯವಂಶದ ವಿಶ್ವಸಹನ ಮಗ; ಖಟ್ವಾಂಗನೆಂಬುದು ಈತನ ಇನ್ನೊಂದು ಹೆಸರು. ನೋ. ಖಟ್ವಾಂಗ. ಇವನ ಮಗ ದೀರ್ಘಬಾಹು; ಮೊಮ್ಮಗ ರಘು (ವಿಷ್ಣುಪು.). ದಿಲೀಪನು ತನ್ನ ಭಾರ್ಯೆಯಾದ ಸುದಕ್ಷಿಣೆಯೊಡನೆ, ವಸಿಷ್ಠನ ಆಜ್ಞೆಯಂತೆ, ಕಾಮಧೇನುವಿನ ಸೇವೆ ಮಾಡಿ ಆಕೆಯ ಅನುಗ್ರಹದಿಂದ ರಘುವೆಂಬ ಮಗನನ್ನು ಪಡೆದನು (ಪದ್ಮಪು., ಮ.ವ., ವಿ., ದ್ರೋ., ಶಾಂ.). ೩. ಒಂದು ಸರ್ಪ (ಮ.ಉ.).

ದಿವಾಕರ - ೧. ಸೂರ್ಯ ೨. ಗರುಡಪುತ್ರ (ಮ.ಉ.).

ದಿವಿರಥ - ಕ್ಷತ್ರಿಯನೊಬ್ಬ; ದಧಿವಾಹನನ ತಂದೆ.

ದಿವೋದಾಸ - ೧. ಕಾಶಿಯ ರಾಜ ಭೀಮಸೇನನ ಮಗ. ಈತನ ಮಗ ಪ್ರತರ್ದನ. ಈತನು ಯಯಾತಿಪುತ್ರಿಯಾದ ಮಾಧವಿಯಲ್ಲಿ ಹುಟ್ಟಿದನು (ಮ.ಸ.,ಉ.,ಅನು.). ನೋ. - ಗಾಲವ, ಕುಂಭ. ವೀತಹವ್ಯನೆಂಬ ಹೈಹಯರಾಜ ದಿವೋದಾಸನ ತಂದೆಯಾದ ಭೀಮಸೇನನನ್ನು ಕೊಲ್ಲಲಾಗಿ, ದಿವೋದಾಸನು ಭಾರದ್ವಾಜ ಮಹರ್ಷಿಯನ್ನು ಮರೆಹೊಕ್ಕು, ಪುತ್ರಕಾಮೇಷ್ಟಿಯಾಗವನ್ನು ಮಾಡಿ ವೀತಹವ್ಯನನ್ನು ಕೊಲ್ಲತಕ್ಕ ಸಾಮರ್ಥ್ಯವುಳ್ಳ ಪ್ರತರ್ದನನನ್ನು ಪಡೆದ. ಈ ಪ್ರತರ್ದನನು ಹೈಹಯರಾಜನನ್ನು ಯುದ್ಧದಲ್ಲಿ ಸೋಲಿಸಿದ (ಮ.ಅನು.). ೨. ಮುದ್ಗಲಾಚಾರ್ಯನ ಮಗ. ಈತನ ಸೋದರಿ ಶತಾನಂದನ ತಾಯಿ ಅಹಲ್ಯೆ. ಅಹಲ್ಯೆ ಗೌತಮನ ಪತ್ನಿ (ಭಾಗ.). ೩. ವಧ್ಯಶ್ವನಿಂದ ಮೇನಕೆಯಲ್ಲಿ ಹುಟ್ಟಿದ ಮಗ. ಈತನ ಸೋದರಿ ಅಹಲ್ಯೆ (ಹರಿ.). ೪. ವಾರಣಾಸಿಯ ರಾಜ. ಧನ್ವಂತರಿಯ ಪುತ್ರನಾದ ಕೇತುಮಂತನ ಮಗ. ಇವನಿಗೆ ಭೀಮರಥನೆಂಬ ಹೆಸರೂ ಇದೆ (ವಾಯುಪು.). ೫. ಇವನು ಕಾಶಿಯ ರಾಜ. ಇವನ ಕ್ಷೌರಿಕನಾದ ಕಂಡುಕನಿಗೆ ಗಣೇಶ್ವರನು ಸ್ವಪ್ನದಲ್ಲಿ ಬಂದು 'ಈ ಊರಲ್ಲಿ ನನಗೆ ಒಂದು ಗುಡಿ ಕಟ್ಟಿಸಿ ಹಾಕಿ, ನನ್ನ ಮೂರ್ತಿಯನ್ನು ಸ್ಥಾಪಿಸಿ, ನನಗೆ ಕ್ರಮವಾಗಿ ಪೂಜೆ

ನಡೆಯುವಂತೆ ಮಾಡಿದರೆ ನಿನಗೆ ಬೇಕಾದ ವರವನ್ನು ಕೊಡುತ್ತೇನೆ' ಎಂದು ಹೇಳಲು ಕ್ಷೌರಿಕನು ರಾಜನ ಸಹಾಯದಿಂದ ಕಾಶೀಪಟ್ಟಣದ ಅಗಸೆ ಬಾಗಿಲ ಹತ್ತಿರ ಒಂದು ದೇವಮಂದಿರವನ್ನು ನಿರ್ಮಿಸಿ, ಗಣೇಶನನ್ನು ಪ್ರತಿಷ್ಠಿಸಿ, ಆತನ ಸೇವೆಯನ್ನು ವೈಭವದಿಂದ ನಡೆಸಹತ್ತಿದನು. ಇದರಿಂದ ಗಣೇಶನ ಕೀರ್ತಿಯು ದೂರದೇಶಗಳಲ್ಲಿ ಹರಡಿ ಸಾವಿರಾರು ಜನರು ನಿತ್ಯವೂ ಈತನ ದರ್ಶನ ಪ್ರಾರ್ಥನೆಗಳಿಗಾಗಿ ಕಾಶೀಪಟ್ಟಣಕ್ಕೆ ಬರತೊಡಗಿದರು. ಆಗ ದಿವೋದಾಸರಾಜನಿಗೆ ಪಟ್ಟದ ರಾಣಿಯಾದ ಸುಯಶೆಯಲ್ಲಿ ಮಕ್ಕಳಿಲ್ಲದುದರಿಂದ ಗಣೇಶನನ್ನು ಭಕ್ತಿಯಿಂದ ಎಷ್ಟು ಕಾಲ ಆರಾಧಿಸಿದರೂ ಮಕ್ಕಳಾಗದಿರಲು ಕಾಶೀರಾಜನು ಸಿಟ್ಟಿಗೆದ್ದು ಆ ಗಣಪತಿಯ ದೇವಸ್ಥಾನವನ್ನು ಕಿತ್ತು ನಾಶಮಾಡಿಬಿಟ್ಟನು. ಇದರಿಂದ ಕೋಪಗೊಂಡ ಗಣಪತಿಯು ರಾಜನಿಗೆ - 'ನಿನ್ನ ಕಾಶೀಪಟ್ಟಣವು ಒಂದು ಸಾವಿರ ವರ್ಷಗಳವರೆಗೆ ಜನಶೂನ್ಯವಾಗಲಿ' ಎಂದು ಶಾಪವಿತ್ತನು. ಮುಂದೆ ದಿವೋದಾಸನು ಗೋಮತೀನದಿಯ ದಂಡೆಯ ಮೇಲೆ ಬೇರೊಂದು ಪಟ್ಟಣವನ್ನು ನಿರ್ಮಾಣಮಾಡಿಕೊಂಡು ಅಲ್ಲಿ ಇರಹತ್ತಿದನು. ಮುಂದೆ ವಿಶ್ವನಾಥನು ಅನ್ನಪೂರ್ಣೆಯೊಡನೆ ಆ ಜನಶೂನ್ಯವಾದ ಪಟ್ಟಣದಲ್ಲಿ ಇರತೊಡಗಿದನು. ಈ ಗಣಪತಿಗೆ ನಿಕುಂಭನೆಂಬ ಹೆಸರಿದೆ (ಹರಿ.).

ದೀರ್ಘ - ಮಗಧರಾಜ. ಈತನು ಪಾಂಡುವಿನ ದಿಗ್ವಿಜಯ ಕಾಲದಲ್ಲಿ ಆತನಿಂದ ಹತನಾದನು (ಮ.ಆ.).

ದೀರ್ಘಜಿಹ್ವ - ದನುವಿನ ಮಗನಾದ ರಾಕ್ಷಸನೊಬ್ಬ (ಮ.ಆ.).

ದೀರ್ಘತಮ - ಬ್ರಹ್ಮರ್ಷಿಯೊಬ್ಬ. ಉಚಥ್ಯನ ಮಗ. ಈತನ ತಾಯಿ ಮಮತೆ; ಪತ್ನಿ ಪ್ರದ್ವೇಷಿಣಿ. ಈಕೆಯಲ್ಲಿ ಈ ಮುನಿಯಿಂದ ಗೌತಮನೇ ಮೊದಲಾದ ಹಲವು ಮಕ್ಕಳು ಹುಟ್ಟಿದರು. ನೋ. - ಉಚಥ್ಯ. ಅಂಗಿರಸಮುನಿಯ ಮಗನಾದ ಉಚಥ್ಯನ ಪತ್ನಿಯಾದ ಮಮತೆಯು ಈತನನ್ನು ಗರ್ಭದಲ್ಲಿ ಧರಿಸಿದಾಗ, ಆಯಾಸದಿಂದ ಮಲಗಿದ್ದಳು. ಆಗ ಉಚಥ್ಯನ ತಮ್ಮನಾದ ಬೃಹಸ್ಪತಿಯು ಅಣ್ಣನ ಪತ್ನಿಯಾದ ಮಮತೆಯನ್ನು ಕಂಡು ಕಾಮಾಭಿಭೂತನಾಗಿ ಚೌರ್ಯದಿಂದ ಆಕೆಯ ಗರ್ಭದಲ್ಲಿ ತನ್ನ ವೀರ್ಯವನ್ನು ಹೊರಗೆ ತಳ್ಳಿಬಿಡಲು ಅದು ಅಮೋಘ ವೀರ್ಯವಾದುದರಿಂದ ಭೂಮಿಯಲ್ಲಿ ಬಿದ್ದರೂ ಭರದ್ವಾಜನೆಂಬ ಹೆಸರಿನಿಂದ ಬೃಹಸ್ಪತಿಯ ಪುತ್ರನಾದನು. ಈ ಶಿಶುವನ್ನು ಮಮತೆ ಮತ್ತು ಬೃಹಸ್ಪತಿಗಳು ನೋಡಿ - 'ನಮ್ಮಿಬ್ಬರಿಂದ ಹುಟ್ಟಿದ ದ್ವಾಜನಾದ ಇವನನ್ನು ಭರಣಮಾಡು' ಎಂದು ಪರಸ್ಪರವಾಗಿ ಹೇಳಿ, ಇಬ್ಬರೂ ಒಪ್ಪದೆ ತ್ಯಜಿಸಿ ಹೋದುದರಿಂದ ಆ

ಬಾಲಕನು ಭರದ್ವಾಜನೆಂಬ ಹೆಸರುಳ್ಳವನಾದನು. ಹೀಗೆ ಭರದ್ವಾಜನು ದೀರ್ಘತಮನ ಸೋದರನಾದನು. ಇತ್ತ ಬೃಹಸ್ಪತಿಯು ಗರ್ಭದಲ್ಲಿದ್ದ ಶಿಶುವಿನ ಮೇಲೆ ಕೋಪಗೊಂಡು 'ಅಂಧನಾಗು' ಎಂದು ಶಾಪವಿತ್ತನು (ವಿಷ್ಣುಪು.). ಆ ಶಾಪದಂತೆ ಅವನು ಜಾತ್ಯಂಧನಾಗಿ ಹುಟ್ಟಿ, ದೀರ್ಘತಮನೆಂಬ ಹೆಸರನ್ನು ಪಡೆದನು. ಮುಂದೆ ತಂದೆಯಾದ ಉಚಥ್ಯನು ಮಗನ ಮೇಲೆ ಕರುಣೆಯಿಂದ ಅವನಿಗೆ ಸರ್ವಜ್ಞತ್ವವನ್ನು ದಯಪಾಲಿಸಿದನು. ದೀರ್ಘತಮನು ಪ್ರದ್ವೇಷಿಣಿಯೆಂಬ ಪತ್ನಿಯನ್ನು ಪಡೆದು ಸಂಸಾರಿಯಾಗಿರುವಾಗ ಅವನಿಗೆ ಹಲವಾರು ಮಕ್ಕಳು ಹುಟ್ಟಿದರು. ಆಗಲೂ ಪ್ರದ್ವೇಷಿಣಿಯು ಹೆಂಡತಿ ಮತ್ತು ಮಕ್ಕಳನ್ನು ಕಾಪಾಡಲು ಅಸಮರ್ಥನೆಂದು ದೀರ್ಘತಮನನ್ನು ತಿರಸ್ಕರಿಸುತ್ತ ಒಂದು ದಿನ ತಾಯಿ ಮತ್ತು ಮಕ್ಕಳು ಆತನನ್ನು ಗಂಗೆಯಲ್ಲಿ ತೇಲಿಬಿಟ್ಟರು. ನದಿಯಲ್ಲಿ ತೇಲುತ್ತಿರುವ ಈ ಮುನಿಯನ್ನು ಕಂಡು ಸ್ನಾನಮಾಡಲು ಬಂದ ಚಂದ್ರವಂಶದ ರಾಜನಾದ ಬಲಿಯು ಆತನನ್ನು ಎತ್ತಿ ಅರಮನೆಗೆ ತಂದು ಸಾಕುತ್ತಿದ್ದನು. ಆ ರಾಜನಾದ ಬಲಿಗೆ ಮಕ್ಕಳಿಲ್ಲದುದರಿಂದ ಆತನ ಪಟ್ಟದರಸಿಯಾದ ಸುದೇಷ್ಣೆಯು ದೀರ್ಘತಮನಿಂದ ಅಂಗ, ವಂಗ, ಕಳಿಂಗ, ಸುಹ್ಮ, ಪುಂಡ್ರ ಮತ್ತು ಆಂಧ್ರರೆಂಬ ಮಕ್ಕಳನ್ನು ಪಡೆದಳು. ಸುದೇಷ್ಣೆಯ ದಾಸಿಯೊಬ್ಬಳು ಕಕ್ಷೀವಂತ ಮೊದಲಾದ ಹನ್ನೊಂದು ಮಂದಿ ಮಕ್ಕಳನ್ನು ಈತನಿಂದ ಪಡೆದಳು (ಭಾಗ., ವಿಷ್ಣುಪು., ಮತ್ಸ್ಯಪು.).

ದೀರ್ಘನೇತ್ರ - ಧೃತರಾಷ್ಟ್ರನ ಮಗ; ಭೀಮನಿಂದ ಹತನಾದನು (ಮ.ದ್ರೋ.).

ದೀರ್ಘಬಾಹು - ಧೃತರಾಷ್ಟ್ರನ ಮಗ; ಭೀಮನಿಂದ ಹತನಾದನು (ಮ.ದ್ರೋ.).

ದೀರ್ಘಪ್ರಜ್ಞ - ಒಬ್ಬ ಕ್ಷತ್ರಿಯ (ಮ.ಆ.).

ದೀರ್ಘರೋಮ - ಧೃತರಾಷ್ಟ್ರನ ಮಗ (ಮ.ಆ.).

ದೀರ್ಘಲೋಚನ - ಧೃತರಾಷ್ಟ್ರನ ಮಗ (ಮ.ಆ.).

ದೀರ್ಘಸತ್ರ - ಯಜಮಾನರೇ ಋತ್ವಿಕ್ಕುಗಳಾಗಿದ್ದು, ಅನೇಕರು ಸೇರಿ ನಡೆಸತಕ್ಕ ಒಂದು ವಿಧವಾದ ಯಜ್ಞ.

ದೀರ್ಘಾಯು - ಕಳಿಂಗದೇಶದ ರಾಜ. ಇವನು ಶ್ರುತಾಯುವಿನ ಮಗ. ಇವನ ಸಹೋದರನು ನಿಯತಾಯು. ದೀರ್ಘಾಯುವು ಕೌರವನ ಪಕ್ಷದಲ್ಲಿ ಹೋರಾಡಿ ಅರ್ಜುನನಿಂದ ಹತನಾದನು (ಮ.ದ್ರೋ.).

ದುಂದುಭಿ - ನೋ. - ಕುಬ್ಜಾ. ೧. ಕೇಕಯರಾಜನ ದಾಸಿ. ಗಂಧರ್ವಸ್ತ್ರೀಯಾಗಿದ್ದ ಈಕೆಯು ಬ್ರಹ್ಮನ ಶಾಪದಿಂದ ಮಂಥರೆ ಎಂಬ ಹೆಸರಿನಿಂದ ಕೇಕಯ ರಾಜನಾಗಿದ್ದ ಅಶ್ವಪತಿಯ ಅಂತಃಪುರದಲ್ಲಿ ದಾಸಿಯಾಗಿದ್ದು ಕೈಕೆಯ ವಿವಾಹನಂತರ ಆಕೆಯೊಡನೆ ಅಯೋಧ್ಯೆಗೆ ಬಂದಳು. ಶ್ರೀರಾಮನ ಯುವರಾಜ್ಯಾಭಿಷೇಕವನ್ನು ಈಕೆಯೇ ನಿಲ್ಲಿಸಿ ಆತನ ಹದಿನಾಲ್ಕು ವರ್ಷ ಅರಣ್ಯವಾಸಕ್ಕೆ ಕಾರಣಳಾದಳು. ದುಂದುಭಿ ಎಂಬುದು ಗಂಧರ್ವನ ಪತ್ನಿಯಾದ ಕಾಲದ ಹೆಸರು. ೨. ಒಬ್ಬ ರಾಕ್ಷಸ, ಈತನ ತಂದೆ ಮಯಾಸುರ; ತಾಯಿ ಅಪ್ಸರೆಯಾದ ಹೇಮೆ. ನೋ. ಹೇಮೆ. ದುಂದುಭಿಗೆ ಮಾಯಾವಿ ಎಂಬ ಸೋದರ ಮತ್ತು ಮಂಡೋದರಿ ಎಂಬ ಸೋದರಿಯರಿದ್ದರು. ಮಾಯಾವಿ ವಾಲಿಯಿಂದ ಹತನಾದನು. ಮಂಡೋದರಿಯು ರಾವಣನ ಪತ್ನಿ. ದುಂದುಭಿಯು ವರಗಳಿಂದ ಗರ್ವಿತನಾಗಿ ಸಮುದ್ರರಾಜನಾದ ವರುಣನನ್ನು ಯುದ್ಧಕ್ಕೆ ಸ್ವಾಗತಿಸಿದನು. ಅವನು ರಕ್ಕಸನನ್ನು ಹಿಮಾಚಲನಲ್ಲಿಗೆ ಕಳುಹಿಸಿದನು. ಹಿಮಾಚಲನು ಈ ಸೊಕ್ಕಿದ ದೈತ್ಯನನ್ನು ವಾಲಿಯಲ್ಲಿಗೆ ಹೋರಾಟಕ್ಕೆ ಹೋಗುವಂತೆ ಸೂಚಿಸಿದನು. ಇವನು ಭಯಂಕರವಾದ ಕೋಣನ ರೂಪದಿಂದ ಕಿಷ್ಕಿಂಧೆಗೆ ಹೋಗಿ ವಾಲಿಯನ್ನು ಕೆಣಕಿ ಯುದ್ಧಮಾಡಿ ಮೃತನಾದನು. ಇವನ ಶವವನ್ನು ವಾಲಿಯು ದೂರಕ್ಕೆಸೆಯಲು ಅದು ಮತಂಗ ಋಷಿಯ ಆಶ್ರಮದ ಹತ್ತಿರ ಬಿದ್ದು ಅದನ್ನು ಹೊಲಸುಮಾಡಿತು. ಇದರಿಂದ ಮತಂಗನು ವಾಲಿಯನ್ನು ಶಪಿಸಿದನು. ನೋ. -ಮತಂಗ, ವಾಲಿ (ಮ.ವ., ಉತ್ತರರಾಮ., ರಾಮಾ. ಕಿಷ್ಕಿಂ).

ದುಂಧುಲಿ - ನೋ. - ಗೋಕರ್ಣ.

ದುರಾಧನ - ಧೃತರಾಷ್ಟ್ರನ ಮಗ (ಮ.ಆ.).

ಧುರಾಧರ - ಧೃತರಾಷ್ಟ್ರನ ಮಗ (ಮ.ಅ.)

ದುರ್ಗ - ರಾಕ್ಷಸನೊಬ್ಬ. ಈತನ ತಂದೆ ಗುರು ಎಂಬ ದಾನವ. ಈತನು ಬ್ರಹ್ಮನಿಂದ ವರವನ್ನು ಪಡೆದು ಲೋಕಕಂಟಕನಾಗಿರಲು, ದೇವಿಯು ಕಾಳರಾತ್ರಿಯ ಮೂಲಕ ಈತನನ್ನು ಕರೆಸಿ ಇವನೊಡನೆ ಯುದ್ಧ ಮಾಡಿ ಕೊಂದಳು (ಸ್ಕಾಂ.ಪು.).

ದುರ್ಗಮ - ಕ್ಷತ್ರಿಯ. ಈತನ ತಂದೆ ವಿಕ್ರಮಶೀಲ; ತಾಯಿ ಯಮುನಾ ನದಿ. ನೋ. - ದುರ್ದಮ, ರೇವತಿ.

ದುರ್ಗಾ - ೧. ತಮೋಭಿಮಾನಿಯಾದ ದೇವಿ. ಈಕೆ ದುರ್ಗಮನೆಂಬ ಅಸುರನನ್ನು ಕೊಂದಳು. ಇಂದ್ರಾದಿ ದೇವತೆಗಳನ್ನು ರಿಪುಸಂಕಟದಿಂದ ಪಾರು ಮಾಡಿದ ಕಾರಣ ದೇವಿಯು ದುರ್ಗೆಯಾದಳು (ದೇವೀಭಾ.). ೨. ಯೋಗನಿದ್ರೆಯಲ್ಲಿದ್ದ ಶ್ರೀಮನ್ನಾರಾಯಣನನ್ನು ಲಕ್ಷ್ಮಿಯು ದುರ್ಗಾರೂಪದಿಂದ ಅಖಂಡವಾಗಿ ಸ್ತುತಿಸಿ ಆತನನ್ನು ಎಚ್ಚರಿಸಿದಳು. ಅಗಣಿತ ಜೀವರಾಶಿಗಳ ಉದ್ಧಾರಾರ್ಥವಾಗಿ ಸೃಷ್ಟಿಯನ್ನು ಪ್ರಾರಂಭಿಸಬೇಕೆಂದು ಪ್ರಾರ್ಥಿಸಿದಳು.

ದುರ್ಜಯ - ೧. ಧೃತರಾಷ್ಟ್ರನ ಮಗ; ಭೀಮನಿಂದ ಹತನಾದನು. ೨. ಸೂರ್ಯವಂಶದ ಇಕ್ಷ್ವಾಕುಕುಲದ ಸುವೀರನ ಮಗ. ಈತನ ಮಗ ದುರ್ಯೋಧನ (ಮ.ಅನು.). ೩. ಪಾಂಚಾಲದ ಕ್ಷತ್ರಿಯನೊಬ್ಬ. ಈತನು ಕರ್ಣನಿಂದ ಹತನಾದ (ಮ.ಕ.). ೪. ರಾಜನೊಬ್ಬ. ಈತನ ತಂದೆ ಸುಪ್ರತೀಕ; ತಾಯಿ ವಿದ್ಯುತ್ಪ್ರಭೆ; ತಮ್ಮ ಸುದ್ಯುಮ್ನ, ಈತನು ಸುದ್ಯುಮ್ನನ ಸಹಾಯದಿಂದ ಎಲ್ಲ ರಾಜರನ್ನು ಮಾತ್ರವಲ್ಲದೆ ದೇವೇಂದ್ರನನ್ನೂ ಗೆದ್ದು ಏಕಚಕ್ರಾಧಿಪತಿಯಾಗಿದ್ದನು. ವಿದ್ಯುತ್ತು, ವಿಷಜಿಹ್ವ ಮೊದಲಾದ ರಾಕ್ಷಸರು ಈತನ ಸಾಮಂತರಾಗಿದ್ದರು. ಈತನು ಒಮ್ಮೆ ಕುಬೇರನ ಉದ್ಯಾನದಲ್ಲಿ ವಿಹರಿಸುತ್ತಿದ್ದ ಸುಕೇಶಿ-ಮಿಶ್ರಕೇಶಿ ಎಂಬ ತರುಣಿಯರನ್ನು ಮೋಹಿಸಿ ವಿವಾಹವಾದನು. ಸುಕೇಶಿಗೆ ಸುಪ್ರಭನೂ ಮಿಶ್ರಕೇಶಿಗೆ ಸುದರ್ಶನನೂ ಮಗನಾಗಿ ಹುಟ್ಟಿದರು. ಮುಂದೆ ರಾಜ್ಯಭಾರವನ್ನು ದುರ್ಜಯನು ಸುದ್ಯುಮ್ನನಿಗೊಪ್ಪಿಸಿ ತಾನು ಸ್ತ್ರೀಲೋಲನಾಗಿದ್ದನು. ಒಂದು ದಿನ ಈತನು ಬೇಟೆಗೆ ಹೋಗಿದ್ದಾಗ ಗೌರಮುಖವೆಂಬ ಮುನಿಯ ಆಶ್ರಮದಲ್ಲಿ ಅವನಲ್ಲಿದ್ದ ಒಂದು ರತ್ನದ ಪ್ರಭಾವದಿಂದ ತಾನೂ ತನ್ನ ಸೈನಿಕರೂ ಆತಿಥ್ಯವನ್ನು ಹೊಂದಿ ಮುಂದೆ ಆ ರತ್ನವನ್ನು ಮುನಿಯಿಂದ ಕಿತ್ತುಕೊಳ್ಳಲು ಯತ್ನಿಸಿದಾಗ ಮುನಿಯು ಆ ರತ್ನದೊಂದಿಗೆ ಗಂಗಾನದಿಯಲ್ಲಿ ಮುಳುಗಿದನು. ಆಗ ಆ ನದಿಯಿಂದ ಚತುರಂಗಸೇನೆ ಎದ್ದು ಬಂದು ದುರ್ಜಯನನ್ನೂ, ಅವನ ಸೇನೆಯನ್ನೂ ನಾಶಮಾಡಿತು. ನೋ. - ಗೌರಮುಖ (ವರಾಹಪು). ೫. ಇಂದಿರನಿಗೆ ಪೀಡೆ ಕೊಡುತ್ತಿದ್ದ ರಕ್ಕಸನೊಬ್ಬ. ಶ್ರೀರಾಮಪುತ್ರನಾದ ಕುಶನು ಇವನೊಡನೆ ಹೋರಾಡಿ ಇವನನ್ನು ಕೊಂದು, ಇವನ ಹೊಡೆತದಿಂದ ತಾನೂ ಮೃತನಾದನು. ಆಗ ಕುಶನ ಪತ್ನಿಯಾದ ಕುಮುದ್ವತಿಯು ಅವನ ಶವದೊಂದಿಗೆ ಸಹಗಮನವಾದಳು. ೬. ಒಂದು ಪಟ್ಟಣ. ಇದಕ್ಕೆ ಮಣಿಮತಿಯೆಂಬ ಹೆಸರೂ ಇದೆ. ಇದು ವಾತಾಪಿಯ ರಾಜಧಾನಿಯಾಗಿತ್ತು. ಅಗಸ್ತ್ಯನು ವಾತಾಪಿಯನ್ನು

ಇಲ್ಲೇ ಜೀರ್ಣಿಸಿಕೊಂಡನು (ಮ.ವ.). ೬. ಜನಸ್ಥಾನದ ಖರನೆಂಬ ರಾಕ್ಷಸರಾಜನ ಒಬ್ಬ ಮಂತ್ರಿ. ನೋ.-ಖರ.

ದುರ್ದಮ - ರಾಜನೊಬ್ಬ; ಇವನು ಪ್ರಮುಖನೆಂಬ ಮುನಿಯ ಆಶ್ರಮವನ್ನು ಆತನಿಲ್ಲದಾಗ ಪ್ರವೇಶಿಸಿ, ಆತನ ಪುತ್ರಿಯಾದ ರೇವತಿಯನ್ನು-'ಪ್ರಿಯೆ' ಎಂದು ಕರೆದುದರಿಂದ ಒಳಗಿದ್ದ ಮುನಿಯು ಹೊರಬಂದು, ರೇವತಿಯನ್ನು ಈತನಿಗೆ ವಿವಾಹಮಾಡಿ ಕೊಟ್ಟನು. ಆ ಮುನಿಯ ಅನುಗ್ರಹದಿಂದ ಈ ದಂಪತಿಗಳಿಗೆ ರೈವತ ಮನುವೆಂಬ ಮನ್ವಂತರಾಧಿಪತಿಯು ಜನಿಸಿದನು (ಮಾರ್ಕಂ.ಪು.). ೨. ವಿಶ್ವಾವಸುವೆಂಬ ಗಂಧರ್ವನ ಮಗನಾದ ಈತನು ಮಧ್ಯಾಹ್ನದ ಹೊತ್ತಿನಲ್ಲಿ ಸುಂದರ ಸ್ತ್ರೀಯರೊಡನೆ ನಿರ್ವಾಣವಾಗಿ ಜಲಕ್ರೀಡೆಯಾಡುತ್ತಿರಲು ಮಾಧ್ಯಾಹ್ನಿಕಕ್ಕಾಗಿ ನದೀತೀರಕ್ಕೆ ಬಂದ ವಸಿಷ್ಠಮುನಿಯನ್ನು ಕಂಡು ಸ್ತ್ರೀಯರು ನಾಚಿ ಬೇಗ ಬೇಗ ದಡಕ್ಕೆ ಬಂದು ವಸ್ತ್ರವನ್ನು ಧರಿಸಿದರು. ದುರ್ದಮನೆಂಬ ಗಂಧರ್ವನು ಮಾತ್ರ ಆಗ ನಿರ್ವಾಣವಾಗಿಯೇ ಇದ್ದುದನ್ನು ವಸಿಷ್ಠ ಮುನಿಯು ಕಂಡು - 'ರಾಕ್ಷಸನಾಗು' ಎಂದು ಶಾಪವಿತ್ತನು. ಆಗ ಗಂಧರ್ವ ಸ್ತ್ರೀಯರು ಮುನಿಯನ್ನು ಪ್ರಾರ್ಥಿಸಲು- 'ಗಾಲವ ಮುನಿಯನ್ನು ಪೀಡಿಸಿದಾಗ ಶಾಪವಿಮೋಚನೆಯಾಗುತ್ತದೆಂದು' ಹೇಳಿ ವಸಿಷ್ಠರು ತಮ್ಮ ಆಹ್ನಿಕಕ್ಕೆ ತೆರಳಿದರು. ಆಮೇಲೆ ೧೬ ವರ್ಷದ ಅನಂತರ ಈ ರಾಕ್ಷಸನು ಗಾಲವಮುನಿಯನ್ನು ನುಂಗತೊಡಗಿದಾಗ ವಿಷ್ಣುಚಕ್ರದಿಂದ ಕೊಲ್ಲಲ್ಪಟ್ಟು, ಪೂರ್ವಜನ್ಮವನ್ನು ಪಡೆಯುವ ಅನುಗ್ರಹ ಪಡೆದನು (ಸ್ಕಾಂ.ಪು., ಬ್ರಹ್ಮಪು.).

ದುರ್ಧರ - ೧. ಧೃತರಾಷ್ಟ್ರನ ಮಗ; ಭೀಮನಿಂದ ಹತನಾದ (ಮ.ದ್ರೋ.). ೨.ಮಹಿಷಾಸುರನ ಪಕ್ಷದ ರಾಕ್ಷಸ; ದೇವಿಯಿಂದ ಹತನಾದ (ದೇವೀಭಾ., ಮತ್ಸ್ಯಪು.) ೩. ರಾವಣನ ಮಂತ್ರಿಯೊಬ್ಬ ಮತ್ತು ಸೇನಾಪತಿ (ರಾಮಾ.ಸುಂ.). ೪.ಸುಗ್ರೀವನ ಕಪಿಸೇನೆಯ ನಾಯಕನೊಬ್ಬ (ರಾಮಾ.ಯುದ್ಧ).

ದುರ್ಧರ್ಷ - ರಾವಣನ ಸೇನಾಪತಿಯೊಬ್ಬ. ಈತನು ಅಶೋಕವನವನ್ನು ಮುರಿದ ಹನುಮನನ್ನೆದುರಿಸಿ ಮೃತನಾದನು (ರಾಮಾ.ಸುಂ.).

ದುರ್ಮರ್ಷಣ - ಧೃತರಾಷ್ಟ್ರನ ಮಗ. ಭೀಮನಿಂದ ಹತನಾದನು (ಮ.ಶ.).

ದುರ್ಮುಖ - ೧. ಅಸುರನೊಬ್ಬ. ೨. ಕ್ಷತ್ರಿಯನೊಬ್ಬ. ೩. ಧೃತರಾಷ್ಟ್ರನ ಮಗ. ಸಹದೇವನಿಂದ ಈತನ ಪರಾಜಯವಾಯಿತು; ಭೀಮನಿಂದ ಹತನಾದನು; ಈತನ ಮಗ ಯಶೋಧರ (ಮ.ದ್ರೋ., ಸ.).

ದುರ್ಯೋಧನ - ೧. ಧೃತರಾಷ್ಟ್ರನ ಹಿರಿಯ ಮಗ. ಈತನ ತಾಯಿ ಗಾಂಧಾರಿ. ಈತನು ಕಲಿಯ ಅಂಶದಿಂದ ಜನಿಸಿದವನು. ಈತನ ಸಹೋದರರು ತೊಂಬತ್ತೊಂಬತ್ತು ಮಂದಿ. ಸಹೋದರಿ ದುಶ್ಶಳೆಯೊಬ್ಬಳು. ಈತನು ಸರ್ಪಧ್ವಜನು (ಮ.ವಿ.).

೧. ದುರ್ಯೋಧನ ೨. ದುಶ್ಶಾಸನ ೩. ದುಸ್ಸಹ ೪. ದುಶ್ಶಲ ೫. ಜಲಸಂಧ ೬. ಸಮ. ೭. ಸಹ ೮. ವಿಂದ ೯. ಅನುವಿಂದ ೧೦. ದುರ್ಧರ್ಷ ೧೧. ಸುಬಾಹು ೧೨. ದುಷ್ಪ್ರಧರ್ಷಣ ೧೩. ಸುವರ್ಮ ೧೪. ದುರ್ವಿಮೋಚನ ೧೫.ಅಯೋಬಾಹು ೧೬. ಮಹಾಬಾಹು ೧೭. ಚಿತ್ರಾಂಗ ೧೮. ಚಿತ್ರಕುಂಡಲ ೧೯. ದುರ್ಮರ್ಷಣ ೨೦. ದುರ್ಮುಖ ೨೧. ದುಷ್ಕಣ ೨೨. ಕರ್ಣ ೨೩.ವಿಮಿಶತಿ ೨೪. ವಿಕರ್ಣ ೨೫. ಶಲ ೨೬. ಸತ್ವ ೨೭. ಸುಲೋಚನ ೨೮.ಚಿತ್ರ ೨೯. ಉಪಚಿತ್ರ ೩೦. ಚಿತ್ರಾಕ್ಷ ೩೧. ದೃಢಕ್ಷತ್ರ ೩೨. ಸೋಮಕೀರ್ತಿ ೩೩.ಅನೂದರ ೩೪. ದೃಢಸಂಧ ೩೫. ಸತ್ಯಸಂಧ ೩೬. ಚಾರುಚಿತ್ರ ೩೭.ಶರಾಸನ ೩೮. ದುರ್ಮದ ೩೯. ದುರ್ವಿಗಾಹ ೪೦. ವಿವಿತ್ಸು ೪೧.ವಿಕಟಾನನ ೪೨. ಊರ್ಣನಾಭ ೪೩. ಸುನಾಭ ೪೪. ನಂದ ೪೫.ಉಪನಂದಕ ೪೬. ಚಿತ್ರಬಾಣ ೪೭. ಚಿತ್ರವರ್ಮ ೪೮. ಆದಿತ್ಯಕೇತು ೪೯.ಬಹ್ವಾಶಿ ೫೦. ನಾಗದತ್ತ ೫೧. ಉಗ್ರಯಾಯಿ ೫೨. ಕನಕಾಂಗದ ೫೩.ಕವಚಿ ೫೪. ಭೀಮವೇಗ ೫೫. ಭೀಮಬಲ ೫೬. ಬಲಾಕಿ ೫೭. ಬಲವರ್ಧನ ೫೮. ಉಗ್ರಾಯುಧ ೫೯. ಸುಷೇಣ ೬೦. ಕುಂಡಧಾರ ೬೧. ಮಕರಧ್ವಜ (ಮಹೋದರ) ೬೨. ಚಿತ್ರಾಯುಧ ೬೩. ನಿಷಂಗಿ ೬೪. ವಾಯುವೇಗ ೬೫.ವ್ಯೂಢೋರ ೬೬. ದೃಢವರ್ಮ ೬೭. ಪ್ರಮಾಥಿ ೬೮. ದೀರ್ಘರೋಮ ೬೯. ದೀರ್ಘಬಾಹು ೭೦. ಸದಾ (ಸಂಧ) ೭೧. ಉಗ್ರಶ್ರವ ೭೨. ಉಗ್ರಸೇನ ೭೩. ಸೇನಾನಿ ೭೪. ದುಷ್ಪರಾಜಯ ೭೫. ಅಪರಾಜಿತ ೭೬. ಕುಂಡಾಶಾಯಿ ೭೭. ವಿಶಾಲಾಕ್ಷ ೭೮. ದುರಾಧರ ೭೯. ಧೃಡಹಸ್ತ ೮೦. ಸುಹಸ್ತ ೮೧.ವಾತವೇಗ ೮೨. ಸುವರ್ಚ ೮೩. ವ್ಯೂಢೋರು ೮೪. ಕನಕಧ್ವಜ ೮೫.ಕುಂಡಾಶಿ ೮೬. ಕುಂಡಕ ೮೭. ಕುಂಡೋದರ ೮೮. ಉಗ್ರ ೮೯. ಭೀಮರಥ ೯೦.ವೀರಬಾಹು ೯೧. ಅಲೋಲುಪ ೯೨. ಅಭಯ ೯೩. ರೌದ್ರಕರ್ಮ ೯೪.ದೃಢರಥಾಶ್ರಯ ೯೫. ಅನಾಧೃಷ್ಯ ೯೬. ಕುಂಡಭೇದಿ ೯೭. ಪ್ರಮಥ ೯೮.ವಿರಜ ೯೯. ವಿರಾಜ ೧೦೦. ದುಶ್ಶಳೆ.

ಯಯುತ್ಸುವು ಧೃತರಾಷ್ಟ್ರನ ದಾಸೀಪುತ್ರ. ನೋ. - ಯಯುತ್ಸು, ಧೃತರಾಷ್ಟ್ರನಿಗೆ ಗಾಂಧಾರಿಯಲ್ಲಿ ನೂರು ಮಂದಿ ಗಂಡುಮಕ್ಕಳೂ, ಒಬ್ಬಳು ಮಗಳೂ ಇದ್ದಳೆಂದಿದೆ. ಈ ಮಕ್ಕಳ ವಿಷಯದಲ್ಲಿ ಹೆಚ್ಚಿನ ವಿಚಾರಗಳಿಗೆ ನೋ. - ಧೃತರಾಷ್ಟ್ರ.

ದ್ರೋಣಾಚಾರ್ಯರಿಂದ ದುರ್ಯೋಧನನಿಗೆ ಅಸ್ತ್ರ ವಿದ್ಯಾಭ್ಯಾಸವಾಯಿತು. ಮೊದಲು ಸ್ವಲ್ಪಾಂಶವನ್ನು ಕೃಪಾಚಾರ್ಯರು ಕಲಿಸಿದರು. ಬಲರಾಮನಿಂದ ಈತನಿಗೆ ಗದಾ ವಿದ್ಯೆಯು ಪ್ರಾಪ್ತಿಯಾಯಿತು. (ಭಾಗ., ವಿಷ್ಣುಪು.). ಈತನ ಪತ್ನಿ ಕಾಶೀರಾಜನ ಮಗಳು ಭಾನುಮತಿ. ಕಲಿಂಗದೇಶಾಧಿಪನಾದ ಚಿತ್ರಾಂಗದನು ಈತನ ಮಾವನೆಂದು ಹೇಳುತ್ತಾರೆ. ಗಂಡುಮಕ್ಕಳು ಲಕ್ಷ್ಮಣನೇ ಮೊದಲಾದ ನೂರು ಮಂದಿ; ಮಗಳು ಲಕ್ಷ್ಮಣೆ. ಈಕೆ ಶ್ರೀಕೃಷ್ಣ-ಜಾಂಬವತಿಯರ ಮಗನಾದ ಸಾಂಬನ ಪತ್ನಿ. ಬಾಲ್ಯದಿಂದಲೂ ದುರ್ಯೋಧನನಿಗೆ ಭೀಮನೆಂದರಾಗದು. ಈತನು ಗುರುದಕ್ಷಿಣೆ ಸಲ್ಲಿಸಲು ದ್ರುಪದನನ್ನು ತರಲು ಹೋದಾಗ ಆತನಿಂದ ಪರಾಜಯಹೊಂದಿದನು. ಯುಧಿಷ್ಠಿರನ ಸಭಾಭವನದೊಳಗೆ ಈತನು ಭ್ರಾಂತನಂತೆ ವರ್ತಿಸಿದನು. ಪಾಂಡವರನ್ನು ಕಪಟದ್ಯೂತದಲ್ಲಿ ಗೆದ್ದು ಹನ್ನೆರಡು ವರ್ಷ ಅರಣ್ಯ ಮತ್ತು ಒಂದು ವರ್ಷ ಅಜ್ಞಾತವಾಸಕ್ಕೆ ಕಳುಹಿಸಿದನು. ಅಲ್ಲಿ ಪಾಂಡವರು ದ್ವೈತವನದಲ್ಲಿರುವಾಗ ಘೋಷಯಾತ್ರೆಯ ನೆವದಿಂದ ಹೋಗಿ ಚಿತ್ರಸೇನ ಗಂಧರ್ವರಿಂದ ಅವಮಾನಿತನಾದನು. ಇದರಿಂದ ಪ್ರಾಯೋಪವೇಶ ಕೈಕೊಂಡ ದುರ್ಯೋಧನನನ್ನು ಸಂಶಪ್ತಕರು ಪಾತಾಳಕ್ಕೆ ಕೊಂಡುಹೋಗಿ ಅವನನ್ನು ಸಂತೋಷಪಡಿಸಿ ಭೂಮಿಗೆ ಕಳುಹಿಸಿದರು. ಈತನ ಸೂಚನೆಯಂತೆ ದುರ್ವಾಸರು ತಮ್ಮ ಅಸಂಖ್ಯಾತ ಶಿಷ್ಯರೊಡನೆ ಅಕಾಲದಲ್ಲಿ ಪಾಂಡವರ ಆಶ್ರಮಕ್ಕೆ ಬಂದು ಕವಳವನ್ನು ಬೇಡಿದರೂ ಶ್ರೀಕೃಷ್ಣನ ಸಹಾಯದಿಂದ ಪಾಂಡವರನ್ನು ಏನೂ ಮಾಡಲಾಗದೆ ಸಂತುಷ್ಟರಾಗಿಯೇ ಹಿಂದಿರುಗಿದರು. ಅಜ್ಞಾತವಾಸಕಾಲದಲ್ಲಿ ಪಾಂಡವರನ್ನು ಉತ್ತರ ಮತ್ತು ದಕ್ಷಿಣ ಗೋಗ್ರಹಣ ನೆವದಿಂದ ಕೆಣಕಿ ಪರಾಜಿತನಾದನು. ಕೊನೆಗೆ ಯುದ್ಧವೇ ನಿರ್ಧಾರವಾಯಿತು. ಹನ್ನೊಂದು ಅಕ್ಷೋಹಿಣಿ ಸೇನೆಯನ್ನು ಕೌರವನು ಕೂಡಿಸಿದನು. ಈತನು ಸಮಸ್ತ ಯಾದವ ಸೈನ್ಯದ ನೆರವನ್ನು ಶ್ರೀಕೃಷ್ಣನಿಂದ ಪಡೆದನು. ಪಾಂಡವರ ಸಹಾಯಕ್ಕೆ ಬರುತ್ತಿದ್ದ ಶಲ್ಯನನ್ನು ಒಲಿಸಿಕೊಂಡು ತನ್ನ ಪಕ್ಷಕ್ಕೆ ಸೇರಿಸಿಕೊಂಡನು. ಕರ್ಣನನ್ನು ಹಾಸ್ಯ ಮಾಡಿ ತೊಡೆ ಮುರಿದುಕೊಂಡು ಸಾಯುವ ಶಾಪವನ್ನು ಆತನಿಂದ ಪಡೆದನು. ಯುದ್ಧರಂಗದಲ್ಲಿ ಭೀಷ್ಮ,

ದ್ರೋಣ, ಕರ್ಣ, ಶಲ್ಯ, ತನ್ನ ಎಲ್ಲ ಮಕ್ಕಳು, ಸಹೋದರರನ್ನು ಕಳೆದುಕೊಂಡು ದ್ವೈಪಾಯನ ಕೊಳದಲ್ಲಿ ಅಡಗಿ ಕುಳಿತನು. ಆದರೂ ದುರ್ಯೋಧನನು ಮೇಲೆ ಬಂದು, ಭೀಮನೊಡನೆ ಗದಾಯುದ್ಧಮಾಡಿ ಊರುಭಂಗದಿಂದ ಮರಣಹೊಂದಿದನು (ಮ.ಆ., ಸ., ವ., ವಿ., ಉ., ಭೀ., ದ್ರೋ., ಕ., ಶ., ಸೌ., ಭಾಗ., ವಿಷ್ಣುಪು.).

ಮಹಾಭಾರತ ಆದಿಪರ್ವತದ ಸಂಭವಪರ್ವದ ಅರವತ್ತೆಂಟನೆಯ ಅಧ್ಯಾಯದಲ್ಲಿ ಧೃತರಾಷ್ಟ್ರನ ಪುತ್ರರನ್ನು ಜ್ಯೇಷ್ಠಾನುಕ್ರಮವಾಗಿ ಹೀಗೆ ಕೊಟ್ಟಿದೆ:

೧. ದುರ್ಯೋಧನ ೨. ಯುಯುತ್ಸು ೩. ದುಶ್ಶಾಸನ ೪. ದುಸ್ಸಹ ೫. ದುಶ್ಶಲ ೬. ದುರ್ಮುಖ ೭. ವಿವಿಂಶಂತಿ ೮. ವಿಕರ್ಣ ೯. ಜಲಸಂಧ ೧೦. ಸುಲೋಚನ ೧೧. ವಿಂದ ೧೨. ಅನುವಿಂದ ೧೩. ದುರ್ಧರ್ಷ ೧೪. ಸುಬಾಹು ೧೫.ದುಷ್ಪ್ರಧರ್ಷಣ ೧೬. ದುರ್ಮರ್ಷಣ ೧೭. ದುರ್ಮುಖ ೧೮. ದುಷ್ಕರ್ಣ ೧೯. ಕರ್ಣ ೨೦. ಚಿತ್ರ ೨೧. ಉಪಚಿತ್ರ ೨೨. ಚಿತ್ರಾಕ್ಷ ೨೩. ಚಾರುಚಿತ್ರ ೨೪.ಅಂಗದ ೨೫. ದುರ್ಮತ ೨೬. ದುಷ್ಪ್ರಹರ್ಶಣ ೨೭. ವಿವಿತ್ಸು ೨೮. ವಿಕಟ ೨೯. ಸಮ ೩೦. ಊರ್ಣನಾಭ ೩೧. ಪದ್ಮನಾಭ ೩೨. ನಂದ ೩೩. ಉಪನಂದ ೩೪. ಸೇನಾಪತಿ ೩೫. ಸುಷೇಣ ೩೬. ಕುಂಡೋದರ ೩೭. ಮಹೋದರ ೩೮.ಚಿತ್ರಬಾಹು ೩೯. ಚಿತ್ರನರ್ಮ (ಚಿತ್ರವರ್ಮ) ೪೦. ಸುವರ್ಮ ೪೧.ದುರ್ವಿರೋಚನ ೪೨. ಅಯೋಬಾಹು ೪೩. ಮಹಾಬಾಹು ೪೪.ಚಿತ್ರಚಾಪ ೪೫. ಸುಕುಂಡಲ ೪೬. ಭೀಮವೇಗ ೪೭. ಭೀಮಬಲ ೪೮.ಬಲಾಕಿ ೪೯. ಭೀಮವಿಕ್ರಮ ೫೦. ಉಗ್ರಾಯುಧ ೫೧. ಭೀಮಶರ ೫೨.ಕನಕಾಯು ೫೩. ದೃಢಾಯುಧ ೫೪. ಧೃಢವರ್ಮ ೫೫. ಧೃಡಕ್ಷತ್ರ ೫೬.ಸೋಮಕೀರ್ತಿ ೫೭. ಅನೂದರ ೫೮. ಜರಾಸಂಧ ೫೯. ದೃಢಸಂಧ ೬೦.ಸತ್ಯಸಂಧ ೬೧. ಸಹಸ್ರವಾಕ್ ೬೨. ಉಗ್ರಶ್ರವ ೬೩. ಉಗ್ರಸೇನ ೬೪.ಕ್ಷೇಮಮೂರ್ತಿ ೬೫. ಅಪರಾಜಿತ ೬೬. ಪಂಡಿತಕ ೬೭. ವಿಶಾಲಾಕ್ಷ ೬೮.ದುರಾಧಾರ ೬೯. ದೃಢಹಸ್ತ ೭೦. ಸುಹಸ್ತ ೭೧. ವಾತವೇಗ ೭೨.ಸುವರ್ಚಸ ೭೩. ಆದಿತ್ಯಕೇತು ೭೪. ಬಹ್ವಾಶಿ ೭೫. ನಾಗದತ್ತ ೭೬.ಅನುಯಾಯಿ ೭೭. ಕವಚಿ ೭೮. ನಿಷಂಗಿ ೭೯. ದಂಡಿ ೮೦. ದಂಡಧಾರ ೮೧. ಧನುರ್ಗ್ರಹ ೮೨. ಉಗ್ರ ೮೩. ಭೀಮರಥ ೮೪. ವೀರ ೮೫. ವೀರಬಾಹು ೮೬. ಅಲೋಲುಪ ೮೭. ಅಭಯ ೮೮. ರೌದ್ರಕರ್ಮ ೮೯. ದೃಢರಥ ೯೦.ಅನಾಧೃಶ್ಯ ೯೧. ಕುಂಡಭೇದಿ ೯೨. ವಿರಾವಿ ೯೩. ದೀರ್ಘಲೋಚನ ೯೪.ದೀರ್ಘಬಾಹು ೯೫. ಮಹಾಬಾಹು ೯೬. ವ್ಯೂಢೋರು ೯೭. ಕನಕಾಂಗದ ೯೮. ಕುಂಡಜ ೯೯. ಚಿತ್ರಕ.

ಭೀಮ ಎಂಬ ಮಗನು ಎಷ್ಟನೆಯವನೆಂಬುದು ಗೊತ್ತಾಗುವುದಿಲ್ಲ. ಧೃತರಾಷ್ಟ್ರನಿಗೆ ವೈಶ್ಯಸ್ತ್ರೀಯರಲ್ಲಿ ಯಯುತ್ಸುವೆಂಬ ಮಗನಿದ್ದನು. ಇವನು ನೂರ ಎರಡನೆಯವನು. ಎರಡನೆಯ ಮಗನೂ ಯುಯುತ್ಸು. ನೂರಒಂದನೆಯ ಮಗಳು ದುಶ್ಶಳೆ.

ಮೇಲಿನ ಹೆಸರು ಭಾರತದ ಆದಿಪರ್ವತದ ೬೮ನೆಯ ಅಧ್ಯಾಯದಲ್ಲಿ ಬಂದಿದೆ ಪುನಃ ಅದೇ ಪರ್ವದ ೧೩೧ನೆಯ ಅಧ್ಯಾಯದಲ್ಲಿ ಬಂದಿದೆ. ಈ ಅಧ್ಯಾಯದಲ್ಲಿ ಕೆಲವು ಹೆಸರುಗಳಲ್ಲಿ ವ್ಯತ್ಯಾಸವಿದೆ ಮತ್ತು ಕೆಲವು ಹಿಂದು ಮುಂದಾಗಿವೆ.

೧. ಅಂಗದ ೨. ದುಷ್ಪ್ರಹರ್ಷಣ ೩. ಪದ್ಮನಾಭ ೪. ಸೇನಾಪಿ ೫.ಮಹೋದರ ೬. ಚಿತ್ರಬಾಹು ೭. ಚಿತ್ರಚಾಪ ೮. ಸುಕುಂಡಲ ೯.ಭೀಮವಿಕ್ರಮ ೧೦. ಭೀಮಶರ ೧೧. ಕನಕಾಯು ೧೨. ದೃಢಾಯುಧ ೧೩.ಜರಾಸಂಧ ೧೪. ಸಹಸ್ರವಾಕ್ ೧೫. ಕ್ಷೇಮಮೂರ್ತಿ ೧೬. ಪಂಡಿತಕ ೧೭.ದುರ್ಮುಖ ೧೮. ಅನುಯಾಯಿ ೧೯. ಕರ್ಣ ೨೦. ದಂಡಿ ೨೧. ದಂಡಧಾರ ೨೨. ಧನುಗ್ರಹ ೨೩. ವೀರ ೨೪. ವಿರಾವಿ ೨೫. ದೀರ್ಘಲೋಚನ ೨೬. ಚಿತ್ರಕ (ಮ.ಆ., ಸಂ.). ದುರ್ಯೋಧನ, ದುಶ್ಶಾಸನ, ಯುಯುತ್ಸು (ಕರಣ), ದುಮರ್ಷಣ, ದುಸ್ಸಹ, ವಿಕರ್ಣ, ಚಿತ್ರಸೇನ, ವಿವಿಂಶತಿ, ಜಯ, ಸತ್ಯವ್ರತ, ಪುರುಮಿತ್ರ- ಈ ಹನ್ನೊಂದು ಮಂದಿ ಮಹಾರಥರು. ಇವರಲ್ಲಿ ಯುಯುತ್ಸುವು ಕ್ಷತ್ರಿಯನಿಂದ ವೈಶ್ಯಸ್ತ್ರೀಯಲ್ಲಿ ಹುಟ್ಟಿದುದರಿಂದ ಅವನನ್ನು ಕರಣನೆನ್ನುತ್ತಾರೆ (ಮ.ಆ.). ಭೀಮನು ಹುಟ್ಟಿದ ರಾತ್ರಿ ದುರ್ಯೋಧನನು ಹುಟ್ಟಿದನು. ಅವನು ಹುಟ್ಟಿದೊಡನೆ ಕತ್ತೆಯಂತೆ ವಿಕಾರವಾಗಿ ಕೂಗಿದನು. ಇವನಿಗೆ ಮದ್ಯರಸದಂತೆ ಹೊಂಬಣ್ಣವುಳ್ಳ ಕಣ್ಣುಗಳಿದ್ದವು. ಇವನು ಭೀಮನನ್ನು ಕೊಲ್ಲಬೇಕೆಂಬ ಉದ್ದೇಶದಿಂದ ಉಕ್ಕಿನ ಪುರುಷಾಕೃತಿಯೊಡನೆ ಹದಿಮೂರು ವರ್ಷಗಳವರೆಗೆ ಗದಾಯುದ್ಧ ವಿದ್ಯೆಯನ್ನು ಅಭ್ಯಾಸಮಾಡಿದ್ದನು (ಮ.ಶ.). ೨.ಸೂರ್ಯವಂಶದ ಇಕ್ಷ್ವಾಕು ಕುಲದ ದುರ್ಜಯನ ಮಗ. ಈತನ ಮಗಳು ಅಗ್ನಿಯ ಪತ್ನಿಯಾದ ಸುದರ್ಶನೆ.

ದುರ್ವಾಸ (ದೂರ್ವಾಸ) - ಮಹರ್ಷಿಯೊಬ್ಬ; ಅತ್ರಿಯ ಮಗ: ಈತನ ತಾಯಿ ಅನಸೂಯೆ. ಈತನು ಶಿವನ ಅಂಶದವನು. ವಿಷ್ಣುವಿನ ಅಂಶದ ದತ್ತಾತ್ರೇಯನೂ ಬ್ರಹ್ಮನ ಅಂಶದ ಚಂದ್ರನೂ ಈತನ ಸಹೋದರರು. ಅರ್ಯಮನೂ ಸೋದರನು (ಭಾಗ.). ಕುಂತಿಯು ಬಾಲ್ಯದಲ್ಲಿ ಈತನ ಸೇವೆಮಾಡಿ

ಐದು ಮಂತ್ರಗಳನ್ನು ಉಪದೇಶಿಸಿಕೊಂಡಿದ್ದಳು. ದುರ್ಯೋಧನನು ಈತನ ಸೇವೆ ಮಾಡಿ ಮೆಚ್ಚಿಸಿ ದ್ರೌಪದಿಯ ಭೋಜನಾನಂತರ ಪಾಂಡವರ ಆಶ್ರಮಕ್ಕೆ ಹೋಗುವಂತೆ ಕಳುಹಿಸಿದನು. ಕೊನೆಗೆ ಶ್ರೀಕೃಷ್ಣನ ಸಹಾಯದಿಂದ ಪಾಂಡವರು ದುರ್ವಾಸಮುನಿಯನ್ನು ಸಂತುಷ್ಟಗೊಳಿಸಿದರು. ಈತನು ಅಂಬರೀಷನ ನಾಶಕ್ಕಾಗಿ ಕೃತ್ಯೆಯೊಂದನ್ನು ಬಿಟ್ಟು ಕೊನೆಗೆ ಶ್ರೀಕೃಷ್ಣನ ಸುದರ್ಶನ ಪ್ರಭಾವಕ್ಕೆ ಹೆದರಿ ಪಲಾಯನಮಾಡಿ ಮುಂದೆ ಅಂಬರೀಷನನ್ನೇ ಮರೆಹೊಕ್ಕನು. ಇಂದ್ರನಿಗೆ ಶಾಪಕೊಟ್ಟು ಆತನನ್ನು ಹೀನಾವಸ್ಥೆಗೆ ತಂದನು (ಬ್ರ.ವೈ.). ಶ್ರೀರಾಮನು ಪಟ್ಟಾಭಿಷೇಕಾನಂತರ ಒಂದು ದಿನ ಗುಪ್ತವಾಗಿ ಯಮನೊಂದಿಗೆ ಮಾತನಾಡುತ್ತಿರುವಾಗ ಬಾಗಿಲು ಕಾಯುತ್ತಿದ್ದ ಲಕ್ಷ್ಮಣನನ್ನು ಈತನು ಗದರಿಸಿ ಒಳಗೆ ಹೋದುದರಿಂದ ರಾಮಚಂದ್ರನ ನಿಯಮಕ್ಕೆ ಭಂಗ ಬಂದು ಆ ವ್ಯಸನದಿಂದ ಲಕ್ಷ್ಮಣನು ದೇಹಬಿಟ್ಟನು. ಈತನು ವಿದ್ಯಾಧರೆಯೊಬ್ಬಳ ಕೈಯಲ್ಲಿದ್ದ ಹೂಮಾಲೆಯನ್ನು ಬೇಡಿ ಧರಿಸಿ ಸ್ವರ್ಗಕ್ಕೆ ಬಂದಾಗ ಐರಾವತವನ್ನೇರಿ ಬರುತ್ತಿದ್ದ ಇಂದ್ರನಿಗೆ ಈ ಮಾಲೆಯನ್ನು ಕೊಡಲು ಇಂದ್ರನು ಅದನ್ನು ಐರಾವತನ ಕುಂಭಸ್ಥಳದ ಮೇಲಿಡಲು ಐರಾವತವು ಅದನ್ನು ನೆಲಕ್ಕೆ ಕೆಡವಿ ತುಳಿಯಿತು. ಇದರಿಂದ ಕೋಪಗೊಂಡ ಮುನಿಯು ಇಂದ್ರನ ಸಂಪತ್ತು ನಾಶವಾಗುವಂತೆ ಆತನಿಗೆ ಶಾಪವಿತ್ತನು. ಶ್ರೀಕೃಷ್ಣನಿಗೆ ಅಂಗಾಲಿನ ನೋವೇ ಕಾರಣವಾಗಿ ಮರಣಪ್ರಾಪ್ತವಾಗಲೆಂದು ಶಾಪವಿತ್ತ ಮಹಾನುಭಾವ ಮುನಿಯೂ ಇವನೇ. ಇವನು ತುಂಬ ಕೋಪಿಷ್ಠ (ಭಾಗ.). ಕುಶಿಕರಾಜನ ಶುಶ್ರೂಷೆಗೆ ಮೆಚ್ಚಿ ಆತನ ವಂಶದಲ್ಲಿ ಬ್ರಹ್ಮರ್ಷಿಯೊಬ್ಬನು ಹುಟ್ಟುವಂತೆ ವರವಿತ್ತನು. ಕಾಶೀಕ್ಷೇತ್ರದಲ್ಲೊಮ್ಮೆ ಮುನಿಯು ಈ ಕ್ಷೇತ್ರಕ್ಕೆ ಶಾಪಕೊಡಬೇಕೆಂದು ಸಿದ್ಧನಾದಾಗ ಪರಮೇಶ್ವರನು ಪ್ರತ್ಯಕ್ಷನಾದನು (ಸ್ಕಾಂ.ಪು.). ನೋ. - ಅಂಬರೀಷ.

ಶ್ರೀರಾಮನು ಪ್ರಜಾರಕ್ಷಣೆಮಾಡುತ್ತಿರುವಾಗ ಇವರು ಅರವತ್ತುಸಾವಿರ ಮಂದಿ ಶಿಷ್ಯರೊಡನೆ ಬಂದು ಧೇನು, ಮಣಿ, ಅಗ್ನಿಯ ಸಹಾಯವಿಲ್ಲದ ಭೋಜನ ಬೇಡಿದರು. ಶ್ರೀರಾಮನು ಸ್ವರ್ಗದಿಂದ ಕಲ್ಪವೃಕ್ಷ ಮತ್ತು ಪಾರಿಜಾತಗಳನ್ನು ಅಯೋಧ್ಯೆಗೆ ತರಿಸಿ ಅವುಗಳ ಸಹಾಯದಿಂದ ಮುನಿಗಳಿಗೆಲ್ಲ ಮೃಷ್ಟಾನ್ನವನ್ನಿತ್ತು ತೃಪ್ತಿಪಡಿಸಿದನು (ಆನಂ.ರಾ.).

ದುರ್ವಿಮೋಚನ - ಧೃತರಾಷ್ಟ್ರನ ಮಗ (ಮ.ದ್ರೋ.).

ದುರ್ವಿರೋಚನ - ಧೃತರಾಷ್ಟ್ರನ ಮಗ (ಮ.ಆ.).

ದುರ್ವಿಷಹ - ಧೃತರಾಷ್ಟ್ರನ ಮಗ; ಭೀಮನಿಂದ ಹತನಾದನು (ಮ.ಆ., ಭೀ. ಆ.).

ದುಶ್ಶಲ - ಧೃತರಾಷ್ಟ್ರನ ಮಗ (ಮ.ಆ.).

ದುಶ್ಶಲಾ - ಧೃತರಾಷ್ಟ್ರನ ಮಗಳು; ಜಯದ್ರಥನ ಹೆಂಡತಿ. ಈಕೆಯ ಒಬ್ಬ ಮಗ ದ್ರೌಪದಿಯ ಸ್ವಯಂವರಕಾಲದಲ್ಲಿ ಅರ್ಜುನನಿಂದ ಹತನಾದ. ನೋ.- ಜಯದ್ರಥ (ಮ.ಆ., ಅಶ್ವ).

ದುಶ್ಶಾಸನ - ಧೃತರಾಷ್ಟ್ರ-ಗಾಂಧಾರಿಯ ಎರಡನೆಯ ಮಗ; ಮೂರನೆಯ ಮಗನೆಂದೂ ಇದೆ. ಈತ ದ್ರೌಪದಿಯ ವಸ್ತ್ರಾಪಹಾರ ಮಾಡಿದ. ಈತನ ಪುತ್ರನಿಂದಲೇ ಅಭಿಮನ್ಯುವಿನ ವಧೆ ಆಯಿತು. ದುಶ್ಶಾಸನನನ್ನು ಭೀಮ ಚಿತ್ರಹಿಂಸೆಯಿಂದ ಕೊಂದು ಪ್ರತೀಕಾರ ಮಾಡಿದನು. ಆಗ ಭೀಮನು ರುದ್ರಾವತಾರಿಯಾಗಿದ್ದ. ದ್ರೌಪದಿಯ ಮಗನು ಈತನ ಮಗನನ್ನು ಕೊಂದನು (ಮ.ಆ., ಸ., ವಿ., ಉ., ಭೀ., ದ್ರೋ., ಕ., ಸ್ತ್ರೀ).

ದುಷ್ಟಬುದ್ಧಿ - ನೋ.-ಚಂದ್ರಹಾಸ. ಈತನು ಕುಂತಳರಾಜನ ಪ್ರಧಾನಮಂತ್ರಿ (ಜೈ.ಭಾ.).

ದುಷ್ಕರ್ಣ - ಧೃತರಾಷ್ಟ್ರನ ಮಗ. ಶತಾನೀಕನಿಂದ ಈತನ ಪರಾಭವವಾಯಿತು. ಈತ ಭೀಮನಿಂದ ಹತನಾದ. (ಮ.ಆ., ಭೀ., ದ್ರೋ).

ದುಷ್ಪರಾಜಯ - ಧೃತರಾಷ್ಟ್ರನ ಮಗ. (ಮ.ಆ.).

ದುಷ್ಪ್ರಧರ್ಷ - ಧೃತರಾಷ್ಟ್ರನ ಮಗ (ಮ.ಆ.).

ದುಷ್ಯಂತ - ೧. ಚಂದ್ರವಂಶದ ಇಲಿಲನ ಮಗ; ಈತನ ಪ್ರಥಮ ಪತ್ನಿ ಲಾಕ್ಷಿ; ಈಕೆಗೆ ಲಕ್ಷ್ಮಣಾ ಎಂಬ ಹೆಸರೂ ಇದೆ. ಈಕೆಯ ಮಗನೇ ಜನಮೇಜಯ. ದುಷ್ಯಂತನಿಗೆ ಶೂರ, ಭೀಮ, ವಸು, ಪ್ರವಸುವೆಂಬ ನಾಲ್ವರು ಸೋದರರಿದ್ದರು. ಎರಡನೆಯ ಹೆಂಡತಿಯೇ ಶಕುಂತಲೆ. ನೋ. ಶಕುಂತಲೆ. ಈಕೆಯ ಮಗನಿಗೆ ಮೊದಲು ಸರ್ವದಮನನೆಂಬ ಹೆಸರಿತ್ತು. ಬೇಟೆಗಾಗಿ ಹೋದ ದುಷ್ಯಂತನು ಕಣ್ವಾಶ್ರಮದಲ್ಲಿದ್ದ ಶಕುಂತಲೆಯನ್ನು ಗಾಂಧರ್ವವಿವಾಹದಿಂದ ಕೂಡಿ ಸದ್ಯದಲ್ಲೇ ಕರೆಸಿಕೊಳ್ಳುವೆನೆಂದು ಹೊರಟು ಹೋದವನು ರಾಜಕಾರ್ಯಗಳಿಂದ ಮರೆತ. ಶಕುಂತಲೆಯು ಗರ್ಭಿಣಿಯಾಗಿ ಶುಭ ಮುಹೂರ್ತದಲ್ಲಿ ಒಬ್ಬ ಬಾಲಕನನ್ನು ಹೆತ್ತು ಆತನಿಗೆ ಸರ್ವದಮನನೆಂದು

ಹೆಸರಿಟ್ಟು ಪೋಷಿಸಿಕೊಂಡಿದ್ದಳು. ಬಾಲಕನಿಗೆ ಐದು ವರ್ಷವಾದರೂ ರಾಜನ ಕರೆ ಬಾರದಿರಲು ಕಣ್ವನು ತನ್ನ ಶಿಷ್ಯರೊಡನೆ ಆ ತಾಯಿಮಕ್ಕಳನ್ನು ಪತಿಗೃಹಕ್ಕೆ ಕಳುಹಿಸಿದನು. ಅಲ್ಲಿ ಶಕುಂತಲೆಯು ತನ್ನ ಜನ್ಮವಿಚಾರ ಮತ್ತು ಗಾಂಧರ್ವವಿವಾಹ ವಿಚಾರಗಳನ್ನು ರಾಜನಿಗೆ ತಿಳಿಸಿದರೂ ಆತನು ಇವರನ್ನು ಗುರುತಿಸದಿರಲು ಆಕಾಶವಾಣಿಯು, 'ರಾಜನೇ, ಈಕೆಯು ನಿನ್ನ ಪತ್ನಿ. ಈ ಬಾಲಕನು ನಿನ್ನ ಮಗನೆಂಬುದು ಸತ್ಯ. ಇವರನ್ನು ಪರಿಗ್ರಹಿಸು' ಎಂದು ಹೇಳಲು ದುಷ್ಯಂತನು ಅವರನ್ನು ಸ್ವೀಕರಿಸಿದನು. ಸರ್ವದಮನನಿಗೆ ಪಟ್ಟಾಭಿಷೇಕ ಕಾಲದಲ್ಲಿ ಭರತನೆಂಬ ಹೆಸರಿಟ್ಟನು (ವಿಷ್ಣುಪು.).

ದುಸ್ಸಹ - ೧. ಧೃತರಾಷ್ಟ್ರನ ಮಗ; ಭೀಮನಿಂದ ಹತನಾದ (ಮ.ಆ., ಭೀ., ದ್ರೋ) ೨. ದುರ್ದೇವತೆಯೊಂದು. ಈತನ ತಂದೆ ಮೃತ್ಯು; ತಾಯಿ ಜ್ಯೇಷ್ಠಾದೇವಿ. ಹುಟ್ಟಿದೊಡನೆ ಈ ವಿಕಾರದೇವತೆಯು ಲೋಕದ ಪ್ರಾಣಿಗಳನ್ನೆಲ್ಲ ನುಂಗುತ್ತ ಬರಲು ಬ್ರಹ್ಮನು 'ಮುಂದೆ ಧರ್ಮವಿಮುಖರ ಮನೆ ನಿನ್ನ ಬಿಡಾರವಾಗಲಿ. ಹಳಸಿದ ಆಹಾರ ಮತ್ತು ಒಡಕು ಪಾತ್ರೆಯ ಆಹಾರಗಳು ನಿನ್ನ ಆಹಾರವಾಗಲಿ ' ಎಂದನು (ಮಾರ್ಕಂ.ಪು.).

ದೂಷಣ - ಖರನ ತಮ್ಮನಾದ ರಾಕ್ಷಸನೊಬ್ಬ. ಶ್ರೀರಾಮನಿಂದ ಹತನಾದ ಇವನು ಖರತ್ರಿಶಿರನೊಡನೆ ದಂಡಕಾರಣ್ಯದ ಜನಸ್ಥಾನದಲ್ಲಿದ್ದನು (ಮ.ವ., ರಾಮಾ. ಅರ.). ನೋ. ಖರ.

ದೃಢ - ಧೃತರಾಷ್ಟ್ರನ ಮಗ; ಭೀಮನಿಂದ ಹತನಾದ (ಮ.ದ್ರೋ.).

ದೃಢಕ್ಷತ್ರ - ಧೃತರಾಷ್ಟ್ರನ ಮಗ (ಮ.ಆ.)

ದೃಢಧನ್ವ - ಕ್ಷತ್ರಿಯನೊಬ್ಬ (ಮ.ಆ.)

ದೃಢರಥ - ಧೃತರಾಷ್ಟ್ರನ ಮಗ; ಭೀಮನಿಂದ ಹತನಾದ (ಮ.ದ್ರೋ.)

ದೃಢರಥಾಶ್ರಯ - ಧೃತರಾಷ್ಟ್ರನ ಮಗ (ಮ.ಆ.)

ದೃಢವರ್ಮ - ಧೃತರಾಷ್ಟ್ರನ ಮಗ (ಮ.ಆ.)

ದೃಢಸಂಧ - ಧೃತರಾಷ್ಟ್ರನ ಮಗ (ಮ.ಆ.)

ದೃಢಸೇನ - ಪಾಂಡವಪಕ್ಷದ ಕ್ಷತ್ರಿಯ; ದ್ರೋಣನಿಂದ ಹತನಾದ (ಮ.ದ್ರೋ)

ದೃಢಸ್ಯು (ದೃಧಾಸ್ಯ) - ಮಹರ್ಷಿಯೊಬ್ಬ; ತಂದೆ ಅಗಸ್ತ್ಯ; ತಾಯಿ ಲೋಪಾಮುದ್ರೆ. ಈತ ತಾಯಿಯ ಗರ್ಭದಲ್ಲಿ ಏಳು ವರ್ಷವಿದ್ದ. ಇವನು ಬಾಲ್ಯದಲ್ಲಿ ಸಾವಿರ ಮಂದಿ ಹೊರುವಷ್ಟು ಇಧ್ಮಗಳನ್ನು (ಕಟ್ಟಿಗೆ, ಸಮಿಧೆ) ಒಬ್ಬನೇ ಹೊತ್ತು

ತರುತ್ತಿದ್ದುದರಿಂದ ಇವನಿಗೆ ಅಗಸ್ತ್ಯನೇ ಇಧ್ಮವಾಹನನೆಂದು ಹೆಸರಿಟ್ಟನು. ಬ್ರಹ್ಮನ ಮಾನಸಪುತ್ರನಾದ ಕ್ರತುಮಹರ್ಷಿಯ ಎಲ್ಲ ಮಕ್ಕಳೂ ಶಿವನ ಶಾಪದಿಂದ ನಾಶವಾಗಲು ಈತನನ್ನು ಸ್ವೀಕಾರ ಮಾಡಿದ (ಮ.ವ., ಮತ್ಸ್ಯಪು)

ದೃಢಹಸ್ತ - ಧೃತರಾಷ್ಟ್ರನ ಮಗ (ಮ.ಆ.)

ದೃಢಹಾಸ್ಯ - ನೋ-ದೃಢಸ್ಯು

ದೃಢಾಯು - ಚಂದ್ರವಂಶದ ಪುರೂರವಸ್ಸೆಂಬ ರಾಜನಿಂದ ಊರ್ವಶಿಯೆಂಬ ಅಪ್ಸರೆಯಲ್ಲಿ ಜನಿಸಿದ ಮಗನು. ಈತನಿಗೆ ಆಯು, ಧೀಮಂತ, ವನಾಯು, ಅಮಾವಸು, ಶತಾಯುವೆಂಬ ಐವರು ಸಹೋದರರು. ಆಯು, ಧೀಮಂತನಾದ, ಅಮಾವಸು, ಶೃತಾಯು, ಶತಾಯು, ಅಯುತಾಯು ಎಂಬ ಆರು ಮಂದಿ ಮಕ್ಕಳು ಪುರೂರವನಿಗಿದ್ದರು (ವಿಷ್ಣುಪು. ಮ.ಆ.)

ದೃಢಾಯುಧ - ಧೃತರಾಷ್ಟ್ರನ ಮಗ

ದೃಢಾಶ್ವ - ಸೂರ್ಯವಂಶದ ಕುವಲಯಾಶ್ವರಾಜನ ಮಗ. ಈತನ ಮಗ ಹರ್ಯಶ್ವ (ಭಾಗ)

ದೃಷದ್ವತಿ - ೧. ಒಂದು ನದಿ. ಇದು ಅಂಬಾಲಾ ಮತ್ತು ಸಿರ್‌ಹಿಂದದಲ್ಲಿ ಪ್ರವಹಿಸುತ್ತಿದ್ದು ಈಗ ರಜಪುತಾನದ ಮರಳಿನಲ್ಲಿ ಅದೃಶ್ಯವಾಗಿದೆ. ಇದು ಫಲಕವೆಂಬ ವನದಲ್ಲಿ ಹರಿಯುತ್ತಿತ್ತು. ಈ ನದಿಗೆ ಕೈಶಿಕಿ ನದಿಯು ಸಂಗಮವಾಗುತ್ತದೆ. ಈ ನದಿಯ ಉತ್ತರದಲ್ಲಿಯೂ, ಸರಸ್ವತಿ ನದಿಯ ದಕ್ಷಿಣದಲ್ಲಿಯೂ ಕುರುಕ್ಷೇತ್ರವಿದೆ (ಮ.ವ., ಭೀ.ಶಾಂ.) ೨. ವಿಶ್ವಾಮಿತ್ರನ ಹೆಂಡತಿ. ಈಕೆಯಲ್ಲಿ ಅಷ್ಟಕ, ಕಚ್ಛಪ, ಹಾರೀತರೆಂಬ ಮೂವರು ಮಕ್ಕಳಾದರು (ಹರಿ)

ದೇವಕ - ದೇವಕಿಯ ತಂದೆ ; ಆಹುಕನ ಮಗ; ಉಗ್ರಸೇನನ ಸಹೋದರ. ದೇವಕನು ಪೂರ್ವಜನ್ಮದಲ್ಲಿ ಗಂಧರ್ವರಾಜನಾಗಿದ್ದ. ಈತನಿಗೆ ದೇವವಂತ ಉಪದೇವ, ಸಹದೇವ, ದೇವರಕ್ಷಿತ್ರ ಎಂಬ ನಾಲ್ವರು ಪುತ್ರರು. ಇವರಿಗೆ ವೃತದೇವಾ, ಉಪದೇವಾ, ದೇವರಕ್ಷಿತಾ, ಶ್ರೀದೇವಾ, ಶಾಂತಿದೇವಾ, ಸಹದೇವಾ, ದೇವಕಿ ಎಂಬ ಏಳು ಮಂದಿ ಸಹೋದರಿಯರು (ವಿಷ್ಣುಪು). ಈತನಿಗೆ ಧೃತದೇವಾ, ಶಾಂತಿದೇವಾ, ಉಪದೇವಾ, ಶ್ರೀದೇವಾ ದೇವಾದೇವರಕ್ಷಿತ, ಸಹದೇವ, ದೇವಕಿ ಎಂಬ ಏಳು ಮಂದಿ ಕನ್ನೆಯರಿದ್ದು ಇವರನ್ನೆಲ್ಲ ವಸುದೇವನು ವಿವಾಹವಾದನು (ಭಾಗ., ಮ.ಆ.). ಯುಧಿಷ್ಠಿರನ ಮಗ. ನೋ.-ದೇವಕಿ.

ದೇವಕಿ - ೧. ದೇವಕನ ಮಗಳು; ವಸುದೇವನ ಪತ್ನಿ; ಶ್ರೀಕೃಷ್ಣನ ತಾಯಿ. ಈಕೆಯು ಶ್ರೀಕೃಷ್ಣನ ನಿರ್ಯಾಣಾನಂತರ ಸ್ವರ್ಗಸ್ಥನಾದ ಪತಿಯೊಡನೆ ಸಹಗಮನವಾದಳು. ನೋ.ದೇವಕ. ಈಕೆ ಪೂರ್ವಜನ್ಮದಲ್ಲಿ ಅದಿತಿಯಾಗಿದ್ದಳು (ಮ., ಮೌ., ಭಾಗ.) ೨. ಶೈಬ್ಯರಾಜನ ಮಗಳು; ಯುಧಿಷ್ಠಿರನ ಹೆಂಡತಿ. ಈಕೆಯ ಮಕ್ಕಳು ಯೌಧೇಯರು (ಮ.ಆ.) ಯುಧಿಷ್ಠಿರನಿಗೆ ಯೌಧೇಯಿಯೆಂಬ ಹೆಂಡತಿಯಲ್ಲಿ ದೇವಕ ಎಂಬ ಮಗನು ಹುಟ್ಟಿದನು (ವಿಷ್ಣುಪು).

ದೇವದತ್ತ - ೧. ಅರ್ಜುನನ ಶಂಖದ ಹೆಸರು. ಇದನ್ನು ಮಯನು ಬಿಂದುಸರೋವರದಿಂದ ತಂದು ಅರ್ಜುನನಿಗೆ ಕೊಟ್ಟನು. ನಿವಾತಕವಚರನ್ನು ಜಯಿಸುವುದಕ್ಕಾಗಿ ದೇವೇಂದ್ರನು ಅರ್ಜುನನಿಗೆ ಈ ಶಂಖವನ್ನು ಕೊಟ್ಟನು (ಮ.ಪ.) ೨. ದೇಹದ ಒಂದು ಉಪವಾಯು. ಇದು ಆಕಳಿಕೆಯನ್ನು ಹುಟ್ಟಿಸುತ್ತದೆ (ಅಮರಪ್ರ).

ದೇವಭಾಗ - ಚಂದ್ರವಂಶದ ಶೂರರಾಜ ಮತ್ತು ಮಾರಿಷೆಯಲ್ಲಿ ಹುಟ್ಟಿದ ಎರಡನೆಯ ಮಗ. ಈತನಿಗೆ ಒಬ್ಬ ಅಣ್ಣನೂ, ಎಂಟು ಮಂದಿ ತಮ್ಮಂದಿರೂ ಇದ್ದರು. ಈತನ ಪತ್ನಿ ಕಂಸನ ತಂಗಿಯಾದ ಕಂಸೆ. ಮಕ್ಕಳು ಚಿತ್ರಕೇತು, ಬೃಹದ್ಬಲ ಮತ್ತು ಉದ್ಧವರು (ಮ.ಆ.).

ದೇವಭ್ರಾಟ್ - ಮನುವಿನ ಮಗ. ಈತನ ಮಗ ಸುಭ್ರಾಟ್. ಈತನಿಗೆ ದಶಜ್ಯೋತಿ, ಶತಜ್ಯೋತಿ ಮತ್ತು ಸಹಸ್ರಜ್ಯೋತಿ ಎಂಬ ಮೂವರು ಮಕ್ಕಳು. ಈ ಪುತ್ರ ಪರಂಪರೆಯಿಂದಲೇ ಕುರುವಂಶ, ಯದುವಂಶ, ಭರತವಂಶ, ಇಕ್ಷ್ವಾಕುವಂಶ, ಯಯಾತಿ ವಂಶಗಳೂ, ಇನ್ನೂ ಅನೇಕ ರಾಜರ್ಷಿಗಳ ವಂಶಗಳೂ ಹರಡಿದವು. ನೋ.-ಮನು (ಮ.ಆ.).

ದೇವಯಾನಿ - ಶುಕ್ರಾಚಾರ್ಯರ ಪುತ್ರಿ; ಯಯಾತಿಯ ಪತ್ನಿ. ಈಕೆಯ ತಾಯಿಯು ಪ್ರಿಯವ್ರತರಾಜನ ಮಗಳಾದ ಊರ್ಜಸ್ವತಿ (ಭಾಗ.). ರಾಕ್ಷಸರಾಜನಾದ ವೃಷಪರ್ವನ ಮಗಳು ಶರ್ಮಿಷ್ಠೆಯು ದೇವಯಾನಿಯನ್ನು ಅರಣ್ಯದ ಬಾವಿಯೊಂದಕ್ಕೆ ನೂಕಿ ಹೋಗಲು ಬೇಟೆಯಾಡಲು ಬಂದ ಯಯಾತಿಯು ಆಕೆಯನ್ನು ಮೇಲಕ್ಕೆತ್ತಿ ವಿವಾಹವಾದನು. ದೇವಯಾನಿಗೆ ಯದು ಮತ್ತು ತುರ್ವಸು ಎಂಬಿಬ್ಬರು ಮಕ್ಕಳು. ತುರ್ವಸುವಿಗೆ ದುರ್ವಾಸುವೆಂಬ ಹೆಸರೂ ಇದೆ. (ವಿಷ್ಣುಪು.).

ಈಗಿನ ಮನ್ವಂತರದ ಅಧಿಪತಿಯಾದ ಪುರಂದರನ ಮಗಳು ಜಯಂತಿಗೆ ಶುಕ್ರಾಚಾರ್ಯನಿಂದ ಈಕೆ ಹುಟ್ಟಿದಳು. ನೋ. - ಕಚ. ಶುಕ್ರಾಚಾರ್ಯನ ಮಗಳು ದೇವಯಾನಿಯೂ ವೃಷಪರ್ವನ ಮಗಳು ಶರ್ಮಿಷ್ಠೆಯೂ ಸೀರೆಗಳನ್ನು ಕೊಳದ ದಡದಲ್ಲಿಟ್ಟು ಜಲಕ್ರೀಡೆಯಾಡುತ್ತಿರುವಾಗ ಇಂದ್ರನು ಗಾಳಿಯ ರೂಪದಿಂದ ಬಂದು ಇವರ ಸೀರೆಗಳನ್ನೆಲ್ಲಾ ಒಟ್ಟುಮಾಡಿದ. ಜಲಕ್ರೀಡೆಯಾಡಿ ಮೊದಲು ಮೇಲೆ ಬಂದ ಶರ್ಮಿಷ್ಠೆಯು ತಿಳಿಯದೇ ದೇವಯಾನಿಯ ಸೀರೆಯನ್ನುಟ್ಟಳು. ಇದರಿಂದ ದೇವಯಾನಿಗೆ ಕೋಪಬಂದು ಶರ್ಮಿಷ್ಠೆಯನ್ನು ರಾಕ್ಷಸಸ್ತ್ರೀಯೆಂದು ಜರೆಯಲು ಆಕೆಯು ಕೋಪಗೊಂಡು ದೇವಯಾನಿಯನ್ನು ಅಲ್ಲಿದ್ದ ಒಂದು ಬಾವಿಗೆ ನೂಕಿ ಹೋದಳು. ಆಗ ನಹುಷಪುತ್ರನಾದ ಯಯಾತಿಯು ಅಲ್ಲಿಗೆ ಬಂದವನು ಆಕೆಯನ್ನು ಬಾವಿಯಿಂದ ಕೈಕೊಟ್ಟು ಮೇಲಕ್ಕೆತ್ತಿದ್ದನು. ಮೇಲೆ ಬಂದ ದೇವಯಾನಿಯು ತನ್ನನ್ನು ವಿವಾಹವಾಗುವ ಭರವಸೆಯನ್ನು ರಾಜನಿಂದ ಪಡೆದು ಮನೆಗೆ ಬಂದಳು. ಆಕೆಯು ಶರ್ಮಿಷ್ಠೆಯು ತನಗೆ ಮಾಡಿದ ಅಪರಾಧವನ್ನು ತಂದೆಯೊಡನೆ ದೂರಲು ಶುಕ್ರಾಚಾರ್ಯರು ಇದನ್ನು ವೃಷಪರ್ವರಾಜನಿಗೆ ತಿಳಿಸಿದರು. ವೃಷಪರ್ವನು ದೇವಯಾನಿಯ ಅಭಿಪ್ರಾಯದಂತೆ ತನ್ನ ಮಗಳನ್ನು ಆಕೆಯ ದಾಸಿಯನ್ನಾಗಿ ಮಾಡಿದನು. ಮುಂದೆ ದೇವಯಾನಿ ಮತ್ತು ಯಯಾತಿಯರಿಗೆ ವಿವಾಹವಾಯಿತು. ದಾಸಿಯಾದ ಶರ್ಮಿಷ್ಠೆಯೂ ದೇವಯಾನಿಯೊಡನೆ ಆಕೆಯ ಪತಿಗೃಹಕ್ಕೆ ಹೋದಳು. ಮುಂದೆ ದೇವಯಾನಿಯು ಯಯಾತಿಯಿಂದ ಯದು ಮತ್ತು ತುರ್ವಸು ಎಂಬ ಮಕ್ಕಳನ್ನು ಪಡೆದಳು. ಶರ್ಮಿಷ್ಠೆಯೂ ದೇವಯಾನಿಗೆ ತಿಳಿಯದಂತೆ ರಾಜನನ್ನು ಪ್ರಾರ್ಥಿಸಿ ದ್ರುಹು, ಅನು, ಪೂರುವೆಂಬ ಮಕ್ಕಳನ್ನು ಪಡೆದಳು. ಇದನ್ನು ತಿಳಿದು ಕೋಪಗೊಂಡ ದೇವಯಾನಿಯು ತನ್ನ ಗಂಡನಿಗೆ ಮುದಿತನ ಬರುವಂತೆ ಅಪ್ಪನಿಂದ ಶಾಪಕೊಡಿಸಿದಳು. ಯಯಾತಿಯು ಶುಕ್ರಾಚಾರ್ಯನನ್ನು ಶಾಪವಿಮೋಚನೆಗಾಗಿ ಪ್ರಾರ್ಥಿಸಲು ಆಚಾರ್ಯರು - 'ಮುದಿತನವನ್ನು ನಿನ್ನ ಮಕ್ಕಳಿಗೆ ಕೊಟ್ಟು ಯೌವ್ವನವನ್ನು ಸ್ವೀಕರಿಸು. ಮುಪ್ಪನ್ನು ಸ್ವೀಕರಿಸಿದ ಮಗನಿಗೆ ಸಿಂಹಾಸನವನ್ನು ಕೊಡು' ಎಂದರು. ಶರ್ಮಿಷ್ಠೆಯ ಮಗ ಪೂರುವಲ್ಲದೆ ಬೇರಾರೂ ತಂದೆಯ ವೃದ್ಧಾಪ್ಯವನ್ನು ತೆಗೆದುಕೊಳ್ಳಲು ಒಪ್ಪದುದರಿಂದ ಅವರೆಲ್ಲ ರಾಜ್ಯಾಧಿಕಾರವನ್ನು ಕಳೆದುಕೊಂಡರು. ಬಹಳ ಕಾಲದಮೇಲೆ ಯಯಾತಿಯು ತನ್ನ ಮುಪ್ಪನ್ನು ತೆಗೆದುಕೊಂಡು ಮಗನಿಗೆ ಆತನ ತಾರುಣ್ಯವನ್ನಿತ್ತು, 'ವಿಷಯಸುಖವು

ಸೇವನೆಯಿಂದ ತಗ್ಗುವುದಿಲ್ಲ; ಹೆಚ್ಚುವುದು' ಎನ್ನುತ್ತ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿದನು (ಮ.ಆ.).

ಯಯಾತಿಗೆ ಇಬ್ಬರು ಪತ್ನಿಯರಲ್ಲದೆ ವಿಶ್ವಾಚಿ ಎಂಬ ಅಪ್ಸರೆಯೂ ಪತ್ನಿಯ ಸ್ಥಾನದಲ್ಲಿದ್ದಳು. ಇವನು ಪೂರುವಿಗೆ ಪಟ್ಟಾಭಿಷೇಕವನ್ನು ಮಾಡಿ ದುರ್ವಸುವಿಗೆ ಆಗ್ನೇಯ ದಿಕ್ಕಿನ, ದ್ರುಹ್ಯನಿಗೆ ಪಶ್ಚಿಮದಿಕ್ಕಿನ, ಅನುವಿಗೆ ಉತ್ತರದಿಕ್ಕಿನ, ಯದುವಿಗೆ ದಕ್ಷಿಣದಿಕ್ಕಿನ ಮಂಡಲಗಳ ಒಡೆತನವನ್ನು ಕೊಟ್ಟು ತಾನು ವನದಲ್ಲಿ ತಪೋನಿಷ್ಠನಾದನು (ವಿಷ್ಣುಪು., ಭಾಗ., ಮತ್ಸ್ಯಪು.).

ದೇವರಾತ - ೧. ಶುನಶ್ಶೇಫನೆಂಬ ಋಷಿಯ ಇನ್ನೊಂದು ಹೆಸರು. ಈತನು ಋಚೀಕ ಮುನಿಯ ಮಧ್ಯಮಪುತ್ರ. ಈತನು ಮಂತ್ರಪ್ರವರ್ತಕ. ಈತನಿಗೆ ಕಲೆ ಎಂಬ ಪತಿವ್ರತೆಯಾದ ಮಗಳಿದ್ದಳು. ೨. ಸೀತೆಯ ಸಾಕುತಂದೆಯಾದ ಸೀರಧ್ವಜ ಜನಕನ ವಂಶದ ಹಿಂದಿನ ರಾಜನೊಬ್ಬ. ದಕ್ಷಯಜ್ಞನಾಶದ ಅನಂತರ ತನ್ನ ಬಿಲ್ಲಿಗೆ ಹೆದೆ ಬಿಗಿದು ದಕ್ಷ ಪಕ್ಷಪಾತಿಗಳಾದ ದೇವತೆಗಳನ್ನು ಹೆದರಿಸಲು ಅವರು 'ತ್ರಾಹಿ ತ್ರಾಹಿ' ಎಂದರು. ಆಗ ಶಿವನು ಆ ಬಿಲ್ಲನ್ನು ದೇವತೆಗಳ ವಶ ಕೊಡಲು ಅವರು ಜನಕನ ವಂಶದ ದೇವರಾತನಲ್ಲಿ ನ್ಯಾಸವಾಗಿಟ್ಟರು. ಅದೇ ಬಿಲ್ಲೇ ಸೀತಾಸ್ವಯಂವರಕ್ಕೆ ಪಣವಾಯಿತು. ಇದನ್ನು ಶ್ರೀರಾಮನು ಮುರಿದು ಸೀತೆಯನ್ನು ವಿವಾಹವಾದನು. ಈ ದೇವರಾತನ ತಂದೆ ಸುಕೇತು. ಈತನ ಮಗ ಬೃಹದುಕ್ಥ (ರಾಮಾ.ಬಾಲ.). ದೇವರಾತನೆಂದರೆ ಶುನಶ್ಶೇಫನ ಇನ್ನೊಂದು ಹೆಸರು. ಮಗಳು ಕಲೆ. ನೋ - ಶೋಣ ದೇವರಾತನ ವಂಶದಲ್ಲಿ ಪಾಣಿನ, ಬಭ್ರುವ, ಧ್ಯಾನಜಪ್ಯ, ದೇವರಾತ, ಶಾಲಂಕಾಯನ, ಬಾಷ್ಕಲ, ಲೋಹಿತ, ಯಾಮದೂತ, ಕಾರೀಷವ, ಸೌಶ್ರುತ, ಕೌಶಿಕ ಮತ್ತು ಸೈಂಧವಾಯನ - ಎಂಬ ಹನ್ನೆರಡು ಕುಲಗಳು ಪ್ರಸಿದ್ಧವಾದವು (ಹರಿ.).

ದೇವಲ - ೧. ಅಷ್ಟವಸುಗಳಲ್ಲೊಬ್ಬನಾದ ಪ್ರತ್ಯೂಷನ ಮಗನಾದ ಬ್ರಹ್ಮರ್ಷಿ. ಇವನು ಕಶ್ಯಪಮುನಿಯ ಗೋತ್ರದವನು. ಈತನಿಗೆ ಅಸಿತನೆಂಬ ಹೆಸರೂ ಇದೆ. ಈತನನ್ನು ಅಸಿತದೇವಲನೆಂಬ ಹೆಸರಿನಿಂದಲೂ ಕರೆಯುತ್ತಾರೆ. ಇವನು ಮಹಾಜ್ಞಾನಿ (ಮ.ಶ.). ಪಾಂಡವರ ಪುರೋಹಿತನಾದ ಧೌಮ್ಯನು ಈತನ ಸಹೋದರ. ಈತ ಹೂಹೂ ಎಂಬ ಗಂಧರ್ವನಿಗೆ ಮೊಸಳೆಯಾಗುವಂತೆ ಶಾಪವಿತ್ತ. ಜನಮೇಜಯನ ಸರ್ಪಯಾಗದ ಸದಸ್ಯ (ಭಾಗ.,ಮ.ಆ.,ಮತ್ಸ್ಯಪು.). ಈತನು ಜೈಗೀಷವ್ಯಮುನಿಯ ತಪಃ ಪ್ರಭಾವವನ್ನು ಕಂಡು ಆಶ್ಚರ್ಯಪಟ್ಟ (ಮ.ಶ.). ೨. ಕೃಶಾಶ್ವ ಮುನಿಯ ಪುತ್ರ; ತಾಯಿ ದಕ್ಷಪುತ್ರಿಯಾದ ಧಿಷಣೆ. ವೇದಶಿರಸ್ಸು ಮತ್ತು ವಯುನ ಎಂಬಿಬ್ಬರು ಈತನ ಅಣ್ಣಂದಿರು (ರಾಮಾ.).

ಮರೀಚಿ ಋಷಿಯ ಮಕ್ಕಳಾದ ಸ್ಮರ, ಇದ್ಗೀಥ, ಪೆರಿಷ್ವಂಗ, ಪತಂಗ, ಕ್ಷುದ್ರಭೃತ್, ಘೃಣಿ-ಎಂಬ ಆರು ಮಂದಿ ಮಕ್ಕಳು ತಪಸ್ಸಿನಿಂದ ಕೃಶನಾದ ದೇವಲ ಮುನಿಯ ಬಡಕಲು ದೇಹವನ್ನು ಕಂಡು ನಕ್ಕರು. ಇದರಿಂದ ಕೋಪಗೊಂಡ ದೇವಲರು ಆ ಕುಮಾರರಿಗೆ ದೈತ್ಯರಾಗಿ ಜನಿಸುವಂತೆ ಶಾಪವಿತ್ತರು. ಮುಂದೆ ಅವರೇ ಕಾಲನೇಮಿಯ ಮಕ್ಕಳಾಗಿ ಹುಟ್ಟಿದರು (ಭಾಗ.).

ದೇವವತಿ - ಗ್ರಾಮಣಿಯೆಂಬ ಗಂಧರ್ವನ ಮಗಳು. ಮಾಲಿ, ಸುಮಾಲಿ ಮತ್ತು ಮಾಲ್ಯವಂತರೆಂಬ ದೈತ್ಯರ ತಾಯಿ. ಈಕೆಯ ಗಂಡ ವಿದ್ಯುತ್ಕೇಶನ ಮಗನಾದ ಸುಕೇಶಿ (ಉತ್ತರರಾಮ.).

ದೇವವರ್ಣಿನಿ - ಭರದ್ವಾಜ ಮುನಿಯ ಮಗಳು. ಪುಲಸ್ತ್ಯಪುತ್ರನಾದ ವಿಶ್ರವಸುವಿನ ಪತ್ನಿ. ಈಕೆಗೆ ಇಲಬಿಲೆ ಎಂಬ ಹೆಸರಿದೆ. ಈಕೆಯ ಮಗನೇ ಕುಬೇರ (ದೇವೀಭಾ.).

ದೇವವರ್ಧನ - ಯದುವಂಶದ ದೇವಕನ ನಾಲ್ಕನೆಯ ಮಗ; ದೇವಕಿಯ ಸಹೋದರ. ನೋ.-ದೇವಕ.

ದೇವವೀತಿ - ಅಗ್ನೀಧ್ರ ಮಹಾರಾಜನ ಪತ್ನಿ. ಈಕೆಯ ತಂದೆ ಮೇರು.

ದೇವವ್ರತ - ನೋ-ಭೀಷ್ಮ. ಶಂತನುರಾಜ ಮತ್ತು ಗಂಗಾದೇವಿಯರ ಮಗ. ಇವನು ದೇವತೆಗಳಂತಹ ವ್ರತವುಳ್ಳವನು (ಮ.ಆ.).

ದೇವಶರ್ಮ - ೧. ಋಷಿಯೊಬ್ಬ. ಈತನ ಪತ್ನಿ ಮಹಾರೂಪವತಿಯಾಗಿದ್ದ ರುಚಿ. ನೋ.- ರುಚಿ. ಈಕೆಯನ್ನು ಇಂದ್ರನು ವಶಮಾಡಿಕೊಳ್ಳಲೆತ್ನಿಸಿ ಹತಾಶನಾದನು (ಮ.ಅನು.). ೨. ಜನಮೇಜಯನ ಸರ್ಪಯಾಗದ ಸದಸ್ಯನೊಬ್ಬ (ಮ.ಆ.).

ದೇವಶ್ರವ - ವಿಶ್ವಾಮಿತ್ರವಂಶದ ಮಂತ್ರಪ್ರವರ್ತಕ (ಮ.ಶಾಂ.).

ದೇವಸಾವರ್ಣಿ - ಮನುವೊಬ್ಬ. ಈಗ ನಡೆಯುತ್ತಿರುವ ಶ್ವೇತವರಾಹಕಲ್ಪದ ಹದಿಮೂರನೆಯ ಮನು. ಇವನ ಕಾಲದಲ್ಲಿ ಸ್ವರ್ಗದಲ್ಲಿ ದಿವಸ್ಪತಿ ಎಂಬ ಇಂದ್ರನಿದ್ದ. ದೇವಹೋತ್ರ ಮತ್ತು ಬೃಹತಿಯ ಮಗನಾದ ಯೋಗೀಶ್ವರನೇ ಆಗಿನ ವಿಷ್ಣು. ಆ ಕಾಲದಲ್ಲಿ ಸುಕರ್ಮರೆಂಬ ದೇವತೆಗಳೂ, ನಿರ್ಮೋಕ, ತತ್ವದರ್ಶಿ ಮೊದಲಾದ ಸಪ್ತರ್ಷಿಗಳೂ ಇದ್ದರು (ಭಾಗ.).

ದೇವಸೇನೆ - ದಕ್ಷಪ್ರಜಾಪತಿಯ ಕನ್ಯೆ. ಈಕೆ ಮತ್ತು ಈಕೆಯ ಸೋದರಿಯಾದ ದೈತ್ಯ ಸೇನೆಯು ಉದ್ಯಾನದಲ್ಲಿ ಸಂಚರಿಸುತ್ತಿರುವಾಗ ಕೇಶಿ ಎಂಬ ರಕ್ಕಸನು ಇಬ್ಬರನ್ನೂ ಅಪಹರಿಸಿದ. ಇಂದ್ರನು ಆ ರಕ್ಕಸನ ಸೆರೆಯಲ್ಲಿದ್ದ ಈ

ಸೋದರಿಯನ್ನು ಬಿಡಿಸಿ, ತಾನೇ ರಕ್ಷಿಸಿಕೊಂಡಿದ್ದ. ಷಣ್ಮುಖನು ಶೂರ ಪದ್ಮಾಸುರ ಮತ್ತು ತಾರಕರನ್ನು ಕೊಂದ ಮೇಲೆ ದೇವಸೇನೆಯನ್ನು ಇಂದ್ರನು ಷಣ್ಮುಖನಿಗೆ ಕೊಟ್ಟು ಮದುವೆಮಾಡಿದನು. ಆಗ ಬೃಹಸ್ಪತ್ಯಾಚಾರ್ಯರು ಮಂತ್ರಗಳನ್ನು ಉಚ್ಚರಿಸುತ್ತ ಅಗ್ನಿಯಲ್ಲಿ ಹೋಮ ಮಾಡಿದರು. ದೇವಸೇನೆಯು ಷಣ್ಮುಖನಿಗೆ ಪಟ್ಟದ ರಾಣಿಯಾದಳು. ಆ ದಿನವನ್ನೇ ಸ್ಕಂಧಷಷ್ಠಿ ಎನ್ನುತ್ತಾರೆ. ಈ ಷಷ್ಠಿಯನ್ನು ಸಿನೀವಾಲಿಯೆಂದೂ, ಕುಹೂ ಎಂದೂ, ಸದ್ವೃತ್ತಿಯೆಂದೂ, ಅಪರಾಜಿತೆಯೆಂದೂ ಹೇಳುತ್ತಾರೆ. ಆ ದಿನವನ್ನು ಶ್ರೀಪಂಚಮಿಯೆಂದೂ ಹೇಳುತ್ತಾರೆ (ಮ.ವ.).

ದೇವಸ್ಥಾನ - ಬ್ರಹ್ಮರ್ಷಿಯೊಬ್ಬ. ಈತನು ಬಂಧುಹತ್ಯಾದುಃಖದಿಂದ ಕೊರಗುವ ಧರ್ಮರಾಜನ ದುಃಖವನ್ನು ಸಮಾಧಾನಮಾಡಿದನು. ಈತನು ಧನವನ್ನು ಯಾಗಕ್ಕಾಗಿ ಉಪಯೋಗಿಸಲು ಸೂಚಿಸುವನು (ಮ.ಶಾಂ.).

ದೇವಹೂತಿ - ಸ್ವಾಯಂಭುವ ಮನುವಿನ ಮಗಳು. ಕರ್ದಮಮಹರ್ಷಿಯ ಪತ್ನಿ. ಕಪಿಲಮುನಿ ಮತ್ತು ಅನಸೂಯೆಯರು ಇವರ ಮಕ್ಕಳು. ನೋ.-ಕರ್ದಮ, ಕಪಿಲ (ಭಾಗ.).

ದೇವಹ್ರದ - ತೀರ್ಥವಿಶೇಷವೊಂದು.

ದೇವಹೋತ್ರ - ದೇವಸಾವರ್ಣಿ ಮನ್ವಂತರದ ಯೋಗೇಶ್ವರನೆಂಬ ವಿಷ್ಣುವಿನ ತಂದೆ. ನೋ. - ದೇವಸಾವರ್ಣಿ.

ದೇವಾತಿಥಿ - ಚಂದ್ರವಂಶದ ಪುರುಕುಲಕ್ಕೆ ಸೇರಿದ ಅಕ್ರೋಧನ ಮಗ. ಈತನ ತಾಯಿ ಕಾಲಿಂಗೀ (ಕಳಿಂಗದೇಶದ ರಾಜನ ಮಗಳು). ಕಂಡೂ; ಈತನ ಪತ್ನಿ ವೈದರ್ಭಿ ಮರ್ಯಾದೆ; ಮಗ ಋಚ (ಮ.ಆ.).

ದೇವಾಂತಕ - ಹನುಮಂತನಿಂದ ಸಂಹೃತನಾದ ರಾಕ್ಷಸ. ಇವನ ಜೊತೆಯಲ್ಲಿ ತ್ರಿಶಿರನೂ ಯುದ್ಧರಂಗಕ್ಕೆ ಬಂದಿದ್ದನು. ಇವನೂ ಹನುಮನಿಂದ ಮಡಿದನು (ರಾಮಾ.ಯುದ್ಧ.).

ದೇವಾಪಿ - ೧. ಚಂದ್ರವಂಶದ ಪ್ರತೀಪನ ಪುತ್ರ; ಈತನ ತಾಯಿ ಸುನಂದೆ. ಶಂತನು ಮತ್ತು ಬಾಹ್ಲೀಕರು ಈತನ ಸೋದರರು. ದೇವಾಪಿಗೆ ಕುಷ್ಠರೋಗವು ತಲೆದೋರಿದ ಕಾರಣ ಜೀವನದಲ್ಲಿ ವೈರಾಗ್ಯವನ್ನು ಹೊಂದಿ ಯೋಗಾಭ್ಯಾಸವನ್ನು ಮಾಡುತ್ತ ಕಲಾಪವೆಂಬ ಗ್ರಾಮದಲ್ಲಿ ವಾಸವಾಗಿದ್ದ (ಭಾಗ.). ಇವನು ಸರಸ್ವತೀ ನದಿಯ ಪೃಥೂದಕ ತೀರ್ಥದಲ್ಲಿ ಮಿಂದು

ಬ್ರಾಹ್ಮಣ್ಯವನ್ನು ಪುನಃ ಸಂಪಾದಿಸಿದನು (ಮ.ಶ.). ದೇವಾಪಿಯು ರಾಜ್ಯಭಾರಕ್ಕೆ ಅಸಮರ್ಥನಾದುದರಿಂದ ಶಂತನುವು ರಾಜ್ಯಭಾರ ಮಾಡತೊಡಗಿದನು. ಅಣ್ಣನ ಪಟ್ಟವನ್ನು ತಮ್ಮನು ಆಕ್ರಮಿಸಿದುದರಿಂದ ಶಂತನುವಿನ ರಾಜ್ಯದಲ್ಲಿ ಹನ್ನೆರಡು ವರ್ಷ ಅನಾವೃಷ್ಟಿಯಾಗಲು ಜನರೆಲ್ಲ ಗೋಳಿಡುತ್ತಿರಲು ದೇವಾಪಿಯು ಬಂದೊಡನೆ ಸುವೃಷ್ಟಿಯಾಯಿತು.

ದೇವಾಪಿಯು ವೇದಮಾರ್ಗ ವಿಮುಖನಾಗುವಂತೆ ಮಾಡಿದುದರಿಂದ ಶಂತನು ರಾಜ್ಯದಲ್ಲಿ ಮಳೆ ಸುರಿಯಿತು (ವಿಷ್ಣುಪು.). ೨. ಕ್ಷತ್ರಿಯನೊಬ್ಬ. ಪೃಥೂದಕ ತೀರ್ಥದಲ್ಲಿ ತಪಸ್ಸು ಮಾಡುತ್ತ ಬ್ರಾಹ್ಮಣನಾದ. ನೋ.-ಆರ್ಷ್ಟಿಷೇಣ (ಮ.ಶ.). ೩. ಚೇದಿ ದೇಶದ ಕ್ಷತ್ರಿಯ. ಕರ್ಣನಿಂದ ಹತನಾದ (ಮ.ಶ.).

ದೇವಾಪೃಥ - ೧. ಯದುವಂಶದ ಸಾತ್ವತರಾಜನ ಏಳು ಮಂದಿ ಪುತ್ರರಲ್ಲಿ ಐದನೆಯವನು. ಭಜಿ, ಭಜಮಾನ, ದಿವ್ಯ, ವೃಷ್ಣಿ, ಅಂಧಕ, ಭೋಜ ಎಂಬ ಆರು ಮಂದಿ ಈತನ ಸಹೋದರರು. ದೇವಾಪೃಥನ ಮಗನೇ ಬಭ್ರು. ಈ ತಂದೆಮಕ್ಕಳು ಮಹಾಜ್ಞಾನಿಗಳಾಗಿದ್ದರು (ಮ.ಶಾಂ., ಅನು., ಭಾಗ.).

ಸತ್ವತನ ವಂಶದಲ್ಲಿ ಭಜನ, ಭಜಮಾನ, ದಿವ್ಯಾಂಧಕ, ದೇವಾಪೃಥ, ಮಹಾಭೋಜ, ವೃಷ್ಣಿ ಎಂಬ ಪುತ್ರರಾದರು. ದೇವಾಪೃಥನಿಗೆ ಬಭ್ರು ಎಂಬವನು ಮಗನು. ಬಭ್ರುವೇ ಮನುಷ್ಯಶ್ರೇಷ್ಠನು. ದೇವಾಪೃಥನು ದೇವತೆಗಳಿಗೆ ಸಮಾನನು. ಇವರಿಬ್ಬರ ದೆಸೆಯಿಂದ ಅರವತ್ತಾರು ಪುರುಷರೂ ಅವರ ಶಿಷ್ಯರಾದ ಎಂಟು ಸಾವಿರ ಜನರೂ ಮೋಕ್ಷವನ್ನು ಹೊಂದಿದ್ದರು. ಈ ವಂಶದಲ್ಲೇ ಸತ್ರಾಜಿದ್ರಾಜನು ಹುಟ್ಟಿ ಸೂರ್ಯನಿಂದ ಸ್ಯಮಂತಕ ರತ್ನವನ್ನು ಪಡೆದನು (ವಿಷ್ಣುಪು.). ೨. ಭಾರತಯುದ್ಧದಲ್ಲಿ ದುರ್ಯೋಧನನ ಪಕ್ಷದಲ್ಲಿ ನಿಂತು ಹೋರಾಡಿ ನಕುಲನ ಪುತ್ರನಾದ ಶತಾನೀಕನಿಂದ ಹತನಾದನು (ಮ.ಕ.).

ದೇವಿ - ಪಶ್ಚಿಮ ದಿಕ್ಪಾಲಕನಾದ ವರುಣನ ಪತ್ನಿ; ಮಗನ ಹೆಸರು ಬಲ; ಮಗಳು ಮದ್ಯಾಭಿಮಾನಿ ದೇವತೆಯಾದ ಸುರೆ (ಮ.ಆ.).

ದೇವಿಕಾ - ೧. ಭಾರತದ ಒಂದು ನದಿ. ಇದು ಹಿಮವತ್ಪರ್ವತದಲ್ಲಿ ಹುಟ್ಟಿ ಹರಿಯುತ್ತಿದೆ. ಈ ಪ್ರದೇಶದಲ್ಲೇ ಬ್ರಾಹ್ಮಣರು ಹುಟ್ಟಿದರು (ಮ.ಭೀ.). ೨.ಯುಧಿಷ್ಠಿರನ ಪತ್ನಿಯಾದ ದೇವಕಿಯ ಇನ್ನೊಂದು ಹೆಸರು. ನೋ.-ದೇವಕಿ, ಯೌಧೇಯ.

ದೈತ್ಯದ್ವೀಪ - ಗರುಡನ ಮಗ (ಮ.ಉ.).

ದೈತ್ಯರು - ಕಶ್ಯಪ ಮತ್ತು ದಿತಿಯ ಮಕ್ಕಳು (ಮ.ಆ.,ಶಾಂ.,ಭಾಗ.,ವಿಷ್ಣುಪು.).

ದೈತ್ಯಸೇನೆ - ದಕ್ಷಪ್ರಜಾಪತಿಯ ಮಗಳು; ದೇವಸೇನೆಯ ತಂಗಿ. ನೋ.-ದೇವಸೇನ (ಮ.ವ.).

ದ್ಯು - ಅಷ್ಟವಸುಗಳಲ್ಲೊಬ್ಬ. ಈತನು ವಸಿಷ್ಠನ ಧೇನುವನ್ನು ಅಪಹರಿಸಲು, ನೋಡಿ ವಸಿಷ್ಠನ ಶಾಪದಿಂದ ಮನುಷ್ಯನಾಗಿ ಹುಟ್ಟಿದನು. ಇವನೇ ಭೀಷ್ಮಾಚಾರ್ಯ (ಮ.ಆ.).

ದ್ಯುತಿಮಂತ - ೧. ಸೂರ್ಯವಂಶದ ಇಕ್ಷ್ವಾಕುಲದ ಮದಿರಾಶ್ವನ ಮಗ. ಈತನ ಮಗ ಸುವೀರ (ಮ.ಅನು.). ೨. ಸಾಳ್ವದೇಶದ ರಾಜ. ಋಚೀಕ ಮಹರ್ಷಿಗೆ ರಾಜ್ಯವನ್ನು ದಾನಮಾಡಿದ (ಮ.ಶಾಂ.,ಅನು.). ೩. ಸ್ವಾರೋಚಿಷ ಮನು. ನೋ. - ಸ್ವರೋಚಿಸ್.

ದ್ಯುಮತ್ಸೇನ - ೧. ಸಾಳ್ವದೇಶದ ರಾಜ; ಸತ್ಯವಂತನು ಈತನ ಮಗ; ಸಾವಿತ್ರಿಯು ಈತನ ಸೊಸೆ; ಈತನಿಗೆ ವೃದ್ಧಾಪ್ಯಕಾಲದಲ್ಲಿ ಅಂಧತ್ವ ಬಂತು. ರಾಜ್ಯವು ಶತ್ರುಗಳ ಕೈ ಸೇರಿತು. ಈತನು ಸಂಸಾರದೊಡನೆ ವನ ಸೇರಿದಾಗ ಸಾವಿತ್ರಿಯ ಮಹಿಮೆಯಿಂದ ಈತನಿಗೆ ಕಣ್ಣುಗಳೂ, ರಾಜ್ಯವೂ ಕೈಸೇರಿದವು. ಇವನು ಹತ್ತುಸಾವಿರ ಆನೆಗಳ ಬಲವುಳ್ಳವನು. ಭೀಮಸೇನನಿಗೆ ಬಲದಲ್ಲಿ ಸಾಟಿ (ಮ.ಆ.,ವ.). ೨. ಸಾಳ್ವ ದೇಶಾಧಿಪನಾದ ಕ್ಷತ್ರಿಯ; ರಾಜಸೂಯಯಾಗ ಕಾಲದಲ್ಲಿ ಅರ್ಜುನನು ಈತನನ್ನು ಜಯಿಸಿದನು (ಮ.ಸ.). ೩. ಜರಾಸಂಧನ ವಂಶದ ಕ್ಷತ್ರಿಯ; ಶ್ರೀಕೃಷ್ಣನಿಂದ ಹತನಾದನು (ಮ.ಸ.).

ದ್ಯೂತ - ಜೂಜು. ಯುಧಿಷ್ಠಿರನು ಶಕುನಿಯೊಂದಿಗೆ, ವಿರಾಟನೊಂದಿಗೆ ಜೂಜಾಡಿದ್ದನು. ನಳನು ಪುಷ್ಕರನೊಂದಿಗೆ ಜೂಜಾಡಿದ್ದನು (ಮ.ಸ., ವಿ.,ವ.).

ದ್ಯೌ - ನೋ.-ದ್ಯು.

ದ್ರಮಿಡ - ದ್ರವಿಡದೇಶ. ಮದ್ರಾಸಿನಿಂದ ಶ್ರೀರಂಗಪಟ್ಟಣದವರೆಗೂ, ಅಲ್ಲಿಂದ ಕನ್ಯಾಕುಮಾರಿಯವರೆಗೂ ಇರುವ ದಕ್ಷಿಣದ ಭಾಗ. ಇದರ ರಾಜಧಾನಿ ಮೊದಲು ಕಾಂಚೀಪುರ. ಈಗಿನ ಹೆಸರು ಕಂಜೀವರಂ (ಮ.ಭೀ.).

ದ್ರವಿಣ - ೧. ಧರನೆಂಬ ವಸುವಿನ ಮಗ (ಮ.ಆ.). ೨. ಪೃಥು ಚಕ್ರವರ್ತಿ ಮತ್ತು ಅರ್ಚಿ ಎಂಬಾಕೆಯ ಮಗನೊಬ್ಬ (ಭಾಗ.).

ದ್ರುತಿ (ದ್ಯುತಿ) - ಋಷಭದೇವನ ಸಂತತಿಯ ಪೃಥುಷೇಣನೆಂಬ ರಾಜನ ಪತ್ನಿ. ಈಕೆಯ ಮಗನ ಹೆಸರು ಗಯ. ನೋ. - ಗಯ.

ದ್ರುಪದ - ಪಾಂಚಾಲದ ರಾಜ; ಯಜ್ಞಸೇನನೆಂದು ಇವನ ಹೆಸರು. ಮರದ ಗುರುತಿನ ಧ್ವಜವುಳ್ಳವನು; ಮಹಾರಥ; ಸೋಮಕನ ಮೊಮ್ಮಗ; ಪೃಷದನ ಮಗ (ಭಾಗ., ಹರಿ., ಗರುಡ ಪು.). ಮೇನಕೆಯ ದರ್ಶನದಿಂದ ಜಾರಿದ ಪೃಷದನ ರೇತಸ್ಸಿನಿಂದ ಹುಟ್ಟಿದವನು. ಈತನ ರಾಜಧಾನಿಗೆ ಮಾಕಂದಿ ಎಂದು ಹೆಸರು. ಇವನು ಅಗ್ನಿವೇಶ್ಯ ಮುನಿಯ ಶಿಷ್ಯ; ದ್ರೋಣಾಚಾರ್ಯನ ಸಹಪಾಠಿ. ಮುಂದೆ ದ್ರೋಣನನ್ನು ದ್ರುಪದನು ತಿರಸ್ಕರಿಸಲು ದ್ರೋಣನು ತನ್ನ ಶಿಷ್ಯನಾದ ಅರ್ಜುನನಿಂದ ಆತನನ್ನು ಹಿಡಿದು ತರಿಸಿ, ಅರ್ಧ ರಾಜ್ಯ ಕಸಿದುಕೊಂಡು ಅವಮಾನ ಮಾಡಿಬಿಟ್ಟನು. ಈತನ ಪತ್ನಿಗೆ ಸೌತ್ರಾಮಣಿ ಅಥವಾ ಕೌಸವಿಯೆಂದು ಹೆಸರು. ತಪಸ್ಸಿನ ಫಲವಾಗಿ ಈತನಿಗೆ ಶಿಖಂಡಿಯು ಜನಿಸಿದನು. ಈತನು ಪುನಃ ಮಕ್ಕಳಿಗಾಗಿ ಯಜ್ಞಮಾಡಲು ದುಷ್ಟದ್ಯುಮ್ನನೆಂಬ ಮಗನೂ, ಕೃಷ್ಣೆ ಎಂಬ ಮಗಳೂ ಅಗ್ನಿಕುಂಡದಿಂದ ಹುಟ್ಟಿಬಂದರು. ಈತನಿಗೆ ಸುಮಿತ್ರ (ಸೌಮಿತ್ರ), ಪ್ರಿಯದರ್ಶನ, ವೀರಕೇತು, ಸುರಥ, ಶತ್ರುಂಜಯ, ಧ್ವಜಕೇತು ಎಂಬ ಮಕ್ಕಳು ಕೌಸವಿಯಲ್ಲಿ ಹುಟ್ಟಿದರು. ಸುಮಿತ್ರನು ಜಯದ್ರಥನಿಂದ ಹತನಾದನು. ಇವರಲ್ಲಿ ಪ್ರಿಯದರ್ಶನನು ಕರ್ಣನಿಂದ ಹತನಾದನು. ವೀರಕೇತನು ದ್ರೋಣಾಚಾರ್ಯನಿಂದಲೂ, ಸುರಥ ಮತ್ತು ಶತ್ರುಂಜಯರೂ ಆತನಿಂದಲೇ ಗತಾಸುಗಳಾದರು. ದ್ರುಪದನು ತನ್ನ ಪುರೋಹಿತನನ್ನು ಸಂಧಿಗಾಗಿ ಹಸ್ತಿನಾವತಿಗೆ ಕಳುಹಿಸಿದನು. ದ್ರುಪದನ ವಧೆಯು ದ್ರೋಣನಿಂದಾಯಿತು. ನೋ.- ದೃಷ್ಟದ್ಯುಮ್ನ.

ಪೂರ್ವದಲ್ಲಿ ಪಾಂಚಾಲದೇಶದ ರಾಜನು ಮಕ್ಕಳಿಲ್ಲದುದರಿಂಬ ತನ್ನ ಕೋರಿಕೆಯನ್ನು ಪೂರೈಸಲು ಕಾಡಿಗೆ ಹೋಗಿ ಘೋರ ತಪಸ್ಸಿಗೆ ಆರಂಭಿಸಿದನು. ಆಗ ಕಾಮೋದ್ದೀಪಕವಾದ ವಸಂತಕಾಲವು ಬಂತು. ರಾಜನು ಗಂಗಾತೀರದಲ್ಲಿ ತಪಸ್ಸು ಮಾಡುವಾಗ ಮೇನಕೆಯೆಂಬ ಅಪ್ಸರಸೆ ಆ ಪ್ರದೇಶಕ್ಕೆ ಬಂದಳು. ಆಗ ರಾಜನು ಅವಳನ್ನು ಕಂಡೊಡನೆ ಇಂದ್ರಿಯಸ್ಖಲನವಾಗಿ ರೇತಸ್ಸು ನೆಲದ ಮೇಲೆ ಬಿತ್ತು. ಅದನ್ನು ನೋಡಿ ಲಜ್ಜೆಯಿಂದ ರಾಜನು ಆ ವೀರ್ಯವನ್ನು ಅಲ್ಲಿದ್ದ ಒಂದು ಮರದಡಿಗೆ ಕಾಲಿನಿಂದ ನೂಕಿದನು. ಪಾಂಚಾಲನ ತಪಃಫಲದಿಂದ ಆ ವೀರ್ಯವು ಕೂಡಲೇ ಪುತ್ರರೂಪವನ್ನು ಹೊಂದಿತು. ಋಷಿಗಳೆಲ್ಲರೂ ಆ ಕುಮಾರನಿಗೆ, 'ದ್ರು+ ಪದ (ಮರದ ಬುಡದಲ್ಲಿ ಹುಟ್ಟಿದವ) ಎಂಬ ಹೆಸರು ಬರಲಿ' ಎಂದರು. ರಾಜನ ಆ ಪುತ್ರನನ್ನು ವಿದ್ಯಾಭ್ಯಾಸಕ್ಕಾಗಿ ಭರದ್ವಾಜನಲ್ಲಿ ಬಿಟ್ಟು ತನ್ನ ರಾಜ್ಯಕ್ಕೆ ಹೊರಟುಹೋದನು. ಆಗ ಭರದ್ವಾಜನಲ್ಲಿ ಶಿಷ್ಯನಾಗಿದ್ದ ದ್ರೋಣನು ಈತನ ಸಹಪಾಠಿಯಾದನು. ಮುಂದೆ ತಂದೆಯ ಮರಣಾನಂತರ

ಪ್ರಜೆಗಳು ಈತನನ್ನು ಪಾಂಚಾಲದೇಶಕ್ಕೆ ಕರೆಸಿ ರಾಜ್ಯದಲ್ಲಿ ಅಭಿಷೇಕ ಮಾಡಿದರು (ಮ.ಆ., ಉ., ದ್ರೋ., ಭಾಗ., ಹರಿ.).

ದ್ರುಮ - ೧. ಅಧಿರಥನೆಂಬ ಸೂತನ ಮಗ; ಕರ್ಣನ ಸಹೋದರ; ಈತನು ಭೀಮನಿಂದ ಮೃತನಾದನು. ೨. ಕಿಂಪುರುಷರ ಆಚಾರ್ಯ (ಮದ್ರೋ.). ೩. ನೋ.- ಮಹಾಧನಸ್ಸುಗಳು.

ದ್ರುಮಸೇನ - ೧. ಕ್ಷತ್ರಿಯನೊಬ್ಬ; ಈತನು ದೃಷ್ಟದ್ಯುಮ್ನನಿಂದ ಹತನಾದನು. ಶಲ್ಯನ ಸೇನೆಯ ಅಧಿಪತಿ ; ಈತ ಯುಧಿಷ್ಠಿರನಿಂದ ಹತನಾದನು (ಮ.ದ್ರೋ.,ಶ.).

ದ್ರುಮಿಲ - ರಾಕ್ಷಸನೊಬ್ಬ. ಒಮ್ಮೆ ರಾಜ್ಯೋದ್ಯಾನದಲ್ಲಿ ವಿಹರಿಸುತ್ತಿದ್ದ ಉಗ್ರಸೇನನ ಪತ್ನಿಗೆ ಕಾಮವಿಕಾರವುಂಟಾಯಿತು. ಇದನ್ನು ತಿಳಿದ ಈ ರಕ್ಕಸನು ಉಗ್ರಸೇನನ ರೂಪದಿಂದ ಈಕೆಯನ್ನು ಕೂಡಲು ಅವಳು ಗರ್ಭಿಣಿಯಾಗಿ ಕಂಸನನ್ನು ಹೆತ್ತಳು. ಆದುದರಿಂದ ಕಂಸನು ರಾಕ್ಷಸ ಸ್ವಭಾವದವನಾದನು (ಹರಿ.).

ದ್ರುಹು - ಇವನು ಯಯಾತಿ-ಶರ್ಮಿಷ್ಠೆಯರ ಮಗ. ಅನು ಮತ್ತು ಪೂರು ಇವನ ಸೋದರರು. ಯಯಾತಿಯ ವೃದ್ಧಾಪ್ಯವನ್ನು ಸ್ವೀಕರಿಸಲು ಒಪ್ಪಿದುದರಿಂದ ಈತನಿಗೂ ಈತನ ವಂಶದವರಿಗೂ ಪಟ್ಟದ ಅಧಿಕಾರವು ತಪ್ಪಿಹೋಯಿತು. ನೋ. -ದೇವಯಾನಿ, ಯಯಾತಿ (ಮ.ಆ.,ಭಾಗ.).

ದ್ರುಹ್ಯು - ೧. ಚಂದ್ರವಂಶದ ಮತಿನಾರನ ಮಗ. ಈತನಿಗೆ ತಂಸು ಮತ್ತು ಮಹಾಂತ ಎಂಬ ಇಬ್ಬರು ಸೋದರರಿದ್ದರು. 'ನಿನ್ನ ಭೋಗಾಪೇಕ್ಷೆಗಳಾವುವೂ ನೆರವೇರದಿರಲಿ. ನೀನು ಸಂಚಾರಕ್ಕೆ ಅಯೋಗ್ಯವಾದ ಪ್ರದೇಶದಲ್ಲಿ ಭೋಜನೆಂಬ ಹೆಸರಿನಿಂದ ರಾಜ್ಯವಿಲ್ಲದೆ ಜೀವಿಸು' ಎಂದು ಯಯಾತಿಯು ಶಾಪವಿತ್ತನು (ಮ.ಆ.).

ದ್ರೋಣ - ಪಾಂಡವ ಮತ್ತು ಕೌರವರ ಅಸ್ತ್ರವಿದ್ಯಾಗುರು. ಈತನಿಗೆ ಅಂಗಿರಸಾಂವರ, ಆಚಾರ್ಯ, ಭರತಾಚಾರ್ಯ, ಭಾರದ್ವಾಜ, ಭರದ್ವಾಜಪುತ್ರ, ಶೋಣಾಶ್ವ, ರುಕ್ಮರಥ, ರಥಯೂಥಪಯೂಥಪ, ದ್ರೋಣ-ಎಂಬ ಒಂಬತ್ತು ಹೆಸರುಗಳಿವೆ. ಈತನ ತಂದೆಯಾದ ಭರದ್ವಾಜನು ಘೃತಾಚಿ ಎಂಬ ಅಪ್ಸರೆಯ ದರ್ಶನದಿಂದ ಕ್ಷುಭಿತನಾಗಿ ದ್ರೋಣದಲ್ಲಿ (ದೊನ್ನೆ) ತನ್ನ ವೀರ್ಯವನ್ನು ಬಿಡಲಾಗಿ ಈತನು ಜನಿಸಿ ದ್ರೋಣನಾದನು. ಈತನು ಅಗ್ನಿವೇಶ್ಯಮುನಿಯ ಶಿಷ್ಯ. ಇವನನ್ನು ಬೃಹಸ್ಪತಿಯ ಅವತಾರವೆನ್ನುತ್ತಾರೆ.

ಈತನ ಹೆಂಡತಿ ಶರದ್ವಂತನ ಮಗಳಾದ ಕೃಪಿ; ಮಗನು ಅಶ್ವತ್ಥಾಮ; ಇವನು ಶಿವನ ಅಂಶದಿಂದ ಜನಿಸಿದವನು; ಹುಟ್ಟಿದೊಡನೆ ಈತನು ಕುದುರೆಯಂತೆ ಕೆನೆದುದರಿಂದ ಅಶ್ವತ್ಥಾಮನೆಂದು ಕರೆಯಲ್ಪಟ್ಟನು. ಧನಕ್ಕಾಗಿ ದ್ರೋಣನು ತನ್ನ ಮಗ ಮತ್ತು ಪತ್ನಿಯೊಂದಿಗೆ ಬಾಲ್ಯಸ್ನೇಹಿತನಾದ ದ್ರುಪದನ ಬಳಿಗೆ ಬರಲು, ರಾಜನು ದ್ರೋಣನನ್ನು ತಿರಸ್ಕರಿಸಿದನು. ದ್ರೋಣನು ಹೆಚ್ಚಿನ ಅಸ್ತ್ರವಿದ್ಯಾಭ್ಯಾಸವನ್ನು ಪರಶುರಾಮನಲ್ಲಿ ಮಾಡಿದನು. ತನ್ನ ಶಿಷ್ಯನಾದ ಅರ್ಜುನನಿಂದ ದ್ರುಪದನನ್ನು ಸೆರೆಹಿಡಿಸಿ ತರಿಸಿ ಆತನಿಂದ ಅರ್ಧರಾಜ್ಯವನ್ನು ಕಿತ್ತುಕೊಂಡುಬಿಟ್ಟನು. ದ್ರೋಣನ ಪಾಲಿನ ರಾಜ್ಯಕ್ಕೆ ಅಹಿಚ್ಛತ್ರವೆಂದು ಹೆಸರು. ಈತನ ಕುರುಕ್ಷೇತ್ರದಲ್ಲಿ ನಡೆದ ಯುದ್ಧದಲ್ಲಿ ದ್ರುಪದನ ಪುತ್ರನಾದ ಶಂಖನನ್ನೂ, ವಿರಾಟ ದ್ರುಪದರನ್ನೂ ಕೊಂದನು. ದೃಷ್ಟದ್ಯುಮ್ನನು ಈತನ ಶಿರಚ್ಛೇದ ಮಾಡಿದನು. ದ್ರೋಣನು ನೂರಾರು ವರ್ಷ ಬದುಕಿದ್ದನು; ಶ್ಯಾಮವರ್ಣದವನು. ೨. ಅಷ್ಟವಸುಗಳಲೊಬ್ಬ. ಇವನು ತನ್ನ ಪತ್ನಿಯಾದ ಧರೆಯೊಡನೆ ಸಂತಾನಕ್ಕಾಗಿ ಬಹಳ ಕಾಲ ತಪಸ್ಸು ಮಾಡಿದರೂ ಫ‌ಲ ದೊರೆಯದಿರಲು ಈ ದಂಪತಿಗಳು ಅಗ್ನಿಪ್ರವೇಶ ಮಾಡಿದರು. ಇವರು ಮುಂದಿನ ಜನ್ಮದಲ್ಲಿ ನಂದ- ಯಶೋದೆಯರಾಗಿ ಹುಟ್ಟಿ ಶ್ರೀಕೃಷ್ಣನನ್ನು ಮಗನನ್ನಾಗಿ ಪಡೆದು ಆತನ ಬಾಲಲೀಲೆಗಳನ್ನು ಕಂಡು ಜನ್ಮಸಾರ್ಥಕ ಮಾಡಿಕೊಂಡರು. ೩. ಒಂದು ಪರ್ವತ ೪. ಮಂದಪಾಲನೆಂಬ ಋಷಿಯ ಪುತ್ರನಾದ ಶಾರ್ಙ್ಗಕನ ಇನ್ನೊಂದು ಹೆಸರು. ಈತನ ತಾಯಿ ಜರಿತಾ, ಇವನು ಬ್ರಹ್ಮರ್ಷಿ. ನೋ-ಮಂದಪಾಲ (ಭಾಗ., ಮಾರ್ಕಂಪು., ಮ.ಆ.,ಉ.,ಸ.,ವಿ.,ಭೀ.,ದ್ರೋ., ಸ್ತ್ರೀ.,ಶಾಂ.).

ದ್ರೌಣಾಯನಿ - ಅಶ್ವತ್ಥಾಮ; ಇವನಿಗೆ ದ್ರೌಣಿ ಎಂಬ ಹೆಸರೂ ಇದೆ (ಮ.ಭೀ.).

ದ್ರೌಣಿ - ಅಶ್ವತ್ಥಾಮ (ಮ.ಆ.).

ದ್ರೌಪದಿ - ದ್ರುಪದರಾಜನ ಪುತ್ರಿ; ಪಾಂಡವರ ಪತ್ನಿ. ದ್ರುಪದನು ಅರ್ಜುನನ ಸಂಬಂಧಕ್ಕಾಗಿ ಅಗ್ನಿಯಿಂದ ಪಡೆದ ಸ್ತ್ರೀ. ಈಕೆ ಅಯೋನಿಜೆ. ಕೃಷ್ಣೆ ಎಂಬುದು ಈಕೆಯ ಇನ್ನೊಂದು ಹೆಸರು. ಪಾಂಚಾಲಿ, ಮಖಜೆ- ಮೊದಲಾದ ಹೆಸರುಗಳೂ ಈಕೆಗಿವೆ. ಈಕೆಯಲ್ಲಿ ಲಕ್ಷ್ಮಿಯ ಅಂಶವಿತ್ತು. ಪುಷ್ಯಮಾಸದ ಶುಕ್ಲಪಕ್ಷದಲ್ಲಿ ರೋಹಿಣಿ ನಕ್ಷತ್ರದೊಡಗೂಡಿದ ಶುಭದಿನದಲ್ಲಿ ದ್ರೌಪದಿಗೆ ಸ್ವಯಂವರವಾಯಿತು (ಮ.ಆ.). ಸ್ವಯಂವರ ಮಂಟಪದಲ್ಲಿ ಅರ್ಜುನನು ಮತ್ಸ್ಯಯಂತ್ರವನ್ನು ಭೇದಿಸಿ ಈಕೆಯನ್ನು ವಿವಾಹವಾದರೂ ಕುಂತಿಯ ಮತ್ತು ವ್ಯಾಸರ ಅಪ್ಪಣೆಯಂತೆ ಈಕೆಯು ಐವರು ಪಾಂಡವರ ಪತ್ನಿಯಾದಳು.

ನೋ.-ನಾರಾಯಣ (ನಾಲಾಯನಿ). ಈಕೆಗೆ ಯುಧಿಷ್ಠಿರನಿಂದ ಪ್ರತಿವಿಂಧ್ಯನೆಂಬ ಮಗನೂ, ಭೀಮನಿಂದ ಶ್ರುತಸೋಮನೂ, ಅರ್ಜುನನಿಂದ ಶ್ರುತಕೀರ್ತಿಯೂ, ನಕುಲನಿಂದ ಶತಾನೀಕನೂ, ಸಹದೇವನಿಂದ ಶ್ರುತಸೇನನೆಂಬ ಮಗನೂ ಆದರು. ಇವಳ ಮಕ್ಕಳಾದ ಐವರೂ ವಿಶ್ವದೇವತೆಗಳ ಅಂಶದಿಂದ ಹುಟ್ಟಿದವರು (ಮ.ಆ.). ಗಾಂಧಾರಿಯು ಈಕೆಯ ರೂಪರೇಖೆಗಳನ್ನು ಕಂಡು ತನ್ನ ಮಕ್ಕಳ ಮೃತ್ಯುದೇವತೆಯೆಂದು ಎಣಿಸಿದ್ದಳು. ನಾರದರು ಪಾಂಡವರೊಡನೆ ದ್ರೌಪದಿಯು ಒಂದೊಂದು ವರ್ಷ ಒಬ್ಬೊಬ್ಬರ ಜೊತೆಯಲ್ಲಿರಬೇಕೆಂದೂ ಅವರು ಜೊತೆಯಾಗಿದ್ದ ಕಾಲದಲ್ಲಿ ಅವರನ್ನು ಕಂಡವರು ಒಂದು ವರ್ಷ ತೀರ್ಥಯಾತ್ರೆ ಮಾಡಿ ಬರಬೇಕೆಂದೂ ಸೂಚಿಸಿ ಹೋದನು. ರಾಜಸೂಯಯಾಗದಿಂದ ದ್ರೌಪದಿಯು ಸಾಮ್ರಾಜ್ಞಿ ಎನ್ನಿಸಿಕೊಂಡಳು. ಧರ್ಮರಾಜನು ದ್ಯೂತವನ್ನಾಡಿ ರಾಜ್ಯವನ್ನೆಲ್ಲ ಕಳೆದುಕೊಂಡು ದ್ರೌಪದಿಯನ್ನೂ ಕೌರವರ ತೊತ್ತಾಗಿ ಮಾಡಿದನು. ದುಶ್ಶಾಸನನು ದ್ರೌಪದಿಯ ವಸ್ತ್ರಾಪಹರಣಕ್ಕೆ ಯತ್ನಿಸಲು ಶ್ರೀಕೃಷ್ಣನು ಆಕೆಯ ಮಾನವನ್ನು ಕಾಪಾಡಿದನು. ದ್ರೌಪದಿ ಮತ್ತು ಭೀಮಾರ್ಜುನರು ಕೌರವರ ನಾಶಕ್ಕಾಗಿ ಪ್ರತಿಜ್ಞೆಮಾಡಿದರು. ಅರಣ್ಯದಲ್ಲಿರುವಾಗ ಭೀಮನು ಆಕೆಗೆ ಸೌಗಂಧಿಕ ಪುಷ್ಪವನ್ನು ತಂದು ಮುಡಿಸಿದನು. ಆಕೆ ಪತಿಗಳೊಂದಿಗೆ ತೀರ್ಥಯಾತ್ರೆ ಮಾಡಿದಳು. ಜಯದ್ರಥನು ಆಕೆಯನ್ನು ಅಪಹರಿಸಲು ಹೋಗಿ ಪಾಂಡವರಿಂದ ಅವಮಾನಹೊಂದಿದನು. ಆಕೆ ಒಂದು ವರ್ಷದ ಅಜ್ಞಾತವಾಸಕಾಲದಲ್ಲಿ ಮಾಲಿನಿ ಎಂಬ ಗುಪ್ತನಾಮವನ್ನಿಟ್ಟುಕೊಂಡಿದ್ದಳು. ಆಗ ವಿರಾಟನಗರದಲ್ಲಿ ಸುದೇಷ್ಣೆ ಎಂಬ ರಾಣಿಯ ಬಳಿ ಸೈರಂಧ್ರಿಯಾಗಿದ್ದಳು. ಆ ಕಾಲದಲ್ಲೇ ಕೀಚಕನ ತಮ್ಮಂದಿರ ನಾಶವಾಯಿತು. ಮಹಾಭಾರತ ಯುದ್ಧದ ಕೊನೆಗೆ ಅಶ್ವತ್ಥಾಮನು ಪಾಂಡವರೆಂಬ ಭ್ರಾಂತಿಯಿಂದ ಈಕೆಯ ಐವರು ಮಕ್ಕಳನ್ನೂ ಕೊಂದನು. ಪಾಂಡವರ ಪ್ರಸ್ಥಾನಕಾಲದಲ್ಲಿ ಅವರನ್ನು ಅನುಸರಿಸಿ ಮಾರ್ಗದಲ್ಲೇ ದೇಹತ್ಯಾಗಮಾಡಿದಳು.

ದ್ರೌಪದಿಯು ಬಹಳ ಉದ್ದವೂ ಅಲ್ಲದ ಕುಳ್ಳೂ ಅಲ್ಲದೆ ನಡುತರ ಪ್ರಮಾಣದಲ್ಲಿದ್ದಳು. ಇವಳು ಪದ್ಮಿನೀಜಾತಿಯವಳು ಎಂಬುದನ್ನು ತೋರಿಸುವಂತೆ ಇವಳು ನಿಂತ ಕಡೆಯಲ್ಲೆಲ್ಲ ಪದ್ಮಗಂಧವು ಗಮಗಮಿಸುತ್ತಿತ್ತು. ಇವಳಿಗೆ ತಾವರೆ ಎಸಳಿನಂತೆ ವಿಶಾಲವಾದ ಕಣ್ಣುಗಳೂ, ಅಂದವಾದ ನಿತಂಬಗಳೂ, ಆಕಾಶದಂತೆ ನೀಲವರ್ಣದ ಕೂದಲೂ, ವೈಡೂರ್ಯದಂತೆ (ಕಪ್ಪುಬಣ್ಣ) ಹೊಳೆಯುವ ದೇಹಕಾಂತಿಯೂ, [illegible] ಕುಂದಿಲ್ಲದ ಮೈಕಟ್ಟುಳ್ಳವಳು (ಮ.ಆ.). ಈಕೆಯ ಸ್ವಯಂವರದಲ್ಲಿ ಪಣವಾಗಿಟ್ಟ ಬಿಲ್ಲನ್ನು

ವ್ಯಾಘ್ರಪಾದನ ಪುತ್ರನಾದ ಸೃಂಜಯನೆಂಬವನಿಗೆ ದೇವತೆಗಳು ಕೊಟ್ಟರು. ಆದಕ್ಕೆ ಕಿಂಧುರವೆಂದು ಹೆಸರು. ಇದಕ್ಕೆ ಉಕ್ಕಿನ ನಾಣೆತ್ತು. ಇದು ಶಂಕರನಿಂದ ವರರೂಪವಾಗಿ ಬಂದ ಬಿಲ್ಲು. ಮೈತ್ರವೆಂಬ ತಾರಾಬಲದಿಂದ ಕೂಡಿದ ಎಂಟನೆಯ ಮುಹೂರ್ತದಲ್ಲಿ ದ್ರೌಪದಿಯನ್ನು ವಿವಾಹಕ್ಕಾಗಿ ಅಲಂಕರಿಸಿದರು (ಮ.ಆ.).

ದ್ರುಪದನು ಮಾಡಿದ ಯಾಗಕಾಲದಲ್ಲೇ ಈಕೆಯ ತಾಯಿಯು 'ನನ್ನ ಮಗಳು ಐವರಿಗೆ ಭಾರ್ಯೆಯಾಗಿರಬೇಕು' ಎಂದು ಬೇಡಿಕೊಂಡಳು. ಪುರೋಹಿತರಾಗಿದ್ದ ಯಾಜೋಪಯಾಜಕರೆಂಬ ಮಹರ್ಷಿಗಳೂ ತಮ್ಮ ತಪಸ್ಸಿನಿಂದ ಈಕೆಗೆ ಐವರು ಪತಿಗಳಾಗುವಂತೆ ಮಾಡಿದರು (ಮ.ಆ.,ವೈವಾ.). ಈಕೆಯು ಶಿವನೊಡನೆ - 'ನನಗೆ ಐವರು ಪತಿಗಳಲ್ಲಿ ಒಬ್ಬೊಬ್ಬರೊಡನೆ ಸಂಗಮವು ಪ್ರಾಪ್ತವಾದಾಗಲೆಲ್ಲ ನನ್ನ ಯೌವನವು ಇಳಿಯದೆ ಹೆಚ್ಚುತ್ತಿರಬೇಕು' ಎನ್ನಲು ಶಿವನು 'ಭದ್ರೆ, ಕಾಮಸುಖವೂ ತಪಸ್ಸಿದ್ಧಿಯೂ ಕೇವಲ ವಿರುದ್ಧವಾದವುಗಳಾದರೂ ನಿನಗೆ ನಿನ್ನ ಬಯಕೆಯಂತೆ ಅವೆರಡೂ ಒಟ್ಟು ಲಭಿಸಲಿ' ಎಂದನು (ಮ.ಆ.). ನೋ.-ಭೌಮಾಶ್ವಿ. ದ್ರೌಪದಿಯು ಪಾಂಡವರನ್ನು ದಿನಕ್ಕೊಬ್ಬರಂತೆ ಕ್ರಮವಾಗಿ ಮದುವೆಯಾದಳು. ಇವಳಿಗೆ ಧರ್ಮರಾಯನು ಪತಿ ಮತ್ತು ಮಾವ; ಸಹದೇವನು ಪತಿ ಮತ್ತು ಮೈದುನ. ಉಳಿದ ಮೂವರೂ ಈ ಮೂರು ವಿಧದ ಸಂಬಂಧವುಳ್ಳವರಾಗಿದ್ದರು (ಮ.ಆ.,ವೈವಾ.).

ದ್ವಾದಶಾದಿತ್ಯ - ನೋ.-ಆದಿತ್ಯ, ವಿವಸ್ವಾನ್.

ದ್ವಾಪರ - ೧. ಒಬ್ಬ ರಾಕ್ಷಸ. ದಮಯಂತಿಯ ವಿವಾಹಕ್ಕೆ ಈತನು ಕಲಿಪುರುಷನ ಜೊತೆಯಲ್ಲಿ ಹೋಗಿದ್ದನು. ಕಲಿಯು ಈತನೊಡನೆ ಪಗಡೆಯಾಡುವ ದಾಳವನ್ನು ಪ್ರವೇಶಿಸಿ ತನಗೆ ಸಹಾಯಮಾಡಬೇಕೆಂದನು. ೨. ನಾಲ್ಕು ಯುಗಗಳಲ್ಲಿ ಮೂರನೆಯದು. ಮನುಷ್ಯಮಾನವ ಪ್ರಕಾರ ೮,೬೪,೦೦೦ ವರ್ಷಗಳು. ಈ ಯುಗದ ಕೊನೆಯಲ್ಲಿ ಶ್ರೀಕೃಷ್ಣಾರ್ಜುನರು ಅವತರಿಸಿ ದುಷ್ಟರನ್ನೆಲ್ಲ ಕೊಂದು ಧರ್ಮಸಂಸ್ಥಾಪನೆಯನ್ನು ಮಾಡಿದರು (ಮ.ಆ., ಶಾಂ., ಮತ್ಸ್ಯಪು.).

ದ್ವಾರಕಾ - ಈ ಪಟ್ಟಣವನ್ನು ದ್ವಾರಾವತಿಯೆಂದೂ ಹೇಳುತ್ತಾರೆ. ಜರಾಸಂಧನ ಪೀಡೆಯನ್ನು ಸಹಿಸಲಾರದೆ ಶ್ರೀಕೃಷ್ಣನು ಈ ಪಟ್ಟಣವನ್ನು ವಿಶ್ವಕರ್ಮನಿಂದ ನಿರ್ಮಿಸಿಕೊಂಡನು. ಇದು ಸಮುದ್ರದಿಂದ ಸುತ್ತಲ್ಪಟ್ಟ ಪಟ್ಟಣ. ರಾಮಾಯಣ ಕಾಲದ ಕುಶಸ್ಥಲಪ್ರದೇಶದಲ್ಲಿ ನಿರ್ಮಾಣವಾದ ಪಟ್ಟಣವಿದು. ಆನರ್ತ

ದೇಶಕ್ಕೆ ಅಥವಾ ಗುಜರಾತಿನ ರಾಜಧಾನಿಯಾಗಿತ್ತು ಇದು. ಅರ್ಜುನ ಮತ್ತು ಕೌರವನು ಯುದ್ಧಕ್ಕೆ ಸಹಾಯವನ್ನು ಕೇಳಲು ದ್ವಾರಕೆಗೆ ಹೋಗಿದ್ದರು. ಕುಚೇಲನು ದ್ವಾರಕೆಗೆ ಹೋಗಿ ಬಂದಮೇಲೆ ಶ್ರೀಮಂತನಾದನು. ಅರ್ಜುನನು ಮೊದಲು ಯತಿವೇಷದಿಂದ ದ್ವಾರಕೆಯನ್ನು ಹೊಕ್ಕು ಸುಭದ್ರೆಯನ್ನು ವಿವಾಹವಾದನು. ಮಹಾಭಾರತ ಯುದ್ಧವಾದ ಇಪ್ಪತ್ತಾರು ವರ್ಷಗಳ ಮೇಲೆ ದ್ವಾರಕೆಗೆ ಬಂದ ಕೌಶಿಕಾದಿ ಮುನಿಗಳನ್ನು ಯಾದವರು ಅಪಹಾಸ್ಯ ಮಾಡಿದುದರಿಂದ ಅಲ್ಲಿ ಹಗಲಿನಲ್ಲೇ ವಿಶೇಷ ದುಶ್ಶಕುನಗಳು ತೋರತೊಡಗಿ ಪ್ರಭಾಸಕ್ಷೇತ್ರದಲ್ಲಿ ಯಾದವರ ಅಂತ್ಯವಾದಮೇಲೆ ಶ್ರೀಕೃಷ್ಣನೂ ಅವತಾರವನ್ನು ಮುಗಿಸಿ ವೈಕುಂಠಕ್ಕೆ ತೆರಳಿದನು. ಕೃಷ್ಣನ ನಿರ್ಯಾಣಾನಂತರ ಏಳು ದಿನಗಳಮೇಲೆ ದ್ವಾರಕೆಯು ಸಮುದ್ರದಲ್ಲಿ ಮುಳುಗಿಹೋಯಿತು. (ದ್ವಾರ= ಬಾಗಿಲುಗಳಿಂದ+ ಕಾ= ಕೂಗುತ್ತಿರುವುದು-ಹಲವು ದ್ವಾರಗಳ ಸುಂದರವಾದ ಪಟ್ಟಣ) (ಹರಿ.,ಭಾಗ.,ಮ.ಆ.,ಮೌ.).

ದ್ವಿಜಿಹ್ವ - ಸರ್ಪಗಳು. ತಾಯಿಯ ದಾಸ್ಯನಿವಾರಣೆಗಾಗಿ, ಗರುಡನು ಅಮೃತವನ್ನು ತಂದು ದರ್ಭೆಯ ಮೇಲಿಟ್ಟಾಗ ಸರ್ಪಗಳೆಲ್ಲ ಸ್ನಾನಕ್ಕೆ ಹೋದವು. ಬರುವಾಗ ಇಂದ್ರನು ಆ ಅಮೃತಕಲಶವನ್ನು ಅಪಹರಿಸಿದ್ದನು. ಸರ್ಪಗಳು ಅಮೃತವನ್ನಿಟ್ಟ, ದರ್ಭೆಯ ಹಾಸನ್ನು ನೆಕ್ಕಿದುದರಿಂದ ಅವುಗಳ ನಾಲಿಗೆ ಸೀಳಾಯಿತು (ಮ.ಆ.).

ದ್ವಿತ - ಗೌತಮ ಮುನಿಯ ಎರಡನೆಯ ಮಗ. ಏಕತ, ತ್ರಿತರು ಈತನ ಸೋದರರು. ನೋ. - ತ್ರಿತ (ಮ.ಸ.,ಶ.).

ದ್ವಿಮೂರ್ಧಾ - ಒಬ್ಬ ಅಸುರ (ಮ.ದ್ರೋ.).

ದ್ವಿವಿದ - ಒಬ್ಬ ವಾನರ. ಸುಗ್ರೀವನ ಒಬ್ಬ ಮಂತ್ರಿ. ಮೈಂದನೆಂಬ ಕಪಿನಾಯಕನ ತಮ್ಮ. ಸುಗ್ರೀವನ ಸೋದರಮಾವನಾದ ಸುಷೇಣನ ಮಗ; ಹತ್ತುಸಾವಿರ ಆನೆಗಳ ಬಲವುಳ್ಳವನು. ಇವನು ನರಕಾಸುರನ ಸ್ನೇಹಿತನಾಗಿದ್ದನು. ಶ್ರೀಕೃಷ್ಣನಿಂದ ನರಕಾಸುರನ ವಧೆಯಾದಮೇಲೆ ಈತನು ಕೆರಳಿ ಶ್ರೀಕೃಷ್ಣನಿದ್ದ ಆನರ್ತ ದೇಶೀಯರಿಗೆ ಹಲವು ವಿಧದ ಪೀಡೆ ಕೊಡತೊಡಗಿದನು. ಒಮ್ಮೆ ರೈವತಕ ಪರ್ವತದಲ್ಲಿ ಸ್ತ್ರೀಯರೊಡನೆ ಮದ್ದಾನೆಯಂತೆ ಕ್ರೀಡಿಸುತ್ತ, ಮದ್ಯ ಸೇವಿಸುತ್ತಿದ್ದ ಬಲರಾಮನನ್ನು ಇವನು ಕೆರಳಿಸಲು ಬಲರಾಮನು ತನ್ನ ಸುನಂದವೆಂಬ ಮುಸಲಾಯುಧದಿಂದ ಈ ವಾನರನನ್ನು ಇದಿರಿಸಿ, ಕೊನೆಗೆ ಮುಷ್ಟಿಯುದ್ಧದಲ್ಲಿ ಹೊಡೆದು ಕೊಂದನು (ಭಾಗ., ರಾಮಾ.ಯುದ್ಧ.,ಮ.ವ.).

ದ್ವೀಪಗಳು - ಜಂಬೂ, ಪ್ಲಕ್ಷ, ಕುಶ, ಕ್ರೌಂಚ, ಶಾಕ, ಶಾಲ್ಮಲಿ ಪುಷ್ಕರ ಎಂಬ ಏಳು ದ್ವೀಪಗಳು.

ಹಿಂದೂದೇಶದೊಳಗಿನ ರಾಜನಾದ ದಶರಥ, ಧೃತರಾಷ್ಟ್ರ, ಅರ್ಜುನ, ಅನಿರುದ್ಧ ಮುಂತಾದವರು ಪರದೇಶಗಳ ಹೆಣ್ಣುಗಳನ್ನೇ ಲಗ್ನವಾಗಿರುವರೆಂಬುದು ಎಲ್ಲರಿಗೂ ಗೊತ್ತಿದೆ. ಸ್ವಾಯಂಭುವ ಮನುವಿನ ಮಗನಾದ ಪ್ರಿಯವ್ರತನು ಈ ಭೂತಲವನ್ನು ಏಳು ದ್ವೀಪಗಳಾಗಿ ವಿಂಗಡಿಸಿದನು. ಅವು ಯಾವುವೆಂದರೆ - ಜಂಬೂ ದ್ವೀಪ (ಏಷಿಯಾ), ಪ್ಲಕ್ಷದ್ವೀಪ (ದ.ಅಮೇರಿಕ), ಪುಷ್ಕರ (ಉ.ಅಮೆರಿಕ), ಕ್ರೌಂಚದ್ವೀಪ (ಆಫ್ರಿಕಾ), ಶಕದ್ವೀಪ (ಯುರೋಪ್), ಶಾಲ್ಮಲೀದ್ವೀಪ (ಆಸ್ಟ್ರೇಲಿಯಾ), ಕುಶದ್ವೀಪ (ಓಸ್ಯಾನಿಯಾ) ಸಂಸ್ಕೃತ ವಾಙ್ಮಯವು ಬಹುಮಟ್ಟಿಗೆ ನಷ್ಟವಾದ್ದರಿಂದ ಪ್ರಾಚೀನ ಕಾಲದ ಈ ಹೆಸರುಗಳನ್ನು ಸರಿಯಾಗಿ ಈಗಿನ ಖಂಡಗಳಿಗೆ ಸರಿಹಚ್ಚಲು ಸಾಕಷ್ಟು ಅವಕಾಶವಿಲ್ಲ. ಮೇಲಾಗಿ ಪ್ರಳಯದಿಂದ ಈ ಖಂಡಗಳು ಬಹುಮಟ್ಟಿಗೆ ಪಲ್ಲಟವಾದ್ದರಿಂದ ಅವು ಪ್ರಾಚೀನ ಕಾಲದ ಇಂತಹ ದೇಶಗಳೇ ಎಂದು ಖಂಡಿತವಾಗಿ ಹೇಳಲಿಕ್ಕೆ ಬಾರದು. ಅಂತೂ ಹಿಂದೂ ಪ್ರಾಚೀನ ಸಂಸ್ಕೃತಿಯು ಇಡೀ ಜಗತ್ತಿನಲ್ಲೆಲ್ಲ ಹರಡಿತ್ತೆಂದೂ ಅದರ ಕುರುಹುಗಳು ಈಗಲೂ ಅಲ್ಲಲ್ಲಿ ನೋಡಲಿಕ್ಕೆ ಸಿಗುತ್ತವೆಂದೂ ನಿಸ್ಸಂದೇಹವಾಗಿ ಹೇಳಬಹುದು (ವಿಷ್ಣುಪು., ಮ. ಭೀ., ಭಾಗ., ದೇವೀಭಾ., ಮತ್ಸ್ಯಪು.).

ದ್ವೈತವನ - ಸರಸ್ವತೀ ನದೀ ತೀರದ ಒಂದು ಅರಣ್ಯ. ಅರ್ಜುನನ ಸೂಚನೆಯ ಮೇರೆಗೆ ಪಾಂಡವರು ಈ ಪುಣ್ಯಕರವಾದ ಅರಣ್ಯದಲ್ಲಿ ಅರಣ್ಯವಾಸ ಕಾಲದಲ್ಲಿ ವಾಸಿಸಲು ನಿರ್ಧರಿಸಿದರು. ಈ ಹೆಸರಿನ ಒಂದು ಸರೋವರವಿದೆ (ಮ.ಶ.,ವ.,ವಿ.).

ದ್ವೈಪಾಯನ - ವೇದವ್ಯಾಸ ಮುನಿ. ಪರಾಶರರಿಂದ ಸತ್ಯವತಿಯಲ್ಲಿ ಯಮುನಾ ನದಿಯ ದ್ವೀಪವೊಂದರಲ್ಲಿ ಹುಟ್ಟಿದವರು. ನೋ. - ಕೃಷ್ಣದ್ವೈಪಾಯನ. ಈತನ ಮಗ ಶುಕಮುನಿ. ದ್ವೈಪಾಯನಹ್ರದ ಎಂಬ ಒಂದು ತೀರ್ಥವಿದೆ. ದುರ್ಯೋಧನನು ಭೀಮನೊಂದಿಗೆ ಗದಾಯುದ್ಧ ಮಾಡಲು ಮೊದಲು ಈ ಮಡುವಿನಲ್ಲಿ ಅಡಗಿಕೊಂಡಿದ್ದ. ಭೀಮ-ದುರ್ಯೋಧನರ ಯುದ್ಧವು ಈ ಸರೋವರದ ತೀರದಲ್ಲೇ ನಡೆಯಿತು (ಮ.ಶ.,ಅಶ್ವ.).

ಧ

ಧನಕ - ಚಂದ್ರವಂಶದ ಭದ್ರಸೇನರಾಜನ ಮಗ. ಇವನಿಗೆ ಕೃತವೀರ್ಯ, ಕೃತಾಗ್ನಿ, ಕೃತವರ್ಮ, ಕೃತೌಜರೆಂಬ ನಾಲ್ವರು ಮಕ್ಕಳಿದ್ದರು. ಕೃತವೀರ್ಯನ ಮಗನೇ ಕಾರ್ತವೀರ್ಯಾರ್ಜುನ (ಮ.ಸ.).

ಧನದ - ನೋ.-ಕುಭೇರ (ಮ.ಸ.).

ಧನಂಜಯ - ೧. ಅರ್ಜುನ. ರಾಜಸೂಯಯಾಗ ಕಾಲದಲ್ಲಿ ಉತ್ತರ ಕುರುವಿನವರೆಗೆ ದಿಗ್ವಿಜಯ ಮಾಡಿ ಹೇರಳ ಧನವನ್ನು ಜಯಿಸಿ ತಂದವನು. ೨.ವಿಶ್ವಾಮಿತ್ರನ ವಂಶದ ಮಂತ್ರಪ್ರವರ್ತಕನೊಬ್ಬ. ೩.ಸರ್ಪವೊಂದು. ನಾರದನು ಸರ್ಪಲೋಕಕ್ಕೆ (ಭೋಗವತಿಗೆ) ಮಾತಲಿಯನ್ನು ಕರೆದುಕೊಂಡು ಹೋಗಿ ಕಶ್ಯಪಕುಮಾರರಲ್ಲಿ ಪ್ರಸಿದ್ಧರಾದ ವಾಸುಕಿ, ತಕ್ಷಕ, ಕಾರ್ಕೋಟಕ, ಧನಂಜಯ, ಕಾಳೀಯ, ನಹುಷ ಮೊದಲಾದ ಪ್ರಸಿದ್ಧ ಸರ್ಪಗಳನ್ನು ತೋರಿಸಿ ಇವರಲ್ಲಿ ನಿನ್ನ ಮಗಳಾದ ಗುಣಕೇಶಿಗೆ ತಕ್ಕ ಪತಿ ಯಾರೆಂದು ಕೇಳಿದಾಗ ಮಾತಲಿಯು ಐರಾವತವೆಂಬ ಸರ್ಪದ ವಂಶದಲ್ಲಿ ಹುಟ್ಟಿದ ಚಿಕುರನ ಮಗನಾದ ಸುಮುಖನನ್ನು ತನ್ನ ಅಳಿಯನನ್ನಾಗಿ ಮಾಡಿಕೊಳ್ಳುತ್ತೇನೆನ್ನುತ್ತಾನೆ. ೪. ಒಬ್ಬ ಬ್ರಹ್ಮರ್ಷಿ; ಈತನ ಪತ್ನಿ ಕುಮಾರಿ. ೫. ದೇಹದಲ್ಲಿರುವ ಉಪಪ್ರಾಣವಾಯುಗಳಲ್ಲೊಂದು. ಮುಖ್ಯಪ್ರಾಣ ವಾಯುದೇವನು ತೊಲಗಿದಮೇಲೂ ಇದು ಸ್ವಲ್ಪ ಕಾಲದವರೆಗೆ ದೇಹದಲ್ಲಿರುತ್ತದೆ. ೬. ಈಗಿನ ವೈವಸ್ವತ ಮನ್ವಂತರದ ಹದಿನಾರನೆಯ ದ್ವಾಪರಯುಗದ ವ್ಯಾಸ. ೭. ಅಗ್ನಿಯ ಹೆಸರು; ಧನವನ್ನು ಜಯಿಸಿದನು (ಮ.ಸ.,ಉ.,ವಿ.,ದೇವೀಭಾ.).

ಧನಿಷ್ಠಾ - ದಕ್ಷಬ್ರಹ್ಮನ ಮಗಳು. ಚಂದ್ರನ ಒಬ್ಬಳು ಪತ್ನಿ. ಒಂದು ನಕ್ಷತ್ರ (ಮ.ಆ.).

ಧನುರ್ಧರ - ಚಂದ್ರವಂಶದ ಧೃತರಾಷ್ಟ್ರನ ಮಗ; ಭೀಮನಿಂದ ಹತನಾದನು (ಮ.ಕ.).

ಧನುರ್ವೇದ - ಯಜುರ್ವೇದದ ಉಪವೇದ. ವಿವಿಧ ಬಾಣಗಳ ಪ್ರಯೋಗೋಪಸಂಹಾರದ ಕುರಿತು ಹೇಳಿದ್ದರೂ ಇದು ಈಗ ರೂಢಿಯಲ್ಲಿಲ್ಲ. ಚತುರ್ಮುಖನ ದಕ್ಷಿಣಮುಖದಿಂದ ಉತ್ಪತ್ತಿಯಾದದ್ದು (ಭಾಗ.).

ಧನುಷಾಕ್ಷ (ಧನುಷಾಖ್ಯ) - ಋಷಿ; ಬ್ರಹ್ಮರ್ಷಿಯಾದ ಬಾಲಧಿಯು ತನಗೆ ಚಿರಂಜೀವಿಯಾದ ಮಗನಾಗಬೇಕೆಂದು ಪ್ರಾರ್ಥಿಸಿದನು. ದೇವರು ಹಾಗೆಯೇ ಅನುಗ್ರಹಿಸಿ ಅದೃಶ್ಯನಾದನು. ಮುಂದೆ ಬಾಲಧಿಗೂ ಮಗನಾದನು. ಅವನಿಗೆ ಮೇಧಾವಿಯೆಂದು ಹೆಸರನ್ನಿಟ್ಟು ಪ್ರೀತಿಯಿಂದ ಪೋಷಿಸುತ್ತಿದ್ದನು. ಈ ಬಾಲಕನಿಗೆ ತಾನು ದೊಡ್ಡವನಾದಮೇಲೆ ಚಿರಂಜೀವಿಯೆಂಬ ವಿಚಾರ ತಿಳಿದು ಲೋಕಕಂಟಕನಾದನು. ಒಮ್ಮೆ ಧನುಷಾಕ್ಷನೆಂಬ ಮುನಿಯನ್ನು ಪೀಡಿಸಲು

ಆತನು ಕೋಪಗೊಂಡು - 'ನೀನು ಸಾಯಿ' ಎಂದು ಶಾಪವಿತ್ತರೂ ಸಾಯದಿರಲು ಮುನಿಯು ಇದರ ಕಾರಣವನ್ನು ತಿಳಿದು, ದೊಡ್ಡ ಕೋಣಗಳನ್ನು ತನ್ನ ತಪಶ್ಶಕ್ತಿಯಿಂದ ಉತ್ಪತ್ತಿಮಾಡಿ, ಅಲ್ಲಿರುವ ಪರ್ವತವನ್ನು ಹುಡಿಮಾಡುವಂತೆ ಅಪ್ಪಣೆ ಇತ್ತನು. ಪರ್ವತವು ಈ ಕೋಣಗಳಿಂದ ಹುಡಿಹುಡಿಯಾಯಿತು. ಮೇಧಾವಿಯು ಅಲ್ಲೇ ಬಿದ್ದು ತೀರಿಹೋದನು. ನೋ-ಬಾಲಧಿ, ಮೇಧಾವಿ (ಮ.ವ.,ಶಾಂ.).

ಧನುಷ್ಕೋಟ - ರಾಮೇಶ್ವರನ ಬಳಿ ಪೂರ್ವ-ಪಶ್ಚಿಮ ಸಮುದ್ರಗಳು ಕೂಡುವ ಸ್ಥಳ. ರಾವಣನ ವಧಾನಂತರ ಶ್ರೀರಾಮನು ಅಯೋಧ್ಯೆಗೆ ಹೊರಟಾಗ ವಿಭೀಷಣನು 'ದೇವಾ, ನೀನು ನಿರ್ಮಿಸಿದ ಸೇತುವೆಯಿಂದ ಮುಂದೆ ಲಂಕೆಗೆ ವಿಪತ್ತು ತಪ್ಪದು. ಅದಕ್ಕಾಗಿ ಅದನ್ನು ನಾಶಮಾಡು' ಎಂದು ಪ್ರಾರ್ಥಿಸಲು ಶ್ರೀರಾಮನು ಧನುಸ್ಸಿನ ಕೋಟಿ ಅಂದರೆ ತುದಿಯಿಂದ ಆ ಸೇತುವೆಯನ್ನು ಅಲ್ಲಲ್ಲಿ ತುಂಡರಿಸಿದನು. ಹೀಗೆ ಸೇತುವೆಯನ್ನು ತುಂಡರಿಸಿದ ಈ ಭಾಗಕ್ಕೆ ಧನುಷ್ಕೋಟಿ ಎನ್ನುತ್ತಾರೆ. ರಾಮನಾಡದಿಂದ ಇಲ್ಲಿಗೆ ೪೨ ಮೈಲು ದೂರವಿದೆ. ಇಲ್ಲಿರುವ ಪಂಬನ್ ಜಂಕ್ಷನ್ನಿನ ಹತ್ತಿರ ರೈಲ್ವೆ ಗಾಡಿಯು ಸಮುದ್ರವನ್ನು ದಾಟುತ್ತದೆ. ಇಲ್ಲಿಯ ದೃಶ್ಯವು ಅತ್ಯಂತ ಮನೋಹರವಾದುದು. ಇಲ್ಲಿ ಸಮುದ್ರವು ತುಂಬಾ ಆಳವಾಗಿ ಹೆದ್ದೆರೆಗಳಿಂದ ಆರ್ಭಟಿಸುತ್ತಿರುತ್ತದೆ. ಇಲ್ಲಿ ಜನರು ಸ್ನಾನಮಾಡಿ ಶ್ರಾದ್ಧಪಿಂಡಗಳನ್ನು ಅರ್ಪಿಸುವರು (ಕ್ಷೇತ್ರದ.).

ಧನ್ಯಾ - ಉತ್ತಾನಪಾದರಾಜನ ಮಗನಾದ ಧ್ರುವನ ನಾಲ್ವರು ಪತ್ನಿಯರಲ್ಲಿ ಈಕೆ ಮೂರನೆಯವಳು. ಈಕೆಯ ಮಗನೇ ಶಿಷ್ಟನು ನೋ.-ಧ್ರುವ (ಮತ್ಸ್ಯಪು.).

ಧನ್ವಂತರಿ-ದೇವವೈದ್ಯ. ಸಮುದ್ರಮಥನ ಕಾಲದಲ್ಲಿ ಅಮೃತವನ್ನು ಹಿಡಿದುಕೊಂಡೇ ಹುಟ್ಟಿದವನು. ಈತನು ಆಯುರ್ವೇದಕ್ಕೆ ಮೂಲಪುರುಷ. ಕಾಶೀರಾಜನಾದ ದೀರ್ಘತಪಸ್ಸಿನ ಮಗ. ಇವನಿಗೆ ನಾರಾಯಣನು ಕಾಶೀರಾಜನ ವಂಶದಲ್ಲಿ ಹುಟ್ಟಿ ಆಯುರ್ವೇದ ವೈದ್ಯಶಾಸ್ತ್ರವನ್ನು ಎಂಟು ಭಾಗ ಮಾಡಿ 'ಯಜ್ಞಭಾಗದಲ್ಲಿ ಭಾಗಿಯಾಗು' ಎಂದು ಅಪ್ಪಣೆ ಮಾಡಿದನು. ಇವನಿಗೆ ಕೇತುಮಂತನೆಂಬ ಮಗನಿದ್ದನು (ಮ.ಆ.,ಭಾಗ.,ವಿಷ್ಣುಪು.,ಮತ್ಸ್ಯಪು.).

ಧರ - ೧. ಅಷ್ಟವಸುಗಳಲ್ಲಿ ಮೊದಲನೆಯವನು. ಈತನ ತಾಯಿ ಧೂಮ್ರೆ. ಧ್ರುವನು ಸೋದರ; ದ್ರವಿಣ ಮತ್ತು ಹುತಹವ್ಯರೆಂಬವರು ಮಕ್ಕಳು. ೨.ಶುಕ್ರಾಚಾರ್ಯನ ಮಗ (ಮ.ಆ., ಅನು.).

ಧರಣಿ - ಬ್ರಹ್ಮನ ಎಡಗೈ ಹೆಬ್ಬೆಟ್ಟಿನಿಂದ ಜನಿಸಿದಳು. ದಕ್ಷನ ಪತ್ನಿ. ದಿತಿ, ಅದಿತಿ, ಮೊದಲಾದ ಕಶ್ಯಪನ ಹೆಂಡಿರು ಈಕೆಯ ಮಕ್ಕಳು (ಮ.ಆ.).

ಧರಾ - ದ್ರೋಣನೆಂಬ ವಸುವಿನ ಪತ್ನಿ. ಈಕೆ ಮರುಜನ್ಮದಲ್ಲಿ ಯಶೋದೆಯಾಗಿ ಜನಿಸಿದಳು. ನೋ. - ದ್ರೋಣ.

ಧರ್ಮ - ೧. ಪರಮಾತ್ಮನನ್ನು ಪಡೆಯುವ ಹಾದಿಯ ಹೆಸರು ಧರ್ಮ. ಧರ್ಮಕ್ಕೆ ಮನುವು ನಾಲ್ಕು ಲಕ್ಷಣ. ಹೇಳಿದ್ದಾನೆ;

ಶ್ಲೋ || ವೇದಃ ಸ್ಮೃತಿಃ ಸದಾಚಾರಃ ಸ್ವಸ್ಯಚ ಪ್ರಿಯಮಾತ್ಮನಃ|

ಏತಚ್ಚತುರ್ವಿಧಂ ಪ್ರಾಹುಃ ಸಾಕ್ಷಾತ್ ಧರ್ಮಸ್ಯ ಲಕ್ಷಣಮ್||

ಧರ್ಮಕ್ಕೆ ನಾಲ್ಕು ಒರೆಗಲ್ಲು: ೧. ವೇದ, ೨. ಸ್ಮೃತಿ ೩. ಸದಾಚಾರ ೪.ಯಾವುದರಿಂದ ಆತ್ಮಕ್ಕೆ ಸಂತೋಷವಾಗುತ್ತದೆಯೋ ಅದು.

೧. ವೇದ-ವೇದಗಳು ನಾಲ್ಕು. ಒಂದೊಂದು ವೇದದಲ್ಲೂ ನಾಲ್ಕು

ವಿಭಾಗಗಳಿವೆ:

೧. ಸಂಹಿತೆ ೨. ಬ್ರಾಹ್ಮಣ ೩. ಆರಣ್ಯಕ ೪. ಉಪನಿಷತ್ತು.

೨. ಸ್ಮೃತಿ-ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದ, ಜ್ಯೋತಿಷ-ಈ ಆರು ವೇದಾಂಗಗಳು. ಧರ್ಮಶಾಸ್ತ್ರ, ಇತಿಹಾಸ, ಪುರಾಣ ನೀತಿಯ ಸಮಸ್ತ ಗ್ರಂಥ ಸ್ಮೃತಿ ಎನ್ನಿಸಿಕೊಳ್ಳುತ್ತದೆ. ಮನಸ್ಮೃತಿ (ಮಾನವಧರ್ಮಶಾಸ್ತ್ರ), ಯಾಜ್ಞವಲ್ಕ್ಯಸ್ಮೃತಿ, ಅತ್ರಿಸ್ಮೃತಿ, ವಿಷ್ಣುಸ್ಮೃತಿ, ಆಪಸ್ತಂಬಸ್ಮೃತಿ, ಪರಾಶರಸ್ಮೃತಿ, ವ್ಯಾಸಸ್ಮೃತಿ, ವಸಿಷ್ಠಸ್ಮೃತಿ. ಧರ್ಮದ ಆರು ಆಧಾರಗಳನ್ನು ಅಥರ್ವವೇದದಲ್ಲಿ ಹೀಗೆ ಹೇಳಿದೆ.

ಶ್ಲೋ|| ಸತ್ಯಂ ಬೃಹದ್ ಋತಮ್ ಉಗ್ರಂ|

ದೀಕ್ಷಾ ತಪೋ ಬ್ರಹ್ಮಯಜ್ಞಃ ಪೃಥಿವೀಂ ಧಾರಯನ್ತಿ||

ಪೃಥ್ವಿಯನ್ನು ಧಾರಣೆ ಮಾಡುವ ಆಧಾರ ಆರು-೧. ಸತ್ಯ, ೨. ದೀಕ್ಷಾ ೩.ಬ್ರಹ್ಮ ೪. ಋತ ೫. ತಪ ೬. ಯಜ್ಞ.

ಈ ಆರರ ಮೇಲೆ ನಿಂತಿದೆ ಪೃಥ್ವಿ. ಸತ್ಯ-ಧರ್ಮದಲ್ಲಿ ಸತ್ಯದ್ದೇ ಪ್ರಥಮಸ್ಥಾನ. ಋಗ್ವೇದದಲ್ಲಿ ಓಗೆ ಹೇಳಿದೆ.

ಸತ್ಯಮಿದ್ ವಾ ಉತಂ ವಯಮ್| ಇಂದ್ರಂ ಸ್ತವಾಮ ನಾನೃತಂ||

'ಬನ್ನಿ, ಇಂದ್ರೋಪಾಸನ ಮಾಡೋಣ. ಅವನು ಸತ್ಯ; ಅಸತ್ಯ ಅಲ್ಲ.'

ಋತ-ಋತವೆಂದರೆ ನೀಟುಗೆರೆ, ನಿಯಮ. ಜಗತ್ತಿನ ಎಲ್ಲ ಪದಾರ್ಥಗಳೂ ನಿಯಮದಂತೆ ನಡೆಯುತ್ತವೆ. ಮನುಷ್ಯನೂ ಹೀಗೆ ನಿಯಮದಂತೆ ನಡೆಯಬೇಕು; ನೀತಿಗೆ ಅನುಸಾರವಾದ ನಿಯಮದಂತೆ ನಡೆಯಬೇಕು. ಋತದಲ್ಲಿ ನ್ಯಾಯವೂ ಬಂತು; ಸದಾಚಾರವೂ ಬಂತು.

ಸತ್ಯಋತಗಳನ್ನು ಒತ್ತಿಹೇಳುವುದು ಎಂದರೆ ಜ್ಞಾನ-ವಿಜ್ಞಾನವೆರಡನ್ನೂ ಒತ್ತಿ ಹೇಳಿದಂತೆ. ನಾಲ್ಕು ವರ್ಣದವರೂ ಧರ್ಮಪಾಲನೆ ಮಾಡಲಿ. ಆಗ ಸಮಾಜದ ಗಾಡಿ ಸರಿಯಾಗಿ ಮುಂದೆ ಸಾಗುವುದು. ಧರ್ಮವು ನೆಲೆ ನಿಂತೀತು. ದೀಕ್ಷಾ-ತಪ-ಸತ್ಯಸಾಧನೆಗೆ ದೀಕ್ಷೆಯೂ ಬೇಕು ತಪಸ್ಸೂ ಬೇಕು.

ಯಜುರ್ವೇದದಲ್ಲಿ ಹೀಗೆ ಹೇಳಿದೆ:

ಶ್ಲೋ|| ವ್ರತೇನ ದೀಕ್ಷಾಮಾಪ್ನೋತಿ ದೀಕ್ಷಯಾಽಪ್ನೋತಿ ದಕ್ಷಿಣಾಮ್|
ದಕ್ಷಿಣಾ ಶ್ರದ್ಧಾಮಾಪ್ನೋತಿ ಶ್ರದ್ಧಯಾ ಸತ್ಯಮಾಪ್ಯತೇ||

'ವ್ರತದಿಂದ ದೀಕ್ಷೆ, ದೀಕ್ಷೆಯಿಂದ ದಕ್ಷಿಣೆ, ದಕ್ಷಿಣೆಯಿಂದ ಶ್ರದ್ಧೆ, ಶ್ರದ್ಧೆಯಿಂದ ಸತ್ಯ-ಲಭಿಸುತ್ತವೆ.'

ತಪ ಎಂದರೆ ಇಂದ್ರಿಯ ಸಂಯಮ. ಯಾವ ಗುರಿಯನ್ನು ಸಾಧಿಸಬೇಕಾದರೂ ತಪಸ್ಸು ಮಾಡಲೇಬೇಕು. ಧರ್ಮವನ್ನು ಸಾಧಿಸಲಿಕ್ಕೂ ತಪಸ್ಸು ಅಗತ್ಯ. ಬ್ರಹ್ಮಚರ್ಯ ಜೀವನದಲ್ಲಿ ಹೇಗೆ ತಪಸ್ಸು ಮಾಡಬೇಕೋ ಮುಂದೆಯೂ ಹಾಗೇ.

ಬ್ರಹ್ಮ-ಯಜ್ಞ-ಬ್ರಹ್ಮವೆಂದರೆ ಪ್ರಾರ್ಥನೆ. ವೈದಿಕ ಮಂತ್ರಗಳ ವಿಧಿಪೂರ್ವಕ ಪಾಠ, ಮಂತ್ರಗಳ ಜಪ, ಪರಮಾತ್ಮನ ಸ್ತುತಿ, ಪ್ರಾರ್ಥನೆ ಇವು ಧರ್ಮದ ಆವಶ್ಯಕ ಅಂಗಗಳು. ಇದೇ ರೀತಿ ಯಜ್ಞಮಾಡುವುದೂ ಕೂಡ. ಪ್ರಾರ್ಥನೆ ಮಾಡುವವನೂ, ಯಜ್ಞ ಮಾಡುವವನೂ ಸದಾಚಾರಿಯಾಗಿರಬೇಕು. ಇಲ್ಲದಿದ್ದರೆ ಅವನು ಮಾಡುವ ಪೂಜೆ ಪ್ರಾರ್ಥನೆಗಳಿಗೆ ಅರ್ಥವಿಲ್ಲ. ಸದಾಚಾರಿಗಳಿಗೆ ಈ ಜಗತ್ತಿನಿಂದ ತಾರಣ; ದುರಾಚಾರಿಗಳಿಗೆ ಇಲ್ಲವೇ ಇಲ್ಲ. ಇದನ್ನು ಋಗ್ವೇದದಲ್ಲಿ ಹೇಳಿದೆ - 'ಋತಸ್ಯ ಪಂಥಾಂ ನ ತರನ್ತಿ ದುಷ್ಕೃತಃ|'

೨. ಪ್ರಜಾಪತಿಯೊಬ್ಬ; ಈತನು ಬ್ರಹ್ಮನ ದಕ್ಷಿಣಸ್ತನದಿಂದ ಉತ್ಪತ್ತಿಯಾದವನು. ಇವನು ಯಮನಾದನು. ಈತನ ಪತ್ನಿಯರು ದಕ್ಷಪ್ರಜಾಪತಿಯ ಹತ್ತು ಮಂದಿ ಪುತ್ರಿಯರು. ಕೀರ್ತಿ, ಲಕ್ಷ್ಮಿ, ಧೃತಿ, ಮೇಧಾ, ಪುಷ್ಟಿ, ಶ್ರದ್ಧೆ, ಕ್ರಿಯೆ, ಬುದ್ಧಿ, ಲಜ್ಜೆ, ಮತಿ- ಇವರೇ ಆ ಹತ್ತು ಮಂದಿ. ಈತನ ಮಗಳು ಸತ್ಯೆ. ಈಕೆಯು ಶಂಯು ಎಂಬ ಅಗ್ನಿಯ ಪತ್ನಿ. ೩. ಯಮ.

೪.ಯುಧಿಷ್ಠಿರ. ೫. ನಾಲ್ಕು ಪುರುಷಾರ್ಥಗಳಲ್ಲಿ ಮೊದಲನೆಯದು. ೬.ಬ್ರಹ್ಮನ ಮಾನಸಪುತ್ರನೊಬ್ಬ. ಇವನು ದಕ್ಷನ ಹದಿಮೂರು ಮಂದಿ ಹೆಣ್ಣುಮಕ್ಕಳನ್ನು ಮದುವೆಯಾದ. ಇವರಲ್ಲಿ ಮೂರ್ತಿ ಎಂಬವಳಲ್ಲಿ ನರ ಮತ್ತು ನಾರಾಯಣರು ಹುಟ್ಟಿದರು. ೭. ಉತ್ತಮ ಮನ್ವಂತರದ ಒಬ್ಬ ಬ್ರಹ್ಮರ್ಷಿ. ವಸು ಎಂಬವಳು ವಸುಗಳನ್ನೂ, ಲಂಘಾ ಎಂಬವಳು ಘೋಷನೆಂಬ ಮಗನನ್ನೂ, ಮುಹೂರ್ತಾ ಎಂಬವಳಲ್ಲಿ ಮುಹೂರ್ತಾಭಿಮಾನಿ ದೇವತೆಗಳನ್ನೂ, ವಿಶ್ವಾ ಎಂಬವಳಲ್ಲಿ ವಿಶ್ವದೇವತೆಗಳನ್ನೂ ಪಡೆದರು (ಮ.ಆ., ವ., ಶಾಂ., ಅನು.,ಭಾಗ., ದೇವೀಭಾ.,ಮತ್ಸ್ಯಪು.,ವಿಷ್ಣುಪು.).

ಧರ್ಮಜಾಲಿಕ - ವಿದ್ವಾಂಸನಾಗಿದ್ದ ವಿದಿಶಾ ನಗರದ ಬ್ರಾಹ್ಮಣನೊಬ್ಬ. ಈತನು ಪರೋಪದೇಶ ಪಾಂಡಿತ್ಯವುಳ್ಳವನಾಗಿ, ತಾನು ಮಾತ್ರ ಮದ್ಯಮಾಂಸಾದಿಗಳನ್ನು ಸೇವಿಸಿ, ಮಹಾಪಾಪಿಷ್ಠನಾಗಿ ಮರಣಾನಂತರ ನರಕವನ್ನನುಭವಿಸಿ, ಏಳು ಜನ್ಮಗಳ ತರುವಾಯ ಬ್ರಾಹ್ಮಣನಾಗಿ ಜನಿಸಿ ತಪಸ್ಸು ಮಾಡಿ ದೇಹಬಿಟ್ಟನು (ಸ್ಕಾಂ.ಪು.).

ಧರ್ಮದತ್ತ - ಭಿಕ್ಷುವೆಂಬ ಬ್ರಾಹ್ಮಣನ ಪತ್ನಿಯ ಪಿಶಾಚದೇಹವನ್ನು ತನ್ನ ಕಾರ್ತಿಕ ವ್ರತದ ಪುಣ್ಯ ಕೊಟ್ಟು ಉದ್ಧರಿಸಿದ ಬ್ರಾಹ್ಮಣ. ಮುಂದಿನ ಜನ್ಮದಲ್ಲಿ ಇವನು ದಶರಥನಾಗಿ ಜನಿಸಿದನು (ಸ್ಕಾಂ.ಪು.) ನೋ. - ಕಲಹಾ (ಆನಂ.ರಾ.).

ಧರ್ಮಧ್ವಜ - ವಿದೇಹರಾಜವಂಶದವ. ಈತನ ತಂದೆ ಕುಶಧ್ವಜ ಜನಕ. ಲಕ್ಷ್ಮಣನ ಪತ್ನಿಯಾದ ಊರ್ಮಿಳೆಯ ಒಬ್ಬ ಸೋದರ. ಕೃತಧ್ವಜ ಮತ್ತು ಮಿತಧ್ವಜರು ಈತನ ಮಕ್ಕಳು (ಮ.ಶಾಂ.).

ಧರ್ಮಪಕ್ಷಿ - ಇಂದ್ರನು ಪಕ್ಷಿರೂಪದಿಂದ ಸುಕೃಶನೆಂಬ ಬ್ರಾಹ್ಮಣನೊಡನೆ ನರಮಾಂಸವನ್ನು ಬೇಡಲು, ಸುಕೃಶನು ತನ್ನ ಮಕ್ಕಳೊಡನೆ ಆ ಪಕ್ಷಿಗೆ ಆಹಾರವಾಗುವಂತೆ ಹೇಳಲು, ಅವರು ಒಪ್ಪದುದರಿಂದ 'ನೀವು ಹಕ್ಕಿಗಳಾಗಿ ಜನಿಸಿರಿ' ಎಂದು ಶಾಪಕೊಟ್ಟು ಕೊನೆಗೆ ಮಕ್ಕಳು ತಂದೆಯೊಡನೆ ತಮ್ಮ ಅಪರಾಧವನ್ನು ಕ್ಷಮಿಸಬೇಕೆನ್ನಲು ಅವನು 'ಪಕ್ಷಿಜನ್ಮದಲ್ಲೂ ನಿಮಗೆ ಮನುಷ್ಯರಂತೆ ಮಾತಾಡುವ ಶಕ್ತಿ ಶಾಸ್ತ್ರ ಜ್ಞಾನವು ಮರೆಯದಿರಲಿ' ಎಂದನು. ಆ ಮಕ್ಕಳು ಪಕ್ಷಿಗಳಾಗಿ ಹುಟ್ಟಿ, ಶಮೀಕಮುನಿಗಳಿಂದ ಪೋಷಿಸಲ್ಪಟ್ಟು ದೊಡ್ಡವಾದಮೇಲೆ ವಿಂಧ್ಯಪರ್ವತದಲ್ಲಿ ತಪಸ್ಸುಮಾಡಿ ಶಾಪವಿಮೋಚನೆ

ಹೊಂದಿದವು. ಜೈಮಿನಿ ಮಹರ್ಷಿ ಇವುಗಳಲ್ಲಿ ಹೋಗಿ ಅನೇಕ ಧರ್ಮರಹಸ್ಯಗಳನ್ನು ತಿಳಿದುಕೊಂಡನು (ಮಾರ್ಕಂ.ಪು.).

ಧರ್ಮಪುತ್ರ - ೧. ಯಮನ ಪುತ್ರ; ಯುಧಿಷ್ಠಿರ; ವಿದುರ. ಯುಧಿಷ್ಠಿರನು ಕರ್ಣನ ಮರಣದಿಂದ ದುಃಖಿತನಾಗಿ ಕರ್ಣನ ಜನ್ಮವನ್ನು ರಹಸ್ಯವಾಗಿಟ್ಟ ಕುಂತಿಯ ಮೇಲೆ ಬೇಸರಗೊಂಡು 'ಸ್ತ್ರೀಯರು ರಹಸ್ಯವನ್ನು ಕಾಪಾಡುವುದರಲ್ಲಿ ಅಸಮರ್ಥರಾಗಲಿ' ಎಂದು ಶಾಪವಿತ್ತನು. (ಮ.ಶಾಂ.).

ಧರ್ಮಪ್ರಸ್ಥ - ಒಂದು ಕ್ಷೇತ್ರ. ಮದುವೆ ಮುಂಜಿ ಮೊದಲಾದ ಧರ್ಮಕಾರ್ಯಗಳಾಗುವ ಸ್ಥಳ. ಕುರುವೆಂಬ ರಾಜನು ಆ ಬಯಲನ್ನು ಉತ್ತದ್ದರಿಂದ ಅದು ಕುರುಕ್ಷೇತ್ರ-ಧರ್ಮಕ್ಷೇತ್ರವಾಯಿತು. ಇಂದ್ರನು ಅದಕ್ಕೆ ಆ ಹೆಸರಿಟ್ಟನೆಂದೂ ಹೇಳುತ್ತಾರೆ. ಇಲ್ಲೇ ಪರಶುರಾಮನು ಇಪ್ಪತ್ತೊಂದು ಸಲ ಸುತ್ತಿ ಭೂಮಿಯ ಮೇಲಿರುವ ಕ್ಷತ್ರಿಯರನ್ನೆಲ್ಲ ಕೊಂದಮೇಲೆ ಇಲ್ಲಿ ಪಿತೃತರ್ಪಣ ಮಾಡಿದನೆಂದೂ ಹೇಳುತ್ತಾರೆ. ಈಗಿನ ದಿಲ್ಲಿ ಪಟ್ಟಣವಿರುವುದು ಈ ಬಯಲಿನಲ್ಲೇ (ಕ್ಷೇತ್ರದ).

ಧರ್ಮರುಚಿ - ನೋ. - ಸತ್ಯಕೇತು. ಪ್ರತಾಪಭಾನು.

ಧರ್ಮವರ್ಧನ - ಕೇಕಯ ದೇಶ ಮತ್ತು ಅಯೋಧ್ಯೆಗೆ ನಡುವಿರುವ ಪಟ್ಟಣ. ಭರತನು ತಂದೆಯ ಮರಣಾನಂತರ ಅಯೋಧ್ಯೆಗೆ ಬರುವಾಗ ಈ ಪಟ್ಟಣವನ್ನು ಹಾದುಬಂದನು (ರಾಮಾ.ಅಯೋ).

ಧರ್ಮವ್ರತ - ಮಹರ್ಷಿಯೊಬ್ಬ. ಶ್ರೀರಾಮನು ಸುತೀಕ್ಷ್ಣಮುನಿಯ ಆಶ್ರಮದಿಂದ ಅಗಸ್ತ್ಯಾಶ್ರಮಕ್ಕೆ ಹೋಗುವ ದಾರಿಯಲ್ಲಿ ದಿವ್ಯಸಂಗೀತವನ್ನು ಕೇಳಿ ಆ ಮುನಿಯ ಹತ್ತಿರ ಹೋಗಿ ಇದರ ಕಾರಣವನ್ನು ಕೇಳಲು ಆತನು - 'ಇಲ್ಲಿ ಅದೃಶ್ಯನಾಗಿ ಮಾಂಡಿಕರ್ಣಿ ಎಂಬ ಮುನಿಯು ಇಂದ್ರನು ಕಳುಹಿಸಿದ ಐವರು ಅಪ್ಸರೆಯೊಂದಿಗೆ ದಿವ್ಯ ತಾರುಣ್ಯದಿಂದ ಕ್ರೀಡಿಸುತ್ತಿದ್ದಾನೆ'. ಎಂದು ನಿಜಾಂಶವನ್ನು ಹೇಳಿದನು (ರಾಮಾ.ಅರ.).

ಧರ್ಮವ್ಯಾಧ - ೧. ಜ್ಞಾನವುಳ್ಳ ಬೇಡನೊಬ್ಬ. ಕೌಶಿಕನೆಂಬ ಬ್ರಾಹ್ಮಣನಿಗೆ ಜ್ಞಾನೋಪದೇಶ ಮಾಡಿದನು. ನೋ.-ಕೌಶಿಕ. ಪೂರ್ವಜನ್ಮದಲ್ಲಿ ಈತನೊಬ್ಬ ಬ್ರಾಹ್ಮಣನಾಗಿದ್ದು ಶಸ್ತ್ರಶಾಸ್ತ್ರಪಾರಂಗತನಾಗಿ ರಾಜಪುತ್ರರೊಡನೆ ಬೇಟೆಗೆ ಹೋಗಿ ಜಿಂಕೆಯೆಂಬ ಭ್ರಾಂತಿಯಿಂದ ಮುನಿಯೊಬ್ಬನನ್ನು ಕೊಂದನು. ಆ ಮುನಿಯು - 'ನೀನು ಬ್ರಾಹ್ಮಣನಾಗಿಯೂ ಕಟುಕನಂತೆ ವರ್ತಿಸಿದುದರಿಂದ ಮುಂದಿನ ಜನ್ಮದಲ್ಲಿ ಕಟುಕನಾಗು' ಎಂದು ಶಾಪವಿತ್ತನು. ಈ ಶಾಪದಿಂದ ಮುಂದೆ ಈ ಬ್ರಾಹ್ಮಣನು ಧರ್ಮವ್ಯಾಧನೆಂಬ ಹೆಸರಿನ ಬೇಡನಾಗಿ

ಹುಟ್ಟಿದನು. ಈತನಿಗೆ ಅರ್ಜುನನೆಂಬ ಮಗನೂ, ಅರ್ಜುನಿಕಿ ಎಂಬ ಮಗಳೂ ಇದ್ದರು. ಈತನು ಮಗಳನ್ನು ಮತಂಗಮುನಿಯ ಪುತ್ರನಾದ ಪ್ರಸನ್ನಮುನಿಗೆ ಲಗ್ನಮಾಡಿಕೊಟ್ಟಿದ್ದ. ಒಮ್ಮೆ ಅರ್ಜುನಿಕಿಯ ಅತ್ತೆ ಆಕೆಯನ್ನು ಬೇಡನ ಮಗಳೆಂದು ತಿರಸ್ಕರಿಸಲು ಧರ್ಮವ್ಯಾಧನು, 'ನಾನು ವಾರಕ್ಕೊಮ್ಮೆ ಒಂದು ಮೃಗವನ್ನು ಕೊಂದರೆ ನೀವು ನಿತ್ಯವೂ ಸಸ್ಯಗಳ ಪ್ರಾಣಹಿಂಸೆ ಮಾಡುತ್ತಿದ್ದೀರಿ' ಎಂದು ಹೇಳಿ ಅಲ್ಲಿಂದ ಹೊರಟುಹೋದನು. ಆಗ ಅರ್ಜುನಿಕಿಯ ಅತ್ತೆಯು ಸೊಸೆಯನ್ನು ನಿಂದಿಸುವುದು ತಪ್ಪೆಂದು ತಿಳಿದುಕೊಂಡಳು. ಧರ್ಮವ್ಯಾಧನು ಮಿಥಿಲಾ ಪಟ್ಟಣದಲ್ಲಿ ವಾಸಿಸುತ್ತಿದ್ದನು. ೨. ಶ್ವೇತರಾಜನ ದೇಹದಿಂದ ಹೊರಬಿದ್ದ ಬ್ರಹ್ಮಹತ್ಯೆಯು ಬೇಡನ ಆಕಾರವನ್ನು ಹೊಂದಿತು. ಶ್ವೇತನು ಇವನಿಗೆ ಧರ್ಮವ್ಯಾಧನೆಂದು ಹೆಸರಿಟ್ಟನು. ನೋ.-ಶ್ವೇತ (ಮ.ವ.). ಧರ್ಮವ್ಯಾಧನು ಬೇಡನಾಗಿ ಜನಿಸಿದ್ದರೂ ಕೌಶಿಕನೆಂಬ ಮುನಿಗೆ ಧರ್ಮೋಪದೇಶಮಾಡಿದನು (ಮ.ವ.).

ಧರ್ಮಸಾವರ್ಣಿ - ಹನ್ನೊಂದನೆಯ ಮನು. ಇವನಿಗೆ ಮೇರುಸಾವರ್ಣಿ ಎಂಬ ಹೆಸರೂ ಇದೆ. ಈತನಿಗೆ ಹತ್ತು ಮಂದಿ ಪುತ್ರರು. ಇವನ ಕಾಲದಲ್ಲಿ ಸ್ವರ್ಗಲೋಕದಲ್ಲಿ ವೈಧೃತಿ ಎಂಬ ಇಂದ್ರನು ಪಾಲಿಸುತ್ತಿದ್ದ. ಆಗ ಧರ್ಮಸೇತುವೆಂಬ ಹೆಸರಿನ ವಿಷ್ಣುವಿದ್ದನು.

ಕೊನೆಯ ಐದು ಮನುಗಳಿಗೆ ಸಾವರ್ಣಿಮನುಗಳೆಂದೇ ಹೆಸರು. ಇವರಲ್ಲಿ ಮೊದಲನೆಯವನು ವೈವಸ್ವತ ಮನುವಿನ ಮಗ. ಉಳಿದ ನಾಲ್ವರು ಬ್ರಹ್ಮದೇವರ ಮಕ್ಕಳು. ದಕ್ಷಪ್ರಜಾಪತಿಯ ಪ್ರಿಯಾ ಎಂಬ ಹೆಣ್ಣುಮಗಳ ಹೊಟ್ಟೆಯಿಂದ ಈ ನಾಲ್ವರು ಹುಟ್ಟಿ ಮೇರುಪರ್ವತದಲ್ಲಿ ತಪವನ್ನು ಆಚರಿಸುತ್ತಿದ್ದುದರಿಂದ ಇವರನ್ನು ಮೇರುಸಾವರ್ಣಿಗಳೆಂದು ಕರೆಯುತ್ತಾರೆ. ಹನ್ನೊಂದನೆಯ ಮನ್ವಂತರದಲ್ಲಿ ಹವಿಷ್ಮಾನ್ (ಕಶ್ಯಪ ವಂಶಜ), ಹವಿಷ್ಮಾನ್ (ಭೃಗುವಂಶಜ), ತರುಣ, ಅನಘ, ಉದಧಿಷ್ಣ, ನಿಶ್ಚರ, ಅಗ್ನಿತೇಜ - ಇವರು ಸಪ್ತರ್ಷಿಗಳಾಗಿದ್ದರು (ಹರಿ.). ಇವನ ಕಾಲದಲ್ಲಿ ವಿಹಂಗಮ, ಕಾಮಗಮ, ನಿರ್ವಾಣ ರುಚಿಗಳೆಂಬ ಮೂರು ಬಗೆಯ ದೇವತೆಗಳು ಸ್ವರ್ಗದಲ್ಲಿ ವಾಸಮಾಡುತ್ತಿದ್ದರು (ಭಾಗ.).

ಧರ್ಮಸ್ಥಳ - ದಕ್ಷಿಣಭಾರತದ ಪ್ರಸಿದ್ಧ ಕ್ಷೇತ್ರ. ಇದು ನೇತ್ರಾವತಿ ನದೀತೀರದಲ್ಲಿದೆ. ಇದರ ಅನತಿದೂರದಲ್ಲಿರುವ ಬೆಟ್ಟಗಳು ಮತ್ತು ವನಶ್ರೀಯು ನೋಟಕರನ್ನು ಮುಗ್ಧಗೊಳಿಸುವುದು. ಇದರ ಬಳಿಯಲ್ಲೇ ಜಯಕೀರ್ತಿಬೆಟ್ಟ ಅಥವಾ ಶಿವರಾತ್ರಿಬೆಟ್ಟ, ಅಣ್ಣಪ್ಪನ ಬೆಟ್ಟ

ಮೊದಲಾದವುಗಳನ್ನು ಕಾಣಬಹುದು. ಧರ್ಮಸ್ಥಳಕ್ಕೆ ಕುಡುಮ ಎಂಬ ಇನ್ನೊಂದು ಹೆಸರಿದೆ. ಕುಡುಮ ಎಂದರೆ ಕೊಡುವ- ದಾನಕೊಡುವ ಸ್ಥಳ ಎಂದರ್ಥ. ಹೆಗ್ಗಡೆಯವರಿಗೆ ಬ್ರಾಹ್ಮಣರ ಸಂತರ್ಪಣೆಗೆ ಅನುಕೂಲವಾಗಿ ಧರ್ಮದೇವತೆಗಳು ದೂತನಾದ ಅಣ್ಣಪ್ಪನನ್ನು ಕಳುಹಿಸಿ ಕದಿರೆ ಮಂಜುನಾಥ ಲಿಂಗವನ್ನು ತರಿಸಿ ಇಲ್ಲಿ ಸ್ಥಾಪಿಸಿದರು. ಇದನ್ನು ಸಂಪತ್ತಿನ ದೃಷ್ಟಿಯಲ್ಲಿ ಅಭಿನವ ತಿರುಪತಿಯೆಂದರೂ ಸಲ್ಲುವುದು. ಇದೊಂದು ನದೀದುರ್ಗ (ಕ್ಷೇತ್ರದ.).

ಧರ್ಮಾರಣ್ಯ - ೧. ಬ್ರಾಹ್ಮಣನೊಬ್ಬ. ಈತನು ಪದ್ಮನಾಭನೆಂಬ ನಾಗರಾಜನ ಮೂಲಕ ಅಧ್ಯಾತ್ಮವಿದ್ಯೆಯನ್ನು ಅಭ್ಯಾಸಮಾಡಿದ. ೨. ಗಯಾದ ಸಮೀಪದ ಕ್ಷೇತ್ರವೊಂದು. ಇದು ಗಯಾ ಜಿಲ್ಲೆಯ ಬುದ್ಧಗಯೆಗೆ ನಾಲ್ಕು ಮೈಲು ದೂರದಲ್ಲಿದೆ (ಮ.ವ.,ಅನು.,ಶಾಂ.).

ಧರ್ಮೇಯು - ಚಂದ್ರವಂಶದ ರೌದ್ರಾಶ್ವನ ಪುತ್ರನಾದೊಬ್ಬ ಕ್ಷತ್ರಿಯ. ಈತನ ತಾಯಿ ಪಿತ್ರಕೇಶಿಯೆಂಬ ಅಪ್ಸರೆ. ಋಚೇಯು, ಕಕ್ಷೇಯು, ಸ್ಥಂಡಿಲೇಯು ಮೊದಲಾದ ಒಂಬತ್ತು ಮಂದಿ ಈತನ ಸೋದರರು (ಮ.ಆ.).

ಧಾತಕಿ - ಪ್ರಿಯವ್ರತರಾಜನ ಮೊಮ್ಮಗ. ನೋ. - ಪುಷ್ಕರದ್ವೀಪ.

ಧಾತಾ (ಧಾತೃ) - ೧. ದ್ವಾದಶಾದಿತ್ಯರಲ್ಲೊಬ್ಬ. ೨. ಭೃಗುಋಷಿಯ ಪುತ್ರ. ಈತನ ತಾಯಿ ಖ್ಯಾತಿ; ಹೆಂಡತಿ ಮೇರುಪುತ್ರಿಯಾದ ಆಯತಿ. ಈತನ ಮಗ ಮೃಕಂಡು; ಮೊಮ್ಮಗ ಚಿರಂಜೀವಿಯಾದ ಮಾರ್ಕಂಡೇಯ (ಭಾಗ.). ೩. ಬ್ರಹ್ಮ; ಸಮಸ್ತವನ್ನು ಧರಿಸುವವನು; ವೃದ್ಧಿ ಹೊಂದುವವನು (ಅಮರಪ್ರ.).

ಧಾತ್ರೇಯಿ - ದ್ರೌಪದಿಯ ದಾಸಿ. ಈಕೆಯು ದ್ರೌಪದಿಯನ್ನು ಜಯದ್ರಥನು ಅಪಹಾರ ಮಾಡಿದ ವಿಚಾರವನ್ನು ಭೀಮನಿಗೆ ತಿಳಿಸಿದಳು. ನೋ.-ಜಯದ್ರಥ (ಮ.ಆ.).

ಧಾನ್ಯಮಾಲಿನಿ - ೧. ರಾವಣನ ಒಬ್ಬಳು ಪತ್ನಿ. ಈಕೆಯ ಮಗನೇ ಅತಿಕಾಯ (ರಾಮಾ.ಸುಂ.). ೨. ಒಬ್ಬಳು ಅಪ್ಸರೆ. ಹನುಮಂತನು ಲಕ್ಷ್ಮಣನನ್ನು ಬದುಕಿಸಲು ಸಂಜೀವಿನಿ ಲತೆಯನ್ನು ತರಬೇಕೆಂದು ಚಂದ್ರದ್ರೋಣ ಪರ್ವತಕ್ಕೆ ಹೋದಾಗ, ಇದನ್ನು ತಿಳಿದ ರಾವಣನು ಕಳುಹಿಸಿದ ಕಾಲನೇಮಿಯು ತಾಪಸವೇಷದಿಂದ ಹನುಮನನ್ನುಪಚರಿಸಿ ತನ್ನ ಆಶ್ರಮದ ಸಮೀಪವಿದ್ದ ಕೊಳದಲ್ಲಿ ಮೀಯಲು ಕಳುಹಿಸಲು, ಸ್ಪರ್ಶದಿಂದಲೇ ಅದು ಶಾಪವಿಮೋಚನೆಯನ್ನು ಹೊಂದಿ ತಾನು ಧಾನ್ಯಮಾಲಿನಿಯೆಂಬ ಅಪ್ಸರೆಯೆಂದು ತನ್ನ ವೃತ್ತಾಂತವನ್ನು ಹೇಳಿ, ಆ

ಆಶ್ರಮವು ಕಾಲನೇಮಿಯ ಕಪಟರಚನೆಯಲ್ಲದೆ ಯಥಾರ್ಥವಲ್ಲವೆಂದು ಹೇಳಿ, ಆಕಾಶಮಾರ್ಗವಾಗಿ ಹೊರಟುಹೋದಳು. ನೋ.-ಕಾಲನೇಮಿ (ರಾಮಾ.ಯುದ್ಧ).

ಧಾರಾ - ಕುಮಾರಧಾರಾ ನದಿ. ನೋ.-ಸುಬ್ರಹ್ಮಣ್ಯ ಷಷ್ಠಿ.

ಧಾರಿಣಿ - ಪಿತೃದೇವತೆಗಳ ಮಗಳು. ಈಕೆಯ ಸೋದರಿ ವಯೂನ ಮತ್ತು ಬ್ರಹ್ಮವಾದಿನಿಯರು. ಭೂಮಿ; ವಿಶ್ವವನ್ನು ಧರಿಸುವುದು.

ಧಾರ್ತರಾಷ್ಟ್ರ - ಧೃತರಾಷ್ಟ್ರನ ನೂರುಮಂದಿ ಪುತ್ರರು. ನೋ. - ದುರ್ಯೋಧನ. ಧೃತರಾಷ್ಟ್ರ.

ಧಿಷಣ - ಬೃಹಸ್ಪತ್ಯಾಚಾರ್ಯನ ಇನ್ನೊಂದು ಹೆಸರು. ನೋ.-ಬೃಹಸ್ಪತಿ. ಈ ಬೃಹಸ್ಪತಿಯೇ ದ್ರೋಣನಾಗಿ ಅವತರಿಸಿದನು (ಹರಿ.). ಒಳ್ಳೆಯ ಬುದ್ಧಿಯುಳ್ಳವನು.

ಧೀಮಂತ - ನೋ.- ಪುರೂರವ. ಕ್ಷತ್ರಿಯ. ಚಂದ್ರವಂಶದ ಪುರೂರವನ ಮಗ; ಈತನ ತಾಯಿ ಊರ್ವಶಿ (ಮ.ಆ.). ಬುದ್ಧಿವಂತ.

ಧುಂಧು - ಮಧುಕೈಟಭರ ಮಗ. ನೋ. - ಮಧುಕೈಟಭ, ಕುವಲಾಶ್ವ.

ಧುಂಧುಕಾರಿ - ನೋ.-ಆತ್ಮದೇವ. ಧುಂಧುಲಿಯ ಕಪಟಪುತ್ರ.

ಧುಂಧುಮಾರ - ಸೂರ್ಯವಂಶದ ಬೃಹದಶ್ವನ ಮಗ; ಈತನು ಉದಂಕ ಮಹರ್ಷಿಗೆ ಅಪಕಾರಿಯಾದ ಧುಂಧುವೆಂಬ ರಾಕ್ಷಸನನ್ನು ವಿಷ್ಣುವಿನ ಆವೇಶಾವತಾರದಿಂದ ತನ್ನ ಇಪ್ಪತ್ತೊಂದನೆಯ ಸಾವಿರ ಪುತ್ರರೊಂದಿಗೆ ಕೂಡಿ ಸಂಹರಿಸಿದನು. ಇದರಿಂದ ಧುಂಧುಮಾರನೆಂಬ ಹೆಸರನ್ನು ಪಡೆದನು (ವಿಷ್ಣುಪು.). ಆ ಮಕ್ಕಳಲ್ಲಿ ದೃಢಾಶ್ವ, ಚಂದ್ರಾಶ್ವ, ಕಪಿಲಾಶ್ವರೆಂಬ ಮೂವರನ್ನು ಬಿಟ್ಟು ಉಳಿದೆಲ್ಲ ಮಕ್ಕಳೂ ಆ ರಾಕ್ಷಸನ ಉಚ್ಛ್ವಾಸಾಗ್ನಿಯಿಂದ ನಾಶವಾದರು. ನೋ.-ಕುವಲಾಶ್ವ (ಬ್ರಹ್ಮಪು., ವ.ವ., ಹರಿ., ಭಾಗ., ವಾಯುಪು).

ಧುಂಧುಲಿ - ನೋ.- ಆತ್ಮದೇವ. ಒಬ್ಬ ಬ್ರಾಹ್ಮಣಿ.

ಧೂತಪಾಪಾ - ನದಿಯೊಂದು. ವೇದಶಿರ ಮುನಿಯು ಅಪ್ಸರೆಯನ್ನು ಕಂಡಾಗ ಹುಟ್ಟಿದಳು. ಈಕೆಯನ್ನು ಧರ್ಮನು ಬಲಾತ್ಕರಿಸಿ ನದಿಯಾಗುವಂತೆ ಶಾಪಹೊಂದಿದ ಧೂತಪಾಪೆಗೆ ಶಿಲೆಯಾಗುವಂತೆ ಶಾಪವಿತ್ತ. ಆಗ ಧೂತಪಾಪೆಯು ಚಂದ್ರಕಾಂತಶಿಲೆಯಾಗಿ ಚಂದ್ರೋದಯವಾದೊಡನೆ ಕರಗಿ ನದಿಯಾಗಿ ಹರಿದು ಧರ್ಮನನ್ನು ಕೂಡಿದಳು (ಮ.ಭೀ.).

ಧೂಮಿನೀ - ಚಂದ್ರವಂಶದ ಅಜಮೀಢನ ಹೆಂಡತಿ. ಈಕೆಯ ಮಗ ಋಕ್ಷ ನೋ.-ಅಜಮೀಢ, ಋಕ್ಷ (ಮ.ಆ.).

ಧೂಮೋರ್ಣಾ - ೧. ಮಾರ್ಕಂಡೇಯ ಮುನಿಯ ಪತ್ನಿ (ಮ.ಅನು.). ೨. ಯಮನ ಪತ್ನಿ (ಮ.ಅನು.).

ಧೂಮ್ರಲೋಚನ - ರಾಕ್ಷಸನೊಬ್ಬ. ತ್ರಿಪುರಸುಂದರಿಯಿಂದ ನಾಶವಾದನು. ನೋ.-ಶುಂಭ, ನಿಶುಂಭ (ಮಾರ್ಕಂಪು.).

ಧೂಮ್ರಾ - ವಸುವಿನ ಪತ್ನಿ. ಈಕೆಗೆ ಧರ, ಧ್ರುವರೆಂಬವರು ಮಕ್ಕಳು (ಮ.ಆ.).

ಧೂಮ್ರಾಕ್ಷ - ರಾವಣನ ಮಂತ್ರಿಯಾದ ರಾಕ್ಷಸ. ವಜ್ರದಂಷ್ಟ್ರನೊಡನೆ ಕೂಡಿ ಯುದ್ಧರಂಗಕ್ಕೆ ಬಂದು ಹನುಮಂತನಿಂದ ಸ್ವರ್ಗಸ್ಥನಾದ (ಮ.ವ., ರಾಮಾ.ಯುದ್ಧ).

ಧೃತದೇವಾ - ದೇವಕನ ಮಗಳು. ಈಕೆ ವಸುದೇವನ ಹೆಂಡತಿ. ಮಗ ವಿಪೃಷ್ಠ. ನೋ.-ದೇವಕ, ವಸುದೇವ.

ಧೃತರಾಷ್ಟ್ರ - ೧. ಚಂದ್ರವಂಶದ ಪುರುವಂಶೋತ್ಪನ್ನನಾದ ವಿಚಿತ್ರವೀರ್ಯನ ಕ್ಷೇತ್ರದಲ್ಲಿ ವ್ಯಾಸನಿಂದ ಉತ್ಪನ್ನನಾದ ಮಗ; ತಾಯಿ ಅಂಬಿಕೆ. ಈತನಿಗೆ ಅಂಬಿಕೇಯ, ವೈಚಿತ್ರ್ಯವೀರ್ಯ, ಪ್ರಜ್ಞಾಚಕ್ಷು, ಅಜಮೀಢನೆಂಬ ಹೆಸರುಗಳಿವೆ. ಈತನು ಗಂಧರ್ವ ಅಂಶದಿಂದ ಉತ್ಪನ್ನನಾದವನು.

ಕುಬೇರನು ಧೃತರಾಷ್ಟ್ರನಾಗಿ ಅವತರಿಸಿದನು (ಹರಿ.). ಈತನ ಪತ್ನಿ ಗಾಂಧಾರಿ ಮತ್ತು ಈಕೆಯ ಸೋದರಿಯರಾದ ಸತ್ಯವ್ರತಾ, ಸತ್ಯಸೇನಾ ಮೊದಲಾದ ಹತ್ತು ಮಂದಿ ಇದ್ದರು. ನೋ.-ಗಾಂಧಾರಿ. ಈತನ ಮೈದುನರು ಶಕುನಿ ಮೊದಲಾದ ಹದಿಮೂರು ಮಂದಿ; ತುರಂಗ ಭಾರತದಲ್ಲಿ ಮೈದುನರು ನೂರು ಮಂದಿ ಎಂದಿದೆ. ಇದಕ್ಕೆ ಆಧಾರ ಯಾವುದೋ ಗೊತ್ತಿಲ್ಲ. ನೋ-ದುರ್ಯೋಧನ. ಶ್ರೀಕೃಷ್ಣನು ತನ್ನ ವಿಶ್ವರೂಪದರ್ಶನಕ್ಕಾಗಿ ಈತನಿಗೆ ಕಣ್ಣುಗಳನ್ನು ಕೊಟ್ಟನು. ಪುತ್ರನಾಶದಿಂದ ಈತನ ವ್ಯಸನ ಅತಿಶಯವಾದಾಗ ಭೀಮನ ಆಲಿಂಗನಕ್ಕಾಗಿ ಧೃತರಾಷ್ಟ್ರನು ಅಪೇಕ್ಷೆಪಡಲು ಶ್ರೀಕೃಷ್ಣನು ಇದರ ಕಾರಣವನ್ನು ಊಹಿಸಿ ಲೋಹಮಯವಾದ ಭೀಮನ ಮೂರ್ತಿಯನ್ನು ಮುಂದೆ ಮಾಡಲು ಧೃತರಾಷ್ಟ್ರ ಆ ಮೂರ್ತಿಯನ್ನೇ ಭೀಮನೆಂದು ಬಗೆದು ಆಲಿಂಗಿಸಲು ಆ ಮೂರ್ತಿ ಹುಡಿಹುಡಿಯಾಯಿತು. ಭೀಮನ ನಿಂದಾವಾಕ್ಯದಿಂದ ಈತನು

ತಪೋವನವನ್ನು ಪ್ರವೇಶಮಾಡಿ ಅಲ್ಲಿ ದಾವಾಗ್ನಿಯಿಂದ ಮಡಿದನು. ಈತನಿಗೆ ಕುಬೇರಲೋಕ ಪ್ರಾಪ್ತಿಯಾಯಿತು. ಈತನಿಗೆ ಗಾಂಧಾರಿಯಲ್ಲಿ ನೂರು ಮಂದಿ ಮಕ್ಕಳೂ ದುಶ್ಯಳೆ ಎಂಬ ಮಗಳೂ ಇದ್ದರು. ದುಶ್ಯಳೆಯನ್ನು ಹಿಂದೂ ದೇಶದ ವೃದ್ಧಕ್ಷತ್ರನ ಮಗನಾಗದ ಜಯದ್ರಥನಿಗೆ (ಸೈಂಧವನಿಗೆ) ಲಗ್ನ ಮಾಡಿಕೊಟ್ಟಿದ್ದನು. ಧೃತರಾಷ್ಟ್ರನ ದಾಸಿಯಾದ ವೇಶ್ಯೆಗೆ (ವೈಶ್ಯೆಗೆ) ಈತನಿಂದ ಯುಯುತ್ಸು ಎಂಬ ಮಗನಿದ್ದನು. ಸಂಸ್ಕೃತ ಭಾರತದಲ್ಲಿ ನೂರಕ್ಕಿಂತ ಹೆಚ್ಚು ಧೃತರಾಷ್ಟ್ರನ ಮಕ್ಕಳ ಹೆಸರು ದೊರೆತರೂ ಅದು ಕೇವಲ ಪರ್ಯಾಯ ನಾಮವೆಂದೇ ತಿಳಿಯಬೇಕು. ಸಂಸ್ಕೃತ ಭಾರತದಲ್ಲಿ ದೊರೆಯುವ ಕೌರವರ ಹೆಸರುಗಳನ್ನೆಲ್ಲಾ ಇಲ್ಲಿ ಕೆಳಗೆ ಕಾಣಿಸಿದೆ. ೧. ಅಗ್ರಯಾಯಿ, ೨. ಅನಾಧೃಷ್ಟಿ (ಭೀಮನಿಂದ ಹತನಾದನು), ೩. ಅನಾಧೃಷ್ಯ, ೪. ಅನುಯಾಯಿ, ೫.ಅನುವಿಂದ, ೬. ಅನೂದರ, ೭, ಅಪರಾಜಿತ (ಬೀಮನಿಂದ ಹತನಾದನು.,) ೮. ಅಭಯ, ೯. ಅಯೋಬಾಹು, ೧೦. ಅಯೋಭುಜ, ೧೧. ಅಲಂಬು (ಭೀಮನಿಂದ ಹತನಾದನು), ೧೨. ಅಲೋಲುಪ, ೧೩. ಆದಿತ್ಯಕೇತು, ೧೪.ಉಗ್ರ (ಭೀಮನಿಂದ ಹತನಾದನು), ೧೫. ಉಗ್ರಶ್ರವ (ಉಗ್ರಯಾಯಿ), ೧೬. ಉಗ್ರಸೇನ, ೧೭. ಉಗ್ರಾಯುಧ, ೧೮. ಉಪಚಿತ್ರ, ೧೯. ಉಪನಂದ, (ಭೀಮನಿಂದ ಹತನಾದನು), ೨೦. ಉಪನಂದಕ, ೨೧. ಊರ್ಣನಾಭ, ೨೨.ಕನಕಧ್ವಜ, ೨೩. ಕನಕಾಂಗದ, ೨೪. ಕನಕಾಯು, ೨೫. ಕರಕಾಯು, ೨೬.ಕರ್ಣ, ೨೭. ಕವಚಿ (ಭೀಮನಿಂದ ಹತನಾದನು), ೨೮. ಕುಂಡಕ, ೨೯.ಕುಂಡಜ, ೩೦. ಕುಂಡಧಾರ (ಭೀಮನಿಂದ ಹತನಾದನು), ೩೧.ಕುಂಡಭೇದಿ (ಭೀಮನಿಂದ ಹತನಾದನು), ೩೨. ಕುಂಡಭೇದೀ (ಭೀಮನಿಂದ ಹತನಾದನು), ೩೩. ಕುಂಡಲಿ(ಭೀಮನಿಂದ ಹತನಾದನು), ೩೪.ಕುಂಡಶಾಯಿ, ೩೫. ಕುಂಡಾಶಿ, ೩೬. ಕುಂಡಿ, ೩೭. ಕುಂಡೋದರ, ೩೮.ಕ್ಷೇಮಮೂರ್ತಿ, ೩೯. ಕ್ರಥನ, ೪೦. ಕ್ರಾಥ (ಭೀಮನಿಂದ ಹತನಾದನು)೪೧. ಖಡ್ಗಿ, ೪೨. ಚಾರುಚಿತ್ರ, (ಭೀಮನಿಂದ ಹತನಾದನು), ೪೩. ಚಾರುಚಿತ್ರಾಗಂದ, ೪೪. ಚಿತ್ರ (ಭೀಮನಿಂದ ಹತನಾದನು), ೪೫.ಚಿತ್ರಕ, ೪೬. . ಚಿತ್ರಕುಂಡಲ, ೪೭. ಚಿತ್ರಚಾಪ, ೪೮. ಚಿತ್ರದರ್ಶನ, ೪೯.ಚಿತ್ರಬಾಣ, ೫೦. ಚಿತ್ರಬಾಹು, ೫೧. ಚಿತ್ರವರ್ಮ (ಭೀಮನಿಂದ ಹತನಾದನು), ೫೨. ಚಿತ್ರಸೇನ (ಭೀಮನಿಂದ ಹತನಾದನು), ೫೩. ಚಿತ್ರಾಕ್ಷ (ಭೀಮನಿಂದ ಹತನಾದನು), ೫೪. ಚಿತ್ರಾಂಗ, ೫೫. ಚಿತ್ರಯುಧ (ಭೀಮನಿಂದ ಹತನಾದನು),, ೫೬. ಚಿತ್ರೋಪಚಿತ್ರ ೫೭. ಜಯ(ಭೀಮನಿಂದ

ಹತನಾದನು),ೃ ೫೮. ಜಯತ್ಸೇನ (ಭೀಮನಿಂದ ಹತನಾದನು), ೫೯.ಜರಾಸಂಧ, ೬೦. ಜಲಸಂಧ (ಭೀಮನಿಂದ ಹತನಾದನು),೬೧. ಜೈತ್ರ (ಭೀಮನಿಂದ ಹತನಾದನು) ೬೨. ತುಹುಂಡ, ೬೩. ಢಂಡಧಾರ (ಭೀಮನಿಂದ ಹತನಾದನು), ೬೪. ದಂಡಿ, ೬೫. ದೀಪ್ತಲೋಚನ (ಭೀಮನಿಂದ ಹತನಾದನು),೬೬. ದೀರ್ಘನೇತ್ರ, ೬೭. ದೀರ್ಘಬಾಹು (ಭೀಮನಿಂದ ಹತನಾದನು), ೬೮. ದೀರ್ಘರೋಮ, ೬೯. ದೀರ್ಘಲೋಚನ, ೭೦.ದುರಾಧನ, ೭೧. ದುರಾಧರ, ೭೨. ದುರ್ಜಯ, ೭೩. ದುರ್ಧರ (ಭೀಮನಿಂದ ಹತನಾದನು),, ೭೪. ದುರ್ಧರ್ಷ, ೭೫. ದುರ್ಧರ್ಷಣ, ೭೬.ದುರ್ಮದ (ಭೀಮನಿಂದ ಹತನಾದನು), ೭೭.ದುರ್ಮರ್ಷಣ (ಭೀಮನಿಂದ ಹತನಾದನು), ೭೮. ದುರ್ಮುಖ (ಭೀಮನಿಂದ ಹತನಾದನು), ೭೯. ದುರ್ಯೋಧನ (ಭೀಮನಿಂದ ಹತನಾದನು), ೮೦. ದುರ್ವಿಗಾಹ. ೮೧.ದುರ್ವಿರೋಚನ (ಭೀಮನಿಂದ ಹತನಾದನು), ೮೨. ದುರ್ವಿಷಹ (ಭೀಮನಿಂದ ಹತನಾದನು), ೮೩. ದುಶ್ಶಲ (ಭೀಮನಿಂದ ಹತನಾದನು),ದುಶ್ಶಲಾಹುಡುಗಿ ೮೪. ದುಶ್ಶಾಸನ (ಭೀಮನಿಂದ ಹತನಾದನು), ೮೫. ದುಷ್ಕರ್ಣ (ಭೀಮನಿಂದ ಹತನಾದನು), ೮೬.ದುಷ್ಪರಾಜಯ, ೮೭. ದುಷ್ಪ್ರಧರ್ಷ (ಭೀಮನಿಂದ ಹತನಾದನು), ೮೮.ದುಷ್ಪ್ರಧರ್ಷನ , ೮೯. ದುಷ್ಪ್ರಹರ್ಷ, ೯೦. ದುಸ್ಸಹ (ಭೀಮನಿಂದ ಹತನಾದನು), ೯೧. ದೃಢ (ಭೀಮನಿಂದ ಹತನಾದನು), ೯೨. ಧೃಢಕ್ಷತ್ರ, ೯೩.ದೃಢರಥ (ಭೀಮನಿಂದ ಹತನಾದನು), ೯೪. ದೃಢರಥಾಶ್ರಯ, ೯೫.ದೃಢವರ್ಮ, ೯೬. ಧೃಢಸಂಧ, ೯೭. ದೃಢಹಸ್ತ, ೯೮. ದೃಢಾಯುಧ, ೯೯.ಧನುರ್ಗಹ, ೧೦೦. ಧನುರ್ಧರ (ಭೀಮನಿಂದ ಹತನಾದನು), ೧೦೧.ನಂದ (ಭೀಮನಿಂದ ಹತನಾದನು), ೧೦೨. ನಂದಕ ೧೦೩. ನಾಗದತ್ತ (ಭೀಮನಿಂದ ಹತನಾದನು), ೧೦೪. ಸಿಷಂಗೀ (ಭೀಮನಿಂದ ಹತನಾದನು), ೧೦೫. ಪಂಡಿತ (ಭೀಮನಿಂದ ಹತನಾದನು), ೧೦೬. ಪಂಡಿತಕ, ೧೦೭. ಪದ್ಮನಾಭ, ೧೦೮.ಪಾಶಿ, ೧೦೯. ಪ್ರಮಥ, ೧೧೦. ಪ್ರಮಾಥಿ, ೧೧೧. ಬಲವರ್ಧನ, ೧೧೨.ಬಲಾಕಿ, ೧೧೩. ಬಹ್ವಾಶಿ ೧೧೪. ಬಾಹುಶಾಲಿ (ಭೀಮನಿಂದ ಹತನಾದನು), ೧೧೫. ವೃಂದಾರಕ, ೧೧೬. ಭೀಮ (ಭೀಮನಿಂದ ಹತನಾದನು),೧೧೭. ಭೀಮಬಲ, ೧೧೮. ಭೀಮರಥ (ಭೀಮನಿಂದ ಹತನಾದನು), ೧೧೯. ಭೀಮವಿಕ್ರಮ, ೧೨೦. ಭೀಮವೇಗ, ೧೨೧.ಭೀಮವೇಗರವ, ೧೨೨. ಭೀಮಶರ, ೧೨೩. ಭೂರಿಬಲ (ಭೀಮನಿಂದ

ಹತನಾದನು), ೧೨೪. ಮಕರಧ್ವಜ (ಮಹೋದರ), ೧೨೫. ಮಹಾಬಾಹು (ಭೀಮನಿಂದ ಹತನಾದನು), ೧೨೬. ಯುಯುತ್ಸು, ೧೨೭. ರವಿ(ಭೀಮನಿಂದ ಹತನಾದನು), ೧೨೮.ರೌದ್ರಕರ್ಮ (ಭೀಮನಿಂದ ಹತನಾದನು), ೧೩೯. ವಾತವೇಗ (ಭೀಮನಿಂದ ಹತನಾದನು), ೧೩೦. ವಾಯುವೇಗ, ೧೩೧. ವಿಕಟ (ಭೀಮನಿಂದ ಹತನಾದನು), ೧೩೨. ವಿಕಟಾನನ, ೧೩೩. ವಿಕರ್ಣ (ಭೀಮನಿಂದ ಹತನಾದನು), ೧೩೪. ವಿಂದ, ೧೩೫. ವಿರಜ (ಭೀಮನಿಂದ ಹತನಾದನು), ೧೩೬. ವಿರಾಜ (ಭೀಮನಿಂದ ಹತನಾದನು), ೧೩೭. ವಿರಾವಿ, ೧೩೮. ವಿರೋಚನ, ೧೩೯. ವಿವಿತ್ಸು (ಭೀಮನಿಂದ ಹತನಾದನು), ೧೪೦.ವಿವಿಂಶತಿ, ೧೪೧. ವಿಶಾಲಾಕ್ಷ (ಭೀಮನಿಂದ ಹತನಾದನು), ೧೪೨.ವೀರ, ೧೪೩. ವೀರಬಾಹು (ಭೀಮನಿಂದ ಹತನಾದನು), ೧೪೪.ವ್ಯೂಢೋರ (ವೃಂದಾಕರ), ೧೪೫. ವ್ಯೂಡೋರು, ೧೪೬. ಶತ್ರುಂಜಯ (ಭೀಮನಿಂದ ಹತನಾದನು), ೧೪೭. ಶತ್ರುಸಹ (ಭೀಮನಿಂದ ಹತನಾದನು), ೧೪೮. ಶರಾಸನ (ಭೀಮನಿಂದ ಹತನಾದನು), ೧೪೯. ಶಲ, ೧೫೦. ಶ್ರುತರ್ವಾ, ೧೫೧. ಶ್ರುತಾಯು, ೧೫೨. ಶ್ರುತಾಂತ (ಭೀಮನಿಂದ ಹತನಾದನು), ೧೫೩.ಸಂಜಯ, ೧೫೪. ಸತ್ಯಸಂಧ (ಭೀಮನಿಂದ ಹತನಾದನು), ೧೫೫. ಸತ್ವ, ೧೫೬. ಸದ (ಸಂಧ), ೧೫೭. ಸಮ, ೧೫೮. ಸಹ (ಭೀಮನಿಂದ ಹತನಾದನು), ೧೫೯. ಸಹಸ್ರವಾಕ್, ೧೬೦. ಸುಕುಂಡಲ, ೧೬೧. ಸುಚಾರು, ೧೬೨. ಸುಚಿತ್ರ, ೧೬೩. ಸುಜಾತ (ಭೀಮನಿಂದ ಹತನಾದನು), ೧೬೪. ಸುದರ್ಶನ (ಭೀಮನಿಂದ ಹತನಾದನು), ೧೬೫. ಸುನಾಭ (ಭೀಮನಿಂದ ಹತನಾದನು), ೧೬೬. ಸುಬಾಹು (ಭೀಮನಿಂದ ಹತನಾದನು), ೧೬೭. ಸುಲೋಚನ (ಭೀಮನಿಂದ ಹತನಾದನು), ೧೬೮. ಸುವರ್ಚ (ಭೀಮನಿಂದ ಹತನಾದನು), ೧೬೯. ಸುವರ್ಮ, ೧೭೦.ಸುವಾಕ್, ೧೭೧. ಸುಷೇಣ (ಭೀಮನಿಂದ ಹತನಾದನು), ೧೭೨. ಸುಹಸ್ತ (ಭೀಮನಿಂದ ಹತನಾದನು), ೧೭೩, ಸೇನಾನಿ, ೧೭೪. ಸೇನಾಪತಿ (ಭೀಮನಿಂದ ಹತನಾದನು), ೧೭೫. ಸೋಮಕೀರ್ತಿ.

ಭೀಷ್ಮನು ಧೃತರಾಷ್ಟ್ರನಿಗೆ ಗಾಂಧಾರಿ ಮತ್ತು ಹತ್ತು ಮಂದಿ ರಾಣಿಯರಲ್ಲದೆ ನೂರಕ್ಕಿಂತ ಹೆಚ್ಚು ರಾಜಕುಮಾರಿಯರನ್ನು ತಂದು ವಿವಾಹ ಮಾಡಿಸಿದನು. ಇವನಿಗೆ ಹತ್ತು ಸಾವಿರ ಆನೆಗಳ ಬಲವಿತ್ತು (ಮ.ಆ.). ಗಾಂಧಾರಿಗೆ ಗರ್ಭ ಬೆಳೆದು ಹೊಟ್ಟೆ ಉಬ್ಬಿ ಕಷ್ಟಪಡುತ್ತಿದ್ದಾಗ ಕನ್ಯಾವಸ್ಥೆಯಲ್ಲಿದ್ದ ಒಬ್ಬ ವೈಶ್ಯಜಾತಿಯ ಹುಡುಗಿಯು ಧೃತರಾಷ್ಟ್ರನ

ಬಳಿಯಲ್ಲಿದ್ದು ಅವನ ಶುಶ್ರೂಷೆ ಮಾಡುತ್ತಿದ್ದಳು. ಆಗ ಅವಳ ಸಂಗಮವಾದುದರಿಂದ ಒಂದು ವರ್ಷದ ಮೇಲೆ ಮಹಾಯಶಸ್ವಿಯೂ, ಧೀಮಂತನು ಆದ ಒಬ್ಬ ಪುತ್ರ ಹುಟ್ಟಿದನು ಇವನಿಗೆ ಕರಣನೆಂದು ಹೆಸರು (ಕರಣ = ವೈಶ್ಯನಿಗೆ ಶೂದ್ರ ಸ್ತ್ರೀಯಲ್ಲಿ ಹುಟ್ಟಿದ ಕೂಸು), (ಮ.ಆ.). ಮೇಲಿನ ಭಾರತದ ಹೇಳಿಕೆಯಂತೆ ಭೀಮನಿಂದ ಎಪ್ಪತ್ತನಾಲ್ಕು ಮಂದಿ ಕೌರವರು ಹತವಾದುದಕ್ಕೆ ಮಾತ್ರ ಆಧಾರ ದೊರೆಯುತ್ತದೆ. ೨. ಪಾಂಚಾಲದೇಶದ ಒಬ್ಬ ರಾಜ. ಈತನ ಕಾಲದಲ್ಲಿ ಶಾಸ್ತ್ರಕ್ಕೆ ಸಮ್ಮತವಲ್ಲದ ಹೋಮಕಾರ್ಯವನ್ನು ಮಾಡಿದನು. ನೋ.- ದಾಲ್ಭ್ಯ. ೩. ಗೌತಮಮುನಿಯೊಂದಿಗೆ ಸಂಭಾಷಣೆ ಮಾಡುವಾಗ ಇಂದ್ರನು ಈತನ ವೇಷದಲ್ಲಿದ್ದನು ೪. ಉತ್ತಮ ಕುಲದ ಸರ್ಪ. ನಾರದನು ಮಾತಲಿಯನ್ನು ಭೋಗವತಿಗೆ ಅಳಿಯನನ್ನು ಹುಡುಕಲು ಕರೆದುಕಂಡು ಹೋದಾಗ ಈ ಸರ್ಪವನ್ನು ನೋಡಿದ್ದನು. ಆದರೆ ಮಾತಲಿಯು ಚಿಕುರನೆಂಬ ಸರ್ಪರಾಜನ ಮಗನಾದ ಸುಮುಖನು ತನ್ನ ಮಗಳಾದ ಗುಣಕೇಶಿಗೆ ತಕ್ಕ ವರನೆಂದು ಮೆಚ್ಚಿದನು. ೫. ಒಬ್ಬ ದೇವಗಂಧರ್ವ. ಕಶ್ಯಪನ ಪತ್ನಿಯಾದ ಮುನಿಯ ಪುತ್ರ. ೬. ಸರ್ಪರಾಜ; ಕಶ್ಯಪ ಮತ್ತು ಕದ್ರುವಿನ ಮಗ. ಚಿತ್ರಾಂಗದೆಯು ಇವನೊಡನೆ ಸಂಜೀವಕರತ್ನವನ್ನು ಕೇಳಿದರೂ ಕೊಡದಿರಲು ಬಭ್ರುವಾಹನನು ಧೃತರಾಷ್ಟ್ರನೊಡನೆ ಯುದ್ಧಮಾಡಿ ಸಂಜೀವಕವನ್ನು ಪಡೆದು ಅರ್ಜುನನ್ನನ್ನು ಬದುಕಿಸಿದನು (ಜೈ.ಭಾ.,ಮ.ಶ.,ಆ.,ಸ.,ವ.,ಉ., ಭೀ.,ದ್ರೋ., ಕ.,ಸ್ತ್ರೀ.,ಸೌ.,ಅನು.,ಆಶ್ರಮ.,ಅಶ್ವ.,ಭಾಗ.). ಬಲಿಚಕ್ರವರ್ತಿಯ ಮಗ.

ಧೃತರಾಷ್ಟ್ರಿ - ಕಶ್ಯಪಮುನಿ ಮತ್ತು ತಾಮ್ರೆಯ ಮಗಳು. ಈಕೆ ಹಂಸ ಪಕ್ಷಿಗಳ ತಾಯಿ (ಮ.ಆ.).

ಧೃತವರ್ಮ - ತ್ರಿಗರ್ತದ ರಾಜನ ತಮ್ಮ. ಸೂರ್ಯವರ್ಮನ ಸೋದರ. ಅಶ್ವಮೇಧದ ಕಾಲದಲ್ಲಿ ಅರ್ಜುನನನ್ನು ಇದಿರಿಸಿ ಸೋತನು (ಮ.ಅಶ್ವ). ನೋ.-ಸೂರ್ಯವರ್ಮ.

ಧೃತಸೇನ - ದುರ್ಯೋಧನನ ಪಕ್ಷದ ಒಬ್ಬ ರಾಜ (ಮ.ಶ.).

ಧೃತಿಮಂತ - ೧. ಕ್ರೌಂಚ ದ್ವೀಪದ ಭಾಗ. ೨. ಅಗ್ನಿವಿಶೇಷ; ಈತನಿಗೆ ವಿಷ್ಣು ಎಂಬ ಹೆಸರಿದೆ (ಮಭೀ.,ವ.).

ಧೃಷ್ಟಕೇತು - ೧. ಚೇದಿ ದೇಶದ ರಾಜನಾದ ಶಿಶುಪಾಲನ ಮಗ. ಈತನಿಗೆ ಸುಕೇತು, ಶರಭರೆಂಬ ಸಹೋದರರೂ, ರೇಣುಮತಿ ಅಥವಾ ಕರೇಣುಮತಿ ಎಂಬ ಮಗಳೂ ಇದ್ದರು. ಶುಕ್ತಿಮತಿಪುರವು ಈತನ ರಾಜಧಾನಿ. ಶ್ರೀಕೃಷ್ಣನು

ಶಿಶುಪಾಲನನ್ನು ಕೊಂದ ಮೇಲೆ ಇವನು ಪಾಂಡಪಕ್ಷೀಯನಾಗಿ ಭಾರತಯುದ್ಧಕಾಲದಲ್ಲಿ ಕುರುಸೇನೆಯೊಂದಿಗೆ ಯುದ್ಧಮಾಡಿದ. ಹದಿನಾಲ್ಕನೇ ದಿವಸದ ಯುದ್ಧದಲ್ಲಿ ದ್ರೋಣನಿಂದ ಈತನ ಮಗನೂ ಇವನೂ ಹತರಾದರು (ಮ.ವ.,ಉ.,ದ್ರೋ.,ಆ.). ಇವನು ಮಹಾರಥನು. ಇವನ ತಂಗಿಯಾದ ರೇಣುಮತಿ ಎಂಬುವಳನ್ನು ಪಾಂಡುಪುತ್ರನಾದ ನಕುಲನು ವಿವಾಹವಾಗಿದ್ದನು. ೨. ಕೇಕಯ ದೇಶದ ರಾಜ. ಈತನ ಪತ್ನಿ ಶ್ರೀಕೃಷ್ಣನ ಸೋದರತ್ತೆಯಾದ ಶ್ರುತಿಕೀರ್ತಿ. ಈ ದಂಪತಿಗಳ ಮಗಳಾದ ಭದ್ರೆಯನ್ನು ಶ್ರೀಕೃಷ್ಣನು ವಿವಾಹವಾದನು (ವಿಷ್ಣುಪು.,ಹರಿ., ಭಾಗ).

ಧೃಷ್ಟದ್ಯುಮ್ನ - ಈತನು ದಿಟ್ಟತನದಿಂದ ಕೂಡಿದುದರಿಂದ ಧೃಷ್ಟ, ಕವಚ ಕಿರೀಟ ಕುಂಡಲ ಸಮೇತವಾಗಿ ಹುಟ್ಟಿದುದರಿಂದ ದ್ಯುಮ್ನನು (ಮ.ಆ.).

ದ್ರುಪದನ ಮಗ. ಈತನು ಅತಿರಥ. ಭಾರತಯುದ್ಧದಲ್ಲಿ ಪಾಂಡವಪಕ್ಷದ ಸೇನಾಪತಿ. ಈತನ ಪುತ್ರನಾದ ಕ್ಷತ್ರಧರ್ಮನು ಬಾಲ್ಯದಿಂದ ಯುದ್ಧ ಪರಿಶ್ರಮವಿಲ್ಲದವನಾದುದರಿಂದ ಅರ್ಧರಥನು. ಕುರುಕ್ಷೇತ್ರಯುದ್ಧದಲ್ಲಿ ದ್ರೋಣನು ಇವನಿಂದ ಮಡಿದನು. ಧೃಷ್ಟದ್ಯುಮ್ನನಿಗೆ ಸತ್ಯಜಿತ್ತು ಎಂಬ ಸೋದರನು (ಈತನು ಅತಿರಥನು). ದ್ರೌಪದಿ ಮತ್ತು ಧೃಷ್ಟದ್ಯುಮ್ನರು ಅಯೋನಿಜರು. ಇಬ್ಬರೂ ಯಜ್ಞಕುಂಡದಿಂದ ಜನಿಸಿದವರು. ಧೃಷ್ಟದ್ಯುಮ್ನನನ್ನು ದ್ರೋಣನ ಮರಣಕ್ಕಾಗಿಯೇ ದ್ರುಪದನು ಪಡೆದನು. ಈತನು ಅಗ್ನಿಯ ವಂಶದವನು. ಪಾಂಡವರ ಸೇನಾಪತಿ. ಈತನು ಶಸ್ತ್ರಧಾರಿಯಾಗಿ ಬಿಲ, ಕವಚ, ಕುಂಡಲ ಮೊದಲಾದುವುಗಳೊಂದಿಗೆ ಜನಿಸಿದುದರಿಂದ ಈತನಿಗೆ ಧೃಷ್ಟದ್ಯುಮ್ನನೆಂದು ಹೆಸರಾಯಿತು. ಇವನು ಅಸ್ತ್ರವಿದ್ಯೆಯನ್ನು ದ್ರೋಣನಿಂದ ಕಲಿತನು. ದ್ರೌಪದಿಯ ವಿವಾಹದ ನಿಯಮವನ್ನು ಸಭೆಗೆ ಸಾರಿದವನು ಈತನೇ. ಅರ್ಜುನನು ಮತ್ಸ್ಯಯಂತ್ರವನ್ನು ಭೇದಿಸಿ ದ್ರೌಪದಿಯನ್ನು ಕುಂಬಾರನ ಕೊಟ್ಟಿಗೆಗೆ ಕರೆತಂದಾಗ ರಾತ್ರಿಯಾಗಿತ್ತು. ಈತನು ಪಾಂಡವರ ಮಾತುಗಳನ್ನು ಕೇಳಿ ಇವರು ಬ್ರಾಹ್ಮಣರಲ್ಲವೆಂದು ತಂದೆಯನ್ನು ಸಮಾಧಾನ ಪಡಿಸಿದನು. ಭಾರತಯುದ್ಧರಂಗದಲ್ಲಿ ದ್ರೋಣನ ಶಿರಚ್ಛೇದ ಮಾಡಿದನು. ಇದನ್ನು ಅರ್ಜುನಾದಿಗಳು ತಿರಸ್ಕರಿಸಿದರೂ, ಧೃಷ್ಟದ್ಯುಮ್ನನು ತನ್ನ ಕಾರ್ಯವನ್ನು ಕ್ಷತ್ರಧರ್ಮೋಚಿತವಾದುದೆಂದು ವಿವರಿಸಿದನು. ಯುದ್ಧಾನಂತರ ಅಶ್ವತ್ಥಾಮನಿಂದ ಈತನ ವಧೆಯಾಯಿತು. ಈತನ ಸೋದರರ ಕುರಿತು ನೋ.- ದ್ರುಪದ. ಈತನಿಗೆ ಕ್ಷತ್ರಂಜಯ, ಕ್ಷತ್ರದೇವ,

ಕ್ಷತ್ರವರ್ಮ ಮತ್ತು ಕ್ಷತ್ರಧರ್ಮರೆಂಬ ಮಕ್ಕಳಿದ್ದರು. ಇವರೆಲ್ಲ ದ್ರೋಣನಿಂದಲೇ ಹತರಾದರು (ಮ.ಆ.,ಭೀ.,ದ್ರೋ.).

ಧೃಷ್ಟಿ - ದಶರಥನ ಪ್ರಧಾನಿಯೊಬ್ಬ. ನೋ. ದಶರಥ (ರಾಮಾ.ಬಾಲ).

ಧೃಷ್ಣು - ವೈವಸ್ವತ ಮನು ಪುತ್ರ *(ಮ.ಆ.)*.

ಧೇನುಕ - ಕತ್ತೆಯ ರೂಪದ ರಾಕ್ಷಸ; ಕಂಸನ ಅನುಯಾಯಿಯೊಬ್ಬ. ಇವನು ಬೃಂದಾವನ ಸಮೀಪದ ತಾಳವನದಲ್ಲಿ ವಾಸಮಾಡುತ್ತಿದ್ದನು. ಗೋಪರು ಶ್ರೀಕೃಷ್ಣಬಲರಾಮರೊಂದಿಗೆ ತಾಳೆಹಣ್ಣುಗಳನ್ನು ಉದುರಿಸಿ ತಿನ್ನುವಾಗ ಕತ್ತೆಯರೂಪದಿ ಬಂದು ಬಲರಾಮನ ಮೇಲೆ ಬಿದ್ದನು. ಬಲರಾಮನು ಅದರ ಹಿಂಗಾಲುಗಳನ್ನು ಗರಗರನೆ ತಿರುಗಿಸಿ ತಾಳೆಯಮರಕ್ಕೆ ಹೊಡೆದು ಕೊಂದನು (ಮ.ಸ.,ಉ.,ಭಗ.,ಹರಿ.,ವಿಷ್ಣುಪು.).

ಧೌತಮೂಲಕ - ಪಾಂಡವರ ಕಾಲದ ಚೀನಾದೇಶದ ರಾಜ. ಇವನು ದುರ್ಯೋದನನ ಪಕ್ಷವನ್ನು ವಹಿಸಿ ಕುರುಕ್ಷೇತ್ರದಲ್ಲಿ ನಾಶವಾದ. ಇವನು ದುಷ್ಟರಾಜ. ನೋ.- ಚೀನ.

ಧೌಮ್ಯ - ೧. ಅಪೋದನೆಂಬುದು ಈತನ ಇನ್ನೊಂದು ಹೆಸರು. ನೋ.- ಉಪಮನ್ಯು. ಈತನಿಗೆ ಉಪಮನ್ಯು, ಆರುಣಿ ಮತ್ತು ಬೈದ ಎಂಬ ಶಿಷ್ಯರಿದ್ದರು. ೨.ಮಹರ್ಷಿಯೊಬ್ಬ. ಈತನ ತಂದೆ ವ್ಯಾಘ್ರಪಾದ. ಈತನು ಶಿವಸಹಸ್ರ ನಾಮವನ್ನು ರಚಿಸಿದನೆಂದೂ ಹೇಳುತ್ತಾರೆ. ೩. ಅಷ್ಟವಸುಗಳಲ್ಲಿ ಒಬ್ಬನಾದ ಪ್ರತ್ಯೂಷನ ಮಗ. ಬ್ರಹ್ಮರ್ಷಿಯಾದ ದೇವಲನ ಸೋದರ. ನೋ.-ದೇವಲ. ಈತನೇ ಪಾಂಡವರ ಪುರೋಹಿತ. ಈತನು ಉಾಚಕ ತೀರ್ಥದ ಬಳಿ ತಪಸ್ಸು ಮಾಡುತ್ತಿದ್ದನು. ಅಂಗಾರಪರ್ಣನು ಅರ್ಜುನನಿಗೆ ಧೌಮ್ಯರನ್ನು ಪುರೋಹಿತರನ್ನಾಗಿ ಮಾಡಿಕೊಳ್ಳುವಂತೆ ಸೂಚನೆ ಇತ್ತನು. ಪಾಂಡವರಲ್ಲಿ ಧರ್ಮರಾಜನಿಗೆ ಈತನೇ ಸೂರ್ಯಾಷ್ಟೋತ್ತರವನ್ನು ಉಪದೇಶಿಸಿ ಸೂರ್ಯನಿಂದ ಅಕ್ಷಯಪಾತ್ರೆಯನ್ನು ಕೊಡಿಸಿದನು. ಅರಣ್ಯವಾಸಕಾಲದಲ್ಲಿ ಪಾಂಡವರ ಜೊತೆಗಿದ್ದು ಅವರಿಗೆ ಅನೇಕ ಸತ್ಕಥೆಗಳನ್ನು ಹೇಳಿದುದಲ್ಲದೆ, ಅನೇಕ ತೀರ್ಥಗಳ ಮಹಿಮೆಯನ್ನು ವಿವರಿಸಿದನು. ಅಜ್ಞಾತವಾಸಕಾಲದಲ್ಲಿ ಪಾಂಡವರ ಅಗ್ನಿಹೋತ್ರಗಳನ್ನು ಕಾಪಾಡಿಕೊಂಡು ಅರಣ್ಯದಲ್ಲೇ ಇದ್ದನು (ಮ.ಆ.,ಅನು.,ಸ.,ವ.,ವ.,ವಿ.,ಆಶ್ರಮ.). ಇವನಿಗೆ ಅಯೋದನೆಂಬ ನಾಮಾಂತರ ಉಂಟು. ಇವನ ಮಗ ಅಪೋದನನು; ಕೇವಲ ಜಲಪಾನದಿಂದಲೇ

ಜೀವಿಸುತ್ತಿದ್ದನು. ಇವನಿಗೆ ಉಪಮನ್ಯು, ಆರುಣಿ ಮತ್ತು ಬೈದರೆಂಬ ಮೂವರು ಶಿಷ್ಯರಿದ್ದರು. ಇವರಲ್ಲಿ ಪಾಂಚಾಲದೇಶೀಯನಾದ ಆರುಣಿಯನ್ನು ಗದ್ದೆಯ ತೂಬನ್ನು ಕಟ್ಟಲು ಕಳುಹಿಸಿದನು. ತೂಬಿನ ನೀರಿನ ವೇಗವನ್ನು ತಡೆಯಲಾರದೆ ತಾನೆ ಆ ತೂಬಿನ ಅಡ್ಡಕ್ಕೆ ಮಲಗಿದನು. ಗುರುವು ಈ ಶಿಷ್ಯನನ್ನು ಕರೆಯುತ್ತಾ ಹುಡುಕಿಕೊಂಡು ಬರಲು ಆರುಣಿ ಗದ್ದೆಯ ತೆವರಿಯನ್ನು ಕಿತ್ತುಕೊಂಡು ಬಂದುದರಿಂದ 'ಉದ್ದಾಲಕ'ನೆಂಬ ಹೆಸರು ಬಂತು. ಇವನಿಗೆ ಗುರುವು ಆಶೀರ್ವದಿಸಲು ಆರುಣಿಯು ತನ್ನ ಇಷ್ಟವಾದ ದೇಶಕ್ಕೆ ಹೊರಟು ಹೋದನು (ಆಯೋದ = ಉಕ್ಕಿನ ಹಲ್ಲುಳ್ಳವ) (ಮ.ಆ.).

ಧೌಮ್ಯ - ಋಷಿಯೊಬ್ಬ (ಮ.ಶಾಂ.).

ಧ್ರುವ - ೧. ಸ್ವಾಯಂಭುವನ ಮನುವಿನ ಮೊಮ್ಮಗನಾದ ಉತ್ತಾನಪಾದನ ಮಗ. ಸುನೀತಿ ಅಥವಾ ಸೂನೃತೆ ಎಂಬುವಳು ಈತನ ತಾಯಿ. ಈತನು ಪೂರ್ವಜನ್ಮದಲ್ಲಿ ಸದಾಚಾರ ಸಂಪನ್ನನಾದ ಬ್ರಾಹ್ಮಣನಾಗಿದ್ದು, ರಾಜನಾಗುವ ಬಯಕೆಯುಳ್ಳವನಾದುದುರಿಂದ ಮುಂದಿನ ಜನ್ಮದಲ್ಲಿ ರಾಜಪುತ್ರನಾಗಿ ಜನಿಸಿದನು. ಒಂದು ದಿನ ಉತ್ತಾನಪಾದ ರಾಜನು ಸುರುಚಿಯೆಂಬ ಪತ್ನಿಯ ಮಗನಾದ ಉತ್ತಮನನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಸುರುಚಿಯೊಡನೆ ರಾಜಸಭೆಯಲ್ಲಿ ಕುಳಿತಿದ್ದನು. ಆಗ ಧ್ರುವನು ರಾಜಸಭೆಯನ್ನು ಪ್ರವೇಶಿಸಿ ತನ್ನನ್ನೂ ತೊಡೆಯಮೇಲೆ ಏರಿಸಿಕೊಳ್ಳಬೇಕೆಂದು ಹಟ ಹಿಡಿಯಲು ಸುರುಚಿಯು ಆತನನ್ನು ತಿರಸ್ಕರಿಸುತ್ತಾ ತಪಸ್ಸು ಮಾಡಿ ದೇವರ ಅನುಗ್ರಹ ಪಡೆದು ತನ್ನ ಹೊಟ್ಟೆಯಲ್ಲಿ ಹುಟ್ಟಿದರೆ ಮಾತ್ರ ಈ ಸಿಂಹಾಸನವನ್ನೇರಲು ಸಾಧ್ಯವೆನ್ನಲು, ಧ್ರುವನು ತಾಯಿಯ ಅಪ್ಪಣೆಯನ್ನು ಪಡೆದು ಯಮುನಾ ನದೀತೀರದ ಮಧುವನದಲ್ಲಿ ಶ್ರೀಮಹಾವಿಷ್ಣುವನ್ನು ಕುರಿತು ತಪಸ್ಸುಮಾಡಿ ಮೆಚ್ಚಿಸಿದನು. ಆ ದೇವನ ಅನುಗ್ರಹದಿಂದ ಭೂಮಿಯಲ್ಲಿ ಬಹುಕಾಲ ಚಕ್ರವರ್ತಿಯಾಗಿ ರಾಜ್ಯಭಾರಮಾಡಿ ಮುಂದೆ ಧ್ರುವ ನಕ್ಷತ್ರದ ಒಡೆಯನಾದನು. ಸುರುಚಿಯ ಮಗನಾದ ಉತ್ತಮನು ಬೇಟೆಗೆ ಹೋಗಿದ್ದಾಗ ಯಕ್ಷರೊಡನೆ ಹೋರಾಡಿ ಸ್ವರ್ಗಸ್ಥನಾದನು. ಇದನ್ನು ಕೇಳಿ ಸುರುಚಿಯು ಮಗನು ಕಾಲವಶನಾದ ಸ್ಥಳಕ್ಕೆ ಬಂದು ಅಲ್ಲೇ ಸ್ವರ್ಗಸ್ಥಳಾದಳು. ಇದನ್ನು ತಿಳಿದ ಧ್ರುವನು ಕೋಪದಿಂದ ಯಕ್ಷರನ್ನು ಯುದ್ಧರಂಗದಲ್ಲಿ ಸದೆಬಡಿಯತೊಡಗಲು ಕುಬೇರನೇ ಯುದ್ಧಕ್ಕೆ

ಬಂದನು. ಆಗ ಸ್ವಯಂಭುವ ಮನುವೂ ಅಲ್ಲಿಗೆ ಬಂದು ಧ್ರುವನ ಕೋಪವನ್ನು ಹೋಗಲಾಡಿಸಿದನು. ಕುಬೇರನು ಧ್ರುವನ ಮುಂದೆ ಸ್ನೇಹಹಸ್ತವನ್ನು ನೀಡಿದನು. ಧ್ರುವನು ಅನೇಕ ಯಜ್ಞಗಳನ್ನು ಮಾಡಿ ಮೂವತ್ತಾರು ಸಾವಿರ ವರ್ಷ ರಾಜ್ಯಭಾರ ಮಾಡಿ, ಮಕ್ಕಳಿಗೆ ರಾಜ್ಯವನ್ನು ಅರ್ಪಿಸಿ ಅರಣ್ಯಕ್ಕೆ ಹೋಗಿ ತಪಸ್ಸು ಮಾಡಿ ಸದ್ಗತಿ ಹೊಂದಿದನು. ಇವನಿಗೆ ಭ್ರಮಿ ಎಂಬ ಪತ್ನಿಯಲ್ಲಿ ಕಲ್ಪ ಮತ್ತು ವತ್ಸರರೂ, ಇಲೆಯಲ್ಲಿ ಉತ್ಕಲನೂ, ಧನ್ಯೆಯಲ್ಲಿ ಶಿಷ್ಟನೂ, ಶಂಭು ಎಂಬ ಪತ್ನಿಯಲ್ಲಿ ಧನ್ಯನೆಂಬ ಮಗನೂ ಹುಟ್ಟಿದರು. ನೋ.-ಉತ್ತಮ. ಧ್ರುವನ ತಪೋವಿಚಾರಗಳನ್ನು ಕೇಳಿ ಶುಕ್ರಾಚಾರ್ಯರು ಬೆರಗಾದರು. ಇವನಿಗೆ ಶಂಭು ಎಂಬ ಪತ್ನಿಯಿಂದ ಶ್ಲಿಷ್ಟ ಮತ್ತು ಭವ್ಯರೆಂಬ ಮಕ್ಕಳಾದರು (ಹರಿ.,ಭಗ.,ವಿಷ್ಣುಪು., ಮತ್ಸ್ಯಪು.,ಲಿಂಗಪು.,ಸ್ಕಾಂ.,ಪು.). ೨. ವಸುದೇವ ಮತ್ತು ರೋಹಿಣಿಯರ ಮಗ (ಭಾಗ.). ೩. ಕಳಿಂಗದೇಶದ ರಾಜ. ದುರ್ಯೋಧನನ ಪರವಾಗಿ ಹೋರಾಡಿ ಭೀಮನಿಂದ ಹತನಾದ (ಮ.ದ್ರೋ.). ೪.ಅಷ್ಟವಸುಗಳಲ್ಲೊಬ್ಬ. ನೋ.- ಧೂಮ್ರಾ (ಮ.ಆ.). ಈತನ ಮಗ ಕಾಲ. ೫.ನಹುಷ ಮತ್ತು ದೇವಕನ್ಯೆಯಾದ ವಿರಜೆಯಲ್ಲಿ ಜನಿಸಿದ ಆರು ಮಂದಿ ಮಕ್ಕಳಲ್ಲಿ ಕಿರಿಯವನು. ನೋ.-ನಹುಷ (ಮ.ಆ.).

ಧ್ರುವಸಂಧಿ - ನೋ.- ಮನೋರಮಾ. ಸೂರ್ಯವಂಶದ ಪುಷ್ಯನೆಂಬ ರಾಜನ ಮಗ. ಇವನಿಗೆ ಸುದರ್ಶನನೆಂಬ ಮಗನಿದ್ದನು. ಧ್ರುವಸಂಧಿಯು ಕಾಡಿಗೆ ಬೇಟೆಗೆ ಹೋಗಿದ್ದಾಗ ಸಿಂಹವೊಂದರಿಂದ ಮರಣಹೊಂದಿದನು. ಇವನ ಮೊಮ್ಮಗನೇ ಸೂರ್ಯವಂಶದ ಕೊನೆಯ ರಾಜನಾದ ಅಗ್ನಿವರ್ಣನು (ರ.ವಂ.).

ಧ್ವಜಕೇತು - ದ್ರುಪದನ ಮಗ (ಮ.ಆ.).

ಧ್ವಜವತಿ - ಹರಿಮೇಧಸನ ಮಗಳು. ನೋ.-ಸುಮೇಧ (ಮ.ಉ.).

ಧ್ಯಾನಕಾಷ್ಠ - ಭೃಗುವಂಶದ ಮಹರ್ಷಿ. ಇಷ್ಟವಾದ ರೂಪ ಪಡೆಯುವ ಶಕ್ತಿ ಇದ್ದವ (ಸ್ಕಾಂ.ಪು.).

ನ

ನಕುಲ - ಪಾಂಡುವಿನ ಮಗ; ಈತನು ಮಾದ್ರಿಯಲ್ಲಿ ಅಶ್ವಿನಿ ದೇವತೆಗಳಿಂದ ಜನಿಸಿದವನು. ಏಕರಥ; ಇವನು ಚಿತ್ರಯುದ್ಧದಲ್ಲಿ ನಿಪುಣನೆನಿಸಿ ಅತಿರಥನೆಂಬ ಖ್ಯಾತಿಯನ್ನು ಪಡೆದನು (ಮ.ಆ.). ಈತನ ಸಹೋದರ ಸಹದೇವ. ನಕುಲನು

ಪಾಂಡವರಲ್ಲಿ ಸುಂದರ. ಈತನಿಗೆ ದ್ರೌಪದಿಯಲ್ಲಿ ಶತಾನೀಕನೂ, ಧೃಷ್ಟಕೇತುವಿನ ಸೋದರಿಯಾದ ರೇಣುಮತಿಯಲ್ಲಿ ನಿರಮಿತ್ರನೆಂಬ ಮಗನೂ ಜನಿಸಿದರು. ರಾಜಸೂಯಯಾಗದ ಕಾಲದಲ್ಲಿ ಈತನು ಪಶ್ಚಿಮದಿಕ್ಕಿನ ವಿಜಯ ಯಾತ್ರೆಯನ್ನು ಕೈಗೊಂಡು ರೋಹಿತ, ತ್ರಿಗರ್ತ, ಶಿಬಿ, ಮದ್ರಾದಿ ದೇಶಗಳನ್ನು ಗೆದ್ದು ಕಪ್ಪಗಳನು ಸಾಗಿಸಿಕೊಂಡು ಯುಧಿಷ್ಠಿರನ ಬಳಿಗೆ ಬಂದನು. ಈತನು ಅಜ್ಞಾತವಾಸಕಾಲದಲ್ಲಿ ದಾಮಗ್ರಂಥಿ ಎಂಬ ಹೆಸರನ್ನಿಟ್ಟುಕೊಂಡು ವಿರಾಟನಲ್ಲಿ ಅಶ್ವಪಾಲಕನಾಗಿದ್ದ ಆಗ ಈತನಿಗೆ ಜಯತ್ಸೇನನೆಂಬುದು ಗುಪ್ತನಾಮವಾಗಿತ್ತು. ಶ್ರೀಕೃಷ್ಣನು ದುರ್ಯೋಧನನ ಆಸ್ಥಾನಕ್ಕೆ ರಾಯಭಾರಿಯಾಗಿ ಹೊರಟಾಗ ಇವನು ಸಂಧಾನವನ್ನೇ ಸೂಚಿಸಿದನು. ಈತನ ಶಂಖದ ಹೆಸರು ಸುಘೋಷ; ರಥಕ್ಕೆ ಕಾಂಭೋಜ ದೇಶದ ಕುದುರೆಗಳನ್ನು ಹೂಡಿದ್ದು ಶರಭಧ್ವಜವುಳ್ಳವನಾಗಿದ್ದನು. ಕರ್ಣನ ಮಕ್ಕಳಾದ ಸತ್ಯಸೇನ, ಚಿತ್ರಸೇನ ಮತ್ತು ಸುಶರ್ಮರನ್ನು ಈತನು ಶಲ್ಯನು ಸೇನಾಧಿಪತಿಯಾಗಿದ್ದಾಗ ಕೊಂದನು. ಭಾರತಯುದ್ಧದಲ್ಲಿ ದುರ್ಯೋಧನನನ್ನು ಗೆದ್ದನು. ಕರ್ಣನಿಂದ ಪರಾಭವ ಹೊಂದಿದನು. ಮಹಾಪ್ರಸ್ಥಾನ ಕಾಲದಲ್ಲಿ ದ್ರೌಪದಿ ಮತ್ತು ಸಹದೇವರು ಮಡಿದು ಬಿದ್ದಮೇಲೆ ಈತನು ಅವರಂತೆಯೆ ದೇಹಬಿಟ್ಟನು. ಧರ್ಮರಾಜನು ಸುರಗಂಗೆಯಲ್ಲಿ ಮಿಂದು ಮನುಷ್ಯದೇಹವನ್ನು ಕಳಚಿ ದೇವಯೋಗ್ಯವಾದ ದೇಹವನ್ನು ಹೊಂದಿ ಇಂದ್ರನೊಡನೆ ಹೋಗುವಾಗ ಅಶ್ವಿನಿದೇವತೆಗಳೊಡನೆ ಸ್ವರ್ಗಸುಖವನ್ನು ಅನುಭವಿಸುತ್ತಿದ್ದ ನಕುಲನನ್ನು ಕಂಡನು (ಮ.ಆ.,ಆಶ್ರಮ.,ಉ.,ಸ.,ವಿ.,ದ್ರೋ.,ಕ.,ಮಹಾ.,ಭಾಗ.). ೨. ಸುವರ್ಣ ಪಾರ್ಶ್ವವುಳ್ಳ ಮುಂಗುಸಿಯೊಂದು. ಇದು ಉಂಛವೃತ್ತಿ (ಆಯ್ದು ತಂದ ಕಾಳುಗಳನ್ನು ಮುಂದಿನ ದಿನಕ್ಕೆ ಇಡಬಹುದಾದ ನಿಯಮ), ಕಪೋತ ವೃತ್ತಿಯಿಂದ (ಆಯ್ದು ತಂದ ಕಾಳುಗಳನ್ನು ಮರು ದಿನಕ್ಕೆ ಇಡಬಾರದ ನಿಯಮ) ಜೀವನ ಮಾಡುತ್ತಿದ್ದ ಕುರುಕ್ಷೇತ್ರ ಬ್ರಾಹಣನೊಬ್ಬನಿಂದ ಅತಿಥಿ ಸೇವೆಮಾಡಿ ಮಿಕ್ಕಿ ಉಳಿದ ಹುಡಿಗಳಲ್ಲಿ ಈ ಮುಂಗುಸಿ ಹೊರಳಿ ತನ್ನ ಅರ್ಧಶರೀರವನ್ನು ಸುವರ್ಣವನ್ನಾಗಿ ಮಾಡಿಕೊಂಡಿತು. ಧರ್ಮರಾಜನ ಹಿಂಸೆಗೆ ಕಾರಣವಾದ ಯಾಗವು ಅಷ್ಟೇನು ಪ್ರಶಸ್ತವಲ್ಲವೆಂದೂ, ಹಿಂದಿನ ಆ ಬ್ರಾಹ್ಮಣನ ಅತಿಥಿ ಸೇವೆಯೆಂಬ ಯಜ್ಞವೇ ಮಿಗಿಲೆಂದು ಅದು ಸಾಧಿಸಿತು. (ಮ.ಅಶ್ವ.).

ನಕ್ಷತ್ರಕ - ನೋ. - ಹರಿಶ್ಚಂದ್ರ. ವಿಶ್ವಾಮಿತ್ರಮುನಿಯ ಶಿಷ್ಯ . ಪರಪೀಡೆಯಲ್ಲಿ ತುಂಬಾ ಸಮರ್ಥ; ವಿಶ್ವಾಮಿತ್ರನಿಗೆ ತಕ್ಕ ಶಿಷ್ಯ. ಕಾಶಿ ಪಟ್ಟಣದಲ್ಲಿ ಹರಿಶ್ಚಂದ್ರನು ತನ್ನ ಪತ್ನಿ ಪುತ್ರರನ್ನು ಮಾರಾಟಮಾಡಿ ಮುನಿಯ ಸಾಲದ ಹಣವನ್ನು ತೆರುವವರೆಗೆ ಜೊತೆಯಲ್ಲಿದ್ದು ಹಣವನ್ನು ಪಡೆದಮೇಲೆ ವಿಶ್ವಾಮಿತ್ರನ ಬಳಿಗೆ ಹೊರಟುಹೋದನು. (ಭಾಗ.,ಹರಿ.,ಮ.,ವ.,ಬ್ರಹ್ಮಪು., ಮಾರ್ಕಂ.,ಪು.).

ನಗ್ನಜಿತ್ - ರಾಜನೊಬ್ಬ. ಇವನು ದಿಗ್ವಿಜಯಕಾಲದಲ್ಲಿ ಕರ್ಣನಿಂದ ಸೋತನು. ಶ್ರೀಕೃಷ್ಣನ ಸತ್ಯೆಯೆಂಬ ಹೆಸರುಳ್ಳ ನೀಲಾದೇವಿಯ ತಂದೆ. ಈತನು ಇಷುಪಾದನೆಂಬ ರಾಕ್ಷಸನ ಅಂಶದಿಂದ ಜನಿಸಿದ ರಾಜ (ಮ.ಆ.,ವ.,ಭಾಗ).

ನಚಿಕೇತ - ಉದ್ದಾಲಕ ಮುನಿಯ ಮಗ. ಉದ್ದಾಲಕನು ತಾನು ಮಾಡಿದ ಯಜ್ಞದಲ್ಲಿ ಮುದಿಗೋವುಗಳನ್ನು ಬ್ರಾಹ್ಮಣರಿಗೆ ದಕ್ಷಿಣೆಯಾಗಿ ಕೊಡುತ್ತಿದ್ದುದನ್ನು ಕಂಡು, ತನ್ನನ್ನು ಯಾರಿಗೆ ಕೊಡುತ್ತೀಯೆಂದು ಉದ್ದಾಲಕನು ಕೇಳಲು ಆತನು ಕೋಪದಿಂದ 'ನಿನ್ನನ್ನು ಮೃತ್ಯುವಿಗೆ ಕೊಡುತ್ತೇನೆ' ಎನ್ನಲು ನಚಿಕೇತನು ಯಮನಲ್ಲಿಗೆ ಹೋಗಿ ಅವನಿಂದ ಜ್ಞಾನ ಸಂಪಾದಿಸಿಕೊಂಡು ಬಂದನು. ಈತನು ಪಿಪ್ಪಲಾದ ಮಹರ್ಷಿಗೆ ಯಮಲೋಕ ಮತ್ತು ಯಮಶಾಸನವನ್ನು ಪ್ರತ್ಯಕ್ಷಕಂಡು ವಿವರಿಸುತ್ತಾನೆ (ಮ.ಸ.,ಅನು.).

ನಂದ - ೧. ಒಂದು ಸರ್ಪ. ೨. ಧೃತರಾಷ್ಟ್ರನ ಮಗ. ೩. ಗೋಕುಲದ ಗೊಲ್ಲರ ಯಜಮಾನ. ಇವನು ಪೂರ್ವಜನ್ಮದಲ್ಲಿ ದ್ರೋಣನೆಂಬ ವಸುವಾಗಿದ್ದ. ನಂದ ಯಶೋದೆಯರೂ, ವಸುದೇವ ದೇವಕಿಯರೂ ಕಶ್ಯಪ ಮತ್ತು ಅದಿತಿಯ ಅಂಶದಿಂದ ಜನಿಸಿದರು. ನೋ- ದ್ರೋಣ. ಶ್ರೀಕೃಷ್ಣನ ಬಾಲಲೀಲೆಗಳೆಲ್ಲಾ ನಂದನ ಮನೆಯಲ್ಲೇ ನಡೆಯಿತು. ಕಂಸನ ವಧೆಯನಂತರ ಶ್ರೀಕೃಷ್ಣಬಲರಾಮರು ಗೋಪರ ಸಂಸರ್ಗ ಬಿಟ್ಟು ವಸುದೇವ ದೇವಕಿಯರೊಡನೆ ಬಾಳಲು ತೊಡಗಿದರು. ಶ್ರೀಕೃಷ್ಣನು ಯಾದವರನ್ನೆಲ್ಲಾ ಕೂಡಿಕೊಂಡು ಬಂದು ಆತನನ್ನು ಕಂಡು ತುಂಬ ಸಂತೋಷ ಹೊಂದಿದನು ೪.ಮಹಾಪದ್ಮನ ತಮ್ಮ ನೋ.- ಮಹಾಪದ್ಮ. ಇವನ ಮಕ್ಕಳೇ ಇತಿಹಾಸಯುಗದ ಮೊದಲಿನ ನವನಂದರು. ಇವರನ್ನು ಕೌಟಿಲ್ಯನು (ಚಾಣಕ್ಯನು)

ನಾಶಮಾಡಿದನು (ವಿಷ್ಣುಪು.). ೫. ವಸುದೇವನಿಂದ ಮದಿರೆ ಎಂಬ ಪತ್ನಿಯಲ್ಲಿ ಜನಿಸಿದ ನಾಲ್ವರು ಪುತ್ರರಲ್ಲಿ ಈತನು ಹಿರಿಯವನು (ಭಾಗ.,ಹರಿ.).

ನಂದಕ - ೧. ಸರ್ಪವೊಂದು. ೨. ಧೃತರಾಷ್ಟ್ರನ ಮಗ ೩. ವಿಷ್ಣುವಿನ ಖಡ್ಗ. ೪.ವಸುದೇವನ ಮಗ. ಈತನ ತಾಯಿ ವೃಕದೇವಿ (ಭಾಗ.,ಹರಿ.).

ನಂದನ - ಸಂತೋಷಪಡಿಸುವ ಇಂದ್ರನ ಉದ್ಯಾನ (ಅಮರಪ್ರ.).

ನಂದಭದ್ರ - ವೈಶ್ಯನೊಬ್ಬ. ಮೊದಲು ವೈರಾಗ್ಯವುಳ್ಳವನಾಗಿದ್ದು, ಪತ್ನಿಪುತ್ರರು ಸತ್ತರೂ ವಿಚಲಿತನಾಗದೆ ಕುಷ್ಠರೋಗವುಳ್ಳ ಹುಡುಗನಿಂದ ಪುನಃ ಪ್ರವೃತ್ತಿಮಾರ್ಗಕ್ಕೆ ಬಂದು, ವಿವಾಹಿತನಾಗಿ ಅನೇಕ ಪುತ್ರರನ್ನು ಪಡೆದು, ಸೂರ್ಯ ಮತ್ತು ಶಿವನ ಆರಾಧಕನಾಗಿದ್ದು ಸದ್ಗತಿ ಪಡೆದನು (ಸ್ಕಾಂ.ಪು.).

ನಂದಾ - ೧. ಧರ್ಮಪ್ರಜಾಪತಿಯ ಮಗನಾದ ಸಂತೋಷ ಅಥವಾ ಹರ್ಷನ ಹೆಂಡತಿ. ೨. ಋಷಭಕೂಟ ಪರ್ವತದಲ್ಲಿ ಹುಟ್ಟಿ ಅಲಕಾನಗರದ ಸಮೀಪ ಹರಿಯುವ ನದಿ. ಈ ನದಿಯ ತೀರದಲ್ಲಿ ದೇವತೆಗಳು ಅನೇಕ ಯಜ್ಞಮಾಡಿದರು. (ನೋ. - ವೃಷಭ. ೩. ಈಕೆ ಸರ್ಪರಾಜನಾದ ಸಾಲಪೋತಕನ ಮಗಳು. ಸಾಲಪೋತಕನು ಕರೆತಂದ ಬಹುಳೆ ಎಂಬ ಸುಂದರಿಯನ್ನು ಈಕೆಯು ಅಡಗಿಸಿಟ್ಟು ತಂದೆಯಿಂದ ಮೂಕಳಾಗುವಂತೆ ಶಾಪ ಪಡೆದಳು. ಆಮೇಲೆ ಬಹುಳೆಯ ಗಂಡನಾದ ಸುಶರ್ಮನು ಬಲಾಕನೆಂಬ ರಾಕ್ಷಸನ ಮಾಯಾಬಲದಿಂದ ತನ್ನ ಹೆಂಡತಿಯನ್ನು ತನ್ನಲ್ಲಿಗೆ ಬರಮಾಡಿಕೊಂಡು ನಂದೆಯಿಂದ ಆಕೆಗಾದ ಉಪಕಾರವನ್ನು ಸಾಲಪೋತಕನ ಶಾಪದ ವಿವರವನ್ನು ತಿಳಿದು ಆಕೆಗಾಗಿ ಸುಶರ್ಮನು ಸಾರಸ್ವತಕ್ರತುವನ್ನು ಮಾಡಿ ನಂದೆಯ ಮೂಕತನವನ್ನು ಹೋಗಲಾಡಿಸಿದನು (ಮಾರ್ಕಂ.ಪು.).

ನಂದಿ (ನಂದೀಶ್ವರ) - ಶಿವನವಾಹನವಾದ ವೃಷಭ. ಈತನ ತಾಯಿ ಕಾಮಧೇನು. ಸಹೋದರಿ ನಂದಿನಿ. ಈತನು ಶಿಲೆಯನ್ನು ಆಹಾರವಾಗಿ ಮಾಡಿಕೊಂಡು ತಪಸ್ಸು ಮಾಡುತ್ತಿದ್ದ ಶಿಲಾದಮುನಿಗೆ ಮಗನಾಗಿ ಹುಟ್ಟಿದ. ರಾವಣನು ಕುಬೇರನನ್ನು ನೋಡಿ ಕಪಿಯೆಂದು ಹಾಸ್ಯಮಾಡಿದುದರಿಂದ ಆತನು ಕೆರಳಿ, 'ನಿನ್ನ ರಾಜ್ಯಸಂಪತ್ತುಗಳೆಲ್ಲಾ ಕಪಿಗಳಿಂದಲೇ ನಾಶವಾಗಲಿ' ಎಂದು ಶಾಪವಿತ್ತನು. ಇವನು ಶಿವನ ಪ್ರಥಮಗಣಗಳ ಮುಖಂಡ. ಈತನು ದಕ್ಷಯಜ್ಞವಿನಾಶದ

ಕಾಲದಲ್ಲಿ ಭಗನೆಂಬ ಋತ್ವಿಜನನ್ನು ಕಟ್ಟಿಹಾಕಿದ. ವೀರಭದ್ರನು ಭಗನ ಕಣ್ಣುಗಳನ್ನು ಕಿತ್ತನು (ಮ.ಅನು.,ಲಿಂಗಪು.,ಉತ್ತರರಾಮ.,ಭಾಗ.).

ನಂದಿಗ್ರಾಮ - ಅಯೋಧ್ಯೆಯ ಸಮೀಪದ ಒಂದು ಗ್ರಾಮ ಶ್ರೀರಾಮನ ವನವಾಸ ಕಾಲದಲ್ಲಿ ಭರತನು ಶ್ರೀರಾಮನ ಪಾದುಕೆಗಳನ್ನು ಪೂಜಿಸುತ್ತಾ ಇಲ್ಲೇ ವಾಸಿಸಿದ್ದನು. ಮುಂದೆ ಆತನ ದರ್ಶನವೂ ಭರತನಿಗೆ ಇದೇ ಗ್ರಾಮದಲ್ಲಾಯಿತು (ರಾಮಾ.ಅಯೋ.,ಯುದ್ಧ).

ನಂದಿನಿ - ಒಂದು ನದಿ. ೨. ವಸಿಷ್ಠಮುನಿಯ ದನ; ಕಾಮಧೇನುವಿನ ಮಗಳು. ಕಶ್ಯಪ ಮತ್ತು ಸುರಭಿಯರ ಮಗಳು. ಶಿವನ ವಾಹನವಾದ ನಂದಿಯ ಸೋದರಿ (ಮ.ಆ.,ರ.,ವಂ.).

ಒಮ್ಮೆ ಪೃಥು ಮೊದಲಾದ ಅಷ್ಟವಸುಗಳು ದೇವರ್ಷಿಗಳಿಂದ ಪೂಜಿತರಾದ ವಸಿಷ್ಠನ ವನಕ್ಕೆ ಬಂದರು. ಅವರಲ್ಲಿ ದ್ಯು ಎಂಬ ವಸುವಿನ ಪತ್ನಿಯು 'ಆ ನಂದಿಯನ್ನು ನನಗೆ ತಂದುಕೊಟ್ಟರೆ ಅದನ್ನು ನನ್ನ ಸ್ನೇಹಿತೆಯಾದ ಜಿತವತಿ ಎಂಬ ರಾಜಪುತ್ರಿಗೆ ಕೊಡುವೆನು. ಇದರ ಹಾಲನ್ನು ಪಾನಮಾಡತಕ್ಕ ಮನುಷ್ಯರು ಹತ್ತು ಸಾವಿರ ವರುಷಗಳವರೆಗೆ ಜರಾರಹಿತವಾಗಿ ಯೌವ್ವನದಿಂದಿರುವರು. ಅದಕ್ಕಾಗಿ ನನ್ನ ಸ್ನೇಹಿತೆಗಾಗಿ ಈ ದನವನ್ನು ತಂದು ಕೊಡಬೇಕು' ಎನ್ನಲು ಆ ದ್ಯು ಎಂಬ ವಸುವು ಕದ್ದುಕೊಂಡುಹೋಗಿ ಅದನ್ನು ತನ್ನ ಪತ್ನಿಗೆ ಕೊಟ್ಟನು. ಇದನ್ನು ತಿಳಿದ ವಸಿಷ್ಠನು 'ವಸುಗಳೆಲ್ಲಾ ಮನುಷ್ಯರಾಗಿ ಜನಿಸಲಿ' ಎಂದು ಶಾಪಕೊಟ್ಟನು. ಆಮೇಲೆ ವಸುಗಳ ಪ್ರಾರ್ಥನೆಯನ್ನು ಕೇಳಿ ಒಂದು ಸಂವತ್ಸರ ಕಳೆದ ಮೇಲೆ ನೀವು ಶಾಪಮುಕ್ತರಾಗುವಿರಿ' ಎಂದನು (ಮ.ಆ.).

ನಂದ - ಪುಣ್ಯಕೋಟಿ ಎಂಬ ದನದ ಇನ್ನೊಂದು ಹೆಸರು. ಧರ್ಮರಾಜನು ಇದರ ಧರ್ಮಬುದ್ಧಿಗೆ ಮೆಚ್ಚಿ ಸರಸ್ವತಿ ನದಿಯಾಗಿ ಹರಿಯುವಂತೆ ವರವಿತ್ತನು (ಕಾರ್ತಿ.ಮ.).

ನಭ - ಸೂರ್ಯವಂಶದ ನಳನ ಮಗ. ಶ್ರೀರಾಮನಿಂದ ಆರನೆಯವನು. ೨.ಶ್ರಾವಣಮಾಸದ ಹುಣ್ಣಿಮೆಯ ದಿನ ಶ್ರವಣನಕ್ಷತ್ರವಿರುತ್ತದೆ. ಈ ತಿಂಗಳಲ್ಲಿ ಇಂದ್ರನೆಂಬ ಆದಿತ್ಯನು ಸೂರ್ಯಮಂಡಲದಲ್ಲಿದ್ದು ಅಂಗೀರನೆಂಬ ಋಷಿ, ವಿಶ್ವಾವಸುವೆಂಬ ಗಂಧರ್ವ, ಪ್ರಮ್ಲೋಚೆಯೆಂಬ ಅಪ್ಸರೆ, ವರ್ಯನೆಂಬ

ರಾಕ್ಷಸ, ಏಲಾಪುತ್ರನೆಂಬ ನಾಗ, ಶ್ರೋತಾರನೆಂಬ ಯಕ್ಷನೊಂದಿಗೆ ಗ್ರಹಮಂಡಲದಲ್ಲಿ ಸಂಚರಿಸುತ್ತಾನೆ (ಭಾಗ.).

ನಭಗ - ನಾಭಾಗನ ತಂದೆ. ನೋ- ನಾಭಾಗ (ಹರಿ).

ನಭಸ್ಯ - ಭಾದ್ರಪದ ಮಾಸ. ಈ ತಿಂಗಳ ಹುಣ್ಣಿಮೆಯ ದಿನ ಪೂರ್ವಾಭಾದ್ರ, ಅಥವಾ ಉತ್ತರಾಭಾದ್ರ ನಕ್ಷತ್ರವಿರುವುದರಿಂದ ಇದು ಭಾದ್ರಪದ ಮಾಸವಾಯಿತು. ಆ ತಿಂಗಳಲ್ಲಿ ವಿವಸ್ವಂತನೆಂಬ ಸೂರ್ಯನು ಸೂರ್ಯಮಂಡಲದಲ್ಲಿ ಭೃಗುಮಹರ್ಷಿ, ಉಗ್ರಸೇನ ಗಂಧರ್ವ, ಅನುಮ್ಲೋಚೆಯೆಂಬ ಅಪ್ಸರೆ, ಶಂಖಪಾಲನೆಂಬ ನಾಗ, ಆಸಾರಣ ಯಕ್ಷ, ವ್ಯಾಘ್ರನೆಂಬ ರಾಕ್ಷಸರೊಂದಿಗೆ ಗ್ರಹಮಂಡಲದಲ್ಲಿ ಸಂಚರಿಸುತ್ತಾನೆ (ಭಾಗ.).

ನಭಸ್ವತಿ - ಅಂತರ್ಧಾನನೆಂಬ ರಾಜನ ಎರಡನೆಯ ಪತ್ನಿ. ನೋ.-ಅಂತರ್ಧಾನ.

ನಮುಚಿ - ೧. ಧನುವಿನ ಮಗನಾದ ರಾಕ್ಷಸನೊಬ್ಬ. ಈತನ ತಂದೆ ಕಶ್ಯಪ. ಸ್ವರ್ಭಾನುವಿನ ಮಗಳಾದ ಸುಪ್ರಭೆಯು ಈತನ ಹೆಂಡತಿ. ಇಂದ್ರನು ಇವನನ್ನು ಕೊಂದನು (ಮ.ಶ.).

ಈ ರಾಕ್ಷಸನು ಇಂದ್ರನಿಗೆ ಹೆದರಿ ಸೂರ್ಯಕಿರಣದಲ್ಲಿ ಪ್ರವೇಶಿಸಿ ಅವಿತುಕೊಂಡನು. ಆಗ ಇಂದ್ರನು ಅವನೊಡನೆ ಸ್ನೇಹ ಬೆಳೆಸಿ, ಅವನೊಡನೆ 'ಓ ದೈತ್ಯೇಂದ್ರ, ನಿನ್ನನ್ನು ನಾನು ಆರ್ದವಸ್ತುವಿನಿಂದಾಗಲಿ, ಒಣಗಿದ ವಸ್ತುವಿನಿಂದಾಗಲಿ, ರಾತ್ರಿಯಲ್ಲಾಗಲಿ, ಹಗಲಿನಲ್ಲಾಗಲಿ ಕೊಲ್ಲುವುದಿಲ್ಲ' ಎಂದು ಪ್ರತಿಜ್ಞೆಮಾಡಿದನು. ಕೊನೆಗೆ ಆರ್ದ್ರವೂ ಶುಷ್ಕವೂ ಅಲ್ಲದ ನೊರೆಯಿಂದ ಆತನ ಶಿರಚ್ಛೇದನ ಮಾಡಿದನು. ಆಗ ನಮುತಿಯ ತಲೆಯು ಇಂದ್ರನನ್ನು ನೋಡಿ 'ಓ ಮಿತ್ರಘ್ನಾ, ಪಾಪಿ' ಎನ್ನುತ್ತಾ ಹಿಂಬಾಲಿಸಲು, ಇಂದ್ರನು ಆ ಶಿರದಿಂದ ತಪ್ಪಿಸಿಕೊಳ್ಳಲು ಬ್ರಹ್ಮನ ಬಳಿಗೆ ಬಂದು ತನ್ನ ಕಷ್ಟವನ್ನು ಹೇಳಿಕೊಂಡನು. ಬ್ರಹ್ಮನು - 'ಋಷಿಗಳಿಂದ ನಿರ್ಮಿತವಾದ ಪುಣ್ಯಜಲವುಳ್ಳ ಅರುಣಾನದಿಯಲ್ಲಿ ಸ್ನಾನಮಾಡಿ ಅರುಣೆ ಸರಸ್ವತಿಯರ ಸಂಗಮದಲ್ಲಿ ಯಜ್ಞಮಾಡು. ನೀನು ಶಾಪದಿಂದ ಮಕ್ತನಾಗುವೆ' ಎಂದನು. ಇಂದ್ರನನ್ನು ಅಂಟಿಬಂದಿದ್ದ ನಮುಚಿಯ ಶಿರವು ಆತನು ಅರುಣಾನದಿಯಲ್ಲಿ ಸ್ನಾನಮಾಡಿ ಮುಳುಗಿ ಮಿಂದುದರಿಂದ ಆತನನ್ನು ಬಿಟ್ಟು ಅಕ್ಷಯವಾದ ಪುಣ್ಯಲೋಕಗಳನ್ನು ಹೊಂದಿತು (ಮ.ಶ.). ೨. ದಕ್ಷಿಣದೇಶದ ಮಹರ್ಷಿಯೊಬ್ಬ. ಶ್ರೀರಾಮನು ಪಟ್ಟಾಭಿಷಿಕ್ತನಾದಮೇಲೆ ಆತನ ಸಂದರ್ಶನಕ್ಕಾಗಿ ಮಹರ್ಷಿಯೊಂದಿಗೆ ಬಂದಿದ್ದನು (ಉತ್ತರರಾಮ).

ನರ - ನಾರಾಯಣನ ಸಹೋದರ. ಈತನ ತಂದೆ ತಾಯಿಗಳು ಧರ್ಮ ಮತ್ತು ಮೂರ್ತಿ. ಪಾಂಡವರು ವನವಾಸಕಾಲದಲ್ಲಿ ಈತನ ಆಶ್ರಮಕ್ಕೆ ಹೋದರು. ಅರ್ಜುನನು ಈತನ ಅಂಶದಿಂದ ಅವತರಿಸಿದನು.

ಹಿರಣ್ಯಕಶಿಪುವಿನ ವಧೆಯಾದಮೇಲೆ ಹರಿಯ ಸಿಂಹಾಕಾರವು ನಾರಾಯಣನಾಗಿಯೂ, ನರರೂಪವು ನರಮುನಿಯಾಗಿಯೂ ಆದರು. ಇವರಿಬ್ಬರು ಮಹಾತಪಸ್ಸನ್ನು ಕೈಗೊಂಡಿರಲು ಇಂದ್ರನು ಇವರ ತಪೋಭಂಗಕ್ಕೆ ಅನೇಕ ಅಪ್ಸರೆಯರನ್ನು ಕಳುಹಿಸಿದನು. ನಾರಾಯಣನು ಅವರನ್ನೆಲ್ಲಾ ಕಂಡು ನಗುತ್ತಾ ತನ್ನ ಊರುವನ್ನು (ತೊಡೆ) ತುರಿಸಿದಾಗ ಊರ್ವಶಿಯೆಂಬ ಮಹಾಸುಂದರಿಯಾದ ಅಪ್ಸರೆಯು ಜನಿಸಿದಳು. ಇವಳ ಸೌಂದರ್ಯವನ್ನು ಕಂಡು ಉಳಿದ ಅಪ್ಸರೆಯರೆಲ್ಲಾ ನಾಚಿ ಹಿಂದೆಹೋದರು.

ಪ್ರಹ್ಲಾದನು ಒಮ್ಮೆ ಬದರಿಕಾಶ್ರಮಕ್ಕೆ ಬಂದಾಗ ನರನಾರಾಯಣರೀರ್ವರು ಆಯುಧಧಾರಿಗಳಾಗಿ ತಪಸ್ಸು ಮಾಡುತ್ತಿರುವುದನ್ನು ಕಂಡು ಇವರು ಕಪಟಮುನಿಗಳೆಂದು ಇವರಿಬ್ಬರನ್ನು ಕೆಣಕಲು ಇವರಿಬ್ಬರಿಂದ ಪ್ರಹ್ಲಾದನು ಪರಾಜಿತನಾಗಿ ಚಿಂತೆಗೀಡಾಗಿರುವಾಗ ಹರಿಯು ಆ ಭಕ್ತನಿಗೆ ಪ್ರತ್ಯಕ್ಷನಾಗಿ 'ನರನಾರಾಯಣರಿಬ್ಬರೂ ನನ್ನ ಅಂಶದವರು. ನೀನು ಅವರನ್ನೆಂದಿಗೂ ಗೆಲ್ಲಲಾರೆ'ಎಂದು ಸಮಾಧಾನಪಡಿಸಿದನು.

ಸಹಸ್ರಕವಚನೆಂಬ ರಾಕ್ಷಸನು ತನಗೆ ಸಾವಿರ ವರ್ಷ ತಪಸ್ಸು ಮಾಡಿದವರಿಂದ ಮರಣವಾಗಲೆಂದು ವರ ಪಡೆದಿದ್ದನು. ಇದರಿಂದ ನರನಾರಾಯಣರಿಬ್ಬರೂ ತಪಸ್ಸು ಮಾಡುತ್ತಿದ್ದರು. ಕೆಲವು ಕಾಲದಮೇಲೆ ಜಗತ್ಕಂಟಕನಾದ ಸಹಸ್ರಕವಚನೊಡನೆ ನಾರಾಯಣನು ಯುದ್ಧಕ್ಕೆ ತೊಡಗಿದ. ಆಗ ನರನು ತಪಸ್ಸು ಮಾಡುತ್ತಿದ್ದ. ನಾರಾಯಣನು ಯುದ್ಧದಲ್ಲಿ ಬಳಲಿದೊಡನೆ ತಪಸ್ಸಿಗೆ ತೊಡಗುತ್ತಿದ್ದ. ಆಗ ನರನು ಸಹಸ್ರಕವಚನೊಡನೆ ಯುದ್ಧಮಾಡುತ್ತಿದ್ದ. ಹೀಗೆ ಒಂಬೈನೂರ ತೊಂಬತ್ತೊಂಬತ್ತು ಕವಚಗಳನ್ನು ಹರಿದರು. ಆಗ ರಕ್ಕಸನು ಬೆದರಿ ಸೂರ್ಯನ ಮರೆಹೊಕ್ಕು ನರನಾರಾಯಣರ ಕಾಟವನ್ನು ತಪ್ಪಿಸಿಕೊಂಡ. ಆದರೆ ಅವನೇ ಕರ್ಣನಾಗಿ ಹುಟ್ಟಲು, ನರನಾರಾಯಣರು ಅರ್ಜುನ ಮತ್ತು ಕೃಷ್ಣರಾಗಿ ಹುಟ್ಟಿದರು. ಆಗ ಆ ರಕ್ಕಸನ ಒಂದು ಕವಚವನ್ನು ಕತ್ತರಿಸುವ ಸರದಿ ಬಂದುದರಿಂದ ಅರ್ಜುನನು ಕರ್ಣನೊಡನೆ ಹೋರಾಡಿ ಅವನನ್ನು ಕೊಂದನು (ದೇವಿಭಾ.,ಮ.,ವ.).

ನರಕ - ೧. ದನುಪುತ್ರನಾದ ರಾಕ್ಷಸನೊಬ್ಬ. ೨. ಮರಣಾನಂತರ ಪಾಪಿಗಳ ಶಿಕ್ಷೆಯ ಸ್ಥಾನ. ಇದರಲ್ಲಿ ತಾಮಿಸ್ರ, ಅಂಧತಾಮಿಸ್ರ, ಅಂಧಕೂಪ, ಸೂಚೀಮುಖ, ರೌರವ, ಮಹಾರೌರವ, ಕಾಲಸೂತ್ರ, ಅಸಿಪತ್ರವನ ಮೊದಲಾದ ಹಲವು ಭೇದಗಳಿವೆ. ೩. ಭೂದೇವಿಯ ಪುತ್ರನಾದ ಅಸುರ. ವಿಷ್ಣುವು ವರಾಹಾವತಾರವನ್ನು ಧರಿಸಿದಾಗ ಆತನ ಮೈಬೆವರು ಭೂಮಿಯಮೇಲೆ ಬಿದ್ದು ಈತನು ಹುಟ್ಟಿ ಮಗನೆನ್ನಿಸಿದನು. ಇದರಿಂದ ಈತನಿಗೆ ಭೌಮಾಸುರನೆನ್ನುತ್ತಾರೆ. ಭೂದೇವಿಯು ವರಾಹಸ್ವಾಮಿಯನ್ನು ಪ್ರಾರ್ಥಿಸಲು ಆತನು ತನ್ನ ದಾಡೆಯನ್ನು ಕಿತ್ತು ಆಕೆಯ ಕೈಗಿತ್ತು ' ಇದು ಅಮೋಘವಾದ ವೈಷ್ಣವಾಸ್ತ್ರ' ಎಂದಿದ್ದನು. ಭೂದೇವಿಯು ಆ ಅಸ್ತ್ರವನ್ನು ತನ್ನ ಮಗನ ಕೈಗಿತ್ತಳು. ಮುಂದೆ ನರಕನ ಮಗ ಭಗದತ್ತನು ಅರ್ಜುನನ ಮೇಲೆ ಈ ಅಸ್ತ್ರವನ್ನು ಪ್ರಯೋಗಿಸಲು ಶ್ರೀಕೃಷ್ಣನು ಅದನ್ನು ತಾನೆ ಸೆಳೆದು ಅದರ ಶಕ್ತಿಯನ್ನು ಹಾಳುಮಾಡಿದನು.

ಮುಂದೆ ನರಕನು ಪ್ರಾಗ್ಜ್ಯೋತಿಷ ನಗರದಲ್ಲಿ ರಾಜ್ಯಭಾರ ಮಾಡುತ್ತ ಲೋಕಕಂಟಕನಾಗಿದ್ದನು. ಇವನು ಅದಿತಿದೇವಿಯ ಕಿವಿಯ ರತ್ನಕುಂಡಲಗಳನ್ನೂ, ವರುಣನ ಶ್ವೇತಚ್ಛತ್ರವನ್ನು, ಮೇರುಪರ್ವತದ ಭಾಗವಾದ ಮಹಾಮಣಿ ಎಂಬ ಶಿಖರವನ್ನೂ, ವೈಜಯಂತಿ ಮಾಲೆಯನ್ನು ಅಪಹರಿಸಿದನು. ದೇವೇಂದ್ರನು ನರಕನ ದುಶ್ಚೇಷ್ಟೆಗಳನ್ನು ಸಹಿಸಲಾರದೆ ಶ್ರೀಕೃಷ್ಣನಿಗೆ ದೂರಲು ಆತನು ಭೂದೇವಿಯ ಅಂಶಭೂತೆಯಾದ ಸತ್ಯಭಾಮೆಯನ್ನು (ಆಕೆಯ ಅಪ್ಪಣೆ ಪಡೆದೇ ನರಕನನ್ನು ಕೊಲ್ಲಬೇಕೆಂದು) ತನ್ನೊಡನೆ ಕರೆದುಕೊಂಡು ಗರುಡಾರೂಢನಾಗಿ ಪ್ರಾಗ್ಜ್ಯೋತಿಷಪುರಕ್ಕೆ ಬಂದನು. ಅಲ್ಲಿ ಆ ಪಟ್ಟಣವನ್ನು ರಕ್ಷಿಸುತ್ತಿರುವ ಗಿರಿದುರ್ಗ, ಜಲದುರ್ಗ, ಅಗ್ನಿದುರ್ಗ, ಶಸ್ತ್ರದುರ್ಗ, ವಾಯುದುರ್ಗಗಳೆಂಬ ಐದು ಬಗೆಯ ದುರ್ಗಗಳನ್ನು ಭೇದಿಸಿ, ಮುರಾಸುರನಿಂದ ನಿರ್ಮಿತವಾದ ಸಾವಿರಾರು ಪಾಶಗಳನ್ನು ತನ್ನ ಖಡ್ಗದಿಂದ ಕತ್ತರಿಸಿದನು. ಈ ಪಾಶಗಳು ನಗರದ ಸಮೀಪಕ್ಕೆ ಬಂದ ಶತ್ರುಗಳ ಮೈಗೆ ಬಲವಾಗಿ ಸುತ್ತಿಕೊಂಡು ಅವರನ್ನು ಕೆಡಹಿ ಕೊಲ್ಲುತ್ತಿದ್ದವು. ಅವನ ಶಂಖಧ್ವನಿಯಿಂದ ಅಲ್ಲಿನ ಯಂತ್ರಗಳ ಕಟ್ಟುಗಳೆಲ್ಲಾ ಸಡಿಲಾದವು. ಈ ಶಂಖಧ್ವನಿಯನ್ನು ಕೇಳಿ ಜಲಶಯ್ಯೆಯಲ್ಲಿ ಮಲಗಿದ್ದ ಐದು ತಲೆಯುಳ್ಳ ಮುರಾಸುರನು ಎದ್ದು ಶ್ರೀಕೃಷ್ಣನನ್ನು ಇದಿರಿಸಿ ಆತನ ಚಕ್ರಾಯುಧದಿಂದ ಹತನಾದನು. ನೋ-ಮುರ.

ಮುಂದೆ ಶ್ರೀಕೃಷ್ಣನು ನರಕನ ಸೇನಾಪತಿಗಳನ್ನು, ಗಜಸೈನ್ಯವನ್ನು ಕೊಂದು, ನರಕನ ತಲೆಯನ್ನು ಚಕ್ರಾಯುಧದಿಂದ ಕತ್ತರಿಸಿ ಕೊಂದನು. ಆಮೇಲೆ ಅದಿತಿ, ವರುಣ ಮೊದಲಾದವರ ಅಮೂಲ್ಯವಸ್ತುಗಳನ್ನೆಲ್ಲಾ ಅವರವರಿಗೆ ಕೊಟ್ಟು ಭೂದೇವಿಯ ಪ್ರಾರ್ಥನೆಯಂತೆ ನರಕನ ಮಗನಾದ ಭಗದತ್ತನಿಗೆ ಅಭಯವನ್ನು ಕೊಟ್ಟನು. ನರಕನು ತನ್ನ ಅರಮನೆಯಲ್ಲಿ ಸೆರೆಯಿಟ್ಟ ಅರವತ್ತುಸಾವಿರ ಮಂದಿಗಿಂತ ಹೆಚ್ಚಾದ ರಾಜಕನ್ಯೆಯರನ್ನು ಸೆರೆಯಿಂದ ಬಿಡಿಸಿ ಅವರಿಷ್ಟದಂತೆ ಅವರನ್ನು ದ್ವಾರಕಾಪುರಿಗೆ ಕಳುಹಿಸಿದನು (ಭಾಗ.). ನರಕನ ಅಂತಃಪುರದಲ್ಲಿದ್ದ ಹದಿನಾರು ಸಾವಿರದ ನೂರು ಸತಿಯರನ್ನು ಕೃಷ್ಣನು ದ್ವಾರಕೆಗೆ ಕರೆತಂದು ವಿವಾಹವಾದನು (ಹರಿ.).

ನಾಲ್ಕು ಮಂದಿ ರಾಕ್ಷಸರು ನರಕನ ರಾಜ್ಯದ ನಾಲ್ಕು ಎಲ್ಲೆಗಳನ್ನು ಕಾಯುತ್ತಿದ್ದರು. ಹಯಗ್ರೀವ, ನಿಕುಂಭ, ಪಂಚಜನ, ಮುರಾಸುರರೆಂದು ಇವರ ಹೆಸರು.

ನರನಾರಾಯಣರು - ದಕ್ಷಪ್ರಜಾಪತಿಯು ತನ್ನ ಮೂರ್ತಿ ಎಂಬ ಮಗಳನ್ನು ಧರ್ಮನೆಂಬ ಮುನಿಗೆ ಮದುವೆ ಮಾಡಿಕೊಟ್ಟನು. ಈ ಧರ್ಮನು ಹೇಗೆ ಮಹಾತಪಸ್ವಿಯೋ, ಮೂರ್ತಿಯೂ ಹಾಗೆಯೇ ಪತಿವ್ರತಾ ಶಿರೋಮಣಿಯಾಗಿದ್ದಳು. ಮೂರ್ತಿಗೆ ಶ್ರೀಮನ್ನಾರಾಯಣನೇ ಮಗನಾಗಬೇಕೆಂಬ ಆಸೆಯಿತ್ತು. ಆ ದಂಪತಿಗಳ ಜೀವನಕ್ಕೆ ಸಂತೋಷಗೊಂಡ ಶ್ರೀ ಹರಿಯು ಆ ದಂಪತಿಗಳ ಮಗನಾಗಬೇಕೆಂದು ನಿಶ್ಚಯಿಸಿದನು. ಮೂರ್ತಿಯು ಗರ್ಭಿಣಿಯಾಗಿ ಸಕಲ ಲಕ್ಷಣೋಪೇತರಾದ ಅವಳಿಮಕ್ಕಳನ್ನು ಹೆತ್ತಳು. ಅವರೇ ನರನಾರಾಯಣರು. ಹರಿಯ ಇಪ್ಪತ್ತನಾಲ್ಕು ಅವತಾರಗಳಲ್ಲಿ ಇದೂ ಒಂದು ಅವತಾರ. ಹುಟ್ಟಿದೊಡನೆಯೇ ತಾಯ್ತಂದೆಗಳು ಮಕ್ಕಳಿಗೆ ತತ್ತ್ವೋಪದೇಶವನ್ನಿತ್ತು ಹಿಮಾಚಲ ಪ್ರದೇಶಕ್ಕೆ ನರನಾರಾಯಣರನ್ನು ತಪಸ್ಸಿಗಾಗಿ ಕಳುಹಿಸಿದರು. ಇವರು ಬದರಿಕಾಶ್ರಮದಲ್ಲಿ ಭಯಂಕರವಾಗಿ ತಪಸ್ಸಿಗೆ ತೊಡಗಿದರು. ಇಂದ್ರನು ಗಾಬರಿಯಾಗಿ ಅವರ ತಪೋಭಂಗಕ್ಕಾಗಿ ಅಪ್ಸರೆಯರನ್ನು, ಗಂಧರ್ವ, ಕಿಂಪುರುಷರನ್ನೂ ಕಳುಹಿಸಿದನು. ನಾರಾಯಣನು ಆ ಅಪ್ಸರೆಯರನ್ನು ಮೀರಿದ ಊರ್ವಶಿಯನ್ನು ಆ ಕಾಲದಲ್ಲೇ ತೊಡೆಯಿಂದ ನಿರ್ಮಾಣ ಮಾಡಿ ಅಪ್ಸರೆಯರೂ ತಲೆತಗ್ಗುವಂತೆ ಮಾಡಿದನು. ನರನಾರಾಯಣರ ತಪಸ್ಸು ತ್ರಿಲೋಕ ಕಂಪನಕಾರಿಯಾಗಿತ್ತು. ನೋ-ನರ.

ನರಸಿಂಹ (ನೃಸಿಂಹ) - ವಿಷ್ಣುವಿನ ಹದಿನಾಲ್ಕನೆಯ ಅವತಾರ. ಇದು ವೈವಸ್ವತ ಮನ್ವಂತರದ ನಾಲ್ಕನೆಯ ಕೃತಯುಗದಲ್ಲಿ ನಡೆಯಿತು. ಪ್ರಹ್ಲಾದನ

ಮೊರೆಯನ್ನು ಕೇಳಿ, ವಿಷ್ಣುವು ಕಂಬದಿಂದ ಅವತರಿಸಿ, ಹಿರಣ್ಯಕಶಿಪುವನ್ನು ವಧಿಸಿದನು. ನೋ.-ನೃಸಿಂಹ.

ನರಿಷ್ಯಂತ - ೧. ಮರುತ್ತರಾಜನ ಮಗ. ಮಹರ್ಷಿ ಬಾಭ್ರವ್ಯನ ಪುತ್ರಿಯಾದ ಇಂದ್ರಸೇನೆ ಈತನ ಪತ್ನಿ. ಇವನು ಹಲವು ಕೋಟಿ ಯಜ್ಞಮಾಡಿ ಲೋಕದ ಬಡತನವನ್ನೇ ಪರಿಹರಿಸಿದನು. ಯಜ್ಞಮಾಡಲು ಆತನಿಗೆ ಋತ್ವಿಜರೇ ದೊರೆಯಲಿಲ್ಲ. ಎಲ್ಲರು ದೀಕ್ಷಿತರೆ. ಕೊನೆಗೆ ಬ್ರಾಹ್ಮಣರನ್ನು ಅಂಗಲಾಚಿ, ಬೇಡಿ ಕರೆತರಬೇಕಾಯಿತು (ಮಾರ್ಕಂ.ಪು.). ೨. ವೈವಸ್ವತನ ಪುತ್ರ. ಇವನನ್ನು ನರಿಷ್ಯಂತನೆಂದೂ ಹೇಳುತ್ತಾರೆ. ಈತನಿಗೆ ಶಕರೆಂಬ ಪುತ್ರರಿದ್ದರು. ಈತನ ಮಗನೇ ಶಾಸನ ಸಮರ್ಥನಾದ ದಮ (ಹರಿ).

ನರ್ಮದಾ - ೧. ಒಂದು ನದಿ. ಇದು ಕಳಿಂಗದೇಶದ ಅಮರಕಂಟಕ ಪರ್ವತದಲ್ಲಿ ಹುಟ್ಟುತ್ತದೆ. ಇಲ್ಲಿ ಅಹಲ್ಯಾಬಾಯಿಯ ದೊಡ್ಡ ಧರ್ಮಶಾಲೆಯಿದೆ. ಇಲ್ಲಿ ಕೋಟಿ ತೀರ್ಥಕುಂಡ, ನರ್ಮದೇಶ್ವರ ಮಂದಿರವಿದೆ. ಇಲ್ಲಿಂದ ಅರ್ಧಮೈಲು ದೂರದಲ್ಲಿ ಮಾರ್ಕಂಡೇಯಾಶ್ರಮವಿದೆ. ೨. ಇಕ್ಷ್ವಾಕುವಂಶದ ದುರ್ಯೋಧನನ ಪತ್ನಿ. ಈಕೆಯ ಮಗಳು ಸುದರ್ಶನಾ. ೩. ಒಬ್ಬಳು ಗಂಧರ್ವಸ್ತ್ರೀ. ಈಕೆಯು ತನ್ನ ಸುಂದರಿ, ಕೇತುಮತಿ, ವಸುಧೆ ಎಂಬ ಮೂವರು ಹೆಣ್ಣುಮಕ್ಕಳನ್ನುಮಾಲ್ಯವಂತ, ಸುಮಾಲ ಮತ್ತು ಸುಕೇಶನ ಮಗನಾದ ಮಾಲಿಗೂ ಲಗ್ನಮಾಡಿಕೊಟ್ಟಿದ್ದಳು. ೪. ಮಾಂಧಾತ ಚಕ್ರವರ್ತಿಯ ಮಗನಾದ ಪುರುಕುತ್ಸನ ಪತ್ನಿ. ಈಕೆ ನಾಗಕುಲದವಳು. ಈಕೆಯ ಮಗ ಅನರಣ್ಯ (ತ್ರಸದಸ್ಯು) (ಮ.,ವ.,ಅನು.,ಮತ್ಸ್ಯಪು.,ಪದ್ಮಪು.,ಉತ್ತರರಾಮ.).

ನಲ (೪) - ೧. ವಾನರನೊಬ್ಬ. ಈತನು ಸುಗ್ರೀವನ ಸೇನಾಪತಿ. ವಿಶ್ವಕರ್ಮನ ಅಂಶದಿಂದ ಜನಿಸಿದವ. ಈತನು ಲಂಕೆಗೆ ಸೇತುವೆಯನ್ನು ಕಟ್ಟಿದನು. ಇವನು ನೀರಿಗೆ ಹಾಕಿದ ವಸ್ತುಗಳೆಲ್ಲಾ ತೇಲುವಂತೆ ವಿಶ್ವಕರ್ಮನು ಇವನಿಗೆ ವರವನ್ನು ಕೊಟ್ಟಿದ್ದ (ರಾಮಾ.ಯುದ್ಧ).

ಪೂರ್ವದಲ್ಲಿ ಈ ನಳನು ಗಂಗಾತೀರದಲ್ಲಿ ವಾಸಮಾಡುತ್ತಿದ್ದಾಗ ಬ್ರಾಹ್ಮಣನೊಬ್ಬನ ಸಾಲಿಗ್ರಾಮಗಳನ್ನು ನಿತ್ಯವೂ ಗಂಗಾಪ್ರವಾಹಕ್ಕೆ ಎಸೆಯುತ್ತಾ ಬರಲು, ಕೋಪಗೊಂಡ ಆ ಬ್ರಾಹ್ಮಣನು - 'ಎಲೈ ವಾನರನೇ, ನೀನು ಮುಟ್ಟಿದ ಕಲ್ಲುಗಳೆಲ್ಲಾ ನೀರಿನಲ್ಲಿ ತೇಲಲಿ' ಎಂದು ಶಾಪಕೊಟ್ಟನು.ನೋ.- ಸೇತುಬಂಧನ (ಆನಂ.ರಾ.). ೨. ಶ್ರೀರಾಮನ ಮೊಮ್ಮಗನಾದ ಅತಿಥಿಯ ಮೊಮ್ಮಗ. ಈತನ ಮಗನೇ ನಭ. ೩.ನಿಷಧದೇಶದ

ರಾಜ. ವೀರಸೇನನ ಮಗ; ದಮಯಂತಿಯ ಪತಿ. ನೋ.- ದಮಯಂತಿ. ಈತನ ಮಕ್ಕಳು ಇಂದ್ರಸೇನ ಮತ್ತು ಇಂದ್ರಸೇನೆ. ಈತನಿಗೆ ಭೀಷ್ಮಕನ (ಭೀಮ) ಮಗಳಾದ ದಮಯಂತಿಯೊಡನೆ ವಿವಾಹವಾಗಿತ್ತು. ಇವನು ಕಲಿಯ ಆವೇಶದಿಂದ ಪುಷ್ಕರನೊಡನೆ ಜೂಜಾಡಿ ಸಮಸ್ತ ಸಂಪತ್ತನ್ನೂ ಕಳೆದುಕೊಂಡು, ದಮಯಂತಿಯನ್ನೂ ಅಗಲಿ, ಕಾರ್ಕೋಟಕನ ದಂಶನದಿಂದ ವಿಕಾರದೇಹವುಳ್ಳವನಾಗಿ, ಬಾಹುಕನೆಂಬ ಹೆಸರಿನಿಂದ ಅಯೋಧ್ಯಾನಗರದ ಋತುಪರ್ಣನ ಆಶ್ರಯವನ್ನು ಸೇರಿದನು. ಅಲ್ಲಿ ಆತನ ಸಾರಥಿಯಾಗಿದ್ದನು. ಇತ್ತ ಕುಂಡಿನ ನಗರದಲ್ಲಿದ್ದ ದಮಯಂತಿಗೆ ಪುನಃ ಸ್ವಯಂವರವೆಂದು ಕೇಳಿ ಋತುಪರ್ಣನೊಡನೆ ಬಂದು ದಮಯಂತಿಯನ್ನು ಸ್ವೀಕರಿಸಿ, ಮರುಜೂಜಿನಲ್ಲಿ ಪುಷ್ಕರನನ್ನು ಗೆದ್ದು ತನ್ನ ಸಂಪತ್ತನ್ನೆಲ್ಲ ವಶಮಾಡಿಕೊಂಡನು. ಈತನು ಋತುಪರ್ಣನಿಗೆ ಅಶ್ವಹೃದಯವನ್ನು ತಿಳಿಸಿ, ತಾನು ಅವನಿಂದ ಅಕ್ಷಹೃದಯವನ್ನು ಕಲಿತುಕೊಂಡನು. ಈತನ ನಾಮಸ್ಮರಣೆಯಿಂದ ಕಲಿಬಾಧೆಯು ಪರಿಹಾರವಾಗುವುದು. ಈತನು ಬೆಂಕಿ-ನೀರಿಲ್ಲದೆ ಅಡುಗೆ ಮಾಡಬಲ್ಲ ಚತುರ ಪಾಕಶಾಸ್ತ್ರಿಯಾಗಿದ್ದನು. ಈತನ ಮಗಳು ಮೌದ್ಗಲ್ಯನ ಪತ್ನಿಯಾದ ನಾಲಾಯಣಿ (ಮ.ಆ.,ವ.).

ನಲ (ಳ) ಕೂಬರ - ಕುಬೇರನ ಕಿರಿಯಮಗ; ಅಣ್ಣ ಮಣಿಗ್ರೀವ. ಈ ಸಹೋದರರು ದೇವಲೋಕದ ವಿಲಾಸಿನಿಯರೊಂದಿಗೆ ಗಂಗಾನದಿಯಲ್ಲಿ ಜಲಕ್ರೀಡೆಯಾಡುತ್ತಿದ್ದಾಗ ಅಲ್ಲಿಗೆ ನಾರದಮುನಿಗಳು ಬಂದರು. ಅವರನ್ನು ಕಂಡು ವಿಲಾಸಿನಿಯರು ಮೇಲೆ ಬಂದು ಸೀರೆಯುಟ್ಟುಕೊಂಡರು. ನಲಕೂಬರ ಮಣಿಗ್ರೀವರು ಮಧುಮತ್ತರಾಗಿ ಜಲಕ್ರೀಡೆಯಲ್ಲೇ ಮಗ್ನರಾಗಿರುವಾಗ ನಾರದನು ಇವರನ್ನು ಕಂಡು ಎರಡು ಮತ್ತಿ ಮರಗಳಾಗಿ (ಯಮಳಾರ್ಜುನ) ಎಂದು ಶಾಪಕೊಟ್ಟನು. ಆಗ ಸಹೋದರರು ಮುನಿಯ ಮರೆಹೊಗಲು 'ಶ್ರೀಕೃಷ್ಣನ ಶರೀರಸ್ಪರ್ಶದಿಂದ ನಿಮಗೆ ಶಾಪವಿಮೋಚನೆಯಾಗಲಿ' ಎಂದನು. ಮುಂದೆ ಇವರಿಬ್ಬರೂ ನಂದಗೋಪನ ಮನೆ ಅಂಗಳದಲ್ಲಿ ಎರಡು ಮತ್ತಿಮರಗಳಾಗಿ ಬೆಳೆದರು. ಹೀಗೆ ನೂರು ವರ್ಷ ಕಳೆದಮೇಲೆ ಶ್ರೀಕೃಷ್ಣನ ಅವತಾರವಾಗಿ ಅವನು ನಂದ ಯಶೋದೆಯರ ಮನೆಯಲ್ಲಿ ಬೆಳೆಯತೊಡಗಿದನು. ಯಶೋದೆಯೊಮ್ಮೆ ಶ್ರೀಕೃಷ್ಣನ ತಂಟೆಯನ್ನು ಸಹಿಸಲಾರದೆ ಒರಳುಕಲ್ಲಿಗೆ ಹಗ್ಗಹಾಕಿ ಶ್ರೀಕೃಷ್ಣನ ಸೊಂಟಕ್ಕೆ ಬಿಗಿದಳು. ಶ್ರೀಕೃಷ್ಣನು ಅದನ್ನೆಳೆದುಕೊಂಡು ಆ ಮತ್ತಿಮರಗಳೆಡೆಯಿಂದ ಆಚೆ

ಪಾರಾದಾಗ ಆತನ ಸ್ಪರ್ಶದಿಂದ ಆ ಮರಗಳೆರಡೂ ಬಿದ್ದು ಆ ಇಬ್ಬರು ಯಕ್ಷರೂ ಶಾಪದಿಂದ ಬಿಡುಗಡೆಹೊಂದಿ ಅಲಕಾನಗರಕ್ಕೆ ನಡೆದರು. ನಲಕೂಬರನ ವಿಲಾಸಿನಿಯರಲ್ಲಿ ರಂಭೆಯು ಅಗ್ರೇಸರಳು (ಮ.ಸ.,ವ.,ಭಾಗ).

ನವತಂತು - ವಿಶ್ವಾಮಿತ್ರನ ಪುತ್ರ (ಮ.ಅನು.).

ನವನಿಧಿಗಳು - ಕುಬೇರನ ಸಂಪತ್ತು. ನೋ. - ಕುಬೇರ.

ನವಬ್ರಹ್ಮರು - ಬ್ರಹ್ಮನ ನೇತ್ರದಲ್ಲಿ ಹುಟ್ಟಿದವ ಮರೀಚಿ; ಹೃದಯದಲ್ಲಿ ಹುಟ್ಟಿದವ ಭೃಗು; ಶಿರದಲ್ಲಿ ಅಂಗೀರಸ; ಉದಾನವಾಯುವಿನಲ್ಲಿ ಪುಲಸ್ತ್ಯ; ವ್ಯಾನ ವಾಯುವಿನಲ್ಲಿ ಪುಲಹ; ಅಪಾನವಾಯುವಿನಲ್ಲಿ ಕ್ರತು; ಪ್ರಾಣವಾಯುವಿನಲ್ಲಿ ದಕ್ಷ; ಶ್ರೋತ್ರವಾಯುವಿನಲ್ಲಿ ಅತ್ರಿ; ಸಮಾನವಾಯುವಿನಲ್ಲಿ ವೃದ್ಧವಸಿಷ್ಠ ಹುಟ್ಟಿದರು.

ನವಪಾಷಾಣ (ದೇವೀಪತ್ತನ) - ರಾಮನಾಡಿನಿಂದ ೧೨ ಮೈಲು ದೂರದಲ್ಲಿದ್ದ ಕ್ಷೇತ್ರ. ಶ್ರೀರಾಮನು ಇಲ್ಲೇ ನವಗ್ರಹಪೂಜೆಯನ್ನು ಮಾಡಿದನು. ಇಲ್ಲಿಂದಲೇ ಸೇತುಬಂಧವು ಆರಂಭವಾಗುತ್ತದೆ. ಇಲ್ಲಿ ಧರ್ಮಪುಷ್ಕರಿಣಿ ಅಥವಾ ಚಕ್ರತೀರ್ಥವಿದೆ. ದೇವಿಯು ಮಹಿಷಾಸುರನನ್ನು ಕೊಂದಮೇಲೆ ಅವನ ಪಕ್ಷದ ರಾಕ್ಷಸನೊಬ್ಬನು ಓಡಿಹೋಗಿ ಪುಷ್ಕರಿಣಿಯಲ್ಲಿ ಅಡಗಿಕೊಳ್ಳಲು, ದೇವಿಯ ಸಿಂಹವು ಪುಷ್ಕರಿಣಿಯ ನೀರನ್ನು ಕುಡಿದು ಬಿಡಲು, ಆಕೆಯು ಆ ರಕ್ಕಸನನ್ನು ಕೊಂದಳು. ಇಲ್ಲಿ ಸಮುದ್ರವು ಸರೋವರದಂತೆ ಶಾಂತವಿದೆ. ಶ್ರೀರಾಮನು ನವಗ್ರಹಪೂಜೆ ಮಾಡಿದ ಮೇಲೆ ಸಮುದ್ರವು ಇಲ್ಲಿ ಬಂದು ತುಂಬಿತು. ಈಗಲೂ ಈ ಸಮುದ್ರದಲ್ಲಿ ಒಂಬತ್ತು ಕಲ್ಲುಗಳಿವೆ (ಕ್ಷೇತ್ರದ.).

ನಹುಷ - ಚಂದ್ರವಂಶದ ಪೂರೂರವಸನ ಮೊಮ್ಮಗ. ಈತನ ತಂದೆ ಆಯು; ತಾಯಿ ಸ್ವರ್ಭಾನವಿ. ಈತನ ಪತ್ನಿಯು ಪಿತೃದೇವತೆಗಳ ಮಗಳಾದ ವಿರಜೆ. ಮಕ್ಕಳು ಯತಿ, ಯಯಾತಿ, ಸಂಯಾತಿ, ಅಯತಿ, ಆಯತಿ ಮತ್ತು ಧ್ರುದ ಎಂಬ ಆರುಮಂದಿ (ಬ್ರಹ್ಮಪು., ಹರಿ.). ವೃತ್ರನ ವಧೆಯಿಂದುಂಟಾದ ಬ್ರಹ್ಮಹತ್ಯೆಯ ಭಯದಿಂದ ಇಂದ್ರ ಅದೃಶ್ಯನಾಗಲು, ಈತನು ದೇವತೆಗಳ ಪ್ರಾರ್ಥನೆಯಂತೆ ಇಂದ್ರನಾದನು. ಕೆಲವು ಕಾಲ ಕಳೆಯಿತು. ಇಂದ್ರನು ಬ್ರಹ್ಮಹತ್ಯೆಯನ್ನು ಹೋಗಲಾಡಿಸಿಕೊಂಡು ದೇವರಾಜಪಟ್ಟಕ್ಕೆ ಯೋಗ್ಯನಾದನು. ಆ ಕಾಲದಲ್ಲಿ ನಹುಷನ ದುರ್ದಶೆಯಿಂದ ಇಂದ್ರನ ಪತ್ನಿಯಾದ ಶಚೀದೇವಿಯಲ್ಲಿ ಮನಸ್ಸನ್ನು ಇಟ್ಟನು. ಆಕೆಯು ಬೃಹಸ್ಪತಿಗಳ ಸೂಚನೆಯಂತೆ, ಸಪ್ತರ್ಷಿಗಳಿಂದ ಪಲ್ಲಕ್ಕಿಯನ್ನು ಹೊರಿಸಿಕೊಂಡು ತನ್ನ ಅರಮನೆಗೆ ಬಂದರೆ ನಿನ್ನನ್ನು ವಿವಾಹವಾಗುವೆನೆಂದು ಹೇಳಿದಳು. ನಹುಷನು ಅದಕ್ಕೊಪ್ಪಿ ತನ್ನ

ಪಲ್ಲಕ್ಕಿಯನ್ನು ಸಪ್ತರ್ಷಿಗಳಿಂದ ಹೊರಿಸಿಕೊಂಡು ಶಚಿಯ ಅಂತಃಪುರಕ್ಕೆ ಹೋಗುವಾಗ ಅಗಸ್ತ್ಯನೊಡನೆ 'ಸರ್ಪ ಸರ್ಪ' (ಬೇಗ ನಡೆ ಬೇಗ ನಡೆ) ಎಂದು ಆತನ ತಲೆಯನ್ನು ತನ್ನ ಕಾಲಿನಿಂದ ತುಳಿಯಲು, ಅಗಸ್ತ್ಯನು ಹೆಡೆತುಳಿದ ಸರ್ಪದಂತೆ ಬುಸುಗುಟ್ಟುತ್ತ 'ಸರ್ಪೋ ಭವ' (ಸರ್ಪವಾಗು) ಎಂದು ಶಾಪವಿತ್ತನು. ಆಗ ನಹುಷನ ತಲೆಪಿತ್ತವೆಲ್ಲ ಇಳಿದು ಅಗಸ್ತ್ಯರ ಕಾಲನ್ನು ಹಿಡಿದುಕೊಂಡು ' ಅನುಗ್ರಹಿಸಬೇಕು' ಎಂದನು. ಅಗಸ್ತ್ಯರು ಮುಂದೆ 'ನಿನ್ನ ವಂಶದಲ್ಲಿ ಹುಟ್ಟಿದ ಯುಧಿಷ್ಠಿರನೊಡನೆ ಸಂಭಾಷಣೆ ಮಾಡಿದಾಗ ನಿನ್ನ ಶಾಪವು ವಿಮೋಚನೆಯಾಗುವುದು' ಎಂದು ಹೊರಟುಹೋದರು.

ಅರಣ್ಯವಾಸಕಾಲದಲ್ಲಿ ಒಮ್ಮೆ ಭೀಮನು ಬೇಟೆಗೆ ಹೋಗಿದ್ದಾಗ ಹೆಬ್ಬಾವಾಗಿದ್ದ ನಹುಷನ ತೆಕ್ಕೆಗೆ ಸಿಕ್ಕಿಬಿದ್ದು ತಪ್ಪಿಸಿಕೊಳ್ಳಲಾರದೆ ಸಂಕಟಪಡುತ್ತಿರುವಾಗ ಆಶ್ರಮದಲ್ಲಿ ಧರ್ಮರಾಜನು ಕೆಲವು ದುರ್ನಿಮಿತ್ತಗಳನ್ನು ಕಂಡು, ಭೀಮನನ್ನು ಹುಡುಕುತ್ತ, ಆತನು ಅಜಗರದ ತೆಕ್ಕೆಗೆ ಸಿಕ್ಕಿಬಿದ್ದು ನರಳುತ್ತಿರುವುದುನ್ನು ಕಂಡು ಪರಮಾಶ್ಚರ್ಯಪಟ್ಟು, ಆತನಾರೆಂದು ತಿಳಿದುಕೊಂಡು ಹೆಬ್ಬಾವಿನೊಡನೆ ಭೀಮಸೇನನನ್ನು ಬಿಡಬೇಕೆಂದು ಕೇಳಲು ನಹುಷನು - 'ನನ್ನ ಪ್ರಶ್ನೆಗೆ ಸರಿಯಾಗಿ ಉತ್ತರವಿತ್ತರೆ ನಿನ್ನ ತಮ್ಮನನ್ನು ಬಿಡುವೆನು' ಎನ್ನಲು ಯುಧಿಷ್ಠಿರನು 'ಏನು ಕೇಳುತ್ತಿಯೋ ಬೇಗ ಕೇಳು' ಎಂದನು.

ಉರಗ - 'ಬ್ರಾಹ್ಮಣನೆಂದರೆ ಯಾರು? ಜಿತೇಂದ್ರಿಯರಾದ ಮಹಾತ್ಮರು ಹುಡುಕುವುದೇನು?'

ರಾಜ - 'ಸತ್ಯ, ಶೀಲ, ದಯಾ, ಕ್ಷಮೆ, ತಪಸ್ಸೆಂಬ ಗುಣಗಳಿರುವವನೇ ಬ್ರಾಹ್ಮಣನು. ಸುಖವಾಗಲೀ ದುಃಖವಾಗಲೀ ಎರಡೂ ಇರದ ಸ್ಥಾನವನ್ನು ಜಿತೇಂದ್ರಿಯರು ಹುಡುಕುವರು'

ಉರಗ - 'ಶೂದ್ರನಲ್ಲಿ ಈ ಗುಣಗಳಿದ್ದರೆ? ಸುಖ ಮತ್ತು ದುಃಖಗಳೆರಡೂ ಇಲ್ಲದ ಸ್ಥಾನವುಂಟೆ?'

ರಾಜ - 'ಶೂದ್ರನಲ್ಲಿ ಈ ಸತ್ಯವೇ ಮೊದಲಾದ ಗುಣಗಳಿದ್ದರೆ ಪೂಜ್ಯನೇ. ಬ್ರಾಹ್ಮಣನಲ್ಲಿ ಈ ಗುಣಗಳಿಲ್ಲದಿದ್ದರೆ ಅವನು ತ್ಯಾಜ್ಯನು. ಸುಖ ದುಃಖಗಳೆರಡೂ ಇಲ್ಲದ ಸ್ಥಾನ ಉಂಟು. ಅಲ್ಲಿ ಜಾತಿಭೇದವಿಲ್ಲ; ಎಲ್ಲರೂ ಸಮಾನರು' ಇನ್ನೂ ಹಲವು ಪ್ರಶ್ನೆಗಳನ್ನು ಧರ್ಮರಾಜನೊಡನೆ ಕೇಳಿ ಸಮರ್ಪಕವಾದ ಉತ್ತರವನ್ನು ಪಡೆದು ತನ್ನ ಸರ್ಪರೂಪವನ್ನು ತ್ಯಜಿಸಿ ಸ್ವರ್ಗಕ್ಕೆ

ಹೊರಟುಹೋದನು. ಧರ್ಮರಾಜನು ಭೀಮನೊಂದಿಗೆ ಆಶ್ರಮಕ್ಕೆ ಬಂದನು. ನೋ:-ಹುಂಡ, ಆಯು (ಮ.ವ.).

ನಾಗ - ೧. ಭರತಚಕ್ರವರ್ತಿಯ ಮೊಮ್ಮಗ. ನೋ.-ಶತಶೃಂಗ. ೨. ಸರ್ಪ. ಇವು ಉತ್ತಂಕನಿಗೆ ದ್ರೋಹಬಗೆದು ಕೊನೆಗೆ ಪ್ರಾರ್ಥಿಸಿದುವು.

ನಾಗದತ್ತ - ಧೃತರಾಷ್ಟ್ರನ ಮಗ; ಭೀಮನಿಂದ ಹತನಾದ (ಮ.ಆ.,ದ್ರೋ.).

ನಾಗಕನ್ಯೆ - ನೋ.-ಉಲೂಪಿ.

ನಾಗಧನ್ವಾ - ತೀರ್ಥವಿಶೇಷ. ಇಲ್ಲಿಗೆ ಬಲರಾಮನು ಬಂದಿದ್ದನು (ಮ.ಶ.).

ನಾಗಲೋಕ - ಸರ್ಪಗಳ ವಾಸಸ್ಥಾನ; ಭೋಗವತಿ.

ನಾಗರಪಂಚಮಿ - ಶ್ರಾವಣ ಶುದ್ಧ ಪಂಚಮಿಯ ಹಬ್ಬ. ಶ್ರೀಕೃಷ್ಣನು ಕಾಲಿಯನಂತಹ ತಾಮಸಮೂರ್ತಿಯನ್ನು ಸಾತ್ವಿಕನನ್ನಾಗಿ ಮಾಡಿದ ದಿನವಿದು. ೧. ಭಾರತದಲ್ಲಿ ಗಜಮುಖದ ಗಣಪತಿಯು ವಿಘ್ನನಿವಾರಕನು; ಈಜಿಪ್ಟಿನಲ್ಲಿ ನರಿ ತಲೆಯ ಅನುಬಿಸ್ ಆತ್ಮವನ್ನು ಪರಲೋಕಕ್ಕೆ ಕೊಂಡುಹೋಗುವ ಮಾರ್ಗದರ್ಶಿ. ಟಿಬೆಟಿನಲ್ಲಿ ಹಯವದನನಾದ ಹಯಗ್ರೀವನು ದುಷ್ಟಶಕ್ತಿಗಳನ್ನು ದೂರಮಾಡುವ ಸಂಕಷ್ಟ ಪರಿಹಾರಿ. ಪ್ರಾಣಿಪಕ್ಷಿಗಳನ್ನು ಭಯಭಕ್ತಿಗಳಿಂದ ಪೂಜಿಸುವ ಸಂಪ್ರದಾಯವು ಪ್ರಾಚೀನವಾದುದು. ಕೆಂಬೋಡಿಯದಲ್ಲಿ ಮೊಸಳೆಯನ್ನು ಪೂಜಿಸುತ್ತಾರೆ; ಅಂಗಾಮಿ ನಾಗರಿಗೆ ಹುಲಿಯು ಗೌರವಪ್ರಾಣಿ. ಚೀನಾದಲ್ಲಿ ಮೀನು ಪವಿತ್ರತೆಯ ಸಂಕೇತ. ಭಾರತದಲ್ಲಿ ಗೋವು ತಾಯಿ ಸಮಾನ; ಆದರೆ ನಾಗವು ವಿಶ್ವದ ಪ್ರತಿಯೊಂದು ಜನಾಂಗವೂ ಭಯಭಕ್ತಿಗಳಿಂದ ಆದರಿಸಿಕೊಂಡುಬಂದಿರುವ ಶ್ರೀಮಂತ ಪ್ರಾಣಿಯಾಗಿದೆ. ನಿಜವಾಗಿ ನಾಗವು ವಿಶ್ವದಲ್ಲಿ ಪೂಜಿಸುವ ಪ್ರಾಣಿಗಳಲ್ಲಿ ಭಯ ಹುಟ್ಟಿಸುವ, ವಿಶ್ವದ ಹೆಚ್ಚಿನ ರಾಷ್ಟ್ರಗಳಲ್ಲಿ ಪ್ರಾಚೀನಕಾಲದಿಂದಲೂ ಪೂಜಿಸಲ್ಪಡುವ ಪ್ರಾಣಿಯಾಗಿದೆ. ಆಹಾರವಿಲ್ಲದೆ ದೀರ್ಘಕಾಲ ಬದುಕುವ, ಹಳೆಯ ಹುರಿಬಿಟ್ಟು ಪುನರ್ಜನ್ಮ ಪಡೆಯುವ ರಹಸ್ಯ, ನೆಲಕ್ಕೆ ಹೆಡೆಬಡಿದು ಪ್ರಾಣಬಿಡುವ ರೀತಿಗಳು ಭಯದೊಂದಿಗೆ ಭಕ್ತಿಯನ್ನೂ ಹುಟ್ಟಿಸುವುವು.

ಪವಿತ್ರಗ್ರಂಥ ಬೈಬಲಿನ ಪ್ರಕಾರ ನಾಗರೂಪದಲ್ಲಿದ್ದ ಸೈತಾನನು ಆದಂ ಮತ್ತು ಈವ್‌ರನ್ನು ಆಕರ್ಷಿಸಿ ಮನುಕುಲಸೃಷ್ಟಿಗೆ ಕಾರಣನಾಗಿದ್ದ. ಅನಂತನೆಂಬ ನಾಗ ತನ್ನ ಹೆಡೆಗಳಲ್ಲಿ ಈ ವಿಶ್ವವನ್ನು ಎತ್ತಿಹಿಡಿದಿದ್ದಾನೆಂದು

ಹಿಂದೂಗಳ ನಂಬಿಕೆ. ಸೃಷ್ಟಿಕರ್ತ ಶ್ರೀಮನ್ನಾರಾಯಣನು ಪನ್ನಗಶಾಯಿಯಾಗಿದ್ದರೆ ಲಯಕಾರಿ ಶಿವನು ನಾಗಭೂಷಣನು.

ಮೆಕ್ಸಿಕೊ ಪುರಾಣದ ಪ್ರಕಾರ ನಾಗದೇವಿ ಸಿಹೂಕೋಹಂಟೆಗೆ (Cihuacohante) ಜನ್ಮ ನೀಡಿದ್ದ ಗಂಡುಹೆಣ್ಣುಗಳು ಮಾನವ ಕುಲದ ಹುಟ್ಟಿಗೆ ಕಾರಣಭೂತರು. ನಾಗದೇವತೆ ಇರೆಥೋನೆಸ್ (Erethonios) ದೇವಾಲಯದಲ್ಲಿ ಪ್ರಾಚೀನ ಕಾಲದಲ್ಲಿ ಜೀವಂತ ನಾಗನನ್ನೇ ಪೂಜಿಸುತ್ತಿದ್ದರು.

ನಾಗವು ಈಜಿಪ್ಟಿನ ದೇವತೆ. ನೇಫ (Kneph), ಥೋತ್ (Thoth), ಹರ್ಮೆಸ್‌ರ (Hermes) ಚಿಹ್ನೆಯಾಗಿದೆ. ಈಜಿಪ್ಟಿನ ಪ್ರಾಚೀನ ದೇವಾಲಯಗಳ ಮುಖಮಂಟಪಗಳಲ್ಲಿ ಎರಡು ತಲೆಯ ನಾಗಶಿಲ್ಪಗಳನ್ನು ಕಾಣಬಹುದು. ಈಜಿಪ್ಟಿನ ಸೂರ್ಯದೇವತೆ ಹೆಲೆಯುಸ್ (Helius) ನಾಗದೇವಿ ಓಫ್ಸ್‌ಗಳನ್ನು ವಿವಾಹವಾಗಿ ಇಸಿಸ್ (Isis) ಟೆಫನ್, ಅಪೆಲೋ ಮತ್ತು ವೀನಸ್‌ರನ್ನು ಪಡೆದಿದ್ದ. ನಾಗಗಳು ಪಾತಾಳ ಮತ್ತು ಭೂಮಿಯ ಜೋಡಣೆಯೆಂದು ಪ್ರಾಚೀನ ಗ್ರೀಕರ ನಂಬಿಕೆ. ಧೀರೋದಾತ್ತ ಗ್ರೀಕ್ ವೀರರ ಚಿತ್ರದೊಂದಿಗೆ ಶಕ್ತಿಯ ಪ್ರತೀಕವಾಗಿರುವ ನಾಗಚಿತ್ರವಿರುವುದು ಸರ್ವಸಾಮಾನ್ಯ.

ಪ್ರಾಚೀನ ಬೆಬಿಲೋನ್, ಬರ್ಮಾಗಳಲ್ಲಿ ನಾಗದೇವತೆಗಾಗಿಯೇ ಪ್ರತ್ಯೇಕ ದೇವಾಲಯ ಕಟ್ಟಿಸಿ ಆರಾಧಿಸುತ್ತಿದ್ದರು. ಜಾವಾ ಮತ್ತು ಬೋರ್ನಿಯೋ ದ್ವೀಪಗಳಲ್ಲಿ ನಾಗಾರಾಧನೆಯು ಕೂಡ ಇಂದೂ ವಿಶೇಷ ಪ್ರಚಾರದಲ್ಲಿದೆ. ಕ್ಷತ್ರಿಯನು ಸತ್ತಲ್ಲಿ ಆತನ ಶವದೊಂದಿಗೆ ಸತ್ತ ಹಾವನ್ನು ಕೂಡ ಸುಡುವುದು ಅಲ್ಲಿಯ ಶವಸಂಸ್ಕಾರದ ಪದ್ಧತಿಯಾಗಿದೆ. ನಾಗವು ವಿಶ್ವವನ್ನಾಳುವ ಶ್ರೇಷ್ಠ ದೇವತೆಯೆಂದು ನಂಬಿದ್ದ ಪರ್ಶಿಯನ್ನರು ನಾಗನಿಗಾಗಿ ದೇವಾಲಯಗಳನ್ನು ಕಟ್ಟಿಸಿ ಸಂಭ್ರಮದಿಂದ ಉತ್ಸವಗಳನ್ನು ಜರುಗಿಸುತ್ತಿದ್ದರು. ನಾಗವು ಮಳೆತರುವ ದೇವತೆಯೆಂದೂ, ಪ್ರಾಚೀನ ಚೀನೀಯರ ವಂಶದ ಮೂಲಪುರುಷನೆಂದು ಉತ್ತರ ಅಮೆರಿಕದ ಮೊಹಿಕಾ ಜನಾಂಗದವರ, ಸತ್ತವರ ಆತ್ಮವು ಹಾವಿನ ರೂಪದಲ್ಲಿ ಚಲಿಸುವುದೆಂದು ಆಫ್ರಿಕಾದ ಗುಡ್ಡಗಾಡುಜನರ, ಗುಪ್ತನಿಧಿಗಳನ್ನು ಕಾಯುವುದೆಂದು ಭಾರತೀಯರ ನಂಬಿಕೆ.

ಬಂಗಾಳದಲ್ಲಿ ಮಾನಸಪೂಜೆಯು ವಿಶೇಷ ಪ್ರಚಾರದಲ್ಲಿದೆ. ಮಾನಸಾದೀರ್ಘ ಆಯುಷ್ಯ, ಸಂಪತ್ತು ಮತ್ತು ಆರೋಗ್ಯಗಳನ್ನು ನೀಡುವ ನಾಗದೇವಿ ಎಂದು ಬಂಗಾಲಿಗಳ ನಂಬಿಕೆ. ಸತ್ತ ನಾಗನನ್ನು ಶಾಸ್ತ್ರೋಕ್ತವಾಗಿ

ಚಿತೆಯಲ್ಲಿರಿಸಿ ಸುಡುತ್ತಾರೆ. ಪರಶುರಾಮ ಸೃಷ್ಟಿಯಲ್ಲಿ ನಾಗನ ಶಾಪಕ್ಕಾಗಿ ನಾಗದರ್ಶನ, ನಾಗಮಂಡಲ, ನಾಗಪ್ರತಿಷ್ಠೆಗಳನ್ನು ಮಾಡಿಸುತ್ತಾರೆ. ೨. ಒಮ್ಮೆ ಕದ್ರುವಿಗೂ ವಿನತೆಗೂ ಮಾತಿನ ಜಗಳ ಉಂಟಾದಾಗ ಕದ್ರುವು ತನ್ನ ಮಕ್ಕಳಾದ ನಾಗಗಳ ಸಹಾಯ ಕೇಳಿದಳು. ನಾಗಗಳು ತಾಯಿಯ ಮೋಸಕೃತ್ಯವನ್ನು ಮೆಚ್ಚದೆ ತಾಯಿಗೆ ಸಹಾಯ ಮಾಡಲು ನಿರಾಕರಿಸಿದವು. ಇದರಿಂದ ಕೋಪಗೊಂಡ ಕದ್ರುವು 'ಜನಮೇಜಯರಾಜನ ಸರ್ಪಯಾಗದಲ್ಲಿ ನೀವೆಲ್ಲ ನಾಶವಾಗಿ' ಎಂದು ಶಾಪಕೊಟ್ಟಳು. ಆಗ ಶಾಪದಿಂದ ಕುದಿಯುತ್ತಿರುವ ನಾಗಗಳಲ್ಲಿ ವಾಸುಕಿಗೆ ಬ್ರಹ್ಮನು ಶಾಪವಿಮೋಚನೆಯ ಮಾರ್ಗವನ್ನು ತಿಳಿಸಿದನು. ತಪಸ್ವಿಯಾದ ಜರುತ್ಕಾರುವೆಂಬ ಮುನಿಗೆ ನಿನ್ನ ತಂಗಿಯಾದ ಜರತ್ಕಾರುವನ್ನು ಮದುವೆ ಮಾಡಿಕೊಡು. ಅವಳಲ್ಲಿ ಆಸ್ತಿಕನೆಂಬ ಮಹಾತೇಜಸ್ವಿ ಜನಿಸುತ್ತಾನೆ. ಅವನಿಂದ ನೀವೆಲ್ಲ ಸುಖಿಗಳಾಗುತ್ತೀರಿ ಎನ್ನಲು ವಾಸುಕಿಯು ಬ್ರಹ್ಮನು ಹೇಳಿದಂತೆ ನಡೆಯಲು ತಂಗಿಯಲ್ಲಿ ಆಸ್ತಿಕನೆಂಬ ಮಗನು ಜನಿಸಿದನು. ಅವನು ಯಾಗಕಾಲದಲ್ಲಿ ಜನಮೇಜಯನಿಗೆ ತಿಳುವಳಿಕೆಯನ್ನು ಹೇಳಿ ನಾಗಗಳನ್ನು ರಕ್ಷಿಸುವೆನೆಂದು ಅಭಯವನ್ನು ಬ್ರಹ್ಮನಿಂದ ಪಡೆದ ದಿನವೇ ಪಂಚಮಿಯಾಗಿತ್ತು. ಆ ಪಂಚಮಿಯನ್ನು ಇಂದೂ ನಾಗಪಂಚಮಿಯೆಂದು ಆಚರಿಸುತ್ತಾರೆ. ಆದುದರಿಂದ ಈ ಪಂಚಮಿ ತಿಥಿಯು ನಾಗಗಳಿಗೆ ಶುಭತಿಥಿಯಾಗಿದೆ. ಆಸ್ತಿಕನು ನಾಗರಿಗೆ ಗೌರವವನ್ನು ತಂದ ದಿನವಾದ ಪಂಚಮಿಯಂದು ನಾಗಪೂಜೆಯನ್ನು ಮಾಡುತ್ತಾರೆ.

ಪಾರ್ವತಿಯ ಮಾನಸಪುತ್ರಿಯಾದ ಮಾನಸಾ ಎಂಬ ನಾಗದೇವತೆಯು ಎಲ್ಲರೂ ತನ್ನನ್ನು ಆರಾಧಿಸಬೇಕೆಂಬ ದುರಾಶೆಯಿಂದ ಶಿವಭಕ್ತನಾದ ಚಾಂದಸೌದಾಗರನನ್ನು ಕಾಡಿ ಕೊನೆಯಲ್ಲಿ ತಾನೇ ಪರಾಜಿತಳಾದಳು. ಈ ಕಥೆಯನ್ನು ಉತ್ತರಭಾರತದಲ್ಲಿ ಅಲ್ಲಿಯ ಹಳ್ಳಿಗರು ತಮ್ಮ ಕೋಲಾಟದಲ್ಲಿ ಬಳಸಿಕೊಂಡಿದ್ದಾರೆ.

ಒಂದು ದಿನ ಒಬ್ಬ ರೈತನ ನೇಗಿಲಿನ ತುದಿಗೆ ಸಿಕ್ಕಿ ಹಾವಿನ ಮರಿಗಳು ಸತ್ತುಹೋದವು. ಆ ಮರಿಗಳ ತಾಯಿ ಇದರಿಂದ ರೊಚ್ಚಿಗೆದ್ದು ಅವನ ಮನೆಯವರನ್ನೆಲ್ಲ ಕಚ್ಚಿಕೊಂದುದಲ್ಲದೆ ನೆರೆಹಳ್ಳಿಯಲ್ಲಿದ್ದ ಆ ರೈತನ ಇನ್ನೊಬ್ಬ ಮಗಳನ್ನೂ ಕೊಲ್ಲಬೇಕೆಂದು ಹೋಯಿತು. ಅಲ್ಲಿ ಆತನ ಮಗಳು ಮಣ್ಣಿನಿಂದ ಸರ್ಪಾಕೃತಿಯನ್ನು ಮಾಡಿ ಹಾಲೆರೆದು ಪೂಜಿಸುತ್ತಿರುವುದನ್ನು ಕಂಡು ಅದರ ಕೋಪವು ಇಳಿದು, ಅವಳ ಅಪೇಕ್ಷೆಯಂತೆ ರೈತನ ಮನೆಯವರನ್ನೆಲ್ಲ ಬದುಕಿಸಿತು. ಈ ಘಟನೆ ನಡೆದುದು ಪಂಚಮಿಯ ದಿನ. ಅದೇ ನಾಗರಪಂಚಮಿ.

ತೀರಾ ಬಡತನದಲ್ಲಿದ್ದವನೊಬ್ಬನು ತನ್ನ ತಂಗಿಯನ್ನು ತೌರಿಗೆ ಕರೆದೊಯ್ಯುತ್ತಿದ್ದಾಗ ಆಕೆಯ ಮೈಮೇಲಿನ ಒಡವೆಗಳನ್ನು ನೋಡಿ ಅವನಲ್ಲಿ ದುರಾಶೆ ಉಂಟಾಯಿತು; ಬುದ್ಧಿ ವಿಕಾರವಾಯಿತು. ಒಡವೆಯನ್ನು ಅಪಹರಿಸುವ ದುರಾಕಾಂಕ್ಷೆಯಿಂದ ಕೂಡಿದ ಆತನು ಮಾರ್ಗಮಧ್ಯದಲ್ಲಿ ಅವಳನ್ನು ಕೊಲ್ಲಬೇಕೆಂದು ಕಲ್ಲೊಂದನ್ನು ಎತ್ತಿದನು. ಆಗ ಅದರ ಕೆಳಗಿದ್ದ ಸರ್ಪವು ಅವನನ್ನು ಕಚ್ಚಿಬಿಟ್ಟಿತು. ತಂಗಿಯು ನಾಗನನ್ನು ವಿಧವಿಧವಾಗಿ ಪ್ರಾರ್ಥಿಸಿಕೊಂಡು ಅಣ್ಣನನ್ನು ಬದುಕಿಸಿಕೊಂಡಳು. ಇದು ಪಂಚಮಿಯ ದಿನ ನಡೆದ ಕಥೆಯಾದುದರಿಂದ ಈ ದಿನವನ್ನು ಒಂದು ಹಬ್ಬದ ದಿನ ಎನ್ನುತ್ತಾರೆ. ನಾಗರಪಂಚಮಿಯು ಭಾರತೀಯರಿಗೆ ಒಂದು ವಿಶೇಷ ದಿನ.

ನಾಗಾಸ್ತ್ರಪ್ರಯೋಗ - ೧. ಇಂದ್ರಜಿತುವು ಕಪಿಸೇನೆಯ ಮೇಲೆ ಮತ್ತು ಶ್ರೀರಾಮ ಲಕ್ಷ್ಮಣರ ಮೇಲೆ ಪ್ರಯೋಗಿಸಿದ ಅಸ್ತ್ರ. ಅವರೆಲ್ಲ ಎಚ್ಚರತಪ್ಪಿ ಬಿದ್ದಿರಲು, ಗರುಡನ ಆಗಮನದಿಂದ ಆಗ ಆ ಅಸ್ತ್ರದ ವಿಮೋಚನೆಯಾಗುವುದು (ರಾಮಾ.ಯುದ್ಧ.) ೨. ಕರ್ಣನು ಅರ್ಜುನನ ಮೇಲೆ ಪ್ರಯೋಗಿಸಿದ ಅಸ್ತ್ರವು ಸರ್ಪಾಕೃತಿಯನ್ನು ಧರಿಸಿ ಬುಸುಗುಟ್ಟುತ್ತಾ ವಿಷವನ್ನು ಕಾರುತ್ತ, ಅರ್ಜುನನ ಕೊರಳ ಸಮೀಪಕ್ಕೆ ಬರುವಷ್ಟಕ್ಕೆ ಕೃಷ್ಣನು ಅರ್ಜುನನ ರಥವನ್ನು ತನ್ನ ಪಾದಗಳಿಂದ ಒತ್ತಿ ತುಳಿದನು. ಹುರುಪಿನಿಂದ ಬಂದ ಬಾಣವು ಅರ್ಜುನನ ಕೊರಳಿಗೆ ತಗಲುವುದರ ಬದಲು ಕಿರೀಟವನ್ನು ಕಚ್ಚಿ ಹಾರಿತು. ಖಾಂಡವನ ದಹನಕಾಲದಲ್ಲಿ ಅರ್ಜುನನಿಂದ ಗಾಯಗೊಂಡ ಅಶ್ವಸೇನನೆಂಬ ಸರ್ಪವು ಆತನ ಮೇಲಿನ ಹಗೆತನದಿಂದ ಹಿಂತಿರುಗಿ ಬರಲು ಅರ್ಜುನನು ಆರು ಬಾಣಗಳಿಂದ ಆ ಸರ್ಪವನ್ನು ತುಂಡುಮಾಡಿ ಕೆಡೆದನು (ಮ.ಕ.).

ನಾಗ್ನಜಿತಿ - ಕೋಸಲ ದೇಶದ ರಾಜನಾದ ನಗ್ನಜಿತನ ಮಗಳು. ಈಕೆಯ ಹೆಸರು ಸತ್ಯೆ ಎಂದು. ನಗ್ನಜಿತನು ಕೊಬ್ಬಿದ ಏಳು ಗೂಳಿಗಳನ್ನು ಸಾಕಿದ್ದು ಅವನ್ನು ಗೆದ್ದವನಿಗೆ ತನ್ನ ಮಗಳನ್ನು ವಿವಾಹ ಮಾಡಿಕೊಡುವೆನೆಂದು ಶಪಥ ಮಾಡಿದ್ದನು. ಶ್ರೀಕೃಷ್ಣನು ಅವನ್ನು ಗೆದ್ದು ನಾಗ್ನಜಿತಿಯನ್ನು ಲಗ್ನವಾದನು. ಈಕೆಗೆ ಕೃಷ್ಣನಿಂದ ವೀರ, ಚಂದ್ರ, ಅಶ್ವಸೇನ, ಚಿತ್ರನು, ವೇಗವಂತ, ವೃಷ, ಆಮ, ಶಂಕು ಮತ್ತು ಕುಂತಿ ಎಂಬ ಮಕ್ಕಳಾದರು (ಭಾಗ.).

ನಾಚಿಕ - ವಿಶ್ವಾಮಿತ್ರಮುನಿಯ ಪುತ್ರ.

ನಾಚಿಕೇತ - ಆರುಣಿ ಎಂಬ ಹೆಸರುಳ್ಳ ಉದ್ದಾಲಕನ ಮಗ. ಈತನಿಗೆ ನಚಿಕೇತನೆಂದೂ ಹೆಸರಿದೆ. ನೋ.- ನಚಿಕೇತ.

ನಾಡೀ (ಲೀ)ಜಂಘ - ನೋ.-ನಾಲೀಜಂಘ.

ನಾಭಾಗ - ೧. ವೈವಸ್ವತ ಮನುವಿನ ಮಗ. ಈತನ ಅಣ್ಣನೇ ಇಕ್ಷ್ವಾಕು. ಇನ್ನು ಧೃಷ್ಣು, ಶರ್ಯಾತಿ, ನರಿಷ್ಯನ್, ಪ್ರಾಂಶು, ನಾಭಾಗಾರಿಷ್ಟ, ಕರೂಷ, ಪೃಷಧ್ರ ಎಂಬ ಏಳು ಮಂದಿ ಈತನ ತಮ್ಮಂದಿರು. ನಾಭಾಗಾರಿಷ್ಟನ ವೈಶ್ಯಪತ್ನಿಯರಲ್ಲಿ ಹುಟ್ಟಿದ ಇಬ್ಬರು ಮಕ್ಕಳು ತಮ್ಮ ತಪಃಸಾಮರ್ಥ್ಯದಿಂದ ಬ್ರಾಹ್ಮಣರಾದರು. ಪೃಷಧ್ರನು ತನ್ನ ಗುರುವಿನ ಆಕಳವನ್ನು ಕೊಂದದ್ದರಿಂದ ಶಪಿತನಾಗಿ ಶೂದ್ರತ್ವವನ್ನು ಹೊಂದಿದನು. ಈತನ ಮಗ ಅಂಬರೀಷ (ಭಾಗ., ಹರಿ.). ಈತನು ಸ್ವಯಂಭೂ ತೀರ್ಥಯಾತ್ರೆಗೆ ಹೊರಟಾಗ ಬ್ರಹ್ಮಸರೋವರದ ಒಂದು ತಾವರೆಯ ಹೂವನ್ನು ಅಗಸ್ತ್ಯಮುನಿಯು ಕೊಯ್ದನು. ಇಂದ್ರನು ಅದನ್ನು ಅಪಹರಿಸಿದನು. ಅಗಸ್ತ್ಯನು ಸುತ್ತಮುತ್ತಲಿನ ರಾಜರನ್ನೂ, ಮುನಿಗಳನ್ನೂ ಕಳ್ಳರೆಂದು ಶಂಕೆಯಿಂದ ಕಂಡಾಗ ಅಲ್ಲಿದ್ದ ಪ್ರತಿಯೊಬ್ಬರೂ ತಾವು ಕದ್ದಿಲ್ಲವೆಂದು ಪ್ರತಿಜ್ಞೆ ಮಾಡಿದರು. ಆಗ ನಾಭಾಗನೂ ಪ್ರತಿಜ್ಞೆಮಾಡಿದ್ದ. ಕೊನೆಗೆ ಇಂದ್ರನು ತಾನು ಆ ಹೂವನ್ನು ತೆಗೆದಿರುವೆನೆಂದೂ, ಅದಕ್ಕೆ ಕಾರಣವನ್ನು ಹೇಳಿ ಮುನಿಯಲ್ಲಿ ಕ್ಷಮೆ ಬೇಡಿದನು (ಮ.ಅನು.). ೨. ಇವನು ನಭಗನ ಮಗ. ಬಾಲ್ಯದಿಂದಲೂ ವಿರಾಗಿಯಾದುದರಿಂದ ಇವನ ಪಾಲಿನ ರಾಜ್ಯವನ್ನು ಇವನ ಸಹೋದರರೇ ಹಂಚಿಕೊಂಡರು. ನಾಭಾಗನು ಇದನ್ನು ತಿಳಿದು ತಂದೆಯೊಡನೆ ಪ್ರಸ್ತಾಪಿಸಲು ಅವರು 'ನಿನಗೆ ರಾಜ್ಯಬೇಡ. ಅಂಗೀರಸ ಮಹರ್ಷಿಗಳು ಸತ್ರಯಾಗವನ್ನು ಕೈಗೊಂಡಿದ್ದಾರೆ. ಆದರೆ ಆ ಸತ್ರದಲ್ಲಿ ನಡೆಯತಕ್ಕ ಆರನೇ ದಿನದ ಕಾರ್ಯ ಕಲಾಪಗಳನ್ನು ಅವರಾರು ತಿಳಿಯರು. ಅದು ನಿನಗೆ ಗೊತ್ತಿದೆ. ನಿನ್ನಿಂದ ಸಹಾಯ ಪಡೆದ ಋಷಿವರ್ಯರು ನಿನ್ನ ತಪಶ್ಚರ್ಯೆ, ಪಾಂಡಿತ್ಯ ಮೊದಲಾದವುಗಳಿಗೆ ಬೆರಗಾಗಿ ನಿನ್ನನ್ನು ತುಂಬ ಗೌರವಿಸುವರು' ಎಂದು ಕಳುಹಿಸಿದನು. ನಾಭಾಗನು ಆ ಸತ್ರಯಾಗವನ್ನು ಕೊನೆಗಾಣಿಸಿಕೊಟ್ಟನು. ಇದರಿಂದ ಪ್ರಸನ್ನರಾದ ಅಂಗೀರಸ ಮಹರ್ಷಿಗಳು ಯಾಗದಲ್ಲಿ ಕೊನೆಗುಳಿದ ಅತುಲ ಸಂಪತ್ತನ್ನು ನಾಭಾಗನಿಗೇ ಕೊಟ್ಟರು. ನಾಭಾಗನು ಅದನ್ನು ಸಾಗಿಸುವಾಗ ವೇಷಧಾರಿ ರುದ್ರನು ತಡೆಯಲು ನಾಭಾಗನು ಅವನನ್ನು ಮೆಚ್ಚಿಸಿ ಆ ಸಂಪತ್ತನ್ನೆಲ್ಲ ಪಡೆದನು (ಭಾಗ.).

ನಾಭಿ - ಪ್ರಿಯವ್ರತ ಮಹಾರಾಜನ ಮಗನಾದ ಅಗ್ನೀಧ್ರನು ಈತನ ತಂದೆ. ವಿಪ್ರಚಿತ್ತಿ ಎಂಬಾಕೆ ಈತನ ತಾಯಿ. ಈಕೆಯು ಅಪ್ಸರೆ. ನಾಭಿಯು ಈಕೆಯ

ಹಿರಿಯ ಮಗ. ಮೇರುಪುತ್ರಿಯಾದ ಮೇರುದೇವಿಯು ಈತನ ಪತ್ನಿ. ಮಗ ಋಷಭದೇವ. ಈ ನಾಭಿ ರಾಜನು ಆಳಿದ ಭೂಭಾಗಕ್ಕೆ ಭಾರತವರ್ಷವೆನ್ನುತ್ತಾರೆ. ಇದನ್ನು ಅಜನಾಭವರ್ಷ ಎನ್ನುವುದೂ ಉಂಟು. ನೋ.-ಋಷಭ.

ನಾರದ - ೧. ವಿಶ್ವಾಮಿತ್ರನ ಮಗ. ೨. ಕಶ್ಯಪನ ಭಾರ್ಯೆಯಾದ ಮುನಿಯಲ್ಲಿ ಹುಟ್ಟಿದ ಗಂಧರ್ವ. ೩. ದೇವರ್ಷಿ; ಪರ್ವತನ ಸೋದರಮಾವ. ಈತನು ಸೃಂಜಯನ ಮಗಳಾದ ದಮಯಂತಿಯನ್ನು ವಿವಾಹವಾಗಿದ್ದ. ದ್ರೌಪದಿಯ ವಿಚಾರದಲ್ಲಿ ಪಾಂಡವರು ಒಂದು ವ್ಯವಸ್ಥೆಯನ್ನು ಮಾಡಿಕೊಳ್ಳಬೇಕೆಂದು ಅವರಿಗೆ ಸುಂದೋಪಸುಂದರ ಕಥೆಯನ್ನು ಹೇಳಿದನು. ಅಂಬರೀಷರಾಜನ ಮಗಳಾದ ಶ್ರೀಮತಿಯನ್ನು ವಿವಾಹ ಮಾಡಿಕೊಳ್ಳಲು ಈ ನಾರದ ಮತ್ತು ಪರ್ವತರು ಮನಸ್ಸು ಮಾಡಿ ಶ್ರೀವಿಷ್ಣುವಿನೊಡನೆ ನಾರದನು 'ಪರ್ವತನ ಮುಖವು ಮಂಗನ ಮುಖವಾಗಲಿ' ಎಂದು ಪ್ರಾರ್ಥಿಸಿದನು. ಪರ್ವತನೂ ವಿಷ್ಣುವಿನೊಡನೆ 'ನಾರದನ ಮುಖವು ಶ್ರೀಮತಿಗೆ ಕೋಡಗನ ಮುಖವಾಗಿ ಕಾಣಿಸಲಿ' ಎನ್ನಲು, ನಾರಾಯಣನು 'ತಥಾಸ್ತು'ವೆಂದನು. ಶ್ರೀಮತಿಯು ಈ ಮುನಿಗಳಿಬ್ಬರನ್ನೂ ಬಿಟ್ಟು ನಾರಾಯಣನನ್ನೇ ವರಿಸಿದಳು. ೪.ಕಾಲಧ್ವಜನೊಂದಿಗೆ ಸ್ತ್ರೀತ್ವವನ್ನು ಹೊಂದಿದ ನಾರದ ವಿವಾಹವಾಗಿ ಮಕ್ಕಳನ್ನು ಪಡೆದನು (ದೇವೀಭಾ.). ೫. ಸ್ವಾಯಂಭುವ ಮನ್ವಂತರದ ಬ್ರಹ್ಮನ ಹತ್ತು ಮಂದಿ ಮಾನಸಪುತ್ರರಲ್ಲಿ ಈತನು ಕಿರಿಯವನು, ಮರೀಚಿ, ಅಂಗಿರಾ, ಅತ್ರಿ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ, ಭೃಗು, ದಕ್ಷರೆಂಬ ಒಂಬತ್ತು ಮಂದಿ ಇವನ ಅಣ್ಣಂದಿರು. ೬. ಈತನು ವಸಿಷ್ಠನ ಪತ್ನಿಯಾದ ಅರುಂಧತಿಯ ಅಣ್ಣ; ಈತನ ಪತ್ನಿ ಸತ್ಯವತಿ. ೭. ವಿಶ್ವಾಮಿತ್ರ ಮಹರ್ಷಿಯ ಮಗ. ಇವರಲ್ಲಿ ತ್ರಿಲೋಕಸಂಚಾರಿಯಾದ ನಾರದನು ಪರ್ವತನ ಸೋದರಮಾವ. ದಕ್ಷನ ಮಕ್ಕಳಿಗೆ ಈತನು ವೈರಾಗ್ಯವನ್ನು ಬೋಧಿಸಿ ತಂದೆಯ ಕೋಪಕ್ಕೆ ಪಾತ್ರನಾಗಿ ಆತನಿಂದ 'ಎಲ್ಲೆಲ್ಲಿಯೂ ಅಲೆಯುತ್ತ ಕಲಹಪ್ರಿಯನಾಗಿರು' ಎಂದು ಶಾಪ ಪಡೆದ. ಮಹಾಭಾರತ ಕಥೆಯನ್ನು ದೇವಲೋಕದಲ್ಲಿ ಪ್ರಚಾರಮಾಡಿದವ ನಾರದ. ಪಾಂಡವರಿಗೆ ಒಂದೊಂದು ವರ್ಷ ಕ್ರಮವಾಗಿ ದ್ರೌಪದಿಯನ್ನು ಪ್ರತಿಯೊಬ್ಬರೂ ಭೋಗಿಸಿಕೊಂಡಿರುವಂತೆಯೂ, ಇದಕ್ಕೆ ತಪ್ಪಿನಡೆದರೆ ಒಂದು ವರ್ಷ ತೀರ್ಥಯಾತ್ರೆ ಮಾಡಬೇಕೆಂದವನು ಇವನೇ; ಧರ್ಮರಾಜನಿಗೆ ರಾಜಸೂಯಯಾಗ ಮಾಡುವಂತೆ ಪ್ರೋತ್ಸಾಹಿಸಿದವನೂ ಇವನೇ. ಇಂದ್ರ

ಸಾರಥಿಯಾದ ಮಾತಲಿಯ ಮಗಳು ಗುಣಕೇಶಿಗೆ ಪತಿಯನ್ನು ಹುಡುಕುತ್ತ ಮಾತಲಿಯೊಂದಿಗೆ ಮೂರು ಲೋಕಗಳನ್ನೂ ಸಂಚರಿಸಿ ನೆಂಟಸ್ತಿಕೆಯನ್ನು ಗೊತ್ತುಮಾಡಿದವನೂ ಇವನೇ. ಇನ್ನು ಈತನೇ ವಾಲ್ಮೀಕಿಗೆ ರಾಮಾಯಣ ಕಾವ್ಯವನ್ನು ಬರೆಯಲು ಪ್ರೋತ್ಸಾಹಿಸಿದವ. ಪ್ರಹ್ಲಾದನು ತನ್ನ ತಾಯಿಯ ಗರ್ಭದಲ್ಲಿರುವಾಗಲೇ ಆತನಿಗೆ ತತ್ತ್ವೋಪದೇಶವನ್ನು ಮಾಡಿದನು. ಈತನೇ ಸಾವಿತ್ರಿಯ ಪತಿ ಸತ್ಯವಂತನು ಒಂದು ವರ್ಷದಲ್ಲಿ ಸಾಯುವನೆಂದು ಅಶ್ವಪತಿಗೆ ಮೊದಲೇ ತಿಳಿಸಿದ್ದ (ಮ.ವ.).

ಬ್ರಹ್ಮನ ಮಾನಸಪುತ್ರರಲ್ಲೊಬ್ಬ. ನೋ.-ಸನಕ (ಹರಿ.). ದಕ್ಷಪುತ್ರರನ್ನೆಲ್ಲ ಈತ ತಾಯಿತಂದೆಗಳಿಂದ ದೂರಮಾಡಿದುದರಿಂದ ದಕ್ಷನಿಂದ ಶಾಪಹೊಂದಿ ಆತನ ಪತ್ನಿ ಅಸಿಕ್ನಿಯ ಕಿರಿಯ ತಂಗಿಯಾದ ವೀರಣಿ ಎಂಬ ಕಶ್ಯಪನ ಪತ್ನಿಯಲ್ಲಿ ಮತ್ತೊಮ್ಮೆ ಹುಟ್ಟಿದನು (ಹರಿ.). ಇವರಲ್ಲಿ ಭಕ್ತಿಸೂತ್ರವನ್ನು ಒಬ್ಬ ನಾರದನು ಬರೆದನು. ಹಲವು ಮಂದಿ ರಾಕ್ಷಸರಿಗೆ ಈತನು ಹರಿಯೊಡನೆ ಕಲಹವನ್ನು ಗಂಟಿಕ್ಕಿ ಭೂಭಾರ ಹರಣಕ್ಕೆ ನೆರವಾದನು.

ಅಕಾಲಮರಣಕ್ಕಾಗಿ ತನ್ನ ಅರಮನೆಯ ಮುಂದೆ ಗೋಳಾಡುತ್ತಿದ್ದ, ಬ್ರಾಹ್ಮಣಪುತ್ರನ ತಂದೆತಾಯಿಗಳ ಕುರಿತು ಚಿಂತಿಸುತ್ತಿದ್ದ ಶ್ರೀರಾಮನಿಗೆ ನಾರದನು ಬಂದು ಯುಗಧರ್ಮವನ್ನು ಬೋಧಿಸಿದನು (ಉತ್ತರರಾಮ) ಶೂರಸೇನದೇಶದ ರಾಜನಾದ ಚಿತ್ರಕೇತುವು ಪುತ್ರಶೋಕದಿಂದ ಪೀಡಿತನಾಗಿದ್ದಾಗ ಈತ ತತ್ತ್ವೋಪದೇಶವನ್ನು ಮಾಡಿದನು (ಭಾಗ.). ದ್ವಾರಕೆಯ ಪ್ರತಿಯೊಂದು ಮನೆಯಲ್ಲೂ ಶ್ರೀಕೃಷ್ಣನು ಪತ್ನಿಯರೊಂದಿಗೆ ಸುಂದರ ಸಂಸಾರಿಯಾಗಿರುವುದನ್ನು ಕಂಡು ಈತನು ಬೆರಗಾದನು (ಭಾಗ.). ಶೈಬ್ಯರಾಜನಾದ ಸೃಂಜಯನ ಮಗನಾದ ಸುವರ್ಣಷ್ಠೀವಿಯನ್ನು ಕಳ್ಳರು ಅಪಹರಿಸಲು, ನಾರದನು ಆ ಮಗುವನ್ನು ತಂದುಕೊಟ್ಟು, ಆತನ ಮಗಳಾದ ಸುಕುಮಾರಿಯನ್ನು ವಿವಾಹವಾದನು.

ಶ್ರೀರಾಮನು ಅಯೋಧ್ಯೆಯಲ್ಲಿ ಪತ್ನಿಯೊಂದಿಗೆ ಸುಖದಿಂದಿರುವಾಗ ನಾರದನು ಬಂದು ಆತನ ಅವತಾರ ಕಾರಣವನ್ನು ಹೇಳಿ ಎಚ್ಚರಿಸಿದನು (ಆನಂ.ರಾ.).

ವೈಕುಂಠದಲ್ಲಿ ಕೌಶಿಕನೆಂಬ ಬ್ರಾಹ್ಮಣನ ಶಿಷ್ಯರು ಕ್ರಮವಾಗಿ ಹಾಡುತ್ತಿರಲು ಕರ್ಣರಸಾಯನವಾದ ಆ ಗಾನವನ್ನು ಕೇಳಲು ಬ್ರಹ್ಮ ಇಂದ್ರ ಮೊದಲಾದ ದೇವತೆಗಳೇ ಬಂದಿದ್ದರು. ನಾರದನು ಆ ಗಾನವನ್ನು ಕೇಳಲು ಮುಂದೆ ನುಗ್ಗಲು ದ್ವಾರಪಾಲಕಿಯರು ಅವನನ್ನು ಹಿಂದಕ್ಕೆ ನೂಕಿದರು. ಆದರೆ

ನಾರಾಯಣನ ದರ್ಶನಕ್ಕಾಗಿ ಬಂದ ತುಂಬುರನನ್ನು ಒಳಗೆ ಬಿಟ್ಟರು. ಇದರಿಂದ ನಾರದನಿಗೆ ಲಕ್ಷ್ಮಿಯ ಸೇವಕಿಯರಿಂದಾದ ಅಪಮಾನವು ಮರೆಯದೆ - 'ಲಕ್ಷ್ಮಿಯು ರಾಕ್ಷಸಿಯ ಮಗಳಾಗಿ ಹುಟ್ಟಿ ಆಕೆಯ ತಾಯಿಯಿಂದ ಹೊರದೂಡಲ್ಪಡಲಿ' ಎಂದು ಶಾಪವಿತ್ತನು. ಅಲ್ಲದೆ ಕೌಶಿಕನಂತೆ ತಾನೂ ಹಾಡುಗಾರನಾಗಬೇಕೆಂದು ವಿಷ್ಣುವಿನ ಸೂಚನೆಯಂತೆ ಹಿಮಾಲಯದ ಉತ್ತರಕ್ಕಿರುವ ಮಾನಸಸರೋವರದ ಬಡಗುದಿಕ್ಕಿನ ಒಂದು ಪರ್ವತದಲ್ಲಿದ್ದ ಗಾನಬಂಧುವೆಂಬ ಉಲೂಕ ರಾಜನ ಶಿಷ್ಯನಾಗಿ ಹಲವು ವರ್ಷ ಅಭ್ಯಾಸಮಾಡಿದರೂ ಸಂಗೀತವಿದ್ಯೆಯು ವಶವಾಗದಿರಲು ಪುನಃ ಶ್ರೀಮನ್ನಾರಾಯಣನ ಆಜ್ಞೆಯಂತೆ ವೈವಸ್ವತ ಮನ್ವಂತರದ ಇಪ್ಪತ್ತೆಂಟನೆಯ ಯುಗದ ದ್ವಾಪರಾಂತ್ಯದಲ್ಲಿ ಅವತರಿಸಿದ ಶ್ರೀಕೃಷ್ಣನಲ್ಲಿ ಸಂಗೀತಾಭ್ಯಾಸಕ್ಕಾಗಿ ಹೋದನು. ಅವನು ಜಾಂಬವತಿ, ಸತ್ಯಭಾಮೆಯರ ಬಳಿ ನಾರದನನ್ನು ಸಂಗೀತಾಭ್ಯಾಸಕ್ಕಾಗಿ ಕಳುಹಿಸಿದನು. ಅಲ್ಲೂ ಅವನ ಬಯಕೆ ಈಡೇರದಿರಲು ಶ್ರೀಕೃಷ್ಣನನ್ನೇ ಗುರುವಾಗಿಟ್ಟುಕೊಂಡು ಸಂಗೀತಾಭ್ಯಾಸಮಾಡಿ, ತುಂಬರನಿಗೆ ಸರಿಸಾಟಿಯೆನಿಸಿದನು (ಅದ್ಭು.ರಾಮಾ.). ನೋ.-ಭುವನೇಶ.

ಇವನು ಜ್ಞಾನವೃದ್ಧ; ನರೆತ ಕೂದಲೊಂದೂ ಇಲ್ಲದೆ ಅಂದವಾದ ಶಿಖೆ ಇದ್ದು, ಅಸಾಧಾರಣ ತೇಜಸ್ಸೂ ದೇವನಿರ್ಮಿತವಾಗಿ ಇಂದ್ರನಿಂದ ಕೊಡಲ್ಪಟ್ಟ ಎರಡು ತೆಳುವಾದ ದುಕೂಲವನ್ನುಟ್ಟಿರುವನು. ಅವನ ಕಿವಿಗಳಲ್ಲಿ ಗಂಡೂಪದವೆಂಬ ಹಾವಿನ ಮುಖದಂತಿರುವ ಎರಡು ಕುಂಡಲಗಳು ಶೋಭಿಸುತ್ತವೆ. ಚಿತ್ರಿತವಾದ ಬೆಳ್ಳಿಯ ಕೊಡೆಯನ್ನು ಹಿಡಿದಿರುವನು (ಮ.ಆ., ರಾಜ್ಯ.).

'ದ್ರೌಪದಿಯು ಪಾಂಡವರಲ್ಲಿ ಕ್ರಮವಾಗಿ ಒಬ್ಬೊಬ್ಬರೊಡನೆ ಒಂದೊಂದು ವರ್ಷ ಪತ್ನಿಯಂತಿರಬೇಕು. ದ್ರೌಪದಿ ಒಬ್ಬನೊಡನೆ ಏಕಾಂತದಲ್ಲಿರುವಾಗ (ಸಂಕೇತದಲ್ಲಿ) ಉಳಿದವರು ನೋಡಿದರೆ ಅವರು ಹನ್ನೆರಡು ತಿಂಗಳು ಬ್ರಹ್ಮಚಾರಿಯಾಗಿ ವನದಲ್ಲಿ ವಾಸಮಾಡಬೇಕು' ಎಂದು ನಾರದನು ಪಾಂಡವರಿಗೆ ಸೂಚಿಸಿದನು. ಇದು ಅವರಿಗೆ ಒಪ್ಪಿತವಾಯಿತು (ಮ.ಆ.).

ನಾರದನು ಬ್ರಹ್ಮದೇವರ ಪಾದಗಳಿಂದ ಹುಟ್ಟಿದವನು. ಈತನು ದೇವತೆಗಳಿಗೆ ಮಹಾಭಾರತ ಕಥೆಯನ್ನು ಹೇಳಿದನು (ಮ.ಆ.).

ನಾರದಿ - ೧. ವಿಶ್ವಾಮಿತ್ರನ ಮಗ. ೨. ಸ್ತ್ರೀರೂಪವನ್ನು ಹೊಂದಿದ ನಾರದ. ನಾರದನೊಮ್ಮೆ ವಿಷ್ಣುವಿನೊಡನೆ ಮಾಯಾಸ್ವರೂಪವನ್ನು ತನಗೆ

ತಿಳಿಸಬೇಕೆನ್ನಲು ವಿಷ್ಣು ಇವನನ್ನು ಕರೆದುಕೊಂಡು ಗರುಡವಾಹನನಾಗಿ ಕನ್ಯಾಕುಬ್ಜದ ಬಳಿಗೆ ಬಂದಿಳಿದನು. ಅಲ್ಲಿ ಆತನು ನಾರದನೊಡನೆ ಒಂದು ಕೊಳದಲ್ಲಿ ಸ್ನಾನಮಾಡಿ ಬರಹೇಳಲು ನಾರದನು ಅಲ್ಲಿ ಮಿಂದು ಮೇಲೆ ಬರುವಾಗ ಸ್ತ್ರೀಯಾಗಿದ್ದನು. ವಿಷ್ಣುವು ಅವನ ವೀಣೆ ಮತ್ತು ಕಮಂಡಲುಗಳನ್ನು ಹಿಡಿದುಕೊಂಡು ಅವನನ್ನು ಅಲ್ಲೇ ಬಿಟ್ಟು ಹೊರಟುಹೋದನು. ಆಗ ಅಲ್ಲಿಗೆ ಬಂದ ಕನ್ಯಾಕುಬ್ಜದ ರಾಜನು ಅತ್ಯಂತ ಸುಂದರಿಯಾದ ನಾರದಿಯನ್ನು ಕಂಡು ಅನಾಥೆಯಾದ ಅವಳನ್ನು ತಾನು ವಿವಾಹವಾದನು. ಮುಂದೆ ನಾರದಿಯು ರಾಜನಾದ ತಾಲಧ್ವಜನಿಂದ ಸುಧನ್ವ, ವೀರವರ್ಮ ಮೊದಲಾದ ಇಪ್ಪತ್ತು ಮಂದಿ ಮಕ್ಕಳನ್ನು ಪಡೆದಳು. ತಾಲಧ್ವಜನು ಒಮ್ಮೆ ಶತ್ರುಗಳೊಡನೆ ಹೊಡೆದಾಡುವಾಗ ಸ್ವರ್ಗಸ್ಥನಾದನು. ನಾರದಿಯು ಯುದ್ಧಭೂಮಿಗೆ ಬಂದು ಗೋಳಾಡುವಾಗ ವಿಷ್ಣುವು ಮುದಿಬ್ರಾಹ್ಮಣನ ವೇಷದಿಂದ ಬಂದು ಇದೇ ಮಾಯಾ ಸ್ವರೂಪವೆಂದು ಹೇಳಿ ಆಕೆಯನ್ನು ಮತ್ತೊಂದು ಕೊಳದಲ್ಲಿ ಮುಳುಗುವಂತೆ ಹೇಳಿದನು. ಅವಳು ಮುಳುಗಿ ಮೇಲೆ ಬರುವಾಗ ಮೊದಲಿನ ನಾರದನೇ ಆಗಿದ್ದನು (ದೇವಿಭಾ.).

ನಾರಸಿಂಹ - ನೋ.-ನರಸಿಂಹ.

ನಾರಸಿಂಹಕಲ್ಪ - ನರಸಿಂಹಾವತಾರ ನಡೆದ ದಿನ. ಇದು ವೈವಸ್ವತ ಮನ್ವಂತರದ ಬ್ರಹ್ಮನ ತಿಂಗಳಿನ ಹದಿನಾರನೆಯ ದಿನದಲ್ಲಿ ನಡೆಯಿತು. ಈಗ ಬ್ರಹ್ಮನ ತಿಂಗಳಲ್ಲಿ ಇಪ್ಪತ್ತಾರನೇ ದಿನ ನಡೆಯುತ್ತಿದೆ. ಈ ದಿನಕ್ಕೆ ಶ್ವೇತವಾರಾಹ (ವರಾಹ) ಕಲ್ಪವೆಂದು ಹೇಳುತ್ತಾರೆ. (ಮತ್ಸ್ಯಪು.).

ನಾರಾಯಣ - ತ್ರಿಮೂರ್ತಿಗಳಲ್ಲಿ ಎರಡನೆಯವ. ಇವನ ಕಾರ್ಯ ಜಗತ್ತಿನ ರಕ್ಷಣೆ. ಈತನು ಅನೇಕ ಅವತಾರಗಳನ್ನು ಮಾಡಿದ್ದಾನೆ. ನಾರಾಯಣನ ಭಕ್ತರಿಗೆ ಐಹಿಕ ಸುಖ ಕಡಿಮೆ. ಅವತಾರಗಳಲ್ಲಿ ನರದೇಹವನ್ನು ಹೊಂದಿರುವನು; ಜಲದಲ್ಲಿ ವಾಸಮಾಡುವವನು.

ನಾರಾಯಣಾಸ್ತ್ರಪ್ರಯೋಗ - ೧. ಭಗದತ್ತನ ಸುಪ್ರತೀಕ ಗಜವು ದಾಶಾರ್ಣ ರಾಜನನ್ನು ತುಳಿದು ಕೊಂದು ಸಾತ್ಯಕಿಯ ರಥವನ್ನು ಪುಡಿಮಾಡಿತು. ಭೀಮನು ಆ ಗಜವನ್ನು ತಡೆಯಲಸಾಧ್ಯವಾಗಲು ಪಾಂಡವರ ಸೇನೆಯಲ್ಲಿ ನಾಲ್ಕೂ ಕಡೆಗೆ ಹಾಹಾಕಾರವೆದ್ದಿತು. ಸಂಶಪ್ತಕರೊಡನೆ ಯುದ್ಧ ಮಾಡುತ್ತಿದ್ದ ಅರ್ಜುನನು ಈ ಗದ್ದಲವನ್ನು ಕೇಳಿ ವಜ್ರಾಸ್ತ್ರದಿಂದ ತ್ರಿಗರ್ತರನ್ನು ಕೊಂದು ಕ್ಷಣದಲ್ಲಿಯೇ ಭಗದತ್ತನ ಮುಂದೆ ಬಂದು ನಿಂತನು. ಭಗದತ್ತನು ಅರ್ಜುನನು ತನ್ನ ಮುಂದೆ

ಬಂದು ನಿಂತುದನ್ನು ಕಂಡು ಆನೆಯನ್ನು ಮುನ್ನಡೆಸಲು ಕೃಷ್ಣನು ಚಮತ್ಕಾರದಿಂದ ರಥವನ್ನು ಹಿಂದಕ್ಕೂ ಮುಂದಕ್ಕೂ ಚಲಿಸಿ ಆ ಗಜವನ್ನು ಸೋಲಿಸಿದನು. ಆಗ ಭಗದತ್ತನು ಕೋಪದಿಂದ ನಾರಾಯಣಾಸ್ತ್ರವನ್ನು ಅರ್ಜುನನ ಮೇಲೆ ಎಸೆಯಲು ಕೃಷ್ಣನು ಆ ಮಹಾಸ್ತ್ರವನ್ನು ತನ್ನ ಕೈಯಿಂದ ಸೆಳೆದು ಕೊರಳಲ್ಲಿ ಮಾಲೆಯಂತೆ ಧರಿಸಿದನು. ಹಿಂದೆ ಶ್ರೀಕೃಷ್ಣನು ಈ ಬಾಣವನ್ನು ನರಕಾಸುರನಿಗೆ ಕೊಟ್ಟಿದ್ದನು. ಅದು ಅವನಿಂದ ಭಗದತ್ತನಿಗೆ ಬಂತು (ಭಾಗ.). ೨. ದ್ರೋಣನ ವಧೆಯ ವಿಚಾರವನ್ನು ಕೇಳಿದ ಅಶ್ವತ್ಥಾಮನು ಪಾಂಡವಸೇನೆಯ ಮೇಲೆ ನಾರಾಯಣಾಸ್ತ್ರವನ್ನು ಪ್ರಯೋಗಿಸಿದನು. ಅಸ್ತ್ರಜ್ವಾಲೆಯು ನಾಲ್ಕೂ ದಿಕ್ಕುಗಳನ್ನು ಆವರಿಸತೊಡಗಿತು. ಯುಧಿಷ್ಠಿರನು ತಮ್ಮಂದಿರೊಡನೆ ತಾನು ಇಂದು ಬೂದಿಯಾಗುವುದು ನಿಜವೆಂದೇ ಎಣಿಸಿದನು. ಆಗ ಕೃಷ್ಣನು 'ಎಲೈ ಅರಸರೇ, ಭಯಪಡಬೇಡಿ. ಈ ಅಸ್ತ್ರವು ನಿರಾಯುಧರನ್ನೂ, ವಾಹನವಿಲ್ಲದವರನ್ನೂ ಕೊಲ್ಲತಕ್ಕದಲ್ಲ. ಆದುದರಿಂದ ಅಸ್ತ್ರಗಳನ್ನೆಲ್ಲ ಕೆಳಗೆ ಹಾಕಿ ವಾಹನಗಳಿಂದ ಕೆಳಗೆ ಇಳಿದುಬಿಡಿ' ಎಂದನು. ಎಲ್ಲರೂ ಅವನ ಮಾತಿನಂತೆಯೇ ಮಾಡಿದರು. ಆದರೆ ಭೀಮನು ಮಾತ್ರ ಗದಾಪಾಣಿಯಾಗಿ ರಥದಿಂದ ಕೆಳಗಿಳಿಯದೆ ಹೆಮ್ಮೆಯಿಂದ ನಿಂತಿದ್ದನು. ಇದನ್ನು ಕಂಡು ಶ್ರೀಕೃಷ್ಣನು ಅವಸರದಿಂದ ಬಂದು ಭೀಮನ ಕೈಯಲ್ಲಿರುವ ಗದೆಯನ್ನು ಸೆಳೆದುಕೊಂಡು ಅವನನ್ನು ರಥದಿಂದ ಕೆಳಗೆ ಹಾಕಿದನು. ಇದರಿಂದ ನಾರಾಯಣಾಸ್ತ್ರವು ಪಾಂಡವರ ಸೇನೆಯಲ್ಲಿ ತನ್ನನ್ನು ಪ್ರತಿಭಟಿಸುವವರನ್ನು ಕಾಣದೆ ಶಾಂತವಾಯಿತು (ಮ.ದ್ರೋ.). ೩. ನೀಲಧ್ವಜನನ್ನು ಗೆಲ್ಲಲು ಅರ್ಜುನನು ನಾರಾಯಣಾಸ್ತ್ರವನ್ನು ಪ್ರಯೋಗಿಸಿದ್ದ (ಜೈ.ಭಾ.).

ನಾರಾಯಣಿ - ಅಮೃತವನ್ನು ಹಂಚುವ ಕಾಲದಲ್ಲಿ ನಾರಾಯಣನು ಮೋಹಿನಿಯ ವೇಷದಿಂದ ರಕ್ಕಸರನ್ನು ವಂಚಿಸಿ ದೇವತೆಗಳಿಗೆ ಅಮೃತವನ್ನು ಕುಡಿಸಿದನು.

ದ್ರೌಪದಿಯು ಹಿಂದಿನ ಜನ್ಮದಲ್ಲಿ ನಾರಾಯಣಿ ಎಂಬ ತಪಸ್ವಿಯಾಗಿದ್ದಳು. ಈಕೆ ತಪಸ್ಸುಮಾಡಿ ಶಿವನನ್ನು ಮೆಚ್ಚಿಸಿ 'ಪತಿಂ ದೇಹಿ' ಎಂದು ಐದು ಸಾರಿ ಆತನನ್ನು ಕೇಳಿದುದರಿಂದ ಮುಂದೆ ಐವರು ಪಾಂಡವರ ಪತ್ನಿಯಾದಳು. ಈಕೆಯು ನಾರಾಯಣ ಅಥವಾ ಶಿವನಿಗೆ ಸಂಬಂಧಪಟ್ಟವಳು. ನಾರಾಯಣನ ತಂಗಿಯೇ ನಾರಾಯಣಿ. ಸುಪಾರ್ಶ್ವಕ್ಷೇತ್ರದಲ್ಲಿ ಅರ್ಚಿಸಲ್ಪಡುವ ದೇವಿಗೆ ನಾರಾಯಣಿ ಎಂದು ಹೆಸರು. ನಾರಾಯಣಿಯು (ನಾಲಾಯನಿ) ಮೌದ್ಗಲ್ಯಮುನಿಯ ಹೆಂಡತಿ. ಈಕೆ ತನ್ನ ಗಂಡನನ್ನು ...ೆಯಿಂದ ಮೆಚ್ಚಿಸಿದಳು. ಈಕೆಯೊಡನೆ ಮೌದ್ಗಲ್ಯನು ಐದು ದೇಹಗಳನ್ನು

ತನ್ನ ತಪಶ್ಶಕ್ತಿಯಿಂದ ಪಡೆದು ಕ್ರೀಡಿಸಿ ಆಕೆಯ ಮನಸ್ಸಂತೋಷಪಡಿಸಿದನು. ಈಕೆಯೇ ಮುಂದಿನ ಜನ್ಮದಲ್ಲಿ ದ್ರೌಪದಿಯಾಗಿ ಹುಟ್ಟಿ ಐವರು ಮಹಾವ್ಯಕ್ತಿಗಳಾದ ಪಾಂಡವರನ್ನು ಪತಿಯಾಗಿ ಪಡೆದಳು. ವ್ಯಾಸರು ದ್ರುಪದನಿಗೆ ಇದೇ ಕಥೆಯನ್ನು ಮುಂದೆ ಹೇಳಿದರು (ಮ.ಆ.).

ನಾರೀಕವಚ - ಸೂರ್ಯವಂಶದ ಅಶ್ಮಕರಾಜನ ಮಗ. ಪರಶುರಾಮನು ಕ್ಷತ್ರಿಯರ ಸಂಹಾರಕ್ಕೋಸ್ಕರ ಇಪ್ಪತ್ತೊಂದು ಸಾರಿ ಭೂಸಂಚಾರ ಮಾಡುತ್ತಿರುವಾಗ ಆತ ತನ್ನ ಅಂತಃಪುರದಲ್ಲಿ ಸ್ತ್ರೀವೇಷಧಾರಿಯಾಗಿದ್ದು ಬದುಕಿದ. ಮುಂದೆ ಸೂರ್ಯವಂಶಕ್ಕೆ ಈತನೇ ಮೂಲನಾದುದರಿಂದ ಈತನಿಗೆ ಮೂಲಕನೆಂಬ ಹೆಸರೂ ಬಂತು (ಭಾಗ.).

ನಾರೀತೀರ್ಥ - ಸೌರಭೇಯಿ, ವಂದಾ, ಸಮೀಚಿ, ಬುದ್ಬುದಾ, ಲತಾ ಎಂಬ ಅಪ್ಸರೆಯರು ಜಲಕ್ರೀಡೆಯಾಡುತ್ತಿದ್ದ ಸೌಭದ್ರ, ಪೌಲೋಮ, ಅಗಸ್ತ್ಯ, ಕಾರಂಧಮ, ಭಾರದ್ವಾಜ ಎಂಬ ಐದು ಕೊಳಗಳ ಹೆಸರು. ಈ ಐವರು ಅಪ್ಸರೆಯರ ವಿಲಾಸ ಮತ್ತು ನರ್ತನಗೀತೆಗಳು ಸಮೀಪದಲ್ಲಿ ವೇದಾಧ್ಯಯನ ಮಾಡುತ್ತಿದ್ದ ಒಬ್ಬ ಮುನಿಗೆ ತೊಂದರೆಯನ್ನುಂಟುಮಾಡಲು ಈ ಐವರಿಗೂ ಮೊಸಳೆಗಳಾಗುವಂತೆ ಶಾಪವಿತ್ತನು. ಅವರು ಮುನಿಯನ್ನು ಪ್ರಾರ್ಥಿಸಲು, 'ಅರ್ಜುನನಿಂದ ಶಾಪವಿಮೋಚನೆ ಹೊಂದುತ್ತೀರಿ' ಎಂದಿದ್ದನು. ಮುಂದೆ ತೀರ್ಥಯಾತ್ರೆಗೆ ಮಣಿಪುರದ ಕಡೆಗೆ ಬಂದ ಅರ್ಜುನನು ಈ ಕೊಳದಲ್ಲಿ ಸ್ನಾನಕ್ಕಿಳಿದು ಮೊಸಳೆಗಳಿಗೆ ಶಾಪವಿಮೋಚನೆಯಾಗುವಂತೆ ಮಾಡಿದನು. ಅಪ್ಸರೆಯರು ಅರ್ಜುನನನ್ನು ಹೊಗಳಿ ಅಲಕಾನಗರದ ಕಡೆಗೆ ಹೊರಟರು (ಮ.ಆ.).

ವರ್ಗೆ ಎಂಬ ಅಪ್ಸರಸ್ತ್ರೀ ತನ್ನ ಸಖಿಯರಾದ ಸೌರಭೇಯಿ, ಸಮೀಚಿ, ಬುದ್ಬುದೆ, ಲತೆಯರೊಡನೆ ಕುಬೇರನ ಗೃಹಕ್ಕೆ ಹೋಗುತ್ತಿರುವಾಗ ಒಬ್ಬ ತಪಸ್ವಿಯ ತಪಸ್ಸನ್ನು ಕೆಡಿಸಲು ಯತ್ನಪಟ್ಟಾಗ ಅವನು ನೂರು ವರ್ಷ ಮೊಸಳೆಗಳಾಗುವಂತೆ ಶಾಪವಿತ್ತು ಕೊನೆಗೆ ಅರ್ಜುನನಿಂದ ನಿಮಗೆ ಶಾಪವಿಮೋಚನೆಯಾಗುತ್ತದೆಂದನು (ಮ.ಆ.).

ನಾಲಾ(ರಾ)ಯನಿ - ನೋ.-ನಾರಾಯಣಿ. ಕುಷ್ಠರೋಗವನ್ನು ನಟಿಸಿ ಮುದ್ಗಲ ಮುನಿಗಳು (ಮೌದ್ಗಲ್ಯರು) ತನ್ನ ಪತ್ನಿಯಾದ ಈಕೆಯ ಪಾತಿವ್ರತ್ಯವನ್ನು ಪರೀಕ್ಷಿಸಿ ಮೆಚ್ಚಿದರು. ಒಮ್ಮೆ ಈಕೆಯು ಕುಷ್ಠರೋಗದ ಪತಿಯನ್ನು ರಾತ್ರಿಯಲ್ಲಿ ಆತನ ಇಚ್ಛೆಯಂತೆ ವೇಶ್ಯಾಗೃಹಕ್ಕೆ ಹೊತ್ತುಕೊಂಡು ಹೋಗುವಾಗ ಇನ್ನೊಬ್ಬ ಮುನಿಗೆ ಈತನ ಕೊಳಕು ಕಾಲು ತಗಲಲು, ಅವನು

ಕೋಪದಿಂದ 'ನಾಳೆ ಸೂರ್ಯೋದಯದ ಒಳಗೆ ನನಗೆ ಕಾಲು ತಗಲಿಸಿದ ಅಧಮನು ಸಾಯಲಿ' ಎಂದು ಶಾಪವಿತ್ತು ಹೋಗಲು, 'ನಾಳೆ ಸೂರ್ಯೋದಯವಾಗದಿರಲಿ' ಎಂದು ಈಕೆಯು ನುಡಿದು ತಾನು ಹೋಗಬೇಕಾಗಿದ್ದ ಸ್ಥಳವನ್ನು ಸೇರಿದಳು. ಅನೇಕ ದಿನಗಳವರೆಗೆ ಸೂರ್ಯೋದಯವಿಲ್ಲದಿರಲು ಜಗತ್ತು ಚಳಿಯಿಂದ ತಲ್ಲಣಿಸಿತು. ಆಗ ದೇವತೆಗಳು ಸೂರ್ಯೋದಯವಾಗುವಂತೆ ಮಾಡಿ ಮುದ್ಗಲನನ್ನು ಬದುಕಿಸಿದರು. ಮುಂದೆ ಮುದ್ಗಲನು ಪತ್ನಿಯ ಇಚ್ಛೆಯಂತೆ ಐದು ಸುಂದರ ದೇಹಗಳಿಂದ ಆಕೆಯನ್ನು ಕೂಡಿದ್ದು ಆಕೆಯನ್ನು ಸಂತೋಷಪಡಿಸಿದನು. ಮರುಜನ್ಮದಲ್ಲಿ ಈಕೆ ದ್ರೌಪದಿಯಾಗಿ ಪಾಂಡವರೈವರನ್ನು ವಿವಾಹವಾದಳು. ಈಕೆಗೆ ಇಂದ್ರಸೇನೆಯೆಂಬ ಹೆಸರೂ ಇತ್ತು (ಮ.ಆ.).

ನಾಲಂದ - ಇದು ಹಿಂದೂ, ಜೈನ, ಬೌದ್ಧಮತೀಯರ ಯಾತ್ರಾಸ್ಥಳ. ಬೌದ್ಧರ ಕಾಲದಲ್ಲಿ ಇದು ಪ್ರಮುಖ ವಿದ್ಯಾಕೇಂದ್ರವಾಗಿತ್ತು. ಇಲ್ಲಿ ಮಹಾವೀರಸ್ವಾಮಿಯ ಮಂದಿರವಿದೆ (ಕ್ಷೇತ್ರದ.).

ನಾಲಿ(ಲೀ)ಜಂಘ - ಹಿಮಾಲಯದಲ್ಲಿದ್ದ ಒಂದು ಬಕಪಕ್ಷಿ. ಈತನು ಪೂರ್ವಜನ್ಮದಲ್ಲಿ ಗಾಲವ ಮುನಿಯ ರಜಸ್ವಲೆಯಾದ ಪತ್ನಿಯನ್ನು ಅಪಹರಿಸಲು ಪ್ರಯತ್ನಮಾಡಿ, ಮುನಿಯಿಂದ ಬಕಪಕ್ಷಿಯಾಗುವಂತೆ ಶಾಪಹೊಂದಿದನು. ಮುಂದೆ ಇಂದ್ರ ದ್ಯುವನಿಂದ ಈತನ ಶಾಪವಿಮೋಚನೆಯಾಯಿತು. ಈತನಿಗೆ ನಾಡೀಜಂಘನೆಂಬ ಹೆಸರೂ ಇದೆ. ನೋ.-ಅಕೂಪಾರ, ಇಂದ್ರದ್ಯುಮ್ನ (ಮ.ವ.).

ನಾವಿಕ - ವಿದುರನ ಸ್ನೇಹಿತನಾದ ಖನಕನ ಇನ್ನೊಂದು ಹೆಸರು (ಮ.ಆ.).

ನಾಸತ್ಯ - ಅಶ್ವಿನೀದೇವತೆಗಳ ಇನ್ನೊಂದು ಹೆಸರು (ಮ.ಆ.).

ನಾಸಿಕ - ನಾಸಿಕವು ಭಾರತದ ಪ್ರಮುಖ ತೀರ್ಥಗಳಲ್ಲಿ ಸೇರುತ್ತದೆ. ನಾಸಿಕ ಮತ್ತು ಪಂಚವಟಿ ಒಂದೇ ನಗರದ ಎರಡು ಭಾಗಗಳು. ಇದರ ಮಧ್ಯದಲ್ಲಿ ಗೋದಾವರಿ ನದಿಯು ಹರಿಯುತ್ತಿದೆ. ಯಾತ್ರಿಕರು ಹೆಚ್ಚಾಗಿ ಪಂಚವಟಿಯಲ್ಲಿ ಉಳಿದುಕೊಳ್ಳುವರು. ರಾವಣನು ಸೀತೆಯನ್ನು ಇಲ್ಲಿಯೇ ಅಪಹಾರ ಮಾಡಿದ. ಬೃಹಸ್ಪತಿಯು ಸಿಂಹರಾಶಿಗೆ ಬಂದಾಗ ಇಲ್ಲಿ ಕುಂಭಮೇಳವು ಜರುಗುತ್ತದೆ (ಕ್ಷೇತ್ರದ.).

ನಿಋತಿ - ೧. ಅಧರ್ಮನ ಪತ್ನಿ. ಈಕೆಯ ಮಕ್ಕಳು ಭಯ, ಮಹಾಭಯ ಮತ್ತು ಮೃತ್ಯು (ಮ.ಆ.). ೨. ಏಕಾದಶರುದ್ರರಲ್ಲೊಬ್ಬ (ಮ.ಆ.). ೩. ದಿಕ್ಪಾಲಕನೊಬ್ಬ. ಇವನ ಪತ್ನಿ ದೀರ್ಘಾದೇವಿ.

ನಿಕುಂಭ - ಕುಂಭಕರ್ಣನ ಮಗ; ಈತನ ತಾಯಿ ವೃತ್ರಜ್ವಾಲೆ; ಅಣ್ಣ ಕುಂಭ. ಶ್ರೀರಾಮಲಕ್ಷ್ಮಣರು ಇಂದ್ರಜಿತುವಿನ ಸರ್ಪಾಸ್ತ್ರದಿಂದ ವಿಮೋಚನೆ ಹೊಂದಿದ ಮೇಲೆ ಯುದ್ಧಕ್ಕೆ ಬಂದ ನಿಕುಂಭನನ್ನು ಹನುಮಂತನು ಕೊಂದನು. ಈತನು ಶ್ರೀರಾಮನಿಗೆ ಸೀತೆಯನ್ನು ಕೊಡಲೇಬಾರದೆಂದು ರಾವಣನಿಗೆ ಬೋಧಿಸಿದನು (ರಾಮಾ.ಯುದ್ಧ.). ೨. ದನುವಿನ ಮಗನಾದ ದಾನವನೊಬ್ಬ (ಮ.ಆ.). ೩. ಪ್ರಹ್ಲಾದನ ಮಗನೊಬ್ಬ. ಈತನಿಗೆ ವಿರೋಚನ ಮತ್ತು ಕುಂಭರೆಂಬ ಸಹೋದರರೂ, ವಿರೋಚನೆಯೆಂಬ ಸಹೋದರಿಯೂ ಇದ್ದರು. ಸುಂದೋಪಸುಂದರು ಇವನ ಮಕ್ಕಳು. ನೋ.-ತಾಟಕಾ, ಸುಂದ, ಉಪಸುಂದ (ಮ.ಆ.). ೪. ಶಿವನ ಪ್ರಮಥಗಣಗಳಲ್ಲೊಬ್ಬ. ನೋ.-ದಿವೋದಾಸ.

ನಿಕುಂಭನಾಭ - ಬಲಿಯಮಗ (ಭಾಗ.).

ನಿಕುಂಭಿಲಾ - ಇಂದ್ರಜಿತ್ತು ಪೂಜಿಸುತ್ತಿದ್ದ ಕಾಳೀ ವಿಗ್ರಹದ ಹೆಸರು. ಇದು ಲಂಕೆಯ ಪಶ್ಚಿಮದಲ್ಲಿತ್ತು. ರಾಮಾಯಣ ಯುದ್ಧದಲ್ಲಿ ಇಂದ್ರಜಿತ್ತು ರಾಮಲಕ್ಷ್ಮಣರ ನಾಶಕ್ಕಾಗಿ ಇಲ್ಲಿ ಅಭಿಚಾರಕ್ರಿಯೆಗಳಿಂದ ಯಾಗವನ್ನು ಮಾಡಿದನು. ಇದನ್ನು ತಿಳಿದ ವಿಭೀಷಣನು ಲಕ್ಷ್ಮಣನನ್ನು ಅಲ್ಲಿಗೆ ಕರೆದೊಯ್ದು, ಆ ಯಾಗವನ್ನು ಹಾಳು ಮಾಡಿ ಇಂದ್ರಜಿತ್ತುವನ್ನು ಕೊಲ್ಲಿಸಿದನು (ರಾಮಾ.ಯುದ್ಧ).

ನಿಕೃತಿ - ಸುಬಲನ ಪುತ್ರಿ; ಗಾಂಧಾರಿಯ ಸಹೋದರಿ; ಧೃತರಾಷ್ಟ್ರನ ಪತ್ನಿ. ನೋ.-ಗಾಂಧಾರಿ.

ನಿಚಂದ್ರ - ದನುವಿನ ಮಗನಾದ ರಾಕ್ಷಸನೊಬ್ಬ.

ನಿಚಕ್ನು - ಚಂದ್ರವಂಶದ ರಾಜ. ಇವನ ಕಾಲದಲ್ಲಿ ಹಸ್ತಿನಾಪುರಿ ಗಂಗಾನದಿಯಲ್ಲಿ ಮುಳುಗಿತು. ಮುಂದೆ ಈ ವಂಶದ ರಾಜರು ಕೌಶಾಂಬಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು.

ನಿದಾಘ - ಪುಲಸ್ತ್ಯನ ಮಗ. ನೋ.-ಋಭು.

ನಿದ್ರಾದೇವಿ - ಸರಯೂ ನದೀತೀರದಲ್ಲಿ ಅಳುತ್ತಿದ್ದ ನಿದ್ರಾದೇವಿಯನ್ನು ವಿಚಾರಿಸಲು ಆಕೆಯು ಕುಂಭಕರ್ಣನ ಮರಣಾನಂತರ 'ನಾನು ಅನಾಥಳಾಗಿದ್ದೇನೆ. ನನಗೆ ಆಶ್ರಯ ಕೊಡಬೇಕು' ಎನ್ನಲು ಶ್ರೀರಾಮನು 'ಈ ಲೋಕದಲ್ಲಿ ರಾಮಭಜನೆ ಮಾಡುವ ಪಾಪಿಗಳಲ್ಲಿಯೂ, ವೇದಪಠನ, ಪುರಾಣಶ್ರವಣ ಮಾಡುವ ದುಷ್ಟರಲ್ಲಿಯೂ, ಸೋಮಾರಿಯಾದ ವಿದ್ಯಾರ್ಥಿಗಳಲ್ಲಿಯೂ ವಾಸಮಾಡು' ಎಂದು ಅಪ್ಪಣೆಮಾಡಿದನು (ಆನಂ.ರಾ.).

ನಿಬಂಧನ - ೧. ಒಬ್ಬ ವಿರಕ್ತನಾದ ಮುನಿ (ಮ.ಶಾಂ.). ೨. ತ್ರಿಶಂಕುವಿನ ಅಜ್ಜ; ತ್ರಿಧನ್ವನ ತಂದೆ. ನೋ.- ತ್ರಿಶಂಕು.

ನಿಮಿ - ೧. ದತ್ತಾತ್ರೇಯ ಮುನಿಯ ಮಗ (ಮ.ಅನು.). ೨. ಸೂರ್ಯವಂಶದ ಇಕ್ಷ್ವಾಕುವಿನ ಹನ್ನೆರಡನೆಯ ಮಗ; ಶಶಾದ, ವಿಕುಕ್ಷಿಯರು ಈತನ ಅಣ್ಣಂದಿರು. ಈತನು ಜನಕನ ತಂದೆ. ಇವನ ಪಟ್ಟಣವು ಗೌತಮಾಶ್ರಮದ ಸಮೀಪದಲ್ಲಿದ್ದ ವೈಜಯಂತಪುರವಾಗಿತ್ತು. ಇವನೊಮ್ಮೆ ಸಹಸ್ರವರ್ಷ ಯಾಗಮಾಡಬೇಕೆಂದು ಸಂಕಲ್ಪಿಸಿ ಯಾಗದಲ್ಲಿ ಗುರುವಾದ ವಸಿಷ್ಠರನ್ನು ಹೋತೃವಾಗಬೇಕೆನ್ನಲು ಅವರು 'ರಾಜನೇ ನಾನು ಐನೂರು ವರ್ಷ ಮಾಡಲ್ಪಡುವ ಇಂದ್ರನ ಯಾಗದಲ್ಲಿ ಹೋತೃವಾಗಿ ಮಾಡಲ್ಪಟ್ಟಿರುವೆನು. ಅಲ್ಲಿಂದ ಬಂದ ಮೇಲೆ ನಿನ್ನ ಯಾಗದಲ್ಲಿ - ಋತ್ವಿಕ್ಕು ಆದೇನು' ಎಂದು ಸ್ವರ್ಗಕ್ಕೆ ಹೊರಟುಹೋದರು. ಇತ್ತ ನಿಮಿಯು ಗೌತಮಾದಿ ಮುನಿಗಳನ್ನು ಕೂಡಿಕೊಂಡು ಯಾಗವನ್ನು ಮಾಡತೊಡಗಿದನು. ಇಂದ್ರನ ಯಾಗವನ್ನು ಪೂರೈಸಿ ಬರುವಾಗ ತನ್ನ ಶಿಷ್ಯನು ಗೌತಮನ ಅಧಿಕಾರದಲ್ಲಿ ಯಜ್ಞಮಾಡುತ್ತಿದ್ದುದನ್ನು ಕಂಡು ಕೋಪದಿಂದ - 'ನಿಮಗೆ ದೇಹವಿಲ್ಲದೆ ಹೋಗಲಿ' ಎಂದು ಶಾಪವನ್ನಿತ್ತನು. ನಿಮಿಯು ಮುನಿಯ ಶಾಪದಂತೆ ದೇಹತ್ಯಾಗ ಮಾಡಿದನು. ಪ್ರಜೆಗಳು ತಮ್ಮ ರಾಜ್ಯವು ಅರಾಜಕವಾದುದನ್ನು ಕಂಡು ನಿಮಿಯ ಶವದ ಬಲತೋಳನ್ನು ಮಥಿಸಲು ಒಬ್ಬ ಪುರುಷನು ಜನಿಸಿದನು. ಇವನಿಗೆ ವಿದೇಹ, ಮಿಥಿ, ಜನಕನೆಂಬುದಾಗಿ ಹೆಸರಿಟ್ಟರು. ನಿಮಿಯ ಶಾಪದಿಂದ ವಸಿಷ್ಠನ ಸ್ಥೂಲದೇಹವು ನಿವೃತ್ತಿಯಾಗಿ ಸೂಕ್ಷ್ಮಶರೀರದಿಂದ ಮಿತ್ರಾವರುಣರ ತೇಜಸ್ಸನ್ನು ಪ್ರವೇಶಮಾಡಿ ಅವರು ಊರ್ವಶಿಯ ದರ್ಶನದಿಂದ ವೀರ್ಯ ಬಿಡಲು ಅಲ್ಲೇ ವಸಿಷ್ಠನಿಗೆ ಹೊಸ ದೇಹ ದೊರೆಯಿತು. ನೋ.-ಜನಕ, ಮಿಥಿ (ಉತ್ತರ. ರಾಮ.).

ನಿಮಿಷ - ಅಮೃತರಕ್ಷಕನಾದ ದೇವತೆ. ಈತನಿಂದ ಅಮೃತವನ್ನು ತರುವಾಗ ಗರುಡನು ಯುದ್ಧವನ್ನು ಮಾಡಿದನು.

ನಿಮೇಷ - ಗರುಡನ ಮಗ (ಮ.ಉ.).

ನಿಮ್ನ - ಈತನಿಗೆ ನಿಘ್ನನೆಂಬ ಹೆಸರುಂಟು (ವಿಷ್ಣು.ಪು.). ಈತನಿಗೆ ಸತ್ರಾಜಿತ ಮತ್ತು ಪ್ರಸೇನರೆಂಬಿಬ್ಬರು ಮಕ್ಕಳು. ನೋ.-ಸತ್ರಾಜಿತ,.ಸ್ಯಮಂತಕ. ಯದುವಂಶದವನು.

ನಿಯತಾಯು (ನಿಯುತಾಯು) - ಕಲಿಂಗರಾಜನಾದ ಶ್ರುತಾಯುವಿನ ಮಗ. ಇವನ ಸೋದರ ದೀರ್ಘಾಯು. ಭಾರತಯುದ್ಧದಲ್ಲಿ ಇವನು ಅರ್ಜುನನಿಂದ ಹತನಾದನು (ಮ.ದ್ರೋ.).

ನಿರಮಿತ್ರ - ೧. ನಕುಲನ ಮಗ; ಶಿಶುಪಾಲನ ಮಗಳಾದ ರೇಣುಮತಿಯಲ್ಲಿ ಜನಿಸಿದವ. ೨. ತ್ರಿಗರ್ತದೇಶಾಧಿಪತಿಯಾದ ವೀರಧನ್ವನ ಮಗ. ಈತನು ಭಾರತಯುದ್ಧದಲ್ಲಿ ಸಹದೇವನಿಂದ ಹತನಾದನು (ಮ.ಆ.,ದ್ರೋ.).

ನಿವಾತಕವಚ - ದಾನವರು; ಇವರು ಪ್ರಹ್ಲಾದನ ತಮ್ಮನಾದ ಸಂಹ್ಲಾದನ ಸುತರು. ಅರ್ಜುನನು ಸ್ವರ್ಗದಲ್ಲಿ ಐದು ವರ್ಷವಿದ್ದು, ಇಂದ್ರನಲ್ಲಿ ಆಗ್ನೇಯ, ವಾರುಣ, ಸಾಮ್ಯ, ವಾಯುವ್ಯ, ವೈಷ್ಣವ, ಯಾಮ್ಯ, ಪಾಶುಪತ, ಬ್ರಾಹ್ಮ, ಪ್ರಾಜಾಪತ್ಯ, ಕೌಬೇರ ಮೊದಲಾದ ಅಸ್ತ್ರಗಳನ್ನು ಪಡೆದು ಮಾತಲಿಯು ನಡೆಸುತ್ತಿರುವ ಆತನ ರಥವನ್ನೇರಿ ಗಂಧಮಾದನ ಪರ್ವತದ ಕಡೆಗೆ ಬರುತ್ತಿರುವಾಗ ಮಾರ್ಗದಲ್ಲಿ ಆ ರಕ್ಕಸನ ಪಟ್ಟಣವನ್ನು ಕಂಡು ಸಮ್ಮೋಹನಾಸ್ತ್ರ, ವಜ್ರಾಸ್ತ್ರ ಮೊದಲಾದುವುಗಳಿಂದ ಆ ರಾಕ್ಷಸರನ್ನು ಕೊಂದು ದೇವತೆಗಳಿಗೆ ಹಿತವನ್ನುಂಟುಮಾಡಿದನು. ಈ ರಕ್ಕಸರೊಡನೆ ಹೋರಾಡುವ ಮೊದಲು ದೇವತೆಗಳಿಂದ ದೇವದತ್ತವೆಂಬ ಶಂಖವು ಅರ್ಜುನನಿಗೆ ಕೊಡಲ್ಪಟ್ಟಿತು (ಮ.ವ.).

ನಿಶಠ - ಯಾದವರಲ್ಲೊಬ್ಬ (ಮ.ಆ.).

ನಿಶಾಕರ - ೧. ಚಂದ್ರ. ನೋ.-ಚಂದ್ರ. ೨. ಗರುಡನ ಮಗ (ಮ.ಉ.). ೩. ಸಂಪಾತಿ, ಜಟಾಯುಗಳು ತಮ್ಮ ಶಕ್ತಿಪ್ರದರ್ಶನಕ್ಕಾಗಿ ಆಕಾಶಕ್ಕೆ ಹಾರಲು ಸೂರ್ಯನ ಉಷ್ಣದಿಂದ ರೆಕ್ಕೆ ಸುಟ್ಟು ಸಂಪಾತಿಯು ಆ ಮುನಿಯ ಆಶ್ರಮದಲ್ಲಿ ಬಿದ್ದನು. ಆ ಮುನಿಯು - 'ನೀನು ಸೀತಾಸಂಶೋಧಕರಾಗಿ ಬರುವ ವಾನರರಿಗೆ ಸಹಾಯ ಮಾಡಿದೊಡನೆ ನಿನ್ನ ರೆಕ್ಕೆ ಚಿಗುರುವುವು' ಎಂದನು. ಆಗ ಜಟಾಯುವು ಬೇರೊಂದು ಕಡೆಯಲ್ಲಿ ಬಿದ್ದಿದ್ದನು. ನೋ.-ಸಂಪಾತಿ, ಜಟಾಯು (ರಾಮಾ.ಕಿಷ್ಕಿಂ.,ಅಧ್ಯಾ.ರಾಮಾ.ಕಿಷ್ಕಿಂ.).

ನಿಶುಂಭ - ಶ್ರೀಕೃಷ್ಣನಿಂದ ಹತನಾದ ರಾಕ್ಷಸನೊಬ್ಬ. ೨. ಇವನು ಶುಂಭನೆಂಬ ದಾನವನ ತಮ್ಮ. ಈ ಸೋದರರು ತಪಸ್ಸಿನಿಂದ ಬ್ರಹ್ಮನನ್ನು ಮೆಚ್ಚಿಸಿ ತಮಗೆ ಅಯೋನಿಜೆ ಕನ್ಯೆಯಿಂದಲ್ಲದೆ ಉಳಿದವರಿಂದ ಮರಣವಾಗಬಾರದೆನ್ನಲು ಬ್ರಹ್ಮನು 'ಹಾಗೇ ಆಗಲಿ' ಎಂದನು. ಮುಂದೆ ಇವರ ಪೀಡೆಗಳನ್ನು ದೇವತೆಗಳು ಸಹಿಸಲಾರದೆ ಆದಿಶಕ್ತಿಯಲ್ಲಿ ದೂರಲು, ಆಕೆ ತನ್ನ ದೇಹದಿಂದ ಕೌಶಿಕಿ ಎಂಬ ದೇವತೆಯೊಂದನ್ನು ಹೊರಡಿಸಿದಳು. ಶುಂಭನಿಶುಂಭರು ಆಕೆಯ ರೂಪಕ್ಕೆ ಮೋಹಿಸಿ ಆಕೆಯೊಡನೆ ಪ್ರಣಯಭಿಕ್ಷೆಯನ್ನು ಬೇಡಲು, ಆಕೆಯು ತನ್ನನ್ನು ಯುದ್ಧದಲ್ಲಿ ಗೆದ್ದವರನ್ನು ಮಾತ್ರ ಮದುವೆಯಾಗುತ್ತೇನೆನ್ನಲು,

ಶುಂಭನಿಶುಂಭರು ಚಂಡಮುಂಡರೆಂಬ ಸೇನಾಪತಿಗಳಿಂದ ಕೂಡಿ ಕೌಶಿಕಿಯೊಡನೆ ಹೋರಾಡಿ ಮೃತರಾದರು. ನೋ.-ರಕ್ತಬೀಜ, ಚಂಡ, ಮುಂಡ, ಶುಂಭ, ಚಾಮುಂಡಾ (ದೇವೀಭಾ.,ಮಾರ್ಕಂಪು.).

ನಿಶ್ಚ್ಯವನ - ೧. ಬೃಹಸ್ಪತಿಯ ಎರಡನೆಯ ಮಗ. ಇವನು ಯಶಸ್ಸಿನಿಂದಲೂ ತೇಜಸ್ಸಿನಿಂದಲೂ ಯಾವಾಗಲೂ ಚ್ಯುತಿಯನ್ನು ಹೊಂದದೆ ಇದ್ದ ಕಾರಣ ಈತನಿಗೆ ನಿಶ್ಚ್ಯವನ ಎಂಬ ಹೆಸರು ಬಂತು. ಇವನ ಮಗನೇ ವಿಪಾಪನು. ಈ ವಿಪಾಪನೆಂಬ ಅಗ್ನಿಗೆ ನಿಷ್ಕೃತಿಯೆಂಬ ಹೆಸರೂ ಉಂಟು. ಬೃಹಸ್ಪತಿಯ ಮೂರನೆಯ ಮಗನೇ ವಿಶ್ವಜಿತ್ತೆಂಬ ಅಗ್ನಿ. ನಾಲ್ಕನೆಯ ಮಗನೇ ವಿಶ್ವಭುಕ್ಕು. ಐದನೆಯ ಮಗನೇ ಬಡಬಾಗ್ನಿಯು. ಇವನಿಗೆ ಊರ್ಧ್ವಭಾಕ್ ಎಂಬ ಹೆಸರುಂಟು. ಆರನೆಯ ಮಗನಿಗೆ ಸ್ವಿಷ್ಟಕೃತ್ತೆಂದು ಹೆಸರು. ನಿಶ್ಚ್ಯವನನ ತಾಯಿ ಚಂದ್ರಪತ್ನಿಯಾದ ತಾರಾದೇವಿ (ಮ.ವ.).

ನಿಷಂಗಿ - ಧೃತರಾಷ್ಟ್ರನ ಮಗ; ಇವನು ಭೀಮನಿಂದ ಹತನಾದ (ಮ.ಆ.,ಕ.).

ನಿಷಧ - ೧. ಸಪ್ತಕುಲಪರ್ವತಗಳಲ್ಲೊಂದು. ೧. ಹಿಮವತ್, ೨. ನಿಷಧ, ೩.ವಿಂಧ್ಯ, ೪. ಮಾಲ್ಯವಂತ. ೫. ಪಾರಿಯಾತ್ರಕ. ೬. ಗಂಧಮಾದನ. ೭.ಹೇಮಕೂಟ.

೨. ದೇಶವೊಂದು-ಇದರ ರಾಜ ನಳ. ಈಗ ಇದನ್ನು ನಳಪುರದ ರಾಜಧಾನಿಯಾದ ನರ್ವಾರ್ ಎನ್ನುತ್ತಾರೆ. ೩. ಜಂಬೂದ್ವೀಪದ ಒಂದು ಪರ್ವತ; ಇದರ ಸಮೀಪ ವಿಷ್ಣುಪದವೆಂಬ ಸರೋವರವಿದೆ (ಮ.ಸ.,ಭೀ.,ವ.,ಭಾಗ.).

ನಿಷೀಧ - ವೇನರಾಜನ ಬಲತೊಡೆಯಿಂದ ಹುಟ್ಟಿದವ. ಇವನು ಕಪ್ಪು ಮೈಯ ಕುಳ್ಳನಾಗಿದ್ದುದರಿಂದ ನಿಷಾದಜಾತಿಗೆ ಮೂಲಪುರುಷನಾದನು (ಹರಿ.).

ನಿಷ್ಕೃತಿ - ನೋ. -ನಿಶ್ಚ್ಯವನ, ಅಗ್ನಿವಿಶೇಷ.

ನಿಷ್ಠಾನಕ - ಸರ್ಪವೊಂದು (ಮ.ಆ.).

ನೀಪ - ಚಂದ್ರವಂಶದ ವಿಭ್ರಾಜರಾಜನ ಮಗ. ನೋ.-ಅಣುಹ. ಇವನು ಶುಕ್ರಾಚಾರ್ಯನ ಮಗಳಾದ ಕೀರ್ತಿಮತಿಯನ್ನು (ಕೃತ್ವಿಯನ್ನು) ವಿವಾಹವಾಗಿ ಬ್ರಹ್ಮದತ್ತನೆಂಬ ಮಗನನ್ನು ಪಡೆದನು (ಮತ್ಸ್ಯಪು.,ಹರಿ.).

ನೀಲ - ೧. ಅಗ್ನಿಯ ಅಂಶದಿಂದ ಹುಟ್ಟಿದ ವಾನರ. ಇವನು ಸುಗ್ರೀವನ ಕಪಿಸೇನಾ ನಾಯಕರಲ್ಲೊಬ್ಬ ೨. ವೈಢೂರ್ಯಮಯವಾದ ಒಂದು ಪರ್ವತ. ಇದು ರಮ್ಯಕ ವರ್ಷದ ಉತ್ತರಕ್ಕಿದೆ. ೩. ಕಾರ್ತವೀರ್ಯಾರ್ಜುನನ ವಂಶೋತ್ಪನ್ನನಾದ

ಪಾಂಡವಪಕ್ಷದ ಕ್ಷತ್ರಿಯನೊಬ್ಬ. ಈತನ ವಧೆ ಅಶ್ವತ್ಥಾಮನಿಂದಾಯಿತು. ೪.ಕುಬೇರನ ಒಂಬತ್ತು ನಿಧಿಗಳಲ್ಲೊಂದು.

ನೀಲಕಂಠ - ಸಮುದ್ರಮಥನ ಕಾಲದಲ್ಲಿ ಹುಟ್ಟಿದ ವಿಷವನ್ನು ಕುಡಿದ ಶಿವ. ಇವನಿಗೆ ವಿಷಕಂಠನೆಂಬ ಹೆಸರೂ ಇದೆ (ಮ.ಆ.,ಭಾಗ.).

ನೀಲ - ಮಾಹಿಷ್ಮತಿ ನಗರದ ರಾಜ. ಇವನ ಮಗಳನ್ನು ಅಗ್ನಿಯು ಬ್ರಾಹ್ಮಣರೂಪದಿಂದ ಬಂದು ವಿವಾಹವಾದನು. ಅಗ್ನಿಯು ನೀಲರಾಜನ ಮಗಳನ್ನು ಮದುವೆಯಾಗುವ ಮೊದಲು ಸ್ತ್ರೀಯರಿಗೆ ಸ್ವಾತಂತ್ರ್ಯವಿರಲಿಲ್ಲ. ಸಹದೇವನು ರಾಜಸೂಯಯಾಗ ಕಾಲದಲ್ಲಿ ಇಲ್ಲಿಗೆ ಬಂದು ಅಗ್ನಿಯನ್ನು ಮೆಚ್ಚಿಸಿ ನೀರಿನಿಂದ ಕಪ್ಪಕಾಣಿಕೆಗಳನ್ನು ಪಡೆದನು (ಮ.ಸ.,ಆ.,ಉ.).

ನೀಲಧ್ವಜ - ನರ್ಮದಾ ನದೀತೀರದಲ್ಲಿದ್ದ ಮಾಹಿಷ್ಮತೀ ನಗರದ ರಾಜ. ಸುನಂದೆ ಈತನ ಪತ್ನಿ; ಪ್ರವೀರನು ಮಗ. ಇವನಿಗೆ ಜ್ವಾಲೆ ಎಂಬ ಮತ್ತೊಬ್ಬ ಪತ್ನಿ ಇದ್ದಳು. ಇವಳ ಮಗಳು ಸ್ವಾಹೆ. ಅಗ್ನಿ ಸ್ವಾಹೆಯನ್ನು ಮದುವೆಯಾದ. ಧರ್ಮರಾಜನ ಅಶ್ವಮೇಧದ ಕುದುರೆಯನ್ನು ಪ್ರವೀರನು ಕಟ್ಟಲು ಅರ್ಜುನನು ಇವನನ್ನು ಗೆದ್ದನು. ನೋ.-ನಾರಾಯಣಾಸ್ತ್ರ. ಜ್ವಾಲೆಯ ಮಾತಿನಂತೆ ಪುನಃ ಅರ್ಜುನನೊಡನೆ ನೀಲಧ್ವಜನು ಯುದ್ಧಮಾಡದೆ ಸಂಧಿ ಮಾಡಿಕೊಂಡದ್ದರಿಂದ ಆಕೆ ಕೆರಳಿ ಗೃಹತ್ಯಾಗ ಮಾಡಿ ಗಂಗಾತೀರಕ್ಕೆ ನಡೆದು ಅಲ್ಲಿ ಗಂಗೆಯಿಂದ ಅರ್ಜುನನಿಗೆ ಶಾಪಕೊಡಿಸಿ ತಾನು ದೇಹತ್ಯಾಗ ಮಾಡಿದಳು (ಜೈ.ಭಾ.).

ನೀಲಲೋಹಿತಕಲ್ಪ - ಈಗ ನಡೆಯುತ್ತಿರುವ ಬ್ರಹ್ಮನ ತಿಂಗಳಿನ ಎರಡನೆಯ ದಿನದಲ್ಲಿ ಶಿವನು ನೀಲಲೋಹಿತನೆಂಬ ಹೆಸರಿನಿಂದ ಅವತರಿಸಿದುದರಿಂದ ಈ ಕಲ್ಪವನ್ನು ಅವನ ಹೆಸರಿನಿಂದಲೇ ಕರೆಯುತ್ತಾರೆ (ಮತ್ಸ್ಯಪು.).

ನೀಲಾ - ೧. ಭಾರತದ ನದಿಯೊಂದು. ೨. ಕೋಸಲ ರಾಜನಾದ ನಗ್ನಜಿತನ ಮಗಳು; ಶ್ರೀಕೃಷ್ಣನ ಪತ್ನಿ. ನೋ.-ನಗ್ನಜಿತ (ಮ.ಭೀ.). ೩. ಆಫ್ರಿಕದ ನೈಲ್ ನದಿ.

ನೀಲಿ - ಚಂದ್ರವಂಶದ ಸುಹೋತ್ರನ ಪುತ್ರ ಅಜಮೀಢನ ಪತ್ನಿ. ಈಕೆಗೆ ದುಷ್ಯಂತ ಮತ್ತು ಪರಮೇಷ್ಠಿಗಳೆಂಬ ಇಬ್ಬರು ಮಕ್ಕಳು (ಮ.ಆ.).

ನೃಗ - ಇಕ್ಷ್ವಾಕು ರಾಜನ ಒಬ್ಬ ಮಗ. ಈತನು ಒಮ್ಮೆ ದಾನಮಾಡಿದ ದನವನ್ನು ಪುನಃ ದಾನಮಾಡಿದುದರಿಂದ ಮೊದಲು ದಾನಪಡೆದವನು ಕೋಪದಿಂದ ರಾಜನಿಗೆ ಓತಿಯಾಗುವಂತೆ ಶಾಪವಿತ್ತನು. ಮುಂದೆ ಶ್ರೀಕೃಷ್ಣನಿಂದ ಈತನ ಉದ್ಧಾರವಾಯಿತು (ಉತ್ತರ.ರಾಮ.,ಭಾಗ.,ಮ.ಸ.,ವಿ.).

ನೃಮೇಧ -ಸುವ್ರತನ ಸೋದರ. ಇವರಿಬ್ಬರೂ ಪರಸ್ಪರ ಪ್ರೇಮವುಳ್ಳವರಾಗಿದ್ದರು. ಇವರ ಸೋದರಪ್ರೇಮವು ಅನುಕರಣೀಯವಾಗಿತ್ತು. ಹೀಗಿರಲು ಒಂದು ದಿನ ಸುವ್ರತನ ಮನದಲ್ಲಿ ಯಜ್ಞಮಾಡಬೇಕೆಂದೆನಿಸಿತು. ಇದನ್ನು ತನ್ನ ಸೋದರನಾದ ನೃಮೇಧನೊಡನೆ ವ್ಯಕ್ತಪಡಿಸಿದನು. ಯಜ್ಞಕ್ಕೆ ನೃಮೇಧನನ್ನೇ ಪುರೋಹಿತನನ್ನಾಗಿ ಮಾಡಿಕೊಂಡನು. ಯಜ್ಞ ಪ್ರಾರಂಭವಾಯಿತು. ಸುವ್ರತನು ಯಜ್ಞದಲ್ಲಿ ಆಹುತಿಯನ್ನರ್ಪಿಸುತ್ತಿದ್ದನು. ಸೋದರರಿಬ್ಬರೂ ತಮ್ಮ ಕಾರ್ಯದಲ್ಲಿ ತಲ್ಲೀನರಾಗಿದ್ದರು. ಒಮ್ಮೆಯೇ ಮಂಗಳವಾದ್ಯ, ಮಂಗಳಘೋಷಗಳ ಸಮಾರಂಭ ನಿಂತು ಅಲ್ಲೆಲ್ಲ ಸ್ಮಶಾನಶಾಂತಿ ಆವರಿಸಿತು. ಆಗ ಬೇರೊಬ್ಬರು ಸುವ್ರತನ ಬಳಿಗೆ ಬಂದು 'ಸುವ್ರತಾ, ನೀನು ಯಜ್ಞಕಾರ್ಯದಲ್ಲಿ ಮಗ್ನನಾಗಿರುವೆ. ನಿನ್ನ ಮಗನನ್ನು ನಿನ್ನ ಸೋದರನ ಮಕ್ಕಳಿಬ್ಬರು ಕೂಡಿ ಕೊಂದುಹಾಕಿದರು. ಇನ್ನು ನೀನು ಯಜ್ಞಮಾಡಿದರೇನು? ಬಿಟ್ಟರೇನು?' ಎಂದನು. ಸುವ್ರತನು ಅಲ್ಲಿ ಪುರೋಹಿತನಾಗಿ ಕುಳಿತಿದ್ದ ತನ್ನ ಸೋದರ ನೃಮೇಧನ ಮುಂಗೈ ಹಿಡಿದು ಒತ್ತಾಯದಿಂದ ಎಬ್ಬಿಸಿ ಅವನೊಡನೆ 'ನಿಮಗೆ ಯಜ್ಞಕಾರ್ಯ ಬೇಕಾಗಿದ್ದರೆ ಮಾಡಿ; ನನಗೆ ಯಜ್ಞಯಾಗಬೇಕಾಗಿಲ್ಲ. ನನ್ನ ಮಗನ ಕೊಲೆಯನ್ನು ಮಾಡಿದ ನೃಮೇಧನ ಸೇಡುತೀರಿಸಿಕೊಳ್ಳುತ್ತೇನೆ' ಎಂದು ಅವನನ್ನು ಎಳೆದುಕೊಂಡು ಹೋಗಿ ಒಂದು ಕಂಬಕ್ಕೆ ಬಿಗಿದು ಸುತ್ತಲೂ ಕಟ್ಟಿಗೆ ರಾಶಿಯನ್ನೊಟ್ಟಿದನು. ಅನಂತರ ಅವನನ್ನು ಹರಿದು ತಿನ್ನಲು ಬೇಟೆನಾಯಿ ಬಿಟ್ಟನು. ಆಗ ನೃಮೇಧನು ಅಗ್ನಿಯನ್ನು 'ಹೇ, ದೇವಾ, ನಾನು ಅಪರಾಧಿಯಾಗಿದ್ದರೆ ನೀನು ವಿಧಿಸಿದ ಶಿಕ್ಷೆಯನ್ನು ಅನುಭವಿಸುತ್ತೇನೆ' ಎಂದನು. ಒಮ್ಮೆಂದೊಮ್ಮೆಲೆ ಅಲ್ಲಿ ಭೀಕರ ಅಗ್ನಿಜ್ವಾಲೆ ಎದ್ದಿತು. ನಾಯಿಗಳಿಗೆ ನೃಮೇದನತ್ತ ಹೋಗಲೂ ಸಾಧ್ಯವಾಗಲಿಲ್ಲ. ಆ ಬೆಂಕಿಯು ಅವನನ್ನು ಕಟ್ಟಿಹಾಕಿದ ಹಗ್ಗಗಳನ್ನು ಸುಟ್ಟುಹಾಕಿತು. ಹೀಗೆ ಅವನು ಮುಕ್ತನಾದನು (ಋ).

ನೃಸಿಂಹ - ವಿಷ್ಣುವಿನ ನಾಲ್ಕನೆಯ ಅವತಾರ. ಇದು ಈಗಿನ ವೈವಸ್ವತ ಮನ್ವಂತರದ ನಾಲ್ಕನೆಯ ಕೃತಯುಗದಲ್ಲಿ ನಡೆಯಿತು. ನೋ.-ಹಿರಣ್ಯಕಶಿಪು, ಕಯಾದು. ಹಿರಣ್ಯಕಶಿಪುವು ಸಜ್ಜನರನ್ನು ಮಾತ್ರವಲ್ಲದೆ, ತನ್ನ ಮಗನಾದ ಪ್ರಹ್ಲಾದನನ್ನು ಅನೇಕ ವಿಧದಿಂದ ಶಿಕ್ಷಿಸಲು ಹರಿಯು ನರಸಿಂಹಾವತಾರದಿಂದ ಕಂಬವನ್ನು ಒಡೆದು ಹೊರಬಂದು ಆತನನ್ನು ಸೀಳಿಕೊಂದನು. ನೋ. - ಪ್ರಹ್ಲಾದ. (ಮ.ಸ.,ವ.,ಭಾಗ., ದೇವೀಭಾ., ಪದ್ಮಪು., ಮತ್ಸ್ಯಪು.,ಹರಿ.). ವೀರಭದ್ರನು ನರಸಿಂಹನನ್ನು ಅಣಗಿಸಿದನು (ಲಿಂಗಪು.).

ನೇಪಾಲ - ಹಿಂದೂದೇಶದ ಹಿಮಾಲಯದ ಪಕ್ಕದ ದೇಶ. ಇದರ ಈಗಿನ ರಾಜಧಾನಿ ಖಟ್ಮಂಡು. ವಿದೇಹ ದೇಶಕ್ಕೆ ಉತ್ತರದಲ್ಲಿ ಹಿಮವತ್ಪರ್ವತದಿಂದ ದಕ್ಷಿಣಕ್ಕಿದೆ (ಮ.ವ.). ಇಲ್ಲಿಯ ನಿವಾಸಿಗಳಾದ ಘೂರ್ಖರು ಮಹಾಸಾಹಸಿಗಳು. ಇಲ್ಲಿಯ ಪಶುಪತಿ ದೇವಾಲಯವು ಪ್ರಸಿದ್ಧವಾದ ಮಂದಿರ (ಕ್ಷೇತ್ರದ .).

ನೈಕದೃಕ್ - ವಿಶ್ವಾಮಿತ್ರನ ಮಗ (ಮ.ಅನು.).

ನೈಮಿಶಾ (ಷಾ)ರಣ್ಯ-ಗೋಮತಿ ನದಿಯ ಎಡದಡದಲ್ಲಿರುವ ಅರಣ್ಯ. ಇದು ಭಾರತದ ಪುಣ್ಯಾರಣ್ಯಗಳಲ್ಲೊಂದು. ಅಯೋಧ್ಯೆ ಮತ್ತು ರೋಹಿಲ್‌ಖಂಡ ರೈಲ್ವೆಯ ಸಾಂಡಿಲಾ ನಿಲ್ದಾಣದಿಂದ ೨೪ ಮೈಲುಗಳ ದೂರದಲ್ಲೂ, ಸೀತಾಪುರದಿಂದ ೨೦ ಮೈಲು ದೂರದಲ್ಲೂ ಇರುವ ನಿಮ್ಸಾರ್ (Nimsar) ಪ್ರದೇಶ.

ನೈಮಿಷಾರಣ್ಯ ಸ್ಟೇಶನ್‌ನಿಂದ ಒಂದು ಮೈಲಿನ ಮೇಲೆ ಚಕ್ರತೀರ್ಥವಿದೆ. ಪಂಚಪ್ರಯಾಗ, ಲಲಿತಾದೇವಿಮಂದಿರ, ಜಾನಕೀಕುಂಡ, ಹನುಮಾನ್ ಮತ್ತು ಭೂತನಾಥ ಮಂದಿರ-ಇನ್ನೂ ಕೆಲವು ಆಶ್ರಮಗಳು ಇಲ್ಲಿವೆ. ಹಿಂದೆ ಕೆಲವು ದೇವತೆಗಳೆಲ್ಲ ಕೂಡಿ ಇಲ್ಲಿ ದೊಡ್ಡದೊಂದು ಯಜ್ಞಮಾಡಿದ್ದರು. ಭಾರತಕಥೆಯು ಸೂತಪುರಾಣಿಕರಿಂದ ನೈಮಿಷಾರಣ್ಯವಾಸಿಗಳಾದ ಶೌನಕಾದಿ ಮಹರ್ಷಿಗಳಿಗೆ ಹೇಳಲ್ಪಟ್ಟಿತು.

ಬ್ರಹ್ಮನು ತನ್ನ ಮನಸ್ಸಿನಿಂದ ಸೂರ್ಯತೇಜಸ್ಸುಳ್ಳ ಒಂದು ಚಕ್ರವನ್ನು ನಿರ್ಮಿಸಿ ಅದರ ನೇಮಿಯು (ಬಳೆಯು) ಎಲ್ಲಿ ಜಾರಿಬೀಳುವುದೋ ಆ ಸ್ಥಳವು ತಪಸ್ಸಿಗೆ ಯೋಗ್ಯವಾದುದೆಂದು ಬ್ರಾಹ್ಮಣರಿಗೆ ಹೇಳಿ ಆ ಚಕ್ರವನ್ನು ಪೇರಿಸಿದನು. ಅದೇ ಅರಣ್ಯವೇ ಚಕ್ರದ ನೇಮಿಯು ಕಳಚಿಬಿದ್ದ ಸ್ಥಳವಾದುದರಿಂದ ಅದಕ್ಕೆ ನೈಮಿಷಾರಣ್ಯ ಎಂದು ಹೆಸರಾಯಿತು.

ನಿಮಿಷಮಾತ್ರದಲ್ಲೇ ಈ ಸ್ಥಳದಲ್ಲಿ ಅನೇಕ ದಾನವರು ಹತರಾದುದರಿಂದ ಇದಕ್ಕೆ ಈ ಹೆಸರು ಬಂತು (ವರಾಹಪು.).

ಅರ್ಜುನನು ತೀರ್ಥಯಾತ್ರೆಯ ಕಾಲದಲ್ಲಿ ಈ ಅರಣ್ಯಕ್ಕೆ ಸಮೀಪದಲ್ಲಿದ್ದ ಉತ್ಪಲಿನಿ, ನಂದಾನದಿ (ಅಲಕನಂದೆ), ಅಪರನಂದೆ, ಕೌಶಿಕಿ, ಗಯಾಕ್ಷೇತ್ರ, ಮಹಾನದಿ, ಗಂಗೆ ಮೊದಲಾದ ತೀರ್ಥಕ್ಷೇತ್ರಗಳಿಗೆ ಬಂದಿದ್ದನು (ಮ.ಆ.).

ನೈಮಿಷಕುಂಜ - ಕ್ಷೇತ್ರವೊಂದು (ಮ.ವ.).

ನೈಮಿಷೇಯರು- ಮಹಾತಪಸ್ವಿಗಳು. ಇವರು ಕೂಡಿ ಹನ್ನೆರಡು ವರ್ಷ ನಡೆಯತಕ್ಕ ಸತ್ರಯಾಗವನ್ನು ಮುಗಿಸಿದರು. ಈ ಯಾಗದಿಂದ ಸಮಂತಪಂಚಕಕ್ಷೇತ್ರದವರೆಗೆ ಬ್ರಾಹ್ಮಣರು ನೆಲೆಸಿದರು. ಇಲ್ಲಿಯ ಋಷಿಗಳಲ್ಲಿ ಕೆಲವರು ವಾಲಖಿಲ್ಯರು; ಕೆಲವರು ಅಶ್ಮಕುಟ್ಟರು, ದಂತೋಲೂಖಲರು, ಸಂಪ್ರಕ್ಷಾಲರು ಮೊದಲಾದವರಿದ್ದರು (ಮ.ಶ.).

ನೈಷಧ - ನಳರಾಜ (ಮ.ವ.).

ನೈಷಾದಿ - ನೋ.-ಏಕಲವ್ಯ. ಹಿರಣ್ಯಧನುವೆಂಬ ಬೇಡನ ಸಾಕುಮಗ (ಮ.ದ್ರೋ.).

ನೌಕಾಬಂಧನ - ಹಿಮಾಚಲ. ನೋ.-ಮತ್ಸ್ಯಾವತಾರ (ಮ.ವ.).

ನ್ಯಗ್ರೋಧ - ೧. ಒಂದು ಆಲದ ಮರ. ಅರಗಿನ ಮನೆಯಿಂದ ಪಾರಾದ ಬಳಿಕ ಪಾಂಡವರು ಇದರ ಅಡಿಯಲ್ಲಿ ಆ ರಾತ್ರಿಯನ್ನು ಕಳೆದರು. ಭೀಮನಿಗೂ ಹಿಡಿಂಬೆಗೂ ಇಲ್ಲಿಯೇ ವಿವಾಹವಾಯಿತು. (ಮ.ಆ.). ೨. ಭಾರತಯುದ್ಧ ಮುಗಿದ ಮೇಲೆ ಪಾಂಡವ ನಾಶಕ್ಕಾಗಿ ಕೃಪ, ಅಶ್ವತ್ಥಾಮ, ಕೃತವರ್ಮರು ಇದರಡಿಯಲ್ಲಿ ಸೇರಿದ್ದರು (ಮ.ಶ.). ೩. ಪರೀಕ್ಷಿತನನ್ನು ತಕ್ಷಕನು ಕಚ್ಚುವ ಮೊದಲು ಆಲದ ಮರವನ್ನು ಕಚ್ಚಿ ನಾಶಮಾಡಿದನು. ಕೊನೆಗೆ ಕಶ್ಯಪನ ಮಂತ್ರಬಲದಿಂದ ಆ ಮರವು ಚಿಗುರಿತು (ಮ.ಆ.).

ಪ

ಪಂಚಕಾಶಿ -- ವಾರಣಾಶಿ, ಗುಪ್ತಕಾಶಿ, ಉತ್ತರಕಾಶಿ, ದಕ್ಷಿಣಕಾಶಿ ಮತ್ತು ಶಿವಕಾಶಿ.

ಪಂಚಚೂಡಾ -- ಅಪ್ಸರೆಯೊಬ್ಬಳು. ಇವಳಿಗೂ ನಾರದನಿಗೂ ಸ್ತ್ರೀಸ್ವಭಾವದ ಕುರಿತಾಗಿ ಸಂವಾದವಾಯಿತು (ಮ.ಅನು.).

ಪಂಚಜನ -- ೧. ಹಿರಣ್ಯಕಶಿಪುವಿನ ಎರಡನೆಯ ಮಗನಾದ ಸಂಹ್ಲಾದನ ಮಗ. ಇವನು ಶ್ರೀಕೃಷ್ಣನ ಗುರುವಾದ ಸಾಂದೀಪನಿಯ ಪುತ್ರನನ್ನು ಅಪಹರಿಸಿ ಸಮುದ್ರದಲ್ಲಡಗಿದ್ದನು. ಬಲರಾಮಕೃಷ್ಣರು ವಿದ್ಯಾಭ್ಯಾಸವನ್ನು ಮುಗಿಸಿ ಗುರುದಕ್ಷಿಣೆಯನ್ನು ಸ್ವೀಕರಿಸಬೇಕೆನ್ನಲು ಸಾಂದೀಪನಿಯು 'ಮೃತನಾದ ನನ್ನ ಪುತ್ರನನ್ನು ತಂದುಕೊಡಬೇಕೆಂದನು'. ರಾಮಕೃಷ್ಣರು ಸಮುದ್ರದಿಂದ, ಪಂಚಜನನೆಂಬ ರಾಕ್ಷಸನು ಆತನನ್ನು ಅಪಹರಿಸಿ ತನ್ನಲ್ಲಿ ಅಡಗಿದ್ದಾನೆಂದು

ಕೇಳಿ ಸಮುದ್ರವನ್ನು ಪ್ರವೇಶಿಸಿ, ಆತನನ್ನು ಕೊಂದು ಅವನ ಶರೀರದಲ್ಲಿ ಗುರುಪುತ್ರನನ್ನು ಕಾಣದೆ ಪಾಂಚಜನ್ಯವೆಂಬ ಶಂಖವನ್ನು ಪಡೆದು, ಯಮನ ಪಟ್ಟಣವಾದ ಶೈಮಿನಿಗೆ ಹೋಗಿ, ಅಲ್ಲಿದ್ದ ಗುರುಪುತ್ರನನ್ನು ತಂದು ಗುರುವಿಗೊಪ್ಪಿಸಿದರು. (ಭಾಗ.). ೨. ಚಾಕ್ಷುಷ ಮನ್ವಂತರದ ಬ್ರಹ್ಮ. ಇವನಿಗೆ ವೀರಣನೆಂದೂ ಹೆಸರುಂಟು. ಇವನ ಮಗಳಾದ ವೀರಿಣಿ ಅಥವಾ ಅಸಿಕ್ನಿಯನ್ನು ಈ ಮನ್ವಂತರದ ದಕ್ಷನು ವಿವಾಹವಾದನು. ನೋ.-- ದಕ್ಷ (ಭಾಗ)

ಪಂಚತೀರ್ಥ -- ನೋ.--ನಾರೀತೀರ್ಥ.

ಪಂಚನದ -- ಪಂಜಾಬ್ ಪ್ರಾಂತ. ಇಲ್ಲಿ ಶತದ್ರು, ವಿಪಾಶಾ, ಇರಾವತಿ, ಚಂದ್ರಭಾಗ ಮತ್ತು ವಿತಸ್ತಾ ಎಂಬ ನದಿಗಳು ಹರಿಯುತ್ತವೆ. ಈ ಪ್ರಾಂತದಲ್ಲಿ ಜಲಂಧರನೆಂಬ ದೈತ್ಯನ ರಾಜಧಾನಿಯಾದ ಜಲಂಧರವಿದೆ. ಈತನು ಶಿವನಿಂದ ಕೊಲ್ಲಲ್ಪಟ್ಟನು. ಇಲ್ಲಿ ವಿಶ್ವಮುಖಿದೇವಿಯ ಮಂದಿರವಿದೆ. ಇದು ಐವತ್ತೊಂದು ಶಕ್ತಿಪೀಠಗಳಲ್ಲೊಂದು. ಇದನ್ನು ಪ್ರಾಚೀನಕಾಲದಲ್ಲಿ ತ್ರಿಗರ್ತ ತೀರ್ಥವೆಂದು ಕರೆಯುತ್ತಿದ್ದರು. ಈ ಶಕ್ತಿಯ ಪೀಠದಲ್ಲಿ ಸತೀದೇವಿಯ ವಾಮಸ್ತನವು ಬಿದ್ದಿದ್ದು, ಅದನ್ನು ಬಟ್ಟೆಯಿಂದ ಹೊದಿಸಿ ಇಟ್ಟಿರುವರು. ಇದೇ ಪ್ರಾಂತದಲ್ಲಿ ಹರಿಯುವ ವ್ಯಾಸನದಿಯ ದಡದಲ್ಲಿ ಅಮೃತಸರ ಎಂಬ ಸಿಕ್ಕರ ಕ್ಷೇತ್ರವಿದೆ. (ಮ.ಸ., ವ., ಕ್ಷೇತ್ರದ)

ಪಂಚನಳೀಯ -- ದಮಯಂತಿಯ ಸ್ವಯಂವರಮಂಟಪದಲ್ಲಿ ಇಂದ್ರ, ಅಗ್ನಿ, ಯಮ, ವರುಣರು ನಳನ ಜೊತೆಯಲ್ಲಿ ನಳನ ಆಕಾರದಲ್ಲೇ ಕುಳಿತಿದ್ದರು. ಈ ಪಂಚನಳರಲ್ಲಿ ನಿಜವಾದ ನಳನನ್ನು ದಮಯಂತಿಯು ತನ್ನ ಪತಿಭಕ್ತಿಯಿಂದಲೇ ಗುರುತಿಸಿ ವಿವಾಹವಾದಳು (ಮ.ವ.).

ಪಂಚಬಾಣ -- ೧. ಅರವಿಂದ, ಅಶೋಕ, ಚೂತ, ನವಮಲ್ಲಿಕಾ ಮತ್ತು ನೀಲೋತ್ಪಲ ಎಂಬ ಐದು ಮನ್ಮಥನ ಪಂಚಬಾಣಗಳು. ೨. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ದೇವಿಯ ಐದು ಬಾಣಗಳು. ಮನಸ್ಸೇ ಅವಳ ಬಿಲ್ಲು (ವಾಮ.ತಂತ್ರ) ಕಮಲ, ಕೈರವ, ರಕ್ತಕಲ್ಹಾರ, ಇಂದೀವರ, ಚೂತ -- ಈ ಐದು ಪುಷ್ಪಗಳು ದೇವಿಯ ಸ್ಥೂಲವಾದ ಐದು ಬಾಣಗಳು. ಹರ್ಷಣ, ರೋಚನ, ಮೋಹನ, ಶೋಷಣ ಮತ್ತು ಮಾರಣ -- ಈ ಐದು ಬಾಣಗಳು ದೇವಿಯ ಆಯುಧಗಳು (ಕಾಳಿ.ಪು) ಕ್ಷೋಭಣ, ದ್ರಾವಣ, ಆಕರ್ಷಣ, ವಶ್ಯ, ಉನ್ಮಾದ ಎಂಬುದು ದೇವಿಯ ಪಂಚಬಾಣಗಳು (ಜ್ಞಾನಾರ್ಣವ) ಮದನ, ಉನ್ಮಾದನ,

ಮೋಹನ, ದೀಪನ ಮತ್ತು ಶೋಷಣ -- ಇವು ದೇವಿಯ ಪಂಚಬಾಣಗಳು (ತಂತ್ರ, ಲಲಿತಾಸ)

ಪಂಚಭೂತಗಳು -- ಪೃಥ್ವಿ, ಅಪ್, ತೇಜ, ವಾಯು ಮತ್ತು ಆಕಾಶ.

ಪಂಚಯಜ್ಞಗಳು -- ದೇವಯಜ್ಞ, ಋಷಿಯಜ್ಞ, ಪಿತೃಯಜ್ಞ, ಭೂತಯಜ್ಞ ಮತ್ತು ಮನುಷ್ಯಯಜ್ಞ.

ಪಂಚರಾತ್ರ -- ೧. ಒಂದು ನಾಟಕ ೨. ವೈಷ್ಣವರ ಒಂದು ಆಗಮಶಾಸ್ತ್ರ.

ಪಂಚವಟಿ -- ಗೋದಾವರೀತೀರದ ನಾಸಿಕ ಕ್ಷೇತ್ರದ ಸಮೀಪವಿರುವ ವಿಶೇಷ ಸ್ಥಳವೊಂದು. ಶ್ರೀರಾಮನು ಅಗಸ್ತ್ಯನ ಅಪ್ಪಣೆಯಂತೆ ಇಲ್ಲಿ ಆಶ್ರಮಕಟ್ಟಿಕೊಂಡಿದ್ದ. ಇಲ್ಲಿ ವಿಶಾಲವಾದ ಮತ್ತು ಉನ್ನತವಾದ ಐದು ಆಲದ ಮರಗಳಿದ್ದುವು. ಆಧ್ಯಾತ್ಮ ಸಾಧನೆಗೆ ಪಂಚವಟಿಯು ಉತ್ತಮ ಸ್ಥಳವೆಂದು ಶ್ರೀರಾಮಕೃಷ್ಣ ಪರಮಹಂಸರ ಅಭಿಪ್ರಾಯವಾಗಿತ್ತು. ಅದಕ್ಕಾಗಿ ಬಂಗಾಳದ ದಕ್ಷಿಣೇಶ್ವರದಲ್ಲಿ, ಅವರು ತಮ್ಮ ಕೈಯಿಂದ ಒಂದು ಅಶ್ವತ್ಥಮರವನ್ನು ನೆಟ್ಟು, ವಟ, ಅಶೋಕ, ಬಿಲ್ವ ಮತ್ತು ನೆಲ್ಲಿ ಸಸಿಗಳನ್ನು ತಮ್ಮ ಅಳಿಯನಾದ ಹೃದಯನ ಮೂಲಕ ನೆಡಿಸಿದ್ದರು.

ಪಂಚಶಿಖ -- ಕಾಪಿಲೇಯ ಮುನಿಯೆಂದು ಈತನ ಇನ್ನೊಂದು ಹೆಸರು. ಈತನ ತಂದೆ ಕಪಿಲನೆಂಬ ಬ್ರಾಹ್ಮಣ. ಇವನಿಗೆ (ಕಪಿಲನಿಗೆ) ಜನದೇವನೆಂಬ ಹೆಸರೂ ಇದೆ. ಇವನು ನಾಸ್ತಿಕ ಮತಗಳನ್ನು ಖಂಡಿಸಿದವ (ಬೃ.ನಾ.ಪು.).

ಪಂಚಸರೋವರ -- ೧. ಬಿಂದುಸರೋವರ (ಸಿದ್ಧಪುರ), ೨. ನಾರಾಯಣ ಸರೋವರ (ಕಚ್ಛ), ೩. ಪಂಪಾ ಸರೋವರ (ಮೈಸೂರು ರಾಜ್ಯ) ೪. ಪುಷ್ಕರ ಸರೋವರ (ರಾಜಸ್ಥಾನ), ೫. ಮಾನಸ ಸರೋವರ (ಟಿಬೇಟು).

ಪಂಚಾಕ್ಷರ -- ಇದೊಂದು ಸರೋವರ. ಶ್ರೀರಾಮನು ಅಗಸ್ತ್ಯರೊಡನೆ ದಂಡಕಾರಣ್ಯ ಪ್ರದೇಶದಲ್ಲಿ ವಿಮಾನದಲ್ಲಿ ಕುಳಿತು ವಿಹರಿಸುವಾಗ ಒಂದು ರಾತ್ರಿ ಈ ಸರೋವರದ ದಡದಲ್ಲಿ ಕಳೆದಿದ್ದನು. ಆಗ ಅಗಸ್ತ್ಯರು ಈ ಸರೋವರದ ವೈಶಿಷ್ಟ್ಯವನ್ನು ಹೇಳಿದರು. ಪೂರ್ವದಲ್ಲಿ ಗಂಧರ್ವರಾಜನ ಐವರು ಕುಮಾರಿಯರೂ, ನಾಗರಾಜನ ಏಳು ಕನ್ಯೆಯರೂ ಈ ಸರೋವರದಲ್ಲಿ ನಿತ್ಯವೂ ಜಲಕ್ರೀಡೆಗಾಗಿ ಬಂದು ಎಲ್ಲರೂ ಪರಸ್ಪರ ಸ್ನೇಹಿತರಾದರು. ಅಲ್ಲೇ ತಪಸ್ಸು ಮಾಡಿಕೊಂಡಿದ್ದ ಒಬ್ಬ ತಪಸ್ವಿಗೆ ಇವರ ಆಗಮನದಿಂದ ತೊಂದರೆಗಳುಂಟಾಗಲು ಅವನು ಜಲದೇವತೆಯ ವಶ ಆ ಹನ್ನೆರಡು ಮಂದಿಯನ್ನೂ ನಿರ್ಬಂಧದಲ್ಲಿಡಿಸಿದನು. ಅವರನ್ನು ಜಲದೇವತೆಯ ಬಳಿಯಿಂದ ಯಾರೂ ಬಿಡಿಸಿಕೊಂಡು ಹೋಗಲು ಅಸಮರ್ಥರಾದರು. ಆ

ಮುನಿಯು ತನ್ನ ಸಾಧನದಿಂದ ಸದ್ಗತಿಯನ್ನು ಹೊಂದಿದನು. ಆ ಕನ್ಯೆಯರೂ ಈ ಸರೋವರದಲ್ಲೇ ಹಾಡುತ್ತ ಕಾಲಕಳೆಯತೊಡಗಿದರು. ಶ್ರೀರಾಮನು ಆ ಕನ್ಯೆಯರನ್ನು ಜಲದೇವತೆಯ ಸೆರೆಯಿಂದ ಬಿಡಿಸಿದನು. ಇದರಿಂದ ಸಂತೋಷಹೊಂದಿದ ನಾಗ ಮತ್ತು ಗಂಧರ್ವರಾಜನು ಶ್ರೀರಾಮನ ಬಳಿಗೆ ಬಂದು ಈ ಹನ್ನೆರಡು ಮಂದಿಯನ್ನು ಅವನ ಮಕ್ಕಳಿಗೆ ಪತ್ನಿಯರಾಗಿ ಸ್ವೀಕರಿಸಬೇಕೆನ್ನಲು ಶ್ರೀರಾಮನು ಅಗಸ್ತ್ಯನ ಸೂಚನೆಯಂತೆ ನಾಗಕನ್ಯೆಯಾದ ಕಂಜಾನನೆಯನ್ನು ಲವನಿಗೂ, ಕಂಜಾಕ್ಷಿಯನ್ನು ಅಂಗದನಿಗೂ, ಕಂಜಾಂಘ್ರಿಯನ್ನು ಚಿತ್ರಕೇತುವಿಗೂ, ಕಲಾವತಿಯನ್ನು ಪುಷ್ಕರನಿಗೂ, ಕಲಿಕೆಯನ್ನು ತಕ್ಷನಿಗೂ, ಕಮಲೆಯನ್ನು ಸುಬಾಹುವಿಗೂ, ಮಾಲತಿಯನ್ನು ಯೂಪಕೇತುವಿಗೂ, ಗಂಧರ್ವ ಪುತ್ರಿಯಾದ ಚಂದ್ರಿಕೆಯನ್ನು ಅಂಗದನಿಗೂ, ಚಂದ್ರಾಸ್ಯೆಯನ್ನು ಚಿತ್ರಕೇತುವಿಗೂ, ಚಂಚಲೆಯನ್ನು ಪುಷ್ಕರನಿಗೂ, ಚಪಲೆಯನ್ನು ತಕ್ಷನಿಗೂ, ಅಚಲೆಯನ್ನು ಸುಬಾಹುವಿಗೂ ವಿವಾಹಮಾಡುವುದೆಂದು ನಿರ್ಧರಿಸಿದನು. ಕುಶನಿಗೆ ಈ ಮೊದಲೇ ಇಬ್ಬರು ಕನ್ಯೆಯರೊಡನೆ ವಿವಾಹವಾಗಿತ್ತು. ಜೋಯಿಸರು ವೈಶಾಖದಲ್ಲಿ ಎರಡು, ಜ್ಯೇಷ್ಠದಲ್ಲೆರಡು, ಮಾರ್ಗಶೀರ್ಷದಲ್ಲೆರಡು, ಮಾಘದಲ್ಲಿ ಮೂರು, ಫಾಲ್ಗುಣದಲ್ಲಿ ಮೂರು -- ಈ ಮೇರೆಗೆ ವಿವಾಹಗಳನ್ನು ಮಾಡಿದರು (ಆನಂ.ರಾ.).

ಪಂಚಾಪ್ಸರತೀರ್ಥ -- ಒಂದು ಸರೋವರ. ದಂಡಕಾರಣ್ಯದಲ್ಲಿ ತಪಸ್ಸು ಮಾಡುತ್ತಿದ್ದ ಮಾಂಡಿಕರ್ಣಿಯೆಂಬ ಮಹರ್ಷಿಯ ತಪೋಭಂಗಕ್ಕಾಗಿ ಇಂದ್ರನು ಐವರು ಅಪ್ಸರೆಯನ್ನು ಕಳುಹಿಸಿದನು. ಮಹರ್ಷಿಯು ಇವರ ಬೆಡಗಿಗೆ ಮನಸೋತು, ತಪೋಮಹಿಮೆಯಿಂದ ದಿವ್ಯತಾರುಣ್ಯಹೊಂದಿ ಇವರೊಂದಿಗೆ ನೃತ್ಯಗೀತಾದಿಗಳಿಂದ ವಿಹರಿಸುತ್ತಿದ್ದನು. ಶ್ರೀರಾಮನು ಅಗಸ್ತ್ಯಾಶ್ರಮದ ಮಾರ್ಗದಲ್ಲಿ ಸಂಗೀತವನ್ನು ಕೇಳಿ ಇದರ ಕಾರಣವನ್ನು ಒಬ್ಬ ಮುನಿಯಿಂದ ತಿಳಿದನು. ನೋ.--ಧರ್ಮವ್ರತ (ರಾಮಾ.ಅರಣ್ಯ)

ಪಂಚಾಲಾ (ಪಾಂಚಾಲ) -- ಇಂದ್ರಪ್ರಸ್ಥದ ಪೂರ್ವದಲ್ಲಿದ್ದ ದೇಶ. ಇದರಲ್ಲಿ ಉತ್ತರ ಪಾಂಚಾಲ ಮತ್ತು ದಕ್ಷಿಣ ಪಾಂಚಾಲಗಳೆಂದು ಎರಡು ವಿಧಗಳಿವೆ. ಉತ್ತರ ಪಾಂಚಾಲಕ್ಕೆ ಅಹಿಚ್ಛತ್ರ ರಾಜಧಾನಿ. ದ್ರುಪದನಿಂದ ದ್ರೋಣನು ಈ ಪ್ರದೇಶವನ್ನು ಕಿತ್ತುಕೊಂಡನು. ದಕ್ಷಿಣ ಪಾಂಚಾಲವು ದ್ರುಪದನದ್ದು. ಇವರ ರಾಜಧಾನಿ ಕಾಂಪಿಲ್ಯ, ಇವರೆಡನ್ನೂ ಈಗ ರೋಹಿಲ ಖಂಡವೆನ್ನುತ್ತಾರೆ.

ಪಂಚೇಂದ್ರೋಪಾಖ್ಯಾನ -- ಇದು ಐವರು ಇಂದ್ರರ ಕಥೆ. ನೈಮಿಷಾರಣ್ಯದಲ್ಲಿ ದೇವತೆಗಳು ಸತ್ರಯಾಗಕ್ಕೆ ತೊಡಗಿದರು. ಇದರಲ್ಲಿ ಪಶುಹಿಂಸೆಯ ಕೆಲಸ ಯಮನದಾಗಿತ್ತು. ಈ ಕೆಲಸದಲ್ಲಿಯೇ ಅವನು ತತ್ಪರನಾದುದರಿಂದ ಭೂಲೋಕದಲ್ಲಿ ಮನುಷ್ಯರಿಗೆ ಮರಣವಿಲ್ಲದೆ ಹೋಯಿತು. ದೇವತೆಗಳು ಇದರಿಂದ ತಮಗೂ ಮನುಷ್ಯರಿಗೂ ವ್ಯತ್ಯಾಸ ಇಲ್ಲವೆಂದು ಮತ್ಸರವುಳ್ಳವರಾದರು. ಒಂದು ದಿನ ಇಂದ್ರನು ಗಂಗಾನದಿಯಲ್ಲಿ ತೇಲಿ ಬರುವ ಸುವರ್ಣಕಮಲವನ್ನು ಕಂಡು ಅದು ಎಲ್ಲಿಂದ ಬಂತೆಂದು ತಿಳಿಯಲು ಗಂಗಾಮೂಲದ ಕಡೆಗೆ ಹೊರಟನು. ಗಂಗಾಮೂಲದಲ್ಲಿ ಅಳುತ್ತಿದ್ದ ಸುಂದರಿಯೊಬ್ಬಳನ್ನು ಕಂಡು, ಆವಳಾರೆಂದು ಇಂದ್ರನು ಕೇಳಲು, ಆಕೆಯು ಅವನನ್ನು ಒಂದು ಪರ್ವತಶಿಖರಕ್ಕೊಯ್ದಳು. ಅಲ್ಲಿ ಶಿವನು ತರುಣನ ವೇಷದಿಂದ ಪಾರ್ವತಿಯೊಂದಿಗೆ ಚದುರಂಗವಾಡುತ್ತಿದ್ದನು. ಅವನು ಇಂದ್ರನನ್ನು ಲಕ್ಷ್ಯಮಾಡದುದರಿಂದ, ಇಂದ್ರನು ಈ ತರುಣನು ತನ್ನನ್ನು ಅಪಮಾನ ಮಾಡಿದನೆಂದು ಕೆರಳಿದನು. ಶಿವನು ಇದನ್ನು ತಿಳಿದು ಆತನನ್ನು ಓರೆನೋಟದಿಂದ ಕಂಡೊಡನೆ ಇಂದ್ರನು ಎಚ್ಚರತಪ್ಪಿದನು. ಶಿವನು ಆತನನ್ನು ಕರೆದುಕೊಂಡು ಬಂದಿದ್ದ ಸ್ತ್ರೀಯೊಡನೆ ಇಂದ್ರನನ್ನು ಆ ಪರ್ವತದ ಶಿಖರಕ್ಕೊಯ್ಯಲು ಅಪ್ಪಣೆ ಮಾಡಿದನು. ಅಲ್ಲಿ ಇವನಂತಹ ನಾಲ್ಕು ಮಂದಿ ಇಂದ್ರರಿದ್ದರು. ಶಿವನು ಇವನನ್ನೂ ಅವರೊಂದಿಗೇ ಅಲ್ಲಿದ್ದ ಒಂದು ಗುಹೆಯಲ್ಲಿ ಸೆರೆಯಲ್ಲಿಡಲು ಹೇಳಲು ಇಂದ್ರನು ಶಿವನೊಡನೆ ಕ್ಷಮೆಯನ್ನು ಪ್ರಾರ್ಥಿಸಿದನು. ಆಗ ಶಿವನು ಆ ಐವರಿಗೂ ಭೂಮಿಯಲ್ಲಿ ಜನಿಸುವಂತೆ ಅಪ್ಪಣೆಮಾಡಿದನು. ಇಂದ್ರನನ್ನು ಕರೆದು ತಂದ ಸ್ತ್ರೀಗೆ ಆ ಐವರ ಪತ್ನಿಯಾಗುವಂತೆ ಹೇಳಿದನು. ಆಗ ವಿಶ್ವಭುಕ್, ಭೂತಧಾಮ, ಶಿಬಿ, ಶಾಂತಿ, ತೇಜಸ್ವಿ -- ಎಂಬ ಹೆಸರಿನ ಐವರು ಇಂದ್ರರು ಐವರು ಪಾಂಡವರಾಗಿ ಹುಟ್ಟಿದರು. ಆ ಸ್ತ್ರೀಯು ದ್ರೌಪದಿಯಾದಳು. ಶಿವನು ಆಗ ಬಿಸುಟ ಬಿಳಿ ಮತ್ತು ಕರಿ ಕೂದಲುಗಳಿಂದ ಬಲರಾಮ ಮತ್ತು ಕೃಷ್ಣರು ಜನಿಸಿದರು (ಮ.ಆ., ಮಾರ್ಕಂ.ಪು.). ನೋ. ನಾರಾಯಣಿ.

ಪಟಚ್ಚರ -- ಚೋರದೇಶ.

ಪಂಡರಪುರ -- ದಕ್ಷಿಣ ಹಿಂದುಸ್ಥಾನದ ಪ್ರಸಿದ್ಧ ಕ್ಷೇತ್ರ. ಮಿರಜದಿಂದ ಪಂಡರಪುರಕ್ಕೆ ಎಂಬತ್ತೈದು ಮೈಲುಗಳಿವೆ. ಈ ಕ್ಷೇತ್ರವನ್ನು ಭೂವೈಕುಂಠವೆನ್ನುತ್ತಾರೆ. ಇಲ್ಲಿ ಆಷಾಢ ಮತ್ತು ಕಾರ್ತಿಕ ಶುದ್ಧ ಏಕಾದಶಿಗೆ ದೊಡ್ಡ ಉತ್ಸವವಿದೆ. ಈ ಕ್ಷೇತ್ರದಲ್ಲಿ ಭಕ್ತ ಪುಂಡಲೀಕನು ಪ್ರತಿಷ್ಠಿತನಾಗಿರುವನು. ಇದು ತುಕರಾಮ, ನಾಮದೇವ, ರಾಕ, ನರಹರಿ,

ಜ್ಞಾನದೇವ, ಕಾನೋಪಾತ್ರ ಮೊದಲಾದ ಭಕ್ತರಿಗೆ ಸಾಕ್ಷಾತ್ಕಾರವಾದ ಕ್ಷೇತ್ರ. ಇಲ್ಲಿ ಚಂದ್ರಭಾಗಾ ನದಿಯ ದಂಡೆಯ ಮೇಲೆ ಭಕ್ತ ಪುಂಡಲೀಕನ ಮೂರ್ತಿ ಇದೆ. ಇವನು ಮಾತಾಪಿತೃಗಳ ಸೇವೆಮಾಡುತ್ತಿದ್ದಾಗ ಶ್ರೀಕೃಷ್ಣನು ಬರಲು ಪುಂಡಲೀಕನು ಒಂದು ಇಟ್ಟಿಗೆಯನ್ನು ಚೆಲ್ಲಿ ಅದರ ಮೇಲೆ ನಿಲ್ಲಲು ಹೇಳಿದರು. ಶ್ರೀಕೃಷ್ಣನು ಒಪ್ಪಿಕೊಂಡು ಈಗಲೂ ಅಲ್ಲೇ ಇಟ್ಟಿಗೆಯ ಮೇಲೆ ನಿಂತಿರುವನು. ಕ್ಷೇತ್ರದಲ್ಲಿ ಜಾತಿ ಭೇದವನ್ನು ನೋಡದೆ ಪಾಂಡುರಂಗನ ಪಾದಗಳ ಮೇಲೆ ಮಸ್ತಕವನ್ನಿಡುವ ಭಾಗ್ಯವು ಸರ್ವರಿಗೂ ದೊರೆಯುತ್ತಿದೆ. ಇದರ ಹಿಂಬದಿಯಲ್ಲಿ ಶ್ರೀರುಕುಮಾಯಿಯ (ರುಕ್ಮಿಣಿ) ಮಂದಿರವಿದೆ. ವಿಟ್ಠಲನ ಮಂದಿರದ ಪ್ರವೇಶದ್ವಾರದಲ್ಲಿ ಚೋಖಾಮೇಳನೆಂಬ ಭಕ್ತನ ಸಮಾಧಿಯಿದೆ. ಮಂದಿರದ ಒಳಗೆ ಕಾಮೋಪಾತ್ರೆಯೆಂಬ ವೇಶ್ಯೆಯು ಅದೃಶ್ಯವಾದ ಸ್ಥಳದಲ್ಲಿ ಆಕೆಯ ಪ್ರತಿಮೆಯಿದೆ. ಪಂಡರಪುರದಲ್ಲಿ ಕೋದಂಡರಾಮ ಮಂದಿರವೇ ಮೊದಲಾದ ಹಲವು ಮಂದಿರಗಳಿವೆ (ಕ್ಷೇತ್ರದ).

ಪಂಡಿತ -- ಧೃತರಾಷ್ಟ್ರನ ಮಗ; ಭೀಮಸೇನನಿಂದ ಹತನಾದ (ಮ.ಭೀ.)

ಪಂಡಿತಕ -- ಧೃತರಾಷ್ಟ್ರನ ಮಗ (ಮ.ಆ.).

ಪತನ -- ರಾಕ್ಷಸನೊಬ್ಬ.

ಪಥಿಕೃತ್ -- ಪ್ರಾಯಶ್ಚಿತಾಗ್ನಿ ವಿಶೇಷ.

ಪದ್ಮ -- ೧. ಧಾರ್ಮಿಕ ಬುದ್ಧಿಯ ಒಂದು ಸರ್ಪ. ಇದಕ್ಕೆ ಪದ್ಮನಾಭವೆಂಬ ಹೆಸರೂ ಇದೆ. ಈತನು ಆತ್ಮ ವಿದ್ಯಾಸಂಪನ್ನನಾಗಿದ್ದ. ನೋ--ಪದ್ಮನಾಭ (ಮ.ಸ., ಶಾಂ.) ೨. ಕುಬೇರನ ನವನಿಧಿಗಳಲ್ಲೊಂದು; ಸೇವಿಸಲ್ಪಡುವ ವಸ್ತು.

ಪದ್ಮಕೂಟ -- ಶ್ರೀಕೃಷ್ಣನ ಪತ್ನಿಯಾದ ಸುಪ್ರಭೆಯೆಂಬುವಳ ಅರಮನೆ.

ಪದ್ಮಕೇತನ -- ಗರುಡನ ಮಗ (ಮ.ಉ)

ಪದ್ಮನಾಭ -- ೧. ನೋ--ಪದ್ಮ. ಈತನು ಧೃತರಾಷ್ಟ್ರನೆಂಬ ಸರ್ಪರಾಜನ ಮಗ. ಇವನು ಮಹಾಪದ್ಮಪುರನಿವಾಸಿಯಾಗಿದ್ದ ಧರ್ಮಾರಣ್ಯನೆಂಬ ಮಹರ್ಷಿಗೆ ಆಧ್ಯಾತ್ಮವಿದ್ಯೆಯನ್ನು ತಿಳಿಸಿದನು (ಮ.ಶಾಂ) ೨. ಧೃತರಾಷ್ಟ್ರಪುತ್ರ (ಮ.ಆ.) ೩.ಮಹಾವಿಷ್ಣು. ಕಮಲವು ನಾಭಿಯಲ್ಲಿ ಉಳ್ಳವನು.

ಪದ್ಮವ್ಯೂಹ -- ದ್ರೋಣನು ಕೌರವರಸೇನೆಯನ್ನು ನಿಲ್ಲಿಸಿದ ಒಂದು ಕ್ರಮ. ಇದಕ್ಕೆ ಚಕ್ರವ್ಯೂಹವೆಂದು ಹೇಳುತ್ತಾರೆ. ಇದನ್ನು ಅಭಿಮನ್ಯುವು ಭೇದಿಸಿ ಮರಣಪಟ್ಟನು. ಈ ವ್ಯೂಹಭೇದನಶಕ್ತಿಯು ಪಾಂಡವಸೇನೆಯಲ್ಲಿ

ಅಭಿಮನ್ಯುವಿಗೂ ಕೃಷ್ಣಾರ್ಜುನರಿಗೂ ಮತ್ತು ಪ್ರದ್ಯುಮ್ನನಿಗೂ ಮಾತ್ರ ಇತ್ತು. ಬಲರಾಮನಿಗೂ ಈ ತಿಳಿವು ಇತ್ತೆನ್ನುತ್ತಾರೆ (ಮ.ದ್ರೋ)

ಪದ್ಮಾಕರ -- ವೈಶ್ಯನೊಬ್ಬ. ವಜ್ರಬಾಹು ಮಹಾರಾಜನ ಪಟ್ಟದ ರಾಣಿಯನ್ನು ಆಕೆಯ ಸವತಿಯರ ಕಾಟದಿಂದ ರಾಜನು ಬಿಡಲು, ಆಕೆ ಮತ್ತು ಆಕೆಯ ಮಗುವನ್ನು ಈ ವೈಶ್ಯನು ತನ್ನ ಆಶ್ರಯದಲ್ಲಿಟ್ಟುಕೊಂಡು ರಕ್ಷಿಸುತ್ತಿದ್ದ. ಈ ಮಗುವೇ ಮುಂದೆ ಭದ್ರಾಯುವೆಂಬ ರಾಜಕುಮಾರನಾದನು. ನೋ. -- ಮಂದರ.

ಪದ್ಮಾವತಿ - ೧. ಪುತ್ರಕಾಮೇಷ್ಟಿ ಮಾಡಿದ ಆಕಾಶರಾಜನಿಗೆ ಈಕೆ ಭೂಮಿಯಲ್ಲಿ ದೊರೆತ ಮಗಳು. ಈಕೆ ತಿರುಪತಿ ಶ್ರೀನಿವಾಸನನ್ನು ಮದುವೆಯಾದಳು (ಸ್ಕಾಂ.ಪು.,ವೆಂ.ಮ.) ೨. ಶೃಗಾಲ ವಾಸುದೇವನ ಪತ್ನಿ; ಈಕೆಯ ಮಗ ಶುಕ್ರದೇವ. ಶೃಗಾಲ ವಾಸುದೇವನ ಮರಣಾನಂತರ ಶ್ರೀಕೃಷ್ಣನು ಆತನ ಮಗನಾದ ಶುಕ್ರದೇವನಿಗೆ ಕರವೀರಪುರದಲ್ಲೇ ಪಟ್ಟಾಭಿಷೇಕವನ್ನು ಮಾಡಿದನು. ೩. ಕಲ್ಕಿಯ ಹೆಂಡತಿ. ಈಕೆ ಶಿವಭಕ್ತೆ. ಶಿವನು ಈಕೆಗೆ ಸಂತುಷ್ಟನಾಗಿ 'ನಿನಗೆ ವಿಷ್ಣುವೇ ಪತಿಯಾಗುವನು. ನಿನ್ನನ್ನು ಕಾಮದೃಷ್ಟಿಯಿಂದ ಕಂಡವನು ಸ್ತ್ರೀಯಾಗುವನು' ಎಂದು ವರವಿತ್ತನು. ಪದ್ಮಾವತಿಯ ಸ್ವಯಂವರ ಮಂಟಪಕ್ಕೆ ಬಂದ ಪುರುಷರು ಆಕೆಯನ್ನು ನೋಡಿ ಮೋಹಿಸಲು ಎಲ್ಲರೂ ಸ್ತ್ರೀಯರಾದರು. ಮುಂದೆ ಕಲ್ಕಿಯು ತನ್ನ ಗಿಳಿಯಿಂದ ಪದ್ಮಾವತಿಯ ವಿಚಾರ ತಿಳಿದು ಸಿಂಹಳಕ್ಕೆ ಹೋಗಿ ಆಕೆಯನ್ನು ವಿವಾಹವಾದನು. ಆಗ ಸ್ತ್ರೀಯರಾಗಿದ್ದ ರಾಜರೆಲ್ಲ ಕಲ್ಕಿಯ ಮರೆಹೊಕ್ಕು, ಆತನ ಅಪ್ಪಣೆಯಂತೆ ನರ್ಮದಾ ನದಿಯಲ್ಲಿ ಮಿಂದು ಪುರುಷರಾದರು.

ಪದ್ಮಾಕ್ಷ -- ೧. ಚಂದ್ರಹಾಸ ಮತ್ತು ಚಂಪಕಮಾಲಿನಿಯರ ಮಗ. ನೋ-- ಚಂದ್ರಹಾಸ (ಜೈ.ಭಾ.) ೨. ಇವನೊಬ್ಬ ರಾಜ. ಇವನು ಲಕ್ಷ್ಮಿಯನ್ನು ಕುರಿತು ತಪಸ್ಸು ಮಾಡಿ ಆಕೆಯು ತನ್ನ ಮಗಳಾಗಬೇಕೆಂದು ಕೇಳಲು, ಅವಳು 'ನಾರಾಯಣನ ಒಪ್ಪಿಗೆ ಪಡೆ' ಎಂದು ಅದೃಶ್ಯಳಾದಳು. ಪದ್ಮಾಕ್ಷನು ನಾರಾಯಣನ ಕುರಿತು ತಪಸ್ಸು ಮಾಡಲು, ಅವನು ಪ್ರತ್ಯಕ್ಷನಾಗಿ ರಾಜನಿಗೆ ಅವನ ಬಯಕೆ ಈಡೇರಲು ಒಂದು ಮಾದಳದ ಫಲ ಕೊಟ್ಟು ಅದೃಶ್ಯನಾದನು. ಆ ಹಣ್ಣಿನ ಒಳಗೆ ಒಂದು ಹೆಣ್ಣು ಶಿಶು ಇತ್ತು. ಅದನ್ನು ಪದ್ಮಾಕ್ಷನು ಪ್ರೀತಿಯಿಂದ ಸಾಕಿಕೊಂಡಿದ್ದನು. ಆಕೆಯ ವಿವಾಹ ಕಾಲದಲ್ಲಿ 'ನೀಲಮೇಘಶ್ಯಾಮನಾದ ರಾಜನಿಗೆ ನನ್ನ ಮಗಳನ್ನು ಮದುವೆಮಾಡಿಕೊಡುತ್ತೇನೆಂದು' ಸಾರಿದನು. ಆದರೆ ಯಾವ ರಾಜರಿಗೂ ಆ ಬಣ್ಣವಿಲ್ಲದುದರಿಂದ ರಾಜಕುಮಾರಿಯು ಯಾರ ಕೈಗೂ ಸೇರುವ

ಸಂಭವವಿಲ್ಲವೆಂದು ತಿಳಿದೊಡನೆ ರಾಜರೆಲ್ಲ ಪದ್ಮಾಕ್ಷನೊಡನೆ ಯುದ್ಧಕ್ಕೆ ತೊಡಗಿ ಅವನ ನಗರ ಮತ್ತು ಅವನನ್ನು -- ಆತನ ಸೈನ್ಯವನ್ನು ನಾಶಮಾಡಿಬಿಟ್ಟರು. ರಾಜಕುಮಾರಿಯು ಯಜ್ಞಕುಂಡದಲ್ಲಿ ಅದೃಶ್ಯಳಾದಳು. ನೋ.ಸೀತೆ (ಆನಂ.ರಾ.)

೩. ಕೌಶಿಕನೆಂಬ ವಿಷ್ಣುಭಕ್ತ ಬ್ರಾಹ್ಮಣನ ಸ್ನೇಹಿತ. ಇವನು ಭಿಕ್ಷಾನ್ನದ ಬದಲು ತನ್ನ ಕೈಯನ್ನವನ್ನು ಕೌಶಿಕನಿಗೆ ತಂದುಕೊಡುತ್ತಿದ್ದನು. ಇವನ ಸ್ನೇಹಿತನಾದ ಮಾಲವನು ಆ ವಿಷ್ಣುದೇವಾಲಯದ ತೂಗುದೀವಿಗೆಯನ್ನು ಹೊತ್ತಿಸುತ್ತಲೂ, ಅವನ ಪತ್ನಿ ಮಾಲವಿಯು ಆ ದೇವಾಲಯದ ಸುತ್ತಲೂ ರಂಗೋಲೆ ಹಾಕಿ ದೇವರ ಸೇವೆ ನಡೆಸುತ್ತಿದ್ದಳು. ಇವರೆಲ್ಲ ಮುಂದೆ ಪುಣ್ಯದ ಬಲದಿಂದ ಸತ್ಯಲೋಕವನ್ನು ಸೇರಿದರು. ಮುಂದೆ ಪದ್ಮಾಕ್ಷನು ಸಂಪತ್ತಿಗೊಡೆಯನಾದ ಕುಬೇರನಾದನು (ಅದ್ಭು.ರಾಮಾ)

ಪನಸ -- ಸುಗ್ರೀವನ ಕಪಿಸೇನಾ ನಾಯಕನೊಬ್ಬ (ರಾಮಾ.ಕಿಷ್ಕಿಂ)

ಪಂಪಾ (ಹಂಪೆ) -- ೧. ಒಂದು ನದಿ. ಇದು ಪಂಪಾಸರೋವರದಲ್ಲಿ ಹುಟ್ಟಿ ಹರಿದು ತುಂಗಭದ್ರಾ ನದಿಯನ್ನು ಸೇರುವ ಒಂದು ನದಿ. ಇದು ಬಳ್ಳಾರಿಯ ಆನೆಗೊಂದಿ ಪರ್ವತದಿಂದ ೮ ಮೈಲು ದೂರದಲ್ಲಿರುವ ಋಷ್ಯಮೂಕ ಪರ್ವತದಲ್ಲಿ ಹುಟ್ಟುತ್ತದೆ. ಇಲ್ಲಿಗೆ ಶ್ರೀರಾಮಲಕ್ಷ್ಮಣರು ಬಂದಿದ್ದರು. ಈ ಪ್ರದೇಶದಲ್ಲೆ ಹನುಮಂತನು ಶ್ರೀರಾಮನ ಸಂದರ್ಶನವನ್ನು ಪ್ರಥಮ ಮಾಡಿದನು (ಕ್ಷೇತ್ರದ). ೨. ಬಳ್ಳಾರಿಯ ಹೊಸಪೇಟೆಯಿಂದ ಹಂಪೆಗೆ ೯ ಮೈಲು ದೂರವಿದೆ. ಇದು ರಾಮಾಯಣಕಾಲದ ಕಿಷ್ಕಿಂಧೆ. ಆ ಕಾಲದಲ್ಲಿ ಇದು ವಾಲಿಸುಗ್ರೀವರ ರಾಜಧಾನಿಯಾಗಿತ್ತು. ಹಂಪೆಯಲ್ಲಿ ಭವ್ಯವಾದ ವಿರೂಪಾಕ್ಷ ದೇವಾಲಯವಿದೆ. ಇದು ಪ್ರಸಿದ್ಧವಾದ ಶಿವಕ್ಷೇತ್ರ. ಇಲ್ಲಿ ಕೃಷ್ಣಸ್ವಾಮಿಯ ದೇವಾಲಯ, ವಿಜಯವಿಟ್ಠಲನ ದೇವಾಲಯ, ಕೋದಂಡರಾಮನ ಗುಡಿ ಮೊದಲಾದ ಹಲವು ದೇವಾಲಯಗಳಿವೆ. ವಿರೂಪಾಕ್ಷ ಗುಡಿಯಿಂದ ನೆಟ್ಟಗೆ ಹೋದರೆ ಋಷ್ಯಮೂಕಪರ್ವತವು ಸಿಕ್ಕುತ್ತದೆ. ಇದರ ಶಿಖರದ ಮೇಲೆ ಮತಂಗ ಋಷಿಯ ಆಶ್ರಮವಿತ್ತು. ಹರಿಗೋಲಿನಿಂದ ತುಂಗಭದ್ರಾನದಿಯನ್ನು ದಾಟಿ ಆಚೆ ದಡಕ್ಕೆ ಹೋದರೆ ಆನೆಗೊಂದಿಯೆಂಬ ಐತಿಹಾಸಿಕ ಪಟ್ಟಣವಿದೆ. ತುಂಗಭದ್ರೆಯ ಎರಡು ಸೀಳುಗಳ ನಡುವೆ -- ಇಲ್ಲಿ ಒಂಬತ್ತು ವೈಷ್ಣವ ಸನ್ಯಾಸಿಗಳ ವೃಂದಾನವಿದೆ. ಇದರ ಸಮೀಪದಲ್ಲೇ ಶಬರಿಯ ಆಶ್ರಮವುಂಟು. ಪಂಪಾಸರೋವರದ ಸುತ್ತಲೂ ಪರ್ವತಗಳಿದ್ದು ಉತ್ತರಕ್ಕೆ ಅಂಜನಾಪರ್ವತವಿದೆ. ಈ ಪರ್ವತದ ಒಂದು ಗುಹೆಯಲ್ಲೇ ಅಂಜನಾದೇವಿ ಇದ್ದಳು. ಅಲ್ಲಿ ಈಗ ಹನುಮಂತನ ಹಾಗೂ ಅಂಜನಾದೇವಿಯ ವಿಗ್ರಹಗಳಿವೆ.

ಪನಾನರಸಿಂಹ -- ಹುಬ್ಬಳ್ಳಿ - ಗುಂತಕಲ್ಲು ಬೆಜವಾಡ ರೈಲು ಮಾರ್ಗದಲ್ಲಿ ಮಂಗಲಗಿರಿ ನಿಲ್ದಾಣವಿದೆ. ಇಲ್ಲಿಂದ ಅರ್ಧಮೈಲು ದೂರದಲ್ಲಿ ಪನಾನರಸಿಂಹ ಮಂದಿರವಿದೆ. ಪನಾನರಸಿಂಹವೆಂದರೆ ಪಾನಕ ಕುಡಿಯುವ ನರಸಿಂಹವೆಂದರ್ಥ. ಎಷ್ಟೇ ಪಾನಕವನ್ನು ಈ ಮೂರ್ತಿಯ ಬಾಯಿಗೆ ಹೊಯ್ದರೂ ಅರ್ಧಾಂಶ ಮಾತ್ರ ಪ್ರಸಾದರೂಪದಿಂದ ಹೊರಗೆ ಬರುತ್ತದೆ. ಉಳಿದರ್ಧ 'ಗಟಗಟ' ಎಂಬ ಶಬ್ದದೊಡನೆ ಒಳಗೆ ಹೋಗುತ್ತದೆ.

ಪಯೋಷ್ಣಿ -- ಒಂದು ನದಿ. ಬೀರಾರಿನಲ್ಲಿ ಹರಿಯುವ ತಪತಿ ನದಿಯ ಒಂದು ಶಾಖೆ. ಇದಕ್ಕೆ ಪೂರ್ಣಾನದಿಯೆಂಬ ಹೆಸರುಂಟು. ಇದರ ದಡದಲ್ಲೇ ಗಯರಾಜನು ಯಜ್ಞಮಾಡಿದನು. ತೀರ್ಥಯಾತ್ರೆಯ ಕಾಲದಲ್ಲಿ ಇಲ್ಲಿಗೆ ಮುನಿಗಳೊಡನೆ ಪಾಂಡವರೂ ಬಂದಿದ್ದರು (ಮ.ವ.)

ಪರಪುರಂಜಯ -- ನೋ--ತಾರ್ಕ್ಷ್ಯ. ಹೈಹಯ ವಂಶದ ರಾಜ. ಈತನು ಒಮ್ಮೆ ಬೇಟೆಗೆ ಹೋದಾಗ ಜಿಂಕೆ ಎಂಬ ಭ್ರಾಂತಿಯಿಂದ ಒಬ್ಬ ಮುನಿಕುಮಾರನನ್ನು ಕೊಂದನು. ಮುಂದೆ ಈತನು ತಾರ್ಕ್ಷ್ಯ ಮುನಿಯ ಮಗನೆಂದು ತಿಳಿದು ಅವನೊಡನೆ ಕ್ಷಮೆ ಕೇಳಿದನು. ತಾರ್ಕ್ಷ್ಯನು ತನ್ನ ಮಗನ ಹೆಸರನ್ನು ಹಿಡಿದು ಕರೆಯಲು ಇಚ್ಛಾಮರಣೆಯಾದ ಆತನು ಎದ್ದು ಬಂದನು. ಮುನಿಯು ರಾಜನಿಗೆ ತಪಶ್ಯಕ್ತಿಯಿಂದ ಸರ್ವವೂ ಸಾಧ್ಯವೆಂದು ವಿವರಿಸಿದನು (ಮ.ವ)

ಪರಶುರಾಮ -- ವಿಷ್ಣುವಿನ ಅವತಾರ; ಮಹರ್ಷಿ. ಭೃಗುವಂಶದವ; ಜಮದಗ್ನಿ ಮುನಿಯ ಪುತ್ರ; ಈತನ ತಾಯಿ ಪ್ರಸೇನಜಿತ್ ಎಂಬ ರಾಜನ ಮಗಳಾದ ರೇಣುಕೆ. ರುಮಣ್ವಂತ, ಸುಷೇಣ, ವಸು ಮತ್ತು ವಿಶ್ವಾವಸು ಎಂಬ ನಾಲ್ವರು ಈತನ ಸೋದರರು. ಈತನು ಇಪ್ಪತ್ತೊಂದು ಸಾರಿ ಭೂಮಿಯನ್ನು ಸುತ್ತಿ ಕ್ಷತ್ರಿಯರನ್ನು ನಾಶಮಾಡಿದನು. ಶ್ರೀರಾಮನಿಂದ ಈತನ ಗರ್ವಭಂಗವಾಯಿತು. ಈತನು ತನ್ನ ತಂದೆಯ ಅಪ್ಪಣೆಯಂತೆ ತಾಯಿಯ ಶಿರಚ್ಛೇದ ಮಾಡಿದ. ಶ್ರೀರಾಮನು ವಿವಾಹವಾಗಿ ಬರುವಾಗ ಈತನ ಗರ್ವಭಂಗ ಮಾಡಿದ. ನೋ.ರೇಣುಕೆ, ಜಮದಗ್ನಿ. ಅಂಬೆಗಾಗಿ ಭೀಷ್ಮನೊಡನೆ ಯುದ್ಧಮಾಡಿ ಪರಾಜಿತನಾದ. ನೋ.-ಅಂಬೆ, ಭೀಷ್ಮ. ದ್ರೋಣನು ಈತನಲ್ಲೇ ಅಭ್ಯಾಸ ಮಾಡಿದ. ಕರ್ಣನು ಇವನಲ್ಲಿ ಅಸ್ತ್ರವಿದ್ಯಾಭ್ಯಾಸ ಮಾಡಿ ಶಾಪ ಹೊಂದಿದ. ನೋ. ಕರ್ಣ. ಕಾರ್ತವೀರ್‍ಯಾರ್ಜುನನ ಬಾಹುಚ್ಛೇದ ಮಾಡಿ ಅವನನ್ನು ಕೊಂದನು. ನೋ. ಕಾರ್ತವೀರ್‍ಯಾರ್ಜುನ. ಈತನು ಅಶ್ವಮೇಧಯಾಗ ಮಾಡಿ ಕಶ್ಯಪನಿಗೆ ಸಮಸ್ತ ಭೂಮಿಯನ್ನು ದಾನವನ್ನಾಗಿ ಕೊಟ್ಟ. ಮುಂದೆ ಸಾವರ್ಣಿ ಮನ್ವಂತರದಲ್ಲಿ ಪರಶುರಾಮನು ಸಪ್ತರ್ಷಿಗಳಲ್ಲೊಬ್ಬನಾಗುವನು. ಮಹೇಂದ್ರ ಪರ್ವತದಲ್ಲಿ ಈಗಲೂ ಈತನು ತಪಸ್ಸುಮಾಡುತ್ತಿದ್ದಾನೆ.

ಪಶ್ಚಿಮಕರಾವಳಿಯ ಹೆಚ್ಚಿನಂಶವನ್ನು ಈತನು ಸಮುದ್ರನಿಂದ ಪಡೆದ. ಇದನ್ನೇ ಈಗ ಪರಶುರಾಮ ಕ್ಷೇತ್ರವೆನ್ನುತ್ತಾರೆ. ಈತನಿಗೆ ಶಿವನು ಪರಶುವನ್ನು ಕೊಟ್ಟನು (ಮ.ಶಾಂ.). ದೇವಿಯು ದಿವ್ಯಾಸ್ತ್ರಗಳನ್ನು ದಯಪಾಲಿಸಿದಳು. ನೋ. ಕಶ್ಯಪ (ಹರಿ, ಮ.ಆ., ಸ., ವ., ಉ., ಶ., ದೇವೀಭಾ, ಮತ್ಸ್ಯಪು, ಭಾಗ., ಪದ್ಮಪು, ಬ್ರಹ್ಮಪು., ವಾಯುಪು., ಮ.ಅಶ್ವ, ಅನು, ದ್ರೋ., ರಾಮಾ.ಬಾಲ)

ಪರಶುರಾಮಾಸ್ತ್ರ -- ಭಾರತಯುದ್ಧದ ಹದಿನೇಳನೇ ದಿನ ಕರ್ಣನು ಅರ್ಜುನನ ಮೇಲೆ ಈ ಮಹಾಸ್ತ್ರ ಬಿಟ್ಟನು. ಆದರೆ ಅರ್ಜುನನು ಅದರ ಶಕ್ತಿಯನ್ನು ನಾಶಮಾಡಿದನು. (ಮ.ಕ)

ಪರಾತ -- ಮೇಲಿಂದ ಮೇಲೆ ದೇವತೆಗಳಿಗೆ ಮನು ಆಹಾರವನ್ನು ಒದಗಿಸುತ್ತಿದ್ದ ಪಾತ್ರ. ಆ ಪಾತ್ರಗಳು ಆಗ ಒಂದಕ್ಕೊಂದು ತಗಲಿ ಶಬ್ದವಾದರೆ ಆ ಶಬ್ದದಲ್ಲಿ ಮಂತ್ರಗಳ ಸಾಮರ್ಥ್ಯವು ಬರುತ್ತಿತ್ತು. ಈ ಶಬ್ದವು ಅಸುರರ ಕಿವಿಗೆ ಬಿದ್ದೊಡನೆ ಅವರು ಅಲ್ಲೇ ಬಿದ್ದು ಸಾಯುತ್ತಿದ್ದರು. ಇದರಿಂದ ಮುಂದೆ ಯಜ್ಞವು ನಿರ್ವಿಘ್ನವಾಗಿ ಸಾಗದಂತೆ ಅಸುರರು ಮಧ್ಯದಲ್ಲೇ ಕೆಡಿಸಿಬಿಡುತ್ತಿದ್ದರು. ಈ ಪರಾತವನ್ನು ನೋಡಿ ಅಸುರರು ತುಂಬಾ ಭಯಪಟ್ಟಿದ್ದರು. ಆಗ ಅಸುರರಿಗೆ ತ್ರಿಷ್ಟ ಮತ್ತು ವರುತ್ರಿ ಎಂಬ ಮಹಾ ಮೋಸಗಾರರಾದ ಇಬ್ಬರು ಪುರೋಹಿತರಿದ್ದರು. ಅವರಿಬ್ಬರೂ ಮನುವಿನಿಂದ ಆ ಪರಾತಗಳನ್ನು ಕೇಳಿ ಪಡೆದರು. ಇದರಿಂದ ಅಸುರರಿಗೆ ಆನಂದವುಂಟಾಯಿತು (ಋ).

ಪರಾವಸು -- ರೈಭ್ಯ ಋಷಿಯ ಮಗ; ಅರ್ವಾವಸುವಿನ ಸೋದರ; ವಿಶ್ವಾಮಿತ್ರನ ಮೊಮ್ಮಗ. ಈತನ ಭಾರ್ಯೆಯನ್ನು ಭರಧ್ವಾಜನ ಮಗನಾದ ಯವಕ್ರೀತನು ಬಲಾತ್ಕಾರದಿಂದ ಭೋಗಿಸಿದನು. ಇದರಿಂದ ಕೋಪಗೊಂಡ ರೈಭ್ಯನು ಸ್ತ್ರೀ ಮತ್ತು ಪುರುಷಭೂತಗಳನ್ನು ನಿರ್ಮಾಣಮಾಡಿ ಯವಕ್ರೀತನನ್ನು ಕೊಂದನು. ನೋ.ಅರ್ವಾವಸು. ಪರಾವಸುವು ಬೃಹದ್ಯುಮ್ನನ ಸತ್ರಯಾಗಶಾಲೆಯಿಂದ ಅರ್ವಾವಸುವನ್ನು ಹೊರಹಾಕಲು ಯತ್ನಮಾಡಿದನು. ಆದರೆ ಅರ್ವಾವಸುವು ಸೂರ್ಯಾನುಗ್ರಹದಿಂದ ಯಾಗಶಾಲೆಯಲ್ಲಿ ಋತ್ವಿಕ್ಕಾದನು (ಮ.ವ., ಶಾಂ., ಬ್ರಹ್ಮಪು)

ಪರಾಶರ -- ೧. ಶಕ್ತಿಮಹರ್ಷಿಯ ಮಗ; ವಸಿಷ್ಠನ ಮೊಮ್ಮಗ. ಈತನ ತಾಯಿ ಅದೃಶ್ಯಂತಿ. ಈತನಿಂದ ಸತ್ಯವತಿಯಲ್ಲಿ ವ್ಯಾಸ ಮಹರ್ಷಿಯು ಜನಿಸಿದನು. ನೋ.ಸತ್ಯವತಿ. ತನ್ನ ತಂದೆಯಾದ ಶಕ್ತಿಯನ್ನು ರಾಕ್ಷಸನೊಬ್ಬನು ಕೊಲ್ಲಲು ಈತನು ಲೋಕ ನಾಶಕ್ಕೇ ಯಜ್ಞಮಾಡತೊಡಗಿದನು. ಕೊನೆಗೆ ವಸಿಷ್ಠನ

ಮಾತಿನಂತೆ ಆ ಕಾರ್ಯವನ್ನು ಬಿಟ್ಟನು (ವಿಷ್ಣುಪು, ಲಿಂಗಪು.). ಜನಕ ಮತ್ತು ಪರಾಶರರ ಸಂವಾದವನ್ನೇ ಪರಾಶರ ಗೀತೆಯೆನ್ನುತ್ತಾರೆ. ನೋ.--ಕಲ್ಮಾಷಪಾದ.

ವಸಿಷ್ಠನು ಮಗನ ನಾಶದಿಂದ ದೇಹತ್ಯಾಗ ಮಾಡಲು ಸಮುದ್ರಕ್ಕೆ ಹಾರಿದರೂ ಆ ಬ್ರಹ್ಮರ್ಷಿಯ ನಾಶಕ್ಕೆ ಸಮುದ್ರದಲ್ಲಿ ನೀರು ಕಡಿಮೆಯಾಯಿತು. ಮುಂದೆ ಸೊಸೆಯಾದ ಅದೃಶ್ಯಂತಿಯು ನಡೆಯುವಾಗ ಆಕೆಯ ಹೊಟ್ಟೆಯಲ್ಲಿದ್ದ ಮಗುವು ವೇದಾಧ್ಯಯನ ಮಾಡುತ್ತಿದ್ದುದನ್ನು ಕೇಳಿ, ವಂಶವುಳಿಯಿತೆಂದು ವಸಿಷ್ಠನು ಶಾಂತನಾದನು. ಈ ಬಾಲಕನೇ ಪರಾಶರ. ಈ ಪರಾಶರನು ಯಮುನಾನದಿಯನ್ನು ದಾಟುವಾಗ ಮತ್ಸ್ಯಗಂಧಿನಿಯನ್ನು (ಕಾಳಿ, ಸತ್ಯವತಿ, ಯೋಜನಗಂಧಿ) ಒಂದು ದ್ವೀಪದಲ್ಲಿ ಕತ್ತಲನ್ನುಂಟುಮಾಡಿ ಕೂಡಲು ಕೂಡಲೇ ಆಕೆ ಗರ್ಭಿಣಿಯಾಗಿ ವೇದವ್ಯಾಸನೆಂಬ (ಕೃಷ್ಣದ್ವೈಪಾಯನ) ಬಾಲಕನನ್ನು ಹೆತ್ತಳು. ನೋ--ಕೃಷ್ಣದ್ವೈಪಾಯನ (ಪರಾಶರ = ಜೀವಿತಾಸೆಯನ್ನು ತೊರೆದ ವಸಿಷ್ಠನನ್ನು ಗೃಹಸ್ಥಾಶ್ರಮದಲ್ಲಿ ನೆಲೆಗೊಳಿಸಿದವ) (ಮ.ಆ., ಅನು., ಶಾಂ., ಮತ್ಸ್ಯಪು.). ೨. ಸರ್ಪವೊಂದು.

ಪರಿತಾ -- ಒಂದು ಪಟ್ಟಣ. ರಾಜರ್ಷಿಯಾದ ಮುಚುಕುಂದ ಇದನ್ನು ನಿರ್ಮಿಸಿದನು. ನೋ --ಮಾಹಿಷ್ಮತಿ.

ಪರಿಬರ್ಹ -- ಗರುಡನ ಮಗ (ಮ.ಉ.).

ಪರಿಶ್ರವ -- ಚಂದ್ರವಂಶದ ಭೀಮಸೇನನ ಮಗ; ಈತನ ತಾಯಿ ಸುಕುಮಾರಿ; ಪತ್ನಿ ಶೈಬ್ಯರಾಜಪುತ್ರಿಯಾದ ಸುಂದರಿ. ಈತನಿಗೆ ದೇವಾಪಿ, ಶಂತನು ಮತ್ತು ಬಾಹ್ಲಿಕರೆಂಬ ಮೂವರು ಮಕ್ಕಳಿದ್ದರು. ಈ ಪರಿಶ್ರವನಿಗೆ ಪ್ರತೀಪನೆಂಬ ಹೆಸರೂ ಇದೆ. ಇವನು ತಪಸ್ಸು ಮಾಡುತ್ತಿದ್ದಾಗ ಗಂಗೆಯು ನದಿಯಿಂದ ಎದ್ದು ಬಂದು ಈತನ ಬಲ ತೊಡೆಯ ಮೇಲೆ ಕೂತುಕೊಳ್ಳಲು, 'ನೀನು ನನ್ನ ಸೊಸೆಯಾಗತಕ್ಕವಳು' ಎಂದು ಆಕೆಯನ್ನು ಹಿಂದೆ ಕಳುಹಿಸಿದನು (ಮ.ಆ.). ಭೀಮಸೇನನಿಗೆ ದಿಲೀಪನೆಂಬುವನು ಮಗನಾದನು. ಈ ದಿಲೀಪನ ಮಗನೇ ಪ್ರತೀಪನು. ಈ ಪ್ರತೀಪನಿಗೆ ದೇವಾಪಿ, ಶಂತನು ಮತ್ತು ಬಾಹ್ಲೀಕರೆಂಬ ಮೂವರು ಮಕ್ಕಳಾದರು (ವಿಷ್ಣುಪು.).

ಪರಿಸಾರಕ -- ನೋ -- ಕವಷ.

ಪರೀಕ್ಷಿತ್ (ಪರಿಕ್ಷಿತ್) -- ೧. ಚಂದ್ರವಂಶದ ಅನಶುಷನ ಮಗ; ಈತನ ತಾಯಿ ಅಮೃತೆ; ಪತ್ನಿ ಸುವೇಷಾ; ಈಕೆಯ ಮಗ ಭೀಮಸೇನ (ಮ.ವ.) ೨.ಚಂದ್ರವಂಶದ ಅವಿಕ್ಷಿತನ ಮಗ; ಶಬಲಾಶ್ವ ಮೊದಲಾದವರು ಈತನ ಸೋದರರು; ಕಕ್ಷಸೇನ ಮೊದಲಾದವರು ಈತನ ಮಕ್ಕಳು (ಮ.ಆ.) ೩.ಸೂರ್ಯವಂಶದ ಈ ರಾಜನಿಗೆ ಶಲ, ದಲ, ಬಲರೆಂಬ ಮೂವರು ಮಕ್ಕಳು.

ಇವರು ಸುಶೋಭನೆ ಎಂಬ ಮಂಡೂಕ ಕನ್ಯೆಯಲ್ಲಿ ಹುಟ್ಟಿದವರು. ಸುಶೋಭನೆಯು ಆಯುವೆಂಬ ಮಂಡೂಕ ರಾಜನ ಮಗಳು. ಈಕೆ ಪತಿಯೊಡನೆ ಜಲಕೇಳಿಗಿಳಿದಾಗ ಅದೃಶ್ಯಳಾದಳು. ಕೊನೆಗೆ ಪರೀಕ್ಷಿತರಾಜನು ಪುನಃ ಆಕೆಯನ್ನು ಪಡೆದನು. ೪. ಚಂದ್ರವಂಶದ ಅರ್ಜುನನ ಮೊಮ್ಮಗ, ಅಭಿಮನ್ಯುವಿನ ಮಗ. ಈತನ ತಾಯಿ ವಿರಾಟರಾಜನ ಮಗಳಾದ ಉತ್ತರೆ. ಕುರುಗಳೆಲ್ಲ ಯುದ್ಧದಲ್ಲಿ ಕ್ಷೀಣಿಸಿದ ಮೇಲೆ ಉತ್ತರೆಯ ಗರ್ಭದಲ್ಲಿ ಹುಟ್ಟಿದುದರಿಂದ ಪರೀಕ್ಷೀತ್ ಎಂದು ಹೆಸರಾಯಿತು (ಮ.ಆ.). ಈತನು ಕೃಪಾಚಾರ್ಯನ ಶಿಷ್ಯ. ಈತನು ತಾಯಿಯ ಗರ್ಭದಲ್ಲಿ ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದ ಸಾಯುತ್ತಿರುವಾಗ ಶ್ರೀಕೃಷ್ಣನು ರಕ್ಷಿಸಿದನು. ಅಲ್ಲದೆ ವಂಶ ಪರಿಕ್ಷೀಣವಾದಾಗ ಜನಿಸಿದವನಾದುದರಿಂದ ಪರೀಕ್ಷಿತನೆನ್ನಿಸಿದನು. ಈತನ ಪತ್ನಿ ಭದ್ರವತಿ; ಮಕ್ಕಳು ಜನಮೇಜಯ, ಶ್ರುತಸೇನ, ಉಗ್ರಸೇನ, ಭೀಮಸೇನನೆಂಬ ನಾಲ್ವರು. ಪರೀಕ್ಷಿತನು ಮೂವತ್ತಾರನೆಯ ವಯಸ್ಸಿನಲ್ಲಿ ಪಟ್ಟಕ್ಕೆ ಬಂದು ತೊಂಬತ್ತಾರನೆಯ ವಯಸ್ಸಿನಲ್ಲಿ ಮೃತನಾದನು. ಈತನು ರಥಾರೂಢನಾಗಿ ಅರಣ್ಯದಲ್ಲಿ ಸಂಚರಿಸುತ್ತಿರುವಾಗ ಒಬ್ಬ ಶೂದ್ರನು ರಾಜಚಿಹ್ನವನ್ನು ಧರಿಸಿ ಒಂದು ದನ ಮತ್ತು ಎತ್ತನ್ನು ಹಿಂಸಿಸುತ್ತಿರುವುದನ್ನು ಕಂಡು ಆ ಗೋವು ಭೂದೇವಿಯೆಂದೂ, ಆ ಪುರುಷನೇ ಕಲಿಪುರುಷನೆಂದೂ, ಆ ವೃಷಭನೇ ಧರ್ಮವೆಂದೂ ತಿಳಿದು ಆ ಶೂದ್ರನನ್ನು ಹಿಡಿದು ದಂಡಿಸಲು ಆತನು ರಾಜನ ಮರೆಹೊಕ್ಕು ಅಲ್ಲಿಂದ ಓಡಿಹೋದನು. ಆ ರಾಜನು ಮೂರು ಅಶ್ವಮೇಧ ಯಾಗಗಳನ್ನು ಮಾಡಿದನು. ಒಮ್ಮೆ ಈತನು ಬೇಟೆಗೆ ಹೋಗಿದ್ದಾಗ ವಿನೋದಕ್ಕಾಗಿ ಶಮೀಕನೆಂಬ ಮುನಿಯ ಕೊರಳಿಗೆ ಬಿಲ್ಲಿನಕೊಪ್ಪಿನಿಂದ ಮೃತಸರ್ಪವನನ್ನು ಹಾಕಿ ಹೋಗಲು, ಇದನ್ನು ಕಂಡ ಆತನ ಮಗನಾದ ಶೃಂಗಿಯು- 'ಈ ಕಾರ್ಯವನ್ನು ಮಾಡಿದವನನ್ನು ತಕ್ಷಕನು ಕಚ್ಚಲಿ' ಎಂದು ಶಾಪವಿತ್ತನು. ತಕ್ಷಕನ ವಿಷ ಪರಿಹರಿಸಿ ರಾಜನನ್ನು ಬದುಕಿಸುವುದಕ್ಕಾಗಿ ಕಶ್ಯಪನೆಂಬ ಬ್ರಾಹ್ಮಣನು ರಾಜಧಾನಿಯ ಕಡೆಗೆ ಬರುತ್ತಿರುವಾಗ ತಕ್ಷಕನು ದ್ರವ್ಯದಿಂದ ಆತನನ್ನು ತೃಪ್ತಿಗೊಳಿಸಿ ಹಿಂದಿರುಗಿಸಿದನು. ಆಮೇಲೆ ತಾನು ಪರೀಕ್ಷಿತ ಮಂದಿರವನ್ನು ಪ್ರವೇಶಿಸಿ ಆತನನ್ನು ಕಚ್ಚಿ ಕೊಂದನು. ಇವನು ಕಲಿಕಟ್ಟಿ ಸಮಸ್ತ ಭರತಖಂಡವನ್ನೂ ಆಳಿದನು. ಇವನ ಅರುವತ್ತು ವರ್ಷದ ಆಳ್ವಿಕೆಯಲ್ಲಿ ಭರತಭೂಮಿಯಲ್ಲಿ ರಾಮರಾಜ್ಯವು ನೆಲೆಸಿತ್ತು (ಮ.ಆ., ವ., ಅಶ್ವ., ಮಹಾ., ದೇವೀಭಾ.).

ಪರ್ಜನ್ಯ -- ಗಂಧರ್ವನೊಬ್ಬ (ಮ.ಆ.).

ಪರ್ಣಜಂಘ -- ವಿಶ್ವಾಮಿತ್ರನ ಮಗ (ಮ.ಅನು).

ಪರ್ಣಾದ -- ೧. ಋಷಿಯೊಬ್ಬ, ೨. ಬ್ರಾಹ್ಮಣನೊಬ್ಬ. ಈತನನ್ನು ದಮಯಂತಿಯು ನಳನ ಸಂಶೋಧನೆಗಾಗಿ ಅಯೋಧ್ಯಾನಗರಕ್ಕೆ ಕಳುಹಿಸಿದಳು (ಮ.ಸ., ವ.).

ಪರ್ಣಾಶಾ -- ೧. ಒಂದು ನದಿ. ಇದಕ್ಕೆ ಶೀತತೋಯವೆಂಬ ಹೆಸರಿದೆ. ಈ ಪರ್ಣಾಶೆಯಲ್ಲಿ ವರುಣನಿಂದ ಹುಟ್ಟಿದ ಮಗನೇ ಶ್ರುತಾಯುಧ. ಸೈಂಧವನ ವಧೆಗಾಗಿ ಅರ್ಜುನನು ದ್ರೋಣನನ್ನು ವಂಚಿಸಿ ಸೇನಾವ್ಯೂಹವನ್ನು ಪ್ರವೇಶಿಸಲು, ಗುರುವು ಸಿಟ್ಟಿನಿಂದ ಅರ್ಜುನನ ಮೇಲೇ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು. ಅರ್ಜುನನು ಬ್ರಹ್ಮಾಸ್ತ್ರವನ್ನು ಬ್ರಹ್ಮಾಸ್ತ್ರದಿಂದಲೇ ಗೆದ್ದು ತಿರುಗಿಯೂ ಗುರುವನ್ನು ವಂಚಿಸಿ ಮುಂದುವರಿಯಲು ವರುಣಪುತ್ರನಾದ ಶ್ರುತಾಯುಧನು ಅರ್ಜುನನನ್ನು ತಡೆದು ದಿವ್ಯವಾದ ಒಂದು ಗದೆಯಿಂದ ಹೊಡೆಯಲು, ಆ ಗದೆಯು ದೈವವಶದಿಂದ ಅರ್ಜುನನಿಗೆ ತಗಲದೆ ಶ್ರೀಕೃಷ್ಣನಿಗೆ ತಗಲಲು ನಿರಾಯುಧನನ್ನು ಹೊಡೆದ ತಪ್ಪಿಗಾಗಿ ಆ ದಿವ್ಯ ಗದೆಯು ಹಿಂದಿರುಗಿ ಶ್ರುತಾಯುಧನನ್ನೇ ಹೊಡೆದು ಅವನನ್ನು ಪುಡಿಮಾಡಿಬಿಟ್ಟಿತು. ಇದು ಈಗ ರಜಪುತಾನದಲ್ಲಿ ಹರಿಯುವ ಬಾಣೂಸ್ ನದಿ. ಇದು ಚಂಬಲ್ ನದಿಯ ಉಪನದಿ (ಮ.ಸ., ಭೀ., ದ್ರೋ) ೨. ಸತ್ವತನ ಮಗನಾದ ದೇವವೃಧನು ಸತ್ಪುತ್ರನನ್ನು ಪಡೆಯಬೇಕೆಂದು ಅತ್ಯುಗ್ರ ತಪಸ್ಸು ಮಾಡುತ್ತಿರಲು ಸಮೀಪದಲ್ಲಿ ಹರಿಯುತ್ತಿರುವ ಪರ್ಣಾಶಾ ನದಿಯು ಅವನ ತೀವ್ರ ತಪಸ್ಸನ್ನು ನೋಡಲಾರದೆ ಆತನ ಪತ್ನಿಯಾದಳು. ಈಕೆಯಲ್ಲಿ ದೇವತೆಗಳಿಗೆ ಸಮಾನನಾದ ಬಭ್ರು ಎಂಬ ಮಗನು ಜನಿಸಿದನು (ಹರಿ.).

ಪರ್ವಣ -- ರಾಕ್ಷಸನೊಬ್ಬ (ಮ.ವ.)

ಪರ್ವತ -- ನಾರದನ ಸೋದರಳಿಯ. ಶ್ರೀಮತಿಯನ್ನು ವಿವಾಹವಾಗಬೇಕೆಂಬ ಆತುರದಲ್ಲಿ ತಮ್ಮ ಮುಖವನ್ನು ಕಪಿಯಂತೆ ಮಾಡಿಕೊಂಡರು. ನೋ. ಶ್ರೀಮತಿ, ಅಂಬರೀಷ, ನಾರದ (ಮ.ಶಾಂ., ಅದ್ಭು.ರಾಮಾ)

ಪಶುಪತಿ -- ಶಿವನ ನಾಮಾಂತರ. ನೋ -- ಶಿವ. ಪ್ರಮಥಗಣಗಳಿಗೊಡೆಯ, ಜೀವರನ್ನು ಸಂಸಾರಬಂಧದಿಂದ ಬಿಡಿಸಿ ಪಾಲಿಸುವವನು. ಪವಿತ್ರಪಾಣಿ. ಬ್ರಹ್ಮರ್ಷಿ (ಮ.ಸ.)

ಪಶುಸಖ -- ಸಪ್ತರ್ಷಿಗಳ ಸೇವಕನಾದ ಶೂದ್ರನೊಬ್ಬ. ಇವನು ಮಹಾ ಸತ್ಯಸಂಧ ಮತ್ತು ಧರ್ಮಿಷ್ಠನಾಗಿದ್ದ. ಗಂಡೆ ಎಂಬವಳು ಈತನ ಪತ್ನಿ (ಮ.ಅನು)

ಪಾಂಸುರಾಷ್ಟ್ರ -- ಒಂದು ದೇಶ. ಇದರ ರಾಜನಾದ ವಸುದಾನನನ್ನು ಪಾಂಡವರು ರಾಜಸೂಯಯಾಗ ಕಾಲದಲ್ಲಿ ಜಯಿಸಿದರು (ಮ.ಸ.)

ಪಾಂಚಜನ್ಯ -- ಶ್ರೀಕೃಷ್ಣನ ಶಂಖ. ಇದನ್ನು ಶ್ರೀಕೃಷ್ಣನು ಪಂಚಜನನೆಂಬ ರಕ್ಕಸನ ದೇಹದಿಂದ ಪಡೆದನು. ನೋ. -- ಪಂಚಜನ (ಮ.ಉ., ಭೀ)

ಪಾಂಚಾಲ -- ಪಾಂಚಾಲದೇಶದ ರಾಜರ ಹೆಸರು. ದ್ರುಪದನಿಗೂ ಆತನ ಮಕ್ಕಳಿಗೂ ಭಾರತದಲ್ಲಿ ಈ ಹೆಸರು ರೂಢಿಯಲ್ಲಿದೆ. ಉತ್ತರಪಾಂಚಾಲವನ್ನು ದ್ರೋಣನು ದ್ರುಪದನಿಂದ ಕಿತ್ತುಕೊಂಡನು. ಇದರ ರಾಜಧಾನಿ ಅಹಿಚ್ಛತ್ರ (ಅಹಿಕ್ಷೇತ್ರ). ದ್ರುಪದನ ವಶವಿದ್ದ ದಕ್ಷಿಣ ಪಾಂಚಾಲಕ್ಕೆ (ಪಾಂಚಾಲ) ಕಾಂಪಿಲ್ಯ ನಗರವು ರಾಜಧಾನಿ. ಇವೆರಡನ್ನೂ ಈಗ ರೋಹಿಲಖಂಡವೆನ್ನುತ್ತಾರೆ (ಮ.ಭೀ.)

ಪಾಂಚಾಲಿ -- ನೋ -- ದ್ರೌಪದಿ, ನಾರಾಯಣಿ

ಪಾಂಚಾಲ್ಯ -- ಆರುಣಿ ಋಷಿಯ ಮತ್ತೊಂದು ಹೆಸರು. ನೋ -- ಆರುಣಿ (ಮ.ಆ)

ಪಾಟಲಾವತಿ -- ಒಂದು ನದಿ. ಇದು ಅನೂಪದೇಶದ ಸಮೀಪವಿರುವ ಪಾರಿಯಾತ್ರ ಪರ್ವತದಲ್ಲಿ ಹುಟ್ಟಿದ ಚರ್ಮಣ್ವತಿಯ ಉಪನದಿಯೊಂದು. ಚಂಬಲ್ ನದಿಯ ಉಪನದಿ *(ಮ.ಭೀ)*

ಪಾಂಡವ -- ಚಂದ್ರವಂಶದ ಪಾಂಡುರಾಜನ ಪುತ್ರರು. ನೋ -- ಪಂಚೇಂದ್ರೋಪಾಖ್ಯಾನ. ಯುಧಿಷ್ಠಿರ, ಭೀಮ, ಅರ್ಜುನ, ನಕುಲ, ಸಹದೇವ -- ಇವರು ಪಾಂಡವರು. ಕುಂತಿಯಲ್ಲಿ ಯಮ, ವಾಯು, ಇಂದ್ರರಿಂದ ಯುಧಿಷ್ಠಿರ ಮತ್ತು ಭೀಮಾರ್ಜುನರೂ, ಮಾದ್ರಿಯಲ್ಲಿ ಅಶ್ವಿನಿದೇವತೆಗಳಿಂದ ನಕುಲಸಹದೇವರೂ ಹುಟ್ಟಿದರು. ಇವರನ್ನು ಪಂಚಪಾಂಡವರೆನ್ನುತ್ತಾರೆ. ಶತಶೃಂಗಪರ್ವತದಲ್ಲಿರುವಾಗ ಇವರಿಗೆ ಶುಕ್ರನೆಂಬ ಮುನಿಯಿಂದ ಧನುರ್ವಿದ್ಯಾಭ್ಯಾಸವಾಯಿತು. ಅರಣ್ಯದಲ್ಲಿರುವಾಗಲೇ ಪಾಂಡುವು ಒಮ್ಮೆ ಮಾದ್ರಿಯ ರೂಪಕ್ಕೆ ಮೋಹಿಸಿ ಋಷಿಶಾಪಕ್ಕೊಳಗಾಗಿ ಕಾಲವಶನಾದನು. ಮುಂದೆ ಇವರನ್ನು ಮುನಿಗಳು ಹಸ್ತಿನಾಪುರಕ್ಕೆ ಕರೆತಂದು ಭೀಷ್ಮನ ವಶ ಒಪ್ಪಿಸಿ ಹೋದರು. ಹಸ್ತಿನಾವತಿಯಲ್ಲಿ ಇವರು ಕೃಪಾಚಾರ್ಯ ಮತ್ತು ದ್ರೋಣಾಚಾರ್ಯರಿಂದ ಅಸ್ತ್ರವಿದ್ಯಾ ಪಾರಂಗತರಾದರು. ಇವರ ಶಕ್ತಿ ಪರಾಕ್ರಮಕ್ಕೆ ಹೆದರಿದ ಕೌರವನು ರಾಜ್ಯವನ್ನು ಎರಡು ಪಾಲು ಮಾಡಿಸಿ ಇವರನ್ನು ವಾರಣಾವತಕ್ಕೆ ಕಳುಹಿಸಿದನು. ಅಲ್ಲಿ ಅರಗಿನ ಮನೆಯು ದಹಿಸಿಹೋದಮೇಲೆ, ವನ ಪ್ರವೇಶಿಸಿ, ಅಲ್ಲಿ ಭೀಮನು ಹಿಡಿಂಬನನ್ನು ಕೊಂದು ಹಿಡಿಂಬೆಯನ್ನು ವಿವಾಹವಾಗಿ, ಶಾಲಿಹೋತ್ರ ಆಶ್ರಮದಿಂದ ಏಕಚಕ್ರ ನಗರಕ್ಕೆ ಬಂದರು. ಮುಂದೆ ಧೌಮ್ಯನನ್ನು ಪುರೋಹಿತನನ್ನಾಗಿ ಮಾಡಿಕೊಂಡು, ಪಾಂಚಾಲಪುರವನ್ನು ಪ್ರವೇಶಿಸಿ, ದ್ರೌಪದಿಯನ್ನು ವಿವಾಹವಾಗಿ

ಇಂದ್ರಪ್ರಸ್ಥವನ್ನೇ ರಾಜಧಾನಿ ಮಾಡಿಕೊಂಡರು. ರಾಜಸೂಯಯಾಗವನ್ನು ಮಾಡಿ ಯಶಸ್ಸನ್ನು ಪಡೆದರು. ಇವರು ದ್ಯೂತದಲ್ಲಿ ರಾಜ್ಯವನ್ನೆಲ್ಲ ಕಳೆದುಕೊಂಡು ಹನ್ನೆರಡು ವರ್ಷ ಅರಣ್ಯವಾಸ ಮತ್ತು ಒಂದು ವರ್ಷ ಅಜ್ಞಾತವಾಸ ಮಾಡಿ ತಮ್ಮ ರಾಜ್ಯವನ್ನು ಪುನಃ ಕೌರವರೊಡನೆ ಕೇಳಿದರು. ಸಂಧಾನ ಮುರಿದು ಸಂಗ್ರಾಮ ಮಾಡಬೇಕಾಯಿತು. ಯುದ್ಧದಲ್ಲಿ ಕೌರವರೆಲ್ಲ ನಾಶವಾಗಿ, ಪಾಂಡವರು ಹಸ್ತಿನಾವತಿಯ ರಾಜರಾಗಿ, ಅಶ್ವಮೇಧಯಾಗವನ್ನು ಮಾಡಿ, ಮೂವತ್ತಾರು ವರ್ಷ ರಾಜ್ಯಭಾರ ಮಾಡಿ, ರಾಜ್ಯವನ್ನು ಮೊಮ್ಮಗನಾದ ಪರೀಕ್ಷಿತನಿಗೊಪ್ಪಿಸಿ, ತಾವು ಮಹಾಪ್ರಸ್ಥಾನವನ್ನು ಕೈಗೊಂಡು ಸ್ವರ್ಗವನ್ನು ಸೇರಿದರು (ಮ.ಆ., ಸ., ವ., ವಿ., ದ್ರೋ., ಕ., ಭೀ., ಸೌ., ಅಶ್ವ., ಮಹಾ.,ಸ್ವ.).

ಪಾಂಡು -- ೧. ಚಂದ್ರವಂಶದ ವಿಚಿತ್ರವೀರ್ಯನ ಪತ್ನಿಯಾದ ಅಂಬಾಲಿಕೆಯಲ್ಲಿ ವೇದವ್ಯಾಸನಿಂದ ಈತನು ಹುಟ್ಟಿದನು. ಈತನಿಗೆ ಧೃತರಾಷ್ಟ್ರ ಮತ್ತು ವಿದುರರು ಸಹೋದರರು. ಕುಂತಿ ಮತ್ತು ಮಾದ್ರಿಯರು ಈತನ ಪತ್ನಿಯರು. ಒಂದು ದಿನ ಪಾಂಡುವು ಬೇಟೆಗೆ ಅರಣ್ಯಕ್ಕೆ ಹೋದಾಗ ಕಿಂದಮನನೆಂಬ ಮುನಿಯು ಪತ್ನಿಯೊಂದಿಗೆ ಮೃಗ ವೇಷದಿಂದ ಕ್ರೀಡಿಸುತ್ತಿರಲು ರಾಜನು ಅವರನ್ನು ಮೃಗಗಳೆಂಬ ಭಾವನೆಯಿಂದ ಹೊಡೆದನು. ಕಿಂದಮನ ಮುನಿಯು ಬಾಣದ ಹೊಡೆತದಿಂದ ಪ್ರಾಣಬಿಡುವಾಗ ಪಾಂಡುವಿಗೆ -- 'ನೀನು ಪತ್ನಿಯನ್ನು ಕೂಡಿದಾಗ ಸ್ವರ್ಗಸ್ಥನಾಗು' ಎಂದು ಹೇಳಿ ಪ್ರಾಣಬಿಟ್ಟನು. ಪಾಂಡು ಈ ಶಾಪವಾಕ್ಯದಿಂದ ಜೀವನದಲ್ಲೇ ವೈರಾಗ್ಯ ಹೊಂದಿ ರಾಜ್ಯವನ್ನು ತೊರೆದು ಪತ್ನಿಯರನ್ನು ಕೂಡಿಕೊಂಡು ಶತಶೃಂಗ ಪರ್ವತಪ್ರಾಂತಕ್ಕೆ ಹೋಗಿ ಅಲ್ಲಿ ಮುನಿಜೀವನವನ್ನವಲಂಬಿಸಿದರೂ, ಒಂದು ದಿನ ವಸಂತಕಾಲದಲ್ಲಿ ರತಿದೇವಿಯಂತೆ ಸಿಂಗರಿಸಿಕೊಂಡಿದ್ದ ಮಾದ್ರಿಯನ್ನು ಕಂಡು ವಿಕಾರಕ್ಕೊಳಗಾಗಿ ಆಕೆಯನ್ನು ಆಲಿಂಗಿಸಲು ರಾಜನು ಮೃತನಾದನು. ೨. ಚಂದ್ರವಂಶದ ಜನಮೇಜಯನ ಮಗ. ಇವನು ಪಾಂಡವರಿಗಿಂತ ಪೂರ್ವದಲ್ಲಿದ್ದನು. ಇವನಿಗೆ ಧೃತರಾಷ್ಟ್ರನೇ ಮೊದಲಾದ ಏಳು ಜನ ಸೋದರರು. ಇವನು ವಿವಾಹಾನಂತರ ದಶಾರ್ಣ, ರಾಜಗೃಹ (ಮಗಧ), ಮಿಥಿಲ (ವಿದೇಹ), ಕಾಶಿ, ಸುಹ್ಮ, ಪುಂಡ್ರ -- ಮೊದಲಾದ ದೇಶಗಳನ್ನು ಗೆದ್ದು ದಿಗ್ವಿಜಯ ಮುಗಿಸಿದನು. (ಮ.ಆ.) ಅಂಬಿಕೆಗೆ ಕೌಸಲ್ಯೆ ಎಂಬ ಹೆಸರೂ ಇದೆ.

ಪಾಂಡುರಾಷ್ಟ್ರ (ಪಾಂಡ್ಯ) -- ದೇಶವೊಂದು. ಇದನ್ನು ಪಾಂಡ್ಯದೇಶವೆನ್ನುತ್ತಾರೆ. ಇದು ಇಂದಿನ ಮಧುರಾ ಮತ್ತು ತಿನ್ನವೆಲ್ಲಿ ಜಿಲ್ಲೆಗಳು. ಹಿಂದೆ

ಉರಗಪುರವೆಂಬುದು ಇದರ ರಾಜಧಾನಿಯಾಗಿತ್ತು. ಆಮೇಲೆ ನಾಗಪಟ್ಟಣ ಮತ್ತು ಮಧುರೆಗಳು ಇದರ ರಾಜಧಾನಿಗಳಾದವು (ಮ.ಭೀ).

ಪಾಂಡ್ಯ -- ಚಿತ್ರಾಂಗದೆಯ ತಂದೆ. ಈತನು ದ್ರವಿಡ ದೇಶದ ರಾಜನಾಗಿದ್ದ. ಈತನು ಅಶ್ವತ್ಥಾಮನಿಂದ ಹತನಾದನು. ಈತನಿಗೆ ಪ್ರವೀರ, ಚಿತ್ರವಾಹನ, ಮಲಯಧ್ವಜನೆಂಬ ಹೆಸರೂ ಇತ್ತು. ನೋ -- ಚಿತ್ರಾಂಗದೆ. ಈತನ ಮಗಳಾದ ಚಿತ್ರಾಂಗದೆಯನ್ನು ತೀರ್ಥಯಾತ್ರೆಗೆಂದು ಬಂದ ಅರ್ಜುನನು ವಿವಾಹವಾದನು. ಈಕೆಯ ಮಗನೇ ಬಭ್ರುವಾಹನ. ಭಾರತಯುದ್ಧದಲ್ಲಿ ಈತನು ಪಾಂಡವರ ಪರವಾಗಿ ಹೋರಾಡಿ, ಹದಿನೇಳನೆಯ ದಿನ ಅಶ್ವತ್ಥಾಮನಿಂದ

ಹತನಾದನು (ಮ.ಕ)

ಪಾತಾಳಕೇತು -- ಒಬ್ಬ ರಾಕ್ಷಸ. ನೋ -- ಕುವಲಾಶ್ವ. ಮದಲಸಾ.

ಪಾತಾಳಗಂಗೆ -- ಕೃಷ್ಣಾನದೀತೀರದ ಮಲ್ಲಿಕಾರ್ಜುನ ದೇವಸ್ಥಾನದ ಪೂರ್ವದ್ವಾರದಿಂದ ಒಂದು ದಾರಿ ಕೃಷ್ಣಾನದಿಯವರೆಗೆ ಹೋಗಿದೆ. ಇದಕ್ಕೆ ಪಾತಾಳಗಂಗೆಯೆಂದು ಹೆಸರು. ಇಲ್ಲಿ ಪಾತಾಳದಷ್ಟು ಕೆಳಗಿಳಿಯಬೇಕಾಗುತ್ತದೆ; ಮೂರು ಮೈಲು ದೂರವಿದೆ. ಅರ್ಧದಾರಿ ಸುಮಾರು ಇಳಿಜಾರಾಗಿದ್ದು ೮೫೨ ಮೆಟ್ಟಲುಗಳನ್ನಿಳಿಯಬೇಕಾಗುತ್ತದೆ. ಪರ್ವತದ ಪಾದತಲದಲ್ಲಿ ಕೃಷ್ಣಾನದಿಯು ಹರಿಯುತ್ತಿದೆ. ಇಲ್ಲಿ ಯಾತ್ರಿಕರು ಮಿಂದು, ಈ ನೀರನ್ನೊಯ್ದು, ಮಲ್ಲಿಕಾರ್ಜುನನ ಜ್ಯೋತಿರ್ಲಿಂಗಕ್ಕೆ ಅಭಿಷೇಕ ಮಾಡುತ್ತಾರೆ (ಕ್ಷೇತ್ರದ)

ಪಾರ -- ಬ್ರಹ್ಮರ್ಷಿಯೊಬ್ಬ. ನೋ -- ಕಲಾವತಿ, ಪುಂಜಿಕಸ್ಥಲಾ.

ಪಾರಾವತಾಶ್ವ -- ಧೃಷ್ಟದ್ಯುಮ್ನ.

ಪಾರಾಶರ್ಯ -- ವ್ಯಾಸ.

ಪಾರಿಜಾತ -- ದೇವತರು; ಕಲ್ಪವೃಕ್ಷ. ಇದು ಸಮುದ್ರಮಥನದಲ್ಲಿ ಉತ್ಪತ್ತಿಯಾಯಿತು. ಇದನ್ನು ಇಟ್ಟುಕೊಂಡವರ ಹತ್ತಿರ ಸಾವು ಸುಳಿಯುವುದಿಲ್ಲ; ನೋವು ಹುಟ್ಟುವುದಿಲ್ಲ; ಮುಪ್ಪು ಮುಸುಕುವುದಿಲ್ಲ; ಹರಯವು ಮಸುಳುವುದಿಲ್ಲ; ಕಾಂತಿ ಅಳಿಯುವುದಿಲ್ಲ. ಈ ವೃಕ್ಷವನ್ನು ಕಶ್ಯಪ ಮಹರ್ಷಿಗಳು ಅದಿತಿ ದೇವಿಯ ವ್ರತವು ಸಾಂಗವಾಗಿ ಸಂಪನ್ನವಾಗಲು ನಿರ್ಮಿಸಿದರು. ಹಿಂದೆ ಒಂದು ದಿನ ಅದಿತಿಯು ಕಶ್ಯಪರನ್ನು ಸೇವಾ ಶುಶ್ರೂಷೆಗಳಿಂದ ಮೆಚ್ಚಿಸಲು ಅವರು, 'ನಿನಗೆ ಬೇಕಾದ ವರವನ್ನು ಬೇಡು' ಎಂದರು. ಅದಕ್ಕೆ ಅದಿತಿಯು ನಾನು ನಿತ್ಯಸೌಭಾಗ್ಯವತಿಯಾಗಬೇಕು. ನಾನು ಬಯಸಿದ ವಸ್ತ್ರಾಲಂಕಾರ, ಒಡವೆಗಳು ನನಗೆ ದೊರಕಬೇಕು ಮತ್ತು

ಅಪೇಕ್ಷಿಸಿದಂತೆ ಹಾಡುಕುಣಿತಗಳಲ್ಲಿ ನಾನು ಪ್ರಾವೀಣ್ಯವನ್ನು ಪಡೆದು ಶೋಕರಹಿತಳಾಗಿ, ನಿತ್ಯಕುಮಾರಿಯಾಗಿ ಪರಮಪವಿತ್ರೆಯೆಂದು ಪ್ರಖ್ಯಾತಳಾಗುವಂತೆ ವರವನ್ನು ಅನುಗ್ರಹಿಸಬೇಕು' ಎಂದು ಬೇಡಿಕೊಂಡಳು. ಅದಿತಿಯ ಈ ಪ್ರಾರ್ಥನೆಯನ್ನು ಪೂರೈಸುವುದಕ್ಕಾಗಿಯೇ ಕಶ್ಯಪರು ಈ ಪಾರಿಜಾತ ವೃಕ್ಷವನ್ನು ನಿರ್ಮಿಸಿದರು. ಈ ಮರಕ್ಕೆ ಮೂರು ಶಾಖೆಗಳಿವೆ. ಒಂದು ಶಾಖೆಯಲ್ಲಿ ಪಾರಿಜಾತ ಕುಸುಮಗಳೂ ಇನ್ನೊಂದರಲ್ಲಿ ನಾನಾ ಬಣ್ಣದ ಬೇರೆ ಬೇರೆ ಹೂಗಳೂ, ಮೂರನೆಯದರಲ್ಲಿ ಸುಂದರ, ಸುಗಂಧದ ಕಮಲ ಪುಷ್ಪಗಳೂ ಅರಳುತ್ತವೆ. ಹೀಗೆ ಪಾರಿಜಾತ ಗಿಡ ಒಂದಾದರೂ ಅನೇಕ ತರದ ಹೂಗಳನ್ನು ಕೊಡಬಲ್ಲದು. ಕಶ್ಯಪರು ಮಂದಾರವೆಂಬ ಕಲ್ಪವೃಕ್ಷದ ಸಾರದಿಂದಲೇ ಇದನ್ನು ನಿರ್ಮಿಸಿದರು. ಈ ವೃಕ್ಷಕ್ಕೆ ಕಶ್ಯಪರನ್ನು ಕಟ್ಟಿ ಅದಿತಿಯೂ, ಇಂದ್ರನನ್ನು ಕಟ್ಟಿ ಶಚಿಯೂ, ಚಂದ್ರನನ್ನು ಕಟ್ಟಿ ರೋಹಿಣಿಯೂ, ಕುಬೇರನನ್ನು ಕಟ್ಟಿ ಋದ್ಧಿಯೂ, ನಾರದನಿಗೆ ದಾನಕೊಟ್ಟು ಅಖಂಡ ಸೌಭಾಗ್ಯವನ್ನು ಪಡೆದಿದ್ದರು. ಸತ್ಯಭಾಮೆಯೂ ಈ ವ್ರತವನ್ನು ಪೂರೈಸಿದಳು. ಗಂಗಾನದಿಯ ಆಚೆ ದಡದಲ್ಲಿ ಇದು ಹುಟ್ಟಿದುದರಿಂದ ಪಾರಿಜಾತವೆಂದೂ, ಮಂದಾರಕುಸುಮಗಳಿಂದ ಇದು ಶೋಭಿಸುವುದರಿಂದ ಇದನ್ನು ಮಂದಾರ ವೆಂದೂ ಕರೆಯುತ್ತಾರೆ. ಇದರ ಮಹಿಮೆಯನ್ನು ತಿಳಿಯದ ಅಜ್ಞಜನರು ಇದನ್ನು ಯಾವುದೋ ಒಂದು ಜಾತಿಯ ಗಿಡವೆಂದು ಹೇಳುವುದರಿಂದ ಇದಕ್ಕೆ ಕೋವಿದಾರ ಎಂಬ ಹೆಸರೂ ಇದೆ (ಹರಿ., ಮ. ಆ., ಸ., ಭಾಗ.)

ಪಾರಿಯಾತ್ರ -- ೧. ಕುಲಪರ್ವತ; ವಿಂಧ್ಯಪರ್ವತದ ಪಶ್ಚಿಮಭಾಗವನ್ನು ಪಾರಿಯಾತ್ರ ಎನ್ನುತ್ತಾರೆ. ಇದು ಅರಾವಲಿ ಪರ್ವತದೊಡನೆ ಸೇರಿದೆ. ಇದರಲ್ಲಿ ವೇದಸ್ಮೃತಾ, ವೇತ್ರವತೀ, ವೃತಘ್ನೀ, ಸಿಂಧು, ಪರ್ಣಾಶಾ, ನರ್ಮದಾ, ಕಾವೇರಿ, ಮಹತಿ, ಪಾರಾ, ಧನ್ವತಿ, ರೂಪಾ, ವಿದಿಶಾ, ವೇಣಿಮತಿ, ಸಿಪ್ರಾ, ಅವಂತಿ ಮುಂತಾದ ನದಿಗಳು ಹುಟ್ಟುತ್ತವೆ (ಮ.ಭೀ., ಮತ್ಸ್ಯಪು) ೨. ಒಂದು ಸರ್ಪ.

ಪಾರ್ಥ -- ಅರ್ಜುನನ ಹತ್ತು ಹೆಸರುಗಳಲ್ಲೊಂದು. ಕುಂತಿಗೆ ನಾಮಕರಣದ ಹೆಸರು ಪೃಥೆ ಎಂದು ಇದ್ದುದರಿಂದ ಧರ್ಮರಾಜ, ಭೀಮ ಮತ್ತು ಅರ್ಜುನರಿಗೆ ಈ ಹೆಸರು ಸಲ್ಲುತ್ತದಾದರೂ ಅರ್ಜುನನನ್ನು ಮಾತ್ರ ಈ ಹೆಸರಿನಿಂದ ಕರೆಯುವುದು ರೂಢಿಯಲ್ಲಿದೆ. (ವಿಷ್ಣುಪು., ಮ.ವಿ)

ಪಾರ್ವತಿ -- ಪರ್ವತರಾಜನಾದ ಹಿಮವಂತನ ಮಗಳು. ಈಕೆಯ ತಾಯಿ ಮೇನೆ. ತಂಗಿಯಂದಿರು ಏಕಪರ್ಣಾ ಮತ್ತು ಏಕಪಾಟಲಾ. ಪಾರ್ವತಿಗೆ ಗಿರಿಜೆ,ಅಪರ್ಣೆ, ಉಮೆ ಮೊದಲಾದ ನಾಮಾಂತರಗಳಿವೆ. ಈಕೆ ಗಿರಿರಾಜನ ಮಗಳಾದುದರಿಂದ

ಗಿರಿಜೆ; ಪರ್ಣವನ್ನೂ (ಎಲೆ) ತಿನ್ನದೆ ತಪಸ್ಸು ಮಾಡಿದುದರಿಂದ ಅಪರ್ಣೆ; ಕಷ್ಟಸಾಧ್ಯವಾದ ತಪಸ್ಸನ್ನು ಮಾಡಬೇಡವೆಂದು ತಡೆಯಲ್ಪಟ್ಟಳಾದುದರಿಂದ ಉಮೆ ಎಂದು ಕರೆಯಲ್ಪಟ್ಟಳು. ಪಾರ್ವತಿಯು ಶಿವನನ್ನೂ, ಏಕಪರ್ಣೆಯು ಯೋಗಾಚಾರ್ಯನಾದ ಅಸಿತ ದೇವಲ ಮುನಿಯನ್ನೂ, ಏಕಪಾಟಲೆಯು ಜೈಗೀಷವ್ಯಮುನಿಯನ್ನೂ ಲಗ್ನವಾದರು. ಮೈನಾಕನು ಈಕೆಯ ಸೋದರ ನೋ-- ದಾಕ್ಷಾಯಿಣಿ. ತಾರಕಾಸುರನ ಬಾಧೆಯನ್ನು ತಡೆಯಲಾರದೆ ದೇವತೆಗಳು ಮನ್ಮಥನನ್ನು ಶಿವನ ತಪೋಭಂಗಕ್ಕೆ ಕಳುಹಿಸಲು ಶಿವನು ಮನ್ಮಥನನ್ನು ಮೂರನೆಯ ಕಣ್ಣಿನಿಂದ ಸುಟ್ಟು, ಕೊನೆಗೆ ಪಾರ್ವತಿಯನ್ನು ವಿವಾಹವಾದನು. ಈಕೆ ಪೂರ್ವಜನ್ಮದಲ್ಲಿ ದಕ್ಷನ ಮಗಳಾದ ದಾಕ್ಷಾಯಿಣಿಯಾಗಿದ್ದಳು. ಜಲಂಧರನು ಈಕೆಯ ಪಾತಿವ್ರತ್ಯವನ್ನು ಕೆಡಿಸಲು ಹೋಗಿ ಶಿವನಿಂದ ನಾಶವಾದನು. ನೋ -- ಜಲಂಧರ. ಗೌರೀಕುಂಡದಲ್ಲಿ ಈಕೆ ಹುಟ್ಟಿದಳು (ಹರಿ., ಲಿಂಗಪು., ಭಾಗ) ನೋ -- ಕುಮಾರಸ್ವಾಮಿ, ತಾರಕ.

ಪಾರ್ಷದ -- ಪೃಷದನೆಂಬ ರಾಜನ ಮಗ; ದ್ರುಪದ.

ಪಾರ್ಷದೀ -- ಪಾರ್ಷದನ (ದ್ರುಪದ) ಮಗಳು; ದ್ರೌಪದಿ.

ಪಾವನಿ -- ನದಿಯೊಂದು. ಇದು ಬರ್ಮಾದಲ್ಲಿ ಹರಿಯುತ್ತಿರುವ ಇರಾವತೀ ನದಿ (ಮ.ಭೀ.)

ಪಾಶೀ -- ಧೃತರಾಷ್ಟ್ರನ ಮಗ (ಮ.ಆ., ಕ)

ಪಾಶುಪತಾಸ್ತ್ರ -- ಪಶುಪತಿಗೆ (ಶಿವನಿಗೆ) ಸಂಬಂಧಿಸಿದ ಬಾಣ. ಶೂರಪದ್ಮಾಸುರನನ್ನು ಜಯಿಸಲು ಕಾರ್ತಿಕೇಯನು ಶಿವನಿಂದ ಈ ಅಸ್ತ್ರವನ್ನು ಪಡೆದನು. ಇಂದ್ರಕೀಲ ಪರ್ವತದಲ್ಲಿ ಅರ್ಜುನನು ತಪಸ್ಸು ಮಾಡಿ ಶಿವನಿಂದ ಈ ಮಹಾಸ್ತ್ರವನ್ನು ಪಡೆದನು. ಈತನು ನಿವಾತಕವಚರೆಂಬ ರಾಕ್ಷಸರನ್ನು ಕೊಂದು ಸ್ವರ್ಗಕ್ಕೆ ಬರುತ್ತಿರುವಾಗ ಆಕಾಶಸಂಚಾರವುಳ್ಳ ಹಿರಣ್ಯಪುರವನ್ನು ಕಂಡು, ಅಲ್ಲಿಯ ರಕ್ಕಸರಾದ ಪೌಲೋಮರನ್ನೂ, ಕಾಲಕಂಜರರನ್ನೂ, ಕೆಣಕಿ ದೇವತೆಗಳಿಗೆ ಅವಧ್ಯರಾದ ಮಾಯಾವಿ ದೈತ್ಯರನ್ನು ಈ ಅಸ್ತ್ರದಿಂದ ಸಂಹರಿಸಿದನು. ನೋ. -- ಅರ್ಜುನ. (ಮ.ಸ.,ದ್ರೋ)

ಪಾಷಂಡರು(ನಾಸ್ತಿಕರು) -- ದುರ್ಭಿಕ್ಷಕಾಲದಲ್ಲಿ ಗೌತಮನು ಶಿವನ ಕೃಪೆಯಿಂದ ತನ್ನ ಆಶ್ರಮದಲ್ಲಿ ಬೆಳೆದ ಧಾನ್ಯದಿಂದಲೇ ಅನೇಕ ಸಹಸ್ರ ಬ್ರಾಹ್ಮಣರನ್ನು ರಕ್ಷಿಸಿದನು. ಕ್ಷಾಮ ತೀರಿದಮೇಲೆ ಆ ಬ್ರಾಹ್ಮಣರು ದುರಾಲೋಚನೆಯಿಂದ ಮಾಯಾ ಗೋವೊಂದನ್ನು ನಿರ್ಮಿಸಿ ಗೌತಮನ ಮುಂದೆ ನಿಲ್ಲಿಸಲು ಅವನು ಅದರ ಮೈತುರಿಸಲೆಂದು ದೇಹಸ್ಪರ್ಶಮಾಡಲು ಒಡನೆಯೇ ಅದು ಬಿದ್ದು

ಪ್ರಾಣಬಿಟ್ಟಿತು. ಗೌತಮನು ಶಿವನ ಮುಖದಿಂದ ಬ್ರಾಹ್ಮಣರ ಕಪಟವನ್ನು ತಿಳಿದು, ಆ ದ್ರೋಹಿಗಳಿಗೆ ಪಾಷಂಡರಾಗುವಂತೆ ಶಾಪವಿತ್ತನು. ನಾರಾಯಣನು ಮುನಿಯ ಈ ಶಾಪವನ್ನು ಸಫಲಗೊಳಿಸುವುದಕ್ಕಾಗಿ ಬೌದ್ಧಾವತಾರವನ್ನು ತಾಳಿ, ಜನರಿಗೆ ನಾಸ್ತಿಕವಾದವನ್ನು ಬೋಧಿಸಿ, ಜನರನ್ನು ಪಾಷಂಡರನ್ನಾಗಿ ಮಾಡಿದನು.

ಪಿಂಗಲ -- ೧. ಜನಮೇಜಯನ ಸರ್ಪಯಾಗದ ಸದಸ್ಯ. ೨. ದೇಹದ ಮೂರು ಮುಖ್ಯ ನಾಡಿಗಳಲ್ಲೊಂದು. ಇಡಾ, ಪಿಂಗಲಾ, ಸುಷುಮ್ನಾ ನಾಡಿಗಳು, ಗುದಸ್ಥಾನದ ಮೇಲ್ಭಾಗದಿಂದ ಹೊರಟು ಹುಬ್ಬುಗಳ ನಡುವೆ ಬರುವ ನಾಡಿಗಳು. ನಮ್ಮ ದೇಹದಲ್ಲಿ ಪ್ರಾಣಮಾರ್ಗವನ್ನು ಆಶ್ರಯಿಸಿಕೊಂಡಿರುವ ಮುಖ್ಯ ನಾಡಿಗಳು, ಇಡಾ, ಪಿಂಗಳಾ, ಸುಷುಮ್ನಾ ಎಂಬ ಮೂರು. ಈ ಮೂರು ಪ್ರಾಣಗಳ ಬೆನ್ನುಹುರಿಯಲ್ಲಿವೆ. ಈ ಮೂರರಲ್ಲಿ ಸುಷುಮ್ನೆಯು ಮಧ್ಯದ ನಾಡಿ. ಯಾವಾಗ ವಾಯುವು ಸುಷುಮ್ನಾ ನಾಡಿಯನ್ನು ಪ್ರವೇಶಮಾಡಿ ಬ್ರಹ್ಮರಂಧ್ರದಲ್ಲಿ ನಿಲ್ಲುವುದೋ ಆಗ ಚಿತ್ತನಿರೋಧವಾಗುವುದೆಂದು ಅಮೃತಸಿದ್ಧಿಯಲ್ಲಿ ಹೇಳಿದೆ (ಭ.ಸಾ.ವಿ) ೩. ಮಿಥಿಲಾನಗರಿಯಲ್ಲಿದ್ದ ಒಬ್ಬ ಸೂಳೆ. ಈಕೆ ಅತ್ಯಂತ ಸುಂದರಿಯಾಗಿದ್ದಳು. ಪ್ರತಿ ದಿನವೂ ಈಕೆ ತನ್ನ ಕುಲಧರ್ಮಾನುಸಾರವಾಗಿ ಶೃಂಗಾರ ಮಾಡಿಕೊಂಡು ಬಾಗಿಲ ಬಳಿ ನಿಂತು ತನಗೆ ಅನುರೂಪನಾದ ಪುರುಷನೊಬ್ಬನೂ ಬಾರದಿದ್ದುದನ್ನು ಕಂಡು ಬೇಸತ್ತು ತನ್ನ ಹಿಂದಣ ಜನ್ಮದ ಪರಿತಾಪದಿಂದ ವೈರಾಗ್ಯಹೊಂದಿ ಜನ್ಮ ಜರಾಮರಣಶೂನ್ಯನಾದ ಪರಮಾತ್ಮನು ತನ್ನಲ್ಲೇ ಇರುವಾಗ ಹೀನಪುರುಷರನ್ನೇಕೆ ಹಾರೈಸಬೇಕೆಂದು ವೈರಾಗ್ಯ ಹೊಂದಿ ನಿಶ್ಚಿಂತೆಯಿಂದ ಮಲಗಿಕೊಳ್ಳುತ್ತಿದ್ದಳು. ಈಕೆ ಕ್ರಮವಾಗಿ ಪರಮಾತ್ಮ ಸ್ವರೂಪವನ್ನರಿತು ಧನ್ಯೆಯಾದಳು (ಭಾಗ., ಮ.ಆ., ಶಾಂ)

ಪಿಂಗಲಕ -- ಯಕ್ಷನೊಬ್ಬ (ಮ.ಸ.)

ಪಿಂಗಲೆ -- ೧. ವೇಶ್ಯೆಯೊಬ್ಬಳು. ಈಕೆ ಮತ್ತು ಮಂದರನೆಂಬ ಬ್ರಾಹ್ಮಣನು ಶಿವಯೋಗಿಯೊಬ್ಬನ ಸೇವೆಯಿಂದ ಸದ್ಗತಿಪಡೆದರು. ೨. ವೇಶ್ಯೆಯೊಬ್ಬಳು. ಅಲಂಕರಿಸಿಕೊಂಡು ರಾತ್ರಿಯೆಲ್ಲ ವಿಟರನ್ನು ನಿರೀಕ್ಷಿಸಿ ವ್ಯರ್ಥವಾಗಲು 'ಆಸೆಯೇ ದುಃಖವೆಂದೂ, ನಿರಾಶೆಯೇ ಪರಮಸುಖವೆಂದೂ' ತನ್ನಲ್ಲಿಯೇ ಈಕೆ ನಿರ್ಧರಿಸಿಕೊಂಡಳು. ಈ ಭಾವನೆಯಿಂದಲೇ ಈಕೆ ಮುಂದೆ ಆತ್ಮ ಸಾಕ್ಷಾತ್ಕಾರ ಪಡೆದಳು. (ಮ.ಶಾಂ., ಭಾಗ.) ೩. ಮೂಗಿನ ಬಲಗಡೆಯ ಶ್ವಾಸೋಚ್ಛ್ವಾಸದ ಮಾರ್ಗವೇ ಪಿಂಗಳ; ಎಡಗಡೆಯ ಮಾರ್ಗಕ್ಕೆ ಇಡಾ ಎನ್ನುತ್ತಾರೆ. ಯೋಗಿಗಳ

ಬೆನ್ನುಮೂಳೆಗಳ ನಡುವೆ ಸುಷುಮ್ನಾ ಕಾಲುವೆ. ಅದರ ಎರಡು ಪಾರ್ಶ್ವಗಳಲ್ಲಿ ಇಡಾ ಮತ್ತು ಪಿಂಗಳಗಳೆಂಬ ಶಕ್ತಿಗಳಿವೆ. ಸಾಧಾರಣ ಮಾನವರಲ್ಲಿ ಈ ಸುಷುಮ್ನಾ ಕಾಲುವೆ ಮುಚ್ಚಿರುವುದು. ಅದರ ಚಲನೆ ಅಷ್ಟು ಗೋಚರಿಸುವುದಿಲ್ಲ. ಆದರೆ ಇಡಾ ಮತ್ತು ಪಿಂಗಳ -- ದೇಹದ ನಾನಾಭಾಗಗಳಿಗೆ ಶಕ್ತಿಯನ್ನು ಒದಗಿಸುತ್ತದೆಂದು ಯೋಗಿಗಳು ಹೇಳುತ್ತಾರೆ.

ಪಿಂಗೆ -- ಮಾಂಡುಕಿಯ ಐತರೇಯನೆಂಬ ಮಗನು ಹೆಡ್ಡನೆಂದು ಭಾವಿಸಿ ಪಿಂಗೆಯೆಂಬ ಪತ್ನಿಯನ್ನು ವಿವಾಹವಾಗಿ ನಾಲ್ವರು ಮಕ್ಕಳನ್ನು ಪಡೆದನು. ನೋ -- ಐತರೇಯ.

ಪಿಂಡದಾನ -- ಪಿತೃಗಳಿಗೆ ಸಲ್ಲಿಸುವ ಅನ್ನದ ಗೋಲಗಳು ಇವುಗಳಲ್ಲಿ ಮಧ್ಯಮ ಪಿಂಡವನ್ನು ಪತ್ನಿಯೇ ಉಂಡರೆ ಪುತ್ರೋತ್ಪತ್ತಿಯಾಗುವುದು (ಮ.ಅನು)

ಪಿಂಡಾರಕ -- ೧. ಒಂದು ಸರ್ಪ. ೨. ಯಾದವರೊಬ್ಬ ೩. ತೀರ್ಥ (ಮ.ವ., ಆ.)

ಪಿತೃಗಳು -- ದೇವತೆಗಳಲ್ಲೊಂದು ಪಂಗಡ. ಇವರಲ್ಲಿ ಅಗ್ನಿಷ್ವಾತ್ತರು, ಬರ್ಹಿಷದರು, ಸೋಮಪರು, ಆಜ್ಯಪರು, ಕಾವ್ಯರು ಮೊದಲಾದ ಹಲವು ಭೇದಗಳಿವೆ. ಇವರ ಪತ್ನಿ ದಕ್ಷನ ಮಗಳಾದ ಸ್ವಧೆ. ಚತುರ್ಮುಖನ ಮೂವತ್ತನೆಯ ದಿನಕ್ಕೆ ಪಿತೃಕಲ್ಪ ಎಂದು ಹೆಸರು; ಅಂದರೆ ಅಮಾವಾಸ್ಯೆಗೆ ಈ ಹೆಸರು ಸಲ್ಲುತ್ತದೆ (ಮ.ಸ.ಹರಿ., ಶಾಂ., ಮತ್ಸ್ಯಪು)

ಪಿತಾಮಹ -- ೧. ಬ್ರಹ್ಮ. ೨. ಭೀಷ್ಮ

ಪಿತೃವರ್ತಿ -- ಕುರುಕ್ಷೇತ್ರದ ಕೌಶಿಕನೆಂಬ ಮುನಿಯ ಕಿರಿಯ ಮಗ. ಇವನಿಗೆ ಸ್ವಸೃಪ, ಕ್ರೋಧನ, ಹಿಂಸಾ, ಪಿಶುನ, ಕವಿ ಮತ್ತು ವಾಗ್ದುಷ್ಟರೆಂಬ ಆರು ಮಂದಿ ಅಣ್ಣಂದಿರಿದ್ದರು. ಇವರೆಲ್ಲ ಗರ್ಗಮುನಿಯಲ್ಲಿ ಅಭ್ಯಾಸಮಾಡುತ್ತಿರುವಾಗ ಒಂದು ಭಯಂಕರವಾದ ಕ್ಷಾಮವು ಬಂತು. ಆಗ ಈ ಸೋದರರೆಲ್ಲ ಗುರುವಿನ ಗೋವನ್ನೇ ತಿನ್ನಬೇಕೆಂದು ನಿರ್ಧರಿಸಿದರು. ಪಿತೃವರ್ತಿಯು ತಂದೆಯ ಶ್ರಾದ್ಧದಲ್ಲಿ ತನ್ನ ಸೋದರರನ್ನೇ ವಿಶ್ವೇದೇವಸ್ಥಾನದಲ್ಲಿಯೂ, ಪಿತೃಸ್ಥಾನದಲ್ಲಿಯೂ, ಅತಿಥಿಸ್ಥಾನದಲ್ಲಿಯೂ ಇಟ್ಟುಕೊಂಡು ಆ ಗೋಮಾಂಸವನ್ನು ತಿಂದು 'ಹಸುವನ್ನು ಹುಲಿ ತಿಂದಿತು' ಎಂದು ಗುರುಗಳಿಗೆ ತಿಳಿಸಿದರು. ಗುರುಗಳೊಡನೆ ಸುಳ್ಳು ಹೇಳಿದ ಇವರು ಮುಂದಿನ ಜನ್ಮದಲ್ಲಿ ದಶಾರಣ ದೇಶದ ಬೇಡರಾಗಿ ಹುಟ್ಟಿದರು. ಗೋಮಾಂಸವನ್ನು ಪಿತೃದೇವತೆಗಳಿಗೆ ಅರ್ಪಿಸಿದುದರಿಂದ ಇವರಿಗೆ ಪೂರ್ವಜನ್ಮದ ಸ್ಮರಣೆ ಉಳಿದಿತ್ತು. ಮುಂದಿನ ಜನ್ಮಗಳಲ್ಲಿ ಇವರು ಕ್ರಮವಾಗಿ ಜಿಂಕೆಗಳು, ಚಕ್ರವಾಕ ಪಕ್ಷಿಗಳು, ಹಂಸಪಕ್ಷಿಗಳಾಗಿ ಜನ್ಮಿಸಿದರು.

ಮುಂದೆ ಇವರಲ್ಲಿ ಪಿತೃವರ್ತಿಯು ರಾಜನಾಗಲು ಉಳಿದಿಬ್ಬರು ಸೋದರರು ಮಂತ್ರಿಗಳಾಗಿ ಹುಟ್ಟಿದರು. ಇದರಿಂದ ಕೊಲ್ಲಲ್ಪಟ್ಟ ದನವು ಸನ್ನತಿಯೆಂಬ ಹೆಸರಿನಿಂದ ದೇವಲ ಮುನಿಯ ಮಗಳಾಗಿ ಹುಟ್ಟಿ ಆ ರಾಜನ -- ಬ್ರಹ್ಮದತ್ತನ -- ಪತ್ನಿಯಾದಳು. ಮುಂದೆ ಇವರೆಲ್ಲ ತಪಸ್ಸು ಮಾಡಿ ಸದ್ಗತಿ ಪಡೆದರು (ಮತ್ಸ್ಯಪು., ಶಿವಪು)

ಪಿನಾಕ -- ಶಿವನ ಬಿಲ್ಲು. ನೋ--ಶಿವ

ಪಿಪ್ಪಲಾದ -- ಋಷಿಯೊಬ್ಬ; ದಧೀಚಿಮುನಿಯ ಪುತ್ರ. ನೋ -- ದಧೀಚಿ. ಈತನ ತಾಯಿ ಸುವರ್ಚಾ; ಹೆಂಡತಿ ಅನರಣ್ಯನ ಮಗಳಾದ ಪದ್ಮಾವತಿ. ಈತನು ಶನೀಶ್ವರನಿಗೆ ೧೨ ವರ್ಷಕ್ಕಿಂತ ಕಿರಿಯರನ್ನು ಪೀಡಿಸಬಾರದೆಂದು ಆಜ್ಞೆ ಮಾಡಿದನು. ಆದಕ್ಕೆ ಶನಿ ಒಪ್ಪಿದನು. (ಮ.ಶಾಂ.) ನಚಿಕೇತನು ಈತನಿಗೆ ಜೀವನ - ಮರಣಾನಂತರದ ವಿಷಯಗಳನ್ನೂ ನರಕ -- ಯಮಲೋಕದ ಕುರಿತೂ ಹೇಳಿದನು (ಮ.ಶಾಂ.)

ಪಿಶಿತಾಶಿನಿ -- ಪೂರ್ವದಲ್ಲಿ ಕಶ್ಯಪ ಮಹರ್ಷಿಗಳ ಪತ್ನಿಯಾದ ಆದಿತಿಯು ತನ್ನ ಮಕ್ಕಳಾದ ಇಂದ್ರಾದಿಗಳ ಬಾಲಕ್ರೀಡೆಯಲ್ಲಿ ತನ್ಮಯಳಾಗಿರಲು, ಅಸಿತಮುನಿಯು ಬಂದುದನ್ನು ಲಕ್ಷ್ಯಮಾಡದೆ ಅನ್ಯಮನಸ್ಕನಾಗಿರಲು, ಅಸಿತಮುನಿಗಳು ಅದಿತಿಗೆ 'ರಾಕ್ಷಸಿಯಾಗಿ ಹುಟ್ಟು' ಎಂದು ಶಪಿಸಿದರು. ಇದರ ಪರಿಣಾಮವಾಗಿ ಅದಿತಿಯು ಪಿಶಿತಾಶಿನಿಯಾಗಿ ಹುಟ್ಟಿದಳು. ಈಕೆ ವೇದಾಪಹಾರ ಮಾಡಿದ ತಮನ ಹೆಂಡತಿಯಾದಳು. ತಮನು ವೇದಗಳನ್ನು ಕದ್ದು ಸಮುದ್ರದಲ್ಲಿ ಅಡಗಲು ವಿಷ್ಣುವು ತಮನನ್ನು ಕೊಂದನು. ಪಿಶಿತಾಶಿನಿಯು ದುಃಖಾರ್ತಳಾಗಿ ತನ್ನ ರಾಕ್ಷಸಜನ್ಮದ ಪರಿಹಾರಕ್ಕಾಗಿ ಧಾರಾನದಿಯ ತೀರಕ್ಕಾಗಿ ಬಂದಳು. ಆಮೇಲೆ ಎಷ್ಟೋ ತೀರ್ಥಕ್ಷೇತ್ರಗಳಲ್ಲಿ ಮಿಂದರೂ ಶಾಪವಿಮೋಚನೆಯಾಗದ ಆಕೆಯು ಆ ನದಿಯಲ್ಲಿ ಮೀಯಲು ಶಾಪವಿಮೋಚನೆಯಾಗಿ ಸ್ಕಂಧ ಮತ್ತು ವಾಸುಕಿಯನ್ನು ಆರಾಧಿಸಿ ಸುರಲೋಕಕ್ಕೆ ಹೋದಳು. ಅಲ್ಲಿ ಆಕೆಗೆ ಕಶ್ಯಪರು ಸುಬ್ರಹ್ಮಣ್ಯಕ್ಷೇತ್ರದ ಮಹಿಮೆಯನ್ನು ಹೇಳಿದರು. ನೋ -- ಸುಬ್ರಹ್ಮಣ್ಯ ಷಷ್ಠಿ.

ಪೀಠಾಸುರ -- ನರಕಾಸುರನ ಸೇನಾಪತಿ. ಮುರನ ಏಳುಮಂದಿ ಮಕ್ಕಳ ಸೇನೆಯ ಸೇನಾಪತಿ. ಈ ಮಕ್ಕಳೂ ಈ ಸೇನಾಪತಿಯೂ ಶ್ರೀಕೃಷ್ಣನ ಆಯುಧಗಳಿಂದ ಹತರಾದರು (ಭಾಗ.) ನೋ-- ಮುರ, ನರಕ.

ಪೀವರಿ -- ವಿಭ್ರಾಜರೆಂಬ ಪಿತೃದೇವತೆಗಳ ಮಗಳು. ಈಕೆ ವಿಷ್ಣುವನ್ನು ತಪಸ್ಸಿನಿಂದ ಮೆಚ್ಚಿಸಿ ರೂಪಸುಂದರನೂ ಜಿತೇಂದ್ರಿಯನೂ ಆದ ಪತಿಯನ್ನು

ಪ್ರಾರ್ಥಿಸಿದುದರಿಂದ ಹರಿಯ ಅನುಗ್ರಹದಿಂದ ವ್ಯಾಸಮುನಿಯ ಪುತ್ರನಾದ ಶುಕನು ಈಕೆಯ ಪತಿಯಾದನು. ಈಕೆಗೆ ಕೃಷ್ಣ, ಗೌರಪ್ರಭ, ಭೂರಿಶ್ರುತ, ಜಯರೆಂಬ ಐವರು ಮಕ್ಕಳೂ, ಕೃತ್ವಿ ಎಂಬ ಪುತ್ರಿಯೂ ಇದ್ದಳು. ಕೃತ್ವಿಯನ್ನು ಚಂದ್ರವಂಶದ ಅಣುಹನೆಂಬ ರಾಜನು ವಿವಾಹವಾದನು (ಮತ್ಸ್ಯಪು., ಭಾಗ., ದೇವೀಭಾ)

ಪುಂಜಿಕಸ್ಥಲಾ -- ಅಪ್ಸರೆಯೊಬ್ಬಳು. ಈಕೆಯು ಶಾಪದಿಂದ ಕುಂಜರನೆಂಬ ಕಪಿ ನಾಯಕನ ಮಗಳಾಗಿ ಹುಟ್ಟಿದಳು. ಇವಳೇ ಅಂಜನೆ. ಇವಳ ತಾರುಣ್ಯದಲ್ಲಿ ವಾಯುವು ಇವಳನ್ನು ಮೋಹಿಸಿ ಕೂಡಲು, ಆಂಜನೇಯನು ಜನಿಸಿದನು. ನೋ -- ಅಂಜನಾ, ಆಂಜನೇಯ, ಕಲಾವತಿ, ಪಾರ (ಮ.ಆ., ಸ., ರಾಮಾ. ಕಿಷ್ಕಿಂ)

ಪುಂಡರೀಕ -- ೧. ಯಮಸಭೆಯ ಕ್ಷತ್ರಿಯನೊಬ್ಬ. ೨. ನಾರದನೊಡನೆ ನಾರಾಯಣನೇ ಸರ್ವೋತ್ತಮ ಎಂಬ ವಿಚಾರದಲ್ಲಿ ವಾದ ಮಾಡಿದ ಬ್ರಾಹ್ಮಣ (ಮ.ಅನು) ೩. ಆಗ್ನೇಯ ದಿಕ್ಕಿನ ದಿಗ್ಗಜ ೪. ಸಂಜೀವನ ಮಣಿಯನ್ನು ಕಾಯುತ್ತಿದ್ದ ಸರ್ಪರಾಜ. ಬಭ್ರುವಾಹನನು ಅರ್ಜುನನನ್ನು ಕೊಂದು, ಕೊನೆಗೆ ಆತನು ತನ್ನ ತಂದೆ ಎಂದು ತಿಳಿದು ಆತನನ್ನು ಬದುಕಿಸಲು ಸಂಜೀವನ ಮಣಿಯನ್ನು ತರಬೇಕೆಂದು ಈತನನ್ನು ಮಹಾಶೇಷನಲ್ಲಿ ಕಳುಹಿಸಿದ್ದ. ಆದರೆ ಧೃತರಾಷ್ಟ್ರನೆಂಬ ಸರ್ಪದ ಸೂಚನೆಯಂತೆ ಶೇಷನು ಪುಂಡರೀಕನಿಗೆ ಆ ರತ್ನವನ್ನು ಒಪ್ಪಿಸಲು ತಿರಸ್ಕರಿಸಲು ಬಭ್ರುವಾಹನನು ಪಾತಾಳಕ್ಕೆ ದಂಡೆತ್ತಿ ಬಂದು ನಾಗರನ್ನು ಗೆದ್ದು ಈ ಮಣಿಯನ್ನು ಭೂಮಿಗೆ ತಂದನು. ಇದರಿಂದ ಅರ್ಜುನ ಮತ್ತು ವೃಷಕೇತುಗಳು ಬದುಕಿದರು (ಜೈ.ಭಾ) ೫. ವಿಷ್ಣು ೬. ಕೃಷ್ಣ ೭. ಬಿಳಿಕಮಲ.

ಪುಂಡರೀಕಾ -- ೧. ಅಪ್ಸರೆ ೨. ವಸಿಷ್ಠ -- ಊರ್ಜಾಲೆಯ ಮಗಳು. ನೋ -- ವಸಿಷ್ಠ

ಪುಂಡ್ರ -- ೧. ಒಂದು ದೇಶ. ಈ ದೇಶಕ್ಕೆ ಪೌಂಡ್ರಕ ವಾಸುದೇವನು ರಾಜನಾಗಿದ್ದನು. ಈ ದೇಶವನ್ನು ಕರೂಶ ದೇಶವೆನ್ನುವುದೂ ಉಂಟು. ಈ ವಾಸುದೇವನು ಕೃಷ್ಣನನ್ನು ದ್ವೇಷಿಸಿ ಆತನೊಡನೆ ಯುದ್ಧಮಾಡಿ ಆತನಿಂದ ಮೃತನಾದನು (ಮ.ಸ) ೨. ಬಲಿಯೆಂಬ ರಾಜನ ಪತ್ನಿಯಾದ ಸುದೇಷ್ಣೆಯಲ್ಲಿ ದೀರ್ಘತಮಸನೆಂಬ ಮುನಿಯಿಂದ ಹುಟ್ಟಿದ ಮಗ. ಅಂಗ, ವಂಗ ಮೊದಲಾದವರು ಈತನ ಸಹೋದರರು. ನೋ -- ಬಲಿ, ದೀರ್ಘತಮ (ಮ.ಆ)

ಪುತ್ರ -- ೧. ಸೂರ್ಯವಂಶದ ಬ್ರಹ್ಮಿಷ್ಠರಾಜನ ಮಗ. ಅವನ ಮಗ ಪುಷ್ಯನಕ್ಷತ್ರಯುಕ್ತವಾದ ಪೌರ್ಣಿಮೆಯಲ್ಲಿ ಹುಟ್ಟಿದುದರಿಂದ ಪುಷ್ಯನೆಂದೇ

ಹೆಸರು. ಪುತ್ರನು ಜೈಮಿನಿಯ ಶಿಷ್ಯ. ಇವನು ಯೋಗವಿದ್ಯೆಯಿಂದ ಶರೀರ ಬಿಟ್ಟನು. ೨. ಪುನ್ನಾಮ ನರಕದಿಂದ ಉದ್ಧರಿಸುವವ -- ಮಗ.

ಪುನರ್ವಸು -- ೧. ದಕ್ಷನ ಮಗಳು. ಈಕೆ ಚಂದ್ರನ ಪತ್ನಿ; ಒಂದು ನಕ್ಷತ್ರ (ವಿಷ್ಣುಪು., ಮ.ಆ.) ೨. ಯದುವಂಶದ ಅರಿದ್ಯೋತನೆಂಬ ರಾಜನ ಮಗ. ಕಂಸನ ತಂದೆಯಾದ ಉಗ್ರಸೇನನ ತಂದೆ. ಇವನಿಗೆ ಅಹುಕ ಮತ್ತು ಆಹುತಿ ಎಂಬಿಬ್ಬರು ಮಕ್ಕಳು (ಭಾಗ., ವಿಷ್ಣುಪು)

ಪುರಂಜಯ -- ಇಕ್ಷ್ವಾಕುವಿನ ಮೊಮ್ಮಗ. ಶಶಾದನ (ವಿಕುಕ್ಷಿ) ಮಗ. ನೋ. -- ಇಂದ್ರವಾಹ.

ಪುರಂದರ -- ಈಗಿನ ವೈವಸ್ವತ ಮನ್ವಂತರದ ಇಂದ್ರ. ಈತನ ತಂದೆ ಕಶ್ಯಪ; ತಾಯಿ ಅದಿತಿ. ನೋ.-- ಇಂದ್ರ, ಜಯಂತ.

ಇಂದ್ರರು ಹದಿನಾಲ್ಕು ಮಂದಿ -- ಯಜ್ಞ, ರೋಚನ, ಸತ್ಯಜಿತ್, ತ್ರಿಶಿಖ, ವಿಭು, ಮಂತ್ರದ್ರುಮ, ಪುರಂದರ, ಬಲಿ, ಅದ್ಭುತ, ಶಂಭು, ವೈವೃತಿ, ಋತಧಾಮ, ದಿವಸ್ಪತಿ, ಶುಚಿ. ಪುರಂದರನು ನೂರು ಅಶ್ವಮೇಧಯಾಗಗಳನ್ನು ಮಾಡಿ ಇಂದ್ರನಾದ. ಚತುರ್ಮುಖನ ಒಂದು ಹಗಲಿನಲ್ಲಿ ಹದಿನಾಲ್ಕು ಮಂದಿ ಇಂದ್ರರು ಆಳುವರು. ಇವರಲ್ಲಿ ಈಗ ಇರತಕ್ಕ ಇಂದ್ರನು ಏಳನೆಯವನು. ಇವನಿಗೆ ಪುರುದರನೆಂಬುದು ಹೆಸರು. ಇಂದ್ರನೆಂಬುದು ಅಧಿಕಾರದ ಹೆಸರು (ಭಾಗ) ೨. ಪುರಂದರಗಡದ ದಾಸರು.

ಪುಣ್ಯನಿಧಿ -- ಚಂದ್ರವಂಶದ ರಾಜನೊಬ್ಬ. ನೋ -- ಸೇತುಮಾಧವ.

ಪುರಾಣ -- ವೇದಾರ್ಥವನ್ನು ನಿರ್ಣಯ ಮಾಡುವ ಋಷಿಪ್ರೋಕ್ತವಾದ ಗ್ರಂಥ. ಇವುಗಳಲ್ಲಿ ಮಹಾಪುರಾಣ ಮತ್ತು ಉಪಪುರಾಣವೆಂದು ಎರಡು ವಿಧ. ಮಹಾಪುರಾಣಗಳು ಹದಿನೆಂಟು:

೧. ಬ್ರಹ್ಮಪುರಾಣ, ೨. ಪದ್ಮಪುರಾಣ, ೩. ವಿಷ್ಣುಪುರಾಣ, ೪.ಶಿವಪುರಾಣ, ೫. ಭಾಗವತಪುರಾಣ (ದೇವೀಭಾಗವತ), ೬.ನಾರದೀಯಪುರಾಣ, ೭. ಮಾರ್ಕಂಡೇಯಪುರಾಣ, ೮. ಅಗ್ನಿಪುರಾಣ, ೯.ಭವಿಷ್ಯತ್ ಪುರಾಣ, ೧೦. ಬ್ರಹ್ಮವೈವರ್ತಪುರಾಣ, ೧೧. ಲಿಂಗಪುರಾಣ, ೧೨. ವರಾಹಪುರಾಣ, ೧೩. ಸ್ಕಾಂಧಪುರಾಣ, ೧೪. ವಾಮನಪುರಾಣ, ೧೫.ಕೂರ್ಮಪುರಾಣ, ೧೬. ಮತ್ಸ್ಯಪುರಾಣ, ೧೭. ಗರುಡಪುರಾಣ, ೧೮,ಬ್ರಹ್ಮಾಂಡ ಪುರಾಣ. ಇವುಗಳಲ್ಲಿ ಒಟ್ಟು ನಾಲ್ಕು ಲಕ್ಷ ಶ್ಲೋಕಗಳಿವೆ. ಇವುಗಳಲ್ಲಿ ಹತ್ತು ಶಿವಪುರಾಣಗಳು, ನಾಲ್ಕು ವಿಷ್ಣುಪುರಾಣಗಳು, ಎರಡು ಬ್ರಹ್ಮಪುರಾಣಗಳು, ಒಂದು ಸೂರ್ಯಪುರಾಣ, ಒಂದು ಅಗ್ನಿ ಪುರಾಣ.

ಅಷ್ಟಾದಶ ಪುರಾಣಗಳ ಶ್ಲೋಕ ಸಂಖ್ಯೆ

ಪುರಾಣ	ಶ್ಲೋ.ಸಂ.	ಪುರಾಣ	ಶ್ಲೋ.ಸಂ.
೧. ಬ್ರಹ್ಮ	೧೦,೦೦೦	೧೦. ಬ್ರಹ್ಮವೈವರ್ತ	೧೮,೦೦೦
೨. ಪದ್ಮ	೨೫,೦೦೦	೧೧. ಲಿಂಗ	೧೧,೦೦೦
೩. ವಿಷ್ಣು	೨೩,೦೦೦	೧೨. ವರಾಹ	೨೪,೦೦೦
೪. ಶಿವ	೨೪,೦೦೦	೧೩. ಸ್ಕಾಂಧ	೮೧,೦೦೦
೫. ಭಾಗವತ	೧೮,೦೦೦	೧೪. ವಾಮನ	೧೦,೦೦೦
೬. ನಾರದೀಯ	೨೫,೦೦೦	೧೫. ಕೂರ್ಮ	೧೭,೦೦೦
೭. ಮಾರ್ಕಂಡೇಯ	೯,೦೦೦	೧೬. ಮತ್ಸ್ಯ	೧೪,೦೦೦
೮. ಅಗ್ನಿ	೧೫,೪೦೦	೧೭. ಗರುಡ	೧೯,೦೦೦
೯. ಭವಿಷ್ಯತ್	೧೪,೫೦೦	೧೮. ಬ್ರಹ್ಮಾಂಡ	೧೨,೦೦೦

ಉಪಪುರಾಣಗಳು ಹದಿನೆಂಟು -- ಸನತ್ಕುಮಾರಪುರಾಣ, ನಾರಸಿಂಹಪುರಾಣ, ನಂದಿಪುರಾಣ, ಶಿವಧರ್ಮಪುರಾಣ, ದುರ್ವಾಸಪುರಾಣ, ನಾರದೀಯಪುರಾಣ, ಕಪಿಲಪುರಾಣ, ಮಾನವಪುರಾಣ, ಉಶನಃಪುರಾಣ, ಬ್ರಹ್ಮಾಂಡಪುರಾಣ, ವಾರುಣಪುರಾಣ, ಕಾಳೀಪುರಾಣ, ವಾಪಿಷ್ಠಲೈಂಗಪುರಾಣ, ಸಾಂಬಪುರಾಣ, ಸೌರಪುರಾಣ, ಪರಾಶರಪುರಾಣ, ಮರೀಚಿಪುರಾಣ, ಭಾರ್ಗವಪುರಾಣ. ಮಹಾಪುರಾಣಕ್ಕೆ ಸರ್ಗ, ವಿಸರ್ಗ, ವೃತ್ತಿ, ರಕ್ಷಾ, ಅಂತರ, ವಂಶ, ವಂಶಾನುಚರಿತ, ಸಂಸ್ಥಾ, ಹೇತು, ಅಪಾಶ್ರಯವೆಂಬ ಹತ್ತು ಲಕ್ಷಣಗಳಿವೆ.

ಉಪಪುರಾಣಗಳಲ್ಲಿ ಸರ್ಗ, ಪ್ರತಿಸರ್ಗ, ವಂಶ, ಮನ್ವಂತರ ವಂಶಾನುಚರಿತೆಗಳೆಂಬ ಐದು ಲಕ್ಷಣಗಳಿರಬೇಕು. ಮಹಾಪುರಾಣಗಳಲ್ಲಿ ಭಾಗವತವು ನವೀನಗ್ರಂಥವೆಂದೂ, ದೇವೀಭಾಗವತವೇ ಪುರಾಣಗಳ ಸಾಲಿಗೆ ಸೇರತಕ್ಕ ಗ್ರಂಥವೆಂದೂ ಹಲವರು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ವೇದಗಳಿಗಿಂತಲೂ ಇವೇ ಪ್ರಾಚೀನವಾದವುಗಳೆನ್ನುತ್ತಾರೆ. ವ್ಯಾಸರೇ ಈ ಹದಿನೆಂಟು ಪುರಾಣಗಳನ್ನು ಬರೆದರೆಂಬುದರಲ್ಲಿ ಭಿನ್ನಾಭಿಪ್ರಾಯಗಳಿವೆ. (ಮ.ಆ., ದೇವೀಭಾ., ಮತ್ಸ್ಯಪು., ಕೂರ್ಮಪು.)

ಪುರುಕುತ್ಸ -- ೧. ಸೂರ್ಯವಂಶದ ರಾಜನೊಬ್ಬ. ಈತನ ತಂದೆ ಯುವನಾಶ್ವ. ರಸಾತಲದಲ್ಲಿದ್ದ ಮೌನೆಯರೆಂಬ ಆರುಕೋಟಿ ಗಂಧರ್ವರ ಪೀಡೆಯನ್ನು ಸಹಿಸಲಾರದೆ ನಾಗರು ನಾರಾಯಣನನ್ನು ಪ್ರಾರ್ಥಿಸಲು ಪುರಾಣಪುರುಷನಾದ

ನಾರಾಯಣನು ಪುರುಕುತ್ಸನೆಂಬ ರಾಜನ ಶರೀರವನ್ನು ಪ್ರವೇಶಿಸಿ ನಾಗರನ್ನು ನಾಶಮಾಡುವೆನೆಂದು ಭರವಸೆ ಇತ್ತನು. ಈತನ ಪತ್ನಿಯೇ ನರ್ಮದೆ. ಈ ದಂಪತಿಗಳ ಮಗನೇ ತ್ರಸದಸ್ಯು (ವಿಷ್ಣುಪು.). ೨. ಪುರುಕುತ್ಸನು ಮಾಂಧಾತನ ಮಗ; ಈತನ ತಾಯಿ ಬಿಂದುಮತಿ. ಈತನ ಮಗನೇ ಅನರಣ್ಯ (ಮ.ಸ., ಅನು) ನೋ -- ನರ್ಮದಾ, ಅನರಣ್ಯ.

ಪುರುಜಿತ್ -- ಕುಂತೀಭೋಜನ ಮಗ; ಪೃಥೆಯ (ಕುಂತಿ) ಸೋದರ. ಈತ ಅತಿರಥ. ಇವನು ದ್ರೋಣನಿಂದ ಹತನಾದನು (ಮ.ಉ., ಭೀ., ದ್ರೋ)

ಪುರುಮಿತ್ರ -- ದುರ್ಯೋಧನ ಪಕ್ಷದ ಕ್ಷತ್ರಿಯ (ಮ.ಭೀ)

ಪುರುಮೀಢ -- ಚಂದ್ರವಂಶದ ಭುಮನ್ಯುವಿನ ಮಗನಾದ ಸುಹೋತ್ರನ ಮಗ *(ಮ.ಆ.)*

ಪುರುಷಾಮೃಗ -- ಮಾನಸ ಸರೋವರದ ತೀರದಲ್ಲಿ ಶಿವಾರ್ಚನೆ ಮಾಡುತ್ತಿದ್ದ ಈ ಮೃಗವನ್ನು ಕೃಷ್ಣನ ಅಪ್ಪಣೆಯಂತೆ ರಾಜಸೂಯ ಯಾಗದಲ್ಲಿ ಎಂಜಲಿನ ಅತಿಶುದ್ಧಿಗಾಗಿ ಭೀಮಸೇನನು ಇಂದ್ರಪ್ರಸ್ಥಕ್ಕೆ ತಂದನು (ಕು.ವ್ಯಾ.ಭಾ)

ಪುರೂರವ -- ಚಂದ್ರಪುತ್ರನಾದ ಬಂಧನ ಮಗ; ಈತನ ತಾಯಿ ಇಳೆ. ಬ್ರಹ್ಮದೇವನಿಂದ ಶಪಿತಳಾದ ಊರ್ವಶಿಯು ಈತನ ಪತ್ನಿ. ಈ ಸುರಸುಂದರಿಯ ಜೊತೆಗೆ ಈ ರಾಜರ್ಷಿಯು ಅನುಭವಿಸಿದ ದಿವ್ಯಭೋಗಗಳಿಗೆ ಲೆಕ್ಕವಿಲ್ಲ. ದೇವಗಣಿಕೆಯಾದ ಊರ್ವಶಿಯು ಈ ತರುಣ ರಾಜಪುತ್ರನನ್ನು ಕರೆದುಕೊಂಡು ಕುಬೇರನ ಚೈತ್ರವನದಲ್ಲಿ ಹದಿನೈದು ವರ್ಷ ಮಧುಚಂದ್ರನ ಮಾಧುರ್ಯವನ್ನು ಸವಿದಳು. ಹನ್ನೊಂದು ವರ್ಷ ಆಕಾಶಗಂಗೆಯ ಉತ್ಫುಲ್ಲ ಕಲ್ಹಾರವನಗಳಲ್ಲಿ ವಿಹರಿಸಿದಳು. ಅಲಕಾಪಟ್ಟಣದ ಬೆಳುದಿಂಗಳಿನ ತಂಪಿನಲ್ಲಿ ಏಳು ವರ್ಷಗಳವರೆಗೆ ಯಕ್ಷಭೋಗಗಳನ್ನು ಅನುಭವಿಸಿದಳು. ನಂದನವನದ ಮಂದಾರ ವೃಕ್ಷದಡಿಯಲ್ಲಿ ಹತ್ತು ವರ್ಷದ ರಸಾನುಭವವನ್ನು ಮಾಡಿದಳು. ಈಕೆ, ಸ್ವರ್ಗಕ್ಕೆ ಬೇಕಾದಾಗ ಹೋಗತಕ್ಕವಳು ನೆನಪಿರಲಿ ಎಂದು ರಾಜನೊಡನೆ -- ನೀನು ದಿಗಂಬರನಾಗಿದ್ದಾಗ ನನ್ನ ಕಣ್ಣಿಗೆ ಬೀಳಬಾರದು. ನಾನು ಬಯಸಿದಾಗಷ್ಟೇ ನೀನು ಬರಬೇಕು. ನನ್ನ ಪ್ರೀತಿಯ ಮಕ್ಕಳಾದ ಎರಡು ಹೋತಗಳನ್ನು ನೀನು ರಕ್ಷಿಸಬೇಕು. ನಾನು ಈ ಲೋಕದಲ್ಲಿ ಉಣ್ಣುವುದು ಕೇವಲ ತುಪ್ಪ ಮಾತ್ರ. ಅದು ಕೂಡ ಒಪ್ಪತ್ತು ಎಂದು ಸೂಚಿಸಿದಳು. ಇತ್ತ ಊರ್ವಶಿ ಇಲ್ಲದ ಸ್ವರ್ಗವು ದೇವತೆಗಳಿಗೆ ದುಃಖದ ದುರ್ಗವಾಯಿತು. ಅದಕ್ಕಾಗಿ ಅವಳನ್ನು ಸ್ವರ್ಗಕ್ಕೆ ಕರೆದೊಯ್ಯಲು ವಿಶ್ವಾವಸುವೆಂಬ ಗಂಧರ್ವನು ದೇವತೆಗಳ ಮುಂದೆ ಪ್ರತಿಜ್ಞೆಮಾಡಿ ಪ್ರತಿಷ್ಠಾನಪುರಕ್ಕೆ ಬಂದನು. ಅವನು

ಊರ್ವಶಿಯ ಹೋತಗಳನ್ನು ಆಕಾಶಮಾರ್ಗದಲ್ಲಿ ಒಯ್ಯುತ್ತಿರುವಾಗ ಆಕೆ ರಾಜನೊಡನೆ ತನ್ನ ಮಕ್ಕಳನ್ನು ಕಾಪಾಡಬೇಕೆಂದು ಬೊಬ್ಬಿಟ್ಟಳು. ಆಗ ನಗ್ನಾವಸ್ಥೆಯಲ್ಲಿದ್ದ ರಾಜನು ಗಂಧರ್ವನನ್ನು ಹಿಂಬಾಲಿಸಿದನು. ಆಗ ಗಂಧರ್ವನು ಮಿಂಚನ್ನುಂಟುಮಾಡಿ ಊರ್ವಶಿಗೆ ರಾಜನ ನಗ್ನದೇಹವು ಕಾಣುವಂತೆ ಮಾಡಿದನು. ಇದರಿಂದ ಊರ್ವಶಿಯು ರಾಜನು ಮಾತಿಗೆ ತಪ್ಪಿದನೆಂದು ಸ್ವರ್ಗಕ್ಕೆ ಹೊರಟುಹೋದಳು. ಇದರಿಂದ ರಾಜನು ಊರ್ವಶಿಯ ವಿಯೋಗ ದುಃಖವನ್ನು ಸಹಿಸಲಸಮರ್ಥನಾಗಿ ಊರೂರು ಅಲೆಯತೊಡಗಿದನು. ಅವನು 'ಊರ್ವಶಿ ಊರ್ವಶಿ!' ಎಂದು ಬಡಬಡಿಸುತ್ತ ಕುರುಕ್ಷೇತ್ರಕ್ಕೆ ಬಂದಾಗ ಹೊಂದಾವರೆಗಳರಳಿ ನಿಂತ ಪ್ಲಕ್ಷತೀರ್ಥವೆಂಬ ಪುಷ್ಕರಿಣಿಯಲ್ಲಿ ಊರ್ವಶಿಯು ಮೈ ತೊಳೆಯುವುದನ್ನು ಕಂಡನು. ಆಗ ಆಕೆ ಗರ್ಭಿಣಿಯಾಗಿದ್ದಳು. ತಾನು ಮಗುವನ್ನು ಹೆತ್ತ ಮೇಲೆ ರಾಜನೊಡನೆ ಒಂದು ರಾತ್ರಿ ಕಳೆಯುತ್ತೇನೆಂದು ಹೇಳಿದಳು. ಅಂತೆಯೇ ಮಹಾರಾಜನ ಅಂತಃಪುರವನ್ನು ತನ್ನ ನಗೆಯ ಬೆಳದಿಂಗಳುಗಳಿಂದ ತುಂಬಲು ಬಂದಳು. ಆ ರಸರಾತ್ರಿಯು ಎಂದೆಂದಿಗೂ ಕರಗದಂತೆ ಮಾಡಲು ರಾಜನೊಡನೆ, ''ನಾಳೆ ನನ್ನನ್ನು ಸ್ವರ್ಗಕ್ಕೆ ಕರೆದೊಯ್ಯಲು ಗಂಧರ್ವರು ಬರುವರು. ಅವರನ್ನು ಆದರಾತಿಥ್ಯದಿಂದ ಸಂತೋಷಪಡಿಸು. ಅವರು 'ನಿನಗೆ ಬೇಕಾದ ವರವನ್ನು ಬೇಡು' ಎನ್ನುವರು. ಆಗ ನಾವಿಬ್ಬರೂ ಗಂಧರ್ವರಾಗುವ ವರವನ್ನು ಬೇಡು'' ಎಂದಳು. ಮರುದಿನ ಗಂಧರ್ವರು ಬಂದಾಗ ರಾಜನು ಅವರನ್ನು ಸಂತೋಷಪಡಿಸಿದನು. ಅವರು ರಾಜನ ಪ್ರಾರ್ಥನೆಯಂತೆ ಗಂಧರ್ವರಾಗಲು ಒಂದು ಅಗ್ನಿಸ್ಥಾಲಿಯನ್ನು ಕೊಟ್ಟು -- 'ಇದರಿಂದ ನೀನು ಯಜ್ಞಮಾಡಿದರೆ ಗಂಧರ್ವಲೋಕವನ್ನು ಹೊಂದುವಿ' ಎಂದರು. ಅವನು ಅಗ್ನಿಯನ್ನು ಅರಣ್ಯದಲ್ಲಿಟ್ಟು ಊರ್ವಶಿಯ ಮಕ್ಕಳನ್ನು ಅರಮನೆಯಲ್ಲಿ ಬಿಟ್ಟು ಬರುವಾಗ ಅಗ್ನಿ ಇಟ್ಟ ಸ್ಥಳದಲ್ಲಿ ಒಂದು ಅಶ್ವತ್ಥದ ಗಿಡವು ಬೆಳೆದಿತ್ತು. ಪುನಃ ರಾಜನು ಗಂಧರ್ವರ ಆಜ್ಞೆಯಂತೆ ಅಶ್ವತ್ಥದ ಸಸಿಯಿಂದ ಅರಣಿಯನ್ನು ಮಾಡಿ ಅದರಿಂದ ಅಗ್ನಿಯನ್ನು ನಿರ್ಮಿಸಿ, ಯಜ್ಞವನ್ನು ಮಾಡಿ ಅದರ ಪ್ರಭಾವದಿಂದ ಊರ್ವಶಿಯೊಡನೆ ಗಂಧರ್ವಲೋಕವನ್ನು ಹೊಂದಿ ಆಕೆಯ ಸಂಗಾನಂದದ ನಿರಂತರ ಸೌಭಾಗ್ಯವನ್ನು ಪಡೆದನು. ಈತನಿಗೆ ಊರ್ವಶಿಯಲ್ಲಿ ಆಯು, ಅಮಾವಸು, ವಿಶ್ವಾಯು, ಶ್ರುತಾಯು, ದೃಢಾಯು, ವನಾಯು, ಶತಾಯು ಎಂಬ ಏಳು ಮಂದಿ ದೇವಕುಮಾರರಂತಹ ಮಕ್ಕಳು ಹುಟ್ಟಿದರು (ಹರಿ., ಭಾಗ., ವಾಯುಪು., ಮತ್ಸ್ಯಪು) ನೋ--ಮನು.

ಪುರೂರವನು ಹದಿಮೂರು ಸಮುದ್ರದ್ವೀಪಗಳನ್ನು ಸ್ವಾಧೀನಪಡಿಸಿಕೊಂಡು ಆಗಾಗ ದೇವತೆಗಳಿಗಾಗಿ ಸಹಾಯ ಮಾಡುತ್ತಿದ್ದನು. ವೀರ್ಯ ಮದದಿಂದ ಕೊಬ್ಬಿದ ಇವನು ಬ್ರಾಹ್ಮಣರನ್ನು ವಿರೋಧಿಸಿ ಅವರು ಮೊರೆಯಿಡುತ್ತಿದ್ದರೂ ಕೇಳದೆ ಅವರ ರತ್ನಗಳನ್ನು ಅಪಹರಿಸಿದನು. ಸನತ್ಕುಮಾರನೇ ಬ್ರಹ್ಮಲೋಕದಿಂದ ಬಂದು ವಿವೇಕ ಹೇಳಿದರೂ ಕೇಳದೇ ತಿರಸ್ಕರಿಸಿದನು. ಇವರಿಂದ ಮಹರ್ಷಿಗಳು ಕೋಪಗೊಂಡು ಇವನನ್ನು ಶಪಿಸಲು ಕೂಡಲೇ ನಾಶಹೊಂದಿದನು. ಇವನೇ ಗಂಧರ್ವಲೋಕದಿಂದ ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯವೆಂಬ ಅಗ್ನಿತ್ರಯವನ್ನು ಶಾಸ್ತ್ರೋಕ್ತವಾಗಿ ಯಜ್ಞಮಾಡುವುದಕ್ಕಾಗಿ ಭೂಮಿಗೆ ತಂದನು (ಮ.ಆ.)

ಪುರೋಚನ -- ದುರ್ಯೋಧನನ ಮಂತ್ರಿ; ಇವನೇ ಅರಗಿನ ಮನೆಯನ್ನು ಕಟ್ಟಿದವನು. ಇವನು ಅರಗಿನ ಮನೆಗೆ ಬೆಂಕಿ ಹೊತ್ತಿಸಲು ನಿರೀಕ್ಷಿಸುತ್ತಿರುವಾಗ, ವಿದುರನಿಂದ ಈ ಗುಟ್ಟನ್ನು ತಿಳಿದು ಪಾಂಡವರು ತಾವೇ ಒಂದು ರಾತ್ರಿ ಆ ಅರಮನೆಗೆ ಬೆಂಕಿ ಹೊತ್ತಿಸಿ ತಪ್ಪಿಸಿಕೊಂಡು ಹೋದರು. ಪುರೋಚನನು ಈ ಬೆಂಕಿಯಲ್ಲಿ ಸತ್ತನು. ಈತನು ಒಬ್ಬ ದುಷ್ಟ ಮ್ಲೇಚ್ಛ (ಮ.ಆ.)

ಪುಲಕ -- ದೈತ್ಯನೊಬ್ಬ. ಕಸ್ತೂರಿಮೃಗರೂಪದ ಈ ರಾಕ್ಷಸನು ಶಿವನ ಕುರಿತು ತಪಸ್ಸು ಮಾಡಿ, ತನ್ನ ದೇಹವು ಅತ್ಯಂತ ಪರಿಮಳವುಳ್ಳದ್ದಾಗಬೇಕೆಂದು ವರಪಡೆದನು. ಮುಂದೆ ಆತನ ದೇಹವೇ ಅತ್ಯಂತ ಸುವಾಸನೆಯುಳ್ಳದ್ದಾಯಿತು. ಇದರಿಂದ ದೇವಸ್ತ್ರೀಯರಿಗೆಲ್ಲ ಇವನಲ್ಲಿ ವ್ಯಾಮೋಹವುಂಟಾಯಿತು. ಇದರಿಂದ ದೇವತೆಗಳು ಶಿವನಲ್ಲಿ ಮೊರೆ ಇಟ್ಟರು. ಶಿವನು ಆತನೊಡನೆ ದೇಹಬಿಡುವಂತೆ ಅಪ್ಪಣೆಮಾಡಿದನು. ಆಗ ಪುಲಕನು ತನ್ನ ದೇಹದಿಂದ ಪರಿಮಳವು ನಿನಗೂ ನಿನ್ನ ಪತ್ನಿಗೂ ಪ್ರಿಯವಾಗಬೇಕೆಂದು ಈ ಮೃಗಮದವು ದೇವಪೂಜಾದಿಗಳಿಗೆ ಶ್ರೇಷ್ಠವಸ್ತುವಾಗಬೇಕೆಂದೂ, ಅಲ್ಲದೆ ಸಮಸ್ತರೂ ಈ ಪರಿಮಳವನ್ನು ಪ್ರೀತಿಸಬೇಕೆಂದೂ ಶಿವನೊಡನೆ ಕೇಳಿದುದಲ್ಲದೆ, ಈ ಜಾತಿಯ ಮೃಗಗಳಿಗೆಲ್ಲ ಈ ಪರಿಮಳವು ಉಂಟಾಗಬೇಕೆಂದು ಪ್ರಾರ್ಥಿಸಿದನು. ಶಿವನು ಆ ಮಾತಿಗೆ 'ತಥಾಸ್ತು' ಎಂದನು. ಪುಲಕನು ದೇಹ ಬಿಟ್ಟನು. ಈಗ ಆ ಜಾತಿಯ ಮೃಗಗಳಿಂದ ಸಿಕ್ಕುವ ಪರಿಮಳ ವಸ್ತುವೇ ಕಸ್ತೂರಿ ಅಥವಾ ಮೃಗಮದವೆನ್ನುತ್ತಾರೆ (ಸ್ಕಾಂ.ಪು)

ಪುಲಸ್ತ್ಯ -- ಬ್ರಹ್ಮನ ಮಾನಸಪುತ್ರ. ಈತನ ಪತ್ನಿ ಕರ್ದಮ ಪ್ರಜಾಪತಿಯ ಮಗಳಾದ ಹವಿರ್ಭುಕ್. ಈತನ ಮಗ ಅಗಸ್ತ್ಯ. ಈತನ ಇಲಬಿಲೆಯೆಂಬ ಹೆಂಡತಿಯಲ್ಲಿ ಹುಟ್ಟಿದ ಮಗನೇ ಕುಬೇರ; ಕೇಶಿನಿಯಲ್ಲಿ ಹುಟ್ಟಿದ ಮಕ್ಕಳೆ

ರಾವಣ ಮೊದಲಾದವರು (ಭಾಗ.) ಈತನ ಪತ್ನಿ ಪ್ರೀತಿ; ಮಗ ದಂಭೋಲಿ (ವಿಷ್ಣುಪು) ಈತನ ಒಬ್ಬಳು ಭಾರ್ಯೆ ಸಂಧ್ಯಾ; ಇನ್ನೊಬ್ಬಳು ಪ್ರತೀಚ್ಯಾ (ಮ.ಉ) ತೃಣಬಿಂದುವಿನ ಮಗಳಾದ ಗೋ ಎಂಬುವಳು ಈತನ ಪತ್ನಿ, ವಿಶ್ರವಸ್ಸು ಮಗ (ಉತ್ತರ.ರಾಮ). ರಾವಣನು ಕಾರ್ತವೀರ್ಯಾರ್ಜುನನ ಸೆರೆಯಲ್ಲಿ ಸಿಕ್ಕಿದ್ದಾಗ ಪುಲಸ್ತ್ಯನು ಬಂದು ಆತನನ್ನು ಬಿಡಿಸಿದನು (ಉತ್ತರ ರಾಮ). ಮರೀಚಿ, ಅತ್ರಿ, ಅಂಗಿರಸ, ಪುಲಹ, ಕ್ರತು, ವಸಿಷ್ಠರು ಈತನ ಸೋದರರು. ರಾಕ್ಷಸರ ಕುಲ ನಾಶಮಾಡಲು ಪರಾಶರರು ಕೈಗೊಂಡ ಯಜ್ಞವನ್ನು ಈ ಮುನಿಯು ಬಂದು ನಿಲ್ಲಿಸಿದನು. ಪರಾಶರರ ತಂದೆಯನ್ನು ರಾಕ್ಷಸನು ಕೊಂದದ್ದೇ ಈ ದ್ವೇಷಕ್ಕೆ ಕಾರಣ (ಮ.ಆ.).

ಪುಲಹ -- ಬ್ರಹ್ಮನ ಮಾನಸಪುತ್ರರಲ್ಲೊಬ್ಬ. ನೋ -- ಪುಲಸ್ತ್ಯ. ಈತ ಬ್ರಹ್ಮರ್ಷಿ. ಈತನ ಪತ್ನಿ ಕರ್ದಮ ಪ್ರಜಾಪತಿಯ ಪುತ್ರಿಯಾದ ಗತಿ. ನೋ -- ಗತಿ. ಕರ್ಮಶ್ರೇಷ್ಠ, ವರೀಯಸ್ ಮತ್ತು ಸಹಿಷ್ಣು ಎಂಬ ಮೂವರು ಈತನ ಮಕ್ಕಳು (ಮ.ಆ., ಸ)

ಪುಲಿನ -- ಅಮೃತರಕ್ಷಕನಾದ ದೇವತೆ (ಮ.ಆ.)

ಪುಲಿಂದ -- ೧. ಒಂದು ದೇಶ; ಬುಂದೇಲ ಖಂಡದ ಪಶ್ಚಿಮಭಾಗ ಮತ್ತು ಸಾಗರ ಜಿಲ್ಲೆ ಕೂಡಿದ ಪ್ರಾಂತ. ಪಾಂಡವರ ಕಾಲದಲ್ಲಿ ಸುಕುಮಾರ ಮತ್ತು ಸುಮಿತ್ರರು ಇಲ್ಲಿಯ ರಾಜರು. ೨. ಚಂದ್ರಹಾಸನ ಸಾಕುತಂದೆ. ಈತನು ಬೇಡರ ರಾಜ. ನೋ -- ಚಂದ್ರಹಾಸ (ಜೈ.ಭಾ., ಮ.ಭೀ., ಸ).

ಪುಲೋಮ -- ೧. ದನುಪುತ್ರ. ೨. ಭೃಗುಪತ್ನಿಯಾದ ಪುಲೋಮೆಯನ್ನು ಅಪಹಾರಮಾಡಿದ ರಾಕ್ಷಸನೊಬ್ಬ (ಮ.ಆ.)

ಪುಲೋಮೆ -- ೧. ಈಕೆ ಭೃಗುಪತ್ನಿ. ಈಕೆ ಗರ್ಭಿಣಿಯಾಗಿದ್ದಾಗ ಪುಲೋಮರಕ್ಕಸನು ಈಕೆಯನ್ನು ಅಪಹಾರಮಾಡಿದ. ಈಕೆಗೆ ಚ್ಯವನ, ವಜ್ರಶೀರ್ಷ, ಶುಚಿ, ಔರ್ವ, ಶುಕ್ರ, ವರೇಣ್ಯ ಮತ್ತು ಸವನರೆಂಬ ಏಳು ಮಂದಿ ಮಕ್ಕಳು ಇದ್ದರು. ನೋ -- ವಧೂಸರ, ಚ್ಯವನ. ೨. ದೈತ್ಯಸ್ತ್ರೀ. ಈಕೆಯ ಮಗ ಪೌಲೋಮ. ಈಕೆ ವೈಶ್ವಾನರನೆಂಬ ರಾಕ್ಷಸನ ಮಗಳು, ಮಾರೀಚನ ಸತಿ. ಈ ಪೌಲೋಮ ರಕ್ಕಸರನ್ನು ಅರ್ಜುನ ಇಂದ್ರಲೋಕದಿಂದ ಬರುವಾಗ ಕೊಂದನು. ನೋ -- ನಿವಾತಕವಚ (ಮ.ವ.)

ಪುಷ್ಕರ -- ೧. ವರುಣನ ಮಗ. ಈತನ ಹೆಂಡತಿ ಚಂದ್ರಪುತ್ರಿಯಾದ ಜ್ಯೋತ್ಸ್ನಾಕಾಲಿ. ನೋ -- ರೌಚ್ಯ. ೨. ಪರ್ವತವೊಂದು ೩. ನಳರಾಜನ ದಾಯಾದಿ. ಈತ ನಳನನ್ನು ಕಲಿಯ ಪ್ರೋತ್ಸಾಹದಿಂದ ಗೆದ್ದನು. ಕೊನೆಗೆ ನಳನು

ಋತುಪರ್ಣನಿಂದ ಅಕ್ಷ ಹೃದಯವನ್ನು ಅಭ್ಯಾಸಮಾಡಿ ಪುಷ್ಕರನನ್ನು ಮರುಜೂಜಿನಲ್ಲಿ ಗೆದ್ದನು. ೪. ಮಹಾಬ್ರಾಹ್ಮಣನೊಬ್ಬ; ನಂದಿಗ್ರಾಮದವ; ಈ ಊರಿನಲ್ಲಿ ಇಬ್ಬರು ಪುಷ್ಕರರೆಂಬ ಬ್ರಾಹ್ಮಣರಿದ್ದರು. ಇವರಲ್ಲಿ ಒಬ್ಬನು ಪುಣ್ಯವಂತ; ಇನ್ನೊಬ್ಬನು ಪಾಪಿಷ್ಠ. ಯಮನು ಇವರಲ್ಲಿ ಪಾಪಿಷ್ಠ ಪುಷ್ಕರನನ್ನು ನರಕಕ್ಕೆ ಕರೆತರುವಂತೆ ಅಪ್ಪಣೆ ಕೊಡಲು, ದೂತರು ಪುಣ್ಯವಂತನಾದ ಪುಷ್ಕರನನ್ನು ತಂದರು. ಇವನ ಪುಣ್ಯದ ಪ್ರಭಾವದಿಂದ ನರಕದ ಜೀವಿಗಳೆಲ್ಲ ಸದ್ಗತಿಹೊಂದಿದರು (ಕಾವೇ.ಮ). ೫. ಒಂದು ಕ್ಷೇತ್ರ. ಇದು ಅಜಮೀರದಿಂದ ಏಳು ಮೈಲು ದೂರದಲ್ಲಿದೆ. ಇಲ್ಲಿ ಬ್ರಹ್ಮಮಂದಿರವು ಮುಖ್ಯವಾದುದ್ದು. ಬ್ರಹ್ಮನ ಎಡಬಲಗಳಲ್ಲಿ ಗಾಯತ್ರಿ ಮತ್ತು ಸಾವಿತ್ರಿಯ ಮಂದಿರಗಳಿವೆ. ಇಲ್ಲೇ ಸಮೀಪ ಅಗಸ್ತ್ಯಾಶ್ರಮವಿದೆ. ಬ್ರಹ್ಮನ ಕೈಯಿಂದ ಕಮಲ ಬಿದ್ದಲ್ಲಿ ಪುಷ್ಕರ ಸರೋವರ ಉಂಟಾಯಿತು. ೬. ಸಪ್ತದ್ವೀಪಗಳಲ್ಲೊಂದು ಇದಕ್ಕೆ ಪೋಕ್ರಾ (Pokhra) ಎಂಬ ಹೆಸರಿದೆ. ಇದೇ ಇಂದಿನ ಉತ್ತರ ಅಮೇರಿಕಾ. ಪ್ರಿಯವ್ರತನ ಮಗನಾದ ವೀತಿಹೋತ್ರನ ರಾಜ್ಯವಿದು. ಈತನಿಗೆ ರಮಣಕ ಮತ್ತು ಧಾತಕಿ ಎಂಬ ಇಬ್ಬರು ಮಕ್ಕಳು. ಈ ದ್ವೀಪದ ಸುತ್ತಲೂ ದಧಿಸಮುದ್ರವಿದ್ದು ಈ ದ್ವೀಪದಲ್ಲಿ ಮಾನಸ ಪರ್ವತವಿದೆ (ವಿಷ್ಣುಪು). ನೋ--ಶಕ. ೭. ದಶರಥಪುತ್ರನಾದ ಭರತನ ಮಗ. ನೋ -- ಪಂಚಾಕ್ಷರ. ಈತನ ತಾಯಿ ಮಾಂಡವಿ. ಈ ಪುಷ್ಕರನಿಗಾಗಿ ನಿರ್ಮಿತವಾದ ಪಟ್ಟಣವೇ ಪುಷ್ಕರಾವತ. ಈತನ ಅಣ್ಣನೇ ತಕ್ಷ. (ವಿಷ್ಣುಪು., ಮತ್ಸ್ಯಪು., ಮ.ಭೀ., ಉ., ವ., ಅನು., ರಾಮಾ. ಉತ್ತರ.). ತಕ್ಷನ ಪಟ್ಟಣವೇ ತಕ್ಷಶಿಲೆ.

ಪುಷ್ಕರಮಾಲಿನಿ -- ೧. ಉಂಛವೃತ್ತಿಯ ಸತ್ಯನೆಂಬುವನ ಪತ್ನಿ (ಮ.ಶಾಂ) ೨. ವರುಣ ಸಭೆ. ಇಂದ್ರನ ಸಭೆಯ ಹೆಸರು (ಮ.ಸ.)

ಪುಷ್ಕರಾವತ -- ಭರತನ ಮಗ ಪುಷ್ಕರನಿಗಾಗಿ ನಿರ್ಮಿತವಾದ ಪಟ್ಟಣ. ನೋ -- ಪುಷ್ಕರ.

ಪುಷ್ಕರಿಣಿ -- ಭರತ ಚಕ್ರವರ್ತಿಯ ಮಗನೇ ಭುಮನ್ಯು. ಈತನ ಪತ್ನಿಯ ಹೆಸರು ಸುವರ್ಣೆ. ಈಕೆಗೆ ಪುಷ್ಕರಿಣಿ ಎಂಬ ಹೆಸರೂ ಉಂಟು. ನೋ -- ಭುಮನ್ಯು (ಮ.ಆ.)

ಪುಷ್ಟಿ -- ೧. ದಕ್ಷಪ್ರಜಾಪತಿಯ ಮಗಳು; ಧರ್ಮಪ್ರಜಾಪತಿಯ ಪತ್ನಿ (ಮ.ಆ.). ೨. ಲಲಿತಾದೇವಿಯ ಹೆಸರು (ಲಲಿತಾಸ.).

ಪುಷ್ಟಿಪತಿ -- ಅಗ್ನಿವಿಶೇಷ (ಮ.ವ.).

ಪುಷ್ಪಕ -- ಕುಬೇರನ ವಿಮಾನ. ಇದನ್ನು ಅವನು ಬ್ರಹ್ಮನಿಂದ ಪಡೆದ. ರಾವಣನು ಇದನ್ನು ಕುಬೇರನಿಂದ ಅಪಹರಿಸಿದನು. ರಾಮನು ರಾವಣನನ್ನು ಗೆದ್ದು

ಅಯೋಧ್ಯೆಗೆ ಬಂದಮೇಲೆ ಪುನಃ ಆ ವಿಮಾನವನ್ನು ಕುಬೇರನಲ್ಲಿಗೇ ಕಳುಹಿಸಿದನು. ಇದು ಯಜಮಾನನ ಇಚ್ಛೆಯನ್ನನುಸರಿಸಿ ನಡೆಯುವ ವಿಮಾನ (ಮ.ಸ., ವ., ಉತ್ತರ ರಾಮಾ.).

ಪುಷ್ಪದಂತ -- ೧. ವಾಯುವ್ಯ ದಿಕ್ಕಿನ ದಿಗ್ಗಜ. ೨. ಶಿವನ ಪ್ರಸಾದವನ್ನು ತುಳಿದು ಆಕಾಶಗಮನ ಸಾಮರ್ಥ್ಯವನ್ನು ಕಳೆದುಕೊಂಡ ಒಬ್ಬ ಗಂಧರ್ವ. ಇವನು ಶಿವಮಹಿಮಸ್ತೋತ್ರವನ್ನು ಪಠಿಸಿ ಆಕಾಶಗಮನ ಸಾಮರ್ಥ್ಯವನ್ನು ಪುನಃ ಪಡೆದನು (ದೇವಿಭಾ).

ಪುಷ್ಪೋತ್ಕಟಾ -- ರಾವಣ, ಕುಂಭಕರ್ಣರ ತಾಯಿ; ಸುಮಾಲಿ ರಾಕ್ಷಸನ ಮಗಳು. ಪುಲಸ್ತ್ಯನ ಮಗನಾದ ವಿಶ್ರವಸು ಈಕೆಯ ಪತಿ. ರಾಮಾಯಣದಲ್ಲಿ ಸುಮಾಲಿ ರಾಕ್ಷಸನ ಮಗಳು ಕೇಕಸಿ (ಕೈಕಸೆ) ಎಂದಿದೆ. ಭಾರತದಲ್ಲಿ ಪುಷ್ಪೋತ್ಕಟೆ ಎಂದಿದೆ (ಮ.ವ.)

ಪುಷ್ಯಾ -- ದಕ್ಷನ ಮಗಳು; ಚಂದ್ರನ ಪತ್ನಿ; ಒಂದು ನಕ್ಷತ್ರ (ಮತ್ಸ್ಯಪು., ಮ.ಆ.)

ಪೂಜನೀ (ಪೂಜನೀಯ) -- ಒಂದು ಪಕ್ಷಿ. ಕಾಂಪಿಲ್ಯನಗರದ ರಾಜ ಬ್ರಹ್ಮದತ್ತನಿಗೆ ಪಶುಪಕ್ಷಿಗಳ ಭಾಷೆಗಳೆಲ್ಲಾ ತಿಳಿದಿದ್ದವು. ಅವನಿಗೆ ಪೂಜನೀಯಾ ಎಂಬ ಹೆಣ್ಣುಗುಬ್ಬಿಯೊಂದು ಜೀವದ ಗೆಳತಿಯಾಗಿತ್ತು. ಇದು ಅರಮನೆಯ ಚಂದ್ರಶಾಲೆಯ ಸಂದಿಯಲ್ಲಿ ಗೂಡುಕಟ್ಟಿಕೊಂಡಿತ್ತು. ಇದು ಹಗಲು ದಿಕ್ ದೇಶಗಳನ್ನೆಲ್ಲಸುತ್ತಾಡಿ, ಸಾಯಂಕಾಲ ಅರಮನೆಗೆ ಬಂದು ರಾಜನಿಗೆ ಪ್ರಪಂಚದ ಸಮಾಚಾರವನ್ನೆಲ್ಲ ತಿಳಿಸುತ್ತಿತ್ತಲ್ಲದೆ ಅನೇಕ ಕಥೆ ಕಾದಂಬರಿಗಳನ್ನು ಹೇಳಿ ರಾಜನ ಮನಸ್ಸನ್ನು ರಂಜಿಸುತ್ತಿತ್ತು. ರಾಜನ ಪಟ್ಟದ ರಾಣಿಯಾದ ಸನ್ನತಿಯು ಗರ್ಭಿಣಿಯಾಗಿ ಹೆತ್ತ ದಿನವೇ ಪೂಜನೀಯಾ ಎಂಬ ಗುಬ್ಬಿಯೂ ತನ್ನ ಗೂಡಿನಲ್ಲಿ ತತ್ತಿ ಇಟ್ಟಿತು. ಆ ತತ್ತಿ ಒಡೆದು ಮರಿ ಬರುವಾಗ ಅದರ ಮುಖ ವಿಕಾರವಿದ್ದು, ಕಣ್ಣುಗಳಿನ್ನೂ ಒಡೆಯದೆ ಅಪೂರ್ಣ ಮರಿಯಾಗಿತ್ತು. ಈ ಮರಿಯನ್ನು ಕಂಡು ಪೂಜನೀಯೆಗೆ ದುಃಖವಾಗಿ ಅದು ದಿಕ್ ದೇಶಗಳನ್ನೆಲ್ಲ ಸುತ್ತಿ ಅರಸಿ, ಒಂದೊಂದು ಅಮೃತಫಲವನ್ನು ತಂದು ತನ್ನ ಅಂಗಹೀನ ಮರಿಗೆ ತಿನ್ನಿಸಹತ್ತಿತು. ಇದರಿಂದ ಮರಿಗೆ ಕಣ್ಣು ಬಂದು, ಮೈ ತುಂಬಿ ಬಂದು ಚಂದ ಕಾಣಹತ್ತಿತು. ಅದು ಕ್ರಮೇಣ ರಾಜಾಂಗಣದಲ್ಲಿ ರಾಜಕುಮಾರ ಸರ್ವಸೇನನೊಡನೆ ಆಟವಾಡತೊಡಗಿತು, ಮುಂದೆ ಆ ಪಕ್ಷಿಯು ಎರಡೆರಡು ಅಮೃತ ಫಲಗಳನ್ನು ತಂದು ಒಂದು ತನ್ನ ಮರಿಗೂ, ಇನ್ನೊಂದು ರಾಜಪುತ್ರನಿಗೂ ಕೊಡುತ್ತ ಬಂತು. ಇದರಿಂದ ಗುಬ್ಬಿಮರಿ ಮತ್ತು ರಾಜಕುಮಾರರಿಬ್ಬರೂ ಜೀವದ ಗೆಳೆಯರಾಗಿ ಬೆಳೆದರಲ್ಲದೆ ಇಬ್ಬರೂ

ಸತ್ವಯುತರೂ ತೇಜೋವಂತರೂ ಆದರು. ಒಂದು ದಿನ ರಾಜಕುಮಾರನು ಸಿಟ್ಟಿಗೆದ್ದು ಆ ಗುಬ್ಬಿಮರಿಯ ಕೊರಲನ್ನು ಮುರಿದು ದೂರ ಚೆಲ್ಲಿದನು. ಸಾಯಂಕಾಲ ಗೂಡಿಗೆ ಬಂದ ಗುಬ್ಬಿ ತನ್ನ ಮರಿಯ ಶವವನ್ನು ಕಂಡು ರಾಜಕುಮಾರ ಸರ್ವಸೇನನಿಂದಾದ ಅನಾಹುತವಿದೆಂದು ತಿಳಿದು ಅಲ್ಲಿ ಆಡುತ್ತಿದ್ದ ಅವನ ಕಣ್ಣುಗಳನ್ನು ಕುಕ್ಕಿ ಅವನನ್ನು ಕುರುಡನನ್ನಾಗಿ ಮಾಡಿ ಹಾರಿ ಹೋಯಿತು. ಇದರಿಂದ ಈತನ ತಮ್ಮನಾದ ವಿಷ್ವಕ್ಸೇನನೇ ಮುಂದೆ ರಾಜನಾದನು (ಮ.ಶಾಂ., ಹರಿ).

ಪೂತನೆ -- ೧. ಸ್ಕಂದನ ಮಾತೃಗಣದಲ್ಲೊಬ್ಬಳು ೨. ಬಾಲಗ್ರಹದ ದೇವತೆ. ಕಂಸನ ಪರಿವಾರದವಳು. ಈಕೆ ಸುಂದರ ಸ್ತ್ರೀವೇಷದಿಂದ ನಂದನ ಮನೆಯನ್ನು ಹೊಕ್ಕು ಅಲ್ಲಿ ಶ್ರೀಕೃಷ್ಣನಿಗೆ ವಿಷಪೂರಿತವಾದ ಮೊಲೆಯುಣ್ಣಿಸತೊಡಗಲು ಪರಮಾತ್ಮನು ಆಕೆಯ ಜೀವವನ್ನೇ ಹೀರಿದನು. ಪೂತನೆಯು ಕೂಗುತ್ತ ಭಯಂಕರ ರಾಕ್ಷಸಿಯ ಆಕಾರದಿಂದ ಪ್ರಾಣಬಿಟ್ಟಳು. ಮುಂದೆ ಗೋಪರು ಆಕೆಯ ದೇಹವನ್ನು ಹೊರಲಾರದೆ ತುಂಡು ತುಂಡು ಮಾಡಿ ಊರ ಹೊರಗೆ ಒಯ್ದು ಸುಟ್ಟುಬಿಟ್ಟರು (ಭಾಗ., ಮ.ವ., ಹರಿ., ವಿಷ್ಣುಪು).

ಊರ್ವಶಿಯು ತುಂಬುರುವಿನ ಸಂಗಮಾಡಿದ್ದರಿಂದ ಸಿಟ್ಟಾಗಿ ಕುಬೇರನು ಅವಳಿಗೆ ' ರಾಕ್ಷಸದೇಹಪ್ರವಿಷ್ಟಳಾಗು' ಎಂದು ಶಾಪವಿತ್ತನು. ತಾಟಕಿಯು ಪೂತನಿಯಾಗಿಹುಟ್ಟಿ ಬಂದಾಗ ಶಾಪದಿಂದ ಊರ್ವಶಿಯು ಅವಳಲ್ಲಿ ಪ್ರವೇಶಮಾಡಿ ಭಕ್ತಿಯಿಂದಲೇ ಭಗವಂತನಿಗೆ ಸ್ತನಪ್ರಾಶನ ಮಾಡಿಸಿದಳು (ಭಾಗ.ತಾ.ನಿ).

ಪೂರು -- ೧. ಚಂದ್ರವಂಶದ ಯಯಾತಿರಾಜನ ಪುತ್ರ. ಈತನ ತಾಯಿ ವೃಷಪರ್ವರಾಜನ ಮಗಳಾದ ಶರ್ಮಿಷ್ಠೆ. ಈತನಿಗೆ ಕೌಸಲ್ಯೆ ಎಂಬ ಪತ್ನಿಯಲ್ಲಿ ಜನಮೇಜಯನೆಂಬ ಮಗನೂ, ಪೌಷ್ಟಿ ಎಂಬ ಪತ್ನಿಯಲ್ಲಿ ಪ್ರವೀರ, ಈಶ್ವರ, ರೌದ್ರಾಶ್ವರೆಂಬ ಮೂರು ಮಕ್ಕಳಿದ್ದರು. ಇವನ ಮಕ್ಕಳಲ್ಲಿ ಪ್ರವೀರನೇ ಪ್ರಸಿದ್ಧನು. ನೋ -- ದೇವಯಾನಿ, ಜನಮೇಜಯ. ಶುಕ್ರಾಚಾರ್ಯರ ಶಾಪದಿಂದ ಯಯಾತಿಗೆ ಅಕಾಲ ವೃದ್ಧಾಪ್ಯವು ಬರಲು ಆತನ ಮಕ್ಕಳಲ್ಲಿ ಪೂರುವು ತನ್ನ ತಾರುಣ್ಯವನ್ನು ತಂದೆಗೆ ಕೊಟ್ಟು ಆತನ ಮುದಿತನವನ್ನು ತಾನು ಸಂತೋಷದಿಂದ ಸ್ವೀಕರಿಸಿದನು. ಮುಂದೆ ವಿಷಯಲಾಲಸೆಯು ಸೇವನೆಯಿಂದ ಹೆಚ್ಚುವುದೆಂದು ತಿಳಿದು ವೈರಾಗ್ಯಹೊಂದಿ ಪೂರುವಿನ ತಾರುಣ್ಯವನ್ನು ಆತನಿಗೇ ಕೊಟ್ಟು ಅವನ ವೃದ್ಧಾಪ್ಯವನ್ನು ತಾನು ಸ್ವೀಕರಿಸಿ ಅರಣ್ಯಕ್ಕೆ ಹೋದನು.

ಮುಂದೆ ಸಿಂಹಾಸನವು ಪೂರುವಿನ ಸಂತಾನದ ಸೊತ್ತಾಯಿತು. ನೋ -- ಶರ್ಮಿಷ್ಠೆ. (ಮ.ಆ., ಸ., ಮತ್ಸ್ಯಪು., ಭಾಗ., ಹರಿ., ವಿಷ್ಣುಪು). ೨. ಅರ್ಜುನನ ಸಾರಥಿ (ಮ.ಸ).

ಪೂರ್ಣ -- ೧. ಸರ್ಪವೊಂದು. ೨. ಪ್ರಾಧೆಯ ಮಗ.

ಪೂರ್ಣಾಯು -- ದಕ್ಷನ ಮಗಳಾದ ಪ್ರಾಧೆಯ ಮಗ. ನೋ -- ಪ್ರಾಧೆ.

ಪೂರ್ವಚಿತ್ತಿ -- ಅಪ್ಸರೆಯೊಬ್ಬಳು. ಪ್ರಿಯವ್ರತ ರಾಜನ ಮಗ; ಅಗ್ನೀಧ್ರನ ತಪೋಭಂಗಕ್ಕಾಗಿ ಬ್ರಹ್ಮನಿಂದ ಕಳುಹಿಸಲ್ಪಟ್ಟವಳು. ಅಗ್ನೀಧ್ರನು ಈಕೆಯನ್ನು ಮೋಹಿಸಿ ಈಕೆಯಲ್ಲಿ ನಾಭಿ, ಕಿಂಪುರುಷ, ಹರಿವರ್ಷ, ಇಲಾವೃತ, ರಮ್ಯಕ, ಹಿರಣ್ಮಯ, ಕುರು, ಭದ್ರಾಶ್ವ, ಕೇತುಮಾಲರೆಂಬ ಒಂಬತ್ತು ಮಂದಿ ಮಕ್ಕಳನ್ನು ವರ್ಷಕ್ಕೊಂದು ಪಡೆದಳು. ಇವರೇ ಮುಂದೆ ಜಂಬೂ ಮೊದಲಾದ ಒಂಬತ್ತು ಖಂಡಗಳಿಗೆ ಅಧಿಪತಿಗಳಾದರು. (ಮ.ಆ., ಭಾಗ.)

ಪೂರ್ವಫಲ್ಗುನಿ -- ದಕ್ಷನ ಮಗಳು; ಚಂದ್ರನ ಹೆಂಡತಿ; ಒಂದು ನಕ್ಷತ್ರ (ಮ.ಆ., ವಿಷ್ಣುಪು)

ಪೂರ್ವಾಭಾದ್ರಾ -- ದಕ್ಷನ ಮಗಳು; ಚಂದ್ರನ ಹೆಂಡತಿ; ಒಂದು ನಕ್ಷತ್ರ (ಮ.ಆ., ವಿಷ್ಣುಪು)

ಪೂರ್ವಾಷಾಢಾ -- ದಕ್ಷನ ಮಗಳು; ಚಂದ್ರನ ಪತ್ನಿ; ಒಂದು ನಕ್ಷತ್ರ (ಮ.ಆ.,ವಿಷ್ಣುಪು)

ಪೂಷಾ -- ೧. ದ್ವಾದಶಾದಿತ್ಯರಲ್ಲೊಬ್ಬ. ಪಾರ್ವತಿಯ ವಿವಾಹಕಾಲದಲ್ಲಿ ಶಿವನೇ ಆಕೆಯ ತೊಡೆಯ ಮೇಲೆ ಮಗುವಾಗಿ ಮಲಗಿರುವುದನ್ನು ಕಂಡು ಪೂಷನು ಹಲ್ಲು ಕಡಿಯಲು ಹಲ್ಲುಗಳು ತಾವಾಗಿ ಉದುರಿಬಿದ್ದುವು (ಮ.ಆ) ನೋ -- ದಕ್ಷ, ದಾಕ್ಷಾಯಣಿ, ಪಾರ್ವತಿ.

ಪೃಥಾಶ್ವ -- ರಾಜರ್ಷಿಯೊಬ್ಬ.

ಪೃಥಿವೀ -- ಭೂಮಿ. ನೋ -- ಕಶ್ಯಪ, ಪರಶುರಾಮ, ಪೃಥು (ಮ.ಅನು).

ಪೃಥಿವೀಜಯ -- ಅಸುರನೊಬ್ಬ (ಮ.ಸ).

ಪೃಥು -- ೧. ಯಾದವರಲ್ಲೊಬ್ಬ (ಮ.ಆ). ೨. ಅಷ್ಟವಸುಗಳಲ್ಲೊಬ್ಬ (ಮ.ಆ). ೩. ವೇನರಾಜನ ಮಗ; ಈತನ ಪತ್ನಿ ಅರ್ಚಿ; ಈಕೆಯಲ್ಲಿ ಅಂತರ್ಧಾನನೆಂಬ ಮಗನಾದ; ಈತನ ಮೊಮ್ಮಗನೇ (ಪೃಥುವಿನ ಮರಿಮಗ) ಪ್ರಾಚೀನ ಬರ್ಹಿ. ವೇನನು ನಾಸ್ತಿಕನೂ ದುಷ್ಟನೂ ಆಗಿದ್ದುದರಿಂದ ಪ್ರಜೆಗಳು ಇವನನ್ನು ಕೊಂದು, ರಾಜ್ಯಕ್ಕೆ ರಾಜನನ್ನು ಪಡೆಯಲು ಇವನ ಶರೀರವನ್ನೇ ಮಥಿಸಿದರು. ಆಗ ಹುಟ್ಟಿದವನೇ ಪೃಥು. ಇವನ ಜನ್ಮಕ್ಕಿಂತ ಮೊದಲು ಭೂಮಿಯು ನುಂಗಿದ್ದ

ಸಸ್ಯಬೀಜಗಳನ್ನೆಲ್ಲ ಅದರಿಂದಲೇ ಹೊರಪಡೆದು ಪ್ರಜೆಗಳಿಗೆ ಸುಖವನ್ನುಂಟುಮಾಡಿದುದರಿಂದ ಭೂಮಿಗೆ ಪೃಥುವಿನ ಮಗಳು ಎಂಬರ್ಥದಿಂದ ಪೃಥ್ವೀ ಎಂಬ ಹೆಸರು ಬಂತು. ಇವನು ಜಗತ್ತಿನಲ್ಲಿ ಪ್ರಪ್ರಥಮ ಪಟ್ಟಾಭಿಷಿಕ್ತನಾದ ರಾಜರ್ಷಿ. ಇವನಿಂದಲೇ ಸೂತ, ಮಾಗಧರು ಹುಟ್ಟಿದರು. ಇವನಿಗೆ ಅಂತರ್ಧಿ, ಫಲಿತ ಎಂಬ ಮಕ್ಕಳಿದ್ದರು (ವಿಷ್ಣುಪು., ಭಾಗ., ಹರಿ., ವಾಯುಪು., ಮತ್ಸ್ಯಪು., ಪದ್ಮಪು., ಮ.ದ್ರೋ.ಶಾಂ). ಈ ಕಾಲದಲ್ಲೇ ಬ್ರಹ್ಮನು ಬ್ರಾಹ್ಮಣ, ಬಳ್ಳಿ, ನಕ್ಷತ್ರ, ಗ್ರಹ, ಯಜ್ಞ, ತಪ ಮೊದಲಾದವುಗಳ ಮೇಲೆ ಚಂದ್ರನನ್ನೂ, ಜಲರಾಜ್ಯಕ್ಕೆ ವರುಣನನ್ನೂ, ಯಕ್ಷರಿಗೆ ಕುಬೇರನನ್ನೂ, ವಿಶ್ವದೇವತೆಗಳಿಗೆ ಬೃಹಸ್ಪತಿಯನ್ನೂ, ಭೃಗುಕುಲಕ್ಕೆ ಶುಕ್ರಾಚಾರ್ಯರನ್ನೂ, ದೇವಗಣಕ್ಕೆ ವಿಷ್ಣುವನ್ನೂ, ಅಷ್ಟವಸುಗಳಿಗೆ ಅಗ್ನಿಯನ್ನೂ, ಪ್ರಜಾಪತಿಗಳಿಗೆ ದಕ್ಷನನ್ನೂ, ಮರುದ್ಗಣಕ್ಕೆ ಇಂದ್ರನನ್ನೂ, ದೈತ್ಯದಾನವರಿಗೆ ಪ್ರಹ್ಲಾದನನ್ನೂ, ಪಿತೃಗಳಿಗೆ ಯಮಧರ್ಮನನ್ನೂ, ವ್ರತ, ಮಂತ್ರ, ಮಾತೃಕೆಯರು, ರಾಜಮಹಾರಾಜರಿಗೆಲ್ಲ ನಾರಾಯಣನನ್ನೂ, ಭೂತ ಪಿಶಾಚಿಗಳಿಗೆ ಶಂಕರನನ್ನೂ ಅಧಿರಾಜನನ್ನಾಗಿ ನಿಯಮಿಸಿದನು (ಹರಿ). ೪. ಪೃಥುವಿನ ರಾಜ್ಯದ ನಾಲ್ಕು ದಿಕ್ಕುಗಳಲ್ಲಿ ಕ್ರಮವಾಗಿ ಸುಧರ್ಮ, ಶಂಖಪದ್ಮ, ಕೇತುಮಂತ, ಹಿರಣ್ಯರೋಮ ರಾಜರು ಸಾಮಂತರಾಗಿ ರಾಜ್ಯಭಾರ ಮಾಡುತ್ತಿದ್ದರು. ಈ ಪೃಥುವು ಅನೇನಸರಾಜನ ಮಗನಾಗಿದ್ದನು (ಮತ್ಸ್ಯಪು., ಮ.ವ.).

ಪೃಥುಲಾಕ್ಷ -- ಅಂಗವಂಶದ ಕ್ಷತ್ರಿಯ, ಈತನ ಮಗ ಚಂಪ (ಮ.ಸ.).

ಪೃಥೂದಕ -- ತೀರ್ಥವೊಂದು. ಇದು ಸ್ಥಾನೇಶ್ವರದಿಂದ ಹದಿನಾಲ್ಕು ಮೈಲು ಪಶ್ಚಿಮದಲ್ಲಿದೆ. ವಸಿಷ್ಠನಿಂದ ಪರಾಜಿತನಾದ ವಿಶ್ವಾಮಿತ್ರನು ಇದರ ದಡದಲ್ಲೇ ತಪಸ್ಸು ಮಾಡಿದ. ಇದು ಬ್ರಹ್ಮಯೋನಿ ತೀರ್ಥದ ಬಳಿ ಇದೆ (ಮ.ವ.,ಶ).

ಪೃಥೆ -- ಕುಂತೀಭೋಜನ ಮಗಳು ಕುಂತಿ. ನೋ -- ಕುಂತಿ.

ಪೃಶ್ನಿಗರ್ಭ -- ವಿಷ್ಣು (ಮ.ಶಾಂ). ದೇವಕಿಯ ಮಗ (ಪೃಶ್ನಿ= ದೇವಕಿ).

ಪೃಷತ (ದ) -- ಪಾಂಚಾಲದೇಶದ ರಾಜ; ದ್ರುಪದನ ತಂದೆ. ಈತ ಸೋಮಕರಾಜನ ಮಗ (ಹರಿ., ಮ.ಆ.,ಭಾಗ.).

ಪೃಷಧ್ರ -- ೧. ವೈವಸ್ವತ ಮನುವಿನ ಎಂಟನೇ ಮಗ; ಕ್ಷತ್ರಿಯ. ಇವನು ವಸಿಷ್ಠರ ಆಕಳನ್ನು ಕಾಯುತ್ತಿರುವಾಗ ಒಂದು ದಿನ ಹುಲಿಯೊಂದು ಕೊಟ್ಟಿಗೆಯೊಳಗೆ ಪ್ರವೇಶ ಮಾಡಲು ಪೃಷಧ್ರನು ಹುಲಿಯೆಂದೇ ಭಾವಿಸಿ ದನವನ್ನು ಕೊಂದನು. ಇದರಿಂದ ಕೋಪಗೊಂಡ ವಸಿಷ್ಠನು ಈತನಿಗೆ ಶೂದ್ರನಾಗುವಂತೆ ಶಾಪವಿತ್ತನು. ಇವನು ಮುಂದೆ ಕಾಡುಕಿಚ್ಚಿಗೆ ದೇಹವನ್ನೊಪ್ಪಿಸಿದನು (ಭಾಗ.,

ಮ.ಆ.) ೨. ಪಾಂಡವ ಪಕ್ಷದ ಕ್ಷತ್ರಿಯ; ಈತನು ಅಶ್ವತ್ಥಾಮನಿಂದ ಹತನಾದ (ಮ.ದ್ರೋ).

ಪೇದು -- ರಾಜರ್ಷಿಯೊಬ್ಬ. ಅಶ್ವಿನೀದೇವತೆಗಳನ್ನು ಸ್ತುತಿಸಿ ಅವರಿಂದ ಬಿಳಿ ಕುದುರೆಯನ್ನು ಪಡೆದು ಆ ಕುದುರೆಯಿಂದ ಇವನು ಶತ್ರುಗಳನ್ನು ಜಯಿಸಿದನು (ಋ).

ಪೈಲ -- ಪಿಲಿ ಋಷಿಯ ಗೋತ್ರೋತ್ಪನ್ನನಾದ ಮುನಿ. ಇವನು ವೇದವ್ಯಾಸನ ಶಿಷ್ಯ. ವ್ಯಾಸನು ವೇದವನ್ನು ನಾಲ್ಕಾಗಿ ವಿಭಾಗ ಮಾಡಿದ ಮೇಲೆ ಋಗ್ವೇದವನ್ನು ಈ ಮುನಿಗೆ ಹೇಳಿಕೊಟ್ಟನು (ಮ.ಆ., ಸ., ಶಾಂ., ವಿಷ್ಣುಪು).

ಪೌಂಡ್ರ -- ಭೀಮಸೇನನ ಶಂಖ (ಮ.ಭೀ).

ಪೌಂಡ್ರಕ -- ಪುಂಡ್ರವಂಶದ ವಾಸುದೇವನ ಪುತ್ರ. ಈತನು ಶ್ರೀಕೃಷ್ಣನಂತೆ ಶಂಖಚಕ್ರಗಳನ್ನು ಧರಿಸುತ್ತಿದ್ದ. ಈತನ ವಧೆ ಕೃಷ್ಣನಿಂದಾಯಿತು. ನೋ -- ಪುಂಡ್ರ (ಮ.ಆ., ಸ., ಭಾಗ., ಭವಿ.ಪು).

ಪೌರವ -- ಕ್ಷತ್ರಿಯ; ಈತನ ವಧೆ ಅಭಿಮನ್ಯುವಿನಿಂದಾಯಿತು (ಮ.ಆ., ಉ., ಭೀ., ದ್ರೋ).

ಪೌರುಕುಚ್ಛಿ -- ಕುಶನೆಂಬ ರಾಜನ ಮಗ. ಈತನಿಗೆ ಕುಶನಾಥ, ಕುಶಾಂಬ ಮತ್ತು ಮೂರ್ತಿಮಾನ್ ಎಂಬ ಮಕ್ಕಳಿದ್ದರು. ಇವರಲ್ಲಿ ಕುಶಿಕನ ಪತ್ನಿಯೇ ಪೌರುಕುಚ್ಛಿ. ಕುಶಿಕನು ಇಂದ್ರನ ಸಮಾನನಾದ ಮಗನಾಗಬೇಕೆಂದು ಹಲವು ವರ್ಷತಪಸ್ಸು ಮಾಡಿದನು. ಇದರಿಂದ ಇಂದ್ರನೇ ಗಾಧಿಯೆಂಬ ಹೆಸರಿನಿಂದ ಇವನ ಮಗನಾದನು. ಇವನಿಗೆ ಕೌಶಿಕನೆಂಬ ಹೆಸರಿದೆ (ಹರಿ).

ಪೌಲಸ್ತ್ಯ -- ನೋ -- ಪುಲಸ್ತ್ಯ. ಪುಲಸ್ತ್ಯನ ಮೊಮ್ಮಗ; ರಾವಣನಿಗೆ ಈ ಹೆಸರು ರೂಢಿಯಲ್ಲಿದೆ.

ಪೌಲೋಮ -- ೧. ನೋ -- ಪುಲೋಮ, ಪುಲೋಮ, ಪುಲೋಮೆಯ ಮಕ್ಕಳು. ಇವರೆಲ್ಲ ಅರ್ಜುನನಿಂದ ಹತರಾದರು (ಮ.ವ) ೨. ನಾರೀತೀರ್ಥದ ಒಂದು ಕೊಳ. ನೋ - ನಾರೀತೀರ್ಥ.

ಪೌಷ್ಟೀ -- ಪೂರುವಿನ ಪತ್ನಿ. ನೋ -- ಪೂರು.

ಪೌಷ್ಯ -- ಸೂರ್ಯವಂಶದ ಧ್ರುವಸಂಧಿಯೆಂಬ ರಾಜನ ಇನ್ನೊಂದು ಹೆಸರು. ಈತನ ಪತ್ನಿಯಿಂದ ಉತ್ತಂಕನಿಗೆ ಕುಂಡಲಗಳು ಕೊಡಲ್ಪಟ್ಟವು. ಈ ಮುನಿಯು ಹಿಂತಿರುಗುವಾಗ ಈ ರಾಜನು ಆತನಿಗೆ ಒಂದು ಔತಣವನ್ನು ಮಾಡಿಸಿದ. ಆ ಊಟದಲ್ಲಿ ಉತ್ತಂಕನಿಗೆ ಅನ್ನದೊಳಗೆ ಕೂದಲು ದೊರೆಯಲು ಉತ್ತಂಕನು ರಾಜಗೆ ಕುರುಡನಾಗುವಂತೆ ಶಾಪವಿತ್ತನು. ಪೌಷ್ಯನು ಕೋಪಗೊಂಡು

ಉತ್ತಂಕನಿಗೆ ಪುತ್ರಹೀನನಾಗುವಂತೆ ಶಾಪವಿತ್ತನು. ಉತ್ತಂಕನು. ರಾಜನಿಗೆ ಕೊಟ್ಟ ಶಾಪವನ್ನು ಹಿಂತೆಗೆದುಕೊಂಡರೂ, ರಾಜನು ಹಾಗೆ ಹಿಂದೆ ತೆಗೆದುಕೊಳ್ಳಲು ಅಸಮರ್ಥನಾದ (ಮ.ಆ).

ಪಂಚಕಾಶಿ -- ವಾರಣಾಸಿ, ಗುಪ್ತಕಾಶಿ, ಉತ್ತರಕಾಶಿ, ದಕ್ಷಿಣಕಾಶಿ ಮತ್ತು ಶಿವಕಾಶಿ.

ಪಂಚಸರೋವರ -- ಬಿಂದು ಸರೋವರ (ಸಿದ್ಧಪುರ), ನಾರಾಯಣ ಸರೋವರ (ಕಚ್ಛ), ಪಂಪಾಸರೋವರ (ಕರ್ನಾಟಕ ರಾಜ್ಯ), ಪುಷ್ಕರ ಸರೋವರ (ರಾಜಸ್ಥಾನ) ಮತ್ತು ಮಾನಸ ಸರೋವರ (ಟಿಬೆಟ್).

ಪ್ರಕಾಶ -- ಬ್ರಾಹ್ಮಣನೊಬ್ಬ. ಈತನ ತಂದೆ ತಮ. ಮಗ ವಾಗೀಂದ್ರ (ಮ.ಅನು).

ಪ್ರಘಸೆ -- ಸೀತೆಯನ್ನು ಅಶೋಕವನದಲ್ಲಿ ಕಾಯುತ್ತಿದ್ದ ಒಬ್ಬಳು ರಾಕ್ಷಸಿ. ಈಕೆಯು ರಾವಣನಿಗೆ ಸೀತೆಯ ಕೊರಳನ್ನು ಒತ್ತಿ ಕೊಲ್ಲಲು ಸೂಚನೆ ಕೊಟ್ಟಳು (ಮ.ವ).

ಪ್ರಚೇತ -- ವರುಣ; ಸಮುದ್ರಗಳ ರಾಜ; ಪಶ್ಚಿಮ ದಿಕ್ಕಿನ ಒಡೆಯ.

ಪ್ರಚೇತಸ -- ಪೃಥು ಚಕ್ರವರ್ತಿಯ ವಂಶದ ಪ್ರಾಚೀನ ಬರ್ಹಿಯಿಂದ ಶತದ್ರುತಿಯಲ್ಲಿ ಜನಿಸಿದ ಪುತ್ರ. ಇವರು ಹನ್ನೊಂದು ಮಂದಿ. ಇವರು ಶಿವನನ್ನು ತಪದಿಂದ ಮೆಚ್ಚಿಸಿ, ಪ್ರಜಾಧಿಪತ್ಯವನ್ನು ಬಯಸಿದರು. ಆದರೆ ಇವರ ಮಗನಾದ ದಕ್ಷನು ಪ್ರಜಾಧಿಪತಿಯಾಗುವನೆಂದು ಶಿವನು ನುಡಿದನು. ಇವರು ತಪಸ್ಸಿನಿಂದ ಹಿಂದಿರುಗುವಾಗ ಜಗತ್ತೆಲ್ಲ ಅರಣ್ಯಮಯವಾಗಿತ್ತು. ಇವರು ಅರಣ್ಯವನ್ನು ನಾಶಮಾಡತೊಡಗಿದಾಗ, ಓಷಧೀಶನಾದ ಚಂದ್ರನು ಅವರನ್ನು ತಡೆದು ಅವರಿಗೆ ವೃಕ್ಷಪುತ್ರಿಯಾದ ಮಾರಿಷೆಯನ್ನು ವಿವಾಹ ಮಾಡಿಕೊಟ್ಟನು. ಈ ಪ್ರಚೇತಸರು ಈಕೆಯಲ್ಲಿ ದಕ್ಷನನ್ನು ಪಡೆದರು (ವಿಷ್ಣುಪು). ನೋ -- ಪ್ರಮ್ಲೋಚಾ.

ಪ್ರಜಂಘ -- ಇಂದ್ರನ ದೂತ. ಐರಾವತನನ್ನು ಭೂಮಿಗೆ ಕಳುಹಿಸಲು ಮಾರ್ಗ ಮಾಡುವಂತೆ ಈತನೊಡನೆ ಅರ್ಜುನನಿಗೆ ಇಂದ್ರನು ಹೇಳಿಕಳುಹಿಸಿದನು (ಕು.ವ್ಯಾ.ಭಾ.ಆ).

ಪ್ರಜಾತಿ -- ಮನುವೆಂಬ ರಾಜನ ಮಗ, ಈತನು ಮಹಾಧನುರ್ಧರ. ಇವನ ಮಗ ಕ್ಷಾತ್ರ; ಮೊಮ್ಮಗ ಇಕ್ಷ್ವಾಕು (ಮ.ಅಶ್ವ).

ಪ್ರಜಾಪತಿ -- ಬ್ರಹ್ಮ, ಕಶ್ಯಪ, ಮರೀಚಿ ಮತ್ತು ಕರ್ದಮ ಮೊದಲಾದವರಿಗೂ ಈ ಹೆಸರು ಸಲ್ಲುತ್ತದೆ.

ಮಾನವನ ಜೀವನ -- ಮರಣದ ಗುಟ್ಟನ್ನು ತಿಳಿದವನೇ ಬ್ರಹ್ಮ.

ಒಂದು ಸಲ ಜಗತ್ತಿನ ಪ್ರಾಣಿಗಳೆಲ್ಲ ಪ್ರಜಾಪತಿಯ ಬಳಿಗೆ ಹೋದವು. ಅವು ಆತನೊಡನೆ, 'ಹೇ ದೇವಾ, ಜಗತ್ತಿನಲ್ಲಿ ನಾವು ಬದುಕುವ ರೀತಿಯನ್ನು ಕೊಂಚ ವಿಸ್ತಾರವಾಗಿ ಹೇಳುವೆಯಾ?' ಎಂದು ಕೇಳಿಕೊಂಡವು. ಆಗ ಪ್ರಜಾಪತಿಯು ದೇವತೆಗಳನ್ನು ಕುರಿತು, 'ಸುರರೇ, ಯಜ್ಞವೇ ಜೀವನಾಧಾರವಾದ ನಿಮ್ಮ ಅನ್ನವಾಗಲಿ; ಅಮೃತವು ಪಾನೀಯವಾಗಲಿ, ಸೂರ್ಯನು ನಿಮಗೆ ಪ್ರಕಾಶವನ್ನು ಕೊಡಲಿ. ಇಷ್ಟೇ ನಿಮ್ಮ ಜೀವನದ ಕುರಿತಾಗಿ ನಾನು ಹೇಳುವುದು' ಎಂದನು. ಇದನ್ನು ಕೇಳಿ ದೇವತೆಗಳು ಸಂತುಷ್ಟರಾದರು. ಆಮೇಲೆ ಮನುಷ್ಯರು ಪ್ರಜಾಪತಿಯ ಮುಂದೆ ಬರಲು ಅವನು, 'ಮಾನವಶ್ರೇಷ್ಠರೇ, ಬೆಳಗಿನ ಸಮಯದಲ್ಲಿ ಒಂದು ಸಲ, ಹಾಗೂ ಸಾಯಂಕಾಲದ ಸಮಯದಲ್ಲಿ ಒಂದು ಸಲ -- ಹೀಗೆ ಎರಡೇ ಸಲ ನೀವು ಊಟ ಮಾಡತಕ್ಕದ್ದು. ನಿಮ್ಮ ಸಂತಾನವೇ ನಿಮ್ಮ ಮೃತ್ಯುವಿಗೆ ಕಾರಣವಾಗುವುದು. ಅಗ್ನಿಯು ನಿಮಗೆ ಬೆಳಕು ಉಷ್ಣಗಳನ್ನು ಕೊಡುವನು.' ಆಮೇಲೆ ಪ್ರಜಾಪತಿಯು ಪ್ರಾಣಿಗಳನ್ನು ನೋಡಿ 'ಆಹಾರಸೇವನೆಯ ಬಗ್ಗೆ ನಿಮಗಾವ ನಿರ್ಬಂಧವೂ ಇಲ್ಲ. ನಿಮಗೆ ಬೇಕಾದ ಸಮಯದಲ್ಲಿ, ಬೇಕಾದಾಗ, ಆಹಾರ ದೊರೆತಾಗ ತಿನ್ನಬಹುದು. ಅದರಿಂದಲೇ ನಿಮಗೆ ಕಲ್ಯಾಣವಾಗುವುದು' ಎಂದು ಹೇಳಿದ. ಅಂದಿನಿಂದ ಪಶುಗಳು ಸಮಯಾಸಮಯಗಳನ್ನೆಣಿಸದೆ ತಮ್ಮ ಆಹಾರ ಸಿಕ್ಕಿದೊಡನೆ ಮೆಲುಕಾಡಿಸುತ್ತ ನಿಂತುಕೊಳ್ಳುವುವು. ಆಮೇಲೆ ಅಸುರರು ಪ್ರಜಾಪತಿಯ ಎದುರು ಹೋಗಿ ನಿಂತರು. ಆತನಿಗೆ ಅಸುರರ ತಾಮಸವೃತ್ತಿಯ ಪರಿಚಯವಿತ್ತು. ಅವನು ಅಸುರರಿಗೆ ಅಹಂಕಾರ ಮತ್ತು ಮಾಯೆಯನ್ನು ಅನುಗ್ರಹಿಸಿದನು. ಅಂದಿನಿಂದ ಅಸುರರು ಮಾಯಾವಿಗಳೂ, ಅಹಂಕಾರಿಗಳೂ ಆದರು. ಮುಂದೆ ಸುರರೂ, ಪಶುಗಳೂ, ದಾನವರೂ -- ಎಲ್ಲರೂ ಪ್ರಜಾಪತಿಯ ಆಜ್ಞೆಯನ್ನು ಶಿರಸಾವಹಿಸಿ ನಡೆದುಕೊಂಡರು. ಮಾನವನು ಮಾತ್ರ ಅವನ ಮಾತನ್ನು ಮನ್ನಿಸಲಿಲ್ಲ. ಮಾನವನು ಸಿಕ್ಕಾಬಟ್ಟೆ ತಿಂದು ಆಹಾರ ಸೇವನೆಯ ನಿಯಮವನ್ನು ಮುರಿದು ಅಕಾಲಮರಣಕ್ಕೆ ಗುರಿಯಾಗುತ್ತಾನೆ. ಅವನ ಆಯುಷ್ಯವು ತನ್ನಿಂದ ತಾನೇ ಕ್ಷೀಣವಾಗುತ್ತಿದೆ. ಮನುಷ್ಯನು ಪ್ರಜಾಪತಿಯ ಅಭಿಪ್ರಾಯದಂತೆ ಬೆಳಿಗ್ಗೆ ಒಂದು ಸಲ, ಸಾಯಂಕಾಲ ಒಂದು ಸಲ ಊಟ ಮಾಡಿದರೆ ಅವನು ದೀರ್ಘಾಯುಷಿಯಾಗಲು ಸಾಧ್ಯವಿದೆ. ಇದು ಪ್ರಜಾಪತಿಯು ಮಾನವನಿಗೆ ತೋರಿದ ದೀರ್ಘಾಯುಷ್ಯದ ರಹಸ್ಯ (ಶತ.ಬ್ರಾ).

ಪ್ರಜ್ಞಾಚಕ್ಷು -- **ಧೃತರಾಷ್ಟ್ರ**; ದುರ್ಯೋಧನನ ತಂದೆ. **ನೋ** -- **ಧೃತರಾಷ್ಟ್ರ**, ಗಾಂಧಾರಿ.

ಪ್ರಣಿಧಿ -- **ಅಗ್ನಿವಿಶೇಷ.**

ಪ್ರತರ್ದನ -- ಕಾಶಿರಾಜ; ದಿವೋದಾಸನ ಮಗ; ಯಯಾತಿಯ ದೌಹಿತ್ರ; ಈತನ ತಾಯಿ ಮಾಧವಿ. ಹೈಹಯ ದೇಶಾಧಿಪತಿ ವೀತಹವ್ಯನು ದಿವೋದಾಸನ ಮೇಲೆ ದಂಡೆತ್ತಿಹೋಗಿ ಅವನನ್ನು ಸೋಲಿಸಿ ರಾಜ್ಯದಿಂದ ಓಡಿಸಿದ. ಇದರಿಂದ ಪ್ರತರ್ದನನು ಕೋಪಗೊಂಡು ವೀತಹವ್ಯನ ಮಕ್ಕಳನ್ನು ಕೊಂದು ಅವನನ್ನು ಬೆನ್ನಟ್ಟಲು ಆತನು ತನ್ನ ತಂಗಿಯ ಗಂಡನಾದ ಚ್ಯವನನ ಆಶ್ರಮವನ್ನು ಹೊಕ್ಕು ಬ್ರಾಹ್ಮಣನೆಂದು ಹೇಳಿಸಿಕೊಂಡು ಬದುಕಿದನು (ಮ.ಅನು).

ಪ್ರತಾಪ -- ಜಯದ್ರಥನ ಸಹೋದರ.

ಪ್ರತಾಪಭಾನು -- ಕಾಶ್ಮೀರದ ಸತ್ಯಕೇತುರಾಜನ ಹಿರಿಯ ಮಗ. ನೋ -- ಸತ್ಯಕೇತು. ಪ್ರತಾಪಭಾನುವು ಕಪಟದ ಮುನಿ ಮತ್ತು ಕಾಲಕೇತುವಿನ ಮಾತಿನಂತೆ ಬ್ರಾಹ್ಮಣರಿಗೆ ಗೋಬ್ರಾಹ್ಮಣರ ಮಾಂಸ ತಿನ್ನಿಸುವ ಪ್ರಯತ್ನ ಮಾಡಲು, ಆಕಾಶವಾಣಿಯು ಆ ಬ್ರಾಹ್ಮಣರು ಪ್ರತಾಪಭಾನು ಮತ್ತು ಆತನ ಸೋದರನಾದ ಅರಿಮರ್ದನನಿಗೆ ಶಾಪವಿತ್ತನು. ಅವರೇ ಮುಂದೆ ರಾವಣ ಕುಂಭಕರ್ಣರಾಗಿ ಹುಟ್ಟಿದರು. (ತುಲಸೀರಾ).

ಪ್ರತಿವಿಂಧ್ಯ -- ಯುಧಿಷ್ಠರನ ಮಗ. ಈತನ ತಾಯಿ ದ್ರೌಪದಿ. ಭಾರತ ಯುದ್ಧದ ಹದಿನೆಂಟನೆಯ ರಾತ್ರಿ ಈತನ ಮತ್ತು ಈತನ ಸೋದರರ ವಧೆಯು ಅಶ್ವತ್ಥಾಮನಿಂದಾಯಿತು (ಮ.ಆ., ಸೌ).

ಪ್ರತಿಶ್ರವ -- ಚಂದ್ರವಂಶದ ಭೀಮಸೇನನ ಮಗ, ಈತನ ತಾಯಿ ಸುಕುಮಾರಿ. ಈತನಿಗೆ ಪರಿಶ್ರವನೆಂಬ ಹೆಸರೂ ಇದೆ. ಈತನಿಗೆ ಶೈಬ್ಯೆ ಮತ್ತು ಸುನಂದಿ ಎಂಬಿಬ್ಬರು ಹೆಂಡಿರು. ಈತನ ಮಕ್ಕಳೇ ದೇವಾಪಿ, ಶಂತನು, ಬಾಹ್ಲಿಕರು. ಇವನಿಗೆ ಪ್ರತೀಪನೆಂಬ ಹೆಸರಿದೆ (ಮ.ಆ).

ಪ್ರತಿಷ್ಠಾನಪುರ -- ಹಸ್ತಿನಾಪುರದ ಸಮೀಪದ ಒಂದು ಪಟ್ಟಣ. ಈಗ ಇದಕ್ಕೆ ವರ್ಧಮಾನಪುರವೆಂಬ (ಬರ್ದವಾನೇ) ಹೆಸರಿದೆ. ಪುರೂರವ ದುಷ್ಯಂತ ಮೊದಲಾದ ಚಂದ್ರವಂಶದವರ ರಾಜಧಾನಿ ಇದಾಗಿತ್ತು. ಉತ್ತಾನಪಾದ ರಾಜನ ಕಾಲದ ಕೋಟೆಯ ಅವಶೇಷಗಳು ಇಂದೂ ಇಲ್ಲಿವೆ. (ಮ.ಆ)

ಪ್ರತೀಚ್ಯಾ -- ಪುಲಸ್ತ್ಯನ ಪತ್ನಿ (ಮ.ಉ.).

ಪ್ರತೀಪ -- ೧. ಚಂದ್ರವಂಶದ ಆರನೆಯ ಧೃತರಾಷ್ಟ್ರನ ಮಗ, ಅವಿಕ್ಷಿತ ರಾಜನ ವಂಶದವ. ಈತನಿಗೆ ದೇವಾಪಿ, ಶಂತನು ಮತ್ತು ಬಾಹ್ಲಿಕರೆಂಬ ಮೂವರು ಮಕ್ಕಳು. ನೋ -- ಪ್ರತಿಶ್ರವ. ೨. ಚಂದ್ರವಂಶದ ಋಕ್ಷನ ಮಗ ಭೀಮಸೇನ, ಇವನಿಗೆ ದಿಲೀಪನೆಂಬ ಮಗ, ಈತನಿಗೆ ಪ್ರತೀಪನೆಂಬ ಮಗ, ಇವನಿಗೆ ದೇವಾಪಿ, ಶಂತನು ಬಾಹ್ಲೀಕರೆಂಬ ಮೂವರು ಮಕ್ಕಳು (ವಿಷ್ಣು.ಪು).

ಚಂದ್ರವಂಶದ ಪರೀಕ್ಷಿತನ ಮಗ ಭೀಮಸೇನ, ಸುಕುಮಾರಿ ಎಂಬ ದಂಪತಿಗಳಲ್ಲಿ ಜನಿಸಿದ ಮಗನೇ ಪ್ರತೀಪ. ಈತನ ಪತ್ನಿ ಸುನಂದ. ಇವರ ಮಕ್ಕಳು, ದೇವಾಪಿ, ಶಂತನು ಮತ್ತು ಬಾಹ್ಲಿಕರು. ಪ್ರತೀಪನು ಗಂಗಾತೀರದಲ್ಲಿ ತಪಸ್ಸು ಮಾಡುತ್ತಿದ್ದಾಗ (ಕೆರೆ ದಂಡೆಯ ಮೇಲೆ ಆಹ್ನಿಕವನ್ನು ಮಾಡುತ್ತಿದ್ದಾಗ) ಒಬ್ಬಳು ಸುಂದರ ಸ್ತ್ರೀಯು ನಡೆದುಕೊಂಡು ಬಂದು ಆತನ ಬಲತೊಡೆಯ ಮೇಲೆ ಕುಳಿತುಕೊಂಡು 'ನನ್ನನ್ನು ವರಿಸು' ಎಂದಳು. ಆಗ ಪ್ರತೀಪನು 'ನೀನು ನನ್ನ ಬಲ ತೊಡೆಯನ್ನೇರಿ ಕುಳಿತುದರಿಂದ ನೀನು ನನ್ನ ಸೊಸೆಯಾಗಲಿಕ್ಕೆ ಯೋಗ್ಯಳು ' ಎಂದನು. ಆಗ ಅರಸಿಗಿನ್ನೂ ಗಂಡುಮಕ್ಕಳಾಗದುದರಿಂದ -- ಗಂಡುಮಗನಾದರೆ ನನ್ನನ್ನು ಸೊಸೆಯಾಗಿ ಸ್ವೀಕರಿಸಬೇಕು' ಎಂದು ಮಾತು ಪಡೆದು ಆಕೆ ಅದೃಶ್ಯಳಾದಳು. ಮುಂದೆ ಈತನು ಶಂತನುವಿಗೆ ಪಟ್ಟಕಟ್ಟಿ ಅರಣ್ಯಕ್ಕೆ ಹೋಗುವಾಗ ಸುಂದರಿಯ ಮಾತನ್ನು ಶಂತನುವಿಗೆ ತಿಳಿಸಿ ಹೊರಟುಹೋದನು (ಮ.ಆ).

ಪ್ರತ್ಯಗ್ರಹ -- ಉಪರಿಚರ ವಸುವಿನ ಮಗ (ಮ.ಆ).

ಪ್ರತ್ಯುತ್ಪನ್ನಮತಿ -- ಬುದ್ಧಿಶಾಲಿಯಾದ ಒಂದು ಮೀನಿನ ಹೆಸರು (ಮ.ಶಾಂ.).

ಪ್ರತ್ಯೂಷ -- ಅಷ್ಟವಸುಗಳಲ್ಲೊಬ್ಬ. ಪ್ರಭಾತನ ಮಗ, ಈತನ ಮಗ ದೇವಲ (ಮ.ಆ).

ಪ್ರದ್ಯುಮ್ನ -- ಕೃಷ್ಣ ರುಕ್ಮಿಣಿಯರ ಮಗ. ಈತನಿಗೆ ಚಾರುದೇಷ್ಣ, ಸುದೇಷ್ಣ, ಚಾರುದೇಹ, ಸುಚಾರು, ಚಾರುಗುಪ್ತ, ಚಾರುಚಂದ್ರ, ವಿಚಾರು, ಭದ್ರಚಾರು ಮೊದಲಾದ ಎಂಟು ಮಂದಿ ಸಹೋದರರೂ, ಚಾರುಮತಿ ಎಂಬ ಸೋದರಿಯೂ ಇದ್ದಳು. ಇವನು ಮನ್ಮಥನ ಅವತಾರ. ತೇಜಸ್ವಿಯಾದ ಸನತ್ಕುಮಾರನ ಅಂಶದಿಂದ ಹುಟ್ಟಿದವನು. (ಮ.ಆ). ರುಕ್ಮಿಯ ಮಗಳಾದ ಶುಭಾಂಗಿಯು ಈತನ ಪತ್ನಿ. ಪ್ರದ್ಯುಮ್ನ ಮತ್ತು ಶುಭಾಂಗಿಯರ ಮಗನೇ ಅನಿರುದ್ಧ. ಅನಿರುದ್ಧನು ರುಕ್ಮಿಯ ಮೊಮ್ಮಗಳಾದ ರುಕ್ಮವತಿ (ಹರಿ) ಮತ್ತು ಬಾಣಾಸುರನ ಮಗಳಾದ ಉಷೆಯನ್ನು ಮದುವೆಯಾದನು. ನೋ -- ಉಷೆ. ಪ್ರದ್ಯುಮ್ನನ ಪೂರ್ವಜನ್ಮದ ಪತ್ನಿಯು ರತಿ. ಈಕೆ ವೇಷಮರೆಸಿಕೊಂಡು ಶಂಬರಾಸುರನ ಪತ್ನಿಯೊಡನಿದ್ದಳು. ಆಗ ಈಕೆಗೆ ಮಾಯಾವತಿ ಎಂಬ ಹೆಸರಿತ್ತು. ಶಂಬರಾಸುರನು ಕೃಷ್ಣಪುತ್ರನಿಂದ ತನಗೆ ಮರಣವೆಂಬುದನ್ನು ಕೇಳಿ, ಪ್ರದ್ಯುಮ್ನನ ಜನನವಾದೊಡನೆ ರಾಕ್ಷಸನು ಮಾಯೆಯಿಂದ ಆ ಮಗುವನ್ನು ಅಪಹರಿಸಿ ಸಮುದ್ರದಲ್ಲಿ ಎಸೆದನು. ಅದನ್ನು ಮೀನೊಂದು ನುಂಗಿತು. ಆ ಮೀನನ್ನು ಬೆಸ್ತರು ಹಿಡಿದು ಸೀಳಿದಾಗ ಸಿಕ್ಕಿದ ಮಗುವನ್ನು ಮಾಯಾವತಿಗೇ ತಂದೊಪ್ಪಿಸಿದರು. ಆ ಮಗು ಮನ್ಮಥನೆಂದು ನಾರದನಿಂದ ತಿಳಿದ

ಮಾಯಾವತಿಯು ಜೋಪಾನದಿಂದ ಕಾಪಾಡಿಕೊಂಡಿದ್ದಳು. ಅದಕ್ಕೆ ಆಕೆಯೇ ಯುದ್ಧವಿದ್ಯೆಯನ್ನೂ, ಮಾಯಾವಿದ್ಯೆಯನ್ನೂ ಕಲಿಸಿದಳು. ಇವನು ದೊಡ್ಡವನಾದ ಮೇಲೆ ಶಂಬರಾಸುರನನ್ನು ಕೊಂದನು. ದಾರುಕನ ಮಗನೇ ಈತನ ಸಾರಥಿ. ಪ್ರದ್ಯುಮ್ನನು ಯಾದವರ ಅಂತಃಕಲಹದಲ್ಲಿ ಸ್ವರ್ಗಸ್ಥನಾದನು (ಮ.ಸ., ಭಾಗ).

ಪ್ರದ್ವೇಷಿ (ಪ್ರದ್ವೇಷಿಣಿ) -- ದೀರ್ಘತಮ ಋಷಿಯ ಪತ್ನಿ; ಈಕೆಯ ಮಕ್ಕಳೇ ಗೌತಮಾದಿಗಳು. ನೋ -- ದೀರ್ಘತಮ.

ಪ್ರಧಾನ -- ರಾಜರ್ಷಿ; ಈತನ ಮಗಳು ಸುಲಭಾ (ಮ.ಶಾಂ).

ಪ್ರಭಂಕರ -- ಜಯದ್ರಥನ ಸಹೋದರನೊಬ್ಬ (ಮ.ವ).

ಪ್ರಭಂಜನ -- ೧. ಮಣಲೂರ (ಮಣಿಪುರ) ರಾಜರ ಮೂಲಪುರುಷ. ಈತನಿಗೆ ಮಕ್ಕಳಿಲ್ಲದುದರಿಂದ ಶಿವನನ್ನು ಕುರಿತು ತಪಸ್ಸುಮಾಡಲು ಶಿವನು ಪ್ರತ್ಯಕ್ಷನಾಗಿ 'ವಂಶೋದ್ಧಾರಕನಾದ ಒಬ್ಬನೇ ಮಗನಾಗುವನು' ಎಂದನು. ಮುಂದೆ ಬಹುಕಾಲದವರೆಗೆ ಹೀಗೆಯೇ ನಡೆದುಬಂತು. ನೋ -- ಮಲಯಧ್ವಜ ೨.ರಾಜನೊಬ್ಬ. ಇವನು ಬೇಟೆಯಾಡುತ್ತಿದ್ದಾಗ ಪೊದೆಯಲ್ಲಿದ್ದ ಮರಿಗೆ ಹಾಲು ಕುಡಿಸುತ್ತಿದ್ದ ತಾಯಿಜಿಂಕೆಯನ್ನು ಹೊಡೆದನು. ಅದು ಸಾಯುವಾಗ ರಾಜನಿಗೆ ಹುಲಿಯಾಗುವಂತೆ ಶಾಪವಿತ್ತಿತು. ಪ್ರಭಂಜನನು ಮುಂದೆ ಹುಲಿಯಾಗಿ ಹುಟ್ಟಿ ನೂರು ವರ್ಷ ಬದುಕಿದ್ದನು. ಆಗ ಒಮ್ಮೆ ನಂದೆ (ಪುಣ್ಯಕೋಟಿ) ಎಂಬ ದನವನ್ನು ಹಿಡಿಯಲು ಹೋದಾಗ ಅದು ತನ್ನ ಕರುವಿಗೆ ಹಾಲು ಕೊಟ್ಟು ಬರುತ್ತೇನೆಂದು ಹೇಳಿ ಹಾಗೆಯೇ ಮೊಲೆಯುಣ್ಣಿಸಿ ಹಿಂದೆ ಬರಲು ಅದರ ದರ್ಶನದಿಂದ ಹುಲಿಗೆ ಶಾಪವಿಮೋಚನೆಯಾಗಿ ಪುನಃ ದೊರೆಯಾದನು. ಇವನು ತನ್ನ ಗುರುಗಳಾದ ವಸಿಷ್ಠರ ಉಪದೇಶದಂತೆ ಕಾರ್ತಿಕ ವ್ರತವನ್ನು ಮಾಡಿ ಮುಕ್ತಿ ಪಡೆದನು (ಕಾರ್ತಿಕಮ).

ಪ್ರಭಾ -- ೧. ದೇವಮಾತೆ. ೨. ಅಪ್ಸರೆಯೊಬ್ಬಳು (ಮ.ಸ., ಅನು).

ಪ್ರಭಾತಾ -- ಪ್ರತ್ಯೂಷಪ್ರಭಾಸನ ತಾಯಿ (ಮ.ಆ).

ಪ್ರಭಾವ -- ಸ್ವರೋಚಿಸನೆಂಬ ಗಂಧರ್ವನ ಮೂರನೆಯ ಪತ್ನಿಯಾದ ಕಲಾವತಿಯಲ್ಲಿ ಪಡೆದ ಮಗ. ಇವನು ದಕ್ಷಿಣದಿಕ್ಕಿನ ತಾಲವೆಂಬ ಪಟ್ಟಣದಲ್ಲಿ ಅರಸಾಗಿದ್ದ. ನೋ -- ಸ್ವರೋಚಿಸ್ (ಮಾರ್ಕಂ.ಪು).

ಪ್ರಭಾವತಿ -- ೧. ಸುಧನ್ವನ ಹೆಂಡತಿ; ಹಂಸಧ್ವಜನ ಸೊಸೆ. ಈಕೆ ತುಂಬಾ ರಸಿಕಳು. (ಜೈ.ಭಾ). ೨. ದೇವಶರ್ಮನ ಪತ್ನಿಯಾದ ರುಚಿಯ ಹಿರಿಯ ಸೋದರಿ. ಈಕೆಯು ಅಂಗೇಶ್ವರನಾದ ನಾಲ್ಕನೆಯ ಚಿತ್ರರಥನ ಹೆಂಡತಿ (ಮ.ಅನು).

೩.ಶಾಂಡಿಲ್ಯ ಮುನಿಯ ಕನ್ಯೆ. ಋಷಭಕೂಟ ಪರ್ವತದಲ್ಲಿ ಈಕೆ ತಪಸ್ಸು ಮಾಡುತ್ತಿದ್ದಳು. ಈಕೆಗೆ ಸ್ವಯಂಪ್ರಭೆ ಎಂಬ ಹೆಸರೂ ಇದೆ. ಈಕೆಯ ಉಪಾಧ್ಯಾಯನಿಂದ ಗರುಡನ ಪಕ್ಷಗಳು ನಾಶವಾಗಿ ಈಕೆಯ ಅನುಗ್ರಹದಿಂದ ಪುನಃ ಚಿಗುರಿದುವು (ಮ.ಉ., ಭೀ., ರಾಮಾ. ಕಿಷ್ಕಿಂ., ಸ್ಕಾಂ.ಪು). ಸೀತಾ ಸಂಶೋಧನೆಗೆ ಹೊರಟ ಹನುಮದಾದಿಗಳು ಈಕೆಯ ಗವಿಯನ್ನು ಹೊಕ್ಕು ಈಕೆಯ ಸಹಾಯದಿಂದಲೇ ಹೊರಬಂದರು.

ಪ್ರಭಾಸ (ಸೋಮನಾಥ) - ೧. ಅಷ್ಟವಸುಗಳಲ್ಲೊಬ್ಬ; ಈತನ ಪತ್ನಿಯು ಬೃಹಸ್ಪತಿಯ ಸೋದರಿ. ಮಗ ವಿಶ್ವಕರ್ಮನೆಂಬ ದೇವಶಿಲ್ಪಿ. ೨. ಒಂದು ಪವಿತ್ರಕ್ಷೇತ್ರ. ಗುಜರಾತಿನಲ್ಲಿರುವ ಸೋಮನಾಥ ಕ್ಷೇತ್ರ. ಪಾಂಡವರು ವನವಾಸಕಾಲದಲ್ಲಿ ಇಲ್ಲಿಗೆ ಬಂದಿದ್ದರು. ಅರ್ಜುನನು ತೀರ್ಥಯಾತ್ರಾ ಕಾಲದಲ್ಲಿ ಇಲ್ಲಿಗೆ ಬಂದಿದ್ದನು. ಈ ಕ್ಷೇತ್ರವು ಸಮುದ್ರತಟದಲ್ಲಿದೆ. ಮುಂಬಯಿಯಿಂದ ವಾರಕ್ಕೊಮ್ಮೆ ಹಡಗು ಇಲ್ಲಿಗೆ ಬರುತ್ತದೆ. ವೇರಾವಳ ರೈಲ್ವೆ ನಿಲ್ದಾಣದಿಂದ ಪ್ರಭಾಸ ಪಟ್ಟಣಕ್ಕೆ ಮೂರು ಮೈಲು ದೂರವಿದೆ. ಈ ಸ್ಥಳಕ್ಕೆ ವೇರಾವಳ, ಸೋಮನಾಥ ಪಟ್ಟಣ, ಪ್ರಭಾಸವೆಂದು ಮೂರು ಹೆಸರುಗಳಿವೆ. ದಕ್ಷಬ್ರಹ್ಮನ ಇಪ್ಪತ್ತೇಳು ಮಂದಿ ಕನ್ಯೆಯರನ್ನು ಚಂದ್ರನು ವಿವಾಹವಾದಮೇಲೆ ರೋಹಿಣಿಯನ್ನು ಮಾತ್ರ ಪ್ರೀತಿಸಿ ದಕ್ಷನಿಂದ ಕ್ಷಯರೋಗ ಪ್ರಾಪ್ತವಾಗುವಂತೆ ಶಾಪ ಪಡೆದನು. ಆಗ ಚಂದ್ರನು ಈ ಪ್ರಭಾಸಕ್ಷೇತ್ರಕ್ಕೆ ಬಂದು ಮೃತ್ಯುಂಜಯನನ್ನು ಆರಾಧಿಸಿದನು. ಶಂಕರನು ಆತನಿಗೆ ಪ್ರತ್ಯಕ್ಷನಾಗಿ ಶುಕ್ಲ -- ಕೃಷ್ಣಪಕ್ಷಗಳಲ್ಲಿ ಆತನ ತೇಜಸ್ಸು ಹಿಗ್ಗಿ ಕುಗ್ಗುವಂತೆ ವರವಿತ್ತನು. ಇಲ್ಲಿ ಹಿರಣ್ಯ, ಸರಸ್ವತಿ ಮತ್ತು ಕಪಿಲಾಚ ಎಂಬ ಮೂರು ನದಿಗಳು ಸಂಗಮವಾಗುತ್ತವೆ. ಇಲ್ಲಿಯೇ ಹಿಂದೆ ಯಾದವರ ಸಂಹಾರವಾಯಿತು. ಶ್ರೀಕೃಷ್ಣನು ಇಲ್ಲಿದ್ದ ಒಂದು ವಟವೃಕ್ಷದ ಕೆಳಗೇ ದೇಹವಿಸರ್ಜನೆ ಮಾಡಿದನು. ಇಲ್ಲೇ ಬಲರಾಮನು ಶೇಷರೂಪದಿಂದ ಪಾತಾಳಕ್ಕೆ ಇಳಿದುಹೋದನು. ಸೋಮನಾಥವು ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದು ಲಿಂಗವಿದ್ದ ಪವಿತ್ರಕ್ಷೇತ್ರವು.

ಇಲ್ಲಿ ಬಾಣ ಮೊದಲಾದ ತೀರ್ಥಗಳಿವೆ. ಮಹಾಕಾಲ, ಗಣೇಶ, ಭದ್ರಕಾಳಿ ಮತ್ತು ವಿಷ್ಣುಮಂದಿರಗಳು ಇಲ್ಲಿವೆ. ಸಿದ್ದನಾಥ ಮಹಾದೇವನ ಮಂದಿರದ ಹತ್ತಿರ ಬಲರಾಮ ಮಂದಿರವಿದೆ. ಇಲ್ಲಿಂದಲೇ ಬಲರಾಮನು ಪಾತಾಳಕ್ಕೆ ಇಳಿದುಹೋದನಂತೆ (ಮ.ಮೌ.ಸ). ಅರ್ಜುನನು ಸುಭದ್ರಾಪಹಾರಕ್ಕೆ ಇಲ್ಲಿಯೇ ಸನ್ಯಾಸಿವೇಷ ಧರಿಸಿದನು (ಮ.ಆ., ವ., ಶ).

ಪ್ರಮತಕ -- ಜನಮೇಜಯನ ಸರ್ಪಯಜ್ಞದ ಸದಸ್ಯ (ಮ.ಆ).

ಪ್ರಮತಿ -- ೧. ಋಷಿ; ಚ್ಯವನನ ಪುತ್ರ. ಈತನ ತಾಯಿ ಸುಕನ್ಯೆ. ಈತನು ಘೃತಾಚಿ ಎಂಬ ಅಪ್ಸರೆಯಲ್ಲಿ ರುರು ಎಂಬ ಮಗನನ್ನು ಪಡೆದಳು. ನೋ -- ರುರು. ಇವನು ಸೂರ್ಯನ ಮಹಿಮೆಯನ್ನೂ, ರಾಜ್ಯವರ್ಧನನ ಪ್ರಜೆಗಳ ರಾಜಭಕ್ತಿಯನ್ನೂ ಕೊಂಡಾಡಿದನು. **ನೋ -- ರಾಜ್ಯವರ್ಧನ.** ೨. ವಿಭೀಷಣನ ಒಬ್ಬ ಮಂತ್ರಿ. ೩. ಚಾಕ್ಷುಷಮನ್ವಂತರದ ಕಲಿಯುಗದಲ್ಲಿ ವಿಷ್ಣುವು ಈ ಹೆಸರಿನಲ್ಲಿ ಅವತರಿಸಿದನು (ಮ.ಆ., ಅನು., ಮತ್ಸ್ಯಪು., ರಾಮಾ. ಯುದ್ಧ).

ಪ್ರಮಥ -- ಧೃತರಾಷ್ಟ್ರನ ಮಗ (ಮ.ಆ.).

ಪ್ರಮಥಗಣ -- ಶಿವನ ಗಣಗಳು (ಮ.ಅನು)

ಪ್ರಮದ್ವರಾ -- ಈಕೆಯ ತಂದೆ ವಿಶ್ವಾವಸು ಎಂಬ ಗಂಧರ್ವ, ತಾಯಿ ಮೇನಕೆ ಎಂಬ ಅಪ್ಸರೆ. ಈಕೆಯ ಪೋಷಕನೂ ಸಾಕುತಂದೆಯೂ ಸ್ಥೂಲಕೇಶನೆಂಬ ಮುನಿಯು. ಪ್ರಮತಿಯ ಪುತ್ರನಾದ ರುರುವು ಈಕೆಯ ಪತಿ. ಪ್ರಮದ್ವರೆಗೆ ಒಮ್ಮೆ ಹಾವು ಕಚ್ಚಿ ಸಾಯಲು ರುರುವು ತನ್ನ ಅರ್ಧಾಯುಷ್ಯವನ್ನು ಕೊಟ್ಟು ಬದುಕಿಸಿದನು. **ನೋ - ಸ್ಥೂಲಕೇಶ, ರುರು.**

ಸ್ಥೂಲಕೇಶನು ಈಕೆಯ ಮುಂದಿನ ಹಸ್ತನಕ್ಷತ್ರದಲ್ಲಿಯೇ ವಿವಾಹ ನಡೆಸುವುದಾಗಿ ನಿಶ್ಚಯಿಸಿದ್ದನು.

ರುರುವು ಪತ್ನಿಯ ವಿಯೋಗದಿಂದ ದುರ್ಗಮ ಅರಣ್ಯಗಳಲ್ಲಿ ಪ್ರಲಾಪಿಸುತ್ತ ತಿರುಗುವಾಗ ದೇವತೆಗಳಿಗೂ ಆತನಲ್ಲಿ ಕನಿಕರ ಹುಟ್ಟಿತು. ಅವರು ತಮ್ಮ ದೂತನನ್ನು ಕರೆದು ಅವನಿಗೆ ಹೇಳಬೇಕಾದುದನ್ನೆಲ್ಲ ಹೇಳಿ ರುರುವಿನ ಬಳಿ ಕಳುಹಿಸಿದರು. ಅವರು ರುರುವಿನ ಬಳಿಗೆ ಬಂದು -- 'ಓ! ಧರ್ಮಾತ್ಮ, ಆಯಸ್ಸು ತೀರಿ ಮೃತರಾದವರಿಗೆ ತಿರುಗಿ ಆಯಸ್ಸು ಲಭಿಸುವುದು ದುರ್ಲಭ. ಆದರೆ ಮಹಾತ್ಮರಾದ ದೇವತೆಗಳು ಮೊದಲೇ ಇದಕ್ಕೊಂದು ಉಪಾಯವನ್ನು ನಿರ್ಧರಿಸಿರುವರು. ನಿನ್ನ ಆಯುಸ್ಸಿನ ಅರ್ಧಭಾಗವನ್ನು ಆ ಕನ್ಯೆಗೆ ಕೊಟ್ಟರೆ ಅವಳು ಬದುಕಿಕೊಳ್ಳಬಹುದು' ಎನ್ನಲು ರುರುವು ' ಹಾಗೇ ಆಗಲಿ' ಎಂದನು. ಆಮೇಲೆ ವಿಶ್ವಾವಸು ಎಂಬ ಗಂಧರ್ವರಾಜನೂ, ದೇವದೂತನು ಯಮನ ಬಳಿಗೆ ಹೋಗಿ 'ಪ್ರಮದ್ವರೆಯು ಬದುಕುವಂತೆ ಸಮ್ಮತಿಸಬೇಕು' ಎಂದರು. ಯಮನು ಆ ಮಾತನ್ನು ಅಂಗೀಕರಿಸಲು ಪ್ರಮದ್ವರೆಯು ನಿದ್ರೆಯಿಂದೆದ್ದವಳಂತೆ ಮೇಲಕ್ಕೆದ್ದಳು (ಮ.ಆ.).

ಪ್ರಮಾಣ -- ವಟವೃಕ್ಷ. ಪಾಂಡವರು ಇದರ ಸಮೀಪಕ್ಕೆ ಬಂದಿದ್ದರು (ಮ.ವ).

ಪ್ರಮಾಣಕೋಟಿ -- ಗಂಗಾನದಿಯ ಒಂದು ಆಳವಾದ ಮಡು. ಕೌರವನು ಬಾಲ್ಯದಲ್ಲಿ ಭೀಮನಿಗೆ ವಿಷಮಿಶ್ರಿತವಾದ ತಿಂಡಿಯನ್ನು ತಿನ್ನಿಸಿ, ಕೈಕಾಲು ಕಟ್ಟಿಸಿ, ಇದೇ ಮಡುವಿನಲ್ಲಿ ಕೆಡೆದಿದ್ದನು (ಮ.ಆ).

ಪ್ರಮಾಥಿ -- ೧. ಸಂವತ್ಸರವೊಂದು. ೨. ಧೃತರಾಷ್ಟ್ರನ ಪುತ್ರ; ಈತನು ಭೀಮನಿಂದ ಹತನಾದ (ಮ.ಆ., ದ್ರೋ). ೩. ಬಲಾಕೆಯೆಂಬ ರಾಕ್ಷಸಿಯಲ್ಲಿ ವಿಶ್ರವಸುವಿನಲ್ಲಿ ಹುಟ್ಟಿದವ. ಇವನು ಕಪಿ ಸೇನಾನಾಯಕನಾದ ನೀಲನಿಂದ ಹತನಾದ (ಮ.ವ.).

ಪ್ರಮೀಲಾ (ಪ್ರಮೀಳೆ) -- ಸ್ತ್ರೀರಾಜ್ಯದ ರಾಣಿ. ಈಕೆ ಧರ್ಮರಾಜನ ಅಶ್ವಮೇಧದ ಕುದುರೆಯನ್ನು ಕಟ್ಟಿ ಅರ್ಜುನನೊಂದಿಗೆ ಯುದ್ಧಮಾಡಿ ಕೊನೆಗೆ ಅವನನ್ನು ವಿವಾಹವಾದಳು (ಜೈ.ಭಾ). ಈ ರಾಜ್ಯದ ಸ್ತ್ರೀಯರೆಲ್ಲ ವಿಷಕನ್ಯೆಯರೆಂದು ತೋರುತ್ತದೆ. ಅರ್ಜುನನು ಆಕಾಶವಾಣಿಯ ಸೂಚನೆಯಂತೆ ಆಕೆಯನ್ನು ವಿವಾಹವಾದನು. ಕೃಷ್ಣನ ದರ್ಶನದಿಂದ ಆಕೆಯ ದೇಹದ ದೋಷಗಳೆಲ್ಲ ಪರಿಹಾರವಾಗುತ್ತವೆ.

ಪ್ರಮ್ಲೋಚಾ (ಚನಾ) -- ಅಪ್ಸರೆಯೊಬ್ಬಳು. ಕಂಡುಮುನಿಯ ತಪೋಭಂಗಕ್ಕಾಗಿ ಇಂದ್ರನು ಈಕೆಯನ್ನು ಕಳುಹಿಸಲು, ಕಂಡು ಈಕೆಯೊಡನೆ ಬಹಳ ಕಾಲ ಸಂಸಾರಿಯಾಗಿದ್ದ. ಒಮ್ಮೆ ಕಂಡು ಕೋಪಿಷ್ಠನಾಗಿದ್ದಾಗ ಗರ್ಭಿಣಿಯಾಗಿದ್ದ ಪ್ರಮ್ಲೋಚೆಯು ಕಂಡು ಹೆದರಲು ಆಕೆಯ ಗರ್ಭವು ಕರಗಿ ನೀರಾಯಿತು. ಅವಳು ದೇವಲೋಕಕ್ಕೆ ಹೋಗುತ್ತ ದಾರಿಯ ಮರಗಳಿಗೆ ಗರ್ಭದ ನೀರನ್ನು ಒರೆಸುತ್ತ ಹೋದಳು. ಗಾಳಿಯಿಂದ ಅವೆಲ್ಲ ಕೂಡಿ ಒಂದು ಹೆಣ್ಣು ರೂಪವಾಯಿತು. ಮರಗಳು ಆ ಮಗುವನ್ನು ಕಾಪಾಡಿಕೊಂಡಿದ್ದವು. ಈ ಮಗುವೇ ಮಾರಿಷೆ ಎಂಬ ಹೆಸರಿನಿಂದ ಮುಂದೆ ಪ್ರಚೇತಸರ ಪತ್ನಿಯಾದಳು. ನೋ -- ಪ್ರಚೇತಸ, ಮಾರಿಷೆ, ಪುರಸ್ಕರ, ರೌಚ್ಯ (ಭಾಗ., ಮ.ಆ., ಸ., ವಿಷ್ಣುಪು).

ಪ್ರಯಾಗ -- ಒಂದು ಕ್ಷೇತ್ರ. ಈಗ ಇದನ್ನು ಅಲಹಾಬಾದು ಎನ್ನುತ್ತಾರೆ. ಇಲ್ಲಿ ಬ್ರಹ್ಮನು ಅನೇಕ ಯಾಗಗಳನ್ನು ಮಾಡಿದುದರಿಂದ ಪ್ರಯಾಗ ಆಯಿತು. ಇದಕ್ಕೆ ಧಾರಾಗಂಜವೆನ್ನುತ್ತಾರೆ. ಇಲ್ಲಿ ಗಂಗಾ, ಯಮುನಾ, ಸರಸ್ವತಿ ನದಿಗಳ ಸಂಗಮ ಸ್ಥಾನವಿದೆ. ಈಗ ಇಲ್ಲಿ ಗಂಗಾಯಮುನೆಗಳ ಸಂಗಮವು ಮಾತ್ರ ಕಾಣಿಸುತ್ತಿದೆ. ಸರಸ್ವತಿಯು ಗುಪ್ತಗಾಮಿನಿಯಾಗಿ ಹರಿಯುತ್ತಿದ್ದಾಳೆ. ಈ ಸಂಗಮಕ್ಕೆ ತ್ರಿವೇಣಿ ಸಂಗಮವೆನ್ನುತ್ತಾರೆ. ಇಲ್ಲಿ ಭಾಗೀರಥಿಯು ವೇಗವಾಗಿ ಹರಿಯುತ್ತಿದೆ. ಇಲ್ಲಿ ತೀರ್ಥಶ್ರಾದ್ಧ ಮಾಡುವರಲ್ಲದೆ, ದಂಪತಿಗಳ ವೇಣೀದಾನದ ಸಮಾರಂಭವೂ ನಡೆಯುವುದು. ಇಲ್ಲಿ ಮಹಾವಟವೃಕ್ಷದ ಬೇರು ಮಾತ್ರವಿದ್ದು, ಕಾಶಿಯಲ್ಲಿ ಅದರ ಮಧ್ಯ ಭಾಗವೂ, ಗಯೆಯಲ್ಲಿ ಇದರ ಕೊನೆಯೂ ಇರುವುದು (ಮ.ವ).

ಪ್ರರುಜ -- ಅಮೃತರಕ್ಷಕನಾದ ದೇವತೆ. ಈತನು ಗರುಡನೊಡನೆ ಯುದ್ಧ ಮಾಡಿದನು (ಮ.ಆ).

ಪ್ರಲಂಬ -- ರಾಕ್ಷಸನೊಬ್ಬ. ಕಂಸನಿಂದ ಕಳುಹಿಸಲ್ಪಟ್ಟ ಇವನು ಗೊಲ್ಲರ ವೇಷದಿಂದ ಬಂದು ಬಲರಾಮನನ್ನು ಹೊತ್ತುಕೊಂಡು ಹೋಗಲು ಬಲರಾಮನು ಈತನನ್ನು ನೆಲಕ್ಕೆ ಕೆಡಹಿ ಕೊಂದನು. ಈತನು ಕೃಷ್ಣನನ್ನು ಅಪಹರಿಸಲು ಬಂದಿದ್ದರೂ ಹಿಂದೆ ತೃಣಾವರ್ತನಿಗಾದವಸ್ಥೆಯನ್ನು ನೆನೆದು, ರಾಮನನ್ನು ಅಪಹರಿಸುವ ಪ್ರಯತ್ನ ನಡೆಸಿ ಜೀವ ಕಳೆದುಕೊಂಡನು (ಭಾಗ., ಹರಿ., ವಿಷ್ಣುಪು).

ಪ್ರವೀರ -- ೧. ಪಾಂಡ್ಯರಾಜ; ಚಿತ್ರಾಂಗದೆಯ ತಂದೆ; ಬಭ್ರುವಾಹನನ ಅಜ್ಜ. ಈತನಿಗೆ ಮಲಯಧ್ವಜ ಮತ್ತು ಚಿತ್ರವಾಹನನೆಂಬ ಹೆಸರೂ ಉಂಟು. ಈತನು ಭಾರತ ಯುದ್ಧದಲ್ಲಿ ಅಶ್ವತ್ಥಾಮನಿಂದ ಹತನಾದನು (ಮ.ಕ). ೨.ಚಂದ್ರವಂಶದ ಪೂರುವಿನ ಮಗ; ಪತ್ನಿ ಶೂರಸೇನಿ; ಮಗ ಮನಸ್ಯು (ಮ.ಕ.,ಆ).

ಪ್ರಶ್ನಿ -- ಅದಿತಿಯ ರೂಪಾಂತರ. ವಿಷ್ಣುವು ಈಕೆಯಲ್ಲಿ ಪ್ರಶ್ನಿಗರ್ಭನೆಂಬ ಹೆಸರಿನಿಂದ ಅವತರಿಸಿದನು (ಮ.ಶಾಂ).

ಪ್ರಸನ್ನ -- ಧರ್ಮವ್ಯಾಧನ ಅಳಿಯ; ಧರ್ಮವ್ಯಾಧನ ಮಗಳಾದ ಅರ್ಜನಿಕಿಯ ಗಂಡ. ಇವನು ಮತಂಗಮುನಿಯ ಮಗ. ನೋ -- ಅರ್ಜುನಿಕಿ, ಧರ್ಮವ್ಯಾಧ (ಮ.ವ).

ಪ್ರಸೇನಜಿತ್ -- ೧. ಕ್ಷತ್ರಿಯ; ಈತನ ಪುತ್ರಿ ಜಮದಗ್ನಿಯ ಪತ್ನಿಯಾದ ರೇಣುಕೆ. ಈತನಿಗೆ ರೇಣು ಎಂಬ ಹೆಸರೂ ಉಂಟು (ಮ.ವ). ೨. ಯಾದವನೊಬ್ಬ. ಈತ ಸ್ಯಮಂತಕ ರತ್ನ ಪಡೆದ ಸತ್ರಾಜಿತನ ತಮ್ಮ. ಈತನಿಗೆ ಪ್ರಸೇನನೆಂಬ ಹೆಸರೂ ಇದೆ. ಇವನು ಬೇಟೆಯಾಡಲು ಅರಣ್ಯಕ್ಕೆ ಹೋದಾಗ ಈ ರತ್ನವನ್ನು ಕೊರಳಲ್ಲಿ ಧರಿಸಿಕೊಂಡು ಹೋಗಿದ್ದನು. ಇವನನ್ನು ಒಂದು ಸಿಂಹವು ಕೊಂದು ಆ ರತ್ನವನ್ನು ತೆಗೆದುಕೊಂಡು ಹೋಗುವಾಗ ಜಾಂಬವಂತನು ಕಂಡು ಈ ಸಿಂಹವನ್ನು ಕೊಂದು ಆ ರತ್ನವನ್ನು ತನ್ನ ಗುಹೆಗೆ ಕೊಂಡುಹೋದನು. ನೋ -- ಸ್ಯಮಂತಕಮಣಿ (ಮ.ಸ., ಭಾಗ).

ಪ್ರಸ್ರವಣ -- ನೋ -- ಮಾಲ್ಯವಂತ.

ಪ್ರಸ್ವಾಪನಾಸ್ತ್ರ -- ಈ ಅಸ್ತ್ರವು ಭೀಷ್ಮನಿಂದ ಪರಶುರಾಮನ ಮೇಲೆ ಪ್ರಯೋಗಿಸಲ್ಪಟ್ಟಿತು. ಇದರ ವಿಚಾರ ಪರಶುರಾಮನಿಗೆ ತಿಳಿದಿರಲಿಲ್ಲ. ಈ ಅಸ್ತ್ರದ ಮಹಿಮೆಯಿಂದ ಪರಶುರಾಮನು ಯುದ್ಧಭೂಮಿಯಲ್ಲಿ ನಿದ್ರಿಸಿದನು.

ಅವನನ್ನು ಭೀಷ್ಮನೇ ಮುಂದೆ ಸಂಬೋಧನಾಸ್ತ್ರದಿಂದ ಎಚ್ಚರಿಸಿ ಕಾಪಾಡಿದನು (ಮ.ಉ).

ಪ್ರಹಸ್ತ -- ರಾವಣನ ಮಂತ್ರಿ. ಸುಮಾಲಿ ಎಂಬ ರಾಕ್ಷಸನ ಮಗ. ಇವನು ರಾವಣನಿಗೆ ಸೋದರಮಾವನಾಗಬೇಕು. ವಿಭೀಷಣನಿಂದ ಈತನು ಹತನಾದ. ವಿಭೀಷಣನ ಶತಘಂಟವೆಂಬ ದಿವ್ಯಶಕ್ತಿಯು ಈತನನ್ನು ಕೊಂದಿತು (ಮ.ವ). ನೀಲನೆಂಬ ಕಪಿ ಸೇನಾಪತಿಯು ಈತನನ್ನು ಕೊಂದನು (ರಾಮಾ, ಯುದ್ಧ).

ಪ್ರಹ್ಲಾದ -- ಹಿರಣ್ಯಕಶಿಪುವಿನ ಹಿರಿಯ ಮಗ. ಈತನ ತಾಯಿ ಕಯಾದು. ಸಂಹ್ಲಾದ, ಅನುಹ್ಲಾದ, ಶಿಬಿ ಮತ್ತು ಬಾಷ್ಕಲರೆಂಬವರು ಈತನ ಸಹೋದರರು. ವಿರೋಚನ, ಕುಂಭ ಮತ್ತು ನಿಕುಂಭರೆಂಬವರು ಈತನ ಮಕ್ಕಳು. ವಿಶ್ವರೂಪಾಚಾರ್ಯನ ತಾಯಿಯಾದ ರಚನೆಯು ಈತನ ಮಗಳು (ಭಾಗ). ಈಕೆಗೆ ವಿರೋಚನೆ ಎಂಬ ಹೆಸರೂ ಇದೆ (ವಾಯುಪು). ಪ್ರಹ್ಲಾದನು ಬಾಲ್ಯದಿಂದಲೇ ಹರಿಭಕ್ತನಾಗಿದ್ದನು. ಈತನ ಗುರುಗಳಾದ ಶಂಡಾಮರ್ಕರು ಈತನಿಂದ ಹರಿಭಕ್ತಿಯನ್ನು ತೊಲಗಿಸಬೇಕೆಂದು ಮಾಡಿದ ಪ್ರಯತ್ನಗಳೆಲ್ಲ ವ್ಯರ್ಥವಾದುವು. ಹಿರಣ್ಯಕಶಿಪುವೂ ಇದಕ್ಕಾಗಿ ಇವನಿಗೆ ಹಲವು ಶಿಕ್ಷೆಗಳನ್ನು ಕೊಟ್ಟನು ; ವಿಷ ಕುಡಿಯಲು ಕೊಟ್ಟನು; ಸಮುದ್ರಕ್ಕೆ ನೂಕಿದನು. ಆತನ ಎಲ್ಲ ವಿಶ್ವಪ್ರಯತ್ನಗಳೂ ವ್ಯರ್ಥವಾಗಲು ಆತನೇ ಮಗನೊಡನೆ 'ನಿನ್ನ ಹರಿ ಎಲ್ಲಿದ್ದಾನೆ?' ಎಂದು ಕೇಳಲು, ಪ್ರಹ್ಲಾದ 'ಆತ ಸರ್ವವ್ಯಾಪಿ' ಎಂದನು. ಹಿರಣ್ಯನು ಆಸ್ಥಾನದ ವಜ್ರಸ್ತಂಭವನ್ನು ತೋರಿಸಿ, 'ಇಲ್ಲಿರುವನೇ ನಿನ್ನ ಹರಿ ?' ಎಂದು ಗರ್ಜಿಸಲು, ಪ್ರಹ್ಲಾದನು -- 'ಹೌದು' ಎಂದನು. ಹಿರಣ್ಯಕಶಿಪುವು ಕೋಪದಿಂದ ಆ ಕಂಬವನ್ನು ತುಳಿಯಲು ಅದರೊಳಗಿಂದ ಭಕ್ತಪ್ರಾಣನಾದ ಪರಮಾತ್ಮನು ನರಸಿಂಹಾಕಾರದಿಂದ ಹೊರಬಂದು ಹಿರಣ್ಯಕಶಿಪುವನ್ನು ಸಂಧ್ಯಾಕಾಲದಲ್ಲಿ ಹೊಸ್ತಿಲಮೇಲೆ ಕುಳಿತು ತನ್ನ ತೊಡೆಯ ಮೇಲೆ ಕೆಡೆದುಕೊಂಡು ಉಗುರುಗಳಿಂದ ಸೀಳಿ ಕೊಂದನು. ಆ ದಿನವನ್ನು ಈಗಲೂ ನರಸಿಂಹ ಜಯಂತಿಯೆನ್ನುತ್ತಾರೆ. ಮುಂದೆ ಶುಕ್ರಾಚಾರ್ಯರು ರಾಕ್ಷಸ ಸಾಮ್ರಾಜ್ಯದಲ್ಲಿ ಪ್ರಹ್ಲಾದನಿಗೆ ಪಟ್ಟಾಭಿಷೇಕ ಮಾಡಿದರು (ಭಾಗ., ಮ.ಆ., ಸ., ವ., ಉ., ಶಾಂ., ವಿಷ್ಣುಪು., ಮತ್ಸ್ಯಪು).

ಪ್ರಹ್ಲಾದಾ -- ಒಂದು ದೇಶ.

ಪ್ರಾಗ್ಜ್ಯೋತಿಷ -- ೧. ನರಕಾಸುರನ ಮಗನಾದ ಭಗದತ್ತನು. ಪಾಂಡವರ ಕಾಲದಲ್ಲಿ ಈ ನಗರದ ರಾಜನಾಗಿದ್ದನು. ಈತನ ತಂದೆ ನರಕ ಅಥವಾ ಭೌಮಾಸುರನಿಗೂ ಇದೇ ರಾಜಧಾನಿಯಾಗಿತ್ತು. ಹಿಂದೆ ಇದನ್ನೇ ಕಾಮರೂಪ

ದೇಶವೆಂದೂ, ಈಗ ಅಸ್ಸಾಂ ಎಂದೂ ಕರೆಯುತ್ತಾರೆ. ಈ ಪಟ್ಟಣಕ್ಕೆ ಅಭೇದ್ಯವಾದ ಜಲದುರ್ಗಗಳಿದ್ದುದರಿಂದ ಕೃಷ್ಣನು ಅಲ್ಲಿಗೆ ಗರುಡಾರೂಢನಾಗಿ ಹೋದನು. ನೋ.-- ನರಕ, ಭಗದತ್ತ.

ರಾಜಸೂಯಯಾಗ ಕಾಲದಲ್ಲಿ ಅರ್ಜುನನು ಈ ಪಟ್ಟಣವನ್ನು ಮುತ್ತಿ ಇಲ್ಲಿಯ ಅರಸಾದ ಭಗದತ್ತನೊಡನೆ ಎಂಟು ದಿನಗಳವರೆಗೆ ಯುದ್ಧಮಾಡಿ ಆತನನ್ನು ಗೆದ್ದು ಕಪ್ಪವನ್ನು ಪಡೆದನು. ಈ ನಗರವನ್ನು ಅಸ್ಸಾಮಿನ ಕಾಮಾಕ್ಷ್ಯವೆನ್ನುತ್ತಾರೆ (ಮ.ಸ).

೨. ಮದ್ರ ದೇಶದ ಶಲ್ಯನ ರಾಜಧಾನಿ (ಮ.ಉ).

ಪ್ರಾಚೀನ ಬರ್ಹಿ -- ಅತ್ರಿವಂಶದಲ್ಲಿ ಹುಟ್ಟಿದ ರಾಜ. ಈತ ಪ್ರಚೇತಸರ ತಂದೆ; ಪೃಥು ಚಕ್ರವರ್ತಿಯ ಮರಿಮಗ; ಅಂತರ್ಧಾನನ ಮಗ. ಈತನ ಹೆಂಡತಿಯ ಹೆಸರು ಶತದ್ರುತಿ (ಹರಿ., ವಿಷ್ಣುಪು). ಇವನು ಯಜ್ಞಮಾಡಿ ಪೂರ್ವಾಭಿಮುಖವಾಗಿ ಇರಿಸಿದ ದರ್ಭೆಗಳಿಂದ ಭೂಮಿಯೆಲ್ಲ ತುಂಬಿದುದರಿಂದ ಪ್ರಾಚೀನಬರ್ಹಿಯಾದನು (ಭಾಗ., ಹರಿ., ವಿಷ್ಣುಪು., ಮ.ಶಾಂ).

ಪ್ರಾಚೀನ್ವಂತ -- ಚಂದ್ರವಂಶದ ಪೂರುವಿನ ಮೊಮ್ಮಗ; ಜನಮೇಜಯನ ಮಗ; ಈತನ ಹೆಂಡತಿ ಅಶ್ಮಕಿ; ಮಗ ಶರ್ಯಾತಿ (ಮ.ಆ).

ಪ್ರಾಚೇತಸ -- ಪ್ರಾಚೀನಬರ್ಹಿಯ ಮಕ್ಕಳು; ಇವರು ಹತ್ತುಮಂದಿ ಇವರ ಮಗ ದಕ್ಷ; ಈತನ ಪತ್ನಿ ವಾರ್ಕ್ಷೀ ಅಥವಾ ಮಾರಿಷೆ (ಭಾಗ). ಪ್ರಚೇತಸರು ಸಮುದ್ರಗರ್ಭದಲ್ಲಿ ತಪಸ್ಸು ಮಾಡುತ್ತಿದ್ದಾಗ, ಭೂಮಿಯೆಲ್ಲ ಗಿಡಮರಗಳಿಂದ ತುಂಬಿಹೋಗಿ ಜನ ವಾಸ್ತವ್ಯಕ್ಕೇ ಅಸಾಧ್ಯವಾಗಲು ಇವರು ತಮ್ಮ ತಪಶ್ಶಕ್ತಿಯಿಂದ ಭೂಮಿಯ ಅಧಿಕ ಗಿಡಮರಗಳನ್ನು ನಾಶಮಾಡಿ ವೃಕ್ಷ ಕನ್ಯೆಯಾದ ಮಾರಿಷೆಯನ್ನು ವಿವಾಹವಾದರು (ಹರಿ).

ಪ್ರಾತಿಕಾಮಿ (ಪ್ರಾತಿಕಾಮಿಕ) -- ದುರ್ಯೋಧನನ ಸಾರಥಿಯ ಮಗ. ಪಾಂಡವರು ಕಪಟ ಜೂಜಿನಲ್ಲಿ ಸೋತಮೇಲೆ ದ್ರೌಪದಿಯನ್ನು ಸಭೆಗೆ ಕರೆತರಲು ಮೊದಲು ಹೋದವನಿವನು. ಇವನು ಸೂತನು (ಮ.ಸ). ಇವನು ಭಾರತಯುದ್ಧದಲ್ಲಿ ಮಡಿದನು. (ಮ.ಶ)

ಪ್ರಾತಿಪೇಯ -- ಶಂತನುರಾಜ; ಪ್ರತೀಪನ ಮಗ.

ಪ್ರಾಪ್ತಿ -- ಶಮನ ಹೆಂಡತಿ.

ಪ್ರಾದ್ಯುಮ್ನಿ -- ಅನಿರುದ್ಧ; ಪ್ರದ್ಯುಮ್ನನ ಮಗ.

ಪ್ರಾಧಾ -- ದಕ್ಷಪ್ರಜಾಪತಿಯ ಪುತ್ರಿ; ಈಕೆ ಕಶ್ಯಪರ ಹದಿಮೂರು ಮಂದಿ ಪತ್ನಿಯರಲ್ಲಿ ಒಬ್ಬಳು. ಈಕೆ ಗಂಧರ್ವರನ್ನು ಹೆತ್ತಳು. ನೋ -- ಕಶ್ಯಪ. ಈಕೆಗೆ

ಸಿದ್ಧ, ಪೂರ್ಣ, ಬರ್ಹಿ, ಪೂರ್ಣಾಯು, ಬ್ರಹ್ಮಚಾರಿ, ರತಿಗುಣ, ಸುಪರ್ಣ, ವಿಶ್ವಾಯು, ಭಾನು, ಸುಚಂದ್ರರೆಂಬ ಹತ್ತು ಮಂದಿ ಮಕ್ಕಳಿದ್ದರು. ಅನವದ್ಯಾ, ಮನು, ವಂಶಾ, ಅಸುರಾ, ಮಾರ್ಗಣಪ್ರಿಯಾ, ಅರೂಪಾ, ಸುಭಗಾ, ಭಾಸೀ -- ಎಂಬ ಎಂಟು ಮಂದಿ ಈಕೆಯ ಹೆಣ್ಣು ಮಕ್ಕಳು. (ಮ.ಆ)

ಪ್ರಾವಾರಕರ್ಣ -- ಉಲೂಕರಾಜ. ಕಾಶೀಕ್ಷೇತ್ರದ ಘಂಟನೆಂಬ ಬ್ರಾಹ್ಮಣನು ಅದೇ ಕ್ಷೇತ್ರದ ಭಾರ್ಗವ ಮತ್ತು ಸುದರ್ಶನೆ ಎಂಬ ದಂಪತಿಗಳ ಮಗಳಾದ ಸುದರ್ಶನೆಯನ್ನು (ತಾಯಿಗೂ ಮಗಳಿಗೂ ಒಂದೇ ಹೆಸರು) ಬಲಾತ್ಕಾರದಿಂದ ಕೆಡಿಸಲು, ಭಾರ್ಗವನು ಈತನಿಗೆ ಗೂಬೆಯಾಗುವಂತೆ ಶಾಪವಿತ್ತನು. ಈ ಶಾಪವಾಕ್ಯವನ್ನು ಕೇಳಿದ ಘಂಟನು ಭಾರ್ಗವನೊಡನೆ ಕ್ಷಮಾಯಾಚನೆ ಮಾಡಲು 'ಇಂದ್ರದ್ಯುಮ್ನ ರಾಜನನ್ನು ನೀನು ಸಂದರ್ಶನ ಮಾಡಿದಾಗ ಶಾಪ ಪರಿಹಾರವಾಗುವುದು' ಎಂದನು. ನೋ -- ಇಂದ್ರದ್ಯುಮ್ನ, ನಾಡೀಜಂಘ, ಅಕೂಪಾರ (ಮ.ವ., ಸ್ಕಾಂ.ಪು).

ಪ್ರಾಪ್ತಿ -- ೧. ಜರಾಸಂಧನ ಮಗಳು. ಅಸ್ತಿಯ ತಂಗಿ; ಇವರು ಕಂಸನ ಪತ್ನಿಯರು. ೨. ಆಕಾಶದಲ್ಲಿ ಸದಾ ಸಂಚರಿಸುತ್ತಿರುವ ಇಬ್ಬರು ದೇವತೆಗಳು. ನಮ್ಮ ಬಾಯಿಂದ ಸದಾ ಬರುತ್ತಿರುವ ಶುಭಾಶುಭವಾಕ್ಯಗಳಿಗೆ 'ತಥಾಸ್ತು' ಎನ್ನುವವರು (ಮ.ಸ).

ಪ್ರಿಯದರ್ಶನ -- ದ್ರುಪದನ ಮಗ. ಈತನು ದ್ರೌಪದಿಯ ಸ್ವಯಂವರಾನಂತರ ನಡೆದ ಯುದ್ಧದಲ್ಲಿ ಜಯದ್ರಥನಿಂದ ಮಡಿದನು. (ಮ.ಆ). ಭಾರತಯುದ್ಧದಲ್ಲಿ ಕರ್ಣನಿಂದ ಹತನಾದನು (ಮ.ಅ).

ಪ್ರಿಯಂವದೆ -- ಶಕುಂತಲೆಯ ಗೆಳತಿ. ಈಕೆಯ ಜೊತೆಗಾತಿ ಅನಸೂಯೆ (ಅ.ಶಾಕುಂ).

ಪ್ರಿಯವ್ರತ -- ಸ್ವಾಯಂಭುವ ಮನುವಿನಿಂದ ಶತರೂಪೆಯಲ್ಲಿ ಜನಿಸಿದವ. ಉತ್ತಾನ ಪಾದರಾಜನ ಅಣ್ಣ. ಈತನಿಗೆ ವಿಶ್ವಕರ್ಮನ ಮಗಳಾದ ಬರ್ಹಿಷ್ಮತಿಯು ಪತ್ನಿ. ಈಕೆಗೆ ಅಗ್ನೀಧ್ರ, ಇಧ್ಮಜಿಹ್ವ, ಯಜ್ಞಬಾಹು, ಮಹಾವೀರ, ಹಿರಣ್ಯರೇತ, ಘೃತಪೃಷ್ಠ, ಸುವನ, ಮೇಧಾತಿಥಿ, ವೀತಿಹೋತ್ರ, ಕವಿ ಎಂಬ ಹತ್ತು ಮಂದಿ ಗಂಡುಮಕ್ಕಳು ಮತ್ತು ಊರ್ಜಸ್ವತಿ ಎಂಬ ಕನ್ಯೆಯೂ ಇದ್ದರು. ಊರ್ಜಸ್ವತಿಯು ಶುಕ್ರಾಚಾರ್ಯರ ಪತ್ನಿ. ಉತ್ತಮ, ತಾಮಸ, ರೈವತರೆಂಬ ಮನುಗಳು ಈತನ ಮಕ್ಕಳು. ಈತನ ರಥದ ಚಕ್ರಗಳ ರೇಖೆಯಿಂದಲೇ ಸಪ್ತಸಾಗರ ಮತ್ತು ಸಪ್ತದ್ವೀಪಗಳಾದುವು. ಈತನಿಗೆ ಕರ್ದಮಪ್ರಜಾಪತಿಯ ಪುತ್ರಿಯಾದ ಕುಕ್ಷಿಯಲ್ಲಿ ಅಗ್ನೀಧ್ರ, ಅಗ್ನಿಬಾಹು, ವಪುಷ್ಮಂತ, ದ್ಯುತಿಮಂತ, ಮೇಧಾ, ಮೇಧಾತಿಥಿ, ಭವ್ಯ, ಸವನ, ಪುತ್ರ

ಜ್ಯೋತಿಷ್ಮಂತರೆಂಬ ಹತ್ತು ಮಂದಿ ಪುತ್ರರೂ, ಸಮ್ರಾಟ್ ಮತ್ತು ಕುಕ್ಷಿ ಎಂಬ ಇಬ್ಬರು ಪುತ್ರಿಯರೂ ಇದ್ದರು (ಭಾಗ). ನೋ--ಶ.ಕ.

ಪ್ಲಕ್ಷ (ದ್ವೀಪ) -- ಇದಕ್ಕೆ ಇಂದಿನ ಹೆಸರು ದಕ್ಷಿಣ ಅಮೇರಿಕಾ. ಇದು ಸಪ್ತದ್ವೀಪಗಳಲ್ಲಿ ಎರಡನೆಯದು. ಇದರ ಸುತ್ತಲೂ ಲವಣಸಮುದ್ರವಿದೆ. ಇದರ ರಾಜನು ಪ್ರಿಯವ್ರತನ ಮಗನಾದ ಇಧ್ಮಜಿಹ್ವ (ಭಾಗ., ಲಿಂಗಪು) ನೋ -- ಶಕ.

ಫ

ಫಲಕಕ್ಷ -- ಯಕ್ಷನೊಬ್ಬ (ಮ.ಸ).

ಫಲ್ಗು -- ಗಯಾಕ್ಷೇತ್ರದ ನದಿ. ಈ ನದಿಯ ಪಾತ್ರವು ಸಾಕಷ್ಟು ಅಗಲವಾಗಿದ್ದರೂ, ಮಳೆಗಾಲವಲ್ಲದೆ ಉಳಿದ ಕಾಲಗಳಲ್ಲಿ ಈ ನದಿಯಲ್ಲಿ ನೀರೇ ಇರುವುದಿಲ್ಲ. ಉಳಿದ ಕಾಲಗಳಲ್ಲಿ ಈ ನದಿಯ ಮರಳಿನಲ್ಲಿ ಗುಂಡಿಗಳನ್ನು ತೋಡಿ ಆ ನೀರಿನಲ್ಲಿ ಸ್ನಾನ ಮಾಡುವರು. ಸೀತಾದೇವಿಯ ಶಾಪದಿಂದ ಈ ನದಿಯಲ್ಲಿ ಉಳಿದ ಕಾಲಗಳಲ್ಲಿ ನೀರು ಉಳಿಯುವುದಿಲ್ಲವೆಂದು ಹೇಳುತ್ತಾರೆ. ನೋ -- ಗಯಾ (ಮ.ವ).

ಫಲ್ಗುನ -- ಅರ್ಜುನನ ಹತ್ತು ಹೆಸರುಗಳಲ್ಲೊಂದು. ಈತನು ಫಾಲ್ಗುಣ ಮಾಸದ ಹುಣ್ಣಿಮೆಯ ದಿನ ಹುಟ್ಟಿದುದರಿಂದ ಇವನಿಗೆ ಈ ಹೆಸರು ಪ್ರಾಪ್ತವಾಯಿತು. (ಇವನು ಪೂರ್ವಫಲ್ಗುಣಿಯೆಂಬ ಹುಬ್ಬಾನಕ್ಷತ್ರಕ್ಕೂ, ಉತ್ತರಫಲ್ಗುಣಿಯೆಂಬ ಉತ್ತರಾ ನಕ್ಷತ್ರಕ್ಕೂ ನಡುವೆ ಹುಟ್ಟಿದವ) (ಮ.ವಿ).

ಫೇನಪ -- ಮೊಲೆ ತಿನ್ನುವ ಕರುವಿನ ಬಾಯಿಯಿಂದ ಬರುವ ನೊರೆಯನ್ನು ಕುಡಿದು ಬದುಕಿದ ಮುನಿ. ಇವನು ಭೃಗುವಂಶದವನು; ಸುಮಿತ್ರಾಪರನೆಂಬುದು ಈತನ ಹೆಸರು. ಈತನು ತ್ರಿಕೂಟಗಿರಿಯಲ್ಲಿ ವಾಸಮಾಡುತ್ತಿದ್ದನು (ಮ.ಉ., ಅನು).

ಬ

ಬಕ -- ೧. ಏಕಚಕ್ರ ನಗರದ ಹತ್ತಿರದ ಬೆಟ್ಟದಲ್ಲಿ ವಾಸವಾಗಿದ್ದ ಒಬ್ಬ ರಾಕ್ಷಸ. ವೇತ್ರಕೀಯಗೃಹವೆಂಬ ಒಂದು ಸಣ್ಣ ಪಟ್ಟಣದ (ಅಗ್ರಹಾರ) ರಾಜನು ದುರ್ಬಲನಾದುದರಿಂದ ಈ ರಕ್ಕಸನೊಡನೆ ಹೋರಾಡಲಾರದೆ ಪ್ರತಿದಿನ ಆತನ ಊಟದ ವೇಳೆಗೆ ಸರಿಯಾಗಿ ಉಪಸ್ಕರಸಹಿತವಾದ ಒಂದು ಬಂಡಿ ಅನ್ನ, ಆ ಬಂಡಿಗೆ ಒಂದು ಜೊತೆ ಕೋಣಗಳನ್ನು ಹೂಡಿ, ಒಬ್ಬ ಆಳು ಆ ಬಂಡಿಯನ್ನು ಹೊಡೆದುಕೊಂಡು ಆ ರಾಕ್ಷಸನ ಸಮೀಪಕ್ಕೆ ಹೋಗಬೇಕಿತ್ತು. ಹೋದ ವಸ್ತು ಮತ್ತು ಪ್ರಾಣಿಗಳಲ್ಲಿ ಬಂಡಿ ಮಾತ್ರ ಬರುತ್ತಿತ್ತು. ಒಂದು ದಿನ ಪಾಂಡವರು

ಉಳಿದಿದ್ದ ನೆರಮನೆಯ ಬ್ರಾಹ್ಮಣನು ಆ ರಕ್ಕಸನ ಆಹಾರಕ್ಕೆ ಸಿದ್ಧತೆ ನಡೆಸಬೇಕಿತ್ತು. ಕುಂತಿಯು ಆ ಆಹಾರವಸ್ತುಗಳೊಡನೆ ಭೀಮನನ್ನು ಕಳುಹಿಸಿದಳು. ಅವನು ಆ ರಕ್ಕಸನೊಡನೆ ಹೋರಾಡಿ ಆತನನ್ನು ಕೊಂದನು. ಇವನ ತಮ್ಮನಾದ (ಮಿತ್ರನಾದ) ಅಲಾಯುಧನನ್ನು ದ್ರೋಣನು ಸೇನಾಪತಿಯಾಗಿರುವಾಗ ಘಟೋತ್ಕಚನು ಕೊಂದನು (ಮ. ಆ., ದ್ರೋ). ೨.ಒಬ್ಬ ರಾಜರ್ಷಿ. ಈತನು ದೀರ್ಘಾಯುಷ್ಮಂತನಾದ ತಪಸ್ವಿ. ಹಿಂದೆ ದೇವಾಸುರರಿಗೆ ನಡೆದ ಯುದ್ಧದಲ್ಲಿ ದೇವತೆಗಳು ಜಯಹೊಂದಿ ಸ್ವರ್ಗಕ್ಕೆ ದೇವೇಂದ್ರನೇ ಒಡೆಯನಾದನು. ಅವನೊಮ್ಮೆ ಭೂಲೋಕವನ್ನು ನೋಡಲು ಐರಾವತವನ್ನೇರಿ ಬಂದನು. ಆಗ ಭೂಮಿಯು ಸುಭಿಕ್ಷವಾಗಿತ್ತು. ಅವನು ಭೂಮಿಯ ಎಲ್ಲ ಪ್ರದೇಶಗಳನ್ನು ನೋಡುತ್ತ ಪೂರ್ವಸಮುದ್ರತೀರಕ್ಕೆ ಬಂದು ಅಲ್ಲಿರುವ ಬಕ ರಾಜರ್ಷಿಯ ಆಶ್ರಮವನ್ನು ಕಂಡು ಅದನ್ನು ಪ್ರವೇಶಿಸಿ ಆ ಮುನಿಯೊಡನೆ -- 'ಬಹುದಿನ ಜೀವಿಸುವವರಿಗೆ ಯಾವ ದುಃಖ ಉಂಟಾಗುವುದು? ಯಾವ ಸುಖ ದೊರೆಯುವುದು ?' ಎಂಬ ಪ್ರಶ್ನೆಗಳಿಗೆ ಉತ್ತರ ಪಡೆದು ಸ್ವರ್ಗಕ್ಕೆ ಹೊರಟುಹೋದನು. ದಾಲ್ಭ್ಯನು ಈ ಮುನಿಯ ಸೋದರನು. ಬಕದಾಲ್ಭ್ಯರು ಅರಣ್ಯವಾಸಿಯಾದ ಧರ್ಮರಾಜನ ಆಶ್ರಮಕ್ಕೆ ಬಂದು ಆತನಿಗೆ ನೀತಿಯನ್ನುಪದೇಶಿಸಿದರು. ಧೃತರಾಷ್ಟ್ರನೆಂಬ ಪಾಂಚಾಲರಾಜನ ರಾಜ್ಯವನ್ನು ಹಾಳುಮಾಡುವುದಕ್ಕಾಗಿ ಈತನು ಸತ್ತ ಪಶುವಿನ ಮಾಂಸದಿಂದ ಹೋಮ ಮಾಡಿದನು. (ಮ. ಶ). ೩. ಶ್ರೀಕೃಷ್ಣನು ಒಮ್ಮೆ ದನಗಳನ್ನು ಮೇಯಿಸುತ್ತ ಅವುಗಳಿಗೆ ನೀರು ಕುಡಿಸಲು ಯಮುನಾನದಿಯ ಮಡುವಿಗೆ ಬಂದಾಗ ಅದರ ದಡದಲ್ಲಿ ಮಹಾದೇಹವುಳ್ಳ ಒಂದು ಬಕಪಕ್ಷಿಯು ಗೋಚರಿಸಿತು. ಇವನೇ ಬಕಾಸುರ. ಇವನು ಕೃಷ್ಣನನ್ನು ತನ್ನ ಕೊಕ್ಕಿನಿಂದ ಹಿಡಿದಾಗ ಆತನ ದವಡೆಗಳೆರಡೂ ಬೆಂಕಿಯಂತೆ ಸುಡಲಾರಂಭಿಸಿತು. ಆಗ ಅವನು ಕೃಷ್ಣನನ್ನು ಕಟ್ಟಿ ಕೊಕ್ಕಿನಿಂದ ಕುಕ್ಕಿ ಕೊಲ್ಲುವ ಪ್ರಯತ್ನ ನಡೆಸಲು ಕಂಸನ ಸ್ನೇಹಿತನಾದ ಆ ರಾಕ್ಷಸನನ್ನು ಶ್ರೀಕೃಷ್ಣನು ಎರಡು ಸೀಳಾಗಿ ಸೀಳಿಬಿಟ್ಟನು (ಭಾಗ). ೪. ಚಂದ್ರಹಾಸನೊಡನೆ ಸಂಧಾನ ಮಾಡಿಕೊಂಡ ಕೃಷ್ಣಾರ್ಜುನರು ಸಮುದ್ರವನ್ನು ಪ್ರವೇಶಿಸಿ ಬಕದಾಲ್ಭ್ಯಮುನಿಗಳ ಆಶ್ರಮಕ್ಕೆ ಬಂದರು. ಇವರು ಅನೇಕ ಮಾರ್ಕಂಡೇಯ ರೋಮಶರನ್ನು ಕಂಡ ಮಹಿಮರು. ಇವರ ಜೀವನದಲ್ಲಿ ಇಪ್ಪತ್ತು ಬ್ರಹ್ಮರ ಆಡಳಿತವು ಮುಗಿದಿತ್ತು. ಇವರನ್ನು ಶ್ರೀಕೃಷ್ಣನು ಧರ್ಮರಾಜನ ಯಜ್ಞಶಾಲೆಗೆ ಕರೆದುತಂದನು (ಜೈ. ಭಾ).

ಬಕನಖ -- ಋಷಿಯೊಬ್ಬ ; ವಿಶ್ವಾಮಿತ್ರನ ಪುತ್ರ (ಮ. ಅನು).

ಬಡಬಾಗ್ನಿ -- ಬೃಹಸ್ಪತಿಪುತ್ರನಾದ ಅಗ್ನಿಯೊಬ್ಬ. ಈತನಿಗೆ ಊರ್ಧ್ವಭಾಕ್ ಎಂಬ ಹೆಸರಿದೆ (ಮ. ವ).

ಬದರಪಾಚನ -- ಅರುಂಧತಿಯು ಶಿವನಿಗೆ ಎಲಚಿ (ಬದರಿ) ಹಣ್ಣುಗಳನ್ನು ಪಾಕಮಾಡಿ ಕೊಟ್ಟ ಸ್ಥಳ. ಇಲ್ಲೇ ಅರುಂಧತಿ ತಪಸ್ಸುಮಾಡಿದಳು. ಇಲ್ಲಿ ಬದರಿ ಹಣ್ಣುಗಳನ್ನು ಬೇಯಿಸಲು ಸೌದೆ ಇಲ್ಲದುದರಿಂದ ಅರುಂಧತಿಯು ತನ್ನ ಶರೀರವನ್ನೇ ಸೌದೆಯಾಗಿ ಉಪಯೋಗಿಸಿ ದೇವೇಂದ್ರನನ್ನು ಮೆಚ್ಚಿಸಿದಳು (ಮ.ಶ).

ಬದರಿ (ಬದರೀನಾಥ) -- ಹಿಮಾಲಯಪರ್ವತದಲ್ಲಿ ನರನರಾಯಣರು ವಾಸವಾಗಿದ್ದ ಆಶ್ರಮ. ಇಲ್ಲಿಗೆ ಪಾಂಡವರು ಹೋಗಿದ್ದರು. ಇಲ್ಲಿ ನರನಾರಾಯಣರ ದೇವಾಲಯವನ್ನು ವಿಷ್ಣುಗಂಗಾ ಅಥವಾ ಅಲಕಾನಂದಾ ನದಿಯ ದಡದ ಮೇಲೆ ಕಟ್ಟಿದ್ದಾರೆ. ಇದು ಹಿಂದೆ ವೇದವ್ಯಾಸರ ಆಶ್ರಮವಾಗಿತ್ತು.

ಸಮುದ್ರಮಟ್ಟದಿಂದ ಈ ಕ್ಷೇತ್ರವು ೧೦,೨೪೮ ಅಡಿಗಳ ಎತ್ತರದಲ್ಲಿದೆ. ಇಲ್ಲಿಯ ದೇವಮಂದಿರವು ಮೇ ಎರಡನೆಯ ವಾರದಿಂದ ನವಂಬರ್ ಎರಡನೆಯ ವಾರದವರೆಗೆ ಮಾತ್ರ ತೆರೆದಿರುತ್ತದೆ. ಇನ್ನುಳಿದ ಆರುತಿಂಗಳು ಈ ದೇವಾಲಯವು ಹಿಮಗಡ್ಡೆಗಳಿಂದ ಮುಚ್ಚಲ್ಪಡುವುದು. ಈ ಮಂದಿರವನ್ನು ಮುಚ್ಚುವಾಗ ಹಚ್ಚಿದ ದೀಪವು ಆರು ತಿಂಗಳವರೆಗೆ ಹಾಗೇ ಉರಿಯುತ್ತದೆಂದೂ, ಮೇ ಎರಡನೇ ವಾರದಲ್ಲಿ ದೇವಾಲಯದ ಬಾಗಿಲು ತೆರೆದಾಗ ಇದನ್ನು ಕಂಡ ಅನೇಕ ಯಾತ್ರಿಕರು ಹೇಳುತ್ತಾರೆ. ಈ ದೀಪದ ದರ್ಶನಕ್ಕೆ ಜ್ಯೋತಿರ್ದರ್ಶನವೆನ್ನುತ್ತಾರೆ. ಆ ಆರು ತಿಂಗಳ ಹಿಂದೆ ದೇವರಿಗೇರಿಸಿದ ಹೂ ಬಾಡದೇ ಇರುವುದನ್ನು ನೋಡಬಹುದು. ಇಲ್ಲೇ ದಕ್ಷಪುತ್ರಿಯಾದ ಮೂರ್ತಿದೇವಿಯು ಧರ್ಮಪ್ರಜಾಪತಿಯನ್ನು ವಿವಾಹವಾದ ಮೇಲೆ ಪುತ್ರಾರ್ಥಿಯಾಗಿ ವಸುಧಾರಾ ತೀರ್ಥದಲ್ಲಿ ಅನೇಕ ವರ್ಷಗಳವರೆಗೆ ತಪಸ್ಸು ಮಾಡಿದಳು. ಆಗ ನಾರಾಯಣನು ಪ್ರತ್ಯಕ್ಷನಾಗಿ 'ವರ ಕೇಳು' ಎನ್ನಲು, ಮೂರ್ತಿದೇವಿ -- 'ನಿನ್ನಂಥ ಇಬ್ಬರು ಮಕ್ಕಳನ್ನು ಕೊಡು ' ಎನ್ನಲು, ಅವನು 'ತಥಾಸ್ತು' ಎಂದು ಅದೃಶ್ಯನಾದನು. ಮುಂದೆ ನಾರಾಯಣನ ಅನುಗ್ರಹದಿಂದ ಮೂರ್ತಿದೇವಿಯಲ್ಲಿ ನರನಾರಾಯಣರೆಂಬ ಇಬ್ಬರು ಬಾಲಕರು ಜನಿಸಿದರು, ಆಗ ಸಹಸ್ರಕವಚನೆಂಬ ರಾಕ್ಷಸನು ಬ್ರಹ್ಮನಿಂದ ತನ್ನ ಒಂದೊಂದು ಕವಚವನ್ನು ಕತ್ತರಿಸಲು ಹತ್ತುಸಾವಿರ ವರ್ಷ ತಪಸ್ಸು ಮಾಡಿದ

ಪುಣ್ಯಪುರುಷನಿಂದ ಮಾತ್ರ ಸಾಧ್ಯವಾಗಬೇಕು ಎಂದು ವರ ಪಡೆದಿದ್ದನು. ನಾರಾಯಣನು ತನ್ನ ತಪಶ್ಶಕ್ತಿಯಿಂದ ಸಹಸ್ರಕವಚನ ಐದುನೂರು ಕವಚಗಳನ್ನು ಕತ್ತರಿಸಿದನು. ನರನು ೪೯೯ ಕವಚಗಳನ್ನು ಕತ್ತರಿಸಲು ರಾಕ್ಷಸನು ಓಡಿ ಸೂರ್ಯನ ಮರೆಹೊಕ್ಕನು. ಮುಂದೆ ಅವನೇ ದ್ವಾಪರದಲ್ಲಿ ಕರ್ಣನಾಗಿ ಹುಟ್ಟಲು ನರನಾರಾಯಣರು ಅರ್ಜುನ ಕೃಷ್ಣರಾಗಿ ಹುಟ್ಟಿ ಅವನನ್ನು ಕೊಂದರು. ನರನಾರಾಯಣರ ತಪಸ್ಸಿನ ಕಾಲದಲ್ಲಿ ಲಕ್ಷ್ಮಿಯು ಬದರಿವೃಕ್ಷವಾಗಿ ಅವರಿಗೆ ನೆರಳು ಮತ್ತು ಫಲಕೊಟ್ಟುದರಿಂದ ಈ ಕ್ಷೇತ್ರಕ್ಕೆ ಬದರಿ ಎಂದು ಹೆಸರು ಬಂದಿತು. ನೋ -- ನರ, ಗರುಡ, (ಮ. ವ., ಅನು).

ಬನವಾಸಿ -- ಕದಂಬರ ಮಯೂರವರ್ಮನಿಗೆ ಇದು ರಾಜಧಾನಿಯಾಗಿತ್ತು. ಇದು ನಾಡೋಜಪಂಪನ ನೆಚ್ಚಿನ ಊರು. ಇಲ್ಲಿ ಮಧುಕೇಶ್ವರ ದೇವಾಲಯವಿದೆ.

ಬಂದಿ -- ವಿದ್ವಾಂಸನಾದ ವರುಣನ ಮಗ. ಈತ ತನ್ನೊಡನೆ ಮಾಡಿದ ವಾದದಲ್ಲಿ ಸೋತವರನ್ನೆಲ್ಲಾ ನೀರಿನಲ್ಲಿ ಮುಳುಗಿಸುತ್ತಿದ್ದ. ಅಷ್ಟಾವಕ್ರನು ಇವನನ್ನು ಸೋಲಿಸಿ ಅವರನ್ನೆಲ್ಲಾ ಬಿಡುಗಡೆ ಮಾಡಿದ. ನೋ - ಅಷ್ಟಾವಕ್ರ (ಮ.ವ.ಅನು)

ಬಭ್ರು -- ೧. ಕ್ಷತ್ರಿಯ ; ಯದುವಂಶದ ಅಕ್ರೂರನ ಇನ್ನೊಂದು ಹೆಸರು. ಶಿಶುಪಾಲನು ಈತನ ಪತ್ನಿಯನ್ನು ಅಪಹಾರ ಮಾಡಿದನು (ಮ. ಆ., ಸ). ೨.ವಿಶ್ವಾಮಿತ್ರ ಪುತ್ರನಾದ ಋಷಿ (ಮ. ಅನು). ೩. ಒಬ್ಬ ಕ್ಷತ್ರಿಯ ; ವಿರಾಟರಾಜನ ಮಗ (ಮ. ಉ). ೪. ಯದುವಂಶದ ದೇವಪೃಥನ ಮಗ. ಈ ತಂದೆ ಮಕ್ಕಳು ಮಹಾಜ್ಞಾನಿಗಳು. ನೋ -- ದೇವಾಪೃಥ.

ಬಭ್ರುವಾಹನ -- ಕ್ಷತ್ರಿಯ; ಅರ್ಜುನನ ಮಗ. ಈತನ ತಾಯಿ ಚಿತ್ರಾಂಗದೆ; ರಾಜಧಾನಿ -- ಮಣಲೂರಪುರ ಅಥವಾ ಮಣಿಪುರ. ರಾಜಸೂಯಯಾಗ ಕಾಲದಲ್ಲಿ ಸಹದೇವನಿಗೆ ಈತನು ಕಪ್ಪ ಕೊಟ್ಟಿದ್ದನು. ಅಶ್ವಮೇಧಯಜ್ಞಕಾಲದಲ್ಲಿ ಅರ್ಜುನನು ಈತನನ್ನು ತಿರಸ್ಕರಿಸಲು ಯುದ್ಧದಲ್ಲಿ ಅರ್ಜುನನ್ನು ಕೊಂದು ಸಂಜೀವಕ ಮಣಿ ಮತ್ತು ಶ್ರೀಕೃಷ್ಣಾನುಗ್ರಹದಿಂದ ಬದುಕಿಸಿದನು. ಅಶ್ವಮೇಧಯಾಗದ ಕಾಲದಲ್ಲಿ ಈತನು ಹಸ್ತಿನಾಪುರಕ್ಕೆ ಬಂದನು. ನೋ -- ಚಿತ್ರಾಂಗದೆ, ಉಲೂಪಿ, ಜ್ವಾಲೆ (ಮ. ಆ., ಜೈ. ಭಾ).

ಬರ್ಬರಾ -- ದೇಶವೊಂದು.

ಬರ್ಬರೀಕ -- ರಾಕ್ಷಸನೊಬ್ಬ. ಈತನ ತಂದೆ ಘಟೋತ್ಕಚ; ತಾಯಿ ಕಾಮಕಟಂಕಟೆ. ಈತನಿಗೆ ಸಹೃದಯನೆಂಬ ಹೆಸರೂ ಇದೆ. ನೋ -- ವಿಜಯ. ಇವನು ಮಹೀಸಾಗರ ಸಂಗಮಕ್ಷೇತ್ರದಲ್ಲಿ ಸಕಲ ಮಂತ್ರಸಿದ್ಧಿಗಳನ್ನು ಪಡೆದು ಭಾರತಯುದ್ಧಕಾಲದಲ್ಲಿ ಎಲ್ಲರೂ ತಮ್ಮ ತಮ್ಮ ಶಕ್ತಿಗಳನ್ನು

ಹೇಳಿಕೊಂಡಾಗ, ಇವನು ಒಂದು ಮುಹೂರ್ತದಲ್ಲೇ ಕುರುಸೇನೆಯನ್ನು ನಾಶಮಾಡುವೆನೆಂದನು. ಇವನನ್ನು ಶ್ರೀಕೃಷ್ಣನು ಚಕ್ರಾಯುಧದಿಂದ ಕೊಲ್ಲಲು ಇವನು ಚಂಡಿಯ ಅನುಗ್ರಹದಿಂದ ಪರ್ವತವೊಂದರ ಮೇಲೆ ಕುಳಿತು ರುಂಡಮಾತ್ರದಿಂದ ಭಾರತಯುದ್ಧವನ್ನು ಕಂಡನು (ಸ್ಕಾಂ. ಪು).

ಬರ್ಹಿಷದ -- ಪಿತೃದೇವತೆಯೊಬ್ಬ (ಹರಿ., ಮ. ಆ., ಸ., ಮತ್ಸ್ಯಪು).

ಬರ್ಹಿಷ್ಮತಿ -- ೧. ವಿಶ್ವಕರ್ಮನ ಮಗಳು. ಸ್ವಾಯಂಭುವ ಮನುವಿನ ಮಗ ಪ್ರಿಯವ್ರತ ರಾಜನ ಹೆಂಡತಿ. ನೋ -- ಪರಿಯವ್ರತ. ಈಕೆಯ ಮಗಳಾದ ಊರ್ಜಸ್ವತಿಯು ಶುಕ್ರಾಚಾರ್ಯನ ಹೆಂಡತಿ. ೨. ಬ್ರಹ್ಮಾವರ್ತದೇಶದಲ್ಲಿದ್ದ ಸಾಯಂಭುಮನುವಿನ ಪಟ್ಟಣ. ವರಾಹಾವತಾರವನ್ನು ತಾಳಿದ ವಿಷ್ಣುವು ತನ್ನ ಮೈಯನ್ನು ಕೊಡಹಲು ಉದುರಿದ ರೋಮಗಳು ಹಸುರು ದರ್ಭೆಗಳಾದವು. ಈ ಬರ್ಹಿಸ್ಸುಗಳಿಂದ ತುಂಬಿದ ಪ್ರದೇಶವೇ ಬರ್ಹಿಷ್ಮತಿ. (ಭಾಗ).

ಬಲ -- ೧. ಸೂರ್ಯವಂಶದ ಮೂರನೆಯ ಪರೀಕ್ಷಿತನ ಮಗ. ಈತನ ತಾಯಿ ಮಂಡೂಕ ಕನ್ಯೆಯಾದ ಸುಶೋಭನೆ. ಈತನ ಸಹೋದರರು ಶಲ ಮತ್ತು ದಲರು. ೨. ವಿಶ್ವಾಮಿತ್ರನ ಮುನಿಯ ವಂಶದಲ್ಲಿ ಹುಟ್ಟಿದ ಮಂತ್ರಪ್ರವರ್ತಕನೊಬ್ಬ. ೩. ಬಲರಾಮ; ಈತನು ಶ್ರೀಕೃಷ್ಣನ ಅಣ್ಣ. ಈತನ ತಂದೆ ವಸುದೇವ ; ತಾಯಿ ರೋಹಿಣಿ. ಇವನು ಧೇನುಕನೆಂಬ ರಾಕ್ಷಸನನ್ನು ಕೊಂದನು (ಶ್ರೀಕೃಷ್ಣನೂ ಧೇನುಕನನ್ನು ಕೊಂದನೆಂದೂ ಇದೆ). ಸಾಂದೀಪನಿಯು ಈತನ ಗುರು. ರೈವತಕನ (ಕಕುದ್ಮಿ) ಮಗಳಾದ ರೇವತಿ ಈತನ ಪತ್ನಿ. ಈತನು ಮಹಾಶೇಷನ ಅವತಾರ. ರುಕ್ಮಿಯೂ ಬಲರಾಮನೂ ಪ್ರದ್ಯುಮ್ನನ ವಿವಾಹಕಾಲದಲ್ಲಿ ಜೂಜಾಡುತ್ತಿದ್ದಾಗ ಇಬ್ಬರಲ್ಲೂ ವಾದ ನಡೆದು ಬಲರಾಮನು ರುಕ್ಮಿಯನ್ನು ಕೊಂದನು. ಸ್ಯಮಂತಕಮಣಿಯ ವಿಚಾರದಲ್ಲಿ ಬಲರಾಮಕೃಷ್ಣರಿಗೆ ವೈಮನಸ್ಸುಂಟಾಗಿ ಬಲರಾಮನು ವಿದೇಹದೇಶಕ್ಕೆ ಹೋದಾಗ ಅಲ್ಲಿ ದುರ್ಯೋಧನನಿಗೆ ಗದಾವಿದ್ಯೆಯನ್ನು ಕಲಿಸಿದನು (ವಿಷ್ಣುಪು., ಭಾಗ). ಈತನೇ ಭೀಮ ಮತ್ತು ದುರ್ಯೋಧನರ ಗದಾವಿದ್ಯೆಯ ಗುರು. ಕುರುಕ್ಷೇತ್ರದ ಯುದ್ಧದ ಆರಂಭದಲ್ಲಿ ಇವನು ತೀರ್ಥಯಾತ್ರೆಗೆ ಹೊರಟವನು ನೈಮಿಷಾರಣ್ಯಕ್ಕೆ ಹೋಗಿ ಅಲ್ಲಿ ಪುರಾಣಕಥೆಯನ್ನು ಹೇಳುತ್ತಿದ್ದ ರೋಮಹರ್ಷಣನು ತನಗೆ ಗೌರವ ಕೊಡಲಿಲ್ಲವೆಂದು ಆತನನ್ನು ತನ್ನ ಕೈಯ ದರ್ಭೆಯಿಂದ ಕೊಂದು ಅಲ್ಲಿದ್ದ ಮುನಿಗಳ ಪ್ರಾರ್ಥನೆಯಂತೆ ಆತನನ್ನು ಬದುಕಿಸಿದನು. ಅಲ್ಲದೆ ಅಲ್ಲಿದ್ದ ಮುನಿಗಳನ್ನು ಪೀಡಿಸುತ್ತಿದ್ದ ಬಲ್ವಲ ಎಂಬ ರಾಕ್ಷಸನನ್ನು ಕೊಂದನು. ಜಾಂಬವತಿಯ ಪುತ್ರನಾದ ಸಾಂಬನು ದುರ್ಯೋಧನನ ಮಗಳಾದ

ಲಕ್ಷಣೆಯನ್ನು ಅಪಹರಿಸಲು ಕೌರವರು ಸಾಂಬನನ್ನು ಸೆರೆಮನೆಯಲ್ಲಿ ಬಂಧಿಸಿಟ್ಟರು. ಇದನ್ನು ಕೇಳಿ ಕ್ರುದ್ಧನಾದ ಬಲರಾಮನು ಹಸ್ತಿನಾವತಿಯ ದಕ್ಷಿಣಭಾಗದ ಕೋಟೆಯನ್ನು ಹಲಾಯುಧದಿಂದ ಮೀಟಲು ಕೌರವರು ಸಂಧಾನಕ್ಕೆ ಬಂದರು. ಈತನು ಮದ್ಯಪಾನದಿಂದ ಮತ್ತನಾಗಿ ಜಲಕ್ರೀಡೆಗಾಗಿ ಯಮುನಾನದಿಯನ್ನೇ ಕರೆಯಲು ಆಕೆ ಬಾರದಿರಲು ಬಲನು ತನ್ನ ನೇಗಿಲಿನ ತುದಿಯಿಂದ ಅದನ್ನು ಭೇದಿಸತೊಡಗಲು ಯಮುನೆಯ ಭಯದಿಂದ ಬಲರಾಮನಿಗೆ ನೀಲಾಂಬರ, ಮಾಲ್ಯ ಮತ್ತು ಭೂಷಣಗಳನ್ನು ಕಾಣಿಕೆ ಕೊಟ್ಟಳು. ತೀರ್ಥಯಾತ್ರೆಯಿಂದ ಹಿಂದಿರುಗಿದ ಈತನು ತೊಡೆ ಮುರಿದು ಬಿದ್ದ ದುರ್ಯೋಧನನನ್ನು ಕಂಡು ಕೋಪದಿಂದ ಭೀಮಸೇನನನ್ನು ಕೊಲ್ಲಲು ಸಿದ್ಧನಾಗಲು ಶ್ರೀಕೃಷ್ಣನು ಆತನನ್ನು ಸಮಾಧಾನಪಡಿಸಿದನು. ಯಾದವರೆಲ್ಲರೂ ಪರಸ್ಪರ ಹೊಡೆದಾಡಿಕೊಂಡು ಮೃತರಾದಮೇಲೆ ಈತನು ಸರ್ಪಶರೀರ ಹೊಂದಿ ಸಮುದ್ರಪ್ರವೇಶ ಮಾಡಿದನು. ನೋ -- ಅರ್ಜುನ, ಕೃಷ್ಣ. ಈತನ ಆಯುರ್ಮಾನ ೧೦೬ ॥ ವರ್ಷ (ಮ.ಆ.). ಬಲರಾಮನಿಗೆ ತಾಲಧ್ವಜ (ಮ. ಶ).

ಬಲವರ್ಧನ -- ಧೃತರಾಷ್ಟ್ರನ ಮಗ (ಮ. ಆ).

ಬಲಾಕ -- ೧. ಬೇಡನೊಬ್ಬ. ತಂದೆತಾಯಿಗಳ ಭಕ್ತನಾಗಿದ್ದ. ಈತನು ಒಮ್ಮೆ ಕುರುಡುಪ್ರಾಣಿಯನ್ನು ಬೇಟೆಯಾಡಿ ಮನೆಗೆ ತಂದಮೇಲೆ ತಾನು ಕುರುಡುಪ್ರಾಣಿಯನ್ನು ಕೊಂದು ಅಧರ್ಮಮಾರ್ಗದಲ್ಲಿ ಕಾಲಿಟ್ಟೆನೆಂದು ವ್ಯಸನವಾದರೂ ಹಲವರನ್ನು ಪೀಡಿಸುತ್ತಿದ್ದ ಆ ಪ್ರಾಣಿಯನ್ನು ಕೊಂದು ಸ್ವರ್ಗವನ್ನೇ ಹೊಂದಿದನು. ೨. ಅದ್ರಿ ಎಂಬ ರಾಕ್ಷಸನ ಮಗ (ಮ. ಕ., ಮಾರ್ಕಂ.ಪು).

ಬಲಾಕಾ --ಒಂದು ಕೊಕ್ಕರೆ ಅಥವಾ ಬಕಪಕ್ಷಿ. ಇದು ಕೌಶಿಕನ ಕ್ರೂರದೃಷ್ಟಿಯಿಂದ ಉರಿದುಹೋಯಿತು. ನೋ -- ಕೌಶಿಕ (ಮ. ವ).

ಬಲಾಕಾಶ್ವ -- ಸಿಂಧುದ್ವೀಪನ ಮಗ; ಕ್ಷತ್ರಿಯ. ಜಹ್ನುವಿಗೆ ಗಂಗಾಂಶ ಸಂಭೂತಳಾದ ಕಾವೇರಿಯಿಂದ ಸುನಹನೆಂಬ ಧಾರ್ಮಿಕನಾದ ಮಗನು ಹುಟ್ಟಿದನು. ಈ ವಂಶದಲ್ಲಿ ಅಜಕ ಬಲಾಕಾಶ್ವ ಮತ್ತು ಕುಶರೆಂಬ ರಾಜರು ಹುಟ್ಟಿದರು (ಹರಿ).

ಬಲಾಕಿ -- ಧೃತರಾಷ್ಟ್ರನ ಮಗ (ಮ. ಆ).

ಬಲಾನೀಕ -- ೧. ದ್ರುಪದರಾಜನ ಪುತ್ರ; ಅಶ್ವತ್ಥಾಮನಿಂದ ಇವನು ಹತನಾದನು. ೨. ವಿರಾಟನ ಒಬ್ಬ ಸಹೋದರ (ಮ. ದ್ರೋ).

ಬಲಾಹಕ -- ೧. ಒಂದು ಸರ್ಪ. ೨. ಜಯದ್ರಥನ ಸಹೋದರ. ೩. ಶ್ರೀಕೃಷ್ಣನ ರಥದ ನಾಲ್ಕು ಕುದುರೆಗಳಲ್ಲಿ ಒಂದರ ಹೆಸರು. ೪. ಮೇಘ. ೫. ಪರ್ವತ (ಮ. ಸ., ವ., ಅಶ್ವ).

ಬಲಿ -- ೧. ಚಂದ್ರವಂಶದ ಶಿಬಿರಾಜನ ಮಗ. ಈತನ ಪತ್ನಿ ಸುದೇಷ್ಣೆ. ಈತನ ಪುತ್ರರು ದೀರ್ಘತಮ ಮುನಿಯಿಂದ ಹುಟ್ಟಿದ ಅಂಗ. ವಂಗ, ಕಲಿಂಗ, ಪುಂಡ್ರ, ಸುಹ್ಮರು. ನೋ -- ದೀರ್ಘತಮ. ೨. ಅಸುರನೊಬ್ಬ. ಈತನಿಗೆ ಮಹಾಬಲಿ ಎಂಬ ಹೆಸರೂ ಇದೆ. ಪ್ರಹ್ಲಾದನು ಈತನ ಅಜ್ಜ; ವಿರೋಚನನು ಈತನ ತಂದೆ. ಈತನ ಮಗನೇ ಬಾಣಾಸುರ. ಬಲಿಗೆ ಇಂದ್ರಸೇನನೆಂಬ ಹೆಸರೂ ಇದೆ (ಭಾಗ). ಈತನ ಪತ್ನಿ ವಿಂಧ್ಯಾವಲಿ. ಇವನಿಗೆ ಕೋಟರೆ ಎಂಬ ಪತ್ನಿಯೂ ಇದ್ದಳು. ಇವನಿಗೆ ಬಾಣನೆಂಬ ಮಗನಲ್ಲದೆ ಧೃತರಾಷ್ಟ್ರನೆಂಬ ಇನ್ನೊಬ್ಬ ಮಗನಿದ್ದನು. ಇವನು ನರ್ಮದೆಯ ಉತ್ತರತಟದಲ್ಲಿರುವ ಭೃಗುಕಚ್ಛದಲ್ಲಿ ಯಜ್ಞ ಮಾಡಿದನು. ಇಲ್ಲಿಗೆ ವಾಮನನು ಬಂದು ಬಲಿಯಿಂದ ಮೂರು ಹೆಜ್ಜೆ ಸ್ಥಳ ಬೇಡಿ ಪಡೆದು, ಬಲಿಯನ್ನು ಪಾತಾಳಕ್ಕೊತ್ತಿದನು.

ಬಲಿಚಕ್ರವರ್ತಿಗೆ ಬಾಣ, ಧೃತರಾಷ್ಟ್ರ, ಸೂರ್ಯ, ಚಂದ್ರ, ಚಂದ್ರಾಂಶು, ತಾಪನ, ನಿಕುಂಭನಾಭ, ಗುರ್ವಕ್ಷ, ಕುಕ್ಷಿ, ಭೀಮ, ವಿಭೀಷಣ ಮೊದಲಾದ ಹಲವರು ಮಕ್ಕಳಿದ್ದರು. ಇವನನ್ನು ವಿಷ್ಣುವು ರಸಾತಳಕ್ಕೊತ್ತುವಾಗ 'ಶ್ರೋತ್ರಿಯನಿಲ್ಲದ ಶ್ರಾದ್ಧ, ಶ್ರದ್ಧೆ ಇಲ್ಲದ ದಾನ, ವಿಧಿಹೀನವಾದ ಯಜ್ಞ, ಗುರುಭಕ್ತಿ ಇಲ್ಲದೆ ಮಾಡಿದ ಕರ್ಮ, ಅಶುಚಿಯಾಗಿ ಮಾಡುವ ಪೂಜಾವ್ರತಗಳು -- ಇವುಗಳಿಂದ ಬರುವ ಪುಣ್ಯಫಲಗಳೆಲ್ಲ ನಿನಗೇ ಸೇರಲಿ' ಎಂದು ವರವಿತ್ತನು (ದೇವೀ. ಭಾ). ಪ್ರಹ್ಲಾದನ ಮುಂದೆ ಬಲಿಯು ವಿಷ್ಣುವನ್ನು ನಿಂದಿಸಿದುದರಿಂದ ಕೋಪಗೊಂಡ ಪ್ರಹ್ಲಾದನು -- 'ನೀನು ರಾಜ್ಯಭ್ರಷ್ಟನಾಗಿ ಅಧಃಪತನವನ್ನು ಹೊಂದು' ಎಂದು ಶಾಪವಿತ್ತನು. ತ್ರಿವಿಕ್ರಮನು ಬಲಿಯಿಂದ ದಾನಪಡೆದಮೇಲೆ ಅವನಿಗೆ ಒಂದು ಕಲ್ಪಪ್ರಮಾಣದ ಆಯುಷ್ಯವನ್ನೂ, ಮುಂದಿನ ಸಾವರ್ಣಿಕ ಮನ್ವಂತರದಲ್ಲಿ ಈತನಿಗೆ ಇಂದ್ರಪದವಿಯನ್ನೂ, ಅದುವರೆಗೆ ಸುತಲ ಲೋಕದಲ್ಲಿ ಮುನ್ನೂರು ಮಂದಿ ಸುಂದರಿಯರೊಡನೆ ಭೋಗಿಸುತ್ತಿರುವಂತೆ ಅನುಗ್ರಹಿಸಿ, ದಾರಿತಪ್ಪಿನಡೆದರೆ ನಿನ್ನನ್ನು ವರುಣಪಾಶಗಳು ಬಂಧಿಸುವುವು' ಎಂದು ಎಚ್ಚರಿಕೆ ಕೊಟ್ಟು ಅದೃಶ್ಯನಾದನು.

ಮೊದಲೊಮ್ಮೆ ಬಲಿಯು ಇಂದ್ರನಿಂದ ಹತನಾಗಿ ಶುಕ್ರಾಚಾರ್ಯರ ಮೃತ ಸಂಜೀವಿನಿ ವಿದ್ಯೆಯ ಬಲದಿಂದ ಬದುಕಿ ವಿಶ್ವಜಿತ್ತೆಂಬ ಯಾಗಮಾಡಿ ಅಗ್ನಿದೇವನಿಂದ ರಥಾಶ್ವಗಳನ್ನೂ, ಪ್ರಹ್ಲಾದನಿಂದ ಮಹಾಧನುಸ್ಸನ್ನೂ,

ಅಕ್ಷಯಬತ್ತಳಿಕೆಯನ್ನೂ ಪಡೆದು ಇಂದ್ರನನ್ನು ಗೆದ್ದು ಸ್ವರ್ಗದ ಅಧಿಕಾರಿಯಾದನು. ಈತನ ರಾಜ್ಯಭಾರ ಕಾಲದಲ್ಲಿ ಭೂಮಿಯು ಬೀಜಗಳನ್ನು ತಾನೇ ಜೋಪಾನ ಮಾಡಿ ಫಲಧಾನ್ಯಗಳನ್ನು ಮನುಷ್ಯರಿಗೆ ಕೊಡುತ್ತಿತ್ತು. ಮನುಷ್ಯರು ನೆಟ್ಟು ಬೆಳಸುವ ಶ್ರಮವೇ ಆಗ ಇದ್ದಿಲ್ಲ. ಇವನ ರಾಜ್ಯಭಾರವು ರಾಮರಾಜ್ಯಭಾರದಂತೆ ಸುಪ್ರಸಿದ್ಧವಾಗಿತ್ತು. ಸಪ್ತ ಚಿರಂಜೀವಿಗಳಲ್ಲಿ ಈತನೊಬ್ಬ (ಮ. ಆ., ಸ., ಅನು., ಶಾಂ., ವ., ದೇವೀಭಾ., ಭಾಗ., ಮತ್ಸ್ಯ). ೩. ಒಮ್ಮೆ ಆಕಾಶದಿಂದ ಒಂದು ಕಿರೀಟವು ಶ್ರೀಕೃಷ್ಣನ ತಲೆಯ ಮೇಲೆ ಬಂದು ಶೋಭಿಸಿತು. ಶ್ರೀಕೃಷ್ಣನು ಯೋಗನಿದ್ರೆಯಲ್ಲಿದ್ದಾಗ ಬಲಿಚಕ್ರವರ್ತಿ ಈತನ ಕಿರೀಟವನ್ನು ಅಪಹರಿಸಿ ಪಾತಾಳಕ್ಕೆ ಹೊರಟುಹೋದನು. ಇದನ್ನು ತಿಳಿದ ಗರುಡನು ಬಲಿಯೊಡನೆ ಯುದ್ಧಮಾಡಿ ಗೆದ್ದು ಆ ಕಿರೀಟವನ್ನು ಶ್ರೀಕೃಷ್ಣನ ತಲೆಯ ಮೇಲೆ ತಂದಿಟ್ಟನು. (ಹರಿ). ೪. ಒಬ್ಬ ಋಷಿ. ೫. ಇವನು ಸುತಪನೆಂಬ ರಾಜನ ಮಗ. ಈ ಬಲಿಗೆ ಅಂಗ, ವಂಗ, ಸುಮ್ನ, ಕಲಿಂಗ ಮತ್ತು ಪುಂಡರೆಂಬ ಪಂಚಪುತ್ರರು ಜನಿಸಿದರು. ಈ ಕ್ಷತ್ರಿಯಪುತ್ರರಲ್ಲದೆ ಬಲಿರಾಜನಿಗೆ ಬ್ರಾಹ್ಮಣ ಸ್ತ್ರೀಯಲ್ಲಿ ಅನೇಕ ಬ್ರಾಹ್ಮಣಪುತ್ರರೂ ಜನಿಸಿದರು. ಹಿಂದಿನ ಜನ್ಮದಲ್ಲಿ ದಾನವನಾಗಿದ್ದ ಬಲಿಯೇ ಮುಂದೆ ಈ ಬಲಿರಾಜನಾದನು. ಇವನು ಊರ್ಧ್ವರೇತಸ್ಕನಾದುದರಿಂದ ಇವನ ಎಲ್ಲ ಮಕ್ಕಳೂ ಸುದೇಷ್ಣಾ ಎಂಬ ಅವನ ಹೆಂಡತಿಯಲ್ಲಿ ದೀರ್ಘತಪನೆಂಬ ಮಹಾಮುನಿಯಿಂದ ಹುಟ್ಟಿದರು. ಮುಂದೆ ಈ ಮಕ್ಕಳಿಗೆಲ್ಲ ಕ್ಷೇತ್ರಜರೆಂಬ ಹೆಸರು ಬಂತು.

ರಾವಣನೊಮ್ಮೆ ದಿಗ್ವಿಜಯಕ್ಕಾಗಿ ಪಾತಾಳಲೋಕವನ್ನು ಸೇರಿ ಬಲಿಚಕ್ರವರ್ತಿಯ ಅರಮನೆಗೆ ಹೋದನು. ಅಲ್ಲಿ ಬಾಗಿಲಿನಲ್ಲಿ ನಿಂತಿದ್ದ ವಾಮನಾವತಾರಿಯೊಡನೆ -- ಈ ಲೋಕಕ್ಕೆ (ದೇಶಕ್ಕೆ) ರಾಜನಾರೆಂದು ಕೇಳಲು, ಅವನು ಉತ್ತರ ಕೊಡದುದರಿಂದ ಅರಮನೆಯೊಳಗೆ ಪ್ರವೇಶಮಾಡಿದನು. ಆಗ ಬಲಿಚಕ್ರವರ್ತಿಯು ಸ್ತ್ರೀಯರೊಡನೆ ದ್ಯೂತವಾಡುತ್ತಿದ್ದನು. ರಾವಣನು ಅವನ ಸಮೀಪದಲ್ಲಿ ನಿಂತು ಬಲಿಯ ವೈಭವಗಳೆನ್ನಲ್ಲ ನೋಡುತ್ತಿದ್ದನು. ಆಗ ಬಲಿಚಕ್ರವರ್ತಿಯ ಕೈಯ ದಾಳವು ದೂರ ಸಿಡಿಯಲು ಬಲಿಯು ಅದನ್ನು ತರುವಂತೆ ರಾವಣನಿಗೆ ಆಜ್ಞೆಮಾಡಿದನು. ರಾವಣನ ಇಪ್ಪತ್ತು ತೋಳುಗಳಿಂದಲೂ ಆ ದಾಳವನ್ನು ಎತ್ತಲಾಗಲಿಲ್ಲ. ಅದು ಆತನ ಬೆರಳುಗಳ ಮೇಲೆ ಬೀಳಲು ರಾವಣನು ಆ ವೇದನೆಯನ್ನು ಸಹಿಸಲಾರದೆ ರೋಧಿಸತೊಡಗಿದನು. ಬಲಿಚಕ್ರವರ್ತಿಯ ದಾಸಿಯು ಬಂದು ಅವನ ಬೆರಳುಗಳ ಮೇಲಿನಿಂದ ದಾಳವನ್ನು ತೆಗೆದಳು (ಆನಂ. ರಾ).

ಬಲ್ವಲ -- ಇಲ್ವಲನೆಂಬ ದಾನವನ ಮಗ ; ನೈಮಿಷಾರಣ್ಯವಾಸಿಗಳಾದ ಮುನಿಗಳನ್ನು ಪೀಡಿಸುತ್ತಿದ್ದ ಇವನನ್ನು ಬಲರಾಮನು ಕೊಂದನು. ನೋ -- ಬಲ (ಭಾಗ).

ಬಹುಲಾ -- ೧. ಒಂದು ನದಿ. ೨. ಉತ್ತಾನಪಾದರಾಜನ ಮಗನಾದ ಉತ್ತಮನ ಹೆಂಡತಿ. ಈಕೆ ಬಾಭ್ರವ್ಯನ ಮಗಳು (ಭಾಗ).

ಬಹುಳಾಶ್ವ -- ವಿದೇಹದ ರಾಜ. ಶ್ರೀಕೃಷ್ಣನೊಮ್ಮೆ ಅನೇಕ ಮುನಿಗಳನ್ನು ಕೂಡಿಕೊಂಡು ತನ್ನ ಗೆಳೆಯರಾದ ಮಿಥಿಲಾಪಟ್ಟಣ ನಿವಾಸಿ ಶುಕ್ರದೇವನಲ್ಲಿಗೆ ಹೋಗಿ ಇನ್ನೊಂದು ದೇಹದಿಂದ ಬಹುಳಾಶ್ವರಾಜನಲ್ಲಿಗೂ ಹೋಗಿ ಅವರಿಬ್ಬರಲ್ಲಿಯೂ ಕೆಲವು ದಿನಗಳವರೆಗೆ ನಿಂತು, ಉಪದೇಶಮಾಡಿ ದ್ವಾರಕೆಗೆ ಹೊರಟುಬಂದನು (ಭಾಗ).

ಬಾಣ-- ೧. ಬಲಿರಾಜನ ಹಿರಿಯ ಮಗ. ಇವನು ಶಿವಭಕ್ತನಾಗಿದ್ದನು. ಈತನಿಗೆ ಮಹಾಕಾಲನೆಂಬ ಹೆಸರೂ ಇದೆ. ಉಷೆಯನ್ನು (ಊಷೆ) ಶ್ರೀಕೃಷ್ಣನ ಮಗ (ಮೊಮ್ಮಗ) ಅನಿರುದ್ಧನು ವಿವಾಹವಾದನು. ನೋ -- ಉಷಾ, ಅನಿರುದ್ಧ, ಚಿತ್ರಲೇಖೆ. ಕುಂಭಾಂಡ ಬಾಣಾಸುರನ ಮಂತ್ರಿ. ಇವನ -- ಬಾಣನ -- ಪಟ್ಟಣವೇ ಶೋಣಿತಪುರ; ಈತನ ಪತ್ನಿಯು ಲೋಹಿತಿ; ಮಗನು ಇಂದ್ರದಮನ (ಹರಿ). ಬಾಣನಿಗೆ ಸಾವಿರ ತೋಳುಗಳಿದ್ದುವು. ೨. ರಾಕ್ಷಸನೊಬ್ಬ. ಶಿವಭಕ್ತನಾದ ಈತನು ತ್ರಿಪುರಾಸುರರಂತೆ ಆಕಾಶದಲ್ಲಿ ಸಂಚರಿಸುವ ಮೂರು ಪಟ್ಟಣಗಳನ್ನು ಕಟ್ಟಿಕೊಂಡಿದ್ದನು. ಪತ್ನಿ ಅಸೌಪಮ್ಯೆ. ಈತನ ಸಂಚರಿಸುವ ಪಟ್ಟಣಗಳನ್ನೂ ತನ್ನ ಬಾಣಗಳಿಂದ ಸುಡತೊಡಗಿದ. ಆಗ ಬಾಣನು ತ್ರಿಭುವನೇಶ್ವರವೆಂಬ ಲಿಂಗವನ್ನು ಮಾತ್ರ ರಕ್ಷಿಸಬೇಕೆಂದು ಶಿವನನ್ನು ಪ್ರಾರ್ಥಿಸಲು ಶಿವನು ಅವನಿಗೆ ಅಭಯಪ್ರದಾನ ಮಾಡಿ ಅಗ್ನಿಯನ್ನು ಶಾಂತಗೊಳಿಸಿ ಇನ್ನು ಮುಂದೆ ಅವನಿಗೆ ಸ್ವರ್ಣಪುರದಲ್ಲಿರುವಂತೆ ಅಪ್ಪಣೆ ಮಾಡಿದನು. (ಮತ್ಸ್ಯಪು). ೩. ದನುಪುತ್ರನೊಬ್ಬ. ಈತನಿಗೆ ವಿಪ್ರಚಿತ್ತಿ, ಏಕಚಕ್ರ, ನಮುಚಿ, ನರಕ, ಶಂಬರ ಮೊದಲಾದ ಮೂವತ್ತೊಂಬತ್ತು ಮಂದಿ ಸಹೋದರರಿದ್ದರು (ಮತ್ಸಪು). ನೋ -- ದನು. ಬಾಣನ (ಶೋಣಿತಪುರದವ) ಪಟ್ಟಣದ ನಾಲ್ಕು ಬಾಗಿಲುಗಳನ್ನು ಕ್ರಮವಾಗಿ ಮಹೇಶ್ವರ, ಷಣ್ಮುಖ, ಭದ್ರಕಾಳಿ, ವಿನಾಯಕರು ಕಾಯುತ್ತಿದ್ದರು. ಶ್ರೀಕೃಷ್ಣನು ಮೂವರು ದ್ವಾರಪಾಲಕರನ್ನು ಗೆದ್ದು ಶಿವನೊಡನೆ ಯುದ್ಧವಾರಂಭಿಸಿದನು. ಇವನು ಶಿವನನ್ನು ಗೆದ್ದು ಪಟ್ಟಣದ ಒಳಗೆ ಪ್ರವೇಶಿಸಿದನು. ಒಳಗೆ ಬಾಣಾಸುರನು ಇದಿರಿಸಲು ಶ್ರೀಕೃಷ್ಣನು ತನ್ನ ಚಕ್ರಾಯುಧದಿಂದ ಆ ರಕ್ಕಸನ ತೋಳುಗಳನ್ನು

ಕತ್ತರಿಸಿ ನೆಲಕ್ಕೆ ಕೆಡವಿದನು. ಆ ಮೇಲೆ ಸೆರೆಯಲ್ಲಿದ್ದ ಅನಿರುದ್ಧನನ್ನು ಬಾಣನ ಮಗಳಾದ ಉಷೆಯೊಡನೆ ಕೂಡಿಸಿ ಅವರೊಡನೆ ದ್ವಾರಕೆಗೆ ಹಿಂದಿರುಗಿದನು (ಮ. ಸ). ಬಲಿಪುತ್ರನಾದ ಬಾಣನು ಷಣ್ಮುಖನಿಗೆ ಹೆದರಿ ಕ್ರೌಂಚಪರ್ವತದಲ್ಲಿ ಅಡಗಿಕೊಳ್ಳಲು, ಷಣ್ಮುಖನು ಅಗ್ನಿಯು ಕೊಟ್ಟ ಶಕ್ತ್ಯಾಯುಧದಿಂದ ಆ ಪರ್ವತವನ್ನೆ ಭೇದಿಸಿ ಬಾಣನನ್ನು ಕೊಂದುಬಿಟ್ಟನು. (ಮ. ಶ).

ಬಾದರಾಯಣ -- ನೋ-- ಬದರಿ. ಬದರಿಕಾಶ್ರಮದಲ್ಲಿ ವಾಸಮಾಡುವ ಮುನಿ; ವೇದವ್ಯಾಸ; ಕೃಷ್ಣದ್ವೈಪಾಯನ.

ಬಾದಾರಾಯಣಿ -- ವಿಶ್ವಾಮಿತ್ರನ ವಂಶವಿಸ್ತಾರಕ್ಕೆ ಕಾರಣನಾದವನು (ಹರಿ).

ಬಾಬಾಬುಡನ್‌ಗಿರಿ -- ಬೀರೂರು ಸ್ಟೇಶನ್ನಿನ ಹತ್ತಿರ ಈ ಗುಡ್ಡವಿದೆ. ಇಲ್ಲಿ ಭಗವಾನ್ ದತ್ತಾತ್ರೇಯನ ಪ್ರಸಿದ್ಧ ದೇವಾಲಯವಿದೆ.

ಬಾಭ್ರವಾಯಣಿ -- ವಿಶ್ವಾಮಿತ್ರನ ಪುತ್ರ. ಋಷಿಯೊಬ್ಬ (ಮ. ಅನು).

ಬಾಭ್ರವ್ಯ-- ವಿಶ್ವಾಮಿತ್ರ ಗೋತ್ರದ ಮಹರ್ಷಿ. ಇವನು ಅರ್ಜುನನಿಗೆ ನಾರದರ ಮಹಿಮೆಯನ್ನು ತಿಳಿಸಿದನು (ಸ್ಕಾಂ. ಪು).

ಬಾರ್ಹದ್ರಥ-- ಬೃಹದ್ರಥನ ಮಗ ; ಜರಾಸಂಧ ; ಮಗಧದೇಶದ ರಾಜ. ಇವನು ಭೀಮನಿಂದ ಹತನಾದನು. ನೋ -- ಜರಾಸಂಧ (ಮ. ಆ., ಸ.).

ಬಾರ್ಹಸ್ಪತ್ಯವ್ಯೂಹ -- ಬೃಹಸ್ಪತಿ (ಗುರು) ಎಂಬ ಗ್ರಹದ ಮಂಡಲದಂತೆ ಯುದ್ಧಕ್ಕೆ ಸೇನೆಯನ್ನು ನಿಲ್ಲಿಸುವ ಕ್ರಮ. ಬೃಹಸ್ಪತಿಪ್ರೋಕ್ತವಾದ ನೀತಿಗೆ ಅನುಸಾರವಾಗಿ ಸೇನೆಯನ್ನು ನಿಲ್ಲಿಸುವ ಒಂದು ಕ್ರಮ. ರಾವಣನು ಶುಕ್ರನೀತಿಗೆ ಅನುಸಾರವಾಗಿ ಸೇನೆಯನ್ನು ನಿಲ್ಲಿಸಲು ರಾಮನು ಬೃಹಸ್ಪತಿಗೆ ಒಪ್ಪಿತವಾದ ಮಾರ್ಗದಲ್ಲಿ ವ್ಯೂಹವನ್ನು ನಿಲ್ಲಿಸಿದನು (ಮ. ವ., ಕ).

ಬಾಲಧಿ -- ಋಷಿಯೊಬ್ಬ ಈತನು ಮರಣವಿಲ್ಲದ ಮಗನನ್ನು ಪಡೆಯಬೇಕೆಂದು ತಪಸ್ಸು ಮಾಡಿದನು. ಇವನಿಗೆ ದೇವತೆಗಳ ಅನುಗ್ರಹದಿಂದ ಮೇಧಾವಿಯೆಂಬ ಮಗನು ಹುಟ್ಟಿದನು. ಇವನು ಸಮಸ್ತ ಋಷಿಗಳನ್ನು ಅವಮಾನ ಪಡಿಸುತ್ತಾ ಬಂದನು. ಹಿಂದೆ ಬಾಲಧಿಯು ಅಲ್ಲಿದ್ದ ಪರ್ವತವನ್ನು ಕಂಡು ತನ್ನ ಮಗನು ಪರ್ವತಗಳಿರುವವರೆಗೆ ಇರಬೇಕೆಂದಿದ್ದ. ದೇವತೆಗಳು ಹಾಗೆಯೇ ವರವನ್ನು ಕೊಟ್ಟಿದ್ದರು. ಅವನು ಧನುಷಾಕ್ಷನೆಂಬ ಋಷಿಗೆ ಅವಮಾನಪಡಿಸಲು ಅವನು ತನ್ನ ತಪಶ್ಶಕ್ತಿಯಿಂದ ಕೋಣಗಳನ್ನು ನಿರ್ಮಾಣಮಾಡಿ ಪರ್ವತವನ್ನು ಹುಡಿಮಾಡಿ ನೆಲಸಮ ಮಾಡುವಂತೆ ಮಾಡಿ ಮೇಧಾವಿ ಮುನಿಯನ್ನು ಕೊಂದನು (ಮ. ವ).

ಬಾಲಾ -- ಲಲಿತಾದೇವಿಯ ಒಂಬತ್ತು ವರ್ಷದ ಮಗಳು. ಇವಳು ಭಂಡಾಸುರನ ಮೂವತ್ತು ಮಕ್ಕಳನ್ನು ವಧಿಸಿ ಪ್ರಸಿದ್ಧಳಾದಳು. ನೋ -- ಭಂಡಾಸುರ, ಶ್ರೀಚಕ್ರ (ಬ್ರಹ್ಮಾಂಡಪು).

ಬಾಲಾದಿತ್ಯ -- ನೋ -- ಕಮಠ.

ಬಾಲ್ಯ -- ಹದಿನಾಲ್ಕು ವರ್ಷಗಳವರೆಗಿನ ಮಾನವನ ಜೀವನದ ಒಂದು ಘಟ್ಟ. ಇದಕ್ಕೆ ಬಾಲ್ಯವೆನ್ನುತ್ತಾರೆ. ಅಣಿಮಾಂಡವ್ಯ ಮುನಿಯ ತೀರ್ಮಾನದಂತೆ ಬಾಲಕರು ಇಲ್ಲಿಯವರೆಗೆ ಮಾಡಿದ ಪಾಪಗಳೆಲ್ಲ ತಂದೆ ತಾಯಿಗಳನ್ನು ಸೇರುವುದು (ಮ. ಆ).

ಶ್ರೀರಾಮನ ಬಾಲ್ಯವು ವಸಿಷ್ಠ ವಿಶ್ವಾಮಿತ್ರರಿಂದ ಚೆನ್ನಾಗಿ ಪೋಷಿಸಲ್ಪಟ್ಟಿತು. ವಜ್ರಕಾಯನಾದ ಮಾರುತಿಯು ಬಾಲ್ಯದಿಂದಲೂ ಸೂರ್ಯದೇವನ ಶಿಷ್ಯನಾಗಿದ್ದ. ವಿಶ್ವಾಮಿತ್ರನಿಗೆ ಬಾಲ್ಯದಿಂದಲೇ ಮಹಾವ್ಯಕ್ತಿಯಾಗುವ ಹುಮ್ಮಸವಿತ್ತು. ಬಾಲ್ಯದ ಈತನ ಬತ್ತದ ಬಾಯಾರಿಕೆಯೇ ಈತನನ್ನು ಬ್ರಹ್ಮರ್ಷಿಯನ್ನಾಗಿ ರೂಪಿಸಿತು; ಅಲ್ಲದೆ ವಸಿಷ್ಠರನ್ನೂ ಬ್ರಹ್ಮತೇಜದಲ್ಲಿ ಸ್ಪರ್ಧಿಸಲು ಸಾಧ್ಯವಾಯಿತು. ಏಕಲವ್ಯನ ಬಾಲ್ಯದ ಗುರುಭಕ್ತಿಯು ಸೀಮಾತೀತವಾಗಿದ್ದುದರಿಂದಲೇ ಈತನು ಅರ್ಜುನನಿಗೂ ತಲೆನೋವನ್ನುಂಟುಮಾಡಿದನು. ಪರಶುರಾಮನ ಬಾಲ್ಯದ ಕ್ಷತ್ರಿಯದ್ವೇಷವೇ ಆ ಕಾಲದಲ್ಲಿ ದೇಶದಲ್ಲೇ ಕ್ರಾಂತಿಯನ್ನೆಬ್ಬಿಸಿತು. ವಾಲ್ಮೀಕಿ ಮಹರ್ಷಿಯ ಬಾಲ್ಯದ ರಾಮಭಕ್ತಿಯೇ ಆತನಿಂದ ಆದಿಕಾವ್ಯವಾದ ರಾಮಾಯಣವನ್ನು ಬರೆಸಿತು. ಅರ್ಜುನ ದೇವನ ಹತ್ತು ಬಿರುದುಗಳಿಗೂ ಆತನ ಬಾಲ್ಯದ ಪ್ರಯತ್ನಗಳೇ ಕಾರಣ. ಭೀಷ್ಮಾಚಾರ್ಯರ ಅಸದೃಶ ಕೀರ್ತಿಪರಂಪರೆಗಳಿಗೂ ಅವರ ಬಾಲ್ಯದ ಸಂಯಮಶಕ್ತಿಯೇ ಮೂಲ. ನಾರದರು ದಾಸಕೂಟದಲ್ಲಿ ಅಗ್ರೇಸರರಾಗಲು ಅವರ ಬಾಲ್ಯವೇ ಸಹಾಯಕವಾಗಿತ್ತು. ಕಣ್ವರ ಕುಲಪತಿಸ್ಥಾನಕ್ಕೂ ಅವರ ಬಾಲ್ಯವೇ ತಳಹದಿಯಾಗಿತ್ತು. ಕೃಷ್ಣನು ಅವತಾರಪುರುಷನೆಂಬುದಕ್ಕೆ ಆತನ ಬಾಲ್ಯದ ಅಸಮಸಾಹಸಗಳೇ ಕಾರಣ. ಇವೇ ಆತನನ್ನು ಭಗವಂತನೆನ್ನಿಸಿದುವು. ಹೀಗೆ ಜೀವನಯಾತ್ರೆಯಲ್ಲಿ ಮಹತ್ಫಲದಾಯಕ ಮತ್ತು ಪುಣ್ಯಕರವಾದ ಈ ಬಾಲ್ಯವನ್ನು ಲಾಲಸೆಯಲ್ಲಿ ಕಳೆದ ಭೂಮಿಂಜಯನು ಅಥವಾ ಉತ್ತರಕುಮಾರನು ಷಂಡಶಿರೋಮಣಿ -- ಹೇಡಿಗಳ ಕುಲದೀಪಕವೆನಿಸಿದನು. ಬಾಲ್ಯದ ಗೌರವವನ್ನು ತಿಳಿಯಬೇಕಾದರೆ ವೃದ್ಧರೊಡನೆ ಈ ಕುರಿತು ಮಾತೆತ್ತಬೇಕು. ಆಗ ಅಮೃತಕ್ಕಿಂತ ಬಾಲ್ಯವೇ ಹಿರಿದೆಂದು ತಿಳಿಯುವುದು.

ಬಾಷ್ಕಲ -- ಹಿರಣ್ಯಕಶಿಪುವಿನ ಪುತ್ರ ; ಮಹಿಷಾಸುರನ ಸೇನಾಪತಿ (ಮ. ಆ., ದೇವೀಭಾ., ಮಾರ್ಕಂ. ಪು).

ಬಾಹು -- ೧. ಸೂರ್ಯವಂಶದ ಮರುಕನ ಮೊಮ್ಮಗ ; ವೃಕನ ಮಗ. ಈ ಬಾಹುರಾಜನು ಧಾರ್ಮಿಕನಾಗಿರಲಿಲ್ಲ. ಇದರಿಂದ ಇವನ ರಾಜ್ಯವನ್ನು ಶಕರೂ, ಯವನರೂ, ಕಾಂಭೋಜರೂ ಮತ್ತು ಇತರರೂ ಕೂಡಿ ಅಪಹರಿಸಿದರು. ಈತನು ರಾಜ್ಯಭ್ರಷ್ಟನಾಗಿ ಹೆಂಡಿರುಮಕ್ಕಳೊಡನೆ ಅರಣ್ಯ ಸೇರಿ ಅಲ್ಲಿ ದುಃಖದಿಂದ ಪ್ರಾಣಬಿಟ್ಟನು. ಆಗ ಈತನ ಹೆಂಡತಿಯಾದ ಯಾದವಿಯು ಗರ್ಭಿಣಿಯಾಗಿದ್ದರೂ ಸಹಗಮನಕ್ಕೆ ಯತ್ನಿಸಲು ಅದೇ ವನದಲ್ಲಿದ್ದ ಔರ್ವಮುನಿಯು -- ಗರ್ಭಿಣಿಯರಾದ ಸ್ತ್ರೀಯರು ಸಹಗಮನ ಮಾಡಬಾರದು. ನಿನ್ನ ಹೊಟ್ಟೆಯಲ್ಲಿ ಚಕ್ರವರ್ತಿಯಾಗುವ ಮಗನು ಹುಟ್ಟಲಿದ್ದಾನೆ ಎಂದು ಸಮಾಧಾನಪಡಿಸಿದನು. ಮುಂದೆ ಈಕೆಯ ಹೊಟ್ಟೆಯಿಂದಲೇ ಸಗರ ಚಕ್ರವರ್ತಿಯು ಹುಟ್ಟಿದನು. ನೋ --ಸಗರ (ಮ. ಶಾಂ., ಭಾಗ., ಹರಿ).೨. ಪಾಂಡವ ಪಕ್ಷದ ಕ್ಷತ್ರಿಯ.

ಬಾಹುಕ -- ೧. ಋತುಪರ್ಣನ ನಗರದಲ್ಲಿ ನಳನು ಇಟ್ಟುಕೊಂಡಿದ್ದ ಹೆಸರು (ಮ.ವ). ೨. ಯಾದವನೊಬ್ಬ.

ಬಾಹುಕಾ (ಬಾಹುದಾ) -- ೧. ಪರೀಕ್ಷಿತ ಭಾರ್ಯೆ. ಈಕೆಗೆ ಸುವೇಷಾ ಎಂಬ ಹೆಸರಿದೆ. ಈಕೆಯ ಮಗ ಭೀಮಸೇನ. ಈ ಭೀಮಸೇನ ಶಂತನು ಚಕ್ರವರ್ತಿಯ ತಾತ (ಮ.ಆ.).

ಬಾಹುದಾ -- ಹಿಮಾಲಯದ ಸಮೀಪದ ಒಂದು ನದಿ. ಈ ನದಿಯಲ್ಲಿ ಮಿಂದುದರಿಂದ ಲಿಖಿತ ಋಷಿಯ ತುಂಡಾದ ತೋಳು ಕೂಡಿ ಬೆಳೆದುದರಿಂದ ಇದಕ್ಕೆ ಈ ಹೆಸರು ಬಂತು. ಇದು ಅಯೋಧ್ಯೆಯ ಸಮೀಪ ಹರಿಯುವ ಒಂದು ನದಿ. ನೋ. -- ಶಂಖ, ಲಿಖಿತ (ಮ.ಆ., ವ., ಭೀ.).

ಬಾಹುಶಾಲಿ -- ಧೃತರಾಷ್ಟ್ರನ ಮಗ (ಮ.ಆ.).

ಬಾಹ್ಲೀಕ -- ೧. ಪ್ರತೀಪರಾಜನ ಮಗ; ಅತಿರಥ; ಈತನ ಪುತ್ರ ಸೋಮದತ್ತ. ಬಾಹ್ಲೀಕನು ದುರ್ಯೋಧನನ ಪಕ್ಷದಲ್ಲಿ ನಿಂತು ಹೋರಾಡಿ ಭೀಮನಿಂದ ಹತನಾದ. (ಮ.ದ್ರೋ.). ೨. ಶಲ್ಯನೂ ಬಾಹ್ಲೀಕ ದೇಶದ ರಾಜನು (ಮ.ಆ.). ೩. ಚಂದ್ರವಂಶದ ಜನಮೇಜಯನ ಮಗ. ೪. ವಿಪಾಶಾ ಮತ್ತು ಶತದ್ರೂ ನದಿಗಳ ಮಧ್ಯದ ಕೇಕಯದ ಪೂರ್ವಭಾಗದಲ್ಲಿರುವ ದೇಶ. ಬೀಯಾಸ್ ಮತ್ತು ಸಟ್ಲೆಜ್ ನದಿಗಳ ನಡುವೆ ಇರುವ ಕೇಕಯದ ಈಶಾನ್ಯದಲ್ಲಿರುವ ದೇಶ (ಮ.ಭೀ., ಕ., ಶಾಂ.). ೫. ಇಂದಿನ ಬಲೂಚಿಸ್ಥಾನ.

ಬಿಡಾಲ -- ಮಹಿಷಾಸುರನ ಪರಿವಾರದ ರಾಕ್ಷಸ; ಈತನನ್ನು ತ್ರಿನೇತ್ರೆ ಕೊಂದಳು (ಮಾರ್ಕಂ.ಪು).

ಬಿಂದುಮತಿ -- ಮಾಂಧಾತರಾಜನ ಪತ್ನಿ; ಶಶಿಬಿಂದುರಾಜನ ಮಗಳು. ಈಕೆಗೆ ಪುರುಕುತ್ಸ, ಅಂಬರೀಷ ಮತ್ತು ಮುಚುಕುಂದರೆಂಬ ಮೂವರು ಗಂಡುಮಕ್ಕಳೂ, ಐವತ್ತು ಮಂದಿ ಕುಮಾರಿಯರೂ ಹುಟ್ಟಿದರು. ಕುಮಾರಿಯರನ್ನೆಲ್ಲ ಸೌಭರಿ ಮುನಿಯು ಮದುವೆಯಾದನು. ನೋ--ಸೌಭರಿ (ಭಾಗ., ವಿಷ್ಣುಪು., ರಾಮಾ.ಉತ್ತರ., ವಾಯುಪು).

ಬಿಂದುಮಾಧವ -- ಕಾಶಿಯಲ್ಲಿದ್ದ ವಿಷ್ಣುಮೂರ್ತಿಯ ಹೆಸರು (ಸ್ಕಾಂ.ಪು., ವಿಷ್ಣುಪು.).

ಬಿಂದುಸರ (ಬಿಂದುಸರೋವರ) -- ಒಂದು ಸರೋವರ. ಇದರ ತೀರದಲ್ಲೇ ಭಗೀರಥನು ಗಂಗಾವತರಣಕ್ಕಾಗಿ ತಪಸ್ಸು ಮಾಡಿದನು. ಆಕಾಶದಿಂದ ವೇಗವಾಗಿ ಧುಮುಕಿದ ಗಂಗೆಯನ್ನು ಶಿವನು ಇಲ್ಲೇ ಜಡೆಗಳಿಂದ ತಡೆಹಿಡಿಯಲು ಜಡೆಗಳಿಂದ ಕೆಲವು ಬಿಂದುಗಳು ಕೆಳಗೆ ಬಿದ್ದು ಈ ಸರೋವರವಾಯಿತು (ಮತ್ಸ್ಯಪು). ಮಯನು ಈ ಪ್ರಾಂತದಿಂದಲೇ ಅನೇಕ ರತ್ನಗಳನ್ನೂ, ಅಮೂಲ್ಯ ವಸ್ತುಗಳನ್ನೂ ಒಯ್ದು, ಪಾಂಡವರಿಗೊಂದು ಸಭಾಮಂದಿರವನ್ನು ನಿರ್ಮಿಸಿಕೊಟ್ಟನು. ಇದು ರುದ್ರ ಹಿಮಾಲಯದ ಗಂಗೋತ್ರಿಯಿಂದ ಎರಡು ಮೈಲು ದೂರದಲ್ಲಿರುವ ಒಂದು ತೀರ್ಥ (ಮ.ಸ., ಭೀ., ಭಾಗ).

ಬೀಭತ್ಸು -- ಅರ್ಜುನನ ಹತ್ತು ಹೆಸರುಗಳಲ್ಲೊಂದು. ಯುದ್ಧನಿಯಮದಂತೆ ಸಂಗ್ರಾಮವನ್ನು ಸಾಗಿಸುವವನು (ಮ.ವಿ.).

ಬುದ್ಧ -- ಇವನು ದಶಾವತಾರಗಳಲ್ಲಿ ಒಂಬತ್ತನೆಯವನು. ಅಲ್ಲದೆ ಬೌದ್ಧಧರ್ಮ ಸ್ಥಾಪಕನೂ ಹೌದು. ಮೋನಿಯರ್ ವಿಲಿಯಂಸ್ ಎಂಬ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕನು ಸುಮಾರು ೧೮೭೦ ರಲ್ಲಿ ಇಂಗ್ಲೆಂಡಿನಲ್ಲಿ ಬರೆದು ಪ್ರಕಟಿಸಿದ ಬೃಹತ್ ಸಂಸ್ಕೃತ -- ಇಂಗ್ಲೀಷ್ ಕೋಶದಲ್ಲಿ ಹೀಗೆ ಹೇಳಿದ್ದಾನೆ: ಬುದ್ಧ ಅಂದರೆ ಎಚ್ಚೆತ್ತವನು -- ಅರಿತವನು -- ತಿಳಿದವನು. ದೇವರ ವಿಷಯವಾಗಿ ಸಂಪೂರ್ಣ ಜ್ಞಾನವನ್ನು ಸಂಪಾದಿಸಿ ಮೋಕ್ಷವನ್ನು ಹೊಂದಿದವನು. ಇವನು ನಿರ್ವಾಣಹೊಂದುವುದಕ್ಕೆ ಮೊದಲು ಇತರರಿಗೆ ನಿರ್ವಾಣಪಡೆಯುವ ಮಾರ್ಗವನ್ನು ತಿಳಿಸಿದನು. ಇವನಿಗೆ ಮೊದಲು ಶಾಕ್ಯಮುನಿ ಅಥವಾ ಶಾಕ್ಯಸಿಂಹ ಎಂಬ ಹೆಸರುಗಳಿದ್ದವು. ಇವನು ನಿಯಮಪಾಲ (ನೇಪಾಲ -- ತದ್ಭವ) ರಾಜ್ಯದ ಕಪಿಲ ವಸ್ತುವಿನಲ್ಲಿ ಜನಿಸಿದನು. ತಂದೆ ಶಾಕ್ಯವಂಶದ ರಾಜನಾದ ಶುದ್ಧೋದನ. ತಾಯಿಯು ಸುಪ್ರಬುದ್ಧ ಎಂಬ ರಾಜನ ಮಗಳಾದ ಮಾಯಾದೇವಿ. ಇದರಿಂದ ಈತನು ಜಾತಿಯಲ್ಲಿ ಕ್ಷತ್ರಿಯ. ಶಾಕ್ಯ ಎಂಬುದು ಈತನ ಕುಲದ ಹೆಸರು. ಬುದ್ಧ (ಜ್ಞಾನಿ),

ಸಿದ್ಧಾರ್ಥ - (ಗುರಿಸಾಧಿಸಿದವನು) -ಈ ಎರಡು ಹೆಸರುಗಳು ಆತನಿಗೆ ಆಮೇಲೆ ಬಂದವುಗಳು. ಇವನು ಕ್ರಿ. ಪೂ. ಸು. ೫೮೮ ರಲ್ಲಿ ಮಗಧ ಅಥವಾ ಬಿಹಾರದಲ್ಲಿ ತನ್ನ ಯಾತ್ರೆಯನ್ನಾರಂಭಿಸಿದನು.

ಕ್ರಿ. ಪೂ. ೫೪೩ ರಲ್ಲಿ ಔಧ್‌ನ ಕುಶೀನಗರದಲ್ಲಿ ಇವನ ದೇಹಾಂತ ವಾಯಿತು. ಈತನ ಹಿಂದೆ ೨೪ ಬುದ್ಧರು ಆಗಿ ಹೋಗಿದ್ದಾರೆಂದು ಹೇಳುತ್ತಾರೆ. ಇನ್ನು ಕೆಲವರ ಗಣನೆಯಲ್ಲಿ ಇವನು ಏಳನೇ ಬುದ್ಧ. ಇನ್ನು ಕೆಲವರು ಇವನನ್ನು ೫ ನೇ ಬುದ್ಧನೆಂದೂ ಕೆಲವು ಕಡೆಗಳಲ್ಲಿ ಇವನನ್ನು ವಿಷ್ಣುವಿನ ಒಂಬತ್ತನೇ ಅವತಾರವೆಂದೂ ಹೇಳುತ್ತಾರೆ. ಯೂರೋಪಿನ ಹಲವಾರು ಭಾಷೆಗಳಲ್ಲಿ (ಹಳೆಯ ಜರ್ಮನ್, ಹೊಸ ಜರ್ಮನ್, ಸ್ಲಾವೋನಿಕ್, ಲಿಥುವೇನಿಯನ್) ಸಂಸ್ಕೃತದ ಬುಧ್ ಎಂಬ ಧಾತುವು ಎಚ್ಚರಗೊಳ್ಳು ಎಂಬರ್ಥದಲ್ಲಿ ಈಗಲೂ ಬಳಕೆಯಲ್ಲಿದೆ.

ಬುದ್ಧಿ -ಧರ್ಮಪ್ರಜಾಪತಿಯ ಪತ್ನಿ; ಈಕೆಯ ತಂದೆ ದಕ್ಷಪ್ರಜಾಪತಿ; ತಾಯಿ ಪ್ರಸೂತಿ. ಇವಳೂ ಮತ್ತು ಈಕೆಯ ಹನ್ನೆರಡೂ ಮಂದಿ ಸಹೋದರಿಯರೂ ಧರ್ಮಪ್ರಜಾಪತಿಯನ್ನು ವಿವಾಹವಾದರು. ನೋ - ಧರ್ಮ (ಮ. ಆ., ಭಾಗ).

ಬುದ್ಬುದಾ -ಅಪ್ಸರೆಯೊಬ್ಬಳು. ಈಕೆ ಒಬ್ಬ ಮುನಿಯನ್ನು ಹಾಸ್ಯಮಾಡಿ, ಮೊಸಳೆಯಾಗಿ ಕೊನೆಗೆ ಅರ್ಜುನನಿಂದ ಶಾಪವಿಮೋಚನೆ ಹೊಂದಿದಳು. ನೋ - ನಾರೀತೀರ್ಥ (ಮ. ಆ., ಸ್ಕಾಂ. ಪು).

ಬುಧ --೧. ನವಗ್ರಹದಲ್ಲೊಂದು ೨. ಚಂದ್ರನಿಂದ ಬೃಹಸ್ಪತಿಯ ಪತ್ನಿಯಾದ ತಾರೆಯಲ್ಲಿ ಜನಿಸಿದವ. ನೋ --ಚಂದ್ರ, ತಾರೆ, ಇಲಾ. (ಮ. ಆ., ಭಾಗ., ಹರಿ., ಪದ್ಮಪು., ವಾಯುಪು). ಈತ ಇಲೆಯಲ್ಲಿ ಪುರೂರವನೆಂಬ ಮಗನನ್ನು ಪಡೆದ. ನೋ -- ಪುರೂರವ. (ದೇವೀಭಾ).

ಬೃಂದಾರಕ -- ಕೌರವನ ಪಕ್ಷದ ಕ್ಷತ್ರಿಯ; ಈತನು ಅಭಿಮನ್ಯುವಿನಿಂದ ಹತನಾದನು (ಮ. ದ್ರೋ). ೨. ಧೃತರಾಷ್ಟ್ರನ ಮಗ (ಮ. ಆ).

ಬೃಹಜ್ಜ್ಯೋತಿ -- ಋಷಿಯೊಬ್ಬ; ಅಂಗೀರಸನ ಮಗ (ಮ. ವ).

ಬೃಹತ್ಕೀರ್ತಿ --ಋಷಿಯೊಬ್ಬ; ಅಂಗೀರಸನ ಮಗ (ಮ. ವ).

ಬೃಹತೀ -- ವಿಶ್ವಾವಸು ಎಂಬ ಗಂಧರ್ವನ ವೀಣೆ.

ಬೃಹತ್ಕ್ಷತ್ರ -- ೧. ಕ್ಷತ್ರಿಯ ; ಕೇಕಯದೇಶಾಧಿಪತಿ ಇವನು ದ್ರೋಣನಿಂದ ಹತನಾದನು (ಮ.ಆ.,ದ್ರೋ). ಕೌರವಪಕ್ಷದ ಸೇನಾಪತಿ ಕ್ಷೇಮಧೂರ್ತಿ ಯನ್ನು ಹದಿನಾಲ್ಕನೇ ದಿನದ ಹಗಲು ಯುದ್ಧದಲ್ಲಿ ಕೊಂದಿದ್ದನು. ೨. ನಿಷಧ ದೇಶದ ರಾಜ ; ದುರ್ಯೋಧನನ ಪಕ್ಷೀಯ. ಧೃಷ್ಟದ್ಯುಮ್ನನಿಂದ ಹತನಾದನು (ಮ.ದ್ರೋ).

ಬೃಹದಶ್ವ-- ೧. ಇಕ್ಷ್ವಾಕು ವಂಶದ ಕ್ಷತ್ರಿಯ ; ಈತನ ತಂದೆ ಶಾಬಸ್ತಿ ಎಂಬ ಪಟ್ಟಣವನ್ನು ನಿರ್ಮಿಸಿದ ಶಾಬಸ್ತರಾಜನು. ಬೃಹದಶ್ವನ ಮಗನೇ ಕುವಲಾಶ್ವನು (ಮ. ವ).೨. ಋಷಿಯೊಬ್ಬ. ಅರ್ಜುನನು ಅಸ್ತ್ರಲಾಭಕ್ಕಾಗಿ ಇಂದ್ರಲೋಕಕ್ಕೆ ಹೊರಟುಹೋದ ಮೇಲೆ ಕಾಮ್ಯಕ ವನದಲ್ಲಿ ಪಾಂಡವರು ಅರ್ಜುನನ ಕುರಿತಾಗಿ ಚಿಂತಿಸುತ್ತಿರುವಾಗ ಮುನಿಯು ಬಂದು ನಳನ ಚರಿತ್ರೆಯನ್ನು ಅವನಿಗೆ ಹೇಳಿ ದುಃಖ ಶಮನಮಾಡಿ ಕೊನೆಗೆ ತಾನು ಹೋಗುವಾಗ ಧರ್ಮರಾಯನಿಗೆ ಅಕ್ಷವಿದ್ಯೆಯನ್ನು (ಪಗಡೆಯಾಟ) ಕಲಿಸಿದನು (ಮ. ವ).

ಬೃಹದ್ಗರ್ಭ -- ಶಿಬಿಯ ಮಗ. ಒಬ್ಬ ಬ್ರಾಹ್ಮಣನು ಶಿಬಿಯ ಬಳಿಗೆ ಬಂದು ಬೃಹದ್ಗರ್ಭನ ಮಾಂಸವನ್ನು ಯಾಚಿಸಲು ಶಿಬಿಯು ಹಾಗೆಯೇ ಅವನ ಮಾಂಸವನ್ನು ಅಡುಗೆ ಮಾಡಿ ಬಡಿಸಿದನು (ಮ. ವ).

ಬೃಹದ್ಬಲ -- ೧. ಸೂರ್ಯವಂಶದ ರಾಜ ; ಇವನು ದುರ್ಯೋಧನನ ಪಕ್ಷದವನು. ಇವನು ಅಭಿಮನ್ಯುವಿನಿಂದ ಹತನಾದನು. ಇವನ ಮಗನು ಬೃಹದ್ರಣ (ಮ. ಸ., ಉ., ಭೀ., ದ್ರೋ). ೨. ಶಕುನಿಯ ಸಹೋದರ (ಮ. ಆ). ೩. ಉದ್ಧವನ ಸಹೋದರರಲ್ಲಿ ಒಬ್ಬ.

ಬೃಹದ್ಯುಮ್ನ -- ಕ್ಷತ್ರಿಯ ; ಇವನು ವಿಶ್ವಾಮಿತ್ರನ ಮೊಮ್ಮಕ್ಕಳಾದ ಅಮಾವಸು ಮತ್ತು ಪರಾವಸುಗಳಿಂದ ಮಹಾಕ್ರತುವೊಂದನ್ನು ಮಾಡಿಸಿದನು. (ಮ. ವ., ಸ್ಕಾಂ. ಪು).

ಬೃಹದ್ಬ್ರಹ್ಮ -- ಋಷಿಯೊಬ್ಬ ; ಅಂಗೀರಸನ ಮಗ (ಮ. ವ).

ಬೃಹದ್ರಥ -- ೧. ಚಂದ್ರವಂಶದ ಕ್ಷತ್ರಿಯ ; ಉಪರಿಚರವಸುವಿನ ಮಗ ; ಈತನ ಪತ್ನಿಯರು ಕಾಶೀರಾಜನ ಇಬ್ಬರು ಪುತ್ರಿಯರು ; ಈತನ ಮಗ ಜರಾಸಂಧ. ನೋ --ಚಂಡಕೌಶಿಕ, ಜರಾಸಂಧ (ಮ. ಆ., ಸ., ಭಾಗ). ೨. ಈತನಿಗೆ ಬೃಹದ್ರಥ ಪೌರವ ಎಂಬ ಹೆಸರುಗಳಿವೆ. ಮಾಂಧಾತನಿಂದ ಇವನು ಪರಾಜಿತನಾದನು. ೩.ಕೌಸಲ್ಯ -- ಇವನು ದುರ್ಯೋಧನನ ಪಕ್ಷದ ಕ್ಷತ್ರಿಯ (ಮ. ಉ).

ಬೃಹದ್ಭಾನು -- ೧. ದೇವತೆಯೊಬ್ಬ; ದಿವನ ಮಗ (ಮ. ಆ).ಅಗ್ನಿವಿಶೇಷ (ಮ. ವ)

ಬೃಹದ್ಭಾಸ -- ಋಷಿಯೊಬ್ಬ ; ಅಂಗೀರಸನ ಮಗ (ಮ. ವ)

ಬೃಹದ್ಭಾಸಾ -- ಚಂದ್ರನ ಮಗಳು; ಈಕೆಯು ಭಾನು ಎಂಬ ಹೆಸರಿನ ಅಗ್ನಿಯ ಹೆಂಡತಿ (ಮ. ವ).

ಬೃಹನ್ -- ಅಗ್ನಿವಿಶೇಷ (ಮ. ವ).

ಬೃಹಂತ -- ಉಲೂಕ ದೇಶಾಧಿಪತಿ; ಕ್ಷೇಮಧೂರ್ತಿ ಎಂಬ ರಾಜನ ಅಣ್ಣ. ಇವನು ಪಾಂಡವಪಕ್ಷದವ ; ದುಶ್ಶಾಸನನಿಂದ ಹತನಾದನು (ಮ. ಆ., ಸ., ಉ., ಕ).

ಬೃಹನ್ನಳೆ -- ಅರ್ಜುನನ ಅಜ್ಞಾತವಾಸಕಾಲದ ಹೆಸರು. ಊರ್ವಶಿಯಿಂದ ಬಂದ ಶಾಪದಿಂದ ಇವನು ಆಗ ನಪುಂಸಕನ ವೇಷದಿಂದಿದ್ದನು. ಆ ಕಾಲದಲ್ಲಿ ಅವನು ಉತ್ತರೆಗೆ ನರ್ತನ ವಿದ್ಯೆಯನ್ನು ಕಲಿಸುತ್ತಿದ್ದನು. ಉತ್ತರಗೋಗ್ರಹಣದ ಕಾಲದಲ್ಲಿ ಸಾರಥಿ ಇಲ್ಲವೆಂದು ಹಳಹಳಿಸಿದ ಉತ್ತರನಿಗೆ ತಾನೇ ಸಾರಥಿಯಾಗಿ ಉತ್ತರ ಗೋಗ್ರಹಣದಲ್ಲಿ ಕೌರವರನ್ನೆಲ್ಲ ಗೆದ್ದ ವೀರ (ಯುದ್ಧದಲ್ಲಿ ಬೃಹತ್ = ವೀರರಾದ ಕ್ಷತ್ರಿಯರನ್ನು ರಣಭೂಮಿಯಲ್ಲಿ, ನಳ (ಡಾ)= ಕುಣಿಸುವವನು) (ಮ. ವ).

ಬೃಹನ್ಮನ -- ಋಷಿ; ಅಂಗಿರಸನ ಮಗ (ಮ. ವ).

ಬೃಹನ್ಮಂತ್ರ -- ಋಷಿ ; ಅಂಗಿರಸನ ಮಗ (ಮ. ವ).

ಬೃಹಸ್ಪತಿ --ಋಷಿ ; ಅಂಗಿರಸನ ಮಗ ;ದೇವಗುರು ; ಈತನ ಸಹೋದರಿ ಬ್ರಹ್ಮವಾದಿನಿ; ಈಕೆಯ ಪತಿಯೇ ಪ್ರಭಾಸ. ಬೃಹಸ್ಪತಿಯ ಪತ್ನಿ ತಾರೆ. ಈಕೆಗೆ ಸುಭೆ ಮತ್ತು ಚಾಂದ್ರಮಸಿ ಎಂಬ ಹೆಸರುಗಳಿವೆ. ಈಕೆಗೆ ಚಂದ್ರನಿಂದ ಬುಧನೆಂಬ ಮಗನು ಹುಟ್ಟಿದನು. ನೋ --ಚಂದ್ರ, ಬುಧ, ಈಕೆಯಲ್ಲಿ ಬೃಹಸ್ಪತಿಯಿಂದ ಹುಟ್ಟಿದ ಮಕ್ಕಳು ಆರು ಅಗ್ನಿಗಳು -- ಶಂಯು, ನಿಶ್ಚ್ಯವನ, ವಿಶ್ವಜಿತ್, ವಿಶ್ವಭುಕ್, ಬಡಬಾಗ್ನಿ, ಸ್ವಿಷ್ಟಕೃತ್. ಈತನ ಏಳನೇ ಮಗಳೇ ಸ್ವಾಹೆ. ಕಚನೂ ಇವನ ಮಗನೇ.

ಒಮ್ಮೆ ಶುಕ್ರಾಚಾರ್ಯರೂ ಧೂಮವ್ರತವೆಂಬ ತಪಸ್ಸು ಮಾಡುತ್ತಿರುವಾಗ ಬೃಹಸ್ಪತಿಯು ಶುಕ್ರನ ವೇಷದಿಂದ ರಾಕ್ಷಸರಾಜನ ಬಳಿಗೆ ಬಂದು ಅವನಿಗೆ ನಾಸ್ತಿಕವಾದವನ್ನು ಬೋಧಿಸಿದನು. ಮುಂದೆ ತಪಸ್ಸನ್ನು ಮುಗಿಸಿಬಂದ ಶುಕ್ರನನ್ನು ರಾಕ್ಷಸರಾಜನು ತಿರಸ್ಕರಿಸಲು ಶುಕ್ರನು ರಾಕ್ಷಸರಿಗೆ ಶಾಪವೀಯಲು, ಬೃಹಸ್ಪತಿಯು ತನ್ನ ಕಾರ್ಯವಾಯಿತೆಂದು ಅದೃಶ್ಯವಾದನು. ಈತನು ತನ್ನ ಅಣ್ಣನಾದ ಉಚಥ್ಯನ ಪತ್ನಿ ಮಮತಾದೇವಿಯಲ್ಲಿ ಭರದ್ವಾಜನೆಂಬ ಮಗನನ್ನು ಪಡೆದನು. ದ್ರುಪದನ ಅರಮನೆಯಲ್ಲಿ ದ್ರೌಪದಿ ಚಿಕ್ಕವಳಿರುವಾಗ ಒಬ್ಬ ಬ್ರಾಹ್ಮಣನು ಬಂದು ಆಕೆಗೆ ಬೃಹಸ್ಪತಿ ನೀತಿಯನ್ನು ಉಪದೇಶಿಸಿದ್ದನೆಂದು ವನವಾಸಕಾಲದಲ್ಲಿ ದ್ರೌಪದಿಯು ಧರ್ಮರಾಜನಿಗೆ ತಿಳಿಸಿದಳು (ಮ. ಆ., ಸ., ಆಶ್ವ., ವ., ಶಾಂ., ಅನು., ಬ್ರಹ್ಮಪು., ಮತ್ಸ್ಯಪು).ನಹುಷ ಇಂದ್ರನಾಗಿದ್ದಾಗ, ಶಚೀದೇವಿಯನ್ನು ನಿರ್ಬಂಧಪಡಿಸಿದ ಸಂದರ್ಭದಲ್ಲಿ ಬೃಹಸ್ಪತಿಯು ನಹುಷನನ್ನು ಅನರ್ಥಕ್ಕೆ ಈಡುಮಾಡಿ ಶಚೀದೇವಿಯ ಪಾತಿವ್ರತ್ಯವನ್ನು ಕಾಪಾಡಿದ. ನೋ -- ನಹುಷ (ಮ. ಉ).ಇವನು

ದೈತ್ಯವಿನಾಶಕ್ಕಾಗಿ ಸರಸ್ವತೀನದಿಯ ತೀರದಲ್ಲಿ ಒಂದು ಯಾಗವನ್ನು ಮಾಡಿದನು. ಆದರ ಪರಿಣಾಮವಾಗಿ ಯುದ್ಧದಲ್ಲಿ ದೈತ್ಯರು ಸೋತು ದೇವತೆಗಳು ಗೆದ್ದರು. (ಮ. ಶ).

ಬೈದ --ಒಬ್ಬ ಋಷಿ; ಈತನು ಧೌಮ್ಯಮುನಿಯ ಶಿಷ್ಯ. ಈತನ ಬಳಿಗೆ ಜನಮೇಜಯ ಮತ್ತು ಪೌಷ್ಯನೆಂಬ ಹೆಸರುಳ್ಳ ಕ್ಷತ್ರಿಯರು ಬಂದು -- ನೀನು ನಮಗೆ ಪುರೋಹಿತನಾಗಬೇಕು ಎಂದು ಪ್ರಾರ್ಥಿಸಿದರು. ಬೈದನು ಒಪ್ಪಿ ಅವರ ಯಜ್ಞಕಾರ್ಯಕ್ಕಾಗಿ ಹೊರಟಾಗ ತನ್ನ ಶಿಷ್ಯರಲ್ಲಿ ಒಬ್ಬನಾದ ಉತ್ತಂಕನೆಂಬವನನ್ನು ನೋಡಿ -- 'ವತ್ಸ, ನಾನು ಬರುವವರೆಗೆ ಮನೆಯಲ್ಲಿ ಯಾವ ವಿಷಯಕ್ಕೂ ಲೋಪವಾಗದಂತೆ ನೀನು ಗೃಹಕೃತ್ಯವನ್ನು ಸರಿಯಾಗಿ ನೋಡಿಕೊ' ಎಂದು ಆ ರಾಜರೊಡನೆ ಹೊರಟು ಹೋದನು. ಉತ್ತಂಕನು ಗುರುವಿನಾಜ್ಞೆಯನ್ನು ಪಾಲಿಸುತ್ತಾ ಇರುವಾಗ ಅವನ ಇಂದ್ರಿಯನಿಗ್ರಹಶಕ್ತಿಯನ್ನು ಪರೀಕ್ಷಿಸುವುದಕ್ಕಾಗಿ ಕೆಲವು ವೃದ್ಧಸ್ತ್ರೀಯರು ಒಟ್ಟು ಸೇರಿ ಉತ್ತಂಕನನೊಡನೆ -- ಮಗೂ ಉತ್ತಂಕಾ, ನಿನ್ನ ಉಪಾಧ್ಯಾಯರು ಊರು ಬಿಟ್ಟು ಅನೇಕ ದಿನಗಳಾದವು. ನಿನ್ನ ಗುರುಪತ್ನಿಯೂ ಇಂದೇ ಋತುಸ್ನಾನ ಮಾಡಿರುವಳು. ಅವಳ ಋತುಕಾಲವು ವ್ಯರ್ಥವಾಗದಂತೆ ನೀನು ನಡೆಯಬೇಕು. ಉಪಾಧ್ಯಾಯರು ಯಾವ ವಿಷಯಕ್ಕೂ ಕೊರತೆಬಾರದಂತೆ ನಡೆದುಕೊಳ್ಳಬೇಕೆಂದು ನಿನ್ನನ್ನು ನಿಯಮಿಸಿರುವರಲ್ಲವೇ ಎನ್ನಲು, ಉತ್ತಂಕನು ಅವರ ಮಾತುಗಳಿಗೆ ಛೀಗುಟ್ಟಿದನು. ಗುರುವು ಹಿಂದಿರುಗಿದಮೇಲೆ ಉತ್ತಂಕನ ಇಂದ್ರಿಯನಿಗ್ರಹಕ್ಕೆ ತಲೆದೂಗಿ ಅವನನ್ನು ಗುರುಕುಲದಿಂದ ಗೃಹಸ್ಥಾಶ್ರಮಿಯಾಗುವಂತೆ ಹೇಳಿ ಕಳುಹಿಸಿದನು. ಉತ್ತಂಕನು ಗುರುಪತ್ನಿಯ ಸೂಚನೆಯಂತೆ ಪೌಷ್ಯರಾಜನ ಪತ್ನಿಯ ಕಿವಿಯ ಕುಂಡಲಗಳೆಂಬ ಗುರುದಕ್ಷಿಣೆಯನ್ನೊಪ್ಪಿಸಿ ತನ್ನ ಗೃಹಾಭಿಮುಖನಾದನು. ಸೋ -- ಉತಂಕ (ಉತ್ತಂಕ) (ಮ. ಆ).

ಬ್ರಧ್ನಶ್ವ -- ಕ್ಷತ್ರಿಯನೊಬ್ಬ. ಒಮ್ಮೆ ಅಗಸ್ತ್ಯನು ಒಂದು ಕಾಡಿನ ಹಳ್ಳದಲ್ಲಿ ನೇತಾಡುತ್ತಿರುವ ತನ್ನ ಪಿತೃಗಳನ್ನು ಕಂಡು ಅವರ ಅಪೇಕ್ಷೆಯಂತೆ ಅವರನ್ನುದ್ಧರಿಸಲು ತಾನು ಪುತ್ರವಂತನಾಗಬೇಕೆಂದು ಬಯಸಿದನು. ಆದರೆ ಅವನಿಗೆ ಅನುಕೂಲೆಯಾದ ಉತ್ತಮ ಸ್ತ್ರೀಯು ಎಲ್ಲೂ ಕಾಣಿಸದಿರಲು ಅರಣ್ಯದಲ್ಲಿದ್ದ ಸಿಂಹ, ಜಿಂಕೆ ಮೊದಲಾದವುಗಳ ಸೊಂಟ, ಕಣ್ಣು ಮೊದಲಾದವುಗಳನ್ನು ಅಂತಹ ಸೌಂದರ್ಯದಿಂದ ಕೂಡಿದ ಸ್ತ್ರೀಯೊಬ್ಬಳನ್ನು ನಿರ್ಮಾಣಮಾಡಿ, ಆಗ ಸಂತಾನ ಅಪೇಕ್ಷೆಯಿಂದ ತಪಸ್ಸು ಮಾಡುತ್ತಿದ್ದ ವಿದರ್ಭರಾಜನಿಗೆ ಕೊಟ್ಟುಬಿಟ್ಟನು. ಆ ಸುಂದರಸ್ತ್ರೀಯಲ್ಲಿ ಹುಟ್ಟಿದ ಕನ್ಯೆಯೇ

ಲೋಪಾಮುದ್ರೆ. ಈಕೆ ವಿವಾಹದ ವಯಸ್ಸಿನವಳಾಗಲು ಅಗಸ್ತ್ಯನು ಆಕೆಯನ್ನು ವಿವಾಹವಾಗಿ ಆಕೆಯೊಡನೆ ಗಂಗಾದ್ವಾರಕ್ಕೆ ಹೋಗಿ ತಪಸ್ಸಿಗಾರಂಭಿಸಿದನು. ಒಮ್ಮೆ ಋತುಸ್ನಾತಳಾಗಿದ್ದ ಪತ್ನಿಯೊಡನೆ ವಿಹರಿಸುವ ಮನಸ್ಸು ಅಗಸ್ತ್ಯನಿಗಾಗಲು ಇದನ್ನು ತಿಳಿದ ಆಕೆ ಮುನಿಯೊಡನೆ ರಾಜಸಂಪತ್ತನ್ನೂ, ವಿಲಾಸಸಾಮಗ್ರಿಗಳನ್ನೂ ಬಯಸಲು ಮುನಿಯು ಸಂಪತ್ತಿಗಾಗಿ ಶ್ರುತರ್ವನೆಂಬ ರಾಜನ ಬಳಿಗೂ, ಅಲ್ಲಿ ಧನ ದೊರೆಯದಿರಲು ಬ್ರಧ್ನಶ್ವರಾಜನ ಬಳಿಗೂ ಅಲ್ಲಿಯೂ ರಾಜಭಂಡಾರ ಬರಿದಾಗಿದ್ದುದರಿಂದ ಇಲ್ವಲ ಎಂಬ ರಾಕ್ಷಸನ ಬಳಿಗೆ ಹೋಗಿ ಹಣ ಪಡೆದನು. ನೋ -- ಇಲ್ವಲ. ಅಗಸ್ತ್ಯನು ಆ ರಾಕ್ಷಸರಾಜನಿಂದ ಪಡೆದ ಹಣದಲ್ಲಿ ಶ್ರುತರ್ವನಿಗೂ, ಬ್ರಧ್ನಶ್ವನಿಗೂ, ಇಕ್ಷ್ವಾಕುವಂಶದ ಪುರುಕುತ್ಸ ಎಂಬ ರಾಜನ ಮಗನಾದ ತ್ರಸದಸ್ಯು ರಾಯನಿಗೂ ಕೊಡಿಸಿ ತಾನು ಉಳಿದ ಸಂಪತ್ತುಗಳನ್ನು ಲೋಪಾಮುದ್ರೆಗೆ ತಂದುಕೊಟ್ಟು, ಆಕೆಯನ್ನು ಸಂತೋಷಗೊಳಿಸಿ ದೃಢದಸ್ಯು ಎಂಬ ತೇಜಸ್ವಿಯಾದ ಮಗನನ್ನು ಪಡೆದನು (ಮ. ವ).

ಬ್ರಹ್ಮ -- ೧. ಪರಮಾತ್ಮ. ೨. ವೇದಗಳು. ೩. ವಿಷ್ಣುವಿನ ನಾಭಿಕಮಲದಿಂದ ಹುಟ್ಟಿದವ. ಇವನಿಗೆ ಪಂಚಮುಖಗಳಿದ್ದು ಶಿವನಿಗಿಂತ ತಾನು ಶ್ರೇಷ್ಠನೆಂಬ ಗರ್ವವು ಪ್ರಾಪ್ತವಾಗಲು, ಶಿವನು ಈತನ ಒಂದು ತಲೆಯನ್ನು ಕತ್ತರಿಸಿ ಚತುರ್ಮುಖನನ್ನಾಗಿ ಮಾಡಿದನು. ಇದರಿಂದ ಶಿವನಿಗೆ ಬ್ರಹ್ಮಹತ್ಯಾದೋಷವು ಪ್ರಾಪ್ತವಾಗಲು ಬ್ರಹ್ಮ ಕಪಾಲವೂ ಅವನ ಕೈಯಿಂದ ಜಾರಿಬಿತ್ತು. ಶಿವನೇ ಬ್ರಹ್ಮನಿಗೆ ಪೂಜಾ ಉತ್ಸವಗಳು ಸಲ್ಲದಂತೆ ಶಾಪವಿತ್ತನು. ಬ್ರಹ್ಮನಿಗೆ ವಿಷ್ಣುವಿನ ನಾಭಿಕಮಲದಿಂದ ಜನಿಸುವಾಗ ಒಂದೇ ಮುಖವಿತ್ತು. ಅವನು ನಾಲ್ಕೂ ದಿಕ್ಕುಗಳನ್ನು ನೋಡಲನುಕೂಲವಾಗುವಂತೆ ನಾಲ್ಕು ಮುಖಗಳನ್ನು ಪಡೆದನು. ಈತನೇ ಅತ್ರಿಮುನಿಯ ಪತ್ನಿಯಾದ ಅನಸೂಯೆಯಲ್ಲಿ ಚಂದ್ರನಾಗಿ ಅವತರಿಸಿದನು. ನೋ -- ಅನಸೂಯ ಇವನಿಗೆ ಮರೀಚಿ, ಅಂಗಿರಸ್ಸು, ಅತ್ರಿ, ಪುಲಸ್ತ್ಯ, ಪುಲಹ, ಕ್ರತು ಎಂಬ ಆರು ಮಂದಿ ಮಾನಸಪುತ್ರರು. ಸನಂದನ, ಸನತ್ಕುಮಾರ ಮತ್ತು ಸನತ್ಸುಜಾತರು ಬ್ರಹ್ಮನ ಮಾನಸಪುತ್ರರೇ. ಬ್ರಹ್ಮನು ತ್ರಿಪುರದಹನದ ಕಾಲದಲ್ಲಿ ಶಿವನ ಸಾರಥಿಯಾಗಿದ್ದನು. ರಾಮಾಯಣವನ್ನು ಬರೆಯಲು ಈತನು ವಾಲ್ಮೀಕಿಯನ್ನು ಅನುಗ್ರಹಿಸಿದ್ದನು. ಭಾರತವನ್ನು ಬರೆದ ವ್ಯಾಸರನ್ನು ಹೊಗಳಿದ್ದನು. ಭಾಗವತವನ್ನು ನಾರಾಯಣನಿಂದ ಕೇಳಿದ್ದನು. ರಾವಣನ ಮಗನಾದ ಇಂದ್ರಜಿತುವು ದೇವೇಂದ್ರನನ್ನು ಸೆರೆಹಿಡಿದಾಗ ಬ್ರಹ್ಮನು ಆತನನ್ನು ಸೆರೆಯಿಂದ ಬಿಡಿಸಿದನು. ಭೃಗುಮುನಿಯೂ ಈತನ ಮಗನೇ. ನೋ -- ಪ್ರಜಾಪತಿ.

ಬ್ರಹ್ಮನ ಮುಖದಿಂದ ದೇವತೆಗಳೂ ವಕ್ಷದಿಂದ ಪಿತೃಗಳೂ ಕೆಳಗಿನ ಇಂದ್ರಿಯದಿಂದ ಮಾನವರೂ ಬೆನ್ನುಭಾಗದಿಂದ ರಾಕ್ಷಸರು ಮತ್ತು ಸಾಧ್ಯರೂ ಜನಿಸಿದರು (ಹರಿ). ಇವನು ತಾನೇ ಸೃಷ್ಟಿಸಿದ ಸರಸ್ವತಿಯನ್ನು ಕಾಮದಿಂದ ನೋಡಲು ಬಯಸಿದನೆಂದೂ, ಅವಳು ಹೆಣ್ಣು ಜಿಂಕೆಯಾಗಿ ಶಿವನ ಬಳಿ ರಕ್ಷಣೆ ಬೇಡಿದಳೆಂದೂ, ಶಿವನು ಆ ಜಿಂಕೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ರಕ್ಷಿಸಿ ಬ್ರಹ್ಮನನ್ನು ಬಾಣಗಳಿಂದ ಹೊಡೆದೋಡಿಸಿದನು. ಇದರಿಂದ ಶಿವನಿಗೆ ಮೃಗಧರ, ಮೃಗಾಲಯ ಎಂಬ ಹೆಸರೂ ಬಂದಿದೆ (ಮ. ಆ. ವ., ಶಾಂ., ಅನು., ಭಾಗ., ಲಿಂಗಪು., ಮತ್ಸ್ಯಪು., ರಾಮಾ. ಬಾಲ).

ಬ್ರಹ್ಮಚಾರಿ -- ೧. ಪ್ರಾಧೆಯ ಪುತ್ರ ಗಂಧರ್ವ. ೨. ಷಣ್ಮುಖ. ೩. ವೀರ್ಯವನ್ನು ತೇಜಸ್ಸನ್ನಾಗಿ ಮಾಡಿಕೊಳ್ಳುವ ಕಾಲ. ಇದಕ್ಕೆ ಉಜ್ವಲ ಶಿವಸಂಕಲ್ಪ ಸಾತ್ವಿಕ ಮಿತಾಹಾರ ವ್ಯಾಯಾಮ ಅತ್ಯಗತ್ಯ.

ಬ್ರಹ್ಮದತ್ತ -- ೧. ಪೂರುವಂಶೋತ್ಪನ್ನನಾದ ಕಾಂಪಿಲ್ಯವಾಸಿಯಾದ ಕ್ಷತ್ರಿಯನು. ಈತನ ಪತ್ನಿ ದೇವಲಮುನಿಯ ಪುತ್ರಿಯಾದ ಸನ್ನತಿ. ಈತನ ತಾಯಿ ಶುಕಮುನಿಯ ಪುತ್ರಿಯಾದ ಕೃತ್ವಿ (ಹರಿ., ಮತ್ಸ್ಯ. ಪು).ನೋ -- ಪಿತೃಪರ್ತಿ ೨.ಸಾಲ್ವದೇಶದ ರಾಜ. ಇವನು ಶಿಶುಪಾಲನ ಮಿತ್ರ. ನೋ -- ಸಾಲ್ವ.

ಬ್ರಹ್ಮಶಿರೋಸ್ತ್ರ (ಬ್ರಹ್ಮಾಸ್ತ್ರ) -- ಇದು ಮಹಾಸ್ತ್ರಗಳಲ್ಲಿ ಉನ್ನತವಾದುದು. ಅರ್ಜುನ ಮತ್ತು ಅಶ್ವತ್ಥಾಮರು ಈ ಅಸ್ತ್ರವನ್ನು ಪ್ರಯೋಗಿಸಿದರು. ಅರ್ಜುನನು ಈ ಅಸ್ತ್ರವನ್ನು ಉಪಸಂಹರಿಸಿದನು. ಜಿತೇಂದ್ರಿಯನಲ್ಲದ ಅಶ್ವತ್ಥಾಮನಿಗೆ ಉಪಸಂಹಾರ ಮಾಡಲು ಅಸಾಧ್ಯವಾಗಿ ಅದು ಉತ್ತರೆಯಗರ್ಭದ ಶಿಶುವನ್ನು ಹಿಂಸಿಸತೊಡಗಿತು. ಆಗ ಕೃಷ್ಣನು ತನ್ನ ಚಕ್ರಾಯುಧದಿಂದ ಆ ಅಸ್ತ್ರವನ್ನು ನಾಶಮಾಡಿ ಮಗುವನ್ನು ರಕ್ಷಿಸಿದನು. ನೋ -- ಪರೀಕ್ಷಿತ. ಸುಧನ್ವಾರ್ಜುನರು ಪರಸ್ಪರ ಬ್ರಹ್ಮಾಸ್ತ್ರವನ್ನು ಬಿಟ್ಟಿದ್ದರೂ ಇವೆರಡೂ ತಾಕಲಾಡಿ ಕೊನೆಗೆ ಶಾಂತವಾದವು. ಸೀತಾನ್ವೇಷಣಕ್ಕೆ ಹೊರಟ ಆಂಜನೇಯನನ್ನು ಇಂದ್ರಜಿತ್ತುವು ಈ ಮಹಾಸ್ತ್ರದಿಂದ ಬಂಧಿಸಿದ. ವಸಿಷ್ಠನೂ ಈ ಅಸ್ತ್ರದ ಬಲದಿಂದಲೇ ವಿಶ್ವಾಮಿತ್ರನನ್ನು ಗೆದ್ದನು (ಮ. ಆ., ದ್ರೋ., ಸೌ., ರಾಮಾ. ಸುಂ).

ಬ್ರಹ್ಮಸರ --ಒಂದು ತೀರ್ಥ. ಗಯನು ಇದರ ಬಳಿ ಯಜ್ಞಮಾಡಿದನು(ಮ.ವ).

ಬ್ರಹ್ಮಸಾವರ್ಣಿ --ಹತ್ತನೆಯ ಮನ್ವಂತರದ ಅಧಿಪತಿ. ಈ ಮನ್ವಂತರವು ಫಾಲ್ಗುಣ ಶುಕ್ಲಪಕ್ಷದ ಹುಣ್ಣಿಮೆಯ ದಿನ ಆರಂಭವಾಗುತ್ತದೆ. ಇವನ

ಕಾಲದಲ್ಲಿ ಸ್ವರ್ಗದಲ್ಲಿ ಶುಭುವೆಂಬ ಇಂದ್ರನೂ, ಇವನ ಸಹಾಯಕ್ಕೆ ವಿಷ್ವಕ್ಸೇನನೆಂಬ ವಿಷ್ಣುವೂ ಅವತರಿಸುವರು (ಭಾಗ).

ಬ್ರಹ್ಮಹತ್ಯೆ -- ಬ್ರಹ್ಮಹತ್ಯೆಯನ್ನು ಇಂದ್ರನೂ, ಪರೀಕ್ಷಿತನ ಮಗನಾದ ಜನಮೇಜಯನೂ, ವೈಶಂಪಾಯನ ಮುನಿಯೂ, ಯಾಜ್ಞವಲ್ಕ್ಯನೂ ಮಾಡಿದರು. ಇಂದ್ರನು ಈ ಪಾಪವನ್ನು ಪರ್ವತ, ವೃಕ್ಷ, ಭೂಮಿ, ನದಿ, ಸ್ತ್ರೀಯರಿಗೆ ಹಂಚಿಕೊಟ್ಟು ಪರಿಶುದ್ಧನಾದ. ಜನಮೇಜಯನು ಅಶ್ವಮೇಧದಿಂದ ಈ ಪಾಪವನ್ನು ನಿವಾರಿಸಿಕೊಂಡನು. ಶ್ರೀರಾಮನೂ ಈ ಪಾಪವನ್ನು ಅಶ್ವಮೇಧಯಾಗದಿಂದಲೇ ಕಳೆದುಕೊಂಡನು (ಮ. ಶಾಂ., ಅನು., ಉ., ಭಾಗ).

ಬ್ರಹ್ಮಾವರ್ತ -- ಸ್ವಾಯಂಭುವ ಮನುವಿನ ರಾಜಧಾನಿ. ಇದು ಸರಸ್ವತೀ ಮತ್ತು ದೃಷದ್ವತೀ ನದಿಗಳ ಮಧ್ಯದಲ್ಲಿತ್ತು. ಈ ದೇಶದ ಮುಖ್ಯ ಪಟ್ಟಣ ಬರ್ಹಿಷ್ಮತಿಯಾಗಿತ್ತು. ನೋ -- ಬರ್ಹಿಷ್ಮತಿ (ಮ. ವ).

ಬ್ರಾಹ್ಮಣ -- ೧. ಪ್ರಥಮವರ್ಣ. ಬ್ರಹ್ಮನ ಮುಖದಿಂದ ಉತ್ಪತ್ತಿಯಾದವರು ಅಥವಾ ಮುಖದ ಶಕ್ತಿಯಾದ ಮಾತು, ವಿದ್ಯೆ, ತಪಶ್ಶಕ್ತಿಯಿಂದ ಬದುಕಬಲ್ಲವರು. ಅವರೇ ಜಗತ್ತಿನ ನೆಮ್ಮದಿಗೆ ಮೂಲಕಾರಣರು. ಗಾಯತ್ರಿಯು ಇವರ ಪರಮಮಂತ್ರ. ೨. ವೇದವನ್ನು ಮಂತ್ರ ಮತ್ತು ಬ್ರಾಹ್ಮಣವೆಂದು ವಿಭಾಗಿಸಿರುವರು. ಪೂರ್ವಮೀಮಾಂಸಕರು ಈ ವಿಭಜನೆಯನ್ನಂಗೀಕರಿಸಿದ್ದರೂ, ಕರ್ಮದೃಷ್ಟಿಯಿಂದ ವೇದ ವಾಕ್ಯಗಳನ್ನು ವಿಧಿ, ಮಂತ್ರ, ನಾಮಧೇಯ, ನಿಷೇಧ, ಅರ್ಥವಾದವೆಂದು ಐದು ವಿಧವಾಗಿ ವಿಭಾಗಿಸಿರುವರು. ವೇದದ ಪ್ರತಿಯೊಂದು ಮಂತ್ರಕ್ಕೂ ವಿನಿಯೋಗವಿರುವುದರಿಂದ ಯಾವುದೂ ನಿರರ್ಥಕವಲ್ಲ. ವಿನಿಯೋಗವನ್ನು ತಿಳಿಯಬೇಕಾದರೆ ಬ್ರಾಹ್ಮಣಗಳು ಅವಶ್ಯಕ. ಬ್ರಾಹ್ಮಣಗಳು ಗದ್ಯರೂಪವಾಗಿವೆ. ಇವುಗಳ ಅರ್ಥವನ್ನು ವಿಶದೀಕರಿಸುವುದಕ್ಕಾಗಿ ಆರಣ್ಯಕ, ಉಪನಿಷತ್, ಶ್ರೌತಸೂತ್ರ, ಗೃಹ್ಯಸೂತ್ರ, ಧರ್ಮಸೂತ್ರ, ಧರ್ಮಶಾಸ್ತ್ರ, ಶಿಕ್ಷಾ, ಪ್ರಾತಿಶಾಖ್ಯ ಇತ್ಯಾದಿ ಗ್ರಂಥಗಳು ಹುಟ್ಟಿವೆ. ಹೀಗೆ ಪ್ರತಿಯೊಂದು ವೇದಕ್ಕೂ ಶಾಖಾನುಸಾರವಾಗಿ ಬ್ರಾಹ್ಮಣ ಮುಂತಾದ ಗ್ರಂಥಗಳಿವೆ.

ಋಗ್ವೇದಕ್ಕೆ ಐತರೇಯ, ಕೌಷೀತಕಿ, ಶಾಂಖಾಯನ (ಸಾಂಖ್ಯಾಯನ),ಶುಕ್ಲಯಜುರ್ವೇದಕ್ಕೆ ಶತಪಥ, ಕಾಣ್ವ, ಕೃಷ್ಣಯಜುರ್ವೇದಕ್ಕೆ ತೈತ್ತರೀಯ, ಸಾಮವೇದಕ್ಕೆ ಪಂಚವಿಂಶ, ಷಡ್ವಿಂಶಸಾಮವಿಧಾನ, ಆರ್ಷೇಯ, ಮಂತ್ರ ದೇವತಾಧ್ಯಾಯ, ವಂಶ,

ಸಂಹಿತೋಪನಿಷದ್, ಗೋಪಥ, ಜೈಮಿನೀಯ, ಜೈಮಿನೀಯೋಪನಿಷದ್ಬ್ರಾಹ್ಮಣ, ಆಪಯ(?) ಮೊದಲಾದ ಬ್ರಾಹ್ಮಣಗಳಿವೆ.

ಭ

ಭಗ -- ೧.ಏಕಾದಶರುದ್ರರಲ್ಲೊಬ್ಬ. ೨. ದ್ವಾದಶಾದಿತ್ಯರಲ್ಲೊಬ್ಬ. ಸ್ವಾಯಂಭುವ ಮನ್ವಂತರದಲ್ಲಿ ಈತನೇ ಪುಷ್ಯಮಾಸದ ಅಧಿಪತಿ. ದಾಕ್ಷಾಯಿಣಿಯು ದಕ್ಷನ ಯಜ್ಞ ಶಾಲೆಯಲ್ಲಿ ದೇಹ ಬಿಡಲು, ಇದನ್ನು ಕೇಳಿದ ಶಿವನು ಕೆರಳಿ ವೀರಭದ್ರನನ್ನು ಸೃಷ್ಟಿಸಿ ದಕ್ಷನನ್ನು ಶಿಕ್ಷಿಸಲು ಆತನ ಯಜ್ಞಶಾಲೆಗೆ ಕಳುಹಿಸಿದಾಗ ಆತನಿಗೆ ಸಹಾಯಕನಾಗಿ ಈತನು ವೀರಭದ್ರನಿಂದ ಕಣ್ಣನ್ನು ಕಳೆದುಕೊಂಡನು. ನೋ. -- ದಾಕ್ಷಾಯಣಿ (ಭಾಗ).

ಭಗದತ್ತ - ಭೂಮಿದೇವಿಯ ಮೊಮ್ಮಗ; ನರಕಾಸುರನ ಮಗ; ಈತನ ರಾಜಧಾನಿ ಪ್ರಾಗ್ಜ್ಯೋತಿಷಪುರ, ಈತನಿಗೆ ಕೃತಪ್ರಜ್ಞ ಮತ್ತು ವಜ್ರದತ್ತರೆಂಬ (ಯಜ್ಞದತ್ತ) ಇಬ್ಬರು ಮಕ್ಕಳು. ಸುಪ್ರತೀಕವೆಂಬ ಮಹಾಗಜವೂ ಇವನ ವಾಹನವಾಗಿತ್ತು. ರಾಜ ಸೂಯಯಾಗಕಾಲದಲ್ಲಿ ಉತ್ತರ ದಿಕ್ಕಿನ ವಿಜಯಯಾತ್ರೆ ಕೈಗೊಂಡ ಅರ್ಜುನನು ಕಾಮರೂಪದ ರಾಜಧಾನಿಯಾದ ಪ್ರಾಗ್ಜ್ಯೋತಿಷವನ್ನು ಮುತ್ತಿದನು. ಅಲ್ಲಿಯ ರಾಜನಾದ ಭಗದತ್ತನು ಎಂಟು ದಿನಗಳವರೆಗೆ ಅರ್ಜುನನೊಡನೆ ಹೋರಾಡಿ ಆತನ ಪರಾಕ್ರಮಕ್ಕೆ ಮೆಚ್ಚಿ ಕಪ್ಪ ಕೊಟ್ಟನು. ಕರ್ಣನು ದುರ್ಯೋಧನನು ಮಾಡಿದ ವೈಷ್ಣವಯಾಗದ ಪೂರ್ವದಲ್ಲಿ ದಿಗ್ವಿಜಯವನ್ನು ಮಾಡುವಾಗ ಪ್ರಾಗ್ಜ್ಯೋತಿಷಪುರಕ್ಕೆ ಹೋಗಿ ಈತನನ್ನು ಜಯಿಸಿದ್ದನು. ಭಾರತಯುದ್ಧದ ಹನ್ನೆರಡನೆಯ ದಿನ ಭಗದತ್ತನು ಸುಪ್ರತೀಕವನ್ನೇರಿ ಪಾಂಡವಸೇನೆಯನ್ನು ಹಣಿಯಹತ್ತಲು, ಭೀಮಾದಿಗಳೂ ಈತನೊಡನೆ ಸೆಣಸಲಾರದೆ ಹಿಂಜರಿದಾಗ ಅರ್ಜುನನು ವಜ್ರಾಸ್ತ್ರದಿಂದ ತ್ರಿಗರ್ತರನ್ನು ಸೀಳಿ ಭಗದತ್ತನ ಮುಂದೆ ನಿಂತು ಆತನನ್ನು ಕೆಣಕಿದನು. ಶ್ರೀಕೃಷ್ಣನು ಅರ್ಜುನನ ರಥವನ್ನೂ ಹಿಂದಕ್ಕೂ ಮುಂದಕ್ಕೂ ನಡೆಸಿ ಆ ಮಹಾಗಜವನ್ನು ಸೋಲಿಸಿದನು. ಆಗ ಭಗದತ್ತನು ಬಿಟ್ಟ ನಾರಾಯಣಾಸ್ತ್ರವನ್ನು ಶ್ರೀಕೃಷ್ಣನು ತನ್ನ ಕೊರಳಲ್ಲಿ ಮಾಲೆಯಂತೆ ಧರಿಸಿದನು. ಮುಂದೆ ಅರ್ಜುನನು ಹರಿತವಾದ ಬಾಣಗಳಿಂದ ಸುಪ್ರತೀಕವನ್ನು ಸೀಳಿ ಅರ್ಧಚಂದ್ರಾಕೃತಿಯಾದ ಬಾಣದಿಂದ ಭಗದತ್ತನ ಹೃದಯವನ್ನು ಭೇದಿಸಿ ಕೊಂದನು. ನಕುಲನಿಂದ ಈತನ ಮಗನಾದ ಕೃತಪ್ರಜ್ಞನ ಮರಣವಾಯಿತು. ಇನ್ನೊಬ್ಬ ಮಗನಾದ ವಜ್ರದತ್ತನು ಅಶ್ವಮೇಧದ ಕಾಲದಲ್ಲಿ ಅರ್ಜುನನಿಗೆ ಸೋತು ಕಪ್ಪವಿತ್ತನು (ಮ. ದ್ರೋ., ಆ., ಸ., ವ., ಉ., ಭೀ., ಕ., ಅಶ್ವ).

ಭಾಷ್ಕಲನೆಂಬ ಅಸುರಶ್ರೇಷ್ಠನೇ ಭಗದತ್ತನಾದನು (ಮ. ಆ). ರಾಜಸೂಯದ ವಿಜಯಯಾತ್ರೆಯಲ್ಲಿ ಇವನು ಅರ್ಜುನನೊಡನೆ ಎಂಟು ದಿನ ಯುದ್ಧಮಾಡಿದನು. ನೋ -- ಅರ್ಜುನ (ಮ. ಸ).

ಭಗವದ್ಗೀತೆ -- ಕುರುಕ್ಷೇತ್ರ ರಣರಂಗದಲ್ಲಿ ಅರ್ಜುನನು ತನ್ನವರನ್ನೇ ಕೊಲ್ಲುವ ಪ್ರಸಂಗ ಬಂದುದನ್ನು ನೋಡಿ ಅತ್ಯಂತ ಖಿನ್ನನಾಗಿ ಕಿಂಕರ್ತವ್ಯ ಮೂಢನಾದನು. ಅವನು ತನ್ನ ಧನುಷ್ಯಬಾಣಗಳನ್ನು ರಥದಲ್ಲಿ ಚೆಲ್ಲಿ ಬಿಟ್ಟು ವಿಚಾರಮಗ್ನನಾದನು. ಆಗ ಶ್ರೀಕೃಷ್ಣನು ಉಪನಿಷತ್ತುಗಳೆಂಬ ಹಸುಗಳಿಂದ ಕರೆದ ಹಾಲಾದ ಭಗವದ್ಗೀತೆಯನ್ನುಣ್ಣಿಸಿ ಆತನಿಗೆ ಕರ್ತವ್ಯಪಥವನ್ನು ತೋರಿಸಿದನು. ಅವನ ಹೃದಯದೌರ್ಬಲ್ಯವನ್ನು ಕಳೆದನು. ಆತ್ಮನಿಗೆ ಸಾವಿಲ್ಲ; ದೇಹಾದಿಗಳು ಎಂದಿದ್ದರೂ ನಶಿಸಿ ಹೋಗತಕ್ಕವುಗಳು. ಆದುದರಿಂದ ಅವಕ್ಕಾಗಿ ದುಃಖಿಸಬಾರದು. ಸ್ವಧರ್ಮ ಮತ್ತು ವ್ಯವಹಾರದೃಷ್ಟಿಯಿಂದ ನೋಡಿದರೂ ಯುದ್ಧ ಮಾಡಲೇಬೇಕು. ಸಮತ್ವಬುದ್ಧಿಯಿಂದ ಯುದ್ಧಮಾಡಿದರೆ ಪಾಪವಿಲ್ಲ. ಫಲದ ಬಯಕೆಯಿಂದಲೇ ಮನಸ್ಸಿನ ಹರಿದಾಟವು ಹೆಚ್ಚುವುದು. ಸಾಧಕರೂ ಕರ್ಮವನ್ನು ಬಿಡಬಾರದು. ಜ್ಞಾನಿಗೆ ಮಾತ್ರ ಕರ್ಮದ ನಿರ್ಬಂಧವಿಲ್ಲ. ಕರ್ಮವು ಈಶ್ವರಪ್ರೀತ್ಯರ್ಥವಾಗಿರಬೇಕುಕು. ಜ್ಞಾನಿಗೆ ಬಂಧವಿಲ್ಲ. ಮನೋನಿಗ್ರಹದ ಮಾರ್ಗವು ಕಷ್ಟಕರವಾದದ್ದು. ಓಂಕಾರದ ಉಪಾಸನೆಯ ವಿಚಾರ ಉತ್ತಮ. ವಿಶ್ವರೂಪದ ದರ್ಶನದಿಂದ ಅರ್ಜುನನ ಭಾವಪರಿವರ್ತನೆಯಾಯಿತು. ಸಗುಣೋಪಾಸನೆಗೂ ನಿರ್ಗುಣೋಪಾನೆಗೂ ವ್ಯತ್ಯಾಸವಿದೆ. ಕ್ಷೇತ್ರಜ್ಞನನ್ನು ತಿಳಿಯುವ ಸಾಧನವಿದೆ. ಸಂಸಾರವೃಕ್ಷವು ಸುಂದರವಾದದ್ದು. ದೈವೀಸಂಪತ್ತು ಮತ್ತು ಆಸುರೀಸಂಪತ್ತು ವಿಚಿತ್ರವಾದವುಗಳು. ತಪಸ್ಸಿನಲ್ಲಿ ಮೂರು ಬಗೆ ಇದೆ. ತ್ಯಾಗದಲ್ಲಿ ಮೂರು ವಿಧವಿದೆ. ಸ್ವಧರ್ಮಾನುಷ್ಠಾನದಿಂದ ಚಿತ್ತಶುದ್ಧಿಯಾಗುವುದು. ಅಕರ್ತ್ರಾತ್ಮ ಜ್ಞಾನಪ್ರಾಪ್ತಿ, ಅಂತರಂಗಸಾಧನ ಹೀಗೆ ಬ್ರಹ್ಮಾರ್ಪಣ ಬುದ್ಧಿಯಿಂದ ಮತ್ತು ಅನಾಸಕ್ತಭಾವದಿಂದ ಮಾಡಿದ ಹಠಯೋಗ, ರಾಜಯೋಗ, ಭಕ್ತಿಯೋಗ ಮತ್ತು ಜ್ಞಾನಯೋಗ ಇವುಗಳ ಸಾಧನೆಯು ಸಹ ಸಾಧಕನನ್ನು ದ್ರುತಗತಿಯಿಂದ ಸಿದ್ಧಿಯತ್ತ ಒಯ್ಯುವುದು - ಎಂಬುದು ಗೀತೆಯ ಸಿದ್ಧಾಂತ (ಮ. ಭೀ).

ಭಗವಂತನ ನಾಮನಿರ್ವಚನ - ಭಗವಂತನು ಸರ್ವಭೂತಗಳಿಗೆ ನಿವಾಸ ಸ್ಥಾನ. ಆ ಭೂತಗಳಲ್ಲಿ ತಾನು ಇರುವನು. ಎಲ್ಲ ದೇವತೆಗಳಿಗೆ ಆದಿಕಾರಣನಾದುದರಿಂದ ವಾಸುದೇವ. ಧರ್ಮಸ್ವಭಾವವುಳ್ಳವನಾದುದರಿಂದ ವೃಷ್ಣಿ. ಮೌನ - ಧ್ಯಾನಯೋಗದಿಂದ ತಿಳಿಯತಕ್ಕವನಾದುದರಿಂದ ಮಾಧವ. ಚತುರ್ವಿಂಶತಿ

ತತ್ತ್ವಗಳನ್ನು ತನ್ನಲ್ಲಿ ಅಡಗಿಸಿಕೊಂಡಿರುವುದರಿಂದಲೂ ಮಧು ಎಂಬ ರಾಕ್ಷಸನನ್ನು ಸಂಹರಿಸಿದುದರಿಂದಲೂ ಮಧುಸೂದನ. ನಿತ್ಯಾನಂದ ಸ್ವರೂಪನಾದುದರಿಂದ ಭೂವಾಚಕವಾದ ಕೃಷಿಶಬ್ದವೂ, ನಿರ್ವೃತಿವಾಚಕ ವಾದ ಶಬ್ದವು ಸೇರಿ ಕೃಷ್ಣ, ನಿತ್ಯವಾಗಿ ನಾಶರಹಿತವಾಗಿರುವ ಪುಂಡರೀಕದಲ್ಲಿ ವಾಸಮಾಡಿಕೊಂಡಿರುವುದರಿಂದ ಪುಂಡರೀಕಾಕ್ಷ. ದುಷ್ಟರನ್ನು ನಿಗ್ರಹಿಸಿ, ಶಿಷ್ಟರನ್ನು ಸಂರಕ್ಷಿಸುವವನಾದುದರಿಂದ ಜನಾರ್ದನ. ಸತ್ವಗುಣದಲ್ಲಿ ತಾನಿದ್ದು ತನ್ನನ್ನು ಸತ್ವಗುಣವು ಎಡೆಬಿಡದೆ ಇರುವುದರಿಂದ ಸಾತ್ವತನು. ಮಹಾಪುರುಷರ ಲಕ್ಷಣವಾದ ನೋಟವುಳ್ಳವನಾದುದರಿಂದ ವೃಷಭಾಕ್ಷ. ತಾಯಿಯ ಗರ್ಭದಲ್ಲಿ ಹುಟ್ಟದೆ ಇದ್ದುದರಿಂದ ಅಜ. ದಾನವರನ್ನು ನಿಗ್ರಹಿಸಿ ದೇವತೆಗಳಿಗೆ ಸುಖವನ್ನು ಕಲ್ಪಿಸುವವನಾದುದರಿಂದಲೂ, ಇಂದ್ರಿಯನಿಗ್ರಹವುಳ್ಳವನಾದುದರಿಂದಲೂ ದಾಮೋದರನು. ಹರ್ಷ, ಸುಖ ಮತ್ತು ಐಶ್ವರ್ಯದಿಂದ ಪ್ರಕಾಶಿಸುವವನಾದುದರಿಂದ ಹೃಷಿಕೇಶ. ಎರಡು ಬಾಹುಗಳಿಂದ ಭೂಮ್ಯಾಕಾಶಗಳನ್ನು ಧರಿಸಿರುವುದರಿಂದ ಮಹಾಬಾಹು. ಎಂದಿಗೂ ನಿಜಸ್ವರೂಪವು ಕ್ಷೀಣವಾಗದಿರುವುದರಿಂದ ಅಧೋಕ್ಷಜ. ಜೀವರಿಗೆ ಆವಾಸಸ್ಥಾನನಾದುದರಿಂದ ನಾರಾಯಣ. ಸಕಲ ಪ್ರಾಣಿಗಳ ಶರೀರದಲ್ಲಿಯೂ ಇರುವವನಾದುದರಿಂದ ನಾರಾಯಣ. ಸಕಲ ಪ್ರಾಣಿಗಳ ಶರೀರದಲ್ಲಿಯೂ ಇರುವವನಾದುದರಿಂದ ಪುರುಷೋತ್ತಮ. ಸದಾ ಸತ್ಪ್ರಪಂಚಗಳಿಗೆ ಕಾರಣನಾದುದರಿಂದ ಸರ್ವಜ್ಞ. ಸತ್ಯವು ತನ್ನಲ್ಲೂ, ತಾನು ಸತ್ಯದಲ್ಲೂ ಇರುವವನಾದುದರಿಂದ ಸತ್ಯ. ಮೂರು ಲೋಕಗಳೂ ತನ್ನನ್ನು ಆಶ್ರಯಿಸಿರುವುದರಿಂದ ವಿಷ್ಣು. ಜಯಶೀಲನಾದುದರಿಂದ ಜಿಷ್ಣು. ಯಾವಾಗಲೂ ಇರುವವನಾದುದರಿಂದ ಅನಂತ. ವೇದವೇದ್ಯ ನಾದುದರಿಂದಲೂ ಸೃಷ್ಟಿಕಾಲದಲ್ಲಿ ಸಮಸ್ತಭೂತಗಳಿಗೂ ಚೈತನ್ಯ ವನ್ನುಂಟುಮಾಡುವುದರಿಂದ ಗೋವಿಂದ (ಮ. ಉ).

ಭಗೀರಥ - ಇಕ್ಷ್ವಾಕುವಂಶದ ದಿಲೀಪನ ಮಗ. ಈತನ ಮಗಳು ಹಂಸಿ; ಅಳಿಯ ಕೌತ್ಸಮುನಿ ನೋ -- ಸಗರ. ಕಪಿಲಮುನಿಯ ಕೋಪದಿಂದ ಬೂದಿಯಾದ ಅರವತ್ತು ಸಾವಿರ ಮಂದಿ ಸಾಗರರ ಸದ್ಗತಿಗಾಗಿ ಗಂಗಾವತರಣವಾಯಿತು. ಭಗೀರಥನ ತಂದೆಯಾದ ದಿಲೀಪನು ಗಂಗಾವತರಣದ ಪ್ರಯತ್ನದಲ್ಲೇ ಸದ್ಗತಿಹೊಂದಲು ಭಗೀರಥನು ಗಂಗೆಯನ್ನು ಭೂತಲಕ್ಕೆ ತರಬೇಕೆಂದು ತಪಸ್ಸುಮಾಡುವುದಕ್ಕೋಸ್ಕರ ಹಿಮಾಲಯ ಪ್ರಾಂತಕ್ಕೆ ಹೋದನು. ಅಲ್ಲಿ ಆ ರಾಜನು ಕಂದಮೂಲಫಲಗಳನ್ನೂ ನೀರನ್ನೂ ಆಹಾರ ಮಾಡಿಕೊಂಡು ಗಂಗೆಯನ್ನು ಕುರಿತು ಒಂದು ದಿವ್ಯ ಸಹಸ್ರವರ್ಷ ತಪಸ್ಸು ಮಾಡಿಕೊಂಡಿದ್ದನು.

ಗಂಗೆಯು ಪ್ರತ್ಯಕ್ಷಳಾಗಿ ಭೂಮಿಗೆ ಬರಲು ಒಪ್ಪಿ ತನ್ನ ವೇಗವನ್ನು ತಡೆಯಲು ಮಹಾದೇವನನ್ನು ಪ್ರಾರ್ಥಿಸುವಂತೆ ಸೂಚಿಸಿದಳು. ಭಗೀರಥನು ಈ ಮಹಾಕಾರ್ಯಕ್ಕೆ ಶಿವನ ಒಪ್ಪಿಗೆಯನ್ನು ಪಡೆದನು. ಗಂಗೆಯು ಶಿವನ ಜಡೆಯಿಂದ ಕೆಳಗೆ ಹರಿದು ಅವರಿಗೆ ಸದ್ಗತಿಯನ್ನುಂಟುಮಾಡಿದಳು. ಹಿಂದೆ ಕಾಲೇಯರೆಂಬ ರಕ್ಕಸರ ನಾಶಕ್ಕಾಗಿ ಅಗಸ್ತ್ಯನು ಸಮುದ್ರವನ್ನು ಕುಡಿದು ಬತ್ತಿಸಿದ್ದನು. ಈ ಭಗೀರಥನು ತಂದ ಗಂಗೋದಕದಿಂದ ಸಮುದ್ರವು ತುಂಬಿತು.

ಗಂಗೋತ್ರಿಯು ಭಾಗೀರಥಿಯ ಬಲದಂಡೆಯ ಮೇಲಿದೆ. ಭಗೀರಥನು ಮಹಾದೇವನನ್ನು ಧ್ಯಾನಮಾಡಿದ ಕಲ್ಲುಬಂಡೆಯ ಮೇಲೆ ಗಂಗಾಮಂದಿರವಿದೆ. ಭಾಗೀರಥಿಯು ಸ್ವರ್ಗದಿಂದ ಭೂಮಿಗೆ ಇಳಿದು ಬಂದದ್ದು ಇಲ್ಲಿಯೇ. ಗಂಗೋತ್ರಿಯ ತುಸು ದೂರದಲ್ಲಿ ಕೇದಾರಗಂಗಾ ಮತ್ತು ಗಂಗಾಸಂಗಮವಿದೆ. ಇಲ್ಲಿಂದ ಒಂದು ಫರ್ಲಾಂಗ್ ಮುಂದೆ ಗೌರೀಕುಂಡದಲ್ಲಿ ಒಂದು ಫರ್ಲಾಂಗ್ ಎತ್ತರದಿಂದ ಗಂಗೆ ಕೆಳಗೆ ಹಾರುತ್ತಾಳೆ. ಗಂಗಾವತರಣವು ಮನುಷ್ಯಯತ್ನದ ದೊಡ್ಡ ವಿಜಯವು. ಹಿಮಾಲಯದಲ್ಲಿ ಎರಡು ದೊಡ್ಡ ಮತ್ತು ಎತ್ತರದ ಪರ್ವತದ ಸಾಲುಗಳಿರುತ್ತವೆ. ಇವುಗಳಲ್ಲಿ ಹಿಂದೂಸ್ಥಾನದ ಕಡೆಗಿದ್ದ ಪರ್ವತದ ಸಾಲು ಅತ್ಯಂತ ಎತ್ತರ. ಇದರಿಂದ ಹಿಮಾಲಯದಲ್ಲಿ ಹುಟ್ಟಿದ ನದಿಗಳೆಲ್ಲಾ ಉತ್ತರಕ್ಕೆ ಹರಿದವು. ಆರ್ಯರು ಹಿಂದೂಸ್ಥಾನಕ್ಕೆ ಪ್ರಥಮ ಬಂದಾಗ ಅವರಿಗೆ ಸಿಂಧು ಮತ್ತು ಬ್ರಹ್ಮಪುತ್ರಾನದಿಯ ದಡವಲ್ಲದೆ ವಸತಿಗೆ ಯೋಗ್ಯಸ್ಥಳವು ಬೇರೆಲ್ಲಿಯೂ ಕಾಣಿಸಲಿಲ್ಲ. ಈ ಎರಡು ನದಿಗಳ ನಡುವಣ ಪ್ರದೇಶವು ಫಲವತ್ತಾಗಿದ್ದರೂ ನೀರಾಶ್ರಯವಿರಲಿಲ್ಲ. ಆಗ ಈ ಪ್ರಾಂತದ ರಾಜನಾದ ಸಗರನ ಮಕ್ಕಳು ಆಗಾಗ ಬರುತ್ತಿದ್ದ ಬರಗಾಲದಿಂದ ಸತ್ತರು. ಮುಂದೆ ಅವರ ವಂಶದಲ್ಲಿ ಹುಟ್ಟಿದ ಭಗೀರಥನು ಹಿಮಾಲಯದಿಂದ ಉತ್ತರಕ್ಕೆ ಹರಿಯುತ್ತಿದ್ದ ಗಂಗೆಯನ್ನು ಹಿಂದೂಸ್ಥಾನಕ್ಕೆ ತರಲು ದೊಡ್ಡ ತಪಸ್ಸನ್ನೇ ಮಾಡಿದನು. ಅವನು ಬೆಟ್ಟಗಳನ್ನು ಕಡಿದು ಗಂಗೆಗೆ ಮಾರ್ಗಮಾಡಿ ಉತ್ತರ ಹಿಂದೂಸ್ಥಾನದ ಬಯಲಿಗೆ ತಂದನು. ಈ ನದಿಯಿಂದ ಆರ್ಯಾವರ್ತಕ್ಕೆ ಕಲ್ಯಾಣವಾಗಿ ಪುಣ್ಯಭೂಮಿಯಾಯಿತು. ಗಂಗೆಯು ಹರಿದು ಬರುವಲ್ಲೆಲ್ಲ ಲಕ್ಷ್ಯವಿಟ್ಟುನೋಡಿದರೆ ಅನೇಕ ಕಡೆ ಪರ್ವತವನ್ನು ಒಡೆದು ದಾರಿ ಮಾಡಿಕೊಟ್ಟದ್ದು ಸ್ಪಷ್ಟವಾಗಿ ಕಂಡುಬರುತ್ತದೆ. ಗಂಗೆಯನ್ನು ಕಂಡ ಆರ್ಯಾವರ್ತದ ಜನರೆಲ್ಲಾ ಅದಕ್ಕೆ ದೇವತ್ವವನ್ನು ಕಲ್ಪಿಸಿ ಭಗೀರಥನ ಸಾಹಸದ ದ್ಯೋತಕವಾಗಿ ಭಾಗೀರಥಿ ಎಂದು ಹೆಸರಿಟ್ಟರು. ಹಿಮಾಲಯದಲ್ಲಿ ಭಗೀರಥನು ತಪಸ್ಸು ಮಾಡಿದ ಶಿಲೆಯನ್ನು ಭಗೀರಥ ಶಿಲೆಯೆನ್ನುತ್ತಾರೆ.

ಪ್ರಯತ್ನದ ಕೊನೆಯಲ್ಲಿ ಪರಮಾತ್ಮನಿದ್ದಾನೆಂದು ಭಗೀರಥನು ಭಾರತೀಯರಿಗೆ ಬೋಧಿಸಿದ್ದಾನೆ. ಭಗೀರಥನ ಯಶಸ್ಸನ್ನು ತಿಳಿದ ಜಹ್ನುರಾಜನು ಹಿಮಾಲಯದ ಬೇರೊಂದು ಪ್ರವಾಹವನ್ನು ಭಾಗೀರಥಿಗೆ ಜೋಡಿಸಿದನು. ಅಂದಿನಿಂದ ಭಾಗೀರಥಿಯು ಜಾಹ್ನವಿಯಾದಳು ಮುಂದೆ ಅನೇಕರು ಇದರಂತೆ ಪ್ರಯತ್ನಮಾಡಿ ಚಿಕ್ಕದೊಡ್ಡ ಪ್ರವಾಹಗಳನ್ನು ಗಂಗೆಗೆ ಕೂಡಿಸಿ ಅದರ ಪ್ರವಾಹವನ್ನು ಬೆಳೆಸಿ ಅದನ್ನು ಅಮರನದಿ ಎನ್ನಿಸಿದರು. ಗಂಗಾ ನದಿಯಿಂದ ಮಾನವ ಜಾತಿಯ ಉದ್ಧಾರವಾಯಿತು. ನೋ -- ಜಹ್ನು (ರಾಮಾ. ಬಾಲ., ಮ. ಆ., ಸ., ವ., ವಿ., ಅನು., ದ್ರೋ., ಶಾಂ., ವಾಯುಪು., ಹರಿ).

ಭಂಗಕಾರ -- ೧. ಕ್ಷತ್ರಿಯ ;ಅವಿಕ್ಷಿತನ ಮಗ (ಮ. ಆ).೨. ಯಾದವನೊಬ್ಬ (ಮ. ಆ).

ಭಂಗಾಸ್ವನ (ಭಂಗಾಸ್ವನ)-- ರಾಜರ್ಷಿ. ಈತನಿಗೆ ಸ್ತ್ರೀತ್ವಪ್ರಾಪ್ತಿಯಾಯಿತು. ಇವನು ಯಜ್ಞಮಾಡಿ ನೂರು ಮಂದಿ ಮಕ್ಕಳನ್ನು ಪಡೆದನು. ಇಂದ್ರನಿಗೆ ಇವನ ಮೇಲೆ ಅಸೂಯೆ ಹುಟ್ಟಿ ಇವನು ಒಮ್ಮೆ ಕಾಡಿಗೆ ಹೋಗಿದ್ದಾಗ ಇವನಿಗೆ ಬಾಯಾರಿಕೆ ಹುಟ್ಟಿಸಿ, ನೀರು ಕುಡಿಯಲು ಒಂದು ಕೊಳದಲ್ಲಿಳಿಯುವಂತೆ ಮಾಡಿದನು. ಇವನು ನೀರು ಕುಡಿದು ಮೇಲೆ ಬರುವಾಗ ಸ್ತ್ರೀಯಾಗಿದ್ದ. ಈ ಸ್ತ್ರೀಯು ಒಬ್ಬ ಮುನಿಯನ್ನು ಮದುವೆಯಾಗಿ ಅನೇಕ ಮಕ್ಕಳನ್ನು ಪಡೆದಳು. ಇಂದ್ರನು ಭಂಗಾಸ್ವನರಾಜನು ಮೊದಲು ಪಡೆದ ಮಕ್ಕಳಿಗೂ, ಈ ಮುನಿಪುತ್ರರಿಗೂ ಕಲಹವುಂಟಾಗುವಂತೆ ಮಾಡಿದನು. ಅವರೆಲ್ಲ ಹೊಡೆದಾಡಿಕೊಂಡು ನಾಶವಾದರು. ಆಗ ಮುನಿಪತ್ನಿಯು ತನ್ನ ಮಕ್ಕಳ ಮರಣಕ್ಕಾಗಿ ಗೋಳಿಡುತ್ತಿರಲು ಇಂದ್ರನು ಬ್ರಾಹ್ಮಣರೂಪದಿಂದ ಅಲ್ಲಿಗೆ ಬಂದು ದುಃಖದ ಕಾರಣವನ್ನು ಕೇಳಿದನು. ಸ್ತ್ರೀಯು ಆತನೊಡನೆ ತನ್ನ ಮಕ್ಕಳನ್ನು ಬದುಕಿಸುವಂತೆ ಕೇಳಿದಳು. ಬ್ರಾಹ್ಮಣನು ಯಾವ ಮಕ್ಕಳನ್ನು ಬದುಕಿಸಲಿ? ಎಂದಾಗ 'ಗಂಡಸರಿಗಿಂತ ಸ್ತ್ರೀಗೇ ಮಕ್ಕಳ ಮೇಲೆ ಮಮತೆ ಹೆಚ್ಚು. ನಾನು ಸ್ತ್ರೀಯಿದ್ದಾಗ ಪಡೆದ ಮಕ್ಕಳನ್ನೇ ಅನುಗ್ರಹಿಸು' ಎನ್ನಲು ಇಂದ್ರನು ಪ್ರತ್ಯಕ್ಷವಾಗಿ ಇತ್ತಂಡದ ಮಕ್ಕಳನ್ನು ಬದುಕಿಸಿ ಸ್ತ್ರೀಗೆ ಪುರುಷತ್ವವನ್ನು ಅನುಗ್ರಹಿಸಿದನು. ಆದರೆ ಆಕೆ ಸ್ತ್ರೀಯಾಗಿಯೇ ಬಾಳುವಲ್ಲಿ ಸುಖವೆಂದು ಸ್ತ್ರೀಯಾಗಿಯೇ ಇದ್ದಳು (ಮ. ಅನು).

ಭಂಡಾಸುರ -- ಮನ್ಮಥನ ದಹನವಾದ ಮೇಲೆ ಆ ಬೂದಿಯಿಂದ ಚಿತ್ರಕರ್ಮನೆಂಬ ಗಣೇಶ್ವರನು ಒಂದು ಪುರುಷಾಕೃತಿಯನ್ನು ಮಾಡಿದನು. ಧ್ಯಾನದಿಂದ ಕಣ್ಣು ತೆರೆದ ಶಿವನು ಇದನ್ನು ಕಂಡೊಡನೆಯೇ ಅದಕ್ಕೆ ಜೀವ ಬಂದು ಸುಂದರ ತರುಣನಾಗಿ ಶಿವನನ್ನು ಪ್ರಾರ್ಥಿಸಲು ಆತನು ವರ ಕೇಳುವಂತೆ ಹೇಳಿದನು. ಈ

ತರುಣನು 'ಪ್ರಭೋ, ನನ್ನೊಡನೆ ಹೋರಾಡುವವನ ಅರ್ಧಬಲವು ನನ್ನನ್ನೆ ಸೇರಬೇಕು. ಯಾವ ಶಸ್ತ್ರಾಸ್ತ್ರಗಳಿಂದಲೂ ನನಗೆ ನೋವಾಗಬಾರದು' ಎಂದು ವರ ಕೇಳಲು ಶಿವನು 'ಹಾಗೇ ಆಗಲಿ. ನಿನ್ನ ರಾಜ್ಯಭಾರವು ಅರುವತ್ತು ಸಾವಿರ ವರ್ಷ ನಡೆಯಲಿ' ಎಂದು ಅದೃಶ್ಯನಾದನು. ಪರಶಿವನ ನಡತೆಯನ್ನು ನೋಡಿದ ಬ್ರಹ್ಮನು 'ಭಂಡ್ ಭಂಡ್' (ಭಂಡ = ನಿರ್ಲಜ್ಜ) ಎಂದು ಹೇಳಿದನು. ಆದುದರಿಂದ ಆ ಪುರುಷನು ಭಂಡನೆಂದು ಪ್ರಸಿದ್ಧನಾದನು. ಇವನು ರುದ್ರನ ಕೋಪಾನಲದಿಂದ ಹುಟ್ಟಿದುದರಿಂದ ರೌದ್ರಸ್ವಭಾವವುಳ್ಳವನಾಗಿ ದಾನವನಾದನು. ಇವನು ಮಯನಿಂದ ಕಟ್ಟಿಸಲ್ಪಟ್ಟ ಶೋಣಿತಪುರದಲ್ಲಿ ರಾಜ್ಯವಾಳುತ್ತ ದೇವತೆಗಳನ್ನು ತನ್ನ ಹಿಡಿತಕ್ಕೆ ತಂದುಕೊಂಡನು. ಇವನಿಗೆ ಸಮ್ಮೋಹಿನಿ, ಕುಮುದಿನಿ, ಚಿತ್ರಾಂಗಿ, ಸುಂದರಿಯರೆಂಬ ನಾಲ್ವರು ತರುಣಿಯರು ಪತ್ನಿಯರಾಗಿದ್ದರು. ಇವನೂ, ಇವನ ಅನುಯಾಯಿಗಳೂ ಲೋಕಕಂಟಕರಾದಾಗ ವಿಷ್ಣುವು ಮೋಹಿನಿಯ ವೇಷದಿಂದ ಭಂಡಾಸುರನ ಶಕ್ತಿಯನ್ನು ಕಡಿಮೆಮಾಡಿದನು. ಇತ್ತ ನಾರದನ ಉಪದೇಶದಂತೆ ಇಂದ್ರನು ಸಮಸ್ತ ದೇವತೆಗಳೊಂದಿಗೆ ಹಿಮಗಿರಿಯ ತಪ್ಪಲಿಗೆ ಬಂದು ಭಾಗೀರಥಿಯ ತೀರದಲ್ಲಿ ಪರಾಶಕ್ತಿಯ ಪೂಜೆಯನ್ನು ಯಾಗ ವಿಧಾನದಿಂದ ಮಾಡಿದನು. ಆ ಯಜ್ಞಕುಂಡದಿಂದ ಪರಮ ತೇಜಃಪುಂಜವೂ, ಅನುಪಮವೂ ಆದ ಒಂದು ಚಕ್ರಾಕಾರವು ಉದ್ಭವಿಸಿತು. ಆ ಚಕ್ರದ ಮಧ್ಯದಲ್ಲಿ ತೇಜಸ್ವಿಯೂ, ಸರ್ವಾಯುಧಗಳನ್ನು ಧರಿಸಿದ್ದ ಮಹಾದೇವಿಯು ಅವತರಿಸಿದಳು. ಈ ದೇವಿಯೇ ಭಂಡಾಸುರನನ್ನೂ, ಆವರ ಪರಿವಾರವನ್ನೂ, ಶೋಣಿತಪುರವನ್ನೂ ನಾಶ ಮಾಡಿದಳು. ನೋ --ಲಲಿತಾದೇವಿ.

ಭದ್ರ -- ಚೈದ್ಯ : ಇವನು ಕರ್ಣನಿಂದ ಹತನಾದನು (ಮ. ಕ).

ಭದ್ರಮನಾ -- ಕ್ರೋಧೆಯ ಮಗಳು ;ಈಕೆಯ ಮಗ ಐರಾವತನೆಂಬ ನಾಗ (ಭಾಗ).

ಭದ್ರವಟ -- ಕೈಲಾಸ ಪರ್ವತದಲ್ಲಿದ್ದ ಒಂದು ವಟವೃಕ್ಷ (ಮ. ವ).

ಭದ್ರವತಿ -- ಅರ್ಜುನನ ಮಗನಾದ ಅಭಿಮನ್ಯುವಿನ ಸೊಸೆ ; ಪರೀಕ್ಷಿತನ ಪತ್ನಿ. ಈಕೆಯ ಮಗ ಜನಮೇಜಯ (ಮ. ವ).

ಭದ್ರಾ -- ೧. ಚಂದ್ರನ ಮಗಳು ; ಉಚಥ್ಯನ ಪತ್ನಿ. ಈಕೆಯನ್ನು ವರುಣನು ಅಪಹರಿಸಿದನು. ನೋ -- ಉಚ್ಯಥ್ಯ. ಇದರಿಂದ ಕೋಪಗೊಂಡ ಉಚಥ್ಯ ಸಮುದ್ರವನ್ನು ಬತ್ತಿಸಿದನು. (ಮ. ಅನು). ೨. ಕುಬೇರನ ಪತ್ನಿ (ಮ. ಆ). ೩. ಪೂರುವಂಶದ ವ್ಯುಷಿತಾಶ್ವನ ಪತ್ನಿ. ಈಕೆಯ ತಂದೆ ಕಕ್ಷೀವಂತ. ಈಕೆ ಋತುಸ್ನಾನ ಮಾಡಿದ ಎಂಟು, ಹತ್ತು ಹದಿನಾಲ್ಕನೇ ದಿನ ಮಲಗಿ ಕೆಲವು

ಮಕ್ಕಳನ್ನು ಪಡೆದಳು. ನೋ -- ವೃಷಿತಾಶ್ವ ಸಾಲ, ಮದ್ರ ಮೊದಲಾದ ಏಳು ಮಂದಿ ಈಕೆ ಮಕ್ಕಳು (ಮ. ಆ.). ೪. ವಸುದೇವನ ಪತ್ನಿ. ನೋ -- ವಸುದೇವ. ಇವನ ಹದಿನಾಲ್ಕು ಮಂದಿ ಪತ್ನಿಯರಲ್ಲಿ ಈಕೆ ನಾಲ್ಕನೆಯವಳು. ಇವಳು ಪುರುರಾಜನ ಪುತ್ರಿ ; ರೋಹಿಣಿ, ಇಂದಿರಾ, ವೈಶಾಖಿ, ಸುನಾಮ್ನಿ ಎಂಬ ನಾಲ್ವರು ಈಕೆಯ ಸಹೋದರರು (ಮ. ಮೌ. ಭಾಗ., ಹರಿ). ೫. ಶ್ರೀಕೃಷ್ಣನ ಒಬ್ಬಳು ಪತ್ನಿ ; ಈಕೆ ಕೇಕಯ ದೇಶದ ರಾಜ ಧೃಷ್ಟಕೇತುವಿನ ಮಗಳು. ಈಕೆಯ ತಾಯಿ ಶ್ರುತಕೀರ್ತಿ. ನೋ -- ಶ್ರುತಕೀರ್ತಿ. ಈಕೆ ಶ್ರೀಕೃಷ್ಣನ ಒಬ್ಬ ಸೋದರತ್ತೆ. ಈಕೆಗೆ ಸಂಗ್ರಾಮಜಿತ್, ಬೃಹತ್ಸೇನ, ಶೂರ, ಪ್ರಹರಣ, ಅರಿಜಿತ್, ಜಯ, ಸುಭದ್ರ, ವಾಮ, ಆಯು, ಸತ್ಯಕರೆಂಬ ಹತ್ತು ಮಂದಿ ಗಂಡು ಮಕ್ಕಳೂ ಒಬ್ಬಳು ಪುತ್ರಿಯೂ ಇದ್ದಳು. ನೋ -- ಕೃಷ್ಣ. ಈಕೆಯ ಸ್ವಯಂವರಕಾಲದಲ್ಲಿ ಈಕೆಯ ಸಹೋದರರೇ ಶ್ರೀಕೃಷ್ಣನ ವಿರೋಧಿಗಳಾಗಿದ್ದರೂ, ಬಲಾತ್ಕಾರದಿಂದ ಇವಳನ್ನು ದ್ವಾರಕೆಗೆ ಸಾಗಿಸಿದನು (ಭಾಗ., ವಿಷ್ಣುಪು).

ಭದ್ರಾಯು -- ನೋ -- ಮಂದ.

ಭದ್ರಾವತಿ - ಯೌವನಾಶ್ವರಾಜನ ರಾಜಧಾನಿ. ಭೀಮನು ಅಶ್ವಮೇಧದ ಕುದುರೆಯನ್ನು ತರುವುದಕ್ಕಾಗಿ ಇಲ್ಲಿಗೆ ಬಂದಿದ್ದನು. ಇದು ಭದ್ರಾನದಿಯ ದಡದ ಮೇಲಿದೆ. ನೋ -- ಯೌವನಾಶ್ವ (ಜೈ. ಭಾ).

ಭದ್ರಾಶ್ವ -- ೧. ಒಂದು ಖಂಡ (ಮ. ಭೀ). ನೋ -- ಅಗ್ನೀಧ್ರ ಅಗ್ನೀಧ್ರರಾಜನಿಗೆ ಪೂರ್ವ ಚಿತ್ತಿಯಲ್ಲಿ ಹುಟ್ಟಿದ ಒಬ್ಬ ಮಗ. ೨. ಕುವಲಾಶ್ವನ ಮಗ. ನೋ -- ಕುವಲಾಶ್ವ (ಮ. ವ). ಈತನಿಗೆ ದೃಢಾಶ್ವ, ಕಪಿಲಾಶ್ವರೆಂಬ ಸಹೋದರರಿದ್ದರು.

ಭರಣಿ -- ದಕ್ಷನ ಮಗಳು; ಚಂದ್ರನ ಪತ್ನಿ ಒಂದು ನಕ್ಷತ್ರ (ಮ. ಆ., ವಿಷ್ಣುಪು).

ಭರತ -- ೧. ಶಂಯು ಎಂಬ ಅಗ್ನಿಯ ಎರಡನೇ ಮಗ; ಅಗ್ನಿವಿಶೇಷ (ಮ. ವ). ೨. ಚಂದ್ರವಂಶದ ದುಷ್ಯಂತನ ಮಗ; ಈತನ ತಾಯಿ ಶಕುಂತಳೆ. ಈತನಿಗೆ ವಿದರ್ಭ ರಾಜಪುತ್ರಿಯರಾದ ತಾಸು, ಸುಂದೆ ಮತ್ತು ಮುಖ್ಯೆ ಎಂಬ ಮೂವರು ಹೆಂಡಿರು. ದೀರ್ಘತಮಮುನಿಯು ಈತನ ಪುರೋಹಿತ. ಇವನು ಗಂಗಾತೀರದಲ್ಲೂ ಯಮುನಾತೀರದಲ್ಲೂ ಹಲವು ಅಶ್ವಮೇಧಗಳನ್ನು ಮಾಡಿದನು. ಇದರಿಂದ ಇವನ ಮೂವರು ಪತ್ನಿಯರು ಮಕ್ಕಳನ್ನು ಹೆತ್ತರೂ, ಒಂದು ಮಗುವೂ ಭರತನ ಹೋಲಿಕೆಯದಾಗಿರಲಿಲ್ಲ. ಇದರಿಂದ ರಾಣಿಯರೆಲ್ಲ ತಮ್ಮ ತಮ್ಮ ಮಕ್ಕಳನ್ನು ಕೊಂದರು. ಇದರಿಂದ ರಾಜ ವಂಶವೇ ಅಂತ್ಯವಾಗುವ ಪರಿಸ್ಥಿತಿಯೊದಗಲು ದೇವತೆಗಳು ರಾಜನಿಗೆ ಭರದ್ವಾಜನೆಂಬ ಬಾಲಕನನ್ನು ಸಾಕಲು ಕೊಟ್ಟರು. ಈತನನ್ನೇ ರಾಜನು ವಿತಥ ಅಥವಾ

ಭುಮನ್ಯು ಎಂಬ ಹೆಸರಿನಿಂದ ಪುತ್ರನನ್ನಾಗಿ ಸ್ವೀಕರಿಸಿದ (ಭಾಗ). ನೋ -- ದುಷ್ಯಂತ, ಶಕುಂತಳೆ. ದುಷ್ಯಂತರಾಜನು ಕಣ್ವಾಶ್ರಮಕ್ಕೆ ಹೋದಾಗ ಆಕೆಯನ್ನು ನೋಡಿ ಗಾಂಧರ್ವವಿವಾಹ ಮೂಲಕ ಅವಳಲ್ಲಿ ಗರ್ಭಾಧಾನ ಮಾಡಿ ತನ್ನ ಪಟ್ಟಣಕ್ಕೆ ಹೊರಟುಹೋದನು. ಇತ್ತ ಶಕುಂತಲೆ ಪುತ್ರನನ್ನು ಹೆತ್ತು ಕೆಲವು ವರ್ಷ ದಾಟಿದರೂ ದುಷ್ಯಂತನು ಈಕೆಯನ್ನು ಕರೆಸದುದರಿಂದ ಕಣ್ವನು ಶಕುಂತಳೆಯನ್ನು ತನ್ನ ಶಿಷ್ಯರೊಂದಿಗೆ ರಾಜನ ಆಸ್ಥಾನಕ್ಕೆ ಕಳುಹಿಸಲು ರಾಜನು ಈ ತಾಯಿಮಗನನ್ನು ಸ್ವೀಕರಿಸಲು ಅನುಮಾನಿಸುತ್ತಿರುವಾಗ ಆಕಾಶವಾಣಿಯು - ' ಶಕುಂತಲೆಯು ನಿನ್ನ ಪತ್ನಿ ; ಈ ಬಾಲಕನು ನಿನ್ನ ಮಗನು' ಎಂದು ನುಡಿಯಲು ರಾಜನು ಅವರನ್ನು ಸ್ವೀಕರಿಸಿದನು. ಈ ಮಗುವೇ ಭರತನು. ಭರತನಿಗೆ ಮೂವರು ಪತ್ನಿಯರಲ್ಲಿ ಒಂಬತ್ತು ಮಂದಿ ಮಕ್ಕಳಾದರು. ಇವರೆಲ್ಲ ತಂದೆಯ ಗುಣರೂಪಗಳಿಗೆ ಪ್ರತಿಕೂಲರಾದುದರಿಂದ ತಮಗೆ ವ್ಯಭಿಚಾರದೋಷದ ಅಪವಾದ ಬಂದೀತೆಂಬ ಭಯದಿಂದ ಆ ಸ್ತ್ರೀಯರು ತಮ್ಮ ಮಕ್ಕಳನ್ನು ಕೊಂದುಬಿಟ್ಟರು. ಮುಂದೆ ಬೃಹಸ್ಪತಿಯ ವೀರ್ಯದಿಂದ ಉಚಥ್ಯನ ಪತ್ನಿಯಾದ ಮಮತೆಯಲ್ಲಿ ಹುಟ್ಟಿದ ಭರದ್ವಾಜನೆಂಬ ಹೆಸರುಳ್ಳ ಬಾಲಕನನ್ನು ಮರುತ್ತುಗಳು ರಾಜನಿಗೆ ಕೊಟ್ಟರು ನೋ -- ಭರದ್ವಾಜ, ದೀರ್ಘತಮ (ವಿಷ್ಣುಪು).

ದುಷ್ಯಂತನಿಗೆ ಕೇಳುವಂತೆ ಅಶರೀರವಾಕ್ಕು 'ಈ ಬಾಲಕನನ್ನು ನೀನು ಭರಿಸು ' ಎಂದ ಆಕಾಶವಾಣಿಯ ಮಾತಿನಿಂದ ಈತನಿಗೆ ಭರತನೆಂದು ಹೆಸರಾಯಿತು (ಮ. ಆ).

ಭರತನಿಂದ ಭರತವಂಶಕ್ಕೆ ಆ ಹೆಸರು ಬಂತು (ಮ. ಆ., ಸಂ).೩. ದಶರಥನ ಮಗ. ಈತನ ತಾಯಿ ಕೈಕೆಯಿ (ಕೈಕೆ). ಪತ್ನಿಯು ಕುಶಧ್ವಜನ ಮಗಳಾದ ಮಾಂಡವಿ. ಇವನು ರಾಮನ ಅಪ್ಪಣೆಯಂತೆ ಗಂಧರ್ವದೇಶವನ್ನು ಜಯಿಸಿ ತಕ್ಷಶಿಲಾ ಮತ್ತು ಪುಷ್ಕಲಾವತ ಪಟ್ಟಣವನ್ನು ನಿರ್ಮಿಸಿ ತನ್ನ ಮಕ್ಕಳಾದ ತಕ್ಷ ಮತ್ತು ಪುಷ್ಕಲರಿಗೆ ಅಲ್ಲಿ ಪಟ್ಟ ಕಟ್ಟಿದನು. ನೋ -- ರಾಮ., ಗುಹ, ಕೈಕೆ (ರಾಮಾ, ಬಾಲ., ಅಯೋ., ರಾಮಾ. ಉತ್ತರ). ವಿಶ್ವಾಮಿತ್ರ ಮತ್ತು ಜಮದಗ್ನಿಗಳು ಈ ಜನರ ಪಕ್ಷದವರು. ಇವರಿಗೂ ಇಕ್ಷ್ವಾಕು ಜನರಿಗೂ ಯುದ್ಧವಾಗಿ ಭರತನ ಜನರು ಸೋಲುವಂತಾಗಲು ಇಂದ್ರನ ಸಹಾಯದಿಂದ ಗೆದ್ದರು (ಋ.). ೫.ಋಷಭದೇವರು ಈತನ ತಂದೆ; ಜಯಂತಿಯು ಈತನ ತಾಯಿ. ಇವನಿಗೆ ಪಂಚಜನಿಯೆಂಬ ಹೆಂಡತಿಯಲ್ಲಿ ಸುಮತಿ, ರಾಷ್ಟ್ರಭೃತ್, ಸುದರ್ಶನ, ಆವರಣ, ಧೂಮಕೇತುಗಳೆಂಬ ಐವರು ಮಕ್ಕಳು. ಇವನು ಪಾಲಿಸಿದ ದೇಶವೇ

ಅಜನಾಭವರ್ಷ ಅಥವಾ ಭರತಖಂಡವೆಂದು ಹೆಸರಾಯಿತು. (ವಿಷ್ಣುಪು., ಭಾಗ). ೬. ನಾಟ್ಯಶಾಸ್ತ್ರವನ್ನು ಬರೆದ ಮಹರ್ಷಿ.

ಭರತಖಂಡ -- ನೋ -- ಭರತ.

ಭರತವರ್ಷ -- ಅಗ್ನೀಧ್ರರಾಜನ ಮಗನಾದ ಅಜನಾಭನು ಪಾಲಿಸಿದ ದೇಶ. ಇದಕ್ಕೆ ಈಗ ಹಿಂದೂದೇಶವೆನ್ನುತ್ತಾರೆ. ಹಿಂದೆ ಭರತವರ್ಷವೆನ್ನುತ್ತಿದ್ದರು. ಇದು ಜಂಬೂ ದ್ವೀಪದ ಒಂಬತ್ತನೇ ಒಂದು ಭಾಗ ; ವಿಶಾಲವಾಗಿದೆ (ಮ. ಭೀ., ಮತ್ಸ್ಯಪು., ಲಿಂಗಪು). ವರ್ಷವೆಂದರೆ ಭೂಭಾಗ.

ಭರದ್ವಾಜ -- ೧. ಶಂಯು ಎಂಬ ಅಗ್ನಿಯ ಎರಡನೆಯ ಮಗ ; ಈತನ ಪತ್ನಿ ವೀರಾ; ಮಗ ವೀರ. ೨. ಉಚಥ್ಯನ ಪತ್ನಿಯಾದ ಮಮತೆಯಲ್ಲಿ ಬೃಹಸ್ಪತಿಯಿಂದ ಹುಟ್ಟಿದವನು. ನೋ -- ಬೃಹಸ್ಪತಿ (ಭಾಗ., ವಿಷ್ಣುಪು., ಮತ್ಸ್ಯಪು). ಇವನು ಗಂಗಾತೀರದಲ್ಲಿ ತಪಸ್ಸು ಮಾಡುತ್ತಿದ್ದಾಗ ಘೃತಾಚಿ ಎಂಬ ಅಪ್ಸರೆಯ ಸೌಂದರ್ಯಕ್ಕೆ ಮರುಳಾಗಿ ಪತನವಾದ ವೀರ್ಯವನ್ನು ದ್ರೋಣದಲ್ಲಿಟ್ಟು (ದೊನ್ನೆ)ರಕ್ಷಿಸಲಾಗಿ ಅಲ್ಲಿಂದ ಹುಟ್ಟಿ ಬಂದವನೇ ದ್ರೋಣ. (ದ್ವಿಜ = ಇಬ್ಬರಿಂದ ಹುಟ್ಟಿದವ, ಭರ = ಪೋಷಿಸಲ್ಪಟ್ಟವ). ಇಬ್ಬರಿಂದ ಪೋಷಿಸಲ್ಪಟ್ಟವ ಭರದ್ವಾಜ. ಬೃಹಸ್ಪತಿಯು ಮಮತೆಯೊಡನೆ ‘ ಎಲಾ ಮೂಢಬುದ್ಧಿಯವಳೇ, ದ್ವಾಜನಾದ ಇವನನ್ನು ಭರಿಸು’ ಎಂದು ಬೃಹಸ್ಪತಿಯೂ, ‘ ಬೃಹಸ್ಪತಿಯೇ, ದ್ವಾಜನಾದ ಇವಳನ್ನು ನಾನೊಬ್ಬಳೇ ಏಕೆ ಸಾಕಬೇಕು ನೀನೇ ಇವನನ್ನು ಸಾಕು’ ಎಂದು ಅವಳೂ ಈ ರೀತಿ ಪರಸ್ಪರವಾಗಿ ಹೇಳಿ ಯಾವ ಕಾರಣ ತಾಯಿ ತಂದೆಗಳಾದ ಬೃಹಸ್ಪತಿ ಮಮತೆಯರು ಹೊರಟುಹೋದರೋ ಆ ಕಾರಣದಿಂದ ಅವನು ಭರದ್ವಾಜನೆಂದು ಹೆಸರುಪಡೆದನು (ವಿಷ್ಣುಪು). ೩. ಒಬ್ಬ ಋಷಿ. ಇವನ ಮಗ ಯವಕ್ರೀತ. ಈತನ ಇನ್ನೊಬ್ಬ ಮಗ ಅಗ್ನಿವೇಶ್ಯ. ರೈಭ್ಯ ಮುನಿ ಕಲ್ಪಿಸಿದ ಕ್ಷುದ್ರದೇವತೆಯು ರೈಭ್ಯಮುನಿಯ ಸೊಸೆಯನ್ನು ಬಲಾತ್ಕಾರದಿಂದ ಕೆಡಿಸಿದ. ಯವಕ್ರೀತನನ್ನು ಬಡಿದು ಕೊಲ್ಲಲು ಭರದ್ವಾಜನು ರೈಭ್ಯನಿಗೂ ನಿನ್ನ ಹಿರಿಯ ಮಗನು ನಿನ್ನನ್ನು ಕೊಲ್ಲಲಿ ಎಂದು ಶಾಪಕೊಟ್ಟು ಅಗ್ನಿಪ್ರವೇಶಮಾಡಿ ದೇಹಬಿಟ್ಟನು. ಒಂದು ದಿನ ಪರಾವಸುವು ತನ್ನ ತಂದೆಯ ಮೃಗಚರ್ಮವನ್ನು ಹೊದ್ದುಕೊಂಡು ಅರಣ್ಯದಲ್ಲಿ ತಿರುಗುತ್ತಿರುವುದನನ್ನು ಕಂಡು ಒಂದು ಮೃಗವೆಂದು ಭಾವಿಸಿ ಹೊಡೆದು ಕೊಂದನು. ಆ ಕಾಲದಲ್ಲಿ ಪರಾವಸು ಮತ್ತು ಅರ್ವಾವಸುವೆಂಬ ರೈಭ್ಯನ ಇಬ್ಬರು ಮಕ್ಕಳು ಬೃಹದ್ಯುಮ್ನನೆಂಬ ರಾಜನ ಒಂದು ಯಾಗಕಾರ್ಯವನ್ನು ವಹಿಸಿಕೊಂಡಿದ್ದರು. ಅರ್ವಾವಸುವೊಬ್ಬನಿಂದ ಆ

ಕಾರ್ಯವು ನಡೆಯಲಾರದೆಂದು ತನಗೆ ಪ್ರಾಪ್ತವಾದ ಪಾಪವನ್ನು ಹೋಗಲಾಡಿಸಲು ಅಮಾವಸುವಿಗೆ ಹೇಳಿ ಪರಾವಸುವು ಸೂರ್ಯದೇವತಾಕವಾದ ಅಷ್ಟಾಕ್ಷರಮಂತ್ರವನ್ನು ಜಪಿಸಿ ಸೂರ್ಯನನ್ನು ಒಲಿಸಿಕೊಂಡು ಅಣ್ಣನ ಪಾಪವನ್ನು ಹೋಗಲಾಡಿಸಿದುದಲ್ಲದೆ ಭರದ್ವಾಜ ಮತ್ತು ರೈಭ್ಯರನ್ನು ಬದುಕಿಸಿಕೊಂಡನು. ಅಲ್ಲದೆ ತಾನು ರಚಿಸಿದ ಸೂರ್ಯದೇವತಾಕವಾದ ಕಾಠಕ ಬ್ರಾಹ್ಮಣವು ಪ್ರಚಾರಕ್ಕೆ ಬರುವಂತೆ ಅನುಗ್ರಹೀತನಾದನು. ಈತನಿಗೆ ಘೃತಾಚಿದರ್ಶನದಿಂದ ಜಾರಿದ ರೇತಸ್ಸಿನಿಂದ ಹುಟ್ಟಿದ ಮಗಳು ಶ್ರುತಾವತಿ. ಈಕೆ ಮಹಾಪತಿವ್ರತೆ. ೪. ನಾರೀತೀರ್ಥದ ಒಂದು ಕೊಳದ ಹೆಸರು. ನೋ -- ನಾರೀತೀರ್ಥ. ೫. ವಾಲ್ಮೀಕಿ ಮಹರ್ಷಿಯ ಶಿಷ್ಯ. ಶ್ರೀರಾಮಲಕ್ಷ್ಮಣರು ಅರಣ್ಯವಾಸಕ್ಕೆ ಹೋಗುವಾಗಲೂ, ಹಿಂದೆ ಬರುವಾಗಲೂ ಈ ಮಹರ್ಷಿಯ ಆಶ್ರಮವನ್ನು ಪ್ರವೇಶಿಸಿದರು. ಭರತನು ರಾಮದರ್ಶನಕ್ಕೆ ಹೊರಟಾಗ ಈತನ ಆಶ್ರಮವನ್ನು ಹೊಕ್ಕಿದ್ದನು. ಶ್ರೀರಾಮನಿಗೆ ವಾಸ್ತವ್ಯಕ್ಕೆ ಯೋಗ್ಯವಾದ ಸ್ಥಳ ಚಿತ್ರಕೂಟ ಪರ್ವತವೆಂದು ಸೂಚಿಸಿದ ಮುನಿ ಇವನೇ. ದುಷ್ಯಂತನ ಮಗನಾದ ಭರತನು ಮರುತ್ತುಗಳಿಂದ ಪಡೆದ ಮಗ. ನೋ - ಭರತ. ಇವನಿಗೆ ವಿತಥ ಮತ್ತು ಭುಮನ್ಯುವೆಂಬ ಹೆಸರುಗಳಿವೆ (ಭಾಗ, ವಿಷ್ಣುಪು., ಮತ್ಸ್ಯಪು., ಮ. ಆ., ಶಾಂ., ಅನು., ವ., ಶ., ರಾಮಾ., ಬಾಲ., ಅಯೋ., ಯುದ್ಧ).

ಭವನಾಶಿನಿ -- ಒಂದು ನದಿ. ನಂದ್ಯಾಲ ನಿಲ್ದಾಣದಿಂದ ಮೂವತ್ತನಾಲ್ಕು ಮೈಲು ದೂರದಲ್ಲಿ ಅಹೋಬಲಕ್ಷೇತ್ರವಿದೆ. ಇದರ ಪಕ್ಕದಲ್ಲಿ ಈ ಪುಣ್ಯನದಿಯು ಹರಿಯುತ್ತಿದೆ. ಇದೇ ಕ್ಷೇತ್ರವೇ ಹಿರಣ್ಯಕಶಿಪುವಿನ ರಾಜಧಾನಿಯಾಗಿತ್ತು. ಇಲ್ಲಿ ನರಸಿಂಹ ದೇವಾಲಯವಿದೆ. ಪ್ರಹ್ಲಾದನನ್ನು ರಕ್ಷಿಸಲು, ನರಸಿಂಹನು ಪ್ರಕಟವಾದದ್ದು ಇಲ್ಲಿಯೇ ಎನ್ನುತ್ತಾರೆ. ಈ ಕ್ಷೇತ್ರವು ರಾಮಾನುಜ ಸಂಪ್ರದಾಯದ ಆಚಾರ್ಯಪೀಠಗಳಲ್ಲಿ ಒಂದು ಮುಖ್ಯ ಸ್ಥಳವಾಗಿದೆ.

ಭಾಗಸ್ವರಿ (ಭಾಂಗಾಸುರಿ) -- ಋತುಪರ್ಣನ ಇನ್ನೊಂದು ಹೆಸರು. ಇವನು ದಶಾರ್ಣದೇಶಾಧಿಪತಿಯಾಗಿದ್ದನು. (ಮತ್ಸ್ಯಪು).

ಭಾಗೀರಥಿ -- ನೋ -- ಭಗೀರಥ. ಭಗೀರಥನು ಗಂಗೆಯನ್ನು ಭೂಮಿಗೆ ಇಳಿಸಿದವನಾದುದರಿಂದ ಆಕೆಗೆ ಭಾಗೀರಥಿ ಎಂಬ ಹೆಸರು ಸಲ್ಲುತ್ತದೆ. ನೋ --ಗಂಗಾ, ಮಂದಾಕಿನಿ.

ಭಾಂಗಸ್ವನ --ನೋ -- ಭಂಗಾಸ್ವನ (ಮ. ಅನು).

ಭಾಂಗಾಸುರಿ -- ನೋ -- ಭಾಗಸ್ವರಿ (ಮ., ಸ., ವ.,)

ಭಾಂಡೀರ --ಒಂದು ಆಲದ ಮರ. ದನ ಮೇಯಿಸುತ್ತಿದ್ದಾಗ ಶ್ರೀಕೃಷ್ಣನು ಈ ಮರದ ನೆರಳಿನಲ್ಲಿ ವಿಶ್ರಾಂತಿಪಡೆದು ಕುಣಿದಾಡಿದನು. (ಮ. ಸ).

ಭಾನು -- ೧. ಗಂಧರ್ವನೊಬ್ಬ ;ಈತನ ತಂದೆ ಕಶ್ಯಪ;ತಾಯಿ ಪ್ರಾಧೆ (ಮ. ಆ). ೨. ಅಗ್ನಿವಿಶೇಷ. ೩. ಸೂರ್ಯ. ಈತನ ತಂದೆ ಕಶ್ಯಪ ; ತಾಯಿ ಅದಿತಿ. ೪.ಸುಬಲನೆಂಬ ಗಾಂಧಾರದೇಶಾಧಿಪತಿಯ ಮಗ. ಶಕುನಿಯ ಸಹೋದರ. ಭೀಮನಿಂದ ಹದಿನಾಲ್ಕನೇ ದಿನದ ರಾತ್ರಿ ಯುದ್ಧದಲ್ಲಿ ಮಡಿದ (ಮ. ದ್ರೋ). ೫. ಪಾಂಚಾಲ ರಾಜಪುತ್ರ. ಪಾಂಡವಪಕ್ಷೀಯ ; ಹದಿನೇಳನೇ ದಿನದ ಯುದ್ಧದಲ್ಲಿ ಕರ್ಣನಿಂದ ಮಡಿದ (ಮ. ಕ).ಶಕ್ರದೇವ ಈತನ ಮಗ.

ಭಾನುದತ್ತ -- ಕ್ಷತ್ರಿಯ ;ಶಕುನಿಯ ಸಹೋದರ;ಭೀಮನಿಂದ ಹತನಾದ (ಮ. ದ್ರೋ).ನೋ --ಭಾನು.

ಭಾನುದೇವ --ಪಾಂಚಾಲದ ಕ್ಷತ್ರಿಯ, ಕರ್ಣನಿಂದ ಮಡಿದ. ಈತನ ಮಗ ಶಕ್ರದೇವ ನೋ --ಭಾನು (ಮ. ಕ).

ಭಾನುಮತಿ -- ೧. ಯದುವಂಶದ ಕೃತವೀರ್ಯನ ಮಗಳು. ;ಚಂದ್ರವಂಶದ ಅಹಂಯಾತಿಯು ಈಕೆಯ ಪತಿ. ಈಕೆಯ ಮಗ ಸಾರ್ವಭೌಮ (ಮ. ಆ).೨.ಅಂಗಿರಸನ ಮಗಳು. ೩. ದುರ್ಯೋಧನನ ಪತ್ನಿ. ಈಕೆ ಕಳಿಂಗರಾಜನ ಮಗಳು ೪. ಶ್ರೀರಾಮನ ತಾಯಿ ಕೌಸಲ್ಯೆ. ಈಕೆ ಭಾನುಮಂತನ ಮಗಳು (ಮ. ವ)೫.ಬೃಹಸ್ಪತ್ಯಾಚಾರ್ಯನ ಏಳು ಮಂದಿ ಪುತ್ರಿಯರಲ್ಲಿ ಒಬ್ಬಳು. ಈಕೆಯ ತಾಯಿ ಶುಭಾದೇವಿ (ಮ. ವ).

ಭಾನುಮಂತ --೧. ಕೋಸಲ ದೇಶದ ಅರಸು; ಕೌಸಲ್ಯೆಯ ತಂದೆ (ಮ. ವ). ೨.ಕಳಿಂಗದೇಶದ ರಾಜ. ಇವನು ದುರ್ಯೋಧನನ ಮಾವ; ಭಾನುಮತಿಯ ತಂದೆ ಇವನಿಗೆ ಚಿತ್ರಾಂಗದನೆಂಬ ಹೆಸರುಂಟು. ಇವನು ಭೀಮನ ಖಡ್ಗದಿಂದ ಯುದ್ಧದ ಮೊದಲನೆಯ ದಿನವೇ ಹತನಾದ (ಮ. ಭೀ).

ಭಾರತ --ಹಿಂದೆ ದೇವತೆಗಳು ತಕ್ಕಡಿ ಹಿಡಿದುಕೊಂಡು ಒಂದು ಕಡೆ ವೇದಗಳನ್ನೂ, ಇನ್ನೊಂದು ಕಡೆ ಭಾರತವನ್ನೂ ಇಟ್ಟು ತೂಗಿದರಂತೆ. ಆಗ ಭಾರತದ ತೂಕವೇ ಹೆಚ್ಚಾಯಿತು. ಇದರಿಂದ ಇದಕ್ಕೆ ಮಹಾಭಾರತವೆಂದು ಹೆಸರಾಯಿತು. ಬರೇ ಭಾರತದಲ್ಲಿ ಒಂದು ಲಕ್ಷಕ್ಕಿಂತ ಸ್ವಲ್ಪ ಕಡಿಮೆ ಶ್ಲೋಕಗಳಿದ್ದರೂ ಶ್ರೀಕೃಷ್ಣನ ಜೀವನಚರಿತ್ರೆಯನ್ನು ಸಂಪೂರ್ಣ ವಿವರಿಸುವ ಹರಿವಂಶವನ್ನು ಭಾರತದ

ಕೊನೆಯಲ್ಲಿ ಜೋಡಿಸಿದ್ದಾರೆ. ಭಾರತ ಮತ್ತು ಹರಿವಂಶದ ಶ್ಲೋಕಗಳು ಕೂಡಿ ಒಂದು ಲಕ್ಷಕ್ಕಿಂತ ಮಿಗುವುವು. ಭಾರತದಲ್ಲಿ ಮುಖ್ಯ ತಿರುಳು ಶ್ಲೋಕಗಳು ೨೪,೦೦೦ ಮಾತ್ರ. ಇದರಲ್ಲಿ ಇರುವ ವಿದುರನೀತಿ, ಸನಾತ್ಸುಜಾತನುಪದೇಶ, ಭಗವದ್ಗೀತೆ, ಭೀಷ್ಮನು ಹೇಳುವ ರಾಜಧರ್ಮ, ಆಪದ್ಧರ್ಮ, ಮೋಕ್ಷಧರ್ಮಗಳು ಧರ್ಮವಿಚಾರಗಳಲ್ಲಿ ಬಹಳ ಅಮೂಲ್ಯವಾದವುಗಳು.

ಭಾರತ -- ೧. ಹಿಂದೂ ದೇಶದ ಪ್ರಾಚೀನ ಕಾಲದ ಹೆಸರು. ೨. ಒಂದು ಲಕ್ಷ ಶ್ಲೋಕಗಳುಳ್ಳ ಮಹಾಭಾರತವೆಂಬ ಗ್ರಂಥ. ಇದನ್ನು ವೇದವ್ಯಾಸರು ಮೂರು ವರ್ಷಗಳಲ್ಲಿ ರಚಿಸಿದರು. ಇದಕ್ಕೆ ಪಂಚಮವೇದವೆಂಬ ಹೆಸರಿದೆ. ಇದರಲ್ಲಿ ಹದಿನೆಂಟು ಪರ್ವಗಳಿವೆ. ಪ್ರತಿಪರ್ವಗಳಲ್ಲೂ ತುಂಬ ಉಪಪರ್ವಗಳಿವೆ.

೧. **ಆದಿಪರ್ವ** --೧. ಅನುಕ್ರಮಣಿಕಾಪರ್ವ ೨. ಪರ್ವಸಂಗ್ರಹಪರ್ವ, ೩.ಪೌಷ್ಯಪರ್ವ, ೪. ಪೌಲೋಮಪರ್ವ, ೫. ಅಸ್ತೀಕಪರ್ವ, ೬.ಅಂಶಾವತರಣ ಪರ್ವ, ೭. ಸಂಭವಪರ್ವ, ೮. ಜತುಗೃಹಪರ್ವ, ೯. ಹಿಡಿಂಬವಧಪರ್ವ, ೧೦.ಬಕವಧಪರ್ವ, ೧೧. ಚೈತ್ರರಥಪರ್ವ, ೧೨. ಸ್ವಯಂವರಪರ್ವ, ೧೩.ವೈವಾಹಿಕ ಪರ್ವ, ೧೪. ವಿದುರಾಗಮನ ರಾಜ್ಯಲಾಭಪರ್ವ, ೧೫.ಅರ್ಜುನ ವನವಾಸ ಪರ್ವ, ೧೬. ಸುಭದ್ರಾಹರಣಪರ್ವ, ೧೭.ಹರಣಾಹರಣಪರ್ವ, ೧೮. ಖಾಂಡವದಹನ ಪರ್ವ, ೧೯.ಮಯದರ್ಶನಪರ್ವ. ಆದಿಪರ್ವದಲ್ಲಿ ೧೯ ಉಪಪರ್ವಗಳು, ಅಧ್ಯಾಯಗಳು ೨೬೨, ಶ್ಲೋಕಗಳು ೨೦,೮೮೯.

೨. **ಸಭಾಪರ್ವ** --೧. ಮಂತ್ರಪರ್ವ, ೨. ಜರಾಸಂಧವಧ ಪರ್ವ, ೩.ದಿಗ್ವಿಜಯ ಪರ್ವ, ೪. ರಾಜಸೂಯ ಪರ್ವ, ೫. ಅರ್ಘಾಹರಣ ಪರ್ವ, ೬,ಶಿಶುಪಾಲವಧ ಪರ್ವ, ೭. ದ್ಯೂತ ಪರ್ವ, ೮. ಅನುದ್ಯೂತ ಪರ್ವ. ಸಭಾ ಪರ್ವದಲ್ಲಿ ೭ ಉಪ ಪರ್ವಗಳು, ಅಧ್ಯಾಯಗಳು ೧೦೩, ಶ್ಲೋಕಗಳು ೪,೩೬೭.

೩. **ವನ ಪರ್ವ** --೧. ಕಿಮ್ಮೀರವಧ ಪರ್ವ, ೨. ಅರ್ಜುನಾಭಿಗಮನ ಪರ್ವ, ೩. ಕೈರಾತ ಪರ್ವ, ೪. ಇಂದ್ರಲೋಕಾಭಿಗಮನ ಪರ್ವ, ೫. ನಲೋಪಾಖ್ಯಾನ ಪರ್ವ, ೬. ತೀರ್ಥಯಾತ್ರಾ ಪರ್ವ ೭. ಜಟಾಸುರವಧ ಪರ್ವ, ೮.ಯಕ್ಷಯುದ್ಧ ಪರ್ವ, ೯. ನಿವಾತಕವಚಯುದ್ಧ ಪರ್ವ ೧೦. ಅಜಗರ ಪರ್ವ, ೧೧.ಮಾರ್ಕಂಡೇಯ ಸಮಸ್ಯಾ ಪರ್ವ, ೧೨. ದ್ರೌಪದೀಸತ್ಯಭಾಮಾಸಂವಾದ ಪರ್ವ ೧೩. ಘೋಷಯಾತ್ರ ಪರ್ವ, ೧೪. ಮೃಗಸ್ವಪ್ನೋದ್ಭವಪರ್ವ, ೧೫.ವ್ರೀಹಿದ್ರೌಣಿಕಪರ್ವ ೧೬. ದ್ರೌಪದೀಹರಣ ಪರ್ವ ೧೭,ಜಯದ್ರಥ ವಿಮೋಕ್ಷಣ ಪರ್ವ, ೧೮. ರಾಮೋಪಾಖ್ಯಾನ ಪರ್ವ, ೧೯.ಪತಿವ್ರತಾ

ಮಾಹಾತ್ಮ್ಯ ಪರ್ವ, ೨೦.ಕುಂಡಲಾಹರಣ ಪರ್ವ, ೨೧. ಆರಣೇಯ ಪರ್ವ. ವನಪರ್ವದಲ್ಲಿ ೨೧ ಉಪಪರ್ವಗಳು, ಅಧ್ಯಾಯಗಳು ೩೧೫, ಶ್ಲೋಕಗಳು ೧೨, ೪೭೬.

೪. **ವಿರಾಟಪರ್ವ** -- ೧. ಪಾಂಡವಪ್ರವೇಶ ಪರ್ವ, ೨. ಸಮಯಪಾಲನ ಪರ್ವ, ೩. ಕೀಚಕವಧ ಪರ್ವ, ೪. ಗೋಗ್ರಹಣ ಪರ್ವ, ೫. ವೈವಾಹಿಕ ಪರ್ವ. ವಿರಾಟಪರ್ವದಲ್ಲಿ ೫ ಉಪಪರ್ವಗಳು, ಅಧ್ಯಾಯಗಳು ೭೮, ಶ್ಲೋಕಗಳು ೩,೪೯೪.

೫. **ಉದ್ಯೋಗಪರ್ವ** -- ೧. ಸೇನೋದ್ಯೋಗ ಪರ್ವ, ೨. ಸಂಜಯಯಾನ ಪರ್ವ, ೩. ಪ್ರಜಾಗರ ಪರ್ವ, ೪. ಸನತ್ಸುಜಾತ ಪರ್ವ, ೫. ಯಾನಸಂಧಿ ಪರ್ವ, ೬. ಭಗವದ್ಯಾನ ಪರ್ವ, ೭. ಸೈನ್ಯನಿರ್ಯಾಣ ಪರ್ವ, ೮.ಉಲೂಕದೂತಾಗಮನ ಪರ್ವ, ೯. ರಥಾತಿರಥಸಂಖ್ಯಾನ ಪರ್ವ, ೧೦.ಅಂಬೋಪಾಖ್ಯಾನ ಪರ್ವ; ಉದ್ಯೋಗಪರ್ವದಲ್ಲಿ ೧೦ ಉಪಪರ್ವಗಳು, ಅಧ್ಯಾಯಗಳು ೧೯೬, ಶ್ಲೋಕಗಳು ೬, ೭೫೩.

೬. **ಭೀಷ್ಮಪರ್ವ** -- ೧. ಜಂಬೂಖಂಡನಿರ್ಮಾಣ ಪರ್ವ, ೨. ಭೂಮಿ ಪರ್ವ, ೩. ಭಗವದ್ಗೀತಾ ಪರ್ವ, ೪. ಭೀಷ್ಮವಧ ಪರ್ವ; ಭೀಷ್ಮ ಪರ್ವದಲ್ಲಿ ೪ ಉಪಪರ್ವಗಳು, ಅಧ್ಯಾಯಗಳು ೧೨೨, ಶ್ಲೋಕಗಳು ೫,೮೦೯.

೭. **ದ್ರೋಣಪರ್ವ** --೧. ದ್ರೋಣಾಭಿಷೇಕ ಪರ್ವ, ೨. ಸಂಶಪ್ತಕವಧ ಪರ್ವ, ೩. ಅಭಿಮನ್ಯುವಧ ಪರ್ವ, ೪. ಪ್ರತಿಜ್ಞಾ ಪರ್ವ, ೫. ಜಯದ್ರಥವಧ ಪರ್ವ, ೬. ಘಟೋತ್ಕಚವಧ ಪರ್ವ, ೭. ದ್ರೋಣವಧ ಪರ್ವ, ೮.ನಾರಾಯಣಾಸ್ತ್ರಮೋಕ್ಷ ಪರ್ವ. ದ್ರೋಣಪರ್ವದಲ್ಲಿ ೮ ಉಪಪರ್ವಗಳು. ಅಧ್ಯಾಯಗಳು ೨೦೩, ಶ್ಲೋಕಗಳು ೧೦,೦೧೨.

೮. **ಕರ್ಣಪರ್ವ**, ೧. ಕರ್ಣಪರ್ವ, ಕರ್ಣಪರ್ವದಲ್ಲಿ ೧ ಉಪ ಪರ್ವ, ಅಧ್ಯಾಯಗಳು ೧೦೧, ಶ್ಲೋಕಗಳು ೪,೯೭೫.

೯. **ಶಲ್ಯಪರ್ವ** -- ೧. ಶಲ್ಯವಧ ಪರ್ವ, ೨. ಹ್ರದಪ್ರವೇಶಪರ್ವ, ೩.ಗದಾಯುದ್ಧ ಪರ್ವ. ಶಲ್ಯಪರ್ವದಲ್ಲಿ ೩ ಉಪಪರ್ವಗಳು, ಅಧ್ಯಾಯಗಳು ೬೬, ಶ್ಲೋಕಗಳು ೩,೫೯೪.

೧೦. **ಸೌಪ್ತಿಕಪರ್ವ** --೧. ಸೌಪ್ತಿಕ ಪರ್ವ, ೨. ಐಷಿಕ ಪರ್ವ. ಸೌಪ್ತಿಕಪರ್ವದಲ್ಲಿ ೨ ಉಪಪರ್ವಗಳು, ಅಧ್ಯಾಯಗಳು ೧೮, ಶ್ಲೋಕಗಳು ೮೧೫.

೧೧. **ಸ್ತ್ರೀ ಪರ್ವ** -- ಜಲಪ್ರದಾನಿಕ ಪರ್ವ, ೨. ಸ್ತ್ರೀವಿಲಾಪ ಪರ್ವ, ೩.ಶ್ರಾದ್ಧ ಪರ್ವ, ಸ್ತ್ರೀಪರ್ವದಲ್ಲಿ ೩ ಉಪಪರ್ವಗಳು, ಅಧ್ಯಾಯಗಳು ೨೭,ಶ್ಲೋಕಗಳು ೮೦೭.

೧೨. **ಶಾಂತಿ ಪರ್ವ** -- ೧. ರಾಜಧರ್ಮ ಪರ್ವ, ೨. ಆಪದ್ಧರ್ಮ ಪರ್ವ, ೩. ಮೋಕ್ಷಧರ್ಮ ಪರ್ವ; ಶಾಂತಿಪರ್ವದಲ್ಲಿ ೩ ಉಪಪರ್ವಗಳು ಅಧ್ಯಾಯಗಳು ೩೭೫, ಶ್ಲೋಕಗಳು ೧೫೧೫೧.

೧೩. **ಅನುಶಾಸನ ಪರ್ವ** --೧. ದಾನಧರ್ಮ ಪರ್ವ, ೨. ಭೀಷ್ಮ ಸ್ವರ್ಗಾರೋಹಣ ಪರ್ವ. ಅನುಶಾಸನಪರ್ವದಲ್ಲಿ ೨ ಉಪಪರ್ವಗಳು, ಅಧ್ಯಾಯಗಳು ೨೭೪, ಶ್ಲೋಕಗಳು ೧೧,೯೪.

೧೪. **ಅಶ್ವಮೇಧಿಕ ಪರ್ವ** --೧. ಅಶ್ವಮೇಧಪರ್ವ, ೨. ಅನುಗೀತಾ ಪರ್ವ, ೩. ವೈಷ್ಣವಧರ್ಮ ಪರ್ವ. ಅಶ್ವಮೇಧಿಕಪರ್ವದಲ್ಲಿ ೩ ಉಪಪರ್ವಗಳು, ಅಧ್ಯಾಯಗಳು ೧೧೮, ಶ್ಲೋಕಗಳು ೪,೫೫೫.

೧೫. **ಆಶ್ರಮವಾಸಿಕ ಪರ್ವ** --೧. ಆಶ್ರಮವಾಸ ಪರ್ವ, ೨. ಪುತ್ರದರ್ಶನ ಪರ್ವ, ೩. ನಾರದಾಗಮನ ಪರ್ವ, ಆಶ್ರಮವಾಸಿಕಪರ್ವದಲ್ಲಿ ೩.ಉಪಪರ್ವಗಳು, ಅಧ್ಯಾಯಗಳು ೪೧, ಶ್ಲೋಕಗಳು ೧,೯೮.

೧೬. **ಮೌಸಲ ಪರ್ವ** -- ೧. ಮೌಸಲ ಪರ್ವ. ಮೌಸಲಪರ್ವದಲ್ಲಿ ೧ ಉಪ ಪರ್ವ, ಅಧ್ಯಾಯಗಳು ೯, ಶ್ಲೋಕಗಳು ೨೦೧.

೧೭. **ಮಹಾಪ್ರಸ್ಥಾನಿಕ ಪರ್ವ** -- ೧. ಮಹಾಪ್ರಸ್ಥಾನಿಕಪರ್ವ. ಮಹಾಪ್ರಸ್ಥಾನಿಕಪರ್ವದಲ್ಲಿ ೧ ಉಪಪರ್ವ, ಅಧ್ಯಾಯಗಳು ೩, ಶ್ಲೋಕಗಳು ೧೧೧.

೧೮. **ಸ್ವರ್ಗಾರೋಹಣ ಪರ್ವ** --೧. ಸ್ವರ್ಗಾರೋಹಣ ಪರ್ವ. ಸ್ವರ್ಗಾರೋಹಣ ಪರ್ವದಲ್ಲಿ ೧ ಉಪ ಪರ್ವ, ಅಧ್ಯಾಯಗಳು ೫, ಶ್ಲೋಕಗಳು ೨೩೨. ಒಟ್ಟು ಉಪಪರ್ವಗಳು ೯೮, ಅಧ್ಯಾಯಗಳು ೨,೩೧೨, ಶ್ಲೋಕಗಳು ೯೬,೬೪೫.

ಭಾರತಯುದ್ಧ --ಕ್ರಿ. ಪೂ ೧೦ ನೆಯ ಶತಮಾನಕ್ಕಿಂತ ಮೊದಲು ಈ ಯುದ್ಧವು ನಡೆಯಿತು (ಮೆಗ್ಡಾನಲ್). ಈ ಯುದ್ಧಾನಂತರ ಪಾಂಡವರು, ಸಾತ್ಯಕಿ, ಶ್ರೀಕೃಷ್ಣ, ಕೃಪ, ಕೃತವರ್ಮ, ಅಶ್ವತ್ಥಾಮರು ಮಾತ್ರ ಉಳಿದರು. ಈ ಯುದ್ಧದಲ್ಲಿ ಕೌರವನ ೧೧ ಅಕ್ಷೋಹಿಣಿ ಸೇನೆಗೆ ಕೃಪ, ದ್ರೋಣ, ಶಲ್ಯ, ಸೈಂಧವ, ಸುದಕ್ಷಿಣ, ಕೃತವರ್ಮ, ಅಶ್ವತ್ಥಾಮ, ಕರ್ಣ, ಶಕುನಿ, ಬಾಹ್ಲಿಕ ಮತ್ತು ಭೂರಿಶ್ರವಸ್ಸು ಎಂಬ ಹನ್ನೊಂದು ಮಂದಿ ಸೇನಾಪತಿಗಳಿದ್ದರು.

ಪಾಂಡವರ ಏಳು ಅಕ್ಷೋಹಿಣಿ ಸೇನೆಗೆ ವಿರಾಟ, ದ್ರುಪದ, ಧೃಷ್ಟದ್ಯುಮ್ನ, ಧೃಷ್ಟಕೇತು, ಸಾತ್ಯಕಿ, ಶಿಖಂಡಿ, ಜರಾಸಂಧನ ಮಗ ಸಹದೇವರೆಂಬ ಏಳು ಮಂದಿ ಸೇನಾಪತಿಗಳಿದ್ದರು. ಕೌರವನು ಮತ್ತು ಆತನ ತಮ್ಮಂದಿರೆಲ್ಲ ರಥೋದಾರರು. ಭೀಷ್ಮ, ಕೃತವರ್ಮ, ಶಲ್ಯ, ಭೂರಿಶ್ರವ, ಕೃಪಾಚಾರ್ಯ, ಬಾಹ್ಲೀಕರು ಕುರುಸೇನೆಯ ಅತಿರಥರು. ಕರ್ಣಪುತ್ರನಾದ ವೃಷಸೇನನೂ. ಸತ್ಯವ್ರತನೂ, ಅಲಂಬುಸನೆಂಬ ರಾಕ್ಷಸನೂ ಮಹಾರಥರು. ಸೈಂಧವನು ಇಬ್ಬರು ರಥಿಕರಿಗೆ ಸಮಾನನು. ಮಾಹಿಷ್ಮತೀಪುರಾಧಿಪತಿಯಾದ ನೀಲನು ರಥೋದಾರನು. ಸತ್ಯರಥ ಮೊದಲಾದ ತ್ರಿಗರ್ತರೈವರೂ, ಕೌರವನ ಮಗನಾದ ಲಕ್ಷಣ ಮತ್ತು ದುಶ್ಯಾಸನನ ಮಗನೂ ರಥೋದಾರರು. ಕಾಂಬೋಜರಾಜನಾದ ಸುದಕ್ಷಿಣನೂ, ಕೋಸಲರಾಜನಾದ ಬೃಹದ್ಬಲನೂ, ಜಲಸಂಧನೂ ಗಾಂಧಾರದೇಶದ ಅಣ್ಣತಮ್ಮಂದಿರಾದ ಅಚಲವೃಷಕರೂ ಸಮರಥರು. ಅವಂತಿ ದೇಶಾಧಿಪತಿಗಳಾದ ವಿಂದಾನುವಿಂದರು ರಥಿಕಶ್ರೇಷ್ಠರು. ದಂಡಧರನೂ ಶಕುನಿಯೂ ಏಕರಥರು. ಅಶ್ವತ್ಥಾಮನು ಸಮರ್ಥನಾದರೂ ಬದುಕಬೇಕೆಂಬ ಆಸೆಯು ಇವನಿಗೆ ಬಲವತ್ತರವಾಗಿತ್ತು. ಈ ದೋಷವಿಲ್ಲದಿದ್ದರೆ ಏಕರಥನು. ದ್ರೋಣನ ಅಸ್ತ್ರದ ಪ್ರಭಾವ ಮತ್ತು ಪಾಂಡಿತ್ಯವನ್ನು ಇಂತಿಷ್ಟೇ ಎಂದು ಹೇಳಲು ಸಾಧ್ಯವಿಲ್ಲ. ಕರ್ಣನನ್ನು ಅತಿರಥನೆಂದೂ, ಸಮರಥನೆಂದೂ ಹೇಳುವುದಕ್ಕಾಗುವುದಿಲ್ಲ. ಇವನು ಸಹಜಕವಚಕುಂಡಲಗಳನ್ನು ಕಳೆದುಕೊಂಡು ಪರದೂಷಕನಾಗಿ ಮೂರ್ಖನಾಗಿ ಇದ್ದುದರಿಂದ, ಸುಳ್ಳಾಡಿ ಪರಶುರಾಮನಿಂದ ಶಾಪ ಪಡೆದುದರಿಂದ, ಸಮಯದಲ್ಲಿ ಈತನ ಯುದ್ಧ ಸಾಮಗ್ರಿಗಳು ನಷ್ಟವಾಗುವುದರಿಂದ ಅರ್ಧರಥನು.

ಪಾಂಡವರಲ್ಲಿ ಧೃಷ್ಟದ್ಯುಮ್ನನು, ದ್ರುಪದಪುತ್ರನಾದ ಸತ್ಯಜಿತ್ತು, ಶ್ರೇಣಿಮಂತ, ವಸುದಾನರೂ ಅತಿರಥರು. ಅಭಿಮನ್ಯು ಮತ್ತು ವೃಷ್ಣಿವೀರನಾದ ಸಾತ್ಯಕಿ ಅತಿರಥರಲ್ಲಿ ಶ್ರೇಷ್ಠರು. ಹತ್ತು ಸಾವಿರ ಆನೆಗಳ ಬಲವುಳ್ಳ ಭೀಮಸೇನನು ಮಹಾರಥಿಕರಿಗಿಂತ ಎಂಟುಪಾಲು ಅಧಿಕನು. ಕಾಶ್ಯನು ಮಹಾರಥಿಕರಿಗಿಂತ ಎಂಟುಪಾಲು ಅಧಿಕನು. ಕುಂತಿಭೋಜನು ಮಹಾರಥಿಕನು. ಇವನನ್ನು ಅತಿರಥನೆಂದರೂ ಎನ್ನಬಹುದು. ಘಟೋತ್ಕಚನು ಮಹಾರಥರಲ್ಲಿ ಶ್ರೇಷ್ಠನು. ಪಾಂಡವರಲ್ಲಿ ಧರ್ಮರಾಜನೂ, ದ್ರೌಪದಿಯ ಪುತ್ರರೈವರೂ, ದ್ರುಪದ ಮತ್ತು ವಿರಾಟರೂ, ಶಿಖಂಡಿಯೂ, ಶಿಶುಪಾಲ ಪುತ್ರನಾದ ಧೃಷ್ಟಕೇತುವೂ. ಕ್ಷತ್ರಧರ್ಮ, ಕ್ಷತ್ರದೇವ, ಜಯಂತ ಮತ್ತು

ಸತ್ಯಜಿತ್ ಎಂಬ ಪಾಂಚಾಲಶ್ರೇಷ್ಠರೂ, ಭೋಜ ಮತ್ತು ಆಜರೂ, ಅಣ್ಣ ತಮ್ಮಂದಿರಾದ ಕೈಕಯರೈವರೂ, ಕೌಶಿಪ, ಸುಕುಮಾರ, ನೀಲ ಮತ್ತು ಮದಿರಾಶ್ವ, ಪಾರ್ಥಕ್ಷೇಮಿ, ಚಿತ್ರಾಯುಧರೂ, ಚೇಕಿತಾನ ಮತ್ತು ಸತ್ಯಧೃತಿಗಳೂ, ವ್ಯಾಘ್ರದತ್ತ, ಚಂದ್ರಸೇನ, ಸೇನಾಬಿಂದು; ಕ್ರೋಧಹಂತರೂ, ಪಾಂಡ್ಯರಾಜನೂ, ರೋಚಮಾನನೂ, ಪುರುಜಿತ್ತು, ಕುಂತಿಭೋಜನೂ ಮಹಾರಥರು. ನಕುಲಸಹದೇವರು, ವಿರಾಟಪುತ್ರನಾದ ಉತ್ತರ, ಉತ್ತಮೋಜ, ಯುಧಾಮನ್ಯುವೂ ಸಮರಥರು. ಈಗ ಹುಟ್ಟಿದವರಲ್ಲಿಯೂ, ಮುಂದೆ ಹುಟ್ಟುವರಲ್ಲಿಯೂ, ಈಗ ಇದ್ದವರಲ್ಲಿಯೂ ಬುದ್ಧಿಶಾಲಿಯಾದ ಅರ್ಜುನನಿಗೆ ಸಮನಾದ ರಥಿಕರು ಯಾರೂ ಇಲ್ಲ. ಹೀಗೆ ಭೀಷ್ಮನು ದುರ್ಯೋಧನನಿಗೆ ಎರಡು ಸೇನೆಗಳ ವಿಚಾರವನ್ನು ಹೇಳಿದನು (ಮ. ಉ).ಈ ಯುದ್ಧ ಹದಿನೆಂಟು ದಿನ ನಡೆಯಿತು. ನೋ -- ಭಾರತ.

ಭಾರತಾಚಾರ್ಯಮುಖ್ಯ -- ದ್ರೋಣಾಚಾರ್ಯ.

ಭಾರದ್ವಾಜ -- ೧. ಭರದ್ವಾಜಗೋತ್ರೋತ್ಪನ್ನನಾದ ಋಷಿ; ದ್ರೋಣಾಚಾರ್ಯ. ನೋ -- ದ್ರೋಣ (ಮ. ಶಾಂ).೨. ಸತ್ಯವಂತನ ತಂದೆಯಾದ ದ್ಯುಮತ್ಸೇನನ ಆಪ್ತಸ್ನೇಹಿತ. ಸಾವಿತ್ರಿಯ ಮಹಿಮೆಯಿಂದ ದುಮತ್ಸೇನನಿಗೆ ಅಂಧತ್ವವು ಹೋಗಿ ಕಾಣಿಸತೊಡಗಲು ಅವನು ಮಗನಿಗಾಗಿ ಅಲ್ಲಲ್ಲಿ ಹುಡುಕಾಡುತ್ತಿರಲು ಅಲ್ಲಿದ್ದ ಬ್ರಾಹ್ಮಣರು ಪತ್ನೀಸಮೇತನಾದ ದ್ಯುಮತ್ಸೇನನನ್ನು, ಆಶ್ರಮಕ್ಕೆ ಕರೆದುಕೊಂಡು ಬಂದು ವಿಚಿತ್ರವಾದ ಕಥೆಗಳನ್ನು ಹೇಳಿ ಅವರನ್ನು ಸಮಾಧಾನಪಡಿಸುತ್ತಿರಲು, ರಾಜನು ಮಗನ ಮತ್ತು ಸೊಸೆಯ ಗುಣಗಳನ್ನು ಹೊಗಳುತ್ತಿರಲು ಸುವರ್ಚ, ಗೌತಮ, ಭರದ್ವಾಜ, ದಾಲ್ಭ್ಯ, ಆಪಸ್ತಂಭ ಮೊದಲಾದ ಬ್ರಾಹ್ಮಣರು -- 'ಸತ್ಯವಂತನು ಬದುಕಿದ್ದಾನೆ. ಆತನಿಗೇನೂ ಕೆಡುಕಾಗಲಾರದು' ಎಂದು ರಾಜನಿಗೆ ಧೈರ್ಯವನ್ನು ಹೇಳಿದರು (ಮ. ವ).

ಭಾರದ್ವಾಜೀ -- ಒಂದು ಪುಣ್ಯನದಿ (ಮ. ಭೀ).

ಭಾರ್ಗವ -- ಭೃಗುವಂಶದಲ್ಲಿ ಹುಟ್ಟಿದ ಶುಕ್ರಾಚಾರ್ಯ, ಪರಶುರಾಮ, ಶೌನಕ, ಋಚೀಕ, ಜಮದಗ್ನಿ ಇವರಿಗೆಲ್ಲಾ ಈ ಹೆಸರು ಸಲ್ಲುತ್ತದೆ. ೨. ಈ ವೈವಸ್ವತಮನ್ವಂತರದ ವ್ಯಾಸನೊಬ್ಬ (ದೇವೀಭಾ). ೩. ಒಂದು ದೇಶ (ಮ. ಭೀ).

ಭಾರ್ಗವಾಸ್ತ್ರ -- ಕರ್ಣನಿಂದ ಪ್ರಯೋಗಿಸಲ್ಪಟ್ಟ ಮಹಾಸ್ತ್ರ.

ಭಾಸಾ --ಚಂದ್ರವಂಶದ ಯುತಾನಾಯಿಯ ಪತ್ನಿ ;ಈತನ ಮಗ ಅಕ್ರೋಧನ (ಮ.ಆ).

ಭಾಸೀ -- ಪ್ರಾಧೆಯ ಮಗಳು. ಕಶ್ಯಪ ಈಕೆಯ ತಂದೆ. ನೋ --ಪ್ರಾಧಾ (ಮ.ಆ).

ಭಾಸ್ಕರಿ -- ಬ್ರಹ್ಮರ್ಷಿಯೊಬ್ಬ (ಮ. ಶಾಂ).

ಭಾಸ್ವರ -- ಸೂರ್ಯಾನುಯಾಯಿಯಾದ ದೇವತೆ (ಮಂ. ಶಾಂ).

ಭೀಮ -- ೧. ವಿದರ್ಭದೇಶಾಧಿಪತಿ; ದಮಯಂತಿಯ ತಂದೆ. ಈತನಿಗೆ ಭೀಷ್ಮಕನೆಂಬ ಹೆಸರೂ ಉಂಟು. ನೋ --ದಮಯಂತಿ, ನಳ. ಈ ಕಥೆಯನ್ನು ಭಾರತದಲ್ಲಿ ಬೃಹದಶ್ವಮುನಿಗಳು ಧರ್ಮರಾಜನಿಗೆ ಅರಣ್ಯವಾಸಕಾಲದಲ್ಲಿ ಹೇಳಿದರು. (ಮ. ವ). ೨. ಅಗ್ನಿ ವಿಶೇಷ (ಮ. ವ).೩. ಚಂದ್ರವಂಶದ ಇಲಿಲ (ಇಲಿನ) ರಾಜನ ಮಗ. ಈತನ ತಾಯಿ ರಥಂತರಿ. ದುಷ್ಯಂತ, ಶೂರ, ಪ್ರವಸು ಮತ್ತು ವಸುವೆಂಬ ನಾಲ್ವರು ಈತನ ಸೋದರರು. ೪. ಕಶ್ಯಪಮುನಿಯ ಮಗ; ಈತನ ತಾಯಿ ಮುನಿ. ಈತನಿಗೆ ಹದಿನೈದು ಮಂದಿ ದೇವಗಂಧರ್ವರು ಸಹೋದರರು. ೫. ಶಿವನ ಅಷ್ಟಮೂರ್ತಿಗಳಲ್ಲೊಬ್ಬ. ಶಿವನ ಒಂದು ಹೆಸರು ೬. ಪಾಂಡುವಿನ ಮಗ; ಭೀಮಸೇನ; ಇವನು ವಾಯುಪುತ್ರ. ಈತನ ತಾಯಿ ಕುಂತಿ. ನೋ -- ಭೀಮಸೇನ. ೭. ಧೃತರಾಷ್ಟ್ರನ ಮಗ; ಇವನು ಭೀಮನಿಂದ ಹತನಾದ. ೮. ಯದುರಾಜನ ಮರಿಮಗ; ಸತ್ವತನ ಮಗ. ಇವನ ಕಾಲದಲ್ಲಿ ಅಯೋಧ್ಯೆಯಲ್ಲಿ ಶ್ರೀರಾಮಚಂದ್ರನು ಆಳುತ್ತಿದ್ದನು (ಹ., ಮ. ಆ., ವ). ಪಾಂಡುಪುತ್ರನಾದ ಭೀಮನಿಗೆ ಸುವರ್ಣಮಯವಾದ ಸಿಂಹಧ್ವಜ (ಮ. ಭೀ).

ಭೀಮಬಲ -- ೧. ಅಗ್ನಿ. ೨. ಧೃತರಾಷ್ಟ್ರನ ಮಗ (ಮ. ವ).

ಭೀಮರಥ -- ೧. ಭೋಜರಾಜ. ೨. ಧೃತರಾಷ್ಟ್ರನ ಪುತ್ರ ; ಭೀಮನಿಂದ ಹತನಾದ (ಮ. ಸ., ಆ., ಭೀ).

ಭೀಮರಥಿ (ಭೀಮಾ) -- ಸಹ್ಯಾದ್ರಿಯಲ್ಲಿ (ಪಶ್ಚಿಮಘಟ್ಟ) ಹುಟ್ಟಿ ಹರಿಯುವ ಒಂದು ನದಿ (ಮ. ಭೀ., ವ).

ಭೀಮವಿಕ್ರಮ -- ಧೃತರಾಷ್ಟ್ರನ ಮಗ (ಮ. ಆ).

ಭೀಮವೇಗ -- ಧೃತರಾಷ್ಟ್ರನ ಮಗ (ಮ. ಅ).

ಭೀಮವೇಗರವ -- ಧೃತರಾಷ್ಟ್ರನ ಮಗ (ಮ. ಆ).

ಭೀಮಶರ -- ಧೃತರಾಷ್ಟ್ರನ ಮಗ (ಮ. ಆ).

ಭೀಮಸೇನ --೧. ಕುಂತಿಯ ಮಗ; ಈತನು ವಾಯುಪುತ್ರ; ದುರ್ವಾಸನ ಮಂತ್ರಬಲದಿಂದ ಜನಿಸಿದವ. ಧರ್ಮರಾಜನು ಇವನ ಅಣ್ಣ, ಅರ್ಜುನನು ತಮ್ಮ, ನಕುಲಸಹದೇವರು ಇವನ ಬಲತಾಯಿಯಾದ ಮಾದ್ರಿಯ ಮಕ್ಕಳು. ಭೀಮನು ತನ್ನ ಸಹೋದರರಂತೆ ಶತಶೃಂಗಪರ್ವತದ ಋಷ್ಯಾಶ್ರಮದಲ್ಲಿ

ಜನಿಸಿದನು. ಇವನನ್ನು ಒಮ್ಮೆ ಕುಂತಿಯು ಪರ್ವತಶಿಖರದಲ್ಲಿ ಆಡಿಸುತ್ತಿದ್ದಾಗ, ಪಾಂಡುವು ಹುಲಿಬೇಟೆ ಮಾಡುತ್ತಿದ್ದನು. ಹುಲಿಯ ಗರ್ಜನೆಯನ್ನು ಕೇಳಿ ಕುಂತಿಯು ಬೆದರಿ ಮಗುವನ್ನು ಕೈಬಿಡಲು ಭೀಮನು ಒಂದು ಬಂಡೆಯ ಕಲ್ಲಿನ ಮೇಲೆ ಉರುಳಿದನು. ಕುಂತಿಯು ಗಾಬರಿಯಿಂದ ಓಡಿಬಂದು ಮಗುವನ್ನೆತ್ತಲು ಆಗ ಭೀಮನು ನಗುತ್ತಿದ್ದನು; ಬಂಡೆಕಲ್ಲು ಮಾತ್ರ ಹುಡಿಯಾಗಿತ್ತು! ಪಾಂಡುವಿನ ಮರಣಾನಂತರ ಮುನಿಗಳು ಭೀಮಾದಿಗಳನ್ನು ಹಸ್ತಿನಾವತಿಗೆ ತಂದು ಭೀಷ್ಮನಿಗೆ ಒಪ್ಪಿಸಿ ಹೋದರು. ಭೀಮನಿಗೆ ಬಾಲ್ಯದಿಂದಲೂ ಕೌರವಾದಿಗಳನ್ನು ಕಂಡರೆ ಸೇರದು. ದುರ್ಯೋಧನನು ಇವನಿಗೆ ವಿಷದ ಕಜ್ಜಾಯವನ್ನು ತಿನ್ನಿಸಿ ಗಂಗಾನದಿಯ ಮಡುವಿಗೆ ಹಾಕಿದರೂ ಸಾಯಲಿಲ್ಲ. ಪಾಂಡವರನ್ನು ಅರಗಿನ ಮನೆಯಲ್ಲಿ ಸುಡಬೇಕೆಂದಿರಲು ಭೀಮನೇ ಅರಗಿನ ಮನೆಗೆ ಬೆಂಕಿ ಹಾಕಿ ಸಹೋದರರನ್ನೂ ತಾಯಿಯನ್ನೂ ಕಾಡಿಗೆ ಕರೆದುಕೊಂಡು ಹೋಗಿ ಅಲ್ಲಿ ಹಿಡಿಂಬನನ್ನು ಕೊಂದು ಹಿಡಿಂಬೆಯೆಂಬ ಆತನ ಸಹೋದರಿಯನ್ನು ವ್ಯಾಸನ ಅಪ್ಪಣೆಯಂತೆ ಮದುವೆಯಾದನು. ಈಕೆಯ ಮಗನೇ ಘಟೋತ್ಕಚ. ಅಲ್ಲಿಂದ ಸಹೋದರರೊಡನೆ ಏಕಚಕ್ರನಗರಕ್ಕೆ ಹೋಗಿ ಭಿಕ್ಷಾಟನೆಯಿಂದ ಜೀವಿಸುತ್ತಿದ್ದನು. ಅಲ್ಲಿ ಒಬ್ಬ ಕುಂಬಾರನಿಗೆ ಕೊಜೆಮಣ್ಣಿನ ಗುಡ್ಡವನ್ನೇ ತಂದುಹಾಕಿದುದರಿಂದ ಅವನು ಸಂತೋಷದಿಂದ ಭೀಮನಿಗೆ ಒಂದು ದೊಡ್ಡ ಮಣ್ಣಿನ ಹರವಿಯನ್ನು ಮಾಡಿಕೊಟ್ಟಿದ್ದನು. ಕುಂತಿಯು ಮಕ್ಕಳು ತಂದ ಭಿಕ್ಷೆಯಲ್ಲಿ ಭೀಮನಿಗೆ ಅರ್ಧಪಾಲು ಕೊಟ್ಟು, ಉಳಿದರ್ಧವನ್ನು ತಾವು ಐವರು ಉಣ್ಣುತ್ತಿದ್ದರು. ಏಕಚಕ್ರನಗರದಲ್ಲೇ ಬಕಾಸುರನನ್ನು ಇವನು ವಧಿಸಿದನು. ಹಿಡಿಂಬೆಯನಂತರ ಕಾಶಿರಾಜನ ಮಗಳಾದ ಜಲಂಧರೆಯನ್ನು ಮದುವೆಯಾದನು. ಇವಳ ಮಗನೇ ಶರ್ವತ್ರಾತ. ಈತನ ಹೆಂಡಿರಲ್ಲಿ ದ್ರೌಪದಿಯೇ ಮುಖ್ಯಳು. ಇವಳ ಮಗನೇ ಮಹಾರಥನಾದ ಶ್ರುತಸೋಮ. ದ್ರೌಪದಿಯ ಸ್ವಯಂವರಾನಂತರ ಕ್ಷತ್ರಿಯರು ಪಾಂಡವರನ್ನು ಪ್ರತಿಭಟಿಸಲು ಇವನು ಶಲ್ಯನನ್ನು ಸೋಲಿಸಿದನು. ರಾಜಸೂಯ ಯಾಗಕಾಲದಲ್ಲಿ ಜರಾಸಂಧನನ್ನು ಗೆದ್ದುಕೊಂಡನು. ಪೂರ್ವದಿಕ್ಕಿನ ವಿಜಯಯಾತ್ರೆಯನ್ನು ಕೈಗೊಂಡ ಇವನು ದಶಾರ್ಣ ಪುಲಿಂದಾದಿರಾಜರನ್ನು ಗೆದ್ದು ಚೇದಿರಾಜನಾದ ಶಿಶುಪಾಲನಿಂದಲೂ ಕಪ್ಪವನ್ನು ಪಡೆದು ಪೂರ್ವದಿಕ್ಕಿನ ಎಲ್ಲ ರಾಜರನ್ನು ಗೆದ್ದು ಇಂದ್ರಪ್ರಸ್ಥಕ್ಕೆ ಹಿಂದಿರುಗಿದನು. ಈ ರಾಜಸೂಯಯಾಗಕಾಲದಲ್ಲೇ ಮಯನು ಬಿಂದುಸರೋವರದಿಂದ ಗದೆಯನ್ನು ತಂದು ಇವನಿಗೆ ಕೊಟ್ಟನು. ದುರ್ಯೋಧನ ದುಶ್ಶಾಸನರು ದ್ರೌಪದಿಗೆ ಅವಮಾನಮಾಡಿದಾಗ ಇವನು

ಕೌರವನ ತೊಡೆಮುರಿದೂ, ದುಶ್ಯಾಸನನ ಕರುಳನ್ನು ಹೊರಗೆಳೆದು ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದನು. ಅರಣ್ಯವಾಸಕಾಲದಲ್ಲಿ ಇವನು ಕಿಮ್ಮೀರ ಮತ್ತು ಜಟಾಸುರರೆಂಬ ರಾಕ್ಷಸರನ್ನು ಕೊಂದನು. ಕುಬೇರನ ಉದ್ಯಾನದಲ್ಲಿದ್ದ ಸೌಗಂಧಿಕಪುಷ್ಪವನ್ನು ದ್ರೌಪದಿಗೆ ತಂದು ಕೊಟ್ಟನು. ಇದೇ ಕಾಲದಲ್ಲಿ ಇವನಿಗೆ ಹನುಮಂತನ ಸಂದರ್ಶನವಾದುದಲ್ಲದೆ ಅವನ ಶಕ್ತಿಗೆ ಮತ್ತು ವಿಶ್ವರೂಪಕ್ಕೆ ಬೆರಗಾದನು. ಶಾಪದಿಂದ ಹೆಬ್ಬಾವಾಗಿದ್ದ ನಹುಷನು ಇವನನ್ನು ಹಿಡಿಯಲು, ಧರ್ಮರಾಜನ ಸಂದರ್ಶನದಿಂದ ಬಿಡುಗಡೆಯಾಯಿತು. ಯಕ್ಷನ ಸರೋವರದ ನೀರನ್ನು ಕುಡಿದು ಎಚ್ಚರ ತಪ್ಪಿ ಬಿದ್ದು ಧರ್ಮರಾಜನಿಂದ ಬದುಕಿದನು. ಅಜ್ಞಾತವಾಸಕಾಲದಲ್ಲಿ ವಲಲನೆಂಬ ಹೆಸರಿನಿಂದ ವಿರಾಟನಗರಿಯಲ್ಲಿ ಅಡುಗೆಭಟ್ಟನಾಗಿದ್ದು ಕೌರವನ ಜೀಮೂತನನ್ನೂ ವಿರಾಟನ ಮೈದುನನಾದ ಕೀಚಕನನ್ನೂ ಕೊಂದನು. ದಕ್ಷಿಣಗೋಗ್ರಹಣದಲ್ಲಿ ಕೌರವರನ್ನು ಗೆದ್ದನು. ಯುದ್ಧದಲ್ಲಿ ಕೌರವರನ್ನೆಲ್ಲ ಕೊಂದನು. ಹದಿನಾಲ್ಕನೆಯ ದಿನದ ಯುದ್ಧದಲ್ಲಿ ದ್ರೋಣನ ಎಂಟು ರಥಗಳನ್ನು ಮುರಿದು ಆತನ ವ್ಯೂಹವನ್ನು ಭೇದಿಸಿ ಒಳನುಗ್ಗಿದನು. ಭೀಮನಿಂದ ಕರ್ಣನು ಪರಾಜಯಹೊಂದಿದನು. ಕರ್ಣನಿಂದಲೂ ಭೀಮನಿಗೆ ಅಪಜಯವಾಯಿತು. ಕರ್ಣನ ಸೇನಾಧಿಪತ್ಯದ ಕಾಲದಲ್ಲಿ ಸೇನಾಪತಿಯಾಗಿದ್ದ ಕ್ಷೇಮಧೂರ್ತಿಯನ್ನು ಕೊಂದನು. ರಣರಂಗದಲ್ಲಿ ದುಶ್ಯಾಸನನ ಕರುಳನ್ನು ವೀರರ ಮುಂದೆಯೇ ಹೊರಗೆಳೆದು ಆತನ ರಕ್ತಪಾನ ಮಾಡಿದನು. ಶಲ್ಯನ ವಧೆಯಾದ ಮೇಲೆ ದುರ್ಯೋಧನನು ಭಯದಿಂದ ಮಡುವಿನಲ್ಲಿ ಅಡಗಿರಲು ಇವನು ಆತನನ್ನು ಮಡುವಿನಿಂದ ಹೊರಹೊರಡಿಸಿ ಆತನೊಡನೆ ಯುದ್ಧಮಾಡಿ ಅವನ ಎರಡೂ ತೊಡೆಗಳನ್ನು ಮುರಿದು ಕೊಂದನು. ಧೃಷ್ಟದ್ಯುಮ್ನ ಮತ್ತು ಉಪಪಾಂಡವರನ್ನು ಕೊಂದುದಕ್ಕಾಗಿ ಅಶ್ವತ್ಥಾಮನನ್ನೇ ಕೊಲ್ಲಲು ಹೋದನು. ಧೃತರಾಷ್ಟ್ರನ ಮನಸ್ಸನ್ನು ನೋಯಿಸಿ ವಾನಪ್ರಸ್ಥನಾಗಲು ಕಾರಣನಾದನು. ಮಹಾಪ್ರಸ್ಥಾನ ಕಾಲದಲ್ಲಿ ತಮ್ಮಂದಿರೆಲ್ಲ ಬಿದ್ದ ಮೇಲೆ ಈತನು ಕೆಲಕ್ಕೊರಗಿ ಸ್ವರ್ಗಸ್ಥನಾದನು. ಇವನ ಶಂಖದ ಹೆಸರು ಪೌಂಡ್ರ. ಇವನಿಗೆ ವೃಕೋದರ, ಪವನಜ ಮೊದಲಾದ ಹೆಸರುಗಳಿವೆ.

ಭೀಮನಿಗೆ ಕಾಶಿ ಎಂಬ ಹೆಂಡತಿಯಲ್ಲಿ ಸರ್ವಗನೆಂಬ ಮಗನಿದ್ದನು (ವಿಷ್ಣುಪು). ಇವನು ಹತ್ತುಸಾವಿರ ಆನೆಗಳ ಬಲವುಳ್ಳವನು.

ಇವನು ಹುಟ್ಟಿದೊಡನೆ ಎಲ್ಲ ದೇಶದ ರಾಜರಿಗೂ ಮನಸ್ಸಿನಲ್ಲಿ ಭೀತಿಯು ಹುಟ್ಟಿ ಅದರಿಂದ ಮೂತ್ರಸ್ರಾವವಾಯಿತು (ಮ. ಆ).

ಭೀಮನು ಬಲರಾಮನಿಂದ ಖಡ್ಗಯುದ್ಧ, ಗದಾಯುದ್ಧ, ರಥಯುದ್ಧಾದಿಗಳನ್ನು ಕಲಿತನು (ಮ. ಆ). ಕುಂತಿಯು ಭೀಮನನ್ನು ಸಿಂಹದಲ್ಲಿ ಗುರುವೂ, ತಲೆಯಲ್ಲಿ ಸೂರ್ಯನೂ, ಮಖಾನಕ್ಷತ್ರದಲ್ಲಿ ಚಂದ್ರನೂ ಸೇರಿದ್ದಾಗ ಶುಭವಾದ ತ್ರಯೋದಶಿ ತಿಥಿಯಲ್ಲಿ ಪಿತೃದೇವತಾತ್ಮಕ ಮುಹೂರ್ತದಲ್ಲಿ ಹೆತ್ತಳು. (ಮ. ಆ). ನೋ --ಶುಕ. ೨. ಗಂಧರ್ವನೊಬ್ಬ. ೩. ಚಂದ್ರವಂಶದ ಅನುಶುಷನ ಮಗನಾದ ಪರೀಕ್ಷಿತನ ಪುತ್ರ. ಈತನ ಹೆಂಡತಿ ಸುಕುಮಾರಿ; ಮಗ ಪರಿಶ್ರವ ೪. ಪಾಂಡವರ ಮೊಮ್ಮಗನಾದ ಪರೀಕ್ಷಿತನ ಮಗ; ಜನಮೇಜಯನ ಸಹೋದರ (ಮ. ಆ., ವ., ಭೀ).

ಭೀಮಾ -- ಭೀಮರಥಿ ನದಿ. ನೋ -- ಭೀಮರಥಿ. ಪಂಢರಾಪುರದಲ್ಲಿ ಹರಿಯುವ ನದಿಗೆ ಭೀಮಾನದಿ ಎನ್ನುತ್ತಾರೆ. ಇದು ಅಲ್ಲಿ ಚಂದ್ರನಂತೆ ವಕ್ರವಾಗಿ ಹರಿಯುವುದರಿಂದ ಚಂದ್ರಭಾಗಾನದಿಯೆಂದು ಇದನ್ನು ಕರೆಯುತ್ತಾರೆ.

ಭೀಷಣ --ಬಕಾಸುರನ ಮಗ. ಮೇದೋಹೋತನೆಂಬ ಬ್ರಹ್ಮರಾಕ್ಷಸನು ಈತನ ಪುರೋಹಿತ. ಈ ರಾಕ್ಷಸನನ್ನು ಅರ್ಜುನನು ರಕ್ಷೋಘ್ನಬಾಣದಿಂದ ಗೆದ್ದ (ಜೈ. ಭಾ).

ಭೀಷ್ಮ (ವೈರಿಭಯಂಕರ) --ಚಂದ್ರವಂಶದ ಶಂತನು ಚಕ್ರವರ್ತಿಯ ಹಿರಿಯ ಹೆಂಡತಿಯಾದ ಗಂಗಾದೇವಿಯ ಮಗನೇ ಈತನು. ಈತನಿಗೆ ಮೊದಲು ದೇವವ್ರತನೆಂಬ (ದೇವತೆಗಳಂತೆ ನಿಯಮವುಳ್ಳವನು) ಹೆಸರಿತ್ತು. ಒಂದು ಕಾಲದಲ್ಲಿ ಬ್ರಹ್ಮಸಭೆಯಲ್ಲಿ ಕುಳಿತ ಮಹಾಭಿಷನೆಂಬ ರಾಜನು ನಟ್ಟದೃಷ್ಟಿಯಿಂದ ಗಂಗೆಯನ್ನು ನೋಡುತ್ತಿರಲು ಬ್ರಹ್ಮನು ಹೇಸಿ ಆತನಿಗೆ ಮನುಷ್ಯನಾಗಿ ಜನಿಸುವಂತೆ ಶಾಪವಿತ್ತನು. ಈತನೇ ಪ್ರತೀಪರಾಜನ ಮಗನಾದ ಶಂತನು. ಗಂಗೆಯೂ ಬ್ರಹ್ಮನಿಂದ ಶಾಪಹೊಂದಿ ಮಹಾಭಿಷನನ್ನು ಲಗ್ನವಾಗಲು ಭೂಮಿಯ ಕಡೆಗೆ ಬರುತ್ತಿದ್ದಳು. ಆಗ ವಸಿಷ್ಠನಿಂದ ಶಾಪಹೊಂದಿದ ಅಷ್ಟವಸುಗಳು ಕ್ರಮವಾಗಿ ಆಕೆಯ ಮಕ್ಕಳಾಗಿ ಹುಟ್ಟಿ, ಅವರ ಬಯಕೆಯಂತೆ ಒಬ್ಬನನ್ನು ಬಿಟ್ಟು ಉಳಿದವರೆಲ್ಲ ನದಿಗೆ ಎಸೆಯಲ್ಪಟ್ಟು ಕೊಲ್ಲಲ್ಪಟ್ಟರು. ನೋ -- ಅಷ್ಟವಸು, ಗಂಗೆ, ಪ್ರತೀಪ, ಶಂತನು. ಗಂಗೆಗೆ ಹುಟ್ಟಿದ ಎಂಟನೆಯ ಮಗನೇ ದೇವವ್ರತ. ಈತನಿಗೆ ಗಂಗೆಯು ಪರುಶುರಾಮನಿಂದ ಶಸ್ತ್ರಾಭ್ಯಾಸವನ್ನು ಮಾಡಿಸಿ ಆತನ ತಾರುಣ್ಯದಲ್ಲಿ ಆತನನ್ನು ಶಂತನುವಿಗೆ ಒಪ್ಪಿಸಿಹೋದಳು. ಶಂತನು ದೇವವ್ರತನಿಗೆ ಯುವರಾಜ್ಯಾಭಿಷೇಕವನ್ನು

ಮಾಡಿಸಿದನು. ಮುಂದೆ ರಾಜನು ಸತ್ಯವತಿಯನ್ನು ಮೋಹಿಸಿ ವಿವಾಹವಾದನು. ನೋ --ಸತ್ಯವತಿ. ತಂದೆಯ ವಿವಾಹಕ್ಕೆ ದೇವವ್ರತನೇ ಕಾರಣನಾಗಿ, ಆ ಸಂಬಂಧ ಬ್ರಹ್ಮಚರ್ಯವ್ರತವನ್ನೇ ಸ್ವೀಕರಿಸಿ ದೇವತೆಗಳಿಂದ ಭೀಷ್ಮನೆಂಬ ಹೆಸರನ್ನು ಪಡೆದನು. ಈತನು ಸತ್ಯವತಿಯ ಮಗನಾದ ವಿಚಿತ್ರವೀರ್ಯನಿಗೆ ಕಾಶಿರಾಜನ ಮಕ್ಕಳಾದ ಅಂಬಿಕೆ, ಅಂಬಾಲಿಕೆಯರನ್ನು ತಂದು ವಿವಾಹ ಮಾಡಿದನು. ನೋ -- ಅಂಬೆ, ಅಂಬಿಕೆ, ಅಂಬಾಲಿಕೆ. ಅಂಬೆಯು ಪರಶುರಾಮನ ಸಹಾಯದಿಂದ ಭೀಷ್ಮನನ್ನೇ ವಿವಾಹವಾಗಲು ಯತ್ನಿಸಿದರೂ ವ್ಯರ್ಥವಾಯಿತು. ವಿಚಿತ್ರವೀರ್ಯನು ಸ್ತ್ರೀಮೋಹದಿಂದ ಕ್ಷಯ ರೋಗಿಯಾಗಿ ಸಾಯಲು ಚಂದ್ರವಂಶವು ಸಂತಾನರಹಿತವಾಯಿತು. ಆಗ ಸತ್ಯವತಿಯು ಭೀಷ್ಮನನ್ನು ವಿವಾಹಿತನಾಗುವಂತೆ ಕೇಳಿಕೊಳ್ಳಲು ಅವನು 'ಪ್ರಾಣವನ್ನಾದರೂ ತೆರುವೆನಲ್ಲದೆ ಪ್ರತಿಜ್ಞಾಭಂಗವನ್ನು ಮಾಡಿಕೊಳ್ಳಲಾರೆನು ' ಎಂದು ಹೇಳಿಯೇ ಬಿಟ್ಟನು. (ಮ. ಆ).

ಕೌರವಪಾಂಡವರನ್ನು ಚಿಕ್ಕಂದಿನಿಂದ ಪೋಷಿಸಿದವನು ಭೀಷ್ಮ. ಅವನು ಕೌರವಪಾಂಡವರಿಗೆ ಕೃಪಾಚಾರ್ಯ ಮತ್ತು ದ್ರೋಣಾಚಾರ್ಯರಿಂದ ಬಿಲ್ಲುವಿದ್ಯೆಯ ಪಾಠವನ್ನು ಹೇಳಿಸಿದನು. ಪಾಂಡವರು ಅರಗಿನ ಮನೆಯಲ್ಲಿ ಸುಟ್ಟು ಸತ್ತರೆಂದು ಕೇಳಿ ಅವನು ತುಂಬ ವ್ಯಸನಪಟ್ಟನು. ಕಡೆಗೆ ವಿದುರನಿಂದ ಪಾಂಡವರು ಬದುಕಿದ್ದಾರೆಂದು ಕೇಳಿ ಸಂತೋಷಹೊಂದಿದನು. ಪಾಂಡವರ ಅಜ್ಞಾತವಾಸ ಕಾಲದಲ್ಲಿ ಉತ್ತರ ಗೋಗ್ರಹಣಕ್ಕೆ ಹೊರಟ ಕುರುಸೇನೆಯೊಡನೆ ಭೀಷ್ಮನೂ ಹೋಗಿ ಅಲ್ಲಿ ಅರ್ಜುನನಿಂದ ಪರಾಜಿತನಾದನು. ಮುಂದೆ ಪಾಂಡವರಿಗೆ ಅರ್ಧರಾಜ್ಯವನ್ನು ಕೊಡಬೇಕೆಂದು ಭೀಷ್ಮನು ಒತ್ತಾಯಮಾಡಿದರೂ ದುರ್ಯೋಧನನು ಕೇಳದಿರಲು, ಕುರುಕ್ಷೇತ್ರದಲ್ಲಿ ಪಾಂಡವ ಕೌರವರಿಗೆ ಯುದ್ಧವಾಯಿತು. ಆಗ ಹತ್ತು ದಿನಗಳವರೆಗೆ ಕುರುಸೇನೆಯ ಒಡೆತನವನ್ನು ಭೀಷ್ಮನು ಹೊತ್ತು ಪ್ರತಿದಿನ ಪಾಂಡುಸೇನೆಯಲ್ಲಿ ಹತ್ತು ಸಾವಿರ ಮಂದಿ ವೀರರನ್ನು ಕೊಲ್ಲುತ್ತ ಬಂದನು. ಶ್ರೀಕೃಷ್ಣನ ಕೈಯಲ್ಲಿ ಆತನ ಪ್ರತಿಜ್ಞೆ ವ್ಯತಿರಿಕ್ತವಾಗಿ ಸುದರ್ಶನ ಚಕ್ರವನ್ನು ಹಿಡಿಸಿದನು. ಹತ್ತನೆಯ ದಿನ ಇಚ್ಛಾಮರಣಿಯಾದ ಭೀಷ್ಮನ ಸೂಚನೆಯಂತೆ ಆತನ ಮುಂದೆ ಶಿಖಂಡಿಯನ್ನು ಯುದ್ಧಕ್ಕೆ ನಿಲ್ಲಿಸಲು ಭೀಷ್ಮನು ವೈರಾಗ್ಯಹೊಂದಿ ಧನುಸ್ಸನ್ನು ಕೆಳಗಿಟ್ಟನು. ಅರ್ಜುನನು ಹಸ್ತಲಾಘವದಿಂದ ಪಿತಾಮಹನಿಗೆ ಶರಮಂಚವನ್ನು ಏರ್ಪಡಿಸಿಕೊಟ್ಟನು. ಆತನ ಬಾಯಾರಿಕೆಗೆ ಪಾತಾಳ ಗಂಗೆಯ ನೀರನ್ನು ತರಿಸಿ ದಾಹಶಾಂತಿಯನ್ನು ಮಾಡಿದನು.

ಯುದ್ಧಾನಂತರ ಭೀಷ್ಮನು ಯುಧಿಷ್ಠಿರನಿಗೆ ವರ್ಣಾಶ್ರಮ, ರಾಜನೀತಿ, ಆಪದ್ಧರ್ಮ, ಮೋಕ್ಷಧರ್ಮ ಮೊದಲಾದವುಗಳನ್ನು ಕಥಾರೂಪದಲ್ಲಿ ಹೇಳಿ, ಶ್ರೀಕೃಷ್ಣ ಮೊದಲಾದವರ ಅಪ್ಪಣೆಪಡೆದು, ಉತ್ತರಾಯಣದ ಪುಣ್ಯಕಾಲದಲ್ಲಿ ಸ್ವರ್ಗಸ್ಥನಾದನು (ಮ. ಅನು). ಇವನಿಗೆ ಗಾಂಗೇಯನೆಂಬ ಹೆಸರಿದೆ, ಈತನು ತಾಲಧ್ವಜನು (ಮ. ವಿ).

ಸೂರ್ಯನು ಉತ್ತರಾಯಣಕ್ಕೆ ತಿರುಗಿದೊಡನೆ ಮಾಘಮಾಸದ ಶುಕ್ಲಪಕ್ಷದ ಅಷ್ಟಮೀ ತಿಥಿಯಲ್ಲಿ ಪ್ರಜಾಪತಿ ದೇವತಾತ್ಮಕವಾದ ಮೃಗಶೀರ್ಷ ನಕ್ಷತ್ರದಲ್ಲಿ ಸೂರ್ಯನು ಆ ನಕ್ಷತ್ರದ ಮಧ್ಯೆದೆಸೆಯಲ್ಲಿರುವಾಗ ಭೀಷ್ಮನು ಆತ್ಮದಲ್ಲಿ ಲೀನನಾದನು (ಮ. ಶಾಂ).

ಕಾಶಿರಾಜನ ಮಕ್ಕಳ ಸ್ವಯಂವರದಲ್ಲಿ ರಾಜರಿಂದ ದೂರ ಕುಳಿತಿದ್ದ ಭೀಷ್ಮನನ್ನು ಕಂಡು ಮುದುಕನೆಂಬ ಭಾವದಿಂದ ರಾಜಕುಮಾರಿಯರು ಬೇಸರಪಟ್ಟು ಹೊರಟುಹೋದರು. ರಾಜರಲ್ಲಿ ಅಲ್ಪಬುದ್ಧಿಯುಳ್ಳ ಕೆಲವರು --'ಇವನು ಮುದುಕ, ಗೊಡ್ಡು ವೈದಿಕ; ಬ್ರಹ್ಮಚಾರಿ; ಇವನ ಪ್ರತಿಜ್ಞೆ ಸುಳ್ಳಾಯಿತಲ್ಲಾ' ಎಂದು ಹಾಸ್ಯಮಾಡಲು ಭೀಷ್ಮನು ಕೋಪದಿಂದ ಮತ್ತು ಬಲಾತ್ಕಾರದಿಂದ ಆ ಕನ್ಯೆಯರನ್ನು ತನ್ನ ರಥದ ಮೇಲೆ ಕುಳ್ಳಿರಿಸಿಕೊಂಡು, ವೀರರಾದ ರಾಜರಿಗೆ ಎಂಟನೆಯದಾದ ರಾಕ್ಷಸವಿವಾಹವೇ ಯೋಗ್ಯವೆಂದು, ಇದನ್ನೇ ಧರ್ಮಶಾಸ್ತ್ರಜ್ಞರು ಮೆಚ್ಚುವರೆಂದು, ಆ ಕನ್ಯೆಯರೊಡನೆ ಹೊರಟನು (ಮ. ಆ., ಸ., ಉ. ಭೀ., ಸ್ತ್ರೀ., ಶಾಂ., ಭಾಗ.).

ಭೀಷ್ಮಕ -- ವಿದರ್ಭದೇಶದ ರಾಜ. ಇವನಿಗೆ ರುಕ್ಮಿ, ರುಕ್ಮರಥ, ರುಕ್ಮಬಾಹು, ರುಕ್ಮಕೇಶ, ರುಕ್ಮಮಾಲಿ ಎಂಬ ಐವರು ಗಂಡುಮಕ್ಕಳೂ ರುಕ್ಮಿಣಿ ಎಂಬ ಹೆಣ್ಣುಮಗಳೂ ಇದ್ದರು. ನೋ --ರುಕ್ಮಿ, ರುಕ್ಮಿಣಿ, ಇವನಿಗೆ ಹಿರಣ್ಯರೋಮನೆಂಬ ಹೆಸರೂ ಇದೆ. ರುಕ್ಮಿಯ ಪ್ರಭಾವದಿಂದ ಭೀಷ್ಮಕನು ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಡಬೇಕೆಂದು ನಿರ್ಧರಿಸಿದನು (ಭಾಗ., ಮ., ಸ., ಉ).

ಭುಜ್ಯು -- ತುಗ್ರನೆಂಬ ರಾಜನ ಪುತ್ರ. ನೋ -- ತುಗ್ರ.

ಭುಮನ್ಯು -- ೧. ಚಂದ್ರವಂಶದ ಜನಮೇಜಯನ ಮಗನಾದ ಧೃತರಾಷ್ಟ್ರನ ಪುತ್ರ (ಮ. ಆ). ೨. ಶಕುಂತಳೆಯ ಮಗನಾದ ಭರತನ ಸಾಕುಮಗ. ಈತನ ಪತ್ನಿ ಸುವರ್ಣೆ;ಮಗ ಸುಹೋತ್ರ. ಸುವರ್ಣೆಗೆ ಪುಷ್ಕರಿಣಿ ಎಂದೂ ಹೆಸರಿದೆ. ಈಕೆಗೆ ಸುಹೋತ್ರ, ದಿವಿರಥ, ಸುಹೋತಾ, ಸುಹವಿ, ಸುಯಜು, ಋಚೀಕರೆಂಬ ಆರು

ಮಂದಿ ಮಕ್ಕಳು. ಭುಮನ್ಯುವಿಗೆ ಮೊದಲು ಭರದ್ವಾಜ ಮತ್ತು ವಿತಥ ಎಂಬ ಹೆಸರುಗಳಿದ್ದುವು. ನೋ --ಭರತ, ಭರದ್ವಾಜ (ಮ. ಆ., ಭಾಗ).

ಭುವನೇಶ -- ಭುವನೇಶನೆಂಬ ರಾಜನು ಅನೇಕ ದಾನಧರ್ಮಗಳನ್ನು ಮಾಡಿದ್ದರೂ ಹರಿಯನ್ನು ವೇದಮಂತ್ರಗಳಿಂದಲ್ಲದೆ ಹಾಡುಗಳಿಂದ ಕೀರ್ತಿಸಬಾರದೆಂದು ರಾಜ್ಯದಲ್ಲೆಲ್ಲ ಸಾರಿದ್ದನು. ಒಮ್ಮೆ ಅವನ ರಾಜ್ಯದಲ್ಲಿದ್ದ ಹರಿಮಿತ್ರನೆಂಬ ಬ್ರಾಹ್ಮಣನು ಹರಿಯ ದಿವ್ಯಮೂರ್ತಿಯನ್ನು ಷೋಡಶೋಪಚಾರಗಳಿಂದ ಪೂಜಿಸಿ, ಕೊನೆಗೆ ಹರಿಯ ಗುಣನಾಮಗಳನ್ನು ಹಾಡುಗಳಿಂದ ಹಾಡುತ್ತಿರಲು ರಾಜದೂತರು ಇದನ್ನು ಕಂಡು ಅವನನ್ನು ರಾಜನ ಬಳಿಗೆ ಎಳೆದು ತರಲು, ರಾಜನು ಆ ಬ್ರಾಹ್ಮಣನ ಸಂಪತ್ತನ್ನೆಲ್ಲ ಕಿತ್ತುಕೊಂಡು ತನ್ನ ರಾಜ್ಯದಿಂದ ಹೊರಹಾಕಿದನು. ಮುಂದೆ ಆ ರಾಜನಿಗೆ ಮರಣ ಪ್ರಾಪ್ತವಾಗಲು ಆತನು ಮರುಜನ್ಮದಲ್ಲಿ ಉಲೂಕನಾಗಿ (ಗೂಬೆ) ಹುಟ್ಟಿ ಶ್ರೀವಿಷ್ಣುವಿನ ಅನುಗ್ರಹದಿಂದ ಸಂಗೀತಾಚಾರ್ಯನಾದುದಲ್ಲದೆ, ನಾರದನ ಅನುಗ್ರಹದಿಂದ ಕಲ್ಪಾಂತ್ಯದಲ್ಲಿ ಗರುಡನಾಗಿ ವಿಷ್ಣು ಸಾಯುಜ್ಯವನ್ನು ಹೊಂದಿದನು (ಅದ್ಭು. ರಾಮಾ). ನೋ -- ನಾರದ.

ಭೂತಕರ್ತ --ಅಗ್ನಿವಿಶೇಷ (ಮ. ವ).

ಭೂತಕರ್ಮ -- ಕೌರವಪಕ್ಷದವ. ಇವನು ಶತಾನೀಕನಿಂದ ಹತನಾದನು (ಮ. ದ್ರೋ).

ಭೂತಶರ್ಮ --ಕೌರವನ ಪಕ್ಷದ ಕ್ಷತ್ರಿಯ. (ಮ. ದ್ರೋ).

ಭೂತಿ -- ೧. ಋಷಿಯೊಬ್ಬ; ವಿಶ್ವಾಮಿತ್ರನ ಮಗ (ಮ. ಅನು). ೨. ಅಂಗಿರಸ ಮಹರ್ಷಿಯ ಶಿಷ್ಯ. ಮಹಾತಪಸ್ವಿ. ಈತನ ಮಗನೇ ಭೌತ್ಯಮನು. ನೋ -- ಭೌತ್ಯ.

ಭೂಪತಿ --ಅಗ್ನಿವಿಶೇಷ (ಮ. ವ).

ಭೂಮಿಂಜಯ -- ವಿರಾಟಪುತ್ರನಾದ ಉತ್ತರಕುಮಾರನ ಇನ್ನೊಂದು ಹೆಸರು. ನೋ --ಉತ್ತರ (ಮ. ವಿ).

ಭೂರಿ -- ಚಂದ್ರವಂಶದ ಸೋಮದತ್ತನ ಮಗ. ಇವನಿಗೆ ಭೂರಿಶ್ರವ ಮತ್ತು ಶಲರೆಂಬ ಇಬ್ಬರು ಸಹೋದರರು. ನೋ --ಶಲ. ಭೂರಿಯು ಭಾರತಯುದ್ಧದಲ್ಲಿ ಸಾತ್ಯಕಿಯಿಂದ ಹತನಾದ (ಮ. ಆ., ದ್ರೋ., ಭಾಗ).

ಭೂರಿಕೀರ್ತಿ --ಪೂರ್ವದೇಶಕ್ಕೆ ರಾಜ. ಶ್ರೀರಾಮಪುತ್ರರಾದ ಕುಶ ಮತ್ತು ಲವರಿಗೆ ಈತನ ಪೌತ್ರಿಯರಾದ ಚಂಪಕಾ ಮತ್ತು ಸುಮತಿಯನ್ನು ಕೊಟ್ಟು ವಿವಾಹವಾಯಿತು. (ಆನಂ. ರಾಮಾ). ನೋ --ಕುಶಲವ.

ಭೂರಿಶ್ರವ --ನೋ -- ಭೂರಿ. ಇವನು ಅತಿರಥನು. ಇವನು ಜಯದ್ರಥನ ವಧೆಗೆ ಮುಂದರಿದ ಅರ್ಜುನನನ್ನು ಹಿಂಬಾಲಿಸಿದನು. ಆಗ ಭೂರಿಶ್ರವನು ಇವನನ್ನು ತಡೆದು ಯುದ್ಧ ಮಾಡುತ್ತಿರಲು ಉಭಯರೂ ವಿರಥರಾಗಿ ಖಡ್ಗವನ್ನು ಹಿಡಿದುಕೊಂಡು ಹೊಯ್ದಾಡ ಹತ್ತಿದರು. ಆಗ ಅತಿರಥನಾದ ಭೂರಿಶ್ರವನು ಸಾತ್ಯಕಿಯ ಜುಟ್ಟನ್ನು ಹಿಡಿದು, ಅವನ ಎದೆಗೆ ತನ್ನ ಪಾದದಿಂದ ತುಳಿದು, ಅವನನ್ನು ನೆಲಕ್ಕೆ ಕೊಡವಿ ತಲೆಯನ್ನು ಕಡಿದು ಬಿಡಬೇಕೆಂದು ಖಡ್ಗವನ್ನೆತ್ತುತ್ತಿರಲು ಈ ಕೃತ್ಯವನ್ನು ಶ್ರೀಕೃಷ್ಣನು ಅರ್ಜುನನಿಗೆ ತೋರಿಸಿ -- 'ನಿನ್ನ ಶಿಷ್ಯನ ಪ್ರಾಣವನ್ನು ಉಳಿಸೆ'ನ್ನಲು ಕೂಡಲೇ ಅರ್ಜುನನು ಭಲ್ಲಾಯುಧವನ್ನು ಆ ಕಡೆಗೆ ಎಸೆದು ಭೂರಿಶ್ರವನ ಖಡ್ಗ ಹಿಡಿದ ತೋಳನ್ನೇ ಕತ್ತರಿಸಿದನು. ಆಗ ಸಾತ್ಯಕಿಯು ನೆಲದಿಂದ ಎದ್ದು ಅರ್ಜುನನೂ ಕೃಷ್ಣನೂ ಬೇಡವೆಂದರೂ ಕೇಳದೆ ಭೂರಿಶ್ರವನ ತಲೆಯನ್ನು ಕತ್ತರಿಸಿದನು.

ಅರ್ಜುನನು ಈತನ ತೋಳನ್ನು ಕತ್ತರಿಸಿದ ಮೇಲೆ ಪ್ರಾಯೋಪವೇಶ ಮಾಡಿ ಕುಳಿತಿದ್ದಾಗ ಸಾತ್ಯಕಿಯು ಇವನ ತಲೆಯನ್ನು ಕತ್ತರಿಸಿದನು (ಮ. ಆ., ಉ., ಭೀ., ದ್ರೋ).

ಭೂರಿಶ್ರುತ -- ಶುಕಮಹರ್ಷಿಗೆ ಪೀವರಿಯಲ್ಲಿ ಹುಟ್ಟಿದ ಮಗ. ಇವನು ಶುಕ್ರಾಚಾರ್ಯನ ಅವತಾರ (ಹರಿ). ನೋ -- ಪೀವರಿ.

ಭೂಲಿಂಗಶಕುನಿ --ಕುಲಿಂಗ ಎಂಬ ಒಂದು ಪಕ್ಷಿ. ಇದು 'ಸಾಹಸಮಾಡಬೇಡ' ಎಂದು ಯಾವಾಗಲೂ ಕೂಗುತ್ತಿದ್ದರೂ ತಾನು ಮಾತ್ರ ಸಿಂಹದ ಹಲ್ಲುಗಳ ಸಂದಿನಲ್ಲಿ ಸಿಕ್ಕಿದ ಮಾಂಸವನ್ನು ಕುಕ್ಕಿ ತಿನ್ನುವುದು. ಮನುಷ್ಯನ ಪರೋಪದೇಶಪಾಂಡಿತ್ಯಕ್ಕೆ ಇದು ಹೆಸರಾದ ದೃಷ್ಟಾಂತ (ಮ. ಸ).

ಭೃಗು -- ಬ್ರಹ್ಮರ್ಷಿಯೊಬ್ಬ; ಬ್ರಹ್ಮನ ಹೃದಯದಿಂದ ಉತ್ಪನ್ನವಾದವ. ಇವನು ಸ್ವಾಯಂಭುವ ಮನ್ವಂತರದವ. ಈತನ ಮಗ ಕವಿ ; ಇನ್ನೊಬ್ಬ ಮಗ ಚ್ಯವನ. ಇವನಿಗೆ ಧಾತ ಮತ್ತು ವಿಧಾತರೆಂಬ ಮಕ್ಕಳೂ ಇದ್ದರು. ಇವನ ಮಗಳು ಲಕ್ಷ್ಮಿ ಅಥವಾ ಭಾರ್ಗವಿ. ಈತನ ಪತ್ನಿ ಖ್ಯಾತಿ (ಭಾಗ., ವಿಷ್ಣುಪು). ವೈವಸ್ವತ ಮನ್ವಂತರದಲ್ಲಿ ಈತನು ವರುಣನ ಯಜ್ಞಕುಂಡದಲ್ಲಿ ಜನಿಸಿದವನು. ಇದರಿಂದ ಈತನಿಗೆ ವಾರುಣಿ ಎಂಬ ಹೆಸರಿದೆ. ಈತನ ಪತ್ನಿ ಪುಲೋಮೆ. ಈತನಿಗೆ ಚ್ಯವನ, ವಜ್ರಶೀರ್ಷ, ಶುಚಿ, ಔರ್ವ, ಶುಕ್ರ, ವರೇಣ್ಯ (ವಿಭು), ಸವನರೆಂಬ ಏಳು ಮಕ್ಕಳು ಈತನಿಂದ ಅಗ್ನಿಗೆ 'ಸರ್ವಭಕ್ಷಕನಾಗು' ಎಂಬ ಶಾಪ ದೊರೆಯಿತು (ಮ. ಆ., ಅನು., ಶ., ಮತ್ಸ್ಯಪು).

ವಿಷ್ಣುವು ಖ್ಯಾತಿದೇವಿಯ ತಲೆಯನ್ನು ಕತ್ತರಿಸಲು ಕೋಪಗೊಂಡ ಭೃಗುವು ವಿಷ್ಣುವಿಗೆ ಅನೇಕ ಅವತಾರಗಳನ್ನೆತ್ತಿ ಗರ್ಭವಾಸವನ್ನನುಭವಿಸುವಂತೆ ಶಾಪವಿತ್ತನು (ದೇವೀ. ಭಾ.).

ಭೃಗುವು ವರುಣನ ಮಗ. ಇವನು ವರುಣನಿಂದ ಪಡೆದ ರಸವಿದ್ಯೆಗೆ ವಾರುಣೀವಿದ್ಯೆ ಎನ್ನುತ್ತಾರೆ (ತೈ. ಉ.).

ಇವನು ವರುಣ ಋಷಿಯ ಮಗ. ಇವನು ತಂದೆಯಿಂದಲೇ ವಿದ್ಯಾಭ್ಯಾಸ ಮಾಡಿ ತಾನು ಪಂಡಿತೋತ್ತಮನೆಂದು ಗರ್ವಿಷ್ಠನಾದನು. ಮಗನ ಗರ್ವ ಬಿಡಿಸಲು ವರುಣನು ಆತನೊಡನೆ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ, ಈಶಾನ್ಯ ದಿಕ್ಕುಗಳಿಗೆ ಹೋಗಿ ಬರುವಂತೆ ಹೇಳಲು ಭೃಗುವು ಆ ದಿಕ್ಕಿನಲ್ಲಿ ನಡೆಯುತ್ತಿದ್ದ ಹಿಂಸೆಯನ್ನು ಅರ್ಥಮಾಡಿಕೊಳ್ಳಲಾರದೆ ಮನೆಗೆ ಬಂದು ತಂದೆಯಿಂದ -- ಪಾಪವು ಪ್ರತಿಫಲವನ್ನು ಕೊಡುತ್ತದೆ, ಯಜ್ಞದಿಂದ ಪಾಪವು ಪರಿಹಾರವಾಗುತ್ತದೆ ಎಂದು ಕೇಳಿ ಗರ್ವವನ್ನು ಬಿಟ್ಟನು (ಋ).

ಭೃಗುಕಚ್ಛ -- ನರ್ಮದೆಯು ಸಾಗರಕ್ಕೆ ಸಂಗಮವಾಗುವಲ್ಲಿದ್ದ ಕ್ಷೇತ್ರ. ಇಂದಿನ ನರ್ಮದಾತೀರದ ಬ್ರೋಚ್ (Broach). ಇಲ್ಲಿ ಭೃಗು ಋಷಿಯ ಆಶ್ರಮವಿತ್ತು (ಮ. ಸ).

ಭೃಗುತುಂಗ (ತುಂದ) -- ೧. ಕ್ಷೇತ್ರ. ಇದೊಂದು ನದಿಯ ಘಟ್ಟ. ಅರ್ಜುನನು ತೀರ್ಥಯಾತ್ರೆಯ ಕಾಲದಲ್ಲಿ ಇಲ್ಲಿಗೆ ಬಂದು ನದಿಯಲ್ಲಿ ಮಿಂದನು (ಮ. ಆ., ವ., ಅನು). ೨. ಪರ್ವತ (ಮ. ದ).

ಭೈಮಸೇನಿ -- ಘಟೋತ್ಕಚನ ಇನ್ನೊಂದು ಹೆಸರು (ಮ. ಭೀ).

ಭೈರವ -- ೧. ಸರ್ಪ (ಮ. ಆ). ೨. ಶಿವ. ತ್ರಿಮೂರ್ತಿಗಳಲ್ಲಿ ತಾನು ಶ್ರೇಷ್ಠವೆಂದು ಬ್ರಹ್ಮ ಹೆಮ್ಮೆಗೊಂಡಾಗ ಶಿವನು ಭೈರವನನ್ನು ಸೃಜಿಸಿಬಿಡಲು, ಅವನು ಬ್ರಹ್ಮನ ಐದನೇ ತಲೆಯನ್ನು ಕತ್ತರಿಸಲು, ಅದು ಅವನ ಕೈಗಂಟಿಕೊಂಡಿತು. ಭೈರವನು ಕಾಪಾಲಿಕನಾಗಿ ತಿರುಗುತ್ತ ಕಾಶೀಕ್ಷೇತ್ರಕ್ಕೆ ಬರಲು ಆ ಕಪಾಲವು ಆತನ ಕೈಯಿಂದ ಜಾರಿತು (ಶಿವಶತ).

ಭೋಗವತಿ -- ೧. ನಿಬಂಧನೆಂಬ ಮುನಿಯ ತಾಯಿ. ಈಕೆ ಜ್ಞಾನಿಯಾದ ಸ್ತ್ರೀ (ಮ. ಶಾಂ). ೨. ನಾಗಲೋಕ (ಮ. ಉ).

ಭೋಜ -- ಭೋಜದೇಶಾಧಿಪತಿ ಕೃತವರ್ಮ (ಮ. ಆ., ದ್ರೋ).

ಭೋಜಕಟಕ -- ರುಕ್ಮಿಣಿಯ ಅಣ್ಣನಾದ ರುಕ್ಮನು ಕೃಷ್ಣನಿಂದ ಪರಾಜಿತನಾದಾಗ ನಾಚಿಕೆಯಿಂದ ಕುಂಡಿನಾನಗರಕ್ಕೆ ಹೋಗದೆ ಅಲ್ಲೇ ಒಂದು ಹೊಸ ನಗರವನ್ನು ಈ ಹೆಸರಿನಿಂದ ನಿರ್ಮಾಣಮಾಡಿದನು. ಇದು ಈಗ ಬೀರಾರಿನಲ್ಲಿರುವ

ಪೂರ್ಣಾನದಿಯ ದಡದ ಮೇಲಿದೆ. ಇದಕ್ಕೆ ಈಗ ಎಲ್ಲಿಚ್‌ಪುರವೆನ್ನುತ್ತಾರೆ (ಮ.ಸ).

ಭೋಜಾ -- ಸವೀರನ ಪುತ್ರಿ ; ಈಕೆ ಸಾತ್ಯಕಿಯ ಪತ್ನಿ. ಇವಳಿಗೆ ಸರಸ್ವತಿ ಎಂಬ ಹೆಸರೂ ಇದೆ. ಈಕೆಗೆ ಹತ್ತು ಮಂದಿ ಮಕ್ಕಳು. ನೋ -- ಸಾತ್ಯಕಿ (ಮ. ದ್ರೋ.,ಮೌ).

ಭೌತ್ಯ --ಭೂತಿಯೆಂಬ ಮುನಿಯ ಮಗ. ಇವನು ಶೀಘ್ರಕೋಪಿ; ಮಹಾತಪಸ್ವಿ. ಸೂರ್ಯಚಂದ್ರರೂ, ಪಂಚಭೂತಗಳೂ ಆತನ ಮನೋವೃತ್ತಿಯನ್ನನುಸರಿಸುತ್ತಿದ್ದವು. ಈತನ ಶಿಷ್ಯನಾದ ಶಾಂತಿಮುನಿಯು ಅಗ್ನಿರಕ್ಷಣೆಗಾಗಿ ಗುರುವಿನಿಂದ ನೇಮಿಸಲ್ಪಟ್ಟಿರಲು, ಈತನು ಕಾಡಿಗೆ ಸಮಿತ್ಪುಷ್ಪಗಳನ್ನು ತರಲು ಹೋದಾಗ ಅಗ್ನಿಯು ಆಶ್ರಮದಲ್ಲಿ ನಂದಿಹೋದನು. ಶಾಂತಿಯು ಅಗ್ನಿಯನ್ನು ಪ್ರಾರ್ಥಿಸಿ ಪುನಃಜ್ವಲಿಸುವಂತೆ ಮಾಡಿ, ಗುರುವಿಗೆ ಒಬ್ಬ ಪುತ್ರನನ್ನು ಕರುಣಿಸುವಂತೆ ಮಾಡಿದನು. ಈ ಅಗ್ನಿಯ ಅನುಗ್ರದಿಂದ ಹುಟ್ಟಿದ ಮಗನೇ ಭೌತ್ಯ. ಇವನು ಮನ್ವಂತರಾಧಿಪತಿಯಾದನು (ಮಾರ್ಕಂ. ಪು).

ಭೌಮನ --ವಿಶ್ವಕರ್ಮ ; ಇವನು ದೇವತೆಗಳ ಬಡಗಿ, ಇವನು ದೇವಲೋಕದಲ್ಲಿ ಅಮೃತವನ್ನು ಕಾಪಾಡುವವರಲ್ಲೊಬ್ಬ (ಮ. ಆ.)

ಭೌಮಾಶ್ವಿ -- ಈಕೆ ಶಿಬಿಯ ಮಗಳು. ಈಕೆಯ ಪತಿ ನಿತಂತು ಎಂಬ ರಾಜನ ಮಕ್ಕಳಾದ ಸಾಲ್ವೇಯ. ಶೂರಸೇನ, ಶ್ರುತಸೇನ, ತಿಂದುಸಾರ, ಅತಿಸಾರ ಎಂಬುವರು. ಇವರು ಅಸ್ತ್ರವಿದ್ಯಾನಿಪುಣರು. ಈ ಐವರು ರಾಜಕುಮಾರರನ್ನು ಭೌಮಾಶ್ವಿಯು ಸ್ವಯಂವರದಲ್ಲಿ ವರಿಸಿದಳು. ಈಕೆ ಉತ್ತಮ ಸಂಗೀತಜ್ಞಾನವುಳ್ಳವಳಾಗಿದ್ದು ಗಾಂಧರ್ವಸ್ವರ, ಮೂರ್ಛೆಗಳೊಡನೆ ಹಾಡುತ್ತಿದ್ದಳು. ಈಕೆಗೆ ಐವರು ಪತಿಗಳಿಂದ ಹುಟ್ಟಿದ ಮಕ್ಕಳಿಗೆ ಆ ತಂದೆಗಳ ಹೆಸರನ್ನೇ ಇಟ್ಟಿದ್ದರು. ಮುಂದೆ ಆ ವಂಶದಲ್ಲಿ ಹುಟ್ಟಿದವರಿಗೂ ಆ ಹೆಸರುಗಳೇ ಬಂದವು. ಇದು ವ್ಯಾಸನು 'ದ್ರೌಪದಿಯು ಐದು ಜನರನ್ನು ವಿವಾಹವಾದುದು ವಿಶೇಷವಲ್ಲ ' ಎನ್ನುವಾಗ ಹೇಳಿದ ಕತೆ (ಮ. ಆ., ವೈವಾ). ನೋ -- ದ್ರೌಪದಿ, ನಾರಾಯಣ.

ಭ್ರತಕೀಲ -- ವಿಶ್ವಾಮಿತ್ರನ ವಂಶದ ಮಂತ್ರಪ್ರವರ್ತಕನೊಬ್ಬ.

ಭ್ರಮರ -- ಜಯದ್ರಥನ ಸಹೋದರ (ಮ. ವ).

ಮ

ಮಕರಕೇತು -- ಮೊಸಳೆ ಅಥವಾ ಒಂದು ಜಾತಿಯ ಮೀನು ಧ್ವಜವಾಗಿ ಉಳ್ಳವನು; ಪ್ರದ್ಯುಮ್ನ. ನೋ - ಪ್ರದ್ಯುಮ್ನ (ಮ. ವ).

ಮಕರಧ್ವಜ -- ೧. ಮನ್ಮಥ ; ಪ್ರದ್ಯುಮ್ನ. ೨. ಧೃತರಾಷ್ಟ್ರನ ಪುತ್ರ; ಭೀಮಸೇನನಿಂದ ಹತನಾದ (ಮ. ಭೀ).

ಮಗಧ -- ಒಂದು ದೇಶ; ಬಿಹಾರಪ್ರಾಂತ. ಇದರ ಪಶ್ಚಿಮ ಮೇರೆ ಶೋಣಾನದಿ. ಪ್ರಾಚೀನ ಮಗಧಕ್ಕೆ ಕೆಲವು ಸಮಯ ರಾಜಗೃಹವು ರಾಜಧಾನಿಯಾಗಿತ್ತು. ಇಲ್ಲಿ ವೈಹಾರ. ವಾರಾಹ, ವೃಷಭ, ಋಷಿಗೀ (ಋಷಭಕೂಟ), ಚೈತ್ಯಕವೆಂಬ ಐದು ಪರ್ವತಗಳಿವೆ. ರಾಮಾಯಣಕಾಲದ ದಶರಥನ ಪತ್ನಿಯಾದ ಸುಮಿತ್ರೆಯ ತಂದೆ ಶೂರಸೇನನ ರಾಜ್ಯ ಇದಾಗಿತ್ತು.

ಮಗಧ ದೇಶಕ್ಕೆ ಉತ್ತರದಲ್ಲಿ ಗಂಗಾನದಿ, ದಕ್ಷಿಣದಲ್ಲಿ ವಿಂಧ್ಯಗಿರಿ, ಪಶ್ಚಿಮದಲ್ಲಿ ಶೋಣಾನದಿ, ಪೂರ್ವದಲ್ಲಿ ಚಂಪಾದೇಶವೂ ಎಲ್ಲೆಗಳಾಗಿದ್ದುವು. ಮಗಧಕ್ಕೆ ರಾಜಧಾನಿ ಪ್ರಥಮದಲ್ಲಿ ಗಿರಿವ್ರಜವೆಂಬ ದುರ್ಗವೂ, ಅನಂತರ ಕ್ರಮವಾಗಿ ರಾಜಗೃಹ, ವೈಶಾಲಿ, ಪಾಟಲೀಪುತ್ರಗಳು ರಾಜಧಾನಿಗಳಾದವು. ಪಾಟಲೀಪುತ್ರಕ್ಕೆ ಕುಸುಮಪುರ ಮತ್ತು ಪುಷ್ಪಪುರಗಳೆಂಬ ಹೆಸರುಗಳಿದ್ದವು. ಈ ಪಟ್ಟಣಕ್ಕೆ ಈಗ ಪಾಟ್ನಾ ಎನ್ನುತ್ತಾರೆ. ಈ ಪಟ್ಟಣವು ಪಾಟಲಿ (ಪಾದರಿ) ಹೂವಿನ ಆಕಾರದಲ್ಲಿತ್ತೆಂದೂ, ಈ ಪಟ್ಟಣದ ಸುತ್ತಲೂ ಪಾಟಲೀವೃಕ್ಷಗಳು ತುಂಬ ಬೆಳೆಯುತ್ತಿದ್ದವೆಂದೂ ಹೇಳುತ್ತಾರೆ. ಶ್ರೀರಾಮಲಕ್ಷ್ಮಣರು ಸರಯೂ -- ಗಂಗಾ ಸಂಗಮದ ಮೇಲೆ ಸರಯೂ ನದಿಯನ್ನು ದಾಟಿ ದಕ್ಷಿಣತೀರವನ್ನು ಸೇರುತ್ತಲೇ ಅವರಿಗೆ ಪಾಟಲಾದಿ ವೃಕ್ಷಸಂಕೀರ್ಣವಾದ ವನವು ಕಾಣಬಂದಿತೆಂದು ಶ್ರೀಮದ್ರಾಮಾಯಣದಲ್ಲಿ ವರ್ಣಿತವಾಗಿದೆ. ಭಾರತ ಕಾಲದ ಜರಾಸಂಧನ ರಾಜ್ಯವಾಗಿತ್ತು ಇದು. ನೋ - ಜರಾಸಂಧ (ಮ. ಭೀ).

ಮಂಕಣಕ (ಮಂಕಣ)-- ೧. ಕುರುಕ್ಷೇತ್ರದ ದ್ವಾರಪಾಲಕನಾದ ಯಕ್ಷ. ೨.ಸುಕನ್ಯೆಯಲ್ಲಿ ಮಾತರಿಶ್ವನಿಂದ (ವಾಯುವಿನಿಂದ) ಹುಟ್ಟಿದ ಋಷಿ. ಈತನಿಗೆ ವಾಯುವೇಗ, ವಾಯುಬಲ, ವಾಯುಹ, ವಾಯುಮಂಡಲ, ವಾಯುಜಾಲ, ವಾಯುರೇತ, ವಾಯುಚಕ್ರರೆಂಬ ಏಳು ಮಂದಿ ಮಕ್ಕಳು. ಈತನು ಕಶ್ಯಪನ ಮಾನಸಪುತ್ರನೆಂದಿದೆ. (ವಾಮನಪು., ಮ. ಶ.,. ಪದ್ಮಪು., ಸ್ಕಾಂ.ಪು).

ಇವನೊಮ್ಮೆ ಸ್ನಾನಕ್ಕಾಗಿ ಸರಸ್ವತೀ ನದಿಗೆ ಹೋಗಿದ್ದಾಗ ಅಲ್ಲಿ ಅತ್ಯಂತ ಸುಂದರಿಯಾದ ಸ್ತ್ರೀಯೊಬ್ಬಳು ನಗ್ನಳಾಗಿ ಸ್ನಾನಮಾಡುತ್ತಿದ್ದಳು. ಅವಳನ್ನು

ಕಂಡು ಮಂಕಣ ಮುನಿಗೆ ವೀರ್ಯಸ್ಖಲನವಾಗಲು ಅವನು ಅದನ್ನು ಒಂದು ಕಲಶದಲ್ಲಿ ರಕ್ಷಿಸಿಟ್ಟನು. ಆ ಕಲಶದಲ್ಲಿ ಅವನ ವೀರ್ಯವು ಏಳು ಭಾಗಗಳಾಗಿ ಅವುಗಳಿಂದ ಮರುದ್ಗಣಗಳಲ್ಲಿ ಸೇರಿದ ವಾಯುವೇಗ, ವಾಯುಬಲ, ವಾಯುಹ, ವಾಯುಮಂಡಲ, ವಾಯುಜ್ವಾಲ, ವಾಯುರೇತಸ್ಸು, ವಾಯುಚಕ್ರರೆಂಬ ಏಳು ಮಹರ್ಷಿಗಳು ಉತ್ಪತ್ತಿಯಾದರು. ಇವರು ಏಳು ಮಂದಿಯೇ ಮರುದ್ಗಣಗಳ ಉತ್ಪತ್ತಿಗೆ ಕಾರಣರು (ಮ. ಶ).೩. ಒಬ್ಬ ಋಷಿ. ಸಪ್ತಸಾರಸ್ವತವೆಂಬ ತೀರ್ಥದಲ್ಲಿ ಇವನು ಸಿದ್ಧಿಪಡೆದನು. ಇವನ ಕೈಯಲ್ಲಿ ದರ್ಭೆಯ ಗಾಯವಾಗಿ ಶಾಕರಸವು ಸುರಿಯಲು ಅವನು ಸಂತಸದಿಂದ ನರ್ತನ ಮಾಡತೊಡಗಿದನು. ಅವನ ತೇಜಸ್ಸಿನಿಂದ ಪ್ರಭಾವ ಹೊಂದಿದ ಸ್ಥಾವರ ಜಂಗಮಗಳೂ ಅವನೊಡನೆ ಕುಣಿಯತೊಡಗಿದವು. ಆಗ ಬ್ರಹ್ಮಾದಿ ದೇವತೆಗಳು ಶಿವನೊಡನೆ ಕುಣಿಯತೊಡಗಿದವು. ಆಗ ಬ್ರಹ್ಮಾದಿ ದೇವತೆಗಳು ಶಿವನೊಡನೆ -- 'ಈ ಮಂಕಣಕ ಮುನಿಯು ಕುಣಿಯದಂತೆ ಮಾಡಬೇಕು ' ಎನ್ನಲು ಶಿವನು ಬ್ರಾಹ್ಮಣ ವೇಷದಿಂದ ಬಂದು ಮುನಿಯೊಡನೆ ಕುಣಿಯುತ್ತಿದ್ದ ಕಾರಣವನ್ನು ತಿಳಿದು ಅವನ ಅಜ್ಞಾನವನ್ನು ಹೋಗಲಾಡಿಸಿ ತಾನು ಪ್ರತ್ಯಕ್ಷನಾದನು (ಮ. ಶ).

ಮಂಕಿ -- ಋಷಿಯೊಬ್ಬ. ಈತನು ಅರಣ್ಯದಲ್ಲಿ ವ್ಯವಸಾಯದಿಂದ ಜೀವಿಸುತ್ತಿದ್ದನು. (ಮ. ಶಾಂ).

ಮಚಚತ್ರುಕ -- ೧. ಯಕ್ಷನೊಬ್ಬ. ೨. ತೀರ್ಥವೊಂದು (ಮ. ವ., ಶ).

ಮಣಲೂರು (ಮಣಿಪುರ) -- ಅರ್ಜುನನ ಮಾವನಾದ ಪಾಂಡ್ಯದೇಶದ ಚಿತ್ರವಾಹನನ ಪಟ್ಟಣ. ಇಲ್ಲಿಗೆ ಅರ್ಜುನನು ತೀರ್ಥಯಾತ್ರಾನಿಮಿತ್ತ ಬಂದು ಈತನ ಮಗಳಾದ ಚಿತ್ರಾಂಗದೆಯನ್ನು ಮದುವೆಯಾದನು. ಬಭ್ರುವಾಹನನು ಈಕೆಯ ಮಗ. ರಾಜಸೂಯಯಾಗದ ಕಾಲದಲ್ಲಿ ಸಹದೇವನೂ, ಅಶ್ವಮೇಧದ ಕಾಲದಲ್ಲಿ ಅರ್ಜುನನೂ ಇಲ್ಲಿಗೆ ಬಂದಿದ್ದರು. ನೋ - ಚಿತ್ರಾಂಗದ (ಮ. ಆ., ಅಶ್ವ., ಸ).

ಮಣಿ -- ೧. ಋಷಿಯೊಬ್ಬ (ಮ. ಸ). ೨. ಒಂದು ಊರು. ಇದು ಬದರೀನಾಥದಿಂದ ಮೂರು ಮೈಲು ದೂರದಲ್ಲಿದೆ, ಭಾರತದೇಶ ಮತ್ತು ಟಿಬೆಟ್ಟಿನ ಕಟ್ಟಕಡೆಯ ಗ್ರಾಮವಿದು. ಇದಕ್ಕೆ ಮೂರು ಮೈಲುದೂರದಲ್ಲಿ ನಾಲ್ಕುನೂರು ಅಡಿ ಎತ್ತರದಿಂದ ವಸುಧಾರಾ ಎಂಬ ನದಿಯು ಕೆಳಗೆ ಹಾರುತ್ತದೆ. ಧರ್ಮರಾಯನು ಇಲ್ಲಿಂದಲೇ ಸ್ವರ್ಗಕ್ಕೆ ಏರಿದನು. ಇವನು ಏರಿದ ಸೋಪಾನಗಳು ಇನ್ನೂ ಈ ಪರ್ವತದಲ್ಲಿ ಕಾಣಸಿಗುತ್ತವೆ. ಇದರ ಸಮೀಪದಲ್ಲೇ ಕುಬೇರನ ಅಲಕಾಪುರಿಯಿದೆ. ಇಲ್ಲಿಯೇ ಅಲಕಾನಂದಾ ನದಿ ಹುಟ್ಟುತ್ತದೆ. ಈ

ಮಣಿಯೆಂಬ ಊರು ಅಲಕನಂದೆಯ ಉತ್ತರ ತಟದಲ್ಲಿದೆ. ಇಲ್ಲಿಯ ಒಂದು ಗುಡ್ಡದಲ್ಲಿ ವ್ಯಾಸ ಮತ್ತು ಗಣೇಶನ ಗುಹೆ ಇದೆ. ಇಲ್ಲೇ ವ್ಯಾಸನು ಗಣಪತಿಯಿಂದ ಭಾರತ ಮತ್ತು ಪುರಾಣಗಳನ್ನು ಬರೆಸಿದನೆನ್ನುತ್ತಾರೆ. ಈ ಗುಹೆಯ ಪಕ್ಕದಲೇ ಸರಸ್ವತೀನದಿಯು ಕಲಕಲ ನಾದದಿಂದ ಹರಿಯುತ್ತದೆ.

ಮಣಿಪುರ -- ೧. ನೋ - ಮಣಲೂರು. ೨. ಇದು ನಿವಾತಕವಚರೆಂಬ ರಾಕ್ಷಸರ ರಾಜಧಾನಿಯಾಗಿತ್ತು. ರಾವಣ ತನ್ನ ದಿಗ್ವಿಜಯಕಾಲದಲ್ಲಿ ಈ ಪಟ್ಟಣದ ಮೇಲೆ ದಂಡೆತ್ತಿ ಬಂದ (ರಾಮಾ. ಉತ್ತರ).

ಮಣಿಪುಷ್ಪಕ -- ಪಾಂಡುಪುತ್ರನಾದ ಸಹದೇವನ ಶಂಖ (ಮ. ಭೀ).

ಮಣಿಮತಿ -- ವಾತಾಪಿ -- ಇಲ್ವಲರ ಪಟ್ಟಣ. ಅಗಸ್ತ್ಯನು ಲೋಪಾಮುದ್ರೆಯ ಬಯಕೆಯಂತೆ ಸಂಪತ್ತನ್ನು ಸಂಗ್ರಹಿಸಲು ಈ ಪಟ್ಟಣಕ್ಕೆ ಬಂದಿದ್ದನು. ಇದಕ್ಕೆ ದುರ್ಜಯ ಎಂಬ ಹೆಸರೂ ಇದೆ (ಮ. ವ).

ಮಣಿಮಂತ -- ಒಬ್ಬ ರಾಕ್ಷಸ. ಪಾಂಡವರು ಆರ್ಷ್ಟಿಷೇಣ ಎಂಬ ರಾಜರ್ಷಿಯ ಆಶ್ರಮದಲ್ಲಿದ್ದಾಗ ವಾಯುವು ಐದು ವಿಧದ ವರ್ಣಗಳುಳ್ಳ ಹೂಗಳನ್ನು ಆಶ್ರಮದ ಮುಂದೆ ಹಾಕಲು ದ್ರೌಪದಿಯು ಆ ಹೂವನ್ನು ಮುಡಿಯಲು ಬಯಸಿದಳು. ಅಲ್ಲದೆ ಅವಳು ಆ ಪರ್ವತದ ಸುಂದರ ಪ್ರದೇಶಗಳನ್ನು ನೋಡಲು ಅಪೇಕ್ಷೆಪಟ್ಟಿದ್ದರಿಂದ ಆ ಪ್ರದೇಶವನ್ನು ನಿಷ್ಕಂಟಕವನ್ನಾಗಿ ಮಾಡಲು ಹೊರಟ ಭೀಮನಿಗೂ ಕುಬೇರನ ಮಿತ್ರನಾದ ಮಣಿಮಂತನಿಗೂ ಯುದ್ಧವಾಗಿ, ಮಣಿಮಂತನು ಭೀಮನ ಗದಾಪ್ರಹಾರದಿಂದ ಮೃತನಾದನು. ಈತನು ಹಿಂದೆ ಆಕಾಶಮಾರ್ಗದಲ್ಲಿ ಹೋಗುತ್ತ ಕೆಳಗೆ ಹೋಗುತ್ತಿದ್ದ ಅಗಸ್ತ್ಯನ ಮೇಲೆ ಉಗುಳಿದುದರಿಂದ ಅವನಿಗೆ ಮನುಷ್ಯನಿಂದ ಮರಣವಾಗುವಂತೆ ಶಾಪವಿತ್ತಿದ್ದನು. ಹೀಗಾಗಿ ಭೀಮನಿಂದ ಮೃತನಾದನು (ಮ. ವ).

ಮಣಿಮಾನ್ -- ೧. ದ್ರೌಪದಿಯ ಸ್ವಯಂವರಕ್ಕೆ ಬಂದ ಒಬ್ಬ ಕ್ಷತ್ರಿಯ (ಮ. ಆ). ೨. ಒಂದು ಸರ್ಪ (ಮ. ಸ). ೩. ರಾಕ್ಷಸನೊಬ್ಬ. ನೋ -- ಮಣಿಮಂತ (ಮ. ವ).

ಮಂಡಲವ್ಯೂಹ -- ಕುರು ಸೇನೆಯ ಒಂದು ವ್ಯೂಹ (ಮ.ಭೀ)

ಮಂಡೂಕಕನ್ಯೆ -- ಈಕೆಗೆ ಸುಶೋಭನೆ ಎಂದು ಹೆಸರು. ಈಕೆ ಮಂಡೂಕರಾಜಪುತ್ರಿ. ಈಕೆಯ ಗಂಡ ಇಕ್ಷ್ವಾಕುವಂಶದ ಪರೀಕ್ಷಿತ. ಈಕೆಗೆ ಶಲ, ದಲ, ಬಲರೆಂಬ ಮೂವರು ಮಕ್ಕಳಿದ್ದರು. ನೋ -- ಪರೀಕ್ಷಿತ, ಶಲ, ದಲ, ಬಲ (ಮ. ವ).

ಮಂಡೂಕರಾಜ -- ಈತನಿಗೆ ಆಯುವೆಂದು ಹೆಸರು. ಈತನ ಮಗಳು ಸುಶೋಭನೆ ನೋ - ಮಂಡೂಕಕನ್ಯೆ (ಮ. ವ).

ಮಂಡೋದರಿ -- ರಾಕ್ಷಸರ ಶಿಲ್ಪಿಯಾದ ಮಯಾಸುರನ ಮಗಳು. ಈಕೆಯ ತಾಯಿ ಹೇಮೆಯೆಂಬ ಅಪ್ಸರೆ. ಮಂಡೋದರಿಯನ್ನು ರಾವಣನು ವಿವಾಹವಾದನು. ಒಬ್ಬ ಮುನಿಯು ಲಕ್ಷ್ಮಿಯನ್ನು ಮಗಳಾಗಿ ಪಡೆಯಬೇಕೆಂದು ಮುನಿಗಳು ಮಂತ್ರಿಸಿದ ರಕ್ತವನ್ನು ಒಂದು ಕಲಶದಲ್ಲಿಟ್ಟಿರಲು ದಿಗ್ವಿಜಯಕ್ಕೆ ಹೋದ ರಾವಣನು ಅದನ್ನು ಹೊತ್ತುಕೊಂಡು ತಂದು ಪತ್ನಿಯಾದ ಮಂಡೋದರಿಯ ಕೈಯಲ್ಲಿಟ್ಟು -- 'ಇದನ್ನು ಕುಡಿಯಬೇಡ !' ಎಂದು ಎಚ್ಚರಿಸಿ ಹೋದನು. ಅವನು ಪರಸ್ತ್ರೀಯರನ್ನು ಗೋಳಾಡಿಸುವುದನ್ನು ನೋಡಿ ಸಹಿಸಲಾರದೆ ಆ ಕಲಶದಲ್ಲಿದ್ದ ರಕ್ತವನ್ನು ವಿಷವೆಂದು ಭಾವಿಸಿ ಆಕೆ ಕುಡಿದುಬಿಟ್ಟಳು. ಅದರ ಪರಿಣಾಮವಾಗಿ ಮಂಡೋದರಿಯು ಗರ್ಭಿಣಿಯಾಗಿ, ನಾಚಿಕೆಯಿಂದ ಕುರುಕ್ಷೇತ್ರದ ಬಳಿ ವಿಮಾನದಲ್ಲಿ ಬರುತ್ತಿರುವಾಗ ಅಲ್ಲೇ ಪ್ರಸವವೇದನೆಯಿಂದ, ಒಂದು ಹೆಣ್ಣು ಕೂಸನ್ನು ಹೆತ್ತು, ಅದನ್ನು ಒಂದು ಪೆಟ್ಟಿಗೆಯಲ್ಲಿ ಹಾಕಿ ಬಾಯಿ ಮುಚ್ಚಿ ಆ ಕುರುಕ್ಷೇತ್ರದಲ್ಲಿ ಹುಗಿದಿಟ್ಟು ಲಂಕೆಗೆ ತಿರುಗಿದಳು. ಈ ಮಗುವೇ ಜನಕರಾಜನಿಗೆ ಭೂಮಿಯಲ್ಲಿ ದೊರೆತ ಸೀತೆ (ಅನಂ. ರಾಮಾ).

ಮತಂಗ -- ೧. ಒಬ್ಬ ಬ್ರಹ್ಮರ್ಷಿ. ಬ್ರಾಹ್ಮಣನಿಂದ ಕ್ಷೌರಿಕ ಸ್ತ್ರೀಯಲ್ಲಿ ಹುಟ್ಟಿದ ಮಹರ್ಷಿ. ಇವನು ಬ್ರಾಹ್ಮಣ್ಯದ ಪ್ರಾಪ್ತಿಗಾಗಿ ತಪಸ್ಸುಮಾಡಿದನು. ಇಂದ್ರನು ಇವನಿಗೆ ಎಷ್ಟೋ ವರಗಳನ್ನು ಕೊಟ್ಟರೂ ತೃಪ್ತಿಪಡದೆ, ಕೊನೆಗೆ ಬ್ರಾಹ್ಮಣ್ಯವನ್ನು ಸಂಪಾದಿಸಿ ಬ್ರಹ್ಮರ್ಷಿಯಾದನು. (ಮ. ಅನು). ೨. ಅವನು ಋಷ್ಯಮೂಕ ಪರ್ವತದ ಬಳಿ ತಪಸ್ಸು ಮಾಡಿಕೊಂಡಿದ್ದನು. ವಾಲಿಯು ದುಂದುಭಿಯನ್ನು ಕೊಂದು ಅವನು ರುಂಡವನ್ನು ಎಸೆದಾಗ ಈ ಮುನಿಯ ಆಶ್ರಮದಲ್ಲಿ ಬಿದ್ದು ಆ ಪ್ರದೇಶವನ್ನೆಲ್ಲಾ ಹೊಲಸುಮಾಡಿಬಿಟ್ಟಿತು. ಇದರಿಂದ ಈ ಮುನಿಯು ಕೋಪಗೊಂಡು --'ಇಲ್ಲಿಗೆ ವಾಲಿಯು ಬಂದರೆ ಅವನಿಗೆ ಮರಣ ಪ್ರಾಪ್ತವಾಗಲಿ' ಎಂದು ಶಾಪವಿತ್ತನು (ರಾಮಾ. ಕಿಷ್ಕಿಂ). ೩. ಮಾತಂಗನೆಂಬ ಮಹರ್ಷಿಯ ತಂದೆ. ಈತನು ಮಹಾತಪಸ್ವಿಯಾಗಿದ್ದನು. ನೋ - ಮಾತಂಗ.

ಮತಂಗಕೇದಾರ -- ಒಂದು ಕ್ಷೇತ್ರ (ಮ. ವ).

ಮತಿ -- ದಕ್ಷಪ್ರಜಾಪತಿಯ ಮಗಳು. ಈಕೆ ಧರ್ಮಪ್ರಜಾಪತಿಯ ಪತ್ನಿಯಾಗಿದ್ದಳು. (ಮ. ಆ).

ಮತಿನಾರ -- ಚಂದ್ರವಂಶದ ಅನಾಧೃಷ್ಟನೆಂಬ ರಾಜನ ಮಗ. ಈತನಿಗೆ ತಂಸು, ಮಹಾನ್, ಅತಿರಥ, ದ್ರುಹ್ಯು ಎಂಬ ನಾಲ್ವರು ಮಕ್ಕಳಿದ್ದರು. ಇವನು ಅನೇಕ ಅಶ್ವಮೇಧ, ರಾಜಸೂಯಯಾಗಗಳನ್ನು ಮಾಡಿದನು (ಮ. ಆ).

ಮತ್ಸಿಲ್ಲ -- ಉಪರಿಚರವಸುವಿನ ನಾಲ್ಕನೆಯ ಮಗ. ಇವನಿಗೆ ಬೃಹದ್ರಥ. ಕುಶಾಂಬ, ಪ್ರತಗ್ರಹರೆಂಬ ಅಣ್ಣಂದಿರೂ, ಯದು ಎಂಬ ತಮ್ಮನೂ ಇದ್ದರು. ಇವನ ತಾಯಿ ಶುಕ್ತಿಮತಿ ಎಂಬ ನದಿಯ ಮಗಳಾದ ಗಿರಿಕೆ, ನೋ - ಉಪರಿಚರ, ಗಿರಿಕಾ (ಮ. ಆ).

ಮತ್ಸ್ಯ -- ೧. ಉಪರಿಚರವಸುವಿನ ವೀರ್ಯದಿಂದ ಮೀನಿನ ಹೊಟ್ಟೆಯಲ್ಲಿ ಹುಟ್ಟಿದ ಮಗ. ಈತನ ಸಹೋದರಿ ಮತ್ಸ್ಯಗಂಧಾ ಅಥವಾ ಸತ್ಯವತಿ (ಮ. ಆ). ೨. ಒಂದು ದೇಶ. ಆಳ್ವಾರ್ ಸಂಸ್ಥಾನವನ್ನೂ, ಈಗಿನ ಜಯಪುರದ ಸುತ್ತಲಿನ ಪ್ರದೇಶವನ್ನೂ ಸೇರಿಸಿಕೊಂಡರೆ ಮತ್ಸ್ಯದೇಶವಾಗುತ್ತದೆ. ಶೂರಸೇನದೇಶದ ಪಶ್ಚಿಮಕ್ಕಿದೆ. ಪಾಂಡವರ ಕಾಲದಲ್ಲಿ ವಿರಾಟನು ಇಲ್ಲಿ ರಾಜ್ಯಭಾರ ಮಾಡುತ್ತಿದ್ದ (ಮ. ಭೀ).

ಮತ್ಸ್ಯಗಂಧಾ -- ಸತ್ಯವತಿಯ ಮೊದಲನೆಯ ಹೆಸರು. ನೋ - ಸತ್ಯವತಿ.

ಮತ್ಸ್ಯದೇಶ -- ನೋ - ಮತ್ಸ್ಯ.

ಮತ್ಸ್ಯರಾಜ -- ಮತ್ಸ್ಯದೇಶದ ರಾಜ ; ಬ್ರಹ್ಮನ ಶಾಪದಿಂದ ಅದ್ರಿಕೆ ಎಂಬ ಅಪ್ಸರೆಯು ಮೀನಾಗಿ ಉಪರಿಚರವಸುವಿನ ವೀರ್ಯವನ್ನು ನುಂಗಿ ಮತ್ಸ್ಯರಾಜನೆಂಬ ಮಗನನ್ನೂ, ಮತ್ಸ್ಯಗಂಧೆಯೆಂಬ ಮಗಳನ್ನೂ ಪಡೆದು ಶಾಪವಿಮೋಚನೆ ಹೊಂದಿದಳು. ನೋ - ಉಪರಿಚರ.

ಮತ್ಸ್ಯಾವತಾರ -- ನಾರಾಯಣನ ದಶಾವತಾರಗಳಲ್ಲಿ ಮೊದಲನೆಯದು. ಸೋಮಕನೆಂಬ ರಾಕ್ಷಸನು ವೇದಗಳನ್ನು ಅಪಹರಿಸಲು ವಿಷ್ಣುವು ಮತ್ಸ್ಯಾವತಾರ ಹೊಂದಿ ಆ ರಕ್ಕಸನನ್ನು ಕೊಂದು ವೇದವನ್ನುದ್ಧರಿಸಿದನು.

ವೈವಸ್ವತಮನುವು ತಪಸ್ಸುಮಾಡುತ್ತಿರುವಾಗ ಒಂದು ಮೀನು, ದೊಡ್ಡ ಮೀನುಗಳಿಂದ ತನ್ನನ್ನು ರಕ್ಷಿಸಬೇಕೆನ್ನಲು, ಅವನು ನೀರಿನಿಂದ ಅದನ್ನು ತೆಗೆದು ತನ್ನ ಕಮಂಡಲದಲ್ಲಿಟ್ಟುಕೊಂಡನು. ಆ ಮೀನು ದಿನದಿನವೂ ಬೆಳೆಯುತ್ತಾ ಬರಲು ಆತನು ಅದನ್ನು ಕಮಂಡಲುವಿನಿಂದ ತೆಗೆದು ಬಾವಿಯಲ್ಲಿ ಹಾಕಿದನು. ಮುಂದೆ ಬಾವಿಯು ಅದರ ಚಲನೆಗೆ ಸಾಲದಿರಲು ಗಂಗಾನದಿಯಲ್ಲಿ ಬಿಟ್ಟನು. ಕೆಲವು ದಿನಗಳಲ್ಲಿ ಆ ನದಿಯೂ ಅದರ ಸಂಚಾರಕ್ಕೆ ಸಂಕೋಚವಾಗಲು ಅದರ ಪ್ರಾರ್ಥನೆಯಂತೆ ಅದನ್ನು ಸಮುದ್ರದಲ್ಲಿ ಬಿಟ್ಟನು. ಆಗ ಮನುವಿಗೆ ಅದರ ಸ್ಪರ್ಶದಿಂದ ಅಧಿಕಾನಂದವುಂಟಾಯಿತು. ಆ ಮತ್ಸ್ಯವು ಅವನೊಡನೆ

ಸದ್ಯದಲ್ಲೇ ಜಲಪ್ರಳಯವಾಗುವುದೆಂದೂ, ನೀನು ಎಲ್ಲಾ ಸಸ್ಯಗಳ ಬೀಜಗಳನ್ನು ಸಂಗ್ರಹಿಸಿ, ಒಂದು ನಾವೆಯನ್ನು ನಿರ್ಮಿಸಿ, ಸಪ್ತರ್ಷಿಗಳೊಡನೆ ಅದರಲ್ಲಿ ಕುಳಿತು ನನ್ನನ್ನು ನಿರೀಕ್ಷಿಸುತ್ತಿರು ' ಎಂದು ಹೇಳಿ ಸಮುದ್ರದ ನೀರಿನಲ್ಲಿ ಅದೃಶ್ಯವಾಯಿತು. ಮುಂದೆ ಪ್ರಳಯಕಾಲದಲ್ಲಿ ಆ ಮತ್ಸ್ಯವು ಹೇಳಿದಂತೆ ಆ ನಾವೆಯ ಬಳಿಗೆ ಬಂದು ಅದನ್ನು ಹಿಮವತ್ಪರ್ವತದ ಬಳಿಗೆ ಎಳೆದು ತಂದು ಅದನ್ನು ಆ ಪರ್ವತಶಿಖರಕ್ಕೆ ಕಟ್ಟಿಹಾಕುವಂತೆ ಹೇಳಿತು. ಅಂದಿನಿಂದ ಹಿಮಾಲಯಕ್ಕೆ ನೌಕಾಬಂಧನವೆಂದು ಹೆಸರಾಯಿತು. ಮನುವು ಅದರ ಅಭಿಪ್ರಾಯದಂತೆಯೇ ನಡೆದು ಮುಂದೆ ಘೋರ ತಪಸ್ಸನ್ನು ಮಾಡಿ ಪೂರ್ವದ ಸೃಷ್ಟಿಕಾರ್ಯಕ್ಕೆ ತೊಡಗಿದನು (ಮ. ವ., ಭಾಗ.).

ಮಥುರಾ -- ಇದು ಶ್ರೀ ಕೃಷ್ಣನ ಮಹಿಮಾಮಯವಾದ ಊರು. ಇಲ್ಲಿ ಯಮುನಾ ನದಿಗೆ ಇಪ್ಪತ್ತುನಾಲ್ಕು ಮೆಟ್ಟಲುಗಳಿವೆ (ಘಾಟು).ಇಲ್ಲಿ ಶ್ರೀ ಕೃಷ್ಣನು ಕಂಸನನ್ನು ವಧಿಸಿದನು. ಕುಬ್ಜೆಯನ್ನು ಉದ್ಧರಿಸಿದನು. ಇಲ್ಲೇ ತುಲಸೀದಾಸನಿಗೆ ಶ್ರೀರಾಮಚಂದ್ರನ ದರ್ಶನವಾಯಿತು. ಅರುಂಧತೀ ಸಹಿತ ಸಪ್ತ ಋಷಿಗಳು ಇಲ್ಲಿ ತಪಸ್ಸುಮಾಡಿದರು. ಧ್ರುವನೂ ಇಲ್ಲೇ ಶ್ರೀಮಹಾವಿಷ್ಣುವಿನ ಸಂದರ್ಶನ ಪಡೆದನು.

ಮದ (ಮಂದ)-- ಚ್ಯವನಮುನಿಯಿಂದ ನಿರ್ಮಿತನಾದ ಇಂದ್ರಶತ್ರು. ಶರ್ಯಾತಿರಾಜನು ಮಾಡಿದ ಯಜ್ಞದಲ್ಲಿ ಅಶ್ವಿನೀದೇವತೆಗಳಿಗೆ ಹವಿರ್ಭಾಗ ಕೊಟ್ಟಾಗ ಪ್ರತಿಭಟಿಸಿದ ಇಂದ್ರನ ನಾಶಕ್ಕಾಗಿ ಇವನು ಚ್ಯವನನಿಂದ ನಿರ್ಮಿತನಾದನು. ಇವನನ್ನು ಕಂಡ ಇಂದ್ರನು ಮುನಿಯನ್ನು ಪ್ರಾರ್ಥಿಸಲು ಅವನು ಮದಾಸುರನನ್ನು ಸ್ತ್ರೀ --ಮದ್ಯ-- ಜೂಜು -- ಬೇಟೆಯಲ್ಲಿ ವಾಸಮಾಡಿಕೊಂಡಿರುವಂತೆ ಆಜ್ಞಾಪಿಸಿ ಇಂದ್ರನನ್ನು ಉಳಿಸಿದನು (ಮ. ಅನು.).

ಮದಕಲೆ -- ವಿದ್ಯಾಧರಿಯೊಬ್ಬಳು. ಈಕೆ ಸುಮತಿ ಎಂಬ ವಿದ್ಯಾಧರನ ಪತ್ನಿ. ಈಕೆ ಆಕಾಶಗಂಗೆಯ ತಾವರೆಗಳ ಮಾಲೆಯನ್ನು ಹಿಡಿದುಕೊಂಡು ಬರುವಾಗ ದುರ್ವಾಸಮುನಿಯು ಅದನ್ನು ಕೇಳಲು, ಮದಕಲೆಯು ಅದನ್ನು ಅವನಿಗೆ ಕೊಟ್ಟಳು. ಆ ಮುನಿಯು ಐರಾವತವನ್ನೇರಿ ಬರುತ್ತಿದ್ದ ಇಂದ್ರನಿಗೆ ಅದನ್ನು ಕೊಡಲು, ಇಂದ್ರನು ಅದನ್ನು ಐರಾವತಕ್ಕೆ ಕೊಟ್ಟನು. ಅದು ಆ ಮಾಲೆಯನ್ನು ಕಾಲಡಿಯಲ್ಲಿ ಹಾಕಿ ತುಳಿಯಿತು. ಇದರಿಂದ ಕ್ರೋಧನಾದ ಮುನಿಯು ಇಂದ್ರನ ಸಂಪತ್ತು ನಾಶವಾಗುವಂತೆ ಶಾಪವಿತ್ತನು. (ಸ್ಕಾಂ. ಪು.).

ಮದನ -- ೧ ಮನ್ಮಥ; ಇವನು ಬ್ರಹ್ಮನ ಮಗ. ಬ್ರಹ್ಮನಿಗೆ ಮನ್ಮಥ ಮತ್ತು ಸಂಧ್ಯೆ ಎಂಬಿಬ್ಬರು ಮಕ್ಕಳು. ಇವನು ಜಗತ್ತನ್ನು ಮೋಹಿಸುವಂತೆ ಬ್ರಹ್ಮನಿಂದ

ವರವನ್ನು ಪಡೆದು, ಆ ವರದ ಪರೀಕ್ಷೆಯನ್ನು ಬ್ರಹ್ಮನ ಮೇಲೇ ನಡೆಸಲು, ಬ್ರಹ್ಮನು ತನ್ನ ಮಗಳಾದ ಸಂಧ್ಯೆಯನ್ನೇ ಮೋಹಿಸಿದನು. ಆಗ ಶಿವನು ಅಲ್ಲಿಗೆ ಬಂದು ಬ್ರಹ್ಮನಿಗೆ ಬುದ್ಧಿವಾದವನ್ನು ಹೇಳಬೇಕಾಯಿತು. ಬ್ರಹ್ಮನು ಮೋಹದಿಂದ ಕಣ್ಣು ತೆರೆದಮೇಲೆ ಮನ್ಮಥನ ಕುಕಾರ್ಯಕ್ಕೆ ಹೇಸಿ, ರೋಸಿ, 'ನೀನು ಶಿವನ ಫಾಲನೇತ್ರಾಗ್ನಿಯಿಂದ ಭಸ್ಮವಾಗು, ಎಂದು ಶಾಪವಿತ್ತನು. ಮುಂದೆ ಶಿವಪಾರ್ವತಿಯರ ವಿವಾಹಕ್ಕೆ ಮುಂದಾದ ಮನ್ಮಥನು ಶಿವನ ಹಣೆಗಣ್ಣಿನ ಕಿಚ್ಚಿನಿಂದ ಸುಟ್ಟುಹೋದನು. ಮುಂದೆ ಪಾರ್ವತೀ ದೇವಿಯೇ ಆತನನ್ನು ಬದುಕಿಸಿದಳು. ನೋ. --ಕಾಮ. ಇವನು ದಕ್ಷಪುತ್ರಿಯಾದ ರತಿಯನ್ನು ವಿವಾಹವಾಗಿದ್ದನು (ಶಿವಪು) ೨ ದುಷ್ಟಬುದ್ಧಿಯ ಮಗ. ನೋ. - ಚಂದ್ರಹಾಸ (ಜೈ. ಭಾ.)

ಮದನಸುಂದರಿ -- ದಕ್ಷಿಣ ದೇಶದ ರಾಜನಾದ ಕಂಬುಕಂಠನ ಮಗಳು. ಈಕೆಯನ್ನು ಶ್ರೀರಾಮನಿಗೆ ತಿಳಿಯದಂತೆ ಸ್ವಯಂವರ ಮಾಡಬೇಕೆಂದಿದ್ದಾಗ, ನಾರದರು ಶ್ರೀರಾಮನ ವಂಶದ ಮಹಿಮೆಯನ್ನು ಮದನಸುಂದರಿಗೆ, ಶತ್ರುಘ್ನನ ಕಿರಿಯ ಮಗನಾದ ಯೂಪಕೇತುವಿಗೆ ಮದನಸುಂದರಿಯ ಗುಣಸೌಂದರ್ಯಗಳನ್ನೂ ತಿಳಿಸಲು, ತಮಸಾನದಿಗೆ ಸ್ನಾನಕೆಂದು ಬಂದ ಯೂಪಕೇತುವು ಕಂಬುಕಂಠನ ರಾಜಧಾನಿಯಾದ ಶಿವಕಾಂತಿಯ ಕಡೆಗೆ ಸೇನೆಯೊಡನೆ ಹೊರಟನು. ಯೂಪಕೇತುವು ಮೋಹನಾಸ್ತ್ರದಿಂದ ಸ್ವಯಂವರಕ್ಕೆ ಬಂದಿದ್ದ ರಾಜರನ್ನೆಲ್ಲಾ ಗೆದ್ದು, ಮದನಸುಂದರಿಯನ್ನು ವಿವಾಹವಾದನು (ಆನಂ. ರಾಮಾ.)

ಮದಯಂತಿ -- ಸೂರ್ಯವಂಶದ ಸೌದಾಸನೆಂಬ ರಾಜನ ಪತ್ನಿ. ಈತನಿಗೆ ಕಲ್ಮಾಷ ಪಾದರಾಜನೆಂಬ ಹೆಸರಿದೆ. ನೋ - ಕಲ್ಮಾಷಪಾದ (ಮ. ಆ., ಅಶ್ವ.).

ಮದಾಲಸಾ -- ೧. ವಿಶ್ವಾವಸುವೆಂಬ ಗಂಧರ್ವನ ಮಗಳು. ಕುವಲಾಶ್ವನ ಪತ್ನಿ. ನೋ. ಕುವಲಾಶ್ವ. ಪಾತಾಳಕೇತು, (ಮಾರ್ಕಂ. ಪು.). ೨ ಒಬ್ಬ ಭಕ್ತೆ. ಈಕೆಯ ಹಾಡು ಮದಾಲಸಾ ಜೋಗುಳವೆಂದು ಪ್ರಸಿದ್ಧವಾಗಿದೆ.

ಮದಿರಾಕ್ಷ (ಮದಿರಾಶ್ವ)-- ವಿರಾಟನ ಸಹೋದರ (ಮ. ವಿ.).

ಮದಿರಾಶ್ವ --೧. ಇಕ್ಷ್ವಾಕು ವಂಶದ ದಶಾಶ್ವರಾಜ ಈತನ ತಂದೆ. ಮಾಹಿಷ್ಮತಿ ಈತನ ರಾಜ್ಯ. ಈತನ ಮಗಳು ಸುಮಧ್ಯಮೆ;ಅಳಿಯ ಹಿರಣ್ಯಹಸ್ತನೆಂಬ ಮುನಿ (ಮ. ಅನು., ಶಾಂ). ಈತನ ಮಗ ದ್ಯುತಿಮಾನ್. ೨. ನೋ. --ಮದಿರಾಕ್ಷ.

ಮದ್ರ --೧. ದೇಶ. ಇದು ಪಂಜಾಬಿನಲ್ಲಿರುವ ರಾವಿ ಮತ್ತು ಚೀನಾಬ್ ನದಿಗಳ ನಡುವಿನ ಪ್ರಾಂತ. ಇದರ ರಾಜಧಾನಿ ಶಾಕಲ (Sakala) (ಮ. ಭೀ. ೨. ಶಲ್ಯ.

ನೋ. -ಶಲ್ಯ (ಮ. ಭೀ). ದಶರಥನ ಕಾಲದಲ್ಲಿ ಮದ್ರದೇಶವನ್ನಾಳುತ್ತಿದ್ದ ಚಾರುದೇಷ್ಣನಿಗೂ ಈ ಹೆಸರು ಅನ್ವಯಿಸುತ್ತದೆ (ದೇವೀಭಾ).

ಮದ್ರರಾಜ -- ನೋ. --ಶಲ್ಯ, ಮದ್ರ,

ಮಧು (ಮಧುಕೈಟಭರು)-- ಇವರು ದೈತ್ಯರು. ವಿಷ್ಣುವಿನ ಕಿವಿಯ ಕೆಸರಿನಿಂದ (ಕುಗ್ಗೆ) ಹುಟ್ಟಿದವರು. ಮಾದಲು ಕಲ್ಲುಕಟ್ಟಿಗೆಗಳಂತೆ ನಿಶ್ಚೇತನರಾದ ಅವರಲ್ಲಿ ಬ್ರಹ್ಮದೇವನ ಅಪ್ಪಣೆಯಂತೆ ವಾಯುವು ಜೀವಕೊಟ್ಟನು. ಅವರು ಒಡನೆಯೇ ಬೆಳೆದುನಿಂತರು. ಅವರನ್ನು ಬ್ರಹ್ಮನು ಪರೀಕ್ಷಿಸಿದಾಗ ಮೊದಲಿನವನು ಮೆತ್ತಗಿದ್ದುದರಿಂದ ಅವನಿಗೆ ಮಧುವೆಂದೂ, ಇನ್ನೊಬ್ಬನು ಬ್ರಹ್ಮನ ಬೆರಳಿಗೆ ಕಠಿಣನಾಗಿ ತೋರಿದುದರಿಂದ ಅವನಿಗೆ ಕೈಟಭನೆಂದೂ ಹೆಸರಾಯಿತು. ಮುಂದೆ ಇವರ ಪೀಡೆಯನ್ನು ಸಹಿಸದೆ ಬ್ರಹ್ಮನು ಶ್ರೀಹರಿಯ ನಾಭಿಕಮಲಕೋಶದಲ್ಲಿ ಅಡಗಿ ಕೂತನು. ಆಮೇಲೆ ಇದಿರಾಳಿಗಳಿಲ್ಲದ ಆ ರಕ್ಕಸರೊಡನೆ ಹರಿಯು ಯುದ್ಧಕ್ಕೆ ತೊಡಗಲು ಆ ದಾನವರಿಬ್ಬರೂ ಹರಿಗೆ ಸೋತು ನಿರ್ವಿಣ್ಣರಾಗಿ -- 'ನಾರಾಯಣ, ನಿನ್ನ ಕೈಯಿಂದಲೇ ನಮಗೆ ಸಾಯುವ ಮನಸ್ಸಿದೆ; ನೀರಿಲ್ಲದ ಸ್ಥಳದಲ್ಲಿ ನಮ್ಮನ್ನು ಕೊಲ್ಲು' ಎಂದರು. ಆಗ ಹರಿಯು ಅವರಿಬ್ಬರನ್ನೂ ಭುಜಗಳಿಂದಲೂ ಕೊಡೆಗಳಿಂದಲೂ ಹಿಸುಕಿ ಕೊಂದನು. ಆಗ ದೈತ್ಯರ ದೇಹದಿಂದ ಮೇದಸ್ಸು ಹೊರಬಿದ್ದು ಸಮುದ್ರವನ್ನು ವ್ಯಾಪಿಸಿತು. ಇದೇ ಮೇದಿನಿ ಎಂದು ಕರೆಯಲ್ಪಟ್ಟು ಈಗ ಭೂಮಿಯಾಗಿದೆ (ಹರಿ, ಮ.ಸ.)ನೋ. --ಕೈಟಭ. ಇವರು ಲೋಲಾ ಎಂಬುವಳ ಮಕ್ಕಳು. ಮಧುವು ಶಿವನಿಂದ ಶೂಲಾಯುಧವನ್ನು ಪಡೆದು ಕುಂಭೀನಸಿ ಎಂಬಾಕೆಯನ್ನು ಮದುವೆಯಾಗಿ ಲವಣನನ್ನುಮಗನನ್ನಾಗಿ ಪಡೆದಳು. ಇವನ ಪಟ್ಟಣಕ್ಕೆ ಮಧುಪುರ ಅಥವಾ ಮಧುರೆ ಎನ್ನುತ್ತಾರೆ ನೋ. --ಲವಣ. ಲವಣನು ದುಷ್ಟನಾದುದರಿಂದ ಶತ್ರುಘ್ನನು ಇವನನ್ನು ಕೊಂದು ಇವನ ಪಟ್ಟಣವನ್ನು ತಾನು ಸ್ವಾಧೀನಪಡಿಸಿಕೊಂಡನು (ದೇವೀಭಾ., ಮ. ಸ., ವ.).

ಮಧುಚ್ಛಂದ -- ವಿಶ್ವಾಮಿತ್ರನ ಮಗ; ಈತ ಮಂತ್ರಪ್ರವರ್ತಕನಾಗಿದ್ದ (ಮ. ಅನು.).

ಮಧುಪರ್ಕ --೧. ಮಂಗಲ ಸಮಾರಂಭದಲ್ಲಿ ಮತ್ತು ಗೌರವದ ಅತಿಥಿಗಳು ಬಂದಾಗ ಕೊಡುವ ಜೇನುತುಪ್ಪ ಬೆರೆಸಿದ ಸಿಹಿಯಾದ ಪಾನೀಯ. ೨. ಗರುಡನ ಮಗ (ಮ. ಉ., ಆ.).

ಮಧುಮಂತ -- ದೇಶ ; ಒಂದು ಪಟ್ಟಣ ; ಇದು ವಿಂಧ್ಯಪರ್ವತದ ಬಳಿ ಇತ್ತು. ಇದು ದಂಡಕನು ನಿರ್ಮಾಣ ಮಾಡಿದ ಪಟ್ಟಣ. ನೋ. -ದಂಡ, ದಂಡಕ.

ಮಧುರೆ --ಶೂರಸೇನ ದೇಶದ ರಾಜಧಾನಿ. ಇದು ಶ್ರೀಕೃಷ್ಣನ ಜನ್ಮಸ್ಥಾನವಾಗಿತ್ತು. ಇದನ್ನು ಮಥುರೆ ಎನ್ನುವುದೂ ಇದೆ (Muttra). ನೋ. - ಮಧು.

ಮಧುರೆಯು ತಿರುಚಿನಾಪಳ್ಳಿಯಿಂದ ೯೬ ಮೈಲು ದೂರವಿದೆ. ಇಲ್ಲಿ ಊರಿನ ಮಧ್ಯದಲ್ಲಿ ಮೀನಾಕ್ಷಿಮಂದಿರವಿದೆ. ಇದು ಹಲವು ದೇವಾಲಯಗಳ ಗುಂಪಿನಂತೆ ಕಾಣಿಸುತ್ತದೆ. ಹೊಸಬನೊಬ್ಬನು ಈ ಮಂದಿರವನ್ನು ಪ್ರವೇಶಿಸಿ ಎಲ್ಲವನ್ನೂ ನೋಡಿಕೊಂಡು ಬಂದ ದಾರಿಯಿಂದ ಹಿಂದಿರುಗುವುದು ಅಸಾಧ್ಯ. ದೇವಾಲಯ ೮೫೦x೭೫೦ ಅಡಿ ವಿಸ್ತಾರವಿದೆ. ದೇವರ ಮೈಯಲ್ಲಿ ನವರತ್ನಖಚಿತವಾದ ಆಭರಣಗಳಿವೆ. ಮೀನಾಕ್ಷಿ ದೇವಿಗೆ ತಿರುಮಲನಾಯಕನು ಮಾಡಿಸಿದ ನವರತ್ನದ ಕಿರೀಟವೂ ಸು: ೨೦ ಸಾವಿರರೂಪಾಯಿ ಬೆಲೆಬಾಳುವ ಮಾಣಿಕ್ಯದ ಮೂಗುತಿಯೂ ೧೮೧೨ ರಿಂದ ೨೮ ರವರೆಗೆ ಅಲ್ಲಿಯ ಕಲೆಕ್ಟರರಾಗಿದ್ದ ಪೀಟರ್ ರೋಸ್ ಎಂಬವರು ಮಾಡಿಸಿದ ಆಭರಣಗಳೂ ನೋಡತಕ್ಕದ್ದಿವೆ. ಅಲ್ಲಿರುವ ಹಲವು ಮಂಟಪಗಳಲ್ಲಿ ೧೬ ನೆಯ ಶತಮಾನದಲ್ಲಿ ಆರ್ಯನಾಥನೆಂಬ ಅಮಾತ್ಯನಿಂದ ಕಟ್ಟಿಸಲ್ಪಟ್ಟ ಸಾವಿರ ಕಂಬದ ಮಂಟಪವು ಸರ್ವಾಂಗ ಸುಂದರವಾದುದು. ಇನ್ನೂ ಅಲ್ಲಿ ಸುಂದರೇಶ್ವರ ದೇವಾಲಯ, ತಿರುಮಲನಾಯಕನ ಅರಮನೆ, ತೆಪ್ಪಾಕುಲಂ ಎಂಬ ಸುಂದರವಾದ ಕೊಳ, ಸುಂದರರಾಜ ಪೆರುಮಾಳನ ಮಂದಿರವೆಲ್ಲಾ ನೋಡತಕ್ಕವುಗಳು (ಕ್ಷೇತ್ರದ., ಮ. ಸ.).

ಮಧುವಟಿ -- ದೇವತೆಗಳ ಸ್ಥಾನ (ಮ. ಪ.)

ಮಧುವನ --೧. ಸೀತಾದರ್ಶನ ಮಾಡಿ ಹನುಮನು ಬಂದಮೇಲೆ ಎಲ್ಲಾ ಕಪಿಗಳು ಆನಂದಾವೇಶದಿಂದ ಸುಗ್ರೀವನ ಈ ವನವನ್ನು ಲೂಟಿಮಾಡಿದರು. (ರಾಮಾ. ಸುಂದರ)೨. ಯಮುನಾ ನದೀತೀರದ ಒಂದು ವನ. ಧ್ರುವನು ಇಲ್ಲೇ ತಪಸ್ಸು ಮಾಡಿ ದೈವ ಸಾಕ್ಷಾತ್ಕಾರವನ್ನು ಪಡೆದನು. ರಾಮಾಯಣ ಕಾಲದಲ್ಲಿ ಕರ್ನಾಟಕದಲ್ಲಿ ಒಂದು ಮಧುವನವಿತ್ತು. ಆಗ ಇದಕ್ಕೆ ಸುಗ್ರೀವನು ಒಡೆಯನೂ, ದಧಿಮುಖನು ಇದರ ರಕ್ಷಕನೂ ಆಗಿದ್ದನು.

ಮನಸಾ --ಕಶ್ಯಪಮುನಿಯ ಮಗಳು. ಲೋಕದಲ್ಲಿ ಸರ್ಪಗಳ ಹಾವಳಿ ಹೆಚ್ಚಿದಾಗ ಅವುಗಳ ನಿಯಂತ್ರಣಕ್ಕಾಗಿ ಎಲ್ಲರೂ ಕಶ್ಯಪಮುನಿಯ ಮರೆಹೊಕ್ಕರು. ಆಗ ಕಶ್ಯಪನು ಮನಸ್ಸಿನಲ್ಲೇ ಮಂತ್ರಾಧಿಷ್ಠಾನ ದೇವತೆಯೊಂದನ್ನು ನಿರ್ಮಿಸಿದನು. ಈಕೆ ಮೂರು ಯುಗಗಳ ಕಾಲ ಪರಮಾತ್ಮಾನುಸಂಧಾನದಲ್ಲಿ ಮುಳುಗಿದುದರಿಂದ ಈಕೆಗೆ ಮನಸಾ ಎಂದು ಹೆಸರಾಯಿತು. ಈಕೆಗೆ ನಾಗದೇವತೆ, ನಾಗಭಗಿನಿ, ವಿಷಹರೆ, ಮೃತ ಸಂಜೀವಿನಿ, ಸಿದ್ಧಯೋಗಿನಿ, ಯೋಗಿನಿ, ಜರತ್ಕಾರಪ್ರಿಯಾ, ಜರತ್ಕಾರು, ಜಗದ್ಗೌರಿ, ಮನಸಾ, ವೈಷ್ಣವಿ,

ಶೈವಿ, ನಾಗೇಶ್ವರಿ, ಆಸ್ತಿಕಮಾತೆ ಮೊದಲಾದ ಹೆಸರುಗಳಿವೆ. ಈ ಹೆಸರುಗಳನ್ನು ಸ್ಮರಿಸುವವರಿಗೆ ಸರ್ಪಭಯವಿಲ್ಲ; ಅಲ್ಲದೆ ನಾಗದ ಬಾಧೆಗಳೆಲ್ಲ ಪರಿಹಾರವಾಗುವುವು (ದೇವೀಭಾ). ನೋ. - ಜರತ್ಕಾರು, ಆಸ್ತೀಕ.

ಮನಸ್ಯು --ಚಂದ್ರವಂಶದ ಪ್ರವೀರನ ಮಗ. ಈತನ ತಾಯಿ ಶೂರಸೇನಿ. ಪತ್ನಿಸೌವೀರಿ, ಸೌವೀರಿಗೆ ಶಕ್ತ ಮತ್ತು ವಾಗ್ಮಿ, ಸಂಹನವರು ಮಕ್ಕಳು. ಇವರು ಮೂವರು ಮಹಾರಥರು (ಮ. ಆ.).ಮನಸ್ಯುವಿಗೆ ಮಿಶ್ರಕೇಶಿ ಎಂಬ ಅಪ್ಸರೆಯಲ್ಲಿ ಶಕ್ತಿ ಮೊದಲಾದ ಮಕ್ಕಳು ಹುಟ್ಟಿದರು. ಇವನು ಬಹಳ ಸುಂದರನು.

ಸೌವೀರಿಯ ಮಕ್ಕಳೇ ಶಕ್ತ, ಸಿಂಹನನ ಮತ್ತು ವಾಗ್ಮಿಯೆಂದಿದೆ (ಮ. ಆ.).ಪೂರುವಿನ ಮೂರನೇ ಮಗನಾದ ರೌದ್ರಾಶ್ವನಿಗೆ ಮಿತ್ರಕೇಶಿ ಎಂಬ ಅಪ್ಸರಸ್ತ್ರೀ ಪತ್ನಿಯಾಗಿದ್ದಳೆಂದಿದೆ. ಇವಳ ಮಕ್ಕಳು ಅನ್ವಗ್ಭಾನು ಮೊದಲಾದ ಹತ್ತು ಮಂದಿ ಎಂದಿದೆ. ಮುಂದೆ ಅವರ ಹೆಸರನ್ನು ಹೇಳುವಾಗ ಋಚೇಯು, ಕಕ್ಷೇಯು, ಸ್ಥಂಡಿಲೇಯು, ಜಲೇಯು, ತೇಜೇಯು, ಸತ್ಯೇಯು, ಧರ್ಮೇಯು, ಸನ್ನತೇಯು ಎಂದು ಹೆಸರು ಎಂದಿದೆ. ಋಚೇಯುವಿಗೆ ಅನಾದೃಷ್ಟಿ ಎಂಬ ಹೆಸರಿತ್ತು (ಮ. ಆ.).

ಮನಸ್ವಿನಿ -- ದೇವಸ್ತ್ರೀ, ಈಕೆಗೆ ಚಂದ್ರಮನೆಂದು ಮಗನಿದ್ದನು (ಮ. ಆ.).

ಮನಾಮಿ--ಮನುವಿನ ಪತ್ನಿ. ನೋ. -ಮನು.

ಮನು. --೧. ವೈವಸ್ವತ ಮೊದಲಾದ ಮನುಗಳು ಹದಿನಾಲ್ಕು ಮಂದಿ. ಅವರಲ್ಲಿ ವೈವಸ್ವತ ಮನುವಿಗೆ ಇಕ್ಷ್ವಾಕು ಮೊದಲಾದ ಹತ್ತು ಮಂದಿ ಮಕ್ಕಳು. ಈಗ ನಡೆಯುವುದು ವೈವಸ್ವತ ಮನ್ವಂತರ. ಇದಕ್ಕೂ ಹಿಂದೆ ಸ್ವಾಯಂಭುವ, ಸ್ವಾರೋಚಿಷ, ಉತ್ತಮ, ತಾಮಸ, ರೈವತ, ಚಾಕ್ಷುಷ ಎಂಬ ಆರು ಮನ್ವಂತರಗಳು ಆಗಿ ಹೋಗಿವೆ. ಮುಂದೆ ಸಾವರ್ಣಿ, ಭೌತ್ಯ, ರೌಚ್ಯ, ಬ್ರಹ್ಮಸಾವರ್ಣಿ, ರುದ್ರಸಾವರ್ಣಿ, ಮೇರುಸಾವರ್ಣಿ, ದಕ್ಷಸಾವರ್ಣಿ ಎಂಬ ಏಳು ಮನ್ವಂತರಗಳು ಬರಲಿವೆ. ಪ್ರತಿಯೊಂದು ಮನ್ವಂತರಕ್ಕೂ ಮನು, ಋಷಿ, ದೇವಗಣ, ಮನುಸಂತತಿ ಬೇರೆ ಬೇರೆ ಇರುತ್ತದೆ. ಮೊದಲನೆಯವನಾದ ಸ್ವಾಯಂಭುವ ಮನ್ವಂತರದಲ್ಲಿ ಮರೀಚಿ, ಅತ್ರಿ, ಅಂಗಿರ, ಪುಲಹ, ಕ್ರತು, ಅಗಸ್ತ್ಯ, ವಸಿಷ್ಠ ಮೊದಲಾದ ಬ್ರಹ್ಮನ ಏಳು ಮಂದಿ ಮಾನಸಪುತ್ರರೇ ಸಪ್ತರ್ಷಿಗಳೆಂದು ಪೂಜಿಸಲ್ಪಡುತ್ತಾರೆ. ಈ ಮನ್ವಂತರದ ದೇವಗಣವನ್ನು ಯಮವೆಂದು ಕರೆಯುತ್ತಾರೆ. ಅಗ್ನೀಧ್ರ, ಅಗ್ನಿಬಾಹು, ಮೇಧಾ, ಮೇಧಾತಿಥಿ, ವಸು, ಜ್ಯೋತಿಷ್ಮಾನ್, ದ್ಯುತಿಮಾನ್, ಹವ್ಯ, ಸವನವೆಂಬ ಅತ್ಯಂತ ತೇಜಸ್ವಿಗಳಾದ ಹತ್ತು ಜನರು ಈ ಮನ್ವಂತರದ ಮನುಕುಮಾರರು.

ಎರಡನೆಯದಾದ ಸ್ವಾರೋಚಿಷಮನ್ವಂತರದಲ್ಲಿ ವಸಿಷ್ಠ ಪುತ್ರನಾದ ಔರ್ವ, ಸ್ತಂಬ, ಕಶ್ಯಪ (ಅತ್ರಿ), ಪ್ರಾಣ, ಬೃಹಸ್ಪತಿ, ದತ್ತ, ನಿಶ್ಚವನ (ಚ್ಯವನ) ಎಂಬ ಹೆಸರಿನ ಸಪ್ತರ್ಷಿಗಳೂ ತುಷಿತರೆಂಬ ದೇವತೆಗಳೂ ಹವಿರ್ಧ್ರ, ಸುಕೃತಿ, ಜ್ಯೋತಿ, ಅಪಮೂರ್ತಿ, ಅಯಸ್ಮಯ (ಮತ್ಸ್ಯಪುರಾಣದಲ್ಲಿ ಮುಂದಿನ ನಾಲ್ಕು ಹೆಸರುಗಳು ಕಾಣುವುದಿಲ್ಲ), ಪ್ರಥಿತ, ನಭಸ್ಯ, ನಭ, ಊರ್ಜರೆಂಬ ಮನುಪುತ್ರರು.

ಮೂರನೆಯದಾದ ಉತ್ತಮ ಮನ್ವಂತರದಲ್ಲಿ ವಸಿಷ್ಠ ಋಷಿಯ ಏಳು ಮಂದಿ ಮಕ್ಕಳೇ ವಾಸಿಷ್ಠರೆಂಬ ಹೆಸರಿನಿಂದ ಸಪ್ತರ್ಷಿಗಳಾಗಿದ್ದರು. ಅವರು ಹಿಂದಿನ ಜನ್ಮದಲ್ಲಿ ಊರ್ಜ ಎಂಬ ಹೆಸರಿನಿಂದ ಪ್ರಖ್ಯಾತರಾಗಿದ್ದರು. ಆಗ ಭಾನುವೆಂಬ ದೇವಗಣವೂ ಇಷ, ಊರ್ಜ, ತನೂಜ, ವಧು, ಮಾಧವ, ಶುಚಿ, ಶುಕ್ರ, ಸಹ, ನಭಸ್ಯ, ನಭ ಎಂಬ ಹತ್ತು ಮಂದಿ ಉತ್ತಮನ ಮಕ್ಕಳಾಗಿದ್ದರು.

ನಾಲ್ಕನೆಯದಾದ ತಾಮಸ ಮನ್ವಂತರದಲ್ಲಿ ಕಾವ್ಯ, ಪೃಥು, ಅಗ್ನಿ, ಜನ್ಯು, ಧಾತಾ, ಕಪೀವಾನ್, ಅಕಪೀವಾನ್ ಎಂಬುವರು ಸಪ್ತರ್ಷಿಗಳು. ದ್ಯುತಿ, ತಪಸ್ಯ, ಸುತಪ, ತಪೋಮೂಲ, ತಪೋಧನ, ತಪೋರತಿ, ಅಕಲ್ಮಾಷ, ತನ್ವೀ, ಧನಿ, ಪರಂತಪ ಎಂಬವರು ತಾಮಸನ ಮಕ್ಕಳು. ಆಗ ಸತ್ಯ ಎಂಬ ದೇವತೆಗಳಿದ್ದರು.

ಐದನೆಯದಾದ ರೈವತ ಮನ್ವಂತರದಲ್ಲಿ ವೇದಬಾಹು, ಯದುಧ್ರ, ವೇದಶಿರ, ಹಿರಣ್ಯರೋಮ, ಪರ್ಜನ್ಯ, ಸೋಮಪುತ್ರನಾದ ಊರ್ಧ್ವಬಾಹು, ಅತ್ರಿಯ ಮಗನಾದ ಸತ್ಯನೇತ್ರ --ಇವರು ಸಪ್ತರ್ಷಿಗಳು. ಭೂತರಜಸವೆಂಬ ದೇವಗಣ, ಧೃತಿಮಾನ್, ಅವ್ಯಯ, ಯುಕ್ತ, ತತ್ವದರ್ಶಿ, ನಿರುಚ್ಛುಕ, ಅರಣ್ಯ, ಪ್ರಕಾಶ, ನಿರ್ಮೋಹ, ಸತ್ಯವಾಕ್ ಮತ್ತು ಕವಿಯೆಂಬ ಹತ್ತು ಮಂದಿ ಮನುಪುತ್ರರು.

ಆರನೆಯದಾದ ಚಾಕ್ಷುಷ ಮನ್ವಂತರದಲ್ಲಿ ಭೃಗು, ನಭ, ವಿವಸ್ವಾನ್, ಸುದಾಮ, ವಿರಜ, ಅತಿನಾಮ, ಸಹಿಷ್ಣು ಎಂಬ ಸಪ್ತರ್ಷಿಗಳೂ ಆದ್ಯ, ಪ್ರಭೂತ, ಋಭು, ಪೃಥಗ್‌ಭಾವ, ಲೇಖ ಎಂಬ ಅಂಗಿರಾ ಋಷಿಯ ಐವರು ಮಕ್ಕಳೇ ದೇವತಾಗಣಗಳೂ ಊರು ಮೊದಲಾದ ಮನುವಿನ ಮಕ್ಕಳು ಪ್ರಸಿದ್ಧರು. ಇವರೆಲ್ಲಾ ನಡ್ವಲೆಯ ಮಕ್ಕಳಾದರಿಂದ ಇವರಿಗೆ ನಾಡ್ವಲೇಯರೆಂದು ಹೆಸರು.

ಏಳನೆಯ ಮನ್ವಂತರವಾದ ವೈವಸ್ವತದಲ್ಲಿ ವಸಿಷ್ಠ, ಕಶ್ಯಪ, ಗೌತಮ, ವಿಶ್ವಾಮಿತ್ರ, ಭರದ್ವಾಜ, ಜಮದಗ್ನಿ ಮತ್ತು ಅತ್ರಿ ಎಂಬ ಸಪ್ತರ್ಷಿಗಳೂ, ಸಾಧ್ಯ, ರುದ್ರ, ವಿಶ್ವೇದೇವ, ಮರುಕ, ವಸು, ಆದಿತ್ಯ ಮೊದಲಾದ

ದೇವಗಣಗಳೂ ಮತ್ತು ಇಕ್ಷ್ವಾಕು ಮೊದಲಾದ ಹತ್ತು ಮಂದಿ ಮನುಪುತ್ರರೂ ಇರುವರು.

ಇನ್ನುಮುಂದೆ ಬರುವ ಮುನಿಗಳಿಗೆಲ್ಲಾ ಸಾವರ್ಣಮನುವೆಂದೇ ಹೆಸರು. ಇವರಲ್ಲಿ ಮೊದಲಿನವರು ವೈವಸ್ವತಮನುವಿನ ಮಗನು. ಉಳಿದ ನಾಲ್ವರು ಬ್ರಹ್ಮನ ಮಕ್ಕಳು. ಈ ನಾಲ್ವರು ಮೇರುಪರ್ವತದಲ್ಲಿ ಅಖಂಡತಪವನ್ನಾಚರಿಸುತ್ತಿದ್ದುದರಿಂದ ಇವರನ್ನು ಮೇರುಸಾವರ್ಣರೆಂದು ಕರೆಯುತ್ತಾರೆ. ರುಚಿ ಎಂಬ ಪ್ರಜಾಪತಿಯ ಮಗನೇ ರೌಚ್ಯ ಮನುವು. ರುಚಿಪ್ರಜಾಪತಿಯ ಭೂತಿ ಎಂಬ ಪತ್ನಿಯಲ್ಲಿ ಹುಟ್ಟಿದ ಮಗನೇ ಭೌತ್ಯಮನುವು (ಹರಿ.).ಮನುವೆಂಬುದು ಹೆಸರಲ್ಲ ; ಪದವಿ. ಕೃತಯುಗವೇ ಮೊದಲಾದ ಯುಗಗಳು ಎಪ್ಪತ್ತೊಂದು ಬಾರಿ ಮುಗಿದರೆ ಒಂದು ಮನ್ವಂತರವಾಗುತ್ತದೆ. ಒಂದು ಮನ್ವಂತರಕ್ಕೆ ೩೦,೬೭,೨೦,೦೦೦ ಮನುಷ್ಯವರ್ಷಗಳು.

ಸೂರ್ಯನ ಕೊನೆಯ ಪುತ್ರ. ಇವನು ಮಗ ದೇವಭ್ರಾಟ್ (ಮ. ಆ.)ನೋ. -ಸರಯೂ, ಸೂರ್ಯ.

ಮನುವಿಗೆ ವೇನ, ಧೃಷ್ಣು, ನರಿಷ್ಯಂತ, ನಾಭಾಗ, ಇಕ್ಷ್ವಾಕು, ಕಾರೂಷ, ಶರ್ಯಾತಿ ಎಂಬ ಪುತ್ರರೂ, ಇಳೆಯೆಂಬ ಕನ್ಯೆಯೂ ಹುಟ್ಟಿದರು. ಕ್ಷತ್ರಧರ್ಮಪರಾಯಣನಾದ ಪೃಷಧ್ರನ ಒಂಬತ್ತನೇ ಮಗನು. ನಾಭಾಗ ಅಥವಾ ಅರಿಷ್ಟನು ಹತ್ತನೇ ಮಗನು. ಇವರಲ್ಲದೆ ಬೇರೆ ಐವತ್ತು ಮಂದಿ ಪುತ್ರರು ಹುಟ್ಟಿದರೂ ಅನ್ಯೋನ್ಯವಿರೋಧದಿಂದ ಅವರೆಲ್ಲಾ ನಾಶಹೊಂದಿದರು. ಇಳೆಯಲ್ಲಿ ಮಹಾವಿದ್ವಾಂಸನಾದ ಪುರೂರವನು ಹುಟ್ಟಿದನು. ಇಳೆಯೇ ಪುರೂರವನಿಗೆ ತಾಯಿಯೂ ತಂದೆಯೂ ಆಗಿದ್ದಳು (ಮ.ಆ.).

ಮನು ಮಹರ್ಷಿಗೆ ಯಜ್ಞವೆಂದರೆ ಬಹಳ ಇಷ್ಟ. ಅವನ ಬಳಿ ಒಂದು ಅದ್ಭುತ ಎತ್ತು ಇತ್ತು. ಆದರ ವೈಶಿಷ್ಟ್ಯವೆಂದರೆ --ಅದರಲ್ಲೊಂದು ದೈವೀವಾಣಿ ಇತ್ತು ಆ ಎತ್ತು ಕೂಗಿದರೆ ಇಲ್ಲವೇ ಉಸಿರಾಡಿದರೆ ಆ ದೈವೀವಾಣಿ ಕೇಳಿಬರುತ್ತಿತ್ತು. ಅದರ ಬಾಯಿಂದ ಹೊರಬಿದ್ದ ಆ ವಾಣಿಯು ಅಸುರರ ಕಿವಿಗೆ ಬೀಳುತ್ತಲೇ ಅವರು ತಕ್ಷಣ ಸತ್ತುಹೋಗುತ್ತಿದ್ದರು. ಇದರಿಂದ ಅಸುರರಿಗೆ ಆ ಎತ್ತು ಹಂತಕವಾಗಿ ಪರಿಣಮಿಸಿತು. ಅಸುರರಿಗೆ ಆಗ ಏನು ಮಾಡಬೇಕೆಂದು ಗೊತ್ತಾಗಲಿಲ್ಲ. ಅವರಿಗೆ ಆ ಎತ್ತನ್ನು ಕೊಲ್ಲಬೇಕಾಗಿತ್ತು. ಅವರು ಕಿರಾತ ಮತ್ತು ಆಕುಲಿ ಎಂಬ ಚಾಣಾಕ್ಷ್ಯ ಪುರೋಹಿತರ ಮರೆಹೊಕ್ಕರು. ಅವರು ಮನುವಿನಿಂದ ಒಪ್ಪಿಗೆ ಪಡೆದು ಯಜ್ಞಮಾಡಿ, ಅದರಲ್ಲಿ ಆ ಎತ್ತನ್ನು ಬಲಿಯಾಗಿ

ಕೊಡುವುದನ್ನು ಒಪ್ಪಿಸಿದರು. ಎತ್ತಿನ ಮರಣಾನಂತರ ಎತ್ತಿನಲ್ಲಿದ್ದ ದೈವೀವಾಣಿಯು ಮನುವಿನ ಪತ್ನಿಯಾದ ಮನಾವಿಯ ಶರೀರದಲ್ಲಿ ಆಶ್ರಯಪಡೆಯಿತು. ಮುಂದೆ ಅವಳ ಮಾತುಗಳನ್ನು ಕೇಳುತ್ತಲೇ ಅವರು ಮೊದಲಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸಾಯತೊಡಗಿದರು. ಪುನಃ ಅಸುರರು ಆ ದುಷ್ಟಪುರೋಹಿತರ ನೆರವನ್ನು ಪಡೆದು ಮನುವಿನ ಪತ್ನಿಯನ್ನೂ ಬಲಿಕೊಡಿಸಿದರು. ಆಗ ಆಕೆಯ ಶರೀರದಲ್ಲಿದ್ದ ದೈವೀವಾಣಿಯು ಯಜ್ಞವೇದಿಕೆಯಲ್ಲಿ ಇರಿಸಲಾಗಿದ್ದ ಒಂದು ಪರಾತದಲ್ಲಿ (ತಟ್ಟೆಯಲ್ಲಿ) ಸೇರಿಕೊಂಡಿತು. ಮುಂದೆ ಆ ಪರಾತದಿಂದ ದೈವೀವಾಣಿ ಹೊರಬಿದ್ದು ಅಸುರರನ್ನು ಕೊಲ್ಲುವುದನ್ನು ಬಿಡಲಿಲ್ಲ. (ಋ. ವಿಷ್ಣುಪು, ಬ್ರಹ್ಮಪು., ಹರಿ, ಬ್ರವೈ., ಮಾರ್ಕಂಪು. ಮ ಆ, ಅಶ್ವ., ಅನು., ಶಾಂ., ಭಾಗ., ಮತ್ಸ್ಯಪು).೨. ಪ್ರಾಧೆಯ ಮಗಳು (ಮ. ಆ.) ೩. ಅಗ್ನಿವಿಶೇಷ (ಮ. ಆ.)

ಮನೋರಮಾ --೧. ಒಬ್ಬಳು ಅಪ್ಸರೆ (ಮ. ಆ.). ೨. ಸರಸ್ವತೀ ನದಿಯ ಒಂದು ಶಾಖೆ. ಇದಕ್ಕೆ ಮನೋಹರೆ ಎಂಬ ಹೆಸರೂ ಇದೆ. ೩. ಇಕ್ಷ್ವಾಕುವಂಶದ ಧ್ರುವಸಂಧಿ ಅಥವಾ ಪೌಷ್ಯನೆಂಬ ರಾಜನಪತ್ನಿ. ಈಕೆಯ ತಂದೆ ನಿಷಧದೇಶಾಧಿಪತಿಯಾಗಿದ್ದ ವೀರಸೇನ. ಈಕೆಯ ಮಗನೇ ಸುದರ್ಶನ. ಲೀಲಾವತಿಯು ಈಕೆಯ ಸವತಿ. ಶತ್ರುಜಿತನು ಲೀಲಾವತಿಯ ಮಗನು. ಧ್ರುವಸಂಧಿರಾಜನು ಮುಂದೆ ತನ್ನ ಕಿರಿಯ ಹೆಂಡತಿಯ ಮಗನಾದ ಶತ್ರುಜಿತನಿಗೇ ಪಟ್ಟಣವನ್ನು ಕಟ್ಟಿದನು. ಮನೋರಮೆಯ ತನ್ನ ಮಗನಾದ ಸುದರ್ಶನನೊಂದಿಗೆ ಭರದ್ವಾಜನ ಆಶ್ರಮಕ್ಕೆ ಹೋದಳು (ದೇವೀಭಾ.).೪.ಈಕೆಯ ಗಂಡ ಕಪೋತಕ ಎಂಬ ನಾಗರಾಜ. ನೋ. -ಕಪೋತಕ. ೫. ದೀರ್ಘತಮಪುತ್ರನಾದ ಕಕ್ಷೀವಂತನ ಹೆಂಡತಿ. ನೋ -ಸ್ವನಯ. ೬.ಸ್ವರೋಚಿಯ ಪತ್ನಿ.

ಮನೋಹರೆ -- ೧ ದೇವಸ್ತ್ರೀಯೊಬ್ಬಳು. ಈಕೆಗೆ ಶಿಶಿರ, ಪ್ರಾಣ ಮತ್ತು ರಮಣರೆಂಬ ಮೂವರು ಮಕ್ಕಳಿದ್ದರು. ೨. ಸರಸ್ವತೀನದಿಯ ಒಂದು ಶಾಖೆ (ಮ. ಆ., ಶ.).

ಮಂತ್ರಾಲಯ -- ಗುಂತಕಲ್ಲು ಜಂಕ್ಷನಿನಿಂದ ಮಂತ್ರಾಲಯ ೫೭ ಮೈಲು ದೂರದಲ್ಲಿದೆ. ಇದು ತುಂಗಭದ್ರಾತೀರದಲ್ಲಿದೆ. ಇಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳ ಬೃಂದಾವನವಿದೆ. ಇದು ಅತ್ಯಂತ ಜಾಗೃತಸ್ಥಾನ.

ಮಂಥರಾ --ಕೈಕೇಯಿಯ ದಾಸಿ. ದುಂದುಭಿ ಎಂಬ ಗಂಧರ್ವಸ್ತ್ರೀ ಬ್ರಹ್ಮನ ಶಾಪದಿಂದ ಮಂಥರೆ ಎಂಬ ಕುಬ್ಜೆಯಾಗಿ ಹುಟ್ಟಿದಳು. ಈಕೆಯು ಶ್ರೀರಾಮನ ವನವಾಸಕ್ಕೆ ಕಾರಣಳಾದಳು (ಮ. ವ., ರಾಮಾ. ಅಯೋ)

ಮಂದ --೧. ಚ್ಯವನಮುನಿಯ ಅಗ್ನಿಕುಂಡದಿಂದ ಹುಟ್ಟಿದ ರಾಕ್ಷಸ. ಚ್ಯವನನಿಗೆ ತಾರುಣ್ಯವನ್ನಿತ್ತ ಅಶ್ವಿನೀದೇವತೆಗಳಿಗೆ ಚ್ಯವನನು ಹವಿರ್ಭಾಗವನ್ನು ಕೊಡಲು ಇಂದ್ರನು ಅದನ್ನು ವಿರೋಧಿಸಿದನು. ಆಗ ಮುನಿಯ ಈ ರಾಕ್ಷಸನನ್ನು ನಿರ್ಮಿಸಲು ಇಂದ್ರನು ಹೆದರಿ ಚ್ಯವನನ ಮರೆಹೊಕ್ಕನು. ನೋ. -ಮದ (ಮ. ಅನು).೨. ಅವಂತೀ ದೇಶದ ಬ್ರಾಹ್ಮಣನೊಬ್ಬ. ಇವನಿಗೆ ಮಂದರನೆಂಬ ಹೆಸರೂ ಇದೆ. ಇವನು ಶ್ರೀಮಂತನಾಗಿದ್ದು ಪಿಂಗಳೆಯೆಂಬ ವಾರವಿಲಾಸಿನಿಯಲ್ಲಿ ಆಸಕ್ತನಾಗಿದ್ದರೂ, ಋಷಭನೆಂಬ ಶಿವಯೋಗಿಯ ಆಶೀರ್ವಾದದಿಂದ ಮುಂದಿನ ಜನ್ಮದಲ್ಲಿ ರಾಜರಾಣಿಯರಾದ ವಜ್ರಬಾಹು ಮತ್ತು ಸುಮತಿಯರಿಗೆ ಮಗನಾಗಿ ಹುಟ್ಟಿದ. ಇವನು ಗರ್ಭದಲ್ಲಿರುವಾಗಲೇ ರಾಜನ ಇತರ ಪತ್ನಿಯರು ಈಕೆಗೆ ವಿಷ ಕುಡಿಸಿದುದರಿಂದ ಸುಮತಿ ಸಾಯದಿದ್ದರೂ ಮಗುವು ಸ್ವರ್ಗಸ್ಥವಾಯಿತು. ಶಿವಯೋಗಿಯು ಈ ಮಗುವನ್ನು ಬದುಕಿಸಿ ಸುಮತಿಗೆ ಆರೋಗ್ಯವನ್ನುಂಟುಮಾಡಿ, ಮಗುವಿಗೆ ಭದ್ರಾಯುವೆಂದೇ ಹೆಸರಿಟ್ಟನು. ವೇಶ್ಯೆಯಾದ ಪಿಂಗಳೆಯು ಚಂದ್ರಾಂಗರಾಜನ ಮಗಳಾಗಿ ಕೀರ್ತಿಮಾಲಿನಿ ಎಂಬ ಹೆಸರಿನಿಂದ ಬೆಳೆಯುತ್ತಿದ್ದಳು. ಮುಂದೆ ಇವರಿಬ್ಬರಿಗೂ ವಿವಾಹವಾಗುವುದು. ಭದ್ರಾಯು ಒಮ್ಮೆ ಬೇಟೆಗೆ ಹೋಗಿದ್ದಾಗ ಬ್ರಾಹ್ಮಣ ಪತ್ನಿಯೊಬ್ಬಳನ್ನು ಹುಲಿ ಹಿಡಿಯಲು, ಭದ್ರಾಯುವಿಗೆ ಹುಲಿಯಿಂದ ಆ ಬ್ರಾಹ್ಮಣ ಪತ್ನಿಯನ್ನು ತಪ್ಪಿಸಲು ಅಸಾಧ್ಯವಾಯಿತು. ಇದಕ್ಕೆ ಪ್ರತೀಕಾರವಾಗಿ ಬ್ರಾಹ್ಮಣನು ಕೀರ್ತಿಮಾಲಿಯನ್ನೇ ತನಗೆ ಕೊಡಬೇಕೆನಲು, ಭದ್ರಾಯುವು ತನ್ನ ಪತ್ನಿಯನ್ನು ಆ ಬ್ರಾಹ್ಮಣನಿಗೆ ಅರ್ಪಿಸಿ ತಾನು ಅಗ್ನಿಪ್ರವೇಶಮಾಡುವಾಗ ಶಿವನು ಪ್ರತ್ಯಕ್ಷನಾದನು. ಮುಂದೆ ಶಿವನ ಅನುಗ್ರಹದಿಂದ ಭದ್ರಾಯು ಪತ್ನಿಯೊಡನೆ ಹತ್ತುಸಾವಿರ ವರ್ಷಗಳ ಕಾಲ ಬದುಕಿದ್ದು ಮುಂದೆ ಸದ್ಗತಿಪಡೆದನು.

ಮಂದಪಾಲ -- ಶಾಂರ್ಗಕ (ಶಾರ್ಙಕ) ಪಕ್ಷಿರೂಪದ ಒಬ್ಬ ಋಷಿ. ಈತನ ಪತ್ನಿ ಜರೀತಾ ಎಂಬ ಹೆಸರಿನ ಶಾಂರ್ಗಿ. ಈತನಿಗೆ ಮಕ್ಕಳಿಲ್ಲದುದರಿಂದ ಸದ್ಗತಿ ದೊರೆಯದಿರಲು ಜರಿತೆಯನ್ನು ಮದುವೆಯಾದನು. ಈತನಿಗೆ ಮುಂದೆ ಜರಿತಾರಿ, ಸಾರಿಸ್ರಕ್ಕ, ದ್ರೋಣ ಸ್ತಂಭಮಿತ್ರ ಎಂಬ ಮಕ್ಕಳಾದರು. ಈತನ ಇನ್ನೊಬ್ಬಳು ಪತ್ನಿ ಲಪತಾ. ಈ ಮುನಿಯು ಬೇಗ ಮಕ್ಕಳನ್ನು ಪಡೆಯುವುದಕ್ಕಾಗಿ ಶಾರ್ಙಕವೆಂಬ ಪಕ್ಷಿರೂಪದಿಂದ ಅದೇ ಜಾತಿಯ ಹೆಣ್ಣುಹಕ್ಕಿಯನ್ನು ಸೇರಿ ಬ್ರಹ್ಮವಾದಿಗಳಾದ ನಾಲ್ಕು ಮಕ್ಕಳನ್ನು ಪಡೆದನು. ಖಾಂಡವವನ ದಹನಕಾಲದಲ್ಲಿ ಮಂದಪಾಲನು ಅಗ್ನಿಯನ್ನು ಸ್ತುತಿಸಿ ತನ್ನ ನಾಲ್ಕು ಮಕ್ಕಳನ್ನು ಅಗ್ನಿಯಿಂದ ರಕ್ಷಿಸಿದನು. (ಮ. ಆ)

ಮಂದರ -- ೧. ಒಂದು ಪರ್ವತ. ಇದನ್ನು ಕಡೆಗೋಲನ್ನಾಗಿ ಮಾಡಿಕೊಂಡು ದೇವತೆಗಳು ಸಮುದ್ರವನ್ನು ಮಥಿಸಿ, ಅಮೃತವನ್ನು ಪಡೆದರು. ಇದು ಪೂರ್ವದಿಕ್ಕಿನ ಪರ್ವತ. ಇದನ್ನು ಅಸ್ತಪರ್ವತವೆಂದು ಕರೆಯುತ್ತಾರೆ. ಈ ಪರ್ವತದ ಉತ್ತರದಿಕ್ಕಿನಲ್ಲಿ ಮಹಾಮೇರು ಪರ್ವತವಿದೆ. ಅಲಕನಂದಾ ಎಂಬ ಗಂಗಾನದಿಯು ಇದರ ಸಮೀಪವೇ ಪ್ರವಹಿಸುವುದು (ಮ. ವ.).ಪಾಂಡವರು ತೀರ್ಥಯಾತ್ರಾಕಾಲದಲ್ಲಿ ಈ ಪರ್ವತವನ್ನು ಸಂದರ್ಶಿಸಿದ್ದರು. ೨.ಅವಂತೀದೇಶದ ಒಬ್ಬ ಬ್ರಾಹ್ಮಣ. ಇವನು ಶ್ರೀಮಂತನಾಗಿದ್ದರೂ ಒಂದು ರಾತ್ರಿ ಅಲ್ಲಿಗೆ ಬಂದ ಋಷಭನೆಂಬ ಶಿವಯೋಗಿಯನ್ನು ವಿಶೇಷ ಭಕ್ತಿಯಿಂದ ಸತ್ಕರಿಸಿದ್ದರಿಂದ ಆ ಪುಣ್ಯದ ಫಲದಿಂದ ಆ ದೇಶಾಧಿಪತಿ ವಜ್ರಬಾಹುಮಹಾರಾಜನ ಪಟ್ಟದ ರಾಣಿಯ ಗರ್ಭದಿಂದ ಹುಟ್ಟಿದನು. ನೋ. -ಮಂದ.

ಮಂದರಕ --ಒಂದು ಆಮೆ. ಜಯದತ್ತನೆಂಬ ರಾಜನು ಶಿವನ ಶಾಪದಿಂದ ಮಂದರಕನೆಂಬ ಆಮೆಯಾದನು. ನೋ. -ಜಯದತ್ತ, ಇಂದ್ರದ್ಯುಮ್ನ, ಶಾಂಡಿಲ್ಯ.

ಮಂದಾರ --೧. ದೇವವೃಕ್ಷದ ಕಲ್ಪವೃಕ್ಷಗಳಲ್ಲೊಂದು. ೨. ಒಬ್ಬ ವಿದ್ಯಾಧರ ರಾಜ. ಈತನ ಮಗಳಾದ ವಿಭಾವರಿಯನ್ನು ಸ್ವರೋಚಿಸನೆಂಬ ಗಂಧರ್ವನು ಮದುವೆಯಾದನು. ನೋ. - ಸ್ವರೋಚಿಸ್.

ಮಂಡೋದರಿ --೧. ನೋ. -ಮಂಡೋದರಿ. ೨. ಸಿಂಹಳದ ರಾಜನಾದ ಚಂದ್ರಸೇನ ಮತ್ತು ಗುಣವತಿಯ ಮಗಳು. ಇವಳು 'ಪುರುಷರು ಸ್ತ್ರೀಲೋಲರು. ಇವರನ್ನು ನಂಬಬಾರದೆಂದಿದ್ದರೂ' ಕೊನೆಗೆ ತಂಗಿಯ ವಿವಾಹಕಾಲದಲ್ಲಿ ಮದ್ರರಾಜ ಚಾರುದೇಷ್ಣನನ್ನು ಮೋಹಿಸಿ, ಮದುವೆಯಾಗಿ ಕೊನೆಗೆ ತನ್ನ ಅನುಭವದಂತೆ ಬಹಳ ವ್ಯಸನಪಟ್ಟಳು (ದೇವೀಭಾ.)

ಮನ್ಮಥ --ನೋ. -ಮದನ. ಕಾಮ.

ಮಮತಾ --ಅಂಗಿರಸನ ಮಗನಾದ ಉಚಥ್ಯ ಋಷಿಯ ಪತ್ನಿ. ನೋ. -ಉಚಥ್ಯ, ದೀರ್ಘತಮ, ಸುವರ್ತ, ಭಾರದ್ವಾಜ, ಬೃಹಸ್ಪತಿ (ಮ. ಆ, ಶಾಂ, ಮತ್ಸ್ಯ, ಪು. ವಿಷ್ಣುಪು.).

ಮಯ --೧ ನೋ -ತ್ರಿಪುರ. ತ್ರಿಪುರಾಸುರರಲ್ಲಿ ಇವನೂ ಒಬ್ಬನು. ತಾರಕಾಸುರನ ಮರಣಾನಂತರ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ ಶಿಲ್ಪವಿದ್ಯೆಯಲ್ಲಿ ಅಗ್ರೇಸರನಾಗುವ ವರವನ್ನು ಪಡೆದನು. ಇವನ ಪತ್ನಿ ಹೇಮೆ ಎಂಬ ಅಪ್ಸರೆ. ಈತನಿಗೆ ಹೇಮೆಯಲ್ಲಿ ಮಾಯಾವಿ ಮತ್ತು ದುಂದುಭಿ ಎಂಬ ಗಂಡುಮಕ್ಕಳೂ. ಮಂಡೋದರಿ ಎಂಬ ಮಗಳೂ ಹುಟ್ಟಿದರು. ರಾವಣನ ಪ್ರಭಾವಕ್ಕೆ ಮೆಚ್ಚಿದ ಮಯನು ಮಂಡೋದರಿಯನ್ನು ರಾವಣನಿಗೆ ವಿವಾಹ ಮಾಡಿಕೊಟ್ಟನು (ಮ.

ಸ. ಮತ್ಸ್ಯಪು., ರಾಮಾ ಉತ್ತರ). ಇಂದ್ರಜಿತುವಿನ ಮರಣಾಂತರ ಇವನು ರಾವಣನಿಗೆ ಶ್ರೀರಾಮನ ಕೃತಕಶಿರವನ್ನು ಮಾಡಿಕೊಡಲು ರಾವಣನು ಅದನ್ನು ಸೀತೆಗೆ ತೋರಿಸಿದನು (ಆನಂರಾಮಾ.) ೨. ರಾಕ್ಷಸರ ಶಿಲ್ಪಿ. ಅರ್ಜುನನು ಖಾಂಡವವನ ದಹನ ಕಾಲದಲ್ಲಿ ಅಗ್ನಿಯಿಂದ ಈತನನ್ನು ರಕ್ಷಿಸಿದನು. ಇದರಿಂದ ಇವನು ಪಾಂಡವರಿಗೆ ದಿವ್ಯಸಭೆಯೊಂದನ್ನು ನಿರ್ಮಾಣ ಮಾಡಿಕೊಟ್ಟನು. ಭೀಮನಿಗೆ ಗದೆಯನ್ನೂ, ಅರ್ಜುನನಿಗೆ ದೇವದತ್ತವೆಂಬ ಶಂಖವನ್ನೂ ಬಿಂದುಸರೋವರದಿಂದ ತಂದುಕೊಟ್ಟನು. ನೋ -ಬಿಂದು ಸರೋವರ (ಮ. ಆ. ಸ.).

ಮಯೂರಧ್ವಜ -- ೧ ಷಣ್ಮುಖ (ಮ. ವ). ೨. ರತ್ನಪುರದ ಅರಸ. ಈತನ ಮಗನು ತಾಮ್ರಧ್ವಜ. ಇವನು ಅಶ್ವಮೇಧ ಕುದುರೆಯ ರಕ್ಷಕನಾಗಿದ್ದ ಅರ್ಜುನನನ್ನು ಯುದ್ಧದಲ್ಲಿ ಸೋಲಿಸಲು ಕೃಷ್ಣಾರ್ಜುನರು ಬ್ರಾಹ್ಮಣ ಮತ್ತು ಬ್ರಾಹ್ಮಣಪುತ್ರನ ವೇಷದಿಂದ ಈತನ ಬಳಿಗೆ ಹೋಗಿ --ಸಿಂಹವು ತನ್ನ ಮಗನೊಬ್ಬನನ್ನು ಬರುವ ದಾರಿಯಲ್ಲಿ ಹಿಡಿಯಿತೆಂದೂ, ಅದಕ್ಕೆ ಮಯೂರಧ್ವಜನ ದೇಹಾರ್ಧವನ್ನು ಕೊಟ್ಟರೆ ತನಗೆ ಗತಿ ಕೊಡುವ ಮಗನನ್ನು ಬಿಡುವೆನೆಂದೂ ಹೇಳಿದನು. ಮಯೂರಧ್ವಜನು ಸಂತೋಷದಿಂದ ತನ್ನ ದೇಹಾರ್ಧವನ್ನು ಕೊಡಲೊಪ್ಪಿದುದಲ್ಲದೆ ಪತ್ನಿ ಮತ್ತು ಮಗನು ಗರಗಸದಿಂದ ಸೀಳುವಾಗಲೂ ನಿರ್ವಿಕಾರನಾದುದರಿಂದ, ಶ್ರೀಕೃಷ್ಣನು ಮೆಚ್ಚಿ ಅವನಿಗೆ ಪ್ರತ್ಯಕ್ಷನಾದನು. ನೋ. -ತಾಮ್ರಧ್ವಜ (ಜೈ. ಭಾ).

ಮರೀಚಿ --೧ ಬ್ರಹ್ಮರ್ಷಿಯೊಬ್ಬ. ಈತನು ಬ್ರಹ್ಮನ ಮಾನಸಪುತ್ರ. ಈತನೊಬ್ಬ ಪ್ರಜಾಪತಿ; ಪ್ರಜೆಗಳ ಸೃಷ್ಟಿಕರ್ತ, ಮಹರ್ಷಿಗಳೂ ಆದಿಯಲ್ಲಿ ಸೃಷ್ಟಿಯನ್ನು ಬೆಳೆಸಿದುದರಿಂದ ಪ್ರಜಾಪತಿಗಳೆನ್ನಿಸಿದರು (ಮನುಸ್ಮೃತಿ). ಈ ಬ್ರಹ್ಮರ್ಷಿಯಲ್ಲದೆ ಅತ್ರಿ, ಅಂಗಿರಸ್ಸು, ಪುಲಸ್ತ್ಯ, ಪುಲಹ, ಕ್ರತು, ಪ್ರಚೇತಸ್ಸು, ವಸಿಷ್ಠ, ಭೃಗು ಮತ್ತು ನಾರದರೆಂಬ ಹತ್ತು ಮಹರ್ಷಿಗಳೂ ಪ್ರಜಾಪತಿಗಳು. ಇವರಲ್ಲಿ ಮರೀಚಿಯು ಬ್ರಹ್ಮನ ಮನಸ್ಸಿನಿಂದಲೂ, ಮುಖದಿಂದ ಅಂಗಿರನೂ, ಕಣ್ಣಿನಿಂದ ಅತ್ರಿಯೂ, ಕಿವಿಗಳಿಂದ ಪುಲಸ್ತ್ಯನೂ, ನಾಭಿಯಿಂದ ಪುಲಹನೂ, ಕೈಯಿಂದ ಕ್ರತುವೂ, ಪ್ರಾಣದಿಂದ ವಸಿಷ್ಠನೂ ಚರ್ಮದಿಂದ ಭೃಗುವೂ, ತೊಡೆಯಿಂದ ನಾರದನೂ, ಅಂಗುಷ್ಠದಿಂದ ದಕ್ಷನೂ ಹುಟ್ಟಿದರು. (ಭಾಗ.)ಇವರಲ್ಲಿ ಪ್ರಚೇತಸ್ಸು, ಭೃಗು, ನಾರದರನ್ನುಳಿದು ಉಳಿದ ಏಳು ಮಂದಿ ಸ್ವಾಯಂಭುವ ಮನ್ವಂತರದಲ್ಲಿ ಸಪ್ತರ್ಷಿಗಳು. ಮರೀಚಿಯ ಮಗನು ಕಶ್ಯಪ. ನೋ -ಕ್ಯಪ. ಪತ್ನಿಯು ಕರ್ದಮಪ್ರಜಾಪತಿಯ ಮಗಳಾದ ಕಲಾ. ಈತನ ಎರಡನೇ ಹೆಂಡತಿ ಊರ್ಣಾ. ಈಕೆಗೆ ಸ್ಮರ, ಉದ್ಗೀಥ, ಪರಿಷ್ವಂಗ, ಪತಂಗ,

ಕ್ಷುದ್ರಭೃತ್, ಘೃಣಿ ಎಂಬ ಆರು ಮಂದಿ ಮಕ್ಕಳು ಜನಿಸಿದರು. ಇವರು ಬ್ರಹ್ಮನ ಶಾಪದಿಂದ ಮೊದಲನೇ ಜನ್ಮದಲ್ಲಿ ಹಿರಣ್ಯಕಶಿಪುವಿನ ಮಕ್ಕಳಾಗಿಯೂ, ಎರಡನೇ ಜನ್ಮದಲ್ಲಿ ಕಾಲನೇಮಿ ಎಂಬ ರಾಕ್ಷಸನ ಮಕ್ಕಳಾಗಿಯೂ, ಮೂರನೇ ಜನ್ಮದಲ್ಲಿ ಶ್ರೀಕೃಷ್ಣನ ಜನ್ಮಕ್ಕಿಂತ ಮೊದಲೇ ವಸುದೇವ ದೇವಕಿಯರ ಪುತ್ರರಾಗಿ ಹುಟ್ಟಿದರು. ನೋ. - ದೇವಲ (ಮ. ಆ., ಶಾಂ. ದೇವಿಭಾ.). ೨. ಅಪ್ಸರೆಯೊಬ್ಬಳು. ಈಕೆಯು ಕಶ್ಯಪನ ಮಗಳು (ಮ. ಆ.).

ಮರೀಚಿಪಾ -- ಕೆಲವು ಋಷಿಗಳು

ಮರುತ್ (ಮರುತ್ತ)--೧. ಕಶ್ಯಪ ಮತ್ತು ಅದಿತಿಯಲ್ಲಿ ಹುಟ್ಟಿದ ದೇವತೆಗಳು. ೨. ಇವರನ್ನು ಮಾರುತರೆನ್ನುವುದುಂಟು. ಇವರೆಲ್ಲಾ ವಾಯುಸ್ವರೂಪರು. ಇವರ ತಾಯಿ ಕಶ್ಯಪನ ಒಬ್ಬಳು ಪತ್ನಿಯಾದ ದಿತಿ. ಇಂದ್ರನು ದಿತಿಯ ಮಕ್ಕಳನ್ನೆಲ್ಲಾ ಕೊಲ್ಲಲು, ದಿತಿಯು ಕಶ್ಯಪನೊಡನೆ ಇಂದ್ರನನ್ನು ಕೊಲ್ಲುವ ಮಗನನ್ನು ಪ್ರಾರ್ಥಿಸಲು ಕಶ್ಯಪನು ಹಾಗೆಯೇ ಅನುಗ್ರಹಿಸಿದನು. ಮುಂದೆ ದಿತಿಯು ಗರ್ಭಿಣಿಯಾಗಿರುವಾಗ ಒಂದು ದಿನ ಅಶುಚಿಯಾಗಿ ಹಗಲುಹೊತ್ತಿನಲ್ಲಿ ನಿದ್ರಿಸಿದಳು. ಆಗ ಇಂದ್ರನು ದಿತಿಯ ಗರ್ಭವನ್ನು ಏಳು ತುಂಡುಗಳನ್ನಾಗಿ ಮಾಡಲು ಗರ್ಭವು ಅಳತೊಡಗಿತು. ಪುನಃ ಅಳುತ್ತಿದ್ದ ಏಳು ತುಂಡುಗಳನನ್ನು ಏಳು ಭಾಗಗಳಾಗಿ ಮಾಡಿ (ಮಾ + ರುದ= ಅಳಬೇಡ) ಅಳಬೇಡವೆಂದು ಅದನ್ನು ಸಮಾಧಾನಮಾಡಿದನು. ಆಗ ದಿತಿಯ ಎಚ್ಚರಹೊಂದಿ ನಡೆದ ಅನರ್ಥಗಳನ್ನು ತಿಳಿದು 'ಈ ಮಕ್ಕಳನ್ನು ನೀನೇ ಕಾಪಾಡಬೇಕು' ಎಂದು ಇಂದ್ರನನ್ನು ಪ್ರಾರ್ಥಿಸಿದಳು. ಇವರಿಗೆ ದೇವತ್ವವನ್ನು ಕೊಟ್ಟು ಮರುತ್ತುಗಳೆಂಬ ಹೆಸರನ್ನಿಟ್ಟನು. ಸೂರ್ಯವಂಶದ ಮರುತ್ತರಾಜನ ಯಜ್ಞದಲ್ಲಿ ದೇವತೆಗಳು ಆರೋಗಣೆಗೆ ಕುಳಿತಾಗ ಈ ಮರುತ್ತರೇ ಅವರಿಗೆ ಬಡಿಸಿದರು. ೩. ಸೂರ್ಯವಂಶದ ಅವಿಕ್ಷಿತ ರಾಜನ ಮಗ. ಇವನಿಗೆ ಅವೀಕ್ಷಿತನೆಂಬ ಹೆಸರೂ ಇದೆ. ಇವನು ಜನಿಸಿದಾಗ ತುಂಬುರುವು --'ಈತನು ಮರುತ್ತುಗಳಂತೆ ಮಹಾ ಶಕ್ತಿವಂತನಾಗುವುದರಿಂದ ಮರುತ್ತನೆಂದೇ' ಈತನಿಗೆ ಹೆಸರಿಟ್ಟನು. ಈತನ ತಾಯಿ ವಿಶಾಲದೇವಿ. ಮರುತ್ತನು ಮಾಡುವ ಯಜ್ಞಕ್ಕೆ ಪುರೋಹಿತನಾಗಲಿದ್ದ ಬೃಹಸ್ಪತಿಯ ತಮ್ಮನಾದ ಸಂವರ್ತನನ್ನು ಪುರೋಹಿತನನ್ನಾಗಿ ಮಾಡಿಕೊಂಡು ಯಜ್ಞವನ್ನು ಮಾಡಿದನು. ಇವನಂತೆ ಯಾರೂ ಯಜ್ಞವನ್ನು ಮಾಡಲಿಲ್ಲ. ಇವನ ಯಜ್ಞವಸ್ತುಗಳೆಲ್ಲಾ ಸ್ವರ್ಣಮಯವಾಗಿದ್ದುವು. ಆ ಯಜ್ಞದಲ್ಲಿ ಸೋಮರಸಪಾನದಿಂದ ಇಂದ್ರನು ಮತ್ತನಾದನು. ದಕ್ಷಿಣೆಗಳಿಂದ ಬ್ರಾಹ್ಮಣರು ತೃಪ್ತರಾದರು. ಆ ಯಜ್ಞದಲ್ಲಿ ದೇವತೆಗಳಿಗೇ ಮರುತ್ತಗಳೇ ಬಡಿಸಿದರು. ಮೊದಲು ಇಂದ್ರನು ಈ ಯಜ್ಞಕ್ಕೆ

ವಿಘ್ನವನ್ನೊಡ್ಡಿದರೂ ಕೊನೆಗೆ ಆತನು ಮರುತ್ತನಿಗೆ ಶರಣಾಗತನಾದ. ಈ ರಾಜನು ಮಾಡಿದ ಯಜ್ಞದಲ್ಲಿ ಕೊಟ್ಟ ಹಣವನ್ನು ಬ್ರಾಹ್ಮಣರು ಒಯ್ಯಲಾರದೆ, ಹಿಮಾಚಲ ಪ್ರದೇಶದಲ್ಲಿ ಚೆಲ್ಲಿಹೋದರು. ಇದನ್ನು ವೇದವ್ಯಾಸರ ಸೂಚನೆಯಂತೆ ಧರ್ಮರಾಜನು ಹಸ್ತಿನಾವತಿಗೆ ತರಿಸಿ ಅಶ್ವಮೇಧಯಾಗವನ್ನು ಪೂರೈಸಿದನು. ಮರುತ್ತನ ಯಜ್ಞಮಂಟಪವನ್ನು ರಾವಣನು ಪ್ರವೇಶಿಸಲು ದೇವತೆಗಳೆಲ್ಲಾ ಭಯದಿಂದ ಮೈಗರೆದರು. ಇಂದ್ರನು ನವಿಲಾದನು, ಯಮನು ಕಾಗೆಯಾದನು, ವರುಣನು ಹಂಸೆಯಾದನು, ಕುಬೇರನು ಓತಿಯಾದನು, ನಿರುತಿಯು ನಾಯಿಯಾದನು. ಹೀಗೆ ದೇವತೆಗಳೆಲ್ಲಾ ತಿರ್ಯಗ್ಜಾತಿಯಲ್ಲಿ ಅದೃಶ್ಯರಾದರು. ರಾವಣನು ಮರುತ್ತನನ್ನು ಯುದ್ಧಕ್ಕೆ ಕರೆಯಲು ಮರುತ್ತನು ಯುದ್ಧಕ್ಕೆ ಸಿದ್ಧನಾದನು. ಆಗ ಸಂವರ್ತನು ಅವನನ್ನು ತಡೆದು --ರಾವಣನು ವರಬಲದಿಂದ ಅಜಿಂಕ್ಯನಾಗಿದ್ದಾನೆನ್ನಲು, ಮರುತ್ತನು ರಾವಣನೊಡನೆ --'ನಿನಗೆ ನಾನು ಸೋತಿದ್ದೇನೆ' ಎಂದು ಒಪ್ಪಿಕೊಂಡನು. ಆಗ ರಾವಣನು ಅಲ್ಲಿಂದ ಹೊರಟುಹೋದನು. ಮರುತ್ತ ನರಿಷ್ಯಂತನೇ ಮೊದಲಾದ ಹದಿನೆಂಟು ಮಂದಿ ಮಕ್ಕಳಿದ್ದರೂ ಇವನು ಏಕಚ್ಛತ್ರಾಧಿಪತಿಯಾಗಿ ಎಂಬತ್ತೈದು ಸಾವಿರ ವರ್ಷ ರಾಜ್ಯಭಾರ ಮಾಡಿದನು. ನೋ. -ನರಿಷ್ಯಂತ (ಭಾಗ., ರಾಮಾ. ಬಾಲ., ಮ. ಸ. ಅಶ್ವ., ದ್ರೋ, ಶಾಂ., ಮಾರ್ಕಂಪು., ರಾಮಾ. ಉ.).

ಮರ್ಯಾದಾ --೧. ಚಂದ್ರವಂಶದ ರಾಜನಾದ ಅಪರಾಚೀನನ ಹೆಂಡತಿ. ಈಕೆಯ ಮಗ ಅರಿಹ (ಮ. ಆ)- ೨. ದೇವಾತಿಥಿಯ ಪತ್ನಿ. ಈಕೆಯ ಮಗ ಋಚಿ (ಮ. ಆ.)

ಮಲಜಾ (ಮಲದಾ) --ಕರೂಶ ದೇಶದ ಸಮೀಪವಿದ್ದ ಒಂದು ದೇಶ. ಇದು ಈಗಿನ ಶಹಬಾದ್ ಜಿಲ್ಲೆಯ ಪಶ್ಚಿಮ ಭಾಗದಲ್ಲಿದೆ. (ಮ. ಭೀ, ರಾಮಾ ಬಾಲ)

ಮಲದಾ --ಒಂದು ನದಿ (ಮ. ವ)

ಮಲಯ -- ೧. ಕುಲಪರ್ವತಗಳಲ್ಲೊಂದು. ಪಶ್ಚಿಮಘಟ್ಟದ ದಕ್ಷಿಣದ ತುದಿಗೆ ಈ ಹೆಸರಿದೆ. ಈ ಪ್ರದೇಶದಿಂದ ಬೀಸಿಕೊಂಡು ಬರುವ ಗಾಳಿಯನ್ನು ಮಲಯಮಾರುತ ಎನ್ನುತಾರೆ; ಗಂಧದ ಮರಗಳು ಬೆಳೆಯುವ ಪ್ರದೇಶ (ಮಭ). ೨. ಬರ್ಮಾದ ದಕ್ಷಿಣದಲ್ಲಿದ್ದ ಒಂದು ಅರ್ಧದ್ವೀಪ.

ಮಲಯಧ್ವಜ --ಮಣಲೂರಿನ ರಾಜನಾದ ಪಾಂಡ್ಯನ ಹೆಸರು. ಇವನು ಚಿತ್ರಾಂಗದೆಯ ತಂದೆ; ಅರ್ಜುನನ ಮಾವ. ಈತನಿಗೆ ಪ್ರವೀರ ಮತ್ತು ಚಿತ್ರವಾಹನನೆಂಬ ಹೆಸರಿದೆ. ಇವನು ಯುದ್ಧದಲ್ಲಿ ಅಶ್ವತ್ಥಾಮನಿಂದ ಹತನಾದ. ಈತ ತನಗೆ ಹುಟ್ಟಿದ ಚಿತ್ರಾಂಗದೆಯನ್ನು ಪುತ್ರಿಕಾಧರ್ಮದಿಂದ ಅರ್ಜುನನಿಗೆ ಕೊಟ್ಟು ಮದುವೆಮಾಡಿದನು. ಈಕೆಯ ಮಗನೇ ಬಭ್ರುವಾಹನ.

ರಾಜನು ಮಗಳು ಮತ್ತು ಮೊಮ್ಮಗನನ್ನು ಅರಮನೆಯಲ್ಲೇ ಇಟ್ಟುಕೊಂಡಿದ್ದನು. ಅಶ್ವಮೇಧಕಾಲದಲ್ಲಿ ಹಸ್ತಿನಾವತಿಗೆ ಬಂದು ಈಕೆಯು ಪಾಂಡವರ ಮಹಾಪ್ರಸ್ಥಾನ ಕಾಲದಲ್ಲಿ ಪುನಃ ಮಣಲೂರಿಗೆ ಹೊರಟು ಹೋದಳು. (ಮಅ., ಕ.)

ಮಲ್ಲ --ಒಂದು ದೇಶ. ಮಲ್ಲದೇಶಗಳಲ್ಲಿ ಪೂರ್ವಮಲ್ಲ ಮತ್ತು ಪಶ್ಚಿಮಮಲ್ಲಗಳೆಂಬ ಎರಡು ಭಾಗಗಳಿದ್ದವು. ಒಂದು ಪೂರ್ವದ ಪಾರ್ಶ್ವನಾಥ ಪರ್ವತಪ್ರದೇಶ ಅಥವಾ ಹಜಾರೀಬಾಗ್ ಜಿಲ್ಲೆಯ ಮತ್ತು ಮಾನ್‌ಭೂಮ್‌ಜಿಲ್ಲೆಯ ಕೆಲವು ಭಾಗಗಳು. ಇನ್ನೊಂದು ಪಶ್ಚಿಮ ಮುಲ್ತಾನಾ (ಮ. ಭೀ.)

ಮಲ್ಲಿಕಾರ್ಜುನ --ನೋ -ಶ್ರೀಶೈಲ. ಆಂಧ್ರರಾಜ್ಯದ ಕೃಷ್ಣಾ ಜಿಲ್ಲೆಯ ಕೃಷ್ಣಾನದೀತೀರದ ಸುಪ್ರಸಿದ್ಧ ಶಿವಕ್ಷೇತ್ರ. ಗಣಪತಿ ಮತ್ತು ಕಾರ್ತಿಕೇಯರೊಳಗೆ ಮೊದಲು ಲಗ್ನವು ಯಾರಿಗೆಂದು ಪ್ರಶ್ನೆ ಬಂದು, ಮೊದಲು ಭೂಪ್ರದಕ್ಷಿಣೆ ಮಾಡಿಕೊಂಡು ಬಂದವರಿಗೆ ಮೊದಲು ಲಗ್ನವೆಂದಾಯಿತು. ಷಣ್ಮುಖನು ಭೂಪ್ರದಕ್ಷಿಣೆಗೆ ಹೋದನು. ಗಣಪತಿ ಮಾತಾಪಿತರಿಗೆ ಪ್ರದಕ್ಷಿಣೆ ಮಾಡಿ ಭೂಪ್ರದಕ್ಷಿಣೆ ಫಲಬಂತೆಂದು ಸಿದ್ಧಿ ಮತ್ತು ಬುದ್ಧಿ ಎಂಬ ಕನ್ಯೆಯರನ್ನು ವಿವಾಹವಾದನು. ಭೂಪ್ರದಕ್ಷಿಣೆ ಮುಗಿಸಿ ಷಣ್ಮುಖನು ಕೋಪದಿಂದ ಕ್ರೌಂಚಪರ್ವತಕ್ಕೆ ಹೋದನು, ಶಿವನು ಅಲ್ಲೇ ಬಂದು ಜ್ಯೋತಿರ್ಲಿಂಗವಾಗಿ ಉದ್ಭವಿಸಿ ಮಲ್ಲಿಕಾರ್ಜುನನೆನ್ನಿಸಿ ಕಾರ್ತಿಕೇಯನನ್ನು ಸಮಾಧಾನಪಡಿಸಿದ.

ಮಹತೀ --ನಾರದನ ವೀಣೆಯ ಹೆಸರು. ನೋ. -ಕಚ್ಛಪಿ, ಬೃಹತೀ, ಕಲಾವತಿ.

ಮಹಾಕರ್ಣಿ --ಅಂಬುವೀಚನ ಮಂತ್ರಿ (ಮ. ಆ.).

ಮಹಾಕಾಯ --ರಾವಣನ ಸೇನಾಪತಿಯೊಬ್ಬ. ಇವನು ವಾಲಿಪುತ್ರನಾದ ಅಂಗದನಿಂದ ಹತನಾದ (ರಾಮಾ. ಯುದ್ಧ.).

ಮಹಾಕಾಲ --ಬಾಣಾಸುರನ ಇನ್ನೊಂದು ಹೆಸರು (ಮ. ಆ.)

ಮಹಾಕಾಲೇಶ್ವರ --ದ್ವಾದಶ ಜ್ಯೋತಿರ್ಲಿಂಗಗಳಲ್ಲೊಂದು. ಇದು ಉಜ್ಜಯಿನಿ ಅಥವಾ ಅವಂತಿಕೆಯಲ್ಲಿದೆ. ಈ ದೇವಾಲಯದ ಪಕ್ಕದಲ್ಲಿ ಸಿಪ್ರಾನದಿ ಹರಿಯುತ್ತಿದೆ. ಈ ನದಿಯು ಭಗವಾನ್ ವಿಷ್ಣುವಿನ ಶರೀರದಲ್ಲಿ ಉತ್ಪನ್ನವಾದುದು. ಈ ನದಿಗೆ ನರಸಿಂಹಘಾಟು, ರಾಮಘಾಟು, ಛತ್ರಿಘಾಟು ಮೊದಲಾದ ಪ್ರಸಿದ್ಧ ಘಾಟುಗಳಿವೆ.

ಇಲ್ಲಿ ಓಂಕಾರೇಶ್ವರ ಮತ್ತು ಮಹಾಕಾಲ ಲಿಂಗಗಳಿವೆ. ಮಹಾಕಾಲೇಶ್ವರ ದೇವಾಲಯಕ್ಕೆ ಐದು ಅಂತಸ್ತುಗಳಿವೆ. ಇಲ್ಲೇ ಸಮೀಪದಲ್ಲಿ

ವೃದ್ಧಕಾಲೇಶ್ವರಮಂದಿರ ಮತ್ತು ಶ್ರೀರಾಮಮಂದಿರಗಳಿವೆ. ಇಲ್ಲೇ ಕೋಟಿತೀರ್ಥವೆಂಬ ಸರೋವರವಿದೆ. ಪೇಟೆಯಿಂದ ಎರಡು ಮೈಲಿ ದೂರದಲ್ಲಿ ಸಾಂದೀಪನಿ ಎಂಬ ಶ್ರೀಕೃಷ್ಣನ ಗುರುವಿನ ಆಶ್ರಮವಿದೆ. ಈಗ ಇಲ್ಲಿ ಸಾಂದೀಪನಿ, ಕೃಷ್ಣ, ಬಲರಾಮ ಮತ್ತು ಸುದಾಮರ ಮೂರ್ತಿಗಳಿವೆ ನೋ - ಚಂದ್ರಸೇನ.

ಮಹಾಧನುಸ್ಸುಗಳು --೧. ಮಾಹೇಂದ್ರ, ೨. ಗಾಂಡೀವ, ೩. ಶಾರ್ಙ್ಗ.

೧. ಮಾಹೇಂದ್ರ ಧನುಸ್ಸನ್ನು ಭೀಷ್ಮಕನ ಮಗನಾದ ರುಕ್ಮಿಯು ಗಂಧಮಾದನ ಪರ್ವತದಲ್ಲಿರುವ ಕಿಂಪುರುಷಸಿಂಹನೆಂಬವನ ಶಿಷ್ಯನಾಗಿ, ಸಾಂಗವಾಗಿ ಧನುರ್ವೇದವನ್ನೋದಿ ಸಂಪಾದಿಸಿದನು. ಈ ಬಿಲ್ಲಿಗೆ ಮೊದಲು ವಿಜಯವೆಂಬ ಹೆಸರಿತ್ತು. ಇದನ್ನು ಇಂದ್ರನು ಸ್ವೀಕರಿಸಿದ ಮೇಲೆ ಇದಕ್ಕೆ ಮಾಹೇಂದ್ರವೆಂಬ ಹೆಸರು ಬಂದಿತು. ೨ ಗಾಂಡೀವವು ಮೊದಲು ವರುಣನ ಬಿಲ್ಲಾಗಿತ್ತು. ಖಾಂಡವವನ ದಹನಕಾಲದಲ್ಲಿ ಅಗ್ನಿಯು ಈ ಬಿಲ್ಲನ್ನು ವರುಣನಿಂದ ಪಡೆದು ಅರ್ಜುನನಿಗೆ ಕೊಟ್ಟನು. ಮಹಾಪ್ರಸ್ಥಾನಕ್ಕೆ ಪಾಂಡವರು ಹೊರಟಾಗ ಅಗ್ನಿಯು ಅರ್ಜುನನಿಗೆ ಬಳಿಗೆ ಬಂದು ಈ ಬಿಲ್ಲನ್ನೂ ಅಕ್ಷಯಬಾಣಗಳ ಬತ್ತಳಿಕೆಯನ್ನೂ ಆತನಿಂದ ಹಿಂದೆ ಪಡೆದನು. ೩.ಶ್ರೀಕೃಷ್ಣನು ನರಕಾಸುರನನ್ನು ಸಂಹರಿಸಿದ ಕಾಲದಲ್ಲಿ ಆತನಿಗೆ ಶಾರ್ಙ್ಗಧನುಸ್ಸೂ ಅದಿತಿಯ ಕುಂಡಲಗಳೂ, ಹದಿನಾರು ಸಾವಿರ ರಾಜಕನ್ಯೆಯರೂ, ಅನೇಕರತ್ನಗಳೂ ದೊರೆತವು. ರುಕ್ಮಿಯು ದ್ರುವನೆಂಬವನಿಂದ ವಿಜಯವೆಂಬ ಧನುಸ್ಸನ್ನು ಪಡೆದನೆಂದೂ ಇದೆ.

ಮಹಾನದಿ -- ಒರಿಸ್ಸಾದಲ್ಲಿ ಹರಿಯುವ ಒಂದು ನದಿ (ಮ. ಅ., ಭೀ).

ಮಹಾನಂದ -- ಮದ್ರದೇಶದ ರಾಜಪುತ್ರ. ನೋ. -ದಮ.

ಮಹಾಪದ್ಮ --ಒಬ್ಬ ರಾಜ. ಶಿಶುನಾಭ ರಾಜಸಂತತಿಯ ಮಹಾನಂದಿ ರಾಜನಿಗೆ ಶೂದ್ರಸ್ತ್ರೀಯಲ್ಲಿ ಹುಟ್ಟಿದ ಮಗ. ನಂದನು ಇವನ ಸೋದರ. ಈ ಮಹಾಪದ್ಮ ಮತ್ತು ನಂದರು, ಎರಡನೆಯ ಪರಶುರಾಮನಂತೆ ಕ್ಷತ್ರಿಯರನ್ನು ಸಂಹರಿಸಿದನು. ಇವರಲ್ಲಿ ಮಹಾಪದ್ಮ ಸಂಖ್ಯೆಯ (ನೂರುಕೋಟಿ) ಸೇನೆ ಮತ್ತು ಧನವಿತ್ತು (ವಿಷ್ಣುಪು).

ಮಹಾಪದ್ಮಪುರ -- ಗೋಮತೀ ನದೀತೀರದ ಒಂದು ಪಟ್ಟಣ.

ಮಹಾಪಾರ್ಶ್ವ --ರಾಕ್ಷಸನೊಬ್ಬ. ಈತನ ತಂದೆ ವಿಶ್ರವಸು ;ತಾಯಿ ಪುಷ್ಪೋತ್ಕಟೆ. ಸೀತೆಯನ್ನು ಶ್ರೀರಾಮನಿಗೊಪ್ಪಿಸಬಾರದೆಂದು ರಾವಣನಿಗೆ ಬೋಧಿಸಿದವನು. ಇವನು ಅಂಗದನಿಂದ ಹತನಾದನು. (ರಾಮಾ. ಸುಂ. ಯುದ್ಧ)

ಮಹಾಬಲಿ --ನೋ. -ಬಲಿ.

ಮಹಾಬಲೇಶ್ವರ --ಒಂದು ಪುಣ್ಯಕ್ಷೇತ್ರ. ಇದು ಪುಣೆಯಿಂದ ಎಪ್ಪತ್ತೆಂಟು ಮೈಲುದೂರದಲ್ಲಿದೆ. ಇದು ಕೃಷ್ಣಾನದಿಯ ಉಗಮಸ್ಥಾನ. ಇಲ್ಲಿ ಸಾವಿತ್ರಿ, ಕೃಷ್ಣ, ವೇಣಿ, ಕೋಯನಾ ಮತ್ತು ಗಾಯತ್ರೀ ನದಿಗಳು ಉಗಮವಾಗುತ್ತವೆ. ಈ ಕ್ಷೇತ್ರದಲ್ಲಿ ಮಹಾಬಲೇಶ್ವರನ ರೂಪದಿಂದ ಶಂಕರನೂ, ಅತಿಬಲೇಶ್ವರನ ರೂಪದಿಂದ ವಿಷ್ಣುವೂ ಕೋಟೇಶ್ವರನ ರೂಪದಿಂದ ಬ್ರಹ್ಮನೂ ನಿತ್ಯವಾಸಮಾಡುತ್ತಿದ್ದಾರೆ. ಒಮ್ಮೆ ಬ್ರಹ್ಮನು ಯಜ್ಞಮಾಡುತ್ತಿದ್ದಾಗ ಮಹಾಬಲ ಮತ್ತು ಅತಿಬಲರೆಂಬಿಬ್ಬರು ರಾಕ್ಷಸರು ಆತನನ್ನು ತುಂಬಾ ಪೀಡಿಸಿದರು. ಆಗ ವಿಷ್ಣುವು ಅತಿಬಲನನ್ನು ಸಂಹರಿಸಿದನು. ಮಹಾಬಲನು ತಪೋಬಲಸಂಪನ್ನನಾದುದರಿಂದ ಯಾರೂ ಅವನನ್ನು ಕೊಲ್ಲಲಾರದೆ ಹೋದರು. ಆಗ ಆದಿಶಕ್ತಿಯು ಪ್ರಕಟವಾಗಿ ಆತನನ್ನು ಸಂಹರಿಸಿದಳು. ಅವನು ಸಾಯುವಾಗ ಈ ಸ್ಥಳ ತನ್ನ ಹೆಸರಿನಿಂದ ಪ್ರಸಿದ್ಧವಾಗಬೇಕೆಂದೂ, ತ್ರಿಮೂರ್ತಿಗಳ ನಿತ್ಯವಾಸ ಇಲ್ಲಿರಬೇಕೆಂದೂ ಶಕ್ತಿಯನ್ನು ಪ್ರಾರ್ಥಿಸಿದನು. ಅಂದಿನಿಂದ ಇದು ಮಹಾಬಲೇಶ್ವರ ಕ್ಷೇತ್ರವಾಯಿತು. ಕೊನೆಗೆ ಬ್ರಹ್ಮನ ಯಜ್ಞವೂ ಪೂರ್ಣವಾಯಿತು. (ಕ್ಷೇತ್ರದ.)

ಮಹಾಬಾಹು -- ಧೃತರಾಷ್ಟ್ರನ ಮಗ ;ಇವನು ಭೀಮನಿಂದ ಹತನಾದನು (ಮ. ಆ., ದ್ರೋ).

ಮಹಾಭಾರತ -- ನೋ. -ಭಾರತ.

ಮಹಾಭಿಷಕ್ (ಮಹಾಭಿಷ) --ಸೂರ್ಯವಂಶದ ಕ್ಷತ್ರಿಯ ; ಇವನು ಪುಣ್ಯದ ಬಲದಿಂದ ಬ್ರಹ್ಮನ ಸಭೆಯನ್ನು ಸೇರಿದ್ದ ;ಒಂದು ದಿನ ಗಂಗಾದೇವಿಯು ಸಭೆಯಲ್ಲಿ ನರ್ತಿಸುತ್ತಿದ್ದಾಗ ಗಾಳಿಯಿಂದ ಆಕೆಯ ಸೆರಗು ಹಾರಿದಾಗ ಸಭೆಯಲ್ಲಿದ್ದವರೆಲ್ಲಾ ತಲೆತಗ್ಗಿಸಿದರು. ಆದರೆ ಈ ರಾಜನು ಮಾತ್ರ ನಟ್ಟದೃಷ್ಟಿಯಿಂದ ಆಕೆಯನ್ನು ಕಾಣುತ್ತಿದ್ದುದರಿಂದ ಈ ರಾಜನಿಗೆ ಬ್ರಹ್ಮನು ಭೂಮಿಯಲ್ಲಿ ಜನಿಸುವಂತೆ ಶಾಪವಿತ್ತನು. ಗಂಗೆಯು ವಸುಗಳ ಪ್ರಾರ್ಥನೆಯಂತೆ ಆ ರಾಜನ ಪತ್ನಿಯಾಗಲು ಒಪ್ಪಿದಳು. ಮಹಾಭಿಷನು ಚಂದ್ರವಂಶದ ಪ್ರತೀಪರಾಜನ ಮಗನಾಗಿ ಹುಟ್ಟಿ ಶಂತನುವೆಂಬ ಹೆಸರಿನಿಂದ ಪ್ರಸಿದ್ಧನಾದನು. ಗಂಗೆಯು ಈತನ ಪತ್ನಿಯಾದಳು. ನೋ. -ಶಂತನು (ಮ. ಆ.)

ಮಹಾಭೌಮ. --ಚಂದ್ರವಂಶದ ಪೂರುವಿನ ಕುಲದಲ್ಲಿ ಹುಟ್ಟಿದ ಅರಿಹನೆಂಬ ರಾಜನ ಮಗ. ಈತನ ತಾಯಿ ಅಂಗೀ; ಪತ್ನಿ ಸುಯಜ್ಞಾ; ಮಗ ಆಯುತಾನಾಯೀ (ಮ. ಆ)

ಮಹಾಮತಿ --ಅಂಗಿರಸನ ಮಗಳು (ಮ. ವ.).

ಮಹಾಯಜ್ಞ --ಅಧ್ಯಾಪನ, ಬ್ರಹ್ಮಯಜ್ಞ, ಪಿತೃಯಜ್ಞ, ದೈವಯಜ್ಞ, ಭೂತಯಜ್ಞ ಇವು ಐದು ಮಹಾಯಜ್ಞಗಳು. ಇವುಗಳನ್ನು ಋಷಿಯಜ್ಞ, ದೇವಯಜ್ಞ, ಭೂತಯಜ್ಞ, ಮನುಷ್ಯಯಜ್ಞ, ಪಿತೃಯಜ್ಞಗಳೆಂಬ ಹೆಸರಿನಿಂದಲೂ ಕರೆಯುತ್ತಾರೆ. ಯಜ್ಞವೆಂದರೆ ಪರಮಾತ್ಮ ಮೊದಲಾದವರ ಪೂಜೆಯು ಪಂಚಯಜ್ಞ ರೂಪವಾಗಿಯೂ ಅಗ್ನಿಹೋತ್ರ ಮೊದಲಾದ ಹೋಮರೂಪವಾಗಿಯೂ ಇರುವುದು ಬಾಹ್ಯಯಜ್ಞ. ಶಾಸ್ತ್ರಾಭ್ಯಾಸದಿಂದ ಬ್ರಹ್ಮಜ್ಞಾನವನ್ನು ಸಂಪಾದಿಸಿ, ಅದರಿಂದ ಆ ಭಗವಂತನ ಮಹಿಮೆಯನ್ನು ತಿಳಿಯುವುದೂ, ಜಿತೇಂದ್ರಿಯನಾಗಿ ಯೋಗಮಾರ್ಗದಿಂದ ಭಗವಂತನನ್ನು ಪೂಜಿಸುವುದೂ ಅಭ್ಯಂತರ (ಒಳಗಿನ)ಯಜ್ಞವು (ಮನುಸ್ಮೃ).

ಮಹಾರವ --ಯಾದವನೊಬ್ಬ (ಮ. ಆ.).

ಮಹಾರೌರವ -- ನರಕವಿಶೇಷ ನೋ. - ನರಕ. ಇವುಗಳಲ್ಲಿ ಸೂಕರಮುಖ, ಅಂಧಕೂಪ, ಕ್ರಿಮಿಭೋಜನ, ಅಯಃಪಾನ, ಸೂಚೀಮುಖ, ದಂದಶೂಕ, ಶಾಲ್ಮಲಿ ಮೊದಲಾದ ಭೇದಗಳಿವೆ, ಇಂತಿಂತಹ ಪಾಪ ಮಾಡಿದವರಿಗೆ ಇಂತಿಂತಹ ಶಿಕ್ಷೆಯೆಂದು ನಿರ್ಣಯವಿದೆ (ಮ. ಅನು.)

ಮಹಾಲಕ್ಷ್ಮೀ --ನೋ -ಲಕ್ಷ್ಮೀ. ಈಕೆ ವಿಷ್ಣುವಿನ ಪತ್ನಿ; ಸಂಪತ್ತಿನ ರಾಣಿ. ವಿಷ್ಣುವಿನ ಹೃದಯವೇ ಈಕೆಯ ವಾಸಸ್ಥಳ. ಈಕೆಯ ಅನುಗ್ರಹವೇ ಪ್ರಾಪಂಚಿಕರ ಜೀವನದ ಗುರಿ ;ಕಮಲವೇ ಗೃಹವಾಗಿ ಉಳ್ಳವಳು; ಪದ್ಮವು ಹಸ್ತದಲ್ಲಿ ಉಳ್ಳವಳು;ಸದಾ ಪ್ರಕಾಶಿಸುವವಳು; ಸರ್ವರಿಂದಲೂ ಆಶ್ರಯಿಸಲ್ಪಡುವಳು; ಹರಿಗೆ ಪ್ರಿಯಳು ; ಪರಮ ಐಶ್ವರ್ಯಯುಕ್ತಳು; ಎಲ್ಲಾ ಲೋಕಗಳಿಗೂ ತಾಯಿಯು; ಕ್ಷೀರಸಮುದ್ರನ ಮಗಳು.

ಮಹಾಶಿರ --೧ ರಾಕ್ಷಸನೊಬ್ಬ (ಮ. ಸ.).೨ಒಬ್ಬ ಋಷಿ (ಮ. ಸ)

ಮಹಾಶ್ವ --ಯಮಸಭೆಯ ಕ್ಷತ್ರಿಯನೊಬ್ಬ (ಮ. ಸ.)

ಮಹಾಸರಸ್ವತಿ -- ಬ್ರಹ್ಮನ ಪತ್ನಿ; ಈಕೆ ವಾಗ್ದೇವತೆ. ಈಕೆಯನ್ನು ಶರದೃತುವಿನಲ್ಲಾಗಲೀ, ವರ್ಷಾಕಾಲದಲ್ಲಾಗಲೀ ಆರಾಧಿಸುವುದರಿಂದ ಶಾರದೆ ಎನ್ನುವರು. ಶರತ್ಕಾಲದಲ್ಲಿ ಮತ್ತು ಮಳೆಗಾಲದಲ್ಲಿ ದೇವಿಯನ್ನು ಪೂಜಿಸಬೇಕೆಂದು ಮಾರ್ಕಂಡೇಯ ಪುರಾಣದಲ್ಲಿ ಹೇಳಿದೆ (ಮಾರ್ಕಂಪು.).

ಮಹಾಸೇನ -- ಕುಮಾರಸ್ವಾಮಿ; ಶಿವಪುತ್ರ; ಬಹು ದಂಡುಳ್ಳವನು. ಶೂರ ಪದ್ಮಾಸುರನ ನಾಶಕ್ಕಾಗಿ ದೇವತೆಗಳ ಪ್ರಾರ್ಥನೆಯಂತೆ ಶಿವನ ಅಗ್ನಿನೇತ್ರದಿಂದ ಹೊರಬಿದ್ದ ತೇಜಸ್ಸು ಆತನ ಅಪ್ಪಣೆಯಂತೆ ವಾಯು ಮತ್ತು ಅಗ್ನಿಗಳು ಹೊತ್ತು ತಂದು ಭಾಗೀರಥಿಯತೀರದಲ್ಲಿ ಶೋಭಿಸುತ್ತಿರುವ ಶರವನದಲ್ಲಿ ಇಳಿಸಿದರು. ಅಲ್ಲಿ ಆ ತೇಜಸ್ಸಿನ ಮುಂದೆ ದೇವಗಂಗೆಯಲ್ಲಿ ಬೆಳೆದ ಆರು ಕಮಲಪುಷ್ಪಗಳನ್ನಿಟ್ಟರು. ಅದರಲ್ಲಿ ಷಣ್ಮುಖಗಳಿಂದಲೂ, ಹದಿನೆಂಟು ನೇತ್ರಗಳಿಂದಲೂ, ಹನ್ನೆರಡು ಭುಜಗಳಿಂದಲೂ, ಒಂದು ಶರೀರದಿಂದಲೂ, ಎರಡೂ ಪಾದಗಳಿಂದಲೂ ಕೂಡಿದ ಸುಬ್ರಹ್ಮಣ್ಯನ ಜನನವಾಯಿತು. ಆಗ ವಿಷ್ಣುವು ಆರು ಮಂದಿ ಕೃತ್ತಿಕೆಯರನ್ನು ಕರೆದು -- 'ಈ ಶಿಶುವಿಗೆ ನಿತ್ಯವೂ ನಿಮ್ಮ ಮೊಲೆಯ ಹಾಲನ್ನು ಉಣ್ಣಿಸಿರಿ' ಎಂದು ಅಪ್ಪಣೆ ಮಾಡಿದನು. ಒಡನೆಯೇ ಆ ಕೃತಿಕೆಯರ ಮೊಲೆಗಳಿಂದ ಹಾಲು ಸ್ರವಿಸತೊಡಗಿತು. ಅವರು 'ದುಡಿಯದೇ ಬಂಗಾರ, ಹಡೆಯದೇ ಮಕ್ಕಳು, ದೊರಕುವುದು ಅಲಭ್ಯಲಾಭವೆಂದು ಪ್ರತ್ಯೇಕ ಪ್ರತ್ಯೇಕ ಆರು ಕಮಲಗಳಲ್ಲಿ ಮಲಗಿ ಶೋಭಿಸುವ ಕುಮಾರನಿಗೆ ಆ ಕೃತ್ತಿಕೆಯರು ಮೊಲೆಕೊಟ್ಟು ಕಾಪಾಡತೊಡಗಿದರು. ಹಿಂದೆ ಶಿವನು ತನ್ನ ತೇಜವನ್ನು ಭೂಮಿಯ ಮೇಲಿಟ್ಟಾಗ ಅದು ಬೆಂದು ಚಿನ್ನ, ಬೆಳ್ಳಿ, ತಾಮ್ರ ಮೊದಲಾದ ಧಾತುಗಳು ಹುಟ್ಟಿದವು. ಆಗ ಉರಿದು ಉಳಿದ ಕಿಟ್ಟದಿಂದ ಸೀಸ, ತವರ ಮೊದಲಾದವುಗಳುಂಟಾದವು. ಹೀಗೆ ಎಲ್ಲಾ ಲೋಹಗಳೂ ಹರನ ವೀರ್ಯದಿಂದಲೇ ಉಂಟಾದವು. ಮುಂದೆ ಪಾರ್ವತಿಯು ಈ ಆರು ಬಾಲಕರನ್ನು ರಕ್ಷಿಸುವಾಗ ಕಷ್ಟವಾಗಬಾರದೆಂದು ಆ ಆರು ದೇಹಗಳನ್ನು ಒಂದು ದೇಹವನ್ನಾಗಿ ಮಾಡಿ ಶಿವನು ಪರಿವರ್ತಿಸಿದನು (ಶಿವಪು., ಸ್ಕಾಂಪು.).

ಮಹಾಹನು -- ೧ ಒಂದು ಸರ್ಪ. ೨ ಮಹಿಷಾಸುರನ ಒಬ್ಬ ಸೇನಾಪತಿ. ಈತನನ್ನು ಮಹಾಲಕ್ಷ್ಮಿಯ ಪರಿವಾರದವಳಾದ ತ್ರಿನೇತ್ರೆಯು ಕೊಂದಳು. (ಮಾರ್ಕಂಪು., ಮ. ಆ.)

ಮಣಿಭದ್ರ --೧. ಯಕ್ಷರಾಜ ೨. ಶಿವನ ಗಣಗಳಲ್ಲೊಬ್ಬ; ಶಿವನಲ್ಲಿ ವಿಶೇಷ ಭಕ್ತಿಯುಳ್ಳ ಆತನ ಪರಿವಾರದವನು; ಇವನು ಶಿವಕ್ಷೇತ್ರವನ್ನು ಪಾದಗಳಿಂದ ತುಳಿಯಲಾರನೆಂದು ತಲೆಯಡಿಯಾಗಿ ನಡೆದನು (ಗೋ, ಮ.).

ಮಹಿರಾವಣ (ಮೈರಾವಣ) -- ನೋ --ಅಹಿರಾವಣ, ಜಯ.

ಮಹಿಷ್ಮತಿ -- ಅಂಗಿರಸನ ಪುತ್ರಿ (ಮ. ವ.).

ಮಹಿಷಾಸುರ --೧. ರಾಕ್ಷಸನೊಬ್ಬ. ದಿತಿಯ ಮಕ್ಕಳನ್ನೆಲ್ಲ ಇಂದ್ರನು ನಾಶಮಾಡಲು ದಿತಿಯು ದುಃಖ ಮತ್ತು ಕೋಪದಿಂದ ಸುಪಾರ್ಶ್ವನೆಂಬ ಮುನಿಯ ಆಶ್ರಮದ ಹತ್ತಿರ ಎಮ್ಮೆಯಂತೆ ನಿಂತು ತಪಸ್ಸುಮಾಡಿ ಬ್ರಹ್ಮನಿಂದ ಬಲಿಷ್ಠನಾದ ಪುತ್ರನಾಗುವಂತೆ ವರ ಪಡೆದಳು. ಇದನ್ನು ಕೇಳಿದ ಸುಪಾರ್ಶ್ವನು -- 'ನೀನು ಮಹಿಷದಂತಿರುವ ಮಗನನ್ನು ಪಡೆಯುತ್ತಿ' ಎಂದನು. ದಿತಿಯು ವ್ಯಸನದಿಂದ ಪುನಃ ಬ್ರಹ್ಮನಿಗೆ ಮೊರೆ ಇಡಲು ಅವನು -- 'ಮುಖ ಮಾತ್ರ ಮಹಿಷದಂತಿರುವ ಮಗನನ್ನು ಪಡೆಯುವೆ' ಎಂದನು. ಮುಂದೆ ಈಕೆಯಲ್ಲಿ ಮಹಿಷಾಸುರನೆಂಬ ಮಗನು ಹುಟ್ಟಿ ಶಿವನನ್ನು ಕುರಿತು ತಪಸ್ಸುಮಾಡಿ ಆತನಿಂದ, ಹೆಂಗಸಿನಿಂದ ಮಾತ್ರ ಮರಣವಾಗುವ ವರವನ್ನು ಪಡೆದನು. ಈ ವರದಿಂದ ಕೊಬ್ಬಿದ ಅಸುರನು ಲೋಕಕಂಟಕನಾಗಲು ದೇವತೆಗಳೆಲ್ಲ ಕೂಡಿ ಕೊಟ್ಟ ತೇಜಸ್ಸಿನಿಂದ ತ್ರಿಪುರಸುಂದರಿಯು ಆವಿರ್ಭವಿಸಿದಳು. ಮಹಿಷಾಸುರನು ಈಕೆಯನ್ನು ಮೋಹಿಸಿ ಈಕೆಯಿಂದ ಹತನಾದನು.

ಪರಶಿವನು ಬ್ರಹ್ಮ ವಿಷ್ಣು ಶಿವ ಶರೀರಗಳುಳ್ಳವನಾದುದರಿಂದ ಆತನಿಗೆ ತ್ರಿಪುರನೆಂದು ಹೆಸರು. ಆತನ ಪತ್ನಿಯೇ ತ್ರಿಪುರಸುಂದರಿ (ಮಾರ್ಕಂ. ಪು. ದೇವೀಭಾ.).

೨. ರಂಭನೆಂಬ ಅಸುರನು ಮಹಿಷವನ್ನು (ಎಮ್ಮೆ) ನೋಡಿ ಪತ್ನಿಯೊಡನೆ ಸಂಭೋಗಿಸಲು ಆತನಿಗೆ ಮಹಿಷಾಕಾರದ ಬಾಲಕನೊಬ್ಬ ಜನಿಸಿದನು. ಮಗನಿಗಾಗಿ ರಂಭನು ಅಗ್ನಿಯನ್ನು ಕುರಿತು ತಪಸ್ಸುಮಾಡಿದಾಗ -- 'ನಿನಗೆ ದೇವತೆಗಳನ್ನು ಗೆಲ್ಲಬಲ್ಲ ಮಗನಾಗುವನು. ಆದರೆ ಪತ್ನಿಯೊಡನೆ ಕ್ರೀಡಿಸುವ ಮೊದಲು ನೀನು ನೋಡಿದಂತಹ ಆಕಾರದವನಾಗುವನು'ಎಂದಿದ್ದನು. ಈ ಮಹಿಷಾಸುರನೇ ದೇವಿಯನ್ನು ಮೋಹಿಸಿ ಆಕೆಯಿಂದ ಹತನಾದನು (ದೇವೀಭಾ.).೩. ಪ್ರಹ್ಲಾದನ ತಮ್ಮನಾದ ಅನುಹ್ಲಾದನ ಮಗ. ಇವನು ತಾರಕಾಸುರನ ಸೇನಾಪತಿಯಾಗಿದ್ದನು. ಇವನು ದೇವತೆಗಳೊಡನೆ ಯುದ್ಧ ಮಾಡುವಾಗ ದೊಡ್ಡ ಪರ್ವತ ಒಂದನ್ನು ಅವರ ಮೇಲೆ ಎತ್ತಿ ಒಗೆಯಲು ಒಮ್ಮೆಲೇ ಹತ್ತುಸಾವಿರ ಮಂದಿ ದೇವತೆಗಳು ಹತರಾಗಿ ನೆಲಕ್ಕೆ ಬಿದ್ದರು. ಇವನು ದೇವತೆಗಳನ್ನು ಬೆನ್ನಟ್ಟಿ ಮಹಾದೇವನ ರಥದ ಮೂಕಿಯನ್ನು ಹೋಗಿ ಹಿಡಿಯಲು ಆಗ ಆಕಾಶದಲ್ಲೂ ಭೂಮಿಯಲ್ಲೂ ಮಹಾಕೋಲಾಹಲವುಂಟಾಯಿತು. ಮಹಾದೇವನು ಆಗ ಷಣ್ಮುಖನನ್ನು ಧ್ಯಾನಿಸಲು ಆತನು ಆ ರಾಕ್ಷಸನನ್ನು ಇದಿರಿಸಿ ತನ್ನ ಶಕ್ತ್ಯಾಯುಧದಿಂದ ಕೊಂದನು (ಮ. ವ).

ಮಹೀಷಕಾ (ಮಹಿಷಕಾ)-- ಮೈಸೂರು ದೇಶ (ಮ. ಭೀ., ಅಶ್ವ).

ಮಹೇಂದ್ರ --೧ ಸಪ್ತಕುಲಪರ್ವತಗಳಲ್ಲಿ ಒಂದು. ಇದು ಗಂಜಾಮ್ ಜಿಲ್ಲೆಯ ಪರ್ವತ. ಇಲ್ಲೇ ಪರಶುರಾಮನ ವಾಸ್ತವ್ಯವಿತ್ತು. ಈಗ ಇದನ್ನು ಕಾಲಂಜರ ಪರ್ವತ ಎನ್ನುತ್ತಾರೆ. ಧರ್ಮರಾಜನು ಲೋಮಶಮುನಿಯೊಡನೆ ತೀರ್ಥಯಾತ್ರೆ ಮಾಡುತ್ತ ಈ ಪರ್ವತಕ್ಕೆ ಬಂದು, ಇಲ್ಲೆ ರಾತ್ರಿ ವಾಸ ಮಾಡಿ, ಮರುದಿನ ಭೃಗು, ಆಂಗಿರಸ್ಸು, ವಸಿಷ್ಠ, ಕಶ್ಯಪ ಮೊದಲಾದ ಋಷಿಗಳ ವಂಶದಲ್ಲಿ ಹುಟ್ಟಿದ ಮುನಿಗಳಿಗೆ ನಮಸ್ಕರಿಸಿ ಪರಶುರಾಮನ ಸ್ನೇಹಿತನಾದ ಅಕೃತವ್ರಣ ಮುನಿಯೊಡನೆ ಸಂಭಾಷಣೆ ಮಾಡಿದನು. ೨. ಅದಿತಿಯ ಮಗನಾದ ಇಂದ್ರನಿಗೂ ಈ ಹೆಸರು ಸಲ್ಲುತ್ತಿದೆ. ಹದಿನಾಲ್ಕು ಮಂದಿ ಇಂದ್ರರಲ್ಲಿ ಇವನು ಏಳನೆಯವನು. ಋಗ್ವೇದದಲ್ಲಿ ಕೆಲವು ಮಂತ್ರಗಳಿಗೆ ಅಧಿದೇವತೆ ಮುಖ್ಯ ದೇವತೆಯೂ ಹೌದು. ಪುರಂದರನೆಂಬವನು ಈಗಿನ ಇಂದ್ರ. ಇಂದ್ರನೆಂಬುದು ಈತನ ಪದವಿಯ ಹೆಸರು; ಪೂರ್ವದಿಕ್ಕಿನ ದೇವತೆ. ನೋ. -ಇಂದ್ರ (ಮ. ಆ., ವ., ಭೀ., ರಾಮಾ. ಬಾಲ., ಮತ್ಸ್ಯಪು.).

ಮಹೋದರ --೧. ಒಂದು ಸರ್ಪ. ೨. ಋಷಿಯೊಬ್ಬ. ಈತನ ದೇಹದಲ್ಲಿದ್ದ ಪೂತಿಗಂಧಿ ಎಂಬ ರಾಕ್ಷಸ ಈ ಮುನಿಯು ಔಶನಸ ತೀರ್ಥದಲ್ಲಿ ಸ್ನಾನಮಾಡಿದ ಮೇಲೆ ಈತನನ್ನು ಬಿಟ್ಟನು. ನೋ. - ಕಪಾಲಮೋಚನತೀರ್ಥ, ಔಶನಸತೀರ್ಥ. (ಮ. ವ. ಶ.). ೩. ಚಂದ್ರವಂಶದ ಧೃತರಾಷ್ಟ್ರನ ಮಗ; ಇವನು ಭೀಮನಿಂದ ಹತನಾದನು. (ಮ. ಆ., ಭೀ.). ೪ ರಾವಣನ ಸೋದರಮಾವ. ವಿಶ್ರವಸು ಮತ್ತು ಪುಷ್ಪೋತ್ಕಟೆಯರ ಮಗ. ಇವರಲ್ಲಿ ಮೊದಲನೆಯವನು ಸೀತಾಶೋಧನೆಗಾಗಿ ಲಂಕೆಗೆ ಬಂದ ಹನುಮಂತನಿಂದ ಹತನಾದನು. ಎರಡನೆಯವನು ರಾಮಾಯಣ ಯುದ್ಧಕಾಲದಲ್ಲಿ ನೀಲನಿಂದ ಹತನಾದನು (ರಾಮಾ. ಸುಂದರ. ಯುದ್ಧ).

ಮಾಕಂದಿ --೧. ಗಂಗಾತೀರದಲ್ಲಿದ್ದ ಒಂದು ಪಟ್ಟಣ. ಸಂಧಾನಕಾಲದಲ್ಲಿ ಪಾಂಡವರು ಕೇಳಿದ ಐದು ಊರುಗಳಲ್ಲಿ ಒಂದು (ಮ. ಆ.).೨ ಭಾಗೀರಥಿಯ ದಕ್ಷಿಣ ತೀರದಲ್ಲಿದ್ದ ದ್ರುಪದನ ನಗರ. ದ್ರುಪದನು ದ್ರೋಣನಿಗೆ ಸೋತು ಚರ್ಮಣ್ವತೀ ನದಿಯವರೆಗಿನ ಅರ್ಧರಾಜ್ಯವನ್ನು ದ್ರೋಣನಿಗೆ ಕೊಟ್ಟು ಗಂಗಾತೀರದಲ್ಲಿದ್ದ ಮಾಕಂದಿ ಹತ್ತುಸಾವಿರದಲ್ಲಿಯೂ, ಕಾಂಪಿಲ್ಯ ನಗರದಲ್ಲಿಯೂ ತಾನು ದೀನನಾಗಿ ವಾಸಿಸಿದ್ದನು (ಮ. ಆ.)

ಮಾಗಧ -- ನೋ- ಜರಾಸಂಧ. ಮಗಧದೇಶಾಧಿಪತಿ. ಇವನು ಅಭಿಮನ್ಯುವಿನಿಂದ ಹತನಾದನು (ಮ. ಭೀ)

ಮಾಂಡವೀ -- ದಶರಥನ ಪುತ್ರನಾದ ಭರತನ ಪತ್ನಿ ;ಈಕೆಯ ಮಕ್ಕಳು ತಕ್ಷ ಮತ್ತು ಪುಷ್ಕರ. ನೋ - ಭರತ (ರಾಮಾ. ಬಾಲ. ಉತ್ತರ.).

ಮಾಂಡವ್ಯ --ನೋ. -ಅಣಿಮಾಂಡವ್ಯ.

ಮಾಂಡುಕರ್ಣಿ --ಪಂಚಾಪ್ಸರತೀರ್ಥದಲ್ಲಿದ್ದ ಮುನಿಯೊಬ್ಬ (ರಾಮಾ. ಅರಣ್ಯ.).

ಮಾತಂಗ --ಮತಂಗಮುನಿಯ ಮಗ. ನೋ. -ಮತಂಗ (ರಾಮಾ. ಕಿಷ್ಕಿಂ., ಮ. ಅನು.)ಇವನೂ ಹಿಮಾಚಲನೂ ಪ್ರಾಣಸ್ನೇಹಿತರಾಗಿದ್ದರು. ಒಮ್ಮೆ ಹಿಮವಂತನು ತಾನು ಪಾರ್ವತಿಯನ್ನು ಮಗಳಾಗಿ ಪಡೆದಿರುವೆನೆಂದು ಹೆಮ್ಮೆಯಿಂದಾಡಲು, ಮಾತಂಗಮುನಿಯು ಶ್ಯಾಮಲಾದೇವಿಯನ್ನು ತಪಸ್ಸಿನಿಂದ ಮೆಚ್ಚಿಸಿ ಆಕೆಯ ಅನುಗ್ರಹದಿಂದ ತನ್ನ ಪತ್ನಿಯಾದ ಸಿದ್ಧಿಮತಿಯಲ್ಲಿ ಒಂದು ಹೆಣ್ಣುಮಗುವನ್ನು ಪಡೆದು ಆಕೆಗೆ ಲಘುಶ್ಯಾಮಲಾ ಎಂದು ಹೆಸರಿಟ್ಟನು. ಈಕೆಯು ಮಾತಂಗಮುನಿಯ ಮಗಳಾದುದರಿಂದ ಈಕೆಗೆ ಮಾತಂಗಿ ಎಂಬ ಹೆಸರಿದೆ. ಈಕೆ ತಂದೆಯಿಂದ ಎಲ್ಲಾ ವಿದ್ಯೆಗಳನ್ನೂ, ಮಂತ್ರರಹಸ್ಯಗಳನ್ನೂ ತಿಳಿದು ಲಲಿತಾಪರಮೇಶ್ವರಿಯ ಅನುಗ್ರಹಕ್ಕೆ ಪಾತ್ರಳಾದಳು (ಬ್ರ. ಪು.).

ಮಾತಂಗಿ --ಮಾತಂಗಮುನಿಯ ಮಗಳು. ನೋ,-ಮಾತಂಗ.

ಮಾತರಿಶ್ವ -- ಗರುಡನ ಮಗ (ಮ. ಉ.).

ಮಾತಲಿ -- ಇಂದ್ರನ ಸಾರಥಿ. ಈತನ ಪತ್ನಿ ಸುಧರ್ಮಾ; ಮಗಳು ಗುಣಕೇಶಿ ;ಮಗ ಗೋಮುಖ. ಈ ಮಗನು ಇಂದ್ರಪುತ್ರನಾದ ಜಯಂತನ ಸಾರಥಿ (ಮ. ಉ., ಅನು., ರಾಮಾ. ಉತ್ತರ.).ಕಿರಾತರೂಪಿಯಾದ ಶಿವನಿಂದ ಅರ್ಜುನನು ಪಾಶುಪತಾಸ್ತ್ರವನ್ನು ಪಡೆದಮೇಲೆ ಪಾರ್ಥನನ್ನು ಈತನು ಇಂದ್ರನ ರಥದಲ್ಲಿ ಕುಳ್ಳಿರಿಸಿಕೊಂಡು ಸ್ವರ್ಗಕ್ಕೆ ಕರೆದುಕೊಂಡು ಹೋದನು (ಮ. ವ.). ರಾಮರಾವಣರ ಯುದ್ಧದಲ್ಲಿ ಮಾತಲಿಯು ಶ್ರೀರಾಮನಿಗೆ ಯುದ್ಧ ಮಾಡಲು ಇಂದ್ರನ ರಥವನ್ನು ತಂದುಕೊಟ್ಟನು (ರಾಮಾ. ಯುದ್ಧ).

ಮಾತೃಕೆಯರು --ಇವರು ಷಣ್ಮುಖನನ್ನು ಬಾಲ್ಯದಲ್ಲಿ ರಕ್ಷಿಸಿದವರು. ಇವರು ಕಾಕಿ, ಹಲಿಮೆ, ಬೃಂಹಿತೆ, ಆರ್ಯೆ, ಪಲಾಲೆ, ವೈಮಿತ್ರೆಯರೆಂಬ ಏಳು ಮಂದಿ. ಈ ಏಳು ಮಂದಿಗೆ ಷಣ್ಮುಖನ ಅನುಗ್ರಹದಿಂದ ಶಿಶುವೆಂಬ ಪುತ್ರನು ಹುಟ್ಟಿ ಭಯಂಕರನಾಗಿದ್ದು ವೀರಾಷ್ಟ ಮತ್ತು ನವಕ ಎಂಬ ಹೆಸರುಳ್ಳವನಾಗಿ ವಿಶಾಖನೊಡಗೂಡಿಕೊಂಡಿದ್ದನು (ಮ.ವ.,ಶ.). ಬ್ರಾಹ್ಮಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ, ಚಾಮುಂಡಾ --ಇವರು ಸಪ್ತಮಾತೃಕೆಯರು (ಅಮರಪ್ರ).

ಮಾದ್ರಿ -- ೧. ಪಾಂಡುವಿನ ಎರಡನೆಯ ಹೆಂಡತಿ. ಮದ್ರಾಧಿಪನಾದ ಋತಾಯನನ ಮಗಳು ;ಶಲ್ಯನ ಸಹೋದರಿ. ಈಕೆಯಲ್ಲಿ ಅಶ್ವಿನೀದೇವತೆಗಳ ಅನುಗ್ರಹದಿಂದ ನಕುಲ ಸಹದೇವರು ಹುಟ್ಟಿದರು. ಒಂದು ವಸಂತ ಋತುವಿನಲ್ಲಿ ವಸಂತಲಕ್ಷ್ಮಿಯಂತೆ ಅಲಂಕರಿಸಿಕೊಂಡ ಮಾದ್ರಿಯನ್ನು ಕಂಡು ಮೋಹಿಸಿ ಆಕೆಯ ಸಂಗದಿಂದ ಪಾಂಡುವು ಸದ್ಗತಿಯನ್ನು ಹೊಂದಲು ಮಾದ್ರಿಯೂ ಪತಿಯೊಡನೆ ಸದ್ಗತಿಯನ್ನು ಹೊಂದಲು ಸಹಗಮನವಾದಳು. ಈಕೆಯು ಧೃತಿದೇವಿಯ ಅಂಶದಿಂದ ಜನಿಸಿದವಳು. (ಮ. ಆ.).

ಕುಂತಿಯನ್ನು ಸ್ವಯಂವರದಲ್ಲಿ ಪಾಂಡುವು ವಿವಾಹವಾದ ಮೇಲೆ ಭೀಷ್ಮನೇ ಬಾಹ್ಲೀಕ ರಾಜರಲ್ಲಿ ಶ್ರೇಷ್ಠನೆನಿಸಿದ ಮದ್ರರಾಜನ ಬಳಿಗೆ ಹೋಗಿ -- 'ನಿನ್ನ ಸೋದರಿಯಾದ ಮಾದ್ರಿಯನ್ನು ಪಾಂಡುವಿಗೆ ಕೊಡಬೇಕು' ಎನ್ನಲು ಅವನು 'ಹಿಂದೆ ವಿವಾಹಕಾಲದಲ್ಲಿ ನಮ್ಮಲ್ಲಿ ಅನುಸರಿಸುತ್ತಿದ್ದ ಪದ್ಧತಿಯಂತೆ ವರನ ಕಡೆಯಿಂದ ಧನ ತೆಗೆದುಕೊಂಡು ಕನ್ಯೆಯನ್ನು ಕೊಡುವ ಕ್ರಮವನ್ನು ಅನುಸರಿಸಬೇಕಾಗಿದೆ. ನಮ್ಮಲ್ಲಿ ಕನ್ಯಾಶುಲ್ಕವು ರೂಢಿಯಲ್ಲಿದೆ. ಇದೇ ನಮ್ಮ ಕುಲಧರ್ಮ' ವೆನ್ನಲು ಭೀಷ್ಮನು ಅಪರಿಮಿತವಾದ ರತ್ನ, ಸುವರ್ಣ ನಾಣ್ಯಗಳನ್ನೂ, ಆನೆ, ಕುದುರೆ, ರಥಗಳು ಮತ್ತು ವಸ್ತ್ರಾಭರಣಗಳನ್ನೂ ತರಿಸಿ ಶಲ್ಯನ ಮನಸ್ಸಿಗೆ ತೃಪ್ತಿಯಾಗುವಂತೆ ಕೊಟ್ಟನು. ಶಲ್ಯನು ಮಾದ್ರಿಯನ್ನು ಸರ್ವಾಭರಣಗಳಿಂದಲಂಕರಿಸಿ ಭೀಷ್ಮನ ವಶಕ್ಕೊಪ್ಪಿಸಿದನು (ಮ.ಆ.). ೨.ಯದುರಾಜನ ಮೂರನೆಯ ಮಗನಾದ ಕ್ರೋಷ್ಟುವಿನ ಎರಡನೆಯ ಹೆಂಡತಿ. ಈಕೆಗೆ ಯುಧಾಜಿತ, ದೇವಮೀಢುಷರೆಂಬಿಬ್ಬರು ಮಕ್ಕಳಿದ್ದರು (ಹರಿ).

ಮಾಧವ --೧. ಲಕ್ಷ್ಮೀಪತಿ ಅಥವಾ ವಿದ್ಯೆಯ ಒಡೆಯ; ಶ್ರೀಕೃಷ್ಣ; ನಾರಾಯಣ. ೨. ಆಕಾಶರಾಜನು ಹಿಂದಿನ ಜನ್ಮದಲ್ಲಿ ಆಗಿದ್ದ ಬ್ರಾಹ್ಮಣ (ವೆಂ. ಮ.)

ಮಾಧವಿ --ಈಕೆಯು ಯಯಾತಿರಾಜನ ಮಗಳು. ಈಕೆಗೆ ನಾಲ್ವರು ಮಕ್ಕಳಿದ್ದರು. ಈಕೆ ಹೆರಿಗೆಯಾದಮೇಲೂ ಕನ್ಯೆಯಾಗುವ ವರ ಪಡೆದುದರಿಂದ ಈಕೆ ಬೇರೆಬೇರೆಯವರಿಂದ ಮಕ್ಕಳನ್ನು ಪಡೆದಳು. ಇಕ್ಷ್ವಾಕುವಂಶದ ಹರ್ಯಶ್ವನಿಂದ ಈಕೆ ವಸುಮನನೆಂಬುವನನ್ನೂ, ಕಾಶೀಶ್ವರನಾದ ದಿವೋದಾಸನಿಂದ ಪ್ರತರ್ದನನನ್ನೂ, ಭೋಜ ನಗರಾಧಿಪತಿಯಾದ ಉಶೀನರನಿಂದ ಶಿಬಿಯನ್ನೂ, ವಿಶ್ವಾಮಿತ್ರನಿಂದ ಅಷ್ಟಕನೆಂಬ ಮಗನನ್ನೂ ಪಡೆದಳು. ಈಕೆಗೆ ಯಯಾತಿಯು ವಿವಾಹ ಮಾಡಲು ನಿಶ್ಚಯಿಸಿದರೂ ಈಕೆ ಎಲ್ಲಾ ರಾಜಪುತ್ರರನ್ನು ತಿರಸ್ಕರಿಸಿ ತಪಸ್ಸಿಗೆ ಹೋದಳು (ಮ. ಆ., ಉ., ಮತ್ಸ್ಯಪು.).

ಮಾಂಧಾತ -- ಸೂರ್ಯವಂಶದ ಯುವನಾಶ್ವನ ಮಗ. ಈತನ ಪತ್ನಿ ಶಶಿಬಿಂದುವಿನ ಪುತ್ರಿಯಾದ ಬಿಂದುಮತಿ. ಮಕ್ಕಳು ಪುರುಕುತ್ಸ, ಅಂಬರೀಷ ಮತ್ತು ಮುಚುಕುಂದರು. ಈತನಿಗೆ ಐವತ್ತು ಮಂದಿ ಪುತ್ರಿಯರು. ಇವರನ್ನೆಲ್ಲ ಸೌಭರಿಮುನಿಯು ವಿವಾಹವಾದನು. ಈ ರಾಜ ನೂರು ರಾಜಸೂಯಯಾಗಗಳನ್ನೂ ನೂರು ಅಶ್ವಮೇಧಯಾಗಗಳನ್ನೂ ಮಾಡಿದನು. ಈತನೊಮ್ಮೆ ಇಂದ್ರನನ್ನು ಜಯಿಸಲಿಕ್ಕೆ ಹೋಗಿದ್ದ. ಇಂದ್ರನು ಇವನೊಡನೆ 'ನನ್ನನ್ನು ಜಯಿಸುವ ಮೊದಲು ಭೂಲೋಕದ ಲವಣಾಸುರನನ್ನು ಜಯಿಸಿ ಬಾ 'ಎಂದನು. ಮಾಂಧಾತನು ಲವಣಾಸುರನೊಡನೆ ಯುದ್ಧಮಾಡಿ ಅವನಿಂದ ಹತನಾದನು. ಇವನು ಸ್ವರ್ಗಸ್ಥನಾದ ಮೇಲೆ ಉತ್ತರಗೋಗ್ರಹಣದಲ್ಲಿ ಅರ್ಜುನನ ಯುದ್ಧಚಾತುರ್ಯವನ್ನು ನೋಡುವುದಕ್ಕೆ ಸ್ವರ್ಗದಿಂದ ಇಂದ್ರನೊಡನೆ ಬಂದಿದ್ದ (ಭಾಗ., ವಿಷ್ಣುಪು., ಮ. ಶಾಂ., ವಿ., ರಾಮಾ., ಉತ್ತರ.). ಯುವನಾಶ್ವರಾಜನು ಒಮ್ಮೆ ಭೃಗುಮಹರ್ಷಿಯು ಮಂತ್ರಿಸಿಟ್ಟಿದ್ದ ಪುತ್ರಪ್ರದವಾದ ಉದಕವನ್ನು ಕುಡಿದು ಗರ್ಭಿಣಿಯಾಗಿ ಒಂದು ಶಿಶುವನ್ನು ಹೆತ್ತನು. ಅವನೇ ಮಾಂಧಾತ (ಮಾಂಧಾಸ್ಯತಿ= ನನ್ನನ್ನು ಚೀಪುತ್ತಾನೆ).ಆ ಮಗುವಿಗೆ ಇಂದ್ರನು ತನ್ನ ಬಲಗೈ ಹೆಬ್ಬೆರಳಿನಲ್ಲಿ ಅಮೃತರಸವನ್ನು ತುಂಬಿ ಶಿಶುವು ಚೀಪುವಂತೆ ಮಾಡಿದನು (ಮ. ವ., ದ್ರೋ., ಭಾಗ.).

ಮಾಧ್ಯಮ -- ನೋ., -ಕವಷ.

ಮಾಂಬುಧಿ --ವಿಶ್ವಾಮಿತ್ರನ ವಂಶದ ಮಂತ್ರಪವರ್ತಕನೊಬ್ಬ.

ಮಾನಸ ಸರೋವರ --ಮಾಂಧಾತಪರ್ವತದಡಿಯಲ್ಲಿ ಮಾನಸಸರೋವರವಿದೆ. ಇದರ ನೀರು ಅತ್ಯಂತ ನಿರ್ಮಲ. ಇದರಲ್ಲಿ ತುಂಬ ಹಂಸಗಳ ಗುಂಪುಗಳಿವೆ. ಇಲ್ಲಿಂದಲೇ ಸಿಂಧು, ಸಟ್ಲೇಜ್, ಬ್ರಹ್ಮಪುತ್ರಾ ನದಿಗಳು ಉಗಮವಾಗುತ್ತವೆ. ಈ ಸರೋವರದ ದಂಡೆಯ ಮೇಲೆ ಎಂಟು ಮಠಗಳಿದ್ದು ಕೆಲವು ಮಠಗಳಲ್ಲಿ ಹಿಂದೂ ಮೂರ್ತಿಗಳಿವೆ. ಈ ಸರೋವರದ ದಕ್ಷಿಣಕ್ಕೆ ೨೫,೦೦೦ ಅಡಿ ಎತ್ತರದ ಮಾಂಧಾತ ಶಿಖರವು ಸ್ಫಟಿಕದಂತೆ ಹೊಳೆಯುತ್ತದೆ. ಕೆಲವರು ಈ ಸರೋವರದ ಸುತ್ತಳತೆ ೨೦೦ ಮೈಲುಗಳೆನ್ನುತ್ತಾರೆ. ಈ ಸರೋವರವು ಸಮುದ್ರದ ಮೇಲಿನ ತಳದಿಂದ ೧೫,೦೦೦ ಅಡಿ ಎತ್ತರವಿದೆ. ಇಲ್ಲಿ ಬಿಳಿ ರಾಜಹಂಸಗಳೂ, ಕರಿ ರಾಜಹಂಸಗಳೂ ಇವೆ. ಇಲ್ಲಿ ಚಳಿ ಅತ್ಯಧಿಕವಿರುವುದರಿಂದ ಶ್ವಾಸೋಚ್ಛ್ವಾಸ ಕ್ರಿಯೆ ಚೆನ್ನಾಗಿ ನಡೆಯುವುದಿಲ್ಲ. ಈ ಸರೋವರದಲ್ಲಿ ಮೀನುಗಳಿವೆ, ಅವನ್ನು ಹಿಡಿಯಲು ಯಾರಿಗೂ ಅನುಮತಿ ಇಲ್ಲ. ತೆರೆಗಳ ಹೊಡೆತದಿಂದ ದಡಕ್ಕೆ ಬಿದ್ದ ಮೀನುಗಳನ್ನು ಟಿಬೇಟದವರು ಕೊಂಡುಹೋಗಿ ಒಣಗಿಸಿ ಭೂತಪಿಶಾಚಿಗಳ

ಉಚ್ಚಾಟನೆಗಾಗಿ ಉಪಯೋಗಿಸುತ್ತಾರೆ. ಹಗಲು ೧೨ ಗಂಟೆಗೆ ಇಲ್ಲಿ ೨೮ ಡಿಗ್ರಿ ಉಷ್ಣವಿರುತ್ತದೆ.

ಬ್ರಹ್ಮನ ಹೃದಯದಿಂದ ಹೊರಟ ಸರೋವರವೇ ಮಾನಸ ಸರೋವರವೆನ್ನುತ್ತಾರೆ. ಇದರ ಸಮೀಪ ಪುರಾಣಪ್ರಸಿದ್ಧವಾದ ಸುಮೇರು ಪರ್ವತವಿದೆ ಎನ್ನುತ್ತಾರೆ. ಬ್ರಹ್ಮನು ಕೈಲಾಸದಲ್ಲಿ ತಪಸ್ಸು ಮಾಡುತ್ತಿರುವಾಗ ಆವನಿಗೆ ನೀರಿನ ಆವಶ್ಯಕತೆ ಉಂಟಾಗಿ ಈ ಸರೋವರ ಸೃಷ್ಟಿಸಿದನೆಂದು ಸ್ಕಾಂದಪುರಾಣದಲ್ಲಿದೆ. ಈ ಸರೋವರದಲ್ಲಿ ಕಮಲಗಳು ತುಂಬಾ ಬೆಳೆಯುತ್ತವೆ (ಕ್ಷೇತ್ರದ.).

ಮಾನಿನಿ --ರಾಜ್ಯವರ್ಧನನ ಪತ್ನಿ. ಈಕೆ ವಿಡೂರಥನ (ವಿಡೂರಧನ) ಮಗಳು. ಈಕೆ ಪತಿಯೊಂದಿಗೆ ಮತ್ತು ಮಕ್ಕಳು ಮೊಮ್ಮಕ್ಕಳೊಂದಿಗೆ ಕೆಲವು ಸಾವಿರ ವರ್ಷ ಬದುಕಿದ್ದಳು. ರಾಜ್ಯವರ್ಧನನು ಏಳು ಸಾವಿರ ವರ್ಷ ರಾಜ್ಯಭಾರ ಮಾಡಿ ಒಂದು ದಿನ ತನ್ನ ತಲೆಯ ಮೇಲೆ ನರೆಗೂದಲನ್ನು ಕಂಡು ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಬೇಕೆಂದಿರುವಾಗ, ಪ್ರಜೆಗಳು ಸೂರ್ಯನನ್ನು ಕುರಿತು ತಪಸ್ಸುಮಾಡಿ ಪುನಃ ಹತ್ತುಸಾವಿರ ವರ್ಷ ಆಯುಷ್ಯವನ್ನು ರಾಜ್ಯವರ್ಧನನಿಗೆ ಹೆಚ್ಚಿಸಿದರು. ಆದರೆ ತನಗೆ ಆಯುಷ್ಯವನ್ನು ಪಡೆದುಕೊಟ್ಟ ಪ್ರಜೆಗಳನ್ನು ತಾನು ಅಗಲಿರಲಾರೆನೆಂದು ರಾಜನು ತಪಸ್ಸಿಗೆ ಹೊರಡಲು ಸೂರ್ಯನು ಆತನಿಗೆ ಪ್ರತ್ಯಕ್ಷನಾಗಿ ಆತನ ಪ್ರಜೆಗಳಿಗೂ ಹತ್ತುಸಾವಿರ ವರ್ಷ ಆಯುಷ್ಯವನ್ನು ಕೊಟ್ಟನು (ಮಾರ್ಕಂ. ಪು.).

ಮಾಯಾ --ಮೋಕ್ಷಪ್ರದಗಳಾದ ಏಳು ಪಟ್ಟಣಗಳಲ್ಲಿ ಒಂದು; ಇದಕ್ಕೆ ಗಂಗಾದ್ವಾರ ಅಥವಾ ಹರಿದ್ವಾರವೆಂಬ ಹೆಸರಿದೆ. ಇಲ್ಲಿಯೇ ಗಂಗೆಯು ಶಂತನುವನ್ನು ವರಿಸಿದಳು. ಭರದ್ವಾಜನಿಗೆ ದ್ರೋಣನು ಇಲ್ಲಿಯೇ ಜನಿಸಿದನು. ನಾಗಕನ್ಯೆಯಾದ ಉಲೂಪಿಯು ಅರ್ಜುನನನ್ನು ನಾಗಲೋಕಕ್ಕೆ ಇಲ್ಲಿಂದಲೇ ಕರೆದೊಯ್ದಳು. ಈ ಕ್ಷೇತ್ರಕ್ಕೆ ಹರಿದ್ವಾರ, ಹರದ್ವಾರ ಮತ್ತು ಗಂಗಾದ್ವಾರವೆಂದೂ ಹೇಳುತ್ತಾರೆ ಬದರಿ, ಕೇದಾರ ಮತ್ತು ಗಂಗೋತ್ರಿಯೆಂಬ ಮೂರು ಮಹತ್ವದ ಯಾತ್ರೆಗಳಿಗೆ ಹೋಗುವವರಿಗೆ ಇದು ಮಹಾದ್ವಾರದಂತಿದೆ (ಮ. ಆ.).

ಮಾಯಾವತಿ --ಶಂಬರಾಸುರನ ಹೆಂಡತಿ; ಈಕೆಯೇ ಪೂರ್ವಜನ್ಮದಲ್ಲಿ ರತೀದೇವಿ. ಈಕೆಯು ಪ್ರದ್ಯುಮ್ನನನ್ನು ಕಾಪಾಡಿ ಈತನಿಂದ ಶಂಬರಾಸುರನನ್ನು ಕೊಲ್ಲಿಸಿದಳು. ನೋ. -- ಪ್ರದ್ಯುಮ್ನ (ಭಾಗ., ವಿಷ್ಣುಪು., ಹರಿ)

ಮಾಯಾವಿ -- ದುಂದುಭಿಯೆಂಬ ರಾಕ್ಷಸನ ಸೋದರ. ಈತನ ತಂದೆ ಮಯಾಸುರ: ತಾಯಿ ಹೇಮೆಯೆಂಬ ಅಪ್ಸರಸಿ. ದುಂದುಭಿಯ ಮರಣದಿಂದ ಕೋಪಗೊಂಡ

ಮಾಯಾವಿಯು ವಾಲಿಯೊಡನೆ ಯುದ್ಧಮಾಡಿ ಆತನಿಂದ ಹತನಾದನು (ರಾಮಾ. ಕಿಷ್ಕಿಂ., ಉತ್ತರ.).

ಮಾರಿಷಾ -- ಪ್ರಚೇತಸರ ಪತ್ನಿ. ಪ್ರಚೇತಸರು ಲೋಕದಲ್ಲಿ ತುಂಬಿದ ಮರಗಳನ್ನು ಕಡಿಯುತ್ತಾ ಬರಲು ಅವೆಲ್ಲ ಚಂದ್ರನಲ್ಲಿ ಮೊರೆಯಿಡಲು ಅವನು ವೃಕ್ಷಗಳ ಪುತ್ರಿಯಾದ ಮಾರಿಷೆಯನ್ನು ಅವರಿಗೆ ಕೊಡಿಸಿದನು. ನೋ. -ಪ್ರಚೇತಸ. ಪ್ರಮ್ಲೋಚನೆ, ಕಂಡು.

ಮಾರೀಚ --೧. ಮರೀಚಮುನಿಯ ಪುತ್ರನಾದ ಕಶ್ಯಪ. ೨. ಇವನು ರಾವಣನ ಮಂತ್ರಿ; ಸೋದರಮಾವ. ಈತನ ತಾಯಿ ತಾಟಕಿ; ತಂದೆ ಸುಂದನೆಂಬ ರಾಕ್ಷಸ. ಈತನ ಸಹೋದರ ಸುಬಾಹು. ನೋ. -ತಾಟಕಿ. ಇವರು ಅಗಸ್ತ್ಯಮುನಿಯ ಕೋಪಕ್ಕೆ ಗುರಿಯಾಗಿ ರಾಕ್ಷಸರಾದರು. ಇವರು ಯಾಗಕಾರ್ಯವನ್ನು ಕೈಗೊಂಡ ವಿಶ್ವಾಮಿತ್ರನನ್ನು ಪೀಡಿಸುತ್ತಿದ್ದುದರಿಂದ ಅವನು ರಾಮಲಕ್ಷ್ಮಣರ ಸಹಾಯದಿಂದ ತಾಟಕಿ ಮತ್ತು ಸುಬಾಹುಗಳನ್ನು ಕೊಲ್ಲಿಸಿ, ಮಾರೀಚನನ್ನು ಸಮುದ್ರದಾಚೆ ಹಾರಿಸಿದನು. ಮುಂದೆ ಸೀತಾಪಹಾರಕ್ಕೆ ಇವನು ಸುವರ್ಣಮೃಗವಾಗಿ ರಾವಣನಿಗೆ ಸಹಾಯಮಾಡಿ ಶ್ರೀರಾಮನಿಂದ ಹತನಾದನು (ರಾಮಾ. ಅರಣ್ಯ., ಮ. ಸ., ವ.)

ಮಾರುತಂತವ್ಯ --ವಿಶ್ವಾಮಿತ್ರ ಪುತ್ರನಾದ ಋಷಿ (ಮ. ಅನು.).

ಮಾರುತಿ --ವಾಯುಪುತ್ರರಾದ ಭೀಮಸೇನ ಮತ್ತು ಹನುಮಂತ. ಹನುಮಂತನು ತ್ರೇತಾಯುಗದಲ್ಲಿ ವಾಯುವಿನಿಂದ ಅಂಜನಾದೇವಿಗೆ ಹುಟ್ಟಿದನು. ಭೀಮನು ದ್ವಾಪರಯುಗದಲ್ಲಿ ವಾಯುವಿನಿಂದ ಕುಂತಿಯಲ್ಲಿ ಹುಟ್ಟಿದನು. ನೋ. -ಅಂಜನೆ, ಕುಂತಿ. (ರಾಮಾ. ಕಿಷ್ಕಿಂ., ಸುಂದರ., ಯುದ್ಧ., ಉತ್ತರ., ಮ. ವ.).

ಮಾರ್ಕಂಡೇಯ --೧. ಈತನು ಮೃಕಂಡು ಮುನಿಯ ಪುತ್ರ. ಇವನು ಬ್ರಹ್ಮ ಮಾನಸಪುತ್ರನಾದ ಭೃಗುಮಹರ್ಷಿಯ ವಂಶದವ. ಈತನ ಪತ್ನಿ ಧೂಮೋರ್ಣೆ. ಇವನು ಜನ್ಮತಃ ಅಲ್ಪಾಯುಷಿಯಾದರೂ ಶಿವಪೂಜೆಯಿಂದ ಮೃತ್ಯುವನ್ನು ಜಯಿಸಿ ಚಿರಂಜೀವಿಯಾದನು. ಈತನು ಪಾಂಡವರು ದ್ವೈತ ಮತ್ತು ಕಾಮ್ಯಕವನದಲ್ಲಿದ್ದಾಗ ಅವರ ಬಳಿಗೆ ಬಂದು ಅವರಿಗೆ ಅನೇಕ ಪುಣ್ಯಕಥೆಗಳನ್ನು ಹೇಳಿದನು. ಇವನ ಆಶ್ರಮವು ಗೋಮತೀ --ಸರಯೂ ನದಿಗಳ ಸಂಗಮಸ್ಥಳದಲ್ಲಿದೆ (ಮ. ವ., ಸ., ಭಾಗ., ಬ್ರಹ್ಮಪು., ಬೃ. ನಾ., ಮತ್ಸ್ಯಪು.). ೨.ದಶರಥನು ಮಾಡಿದ ಪುತ್ರಕಾಮೇಷ್ಟಿಯಲ್ಲಿ ಈತನೊಬ್ಬ ಋತ್ವಿಜ (ರಾಮಾ. ಬಾಲ.).

ಮಾರ್ಗಣಪ್ರಿಯಾ --ಪ್ರಾಧೆಯ ಪುತ್ರಿ; ದಕ್ಷಬ್ರಹ್ಮನ ಮಗಳು ಪ್ರಾಧೆ; ಈಕೆಯ ಪತಿ ಕಶ್ಯಪ. ಇವರಿಗೆ ಮಾರ್ಗಣಪ್ರಿಯೆ ಅಲ್ಲದೆ ಇನ್ನೂ ಏಳು ಮಂದಿ ಪುತ್ರಿಯರೂ ಹತ್ತು ಮಂದಿ ಪುತ್ರರೂ ಇದ್ದರು. ನೋ. ಪ್ರಾಧೆ (ಮ ಆ)

ಮಾರ್ತಾಂಡ ೧. ಕಾಮಧೇನುವಿನ ಒಡೆಯ (ಮ. ಅನು).೨. ಸೂರ್ಯ. ಕಶ್ಯಪರೊಮ್ಮೆ ಮಂದಾಕಿನೀ ನದಿಯಲ್ಲಿ ಸ್ನಾನಕ್ಕೆ ಹೋದಾಗ ಮನೆಯಲ್ಲಿ ಅದಿತಿಯು ದೇವಪೂಜೆಗೆ ಬೇಕಾದ ಸಿದ್ಧತೆಗಳನ್ನು ಮಾಡುತ್ತಿದ್ದಳು. ಆಗ ಹೊರಗಿನಿಂದ 'ಓಂ ಭವತಿ ಭಿಕ್ಷಾಂ ದೇಹಿ'ಎಂದು ಬ್ರಾಹ್ಮಣರು ಕೂಗಿದಂತಾಯಿತು. ಆಗ ಅದಿತಿ ತುಂಬಿದ ಗರ್ಭಿಣಿಯಾಗಿದ್ದಳು. ಅವಳು ಗರ್ಭದ ಭಾರದಿಂದ ಮೆಲ್ಲನೆ ಒಳಗೆ ಹೋಗಿ ತರುವಾಗ ತಡವಾದುದರಿಂದ ಹೊರಗೆ ಭಿಕ್ಷೆಗಾಗಿ ಕಾಯುತ್ತಿದ್ದ ಬುಧನು ಸಿಟ್ಟಿನಿಂದ ನಡುಗುತ್ತಾ ತಡವಾಗಿ ಬಂದು ನಿನ್ನ ಹೊಟ್ಟೆಯೊಳಗಿನ ಕೂಸು ಸಾಯಲಿ 'ಎಂದು ಶಾಪಕೊಟ್ಟು ಹೋದನು. ಇದನ್ನು ಕೇಳಿದ ಅದಿತಿಗೆ ತುಂಬಾ ವ್ಯಸನವಾಯಿತು. ಮನೆಗೆ ಬಂದು ಕಶ್ಯಪರು ಅಳುತ್ತಿರುವ ಅದಿತಿಯ ದುಃಖದ ಕಾರಣವನ್ನು ತಿಳಿದು ಕೂಡಲೇ ತಮ್ಮ ತಪಸ್ಸಿನಿಂದ ಬುಧನ ಶಾಪವನ್ನು ಪರಿಹರಿಸಿ ಮಗು ಮತ್ತಷ್ಟು ತೇಜಸ್ವಿಯಾಗುವಂತೆ ಮಾಡಿದರು. ಆದರೆ ಅದಿತಿಗೆ 'ಶಾಪವು ಸುಳ್ಳಾಗಲಾರದು. ನನ್ನ ಅಂಡ -- ಗರ್ಭವು ಮೃತವಾಗಿದೆ' ಎಂದೇ ಅನ್ನಿಸುತ್ತಿತ್ತು. ಮೃತವಾದ ಅಂಡದಿಂದ ಹುಟ್ಟಿದ ಮಗುವಿಗೆ ಮುಂದೆ ಮಾರ್ತಾಂಡನೆಂದೇ ಹೆಸರಾಯಿತು. ಇವನೇ ಸೂರ್ಯ. ನೋ. -ಆದಿತ್ಯ, ಸೂರ್ಯ, ವಿವಸ್ವಾನ್ (ಮ. ಆ.).

ಮಾರ್ತಿಕಾವತಕ -- ೧. ಗಂಧರ್ವನೊಬ್ಬ. ಈತನಿಗೆ ಚಿತ್ರರಥನೆಂಬ ಹೆಸರೂ ಇದೆ ಇವನು ತನ್ನ ಸ್ತ್ರೀಯೊಡನೆ ತಾವರೆಹೂವಿನ ಮಾಲಿಕೆಯನ್ನು ಧರಿಸಿ ಜಲಕ್ರೀಡೆಯಾಡುತ್ತಿರಲು ಸ್ನಾನಮಾಡಿಕೊಂಡು ಬರುವ ರೇಣುಕೆಯು ಅವನನ್ನು ನೋಡಿ ಅಪೇಕ್ಷೆಪಟ್ಟು ಮನೋವಿಕಾರವುಳ್ಳವಳಾಗಿ ಪುನಃ ಸ್ನಾನಮಾಡಿಕೊಂಡು ಆಶ್ರಮಕ್ಕೆ ಬಂದರೂ ಕಾಂತಿ ಹೀನಳಾಗಿರುವುದನ್ನು ಜಮದಗ್ನಿ ಕಂಡು ಕೋಪದಿಂದ ಆಕೆಯನ್ನು ಪರಶುರಾಮನಿಂದ ಕೊಲ್ಲಿಸಿದನು. ೨. ಮಾರ್ತಿಕಾವತಕವೆಂಬುದು ಚಿತ್ರರಥನ ಪಟ್ಟಣ (ಮ. ವ.). ೩.ಸಾಲ್ವದೇಶದ ರಾಜನೊಬ್ಬ (ಮ. ವ., ದ್ರೋ).

ಮಾರ್ದಮರ್ಷಿ --ವಿಶ್ವಾಮಿತ್ರನ ಮಗ (ಮ. ಅನು.).

ಮಾಲಯ --ಗರುಡನ ಮಗ (ಮ. ಉ.).

ಮಾಲವ -- ದೇಶವೊಂದು. ಇದು ಅನೂಪದೇಶದ ವಾಯುವ್ಯದಲ್ಲಿದೆ. ಅದಕ್ಕೆ ಉಜ್ಜಯಿನಿ ಮತ್ತು ಧಾರಾನಗರವು ಮುಖ್ಯ ರಾಜಧಾನಿಯಾಗಿತ್ತು (ಮ. ಭೀ.).

ಮಾಲವಿ --೧. ಕೇಕಯನೆಂಬ ಸೂತನ ಪತ್ನಿ ;ಈಕೆ ಕೀಚಕಾದಿಗಳ ತಾಯಿ ; ವಿರಾಟ ರಾಜನ ಪತ್ನಿಯಾದ ಸುದೇಷ್ಣೆಯ ದೊಡ್ಡತಾಯಿ (ಮ. ವಿ.).೨. ಅಶ್ವಪತಿರಾಜನ

ಪತ್ನಿ ;ಈಕೆ ಸಾವಿತ್ರಿಯ ತಾಯಿ (ಮ. ವ.) ಸುದೇಷ್ಣೆಯ ತಾಯಿಗೂ ಹೆಸರು ಸಲ್ಲುತ್ತದೆ.

ಮಾಲಿ --ರಾಕ್ಷಸನೊಬ್ಬ. ಇವನು ಸುಕೇಶನೆಂಬ ರಾಕ್ಷಸನಿಂದ ಗಂಧರ್ವ ಸ್ತ್ರೀಯಾದ ದೇವವತಿಯಲ್ಲಿ ಜನಿಸಿದನು. ಇವನಿಗೆ ಮಾಲ್ಯವಂತ ಮತ್ತು ಸುಮಾಲಿ ಎಂಬಿಬ್ಬರು ಸಹೋದರರು. ಇವರಿಗೆ ನರ್ಮದೆ ಎಂಬ ಗಂಧರ್ವಸ್ತ್ರೀಯ ಮಕ್ಕಳಾದ ಸುಂದರಿ, ಕೇತುಮತಿ ಮತ್ತು ವಸುಧೆ ಎಂಬ ಮೂವರು ಕ್ರಮವಾಗಿ ಪತ್ನಿಯರಾದರು. ಮಾಲಿ ಮತ್ತು ವಸುಧೆಯರಿಗೆ ಅನಲ, ಅನಿಲ, ಹರ ಮತ್ತು ಸಂಪಾತಿ ಎಂಬ ನಾಲ್ವರೂ, ಮಾಲ್ಯವಂತ ಮತ್ತು ಸುಂದರಿಯರಿಗೆ ವಜ್ರಮುಷ್ಟಿ, ವಿರೂಪಾಕ್ಷ, ದುರ್ಮುಖ, ಸುಪ್ತಘ್ನ, ಯಜ್ಞಕೋಪ ಮತ್ತು ಉನ್ಮತ್ತರೆಂಬ ಆರುಮಂದಿ ಮಕ್ಕಳೂ ಅನಲೆಯೆಂಬ ಮಗಳೂ, ಸುಮಾಲಿ ಮತ್ತು ಕೇತುಮತಿಯರಿಗೆ ಪ್ರಹಸ್ತ, ಅಕಂಪನ, ವಿಕಟ, ಕಾಲ ಕಾರ್ಮುಕ, ಧೂಮ್ರಾಕ್ಷ, ದಂಡ, ಸುಪಾರ್ಶ್ವ, ಸಂಹ್ರಾದಿ, ಪ್ರಘಸ, ಭಾಸಕರ್ಣರೆಂಬ ಹತ್ತು ಮಂದಿ ಗಂಡುಮಕ್ಕಳೂ, ರಾಕಾ, ಪುಷ್ಪೋತ್ಕಟೆ, ಕೈಕಸಿ, ಕುಂಭೀನಸಿ ಎಂಬ ನಾಲ್ವರು ಹೆಣ್ಣುಮಕ್ಕಳೂ ಜನಿಸಿದರು. ಮಾಲಿ, ಮಾಲ್ಯವಂತ, ಸುಮಾಲಿಗಳು ಬ್ರಹ್ಮನನ್ನು ಮೆಚ್ಚಿಸಿ ವರ ಪಡೆದು, ವಿಶ್ವಕರ್ಮನಿಂದ ಲಂಕಾಪಟ್ಟಣವನ್ನು ನಿರ್ಮಿಸಿಕೊಂಡು ರಾಜ್ಯವಾಳುತ್ತಿದ್ದರು. ಇವರು ದೇವತೆಗಳನ್ನೂ, ಸಜ್ಜನರನ್ನೂ ಪೀಡಿಸತೊಡಗಲು ಶ್ರೀಮಹಾವಿಷ್ಣುವು ಗರುಡವಾಹನನಾಗಿ ಬಂದು ಮಾಲಿಯನ್ನು ಕೊಲ್ಲಲು; ಮಾಲ್ಯವಂತ, ಸುಮಾಲಿಯರು ವಿಷ್ಣುವಿಗೆ ಬೆದರಿ ಲಂಕೆಯನ್ನು ಬಿಟ್ಟೋಡಿ ಪಾತಾಳಕ್ಕೆ ಹೋಗಿ ವಾಸಿಸತೊಡಗಿದರು. ಮುಂದೆ ರಾವಣನು ಪ್ರಬಲನಾದ ಮೇಲೆ ಇವರು ಪುನಃ ಲಂಕೆಗೆ ಬಂದರು (ರಾಮ. ಉತ್ತರ).

ಮಾಲಿನಿ --೧. ವಿಭೀಷಣನ ತಾಯಿ (ಮ. ವ.).ವಿಶ್ರವಸನ ಪತ್ನಿ. ೨. ನದಿಯೊಂದು. ಇದು ಗೋಗ್ರಾ (ಸರಯೂ) ನದಿಗೆ ಅಯೋಧ್ಯೆಯಿಂದ ೫೦ ಮೈಲು ದೂರದಲ್ಲಿ ಸೇರುವ ನದಿ. ಇದರ ತೀರದಲ್ಲೇ ಕಣ್ವಮುನಿಯ ಆಶ್ರಮ ಮತ್ತು ವಿದ್ಯಾಲಯವಿತ್ತು (ಮ. ಆ) ೩. ಅಪ್ಸರೆಯೊಬ್ಬಳು (ಮ. ವಿ.). ೪.ವಿರಾಟನಗರದಲ್ಲಿ ಅಜ್ಞಾತವಾಸದಲ್ಲಿರುವಾಗ ದ್ರೌಪದಿಯು ಸುದೇಷ್ಣೆಯ ದಾಸಿಯಾಗಿ ಇಟ್ಟುಕೊಂಡ ಹೆಸರು. ಇವಳಿಗೆ ಆಗ ಸೈರಂಧ್ರಿ (ಸೈರಂ = ಸ್ವಾತಂತ್ರ್ಯವನ್ನು + ಧ್ರೀ = ಹೊಂದಿರುವವಳು ; ಇನ್ನೊಬ್ಬರ ಮನೆಯಲ್ಲಿ ಸ್ವಾತಂತ್ರ್ಯದಿಂದಿರುವ ದಾಸಿ) ಎಂಬ ಹೆಸರೂ ಇತ್ತು (ಮ. ವಿ).

ಮಾಲ್ಯವಂತ --೧ ಪರ್ವತವೊಂದು. ಕಡಪಾ, ಕರ್ನೂಲು, ನೆಲ್ಲೂರು, ಗುಂಟೂರು ಜಿಲ್ಲೆಯಲ್ಲಿರುವ ಪೂರ್ವಘಟ್ಟದ ಉತ್ತರ ಭಾಗ. ಇದು ಹಂಪೆಯಲ್ಲಿದ್ದ

ಪರ್ವತ. ಇದಕ್ಕೆ ಪ್ರಸ್ರವಣ ಪರ್ವತವೆನ್ನುತ್ತಾರೆ. (ಮ. ಸ., ಭೀ., ವ. ರಾಮಾ., ಕಿಷ್ಕಿಂ). ೨. ಮಾಲಿಯೆಂಬ ರಾಕ್ಷಸನ ಸಹೋದರ. ನೋ. ಮಾಲಿ

ಮಾಷ (ಮಾಸ) -- ಭಯಂಕರವಾದ ವೃಷಭರೂಪದ ರಾಕ್ಷಸನೊಬ್ಬ. ಜರಾಸಂಧನು ಇವನ ಚರ್ಮದಿಂದ ನಗಾರಿಗಳನ್ನು ಮಾಡಿಸಿ ತನ್ನ ರಾಜಧಾನಿಯ ಹೊರಗೆ ಇರಿಸಿದ್ದನು. ಶ್ರೀಕೃಷ್ಣನು ಭೀಮನನ್ನು ಕೂಡಿಕೊಂಡು ಜರಾಸಂಧನ ರಾಜಧಾನಿಯನ್ನು ಪ್ರವೇಶಿಸುವ ಮೊದಲು ಚೈತ್ಯಪರ್ವತವನ್ನು ಹತ್ತಿ ಅದರ ಶಿಖರದ ಮೇಲಿರಿಸಿದ್ದ ಮಾಸನ ಚರ್ಮದಿಂದಾದ ಮೂರು ಭೇರಿಗಳನ್ನು ನಾಶಮಾಡಿದನು (ಮ. ಸ.).

ಮಾಹಿಷ್ಮತಿ --೧. ಒಂದು ನಗರ. ಇಲ್ಲಿ ಕಾರ್ತಿವೀರ್ಯ ಮತ್ತು ನೀಲ ಮೊದಲಾದ ಪ್ರಬಲ ರಾಜರು ರಾಜ್ಯಭಾರ ಮಾಡಿಕೊಂಡಿದ್ದರು. ಇದನ್ನು ರಾಜರ್ಷಿಯಾದ ಮುಚುಕುಂದನು ನರ್ಮದಾ ತೀರದಲ್ಲಿ ನಿರ್ಮಿಸಿದನು (ಹರಿ.)ಇದು ಇಂದೂರಿನಿಂದ ೪ ಮೈಲು ದಕ್ಷಿಣದಲ್ಲಿರುವ ನರ್ಮದಾ ನದಿಯ ಬಲದಡದಲ್ಲಿದೆ. ಇದಕ್ಕೆ ಮೊದಲು ಮಹೇಶ್ವರವೆಂದು ಹೆಸರಿತ್ತು (ಮ. ಸ.). ೨. ಇಕ್ಷ್ವಾಕು ರಾಜನ ಹತ್ತನೇ ಮಗನಾದ ದಶಾಶ್ವರಾಜನ ರಾಜಧಾನಿ ಇದಾಗಿತ್ತು. ನೋ. -ದಶಾಶ್ವ. (ಮ. ಅನು.).

ಮಿಂಜಿಕ --ಶಿವನಿಂದ ಉತ್ಪತ್ತಿಯಾದವ (ಮ. ವ.).

ಮಿತ್ರ --೧ ದ್ವಾದಶಾದಿತ್ಯರಲ್ಲೊಬ್ಬ; ಸೂರ್ಯನ ಹನ್ನೆರಡು ಹೆಸರುಗಳಲ್ಲೊಂದು (ಮ. ಆ.). ೨. ಅಗಸ್ತ್ಯನ ತಂದೆ; ಒಬ್ಬ ಮಹರ್ಷಿ. ನೋ. -ವರುಣ, ಅಗಸ್ತ್ಯ, ವಸಿಷ್ಠ

ಮಿತ್ರಜ್ಞ --ಅಗ್ನಿವಿಶೇಷ (ಮ. ವ.)

ಮಿತ್ರದೇವ --ತ್ರಿಗರ್ತದ (ತ್ರಿ = ಮೂರು ಕಡೆ + ಗರ್ತ = ತಗ್ಗುಳ್ಳ ರಾಜ್ಯ. ಇದನ್ನು ಈಗಿನ ತಿರ್ಹುಟವೆಂದು ಭಾವಿಸುತ್ತಾರೆ)ರಾಜ ;ಇವನು ಅರ್ಜುನನಿಂದ ಹತನಾದನು (ಮ. ಕ.)

ಮಿತ್ರಧರ್ಮ -- ಅಗ್ನಿವಿಶೇಷ (ಮ. ವ.).

ಮಿತ್ರವರ್ಧನ --ಅಗ್ನಿವಿಶೇಷ (ಮ. ವ.)

ಮಿತ್ರವಿಂದೆ -- ಶ್ರೀಕೃಷ್ಣನ ಪತ್ನಿ. ಈಕೆಯ ತಂದೆ ಅವಂತಿ ದೇಶದ ಜಯತ್ಸೇನ; ತಾಯಿ ರಾಜಾಧಿದೇವಿ. ಮಿತ್ರವಿಂದೆಯು ಶ್ರೀಕೃಷ್ಣನ ಸೋದರತ್ತೆಯ ಮಗಳು. ಈಕೆಗೆ ವೃಕ, ಹರ್ಷ, ಅನಿಲ, ಗೃಧ್ರ, ವರ್ಧನ, ಉನ್ನಾದ, ಮಹಾಶ, ಪಾವನ, ವಹ್ನಿ, ಕ್ಷುಧಿ ಎಂಬ ಹತ್ತುಮಂದಿ ಮಕ್ಕಳಿದ್ದರು (ಭಾಗ, ವಿಷ್ಣುಪು.).

ಮಿತ್ರಸಹ -- ನೋ.- ಕಲ್ಮಾಷಪಾದ, ಸೌದಾಸ. ಇವನು ವಸಿಷ್ಠ ಶಾಪದಿಂದ ರಾಕ್ಷಸನಾಗಿ ಹೊಸತಾಗಿ ಮದುವೆಯಾಗಿದ್ದ ಬ್ರಾಹ್ಮಣದಂಪತಿಗಳಲ್ಲಿ ವರನನ್ನು ತಿಂದುಹಾಕಲು ಅವನ ಪತ್ನಿಯು ದುಃಖ ಮತ್ತು ಕೋಪದಿಂದ -- 'ನೀನು ನಿನ್ನ ಪತ್ನಿಯ ಸಂಗವನ್ನು ಮಾಡಿದಾಗ ಮರಣಹೊಂದು' ಎಂಬು ಶಾಪವನ್ನು ಕೊಟ್ಟು ಸಹಗಮನವಾದಳು. ಮುಂದೆ ಗುರುಶಾಪದಿಂದ ವಿಮೋಚನೆ ಹೊಂದಿದ ಮಿತ್ರಸಹನು ತನ್ನ ಪತ್ನಿಯಿಂದ ಬ್ರಾಹ್ಮಣ ಪತ್ನಿಯ ಶಾಪದ ವಿಚಾರವನ್ನು ತಿಳಿದು, ಗೌತಮಮುನಿಯ ಮರೆಹೊಕ್ಕು, ಗೋಕರ್ಣ ಕ್ಷೇತ್ರದಲ್ಲಿ ಮಹಾಬಲೇಶ್ವರನನ್ನು ಆರಾಧಿಸಿ, ಆ ಶಾಪದಿಂದ ಬಿಡುಗಡೆಹೊಂದಿದನು (ಹರಿ)

ಮಿಥಿ --ಇಕ್ಷ್ವಾಕು ರಾಜನ ಮಗನಾದ ನಿಮಿರಾಜನ ದೇಹವನ್ನು ಮಥಿಸಿದಾಗ ಹುಟ್ಟಿದವ. ನೋ. - ನಿಮಿ (ರಾಮಾ. ಉತ್ತರ.).

ಮಿಥಿಲ -- ಭರತವಂಶೋತ್ಪನ್ನನಾದ ರಾಜ. ಈತನ ಮಗ ಜಹ್ನು (ಮ. ಅನು.).

ಮಿಥಿಲೆ -- ಒಂದು ಪಟ್ಟಣ. ಜನಕನ ದೇಶ ಮತ್ತು ರಾಜಧಾನಿ. ಈ ಪಟ್ಟಣವನ್ನು ಮಿಥಿ ಎಂಬವನು ನಿರ್ಮಿಸಿದನು. ಇದನ್ನು ಈಗ ಜನಕಪುರವೆಂದು ಕರೆಯುತ್ತಾರೆ. (ಮ. ವ.).

ಮಿಥ್ಯ --ಅಗ್ನಿವಿಶೇಷ (ಮ. ವ.).

ಮಿಶ್ರಕೇಶಿ -- ಅಪ್ಸರೆಯೊಬ್ಬಳು. ಈಕೆಗೆ ರೌದ್ರಾಶ್ವನಿಂದ ಋಚೇಯು, ಕಕ್ಷೇಯು ಅನ್ವಗ್ಭಾನು ಮೊದಲಾದ ಹತ್ತು ಮಂದಿ ಮಕ್ಕಳು ಹುಟ್ಟಿದರು. ನೋ. -ರೌದ್ರಾಶ್ವ. (ಮ. ಆ., ಸ.)

ಮುಚುಕುಂದ --ಸೂರ್ಯವಂಶದ ಮಾಂಧಾತನ ಮಗ. ಈತನ ಸಹೋದರರು ಪುರುಕುತ್ಸ ಮತ್ತು ಅಂಬರೀಷ. ಈತನ ಐವತ್ತು ಮಂದಿ ಸೋದರಿಯರು ಸೌಭರಿ ಋಷಿಯ ಪತ್ನಿಯರು. ಈತನಿಂದ ಕಾಲಯವನನು ಭಸ್ಮವಾದನು. ನೋ -ಕಾಲಯವನ (ಭಾಗ. ವಿಷ್ಣುಪು., ಹರಿ.).

ಮುಚುಕುಂದತೀರ್ಥ --ಧೌಲಪುರ ನಿಲ್ದಾಣದಿಂದ ಮೂರು ಮೈಲಿಗಳ ಮೇಲೆ ಮುಚುಕುಂದ ತೀರ್ಥವಿದೆ. ಇಲ್ಲಿ ಗುಡ್ಡದಲ್ಲಿ ಮುಚುಕುಂದನ ಗುಹೆಯಿದೆ. ಧೌಲಪುರದಲ್ಲೊಂದು ಗುಹೆ ಇದೆ. ಇಲ್ಲಿ ಮುಚುಕುಂದನು ಯಜ್ಞಮಾಡಿದನು. ಈ ಸ್ಥಳದಲ್ಲಿ ಒಂದು ಸರೋವರವಿದೆ (ಕ್ಷೇತ್ರದ.)

ಮುಂಜಕೇತು -- ಯುಧಿಷ್ಠಿರನ ಸಭೆಯಲ್ಲಿದ್ದ ಕ್ಷತ್ರಿಯ (ಮ. ಸ.).

ಮುಂಜಪಟ --ಶಿವನ ಸ್ಥಾನ (ಮ. ವ.).

ಮುಂಜವಂತ --ಹಿಮಾಲಯದ ಒಂದು ಬೆಟ್ಟ. ಶಿವನು ಇಲ್ಲಿ ತಪಸ್ಸು ಮಾಡುತ್ತಿರುವನು. ಮರುತ್ತನು ಇಲ್ಲಿ ತಪಸ್ಸುಮಾಡುತ್ತಿರುವ ಶಿವನ ಅನು

ಗ್ರಹಪಡೆದು. ವಿಶೇಷ ಧನ ಪಡೆದು ಕುಬೇರನಿಗೆ ಸಮನಾದನು. ಈ ಹಣದಿಂದ ಮರುತ್ತನು ಮಹತ್ತಾದ ಯಾಗ ಮಾಡಿದನು (ಮಾರ್ಕಂ. ಪು).

ಮುಂಡ --ನೋ. --ಚಂಡ ಒಬ್ಬರಾಕ್ಷಸ (ಮಾರ್ಕಂಪು.).

ಮುದ್ಗಲ --ಕುರುಕ್ಷೇತ್ರವಾಸಿಯಾದ ವ್ರೀಹಿದ್ರೋಣನೆಂಬ ಹೆಸರಿನ ಋಷಿ. ಈತನು ಭರ್ಯಾಶ್ವರಾಜನ ಮಗ ;ಈತನ ಮಗ ದಿವೋದಾಸ. ಮುದ್ಗಲನ ಮಗಳೇ ಗೌತಮ ಮುನಿ ಪತ್ನಿಯಾದ ಅಹಲ್ಯೆ. ದುರ್ವಾಸನು ಮುದ್ಗಲನ ಮನಸ್ಸನ್ನು ಪರೀಕ್ಷೆ ಮಾಡುವುದಕ್ಕಾಗಿ ಆರು ಸಲ ಅತಿಥಿಯಾಗಿ ಬಂದರೂ ಮುದ್ಗಲನು ಶ್ರದ್ಧೆಯಿಂದ ಅವನನ್ನು ಸತ್ಕರಿಸಿದನು. ಇವನು ಒಂದೊಂದೇ ಧಾನ್ಯದ ಕಾಳನ್ನು ಕೂಡಿ ಹಾಕಿ (ಕಪೋತ ವೃತ್ತಿ. ಶಿಲೋಂಛವೃತ್ತಿ)ಒಂದು ಕೊಳಗ ಧಾನ್ಯದಿಂದ ಎಷ್ಟು ಮಂದಿ ಅತಿಥಿಗಳು ಬಂದರೂ ಅವರನ್ನು ತೃಪ್ತಿಪಡಿಸುತ್ತಿದ್ದನು. ಇದರಿಂದ ಮೆಚ್ಚಿದ ದುರ್ವಾಸನು ಪರಿಶುದ್ಧಾತ್ಮನಾದ ಮುದ್ಗಲನನ್ನು ಕುರಿತು -- ''ನಿನ್ನ ಸತ್ಕರ್ಮಗಳಿಂದಲೇ ನೀನು ಸಶರೀರನಾಗಿ ಸ್ವರ್ಗಸುಖವನ್ನು ಅನುಭವಿಸುವೆ'' ಎಂದೊಡನೆ ದೇವದೂತನು ವಿಮಾನವನ್ನು ಅವನ ಬಳಿಗೆ ತಂದು -- ''ನಿನ್ನ ಅನ್ನದಾನದ ಮಹಿಮೆಯಿಂದ ಸ್ವರ್ಗವನ್ನು ಜಯಿಸಿರುವೆ. ಅದನ್ನು ಆರೋಹಣ ಮಾಡು'' ಎನ್ನಲು, ಮುದ್ಗಲನು ನಾನು ಸ್ವರ್ಗಸುಖವನ್ನೆಂದೂ ಬಯಸುವುದಿಲ್ಲ. ದುಃಖ -- ಆಯಾಸದ ಪುನರಾವೃತ್ತಿ ಇಲ್ಲದಿರುವ, ನಾಶವಿಲ್ಲದಿರತಕ್ಕ ನಿರ್ದೋಷವಾದ ಲೋಕಕ್ಕೆ ಹೋಗಲು ಅಪೇಕ್ಷೆ ಪಡುತ್ತೇನೆ' ಎಂದು ಆ ದೇವದೂತನನ್ನು ಹಿಂದಕ್ಕೆ ಕಳುಹಿಸಿದನು. ಅವನು ಮುಂದೆ ಶಾಂತಾತ್ಮನಾಗಿ ನಿಂದಾಸ್ತುತಿಗಳಲ್ಲೂ ಮಣ್ಣುಚಿನ್ನಗಳಲ್ಲೂ ಸಮಬುದ್ಧಿಯುಳ್ಳವನಾಗಿ ಬ್ರಹ್ಮಜ್ಞಾನವನ್ನು ಪಡೆದು ಶಾಶ್ವತವಾದ ಮೋಕ್ಷವನ್ನು ಹೊಂದಿದನು. ಈ ಕಥೆಯನ್ನು ವ್ಯಾಸರು ಧರ್ಮರಾಜನಿಗೆ ದಾನವ ಮಹಿಮೆಯನ್ನು ಹೇಳುವಾಗ ಹೇಳಿದರು. ನೋ. -ಕ್ಷೀರಕುಂಡ (ಮ. ವ, ಭಾ., ಗ. ಸ್ಕಾಂಪು.)

ದೀಪಾವಳಿಯ ಹೊಸ ಹಬ್ಬಕ್ಕಾಗಿ ದಶರಥ, ಕೌಸಲ್ಯೆ, ಮೊದಲಾದವರು ಶ್ರೀರಾಮಾದಿಗಳೊಡನೆ ಮಿಥಿಲೆಗೆ ಹೋಗಿ ಹಿಂದಿರುಗುವಾಗ ಸೀತಾಸ್ವಯಂವರ ಕಾಲದಲ್ಲಿ ಪರಾಜಿತರಾದ ಕ್ಷತ್ರಿಯರಾಜರೆಲ್ಲ ಕೂಡಿ ಮಿಥಿಲೆಯ ಮೇಲೆ ದಂಡೆತ್ತಿಬರಲು ಶ್ರೀರಾಮಲಕ್ಷ್ಮಣ ಭರತಶತ್ರುಘ್ನರು ಎಚ್ಚರತಪ್ಪಿ ಬಿದ್ದರು. ಶ್ರೀರಾಮನು ಶತ್ರುಗಳನ್ನು ಹೊಡೆದೋಡಿಸಿ ತಮ್ಮಂದಿರಿಗೆ ಶೈತ್ಯೋಪಚಾರ ನಡೆಸಿದನು. ಆಗ ಲಕ್ಷ್ಮಣ ಶತ್ರುಘ್ನರು ಎಚ್ಚರ ಹೊಂದಿದರೂ : ಭರತನು ಎಚ್ಚರವಾಗುವ ಸಂಭವ ಕಾಣಿಸದಿರಲು ಶ್ರೀರಾಮನು ಲಕ್ಷ್ಮಣನೊಂದಿಗೆ -- 'ಇಲ್ಲೇ ಸಮೀಪದಲ್ಲಿ ಮುದ್ಗಲ

ಮಹರ್ಷಿಗಳ ಆಶ್ರಮವಿದೆ. ಅಲ್ಲಿ ಸಂಜೀವಿನಿಯೇ ಮೊದಲಾದ ಮಾಹೌಷಧಿಗಳ ಲತೆಗಳಿವೆ. ಅವನ್ನುತೆಗೆದುಕೊಂಡು ಬಾ' ಎನ್ನಲು, ಅವನು ಅಲ್ಲಿಂದ ಆ ಲತೆಯನ್ನು ತಂದು ಶ್ರೀರಾಮನಿಗೆ ಕೊಡಲು ಅವನು ಅದರ ಸಹಾಯದಿಂದ ಭರತನನ್ನು ಬದುಕಿಸಿದನು. ಅಲ್ಲೇ ಮುದ್ಗಲ ಮಹರ್ಷಿಗಳು ದಶರಥನಿಗೆ ಶ್ರೀರಾಮನು ಶ್ರೀಮನ್ನಾರಾಯಣನ ಅವತಾರವೆಂದೂ, ಹತ್ತುಸಾವಿರ ವರ್ಷ ಇವನು ಅಯ್ಯೋಧ್ಯೆಯಲ್ಲಿ ರಾಜ್ಯಭಾರ ಮಾಡುವನೆಂದೂ ಈತನಿಗೆ ಇಬ್ಬರು ಗಂಡು ಮಕ್ಕಳೂ, ಇಪ್ಪತ್ತುನಾಲ್ಕು ಮಂದಿ ಪೌತ್ರರೂ, ಹನ್ನೆರಡು ಮಂದಿ ಪೌತ್ರಿಯರೂ ಆಗುವರೆಂದೂ. ವೃಂದೆಯ ಶಾಪದಿಂದ ಶ್ರೀರಾಮನಿಗೆ ಹದಿನಾಲ್ಕು ವರ್ಷ ಅರಣ್ಯವಾಸ, ಸೀತಾವಿಯೋಗ. ಕಪಿಗಳ ಸ್ನೇಹಪ್ರಾಪ್ತಿಯಾಗುವುದೆಂದೂ ಹೇಳಿದರು (ಅನಂ. ರಾ).ನೋ. -ವೃಂದ. ಈ ಮುದ್ಗಲನೇ ದಶರಥನ ಪೂರ್ವಜನ್ಮ ವೃತ್ತಾಂತವನ್ನು ಹೇಳುವನು (ಅನಂ, ರಾ.).

ಗಂಗಾ --ಸರಯೂ ನದಿಗಳ ಸಂಗಮದ ಬಳಿಯಲ್ಲಿ ಇವರ ಆಶ್ರಮವಿತ್ತು. ಈ ಆಶ್ರಮದ ಬಳಿಯಲ್ಲಿ ಮೊದಲು ನೀರಾಶ್ರಯವಿರಲಿಲ್ಲ. ಮುದ್ಗಲರು ತಮ್ಮ ಆಶ್ರಮದ ಬಳಿಯಲ್ಲಿ ನೀರಾಶ್ರಯವಿರಬೇಕೆಂದು ಶ್ರೀರಾಮನನ್ನು ಪ್ರಾರ್ಥಿಸಲು ಶ್ರೀರಾಮನು ಲಕ್ಷ್ಮಣನೊಡನೆ ಸರಯೂ ನದಿಯನ್ನು ಈ ಆಶ್ರಮದ ಬಳಿ ಪ್ರವಹಿಸುವಂತೆ ಮಾಡು ಎನ್ನಲು ಲಕ್ಷ್ಮಣನು ತನ್ನ ಧನುಸ್ಸಿಗೆ ಬಾಣವನ್ನು ಜೋಡಿಸಿ ಸರಯೂ ನದಿ ಇರುವಲ್ಲಿಗೆ ಪ್ರಯೋಗಿಸಿದನು. ಆಗ ಆ ನದಿಯು ಎರಡು ಭಾಗವಾಗಿ ಒಂದು ಭಾಗವು ಮುದ್ಗಲ ಮಹರ್ಷಿಗಳ ಆಶ್ರಮದ ಬಳಿ ಪ್ರವಹಿಸುತ್ತಾ ಗಂಗೆಯನ್ನು ಸೇರಿತು. ಮುದ್ಗಲರು ತಮ್ಮ ಆಯುಷ್ಯವನ್ನೆಲ್ಲಾ ಈ ಸಂಗಮಸ್ಥಾನದಲ್ಲೇ ಕಳೆದರು (ಅನಂ. ರಾಮಾ.).ನೋ. -ಸರಯೂ

ಮುನಿ --೧. ದಕ್ಷಪ್ರಜಾಪತಿಯ ಮಗಳು; ಕಶ್ಯಪನ ಪತ್ನಿ. ಈಕೆಯ ಮಕ್ಕಳು ಹದಿನಾರು ಮಂದಿ ಗಂಧರ್ವರು ಮತ್ತು ಅಪ್ಸರೆಯರು. ೨. ಅಹ್ನನ ಮಗ (ಮ.ಆ.)

ಮುನಿದೇಶ --ಕ್ರೌಂಚದ್ವೀಪದ ಸಮೀಪದ ಒಂದು ದೇಶ. ಕ್ರೌಂಚದ್ವೀಪವು ಇಂದಿನ ಆಫ್ರಿಕಾ (ಮಭೀ.).

ಮುರ -- ನರಕಾಸುರನ ಒಬ್ಬ ಸೇನಾಪತಿ. ಇವನು ರಾಕ್ಷಸ. ಈತನಿಗೆ ಐದು ಮುಖಗಳಿದ್ದುವು. ಇವನಿಗೆ ತಾಮ್ರ, ಅಂತರಿಕ್ಷ, ಶ್ರವಣ, ವಿಭಾವಸು, ವಸು, ನಭಸ್ವಂತ, ಅರಣರೆಂಬ ಏಳು ಮಕ್ಕಳು. ಇವನು ಶ್ರೀಕೃಷ್ಣನಿಂದ ಹತನಾದ. ಕೃಷ್ಣನು ಮುರಾರಿ, ನೋ. -ನರಕ (ಭಾಗ, ವಿಷ್ಣುಪು., ಹರಿ., ಮ. ಸ.).

ಮುಷ್ಟಿಕ --ಕಂಸನ ಆಸ್ಥಾನದ ಒಬ್ಬ ಜಟ್ಟಿ. ಬಿಲ್ಲ ಹಬ್ಬಕ್ಕೆಂದು ಮಧುರೆಗೆ ಹೋದ ಶ್ರೀಕೃಷ್ಣನಿಂದ ಇವನು ಹತನಾದನು. ನೋ. -ಚಾಣೂರ (ಭಾಗ.).

ಮುಸಲ --೧. ವಿಶ್ವಾಮಿತ್ರನ ಮಗ (ಮ. ಅನು).೨. ಮಹಾಭಾರತ ಯುದ್ಧವು ನಡೆದು ಇಪ್ಪತ್ತಾರು ವರ್ಷ ಕಳೆಯುತ್ತಾ ಬರುವಾಗ ಒಮ್ಮೆ ದ್ವಾರಕಾನಗರಕ್ಕೆ ಕೌಶಿಕಾದಿ ಮುನೀಶ್ವರರು ಬಂದರು. ಆಗ ಉನ್ಮತ್ತರಾದ ಯಾದವರು ತಮ್ಮೆಲ್ಲೆಲ್ಲಾ ಅತ್ಯಂತ ಸುಂದರನಾದ ಸಾಂಬನಿಗೆ ಗರ್ಭಿಣಿಸ್ತ್ರೀವೇಷ ಹಾಕಿ ಮುನೀಶ್ವರರ ಬಳಿಗೆ ಕರೆದುಕೊಂಡು ಹೋಗಿ ಈಕೆ ಗಂಡು ಹೆರುವಳೆ? ಹೆಣ್ಣು ಹೆರುವಳೆ ? ಎಂದು ಹಾಸ್ಯಮಾಡಿದರು. ಆಗ ಮುನೀಶ್ವರರು ಈ ಯಾದವರ ಮನಸ್ಸನ್ನು ತಿಳಿದು ಕೋಪದಿಂದ ನಿಮ್ಮ ವಂಶವನ್ನು ನಾಶಮಾಡತಕ್ಕ ಒಂದು ಮುಸಲವನ್ನು (ಒನಕೆ)ಹಡೆಯುವಳು' ಎಂದು ಹೊರಟು ಹೋದರು. ಮುಂದೆ ಸಾಂಬನು ಋಷಿಗಳ ವಾಕ್ಯದಂತೆ ಒಂದು ಮುಸಲವನ್ನು ಹಡೆದನು. ಅದನ್ನು ಯಾದವರೆಲ್ಲಾ ಬಂಡೆಯಲ್ಲಿ ತೇದು ಸಮುದ್ರದಲ್ಲಿ ಬಿಟ್ಟರೂ ಆ ಸಾರದಿಂದ ಹುಟ್ಟಿದ ಜೊಂಡುಹುಲ್ಲಿನಿಂದ ಯಾದವರೆಲ್ಲಾ ಹೊಡೆದಾಡಿಕೊಂಡು ಸ್ವರ್ಗಸ್ಥರಾದರು. ಶ್ರೀಕೃಷ್ಣನೂ ಬೇಡನೊಬ್ಬನ ಕೈಸೇರಿದ ಮುಸಲದ ತುದಿಯಿಂದಲೇ ಮರಣಹೊಂದಿದ. ೩. ಬಲರಾಮನ ಒಂದು ಆಯುಧ (ಭಾಗ., ಮ. ಮೌ.).

ಮೂಕ --೧. ಸರ್ಪ. ೨. ಇಂದಿನ ಕೊಲ್ಲೂರು (ಮಹಾರಣ್ಯಪುರ) ಕ್ಷೇತ್ರದ ಒಬ್ಬ ರಾಕ್ಷಸ. ಕೋಲ ಮಹರ್ಷಿಯ ತಪಸ್ಸಿಗೆ ಮೆಚ್ಚಿದ ಅಂಬಿಕೆಯು ಈ ರಾಕ್ಷಸನನ್ನು ಕೊಂದು ಮೂಕಾಂಬಿಕೆ ಎಂಬ ಹೆಸರಿನಿಂದ ಅಲ್ಲಿ ನಿಂತಳು. ಇದು ದಕ್ಷಿಣ ಕನ್ನಡ ಜಿಲ್ಲೆಯ ಸಪ್ತಕ್ಷೇತ್ರಗಳಲ್ಲಿ ಒಂದು. --ಮೂಕಾಂಬಾಕ್ಷೇತ್ರವೆಂದು ಪ್ರಸಿದ್ಧವಾದುದು. ಇಲ್ಲೇ ಕುಟಜಾದ್ರಿಶಿಖರವಿದೆ. ಈ ಶಿಖರದಲ್ಲಿ ಶಂಕರಾಚಾರ್ಯರು ತಪಸ್ಸುಮಾಡಿದ ಚಿತ್ರ ಮೂಲ ಗುಹೆ ಇದೆ. ೩.ಅಸುರನೊಬ್ಬ. ವರಾಹರೂಪದ ಈ ರಾಕ್ಷಸನು ಇಂದ್ರಕೀಲ ಪರ್ವತದಲ್ಲಿ ಸಂಚರಿಸುತ್ತಿದ್ದಾಗ ಶಿವ ಮತ್ತು ಅರ್ಜುನರಿಂದ ಕೊಲ್ಲಲ್ಪಟ್ಟನು (ಕೊ. ಕ್ಷೇತ್ರಮ., ಮ. ವ.).

ಮೂಲಕ -- ೧. ಸೂರ್ಯವಂಶದ ಅಶ್ಮಕರಾಜನ ಮಗ. ನೋ. ನಾರೀಕವಚ (ಭಾಗ.) ೨. ಕುಂಭಕರ್ಣನಿಗೆ ಮೂಲಾನಕ್ಷತ್ರದಲ್ಲಿ ಹುಟ್ಟಿದ ಮಗ. ಇವನು ಬ್ರಹ್ಮನನ್ನು ಕುರಿತು ಉಗ್ರ ತಪಸ್ಸುಮಾಡಿ ವರಗಳನ್ನು ಪಡೆದನು. ಇವನು ವಿಭೀಷಣನನ್ನು ನಾಶಮಾಡಬೇಕೆಂಬ ಪ್ರಯತ್ನದಲ್ಲಿರಲು, ವಿಭೀಷಣನು ಅಯೋಧ್ಯೆಗೆ ಬಂದು ಶ್ರೀರಾಮನ ಮರೆಹೊಕ್ಕನು. ಶ್ರೀರಾಮನು ಕಪಿಸೇನೆಯೊಡನೆ ಪುಷ್ಪಕದಲ್ಲಿ ಕುಳಿತು ಲಂಕೆಯಲ್ಲಿ ಬಂದಿಳಿದನು. ಕುಶನು ಮೂಲಕಾಸುರನೊಡನೆ ಯುದ್ಧ

ಮಾಡುತ್ತಾ ವಾಯುವ್ಯಾಸ್ತ್ರದಿಂದ ಆತನು ಲಂಕೆಗೆ ಹೋಗಿ ಬೀಳುವಂತೆ ಮಾಡಲು, ಅಸುರನು ಗುಹೆಯೊಂದರಲ್ಲಿ ಅಡಗಿ ಮಹಾಹೋಮವನ್ನು ಮಾಡಲಾರಂಭಿಸಿದನು. ಇದು ವಿಭೀಷಣನಿಂದ ಶ್ರೀರಾಮನಿಗೆ ತಿಳಿದು ಅವನು ರಾಕ್ಷಸನ ಯಜ್ಞವನ್ನು ಹಾಳುಮಾಡುವಂತೆ ಕಪಿಗಳಿಗೆ ಆಜ್ಞೆಮಾಡಿದನು. ಆಗ ಬ್ರಹ್ಮನ ಸೂಚನೆಯಂತೆ ಸೀತಾದೇವಿಯೇ ಚಂಡಿಯಾಗಿ ಆ ರಾಕ್ಷಸನ ತಲೆಯನ್ನು ಕಡಿದು ಚೂರುಮಾಡಿ ಲಂಕೆಯ ಬಾಗಿಲಿಗೆಸೆದಳು. (ಆನಂ. ರಾ)

ಮೃಕಂಡು -- ಮಹರ್ಷಿಯೊಬ್ಬ. ಭೃಗುಮಹರ್ಷಿಯ ಮಗನಾದ ಧಾತನ ಪುತ್ರ. ಇವನ ತಾಯಿ ಮೇರುಪುತ್ರಿಯಾದ ಆಯತಿ; ಮಗ ಮಾರ್ಕಂಡೇಯ. ನೋ. -ಮಾರ್ಕಂಡೇಯ (ಭಾಗ).

ಮೃಗಮಂದಾ --ಕಶ್ಯಪ ಮುನಿಯ ಮಗಳು. ಈಕೆಯ ತಾಯಿ ಕ್ರೋಧವಶೆ. ಈಕೆಗೆ ಮಾಂಸಾಹಾರಿಗಳಾದ ಮೃಗಗಳೂ, ಕರಡಿ, ಸೃಮರುಗಳೂ (ಬಿಳಿಕೂದಲಿನ ಚಮರೀ ಮೃಗ)ಮಕ್ಕಳೂ (ಮ. ಆ).

ಮೃಗವ್ಯಾಧ -- ೧. ಏಕಾದಶರುದ್ರರಲ್ಲೊಬ್ಬ. ೨. ಮೃಗಶಿರಾ ನಕ್ಷತ್ರಗಳಿಗೆ ಸಂಬಂಧಪಟ್ಟ ನಕ್ಷತ್ರಗಳು. ನೋ. -ಮೃಗಶಿರ.

ಮೃಗಶಿರ -- ಒಂದು ನಕ್ಷತ್ರ. ಬ್ರಹ್ಮನು ವಾಗ್ದೇವಿಯನ್ನು ನಿರ್ಮಾಣ ಮಾಡಿ ಆಕೆಯ ಸೌಂದರ್ಯಕ್ಕೆ ಮೋಹಿಸಲು ಆಕೆಯು ಹೆಣ್ಣುಜಿಂಕೆಯ ರೂಪದಿಂದ ಓಡಿದಳು. ಆಗ ಬ್ರಹ್ಮನು ಗಂಡುಜಿಂಕೆಯಾಗಿ ಆಕೆಯನ್ನು ಹಿಂಬಾಲಿಸಲು ಶಿವನು ವ್ಯಾಧರೂಪದಿಂದ ಆ ಗಂಡುಜಿಂಕೆಯ ತಲೆಯನ್ನು ಕತ್ತರಿಸಿದ. ಆ ಜಿಂಕೆಯ ದೇಹದಿಂದ ಹೊಮ್ಮಿದ ತೇಜಸ್ಸು ಆಕಾಶದಲ್ಲಿ ಮೃಗಶಿರನಕ್ಷತ್ರವಾಯಿತು. ಶಿವನು ಈ ನಕ್ಷತ್ರದ ಬಳಿಯಲ್ಲೇ ಮೃಗವ್ಯಾಧ ನಕ್ಷತ್ರವಾಗಿ ಕಾಣಿಸಿಕೊಂಡನು (ಸ್ಕಾಂ. ಪು).

ಮೃಗಾವತಿ --ಅಯೋಧ್ಯೆಯ ರಾಜನಾದ ಕೃತವರ್ಮನ ಮಗಳು. ಕೌಶಾಂಬಿಯ ರಾಜನಾದ ಶತಾನೀಕನ ಮಗನಾದ ಸಹಸ್ರಾನೀಕನ ಪತ್ನಿ. ನೋ. -ಅಲಂಬುಸಾ, ವಿದೂಮ (ಸ್ಕಾಂಪು.).

ಮೃಗೀ -- ಕ್ರೋಧವಶೆಯ ಮಕ್ಕಳಾದ ಎಲ್ಲಾ ಮೃಗಗಳು. ನೋ. ಮೃಗಮಂದಾ (ಮ. ಆ.)

ಮೃತ್ಯು -- ಸಂಹಾರದ ದೇವತೆಯಾದ ಮೃತ್ಯು --ದುರ್ಗೆ. ಈಕೆ ಬ್ರಹ್ಮನ ಮಗಳು. ಒಮ್ಮೆ ಭೂಭಾರ ಹೆಚ್ಚಲು ಭೂದೇವಿಯು ಬ್ರಹ್ಮನಲ್ಲಿ ಮೊರೆ ಇಟ್ಟಳು. ಬ್ರಹ್ಮನು ಕೋಪಗೊಳ್ಳಲು ಆಗ ಅವನ ಭ್ರೂಮಧ್ಯದಿಂದ ಕ್ರೋಧಾಗ್ನಿ ಹುಟ್ಟಿ ಜಗತ್ತನ್ನು ಸುಡತೊಡಗಲು ಶಿವನು ಬ್ರಹ್ಮನನ್ನು ಶಾಂತನಾಗುವಂತೆ

ಮಾಡಿದನು. ಆಗ ಬ್ರಹ್ಮನ ದೇಹದಿಂದ ಒಂದು ಸ್ತ್ರೀವ್ಯಕ್ತಿಯು ಜನಿಸಲು ಅದಕ್ಕೆ ಬ್ರಹ್ಮನು ಮತ್ಯುವೆಂದು ಹೆಸರಿಟ್ಟು ಪ್ರಾಣಿಸಂಹಾರದಿಂದ ನಿನಗೆ ಪಾಪವುಂಟಾಗದಿರಲೆಂದೂ ವರವಿತ್ತು ಪ್ರಾಣಿಗಳ ನಾಶಕ್ಕೆ ಕಾಮಾದಿ ಅರಿಷಡ್ವರ್ಗಗಳನ್ನು ನಿರ್ಮಾಣ ಮಾಡಿದನು. ಇದರಿಂದ ಮೃತ್ಯುವಿನ ಕಾರ್ಯವು ಸುಲಭವಾಯಿತು (ಮದ್ರೋ., ಶಾಂ., ಉ., ಅನು.,)

ಮೇಕಲಾ -- ನರ್ಮದಾ ನದಿಯ ಉಗಮಸ್ಥಾನ. ಮೇಕಲಪರ್ವತದ ಸುತ್ತಲಿನ ಪ್ರದೇಶ. ಈ ಪ್ರದೇಶದಲ್ಲಿ ಹುಟ್ಟಿದುದರಿಂದ ನರ್ಮದಾ ನದಿಗೆ ಮೇಕಲಕನ್ಯಕೆ ಎಂಬ ಹೆಸರಿದೆ (ಮ. ಭೀ).

ಮೇಘನಾದ --ಇಂದ್ರಜಿತ್ತಿನ ಜನ್ಮಕಾಲದ ಹೆಸರು. ಇವನು ಹುಟ್ಟಿದೊಡನೆ ಅಳುವ ಬದಲು ಮೇಘದಂತೆ ಗುಡುಗಿದನು. ನೋ. --ಇಂದ್ರಜಿತ್, ಮಂಡೋದರಿ (ರಾಮಾ. ಉತ್ತರ.)

ಮೇಘಪುಷ್ಪ --ಶ್ರೀಕೃಷ್ಣನ ರಥದ ಕುದುರೆಯೊಂದು. ಶೈಬ್ಯ, ಸುಗ್ರೀವ, ಬಲಾಹಕಗಳು ಇನ್ನುಳಿದ ಕುದುರೆಗಳು.

ಮೇಘವರ್ಣ -- ಇವನಿಗೆ ಮೇಘನಾದನೆಂಬ ಹೆಸರೂ ಇದೆ. ಇವನು ಘಟೋತ್ಕಚನ ಮಗ. ಇವನು ಯೌವನಾಶ್ವನ ಬಳಿಯಲ್ಲಿದ್ದ ಅಶ್ವಮೇಧದ ಕುದುರೆಯನ್ನು ತನ್ನ ಮಾಯಾಬಲದಿಂದ ಭೀಮನ ಬಳಿಗೆ ತಂದನು. ಪಾಂಡವರು ಈ ಕುದುರೆಯಿಂದ ಅಶ್ವಮೇಧಯಾಗವನ್ನು ಪೂರೈಸಿದರು. (ಜೈ.ಭಾ).

ಮೇಘವಾಹನ -- ಜರಾಸಂಧನ ಮಿತ್ರ. ಇವನ ತಲೆಯಲ್ಲಿ ಅದ್ಭುತವಾದ ದಿವ್ಯಮಣಿಯೊಂದಿತ್ತು (ಮ. ಸ.)

ಮೇಘವೇಗ --ದುರ್ಯೋಧನನ ಪಕ್ಷದ ಕ್ಷತ್ರಿಯ. ಇವನು ಅಭಿಮನ್ಯುವಿನಿಂದ ಹತನಾದನು (ಮ. ದ್ರೋ).

ಮೇಘಸಂಧಿ -- ೧. ಜರಾಸಂಧನ ಮಗನಾದ ಸಹದೇವನ ಮಗ. ಇವನು ಪಾಂಡವರ ಅಶ್ವಮೇಧ ಕುದುರೆಯನ್ನು ಕಟ್ಟಿ, ಅರ್ಜುನನೊಡನೆ ಯುದ್ಧಮಾಡಲಾರದೆ, ಕೊನೆಗೆ ಕಾಣಿಕೆಯನ್ನಿತ್ತನು (ಮ.ಅಶ್ವ). ೨.ಕ್ಷತ್ರಿಯನೊಬ್ಬ (ಮ. ಆ).

ಮೇಧತಿಥಿ --ಕಣ್ವನೆಂಬ ತಪಸ್ವಿಯ ಬ್ರಾಹ್ಮಣ ಪತ್ನಿಯ ಮಗ. ನೋ. -ಕಣ್ವ. ಈತನಿಗೆ ತಾನು ಉತ್ತಮ ಕುಲದವನೆಂಬ ಹೆಮ್ಮೆ ಇತ್ತು. ಈತನ ತಂದೆಯ ಶೂದ್ರಪತ್ನಿಯ ಮಕ್ಕಳಾದ ತ್ರಿಲೋಕ ಮತ್ತು ನಭಾಕರರಿಗಿಂತ ತಾನು ಉತ್ತಮ ಜಾತಿಯವನೆಂಬ ಹೆಮ್ಮೆ ಬಂದಾಗ ತ್ರಿಲೋಕನು ಅಗ್ನಿಪರೀಕ್ಷೆ, ಜಲಪರೀಕ್ಷೆ

ನಡೆಸಲು ಆ ಎರಡು ಪರೀಕ್ಷೆಗಳಲ್ಲೂ ತ್ರಿಲೋಕನೇ ಗೆದ್ದನು. ಕೊನೆಗೆ ಗೋವುಗಳ ಸಂಗ್ರಹವನ್ನು ಯಾರು ಹೆಚ್ಚುಮಾಡುವರೋ ಅವರೇ ಉತ್ತಮರೆಂಬ ಸ್ಪರ್ಧೆಯಲ್ಲಿ ತ್ರಿಲೋಕನೇ ಗೆದ್ದನು. ಈ ಸ್ಪರ್ಧೆಯಿಂದ ಮೇಧತಿಥಿಗೆ ಪಶ್ಚಾತ್ತಾಪವಾಯಿತು. (ಋ).

ಮೇಧಾ -- ದಕ್ಷಪ್ರಜಾಪತಿಯ ಪುತ್ರಿ; ಈಕೆ ಧರ್ಮಪ್ರಜಾಪತಿಯ ಪತ್ನಿ (ಮ. ಆ).

ಮೇಧಾತಿಥಿ-- ೧. ಗೌತಮನೆಂಬ ಬ್ರಾಹ್ಮಣ. ಈತನ ಮಗನೇ ಚಿರಕಾರಿ (ಮ. ಸ.ಶಾಂ)., ೨. ಪೂರುವಂಶದಲ್ಲಿ ಜನಿಸಿದ ಈ ರಾಜನು ಮುಂದೆ ಬ್ರಾಹ್ಮಣನಾದನು. (ಮ. ಅನು.)೩. ಪ್ರಿಯವ್ರತರಾಜನ ಮಗ. ನೋ. -ಪ್ರಿಯವ್ರತ. ಈತನ ತಾಯಿ ವಿಶ್ವಕರ್ಮನ ಮಗಳಾದ ಬರ್ಹಿಷ್ಮತಿ. ಈತನು ಶಾಕದ್ವೀಪದ (ಯುರೋಪ್) ರಾಜನಾಗಿದ್ದನು (ಭಾಗ.).

ಮೇಧಾವಿ -- ೧. ಗೌತಮ ಮುನಿಯ ಶಿಷ್ಯ. ನೋ -ಗೌತಮ. ೨. ಚಂದ್ರಹಾಸನ ತಂದೆ (ಜೈ. ಭಾ.) ನೋ. ಧನುಪಾಕ್ಷ

ಮೇಧಾವಿಕಾ --ಬೇಡರ ದೊರೆಯಾದ ಕುಳಿಂದನ ಪತ್ನಿ. ಚಂದ್ರಹಾಸನ ಸಾಕುತಾಯಿ. ನೋ. ಚಂದ್ರಹಾಸ, ಕುಳಿಂದ (ಜೈಭಾ)

ಮೇನಕೆ --೧ ಅಪ್ಸರೆ; ಈಕೆಯ ದರ್ಶನದಿಂದ ಪಾಂಚಾಲದ ರಾಜನಾದ ಪೃಷತನ ರೇತಸ್ಸು ಜಾರಿ ದ್ರುಪದನು ಹುಟ್ಟಿದನು. ವಿಶ್ವಾಮಿತ್ರನಿಗೆ ಈಕೆಯಲ್ಲಿ ಶಕುಂತಲೆ ಜನಿಸಿದಳು. ಮೇನಕೆಯು ವಿಶ್ವಾಮಿತ್ರನ ತಪೋಭಂಗಕ್ಕೆ -- ತಾನು ವಿಶ್ವಾಮಿತ್ರನ ಮುಂದೆ ಸಂಚರಿಸುವಾಗ ವಾಯುವು ತನ್ನ ವಸ್ತ್ರವನ್ನು ನಗ್ನಳಾಗುವಂತೆ ಹಾರಿಸಲಿ, ಆಗ ಮನ್ಮಥನು ತನ್ನ ಸಹಾಯಕ್ಕೆ ಬರಲಿ-- ಎಂದಳು. ಮುಂದೆ ವಾಯುವು ಹಾಗೇ ಮಾಡಲು ನಗ್ನಳಾದ ಅವಳ ದೇಹಲಾವಣ್ಯವನ್ನು ಕಂಡು ಮೋಹಿಸಿ ವಿಶ್ವಾಮಿತ್ರನು ತನ್ನ ತಪೋಬಲವನ್ನೆಲ್ಲ ಕಳೆದುಕೊಂಡನು. ಮೇನಕೆಯು ವಿಶ್ವಾಮಿತ್ರನ ಪತ್ನಿಯೆಂದೇ ಪರಿಗಣಿಸಲ್ಪಟ್ಟಿದ್ದಾಳೆ. ನೋ. ಊರ್ಣಾಯು (ಮ. ಆ.)೨ ಹಿಮವಂತನ ಪತ್ನಿಯಾದ ಮೇನೆಗೂ ಈ ಹೆಸರಿದೆ. ನೋ. -ಮೇನಾ.

ಮೇನಾ --೧. ಒಂದು ನದಿ (ಮ. ಭೀ). ೨. ಪಿತೃದೇವತೆಗಳ ಕನ್ಯೆ. ಈಕೆಗೆ ಮೇನಕೆ ಎಂಬ ಹೆಸರೂ ಇದೆ. ಈಕೆ ಹಿಮವಂತನ ಪತ್ನಿ (ಹರಿ ಮತ್ಸ್ಯಪು.).ಈಕೆಗೆ ಮೈನಾಕನೆಂಬ ಮಗ ಮತ್ತು ಪಾರ್ವತಿಯೆಂಬ ಮಗಳು ಹುಟ್ಟಿದರು. ಏಕಪರ್ಣೆ ಮತ್ತು ಏಕಪಾಟಲೆಯರು ಈಕೆಯ ಮಕ್ಕಳು. ನೋ., - ಏಕಪರ್ಣಾ, ಏಕಪಾಟಲಾ (ಶಿವಪು). ಮೇನೆಯು ನೂರು ಮಂದಿ ಮಕ್ಕಳನ್ನು ಪಡೆದಳು (ಶಿವಪು).

ಮೇರು -- ೧. ಸುವರ್ಣಪರ್ವತ ;ಉತ್ತರಧ್ರುವವನ್ನು ಮೇರು ಎನ್ನುತ್ತಾರೆ. ಸೂರ್ಯನು ಈ ಪ್ರದೇಶಕ್ಕೆ ಪ್ರದಕ್ಷಿಣೆ ಬರುವನು. ೨. ಶ್ರೀಕೃಷ್ಣನ ಪತ್ನಿಯಾದ ಸುಕೇಶಿಯ ಅರಮನೆ. ಈಕೆ ಗಾಂಧಾರ ರಾಜನ ಮಗಳು. ಇದು ವಿಶ್ವಕರ್ಮನಿಂದ ನಿರ್ಮಿತವಾಯಿತು. (ಮ. ಸ.).

ಮೇರುದೇವಿ--ಮೇರುವಿನ ಮಗಳು; ನಾಭಿರಾಜನ ಹೆಂಡತಿ ;ಅಗ್ನೀಧ್ರರಾಜನ ಸೊಸೆ ನೋ. -ನಾಭಿ, ಋಷಭ.

ಮೇರುಸಾವರ್ಣಿ --೧. ಹನ್ನೊಂದನೆಯ ಮನು. ಧರ್ಮಸಾವರ್ಣಿಯೆಂದೂ ಈತನಿಗೆ ಹೆಸರಿದೆ. ೨. ಋಷಿಯೊಬ್ಬ (ಮ. ಅನು.).

ಮೇಷಹೃತ್ -- ಗರುಡನ ಮಗ (ಮ. ಉ.)

ಮೈತ್ರಾವರುಣಿ --ಮಿತ್ರಾ ಮತ್ತು ವರುಣರಿಂದ ಜನಿಸಿದ ಅಗಸ್ತ್ಯ ಮತ್ತು ವಸಿಷ್ಠರು. ಮಿತ್ರಾ ಮತ್ತು ವರುಣ ಮಹರ್ಷಿಗಳ ಮಕ್ಕಳಾದ ಅಗಸ್ತ್ಯ ಮತ್ತು ವಸಿಷ್ಠರು ನೋ.- ಅಗಸ್ತ್ಯ, ವಸಿಷ್ಠರು. (ರಾಮಾ. ಉತ್ತರ.).

ಮೈತ್ರೇಯ -- ಬ್ರಹ್ಮರ್ಷಿ. ಈತನ ತಂದೆ ಕುಶಾರವ; ತಾಯಿ ಮಿತ್ರೆ. ಪಾಂಡವರು ವನವಾಸಕ್ಕೆ ಹೋದ ವಿಚಾರ ತಿಳಿದು ದುರ್ಯೋಧನನಿಗೆ ಬುದ್ಧಿ ಹೇಳಬೇಕೆಂದು ಹಸ್ತಿನಾವತಿಗೆ ಬಂದನು. ಅಲ್ಲಿ ದುರ್ಯೋಧನನು ಇವನ ಬುದ್ಧಿವಾದವನ್ನು ಕೇಳದೆ ಗರ್ವದಿಂದ ತೊಡೆಯನ್ನು ತಟ್ಟಿಕೊಂಡುದರಿಂದ ಈತನಿಗೆ ತೊಡೆಮುರಿದು ಸಾಯುವಂತೆ ಶಾಪವಿತ್ತನು. 'ಪುನಃ ಪಾಂಡವರೊಡನೆ ಹೊಂದಿಕೊಂಡು ಬಾಳಿದರೆ ಈತನಿಗೆ ತನ್ನ ಶಾಪವು ತಗಲದಿರಲಿ' ಎಂದು ಮೈತ್ರೇಯ ಅನುಗ್ರಹಿಸಿದನು (ಮ. ಸ., ಶಾಂ., ವ., ಭಾಗ.).

ಮೈಥಿಲ -- ಮಿಥಿಲ ರಾಜವಂಶದವರು. ನೋ.- ಮಿಥಿ, ಮಿಥಿಲೆ.

ಮೈಥಿಲಿ -- ಮಿಥಿಲದೇಶದ ರಾಜನಾದ ಜನಕನ ಪುತ್ರಿ; ಸೀತೆ.

ಮೈನಾಕ -- ಹಿಮವಂತನ ಪುತ್ರ. ಬಿಯಾಸ್ ಮತ್ತು ಗಂಗಾನದಿಯ ನಡುವಿರುವ, ಹಿಮಾಲಯದ ತಪ್ಪಲಿನಲ್ಲಿರುವ ಶಿವಾಲಿಕ್ ಪರ್ವತಗಳು. ಈತನ ಮಗ ಕ್ರೌಂಚ. ಇಂದ್ರನು ಪರ್ವತಗಳ ರೆಕ್ಕೆಯನ್ನು ಕತ್ತರಿಸುವಾಗ ಈತನು ವಾಯುವಿನ ಸಹಾಯದಿಂದ ಹಾರಿಬಂದು ಸಮುದ್ರದಲ್ಲಡಗಿದನು. ಹನುಮಂತನು ಲಂಕೆಗೆ ಹಾರುವಾಗ ಹಿಂದೆ ವಾಯುವು ಮಾಡಿದ ಉಪಕಾರವನ್ನು ಸ್ಮರಿಸಿ ಈತನು ಸಮುದ್ರದಿಂದ ಮೇಲೆದ್ದು ಬಂದು

ಹನುಮಂತನೊಡನೆ ತುಸು ವಿಶ್ರಾಂತಿಪಡೆದು ಹೋಗೆಂದು ಉಪಚರಿಸಿದನು (ಮ. ವ., ಭೀ ರಾಮಾ. ಸುಂದರ, ಹರಿ.).

ಮೈಂದ --ವಾನರನೊಬ್ಬ; ಸುಗ್ರೀವನ ಕಪಿಸೇನಾನಾಯಕ. ಈತನು ಸುಷೇಣನ ಮಗ; ದ್ವಿವಿದನ ಸಹೋದರ; ತಾರೆಯ ಅಣ್ಣ. ರಾಜಸೂಯಯಾಗಕಾಲದಲ್ಲಿ ಸಹದೇವನು ಇವನೊಂದಿಗೆ ಯುದ್ಧ ಮಾಡಿದನು. ರಾಮಾಯಣದ ಯುದ್ಧಕಾಲದಲ್ಲಿ ಇವನು ವಜ್ರಮುಷ್ಟಿ, ಯೂಪಾಕ್ಷ ಮೊದಲಾದ ರಾಕ್ಷಸರನ್ನು ಕೊಂದನು. ನೋ.- ದ್ವಿವಿದ (ರಾಮ, ಕಿಷ್ಕಿಂ., ಯುದ್ಧ., ಮ. ಸ.).

ಮಹೇಂದ್ರಪರ್ವತಶಿಖರದಲ್ಲಿದ್ದ ಮೈಂದ -- ದ್ವಿವಿದರನ್ನು ಶ್ರೀಕೃಷ್ಣನು ಕಟ್ಟಿದನು ಇವರು ವಾನರರು ; ಮನೋವೇಗವುಳ್ಳವರು.

ಮೈರಾವಣ -- ನೋ. -ಅಹಿರಾವಣ.

ಮೈಸೂರು -- ಇದು ಕರ್ನಾಟಕ ರಾಜ್ಯದ ಒಂದು ಮುಖ್ಯ ಪಟ್ಟಣ. ಇಲ್ಲಿ ಚಾಮುಂಡಿ ಬೆಟ್ಟದಲ್ಲಿ ಚಾಮುಂಡಿದೇವಿಯ ಮಂದಿರವಿದೆ. ಇದು ಮೊದಲು ಮಹಿಷಾಸುರನ ರಾಜಧಾನಿಯಾಗಿತ್ತಂತೆ.

ಮೋದಾಗಿರಿ -- ಅಂಗದೇಶದ ಪೂರ್ವದಲ್ಲಿರುವ ಪರ್ವತ. ಭಾಗಲ್ಪುರ ಜಿಲ್ಲೆಯ ಮುದಗಗಿರಿ (ಮಾಂಘೀರ್) ಅಥವಾ ಮುದುಗಲ್ ಗಿರಿ ಎಂದು ಅದನ್ನು ಈಗ ಕರೆಯುತ್ತಾರೆ. (ಮ. ಸ.).

ಮೋದಾಪುರ -- ಉಲೂಕದೇಶದ ಹತ್ತಿರವಿದ್ದ ದೇಶ. ಇದರ ಅಧಿಪರು ವಾಮದೇವ ಮತ್ತು ಸುದಾಮರು. ನೋ.- ಉಲೂಕ (ಮ. ಸ.).

ಮೋಹಿನಿ -- ಅಮೃತವನ್ನು ಹಂಚುವ ಕಾಲದಲ್ಲಿ ರಾಕ್ಷಸರನ್ನು ವಂಚಿಸಲು ನಾರಾಯಣನು ಧರಿಸಿದ ಸ್ತ್ರೀವೇಷ. ನೋ. -ಸುಂದ, ಉಪಸುಂದ (ಮ. ಆ., ಭಾಗ.).

ಮೌದ್ಗಲ್ಯ --೧ ಮಹಾಪತಿವ್ರತೆಯಾದ ನಾಲಾಯನಿಯ ಪತಿ. ನೋ. -ನಾಲಾಯನಿ(ಮ. ಆ., ಭಾಗ.).೨. ಸರ್ಪಯಜ್ಞದ ಒಬ್ಬ ಸದಸ್ಯ (ಮ. ಸ.).

ಮ್ಲೇಚ್ಛ --ಭಾರತದ ಗಡಿಯಲ್ಲಿ ಮತ್ತು ಹೊರಗಿರುವ ಹೂಣರು, ಶಕರು ಮತ್ತು ಕಿರಾತರ ದೇಶಗಳು (ಮ. ಭೀ.).

ಮ್ಲೇಚ್ಛಭಾಷೆ - ಮ್ಲೇಚ್ಛರ ದೇಶದಲ್ಲಿ ಆಡುತ್ತಿದ್ದ ಭಾಷೆ. ಇದನ್ನು ಯುಧಿಷ್ಠಿರನು ವಿದುರನಿಂದ ಕಲಿತನು. ವಿದುರನು ಅರಗಿನ ಮನೆಯ ವಿಚಾರವನ್ನು ಧರ್ಮರಾಜನಿಗೆ ಈ ಭಾಷೆಯಲ್ಲೇ ಹೇಳಿದನು (ಮ.ಆ.).

ಯ

ಯಕ್ಷ --ದೇವತೆಗಳಲ್ಲೊಂದು ಭೇದ. ಬ್ರಹ್ಮನು ಮೊದಲು ನೀರನ್ನು ನಿರ್ಮಿಸಿ ಅದರ ರಕ್ಷಣೆಗೆ ಕೆಲವರನ್ನು ಸೃಷ್ಟಿಸಿದನು. ಇವರ ಸ್ವಭಾವಕ್ಕನುಸರಿಸಿ ಕೆಲವರು ಯಕ್ಷರಾದರು. ಕೆಲವರು ರಾಕ್ಷಸರಾದರು. ಯಕ್ಷರ ಅಧಿಪತಿ ಉತ್ತರ ದಿಕ್ಕಿನ ಒಡೆಯನಾದ ಕುಬೇರ. ಯಕ್ಷ (ಜಕ್ಷ) = ತಿನ್ನು, ರಕ್ಷ = ಕಾಪಾಡು (ರಾಮಾ. ಉತ್ತರ., ಮ. ಸ, ಮತ್ಸ್ಯಪು).

ಯಕ್ಷಪ್ರಶ್ನೆ --ಯಕ್ಷರೂಪದ ಯಮನಿಗೂ ಯುಧಿಷ್ಠಿರನಿಗೂ ನಡೆದ ಸಂಭಾಷಣೆ. ಪಾಂಡವರ ವನವಾಸದ ಹನ್ನೊಂದೂವರೆ ವರ್ಷಗಳು ಕಳೆದಮೇಲೆ ನಡೆದ ವಿಚಾರ. ಯಮನು ಜಿಂಕೆಯಾಗಿ ಮುನಿಗಳ ಅರಣಿಯನ್ನು ಅಪಹರಿಸಲು, ಮುನಿಗಳ ಪ್ರಾರ್ಥನೆಯಂತೆ ಪಾಂಡವರು ಅರಣಿಯನ್ನು ತರಲು ಜಿಂಕೆಯನ್ನು ಹಿಂಬಾಲಿಸಿ ಹಿಡಿದು ಅರಣಿಯನ್ನು ಪಡೆದರು. ಆದರೆ ಈ ಪ್ರಯಾಣದಿಂದ ಅವರು ತುಂಬ ಬಳಲಿ ಬಾಯಾರಿದರು. ಅವರಲ್ಲಿ ಯಮನಿಂದ ರಕ್ಷಿಸಲ್ಪಟ್ಟ ಒಂದು ಕೃತಕ ಕೊಳದ ನೀರನ್ನು ಧರ್ಮಜನು ಹೊರತು ನಾಲ್ವರು ಕುಡಿದು ಎಚ್ಚರತಪ್ಪಿ ನೆಲಕ್ಕೊರಗಿದರು. ಧರ್ಮಜನು ಯಕ್ಷನ ಪ್ರಶ್ನೆಗೆ ಉತ್ತರ ಕೊಟ್ಟು ತಮ್ಮಂದಿರನ್ನೆಲ್ಲಾ ಬದುಕಿಸಿಕೊಂಡನು. ಯಕ್ಷನ ಪ್ರಶ್ನೆ ಮತ್ತು ಧರ್ಮಜನ ಉತ್ತರಗಳು :

ಯಕ್ಷ --ತೃಪ್ತಿ ಪಡಿಸುವ ವಸ್ತುಗಳಲ್ಲಿ ಶ್ರೇಷ್ಠವಾದದ್ದು ಯಾವುದು? ಸಂತತಿಯನ್ನಪೇಕ್ಷಿಸುವವರಿಗೆ ಶ್ರೇಷ್ಠವಾದದ್ದು ಯಾವುದು ?

ಧರ್ಮ -- ತೃಪ್ತಿಪಡಿಸತಕ್ಕ ವಸ್ತುಗಳಲ್ಲಿ ಮಳೆ, ಸಂತಾನವನ್ನಪೇಕ್ಷಿಸುವವರಿಗೆ ಪುತ್ರನೂ ಶ್ರೇಷ್ಠನು.

ಯಕ್ಷ --ಭೂಮಿಗಿಂತ ದೊಡ್ಡದು ಯಾವುದು ?ಆಕಾಶಕ್ಕಿಂತ ಶ್ರೇಷ್ಠವಾದದ್ದು ಯಾವುದು ? ವಾಯುವಿಗಿಂತ ಶೀಘ್ರವಾದದ್ದು ಯಾವುದು? ಮನುಷ್ಯನಿಗೆ ಎಲ್ಲವುಗಳಿಗಿಂತ ಅಧಿಕವಾದದ್ದು ಯಾವುದು ?

ಧರ್ಮ -- ಭೂಮಿಗಿಂತ ದೊಡ್ಡವಳು ತಾಯಿ. ಆಕಾಶಕ್ಕಿಂತ ತಂದೆ ಶ್ರೇಷ್ಠನು. ವಾಯುವಿಗಿಂತ ವೇಗವುಳ್ಳದ್ದು ಮನಸ್ಸು. ಮನುಷ್ಯನಿಗೆ ಎಲ್ಲವುಗಳಿಗಿಂತ ಅಧಿಕವಾದದ್ದು ಚಿಂತೆ.

ಯಕ್ಷ -- ಯಾವನು ಸಂತೋಷಪಡತಕ್ಕವನು? ಲೋಕದಲ್ಲಿ ಆಶ್ಚರ್ಯಕರವಾದುದು ಯಾವುದು? ಯಾವುದು ಸರಿಯಾದ ಮಾರ್ಗವು ? ಇವುಗಳಿಗೆ ಉತ್ತರವನ್ನು ಹೇಳು. ನಿನ್ನ ಮೃತರಾದ ತಮ್ಮಂದಿರು ಬದುಕಲಿ.

ಧರ್ಮ -- ಸಾಲದ ಬಾಧೆ ಇಲ್ಲದವನೆ ಸಂತೋಷಪಡುವನು. ನಿತ್ಯವೂ ಅನೇಕ ಪ್ರಾಣಿಗಳು ಯಮನ ಪಟ್ಟಣಕ್ಕೆ ಹೋಗುತ್ತಿದ್ದರೂ ಉಳಿದವರು ತಾವು ಶಾಶ್ವತ ಎಂದೇ ಭಾವಿಸುತ್ತಿರುವರು ! ಇದಕ್ಕಿಂತ ಆಶ್ಚರ್ಯವು ಯಾವುದು? ಬಹುಜನರು ನಡೆಯುವ ಮಾರ್ಗವೇ ಸರಿಯಾದ ಮಾರ್ಗ.

ಧರ್ಮರಾಯನು ಯಮನಿಂದ ತಮ್ಮಂದಿರನ್ನು ಪುನಃ ಪಡೆದನು.

ಯಕ್ಷೇಶ್ವರ -- ಅಮೃತಪಾನದಿಂದ ಮದಿಸಿದ ದೇವತೆಗಳು ತಾವೇ ಬಲಿಷ್ಠರೆಂದು ಗರ್ವಿತರಾಗಲು ಶಿವನು ಯಕ್ಷರೂಪದಿಂದ ದೇವತೆಗಳ ಮುಂದೆ ಕಾಣಿಸಿಕೊಂಡು ಅವರ ಮುಂದೆ ಒಂದು ತೃಣವನ್ನು ಹಾಕಿ -- 'ಇದನ್ನು ತುಂಡು ಮಾಡಿ' ಎಂದನು. ಆಗ ದೇವತೆಗಳಿಂದ ಇದು ಅಸಾಧ್ಯವಾಗಲು ಅವರೆಲ್ಲಾ ಚಿಂತಿಸುತ್ತಿರುವಾಗ, ಆಕಾಶವಾಣಿಯು ಯಕ್ಷನೇ ಶಿವನೆನ್ನಲು, ದೇವತೆಗಳೆಲ್ಲಾ ಅವನೇ ಬಲಿಷ್ಠನೆಂದು ಅವನಿಗೆ ಶರಣುಹೋದರು (ಮ. ವ).

ಯಜುರ್ವೇದ --ನಾಲ್ಕು ವೇದಗಳಲ್ಲಿ ಇದು ಎರಡನೆಯದು. ಋಗ್ವೇದ ಮೊದಲನೆಯದು. ಇದರಲ್ಲಿ ಶುಕ್ಲಯರ್ಜುವೇದ ಮತ್ತು ಕೃಷ್ಣಯಜುರ್ವೇದವೆಂದು ಎರಡು ವಿಧಗಳಿವೆ. ಧನುರ್ವೇದವು ಇದರ ಉಪವೇದ. ಈ ವೇದದ ಮಂತ್ರಗಳನ್ನು ಯಜ್ಞದಲ್ಲಿ ದೇವತೆಗಳಿಗೆ ಆಹುತಿಗಳನ್ನರ್ಪಿಸಲು ಉಪಯೋಗಿಸುತ್ತಾರೆ. ವೇದವ್ಯಾಸನು ವೇದಗಳನ್ನು ನಾಲ್ಕಾಗಿ ವಿಭಾಗಿಸಿ ಯಜುರ್ವೇದವನ್ನು ವೈಶಂಪಾಯನ ಮುನಿಗೆ ಉಪದೇಶಿಸಿದ. ಈ ವೇದಕ್ಕೆ ಅಧ್ವರ್ಯುವೇದವೆಂಬ ಹೆಸರಿದೆ (ವಿಷ್ಣುಪು).

ಯಜ್ಞ -- ೧. ವೇದಕಾಲದ ಆರ್ಯರ ಪೂಜಾವಿಧಾನ. ಯಜ್ಞವನ್ನು ಒಬ್ಬನೇ ವ್ಯಕ್ತಿಯು ಕುಳಿತು ಮಾಡಲಾಗದುದರಿಂದ ಅನೇಕರನ್ನು ಸಹಾಯಕ್ಕಾಗಿ ನಿಯಮಿಸಿಕೊಳ್ಳಬೇಕಾಗಿತ್ತು. ಹೀಗೆ ನಿಯಮಿತರಾದವರೇ ಋತ್ವಿಕ್ಕುಗಳು. ದೇವತೆಗಳನ್ನು ಕರೆದು ಹೊಗಳುವವನು ಇವರಲ್ಲೊಬ್ಬ. ಇವನೇ ಹೋತೃ. ಯಾಗದಲ್ಲಿ ಮುಖ್ಯವಾಗಿ ಉಪಯೋಗವಾಗುವ ಬೆಂಕಿ ಮತ್ತು ಉಪಕರಣಗಳು, ಹವಿಸ್ಸು, ಇದನ್ನು ಮಾಡಬೇಕಾದ --ಕ್ರಮ ಇವೆಲ್ಲವೂ ಅಧ್ವರ್ಯು ಎಂಬ ಋತ್ವಿಕ್ಕಿನ ಪಾಲಿನ ಕೆಲಸ. ದೇವತೆಗಳಿಗೆ ಹವಿಸ್ಸನ್ನರ್ಪಿಸಿದ ಮೇಲೆ ಮನಸ್ಸಂತೋಷಾರ್ಥವಾಗಿ ಹಾಡುವ ಹಾಡುಗಳೇ ಉದ್ಗಾತೃವೆಂಬ

ಋತ್ವಿಕ್ಕನ ಪಾಲಿನವು. ನೋ -- ಪಂಚಯಜ್ಞ. ೨. ಯಜ್ಞಪುರುಷ. ಈತನು ದಕ್ಷಿಣಾದೇವಿಯ ಪತಿ ನೋ --ತುಷಿತ (ಮ. ಶಾಂ., ವ).

ಯಜ್ಞದತ್ತ (ವಜ್ರದತ್ತ) -- ಇವನು ಭಗದತ್ತನ ಮಗ; ನರಕಾಸುರನ ಮೊಮ್ಮಗ. ಅಶ್ವಮೇಧಕಾಲದಲ್ಲಿ ಅರ್ಜುನನು ಇವನೊಡನೆ ಹೋರಾಡಿ ಗೆದ್ದನು (ಮ.ಅಶ್ವ).

ಯಜ್ಞವರಾಹ --ವಿಷ್ಣುವಿನ ವರಾಹಾವತಾರ ನೋ -- ವರಾಹಾವತಾರ (ಭಾಗ).

ಯಜ್ಞಸೇನ -- ದ್ರುಪದನ ಇನ್ನೊಂದು ಹೆಸರು. ನೋ -- ದ್ರುಪದ.

ಯತಿ -- ೧. ಚಂದ್ರವಂಶದ ನಹುಷನ ಮಗ; ಯಯಾತಿಯ ಸಹೋದರ. ಬಾಲ್ಯದಿಂದಲೂ ಇವನಿಗೆ ಯೋಗಾಭ್ಯಾಸದಲ್ಲಿ ಆಸಕ್ತಿಯಿದ್ದು ಬ್ರಹ್ಮಸಾಯುಜ್ಯವನ್ನು ಹೊಂದಿದನು. (ಮ ಆ).೨. ವಿಶ್ವಾಮಿತ್ರ ಋಷಿಯ ಪುತ್ರನೊಬ್ಬ (ಮ. ಅನು). ೩. ನಾಲ್ಕನೆಯ ಆಶ್ರಮ. ಮೋಕ್ಷಸಾಧನವೇ ಸನ್ಯಾಸಿಯ ಲಕ್ಷಣ (ಮ. ಆ., ಶಾಂ).

ಯದು -- ೧. ಯಯಾತಿಯ ಮಗ ;ಈತನ ತಾಯಿ ಶುಕ್ರಾಚಾರ್ಯರ ಮಗಳಾದ ದೇವಯಾನಿ. ಈತನು ತಂದೆಯ ಕೋಪಕ್ಕೆ ಗುರಿಯಾದುದರಿಂದ ಅರಸುತನವನ್ನು ಕಳೆದುಕೊಂಡನು. ನೋ--ದೇವಯಾನಿ, ತುರ್ವಸು. ಈತನ ವಂಶವು ಶ್ರೀಕೃಷ್ಣಾವತಾರವು ಮುಗಿದಮೇಲೆ ದುರ್ಬಲವಾಗುತ್ತಾ ಹೋಯಿತು. ಈ ಯದುವಂಶೀಯರು ಭಾರತ ಯುದ್ಧಾನಂತರ ಖೋರಾಸಾನ ಪ್ರಾಂತವನ್ನು ಆಳಿದರು. ಶ್ರೀಕೃಷ್ಣನು ಹಿರಿಯ ಮಕ್ಕಳಾದ ಸಾಂಬ ಮೊದಲಾದ ಮೂವರು ಅನೇಕ ಬ್ರಾಹ್ಮಣ ಮತ್ತು ಕ್ಷತ್ರಿಯರನ್ನೊಳಗೊಂಡು ಸೈಬೀರಿಯಕ್ಕೆ ಹೋಗಿ ಅಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿ ಅದರ ರಾಜಧಾನಿಗೆ ವಜ್ರಪುರವೆಂದು ಹೆಸರಿಟ್ಟರು. ಸೈಬೇರಿಯಾ ಮತ್ತು ಫಿನ್ಲೆಂಡಿನವರಿಗೆ ಜ್ಯಾರುಸಾಮಾ ಯದುಗಳೆಂದು ಹೆಸರು. ಹಿಂದೆ ಗಝುನಿಯಿಂದ ಸಮರ್ಕಂದದವರೆಗಿನ ಪ್ರದೇಶವೆಲ್ಲಾ ಜೈಸಲ್ಮೀರದ ಯದುವಂಶೀಯರ ಕೈಯಲ್ಲಿತ್ತು.

ಯಯಾತಿಯ ಮುಪ್ಪನ್ನೂ ಪಾಪವನ್ನೂ ಯದುವು ತೆಗೆದುಕೊಳ್ಳಲು ಒಪ್ಪದುದರಿಂದ ರಾಜನು 'ನಿನ್ನ ಸಂತತಿಯವರೆಗೆ ರಾಜ್ಯವು ಇಲ್ಲದೆ ಹೋಗಲಿ, -ಎಂದು ಶಪಿಸಿದನು (ಮ. ಆ., ಮೌ., ಭಾಗ., ವಿಷ್ಣುಪು., ಹರಿ., ವಾಯುಪು., ಲಿಂಗಪು). ೨. ಉಪರಿಚರವಸುವಿನ ಪುತ್ರನೊಬ್ಬ.

ಯಮ --ದಕ್ಷಿಣ ದಿಕ್ಕಿನ ಒಡೆಯ. ಸಂಯಮಿನಿ (ಶ್ಯಮಿನಿ) ಇವನ ರಾಜಧಾನಿ. ಇವನ ತಂದೆ ಸೂರ್ಯ; ತಾಯಿ ಸಂಜ್ಞೆ; ಸಹೋದರಿ ಯಮುನೆ. ನಾರದನು ಯುಧಿಷ್ಠಿರನ ಮುಂದೆ ಈತನ ಸಭೆಯನ್ನು ವರ್ಣಿಸಿ, 'ಆ ಸಭೆಯಲ್ಲಿ ದಿಲೀಪ,

ಶರ್ಯಾತಿ, ಭರತನೇ ಮೊದಲಾದ ಅನೇಕ ಮಂದಿ ರಾಜರಿದ್ದಾರೆ' ಎಂದನು. ಪಾಂಡುಮಹಾರಾಜನು ಆಗ ಅಲ್ಲೇ ಇದ್ದನು. ಅಣಿಮಾಂಡವ್ಯನ ಶಾಪದಿಂದ ಯಮನು ವಿದುರನಾಗಿ ಜನಿಸಿದನು. ನೋ. -- ಅಣಿಮಾಂಡವ್ಯ, ಧರ್ಮರಾಜ. ಯಮನೇ ಕುಂತೀದೇವಿಯಲ್ಲಿ ಯುಧಿಷ್ಠಿರನಾಗಿ ಜನಿಸಿದನು. ಈ ಯಮನೇ ಪಾಂಡವರ ವನವಾಸಾಂತ್ಯದಲ್ಲಿ ಯಕ್ಷನಾಗಿ ದುರ್ಯೋಧನನು ಕಳುಹಿಸಿದ ಕೃತ್ತಿಕೆಯಿಂದ ಪಾಂಡವರನ್ನು ಉಳಿಸಿದನು. ಸಾವಿತ್ರಿಯ ಪತಿಭಕ್ತಿಗೆ ಮೆಚ್ಚಿ ಆಕೆಯ ಪತಿಯಾದ ಸತ್ಯವಂತನ ಪ್ರಾಣವನ್ನು ಆತನಿಗೇ ಒಪ್ಪಿಸಿದನು. ಮಾರ್ಕಂಡೇಯನ ಪ್ರಾಣವನ್ನು ಒಯ್ಯಲಾರದೆ ಶಿವನಿಂದ ಪರಾಜಿತನಾದನು. ಶ್ರೀರಾಮಾವತಾರದ ಕಾರ್ಯಗಳೆಲ್ಲಾ ಮುಗಿಯುತ್ತಾ ಬಂದಾಗ ಇವನು ರಾಮನಿಗೆ ವೈಕುಂಠಕ್ಕೆ ತೆರಳಬೇಕೆಂದು ಸೂಚನೆಯಿತ್ತನು. ನೋ. - ಛಾಯಾ, ಸಂಜ್ಞೆ. ಧರ್ಮರಾಜ, ವಿದುರ, ಸಾವಿತ್ರಿ, ಮಾರ್ಕಂಡೇಯ, ಶ್ರೀರಾಮ. ಯಮನ ಕರಣೀಕನಿಗೆ ಚಿತ್ರಗುಪ್ತರೆಂದು ಹೆಸರು. ಪ್ರಾಣಿಗಳ ಪಾಪ--ಪುಣ್ಯಗಳ ಲೆಕ್ಕವಿಡುವವನು (ಮ. ಸ., ಭಾಗ., ವಿಷ್ಣುಪು, ಹರಿ, ಮತ್ಸ್ಯಪು., ಪದ್ಮಪು., ವಾಯುಪು., ಬ್ರಹ್ಮಪು., ವರಾಹಪು., ಶಿವಪು, ಮ. ಆ., ವ., ಮಾರ್ಕಂಪು., ರಾಮಾ. ಉತ್ತರ).

ಯಮದೂತ --೧. ಪಾಪಿಗಳ ಜೀವವನ್ನೊಯ್ಯುವ ಯಮನ ಸೇವಕರು. ೨. ವಿಶ್ವಾಮಿತ್ರನ ಒಬ್ಬ ಪುತ್ರ (ಮ. ಅನು).

ಯಮುನಾ --ಗಂಗೆಯನ್ನು ಪ್ರಯಾಗದಲ್ಲಿ ಸೇರುವ ಪುಣ್ಯನದಿಯೊಂದು. ಈಕೆ ಸೂರ್ಯಪುತ್ರಿ; ಯಮನ ಸೋದರಿ. ಶ್ರೀಕೃಷ್ಣಾರ್ಜುನರು ಈ ನದಿಯಲ್ಲಿ ಜಲಕ್ರೀಡೆಯಾಡಿದರು. ಈ ನದಿಗೆ ಕಾಳಿಂದೀ ಎಂಬ ಹೆಸರಿದೆ. ಇದರ ದಡದ ಮಧುವನದಲ್ಲಿ ಧ್ರುವನು ತಪಸ್ಸು ಮಾಡಿ ಶ್ರೀಮನ್ನಾರಾಯಣನನ್ನು ಪ್ರತ್ಯಕ್ಷ ಮಾಡಿಕೊಂಡನು. ಶ್ರೀಕೃಷ್ಣನ ಬಾಲ್ಯವೆಲ್ಲಾ ಯಮುನಾತೀರದಲ್ಲೇ ಕಳೆಯಿತು. ಬಲರಾಮನು ಒಂದು ದಿನ ವಾರುಣಿ ಎಂಬ ಮದ್ಯಪಾನದಿಂದ ಎಚ್ಚರ ತಪ್ಪಿ, ಯಮುನಾ ನದಿಯನ್ನು ನಿಜರೂಪದಿಂದ ತನ್ನಲ್ಲಿಗೆ ಬರುವಂತೆ ಕರೆಯಲು, ಆಕೆಯು ಇದು ಕುಡುಕನ ಮಾತೆಂದು ತಿರಸ್ಕರಿಸಿದಳು. ಇದರಿಂದ ಕೋಪಗೊಂಡ ಬಲರಾಮನು ತನ್ನ ಹಲಾಯುಧದಿಂದ ಯಮುನಾನದಿಯನ್ನು ವೃಂದಾವನದ ಕಡೆಗೆ ಸೆಳೆಯಲು ಆಕೆಯು ಭಯದಿಂದ ಬಲರಾಮನನ್ನು ಪ್ರಾರ್ಥಿಸಿ ಆತನಿಂದ ಬಿಡುಗಡೆ ಹೊಂದಿದಳು. (ಹರಿ).

ಯಮೌ --ನಕುಲಸಹದೇವರು. ನೋ --ನಕುಲ, ಸಹದೇವ.

ಯಯಾತಿ --ನಹುಷನ ಮಗ ;ಚಂದ್ರವಂಶದ ರಾಜ. ಈತನಿಗೆ ಇಬ್ಬರು ಪತ್ನಿಯರು. ಹಿರಿಯ ಪತ್ನಿಯು ಶುಕ್ರಾಚಾರ್ಯರ ಮಗಳಾದ ದೇವಯಾನಿ.

ಈಕೆಯ ಮಕ್ಕಳು ಯದು ಮತ್ತು ತುರ್ವಸು. ಎರಡನೆಯ ಪತ್ನಿಯು ರಾಕ್ಷಸರಾಜನಾದ ವೃಷಪರ್ವನ ಮಗಳು. ಈಕೆಯ ಹೆಸರು ಶರ್ಮಿಷ್ಠೆ. ಈಕೆಗೆ ದ್ರುಹ್ಯು, ಅನು ಮತ್ತು ಪೂರು ಎಂಬ ಮೂವರೂ ಗಂಡುಮಕ್ಕಳೂ, ಮಾಧವಿಯೆಂಬ ಒಬ್ಬ ಹೆಣ್ಣು ಮಗಳೂ ಇದ್ದರು. ಯಯಾತಿಯು ಯೌವನದಲ್ಲಿ ವಿಶ್ವಾಚಿ ಎಂಬ ಅಪ್ಸರೆಯೊಡನೆ ಸುಖಿಯಾಗಿದ್ದನು. ಇವನು ಶರ್ಮಿಷ್ಠೆಯ ಕಡೆಗೆ ಪ್ರೀತಿ ಹೆಚ್ಚು ತೋರಿದುದರಿಂದ ದೇವಯಾನಿಯು ಕುಪಿತಳಾಗಿ ತಂದೆಯಾದ ಶುಕ್ರಾಚಾರ್ಯರಿಂದ ತನ್ನ ಗಂಡನಿಗೆ ಅಕಾಲವೃದ್ಧಾಪ್ಯವು ಬರುವಂತೆ ಶಾಪಕೊಡಿಸಿದಳು. ಮುಂದೆ ಶುಕ್ರಾಚಾರ್ಯರ ಸೂಚನೆಯಂತೆ ವೃದ್ಧಾಪ್ಯವನ್ನು ಮಕ್ಕಳೊಡನೆ ಸ್ವೀಕರಿಸುವಂತೆ ಹೇಳಿದನು. ಆದರೆ ಯದು ಮೊದಲಾದವರು ತಂದೆಯ ಪ್ರಾರ್ಥನೆಯನ್ನು ತಿರಸ್ಕರಿಸಿದರು. ಶರ್ಮಿಷ್ಠೆಯ ಮಗನಾದ ಪೂರುವು ಮಾತ್ರ ತಂದೆಯ ವೃದ್ಧಾಪ್ಯವನ್ನು ಸಂತೋಷದಿಂದ ಸ್ವೀಕರಿಸಿದನು. ಇದರ ಪರಿಣಾಮವಾಗಿ ಪೂರುವಿನ ವಂಶಜರೇ ರಾಜ್ಯಭಾರ ಮಾಡುವಂತೆ ಯಯಾತಿಯು ಅನುಗ್ರಹಿಸಿದನು. ನೋ --ದೇವಯಾನಿ, ಶರ್ಮಿಷ್ಠೆ, ವೃಷಪರ್ವ, ಶುಕ್ರಾಚಾರ್ಯ, ಪೂರು, ಯದು, ಮುಂದೆ ಯಯಾತಿಯು, ಇಂದ್ರಿಯಸುಖವು ಅನುಭವಿಸುವುದರಿಂದ ಹೆಚ್ಚುವುದು ಎಂದು ತಿಳಿದು, ವೈರಾಗ್ಯತಾಳಿ, ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ, ಅರಣ್ಯವನ್ನು ಸೇರಿದನು. ನೋ -- ಮಾಧವಿ, ಕಚ, ಯಯಾತಿಯು ಸ್ವರ್ಗವನ್ನು ಹೊಂದಿದಮೇಲೆ ಸ್ವರ್ಗದಲ್ಲಿರುವ ಹಿರಿಯರನ್ನೆಲ್ಲಾ ಕೀಳು ದೃಷ್ಟಿಯಿಂದ ಕಂಡುದರಿಂದ ಭೂಮಿಗೆ ಬಿದ್ದನು (ಮ. ಆ).ನೋ --ಅಷ್ಟಕ (ಮ, ಆ., ಸ., ವಿ., ದ್ರೋ., ಶಾಂ., ಉ., ವ., ಶ., ಭಾಗ., ವಾಯುಪು., ಮತ್ಸ್ಯಪು., ವಿಷ್ಣುಪು., ರಾಮಾ. ಉತ್ತರ).

ಯಯಾತಿಪತನ --ಇದೊಂದು ಕ್ಷೇತ್ರ. ಇಲ್ಲಿ ದೊಡ್ಡದೊಂದು ಯಜ್ಞ ನಡೆದಾಗ ವಿಶ್ವಾಮಿತ್ರನ ಮೊಮ್ಮಗನನ್ನು ರೈಭ್ಯನ ಮಗನೂ ಆದ ಪರಾವಸುವೆಂಬ ತಪಸ್ವಿಯು ಪರಶುರಾಮನನ್ನು -- 'ನೀನು ಎಲ್ಲಾ ಕ್ಷತ್ರಿಯರನ್ನು ಕೊಂದದ್ದು ಸುಳ್ಳು' ಎಂದು ಮರ್ಮಭೇದಕವಾಗಿ ನುಡಿಯಲು ಪರಶುರಾಮನು ಪುನಃ ಕ್ಷತ್ರಿಯ ಮಕ್ಕಳನ್ನು ಬಿಡದೆ ಕೊಲ್ಲುತ್ತ ಬಂದನು. (ಮ. ಶಾಂ.)

ಯವಕ್ರೀತ --ಭರದ್ವಾಜನೆಂಬ ಋಷಿಯ ಮಗ. ಇವನು ವಿದ್ಯೆಗಾಗಿ ಇಂದ್ರನನ್ನು ಕುರಿತು ತಪಸ್ಸು ಮಾಡಿ ಆತನೊಡನೆ ತನಗೆ ಶಾಸ್ತ್ರಜ್ಞಾನವನ್ನು ಅನುಗ್ರಹಿಸಬೇಕೆನ್ನಲು ಆತನು -- 'ಗುರುಸನ್ನಿಧಿಯಿಂದಲೇ ಶಾಸ್ತ್ರಜ್ಞಾನವನ್ನು ಪಡೆ; ಈ ಮಾರ್ಗದಿಂದ ಶಾಸ್ತ್ರಜ್ಞಾನವನ್ನು ಪಡೆಯುವುದರಿಂದ ನಿನಗೆ ಕೆಡುಕುಂಟಾಗುವ ಸಂಭವವುಂಟು ಎಂದರೂ ಕೇಳದೆ ಇದ್ದುದರಿಂದ ಇಂದ್ರನು

ಆತನಿಗೆ ಮತ್ತು ಆತನ ತಂದೆಗೆ ಶಾಸ್ತ್ರಜ್ಞಾನವನ್ನು ಅನುಗ್ರಹಿಸಿದನು. ಮುಂದೆ ಇವನು ಗರ್ವದಿಂದ ಪರಾವಸುಮುನಿಯ ಪತ್ನಿಯನ್ನು ಉಪಭೋಗಿಸಿದನು. ಇದರಿಂದ ಪರಾವಸು ಮುನಿಯ ತಂದೆಯಾದ ರೈಭ್ಯ ಮುನಿಯು ಕೋಪಗೊಂಡು ಈತನ ನಾಶಕ್ಕಾಗಿ ಕೃತ್ಯೆಯೊಂದನ್ನು ನಿರ್ಮಿಸಿ ಕಳುಹಿಸಿದನು. ಅದು ಅವನನ್ನು ಬೆನ್ನಟ್ಟುತ್ತಾ ಬರಲು ಅವನು ಓಡಿ ತನ್ನ ತಂದೆಯ ಹೋಮಶಾಲೆಯನ್ನು ಪ್ರವೇಶಿಸುತ್ತಿರುವಾಗ, ಅದರ ಬಾಗಿಲು ಕಾಯುತ್ತಿದ್ದ ಯವಕ್ರೀತನನ್ನು ತನ್ನ ಶೂಲಾಯುಧದಿಂದ ಇರಿಯಿತು. ಯವಕ್ರೀತನು ನೆಲದ ಮೇಲೆ ಬಿದ್ದು ಮೃತನಾದನು (ಮ. ವ).

ಯವನ --ಅವ್ಯಕ್ತ ಭಾಷೆ ಮತ್ತು ಲಿಪಿಗಳನ್ನು ಬಳಸುವವ;ಗ್ರೀಕ;ವಿದೇಶೀಯ; ಮಹಮ್ಮದೀಯ; ಐರೋಪ್ಯ (ಕ. ಕೋ).೧. ಒಂದು ದೇಶ. ೨. ನೋ -- ಕಾಲಯವನ. ಇವನು ಶ್ರೀಕೃಷ್ಣನಿಂದ ಹತನಾದನು.

ಯಶೋದಾ --೧. ಚಂದ್ರವಂಶದ ಹಸ್ತಿರಾಜನ ಪತ್ನಿ ; ಈಕೆಯ ಮಗ ವಿಕುಂಜನ (ವಿಕುಂಠನ) (ಮ. ಆ). ೨. ಗೋಕುಲದ ಒಡೆಯನಾದ ನಂದನ ಪತ್ನಿ; ಶ್ರೀಕೃಷ್ಣನ ಸಾಕುತಾಯಿ. ನೋ --ಕೃಷ್ಣ (ಭಾಗ., ವಿಷ್ಣುಪು., ಹರಿ).೩. ಸೂರ್ಯವಂಶದ ಅಂಶುಮಂತನ ಹೆಂಡತಿ; ದಿಲೀಪನ ತಾಯಿ. ಈ ದಿಲೀಪನ ಮಗ ಭಗೀರಥ.

ಯಶೋಧರ --ದುರ್ಮುಖನೆಂಬ ಪಾಂಚಾಲನ ಮಗ (ಮ. ದ್ರೋ).

ಯಾಜ --ಕಾಶ್ಯಪಗೋತ್ರೋತ್ಪನ್ನನಾದ ಒಬ್ಬ ಋಷಿ. ಈತನ ತಮ್ಮ ಉಪಯಾಜ ಯಮುನಾತೀರ ವಾಸಿಗಳಾಗಿದ್ದರು. ದ್ರುಪದನು ದ್ರೋಣನಿಂದ ಅವಮಾನ ಹೊಂದಿದ ಮೇಲೆ ದ್ರೋಣನನ್ನು ಕೊಲ್ಲುವ ಮಗನನ್ನೂ ಅರ್ಜುನನನ್ನು ವಿವಾಹವಾಗುವ ಮಗಳನ್ನೂ ಪಡೆಯುವುದಕ್ಕಾಗಿ ಹವನಕರ್ಮವನ್ನು ನಡೆಸಬಲ್ಲ ಪುರೋಹಿತನನ್ನು ಹುಡುಕಿಕೊಂಡು ಹೊರಟನು. ಯಾಜ ಮತ್ತು ಉಪಯಾಜರು ಆ ಕರ್ಮವನ್ನು ಮಾಡಿ ದ್ರುಪದನ ಇಚ್ಛೆಯನ್ನು ಪೂರೈಸಿದರು. ನೋ --ದ್ರುಪದ, ದೇವಯಾನಿ. (ಮ. ಆ).

ಯಾಜ್ಞವಲ್ಕ್ಯ -- ವೈಶಂಪಾಯನನ ಸೋದರಳಿಯನೂ, ಶಿಷ್ಯನೂ ಆದ ಬ್ರಹ್ಮರ್ಷಿ. ಬ್ರಹ್ಮರಾತನ ಮಗ (ವಿಷ್ಣುಪು). ಇವನಿಗೆ ಸೂರ್ಯನಿಂದ ವಿದ್ಯಾಭ್ಯಾಸವಾಯಿತು (ಭಾಗ., ವಿಷ್ಣುಪು).ಇವನು ವೈಶಂಪಾಯನನ ಶಿಷ್ಯರನ್ನು ತಿರಸ್ಕರಿಸಿ, ಗುರುವಿನಿಂದ ಶಾಪಹೊಂದಿ ಆತನಿಂದ ಕಲಿತ ವೇದಗಳನ್ನು ವಾಂತಿಮಾಡಲು ಉಳಿದ ಮುನಿಗಳು ತಿತ್ತಿರಿಪಕ್ಷಿಯ ರೂಪದಿಂದ ಅದನ್ನು ಸ್ವೀಕರಿಸಿದರು. ಇವನಿಗೆ ಇಬ್ಬರು ಮಡದಿಯರು. ಈತನು ಮಹಾವಿದ್ವಾಂಸನಾಗಿದ್ದನು. ವಾದಮಾಡುವುದರಲ್ಲಿ ತುಂಬಾ ಸಮರ್ಥನಾದ ಇವನು ತುಂಬಾ ಐಶ್ವರ್ಯ

ಮತ್ತು ಕೀರ್ತಿಯನ್ನು ಸಂಪಾದಿಸಿದನು. ಜನಕರಾಜನ ಸಭೆಯಲ್ಲಿ ಪ್ರಾಣಪಣದಿಂದ ತರ್ಕಮಾಡಿ ಶಾಕಲ್ಯಮುನಿಯನ್ನು ಇವನು ಕೊಂದನು. ಬ್ರಹ್ಮವಿದ್ಯೆಯ ವಿಷಯವಾಗಿ ಜನಕರಾಜನೊಂದಿಗೂ ವಾದ ಮಾಡಿದನು. ಈತನು ಬರೆದ ಸ್ಮೃತಿಗೆ ಯಾಜ್ಞವಲ್ಕ್ಯಸ್ಮೃತಿ ಎನ್ನುತ್ತಾರೆ. ಇವನು ಜೀವನದ ಉತ್ತರಾರ್ಧದಲ್ಲಿ ಐಹಿಕ ಜೀವನವು ಅರ್ಥಹೀನವೆಂದು ಎಲ್ಲವನ್ನೂ ತ್ಯಜಿಸಿ ಕೊನೆಗೆ ಪರಿವ್ರಾಜಕನಾದನು. (ಮ. ಸ., ಶಾಂ., ವಿಷ್ಣುಪು., ಭಾಗ., ವಾಯುಪು). ನೋ -- ಅಷ್ಟಾವಕ್ರ.

ಯಾಜ್ಞಸೇನಿ -- ಯಜ್ಞಸೇನನೆಂಬ ಹೆಸರಿನ ದ್ರುಪದನ ಮಕ್ಕಳಾದ ಧೃಷ್ಟದ್ಯುಮ್ನ ಮತ್ತು ದ್ರೌಪದಿ.

ಯಾಮಧಾಮ -- ದೇವತೆಗಳಲ್ಲಿ ಒಂದು ಭೇದ (ಮ. ಶ).

ಯಾಯಾತ -- ಇದು ಸರಸ್ವತೀ ನದಿಯ ಒಂದು ತೀರ್ಥ. ಇಲ್ಲಿ ನಹುಷನ ಪುತ್ರನಾದ ಯಯಾತಿಯು ಒಂದು ಯಾಗವನ್ನು ಮಾಡಿದನು. ಈ ಯಾಗಕ್ಕೆ ಬಂದವರಿಗೆಲ್ಲಾ ಸರಸ್ವತೀ ನದಿಯೇ ವಾಸಸ್ಥಳವನ್ನೂ, ಷಡ್ರಸೋಪೇತವಾದ ಭೋಜನವನ್ನೂ, ಶಯನ ಆಸನಾದಿ ಸಕಲ ಭೋಗವಸ್ತುಗಳನ್ನೂ ಒದಗಿಸುತ್ತಿದ್ದಿತು. ಇದರಿಂದ ಜನರೆಲ್ಲಾ ಸಂತೋಷಗೊಂಡು ಆ ಯಾಗ ಮಾಡಿದ ಸ್ಥಳವನ್ನು ಯಾಯಾತವೆಂದು ಕರೆಯತೊಡಗಿದರು. ನೋ -- ಯಯಾತಿ (ಮ. ಶ).

ಯಾಯಾವರ --ಜರತ್ಕಾರುವಂಶದ ಋಷಿ. ಜರತ್ಕಾರು ಮುನಿಯ ಪಿತೃದೇವತೆಗಳು. ನೋ -- ಜರತ್ಕಾರು (ಮ. ಆ).

ಯುಕ್ತಾಶ್ವ --ಒಬ್ಬ ಮುನಿ; ವಸಿಷ್ಠರ ಕಿರಿಯ ತಮ್ಮ. ಪಾಂಚಾಲದ ಉತ್ತರದಲ್ಲಿ ರಾಜ್ಯಭಾರ ಮಾಡುತ್ತಿದ್ದ ಸುದಾಸನು ಇಂದ್ರನ ಸಹಾಯದಿಂದ ತನ್ನ ಶತ್ರುಗಳಾದ ಹತ್ತು ಮಂದಿ ರಾಜರನ್ನು ಗೆದ್ದು, ಅವರ ಕುದುರೆಗಳನ್ನು ಕಿತ್ತುಕೊಂಡು, ಅವನ್ನು ರಕ್ಷಿಸಲು ವಸಿಷ್ಠರಿಗೆ ಕೊಟ್ಟನು. ಅವರು ತಮ್ಮ ಕಿರಿಯ ತಮ್ಮನಾದ ಯುಕ್ತಾಶ್ವನಿಗೆ ಆ ಕಾರ್ಯವನ್ನೊಪ್ಪಿಸಿದರು. ಯುಕ್ತಾಶ್ವನಿಗೆ ಸುದಾಸನ ಕುದುರೆಗಳನ್ನು ಸಂಗ್ರಹಿಸುವ ಮನಸ್ಸಾಗಿ, ಕಳವು ಮಾಡಲು ಹೋಗಿ, ಸಿಕ್ಕಿಬಿದ್ದು ಅವಮಾನಿತನಾಗಿ, ಪಶ್ಚಾತ್ತಾಪದಿಂದ ಋಷಿಯಾಗಬೇಕೆಂದಿದ್ದಾಗ ಈತನ ಬಾಯಿಂದ ಮಂತ್ರಗಳು ಸ್ವಾಭಾವಿಕವಾಗಿ ಹೊರಬಿದ್ದು, ಮುನಿಗಳಲ್ಲಿ ಗಣ್ಯಸ್ಥಾನವನ್ನು ಪಡೆದನು (ಋ).

ಯುಗ -- ಕೃತ, ತ್ರೇತಾ, ದ್ವಾಪರ ಮತ್ತು ಕಲಿಯುಗವೆಂದು ನಾಲ್ಕು ಯುಗಗಳು.

ಕೃತಯುಗಕ್ಕೆ ೧೭,೨೮,೦೦೦ ಸೌರವರ್ಷಗಳು.

ತ್ರೇತಾಯುಗಕ್ಕೆ ೧೨,೯೬,೦೦೦ ಸೌರವರ್ಷಗಳು.

ದ್ವಾಪರಯುಗಕ್ಕೆ ೮,೬೪,೦೦೦ ಸೌರವರ್ಷಗಳು.

ಕಲಿಯುಗಕ್ಕೆ ೪,೩೨,೦೦೦ ಸೌರವರ್ಷಗಳು.

ಒಟ್ಟು ೪೩,೨೦,೦೦೦ ಸೌರವರ್ಷಗಳಿಗೆ ಚತುರ್ಯುಗವಾಗುತ್ತದೆ (ವಿಷ್ಣುಪು).

ಯುಗಂಧರ --೧. ಸಾತ್ಯಕಿಯ ಪುತ್ರ. ಈತನು ದ್ರೋಣನಿಂದ ಹತನಾದನು (ಮ. ದ್ರೋ).೨. ವೃಷ್ಣಿವಂಶದ ಕೊನೆಯ ಪುರುಷ. ಈತನು ಭೂಮಿಯ ಪುತ್ರ.

ಯುಧಾಜಿತ್ತು --ಕೇಕಯದೇಶದ ಅಶ್ವಪತಿ ರಾಜನ ಮಗ. ದಶರಥನ ಪತ್ನಿಯಾದ ಕೈಕೆಯು ಈತನ ಸಹೋದರಿ (ರಾಮಾ. ಬಾಲ).

ಯುಧಾಮನ್ಯು --ಪಾಂಚಾಲದ ಕ್ಷತ್ರಿಯ. ಯುದ್ಧಮುಗಿದ ರಾತ್ರಿ ಅಶ್ವತ್ಥಾಮನಿಂದ ಹತನಾದನು (ಮ. ಉ., ಸೌ).

ಯುಧಿಷ್ಠಿರ -- ಅಜಾತಶತ್ರು; ಧರ್ಮಪುತ್ರ. ಇವನಿಗೆ ಧರ್ಮರಾಜನೆಂಬ ಹೆಸರಿದೆ. ಪಾಂಡುಪುತ್ರನೂ ಹೌದು. ಇವನು ಯಮನಿಂದ ಕುಂತಿಯಲ್ಲಿ ಹುಟ್ಟಿದವ. ಸೂರ್ಯನು ತುಲಾರಾಶಿಯಲ್ಲಿರುವಾಗ ಪೂರ್ಣತಿಥಿಯೆನ್ನಿಸಿಕೊಂಡ ಪಂಚಮೀ ತಿಥಿಯಲ್ಲಿ ಇಂದ್ರ ದೇವತಾತ್ಮಕವಾದ ಜ್ಯೇಷ್ಠಾ ನಕ್ಷತ್ರದೊಡನೆ ಚಂದ್ರನು ಸೇರಿದ್ದಾಗ ಅಭಿಜಿತ್ ಎಂಬ ಎಂಟನೇ ಮುಹೂರ್ತದಲ್ಲಿ ಕುಂತಿಯು ಧರ್ಮರಾಜನನ್ನು ಹಡೆದಳು (ಮ. ಆ).ನೋ--ಶುಕ. ಈತನ ಮುಖ್ಯಪತ್ನಿ ದ್ರೌಪದಿ. ಈಕೆಯಲ್ಲಿ ಧರ್ಮರಾಜನಿಗೆ ಪ್ರತಿವಿಂಧ್ಯನೆಂಬ ಮಗನಿದ್ದನು. ಯುಧಿಷ್ಠಿರನಿಗೆ ಶೈಬ್ಯ ಮತ್ತು ದೇವಕಿಯೆಂಬ ಇನ್ನಿಬ್ಬರು ಹೆಂಡಿರಿದ್ದರು. ಇವರಲ್ಲಿ ದೇವಕಿಗೆ ಯೌಧೇಯನೆಂಬ ಮಗನಿದ್ದನು. ರಾಜಸೂಯ ಯಾಗಾನಂತರ ಈತನು ಚಕ್ರವರ್ತಿಯಾದನು. ಶಕುನಿಯೊಡನೆ ಈತನು ಜೂಜಾಡಿ ಪರಾಜಿತನಾದನು. ಹನ್ನೆರಡು ವರ್ಷ ತಮ್ಮಂದಿರೊಡನೆ ಅರಣ್ಯವಾಸ ಮಾಡಿದನು. ಈ ಕಾಲದಲ್ಲೆ ಈತನಿಗೆ ಸೂರ್ಯನಿಂದ ಅಕ್ಷಯಪಾತ್ರೆ ಪ್ರಾಪ್ತವಾಯಿತು. ಬೃಹದಶ್ವಮುನಿಯು ಇವನಿಗೆ ಅಕ್ಷಹೃದಯದ ಶಿಕ್ಷಣಕೊಟ್ಟನು. ಲೋಮಶಮುನಿಯಿಂದ ಕೂಡಿಕೊಂಡು ತೀರ್ಥಯಾತ್ರೆ ಮಾಡಿದನು. ಹೆಬ್ಬಾವಾಗಿದ್ದ ನಹುಷನ ಹಿಡಿತಕ್ಕೆ ಭೀಮಸೇನನು ಸಿಕ್ಕಲು ಅವನನ್ನು ಧರ್ಮರಾಜನು ಬಿಡಿಸಿದನು. ಯಕ್ಷನಿಂದ ಎಚ್ಚರತಪ್ಪಿ ಬಿದ್ದಿದ್ದ

ತಮ್ಮಂದಿರನ್ನು ಆತನಿಗೆ ಉತ್ತರವಿತ್ತು ಬದುಕಿಸಿಕೊಂಡನು. ಅಜ್ಞಾತವಾಸ ಕಾಲದಲ್ಲಿ ಇವನು ಕಂಕನೆಂಬ (ಕಂ = ಅಜ್ಞಾತವಾಸವೆಂಬ ಶಪಥವನನ್ನು + ಕ= ನಡೆಸತಕ್ಕವನು). ಹೆಸರಿನಿಂದ ವಿರಾಟನ ಸಭಾಸ್ತಾರನಾಗಿದ್ದನು. ಆ ಕಾಲದಲ್ಲಿ ಜಯನೆಂಬುದು ಈತನ ಗುಪ್ತನಾಮ. ಇವನು ದ್ರೋಣನನ್ನು ಅಶ್ವತ್ಥಾಮೋಹತಃ' ಎಂದು ಕೊಲ್ಲಲು ಕಾರಣನಾದನು. ಯುದ್ಧಾನಂತರ ಭೀಷ್ಮಕರ್ಣಾದಿಗಳ ಮರಣಕ್ಕಾಗಿ ತುಂಬ ವ್ಯಥೆಪಟ್ಟನು. ಅಶ್ವಮೇಧಯಾಗವನ್ನು ಮಾಡಿದನು. ಸಶರೀರನಾಗಿ ಸ್ವರ್ಗವನ್ನು ಸೇರಿದನು. ನೋ -- ನೇಮ, ಅರ್ಜುನ, ನಕುಲ, ಸಹದೇವ, ದ್ರೌಪದಿ (ಮಹಾಭಾರತದ ಎಲ್ಲ ಪರ್ವಗಳು, ಪದ್ಮಪು. ಭಾಗ).

ಯುಯುತ್ಸು -- ೧. ಧೃತರಾಷ್ಟ್ರನ ವೇಶ್ಯೆಯ ಪುತ್ರ. ಈತ ಪಾಂಡವಪಕ್ಷವನ್ನು ಸೇರಿದ್ದ. ಇವನು ಕೌರವಪಕ್ಷದ ಉಲೂಕನೊಡನೆ ಯುದ್ಧಮಾಡಿದನು. ಪಾಂಡವರೂ ಮಹಾಪ್ರಸ್ಥಾನಕ್ಕೆ ಹೊರಟಾಗ ಪರೀಕ್ಷಿತನಿಗೆ ಪಟ್ಟಕಟ್ಟಿ, ಎಲ್ಲಾ ರಾಜ್ಯಾಡಳಿತವನ್ನು ಇವನಿಗೆ ಒಪ್ಪಿಸಿದರು (ಮ. ಆ., ಭೀ., ಶ., ಮಹಾಪ್ರ). ೨. ಧೃತರಾಷ್ಟ್ರನಿಂದ ಗಾಂಧಾರಿಯಲ್ಲಿ ಹುಟ್ಟಿದ ಮಗ (ಮ. ಆ).

ಯುಯುಧಾನ -- ಸಾತ್ಯಕಿ. ಇವನ ಪತ್ನಿ ಸರಸ್ವತಿ. ಇವನು ಮರುತ್ತುಗಳ ಅಂಶದಿಂದ ಜನಿಸಿದವ. ಇವನಿಗೆ ಹತ್ತು ಮಂದಿ ಪುತ್ರರು. ಭೂರಿಶ್ರವನು ಇವನ ಹತ್ತು ಮಂದಿ ಮಕ್ಕಳನ್ನು ಕೊಂದನು. ಯದುವಂಶದ ಸತ್ಯಕನು ಇವನ ತಂದೆ. ಕೃಷ್ಣನು ಸಂಧಾನಕ್ಕೆ ಕೌರವರಲ್ಲಿಗೆ ಹೋದದ್ದು ಇವನಿಗೆ ಸಮ್ಮತವಿರಲಿಲ್ಲ. ಭೂರಿಶ್ರವನು ಇವನನ್ನು ಕೊಲ್ಲುವ ಯತ್ನದಲ್ಲಿದ್ದಾಗ ಶ್ರೀಕೃಷ್ಣನ ಸೂಚನೆಯಂತೆ ಅರ್ಜುನನು ಇವನ ಭುಜವನ್ನು ಕತ್ತರಿಸಲು ಸಾತ್ಯಕಿಯು ಇವನ ತಲೆಯನ್ನು ತುಂಡರಿಸಿದನು. ಯುಯುಧಾನನು ಪ್ರಭಾಸಕ್ಷೇತ್ರದಲ್ಲಿ ಕೃತವರ್ಮನ ಶಿರಶ್ಛೇದ ಮಾಡಿದನು (ಮ. ಆ., ಉ., ಭೀ., ದ್ರೋ., ಶ., ಮೌ).ನೋ -- ರಜತಾಶ್ವ.

ಯುವನಾಶ್ವ -- ಸೂರ್ಯವಂಶದ ಆರ್ದ್ರನ (ಪ್ರಸೇನಜಿತ್) ಮಗ ; ಮಾಂಧಾತನ ತಂದೆ. ಈತನ ಇನ್ನೊಬ್ಬ ಮಗ ಶ್ರಾವಸ್ತ (ಭಾಗ). ಯುವನಾಶ್ವನಿಗೆ ನೂರು ಮಂದಿ ಪತ್ನಿಯರಿದ್ದರೂ ಮಕ್ಕಳಾಗಲಿಲ್ಲ. ಅದಕ್ಕಾಗಿ ಅವನು ಅನೇಕ ಯಜ್ಞಗಳನ್ನು ಮಾಡಿದನು. ಅದು ನಿಷ್ಪ್ರಯೋಜನವಾಗಲು ಭೃಗುಮಹರ್ಷಿಯಿಂದ ಪುತ್ರಕಾಮೇಷ್ಟಿಯನ್ನು ಮಾಡಿಸಿದನು. ಭೃಗುವು ಒಂದು ಕಲಶದಲ್ಲಿ ಮಂತ್ರಗಳಿಂದ ಅಭಿಮಂತ್ರಿತವಾದ ನೀರನ್ನು ಯಜ್ಞವೇದಿಕೆಯಲ್ಲಿಟ್ಟಿದ್ದನು. ಇದನ್ನು ರಾಜನು ತಿಳಿಯದೆ ಕುಡಿದು

ಗರ್ಭಧರಿಸಿದನು. ಮುಂದೆ ಮಗು ಹುಟ್ಟಲಾಗಿ ಅಲ್ಲಿಗೆ ಇಂದ್ರನು ಬಂದು -- 'ಮಾಂ ಧಾಸ್ಯತಿ' (ನನ್ನನ್ನು ಚೀಪುತ್ತಾನೆ) ಎಂದು ಅಮೃತ ತುಂಬಿದ ತನ್ನ ಹೆಬ್ಬೆಟ್ಟನ್ನು ಮಗುವಿನ ಬಾಯಿಗಿಟ್ಟು ಮಾಂಧಾತನೆಂದು ಹೆಸರಿಟ್ಟನು. ನೋ -- ಮಾಂಧಾತ (ಮ. ವ., ಭಾಗ).

ಈತನು ಯಾವುದೋ ಒಂದು ಕಾರಣಕ್ಕಾಗಿ ಗಂಗೆಗೆ ಮಾನವಿಯಾಗೆಂದು ಶಾಪಕೊಟ್ಟಿದ್ದನು. ಆಗ ಅವಳು ಅವನ ಮಗಳಾಗಿಯೇ ಹುಟ್ಟಿ ಕಾವೇರಿಯೆಂಬ ಹೆಸರಿನಿಂದ ಪ್ರಸಿದ್ಧಳಾದಳು. ಇವಳನ್ನು ಯುವನಾಶ್ವನು ಜಹ್ನುವಿಗೆ ಕೊಟ್ಟು. ಲಗ್ನ ಮಾಡಿದ್ದನು (ಹರಿ).

ಯೂಪಕೇತು(ಯೂಪಧ್ವಜ) -- ಚಂದ್ರವಂಶದ ಸೋಮದತ್ತನ ಮಗ ; ಭೂರಿಶ್ರವ. ನೋ -- ಭೂರಿಶ್ರವ (ಮ. ದ್ರೋ). ಇವನು ಶತ್ರುಘ್ನನ ಕಿರಿಯ ಮಗ. ನೋ ಶತ್ರುಘ್ನ ಪಂಚಾಕ್ಷರ.

ಯೋಗಮಾಯೆ --ಶ್ರೀಕೃಷ್ಣನು ಹುಟ್ಟಿದ ರಾತ್ರಿಯಲ್ಲೇ ಈಕೆ ನಂದನ ಪತ್ನಿಯಾದ ಯಶೋದೆಯಲ್ಲಿ ಜನಿಸಿದಳು. ಶ್ರೀಕೃಷ್ಣನ ಜನ್ಮತಿಥಿ ಅಷ್ಟಮಿ;ಯೋಗಮಾಯೆಯದು ನವಮಿ ತಿಥಿಯೆಂದು ನೀಲಕಂಠ ದೀಕ್ಷಿತರು ಹೇಳಿದ್ದಾರೆ.

ಯೋಜನಗಂಧಾ --ದಾಶಪುತ್ರಿ ; ಈಕೆ ವೇದವ್ಯಾಸನ ತಾಯಿ. ಪರಾಶರ ಮುನಿಯು ಈಕೆಯೊಡನೆ ಭೋಗಿಸುತ್ತಿರುವಾಗ ಮೈ ಪರಿಮಳಿಸುತ್ತಿರುವಂತೆ ವರವಿತ್ತನು. ಈಕೆಗೆ ಸತ್ಯವತಿಯೆಂಬ ಹೆಸರಿದೆ. ಇವಳು ಮುಂದೆ ಶಂತನುರಾಜನ ಪತ್ನಿಯಾಗಿ ಚಿತ್ರಾಂಗದ ಮತ್ತು ವಿಚಿತ್ರವೀರ್ಯರೆಂಬ ಇಬ್ಬರು ಮಕ್ಕಳನ್ನು ಹೆತ್ತಳು. ಈಕೆ ಉಪರಿಚರವಸುವಿನ ಮಗಳು; ವಿರಾಟರಾಜನ ತಂಗಿ. ನೋ -- ಉಪರಿಚರವಸು, ಸತ್ಯವತಿ.

ಯೌಧೇಯ -- ಯುಧಿಷ್ಠಿರನ ಮಗ. ಈತನ ತಾಯಿ ದೇವಕಿ. ಈಕೆಗೆ ದೇವಕನೆಂಬ ಮಗನಿದ್ದನು (ವಿಷ್ಣುಪು).

ಯೌವನಾಶ್ವ -- ಭದ್ರಾವತೀ ನಗರದ ರಾಜ. ಪಾಂಡವರು ಇವನಿಂದ ಅಶ್ವಮೇಧದ ಕುದುರೆಯನ್ನು ಸಂಪಾದಿಸಿಕೊಂಡರು ನೋ -- ಮೇಘವರ್ಣ (ಜೈ. ಭಾ).

ಯಃ ಆಸಂಗ --ಶ್ವಫಲ್ಕಾಚಿ ಎಂಬಾಕೆಯ ಮಗ.

ರ

ರಕ್ತಬೀಜ -- ರಾಕ್ಷಸನೊಬ್ಬ. ಇವನು ಶುಂಭ -- ನಿಶುಂಭರ ಸೋದರಳಿಯ. ಇವನು ಪರಮೇಶ್ವರನನ್ನು ತಪಸ್ಸಿನಿಂದ ಮೆಚ್ಚಿಸಿ ತನ್ನ ದೇಹದಿಂದ ನೆಲಕ್ಕೆ ಬಿದ್ದ ಒಂದೊಂದು ಹನಿರಕ್ತದಿಂದಲೂ ತನ್ನಂತಹ ವೀರನು ಜನಿಸಬೇಕೆಂದು ವರಪಡೆದಿದ್ದನು. ಶುಂಭ- ನಿಶುಂಭರು ತ್ರಿಪುರಸುಂದರಿಯನ್ನು ಮೋಹಿಸಿ ಯುದ್ಧಮಾಡುತ್ತಿರುವಾಗ ರಕ್ತಬೀಜನ ದೇಹದಿಂದ ಸುರಿದ ರಕ್ತದ ತಟಕುಗಳೆಲ್ಲ ರಾಕ್ಷಸರಾಗುತ್ತಾ ಬರಲು, ತ್ರಿಪುರಸುಂದರಿಯು ಚಾಮುಂಡಿಯೊಡನೆ ಆಕೆಯೊಡನೆ ಆಕೆಯ ನಾಲಗೆಯನ್ನು ನೆಲದಲ್ಲಿ ಹಾಸುವಂತೆ ಹೇಳಲು, ಆಕೆಯ ಹಾಗೆಯೇ ಮಾಡಲು, ರಕ್ತಬೀಜನ ರಕ್ತವನ್ನೆಲ್ಲ ಆ ನಾಲಗೆಯು ಹೀರುತ್ತಾ ಬಂತು. ಇದರಿಂದ ಅವನು ದುರ್ಬಲನಾಗಲು ತ್ರಿಪುರ ಸುಂದರಿಯು ಅವನನ್ನು ಸಂಹರಿಸಿದಳು (ದೇವೀಭಾ., ಮಾರ್ಕಂ. ಪು).

ರಘು -- ಸೂರ್ಯವಂಶದ ಖಟ್ವಾಂಗ ಅಥವಾ ದಿಲೀಪನ ಮೊಮ್ಮಗ. ದಿಲೀಪನ ಮಗ ದೀರ್ಘಬಾಹು -- ಇವನ ಮಗ ರಘು. ಈತನ ಮಗ ಅಜ. ದಿಲೀಪನಿಗೇ ರಘುವೆಂಬ ಮಗನಿದ್ದನೆಂದೂ ಇದೆ. ರಘುವು ವಿಶ್ವವನ್ನು ಗೆದ್ದು ವಿಶ್ವಜಿತ್ ಎಂಬ ಯಜ್ಞವನ್ನು ಮಾಡಿ ಆ ಯಾಗಕಾಲದಲ್ಲಿ ತನ್ನಲ್ಲಿದ್ದ ಸಂಪತ್ತನ್ನೆಲ್ಲ ಜನರಿಗೆ ಹಂಚಿದನು. ಆ ಮೇಲೆ ವಿಶ್ವಾಮಿತ್ರನ (ವರತಂತುವೆಂಬ ಮುನಿಯ ಹೆಸರು ರಘುವಂಶದಲ್ಲಿದೆ). ಶಿಷ್ಯನಾದ ಕೌತ್ಸನು ತನಗೆ ಬೇಕಾದಷ್ಟನ್ನು ಪಡೆದು --'ನೀನು ವಂಶೋದ್ಧಾರಕನಾದ ಸತ್ಪುತ್ರನನ್ನು ಪಡೆ' ಎಂದು ಹರಸಿ ಹೊರಟುಹೋದನು. ಕೌತ್ಸನು ಸುವರ್ಣವನ್ನು ಪಡೆದ ಸ್ಥಳದಲ್ಲಿ 'ಸುವರ್ಣಖನಿ' ಎಂಬ ತೀರ್ಥವಾಯಿತು. ವೈಶಾಖ ಶುಕ್ಲದ್ವಾದಶಿಯ ದಿನ ಈ ತೀರ್ಥದಲ್ಲಿ ಸ್ನಾನಮಾಡಲು ಜನರು ತುಂಬಾ ಬರುವರು (ರ. ವಂ., ಸ್ಕಾಂ., ಪು).

ರಜತಪೀಠ -- ನೋ-- ಉಡುಪಿ. ದ್ವೈತಸಂಪ್ರದಾಯದವರ -- ಮಧ್ವಾಚಾರ್ಯರ -- ಪ್ರಸಿದ್ಧ ಕ್ಷೇತ್ರ. ಉಡುಪನಿಂದಾಗಿ ಉಡುಪಿಯಾಯಿತು. ಚಂದ್ರನಿಗೆ ಶಿವನು ಪ್ರತ್ಯಕ್ಷನಾದ ಸ್ಥಳವನ್ನು ಚಂದ್ರೇಶ್ವರವೆನ್ನುತ್ತಾರೆ. ಸಹ್ಯಾದ್ರಿ ತಪ್ಪಲಿನ ಕನ್ಯಾಕುಮಾರಿಯಿಂದ ಗೋಕರ್ಣದವರೆಗಿನ ಪಾವನವಾದ ಸ್ಥಳವನ್ನು ಪರಶುರಾಮಕ್ಷೇತ್ರವೆನ್ನುತ್ತಾರೆ. ಪೂರ್ವಾಭಿಮುಖವಾಗಿ ಮಧ್ವಾಚಾರ್ಯರು ಸ್ಥಾಪಿಸಿದ ಶ್ರೀಕೃಷ್ಣನ ವಿಗ್ರಹವು ಕನಕದಾಸರ ದೈಹಿಕಶಕ್ತಿಯಿಂದ ಪಶ್ಚಿಮಾಭಿಮುಖವಾಗಿದೆ. ಈ ಕೃಷ್ಣವಿಗ್ರಹವು ಮಲ್ಪೆಯಲ್ಲಿ ಆಚಾರ್ಯರಿಗೆ

ಗೋಪೀಚಂದನದ ಉಂಡೆಯಲ್ಲಿ ಸಿಕ್ಕಿತೆಂದು ಹೇಳುತ್ತಾರೆ. ಮುಂದೆ ವಾದಿರಾಜಸ್ವಾಮಿಗಳು ಅಲ್ಲಿ ಶ್ರೀಕೃಷ್ಣನ ಪೂಜೆಗಾಗಿ ಅಷ್ಟಮಠಗಳನ್ನು ಸ್ಥಾಪಿಸಿದರು. ಶ್ರೀಕೃಷ್ಣನ ಪೂಜಾಧಿಕಾರದ ಹಕ್ಕನ್ನು ಎರಡು ವರ್ಷಗಳಿಗೊಮ್ಮೆ ಈ ಅಷ್ಟಮಠದ ಯತಿವರ್ಯರು ತಂತಮ್ಮೊಳಗೆ ಹಸ್ತಾಂತರಿಸಿಕೊಳ್ಳುವುದನ್ನೇ ಪರ್ಯಾಯವೆನ್ನುವರು. ಕನಕದಾಸರಿಗೆ ಶ್ರೀಕೃಷ್ಣನು ದರ್ಶನ ಕೊಟ್ಟ ಸ್ಥಳವನ್ನು 'ಕನಕನ ಕಿಂಡಿ' ಎನ್ನುತ್ತಾರೆ. ಉಡುಪಿಯಲ್ಲಿ ಶ್ರೀರಾಘವೇಂದ್ರಸ್ವಾಮಿಮಠ, ವ್ಯಾಸರಾಯಮಠ, ಉತ್ತರಾದಿಮಠ, ಭೀಮನಕಟ್ಟೆ ಮಠ ಮೊದಲಾದ ಇತರ ಮಠಗಳಿವೆ. ಉಡುಪಿಯಿಂದ ೧೨ ಮೈಲು ದೂರದ ಪಾಜಕ ಕ್ಷೇತ್ರವು ಮಧ್ವಾಚಾರ್ಯರ ಜನ್ಮಸ್ಥಳ (ಕ್ಷೇತ್ರದ).

ರಜತಾಶ್ವ -- ಶೈನೇಯ ; ಶನಿಯ ಮಗನೊಬ್ಬ; ಸಾತ್ಯಕಿ. ನೋ -- ಯುಯುಧಾನ

ರಜಿ -- ಚಂದ್ರವಂಶದ ಆಯುವಿನ ಮಗ. ಈತನ ತಾಯಿ ಸ್ವರ್ಭಾನವಿ; ಸಹೋದರರು ನಹುಷ, ವೃದ್ಧಶರ್ಮ, ಗಯ ಮತ್ತು ಅನೇನ. ಇವನಿಗೆ ಪರಾಕ್ರಮಶಾಲಿಗಳಾದ ಐದುನೂರು ಮಂದಿ ಮಕ್ಕಳಿದ್ದರು. ಒಮ್ಮೆ ದೇವದಾನವರಿಗೆ ಯುದ್ಧ ಪ್ರಾರಂಭವಾಗಲು ರಜಿಯು ಇಂದ್ರನ ಪಕ್ಷದಲ್ಲಿ ಹೋರಾಡಿ ದೇವತೆಗಳಿಗೆ ಜಯ ಸಂಪಾದಿಸಿಕೊಟ್ಟನು. ಇದರಿಂದ ಸಂತೋಷಗೊಂಡ ಇಂದ್ರನು ರಜಿಯನ್ನೇ ಸ್ವರ್ಗಾಧಿಪತಿಯನ್ನಾಗಿ ಮಾಡಿದನು. ರಜಿಯ ಮರಣಾನಂತರ ಅವನ ಮಕ್ಕಳು ಸ್ವರ್ಗವನ್ನು ತಾವು ಆಳತೊಡಗಲು ಇಂದ್ರನು ಬೃಹಸ್ಪತ್ಯಾಚಾರ್ಯರೊಡನೆ ಕೂಡಿ ಮಾತನಾಡಿ ಆ ಮಕ್ಕಳನ್ನು ನಾಸ್ತಿಕರನ್ನಾಗಿ ಮಾಡಿ ಕೊಂದು ಸ್ವರ್ಗಾಧಿಪತ್ಯವನ್ನು ಅನುಭವಿಸಿದನು. (ವಿಷ್ಣುಪು., ಮ. ಆ., ಭಾಗ., ಹರಿ., ಮತ್ಸ್ಯಪು).

ರತಾ -- ದೇವಸ್ತ್ರೀಯೊಬ್ಬಳು ;ಈಕೆಯ ಮಗ ಅಹ (ಮ. ಆ).

ರತಿ -- ೧. ಕಾಮ -- ಮನ್ಮಥನ ಪತ್ನಿ. ಈಕೆ ದಕ್ಷಪ್ರಜಾಪತಿಯ ಬೆವರಿನಿಂದ ಹುಟ್ಟಿದಳು. (ಕಾಳಿ. ಪು., ಶಿವಪು., ಮ. ಆ).ನೋ-- ಮನ್ಮಥ, ಮದನ. ೨.ಅಪ್ಸರೆಯೊಬ್ಬಳು. (ಮ. ಅನು).

ರತ್ನಮಾಲಾ -- ಜನಕರಾಜನ ಪತ್ನಿ. ನೋ -- ಜನಕ.

ರಥಕಾರ --ಕೀಚಕ ಮತ್ತು ಸುದೇಷ್ಣೆಯರ ತಂದೆ. ನೋ -- ಕೇಕಯ.

ರಥಧ್ವಾನ -- ಅಗ್ನಿವಿಶೇಷ (ಮ. ವ).

ರಥಂತರಿ -- ಚಂದ್ರವಂಶದ ಇಲಿಲರಾಜನ ಪತ್ನಿ. ಈಕೆಗೆ ದುಷ್ಯಂತ, ಶೂರ, ಭೀಮ, ಪ್ರವಸು, ವಸು -- ಎಂಬ ಐದು ಮಂದಿ ಮಕ್ಕಳಿದ್ದರು (ಮ. ಆ).

ರಥಪ್ರಭ-- ಅಗ್ನಿವಿಶೇಷ (ಮ. ವ).

ರಥವಾಹನ -- ವಿರಾಟನ ಸೋದರ (ಮ. ದ್ರೋ).

ರಥವೀಥಿದಾರ್ಬ್ಯ -- ಒಬ್ಬ ರಾಜರ್ಷಿ. ಅತ್ರಿಮಹರ್ಷಿಗಳ ಮಗನಾದ ಅರ್ಚನಾನಸನಿಂದ ಸೋಮಯಜ್ಞವನ್ನು ಮಾಡಿಸಬೇಕೆಂದು ನಿರ್ಣಯಿಸಿದನು. ಅರ್ಚನಾನಸನು ತನ್ನ ಮಗನಾದ ಶ್ಯಾವಾಶ್ವನೊಂದಿಗೆ ರಥವೀಥಿಯ ಮನೆಗೆ ಬಂದನು. ಯಜ್ಞದ ಕಾಲದಲ್ಲಿ ತನ್ನ ತಂದೆಯ ಬಳಿ ಕುಳಿತಿದ್ದ ಕನ್ಯಾಮಣಿಯೊಬ್ಬಳು ಅರ್ಚನಾನಸ ಋಷಿಯ ಕಣ್ಣಿಗೆ ಬಿದ್ದಳು. ಈಕೆಯು ತನ್ನ ಸೊಸೆಯಾದರೆ ಎಷ್ಟು ಒಳ್ಳೆಯದಾದೀತೆಂದು ತನ್ನ ಮನಸ್ಸಿನಲ್ಲೇ ಎಣಿಸಿದನು. ಶ್ಯಾವಾಶ್ವನೂ ಅವಳಿಗೆ ಮೋಹಿಸಿದನು. ಅರ್ಚನಾನಸನು ತನ್ನ ಮಗನಿಗೆ ರಾಜಪುತ್ರಿಯನ್ನು ಕೊಡುವಂತೆ ಕೇಳಿದನು. ರಾಜನು ಒಪ್ಪಿದನು. ಆದರೆ ರಾಣಿಯು ತನ್ನ ಮಗಳನ್ನು ಮಂತ್ರಗಳನ್ನು ರಚಿಸಿದ ಋಷಿಗೇ ಕೊಡಬೇಕೆನ್ನಲು ರಾಜನೂ ಅದನ್ನೇ ಒಪ್ಪಿದನು. ಅವನು ರಾಜಪುತ್ರಿಯನ್ನು ಮದುವೆಯಾಗಲು ಉಗ್ರ ತಪಸ್ವಿಯಾಗಿ ಭಿಕ್ಷಾಟನೆ ಮಾಡುತ್ತಾ ತರಂತನೆಂಬ ರಾಜನ ಬಳಿಗೆ ಬಂದನು. ಈ ರಾಜನು ವಿಷಯಲೋಲುಪನಾಗಿ ತನ್ನ ಪತ್ನಿಯಾದ ಶಶೀಯಸಿ ಎಂಬವಳಿಗೆ ಬಹಳ ಬಾಧೆ ಕೊಡುತ್ತಿದ್ದನು. ಆ ರಾಜದಂಪತಿಗಳು ಈ ಶ್ಯಾವಾಶ್ವನಿಗೆ ಆದರಾದಿ ಉಪಚಾರಗಳಿಂದ ಸತ್ಕರಿಸಿ ಬಹಳಷ್ಟು ಹಣ ಕೊಟ್ಟರು. ಈಗ ಶ್ಯಾವಾಶ್ವನು ಬಹಳ ಶ್ರೀಮಂತನಾದನು. ಆದರೆ ಅವನಿಗೆ ಶ್ರೀಮಂತಿಕೆ ಬೇಕಾಗಿರಲಿಲ್ಲ. ಆತನಿಗೆ ಮಂತ್ರಕರ್ತೃ ಎನ್ನಿಸಿಕೊಳ್ಳಬೇಕಿತ್ತು. ಮುಂದೆ ಇವನು ಐಶ್ವರ್ಯದಿಂದ ತೃಪ್ತನಾಗದೆ ಕಾಡಿನಲ್ಲಿ ಹುಚ್ಚನಂತೆ ಅಲೆಯುತ್ತಿರುವಾಗ ಒಂದು ದಿನ ವಾಯುದೇವನು ಎದೆಯ ಮೇಲೆ ಕವಚವನ್ನು ಧರಿಸಿ ಮನ್ಮಥನಂತೆ ಅತಿ ಸುಂದರವಾಗಿ ಕಾಣಿಸಿದನು. ವಾಯುದೇವನ ರೂಪ ಹಾಗೂ ಯೌವನಗಳನ್ನು ಕಂಡು ಆಶ್ಚರ್ಯವಾಗಿ ಅವನ ಕುರಿತು ಮಂತ್ರ ರಚಿಸದೇ ಹಳಹಳಿಸಿದುದಕ್ಕಾಗಿ ವ್ಯಥೆಪಟ್ಟನು. ಅವನು ವಾಯುವಿನ ಅನುಗ್ರಹದಿಂದ ಮರುತ್ ಸ್ತೋತ್ರದ ಸುಂದರ ಕವಿತೆಗಳನ್ನು ರಚಿಸಿ ರಾಜನ ಮಗಳನ್ನು ಮದುವೆಯಾಗಿ ಸುಖವಾಗಿದ್ದನು (ಋ).

ರಥಸೇನ -- ಪಾಂಡವಪಕ್ಷದ ಕ್ಷತ್ರಿಯನೊಬ್ಬ (ಮ. ದ್ರೋ).

ರಥಸ್ಥಾ-- ಒಂದು ನದಿ. ಬ್ರಾಹ್ಮಣ್ಯದ ಪರೀಕ್ಷೆಗಾಗಿ ಮೇಧಾತಿಥಿ ಮತ್ತು ತ್ರಿಶೋಕರು ಈ ನದಿಯಲ್ಲಿಳಿಯಲು, ತ್ರಿಶೋಕನನ್ನು ನದಿಯ ನೀರು ಮುಟ್ಟಲಿಲ್ಲ. ಮೇಧಾತಿಥಿಯು ಈ ನದಿಯಲ್ಲಿ ಮುಳುಗಿ ಸೋತನು (ಋ), ನೋ-- ತ್ರಿಶೋಕ (ಮ. ದ್ರೋ).

ರಂತಿದೇವ -- ಪೂರುವಂಶದ ಸಂಕೃತಿಯ ಮಗ. ಈತನು ಮಾಡಿದ ಪಶುಯಜ್ಞದ ಚರ್ಮಗಳ ರಾಶಿಯಿಂದ ಚರ್ಮಣ್ವತೀ ನದಿಯು ಉತ್ಪತ್ತಿಯಾಯಿತು. ನೋ --ಚರ್ಮಣ್ವತಿ. ರಂತಿದೇವನು ಸಂಸಾರದೊಡನೆ ಅರಣ್ಯದಲ್ಲಿ ತಪಸ್ಸು ಮಾಡುತ್ತಿದ್ದಾಗ ನಲವತ್ತೆಂಟು ದಿನಗಳವರೆಗೆ ಉಪವಾಸಮಾಡಿದನು. ಮರುದಿನ ಅವನಿಗೆ ದೇವಲೋಕದಿಂದ ದಿವ್ಯಭೋಜನ ಬಂತು. ಅದನ್ನು ತನ್ನ ಸಂಸಾರಕ್ಕೆ ಹಂಚಿ ತನ್ನ ಪಾಲಿನದನ್ನು ಉಣ್ಣುವಾಗ ಒಬ್ಬ ಬ್ರಾಹ್ಮಣನು ಬಂದು ಆಹಾರ ಬೇಡಿದನು. ಅವನನ್ನು ತೃಪ್ತಿಪಡಿಸಿ ಕಳುಹಿಸಿದ ಮೇಲೆ ಕ್ರಮವಾಗಿ ಶೂದ್ರನೊಬ್ಬನೂ, ನಾಯಿಗಳೊಂದಿಗೆ ಒಬ್ಬ ಬೇಡನೂ ಬಂದನು. ತಾನು ಹಸಿದಿದ್ದರೂ ರಂತಿದೇವನು ಇವರನ್ನೆಲ್ಲ ತೃಪ್ತಿಪಡಿಸಿ ನಿರ್ವಿಕಾರನಾಗಿದ್ದ. ಇದರಿಂದ ಬ್ರಹ್ಮಾದಿಗಳು ಪ್ರತ್ಯಕ್ಷರಾಗಿ ಅವನನ್ನು ಜ್ಞಾನಿಯಾಗುವಂತೆ ಅನುಗ್ರಹಿಸಿದರು. ಮುಂದೆ ಅವನ ಜೊತೆಯಲ್ಲಿದ್ದವರೂ ಅವನೊಡನೆ ಸದ್ಗತಿಪಡೆದರು.

ಮಹಾರಾಜ ರಂತಿದೇವನು ಸ್ವಪ್ನಾದೇಶಕ್ಕೆ ಅನುಸಾರವಾಗಿ ಚಂಬಲ್ ನದೀತೀರದಲ್ಲಿ ತಪಸ್ಸು ಮಾಡುತ್ತಿದ್ದಾಗ ಅವನಿಗೆ ನದಿಯ ತೀರದಲ್ಲಿ ಚತುರ್ಭುಜ ಕೇಶವ ಮೂರ್ತಿಯು ದೊರೆಯಿತು. ಅವನು ಅದನ್ನು ಕೇಶವರಾಯ -- ಪಾಟಣಾದಲ್ಲಿ (ರಾಜಸ್ಥಾನದ ಕೋಟಾ ವಿಭಾಗ) ಸ್ಥಾಪಿಸಿದನು (ಭಾಗ. ಮ. ಅನು., ದ್ರೋ., ಶಾಂ).

ರಮಣಕ -- ೧. ಪ್ರಿಯವ್ರತನ ಮಗನಾದ ವೀತಿಹೋತ್ರನ ಪುತ್ರ. ನೋ -- ಪುಷ್ಕರದ್ವೀಪ. ಪುಷ್ಕರದ್ವೀಪವನ್ನು ರಮಣಕ ಮತ್ತು ಧಾತಕಿಯೆಂಬಿಬ್ಬರು ಸಹೋದರರು ಹಂಚಿಕೊಂಡರು. ಇದನ್ನು ಪ್ರಿಯವ್ರತ ಮಗ ಯಜ್ಞಬಾಹವು ಪಾಲಿಸುತ್ತಿದ್ದನು. ಈ ಭೂಭಾಗ ಶಾಲ್ಮಲಿ ದ್ವೀಪಕ್ಕೆ ಸೇರಿದೆ (ಭಾಗ). ಕಾಳಿಯ ಸರ್ಪದ ಗರ್ವವನ್ನು ಭಂಗಿಸಿ ಶ್ರೀಕೃಷ್ಣನು ಈ ದ್ವೀಪಕ್ಕೆ ಕಳುಹಿಸಿದನು (ಮ. ಆ). ೨. ಜಂಬೂದ್ವೀಪದ ಸುತ್ತಲಿರುವ ಎಂಟು ಉಪದ್ವೀಪಗಳಲ್ಲೊಂದು. ಇಲ್ಲಿ ಗರುಡನು ಸರ್ಪಗಳನ್ನು ಹೊತ್ತು ತಿರುಗುತ್ತಿದ್ದನು (ಭಾಗ).

ರಂಭ --ರಾಕ್ಷಸನೊಬ್ಬ. ಇವನು ಮಹಿಷಾಸುರನ ತಂದೆ. ನೋ -- ಮಹಿಷಾಸುರ. ಕರಂಭನೆಂಬ ಇವನ ಗೆಳೆಯನನ್ನು ದೇವತೆಗಳು ಕೊಂದರು (ದೇವೀಭಾ).

ರಂಭಾ -- ಅಪ್ಸರೆಯೊಬ್ಬಳು. ಕಶ್ಯಪ ಮುನಿ ಮತ್ತು ಪ್ರಾಧೆ ಎಂಬಾಕೆಯ ಮಗಳು. ಈಕೆ ತುಂಬುರನೆಂಬ ಗಂಧರ್ವನ ಹೆಂಡತಿ. ಇಂದ್ರನ ಅಪ್ಪಣೆಯಂತೆ ವಿಶ್ವಾಮಿತ್ರನ ತಪಸ್ಸನ್ನು ಕೆಡಿಸುವ ಪ್ರಯತ್ನ ನಡೆಸಲು ಆತನು ಕೋಪಗೊಂಡು ರಂಭೆಗೆ ಶಿಲೆಯಾಗುವಂತೆ ಶಾಪವಿತ್ತನು. ಈಕೆಯು ಶುಕಮುನಿಯ ತಪಸ್ಸನ್ನು ಕೆಡಿಸಲು ಯತ್ನಿಸಿ ಹತಾಶಳಾದಳು. ಈಕೆ ದೇವಲೋಕದ ವೇಶ್ಯೆಯರಲ್ಲೆಲ್ಲ ಸುಪ್ರಸಿದ್ಧಳು. ಇವಳು ಕುಬೇರನ ಕಿರಿಯ ಮಗನಾದ ನಳಕೂಬರನ ಪ್ರೇಮಪಾತ್ರಳು (ಭಾಗ).

ಒಂದು ದಿನ ರಂಭೆ ಎಂಬ ಅಪ್ಸರೆಯು ಸರಯೂ ನದಿಯಲ್ಲಿ ಮಿಂದು ಸುವರ್ಣಕಲಶದಲ್ಲಿ ನೀರು ತುಂಬಿಕೊಂಡು ರಾಮೇಶ್ವರದ ಕಡೆಗೆ ಹೋಗುತ್ತಿದ್ದಳು. ಅವಳ ಸೀರೆಯ ಸೆರಗು ದಾರಿಯಲ್ಲಿ ಮೂರು ಪಿಶಾಚಿಗಳಿಗೆ ತಗಲಿ ಅವಕ್ಕೆ ಪೂರ್ವಜನ್ಮದ ಸ್ಮರಣೆ ಬಂತು. ಅವು ಪೂರ್ವಜನ್ಮದಲ್ಲಿ ಗುರುಗಳ ಮಗಳನ್ನು ಮೋಹಿಸಿ ಆಕೆಯನ್ನು ಭೋಗಿಸಲು ಗುರುವು ತಿಳಿದು ಮೂವರಿಗೂ ಪಿಶಾಚಿಗಳಾಗುವಂತೆ ಶಾಪಕೊಟ್ಟನು. ಕೊನೆಗೆ ಗುರುವು ಅವರ ಪ್ರಾರ್ಥನೆಗೆ ಮನಕರಗಿ 'ಚೈತ್ರಮಾಸದಲ್ಲಿ ರಾಮತೀರ್ಥದಲ್ಲಿ ಸ್ನಾನ ಮಾಡಿದ ಒಬ್ಬ ಬ್ರಾಹ್ಮಣನು ತನ್ನ ಚೈತ್ರಮಾಸದ ಸ್ನಾನದ ಫಲವನ್ನು ನಿಮಗೆ ಕೊಟ್ಟು ಉದ್ಧರಿಸುವನು' ಎಂದು ಹೊರಟುಹೋಗುವನು. ಮುಂದೆ ಆ ಬ್ರಾಹ್ಮಣ ಬಂದು ಈ ಪಿಶಾಚಿಗಳನ್ನುದ್ಧರಿಸಿದನು (ಅನಂ. ರಾ). ನೋ -- ಚೈತ್ರಮಾಸ.

ರಂಭಾಪುರಿ-- ಉಡುಪಿ ತಾಲೂಕಿನ ಕೋಟ ಮಾಗಣೆಯ ದಕ್ಷಿಣದಲ್ಲಿರುವ ಗ್ರಾಮ ಇದನ್ನು ಪೂರ್ವ, ದಕ್ಷಿಣ ಮತ್ತು ಪಶ್ಚಿಮ ದಿಕ್ಕಿನಲ್ಲಿ ಸೀತಾನದಿಯು ಅರ್ಧದ್ವೀಪವಾಗುವಂತೆ ಸುತ್ತಿ ಹರಿಯುತ್ತಿದೆ. ಇಲ್ಲಿ ಕೈವಲ್ಯಾಶ್ರಮ ಸ್ವಾಮಿಗಳಿಂದ ಸ್ಥಾಪಿತವಾದ ಉಗ್ರನರಸಿಂಹ ದೇವಾಲಯವಿದೆ. ಈ ನರಸಿಂಹಮೂರ್ತಿಯನ್ನು ಇಂದೂ ಮುಟ್ಟಿ ಪೂಜಿಸುವುದಿಲ್ಲ. ಇದು ಭಾಗವತ ಸಂಪ್ರದಾಯದವರ ಮಠವಾಗಿದೆ. ಈ ಗ್ರಾಮಕ್ಕೆ ಈಗ ಬಾಳೇಕುದುರು ಗ್ರಾಮವೆನ್ನುತ್ತಾರೆ. ಕೈವಲ್ಯಾಶ್ರಮ ಸ್ವಾಮಿಗಳು ಸಮಾಧಿಯಾದ ಸ್ಥಳವನ್ನು ಈಗ ಮಾಯಾಗುಂಡಿ ಎನ್ನುತ್ತಾರೆ (ದ. ಕ. ಇ)

ರಮ್ಯಕ -- ಅಗ್ನೀಧ್ರ ಮಹಾರಾಜನ ಮಗ. ಇವನಾಳಿದ ರಾಜ್ಯಕ್ಕೆ ರಮ್ಯಕವರ್ಷವೆಂದು ಹೆಸರು (ವಿಷ್ಣುಪು., ಮ. ಭೀ).

ರವಿ -- ೧. ಜಯದ್ರಥನ ಸೋದರ (ಮ. ವ). ೨. ಧೃತರಾಷ್ಟ್ರನ ಮಗ ; ಇವನು ಭೀಮನಿಂದ ಹತನಾದನು (ಮ. ಶ).೩. ಸೂರ್ಯನ ಒಂದು ಹೆಸರು ; ಸ್ತೋತ್ರ ಮಾಡಲ್ಪಡುವವನು.

ರಸಾತಲ --ಏಳು ಪಾತಾಳಲೋಕಗಳಲ್ಲೊಂದು. ಬ್ರಹ್ಮನ ಮುಖದಿಂದ ಜನಿಸಿದ ಕಾಮಧೇನು ತನ್ನ ಮಕ್ಕಳೊಂದಿಗೆ ಇಲ್ಲಿ ವಾಸಮಾಡುತ್ತಿದೆ. ಇದರ ಹಾಲಿನ ಮಡು ಇಲ್ಲಿದೆ. ಇದಕ್ಕೆ ಕ್ಷೀರನಿಧಿಯೆಂದು ಹೆಸರು. ಈ ಹಾಲಿನ ನೊರೆಯನ್ನು ಪಾನಮಾಡಿಕೊಂಡು ಫೇನಪರೆಂಬ ತಪಸ್ವಿಗಳು ತಪಸ್ಸು ಮಾಡುತ್ತಿದ್ದರು. ಈ ಕಾಮಧೇನುವಿನ ಸಂತತಿಯಲ್ಲಿ ಹುಟ್ಟಿದ ಸುರೂಪೆಯೆಂಬ ಧೇನು ಪೂರ್ವದಿಕ್ಕನ್ನೂ, ಹಂಸಿಕೆಯೆಂಬ ಧೇನು ಉತ್ತರ ದಿಕ್ಕನ್ನೂ ಸುಭದ್ರೆಯೆಂಬ ಧೇನು ಪಶ್ಚಿಮದಿಕ್ಕನ್ನೂ ಸರ್ವಕಾಮದುಘೆ ಎಂಬ ಧೇನು ಉತ್ತರ ದಿಕ್ಕನ್ನೂ ರಕ್ಷಿಸುತ್ತಿರುವುದು. ಬಲಿಚಕ್ರವರ್ತಿಯನ್ನು ತ್ರಿವಿಕ್ರಮನು ರಸಾತಲಕ್ಕೆ ಒತ್ತಿ ಅವನ ಅರಮನೆಯ ಬಾಗಿಲನ್ನು ಕಾಯುತ್ತಿರುವನು. ನೋ -- ಬಲಿ (ಮ. ಉ).

ರಾಕಾ (ರಾಗಾ) -- ೧. ಅಂಗಿರಸನ ಪುತ್ರಿ (ಮ. ವ).೨. ಶೂರ್ಪಣಖೆಯ ತಾಯಿ; ಈಕೆ ರಾಕ್ಷಸಿ ;ಇವಳು ಸುಮಾಲಿಯೆಂಬ ರಾಕ್ಷಸನ ಮಗಳು. ನೋ -- ಮಾಲಿ (ಮ. ವ).

ರಾಕ್ಷಸಸತ್ರ --ಪರಾಶರನು ತಂದೆಯನ್ನು ರಾಕ್ಷಸನು ಭಕ್ಷಿಸಿದನೆಂಬುದನ್ನು ಕೇಳಿ ಋಷಿಗಳನ್ನು ಕೂಡಿಕೊಂಡು ಸರ್ವರಾಕ್ಷಸರ ನಾಶಕ್ಕಾಗಿ ಈ ಯಜ್ಞವನ್ನು ಮಾಡಿದನು. ನೋ -- ಪರಾಶರ (ಮ. ಶಾಂ).

ರಾಜಸೂಯ --ಚಕ್ರವರ್ತಿಗಳಾಗುವ ರಾಜರು ಮಾತ್ರ ಮಾಡಬಲ್ಲ ಒಂದು ಯಜ್ಞ. ಪಾಂಡುರಾಜನು ಈ ಯಾಗವನ್ನು ಧರ್ಮರಾಜನು ಮಾಡಬೇಕೆಂದು ನಾರದನ ಮೂಲಕ ಹೇಳಿಕಳುಹಿಸಿದ್ದನು. ಯುಧಿಷ್ಠಿರನು ಕೃಷ್ಣನ ಅನುಗ್ರಹದಿಂದ ಮತ್ತು ತಮ್ಮಂದಿರ ಸಾಹಸದಿಂದ ಈ ಯಾಗವನ್ನು ಮಾಡಿದನು. ಈ ಯಾಗದಲ್ಲಿ ಅಪಾರಧನ ಸಂಗ್ರಹ ಮಾಡಿದುದರಿಂದಲೇ ಅರ್ಜುನನಿಗೆ ಧನಂಜಯನೆಂಬ ಹೆಸರು ಬಂತು. ಇದರ ಅಗ್ರಪೂಜೆ ಕಾಲದಲ್ಲೇ ಶಿಶುಪಾಲನ ವಧೆಯು ಶ್ರಿಕೃಷ್ಣನಿಂದಾಯಿತು. ರಾಜಸೂಯಕ್ಕೆ ಬಂದು ದುರ್ಯೋಧನನು ಪಾಂಡವರ ಸಭಾಭವನವನ್ನು ಕಂಡು ಬೆರಗಾಗಿ ಅವರ ವಿನಾಶಕ್ಕೆ ಮುಂದಾದನು. ದುರ್ಯೋಧನನೂ ತಾನು ರಾಜಸೂಯಯಾಗವನ್ನು ಮಾಡಬೇಕೆಂದಾಗ ಅವನ ಪುರೋಹಿತನು ' ಧರ್ಮಜನು ಬದುಕಿರುವಾಗ, ವೃದ್ಧನಾದ ನಿನ್ನ ತಂದೆಯು ಜೀವಂತನಾಗಿರುವಾಗ ನೀನು ರಾಜಸೂಯಯಾಗವನ್ನು ಮಾಡಬಾರದು. ಅದಕ್ಕೆ ಸಮಾನವಾದ ವೈಷ್ಣವ ಯಾಗವನ್ನು ಮಾಡು' ಎಂದು ಅದರ ನಿಯಮವನ್ನು ಹೇಳಿದನು. ಹರಿಶ್ಚಂದ್ರನೂ ಈ ಯಾಗವನ್ನು ಮಾಡಿದ್ದ.

ಯಮನ ಸಭೆಯಲ್ಲಿದ್ದ ಪಾಂಡುಮಹಾರಾಜನನ್ನು ಹರಿಶ್ಚಂದ್ರನಂತೆ ಇಂದ್ರನ ಸಭೆಗೆ ತರಲು ನಾರದನ ಸೂಚನೆಯಂತೆ ಶ್ರಿಕೃಷ್ಣನ ಒಪ್ಪಿಗೆಯಲಿ

ರಾಜಸೂಯ ಯಾಗವನ್ನು ಕೈಕೊಂಡನು. ಈ ಕಾಲದ ವಿಜಯಯಾತ್ರೆಯಲ್ಲಿ ಅರ್ಜುನನು ಉತ್ತರಕ್ಕೂ, ಭೀಮನು ಪೂರ್ವಕ್ಕೂ, ನಕುಲನು ಪಶ್ಚಿಮಕ್ಕೂ, ಸಹದೇವನು ದಕ್ಷಿಣಕ್ಕೂ ಹೊರಟು ಸಮಸ್ತ ರಾಜರನ್ನೂ ಜಯಿಸಿ ಇಂದ್ರಪ್ರಸ್ಥಕ್ಕೆ ಹೇರಳ ಸಂಪತ್ತನ್ನು ಹೇರಿಕೊಂಡು ತಂದರು. ಆ ಯಾಗಕಾಲದಲ್ಲಿ ಇಂದ್ರಸೇನ, ವಿಶೋಕ, ಅರ್ಜುನನ ಸಾರಥಿಯಾದ ಪೂರುವು ಅನ್ನಾದಿಗಳನ್ನು ಸಿದ್ಧಪಡಿಸುವ ಅಧಿಕಾರವನ್ನು ವಹಿಸಿದರು. ಈ ಯಾಗದಲ್ಲಿ ವ್ಯಾಸನು ಬ್ರಹ್ಮನು. ಧನಂಜಯಗೋತ್ರದ ಸುಸಾಮನು ಸಾಮವೇದವನ್ನು ಪಾರಾಯಣ ಮಾಡುವ ಉದ್ಗಾತೃವು. ಯಾಜ್ಞವಲ್ಕ್ಯನು ಯಜುರ್ವೇದಗಳನ್ನು ಪಾರಾಯಣಮಾಡುವ ಪ್ರಧಾನ ಅಧ್ವರ್ಯುವು. ವಸುಪುತ್ರನಾದ ಪೈಲನು ಧೌಮ್ಯರೊಡನೆ ಸೇರಿ ಋಗ್ವೇದವನ್ನು ಪಠಿಸುವವರಿಗೆ ಪ್ರಧಾನವಾದ ಹೋತೃವು. ಊಟಕ್ಕೆ ಬಂದರನ್ನು ವರಿಸೆಯಾಗಿ ಕುಳ್ಳಿರಿಸುವುದು, ಊಟ ಮಾಡಿ ಮಿಗಿಸಿದ ಎಂಜಲನ್ನವನ್ನು ಎತ್ತಿಹಾಕಿಸುವುದು, ಭೋಜನಕಾಲದಲ್ಲಿ ಮೇಲ್ವಿಚಾರಣೆ ನೋಡುವುದು --ಈ ಕಾರ್ಯಕ್ಕೆ ಯುಯುತ್ಸುವನ್ನೂ, ಭಕ್ಷ್ಯಭೋಜಗಳ ಅಧಿಕಾರವನ್ನು ದುಶ್ಶಾಸನನಿಗೂ, ಬ್ರಾಹ್ಮಣರನ್ನು ವಿಚಾರಿಸಿಕೊಳ್ಳುವುದಕ್ಕಾಗಿ ಅಶ್ವತ್ಥಾಮರನ್ನೂ, ರಾಜರನ್ನು ಆದರಿಸುವುದಕ್ಕಾಗಿ ಸಂಜಯರನ್ನೂ, ನಡೆದುದು, ನಡೆಯತಕ್ಕುದನ್ನು ವಿಚಾರಿಸಿಕೊಳ್ಳುವುದಕ್ಕಾಗಿ ಭೀಷ್ಮದ್ರೋಣರನ್ನೂ, ಧನಕನಕ ರತ್ನಾದಿಗಳನ್ನು ನೋಡಿಕೊಳ್ಳುವುದು ಮತ್ತು ದಕ್ಷಿಣೆಗಳನ್ನು ಕೊಡುವುದಕ್ಕೆ ಕೃಪಾಚಾರ್ಯರನ್ನೂ ಯುಧಿಷ್ಠಿರನು ನಿಯಮಿಸಿದನು. ಧೃತರಾಷ್ಟ್ರ, ಬಾಹ್ಲಿಕ, ಸೋಮದತ್ತ, ಜಯದ್ರಥರೆಂಬ ನಾಲ್ವರೂ ಮುಖ್ಯಾಧಿಕಾರಿಗಳಾಗಿ ನೇಮಿಸಲ್ಪಟ್ಟರು. ಧರ್ಮಜ್ಞನಾದ ವಿದುರನು ಹಣದ ವೆಚ್ಚವನ್ನೆಲ್ಲ ನಡೆಸುತ್ತಿದ್ದನು. ದುರ್ಯೋಧನನು ಅಲ್ಲಲ್ಲಿಂದ ಧರ್ಮರಾಜನಿಗೆ ಬಂದ ಕಾಣಿಕೆಗಳನ್ನೆಲ್ಲ ತೆಗೆದಿಡುವ ಕಾರ್ಯಕ್ಕೆ ನಿಂತನು. ಕುಂತಿ ಮತ್ತು ಗಾಂಧಾರಿಯರು ಯಾಗಕ್ಕಾಗಿ ಬಂದ ಸ್ತ್ರೀಯರನ್ನು ಆದರಿಸುತ್ತಿದ್ದರು. ಇವರಿಬ್ಬರ ಸೊಸೆಯರೆಲ್ಲ ತಮ್ಮ ಅತ್ತೆಯರು ಹೇಳಿದ ಕೆಲಸಗಳನ್ನು ಮಾಡುತ್ತಿದ್ದರು. ಅರ್ಜುನನು ಆಗಾಗಿನ ಕಾರ್ಯಗಳನ್ನು ಕೃಷ್ಣನನ್ನು ಕೇಳಿ ನಡೆಸುವುದಕ್ಕಾಗಿ ಶ್ರೀಕೃಷ್ಣನ ಬಳಿಯಲ್ಲೇ ಇರಿಸಲ್ಪಟ್ಟನು. ಸರ್ವಲೋಕೇಶ್ವರನಾದ ಕೃಷ್ಣನು ಅಲ್ಲಿಗೆ ಬಂದ ಬ್ರಾಹ್ಮಣರ ಪಾದಗಳನ್ನು ತೊಳೆಯುವ ಭಾರವನ್ನು ತಾನೇ ವಹಿಸಿಕೊಂಡನು. ಯುಧಿಷ್ಠಿರನು ಜ್ಯೇಷ್ಠಾ ಮತ್ತು ಮೂಲಾ ನಕ್ಷತ್ರಗಳೆರಡೂ ಸಂಧಿಸಿದ ಅಮಾವಾಸ್ಯೆಯ ದಿನಗಳಲ್ಲಿ ಕೃಷ್ಣಾಜಿನವನ್ನು ಮೇಲುತ್ತರೀಯವಾಗಿ ಧರಿಸಿ, ಬರೀ ಚುಕ್ಕಿಯುಳ್ಳ

ಮತ್ತೊಂದು ಕೃಷ್ಣಾಜಿನವನ್ನು ನಡುವಿಗೆ ಸುತ್ತಿ, ಮೈಗೆಲ್ಲಾ ಬೆಣ್ಣೆಯನ್ನು ಲೇಪಿಸಿಕೊಂಡು ಸಾವಿರಾರು ಮಂದಿ ಬ್ರಾಹ್ಮಣರಿಂದ ಪರಿವೃತನಾಗಿ ಯಜ್ಞಶಾಲೆಗೆ ಹೊರಟನು.

ಯಾಗಕಾರ್ಯವು ಮುಗಿಯುತ್ತಾ ಬಂದು ಅಭಿಷೇಚನೀಯವೆಂಬ ದಿನವು ಪ್ರಾಪ್ತವಾಯಿತು. ಆ ದಿನದಲ್ಲಿ ಅನೇಕ ರಾಜರ್ಷಿ ಮತ್ತು ದೇವರ್ಷಿಗಳಿಂದ ಕೂಡಿ ಸೋಮಯಾಗವನ್ನು ಮಾಡಿದನು. ಆಮೇಲೆ ಬಂದವರಿಗೆಲ್ಲ ಯುಧಿಷ್ಠಿರನು ಯೋಗ್ಯಮರ್ಯಾದೆಯನ್ನು ನಡೆಸಿದನು. ಮೊದಲು ಬ್ರಾಹ್ಮಣರ ಪೂಜೆ, ಆಮೇಲೆ ಶ್ರೀಕೃಷ್ಣನ ಪೂಜೆಯನ್ನು ನಡೆಸಬೇಕೆಂದು ಅವನು ನಿರ್ಧರಿಸಿದನು. ಕ್ರಮವಾಗಿ ಆ ಸಭೆಯಲ್ಲಿ ಆಚಾರ್ಯ, ಋತ್ವಿಕ್ಕು, ಸಂಬಂಧಿ, ಸ್ನಾತಕ, ಸ್ನೇಹಿತ, ರಾಜರ ಪೂಜೆ ನಡೆಯಿತು. ಆಮೇಲೆ ಶ್ರೀಕೃಷ್ಣನಿಗೆ ಎಲ್ಲರಿಗಿಂತ ಮೇಲಾದವನಾದುದರಿಂದ ಅಗ್ರಪೂಜೆ ನಡೆಯಿತು (ಮ. ಸ).

ರಾಜಾಧಿದೇವಿ -- ಚಂದ್ರವಂಶದ ಶೂರರಾಜನ ಕಿರಿಯ ಮಗಳು; ವಸುದೇವನ ಸಹೋದರಿ. ಅವಂತಿ ದೇಶದ ಜಯಸೇನನು ಈಕೆಯ ಪತಿ. ಮಕ್ಕಳು ವಿಂದ ಅನುವಿಂದ ಮತ್ತು ಮಿತ್ರವಿಂದೆ. ಮಿತ್ರವಿಂದೆ ಶ್ರೀಕೃಷ್ಣನ ಪತ್ನಿ. ನೋ -- ಮಿತ್ರವಿಂದಾ, ಕೃಷ್ಣ, ವಿಂದ, ಅನುವಿಂದ (ಭಾಗ).

ರಾಜ್ಯವರ್ಧನ --ಧರ್ಮರಾಜನ ಮಗ. ವಿದೂರಥನ ಮಗಳಾದ ಮಾನಿನಿಯ ಪತಿ. ನೋ-- ಮಾನಿನಿ, ವಿದೂರಥ (ಮಾಕಂ. ಪು).

ರಾಧಾ -- ೧. ಸೂತರ ಜಾತಿಯ ಅಧಿರಥನ ಪತ್ನಿ ;ಕರ್ಣನ ಸಾಕುತಾಯಿ (ಮ. ಆ., ವ.)೨. ಶ್ರೀಕೃಷ್ಣನ ಪ್ರಿಯ ಸಖಿ. ಈಕೆಯ ತಂದೆ ವೃಷಭಾನು; ತಾಯಿ ಕಳಾವತಿ. ಶ್ರೀಕೃಷ್ಣನನ್ನು ಭಕ್ತಿಯಿಂದ ಒಲಿಸಿಕೊಂಡ ಗೋಕುಲದ ಒಬ್ಬ ಸ್ತ್ರೀ ಈಕೆ. ಇವಳು ಪೂರ್ವಜನ್ಮದಲ್ಲಿ ಸುಗುಣೆ ಎಂಬ ರಾಮನ ದಾಸಿಯಾಗಿದ್ದಳು. ಆಗ ಶ್ರೀರಾಮನ ಬಾಯಿಯ ತಂಬುಲಕ್ಕೆ ಕೈನೀಡಿದುದರಿಂದ ಮೆಚ್ಚಿದ ರಾಮನು ಒಂದು ವರವನ್ನು ಕೇಳೆನ್ನಲು, ಶ್ರೀರಾಮನ ಅಂಗಸುಖವನ್ನು ಆಕೆ ಅಪೇಕ್ಷಿಸಲು 'ಮುಂದಿನ ಜನ್ಮದಲ್ಲಿ ನೀನು ರಾಧೆಯಾಗಿ ಹುಟ್ಟಿ, ನಾನು ಕೃಷ್ಣನಾಗಿ ನಿನ್ನನ್ನು ಸಂತೋಷ ಪಡಿಸುತ್ತೇನೆ' ಎಂದನು (ಅನಂ. ರಾ).

ರಾಧೇಯ --ರಾಧೆಯ ಮಗ ;ಕರ್ಣ.

ರಾಮ --೧. ನಾರಾಯಣನ ಅವತಾರ. ದಶರಥನ ಮಗ ;ಇವನನ್ನು ದಶರಥರಾಮನೆನ್ನುತ್ತಾರೆ. ಈತನ ತಾಯಿ ಕೌಸಲ್ಯೆ; ಸಹೋದರರು ಭರತ, ಲಕ್ಷ್ಮಣ, ಶತ್ರುಘ್ನರು. ಈತನ ಪತ್ನಿ ಸೀತೆ. ರಾಮನು ಚೈತ್ರಶುಕ್ಲ ನವಮಿ ಪುನರ್ವಸು ನಕ್ಷತ್ರದಲ್ಲಿ ಜನಿಸಿದನು. ಬಾಲ್ಯದಲ್ಲೇ ಇವನು ಸುಬಾಹು ತಾಟಕೆಯರನ್ನು ಕೊಂದನು. ಸೀತಾಪರಿಣಯವಾಗಿ ಹಿಂದೆ ಬರುವಾಗ ಪರಶುರಾಮನ ಗರ್ವಭಂಗ ಮಾಡಿದನು. ರಾಮನಿಗೆ ಪಟ್ಟಾಭಿಷೇಕವನ್ನು ಹವಣಿಸಿಕೊಂಡಾಗ ಕೈಕೆಯ ದಾಸಿಯಾದ ಮಂಥರೆಯು ಅದಕ್ಕೆ ವಿಘ್ನ ತಂದು ರಾಮನ ಹದಿನಾಲ್ಕು ವರ್ಷಗಳ ವನವಾಸಕ್ಕೆ ಕಾರಣಳಾದಳು. ರಾಮನು ಸೀತಾಲಕ್ಷ್ಮಣರೊಡನೆ ಅರಣ್ಯಕ್ಕೆ ಹೋದನು. ಮಾಘ ಶುದ್ಧ ಪಂಚಮಿಯ ದಿನ ರಾಮನು ವನವಾಸಕ್ಕೆ ಹೊರಟನು. (ಆನಂ. ರಾ).ಅಲ್ಲಿ ರಾವಣನು ಸೀತಾಪಹರಣವನ್ನು ಮಾಡಲು ಸುಗ್ರೀವ, ಹನುಮಂತ ಮೊದಲಾದವರ ಸ್ನೇಹದಿಂದ ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ಲಂಕೆಗೆ ಹೋಗಿ ರಾಕ್ಷಸರನ್ನೂ ರಾವಣ ಮತ್ತು ಅವನ ಸಂಬಂಧಿಕರನ್ನೂ ನಾಶಮಾಡಿ ಸೀತೆಯನ್ನು ಕೂಡಿಕೊಂಡು ತಮ್ಮನೊಡನೆ ಅಯೋಧ್ಯೆಗೆ ಬಂದನು. ಅಲ್ಲಿ ಪಟ್ಟಾಭಿಷಿಕ್ತನಾದನು. ಒಬ್ಬ ಮಡಿವಾಳನ ನಿಂದೆಯ ಮಾತಿಗೆ ಬೇಸರಿಸಿ ಸೀತೆಯನ್ನು ವಾಲ್ಮೀಕಿ ಆಶ್ರಮದ ಬಳಿ ಬಿಡಲು ಸೀತೆಯು ಆ ಆಶ್ರಮದಲ್ಲೇ ಕುಶ ಲವರೆಂಬ ಮಕ್ಕಳನ್ನು ಹೆತ್ತಳು. ಶ್ರೀರಾಮನು ಅಶ್ವಮೇಧಯಾಗವನ್ನು ಮಾಡಿದನು. ಯಮನ ಸೂಚನೆಯಂತೆ ಕೊನೆಗೆ ರಾಮನು ವೈಕುಂಠವನ್ನು ಸೇರಿದನು. ನೋ --ಶ್ರೀಮತಿ, ಅಂಬರೀಷ., ಲಕ್ಷ್ಮಣ, ದಶರಥ, ಭರತ, ಶತ್ರುಘ್ನ, ಸೀತೆ, ವೇದವತಿ, ರಾವಣ, ವಿಭೀಷಣ, ಜಟಾಯು, ಹನುಮಂತ, ಸುಗ್ರೀವ, ಪರಶುರಾಮ.

ಅಶ್ವಮೇಧಾನಂತರ ಶ್ರೀರಾಮನು ವಸಿಷ್ಠರಿಗೆ ಅವರ ಅಪೇಕ್ಷೆಯಂತೆ ಸೀತೆಯನ್ನು ಅವರಿಗೆ ದಾನಮಾಡಿ, ಅನಂತರ ಅವರ ಸೂಚನೆಯಂತೆ ಎಂಟು ಭಾರ ಚಿನ್ನ ಕೊಟ್ಟು ಸೀತೆಯನ್ನು ಪಡೆದನು (ಆನಂ. ರಾ). ನೋ --ಶ್ರೀರಾಮ

ಶ್ರೀರಾಮನಿಗೆ ಪ್ರಜೆಗಳು ನಕ್ಕಾಗಲೆಲ್ಲ ರಾವಣನ ಶಿರಸ್ಸಿನ ಜ್ಞಾಪಕ ಬರುತ್ತಿತ್ತು. ಅವನು ರಾವಣನ ತಲೆಗಳನ್ನು ಕತ್ತರಿಸಿದಾಗಲೆಲ್ಲ ಅವು ನಗುತ್ತ ರಾಮನ ಪಾದದ ಮೇಲೆ ಬೀಳಲು ಬರುತ್ತಿದ್ದವು. ಈ ದೃಶ್ಯವು ಪ್ರಜೆಗಳು ನಕ್ಕಾಗಲೆಲ್ಲ ಅವನಿಗೆ ತೋರುತ್ತಿದ್ದುದರಿಂದ ತನ್ನ ರಾಜ್ಯದಲ್ಲೆಲ್ಲೂ ಯಾರೂ ನಗಬಾರದೆಂದು ಅಪ್ಪಣೆಮಾಡಿದನು. ಆಗ ಶ್ರೀರಾಮರಾಜ್ಯದಲ್ಲಿ ಆನಂದಕರವಾದ ಉತ್ಸವಗಳೂ, ಯಜ್ಞಗಳೂ, ಗರ್ಭಾದಾನಾದಿ ಷೋಡಶಕರ್ಮಗಳೂ ಎಲ್ಲಾ ವಿನೋದ ಪ್ರಸಂಗಗಳೂ ಕಟ್ಟಾದವು. ಆಗ ದೇವತೆಗಳೆಲ್ಲಾ ಬ್ರಹ್ಮನಿಗೆ ಮೊರೆ ಇಡಲು ಅವನು ಒಂದು ಅಶ್ವತ್ಥಮರದಲ್ಲಿ

ಅಡಗಿ ಕೂತನು. ಒಬ್ಬ ಕಟ್ಟಿಗೆ ಮಾರುವವನು ಅದನ್ನು ಕಂಡು ನಕ್ಕನು. ಮುಂದೆ ಇವನನ್ನು ಕಂಡ ರಾಜದೂತನೂ, ಇವನನ್ನು ಕಂಡ ಸಭಾಸದರೂ, ಅವರನ್ನು ಕಂಡು ಶ್ರೀರಾಮನೂ ನಕ್ಕನು. ಈ ನಗುವಿನ ಮೂಲವನ್ನು ಪರಿಶೋಧಿಸುವಾಗ ಬ್ರಹ್ಮನೆಂದು ತಿಳಿದು, ಬಳಲಿದ ಮನುಷ್ಯರಿಗೆ ಹಾಸ್ಯದ ಪ್ರಯೋಜನವನ್ನರಿತು ಶ್ರೀರಾಮನು, ಇನ್ನು ಮುಂದೆ ನಗುವಾಗ ಸಮಸ್ತರೂ ಬಟ್ಟೆಯಿಂದ ಬಾಯಿಯನ್ನು ಮುಚ್ಚಿಕೊಂಡು ನಗಬೇಕು ಎಂದು ಅಪ್ಪಣೆ ಮಾಡಿದನು (ಆನಂ.ರಾ).

ಲಿಂಗತೋಭದ್ರವೆಂಬ ಮಂಡಲದಲ್ಲಿ ಶ್ರೀರಾಮಚಂದ್ರನ ಪೂಜೆಯನ್ನು ಶಾಸ್ತ್ರೋಕ್ತವಾಗಿ ಮಾಡುವುದು ಉತ್ತಮವಾದದ್ದು. ಪೂಜಾತಂತ್ರದಲ್ಲಿ ಈ ಪೂಜಾವಿಧಾನವನ್ನು ವಿಸ್ತಾರವಾಗಿ ಹೇಳಿದ್ದಾರೆ. ಯಾವ ಉಪಾಸನೆಯಲ್ಲಾದರೂ ಭಕ್ತಿಯೇ ಮುಖ್ಯ. ಶ್ರೀರಾಮನಿಗೆ ಚೈತ್ರಮಾಸ, ಶುಕ್ಲಪಕ್ಷದ ನವಮಿ, ರವಿವಾರ, ಪುನರ್ವಸು ನಕ್ಷತ್ರ, ಚಂಪಕಪುಷ್ಪ, ತುಳಸೀದಳ, ಜಾಜಿಕುಸುಮ, ಕಮಲ, ಪಾರಿಜಾತಾದಿ ಪುಷ್ಪಗಳು ಅತ್ಯಂತ ಪ್ರಿಯವಾದವುಗಳು (ಆನಂ. ರಾ).

ಶ್ರೀರಾಮನ ರಥಕ್ಕೆ ನಾಲ್ಕು ಧ್ವಜಗಳಿದ್ದವು. ಬಾಲ್ಯದಲ್ಲಿ ಆತನು ತಂದೆಯ ರಥದ ಮೇಲೆ ಕುಳಿತುಕೊಳ್ಳುತ್ತಿದ್ದುದರಿಂದ ತಂದೆಯ ಧ್ವಜವಾದ ಕೋವಿದಾರವೂ, ಬಾಣಾಂಕಿತವಾದ ರಥದಲ್ಲಿ ಕುಳಿತು ತಾಟಕಿಯನ್ನು ನಾಶಮಾಡಿದುದರಿಂದ ಬಾಣ ಧ್ವಜವೂ, ಇಂದ್ರನ ವಜ್ರಧ್ವಜವನ್ನು ರಾವಣನು ಯುದ್ಧದಲ್ಲಿ ಮುರಿದಾಗ ಶ್ರೀರಾಮನು ಆಂಜನೇಯನನ್ನು ಧ್ವಜಸ್ಥಾನದಲ್ಲಿ ಕುಳ್ಳಿರಿಸಿಕೊಂಡುದರಿಂದ ಕಪಿಧ್ವಜವೂ, ಯುದ್ಧದಲ್ಲಿ ರಾವಣನನ್ನು ಕೊಲ್ಲಬೇಕೆಂದು ಗರುಡನನ್ನು ಆರೋಹಣ ಮಾಡಿದುದರಿಂದ ಆತನ ರಥದಲ್ಲಿ ಗರುಡಧ್ವಜವೂ ಶೋಭಿಸುತ್ತಿತ್ತು.

ಶ್ರೀರಾಮನು ನೂರು ಅಶ್ವಮೇಧಯಾಗ ಮಾಡಬೇಕೆಂದು ನಿರ್ಧರಿಸಿ ಭಾಗೀರಥೀ ನದೀತೀರದಲ್ಲಿ ಯಜ್ಞಶಾಲೆಯನ್ನು ಕಟ್ಟಿಸಿ, ಸುವರ್ಣದ ಸೀತೆಯನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಅಶ್ವಮೇಧ ಯಜ್ಞಕ್ಕಾರಂಭಿಸಿದನು. ಈ ಯಜ್ಞದ ಕಾಲದಲ್ಲಿ ಪ್ರತಿ ನವಮಿ ತಿಥಿಯಲ್ಲೂ ಅವಭೃತಸ್ನಾನ ಮಾಡುತ್ತಿದ್ದನು. ಅನೇಕ ಲಕ್ಷ ಬ್ರಾಹ್ಮಣರ ಸಂತರ್ಪಣೆ ಗಂಗಾತೀರದಲ್ಲೇ ನಡೆಯಿತು. ಪ್ರತಿಯಜ್ಞದ ಕೊನೆಯಲ್ಲೂ ಶ್ರೀರಾಮನು ಸುವರ್ಣ ಪ್ರತಿಮೆಯನ್ನು ವಸಿಷ್ಠರಿಗೆ ದಾನಮಾಡುತ್ತಿದ್ದನು. ಪ್ರತಿ ಯಜ್ಞದಲ್ಲೂ

ಶತ್ರುಘ್ನನು ಯಜ್ಞಾಶ್ವದ ರಕ್ಷಕನಾಗಿ ಹೊರಡುತ್ತಿದ್ದನು. ಹೀಗೆ ೯೯ ಯಜ್ಞಗಳು ಮುಗಿದವು.

ಒಂದು ದಿನ ಸೀತೆಯು ತೊಟ್ಟಿಲಲ್ಲಿ ಕುಶನನ್ನು ಮಲಗಿಸಿ ವಾಲ್ಮೀಕಿಮುನಿಗೆ ನೋಡಿಕೊಂಡಿರುವಂತೆ ಹೇಳಿ, ತಾನು ಸಖಿಯರೊಂದಿಗೆ ತಮಸಾ ನದಿಗೆ ಸ್ನಾನಕ್ಕಾಗಿ ಹೋದಳು. ದಾರಿಯಲ್ಲಿ ಮರಿಯನ್ನು ಹೊಟ್ಟೆಗೆ ಅವಚಿಕೊಂಡು ಹೋಗುವ ಕಪಿಯನ್ನು ಕಂಡು ಅವುಗಳ ಪುತ್ರಪ್ರೇಮವನ್ನು ಮೆಚ್ಚಿ, ತಾನೂ ತನ್ನ ಮಗುವನ್ನು ಬಿಟ್ಟಿರಲಾರದೆ ಆಶ್ರಮಕ್ಕೆ ಬಂದು ತೊಟ್ಟಿಲಲ್ಲಿದ್ದ ಮಗುವನ್ನೇ ಎತ್ತಿಕೊಂಡು ನದಿಗೆ ಹೊರಟಳು. ಆಗ ಏನೋ ಕೆಲಸದ ನಿಮಿತ್ತ ಹೊರಗೆ ಹೋಗಿದ್ದ ವಾಲ್ಮೀಕಿಗಳು ಆಶ್ರಮಕ್ಕೆ ಬಂದು ತೊಟ್ಟಿಲನ್ನು ಕಾಣಲು ಅಲ್ಲಿ ಮಗುವಿರಲಿಲ್ಲ. ಅವರು ಸೀತಾಶಾಪಕ್ಕೆ ಹೆದರಿ ಅಲ್ಲಿ ಬಿದ್ದ ಲವಗಳಿಂದ ಒಂದು ಶಿಶುವನ್ನು ರಚಿಸಿ ತೊಟ್ಟಿಲಲ್ಲಿಟ್ಟು ಸುಮ್ಮನೇ ಮಲಗಿದರು. ಸ್ನಾನದಿಂದ ಹಿಂದಿರುಗಿದ ಸೀತೆಯು ತೊಟ್ಟಿಲಲ್ಲಿ ಬೇರೆ ಒಂದು ಮಗುವು ಮಲಗಿರುವುದನ್ನು ಕಂಡು ಬೆರಗಾಗಿ ಮುನಿಯನ್ನು ಪ್ರಶ್ನಿಸಿದಳು. ವಾಲ್ಮೀಕಿ ನಿಜ ಸಂಗತಿಯನ್ನು ಹೇಳಿ ಇವನಿಗೆ ಲವನೆಂದು ಹೆಸರಿಟ್ಟಿದ್ದೇನೆಂದರು. ಎಲ್ಲರೂ ಕುಶನು ಹಿರಿಯವನೆಂದೂ, ಲವನು ಕಿರಿಯವನೆಂದೂ ಭಾವಿಸಿದರು. ಇವರಿಬ್ಬರಿಗೂ ವಿದ್ಯಾಭ್ಯಾಸ, ಉಪನಯನವೆಲ್ಲ ಮುಗಿಯಿತು. ಧನುರ್ವಿದ್ಯೆಯಲ್ಲೂ ಪಾರಂಗತರಾದರು. ಇವರು ಸಮಗ್ರ ರಾಮಾಯಣವನ್ನು ಕಂಠಪಾಠ ಮಾಡಿದರು (ಆನಂ. ರಾ).ನೋ., ಕುಶ, ಲವ, ಪಂಚಾಕ್ಷರ.

ಅಯೋಧ್ಯೆಯ ರಾಮೋಪಾಸಕನಿಗೂ, ದ್ವಾರಕೆಯ ಕೃಷ್ಣೋಪಾಸಕನಿಗೂ ಯಾವ ಅವತಾರ ಶ್ರೇಷ್ಠವೆಂಬ ಬಗ್ಗೆ ವಾದವಾಗಲು ಆಕಾಶವಾಣಿಯು ಏಕಪತ್ನೀ ವ್ರತ, ಸತ್ಯಸಂಭಾಷಣೆ ಮೊದಲಾದ ಸದ್ಗುಣಗಳಿಂದ ರಾಮಾವತಾರವೇ ಶ್ರೇಷ್ಠವೆಂದು ನುಡಿಯಿತು (ಆನಂ. ರಾ).

ಶ್ರೀರಾಮನು ಸಭೆಯಲ್ಲಿರಲು ಒಂದು ಕಾಗೆಯು ದೀನಸ್ವರದಿಂದ ಕೂಗುತ್ತಿರಲು ಶ್ರೀರಾಮನು - ನಿನ್ನ ಕಣ್ಣಿನ ಹೊರತು ಬೇರಾವ ವಸ್ತುವನ್ನು ಕೇಳಿದರೂ ಕೊಡುತ್ತೇನೆ' ಎನ್ನಲು ಕಾಗೆಯು 'ನಿನ್ನ ನಾಮಸ್ಮರಣೆಯಲ್ಲಿ ನನ್ನ ಮನಸ್ಸು ಲೀನವಾಗಲಿ'ಎಂದು ಪ್ರಾರ್ಥಿಸಿತು. ಆದಕ್ಕೆ ಶ್ರೀರಾಮನು -- 'ನಿನಗೆ ಭೂತ -ಭವಿಷ್ಯತ್- ವರ್ತಮಾನಗಳು ತಿಳಿಯಲಿ. ನೀನು ಜನರ ಬಲಭಾಗಕ್ಕೆ ಹಾರಿದರೆ ಅವರ ಕಾರ್ಯ ಜಯವಾಗಲಿ. ನೀನು ಪಿಂಡಗಳನ್ನು ಸ್ಪರ್ಶ ಮಾಡುವುದರಿಂದ ಪಿತೃಗಳಿಗೆ ತೃಪ್ತಿಯಾಗಲಿ' ಎಂದು ವರವಿತ್ತನು. ಕಾಗೆಯು ಹಾರಿಹೋಯಿತು.

ಶ್ರೀರಾಮನೊಮ್ಮೆ ಪಾರಿಜಾತ ವೃಕ್ಷದ ಬುಡದಲ್ಲಿ ಬೆಳ್ದಿಂಗಳ ರಾತ್ರಿಯಲ್ಲಿ ಮಂಚದ ಮೇಲೆ ಮಲಗಿದ್ದನು. ಸೀತೆ ಬಹಿಷ್ಠೆಯಾಗಿದ್ದುದರಿಂದ ದೂರ ಮಲಗಿದ್ದಳು. ಆಗ ನೂರು ಮಂದಿ ಸುಂದರಿಯರೂ, ತರುಣಿಯರೂ, ಸರ್ವಾಲಂಕೃತೆಯರೂ ಆದ ಸ್ತ್ರೀಯರು ಶ್ರೀರಾಮನ ಬಳಿಗೆ ಬಂದು ವಿವಾಹದಲ್ಲಿ ಆತುರೆಯರಾಗಿರಲು, ರಾಮನು ಮುಂದಿನ ಕೃಷ್ಣಾವತಾರದಲ್ಲಿ ಭೌಮಾಸುರನು ನಿಮ್ಮನ್ನೆಲ್ಲ ಸೆರೆಯಲ್ಲಿಟ್ಟಾಗ ನಿಮ್ಮನ್ನು ಬಿಡಿಸಿ ವಿವಾಹವಾಗುತ್ತೇನೆ. ಈ ಅವತಾರದಲ್ಲಿ ಏಕಪತ್ನೀವ್ರತವೇ ತನ್ನ ಧ್ಯೇಯ ಎಂದು ಅವರನ್ನು ಕಳುಹಿಸಿದನು (ಆನಂ. ರಾ).

ಶ್ರೀರಾಮನು ರಾಜ್ಯಭಾರಮಾಡುವ ಕಾಲದಲ್ಲಿ ಒಬ್ಬ ಬ್ರಾಹ್ಮಣನ ಐದು ವರ್ಷದ ಮಗನು ಸತ್ತನು. ಅವನು ಮಗುವಿನ ಶವವನ್ನು ರಾಜಮಂದಿರದ ಬಾಗಿಲಿನಲ್ಲಿ ಹಾಕಿಕೊಂಡು ಅಳುತ್ತಾ -- 'ರಾಮಚಂದ್ರಾ, ರಾಜನ ಪಾಪಕೃತ್ಯಗಳಿಂದಲೇ ಪ್ರಜೆಗಳು ಅಲ್ಪಾಯುಷಿಗಳಾಗುವರು. ನನ್ನ ಮಗನು ನಿನ್ನ ದೋಷದಿಂದಲೇ ಮರಣ ಹೊಂದಿರುವನು. ನನ್ನ ಕಂದನನ್ನು ನೀನು ಬದುಕಿಸದಿದ್ದರೆ ನಿನಗೆ ಶಾಪ ಕೊಟ್ಟು ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ' ಎಂದನು. ಶ್ರೀರಾಮನು ಆ ಬ್ರಾಹ್ಮಣ ಬಾಲಕನ ಶವವನ್ನು ಕಂಡು -- 'ನಿನ್ನ ಮಗನನ್ನು ಬದುಕಿಸುತ್ತೇನೆ. ಅಸಾಧ್ಯವಾದರೆ ನನ್ನ ಹಿರಿಯ ಮಗ ಕುಶನನ್ನು ನಿಮಗೆ ಸಮರ್ಪಿಸುವೆನು'ಎಂದನು. ಸೀತೆಯೂ ಆ ಬ್ರಾಹ್ಮಣಪತ್ನಿಯನ್ನು ಸಮಾಧಾನಪಡಿಸುತ್ತಾ --' ನಿಮ್ಮ ಮಗನು ನಿಶ್ಚಯವಾಗಿ ಬದುಕುವನು. ಇದು ಅಸಾಧ್ಯವಾದರೆ ನನ್ನ ಕಿರಿಯ ಮಗ ಲವನನ್ನು ನಿಮಗೊಪ್ಪಿಸುವೆನು' ಎಂದಳು. ಶ್ರೀರಾಮನು ನಾರದನ ಸೂಚನೆಯಂತೆ ಅಧರ್ಮಪ್ರವರ್ತಕನನ್ನು ಹುಡುಕುತ್ತ ರಾಜ್ಯದಲ್ಲಿ ಸುತ್ತಾಡುವಾಗ ಪ್ರಯಾಗ, ಹಸ್ತಿನಾವತಿ, ಉಜ್ಜಯಿನಿ ಮೊದಲಾದ ನಗರಗಳಿಂದ ಏಳು ಶವಗಳು ಬಂದುವು. ಶ್ರೀರಾಮನಿಗೆ ರೇವಾನದಿಯ ತೀರದಲ್ಲಿ ಅಧೋಮುಖನಾಗಿ ಹೊಗೆ ಕುಡಿಯುತ್ತಾ ತಪಸ್ಸು ಮಾಡುತ್ತಿರುವ ಶೂದ್ರನೊಬ್ಬನು ದೃಷ್ಟಿಗೆ ಬಿದ್ದನು (ಇವನಿಗೆ ಶಂಬುಕನೆಂಬ ಹೆಸರಿದೆ) ಶ್ರೀರಾಮನು ವರ್ಣಾಶ್ರಮಧರ್ಮ ಮೀರಿ ತಪಸ್ಸು ಮಾಡಿದ ಆ ಶೂದ್ರನನ್ನು ಕೊಲ್ಲಲು ಆ ಕಾಲದಲ್ಲಿ ಸತ್ತವರೆಲ್ಲ ಬದುಕಿದರು (ಆನಂ. ರಾ).ನೋ -- ಶಂಬುಕ.

ಶ್ರೀರಾಮನೊಡನೆ ಒಂದು ಹದ್ದು ಮತ್ತು ಒಂದು ಗೂಗೆ ಜಗಳದ ತೀರ್ಮಾನಕ್ಕಾಗಿ ಬಂದುವು. ಗೂಗೆಯು ' ಪೃಥ್ವಿಯ ನಿರ್ಮಾಣ ಕಾಲದಲ್ಲಿ ಈ ಗೂಡು ನನ್ನದಾಗಿತ್ತು ' ಎನ್ನಲು, ಹದ್ದು 'ಭೂಮಿ ನಿರ್ಮಾಣಕ್ಕಿಂತಲೂ ಮೊದಲೇ ನನ್ನದಾಗಿತ್ತು' ಎಂದು ಸುಳ್ಳು ಹೇಳಿ ಶಿಕ್ಷೆ ಹೊಂದಿತು (ಆನಂ. ರಾ).

ಶ್ರೀರಾಮನೊಮ್ಮೆ ಬೇಟೆಯಲ್ಲಿ ಸಿಂಹವೊಂದನ್ನು ಇದರಿಸಿ ಬಾಣ ಹೊಡೆಯಲು ಅದು ಸಿಂಹಶರೀರವನ್ನು ಬಿಟ್ಟು ವಿದ್ಯಾಧರನಾಗಿ ಕಾಣಿಸಿಕೊಂಡು-- 'ಹಿಂದೆ ನಾನು ಋಷಿಪತ್ನಿಯನ್ನು ಬಲಾತ್ಕಾರದಿಂದ ಉಪಭೋಗಿಸಿದಾಗ -- ''ನೀನು ಕ್ರೂರವಾದ ಸಿಂಹವಾಗು' ಎಂದು ಶಾಪವಿತ್ತಳು. ಆಮೇಲೆ ನಾನು ಆಕೆಯನ್ನು ಬಹಳವಾಗಿ ಪ್ರಾರ್ಥಿಸಲು ಆಕೆ -- ನೀನು ಶ್ರೀರಾಮಬಾಣದಿಂದ ಶಾಪವಿಮೋಚನೆ ಹೊಂದುವೆ ಎಂದು ಹೇಳಿದಳು'' ಎಂದು ಹೇಳಿ ಸ್ವರ್ಗಕ್ಕೆ ಹೊರಟುಹೋದನು. (ಆನಂ. ರಾ).

ಶ್ರೀರಾಮನೊಮ್ಮೆ ಬಂಡೆಕಲ್ಲುಗಳಿಂದ ಮುಚ್ಚಲ್ಪಟ್ಟಿದ್ದ ಒಂದು ಗವಿಯನ್ನು ಕಂಡು ಆ ಕಲ್ಲುಗಳನ್ನು ತನ್ನ ಧನುಸ್ಸಿನಿಂದ ಕೆಡೆದು ಒಳಗೆ ಪ್ರವೇಶಿಸಲು ನಾಲ್ವರು ಸ್ತ್ರೀಯರನ್ನು ಕಂಡನು. ಅವರು ಎಲುಬು, ಚರ್ಮ ಮಾತ್ರ ಇದ್ದವರಾಗಿದ್ದು ಶ್ವಾಸೋಚ್ಛ್ವಾಸಗಳಿಂದ ಮಾತ್ರ ಅವರು ಬದುಕಿದ್ದಾರೆಂದು ಗೊತ್ತಾಗುತ್ತಿತ್ತು. ಶ್ರೀರಾಮನು ನಾಲ್ಕು ರೂಪಗಳಿಂದ ನಾಲ್ವರ ಮುಂದೆ ನಿಂತು -- ನಿಮ್ಮ ತಪಸ್ಸಿಗೆ ಮೆಚ್ಚಿರುವೆನು. ವರಗಳನ್ನು ಬೇಡಿರಿ ಎನ್ನಲು ಅವರು ದುಂದುಭಿ ಎಂಬ ರಾಕ್ಷಸನು ತಮ್ಮನ್ನೂ, ಇನ್ನೂ ಹದಿನಾರು ಸಾವಿರ ಹೆಣ್ಣು ಮಕ್ಕಳನ್ನೂ ಸೆರೆಯಲ್ಲಿಟ್ಟಿರುವುದನ್ನು ಹೇಳಿ -- 'ಅವರೆಲ್ಲ ಒಳಗಡೆ ಸೆರೆಯಲ್ಲಿದ್ದಾರೆ. ಆ ರಾಕ್ಷಸನು ಒಂದೇ ದಿನದಲ್ಲಿ ಒಂದು ಲಕ್ಷ ಸ್ತ್ರೀಯರನ್ನು ವಿವಾಹ ಮಾಡಿಕೊಳ್ಳಬೇಕೆಂದಿದ್ದನು. ನಾವೆಲ್ಲ ಆಹಾರವಿಲ್ಲದೆ ವಿಷ್ಣುವನ್ನೇ ಧ್ಯಾನಿಸುತ್ತಿದ್ದೆವು. ನಮ್ಮನ್ನು ಸೆರೆಯಿಂದ ಬಿಡಿಸಿದ ನೀನೇ ನಮ್ಮನ್ನು ವಿವಾಹವಾಗಬೇಕು' ಎಂದರು. ಆಗ ಶ್ರೀರಾಮನು 'ನಾನು ಈ ಅವತಾರದಲ್ಲಿ ಏಕಪತ್ನೀವ್ರತಸ್ಥನು. ಮುಂದಿನ ದ್ವಾಪರಯುಗದಲ್ಲಿ ಕೃಷ್ಣನಾಗಿ ಅವತರಿಸಿದಾಗ ನೀವೆಲ್ಲ ಪುನಃ ಹುಟ್ಟಿ ಬನ್ನಿರಿ. ನಿಮ್ಮನ್ನೆಲ್ಲ ವಿವಾಹವಾಗುತ್ತೇನೆ. ಮುಂದಿನ ಜನ್ಮದಲ್ಲಿ ಈ ದುಂದುಭಿಯೇ ಭೌಮಸುರನಾಗಿ ಹುಟ್ಟಿ ನಿಮ್ಮನ್ನು ಸೆರೆಯಲ್ಲಿಡುವನು. ನಾನು ಅವನನ್ನು ಕೊಂದು ನಿಮ್ಮನ್ನು ವಿವಾಹವಾಗುತ್ತೇನೆ' ಎಂದು ಭರವಸೆಯಿತ್ತು ಕಳುಹಿಸಿದನು. ಅವರಲ್ಲಿ ಬ್ರಾಹ್ಮಣಸ್ತ್ರೀಯರಿಗೆ ವಿವಾಹದ ವಯಸ್ಸು ಮೀರಿತ್ತಾದ್ದರಿಂದ ಅವರು ಬ್ರಹ್ಮಚಾರಿಣಿಯರಾಗಿಯೇ ಬಾಳಿದರು. ಉಳಿದ ಮೂರು ವರ್ಣದವರೂ ವಿವಾಹಜೀವನವನ್ನಲಂಕರಿಸಿದರು (ಆನಂ. ರಾ).

ಒಮ್ಮೆ ಯಮುನಾ ನದೀತೀರದಲ್ಲಿ ಮಲಗಿರುವ ಶ್ರೀರಾಮನ ಬಳಿಗೆ ಬಂದು ಯಮುನೆಯು ವಿವಾಹಕ್ಕಾಗಿ ಪ್ರಾರ್ಥಿಸಲು ಶ್ರೀರಾಮನು --'ಕಾಳಿಂದಿ, ಮುಂದಿನ ಅವತಾರದಲ್ಲಿ ನಿನ್ನನ್ನು ವಿವಾಹವಾಗುತ್ತೇನೆ ' ಎಂದನು (ಆನಂ. ರಾ)ನೋ -- ಸೀತಾರಾಮ.

ರಾಮದಾಸ-- ಗೋದಾವರೀತೀರದ ಅಬ್ಜವೆಂಬ ಕ್ಷೇತ್ರದ ನರಸಿಂಹನೆಂಬ ಮುನಿಯ ಮಗ. ಇವನ ಶಿಷ್ಯನೇ ವಿಷ್ಣುದಾಸ. ರಾಮಾಯಣದ ಸಾರಕಾಂಡವನ್ನು ಹೇಳಿದ ರಾಮದಾಸನು ತನ್ನ ಶಿಷ್ಯನಿಗೆ ಯಾತ್ರಾಕಾಂಡದ ಕಥೆಯನ್ನು ಹೇಳಿದನು (ಆನಂ. ರಾ).

ರಾಮಹ್ರದ -- ತೀರ್ಥವೊಂದು. ಸ್ಥಾನೇಶ್ವರದ ಸಮೀಪದ ಒಂದು ಕೊಳ. ಪರಶುರಾಮನು ಕ್ಷತ್ರಿಯರನ್ನು ವಧಿಸಿದ ಮೇಲೆ ತನ್ನ ಪಿತೃಗಳಿಗೆ ಇಲ್ಲೇ ತರ್ಪಣವಿತ್ತನು (ಮ. ಶಾಂ).

ರಾಮಾಯಣ -- ವಾಲ್ಮೀಕಿಮುನಿಯಿಂದ ರಚಿತವಾದ ಆದಿಕಾವ್ಯ. ಸಂಸ್ಕೃತ ಸಾಹಿತ್ಯಕ್ಕೆ ವಾಲ್ಮೀಕಿ ರಾಮಾಯಣವು ಭೂಷಣವಾದದ್ದು. ವಾಲ್ಮೀಕಿ ಮಹರ್ಷಿ ಒಂದು ಬೇಸಿಗೆಯಲ್ಲಿ ತಮಸಾ ನದಿಗೆ ಸ್ನಾನಕ್ಕೆ ಹೋದಾಗ ಒಬ್ಬ ಬೇಡನು ಕ್ರೌಂಚಪಕ್ಷಿಗಳ ಜೋಡಿಯಲ್ಲಿ ಗಂಡನ್ನು ಕೊಲ್ಲಲು ಹೆಣ್ಣು ಹಕ್ಕಿಯು ಗೋಳಾಡತೊಡಗಿತು. ಮುನಿಯು ಅದನ್ನು ಕಂಡು, ಹೇಳಿ ಉಚ್ಚರಿಸಿದ ಶ್ಲೋಕದ ಮಾತುಗಳೇ ರಾಮಾಯಣಕ್ಕೆ ಮೂಲವಾದವು. ರಾಮಾಯಣದಲ್ಲಿ ಉತ್ತರಕಾಂಡವನ್ನು ಬಿಟ್ಟು ಬಾಲ, ಅಯೋಧ್ಯಾ, ಅರಣ್ಯ, ಕಿಷ್ಕಿಂಧಾ, ಸುಂದರ ಮತ್ತು ಯುದ್ಧಕಾಂಡಗಳೆಂಬ ಆರು ಕಾಂಡಗಳೂ ವಾಲ್ಮೀಕಿಯಿಂದಲೇ ರಚಿತವಾದವೆನ್ನುತ್ತಾರೆ. ಮೂಲರಾಮಾಯಣವು ಕ್ರಿ. ಪೂ. ೪ -- ೫ ನೇ ಶತಮಾನದಲ್ಲಿ ರಚಿತವಾಗಿರಬಹುದೆನ್ನುತ್ತಾರೆ. ರಾಮಾಯಣದ ಕಥೆಯು ರಾಮಾಯಣದ ವನಪರ್ವ, ಬೌದ್ಧಜಾತಕ, ಜೈನಪುರಾಣಗಳು, ರಾಮ ತಾಪಿನೀ ಉಪನಿಷತ್ತು, ಬ್ರಹ್ಮಾಂಡಪುರಾಣ, ಆಧ್ಯಾತ್ಮ ರಾಮಾಯಣ, ಪದ್ಮಪುರಾಣ (ಪಾತಾಳಖಂಡ), ಶ್ರೀಭಾಗವತ, ವಿಶ್ವಾಮಿತ್ರ ರಾಮಾಯಣ, ಮೂಲ ರಾಮಾಯಣ, ಆನಂದರಾಮಾಯಣ, ಶತಕಂಠರಾಮಾಯಣ, ಜಾವಾದ್ವೀಪದ ರಾಮೋಪಾಖ್ಯಾನ, ಅದ್ಭುತರಾಮಾಯಣ -- ಮೊದಲಾದ ಗ್ರಂಥಗಳಲ್ಲಿ ಅನೇಕ ವಿಧವಾಗಿ ಕಂಡುಬರುತ್ತಿವೆ. ವಾಲ್ಮೀಕಿರಾಮಾಯಣದಲ್ಲಿ ಶ್ರೀರಾಮ, ಸೀತೆ ಲಕ್ಷ್ಮಣ, ಭರತ, ಹನುಮಂತ -- ಮೊದಲಾದವರೆಲ್ಲ ಆದರ್ಶರಾಗಿದ್ದು ಭಾರತ ಸಂಸ್ಕೃತಿಯ ಪ್ರತೀಕಗಳು.

ರಾಮೇಶ್ವರ -- ದಕ್ಷಿಣ ಹಿಂದೂ ದೇಶದ ಪ್ರಸಿದ್ಧ ಯಾತ್ರಾಸ್ಥಳ. ಶ್ರೀರಾಮನು ರಾವಣನನ್ನು ವಧಿಸಿದ ಮೇಲೆ ಪುಷ್ಪಕವಿಮಾನದಲ್ಲಿ ಕುಳಿತು ಗಂಧಮಾದನ ಪರ್ವತದಲ್ಲಿ ಬಂದಿಳಿದನು. ಅಲ್ಲಿ ಅಗಸ್ತ್ಯಮಹರ್ಷಿಗಳ ಸೂಚನೆಯಂತೆ ರಾವಣನನ್ನು ಕೊಂದ ಬ್ರಹ್ಮಹತ್ಯೆಯ ನಿವಾರಣಾರ್ಥವಾಗಿ ಗಂಧಮಾದನ

ಪರ್ವತದಲ್ಲಿ ಒಂದು ಶಿವಲಿಂಗವನ್ನು ಸ್ಥಾಪಿಸಲು ಹೇಳಿದನು. ಶ್ರೀರಾಮನು ಹನುಮಂತನೊಡನೆ ಶಿವಲಿಂಗವನ್ನು ತರಲು ಅಪ್ಪಣೆ ಮಾಡಲು ಅವನು ಕೈಲಾಸದಿಂದ ಶಿವಲಿಂಗವನ್ನು ತರುವುದರೊಳಗೆ ಮುಹೂರ್ತವು ದಾಟುತ್ತಿರಲು ಸೀತೆಯು ಮಾಡಿದ ಮಳಲ ಲಿಂಗವನ್ನೇ ಶ್ರೀರಾಮನು ಸ್ಥಾಪಿಸಿದನು. ಇದೇ ರಾಮೇಶ್ವರಲಿಂಗ. ಮುಂದೆ ಹನುಮಂತನು ಶಿವಲಿಂಗವನ್ನು ತಂದು 'ಇದರ ಗತಿಯೇನು ?' ಎನ್ನಲು, 'ಮಳಲ ಲಿಂಗವನ್ನು ಕಿತ್ತು ನೀನು ತಂದ ಲಿಂಗವನ್ನು ಸ್ಥಾಪಿಸು' ಎಂದನು. ಹನುಮಂತನು ಎಷ್ಟೇ ಪ್ರಯತ್ನಪಟ್ಟರೂ ಆ ಮಳಲ ಲಿಂಗವನ್ನು ಅಲ್ಲಾಡಿಸಲೂ ಸಮರ್ಥನಾಗದೆ ಹೋದನು. ಕೊನೆಗೆ ಹನುಮಂತನಲ್ಲಿ ಕರುಣೆಯಿಂದ 'ಹನುಮಂತಾ, ನೀನು ತಂದ ಲಿಂಗವನ್ನು ಹನುಮದೀಶ್ವರನೆಂದು ಹೆಸರಿಟ್ಟು ಸ್ಥಾಪಿಸು' ಎಂದನು. 'ನೀನು ಸ್ಥಾಪಿಸಿದ ಲಿಂಗದರ್ಶನ ಮಾಡಿದಮೇಲೆ ನಾನು ಸ್ಥಾಪಿಸಿದ ಲಿಂಗದರ್ಶನ ಮಾಡಿದವರಿಗೆ ಮಾತ್ರ ಯಾತ್ರೆಯ ಫಲ ದೊರೆಯಲಿ' ಎಂದು ವರವಿತ್ತನು. ರಾಮೇಶ್ವರಲಿಂಗದ ಸಮೀಪವೇ ಶ್ರೀರಾಮನು ತನ್ನ ಧನುಸ್ಸಿನಿಂದ ಭೂಮಿ ಸೀಳಿ ಒಂದು ತೀರ್ಥವನ್ನು ನಿರ್ಮಿಸಿದನು. ಇದಕ್ಕೆ ಕೋಟಿ ತೀರ್ಥವೆನ್ನುತ್ತಾರೆ (ಕ್ಷೇತ್ರದ).

ರಾವಣ-- ವಿಶ್ರವಸುವಿನ ಪುತ್ರನಾದ ರಾಕ್ಷಸರಾಜ ; ಈತನ ತಾಯಿ ಕೈಕಸಿ; ಈಕೆಗೆ ಭಾರತದಲ್ಲಿ ಪುಷ್ಪೋತ್ಕಟೆ ಎಂಬ ಹೆಸರಿದೆ. ಇವನಿಗೆ ಕುಂಭಕರ್ಣ -- ವಿಭೀಷಣರು ಸಹೋದರರು; ಶೂರ್ಪಣಖೆಯು ಈತನ ತಂಗಿ. ರಾವಣನು ಗೋಕರ್ಣಕ್ಷೇತ್ರದಲ್ಲಿ ತಪಸ್ಸು ಮಾಡಿ ಮನುಷ್ಯರಿಂದಲ್ಲದೆ ಉಳಿದವರಿಂದ ಮರಣವು ಬಾರದಂತೆ ಬ್ರಹ್ಮನಿಂದ ವರ ಪಡೆದನು. ಮುಂದೆ ಕುಬೇರನಿಂದ ಲಂಕೆಯನ್ನು ಕಿತ್ತುಕೊಂಡು ತಾನು ತನ್ನ ಪರಿವಾರದವರೊಡನೆ ಇರಲಾರಂಭಿಸಿದನು. ಇವನು ಮಯನ ಮಗಳಾದ ಮಂಡೋದರಿಯನ್ನು ವಿವಾಹವಾಗಿ ಮೇಘನಾದನೆಂಬ ಮಗನನ್ನು ಪಡೆದನು. ಇವನು ದಿಗ್ವಿಜಯ ಕಾಲದಲ್ಲಿ ದೇವತೆಗಳನ್ನೆಲ್ಲ ಗೆದ್ದನು. ಕೈಲಾಸಪರ್ವತವನ್ನೆತ್ತಿ ಅದರಡಿಯಲ್ಲಿ ಕೈ ಸಿಕ್ಕಿ ಅನೇಕ ಕಾಲ ಶಿವನನ್ನು ಪ್ರಾರ್ಥಿಸಿ ಅಲ್ಲಿಂದ ಬಿಡುಗಡೆಹೊಂದಿದನು. ನಂದಿಯನ್ನು ಅಪಹಾಸ್ಯಮಾಡಿ ಕಪಿಯಿಂದ ಲಂಕೆಯು ನಾಶವಾಗುವ ಶಾಪ ಪಡೆದನು. ಕುಶಧ್ವಜನ ಪುತ್ರಿಯಾದ ವೇದವತಿಯನ್ನು ಬಲಾತ್ಕರಿಸಲು ಹೋಗಿ ಈತನು ಆಕೆಯಿಂದ ಶಾಪ ಪಡೆದನು. ಸೂರ್ಯವಂಶದ ಅನರಣ್ಯರಾಜನೊಡನೆ ಯುದ್ಧಮಾಡಿ ಅವನಿಂದಲೂ ಶಾಪ ಪಡೆದನು. ಅಪ್ಸರೆಯಾದ ರಂಭೆಯನ್ನು

ಬಲಾತ್ಕರಿಸಲು ಹೋಗಿ, ಪರಸ್ತ್ರೀಯರನ್ನು ಇನ್ನೊಮ್ಮೆ ಅವಮಾನಪಡಿಸಿದಾಗ ಮರಣಹೊಂದುವಿ -- ಎಂಬ ಶಾಪ ಪಡೆದನು. ವಾಲಿ ಮತ್ತು ಕಾರ್ತವೀರ್ಯಾರ್ಜುನನಿಂದ ಯುದ್ಧದಲ್ಲಿ ಪರಾಜಿತನಾದನು. ಸೀತಾಪಹಾರವನ್ನು ಮಾಡಿ ರಾಮನಿಂದ ದ್ವೇಷ ಸಂಪಾದಿಸಿದನು. ಸೀತಾ ಸಂಶೋಧನೆಗೆ ಹೊರಟ ಹನುಮಂತನು ಲಂಕೆಯನ್ನು ಸುಟ್ಟು ಜಂಬುಮಾಲಿ ಮತ್ತು ಇತರ ಸೇನಾಪತಿಗಳನ್ನಲ್ಲದೆ, ರಾವಣನ ಮಗನಾದ ಅಕ್ಷಕುಮಾರನನ್ನು ಕೊಂದನು. ರಾವಣನಿಗೆ ವಿಭೀಷಣನು ಸೀತೆಯನ್ನು ಹಿಂದೆ ಶ್ರೀರಾಮನಿಗೆ ಒಪ್ಪಿಸುವಂತೆ ಬುದ್ಧಿವಾದ ಹೇಳಿದರೂ ಕೇಳದುದರಿಂದ ಅವನು ತನ್ನ ಬಂಧುಬಾಂಧವರಿಂದ ಕೂಡಿ ಶ್ರೀರಾಮಲಕ್ಷ್ಮಣರಿಂದ ಹತನಾದನು. ನೋ -- ಕೌಸಲ್ಯಾ (ರಾಮಾ. ಉತ್ತರ., ಮ. ವ., ಲಿಂಗಪು., ರಾಮಾ., ಅರಣ್ಯ., ಸುಂದರ, ಯುದ್ಧ).

ಕೈಕಸಿಯು ನಿತ್ಯವೂ ಪೂಜಿಸುತ್ತಿದ್ದ ಶಿವಲಿಂಗವು ಆದಿಶೇಷನ ಉಚ್ಛ್ವಾಸದಿಂದ ರಸಾತಲವನ್ನು ಸೇರಲು ಕೈಕಸಿಯು ಮಗನಾದ ರಾವಣನೊಡನೆ -- 'ಕುಮಾರನೇ, ಪೂಜೆಗೆ ಶಂಕರನ ಪ್ರಾಣಲಿಂಗವನ್ನು ತಂದು ಕೊಡು' ಎನ್ನಲು, ರಾವಣನು ಕೈಲಾಸಪರ್ವತಕ್ಕೆ ಬಂದು ಸಾಮಗಾನದಿಂದ ಶಿವನನ್ನು ಮೆಚ್ಚಿಸಿ ಆತನ ಆತ್ಮಲಿಂಗವನ್ನೂ, ಪಾರ್ವತಿಯನ್ನೂ ಪಡೆದನು. ಶಿವನು ಆತ್ಮಲಿಂಗವನ್ನು ರಾವಣನಿಗೆ ಕೊಡುವಾಗ -- 'ಇದನ್ನು ಭೂಮಿಯ ಮೇಲಿರಿಸಬಾರದು. ಇರಿಸಿದರೆ ಅದು ರಸಾತಳದವರೆಗೆ ಇಳಿದು ಕೀಳಲು ಬಾರದು' ಎಂದನು. ರಾವಣನು ಪ್ರಾಣಲಿಂಗ ಮತ್ತು ಪಾರ್ವತಿಯೊಡನೆ ಲಂಕೆಗೆ ಬರುತ್ತಿರುವಾಗ ಶಂಕರನ ಸೂಚನೆಯಂತೆ ನಾರಾಯಣನು ಬ್ರಾಹ್ಮಣನ ವೇಷದಿಂದ ರಾವಣನನ್ನು ಇದಿರಿಸಿದನು. ಆ ಬ್ರಾಹ್ಮಣನು -- 'ರಾವಣ, ನಿನ್ನ ಜೊತೆಯಲ್ಲಿರುವವಳು ನಿಜವಾದ ಪಾರ್ವತಿಯಲ್ಲ. ಪಾರ್ವತಿಯು ಪಾತಾಳಲೋಕದ ಮಯನ ಮನೆಯಲ್ಲಿದ್ದಾಳೆ' ಎನ್ನಲು ರಾವಣನು ಶಂಭುವಿನ ಮೋಸದ ಪರೀಕ್ಷೆಗಾಗಿ ಪಾತಾಳಕ್ಕೆ ಹೊರಟನು. ಆಗ ರಾವಣನಿಗೆ ಮೂತ್ರದ ಬಾಧೆಯಾಗಲು ಸಮೀಪದಲ್ಲಿದ್ದ ವಟುವನ್ನು ಕರೆದು ಪ್ರಾಣಲಿಂಗವನ್ನು ಕೊಟ್ಟು ಸರೋವರದ ಬಳಿಗೆ ಹೋದನು. ಆಗ ವಟುವು ಪ್ರಾಣಲಿಂಗವನ್ನು ಹಿಡಿದುಕೊಂಡು -- 'ರಾವಣಾ, ನನಗೆ ಬಹಳ ಕೆಲಸಗಳುಂಟು. ಎರಡುಗಳಿಗೆ ಮಾತ್ರ ಇಲ್ಲಿ ನಿಂತಿರುವೆನು; ಅಷ್ಟರಲ್ಲಿ ನೀನು ಬಾರದಿದ್ದರೆ ಲಿಂಗವನ್ನು ನೆಲದ ಮೇಲಿಟ್ಟು ಹೋಗುವೆನು' ಎಂದು ಹೇಳಿದನು. ಈ ವಟುವೇ ಗಣಪತಿ. ಎರಡು ಗಳಿಗೆಯಾದರೂ ರಾವಣನು ಬಾರದಿರಲು ವಟುವು ಲಿಂಗವನ್ನು ನೆಲದ ಮೇಲಿಟ್ಟು ಹೊರಟುಹೋದನು. ರಾವಣನು ಬಂದು ವಟುವನ್ನು ಕಾಣದೆ ನೆಲದ ಮೇಲಿದ್ದ ಪ್ರಾಣಲಿಂಗವನ್ನು ಕೀಳುವ ರಭಸದಲ್ಲಿ ಲಿಂಗವು ಹಸುವಿನ

ಕಿವಿಯಂತೆ ವಕ್ರವಾಯಿತು. ಈ ಲಿಂಗವಿದ್ದ ಕ್ಷೇತ್ರವನ್ನೇ ಗೋಕರ್ಣವೆಂದೂ, ಕೀಳಲು ಬಾರದ ಆ ಲಿಂಗವನ್ನು ಮಹಾಬಲೇಶ್ವರನೆಂದೂ ಹೇಳುತ್ತಾರೆ (ಗೋ.ಮ).

ರಾವಣನು ಅಲ್ಲಿಂದ ಪಾತಾಳದ ಮಯನ ಅರಮನೆಗೆ ಹೋಗಿ ಅಲ್ಲಿ ಅತ್ಯಂತ ಸುಂದರಿಯಾಗಿದ್ದ ಮಂಡೋದರಿಯನ್ನು (ಸೂಕ್ಷ್ಮವಾದ ನಡುವುಳ್ಳವಳು) ಕಂಡು ಮೆಚ್ಚಿ ವಿವಾಹವಾಗಿ ಲಂಕೆಗೆ ಬಂದನು. ಅಳಿಯನಿಗೆ ಮಯನು ಈ ಕಾಲದಲ್ಲೇ ಮಹಾಶಕ್ತಿಯುಳ್ಳ ಒಂದು ಶಕ್ತ್ಯಾಯುಧವನ್ನು ಬಹುಮಾನವಾಗಿ ಕೊಟ್ಟನು. ನೋ -- ಮಂಡೋದರಿ, ಕೈಕಸಿ, ಗೋಕರ್ಣ, ಗಣಪತಿ (ಆನಂ. ರಾ).

ರಾವಣನು ಕುಬೇರನನ್ನು ಜಯಿಸಿದ ಮೇಲೆ ಕೆಲವು ದಿನ ಅಲಕಾನಗರಿಯಲ್ಲೇ ಇದ್ದನು. ಆಗಲೇ ಅಧರ್ಮ ಮಾಡಬಾರದೆಂದು ಬುದ್ಧಿ ಹೇಳಿದ ಕುಬೇರನಿಂದ ಪುಷ್ಪಕ ವಿಮಾನವನ್ನು ಕಿತ್ತುಕೊಂಡನು. ಆಗ ಒಂದು ದಿನ ಕುಬೇರಪುತ್ರನ ಬಳಿಗೆ ಬರುತ್ತಿರುವ ರಂಭೆಯನ್ನು ರಾವಣನು ಬಲಾತ್ಕಾರದಿಂದ ಭೋಗಿಸಿದನು. ಇದರಿಂದ ಕೋಪಗೊಂಡ ಕುಬೇರಪುತ್ರ ನಳಕೂಬರನು -- 'ಇಂದಿನಿಂದ ಪರಸ್ತ್ರೀಯರನ್ನು ಬಲಾತ್ಕಾರದಿಂದ ಸ್ಪರ್ಶಿಸಿದರೆ ಆ ಕ್ಷಣವೇ ಮರಣಹೊಂದು' ಎಂದು ಶಪಿಸಿದನು (ಆನಂ. ರಾ). ನೋ -- ಬಲಿ, ವಾಲಿ, ಕಾರ್ತವೀರ್ಯ, ಸೀತೆ, ರಾಮ, ವೇದವತಿ, ಕುಬೇರ, ಸನತ್ಕುಮಾರ, ನಳಕೂಬರ.

ರಾವಣನು ಒಮ್ಮೆ ನಾರದರೊಡನೆ ತ್ರಿಲೋಕಸಂಚಾರಿಗಳಾದ ನೀವು ನನ್ನೊಡನೆ ಹೋರಾಡಬಲ್ಲ ವೀರರನ್ನು ತೋರಿಸಬೇಕೆನ್ನಲು ಅವರು 'ಶ್ವೇತದ್ವೀಪದಲ್ಲಿ ಮಹಾಬಲ, ಮಹಾಕಾಯರೆಂಬ ವಿಷ್ಣುಭಕ್ತರಿರುವರು. ಅವರೊಡನೆ ಯುದ್ಧಮಾಡು' ಎಂದು ಹೇಳಲು ರಾವಣನು ಪುಷ್ಪಕವಿಮಾನವನ್ನೇರಿ ಶ್ವೇತದ್ವೀಪಕ್ಕೆ ಬಂದನು. ಅಲ್ಲಿ ವಿಷ್ಣುಭಕ್ತರ ಸಮೀಪಕ್ಕೆ ವಿಮಾನ ಹೋಗಲಾರದೆ ನಿಲ್ಲಲು ರಾವಣನು ಕಾಲ್ನಡಿಗೆಯಲ್ಲಿ ಅವರ ಬಳಿಗೆ ಬಂದನು. ಆಗ ಪುಷ್ಪಗಳನ್ನೆತ್ತಲು ಹೋಗುವ ಅಲ್ಲಿನ ಸ್ತ್ರೀಯರು ರಾವಣನನ್ನು ನೋಡಿ ಹಾಸ್ಯಮಾಡುತ್ತಾ, ಅವನ ತಲೆಯ ಮೇಲೂ, ದವಡೆಗಳ ಮೇಲೂ ಹೊಡೆಯುತ್ತಾ ಅವನ ಕಾಲುಗಳನ್ನು ಹಿಡಿದು ಚಂಡಿನಂತೆ ತಿರುಗಿಸುತ್ತಾ ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ಹಾರಿಸತೊಡಗಿದರು. ಆಗ ಒಬ್ಬ ಸ್ತ್ರೀಯು ಅವನನ್ನು ಹಿಡಿಯದೆ ಬಿಡಲು ರಾವಣನು ಪರಲಂಕೆಯ ಕ್ರೌಂಚೀ ದೇವಿಯ ಗುಡಿಯೊಳಗೆ ಬಂದು ಬಿದ್ದನು. ಅವನಿಗೆ ಆ ಸ್ತ್ರೀಯರ ಶಕ್ತಿಯನ್ನು ಕಂಡು ಆಶ್ಚರ್ಯವಾಯಿತು. (ಆನಂ. ರಾ).

ರಾವಣನು ಪರಾಕ್ರಮಶಾಲಿ. ಲಕ್ಷ್ಮಣನು ಮೂರ್ಛೆ ಬಿದ್ದಾಗ ರಾವಣನು ಅವನನ್ನು ಪೀಡಿಸಲು ಯತ್ನಿಸಲಿಲ್ಲ. ಇಂದ್ರ ನಳಕೂಬರರನ್ನು ಸೋಲಿಸಿದ್ದರೂ ಅವರನ್ನು ಗೌರವದಿಂದ ಕಂಡಿರುವನು. ಸೋತ ವರುಣನನ್ನು ಗೌರವಿಸಿರುವನು. ಆದರೆ ಇಂದ್ರಿಯ ಜಯಕ್ಕೆ ಬೇಕಾದ ನಿಶ್ಚಲ ಧರ್ಮಬುದ್ಧಿಯು ಇವನಿಗಿರಲಿಲ್ಲ. ಆದುದರಿಂದಲೇ ಇವನಿಗೆ ನಲ್ವತ್ತೆಂಟುಸಾವಿರ ಮಂದಿ ಪತ್ನಿಯರಿದ್ದರು. ಹೀಗಿದ್ದರೂ ಇವನು ಸೀತೆಯೊಡನೆ ನೀಚತನದಿಂದಲೇ ವರ್ತಿಸುತ್ತಿದ್ದನು. ಅವಲೋಕಿನಿ ವಿದ್ಯೆಯು ಅವನ ನಡತೆ ಸರಿಯಲ್ಲವೆಂದು ವಿರೋಧಿಸಿದರೂ ಅವನ ಮನಸ್ಸು ನಿಲ್ಲಲಿಲ್ಲ. ಪಕ್ಷಿಜಾತಿಗೆ ಸೇರಿದ ಜಟಾಯುವೆಂಬ ಹದ್ದು ಅವನನ್ನು ಅಡ್ಡಗಟ್ಟಿದರೂ ತ್ರಿಲೋಕವೀರನೂ ವಿದ್ಯಾಮಹಿಮೆಯುಳ್ಳವನೂ ಆದ ರಾವಣನು ಅದನ್ನು ಕೊಂದು, ಮಾರ್ಗಮಧ್ಯದಲ್ಲಿ ಅಡ್ಡಗಟ್ಟಿದ ರತ್ನಜಟಿಯನ್ನು ಪಕ್ಕಕ್ಕೆ ಸರಿಸಿ ಸೀತೆಯ ಮುಂದೆ ಏಕಾಂಗಿಯಾಗಿ ತನ್ನ ಪರಾಕ್ರಮದ ಜಂಬ ಕೊಚ್ಚಿಕೊಂಡನು. ನೀತಿಗೆಟ್ಟ ರಾವಣನಿಗೆ ವಿಭೀಷಣನ ಬುದ್ಧಿವಾದವು ನಿಷ್ಪ್ರಯೋಜನವಾಯಿತು; ಮಾರೀಚನ ಹಿತವಾದವು ಅವನ ಪಾಲಿಗೆ ವ್ಯರ್ಥವಾಯಿತು. ತನ್ನ ಕಡೆಯವನಾಗಿದ್ದ ಹನುಮಂತನು ಇದಿರಿಗೆ ಬಂದು ನಿಂತಾಗ ಆತನನ್ನು ಹಂಗಿಸಿಬಿಟ್ಟನೇ ಹೊರತು ಆಗಲೂ ಜ್ಞಾನೋದಯವಾಗಲಿಲ್ಲ.

ಆ ಸಮಯದಲ್ಲಿ ಸಂಭಿನ್ನನೆಂಬ ಮಂತ್ರಿಯು ರಾವಣನ ನಚ್ಚಿನ ಬಂಟರಾದ ಖರದೂಷಣರು ರಾಮಲಕ್ಷ್ಮಣರ ದೆಸೆಯಿಂದ ಹತರಾದುದನ್ನೂ ಹಿಂದೆ ತಮ್ಮ ಕಡೆಯವರಾಗಿದ್ದ ಸುಗ್ರೀವ ಹನುಮರು ಪರಪಕ್ಷವನ್ನು ಸೇರಿದುದನ್ನೂ ತಿಳಿಸಿದರೂ ರಾವಣನು ಆ ಮಂತ್ರಿಯನ್ನು ಹಾಸ್ಯಮಾಡಿಬಿಟ್ಟನು.

ರಾವಣನು ಮರುತ್ತನು ಮಾಡುತ್ತಿದ್ದ ಹಿಂಸಾತ್ಮಕವಾದ ಯಜ್ಞವನ್ನು ನಿಲ್ಲಿಸಿ ತನ್ನ ಅಹಿಂಸಾಪರತೆ ತೋರ್ಪಡಿಸಿಕೊಂಡಿದ್ದರೂ, ನಿಸ್ಸಹಾಯಳಾಗಿದ್ದ ಸೀತೆಯನ್ನು ದುರ್ಭರವಾದ ಹಿಂಸೆಗೆ ಗುರಿಪಡಿಸುವುದಕ್ಕೆ ಆತನು ಹಿಂದೆಗೆಯಲಿಲ್ಲ. ನಳಕೂಬರನ ಪತ್ನಿಯಾದ ಉಪರಂಭೆಗೆ ನೀತಿಬೋಧನೆಯನ್ನು ಮಾಡಿ ಆಕೆಯನ್ನು ದುರ್ಮಾರ್ಗದಿಂದ ತಪ್ಪಿಸಿದ ಈ ಮಹಾತ್ಮನು ಸೀತೆಗೆ ಇಷ್ಟೊಂದು ವಿಧವಾಗಿ ದುರ್ಮಾರ್ಗವನ್ನು ಬೋಧಿಸಿರುವನು ! ಭೂಚರರು ಸಮುದ್ರವನ್ನು ದಾಟಿ ಕೆಲವರು ಖೇಚರರನ್ನು ಜೊತೆ ಮಾಡಿಕೊಂಡು ದಂಡೆತ್ತಿಬರುತ್ತಿರುವರೆಂದು ಒಬ್ಬ ದೂತನು ತಿಳಿಸಿದಾಗ ರಾವಣನು 'ಪರಹಸ್ತದಿಂ ಮೊಳನಿಡಲ್ ಬರ್ಪಂತೆ ಕಾಳಾಹಿಯಂ' ತನ್ನ ಕುತ್ಸಿತರಾದ ಸಾಮಂತರು ಭೂಚರರನ್ನು ಮುಂದೆ ಮಾಡಿಕೊಂಡು

ಬರುತ್ತಿರುವರೆಂದು ಹಾಸ್ಯಮಾಡಿರುವನು. ಈ ಸಂದರ್ಭದಲ್ಲಿ ವಿಭೀಷಣನು ಪುನಃ ಅತ್ಯಂತ ವಿನಯದಿಂದ ವಿವೇಕವನ್ನು ಬೋಧಿಸಿದ್ದರೂ ವಿಭೀಷಣನ ಮೇಲೆ ಈತನು ಚಂದ್ರಹಾಸವನ್ನು ಝಳಪಿಸುತ್ತಾ ಅಲ್ಲಿಂದ ಅಟ್ಟಿಬಿಟ್ಟಿರುವನು. ಬಹುರೂಪಿಣೀವಿದ್ಯೆಯನ್ನು ಸಾಧಿಸಿದ ಬಳಿಕ ಸೀತೆಯನ್ನು ಒಲಿಸಿಕೊಳ್ಳಲು ಕೊನೆಯ ಸಾರಿ ಪ್ರಯತ್ನಿಸುತ್ತಿದ್ದಾಗ ಆಕೆ ಮೂರ್ಛಿತಳಾದ ಕೂಡಲೇ ಧರ್ಮದೇವತೆಯು ಅವನ ಮನಸ್ಸಿನಲ್ಲಿ ಕರುಣೆ, ಪಶ್ಚಾತ್ತಾಪಗಳನ್ನು ತಲೆದೋರಿಸಿದ್ದರೂ ಪುನಃ ಪೌರುಷಪ್ರಣಯಿಯಾಗಿದ್ದ ಅವನು ರಾಮಲಕ್ಷ್ಮಣರನ್ನು ಸೆರೆಹಿಡಿದ ಬಳಿಕ ಅವರಿಗೆ ಸೀತೆಯನ್ನು ಒಪ್ಪಿಸಿಬಿಡುವುದಾಗಿ ನಿರ್ಧರಿಸಿದ್ದನು. ವಾಲ್ಮೀಕಿರಾಮಾಯಣದಲ್ಲಿ ರಾವಣನ ಅವಗುಣಗಳು ಜೈನ ರಾಮಾಯಣಕ್ಕಿಂತ ಹೆಚ್ಚಾಗಿ ತೋರುತ್ತವೆ. ರಾಮಾಯಣದಲ್ಲಿ ರಾವಣನೇ ಪ್ರತಿನಾಯಕನು. ವಂಶವೀರ್ಯ ಪ್ರತಾಪಾದಿಗಳ ವಿಷಯದಲ್ಲಿ ಪ್ರತಿನಾಯಕನು ಗಣ್ಯನಾಗಿದ್ದರೆ ತಾನೇ ನಾಯಕನಿಗೂ ಕಳೆಗಟ್ಟುವುದು. ರಾವಣನು ಪುಲಸ್ತ್ಯಬ್ರಹ್ಮಸಂಭೂತನೆಂದು ವೈದಿಕ ಸಂಪ್ರದಾಯದ ರಾಮಾಯಣಗಳೂ, ವಿದ್ಯಾಧರ ವಂಶೋತ್ಪನ್ನನೆಂದು ಜೈನ ರಾಮಾಯಣಗಳೂ ಹೇಳುತ್ತಿವೆ.

ರಾಸಕ್ರೀಡೆ -- ಶ್ರೀಕೃಷ್ಣನು ಕಿಶೋರಾವಸ್ಥೆಯಲ್ಲಿ ಗೋಪಿಯರೊಡನೆ ಆಡಿದ ಒಂದು ನರ್ತನವಿಶೇಷ. ಹತ್ತು ವರ್ಷಗಳವರೆಗೆ ಅಂದರೆ ಅದರ ಮೇಲೆ ತುಸು ವಯಸ್ಸು. ಅರ್ಥಾತ್ ಹನ್ನೊಂದು ವಯಸ್ಸಿಗೆ ಕಿಶೋರಾವಸ್ಥೆ ಎಂದು ನೀಲಕಂಠ ದೀಕ್ಷಿತರ ಅಭಿಪ್ರಾಯ.

ರಾಷ್ಟ್ರವರ್ಧನ -- ದಶರಥನ ಒಬ್ಬ ಮಂತ್ರಿ.

ರಾಹು -- ದಕ್ಷನ ಮಗಳಾದ ಸಿಂಹಿಕೆಯ ಮಗ ; ಈತ ನವಗ್ರಹರಲ್ಲೊಬ್ಬ. ಅಮೃತಪಾನ ಕಾಲದಲ್ಲಿ ವಿಷ್ಣುವು ಇವನ ಶಿರಚ್ಛೇದ ಮಾಡಿದನು. ಚಂದ್ರಸೂರ್ಯರನ್ನು ನುಂಗುವುದರಿಂದ ರಾಹುವು ಗ್ರಹವೆನ್ನಿಸಿದ್ದಾನೆ. 'ಚಂದ್ರಾರ್ಕೌ ಗೃಹ್ಣಾತಿ ಇತಿ ಗ್ರಹಃ ರಾಹುಃ'' ಶಿವನಿಗೂ ಈ ಹೆಸರಿದೆ. ದೇವತೆಗಳು ಅಮೃತಭಕ್ಷಣೆ ಮಾಡುವ ಕಾಲದಲ್ಲಿ ರಾಹುವು ಅದನ್ನು ಕುಡಿದನು. ಅವನು ಮುಂದೆ ದೇವತೆಗಳನ್ನು ಬಾಧಿಸತೊಡಗಲು ಇಂದ್ರನು -- 'ನೀನು ಸೂರ್ಯಚಂದ್ರರಿಬ್ಬರನ್ನೇ ಬಾಧಿಸು' ಎಂದು ಆಜ್ಞೆಮಾಡಿದನು (ಆನಂ. ರಾ).

ಅಮೃತಪಾನಕಾಲದಲ್ಲಿ ಸೂರ್ಯಚಂದ್ರರಿಬ್ಬರೂ ವಿಷ್ಣುವಿಗೆ ರಾಹುವನ್ನು ಸೂಚಿಸಲು ಅವನು ಚಕ್ರಾಯುಧದಿಂದ ಆತನ ರುಂಡವನ್ನು ಹಾರಿಸಿದನು. ಆ

ದ್ವೇಷದಿಂದ ಆತನು ಗ್ರಹಣಕಾಲದಲ್ಲಿ ಸೂರ್ಯಚಂದ್ರರನ್ನು ನುಂಗುತ್ತಾನೆ (ಮ. ಆ., ಸ., ಭೀ., ಮತ್ಸ್ಯಪು., ಭಾಗ).

ರಿಪುಂಜಯ -- ಪೂರುವಂಶದ ಕೊನೆಯ ರಾಜ. ಇವನಿಗೆ ಪುರಂಜಯನೆಂಬ ಹೆಸರೂ ಇದೆ. ಇವನ ತಂದೆ ಜರಾಸಂಧನ ವಂಶದ ವಿಶ್ವಜಿತನು. ಇವನ ಮಂತ್ರಿಯಾದ ಮುನಿಕನು ರಿಪುಂಜಯನನ್ನು ಕೊಂದು ಪ್ರದ್ಯೋತನೆಂಬುವನಿಗೆ ಪಟ್ಟ ಕಟ್ಟಿದನು. ಪ್ರದ್ಯೋತನ ವಂಶದವರು ೧೩೮ ವರ್ಷ ರಾಜ್ಯವಾಳಿದರು (ವಿಷ್ಣುಪು).

ರುಕ್ಮರಥ -- ೧. ಮದ್ರರಾಜನಾದ ಶಲ್ಯನ ಮಗ. ಇವನಿಗೆ ತೊಂಬತ್ತೊಂಬತ್ತು ಮಂದಿ ಸಹೋದರರಿದ್ದರು. ಇವನ ಸಹೋದರರಲ್ಲಿ ಹೆಚ್ಚಿನವರು ಅಭಿಮನ್ಯುವಿನಿಂದ ಹತರಾದರು (ಮ. ದ್ರೋ). ಉಳಿದವರು ಸಹದೇವನಿಂದ ಹತರಾದರು (ಮ. ಕ). ೨. ದ್ರೋಣನಿಗೆ (ರುಕ್ಮ = ಬಂಗಾರದ, ರಥ = ರಥವುಳ್ಳವನು) ಚಿನ್ನದ ರಥವಿದ್ದುದರಿಂದ ಇವನಿಗೂ ರುಕ್ಮರಥನೆಂಬ ಹೆಸರಿತ್ತು (ಭಾಗ).ರುಕ್ಮಿಣಿಯ ಒಬ್ಬ ಸಹೋದರ. ಈತನಿಗೆ ರುಕ್ಮಿ, ರುಕ್ಮಕೇಶ, ರುಕ್ಮಬಾಹು, ಮತ್ತು ರುಕ್ಮಮಾಲಿ ಎಂಬ ಸಹೋದರರಿದ್ದರು. ಈ ಸಹೋದರರು ಶ್ರೀಕೃಷ್ಣನ ಮೇಲಿನ ದ್ವೇಷದಿಂದ ರುಕ್ಮಿಣಿಯನ್ನು ಶಿಶುಪಾಲನಿಗೆ ವಿವಾಹಮಾಡಿಕೊಡಬೇಕೆಂದಿದ್ದರು. ನೋ -- ರುಕ್ಮಿಣಿ. ರುಕ್ಮಿಣಿಯ ವಿವಾಹಕ್ಕೆ ಶಿಶುಪಾಲನ ಪಕ್ಷವಹಿಸಿ ದಿಬ್ಬಣದೊಡನೆ ಸಾಲ್ವ, ಜರಾಸಂಧ, ದಂತವಕ್ತ್ರ, ವಿಡೂರಥ, ಪೌಂಡ್ರಕ ಮೊದಲಾದ ಶ್ರೀಕೃಷ್ಣನಲ್ಲಿ ಬದ್ಧದ್ವೇಷವುಳ್ಳವರೆಲ್ಲಾ ಹೊರಟಿದ್ದರು. ಶ್ರೀಕೃಷ್ಣನು ಇವರನ್ನೆಲ್ಲ ಜಯಿಸಲು, ರುಕ್ಮಿಯು ಶ್ರೀಕೃಷ್ಣನನ್ನು ಪ್ರತಿಭಟಿಸಲು ಅವನು ರುಕ್ಮಿಯನ್ನು ಸೋಲಿಸಿ ಅವಮಾನಪಡಿಸಿದನು. ನೋ-- ರುಕ್ಮಿ (ಭಾಗ).

ರುಕ್ಮವತಿ -- ರುಕ್ಮಿಯ ಮಗಳು. ಈಕೆ ಪ್ರದ್ಯುಮ್ನನ ಪತ್ನಿ. ಈಕೆಯ ಮಗನೇ ಅನಿರುದ್ಧ (ಭಾಗ).

ರುಕ್ಮಾಂಗದ -- ೧. ಶಲ್ಯನ ಮಗ. ನೋ -- ರುಕ್ಮರಥ. ೨. ರಾಜನೊಬ್ಬ. ಇವನು ಸಂಧ್ಯಾವಳಿ ಎಂಬ ರಾಣಿಯೊಡನೆಯೂ ಧರ್ಮಾಂಗದನೆಂಬ ಕುಮಾರನೊಡನೆಯೂ ರಾಜ್ಯವಾಳುತ್ತಿರುವಾಗ ಆತನಿಗೆ ತೀರ್ಥಯಾತ್ರೆ ಮಾಡುವ ಮನಸ್ಸುಂಟಾಗಿ ಯಾತ್ರೆ ಮಾಡುತ್ತಿರುವಾಗ ಬ್ರಹ್ಮನ ಪ್ರೇರಣೆಯಿಂದ ಒಂದು ವನದಲ್ಲಿ ಗಾನಮಾಡುತ್ತಿರುವ ಮೋಹಿನಿಯನ್ನು ಕಂಡು -- 'ನಿನ್ನಿಷ್ಟದಂತೆ ನಡೆಯುವೆನು ' ಎಂದು ಆಕೆಗೆ ಭರವಸೆಯಿತ್ತು ಗಾಂಧರ್ವವಿಧಿಯಿಂದ ಆಕೆಯನ್ನು ಲಗ್ನವಾದನು. ಆಕೆಯು ಇವನನ್ನು ಪರೀಕ್ಷಿಸುವುದಕ್ಕೆ -- ನೀನು ನಿನ್ನ ಮಗ ಧರ್ಮಾಂಗದನ ತಲೆಯನ್ನು ನಿನ್ನ

ಕೈಯಿಂದ ಕತ್ತರಿಸು. ಇದು ಅಸಾಧ್ಯವಾದರೆ ಏಕಾದಶಿಯ ದಿನ ಭೋಜನ ಮಾಡಿ ನನ್ನೊಡನೆ ಭೋಗಿಸು ಎನ್ನಲು ರಾಜನು ವ್ರತವನ್ನು ಬಿಡಲಾರದೆ ಪತ್ನೀಪುತ್ರರ ಅನುಮತಿಯಿಂದ ಮಗನ ಶಿರಸ್ಸನ್ನು ಕಡಿಯಲು ಖಡ್ಗವೆತ್ತಿದಾಗ ನಾರಾಯಣನು ಪ್ರತ್ಯಕ್ಷವಾಗಿ ಅವನನ್ನೂ ಅವನ ಪತ್ನೀಪುತ್ರರನ್ನೂ ವೈಕುಂಠಕ್ಕೆ ಕರೆದುಕೊಂಡು ಹೋದನು (ಮ. ಅ).

ರುಕ್ಮಿ -- ಭೀಷ್ಮಕ ರಾಜನ ಹಿರಿಯ ಮಗ. ನೋ -- ರುಕ್ಮರಥ, ರುಕ್ಮಿಣಿ. ಈತನು ರುಕ್ಮಿಣಿಯ ಅಣ್ಣ. ಶ್ರೀಕೃಷ್ಣ ಮತ್ತು ರುಕ್ಮಿಣಿಯರ ಕಲ್ಯಾಣಕ್ಕೆ ರುಕ್ಮಿಯು ವಿಘ್ನವನ್ನುಂಟು ಮಾಡಿದುದರಿಂದ ಶ್ರೀಕೃಷ್ಣನು ಈತನ ಕೊಲೆಗೆ ಮುಂದಾದರೂ ರುಕ್ಮಿಣಿಯ ಪ್ರಾರ್ಥನೆಯಂತೆ ಈತನ ಗಡ್ಡಮೀಸೆಗಳನ್ನು ಬೋಳಿಸಿ ಅವಮಾನ ಮಾಡಿದನು. ಇವನು ರುಕ್ಮಿಣಿಯನ್ನು ಶ್ರೀಕೃಷ್ಣನಿಂದ ಕಿತ್ತುಕೊಂಡು ಬರುತ್ತೇನೆಂದು ಪ್ರತಿಜ್ಞೆಮಾಡಿ ಹೊರಟರೂ ಶ್ರೀಕೃಷ್ಣನನ್ನು ಗೆಲ್ಲಲಾರದೆ ಹೋದುದರಿಂದ ಮುಂದೆ ಕುಂಡಿನ ನಗರಕ್ಕೆ ಪ್ರವೇಶಮಾಡದೆ ಭೋಜಕಟಕವೆಂಬ ಬೇರೊಂದು ನಗರಿಯಲ್ಲಿ ವಾಸಮಾಡುತ್ತಿದ್ದನು. ಕೌರವ -- ಪಾಂಡವರ ಯುದ್ಧಕಾಲದಲ್ಲಿ ಯಾರೊಬ್ಬರಿಗಾದರೂ ಸಹಾಯ ಮಾಡಬೇಕೆಂದು ಕುರುಕ್ಷೇತ್ರಕ್ಕೆ ಬಂದು ಜಂಬದಿಂದ ಮಾತನಾಡಲು, ಎರಡೂ ಪಕ್ಷದವರೂ ಆತನ ಕುರುಕ್ಷೇತ್ರಕ್ಕೆ ತಿರಸ್ಕರಿಸಿದರು. ಈತನ ಮಗಳಾದ ರುಕ್ಮವತಿಗೆ ಶುಭಾಂಗಿನಿ ಎಂಬ ಹೆಸರೂ ಉಂಟು. ಇವಳು ಪ್ರದ್ಯುಮ್ನನ ಹೆಂಡತಿ. (ಹರಿ). ಬಲರಾಮನೊಂದಿಗೆ ಇವನು ಪಗಡೆಯಾಡಿ ಸೋತರೂ ತಾನೇ ಗೆದ್ದೆನೆಂದು ಸಟೆ ಸಾಧಿಸಿದುದರಿಂದ ಬಲರಾಮನು ರುಕ್ಮಿಯನ್ನು ಕೊಂದನು. (ಭಾಗ., ಹರಿ).

ರುಕ್ಮಿಣಿ -- ವಿದರ್ಭರಾಜನಾದ ಭೀಷ್ಮಕನ ಮಗಳು. ಶ್ರೀಕೃಷ್ಣನ ಹಿರಿಯ ಹೆಂಡತಿ. ಈಕೆಯ ಅಣ್ಣ ರುಕ್ಮಿ. ನೋ -- ರುಕ್ಮಿ, ರುಕ್ಮರಥ. ಈಕೆಯು ಸ್ವಯಂವರದ ದಿನ ಶ್ರೀಕೃಷ್ಣನಿಂದ ಅಪಹರಿಸಲ್ಪಟ್ಟಳು. ರುಕ್ಮಿಣಿಯು ಶ್ರೀಕೃಷ್ಣನನ್ನು ವಿವಾಹವಾಗಲು ಒಬ್ಬ ಬ್ರಾಹ್ಮಣನು ತುಂಬಾ ಸಹಾಯಮಾಡಿದನು. ಈಕೆಯ ಮಗನೇ ಪ್ರದ್ಯುಮ್ನ. ಇನ್ನೂ ಈಕೆಗೆ ಚಾರುದೇಷ್ಣ, ಸುದೇಷ್ಣ, ಚಾರುದೇಹ, ಸುಚಾರು, ಚಾರುಗುಪ್ತ, ಚಾರುಚಂದ್ರ, ವಿಚಾರು, ಭದ್ರಚಾರರೆಂಬ ಮಕ್ಕಳು ಇದ್ದರು. ಈಕೆಗೆ ಚಾರುಮತಿ ಎಂಬ ಮಗಳಿದ್ದಳು. ಈಕೆಯನ್ನು ಕೃತವರ್ಮನ ಮಗನಾದ ಬಲಿಗೆ ಕೊಟ್ಟು ವಿವಾಹ ಮಾಡಿದ್ದರು. ಕೃಷ್ಣನು ದೇಹಬಿಟ್ಟಮೇಲೆ ಈಕೆಯು ಅಗ್ನಿಪ್ರವೇಶ ಮಾಡಿದಳು (ಭಾಗ., ವಿಷ್ಣುಪು., ಹರಿ., ಮ. ಅನು., ಮೌ).

ರುಚಿ -- ೧. ಅಪ್ಸರೆಯೊಬ್ಬಳು (ಮ. ಅನು). ೨. ದೇವಶರ್ಮನ ಪತ್ನಿ. ಇಂದ್ರನು ಈಕೆಯನ್ನು ಕಾಮಿಸಿದನು. ಒಂದು ಸಾರಿ ದೇವಶರ್ಮನು ಯಜ್ಞವೊಂದಕ್ಕೆ ಹೋಗುವಾಗ ರುಚಿಯ ಕಾವಲಿಗೆ ವಿಪುಲನೆಂಬ ಶಿಷ್ಯನನ್ನು ಬಿಟ್ಟು ಹೋಗಿದ್ದನು. ಇವನು ಆಶ್ರಮಕ್ಕೆ ದುರುದ್ದೇಶದಿಂದ ಬಂದ ಇಂದ್ರನನ್ನು ಗದರಿಸಲು ಇಂದ್ರನು ಹೆದರಿ ಮಾಯವಾದನು (ಮ. ಅನು).

ರುಚಿಪರ್ವ -- ಕೌರವಪಕ್ಷದ ಕ್ಷತ್ರಿಯನೊಬ್ಬ. ಇವನು ಪರ್ವತ ರಾಜನಾದ ಸುಪರ್ವಣನಿಂದ ಹತನಾದನು (ಮ. ದ್ರೋ).

ರುದ್ರ -- ಶಿವ ; ಮಹಾದೇವ. ಇವನು ಬ್ರಹ್ಮನ ಭ್ರೂಮಧ್ಯದಿಂದ ಜನಿಸುವಾಗಲೇ ಅಳುತ್ತಿದ್ದುದರಿಂದ ರುದ್ರನಾದ; ದುಷ್ಟರನ್ನು ಗೋಳಾಡಿಸುವನಾದುದರಿಂದ ರುದ್ರನಾದ. ರುದ್ರರು ಹನ್ನೊಂದು ಮಂದಿ. ನೋ -- ಏಕಾದಶರುದ್ರ. ಇವನು ಸಮುದ್ರ ಮಥನಕಾಲದಲ್ಲಿ ಮೊದಲು ಹುಟ್ಟಿದ ವಿಷವನ್ನು ಜಗತ್ತಿನ ಹಿತಕ್ಕಾಗಿ ಪಾನಮಾಡಿ ನೀಲಕಂಠ ಮತ್ತು ವಿಷಕಂಠನೆಂಬ ಹೆಸರನ್ನು ಪಡೆದನು. ಜಯದ್ರಥನು ಪಾಂಡವರನ್ನು ಗೆಲ್ಲಲು ಶಿವನನ್ನು ಕುರಿತು ತಪಸ್ಸು ಮಾಡಿದಾಗ ಅವನು ಪ್ರತ್ಯಕ್ಷನಾಗಿ ಆತನಿಗೆ ಶ್ರೀಕೃಷ್ಣನ ಮಹಾತ್ಮೆಯನ್ನು ಹೇಳಿದನು. ಈತನೇ ದಕ್ಷಾಧ್ವರವನ್ನು ನಾಶಮಾಡಿದನು. ಇವನೇ ಶರಭಾವತಾರವನ್ನೆತ್ತಿ ನರಸಿಂಹನ ಗರ್ವವನ್ನಡಗಿಸಿದನು. ಇವನ ಹಣೆಗಣ್ಣಿನಿಂದಲೇ ಮನ್ಮಥನು ನಾಶವಾದನು. ಇವನು ಸ್ಮಶಾನವಾಸಿ ; ಮೃತ್ಯುಂಜಯ. ಇವನು ಬ್ರಹ್ಮನ ಮಾನಸಪುತ್ರರಲ್ಲೊಬ್ಬ. ನೋ -- ಸನಕ (ಹರಿ). ಬ್ರಹ್ಮನ ರುದ್ರ, ಮರೀಚಿ ಮೊದಲಾದ ಮಕ್ಕಳು ಗೃಹಸ್ಥಾಶ್ರಮಿಗಳಾದರು (ಲಿಂಗಪು., ವಿಷ್ಣುಪು., ಭಾಗ., ಮ. ಆ., ಅನು. ಶಾಂ).

ರುದ್ರಪ್ರಯಾಗ -- ಇದು ಮಂದಾಕಿನಿ ಮತ್ತು ಅಲಕನಂದಾ ನದಿಗಳ ಸಂಗಮಸ್ಥಳದಲ್ಲಿದೆ. ಇದು ಶ್ರೀನಗರದಿಂದ ೨೨ ಮೈಲುಗಳ ದೂರದಲ್ಲಿದೆ. ಇಲ್ಲಿ ರುದ್ರನಾಥನ ಮಂದಿರವಿದೆ. ನಾರದನು ಇದೇ ಪ್ರದೇಶದಲ್ಲೇ ರುದ್ರನಾಥನ ದರ್ಶನಕ್ಕಾಗಿ ತಪಸ್ಸು ಮಾಡಿದ್ದನು. ಇದು ಬದರಿ ಮತ್ತು ಕೇದಾರಗಳ ಕೇಂದ್ರ ಸ್ಥಳ (ಕ್ಷೇತ್ರದ).

ರುದ್ರಸಾವರ್ಣಿ -- ಇವನು ಹನ್ನೆರಡನೆಯ ಮನು. ಈತನ ಅಧಿಪತ್ಯವಿನ್ನೂ ಭೂಮಿಗೆ ಬಂದಿಲ್ಲ. ನೋ -- ಮನು, ಮನ್ವಂತರ (ಭಾಗ., ಮತ್ಸ್ಯಪು., ಲಿಂಗಪು., ವಿಷ್ಣುಪು).

ರುದ್ರಸೇನ -- ಪಾಂಡವಪಕ್ಷದ ಕ್ಷತ್ರಿಯ (ಮ. ದ್ರೋ).

ರುಮಣ್ವಂತ -- ಮಹರ್ಷಿಯೊಬ್ಬ. ಜಮದಗ್ನಿಮುನಿಯ ಹಿರಿಯ ಮಗ. ಈತನ ತಾಯಿ ಮಹಾರಾಜ ಪ್ರಸೇನಜಿತ್ತಿನ ಮಗಳಾದ ರೇಣುಕೆ. ಇವನಿಗೆ ಸುಷೇಣ, ವಸು, ವಿಶ್ವಾವಸು, ರಾಮ ಎಂಬ ನಾಲ್ವರು ಸಹೋದರರು. ಇವನು

ವ್ಯಭಿಚಾರದೋಷಕ್ಕೆ ಗುರಿಯಾದ ರೇಣುಕೆಯನ್ನು ತಂದೆಯ ಆಜ್ಞೆಯಂತೆ ಸಂಹರಿಸದೆ ಹೋಗಲು ಆಗ ಜಮದಗ್ನಿಯು ಇವನಿಗೂ ರಾಮನನ್ನು ಬಿಟ್ಟು ಉಳಿದ ಮೂವರು ಸಹೋದರರಿಗೂ ಮೃಗಪಕ್ಷಿಗಳಂತೆ ಜಡರಾಗಿಹೋಗುವ ಶಾಪವನ್ನಿತ್ತನು. ಕೊನೆಗೆ ಪರಶುರಾಮನ ಪ್ರಾರ್ಥನೆಯಂತೆ ಇವನೂ ಇವನ ಸಹೋದರರೂ ಶಾಪವಿಮೋಚನೆ ಹೊಂದಿದರು. ನೋ -- ರೇಣುಕೆ, ಜಮದಗ್ನಿ (ಮ. ವ).

ರುಮಾ -- ಸುಗ್ರೀವನ ಪತ್ನಿ. ಈಕೆ ತಾರನೆಂಬ ವಾನರನ ಮಗಳು. ವಾಲಿಯು ಸುಗ್ರೀವನನ್ನು ಕಿಷ್ಕಿಂಧೆಯಿಂದ ಹೊರಗಟ್ಟಿದಾಗ ಈಕೆಯನ್ನು ತನ್ನ ಪತ್ನಿಯಾಗಿಟ್ಟುಕೊಂಡನು. ವಾಲಿಯ ಸಂಹಾರವಾದ ಮೇಲೆ ಈಕೆಯು ವಾಲಿಯ ಪತ್ನಿಯಾದ ತಾರೆಯೊಡನೆ ಸುಗ್ರೀವನ ರಾಣಿಯಾದಳು. ನೋ -- ವಾಲಿ, ಸುಗ್ರೀವ.

ರುರು -- ೧. ಋಷಿ. ಚ್ಯವನ ಮುನಿಯ ಮತ್ತು ಸುಕನ್ಯೆಯರ ಮಗನಾದ ಪ್ರಮತಿಯೇ ಈತನ ತಂದೆ. ಘೃತಾಚಿ ಎಂಬ ಅಪ್ಸರೆಯು ಈತನ ತಾಯಿ. ಈತನ ಮಗನೇ ಶುನಕ. ಈ ಶುನಕನೇ ಶೌನಕ ಮುನಿಯ ತಂದೆ. ಗಂಧರ್ವರಾಜನಾದ ವಿಶ್ವಾವಸು ಮತ್ತು ಮೇನಕೆಯರಿಂದ ಹುಟ್ಟಿದ ಪ್ರಮದ್ವರೆಯೇ ಈತನ ಹೆಂಡತಿ. ಒಂದು ದಿನ ಪ್ರಮದ್ವರೆಯು ಗೆಳತಿಯರೊಡನೆ ಕಾಡಿನಲ್ಲಿ ಸಂಚರಿಸುತ್ತಿರಲು, ಒಂದು ಕೃಷ್ಣ ಸರ್ಪವನ್ನು ಕಾಣದೆ ತುಳಿಯಲು ಅದು ಕಚ್ಚಿತು. ವಿಷವೇರಿದ ಪ್ರಮದ್ವರೆಯು ಸತ್ತಳು. ರುರುವು ದೇವತೆಗಳ ಸೂಚನೆಯಂತೆ ತನ್ನ ಅರ್ಧಾಯುಷ್ಯವನ್ನು ಆಕೆಗಿತ್ತು ಪುನಃ ಆಕೆಯನ್ನು ಪಡೆದನು. ನೋ -- ಪ್ರಮದ್ವರೆ (ಮ. ಆ., ಅನು).

ರುರುವು ತನ್ನ ಪತ್ನಿಯನ್ನು ಕೊಂದ ಹಾವಿನ ವಂಶವನ್ನೇ ನಾಶ ಮಾಡತೊಡಗಿದನು. ಇವನು ಒಂದು ದಿನ ಅರಣ್ಯದಲ್ಲಿ ಮುದಿತನದಿಂದ ಹರಿಯಲಾರದೆ ಮಲಗಿದ್ದ ಡುಂಡುಭ ಎಂಬ ನೀರು ಹಾವನ್ನು ಕಂಡು ಅದನ್ನು ಕೊಲ್ಲಲು ಮುಂದಾಗಲು, ಅದು ನಿರಪರಾಧಿಯಾದ ತನ್ನನ್ನು ಕೊಲ್ಲುವುದು ಸರಿಯಲ್ಲವೆಂದಿತು. ಅಲ್ಲದೆ ಒಬ್ಬ ಬ್ರಾಹ್ಮಣನ ಶಾಪದಿಂದ ನಾನು ನೀರೊಳ್ಳೆಯಾದೆ. ಪೂರ್ವದಲ್ಲಿ ನಾನೊಬ್ಬ ಋಷಿ, ನನಗೆ ಸಹಸ್ರಪಾಲನೆಂದು ಹೆಸರು ' ಎಂದಿತು. ನೋ -- ಸಹಸ್ರಪಾಲ (ಮ. ಆ). ೨. ದುರ್ಗವೆಂಬ ರಾಕ್ಷಸನ ತಂದೆ ನೋ -- ದುರ್ಗ.

ರುಶಂಗ -- ನೋ -- ಉಶಂಗ.

ರೇಣು -- ವಿಶ್ವಾಮಿತ್ರನ ಎರಡನೇ ಪತ್ನಿ. ವಿಶ್ವಾಮಿತ್ರನಿಂದ ಈಕೆಗೆ ರೇಣುಮಾನ್, ಸಾಂಕೃತಿ, ಗಾಲವ, ಮುದ್ಗಲ, ಮಧುಚ್ಛಂದ, ಜಯ ಮತ್ತು ದೇವಲರೆಂಬ ಮಕ್ಕಳು ಹುಟ್ಟಿದರು (ಹರಿ).

ರೇಣುಕ -- ೧. ಅಮೃತರಕ್ಷಕನಾದ ನಾಗದೇವ. ೨. ಒಂದು ಆನೆ (ಮ. ಅನು).

ರೇಣುಕಾ -- ಜಮದಗ್ನಿ ಋಷಿಯ ಪತ್ನಿ. ಈಕೆ ಪ್ರಸೇನಜಿತ್ ಎಂಬ ರಾಜನ ಮಗಳು. ಈಕೆಯು ಅಯೋನಿಜೆ; ಪದ್ಮದಿಂದ ಹುಟ್ಟಿದವಳು. ಇದರಿಂದ ಪ್ರಸೇನಜಿತ್ತು ಈಕೆಯನ್ನು ರಕ್ಷಣೆ ಮಾಡಿದ ತಂದೆಯೆಂದು ತಿಳಿಯಬೇಕು (ಮ. ಅನು., ವ). ಈಕೆ ಇಕ್ಷ್ವಾಕುವಂಶದ ರೇಣುವಿನ ಮಗಳು (ಭಾಗ., ಹರಿ). ಈಕೆಯು ಸುವೇಣುವಿನ ಮಗಳು. ಕಾಮಲಿ ಎಂಬುದು ಈಕೆಯ ಇನ್ನೊಂದು ಹೆಸರು (ವಾಯುಪು). ಚಿತ್ರರಥನೆಂಬ ಗಂಧರ್ವರಾಜನು ತನ್ನ ಸ್ತ್ರೀಯೊಂದಿಗೆ ಜಲಕ್ರೀಡೆಯಾಡುವಾಗ ಈಕೆ ಕಂಡು ಕಾಮವಿಕಾರವುಳ್ಳವಳಾದಳು. ನೋ -- ಋಮಣ್ವಂತ. ಇದರಿಂದ ತಂದೆಯ ಆಜ್ಞೆಯಂತೆ ಪರಶುರಾಮನು ಈಕೆಯ ಶಿರಚ್ಛೇದ ಮಾಡಿದನು. ಮುಂದೆ ಪರಶುರಾಮನ ಪ್ರಾರ್ಥನೆಯಂತೆ ಜಮದಗ್ನಿಯು ರೇಣುಕೆಯನ್ನು ಬದುಕಿಸಿದನು. ಒಮ್ಮೆ ರೇಣುಕೆಯು ನೀರಿನ ಕೊಡವನ್ನು ಹೊತ್ತುಕೊಂಡು ಬಿಸಿಲಿನಲ್ಲಿ ಬರುತ್ತಿರುವುದನ್ನು ಕಂಡು ಜಮದಗ್ನಿಯು ಕರುಣೆಯುಳ್ಳವನಾಗಿ ಕೊಡೆ ಮತ್ತು ಪಾದುಕೆಯನ್ನು ನಿರ್ಮಾಣ ಮಾಡಿದನು (ಮ. ವ., ಅನು. ಭಾಗ).

ರೇಣುಕಾ ತೀರ್ಥ --ಇದು ಪಂಜಾಬಿನ ನಹನ್ ಎಂಬ ಪಟ್ಟಣದಿಂದ ಹದಿನಾರು ಮೈಲು ಉತ್ತರದಲ್ಲಿದೆ (ಮ. ವ).

ರೇಣುಕಾ ಕ್ಷೇತ್ರ (ಯಲ್ಲಮ್ಮನ ಗುಡ್ಡ)-- ಇದು ಬೆಳಗಾವಿ ಜಿಲ್ಲೆಯಲ್ಲಿದೆ. ಪ್ರತಿ ಹುಣ್ಣಿಮೆಯಲ್ಲಿ ಇಲ್ಲಿ ಜಾತ್ರೆ ಜರಗುತ್ತದೆ. ರೇಣುಕೆಯು ಜಮದಗ್ನಿ ಋಷಿಯ ಪತ್ನಿ. ಈಕೆಯ ಹಾವಿನ ಸಿಂಬಿಯನ್ನು ಮಾಡಿ ಉಸುಕಿನ ಕೊಡದಿಂದ ಮಲಾಪಹಾರಿ ನದಿಯ ನೀರನ್ನು ತರುತ್ತಿರುವಾಗ, ನದಿಯಲ್ಲಿ ಜಲಕ್ರೀಡೆಯಾಡುವ ಗಂಧರ್ವನನ್ನು ಕಂಡು ಮೈಮರೆತು ನೋಡುತ್ತಿರುವಾಗ, ಕೊಡವು ಕರಗಿ ಇಲ್ಲದಂತಾಯಿತು. ಅವಳು ಹಾಗೆಯೇ ಬರಿಯ ಕೈಯಲ್ಲಿ ಮರಳಿದಾಗ ಜಮದಗ್ನಿಯು ಇದನ್ನು ತಿಳಿದು ಪತ್ನಿಗೆ 'ಮಹಾಕುಷ್ಠರೋಗವುಳ್ಳವಳಾಗು' ಎಂದು ಶಾಪವಿತ್ತನು. ಮುಂದೆ ರೇಣುಕೆಯು (ಯಲ್ಲಮ್ಮ) ಆದಿಶಕ್ತಿಯ ಸೂಚನೆಯಂತೆ ಜೋಗುಳಬಾವಿಯಲ್ಲಿ (ಯೋಗಿಗಳ ಕುಂಡ) ಸ್ನಾನಮಾಡಿ ಶಾಪಮುಕ್ತಳಾದಳು. ಮುಂದೆ ಕಾರ್ತವೀರ್ಯಾರ್ಜುನನು ಕಾಮಧೇನುವನ್ನು ಪಡೆಯಲು ಜಮದಗ್ನಿಯನ್ನು ಕೊಂದನು. ಯಲ್ಲಮ್ಮನ ಪತಿಯ ವಧೆಯಾದ ಈ ದಿನವನ್ನು ರಂಡೆ ಹುಣ್ಣಿಮೆ ಎಂದೂ ಋಷಿಗಳೆಲ್ಲಾ ಕೂಡಿ ಜಮದಗ್ನಿಯನ್ನು ಬದುಕಿಸಿದ ಹುಣ್ಣಿಮೆಗೆ ಮುತ್ತೈದೆ ಹುಣ್ಣಿಮೆಯೆಂದೂ ಹೇಳುತ್ತಾರೆ.

ರೇಣುಮತಿ -- ಈಕೆ ಶಿಶುಪಾಲನ ಪುತ್ರಿ ; ನಕುಲನ ಪತ್ನಿ. ಈಕೆಯ ಮಗ ನಿರಮಿತ್ರ; ಈಕೆಗೆ ಕರೇಣುಮತಿ ಎಂಬ ಹೆಸರೂ ಇದೆ (ಮ. ಆ).

ರೇಭ -- ಋಷಿಯೊಬ್ಬ. ಒಂದು ಸಾಯಂಕಾಲದಲ್ಲಿ ರಾಕ್ಷಸರು ಕೂಡಿ ಇವನ ಕೈಕಾಲುಗಳನ್ನು ಕಟ್ಟಿ ಬಾವಿಗೆ ನೂಕಿದರು. ಅಲ್ಲಿ ಇವನು ಹತ್ತು ರಾತ್ರಿಗಳನ್ನೂ, ಒಂಬತ್ತು ಹಗಲುಗಳನ್ನು ಕಳೆದನು. ಆಮೇಲೆ ಇವನು ಅಶ್ವಿನೀದೇವತೆಗಳನ್ನು ಸ್ತುತಿಸಲು ಅವರು ಇವನನ್ನು ಬಾವಿಯಿಂದೆತ್ತಿದರು (ಋ).

ರೇವತಿ -- ೧. ಬಲರಾಮನ ಪತ್ನಿ. ಈಕೆ ಕುಶಸ್ಥಳಿ ಪಟ್ಟಣದ ಒಡೆಯನಾದ ರೈವತರಾಯನ ಮಗಳು. ಇವನಿಗೆ ಕಕುತ್ ಪ್ರಿಯನೇ ಮೊದಲಾದ ನೂರು ಮಂದಿ ಮಕ್ಕಳೂ, ರೇವತಿಯೆಂಬ ಕನ್ಯೆಯೂ ಇದ್ದರು. ರೈವತನು ರೇವತಿಯೆಂಬ ತನ್ನ ಮಗಳಿಗೆ ಗಂಡನಾರು ಎಂದು ಕೇಳುವುದಕ್ಕೆ ಬ್ರಹ್ಮಲೋಕಕ್ಕೆ ಹೋಗಿ ಅಲ್ಲಿ ಹಾಹಾ ಹೂಹೂ ಎಂಬ ಗಂಧರ್ವರು ಹಾಡುತ್ತಿರಲು, ಇವನು ಅದನ್ನು ಕೇಳುತ್ತಿರಲು, ಅನೇಕ ಯುಗಗಳು ದಾಟಿದುವು. ಕೊನೆಗೆ ಬ್ರಹ್ಮನು ಆಕೆಯನ್ನು ಬಲರಾಮನಿಗೆ ಕೊಡುವಂತೆ ಹೇಳಿದನು. ರೇವತಿಯು ಬಲರಾಮನಿಗಿಂತ ಎತ್ತರವಿದ್ದಳು. ಬಲರಾಮನು ಹಲಾಯುಧದಿಂದ ಆಕೆಯನ್ನು ಮಟ್ಟವಾದ ಆಕಾರವುಳ್ಳವಳನ್ನಾಗಿ ಮಾಡಿದನು (ವಿಷ್ಣುಪು). ನೋ -- ರೈವತಕ, ಕಕುದ್ಮಿ (ಭಾಗ). ೨. ಸ್ಕಂದನ ತಾಯಿ. ೩. ಒಂದು ನಕ್ಷತ್ರ. ಮುದಿತನದಲ್ಲಿ ಋತವಾಗೆಂಬ ಮುನಿ ರೇವತಿ ನಕ್ಷತ್ರದ ಅಂತ್ಯದ ಅರಿಷ್ಟಾಂಶದಲ್ಲಿ ಒಬ್ಬ ಪುತ್ರನನ್ನು ಪಡೆದನು. ಈತನು ಬಾಲ್ಯದಿಂದಲೂ ಕೆಟ್ಟ ಚಾಳಿಯವನಾಗಿದ್ದನು. ಋತವಾಗ್ ಮುನಿಗೆ ಮಗನ ಜನ್ಮದಿಂದ ಭಯಂಕರ ರೋಗ, ತಾಯಿಗೆ ಕುಷ್ಠರೋಗಗಳು ಪ್ರಾಪ್ತವಾದುವು. ತಂದೆಯು ಹಗಲಿರುಳು ಇದಕ್ಕಾಗಿ ಕೊರಗತೊಡಗಿದನು. ಇಷ್ಟಲ್ಲದೆ ಆ ಬಾಲಕನು ತಾರುಣ್ಯದಲ್ಲಿ ಒಬ್ಬ ಋಷಿಪತ್ನಿಯನ್ನು ಅಪಹರಿಸಿದನು. ಋತವಾಗನು ಗರ್ಗಮುನಿಯ ಬಳಿ ಸೇರಿ ತನ್ನ ಚಿಂತೆಯನ್ನು ವಿವರಿಸಿದನು. ಆಗ ಆ ಮುನಿಯು -- 'ಅಯ್ಯಾ, ಇದರಲ್ಲಿ ನಿಮ್ಮ ಯಾರದೂ ದೋಷವಿಲ್ಲ. ನಿನ್ನ ಮಗ ಹುಟ್ಟಿದ ನಕ್ಷತ್ರದೋಷ' ಎನ್ನಲು ಕೃದ್ಧನಾದ ಋತವಾಗನು ರೇವತಿ ನಕ್ಷತ್ರವು ನೆಲಕ್ಕುರುಳುವಂತೆ ಶಾಪವಿತ್ತನು. ಕುಮುದ ಪರ್ವತದಲ್ಲಿ ಈ ನಕ್ಷತ್ರವು ಬಿದ್ದು ಅಲ್ಲೊಂದು ಕಮಲಸರೋವರವಾಯಿತು. ಅಂದಿನಿಂದ ಪರ್ವತಕ್ಕೆ ರೈವತಕ ಪರ್ವತವೆಂದು ಹೆಸರಾಯಿತು. ಅನಂತರ ಅದೇ ಕೊಳದಿಂದ ಒಬ್ಬಳು ಸುಂದರಿಯು ಹೊರಬಂದಳು. ಅಲ್ಲೇ ತಪಸ್ಸು ಮಾಡುತ್ತಿದ್ದ ಪ್ರಮುಚನೆಂಬ ಮುನಿಯು ಆ ಹುಡುಗಿಗೆ ರೇವತಿಯೆಂದು ಹೆಸರಿಟ್ಟು ಕಾಪಾಡುತ್ತಿದ್ದನು. ಮುಂದೆ ವಿವಾಹ ವಯಸ್ಕಳಾದ ಆ ಕನ್ಯೆಗೆ

ವರನಾರೆಂದು ಹುಡುಕುತ್ತಾ ಪ್ರಿಯವ್ರತ ವಂಶದ ವಿಕ್ರಮಶೀಲ ರಾಜನಿಂದ ಕಾಳಿಂದಿಯಲ್ಲಿ ಜನಿಸಿದ ದುರ್ಗಮನೆಂಬ ಕುಮಾರನೇ ಆಕೆಯ ಪತಿಯೆಂದು ತಿಳಿದು ಮದುವೆಗೆ ಸಿದ್ಧಮಾಡುತ್ತಿರುವಲ್ಲಿ ರೇವತಿಯು -- 'ಅಪ್ಪಾ, ರೇವತಿ ನಕ್ಷತ್ರದಲ್ಲಿ ನನ್ನ ಮದುವೆಯಾಗಬೇಕು' ಎಂದಳು. ಪ್ರಮುಚನು 'ವಿವಾಹಯೋಗ್ಯ ನಕ್ಷತ್ರಗಳು ಎಷ್ಟೋ ಇವೆ. ಋತವಾಗನು ಮಾತ್ರ ತಪಸ್ವಿಯೇ? ನೀನಲ್ಲವೇ ? ಎನ್ನಲು, ಪ್ರಮುಚನು ತನ್ನ ತಪೋಮಹಿಮೆಯಿಂದ ರೇವತಿ ನಕ್ಷತ್ರವನ್ನು ನಕ್ಷತ್ರ ಮಂಡಲಕ್ಕೆ ಕಳುಹಿಸಿ ಮಗಳ ಪಾಣಿಗ್ರಹಣವನ್ನು ಮಾಡಿದನು. ಈ ದಂಪತಿಗಳಲ್ಲಿ ಹುಟ್ಟಿದ ಬಾಲಕನೇ ರೈವತಕಮನು (ಮಾರ್ಕಂ. ಪು). ೪. ಚಂದ್ರನ ಪತ್ನಿ ; ಒಂದು ನಕ್ಷತ್ರ. ೫. ಭಾರದ್ವಾಜಮುನಿಗಳ ತಂಗಿ. ಈಕೆ ಅತ್ಯಂತ ಕುರೂಪಿ. ಈಕೆ ವಿವಾಹಯೋಗ್ಯ ವಯಸ್ಕಳಾದರೂ ಈಕೆಯನ್ನಾರೂ ವಿವಾಹವಾಗಲಿಲ್ಲ. ಕೊನೆಗೆ ಭಾರದ್ವಾಜನ ಶಿಷ್ಯನಾದ ಕಟನೆಂಬವನು ಗುರುವಿನ ಅಪ್ಪಣೆಯಂತೆ ಆಕೆಯನ್ನು ವಿವಾಹವಾದನು. ಆಮೇಲೆ ಕಟನು ತನ್ನ ಪತ್ನಿಯೊಡನೆ ಗೋದಾವರಿಯ ಉಪನದಿಯಾದ ಭಾರದ್ವಾಜದಲ್ಲಿ ಸ್ನಾನಮಾಡಲು ರೇವತಿಗೆ ಅಪ್ಸರೆಯರನ್ನೂ ಮೀರಿಸಿದ ಸೌಂದರ್ಯ ಪ್ರಾಪ್ತವಾಯಿತು.

ರೇವಂತ -- ಸೂರ್ಯನು ಈತನ ತಂದೆ ; ಹೆಣ್ಣು ಕುದುರೆಯ ರೂಪವನ್ನು ಧರಿಸಿದ ಸಂಜ್ಞೆ ಈತನ ತಾಯಿ ; ಅಶ್ವಿನೀದೇವತೆ ಈತನು ಸೋದರರು. ರೇವಂತನು ಉತ್ತಮನಾದ ಸಾರಥಿ.

ರೇವಾ -- ನರ್ಮದಾನದಿಯ ಇನ್ನೊಂದು ಹೆಸರು. ಈ ನದಿಯ ದಡದಲ್ಲೇ ಶರ್ಯಾರಿ ಮಹಾರಾಜನು ಯಜ್ಞಮಾಡಿದನು. ಆ ಯಜ್ಞದಲ್ಲೇ ಚ್ಯವನಮಹರ್ಷಿಯು ಅಶ್ವಿನೀ ದೇವತೆಗಳೊಡಗೂಡಿ ಸೋಮಪಾನವನ್ನು ಮಾಡಿದನು (ಮ. ವ., ಮತ್ಸ್ಯರು).

ರೈಕ್ವ -- ನೋ-- ಜಾನುಶ್ರುತಿ. ಮುನಿಯೊಬ್ಬ. ಇವನು ರಾಮೇಶ್ವರದ ಬಳಿಯ ಗಂಧಮಾದನ ಪರ್ವತದಲ್ಲಿ ತಪಸ್ಸು ಮಾಡುತ್ತಿದ್ದ. ಇವನು ಹುಟ್ಟು ಕುಂಟನಾದುದರಿಂದ ಎರಡೆತ್ತಿನ (ಯುಗ್ವ) ಗಾಡಿಯಲ್ಲಿ ಕುಳಿತು ಎಲ್ಲಾ ತೀರ್ಥಗಳಲ್ಲೂ ಮಿಂದು ಬರುತ್ತಿದ್ದ. ಇವನಿಗೆ ಸಯುಗ್ವನೆಂಬ (ಎರಡೆತ್ತಿನ ಗಾಡಿ ಉಳ್ಳವ) ಹೆಸರೂ ಇತ್ತು. ಇವನು ಗಂಗಾ, ಯಮುನಾ, ಗಯಾ ತೀರ್ಥಗಳಲ್ಲಿ ಸ್ನಾನ ಮಾಡಲು ಅಪೇಕ್ಷಿಪಟ್ಟಾಗ ಇವನ ತಪಶ್ಶಕ್ತಿಗೆ ಹೆದರಿದ

ಆ ಮೂರು ನದಿಗಳು ಅವನ ಮುಂದೆಯೇ ಕಾಣಿಸಿಕೊಂಡವು. ಈಗಲೂ ಅಲ್ಲಿ ಆ ಮೂರು ತೀರ್ಥಗಳಿದ್ದು ತುಂಬಾ ಮಹಿಮೆಯುಳ್ಳದ್ದಾಗಿವೆ (ಸ್ಕಾಂಪು).

ರೈಭ್ಯ -- ವಿಶ್ವಾಮಿತ್ರನು ಬ್ರಹ್ಮರ್ಷಿಯಾದ ಮೇಲೆ ಜನಿಸಿದ ಪುತ್ರ. ಇವನು ಭಾರದ್ವಾಜ ಮುನಿಯ ಮಿತ್ರ. ಈತನಿಗೆ ಅರ್ವಾವಸು ಮತ್ತು ಪರಾವಸು ಎಂಬ ಇಬ್ಬರು ಮಕ್ಕಳು. ಆ ಮಕ್ಕಳಲ್ಲಿ ಪರಾವಸುವು ಮೃಗಭ್ರಾಂತಿಯಿಂದ ತಂದೆಯನ್ನೇ ಕೊಂದನು ; ಪುನಃ ತಂದೆಯನ್ನು ಬದುಕಿಸಿದನು. ನೋ -- ಯವಕ್ರೀತ (ಮ. ವ).

ರೈವತ -- ೧. ದ್ವಾರಕೆಯ ಸಮೀಪದ ಪರ್ವತ. ಯದುವಂಶದ ರಾಜನಾದ ಅಂಧಕನ ಮಗ ರೈವತಕನಿಗೆ ಈ ಗುಡ್ಡದಲ್ಲಿಯೇ ಋಕ್ಷನೆಂಬ ಹೆಸರಿನ ಮಗನು ಜನಿಸಿದುದರಿಂದ ಆ ಗುಡ್ಡಕ್ಕೆ ರೈವತಕವೆಂದು ಹೆಸರಾಯಿತು (ಹರಿ). ೨.ರೈವತನೆಂಬೊಬ್ಬ ಮನು. ನೋ -- ರೇವತಿ.

ರೈವತಕ -- ೧. ಪರ್ವತವೊಂದು, ಪ್ರಭಾಸ (ಸೋಮನಾಥ) ಕ್ಷೇತ್ರದ ಉತ್ತರದಲ್ಲಿರುವ ಗುಜರಾತಿನ ಜುನಾಗಡದ ಹತ್ತಿರದ ಗಿರ್ನಾರ್ ಪರ್ವತ. ಇದಕ್ಕೆ ರೈವತಕವೆಂಬ ಹೆಸರೂ ಇದೆ. ನೋ -- ರೇವತಿ. ಋತವಾಗಮುನಿಯ ಶಾಪದಿಂದ ರೇವತಿ ನಕ್ಷತ್ರವು ನೆಲಕ್ಕೆ ಬಿದ್ದ ಪ್ರದೇಶ. ೨. ಈ ಬೆಟ್ಟದಲ್ಲಿ ವೃಷ್ಣಿಗಳೂ ಅಂಧಕರೂ ಸೇರಿ ಒಂದು ಉತ್ಸವವನ್ನು ನಡೆಸುತ್ತಿದ್ದರು. ಈ ಉತ್ಸವವನ್ನು ನೋಡುವುದಕ್ಕೆ ಬಲರಾಮ, ರೇವತಿ, ಅಕ್ರೂರ, ಸಾತ್ಯಕಿ ಮೊದಲಾದ ಯಾದವರೂ ಕೃಷ್ಣಾರ್ಜುನರೂ ಹೋಗಿದ್ದರು. ಅಲ್ಲಿ ಸಖೀಜನರ ಮಧ್ಯದಲ್ಲಿ ಓಡಾಡುವ ಸುಭದ್ರೆಯ ಮೇಲೆ ಅರ್ಜುನನಿಗೆ ಮನಸ್ಸಾಗಿ ಶ್ರೀ ಕೃಷ್ಣ ಮತ್ತು ಧರ್ಮರಾಜನ ಒಪ್ಪಿಗೆಯಿಂದ ರೈವತಕ ಪರ್ವತದಲ್ಲಿ ದೇವತಾದರ್ಶನ ಮಾಡಿ ಪರ್ವತಕ್ಕೆ ಪ್ರದಕ್ಷಿಣೆ ಹಾಕಿ ದ್ವಾರಕ್ಕೆಗೆ ಹಿಂತಿರುಗಿ ಬರುವಾಗ ಅರ್ಜುನನು ಬಲಾತ್ಕಾರದಿಂದ ಆಕೆಯನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಇಂದ್ರಪ್ರಸ್ಥದ ಕಡೆಗೆ ಹೊರಟನು (ಮ. ಭೀ).

ರೈವತಕಮನು -- ನೋ -- ರೇವತಿ.

ರೋಚನಿ -- ಶ್ರೀಕೃಷ್ಣನ ಮೊಮ್ಮಗನಾದ ಅನಿರುದ್ಧನ ಪತ್ನಿ. ಈಕೆ ರುಕ್ಮಿಯ ಮೊಮ್ಮಗಳು. ಈ ವಿವಾಹವು ರುಕ್ಮಿಣಿಯ ಒತ್ತಾಯದಿಂದಲೇ ನಡೆಯಿತು. ತಂಗಿಯಾದ ರುಕ್ಮಿಣಿಯ ಮೇಲಿನ ಪ್ರೇಮದಿಂದ ರುಕ್ಮಿಯು ಈ ವಿವಾಹಕ್ಕೆ ಸಮ್ಮತಿಸಿದನು (ಭಾಗ).

ರೋಚಮಾನ-- ೧. ಉರಗಪುರಿಯ (ನಾಗಪಟ್ಟಣ) ಅಧಿಪತಿ. ರಾಜಸೂಯಯಾಗ ಕಾಲದಲ್ಲಿ ದಿಗ್ವಿಜಯಕ್ಕೆ ಹೊರಟ ಅರ್ಜುನನಿಂದ ಈತನು ಪರಾಜಿತನಾದನು

(ಮ.ಸ).೨. ಅಶ್ವಮೇಧಪುರದೊಡೆಯ. ಇವನು ಚೇದಿವಂಶದ ರಾಜ. ರಾಜಸೂಯಯಾಗ ಕಾಲದ ವಿಜಯಯಾತ್ರೆಯಲ್ಲಿ ಈತನು ಭೀಮಸೇನನಿಂದ ಸೋತನು. ಇವನು ಭಾರತ ಯುದ್ಧಕಾಲದಲ್ಲಿ ಪಾಂಡವರ ಪಕ್ಷದಿಂದ ಹೋರಾಡಿ ಕರ್ಣನು ಸೇನಾಪತಿಯಾಗಿದ್ದ ಕಾಲದಲ್ಲಿ ಈತನಿಂದ ಮೃತನಾದನು. ಇವನ ಮಗನೇ ಹೇಮವರ್ಣ (ಮ. ಆ, ಸ., ಉ., ದ್ರೋ., ಕ).

ರೋಮಪಾದ (ಲೋಮಪಾದ) --ಚಂದ್ರವಂಶದಲ್ಲಿ ಹುಟ್ಟಿದ, ಅಂಗರಾಜನ ವಂಶಕ್ಕೆ ಸೇರಿದವನು. ಇವನ ತಂದೆ ಚಿತ್ರರಥ. ಈ ಚಿತ್ರರಥನು ವಿಷ್ಣುಪದವೆಂಬ ಪರ್ವತದ ಶಿಖರದಲ್ಲಿ ಯಜ್ಞಮಾಡಿ ಇಂದ್ರನ ಜೊತೆಗೆ ಸೋಮಪಾನ ಮಾಡಿದನು. ರೋಮಪಾದನಿಗೆ ದಶರಥನೆಂಬ ಹೆಸರೂ ಇದೆ. ಈತನ ಮಗಳೇ ಶಾಂತಾ. ಈಕೆಯನ್ನು ಋಷ್ಯಶೃಂಗಮುನಿಗೆ ಮದುವೆ ಮಾಡಿಕೊಟ್ಟನು. ಶಾಂತೆಯ ಮಗನೇ ಚತುರಂಗ (ಹರಿ). ಇವನು ಅಜರಾಜನ ಮಗನಾದ ದಶರಥನ ಸ್ನೇಹಿತ. ಮಕ್ಕಳಿಲ್ಲದ ಈತನಿಗೆ ದಶರಥನು ತನ್ನ ಮಗಳಾದ ಶಾಂತೆಯನ್ನು ಮಗಳಾಗಿ ಕೊಟ್ಟಿದ್ದನು. ಒಮ್ಮೆ ಇಂದ್ರನು ರೋಮಪಾದರಾಯನ ಸಿರಿಗೆ ಮತ್ಸರಿಸಿ ಅವನ ರಾಜ್ಯದಲ್ಲಿ ಹನ್ನೆರೆಡು ವರ್ಷ ಮಳೆ ಬೀಳಿಸದಿರಲು, ಪುಣ್ಯಪುರುಷನಾದ ಋಷ್ಯಶೃಂಗಮುನಿಯನ್ನು ತನ್ನ ರಾಜ್ಯಕ್ಕೆ ಕರೆಸಿ ಮಳೆ ಬೀಳುವಂತೆ ಮಾಡಿಕೊಂಡು ರಾಜ್ಯವನ್ನು ಫಲವತ್ತಾಗಿ ಮಾಡಿಕೊಂಡುದಲ್ಲದೆ, ತನ್ನ ಸಾಕುಮಗಳಾದ ಶಾಂತೆಯನ್ನು ಆ ಮುನಿಗೆ ವಿವಾಹ ಮಾಡಿಕೊಟ್ಟು ತನ್ನ ಅಳಿಯನನ್ನಾಗಿ ಮಾಡಿಕೊಂಡನು. ನೋ -- ಋಷ್ಯಶೃಂಗ (ಮ. ವ., ರಾಮಾ., ಬಾಲ., ಭಾಗ).

ರೋಮಹರ್ಷಣ -- ಸೂತಕುಲದ ಮಹರ್ಷಿಯೊಬ್ಬ. ಇವನು ವ್ಯಾಸಮಹರ್ಷಿಯ ಶಿಷ್ಯನಾಗಿ ಇತಿಹಾಸ, ಪುರಾಣ ಮತ್ತು ಧರ್ಮಶಾಸ್ತ್ರಗಳೆಲ್ಲವನ್ನೂ ಸಾಂಗವಾಗಿ ಓದಿದ್ದನು. ಕೌರವ -- ಪಾಂಡವರ ಯುದ್ಧವನ್ನು ನೋಡಲಾರದೆ ಬಲರಾಮನು ತೀರ್ಥಯಾತ್ರೆ ಮಾಡುತ್ತಾ ನೈಮಿಷಾರಣ್ಯಕ್ಕೆ ಬಂದನು. ಅಲ್ಲಿ ಮುನಿಗಳೆಲ್ಲ ಕೂಡಿ ಸತ್ರಯಾಗವನ್ನು ನಡೆಸುತ್ತಿದ್ದರು. ಆ ಯಾಗದಲ್ಲಿ ಮುನಿಗಳೆಲ್ಲ ಕೂಡಿ ರೋಮಹರ್ಷಣನಿಗೆ ಬ್ರಹ್ಮಾಸನವನ್ನು ಕೊಟ್ಟಿದ್ದರು. ಈ ಆಸನವು ಪುರಾಣ ಹೇಳತಕ್ಕ ಬ್ರಾಹ್ಮಣನಿಗೆ ಮಾತ್ರ ಸಲ್ಲತಕ್ಕದ್ದು. ಇದರ ಮೇಲೆ ಕುಳಿತವನು ಎಂತಹವರಿಗೂ ಪ್ರತ್ಯುತ್ಥಾನ ಮಾಡಬೇಕಾದುದು ಇಲ್ಲವೆಂಬ ವಿಧಿಯುಂಟು. ಬಲರಾಮನು ಯಜ್ಞಶಾಲೆಗೆ ಬಂದೊಡನೆ ಎಲ್ಲ ಮುನಿಗಳು ಎದ್ದುನಿಂತು ಗೌರವಿಸಿದರು. ರೋಮಹರ್ಷಣನು ಮಾತ್ರ ಕುಳಿತಲ್ಲಿಂದ ಏಳದಿರಲು ಬಲರಾಮನು ಶಾಸ್ತ್ರನಿಯಮವನ್ನು ತಿಳಿಯದೆ. ಇವನು ದರ್ಪದಿಂದಲೇ ತನಗೆ

ಗೌರವವನ್ನು ಕೊಡಲಿಲ್ಲವೆಂದು ಮಂತ್ರಿಸಿದ ದರ್ಭೆಯ ಹುಲ್ಲಿನಿಂದ ಇವನನ್ನು ಕೊಂದುಬಿಟ್ಟನು. ಮುಂದೆ ಎಲ್ಲ ಮುನಿಗಳ ಪ್ರಾರ್ಥನೆಯಂತೆ ವೇದಗಳು ಸಾರುವ 'ಆತ್ಮಾವೈ ಪುತ್ರ ನಾಮಾಸಿ' 'ತಂದೆಯೇ ಪುತ್ರನಾಗುವನು' ಎಂಬ ವಾಕ್ಯವನ್ನಾಧರಿಸಿ ರೋಮಹರ್ಷಣನ ಮಗನಾದ ಉಗ್ರಶ್ರವನಿಗೆ ತಂದೆಯ ಸ್ಥಾನ ಮತ್ತು ಶಕ್ತಿಯನ್ನನುಗ್ರಹಿಸಿದನು. ನೋ -- ಬಲರಾಮ, ಉಗ್ರಶ್ರವ, ಸೂತ (ಭಾಗ). ರಸಭರಿತವಾದ ಮಾತಿನಿಂದಕೇಳುವವರಿಗೆ ರೋಮಾಂಚನವನ್ನು ಹುಟ್ಟಿಸತಕ್ಕವನಾದುದರಿಂದ ರೋಮಹರ್ಷಣನು. ಈತನ ಮಗನೇ ಸೂತಪುರಾಣಿಕನು.

ರೋಹೀಣ - ದೇವ ವಟವೃಕ್ಷ. ಗರುಡನು ಅಮೃತವನ್ನು ತರಲು ಹೋದಾಗ ಇದರ ಗೆಲ್ಲುಗಳನ್ನು ಮುರಿದನು (ಮ.ಆ.)

ರೋಹಿಣಿ --೧. ಕಾಮಧೇನುವಿನ ಮಗಳು. ಈಕೆ ಗೋವುಗಳ ತಾಯಿ (ಮ. ಆ). ೨. ದಕ್ಷಬ್ರಹ್ಮನ ಮಗಳು. ಚಂದ್ರನ ಇಪ್ಪತ್ತೇಳು ಮಂದಿ ಪತ್ನಿಯರಲ್ಲಿ ನಾಲ್ಕನೆಯವಳು. ಈಕೆ ಚಂದ್ರನ ಮೋಹದ ಮಡದಿಯಾಗಿದ್ದಳು. ಇದರಿಂದ ಆತನ ಉಳಿದ ಪತ್ನಿಯರೆಲ್ಲಾ ದಕ್ಷನಿಗೆ ದೂರಿ ಆತನಿಗೆ ಕ್ಷಯರೋಗ ಬರಲು ಕಾರಣರಾಗಿದ್ದರು. ನೋ - - ದಕ್ಷ, ಚಂದ್ರ. ಚಂದ್ರನಿಂದ ಈ ಇಪ್ಪತ್ತೇಳು ರಾಣಿಯರಿಗೆ ಅನೇಕ ಮಕ್ಕಳಾದರು (ಹರಿ., ಮ. ಶ).೩. ವಸುದೇವನ ಪತ್ನಿ ಈಕೆಗೆ ಪೌರವಿ, ಮದಿರೆ, ಭದ್ರೆ, ದೇವಕಿ ಮೊದಲಾದ ಹಲವು ಸವತಿಯರಿದ್ದರು. ಈಕೆಗೆ ಬಲರಾಮ (ಬಲಭದ್ರ), ಶಠ, ಸಾರಣ, ದುರ್ಮದ ಮೊದಲಾದ ಮಕ್ಕಳಿದ್ದರು (ಮ. ಮೌ., ಭಾಗ., ಹರಿ).

ರೋಹಿ --ಅಪಘಾನಿಸ್ಥಾನದಲ್ಲಿ ಹರಿಯುವ ನದಿ (ಮ. ಭೀ).

ರೋಹಿತ -- ನೋ-- ರೋಹಿತಾಶ್ವ.

ರೋಹಿತಕ -- ದಿಲ್ಲಿಯಿಂದ ೪೨ ಮೈಲು ವಾಯವ್ಯದಲ್ಲಿರುವ ರೋಹತಕವೆಂಬ ಪ್ರದೇಶ. ಕರ್ಣನು ದಿಗ್ವಿಜಯಕಾಲದಲ್ಲಿ ಇದನ್ನು ಜಯಿಸಿದನು (ಮ. ವ., ಸ).

ರೋಹಿತಾಶ್ವ(ಲೋಹಿತಾಸ್ಯ)-- ಹರಿಶ್ಚಂದ್ರರಾಜನ ಒಬ್ಬನೇ ಮಗ. ಹರಿಶ್ಚಂದ್ರನಿಗೆ ಬಹುಕಾಲ ಮಕ್ಕಳು ಹುಟ್ಟದಿರಲು ನಾರದನ ಮಾತಿನಂತೆ ವರುಣನನ್ನು ಪ್ರಾರ್ಥಿಸಿ ತನಗೆ ಗಂಡುಮಗುವಾದರೆ ಅದನ್ನು ವರುಣನಿಗೆ ಬಲಿಕೊಡುವುದಾಗಿ ಹರಕೆ ಕಟ್ಟಿಕೊಂಡನು. ಮಗುವಾಯಿತು. ಅವನಿಗೆ ರೋಹಿತನೆಂಬ ಹೆಸರಿಟ್ಟರು. ರಾಜನು ತನ್ನ ಮಾತಿನಂತೆ ತನ್ನ ಮಗನನ್ನು

ಬಲಿಯಾಗಿ ವರುಣನಿಗೆ ಅರ್ಪಿಸಲಿಲ್ಲ. ಹತ್ತು ದಿನವಾಗಲಿ, ಹಲ್ಲು ಹುಟ್ಟಲಿ, ಹಲ್ಲು ಬೀಳಲಿ, ಬಿದ್ದ ಹಲ್ಲು ತಿರುಗಿ ಹುಟ್ಟಲಿ, ಅವನು ಬಿಲ್ಲನ್ನು ಹಿಡಿಯುವಂತಾಗಲಿ --ಹೀಗೆ ಕಾಲಾಯಾಪನೆ ಮಾಡುತ್ತಿರಲು ರೋಹಿತನು ದೊಡ್ಡವನಾಗಿ ತನ್ನ ಬಲಿಯ ವಿಚಾರವನ್ನು ತಿಳಿದು ಕಾಡಿಗೆ ಓಡಿಹೋದನು. ಇದರಿಂದ ಕೋಪಗೊಂಡ ವರುಣನು ಹರಿಶ್ಚಂದ್ರನನ್ನೇ ಆಕ್ರಮಿಸಿದನು. ಹರಿಶ್ಚಂದ್ರನಿಗೆ ಜಲೋದರರೋಗ ಬಂತು. ರೋಹಿತನು ಕಾಡಿನಲ್ಲಿ ಹೀಗೆ ಆರು ವರ್ಷಗಳವರೆಗೆ ಅಲೆಯುತ್ತಿದ್ದು ಅಜೀಗರ್ತನೆಂಬ ಮುನಿಯನ್ನು ಕಂಡು ಅವನ ಶುನಃಪುಚ್ಛ, ಶುನಶ್ಶೇಫ, ಶುನೋಲ್ಲಾಂಗೂಲರೆಂಬ ಮೂವರಲ್ಲಿ ತನಗೆ ಒಬ್ಬರನ್ನು ಮಾರಬೇಕೆಂದೂ, ಅದಕ್ಕಾಗಿ ನೂರು ಹಸುಗಳನ್ನು ಕೊಡುತ್ತೇನೆಂದೂ ಹೇಳಿದನು. ಆದಕ್ಕೆ ಮುನಿಯು ಒಪ್ಪಿ ತನ್ನ ನಡುವಿನ ಮಗನಾದ ಶುನಶ್ಶೇಫನನ್ನು ರೋಹಿತನಿಗೆ ಅರ್ಪಿಸಿದನು. ರೋಹಿತನು ಮುನಿಕುಮಾರನನ್ನು ಯಜ್ಞಪಶುವಾಗಿ ತಂದೆಗೆ ತಂದು ಒಪ್ಪಿಸಿದನು. ವರುಣಯಜ್ಞದಲ್ಲಿ ರಾಜನಿಂದ ಇನ್ನೂ ನೂರು ಪಶುಗಳನ್ನು ತೆಗೆದುಕೊಂಡು ಅಜೀಗರ್ತನು ಮಗನನ್ನು ತಾನೇ ಯೂಪಸ್ತಂಭಕ್ಕೆ ಬಿಗಿದನು. ಶುನಶ್ಶೇಫನು ವರುಣನನ್ನು ಪ್ರಾರ್ಥಿಸಿ ಯೂಪಸ್ತಂಭದಿಂದ ಬಿಡುಗಡೆಹೊಂದಿದನು. ರಾಜನೂ ಆರೋಗ್ಯವಂತನಾದನು (ಐ.ಬ್ರಾ). ನೋ -- ಶುನಶ್ಶೇಫ, ಹರಿಶ್ಚಂದ್ರ. ದಕ್ಷಿಣಾದ್ರವ್ಯವನ್ನು ವಿಶ್ವಾಮಿತ್ರನಿಗೆ ಸಲ್ಲಿಸುವುದಕ್ಕಾಗಿ ಕಾಶೀನಗರದ ಕಾಲಕೌಶಿಕ ಎಂಬ ಬ್ರಾಹ್ಮಣನಿಗೆ ತನ್ನ ಹೆಂಡತಿ ಮತ್ತು ಮಗನನ್ನು ಮಾರಿದನು. ಆ ಬ್ರಾಹ್ಮಣನ ಮನೆಯಲ್ಲಿ ಚಿತ್ರಹಿಂಸೆಗೆ ಗುರಿಯಾಗಿದ್ದ ರಾಜಕುಮಾರನೊಮ್ಮೆ ಕಟ್ಟಿಗೆ ದರ್ಭೆಗಳನ್ನು ತರಲು ಕಾಡಿಗೆ ಹೋದಾಗ ವಿಶ್ವಾಮಿತ್ರನಿಂದ ಸೃಷ್ಟಿಯಾದ ಸರ್ಪವು ರೋಹಿತನನನ್ನು ಕಚ್ಚಿ ಕೊಂದಿತು. ಮುಂದೆ ವಿಶ್ವಾಮಿತ್ರನ ಅನುಗ್ರಹದಿಂದಲೇ ಬದುಕಿದನು (ಮ. ವ).

ಈ ರೋಹಿತನು ರೋಹಿತಪುರವೆಂಬ ಪಟ್ಟಣವನ್ನು ಕಟ್ಟಿಸಿ, ಅದನ್ನು ಬ್ರಾಹ್ಮಣರಿಗೆ ದಾನವಾಗಿತ್ತು ಅರಣ್ಯಕ್ಕೆ ತಪಸ್ಸಿಗೆ ಹೋದನು. ಇವನ ಮೊಮ್ಮಗನೇ ಚಂಚು ಹಾರೀತ (ಹರಿ).

ರೋಹಿತಾಶ್ವನ ಮಗ ಹರಿತ. ಈತನ ಈತನ ಮಗನೇ ಚಂಚು (ವಿಷ್ಣುಪು).

ರೌಚ್ಯ -- ಮನುವೊಬ್ಬ. ಈತನ ತಂದೆ ರುಚಿ ಎಂಬ ಮುನಿ ; ತಾಯಿ ಮಾಲಿನಿ ಎಂಬ ಅಪ್ಸರಸಿ. ಬ್ರಹ್ಮಚಾರಿಯಾದ ಈ ಮುನಿಗೆ ಪಿತೃಋಣದಿಂದ ಮುಕ್ತನಾಗಲು ವಿವಾಹವಾಗುವಂತೆ ಸೂಚಿಸಿದರು. ಆದರೆ ರುಚಿಯು

ವಿವಾಹವಾಗಲು ಒಪ್ಪದೆ ಬ್ರಹ್ಮಚರ್ಯದಲ್ಲೇ ಇದ್ದು ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ ಮೆಚ್ಚಿಸಿದನು. ಅವನೂ ಆತನಿಗೆ ಪಿತೃಗಳ ಸೂಚನೆಯನ್ನು ಸಂಪೂರ್ಣ ಮಾಡುವಂತೆ ಸಲಹೆ ಕೊಟ್ಟನು. ಅಲ್ಲೇ ಹರಿಯುವ ನದಿಯಿಂದ ಪುಲ್ಲೋಚನೆಯೆಂಬ ಅಪ್ಸರಸಿ ಹೊರಬಂದು ವರುಣಪುತ್ರನಾದ ಪುಷ್ಕರನಿಂದ ತನ್ನಲ್ಲಿ ಜನಿಸಿದ ಮಾಲಿನಿಯನ್ನು ಲಗ್ನವಾಗುವಂತೆ ಪ್ರಾರ್ಥಿಸಿದಳು. ರುಚಿ ಅಲ್ಲೇ ಮಾಲಿನಿಯನ್ನು ವಿವಾಹವಾದನು. ಅವಳಲ್ಲಿ ಮನ್ವಂತರಾಧಿಪತಿಯಾದ ರೌಚ್ಯನು ಜನಿಸಿ ರುಚಿಯನ್ನು ಪಿತೃಋಣದಿಂದ ಮುಕ್ತಿಗೊಳಿಸಿದನು (ಮಾರ್ಕಂ. ಪು). ಇವನು ಹದಿಮೂರನೇ ಮನ್ವಂತರಾಧಿಪ. ಇವನ ಕಾಲದಲ್ಲಿ ಧೃತಿಮಾನ್, ಹವ್ಯಪ ಮೊದಲಾದವರು ಸಪ್ತಷಿಗಳು.

ರೌದ್ರಕರ್ಮ -- ಧೃತರಾಷ್ಟ್ರನ ಮಗ. ಭೀಮನಿಂದ ಹತನಾದನು (ಮ. ಆ., ದ್ರೋ).

ರೌದ್ರಾಶ್ವ -- ೧. ಚಂದ್ರವಂಶದ ಪೂರುವಿನ ವಂಶೀಯ. ಇವನಿಗೆ ಘೃತಾಚಿ ಎಂಬ ಅಪ್ಸರೆಯಲ್ಲಿ ಋಚೇಯು, ಕೃಕಣೆಯು, ಕಕ್ಷೇಯು, ಸ್ಥಂಡಿಲೇಯು, ಸನ್ನತೇಯು, ದಶಾರ್ಣೇಯು, ಜಲೇಯು, ಸ್ಥಲೇಯು, ವನೇಯು ಎಂಬ ಹತ್ತು ಮಂದಿ ಮಕ್ಕಳೂ, ರುದ್ರಾ, ಶೂದ್ರಾ, ಭದ್ರಾ, ಮಲದಾ, ಮಲಹಾ, ಖಲದಾ, ನಲದಾ, ಸುರಸಾ, ಗೋ ಮತ್ತು ಚಪಲಾ ಎಂಬ ಹತ್ತು ಮಂದಿ ಲಾವಣ್ಯವತಿಯರಾದ ಕನ್ಯೆಯರೂ ಜನಿಸಿದರು. ಅತ್ರಿವಂಶದ ಪ್ರಭಾಕರನೆಂಬ ಮಹರ್ಷಿಯು ಈ ಹತ್ತೂ ಮಂದಿ ಸುರಸುಂದರಿಯರನ್ನು ಪಾಣಿಗ್ರಹಣವಾದನು. ಈ ಪ್ರಭಾಕರನು ಒಮ್ಮೆ ರಾಹುವಿನ ಆಘಾತದಿಂದ ಕೆಳಗೆ ಬೀಳುತ್ತಿರುವ ಸೂರ್ಯನನ್ನು ಆಕಾಶದಲ್ಲಿ ಸ್ಥಿರವಾಗಿ ನಿಲ್ಲಿಸಿದುದರಿಂದ ಆತನಿಗೆ ಪ್ರಭಾಕರನೆಂದು ಹೆಸರಾಯಿತು. ರೌದ್ರಾಶ್ವನ ಹಿರಿಯ ಮಗ ಋಚೇಯುವು ತಕ್ಷಕನ ಮಗಳಾದ ಜ್ವಲನಾ ಎಂಬವಳನ್ನು ಮದುವೆಯಾದನು. ಈ ದಂಪತಿಗಳಿಗೆ ಮತಿನಾರನೆಂಬ ರಾಜರ್ಷಿಯು ಜನಿಸಿದನು (ಹರಿ). ೨.ಚಂದ್ರವಂಶದ ಪೂರುವಿನ ಮಗ. ಈತನ ತಾಯಿ ಪೌಷ್ಟಿ. ಸಹೋದರರು ಪ್ರವೀರ ಮತ್ತು ಈಶ್ವರ. ಈತನಿಗೆ ಮಿಶ್ರಕೇಶಿ ಎಂಬ ಅಪ್ಸರೆಯಲ್ಲಿ ಋಚೇಯು ಮೊದಲಾದ ಹತ್ತು ಮಂದಿ ಮಕ್ಕಳು ಹುಟ್ಟಿದರು (ಮ. ಆ).

ರೌಮಹರ್ಷಣಿ -- ನೋ -- ರೋಮಹರ್ಷಣಿ, ಉಗ್ರಶ್ರವ.

ರೌರವ --ಒಂದು ಮಹಾನರಕ. ಯಮಲೋಕದಲ್ಲಿ ಪಾಪಿಗಳನ್ನು ದಂಡಿಸುವ ಸ್ಥಾನ. ನೋ -- ನರಕ (ಮ. ಅನು).

ರೌಹಿಣ --ನೋ --ರೋಹಿಣ. ದಿವ್ಯಶಕ್ತಿ ಉಳ್ಳ ಒಂದು ಆಲದ ಮರ (ಮ. ಆ).

ಲ

ಲಕ್ಷಣಾ -- ೧. ದುಷ್ಯಂತನ ಪ್ರಥಮ ಪತ್ನಿ. ಈಕೆಗೆ ಲಾಕ್ಷಾ ಎಂಬ ಹೆಸರೂ ಇದೆ. ಈಕೆಯ ಮಗನೇ ಜನಮೇಜಯ. ನೋ -- ಸರ್ವದಮನ (ಮ. ಆ). ೨.ದುರ್ಯೋಧನನ ಪುತ್ರಿ. ಈಕೆ ಶ್ರೀಕೃಷ್ಣನ ಸೊಸೆ ; ಜಾಂಬವತಿಯ ಮಗನಾದ ಸಾಂಬನ ಪತ್ನಿ. ಈಕೆಗೆ ಲಕ್ಷಣೆ ಎಂಬ ಹೆಸರೂ ಇದೆ. ಇವಳ ಸ್ವಯಂವರಕಾಲದಲ್ಲಿ ಸಾಂಬನು ಈಕೆಯನ್ನು ಅಪಹರಿಸಿಕೊಂಡು ಹೋದನು. ಇದರಿಂದ ಕೌರವರೆಲ್ಲಾ ಕೃದ್ಧರಾಗಿ ಸಾಂಬನನ್ನು ಹಿಡಿದು ಕಟ್ಟುವುದಕ್ಕೆ ಕರ್ಣ ಭೂರಿಶ್ರವ ಶಲ್ಯ ಯಜ್ಞಕೇತು ದುರ್ಯೋಧನ ಮೊದಲಾದವರು ಧೃತರಾಷ್ಟ್ರ ಮೊದಲಾದ ಕುರುವೃದ್ಧರ ಅನುಮತಿಯನ್ನು ಪಡೆದು ಮುಂದಾದರು. ಅವರೆಲ್ಲ ಕೂಡಿ ಸಾಂಬನ ರಥದ ಕುದುರೆಗಳನ್ನು ಕೊಂದರು. ಅವರಲ್ಲೊಬ್ಬನು ಅವನ ಧನಸ್ಸನ್ನು ಕತ್ತರಿಸಿದನು. ಇನ್ನೊಬ್ಬನು ಸಾರಥಿ ಮತ್ತು ರಥವನ್ನು ಕತ್ತರಿಸಿದನು. ಕೊನೆಗೆ ಎಲ್ಲರೂ ಕೂಡಿ ವಿರಥನಾದ ಸಾಂಬನನ್ನು ಸೆರೆಹಿಡಿದುಕೊಂಡು ಹಸ್ತಿನಾವತಿಗೆ ಒಯ್ದರು. ಇದರಿಂದ ಕೋಪಗೊಂಡ ಬಲರಾಮನು ಹಸ್ತಿನಾವತಿಯ ಬಳಿಗೆ ಬಂದು ತನ್ನ ನೇಗಿಲಾಯುಧದ ಕೊನೆಯನ್ನು ಹಸ್ತಿನಾವತಿಯ ದಕ್ಷಿಣ ಪ್ರಾಕಾರದಿಂದಾಚೆಗೆ ನೀಡಿ ಅದನ್ನು ಕಿತ್ತು ಗಂಗೆಯಲ್ಲಿ ಮುಳುಗಿಸಬೇಕೆಂದು ನಿಶ್ಚಯಿಸಿ ಅದನ್ನು ಬಲಾತ್ಕಾರದಿಂದ ಸೆಳೆಯಲು ಹಸ್ತಿನಾವತಿಯು ಕಿತ್ತು ಗಂಗಾನದಿಯಲ್ಲಿ ಮುಳುಗುವ ಸಂಭವ ತೋರಿತು. ಆಗ ದುರ್ಯೋಧನಾದಿಗಳೆಲ್ಲ ಸಾಂಬ ಮತ್ತು ಲಕ್ಷಣೆಯನ್ನು ಮುಂದಿಟ್ಟುಕೊಂಡು ಬಂದು ಬಲರಾಮನಿಗೊಪ್ಪಿಸಿ ಅವನನ್ನು ಪ್ರಾರ್ಥಿಸಿ ಅವನಿಂದ ಅಭಯವನ್ನು ಪಡೆದರು. ಬಲರಾಮನ ಸಾಹಸದಿಂದ ಈಗಲೂ ಹಸ್ತಿನಾವತಿಯು ದಕ್ಷಿಣ ದಿಕ್ಕಿನಲ್ಲಿ ಗಂಗಾನದಿಯ ಕಡೆಗೆ ಚಾಚಿರುವುದು (ಭಾಗ.). ೩. ಮದ್ರರಾಜನ ಮಗಳು ; ಶ್ರೀಕೃಷ್ಣನ ಒಬ್ಬಳು ಪತ್ನಿ. ಈಕೆಗೆ ಪ್ರಘೋಷ, ಗಾತ್ರವಂತ, ಸಿಂಹಬಲ, ಪ್ರಬಲ, ಊರ್ಧ್ವಗ, ಮಹಾಶಕ್ತಿ, ಸಹ ಓಜ, ಅಪರಿಜಿತ್ ಮತ್ತು ಒಬ್ಬಳು ಮಗಳಿದ್ದಳು (ಭಾಗ., ಮ. ಸ).೪ ಅಪ್ಸರೆಯೊಬ್ಬಳು (ಮ. ಆ).

ಲಕ್ಷ್ಮಣ -- ೧. ಸೂರ್ಯ ವಂಶದ ದಶರಥನ ಮಗ ; ಈತನ ತಾಯಿ ಸುಮಿತ್ರೆ. ಇವನು ಶೇಷಾಂಶ ಸಂಭೂತನು. ಈತ ಸಹೋದರ ಶತ್ರುಘ್ನ. ಲಕ್ಷ್ಮಣನು ರಾಮನು ಹುಟ್ಟಿದ ಮೂರನೆಯ ದಿನ ಆಶ್ಲೇಷಾ ನಕ್ಷತ್ರದ ಕೊನೆಯ

ಪಾದದಲ್ಲಿ ಕರ್ಕಾಟಕ ಲಗ್ನದಲ್ಲಿ ಜನಿಸಿದನು. ಬಾಲ್ಯದಿಂದಲೂ ಇವನು ರಾಮನ ಅನುಯಾಯಿಯಾಗಿದ್ದನು. ಶ್ರೀರಾಮನೊಡನೆ ವಿಶ್ವಾಮಿತ್ರನ ಜೊತೆಯಲ್ಲಿ ಇವನೂ ಸಿದ್ಧಾಶ್ರಮಕ್ಕೆ ಹೋಗಿದ್ದನು. ಸೀರಧ್ವಜ ಜನಕನ ಮಗಳಾದ ಊರ್ಮಿಳೆಯು ಈತನ ಪತ್ನಿ. ಶ್ರೀರಾಮನನ್ನನುಸರಿಸಿ ಇವನು ಅರಣ್ಯಕ್ಕೆ ಹೋದನು. ಅಲ್ಲಿ ಅಣ್ಣನ ಅಪ್ಪಣೆಯಂತೆ ಶೂರ್ಪಣಖೆಯ ಮಾನಭಂಗ ಮಾಡಿದನು. ರಾವಣನಿಂದ ಸೀತಾಪಹರಣವಾದ ಮೇಲೆ ಕಿಷ್ಕಿಂಧೆಯಲ್ಲಿ (ಹಂಪೆಯ) ಹನುಮಂತನಿಗೆ ರಾಮನ ಅಪ್ಪಣೆಯಂತೆ ತಮ್ಮ ವೃತ್ತಾಂತವನ್ನು ಹೇಳಿದನು. ಸೀತಾಶೋಧಕ್ಕಾಗಿ ಮಳೆಗಾಲ ಮುಗಿದರೂ ಸುಗ್ರೀವನು ಪ್ರಯತ್ನಪಡದುದರಿಂದ ಲಕ್ಷ್ಮಣನು ಕೋಪಿಷ್ಠನಾಗಲು ತಾರೆಯು ಆತನನ್ನು ಸಮಾಧಾನ ಪಡಿಸಿದಳು. ರಾವಣನೊಡನೆ ಮಾಡಿದ ಯುದ್ಧದಲ್ಲಿ ಈತನು ಮೂರ್ಛೆಗೊಳ್ಳಲು ಸುಷೇಣನ ಚಿಕಿತ್ಸೆಯಿಂದ ಎಚ್ಚರಗೊಂಡನು. ಇವನು ರಾವಣನ ಮಗ ಇಂದ್ರಜಿತುವನ್ನು ಕೊಂದನು. ಒಬ್ಬ ಅಗಸನ ನಿಂದೆಗೆ ಮನನೊಂದ ರಾಮನ ಅಪ್ಪಣೆಯಂತೆ ಇವನು ಸೀತಾದೇವಿಯನ್ನು ವಾಲ್ಮೀಕಿಯ ಆಶ್ರಮದ ಬಳಿ ತಂದುಬಿಟ್ಟನು. ಮುಂದೆ ರಾಮನು ಅಶ್ವಮೇಧವನ್ನು ಕೈಗೊಂಡಾಗ ಕುದುರೆಯ ರಕ್ಷಕನಾಗಿ ಹೋದನು. ತನ್ನ ಮಕ್ಕಳಾದ ಅಂಗದ ಮತ್ತು ಚಂದ್ರಕೇತುಗಳನ್ನು ತಾರಾಪಥ ಮತ್ತು ಚಂದ್ರಕಾಂತಪುರಗಳಲ್ಲಿ ಅರಸರನ್ನಾಗಿ ಮಾಡುವಂತೆ ರಾಮನಿಗೆ ಸೂಚಿಸಿದನು. ಬ್ರಾಹ್ಮಣ ರೂಪದಿಂದ ಬಂದ ಯಮನೊಂದಿಗೆ ಶ್ರೀರಾಮನು ಗುಟ್ಟಾಗಿ ಮಾತನಾಡುತ್ತಿದ್ದಾಗ ರಾಜದ್ವಾರದಲ್ಲಿ ಬಂದ ದೂರ್ವಾಸನ ಬರವನ್ನು ರಾಮನಿಗೆ ಹೇಳಲು ಹೋಗಿ ಅವನಿಂದ ಮರಣದಂಡನೆಯ ಶಿಕ್ಷೆಗೆ ಗುರಿಯಾಗಿ ಸರಯೂ ತೀರದಲ್ಲಿ ಧ್ಯಾನಯೋಗದಲ್ಲಿ ಅದೃಶ್ಯನಾಗಿ ವೈಕುಂಠಕ್ಕೆ ತೆರಳಿದನು (ರಾಮಾ).ನೋ -- ಜಾಂಬವಂತ, ಕಾಲನೇಮಿ, ಸೀತೆ. ಊರ್ಮಿಳೆ. ೨. ಚಂದ್ರವಂಶದ ಧೃತರಾಷ್ಟ್ರನ ಮೊಮ್ಮಗ ;ದುರ್ಯೋಧನನ ಮಗ. ಇವನಿಗೆ ಲಕ್ಷಣನೆಂಬ ಹೆಸರೂ ಇದೆ. ಲಕ್ಷಣೆಯು ಇವನ ಸೋದರಿ. ಇವನು ಅಭಿಮನ್ಯುವಿನೊಡನೆ ಯುದ್ಧಮಾಡಿ ಪರಾಜಿತನಾದುದಲ್ಲದೆ ಆತನಿಂದ ಹತನಾದನು (ಮ. ಉ., ಭೀ., ದ್ರೋ., ಸ್ತ್ರೀ).

ಲಕ್ಷ್ಮಣನು ಸುಮಿತ್ರೆಯ ಪುತ್ರನು. ಈತನು ಬಾಲ್ಯದಿಂದಲೂ ಶ್ರೀರಾಮನೊಡನೆಯೇ ಇದ್ದನು. ಜನಕನನ್ನು ತರಂಗತಮನೆಂಬ ಕಿರಾತಾಧಿಪತಿಯು ಪೀಡಿಸುತ್ತಿದ್ದಾಗ ಲಕ್ಷ್ಮಣನೂ ರಾಮನೊಡನೆ ಸೇರಿ ಯುದ್ಧಮಾಡಿದನು. ಶ್ರೀರಾಮನಿಗೆ ವನವಾಸವು ಪ್ರಾಪ್ತವಾದಾಗ ತಾನು ಸರ್ವಸುಖಸಂಪತ್ಸಂಮೃದ್ಧವಾದ ಅರಮನೆಯಲ್ಲಿ ಇರಬೇಕಾಗಿದ್ದರೂ ಪರಪ್ರೇರಣೆಯಿಲ್ಲದ್ಧೆ ಅಣ್ಣನನ್ನು ಕಾಡಿಗೆ ಅನುಸರಿಸಿ ಹೋದನು.

ಕಾಡಿನಲ್ಲಿ ಸೀತಾರಾಮರಿಗೆ ಅನುಕೂಲನಾಗಿದ್ದನು. ಖರದೂಷಣರು ದಂಡೆತ್ತಿಬಂದಾಗ ಶ್ರೀರಾಮನು ತನ್ನ ಬಿಲ್ಲಿಗೆ ಕೈನೀಡಿದುದನ್ನು ನೋಡಿ -- 'ತಾವು ಯುದ್ಧಕ್ಕೆ ಪ್ರವೇಶಿಸಲು ದೇವೇಂದ್ರ ಧರಣೇಂದ್ರರು ಬಂದಿಲ್ಲವಲ್ಲ. ಈ ವಿದ್ಯಾಧರಸೇನೆಯನ್ನು ಒಂದು ನಿಮಿಷದಲ್ಲಿ ಹದ್ದುಗಳಿಗೆ ಆಹಾರವನ್ನಾಗಿ ಮಾಡಿಸಲು ನಾನೇ ಸಾಕು' ಎಂದೂ, 'ತಾವು ಸೀತೆಯನ್ನು ನೋಡಿಕೊಳ್ಳಬೇಕೆಂದು' ಶ್ರೀರಾಮನಿಗೆ ತಿಳಿಸಿ, ಅವರ ಮೇಲೆ ತಾನೇ ಯುದ್ಧಕ್ಕೆ ಹೋಗಿ ಜಯಿಸಿದನು. ಜೈನರಾಮಾಯಣದಲ್ಲಿ ಲಕ್ಷ್ಮಣನಿಗೆ ಆರೋಪಿತವಾಗಿರುವಷ್ಟು ಶೌರ್ಯ, ಧೈರ್ಯೋತ್ಸಾಹಕಾರ್ಯಗಳಿಗೆ ರಾಮನವೂ ಸರಿದೂಗಲಾರವು. ಹನುಮನು ಸೀತೆಯ ಸುದ್ದಿಯನ್ನು ತಿಳಿಸಿ 'ತಕ್ಕುದಲ್ತು ಕಾಲಕ್ಷೇಪಂ' ಎನ್ನಲು ಕೂಡಲೇ ಲಕ್ಷ್ಮಣನು ಕೋಪದಿಂದ ಸಿಂಹನಾದವನ್ನು ಮಾಡಿದನು. ಜೈನಕಥಾಸರಣಿಗೆ ತಕ್ಕಂತೆ ಪ್ರತಿವಾಸುದೇವನಾದ ರಾವಣನನ್ನು ವಾಸುದೇವನಾದ ಲಕ್ಷ್ಮಣನೇ ಕೊಂದಿರುವನು (ಜೈ. ರಾ).

ಅಧ್ಯಾತ್ಮ ರಾಮಾಯಣವೇ ಮೊದಲಾದ ತತ್ತ್ವಾರ್ಥ ಬೋಧಕವಾದ ರಾಮಾಯಣಗಳಲ್ಲಿ ಭರತನು ವೈರಾಗ್ಯಾತ್ಮಕನೆಂದು ಹೇಳಿರುವಂತೆಯೇ ಜೈನ ರಾಮಾಯಣಗಳಲ್ಲಿ ಭರತನ ವೈರಾಗ್ಯವು ಚೆನ್ನಾಗಿ ಸೂಚಿತವಾಗಿರುವುದು. ದಶರಥನು ರಾಜ್ಯವನ್ನು ರಾಮನಿಗೆ ಕೊಟ್ಟು ಪರಮಾರ್ಥಸೌಖ್ಯವನ್ನು ಸಾಧಿಸಬೇಕೆಂದಿದ್ದಾಗ ಭರತನೂ ತಂದೆಯೊಡನೆಯೇ ತಪೋವನಕ್ಕೆ ಹೋಗಬೇಕೆಂದು ಯತ್ನಿಸಿರುವನು. ಸುತಮೋಹದಿಂದ ಕೈಕೆಯು ರಾಜ್ಯವನ್ನು ತನಗೇ ಕೊಡಿಸಲು ಯತ್ನಿಸಿದಾಗ ಬಹಳ ವ್ಯಸನಪಟ್ಟಿರುವನು. ವಾಲ್ಮೀಕಿರಾಮಾಯಣದಲ್ಲಿ ಈತನು ಕೈಕೆಯ ಮೇಲೆ ಕೋಪಿಸಿಕೊಂಡಿರುವುದಕ್ಕೆ ಪ್ರತಿಯಾಗಿ ಜೈನರಾಮಾಯಣದಲ್ಲಿ ಲಜ್ಜಾವಿಷಾದಭರನಾಗಿರುವಂತೆ ವರ್ಣಿಸಿರುವನು. ಈ ಮಾರ್ಪಾಡು ಸ್ತೋತ್ರಾರ್ಹವಾದರೂ ವಿಷಾದಭರತನೂ, ಲೋಲಭರತನೂ ಎಂದು ಹೇಳಿರುವುದು ಅಷ್ಟು ಉಚಿತವಾಗಿ ತೋರುವುದಿಲ್ಲ. ವಾಲ್ಮೀಕಿರಾಮಾಯಣದಲ್ಲಿ ರಾಮನ ಪಾದುಕೆಗಳನ್ನು ಪ್ರಾರ್ಥಿಸಿ ಪಡೆದು ಭರತನು ಅಯೋಧ್ಯೆಗೆ ಹೋಗಲಿಚ್ಛಿಸದೆ ನಂದಿಗ್ರಾಮದಲ್ಲಿ ವಾಸಿಸುತ್ತಿದ್ದನೆಂಬ ವರ್ಣನೆಯು ಜೈನರಾಮಾಯಣದಲ್ಲಿ ಕಂಡುಬರುವುದಿಲ್ಲ. ರಾಮಲಕ್ಷ್ಮಣರು ಲಂಕೆಯಿಂದ ಹಿಂದಿರುಗಿದ ಮೇಲೆ ಭರತನು ರಾಜ್ಯವನ್ನು ಅವರಿಗೊಪ್ಪಿಸಿ ನಿಶ್ಚಲಚಿತ್ತನಾಗಿ ತಪಸ್ಸಿಗೆ ಹೊರಟುಹೋದನು. ಭ್ರಾತೃಭಕ್ತಿಯ ವಿಷಯದಲ್ಲಿ ಜೈನರಾಮಾಯಣಗಳ ಭರತನು ವಾಲ್ಮೀಕಿ ರಾಮಾಯಣದ ಭರತನಿಗಿಂತ ಬೇರೆಯಾಗಿ ತೋರುವನು (ಜೈ. ರಾ).

ಲಕ್ಷ್ಮೀ -- ೧. ಮಹಾಲಕ್ಷ್ಮಿ ; ಶ್ರೀರಾಮನ್ನಾರಾಯಣನ ಪತ್ನಿ. ಈಕೆ ಸಮುದ್ರ ಮಥನದಲ್ಲಿ ಹುಟ್ಟಿದವಳು. ಈಕೆ ಮೊದಲು ಭೃಗುಮಹರ್ಷಿಯ ಪತ್ನಿಯಾದ ಖ್ಯಾತಿಯಲ್ಲಿ ಹುಟ್ಟಿದವಳು. ಸೂರ್ಯವಂಶದ ಅಂಬರೀಷರಾಜನ ಮಗಳಾದ ಶ್ರೀಮತಿಯೂ ಈಕೆಯೇ (ಅದ್ಭು, ರಾಮಾ). ಈಕೆಯ ಅಕ್ಕ ಜ್ಯೇಷ್ಠೆ. ಈಕೆಯನ್ನು ದರಿದ್ರಲಕ್ಷ್ಮೀಯೆನ್ನುತ್ತಾರೆ. ಈ ಕಲಿಲಕ್ಷ್ಮೀಯು ಸಮುದ್ರಮಥನದಲ್ಲಿ ವಿಷದ ಅನಂತರ ಜನಿಸಿದಳು. ದುಸ್ಸಹನೆಂಬ ಬ್ರಹ್ಮರ್ಷಿ ಈಕೆಯ ಪತಿ ; ವಿಷ್ಣು ಸೂರ್ಯನಾದಾಗ ಲಕ್ಷ್ಮೀಯು ತಾವರೆಯಿಂದ ಜನಿಸಿದಳು. ಪರಶುರಾಮನಾದಾಗ ಈಕೆ ಭೂದೇವಿ ; ರಾಮಾವತಾರದಲ್ಲಿ ಸೀತಾದೇವಿ ; ಕೃಷ್ಣಾವತಾರದಲ್ಲಿ ಈಕೆಯು ರುಕ್ಮಿಣಿಯಾಗಿದ್ದಳು (ಲಿಂಗಪು., ವಿಷ್ಣುಪು., ರಾಮಾ. ಬಾಲ., ಮ. ಆ. ಭಾಗ., ಸ್ಕಾಂಪು., ಶಿವಪು). ೨.ದಕ್ಷಪ್ರಜಾಪತಿಯ ಪುತ್ರಿ. ಈಕೆಗೆ ಕೀರ್ತಿ, ಧೃತಿ, ಮೇಧಾ, ಪುಷ್ಟಿ, ಶ್ರಾದ್ಧಾ ಮೊದಲಾದ ಸಹೋದರಿಯರಿದ್ದರು. ನೋ --ಧರ್ಮ.

ಲಘುಶ್ಯಾಮಲಾ -- ನೋ -- ಮಾತಂಗ.

ಲಂಕಾ -- ದೇವತೆಗಳ ಶಿಲ್ಪಿಯಾದ ವಿಶ್ವಕರ್ಮನು ಮಾಲಿ, ಸುಮಾಲಿ ಮತ್ತು ಮಾಲ್ಯವಂತರಿಗಾಗಿ ಈ ಪಟ್ಟಣವನ್ನು ಸಮುದ್ರಮಧ್ಯದಲ್ಲಿ ನಿರ್ಮಿಸಿದನು. ಮಾಲಿಯ ವಿಷ್ಣುವಿನಿಂದ ಹತನಾದ ಮೇಲೆ ಉಳಿದ ಇಬ್ಬರು ವಿಷ್ಣುವಿನ ಭಯದಿಂದ ಲಂಕೆಯನ್ನು ಬಿಟ್ಟು ಪಾತಾಳಕ್ಕೆ ಓಡಿಹೋದರು. ಮುಂದೆ ಕುಬೇರನು ಪರಮೇಶ್ವರನ ಅನುಗ್ರಹವನ್ನು ಸಂಪಾದಿಸಿ ಈ ಪಟ್ಟಣದಲ್ಲೇ ರಾಜ್ಯಭಾರ ಮಾಡಿಕೊಂಡಿದ್ದನು. ರಾವಣನು ಬ್ರಹ್ಮನಿಂದ ವರ ಪಡೆದಮೇಲೆ ಕುಬೇರನಿಂದ ಈ ನಗರವನ್ನು ಕಸಿದುಕೊಂಡು ತನ್ನ ಪರಿವಾರದೊಡನೆ ಇಲ್ಲೇ ವಾಸಮಾಡಿದನು. ಹನುಮಂತನು ಸೀತಾಶೋಧಕ್ಕೆ ಲಂಕೆಯನ್ನು ಪ್ರವೇಶಿಸುವಾಗ ಇದರ ಅಭಿಮಾನದೇವತೆಯನ್ನು ಗೆದ್ದು ಲಂಕೆಯನ್ನು ಪ್ರವೇಶಿಸಿ ಸೀತೆಯನ್ನು ಅಶೋಕವನದಲ್ಲಿ ಕಂಡು ಲಂಕಾನಗರವನ್ನು ಸುಟ್ಟನು. ರಾವಣನ ವಧೆಯ ಬಳಿಕ ಲಂಕೆಗೆ ವಿಭೀಷಣನು ರಾಜನಾದನು. ಯುಧಿಷ್ಠಿರನ ರಾಜಸೂಯಯಾಗ ಕಾಲದಲ್ಲಿ ದಕ್ಷಿಣಕ್ಕೆ ಹೋದ ಸಹದೇವನು ಘಟೋತ್ಕಚನ ಮೂಲಕ ವಿಭೀಷಣನಿಂದ ಕಪ್ಪವನ್ನು ತರಿಸಿಕೊಂಡನು. ಹಿಂದಿನ ಲಂಕೆಯನ್ನು ಇಂದು ಸಿಲೋನ್ ಎನ್ನುತ್ತಾರೆ. ನೋ -- ವಾಲಿ, ಕುಬೇರ, ರಾವಣ, ಹನುಮಂತ, ರಾಮ (ಮ. ವ., ಸ).

ಲಂಕೆ (ಲಂಕಿನಿ) -- ಈಕೆ ಲಂಕಾನಗರಿಯ ರಕ್ಷಕಿ. ಆಂಜನೇಯನು ಲಂಕಾ ನಗರಿಯನ್ನು ಪ್ರವೇಶಿಸುವಾಗ ಈಕೆ ತಡೆದಳು. ಮಾರುತಿ ಲಂಕೆಯನ್ನು ನೋಡಿ ಹೋಗುತ್ತೇನೆ. ಶಾಂತೆಯಾಗಬೇಕೆಂದು ಯಾಚಿಸಿದರೂ ಕೇಳದೆ, ಆತನ

ಕಪೋಲದ ಮೇಲೆ ಬಲವಾಗಿ ಗುದ್ದಲು ಹನುಮನು ಆಕೆಗೆ ಬಲವಾಗಿ ಹೊಡೆದು ನೆಲಕ್ಕುರುಳಿಸಿಬಿಟ್ಟನು. ಆಗ ಶಕ್ತಿಗುಂದಿದ ಲಂಕೆಯು 'ಬ್ರಹ್ಮನು ಸೂಚಿಸಿದ ಲಂಕೆಯ ಅಧಃಪತನದ ಕಾಲವು ಸನ್ನಿಹಿತವಾಯಿತು. ನೀನು ಲಂಕಾನಗರಿಯನ್ನು ಪ್ರವೇಶಮಾಡು' ಎಂದಳು (ರಾಮಾ). ಹನುಮನು ಲಂಕಾದಹನ ಮಾಡಿದೊಡನೆ ಆ ಅಗ್ನಿಯ ಜ್ವಾಲೆಯಿಂದ ತ್ರಿಕೂಟಪರ್ವತದ ಸುವರ್ಣಗಿರಿ ಕರಗಿ ಸಮಸ್ತ ಲಂಕಾಪುರಿಯೂ ಒಡನೆಯೇ ಸುವರ್ಣಮಯವಾಯಿತು (ಆನಂ. ರಾ).ನೋ -- ತ್ರಿಕೂಟ.

ಲಜ್ಜಾ -- ದಕ್ಷನ ಮಗಳು. ಈಕೆ ಧರ್ಮಪ್ರಜಾಪತಿಯ ಹತ್ತು ಮಂದಿ ಹೆಂಡಿರಲ್ಲಿ ಒಬ್ಬಳು. ಈಕೆಗೆ ಹ್ರೀ ಎಂಬ ಹೆಸರೂ ಇದೆ. ನೋ -- ಧರ್ಮ (ಮ. ಆ., ಸ್ಕಾಂ. ಪು).

ಲತಾ -- ಒಬ್ಬಳು ಅಪ್ಸರಸಿ. ನೋ -- ನಾರೀತೀರ್ಥ.

ಲಪಿತಾ -- ಮಂದಪಾಲನ ಎರಡನೆಯ ಹೆಂಡತಿಯಾದ ಶಾರ್ಙ್ಗೀಯ ಇನ್ನೊಂದು ಹೆಸರು. ಈಕೆ ಪಕ್ಷಿರೂಪದಲ್ಲಿದ್ದಳು. ಈಕೆಯ ಸವತಿ ಜರಿತಾ (ಮ. ಆ., ಅನು). ನೋ -- ಮಂದಪಾಲ.

ಲಂಬಕ (ಲಂಪಾಕ) -- ಒಂದು ದೇಶ. ಕಾಬೂಲ್ ನದಿಯ ಉತ್ತರ ದಡದಲ್ಲಿರುವ ಲಮಘನ್ ಪ್ರಾಂತ. (ಮ. ದ್ರೋ).

ಲಲಿತಾ -- ಶಕ್ತಿದೇವತೆ. ನೋ -- ಭಂಡಾಸುರ. ೧. ಭಂಡಾಸುರನು ಶೋಣಿತ ಪುರದಲ್ಲಾಳುತ್ತಿದ್ದಾಗ ದೇವತೆಗಳನ್ನು ಪೀಡಿಸತೊಡಗಲು ಇಂದ್ರನು ನಾರದನ ಉಪದೇಶದಂತೆ ಹಿಮಗಿರಿಯ ತಪ್ಪಲಲ್ಲಿ -- ಭಾಗೀರಥಿಯ ತೀರದಲ್ಲಿ -- ಪರಾಶಕ್ತಿಯ ಪೂಜೆಯನ್ನು ಯಾಗವಿಧಾನದಿಂದ ಮಾಡಿದನು. ಆಗ ಯಜ್ಞಕುಂಡದಿಂದ ಪರಮತೇಜಃಪುಂಜವೂ ಅನುಪಮವೂ ಆದ ಚಕ್ರಾಕಾರವು ಉದ್ಭವಿಸಿತು. ಆ ಚಕ್ರದ ಮಧ್ಯದಿಂದ ತೇಜಸ್ವಿನಿಯಾದ ಲಲಿತಾದೇವಿಯು ಗೋಚರಿಸಿದಳು. ಈಕೆಯು ಕಾಮೇಶ್ವರನ ರೂಪದಲ್ಲಿದ್ದ ಶಿವನನ್ನು ವರಿಸಿದಳು. ಈಕೆಗೆ ಕಾಮಾಕ್ಷಿ ಅಥವಾ ಕಾಮೇಶ್ವರಿ ಎಂಬ ಹೆಸರುಗಳೂ ಇವೆ. ಈಕೆಯೇ ಭಂಡಾಸುರನನ್ನು ಕೊಂದು ಶೋಣಿತಪುರವನ್ನು ನಾಶಮಾಡಿದಳು. ಸುಟ್ಟುಹೋದ ಮನ್ಮಥನನ್ನು ಪುನಃ ಬದುಕಿಸಿದಳು. ನೋ -- ಶ್ರೀಚಕ್ರ (ಬ್ರ.ಪು). ೨. ನಾಗಸುಂದರಿಯೊಬ್ಬಳು. ಈಕೆ ಧೃತರಾಷ್ಟ್ರನೆಂಬ ನಾಗರಾಜನ ಮಗಳು ; ಉದಯನ ರಾಜನ ಹೆಂಡತಿ. ನೋ -- ವಿಧೂಮ (ಸ್ಕಾಂ. ಬ್ರಪು).

ಲವ -- ಶ್ರೀರಾಮನ ಕಿರಿಯ ಮಗ. ಈತನ ಅಣ್ಣ ಕುಶ ; ತಾಯಿ ಮಹಾ ಪತಿವ್ರತೆಯಾದ ಸೀತಾದೇವಿ. ನೋ -- ಕುಶ. ಲವನಿಂದ ನಿರ್ಮಿತವಾದ

ಪಟ್ಟಣವೇ ಲವಕೋಟಿ ಅಥವಾ ಇಂದಿನ ಲಾಹೋರು. ನೋ -- ಪಂಚಾಕ್ಷರ (ರಾಮಾ. ಉತ್ತರ).

ಸೀತೆಯು ವಾಲ್ಮೀಕಿಯೊಡನೆ ತನಗೆ ಶೀಘ್ರವಾಗಿ ಪತಿಯ ಸಮಾಗಮವನ್ನುಂಟು ಮಾಡಬಲ್ಲ ವ್ರತವನ್ನು ಕೇಳಲು ಮುನಿಯು ಪಾಡ್ಯದಿಂದ ನವಮಿಯವರೆಗೆ ರಾಮನ ಪಾದುಕೆಗಳನ್ನು ಸುವರ್ಣಕಮಲಗಳಿಂದ ಪೂಜಿಸಿದರೆ ನಿನ್ನ ಬಯಕೆ ಶೀಘ್ರವಾಗಿ ನೆರವೇರುವುದೆನ್ನಲು, ಲವನು ಅಯೋಧ್ಯೆಗೆ ತೆರಳಿ ಅಲ್ಲಿ ಉದ್ಯಾನದಲ್ಲಿದ್ದ ಚಿನ್ನದ ತಾವರೆಗಳನ್ನು ರಾಮದೂತರೊಡನೆ ಹೋರಾಡಿ ಗೆದ್ದು, ತಾಯಿಯ ವ್ರತವನ್ನು ಸಂಪೂರ್ಣ ಮಾಡಿದನು (ಆನಂ. ರಾ).

ಶ್ರೀರಾಮನ ನೂರನೆಯ ಅಶ್ವಮೇಧಯಾಗವನ್ನು ನೋಡಲು ವಾಲ್ಮೀಕಿಮುನಿಗಳು ಸೀತೆಯೊಂದಿಗೆ ಬಂದಿದ್ದರು. ಸೀತೆಯು ಗುಪ್ತವಾಗಿ ಆ ಕಾಲದಲ್ಲಿ ಪರ್ಣಶಾಲೆಯಲ್ಲಿ ವಾಸಮಾಡಿಕೊಂಡಿದ್ದಳು. ಲವನು ರಾಮನ ಯಜ್ಞಾಶ್ವವನ್ನು ಕಟ್ಟಲು ರಾಮನ ಅಪ್ಪಣೆಯಂತೆ ಭರತ, ಸುಗ್ರೀವ, ಅಂಗದ, ಸುಮಂತ್ರ ಮೊದಲಾದವರು ಲವನೊಡನೆ ಯುದ್ಧಕ್ಕೆ ಬರಲು ಅವರನ್ನು ಲವನು ಮೋಹನಾಸ್ತ್ರದಿಂದ ಗೆದ್ದು, ಮೂರ್ಛೆಹೋದ ಅವರನ್ನು ಸೀತಾ ದೇವಿಗೆ ತೋರಿಸಿದನು. ಇದರಿಂದ ಕೆರಳಿದ ರಾಮನು ಲಕ್ಷ್ಮಣನನ್ನು ಯುದ್ಧರಂಗಕ್ಕೆ ಕಳುಹಿಸಿದನು. ಅವನು ಬ್ರಹ್ಮಾಸ್ತ್ರದಿಂದ ಲವನನ್ನು ಬಂಧಿಸಿ ಶ್ರೀರಾಮನ ಬಳಿಗೆ ತಂದನು. ಶ್ರೀರಾಮನು ಲವವನ್ನು ಕೊಲ್ಲುವಂತೆ ಲಕ್ಷ್ಮಣನಿಗೆ ಅಪ್ಪಣೆ ಮಾಡಲು 'ಬ್ರಹ್ಮಾಸ್ತ್ರದಿಂದಲೂ ಸಾಯದ ತನ್ನ ಮೇಲೆ ನೂರು ಬಿಂದಿಗೆ ನೀರನ್ನು ಹೊಯ್ದರೆ ಸಾಯುತ್ತೇನೆ' ಎಂದನು ಲವನು. ಲಕ್ಷ್ಮಣನು ಹಾಗೇ ಮಾಡಲು ಲವನಿಗೆ ದೇಹ ಉಬ್ಬಿ ಬ್ರಹ್ಮಾಸ್ತ್ರದಿಂದ ಬಿಡುಗಡೆಯಾಯಿತು (ಅನು.ರಾ).

ಲವಣಾಸುರ -- ನೋ -- ಮಧು. ಇವನು ಮಧು ದಾನವನ ಮಗ. ಇವನು ಸೂರ್ಯವಂಶದ ಸುಪ್ರಸಿದ್ಧ ರಾಜನಾದ ಮಾಂಧಾತನನ್ನು ಕೊಂದನು. ಇವನ ತಂದೆಗೆ ಶಿವನು ಕೊಟ್ಟಿದ್ದ ಶೂಲಾಯುಧವನ್ನು ಅರಮನೆಯಲ್ಲಿ ಬಿಟ್ಟು ಬೇಟೆಗೆ ಹೋಗಿರುವಾಗ, ಶತ್ರುಘ್ನನು ಇವನನ್ನು ತಡೆದು ಯುದ್ಧಮಾಡಿ ಕೊಂದು ಇವನ ಪಟ್ಟಣವಾದ ಮಧುಪುರದಲ್ಲಿ (ಮಧುರೆ) ಶ್ರೀರಾಮನ ಅಪ್ಪಣೆಯಂತೆ ರಾಜ್ಯಭಾರ ಮಾಡಲಿಕ್ಕೆ ತೊಡಗಿದನು (ರಾಮಾ. ಉತ್ತರ., ಮ. ಉ., ಸ).

ಲಾಕ್ಷ್ಮೀ -- ದುಷ್ಯಂತನ ಹಿರಿಯ ಹೆಂಡತಿ. ಈಕೆಗೆ ಲಕ್ಷಣಾ ಎಂಬ ಹೆಸರಿದೆ. ಈಕೆಯ ಮಗನೇ ಜನಮೇಜಯ. ನೋ -- ಲಕ್ಷ್ಮಣಾ (ಮ. ಆ).

ಲಾಂಗಲಿ -- ನದಿಯೊಂದು (ಮ. ಸ).

ಲಿಖಿತ -- ಶಂಖನ ಸಹೋದರ. ಮಹರ್ಷಿಯೊಬ್ಬ. ಶಂಖಲಿಖಿತರು ಕೂಡಿ ಒಂದು ಸ್ಮೃತಿಯನ್ನು ಬರೆದಿದ್ದಾರೆ. ದ್ವಾಪರಯುಗಕ್ಕೆ ಶಂಖಲಿಖಿತ ಸ್ಮೃತಿಯೇ ಆಧಾರವಂತೆ. ನೋ -- ಬಾಹುದಾ, ಶಂಖ. ಲಿಖಿತನು ಮಾಡಿದ ಅಪರಾಧಕ್ಕೆ ಸದ್ಯುಮ್ನನೆಂಬ ರಾಜನು ಅವನ ಕೈಗಳನ್ನೇ ಕತ್ತರಿಸಿದನು. ಮುಂದೆ ಶಂಖನ ಸೂಚನೆಯಂತೆ ಬಾಹುದಾ ನದಿಯಲ್ಲಿ ಲಿಖಿತನು ಮಿಂದೊಡನೆ ಅವನ ತುಂಡಾದ ಕೈಗಳು ಸರಿಯಾದವು. ಇವರು ಹಂಸಧ್ವಜನ ಪುರೋಹಿತರು. ಯುದ್ಧಸಮಯವನ್ನು ಮೀರಿ ಬಂದ ಸುಧನ್ವನನ್ನು ಇವರು ಕಾದ ಎಣ್ಣೆ ಕೊಪ್ಪರಿಗೆಗೆ ಹಾಕಿಸಿದರು. ನೋ -- ಸುಧನ್ವ (ಜೈ. ಭಾ., ಮ. ಸ., ಶಾಂ).

ಲೀಲಾಢ್ಯ -- ವಿಶ್ವಾಮಿತ್ರನ ಒಬ್ಬ ಮಗ (ಮ. ಅನು).

ಲೀಲಾವತಿ -- ೧. ವೇಶ್ಯೆಯೊಬ್ಬಳು. ಈಕೆ ಚಿನ್ನದ ಮರ, ದೇವಮೂರ್ತಿಗಳನ್ನು ದಾನಮಾಡಿ ಸದ್ಗತಿಪಡೆದಳು (ಮತ್ಸ್ಯಪು). ೨. ಮಯೂರಧ್ವಜನ ಪತ್ನಿ. ಈಕೆಗೆ ಕುಮುದ್ವತಿ ಎಂಬ ಹೆಸರಿದೆ. ನೋ -- ಮಯೂರಧ್ವಜ, ತಾಮ್ರಧ್ವಜ (ಜೈ. ಭಾ).

ಲುಬ್ಧಕ -- ಅರ್ಜುನಕನೆಂಬ ಬೇಡನೊಬ್ಬ (ಮ. ಅನು).

ಲೋಕಾಲೋಕ -- ಅತಿದಕ್ಷಿಣದ ಪರ್ವತ. ಇದರ ಒಂದು ಭಾಗ ಬೆಳಗುತ್ತಲೂ, ಇನ್ನೊಂದು ಭಾಗ ಕತ್ತಲಾಗಿಯೂ ಇದೆ. ಇದನ್ನು ಕೆಲವರು ದಕ್ಷಿಣಮೇರು ಎನ್ನುತ್ತಾರೆ (ಭಾಗ).

ಲೋಪಾಮುದ್ರಾ -- ವಿದರ್ಭರಾಜನ ಪುತ್ರಿ ; ಈಕೆ ಅಗಸ್ತ್ಯ ಮಹರ್ಷಿಯ ಪತ್ನಿ. ಈಕೆಗೆ ಸತ್ಯವತಿ ಎಂಬ ಹೆಸರಿದೆ. ಈಕೆ ಅಗಸ್ತ್ಯನನ್ನು ವಿವಾಹವಾದ ಮೇಲೆ ರಾಣಿ ಯೋಗ್ಯವಾದ ಉಡುಗೆತೊಡುಗೆಗಳನ್ನು ತಿರಸ್ಕರಿಸಿ, ನಾರುಬಟ್ಟೆ ಕೃಷ್ಣಾಜಿನಗಳನ್ನು ಧರಿಸಿ ಪತಿಯೊಡನೆ ಗಂಗಾದ್ವಾರಕ್ಕೆ ತಪಸ್ಸಿಗೆ ತೆರಳಿದಳು. ಅಲ್ಲಿ ಅಗಸ್ತ್ಯನಿಗೆ ಸಂತಾನದಲ್ಲಿ ಆಸೆ ಉಂಟಾಗಲು ಲೋಪಾಮುದ್ರೆಯ ಸೂಚನೆಯಂತೆ ರಾಣಿಯ ವೈಭವದಲ್ಲೇ ಭೋಗಿಸಬೇಕೆಂದು ಮುನಿಯು ಇಲ್ವಲ ದಾನವನಿಂದ ಸಂಪತ್ತನ್ನು ಪಡೆದು ಸಂತಾನದ ಬಯಕೆಯನ್ನು ಪೂರೈಸಿಕೊಂಡನು. ಈಕೆಯ ಮಗನೇ ದೃಢಸ್ಯು (ಮ. ವ).

ಲೋಮಪಾದ -- ನೋ -- ರೋಮಪಾದ. ಈತನ ಸಾಕುಮಗಳು ಶಾಂತಾ. ಅಳಿಯ ಋಷ್ಯಶೃಂಗ. ನೋ -- ಶಾಂತಾ, ಉಪದಾನವಿ (ಮ. ವ., ಹರಿ).

ಲೋಮಶ -- ೧. ಧರ್ಮರಾಜನಿಗೆ ಅರಣ್ಯವಾಸಕಾಲದಲ್ಲಿ ತೀರ್ಥಯಾತ್ರೆ ಮಾಡಿಸಿ, ಪುಣ್ಯಕಥೆಗಳನ್ನು ಹೇಳಿದ ಮಹರ್ಷಿ. ಅರ್ಜುನನು ಪಾಶುಪತಾಸ್ತ್ರವನ್ನು ಪಡೆದು ಸ್ವರ್ಗದಲ್ಲಿದ್ದ ವಿಚಾರವನ್ನು ಧರ್ಮರಾಜನಿಗೆ ತಿಳಿಸಿದ ಮುನಿಯೇ ಇವನು. ಇವನಿಗೆ ಬೃಹದಶ್ವನೆಂಬ ಹೆಸರೂ ಇದ್ದಂತೆ ತೋರುತ್ತದೆ. ನೋ -- ಬೃಹದಶ್ವ (ಮ. ವ).೨. ಶ್ವೇತದ್ವೀಪದಲ್ಲಿ ತಪಸ್ಸುಮಾಡುತ್ತಿದ್ದ ಮಹರ್ಷಿ. ಇವನು ತನ್ನ ಆಯುಷ್ಯದ ಕುರಿತು ಶಿವನೊಡನೆ 'ಬ್ರಹ್ಮನ ದಿನವೊಂದಕ್ಕೆ ನನ್ನ ದೇಹದ ಒಂದೊಂದು, ರೋಮ ಉದುರಲಿ. ದೇಹದ ಎಲ್ಲಾ ರೋಮಗಳು ಉದುರಿದೊಡನೆ ಮರಣ ಬರಲಿ' ಎನ್ನಲು ಶಿವನು 'ತಥಾಸ್ತು' ಎಂದನು. ಇವನು ಬಹುಕಾಲ ಬದುಕಿದ ಮುನಿ (ಸ್ಕಾಂ. ಪು).

ಲೋಮಮಹರ್ಷಣ -- ನೋ -- ರೋಮಹರ್ಷಣ.

ಲೋಹಿತ -- ವಿಶ್ವಾಮಿತ್ರನ ವಂಶದ ಮಂತ್ರಪ್ರವರ್ತಕನೊಬ್ಬ.

ಲೋಹಿತಾಕ್ಷ -- ೧. ಸೂತ. ಜನಮೇಜಯನ ಸರ್ಪಯಜ್ಞದಲ್ಲಿ ಸ್ಥಪತಿ (ಮುಖಂಡ) ಯಾದವನು. ೨. ಕುಮಾರಸ್ವಾಮಿಯ ಪಾರ್ಷದನೊಬ್ಬ. ೩. ಒಬ್ಬ ಪ್ರಸಿದ್ಧ ಪೌರಾಣಿಕನು. ಇವನು ಜನಮೇಜಯನಿಗೆ ತಕ್ಷಕನು ಇಂದ್ರನ ಮರೆಹೊಕ್ಕ ವಿಚಾರವನ್ನು ತಿಳಿಸಿದನು (ಮ. ಆ).

ಲೋಹಿತಾಶ್ವ -- ನೋ -- ರೋಹಿತಾಶ್ವ. ಹರಿಶ್ಚಂದ್ರ ರಾಜನ ಮಗ (ಮ. ವ).

ಲೌಹಿತ್ಯ -- ೧. ಸಮುದ್ರ. ೨. ನದ; ಪ್ರಾಗ್ಜ್ಯೋತಿಷಪುರದ ಉತ್ತರದಲ್ಲಿ ಹರಿಯುವ ಬ್ರಹ್ಮನದಿಯ ಒಂದು ಭಾಗ. ಇದೊಂದು ಪುಣ್ಯನದಿ (ಮ. ಸ., ಭೀ., ವ).

ವ

ವಂಶಗುಲ್ಮತೀರ್ಥ -- ಅಮರಕಂಟಕದ ಸಮಭೂಮಿಯಲ್ಲಿರುವ ಒಂದು ಪವಿತ್ರವಾದ ಕುಂಡ (ಮ. ವ).

ವಂಶಾ -- ದಕ್ಷಬ್ರಹ್ಮನ ಮೊಮ್ಮಗಳು. ಕಶ್ಯಪಮುನಿ ಮತ್ತು ಪ್ರಾಧೆಯ ಮಗಳು. ನೋ -- ಪ್ರಾಧಾ (ಮ. ಆ).

ವಕ್ರ -- ಕರೂಷದೇಶಾಧಿಪತಿಯಾದ ದಂತವಕ್ತ್ರನ ಇನ್ನೊಂದು ಹೆಸರು. ನೋ -- ದಂತವಕ್ತ್ರ (ಮ. ಸ).

ವಕ್ರದ್ವಾರ -- ಪರ್ವತವೊಂದು (ಮ. ಶಾಂ).

ವಕ್ಷೋಗ್ರೀವ -- ವಿಶ್ವಾಮಿತ್ರ ಋಷಿಯ ಪುತ್ರ ; ಋಷಿ (ಮ. ಅನು).

ವಂಗ -- ೧.ಬಲಿರಾಜನ ಮಗ. ಈತನ ತಾಯಿ ಸುದೇಷ್ಣೆಯಲ್ಲಿ ದೀರ್ಘತಮಸ ಋಷಿಯಿಂದ ಹುಟ್ಟಿದವ. ಇವನಿಗೆ ಒಬ್ಬ ಅಣ್ಣನೂ, ನಾಲ್ವರು ತಮ್ಮಂದಿರೂ ಇದ್ದರು. ನೋ -- ಬಲಿ, ದೀರ್ಘತಮ (ಮ. ಆ). ೨. ದೇಶವೊಂದು. ಬಂಗಾಳ ಪ್ರಾಂತ. ಇದನ್ನು ಪಾಂಡವರ ಕಾಲದಲ್ಲಿ ಸಮುದ್ರಸೇನ ಮತ್ತು ಈತನ ಮಗನಾದ ಚಂದ್ರಸೇನರೆಂಬ ರಾಜರು ರಾಜ್ಯಭಾರ ಮಾಡುತ್ತಿದ್ದರು. ಇವರು ಪಾಂಡವರ ಪಕ್ಷದಲ್ಲಿ ನಿಂತು ಕೌರವರೊಡನೆ ಹೋರಾಡಿದರು (ಮ. ಭೀ. ಸ.).

ವಜ್ರ -- ೧. ಶ್ರೀಕೃಷ್ಣನ ಮರಿಮಗ. ಈತನ ತಂದೆ ಅನಿರುದ್ಧ ; ತಾಯಿ ಉಷಾದೇವಿ. ಶ್ರೀಕೃಷ್ಣನು ನಿರ್ಯಾಣ ಹೊಂದಿದ ಮೇಲೆ ಅರ್ಜುನನು ದ್ವಾರಕೆಯಿಂದ ಅವನನ್ನು ಕರೆತಂದು ಇಂದ್ರಪ್ರಸ್ಥದಲ್ಲಿ ಪಟ್ಟಕಟ್ಟಿದನು (ಭಾಗ). ಅನಿರುದ್ಧನು ರುಕ್ಮಿಯ ಪೌತ್ರಿಯಾದ ಸುಭದ್ರೆಯನ್ನು ವಿವಾಹ ಮಾಡಿಕೊಂಡನು. ಈ ದಂಪತಿಗಳಿಗೆ ವಜ್ರನೆಂಬ ಮಗನಾದನು. ಇವನ ಮಗನೇ ಪ್ರತಿಬಾಹು. ಈ ಯದುಕುಲದಲ್ಲಿ ಅನೇಕ ಶತಸಹಸ್ರ ಕುಮಾರರು ಜನಿಸಿದರು. ಈ ಮಕ್ಕಳಿಗೆ ಧನುರ್ವಿದ್ಯಾಭ್ಯಾಸ ಮುಂತಾದುದರಲ್ಲಿ ಶಿಕ್ಷಿಸುವ ಗೃಹೋಪಾಧ್ಯಾಯರೇ ಮೂರುಕೋಟಿ ಎಂಟುಸಾವಿರದ ಎಂಟು ನೂರು ಮಂದಿ (ವಿಷ್ಣುಪು). ಯಾದವರು ಪರಸ್ಪರ ಹೋರಾಡಿ ನಾಶವಾದಾಗ ಈತನೊಬ್ಬನು ಮಾತ್ರ ಉಳಿದನು (ಭಾಗ., ಮ. ಮೌ).

ವಜ್ರದತ್ತ -- ಪ್ರಾಗ್ಜ್ಯೋತಿಷಪುರದ ರಾಜನಾದ ಭಗದತ್ತನ ಎರಡನೆಯ ಮಗ. ಇವನ ಅಣ್ಣನಾದ ಕೃತಪ್ರಜ್ಞನು ಭಾರತಯುದ್ಧದಲ್ಲಿ ನಕುಲನಿಂದ ಮಡಿದನು. ಇವನು ಅಶ್ವಮೇಧದ ಕುದುರೆಯ ರಕ್ಷಕನಾಗಿದ್ದ. ಅರ್ಜುನನೊಡನೆ ಹೋರಾಡಿ ಸೋತು ಕಪ್ಪ ತೆತ್ತನು.

ವಜ್ರಬಾಹು -- ದಶಾರಣದೇಶಾಧಿಪತಿ.

ವಜ್ರವಿಷ್ಕಂಭ -- ಗರುಡನ ಮಗ (ಮ. ವ).

ವಜ್ರವ್ಯೂಹ -- ಇದಕ್ಕೆ ಅಚಲವೆಂಬ ಹೆಸರೂ ಇದೆ. ಇದನ್ನು ನಿರ್ಮಿಸಿದವನು ಇಂದ್ರ. ಇದು ಶತ್ರುದುರ್ಭೇದ್ಯವಾದುದು (ಮ. ಭೀ). ಪಾಂಡವರ ಸೇನಾವ್ಯೂಹಗಳಲ್ಲೊಂದು.

ವಜ್ರಶೀರ್ಷ -- ಭೃಗುಮಹರ್ಷಿಗೆ ಪುಲೋಮೆಯಲ್ಲಿ ಹುಟ್ಟಿದ ಮಗ (ಮ.ಆ).

ವಜ್ರಾಂಗ -- ದಿತಿ ಮತ್ತು ಕಶ್ಯಪರ ಮಗ. ಇವನ ಪತ್ನಿ ವರಾಂಗಿ. ಇವನು ತನ್ನ ರಾಕ್ಷಸಬುದ್ಧಿ ತೊಲಗುವುದಕ್ಕಾಗಿಯೇ ಬ್ರಹ್ಮನನ್ನು ಕುರಿತು ತಪಸ್ಸುಮಾಡಿದನು. ಇವನು ತನ್ನ ತಪಸ್ಸಿನ ಕಾಲದಲ್ಲಿ ತನ್ನ ಪತ್ನಿ ವರಾಂಗಿಯನ್ನು ಇಂದ್ರನು ತುಂಬಾ ಪೀಡಿಸಿದುದಕ್ಕಾಗಿ ಮನದಲ್ಲೇ ನೊಂದು, ದೇವತೆಗಳನ್ನು ಸದೆಬಡಿಯಲು ಪುನಃ ತಪಸ್ಸು ಮಾಡಿ ತಾರಕನನ್ನು ಮಗನಾಗಿ ಪಡೆದನು. ಇವನು ತಾಯಿಯ ದುಃಖಕ್ಕೆ ತಾರಕನಾದುದರಿಂದ ತಾರನೆಂದು ಕರೆಯಲ್ಪಟ್ಟನು (ಮತ್ಸ್ಯಪು., ಸ್ಕಾಂ.ಪು).

ವಜ್ರಾಸ್ತ್ರ -- ಸ್ವರ್ಗಕ್ಕೆ ಅರ್ಜುನನನ್ನು ಕರೆದೊಯ್ದು ಇಂದ್ರನು ಈ ಮಹಾಸ್ತ್ರವನ್ನು ಆತನಿಗೆ ಉಪದೇಶಿಸಿದನು. ಇದರ ಪ್ರಯೋಗದಿಂದ ಆ ಕಾಲದಲ್ಲಿ ಮೇಘೋದಯವಾಗುವುದು ; ನವಿಲುಗಳು ನರ್ತಿಸುವುವು; ಮಹತ್ತಾದ ಧ್ವನಿಯುಂಟಾಗುವುದು (ಮ. ವ).

ವತ್ಸ -- ೧. ವೀರನಾದ ಪ್ರತರ್ದನನ ಮಗ ; ದಿವೋದಾಸನ ಮೊಮ್ಮಗ. ಪರಶುರಾಮನು ಕ್ಷತ್ರಿಯರನ್ನು ಸಂಹರಿಸುತ್ತ ಕಾಶೀದೇಶಕ್ಕೆ ಬಂದಾಗ ಇವನನ್ನು ವತ್ಸಗಳ (ಕರುಗಳು) ನಡುವೆ ಅಡಗಿಸಿಟ್ಟು ರಕ್ಷಿಸಿದುದರಿಂದ ಇವನಿಗೆ ವತ್ಸನೆಂದು ಹೆಸರಾಯಿತು (ಮ. ಶಾಂ). ಈತನ ಒಡಹುಟ್ಟಿದವನು ಗರ್ಗ. ನೋ -- ಗರ್ಗ, ಪ್ರತರ್ದನ, ದಿವೋದಾಸ (ವಾಯುಪು). ೨. ಬಾಲ್ಯದಲ್ಲೇ ಶ್ರೀಕೃಷ್ಣನು ಕೊಂದ ಒಬ್ಬ ರಾಕ್ಷಸ. ಇವನು ಕಂಸನಿಂದ ಪ್ರೇರಿತನಾಗಿ ಕೃಷ್ಣನನ್ನು ಕೊಲ್ಲಲು ವೇಷಾಂತರದಿಂದ ಬಂದನು. ಯಮುನಾತೀರದಲ್ಲಿ, ದನಗಳ ಮಂದೆಯಲ್ಲಿ ಕರುವಿನ ಆಕಾರದಿಂದ ಸೇರಿಕೊಂಡ ಇವನನ್ನು ಸರ್ವಜ್ಞನಾದ ಶ್ರೀಕೃಷ್ಣನು ತಿಳಿದುಕೊಂಡು ಬಲರಾಮನೊಡನೆ ಆ ಅಸುರನಿದ್ದ ಸ್ಥಳಕ್ಕೆ ಬಂದು ತಟ್ಟನೆ ಅದರ ಬಾಲ ಮತ್ತು ಹಿಂದಿನ ಕಾಲುಗಳನ್ನು ಒಂದಾಗಿ ಸೇರಿಸಿ, ಗಿರಗಿರನೆ ತಿರುಗಿಸಿದನು. ಆ ತಿರುಗಿಸುವ ರಭಸಕ್ಕೆ ಆ ವತ್ಸಾಸುರನ ಉಸಿರಾಟವು ನಿಂತು ಮೃತನಾದನು. ಕೃಷ್ಣನು ಆ ಮೃತಶರೀರವನ್ನು ಬೇಲದ ಮರಕ್ಕೆ ಹೊಡೆದು ತುಂಬಾ ಹಣ್ಣುಗಳನ್ನು ಉದುರಿಸಿದನು (ಭಾಗ).

ವತ್ಸನಾಭ -- ಒಬ್ಬ ಮಹರ್ಷಿ (ಮ. ಅನು).

ವತ್ಸರಾಜ -- ಒಬ್ಬ ಪ್ರಸಿದ್ಧ ರಾಜ (ಮ. ಆ.)ನೋ. -- ವಾತ್ಸ್ಯ.

ವತ್ಸಲಾ -- ಬಲರಾಮನ ಪುತ್ರಿ. ಅಭಿಮನ್ಯುವಿನ ಒಬ್ಬಳು ಪತ್ನಿ. ಪಾಂಡವರ ಅರಣ್ಯವಾಸದ ಮೊದಲು ಈಕೆಯನ್ನು ಅಭಿಮನ್ಯುವಿಗೆ ಕೊಡಲು ಬಲರಾಮನು ಒಪ್ಪಿದ್ದ. ಮುಂದೆ ಪಾಂಡವರು ವನವಾಸಿಗಳಾದ ಮೇಲೆ ಈಕೆಯನ್ನು

ದುರ್ಯೋಧನನ ಮಗನಾದ ಲಕ್ಷಣನಿಗೆ (ಲಕ್ಷ್ಮಣ) ಕೊಡಲು ನಿರ್ಧರಿಸಿದ. ಇದನ್ನು ತಿಳಿದ ಅಭಿಮನ್ಯುವು ಘಟೋತ್ಕಚನ ಸಹಾಯದಿಂದ ಆಕೆಯನ್ನು ಅಪಹರಿಸಿಕೊಂಡು ಹೋಗಿ ಮದುವೆಯಾದನು. ಈಕೆಗೆ ಶಶಿರೇಖೆಯೆಂದೂ ಹೆಸರಿದೆ.

ವತ್ಸಾವತ -- ವಸುದೇವನ ಒಬ್ಬ ತಮ್ಮ. ಇವನು ವಸುದೇವನ ಕೌಶಿಕನೆಂಬ ಮಗನನ್ನು ದತ್ತಕ್ಕೆ ತೆಗೆದುಕೊಂಡನು.

ವದಾನ್ಯ -- ಋಷಿಯೊಬ್ಬ. ಈತನ ಮಗಳಾದ ಸುಪ್ರಭೆಯನ್ನು ಅಷ್ಟಾವಕ್ರಮುನಿಯ ಸಂಯಮ ಶಕ್ತಿಗೆ ಮೆಚ್ಚಿ ವಿವಾಹಮಾಡಿಕೊಟ್ಟನು (ಮ. ಅನು).

ವಧೂಸರಾ-- ನದಿಯೊಂದು. ಪುಲೋಮರಾಕ್ಷಸನಿಂದ ಬಿಡುಗಡೆ ಹೊಂದಿದ ಭೃಗು ಪತ್ನಿಯಾದ ಪುಲೋಮೆಯ ಕಣ್ಣೀರಿನಿಂದ ಹುಟ್ಟಿದ ನದಿ. ಇದು ಬ್ರಹ್ಮನಿಟ್ಟ ಹೆಸರು (ವಧುವಿನ ಸಂಗಡ ಸರಿದು ಹೋದುದು). (ಮ. ಆ).

ವಧ್ರಿಮತಿ -- ರಾಜಪುತ್ರಿಯೊಬ್ಬಳು. ಈಕೆಯ ಗಂಡನು ನಪುಂಸಕನಾದುದರಿಂದ ಪುತ್ರ ಪ್ರಾಪ್ತಿಗಾಗಿ ಈಕೆ ಅಶ್ವಿನಿ ದೇವತೆಗಳನ್ನು ಸ್ತುತಿಸಿದಳು. ಆಗ ಅಶ್ವಿನಿದೇವತೆಗಳು ಅವಳಿಗೆ ಹಿರಣ್ಯಹಸ್ತನೆಂಬ ಮಗನನ್ನು ಕೊಟ್ಟರು. (ಋ).

ವನಾಯು (ವನಾಯವ)-- ೧. ದೇಶವೊಂದು. ಇಂದಿನ ಅರೇಬಿಯಾಕ್ಕೆ ಪ್ರಾಚೀನ ಕಾಲದಲ್ಲಿ ಇದ್ದ ಹೆಸರು (ಮ. ಭೀ). ೨. ದನುವಿನ ನಲವತ್ತು ಮಂದಿ ಮಕ್ಕಳಲ್ಲಿ ಒಬ್ಬ. ಇವನ ತಂದೆ ಕಶ್ಯಪಮುನಿ (ಮ. ಆ). ೩. ಪುರೂರವ ಮತ್ತು ಊರ್ವಶಿಯ ಏಳು ಮಂದಿ ಮಕ್ಕಳಲ್ಲಿ ಇವನು ಆರನೆಯವನು. ಆಯು, ಅಮಾವಸು, ವಿಶ್ವಾಯು, ಶ್ರುತಾಯು, ಧೃತಾಯು ಎಂಬ ಐವರು ಇವನ ಅಣ್ಣಂದಿರು. ಶತಾಯು ಎಂಬುವನು ಇವನ ತಮ್ಮ (ಮ. ಆ).

ವನೇಯು-- ರೌದ್ರಾಶ್ವನ ಮಗ. ನೋ -- ರೌದ್ರಾಶ್ವ (ಮ. ಆ).

ವಂದನ -- ಋಷಿಯೊಬ್ಬ. ರಾಕ್ಷಸರು ಇವನನ್ನು ಬಾವಿಗೆ ನೂಕಲು ಇವನು ಬಾವಿಯಿಂದ ಮೇಲೆ ಬರಲಾರದೆ ಅಶ್ವಿನಿದೇವತೆಗಳನ್ನು ಸ್ತುತಿಸಿದನು. ಅವರು ಬಂದು ಮೇಲೆ ತೆಗೆದರು (ಋ).

ವಂದಿ -- ವರುಣನ ಮಗ (ಮ. ವ).

ವಪುಷ್ಟಮಾ -- ಪಾಂಡವರ ಮರಿಮಗನಾದ ಜನಮೇಜಯನ ಪತ್ನಿ. ಈಕೆ ಕಾಶೀರಾಜನಾದ ಸುವರ್ಣವರ್ಮನ ಪುತ್ರಿ. ಈಕೆಯ ಮಕ್ಕಳು ಶತಾನೀಕ ಮತ್ತು

ಶಂಕುಕರ್ಣರು (ಮ. ಆ). ಜನಮೇಜಯನಿಗೆ ಶತಾನೀಕನೆಂಬ ಒಬ್ಬನೇ ಮಗ (ವಿಷ್ಣುಪು)

ವಪುಷ್ಮಂತ -- ಇವನು ವಿದರ್ಭರಾಜಪುತ್ರನು. ದಶಾರ್ಣದೇಶಾಧಿಪತಿಯಾದ ಚಾರುವರ್ಮನ ಮಗಳು, ಸುಮನೆಯು ಸ್ವಯಂವರದಲ್ಲಿ ನರಿಷ್ಯಂತನ ಮಗನಾದ ದಮನನ್ನು ವಿವಾಹವಾದಳು. ವಪುಷ್ಮಂತನು ಇದೇ ಕಾರಣದಿಂದ ದಮನನ್ನು ಅಪಮಾನಪಡಿಸಲೆಳಸಿ ಕೊನೆಗೆ ತಾನೇ ಅವನಿಂದ ಪರಾಜಿತನಾದನು. ಒಮ್ಮೆ ವಪುಷ್ಮಂತನು ಬೇಟೆಗೆ ಹೋದಾಗ ವಾನಪ್ರಸ್ಥಾಶ್ರಮಿಯಾಗಿದ್ದ ನರಿಷ್ಯಂತನನ್ನು ವಧಿಸಲು, ಇದನ್ನು ಕೇಳಿದ ದಮನು ವಿದರ್ಭದೇಶದ ಮೇಲೆ ದಂಡೆತ್ತಿಹೋಗಿ ವಪುಷ್ಮಂತನನ್ನು ಯುದ್ಧದಲ್ಲಿ ಸೋಲಿಸಿ ಕೊಂದನು. ನೋ -- ದಮ (ಮಾರ್ಕಂ. ಪು).

ವಯಸ್ಯ -- ಅಂಗೀರಸಮುನಿಯ ಮಗ; ಒಬ್ಬ ಋಷಿ (ಮ. ಅನು).

ವಯುನಾ -- ಪಿತೃಗಳ ಮಗಳು. ಈಕೆಯ ಸೋದರಿ ಧಾರಿಣಿ. ಇವರು ಬ್ರಹ್ಮವಾದಿನಿಯರು.

ವರ -- ವರಣೀಯನಾದ ಎಂದರೆ ಪೂಜ್ಯನಾದ ಬೃಹಸ್ಪತಿ ಅಥವಾ ಶುಕ್ರ ; ಶಿವ.

ವರದಾ (ವರ ದಾನತೀರ್ಥ) --ದುರ್ವಾಸಮುನಿಯು ವಿಷ್ಣುವಿಗೆ ವರ ಕೊಟ್ಟ ಸ್ಥಾನ. ಇದು ಒಂದು ನದಿ. ಇದನ್ನು ಬರೋಡಾ ಎನ್ನುತ್ತಾರೆ (ಮ. ವ).

ವರಾಂಗಿ -- ೧. ತ್ರಿಶಂಕುವಿನ ಮಗಳು; ಇವಳಿಗೆ ಸತ್ಯವ್ರತಳೆಂಬ ಹೆಸರೂ ಇತ್ತು (ವಿಷ್ಣುಪು). ವರಾಂಗಿಯು ಶರ್ಯಾತಿರಾಜನ ಪತ್ನಿ. ಈಕೆಗೆ ಸತ್ಯವ್ರತೆ ಎಂಬ ಹೆಸರೂ ಇದೆ. ಈಕೆಯ ಮಗನೇ ಅಹಂಯಾತಿ. ಇವನು ಚಂದ್ರವಂಶಕ್ಕೆ ಸೇರಿದವನು (ಮ. ಆ). ೨. ವಜ್ರಾಂಗನೆಂಬ ದೈತ್ಯನ ಪತ್ನಿ. ಈಕೆ ತಾರಕಾಸುರನ ತಾಯಿ. ನೋ -- ವಜ್ರಾಂಗ (ಮತ್ಸ್ಯಪು).

ವರಾಹ -- ೧. ಋಷಿಯೊಬ್ಬ (ಮ. ಸ).೨. ಒಂದು ಪುರಾಣ. ನೋ -- ಪುರಾಣಗಳು. ೩.ಶ್ರೀಮನ್ನಾರಾಯಣನ ಮೂರನೇ ಅವತಾರ. ಮಹಾಬಲಿಷ್ಠನಾದ ಹಿರಣ್ಯಾಕ್ಷನು ಭೀಕರವಾದ ಗದೆಯನ್ನು ತೂಗುತ್ತ ಸಲಿಲಸಾರ್ವಭೌಮನಾದ ವರುಣನ ಅರಮನೆ ಹೊಕ್ಕು ಅವನನ್ನು ಯುದ್ಧಕ್ಕೆ ಆಹ್ವಾನಿಸಲು, ಅದಕ್ಕೆ ಅವನು ಶ್ರೀಹರಿಯೇ ನಿನ್ನೊಡನೆ ಸೆಣಸಾಡಲು ಸಮರ್ಥನೆಂದು ಸೂಚಿಸಿದನು. ಆ ದೈತ್ಯನು ನಾರದನಿಂದ, ರಸಾತಲದಲ್ಲಿದ್ದು ಭುವನೋದ್ಧರಣವನ್ನು ಮಾಡುತ್ತಿರುವ ವರಾಹನೇ ಶ್ರೀಮಹಾವಿಷ್ಣುವೆಂದು ತಿಳಿದು ಹಿರಣ್ಯನು, ಸಮುದ್ರಮುಖಾಂತರವಾಗಿ ಅವನನ್ನು ಸಂಧಿಸಿ ಯುದ್ಧಕ್ಕೆ ಕರೆಯಲು, ಎಡಗಾಲಿನಿಂದ ಅವನು ರಕ್ಕಸನ ಮಹಾಗದೆಯನ್ನು ಒಡೆದು ಆತನನ್ನು ಸಂಹರಿಸಿದನು (ಹರಿ). ನೋ -- ಹಿರಣ್ಯಾಕ್ಷ.

ವರಾಹತೀರ್ಥ-- ೧. ಪುಣ್ಯತೀರ್ಥವೊಂದು. ಇದಕ್ಕೆ ಕೋವಾಮುಖವೆಂಬ ಹೆಸರಿದೆ. ಇಲ್ಲೇ ಮಹಾವಿಷ್ಣುವು ವರಾಹರೂಪವನ್ನು ಧರಿಸಿದನು (ಮ. ವ). ೨.ಪಶ್ಚಿಮ ಕರಾವಳಿಯ ತೀರ್ಥ. ಇದು ಕುಂದಾಪುರದಿಂದ ಸುಮಾರು ಐದು ಮೈಲು ಉತ್ತರದಲ್ಲಿದೆ. ಸಮುದ್ರ ಮತ್ತು ಹೊಳೆಯ ನಡುವೆ ಈ ಕ್ಷೇತ್ರವಿದೆ. ಇದಕ್ಕೆ ಮಾರಸ್ವಾಮಿ (ವರಾಹಸ್ವಾಮಿ) ಎನ್ನುತ್ತಾರೆ.

ವರಾಹಧ್ವಜ -- ಜಯದ್ರಥ (ಮ. ದ್ರೋ)ಇವನ ರಥದಲ್ಲಿ ವರಾಹಾಕಾರದ ಧ್ವಜವಿತ್ತು. ಇವನು ಭಾರತಯುದ್ಧದಲ್ಲಿ ಕೌರವನ ಹನ್ನೊಂದು ಅಕ್ಷೋಹಿಣಿ ಸೈನ್ಯಗಳ ಹನ್ನೊಂದು ಮಂದಿ ಸೇನಾಪತಿಗಳಲ್ಲೊಬ್ಬನು. ಭೀಷ್ಮನು ತಮ್ಮ ಸೈನ್ಯದ ಬಲಾಬಲವನ್ನು ಹೇಳುವಾಗ ಸೈಂಧವನನ್ನು (ಜಯದ್ರಥ) ಇಬ್ಬರು ರಥಿಕರಿಗೆ ಸಮಾನನು ಎಂದಿರುವನು (ಮ. ಉ).

ವರುಣ-- ನೋ -- ಭೃಗು. ೧. ಗಂಧರ್ವನೊಬ್ಬ. (ಮ. ಆ).೨.ಭರತಚಕ್ರವರ್ತಿಯ ಮೊಮ್ಮಗ. ನೋ -- ಶತಶೃಂಗ. ೩. ದ್ವಾದಶಾದಿತ್ಯರಲ್ಲೊಬ್ಬ (ಮ. ಆ). ೪.ಪಶ್ಚಿಮ ದಿಕ್ಕಿನ ಒಡೆಯ (ಮ.ಸ). ಈತನ ಪತ್ನಿ ಋದ್ಧಿ (ಮ. ಸ).ಈತನ ಇನ್ನೊಬ್ಬಳು ಪತ್ನಿ ವಾರುಣಿ. ಈಕೆಗೆ ಗೌರಿ ಎಂಬ ಹೆಸರೂ ಇದೆ (ಮ. ಸ).ಈತನ ಇನ್ನೊಬ್ಬಳು ಪತ್ನಿ ಶುಕ್ರಾಚಾರ್ಯರ ಮಗಳಾದ ಜ್ಯೇಷ್ಠಾದೇವಿ (ಮ. ಆ). ಈಕೆಯ ಮಕ್ಕಳು ಬಲ ಮತ್ತು ಅಧರ್ಮ. ಮಗಳು ವಿದ್ಯಾಭಿಮಾನಿಯಾದ ಸುರೆ (ಮ. ಆ).ವರುಣನಿಗೆ ಪುಷ್ಕರ ಮತ್ತು ಬಂದಿ ಎಂಬ ಮಕ್ಕಳೂ ಇದ್ದರು (ಮ. ವ). ಈ ಬಂದಿಯು ಜನಕರಾಜನ ಸಭೆಯಲ್ಲಿ ಕಹೋಲಾದಿ ಬ್ರಾಹ್ಮಣರ ಸಂಗಡ ವಾದಮಾಡಿ ಜಯಿಸಿ, ಅವರನ್ನು ನೀರಲ್ಲಿ ಮುಳುಗಿಸಿದನು. ನೋ -- ಅಷ್ಟಾವಕ್ರ, ಕಹೋಳ (ಮ. ವ).

ವರುಣನು ಅರ್ಜುನನ ಸಮೀಪಕ್ಕೆ ಬಂದು ಪಾಶುಪತಾಸ್ತ್ರವನ್ನು ಪಡೆದಮೇಲೆ ಮಹಾಸ್ತ್ರವನ್ನು ತಾನೂ ಕೊಟ್ಟುಹೋದನು. ಈತನು ಉಚಥ್ಯನ ಪತ್ನಿಯಾದ ಭದ್ರೆಯನ್ನು ಅಪಹಾರಮಾಡಿದನು. ಈತನಿಗೆ ಜಲಾಧಿಪತ್ಯದಲ್ಲಿ ಅಭಿಷೇಕವಾಯಿತು. ಸೀತೆಯು ನಿರ್ದೋಷಿ ಎಂದು ಅಗ್ನಿಪರೀಕ್ಷೆಯ ಕಾಲದಲ್ಲಿ ಈತನು ಹೇಳಿದನು (ಮ. ವ., ಅನು., ರಾಮಾ. ಯುದ್ಧ).

ಕ್ಷೀರಸಮುದ್ರದಲ್ಲಿ ತನ್ನ ಸಖಿಯರೊಡನೆ ಕ್ರೀಡಿಸುತ್ತಿದ್ದ ಊರ್ವಶಿಯನ್ನು ವರುಣನು ಕರೆಯಲು ಆಕೆಯು, ತಾನು ಮಿತ್ರನ ವಶದಲ್ಲಿದ್ದೇನೆ ಎನ್ನಲು ವರುಣನು ಆಕೆಗೆ ಮನುಷ್ಯನ ಪತ್ನಿಯಾಗುವಂತೆ ಶಾಪವಿತ್ತನು. ಅದೇ ಕಾಲದಲ್ಲಿ ಊರ್ವಶಿಯ ಯೋಚನೆಯಿಂದ ಉತ್ತೇಜನಾದ ಆತನು ತನ್ನ ತೇಜಸ್ಸನ್ನು ಕುಂಭವೊಂದರಲ್ಲಿ ಇಟ್ಟನು. ಮುಂದೆ ಮಿತ್ರನೂ ಅದೇ ಕುಂಭದಲ್ಲಿ

ತನ್ನ ತೇಜಸ್ಸನ್ನಿಟ್ಟನು. ಇದರಿಂದ ವರುಣನಿಂದ ಅಗಸ್ತ್ಯನೂ, ಮಿತ್ರನಿಂದ ವಸಿಷ್ಠನೂ ಜನಿಸಿದರು (ರಾಮಾ. ಉತ್ತರ).

ವರುಣನ ಮಗ ವಸಿಷ್ಠನು. ಆದುದರಿಂದ ಆಪವನೆಂಬ ಹೆಸರು ವಸಿಷ್ಠನಿಗೆ ಬಂತು (ಮ. ಆ).

ರಾವಣನು ದಿಗ್ವಿಜಯಕಾಲದಲ್ಲಿ ವರುಣಲೋಕಕ್ಕೆ ಹೋಗಿ ಅವನ ಮಗ ಮತ್ತು ಮೊಮ್ಮಗನಾದ ಗೋ ಮತ್ತು ಪುಷ್ಕರರ ಸಂಗಡ ಹೋರಾಡಿ ಗೆದ್ದು ವರುಣನನ್ನು ಯುದ್ಧಕ್ಕೆ ಕರೆಯಲು, ಆಗ ವರುಣನ ಮಂತ್ರಿಯಾದ ಪ್ರಭಾಸನು 'ವರುಣನು ಬ್ರಹ್ಮಲೋಕಕ್ಕೆ ಹೋಗಿದ್ದಾನೆ. ಅವನ ಮಕ್ಕಳನ್ನು ನೀನು ಗೆದ್ದುದರಿಂದ ಇನ್ನು ನಾವೆಲ್ಲಾ ನಿನಗೆ ಸೋತವರಾಗಿದ್ದೇವೆ' ಎಂದು ಒಪ್ಪಿಕೊಳ್ಳಲು ರಾವಣನು ಅಲ್ಲಿಂದ ಹೊರಟನು (ರಾಮಾ. ಉತ್ತರ). ನೋ -- ರೋಹಿತ.

ವರೂಥಿನಿ -- ಗಂಧರ್ವಕುಮಾರಿಯೊಬ್ಬಳು. ಈಕೆಯ ತಂದೆ ಕಲಿ ಎಂಬ ಗಂಧರ್ವ. ಈಕೆ ವರುಣಾನದೀತೀರದ ಒಬ್ಬ ಬ್ರಾಹ್ಮಣನನ್ನು ಕಂಡು ಮೋಹಿಸಲು, ಅವನು ಆಕೆಯ ಪ್ರೇಮದ ಯಾಚನೆಯನ್ನು ತಿರಸ್ಕರಿಸಿ ಹೊರಟು ಹೋದನು. ಇದನ್ನು ತಿಳಿದು, ಆಕೆಯಿಂದ ಈ ಮೊದಲು ತಿರಸ್ಕರಿಸಲ್ಪಟ್ಟ ಕರಿ ಎಂಬ ಇನ್ನೊಬ್ಬ ಗಂಧರ್ವನು ಆ ಬ್ರಾಹ್ಮಣಕುಮಾರನ ವೇಷದಿಂದಲೇ ಅವಳನ್ನು ಕೂಡಿ ಅವಳಿಂದ ಸರ್ವೋಚಿಸನೆಂಬ ತೇಜಸ್ವಿಯಾದ ಮಗನನ್ನು ಪಡೆದನು (ಮಾರ್ಕಂ. ಪು).

ವರೇಣ್ಯ -- ೧. ಭೃಗುಮುನಿಗೆ ಪುಲೋಮೆಯಲ್ಲಿ ಹುಟ್ಟಿದ ಮಗ. ೨. ಶ್ರೇಷ್ಠ

ವರ್ಗಾ--ಶಾಪದಿಂದ ಮೊಸಳೆಯಾಗಿದ್ದ ಅಪ್ಸರೆಯೊಬ್ಬಳು. ಈಕೆಗೆ ಅರ್ಜುನನಿಂದ ಶಾಪವಿಮೋಚನೆಯಾಯಿತು. ನೋ --ನಾರೀತೀರ್ಥ (ಮ. ಆ.,ಸ).

ವರ್ಚಾ (ವರ್ಚಸ್) -- ಚಂದ್ರನ ಮಗನೊಬ್ಬ. ಈತನೇ ಅಭಿಮನ್ಯುವಾಗಿ ಜನಿಸಿದನು. ನರಕವು ಇಂದ್ರಜಾಲದಂತೆ ಧರ್ಮರಾಜನ ಕಣ್ಣಮುಂದಿನಿಂದ ಮಾಯವಾಗಲು ಧರ್ಮರಾಯನು ಸುರಗಂಗೆಯಲ್ಲಿ ಮಿಂದು ತನ್ನ ಹಿಂದಿನ ಮನುಷ್ಯದೇಹವನ್ನು ಕಳಚಿ ಬಿಟ್ಟು ದೇವಯೋಗ್ಯವಾದ ಪ್ರಜ್ವಲಿಸುವ ದೇಹವನ್ನು ಹೊಂದಿ ಇಂದ್ರನ ಹಿಂದೆಯೆ ಹೊರಟುಹೋದನು. ಆಗ ಭೀಮನು ವಾಯುವಿನ ಬಳಿಯಲ್ಲೂ, ಅರ್ಜುನನು ಇಂದ್ರನ ಸಿಂಹಾಸನದ ಪಕ್ಕದಲ್ಲೂ, ದ್ರೌಪದಿದೇವಿಯು ಶಚೀದೇವಿಯ ಬಳಿಯಲ್ಲೂ, ಕರ್ಣನು ಸೂರ್ಯಮಂಡಲದಲ್ಲಿಯೂ, ಅಭಿಮನ್ಯುವು ಚಂದ್ರಮಂಡಲದಲ್ಲಿಯೂ -- ಹೀಗೆ ಎಲ್ಲರೂ ತಾವು ಯಾವ ಯಾವ ದೇವತಾಂಶದಿಂದ ಹುಟ್ಟಿಬಂದರೋ

ಆಯಾ ದೇವತೆಗಳ ಬಳಿಯಲ್ಲೇ ಸ್ವರ್ಗಸುಖವನ್ನನುಭವಿಸುತ್ತಿರುವುದನ್ನು ಕಂಡು ಯುಧಿಷ್ಠಿರನು ಸಂತೋಷಪಟ್ಟನು (ಮ. ಆ., ಸ್ವರ್ಗಾ).

ವರ್ಧಮಾನಪುರ -- ಹಿಂದಿನ ಪ್ರತಿಷ್ಠಾನಪುರ. ಇಲ್ಲಿ ಚಂದ್ರವಂಶದ ಅನೇಕ ಮಂದಿ ರಾಜರು ರಾಜ್ಯಭಾರ ಮಾಡಿದ್ದರು. ನೋ -- ಪ್ರತಿಷ್ಠಾನಪುರ. ಪ್ರತಿಷ್ಠಾನಪುರಕ್ಕೆ ಮುಂದೆ ಹಸ್ತಿನಾಪುರವೆಂಬ ಹೆಸರಾಯಿತು. ಈ ಪಟ್ಟಣದಲ್ಲಿ ದುಷ್ಯಂತ, ಭರತ, ಅಭಿಮನ್ಯು, ಸುಹೋತ್ರ ಮೊದಲಾದ ರಾಜರು ಆಳಿದ ಮೇಲೆ ಹಸ್ತಿ ಎಂಬುವನ ಕಾಲದಲ್ಲಿ ಈ ನಗರದ ಜೀರ್ಣೋದ್ಧಾರವಾಗಿ ಹಸ್ತಿನಾಪುರವಾಯಿತು. ಗೋದಾವರೀ ನದೀತೀರಧಲ್ಲಿ ಪ್ರತಿಷ್ಠಾನಪುರವೆಂಬ ಪಟ್ಟಣವೊಂದಿತ್ತು (ಮ.ಆ).

ವರ್ಷ -- ಮಹಾದ್ವೀಪಗಳಲ್ಲಿನ ಭೂಭಾಗಗಳು. ಇವುಗಳ ಭಾಗಗಳೇ ಖಂಡಗಳು. ಹಿಂದೂದೇಶಕ್ಕೆ ಭಾರತವರ್ಷ ಮತ್ತು ಭರತಖಂಡವೆಂಬ ಹೆಸರಿದೆ. ಕುರು, ಹಿರಣ್ಮಯ, ರಮ್ಯಕ, ಇಲಾವೃತ, ಹರಿ, ಕೇತುಮಾಲ, ಭದ್ರಾಶ್ವ, ಕಿನ್ನರ ಮತ್ತು ಭಾರತ -- ಇವು ಒಂಬತ್ತು ವರ್ಷ ಅಥವಾ ಖಂಡಗಳು.

ವಲಲ -- ಅಜ್ಞಾತವಾಸಕಾಲದಲ್ಲಿ ಅಡುಗೆಭಟ್ಟನ ವೇಷದಲ್ಲಿದ್ದ ಭೀಮನ ಹೆಸರು. ವಲ ಮತ್ತು ಮಲ್ಲ ಎಂಬ ಎರಡು ಧಾತುಗಳು ಸಂವರಣಾರ್ಥದಲ್ಲಿ ಬರುತ್ತವೆ. (ಸಂವರಣ= ಮುಚ್ಚಿಡುವಿಕೆ; ಶತ್ರುಗಳ ಮೇಲೆ ಉಂಟಾದ ಕೋಪವನ್ನು ಮರೆಸಿಟ್ಟಿರುವವನು ವಲಲ) ಭೀಮನಿಗೆ ವಿಷದ ತಿಂಡಿಗಳನ್ನು ತಿನ್ನಿಸಿದ ದುರ್ಯೋಧನನ ಪಕ್ಷದ ಅಡುಗೆ ಭಟ್ಟ (ಮ. ವಿ).

ವಸಾತಯ -- ಬಾಹ್ಲೀಕದೇಶದ ಸಮೀಪವಿದ್ದ ದೇಶ (ಮ. ಸ).

ವಸಾತಿ -- ದುರ್ಯೋಧನನ ಪಕ್ಷದ ರಾಜನೊಬ್ಬ. ಚಕ್ರವ್ಯೂಹ ಭೇದನಕಾಲದಲ್ಲಿ ಇವನು ಅಭಿಮನ್ಯುವಿನಿಂದ ಹತನಾದನು (ಮ. ದ್ರೋ).

ವಸಿಷ್ಠ (ವಶಿಷ್ಠ) -- ಬ್ರಹ್ಮರ್ಷಿಯೊಬ್ಬ. ಇವನು ಬ್ರಹ್ಮನ ಮಾನಸಪುತ್ರ. ಈತನ ಪತ್ನಿ ಮಹಾಪತಿವ್ರತೆಯಾದ ಅರುಂಧತಿ. ಈಕೆ ನಾರದನ ಸೋದರಿ; ಶಕ್ತಿಯು ಈಕೆಯ ಮಗ. ಮೊಮ್ಮಗನೇ ಪರಾಶರ. ವಸಿಷ್ಠನು ಮಿತ್ರಾವರುಣರಿಂದ ಊರ್ವಶಿಯಲ್ಲಿ ಹುಟ್ಟಿದವನು. ನೋ -- ವರುಣ, ಊರ್ವಶಿ, ಮಿತ್ರ (ಭಾ). ಇವನು ವರುಣನ ಪುತ್ರನು. ಕಾರ್ತವೀರ್ಯಾಜುನನಿಂದ ಈತನ ಆಶ್ರಮ ದಹಿಸಲ್ಪಟ್ಟಿತು. ವಸಿಷ್ಠನ ಕಾಮಧೇನುವನ್ನು ಪಡೆಯಲಾರದೆ ವಿಶ್ವಾಮಿತ್ರನು ವಸಿಷ್ಠನನ್ನು ದ್ವೇಷಿಸುವುದರೊಂದಿಗೆ ಬ್ರಹ್ಮರ್ಷಿಯಾಗಲು ಘೋರತಪಸ್ಸನ್ನು ಮಾಡಿ ವಸಿಷ್ಠನ ಅನುಗ್ರಹದಿಂದ ಬ್ರಹ್ಮರ್ಷಿಯಾದನು. ಇಕ್ಷ್ವಾಕುವಂಶಕ್ಕೆ ವಸಿಷ್ಠನೆಂಬುವನು ಪುರೋಹಿತನಾಗಿದ್ದುದರಿಂದ ವಸಿಷ್ಠನೆಂಬುದು

ಸೂರ್ಯವಂಶದ ರಾಜರ ಪುರೋಹಿತರಾಗಿದ್ದ ಸಾಮಾನ್ಯವಾದ ಹೆಸರಾಗಿರಬೇಕು. ಅಗಸ್ತ್ಯನು ಹುಟ್ಟುತ್ತಲೇ ಮಿತ್ರನೊಡನೆ -- 'ನಾನು ನಿನ್ನ ವೀರ್ಯದಿಂದ ಹುಟ್ಟಿದವನಲ್ಲ' ಎಂದುದರಿಂದ ಅಗಸ್ತ್ಯನು ವರುಣನ ಮಗನೆಂದೂ, ವಸಿಷ್ಠನು ಮಿತ್ರನ ಮಗನೆಂದೂ ಹೇಳುತ್ತಾರೆ. ನೋ. -- ಹರಿಶ್ಚಂದ್ರ, ಕಲ್ಮಾಷಪಾದ, ಸೌದಾಸ, ವಿಪಾಶಾ, ವಿಶ್ವಾಮಿತ್ರ, ವಸಿಷ್ಠ ಅರುಂಧತಿಯರು ಆದರ್ಶದಂಪತಿಗಳು.

ಪ್ರಜಾಪತಿಯಿಂದ ಮರೀಚಿ ಜನಿಸಿದ. ಇವನ ಮಗನೇ ಕಶ್ಯಪ. ಈತನಿಗೆ ಅದಿತಿಯಲ್ಲಿ ಮಿತ್ರಾವರುಣರೆಂಬ ಅವಳಿಮಕ್ಕಳು ಹುಟ್ಟಿದರು. ಇವರಿಬ್ಬರೂ ಮಾಡುವ ಭವ್ಯಯಜ್ಞಕ್ಕೆ ದೇವತೆಗಳೂ ಗಂಧರ್ವರೂ ಪಿತೃಗಳೂ ಬಂದಂತೆ ಅಪ್ಸರೆಯರಲ್ಲಿ ಲಾವಣ್ಯಯುಕ್ತಳಾದ ಊರ್ವಶಿಯೂ ಬಂದಿದ್ದಳು. ದೀಕ್ಷಾಬದ್ಧರಾಗಿದ್ದ ಮಿತ್ರಾವರುಣರ ದೃಷ್ಟಿಯು ಊರ್ವಶಿಯ ಮೇಲೆ ಬಿತ್ತು. ಆಕೆಯನ್ನು ಕಂಡು ಮಿತ್ರಾವರುಣರು ವಿಕಾರ ವಶರಾದರು. ಅಖಂಡನಿಷ್ಠೆಯಿಂದ ಪಾಲಿಸಿದ್ದ ಅವರ ಬ್ರಹ್ಮಚರ್ಯವು ಶಿಥಿಲವಾಯಿತು. ಇಬ್ಬರಿಗೂ ವೀರ್ಯಸ್ಖಲನವಾಯಿತು. ಅದನ್ನು ಒಂದು ಕುಂಭದಲ್ಲಿಟ್ಟರು. ಅದರಲ್ಲಿ ಈರ್ವರು ಮುತ್ತಿನಂಥ ಮಕ್ಕಳು ಜನಿಸಿದುವು. ಮೊದಲನೆಯ ಮಗುವೇ ಅಗಸ್ತ್ಯ. ಆಮೇಲೆ ಕುಂಭದಲ್ಲಿದ್ದ ನೀರನ್ನು ಸರೋವರದಲ್ಲಿ ಚೆಲ್ಲಿದಾಗ ಅದರಲ್ಲಿದ್ದ ಎರಡನೆಯ ಮಗುವು ಸರೋವರದಲ್ಲಿ ತೇಲುತ್ತ ಸಾಗಿಬಂದು ಒಂದು ಕಮಲದ ದಳದ ಮೇಲೆ ಕುಳಿತಿತು. ಈ ಮಗುವು ವಿಶಿಷ್ಟರೀತಿಯಲ್ಲಿ ಜನಿಸಿದುದರಿಂದ ಇದಕ್ಕೆ ದೇವತೆಗಳು ವಸಿಷ್ಠನೆಂದು ನಾಮಕರಣ ಮಾಡಿದರು. ಇವರು ಬ್ರಹ್ಮರ್ಷಿಗಳು.

ಆಪವನಾಮಕ ಪ್ರಜಾಪತಿಗಳಾದ ವಸಿಷ್ಠರು (ಬ್ರಹ್ಮದೇವರು) ಒಬ್ಬ ಅತ್ಯಂತ ಸೌಂದರ್ಯವತಿಯಾದ ಸ್ತ್ರೀಯನ್ನು ನಿರ್ಮಾಣಮಾಡಿದರು. ಇವಳೇ ಪ್ರಪಂಚದ ಮೊತ್ತಮೊದಲಿನ ಸ್ತ್ರೀ. ಇವಳಿಗೆ ಶತರೂಪೆಯೆಂದು ನಾಮಕರಣ ಮಾಡಿದರು. ಇವಳು ಮಹಾತಪಸ್ವಿನಿಯಾಗಿದ್ದಳು. ವಸಿಷ್ಠರು ಈಕೆಯನ್ನು ಪತ್ನಿಯನ್ನಾಗಿ ಸ್ವೀಕರಿಸಿದರು. ಇವರಲ್ಲಿ ಇವಳಿಗೆ ವೀರನೆಂಬ ಮಗನು ಹುಟ್ಟಿದನು. (ಹರಿ).

ದಕ್ಷಪ್ರಜಾಪತಿಯು ತನ್ನ ಮಗಳಾದ ಊರ್ಜಾಲಾ ಎಂಬುವಳನ್ನು ವಸಿಷ್ಠರಿಗೆ ಲಗ್ನಮಾಡಿಕೊಟ್ಟನು. ವಸಿಷ್ಠರಿಂದ ಈಕೆಗೆ ಪುಂಡರೀಕಾ ಎಂಬ ಕುಮಾರಿಯೂ ಏಳು ಮಂದಿ ಗಂಡುಮಕ್ಕಳೂ ಹುಟ್ಟಿದರು. ಈ ಏಳು ಮಂದಿಯೇ ಸಪ್ತರ್ಷಿಗಳು ಎಂದು ಪ್ರಖ್ಯಾತರಾದರು (ಬ್ರ. ಪು). ನೋ -- ಪುಂಡರೀಕಾ.

ವಸಿಷ್ಠರು ಬಿಳಿಬಣ್ಣದವರು. ಇವರು ತಮ್ಮ ತಲೆಯ ಜಡೆಯನ್ನು ತಮ್ಮ ತಲೆಯ ಮೇಲ್ಭಾಗದಲ್ಲಿ ಬಲಬದಿಗೆ ಕಟ್ಟುತ್ತಿದ್ದರು (ಋ). ಸ್ವಯಂಭು ಮನುವಿನ ಪತ್ನಿಯಾದ ಶತರೂಪೆಯ ಮಗಳು ದೇವಹೂತಿಯೇ ಕರ್ದಮ ಋಷಿಗಳ ಪತ್ನಿ. ಈ ದಂಪತಿಗಳ ಪುತ್ರನೇ ಕಪಿಲ. ಈತನ ಸೋದರಿಯೇ ಅರುಂಧತಿ (ಭಾಗ). ಅರುಂಧತಿಯು ಕಶ್ಯಪರ ಮಗಳೆಂದು ವಾಯುಪುರಾಣದಲ್ಲಿ ಹೇಳಿದೆ. ವಸಿಷ್ಠ -- ಅರುಂಧತಿಯರ ಪುತ್ರನೇ ಶಕ್ತಿ. ಶಕ್ತಿಯ ಪತ್ನಿ ಅದೃಶ್ಯಂತಿ. ಈ ದಂಪತಿಗಳ ಮಗ ಪರಾಶರ. ಈತನ ಮಗನೇ ವೇದವ್ಯಾಸ.

ತೃತ್ಸು ಎಂಬ ರಾಜನು ಶತ್ರುವಿನೊಡನೆ ಹೋರಾಡಿ ಪಲಾಯನಮಾಡಲು ಅವನು ವಸಿಷ್ಠರಿಗೆ ಶರಣುಬಂದನು. ವಸಿಷ್ಠನು ಇಂದ್ರನ ಸಹಾಯದಿಂದ ಅವನಿಗೆ ಜಯ ಸಂಪಾದಿಸಿಕೊಟ್ಟನು. ವಸಿಷ್ಠರೊಮ್ಮೆ ಯಜ್ಞದಲ್ಲಿ ತೊಡಗಿದ್ದಾಗ ಜರೂಥನೆಂಬ ದೈತ್ಯನು ಅದನ್ನು ಕೆಡಿಸಲೆತ್ನಿಸಿದಾಗ ವಸಿಷ್ಠನು ಅಗ್ನಿಯ ಸಹಾಯದಿಂದ ಅವನನ್ನು ಕೊಲ್ಲಿಸಿದರು.

ಹರಿಶ್ಚಂದ್ರನ ಸತ್ಯಸಂಧತೆಯ ಕುರಿತು ವಿಶ್ವಾಮಿತ್ರನೊಡನೆ ವಾಗ್ವಾದ ನಡೆಸಿ ಕೊನೆಗೆ ವಸಿಷ್ಠರೇ ಗೆದ್ದರು (ದೇವೀಭಾ).

ವಸಿಷ್ಠಪರ್ವತ -- ತೀರ್ಥಯಾತ್ರೆಯ ಕಾಲದಲ್ಲಿ ಅರ್ಜುನನು ಇಲ್ಲಿಗೆ ಬಂದಿದ್ದನು. ಇದು ಹಿಮಾಲಯದ ತಪ್ಪಲಿನಲ್ಲಿದೆ (ಮ. ಆ).

ವಸಿಷ್ಠಾ ಪ್ರವಾಹ -- ಸರಸ್ವತೀನದಿಯ ಸ್ಥಾಣುತೀರ್ಥವೆಂಬ ಘಟ್ಟಕ್ಕೆ ಈ ಹೆಸರಿದೆ. ಇಲ್ಲಿಯೇ ಪೂರ್ವದಲ್ಲಿ ರುದ್ರನು ದೊಡ್ಡ ತಪಸ್ಸನ್ನು ಮಾಡಿದ್ದನು. ಇವನು ಸರಸ್ವತಿಯನ್ನು ಪೂಜಿಸಿ, ಅಲ್ಲಿ ಆಕೆಯನ್ನು ಸ್ಥಾಪಿಸಿದುದರಿಂದ ಇದಕ್ಕೆ ಸ್ಥಾಣುತೀರ್ಥವೆಂದು ಹೆಸರಾಯಿತು. ಈ ಸ್ಥಾಣುತೀರ್ಥವೆಂಬ ಘಟ್ಟದಲ್ಲೇ ವಸಿಷ್ಠನ ಆಶ್ರಮವಿತ್ತು. ಈ ತೀರ್ಥವು ವಿಶ್ವಾಮಿತ್ರನ ಆಶ್ರಮಕ್ಕೆದುರಾಗಿ ಪೂರ್ವದ ಕಡೆಗಿತ್ತು. ಇಲ್ಲೇ ದೇವತೆಗಳು ದೈತ್ಯನಾಶಕ್ಕಾಗಿ ಷಣ್ಮುಖನನ್ನು ಸೈನ್ಯಾಧಿಪತ್ಯದಲ್ಲಿ ಅಭಿಷೇಕಮಾಡಿದರು. ವಿಶ್ವಾಮಿತ್ರನು ಸರಸ್ವತಿನದಿಯ ಪ್ರವಾಹವೇಗದಿಂದ ವಸಿಷ್ಠನನ್ನು ಇತ್ತ ಕಡೆಗೆ ಕೊಚ್ಚಿಸಿ ತರಬೇಕೆಂದು ನಿಶ್ಚಯಿಸಿ, ಕೋಪದಿಂದ ಕೆಂಪೇರಿದ ಕಣ್ಣುಗಳೊಡನೆ ಆ ನದಿಯನ್ನು ಸ್ಮರಿಸಿದನು. ಅವಳು ಬಣ್ಣಗೆಟ್ಟಮುಖದಿಂದ ಪ್ರತ್ಯಕ್ಷಳಾಗಲು ವಿಶ್ವಾಮಿತ್ರನು ಆ ನದಿಯೊಡನೆ 'ನೀನು ವಸಿಷ್ಠನನ್ನು ಈಗಲೇ ಈ ತೀರಕ್ಕೆ ಸೆಳೆದು ತರಬೇಕು' ಎನ್ನಲು, ಅವಳು ಹಾಗೇ ಮಾಡಲು, ವಿಶ್ವಾಮಿತ್ರನು ವಸಿಷ್ಠನ ಕೊಲೆಗಾಗಿ ಒಂದು ಆಯುಧವನ್ನು ಬೀಸಿದನು. ಆದರೆ ಸರಸ್ವತೀ ನದಿಯು ವಸಿಷ್ಠನನ್ನುಳಿಸಬೇಕೆಂದು ಥಟ್ಟನೆ ಆತನನ್ನು ಪೂರ್ವತೀರದೆಡೆಗೆ

ಎಳೆದುಕೊಂಡು ಹೋದಳು. ಇದರಿಂದ ಕೋಪಗೊಂಡ ವಿಶ್ವಾಮಿತ್ರನು 'ನನ್ನ ಕೈಯಿಂದ ವಸಿಷ್ಠರನ್ನು ನೀನು ತಪ್ಪಿಸಿದುದರಿಂದ ನೀನು ರಾಕ್ಷಸರಿಗೆ ಪ್ರಿಯವಾದ ರಕ್ತವನ್ನು ಪ್ರವಹಿಸು' ಎಂದು ಶಪಿಸಿದನು. ಈ ಶಾಪದಿಂದ ಆ ನದಿಯು ಒಂದು ವರ್ಷದವರೆಗೆ ರಕ್ತಮಿಶ್ರವಾದ ನೀರನ್ನೇ ಪ್ರವಹಿಸುತ್ತಿದ್ದಳು. ಮುಂದೆ ಅನೇಕ ಋಷಿಗಳು ವ್ರತೋಪವಾಸದಿಂದಲೂ, ಇಂದ್ರಿಯನಿಗ್ರಹದಿಂದಲೂ, ಕಠಿಣ ನಿಯಮಗಳಿಂದಲೂ ಪಶುಪತಿಯನ್ನಾರಾಧಿಸಿ ಅವನ ಅನುಗ್ರಹದಿಂದ ಸರಸ್ವತೀ ನದಿಗೆ ಶಾಪವಿಮೋಚನೆಯಾಗುವಂತೆ ಮಾಡಿದರು. ವಿಶ್ವಾಮಿತ್ರನಿಂದ ಶಾಪಹೊಂದಿದ ಸರಸ್ವತೀನದಿಯ ಘಟ್ಟಕ್ಕೆ ವಸಿಷ್ಠಾ ಪ್ರವಾಹ ಎಂಬ ಹೆಸರು ಬಂತು (ಮ. ಶ).

ವಸು -- ೧. ಜಮದಗ್ನಿಯ ಐವರು ಮಕ್ಕಳಲ್ಲಿ ಇವನು ಮೂರನೆಯವನು. ನೋ -- ಜಮದಗ್ನಿ (ಮ. ವ). ೨. ಉಪರಿಚರವಸು (ಮ. ಆ).೩. ಅಷ್ಟವಸುಗಳು ನೋ -- ಅಷ್ಟವಸು.

ವಸುದಾ (ವಸುಧಾ) -- ಅಂಗಿರಸನ ಪತ್ನಿ. ನೋ -- ಅಂಗಿರಸ (ಮ. ವ).

ವಸುದಾನ -- ೧. ಪಾಂಚಾಲದ ಕ್ಷತ್ರಿಯನೊಬ್ಬ. ಇವನು ಅತಿರಥ; ದ್ರೋಣನಿಂದ ಹತನಾದನು. ಇವನ ವಿಚಾರವನ್ನು ಭೀಷ್ಮನು ದುರ್ಯೋಧನನೊಡನೆ ಹೇಳಿದನು (ಮ. ಸ., ಉ., ದ್ರೋ).೨. ಕಾಶಿಯ ಕ್ಷತ್ರಿಯನೊಬ್ಬ. ಪಾಂಡವರ ಪಕ್ಷದವನು. ಭಾರತ ಯುದ್ಧದ ಹದಿನೈದನೇ ದಿನ ಹತನಾದನು (ಮ. ದ್ರೋ, ಕ). ೩.ಪಾಂಸುದೇಶಾಧಿಪನಾದ ಕ್ಷತ್ರಿಯ (ಮ. ಸ).

ವಸುದೇವ -- ಶ್ರೀಕೃಷ್ಣನ ತಂದೆ ; ದೇವಕಿಯ ಪತಿ ; ಕುಂತಿಯ ಅಣ್ಣ; ಯದುವಂಶದ ಶೂರರಾಜನ ಮಗ (ಭಾಗ). ದೇವಗರ್ಭನ ಮಗ ಶೂರ; ಈತನ ಪತ್ನಿ ಮಾರಿಷೆ. ಈ ದಂಪತಿಗಳ ಮಗನೇ ವಸುದೇವ. ವಸುದೇವ ಹುಟ್ಟಿದ ಕಾಲದಲ್ಲಿ ಮುಂದೆ ಈತನ ಗೃಹದಲ್ಲಿ ಭಗವಂತನ ಅವತಾರವಾಗುವುದೆಂದು ಯೋಗದೃಷ್ಟಿಯಿಂದ ದೇವತೆಗಳು ತಿಳಿದು ದುಂದುಭಿ ಮೊದಲಾದವುಗಳನ್ನು ಬಾರಿಸಿದುದರಿಂದ ಇವನಿಗೆ ಆನಕದುಂದುಭಿ ಎಂಬ ಹೆಸರಾಯಿತು. ಇವನಿಗೆ ದೇವಭಾಗ, ದೇವಶ್ರವ, ಅಷ್ಟಕ, ಕಕುಚ್ಚತ್ರ, ಧಾರಕ, ಸೃಂಜಯ, ಶ್ಯಾಮ, ಶ್ಯಮಿಕ, ಗಂಡೂಷರೆಂಬ ಒಂಬತ್ತು ಮಂದಿ ಸೋದರರಿದ್ದರು. ಪೃಥೆ, ಶ್ರುತದೇವಿ, ಶ್ರುತಕೀರ್ತಿ, ಶ್ರುತಶ್ರವಾ, ರಾಜಾಧಿದೇವಿಯರೆಂದು ಈತನಿಗೆ ಐವರು ಭಗಿನಿಯರು. ಇವನಿಗೆ ಪೌರವಿ, ರೋಹಿಣಿ, ಮದಿರೆ, ಭದ್ರೆ, ದೇವಕಿ ಮೊದಲಾದ ಹಲವರು ಪತ್ನಿಯರಿದ್ದರು. ಇವರಲ್ಲಿ ರೋಹಿಣಿಗೆ ಬಲಭದ್ರ, ಶಠ, ಸಾರಣ, ದುರ್ಮದ ಮೊದಲಾದ ಮಕ್ಕಳೂ, ಮದಿರೆಗೆ ನಂದ, ಉಪನಂದ,

ಕೃತಕ ಮೊದಲಾದ ಮಕ್ಕಳಿದ್ದರು. ಭದ್ರೆಗೆ ಉಪನಿಧಿ, ಗದಾ ಮೊದಲಾದ ಮಕ್ಕಳೂ, ವೈಶಾಲಿ ಎಂಬುವಳಿಗೆ ಕೌಶಿಕನೂ, ದೇವಕಿಗೆ ಕೀರ್ತಿಮಂತ, ಸುಷೇಣ, ದಾಯು, ಭದ್ರಸೇನ, ಋಜುದಾಸ, ಭದ್ರದೇವರೆಂಬ ಆರು ಮಂದಿ ಮಕ್ಕಳೂ ಕ್ರಮವಾಗಿ ಹುಟ್ಟಿದರು. ಇವರನ್ನೆಲ್ಲ ಕಂಸನು ಕೊಂದನು. ಅನಂತರ ಏಳನೆಯ ಗರ್ಭವನ್ನು ಅರ್ಧರಾತ್ರಿಯಲ್ಲಿ ಭಗವತ್ ಪ್ರೇರಿತೆಯಾದ ಯೋಗಮಾಯೆ ಆಕರ್ಷಿಸಿ ರೋಹಿಣಿಯ ಉದರದಲ್ಲಿ ಹಾಕಿದಳು. ಆಕರ್ಷಿಸಿ ಹಾಕಿದುದರಿಂದ ಹುಟ್ಟಿದ ಮಗುವಿಗೆ ಸಂಕರ್ಷನೆಂದು (ಬಲರಾಮ). ಹೆಸರಾಯಿತು. ಎಂಟನೆಯ ಗರ್ಭದಲ್ಲಿ ಜನಿಸಿದವನೇ ಶ್ರೀಕೃಷ್ಣ. ನೋ -- ಬಲರಾಮ, ಶ್ರೀಕೃಷ್ಣ, ದೇವಕಿ, ರೋಹಿಣಿ (ವಿಷ್ಣುಪು). ಯದುವಂಶದ ಶೂರನಿಗೆ ಭೋಜ್ಯ ಎಂಬ ಪಟ್ಟದರಸಿಯಲ್ಲಿ ವಸುದೇವನೇ ಮೊದಲಾದ ಹತ್ತು ಮಂದಿ ಮಕ್ಕಳು ಹುಟ್ಟಿದರು. ಇವರಲ್ಲಿ ಹಿರಿಯವನಾದ, ಅತ್ಯಂತ ಸುಂದರನಾದ ವಸುದೇವನು ಜನಿಸಿದೊಡನೆ ದೇವ ದುಂದುಭಿ ಮೊಳಗಿ ಪುಷ್ಪವೃಷ್ಟಿಯಾದುದರಿಂದ ಇವನಿಗೆ ಆನಕದುಂದುಭಿ ಎಂಬ ಹೆಸರು ಬಂತು. ಇವನ ಅನಂತರ ಶೂರನಿಗೆ ದೇವಭಾವ, ದೇವಶಿರ, ಅನಾಧೃಷ್ಟಿ, ಕನವಕ, ವಚ್ಛವಾನ್, ಗೃಂಜಿಮ, ಶ್ಯಾಮ, ಶಮೀಕ, ಗಂಡೂಷರೆಂಬ ಒಂಬತ್ತು ಮಂದಿ ಮಕ್ಕಳು ಹುಟ್ಟಿದರು. ಇವರಲ್ಲದೆ ಪೃಥುಕೀರ್ತಿ, ಪೃಥಾ, ಶ್ರುತದೇವಾ, ರಾಜಾಧಿದೇವಿಯರೆಂಬ ಹೆಣ್ಣುಮಕ್ಕಳೂ ಇದ್ದರು. ವಸುದೇವನ ತಮ್ಮನಾದ ದೇವಭಾಗನಿಗೆ ಭಕ್ತಾಗ್ರೇಸರನಾದ ಉದ್ಧವನು ಜನಿಸಿದನು. ಇವನು ಮಹಾವಿದ್ವಾಂಸನೂ, ದೇವಸಮಾನವಾದ ಕೀರ್ತಿಶಾಲಿಯಾದುದರಿಂದ ಇವನಿಗೆ ದೇವಶ್ರವ ಎಂಬ ಹೆಸರೂ ಇದೆ. ಅನಾಧೃಷ್ಟಿಗೆ ಅಶ್ಮಕಿಯಲ್ಲಿ ನಿವೃತ್ತಶತ್ರು ಎಂಬ ಮಗನಾದನು. ದೇವಶ್ರವನೆಂಬ (ದೇವಶಿವ) ಮೂರನೆಯ ಸೋದರನಿಗೆ ಶತ್ರುಘ್ನನೆಂಬ ಮಗನು ಹುಟ್ಟಿದನು. ಇವನ ತಂದೆಯು ಯಾವುದೋ ಕಾರಣಕ್ಕಾಗಿ ಅಡವಿಯಲ್ಲಿ ಬಿಟ್ಟು, ಅಲ್ಲಿ ಭಿಲ್ಲರಿಂದ ಪೋಷಿತನಾಗಿ ಏಕಲವ್ಯನೆಂಬ ಪ್ರಸಿದ್ಧ ಬಿಲ್ಲುಗಾರನಾದನು. ವಸುದೇವನಿಗೆ ರೋಹಿಣಿ, ಇಂದಿರಾ, ವೈಶಾಖಿ ಭದ್ರ, ಸುನಾಮ್ನೀ, ಸಹದೇವಾ, ಶಾಂತಿದೇವಾ, ಶ್ರೀದೇವಾ, ದೇವರಕ್ಷಿತ, ವೃಕದೇವಿ, ಉಪದೇವಿ, ಮತ್ತು ದೇವಕಿ ಎಂಬ ಹನ್ನೆರಡು ಜನ ಧರ್ಮಪತ್ನಿಯರೂ, ಸುತನು, ವಡವಾಯರಾದ ಎಂಬಿಬ್ಬರು ಭೋಗಪತ್ನಿಯರೂ ಇದ್ದರು. ಇವರಲ್ಲಿ ಮೊದಲನೆಯವರೆಲ್ಲ ಪುರುಕುಲೋದ್ಭವರು. ರೋಹಿಣಿಯು ಬಾಹ್ಲೀಕನ ಮಗಳು. ದೇವಕಿ ಮೊದಲಾದ ಕೊನೇ ಏಳು ಜನರು ದೇವಕನ ಮಕ್ಕಳು. ರೋಹಿಣಿಗೆ ಏಳು ಮಂದಿ ಗಂಡುಮಕ್ಕಳೂ, ಚಿತ್ರಾ (ಸುಭದ್ರೆ) ಎಂಬ ಹೆಣ್ಣುಮಗಳೂ ಹುಟ್ಟಿದರು (ಹರಿ).

ಎರವಲಾಗಿ ಬಂದ ವರುಣನ ಗೋವುಗಳನ್ನು ಕಶ್ಯಪನು ಯಜ್ಞ ಪೂರೈಸಿದ ಮೇಲೂ ಕೊಡದುದರಿಂದ ವರುಣನು ಕೋಪದಿಂದ -- 'ಈತನು' ಪತ್ನಿಯರಾದ ದಿತಿ, ಅದಿತಿಯರೊಂದಿಗೆ ಮನುಷ್ಯನಾಗಿ ಜನಿಸಲಿ. ಗೋವುಗಳನ್ನು ನಿರ್ಬಂಧದಲ್ಲಿಟ್ಟುದರಿಂದ ಕಾರಾಗೃಹವಾಸವಾಗಲಿ' ಎಂದು ಶಾಪವಿತ್ತನು. ಈ ಶಾಪದಿಂದ ಕಶ್ಯಪಾದಿತಿ ಅದಿತಿಯರು ವಸುದೇವ, ರೋಹಿಣಿ, ದೇವಕಿಯರಾಗಿ ಜನ್ಮವೆತ್ತಿದರು (ದೇವೀಭಾ). ವಸುದೇವ, ದೇವಕಿಯರನ್ನು ಕಂಸನು ಸೆರೆಯಲ್ಲಿಟ್ಟಿದ್ದನು. ಶ್ರೀಕೃಷ್ಣನು ಕಂಸನನ್ನು ಕೊಂದು ತಂದೆತಾಯಿಗಳನ್ನು ಸೆರೆಯಿಂದ ಬಿಡಿಸಿದನು. ನೋ -- ಚಿತ್ರಾ, ಕೃಷ್ಣ. ಶ್ರೀಕೃಷ್ಣನ ನಿರ್ಯಾಣಾನಂತರ ಇವನು ತನ್ನ ಪತ್ನಿಯರೊಂದಿಗೆ ದೇಹತ್ಯಾಗಮಾಡಿದನು (ಮ. ಮೌ).

ವಸುಮನ (ವಸುಮಂತ) -- ೧. ಅಯೋಧ್ಯೆಯ ರಾಜನಾದ ಹರ್ಯಶ್ವನ ಮಗ. ಈತನಿಗೆ ವಸುಮಾನ್ ಎಂಬ ಹೆಸರಿದೆ. ಈತನ ತಾಯಿ ಯಯಾತಿಪುತ್ರಿಯಾದ ಮಾಧವಿ (ಮ. ವ., ಸ., ವಿ., ಉ). ೨. ಕೋಸಲದ ಕ್ಷತ್ರಿಯನೊಬ್ಬ (ಮ. ಶಾಂ). ೩. ವಿಶ್ವಾಮಿತ್ರ ಮಹರ್ಷಿಯ ಒಬ್ಬ ಮಗ. ಈತನಿಗೆ ಅಷ್ಟಕ, ಪ್ರತರ್ದನರೆಂಬ ಅಣ್ಣಂದಿರೂ, ಶಿಬಿ ಎಂಬ ತಮ್ಮನೂ ಇದ್ದರು. ಇವನೊಮ್ಮೆ ನಾರದಮಹರ್ಷಿಯೊಡನೆ -- 'ಮುಂದೆ ನಾವು ನಾಲ್ಕು ಮಂದಿಯೂ ಸ್ವರ್ಗಕ್ಕೆ ಹೋಗುವೆವು. ನಮ್ಮಲ್ಲಿ ಸ್ವರ್ಗದಿಂದ ಪುನಃ ಭೂಮಿಯನ್ನು ಬೇಗ ಸೇರುವವರಾರು' ಎನ್ನಲು ನಾರದನು ಕ್ರಮವಾಗಿ 'ಅಷ್ಟಕ, ಪ್ರತರ್ದನ, ವಸುಮನ ಮತ್ತು ಶಿಬಿಯು ಭೂಮಿಯನ್ನು ಸೇರುವರು ' ಎಂದನು.

ವಸುಮಾನ್ --೧. ಕ್ಷತ್ರಿಯನೊಬ್ಬ(ಮ. ಸ., ಶಾಂ). ೨. ಅಗ್ನಿವಿಶೇಷ (ಮ. ವ).

ವಸುಷೇಣ -- ಕರ್ಣನ ಇನ್ನೊಂದು ಹೆಸರು. ನೋ -- ಕರ್ಣ. ಕರ್ಣನ ನಾಮಕರಣ ಕಾಲದಲ್ಲಿ ಅಧಿರಥನಿಟ್ಟ ಹೆಸರು (ಮ. ಆ., ವ).

ವಸುಹೋಮ -- ಮಾಂಧಾತನ ಕಾಲದ ಅಂಗದೇಶದ ರಾಜನೊಬ್ಬ (ಮ. ಶಾಂ).

ವಸೋರ್ಧಾರಾ (ವಸುಧಾರೆ) -- ಇಲ್ಲಿ ವಸುಸರಸ್ ಎಂಬ ತೀರ್ಥವಿರುವುದು. ಇದು ಬದರೀನಾಥದಿಂದ ನಾಲ್ಕು ಮೈಲಿ ಉತ್ತರದಲ್ಲಿರುವ ಅಲಕನಂದಾ ನದಿಯ ಉಗಮಸ್ಥಾನ. ಇಲ್ಲಿ ಸ್ನಾನಮಾಡಿದವರಿಗೆ ಅಶ್ವಮೇಧಫಲ ಪ್ರಾಪ್ತವಾಗುವುದು (ಮ. ವ).

ವಸ್ತ್ರಾಪಹಾರ -- ಧರ್ಮರಾಜನು ಪ್ರಥಮ ಜೂಜಿನಲ್ಲಿ ಸೋತಬಳಿಕ ದುಶ್ಶಾಸನನು ದ್ರೌಪದಿಯನ್ನು ರಾಜಸಭೆಗೆ ಎಳೆತಂದು ವಸ್ತ್ರಾಪಹಾರ ಮಾಡಲು ಯತ್ನಿಸಿದನು. ಆಗ ಶ್ರೀಕೃಷ್ಣನಿಂದ ಆಕೆಗೆ ಅಕ್ಷಯವಸ್ತ್ರ

ಪ್ರದಾನವಾಯಿತು. ಪುಷ್ಕರನು ನಳನಿಂದ ರಾಜ್ಯಕೋಶಗಳನ್ನೆಲ್ಲ ಸೆಳೆದುಕೊಂಡ ಮೇಲೆ ನಳನು ಪತ್ನಿಯೊಡನೆ ಪಟ್ಟಣದ ಹೊರಗೆ ಮೂರು ರಾತ್ರಿ ವಾಸಮಾಡಿಕೊಂಡಿದ್ದನು. ಆ ಪುಷ್ಕರನು 'ಪಟ್ಟಣದಲ್ಲಿ ಇರತಕ್ಕವರು ಯಾರಾದರೂ ನಳನಿಗೆ ಸತ್ಕಾರಮಾಡಿದ್ದೇ ಆದರೆ ಅವರಿಗೆ ಮರಣಾಂತ ಶಿಕ್ಷೆಯನ್ನು ವಿಧಿಸುವೆನು' ಎಂದು ಡಂಗುರವನ್ನು ಹೊಡೆಯಿಸಲು ಎಲ್ಲ ಪ್ರಜೆಗಳೂ ನಳನನ್ನು ದ್ವೇಷಿಸತೊಡಗಿದರು. ಅವನು ಪತ್ನಿಯೊಡನೆ ಮುಂದೆ ದಾರಿ ನಡೆಯುತ್ತ ಹಸಿವೆಯಿಂದ ಪೀಡಿತನಾಗಿರಲು ಮಾರ್ಗದಲ್ಲಿ ಸುವರ್ಣದಂತಿರುವ ರೆಕ್ಕೆಗಳುಳ್ಳ ಪಕ್ಷಿಗಳನ್ನು ಕಂಡು ಅವುಗಳನ್ನು ಹಿಡಿಯಲು ತಾನು ಉಟ್ಟಿದ್ದ ಬಟ್ಟೆಯನ್ನು ಅವುಗಳ ಮೇಲೆ ಬೀಸಲು, ಅವು ಆ ಬಟ್ಟೆಯನ್ನು ಎತ್ತಿಕೊಂಡು ಆಕಾಶಮಾರ್ಗದಲ್ಲಿ ಹಾರುತ್ತಾ 'ಎಲೈ ಬುದ್ಧಿಹೀನನಾದ ನಳನೇ, ನಾವು ಸಾಮಾನ್ಯ ಪಕ್ಷಿಗಳಲ್ಲ; ನೀನು ಜೂಜಾಡುವಾಗಿ ಇದ್ದ ಪಗಡೆದಾಳಗಳೇ ನಾವು' ಎಂದು ನುಡಿದವು.

ಉತ್ತರಗೋಗ್ರಹಣಕ್ಕೆ ಹೊರಟ ಉತ್ತರನೊಡನೆ ಉತ್ತರೆಯು ತನ್ನ ಆಟದ ಬೊಂಬೆಗಳಿಗೆ ಉಡಿಸಲು ಶತ್ರುಗಳ ಬಟ್ಟೆ ಆಭರಣಗಳನ್ನು ತರಹೇಳಿದ್ದಳು. ಸಮ್ಮೋಹನಾಸ್ತ್ರದಿಂದ ಅರ್ಜುನನು ಕುರುವೀರರನ್ನೆಲ್ಲ ನೆಲಕ್ಕೆ ಕೆಡೆದು ಮೂರ್ಛೆಗೊಳಿಸಲು ಉತ್ತರನು ಅಂಗರಾಜನ ಬಳಿಗೆ ಹೋಗಿ ಅವನ ಬಂಗಾರ ಬಣ್ಣದ ಬಟ್ಟೆಯನ್ನು ಸೆಳೆದುಕೊಂಡನು. ಆಮೇಲೆ ದುರ್ಯೋಧನನ ನೀಲಬಣ್ಣದ ಬಟ್ಟೆಯನ್ನು ಸೆಳೆದನು. ಭೀಷ್ಮನನ್ನು ಬಿಟ್ಟು ಉಳಿದವರ ಬಟ್ಟೆ ಮತ್ತು ಆಭರಣಗಳನ್ನು ಸೆಳೆದು ಅರ್ಜುನನೊಡನೆ ನಗರದ ಕಡೆಗೆ ತಿರುಗಿದನು (ಮ. ವ., ಸ., ವಿ).

ವಾಗೀಂದ್ರ -- ಪ್ರಕಾಶನೆಂಬ ಋಷಿಯ ಪುತ್ರ ; ಈತನ ಮಗ ಪ್ರಮಿತಿ.

ವಾತಘ್ನ -- ಋಷಿ ;ವಿಶ್ವಾಮಿತ್ರನ ಮಗ (ಮ. ಅನು).

ವಾತವೇಗ -- ಗರುಡನ ಮಗ (ಮ. ಉ).

ವಾತಸ್ಕಂಧ --ದೇವತೆಯೊಬ್ಬ (ಮ. ಸ).

ವಾತಾಪಿ -- ನೋ -- ಇಲ್ವಲ. ರಾಕ್ಷಸನೊಬ್ಬ. ಇಲ್ವಲನ ಸೋದರ. ಈತನು ಆಡಿನ ರೂಪವನ್ನು ಧರಿಸಿ ಅತಿಥಿಯಾಗಿ ಬಂದ ಬ್ರಾಹ್ಮಣನ ಆಹಾರವಾಗಿ ಆಡಿನ ಹೊಟ್ಟೆಯನ್ನು ಸೇರುತ್ತಿದ್ದನು. ಆಮೇಲೆ ಇಲ್ವಲನು ವಾತಾಪಿಯನ್ನು ಆ ಬ್ರಾಹ್ಮಣನ ಹೊಟ್ಟೆಯನ್ನು ಸೀಳಿಕೊಂಡು ಹೊರಬರುವಂತೆ ಕರೆಯಲು

ವಾತಾಪಿಯು ಆ ಬ್ರಾಹ್ಮಣನ ಹೊಟ್ಟೆಯನ್ನು ಸೀಳಿಕೊಂಡು ಹೊರಬರುತ್ತಿದ್ದನು. ಆಮೇಲೆ ಆ ರಾಕ್ಷಸ ಸೋದರರು ಆ ಬ್ರಾಹ್ಮಣನನ್ನು ಭುಜಿಸುತ್ತಿದ್ದರು. ಒಮ್ಮೆ ತಮ್ಮ ಅರಮನೆಗೆ ಬಂದ ಆಗಸ್ತ್ಯನ ಹೊಟ್ಟೆಯನ್ನು ಮೊದಲಿನಂತೆ ಈತ ಆಡಿನ ಮಾಂಸದ ರೂಪದಿಂದ ಸೇರಿ ಅಗಸ್ತ್ಯನ ತಪೋಮಹಿಮೆಯಿಂದ ಅಲ್ಲೇ ಜೀರ್ಣವಾದನು. ನೋ --ದನು. ಬೆಂಗಳೂರು ಜಿಲ್ಲೆಯ ನೆಲಮಂಗಲದಲ್ಲಿ ಅಗಸ್ತ್ಯ ಮತ್ತು ಇಲ್ವಲ ವಾತಾಪಿಯ ಕಥೆ ನಡೆಯಿತು ಎನ್ನುತ್ತಾರೆ (ಮ. ಆ., ವ., ರಾಮಾ. ಅರ).

ವಾತ್ಸ್ಯ -- ೧. ಸರ್ಪಯಜ್ಞದ ಸದಸ್ಯನಾದ ಋಷಿ (ಮ. ಆ., ಶಾಂ). ೨. ವತ್ಸರಾಜನು ರಾಜ್ಯಭಾರಮಾಡುತ್ತಿದ್ದ ದೇಶ. ಇದರ ರಾಜಧಾನಿ ಕೌಶಾಂಬಿ. ಈ ದೇಶ ಗಂಗಾ-- ಯಮುನಾ ನದಿಗಳ ನಡುವೆ ಇತ್ತು. ಈ ಪ್ರಾಂತವು ಅಲಹಾಬಾದಿನ ಪಶ್ಚಿಮದಲ್ಲಿತ್ತು. ಉದಯನು (ವತ್ಸರಾಜ) ಇಲ್ಲಿ ರಾಜ್ಯಭಾರವನ್ನು ಮಾಡುತ್ತಿದ್ದನು (ಮ. ದ್ರೋ).

ವಾತ್ಸ್ಯಾಯನ -- ಮಹರ್ಷಿಯೊಬ್ಬ. ಇವನು ಕಾಮಶಾಸ್ತ್ರವನ್ನು ಬರೆದನು. ಮೌರ್ಯಚಂದ್ರಗುಪ್ತನಿಗೆ ಸಹಾಯಕನಾಗಿದ್ದ ಚಾಣಕ್ಯನೇ ವಾತ್ಸ್ಯಾಯನನೆಂಬ ಹೆಸರಿನಿಂದ ಕಾಮಶಾಸ್ತ್ರವನ್ನೂ, ವಿಷ್ಣುಗುಪ್ತನೆಂಬ ಹೆಸರಿನಿಂದ ಜ್ಯೋತಿಶಾಸ್ತ್ರವನ್ನೂ, ಚಾಣಕ್ಯನೆಂಬ ಹೆಸರಿನಿಂದ ನೀತಿಶಾಸ್ತ್ರವನ್ನು ಬರೆದನೆಂದು ಹೇಳುತ್ತಾರೆ. ಈ ಚಾಣಕ್ಯನ ಕುರಿತು ವಿಷ್ಣುಪುರಾಣದಲ್ಲಿಯೂ, ಮತ್ಸ್ಯ, ವಾಯು, ಭಾಗವತ ಪುರಾಣಗಳಲ್ಲಿಯೂ ಬಂದಿರುವುದು. ಇವನ ಕುರಿತು ಕಾಮಂದಕದಲ್ಲಿ -- ಅಗ್ನಿಸಮತೇಜ, ವೇದವಿದ್ವರ, ನಾಲ್ಕು ವೇದಗಳನ್ನೂ ಒಂದೇ ವೇದಕ್ಕೆ ಬೇಕಾಗುವ ಕಾಲದೊಳಗಾಗಿ ಅಧ್ಯಯನ ಮಾಡಿದವ, ಅಭಿಚಾರವಜ್ರದಿಂದ ನಂದಪರ್ವತವನ್ನು ಮೂಲಸಹಿತ ಕಿತ್ತುಹಾಕಿದ, ಭೂಸುರ, ಶಕ್ತಿಧರಸಮ, ಚಂದ್ರಗುಪ್ತನಿಗೆ ಮೇದಿನಿಯನ್ನು ಸಂಪಾದಿಸಿಕೊಟ್ಟವ. ಈತನು ಅರ್ಥಶಾಸ್ತ್ರ ಮಹಾಸಮುದ್ರದೊಳಗಿನಿಂದ ನೀತಿಶಾಸ್ತ್ರಾಮೃತವನ್ನು ಮಥಿಸಿ ಎತ್ತಿ ತೆಗೆದವನೆಂದು ಶಾಸ್ತ್ರವು ಹೊಗಳಿವೆ.

ವಾದುಲಿ --ಋಷಿ; ವಿಶ್ವಾಮಿತ್ರನ ಮಗ (ಮ. ಆ).

ವಾನರಧ್ವಜ -- ನೋ -- ಅರ್ಜುನ, ಶ್ರೀರಾಮ

ವಾಮದೇವ -- ೧.ಮೋದಾಪುರಾಧಿಪತಿಯಾದ ಕ್ಷತ್ರಿಯನೊಬ್ಬ. ರಾಜಸೂಯ ಯಾಗ ಕಾಲದಲ್ಲಿ ಅರ್ಜುನನಿಂದ ಪರಾಜಿತನಾದನು (ಮ.ಸ.).

೨. ಋಷಿಯೊಬ್ಬ; ಈತನ ಕುದುರೆಗಳನ್ನು ಶಲನು ಅಪಹಾರ ಮಾಡಿದ. ಈತನು ಉಪನಿಷತ್ತುಗಳಲ್ಲಿ ಕೂಡ ಪ್ರಸಿದ್ಧನಾದ ಮುನಿ. ನೋ -- ಶಲ, ದಲ. ಇವನು ಕುಮಾರಸ್ವಾಮಿಯಿಂದ ಪ್ರಣವದ ಅರ್ಥವನ್ನು ತಿಳಿದು ಮುನಿಗಳಿಗೆಲ್ಲ ಬೋಧಿಸಿದನು. ಶ್ರೀರಾಮನ ಆಸ್ಥಾನದಲ್ಲೂ ವಾಮದೇವನೆಂಬ ಮುನಿ ಇದ್ದನು (ಮ. ಸ., ವ., ಶಾಂ., ಶಿಪು., ರಾಮಾ. ಯುದ್ಧ).

ವಾಮದೇವಿ -- ಅಂಗರಾಜನ ಪುತ್ರಿ. ಋಚನೆಂಬ ರಾಜನ ಪತ್ನಿ. ನೋ -- ಋಚ (ಮ. ಆ).

ವಾಮನ -- ೧. ಒಂದು ಸರ್ಪ (ಮ. ಆ., ಉ). ೨. ದಕ್ಷಿಣ ದಿಕ್ಕಿನ ದಿಗ್ಗಜ; ಇದರ ಪತ್ನಿಯ ಹೆಸರು ಪಿಂಗಳೆ (ಮ. ಉ. ಭೀ). ೩. ಗರುಡನ ಮಗ (ಮ. ಉ). ೪. ವಿಷ್ಣುವಿನ ದಶಾವತಾರಗಳಲ್ಲಿ ಐದನೆಯದು. ದೇವತೆಗಳಿಗೆ ಭಯವನ್ನುಂಟು ಮಾಡಿದ ಬಲಿಯ ಯಜ್ಞಮಂಟಪಕ್ಕೆ ಬಂದನು. ಆತನಿಂದ ಮೂರು ಹಜ್ಜೆ ಸ್ಥಳವನ್ನು ದಾನವಾಗಿ ಪಡೆದು ಬಲಿಯನ್ನು ತ್ರಿವಿಕ್ರಮನನ್ನಾಗಿ ರಸಾತಲಕ್ಕಟ್ಟಿದನು. ವಾಮನನಿಗೆ ಉಪೇಂದ್ರನೆಂಬ ಹೆಸರಿದೆ. ಈತನ ತಂದೆ ಕಶ್ಯಪಮುನಿ; ತಾಯಿ ಅದಿತಿ. ನೋ -- ಬಲಿ. ಕಶ್ಯಪನ ಸೂಚನೆಯಂತೆ ಅದಿತಿಯು ಪಯೋವ್ರತವನ್ನಾಚರಿಸಿ ವಾಮನನನ್ನು ಪಡೆದಳು. ಈ ಪುಟ್ಟ ಬ್ರಹ್ಮಚಾರಿಗೆ ಕಶ್ಯಪರು ಉಡಿದಾರ ಕಟ್ಟಿದರು. ತಾಯಿ ಅದಿತಿಯು ಲಂಗೋಟಿಕೊಟ್ಟಳು. ಬ್ರಹ್ಮದೇವನು ಜನಿವಾರ ಹಾಕಿದನು; ಸೂರ್ಯನು ಗಾಯತ್ರಿಯನ್ನು ಉಪದೇಶಿಸಿದನು. ಸಪ್ತರ್ಷಿಗಳು ಕುಶ, ಅಜಿನವನ್ನಿತ್ತರು; ಸರಸ್ವತಿಯು ಜಪಮಾಲೆಯನ್ನು ಕೊಟ್ಟಳು ; ಪಾರ್ವತಿಯು ಮಾತೃಭಿಕ್ಷೆಯನ್ನು ಹಾಕಿದಳು. ತ್ರಿವಿಕ್ರಮನು ಮೂರು ಅಡಿ ಹೆಜ್ಜೆಗೆ ಭೂಮಿಯನ್ನು ಅಳೆಯುವಾಗ ಅವನ ಎಡಗಾಲಿನ ಹೆಬ್ಬೆರಳಿನ ಉಗುರಿನ ತುದಿ ತಾಗಿ ಬ್ರಹ್ಮಾಂಡ ಕಟಾಹದ ತುದಿ ತೂತಾಗಿ ನೀರು ಸೋರಹತ್ತಿತು. ಈ ವಿಷ್ಣುಪಾದೋದಕವೇ ಗಂಗೆ (ಹರಿ., ಮತ್ಸ್ಯಪು., ದೇವೀಭಾ., ಮ. ಸ., ವ., ಪದ್ಮಪು).

ವಾಮನಕ -- ಒಂದು ತೀರ್ಥ (ಮ. ವ). ಪರ್ವತ (ಮ. ಭೀ).

ವಾಯು--ಪಂಚಭೂತಗಳಲ್ಲೊಂದು. ಸೀತೆಯ ಅಗ್ನಿಪರೀಕ್ಷೆಯ ಕಾಲದಲ್ಲಿ ಆಕೆಯ ನಿರ್ದೋಷಿತ್ವವನ್ನು ಹೇಳಿದವ. ಈತನಿಂದ ಅಂಜನೆಯಲ್ಲಿ ಹನುಮನೂ, ಕುಂತಿಯಿಂದ ಭೀಮನೂ ಹುಟ್ಟಿದರು (ಮ. ವ., ಶಾಂ., ಆ., ಅನು. ಉತ್ತರರಾಮಾ).

ವಾಯವ್ಯ ದಿಕ್ಕಿನ ಒಡೆಯ. ಇವನ ಪಟ್ಟಣ ಗಂಧವತಿ. ಇವನು ಕಪಿಲವರ್ಣದವನು. ಇವನ ವಾಹನ ಹುಲ್ಲೆ. ಇವನ ಆಯುಧ ಅಂಕುಶ.

ಪ್ರಾಣ, ಅಪಾನ, ಸಮಾನ, ಉದಾನ, ವ್ಯಾನ ಇವು ಪಂಚಪ್ರಾಣಗಳು. ಪ್ರಾಣವು ಹೃದಯದಲ್ಲಿಯೂ, ಅಪಾನವು ಗುದಸ್ಥಾನದಲ್ಲಿಯೂ, ಸಮಾನವು ನಾಭಿಯಲ್ಲಿಯೂ, ಉದಾನವು ಕಂಠದಲ್ಲಿಯೂ, ವ್ಯಾನವು ಶರೀರದ ಎಲ್ಲಾ ಭಾಗಗಳಲ್ಲಿಯೂ ವ್ಯಾಪಿಸಿರುವ ವಾಯುವು. ಇನ್ನು ನಾಗವೆಂಬ ಉಪವಾಯುವು ವಾಗೇಂದ್ರಿಯದಲ್ಲಿದೆ. ಮಾತನಾಡುವ ಕೆಲಸಕ್ಕೆ ಸಹಾಯಕವಾಗಿದೆ. ಕೂರ್ಮವು ಉನ್ಮೀಲನ ಶಕ್ತಿಯನ್ನೂ, ಕೃಕರವು ಹಸಿವನ್ನೂ, ದೇವದತ್ತದಿಂದ ಆಕಳಿಕೆ ಬಿಕ್ಕಳಿಗೆಗಳೂ, ಧನಂಜಯವು ದೇಹವನ್ನೆಲ್ಲಾ ಆವರಿಸಿಕೊಂಡು ಮರಣಾನಂತರವೂ ಸ್ವಲ್ಪ ಹೊತ್ತಿರುವುದು.

ವಾಯುವೇಗ -- ೧. ಒಂದು ವೇಗದ ಹೆಸರು. ೨. ಧೃತರಾಷ್ಟ್ರನ ಮಗ (ಮ. ಆ). ಇದನ್ನು ಮೀರಿದ ವೇಗವೇ ಮನೋವೇಗ.

ವಾರಣಾವತ -- ಹಸ್ತಿನಾಪುರದ ಸಮೀಪವಿದ್ದ ಒಂದು ಪಟ್ಟಣ. ಪಾಂಡವರು ಸ್ವಲ್ಪಕಾಲ ಇಲ್ಲಿದ್ದರು. ಇದು ಮೀರತ್ತಿನಿಂದ ಹತ್ತೊಂಬತ್ತು ಮೈಲು ವಾಯವ್ಯದಲ್ಲಿರುವ ಇಂದಿನ ಬರ್ದ್ವಾನ್ ಎಂಬ ಊರೆನ್ನುತ್ತಾರೆ. ಕೌರವನು ಇಲ್ಲಿ ಅರಗಿನ ಅರಮನೆಯನ್ನು ಕಟ್ಟಿಸಿ ಪಾಂಡವರ ನಾಶಕ್ಕಾಗಿ ಯತ್ನಿಸಿದನು. ಪಾಂಡವರು ಕೌರವರೊಡನೆ ತಮಗೆ ಅರ್ಧ ರಾಜ್ಯವನ್ನು ಕೊಡಲು ಅಸಾಧ್ಯವಾದರೆ ಕುಶಸ್ಥಲ, ವೃಕಸ್ಥಲ, ವಾಸಂತಿ, ವಾರಣಾವತ ಮತ್ತು ಯಾವುದಾದರೊಂದು ಗ್ರಾಮವನ್ನು ಕೊಡುವಂತೆ ಕೇಳಿದರು. (ಮ. ಆ., ಉ).

ವಾರಣಾಸಿ-- ನೋ --ಕಾಶಿ. ಇದು ವರುಣಾ ಮತ್ತು ಅಸಿ ಎಂಬೆರಡು ನದಿಗಳ ನಡುವೆ ಇರುವ ಕ್ಷೇತ್ರ. ವಾರಣಾಸಿಗೆ ಶ್ಮಶಾನವೆಂಬ ಹೆಸರಿದೆ. ಶ್ಮನ್ ಅಂದರೆ ಶವ ಅಥವಾ ಮೃತಜೀವ. ಇಲ್ಲಿ ಮೃತರಾದವರು ಪುನರುತ್ಥಾನವಿಲ್ಲದೆ ಶಯನ ಮಾಡುವರು ಅಂದರೆ ಪುನರ್ಜನ್ಮ ಹೊಂದುವುದಿಲ್ಲವಾದುದರಿಂದ ಶ್ಮಶಾನ ಎಂದು ಹೆಸರು (ಮ. ವ., ಕ್ಷೇತ್ರದ).

ವಾರಾಹ -- ಮಗಧ ದೇಶದ ಒಂದು ಪರ್ವತ (ಮ. ಸ). ಪಶ್ಚಿಮಕರಾವಳಿಯ ಮಾರ (ವರಾಹ) ಸ್ವಾಮಿಕ್ಷೇತ್ರ.

ವಾರುಣಿ-- ೧. ವಿನತೆಯ ಮಗ. ೨. ವರುಣಪುತ್ರನಾದ ಅಗಸ್ತ್ಯ. ೩. ವರುಣ ಪುತ್ರನಾದ ವಸಿಷ್ಠ. ೪. ಮದ್ಯಪ್ರಾಶನ ಮಾಡಿದ ಬಲರಾಮನಿಗೆ ಕಾಣಿಸಿದ ಸ್ತ್ರೀ. ಈಕೆ ವರುಣನ ಮಗಳು. ಈಕೆಯ ಜೊತೆಯಲ್ಲಿ ಕಾಂತಿ ಮತ್ತು ಶ್ರೀ ಎಂಬ ಸ್ತ್ರೀಯರು ಇದ್ದರು. ೫. ವರುಣನ ಪತ್ನಿ. ಈಕೆಗೆ ಗೌರಿ ಎಂಬ ಹೆಸರೂ ಇದೆ. ಮದ್ಯಾಭಿಮಾನದೇವತೆ (ಮ. ಆ., ಸ).

ವಾರ್ಕ್ಷೀ (ಹೆಣ್ಣು ವೃಕ್ಷ) -- ೧. ಹತ್ತುಮಂದಿ ಪ್ರಚೇತಸರ ಪತ್ನಿ (ಮ. ಆ.). ಈಕೆಗೆ ಮಾರಿಷಾ ಎಂಬ ಹೆಸರೂ ಇದೆ. ೨. ವೃಕ್ಷಗಳ ಮಗಳು. ನೋ -- ಮಾರಿಷಾ (ಮ. ಆ).

ವಾರ್ಧಕ್ಷೇಮಿ -- ವೃದ್ಧಕ್ಷೇಮನ ಮಗ. ಇವನು ತ್ರಿಗರ್ತದೇಶದ ರಾಜ; ಹೆಸರು ಸುಶರ್ಮ. ಇವನು ಮಹಾರಥ. ಇವನಿಗೆ ಅರ್ಜುನನಲ್ಲಿ ತುಂಬಾ ಪ್ರೀತಿ (ಮ. ಆ., ಉ., ದ್ರೋ).

ವಾರ್ಷಿಕಿ -- ಕಾಶೀರಾಜಪುತ್ರಿ. ಜಲಾಪೇಕ್ಷೆಯುಳ್ಳವಳಾದಾಗ ಅವಳ ಅರ್ಧಶರೀರವು ಈ ಹೆಸರಿನ ನದಿಯಾಯಿತು. ಗಂಗೆಯ ಶಾಪದಿಂದ ಈಕೆ ನದಿಯಾಗಿ ಹರಿದಳು.

ವಾರ್ಷ್ಣೇಯ-- ೧.ಶ್ರೀಕೃಷ್ಣ. ೨. ವೃಷ್ಣಿವಂಶದಲ್ಲಿ ಹುಟ್ಟಿದ ಸಾತ್ಯಕಿ ಮೊದಲಾದವರು. ೩. ನಳನ ಸಾರಥಿ. ಇವನು ಜೂಜಿನಲ್ಲಿ ಸೋತು ಮಕ್ಕಳಾದ ಇಂದ್ರಸೇನ ಮತ್ತು ಇಂದ್ರಸೇನೆಯರನ್ನು ಕುಂಡಿನ ನಗರದಲ್ಲಿ ಬಿಟ್ಟು ತಾನು ಅಯೋಧ್ಯೆಯ ರಾಜನಾದ ಋತುಪರ್ಣನಲ್ಲಿ ಸಾರಥಿಯಾಗಿ ಸೇರಿಕೊಂಡನು (ಮ. ವ).

ವಾರ್ಷ್ಣೇಯೀ -- ಕುಂತಿ, ನೋ-- ವಾರ್ಷ್ಣೇಯ (ಮ. ಆ).

ವಾಲಖಿಲ್ಯರು -- ಹಲವರು ಮಹರ್ಷಿಗಳು. ಇವರ ತಂದೆ ಶತ್ರುವೆಂಬ ಮಹರ್ಷಿ; ತಾಯಿ ಕ್ರಿಯೆ. ಇವರು ಅರವತ್ತುಸಾವಿರ ಮಂದಿ ಎಂದು ಹೇಳುತ್ತಾರೆ. ಇವರು ಸೂರ್ಯನನ್ನು ಅನುಸರಿಸಿ ಸಂಚರಿಸುವವರು ; ಆಕಾರದಲ್ಲಿ ತೀರಾ ಚಿಕ್ಕವರು. ಇಂದ್ರನು ಇವರನ್ನು ಹಾಸ್ಯಮಾಡಿದುದರಿಂದ, ಇಂದ್ರನನ್ನು ಪೀಡಿಸಲು ಗರುಡನು ಹುಟ್ಟುವಂತೆ ಇವರು ತಪಸ್ಸು ಮಾಡಿದರು. ಸರಸ್ವತೀ ನದೀತೀರದಲ್ಲಿ ಇವರು ಯಜ್ಞಮಾಡಿದ್ದರು. ಗರುಡನು ತಾಯಿಯ ದಾಸ್ಯ ವಿಮೋಚನೆಗಾಗಿ ಅಮೃತವನ್ನು ತರಲು ಹೊರಟು ತನ್ನ ಆಹಾರಕ್ಕಾಗಿ ಜಗಳವಾಡುತ್ತಿರುವ ಗಜಕಚ್ಛಪರನ್ನು ಕಚ್ಚಿಕೊಂಡು ತಿನ್ನಲು ಸ್ಥಳವನ್ನು ನೋಡುತ್ತ ಹಾರುತ್ತಿರಲು, ಒಂದು ಮರವು ತನ್ನ ಶಾಖೆಯ ಮೇಲೆ ಕುಳಿತುಕೊಳ್ಳುವಂತೆ ಗರುಡನನ್ನು ಕರೆಯಿತು. ಗರುಡ ಅಂತೆಯೇ ಅದರ ಗೆಲ್ಲ ಮೇಲೆ ಕುಳಿತುಕೊಳ್ಳಲು ಅದು ಆತನ ಭಾರದಿಂದ ಮುರಿಯಿತು. ಅದರಲ್ಲಿ ಜೋತಾಡುತ್ತಿದ್ದ ವಾಲಖಿಲ್ಯ ಮುನಿಗಳನ್ನು ಕಂಡು ಆ ಗೆಲ್ಲು ನೆಲಕ್ಕೆ ಬಿದ್ದರೆ ಮುನಿಗಳು ಶಾಪ ಕೊಡುವರೆಂದು ಅದನ್ನು ಕಚ್ಚಿಕೊಂಡೇ ಹಾರಾಡುತ್ತಿರಲು ಗರುಡನ ಸ್ಥಿತಿಯನ್ನು ಕಂಡು ಕಶ್ಯಪರೇ ವಾಲಖಿಲ್ಯರೊಡನೆ ತನ್ನ ಮಗನಿಗೆ ಕ್ಷಮಾದಾನ ಮಾಡಬೇಕೆಂದು ಪ್ರಾರ್ಥಿಸಲು ಅವರು ಪ್ರಸನ್ನರಾಗಿ ಆ ಗೆಲ್ಲನ್ನು ಬಿಟ್ಟು ಹಿಮಾಲಯದ

ಗುಹೆಗಳಿಗೆ ತಪಸ್ಸಿಗೆ ಹೊರಟುಹೋದರು. ನೋ -- ತ್ರಿಕೂಟ (ಮ. ಸ., ಆ., ಅನು., ಭಾಗ., ವಿಷ್ಣುಪ).

ವಾಲಿ --ಸುಗ್ರೀವನ ಅಣ್ಣ ; ಇಂದ್ರನ ಮಗ. ನೋ -- ಋಕ್ಷರಜಸ್ಸು. ಈತನ ಪತ್ನಿ ತಾರೆ ; ಮಗ ಅಂಗದ. ಸುಗ್ರೀವನ ಪತ್ನಿಯನ್ನು ಅಪಹಾರ ಮಾಡಿದ ತಪ್ಪಿಗಾಗಿ ಶ್ರೀರಾಮನು ಈತನನ್ನು ಕೊಂದನು. ನೋ --ದುಂದುಭಿ, ಮತಂಗ. ಇವನು ಸಮುದ್ರಮಥನಕಾಲದಲ್ಲಿ ದೇವತೆಗಳಿಗೆ ಸಹಾಯ ಮಾಡಿದನು. ನೋ -- ರಾವಣ

ಮಯನೆಂಬ ಶಿಲ್ಪಿಯ ಮಗನಾದ ದುರ್ಮದನು ಕಿಷ್ಕಿಂಧೆಗೆ ಬರಲು ವಾಲಿಯು ಇವನೊಡನೆ ಹೋರಾಡಿ ಕೊಂದನು (ಆನಂ., ರಾ. ಮ. ಸ., ವ., ರಾಮಾ. ಉತ್ತರ., ರಾಮಾ., ಕಿಷ್ಕಿಂ).

ದೇವೇಂದ್ರನು ಈತನಿಗೆ ಒಂದು ಸ್ವರ್ಣಹಾರವನ್ನು ಕೊಟ್ಟಿದ್ದನು. 'ಈ ಸ್ವರ್ಣಹಾರವನ್ನು ಧರಿಸಿದಾಗ ಶತ್ರುವು ಇದಿರಾದರೆ ಸ್ತಬ್ಧನಾಗುವನು' ಎಂದು ವರಕೊಟ್ಟಿದ್ದನು. ಸುಗ್ರೀವನಿಂದ ರಾಮನು ಇದನ್ನು ತಿಳಿದು ಒಂದು ಸರ್ಪದ ಮೂಲಕ ಆ ಮಾಲಿಕೆಯನ್ನು ವಾಲಿಯಿಂದ ತರಿಸಿ ದೇವೇಂದ್ರನಿಗೆ ಕಳುಹಿಸಿದನು (ಆನಂ. ರಾ). ವಾಲಿಯು ತನ್ನ ಮರಣಾನಂತರ ತಾರೆಯು ಸುಗ್ರೀವನ ಪತ್ನಿಯಾಗಿ ಆತನನ್ನು ಸಂತೋಷಪಡಿಸಬೇಕೆಂದು, ಇದರಿಂದ ತಾನು ಸುಗ್ರೀವನಿಗೆ ಮಾಡಿದ ಪಾಪಗಳು ಪರಿಹಾರವಾಗುವುವು ಎಂದನು (ಆನಂ. ರಾ).

ವಾಲ್ಮೀಕಿ -- ೧. ರಾಮಾಯಣ ಗ್ರಂಥಕರ್ತನಾದ ಮಹರ್ಷಿ; ಆದಿಕವಿ. ಇವನು ಪ್ರಚೇತಸನ ಮಗ. ಇವನು ಬೇಡರೊಡನೆ ಸೇರಿಕೊಂಡು ದಾರಿಹೋಕರ ತಲೆ ಹೊಡೆದು ಅವರಿಂದ ಕಿತ್ತುಕೊಂಡ ಹಣದಿಂದ ಜೀವಿಸುತ್ತಿದ್ದನು. ಒಮ್ಮೆ ಇವನು ಸಪ್ತರ್ಷಿಗಳನ್ನಿದಿರಿಸಿ ಅವರಿಂದ ರಾಮಮಂತ್ರೋಪದೇಶವನ್ನು ಪಡೆದು ತಪಸ್ಸನ್ನು ಮಾಡುತ್ತಿರಲು ಈತನ ಮೇಲೆ ವಲ್ಮೀಕ (ಹುತ್ತ) ಬೆಳೆಯಿತು. ಮುಂದೆ ಸಪ್ತರ್ಷಿಗಳಿಂದ ಎಚ್ಚರಹೊಂದಿ ವಾಲ್ಮೀಕಿ ಎಂಬ ಹೆಸರನ್ನು ಅವರಿಂದಲೇ ಪಡೆದನು. ಇವನೊಮ್ಮೆ ತಮ್ಮ ಆಶ್ರಮದ ಬಳಿ ಹರಿಯುತ್ತಿದ್ದ ತಮಸಾನದಿಗೆ ಸ್ನಾನಕ್ಕೆ ಹೋಗಿದ್ದಾಗ ಬೇಡನೊಬ್ಬನು ಕ್ರೌಂಚ ಗಂಡು ಹೆಣ್ಣುಪಕ್ಷಿಗಳಲ್ಲಿ ಗಂಡನ್ನು ಕೊಲ್ಲಲು ಹೆಣ್ಣು ಗಂಡಿಗಾಗಿ ಗೋಳಿಡುವುದನ್ನು ಕಂಡು ದುಃಖಿತನಾಗಿ ಆ ಬೇಡನಿಗೆ ಶಾಪಕೊಟ್ಟನು. ಆ ಶಾಪವಾಕ್ಕು ಛಂದೋರೂಪವಾಗಿರುವುದನ್ನು ತಿಳಿದು ಅವನು ಚಿಂತಾಕ್ರಾಂತನಾಗಿರುವಾಗ ಬ್ರಹ್ಮನು ಅವನ ಆಶ್ರಮಕ್ಕೆ ಬಂದು ರಾಮಾಯಣವನ್ನು ಬರೆಯುವಂತೆ ಅವನಿಗೆ ಸೂಚಿಸಿದನು. ನಾರದನು ಅವನಿಗೆ ಶ್ರೀಮದ್ರಾಮಾಯಣವನ್ನು ಸಂಕ್ಷೇಪವಾಗಿ ತಿಳಿಸಿ ಹೋದನು. ವಾಲ್ಮೀಕಿಯು ದೈವಾನುಗ್ರಹದಿಂದ

ರಾಮಾಯಣ ಕಾವ್ಯವನ್ನು ರಚಿಸಿದನು. ಇದನ್ನು ಸೀತಾಪುತ್ರರಾದ ಕುಶಲವರಿಗೆ ಕಂಠಪಾಠ ಮಾಡಿಸಿದನು. ಸೀತೆಯನ್ನು ಶ್ರೀರಾಮನು ತ್ಯಜಿಸಲು ಆಕೆಯು ವಾಲ್ಮೀಕಿಯ ಆಶ್ರಮವನ್ನು ಸೇರಿ ಅಲ್ಲಿ ಕುಶಲವರೆಂಬ ಅವಳಿಮಕ್ಕಳನ್ನು ಹೆತ್ತಳು. ಈ ಮಕ್ಕಳಿಗೆ ಶಾಸ್ತ್ರ ಮತ್ತು ಶಸ್ತ್ರಾಭ್ಯಾಸವು ವಾಲ್ಮೀಕಿಯಿಂದಲೇ ನಡೆಯಿತು. ಶ್ರೀರಾಮನ ಅಶ್ವಮೇಧಯಾಗದ ಕುದುರೆಯನ್ನು ಬಂಧಿಸಿದ ಈ ಮಕ್ಕಳೊಡನೆ ಶತ್ರುಘ್ನ, ಭರತ, ಲಕ್ಷ್ಮಣ, ರಾಮರು ಕಾದಾಡಿ ಮೂರ್ಛೆಹೊಂದಲು ಈ ವರ್ತಮಾನವನ್ನು ಪಾತಾಳಲೋಕಕ್ಕೆ ಯಜ್ಞಕಾರ್ಯದ ನಿಮಿತ್ತ ಹೋಗಿದ್ದ ವಾಲ್ಮೀಕಿಯು ನಾರದನಿಂದ ಕೇಳಿ ಆಶ್ರಮಕ್ಕೆ ಬಂದನು. ಅಲ್ಲಿ ಯುದ್ಧದೊಳೊರಗಿದ್ದ ರಾಘವ ಮೊದಲಾದವರನ್ನೆಲ್ಲಾ ತನ್ನ ಕಮಂಡಲೋದಕದಿಂದ ಎಚ್ಚರಗೊಳಿಸಿ ಸೀತೆಯು ತನಗೆ ದೊರೆತ ವೃತ್ತಾಂತವನ್ನು ಅವನಿಗೆ ಹೇಳಿ, ಸೀತೆ ಮತ್ತು ಕುಶಲವರನ್ನು ಶ್ರೀರಾಮನಿಗೊಪ್ಪಿಸಿದನು. ವಾಲ್ಮೀಕಿಯು ಒಮ್ಮೆ ಬ್ರಹ್ಮಹತ್ಯಾದೋಷಕ್ಕೆ ಗುರಿಯಾಗಿ ಪರಮೇಶ್ವರನ ಮಹಿಮೆಯಿಂದ ಶಾಪವಿಮೋಚನೆ ಹೊಂದಿದರು.

ವಾಲ್ಮೀಕಿ ರಾಮಾಯಣವು ಆದಿಕಾವ್ಯ. ಒಂದು ಮಧ್ಯಾಹ್ನ ವಾಲ್ಮೀಕಿ ಮಹರ್ಷಿಯು ತನ್ನ ಶಿಷ್ಯನಾದ ಭಾರದ್ವಾಜನೊಡನೆ ತಮಸಾನದಿಯ ಸ್ನಾನಕ್ಕಾಗಿ ತೆರಳಿದ್ದಾಗ ಆ ನದಿಯ ನೀರು, 'ರಮಣೀಯಂ ಪ್ರಸನ್ನಾಂಬು ಸನ್ಮನುಷ್ಯಮನೋಯಥಾ' -- ಸತ್ಪುರುಷನ ಮನಸ್ಸಿನ ಹಾಗೆ ತಿಳಿಯಾಗಿಯೂ ರಮಣೀಯವಾಗಿಯೂ ಇತ್ತು. ಪಾಪನಿಶ್ಚಯನೂ ವೈರನಿಲಯನೂ ಆದ ನಿಷಾದನು ಕ್ರೌಂಚಪಕ್ಷಿಗಳ ಮಿಥುನದಲ್ಲಿ ಗಂಡನ್ನು ಕೊಲ್ಲಲು ವಾಲ್ಮೀಕಿ ಮಹರ್ಷಿಯ ಬಾಯಿಯಿಂದ ತಾನಾಗಿ ಹೊರಬಿದ್ದ ಶ್ಲೋಕ:

ಮಾ ನಿಷಾದ ಪ್ರತಿಷ್ಠಾಂತ್ವಮಗಮಃ ಶಾಶ್ವತೀಃ ಸಮಾಃ ।

ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್॥

ಮುಂದೆ ವಾಲ್ಮೀಕಿಮುನಿಯು ತನ್ನ ನುಡಿಗೆ ತಾನೇ ವಿಸ್ಮಯಪಡುತ್ತ ಶಿಷ್ಯನಿಗೆ ಹೇಳುತ್ತಾನೆ.

ಪಾದುಬದ್ಧೋಽಕ್ಷರಸಮಃ ತಂತ್ರೀಲಯಸಮನ್ವಿತಃ ।

ಶೋಕಾರ್ತಸ್ಯ ಪ್ರವೃತ್ತೋ ಮೇ ಶ್ಲೋಕೋ ಭವತು ನಾನ್ಯಥಾ ॥

'ಪಾದಬದ್ಧವಾಗಿದೆ ; ಅಕ್ಷರಗಳು ಸಮವಾಗಿವೆ; ತಂತಿಯ ಲಯಕ್ಕೆ ಕೂಡುತ್ತದೆ. ಶೋಕಾರ್ತನಾದ ನನ್ನ ಬಾಯಿಯಿಂದ ಬಂದುದನ್ನು ಶ್ಲೋಕವೆಂದೇ ಕರೆಯೋಣ. ಬೇರೆ ಯೋಚನೆಯೇ ಬೇಡ'. ಮೇಲಿನ

ಶ್ಲೋಕದಲ್ಲಿ ಕ್ರೌಂಚಪಕ್ಷಿಗಳ ಜೋಡಿ ಎಂದರೆ ಸೀತಾರಾಮರು ; ನಿಷಾದನೇ ರಾವಣ.

ವಿದ್ವಾಂಸರು ರಾಮಾಯಣದ ಹಸ್ತಪ್ರತಿಗಳನ್ನು ಪರಿಶೀಲಿಸಿ ಬೊಂಬಾಯಿ, ಮದ್ರಾಸುಗಳಲ್ಲಿ ಪ್ರಚಾರವಿದ್ದುದನ್ನು ದಾಕ್ಷಿಣಾತ್ಯ ಪಾಠವೆಂದೂ, ಕಲ್ಕತ್ತೆ ಮತ್ತು ಪ್ಯಾರೀಸ್ ನಗರದಲ್ಲಿ ಪ್ರಚಾರದಲ್ಲಿದ್ದ ಪ್ರತಿಗಳನ್ನು ಗೌಡೀಯ ಪಾಠವೆಂದೂ ಲಾಹೋರಿನ ಕಡೆಯಲ್ಲಿ ರೂಢಿಯಲ್ಲಿದ್ದ ಪ್ರತಿಗಳನ್ನು ಪಶ್ಚಿಮೋತ್ತರೀಯ ಪಾಠವೆಂದೂ ಹೇಳುತ್ತಾರೆ. ಇವುಗಳ ದಾಕ್ಷಿಣಾತ್ಯಪಾಠವೇ ಮೂಲಪಾಠವೆಂದೂ, ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ವಾಲ್ಮೀಕಿ ರಾಮಾಯಣದಲ್ಲಿ ಬಾಲಕಾಂಡ ಮತ್ತು ಉತ್ತರ ಕಾಂಡಗಳು ಪ್ರಕ್ಷೇಪಗಳೆಂಬ ಅಭಿಪ್ರಾಯ ವಿದ್ವಾಂಸಮಂಡಲಿಯಲ್ಲಿದೆ. ಚಿತ್ರಕೂಟದ ಹತ್ತಿರ ವಾಲ್ಮೀಕಿಯ ದರ್ಶನಕ್ಕೆ ಬಂದ ರಾಮಾದಿಗಳಿಗೆ ವಾಲ್ಮೀಕಿ ಹೇಳುತ್ತಾನೆ

ಅಹಂ ಪುರಾ ತೇಷು ಕಿರಾತೈಃ ಸಹವರ್ಧಿತಃ ।

ಜನ್ಮಮಾತ್ರ ದ್ವಿಜತ್ವಂ ಮೇ ಶೂದ್ರಾಚಾರರತಃ ಸದಾ ॥ (ಅಧ್ಯಾ. ರಾ.)

'ನಾನು ಬೆಳೆದದ್ದೆಲ್ಲಾ ಕಿರಾತರ ನಡುವೆ ; ಶೂದ್ರಾಚಾರದಲ್ಲಿಯೇ ನಾನಿದ್ದೆ. ಕೇವಲ ಜನ್ಮದಿಂದ ಮಾತ್ರ ನಾನು ದ್ವಿಜನಾಗಿದ್ದೆ'.

ಸಪ್ತರ್ಷಿಗಳು ಇವನಿಗೆ ಮರಾ ಎಂಬ ಮಂತ್ರವನ್ನು ಉಪದೇಶ ಮಾಡಿದರು. 'ಏಕಾಗ್ರಮನಸಾತ್ರೈವ ಮರೇತಿ ಜಪ ಸರ್ವದಾ'.

ವಾಲ್ಮೀಕಿಯು ಅನುಶಾಸನಪರ್ವದಲ್ಲಿ ಯುಧಿಷ್ಠಿರನೊಡನೆ ಅಗ್ನಿಪೂಜಕರಾದ ಮುನಿಗಳೊಡನೆ ನಾನು ವಿವಾದ ಮಾಡಿದ್ದರಿಂದ, 'ನೀನು ಬ್ರಹ್ಮಘ್ನ' ನೆಂದುಬಿಟ್ಟರು. ಕೂಡಲೇ ನಾನು ಅಧರ್ಮಾವಿಷ್ಟನಾದೆ. ಕಡೆಗೆ ಈಶ್ವರನಿಗೆ ಶರಣುಹೋಗಿ ಪಾಪಮುಕ್ತನಾದೆ ' ಎಂದು ಹೇಳಿದ್ದಾನೆ.

ವಾಲ್ಮೀಕಿಯು ಚ್ಯವನಮುನಿಯ ಮಗ (ಬುದ್ಧಚ). ಭೃಗುವಿನ ಮೊಮ್ಮಗನಾದ ವಾಲ್ಮೀಕಿಯು (ಭಾರ್ಗವನು) ರಾಮಚರಿತೆಯನ್ನು ಬರೆದನು (ಮ. ಶಾಂ). ೨. ಗರುಡನ ವಂಶದ ಪಕ್ಷಿರಾಜನೊಬ್ಬ. ೩. ಈತನು ಒಂದು ದಿನ ದಾರಿಕಾಯುತ್ತಿದ್ದಾಗ ಏಳು ಜನ ಮುದುಕರು ಬಂದರು. ಇವನು ಅವರನ್ನು ಹೊಡೆಯಲು ಹೋದಾಗ ಅವರು, 'ನಮ್ಮಲ್ಲಿ ನಿನಗೆ ಬೇಕಾದುದೇನೂ ಇಲ್ಲ' ಎಂದರು. ಅವನು -- ' ನಿಮ್ಮಲ್ಲಿ ಇರುವುದನ್ನೇ ಕೊಡಿರಿ' ಎನ್ನಲು, ಅವರು ಇವನಿಗೆ ರಾಮನಾಮವನ್ನುಪದೇಶ ಮಾಡಿ ಹೋದರು. ಈತನು

ರಾಮನಾಮಧ್ಯಾನಕ್ಕೆ ತೊಡಗಲು, ಅವನ ಮೈಮೇಲೆ ಹುತ್ತ (ವಲ್ಮೀಕ) ಬೆಳೆಯಿತು. ಅವನು ಮಹಾತಪಸ್ವಿಯಾಗಿ ಹುತ್ತದಿಂದ ಹೊರಬರುವಾಗ ಸಂಸ್ಕೃತದಲ್ಲಿ ಮಾತಾಡುತ್ತಿದ್ದನು. ಇದರಿಂದ ಸಪ್ತ ಋಷಿಗಳು ಇವನಿಗೆ ವಾಲ್ಮೀಕಿ ಎಂದು ಹೆಸರಿಟ್ಟರು (ರಾಮಾ).

ಪಂಪಾತೀರದಲ್ಲಿ ಶಂಖನೆಂಬ ಬ್ರಾಹ್ಮಣನಿದ್ದನು. ಅವನು ಗುರುಗಳಿಂದ ಸಿದ್ಧಿಯನ್ನು ಹೊಂದಿ ಗೋದಾವರೀತೀರಕ್ಕೆ ಹೊರಟನು. ಅವನು ದಾರಿಯಲ್ಲಿ ವನ ಒಂದರಲ್ಲಿ ಪ್ರಯಾಣ ಮಾಡುತ್ತಿರುವಾಗ ಭಯಂಕರಾಕಾರದ ಬೇಡನನ್ನು ಕಂಡನು. ಅವನು ಈ ಬ್ರಾಹ್ಮಣನನ್ನು ಬೆದರಿಸಿ, ಅವನ ಕಿವಿಯ ಕುಂಡಲಗಳನ್ನೂ, ಕೊಡೆ, ಪಾದರಕ್ಷೆ ಮತ್ತು ವಸ್ತ್ರಗಳನ್ನು ಕಸಿದುಕೊಂಡುಬಿಟ್ಟನು. ಆ ಬ್ರಾಹ್ಮಣನು ಬರಿಗಾಲಿನಲ್ಲಿ ತೀಕ್ಷ್ಣವಾದ ಬಿಸಿಲಿನಲ್ಲಿ ಹೋಗುವುದನ್ನು ಕಂಡು, ಆ ಬೇಡನಿಗೆ ಕನಿಕರ ಉಂಟಾಗಿ ಅವನ ಪಾದರಕ್ಷೆಗಳನ್ನು ಅವನಿಗೇ ಕೊಟ್ಟನು. ಆಗ ಆ ಬ್ರಾಹ್ಮಣನು -- 'ಎಲೈ ಬೇಡನೇ, ಈ ಬುದ್ಧಿಯು ನಿನ್ನ ಪೂರ್ವಪುಣ್ಯದಿಂದುಂಟಾಯಿತು. ನೀನು ಪೂರ್ವ ಜನ್ಮದಲ್ಲಿ ಶಾಕಲನಗರದಲ್ಲಿ ಸ್ತಂಭನೆಂಬ ಹೆಸರುಳ್ಳ ಬ್ರಾಹ್ಮಣನಾಗಿದ್ದೆ. ಆಗ ನೀನು ವೇದ ವಿದ್ಯೆಯಲ್ಲಿ ನಿಪುಣನಾಗಿದ್ದರೂ, ಒಬ್ಬ ವೇಶ್ಯೆಯ ಸಹವಾಸಕ್ಕೆ ಬಿದ್ದು ಬ್ರಾಹ್ಮಣ ಕರ್ಮಗಳನ್ನೆಲ್ಲಾ ಮರೆತು ಶ್ವಪಚನಾದೆ. ನೀನು ದುಷ್ಟನಾದರೂ ನಿನ್ನ ಧರ್ಮ ಪತ್ನಿಯು ಪತಿವ್ರತೆಯಾಗಿದ್ದಳು. ಮುಂದೆ ನಿನ್ನ ಪಾಪಶೇಷಗಳಿಂದ ಭಯಂಕರ ರೋಗಿಯಾದೆ. ಆಗ ವೇಶ್ಯೆಯು ನಿನ್ನನ್ನು ಬಿಟ್ಟು ತೊಲಗಲು, ನೀನು ಸಾಧ್ವಿಯಾದ ಪತ್ನಿಯೊಡನೆ ಹಿಂದಿನ ನಿನ್ನ ಕರ್ಮಕ್ಕಾಗಿ ಕ್ಷಮೆ ಬೇಡಿದೆ. ಒಂದು ದಿನ ಮನೆಗೆ ದೇವಲರೆಂಬ ಋಷಿಯು ಬಂದರು. ಅವರ ಪಾದಪೂಜೆಯನ್ನು ಮಾಡಿ, ನಿನ್ನ ಪತ್ನಿಯು ಆ ಮಹರ್ಷಿಗಳ ಪಾದೋದಕಗಳನ್ನು ನಿನ್ನ ತಲೆಯ ಮೇಲೆ ಚಿಮುಕಿಸಿದಳು. ಸ್ವಲ್ಪ ಕಾಲದಲ್ಲಿ ನಿನಗೆ ಮರಣಪ್ರಾಪ್ತಿಯಾಯಿತು. ಆಗ ನಿನ್ನ ಪತ್ನಿಯು ನಿನ್ನ ಬಾಯಿಯೊಳಗೆ ಔಷಧ ಹಾಕುತ್ತಿರುವಾಗ ನಿನಗೆ ಪ್ರಾಣವಿಯೋಗವಾದುದರಿಂದ ನೀನು ಹಲ್ಲುಗಿರಿಯಲು ನಿನ್ನ ಪತ್ನಿಯ ಕೈಬೆರಳೊಂದು ತುಂಡಾಗಿ ನಿನ್ನ ಬಾಯಿಯೊಳಗೆ ಮಾಂಸದ ತುಂಡು ಉಳಿದುದರಿಂದ ಈ ಜನ್ಮದಲ್ಲಿ ಮಾಂಸಭಕ್ಷಕನಾದ ಬೇಡನಾದೆ. ದೇವಲಮುನಿಯ ಪಾದತೀರ್ಥವನ್ನು ಕುಡಿದುದರಿಂದ ನಿನಗೆ ಈ ಕನಿಕರದ ಬುದ್ಧಿ ಹುಟ್ಟಿದೆ. ಎಲೈ ವ್ಯಾಧನೇ, ಮುಂದಿನ ಜನ್ಮದಲ್ಲಿ ಒಬ್ಬ ತಪಸ್ವಿಯ ವೀರ್ಯವನ್ನು ಒಂದು ಸರ್ಪವು ಕುಡಿದು ಅದರ ಹೊಟ್ಟೆಯಿಂದ ನೀನು ಜನಿಸುವೆ. ಬಾಲ್ಯದಿಂದಲೇ ನಿನಗೆ ಕಿರಾತರ ಸ್ನೇಹವಾಗಿ ದುಷ್ಕೃತ್ಯಗಳನ್ನು

ಮಾಡಲಾರಂಭಿಸಿ ಒಮ್ಮೆ ಸಪ್ತ ಋಷಿಗಳ ಸಮಾಗಮದಿಂದ ಶ್ರೀ ರಾಮಮಂತ್ರವನ್ನು ಉಪದೇಶಹೊಂದಿ ವಾಲ್ಮೀಕಿ ಮುನಿಯಾಗುವೆ' ಎಂದನು. ಮುಂದೆ ಹಾಗೆಯೇ ಇವನು ಬೇಡನಾಗಿ ಹುಟ್ಟಿ, ಶೂದ್ರ ಸ್ತ್ರೀಯನ್ನು ವಿವಾಹವಾಗಿ, ಅನೇಕ ಮಕ್ಕಳನ್ನು ಪಡೆದು, ಅವರ ರಕ್ಷಣೆಗೆ ದಾರಿತೋರದೆ ಮಾರ್ಗದಲ್ಲಿ ಅಡಗಿ ಕೂತು ಜನರ ತಲೆಯೊಡೆಯುವ ಉದ್ಯೋಗ ಹಿಡಿದನು. ಆದರೆ ಆ ಸಂಸಾರವು ಬಂದ ಪಾಪಗಳಲ್ಲಿ ಅರ್ಧಭಾಗ ಪಡೆಯಲು ತಿರಸ್ಕರಿಸಿದುದರಿಂದ ವೈರಾಗ್ಯಹೊಂದಿ ಮುನಿಯಾದನು. ಮುಂದೆ ಇವನು ಸರಸ್ವತಿ ತೀರದಲ್ಲಿ ಆಶ್ರಮ ಕಟ್ಟಿಕೊಂಡು, ವಾಸಮಾಡಿದನು (ಆನಂ. ರಾ).

ಇವನು ಭಾರತ ದೇಶದ ಆದಿಕವಿ. ವಾಲ್ಮೀಕಿಯು ಭಾರ್ಗವಶ್ರೇಷ್ಠನಾದುದು ಮತ್ಸ್ಯಪುರಾಣದಲ್ಲೂ, ಸುಮತಿಯೆಂಬ ಬ್ರಾಹ್ಮಣನ ಮಗನೆಂದು ಸ್ಕಂದಪುರಾಣದಲ್ಲೂ ಹೇಳಿದೆ. ವಿಷ್ಣು ಪುರಾಣದಲ್ಲಿ ವಾಲ್ಮೀಕಿಯು ಭೃಗುಋಷಿಯ ಸಹೋದರನೆಂದು ಹೇಳಿದ್ದಾರೆ. ವರುಣನಿಗೆ ಚರ್ಷಣಿ ಎಂಬ ಹೆಂಡತಿ ಇದ್ದಳು. ಅವಳಲ್ಲಿ ವರುಣನಿಂದ ಭೃಗುಋಷಿಗಳೂ, ವಾಲ್ಮೀಕಿ ಋಷಿಗಳೂ ಜನಿಸಿದರೆಂದು ಶ್ರೀಮದ್ಭಾಗವತದ ಒಂದು ವ್ಯಾಖ್ಯಾನದಲ್ಲಿದೆ.

ವಾಸವಿ -- ಉಪರಿಚರವಸುವಿನ ಮಗಳಾದ ಸತ್ಯವತಿ. ಈಕೆ ಶಂತನು ರಾಜನ ಪತ್ನಿ.
ನೋ -- ಸತ್ಯವತಿ.

ವಾಸವೇಯ --ವಾಸವಿಯ ಮಗ; ವೇದವ್ಯಾಸ (ಮ. ಆ).

ವಾಸುಕಿ -- ಸರ್ಪರಾಜ; ಇವನು ಭೋಗವತಿ ಎಂಬ ಪಟ್ಟಣದ ರಾಜ. ಈತನಿಗೆ ತಕ್ಷಕ, ಕಾರ್ಕೋಟಕ, ಧನಂಜಯ, ಕಾಳೀಯ, ನಹುಷ, ಐರಾವತ, ಕುಮುದ, ಪದ್ಮ, ಮಹಾಪದ್ಮ ಮೊದಲಾದ ನೂರಾರು ಮಂದಿ ಸಹೋದರರು ಇದ್ದರು. ಈತನ ತಂದೆ ಕಶ್ಯಪಮುನಿ. ತಾಯಿ ಕದ್ರು. ಪತ್ನಿ ಶತಶೀರ್ಷೆ ; ಜರತ್ಕಾರು ಈತನ ಸೋದರಿ. ಸಮುದ್ರಮಥನಕಾಲದಲ್ಲಿ ಸುರಾಸುರರು ಮಂದರ ಪರ್ವತವನ್ನು ಕಡೆಗೋಲಾಗಿ ಮಾಡಿಕೊಂಡು ವಾಸುಕಿಯನ್ನು ಅದಕ್ಕೆ ಹಗ್ಗವಾಗಿ ಸುತ್ತಿಕೊಂಡು ಕ್ಷೀರಸಾಗರವನ್ನು ಕಡೆದರು. ಜನಮೇಜಯನ ಸರ್ಪಯಾಗದಿಂದ ಸರ್ಪಗಳನ್ನು ಸಂರಕ್ಷಿಸಿಕೊಳ್ಳಲು ಈತನು ತನ್ನ ತಂಗಿಯನ್ನು ಜರತ್ಕಾರುವೆಂಬ ಮುನಿಗೆ ವಿವಾಹ ಮಾಡಿಕೊಟ್ಟನು (ಮ. ಆ., ಸ., ಉ., ಭಾಗ., ಶಿವಪು., ರಮಾ., ಸ್ಕಾಂಪು).

ಶ್ರೀಕೃಷ್ಣನೊಮ್ಮೆ ಈತನ ರಾಜಧಾನಿಯಾದ ಭೋಗವತಿಗೆ ಹೋಗಿ ವಾಸುಕಿಯನ್ನು ಜಯಿಸಿ ರುಕ್ಮಿಣಿಯ ಮಗನಾದ ಪ್ರದ್ಯುಮ್ನನನ್ನು ಬಿಡಿಸಿ ತಂದನು (ಮ. ಸ).

ವಾಸುದೇವ -- ೧. ವಸುದೇವನ ಪುತ್ರ ; ಈತನ ತಾಯಿ ದೇವಕಿ. ನೋ -- ಶ್ರೀಕೃಷ್ಣ. ೨. ಶ್ರೀಮನ್ನಾರಾಯಣನ ದಶಾವತಾರಗಳಲ್ಲಿ ಇದು ಎಂಟನೆಯದು. ಇವನು ಹುಟ್ಟಿದ ಯದುಕುಲವು ಚಂದ್ರವಂಶಕ್ಕೆ ಸೇರಿದುದು. ದೇವಕಿಯ ಎಂಟು ಮಕ್ಕಳಲ್ಲಿ ಇವನು ಕಡೆಯವನು. ವೈಕುಂಠದ ದ್ವಾರಪಾಲಕರಾದ ಜಯವಿಜಯರು ಸನಕ ಸನಂದನ ಮೊದಲಾದ ಮುನಿಗಳಿಂದ ಶಾಪವನ್ನು ಹೊಂದಿ ಭೂಮಿಯಲ್ಲಿ ಮೂರನೇ ಸಾರಿ ಶಿಶುಪಾಲ ಮತ್ತು ದಂತವಕ್ತ್ರ ಎಂಬ ಹೆಸರಿನಿಂದ ಜನಿಸಲು ಅವರನ್ನು ಸಂಹರಿಸುವುದಕ್ಕಾಗಿ ಶ್ರೀಮನ್ನಾರಾಯಣನು ತನ್ನ ಪೂರ್ಣಾವತಾರವಾದ ಶ್ರೀಕೃಷ್ಣನಾಗಿ ಹುಟ್ಟಿದನು (ಭಾಗ).ಈ ಅವತಾರವು ವೈವಸ್ವತಮನ್ವಂತರದ ೨೮ ನೆಯ ದ್ವಾಪರಯುಗದ ಅಂತ್ಯದಲ್ಲಿ ನಡೆಯಿತು (ಮ. ಆ). ದೇವಕಿಯ ಮೊದಲಿನ ಆರು ಗರ್ಭಗಳನ್ನು ಕಂಸನು ನಾಶಗೊಳಿಸಲಾಗಿ ಏಳನೆಯ ಬಾರಿ ದೇವಕಿಯು ಗರ್ಭಿಣಿಯಾದಾಗ ವಿಷ್ಣುವೇ ಆ ಗರ್ಭವನ್ನು ವಸುದೇವನ ಮತ್ತೊಬ್ಬಳು ಪತ್ನಿಯಾದ ರೋಹಿಣಿಯ ಗರ್ಭದಲ್ಲಿ ಇಳಿಸಿದನು. ರೋಹಿಣಿಯಲ್ಲಿ ಗರ್ಭ ಬೆಳೆದು ಜನಿಸಿದವನೇ ಬಲರಾಮನು. ದೇವಕಿಯ ಎಂಟನೆಯ ಗರ್ಭದಲ್ಲಿ ಶ್ರೀಕೃಷ್ಣನು ಶ್ರಾವಣಮಾಸದ ಕೃಷ್ಣಾಷ್ಟಮಿ ರೋಹಿಣಿ ನಕ್ಷತ್ರ ಬುಧವಾರ ಮಧ್ಯರಾತ್ರಿಯ ಸಮಯ ನಂದಗೋಕುಲದಲ್ಲಿ ಅವತರಿಸಿದನು. ದೇವಕಿ ವಸುದೇವರು ಪುತ್ರೋದಯದಿಂದ ಚಿಂತಾಕ್ರಾಂತರಾದರು. ಆ ಶಿಶುವಿನ ಪ್ರೇರಣೆಯಂತೆ ವಸುದೇವನು ಆ ಶಿಶುವನ್ನು ಗೋಕುಲಕ್ಕೆ ಕೊಂಡುಹೋಗಿ ತನ್ನ ಸ್ನೇಹಿತನಾದ ನಂದನ ಮನೆಯಲ್ಲಿಟ್ಟು ನಂದನ ಹೆಂಡತಿಯಾದ ಯಶೋದೆಯು ಆಗ ತಾನೇ ಹೆತ್ತ ಹೆಣ್ಣು ಶಿಶುವನ್ನು ಹೊತ್ತುಕೊಂಡು ಮಥುರೆಗೆ ತಂದು ದೇವಕಿಯ ಬಳಿಯಲ್ಲಿಟ್ಟನು. ಆಗ ಕಾವಲುಗಾರರೆಲ್ಲರೂ ನಿದ್ರೆಯಲ್ಲಿ ಇದ್ದರು. ವಸುದೇವನು ಕಾರಾಗೃಹವನ್ನು ಹೊಕ್ಕೊಡನೆಯೇ ಮಗು ಅತ್ತಿತು. ಕಾವಲುಗಾರರು ಎಚ್ಚತ್ತರು. ದೇವಕಿ ಹೆತ್ತ ಸಮಾಚಾರ ಕಂಸನಿಗೆ ತಿಳಿದು ಖಡ್ಗಪಾಣಿಯಾಗಿ ಬಂದು ಆ ಮಗುವನ್ನು ಕೊಲ್ಲಲು ಯತ್ನಿಸಲು ಅದು ಕೈಯಿಂದ ತಪ್ಪಿಸಿಕೊಂಡು -- 'ನಿನ್ನನ್ನು ಕೊಲ್ಲತಕ್ಕವನು ಗೋಕುಲದಲ್ಲಿ ಬೆಳೆಯುತ್ತಿದ್ದಾನೆ' ಎಂದು ಹೇಳಿ ಮಾಯವಾಯಿತು (ಮ. ಆ., ಸ., ಭಾಗ., ಪದ್ಮಪು., ಹರಿ., ದೇವೀಭಾ).

ಮುಂದೆ ಗರ್ಗಾಚಾರ್ಯರ ಸೂಚನೆಯಂತೆ ಬಲರಾಮ ಕೃಷ್ಣರಿಗೆ ನಾಮಕರಣವಾಯಿತು. ತನ್ನ ಶತ್ರುವು ಗೋಕುಲದಲ್ಲಿ ಹುಟ್ಟಿರುವನೆಂದು ಕೇಳಿ ಅವನನ್ನು ಕೊಲ್ಲುವುದಕ್ಕಾಗಿ ತೃಣಾವರ್ತ, ಪೂತನೆ ಮೊದಲಾದ ರಾಕ್ಷಸ

ರಾಕ್ಷಸಿಯರನ್ನು ಕಳುಹಿಸಲು ಶ್ರೀಕೃಷ್ಣನು ಅವರನ್ನೆಲ್ಲಾ ಕೊಂದನು. ವತ್ಸಾಸುರ, ವೃಕಾಸುರ, ಅಘಾಸುರರ ವಧೆಯಾಯಿತು (ಭಾಗ., ಮ. ಸ. ಹರಿ)

ಒಮ್ಮೆ ಶ್ರೀಕೃಷ್ಣನು ದನಗಳನ್ನು ಕಾಯುತ್ತಿದ್ದಾಗ ಬ್ರಹ್ಮನು ಶ್ರೀಕೃಷ್ಣನನ್ನು ಪರೀಕ್ಷಿಸುವುದಕ್ಕಾಗಿ ದನಕರುಗಳನ್ನೂ ಗೊಲ್ಲಹುಡುಗರನ್ನೂ ಅಡಗಿಸಿದನು. ಧೇನುಕಾಸುರನ ವಧೆಯಾಯಿತು. ಕಾಳಿಯ ಮರ್ದನವಾಯಿತು. ಕಾಡುಕಿಚ್ಚಿನಿಂದ ದನಗಳನ್ನೂ ಕರುಗಳನ್ನೂ ರಕ್ಷಿಸಿದನು. ಬಲರಾಮನು ಪ್ರಲಂಬನನ್ನು ಕೊಂದನು (ಭಾಗ., ಮ. ಸ., ಹರಿ., ವಿಷ್ಣುಪು). ನಂದನು ಪ್ರತಿವರ್ಷ ಮಾಡುವ ಇಂದ್ರಯಜ್ಞವನ್ನು ಮಾಡಲು ಯತ್ನಿಸಿದಾಗ ಶ್ರೀಕೃಷ್ಣನು ಗೋವರ್ಧನ ಪೂಜೆಗೆ ಪ್ರೇರೇಪಿಸಿದನು. ಬಿಲ್ಲುಹಬ್ಬಕ್ಕಾಗಿ ಕಂಸನ ಅಪ್ಪಣೆಯಂತೆ ಬಲರಾಮಕೃಷ್ಣರು ಮಥುರೆಗೆ ಹೋದರು. ಅವರ ಜೊತೆಯಲ್ಲಿದ್ದ ಅಕ್ರೂರನು ಯಮುನೆಯಲ್ಲಿ ಮೀಯುವಾಗ ಶ್ರೀಕೃಷ್ಣನು ಅವನಿಗೆ ತನ್ನ ದಿವ್ಯರೂಪವನ್ನು ತೋರಿಸಿದನು. ಮಥುರೆಯಲ್ಲಿ ಶ್ರೀಕೃಷ್ಣನು ಕಂಸನ ಅಗಸನನ್ನು ಕೊಂದನು. ಕುಬ್ಜೆಯ ಬೆನ್ನನ್ನು ಸರಿಪಡಿಸಿ ಸುಂದರಿಯನ್ನಾಗಿ ಮಾಡಿದನು. ಕುವಲಯಾಪೀಡವೆಂಬ ಕಂಸನ ಮದ್ದಾನೆಯನ್ನು ಕೊಂದನು. ಅವನ ಆಸ್ಥಾನದಲ್ಲಿದ್ದ ಚಾಣೂರ -- ಮುಷ್ಟಿಕರೆಂಬ ಜಟ್ಟಿಗಳನ್ನು ಸಂಹರಿಸಿದನು. ಅಲ್ಲೇ ಕಂಸನನ್ನು ಕೊಂದು, ವಸುದೇವ ದೇವಕಿಯರನ್ನು ಸೆರೆಮನೆಯಿಂದ ಬಿಡುಗಡೆ ಮಾಡಿದನು. ಕಂಸನ ತಂದೆಯಾದ ಉಗ್ರಸೇನನಿಗೆ ಪಟ್ಟಕಟ್ಟಿ ರಾಜನನ್ನಾಗಿ ಮಾಡಿದನು (ಭಾಗ., ಹರಿ., ವಿಷ್ಣುಪು). ಮುಂದೆ ಬಲರಾಮಕೃಷ್ಣರಿಗೆ ಉಪನಯನವಾಯಿತು. ಸಾಂದೀಪನಿಯ ಬಳಿಯಲ್ಲಿ ೬೪ ಕಲೆಗಳನ್ನು ಅಭ್ಯಾಸಮಾಡಿದರು. ಮುಂದೆ ಪಾಂಡವರ ಯೋಗಕ್ಷೇಮವನ್ನು ತಾನೇ ಹೊತ್ತುಕೊಂಡನು. ಪಾಂಡವರು ರಾಜಸೂಯಯಾಗವನ್ನು ತೊಡಗಿದಾಗ ಭೀಮನು ಕಂಸನ ಮಾವನಾದ ಜರಾಸಂಧನನ್ನು ಕೊಂದನು. ಸಾಲ್ವ ಮೊದಲಾದ ದುಷ್ಟರ ಬಾಧೆಯನ್ನು ಸಹಿಸದೆ ಕೃಷ್ಣನು ಮಥುರೆಯನ್ನು ಬಿಟ್ಟು ದ್ವಾರಕೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು. ಬಲರಾಮನಿಗೆ ರೇವತರಾಜನ ಮಗಳಾದ ರೇವತಿಯೊಂದಿಗೆ ಮದುವೆಯಾಯಿತು. ಕೃಷ್ಣನು ಭೀಷ್ಮಕನ ಮಗಳಾದ ರುಕ್ಮಿಣಿಯನ್ನು, ಸತ್ರಾಜಿತನ ಮಗಳಾದ ಸತ್ಯಭಾಮೆಯನ್ನೂ ಕೋಸಲರಾಜನಾದ ನಗ್ನರಾಜನ ಮಗಳಾದ ನೀಲೆ ಅಥವಾ ಸತ್ಯೆಯನ್ನೂ, ವಸುದೇವನ ತಂಗಿಯಾದ ಶ್ರುತಕೀರ್ತಿಯ ಮಗಳಾದ ಮಿತ್ರವಿಂದೆಯನ್ನೂ, ಸೂರ್ಯನ ಮಗಳಾದ ಕಾಳಿಂದಿಯನ್ನೂ, ಮದ್ರರಾಜಪುತ್ರಿಯಾದ ಲಕ್ಷಣೆಯನ್ನೂ, ಜಾಂಬವಂತನ ಮಗಳಾದ

ಜಾಂಬವತಿಯನ್ನೂ ವಿವಾಹವಾದನು (ಭಾಗ, ವಿಷ್ಣುಪು). ಅಷ್ಟರಲ್ಲಿ ಪಾಂಡವರು ದ್ರೌಪದಿಯನ್ನು ವಿವಾಹವಾದರು. ಶ್ರೀಕೃಷ್ಣನು ನರಕಾಸುರನನ್ನು ಕೊಂದು ಅವನ ಮಗನಾದ ಭಗದತ್ತನಿಗೆ ಪ್ರಾಗ್ಜ್ಯೋತಿಷ ನಗರದಲ್ಲಿ ಪಟ್ಟಕಟ್ಟಿ ನರಕಾಸುರನು ಸೆರೆಯಲ್ಲಿಟ್ಟ ಹದಿನಾರುಸಾವಿರ ಮಂದಿ ಸ್ತ್ರೀಯರನ್ನು ದ್ವಾರಕೆಗೆ ಕರೆತಂದನು. ಪಾಂಡವರ ರಾಜಸೂಯಯಾಗಕಾಲದಲ್ಲಿ ಶ್ರೀಕೃಷ್ಣನ ಸಹಾಯದಿಂದ ಅವರು ದಿಗ್ವಿಜಯ ಮಾಡಿದರು. ಆ ಕಾಲದಲ್ಲಿ ಶಿಶುಪಾಲನು ಕೃಷ್ಣನನ್ನು ನಿಂದಿಸಲು ಚಕ್ರಾಯುಧದಿಂದ ಶಿಶುಪಾಲನನ್ನು ಶ್ರೀಕೃಷ್ಣನು ಕೊಂದನು. ಅರ್ಜುನನು ಯತಿವೇಷದಿಂದ ದ್ವಾರಕೆಗೆ ಹೋಗಿ ಸುಭದ್ರೆಯನ್ನು ವಿವಾಹವಾದ. ಪೌಂಡ್ರಕ ವಾಸುದೇವನು ದ್ವಾರಕೆಯ ಮೇಲೆ ದಂಡೆತ್ತಿ ಬರಲು ಕೃಷ್ಣನು ಅವನನ್ನು ಕೊಂದನು. ಪಾಂಡವರ ಅರಣ್ಯವಾಸ, ಅಜ್ಞಾತವಾಸ ಮುಗಿದೊಡನೆ ಕೃಷ್ಣನು ಸಂಧಾನಕ್ಕಾಗಿ ಹಸ್ತಿನಾವತಿಗೆ ಹೋಗಿ ಸಂಗ್ರಾಮವನ್ನು ನಿಶ್ಚಯಿಸಿಕೊಂಡು ಬಂದನು. ಮುಂದೆ ಯುದ್ಧದಲ್ಲಿ ಪಾಂಡವರ ಪಕ್ಷದಲ್ಲಿ ನಿಂತು ಅರ್ಜುನನ ಸಾರಥಿಯಾಗಿ ಕೌರವರನ್ನೂ, ದುಷ್ಟರನ್ನೂ ನಾಶಮಾಡಿದನು. ಈ ಯುದ್ಧದಲ್ಲಿ ಪಾಂಡವರ ಪಕ್ಷದ ಅಭಿಮನ್ಯು, ಘಟೋತ್ಕಚ ಮೊದಲಾದವರು ತೀರಿಕೊಂಡರು. ಶ್ರೀಕೃಷ್ಣನು ಒಬ್ಬ ಬೇಡನ ಬಾಣಕ್ಕೆ ಗುರಿಯಾಗಿ ವೈಕುಂಠಕ್ಕೆ ಹೊರಟುಹೋದನು. ನೋ --ಶ್ರೀಕೃಷ್ಣ.

ಕರವೀರಪುರದ ರಾಜ ವಾಸುದೇವ. ಇವನಿಗೆ ಶೃಗಾಲ (ಸೃಗಾಲ) ವಾಸುದೇವನೆಂದು ಹೆಸರು. ಇವನು ಸೂರ್ಯನನ್ನು ಆರಾಧಿಸಿ ಆತನಿಂದ ಒಂದು ದಿವ್ಯರಥವನ್ನು ಪಡೆದಿದ್ದನು. ಈ ರಥವು ಅಕ್ಷಯಬತ್ತಳಿಕೆ, ತೀಕ್ಷ್ಣಬಾಣಗಳು, ವೇಗಗಾಮಿಯಾದ ಕುದುರೆಗಳು ಮತ್ತು ಶಸ್ತ್ರಾಸ್ತ್ರಗಳಿಂದ ಸಜ್ಜಿತವಾಗಿ ಬೆಟ್ಟ ಬಯಲುಗಳಲ್ಲೆಲ್ಲಾ ಅಕುಂಠಿತವಾಗಿ ನಡೆಯುತ್ತಿತ್ತು. ಇವನು ಶಸ್ತ್ರಾಸ್ತ್ರರಾಶಿಗಳಿಂದ ಕೃಷ್ಣನನ್ನು ಹೊಡೆದರೂ ಅವನು ಬೆಟ್ಟದಂತೆ ಸ್ಥಿರವಾಗಿ ನಿಂತಿದ್ದನು. ಶ್ರೀಕೃಷ್ಣನು ತನ್ನ ಚಕ್ರಾಯುಧದಿಂದ ಈತನನ್ನು ಸೀಳಿ ಕೊಂದನು. ಈತನ ಪತ್ನಿ ಪದ್ಮಾವತಿ. ಮಗ ಶುಕ್ರದೇವ (ಹರಿ).

ವಾಹಿನಿ -- ಚಂದ್ರವಂಶದ ಕುರುರಾಜನ ಪತ್ನಿ. ಈಕೆಯ ಮಕ್ಕಳು ಅಶ್ವಪತಿ ಮೊದಲಾದವರು (ಮ. ಆ).

ವಿಂಶ -- ಸೂರ್ಯವಂಶದ ಇಕ್ಷ್ವಾಕುವಿನ ಮಗ. ಈತನ ಮಗ ವಿವಿಂಶ.

ವಿಕಟ --ಧೃತರಾಷ್ಟ್ರನ ಮಗ; ಇವನು ಭೀಮನಿಂದ ಹತನಾದನು (ಮ. ಆ., ಶ., ಭೀ).

ವಿಕಟಾನನ -- ಇವನು ಧೃತರಾಷ್ಟ್ರನ ಮಗ (ಮ. ಆ).

ವಿಕಟೆ --ರಾಕ್ಷಸಿಯೊಬ್ಬಳು. ಅಶೋಕವನದಲ್ಲಿ ಈಕೆಯು ಸೀತೆಯ ಕಾವಲಿದ್ದಳು (ರಾಮಾ. ಸುಂದರ).

ವಿಕರ್ಣ -- ಧೃತರಾಷ್ಟ್ರನ ಮೂರನೆಯ ಮಗ. ನೋ -- ದುರ್ಯೋಧನ (ಮ. ಆ., ವಿ., ಭೀ). (ಇಲ್ಲಿ ಇಪ್ಪತ್ತನಾಲ್ಕನೆಯವನೆಂದು ಹೇಳಿದೆ). ದುರ್ಯೋಧನ, ದುಶ್ಯಾಸನರ ತಮ್ಮ. ದ್ರೌಪದಿಯ ಮಾನವನ್ನು ಕೌರವರು ಭಂಗಿಸುವ ಕಾಲದಲ್ಲಿ ವಿಕರ್ಣನು ಸಭಿಕರನ್ನು ಕಂಡು -- 'ಎಲೈ ಸಭಿಕರೇ, ಒಬ್ಬ ಹೆಂಗಸಿನ ನ್ಯಾಯವನ್ನು ತೀರಿಸುವುದು ನಿಮ್ಮಿಂದ ಅಸಾಧ್ಯವಾಯಿತು ಎಂದಾದರೆ ನಿಮ್ಮನ್ನು ಸಭ್ಯರೆಂದು ಕರೆಯಬಹುದೇ ? ಈಕೆಯು ಐವರ ಮಡದಿಯು. ಆದರಲ್ಲಿಯೂ ಯುಧಿಷ್ಠಿರನು ತನ್ನನ್ನು ಸೋತ ತರುವಾಯ ಈಕೆಯನ್ನು ಸೋತನು; ಮಾತ್ರವಲ್ಲ, ಈಕೆಯನ್ನು ಪಣವಾಗಿಡುವಂತೆ ಶಕುನಿಯೇ ಯುಧಿಷ್ಠಿರನನ್ನು ಬಲಾತ್ಕರಿಸಿದನು. ಆದುರಿಂದ ದ್ರೌಪದಿಯು ಎಂದೂ ದುರ್ಯೋಧನನ ವಸ್ತುವಾಗುವುದಿಲ್ಲ' ಎನ್ನಲು ಸಭೆಯವರೆಲ್ಲಾ ಈತನ ಮಾತನ್ನು ಸರಿಯೆಂದು ಒಪ್ಪಿದರು. ಆಗ ಕರ್ಣನು ವಿಕರ್ಣನ ಮಾತನ್ನು ಒಪ್ಪದೆ ದುಶ್ಯಾಸನನೊಡನೆ ದ್ರೌಪದಿಯ ಸೀರೆಯನ್ನು ಸೆಳೆಯುವಂತೆ ಹೇಳಿದನು -- ಉತ್ತರ ಗೋಗ್ರಹಣಕ್ಕೆ ಇವನೂ ಬಂದಿದ್ದನು. ಇವನು ಹದಿನಾಲ್ಕನೆಯ ದಿನದ ಯುದ್ಧದಲ್ಲಿ ನಕುಲನಿಂದ ಸೋತನು. ಅದೇ ದಿನ ಕರ್ಣನಿಗೆ ಸಹಾಯಮಾಡಲು ಹೋಗಿ ಭೀಮನಿಂದ ಸತ್ತನು. (ಮ. ಆ., ಸ., ವಿ., ಭೀ. ದ್ರೋ., ಸ್ತ್ರೀ).

ವಿಕುಕ್ಷಿ -- ಸೂರ್ಯವಂಶದ ಇಕ್ಷ್ವಾಕುವಿನ ಮಗ. ಇವನಿಗೆ ಶಶಾದನೆಂಬ ಅಣ್ಣನೂ, ನಿಮಿ, ದಂಡಕ, ವಿಶಾಲ ಮುಂತಾದ ತಮ್ಮಂದಿರೂ, ಸುವರ್ಣೆ ಎಂಬ ಸಹೋದರಿಯೂ ಇದ್ದರು.

ವಿಕುಂಜನ (ವಿಕುಂಠನ) -- ಚಂದ್ರವಂಶದ ಹಸ್ತಿರಾಜನ ಮಗ. ಈತನ ತಾಯಿ ಯಶೋದೆ. ಪತ್ನಿ ಸುಂದರಾ; ಮಗ ಅಜಮೀಢ. ನೋ -- ಅಜಮೀಢ (ಮ. ಆ).

ವಿಕ್ರಮಶೀಲ -- ಪ್ರಿಯವ್ರತರಾಜನ ವಂಶದವ. ಇವನ ಪತ್ನಿ ಕಾಳಿಂದಿ. ಮಗ ದುರ್ಗಮ ಅಥವಾ ದುರ್ದಮ. ನೋ -- ರೇವತಿ.

ವಿಘ್ನೇಶ್ವರ (ಗಣಪತಿ) -- ಶಿವನ ಪುತ್ರ ; ಈತನ ತಾಯಿ ಪಾರ್ವತಿ. ದೇವತೆಗಳು ತಮ್ಮ ಕಾರ್ಯವು ನಿರ್ವಿಘ್ನವಾಗಿ ನೆರವೇರುವುದಕ್ಕಾಗಿ ಶಿವನನ್ನು ಪ್ರಾರ್ಥಿಸಲು ಅವನು ಅವರ ಇಷ್ಟದಂತೆ ಪಾರ್ವತಿಯಲ್ಲಿ ತ್ರಿಶೂಲಧಾರಿಯಾದ ಗಜಾನನನಾಗಿ ಅವತರಿಸಿದನು. ಇವನು ದೇವತೆಗಳ

ವಿಘ್ನಗಳನ್ನು ಪರಿಹರಿಸಿ ತ್ರಿಮೂರ್ತಿಗಳಿಂದಲೂ ಪ್ರಥಮ ಪೂಜೆಯನ್ನು ಪಡೆಯತೊಡಗಿದ (ಲಿಂಗಪು).

ಸ್ನಾನಗೃಹವನ್ನು ಹೊಕ್ಕ ಪಾರ್ವತಿಯು ಗಣಪತಿಯನ್ನು ನಿರ್ಮಾಣಮಾಡಿ ಬಾಗಿಲಿನಲ್ಲಿ ಕೂಡಿಸಿ, ಯಾರನ್ನೂ ಒಳಗೆ ಬಿಡಬೇಡವೆಂದು ಹೇಳಿ, ಒಳಗೆ ಹೊರಟುಹೋದಳು. ಆಗ ಗಣಪತಿಯು ಗಜಾನನನಾಗಿರಲಿಲ್ಲ. ಆಗ ಅಲ್ಲಿಗೆ ಬಂದ ಶಿವನಿಗೂ ಒಳಪ್ರವೇಶ ದೊರೆಯದಿರಲು ಕೋಪದಿಂದ ಶಿವನು ಆ ಬಾಲಕನ ತಲೆಯನ್ನು ಕತ್ತರಿಸಿ ಒಳಗೆ ಹೋದನು. ಇದನ್ನು ತಿಳಿದ ಪಾರ್ವತಿಯು ಪುತ್ರನ ಮರಣದಿಂದ ದುಃಖಿತಳಾಗಲು ಶಿವನು ಉತ್ತರ ದಿಕ್ಕಿಗೆ ತಲೆಹಾಕಿ ಮಲಗಿದ ಆನೆಯೊಂದರ ತಲೆಯನ್ನು ಕತ್ತರಿಸಿ ತಂದು ಆ ಮುಂಡಕ್ಕೆ ಜೋಡಿಸಲು ಅವನು ಎಚ್ಚರಹೊಂದಿ ಗಜಾನನನಾದನು. ದೇವತೆಗಳೆಲ್ಲಾ ಅವನಿಗೆ ಗಣಾಧ್ಯಕ್ಷಪದವಿಯಲ್ಲಿ ಅಭಿಷೇಕ ಮಾಡಿದರು. ಶಿವನು ಈ ಬಾಲಕನ್ನು ಕಂಡು -- 'ನೀನು ಭಾದ್ರಪದ ಶುಕ್ಲ ಚತುರ್ಥಿಯ ದಿನ ಚಂದ್ರೋದಯ ಕಾಲದಲ್ಲಿ ಜನಿಸಿದುದರಿಂದ ಇಂದು ಮೊದಲುಗೊಂಡು ನಿನ್ನ ವರ್ಧಂತಿ ಉತ್ಸವವನ್ನು ಜನರು -- 'ಗಣೇಶಚತುರ್ಥಿ' ಅಥವಾ ಚೌತಿ ಎಂಬ ಹೆಸರಿನಿಂದ ಆಚರಿಸಲಿ ಈ ವ್ರತವನ್ನು ಆಚರಿಸಕ್ಕವರಿಗೆ ನೀನು ಸಕಲ ಶುಭಸಂಪತ್ತುಗಳನ್ನು ಅನುಗ್ರಹಿಸು' ಎಂದು ಆಶೀರ್ವದಿಸಿದನು (ಶಿ.ಕು.ಖ).

ಋಗ್ವೇದದಲ್ಲಿ ಗಣಪತಿಯು ಗಜಾನನನಾಗಿರದೆ ಬೃಹಸ್ಪತಿಯಾಗಿರುವನು. ಕ್ರಿ. ಶ. ಎರಡನೆಯ ಶತಮಾನದಿಂದೀಚೆಗೆ ಈಗಿನ ಗಣಪತಿಯ ಪೂಜೆಯು ರೂಢಿಗೆ ಬಂತೆಂದು ಹೇಳುತ್ತಾರೆ. ಈಗ ಎಲ್ಲಾ ಕಾರ್ಯಗಳಿಗೂ ಮೊದಲು ಪೂಜೆಗೊಂಬ ಗಣಪನು ಕ್ರಿ,. ಶ ಎಂಟನೆಯ ಶತಮಾನದಿಂದೀಚೆಗೆ ಮಹತ್ವ ಪಡೆದನು. ಗಣಪತಿಗಳಲ್ಲಿ ಉಚ್ಚಿಷ್ಟಗಣಪತಿ, ಮಹಾಗಣಪತಿ, ಹರಿದ್ರಾಗಣಪತಿ. ಊರ್ಧ್ವಗಣಪತಿ, ಪಿಂಗಲಗಣಪತಿ, ಲಕ್ಷ್ಮೀಗಣಪತಿ ಮೊದಲಾದ ಭೇದಗಳಿವೆ. ಇನ್ನು ಹಲವು ಮುಖ ತೋಳುಗಳ ಗಣಪತಿಗಳೂ ಇವೆ. ಗಣಪತಿಯ ಮೊತ್ತಮೊದಲಿನ ಆಕಾರ ಕಾಣುವುದು ಸಾಂಚೀ ಸ್ತೂಪದ ಪಶ್ಚಿಮ ತೋರಣದಲ್ಲಿ. ಇದು ಕ್ರಿ. ಶ. ಆರಂಭದ ಕಾಲದ್ದು. ಪ್ರಾಚೀನ ಕಾಲದ ಗಣಪತಿಗೆ ಎರಡೇ ಕೈಗಳಿದ್ದುವೆಂದು ಭೂಮಾರಾದ ಗಣಪತಿ (ಬಲಗೈಯಲ್ಲಿ ಪರಶು, ಎಡಗೈಯಲ್ಲಿ ಕಮಲ), ಮತ್ತು ಗೋಕರ್ಣದ ಗಣಪತಿಯ ವಿಗ್ರಹಗಳಿಂದ ಗೊತ್ತಾಗುವುದು. ಭೂಮಾರಾದ ಗಣಪತಿಯ ಎಡತೊಡೆಯ ಮೇಲೆ ಅವನ ಪತ್ನಿ ಶಕ್ತಿ ಕುಳಿತು ಮೋದಕವನ್ನು ತಿನ್ನಿಸುತ್ತಿದ್ದಾಳೆ. ಚಾಲುಕ್ಯರಾಜ ಮೂರನೆಯ ಸೋಮೇಶ್ವರನ ಮಾನಸೋಲ್ಲಾಸವೆಂಬ

ಗ್ರಂಥದಲ್ಲಿ ಗಣಪತಿಯನ್ನು ಹೀಗೆ ಚಿತ್ರಿಸಬೇಕೆಂದಿದೆ: ' ಆನೆಯ ಮುಖ, ಮೂರು ಕಣ್ಣು, ದೊಡ್ಡ ಹೊಟ್ಟೆ, ನಾಗೋಪವೀತ, ಬಲದ ಎರಡು ಕೈಗಳಲ್ಲಿ ಮುರಿದ ಕೋರೆ ಮತ್ತು ಉತ್ಪಲ. ಎಡಗೈಗಳಲ್ಲಿ ಪರಶು ಮತ್ತು ಮೋದಕ ಅವನ ಸಿದ್ಧಿ ಬುದ್ಧಿಯಲ್ಲಿರಬೇಕು. ಅವನ ವರ್ಣಕೆಂಪು.'

ವಿಚಿತ್ರವೀರ್ಯ -- ಚಂದ್ರವಂಶದ ಶಂತನುರಾಜನ ಮಗ ; ಈತನ ತಾಯಿ ಸತ್ಯವತಿ ; ಭೀಷ್ಮನು ಇವನ ಅಣ್ಣ. ಚಿತ್ರಾಂಗದನು ಸತ್ಯವತಿಯ ಹಿರಿಯ ಮಗ. ಕಾಶೀರಾಜನ ಮಕ್ಕಳಾದ ಅಂಬಿಕೆ, ಅಂಬಾಲಿಕೆಯರು ವಿಚಿತ್ರವೀರ್ಯನ ಹೆಂಡಿರು. ಮುಂದೆ ವಿಚಿತ್ರವೀರ್ಯನು ಸ್ತ್ರೀ ವ್ಯಾಮೋಹಿತನಾಗಿ ಸದಾ ರತಿಸುಖದಲ್ಲಿ ಆಸಕ್ತನಾಗಿರಲು ಆ ದುರ್ವ್ಯಸನದಿಂದ ಆತನಿಗೆ ರಾಜಕ್ಷಯವು ಪ್ರಾಪ್ತವಾಗಿ ಮಕ್ಕಳಿಲ್ಲದೆ ಸ್ವರ್ಗಸ್ಥನಾದನು. ಮುಂದೆ ಅಂಬಿಕೆ, ಅಂಬಾಲಿಕೆಯರಲ್ಲಿ ವೇದವ್ಯಾಸರಿಂದ ಧೃತರಾಷ್ಟ್ರ, ಪಾಂಡುಗಳೆಂಬ ಮಕ್ಕಳು ಹುಟ್ಟಿದರು. ವಿಚಿತ್ರವೀರ್ಯನು ಧನುರ್ವಿದ್ಯೆಯಲ್ಲಿ ನಿಪುಣನಾಗಿದ್ದನು (ಮ. ಆ).

ವಿಜಯ -- ೧. ಅರ್ಜುನನ ಹತ್ತು ಹೆಸರುಗಳಲ್ಲೊಂದು. ಇವನು ಅಪಜಯವನ್ನು ಅನುಭವಿಸಿ ತಿಳಿಯದವನು. ೨. ವಿಷ್ಣುವಿನ ದ್ವಾರಪಾಲಕರಲ್ಲೊಬ್ಬ. ಇವನ ಸಹೋದರ ಜಯ. ಇವರು ಸನಕ, ಸನಂದನ ಮೊದಲಾದ ಮಹರ್ಷಿಗಳ ಕೋಪಕ್ಕೆ ಗುರಿಯಾಗಿ ಹಿರಣ್ಯಕಶಿಪು, ಹಿರಣ್ಯಾಕ್ಷ; ರಾವಣ, ಕುಂಭಕರ್ಣ; ಶಿಶುಪಾಲ, ದಂತವಕ್ರರಾಗಿ ಹುಟ್ಟಿದರು. ನೋ -- ಜಯ. ೩. ಮಗಧ ದೇಶದ ಬ್ರಾಹ್ಮಣನೊಬ್ಬ. ಇವನು ಮಹೀಸಾಗರ ಸಂಗಮಕ್ಷೇತ್ರದಲ್ಲಿ ವಿದ್ಯಾಸಿದ್ಧಿಗಾಗಿ ತಪಸ್ಸು ಮಾಡುತ್ತಿರಲು, ದೇವಿಯ ಸೂಚನೆಯಂತೆ ಘಟೋತ್ಕಚನ ಮಗನಾದ ಬರ್ಬರೀಕನಿಂದ ಸಿದ್ಧಿಪಡೆದನು. ೪. ಶಿವನ ತ್ರಿಶೂಲ . ೫. ಲವನ ಮಂತ್ರಿ (ಆನಂ. ರಾ).

ವಿಜಯಾ (ವಿಜಯಿ)-- ಮಾದ್ರಿಯ ಮಗನಾದ ಸಹದೇವನ ಪತ್ನಿ ; ಈಕೆ ಶಲ್ಯರಾಜನ ಮಗಳು. ಈಕೆಯ ಮಗ ಸುಹೋತ್ರ (ಮ. ಆ)

ವಿಜಿತಾಶ್ವ-- ಪೃಥುರಾಜನ ಹಿರಿಯ ಮಗ. ಇವನಿಗೆ ಅಂತರ್ಧಾನನೆಂಬ ಹೆಸರೂ ಇದೆ. ನೋ -- ಅಂತರ್ಧಾನ. ಪೃಥುರಾಜನ ನೂರನೆಯ ಅಶ್ವಮೇಧಯಾಗದಲ್ಲಿ ಕುದುರೆಯನ್ನು ಇಂದ್ರನು ಪಾಷಂಡ ವೇಷದಿಂದ ಅಪಹರಿಸಲು, ಅತ್ರಿ ಮುನಿಯು ಕುದುರೆಗಳನ್ನು ಇಂದ್ರನೆಂದು ರಾಜನಿಗೆ ತಿಳಿಸಿದನು. ಆಗ ರಾಜನ ಹಿರಿಮಗ ಅವನನ್ನು ಬೆನ್ನಟ್ಟಿಹೋಗಲು, ಇಂದ್ರನು ಕುದುರೆಯನ್ನು ಬಿಟ್ಟು

ಹೋದನು. ಅಂದಿನಿಂದ ಅಂತರ್ಧಾನನಿಗೆ ವಿಜಿತಾಶ್ವನೆಂದು ಹೆಸರು ಬಂತು (ಭಾಗ).

ವಿಡೂರಥ (ವಿದೂರಥ) --ಯಾದವನೊಬ್ಬ. ನೋ -- ದಂತವಕ್ತ್ರ (ಮ. ಆ).

ವಿತಥ-- ದುಷ್ಯಂತನ ಮೊಮ್ಮಗ;ಭರತನ ಸಾಕುಮಗ. ನೋ -- ಭರತ.

ವಿತಸ್ತಾ-- ನದಿಯೊಂದು. ಇದು ಹಿಮಾಲಯದಲ್ಲಿ ಹುಟ್ಟಿ ಪಂಜಾಬದಲ್ಲಿ ಹರಿದು ಸಿಂಧುನದಿಗೆ ಸಂಗಮವಾಗುತ್ತದೆ. ಇದಕ್ಕೆ ಈಗ ಜೀಲಂ ನದಿ ಎನ್ನುತ್ತಾರೆ (ಮ. ವ., ಭೀ).

ವಿತಸ್ಯ -- ಸಾವ್ಯೆನನ ಮಗ ;ಬ್ರಾಹ್ಮಣ; ಈತನ ಮಗ ಶಿವ (ಮ. ಅನು).

ವಿದರ್ಭ -- ೧. ಕ್ಷತ್ರಿಯನೊಬ್ಬ. ಇವನ ತಂದೆ ಯದುವಂಶದ ಜ್ಯಾಮಘ ; ತಾಯಿ ಶೈಬ್ಯೆ. ಶೈಬ್ಯೆಗೆ ಚೈತ್ರಾ ಎಂಬ ಹೆಸರೂ ಇದೆ. ಜ್ಯಾಮಘನು ಶತ್ರುಗಳನ್ನು ಗೆದ್ದು ತನ್ನ ದೇಶಕ್ಕೆ ಬರುವಾಗ ಒಂದು ಕನ್ಯಾರತ್ನವನ್ನು ತಂದನು. ಚೈತ್ರೆಯು ರಾಜನೊಡನೆ ಆ ಕನ್ಯೆ ಯಾರೆಂದು ಹೇಳಲಾಗಿ ರಾಜನು ರಾಣಿಯ ಭಯದಿಂದ 'ನಿನ್ನ ಸೊಸೆ' ಎಂದನು. ಮಕ್ಕಳಿಲ್ಲದ ಶೈಬ್ಯೆಯು ಈ ಮಾತಿನಿಂದ ಹಲವು ವ್ರತಗಳನ್ನು ಮಾಡಿ ವಿದರ್ಭನೆಂಬ ಮಗನನ್ನು ಪಡೆದಳು. ವಿದರ್ಭನು ಈ ಕನ್ಯೆಯನ್ನು ವಿವಾಹವಾಗಿ ಕ್ರಥ, ಕೈಶಿಕ, ರೋಮಪಾದರೆಂಬ ಮಕ್ಕಳನ್ನು ಪಡೆದನು (ಮತ್ಸ್ಯಪು). ೨. ವಿಂಧ್ಯಪರ್ವತದ ದಕ್ಷಿಣದಲ್ಲೂ, ದಶಾರ್ಣ ದೇಶದ ಪಶ್ಚಿಮದಲ್ಲೂ, ಗೋದಾವರಿಯ ಉತ್ತರದಲ್ಲೂ, ಸುರಾಷ್ಟ್ರದೇಶದ ಪೂರ್ವದಲ್ಲೂ ಇರುವ ದೇಶ. ಇದು ರುಕ್ಮಿಣಿಯ ತಂದೆಯಾದ ಭೀಷ್ಮಕನ ರಾಜ್ಯವಾಗಿತ್ತು. ಇದು ಇಂದಿನ ಬೀರಾರು. ಇದಕ್ಕೆ ಕುಂಡಿನಾನಗರ, ಭೋಜಕಟಕಪುರ, ಅಕೋಲ, ಅಮರಾವತಿ, ಇಲಿಚಿಪುರ ಇತ್ಯಾದಿ ಪಟ್ಟಣಗಳು ರಾಜಧಾನಿಗಳಾಗಿದ್ದವು. ದಮಯಂತಿಯ ತಂದೆಯಾದ ಭೀಷ್ಮಕನ (ಭೀಮ) ರಾಜಧಾನಿಯೂ ಇದೇ ಆಗಿತ್ತು (ಮ. ಭೀ., ಸ).

ವಿದಿಶಾ -- ೧. ನದಿಯೊಂದು (ಮ. ಸ). ೨. ದೇಶವೊಂದು. ಭಾರತದ ನರಿಹದ್ದುಗಳ ಸಂಭಾಷಣೆಯ ಕಥೆಯು ಈ ದೇಶದಲ್ಲಿ ನಡೆಯಿತೆಂದಿದೆ.

ವಿದುರ --ಚಂದ್ರವಂಶದ ವಿಚಿತ್ರವೀರ್ಯನ ಪತ್ನಿಯಾದ ಅಂಬಿಕೆಯ ದಾಸಿ ಈತನ ತಾಯಿ; ತಂದೆ ವೇದವ್ಯಾಸಮುನಿ. ಇವನು ಯಮನ ಅಂಶದಿಂದ ಜನಿಸಿದವನು (ಮ. ಆ). ಈತನ ಪತ್ನಿ ಪಾರಸವ್ಯಾ. ಅಣಿಮಾಂಡವ್ಯಮುನಿಯ ಶಾಪದಿಂದ ಯಮನು ವಿದುರನಾಗಿ ಜನಿಸಿದನು. ನೋ -- ಅಣಿಮಾಂಡವ್ಯ. ಪಾಂಡವರು ವಾರಣಾವತಕ್ಕೆ ಹೊರಟಾಗ ವಿದುರನು ಮಾರ್ಗದಲ್ಲಿ ಅವರೊಡನೆ ಮ್ಲೇಚ್ಛ ಭಾಷೆಯಲ್ಲಿ 'ಅದು ಅರಗಿನ ಮನೆ'ಎಂದು ಸೂಚಿಸಿದನು. ಇವನೇ ಕೌರವರಿಗೆ ತಿಳಿಯದಂತೆ ಅರಗಿನ ಮನೆಯಲ್ಲಿ ಪಾಂಡವರು ತಪ್ಪಿಸಿಕೊಳ್ಳಲು ಸುರಂಗಮಾರ್ಗವನ್ನು ತೋಡಿಸಿದ್ದನು. ಇವನು ಪಾಂಡವರೊಡನೆ ಸಂಧಾನ

ಮಾಡಿಕೊಳ್ಳಿ ಎಂದು ಧೃತರಾಷ್ಟ್ರನಿಗೆ ನೀತಿಯನ್ನು ಹೇಳಿದನು. ಕೃಷ್ಣನು ಸಂಧಾನಕ್ಕೆ ಹಸ್ತಿನಾವತಿಗೆ ಬಂದಾಗ ಈತನ ಮನೆಯಲ್ಲೇ ಉಳಿದುಕೊಂಡನು. ಯುದ್ಧಾನಂತರ ಧೃತರಾಷ್ಟ್ರ, ಗಾಂಧಾರಿ ಮತ್ತು ಕುಂತಿಯರು ವಾನಪ್ರಸ್ಥಾಶ್ರಮವನ್ನು ಕೈಕೊಂಡಾಗ ಇವನೂ ಅವರ ಜೊತೆಯಲ್ಲೆ ಅರಣ್ಯಕ್ಕೆ ತೆರಳಿದನು. ಭಾರತಯುದ್ಧಕಾಲದಲ್ಲಿ ಇವನು ತೀರ್ಥಯಾತ್ರೆಯಲ್ಲಿದ್ದನು. ಧೃತರಾಷ್ಟ್ರನ ಮರಣದ ವಾರ್ತೆಯನ್ನು ಕೇಳಿ ಅರಣ್ಯಕ್ಕೆ ಹೋಗಿದ್ದ ಧರ್ಮರಾಜನ ದೇಹದೊಳಕ್ಕೆ ವಿದುರನ ಪ್ರಾಣಜ್ಯೋತಿಯು ಬಂದು ಸೇರಿತು (ಮ).

ಇವನು ಪ್ರಭಾಸಕ್ಷೇತ್ರದಲ್ಲಿ ದೇಹತ್ಯಾಗ ಮಾಡಿದನು (ಭಾಗ., ಮ. ಆ., ವ., ಉ., ಶಾಂ., ಆಶ್ರಮ).

ವಿದುಲಾ -- ಸೌವೀರ ರಾಜನ ಪತ್ನಿ. ಈಕೆಯ ಮಗನೇ ಸಂಜಯ. ಈತನು ಸಿಂಧು ರಾಜನಿಗೆ ಸೋತು ದೀನನಾಗಿ ಮಲಗಿಕೊಂಡು ಇರುವಾಗ ಕೀರ್ತಿವಂತಳಾಗಿಯೂ, ಸತ್ಕುಲಪ್ರಸೂತಳಾಗಿಯೂ, ಕ್ಷೇತ್ರಧರ್ಮವನ್ನು ಅನುವರ್ತಿಸಿದವಳಾಗಿಯೂ, ದೂರದೃಷ್ಟಿಯುಳ್ಳವಳಾಗಿಯೂ, ರಾಜನೀತಿ ಬಲ್ಲವಳಾಗಿಯೂ, ಅನೇಕ ಶಾಸ್ತ್ರಗಳನ್ನು ತಿಳಿದವಳಾಗಿಯೂ ಇದ್ದ ವಿದುಲೆಯು ಮಗನಿಗೆ ಕ್ಷಾತ್ರಧರ್ಮವನನ್ನು ಉಪದೇಶಿಸಿದಳು. 'ಹೊಗೆಯಾಡುವ ಯಜ್ಞೇಶ್ವರನಿಗಿಂತ ಒಂದು ಮುಹೂರ್ತವಾದರೂ ಪ್ರಜ್ವಲಿಸುವ ಯಜ್ಞೇಶ್ವರನೇ ಶ್ಲಾಘ್ಯನು. ಎಲೈ ಮಗನೇ, ಬಾಲನಾದ ಒಬ್ಬ ಪ್ರಾಜ್ಞನಾದ ಬ್ರಾಹ್ಮಣನು ನಿನ್ನನ್ನು ನೋಡಿ-- ಈತನು ಸಕಲ ಶತ್ರುಗಳನ್ನೂ ಜಯಿಸತಕ್ಕವನು. ಇವನು ಮೊದಲು ಮಹತ್ತಾದ ವಿಪತ್ತನ್ನು ಹೊಂದಿ ಬಳಿಕ ಇನ್ನೂ ಅಭಿವೃದ್ಧಿಯನ್ನು ಹೊಂದುವನು' ಎಂದು ಹೇಳಿದುದರಿಂದಲೇ ನಿನಗೆ ಸಂಜಯನೆಂದು ಹೆಸರಿಟ್ಟೆ. ಕ್ಷತ್ರಿಯನು ಯುದ್ಧವನ್ನು ಮಾಡುವುದಕ್ಕೂ, ಶತ್ರುಗಳನ್ನೂ ಜಯಿಸುವುದಕ್ಕೂ, ಸಜ್ಜನರನ್ನು ರಕ್ಷಿಸುವುದಕ್ಕೂ ಸೃಷ್ಟಿಸಲ್ಪಟ್ಟಿರುವನು. ನಿನಗೆ ತಿಳಿಯದಂತೆ ನಾನು ತುಂಬಾ ಹಣ ಕೂಡಿಸಿಟ್ಟಿರುವೆನು. ಅದನ್ನು ತೆಗೆದುಕೊಂಡು ಸೈನ್ಯಗಳೆಲ್ಲಕ್ಕೂ ಸಂಬಳ ಕೊಟ್ಟು ಯುದ್ಧಕ್ಕೆ ಪ್ರಯತ್ನಮಾಡು.'' ಮುಂದೆ ಸಂಜಯನು ತಾಯಿಯ ಮಾತಿನಂತೆ ಶತ್ರುಗಳನ್ನು ಗೆದ್ದನು. ಈ ಕಥೆಯನ್ನು ಸಂಧಾನಕ್ಕೆ ಹೊರಟ ಕೃಷ್ಣನಿಗೆ ಕುಂತಿಯು ಹೇಳಿದಳು. ಈ ಕಥೆಗೆ ಜಯೇತಿಹಾಸವೆಂಬ ಹೆಸರಿದೆ (ಮ. ಉ., ಮಾರ್ಕಂ. ಪು).

ವಿದೂರಥ -- ಚಂದ್ರವಂಶದ ಕುರುರಾಜನ ಮಗ. ಈತನ ತಾಯಿ ಶುಭಾಂಗಿ. ಅಶ್ವವಂತ, ಅಭಿಷ್ಯಂತ, ಚೈತ್ರರಥ, ಮುನಿ, ಜನಮೇಜಯರು ಈತನ ಸಹೋದರರು. ಇವನು ಪರಶುರಾಮನಿಗೆ ಹೆದರಿ ಕಾಡಿನಲ್ಲಿ ಅಡಗಿದ್ದ. ಇವನ ಮಗಳು ಮಾನಿನಿ;ಅಳಿಯ ದಮರಾಜನ ಮಗನಾದ ರಾಜವರ್ಧನ. ನೋ --ಕುರು, ರಾಜ್ಯವರ್ಧನ (ಮ. ಶಾಂ., ಆ).

ವಿದೇಹ --ಈಗಿನ ತಿರ್‌ಹಟ್ ಪ್ರಾಂತ. ಇದು ಜನಕನ ರಾಜಧಾನಿಯಾಗಿತ್ತು. ಈ ರಾಜ್ಯದ ಪೂರ್ವದಲ್ಲಿ ಕೌಶಿಕಿ ನದಿಯೂ, ಪಶ್ಚಿಮದಲ್ಲಿ ಗಂಡಕಿಯೂ, ಉತ್ತರದಲ್ಲಿ ಹಿಮಾಲಯವೂ, ದಕ್ಷಿಣದಲ್ಲಿ ಗಂಗಾನದಿಯೂ ಮೇರೆಗಳಾಗಿವೆ. ನೋ -- ನಿಮಿ, ಮಿಥಿ, ಜನಕ (ಮ. ಭೀ).

ವಿದ್ಯುಜ್ಜಿಹ್ವ -- ೧. ದೇವಲೋಕದಲ್ಲಿ ಅಮೃತವನ್ನು ರಕ್ಷಿಸುವ ಸರ್ಪಗಳೆರಡು (ಮ. ಆ). ೨. ಶೂರ್ಪನಖಿಯ ಗಂಡ. ಈತನು ಕಾಲೆಯ ಮಕ್ಕಳಾದ ಕಾಲಕೇಯರೊಂದಿಗೆ ಸೇರಿ ರಾವಣನೊಡನೆ ಯುದ್ಧ ಮಾಡುತ್ತಿದ್ದಾಗ ಆತನಿಂದ ಮೃತನಾದನು (ರಾಮಾ. ಉತ್ತರ). ೩. ಲಂಕೆಯ ಒಬ್ಬ ರಾಕ್ಷಸ ; ಮಹಾಮಾಯಾವಿ. ಮಾಲ್ಯವಂತನು ರಾವಣನಿಗೆ ಬುದ್ಧಿವಾದವನ್ನು ಹೇಳಿದರೂ ಕೇಳದೆ ವಿದ್ಯುಜ್ಜಿಹ್ವನೊಡನೆ ರಾಮನ ಮಾಯಾಶಿರಸ್ಸನ್ನು ನಿರ್ಮಾಣಮಾಡುವಂತೆ ಹೇಳಿ ಸೀತೆಯ ಮುಂದೆ ಕೆಡೆಯಲು ಆಕೆಯು ವೈಧವ್ಯ ದುಃಖ ಪ್ರಾಪ್ತವಾದುದಕ್ಕಾಗಿ ಗೋಳಿಡುತ್ತಿರಲು ಸರಮೆ ಮತ್ತು ತ್ರಿಜಟೆಯರು 'ಅದು ಮಾಯಾಶಿರಸ್ಸು' ಎಂದು ಆಕೆಯನ್ನು ಸಮಾಧಾನಗೊಳಿಸಿದರು (ರಾಮಾ. ಯುದ್ಧ).

ವಿದ್ಯುತಾ--ಅಪ್ಸರೆಯೊಬ್ಬಳು (ಮ. ಅನು).

ವಿದ್ಯುತ್ಪೂರ್ಣಾ-- ಅಪ್ಸರೆಯೊಬ್ಬಳು. (ಮ. ಆ).

ವಿದ್ಯುತ್ಕೇಶ-- ರಾಕ್ಷಸನೊಬ್ಬ. ಹೇತಿ ಎಂಬ ರಾಕ್ಷಸನಿಗೆ ಕಾಲನ ಸೋದರಿಯಾದ ಭಯೆಯಲ್ಲಿ ಹುಟ್ಟಿದ ಮಗ. ಇವನು ಸಂಧ್ಯಾದೇವಿಯ ಮಗಳಾದ ಸಾಲಕಟಂಕಟೆಯನ್ನು ಮದುವೆಯಾದನು. ಈಕೆಯು ಗರ್ಭಿಣಿಯಾಗಿ ಒಂದು ಗುಹೆಯಲ್ಲಿ ಮಗುವನ್ನು ಹೆತ್ತು ಅಲ್ಲೇ ಅದನ್ನು ಬಿಟ್ಟು ಗಂಡನೊಡನೆ ಕ್ರೀಡಿಸಲು ಹೊರಟುಹೋದಳು. ಆಗ ಆ ಮಾರ್ಗವಾಗಿ ಬಂದ ಶಿವ--ಪಾರ್ವತಿಯರು ಅಳುತ್ತಿರುವ ಮಗುವನ್ನು ಕಂಡರು. ಪಾರ್ವತಿಯು ಆ ಶಿಶುವಿನಲ್ಲಿ ಕರುಣೆಯನ್ನು ಹೊಂದಿ; ರಾಕ್ಷಸಿಯರು ಗರ್ಭಧಾರಣ ಮಾಡಿದೊಡನೆಯೇ ಪ್ರಸವಿಸಲಿ; ಮಗುವು ಕೂಡಲೇ ಯೌವನ ಹೊಂದಲಿ' ಎಂದು ವರವಿತ್ತಳು. ಈ ಬಾಲಕನೇ ಸುಕೇಶನೆಂಬ ರಾಕ್ಷಸ (ರಾಮಾ. ಉತ್ತರ).

ವಿದ್ಯುತ್ಪ್ರಭ -- ಋಷಿಯೊಬ್ಬ (ಮ. ಅನು).

ವಿದ್ಯುತ್ಪ್ರಭಾ -- ಅಪ್ಸರೆಯರಲ್ಲೊಬ್ಬಳು. ಇವರು ಹತ್ತು ಮಂದಿ (ಮ. ಉ).

ವಿದ್ಯುನ್ಮಾಲಿ-- ತಾರಕಾಸುರನ ಮೂರನೇ ಮಗ. ಇವನಿಗೆ ತಾರಾಕ್ಷ ಮತ್ತು ಕಮಲಾಕ್ಷರೆಂಬಿಬ್ಬರು ಸಹೋದರರಿದ್ದರು. ನೋ -- ತಾರಾಕ್ಷ, ತಾರಕ, ಕಮಲಾಕ್ಷ (ಮ. ಕ).

ವಿದ್ಯೋತಾ -- ಅಪ್ಸರೆಯೊಬ್ಬಳು (ಮ. ಅನು).

ವಿಧಾತ -- ೧. ಬ್ರಹ್ಮ. ೨. ಬ್ರಹ್ಮನ ಮೊಮ್ಮಗ;ಭೃಗುವಿನ ಮಗ. ಇವನಿಗೆ ಧಾತನೆಂಬ ಸಹೋದರನಿದ್ದನು. ಭಾರ್ಗವಿ ಅಥವಾ ಲಕ್ಷ್ಮಿಯು ಈತನ ಸೋದರಿ. ಈತನ ಪತ್ನಿಯು ಮೇರುವಿನ ಮಗಳಾದ ನಿಯತಿ. ಮಕ್ಕಳು ವೇದಶಿರ ಮತ್ತು ಕವಿ (ಭಾಗ).

ವಿಧಿ -- ಅದೃಷ್ಟ; ದೈವ; ಬ್ರಹ್ಮ (ಮ. ಅನು., ವ).

ವಿಧೂಮ--ಒಬ್ಬ ವಸು. ಇವನು ಬ್ರಹ್ಮನ ಶಾಪದಿಂದ ಅರ್ಜುನನ ಮರಿಮಗನಾದ ಶತಾನೀಕನ ಪಟ್ಟದರಸಿಯಾದ ವಿಷ್ಣುಮತಿಯ ಗರ್ಭದಲ್ಲಿ ಸಹಸ್ರಾನೀಕನೆಂಬ ಹೆಸರಿನಿಂದ ಜನಿಸಿದ್ದನು. ಶತಾನೀಕನು ಇಂದ್ರನಿಗೆ ಸಹಾಯಮಾಡಲು ಸ್ವರ್ಗಕ್ಕೆ ಹೋಗಿ ಅಲ್ಲಿ ಅಹಿದಂಷ್ಟ್ರ ಮತ್ತು ಸ್ಥೂಲಶಿರನೆಂಬ ರಾಕ್ಷಸರೊಡನೆ ಹೋರಾಡುತ್ತ ಸ್ವರ್ಗಸ್ಥನಾದನು. ಇಂದ್ರನು ಇವನ ದೇಹವನ್ನು ಕೌಶಾಂಬಿಗೆ ಕಳುಹಿಸಲು ವಿಷ್ಣುಮತಿಯು ಪತಿಯೊಡನೆ ಸಹಗಮನವಾದಳು. ಮುಂದೆ ಸಹಸ್ರಾನೀಕನು ಇಂದ್ರನ ಆಮಂತ್ರಣದ ಮೇರೆಗೆ ಸ್ವರ್ಗಕ್ಕೆ ಹೋಗಿ ನಂದನ ಮಹೋತ್ಸವವನ್ನು ಮುಗಿಸಿ ಬರುವಾಗ ತಿಲೋತ್ತಮೆಯೆಂಬ ಅಪ್ಸರೆಯು ಅವನನ್ನು ಮಾತನಾಡಿಸಲು ಅನ್ಯಮನಸ್ಕನಾಗಿದ್ದ ರಾಜನು ಆ ಕಡೆಗೆ ಗಮನವನ್ನೇ ಕೊಡಲಿಲ್ಲ. ಇದರಿಂದ ಕೋಪಗೊಂಡ ಅಪ್ಸರೆಯು ರಾಜನಿಗೆ -- 'ನೀನು ಹದಿನಾಲ್ಕು ವರ್ಷ ಪತ್ನೀವಿಯೋಗದುಃಖವನ್ನು ಅನುಭವಿಸಿಕೊಂಡಿರು' ಎಂದು ಶಾಪವಿತ್ತಳು. ಮುಂದೆ ಸಹಸ್ರಾನೀಕನು ಮೃಗವತಿಯನ್ನು ವಿವಾಹವಾದನು. ಈಕೆ ಗರ್ಭಿಣಿಯಾಗಿದ್ದಾಗ ಒಂದು ದಿನ ಕೆಂಪುನೀರಿನಲ್ಲಿ ಮಿಂದು ಬರುತ್ತಿದ್ದಾಗ ಗರುಡ ಪಕ್ಷಿಗೆ ಈಕೆಯೊಂದು ಮಾಂಸದ ಮುದ್ದೆಯಂತೆ ಕಾಣಲು ಅದನ್ನು ಕಚ್ಚಿಕೊಂಡು ಹೋಗಿ ಉದಯ ಪರ್ವತದಲ್ಲಿಟ್ಟಿತು. ಅಲ್ಲಿ ರಾಣಿಯು ಜಮದಗ್ನಿಯ ಆಶ್ರಮವನ್ನು ಸೇರಿ ಉದಯನನೆಂಬ ಮಗನನ್ನು ಹೆತ್ತಳು. ಈ ಉದಯನನು ಯೌವನದಲ್ಲಿ ಬೇಡನ ಕೈಗೆ ಸಿಕ್ಕಿದ ಸರ್ಪವೊಂದನ್ನು ಬಿಡಿಸಿದುದರಿಂದ ಸರ್ಪರಾಜನಾದ. ಧೃತರಾಷ್ಟ್ರನು ಉದಯನನ್ನು ತನ್ನ

ಲೋಕಕ್ಕೆ ಕೊಂಡು ಹೋಗಿ ತನ್ನ ಮಗಳಾದ ಲಲಿತೆಯನ್ನು ಮದುವೆ ಮಾಡಿಕೊಟ್ಟನು. ಈಕೆ ಸದ್ಯೋಗರ್ಭದಿಂದ ಒಬ್ಬ ಬಾಲಕನನ್ನು ಹೆತ್ತು ಗಂಡನಿಗೆ ಮಗುವನ್ನೂ, ಘೋಷವತಿ ಎಂಬ ವೀಣೆಯನ್ನೂ, ಬಾಡದ ಹೂಮಾಲೆಯನ್ನೂ ಕೊಟ್ಟು ತಾನು ಸುಕರ್ಣೆ ಎಂಬ ವಿದ್ಯಾಧರೆಯೆಂದೂ ಶಾಪದಿಂದ ನಾಗಿಣಿಯಾದೆನೆಂದೂ ಹೇಳಿ ಅದೃಶ್ಯಳಾದಳು. ಉದಯನನು ಜಮದಗ್ನಿಯ ಆಶ್ರಮಕ್ಕೆ ಬಂದನು. ಇತ್ತ ಸಹಸ್ರಾನೀಕನು ಪತ್ನಿ ಮತ್ತು ಮಗನ ವಿಚಾರವನ್ನು ತಿಳಿದು ಅವರನ್ನು ಕೌಶಾಂಬಿಗೆ ಕರೆಸಿಕೊಂಡು ಪಟ್ಟಕಟ್ಟಿ ತಾವು ಚಕ್ರತೀರ್ಥದಲ್ಲಿ ಮಿಂದು ಅಲಂಬುಸೆ ಮತ್ತು ವಿಧೂಮರಾದರು (ಸ್ಕಾಂ. ಪು).

ವಿಧೃತ -- ತ್ರೇತಾಯುಗದ ರಾಜನೊಬ್ಬ. ಇವನು ತನ್ನ ರಾಜ್ಯದಲ್ಲಿ ದುಷ್ಟರಿಗೆ ಆಶ್ರಯ ಕೊಟ್ಟುದರಿಂದ ಶತ್ರುಗಳು ಇವನ ರಾಜ್ಯವನ್ನು ಕಿತ್ತುಕೊಂಡರು. ಇವನು ಕಾಡಿನಲ್ಲಿ ಮನುಷ್ಯರ ಮತ್ತು ಪ್ರಾಣಿಗಳ ತಲೆ ಹೊಡೆದು ಅವನ್ನೇ ತಿಂದು ದಿನ ಕಳೆಯುತ್ತಿದ್ದನು. ಇವನಿಗೆ ಅವಸಾನಕಾಲ ಬಂದಾಗ ಪ್ರಹರ, ಆಹರ, ಸಂಹರ-- ಎಂದು ಹರನಾಮ ಸ್ಮರಣೆಯಿಂದ ಶಿವಲೋಕ ಹೊಂದಿದನು (ಪದ್ಮ ಪು).

ವಿನತಾ -- ೧. ದಕ್ಷಪ್ರಜಾಪತಿಯ ಪುತ್ರಿ; ಕಶ್ಯಪಮುನಿಯ ಪತ್ನಿ. ಈತನಿಗೆ ಅರುಣ ಮತ್ತು ಗರುಡ ಎಂಬಿಬ್ಬರು ಮಕ್ಕಳಲ್ಲದೆ ಪಕ್ಷಿವರ್ಗಗಳಿಗೇ ಈಕೆ ತಾಯಿಯಾದಳು. ನೋ -- ಅರುಣ, ಗರುಡ, ಕದ್ರು, ಕಶ್ಯಪ. ಗರುಡನು ದೇವಲೋಕದಿಂದ ಅಮೃತವನ್ನು ತಂದು ತಾಯಿಯ ದಾಸ್ಯವನ್ನು ಹೋಗಲಾಡಿಸಿದನು (ಮ. ಆ., ಅನು). ೨. ಅಶೋಕವನದಲ್ಲಿ ಸೀತೆಗೆ ಕಾವಲಿದ್ದ ಒಬ್ಬಳು ರಾಕ್ಷಸಿ (ರಾಮಾ. ಸುಂದರ).

ವಿನಶನ --ಇದೊಂದು ತೀರ್ಥ. ಸರ್‌ಹಿಂದ್ ಜಿಲ್ಲೆಯ ದೊಡ್ಡ ಮರುಭೂಮಿಯಲ್ಲಿ ಸರಸ್ವತೀನದಿಯು ಅದೃಶ್ಯವಾದ ಭಾಗದಲ್ಲಿದ್ದ ತೀರ್ಥ. ಸರಸ್ವತೀನದಿಯು ಈ ಸ್ಥಳದಲ್ಲಿದ್ದ ಶೂದ್ರರನ್ನೂ, ಗೊಲ್ಲರನ್ನೂ ದ್ವೇಷಿಸಿದುದರಿಂದ ಇವಳು ಇಲ್ಲಿ ನಷ್ಟವಾದಳು. ಇದರಿಂದ ವಿನಶನತೀರ್ಥವಾಯಿತು (ಮ. ವ., ಶ).

ವಿನಾಯಕ -- ನೋ -- ಗಣೇಶ, ವಿಘ್ನೇಶ್ವರ.

ವಿಂದ -- ೧. ಅವಂತಿಯ ರಾಜಪುತ್ರ. ಈತನ ಸಹೋದರ ಅನುವಿಂದ. ನೋ --ಅನುವಿಂದ. ಕರ್ಣನು ಸೇನಾಪತಿಯಾದಾಗ ಈತನು ಅರ್ಜುನನಿಂದ ಹತನಾದನು. ಅನುವಿಂದನನ್ನು ಅರ್ಜುನನು ತೀಕ್ಷ್ಣವಾದ ಕ್ಷುರಪ್ರದಿಂದ ಕೊಂದನು (ಮ. ಸ., ದ್ರೋ). ೨. ಕೇಕಯ ರಾಜಪುತ್ರನೊಬ್ಬ. ಕೌರವಪಕ್ಷೀಯ.

ಈತನ ಸಹೋದರ ಅನುವಿಂದ. ಇವನು ಸಾತ್ಯಕಿಯಿಂದ ಹದಿನಾರನೇ ದಿನದ ಯುದ್ಧದಲ್ಲಿ ಹತನಾದನು (ಮ.ಕ).೩. ದುರ್ಯೋಧನನ ತಮ್ಮಂದಿರಲ್ಲೊಬ್ಬ. ಹದಿನೈದನೇ ದಿನದ ಯುದ್ಧದಲ್ಲಿ ಭೀಮನಿಂದ ಹತನಾದನು (ಮ. ಆ., ದ್ರೋ).

ವಿಂಧ್ಯ -- ಕುಲಪರ್ವತಗಳಲ್ಲೊಂದು. ಇದು ಮಧ್ಯಭಾರತದಲ್ಲಿ ಪೂರ್ವ ಪಶ್ಚಿಮವಾಗಿ ಹರಡಿದೆ. ಇದರ ಪಕ್ಕದಲ್ಲಿ ನರ್ಮದಾ --ತಪತಿ ನದಿಗಳಿವೆ. ವಿಂಧ್ಯನು ಒಮ್ಮೆ ಸೂರ್ಯನೊಡನೆ 'ಮೇರುವನ್ನು ಸುತ್ತುವ ನೀನು ನನಗೇಕೆ ಪ್ರದಕ್ಷಿಣೆ ಬರುವುದಿಲ್ಲ' ಎನ್ನಲು ಸೂರ್ಯನು--ಮೇರುವು ದೇವಪರ್ವತ ಎಂದು ಹೇಳಿದನು. ಆಗ ಗರ್ವಿಷ್ಠನಾದ ವಿಂಧ್ಯನು ಸೂರ್ಯಚಂದ್ರರ ಗತಿಯನ್ನು ತಡೆಯುವಷ್ಟು ಬೆಳೆಯಲು, ದೇವತೆಗಳು ವಿಂಧ್ಯನೊಡನೆ ಹಾಗೆ ಮಾಡಬಾರದೆಂದರೂ ಅವನು ಕೇಳದುದರಿಂದ ದೇವತೆಗಳೆಲ್ಲರು ವಿಂಧ್ಯನ ಗುರುವಾದ ಅಗಸ್ತ್ಯನೊಡನೆ ಈ ವಿಚಾರವನ್ನು ಹೇಳಲು ಆ ಮುನಿಯು ದೇವತೆಗಳಿಗೆ ಶ್ರೇಯಸ್ಸನ್ನುಂಟುಮಾಡುವುದಕ್ಕಾಗಿ ತನ್ನ ಸಂಸಾರದೊಡನೆ, ಮಹೋನ್ನತವಾಗಿ ಬೆಳೆದಿದ್ದ ಆ ಪರ್ವತರಾಜನ ಬಳಿಗೆ ಬಂದು ತನಗೆ ದಕ್ಷಿಣಭಾರತಕ್ಕೆ ಹೋಗಲು ದಾರಿ ಬಿಡಬೇಕೆಂದು ಕೇಳಿದನು. ವಿಂಧ್ಯನು ತನ್ನ ದೇಹವನ್ನು ಕುಗ್ಗಿಸಿಕೊಂಡು ಗುರುವಿಗೆ ಮಾರ್ಗ ಬಿಟ್ಟನು. ದಕ್ಷಿಣಕ್ಕೆ ಬಂದ ಅಗಸ್ತ್ಯನು ಅಲ್ಲೇ ನಿಂತು ಬಿಟ್ಟನು. ವಿಂಧ್ಯನು ಪುನಃ ಬೆಳೆಯಲು ಇನ್ನೂ ಗುರುವಿನ ಆಗಮನವನ್ನು ನಿರೀಕ್ಷಿಸುತ್ತಿದ್ದಾನೆ. ನೋ -- ಅಗಸ್ತ್ಯ. ಈ ಪರ್ವತದಿಂದ ಪಯೋಷ್ಣೀ, ನಿರ್ವಿಂಧ್ಯ, ವೈತರಣೀ, ಕರತೋಯ, ದುರ್ಗಮ ಮುಂತಾದ ಅನೇಕ ನದಿಗಳು ಹುಟ್ಟಿ ಹರಿಯುತ್ತವೆ. (ರಾಮಾ. ಅರಣ್ಯ., ಮ. ವ., ದೇವಿಭಾ., ಸ್ಕಾಂ. ಪು. ಮತ್ಸ್ಯಪು).

ದೇವಿಯು ವಿಂಧ್ಯಪರ್ವತಗಳಲ್ಲಿ ವಾಸಿಸುವಳೆಂಬ ನಂಬಿಕೆ ಅತ್ಯಂತ ಪುರಾತನವಾದುದು. ಮಹಾಭಾರತದಲ್ಲಿ ಬರುವ ದುರ್ಗಾಸ್ತೋತ್ರಗಳಲ್ಲಿಯೂ, ಮಾರ್ಕಂಡೇಯ ಪುರಾಣದಲ್ಲೂ ಇದು ಉಲ್ಲೇಖಿಸಲ್ಪಟ್ಟಿದೆ. ತ್ರಿಕೂಟದಲ್ಲಿ ಸೀತೆಯೂ, ವಿಂಧ್ಯದಲ್ಲಿ ವಿಂಧ್ಯಾಧಿವಾಸಿನಿಯೂ ಇರುವಳೆಂದು ಪದ್ಮಪುರಾಣದ ದೇವೀಕ್ಷೇತ್ರದ ಗಣನೆಯಲ್ಲಿ ಹೇಳಿದೆ.

ನಾರದರೊಮ್ಮೆ ನರ್ಮದಾ ನದಿಯಲ್ಲಿ ಸ್ನಾನಮಾಡಿ, ಓಂಕಾರೇಶ್ವರನ ಪೂಜೆ ತೀರಿಸಿಕೊಂಡು ಉತ್ತರ ದಿಕ್ಕಿಗೆ ಹೊರಟರು. ಆಗ ವಿಂಧ್ಯನು ಅವನನ್ನು ತನ್ನ ಮನೆಗೆ ಕರೆಸಿ ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿ -- ನನ್ನ ಸಾಮರ್ಥ್ಯದಿಂದಲೇ ಭೂಮಿ ನಿಂತಿರುವುದು' ಎಂದು ಆತ್ಮಶ್ಲಾಘನೆ ಮಾಡಿಕೊಳ್ಳಲು, ನಾರದನು -- 'ಪರ್ವತರಾಜಾ, ನೀನು ಮೇರುಪರ್ವತದಷ್ಟು

ಉನ್ನತವಿಲ್ಲ. ಸೂರ್ಯನು ನಿನಗೆ ಪ್ರದಕ್ಷಿಣೆ ಬರುವುದಿಲ್ಲ' ಎನ್ನಲು ಸೂರ್ಯಸಂಚಾರಕ್ಕೇ ತಡೆಯಾಗುವಂತೆ ಬೆಳೆದನು. ಮುಂದೆ ಅಗಸ್ತ್ಯನಿಂದ ವಿಂಧ್ಯನು ಕುಗ್ಗಿದನು (ಅನಂ. ರಾ)

ವಿಂಧ್ಯಾವಳಿ -- ೧. ಚಂದ್ರವಂಶದ ಪುಣ್ಯನಿಧಿರಾಜನ ಪತ್ನಿ. ನೋ -- ಸೇತುಮಾಧವ. ೨. ಬಲಿಚಕ್ರವರ್ತಿಯ ಪತ್ನಿ. ಈಕೆ ಭೂದಾನಸಂಕಲ್ಪ ಮಾಡಿದ ಪತಿಯ ಕೈಯಲ್ಲಿ ಪುಣ್ಯೋದಕವನ್ನು ಬಿಡಲು ಯತ್ನಿಸಿದರೂ ಶುಕ್ರಾಚಾರ್ಯರ ಪ್ರಭಾವದಿಂದ ದಾನೋದಕವು ಬೀಳಲಿಲ್ಲ. ನೋ-- ಬಲಿ.

ವಿಂಧ್ಯಾಶ್ವ --ಚಂದ್ರವಂಶದ ರಾಜ. ಇವನಿಗೆ ಮೇನಕೆಯೆಂಬ ಅಪ್ಸರೆಯಲ್ಲಿ ಗೌತಮ ಪತ್ನಿಯಾದ ಅಹಲ್ಯೆಯೂ, ದಿವೋದಾಸನೆಂಬ ಕುಮಾರನೂ ಹುಟ್ಟಿದರು. ನೋ --ದಿವೋದಾಸ, ಅಹಲ್ಯ. ವಿಂಧ್ಯಾಶ್ವನಿಗೆ ವಧ್ರ್ಯಾಶ್ವನೆಂಬ ಹೆಸರೂ ಇದೆ (ಭಾಗ., ಹರಿ).

ವಿಪಾಟ -- ಕೌರವಪಕ್ಷೀಯನಾದ ಕ್ಷತ್ರಿಯ. ಇವನು ಅರ್ಜುನನಿಂದ ಹತನಾದನು (ಮ. ದ್ರೋ).

ವಿಪಾಶಾ --ಪಂಜಾಬಿನಲ್ಲಿ ಹರಿಯುವ ನದಿಯೊಂದು. ಈಗ ಇದಕ್ಕೆ ಬಿಯಾಸ್ ಎಂಬ ಹೆಸರಿದೆ. ವಸಿಷ್ಠಮುನಿಯು ಪುತ್ರಶೋಕದಿಂದ, ಪಾಶಗಳಿಂದ ತನ್ನ ಕೈಕಾಲುಗಳನ್ನು ಬಿಗಿದುಕೊಂಡು ಈ ನದಿಗೆ ಹಾರಲು, ನದಿಯು ಬ್ರಹ್ಮಹತ್ಯೆಗೆ ಹೆದರಿ ಇವನನ್ನು ದಡಕ್ಕೆ ತಂದು ಬಿಟ್ಟಿತು. ಇದರಿಂದ ಮುಂದೆ ಈ ನದಿಗೆ ವಿಪಾಶವೆಂಬ ಹೆಸರಾಯಿತು (ಮ. ಸ., ವ., ಭೀ., ಅ).

ವಿಪುಲ -- ೧. ದೇವಶರ್ಮನ ಶಿಷ್ಯನಾದ ಬ್ರಾಹ್ಮಣನೊಬ್ಬ. ಇವನು ಗುರುಪತ್ನಿಯಾದ ರುಚಿಯೆಂಬುವಳನ್ನು ಇಂದ್ರನಿಂದ ರಕ್ಷಿಸಿದ. ನೋ -- ದೇವಶರ್ಮ, ರುಚಿ. ಇವನಿಗೆ ದತ್ತಾಮಿತ್ರ, ಸುಮಿತ್ರ ಎಂಬ ಹೆಸರೂ ಇದೆ. ನೋ -- ಅರ್ಜುನ (ಮ. ಅನು).೨. ಸೌವೀರದೇಶಾಧಿಪತಿಯಾದ ಕ್ಷತ್ರಿಯನೊಬ್ಬ. ದ್ರೌಪದಿಯ ಸ್ವಯಂವರಕಾಲದಲ್ಲಿ ಈತನು ಅರ್ಜುನನಿಂದ ಹತನಾದನು (ಮ.ಅ).

ವಿಪೃಥು (ವಿಪೃಥುಶ್ರವ)-- ಯಾದವನೊಬ್ಬ. ಇವನು ರೈವತಕ ಪರ್ವತದಲ್ಲಿ ತನ್ನ ಸೇನೆಯೊಡನಿದ್ದು, ದ್ವಾರಕೆಯಲ್ಲಿ ಅರ್ಜುನನಿಂದ ಆದ ಸುಭದ್ರಾಪಹರಣದ ಕಾಲದಲ್ಲಿ ಆತನಿಂದ ಸೋತನು (ಮ. ಅ).

ವಿಪ್ರಚಿತ್ತಿ -- ಕಶ್ಯಪಮುನಿಯಿಂದ ದನುವೆಂಬ ಸ್ತ್ರೀಯಲ್ಲಿ ಜನಿಸಿದ ದಾನವ. ಇವನ ಪತ್ನಿಯೇ ಹಿರಣ್ಯಕಶಿಪುವಿನ ತಂಗಿಯಾದ ಸಿಂಹಿಕೆ. ಇವರಿಗೆ ವಾತಾಪಿ,

ಇಲ್ವಲ, ನಮುಚಿ, ಅಂಧಕ ಮೊದಲಾದ ಮಕ್ಕಳಿದ್ದರು. ನೋ-- ಸಿಂಹಿಕೆ, ವಾತಾಪಿ, ಅಂಧಕ, ರಾಹು (ಸ್ವರ್ಭಾನು). (ಮ. ಆ., ಸ., ವಿಷ್ಣುಪು).

ವಿಭಾಂಡಕ -- ಕಶ್ಯಪಮುನಿಯ ವಂಶದ ಋಷಿಯೊಬ್ಬ. ಈತನ ಪುತ್ರ ಋಷ್ಯಶೃಂಗ. ನೋ -- ಋಷ್ಯಶೃಂಗ. ವಿಭಾಂಡಕಮುನಿಯ ಆಶ್ರಮವು ಕೌಶಿಕೀನದಿಯ ತೀರದಲ್ಲಿತ್ತು. ಇದರ ಸಮೀಪದಲ್ಲೇ ವಿಶ್ವಾಮಿತ್ರಾಶ್ರಮವು ಇತ್ತು. ತೀರ್ಥಯಾತ್ರೆಯ ಕಾಲದಲ್ಲಿ ಧರ್ಮರಾಜನು ಇಲ್ಲಿಗೆ ಬಂದಿದ್ದನು. ಈ ಮುನಿಯು ಒಂದು ಮಡುವಿನ ಬಳಿ ಬಹುಕಾಲ ತಪಸ್ಸು ಮಾಡುತ್ತಿರಲು ಒಂದು ದಿನ ಊರ್ವಶಿಯೆಂಬ ಅಪ್ಸರೆಯು ಆ ಮಡುವಿನ ಬಳಿಗೆ ಬಂದಳು. ಆ ಅಪ್ಸರೆಯ ರೂಪಕ್ಕೆ ಮೋಹಿಸಿದ ಮುನಿಯ ರೇತಸ್ಸು ಜಾರಿ ನೀರಿನಲ್ಲಿ ಬಿತ್ತು. ಅದೇ ಕಾಲದಲ್ಲಿ ನೀರು ಕುಡಿಯಲು ಬಂದಿದ್ದ ಒಂದು ಹೆಣ್ಣುಜಿಂಕೆಯು ಈ ಮುನಿಯ ರೇತಸ್ಸಿನೊಡನೆ ನೀರನ್ನೂ ಕುಡಿದು ಗರ್ಭಿಣಿಯಾಯಿತು. ಹಿಂದೆ ಬ್ರಹ್ಮನು ದೇವಕನ್ಯೆಯೊಬ್ಬಳಿಗೆ ಹೆಣ್ಣುಜಿಂಕೆಯಾಗುವಂತೆ ಶಾಪವಿತ್ತ. ಆಕೆಯು ಮುನಿಕುಮಾರನೊಬ್ಬನನ್ನು ಹೆತ್ತ ಮೇಲೆ ಶಾಪಾವಸಾನವಾಗುವುದೆಂದು ಹೇಳಿದ್ದನು. ಆ ದೇವಕನ್ಯೆಯೇ ಈ ಹೆಣ್ಣುಜಿಂಕೆ. ಈ ಜಿಂಕೆಯು ಒಬ್ಬ ಮುನಿಪುತ್ರನನ್ನು ಹೆತ್ತಿತು. ಇವನ ತಲೆಯ ಮೇಲೊಂದು ಕೊಂಬು ಇದ್ದುದರಿಂದ ತಂದೆಯು ಇವನಿಗೆ ಋಷ್ಯಶೃಂಗನೆಂದು ಹೆಸರಿಟ್ಟನು (ಮ. ವ., ರಾಮಾ. ಬಾಲ).

ದಕ್ಷಿಣ ವಾರಣಾಸಿ ಎಂದು ಪ್ರಸಿದ್ಧವಾದ ಶೃಂಗೇರಿಯಲ್ಲಿ ವಿಭಾಂಡಕಮುನಿಯ ಆಶ್ರಮವಿತ್ತು. ಇದು ತುಂಗಭದ್ರಾ ನದಿಯ ತೀರದಲ್ಲಿತ್ತು. ವಿಭಾಂಡಕ ಮುನಿಗಳ ಕರಾರ್ಚಿತವಾದ ಮಲ್ಲಿಕಾರ್ಜುನಲಿಂಗವು ಈ ಕ್ಷೇತ್ರದ ಮಧ್ಯದಲ್ಲಿರುವ ಬೆಟ್ಟದಲ್ಲಿ ಈಗಲೂ ಇದೆ. ಭವಾನಿಸಮೇತನಾದ ಮಲ್ಲಿಕಾರ್ಜುನನಿಗೆ ಮಲಹಾನಿಕರೇಶ್ವರನೆಂಬ ನಾಮವಿದೆ (ರಾಮಾ. ಬಾಲ).

ವಿಭಾವರಿ -- ನೋ-- ಸ್ವಾರೋಚಿಷ. ಈಕೆಗೆ ಪಕ್ಷಿಭಾಷೆ ತಿಳಿದಿತ್ತು. ಇವಳ ತಂದೆ ಮಂದರನೆಂಬ ವಿದ್ಯಾಧರ. ಪತಿ ಸ್ವರೋಚಿಷನೆಂಬ ಗಂಧರ್ವ. ಮನೋರಮೆ ಮತ್ತು ಕಲಾವತಿಯರು ಈಕೆಯ ಸವತಿಯರು. ಮೇರುನಂದನನು ಈಕೆಯ ಮಗನು. ನೋ -- ಸ್ವರೋಚಿಸ್.

ವಿಭಾವಸು -- ೧. ಸುಪ್ರತೀಕನ ಸಹೋದರನಾದ ಮುನಿ. ಇವನು ಸುಪ್ರತೀಕನ ಶಾಪದಿಂದ ಆಮೆಯಾದನು. ಕಶ್ಯಪನ ಅಪ್ಪಣೆಯಂತೆ ಅಮೃತವನ್ನು ತರಲು ಹೋಗುವ ಗರುಡನು ಇವನನ್ನು ತಿಂದನು. ದಾಯಾದಿ ಮತ್ಸರದಿಂದ ಈ

ಸಹೋದರರು ಗಜಕಚ್ಛಪರಾಗಿ ಹುಟ್ಟಿದರು. ನೋ -- ಸುಪ್ರತೀಕ (ಮ. ಆ). ೨. ವಿವಸ್ವಂತನ ಮಗ (ಮ. ಆ).

ವಿಭೀಷಣ -- ೧. ಯಕ್ಷನೊಬ್ಬ (ಮ. ಸ). ೨. ಮುನಿಯಾದ ವಿಶ್ರವಸು ಮತ್ತು ಕೈಕಸೆಯಲ್ಲಿ ಜನಿಸಿದ ನಾಲ್ಕನೇ ಮಗ. ಇವನಿಗೆ ರಾವಣ, ಕುಂಭಕರ್ಣರು ಸೋದರರು; ಶೂರ್ಪಣಖೆಯು ಸೋದರಿ (ರಾಮಾ. ಉತ್ತರ., ಮ. ಸ., ವ).

ವೈಶ್ರವಸ ಮತ್ತು ಪುಷ್ಪೋತ್ಕಟೆಯರು ರಾವಣ -- ಕುಂಭಕರ್ಣರ ತಂದೆ ತಾಯಿಗಳು; ಮಾಲಿನಿಯು ವಿಭೀಷಣನ ತಾಯಿ (ಮ. ವ).

ಕೈಕಸೆಯು ಕಶ್ಯಪನೊಡನೆ ಬ್ರಹ್ಮಜ್ಞಾನಿಯಾದ ಮಗನನ್ನು ಅಪೇಕ್ಷಿಸಿದುದರಿಂದ ಆ ಮುನಿಯು ಹಾಗೆಯೇ ಅನುಗ್ರಹಿಸಿದನು. ಇವನು ಗೋಕರ್ಣದಲ್ಲಿ ಬ್ರಹ್ಮದೇವನನ್ನು ಕುರಿತು ತಪಸ್ಸುಮಾಡಿ, ಆತನು ಪ್ರತ್ಯಕ್ಷನಾದಾಗ, ತನಗೆ ಎಂತಹ ಕಷ್ಟದ ಕಾಲದಲ್ಲಿಯೂ ಧರ್ಮಮಾರ್ಗದಲ್ಲೆ ಬುದ್ಧಿಯೋಡುವಂತೆಯೂ, ಮಂತ್ರಾಭ್ಯಾಸವಿಲ್ಲದೆ ಬ್ರಹ್ಮಾಸ್ತ್ರವು ಸ್ವಾಧೀನವಾಗುವಂತೆಯೂ ವರ ಪಡೆದನು. ಬ್ರಹ್ಮನು ಇವನ ಸದ್ಗುಣಗಳಿಗೆ ಮೆಚ್ಚಿ 'ಚಿರಂಜೀವಿಯಾಗು' ಎಂದು ವರವಿತ್ತನು. ಈತನ ಪತ್ನಿ ಶೈಲೂಷನೆಂಬ ಗಂಧರ್ವನ ಮಗಳಾದ ಸರಮೆ. ಅಶೋಕ ವನವನ್ನು ಮುರಿದ ಹನುಮಂತನನ್ನು ವಧಿಸಬೇಕೆಂದು ರಾವಣನೆನ್ನಲು ಈತನು 'ದೂತವಧೆಯು ಶಾಸ್ತ್ರನಿಷಿದ್ಧವಾದುದೆಂದನು.' ಸೀತಾಪಹಾರವು ಮುನಿಕುಲದವನಾದ ನಿನಗೆ ತಕ್ಕುದಲ್ಲವೆನ್ನಲು, ಇವನನ್ನು ರಾವಣನು ತಿರಸ್ಕರಿಸಲು, ಈತನು ಶ್ರೀರಾಮನ ಪಾಳಯಕ್ಕೆ ಬಂದು ಅವನ ಮರೆಹೊಕ್ಕನು. ಯುದ್ಧಕಾಲದಲ್ಲಿ ರಾವಣನ ಹಲವು ಕಪಟಗಳನ್ನು ಶ್ರೀರಾಮನಿಗೆ ತಿಳಿಸಿದನು. ಇಂದ್ರಜಿತುವಿನ ವಿಚಾರವನ್ನೂ ರಾಮನಿಗೆ ಈತನೇ ಹೇಳಿದನು. ರಾವಣನ ವಧೆಯನಂತರ ಲಂಕೆಯಲ್ಲಿ ವಿಭೀಷಣನಿಗೆ ಪಟ್ಟಾಭಿಷೇಕವಾಯಿತು. ವಿಭೀಷಣನು ರಾವಣನ ಪುಷ್ಪಕ ವಿಮಾನವನ್ನು ಶ್ರೀರಾಮನಿಗೆ ಅರ್ಪಿಸಿದನು. ಇವನು ಕಪಿಗಳು ಮತ್ತು ರಾಕ್ಷಸರೊಡನೆ ಶ್ರೀರಾಮಪಟ್ಟಾಭಿಷೇಕಕ್ಕೆ ಅಯೋಧ್ಯೆಗೆ ಹೋಗಿದ್ದನು. ಅಲ್ಲಿಂದ ಇವನು ಹಿಂದಿರುಗುವಾಗ ಲಂಕೆಗೆ ರಾಮಸೇತುವೆಯು ಮುಂದೆಯೂ ಇದ್ದರೆ ತನಗೆ ಮುಂದೆ ಯಾವಾಗಲೂ ಶತ್ರುಬಾಧೆಯು ತಪ್ಪಿದ್ದಲ್ಲವೆನ್ನಲು -- ಶ್ರೀರಾಮನು ಆ ಸೇತುವೆಯನ್ನು ಅಲ್ಲಲ್ಲಿ ಕಡಿದನು. ಈ ಪ್ರದೇಶವನ್ನು ಧನುಷ್ಕೋಟಿ ತೀರ್ಥವೆನ್ನುತ್ತಾರೆ. ನೋ -- ಧನುಷ್ಕೋಟಿ (ರಾಮಾ. ಸುಂದರ, ಯುದ್ಧ, ಮ. ವ., ಸ್ಕಾಂ. ಪು., ಬ್ರ. ಪು).

ಶ್ರೀರಾಮನು ಲಂಕೆಯಿಂದ ಅಯೋಧ್ಯೆಗೆ ಹೋಗುವಾಗಲೇ ಈ ಸೇತುವೆಯನ್ನು ಕಡಿದಿದ್ದನು.

ರಾಜಸೂಯಯಾಗಕಾಲದಲ್ಲಿ ಸಹದೇವನು ಧನುಷ್ಕೋಟಿಯವರೆಗೆ ವಿಜಯಯಾತ್ರೆಯನ್ನು ಮಾಡಿ ಲಂಕೆಗೆ ಘಟೋತ್ಕಚನನ್ನು ಕಳುಹಿಸಿ ವಿಭೀಷಣನಿಂದ ಕಪ್ಪಕಾಣಿಕೆಗಳನ್ನು ತರಿಸಿಕೊಂಡನು (ಮ. ಸ). ಈತ ಚಿರಂಜೀವಿ.

ವಿಭೀಷಣನು ರಾಮನಿಗೆ ಶರಣಾಗತನಾಗಿ ಸಮುದ್ರತೀರಕ್ಕೆ ಬಂದಾಗ, ರಾಮನು ಅಲ್ಲಿ ವಾನರಸೇನಾಮಧ್ಯದಲ್ಲೇ ಆತನಿಗೆ ಲಂಕಾರಾಜ್ಯಾಭಿಷೇಕವನ್ನು ಮಾಡಿಸಿದನು (ರಾಮಾ).

ಲಕ್ಷ್ಮಣನು ರಾವಣನನ್ನು ಜಯಿಸಿದಮೇಲೆ 'ವಿಭೀಷಣೆಂಬರಸು ಸುಗ್ರೀವಾದಿಗಳ್ ರಾಘವಂಗೆ ಸುಮಿತ್ರಾತನಯಂಗೆ ರಾಜ್ಯಸವ ನೋತ್ಸಾಹಂಗಳಂ ಮಾಡಿದರ್' ಎಂದು ಜೈನರಾಮಾಯಣದಲ್ಲಿ ಹೇಳಿದೆ.

ವಿಭು -- ಶಕುನಿಯ ಸಹೋದರ ; ಭೀಮನಿಂದ ಹತನಾದನು (ಮ. ದ್ರೋ).

ವಿಭೂತಿ-- ವಿಶ್ವಾಮಿತ್ರನ ಮಗ. ನೋ -- ವಿಶ್ವಾಮಿತ್ರ (ಮ. ಅನು).

ವಿಭ್ರಾಜ -- ಪುರುವಂಶದ ರಾಜನೊಬ್ಬ. ಕೌಶಿಕ ಮುನಿಯ ಏಳನೆಯ ಮಗನಾದ ಪಿತೃವರ್ತಿಯು ಈ ರಾಜನ ಮಗನಾಗಿ ಬ್ರಹ್ಮದತ್ತನೆಂಬ ಹೆಸರಿನಿಂದ ಹುಟ್ಟಿದನು. ನೋ -- ಪಿತೃವತಿ, ಪೀವರಿ.

ವಿಮದ -- ರಾಜನೊಬ್ಬ. ಇವನು ಸ್ವಯಂವರದಲ್ಲಿ ಪ್ರಾಪ್ತಳಾದ ಪತ್ನಿಯನ್ನು ಮನೆಗೆ ಒಯ್ಯುವಾಗ ಇತರ ರಾಜರು ಪೀಡಿಸಿದರು. ಇವನು ಅಶ್ವಿನಿದೇವತೆಗಳನ್ನು (ಅಶ್ವಿನೀ ಎಂಬ ಹೆಣ್ಣು ಕುದುರೆಯಲ್ಲಿ ಸೂರ್ಯನಿಂದ ಜನಿಸಿದವರು) ಪ್ರಾರ್ಥಿಸಿದನು. ಅಶ್ವಿನೀ ಕುಮಾರರು ಆವನ ಶತ್ರುಗಳನ್ನು ಓಡಿಸಿ ವಿಮದನ ಹೆಂಡತಿಯನ್ನು ಆತನ ಮನೆಗೆ ಮುಟ್ಟಿಸಿದರು (ಋ).

ವಿಮಲ -- ಸದಾಚಾರಸಂಪನ್ನನಾಗಿದ್ದ ಒಬ್ಬ ಬ್ರಾಹ್ಮಣ. ಇವನು ಹಿಮಾಚಲದ ಬಳಿ ವಾಸಿಸುತ್ತಿದ್ದನು. ಇವನು ವಿಷ್ಣುವಿನ ಅನುಗ್ರಹದಿಂದ ಮುದಿತನದಲ್ಲಿ ಹರಿದತ್ತನೆಂಬ ಮಗನನ್ನು ಪಡೆದನು. ಈ ಮಗನು ಘನವಿದ್ವಾಂಸನೂ ಮಹಾತಪಸ್ವಿಯೂ ಆಗಿದ್ದು, ದೈವಾನುಗ್ರಹಕ್ಕೆ ಪಾತ್ರನಾದನು (ಪದ್ಮಪು).

ವಿಮಲೋದಕಾ -- ಸರಸ್ವತೀ ನದಿಯ ಇನ್ನೊಂದು ಹೆಸರು. ನೋ -- ಸರಸ್ವತಿ (ಮ.ಶ)

ವಿರಜ -- ೧. ಒಂದು ಸರ್ಪ. (ಮ. ಆ., ಉ). ೨. ಧೃತರಾಷ್ಟ್ರನ ಮಗ ; ಇವನು ಭೀಮನಿಂದ ಹತನಾದನು (ಮ. ಆ., ದ್ರೋ).

ವಿರಜಸ್ಸು -- ಶ್ರೀಕೃಷ್ಣನ ದರ್ಶನಕ್ಕಾಗಿ ಬಂದವರು ನಿರೀಕ್ಷಿಸುವ ಗೃಹ. ಇದನ್ನು ಉಪಸ್ಥಾನ ಗೃಹವೆಂದೂ ಕರೆಯುತ್ತಾರೆ (ಮ. ಸ). ಇದನ್ನು ನಿರ್ಮಿಸಿದವನು ವಿಶ್ವಕರ್ಮ.

ವಿರಾಜ - ೧. ಚಂದ್ರವಂಶದ ಕುರುರಾಜನ ಮೊಮ್ಮಗ; ಅವಿಕ್ಷಿತನ ಮಗ. ನೋ- ಅವಿಕ್ಷಿತ (ಮ.ಆ.). ೨. ಧೃತರಾಷ್ಟ್ರನ ಮಗನೊಬ್ಬ. ಇವನು ಭೀಮನಿಂದ ಹತನಾದ (ಮ.ಭೀ.).

ವಿರಾಟ - ಮತ್ಸ್ಯದೇಶಾಧಿಪನಾದ ಕ್ಷತ್ರಿಯನೊಬ್ಬ. ಇವನು ಶತ್ರುಗಳನ್ನು ಗರ್ರನೆ ತಿರುಗಿಸುವನಾದುದರಿಂದ ವಿರಾಟನೆಂಬ ಹೆಸರು ಪಡೆದನು. ಇವನು ಮರುದ್ಗಣಗಳ ಅಂಶದವ; (ರಥದಲ್ಲಿ ಕುಳಿತು ತನ್ನವರನ್ನು ಕಾಪಾಡಿಕೊಂಡು ವೈರಿಯ ಮೇಲೆ ಯುದ್ಧಮಾಡುವನು). ನೋ. - ಭಾರತಯುದ್ಧ. ಈತನ ಪ್ರಥಮ ಪತ್ನಿ ಕೋಸಲಪುತ್ರಿಯಾದ ಸುರಥಾ. ಈಕೆಗೆ ಶ್ವೇತ ಮತ್ತು ಶಂಖರು ಮಕ್ಕಳು. ಈತನ ದ್ವಿತೀಯ ಪತ್ನಿ ಕೇಕಯನೆಂಬ ಸೂತರಾಜನ ಪುತ್ರಿಯಾದ ಸುದೇಷ್ಣೆ. ಈಕೆಗೆ ಭೂಮಿಂಜಯ ಅಥವಾ ಉತ್ತರಕುಮಾರನೂ ಬಭ್ರುವನೆಂಬ ಗಂಡುಮಕ್ಕಳಿದ್ದು, ಉತ್ತರೆಯೆಂಬ ಹೆಣ್ಣು ಮಗಳೂ ಇದ್ದರು. ವಿರಾಟನಿಗೆ ಶತಾನೀಕ, ಮದಿರಾಕ್ಷ (ಮದಿರಾಶ್ವ)., ಸೂರ್ಯದತ್ತ, ಶ್ರುತಾನೀಕ, ಶ್ರುತಧ್ವಜ, ಬಲಾನೀಕ, ಜಯಾನೀಕ, ಜಯಾಶ್ವ, ರಥವಾಹನ, ಚಂದ್ರೋದಯ, ಸಮರಥರೆಂಬ ಹನ್ನೊಂದು ಮಂದಿ ಸಹೋದರರಿದ್ದರು. ದಕ್ಷಿಣಗೋಗ್ರಹಣದಲ್ಲಿ ಈತನು ಸುಶರ್ಮನೊಡನೆ ಯುದ್ಧಮಾಡಿ ಸೆರೆಸಿಕ್ಕಿದಾಗ ಭೀಮನು ವಿರಾಟನನ್ನು ಸೆರೆಯಿಂದ ಬಿಡಿಸಿದನು. ಪಾಂಡವರು ಅಜ್ಞಾತವಾಸದ ಅವಧಿಯನ್ನು ಈತನ ರಾಜಧಾನಿಯಲ್ಲೇ ಕಳೆದರು. ಉತ್ತರ ಗೋಗ್ರಹಣದಲ್ಲಿ ಉತ್ತರ ಕುಮಾರನು ಹೆಂಗಸರ ಮುಂದೆ ಬಡಾಯಿ ಕೊಚ್ಚಿಕೊಂಡು ಬೃಹನ್ನಳೆಯನ್ನು ಸಾರಥಿಯಾಗಿ ಮಾಡಿಕೊಂಡು ಯುದ್ಧಕ್ಕೆ ಹೊರಟ. ಕುರುಸೇನೆಯು ಆತನಿಗೆ ನುಂಗಲಾರದ ತುತ್ತಾಗಲು ಬೃಹನ್ನಳೆಯು ಉತ್ತರಕುಮಾರನನ್ನು ಸಾರಥಿಯಾಗಿ ಮಾಡಿಕೊಂಡು ಕುರುಸೇನೆಯನ್ನು ಗೆದ್ದನು. ಉತ್ತರ ಗೋಗ್ರಹಣದಲ್ಲಿ ಅವನ್ನು ಮರಳಿಸಿದವನು ಉತ್ತರನಲ್ಲ; ಬೃಹನ್ನಳೆಯೆನ್ನಲು ವಿರಾಟನು ಕೋಪದಿಂದ ಕಂಕನನ್ನು (ಯುಧಿಷ್ಠಿರ)ಪಗಡೆಯ ಕಾಯಿಯಿಂದ ಹೊಡೆಯಲು ಅದು ಕಂಕನ ಹಣೆಗೆ ತಗುಲಿ ರಕ್ತಸುರಿಯತೊಡಗಿತು. ಈ ರಕ್ತ ಪ್ರವಾಹವನ್ನು ಮಾಲಿನಿ ಎಂಬ ಹೆಸರಿನ ಸೈರಂಧ್ರಿಯು (ದ್ರೌಪದಿ) ತನ್ನ ಸೀರೆಯ ಸೆರಗಿನಿಂದ ಒರೆಸಿದಳು. ವಿರಾಟನು ಇವರನ್ನು ಪಾಂಡವರೆಂದು ತಿಳಿದೊಡನೆ ತನ್ನ ಮಗಳಾದ ಉತ್ತರೆಯನ್ನು ಅಭಿಮನ್ಯುವಿಗೆ ವಿವಾಹ ಮಾಡಿಕೊಟ್ಟು ಅವರ ಸಂಬಂಧ ಬೆಳೆಸಿದನು. ಈತನ ವಧೆ ದ್ರೋಣಾಚಾರ್ಯನಿಂದಾಯಿತು. ನೋ.- ಸತ್ಯವತಿ., ದ್ರೌಪದಿ, ಉತ್ತರಕುಮಾರ, ಕೀಚಕ. ಇವನ ಮತ್ಸ್ಯದೇಶವು ದಿಲ್ಲಿಯಿಂದ ನೂರೈದು ಮೈಲು ನೈಋತ್ಯದಲ್ಲಿಯೂ, ಜಯಪುರದಿಂದ ನಲವತ್ತೊಂದು ಮೈಲು

ಉತ್ತರದಲ್ಲಿಯೂ ಇದೆ. ಈ ಮತ್ಸ್ಯನಗರಿಯು ಧಾರವಾಡದ ಹಾನಂಗಲ್ಲು ಪ್ರದೇಶವೆನ್ನುತ್ತಾರೆ. ನೋ.-- ಕೀಚಕ, ಸುದೇಷ್ಣೆ, ಮತ್ಸ್ಯ (ಮ.ಆ., ವಿ., ಉ., ದ್ರೋ).

ವಿರಾಧ - ರಾಮನಿಂದ ಹತನಾದ ಒಬ್ಬ ರಾಕ್ಷಸ. ತುಂಬುರನೆಂಬ ಗಂಧರ್ವನು ಕುಬೇರನ ಬಳಿಗೆ ಹೋಗುವ ರಂಭೆಯೆಂಬ ಅಪ್ಸರೆಯನ್ನು ಅಡ್ಡಗಟ್ಟಿ, ಅವಳನ್ನು ಅವಮಾನ ಮಾಡಿ ಕುಬೇರನಿಂದ ರಾಕ್ಷಸನಾಗಿ ಹುಟ್ಟುವಂತೆ ಶಾಪ ಪಡೆದ. ಇವನೇ ದಂಡಕಾರಣ್ಯದಲ್ಲಿ ವಿರಾಧನಾಗಿ, ಅರಣ್ಯವಾಸಿಗಳಾದ ಸೀತಾರಾಮಲಕ್ಷ್ಮಣರನ್ನು ತಡೆಯಲು ಅವರಿಂದ ಶಾಪವಿಮೋಚನೆ ಹೊಂದಿದನು. ನೋ -- ತುಂಬುರು (ಮ. ಸ., ರಾಮಾ., ಅರ).

ವಿರಾವಿ -- ಕ್ಷತ್ರಿಯನೊಬ್ಬ; ಧೃತರಾಷ್ಟ್ರನ ಪುತ್ರ (ಮ. ಆ).

ವಿರೂಪ -- ೧. ಅಂಗಿರಸನ ಮಗ ; ಋಷಿಯೊಬ್ಬ (ಮ. ಅನು). ೨. ರಾಕ್ಷಸನೊಬ್ಬ (ಮ. ಸ).

ವಿರೂಪಾಕ್ಷ -- ೧. ಪಂಪಾಕ್ಷೇತ್ರದ ಮುಖ್ಯದೇವತೆ : ಶಿವ. ೨. ದಾನವನೊಬ್ಬ (ಮ. ಆ). ೩. ಘಟೋತ್ಕಚನ ಸಾರಥಿ (ಮ. ದ್ರೋ). ೪. ರಾಕ್ಷಸನೊಬ್ಬ; ಮಹಿಷಾಸುರನ ಮಂತ್ರಿ (ದೇವಿಭಾ). ೫. ಲಂಕೆಯ ರಾಕ್ಷಸನೊಬ್ಬ. ಹನುಮಂತನನ್ನು ಇದಿರಿಸಿ ಹತನಾದ (ರಾಮಾ. ಉತ್ತರ) ೬. ಲಂಕೆಯ ರಾಕ್ಷಸನೊಬ್ಬ. ಸುಗ್ರೀವನಿಂದ ಮಡಿದ (ರಾಮಾ. ಯುದ್ಧ) ೭. ಲಂಕೆಯ ರಕ್ಕಸನೊಬ್ಬ. ಲಕ್ಷ್ಮಣನಿಂದ ಹತನಾದ (ರಾಮಾ. ಯುದ್ಧ).

ವಿರೋಚನ -- ೧. ಪ್ರಹ್ಲಾದನ ಮಗ. ಈತನು ಸುಧನ್ವನೆಂಬ ಬ್ರಾಹ್ಮಣನೊಡನೆ ಕೇಶಿನಿಯ ಸ್ವಯಂವರದಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯರ ಹಿರಿಮೆಯ ಕುರಿತು ವಾದಮಾಡಿದನು. ಈತನ ಮಗ ಮಹಾಬಲಿ ಅಥವಾ ಬಲಿಚಕ್ರವರ್ತಿ. ನೋ -- ಕೇಶಿನಿ, ಸುಧನ್ವ, ಈತನ ಕಥೆಯು ಯದುಗಿರಿ ಬೆಟ್ಟದ ಪ್ರಚಂಡ ಕಣಿವೆಯಲ್ಲಿ ನಿಲ್ಲಿಸಲ್ಪಟ್ಟ ದೇವಸ್ಥಾನಕ್ಕೆ ಸಂಬಂಧಿಸಿದೆ ಎನ್ನುತ್ತಾರೆ (ಮ. ಆ., ಸ., ಉ). ೨.ಧೃತರಾಷ್ಟ್ರನ ಮಗ (ಮ. ಆ).

ವಿರೋಹಣ -- ಸರ್ಪವೊಂದು. (ಮ. ಆ).

ವಿವರ್ಧನ -- ಕ್ಷತ್ರಿಯನೊಬ್ಬ (ಮ. ಸ).

ವಿವಸ್ವಾನ್ --ಅದಿತಿಯ ಮಗ. ದ್ವಾದಶಾದಿತ್ಯರಲ್ಲೊಬ್ಬ. ಸೂರ್ಯನ ತೇಜಸ್ಸನ್ನು ಕಡಿಮೆ ಮಾಡುವುದಕ್ಕಾಗಿ ವಿಶ್ವಕರ್ಮನು ಸಾಣೆ ಹಿಡಿದು ಸೂರ್ಯಮಂಡಲದ ನ್ಯೂನಾಧಿಕ ಭಾಗಗಳನ್ನೆಲ್ಲಾ ಕತ್ತರಿಸಿ ತೆಗೆದನು. ಆದರಿಂದ ಸೂರ್ಯನ ಮುಖವು

ಕೆಂಪಾದುದಲ್ಲದೆ, ಸೂರ್ಯಮಂಡಲದ ತುಣುಕುಗಳಿಂದ ಧಾತಾ, ಅರ್ಯಮಾ, ಮಿತ್ರ, ವರುಣ, ಅಂಶ, ಭಗ, ಇಂದ್ರ, ಪೂಷಾ, ವಿವಸ್ವಾನ್, ಪರ್ಜನ್ಯ, ತ್ವಷ್ಟಾ, ವಿಷ್ಣು ಎಂಬ ದ್ವಾದಶಾದಿತ್ಯರು ಹುಟ್ಟಿದರು. ಇವರಲ್ಲಿ ಕೊನೆಗೆ ಹುಟ್ಟಿದ ವಿಷ್ಣುವೇ ಆದಿತ್ಯರಲ್ಲಿ ಶ್ರೇಷ್ಠನೆನಿಸಿದನು. ದೇವಬಡಗಿಯು ಸಾಣೆ ಹಿಡಿಯುವಾಗ ಬಿದ್ದ ಚಿಕ್ಕ ಚಿಕ್ಕ ಚೂರುಗಳಿಂದ ಸುದರ್ಶನವೆಂಬ ಚಕ್ರಾಯುಧವನ್ನು ರಚಿಸಿ ಅದನ್ನು ಶ್ರೀಹರಿಗೆ ಕೊಟ್ಟನು (ಹರಿ). ನೋ -- ಆದಿತ್ಯ ಮಾರ್ತಾಂಡ, ಸೂರ್ಯ (ಮ. ಆ).

ವಿವಾಜಿ --ಇಲ್ವಲಾಸುರನ ರಥದ ಕುದುರೆ (ಮ. ವ).

ವಿವಿತ್ಸು --ಧೃತರಾಷ್ಟ್ರನ ಮಗ; ಭೀಮನಿಂದ ಹತನಾದನು (ಮ. ಆ, ಶ).

ವಿವಿಂಧ್ಯ --ಸಾಲ್ವಪಕ್ಷದ ರಾಕ್ಷಸನೊಬ್ಬ. ಇವನು ಚಾರುದೇಷ್ಣನಿಂದ ಹತನಾದನು (ಮ. ವ).

ವಿವಿಂಶ --ಸೂರ್ಯವಂಶದ ವಿಂಶನ ಮಗ ; ಈತನ ಮಗನೇ ಸ್ವನೀನೇತ್ರ (ಮ. ಅಶ್ವ).

ವಿವಿಂಶತಿ -- ಧೃತರಾಷ್ಟ್ರನ ಮಗ; ಭೀಮನಿಂದ ಹತನಾದನು (ಮ. ಆ., ವಿ., ಕ)

ವಿಶಲ್ಯ -- ನದಿಯೊಂದು (ಮ. ವ., ಸ).

ವಿಶಲ್ಯಕರಣಿ--ಗಾಯಗಳನ್ನು ಶೀಘ್ರವಾಗಿ ಗುಣಪಡಿಸುವ ಗಿಡಮೂಲಿಕೆಯೊಂದು. ಇಂದ್ರಜಿತ್ತಿನ ಅಸ್ತ್ರಗಳಿಂದ ಎಚ್ಚರತಪ್ಪಿದ ರಾಮಲಕ್ಷ್ಮಣರನ್ನು ವಿಭೀಷಣನು ಎಚ್ಚರಗೊಳಿಸಿದ ಮೇಲೆ ಸುಗ್ರೀವನು ಈ ಔಷಧದಿಂದ ಅವರ ದೇಹದ ಗಾಯಗಳನ್ನು ಗುಣಪಡಿಸಿದನು (ಮ. ವ)

ವಿಶಾಖ -- ಸುಬ್ರಹ್ಮಣ್ಯ. ಇವನು ವಿಶಾಖ ನಕ್ಷತ್ರದಲ್ಲಿ ಜನಿಸಿದವ (ಮ. ಸ). ಸ್ವಾಹಾದೇವಿಯು ಅಗ್ನಿಯ ರೇತಸ್ಸನ್ನು ಚಿನ್ನದ ಕುಂಭದಲ್ಲಿ ಪಾಡ್ಯದ ದಿನ ಆರು ಭಾಗವಾಗಿ ಹಾಕಲು ಅದು ಬಿದಿಗೆಯ ದಿನ ಆಕಾರವನ್ನು ಹೊಂದಿ, ತದಿಗೆಯ ದಿನ ಶಿಶುವಾಗಿ ಚೌತಿಯ ದಿನ ಅಂಗಪ್ರತ್ಯಂಗಗಳಿಂದ ಕೂಡಿ ಆರು ಶಿರಸ್ಸುಗಳಿಂದಲೂ, ಹನ್ನೆರಡು ಕಣ್ಣುಗಳಿಂದಲೂ, ಹನ್ನೆರಡು ಕಿವಿಗಳಿಂದಲೂ, ಹನ್ನೆರಡು ಭುಜಗಳಿಂದಲೂ, ಒಂದು ಕಂಠದಿಂದಲೂ, ಒಂದು ದೇಹದಿಂದಲೂ, ಎರಡು ಪಾದಗಳಿಂದಲೂ ಪ್ರಕಾಶಿಸುತ್ತ ಕುಮಾರಸ್ವಾಮಿಯು ಜನಿಸಿದನು. ಇವನು ಶಕ್ತ್ಯಾಯುಧವನ್ನು ನಿರ್ಮಾಣ ಮಾಡಿದನು (ಮ. ವ).

ಕೃತ್ತಿಕಾ ನಕ್ಷತ್ರದಲ್ಲಿ ಹುಟ್ಟಿದುದರಿಂದ ಇವನಿಗೆ ಕಾರ್ತಿಕೇಯನೆಂಬ ಹೆಸರು ಬಂತು. ನೋ -- ಕಾರ್ತಿಕೇಯ.

ಇಂದ್ರನು ಋಷಿಗಳ ಮಾತಿನಂತೆ ಬಾಲಕನಾದ ಕುಮಾರಸ್ವಾಮಿಯ

ಸಂಹಾರಕ್ಕೆ ದೇವತೆಗಳೊಂದಿಗೆ ಕೂಡಿ, ಯುದ್ಧಹೂಡಿ, ತನ್ನ ವಜ್ರಾಯುಧದಿಂದ ಷಣ್ಮುಖನನ್ನು ಹೊಡೆಯಲು ಆ ಆಯುಧ ಆತನ ಬಲಪಾರ್ಶ್ವವನ್ನು ಭೇದಿಸಿತು. ಆ ಸ್ಥಾನದಿಂದಲೇ ಮಹಾತೇಜಸ್ವಿಯೂ, ಶಕ್ತಿವಂತನೂ ಆದ ವಿಶಾಖನು ಶಕ್ತ್ಯಾಯುಧದೊಂದಿಗೆ ಜನಿಸಿದನು. ಇಂದ್ರನು ಇವನನ್ನು ಕಂಡು ಭಯಪಟ್ಟು ಷಣ್ಮುಖನಿಗೆ ಶರಣುಹೋದನು. ಇವನಿಗೆ ಆರು ಮುಖಗಳಲ್ಲಿ ನಡುವಿನ ಮೊಗವು ಮೇಕೆಯ ಮುಖದಂತಿತ್ತು. (ಸ್ಕಾಂ. ಪು).

ವಿಶಾಖಾ -- ೧. ದಕ್ಷನ ಒಬ್ಬಳು ಮಗಳು. ಈಕೆ ಚಂದ್ರನ ಒಬ್ಬಳು ಪತ್ನಿ;ಇಪ್ಪತ್ತೇಳು ನಕ್ಷತ್ರಗಳಲ್ಲೊಂದು (ಮ. ಆ., ವಿ).

ವಿಶಾಲ --೧. ರಾಜನೊಬ್ಬ. ಇಕ್ಷ್ವಾಕುರಾಜನಿಂದ ಅಲಂಬುಸೆಯೆಂಬ ಅಪ್ಸರೆಯಲ್ಲಿ ಜನಿಸಿದನು. ದಿತಿಯು ಪುತ್ರಪ್ರಾಪ್ತಿಗಾಗಿ ತಪಸ್ಸು ಮಾಡಿದ ಸ್ಥಳದಲ್ಲಿ ಈತನು ವಿಶಾಲವೆಂಬ ಹೆಸರಿನ ಪಟ್ಟಣವನ್ನು ನಿರ್ಮಿಸಿದನು. ಸಿದ್ಧಾಶ್ರಮಕ್ಕೆ ಹೋಗುವ ರಾಮಲಕ್ಷ್ಮಣರು ವಿಶ್ವಾಮಿತ್ರನೊಂದಿಗೆ ಒಂದು ರಾತ್ರಿ ಇಲ್ಲಿ ನಿಂತಿದ್ದರು (ರಾಮಾ. ಬಾಲ., ಮ. ಸ). ೨. ಕಲಿಯುಗದಲ್ಲಿ ಕಾಶೀಪಟ್ಟಣದಲ್ಲಿದ್ದ ರಾಜನೊಬ್ಬ. ಇವನು ಶತ್ರುಗಳಿಂದ ರಾಜ್ಯವನ್ನು ಕಳೆದುಕೊಂಡು ಮರಳಿ ಪಡೆಯುವುದಕ್ಕಾಗಿ ಬದರಿಕಾಶ್ರಮಕ್ಕೆ ಹೋಗಿ ತಪಸ್ಸನ್ನಾಚರಿಸಿದನು. ಪರಮಾತ್ಮನು ಆತನೊಡನೆ 'ಅಲಕನಂದಾ ನದಿಯ ನಾರದಕುಂಡವಲ್ಲಿದ್ದ ನರನಾರಾಯಣರ ಮೂರ್ತಿಯನ್ನು ಹೊರತೆಗೆದು ಪ್ರತಿಷ್ಠಾಪಿಸಿದರೆ ನಿನ್ನ ವಾಂಛಿತವು ಈಡೇರುವುದು' ಎನ್ನಲು, ರಾಜನು ವೈಭವದಿಂದ ತಪ್ತಕುಂಡದಲ್ಲಿದ್ದ ನರನಾರಾಯಣರ ಮೂರ್ತಿಗಳನ್ನು ಅಲ್ಲೇ ಪ್ರತಿಷ್ಠಾಪಿಸಿದನು. ಈಗಲೂ ಬದರಿನಾಥನ ಹೆಸರಿನೊಂದಿಗೆ ವಿಶಾಲರಾಜನ ಹೆಸರನ್ನು ಸೇರಿಸಿ 'ಬದರಿ ವಿಶಾಲಕೀ ಜಯ' ಎಂದು ಯಾತ್ರಿಕರು ಘೋಷಿಸುತ್ತಾರೆ. ನೋ --ಬದರಿ. ವಿಶಾಲರಾಜನಿಂದ ನಿರ್ಮಿತವಾದ ಪಟ್ಟಣಕ್ಕೆ 'ವಿಶಾಲಾ' ಎನ್ನುತ್ತಾರೆ. ಬದರಿಕಾಶ್ರಮ ಬಹಳ ವಿಶಾಲವಾದ ಆಶ್ರಮವಾದುದರಿಂದ -- ತಪೋವನವಾದುದರಿಂದ -- ಇದನ್ನೂ ವಿಶಾಲ ಎನ್ನುತ್ತಾರೆ.

ವಿಶಾಲಾದೇವಿ-- ಸೂರ್ಯವಂಶದ ಮರುತ್ತರಾಜನ ತಾಯಿ. ಈಕೆಯ ಪತಿ ಅವಿಕ್ಷಿತ ಮಹಾರಾಜ. ನೋ -- ಮರುತ್ತ.

ವಿಶಾಲಾಕ್ಷ-- ೧. ಗರುಡನ ಮಗ. ೨. ಧೃತರಾಷ್ಟ್ರನ ಮಗ; ಇವನು ಭೀಮನಿಂದ ಹತನಾದ (ಮ. ಆ., ಭೀ). ೩. ವಿರಾಟರಾಜನ ಸೋದರನೊಬ್ಬ; ಕೀಚಕನು ಮಡಿದ ಮೇಲೆ ಇವನು ವಿರಾಟರಾಜನ ಸೇನೆಗೆ ಒಡೆಯನಾದನು

(ಮ.ಪ).೪.ಸ್ಯಮಂತಕ ಕ್ಷೇತ್ರದಲ್ಲಿ ವಸುದೇವನು ಯಜ್ಞಮಾಡಿದಾಗ ಇವನು ತುಂಬಾ ಸಹಾಯಮಾಡಿದನು (ಭಾಗ).

ವಿಶಾಲಾಕ್ಷಿ--ಕಾಶೀಕ್ಷೇತ್ರದ ದೇವತೆಯೊಬ್ಬಳು. ಮಣಿಕರ್ಣಿಕಾಘಾಟಿನಲ್ಲಿ ಈಕೆಯ ಮಂದಿರವಿದೆ. ೫೧ ಶಕ್ತಿಪೀಠಗಳಲ್ಲಿ ಇದೊಂದು.

ವಿಶೋಕ -- ಭೀಮಸೇನನ ಸಾರಥಿ (ಮ. ಸ., ಭೀ). ಈತನಿಗೆ ಅಶೋಕನೆಂಬ ಹೆಸರೂ ಇದೆ. ಇವನು ಶ್ರೀ ಕೃಷ್ಣನಿಂದ ಕುಬ್ಜೆ ಅಥವಾ ತ್ರಿವಕ್ರೆಯಲ್ಲಿ ಹುಟ್ಟಿದವನು. ಕುಬ್ಜೆಯ ಮಗನು ಉಪಕೋಶನೆಂದೂ, ಇವನು ನಾರದಮುನಿಯ ಶಿಷ್ಯನಾಗಿದ್ದು ಪಾಂಚರಾತ್ರದಲ್ಲಿ ಸಾತ್ವತ ಸಂಹಿತೆಯನ್ನು ನಿರ್ಣಯಿಸಿದವನೆಂದೂ ಇದೆ (ಭಾಗ).

ವಿಶ್ರವಸ್ಸು -- ಇದು ಪುಲಸ್ತ್ಯನ ಇನ್ನೊಂದು ಹೆಸರು. ಇವನು ಬ್ರಹ್ಮನ ಮಾನಸಪುತ್ರ. ಪುಲಸ್ತ್ಯನಿಗೆ ಗೋ ಎಂಬ ಪತ್ನಿಯಲ್ಲಿ ವೈಶ್ರವಣನೆಂಬ ಮಗನು ಹುಟ್ಟಿದನು. ಇವನು ತಂದೆಯಾದ ಪುಲಸ್ತ್ಯನನ್ನು ಬಿಟ್ಟು ತಾತನಾದ ಬ್ರಹ್ಮದೇವನ ಸನ್ನಿಧಿಗೆ ಹೋದನು. ಆದ್ದರಿಂದ ಕೋಪಗೊಂಡ ಪುಲಸ್ತ್ಯನು ವೈಶ್ರವಣನನ್ನು ಬಾಧಿಸಬೇಕೆಂದು ಯೋಗ ಮಹಿಮೆಯಿಂದಲೂ ತನ್ನ ಅಂಶದಿಂದಲೂ ವಿಶ್ರವಸ್ಸೆಂಬ ಪುತ್ರನನ್ನು ಸೃಷ್ಟಿಸಿದನು. ಕೋಪಿಷ್ಠನಾದ ಪುಲಸ್ತ್ಯಬ್ರಹ್ಮನ ಅರ್ಧಶರೀರದಿಂದ ಇವನು ಹುಟ್ಟಿದನು. ಕುಬೇರನು (ವೈಶ್ರವಣ)ತಂದೆಯಾದ ವಿಶ್ರವಸ್ಸಿನ ಅನುಗ್ರಹ ಪಡೆಯಬೇಕೆಂದು ಲಂಕಾಪಟ್ಟಣದಲ್ಲಿ ವಾಸಮಾಡುತ್ತ ಆತನ ಸೇವಾರ್ಥವಾಗಿ ಪುಷ್ಪೋತ್ಕಟೆ, ರಾಕೆ, ಮಾಲಿನಿಯರೆಂಬ ಮೂರು ಮಂದಿ ರಾಕ್ಷಸ ಸ್ತ್ರೀಯರನ್ನು ನೇಮಿಸಿದನು. ಇವರು ವಿಶ್ರವಸ್ಸುವಿನ ಅನುಗ್ರಹಕ್ಕೆ ಪಾತ್ರರಾಗಿ, ಇವರಲ್ಲಿ ಪುಷ್ಪೋತ್ಕಟೆಯು ರಾವಣ ಕುಂಭಕರ್ಣರನ್ನೂ, ಮಾಲಿನಿಯು ಧರ್ಮಾತ್ಮನಾದ ವಿಭೀಷಣನನ್ನೂ, ರಾಕೆಯು ಖರ ಮತ್ತು ಶೂರ್ಪನಖಿಯೆಂಬ ಅವಳಿ ಮಕ್ಕಳನ್ನೂ ಹೆತ್ತಳು (ಮ. ವ).ದೇವವರ್ಣಿನಿ ಅಥವಾ ಇಲಬಿಲೆಯಲ್ಲಿ ವಿಶ್ರವಸುವಿಗೆ ಕುಬೇರನು ಹುಟ್ಟಿದನು (ಭಾಗ).ವಿಶ್ರವಸುವು ಸುಮಾಲಿ ರಾಕ್ಷಸನ ಮಗಳಾದ ಕೇಕಸಿಯನ್ನು ಮದುವೆಯಾಗಿ ರಾವಣ, ಕುಂಭಕರ್ಣ, ಶೂರ್ಪನಖಿ ಮತ್ತು ವಿಭೀಷಣರೆಂಬ ಮಕ್ಕಳನ್ನು ಪಡೆದನು (ರಾಮಾ. ಬಾಲ).

ವಿಶ್ವಕರ್ಮ -- ಅಷ್ಟವಸುಗಳಲ್ಲೊಬ್ಬನಾದ ಪ್ರಭಾಸ ಮತ್ತು ಬೃಹಸ್ಪತಿಯ ತಂಗಿಯಾದ ಯೋಗಸಿದ್ಧಿಯು ಈತನ ತಂದೆತಾಯಿಗಳು (ಭಾರತ).

ಬೃಹಸ್ಪತ್ಯಾಚಾರ್ಯನ ತಂಗಿಯಾದ ಬ್ರಹ್ಮವಾದಿನಿಯು ಈತನ ತಾಯಿ. ತ್ವಷ್ಟ್ರು ಎಂಬುದು ಈತನ ಇನ್ನೊಂದು ಹೆಸರು (ಹರಿ).ಈತನ ಪತ್ನಿ ಪ್ರಹ್ಲಾದ

ಪುತ್ರಿಯಾದ ವಿರೋಚನೆ ; ಮಗನು ವಿಶ್ವರೂಪಾಚಾರ್ಯ ಅಥವಾ ತ್ರಿಶಿರ (ವಾಯುಪು). ಈತನ ಪುತ್ರಿ ಸೂರ್ಯನ ಪತ್ನಿಯಾದ ಸಂಜ್ಞೆ ನೋ -- ತ್ರಿಶಿರ, ಸೂರ್ಯ, ಸಂಜ್ಞೆ, ಅಶ್ವಿನೀ ದೇವತೆಗಳು. ಇವನಿಂದ ಇಂದ್ರಪ್ರಸ್ಥದ ನಿರ್ಮಾಣವಾಯಿತು. ಸುಂದೋಪಸುಂದರ ವಧೆಗಾಗಿ ಈತನೇ ತಿಲೋತ್ತಮೆಯನ್ನು ನಿರ್ಮಿಸಿದನು. ನೋ-- ತಿಲೋತ್ತಮೆ ಈತನು ತ್ರಿಪುರಗಳ ವಧೆಗಾಗಿ ಶಿವನಿಗೆ ರಥವನ್ನು ನಿರ್ಮಿಸಿದನು. ವಿಶ್ವಕರ್ಮನ ಮಗನಿಗೂ ವಿಶ್ವಕರ್ಮನೆಂದೇ ಹೆಸರು. ಈತನು ಗುರುಕುಲವಾಸವನ್ನು ಮಾಡುತ್ತಿರುವಾಗ ಗುರುವು ಈತನೊಡನೆ -- ' ಸದಾ ನೂತನವಾಗಿರುವ ಮನೆಯನ್ನು ಮಾಡಿಕೊಡು' ಎಂದನು. ಗುರುಪತ್ನಿಯು ಮಾಸದ ನಾರುಬಟ್ಟೆ, ಕುಪ್ಪಸಗಳನ್ನು ರಚಿಸಿಕೊಡುವಂತೆ ಹೇಳಿದಳು. ಗುರುಪುತ್ರನು -- ನೀರು ಬೆಂಕಿಗಳಿಗೆ ಹಾಳಾಗದ, ಭೂಮ್ಯಾಕಾಶಗಳಲ್ಲಿ ಸಂಚರಿಸತಕ್ಕ ಪಾದುಕೆಗಳನ್ನು ಮಾಡಿಕೊಡು'ವಂತೆ ಹೇಳಿದನು. ಗುರುಪುತ್ರಿಯು 'ವಜ್ರಖಚಿತವಾದ ಓಲೆಗಳನ್ನೂ, ಎಂದೆಂದೂ ಹಾಳಾಗದ ಮನೆಯ ವಸ್ತುಗಳನ್ನೂ, ಒಂದೇ ಕಂಬದ ಮನೆಯನ್ನೂ ರಚಿಸಿ, ಅದನ್ನು ಬೇಕಾದೆಡೆಗೆ ಸಾಗಿಸುವಂತೆಯೂ ನಿರ್ಮಾಣ ಮಾಡು' ಎಂದಳು. ವಿಶ್ವಕರ್ಮನು ಕಾಶೀಕ್ಷೇತ್ರವನ್ನು ಸೇರಿ ಮೂರು ವರ್ಷ ತಪಸ್ಸು ಮಾಡಿ ಶಿವನನ್ನು ಮೆಚ್ಚಿಸಿ ಶಿಲ್ಪ, ಚಿತ್ರ, ಗೀತ, ವಾದ್ಯಗಳಲ್ಲಿ ಪ್ರವೀಣನಾಗುವಂತೆ ವರ ಪಡೆದುದಲ್ಲದೆ, ತನ್ನ ತಂದೆಯ ವಿಶ್ವಕರ್ಮನೆಂಬ ಹೆಸರನ್ನು ತಾನೂ ಪಡೆದು ಗುರುವಿನ ಕುಟುಂಬದವರ ಬಯಕೆಯನ್ನೆಲ್ಲ ಪೂರೈಸಿದನು. (ಸ್ಕಾಂ.ಪು).

ವಿಶ್ವಗಶ್ವ-- ಸೂರ್ಯವಂಶದ ಪೃಥುರಾಜನ ಮಗ. ಈತನ ಮಗ ಆರ್ದ್ರಕ (ಮ. ಅನು).

ವಿಶ್ವಜಿತ್-- ೧. ಬೃಹಸ್ಪತಿಯ ತೃತೀಯಪುತ್ರ (ಮ. ವ)೨. ಅಗ್ನಿವಿಶೇಷ (ಮ.ವ).

ವಿಶ್ವಭುಕ್-- ೧. ಬೃಹಸ್ಪತಿಯ ನಾಲ್ಕನೇ ಮಗ. ಈತನಿಗೂ ಗೋಪತಿ ಎಂಬ ಹೆಸರೂ ಇದೆ (ಮ. ವ). ೨. ಅಗ್ನಿವಿಶೇಷ (ಮ. ವ).

ವಿಶ್ವರಥ-- ನೋ -- ವಿಶ್ವಾಮಿತ್ರ, ವಿಶ್ವಾಮಿತ್ರನು ರಾಜನಾಗಿರುವಾಗ ಈತನಿಗೆ ವಿಶ್ವರಥನೆಂಬ ಹೆಸರಿತ್ತು.

ವಿಶ್ವರೂಪ -- ಇವನು ತ್ವಷ್ಟೃವೆಂಬ ಬ್ರಹ್ಮನ ಮಗ. ಈತ ದೇವೇಂದ್ರನ ಸಂಹಾರಕ್ಕಾಗಿ ಮೂರು ಶಿರಸ್ಸುಗಳುಳ್ಳ ವಿಶ್ವರೂಪನೆಂಬ ಮಗನನ್ನು ಪಡೆದನು. ಇವನು ಸೂರ್ಯೋಪಮಾನವಾದ ಒಂದು ಮುಖದಿಂದ ವೇದಾಧ್ಯಯನವನ್ನು ಮಾಡುತ್ತ ಚಂದ್ರಬಿಂಬದಂತಹ ಮುಖದಿಂದ ಮದ್ಯಪಾನ ಮಾಡುತ್ತ,

ಯಜ್ಞೇಶ್ವರನಿಗೆ ಸಮಾನವಾದ ಮತ್ತೊಂದು ಮುಖದಿಂದ ನಾಲ್ಕು ದಿಕ್ಕುಗಳನ್ನೂ ನುಂಗುವವನಂತೆ ಕಾಣಿಸುತ್ತಿದ್ದನು. ಇವನು ಜಿತೇಂದ್ರಿಯನಾಗಿ ತಪಸ್ಸುಮಾಡುತ್ತಿರಲು ಇವನ ತಪೋಭಂಗಕ್ಕಾಗಿ ದೇವೇಂದ್ರನು ರಂಭೆ, ಊರ್ವಶಿ ಮೊದಲಾದ ಅಪ್ಸರೆಯರನ್ನು ಕಳುಹಿಸಲು ಅವರು ಅವನ ಮನಸ್ಸನ್ನು ಜಯಿಸಲಾರದೆ ಹತಾಶರಾಗಲು ದೇವೇಂದ್ರನು ಆ ವಿಶ್ವರೂಪನ ಮೇಲೆ ತನ್ನ ವಜ್ರಾಯುಧವನ್ನು ಪ್ರಯೋಗಿಸಿದನು. ಆದರೂ ಅವನು ಸಾಯದೆ ನೆಲದ ಮೇಲೆ ಬಿದ್ದಿರಲು ಇಂದ್ರನು ದೇವಶಿಲ್ಪಿಯಾದ ತಕ್ಷನನ್ನು ಕರೆದು ಆತನ ತೀಕ್ಷ್ಣವಾದ ಗಂಡುಗೊಡಲಿಯಿಂದ ಈತನ ತಲೆ ಕತ್ತರಿಸುವಂತೆ ಅಪ್ಪಣೆಮಾಡಿದನು. ಇಂದ್ರನ ಅಪ್ಪಣೆಯಂತೆ ತಕ್ಷನು ವಿಶ್ವರೂಪನ ತಲೆ ಕತ್ತರಿಸಿದನು. ಆಗ ವಿಶ್ವರೂಪನ ವೇದಾಧ್ಯಯನಶೀಲವಾದ ತಲೆಯಿಂದ ಕಪಿಂಜಲ ಪಕ್ಷಿಗಳೂ, ದಿಕ್ಕುಗಳನ್ನು ನುಂಗುವಂತಿದ್ದ ತೇಜಸ್ವೀ ಶಿರದಿಂದ ತಿತ್ತಿರಿಪಕ್ಷಿಗಳೂ, ಸುರಾಪಾನಮಾಡುವ ಶಿರದಿಂದ ಕಲವಿಂಕ ಪಕ್ಷಿಗಳೂ ಹುಟ್ಟಿ ಹಾರಿಹೋದವು. ಈ ಬ್ರಹ್ಮಹತ್ಯ ದೋಷವನ್ನು ಕಳೆದುಕೊಳ್ಳಲು ಇಂದ್ರನು ಘೋರವಾದ ವ್ರತ ಮತ್ತು ತಪಸ್ಸುಗಳನ್ನು ಮಾಡಿ ದೇವರ ಅನುಗ್ರಹದಿಂದ ತನ್ನ ಪಾಪವನ್ನು ಸಮುದ್ರದಲ್ಲಿ ನೊರೆಯಾಗಿಯೂ, ವೃಕ್ಷಗಳಲ್ಲಿ ಮೇಣವಾಗಿಯೂ, ಯೌವನಸ್ತ್ರೀಯಲ್ಲಿ ರಜವಾಗಿಯೂ, ಭೂಮಿಯಲ್ಲಿ ಚೌಳುತನವಾಗಿಯೂ (ಜವುಗು) ಬಿಟ್ಟು ತಾನು ಪರಿಶುದ್ಧನಾದನು (ಮ. ಉ., ವಾಯುಪು).

೧. ಅಸುರನೊಬ್ಬ. ೨. ತ್ವಷ್ಟೃವಿನ ಮಗ. ಈತನ ತಾಯಿ ದೈತ್ಯರ ಸಹೋದರಿಯಾದ ವಿರೋಚನನ ತಂಗಿಯಾದ ರಚನಾ. ಈಕೆ ಪ್ರಹ್ಲಾದನ ಪುತ್ರಿ. ಈಕೆಯನ್ನು ವಿರೋಚನೆ ಎನ್ನುತ್ತಾರೆ; ಇಂದ್ರನಿಂದ ಈತನ ವಧೆ ಯಾಯಿತು. ಇವನಿಗೆ ಮೂರು ತಲೆಗಳಿದ್ದುವು. ಇವನು ಒಂದರಿಂದ ಸೋಮಪಾನ ಮಾಡುತ್ತಿದ್ದನು. ಮತ್ತೊಂದರಿಂದ ಸುರಾಪಾನ ಮಾಡುತ್ತಿದ್ದ. ಇನ್ನೊಂದರಿಂದ ಊಟ ಮಾಡುತ್ತಿದ್ದ. ಇವನು ದೇವತೆಗಳ ಪುರೋಹಿತನಾಗಿದ್ದರೂ ತಾಯಿ ರಾಕ್ಷಸಿಯಾಗಿದ್ದುದರಿಂದ ರಾಕ್ಷಸರಲ್ಲಿಯೇ ಈತನಿಗೆ ಅಭಿಮಾನ ಹೆಚ್ಚಿತ್ತು. ಯಜ್ಞಯಾಗಾದಿಗಳಲ್ಲಿ ಗುಟ್ಟಾಗಿ ಅಸುರರಿಗೂ ಆಹುತಿಯನ್ನು ಕೊಡುತ್ತ ಬಂದುದರಿಂದ ಅವರ ಶಕ್ತಿ ಹೆಚ್ಚುತ್ತ ಬಂತು. ಇದನ್ನು ತಿಳಿದು ಇಂದ್ರನು ಇವನನ್ನು ಕೊಂದನು (ಭಾಗ).

ವಿಶ್ವರೂಪದರ್ಶನ -- ಯುದ್ಧಕಾಲದಲ್ಲಿ ಕುರುಕ್ಷೇತ್ರದಲ್ಲಿ ಭೀಷ್ಮಾದಿಗಳೊಡನೆ ಹೊಡೆದಾಡಲಾರದೆ ಬಂಧುಪ್ರೇಮದಿಂದ ಅರ್ಜುನನ ರಣೋತ್ಸಾಹವೆಲ್ಲ ನಂದಿಹೋಯಿತು. ಹಿಂಸೆಯು ಮಹಾಪಾಪವೆಂಬ ಭಾವನೆಯು ಅವನಿಗುಂಟಾಯಿತು. ಅವನು ಕೈಕಾಲುಗಳಲ್ಲಿ ಶಕ್ತಿ ಇಲ್ಲದವನಾಗಿ ಬಿಲ್ಲುಬಾಣಗಳನ್ನೆಸೆದು ಸುಮ್ಮನೆ ಕುಳಿತುಬಿಟ್ಟನು. ಕೃಷ್ಣನು ಆಗ ಅವನಿಗೆ ಗೀತೆಯ ತತ್ವರಹಸ್ಯವನ್ನೆಲ್ಲ ಉಪದೇಶಿಸಿ ನಿಷ್ಕಾಮ ಬುದ್ಧಿಯಿಂದ ಯುದ್ಧ ಮಾಡುವಂತೆ ಅವನನ್ನು ಪ್ರೇರಿಸಿದನು. ಅವನಿಗೆ ಈ ಬರಿಯ ಮಾತು ಸಾಕಾಗದೆ ತನ್ನ ವಿಶ್ವರೂಪವನ್ನು ಪ್ರದರ್ಶಿಸಬೇಕಾಯಿತು. ಅದಕ್ಕಾಗಿ ದಿವ್ಯಚಕ್ಷುವನ್ನು ಅನುಗ್ರಹಿಸಿದನು. 'ನಿಮಿತ್ತಮಾತ್ರಂ ಭವ ಸವ್ಯಸಾಚಿನ್' ಎಂದು ಧೈರ್ಯಕೊಟ್ಟನು. ತಾನು ಬಹುಮುಖ ಕಣ್ಣುಗಳೂ, ತೋಳುಗಳೂ, ತೊಡೆಗಳೂ, ಹೆಜ್ಜೆಗಳೂ, ಹೊಟ್ಟೆಗಳೂ, ಅನೇಕ ಕೋರೆದಾಡೆಗಳೂ ಉಳ್ಳ ವಿಶ್ವರೂಪವನ್ನು ಆತನ ಮುಂದೆ ಪ್ರದರ್ಶಿಸಿ ತನ್ನ ವಿಶಾಲ ವಿಕಾರವಾದ ಬಾಯಿಯೊಳಗೆ ಕೌರವರೂ, ಕರ್ಣನೂ, ಭೀಷ್ಮ, ದ್ರೋಣ ಮೊದಲಾದವರೂ ಪ್ರವೇಶಿಸುತ್ತ ಮತ್ತುವಿನೆಡೆಗೆ ಧಾವಿಸುತ್ತಿರುವುದನ್ನು ಮೊದಲೇ ತೋರಿಸಿದನು. ಇದಕ್ಕೆ ಮೊದಲೇ ಯಶೋದೆಗೂ, ಅಕ್ರೂರನಿಗೂ, ಧೃತರಾಷ್ಟ್ರನ ಮನೆಯಲ್ಲಿ ಭೀಷ್ಮಾದಿಗಳಿಗೂ ತೋರಿಸಿದ ವಿಶ್ವರೂಪವು ಅರ್ಜುನನಿಗೆ ತೋರಿಸಿದ ವಿಶ್ವರೂಪದ ಒಂದಂಶವೆಂದೂ, ಅರ್ಜುನನಿಗೆ ತೋರಿಸಿದ ವಿಶ್ವರೂಪವು ಅತ್ಯುತ್ಕೃಷ್ಟವಾದುದೆಂದು ಆತನೇ ಅರ್ಜುನನ ಮುಂದೆ ಹೇಳಿದನು. ಈ ಪ್ರದರ್ಶನವು ಕುರುಕ್ಷೇತ್ರದಲ್ಲಿ ಎರಡು ಸೈನ್ಯಗಳ ಮಧ್ಯೆ ಪ್ರದರ್ಶಿತವಾದರೂ ಇದನ್ನು ಅರ್ಜುನನೊಬ್ಬನು ಮಾತ್ರ ಕಂಡನು. ಕೊನೆಗೆ ಅರ್ಜುನನು ತನ್ನ ಬುದ್ಧಿಯನ್ನು ಬದಿಗೊತ್ತಿ-- 'ಕರಿಷ್ಯೇ ವಚನಂ ತವ'ಎಂದು ಯುದ್ಧಪ್ರವೃತ್ತನಾಗುತ್ತಾನೆ.

ಸಂಧಾನಕ್ಕೆ ಹೋದ ಶ್ರೀಕೃಷ್ಣನನ್ನು ದುರ್ಯೋಧನಾದಿಗಳು ಕಟ್ಟಿಹಾಕಲು ಯತ್ನ ನಡೆಸಲು ಒಡನೆಯೇ ಆ ಮಹಾನುಭಾವನ ಶರೀರದಲ್ಲಿ ಮಿಂಚುಗಳಂತೆ ಹೊಳೆಯುತ್ತಿರುವ ಸಕಲ ದೇವತೆಗಳೂ ಕಾಣಿಸಿಕೊಂಡರು. ಅವನ ಹಣೆಯಲ್ಲಿ ಬ್ರಹ್ಮನೂ, ವಕ್ಷಸ್ಥಳದಲ್ಲಿ ರುದ್ರನೂ, ಭುಜಗಳಲ್ಲಿ ಇಂದ್ರಾದಿ ದಿಕ್ಪಾಲಕರೂ, ಮುಖದಲ್ಲಿ ಅಗ್ನಿಯೂ ಸಹ ಕಾಣಿಸಿಕೊಂಡರು. ಆತನಲ್ಲಿ ಸಿದ್ಧರೂ ಸಾಧ್ಯರೂ, ವಸುಗಳೂ, ಆದಿತ್ಯರೂ, ಗಂಧರ್ವರೂ, ಉರಗರೂ, ರಾಕ್ಷಸರೂ ಮೊದಲಾದವರೆಲ್ಲಾ ಕಾಣಿಸಿಕೊಂಡರು. ಶ್ರೀಕೃಷ್ಣನ ಈ ವಿಶ್ವರೂಪವನ್ನು ಕಾಣಲಾರದೆ ಭಯಭ್ರಾಂತರಾಗಿ ಎಲ್ಲರೂ ಕಣ್ಣು ಮುಚ್ಚಿಕೊಂಡರು. ಈ

ಪ್ರದರ್ಶನವು ಕೌರವರ ಸಭೆಯಲ್ಲಿ ನಡೆಯಿತು (ಭಾರತ).

ಯಶೋದೆಯು ಶ್ರೀಕೃಷ್ಣನಿಗೆ ಸ್ತನ್ಯಪಾನ ಮಾಡಿಸಿ ಮುದ್ದಾಡುತ್ತಿರಲು ಆತನಿಗೆ ನಿದ್ರಾಸೂಚಕವಾದ ಆಕಳಿಕೆಯೊಂದು ಬರಲು ಆತನು ಬಾಯಿ ತೆರೆದನು. ಆಗ ಯಶೋದೆಗೆ ಬಾಯಿಯಲ್ಲೇ ಸಮಸ್ತ ಜಗತ್ತುಗಳೂ ಏಕಕಾಲದಲ್ಲಿ ಗೋಚರಿಸಿದವು. ಅವಳ ಮೈಯೆಲ್ಲಾ ನಡುಗಿಹೋಗಿ ಕಣ್ಣು ಮುಚ್ಚಿದುವು. ಇದು ಯಶೋದೆಯ ಮನೆಯಲ್ಲಿ ನಡೆಯಿತು. ಶ್ರೀಕೃಷ್ಣನು ಮಣ್ಣು ತಿಂದನೆಂಬ ದೂರಿನಿಂದ ಆತನ ಬಾಯಿ ತೆರೆಸಿದಾಗ ಯಶೋದೆಗೆ ವಿಶ್ವರೂಪದರ್ಶನವಾಯಿತೆಂಬ ಕಥೆಯೂ ಇದೆ.

ಮಥುರೆಗೆ ಕಂಸನ ಅಪ್ಪಣೆಯಂತೆ ಬಲರಾಮಕೃಷ್ಣರನ್ನು ಕರೆದೊಯ್ಯಲು ಬಂದ ಅಕ್ರೂರನು ಅವರೊಡನೆ ಯಮುನಾ ನದಿಯ ತೀರದಲ್ಲಿ ತಂಗಿದನು. ಬಲರಾಮ ಕೃಷ್ಣರು ಯಮುನಾ ನದಿಯ ನೀರಿನಲ್ಲಿ ಮಿಂದುಬಂದ ಮೇಲೆ ಅಕ್ರೂರನು ಪ್ರಣವ ಮಂತ್ರವನ್ನು ಜಪಿಸುತ್ತಾ ಆ ನದಿಯ ನೀರಿನಲ್ಲಿ ಮುಳುಗಿದನು. ಆಗ ಬಲರಾಮ ಕೃಷ್ಣರಿಬ್ಬರೂ ನೀರಿನಲ್ಲಿ ಆತನ ಕಣ್ಣಿಗೆ ಗೋಚರಿಸಿದರು. ಆಮೇಲೆ ನೀರಿನಲ್ಲೇ ಸಿದ್ಧಗಣಗಳಿಂದಲೂ, ನಾಗರಿಂದಲೂ, ದೇವತೆಗಳಿಂದಲೂ ಪ್ರಣಾಮಪೂರ್ವಕ ಸ್ತುತಿಸಲ್ಪಡುತ್ತಿರುವ ಆದಿಶೇಷನನ್ನು ಕಂಡನು. ಆಗ ಶೇಷಶಾಯಿಯಾದ ಪರಮಪುರುಷನ ಸುತ್ತಲೂ ಸುನಂದ -- ನಂದರೇ ಮೊದಲಾದ ಪಾರ್ಷದರೂ, ಸನಕಾದಿ ಮಹರ್ಷಿಗಳೂ, ಬ್ರಹ್ಮರುದ್ರಾದಿ ದೇವತೆಗಳೂ, ಪ್ರಹ್ಲಾದ ನಾರದರೇ ಮೊದಲಾದ ಭಾಗವತೋತ್ತಮರೂ ಸ್ತುತಿಸುತ್ತಿದ್ದರು. ಅವನ ನಾಲ್ಕು ಕೈಗಳಲ್ಲಿ ಶಂಖಚಕ್ರಗದಾಪದ್ಮಗಳೂ, ಕಂಠದಲ್ಲಿ ಕೌಸ್ತುಭಮಣಿ ಮತ್ತು ವನಮಾಲಿಕೆಯೂ ಶೋಭಿಸುತ್ತಿದ್ದವು. ಇದನ್ನು ಅಕ್ರೂರನು ಯಮುನಾನದಿಯ ನೀರಿನೊಳಗೆ ಕಂಡನು (ಭಾಗ). ಉದಂಕನಿಗೆ ಶ್ರೀಕೃಷ್ಣನು ವಿಶ್ವರೂಪವನ್ನು ತೋರಿಸಿದನು. ನೋ -- ಉದಂಕ.

ಪಾಂಡವರು ತೀರ್ಥಯಾತ್ರಾಪ್ರಸಂಗದಲ್ಲಿ ಬದರಿಕಾಶ್ರಮದಲ್ಲಿ ಆರು ರಾತ್ರಿ ವಾಸಮಾಡಿದರು. ಆಗ ಈಶಾನ್ಯ ದಿಕ್ಕಿನಲ್ಲಿ ದೈವಯೋಗದಿಂದ ಗಾಳಿಯು ಎದ್ದು ಸಾವಿರ ದಳಗಳುಳ್ಳದ್ದಾಗಿಯೂ, ಸೂರ್ಯನಂತೆ ತೇಜಸ್ಸುಳ್ಳ ಒಂದು ದಿವ್ಯಕಮಲವನ್ನು ತಂದು ದ್ರೌಪದಿಯ ಮುಂದೆ ಹಾಕಲು ಆಕೆಯ ಪ್ರಾರ್ಥನೆಯಂತೆ ಭೀಮನು ಗದಾಧಾರಿಯಾಗಿ ಗಂಧಮಾದನ ಪರ್ವತದ ಪಕ್ಕದಲ್ಲಿ ನಡೆದು ಕದಳೀಖಂಡವನ್ನು ಪ್ರವೇಶಿಸಿ ಅಲ್ಲಿ ಕಾಲುದಾರಿಗೆ ಅಡ್ಡವಾಗಿ ಕುಳಿತ ಹನುಮಂತನನ್ನು ಕಂಡು, ಅವನ ಶಕ್ತಿಗೆ ಬೆರಗಾಗಿ, ಆತನು

ಸಮುದ್ರವನ್ನು ಹಾರಿ ಹೋಗುವಾಗ ತಾಳಿದ ದೇಹವನ್ನು ತೋರಿಸುವಂತೆ ಹೇಳಲು ಆಂಜನೇಯನು ಭೀಮನಿಗೆ ತನ್ನ ವಿಶ್ವರೂಪವನ್ನು ತೋರಿಸಿದನು (ಮ.ವ).

ವಿಶ್ವರೂಪಾ -- ಕಾಮಧೇನುವಿನ ಮಗಳು. ನೋ -- ಕಾಮಧೇನು (ಮ. ಉ).

ವಿಶ್ವಾ -- ದಕ್ಷಪ್ರಜಾಪತಿಯ ಮಗಳು. ಈಕೆ ಧರ್ಮಪ್ರಜಾಪತಿಯ ಹೆಂಡತಿ. ಈಕೆಯ ಮಕ್ಕಳು ವಿಶ್ವೇದೇವತೆಗಳು (ಮ. ಆ., ಮತ್ಸ್ಯಪು).

ವಿಶ್ವಾಚೀ -- ಅಪ್ಸರೆಯೊಬ್ಬಳು. ಈಕೆಯೊಡನೆ ಯಯಾತಿಯು ವಿಷಯ ಸುಖಾನುಭವ ಹೊಂದಿದನು. ನೋ -- ಯಯಾತಿ (ಮ. ಸ., ಆ).

ವಿಶ್ವಾಮಿತ್ರ -- ಬ್ರಹ್ಮರ್ಷಿ. ಚಂದ್ರವಂಶದ ಗಾಧಿರಾಜನ ಮಗ. ಇವನಿಗೆ ಮೊದಲು ವಿಶ್ವರಥನೆಂಬ ಹೆಸರಿತ್ತು. ಈತನು ಪೂರ್ವಕಾಲದಲ್ಲಿ ಕ್ಷತ್ರಿಯನಾಗಿದ್ದು ತಪಸ್ಸಿನಿಂದ ಬ್ರಾಹ್ಮಣನಾದನು (ಮ. ಸ., ಆ., ಶಾಂ., ಹರಿ., ವಾಯುಪು). ಈತನ ಧರ್ಮಪತ್ನಿಯ ಹೆಸರು ಹೈಮವತಿ. ಈತನಿಗೆ ಶಾಲಾವತಿ, ದೃಷದ್ವತಿ, ರೇಣು, ಮಾಧವಿ ಮೊದಲಾದ ಹೆಂಡಿರೂ ಇದ್ದರು. ಆದರೂ ವಿಶ್ವಾಮಿತ್ರ -- ಮೇನಕೆಯರನ್ನು ದಂಪತಿಗಳೆನ್ನುವುದು ರೂಢಿಯಲ್ಲಿದೆ. ಈತನಿಗೆ ಶಾಲಾವತಿ ಎಂಬ ಭಾರ್ಯೆಯಿಂದ ಹಿರಣ್ಯಾಕ್ಷ., ದೇವಶ್ರವ, ಕತಿ ಎಂಬ ಮೂವರು ಮಕ್ಕಳಾದರು. ಇವರಲ್ಲಿ ಕತಿ ಎಂಬುವರ ವಂಶಜರೇ ಕಾತ್ಯಾಯನರೆಂದು ಪ್ರಸಿದ್ಧರಾದರು. ರೇಣು ಎಂಬ ಪತ್ನಿಯಿಂದ ಈ ಬ್ರಹ್ಮರ್ಷಿಗೆ ರೇಣುಮಾನ್, ಸಂಕೃತಿ, ಗಾಲವ, ಮುದ್ಗಲ, ಮಧುಚ್ಛಂದ, ಜಯ, ದೇವಲ ಎಂಬ ಪುತ್ರರಾದರು ; ದೃಷದ್ವತಿ ಎಂಬ ಹೆಂಡತಿಯಲ್ಲಿ ಅಷ್ಟಕ, ಕಚ್ಛಪ, ಹಾರೀತರೆಂಬ ಮೂವರು ಮಕ್ಕಳಾದರು. ಈ ಮಕ್ಕಳಲ್ಲಿ ಶುನಶ್ಶೇಫ ಅಥವಾ ದೇವರಾತರು ಈ ಮುನಿಯ ಅಭಿಮಾನದ ಪುತ್ರರು (ಹರಿ). ನೋ -- ಶುನಶ್ಶೇಫ. ವಿಶ್ವಾಮಿತ್ರನು ಕ್ಷತ್ರಿಯನಾಗಿದ್ದಾಗ ಜಗತ್ತಿನ ರಾಜಮಹಾರಾಜರನ್ನೆಲ್ಲ ಜಯಿಸಿ, ರಾಜಧಾನಿಗೆ ಮರಳುತ್ತಿದ್ದಾಗ ದಾರಿಯಲ್ಲಿದ್ದ ವಸಿಷ್ಠನ ಆಶ್ರಮದಲ್ಲಿ ಮಧ್ಯಾಹ್ನದ ಹೊತ್ತಿಗೆ ಸೈನ್ಯಸಮೇತ ತಂಗಿದನು. ಅಲ್ಲಿದ್ದ ನಂದಿನೀ ಧೇನುವನ್ನು ಮೆಚ್ಚಿ ಬಲಾತ್ಕಾರದಿಂದ ಸೆಳೆದೊಯ್ಯುತ್ತಿದ್ದಾಗ ವಸಿಷ್ಠನಿಂದ ಪರಾಜಿತನಾಗಿ ಬ್ರಾಹ್ಮಣನಾಗುವ ಹಂಬಲದಿಂದ ತಪಸ್ವಿಯಾದನು. ಈತನು ತಪಸ್ಸಿನ ಕಾಲದಲ್ಲೇ ಸ್ವರ್ಗದಿಂದ ಪತಿತನಾಗುತ್ತಿದ್ದ ತ್ರಿಶಂಕುವನ್ನು ಆಕಾಶದಲ್ಲೆ ನಿಲ್ಲಿಸಿ ಅವನಿಗೊಂದು ಸ್ವರ್ಗವನ್ನು ನಿರ್ಮಾಣ ಮಾಡಿಕೊಟ್ಟನು. ಈ ಕಾಲದಲ್ಲೇ ಈತನಿಗೆ ಮೇನಕೆಯಿಂದ ಶಕುಂತಳೆಯು ಜನಿಸಿದಳು (ಮ. ಆ).

ಒಮ್ಮೆ ಹನ್ನೆರಡು ವರ್ಷ ಕ್ಷಾಮ ಬಂದಾಗ ಇವನು ಚಂಡಾಲಗೃಹವನ್ನು ಕಳ್ಳತನದಿಂದ ಹೊಕ್ಕು ನಾಯಿಯ ಮಾಂಸವನ್ನು ಕದ್ದು ತಿನ್ನತೊಡಗಿದನು. ಆಗ ಚಂಡಾಲನಿಗೆ ಇದು ತಿಳಿದು ಮುನಿಯೊಡನೆ ಸಂಭಾಷಣೆಮಾಡುವಾಗ ಚೆನ್ನಾಗಿ ಮಳೆ ಬಂದಿತು (ಮ. ಶಾಂ).

ಮಹರ್ಷಿಗಳಾದ ಋಚೀಕರು ತಮ್ಮ ಪತ್ನಿಯಾದ ಸತ್ಯವತಿಯ ಸೇವೆಗೆ ಮೆಚ್ಚಿ ಅವಳಿಗೂ ಅವಳ ತಾಯಿಗೂ ಸಂತತಿಯಾಗುವುದಕ್ಕಾಗಿ ಎರಡು ಬೇರೆ ಬೇರೆ ಚರುಗಳನ್ನು ತಮ್ಮ ಮಂತ್ರಶಕ್ತಿಯಿಂದ ಸಿದ್ಧಪಡಿಸಿದರು. ಅವನ್ನು ಅವರು ತಮ್ಮ ಹೆಂಡತಿಯ ಕೈಯಲ್ಲಿಟ್ಟು ಆಕೆಗೆ ಕೊಟ್ಟ ಚರುವಿನಿಂದ ಶಾಂತನೂ ತೇಜಸ್ವಿಯೂ ಆದ ತಪಸ್ವಿಪುತ್ರನು ಜನಿಸುವನೆಂದೂ ಆಕೆಯ ತಾಯಿಗಾಗಿ ಸಿದ್ಧಗೊಳಿಸಿದ ಚರುವಿನಿಂದ ಕ್ಷತ್ರಿಯಾಂತಕನೂ, ಜಗಜ್ಜೇತೃನೂ, ದೀಪ್ತಿಮಂತನೂ, ಧೀರನೂ ಆದ ಪುತ್ರನು ಜನಿಸುವನೆಂದೂ ಹೇಳಿ ತಪೋನುಷ್ಠಾನಕ್ಕಾಗಿ ಹೊರಟುಹೋದರು. ಮುಂದೆ ದೈವವಶಾತ್ ಪ್ರಮಾದವಾಗಿ ತಾಯಿಯ ಚರುವನ್ನು ಮಗಳೂ, ಮಗಳ ಚರುವನ್ನು ತಾಯಿಯೂ ತಿಂದು ಗರ್ಭಿಣಿಯರಾದರು. ಮುಂದೆ ಸತ್ಯವತಿಯ ಪ್ರಾರ್ಥನೆಯಂತೆ ಮಗನು ಬ್ರಾಹ್ಮಣಗುಣಮಂಡಿತನೂ, ಮೊಮ್ಮಗನು ಕ್ಷತ್ರಿಯ ಸ್ವಭಾವದವನೂ ಆದನು. ಗಾಧಿಯೆಂಬ ಪತ್ನಿಗೆ ಮುಂದೆ ಬ್ರಹ್ಮರ್ಷಿ ಎನಿಸಿಕೊಂಡ ವಿಶ್ವಾಮಿತ್ರನು ಮಗನಾದನು. ಈತನು ಕ್ಷತ್ರಿಯನಾಗಿ ಹುಟ್ಟಿಯೂ ಬ್ರಹ್ಮರ್ಷಿಯ ಪದವಿಗೇರಿದುದು ಋಚೀಕರ ಮಂತ್ರಪೂತವಾದ ಚರುವಿನ ಪ್ರಭಾವದಿಂದ (ಹರಿ).

ವಿಶ್ವಾಮಿತ್ರನು ತಪಸ್ಸಿನಿಂದ ಬ್ರಾಹ್ಮಣನಾದನು. ಇವನು ಯಯಾತಿ ಪುತ್ರಿಯಾದ ಮಾಧವಿಯನ್ನು ವಿವಾಹವಾಗಿ ಅವಳಲ್ಲಿ ಅಷ್ಟಕನೆಂಬ ಮಗನನ್ನು ಪಡೆದನು. ನೋ -- ಮಾಧವಿ, ಅಷ್ಟಕ.

ಇವನೊಮ್ಮೆ ವಸಿಷ್ಠನ ಮೇಲೆ ಮುನಿದು ಅವನ ಮಕ್ಕಳಿಗೆ ಸಾಯುವಂತೆ ಶಾಪಕೊಡಲು ಅವರೆಲ್ಲಾ ನಾಶವಾದರು. ಇದರಿಂದ ವ್ಯಸನಗೊಂಡ ವಸಿಷ್ಠರು ಆತ್ಮಹತ್ಯಕ್ಕೆಂದು ಸಮುದ್ರಕ್ಕೆ ಹಾರಿಕೊಳ್ಳಲು ಸಮುದ್ರದಲ್ಲೆಲ್ಲಾ ಅವರಿಗೆ ಪಾದ ಮುಳುಗುವಷ್ಟು ನೀರಾಗಿ ಆತ್ಮಹತ್ಯಕ್ಕೆ ಅಸಾಧ್ಯವಾಯಿತು. ವಿಶ್ವಾಮಿತ್ರನೊಮ್ಮೆ ಸರಸ್ವತೀ ನದಿಯ ನೀರು ರಕ್ತವಾಗುವಂತೆ ಶಾಪವಿತ್ತನು. ಇವನು ಹರಿಶ್ಚಂದ್ರನ ರಾಜ್ಯವನ್ನು ದಾನಪಡೆದು ಅವನನ್ನು ಅನೇಕ ವಿಧವಾಗಿ ಹಿಂಸಿಸಿ, ಆತನ ಸತ್ಯವ್ರತವನ್ನು ಭಂಗಿಸಲಾರದೆ ಪರಾಜಿತನಾಗಿ ಆತನ ರಾಜ್ಯವನ್ನೂ, ತನ್ನ ತಪಸ್ಸಿನ ಫಲವನ್ನೂ ಆತನಿಗೆ ಕೊಟ್ಟು ಹೊರಟುಹೋದನು. ನೋ -- ಹರಿಶ್ಚಂದ್ರ, ಚಂದ್ರಮತಿ (ಮ. ವ).

ಇವನು ಈಗಿನ ವೈವಸ್ವತ ಮನ್ವಂತರದಲ್ಲಿ ಸಪ್ತರ್ಷಿಗಳಲ್ಲೊಬ್ಬ. ಇವನು ಒಬ್ಬ ಮಂತ್ರದ್ರಷ್ಟಾರನು. ಗಾಯತ್ರಿಮಂತ್ರವು ಇವನ ತಪಸ್ಸಿನ ಫಲವು. ಮುಂದೆ ಇವನ ವಂಶದಲ್ಲಿ ಹುಟ್ಟಿದ ದೇವರಾತ, ಮಧುಚ್ಛಂದ, ಅಘಮರ್ಷಣ, ಅಷ್ಟಕ, ಲೋಹಿತ, ಬಲ, ಭೃತಕೀಲ, ಶಿಶಿರ, ಶಾಲಂಕಾಯನ, ಧನಂಜಯ ಮೊದಲಾದ ಮುನಿಗಳೆಲ್ಲಾ ಮಂತ್ರಪ್ರವರ್ತಕರು (ಮತ್ಸ್ಯಪು).

ವಿಶ್ವಾಮಿತ್ರಾ -- ಋಚೀಕಮುನಿಪತ್ನಿಯಾದ ಸತ್ಯವತಿಯ ಇನ್ನೊಂದು ಹೆಸರು. ಈಕೆ ಲೋಕಪಾವನಗೈಯಲು ವಿಶ್ವಾಮಿತ್ರಾ ಅಥವಾ ಕೌಶಿಕಿ ಎಂಬ ಹೆಸರಿನಿಂದ ನದಿಯಾಗಿ ಹರಿಯುತ್ತಾಳೆ. ಈಕೆ ವಿಶ್ವಾಮಿತ್ರಮುನಿಯ ಸಹೋದರಿ (ಮ. ಭೀ).

ವಿಶ್ವಾಯು -- ನೋ -- ಪ್ರಾಧಾ. ಕಶ್ಯಪಮುನಿ ಮತ್ತು ಪ್ರಾಧೆಯ ಹತ್ತು ಮಂದಿ ಮಕ್ಕಳಲ್ಲಿ ಇವನು ಎಂಟನೆಯವನು.

ವಿಶ್ವಾವಸು-- ೧. ಒಂದು ಸಂವತ್ಸರ. ೨. ಕಶ್ಯಪಮುನಿ ಮತ್ತು ಪ್ರಾಧೆಯಲ್ಲಿ ಜನಿಸಿದ ಒಬ್ಬ ದೇವಗಂಧರ್ವ. ಇವನೊಮ್ಮೆ ಸ್ಥೂಲಶಿರನೆಂಬ ಬ್ರಾಹ್ಮಣನನ್ನು ಹಾಸ್ಯ ಮಾಡಿದುದರಿಂದ ಅವನಿಂದ ಶಾಪಹೊಂದಿ ಕಬಂಧನೆಂಬ ರಾಕ್ಷಸನಾಗಿ ಜನ್ಮವೆತ್ತಿ ಅರಣ್ಯವಾಸಿಗಳಾಗಿದ್ದ ಶ್ರೀರಾಮಲಕ್ಷ್ಮಣರಿಂದ ಶಾಪವಿಮೋಚನೆ ಹೊಂದಿದನು. ನೋ -- ಕಬಂಧ (ಮ. ಆ., ಸ., ವ., ಅನು., ರಾಮಾ., ಬಾಲ). ೩. ಜಮದಗ್ನಿಯ ಪುತ್ರನೊಬ್ಬ. ಇವನಿಗೆ ರುಮಣ್ವಂತ, ಸುಷೇಣ, ವಸು ಮತ್ತು ರಾಮನೆಂಬ ನಾಲ್ವರು ಸೋದರರಿದ್ದರು. ನೋ--ಜಮದಗ್ನಿ. ರೇಣುಕೆ. ರಾಮನನ್ನು ಬಿಟ್ಟು ತಂದೆ ಮಾತಿನಂತೆ ರೇಣುಕೆಯನ್ನು ಕೊಲ್ಲಲು ಒಪ್ಪದಿದ್ದುದರಿಂದ ಕೋಪದಿಂದ ಅವರಿಗೆ ಶಾಪವನ್ನು ಕೊಡಲು ನಾಲ್ಕು ಮಂದಿಯೂ ಮೃಗಪಕ್ಷಿಗಳಂತೆ ಜಡರಾಗಿ ಹೋದರು. ೪. ರಾಕ್ಷಸನೊಬ್ಬ. ಈತನ ಪತ್ನಿ ಮಾಲ್ಯವಂತನ ಮಗಳಾದ ಅನಲೆ; ಮಗಳು ಕುಂಭೀನಸಿ (ರಾಮಾ. ಉತ್ತರ).ನೋ --ಲವಣಾಸುರ.

ವಿಶ್ವದೇವಾ --ಧರ್ಮಪ್ರಜಾಪತಿಯಿಂದ ದಕ್ಷಪುತ್ರಿಯಾದ ವಿಶ್ವೆಯಲ್ಲಿ ಜನಿಸಿದ ಕ್ರತು, ದಕ್ಷ, ವಸು, ಸತ್ಯ, ಕಾಲಕಾಮ, ಮುನಿ, ಕುರಜ, ಮನುಜ, ವಿಜ, ರೋಚಮಾನರೆಂಬ ಹತ್ತು ಮಂದಿ. ಇವರು ಹವ್ಯಕವ್ಯಗಳಲ್ಲಿ ಪೂಜ್ಯರು.

ಹರಿಶ್ಚಂದ್ರನ ಪತ್ನಿ ಚಂದ್ರಮತಿಯನ್ನು ವಿಶ್ವಾಮಿತ್ರನು ಪೀಡಿಸುತ್ತಿದ್ದಾಗ ವ್ಯಸನಗೊಂಡ ಈ ವಿಶ್ವೇದೇವತೆಗಳು ವಿಶ್ವಾಮಿತ್ರನನ್ನು ನಿಂದಿಸಲು ಅವನು ಕೋಪದಿಂದ ಅವರಿಗೆ ಮನುಷ್ಯರಾಗಿ ಜನ್ಮವೆತ್ತುವಂತೆ, ಶಾಪ ಪರಿಹಾರಕ್ಕಾಗಿ ಪ್ರಾರ್ಥಿಸಲು, ಮನುಷ್ಯಜನ್ಮದಲ್ಲಿ ವಿವಾಹದ ಮೊದಲೇ ನಿಮಗೆ ಶಾಪವಿಮೋಚನೆಯಾಗುವುದೆಂದನು (ಮಾರ್ಕಂ. ಪು., ಮತ್ಸ್ಯಪು).

ವಿಷಪಾನ -- ನೋ -- ಸಮುದ್ರಮಥನ. ಸಮುದ್ರಮಥನಕಾಲದಲ್ಲಿ ಮೊದಲು ಹುಟ್ಟಿದ ವಿಷವನ್ನು ಶಿವನು ಪಾನಮಾಡಿ ನೀಲಕಂಠ -- ವಿಷಕಂಠನೆನಿಸಿದನು (ಮ. ಆ., ಭಾಗ., ರಾಮಾ., ಬಾಲ).

ವಿಷಯಾ -- ಚಂದ್ರಹಾಸನ ಹೆಂಡತಿ; ಈಕೆಯಲ್ಲಿ ಮಕರಾಕ್ಷನೆಂಬ (ಮಕರಧ್ವಜನೆಂಬ) ಮಗನು ಜನಿಸಿದನು. ಈಕೆಯ ತಂದೆ ದುಷ್ಟಬುದ್ಧಿ. ನೋ --ಚಂದ್ರಹಾಸ

ವಿಷ್ಣು -- ೧. ಅಗ್ನಿವಿಶೇಷ. ಈತನಿಗೆ ಧೃತಿಮಾನನೆಂಬ ಹೆಸರಿದೆ (ಮ. ವ) . ೨.ಒಬ್ಬ ಚೇದಿ ದೇಶದ ರಾಜ. ಈತನು ಕರ್ಣನಿಂದ ಮೃತನಾದನು (ಮ. ಕ) .೩.ದ್ವಾದಶಾದಿತ್ಯರಲ್ಲೊಬ್ಬ (ಮ. ಆ).ನೋ -- ವಿವಸ್ವಾನ್. ಇವನೇ ಶ್ರೀಮನ್ನಾರಾಯಣ. ಇವನು ವೃತ್ರಾಸುರನ ನಾಶಕ್ಕೆ ದೇವತೆಗಳಿಗೆ ಯುಕ್ತಿಯನ್ನು ಹೇಳಿಕೊಟ್ಟ. ಧ್ರುವನಿಗೆ ಪ್ರತ್ಯಕ್ಷನಾಗಿ ಧ್ರುವಲೋಕವನ್ನಿತ್ತನು. ನೋ -- ಧ್ರುವ. ಇವನೇ ಮತ್ಸ್ಯ, ಕೂರ್ಮ, ವರಾಹಾದಿ ದಶಾವತಾರಗಳನ್ನು ಮಾಡಿದನು. ಇವನೇ ಅಂಬರೀಷರಾಜನ ಮಗಳಾದ ಶ್ರೀಮತಿಯನ್ನು ಅಪಹರಿಸಿ, ನಾರದ ಮತ್ತು ಪರ್ವತಮುನಿಗಳ ಮುಖಗಳನ್ನು ಮಂಗ ಕೋಡಗಗಳ ಮುಖಗಳಂತೆ ಮಾಡಿ, ಆ ಮುನಿಗಳಿಂದ ಶಾಪಹೊಂದಿ, ರಾಮಾವತಾರವನ್ನು ಮಾಡಿದನು. ನೋ -- ಅಂಬರೀಷ. ಸೃಷ್ಟಿಯ ಆದಿಯಲ್ಲಿ ಶಿವನ ವಾಮಾಂಗದಿಂದ ಈತನು ಜನಿಸಿ, ಮಹಾತಪಸ್ಸನ್ನು ಮಾಡುತ್ತಿದ್ದಾಗ ಈತನ ದೇಹದಿಂದ ಬೆವರು ಹರಿಯತೊಡಗಲು, ಈತನು ಈ ಜಲದ ಮಧ್ಯದಲ್ಲಿ ಮಲಗಿದುದರಿಂದ ಈತನಿಗೆ ನಾರಾಯಣನೆಂಬ ಹೆಸರು ಬಂತು. (ನಾರ = ಜಲವೇ, ಆಯನ = ಸ್ಥಾನ). (ಶಿವಪು, ಮ. ಅನು., ಉ., ವ.) ೪.ಕಲ್ಕಿಮೂರ್ತಿಯ ತಂದೆಯ ಹೆಸರು. ಇವನು ಶಂಬಳ ಗ್ರಾಮದವನು. ೫.ಒಂದು ಪುರಾಣದ ಹೆಸರು. ಇದರಲ್ಲಿ ೨೩,೦೦೦ ಶ್ಲೋಕಗಳಿವೆ. ಪರಾಶರರು ಮೈತ್ರೇಯ ಮುನಿಗಳಿಗೆ ಈ ಪುರಾಣದ ಕಥೆಯನ್ನು ಹೇಳಿದರು.

ವಿಷ್ಣುಧರ್ಮ --ಗರುಡನ ಮಗನೊಬ್ಬ (ಮ. ಉ).

ವಿಷ್ಣುಮತಿ -- ನೋ -- ವಿಧೂಮ, ಶತಾನೀಕ.

ವಿಷ್ಣುವರ್ಮ --ಚೇದಿ ದೇಶದ ರಾಜನೊಬ್ಬ. ನೋ --ವಿಷ್ಣು (ಮ. ಕ).

ವಿಷ್ಣುಸ್ಥಾನಗಳು -- ೧. ಶ್ರೀರಂಗ, ೨. ಅಯೋಧ್ಯಾ, ೩. ದ್ವಾರಕ, ೪. ಮಥುರಾ, ೫. ದೇವಪ್ರಯಾಗ, ೬. ಬದರಿಕಾಶ್ರಮ, ೭. ಗಯಾ. ೮. ಜಗನ್ನಾಥಪುರಿ,

೯.ತಿರುಪತಿ, ೧೦. ಮುಕ್ತಿನಾರಾಯಣ, ೧೧. ತಿರುಪಾ ಕಡಲು (ಕ್ಷೀರಾಬ್ಧಿ), ೧೨. ತಿರುವೆಳ್ಳಾರ್ (ಶ್ವೇತಗಿರಿ), ೧೩. ತಿರುಮೋಹೂರ (ಮುಹೂರ).

ವಿಷ್ವಕ್ಸೇನ -- ೧. ವಿಷ್ಣುವಿನ ಒಂದು ಹೆಸರು. ೨. ವಿಷ್ಣುವಿನ ಪಾರ್ಷದನೊಬ್ಬ (ಮ. ಸ).

ವೀಟಾಕ್ರೀಡಾ -- ಪಾಂಡವ -- ಕೌರವರ ಚಂಡಿನಾಟ (ಮ. ಆ).

ವೀತಹವ್ಯ -- ಸೂರ್ಯವಂಶದ ಶರ್ಯಾತಿರಾಜನ ಮಗ. ಈತನ ಸಹೋದರ ತಾಲಜಂಘ. ಈತನಿಗೆ ಹತ್ತು ಮಂದಿ ಪತ್ನಿಯರು; ನೂರು ಮಂದಿ ಮಕ್ಕಳು. ಇವನು ತಪಸ್ಸಿನಿಂದ ಬ್ರಾಹ್ಮಣನಾದ ಮೇಲೆ ಹುಟ್ಟಿದ ಮಗನೇ ಗೃತ್ಸಮದ್ಯಮಹರ್ಷಿ. ನೋ -- ಪ್ರತರ್ದನ, ಗೃತ್ಸಮದ (ಮ. ಅನು).

ವೀತಿ -- ಅಗ್ನಿವಿಶೇಷ (ಮ. ವ).

ವೀತಿಹೋತ್ರ --ಪ್ರಿಯವ್ರತರಾಜನ ಮಗ. ನೋ -- ಪುಷ್ಕರದ್ವೀಪ.

ವೀರ --೧. ಭರದ್ವಾಜನೆಂಬ ವಿಶೇಷಾಗ್ನಿಯ ದ್ವಿತೀಯ ಪುತ್ರ. ಈತನಿಗೆ ರಥಪ್ರಭು, ರಥಧ್ವಾನ, ಕುಂಭರೇತಾ ಎಂಬ ಹೆಸರುಗಳೂ ಇವೆ (ಮ. ವ). ೨.ಸ್ವಾಯಂಭು ಮನುವಿಗೆ ಶತರೂಪೆಯಲ್ಲಿ ಹುಟ್ಟಿದ ಮಗ. ಇವನ ಪತ್ನಿ ಕಾಮ್ಯಾ. ಈ ದಂಪತಿಗಳ ಮಕ್ಕಳೇ ಪ್ರಿಯವ್ರತ ಮತ್ತು ಉತ್ತಾನಪಾದರು.

ವೀರಕರಾ -- ನದಿಯೊಂದು (ಮ. ಭೀ).

ವೀರಕೇತು -- ಪಂಚಾಲದ ಕ್ಷತ್ರಿಯನೊಬ್ಬ. ಇವನು ದ್ರೋಣನಿಂದ ಹತನಾದನು. (ಮ. ದ್ರೋ).

ವೀರಣಕ -- ಸರ್ಪವೊಂದು (ಮ. ಆ).

ವೀರದ್ಯುಮ್ನ -- ರಾಜರ್ಷಿ;ಭೂರಿದ್ಯುಮ್ನನ ತಂದೆ (ಮ. ಶಾಂ).

ವೀರಧನ್ವ --ತ್ರಿಗರ್ತದೇಶಾಧಿಪನಾದ ಕ್ಷತ್ರಿಯ; ದುರ್ಯೋಧನನ ಪಕ್ಷೀಯ. ಕುರುಕ್ಷೇತ್ರದಲ್ಲಿ ಹೋರಾಡಿ ಧೃಷ್ಟಕೇತುವಿನಿಂದ ಹತನಾದನು (ಮ.ದ್ರೋ).

ವೀರಧರ್ಮ -- ಪಾಂಡವಪಕ್ಷೀಯನಾದ ಕ್ಷತ್ರಿಯನೊಬ್ಬ (ಮ. ಉ).

ವೀರಬಾಹು -- ೧. ಚೇದಿ ದೇಶದ ರಾಜ; ಸುಬಾಹುವಿನ ತಂದೆ. ಈತನ ಅರಮನೆಯಲ್ಲೇ ದಮಯಂತಿಯು ವಾಸಮಾಡಿದಳು (ಮ. ವ).೨. ಧೃತರಾಷ್ಟ್ರನ ಮಗ. ಭೀಮನಿಂದ ಹತನಾದನು (ಮ.ಆ.,ಭೀ). ೩. ಹರಿಶ್ಚಂದ್ರನನ್ನು

ಕಾಶೀನಗರದಲ್ಲಿ ಕೊಂಡುಕೊಂಡ ಹೊಲೆಯ (ಮ. ವ).

ವೀರಭದ್ರ -- ೧. ರುದ್ರಾವತಾರ. ಇವನು ನರಸಿಂಹನ ಗರ್ವವನ್ನು ಅಡಗಿಸಿದನು. ದಾಕ್ಷಾಯಿಣಿಯು ದಕ್ಷಯಜ್ಞಕುಂಡದಲ್ಲಿ ದೇಹಬಿಟ್ಟ ಸಮಾಚಾರವನ್ನು ನಾರದನಿಂದ ಕೇಳಿ ಶಿವನು ಸಿಟ್ಟಿನಿಂದ, ತನ್ನ ಜಟೆಯಿಂದ ಒಂದು ಹಿಡಿ ಕೂದಲನ್ನು ಚೆಲ್ಲಲು, ಒಂದು ಭಯಂಕರ ಶಕ್ತಿಯು ಅಲ್ಲಿ ಜನಿಸಿತು. ಆ ಶಕ್ತಿಯೇ ವೀರಭದ್ರ. ಇವನು ಶಿವನ ಆಜ್ಞೆಯಂತೆ ದಕ್ಷನ ಯಜ್ಞಶಾಲೆಯನ್ನು ಹೊಕ್ಕು ಆತನ ತಲೆಯನ್ನು ಕತ್ತರಿಸಿ, ದಕ್ಷಿಣಾಗ್ನಿಯಲ್ಲಿ ಚೆಲ್ಲಿದನು. ಇವನು ಆ ಯಜ್ಞಶಾಲೆಯಲ್ಲಿ ಭಗನ ಕಣ್ಣುಗಳನ್ನು ಕಿತ್ತನು. ಸೂರ್ಯನ ಹಲ್ಲುಗಳನ್ನು ಉದುರಿಸಿದನು. ಚಂದ್ರನನ್ನು ಕಾಲಿನಿಂದ ಒದೆದು ಪುಡಿಪುಡಿ ಮಾಡಿದನು. ಇಂದ್ರನ ಶಾಲೆಯನ್ನು ಕೆಡೆದನು. ಯಮನ ದಂಡಾಯುಧವನ್ನು ಮುರಿದನು. ಅಗ್ನಿಯ ನಾಲಗೆಯನ್ನು ಕಿತ್ತು, ಕೈಗಳನ್ನು ಮುರಿದನು. ಮೂರು ಸಾವಿರದ ಮುನ್ನೂರು ಮಂದಿ ದೇವತೆಗಳನ್ನು ಸುಲಭವಾಗಿ ಕೊಂದು ವಿಷ್ಣುವಿನ ಬಿಲ್ಲನ್ನು ಮುರಿದು, ಆತನ ರುಂಡವನ್ನು ಕತ್ತರಿಸಿದನು. ಕೊನೆಗೆ ಚತುರ್ಮುಖನ ಪ್ರಾರ್ಥನೆಯಂತೆ ಎಲ್ಲರೂ ಬದುಕಿದರು (ಶಿವಪು). ನೋ--ದಕ್ಷ. ದಾಕ್ಷಾಯಿಣಿ (ಮ. ಶಾಂ). ಶಕ್ತಿದೇವಾಲಯಗಳಲ್ಲೆಲ್ಲಾ ವೀರಭದ್ರನ ಮಂದಿರಗಳಿವೆ.

೨. ವೀರಭದ್ರನೆಂಬ ದೈವವು ಕೆಲವು ಶಕ್ತಿದೇವಾಲಯಗಳಲ್ಲಿವೆ. ಇವನೂ ಕ್ಷೇತ್ರ ಪಾಲನಂತೆ ದೇವಿಯ ಭಕ್ತ.

ವೀರವರ್ಮ-- ಸಾರಸ್ವತ ನಗರದ ರಾಜ. ಇವನು ತನ್ನ ಮಗಳಾದ ಮಾಲಿನಿಯನ್ನು ಯಮನಿಗೆ ವಿವಾಹ ಮಾಡಿಕೊಟ್ಟಿದ್ದ. ಇವನಿಗೆ ಸುಬಲ, ಸುಲಭ, ಲೀಲ, ಕುವಲ, ಸರಲರೆಂಬ ಐವರು ಮಕ್ಕಳಿದ್ದರು. ಇವನು ಯುಧಿಷ್ಠಿರನ ಯಜ್ಞಾಶ್ವವನ್ನು ತಡೆದು, ಅರ್ಜುನನೊಂದಿಗೆ ಹೋರಾಡಿ, ಕೊನೆಗೆ ಶ್ರೀ ಕೃಷ್ಣಾರ್ಜುನರಿಗೆ ಶರಣಾಗಿ ಕಪ್ಪಕಾಣಿಕೆಗಳನ್ನಿತ್ತನು (ಜೈ. ಭಾ).

ವೀರಸೇನ -- ೧. ನಿಷಧದೇಶದ ರಾಜ. ಇವನು ನಳಮಹಾರಾಜನ ತಂದೆ (ಲಿಂಗಪು., ಮ. ವ). ೨. ಕ್ಷತ್ರಿಯನೊಬ್ಬ. ಇವನು ಕಳಿಂಗ ದೇಶದ ರಾಜನಾಗಿದ್ದ. ಇವನು ನಿಷಧ ದೇಶಾಧೀಶನೆಂದೂ ಕಥೆ ಇದೆ. ಈತನ ಮಗಳೇ ಮನೋರಮೆ. ಈಕೆಯ ಪತಿ ಇಕ್ಷ್ವಾಕು ವಂಶದ ಧ್ರುವಸಂಧಿ ಅಥವಾ ಪೌಷ್ಯರಾಜ. ನೋ --ಮನೋರಮೆ, ಪೌಷ್ಯ, ಉತ್ತಂಕ (ಮ. ಆ).

ವೀರಾ -- ೧. ಭಾರದ್ವಾಜನೆಂಬ ಅಗ್ನಿಯ ಪತ್ನಿ. ೨. ನದಿಯೊಂದು (ಮ. ಭೀ). ೩.ರಾಜಪುತ್ರಿ. ಈಕೆ ವೀರ್ಯಚಂದ್ರನ ಮಗಳು. ಈಕೆಯ ಪತಿಯು ಸುವರ್ಚಸ

ಅಥವಾ ಕರಂಧಮ. ಈಕೆಯ ಮಗನೇ ಅವಿಕ್ಷಿತ. ನೋ -- ಕರಂಧಮ, ಅವಿಕ್ಷಿತ.

ವೀರಿಣಿ -- ದಕ್ಷಪ್ರಜಾಪತಿಯ ಪತ್ನಿ. ಈಕೆ ಬ್ರಹ್ಮನ ವಾಮಪಾದಾಂಗುಷ್ಠದಿಂದ ಉತ್ಪನ್ನವಾದಳು. ಈಕೆ ವೀರಣ ಪ್ರಜಾಪತಿಯ ಮಗಳು. ಈಕೆಗೆ ಅಸಿಕ್ನೀ ಮೊದಲಾದ ಹೆಸರುಗಳಿವೆ. ಈಕೆಗೆ ಆರು ಮಂದಿ ಕನ್ಯೆಯರು ಹುಟ್ಟಿದ್ದರು (ವಿಷ್ಣುಪು).ಸತೀದೇವಿಯು ಈಕೆಯ ಮಗಳು (ಕಾಳಿಕಾಪು).

ವೃಕ--೧. ಪಾಂಚಾಲದ ಕ್ಷತ್ರಿಯನೊಬ್ಬ. ಇವನು ದ್ರೋಣನಿಂದ ಹತನಾದನು (ಮ. ದ್ರೋ).೨. ಗಾರ್ಗ್ಯಮುನಿಯ ಪತ್ನಿಗೂ ವೃಕಾ ಎಂಬ ಹೆಸರಿದೆ. ನೋ-- ಗಾರ್ಗ್ಯ. ೩. ವೃಕೆಯು ವಸುದೇವನ ಒಬ್ಬಳು ಪತ್ನಿ. ಅವಗಾಹನ ಮತ್ತು ನಂದಕರು ಈಕೆಯ ಮಕ್ಕಳು. ನೋ -- ವಸುದೇವ. ೪. ಒಬ್ಬ ರಾಕ್ಷಸ,. ೫. ಒಂದು ಅಗ್ನಿವಿಶೇಷ (ಮ. ವ)

ವೃಕರಥ-- ಕರ್ಣನ ಸಹೋದರನೊಬ್ಬ. ಇವನು ಭೀಮನಿಂದ ಹತನಾದನು (ಮ. ದ್ರೋ).

ವೃಕಸ್ಥಲ-- (ವೃಕಪ್ರಸ್ಥ)-- ಸಂಧಾನವನ್ನು ಬಯಸಿದ ಪಾಂಡವರು ಕೇಳಿದ ಐದು ಗ್ರಾಮಗಳಲ್ಲೊಂದು. ಇದು ಹಸ್ತಿನಾವತಿಯ ಸಮೀಪದ ಒಂದು ಗ್ರಾಮ (ಮ. ಉ).

ವೃಕೋದರ-- ಭೀಮಸೇನನ ಒಂದು ಹೆಸರು. ಇವನು ವೃಕದಂತೆ (ತೋಳ) ಉದರವುಳ್ಳವನಾಗಿದ್ದ. ಇವನ ಹೊಟ್ಟೆಯಲ್ಲಿ ವೃಕವೆಂಬ ಒಂದು ಅಗ್ನಿವಿಶೇಷವಿತ್ತು (ಮ. ಆ).

ವೃಕ್ಷವಾಸಿ -- ಯಕ್ಷನೊಬ್ಬ (ಮ. ಸ).

ವೃತ್ತ--ಸರ್ಪವೊಂದು (ಮ. ಆ).

ವೃತ್ರ -- ೧.ದನುವಿನ ಪುತ್ರನಾದ ರಾಕ್ಷಸನೊಬ್ಬ. ೨. ತ್ವಷ್ಟೃಪ್ರಜಾಪತಿಯಿಂದ ಇಂದ್ರನ ಶತ್ರುವಾಗಿ ಅಗ್ನಿಯಲ್ಲಿ ಉತ್ಪನ್ನವಾದ ಮಗ. ಈತನನ್ನು ಇಂದ್ರನು ವಧಿಸಿದ. ಕಾಲೇಯರೆಂಬ ರಾಕ್ಷಸರು ಕೃತಯುಗದಲ್ಲಿ ವೃತ್ರಾಸುರನನ್ನು ಆಶ್ರಯಿಸಿಕೊಂಡು ಇಂದ್ರಾದಿದೇವತೆಗಳ ಮೇಲೆ ದಂಡೆತ್ತಿ ಬಂದರು. ಆಗ ದೇವತೆಗಳು ಬ್ರಹ್ಮನ ಸೂಚನೆಯಂತೆ ದಧೀಚಿ ಮಹರ್ಷಿಯ ಬಳಿಗೆ ಹೋಗಿ ಆತನ ಶರೀರದ ಮೂಳೆಯನ್ನು ಯಾಚಿಸಿದರು. ಆಗ ದಧೀಚಿ ಮಹರ್ಷಿಯು ದೇವತೆಗಳಿಗೆ ಹಿತವಾಗುವುದಕ್ಕೋಸ್ಕರ ತನ್ನ ಶರೀರವನ್ನು ತ್ಯಜಿಸಿದನು. ದೇವತೆಗಳು ಅವನ ಮೂಳೆಯಿಂದ ದೇವತೆಗಳ ಬಡಗಿಯಾದ ತ್ವಷ್ಟೃವಿನ ಮೂಲಕ ಆರು ಮೂಲೆಗಳುಳ್ಳ ಭಯಂಕರವಾದ ಧ್ವನಿಯುಳ್ಳ ತೀಕ್ಷ್ಣವಾದ ವಜ್ರಾಯುಧವನ್ನು ನಿರ್ಮಾಣ ಮಾಡಿಕೊಂಡರು. ತ್ವಷ್ಟೃವು ಇದನ್ನು ಇಂದ್ರ

ಕೈಗಿತ್ತನು. ಇಂದ್ರನು ಕಾಲೇಯರಿಂದ ಕೂಡಿದ ವೃತ್ರನನ್ನು ಜಯಿಸುವುದಕ್ಕಾಗಿ ಮಹಾವಿಷ್ಣುವಿನ ಮತ್ತು ಬ್ರಹ್ಮರ್ಷಿಗಳ ತೇಜಸ್ಸನ್ನು ಪಡೆದು, ಸುವರ್ಣಮಾಲಿಕೆಯನ್ನು ಧರಿಸಿದ್ದ ಮಹಾಬಲಶಾಲಿಯಾದ ಆತನನ್ನು ವಜ್ರಾಯುಧದಿಂದ ಹೊಡೆದು ಕೊಂದನು. ನೋ-- ವಿಶ್ವರೂಪ.

ವಿಶ್ವರೂಪವನ್ನು ಇಂದ್ರನು ನಾಶಮಾಡಲು ತ್ವಷ್ಟೃನು ದೇವೇಂದ್ರನನ್ನು ಸಂಹರಿಸಲು ಸಮರ್ಥನಾದ ಇನ್ನೊಬ್ಬ ಮಗನನ್ನು ಅಗ್ನಿಕುಂಡದಿಂದ ಪಡೆದು, 'ನನ್ನ ತಪೋಬಲದಿಂದ ಅಭಿವೃದ್ಧಿಯನ್ನು ಪಡೆ' ಎಂದು ಆತನನ್ನು ಆಶೀರ್ವದಿಸಿದನು. ಬಳಿಕ ವೃತ್ರನು ಸ್ವರ್ಗಕ್ಕೆ ಹೋಗಿ ದೇವೇಂದ್ರನೊಡನೆ ಘೋರಯುದ್ಧವನ್ನು ಮಾಡಿ ಅವನನ್ನು ಹಿಡಿದುಕೊಂಡು ಗುಹೆಯಂತಿರುವ ತನ್ನ ಬಾಯಿಯಲ್ಲಿ ಹಾಕಿಕೊಂಡು ನುಂಗಿದನು. ದೇವತೆಗಳು ಆಗ ವೃತ್ರಾಸುರನಿಗೆ ಅತಿಘೋರವಾದ ಆಕಳಿಕೆಯನ್ನು ಹುಟ್ಟಿಸಿದರು. ಆಗ ದೇವೇಂದ್ರನು ತನ್ನ ದೇಹವನ್ನು ಮುದುರಿಕೊಂಡು ಆ ಅಸುರನ ಬಾಯಿಯಿಂದ ಹೊರಗೆ ಬಂದನು. ಅದು ಮೊದಲು ಪ್ರಾಣಿಗಳಿಗೆ ಆಕಳಿಕೆಯುಂಟಾಯಿತು. ಮುಂದೆ ಇಂದ್ರ-- ವೃತ್ತರು ಬಹುಕಾಲ ಹೋರಾಡಿದರು. ಆ ಯುದ್ಧದಲ್ಲಿ ದೇವೇಂದ್ರನು ದೇವತೆಗಳೊಡನೆ ಪಲಾಯನವನ್ನು ಕೈಗೊಂಡನು. ಮುಂದೆ ಇಂದ್ರ -- ವೃತ್ರರು ಸ್ನೇಹ ಮಾಡಿಕೊಂಡರು. ಇಂದ್ರನಿಗೆ ಬಹುಕಾಲ ವೃತ್ರನನ್ನು ಸಂಹರಿಸುವುದಕ್ಕೆ ಆಗದೆ ಹೋಯಿತು. ಒಂದು ದಿನ ಸಾಯಂಕಾಲ ಇವರಿಬ್ಬರೂ ಜೊತೆಯಾಗಿ ಸಮುದ್ರತೀರದಲ್ಲಿ ಸಂಚರಿಸುತ್ತಿರುವಾಗ ದೇವೇಂದ್ರನು ಸರ್ವಾತ್ಮಕನಾದ ವಾಸುದೇವನನ್ನು ಮನಸ್ಸಿನಲ್ಲಿ ನೆನೆದು ಒಂದು ನೊರೆಯ ಸಮೂಹವನ್ನು ಸಮುದ್ರದ ನೀರಿನಿಂದ ಎತ್ತಿ ವೃತ್ರನ ಮೇಲೆ ಎಸೆದನು. ಜಗನ್ಮಯನಾದ ನಾರಾಯಣನು ಅದರಲ್ಲಿ ಪ್ರವೇಶಿಸಿ ವೃತ್ರನನ್ನು ಸಂಹರಿಸಿದನು.

ವೃತ್ರನಿಗೆ ಪೂರ್ವಜನ್ಮದಲ್ಲಿ ಚಿತ್ರಕೇತುವೆಂಬ ಹೆಸರಿತ್ತು. ನೋ-- ಚಿತ್ರಕೇತು (ಮ. ಉ., ವ., ಶಾಂ. ಅನು, ಭಾಗ., ಮಾರ್ಕಂ, ಪು.. ರಾಮಾ. ಉತ್ತರ., ಪದ್ಮಪು., ದೇವೀಭಾ., ಸ್ಕಾಂ. ಪು).

ಇಂದ್ರ -- ವೃತ್ರರೆಂದರೆ ಆತ್ಮ ಮತ್ತು ಅಹಂಕಾರವೆಂದು ಅಂತರಾರ್ಥ. ಅಹಂಕಾರವು ಕ್ರಮವಾಗಿ ಸ್ಥೂಲಶರೀರವನ್ನು ಆತ್ಮವೆಂದೆಣಿಸಿ ಕೊನೆಗೆ ವಿವೇಕ ಜ್ಞಾನವನ್ನು ಹೊಂದಿ ಶರೀರವು ಆತ್ಮವಲ್ಲವೆಂದು ತಿಳಿದು, ಪಂಚಭೂತಗಳನ್ನು ಆತ್ಮವೆಂದು ಭಾವಿಸಿ ಅದನ್ನು ಕಳೆದುಕೊಂಡ ಮೇಲೆ ಆತ್ಮದ ನಿಜತತ್ತ್ವ ತಿಳಿದು ಗುರುವಿನ ಉಪದೇಶದಿಂದ ಅಹಂಕಾರವನ್ನು ಕಳೆದುಕೊಂಡು ಬ್ರಹ್ಮಜ್ಞಾನವು

ಗುರುವಿನಿಂದ ಉಪದೇಶ ಹೊಂದಿತು (ಮ. ಅಶ್ವ).

ವೃದ್ಧಕನ್ಯಾ -- ಕುಣಿಗಾರ್ಗ್ಯಋಷಿಯ ಮಗಳು. ಈಕೆ ಗಾಲವ ಋಷಿಯ ಪುತ್ರನಾದ ಶೃಂಗವಂತನ ಪತ್ನಿ. ನೋ --ಕುಣಿಗಾರ್ಗ್ಯ (ಮ. ಶ).

ವೃದ್ಧಕ್ಷತ್ರ -- ಸಿಂಧುದೇಶಾಧಿಪನಾದ ಜಯದ್ರಥನ ತಂದೆ. ಸಾಯಂಸಂಧ್ಯೆಯಲ್ಲಿ ಆಸಕ್ತನಾದ ಈತನ ಬೊಗಸೆಯಲ್ಲಿ ಅರ್ಜುನನಿಂದ ಕತ್ತರಿಸಲ್ಪಟ್ಟ ಜಯದ್ರಥನ ತಲೆಯು ಬಂದು ಬೀಳಲು ಈತನು ಮೊದಲು ತಾನು ಪಡೆದ ವರದಂತೆ ಮೃತನಾದನು. ನೋ --ಜಯದ್ರಥ (ಮ. ದ್ರೋ).

ವೃದ್ಧಗಾರ್ಗ್ಯ-- ಒಬ್ಬ ಬ್ರಹ್ಮರ್ಷಿ (ಮ. ಅನು).

ವೃಂದಾವನ --ಮಥುರೆಯಿಂದ ಆರು ಮೈಲು ಉತ್ತರಕ್ಕಿದೆ. ಈ ಸ್ಥಳವು ಶ್ರೀಕೃಷ್ಣನ ಬಾಲಲೀಲೆಗಳ ಪುಣ್ಯಭೂಮಿ. ಕಾಳಿಯಮರ್ದನ, ರಾಸಕ್ರೀಡೆ, ಗೋಪಿಯರ ವಸ್ತ್ರಾಪಹರಣದ ಸ್ಥಳ ಮುಂತಾದ ನೋಡತಕ್ಕ ಸ್ಥಳಗಳಿವೆ. ಇಲ್ಲಿ ವಜ್ರಮಹಾರಾಜರು ಕಟ್ಟಿಸಿದ ಗಾಜಿನ ರಾಧೇಶ್ಯಾಮ ಮಂದಿರವಿದೆ (ಕ್ಷೇತ್ರದ).

ವೃಂದೆ-- ರಾಕ್ಷಸ ಸ್ತ್ರೀ; ಮಹಾಪತಿವ್ರತೆ. ಈಕೆ ಜಲಂಧರನ ಪತ್ನಿ; ಕಾಲನೇಮಿ ರಾಕ್ಷಸನ ಮಗಳು. ಒಮ್ಮೆ ಜಲಂಧರನು ಶಿವನ ವೇಷಧರಿಸಿ ಪಾರ್ವತಿಯ ಮಾನಭಂಗಪಡಿಸಲು ಯತ್ನಿಸಿದನು. ಇದನ್ನು ತಿಳಿದ ಪಾರ್ವತಿಯು ವಿಷ್ಣುವಿನೊಡನೆ 'ವೃಂದೆಯ ಪಾತಿವ್ರತ್ಯವನ್ನು ಕೆಡಿಸು' ಎಂದು ಸೂಚಿಸಿದಳು. ಶಿವ ಜಲಂಧರರಿಗೆ ಯುದ್ಧ ನಡೆಯುತ್ತಿದ್ದಾಗ ವೃಂದೆಯ ಪಾತಿವ್ರತ್ಯದ ಪ್ರಭಾವದಿಂದ ಅಜಿಂಕ್ಯನಾಗಿದ್ದ ಜಲಂಧರನನ್ನು ಗೆಲ್ಲುವುದಕ್ಕಾಗಿ ಶಿವನು ವೃಂದೆಗೆ ಒಂದು ಸ್ವಪ್ನವನ್ನುಂಟುಮಾಡಿದನು. ಇದರಿಂದ ವ್ಯಸನಹೊಂದಿದ ವೃಂದೆಯು ಅರಣ್ಯದಲ್ಲಿ ಅಲೆಯುತ್ತಿದ್ದಾಗ ವಿಷ್ಣುವು ಜಲಂಧರನ ರೂಪದಿಂದ ಬಂದು ವೃಂದೆಯನ್ನು ಕೆಡಿಸಲು ಆಕೆಯು ವಿಷ್ಣುವಿನ ಈ ಕುಕಾರ್ಯವನ್ನು ತಿಳಿದು 'ನೀನು ಭಾರ್ಯಾವಿಯೋಗವನ್ನನುಭವಿಸು' ಎಂದು ಶಾಪ ಕೊಟ್ಟು ಚಿತೆಯನ್ನೇರಿದಳು. ವೃಂದೆಯು ಕೌಂಚನ ಮಗಳು. ನೋ -- ಜಲಂಧರ, ಮುದ್ಗಲ.

ದುಃಸ್ವಪ್ನದಿಂದ ಮನಸ್ಸು ಚಂಚಲಹೊಂದಿದ ವೃಂದೆಯು ಉಪವನದಲ್ಲಿ ಸಂಚರಿಸುತ್ತಿರುವಾಗ ಇಬ್ಬರು ಭಯಂಕರಾಕಾರದ ರಾಕ್ಷಸರನ್ನು ಕಂಡು ದಿಕ್ಕುದಿಕ್ಕಿಗೆ ಓಡಲು ಆ ರಾಕ್ಷಸರೂ ಈಕೆಯನ್ನೇ ಬೆನ್ನುಹತ್ತಿದರು. ದಾರಿಯಲ್ಲಿ ವೃಂದೆಗೆ ಶಿಷ್ಯರಿಂದ ಕೂಡಿದ ಒಬ್ಬ ತಪಸ್ವಿಯು ಕಾಣಿಸಲು ಆತನ ಆಶ್ರಯವನ್ನು ಹೊಂದಿದಳು. ತಪಸ್ವಿಯ ದೃಷ್ಟಿಯಿಂದ ಇಬ್ಬರು ರಾಕ್ಷಸರೂ

ಬೂದಿಯಾದರು. ಆಗ ಮುನಿಯಲ್ಲಿ ವಿಶ್ವಾಸಹೊಂದಿದ ವೃಂದೆಯು ಶಂಕರನೊಡನೆ ಯುದ್ಧಮಾಡುತ್ತಿದ್ದ ತನ್ನ ಪತಿಯ ವಿಚಾರ ಕೇಳಲು, ಮುನಿಯು ಮೇಲೆ ನೋಡಿದಾಗ, ಎರಡು ಕಪಿಗಳು ಅಲ್ಲಿಗೆ ಬಂದು ನಿಂತವು. ಮುನಿಯ ಅಪ್ಪಣೆಯಿಂದ ಆ ಕಪಿಗಳು ಯುದ್ಧರಂಗದಿಂದ ಜಲಂಧರನ ರುಂಡ ಮುಂಡ ಪ್ರತ್ಯೇಕವಾದ ಶರೀರವನ್ನು ವೃಂದೆಯ ಮುಂದಿಡಲು ಆಕೆಯು ಪತಿಯನ್ನು ಬದುಕಿಸುವಂತೆ ಪ್ರಾರ್ಥಿಸಿದಳು. ಮುನಿಯು ಆಕೆಯ ಮನೋರಥವನ್ನು ಸಿದ್ಧಿಗೊಳಿಸಿ ಅಂತರ್ಹಿತನಾದನು. ಮುಂದೆ ಬದುಕಿದವನು ತನ್ನ ಪತಿಯಲ್ಲವೆಂದೂ ಇವೆಲ್ಲಾ ಶ್ರೀಮನ್ನಾರಾಯಣನ ನಾಟಕವೆಂದೂ ತಿಳಿದು ವೃಂದೆಯು ಕೋಪದಿಂದ 'ಪರಸ್ತ್ರೀಗಮನ ಮಾಡಿದ ಹರಿಯೇ, ನಿನ್ನ ಪಾಪದ ಫಲವನ್ನು ನೀನು ಅನುಭವಿಸು. ನೀನು ನನ್ನನ್ನು ರಾಕ್ಷಸರಿಂದ ಮೋಸಗೊಳಿಸಿದಂತೆ ನಿನ್ನ ಪತ್ನಿಯನ್ನೂ ಮೋಸಗೊಳಿಸಿ ಕದ್ದೊಯ್ಯಲಿ. ನೀನು ನನ್ನ ಪತಿಯಂತೆ ವಿಯೋಗವ್ಯಥೆಯನ್ನನುಭವಿಸು. ವಾನರರು ನಿನಗೆ ಸಹಾಯಕರಾಗಲಿ' ಎಂದು ಅಗ್ನಿಪ್ರವೇಶಮಾಡಿದಳು. ಇದು ಮುದ್ಗಲಮುನಿಯು ದಶರಥನಿಗೆ ಹೇಳಿದ ಕಥೆ (ಅನು. ರಾ).

ವೃಷಕ-- ಗಾಂಧಾರರಾಜ ಸುಬಲನ ಮಗ. ಇವನು ಶಕುನಿಯ ಸಹೋದರ. ಇವನು ಇರಾವಂತನೊಡನೆ ಯುದ್ಧಮಾಡಿ ಅರ್ಜುನನಿಂದ ಮೃತನಾದನು. (ಮ. ಅ. ಉ. ಭೀ. ದ್ರೋ. ಕ)

ವೃಷಕೇತು-- ಕರ್ಣನ ಮಗ. ಕರ್ಣನು ಮಡಿದ ತರುವಾಯ ಇವನು ಪಾಂಡವರನ್ನು ಸೇರಿದನು. ಮುಂದೆ ಪಾಂಡವರು ಮಾಡಿದ ಅಶ್ವಮೇಧಯಾಗದ ಕಾಲದಲ್ಲಿ ಇವನು ಅರ್ಜುನನ ಜೊತೆಯಲ್ಲೇ ಅಶ್ವರಕ್ಷಕನಾಗಿ ಹೋಗಿ ಸುಧನ್ವ, ಬಭ್ರುವಾಹನರೊಡನೆ ಯುದ್ಧಮಾಡಿ ಅರ್ಜುನನ ಪ್ರೀತಿಗೆ ಪಾತ್ರನಾದನು. (ಜೈ. ಭಾ).

ವೃಷದರ್ಭ (ವೃಷಾದರ್ಭಿ)-- ೧. ಕ್ಷತ್ರಿಯನಾದ ಸೇದುಕನ ಸಹೋದರ. ೨.ಕಾಶೀರಾಜ. ಗಿಡುಗನಿಂದ ಭೀತವಾದ ಪಾರಿವಾಳದ ರಕ್ಷಣೆಗೆ ತನ್ನ ಮಾಂಸವನ್ನು ಕಿತ್ತು ಗಿಡುಗನಿಗೆ ಕೊಟ್ಟನು. ಇವನು ಚಂದ್ರವಂಶದ ಉಶೀನರ ರಾಜನ ಮೊಮ್ಮಗ; ಶಿಬಿಯ ಮಗ. ಈತನ ಮಗ ಅನಿಲ. ವೃಷದರ್ಭನಿಗೆ ಶಿಬಿಯೆಂಬ ಹೆಸರೂ ಇದೆ. ಇಂದ್ರನೇ ಗಿಡುಗ; ಅಗ್ನಿಯೇ ಪಾರಿವಾಳ (ಮ. ಅನು. ವ., ಭಾಗ).

ವೃಷಪರ್ವ-- ೧. ಇವನೊಬ್ಬ ರಾಕ್ಷಸರಾಜ; ಈತನ ತಂದೆ ಕಶ್ಯಪಮುನಿ; ತಾಯಿ ದನು. ಈತನ ಮಗಳು ಯಯಾತಿಯ ಪತ್ನಿಯಾದ ಶರ್ಮಿಷ್ಠೆ. ಇನ್ನೊಬ್ಬಳು ಚಂದ್ರಾ. ಶುಕ್ರಾಚಾರ್ಯನು ಈತನ ಪುರೋಹಿತ. ನೋ--ಶರ್ಮಿಷ್ಠೆ, ಯಯಾತಿ, ದೇವಯಾನಿ, ಶುಕ್ರಾಚಾರ್ಯ. ೨. ನರನಾರಾಯಣಾಶ್ರಮದಲ್ಲಿದ್ದ ಒಬ್ಬ ರಾಜರ್ಷಿ (ಭಾಗ., ಮ. ಆ., ಮತ್ಸ್ಯಪು).

ವೃಷಭ-- ೧. ನಂದಿ; ಶಿವನ ವಾಹನ. ಸಕಲ ಬ್ರಹ್ಮಾಂಡದ ಭಾರವನ್ನು ಧರಿಸಿದ ತನ್ನನ್ನು ಧರಿಸುವವರಾರೆಂದು ಒಮ್ಮೆ ಪರಶಿವನು ತನ್ನ ಹೃದಯದೊಳಗಿನ ಧರ್ಮವನ್ನು ನೆನೆಯಲು ಆ ಸದ್ಧರ್ಮವೇ ತೇಜೋಮೂರ್ತಿಯಾಗಿ ಅಡಿಗೆರಗಿ ನಿಂತಿರಲು ತನಗೆ ಭಿನ್ನವಿಲ್ಲದುದರಿಂದ ಶಿವನು ಇದನ್ನು ವಾಹನವನ್ನಾಗಿ ಮಾಡಿಕೊಂಡನು. ಈ ಸದ್ಧರ್ಮಮೂರ್ತಿಯೇ ಆದಿ ವೃಷಭನು. ಇವನಿಗೆ ವೇದಗಳೇ ನಾಲ್ಕು ಪಾದಗಳು; ಷಟ್ ಶಾಸ್ತ್ರಗಳೇ ಶರೀರವು; ನಾದಬಿಂದು ಕಳೆಗಳೇ ತನುತ್ರಯವು; ಆದಿ- ಅನಾದಿಗಳೆ ಎರಡು ಕೊಂಬುಗಳು; ಪ್ರಣವವೇ ಶಿರಸ್ಸು; ಪಂಚಾಕ್ಷರಿಯೇ ಮುಖ; ವೇದಾಂತವೇ ಹಿಣಿಲು ; ತೀರ್ಥ ಸ್ಮೃತಿ ಮಂತ್ರಗಳೇ ಕೂದಲು; ಶಿವಾಗಮಗಳೇ ಪ್ರಾಣವು. ಶಿವನು ಉಮೆಯೊಡನೆ ಈ ವೃಷಭವನ್ನು ಏರಿದುದಕ್ಕೆ 'ವೃಷಭವಾಹನಲೀಲೆ' ಎನ್ನುತ್ತಾರೆ.

ಇವನನ್ನು ನಂದಿಕೇಶ್ವರನೆನ್ನುತ್ತಾರೆ. ಇವನು ಶಿವನ ಅರಮನೆಯ ದ್ವಾರಪಾಲಕ. ವಿಮಾನದಲ್ಲಿ ಹೋಗುತ್ತಿದ್ದ ರಾವಣನು ಈತನನ್ನು ಕಂಡು ಕಪಿಯೆಂದು ಹಾಸ್ಯ ಮಾಡಿದುದರಿಂದ ನಂದಿಕೇಶನು ರಾವಣನಿಗೆ 'ನಿನ್ನ ಸಂಪತ್ತೆಲ್ಲಾ ಕಪಿಯಿಂದಲೇ ನಾಶವಾಗಲಿ' ಎಂದು ಶಾಪವಿತ್ತನು. ಶಿವನ ಮತ್ತು ಕರ್ಣನ ಮಗನಾದ ವೃಷಕೇತುವಿನ ರಥದ ಧ್ವಜದಲ್ಲಿ ಈತನ ಕುರುಹಿತ್ತು. ೨. ಋಷಭವೆಂಬ ಪರ್ವತ.

ವೃಷಭಕಾಚಲ-- ಗಾಂಧಾರ ದೇಶದ ರಾಜಪುತ್ರನೊಬ್ಬ; ಇವನು ಶಕುನಿಯ ಸಹೋದರ. ಭಗದತ್ತನ ಮರಣವಾದುದನ್ನು ಕಂಡು ಕುರುಸೇನೆಯು ಓಡತೊಡಗಲು ಶಕುನಿ ಮತ್ತು ಈತನು ಅರ್ಜುನನೊಡನೆ ಕಾದುತ್ತಿರಲು ಈತನು ಅರ್ಜುನನಿಂದ ಮರಣ ಹೊಂದಿದನು.

ವೃಷಭಾಚಲ -- ಇದು ಕೃತಯುಗದ ಹೆಸರು. ಇದಕ್ಕೆ ತ್ರೇತಾಯುಗದಲ್ಲಿ ಅಂಜನಾಚಲ ಎಂದೂ, ದ್ವಾಪರದಲ್ಲಿ ಶೇಷಾದ್ರಿಯೆಂದೂ, ಕಲಿಯುಗದಲ್ಲಿ ಇದನ್ನೇ ವೆಂಕಟಾಚಲ ಎಂದೂ ಹೇಳುತ್ತಾರೆ. ವೃಷಭಾಸುರನು ಮೊದಲು ನರಸಿಂಹನ ಭಕ್ತನಾಗಿದ್ದು ಒಮ್ಮೆ ದುರ್ಬುದ್ಧಿಯಿಂದ ಹರಿಯ ಶಕ್ತಿಯನ್ನು ಪರೀಕ್ಷಿಸಲು ಅವನನ್ನೇ ಕೇಳಿಕೊಳ್ಳಲು ಶ್ರೀನಿವಾಸನು ತನ್ನ ಚಕ್ರಾಯುಧದಿಂದ

ಆತನ ಕೊರಳನ್ನು ಕತ್ತರಿಸಿದನು. ರಾಕ್ಷಸನ ಕೊನೆಗಾಲದ ಕೋರಿಕೆಯಂತೆ ಈ ಪರ್ವತಕ್ಕೆ ಮುಂದೆ ವೃಷಭಾಚಲವೆಂದು ಹೆಸರಾಯಿತು(ವಂ. ಮ).

ವೃಷಮುನಿ-- ಋಷಿಯೊಬ್ಬ; ಇಕ್ಷ್ವಾಕುವಂಶದ ತ್ರೈವೃಷ್ಣ-- ತ್ರಯರುಣರಾಜರ ಪುರೋಹಿತನೀತ. ಈತನ ತಂದೆಯ ಹೆಸರು ಜನ. ಇದರಿಂದ ಇವನನ್ನು ವೃಷಜನ ಎಂದು ಕರೆಯುತ್ತಿದ್ದರು. ಇವನು ಮಹಾತೇಜಸ್ವಿ. ಇವನು ಸಾಮಗಾನದಲ್ಲಿ ನಿಷ್ಣಾತನಾಗಿದ್ದಂತೆ ಅಥರ್ವಣ ವೇದದಲ್ಲೂ ನಿಪುಣನಾಗಿದ್ದನು. ನೋ-- ತ್ರೈವೃಷ್ಣ, ತ್ರಯರುಣ (ಋ)

ವೃಷಸೇನ-- ಕರ್ಣನ ಒಬ್ಬ ಮಗ. ಇವನು ಮಹಾರಥ. ದ್ರೋಣನ ಸೇನಾಧಿಪತ್ಯದ ಕಾಲದಲ್ಲಿ ಇವನು ಅಭಿಮನ್ಯುವಿನಿಂದ ಸೋತನು. ದುಶ್ಯಾಸನನ ವಧೆಯಾದ ಮೇಲೆ ಕುರುಸೇನೆಯಲ್ಲಿ ಭೀಮನನ್ನು ಇದಿರಿಸುವವರಿಲ್ಲದಿದ್ದಾಗ ವೃಷಸೇನನು ಆವನನ್ನು ಪರಾಜಯಗೊಳಿಸಿದನು. ಮುಂದೆ ಅರ್ಜುನನು ಇವನನ್ನು ಸಂಹರಿಸಿದನು (ಮ. ಉ., ದ್ರೋ. ಕ).

ವೃಷಾಕಪಿ-- ಭಗವಂತನಾದ ನಾರಾಯಣನ ಒಂದು ಹೆಸರು (ಮ. ಶಾಂ).

ವೃಷ್ಣಿ-- ೧. ಚಂದ್ರವಂಶದ ಕಾರ್ತವೀರ್ಯಾರ್ಜುನನ ಮೊಮ್ಮಗ. ಮಧುರಾಜನ ಮಗ (ವಾಯುಪು) ಶ್ರೀಕೃಷ್ಣನ ವಂಶದ ಮೂಲಪುರುಷನೊಬ್ಬ. ಇವನಿಗೆ ಸುಮಿತ್ರ ಮತ್ತು ಯುಧಾಜಿತರೆಂಬ ಇಬ್ಬರು ಮಕ್ಕಳಿದ್ದರು.

ಯದುವಂಶದ ಮಧುವಿಗೆ ವೃಷ್ಣಿ ಮೊದಲಾದ ನೂರು ಮಂದಿ ಮಕ್ಕಳಿದ್ದರು. ವೃಷ್ಣಿಯಿಂದಲೇ ಈ ಕುಲಕ್ಕೆ ವೃಷ್ಣಿವಂಶವೆಂದು ಹೆಸರಾಯಿತು. (ವಿಷ್ಣುಪು. ಭಾ)

ವೇಗವಂತ -- ೧. ಒಂದು ಸರ್ಪ (ಮ.ಆ) ೨. ಧನುಪುತ್ರನಾದ ರಾಕ್ಷಸ; ಸಾಲ್ವರಾಜನ ಪಕ್ಷದಲ್ಲಿದ್ದ ಈತನನ್ನು ಶ್ರೀಕೃಷ್ಣನ ಪುತ್ರನಾದ ಸಾಂಬನು ಕೊಂದನು. (ವ.ಆ.ವ.ಭಾಗ)

ವೇಣಿ -- ಕೃಷ್ಣವೇಣಿ ನದಿಯ ಸಂಕ್ಷೇಪವಾದ ಹೆಸರು.

ವೇಣೀಮಾಧವ-- ಪ್ರಯಾಗಕ್ಷೇತ್ರದಲ್ಲಿದ್ದ ವಿಷ್ಣುಮೂರ್ತಿ.

ವೇಣುಧಾರಿ - ಒಬ್ಬ ಯಾದವ, ಇವನು ಆಶ್ಮಕ ದೇಶಾಧಿಪತಿ. ಕರ್ಣನು ದಿಗ್ವಿಜಯಕ್ಕೆ ಹೋದಾಗ ಇವನನ್ನು ಜಯಿಸಿದನು.

ಕರ್ಣನು ವೇಣುಧಾರಿಯ ಮಗನಾದ ನೀಲನನ್ನು ದಿಗ್ವಿಜಯ ಕಾಲದಲ್ಲಿ ಜಯಿಸಿದನು. (ಮ. ವ., ಸ., ಹರಿ).

ಈತನು ವರಿಸಬೇಕೆಂದಿದ್ದ ತರುಣಿಯನ್ನು ಬಭ್ರು ಎಂಬ ಯಾದವನಿಗಾಗಿ ಕೃಷ್ಣನು ಬಲಾತ್ಕಾರದಿಂದ ಸೆಳೆದು ತಂದನು (ಮ. ಸ). ಈತನ ರಾಜ್ಯವನ್ನು ತಾನು ವಶಪಡಿಸಿಕೊಂಡನು.

ವೇಣುಮಂಡಲ -- ಕ್ರೌಂಚದ್ವೀಪದ ಒಂದು ಪ್ರಾಂತ (ಮ. ಭೀ).

ವೇತ್ರಕೀಯಗೃಹ -- ಏಕಚಕ್ರನಗರದ ಒಂದು ಸ್ಥಳವಿಶೇಷ (ಮ. ಆ).

ವೇತ್ರವತಿ -- ಒಂದು ನದಿ. ಇದಕ್ಕೆ ಬೆಟ್ವ (BETWA) ಎಂದು ಈಗಿನ ಹೆಸರು. ಇದು ಮಾಳವದ ಭೋಪಾಲ ರಾಜ್ಯದಲ್ಲಿದೆ. ಇದು ಯಮುನಾನದಿಗೆ ಸೇರುತ್ತದೆ (ಮ. ಭೀ., ಮತ್ಸ್ಯಪು., ಪದ್ಮಪು).

ವೇದ(ಬೈದ)-೧.ಧೌಮ್ಯಋಷಿಯ ಶಿಷ್ಯನೊಬ್ಬ (ಮ.ಆ). ೨.ಅಪೌರುಷೇಯವಾದ ಗ್ರಂಥಗಳು. ವೇದ. ಇದು ವೇದವ್ಯಾಸರಿಂದ ಋಗ್ವೇದ, ಯಜುರ್ವೇದ, ಸಾಮವೇದ. ಅಥರ್ವವೇದ ಎಂದು ನಾಲ್ಕಾಗಿ ವಿಭಾಗಿಸಲ್ಪಟ್ಟಿದೆ. ಮಧುಕೈಟಭರು ವೇದಗಳನ್ನು ಅಪಹಾರ ಮಾಡಿದುದರಿಂದ ಇವರು ವಿಷ್ಣುವಿನಿಂದ ಕೊಲ್ಲಲ್ಪಟ್ಟರು. (ಭಾಗ., ವಾಯುಪು., ವಿಷ್ಣುಪು., ಮ. ಆ., ಶಾಂ. ಅನು).

ವೇದವತಿ -- ಕುಶಧ್ವಜನ ಮಗಳು ಈಕೆಯು ಬೃಹಸ್ಪತಿಯ ಮೊಮ್ಮಗಳು. ಶಂಖನೆಂಬ ದೈತ್ಯನು ಈಕೆಯನ್ನು ತನಗೆ ವಿವಾಹ ಮಾಡಿಕೊಡಬೇಕೆಂದು ಕುಶಧ್ವಜನೊಡನೆ ಕೇಳಲು ಅವನು ಶ್ರೀಮನ್ನಾರಾಯಣನಿಂದಲ್ಲದೆ ಈಕೆಯನ್ನು ಉಳಿದವರಿಗೆ ಕೊಡಲಾರೆನೆನ್ನಲು ಶಂಖನು ಕೋಪಗೊಂಡು ಯುದ್ಧಮಾಡಿ ಕುಶಧ್ವಜನನ್ನು ಕೊಂದನು. ಇದರಿಂದ ದುಃಖಿಗೊಂಡು ಈಕೆಯು ಕಾಡಿಗೆ ಹೋಗಿ ಶ್ರೀಮನ್ನಾರಾಯಣನನ್ನು ಕುರಿತು ತಪಸ್ಸು ಮಾಡುತ್ತಿದ್ದಾಗ ದಿಗ್ವಿಜಯಕ್ಕೆ ಹೋಗಿದ್ದ ರಾವಣನು ಈಕೆಯನ್ನು ಕಂಡು ಬಲಾತ್ಕರಿಸಹೋಗಲು ಈಕೆಯು ಕೋಪಗೊಂಡು -- 'ಇನ್ನೊಂದು ಜನ್ಮದಲ್ಲಿ ನಾನಾಗಿಯೇ ಲಂಕೆಗೆ ಬಂದು ನಿನ್ನನ್ನು ನಾಶಮಾಡುವೆನು' ಎಂದು ಅಗ್ನಿಪ್ರವೇಶ ಮಾಡಿದಳು. ಇವಳೇ ಮುಂದೆ ಸೀತಾದೇವಿಯಾಗಿ ಜನಿಸಿದಳು. ದೇವೀಭಾಗವತದಲ್ಲಿ ಸೀತೆಯು ಲಂಕೆಯ ಒಂದು ಸರೋವರದ ಕಮಲದಲ್ಲಿ ಜನಿಸಿದಳೆಂದೂ ಜೋಯಿಸರು ಇದು ಉತ್ಪಾತಸೂಚಕವೆನ್ನಲು ರಾವಣನು ಒಂದು ಪೆಟ್ಟಿಗೆಯಲ್ಲಿಟ್ಟು ಆ ಮಗುವನ್ನು ಸಮುದ್ರದಲ್ಲಿ ತೇಲಿಬಿಟ್ಟನೆಂದೂ ಹೇಳಿದೆ. ನೋ -- ಪದ್ಮಾಕ್ಷ. (ದೇವೀಭಾ., ರಾಮ., ಉತ್ತರ).

ಮಹಾಲಕ್ಷ್ಮಿಯು ಪದ್ಮಾಕ್ಷನ ಯಜ್ಞಕುಂಡದ ಬಳಿ ಕುಳಿತಿದ್ದಾಗ ಒಮ್ಮೆ ಪುಷ್ಪಕವಿಮಾನದಲ್ಲಿ ಬರುತ್ತಿದ್ದ ರಾವಣನು ಈಕೆಯನ್ನು ಕಂಡು ಮೋಹಿಸಿ

ಹತ್ತಿರ ಬರುವಾಗ ಲಕ್ಷ್ಮಿಯು ಆ ಯಜ್ಞಕುಂಡಕ್ಕೆ ಹಾರಿ ಅದೃಶ್ಯಳಾದಳು. ರಾವಣನು ಆಕೆಯ ಮೇಲಿನ ಮೋಹದಿಂದ ಯಜ್ಞಕುಂಡವನ್ನು ಪರಿಶೋಧಿಸಿದಾಗ ಕೇವಲ ಐದು ರತ್ನಗಳು ಮಾತ್ರ ದೊರಕಿದವು. ಅವನ್ನು ಆ ರಾಕ್ಷಸರಾಜನು ಪೆಟ್ಟಿಗೆಯೊಳಗಿಟ್ಟು ಲಂಕೆಗೆ ಕೊಂಡುಹೋಗಿ ಅದನ್ನು ದೇವಾಲಯದಲ್ಲಿಟ್ಟನು. ಮುಂದೆ ಮಂಡೋದರಿಯೊಡನೆ ಆ ಪೆಟ್ಟಿಗೆಯ ಬಾಯಿ ತೆರೆದು ಒಳಗೆ ನೋಡಿದಾಗ, ಒಂದು ಸುಂದರ ಸ್ತ್ರೀ ರತ್ನವಿತ್ತು. ಅದು ಹಿಂದೆ ಅನೇಕ ರಾಜರ ಮರಣಕ್ಕೆ ಕಾರಣವಾದುದರಿಂದ (ನೋ-- ಪದ್ಮಾಕ್ಷ) ಅದನ್ನು ದೂರ ಬಿಟ್ಟು ಬರಬೇಕೆನ್ನಲು, ಮಂಡೋದರಿ ಅದನ್ನು ನೆಲದಲ್ಲಿ ಹೂಳಿ ಬನ್ನಿರೆಂದಳು. ಪುಷ್ಪಕವಿಮಾನದಲ್ಲಿ ಆ ಕನ್ಯೆಯನ್ನೊಯ್ಯುತ್ತಿರುವಾಗ ಆ ಕನ್ಯೆಯು -- ರಾವಣನೇ, ಈಗ ನಾನು ಹೋಗುವನೆಂದು ಸಂತೋಷಪಡಬೇಡ. ಮುಂದೆ ನಾನೇ ಇಲ್ಲಿಗೆ ಬಂದು ರಾಕ್ಷಸಕುಲವನ್ನು ಧ್ವಂಸಮಾಡಿ ನಿನ್ನ ಶಿರಸ್ಸನ್ನು ಚೆಂಡಾಡಿಹೋಗುವೆನು. ಮತ್ತೊಂದು ಸಲ ಇಲ್ಲಿಗೆ ಬಂದು ನಿಕುಂಭನ ಮಗನಾದ ಪೌಂಡ್ರನನ್ನೂ, ಶತಮುಖನಾದ ರಾವಣನನ್ನೂ ನಾಶಮಾಡುವೆನು. ನಾಲ್ಕನೇ ಸಲ ಬಂದಾಗ ಕುಂಭಕರ್ಣನ ಮಗನಾದ ಮೂಲಕಾಸುರನನ್ನೂ ನಾಶಮಾಡುವೆನು' ಎಂದು ನುಡಿದಳು. ಇದನ್ನು ಕೇಳಿದ ರಾವಣನು ಆ ಶಿಶುವಿನ ಶಿರಚ್ಛೇದಿಸಲು ಖಡ್ಗವನ್ನೆತ್ತಿದನು. ಆಗ ಮಂತ್ರಿಗಳು ಅವನನ್ನು ಸಮಾಧಾನ ಮಾಡಿ ಆ ಪೆಟ್ಟಿಗೆಯನ್ನು ಮಿಥಿಲಾದೇಶಕ್ಕೆ ತಂದು, ಭೂಮಿಯಲ್ಲಿ ಹುಗಿದಿಟ್ಟು, ಲಂಕೆಗೆ ಹಿಂದಿರುಗಿದರು. ನೋ -- ಸೀತೆ'(ಆನಂ. ರಾ).

ವೇದವ್ಯಾಸ-- ನೋ-- ವ್ಯಾಸ

ವೇದಾರಣ್ಯ-- ದಕ್ಷಿಣ ಸಮುದ್ರತೀರದ ಒಂದು ತಪೋವನ. ಇಲ್ಲಿ ದೀರ್ಘತಮನೆಂಬ ಬ್ರಹ್ಮರ್ಷಿಯು ತಪಸ್ಸು ಮಾಡುತ್ತಿದ್ದ (ಸ್ಕಾಂ. ಪು., ಬ್ರಹ್ಮಪು).

ವೇನ -- ಅಂಗರಾಜನ ಪುತ್ರ. ಈತನ ತಾಯಿ ಸುನೀಥಾ, ಇವನ ಅಪಚಾರ, ಅನಾಚಾರ ಅತ್ಯಾಚಾರಗಳಿಂದ ನೊಂದು ಕ್ರುದ್ಧರಾದ ಸಿದ್ಧಮುನಿಮಹರ್ಷಿಗಳು ಅವನನ್ನು ನಿಗ್ರಹಿಸಿ ಅವನ ಬಲಗೈಯನ್ನು ಕಡಿದರು. ಆಗ ಪೃಥುರಾಜನು ಹುಟ್ಟಿಬಂದನು. ನೋ -- ಪೃಥು (ಹರಿ., ಮ. ದ್ರೋ., ಶಾಂ., ವಿಷ್ಣುಪು).

ವೈಕರ್ತನ -- ಕರ್ಣನ ಇನ್ನೊಂದು ಹೆಸರು. ಇವನು ವಿಕರ್ತನ (ಸೂರ್ಯ) ಮಗ.

ವೈಕುಂಠ-- ೧. ವಿಷ್ಣುಲೋಕ. ೨. ಒಂದು ಮನ್ವಂತರದಲ್ಲಿ ವಿಷ್ಣುವು ವಿಕುಂಠೆಯೆಂಬ ಸ್ತ್ರೀಯಲ್ಲಿ ಅವತರಿಸಿದನು. ಇದರಿಂದ ನಾರಾಯಣನಿಗೆ

ವೈಕುಂಠನೆಂಬ ಹೆಸರು ಬಂತು (ಮ. ಶಾಂ).

ವೈಜಯಂತ --೧. ಕ್ಷೀರಸಮುದ್ರದ ಮಧ್ಯದಲ್ಲಿದ್ದ ಚತುರ್ಮುಖ ಬ್ರಹ್ಮನ ವಾಸಸ್ಥಾನವಾದ ಪರ್ವತ. ೨. ಇಂದ್ರನ ಅರಮನೆ; ಇದು ಪ್ರಶಸ್ತವಾದ ಧ್ವಜಪಟಗಳುಳ್ಳದ್ದು. ೩. ವಿಷ್ಣುವಿನ ಕೊರಳಿನ ಪುಷ್ಪಮಾಲೆ. ೪. ನಿಮಿರಾಜನ ರಾಜಧಾನಿ. ಇದು ಗೌತಮಾಶ್ರಮದ ಸಮೀಪದಲ್ಲಿತ್ತು (ಮ. ಶಾಂ).

ವೈತರಣೀ (ವೈತರಿಣೀ)-- ೧. ಗಂಗಾನದಿಗೆ ಪಾತಾಳದ ಹೆಸರು. ಪಾಪಿಗಳಿಗೆ ಈ ನದಿಯು ನೋಡಲು ಭಯವನ್ನುಂಟುಮಾಡುತ್ತದೆ. (ಮ. ಸ., ವ., ಉ., ಭೀ). ೨. ಒರಿಸ್ಸಾಪ್ರಾಂತದ ಕಟಕದ ಹತ್ತಿರ ಹರಿಯುತ್ತಿರುವ ನದಿಯೊಂದು. ಇದಕ್ಕೆ ಬೆಟ್ರಾನಿ (Betrani) ನದಿ ಎನ್ನುತ್ತಾರೆ.

ವೈದರ್ಭೀ-- ವಿದರ್ಭರಾಜನ ಪುತ್ರಿಯರಾದ ಸಗರ ರಾಜನ ಪತ್ನಿ ಕೇಶಿನಿಗೂ, ಅಗಸ್ತ್ಯ ಮುನಿಯ ಪತ್ನಿ ಲೋಪಾಮುದ್ರೆಗೂ, ಭೀಷ್ಮಕನ ಮಗಳಾದ ರುಕ್ಮಿಣಿಗೂ, ಭೀಮನ ಮಗಳಾದ ದಮಯಂತಿಗೂ ಈ ಹೆಸರು ಸಲ್ಲುತ್ತದೆ. ಕೇಶಿನಿಗೆ ಆರು ಸಾವಿರ ಮಂದಿ ಮಕ್ಕಳಿದ್ದರು. ನೋ -- ಲೋಪಾಮುದ್ರೆ, ರುಕ್ಮಿಣಿ, ದಮಯಂತಿ, ಕೇಶಿನಿ (ಮ.ವ.ಉ).

ವೈನ್ಯ-- ವೇನರಾಜನ ಮಗ; ಪೃಥುಚಕ್ರವರ್ತಿ. ನೋ -- ಪೃಥು, ವೇನ (ಮ. ಸ,ವ)

ವೈಯಾಘ್ರಪದ್ಯ -- ಯುಧಿಷ್ಠಿರ (ಮ. ವಿ).

ವೈರಾಟೀ-- ವಿರಾಟನ ಮಗಳಾದ ಉತ್ತರೆ (ಮ. ವಿ).

ವೈವಸ್ವತ--ವಿವಸ್ವಂತನೆಂಬ ಸೂರ್ಯನ ಮಗ. ಈತನ ತಾಯಿ ತ್ವಷ್ಟ್ರುಪ್ರಜಾಪತಿಯ ಪುತ್ರಿಯಾದ ಸಂಜ್ಞಾದೇವಿ. ಮನುಧರ್ಮಶಾಸ್ತ್ರವು ಇವನಿಂದ ರಚಿತವಾಯಿತು. ಚತುರ್ಮುಖನು ಅಂಧತಮಸ್ಸು-- ಮೋಹ ಮುಂತಾದವುಗಳನ್ನು ನಿರ್ಮಿಸಿ, ಈ ತಾಮಸ ಸೃಷ್ಟಿಗೆ ಬೇಸತ್ತು ಹರಿಧ್ಯಾನದಿಂದ, ನಿರ್ಮಲವಾದ ಮನಸ್ಸಿನಿಂದ ಸನಕಾದಿ ರುದ್ರದೇವನನ್ನೂ, ಮರೀಚಿ, ಅತ್ರಿ ಮೊದಲಾದ ಮುನಿಗಳನ್ನು ನಿರ್ಮಿಸಿದರೂ ಕೃತಕೃತ್ಯನಾಗದೆ ತನ್ನ ರೂಪದಿಂದ ಸ್ತ್ರೀಪುರುಷರಿಬ್ಬರನ್ನೂ ಉಂಟುಮಾಡಿದನು. ಈ ಪುರುಷನೇ ಸ್ವಾಯಂಭುವ ಮನುವು. ಆ ಸ್ತ್ರೀಯೆ ಆತನ ಪತ್ನಿ ಶತರೂಪಾದೇವಿ (ಮ ಆ., ವ., ಭಾಗ., ಮಾರ್ಕಂ. ಪು., ಹರಿ., ಬ್ರಹ್ಮಪು., ವಾಯುಪು, ಮತ್ಸ್ಯಪು).

ವೈಶಂಪಾಯನ -- ೧. ವೈವಸ್ವತ ಮನ್ವಂತರದ ದ್ವೈಪಾಯನ ವ್ಯಾಸನ ಶಿಷ್ಯ. ಇವನಿಗೆ ವ್ಯಾಸನು ಯಜುರ್ವೇದವನ್ನುಪದೇಶಿದನು (ಮ. ಶಾಂ., ವಿಷ್ಣುಪು, ದೇವಿಭಾ) ಇವನು ಯಾಜ್ಞವಲ್ಕ್ಯನ ಮಾವನ ಗುರು. ಈತನು ಜನಮೇಜಯನಿಗೆ ಮಹಾಭಾರತ ಕಥೆಯನ್ನು ಹೇಳಿದನು. ಈತನಿಂದ ಬಾಲವಧೆ ಮತ್ತು

ಬ್ರಾಹ್ಮಣವಧೆಯಾಯಿತು (ಭಾಗ., ಮ. ೮, ಅನು).

ವೈಶಾಲಿ-- ವಿಶಾಲನೆಂಬ ರಾಜನಿಂದ ಸ್ಥಾಪಿತವಾದ ನಗರ.

ವೈಶಾಲಿನಿ-- ಅಗಸ್ತ್ಯನನ್ನು ರೇಗಿಸಿ ಶಾಪಹೊಂದಿದ ಈಕೆ ವಿಶಾಲನೆಂಬ ರಾಜನ ಮಗಳಾಗಿ ಜನಿಸಿದಳು. ನೋ -- ಭಾಮಿನಿ.

ವೈಶ್ಯಾಪುತ್ರ-- ಧೃತರಾಷ್ಟ್ರನ ಮಗ; ಯುಯುತ್ಸು. ಈತನ ತಾಯಿ ಧೃತರಾಷ್ಟ್ರನ ದಾಸಿ.

ವೈಶ್ರವಣ -- ನೋ-- ಕುಬೇರ (ಕು= ಕುತ್ಸಿತವಾದ, ಬೇರ = ದೇಹವುಳ್ಳವನು). ಇವನು ಹುಟ್ಟುವಾಗ ಭಯಂಕರನಾಗಿದ್ದು ವಿಶ್ರವಸನು ಇವನನ್ನು ಸೋಮನೆಂದು ಕರೆಯಲಾಗಿ ಇವನ ಆಕಾರ ಸೌಮ್ಯವಾಯಿತು. (ದೇವಿಭಾ., ಮ. ವ).

ವೈಶ್ವಾನರ -- ವಿಶ್ವಾನರನೆಂಬ ಬ್ರಾಹ್ಮಣನ ಮಗ. ಇವನ ತಾಯಿ ಶುಚಿಷ್ಮತಿ. ಇವರು ಜೋತಿಷ್ಮತಿ ಎಂಬ ಪಟ್ಟಣದಲ್ಲಿ ವಾಸಿಸುತ್ತಿದ್ದರು. ಈ ದಂಪತಿಗಳು ಕಾಶೀಕ್ಷೇತ್ರದಲ್ಲಿ ತಪಸ್ಸು ಮಾಡಿ ವೈಶ್ವಾನರನೆಂಬ ಮಗನನ್ನು ಪಡೆದರು. ಇವನು ಶಿವನ ಅನುಗ್ರಹದಿಂದ ಅಗ್ನಿಯಾಗಿ, ಆಗ್ನೇಯ ದಿಕ್ಕಿನ ಒಡೆಯನಾದನು. ಇವನು ಒಬ್ಬ ದಿಕ್ಪಾಲಕ. ನೋ -- ಅಗ್ನಿ (ಸ್ಕಾಂ. ಪು).

ವೈಷ್ಣವಾಸ್ತ್ರ--ಇದು ಭಗದತ್ತನಿಂದ ಅರ್ಜುನನ ಮೇಲೆ ಪ್ರಯೋಗಿಸಲ್ಪಟ್ಟಿತು. ಇದು ವರಾಹಾವತಾರದ ಕಾಲದಲ್ಲಿ ಭೂದೇವಿಗೆ (ವರಾಹನ ದಾಡೆ) ಕೊಡಲ್ಪಟ್ಟಿತು. ಆಕೆಯಿಂದ ಈ ಅಸ್ತ್ರವು ತನ್ನ ಮಗನಾದ ನರಕಾಸುರನಿಗೂ, ಅವನಿಂದ ಭಗದತ್ತನಿಗೂ ಕೊಡಲ್ಪಟ್ಟಿತು. ಅವನಿಂದ ಅದು ಶ್ರೀಕೃಷ್ಣನ ಕೈಸೇರಿತು (ಮ. ದ್ರೋ).

ವೈಹಾರ -- ಮಗಧದೇಶದ ಒಂದು ಪರ್ವತ. ನೋ -- ಜರಾಸಂಧ (ಮ. ಸ).

ವೈಶ್ವ-- ರಾಜರ್ಷಿ (ಮ. ಸ).

ವ್ಯಾಘ್ರಕೇತು-- ೧. ಪಾಂಡವಪಕ್ಷದ ಪಾಂಚಾಲನೊಬ್ಬ. ಇವನು ಕರ್ಣನಿಂದ ಹತನಾದ (ಮ. ಕ) ೨. ದುರ್ಯೋಧನನ ಪಕ್ಷದ ರಾಜ (ಮ. ದ್ರೋ).

ವ್ಯಾಘ್ರದತ್ತ -- ೧. ಮಾಗಧನ ಪುತ್ರ; ಇವನು ಸಾತ್ಯಕಿಯಿಂದ ಹತನಾದ (ಮ.ದ್ರೋ). ೨. ಪಾಂಚಾಲವೀರ ; ಇವನು ದ್ರೋಣನಿಂದ ಹತನಾದ (ಮ.ದ್ರೋ).

ವ್ಯಾಘ್ರಪದ-- ವಸಿಷ್ಠನಿಂದ ವುತ್ಪತ್ತಿಯಾದ ಋಷಿಯೊಬ್ಬ. (ಮ. ಅನು)

ವ್ಯಾಘ್ರಪಾದ -- ಋಷಿಯೊಬ್ಬ. ಇವನಿಗೆ ಉಪಮನ್ಯು ಮತ್ತು ಧೌಮ್ಯರೆಂಬಿಬ್ಬರು ಮಕ್ಕಳು (ಮ. ಅನು).

ವ್ಯಾಸ--ವೇದವನ್ನು ವಿಭಾಗಿಸಿದ ಮುನಿ. ಈತನ ತಂದೆ ಪರಾಶರಮುನಿ. ದ್ವೀಪದಲ್ಲಿ ಹುಟ್ಟಿದ್ದರಿಂದ ದ್ವೈಪಾಯನಮುನಿಯೆಂದೂ, ಕೃಷ್ಣದ್ವೈಪಾಯನನೆಂದೂ ಇವನಿಗೆ ಹೆಸರಿದೆ. ಈತನ ತಾಯಿ ವಾಸವೀಸತ್ಯವತಿ. ಪ್ರತಿಯೊಂದು ಮಹಾಯುಗದಲ್ಲೂ ಒಬ್ಬೊಬ್ಬ ವ್ಯಾಸನಿದ್ದನು. ಇವರ ಸಂಖ್ಯೆ ಇಪ್ಪತ್ತೇಳು. ಸ್ವಯಂಭು, ಪ್ರಜಾಪತಿ, ಉಶನ, ಬೃಹಸ್ಪತಿ, ಸವಿತೃ, ಮೃತ್ಯು, ಮಘವ, ವಸಿಷ್ಠ, ಸಾರಸ್ವತ, ತ್ರಿಧಾಮ, ತ್ರಿವೃಷ, ಭಾರದ್ವಾಜ, ಅಂತರಿಕ್ಷ , ಧರ್ಮ, ತ್ರಯ್ಯಾರುಣ, ಧನಂಜಯ, ಮೇಧಾತಿಥಿ, ವ್ರತಿ, ಅತ್ರಿ, ಗೌತಮ, ಉತ್ತಮ, ವೇನವಾಜಸ್ರಜಾಕ್ಷ, ಸೋಮನ್ಯೂಷಾಯಣ, ತೃಣಬಿಂದು, ಭಾರ್ಗವ, ಶಕತಿ, ಜಾತೂಕರ್ಣ್ಯ-- ಇವರು ಇಪ್ಪತ್ತೇಳು ವ್ಯಾಸರು. ಈ ಕಲ್ಪದಲ್ಲಿ ಕೃಷ್ಣದ್ವೈಪಾಯನನು ವ್ಯಾಸ. ಮುಂದಿನ ದ್ವಾಪರಯುಗದಲ್ಲಿ ದ್ರೌಣಿ ವ್ಯಾಸ (ಅಶ್ವತ್ಥಾಮ) ಅವತರಿಸಲಿದ್ದಾನೆ (ದೇವೀಭಾ., ವಿಷ್ಣುಪು). ಭಾರತವನ್ನು ವ್ಯಾಸನು ಹೇಳಿದನು; ಗಣಪತಿ ಬರೆದನು. ಈತನು ಅಂಬಿಕೆಯಲ್ಲಿ ಧೃತರಾಷ್ಟ್ರನನ್ನೂ, ಅಂಬಾಲಿಕೆಯಲ್ಲಿ ಪಾಂಡುವನ್ನೂ, ದಾಸಿಯೊಬ್ಬಳಲ್ಲಿ ವಿದುರನನ್ನೂ ಹುಟ್ಟಿಸಿದನು. ತಪಸ್ಸುಮಾಡಿ ಶುಕನೆಂಬ ಮಗನನ್ನು ಪಡೆದನು (ಮ. ಆ).

ವ್ಯಾಸಸ್ಥಲಿ--ಪ್ರಸಿದ್ಧ ಕ್ಷೇತ್ರವೊಂದು. ಇಲ್ಲಿ ಪುತ್ರಶೋಕದಿಂದ ವ್ಯಾಸನು ಪ್ರಾಯೋಪವೇಶವನ್ನು ಕೈಗೊಂಡು ಮಲಗಿದಾಗ ದೇವತೆಗಳು ಇವನನ್ನು ಸಮಾಧಾನಪಡಿಸಿ ಎಬ್ಬಿಸಿದರು.

ವ್ಯುಷಿತಾಶ್ವ -- ಚಂದ್ರವಂಶದವನಾದ ಪೂರುವಿನ ಕುಲದಲ್ಲಿ ಹುಟ್ಟಿದವನು. ಈತನ ಪತ್ನಿ ಕಾಕ್ಷೀವತನ (ಕಕ್ಷಿವಂತ) ಮಗಳಾದ ಭದ್ರೆ. ಈತನ ಮಕ್ಕಳು ಸಾಲ್ವ, ಮದ್ರ ಮೊದಲಾದ ಏಳು ಮಂದಿ. ಇವನು ಅನೇಕ ಯಾಗಗಳನ್ನು ಮಾಡಿ ಕಾಮಸುಖದಲ್ಲಿ ಮಿತಿ ಮೀರಿ, ರೋಗದಿಂದ ಮೃತನಾದನು. ಆಗ ಇವನ ಹೆಂಡತಿಯಾದ ಭದ್ರೆಯು ಇವನ ಶವದ ಮೇಲೆ ಬಿದ್ದು ಗೋಳಾಡಲು ಮೃತನಾದ ವ್ಯುಷಿತಾಶ್ವನು -- 'ಭದ್ರೆ, ಹಂಬಲಿಸಬೇಡ. ನೀನು ರಜಸ್ವಲೆಯಾಗಿ ಮಿಂದ ಎಂಟು ಅಥವಾ ಹದಿನಾಲ್ಕನೇ ದಿನ ನನ್ನ ಶಯನಗೃಹದಲ್ಲಿ ಮಲಗಿದರೆ ನನ್ನಿಂದ ಪುತ್ರರನ್ನು ಪಡೆಯುವೆ' ಎಂದು ಶವದೊಳಗಿನಿಂದ ಆಕಾಶವಾಣಿಯ ಮೂಲಕ ಹೇಳಿದನು. ಇವಳು ಮುಂದೆ ವ್ಯುಷಿತಾಶ್ವನ ಮಾತಿನಂತೆ ನಡೆದು

ಮೂವರು ಸಾಲ್ವದೇಶಾಧಿಪತಿಗಳನ್ನೂ, ನಾಲ್ವರು ಮದ್ರದೇಶಾಧಿಪತಿಗಳನ್ನು ಪಡೆದಳು. ಇವರ ಹೆಸರು ದೊರೆಯುವುದಿಲ್ಲ. ಈ ಕಥೆಯನ್ನು ಸಂತಾನಪ್ರಾಪ್ತಿಯ ಬಯಕೆಯಲ್ಲಿದ್ದ ಪಾಂಡುವಿಗೆ ಕುಂತಿ ಹೇಳಿದಳು (ಮ. ಆ).

ವ್ಯೂಕಾ -- ದೇಶವೊಂದು (ಮ. ಭೀ).

ವ್ಯೂಢೋರ -- ಧೃತರಾಷ್ಟ್ರನ ಮಗ (ಮ. ಆ).

ವ್ಯೂಢೋರು -- ಧೃತರಾಷ್ಟ್ರನ ಮಗ (ಮ. ಆ).

ವ್ಯೋಮ -- ಮಯಾಸುರನ ವಂಶದ ಒಬ್ಬ ರಾಕ್ಷಸ. ಇವನು ಗೋಕುಲದ ಅನೇಕ ಬಾಲಕರನ್ನು ಹೊತ್ತುಕೊಂಡು ಹೋಗಿ ಒಂದು ಪರ್ವತದ ಗವಿಯಲ್ಲಿ ಅಡಗಿಸಿಟ್ಟಾಗ ಶ್ರೀಕೃಷ್ಣನು ಈ ಗವಿಯನ್ನು ಹೊಕ್ಕು, ವ್ಯೋಮಾಸುರನನ್ನು ಕೊಂದು ಆ ಬಾಲಕರನ್ನು ಬಿಡಿಸಿದನು (ಭಾಗ).

ವ್ರಜ-- ಮಧುರೆಯ ಸಮೀಪದಲ್ಲಿ ಹರಿಯುವ ಯಮುನಾ ನದಿಯ ಇನ್ನೊಂದು ದಡದಲ್ಲಿದ್ದ ಒಂದು ಹಳ್ಳಿ. ನಂದನು ಈ ಹಳ್ಳಿಗೆ ಒಡೆಯ. ಶ್ರೀಕೃಷ್ಣನ ಬಾಲ್ಯವೆಲ್ಲ ಇಲ್ಲೇ ಕಳೆಯಿತು (ಭಾಗ).

ವ್ರತಿ -- ಹದಿನೆಂಟನೆಯ ಮನ್ವಂತರದ ವ್ಯಾಸ. ನೋ -- ವ್ಯಾಸ (ದೇವೀಭಾ).

ಶ

ಶಂಖ -- ೧.ನವನಿಧಿಯ ಅಧಿಪತಿ. ಶ್ರೀಕೃಷ್ಣನು ದ್ವಾರಕೆಯನ್ನು ನಿರ್ಮಾಣ ಮಾಡಿದ ಮೇಲೆ ನಿರ್ಧನರ ಮನೆಗಳನ್ನೆಲ್ಲಾ ಸಂಪತ್ತಿನಿಂದ ತುಂಬಲು ಇವನಿಗೆ ಆಜ್ಞೆ ಮಾಡಿದನು (ಹರಿ). ದುಃಖವನ್ನು ಹೋಗಲಾಡಿಸುವ ನಿಧಿಯಾದುದರಿಂದ ಇದಕ್ಕೆ ಶಂಖವೆಂದು ಹೆಸರು. ನೋ -- ಸರಯೂ. ೨. ಇವನು ಸಿಂಧು ರಾಜನ ಮಗ. ಇವನು ಇಂದ್ರನನ್ನು ಜಯಿಸುವ ಮಗನನ್ನು ಪಡೆಯಲಿಕ್ಕಾಗಿ ಗಂಗಾಸಾಗರ ಸಂಗಮದಲ್ಲಿ ತಪಸ್ಸು ಮಾಡುತ್ತಿರಲು ಅಲ್ಲಿ ಅಳುತ್ತಿರುವ ಜಲಂಧರನನ್ನು ಕಂಡನು. ೩. ವಿರಾಟರಾಜನ ಮಗ. ಈತನ ತಾಯಿ ಸುರಥೆ. ಈತನು ರಥೋದಾರನು (ಮ. ಉ., ಆ, ಸ). ಇವನ ಸಹೋದರನ ಹೆಸರು ಶ್ವೇತ (ಮ. ವಿ., ಭೀ). ಇವನ ವಧೆ ದ್ರೋಣಾಚಾರ್ಯನಿಂದಾಯಿತು. ೪. ಕೃಷ್ಣನ ಶಂಖದ ಹೆಸರು ಪಾಂಚಜನ್ಯ, ಅರ್ಜುನನದು ದೇವದತ್ತ; ಭೀಮನದು ಪೌಂಡ್ರ; ಯುಧಿಷ್ಠಿರನದು ಅನಂತವಿಜಯ; ನಕುಲನದು ಸುಘೋಷ; ಸಹದೇವನದು ಮಣಿಪುಷ್ಪಕ (ಮ. ಭೀ). ೫. ಒಂದು ಸರ್ಪ, ಶಂಖಪಿಂಡ,

ಶಂಖಮುಖ ಎಂಬ ಹೆಸರುಗಳೂ ಸರ್ಪಗಳಿಗಿವೆ (ಮ. ಆ., ಉ);. ಒಬ್ಬ ರಾಕ್ಷಸ (ಮ.ಸ). ೭. ಲಿಖಿತನ ಸಹೋದರನಾದ ಋಷಿಯೊಬ್ಬ (ಮ. ಶಾಂ). ನೋ-- ಲಿಖಿತ.

ಶಂಖತೀರ್ಥ -- ಪವಿತ್ರವಾದ ಒಂದು ತೀರ್ಥ (ಮ. ಶ).

ಶಂಖಮೇಖಲ-- ಒಬ್ಬ ಋಷಿ. (ಮ. ಆ).

ಶಂಖಿನೀತೀರ್ಥ-- ಒಂದು ಪವಿತ್ರವಾದ ತೀರ್ಥಸ್ಥಳ (ಮ. ವ).

ಶಂಯು -- ಬೃಹಸ್ಪತಿಯಿಂದ ತಾರೆಯಲ್ಲಿ ಜನಿಸಿದ ಆರು ಮಕ್ಕಳಲ್ಲಿ ಇವನು ಹಿರಿಯವ. ಈತನ ಸತಿ ಸತ್ಯೆ. ಈತನ ಮಕ್ಕಳು ಭರತ ಮತ್ತು ಭರದ್ವಾಜರೆಂಬ ವಿಶೇಷಾಗ್ನಿಗಳು (ಮ. ವ).

ಶಕ--ಇಂದಿನ ಯುರೋಪ್ ಖಂಡಕ್ಕೆ ಶಕದ್ವೀಪವೆಂಬ ಹೆಸರಿತ್ತು. ಪ್ರಿಯವ್ರತರಾಜ ಭೂಮಿಯನ್ನು ಏಳು ಪಾಲುಗಳಾಗಿ ವಿಭಾಗಿಸಿ ಶಕದ್ವೀಪವನ್ನು ತನ್ನೊಬ್ಬ ಮಗನಿಗೆ ಕೊಟ್ಟಿದ್ದನು. ನೋ -- ಪ್ರಿಯವ್ರತ. ವಿದೇಹಕ್ಕೆ ಪೂರ್ವದಿಕ್ಕಿನಲ್ಲಿದ್ದ ದೇಶೀಯರನ್ನು ಶಕರೆನ್ನುತ್ತಾರೆ.

ಸ್ವಾಯಂಭುವ ಮನುವಿನ ಮಗನಾದ ಪ್ರಿಯವ್ರತನು ಈ ಭೂತಲವನ್ನು ಏಳು ದ್ವೀಪಗಳಾಗಿ ವಿಂಗಡಿಸಿದನು. ಅವು ಯಾವುವೆಂದರೆ -- ಜಂಬುದ್ವೀಪ (ಏಷ್ಯಾ), ಪ್ಲಕ್ಷದ್ವೀಪ (ದಕ್ಷಿಣ ಅಮೆರಿಕ), ಪುಷ್ಕರ ದ್ವೀಪ (ಉತ್ತರ ಅಮೆರಿಕ), ಕ್ರೌಂಚದ್ವೀಪ (ಆಫ್ರಿಕ), ಶಕದ್ವೀಪ (ಯುರೋಪು), ಶಾಲ್ಮಲೀದ್ವೀಪ (ಆಸ್ಟ್ರೇಲಿಯ), ಕುಶದ್ವೀಪ (ಓಸ್ಯಾನಿಯಾ). ಪ್ರಿಯವ್ರತನ ಪುತ್ರ ವೀತಿಹೋತ್ರನ ಇನ್ನೊಬ್ಬ ಪುತ್ರನಾದ ಅಗ್ನೀಧ್ರ. ಕ್ರೌಂಚದ್ವೀಪದೊಡೆಯನು ಘೃತಪೃಷ್ಠನು. ಕುಶದ್ವೀಪವನ್ನು ಹಿರಣ್ಯರೇತನು ಆಳುತ್ತಿದ್ದನು (ಮ. ಸ., ಭೀ).

ಶಕಟ -- ಕಂಸರಕ್ಕಸನ ಒಬ್ಬ ಸೇವಕ. ಬಂಡಿಯಾಕಾರದಿಂದ ಗೋಕುಲವನ್ನು ಇವನು ಹೊಕ್ಕು ತುಳಿದು ಶ್ರೀಕೃಷ್ಣನ ಮೈಮೇಲೆ ಬೀಳಲು, ಅವನು ತನ್ನ ಪುಟ್ಟ ಕಾಲುಗಳಿಂದ ಇವನನ್ನು ತುಳಿದುಕೊಂದನು. ನೋ -- ಶ್ರೀಕೃಷ್ಣ, ವಾಸುದೇವ (ಭಾಗ., ಮ. ಸ., ಹರಿ., ವಿಷ್ಣುಪು).

ಶಕಟವ್ಯೂಹ -- ಪುರಾಣಕಾಲದ ಯುದ್ಧದಲ್ಲಿ ಉಪಯೋಗಿಸುತ್ತಿದ್ದ ಒಂದು ವ್ಯೂಹ. ದ್ರೋಣಾಚಾರ್ಯರು ಕೌರವಸೇನೆಯಲ್ಲಿ ಈ ವ್ಯೂಹವನ್ನು ನಿರ್ಮಿಸಿದ್ದರು. ಅದಕ್ಕೆ ಚಕ್ರವ್ಯೂಹವೆಂಬ ಹೆಸರೂ ಇದೆ (ಮ. ದ್ರೋ).

ಶಕುನಿ--೧.ಸುಬಲನ ಮಗ. ಇವನು ಗಾಂಧಾರಿಯ ಸೋದರ ; ದುರ್ಯೋಧನಾದಿಗಳ ಮಾವ. ಈತನು ದ್ವಾಪರನ ಅಂಶದವ. ಇವನ ಮಗ ಉಲೂಕ. ಈ ಮಗನು ಸಹದೇವನಿಂದ ಹತನಾದನು. ಶಕುನಿಯೂ

ಸಹದೇವನಿಂದ ಭಾರತಯುದ್ಧದ ಹದಿನೆಂಟನೆಯ ದಿನ ಮಡಿದನು. ಇವನಿಗೆ ತೊಂಬತ್ತೊಂಬತ್ತು ಮಂದಿ ಸಹೋದರರಿದ್ದರು ಎಂಬ ಕಥೆಯೂ ಇದೆ. ವೃಷಕ, ಬೃಹದ್ಬಲ, ಅಚಲ, ಶರಭ, ಸುಭಗ, ವಿಭು, ಭಾನುದತ್ತ, ಗಜ, ಗವಾಕ್ಷ, ಚರ್ಮವಾನ್, ಆರ್ಜಯ, ಶುಕರೆಂಬ ಸಹೋದರರೂ, ಗಾಂಧಾರಿ, ಸತ್ಯವ್ರತಾ, ಸತ್ಯಸೇನಾ, ಸುದೇಷ್ಣಾ, ಸಂಹಿತಾ, ತೇಜಶ್ರವಾ, ಸುಶ್ರವಾ, ನಿಕೃತಿ, ಶುಭಾ, ಶಂಬರಾ, ದಶಾರ್ಣಾ ಎಂಬ ಹನ್ನೊಂದು ಮಂದಿ ಸಹೋದರಿಯರೂ ಇದ್ದರು. ಈ ಸಹೋದರಿಯರೆಲ್ಲಾ ಧೃತರಾಷ್ಟ್ರನನ್ನೇ ವಿವಾಹವಾದರು. ನೋ -- ಗಾಂಧಾರಿ. ಇವನು ಜೂಜಾಟದಲ್ಲಿ ತುಂಬಾ ಸಮರ್ಥನಾಗಿದ್ದ. ಸಂಧಾನಕ್ಕೆ ಬಂದ ಕೃಷ್ಣನೊಡನೆ ಕರ್ಣನು -- 'ಇಷ್ಟೆಲ್ಲಾ ಅನರ್ಥಕ್ಕೆ ದುಶ್ಶಾಸನ, ಶಕುನಿಗಳೇ ಕಾರಣ' ಎನ್ನುತ್ತಾನೆ. ಇವನು ಯುದ್ಧ ಭೂಮಿಯಲ್ಲಿ ನಕುಲಸಹದೇವರಿಂದ ಮತ್ತು ಭೀಮನಿಂದ ಪರಾಜಿತನಾದನು. ಇವನಿಗೆ ಕಳಿಂಗನೆಂಬ ಹೆಸರೂ ಇದೆ. ತನ್ನ ಸಹೋದರರನ್ನೆಲ್ಲಾ ದುರ್ಯೋಧನನು ಕೊಂದುದರಿಂದ ಈ ಸೇಡನ್ನು ತೀರಿಸಿಕೊಳ್ಳಲು ಕೌರವರನ್ನು ಪಾಂಡವರ ವಿರುದ್ಧ ಎತ್ತಿಕಟ್ಟಿದನೆಂದೂ ಹೇಳುತ್ತಾರೆ.

ಪ್ರಹ್ಲಾದನ ಶಿಷ್ಯನಾದ ನಗ್ನಜಿತ್ತಿನ ಮಗನೇ ಸುಬಲನು. ಈ ಸುಬಲನು ದೇವತೆಗಳ ಕೋಪಕ್ಕೆ ಪಾತ್ರನಾದುದರಿಂದ ಅವನಿಗೆ ಧರ್ಮವನ್ನು ಕೆಡಿಸತಕ್ಕ ಶಕುನಿಯು ಮಗನಾದನು (ಮ. ಆ).

ಇವನು ದಶಾರ್ಹನ ಒಬ್ಬ ಮಗ. ಇವನು ಜ್ಯಾಮಘನ ವಂಶದವನು (ಹರಿ). ೨. ಒಂದು ಸರ್ಪ. ೩. ಹಿರಣ್ಯಾಕ್ಷನ ಎರಡನೆಯ ಮಗ. ಇವನಿಗೆ ಝರ್ಝರನೆಂಬ ಅಣ್ಣನೂ, ಭೂತಸಂತಾಪನ, ಮಹಾನಾಭ, ಕಾಲನಾಭರೆಂಬ ತಮ್ಮಂದಿರೂ ಇದ್ದರು. ಇವರೆಲ್ಲಾ ವಿದ್ವಾಂಸರೂ, ತಪಸ್ವಿಗಳೂ, ಬಲಾಢ್ಯರೂ ಆಗಿದ್ದರು (ಮ. ಭೀ., ವ, ಸ, ಉ., ದ್ರೋ., ಕ., ಶ., ಸ್ತ್ರೀ., ತುರಂ. ಭಾ).

ಶಕುಂತ -- ವಿಶ್ವಾಮಿತ್ರನ ಒಬ್ಬ ಮಗ (ಮ. ಅನು).

ಶಕುಂತಲಾ -- (ಶಕುಂತ = ಪಕ್ಷಿಗಳು. ಲಾ = ಕೈಗೊಂಡು ಪೋಷಿಸಿದುವು). ಈಕೆ ಕಣ್ವಮಹರ್ಷಿಯ ಪೋಷಿತ ಮಗಳು; ಚಂದ್ರವಂಶದ ದುಷ್ಯಂತ ಮಹಾರಾಜನ ದ್ವಿತೀಯ ಪತ್ನಿ. ಈಕೆಯ ಮಗನ ಮೊದಲಿನ ಹೆಸರು ಸರ್ವದಮನ; ಮುಂದೆ ಇವನಿಗೆ ಭರತಚಕ್ರವರ್ತಿ ಎಂಬ ಹೆಸರಾಯಿತು. ಶಕುಂತಲೆಯ ತಂದೆ ವಿಶ್ವಾಮಿತ್ರ. ತಾಯಿ ಮೇನಕೆಯೆಂಬ ಅಪ್ಸರೆ. ಈಕೆ ದುಷ್ಯಂತನೊಡನೆ ಗಾಂಧರ್ವ ವಿವಾಹವಾದಳು. ರಾಜನು ದುರ್ವಾಸನ ಶಾಪದಿಂದ ಶಕುಂತಲೆಯನ್ನು ಮರೆಯಲು ಆಕೆಯನ್ನು ಮೇನಕೆಯು ಸ್ವರ್ಗಕ್ಕೆ

ಕೊಂಡುಹೋದಳು. ಪುನಃ ದುಷ್ಯಂತ -- ಶಕುಂತಲೆಯರ ಸಮಾಗಮವಾಗುವುದು (ಮ. ಆ).

ದುಷ್ಯಂತರಾಜನು ಕಣ್ವಾಶ್ರಮವನ್ನು ಪ್ರವೇಶಿಸುವಾಗ ಅದು ನಿರ್ಜನ ಪ್ರದೇಶದಂತಿದ್ದುದರಿಂದ 'ಯಾರಿಲ್ಲಿ?' ಎಂದು ಕೂಗಿದನು. ಆಗ 'ನಿನಗೆ ಸ್ವಾಗತ' ವೆನ್ನುತ್ತ ಬಂದ ಶಕುಂತಲೆಯ ರೂಪಕ್ಕೆ ಮೋಹಿಸಿ, ಅವಳ ಜನ್ಮವೃತ್ತಾಂತವನ್ನು ಕೇಳಲು ಅವಳು ವಿಶ್ವಾಮಿತ್ರ ಮತ್ತು ಮೇನಕೆಯ ಮಗಳು ತಾನೆಂದಾಗ ದುಷ್ಯಂತನು ಆಕೆಯ ಮಗನಿಗೆ ಸಿಂಹಾಸನ ಕೊಡುವ ಭರವಸೆ ಕೊಟ್ಟು, ತನ್ನೊಡನೆ ಬಂದ ಪುರೋಹಿತನ ಮೂಲಕ ಕ್ರಮವಾಗಿ ಶಕುಂತಲೆಯನ್ನು ವಿವಾಹವಾಗಿ ಆಕೆಯನ್ನು ಬೇಗನೇ ವೈಭವದಿಂದ ಪಟ್ಟಣಕ್ಕೆ ಕರೆಸಿಕೊಳ್ಳುವೆನೆಂದು ಹೇಳಿ ಹೊರಟುಹೋದನು. ಮುಂದೆ ಶಕುಂತಲೆ ಗರ್ಭಿಣಿಯಾಗಿ ಮೂರು ವರ್ಷ ಕಳೆದ ಮೇಲೆ ರೂಪ ಗಾಂಭೀರ್ಯಾದಿಗುಣಗಳಿಂದ ಅಸಮಾನನಾದ ಮಗನು ಹುಟ್ಟಿದನು. ಈ ಶಿಶುವಿಗೆ ಹುಟ್ಟುವಾಗಲೇ ಬೆಳ್ಳಗೆ ಅಂದವಾದ ನಾಲ್ಕು ಹಲ್ಲುಗಳಿದ್ದವು. ಸಿಂಹದ ಮೈಕಟ್ಟು, ಕೈಯಲ್ಲಿ ಸಹಜವಾದ ಚಕ್ರರೇಖೆಗಳಿದ್ದುವು. ಬಾಲಕನು ನಾಲ್ಕು ಮೊಳದಷ್ಟು ಉದ್ದವಿದ್ದನು. ರಾಜನಿಗೆ ಪಟ್ಟಣದಲ್ಲಿರುವಾಗಲೂ ಶಕುಂತಲೆಯ ಸ್ಮರಣವು ಮನಸ್ಸಿನಲ್ಲಿದ್ದರೂ, ಕಣ್ವಮುನಿಯ ಭಯಕ್ಕಾಗಿ ಅವಳನ್ನು ಕರೆಯಿಸಿಕೊಳ್ಳದೆ ಹಾಗೇ ಕಾಲ ಕಳೆಯುತ್ತಿದ್ದು ಕೆಲವು ದಿನಗಳಾದಮೇಲೆ ಆತನಿಗೆ ಎಲ್ಲಾ ಮರವೆಯಾಯಿತು. ಮನುಷ್ಯ ಶಕ್ತಿಗೆ ಮೀರಿದ ಕಾರ್ಯವನ್ನು ಮಾಡುವ ಎಲ್ಲರನ್ನೂ ಅಡಗಿಸುವ ಮಗನಿಗೆ ಸರ್ವದಮನನೆಂದು ಹೆಸರಿಟ್ಟನು. ಇವನು ಬಾಲ್ಯದಲ್ಲಿ ಸಿಂಹ, ವ್ಯಾಘ್ರ, ಆನೆಗಳನ್ನು ಸ್ವಾಧೀನಪಡಿಸಿಕೊಂಡು ಆಟವಾಡುತ್ತಿದ್ದನು. ಇವನು ಚಿಕ್ಕವನಾಗಿರುವಾಗಲೇ ಒಬ್ಬ ಅಸುರನನ್ನೂ ಕೊಂದನು. ಕುಮಾರನಿಗೆ ಹನ್ನೆರಡು ವರ್ಷಗಳಾದರೂ ದುಷ್ಯಂತನು ಪತ್ನೀಪುತ್ರರನ್ನು ಅರಮನೆಗೆ ಕರೆಸಿಕೊಳ್ಳಲಿಲ್ಲ. ಬಾಲಕನು ಆಗಲೇ ಶಸ್ತ್ರಶಾಸ್ತ್ರಗಳೆರಡರಲ್ಲೂ ಪಾರಂಗತನಾಗಿದ್ದನು. ಆಮೇಲೆ ಶಕುಂತಲೆ ತನ್ನ ಪುತ್ರನ ಜೊತೆಗೆ ರಾಜನ ಬಳಿಗೆ ಬಂದರೂ ರಾಜನು ಅವರಿಬ್ಬರನ್ನು ತನ್ನ ಪತ್ನೀಪುತ್ರರೆಂದು ಒಪ್ಪದಿರಲು, ಆಕಾಶವಾಣಿಯನ್ನು ಕೇಳಿ ಆಕೆಯನ್ನೂ ಮಗನನ್ನೂ ಸ್ವೀಕರಿಸಿದನು (ಮ. ಆ).

ಕಾಳಿದಾಸನು ಹೇಳುವ ಅನಸೂಯ -- ಪ್ರಿಯಂವದೆಯರ ವಿಚಾರವೂ, ದುರ್ವಾಸನ ಶಾಪವೃತ್ತಾಂತವೂ, ಉಂಗುರದ ವಿಚಾರವೂ ಮಹಾಭಾರತದಲ್ಲಿಲ್ಲ.

ಶಕ್ತಿ-- ವಸಿಷ್ಠ ಋಷಿಯಪುತ್ರ. ಈತನ ತಾಯಿ ಅರುಂಧತಿ; ಪತ್ನಿ ಅದೃಶ್ಯಂತಿ; ಮಗ

ಪರಾಶರ. ಈತನನ್ನು ಕಲ್ಮಾಷಪಾದರಾಜನು ಭಕ್ಷಿಸಿದನು. ನೋ -- ಕಲ್ಮಾಷಪಾದ, ಪರಾಶರ, ಅದೃಶ್ಯಂತಿ (ಮ. ಆ).

ಶಕ್ತಿಸ್ಥಾನಗಳು -- ೧. ಕಾಮಾಕ್ಷಿ (ಕಂಚಿ). ೨. ಮೀನಾಕ್ಷಿ (ಮಧುರೆ). ೩.ಭ್ರಮರಾಂಬ (ವಲಯಗಿರಿ). ೪. ಕನ್ಯಾಕುಮಾರಿ (ಕೇರಳ). ೫. ಅಂಬಾ (ಗುಜರಾತ). ೬. ಮಹಾಲಕ್ಷ್ಮಿ (ಕೊಲ್ಹಾಪುರ), ೭. ತುಳಜಾಭವಾನಿ (ತುಳಜಾಪುರ), ೮. ಮಹಾಕಾಳಿ (ಉಜ್ಜಯಿನಿ), ೯. ಲಲಿತಾ (ಪ್ರಯಾಗ). ೧೦. ವಿಶಾಲಾಕ್ಷಿ (ವಾರಣಾಸಿ). ೧೧. ಮಂಗಲಾವತಿ (ಗಯೆ). ೧೨.ಗುಹ್ಯಕೇಶ್ವರಿ (ನೇಪಾಲ). ೧೩. ಸುಂದರಿ (ಬಂಗಾಲ).

ಶಕ್ರ -- ೧. ದ್ವಾದಶಾದಿತ್ಯರಲ್ಲೊಬ್ಬ. ೨. ವೈವಸ್ವತ ಮನ್ವಂತರದ ಸ್ವರ್ಗಾಧಿಪತಿ ದೇವೇಂದ್ರ (ಮ. ಆ). ನೋ -- ಇಂದ್ರ, ಬೃಹಸ್ಪತಿ (ಶಿವ. ಪು).

ಶಕ್ರದೇವ -- ಕಳಿಂಗರಾಜನಾದ ಭಾನುಸುತನ ಮಗ ; ದುರ್ಯೋಧನನ ಪತ್ನಿಯಾದ ಭಾನುಮತಿಯ ಸೋದರ. ಇವನು ಭೀಮನ ಉಕ್ಕಿನ ಗದೆಯಿಂದ ಹತನಾದನು. (ಮ. ಭೀ). ನೋ -- ಭಾನುಮಂತ.

ಶಂಕರಪಾಂಡ್ಯ -- ಪಾಂಡ್ಯರಾಜನೊಬ್ಬ. ಇವನು ಹುಲಿಯ ತೊಗಲನ್ನು ಹೊದ್ದು ತಪಸ್ಸು ಮಾಡುತ್ತಿದ್ದ ಶಾಕಲ್ಯಮಹರ್ಷಿಯನ್ನು ಹುಲಿಯೆಂದೇ ಕೊಂದು, ಬ್ರಹ್ಮಹತ್ಯೆಯ ನಿವಾರಣೆಗಾಗಿ ಆಕಾಶವಾಣಿ ಹೇಳಿದಂತೆ ಒಂದು ವರ್ಷ ಸೇತುಸ್ನಾನವನ್ನು ಮಾಡಿ, ರಾಮಲಿಂಗವನ್ನು ಪೂಜಿಸಿ, ಈ ಪಾಪದಿಂದ ಬಿಡುಗಡೆ ಹೊಂದಿದನು (ಸ್ಕಾಂ. ಪು).

ಶಂಕುಕರ್ಣ -- ೧. ಚಂದ್ರವಂಶದ ಜನಮೇಜಯನ ಎರಡನೆ ಮಗ. ಇವನು ಶತಾನೀಕನ ತಮ್ಮ ; ಇವನ ತಾಯಿ ವಪುಷ್ಟಮೆ. ನೋ -- ವಪುಷ್ಟಮೆ (ಮ. ಆ). ೨. ರಾವಣನ ಅಶೋಕವನದಲ್ಲಿ ಸೀತೆಯ ಕಾವಲುಗಾರನಾಗಿದ್ದ ಒಬ್ಬ ರಕ್ಕಸ (ರಾಮಾ. ಸುಂದರ).

ಶಂಖಚೂಡ-- ಯಕ್ಷನೊಬ್ಬ. ಇವನು ಕುಬೇರನ ಅನುಚರ. ಬೆಳುದಿಂಗಳಿನಲ್ಲಿ ಕೃಷ್ಣ ಮತ್ತು ರಾಮರೊಡನೆ ವಿಹರಿಸುತ್ತಿದ್ದ ಗೋಪಿಯರನ್ನು ಇವನು ಉತ್ತರದಿಕ್ಕಿನಲ್ಲಿ ಬಹುದೂರ ಸಾಗಿಸಲು, ಇದನ್ನು ಕೃಷ್ಣನು ತಿಳಿದು, ಅವನನ್ನು ಬೆನ್ನಟ್ಟಿಕೊಂಡು ಹೋಗಿ ಆತನ ತಲೆಯಲ್ಲಿದ್ದ ಉತ್ತಮರತ್ನವನ್ನು ಕಿತ್ತು ತಂದು ಬಲರಾಮನ ಕೈಗಿತ್ತನು.

ಶಚೀ--ಇಂದ್ರನ ಪತ್ನಿ. ಈಕೆ ಹಂಸೆಯಂತೆ ನಡೆಯುಳ್ಳವಳು. ಇವಳು ಪುಲೋಮನೆಂಬ ರಾಕ್ಷಸನ ಮಗಳು. ಜಯಂತನು ಈಕೆಯ ಮಗ. ನಹುಷನು

ಈಕೆಯನ್ನು ಕಾಮಿಸಿ, ಹೆಬ್ಬಾವಾಗಿ ಭೂಮಿಗೆ ಬಿದ್ದನು. ನೋ -- ನಹುಷ, ಕನ್ನಿಕಾಪರಮೇಶ್ವರಿ (ಮ. ವ., ಉ., ಅನು).

ಶಂಡ--ಇವನು ಶುಕ್ರಾಚಾರ್ಯನ ಮಗ. ಅಮರ್ಕನು ಇವನ ಸೋದರ. ಶುಕ್ರಾಚಾರ್ಯ ತಪಸ್ಸಿನಲ್ಲಿದ್ದಾಗ ಇವನು ಹಿರಣ್ಯಕಶಿಪುವಿನ ಪುರೋಹಿತನಾಗಿದ್ದ. ನೋ -- ಅಮರ್ಕ. ಪ್ರಹ್ಲಾದನು ತನ್ನ ಗುರುಗಳಾದ ಶಂಡ -- ಅಮರ್ಕರಿಗೆ ಹರಿಭಕ್ತಿಯನ್ನುಪದೇಶಿಸಿದನು. (ಹರಿ., ಭಾಗ., ಮತ್ಸ್ಯಪು., ವಿಷ್ಣುಪು).

ಶತಕುಂಭಾ -- ಒಂದು ನದಿ (ಮ. ವ., ಭೀ).

ಶತಚಂದ್ರ -- ಗಾಂಧಾರರಾಜನಾದ ಸುಬಲನ ಮಗ. ಇವನು ಭೀಮಸೇನನಿಂದ ಹತನಾದನು (ಮ. ದ್ರೋ).

ಶತಜ್ಯೋತಿ -- ಸುಭ್ರಾಜನ ಮಗ (ಮ. ಆ).

ಶತದ್ಯುಮ್ನ -- ರಾಜರ್ಷಿಯೊಬ್ಬ. ಈತನು ಮುದ್ಗಲ ಋಷಿಗೆ ತನ್ನ ಗೃಹದಾನವನ್ನು ಮಾಡಿ ಉತ್ತಮಲೋಕವನ್ನು ಹೊಂದಿದನು (ಮ.ಶಾಂ.ಅನು).

ಶತದ್ರು -- ಸಟ್ಲೆಜ್ ನದಿ. ಇದಕ್ಕೆ ಮೊದಲನೇ ಹೆಸರು ಹೈಮವತಿ. ಇದಕ್ಕೆ ಘಾಗರ್ ಅಥವಾ ಘಾರವೆಂಬ ಹೆಸರಿದೆ. ವಸಿಷ್ಠನು ಪುತ್ರಶೋಕದಿಂದ ಆತ್ಮಹತ್ಯೆಗಾಗಿ ಇದರಲ್ಲಿ ಹಾರಲು, ನದಿಯು ಹೆದರಿ ನೂರು ಪಾಲಾಗಿ ಹರಿಯಲು ಇದಕ್ಕೆ ಶತದ್ರು ಎಂದು ಹೆಸರಾಯಿತು (ಮ. ಆ., ಸ., ಭೀ).

ಶತಧನ್ವ -- ಕಳಿಂಗರಾಜನ ಕನ್ಯೆಯ ಸ್ವಯಂವರಕ್ಕೆ ಬಂದ ಒಬ್ಬ ಕ್ಷತ್ರಿಯ. ಯದುವಂಶದ ಹೃದೀಕನ ಮಗ. ಸತ್ರಾಜಿತನು ಈತನಿಗೆ ತನ್ನ ಮಗಳಾದ ಸತ್ಯಭಾಮೆಯನ್ನು ಕೊಡಬೇಕೆಂದಿದ್ದ. ಆಮೇಲೆ ಕೃಷ್ಣನ ಸ್ನೇಹಕ್ಕಾಗಿ ಮಗಳನ್ನು ಕೃಷ್ಣನಿಗಿತ್ತನು. ಮುಂದೆ ಇದಕ್ಕಾಗಿ ಇವನು ಸತ್ರಾಜಿತನನ್ನು ಕೊಂದು, ಕೃಷ್ಣನಿಂದ ಮಡಿದನು (ಮ. ಶಾಂ., ಭಾಗ).

ಶತಪರ್ವಾ-- ಶುಕ್ರಾಚಾರ್ಯನ ಒಬ್ಬಳು ಹೆಂಡತಿ (ಮ. ಉ).

ಶತಮುಖ -- ಅಸುರನೊಬ್ಬ. ಈತನಿಗೆ ಶಿವನಿಂದ ವರ ಪ್ರಾಪ್ತಿಯಾಯಿತು. ನೋ -- ಪೌಂಡ್ರಕ. ಇವನನ್ನು ಸೀತೆ ಕೊಂದಳು (ಅದ್ಭು. ರಾಮಾ. ಮ. ಅನು).

ಶತಯೂಪ -- ಕೇಕಯ ವಂಶದವ. ಇವನು ವಾನಪ್ರಸ್ಥಾಶ್ರಮದ ರಾಜರ್ಷಿ (ಮ.ಆ).

ಶತಶೀರ್ಷ-- ನಾಗರಾಜನಾದ ವಾಸುಕಿಯ ಪತ್ನಿ (ಮ. ಉ).

ಶತಶೃಂಗ -- ೧. ಪರ್ವತವೊಂದು ; ವಾನಪ್ರಸ್ಥನಾದ ಪಾಂಡುವು ಇಲ್ಲೇ ತನ್ನ

ಪತ್ನಿಯರೊಡನೆ ವಾಸಮಾಡಿದನು. ಒಮ್ಮೆ ಕುಂತಿಯ ತೊಡೆಯ ಮೇಲೆ ಮಲಗಿದ್ದ ಭೀಮನು ಹುಲಿಯ ಗರ್ಜನೆಯನ್ನು ಕೇಳಿ, ತಾಯಿಯ ಮಡಿಲಿನಿಂದ ಜಾರಿ, ಬಹಳ ಆಳದಲ್ಲಿದ್ದ ಬಂಡೆಯ ಮೇಲೆ ಬೀಳಲು ಭೀಮನ ದೇಹಸ್ಪರ್ಶದಿಂದ ಆ ಕಲ್ಲೇ ಚೂರು ಚೂರಾಯಿತು. ಇದರಿಂದ ಮುಂದೆ ಆ ಪರ್ವತಕ್ಕೆ ಶತಶೃಂಗವೆಂದು ಹೆಸರಾಯಿತು (ಮ.ಆ). ಪಾಂಡುವು ಪತ್ನಿಯರೊಡನೆ ನಾಗಶತವೆಂಬ ಪರ್ವತ, ಕುಬೇರನ ಚೈತ್ರರಥ, ಅಲ್ಲಿಂದ ಕಾಲಕೂಟ ಪ್ರದೇಶ, ಅಲ್ಲಿಂದ ಗಂಧಮಾದನ ಪರ್ವತ, ಅಲ್ಲಿಂದ ಇಂದ್ರದ್ಯುಮ್ನ ಸರಸ್ಸು, ಅಲ್ಲಿಂದ ಹಂಸಕೂಟ ಪ್ರದೇಶವನ್ನು ದಾಟಿ, ಶತಶೃಂಗ ಪರ್ವತವನ್ನು ಸೇರಿದನು. ನೋ -- ಪಾಂಡು, ಮಾದ್ರಿ (ಮ. ಆ). ೨. ಇವನು ಋಷಭದೇವರ ಮೊಮ್ಮಗ ; ಭರತಚಕ್ರವರ್ತಿಯ ಮಗ. ಇವನಿಗೆ ಇಂದ್ರದ್ವೀಪ, ಕಸೇರು, ತಾಮ್ರದ್ವೀಪ, ಗಭಸ್ತಿಮಂತ, ನಾಗಸೌಮ್ಯ, ಗಂಧರ್ವ, ಮತ್ತು ವರುಣರೆಂಬ ಗಂಡು ಮಕ್ಕಳೂ, ಕುಮಾರಿ ಎಂಬ ಮಗಳೂ ಜನಿಸಿದರು. ಈ ಭರತನಿಂದಲೇ ಈ ದೇಶಕ್ಕೆ ಭರತಖಂಡವೆಂದು ಹೆಸರಾಯಿತು. ಶತಶೃಂಗನು ಭರತಖಂಡವನ್ನು ಒಂಬತ್ತು ಪಾಲು ಮಾಡಿ ತನ್ನ ಗಂಡುಮಕ್ಕಳು ಮತ್ತು ಹೆಣ್ಣುಮಗಳಿಗೆ ಹಂಚಿದನು. ಈ ಗಂಡುಮಕ್ಕಳಿಗೆ ಒಬ್ಬೊಬ್ಬರಿಗೂ ಒಂಬತ್ತು ಮಕ್ಕಳು ಹುಟ್ಟಿದರು. ಇವರೆಲ್ಲಾ ತಪಸ್ವಿನಿಯಾದ ಕುಮಾರಿಯ ಹತ್ತಿರ ಬಂದು ತಮ್ಮ ರಾಜ್ಯವನ್ನು ವಿಭಾಗ ಮಾಡಿಕೊಡುವಂತೆ ಕೇಳಿದರು. ಆಕೆ ತನ್ನ ಪಾಲನ್ನು ಕೂಡಿಸಿ ಚಿತ್ರದಲ್ಲಿ ರೇಖೆ ಎಳೆದಂತೆ ಎಪ್ಪತ್ತೆರಡು ಭಾಗ ಮಾಡಿ ಹಂಚಿದಳು. ಈಕೆಯ ಚಾತುರ್ಯಕ್ಕೆ ಪಾರ್ವತೀದೇವಿಯು ಮೆಚ್ಚಿ ಈಕೆಗೆ ಪ್ರತ್ಯಕ್ಷಳಾಗಿ ಚಿತ್ರಲೇಖೆಯೆಂಬ ಹೆಸರನ್ನಿಟ್ಟು ತನ್ನ ಸಖಿಯನ್ನಾಗಿ ಮಾಡಿಕೊಂಡಳು. ಈ ಕುಮಾರಿಯ ರಾಜ್ಯಕ್ಕೆ ಕಾಮರಿಕಾ ಖಂಡವೆಂದು ಹೆಸರು. ಮುಂದೆ ಈಕೆ ಅಪ್ಸರೆಯಾದಳು. ನೋ -- ಉಷಾ, ಚಿತ್ರಲೇಖೆ (ಸ್ಕಾಂ. ಪು).

ಶತಾನಂದ --೧. ಗೌತಮ ಮಹರ್ಷಿಯ ಮಗ. ಈತನ ತಾಯಿ ಬ್ರಹ್ಮನ ಮಾನಸಪುತ್ರಿಯಾದ ಅಹಲ್ಯೆ. ನೋ -- ಅಹಲ್ಯೆ. ಇವನು ವಿದೇಹರಾಜನ ಪುರೋಹಿತನಾಗಿದ್ದ (ಮ. ಅನು. ರಾಮಾ. ಬಾಲ). ೨. ಇವನು ಇನ್ನೊಬ್ಬ ಗೌತಮ ಋಷಿಯ ಪುತ್ರ. ಇವನ ತಾಯಿ ವಿಂಧ್ಯಾಶ್ವ ರಾಜಪುತ್ರಿ ಅಹಲ್ಯೆ. ಈತನ ಸಹೋದರ ಚಿರಕಾರಿ. ಇವನ ಮಗನಾದ ಸತ್ಯಧೃತಿಯು ಕೃಪಾಚಾರ್ಯನ ವಂಶದ ಮೂಲಪುರುಷ (ಭಾಗ).

ಶತಾನೀಕ -- ೧. ಪಾಂಡವರ ಪ್ರಪೌತ್ರನಾದ ಜನಮೇಜಯನ ಮಗ. ಈತನ ಮಗ ಅಶ್ವಮೇಧದತ್ತ. ಶತಾನೀಕನು ಸ್ವರ್ಗಲೋಕದಲ್ಲಿ ಅಹಿದಂಷ್ಟ್ರ ಮತ್ತು ಸ್ಥೂಲಶಿರರೆಂಬ ರಕ್ಕಸರೊಡನೆ ಯುದ್ಧಮಾಡುವಾಗ ಸ್ವರ್ಗಸ್ಥನಾದನು. ಆಗ

ಇಂದ್ರನು ಇವನ ಕಳೇಬರವನ್ನು ಭೂಮಿಗೆ ಕಳುಹಿಸಿದನು. ಶತಾನೀಕನ ಪತ್ನಿ ವಿಷ್ಣುಮತಿಯು ಪತಿಯ ಶವದೊಂದಿಗೆ ಸಹಗಮನ ಮಾಡಿದಳು.

ಶತಾನೀಕನ ವೇದಾಧ್ಯಯನದ ಗುರು ಯಾಜ್ಞವಲ್ಕ್ಯ ; ಅಸ್ತ್ರವಿದ್ಯಾಗುರು ಕೃಪಾಚಾರ್ಯ. ಇವನು ಶೌನಕಾಚಾರ್ಯನಿಂದ ಆತ್ಮಜ್ಞಾನದಲ್ಲಿ ನಿಪುಣನಾದನು (ವಿಷ್ಣುಪು). ೨. ಮತ್ಸ್ಯ ರಾಜನಾದ ವಿರಾಟನ ಸೋದರ. ಇವನು ಭೀಷ್ಮಾಚಾರ್ಯನಿಂದ ಹತನಾದನು. ದ್ರೋಣಾಚಾರ್ಯನಿಂದ ಹತನಾದನೆಂದೂ ಇದೆ. ಶತಾನೀಕನ ತಮ್ಮ ಮದಿರಾಕ್ಷ (ಮ. ವಿ. ಭೀ). ೩. ನಕುಲನ ಮಗ. ಈತನ ತಾಯಿ ದ್ರೌಪದಿ. ಯುದ್ಧದ ಹದಿನೆಂಟನೇ ರಾತ್ರಿ ಅಶ್ವತ್ಥಾಮನಿಂದ ಈತನ ಮರಣವಾಯಿತು (ಮ. ಆ., ಸೌ). ೪. ಚಂದ್ರವಂಶದ ಒಬ್ಬ ಮಹರ್ಷಿ (ಮ. ಆ).

ಶತಾಯು -- ಚಂದ್ರವಂಶದ ಪುರೂರವನ ಮಗ ; ಈತನ ತಾಯಿ ಊರ್ವಶಿ (ಮ. ಆ).

ಶತ್ರುಘ್ನ -- ೧. ಸೂರ್ಯವಂಶದ ದಶರಥನ ಮಗ. ಈತನ ತಾಯಿ ಸುಮಿತ್ರೆ; ಇವನ ಸಹೋದರ ಲಕ್ಷ್ಮಣ. ಶ್ರೀರಾಮನು ಜನಿಸಿದ ಮೂರನೇ ದಿನ ಅಶ್ಲೇಷಾ ನಕ್ಷತ್ರದ ನಾಲ್ಕನೇ ಪಾದ, ಕರ್ಕಾಟಕ ಲಗ್ನದಲ್ಲಿ ಈತನು ಜನಿಸಿದನು. ಶ್ರೀರಾಮಭರತರು ಇವನ ಸಹೋದರರು. ನೋ -- ಶ್ರೀರಾಮ, ಭರತ, ಲಕ್ಷ್ಮಣ, ಸುಮಿತ್ರ. ಇವನು ಕುಶಧ್ವಜ ಜನಕನ ಕಿರಿಯ ಮಗಳಾದ ಶ್ರುತಕೀರ್ತಿಯನ್ನು ವಿವಾಹವಾದ. ಇವನು ಲವಣಾಸುರನನ್ನು ಕೊಂದನು. ಇವನಿಗೆ ಸುಬಾಹು ಮತ್ತು ಶತ್ರುಘಾತಿ ಎಂಬಿಬ್ಬರು ಮಕ್ಕಳು. ಸುಬಾಹುವು ಮಧುರೆಯಲ್ಲಿ ರಾಜನಾದ ಶತ್ರುಘಾತಿಯು ವೈದಿಶ ನಗರದ ರಾಜನಾದ. ಇತ್ತ ಶತ್ರುಘ್ನನು ಅಣ್ಣನನ್ನು ನೋಡದೆ ಬಹುಕಾಲವಾದುದರಿಂದ ತನ್ನ ಇಬ್ಬರು ಮಕ್ಕಳನ್ನು ಮಧುರೆ ಮತ್ತು ವಿದಿಶಾನಗರದಲ್ಲಿ ಅಭಿಷೇಕ ಮಾಡಿ, ತಾನು ಅಯೋಧ್ಯೆಗೆ ಬರುತ್ತ ದಾರಿಯಲ್ಲಿ ವಾಲ್ಮೀಕಿಯ ಆಶ್ರಮವನ್ನು ಹೊಕ್ಕನು. ಅಲ್ಲಿ ಕುಶಲವರ ಗೀತೆಗಳನ್ನು ಕೇಳಿ ಸಂತಸಪಟ್ಟು, ಅಯೋಧ್ಯೆಯನ್ನು ಹೊಕ್ಕು ಅಲ್ಲಿ ಸೀತಾಪರಿತ್ಯಾಗದಿಂದ ದುಃಖಿತನಾದ ರಾಮಚಂದ್ರನನ್ನು ಕಂಡು ನಮಸ್ಕರಿಸಿದನು. ರಾಮನು ಇವನನ್ನು ಕಂಡು ತುಂಬಾ ಆನಂದಿಸಿದನು. ಇವನು ಮಧುರೆಯಲ್ಲಿ ನಡೆದ ಎಲ್ಲಾ ವಿಷಯಗಳನ್ನು ಅಣ್ಣನಿಗೆ ತಿಳಿಸಿದರೂ ಸೀತಾವೃತ್ತಾಂತವನ್ನು ಮಾತ್ರ ವಾಲ್ಮೀಕಿಯ ಅಪ್ಪಣೆಯಂತೆ ಶ್ರೀರಾಮನಿಗೆ ತಿಳಿಸಲಿಲ್ಲ. (ಈತನಿಗೆ ಸುಬಾಹು ಮತ್ತು ಯೂಪಕೇತು ಎಂಬ ಮಕ್ಕಳಿದ್ದರು.) (ಆನಂ. ರಾ., ರಾಮ, ಬಾಲ, ಉತ್ತರ., ಅಯೋ). ೨. ವಸುದೇವನ ಮೂರನೇ ಸೋದರನಾದ ದೇವಶ್ರವನ ಮಗ. ಇವನು ಹುಟ್ಟಿದೊಡನೆ ತಂದೆಯು

ಯಾವುದೋ ಕಾರಣಕ್ಕಾಗಿ ಇವನನ್ನು ಅರಣ್ಯದಲ್ಲಿ ಬಿಟ್ಟು ಬಂದುದರಿಂದ ಭಿಲ್ಲರಿಂದ ಪರಿಪೋಷಿತನಾಗಿ ಏಕಲವ್ಯನೆಂದು ನಿಷಾದ ಜಾತಿಯಲ್ಲಿ ಹೆಸರಾದನು (ಹರಿ).

ಶತ್ರುಜಿತ್ -- ಪೌಷ್ಯನ ಮಗ. ನೋ -- ಮನೋರಮ. ಪೌಷ್ಯನಿಗೆ ಧ್ರುವಸಂಧಿ ಎಂಬ ಹೆಸರೂ ಇದೆ (ದೇಪೀಭಾ).

ಶತ್ರುಂಜಯ -- ೧. ದ್ರುಪದನ ಮಗ. ಇವನು ಅಶ್ವತ್ಥಾಮನಿಂದ ಹತನಾದನು (ಮ.ದ್ರೋ). ೨. ಸೂತನೊಬ್ಬ. ಇವನು ಕರ್ಣನ ಸೋದರ. ಇವನು ಅರ್ಜುನನಿಂದ ಹತನಾದನು (ಮ.ದ್ರೋ). ೩. ಕೌರವಪಕ್ಷದ ರಾಜನೊಬ್ಬ. ಇವನು ಅಭಿಮನ್ಯುವಿನಿಂದ ಪರಾಜಿತನಾದನು (ಮ.ದ್ರೋ). ೪. ಜಯದ್ರಥನ ಸಹೋದರ (ಮ.ವ). ೫. ಕ್ಷತ್ರಿಯ; ಚಂದ್ರವಂಶದವನು. ಧೃತರಾಷ್ಟ್ರನ ಮಗ (ಮ.ಭೀ). ಭೀಮನಿಂದ ಹತನಾದನು (ಮ.ದ್ರೋ).

ಶತ್ರುಂತಪ -- ಕರ್ಣನ ತಮ್ಮ. ಅರ್ಜುನನಿಂದ ಉತ್ತರಗೋಗ್ರಹಣದಲ್ಲಿ ಹತನಾದನು (ಮ.ವಿ).

ಶತ್ರುಸಹ--ಕ್ಷತ್ರಿಯ; ಚಂದ್ರವಂಶದವನು ಧೃತರಾಷ್ಟ್ರನ ಮಗ. ಭೀಮನಿಂದ ಹತನಾದನು (ಮ.ದ್ರೋ).

ಶನಿ--ಇವನಿಗೆ ಶನೈಶ್ಚರನೆಂಬ ಹೆಸರೂ ಇದೆ. ಇವನು ಸೂರ್ಯ ಮತ್ತು ಛಾಯಾದೇವಿಯರ ಮಗ. ತಪತಿಯು ಈತನ ಸಹೋದರಿ. ಸಾವರ್ಣಿಮನುವು ಈತನ ಸಹೋದರ. ನೋ--ಛಾಯಾ, ಯಮ, ಸಂಜ್ಞಾ. ಇವನು ಒಂದು ಗ್ರಹ (ಭಾಗ., ಹರಿ., ಮತ್ಸ್ಯಪು., ಲಿಂಗಪು).

ಶಂತನು--ಚಂದ್ರವಂಶದ ಪ್ರತೀಪನ ಮಗ. ಈತನ ತಾಯಿ ಸುನಂದಿ. ಸಹೋದರರು ದೇವಾಪಿ ಮತ್ತು ಬಾಹ್ಲೀಕ. ಬ್ರಹ್ಮಸಭೆಯಲ್ಲಿದ್ದ ಮಹಾಭಿಷನೆಂಬ ರಾಜನೇ ಶಂತನು ಆಗಿ ಅವತರಿಸಿದನು. ಗಂಗಾದೇವಿಯು ಒಮ್ಮೆ ಬ್ರಹ್ಮನಿಗೆ ಬಿಳಿಯ ಚಾಮರವನ್ನು ಬೀಸುತ್ತಿದ್ದಳು. ಆ ಚಾಮರದ ಗಾಳಿಯಿಂದ ಅವಳುಟ್ಟ ಸೀರೆಯು ತುಸು ಸರಿಯಲು, ಸಭೆಯಲ್ಲಿ ಕುಳಿತವರೆಲ್ಲರೂ ಕೆಳಮೋರೆ ಹಾಕಿದರು. ಆದರೆ ಮಹಾಭಿಷನು ಮಾತ್ರ ಹಾಗೆ ಮಾಡದುದರಿಂದ ಬ್ರಹ್ಮನು ಅವನನ್ನು ಶಪಿಸಲು, ಅವನೇ ಶಂತನು ಆಗಿ ಹುಟ್ಟಿ ಗಂಗೆಯನ್ನು ಪತ್ನಿಯಾಗಿ ಸ್ವೀಕರಿಸಿದನು. ಈತನಿಗೆ ಗಂಗೆಯಲ್ಲಿ ದೇವವ್ರತನೆಂಬ ಮಗನೂ, ಸತ್ಯವತಿಯಲ್ಲಿ ಚಿತ್ರಾಂಗದ ಮತ್ತು ವಿಚಿತ್ರವೀರ್ಯರೆಂಬ ಮಕ್ಕಳೂ ಹುಟ್ಟಿದರು. ತನಗೆ ಸತ್ಯವತಿಯನ್ನು ವಿವಾಹ

ಮಾಡಿಸಿದ ದೇವವ್ರತನಿಗೆ ಇವನು 'ಇಚ್ಛಾಮರಣಿಯಾಗು' ಎಂದು ವರವಿತ್ತನು. ನೋ -- ಭೀಷ್ಮ, ಸತ್ಯವತಿ (ಮ.ಆ).

ಪ್ರತೀಪನು ಉಗ್ರತಪಸ್ಸು ಮಾಡುತ್ತ ಇಂದ್ರಿಯವನ್ನು ನಿಗ್ರಹಿಸಿ, ಶಾಂತನಾಗಿದ್ದ ಕಾಲದಲ್ಲಿ ಈತನು ಹುಟ್ಟಿದುದರಿಂದ ಈತನಿಗೆ ಶಂತನು ಎಂದು ನಾಮಕರಣ ಮಾಡಿದರು. ಇವನೇ ಮಹಾಭಿಷಕ್ಕು (ಮ.ಆ).

ಶಬರಿ -- ಆನೆಗೊಂದಿಯಲ್ಲಿದ್ದ ಒಬ್ಬ ಬೇಡತಿ. ಇಲ್ಲಿ ತುಂಗಭದ್ರೆಯ ಎರಡು ಸೀಳುಗಳ ನಡುವೆ ವೈಷ್ಣವರ ಒಂಭತ್ತು ಮಂದಿ ಸ್ವಾಮಿಗಳ ವೃಂದಾವನಗಳಿವೆ. ಇವಕ್ಕೆ ನವ ವೃಂದಾವನವೆನ್ನುತ್ತಾರೆ. ಇದರ ಸಮೀಪದಲ್ಲೇ ಶಬರಿಯ ಆಶ್ರಮವಿದೆ. ವಾಲ್ಮೀಕಿ ರಾಮಾಯಣದಲ್ಲಿ ಈಕೆ ರಾಮನನ್ನು ಅರ್ಘ್ಯಪಾದ್ಯಗಳಿಂದುಪಚರಿಸಿ ಪಂಪಾತೀರದಲ್ಲಿ ಬೆಳೆಸಿದ ಬಗೆಬಗೆಯ ಪದಾರ್ಥಗಳನ್ನು ಆತನ ಮುಂದೆ ತಂದಿಟ್ಟಳೆಂದಿದೆ. ಪದ್ಮ ಪುರಾಣದಲ್ಲಿ ತಾನು ಹಣ್ಣುಗಳನ್ನು ರುಚಿನೋಡಿ, ಆಮೇಲೆ ಶ್ರೀರಾಮನ ಬಾಯಿಗೆ ಹಾಕಿದಳೆಂದಿದೆ. ಶ್ರೀರಾಮಭಕ್ತೆಯಾದ ಈಕೆ ಸೀತೆಯನ್ನು ಹುಡುಕುತ್ತ ಬಂದ ಶ್ರೀರಾಮನನ್ನುಪಚರಿಸಿ, ಅವನ ಮುಂದೆಯೇ ಅಗ್ನಿಪ್ರವೇಶ ಮಾಡಿ ಸ್ವರ್ಗಸ್ಥಳಾದಳು. ಮತಂಗಮುನಿಯ ಶಿಷ್ಯೆ ಈಕೆ. ಈಕೆ ಐದುನೂರು ವರ್ಷದ ಮುದುಕಿ, ಶ್ರೀರಾಮನ ಪರಮಭಕ್ತೆ (ರಾಮಾ.ಅರಣ್ಯ).

ಶಬಲಾಶ್ವ -- ೧. ಚಂದ್ರವಂಶದ ಅವಿಕ್ಷಿತರಾಜನ ಮಗ (ಮ.ಆ) ೨. ದಕ್ಷ ಮತ್ತು ಅಸಿಕ್ನಿಯರ ಮಗ. ಇವನು ನಾರದನಿಂದ ಉಪದೇಶಹೊಂದಿ ತಪಸ್ಸಿಗೆ ಹೋದನು. ಇವನಿಗೆ ಸಾವಿರ ಮಂದಿ ಸೋದರರು. ನೋ -- ದಕ್ಷ, ಕಾಮಧೇನು, ಶಬಲೆ (ರಾಮಾ. ಬಾಲ).

ಶಮ -- ೧. ಧರ್ಮಪ್ರಜಾಪತಿಯ ಪುತ್ರ. ಈತನ ಪತ್ನಿ ಪ್ರಾಪ್ತಿ; ಸಹೋದರರು ಕಾಮ ಮತ್ತು ಹರ್ಷ. ೨. ಅಹರೆಂಬ ವಸುವಿನ ಮಗ. ಜ್ಯೋತಿ, ಶಾಂತಿ ಮತ್ತು ಮುನಿ ಈತನ ಸಹೋದರರು.

ಶಮಿತೃ -- ಯಾಗಪಶುವನ್ನು ಕೊಲ್ಲತಕ್ಕ ಋತ್ವಿಕ್ಕು (ಮ.ಕ).

ಶಮೀಕ -- ೧. ಶ್ಯಾಮನೆಂಬ ಕೃಷ್ಣನ ಪಿತೃವ್ಯನಿಗೆ (ಚಿಕ್ಕಪ್ಪ ಅಥವಾ ದೊಡ್ಡಪ್ಪ) ಸಂತತಿ ಇಲ್ಲದ್ದರಿಂದ ಅವನು ತನ್ನ ತಮ್ಮನಾದ ಶಮೀಕನನ್ನೇ ಮಗನನ್ನಾಗಿ ದತ್ತಕ್ಕೆ ತೆಗೆದುಕೊಂಡನು. ಇವನಿಗೆ ಯಾದವರ ಪರಿಮಿತ ರಾಜ್ಯವನ್ನು ಕಂಡು ಅವಮಾನ ಎನ್ನಿಸಿ ಮಹಾರಾಜನ ಗೌರವವನ್ನು ಪಡೆಯಬೇಕೆಂದು ಧರ್ಮರಾಜನ ಸಹಾಯದಿಂದ ರಾಜಸೂಯಯಾಗವನ್ನು ಮಾಡಿ ಸಾರ್ವಭೌಮನೆನ್ನಿಸಿದನು. (ಹರಿ). ೨. ಶೃಂಗಿ ಎಂಬ ಋಷಿಯ ತಂದೆ.

ಬೇಟೆಯಾಡಲು ಬಂದ ಪರೀಕ್ಷಿದ್ರಾಜನು ಸಮಾಧಿಯಲ್ಲಿದ್ದ ಈತನ ಕೊರಳಿಗೆ ಮೃತಸರ್ಪವನ್ನು ಸುತ್ತಿ ಹೋದನು. ಶೃಂಗಿ ಬಂದು ನೋಡಿ ರಾಜನಿಗೆ ಶಾಪಕೊಟ್ಟನು. ಈತನ ಶಿಷ್ಯ ಗೌರಮುಖ. ನೋ -- ಪರೀಕ್ಷಿತ (ಮ.ಆ., ಭಾಗ).

ಶಮೀವೃಕ್ಷ -- ಬನ್ನಿಯ ಮರ. ವಿರಾಟನಗರದ ಸಮೀಪದ ಶ್ಮಶಾನದಲ್ಲಿ ಈ ಮಹಾ ವೃಕ್ಷವಿತ್ತು. ಪಾಂಡವರು ಅಜ್ಞಾತವಾಸಕಾಲದಲ್ಲಿ ಇದರಲ್ಲಿ ತಮ್ಮ ಆಯುಧವನ್ನಿಟ್ಟು ಹೋದರು (ಮ.ವಿ).

ಶಮೀವೃಕ್ಷವು ಪವಿತ್ರವಾದುದು. ಈ ವೃಕ್ಷವು ಶನಿಗ್ರಹ ಪ್ರೀತ್ಯರ್ಥವಾದುದು. ಪೂರ್ವದಲ್ಲಿ ಆರ್ಯರು ಶಮಿಯಿಂದ ಬೆಂಕಿಯನ್ನುಂಟು ಮಾಡುತ್ತಿದ್ದರು. ರಘು ಮಹಾರಾಜನಿಗೆ ಶಮೀವೃಕ್ಷದ ಬುಡದಲ್ಲಿ ದ್ರವ್ಯವರ್ಷವಾದುದರಿಂದ ಶಮೀವೃಕ್ಷವು ಬಂಗಾರಕ್ಕೆ ಸಮಾನವೆಂಬ ಭಾವನೆ ಇದೆ. ಪಾಂಡವರು ಶಮೀವೃಕ್ಷದಿಂದ ಆಯುಧ ಪಡೆದಮೇಲೆ ಅವರ ಉತ್ಕರ್ಷವಾಗುತ್ತ ಹೋಯಿತು. ಅದಕ್ಕಾಗಿ ನವರಾತ್ರಿಯ ವಿಜಯದಶಮಿ (ವಿಜಯದ+ ದಶಮಿ) ದಿನ ಶಮೀಪೂಜೆಯೆಂದರೆ ಸರ್ವವಿಜಯಕ್ಕಾಗಿ ಸರ್ವಶಕ್ತನಾದ ಅಗ್ನಿನಾರಾಯಣನನ್ನು ಪೂಜಿಸುವುದಾಗಿದೆ. ಶಮಿತೀರ್ಥವೆಂಬ ತೀರ್ಥವಿಶೇಷವಿದೆ.

ಶಂಪಾಕ (ಶಮ್ಯಾಕ) -- ಹಸ್ತಿನಾವತಿಯ ಒಬ್ಬ ತಪಸ್ವೀ ಬ್ರಾಹ್ಮಣ. ಇವನು ಮಹಾಜ್ಞಾನಿಯಾಗಿದ್ದು ಭೀಷ್ಮನ ಸ್ನೇಹಿತನಾಗಿದ್ದನು (ಮ.ಶಾಂ).

ಶಂಬತಾ -- ಗಾಂಧಾರಿಯ ಸೋದರಿ; ಧೃತರಾಷ್ಟ್ರನ ಒಬ್ಬಳು ಪತ್ನಿ. ನೋ -- ಗಾಂಧಾರಿ, ಶಕುನಿ (ಮ.ಆ). ಸುಬಲರಾಜನ ಪುತ್ರಿ.

ಶಂಬರ -- ೧. ದನುವಿನ ಮಗನೊಬ್ಬ; ರಾಕ್ಷಸ. ಮಹಾಮಾಯಾವಿ. ಈತನ ವಧೆ ಶ್ರೀಕೃಷ್ಣನ ಪುತ್ರನಾದ ಪ್ರದ್ಯುಮ್ನನಿಂದಾಯಿತು. ನೋ -- ಪ್ರದ್ಯುಮ್ನ (ಭಾಗ., ಹರಿ). ಬ್ರಾಹ್ಮಣರ ಮಹಿಮೆಯ ಕುರಿತಾಗಿ ಇಂದ್ರನೊಡನೆ ಸಂವಾದ ನಡೆಸಿದ (ಮ.ಅನು). ೨. ತಿಮಿಧ್ವಜನೆಂಬ ರಾಕ್ಷಸನಿಗೆ ಶಂಬರನೆಂಬ ಹೆಸರಿತ್ತು. ಈ ಶಂಬರಾಸುರನ ಯುದ್ಧದಲ್ಲಿ ದಶರಥನು ಇಂದ್ರನಿಗೆ ಸಹಾಯ ಮಾಡಲು ಹೋಗಿದ್ದ. ನೋ -- ತಿಮಿಧ್ವಜ (ರಾಮಾ. ಅಯೋ).

ಶಂಬಲ (ಸಂಬಲ) -- ಕಲ್ಕ್ಯವತಾರವಾದ ಗ್ರಾಮ. ಈ ಗ್ರಾಮದ ವಿಷ್ಣುಯಶನೆಂಬ ಬ್ರಾಹ್ಮಣನಿಗೂ ಸುಮತಿ ಎಂಬ ಈತನ ಧರ್ಮಪತ್ನಿಗೂ ವಿಷ್ಣುವರ್ಮನೆಂಬ ಬಾಲಕನು ಮಗನಾಗಿ ಹುಟ್ಟಿ, ಶಿವನನ್ನು ತಪಸ್ಸಿನಿಂದ

ಮೆಚ್ಚಿಸಿ, ಒಂದು ಕುದುರೆ ಮತ್ತು ಖಡ್ಗವನ್ನು ಪಡೆದು, ಕಲಿಪುರುಷನನ್ನು ಕೊಂದು ಧರ್ಮವನ್ನು ಸ್ಥಾಪಿಸಿದನು. ನೋ -- ಕಲ್ಕಿ (ಮ.ವ).

ಶಂಬುಕ -- ಶೂದ್ರತಪಸ್ವಿ. ಶ್ರೀರಾಮನ ರಾಜ್ಯಭಾರದ ಕಾಲದಲ್ಲಿ ಈ ಶೂದ್ರನು ಅಂದಿನ ವರ್ಣನಿಯಮವನ್ನು ಮುರಿದು ತಪಸ್ಸಿನಲ್ಲಿ ಆಸಕ್ತನಾದುದರಿಂದ ರಾಮರಾಜ್ಯದಲ್ಲಿ ಒಬ್ಬ ಬ್ರಾಹ್ಮಣಪುತ್ರನಿಗೆ ಅಕಾಲಮರಣವು ಪ್ರಾಪ್ತವಾಯಿತು. ಶ್ರೀರಾಮನು ಪುಷ್ಪಕ ವಿಮಾನದಲ್ಲಿ ಕುಳಿತು ಈ ಶೂದ್ರತಪಸ್ವಿಯ ಬಳಿಗೆ ಹೋಗಿ ಆತನ ಶಿರಚ್ಛೇದ ಮಾಡಿದೊಡನೆ ಆ ಬ್ರಾಹ್ಮಣ ಬಾಲಕನು ಬದುಕಿಕೊಂಡನು. ಶ್ರೀರಾಮನು ಆ ಕಾಲದಲ್ಲಿ ಶಂಬುಕನೊಡನೆ -- ಶೂದ್ರರಿಗೆ ಹರಿಯ ಸ್ಮರಣೆ ಪೂಜೆ ವಂದನೆಗಳೇ ಸದ್ಗತಿಯ ಮಾರ್ಗಗಳು, ಅವರು ಎಲ್ಲರಿಗೂ ನಮಸ್ಕರಿಸುವಾಗ 'ರಾಮ ರಾಮ' ಎನ್ನುವುದರಿಂದಲೇ ಸದ್ಗತಿಯುಂಟಾಗುವುದು' ಎಂದಿದ್ದನು (ಆನಂ.ರಾ., ರಾಮಾ., ಉತ್ತರ., ಮ., ಶಾಂ).

ಶಂಭು -- ೧. ಶಿವನ ಹೆಸರು. ೨. ಅಗ್ನಿವಿಶೇಷ (ಮ.ವ). ೩. ಶುಕಮಹರ್ಷಿಗೆ ಪೀವರಿಯಲ್ಲಿ ಹುಟ್ಟಿದ ಮಗ. ನೋ -- ಪೀವರಿ.

ಶರಣ್ಯು -- ಸೂರ್ಯನ ದ್ವಿತೀಯ ಪತ್ನಿ; ದೇವಶಿಲ್ಪಿಯಾದ ತ್ವಷ್ಟೃವಿನ ಪುತ್ರಿ.

ಶರತಲ್ಪ--ಭೀಷ್ಮನ ಪ್ರಾಯೋಪವೇಶಕ್ಕಾಗಿ ಅರ್ಜುನನಿಂದ ನಿರ್ಮಿತವಾದ ಬಾಣಮಯ ತಲ್ಪ; ಇದಕ್ಕೆ ಮೂರು ಕವಲಂಬುಗಳೇ ದಿಂಬು. ಭೀಷ್ಮನು ವಸುವಾಗಿದ್ದಾಗ ವಸಿಷ್ಠನ ಕಾಮಧೇನುವನ್ನು ಮುಳ್ಳು ಕೋಲಿನಿಂದ ಹೊಡೆದುದರಿಂದ, ವಸಿಷ್ಠನ ಶಾಪದಿಂದ ಶರತಲ್ಪದ ಮೇಲೆ ಮಲಗುವ ಯೋಗ ಈತನಿಗೆ ಬಂತು. ನೋ -- ಅಷ್ಟವಸು., ಭೀಷ್ಮ (ಮ.ಆ., ಭೀ., ದ್ರೋ).

ಶರದ್ವಂತ -- ಗೌತಮ ಮುನಿಯ ವಂಶೋತ್ಪನ್ನನಾದ ಸತ್ಯಧೃತಿಯ ಮಗ. ಈತನ ಮಕ್ಕಳು ಕೃಪಾಚಾರ್ಯ ಮತ್ತು ಕೃಪಿ. ಶರದ್ವಂತನು ತಪಸ್ಸಿನ ಕಾಲದಲ್ಲಿ ಜಾಲವತಿ ಎಂಬ ಅಪ್ಸರೆಯನ್ನು ಕಂಡು ಶರಸ್ತಂಭದಲ್ಲಿ (ಜೊಂಡುಹಲ್ಲು) ರೇತಸ್ಸು ಪತನವಾಗಲು, ಅಲ್ಲಿಂದ ಕೃಪ ಮತ್ತು ಕೃಪಿಗಳು ಜನಿಸಿದರು. ನೋ -- ಶಾಂತನು (ಶಂತನು) (ಮ.ಆ).

ಶರಭ -- ೧. ದನುವಿನ ಪುತ್ರನಾದ ರಾಕ್ಷಸ. ೨. ಸರ್ಪವೊಂದು. ೩. ಶಿಶುಪಾಲನ ಮಗ. ಈತನು ಅಶ್ವಮೇಧದ ಕುದುರೆಯ ರಕ್ಷಣಾರ್ಥವಾಗಿ ಬಂದ ಅರ್ಜುನನನ್ನು ಪೂಜಿಸಿದನು. (ಮ.ಅಶ್ವ). ೪. ಗಾಂಧಾರ ರಾಜನಾದ ಸುಬಲನ ಮಗ. ಇವನು ಭೀಮನಿಂದ ಹತನಾದನು. ಶಕುನಿಯ ಸೋದರ (ಮ.ದ್ರೋ). ೫. ರಾಜರ್ಷಿಯೊಬ್ಬ (ಮ.ಸ). ೬. ರಾಮನ ಸೇವೆಯ ವಾನರನೊಬ್ಬ (ರಾಮಾ.

ಯುದ್ಧ). ೭. ಒಬ್ಬ ವೈಶ್ಯ. ಗೌರಿಯ ಆರಾಧನೆಯಿಂದ ಇವನು ಒಬ್ಬ ಸತ್ಪುತ್ರನನ್ನು ಪಡೆದು ಇಂದ್ರಪ್ರಸ್ಥದಲ್ಲಿ ವಾಸವಾಗಿದ್ದನು (ಸ್ಕಾಂ.ಪು). ೮.ಹಿರಣ್ಯಕಶಿಪುವಿನ ಪೀಡೆಯನ್ನು ಸಹಿಸಲಾರದೆ ದೇವತೆಗಳು ಶಿವನ ಮೊರೆಹೋಗಲು ಅವನು ಹರಿಯನ್ನು ಕರೆದು ಆ ಖಳನನ್ನು ಕೊಲ್ಲುವಂತೆ ಆಜ್ಞಾಪಿಸಿದನು. ಹರಿಯು ಆ ರಕ್ಕಸನಿಗೆ ಬ್ರಹ್ಮನು ಕೊಟ್ಟ ವರದ ಶಕ್ತಿಯನ್ನು ನೆನೆದು, ಆ ರಕ್ಕಸನ ಮನೆಯ ಕಂಬದಲ್ಲಿ ನರಸಿಂಹರೂಪದಲ್ಲಿ ಹುಟ್ಟಿ, ಅವನನ್ನು ಹಿಡಿದು ಸಂಜೆಯ ಹೊತ್ತಿನಲ್ಲಿ ಹೊಸ್ತಿಲ ಮೇಲೆ ಕುಳಿತು, ಆತನನ್ನು ತೊಡೆಯ ಮೇಲೆ ಕೆಡೆದುಕೊಂಡು, ಉಗುರುಗಳ ಕೊನೆಯಿಂದ ಆತನ ಹೊಟ್ಟೆಯನ್ನು ಸೀಳಿ, ರಕ್ತವನ್ನು ಕುಡಿದು, ಲೋಕಕ್ಕೇ ಸಂತಸವನ್ನುಂಟುಮಾಡಿದನು. ಮುಂದೆ ನರಸಿಂಹನು ಮದೋನ್ಮತ್ತನಾಗಿ ಹಿರಣ್ಯಕಶಿಪುವಿಗೆ ಎಂಟುಮಡಿಯಾಗಿ ಲೋಕವನ್ನು ಪೀಡಿಸಹತ್ತಲು, ದೇವತೆಗಳೆಲ್ಲಾ ಕೂಡಿ ಪುನಃ ಶಿವನೊಡನೆ ಬಿನ್ನವಿಸಲು ಆತನು ವೀರೇಶನನ್ನು ಕರೆದು -- 'ನರಸಿಂಹನಿಗೆ ನೀತಿಯನ್ನುಪದೇಶಿಸು, ಅವನು ಕೇಳದಿದ್ದರೆ ಅವನ ದೇಹವನ್ನು ಸೀಳಿ, ಅವನ ತಲೆಯನ್ನೂ, ಚರ್ಮವನ್ನೂ ತೆಗೆದುಕೊಂಡು ಬಾ' ಎಂದು ಹೇಳಿಕಳುಹಿಸಿದನು. ವೀರೇಶನು ಶಿವನಾಜ್ಞೆಯಂತೆ ನರಸಿಂಹನಿಗೆ ಹಲವು ಬುದ್ಧಿವಾದಗಳನ್ನು ಹೇಳಿದರೂ ಕೇಳದಿರಲು ವೀರೇಶನು ಕೋಪದಿಂದ, ನರಹರಿಯ ತಲೆಯನ್ನು ತನ್ನ ಎಡಗಾಲಿನಿಂದೊದೆದನು. ಆಗ ನರಹರಿಯು ಭೂಮಿಯ ಮೇಲೆಬಿದ್ದು ಚೇತರಿಸಿಕೊಂಡೆದ್ದು ವೀರೇಶನನ್ನು ಗುದ್ದಬೇಕೆನ್ನುವಷ್ಟರಲ್ಲಿ ವೀರೇಶನು ಶರಭಾವತಾರವನ್ನು ತಾಳಿ ತನ್ನ ಚಂಚುವಿನಿಂದ ನರಸಿಂಹನ ಕುತ್ತಿಗೆಯನ್ನು ಕಚ್ಚಿಕೊಂಡು, ಆಕಾಶಕ್ಕೆ ಹಾರಿದನು. ಈ ರೀತಿ ವೀರೇಶನು ನರಸಿಂಹನನ್ನು ಕೊಂದು ಅವನ ಶಿರವನ್ನೂ, ಚರ್ಮವನ್ನೂ ತಂದೆಗೆ ತಂದೊಪ್ಪಿಸಿದನು. ಈಶ್ವರನು ನರಸಿಂಹನ ಮುಖಕ್ಕೆ ಕೀರ್ತಿಮುಖವೆಂದು ಹೆಸರಿಟ್ಟು, ಅದನ್ನು ಭೂಷಣಮಾಡಿಕೊಂಡು ಧರಿಸಿ, ಚರ್ಮವನ್ನು ತನ್ನ ಸಿಂಹಾಸನದ ಮೇಲೆ ಹಾಕಿಕೊಂಡನು (ಶಿವಪು).

ಶರಭಂಗ--ಗೌತಮಕುಲೋತ್ಪನ್ನನಾದ ಬ್ರಹ್ಮರ್ಷಿ. ಇವನ ಆಶ್ರಮ ಗೋದಾವರೀ ತೀರದ ದಂಡಕಾರಣ್ಯದಲ್ಲಿತ್ತು. ಇದರ ಸಮೀಪದಲ್ಲೇ ಶುಕ್ರಾಚಾರ್ಯರ ಆಶ್ರಮವಿತ್ತು. ನಾರದರು ಯುಧಿಷ್ಠಿರನೊಡನೆ ತೀರ್ಥಯಾತ್ರೆಯನ್ನು ಪ್ರಶಂಸಿಸುವಾಗ ಈ ವಿಚಾರವನ್ನು ಹೇಳಿದರು. ಅರಣ್ಯಕ್ಕೆ ಬಂದ ಶ್ರೀರಾಮನನ್ನು ಈ ಮುನಿಗಳು ಸಂದರ್ಶಿಸಿ ದೇಹ ಬಿಟ್ಟರು (ವ., ರಾಮಾ., ಅರಣ್ಯ).

ಶರವಣ -- ಶಿವಪಾರ್ವತಿಯರು ಕ್ರೀಡಾಸಕ್ತರಾದ ವನ. ಈ ವನಕ್ಕೆ ಪುರುಷರು ಬಂದರೆ ಸ್ತ್ರೀಯರಾಗುವಂತೆ ಪಾರ್ವತಿಯು ಶಾಪವಿತ್ತಿದ್ದಳು. ಒಮ್ಮೆ ಮನುವಿನ ಮಗನಾದ ಇಲ್ವಲನು ಬೇಟೆಯಾಡುತ್ತ ಇಲ್ಲಿಗೆ ಬಂದು ಸ್ತ್ರೀಯಾದನು. ಆಗ ಚಂದ್ರಪುತ್ರನಾದ ಬುಧನು ಈತನನ್ನು ಕಂಡು ಮೋಹಿಸಿ ಪುರೂರವನೆಂಬ ಪುತ್ರನನ್ನು ಪಡೆದನು. ನೋ -- ಇಲಾ, ಪುರೂರವ (ಭಾಗ., ಮತ್ಸ್ಯಪು).

ಶರಾವತಿ -- ೧. ಗುಜರಾತಿನಲ್ಲಿರುವ ಸಬರ್ಮತಿ ನದಿ. ಇದರ ದಡದಲ್ಲಿ ಅಹಮ್ಮದಾಬಾದು ಇದೆ. ಕೆಲವರು ಅಯೋಧ್ಯೆಯ ಬಳಿ ಫೈಜಾಬಾದಿನಲ್ಲಿ ಹರಿಯುವ ಸರಸ್ವತೀನದಿಯೇ ಶರಾವತಿ ಎನ್ನುತ್ತಾರೆ. ಪಶ್ಚಿಮಘಟ್ಟದಲ್ಲಿ ಹುಟ್ಟಿ ಉತ್ತರಕನ್ನಡದಲ್ಲಿ ಹರಿಯುವ ನದಿ. ಈ ನದಿಯು ಉಂಟುಮಾಡುವ ಗೇರುಸೊಪ್ಪೆ ತಡಸಲು ಅತ್ಯಂತ ಸುಂದರವಾದುದು. ಇಲ್ಲಿ ಶರಾವತಿ ನದಿಯು ಸುಮಾರು ೯೦೦ ಅಡಿ ಮೇಲಿನಿಂದ ಕೆಳಗೆ ಧುಮುಕುತ್ತದೆ. ನಾವು ಶಿರಸಿ ಸಿದ್ದಾಪುರಗಳ ಮೇಲಿನಿಂದ ಗೇರುಸೊಪ್ಪೆಗೆ ಹೋಗಬಹುದು. ಇದಕ್ಕೆ ಜೋಗದ ಜಲಪಾತವೆನ್ನುತ್ತಾರೆ. ಇಲ್ಲಿ ವಿದ್ಯುತ್ತನ್ನು ಉತ್ಪಾದಿಸುತ್ತಾರೆ (ಕ್ಷೇತ್ರದ). ೨.ಅಯೋಧ್ಯೆಯ ಬಳಿ ಹರಿಯುವ ಸರಸ್ವತೀ ನದಿಗೂ ಶರಾವತಿ ಎನ್ನುತ್ತಾರೆ.

ಶರಾಸನ -- ಧೃತರಾಷ್ಟ್ರನ ಮಗ; ಇವನು ಭೀಮನಿಂದ ಹತನಾದನು.

ಶರ್ಮಿಷ್ಠಾ -- ರಾಕ್ಷಸರಾಜನಾದ ವೃಷಪರ್ವನ ಮಗಳು (ಮ.ಆ., ದ್ರೋ). ಈಕೆ ಯಯಾತಿಯ ಎರಡನೆಯ ಹೆಂಡತಿ. ಈಕೆಯ ಮಕ್ಕಳು ದ್ರುಹ್ಯು, ಅನು, ಪೂರು. ಈಕೆಯು ಮಾತಿನ ಜಗಳಾಟದಲ್ಲಿ ದೇವಯಾನಿಯನ್ನು ಒಂದು ಬಾವಿಗೆ ನೂಕಿ ಹೋದಳು. ಬೇಟೆಯಾಡಲು ಬಂದ ಯಯಾತಿಯು ಈಕೆಯನ್ನು ಮೇಲಕ್ಕೆತ್ತಿದನು. ಶುಕ್ರಾಚಾರ್ಯನು ಶರ್ಮಿಷ್ಠೆಯನ್ನು ದೇವಯಾನಿಯ ದಾಸಿಯನ್ನಾಗಿ ಮಾಡಿದನು. ನೋ -- ಯಯಾತಿ, ದೇವಯಾನಿ (ಮ. ಆ., ಭಾಗ., ಮತ್ಸ್ಯಪು).

ಶರ್ಯಾತಿ--೧. ಸೂರ್ಯವಂಶದ ವೈವಸ್ವತ ಮನುವಿನ ಮಗ. ಇವನು ಪಯೋಷ್ಣೀ ನದೀತೀರದಲ್ಲಿ ಅನೇಕ ಯಜ್ಞಗಳನ್ನು ಮಾಡಿದನು. ಇದೇ ಪ್ರದೇಶದಲ್ಲೇ ನೃಗಮಹಾರಾಜನೂ, ದಕ್ಷಪ್ರಜಾಪತಿ ಮೊದಲಾದವರೂ ಗಯಮಹಾರಾಜನೂ ಅನೇಕ ಯಜ್ಞಗಳನ್ನು ಮಾಡಿದ್ದರು. ಶರ್ಯಾತಿ ಮಹಾರಾಜನು ಮಾಡಿದ ಯಜ್ಞದಲ್ಲಿ ಚ್ಯವನ ಮಹರ್ಷಿಯು ಅಶ್ವಿನೀದೇವತೆಗಳೊಡಗೂಡಿ ಸೋಮಪಾನ ಮಾಡಿದನು. ಅದನ್ನು ಕಂಡು ದೇವೇಂದ್ರನು ಕೋಪಗೊಂಡು ಚ್ಯವನಮಹರ್ಷಿಯನ್ನು ಹೊಡೆಯಲು ತನ್ನ ಕೈ

ಎತ್ತಲು ಆ ಕೈ ಹಾಗೆಯೇ ಅಲ್ಲಾಡದಿರುವಂತೆ ಚ್ಯವನಮಹರ್ಷಿಯು ಅಲ್ಲಿಯೇ ಸ್ತಂಭಿಸಿಬಿಟ್ಟನು. ನೋ -- ಸುಕನ್ಯಾ, ಚ್ಯವನ (ಮ.ವ). ೨. ಈತನು ಚಂದ್ರವಂಶದ ಪ್ರಾಚೀನ್ವಂತನ ಮಗನು. ಈತನ ತಾಯಿ ಅಶ್ಮಕಿ; ಹೆಂಡತಿ ತ್ರಿಶಂಕುಪುತ್ರಿಯಾದ ಸತ್ಯವ್ರತೆ; ಮಗನು ಅಹಂಯಾತಿ (ಮ.ಆ).

ಶಲ -- ೧. ಸೂರ್ಯವಂಶದ ಪರೀಕ್ಷಿತನ ಮಗ. ಈತನ ಸೋದರರು ದಲ ಮತ್ತು ಬಲರು. ಈತನು ಬೇಟೆಯಾಡುತ್ತ ವಾಮದೇವಋಷಿಯ ಆಶ್ರಮಕ್ಕೆ ಹೋದನು. ನೋ -- ದಲ, ಬಲ. ೨. ಧೃತರಾಷ್ಟ್ರನ ಮಗ (ಮ.ವ., ಆ., ಕ). ೩. ಸರ್ಪವೊಂದು (ಮ.ಆ). ೪. ಚಂದ್ರವಂಶದ ಕುರುವಂಶೀಯನಾದ ಸೋಮದತ್ತನ ಮಗ. ಈತನ ಸಹೋದರರು ಭೂರಿ ಮತ್ತು ಭೂರಿಶ್ರವರು. ಇವನು ದ್ರೌಪದಿಯ ಮಕ್ಕಳಿಂದ ಹತನಾದನು. ದೃಷ್ಟದ್ಯುಮ್ನನಿಂದ ಈತನ ಪುತ್ರನ ವಧೆಯಾಯಿತು (ಮ.ಆ).

ಶಲಭ -- ೧. ದನುಪುತ್ರನಾದ ರಾಕ್ಷಸ (ಮ.ಆ). ೨. ಪಾಂಡವಪಕ್ಷದ ಚೈದ್ಯನು; ಇವನು ಕರ್ಣನಿಂದ ಹತನಾದನು (ಮ.ಕ).

ಶಲಕರ -- ಸರ್ಪವೊಂದು (ಮ.ಆ).

ಶಲ್ಯ -- ಮದ್ರರಾಜ. ಇವನ ತಂದೆಯ ಹೆಸರು ಋತಾಯನ. ಈತನ ಸಹೋದರಿ ಪಾಂಡುವಿನ ಎರಡನೇ ಹೆಂಡತಿಯಾದ ಮಾದ್ರಿ. ಈತನು ಅತಿರಥ; ಗದಾಯುದ್ಧದಲ್ಲಿ ನಿಪುಣ; ಮಹಾಬಲಶಾಲಿ. ಪ್ರಹ್ಲಾದನ ತಮ್ಮನಾದ ಸಂಹ್ಲಾದನೇ ಶಲ್ಯನಾಗಿ ಜನಿಸಿದನು (ಮ.ಆ). ಇವನಿಗೆ ರುಕ್ಮಾಂಗದ ಮತ್ತು ರುಕ್ಮರಥರೆಂಬ ಇಬ್ಬರು ಮಕ್ಕಳಿದ್ದರು. ಇವನು ಕುರುಕ್ಷೇತ್ರ ಯುದ್ಧದಲ್ಲಿ ಪಾಂಡವರಿಗೆ ಸಹಾಯ ಮಾಡಲು ಬರುತ್ತಿದ್ದಾಗ ಕೌರವನ ಯುಕ್ತಿಗೆ ಬಲಿಬಿದ್ದು ಅವನ ಪಕ್ಷಕ್ಕೆ ಸೇರಬೇಕಾಯಿತು. ಇವನು ದುರ್ಯೋಧನನ ಪ್ರಾರ್ಥನೆಯಂತೆ ಕರ್ಣನ ಸಾರಥಿಯಾದನು. ಕರ್ಣನಿಗೂ, ಶಲ್ಯನಿಗೂ ವಾಕ್ಕಲಹ ಉಂಟಾಯಿತು. ಕರ್ಣನ ಮರಣಾನಂತರ ಈತನೇ ಸೇನಾಪತಿಯಾಗಿ ಧರ್ಮಜನಿಂದ ಹತನಾದನು. ಇದೇ ಕಾಲದಲ್ಲೇ ಈತನ ಸಹೋದರನ ವಧೆಯಾಯಿತು (ಮ.ಶ). ಶರೀರಶಕ್ತಿಯಲ್ಲಿ ಕೌರವ, ಭೀಮ, ಬಲರಾಮ, ಮತ್ತು ಶಲ್ಯರು ಸಮಾನರೆನ್ನುವುದಿದೆ (ಮ.ಉ., ದ್ರೋ., ಕ).

ಶಶಬಿಂದು -- ರಾಜರ್ಷಿ. ಇವನು ವೃಷ್ಣಿವಂಶದ ಚಿತ್ರರಥನ ಮಗ (ಭಾಗ., ಹರಿ). ಇವನ ನ್ಯಾಯ- ನೀತಿರೀತಿಗಳನ್ನನುಸರಿಸಿ ಅನೇಕ ರಾಜರು ರಾಜರ್ಷಿಪದವಿಯನ್ನು ಪಡೆದರು. ಇವನಿಗೆ ನೂರು ಸಾವಿರ ಪತ್ನಿಯರು. ಪ್ರತಿ ಪತ್ನಿಯಲ್ಲೂ ಸಾವಿರಾರು ಮಕ್ಕಳು. ಈತನ ಮಗಳಾದ ಬಿಂದುಮತಿಯು ಮಾಂಧಾತನ ಪತ್ನಿ (ಭಾಗ., ವಾಯುಪು). ಇವನು ಚಿತ್ರರಥನ ಮಗನಾದುದರಿಂದ

ಚೈತ್ರರಥನೆಂಬ ಹೆಸರೂ ಇದೆ (ಮ.ಶಾಂ).

ಶತಲೋಮ -- ರಾಜರ್ಷಿಯೊಬ್ಬ (ಮ.ಆಶ್ರ).

ಶಶಾದ -- ಸೂರ್ಯವಂಶದ ಇಕ್ಷ್ವಾಕುವಿನ ಪುತ್ರನಾದ ವಿಕುಕ್ಷಿಯ ಇನ್ನೊಂದು ಹೆಸರು. ಈತನ ಮಗ ಕಕುತ್ಸ್ಥ. ವಿಕುಕ್ಷಿಯು ಶ್ರಾದ್ಧಕ್ಕೆ ಮಾಂಸ ತರಲು ಹೋದವನು, ಒಂದು ಮೊಲವನ್ನು ಕೊಂದು ತಿಂದು, ಅವಶೇಷವನ್ನು ಇಕ್ಷ್ವಾಕುವಿಗೆ ತಂದುಕೊಟ್ಟನು. ಇದರಿಂದ ಇವನಿಗೆ (ಶಶ= ಮೊಲ, ಅದ= ತಿಂದವ) ಶಶಾದನೆಂದು ಹೆಸರಾಯಿತು. ಇಕ್ಷ್ವಾಕುವು ವಸಿಷ್ಠನ ಯೋಗಶಕ್ತಿಯಿಂದ ನಿಜವಾದ ವಿಷಯವನ್ನು ತಿಳಿದು ತನ್ನ ಮಗನನ್ನು ದೇಶದಿಂದ ಹೊರಡಿಸಿದನು (ಮ.ವ., ಭಾ).

ಶಶಿಕಲಾ -- ಇಕ್ಷ್ವಾಕುವಂಶದ ಸುದರ್ಶನರಾಜನ ಪತ್ನಿ. ನೋ -- ಸುದರ್ಶನ.

ಶಾಕದ್ವೀಪ -- ಸಪ್ತದ್ವೀಪಗಳಲ್ಲೊಂದು. ಪ್ರಿಯವ್ರತನ ಮಗನಾದ ಮೇಧಾತಿಥಿಯು ಇದನ್ನಾಳುತ್ತಿದ್ದನು ನೋ -- ಶಕ (ಭಾಗ., ದೇವೀಭಾ., ಮ.ಭೀ., ಮತ್ಸ್ಯಪು).

ಶಾಕಲ -- ೧. ಮದ್ರದೇಶದ ರಾಜಧಾನಿ. ಚಂದ್ರಭಾಗಾ ನದಿ ಮತ್ತು ಇರಾವತಿ ನದಿಯ ನಡುವಣ ಭಾಗ (ಮ.ಸ.ಕ). ೨. ಇಂದ್ರಪ್ರಸ್ಥದ ಉತ್ತರದಲ್ಲಿರುವ ಒಂದು ಪ್ರಾಂತ. ಇದಕ್ಕೆ ಶಾಕಲದ್ವೀಪವೆಂದು ಹೆಸರು. ಇದು ದ್ವೀಪವಲ್ಲ. ಇಲ್ಲಿಯ ರಾಜ ಪ್ರತಿವಿಂಧ್ಯ. ರಾಜಸೂಯದ ದಿಗ್ವಿಜಯ ಕಾಲದಲ್ಲಿ ಅರ್ಜುನನು ಈತನೊಡನೆ ಯುದ್ಧಮಾಡಿ ಕಷ್ಟ ಪಡೆದನು. (ಮ.ಸ).

ಶಾಕಲ್ಯ--ಶಿವಭಕ್ತನಾದ ಒಬ್ಬ ಋಷಿ. ಪರೀಕ್ಷಿತನನ್ನುಳಿಸಲು ಹೊರಟ ಕಾಶ್ಯಪನೆಂಬ ಬ್ರಾಹ್ಮಣನಿಗೂ ತಕ್ಷಕನು ಹೇರಳ ಧನ ಕೊಟ್ಟು ಹಿಂದಿರುಗಿಸಿದನು. ಇದರಿಂದ ಕಾಶ್ಯಪನಿಗೆ ಅಪಕೀರ್ತಿಯುಂಟಾಗಲು ಆತನು ಶಾಕಲ್ಯನ ಮೊರೆಹೊಕ್ಕನು. ಶಾಕಲ್ಯನು ಕಾಶ್ಯಪನನ್ನು ನಿಂದಿಸಿದನು. ಕೊನೆಗೆ ರಾಮೇಶ್ವರದ ಬಳಿ ಇದ್ದ ಗಾಯತ್ರೀ ಸರಸ್ವತಿ ತೀರ್ಥದಲ್ಲಿ ಮಿಂದು ಪಾಪದಿಂದ ಮುಕ್ತನಾಗುವಂತೆ ಹೇಳಿದನು (ಸ್ಕಾಂ.ಪು). ಇವನಿಗೂ ಶಾಕಲ್ಯನೆಂಬ ಹೆಸರುಂಟು (ಬ್ರಹ್ಮಪು., ಮ.ಅನು).

ಶಾಕ್ತೇಯ--೧. ಶಕ್ತಿಯ ಮಗನಾದ ಪರಾಶರಮುನಿ (ಮ.ಆ). ೨.ಶಕ್ತಿದೇವತೆಯನ್ನು ಆರಾಧಿಸುವ ಪಂಗಡದವನು.

ಶಾಖ -- ಸ್ಕಂದನ ಮೂರ್ತಿಭೇದ (ಮ.ಶ).

ಶಾಂಡಿಲಿ -- ಶಾಂಡಿಲ್ಯಮುನಿಯ ಮಗಳು; ಈಕೆಗೆ ಸ್ವಯಂಪ್ರಭೆಯೆಂಬ ಹೆಸರೂ ಇದೆ. ಈಕೆ ಮಯಾಸುರನ ಹೆಂಡತಿಯಾದ ಹೇಮೆ ಎಂಬ ಅಪ್ಸರೆಯ ಗೆಳತಿ. ಹೇಮೆಯು ದೇವಲೋಕಕ್ಕೆ ಹೋದಮೇಲೆ ಈಕೆಯೂ ಅದೇ ಗುಹೆಯಲ್ಲಿ

ವಾಸವಾಗಿದ್ದು, ಸೀತಾಸಂಶೋಧನೆಗೆ ಬಂದ ಕಪಿನಾಯಕರಿಗೆ ಸಹಾಯಮಾಡಿದಳು. ಗರುಡನು ಗಾಲವ ಮುನಿಯ ಇಷ್ಟಸಿದ್ಧಿಯನ್ನುಂಟುಮಾಡುವುದಕ್ಕಾಗಿ ಅವನನ್ನು ಹೊತ್ತುಕೊಂಡು ಪೂರ್ವದಿಕ್ಕಿಗೆ ಹಾರುವಾಗ ಗಾಲವನಿಗೆ ಆಯಾಸವಾಗಲು, ಅವನನ್ನು ವೃಷಭ ಪರ್ವತದ ಶಿಖರದಲ್ಲಿಳಿಸಿ ಅಲ್ಲಿ ತಪಸ್ವಿನಿಯಾಗಿದ್ದ ಈ ಬ್ರಾಹ್ಮಣ ಸ್ತ್ರೀಯನ್ನು ಇವರಿಬ್ಬರೂ ಪೂಜಿಸಿದರೂ, ಗರುಡನು ಈಕೆಯ ಕುರಿತು ತಪ್ಪು ಎಣಿಸಿದುದಕ್ಕಾಗಿ ಆತನ ದೇಹದ ರೆಕ್ಕೆಗಳೆಲ್ಲಾ ಉದುರಿಹೋಗಿ, ಮಾಂಸಪಿಂಡದಂತಾಗಲು, ಗರುಡನು ಈಕೆಗೆ ಶರಣುಹೋಗಿ ಅನುಗ್ರಹವನ್ನು ಪಡೆದಮೇಲೆ ಮೊದಲಿನಂತಾದನು (ಮ.ಉ., ಭೀ., ರಾಮಾ).

ಶಾಂಡಿಲ್ಯ -- ೧. ಮರೀಚಿಪುತ್ರನಾದ ಕಶ್ಯಪವಂಶದ ಋಷಿಯೊಬ್ಬ. ಈ ವಂಶದಲ್ಲಿ ಅಗ್ನಿಯು ವೈಶ್ವಾನರನೆಂಬ ಹೆಸರಿನಿಂದ ಉತ್ಪನ್ನನಾದನು (ಮ.ಸ., ಶಾಂ). ೨.ಅಗ್ನಿಯಿಂದ ಉತ್ಪತ್ತಿಯಾದ ಋಷಿ (ಮ.ಅನು). ೩. ಬ್ರಾಹ್ಮಣನೊಬ್ಬ. ಇವನು ಬಾಲ್ಯದಲ್ಲಿ ಎರೆಮಣ್ಣಿನಿಂದ ಶಿವಲಿಂಗ, ಶಿವದೇವಾಲಯವನ್ನು ನಿರ್ಮಿಸಿ, ಕಾಡುಹೂಗಳಿಂದ ಶಿವನನ್ನು ಪೂಜಿಸುತ್ತಿದ್ದುದರಿಂದ ಮುಂದಿನ ಜನ್ಮದಲ್ಲಿ ವಿದಿಶಾನಗರದಲ್ಲಿ ಬ್ರಾಹ್ಮಣನಾಗಿ ಹುಟ್ಟಿ, ಶಿವಪಂಚಾಯತನವನ್ನು ಪ್ರತಿಷ್ಠೆಮಾಡಿ, ಭಕ್ತಿಯಿಂದ ಪೂಜಿಸಿ ಮೂರನೆಯ ಜನ್ಮದಲ್ಲಿ ಪ್ರತಿಷ್ಠಾನಪುರದ ಚಕ್ರವರ್ತಿಯಾಗಿ, ಜಯದತ್ತನೆಂಬ ಹೆಸರಿನಿಂದ ಶಿವನ ಅನುಗ್ರಹಕ್ಕೆ ಪಾತ್ರನಾದನು. ಆ ಜನ್ಮದಲ್ಲಿ ಶಿವನ ಅನುಗ್ರಹದಿಂದ ಇವನಿಗೆ ಅಜರಾಮರತ್ವ ಪ್ರಾಪ್ತವಾಯಿತು. ಈ ಮದದಿಂದ ಇವನು ಅನೇಕ ಸ್ತ್ರೀಯರ ಪಾತಿವ್ರತ್ಯವನ್ನು ಸೂರೆಗೊಂಡನು. ಇವನ ಅನ್ಯಾಯಕ್ಕೆ ನೊಂದ ಯಮನು ಶಿವನಿಗೆ ಇವನ ಕುರಿತು ಮೊರೆ ಇಡಲು, ಶಿವನು ಅವನಿಗೆ ಆಮೆಯಾಗುವಂತೆ ಶಾಪವಿತ್ತನು. ಜಯದತ್ತನು ಪಶ್ಚಾತ್ತಾಪದಿಂದ ಪುನಃ ಶಿವನನ್ನು ಪ್ರಾರ್ಥಿಸಲು, ಅವನು, ಮಾಸಿಹೋದ ಇಂದ್ರದ್ಯುಮ್ನನ ಕೀರ್ತಿಯನ್ನು ಪುನಃ ಪ್ರಕಾಶಗೊಳಿಸುವುದರಲ್ಲಿ ಸಹಾಯ ಮಾಡಿದಮೇಲೆ ಕೈಲಾಸಕ್ಕೆ ಬಾ ಎಂದನು. ಜಯದತ್ತನು ಮಂಥರಕನೆಂಬ ಆಮೆಯಾಗಿ ಜನಿಸಿದನು. ನೋ -- ಇಂದ್ರದ್ಯುಮ್ನ (ಸ್ಕಾಂ.ಪು).

ಶಾಂತ -- ೧. ಅಹನೆಂಬ ವಸುವಿನ ಪುತ್ರ (ಮ.ಆ). ೨. ನೋ--ಶಂತನು. ಇವನಿಗೆ ಭೀಷ್ಮನು ದರ್ಭೆಯ ಮೇಲೆ ಪಿಂಡ ಹಾಕಿ ಶ್ರಾದ್ಧಮಾಡುತ್ತಿದ್ದನು (ಹರಿ). ಇವನ ಕಾಲದಲ್ಲೊಮ್ಮೆ ಅನಾವೃಷ್ಟಿಯಿಂದ ದುರ್ಭಿಕ್ಷವುಂಟಾಗಿತ್ತು. ಇದರ ಕಾರಣವನ್ನು ವೇದಶಾಸ್ತ್ರ ಸಂಪನ್ನರಾದ ಧರ್ಮಜ್ಞ ಬ್ರಾಹ್ಮಣರನ್ನು ಕರೆದು ಕೇಳಲು ಅವರು -- 'ಶಾಂತನು ಭೂಪನೇ, ನಿನ್ನ ಅಗ್ರಜನಾದ ದೇವಾಪಿಗೆ

ಸಲ್ಲತಕ್ಕ ಭೂಮಿಯನ್ನು ನೀನೇ ಆಳಿಕೊಂಡಿರುವುದರಿಂದ ಪರಿವೇತೃವೆನ್ನಿಸಿಕೊಳ್ಳುವ ದೋಷಕ್ಕೆ ಒಳಗಾದೆ. ಅದಕ್ಕಾಗಿ ದೇವತೆಗಳು ನಿನ್ನ ರಾಜ್ಯದಲ್ಲಿ ಹನ್ನೆರಡು ವರ್ಷ ಮಳೆ ಸುರಿಸುವುದಿಲ್ಲ' ಎನ್ನಲು ಶಾಂತನು (ಭೀಷ್ಮನು) ಅವರೊಡನೆಯೇ ಅದರ ಪರಿಹಾರ ಮಾರ್ಗವನ್ನು ಕೇಳಲು, ಅವರು 'ನಿಮ್ಮಣ್ಣನು, ವೇದಶಾಸ್ತ್ರ ಮಾರ್ಗವನ್ನು ಮೀರಿ ನಡೆದಾಗ ನೀವು ಈ ಸಿಂಹಾಸನಕ್ಕೆ ಹಕ್ಕುದಾರರಾಗುವಿರಿ' ಎನ್ನಲು, ಅಶ್ಮರಾವಿಯೆಂಬ ಮಂತ್ರಿಶ್ರೇಷ್ಠನನ್ನು ಅರಣ್ಯಕ್ಕೆ ಕಳುಹಿಸಿ -- ದೇವಾಪಿಗೆ ವೇದವಾದಕ್ಕೆ ವಿರೋಧವಾದ ಮಾರ್ಗವನ್ನು ಬೋಧಿಸುವಂತೆ ಕಳುಹಿಸಿ ತಾನೂ ದೇವಾಪಿಯ ಬಳಿಗೆ ಹೊರಟನು. ಅಶ್ಮರಾವಿಯೆಂಬ ಮಂತ್ರಿಯು ತಪಸ್ಸಿನಲ್ಲಿದ್ದ ಸರಳಸ್ವಭಾವದ ದೇವಾಪಿಗೆ ವೇದಶಾಸ್ತ್ರ ಮಾರ್ಗಕ್ಕೆ ವಿರೋಧವಾದ ಮಾತುಗಳನ್ನು ಉಪದೇಶಿಸಿ ಅವನನ್ನು ಪತಿತನನ್ನಾಗಿ ಮಾಡಿದನು. ಇತ್ತ ಶಾಂತನು ರಾಜನೂ ದೇವಾಪಿಯೊಡನೆ ರಾಜ್ಯಕ್ಕೆ ಬಂದು ಸಿಂಹಾಸನವನ್ನೇರಬೇಕೆನ್ನಲು ಅವನು ವೇದವಾದವಿರೋಧವಾದ, ಕುಯುಕ್ತಿದೂಷಿತಗಳಾದ ನುಡಿಗಳನ್ನಾಡಲು ದೇವಾಪಿಯು ಪತಿತನಾದನು. ಅವನು ಸಿಂಹಾಸನವನ್ನೇರಲು ಅಯೋಗ್ಯನೆಂದು ಬ್ರಾಹ್ಮಣರು ಹೇಳಲು, ಶಾಂತನು ತನ್ನ ರಾಜ್ಯಕ್ಕೆ ಹಿಂದಿರುಗಿದನು. ಆಗ ಪೂಜ್ಯನಾದ ಪರ್ಜನ್ಯನು ಸಕಲ ಸಸ್ಯಗಳು ಬೆಳೆದು ಅಭಿವೃದ್ಧಿಯಾಗುವಂತೆ ಶಾಂತನು ರಾಜ್ಯದಲ್ಲಿ ಮಳೆಗರೆದು ಸುಭಿಕ್ಷವನ್ನುಂಟುಮಾಡಿದನು. ಅಗ್ರಜನು ಪತಿತನಾದಮೇಲೆ ಶಾಂತನುವಿಗೆ ಪರಿವೇಶತ್ವದೋಷವು ಪರಿಹಾರವಾಯಿತು. ಶಾಂತನು ಮಹಾರಾಜನು ತನ್ನ ಕರಗಳಿಂದ ಯಾವ ಕೋಪವುಳ್ಳವನನ್ನು ಸ್ಪರ್ಶಿಸಿದರೂ ಅವನಲ್ಲಿ ಕೋಪ ಶಾಂತವಾಗಿ ಸುಖಿಯಾಗುತ್ತಿದ್ದುದರಿಂದ ಶಾಂತನೆಂಬ ಹೆಸರು ಬಂತು (ವಿಷ್ಣುಪು).

ಶಾಂತಾ--ಅಂಗರಾಜನಾದ ರೋಮಪಾದನ ಮಗಳು. ಈಕೆ ಋಷ್ಯಶೃಂಗಮುನಿಯ ಪತ್ನಿ. ನೋ-- ಋಷ್ಯಶೃಂಗ. ವಿಭಾಂಡಕ. ಈಕೆಯು ದಶರಥನ ಮಗಳು; ಶ್ರೀರಾಮಾದಿಗಳ ಅಕ್ಕ. ರೋಮಪಾದನಿಗೆ ಮಕ್ಕಳೇ ಇಲ್ಲದುದರಿಂದ ಆತನಿಗೇ ಕೊಡಲ್ಪಟ್ಟಳು (ಭಾಗ., ರಾಮಾ). ಈಕೆ ರೋಮಪಾದನ ಮಗ[illegible] ದಶರಥನೆಂಬ ಹೆಸರಿದೆ (ಹರಿ., ಮ., ವ., ಭಾಗ., ರಾಮಾ., ಬಾಲ)

ಶಾಂತಿ - ಅಂಗಿರಸನ ಪುತ್ರ; ಒಬ್ಬ ಮುನಿ. ಉಗ್ರಕೋಪಿಯಾದ [illegible] ಶಿಷ್ಯ; ಈತನು ಮಹಾಗುರುಭಕ್ತ ನೋ -- ಭೌತ್ಯ. ಸುವರ್ಚಮುನಿಯ ಯಜ್ಞಕ್ಕೆ ಭೂತಿಯು ತನ್ನ ಶಿಷ್ಯನಾದ ಶಾಂತಿಯನ್ನು ನಿಯಮಿಸಿ ತಾನು ಯಜ್ಞಕ್ಕೆ ಹೋದನು. ಶಾಂತಿಯು ಅಗ್ನಿಯನ್ನು ಮೊರೆಹೊಕ್ಕು ಗುರುವಿಗೆ

ಸತ್ಸಂತಾನವಾಗುವಂತೆ ವರ ಪಡೆದನು. ಇವನು ಮುಂದೆ ಮನ್ವಂತರಾಧಿಪನಾದನು (ಮಾರ್ಕಂ.ಪು).

ಶಾರದಂಡ್ಯಾಯನಿ -- (ಶಾರದಂಡಾಯನಿ) -- ಇವನು ಕೇಕಯ ರಾಜ; ಈತನ ಪತ್ನಿ ಶ್ರುತಸೇನಾ. ಮಕ್ಕಳು ದುರ್ಜಯ ಮೊದಲಾದವರು. ಈ ರಾಜನಿಗೆ ಮೊದಲು ಮಕ್ಕಳಿಲ್ಲದುದರಿಂದ, ಹೇಗಾದರೂ ಮಕ್ಕಳನ್ನೂ ಪಡೆಯುವಂತೆ ಪತ್ನಿಗೆ ಬೋಧಿಸಲು, ಅವಳು ದುರ್ಜಯ ಮೊದಲಾದ ಮಕ್ಕಳನ್ನು ಪಡೆದಳು. ಕುಂತಿಗೆ ಮಕ್ಕಳನ್ನು ಪಡೆಯಲು ಪಾಂಡುರಾಜನು ಆಕೆಗೆ ಈ ಕಥೆಯನ್ನು ಹೇಳಿದನು. (ಮ.ಆ).

ಶಾರದ್ವತ -- ತರದ್ವಂತ ಋಷಿಯ ಮಗ; ಕೃಪಾಚಾರ್ಯ. ನೋ -- ಶರದ್ವಂತ, ಕೃಪ, ಕೃಪಿ (ಮ.ಆ).

ಶಾರದ್ವತಿ -- ೧. ಶರದ್ವಂತನ ಮಗಳು; ಕೃಪಿ. ಈಕೆ ದ್ರೋಣಾಚಾರ್ಯನ ಪತ್ನಿ. ನೋ -- ಕೃಪಿ, ದ್ರೋಣ ೨. ಅಪ್ಸರೆಯೊಬ್ಬಳು. (ಮ.ಆ).

ಶಾರ್ಙ್ಗರವ -- ಜನಮೇಜಯನು ಮಾಡಿದ ಸರ್ಪಯಾಗದಲ್ಲಿ ಈತನು ಋತ್ವಿಕ್ ಬ್ರಹ್ಮನಾಗಿದ್ದ (ಮ.ಆ).

ಶಾರ್ಙ್ಗ -- ವಿಷ್ಣುವಿನ ಬಿಲ್ಲು. ಇದು ಕೋಡಿನಿಂದ ಮಾಡಿದುದು.

ಶಾರ್ದೂಲೀ -- ಕಶ್ಯಪಮುನಿ ಮತ್ತು ಕ್ರೋಧವಶೆಯ ಮಗಳು. ಇವಳು ಸಿಂಹವ್ಯಾಘ್ರಗಳ ತಾಯಿ (ಮ.ಆ).

ಶಾಲಗ್ರಾಮ (ಶಾಲಿಗ್ರಾಮ, ಸಾಲಿಗ್ರಾಮ) -- ೧. ಮೈಸೂರಿನ ಒಂದು ಕ್ಷೇತ್ರ. ೨. ದಕ್ಷಿಣ ಕನ್ನಡ ಜಿಲ್ಲೆಯ ಕೋಟ ಬ್ರಾಹ್ಮಣರ ಗುರುಸ್ಥಾನ. ಇಲ್ಲಿ ಭಟ್ಟಪಾದರಿಂದ ಸ್ಥಾಪಿತವಾದ ದೇವಸ್ಥಾನವಿದೆ. ಇಲ್ಲಿ ನರಸಿಂಹಮೂರ್ತಿ, ಆಂಜನೇಯರು ತುಂಬಾ ಪ್ರಭಾವವುಳ್ಳವರು. ೩. ಗಂಡಕಿ ನದಿಯ ಮೂಲದಲ್ಲಿದ್ದ ಕ್ಷೇತ್ರವೊಂದು. ಕಾಟಮಾಂಡುವಿನಿಂದ ೧೪೦ ಮೈಲು ದೂರದಲ್ಲಿ ಮುಕ್ತಿಮತಿ ಅಥವಾ ಮುಕ್ತಿಕ್ಷೇತ್ರವಿದೆ. ಇದಕ್ಕೆ ಶಾಲಿಗ್ರಾಮ ಕ್ಷೇತ್ರವೆಂದು ಹೆಸರುಂಟು. ಪ್ರಪಂಚದಲ್ಲಿ ಪಾಪವು ಹೆಚ್ಚುತ್ತಿರುವುದನ್ನು ಕಂಡು ಬೇಸರಿಸಿದ ಬ್ರಹ್ಮನ ಗಂಡಭಾಗದಿಂದ (ಕಪೋಲ) ಸುರಿದ ಬೆವರಿನಿಂದ ಜನಿಸಿದವಳೇ ಗಂಡಕಿ. ಈಕೆ ದೇವರು ಮತ್ತು ದೇವತೆಗಳೆಲ್ಲ ತನ್ನ ಹೊಟ್ಟೆಯಲ್ಲಿ ಮಕ್ಕಳಾಗಿ ಹುಟ್ಟಬೇಕೆನ್ನಲು, ದೇವತೆಗಳು ಅದಕ್ಕೆ ಸಮ್ಮತಿಯನ್ನು ಕೊಡದಿರಲು - 'ನೀವೆಲ್ಲಾ ಕೀಟಗಳಾಗಿ' ಎಂದು ಗಂಡಕಿಯು ಅವರಿಗೆ ಶಾಪವಿತ್ತಳು. ಗಂಡಕಿಗೂ ಜಡ ರೂಪತಾಳುವಂತೆ ದೇವತೆಗಳು ಶಾಪವಿತ್ತರು.

ವಿಷ್ಣುವು 'ನಾನು ಶಾಲಿಗ್ರಾಮ' ಕ್ಷೇತ್ರದ ಚಕ್ರತೀರ್ಥದಲ್ಲಿ ವಾಸವಾಗುತ್ತೇನೆ, ನೀವೆಲ್ಲಾ ಅಲ್ಲಿಗೆ ಬನ್ನಿ' ಎಂದು ದೇವತೆಗಳಿಗೆ ಅಪ್ಪಣೆ ಮಾಡಿದನು. ಗಂಡಕಿಯು ನದಿಯಾಗಿ ಹರಿದಳು. ವಿಷ್ಣುವಿನ ಮತ್ತು ದೇವತೆಗಳ ಸಾನ್ನಿಧ್ಯದಿಂದ ಅಲ್ಲಿನ ಕಲ್ಲುಗಳೆಲ್ಲಾ ಪವಿತ್ರವಾದವು. ಈ ಶಾಲಿಗ್ರಾಮಗಳ ಒಳಗಿರುವ ಶಂಖ, ಚಕ್ರ ಚಿಹ್ನೆಗಳಿಂದ ಆ ಸಾಲಿಗ್ರಾಮಗಳು ವಿಷ್ಣುವಿನ ಬೇರೆ ಬೇರೆ ಅವತಾರಗಳನ್ನು ಸೂಚಿಸುತ್ತವೆ -- ಎನ್ನುತ್ತಾರೆ. ಇವುಗಳಲ್ಲಿ ನಾನಾ ಬಣ್ಣಗಳಿದ್ದು ಸರ್ಪರೇಖೆಗಳುಳ್ಳ ಶಿಲೆ ಲಕ್ಷ್ಮೀಕಾಂತ ಸಾಲಿಗ್ರಾಮ. ಇದು ಸರ್ವಾರ್ಥಪ್ರದವಾದುದು. ಒಳಗೆ ಚಕ್ರದ ಸುಳಿಸುಳಿಯುಳ್ಳ ಸಾಲಿಗ್ರಾಮಕ್ಕೂ ಲಕ್ಷ್ಮೀಕಾಂತಸಾಲಿಗ್ರಾಮವೆನ್ನುತ್ತಾರೆ. ಚಕ್ರದ ಗುರುತುಳ್ಳ ಕಪ್ಪು ಸಾಲಿಗ್ರಾಮವು ಸಂತತಿ, ಸೌಭಾಗ್ಯ, ಸೌಖ್ಯಗಳನ್ನು ಕೊಡುವುದು. ಕೂರ್ಮ ಅಥವಾ ಗೋಪಾದ ಚಿಹ್ನವಿರುವ ಶಿಲೆಗೆ ವರಾಹ ಸಾಲಿಗ್ರಾಮವೆನ್ನುತ್ತಾರೆ. ಕೆಂಪು ಸಾಲಿಗ್ರಾಮಗಳಿಗೆ ನರಸಿಂಹ ಸಾಲಿಗ್ರಾಮಗಳೆನ್ನುತ್ತಾರೆ. ಶಂಖಚಿಹ್ನಾಂಕಿತವಾದುದು ವಾಮನ ಸಾಲಿಗ್ರಾಮ. ಮಧ್ಯಭಾಗದಲ್ಲಿ ಚಕ್ರವುಳ್ಳ ದೊಡ್ಡ ಸಾಲಿಗ್ರಾಮವು ಮಾನವನನ್ನು ಚಕ್ರವರ್ತಿಯನ್ನಾಗಿ ಮಾಡುವ ಶಕ್ತಿಯುಳ್ಳದ್ದು. ಇದು ಸಂಪತ್ತನ್ನು ದಯಪಾಲಿಸುತ್ತದೆ. ಚಪ್ಪಟೆಯಾದದ್ದು ದುಃಖವನ್ನುಂಟುಮಾಡುವುದು. ಚೂಪಾದ ಸಾಲಿಗ್ರಾಮವು ಯುದ್ಧಕಾರಕ. ಹಾವಿನ ಹೆಡೆಯಂತೆ ಕಾಣುವ, ಚಿನ್ನದ ಕಾಂತಿಯುಳ್ಳ ಚಕ್ರಾಂಕಿತ ಸಾಲಿಗ್ರಾಮವು ವಾಮದೇವ ಸಾಲಿಗ್ರಾಮ. ಇದು ಸುಖಪ್ರದವಾದುದು. ಚಂದ್ರಹಾಸನ ಸೌಭಾಗ್ಯಗಳಿಗೆಲ್ಲಾ ಅವನಿಗೆ ದೊರೆತ ವಾಸುದೇವ ಸಾಲಿಗ್ರಾಮವೇ ಕಾರಣ. ಎಡಗಡೆಗೆ ಕಪ್ಪು, ಬಲಗಡೆಗೆ ಕಂದು ಬಣ್ಣವುಳ್ಳ ಲಕ್ಷ್ಮೀನರಸಿಂಹ ಸಾಲಿಗ್ರಾಮವು ಕುಬೇರನನ್ನು ಕುಚೇಲನನ್ನಾಗಿ ಮಾಡುತ್ತದೆ. ಉದ್ದ ತುಟಿಯವು ದಾರಿದ್ರ್ಯವನ್ನುಂಟುಮಾಡುತ್ತವೆ. ಕೆಂಪುಬಣ್ಣದ ತುಟಿಯವು ಗಂಡಾಂತರವನ್ನುಂಟುಮಾಡುತ್ತವೆ. ಸಾಲಿಗ್ರಾಮಗಳು ಭಿನ್ನವಾಗಿದ್ದರೆ ಮೃತ್ಯುಕಾರಕ. ಸಾಲಿಗ್ರಾಮದ ಮೂರ್ತಿಗಳು ಭಿನ್ನವಾಗಿದ್ದರೆ, ಮುಕ್ಕಾಗಿದ್ದರೆ, ಬೆಂಕಿಯಲ್ಲಿ ಸುಟ್ಟು ಹೋದರೆ ಯಾವ ಅಪಾಯವಿಲ್ಲ. ಇವುಗಳ ಪೂಜೆಯಿಂದ ಪಾಪವಿಲ್ಲ (ಮ.ವ.).

ಶಾಲಂಕಾಯನ -- ವಿಶ್ವಾಮಿತ್ರನ ವಂಶದ ಮಂತ್ರಪ್ರವರ್ತಕ.

ಶಾಲಾವತಿ -- ವಿಶ್ವಾಮಿತ್ರನ ಒಬ್ಬಳು ಹೆಂಡತಿ. ಈಕೆಗೆ ಹಿರಣ್ಯಾಕ್ಷ, ದೇವಶ್ರವ ಮತ್ತು ತತಿ ಎಂಬ ಮೂವರು ಮಕ್ಕಳಿದ್ದರು. ಇವರಲ್ಲಿ ತತಿಯೆಂಬುವನ ವಂಶದವರೇ ಕಾತ್ಯಾಯನರೆಂದು ಪ್ರಸಿದ್ಧರಾದರು. ಕಾತ್ಯಾಯನಿಯು

ತತಿಮುನಿಯ ಮಗಳೆಂದು ಪ್ರಸಿದ್ಧವಿದೆ. ಶಾಲಾವತಿಯ ಮಗನಾದ ಹಿರಣ್ಯಾಕ್ಷನಿಗೆ ಯಾಜ್ಞವಲ್ಕ್ಯ, ಅಘಮರ್ಷಣ, ಔದುಂಬರು, ಅಭಿಷ್ಣಾತ, ತಾರಕಾಯನ, ಚುಂಚುಲರೆಂಬ ಆರು ಜನ ಋಷಿಕುಲ ಪ್ರತಿಷ್ಠಾಪಕರು ಹುಟ್ಟಿದರು (ಹರಿ.).

ಶಾಲಿಹೋತ್ರ -- ಕಪಿಲಋಷಿಯ ಪುತ್ರ. ಇವನು ಅಶ್ವಶಾಸ್ತ್ರವನ್ನು ಬರೆದಿದ್ದಾನೆ. ಇವನು ನಿರ್ಮಿಸಿದ ಕೊಳದ ನೀರು ಹಸಿವು ಬಾಯಾರಿಕೆಗಳನ್ನೂ, ಇವನು ನಿರ್ಮಿಸಿದ ಮರವು ಬಿಸಿಲು, ಚಳಿ, ಮಳೆ, ಗಾಳಿಗಳನ್ನು ತಡೆಯುತ್ತಿತ್ತು. ದಮಯಂತಿಯ ಸ್ವಯಂವರಕ್ಕೆ ಹೊರಟ ಋತುಪರ್ಣನ ಸಾರಥಿಯಾದ ಬಾಹುಕನು ರಥವನ್ನು ನಡೆಸುವ ವೇಗವನ್ನು ಕಂಡು ಬಾಹುಕನ ಸಮೀಪದಲ್ಲಿ ಕುಳಿತ ವಾರ್ಷ್ಣೇಯನೆಂಬ ಸಾರಥಿಯು ಆತನನ್ನು ಮಾತಲಿಯೋ ಶಾಲಿಹೋತ್ರನೋ ಆಗಿರಬೇಕೆಂದು ಊಹಿಸುತ್ತಾನೆ. ಇದರಿಂದ ಶಾಲಿಹೋತ್ರನು ಪ್ರಸಿದ್ಧ ಸಾರಥಿಯಾಗಿರಬೇಕು (ಮ.ವ). ಭೀಮನು ಹಿಡಿಂಬೆಯನ್ನು ವಿವಾಹವಾದಮೇಲೆ ಪಾಂಡವರು ಆರು ತಿಂಗಳು ಈ ಮುನಿಯ ಆಶ್ರಮದಲ್ಲಿದ್ದರು. (ಮ.ಆ).

ಶಾಲಿಹೋತ್ರಸರ -- ಪಾಂಡವರು ತೀರ್ಥಯಾತ್ರೆಯ ಕಾಲದಲ್ಲಿ ಹೋದ ಒಂದು ಪವಿತ್ರ ಸ್ಥಳ (ಮ.ಆ.).

ಶಾಲ್ಮಲಿ -- ಆಸ್ಟ್ರೇಲಿಯಾ ಖಂಡ; ಸಪ್ತದ್ವೀಪಗಳಲ್ಲೊಂದು. ಇದನ್ನು ಪ್ರಿಯವ್ರತನ ಮಗನಾದ ಯಜ್ಞಬಾಹುವು ಆಳುತ್ತಿದ್ದನು. ನೋ -- ಪ್ರಿಯವ್ರತ, ಶತದ್ವೀಪ.

ಶಾಲ್ವ -- ನೋ -- ಸಾಲ್ವ.

ಶಿಂಶುಮಾರ -- ಶ್ರೀಮನ್ನಾರಾಯಣನ ಒಂದು ಅವತಾರ. ಇದು ಧ್ರುವಮಂಡಲ ಮೊದಲಾದ ಲೋಕಗಳಿಗೆ ಆಶ್ರಯಸ್ಥಾನವಾದುದು (ವಿಷ್ಣುಪು., ಭಾಗ).

ಶಿಖಂಡಿ -- ೧. ಮುಖದ ಮೇಲೆ ಮೀಸೆಯಿಲ್ಲದವ. ಪಾಂಚಾಲರಾಜ ದ್ರುಪದನ ಹಿರಿಯ ಮಗ. ಈತನು ಮೊದಲು ಸ್ತ್ರೀಯಾಗಿದ್ದು, ಆಮೇಲೆ ಪುರುಷನಾದನು. ಇವನು ದ್ರೋಣನಲ್ಲಿ ಧನುರ್ವಿದ್ಯಾಭ್ಯಾಸ ಮಾಡಿದನು. ಇವನಿಗೆ ದಶಾರ್ಣಾಧಿಪತಿಯಾದ ಹಿರಣ್ಯವರ್ಮನ ಮಗಳೊಡನೆ ವಿವಾಹವಾಯಿತು. ಈತನಿಗೆ ಯಕ್ಷನಿಂದ ಪುಂಸ್ತ್ವಪ್ರಾಪ್ತವಾಯಿತು. ಈತನಿಗೆ ಕ್ಷತ್ರದೇವ ಮತ್ತು ಋಕ್ಷದೇವರೆಂಬ ಇಬ್ಬರು ಮಕ್ಕಳು. ಯುದ್ಧಾನಂತರ ಶಿಬಿರದಲ್ಲಿ ಅಶ್ವತ್ಥಾಮನಿಂದ ಈತನ ವಧೆಯಾಯಿತು. ನೋ -- ಸ್ಥೂಣಾಕರ್ಣ, ಅಂಬೆ, ಭೀಷ್ಮ (ಮ.ಆ., ಉ., ದ್ರೋ., ಭೀ., ಕ., ಮ.ಸೌ). ೨. ಅಂತರ್ಧಾನನ ಪತ್ನಿ. ನೋ --

ಅಂತರ್ಧಾನ. ಕುಮಾರಸ್ವಾಮಿಯು ಅಂಬೆಗೆ ಕೊಟ್ಟ ಮಾಲಿಕೆಯನ್ನು ಈಕೆಯು ಧರಿಸಿದಳು. ಇದರಿಂದ ಭಯಪಟ್ಟ ದ್ರುಪದನು ಶಿಖಂಡಿಯನ್ನು ತೊರೆದುಬಿಟ್ಟನು. ಆಗ ಗಂಗಾದ್ವಾರದಲ್ಲಿ ತಪಸ್ಸುಮಾಡುತ್ತಿದ್ದ ಋಷೀಕನೆಂಬ ಬ್ರಹ್ಮರ್ಷಿಯನ್ನು ಸೇವೆ ಮಾಡುತ್ತಿರಲು ಆತನು ಅವನಿಗೆ 'ನಿನಗೆ ಶುಭವಾಗುವುದು' ಎಂದು ಆಶೀರ್ವದಿಸಿದನು. ಮುಂದೆ ಗಂಗಾತೀರದ ವಿಭಜನವೆಂಬ ಉತ್ಸವಕ್ಕೆ ತೇಜಸ್ವಿಗಳಾದ ಗಂಧರ್ವರಿಬ್ಬರು ಬಂದರು. ಅವರಲ್ಲಿ ಒಬ್ಬನು ಸ್ತ್ರೀಯಾಗಬೇಕೆಂದು ಅಪೇಕ್ಷಿಸಲು, ಶಿಖಂಡಿಯು ತನ್ನ ಸ್ತ್ರೀತ್ವವನ್ನು ಅವನಿಗೆ ಕೊಟ್ಟು, ಅವನ ಪುರುಷತ್ವವನ್ನು ಪಡೆದು ಮುಂದೆ ಬುದ್ಬುದಕ ಎಂಬ ಸ್ಥಳಕ್ಕೆ ಹೋಗಿ, ದಿವ್ಯಾಸ್ತ್ರಗಳನ್ನೆಲ್ಲ ಅಭ್ಯಾಸ ಮಾಡಿದನು. ಆಮೇಲೆ ಪಾಂಚಾಲದೇಶಕ್ಕೆ ಬಂದು ತಂದೆಗೆ ನಮಸ್ಕರಿಸಿ -- 'ನೀವು ಭೀಷ್ಮನಿಗಾಗಿ ಇನ್ನಾವ ರೀತಿಯಲ್ಲೂ ಭಯಪಡಬೇಕಾಗಿಲ್ಲ' ಎಂದನು (ಮ.ಅ).

ಶಿಖಾವರ್ತ -- ಯಕ್ಷನೊಬ್ಬ (ಮ.ಸ).

ಶಿಖಿಧ್ವಜ -- ರಾಜನೊಬ್ಬ; ಆತ್ಮಜ್ಞಾನ ಹೊಂದಿದ ಚೂಡಾಲೆಪತಿ. ನೋ -- ಚೂಡಾಲಯ.

ಶಿನಿ -- ಯದುಕುಲದ ವೃಷ್ಣಿವಂಶೋತ್ಪನ್ನನು. ಈತನ ಮಗ ಸತ್ಯಕ; ಮೊಮ್ಮಗ ಯುಯುಧಾನನೆಂಬ ಹೆಸರುಳ್ಳ ಸಾತ್ಯಕಿ. ಶಿನಿಯ ತಂದೆ ಅನಮಿತ್ರ (ಭಾಗ). ನೋ -- ಪ್ರವೀರ.

ಶಿನಿಪ್ರವೀರ -- ಸಾತ್ಯಕಿಯ ಇನ್ನೊಂದು ಹೆಸರು.

ಶಿಬಿ -- ೧. ಹಿರಣ್ಯಕಶಿಪುವಿನ ಮಗ; ಅಸುರನೊಬ್ಬ. ಹಿರಣ್ಯಕಶಿಪುವಿನ ಮಗನಾದ ಅನುಹ್ಲಾದನ ಮಗನಿಗೂ ಶಿಬಿ ಎಂಬ ಹೆಸರಿದೆ. ಇವನಿಗೆ ಆಯು ಮತ್ತು ಕಾಲರು ಸಹೋದರರು (ಹರಿ). ೨. ಇವನು ಭೋಜಪುರಾಧಿಪತಿ. ಇವನ ತಂದೆ ಚಂದ್ರವಂಶದ ಅನುಕುಲದಲ್ಲಿ ಉತ್ಪನ್ನನಾದ ಉಶೀನರನ ಮಗ. ಯಯಾತಿಯ ಮಗಳಾದ ಮಾಧವಿ ಈತನ ತಾಯಿ. ಈತನ ಮಗ ಗೋಪತಿ. ಈತನಿಗೆ ವೃಷದರ್ಭ, ಸುವೀರ, ಮದ್ರ, ಕೇಕಯ ಮೊದಲಾದ ಮಕ್ಕಳಿದ್ದರು (ಭಾಗ). ಇವನಿಗೆ ಬೃಹದ್ಗರ್ಭನೆಂಬ ಇನ್ನೊಬ್ಬ ಮಗನಿದ್ದ. ಇವನನ್ನು ಬ್ರಾಹ್ಮಣರೂಪದಲ್ಲಿ ಬಂದ ಬ್ರಹ್ಮನಿಗರ್ಪಿಸಿದನು. ನೋ -- ವೃಷದರ್ಭ. ಜಲ, ಉಪಜಲವೆಂಬ ನದೀತಟದಲ್ಲಿ ಯಜ್ಞಮಾಡುತಿದ್ದ ಶಿಬಿಯ ಬಳಿಗೆ ಇಂದ್ರನು ಗಿಡುಗನಾಗಿಯೂ, ಅಗ್ನಿಯು ಪಾರಿವಾಳವಾಗಿಯೂ ಬಂದರು. ಶಿಬಿಯು ಆ ಪಾರಿವಾಳವನ್ನು ರಕ್ಷಿಸುವುದಕ್ಕಾಗಿ ತನ್ನ ದೇಹವನ್ನೇ ಗಿಡುಗಕ್ಕೆ ಅರ್ಪಿಸಿ, ತನ್ನ

ಶರಣಾಗತ ರಕ್ಷಣೆಯ ಬುದ್ಧಿಯನ್ನು ಪ್ರದರ್ಶಿಸಿ, ದೇವತೆಗಳಿಂದಲೂ ಹೊಗಳಿಸಿಕೊಂಡನು (ಮ.ವ., ಸ., ವಿ., ಉ., ಸಾಂ., ದ್ರೋ., ಆ., ಭಾಗ) ೩.ಪಾಂಡವಪಕ್ಷೀಯನಾದ ರಾಜನೊಬ್ಬ. ಇವನು ದ್ರೋಣನಿಂದ ಹತನಾದನು (ಮ.ದ್ರೋ).

ಶಿರೀಷಿ -- ವಿಶ್ವಾಮಿತ್ರ ಋಷಿಯ ಮಗನೊಬ್ಬ (ಮ.ಅನು).

ಶಿಲಾದ--ಮಹರ್ಷಿಯೊಬ್ಬ. ಇವನು ಪುತ್ರಪ್ರಾಪ್ತಿಗಾಗಿ ಶಿಲೆಯನ್ನೇ ತಿಂದುಕೊಂಡು ಶಿವನನ್ನು ಕುರಿತು ಘೋರತಪಸ್ಸು ಮಾಡಿದವ. ಇವನ ಭಕ್ತಿಗೆ ಮೆಚ್ಚಿ ಶಿವನು ಅವನಿಗೆ ನಂದಿಯನ್ನೇ ಮಗನನ್ನಾಗಿ ಕೊಟ್ಟನು. ನೋ -- ನಂದಿ (ಶಿವಪು., ಲಿಂಗಪು).

ಶಿವ -- ೧. ವಿತಸ್ಯನೆಂಬ ಬ್ರಾಹ್ಮಣನ ಮಗ. ಈತನ ಮಗ ಶ್ರವ (ಮ.ಅನು). ೨.ಮಹಾದೇವ. ಸಮುದ್ರಮಥನಕಾಲದಲ್ಲಿ ವಿಷಪಾನಮಾಡಿ ವಿಷಕಂಠ, ನೀಲಕಂಠನೆನಿಸಿದ. ಹಾಲಿಗಾಗಿ ಶಿವನ ತಪಸ್ಸುಮಾಡಿದ ಉಪಮನ್ಯುವಿಗೆ ಕ್ಷೀರಸಾಗರದ ಆಧಿಪತ್ಯವನ್ನೇ ಕೊಟ್ಟನು. ಈತನು ಬ್ರಹ್ಮಚಾರಿ ರೂಪದಿಂದ ಬಂದು ಪಾರ್ವತಿಯನ್ನು ವಿವಾಹವಾದನು. ಅರ್ಜುನನಿಗೆ ಇಂದ್ರಕೀಲ ಪರ್ವತದಲ್ಲಿ ಪಾಶುಪತಾಸ್ತ್ರವನ್ನಿತ್ತ. ಕೋಳೂರ ಕೊಡಗೂಸಿನ ಮುಗ್ಧಭಕ್ತಿಗೆ ಮೆಚ್ಚಿ ಹಾಲು ಕುಡಿದ; ತ್ರಿಪುರಗಳನ್ನು ದಹಿಸಿದ. ನೋ -- ಕಾಮ, ಕುಮಾರ, ದಕ್ಷ, ದಾಕ್ಷಾಯಿಣಿ, ಜಲಂಧರ, ಪಾರ್ವತಿ, ತ್ರಿಪುರ, ದಿವೋದಾಸ, ವೃಕ, ರಾವಣ.

ಈತನು ದಶಬಾಹುಗಳಲ್ಲಿ ಕ್ರಮವಾಗಿ ಕಮಂಡಲು, ಧನು, ಬಾಣ, ಕಪಾಲ, ವಜ್ರಾಯುಧ, ಶತಘ್ನಿ, ಖಡ್ಗ, ಪಟ್ಟಿಶ (ವಿಶೇಷ ರೀತಿಯ ಭಲ್ಲೆ), ಶೂಲ, ಸ್ರುವ (ಯಜ್ಞಪಾತ್ರೆ) ಉಳ್ಳವನು.

ಶಿವನು ಭಕ್ತರಿಗೆ ಸುಖವನ್ನು ಕೊಡುವವನಾದುದರಿಂದ ಶಂಭು; ಜೀವರನ್ನು ಸಂಸಾರಬಂಧನದಿಂದ ಬಿಡಿಸಿ, ಪಾಲಿಸುವನಾದುದರಿಂದ ಪಶುಪತಿ, ಕೈಲಾಸದ ಒಡೆಯನಾದುದರಿಂದ ಗಿರೀಶ; ಗಂಗೆಯನ್ನು ಧರಿಸಿದವನಾದುದರಿಂದ ಗಂಗಾಧರ. ನೋ -- ಭಗೀರಥ.

ಶಿವನು ಬ್ರಹ್ಮಶಿರವನ್ನು ಛೇದಿಸಿ, ಭಿಕ್ಷಾಟನಲೀಲೆಯನ್ನು ಪ್ರದರ್ಶಿಸಿದನು. ತ್ರಿಮೂರ್ತಿಗಳಲ್ಲಿ ಮೂರನೆಯವನು. ಜಗತ್ತನ್ನು ನಾಶಮಾಡುವ ಅಧಿಕಾರ ಈತನದು. ಶಿವನ ಮೂರ್ತಿ ವೈರಾಗ್ಯದ ಪ್ರತೀಕ.

ಶಿವನಿಗೆ ಕಪರ್ದಿ ಎಂಬ ಹೆಸರಿದೆ; ಕಪರ್ದ ಉಳ್ಳವನೇ ಕಪರ್ದಿ. ಕ= ನೀರು. ತನ್ನ ಮೇಲೆ ಬಿದ್ದ ಗಂಗೆಯ ನೀರನ್ನು ಜಟೆಯು ಕುಡಿದುದರಿಂದ ಜಟೆಗೆ ಕಪವೆಂಬ ಹೆಸರು; 'ಕಂ ಜಲಂ ಪಿಬತಿ ಇತಿ ಕಪಃ'. ಋತವೆಂದರೆ ಈಶ್ವರತ್ವ,

ಸಾಮರ್ಥ್ಯ. ಭಗೀರಥನ ಪ್ರಾರ್ಥನೆಯ ಫಲವಾಗಿ ತನ್ನಲ್ಲಿ ಅಡಗಿಹೋದ ಗಂಗೆಗೆ ಹೊರಗೆ ಹೋಗಲು ಶಕ್ತಿ ಕೊಟ್ಟದ್ದರಿಂದ ಈ ಜಟೆಯು ಋದ್ಧವೆನಿಸಿತು. 'ಋತಮ್ ಐಶ್ವರ್ಯಮ್ ದದಾತಿ ಇತಿ ಋದ್ಧಃ' ಯಾವುದು ಕಪವೂ ಋದ್ಧವೂ ಆಗಿದೆಯೋ ಅದೇ ಕಪರ್ದ. ಅದು ಉಳ್ಳವನೇ ಕಪರ್ದಿ. ರುದ್ರನೂ ಇವನೇ., ಪ್ರಾಣಗಳೇ ರುದ್ರರು; ಇವು ಎಲ್ಲವನ್ನೂ ರೋದಿಸುವಂತೆ ಮಾಡುವುದರಿಂದ ರುದ್ರರು; ಸರ್ವರ ಪ್ರಾಣ ರೂಪನೇ ರುದ್ರನು, ಸಂಹಾರ ಕಾಲದಲ್ಲಿ ಪ್ರಜೆಗಳನ್ನು ರೋದಿಸುವಂತೆ ಮಾಡುವವನು. ವಾಣಿಯನ್ನು ದಾನಮಾಡುವುದರಿಂದ ರುದ್ರ; 'ರುದಂ ರಾತಿ ದದಾತಿ ಇತಿ'. ದುಃಖವನ್ನೂ, ದುಃಖ ಕಾರಣಗಳನ್ನೂ ನಾಶಮಾಡುವುದರಿಂದ ರುದ್ರ; 'ರಃ ದುಃಖಂ ದುಃಖ ಕಾರಣಂ ವಾ ದ್ರಾವಯತಿ ಇತಿ ರುದ್ರಃ'.

ವಾರಣಾಸಿಗೆ ಬಂದ ಗಜರೂಪಿಯಾದ ಮಹಾಸುರನನ್ನು ಕೊಂದುದರಿಂದ ಇವನಿಗೆ ಗಜಹಾ ಎಂಬ ಹೆಸರಿದೆ (ಸ್ಕಾಂ.ಪು).

ಶಿವನಿಗೆ ಅಶ್ವತ್ಥನೆಂಬ ಹೆಸರಿದೆ. ಸಂಸಾರವು ಅನಿತ್ಯವಾದುದರಿಂದ 'ಅಶ್ವತ್ಥಃ ಶ್ವಃ ಅಪಿನ ಸ್ಥಾತಾ ಇತಿ ಅಶ್ವತ್ಥಃ' ಸಂಸಾರರೂಪ. ಈತ ಪಿನಾಕಿ ರಕ್ಷಿಸುವುದರಿಂದ ಶಿವ ಧನುಸ್ಸಿಗೆ ಪಿನಾಕವೆಂದು ಹೆಸರು. ' ಪಾತಿ ಕ್ಷತಿ ಇತಿ ಪಿನಾಕಃ' ಅದನ್ನುಳ್ಳವ ಪಿನಾಕಿ. ನೋ -- ಕಾಮಧೇನು. ಶಿವಧನಸ್ಸು ತ್ರಿಪುರಸುರರಿಂದ ಸ್ವರ್ಗವನ್ನು ಪಡೆದು ದೇವತೆಗಳಿಗೆ ಕೊಟ್ಟುದರಿಂದ ಪಿನಾಕವೆಂಬ ಹೆಸರು ಬಂತು. ಈ ಬಿಲ್ಲುಳ್ಳವನು ಪಿನಾಕಿ (ಮ.ಆ., ಶಾಂ., ಅನು., ಶಿವಪು., ಲಿಂಗಪು., ಶಿ.ಸ).

ಶಿವಾ -- ೧. ಅಂಗಿರಸ ಋಷಿಯ ಪತ್ನಿ. ೨. ಅನಿಲನೆಂಬ ವಸುವಿನ ಪತ್ನಿ. ೩. ನದಿಯೊಂದು. ೪. ಪಾರ್ವತಿ; ಈಕೆ ಶಿವನ ಪತ್ನಿ. ನೋ -- ಪಾರ್ವತಿ, ದಾಕ್ಷಾಯಣಿ. (ಮ.ವ., ಆ., ಭೀ).

ಶಿಶಿರ - ೧. ವಿಶ್ವಾಮಿತ್ರನ ವಂಶದ ಮಂತ್ರಪ್ರವರ್ತಕನು. ೨. ಮಾಘ, ಫಾಲ್ಗುಣ ಮಾಸಗಳು.

ಶಿಶು -- ಅಂಗಿರಸ ಋಷಿಯ ಮಗ. ಇವನು ತಂದೆಗಿಂತ ಮಂತ್ರರಚನೆಯಲ್ಲಿ ಪ್ರಸಿದ್ಧನಾಗಿ ಹಿರಿಯರನ್ನೂ ಹುಡುಗರೆಂದೇ ಸಂಬೋಧಿಸುತ್ತಿದ್ದನು. ಕೊನೆಗೆ ಅಂಗಿರಸನೇ ಈ ವಿವಾದವನ್ನು ದೇವತೆಗಳ ಬಳಿಗೆ ಒಯ್ಯಲು ಅವರೂ --'ಬುದ್ಧಿವಂತಿಕೆಯೇ ಹಿರಿದು; ಮುದಿತನವಲ್ಲ' ಎಂದು ತೀರ್ಪಿತ್ತರು. (ಋ).

ಶಿಶುಪಾಲ -- ಯದುವಂಶದಲ್ಲಿ ಹುಟ್ಟಿದ ರಾಜ; ಇವನ ತಂದೆ ದಮಘೋಷ. ಈತನ ತಾಯಿ ಕೃಷ್ಣನ ಸೋದರತ್ತೆಯಾದ ಶ್ರುತಶ್ರವೆ.

ಶಿಶುಪಾಲನಿಗೆ ಸುನೀತನೆಂಬ ಹೆಸರಿದೆ. ಇವನು ಹಿರಣ್ಯಕಶಿಪುವಿನ ಅಂಶದವನು. ಇವನು ಬಾಲಕನಾಗಿದ್ದಾಗ ಶ್ರೀಕೃಷ್ಣನು ತನ್ನ ಸೋದರತ್ತೆಯ ಮನೆಗೆ ಹೋಗಿ ಈತನನ್ನು ಎತ್ತಿಕೊಂಡಾಗ ಈತನ ನಾಲ್ಕು ಕೈಗಳಲ್ಲಿ ಹೆಚ್ಚಿನ ಎರಡು ಕೈಗಳು ಬಿದ್ದು ಹೋದುವು. ಆಗ ಶ್ರುತಶ್ರವೆಯು ತನ್ನ ಮಗನಿಗೆ ಈತನಿಂದಲೇ ಮರಣ ಪ್ರಾಪ್ತವಾಗುವುದೆಂದು ತಿಳಿದು ತನ್ನ ಮಗನನ್ನು ಉಳಿಸಿಕೊಡಬೇಕೆಂದು ಪ್ರಾರ್ಥಿಸಿದಳು. ಕೃಷ್ಣನು ಶಿಶುಪಾಲನ ಶತಾಪರಾಧಗಳನ್ನು ಮನ್ನಿಸುವುದಾಗಿ ಆಶ್ವಾಸನೆ ನೀಡಿದನು. ರಾಜಸೂಯಯಾಗದ ಕಾಲದಲ್ಲಿ ಭೀಮನು ಈತನನ್ನು ಜಯಿಸಿ, ಕಪ್ಪ ಪಡೆದಿದ್ದನು. ಯಾಗಾನಂತರ ಅಗ್ರಪೂಜೆಯ ಕಾಲದಲ್ಲಿ ಪಾಂಡವರು ಶ್ರೀಕೃಷ್ಣನನ್ನು ಗೌರವಿಸಿದಾಗ ಇವನು ತಿರಸ್ಕರಿಸಿ ಕೃಷ್ಣನನ್ನು ಹಳಿದು, ಆತನಿಂದ ಹತನಾದನು. ಈತನ ಮಕ್ಕಳಾದ ಸುಕೇತು ಮತ್ತು ಧೃಷ್ಟಕೇತುಗಳು ದ್ರೋಣಾಚಾರ್ಯರಿಂದ ಹತರಾದರು. ಈತನ ಇನ್ನೊಬ್ಬ ಮಗ ಶರಭ; ಮಗಳು ರೇಣುಮತಿ. ಈಕೆ ನಕುಲನ ಪತ್ನಿ. ಶಿಶುಪಾಲನಿಗೆ ಜನ್ಮಕಾಲದಲ್ಲಿ ನಾಲ್ಕು ತೋಳುಗಳಲ್ಲದೆ ಮೂರು ಕಣ್ಣುಗಳಿದ್ದುವು. ಈ ಹೆಚ್ಚಿನ ಲಿಂಗಗಳು ಕೃಷ್ಣನ ಸ್ಪರ್ಶದಿಂದ ಮಾಯುವಾದುವು. ಇವನು ಬಭ್ರುವಿನ (ಅಕ್ರೂರ) ಹೆಂಡತಿಯನ್ನು ಅಪಹರಿಸಿದ್ದನು (ಮ.ಸ., ವ., ಕ., ದ್ರೋ., ಅಶ್ವ., ಆ., ಭಾಗ).

ಶಿಷ್ಟ -- ಉತ್ತಾನಪಾದರಾಜನ ಮೊಮ್ಮಗ. ಈತನ ತಂದೆ ಧ್ರುವ; ತಾಯಿ ಧನ್ಯೆ.

ಶೀತವಾನ್--ಇದು ರುಕ್ಮಿಣಿಯ ಅರಮನೆ. ವಿಶ್ವಕರ್ಮನು ಕಟ್ಟಿದುದು. ಯಾವಾಗಲೂ ತಂಪಾಗಿರುವುದು ಇದರ ಸ್ವಭಾವ.

ಶುಕ -- ೧. ಗಾಂಧಾರ ರಾಜನಾದ ಶಕುನಿಯ ಸಹೋದರ; ಸುಬಲರಾಜನ ಮಗ. ಇವನು ಇರಾವಂತನಿಂದ ಹತನಾದ (ಮ.ಭೀ). ೨. ಕೃಷ್ಣದ್ವೈಪಾಯನನ ಮಗ. ಶುಕಿ (ಹೆಣ್ಣುಗಿಳಿ) ರೂಪದಿಂದ ಬಂದ ಘೃತಾಚಿ ಎಂಬ ಅಪ್ಸರೆಯಲ್ಲಿ ವ್ಯಾಸರಿಂದ ಹುಟ್ಟಿದ ಮಗ. ಇವನು ಜನಕರಾಜನಿಂದ ವಿದ್ಯಾಭ್ಯಾಸ ಪಡೆದನು. ನಾರದನಿಂದ ಉಪದೇಶಹೊಂದಿ ವೈರಾಗ್ಯಶಾಲಿಯಾದನು. ಇವನು ತಪಸ್ಸಿನಲ್ಲಿರುವಾಗ ರಂಭೆಯು ಈತನನ್ನು ಸಂಸಾರವ್ಯಾಪಾರಕ್ಕೆಳೆಯಲು ತುಂಬಾ ಪ್ರಯತ್ನಪಟ್ಟು ಹತಾಶಳಾದಳು. ಈತನ ಭಾರ್ಯೆ ಪಿತೃವಿನ ಕನ್ಯೆಯಾದ ಪೀವರಿ; ಈತನ ಮಗಳು ಕೃತ್ವಿ; ಈಕೆಯ ಮಗ ಅಣುಹ. ಈ ದಂಪತಿಗಳ ಮಗನೇ ಬ್ರಹ್ಮದತ್ತ (ಭಾಗ). ಶುಕಮುನಿಗೆ ಪೀವರಿಯಲ್ಲಿ ಕೃಷ್ಣ, ಗೌರಪ್ರಭ, ಭೂರಿ, ದೇವಶ್ರುತರೆಂಬ ನಾಲ್ವರು ಮಕ್ಕಳಿದ್ದರು; ಕೀರ್ತಿ ಎಂಬುವಳು ಮಗಳು; ಈಕೆಯ ಪತಿ ಅಣುಹ (ದೇವಿಭಾ). ಶುಕನು ಭಾಗವತವನ್ನು ಪರೀಕ್ಷಿತ್ ರಾಜನಿಗೆ ಹೇಳಿದನು. ಇವನು ಮಹಾಭಾರತವನ್ನು

ಯಕ್ಷ, ರಾಕ್ಷಸ, ಗಂಧರ್ವರಿಗೆ ಹೇಳಿದನು (ಮ.ಅ). ೩. ರಾವಣನ ಮಂತ್ರಿಯಾದ ರಾಕ್ಷಸನೊಬ್ಬ. ಇವನ ಜೊತೆಯಲ್ಲಿ ಸಾರಣನೆಂಬ ರಕ್ಕಸನೂ ರಾಮನ ಸೈನ್ಯವನ್ನು ನೋಡಲು ಬಂದಿದ್ದನು. ಇವರಿಬ್ಬರು ಕಪಿರೂಪವನ್ನು ಧರಿಸಿ ರಾಮನ ಸೈನ್ಯದಲ್ಲಿ ಸಂಚರಿಸುತ್ತಿರಲು ವಿಭೀಷಣನು ಅವರಿಬ್ಬರನ್ನೂ ಕಂಡು ಹಿಡಿದು, ರಾಮನ ಸಮೀಪಕ್ಕೆ ಕರೆದುಕೊಂಡು ಹೋದನು. ಶ್ರೀರಾಮನು ವಿಭೀಷಣನೊಡನೆ ಅವರಿಬ್ಬರಿಗೂ ತಮ್ಮ ಸೇನೆಯನ್ನು ತೋರಿಸುವಂತೆ ಹೇಳಿದನು. ರಾವಣನ ಮಂತ್ರಿಯಾದ ಇವನು -- ಸುಗ್ರೀವನನ್ನು ಶ್ರೀರಾಮನಿಂದ ಬೇರ್ಪಡಿಸಲು ಭೇದೋಪಾಯವನ್ನವಲಂಬಿಸಿದನು (ಅನಂ.ರಾ). ೪. ಶತಶೃಂಗ ಪರ್ವತದಲ್ಲಿದ್ದ ಶರ್ಯಾತಿಯ ಪ್ರಥಮ ಪುತ್ರ. ಇವನು ಭೂಮಿಯನ್ನು ಜಯಿಸಿ ನೂರು ಅಶ್ವಮೇಧಗಳನ್ನು ಮಾಡಿದ ಪ್ರಸಿದ್ಧ ರಾಜ. ಇವನು ಪಾಂಡವರ ಪ್ರಥಮದ ಬಿಲ್ಲುವಿದ್ಯಾಗುರು. ಇವನಿಂದಲೇ ಭೀಮನು ಗದೆಯಲ್ಲೂ, ಯುಧಿಷ್ಠಿರನು ಈಟಿ ಯದ್ಧದಲ್ಲೂ, ಅರ್ಜುನನು ಧನುರ್ವಿದ್ಯೆಯನ್ನೂ, ನಕುಲ ಸಹದೇವರು ಖಡ್ಗಯುದ್ಧದಲ್ಲೂ ನಿಪುಣರಾದರು (ಮ.ಅ.). ೫. ಇಂದ್ರನೊಡನೆ ಸಂಭಾಷಣೆಮಾಡಿದ ಪಕ್ಷಿಯೊಂದು.

ಶುಕಿ -- ೧. ಕಶ್ಯಪನ ಮಗಳು; ಈಕೆಯ ತಾಯಿ ತಾಮ್ರ. ಈಕೆಯ ಸಹೋದರರು ಶುಕಪಕ್ಷಿಗಳು. ೨. ಶುಕಮಹರ್ಷಿಯ ತಾಯಿ. ನೋ -- ಶುಕ.

ಶುಕ್ತಿಮತಿ -- ೧. ಶುಕ್ತಿಮತ್ ಪರ್ವತದಿಂದ ಉತ್ಪನ್ನವಾದ ನದಿ. ಒರಿಸ್ಸಾದ ಸುವರ್ಣ ರೇಖಾನದಿ. ೨. ಮಾಲವದ ವೇತ್ರವತೀ ನದಿ. ೩. ಶುಕ್ತಿಮತೀ ನದೀತೀರದ ಪಟ್ಟಣ. ಇದು ಚೇದಿದೇಶದ ರಾಜಧಾನಿಯಾಗಿತ್ತು. ಶಿಶುಪಾಲ ಮತ್ತು ಈತನ ಮಗನಾದ ದೃಷ್ಟಕೇತುವು ಈ ಪಟ್ಟಣದಲ್ಲೇ ರಾಜ್ಯಭಾರ ಮಾಡಿದರು. ನೋ -- ಗಿರಿಕಾ (ಮ.ಆ., ಭೀ., ಮತ್ಸ್ಯಪು).

ಶುಕ್ತಿಮಂತ -- ಉಜ್ಜಯಿನಿ ಸಮೀಪದ ವಿಂಧ್ಯಪರ್ವತದ ಪಶ್ಚಿಮ ಭಾಗ. ಇದರಲ್ಲಿ ಸುಕುಮಾರಿ, ಮಂದವಾಹಿನಿ, ಕೃಪಾ ಮೊದಲಾದ ನದಿಗಳು ಹುಟ್ಟುತ್ತವೆ. ನೋ -- ಶುಕ್ತಿಮತಿ (ಮ.ಆ., ಭೀ., ಮತ್ಸ್ಯಪು).

ಶುಕ್ರ -- ೧. ಭೃಗುಮಹರ್ಷಿಯ ಮಗ. ಈತನ ತಾಯಿ ಪುಲೋಮೆ; ಸಹೋದರ ಚ್ಯವನ; ಈತನ ಮಗಳು ದೇವಯಾನಿ; ಈತನ ಪತ್ನಿ ಶತಪರ್ವೆ (ಮ.ಉ). ಈತನ ಪತ್ನಿ ಪ್ರಿಯವ್ರತನ ಮಗಳಾದ ಊರ್ಜಸ್ವತಿ; ಈಕೆಯ ಮಗಳೇ ದೇವಯಾನಿ (ಭಾಗ). ಈತನ ಪತ್ನಿ ಪುರಂದರನ ಕನ್ಯೆಯಾದ ಜಯಂತಿ; ಈಕೆಯ ಮಗಳೇ ದೇವಯಾನಿ (ಮತ್ಸ್ಯಪು). ಈತನ ಮಗಳು ವರುಣನ ಪತಿಯಾದ ದೇವಿ (ಮ.ಅ).

ಈತನ ಮಕ್ಕಳು ಶಂಡಾಮರ್ಕರು.

ಪ್ರಹ್ಲಾದನ ಕಾಲದಲ್ಲಿ ದೇವತೆಗಳಿಂದ ರಾಕ್ಷಸರಿಗೆ ಮೇಲಿಂದಮೇಲೆ ಅಪಜಯವಾಗಲು ಶುಕ್ರಾಚಾರ್ಯನು ಮೃತಸಂಜೀವಿನಿ ವಿದ್ಯೆಯನ್ನು ಪಡೆಯಲು ಶಿವನನ್ನು ಕುರಿತು ತಪಸ್ಸುಮಾಡಿದನು. ಆಗ ಶಿವನು ಪ್ರತ್ಯಕ್ಷನಾಗಿ -- 'ನೀನು ಸಾವಿರ ವರ್ಷ ಧೂಮಪಾನ ಮಾಡುತ್ತಾ ತಲೆಕೆಳಗಾಗಿ ತಪಸ್ಸು ಮಾಡಿದರೆ ನಿನ್ನ ಬಯಕೆಯು ಸಂಪೂರ್ಣವಾಗುತ್ತದೆ' ಎನ್ನಲು, ಶುಕ್ರನು ಹಾಗೆಯೇ ತಪಸ್ಸು ಮಾಡಿದ. ಇದರಿಂದ ಮೃತಸಂಜೀವಿನಿ ವಿದ್ಯೆಯು ಶುಕ್ರನ ವಶವಾಯಿತು ನೋ -- ಕಚ, ದೇವಯಾನಿ, ವೃಷಪರ್ವ, ಪ್ರಹ್ಲಾದ, ಬಲಿ, ಇತ್ತ ಇಂದ್ರನು ತನ್ನ ಮಗಳು ಜಯಂತಿಯನ್ನು ಶುಕ್ರನಿಗೆ ಕೊಟ್ಟಿದ್ದೇನೆನ್ನಲು ಜಯಂತಿಯು ಶುಕ್ರನನ್ನು ಮೆಚ್ಚಿಸಿ, ಆತನನ್ನು ವಿವಾಹವಾದಳು. ಮುಂದೆ ಶುಕ್ರನು ಅದೃಶ್ಯನಾಗಲು, ಬೃಹಸ್ಪತಿ ಶುಕ್ರನ ವೇಷದಿಂದ ರಾಕ್ಷಸರಲ್ಲಿ ನಾಸ್ತಿಕವಾದವನ್ನು ಪ್ರಚಾರ ಮಾಡಿದನು (ದೇವೀಭಾ). ಇವನು ಶಿವನ ವೀರ್ಯದಿಂದ (ಶುಕ) ಜನಿಸಿದುದರಿಂದ ಶುಕ್ರನಾದನು (ಮ.ಶಾಂ).

ಬಲಿಚಕ್ರವರ್ತಿಯು ವಾಮನನಿಗೆ ಮೂರಡಿಯನ್ನು ಧಾರೆ ಎರೆದು ಕೊಡುವಾಗ ಗಿಂಡಿಯ ತೂತಿನಲ್ಲಿ ಕೀಟವಾಗಿ ಕೂತ ಶುಕ್ರನ ಕಣ್ಣನ್ನು ದರ್ಭೆಯಿಂದ ಚುಚ್ಚಿದುದರಿಂದ ಒಕ್ಕಣ್ಣನಾದನು (ಭಾ). ೨. ಶರ್ಯಾತಿಯ ಮಗ; ಇವನು ಪಾಂಡವರಲ್ಲಿ ಧನುರ್ವಿದ್ಯೆಯನ್ನು ಕಲಿತನು (ಮ.ಆ). ೩.ಕರ್ಣನಿಂದ ಹದಿನೇಳನೆಯ ದಿನದ ಯುದ್ಧದಲ್ಲಿ ಮಡಿದ ಪಾಂಚಾಲರಾಜ (ಮ.ಕ). ಶುಕ್ರ ಕುಬೇರನಿಂದ ಹಣವನ್ನು ಅಪಹರಿಸಿದನು (ಮ.ಶಾಂ).

ಶುಚಿ --೧. ಪ್ರಾಯಶ್ಚಿತ್ತಾಗ್ನಿ (ಮ.ವ). ೨. ವಿಶ್ವಾಮಿತ್ರಮುನಿಯ ಮಗ (ಮ.ಅನು). ೩. ಭೃಗುಋಷಿಗೆ ಪುಲೋಮೆಯಲ್ಲಿ ಹುಟ್ಟಿದ ಮಗ (ಮ.ಆ)

ಶುಚಿಶ್ರವಾ -- ಶ್ರೀಮನ್ನಾರಾಯಣನ ಹೆಸರು.

ಶುಚೀಂದ್ರ--ಇದೊಂದು ಕೇರಳದ ಕ್ಷೇತ್ರ. ಕನ್ಯಾಕುಮಾರಿಯಿಂದ ತ್ರಿವೇಂದ್ರಮಕ್ಕೆ ಹೋಗುವ ಮಾರ್ಗದಲ್ಲಿದೆ. ಗೌತಮನಿಂದ ಶಾಪಹೊಂದಿದ ಇಂದ್ರನು ಇಲ್ಲೇ ಶಾಪವಿಮೋಚನೆ ಹೊಂದಿದನು. ಇದು ಇಂದ್ರನು ಶುಚಿಯಾದ ಸ್ಥಳ. ಇಲ್ಲಿ ಅತ್ಯಂತ ದೊಡ್ಡ ಹನುಮಂತನ ವಿಗ್ರಹವಿದೆ (ಕ್ಷೇತ್ರದ).

ಶುನಕ -- ೧. ಚ್ಯವನ ಋಷಿಯ ಮೊಮ್ಮಗ; ಪ್ರಮತಿಯ ಮಗ. ಈತನ ತಾಯಿ ಘೃತಾಚಿ ಎಂಬ ಅಪ್ಸರೆ. ಈತನ ಪತ್ನಿ ಮೇನಕೆಯ ಮಗಳಾದ ಸ್ಥೂಲಕೇಶಿಯಿಂದ ಪೋಷಿಸಲ್ಪಟ್ಟ ಪ್ರಮದ್ವರೆ. ಇವನ ಮಗನೇ ಶೌನಕ.

ಈತನಿಗೆ ಸೂತಪುರಾಣಿಕರು ಭಾರತಕಥೆಯನ್ನು ಹೇಳಿದರು (ಮ.ಆ., ಸ., ಅನು). ೨. ಚಂದ್ರವಂಶದ ಆಯುವಿನ ವಂಶೋತ್ಪನ್ನನಾದ ಗೃತ್ಸಮದನನ ಮಗ (ಮ.ಆ).

ಶುನಶ್ಶೇಫ -- ಭೃಗುಕುಲೋತ್ಪನ್ನನ್ನಾದ ಋಚೀಕ ಋಷಿಯ ಮಧ್ಯಮ ಪುತ್ರ. ಇವನು ಹರಿಶ್ಚಂದ್ರನ ಯಜ್ಞವೊಂದಕ್ಕೆ ಪಶುವಾಗಿ ಮಾರಲ್ಪಟ್ಟು ವಿಶ್ವಾಮಿತ್ರನಿಂದ ಬಿಡುಗಡೆ ಹೊಂದಿ, ಅವನ ಅಭಿಮಾನಿ ಪುತ್ರನೆನಿಸಿದ. ಋಚೀಕನಿಗೆ ಅಜೀಗರ್ತನೆಂಬ ಹೆಸರೂ ಇದೆ; ಶುನಶ್ಶೇಫನಿಗೆ ದೇವರಾತನೆಂಬ ಹೆಸರೂ ಇದೆ. ಇವನ ಸಹೋದರ ಜಮದಗ್ನಿ ನೋ -- ಋಚೀಕ.

ಇವನು ವಿಶ್ವಾಮಿತ್ರಮುನಿಯ ಹಿರಿಯ ಮಗ. ಇವನು ಜಮದಗ್ನಿಯ ಕಿರಿಯ ಮಗನಾಗಿದ್ದು ಮುಂದೆ ಕೌಶಿಕ ವಂಶಕ್ಕೆ ಸೇರಿದನು. ಹರಿದಶ್ವನ ಯಜ್ಞದಲ್ಲಿ ಯಾಗೀಯ ಪಶುವಾಗಿದ್ದ ಇವನು ವೇದಮಂತ್ರಗಳಿಂದ ದೇವತೆಗಳನ್ನು ಪ್ರಾರ್ಥಿಸಿದಾಗ, ಅವರು ಬಂದು ಅವನನ್ನು ಬಿಡಿಸಿ ವಿಶ್ವಾಮಿತ್ರನಿಗೆ ಒಪ್ಪಿಸಿದರು. ದೇವತೆಗಳಿಂದ ಆ ಮುನಿಗೆ ಆತನು ಒಪ್ಪಿಸಲ್ಪಟ್ಟ ಕಾರಣ ಆತನಿಗೆ ದೈವರಾತನೆಂಬ ಹೆಸರು ಬಂತು (ಹರಿ). ನೋ -- ವಿಶ್ವಾಮಿತ್ರ (ಮ.ಅನು).

ಶುನಸ್ಸಖ -- ತ್ರಿದಂಡ ಸನ್ಯಾಸಿರೂಪದ ಇಂದ್ರ (ಮ.ಅನು).

ಶುಭಾ -- ಗಾಂಧಾರ ರಾಜನಾದ ಸುಬಲನ ಪುತ್ರಿ (ಮ.ಆ).

ಶುಭಾಂಗದ -- ದ್ರೌಪದಿಯ ಸ್ವಯಂವರಕ್ಕಾಗಿ ಬಂದ ಕ್ಷತ್ರಿಯನೊಬ್ಬ (ಮ.ಆ).

ಶುಭಾಂಗಿ -- ೧. ಚಂದ್ರವಂಶದ ಕುರುರಾಜನ ಭಾರ್ಯೆ; ಈಕೆಯ ಮಗ ವಿದೂರಥ ನೋ -- ವಿದೂರಥ (ಮ.ಆ). ೨. ಈಕೆಯು ರುಕ್ಮಿ ರಾಜನ ಮಗಳು, ರುಕ್ಮಿಣಿಯ ಅಕ್ಕನ ಮಗಳು. ಈಕೆಯು ಪ್ರದ್ಯುಮ್ನನನ್ನು ವಿವಾಹವಾದಳು. ಈಕೆಯ ಮಗನೇ ಅನಿರುದ್ಧ (ಭಾಗ.).

ಶುಂಭ -- ರಾಕ್ಷಸನೊಬ್ಬ; ನಿಶುಂಭನ ಅಣ್ಣ. ನೋ -- ನಿಶುಂಭ (ದೇವೀಭಾ., ಮಾರ್ಕಂಪು., ಶಿವಪು).

ಶೂರ--೧. ಯದುವಂಶೋತ್ಪನ್ನನಾದ ದೇವಿಮೀಢನ ಮಗ. ಈತನ ಪತ್ನಿ ಮಾರಿಷೆ. ಮಕ್ಕಳು ವಸುದೇವ ಮೊದಲಾದವರು. ಕುಂತಿ ಮೊದಲಾದವರು ಈತನ ಹೆಣ್ಣು ಮಕ್ಕಳು. ನೋ -- ವಸುದೇವ, ಕುಂತಿ. ಕುಂತಿ, ಶ್ರುತದೇವಾ (ದಂತವಕ್ರನ ತಾಯಿ), ಶ್ರುತಕೀರ್ತಿ (ಕೇಕಯರಾಜನ ಪತ್ನಿ), ಶ್ರುತಶ್ರವಾ (ಶಿಶುಪಾಲನ ಜನನಿ), ರಾಜಧಿದೇವಿ (ವಿಂದಾನುವಿಂದರ ತಾಯಿ) ಎಂಬ ಐವರು ಇವನ ಪುತ್ರಿಯರು (ಮ.ಆ., ವಿಷ್ಣುಪು., ಭಾಗ., ಹರಿ). ೨. ದಶರಥನ

ಮಾವ; ಸುಮಿತ್ರೆಯ ತಂದೆ. ಇವನು ಶತ್ರುಘ್ನ ಮತ್ತು ಲಕ್ಷ್ಮಣರ ಅಜ್ಜ. ಮಗಧ ದೇಶದ ಅರಸು (ಮ.ವ).

ಶೂರತರ -- ಪ್ರಸಿದ್ಧ ರಾಜ; ಇವನು ಪಟಚ್ಚರನೆಂಬ ರಾಕ್ಷಸನನ್ನು ಕೊಂದ. ಕುರುಕ್ಷೇತ್ರಯುದ್ಧದಲ್ಲಿ ಪಾಂಡವಪಕ್ಷದಲ್ಲಿ ಹೊಡೆದಾಡಿ ಕರ್ಣನಿಂದ ಮಡಿದ (ಮ.ದ್ರೋ).

ಶೂರಸೇನ -- ೧. ಪಾಂಡವಪಕ್ಷೀಯನಾದ ಪಾಂಚಾಲನೊಬ್ಬ. ಇವನು ಕರ್ಣನಿಂದ ಹತನಾದನು (ಮ.ಕ). ೨. ಕಾರ್ತವೀರ್ಯನ ಮಗ. ಇವನು ಪರಶುರಾಮನಿಗೆ ಹೆದರಿ ಕಾಡಿನಲ್ಲಿ ಅಡಗಿ ಬದುಕಿಕೊಂಡ (ಮತ್ಸ್ಯಪು). ೩.ಒಂದು ದೇಶ. ಇದರ ರಾಜಧಾನಿ ಮಧುರೆ; ರಾಜ ಕಂಸ (ಮ.ಭೀ)

ಶೂರಸೇನೀ -- ಚಂದ್ರವಂಶದ ಪೂರುವಿನ ಸೊಸೆ; ಪ್ರವೀರನ ಪತ್ನಿ. ಈತನ ಮಗ ಮನಸ್ಯು (ಮ.ಆ).

ಶೂರ್ಪಣಖಾ (ಶೂರ್ಪನಖಿ) -- ಖರರಾಕ್ಷಸನ ತಂಗಿ. ಈಕೆ ರಾಕಾ ಎಂಬ ರಾಕ್ಷಸಿಯ ಮಗಳು. ಈಕೆಯ ಗಂಡ ವಿದ್ಯುಜ್ಜಿಹ್ವನೆಂಬ ರಾಕ್ಷಸ. ಕಾಲಕೇಯರೊಂದಿಗೆ ರಾವಣನು ಯುದ್ಧ ಮಾಡುತ್ತಿದ್ದಾಗ ತಿಳಿಯದೇ ಈಕೆಯ ಪತಿಯನ್ನು ಕೊಂದನು. ಮುಂದೆ ರಾವಣನಿಗೆ ಶೂರ್ಪನಖಿಯ ಗೋಳನ್ನು ನೋಡಲಾರದೆ ಖರನೊಡನೆ ಹದಿನಾಲ್ಕು ಸಾವಿರ ರಕ್ಕಸರ ಸೇನೆಯನ್ನು ಕೊಟ್ಟು, ಆಕೆಯನ್ನೂ ಆತನೊಡನೆ ದಂಡಕಾರಣ್ಯಕ್ಕೆ ಕಳುಹಿಸಿದನು. ಸೀತಾಲಕ್ಷ್ಮಣರೊಡನಿದ್ದ ರಾಮನನ್ನು ಈಕೆಯು ಪಂಚವಟಿಯಲ್ಲಿ ಕಂಡು ಮೋಹಿಸಿ ಆತನನ್ನು ವಿರಹ ಕಾತರಳಾಗಿ ಪ್ರಾರ್ಥಿಸಲು ಶ್ರೀರಾಮನು ವಿನೋದಕ್ಕಾಗಿ ಲಕ್ಷ್ಮಣನನ್ನು ತೋರಿಸಿದನು. ಇದರಿಂದ ರಕ್ಕಸಿಯು ಕೋಪಗೊಂಡು ಸೀತೆಯನ್ನು ನುಂಗಹೋಗಲು ರಾಮನಾಜ್ಞೆಯಂತೆ ಲಕ್ಷ್ಮಣನು ಈಕೆಯ ಕಿವಿಮೂಗುಗಳನ್ನು ಕತ್ತರಿಸಿದನು (ರಾಮಾ.ಉತ್ತರ., ಅರಣ್ಯ).

ಈಕೆ ಕೈಕಸಿ ಮತ್ತು ವಿಶ್ರವಸುವಿನ ಮಗಳು. ರಾವಣ ಕುಂಭಕರ್ಣರು ಈಕೆಯ ಅಣ್ಣಂದಿರು. ಈಕೆಯ ಮಗ ಸಾಂಬ ನೋ--ಸಾಂಬ. ಶ್ರೀರಾಮನು ಶೂರ್ಪನಖಿಯೊಡನೆ ಒಂದು ಶಸ್ತ್ರವನ್ನು ಕೊಟ್ಟು ಕಳುಹಿಸಲು ಅಣ್ಣನ ಮನೋಗತವನ್ನು ತಿಳಿದ ಲಕ್ಷ್ಮಣನು ಆದರಿಂದಲೇ ಆ ರಾಕ್ಷಸಿಯ ಮೂಗು, ಮುಂಗೂದಲು, ಸ್ತನಗಳು ಮತ್ತು ಕಿವಿಗಳನ್ನು ಕತ್ತರಿಸಿದನು (ಅನಂ.ರಾ.).

ಶೂರ್ಪಾರಕ -- ಒಂದು ಕ್ಷೇತ್ರ. ಪರಶುರಾಮನ ವಾಸಸ್ಥಾನ. ಕೇರಳದ ಉತ್ತರಭಾಗ; ಕೊಂಕಣ ಪ್ರದೇಶ. ಇದು ಬಿಜಾಪುರ ಜಿಲ್ಲೆಯ ಜಮಖಂಡಿಯ

ಹತ್ತಿರವಿರುವ ಶೂರಪಾಳಯ (ಶೂರ್ಪಾಲಿ). ಇದನ್ನು ಪರಶುರಾಮ ಕ್ಷೇತ್ರವೆನ್ನುತ್ತಾರೆ. ಸಮುದ್ರನು ಪರಶುರಾಮನಿಗೆ ದಾರಿಬಿಟ್ಟ ಕ್ಷೇತ್ರ (ಮ.ಭೀ., ಸ., ವ., ಶಾಂ).

ಶೃಗಾಲ -- ೧. ಇವನಿಗೆ ಶೃಗಾಲವಾಸುದೇವನೆಂಬ ಹೆಸರಿದೆ. ಇವನು ಕರವೀರಪುರದ ರಾಜ. ಕರವೀರಪುರವು ಇಂದಿನ ಕೊಲ್ಲಾಪುರ. ಈ ರಾಜನು ಸೂರ್ಯನ ಆರಾಧನೆಯನ್ನು ಮಾಡಿ ಒಂದು ದಿವ್ಯರಥವನ್ನು ಪಡೆದಿದ್ದನು. ಈ ರಥವು ಅಕ್ಷಯಬತ್ತಳಿಕೆ, ತೀಕ್ಷ್ಣಬಾಣಗಳು ಮತ್ತು ವೇಗಗಾಮಿಗಳಾದ ಕುದುರೆಗಳುಳ್ಳದ್ದಾಗಿತ್ತು. ಇವನು ಕೃಷ್ಣನ ಕೈಯ ಚಕ್ರಾಯುಧದಿಂದ ಹತನಾದನು (ಹರಿ., ಮ.ಶಾಂ). ೨. ಇಂದ್ರನು ಶೃಗಾಲನ (ನರಿ) ರೂಪವನ್ನು ಧರಿಸಿ ವಣಿಜನೊಬ್ಬನಿಂದ ಅಪಮಾನಿತನಾಗಿ ಪ್ರಾಯೋಪವೇಶ ಮಾಡಲುದ್ಯುಕ್ತನಾದ ಬ್ರಾಹ್ಮಣನನ್ನು ಸಂತವಿಸಿದನೆಂದು ಮೋಕ್ಷಧರ್ಮದಲ್ಲಿ ಹೇಳಿದೆ (ಮ.ಶಾಂ).

ಶೃಂಗಬೇರ -- ೧. ಒಂದು ಸರ್ಪ (ಮ.ಆ). ೨. ಭಾಗೀರಥಿಯ ಉತ್ತರತೀರದಲ್ಲಿದ್ದ ಒಂದು ಪಟ್ಟಣ. ಇದರ ರಾಜನು ಗುಹನೆಂಬ ಬೇಡರ ಒಡೆಯ. ಇದು ಅಲಹಾಬಾದಿನಿಂದ ಹದಿನೆಂಟು ಮೈಲು ವಾಯುವ್ಯದಲ್ಲಿರುವ ಗಂಗಾ ನದಿಯ ತಟದ ಶೃಂಗೂರು. ಇದನ್ನು ಈಗ ಶ್ರೀನಗರವೆನ್ನುತ್ತಾರೆ. ಗುಹನು ರಾಮಭಕ್ತ. ನೋ -- ಗುಹ (ರಾಮಾ.ಅಯೋ., ಮ.ವ).

ಶೃಂಗವಂತ -- ೧. ಒಂದು ಪರ್ವತ (ಮ.ಸ.ಭೀ) ೨. ಗಾಲವಋಷಿಯ ಮಗ. ಈತನ ಪತ್ನಿ ವೃದ್ಧಕನ್ಯಾ. ನೋ -- ಕುಣಿಗಾರ್ಗ್ಯ, ವೃದ್ಧಕನ್ಯಾ (ಮ.ಶ).

ಶೃಂಗಾಟಕ ವ್ಯೂಹ -- ಎಂಟನೆಯ ದಿನದಲ್ಲಿ ಭೀಷ್ಮನು ಕೂರ್ಮವ್ಯೂಹವನ್ನು ರಚಿಸಲು ಅದಕ್ಕೆ ಇದಿರಾಗಿ ಭಾರತ ಯುದ್ಧದಲ್ಲಿ ಧೃಷ್ಟದ್ಯುಮ್ನನಿಂದ ಪಾಂಡವಸೇನೆಯಲ್ಲಿ ನಿರ್ಮಿತವಾದ ಒಂದು ವ್ಯೂಹ. ಇದು ನಾಲ್ಕು ಬೀದಿಗಳು ಸೇರುವ ಚೌಕಾಕಾರದ ವ್ಯೂಹ (ಮ.ಭೀ).

ಶೃಂಗಿ -- ಅಂಗಿರಸಮುನಿಯ ಕುಲೋತ್ಪನ್ನನಾದ ಶಮೀಕ ಋಷಿಯ ಮಗ. ಇವನು ಗೋವಿನ ಹೊಟ್ಟೆಯಲ್ಲಿ ಜನಿಸಿದನು. ಈತನು ಪರೀಕ್ಷಿತ್ ರಾಜನಿಗೆ ಏಳು ದಿನಗಳಲ್ಲಿ ಹಾವು ಕಚ್ಚಿ ಸಾಯುವಂತೆ ಶಾಪವಿತ್ತ. ನೋ -- ಶಮೀಕ, ಪರೀಕ್ಷಿದ್ರಾಜ (ಮ.ಆ., ಭಾಗ).

ಶೃಂಗೇರಿ--ಇದು ಜಗದ್ಗುರು ಶಂಕರಾಚಾರ್ಯರ ನಾಲ್ಕು ಪೀಠಗಳಲ್ಲಿ ಮುಖ್ಯವಾದದ್ದು. ಇಲ್ಲಿ ತುಂಗಾನದಿ ಹರಿಯುತ್ತದೆ. ಇಲ್ಲಿ ಶಾರದಾಂಬೆಯ

ಮಂದಿರವಿದೆ; ಶಾರದಾ ದೇವಿಯ ಮೂರ್ತಿ ಭವ್ಯವಾಗಿದೆ. ಇಲ್ಲಿ ಪ್ರಸಿದ್ಧ ಶಿವದೇವಾಲಯವಿದೆ. ನದಿಯ ಆಚೆಯ ದಡದಲ್ಲಿ ಸಮಾಧಿಗಳೂ ಜಗದ್ಗುರುಗಳ ವಾಸ್ತವ್ಯವೂ ಇದೆ. ಹಿಂದೆ ಇಲ್ಲಿಯ ಗುಡ್ಡದ ತುದಿಯ ಮೇಲೆ ಋಷ್ಯಶೃಂಗನ ತಂದೆ ವಿಭಾಂಡಕ ಋಷಿಯ ಆಶ್ರಮವಿತ್ತು. ಈ ಪರ್ವತಕ್ಕೆ ಪ್ರಾಚೀನ ಕಾಲದ ಹೆಸರು ವಾರಾಹಪರ್ವತವೆಂದು. ಈ ಪರ್ವತದಲ್ಲಿ ತುಂಗಾ, ಭದ್ರಾ, ನೇತ್ರಾವತಿ, ವಾರಾಹಿ ಎಂದು ನಾಲ್ಕು ನದಿಗಳು ಹುಟ್ಟುತ್ತವೆ (ಕ್ಷೇತ್ರದ).

ಶೇಷ -- ಕದ್ರುಪುತ್ರನಾದ ನಾಗನೊಬ್ಬ. ಈತನು ತಪಸ್ಸಿನಿಂದ ಬ್ರಹ್ಮನನ್ನು ಒಲಿಸಿಕೊಂಡು ಭೂಮಿಯನ್ನು ಧರಿಸುವ ಶಕ್ತಿಯನ್ನು ಪಡೆದನು. ಇವನಿಗೆ ಸಾವಿರ ಹೆಡೆಗಳು. ಇವನು ತನ್ನ ಸಹೋದರರ ಗುಣಗಳನ್ನು ಮೆಚ್ಚದೆ ಅವರನ್ನು ತ್ಯಜಿಸಿದ್ದನು. ಈತನು ಶ್ರೀಮನ್ನಾರಾಯಣನ ಹಾಸಿಗೆ. ಲಕ್ಷ್ಮಣ ಮತ್ತು ಬಲರಾಮರು ಶೇಷನ ಅವತಾರ. ಈತನು ಮಹಾಜ್ಞಾನಿ. ನೋ -- ಲಕ್ಷ್ಮಣ (ಮ.ಆ).

ಶೇಷಾದ್ರಿ -- ವಾಯುವು ಶೇಷನ ಗರ್ವ ಭಂಗಿಸಿದ ಸ್ಥಳ. ನೋ -- ವೃಷಭಾದ್ರಿ. ಅಂಜನಾದ್ರಿ.

ಶೈಖಾವತ್ಯ -- ಮುನಿಯೊಬ್ಬ. ಭೀಷ್ಮ ಸಾಲ್ವರಿಂದ ತಿರಸ್ಕಾರಹೊಂದಿದ ಅಂಬೆಯು ಈತನ ಆಶ್ರಮದಲ್ಲಿ ತಪಸ್ಸು ಮಾಡಿದಳು. ಈ ಮುನಿಯು ಅಂಬೆಗೆ ತಪಸ್ಸನ್ನು ನಿಷೇಧಿಸಿ -- 'ಸಮಸ್ಥಿತಿಯಲ್ಲಿರುವ ಸ್ತ್ರೀಗೆ ಗಂಡನೆ ರಕ್ಷಕ'. ವಿಷಮಸ್ಥಿತಿಯನ್ನು ಹೊಂದಿದ ಸ್ತ್ರೀಗೆ ತಂದೆಯೇ ರಕ್ಷಕ' ನೆಂದು ಹೇಳುತ್ತಿರುವಾಗ ಅಲ್ಲಿಗೆ ಹೋತ್ರವಾಹನನೆಂಬ ರಾಜರ್ಷಿ ಬಂದನು. ನೋ -- ಹೋತ್ರವಾಹನ (ಮ.ಉ.).

ಶೈಬ್ಯ --೧. ವೃಷ್ಣಿವಂಶದ ಕ್ಷತ್ರಿಯ (ಮ.ಸ). ೨. ಶ್ರೀಕೃಷ್ಣನ ರಥಾಶ್ವಗಳಲ್ಲೊಂದು (ಮ.ಅಶ್ವ., ವ). ೩. ಕೋಟಿಕಾಸ್ಯ -- ಸೈಂಧವನ ಆಪ್ತಸ್ನೇಹಿತ -- ಕೋಟಿಕ, ಸುರಥ--ನಾಮಾಂತರಗಳು. ಇವನು ಜಯದ್ರಥನಿಂದ ದ್ರೌಪದಿಯ ಬಳಿಗೆ ಕಳುಹಿಸಲ್ಪಟ್ಟವ; ಶಿಬಿಯ ವಂಶದ ರಾಜ. ಇವನು ಸುರಥನ ಮಗ. ೪. ಕೃಷ್ಣನು ಸೋಲಿಸಿದ ಒಬ್ಬ ಕ್ಷತ್ರಿಯ.

ಶೈಬ್ಯಾ -- ೧. ಕೃಷ್ಣನ ಪತ್ನಿಯಲ್ಲಿ ಒಬ್ಬಳಾದ ಮಿತ್ರವಿಂದೆಯ ಹೆಸರು (ಮ.ಮೌ). ೨. ನದಿಯೊಂದು (ಮ.ಭೀ). ೩. ಪ್ರತೀಪನ ಪತ್ನಿಯಾದ ಸುನಂದೆ. ಈಕೆಯ ಮಕ್ಕಳು ದೇವಾಪಿ ಮೊದಲಾದವರು (ಮ.ಆ). ೪. ಸೂರ್ಯವಂಶದ ಸಗರರಾಜನ ಪತ್ನಿ. ಈಕೆಯ ಮಗ ಅಸಮಂಜ. ಈತನ ತಾಯಿಗೆ ಸುಮತಿ ಎಂಬ ಹೆಸರೂ ಇದೆ (ಮ.ವ). ೫. ದ್ಯುಮತ್ಸೇನರಾಜನ ಪತ್ನಿ; ಸತ್ಯವಂತನ ತಾಯಿ. ನೋ -- ಉಪದಾ ನದಿ. ೬. ಧರ್ಮರಾಜನ ಪತ್ನಿ.

ಶೈಲಾಭ -- ವಿಶ್ವದೇವತೆಗಳಲ್ಲೊಬ್ಬ (ಮ.ಅನು).

ಶೈಲಾಲಯ -- ಭಗದತ್ತನ ಅಜ್ಜ (ಮ.ಅಶ್ವ).

ಶೈಲೂಷ -- ೧. ಗಂಧರ್ವನೊಬ್ಬ. ಈತನ ಮಗಳಾದ ಸರಮೆಯು ವಿಭೀಷಣನ ಹೆಂಡತಿ (ಮ.ಸ).

ಶೈವಸ್ಥಲಗಳು -- ೧. ಚಿದಂಬರ, ೨. ಜಂಬುಕೇಶ್ವರ (ತಿರುಚಿನಾಪಳ್ಳಿಯಿಂದ ನಾಲ್ಕು ಮೈಲುಗಳು ದೂರದಲ್ಲಿದೆ). ೩. ಪಶುಪತಿಸ್ಥಾನ (ನೇಪಾಳ), ೪.ಸುಂದರೇಶ್ವರ (ಮಧುರೆ), ೫. ಕುಂಭೇಶ್ವರ (ಕುಂಭಕೋಣ), ೬.ಬೃಹದೀಶ್ವರ (ತಂಜಾವೂರು), ೭. ಪಕ್ಷಿತೀರ್ಥ (ಚೆಂಗಲ್ ಪೇಟೆ), ೮.ಅಮರನಾಥ (ಕಾಶ್ಮೀರ), ೯. ವೈದ್ಯನಾಥ (ಕಾಂಗಡಾ). ೧೦. ತಾರಕೇಶ್ವರ (ಪಶ್ಚಿಮ ಬಂಗಾಳ) ೧೧. ಭುವನೇಶ್ವರ (ಉತ್ಕಲ) ೧೨. ಕಂಡಾರಿಯಾಶಿವ (ಖಜುರಾಹೋ). ೧೩. ಏಕಲಿಂಗೇಶ್ವರ (ಉದಯಪುರ), ೧೪. ಗೌರೀಶಂಕರ (ಜಬಲ್‌ಪುರ), ೧೫. ಹರೀಶ್ವರ (ಮಾನಸಸರೋವರ), ೧೬. ವ್ಯಾಸೇಶ್ವರ (ಕಾಶಿಯ ಹತ್ತಿರ), ೧೭. ಹಾಟಕೇಶ್ವರ (ವಡನಗರ), ೧೮. ಮುಕ್ತಪರಮೇಶ್ವರ (ಅರುಣಾಚಲ), ೧೯. ಪ್ರತಿಜ್ಞೇಶ್ವರ (ಕ್ರೌಂಚಪರ್ವತ), ೨೦. ಸರ್ವೇಶ್ವರ (ಚಿತ್ತೋಡ), ೨೧. ಅಮರೇಶ್ವರ (ಮಹೇಂದ್ರಪರ್ವತ), ೨೨.ಮಹಾಬಲೇಶ್ವರ (ಗೋಕರ್ಣ). ೨೩. ಕಾಲಹಸ್ತೇಶ್ವರ (ಕಾಳಹಸ್ತಿ), ೨೪. ಅರುಣಾಚಲೇಶ್ವರ (ತಿರುವಣ್ಣಾಮಲೆ).

ಶೈವಲಾ -- ದೇಶವೊಂದು (ಮ.ಭೀ).

ಶೋಣ -- ೧. ಒಂದು ನದಿ. ಇದು ಮಗಧದ ಪಶ್ಚಿಮ ಗಡಿಯಲ್ಲಿದೆ (ಮ.ಭೀ). ೨. ಧನಂಜಯನೆಂಬ ಬ್ರಾಹ್ಮಣನ ಮಗ. ಇವನ ಪತ್ನಿ ದೇವರಾತನ ಮಗಳಾದ ಕಲೆ. ಇವಳನ್ನು ಮಾರೀಚನೆಂಬ ರಾಕ್ಷಸನು ವಶಪಡಿಸಿಕೊಳ್ಳಲು ಯತ್ನಿಸಿ, ಅಸಾಧ್ಯವಾಗಲು ಕೊಂದನು. ಶೋಣನು ಕೈಲಾಸವನ್ನು ಸೇರಿ, ಪಾರ್ವತಿಯೊಡನೆ ಪತ್ನಿಯನ್ನು ಬೇಡಿ ಪಡೆದನು (ಪದ್ಮಪು).

ಶೋಣಾಶ್ವ -- ಕೆಂಪು ಕುದುರೆಗಳುಳ್ಳ ದ್ರೋಣಾಚಾರ್ಯ (ಮ.ವಿ., ದ್ರೋ).

ಶೋಣಿತಪುರ -- ಬಾಣಾಸುರನ ರಾಜಧಾನಿ. ಇಲ್ಲಿ ಉಷಾ -- ಅನಿರುದ್ಧರ ವಿವಾಹಕ್ಕಾಗಿ ಶ್ರೀಕೃಷ್ಣ -- ಬಾಣಾಸುರರಿಗೆ ಯುದ್ಧ ನಡೆಯಿತು. ಇಲ್ಲಿಂದ ತುಸು ದೂರದಲ್ಲಿ ನರ್ಮದಾ ತೀರದಲ್ಲಿ ಬ್ರಹ್ಮಾಂಡಪಾಟು ಇದೆ. ಇಲ್ಲಿ ವರಾಹಸ್ವಾಮಿಯ ದೇವಾಲಯವಿದೆ. ಇಲ್ಲೇ ಸಮೀಪದಲ್ಲೇ ವರಾಹಗಂಗೆ ಇದೆ. ನೋ -- ಬಾಣಾಸುರ, ಉಷೆ (ಭಾ).

ಶೋಣಿತೋದ -- ಯಕ್ಷನೊಬ್ಬ (ಮ.ಸ).

ಶೌನಕ --೧. ಭೃಗುವಂಶದ ಋಷಿ. ಈತನು ನೈಮಿಷಾರಣ್ಯವಾಸಿಯಾಗಿದ್ದ ಕುಲಪತಿ. ಇವನು ಭಾರತಾದಿ ಇತಿಹಾಸ ಪುರಾಣಗಳನ್ನು ಸೂತಪುರಾಣಿಕನ ಮುಖದಿಂದ ಕೇಳಿದನು.

ಹತ್ತುಸಾವಿರ ಮಂದಿ ಶಿಷ್ಯರನ್ನು ತಾನೊಬ್ಬನೇ ಅನ್ನದಾನಾದಿಗಳಿಂದ ಭರಿಸತಕ್ಕವನು. ಇವನು ವೇದಭಾಗಗಳಾದ ಅರಣ್ಯಗಳಲ್ಲಿ ಗುರುಸ್ಥಾನ ಪಡೆದವನು (ಮ.ಆ., ಶಾಂ). ೨. ಇಂದ್ರೋದನೆಂಬ ಹೆಸರಿನ ಬ್ರಾಹ್ಮಣ. ಪೂರುಪುತ್ರನಾದ ಜನಮೇಜಯನಿಗೆ ಬ್ರಹ್ಮಹತ್ಯೆಯು ಪ್ರಾಪ್ತವಾಗಲು ಇವನು ಜನಮೇಜಯನಿಂದ ಅಶ್ವಮೇಧ ಮಾಡಿಸಿ ಬ್ರಹ್ಮಹತ್ಯೆಯನ್ನು ಹೋಗಲಾಡಿಸಿದನು (ಮ.ಶಾಂ). ೩. ಯುಧಿಷ್ಠಿರನೊಡನೆ ವನದಲ್ಲಿದ್ದ ಬ್ರಾಹ್ಮಣನೊಬ್ಬ (ಮ.ವ).

ಶ್ಯಾಮ -- ಪರ್ವತವೊಂದು (ಮ.ಭೀ).

ಶ್ಯಾಮಾಯನ -- ವಿಶ್ವಾಮಿತ್ರಮುನಿಯ ಪುತ್ರನೊಬ್ಬ (ಮ.ಅನು).

ಶ್ಯೇನಚಿತ್ರ -- ಕ್ಷತ್ರಿಯನೊಬ್ಬ (ಮ.ಅನು).

ಶ್ಯೇನಜಿತ್ -- ೧. ಇಕ್ಷ್ವಾಕು ಕುಲೋತ್ಪನ್ನನಾದ ದಲರಾಜನ ಮಗ. ನೋ -- ದಲ (ಮ.ವ). ೨. ಪಾಂಡವಪಕ್ಷದ ಕ್ಷತ್ರಿಯನೊಬ್ಬ (ಮ.ಉ).

ಶ್ಯೇನವ್ಯೂಹ -- ಭೀಷ್ಮನು ಸೇನಾಪತಿಯಾಗಿದ್ದ ಕಾಲದಲ್ಲಿ ಧೃಷ್ಟದ್ಯುಮ್ನನು ಪಾಂಡವ ಸೇನೆಯನ್ನು ಹದ್ದಿನಾಕಾರದಲ್ಲಿ ನಿಲ್ಲಿಸಿದ್ದನು. ಇದಕ್ಕೆ ಗೃಧ್ರವ್ಯೂಹವೆಂದೂ ಹೇಳುತ್ತಾರೆ (ಮ.ಭೀ).

ಶ್ಯೇನೀ -- ಕಶ್ಯಪಮುನಿಯ ಮಗಳು. ಈಕೆಯ ತಾಯಿ ತಾಮ್ರೆ. ಈಕೆ ವಿನತೆಯ ಮಗನಾದ ಅರುಣನ ಪತ್ನಿ. ಈಕೆಯ ಮಕ್ಕಳು ಸಂಪಾತಿ ಮತ್ತು ಜಟಾಯು (ಮ.ಆ).

ಶ್ರದ್ಧಾ -- ೧. ಸ್ವಾಯಂಭುವ ಮನ್ವಂತರದ ದಕ್ಷಪ್ರಜಾಪತಿಯ ಪುತ್ರಿ. ಈಕೆ ಧರ್ಮಪ್ರಜಾಪತಿಯ ಪತ್ನಿ (ಮ.ಆ.). ೨. ಸೂರ್ಯನ ಪುತ್ರಿ (ಮ.ಶಾಂ.).

ಶ್ರವ -- ಶಿವನೆಂಬ ಬ್ರಾಹ್ಮಣನ ಮಗ; ಈತನ ಮಗ ತಮ (ಮ.ಅನು).

ಶ್ರವಣ -- ಒಂದು ನಕ್ಷತ್ರ. ಚಂದ್ರನ ಒಬ್ಬಳು ಪತ್ನಿ. ಈಕೆ ದಕ್ಷಪುತ್ರಿ (ಮ.ಆ).

ಶ್ರವಣಬೆಳುಗೊಳ -- ಈ ಜೈನಕ್ಷೇತ್ರವು ಮೈಸೂರಿನಿಂದ ೬೨ ಮೈಲು ಉತ್ತರಕ್ಕಿದೆ. ಸೋಪಾನಗಳಿರುವ ಶ್ವೇತಸರೋವರವುಂಟು. ಇದರಿಂದ ಇದನ್ನು ಶ್ರವಣಬೆಳುಗೊಳ ಎನ್ನುತ್ತಾರೆ. ಇಲ್ಲಿರುವ ಇಂದ್ರಗಿರಿಗೆ ದೊಡ್ಡಬೆಟ್ಟವೆಂಬ

ಹೆಸರಿದ್ದು ಬುಡದಿಂದ ತುದಿಗೆ ೬೦೦ ಸೋಪಾನಗಳಿವೆ; ತುದಿಯಲ್ಲಿ ಗೋಮಟೇಶ್ವರನ ಪ್ರತಿಮೆ ಇದೆ. ಗೋಮಟೇಶ್ವರನಿಗೆ ಭುಜಬಲಿ, ಬಾಹುಬಲಿ, ಪ್ರದ್ಯುಮ್ನ, ಮನ್ಮಥ, ಪುಷ್ಪಬಾಣ ಮೊದಲಾದ ಹೆಸರುಗಳಿವೆ.

ಹಿಂದೆ ಭರತರಾಜನು ಅಯೋಧ್ಯೆಯಲ್ಲೂ, ಆತನ ತಮ್ಮನಾದ ಬಾಹುಬಲಿಯು ಪೌದನಪುರದಲ್ಲೂ ರಾಜ್ಯವಾಳುತ್ತಿದ್ದಾಗ, ಭರತನು ಚಕ್ರವರ್ತಿಯಾಗಬೇಕೆಂದು ತಮ್ಮನೊಡನೆ ಯುದ್ಧಕ್ಕೆ ಸಿದ್ಧನಾದನು. ಯುದ್ಧದಲ್ಲಿ ಭರತನು ಸೋತನು. ಆದರೆ ಬಾಹುಬಲಿಯು ಅಣ್ಣನ ರಾಜ್ಯಾಕಾಂಕ್ಷೆಗೆ ವೈರಾಗ್ಯಹೊಂದಿ, ನಿಂತು ಘೋರತಪಸ್ಸು ಮಾಡಿದನು. ಈ ಪ್ರತೀಕವೇ ಗೋಮಟೇಶ್ವರನ ಪ್ರತಿಮೆ. ಇಂತಹ ಪ್ರತಿಮೆ ಕಾರ್ಕಳ, ವೇಣೂರಿನಲ್ಲೂ ಇದೆ.

ಸುಮಾರು ಸಾವಿರ ವರ್ಷಗಳ ಪೂರ್ವದಲ್ಲಿ ಗಂಗರಾಜನ ಮಂತ್ರಿಯಾದ ಚಾವುಂಡರಾಯನಿಗೆ ಸ್ವಪ್ನಬಿದ್ದ ಪ್ರಕಾರ ಅವನು ಬಾಹುಬಲಿಯ ಉನ್ನತವಾದ ಶಿಲಾಪ್ರತಿಮೆಯನ್ನು ತಯಾರಿಸಿ ಶ್ರವಣಬೆಳಗೊಳದಲ್ಲಿ ಸ್ಥಾಪಿಸಿ ವೈಭವದಿಂದ ಪೂಜೆ ಮಾಡಿದನು. ಈ ವಿಗ್ರಹವು ಎಷ್ಟೋ ವರ್ಷಗಳಿಂದ ಅಚ್ಚಳಿಯದೆ ನಿಂತದ್ದನ್ನು ಕಂಡರೆ ಎಂಥವನಿಗೂ ಭಕ್ತಿಭಾವ ಮೂಡುವುದು (ಕ್ಷೇತ್ರದ).

ಶ್ರಾದ್ಧ -- ಪಿತೃಗಳ ಪ್ರೀತಿಗಾಗಿ ಮಾಡುವ ಕರ್ಮ. ಪ್ರತಿದಿನ ಬ್ರಾಹ್ಮಣರು ಅನ್ನ, ಎಳ್ಳು, ಬತ್ತ, ಯವೆಗಳಿಂದಾಗಲೀ, ನೀರಿನಿಂದಾಗಲೀ, ಹಾಲು, ಗಡ್ಡೆ, ಹಣ್ಣುಗಳಿಂದಾಗಲೀ ಪಿತೃಗಳಿಗೆ ಪ್ರೀತಿಯನ್ನುಂಟು ಮಾಡುವುದಕ್ಕಾಗಿ ಶ್ರಾದ್ಧವನ್ನು ಮಾಡಬೇಕು. ಇದಕ್ಕೆ ಕಳ್ಳರನ್ನೂ, ಜಾತಿಭ್ರಷ್ಟರನ್ನೂ, ನಪುಂಸಕರನ್ನೂ, ಆಮಂತ್ರಿಸಬಾರದು. ಪಿತೃಗಳು, ಕೋಪವಿಲ್ಲದವರು, ಶೌಚಪರರು, ಬ್ರಹ್ಮಚರ್ಯದಲ್ಲಿ ಆಸಕ್ತಿಯುಳ್ಳವರು, ಯುದ್ಧದ ಆಯುಧಗಳನ್ನು ಬಿಟ್ಟವರು, ಭೂತದಯೆಯುಳ್ಳವರು, ಪಿತೃಗಳಿಗೆ ಪಿಂಡಪ್ರದಾನ ಮಾಡಿ ಅವರಲ್ಲಿ ತನ್ನ ಇಷ್ಟಾರ್ಥವನ್ನು ಬೇಡಿದಮೇಲೆ ಆ ಪಿಂಡವನ್ನು ಗೋವುಗಳಿಗಾಗಲೀ, ಬ್ರಾಹ್ಮಣನಿಗಾಗಲೀ, ಆಡಿಗಾಗಲೀ ತಿನ್ನಿಸಬೇಕು. ಅಥವಾ ಅಗ್ನಿಯಲ್ಲಾಗಲೀ, ನೀರಿನಲ್ಲಾಗಲೀ ಹಾಕತಕ್ಕದ್ದು. ಪುತ್ರಸಂತಾನವನ್ನು ಅಪೇಕ್ಷಿಸುವ ಸ್ತ್ರೀಯು ಪಿತೃಗಳಿಗೆ ಅರ್ಪಿಸಿದ ಮೂರು ಪಿಂಡಗಳಲ್ಲಿ ಮಧ್ಯದ (ಪಿತಾಮಹನ) ಪಿಂಡವನ್ನು ಭಕ್ಷಿಸತಕ್ಕದ್ದು. ಶ್ರಾದ್ಧಕ್ಕೆ ಶುಕ್ಲಪಕ್ಷಕ್ಕಿಂತ ಕೃಷ್ಣಪಕ್ಷ ಶ್ರೇಷ್ಠ ಕಾಲ. ರಾತ್ರಿಯಲ್ಲಿ ಶ್ರಾದ್ಧವನ್ನು ಮಾಡಬಾರದು. ಕುತಪಕಾಲವು ಶ್ರಾದ್ಧಕ್ಕೆ ಉತ್ತಮ ಸಮಯ (ಮನಸ್ಮೃ., ಮ.ಅ., ಸ್ತ್ರೀ., ಹರಿ., ಗರುಡಪು., ಮಾರ್ಕಂಪು., ಮತ್ಸ್ಯಪ).

ಶ್ರಾವಸ್ತ (ಶ್ರಾವಸ್ತಿ) -- ಸೂರ್ಯವಂಶದ ಯುವನಾಶ್ವನ ಮಗ. ಶ್ರಾವಸ್ತಿ

ಪಟ್ಟಣವನ್ನು ಇವನೇ ನಿರ್ಮಿಸಿದ. ಈತನ ಮಗ ಬೃಹದಶ್ವ. ಶ್ರೀರಾಮಪುತ್ರನಾದ ಲವನು ಇಲ್ಲಿ ಆಳಿದನು. ಇದು ಕೋಸಲ ದೇಶದ ರಾಜಧಾನಿ (ಮ.ವ., ರಾಮಾ., ಉತ್ತರ).

ಶ್ರಾವಸ್ತಿ -- ನೋ -- ಶ್ರಾವಸ್ತ.

ಶ್ರೀ -- ಮಹಾಲಕ್ಷ್ಮಿಯ ಹೆಸರು. ಈಕೆ ನಾರಾಯಣನ ಪತ್ನಿ; ಸಂಪತ್ತಿನ ಒಡತಿ. ಈಕೆ ಕ್ಷೀರಸಾಗರದಲ್ಲಿ ಉತ್ಪತ್ತಿಯಾದಳು (ಭಾಗ). ಈಕೆ ಭೃಗು ಋಷಿಯ ಖ್ಯಾತಿ ಎಂಬ ಪತ್ನಿಯಲ್ಲಿ ಹುಟ್ಟಿದಳು. ಬಲಿಯನ್ನು ವಾಮನನು ನಿಗ್ರಹಿಸಿದ ಮೇಲೆ ಈಕೆ ಬಲಿಯ ದೇಹವನ್ನು ಬಿಟ್ಟು ಹೊರಟಳು (ವಿಷ್ಣುಪು., ಮ.ಆ., ಅನು., ಶಾಂ).

ಶ್ರೀಚಕ್ರ -- ವಿಶ್ವಕರ್ಮ ಮತ್ತು ಮಯರು ಮೇರುಪರ್ವತದ ಮಧ್ಯಶಿಖರದಲ್ಲಿ ದೇವಿಗಾಗಿ ಶ್ರೀಪುರವೆಂಬ ಪಟ್ಟಣವನ್ನು ನಿರ್ಮಿಸಿದರು. ಈ ಪಟ್ಟಣದಲ್ಲಿ ಚಿಂತಾಮಣಿ ಗೃಹ ಎಂಬ ದೇವಿಯ ಅರಮನೆಯಿದೆ. ಇದರ ಮಧ್ಯದಲ್ಲಿ ಬಿಂದುಪೀಠವೆಂಬ ಪ್ರಸಿದ್ಧವಾದ ದೇವಿಯ ಪೀಠವಿದೆ. ಈ ಮಹಾಪೀಠದಲ್ಲಿ ದೇವಿಯ ಮಂಚರತ್ನವು ವಿರಾಜಿಸುತ್ತಿದೆ. ಇದಕ್ಕೆ ಬ್ರಹ್ಮ, ವಿಷ್ಣು, ಈಶ್ವರ, ಮಹೇಶ್ವರರೆಂಬ ನಾಲ್ಕು ಕಾಲ್ಗಳು. ಸದಾಶಿವನೇ ಈ ಮಂಚಕ್ಕೆ ಹಲಗೆ. ಇದರ ಮೇಲೆ ಪೂರ್ವಾಭಿಮುಖವಾಗಿ ಭಗವಂತನಾದ ಕಾಮೇಶ್ವರನು ಕುಳಿತಿರುವನು. ಇವನ ತೊಡೆಯ ಮೇಲೆ ಸದಾ ಹದಿನಾರು ವರ್ಷ ವಯಸ್ಸಿನವಳಾದ ಲಲಿತಾಂಬಿಕೆಯು ಕುಳಿತಿರುವಳು. ಶ್ರೀಚಕ್ರವು ರೇಖಾಕೃತಿಯಿಂದ ಶ್ರೀಪುರವನ್ನು ರೂಪಿಸಿದೆ (ಬ್ರಹ್ಮಪು). ಇದು ತ್ರಿಕೋನಗಳಿಂದ ಪರಸ್ಪರವಾಗಿ ಸೇರಿಕೊಂಡಿರುವ ರೇಖಾಕೃತಿ. ಇದರ ಮಧ್ಯದಲ್ಲಿ ಬಿಂದುವಿರುವ ವೃತ್ತವಿದೆ. ಈ ವೃತ್ತದಲ್ಲಿ ಕೆಳಗಡೆ ತುದಿಯುಳ್ಳ ಐದು ತ್ರಿಕೋನಗಳೂ, ಮೇಲುಗಡೆ ತುದಿಯುಳ್ಳ ನಾಲ್ಕು ತ್ರಿಕೋನಗಳೂ ಇವೆ. ಶಕ್ತಿಸೂಚಕವಾದ ಐದು ತ್ರಿಕೋನಗಳು ಶಿವಯುವತಿಯರೆಂದೂ, ಶಿವಸೂಚಕವಾದ ನಾಲ್ಕು ತ್ರಿಕೋನಗಳು ಶ್ರೀಕಂಠರೆಂದೂ ಪ್ರಸಿದ್ಧವಾಗಿದೆ. ಈ ನವ ತ್ರಿಕೋನಗಳನ್ನು ಒಳಗೊಂಡಿರುವ ವೃತ್ತವು ಪುನಃ ಪದ್ಮಗಳೆಂದೂ ಹೇಳಲ್ಪಡುವ ಸಮಾನಕೇಂದ್ರವುಳ್ಳ ಎರಡು ವೃತ್ತಗಳಿಂದ ಆವರಿಸಲ್ಪಟ್ಟಿದೆ. ಮೊದಲನೆಯ ವೃತ್ತವು ಅಷ್ಟದಳ ಪದ್ಮವೂ, ಎರಡನೆಯ ವೃತ್ತವು ಷೋಡಶದಳ ಪದ್ಮವೂ ಆಗಿವೆ. ಈ ಷೋಡಶದಳ ಪದ್ಮವೂ ಪುನಃ ನಾಲ್ಕು ಆವರಣರೇಖೆಗಳಿಂದ ಸುತ್ತಲ್ಪಟ್ಟಿದೆ. ಕೊನೆಗೆ ಈ ಆಕೃತಿಯು ಮೂರು ರೇಖೆಗಳುಳ್ಳ ಚಚ್ಚೌಕದಿಂದ ಆವರಿಸಲ್ಪಟ್ಟಿದೆ. ಈ ಶ್ರೀಚಕ್ರಕ್ಕೆ ಚಕ್ರಗಳೆಂದು ಹೇಳಲ್ಪಡುವ ಒಂಬತ್ತು ಭಾಗಗಳಿವೆ (ಲಲಿತಾಸ).

ಶ್ರೀಚಕ್ರದ ಮಧ್ಯಬಿಂದುವು ಕಾಮೇಶ್ವರ--ಕಾಮೇಶ್ವರಿಯರ ಸಂಜ್ಞೆಯಾಗಿದೆ.

ಶ್ರೀಚಕ್ರಕ್ಕೂ ಮಹೇಶ್ವರಿಗೂ ಭೇದವೇ ಇಲ್ಲವೆಂದು ಕಾಮಕಲಾವಿಲಾಸವು ಹೇಳುತ್ತದೆ. ಶ್ರೀಚಕ್ರವು ಶಿವಶಕ್ತಿಯರ ಸಂಜ್ಞೆ ಮಾತ್ರವಲ್ಲ; ಇಡಿಯ ಬ್ರಹ್ಮಾಂಡ ಮತ್ತು ಪಿಂಡಾಂಡಗಳ ಮತ್ತು ವರ್ಣಮಾಲೆಯ ಸಂಜ್ಞೆಯಾಗಿರುತ್ತದೆ. ಶಾಕ್ತರಲ್ಲಿ ಪೂರ್ವಕೌಲರು ಒಂಬತ್ತು ಸ್ತ್ರೀಯೋನಿಗಳ ಚಿತ್ರದ ಮಧ್ಯೆ ಬರೆದ ಸ್ತ್ರೀಯೋನಿಯ ಚಿತ್ರವನ್ನು ಪೂಜಿಸುವರು. ಇದಕ್ಕೆ ಶ್ರೀಚಕ್ರವೆನ್ನುತ್ತಾರೆ. ಈ ಚಿತ್ರವನ್ನು ಭೂರ್ಜಪತ್ರದ ಮೇಲೆ, ರೇಶ್ಮೆ ವಸ್ತ್ರದ ಮೇಲೆ ಅಥವಾ ಚಿನ್ನದ ತಗಡಿನ ಮೇಲೆ ಬರೆದು ಪೂಜಿಸುತ್ತಾರೆ. ಉತ್ತರಕೌಲರು ಸುಂದರಿಯಾದ ಸ್ತ್ರೀಯೋನಿಯನ್ನೇ ಆರಾಧಿಸುವರು. ಇಬ್ಬರು ತಮ್ಮ ಆರಾಧ್ಯದೇವತೆಗೆ ಮದ್ಯ, ಮತ್ಸ್ಯ, ಮಾಂಸ ಇತ್ಯಾದಿಗಳನ್ನು ಅರ್ಪಿಸಿ ತಾವು ಸ್ವೀಕರಿಸುತ್ತಾರೆ. ಪೂರ್ವಕೌಲರ ಆಚಾರ್ಯಕ್ಕಿಂತ ಉತ್ತರಕೌಲರ ಆಚಾರವು ಹೆಚ್ಚು ಬೀಭತ್ಸವಾದುದು.

ಶ್ರೀದೇವಾ -- ವಸುದೇವನ ಒಬ್ಬಳು ಪತ್ನಿ. ನೋ -- ವಸುದೇವ.

ಶ್ರೀನಗರ -- ಇದು ಕಾಶ್ಮೀರದ ರಾಜಧಾನಿ. ಈ ನಗರವು ಜೀಲಂ ನದಿಯ ಎರಡೂ ಪಾರ್ಶ್ವಗಳಲ್ಲಿ ಐದ್ಮೈದು ಮೈಲೂ ದೂರದವರೆಗೆ ಹಬ್ಬಿದೆ. ಏಳು ಸೇತುವೆಗಳನ್ನು ಕಟ್ಟಿಸಿ ನಗರವನ್ನು ಒಂದುಗೂಡಿಸಿದ್ದಾರೆ. ಹೆಚ್ಚಾಗಿ ನಗರದ ಮನೆಗಳೆಲ್ಲ ಮರದಿಂದ ರಚಿತವಾಗಿದೆ. ಇತ್ತೀಚೆಗೆ ಹೊಸ ಕಟ್ಟಡಗಳು ಸೀಮೆಯ ಇಟ್ಟಿಗೆಯಿಂದ ಸಿದ್ಧವಾಗುತ್ತಿವೆ. ಆದ್ಯ ಶ್ರೀಶಂಕರಾಚಾರ್ಯರ ಕಾಲದಲ್ಲಿ ಕಾಶ್ಮೀರದಲ್ಲಿ ಸರ್ವಜ್ಞಪೀಠವಿದ್ದಿತು. ಅದರ ಪೂರ್ವ, ಪಶ್ಚಿಮ, ಉತ್ತರ ದ್ವಾರಗಳನ್ನು ತೆರೆದಿದ್ದು, ದಕ್ಷಿಣದ್ವಾರವು ಯಾವಾಗಲೂ ಮುಚ್ಚಿತ್ತು. ಶ್ರೀಶಂಕರಾಚಾರ್ಯರು ದಕ್ಷಿಣ ದ್ವಾರದಲ್ಲಿದ್ದ ಪಂಡಿತರನ್ನು ಗೆದ್ದು, ಈ ದ್ವಾರವನ್ನು ತೆರೆಯಿಸಿ ಸರ್ವಜ್ಞಪೀಠವನ್ನು ಆರೋಹಿಸಿದರು. ಇದು ಶ್ರೀನಗರದಿಂದ ೧೮೦ ಮೈಲಿನ ಮೇಲೆ ಶಾರ್ಧದಾ ಎಂಬ ಗ್ರಾಮದಲ್ಲಿದೆ. ಆ ಸ್ಥಳಕ್ಕೆ ಹೋಗುವ ದಾರಿಯು ಪಾಕಿಸ್ಥಾನದ ಮೇಲಿನಿಂದ ಹೋಗಬೇಕಾಗಿರುವುದರಿಂದ ಅದು ದುರ್ಗಮವಾಗಿದೆ. ಇಲ್ಲಿರುವ ಡಾಲ್ ಸರೋವರವು ಸುಂದರವಾಗಿದ್ದು ಐದು ಮೈಲುದ್ದ, ಎರಡು ಮೈಲು ಅಗಲವಾಗಿದೆ. ಇದರಲ್ಲಿ ಸಾವಿರಾರು ಎರಡು-ಮೂರಂತಸ್ತಿನ ದೋಣಿಮನೆಗಳಿವೆ. ಇಲ್ಲಿನ ಮಧುರಶೀತಲ ಜಲದ ಬುಗ್ಗೆಗಳೂ, ಅತ್ಯುನ್ನತ ಗಗನಚುಂಬಿತ ಚೀನಾರ ವೃಕ್ಷಗಳೂ ಎಂತಹ ಉದಾಸೀನ ಮನುಷ್ಯನನ್ನೂ ಆನಂದಸಾಗರದಲ್ಲಿ ತೇಲಾಡಿಸುವುವು (ಕ್ಷೇತ್ರದ).

ಶ್ರೀಪರ್ವತ -- ಈ ಪರ್ವತಕ್ಕೆ ಶ್ರೀಶೈಲವೆನ್ನುತ್ತಾರೆ. ನೋ -- ಶ್ರೀಶೈಲ. ಈ

ಪರ್ವತವು ದೊಡ್ಡ ಅರಣ್ಯದೊಳಗಿದೆ. ಇಲ್ಲಿ ಯಾತ್ರೆಗೆ ಶಿವರಾತ್ರಿಯ ಸಮಯ ಮಾತ್ರ ಅನುಕೂಲ. ಗುಂತಕಲ್ಲಿನಿಂದ ೬೦ ಮೈಲುಗಳ ಮೇಲೆ ನಂದ್ಯಾಲ ಸ್ಟೇಶನ್ನಿದೆ. ಈ ಸ್ಟೇಶನ್‌ನಿಂದ ಶ್ರೀಪರ್ವತಕ್ಕೆ ೭೧ ಮೈಲುಗಳಿವೆ. ಇಲ್ಲಿರುವ ಮಲ್ಲಿಕಾರ್ಜುನ ಮಂದಿರದ ಮಗ್ಗುಲಿನಲ್ಲಿ ಭ್ರಮರಾಂಬೆಯ ಮಂದಿರವಿದೆ. ಇಲ್ಲಿ ಪ್ರತಿ ಶಿವರಾತ್ರಿಯ ದಿನ ಶಿವಪಾರ್ವತಿಯರ ವಿವಾಹಮಹೋತ್ಸವವು ನಡೆಯುತ್ತದೆ (ಕ್ಷೇತ್ರದ).

ಶ್ರೀಮತಿ -- ಅಂಬರೀಷರಾಜನ ಮಗಳು. ನಾರದ ಪರ್ವತರಿಬ್ಬರಿಗೂ ಈಕೆಯನ್ನು ವಿವಾಹವಾಗುವ ಸ್ಪರ್ಧೆಯಲ್ಲಿ ಅಪಜಯ ಹೊಂದಿ ಕಪಿಮುಖದವರಾದರು. ಈಕೆಯನ್ನು ಕೊನೆಗೆ ಶ್ರೀವಿಷ್ಣುವೇ ವಿವಾಹವಾದನು. ನೋ -- ಅಂಬರೀಷ, ನಾರದ, ಪರ್ವತ (ಅದ್ಭು.ರಾಮಾ).

ಶ್ರೀಮಾನ್ -- ದತ್ತಾತ್ರೇಯಪುತ್ರನಾದ ನಿಮಿ ಋಷಿಯ ಮಗ.

ಶ್ರೀರಂಗಪಟ್ಟಣ -- ಇದು ಮಂಡ್ಯ ಜಿಲ್ಲೆಯಲ್ಲಿನ ಒಂದು ಕ್ಷೇತ್ರ. ಇಲ್ಲಿ ಕಾವೇರಿಯು ಕವಲಾಗಿ ಹರಿಯುತ್ತದೆ. ಇಲ್ಲಿ ಗೌತಮನ ಆಶ್ರಮವಿದ್ದಂತೆ ತೋರುವುದು. ಇಲ್ಲಿಯ ಮಾಲೂರಿನಲ್ಲಿ ಹರಿಯುವ ಕಣ್ವನದಿಯ ದಡದಲ್ಲೇ ಕಣ್ವಮುನಿಯ ಆಶ್ರಮವಿತ್ತೆಂದು ಹೇಳುತ್ತಾರೆ. ಇಲ್ಲಿ ಕಾವೇರಿಯು ಮೂರು ದ್ವೀಪಗಳನ್ನುಂಟುಮಾಡಿದೆ. ಈ ಮೂರು ದ್ವೀಪಗಳಲ್ಲೂ ರಂಗನಾಥ ದೇವಾಲಯವಿದೆ. ಇಲ್ಲಿ ಭಗವಾನ್ ನಾರಾಯಣನು ಶೇಷಶಾಯಿಯಾಗಿದ್ದಾನೆ. ಈ ದ್ವೀಪವು ಮೂರು ಮೈಲು ಉದ್ದವಾಗಿಯೂ ಒಂದು ಮೈಲು ಅಗಲವಾಗಿಯೂ ಇದೆ. ಇಲ್ಲಿಯ ಶ್ರೀರಂಗಮೂರ್ತಿಯನ್ನು ಗೌತಮಋಷಿಯು ಸ್ಥಾಪಿಸಿದನೆನ್ನುತ್ತಾರೆ. (ಕ್ಷೇತ್ರದ).

ಶ್ರೀರಂಗಂ -- ಒಂದು ಪ್ರಸಿದ್ಧ ಕ್ಷೇತ್ರ. ಇದು ತ್ರಿಚಿ ಸ್ಟೇಷನ್ನಿನಿಂದ ಎಂಟು ಮೈಲಿ ದೂರವಿದೆ. ಇಲ್ಲಿ ಕಾವೇರಿಯು ಎರಡು ಕವಲಾಗಿ ಒಡೆದು ೧೭ ಮೈಲು ಉದ್ದ, ೩ ಮೈಲು ಅಗಲದ ದ್ವೀಪವನ್ನುಂಟುಮಾಡಿದೆ. ಇಲ್ಲಿ ಕಾವೇರಿಯ ಉತ್ತರ ಪ್ರವಾಹಕ್ಕೆ ಕೊಲಹನವೆಂದೂ, ದಕ್ಷಿಣ ಪ್ರವಾಹಕ್ಕೆ ಕಾವೇರಿಯೆಂದೂ ಕರೆಯುವ ವಾಡಿಕೆಯಿದೆ. ಶ್ರೀರಂಗಮಂದಿರದಷ್ಟು ದೊಡ್ಡ ಮಂದಿರವು ಭಾರತದಲ್ಲಿ ಬೇರೊಂದಿಲ್ಲ. ಇಲ್ಲಿ ಗರ್ಭಗುಡಿಯು ಏಳು ಪ್ರಕಾರಗಳಿಂದ ಆವರಿಸಲ್ಪಟ್ಟಿದೆ. ಇದರ ನಾಲ್ಕನೆಯ ಆವಾರದಲ್ಲಿ ಸಾವಿರ ಕಂಬಗಳ ಮಂಟಪವಿದೆ. ಈಶಾನ್ಯದಲ್ಲಿ ಚಂದ್ರಪುಷ್ಕರಿಣಿ ಎಂಬ ಸರೋವರವಿದೆ. ಇಲ್ಲಿ ಶ್ರೀರಂಗನಾಥನು ಚತುರ್ಭುಜನಾಗಿ ಶೇಷಶಾಯಿಯಾಗಿರುವನು. ಮೂರ್ತಿಯ ಮಸ್ತಕದ ಮೇಲೆ ಐದು ಹೆಡೆಗಳ ಶೇಷನ ಛತ್ರವಿದೆ. ಇಲ್ಲಿ ಪುಷ್ಯ ಶುಕ್ಲ

ಪ್ರತಿಪದೆಯಿಂದ ಏಕಾದಶಿಯವರೆಗೆ ದೊಡ್ಡ ಉತ್ಸವವಿದೆ. ಈ ಏಕಾದಶಿಗೆ ವೈಕುಂಠ ಏಕಾದಶಿ ಎನ್ನುತ್ತಾರೆ. ಈ ದಿನ ಶ್ರೀರಂಗನಾಥನ ವೈಕುಂಠದ್ವಾರವನ್ನು ತೆಗೆಯುತ್ತಾರೆ. ಈ ಉತ್ಸವಮೂರ್ತಿಯನ್ನು ಆ ದ್ವಾರದಿಂದಲೇ ಹೊರಗೆ ಹೊರಡಿಸುವರು (ಕ್ಷೇತ್ರದ).

ಶ್ರೀರಾಮ -- ನೋ -- ರಾಮ. ಈತನೇ ರಾಮಾಯಣ ಕಥಾನಾಯಕನು. ಜೈನ ರಾಮಾಯಣಗಳ ಮೇರೆಗೆ ಲಕ್ಷ್ಮಣನಿಗೆ ಕಾರ್ಯಕ್ಷೇತ್ರದಲ್ಲಿ ಅಧಿಕಪ್ರಾಶಸ್ತ್ಯವಿರುವುದರಿಂದ ವಾಲ್ಮೀಕಿ ರಾಮಾಯಣದಲ್ಲಿ ಶ್ರೀರಾಮನಿಗೆ ಕಂಡುಬರುವ ಪ್ರಾಶಸ್ತ್ಯವು ಸ್ವಲ್ಪ ಕುಂಠಿತವಾಗಿದೆ. ಆದರೂ ಜೈನರಾಮಾಯಣದಲ್ಲಿ ಪೌರಸ್ತ್ಯ ಸಾಹಿತ್ಯಶಾಸ್ತ್ರಕ್ಕನುಸಾರವಾಗಿ ಶ್ರೀರಾಮನೇ ಕಥಾನಾಯಕನಾಗಿರುವನು. ಈ ಗ್ರಂಥದಲ್ಲಿ ಇಂದು ಸ್ಫಟಿಕ ಚಂದ್ರಕಾಂತ ಮೌಕ್ತಿಕಗಳಂತೆ ಶ್ರೀರಾಮನು ಧವಳವರ್ಣನು. ನಾನಾ ದೇಶದ ರಾಜಪುತ್ರರಿಗೆ ಸಾಧ್ಯವಾಗದಿದ್ದ ವಜ್ರಾವರ್ತ ಜ್ಯಾರೋಪಣವು ಈತನಿಗೆ ಸಾಧ್ಯವಾಗಿರುವುದು. ಪರಶುರಾಮನ ಗರ್ವಭಂಗ ವೃತ್ತಾಂತವನ್ನು ಜೈನರಾಮಾಯಣದಲ್ಲಿ ಹೇಳದಿರುವುದರಿಂದ ಶ್ರೀರಾಮನ ವಿನಯ ಶೌರ್ಯಾದಿಗಳು ಅಷ್ಟು ಹೆಚ್ಚಾಗಿ ಪ್ರಕಾಶವಾಗಲು ಅವಕಾಶವಿಲ್ಲ.

ಜೈನರಲ್ಲಿ ಶ್ರೀರಾಮನು ಅತಿಗಂಭೀರನು. ದಶರಥನು ಪೂರ್ವಾ ಚಾರದಂತೆಯೂ, ನ್ಯಾಯರೀತಿಯಾಗಿಯೂ ತನಗೇ ರಾಜ್ಯಾಭಿಷೇಕ ಮಾಡಿಸುವ ಯತ್ನಗಳನ್ನು ನಡೆಯಿಸುತ್ತಿದ್ದ ವೇಳೆಯಲ್ಲಿ, ಕೈಕೆಯು ಪುತ್ರವ್ಯಾಮೋಹದಿಂದ ರಾಜ್ಯವನ್ನಪಹರಿಸಿ ಕಾಡಿಗೆ ಅಟ್ಟಿದರೂ ಆ ರಾಜ್ಯವನ್ನು 'ಧರೆಯಂ ತೃಣದಿಂದ ಲಾಘವಮೆನೆ ಬಗೆದು' ಕೊಟ್ಟು ಬಿಟ್ಟಿರುವನೇ ಹೊರತು ಸ್ವಲ್ಪವಾದರೂ ಮನಃ ಕ್ಷೋಭೆಗೆ ಅವಕಾಶ ಕೊಡಲಿಲ್ಲ. ಈ ಸಂದರ್ಭದಲ್ಲಿ ಲಕ್ಷ್ಮಣನು ರಕ್ತೇಕ್ಷಣನಾಗಿ ಕಠಿಣವಾಗಿ ನುಡಿಯುತ್ತಿದ್ದಾಗ ರಾಮನು ತನ್ನ ಅಸಮ್ಮತಿಯನ್ನು ತೋರ್ಪಡಿಸುವುದು ಆತನ ಶಾಂತತೆಗೊಂದು ನಿದರ್ಶನ. ಖರದೂಷಣರು ತಮ್ಮ ಸೇನೆಯೊಡನೆ ರಭಸದಿಂದ ಮೇಲೆಬೀಳಲು ಬರುತ್ತಿದ್ದರೂ ಸ್ವಲ್ಪವೂ ಭಯಪಡದೆ ಆತನು ತನ್ನ ಧನುಸ್ಸಿಗೆ ಕೈ ನೀಡಿರುವನು.

ಶ್ರೀರಾಮನು ಪಿತೃಭಕ್ತನು. 'ಮಗನೆನಿಪಂಗೆ ಮಾತೃಪಿತೃಭಕ್ತಿಯೇ ಕೃತ್ಯ ಮಿಹತ್ರಗಂ ಪರತ್ರಗಮುಪಕಾರಿ' ಎಂದು ಆತನ ವಿಷಯದಲ್ಲಿ ಹೇಳಿರುವುದು ನಿಜ. ಶ್ರೀರಾಮನು ಸತ್ಯವಾಕ್ಯಪರಾಯಣನು. ಆತನು ಕೈಕೆಗೆ ಹೇಳಿರುವ 'ಪುಸಿ ಪೊಲನಲ್ತು ನಾಲಗೆಗೆ, ನನ್ನಿಗೆ ಬನ್ನವಾದೊಡಂ ಯಶಂ ಪಿರಿದಪ್ಪುದು' ಎಂಬುದು ಮನನ ಮಾಡತಕ್ಕ ಮಾತುಗಳು. ಆತನು ವನವಾಸಕ್ಕೆ ಹೊರಟಮೇಲೆ ಪಶ್ಚಾತ್ತಾಪ ಸಂತಪ್ತಳಾದ ಕೈಕೆಯು ಭರತನನ್ನು ಮುಂದಿಟ್ಟುಕೊಂಡು ರಾಮನ

ಬೆನ್ನುಹತ್ತಿ ಹಿಂದಿರುಗಬೇಕೆಂದು ಕೇಳಿಕೊಂಡಾಗ ಬಹಳ ವಿನಯದಿಂದ ಸಮಾಧಾನಪಡಿಸಿ ಅವರನ್ನು ಹಿಂದಕ್ಕೆ ಕಳುಹಿಸಿಕೊಟ್ಟಿರುವನು.

ಶ್ರೀರಾಮನಿಗೆ ಸಹೋದರರಲ್ಲಿ ಗಾಢವಾತ್ಸಲ್ಯವಿತ್ತು. ಹಿಂದಿರುಗಬೇಕೆಂದು ಕಾಡುತ್ತಿದ್ದ ಕೈಕೆಗೆ ' ದೇವರು ನನಗಿತ್ತ ರಾಜ್ಯವನ್ನು ನನ್ನ ತಮ್ಮಂದಿರೇ ಆಳುವರಲ್ಲವೆ ಅದು ಯೋಚಿಸಬೇಕಾದ ವಿಷಯವಲ್ಲ ' ಎಂದ ಶ್ರೀರಾಮನ ಹೃದಯವು ಎಷ್ಟು ಉದಾತ್ತವಾದುದು ಎಂದು ಸ್ಪಷ್ಟವಾಗುವುದು. ರಾವಣನ ದಿವ್ಯಶಕ್ತಿಯಿಂದ ಎಚ್ಚರ ತಪ್ಪಿದ ಲಕ್ಷ್ಮಣನನ್ನು -- ಆತನ ಮೃತಕಳೇಬರವನ್ನು -- ಶ್ರೀರಾಮನು ಆರು ತಿಂಗಳಕಾಲ ಹೊತ್ತು ತಿರುಗುತ್ತಿದ್ದನೆಂಬುದು ವಿಚಿತ್ರವಾಗಿದೆ.

ಶ್ರೀರಾಮನು ಜನಕನನ್ನು ಪೀಡಿಸುತ್ತಿದ್ದ ತರಂಗತಮನೆಂಬ ಕಿರಾತರಾಜನನ್ನು ಗೆದ್ದನೆಂದೂ, ಖರದೂಷಣರನ್ನೂ ರಾವಣನನ್ನೂ ವಧಿಸಿರುವುದು ಲಕ್ಷ್ಮಣನಿಂದಲೇ ಹೊರತು ರಾಮನಿಂದಲ್ಲ. ಒಟ್ಟಿನಲ್ಲಿ ರಾಮನ ಶೌರ್ಯವೀರ್ಯಪರಾಕ್ರಮಗಳಿಗೆ ಜೈನ ರಾಮಾಯಣಗಳಲ್ಲಿ ಅಷ್ಟು ಶೋಭೆಯು ಕಂಡುಬರುವುದಿಲ್ಲ.

ವಾಲ್ಮೀಕಿರಾಮಾಯಣದಲ್ಲಿ ಹೇಳಿರುವಂತೆ ಶ್ರೀರಾಮನು ಜಾಬಾಲಿಯ ನಾಸ್ತಿಕವಾದಕ್ಕೆ ಕೊಟ್ಟಿರುವ ಉತ್ತರದಂತಹ ಪ್ರಸ್ತಾಪವು ಜೈನರಾಮಾಯಣದಲ್ಲಿ ಕಂಡುಬರುವುದಿಲ್ಲ. ಆದರೂ ದೇವಮುನಿ ಗುರುಜನರಲ್ಲಿ ಶ್ರೀರಾಮನಿಗಿದ್ದ ಭಕ್ತಿಯು ನಮ್ಮ ರಾಮಾಯಣಗಳಂತೆ ಜೈನರಾಮಾಯಣದಲ್ಲೂ ಕಂಡುಬರುವುದು. ವಾಲ್ಮೀಕಿ ರಾಮಾಯಣದಲ್ಲಿ ಹೇಳಿದ ಕಾಕಾಸುರವೃತ್ತಾಂತವು ಜೈನರಾಮಾಯಣಗಳಲ್ಲಿಲ್ಲ. ಹಾಗೆಯೇ ವಾಲಿವಧ ವೃತ್ತಾಂತವೂ ಇಲ್ಲ.

ಜೈನರಾಮಾಯಣಗಳಲ್ಲಿ ಶ್ರೀರಾಮನು ಏಕಪತ್ನೀವ್ರತಸ್ಥನಲ್ಲ; ಬಹುಪತ್ನಿಗಳುಳ್ಳವನು. ಸೀತಾದೇವಿಯು ರಾವಣನಿಂದ ಅಪಹೃತಳಾದಮೇಲೆ ಸುಗ್ರೀವನ ಹನ್ನೆರಡು ಮಂದಿ ಪುತ್ರಿಯರನ್ನು ರಾಮನು ವಿವಾಹವಾದನೆಂದು ಜೈನರಲ್ಲಿದೆ. ವಾಲ್ಮೀಕಿ ರಾಮಾಯಣದ ಶ್ರೀರಾಮನ ಉದಾತ್ತಸ್ವಭಾವವು ಜೈನರಾಮಾಯಣದಲ್ಲಿ ಇಲ್ಲ. (ಜೈ.ರಾ).

ಶ್ರೀವತ್ಸ -- ಶ್ರೀವಿಷ್ಣುವಿನ ಎದೆಯ ಒಂದು ಮಚ್ಚೆ. ದಧೀಚಿಯು ಕ್ಷುಪನ ಪಕ್ಷದಿಂದ ಹೋರಾಡಿದ ವಿಷ್ಣುವಿನ ಚಕ್ರವನ್ನು ಮುರಿದು ಅವನ ಎದೆಯನ್ನು ತುಳಿಯಲು ಆತನ ಎದೆಯಲ್ಲೊಂದು ಗುರುತಾಯಿತು. ಅದೇ ಶ್ರೀವತ್ಸಲಾಂಛನ. ನೋ -- ಕ್ಷುಪ.

ಶ್ರೀಶೈಲ -- ಆಂಧ್ರರಾಜ್ಯದ ಕೃಷ್ಣಾಜಿಲ್ಲೆಯ ಕೃಷ್ಣಾನದೀತೀರದಲ್ಲಿ

ಶ್ರೀಶೈಲಕ್ಷೇತ್ರವಿದೆ. ಇದು ಶ್ರೀಶೈಲಪರ್ವತದ ಮೇಲಿದ್ದು ಅಲ್ಲಿ ಮಲ್ಲಿಕಾರ್ಜುನ ಜ್ಯೋತಿರ್ಲಿಂಗವಿದೆ. ಇದಕ್ಕೆ ದಕ್ಷಿಣ ಕೈಲಾಸವೆಂದೆನ್ನುತ್ತಾರೆ. ಇದು ೫೧ ಶಕ್ತಿಪೀಠಗಳಲ್ಲಿ ಒಂದು. ದತ್ತಾತ್ರೇಯ ಅವತಾರ ಇಲ್ಲಿಯೇ ಆಯಿತೆನ್ನುತ್ತಾರೆ. 'ಶ್ರೀಶೈಲಶಿಖರಂ ದೃಷ್ಟ್ವಾ ಪುನರ್ಜನ್ಮನ ವಿದ್ಯತೇ' ಶ್ರೀಶೈಲಶಿಖರವನ್ನು ನೋಡಿದ ಮೇಲೆ ಪುನರ್ಜನ್ಮವಿಲ್ಲ.

ಗಣಪತಿ -- ಕಾರ್ತಿಕೇಯರೊಳಗೆ ಮೊದಲು ಯಾರಿಗೆ ಲಗ್ನವೆಂದು ಪ್ರಶ್ನೆ ಎದ್ದಿತು. ಷಣ್ಮುಖನು ಭೂಪ್ರದಕ್ಷಿಣೆಗೆ ಹೋದನು. ಗಣೇಶನು ತಾಯಿತಂದೆಗಳಿಗೆ ಪ್ರದಕ್ಷಿಣೆ ಮಾಡಿ ಭೂಪ್ರದಕ್ಷಿಣೆಯ ಪುಣ್ಯ ಪಡೆದು ಸಿದ್ಧಿ--ಬುದ್ಧಿ ಎಂಬ ಕನ್ಯೆಯರನ್ನು ಲಗ್ನವಾದನು. ಷಣ್ಮುಖನು ಬಂದು, ನಡೆದ ಸ್ಥಿತಿಯನ್ನರಿತು ಕೋಪಗೊಂಡು ಕ್ರೌಂಚಪರ್ವತಕ್ಕೆ ಹೋದನು. ಅಲ್ಲಿ ಶಿವನು ಅವನಿಗಾಗಿ ಜ್ಯೋತಿರ್ಲಿಂಗ ರೂಪದಿಂದ ಆವಿರ್ಭವಿಸಿದನು. ಅಂದಿನಿಂದ ಶ್ರೀಶೈಲದಲ್ಲಿ ಮಲ್ಲಿಕಾರ್ಜುನ ಜ್ಯೋತಿರ್ಲಿಂಗವು ಪ್ರಸಿದ್ಧವಾಯಿತು (ಕ್ಷೇತ್ರದ).

ಶ್ರುತ -- ಪಾಂಚಾಲರಾಜನಾದ ದ್ರುಪದನ ಮಗ. ಇವನು ಹದಿನಾಲ್ಕನೆಯ ದಿನದ ರಾತ್ರಿ ಯುದ್ಧದಲ್ಲಿ ಅಶ್ವತ್ಥಾಮನಿಂದ ಹತನಾದನು (ಮ.ದ್ರೋ).

ಶ್ರುತಕರ್ಮ -- ೧. ಅರ್ಜುನನ ಮಗ. ಈತನ ತಾಯಿ ದ್ರೌಪದಿ. ಈತನಿಗೆ ಶ್ರುತಕೀರ್ತಿ ಎಂಬ ಹೆಸರೂ ಇದೆ. ಯುದ್ಧದ ಹದಿನೆಂಟನೇ ದಿನದ ರಾತ್ರಿ ಅಶ್ವತ್ಥಾಮನು ಪಾಂಚಾಲರೊಡನೆ ಈತನನ್ನು ಮತ್ತು ಈತನ ಸಹೋದರರನ್ನು ಕೊಂದನು. (ಮ.ಸೌ). ೨. ಸಹದೇವನ ಮಗ. ತಾಯಿ ದ್ರೌಪದಿ. ಈತನಿಗೆ ಶ್ರುತಸೇನನೆಂಬ ಹೆಸರಿದೆ. ಈತನ ವಧೆ ಶಿಬಿರದಲ್ಲಿ ಅಶ್ವತ್ಥಾಮನಿಂದಾಯಿತು (ಮ.ಸೌ., ಆ., ಭೀ., ದ್ರೋ).

ಶ್ರುತಕೀರ್ತಿ -- ೧. ಯದುವಂಶದ ಶೂರನ ಮಗಳು. ಈಕೆ ಕುಂತಿಯ ತಂಗಿ; ದಂತವಕ್ರನ ತಾಯಿ. ಈಕೆಯ ಪತಿ ಕರೂಶದೇಶಾಧಿಪತಿಯಾದ ವೃದ್ಧಶರ್ಮ (ಭಾಗ., ಮ.ಆ., ದ್ರೋ., ಕ). ೨. ಅರ್ಜುನನ ಮಗ. ಈತನ ತಾಯಿ ದ್ರೌಪದಿ. ಇವನಿಗೆ ಶ್ರುತಕರ್ಮನೆಂಬ ಹೆಸರೂ ಇದೆ (ಮ.ಆ., ಕ., ಸೌ). ೩. ಶತ್ರುಘ್ನನ ಹೆಂಡತಿ; ಕುಶಧ್ವಜನ ಮಗಳು. ನೋ -- ಶತ್ರುಘ್ನ (ರಾಮಾ.ಬಾಲ).

ಶ್ರುತಂಜಯ--ತ್ರಿಗರ್ತದೇಶದ ರಾಜ. ಇವನು ಭಾರತಯುದ್ಧದಲ್ಲಿ ಅರ್ಜುನನಿಂದ ಹತನಾದನು (ಮ.ಕ).

ಶ್ರುತಧ್ವಜ -- ಮತ್ಸ್ಯರಾಜನಾದ ವಿರಾಟನ ಸೋದರ (ಮ.ದ್ರೋ).

ಶ್ರುತದೇವ -- ಈತನು ಕೃಷ್ಣನ ಭಕ್ತ. ಇವನು ವಿದೇಹದ ಮಿಥಿಲಾ ಪಟ್ಟಣದಲ್ಲಿ ಗೃಹಸ್ಥಾಶ್ರಮವನ್ನು ಪಾಲಿಸುತ್ತಿದ್ದನು. ಆಗ ಆ ದೇಶಕ್ಕೆ ಬಹುಳಾಶ್ವನು

ರಾಜನಾಗಿದ್ದನು. ಇವನೂ ಶ್ರುತದೇವನಂತೆ ಅಹಂಕಾರ ಮಮಕಾರಗಳನ್ನು ಬಿಟ್ಟು ಶಾಂತಚಿತ್ತನಾಗಿದ್ದನು. ಒಮ್ಮೆ ಶ್ರೀಕೃಷ್ಣನು ಇವರಿಬ್ಬರನ್ನೂ ಅನುಕರಿಸುವುದಕ್ಕಾಗಿ ದಾರುಕಪ್ರೇರಿತವಾದ ರಥವನ್ನೇರಿ ಮಿಥಿಲೆಗೆ ಹೊರಟನು. ಅಲ್ಲಿ ಕೃಷ್ಣನು ಬಹುಳಾಶ್ವ ಶ್ರುತದೇವರ ಸೇವೆಯನ್ನು ಪಡೆಯುತ್ತ ಸ್ವಲ್ಪಕಾಲವಿದ್ದು ಅವರನ್ನು ಅನುಗ್ರಹಿಸಿದನು (ಭಾಗ.). ನೋ -- ಬಹುಳಾಶ್ವ.

ಶ್ರುತದೇವಾ-- ನೋ -- ಶ್ರುತಕೀರ್ತಿ. ಈಕೆ ದಂತವಕ್ರನ ತಾಯಿ. ಈಕೆಗೆ ಶ್ರುತದೇವಿಯೆಂಬ ಹೆಸರೂ ಇದೆ. ಈಕೆಯ ಪತಿಗೆ ವೃದ್ಧಧರ್ಮನೆಂಬ ಹೆಸರೂ ಇತ್ತು (ವಿಷ್ಣುಪು).

ಶ್ರುತರ್ವ -- ೧. ಒಬ್ಬ ರಾಜ. ಅಗಸ್ತ್ಯನು ಈತನ ಬಳಿಗೆ ಧನಾರ್ಜನೆಗಾಗಿ ಹೋದನು. ಇವನು ಅಗಸ್ತ್ಯನನ್ನು ಬ್ರಧ್ನಾಶ್ವನಲ್ಲಿಗೆ ಕರೆದುಕೊಂಡು ಹೋದನು. ನೋ -ಬ್ರಧ್ನಾಶ್ವ (ಮ.ವ). ೨. ಧೃತರಾಷ್ಟ್ರನ ಮಗ. ಇವನು ಭೀಮನಿಂದ ಹತನಾದನು (ಮ.ಶ).

ಶ್ರುತಶ್ರವ (**ಶುತಶ್ರವಾ**) -- ೧. ಚೇದಿರಾಜನಾದ ದಮಘೋಷನ ಪತ್ನಿ; ವಸುದೇವನ ಸೋದರಿ. ಕೃಷ್ಣನ ಅತ್ತೆ; ಈತನ ಮಗ ಶಿಶುಪಾಲ. **ನೋ -- ಶಿಶುಪಾಲ.** ೨. ಪಾಂಡವರ ಮೊಮ್ಮಗನಾದ ಜನಮೇಜಯ ರಾಜನ ಪುರೋಹಿತನಾದ ಸೋಮಶ್ರವನ ಮಗ. ಇವನ ತಾಯಿ ಸರ್ಪಿಣಿ; ಹೆಣ್ಣು ನಾಗರಹಾವು (ಮ.ಆ).

ಶ್ರುತಸೇನ -- ೧. ತಕ್ಷಕಪುತ್ರನಾದ ಸರ್ಪ; ಈತನ ಸೋದರ ಅಶ್ವಸೇನ (ಮ.ಆ). ೨. ಸಹದೇವನ ಮಗ; ಈತನ ತಾಯಿ ದ್ರೌಪದಿ. ಯುದ್ಧಮುಗಿದ ರಾತ್ರಿ ಅಶ್ವತ್ಥಾಮನಿಂದ ಈತನು ಹತನಾದನು (ಮ.ಸೌ). ೩. ಪಾಂಡವರ ಮೊಮ್ಮಗನಾದ ಪರೀಕ್ಷಿತನ ಮಗ. ಜನಮೇಜಯನ ಸಹೋದರ (ಮ.ಆ).

ಶ್ರುತಸೇನಾ -- ಕೇಕಯರಾಜನಾದ ಶಾರದಂಡಾಯಿನಿಯ ಪತ್ನಿ. ಈಕೆಗೆ ದುರ್ಜಯ ಮೊದಲಾದ ಮಕ್ಕಳಿದ್ದರು (ಮ.ಆ).

ಶ್ರುತಾನೀಕ -- ವಿರಾಟನ ಸೋದರ (ಮ.ದ್ರೋ).

ಶ್ರುತಾಂತ -- ಧೃತರಾಷ್ಟ್ರನ ಮಗ. ಇವನು ಭೀಮನಿಂದ ಹತನಾದನು (ಮ.ಕ).

ಶ್ರುತಾಯು -- ೧. ಧೃತರಾಷ್ಟ್ರನ ಮಗ. ಇವನು ಭೀಮನಿಂದ ಹತನಾದನು (ಮ.ಕ). ೨. ದ್ರೌಪದಿಯ ಸ್ವಯಂವರಕ್ಕಾಗಿ ಬಂದ ಒಬ್ಬ ಕ್ಷತ್ರಿಯ (ಮ.ಆ.,ಸ). ೩.ಕಳಿಂಗರಾಜ; ಇವನ ಸೋದರ ಅಶ್ರುವಾಯು. ಇವನು ಅರ್ಜುನನಿಂದ ಹತನಾದನು. ಈತನ ಮಕ್ಕಳು ದೀರ್ಘಾಯು ಮತ್ತು ನಿಯುತಾಯು. ಇವನು ಅರ್ಜುನನಿಂದ ಹತನಾದನು (ಮ.ಕ.,ದ್ರೋ).

ಶ್ರುತಾಯುಧ -- ಅರ್ಜುನನು ದ್ರೋಣನನ್ನು ವಂಚಿಸಿ ವ್ಯೂಹವನ್ನು ಪ್ರವೇಶಿಸಲು ಕೋಪಗೊಂಡ ದ್ರೋಣನು ಅರ್ಜುನನ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು. ಅರ್ಜುನನು ಬ್ರಹ್ಮಾಸ್ತ್ರವನ್ನು ಬ್ರಹ್ಮಾಸ್ತ್ರದಿಂದಲೇ ಗೆದ್ದು, ತಿರುಗಿಯೂ ಗುರುವನ್ನು ವಂಚಿಸಿ ಜಯದ್ರಥನ ವಧೆಗಾಗಿ ಮುಂದರಿಯಲು ವರುಣಪುತ್ರನಾದ ಶ್ರುತಾಯುಧನು ಅರ್ಜುನನನ್ನು ತಡೆದು ದಿವ್ಯವಾದ ಒಂದು ಗದೆಯಿಂದ ಆತನನ್ನು ಹೊಡೆದನು. ಆ ಗದೆಯು ದೈವವಶದಿಂದ ಅರ್ಜುನನಿಗೆ ತಗಲದೆ ಕೃಷ್ಣನಿಗೆ ತಗಲಲು ನಿರಾಯುಧನನ್ನು ಹೊಡೆದ ತಪ್ಪಿಗಾಗಿ ಆ ದಿವ್ಯಗದೆಯು ಹಿಂತಿರುಗಿ ಶ್ರುತಾಯುಧನನ್ನೇ ಹೊಡೆದು ಪುಡಿಮಾಡಿಬಿಟ್ಟಿತು. ಇವನು ಕಳಿಂಗರಾಜ. ಇವನು ವರುಣನಿಂದ ಪರ್ಣಾಶಾನದಿಯಲ್ಲಿ ಜನಿಸಿದನು (ಮ.ಸ., ಭೀ., ದ್ರೋ).

ಶ್ರುತಾವತಿ -- ಭರದ್ವಾಜನೆಂಬ ಬ್ರಾಹ್ಮಣನ ಪುತ್ರಿ. ಈಕೆಯು ಇಂದ್ರನನ್ನು ವಿವಾಹವಾಗಬೇಕೆಂದು ತಪಸ್ಸುಮಾಡಿ, ಆತನನ್ನು ಮೆಚ್ಚಿಸಿ ವಿವಾಹವಾದಳು. ಈಕೆಯ ತಂದೆ ಭರದ್ವಾಜ ಮುನಿ; ತಾಯಿ ಘೃತಾಚಿ ಎಂಬ ಅಪ್ಸರೆ. ಘೃತಾಚಿಯನ್ನು ಕಂಡ ಭರಧ್ವಾಜನ ರೇತಸ್ಸು ಸ್ಖಲನವಾಗಲು ಅದು ಎಲೆಯ ಮೇಲೆ ಜಾರಿಬಿದ್ದು ಒಂದು ಕನ್ಯೆಯಾಯಿತು. ಈ ಹುಡುಗಿಯೇ ಶ್ರುತಾವತಿ (ಮ.ಶ).

ಶ್ರುತಾಹ್ವ -- ಪಾಂಡವಪಕ್ಷೀಯನಾದ ರಾಜನೊಬ್ಬ. ಇವನು ಅಶ್ವತ್ಥಾಮನಿಂದ ಹತನಾದ (ಮ.ದ್ರೋ).

ಶ್ರೇಣಿಮಂತ -- ೧. ಕ್ಷತ್ರಿಯನೊಬ್ಬ; ಅತಿರಥ. ಯುಧಿಷ್ಠಿರನು ಉಪಪ್ಲಾವ್ಯ ಪಟ್ಟಣದಲ್ಲಿ ದಾಸಿಯರೊಡನೆ ದ್ರೌಪದಿಯನ್ನು ಕೆಲವು ಸೈನ್ಯದೊಡನಿರಿಸಿ ತಾನು ಜಯಾರ್ಥವಾಗಿ ಕುರುಕ್ಷೇತ್ರಕ್ಕೆ ಪ್ರಯಾಣ ಮಾಡಿದನು. ಆಗ ಆತನನ್ನು ಕೇಕಯರೂ ದೃಷ್ಟಕೇತುವೂ, ಕಾಶಿರಾಜನ ಮಗನೂ, ಶ್ರೇಣಿಮಂತನೂ, ವಸುದಾನನೂ, ಶಿಖಂಡಿಯೂ ಕವಚಗಳನ್ನೂ ಆಯುಧಗಳನ್ನೂ ಧರಿಸಿಕೊಂಡು ಅನುಸರಿಸಿದರು. ಇವನು ಭಾರತ ಯುದ್ಧದಲ್ಲಿ ಪಾಂಡವಪಕ್ಷದಿಂದ ಹೋರಾಡಿ ಕೌರವರಿಗೆ ಸೆರೆಸಿಕ್ಕಿದನು (ಮ.ಆ., ಸ., ಉ. ದ್ರೋ.,) ೨. ಇವನು ಕುಮಾರದೇಶದ ರಾಜ. ರಾಜಸೂಯಯಾಗ ಕಾಲದಲ್ಲಿ ಭೀಮನು ಇವನನ್ನು ಗೆದ್ದನು (ಮ.ಸ.).

ಶ್ರೋತಶ್ರವ -- ಶಿಶುಪಾಲನ ಇನ್ನೊಂದು ಹೆಸರು. ನೋ -- ಶಿಶುಪಾಲ (ಮ.ವ)

ಶ್ಲೇಷ್ಮಾತಕ -- ರಾವಣನ ತಂದೆ ವಿಶ್ರವಸುವು ತಪಸ್ಸು ಮಾಡುತ್ತಿದ್ದ ಘನ. ಇದು ನರ್ಮದಾ ನದಿಯ ತೀರದಲ್ಲಿತ್ತು. (ರಾಮಾ.ಉತ್ತರ).

ಶ್ವಫಲ್ಕ-- ಯದುವಂಶದ ವೃಷ್ಣಿಯ ಮಗ. ಇವನು ಅಕ್ರೂರನ ತಂದೆ.

ಹಿಂದಕ್ಕೊಮ್ಮೆ ಕಾಶೀರಾಜ್ಯದಲ್ಲಿ ಮೂರು ವರ್ಷ ಬರಗಾಲ ಬರಲು ಕಾಶೀರಾಜನು ಧರ್ಮಿಷ್ಠನಾದ ಶ್ವಫಲ್ಕನನ್ನು ತನ್ನೂರಿಗೆ ಬರುವಂತೆ ಪ್ರಾರ್ಥಿಸಿದನು. ಶ್ವಫಲ್ಕನು ಕಾಶೀರಾಜ್ಯದಲ್ಲಿ ಕಾಲಿಡುತ್ತಲೇ ಧಾರಾಕಾರವಾಗಿ ಮಳೆಯು ಸುರಿಯಹತ್ತಿತು. ಇದರಿಂದ ರಾಜನು ಸಂತುಷ್ಟನಾಗಿ ಗಾಂದಿನಿ ಎಂಬ ತನ್ನ ಮಗಳನ್ನು ಮದುವೆ ಮಾಡಿಕೊಟ್ಟನು. ನೋ -- ಗಾಂದಿನಿ (ಭಾಗ).

ಶ್ವಸನ -- ೧. ಅಮೃತರಕ್ಷಕನಾದ ದೇವನೊಬ್ಬ (ಮ.ಆ). ೨. ಸರ್ಪವೊಂದು (ಮ.ಆ).

ಶ್ವಾಸಾ -- ಶ್ವಸನನ ತಾಯಿ (ಮ.ಆ).

ಶ್ವೇತ -- ೧. ಮತ್ಸ್ಯರಾಜನಾದ ವಿರಾಟನ ಮಗ. ಈತನು ವಿರಾಟನ ಪ್ರಥಮ ಭಾರ್ಯೆಯಾದ ಸುರಥೆಯಲ್ಲಿ ಜನಿಸಿದವನು; ಉತ್ತರಕುಮಾರನ ಸೋದರ. ಈತನ ಇನ್ನೊಬ್ಬ ಸೋದರ ಶಂಖ. ಇವನ ವಧೆ ಭೀಷ್ಮನ ಬ್ರಹ್ಮಾಸ್ತ್ರದಿಂದಾಯಿತು (ಮ.ಭೀ., ವಿ). ೨. ಪರ್ವತವೊಂದು. ರಾಜಸೂಯದ ಕಾಲದ ದಿಗ್ವಿಜಯದ ನಿಮಿತ್ತ ಅರ್ಜುನನು ಇಲ್ಲಿಗೆ ಬಂದಿದ್ದನು (ಮ.ವ., ಭೀ). ೩. ಪ್ರಾಚೀನ ಕಾಲದ ಒಬ್ಬ ಕ್ಷತ್ರಿಯ. ಇಂದ್ರನ ವಿಮಾನದಲ್ಲಿದ್ದವ (ಮ.ವಿ). ೪. ಕ್ರೋಧವಶೆಯ ಮೊಮ್ಮಗ. ಈತನ ತಾಯಿ ಶ್ವೇತೆ. ಈಕೆಯ ಮಗನೇ ಶ್ವೇತನೆಂಬ ದಿಗ್ಗಜ (ಮ.ಆ). ೫. ವಿದರ್ಭದೇಶದ ಸುದೇವರಾಯನ ಮಗ. ಇವನು ತಪಸ್ಸುಮಾಡಿ ಬ್ರಹ್ಮಲೋಕ ಹೊಂದಿದರೂ, ಪ್ರತಿದಿನವೂ ತಾನು ದೇಹ ಬಿಟ್ಟ ಕೊಳದ ಹತ್ತಿರ ಬಂದು ತನ್ನ ಶವವನ್ನು ತಿಂದು ಹೋಗುತ್ತಿದ್ದ. ಕೊನೆಗೆ ಅಗಸ್ತ್ಯನು ಅವನ ಈ ಸ್ಥಿತಿಯನ್ನು ಹೋಗಲಾಡಿಸಿದ (ರಾಮಾ.ಉತ್ತರ., ಮ.ವಿ., ಆನಂ.ರಾ). ಶ್ವೇತನ ತಮ್ಮ ಸುರಥ. ಶ್ವೇತನು ರಾಜನಾಗಿರುವಾಗ ಏನೂ ದಾನ ಮಾಡಿರಲಿಲ್ಲ. ಮುಂದೆ ಕಂಕಣವನ್ನು ಅಗಸ್ತ್ಯನಿಗೆ ದಾನಮಾಡಿ, ಮೃಷ್ಟಾನ್ನ ಹೊಂದಿದನು. ೬. ಕಾಶ್ಮೀರದ ರಾಜ. ಇವನು ಸುಮನಸನ ಮಗ. ಇವನು ಪುಷ್ಕರ ಕ್ಷೇತ್ರದಲ್ಲಿ ತಪಸ್ಸು ಮಾಡುತ್ತಿದ್ದಾಗ ಈತನ ದೇಹದಿಂದ ಭಯಂಕರವಾದ ಪುರಷನೊಬ್ಬನು ಹೊರಬಂದನು. ಇವನು, 'ಮಹಾರಾಜ, ಹಿಂದಿನ ಜನ್ಮದಲ್ಲಿ ನೀನು ಜನಸ್ಥಾನದ ದೊರೆಯಾಗಿದ್ದೆ. ಆಗ ಬೇಟೆಯಾಡುವಾಗ ಮೃಗರೂಪದ ಮುನಿಯನ್ನು ಕೊಲ್ಲಲು ನಿನಗೆ ಬ್ರಹ್ಮಹತ್ಯೆಯು ಪ್ರಾಪ್ತವಾಯಿತು. ಅದನ್ನು ನಿವಾರಿಸಬೇಕೆಂದು ನೀನು ಕಾರ್ತಿಕ ಮಾಸದಲ್ಲಿ ವಿಷ್ಣುವನ್ನು ಭಜಿಸುತ್ತಿದ್ದಾಗ ನೀನು ಮೃತ್ಯುವಶವಾದೆ. ನಿನ್ನ ವಿಷ್ಣುಭಕ್ತಿಯ ಮಹಿಮೆಯಿಂದ ಈ ಜನ್ಮದಲ್ಲಿ ಆ ಬ್ರಹ್ಮಹತ್ಯೆಯೇ ಬೇಡನಾಗಿ ಹೊರಬಂದಿದ್ದೇನೆ' ಎನ್ನಲು, ರಾಜನು ಅವನಿಗೆ -- 'ನೀನು

ಧರ್ಮವ್ಯಾಧನೆಂಬ ಹೆಸರಿನಿಂದ ಪ್ರಸಿದ್ಧನಾಗು' ಎಂದು ವರವಿತ್ತನು. ಈ ರಾಜನು ಮುಂದೆ ದೇವವಿಮಾನವನ್ನೇರಿ ಪರಮಪದವನ್ನು ಹೊಂದಿದನು. ೭. ಇವನು ವಿರಾಟನ ಸೇನಾಪತಿ (ಮ.ಭೀ).

ಶ್ವೇತಕಿ -- ಯಾವಾಗಲೂ ಯಜ್ಞದಲ್ಲಿ ಆಸಕ್ತನಾದ ಕ್ಷತ್ರಿಯನೊಬ್ಬ. ಈತನ ಯಜ್ಞಗಳಿಂದ ಅಗ್ನಿಗೆ ಅಜೀರ್ಣ ಪ್ರಾಪ್ತವಾಯಿತು. ಕೊನೆಗೆ ಖಾಂಡವವನ ದಹನದಿಂದ ಅಗ್ನಿಯು ಆರೋಗ್ಯಹೊಂದಿದನು. ನೋ -- ಖಾಂಡವ (ಮ.ಆ).

ಶ್ವೇತಕೇತು -- ಗೌತಮಕುಲೋತ್ಪನ್ನನಾದ ಉದ್ದಾಲಕನ ಮಗ. ಈತನಿಗೆ ಆರುಣಿ ಎಂಬ ಹೆಸರಿದೆ. ಈತನ ಸೋದರ ನಚೀಕೇತ. ಈತನ ತಂಗಿ ಕಹೋಡ ಋಷಿಪತ್ನಿಯಾದ ಸುಜಾತಾ. ಈತನು ಸ್ತ್ರೀಪುರುಷರ ಮರ್ಯಾದೆಯ ಜೀವನಕ್ಕೆ ಕಾರಣನಾದ. ಇವನು ದೇವಲನೆಂಬ ಬ್ರಾಹ್ಮಣನ ಮಗಳಾದ ಸುವರ್ಚಲೆಯೊಡನೆ ಪುರುಷಾರ್ಥಗಳ ಕುರಿತು ಚರ್ಚೆಮಾಡಿ ಆಕೆಯನ್ನೇ ವಿವಾಹವಾದ. ಇವನು ಅಷ್ಟಾವಕ್ರನ ಮಾವ. ನೋ -- ಅಷ್ಟಾವಕ್ರ (ಮ.ಆ., ವ.ಶಾಂ).

ಶ್ವೇತದ್ವೀಪ -- ಶ್ರೀಮನ್ನಾರಾಯಣನ ವಾಸಸ್ಥಾನ. ನೋ -- ಕ್ಷೀರೋದ. ಕ್ಷೀರಸಾಗರದ ಕೆನೆಯೇ ಘನರೂಪವಾಗಲು ಶ್ವೇತದ್ವೀಪವಾಯಿತು (ಮ.ಶಾಂ).

ಶ್ವೇತವಾಹನ--ಅರ್ಜುನನ ಹೆಸರು. ಇವನು ಬಿಳಿ ಕುದುರೆಗಳನ್ನು ಕಟ್ಟಿದ ರಥವುಳ್ಳವನು; ಶ್ವೇತಾಶ್ವನೆಂದರೂ ಇವನೇ (ಮ.ವಿ).

ಶ್ವೇತಾ--ಕ್ರೋಧವಶೆಯ ಮಗಳು. ನೋ -- ಶ್ವೇತ (ಮ.ಆ).

ಶ್ವೇತವರಾಹಕಲ್ಪ -- ಹಿರಣ್ಯಾಕ್ಷನ ವಧೆಗಾಗಿ ವಿಷ್ಣುವು ಶ್ವೇತವರಾಹ ರೂಪದಿಂದ ಅವತರಿಸಿದ ಕಲ್ಪ. ಈಗ ಶ್ವೇತವರಾಹಕಲ್ಪವು ನಡೆಯುತ್ತಿದೆ. ನೋ -- ಕಲ್ಪ, ವರಾಹ;

ಶ್ವೇತಪರ್ವತ--ಉತ್ತರದಿಕ್ಕಿನಲ್ಲಿದೆ. ರಾಜಸೂಯಯಾಗದ ಸಮಯದಲ್ಲಿ ದಿಗ್ವಿಜಯಕ್ಕೆ ಹೋಗಿದ್ದ ಅರ್ಜುನ ಇಲ್ಲಿಗೆ ಹೋಗಿದ್ದ (ಮ.ವ., ಭೀ., ಸ).

ಶ್ವೇತಾರಣ್ಯ -- ಮಾರ್ಕಂಡೇಯ ಮುನಿಯು ಮೃತ್ಯುವನ್ನು ಗೆದ್ದ ವನ. ಇದು ಕಾವೇರಿ ತೀರದಲ್ಲಿತ್ತು (ರಾಮಾ.ಅರ).

ಶ್ವೈತ್ಯ -- ಶೈಬ್ಯರಾಜನ ಮಗನಾದ ಸೃಂಜಯನ ಇನ್ನೊಂದು ಹೆಸರು (ಮ.ದ್ರೋ).

ಷ

ಷಡಾನನ -- ಷಣ್ಮುಖ; ಕುಮಾರಸ್ವಾಮಿ. ನೋ -- ಕುಮಾರ, ಷಣ್ಮುಖ (ಮ.ವ).

ಷಡಂಗ -- ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ್ಯ ಎಂಬ ಆರು ವೇದಾಂತಗಳು.

ಷಣ್ಮತ -- ಶೈವ, ವೈಷ್ಣವ, ಸೌರ, ಗಾಣಪತ್ಯ, ಕಾಪಾಲಿಕ, ಶಾಕ್ತೇಯ ಎಂಬ ಆರು ಮತಗಳು.

ಷಣ್ಮುಖ -- ಈತನನ್ನು ದೇವಸೇನಾನಿಯಾಗಿ ಬ್ರಹ್ಮನೂ ಕಶ್ಯಪನೂ ಇತರ ಲೋಕ ಪ್ರಸಿದ್ಧರಾದ ಮಹರ್ಷಿಗಳೂ ಈ ಅಭಿಷೇಕ ಕಾರ್ಯವನ್ನು ನಡೆಸಿದರು. ಬ್ರಹ್ಮನು ಮಹಾಬಲಾಢ್ಯರಾದ, ಸಿದ್ಧರಾದ ನಾಲ್ಕು ಮಂದಿ ಪಾರ್ಷದರನ್ನು -- ನಂದಿಸೇನ, ಲೋಹಿತಾಕ್ಷ, ಪುರಾತಾಕರ್ಣ, ಕುಮುದಮಾಲಿ ಎಂಬುವರನ್ನು ಷಣ್ಮುಖನ ಅನುಚರರನ್ನಾಗಿಯೂ, ಸ್ಥಾಣುವು ದೇವಶತ್ರುಗಳನ್ನು ನಾಶಮಾಡಬಲ್ಲ ಕಾಮನನ್ನೂ, ಯಮನು ಉನ್ಮಾದ, ಪ್ರಮಾಥರೆಂಬುವರನ್ನೂ, ಸೂರ್ಯನು ಸುಭ್ರಾಜ, ಭಾಸ್ವರರೆಂಬುವರಿಬ್ಬರನ್ನೂ, ಚಂದ್ರನು ಮಣಿ, ಸುಮಣಿಗಳೆಂಬ ಅನುಚರರಿಬ್ಬರನ್ನೂ, ಅಗ್ನಿಯು ಜ್ವಾಲ, ಜಿಹ್ಮಜ್ಯೋತಿಗಳೆಂಬುವರನ್ನೂ, ಅಂಶನೆಂಬ ದೇವತೆಯು ಪರಿಘ, ವಟ, ಭೀಮ, ದಹತಿ, ದಹನರೆಂಬ ಅನುಚರರನ್ನೂ, ಇಂದ್ರನು ಉತ್ಕ್ರೋಷ, ಸತ್ಕರ, ವಜ್ರ, ದಂಡಧರರೆಂಬುವರನ್ನೂ, ವಿಷ್ಣುವು ಚಕ್ರ, ವಿಕ್ರಮ, ಸಂಕ್ರಮರೆಂಬ ಮೂರು ಮಂದಿ ಅನುಚರರನ್ನೂ, ಅಶ್ವಿನೀದೇವತೆಗಳು ಸರ್ವವಿದ್ಯಾವಿಶಾರದರಾದ ವರ್ಧನ, ನಂದನರೆಂಬಿಬ್ಬರನ್ನೂ, ಧಾತನು ಕುಂದ, ಕುಸುಮ, ಮುದ, ಡಂಬರಾ ಡಂಬರರೆಂಬ ಐದು ಮಂದಿಯನ್ನೂ, ತ್ವಷ್ಟನು ವಕ್ರಾನುವತ್ರರೆಂಬ ಅನುಚರರನ್ನೂ ಕೊಟ್ಟನು. ಹೀಗೆ ಮಿತ್ರನು ಸುವ್ರತ, ಸತ್ಯಸಂಧರನ್ನೂ, ವಿಧಾತನು ಸುವ್ರತ ಮತ್ತು ಶುಭಕರ್ಮಕನನ್ನೂ, ಪೂಷನು ಪಾಣೀತಕ, ಕಾಳಿಂಗಕರೆಂಬವರನ್ನೂ, ವಾಯುವು ಬಲಾತಿಬಲರನ್ನೂ, ವರುಣನು ತಿಮಿಂಗಿಲಗಳಂತೆ ಮುಖವುಳ್ಳ ಯಮಾತಿಯಮರನ್ನೂ, ಹಿಮವಂತನು ಸುವರ್ಚಸ್ಸು, ಅತಿ ವರ್ಚಸ್ಸುಗಳನ್ನೂ, ಮೇರುವು ಕಾಂಚನ, ಮೇಘಮಾಲಿಗಳನ್ನೂ, ಸ್ಥಿರಾತಿಸ್ಥಿರರೆಂಬಿಬ್ಬರನ್ನೂ, ವಿಂಧ್ಯಪರ್ವತವು ಉಚ್ಛ್ರಂಗ, ಅತಿಶೃಂಗರನ್ನೂ, ಸಮುದ್ರವು ಗದಾಧಾರಿಗಳಾದ ಸಂಗ್ರಹವಿಗ್ರಹರನ್ನೂ, ಪಾರ್ವತೀದೇವಿಯು ಉನ್ಮಾದ, ಶಂಕುಕರಣ, ಪುಷ್ಪದಂತರೆಂಬ ಮೂವರನ್ನೂ, ಗಂಗೆಯು ಜಯಮಹಾಜಯರನ್ನೂ -- ಅನುಚರರನ್ನಾಗಿ ಕೊಟ್ಟರು (ಮ.ಶ).

ಷಷ್ಠಿಪ್ರಿಯ -- ಸ್ಕಂಧ ಷಣ್ಮುಖ; ಷಷ್ಠಿ ಎಂಬ ಹೆಂಡತಿಗೆ ಪ್ರಿಯನಾದವ (**ದೇವೀಭಾ**).

ಷೋಡಶ ಮಹಾರಾಜರು -- ಅಭಿಮನ್ಯುವಿನ ವಧೆಯನ್ನು ಕೇಳಿ ದುಃಖಿತನಾದ

ಯುಧಿಷ್ಠಿರನಿಗೆ ವ್ಯಾಸರು ಹದಿನಾರು ಮಂದಿ ರಾಜರ ಕಥೆಯನ್ನು ಹೇಳಿದರು. ೧. ಮರುತ್ತ -- ಇವನು ಅವಿಕ್ಷಿತ್ತಿನ ಕುಮಾರ. ಇವನ ಯಾಗಕ್ಕೆ ಇಂದ್ರ, ವರುಣ, ಬೃಹಸ್ಪತಿ ಮೊದಲಾದ ದೇವತೆಗಳೂ ಸೃಷ್ಟಿಕರ್ತರೂ ಬಂದಿದ್ದರು. ಇವನು ಬೃಹಸ್ಪತಿಯ ತಮ್ಮನಾದ ಸಂವರ್ತನ ಸಹಾಯದಿಂದ ಇಂದ್ರನ ಇಷ್ಟಕ್ಕೆ ವಿರೋಧವಾಗಿ ಯಾಗಮಾಡಿದನು. ಮರುತ್ತನ ಆಳ್ವಿಕೆಯಲ್ಲಿ ಭೂಮಿಯು ತೃಷೆಯಿಲ್ಲದೆ ಸಸ್ಯಸಮೃದ್ಧವಾಗಿ ಶೋಭಿಸುತ್ತಿತ್ತು (ಮ.ಶಾಂ). ೨. ಸುಹೋತ್ರ -- ಈತನು ವಿತಥ ಪುತ್ರನು. ಇವನ ಆಳ್ವಿಕೆಯಲ್ಲಿ ಇಂದ್ರನು ಒಂದು ವರ್ಷ ಎಡೆಬಿಡದೆ ಸುವರ್ಣ ವೃಷ್ಟಿಯನ್ನು ಈತನ ರಾಜ್ಯದಲ್ಲಿ ಕರೆದನು. ಆ ಕಾಲದಲ್ಲಿ ಭೂಮಿಗೆ ವಸುಮತಿಯೆಂಬ ಹೆಸರು ಅನ್ವರ್ಥವಾಯಿತು. ೩. ಅಂಗರಾಜ. ೪.ಶಿಬಿ -- ಇವನು ಉಶೀನರನ ಪುತ್ರ. ಇವನು ಸಮಸ್ತ ಭೂಮಿಯನ್ನೂ ಏಕಚ್ಛತ್ರಾಧಿಪತ್ಯದಿಂದಾಳಿದವನು. ಈ ರಾಜರ್ಷಿಯಂತೆ ಪ್ರಜಾರಕ್ಷಣಾಭಾರವನ್ನು ವಹಿಸಬಲ್ಲ ರಾಜನು ಹಿಂದೆಯೂ ಮುಂದೆಯೂ ಇರಲಾರರು. ೫. ದಾಶರಥಿರಾಮ -- ಇವನು ದಶರಥಪುತ್ರ; ಇವನ ಕಾಲದಲ್ಲಿ ರಾಜ್ಯದಲ್ಲಿ ಸುಭಿಕ್ಷವಿತ್ತು. ಸ್ತ್ರೀಯರಲ್ಲೂ ಜಗಳವಿರಲಿಲ್ಲ. ಇವನು ಹನ್ನೊಂದು ಸಾವಿರ ವರ್ಷರಾಜ್ಯಭಾರಮಾಡಿದನು. ಪ್ರಜೆಗಳೆಲ್ಲರೂ ಧರ್ಮನಿರತರಾಗಿದ್ದರು. ೬. ಭಗೀರಥ -- ಹಿಂದೆ ಗಂಗೆಯು ಸಣ್ಣ ಬಾಲಕಿಯಂತೆ ಏಕಾಂತದಲ್ಲಿ ಬಂದು ಈತನ ತೊಡೆಯ ಮೇಲೆ ಕುಳಿತುದರಿಂದಲೇ ಆಕೆಯು ಭಾಗೀರಥಿಯೆಂದೂ ಊರ್ವಶಿಯೆಂದೂ ಕರೆಯಲ್ಪಟ್ಟಳು. ೭. ದಿಲೀಪ. ನೋ -- ದಿಲೀಪ. ೮. ಮಾಂಧಾತ ನೋ -- ಮಾಂಧಾತ. ೯. ಯಯಾತಿ. ನೋ -- ಯಯಾತಿ. ೧೦. ನಭಗನ ಮಗನಾದ ಅಂಬರೀಷ. ನೋ -- ಅಂಬರೀಷ. ೧೧. ಶಶಬಿಂದು ನೋ -- ಶಶ (ಶಿ) ಬಿಂದು. ೧೨.ಗಯಾ. ನೋ -- ಗಯಾ. ೧೩. ರಂತಿದೇವ. ನೋ -- ರಂತಿದೇವ ೧೪. ದುಷ್ಯಂತ ಪುತ್ರನಾದ ಭರತ -- ಇವನು ದುಷ್ಯಂತ ಶಕುಂತಳೆಯ ಪುತ್ರ. ಇವನು ಸಾವಿರ ಅಶ್ವಮೇಧಗಳನ್ನೂ, ನೂರು ರಾಜಸೂಯಯಾಗಗಳನ್ನೂ ಪೂರ್ತಿಗೊಳಿಸಿದನು. ೧೫. ವೇನರಾಜನ ಮಗನಾದ ಪೃಥು. ನೋ -- ಪೃಥು. ೧೬.ಪರಶುರಾಮ. ನೋ -- ಪರಶುರಾಮ.

೧೬ನೆಯ ರಾಜನಾಗಿ ಪರಶುರಾಮನ ಬದಲಿಗೆ ಸಗರನ ಕಥೆಯನ್ನು ಭಾರತದಲ್ಲಿ ಹೇಳಿದೆ. ಶಾಂತಿಪರ್ವದಲ್ಲಿ ಯುಧಿಷ್ಠಿರನಿಗೆ ಕೃಷ್ಣನು ಈ ಕತೆಯನ್ನು ಹೇಳಿದ್ದಾನೆ.

ಸ

ಸಂಜ್ಞಾ -- ಈಕೆ ವಿಶ್ವಕರ್ಮನ ಮಗಳು; ಸೂರ್ಯನ ಪತ್ನಿ. ಈಕೆಗೆ ಯಮನೆಂಬ ಮಗನೂ, ಯಮುನೆ ಎಂಬ ಮಗಳೂ ಇದ್ದರು. ಸಂಜ್ಞೆಗೆ ಸುರೇಣುವೆಂಬ ಹೆಸರಿದೆ. ಈಕೆಯು ಸೂರ್ಯನ ತೇಜಸ್ಸನ್ನು ಸಹಿಸದೆ ತಾನೇ ಸ್ತ್ರೀಯೊಂದನ್ನು ನಿರ್ಮಿಸಿ ಛಾಯೆಯೆಂದು ಹೆಸರಿಟ್ಟು ಈಕೆಯನ್ನು ಸೂರ್ಯನ ಬಳಿಯಲ್ಲಿಟ್ಟು ತಾನು ತನ್ನ ತಂದೆ ಮನೆಗೆ ಹೊರಟುಹೋದಳು. ಸೂರ್ಯನು ಇದನ್ನು ತಿಳಿದು ವಿಶ್ವಕರ್ಮನ ಬಳಿಗೆ ಹೋಗಲು ಅವನು ಸೂರ್ಯನ ಹೆಚ್ಚಿನ ತೇಜಸ್ಸನ್ನು ತೆಗೆದು ಅದರಿಂದ ವಿಷ್ಣುವಿನ ಚಕ್ರಾಯುಧವನ್ನೂ, ಶಿವನ ತ್ರಿಶೂಲವನ್ನೂ, ಇಂದ್ರನ ವಜ್ರಾಯುಧವನ್ನೂ, ನಿರ್ಮಿಸಿದನು. ಹೀಗೆ ವಿಶ್ವಕರ್ಮನು ಸೂರ್ಯನನ್ನು ಮಿತತೇಜಸ್ವಿಯನ್ನಾಗಿ, ಆಕರ್ಷಕನನ್ನಾಗಿ ಮಾಡಿ ಸಂಜ್ಞೆಯನ್ನು ಆತನ ಬಳಿಗೆ ಕಳುಹಿಸಿದನು. ಆಗ ಉತ್ತರ ಕುರುವಿನಲ್ಲಿ ಹೆಣ್ಣು ಕುದುರೆಯ ರೂಪದಿಂದಿದ್ದ ಸಂಜ್ಞೆಯನ್ನು ಸೂರ್ಯನು ಗಂಡು ಕುದುರೆಯ ರೂಪದಿಂದ ಕೂಡಲು, ಅಲ್ಲೇ ದೇವವೈದ್ಯರಾದ ಅಶ್ವಿನೀದೇವತೆಗಳು ಜನಿಸಿದರು. ಮುಂದೆ ಸೂರ್ಯನು ಸಂಜ್ಞೆಯನ್ನು ಮೆಚ್ಚಿಸಿ ಕರೆದುಕೊಂಡು ಹೋದನು (ಮಾರ್ಕಂ.ಪು.ಹರಿ).

ಸಂನ್ಯಾಸ -- ನಾಲ್ಕನೆಯ ಆಶ್ರಮ. ಈ ಆಶ್ರಮವು ಕೆಲವು ಯುಗಗಳಲ್ಲಿ ಮೋಕ್ಷ ಸಾಧಕವಾದದ್ದೆಂದು ವಿಶ್ವಾಸವಿತ್ತು. ಮನುಷ್ಯನು ಗೃಹಸ್ಥಾಶ್ರಮದಿಂದಲೂ ಸಂನ್ಯಾಸ ಪಡೆಯಬಹುದಿತ್ತು. ಜಾಬಾಲಶ್ರುತಿಯಲ್ಲಿ ಬ್ರಹ್ಮಚರ್ಯದಿಂದ ಗಾರ್ಹಸ್ಥ್ಯ, ಗಾರ್ಹಸ್ಥ್ಯದಿಂದ ವಾನಪ್ರಸ್ಥ, ವಾನಪ್ರಸ್ಥದಿಂದ ಸಂನ್ಯಾಸವೆಂದು ಕ್ರಮದಿಂದಾಗಲೀ ಅಥವಾ ಬ್ರಹ್ಮಚರ್ಯದಿಂದಲೋ ಗೃಹಸ್ಥಾಶ್ರಮದಿಂದಲೋ ಸಂನ್ಯಾಸ ಪಡೆಯಬಹುದೆಂದು ಹೇಳಿರುತ್ತದೆ. ಸಂನ್ಯಾಸಿಯು ಮನೆಯನ್ನು ಬಿಟ್ಟು ದಂಡಕಮಂಡಲಗಳನ್ನು ಹಿಡಿದುಕೊಂಡು ಮೌನವ್ರತವುಳ್ಳವನಾಗಿ ರುಚಿಕರವಾದ ಅನ್ನ, ಇಷ್ಟಕರವಾದ ವಸ್ತುವಿನ ಅಪೇಕ್ಷೆಯನ್ನು ಬಿಟ್ಟು, ದೀಕ್ಷೆಯನ್ನು ಪಡೆಯಬೇಕು. ಇವನು ಸರ್ವತ್ರ ಮಮತೆಯನ್ನು ಬಿಟ್ಟು ಮಕ್ಕಳು ಮೊದಲಾದವರ ಸಹಾಯವನ್ನು ಅಪೇಕ್ಷಿಸಬಾರದು. ಇವನು ಬ್ರಹ್ಮನಲ್ಲಿ ನೆಟ್ಟಮನಸ್ಸುಳ್ಳವನಾಗಿ ಹಗಲುರಾತ್ರಿ ಕಾಡಿನಲ್ಲಿ ಸಂಚರಿಸುತ್ತ ಆಹಾರಭಿಕ್ಷೆಗೆ ಮಾತ್ರ ಊರನ್ನು ಪ್ರವೇಶಿಸಬೇಕು. ಇವನು ದಿನಕ್ಕೊಂದು ಸಲ ದೇಹಪೋಷಣಕ್ಕಾಗಿ ಊರನ್ನು ಪ್ರವೇಶಿಸಬೇಕು. ಇವನು ದಿನಕ್ಕೊಂದು ಸಲ ದೇಹಪೋಷಣಕ್ಕಾಗಿ ಭಿಕ್ಷೆ ಬೇಡಬೇಕು. ಮೋಕ್ಷವೇ ಸಂನ್ಯಾಸಿಯ ಧ್ಯೇಯ (ಮ.ಸ್ಮೃ).

ಸಂಯಮಿನಿ(ನರಕ)--ಶ್ಯೈಮಿನಿ; ಶಮನ (ಯಮ) ಪಟ್ಟಣ. ರಾಜಸೂಯಯಾಗವನ್ನು ಮಾಡದ ದಿಲೀಪ, ಶರ್ಯಾತಿ, ಭರತಾದಿ ಅನೇಕ ರಾಜರು ಯಮನ ಸಭೆಯಲ್ಲಿದ್ದರು. ಪಾಂಡುಮಹಾರಾಜನೂ ಅಲ್ಲೇ ಇದ್ದನು. ಪಾಂಡವರು ರಾಜಸೂಯಯಾಗವನ್ನು ಮಾಡಿ ತಮ್ಮ ತಂದೆಯನ್ನು ಇಂದ್ರನ ಸಭೆಗೆ ಕಳುಹಿಸಿದರು. ನರಕವಿರುವುದು ಇದೇ ಯಮನ ಪಟ್ಟಣದಲ್ಲಿ. ಅಲ್ಲಿ ಕೆಲವರು ಪಾಪಿಗಳನ್ನು ಕೊಯ್ಯುತ್ತಾರೆ; ಕೆಲವರನ್ನು ಕಡಿಯುತ್ತಾರೆ; ಕೆಲವರನ್ನು ಅರೆಯುತ್ತಾರೆ; ಕೆಲವರನ್ನು ಕೊಚ್ಚೆ ಗುಂಡಿಯಲ್ಲಿ ಮುಳುಗಿಸಿ ಮುಳುಗಿಸಿ ಮೇಲಕ್ಕೆತ್ತುತ್ತಾರೆ. ಯುಧಿಷ್ಠಿರನು ಇನ್ನೂ ಅನೇಕ ವಿಧದ ನರಕಯಾತನೆಗಳನ್ನು ಕಂಡು ದುಃಖಪಟ್ಟು ಮುಂದೆ ಬರುತ್ತಿರುವಾಗ, ದೇವತೆಗಳಿಂದ ಕಳುಹಿಸಲ್ಪಟ್ಟ ದೇವದೂತನು ಯುಧಿಷ್ಠಿರನಿಗೆ ಪಾಪಿಗಳ ಲೋಕವನ್ನು ಚೆನ್ನಾಗಿ ತೋರಿಸಿದನು. ಅಲ್ಲಿ ನಡೆಯುವುದೇ ಕಷ್ಟವಾಗಿತ್ತು. ಕತ್ತಲೆ ಕವಿದು ಘೋರವಾಗಿತ್ತು; ಕಾಲಿಟ್ಟರೆ ಕೂದಲು ಪಾಚಿಯೂ ಕಾಲಿಗೆ ಮೆತ್ತಿಕೊಳ್ಳುತ್ತಿತ್ತು. ರಕ್ತಮಾಂಸಗಳಿಂದ ಕೊಚ್ಚೆಕೊಚ್ಚೆಯಾಗಿ ದುರ್ನಾತ ಬಡಿಯುತ್ತಿತ್ತು. ಜೋಇನೆ ಸೊಳ್ಳೆಗಳೂ ನೊಣಗಳೂ ಮುತ್ತಿಕೊಳ್ಳುತ್ತಿದ್ದುವು. ಅಲ್ಲಲ್ಲಿ ಎಲ್ಲಾ ಮೂಳೆಗಳು; ಹುಳುಹುಪ್ಪಟೆಗಳು; ಉಕ್ಕಿನ ಕೊಕ್ಕುಳ್ಳ ಹದ್ದು ಕಾಗೆಗಳು; ಸೂಜೀಮುಖವುಳ್ಳ ಪ್ರೇತಗಳು; ಇವೆಲ್ಲವು ಸತ್ತು ಉರಿಯುತ್ತಿದ್ದ ಬೆಂಕಿಯ ಬೆಳಕಿನಲ್ಲಿ ಕೆಂಚಗೆ ಕಾಣುತ್ತಿದ್ದುವು. ಇವುಗಳ ಮಧ್ಯೆ ಕೈ ಕತ್ತರಿಸಿಹೋದವರು, ತೋಳು ಕತ್ತರಿಸಿಹೋದವರು, ಹೊಟ್ಟೆ ಕುಯ್ದಿರುವವರು, ಕಾಲು ಕಡಿದಿರುವವರು --ಇವುಗಳನ್ನು ನೋಡಿದರೆ ಮೈ ಜುಮ್ಮೆನ್ನುತ್ತದೆ. ಇವುಗಳನ್ನೆಲ್ಲ ನೋಡುತ್ತ ಯುಧಿಷ್ಠಿರನು ಹಲವು ಬಗೆಯಲ್ಲಿ ಚಿಂತಿಸುತ್ತ ದಾರಿಯಲ್ಲಿ ಕುದಿನೀರಿನ ಹೊಳೆಯನ್ನೂ, ಕತ್ತಿ ಎಲೆಯ ಕಾಡನ್ನೂ ಕಂಡನು. ಕೆಂಪಗೆ ಕಾದ ಮರಳನ್ನು, ಬಂಡೆಗಲ್ಲನ್ನೂ ಕಬ್ಬಿಣದ ಹಲಗೆಗಳನ್ನೂ ಕಂಡನು; ಕೊತಕೊತನೆ ಎಣ್ಣೆ ಕುದಿಯುತ್ತಿದ್ದ ಕೊಪ್ಪರಿಗೆಗಳನ್ನೂ, ಮುಳ್ಳಿಡಿದು ಹೊದರಾದ ಬೂರುಗದ ಮರಗಳನ್ನೂ ಕಂಡನು. ಇವುಗಳಲ್ಲೆಲ್ಲಾ ಪಾಪಕರ್ಮಿಗಳು ಬಗೆಬಗೆಯಾಗಿ ಯಾತನೆಯನ್ನು ಅನುಭವಿಸುತ್ತಿದ್ದರು, ಅಲ್ಲಿಯ ಹುಡುಕು ನಾತವನ್ನು ಸಹಿಸಲಾರದೆ 'ನರಕವು ಭಯಂಕರವಾದುದು!' ಎಂದನು. ಯುಧಿಷ್ಠಿರನು ಇನ್ನೂ ಅನೇಕ ವಿಧವಾದ ನರಕಯಾತೆಯನ್ನು ಕಂಡು ದುಃಖವನ್ನು ಅನುಭವಿಸುತ್ತ ದೇವದೂತನೊಡನೆ -- 'ನಾನು ನನ್ನ ಸಹೋದರರೊಡನೆ ಈ ನರಕದಲ್ಲೇ ಇರುವೆನು' ಎಂದು ಅದಕ್ಕೆ ಧುಮುಕಲು, ನರಕವು ಇಂದ್ರಜಾಲದಂತೆ ಕ್ಷಣದಲ್ಲಿ ಮಾಯವಾಯಿತು (ಮ.ಸ., ಸ್ವ., ವ).

ಸಂಯಾತಿ -- ಚಂದ್ರವಂಶದ ನಹುಷನ ಮಗ (ಮ.ಆ).

ಸಂಯೋಧ ಕಟಕ -- ಕುಬೇರ ಸೇವಕನೊಬ್ಬ. ಕುಬೇರನ ಮೇಲೆ ದಂಡೆತ್ತಿ ಬಂದ ರಾವಣನನ್ನು ಇದಿರಿಸಿ ಈತನು ಸೋತನು (ರಾಮಾ.ಉತ್ತರ).

ಸಂವರಣ -- ಚಂದ್ರವಂಶದ ಪುರುಕುಲೋತ್ಪನ್ನನಾದ ಅಜಮೀಢನ ಮೊಮ್ಮಗ; ಋಕ್ಷನ ಮಗ. ಈತನ ಪತ್ನಿ ಸೂರ್ಯಪುತ್ರಿಯಾದ ತಪತಿ. ಮಗ ಕುರುಮಹಾರಾಜ. ನೋ. -- ತಪತಿ, ಕುರು (ಮ.ಆ.).

ಸಂವರ್ತ -- ಅಂಗಿರಸ ಋಷಿಯ ಮಗ. ಉಚಥ್ಯ ಮತ್ತು ಬೃಹಸ್ಪತಿ ಈತನ ಸೋದರರು. ಈತನು ಬೃಹಸ್ಪತಿಯ ಪೀಡೆಗಳನ್ನು ಸಹಿಸಲಾರದೆ ಅರಣ್ಯಪ್ರವೇಶ ಮಾಡಿದನು. ಇವನು ಮರುತ್ತನಿಂದ ಯಜ್ಞ ಮಾಡಿಸಿದನು. ಆಗ ಈತನನ್ನು ಕೊಲ್ಲಲು ಬಂದ ಇಂದ್ರನ ವಜ್ರಾಯುಧವನ್ನು ಹಿಡಿದು ತೋಳನ್ನೇ ಸ್ತಂಭಿಸಿದನು. ನೋ.--ಮರುತ್ತ, ಬೃಹಸ್ಪತಿ (ಮ.ಆ.,ಸ.,ಅಶ್ವ.).

ಸಂವರ್ತಕ --ಕಾಲಾಗ್ನಿ (ಮ.ಭೀ)

ಸಂಶಪ್ತಕ (ಶಂಶಪ್ತಕ) -- ಶಪಥಪೂರ್ವಕ ಯುದ್ಧ ಮಾಡತಕ್ಕ ತ್ರಿಗರ್ತರಾಜರಾದ ಸುಶರ್ಮ, ಸತ್ಯೇಷು, ಸತ್ಯಕರ್ಮ, ಸತ್ಯದೇವ, ಸತ್ಯರಥರೆಂಬ ಐವರು ರಾಜರು. ಇವರು ಒಂಬತ್ತುಕೋಟಿ ಸೇನೆಯೊಂದಿಗೆ ಅರ್ಜುನನೊಡನೆ ಕುರುಕ್ಷೇತ್ರದಲ್ಲಿ ಹೋರಾಡಿ ಆತನಿಂದ ಹತರಾದರು.

ಗಂಧರ್ವರಿಂದ ಪರಾಜಿತನಾದ ದುರ್ಯೋಧನನು ಪ್ರಾಯೋಪವೇಶಮಾಡಿ ದೇಹಬಿಡುವ ಯತ್ನ ನಡೆಸಿರಲು ಪಾತಾಳಲೋಕದ ಸಂಶಪ್ತಕರೆಂಬ ರಾಕ್ಷಸರು ಬಂದು ಮಾಟದ, ಭೂತದ ಮೂಲಕ ದುರ್ಯೋಧನನನ್ನು ಪಾತಾಳಕ್ಕೆ ತರಿಸಿ, ಅವನಿಗೆ ಯುದ್ಧದಲ್ಲಿ ತಮ್ಮ ನೆರವು ಉಂಟೆಂದು ಭರವಸೆಯಿತ್ತು --'ದುರ್ಯೋಧನಾ, ಹಿಂದೆ ನೀನು ಮಹೇಶ್ವರನನ್ನು ನಮ್ಮೊಡನೆ ಕೂಡಿ ತಪಸ್ಸು ಮಾಡಿ, ಮೆಚ್ಚಿಸಿ, ನಿನ್ನ ಶರೀರದ ಮೇಲಣ ಭಾಗವು ವಜ್ರಾಯುಧಕ್ಕೆ ಸಮಾನವಾಗಿ ಅಸ್ತ್ರಶಸ್ತ್ರಗಳಿಗೆ ಅಭೇದ್ಯವಾಗುವಂತೆ ವರ ಪಡೆದೆ. ನಿನ್ನ ಶರೀರದ ಕೆಳಭಾಗವು ಸ್ತ್ರೀಯರಿಗೆ ಮನೋಹರವಾಗಿಯೂ, ಪುಷ್ಪಮಯವಾಗಿಯೂ ಇರುವಂತೆ ವರ ಪಡೆದೆ. ಹೀಗೆ ದೇವಾನುಗ್ರಹಕ್ಕೆ ಪಾತ್ರನಾದ ನೀನು ದೇವಾಂಶಸಂಭೂತನೆಂದು ತಿಳಿ. ನಿನಗೆ ಭಗದತ್ತಾದಿ ಮಹಾವೀರರ ಬೆಂಬಲವಿದೆ. ಸುಮ್ಮನೆ ವಿಷಾದ ಪಡಬೇಡ. ಅನೇಕ ದಾನವರು ನಿನ್ನ ಸಹಾಯಾರ್ಥ ಭೂಮಿಗೆ ಬಂದು ದ್ರೋಣ, ಭೀಷ್ಮ, ಕೃಪಾದಿಗಳಲ್ಲಿ ಆವೇಶಹೊಂದಿ ಅವರು ಪಾಂಡವರ ಸ್ನೇಹ ಬಿಡುವಂತೆ ಮಾಡುವರು. ಅರ್ಜುನನ ಸಂಹಾರಕ್ಕೂ ನಾವು ಉಪಾಯವನ್ನು ಮಾಡಿರುವೆವು.

ಹತನಾದ ನರಕಾಸುರನ ಚೇತನವು ಕರ್ಣನ ಶರೀರವನ್ನು ಆಶ್ರಯಿಸಿರುವುದು. ಆತನು ನಿನಗೆ ಯುದ್ಧದಲ್ಲಿ ಸಂಪೂರ್ಣ ಬೆಂಬಲವನ್ನು ಕೊಡುವನು ಎಂದು ಆತನನ್ನು ಪ್ರಾಯೋಪವೇಶದಿಂದ ಬಿಡಿಸಿ ಭೂಮಿಗೆ ತಂದುಬಿಟ್ಟರು. ಸಂಶಪ್ತಕರ ಮುಖ್ಯಸ್ಥನು ಸುಧನ್ವ. ದ್ರೋಣನು ಸೇನಾಪತಿಯಾದ ಎರಡನೇ ದಿನ ಅರ್ಜುನನು ಇವನನ್ನು ಕೊಂದನು. ಅಭಿಮನ್ಯುವಿನ ವಧೆಯಾದ ದಿನವೇ ಅರ್ಜುನನಿಂದ ಸಂಶಪ್ತಕರ ನಾಶವಾಯಿತು. ಶಲ್ಯನು ಸೇನಾಪತಿಯಾಗಿದ್ದಾಗ ಅರ್ಜುನನು ಸಂಶಪ್ತಕರನ್ನೆಲ್ಲ ನಿರ್ಮೂಲಿಸಿ ಸುಶರ್ಮನನ್ನು ಕೊಂದನು (ಮ.ಆ.,ದ್ರೋ.,ಕ.).

ಸಂಶ್ರುತ್ಯ -- ವಿಶ್ವಾಮಿತ್ರ ಋಷಿಯ ಪುತ್ರ (ಮ.ಅನು).

ಸಂಹ್ರಾದ --ಇವನಿಗೆ ಸಹ್ಲಾದನೆಂಬ ಹೆಸರಿದೆ. ಇವನ ಮಕ್ಕಳೇ ಸುಂದ ನಿಸುಂದರು [illegible] ಸೋ -- ಪ್ರಹ್ಲಾದ. ಇವನು ಹಿರಣ್ಯಕಶಿಪುವಿನ ಮಗ; ಈತನ ತಾಯಿ ಕಯಾದು-- ಅಣ್ಣ ಪ್ರಹ್ಲಾದ; ಪತ್ನಿ ಕೃತಿ; ಮಗ ಪಂಚಜನನೆಂಬ ರಕ್ಕಸ (ಮ.ಆ.,ಭಾಗ.,).

ಸಕ್ತುಪ್ರಸ್ಥ -- ಉಂಛವೃತ್ತಿಯ (ಆಯ್ದ ಅಕ್ಕಿಯಿಂದ ಜೀವಿಸುವುದು) ಬ್ರಾಹ್ಮಣ. ಯುಧಿಷ್ಠಿರನ ಅಶ್ವಮೇಧಯಾಗಾನಂತರ ಒಂದು ಅಳಿಲು (ಮುಂಗುಸಿ) ಯುಧಿಷ್ಠಿರನ ಯಾಗಕ್ಕಿಂತ ಸಕ್ತುಪ್ರಸ್ಥನ ಯಾಗವೇ ಹೆಚ್ಚಿನದೆಂದು ಹೊಗಳಿತು.

ಹಿಂದೆ ಕುರುಕ್ಷೇತ್ರದಲ್ಲಿ ಸಕ್ತುಪ್ರಸ್ಥನೆಂಬ ಬ್ರಾಹ್ಮಣನು ಶಿಲೋಂಛವೃತ್ತಿಯಿಂದ (ಗದ್ದೆಹೊಲಗಳಲ್ಲಿ ಬಿದ್ದಿರುವ ತೆನೆಗಳನ್ನೂ, ಬೀದಿಗಳಲ್ಲಿ ಬಿದ್ದಿರುವ ಕಾಳುಗಳನ್ನೂ ಹೆಕ್ಕಿ ತಿಂದು ಜೀವಿಸುವುದು) ತನ್ನ ದೊಡ್ಡ ಕುಟುಂಬವನ್ನು ರಕ್ಷಿಸಿಕೊಂಡು ಬರುತ್ತಿರುವಾಗ ಒಂದು ವರ್ಷ ದುರ್ಭಿಕ್ಷವು ಪ್ರಾಪ್ತವಾಯಿತು. ಆಗ ಈ ಬ್ರಾಹ್ಮಣನು ನೂರಾರು ಕಡೆ ಸಂಚರಿಸಿ, ಒಂದು ಪ್ರಸ್ಥ (ಸೇರು) ಸಕ್ತುವನ್ನು (ಹುರಿದ ಹಿಟ್ಟು) ಸಂಪಾದಿಸಿ ಮನೆಗೆ ಬಂದು ವೈಶ್ವದೇವವನ್ನು ತೀರಿಸಿ ಭೋಜನಕ್ಕೆ ಕುಳಿತುಕೊಳ್ಳುವ ವೇಳೆಗೆ ಸರಿಯಾಗಿ ಒಬ್ಬ ಅತಿಥಿ ಬರಲು ಈ ಬ್ರಾಹ್ಮಣನು ಸಂತೋಷದಿಂದ ಅವನನ್ನು ಬರಮಾಡಿಕೊಂಡು ತನ್ನ ಪಾಲಿನ ಸಕ್ತವನ್ನು ಅವನಿಗೆ ಸಮರ್ಪಿಸಿದನು. ಅವನು ಅದನ್ನುಂಡು ತೃಪ್ತನಾಗದಿರಲು ಅವನ ಹೆಂಡತಿಯು ತನ್ನ ಪಾಲನ್ನೂ, ಮಗನು ತನ್ನ ಪಾಲನ್ನೂ, ಸೊಸೆಯು ತನ್ನ ಪಾಲನ್ನೂ ಕೊಡಲು ಆ ಅತಿಥಿಯ ಇವರೆಲ್ಲರ ಪಾಲನ್ನೂ ಉಂಡು ತೃಪ್ತನಾಗಿ ಕೊನೆಗೆ ತನ್ನ ನಿಜರೂಪವನ್ನು ತೋರಿಸಿ, ತಾನು ಧರ್ಮದೇವತೆಯೆಂದು ಹೇಳಿ, ಅವರೆಲ್ಲರಿಗೂ ದಿವ್ಯವಾದ ಗತಿಯನ್ನು ದಯಪಾಲಿಸಿದನು. ಆಗ ಮುಂಗುಸಿಯೊಂದು ಸಕ್ತುವಿನ

ವಾಸನೆಯಿಂದ ತನ್ನ ಬಿಲವನ್ನು ಬಿಟ್ಟು ಹೊರಬಂದು ಆ ಅತಿಥಿಯು ಭೋಜನಮಾಡಿದ ಸ್ಥಳಕ್ಕೆ ಹೋಗಿ, ಆ ಸಕ್ತುವಿನ ಗಂಧವನ್ನು ಸೇದುತ್ತ ಆ ಸ್ಥಳದಲ್ಲಿ ಮಗ್ನಲಾಗಿ ಬಿದ್ದುಕೊಳ್ಳಲು, ಅಲ್ಲಿ ಸುರಿದಿದ್ದ ನೀರು ಅದರ ಒಂದು ಪಕ್ಕಕ್ಕೆ ತಗಲಲು ಆ ಪಕ್ಕವು ಬಂಗಾರವಾಯಿತು. ಯುಧಿಷ್ಠಿರನು ಮಾಡಿದ ಯಜ್ಞದಲ್ಲಿ ದಿನವೂ ಲಕ್ಷಾಂತರ ಬ್ರಾಹ್ಮಣರ ಭೋಜನವಾಗುವುದನ್ನು ಕಂಡು ತನ್ನ ದೇಹದ ಮತ್ತೊಂದು ಪಕ್ಕವನ್ನು ಬಂಗಾರವನ್ನಾಗಿ ಮಾಡುವ ಆಸೆಯಿಂದ ಅಲ್ಲಿ ನೂರಾರು ಕಡೆ ನೋಡಿತು. ಆದರೂ ಇನ್ನೊಂದು ಪಕ್ಕವು ಬಂಗಾರವಾಗಲಿಲ್ಲ. ದ್ರವ್ಯಸಂಪತ್ತಿಯಿಂದ ಮಾಡುವ ಯಜ್ಞಕ್ಕಿಂತ ಶುದ್ಧ ಮನಸ್ಸೇ ಮೇಲಾದುದು. ಆ ಮುಂಗುಸಿಯು ನಿಜವಾದ ಮುಂಗುಸಿಯಲ್ಲ. ಕ್ರೋಧವೆಂಬ ದುರ್ಗುಣವು ಜಮದಗ್ನಿಯ ಶಾಪದಿಂದ ಮುಂಗುಸಿಯ ರೂಪವನ್ನು ಹೊಂದಿತ್ತು. ಇದು ಯುಧಿಷ್ಠಿರನ ಯಜ್ಞವನ್ನು ನಿಂದಿಸಿ ಮುನಿಯ ಶಾಪದಂತೆ ಪೂರ್ವಸ್ಥಿತಿಯನ್ನೇ ಹೊಂದಿತು (ಮ.ಅಶ್ವ).

ಸಗರ -- ಸೂರ್ಯವಂಶದ ಅಸಿತ ಅಥವಾ ಬಾಹುಕನ ಮಗ. ಬಾಹುಕನು ವಿಷಯ ಲಂಪಟನೂ ದ್ಯೂತಾಸಕ್ತನೂ ಆಗಿದ್ದುದರಿಂದ ಹೈಹಯವಂಶೀಯರು ಈತನಿಂದ ರಾಜ್ಯವನ್ನು ಕಿತ್ತುಕೊಳ್ಳಲು, ಈತನು ಯಾದವಿ ಮತ್ತು ಇನ್ನೊಬ್ಬ ಪತ್ನಿಯೊಡನೆ ಕಾಡಿಗೆ ಓಡಿಹೋದನು. ಆಗ ಗರ್ಭಿಣಿಯಾದ ಯಾದವಿಯು ಸಹಗಮನವಾಗಲು ಸಿದ್ಧಳಾದಳು. ಆಗ ಭಾರ್ಗವ ಮುನಿಯು (ಔರ್ವಮುನಿಯೆಂದು ಹರಿವಂಶದಲ್ಲಿ ಹೇಳಿದೆ) ಆಕೆಯನ್ನು ಸಹಗಮನದಿಂದ ತಪ್ಪಿಸಿ, ತನ್ನ ಆಶ್ರಮಕ್ಕೆ ಕರೆದೊಯ್ದು ರಕ್ಷಿಸುತ್ತಿರುವಾಗ ಅಲ್ಲೇ ಆಕೆ (ಸ+ ಗರ= ವಿಷಸಹಿತ) ಒಬ್ಬ ಬಾಲಕನನ್ನು ಹಡೆಯಲು, ಆತನಿಗೆ ಆ ಮುನಿಯು ಸಗರನೆಂದು ಹೆಸರಿಟ್ಟನು. ಆ ಮುನಿಯು ಈತನಿಗೆ ಶಸ್ತ್ರಶಾಸ್ತ್ರಗಳೆರಡನ್ನೂ ಕಲಿಸಲು, ಈತನು ಪ್ರಾಯ ಸಮರ್ಥನಾದ ಮೇಲೆ ಶತ್ರುಗಳಿಂದ ತನ್ನ ರಾಜ್ಯವನ್ನು ಕಿತ್ತುಕೊಂಡನು. ಈತನಿಗೆ ವೈದರ್ಭಿ ಎಂಬ ಹೆಂಡತಿಯಲ್ಲಿ ಅಸಮಂಜನೆಂಬ ಮಗನೂ ಹುಟ್ಟಿದನು. ಇವನ ಅರವತ್ತುಸಾವಿರ ಮಕ್ಕಳು ತೋಡಿದ ಹೊಂಡವೇ ಈಗಿನ ಸಾಗರ. ನೋ.--ಅಸಮಂಜ, ಭಗೀರಥ. ಈ ಸಗರನು ಯಮನ ಸಭೆಯಲ್ಲಿದ್ದನು. ಉತ್ತರಗೋಗ್ರಹಣದ ಕಾಲದಲ್ಲಿ ಇವನು ಅರ್ಜುನನ ಯುದ್ಧವನ್ನು ನೋಡಲು ಬಂದಿದ್ದನು (ಹರಿ).

ಈತನಿಗೆ ಕಶ್ಯಪನ ಮಗಳಾದ ಸುಮತಿ ಮತ್ತು ವಿದರ್ಭರಾಜನ ಮಗಳಾದ ಕೇಶಿನಿ ಎಂಬ ಇಬ್ಬರು ಹೆಂಡಿರಿದ್ದರು. ಈತನ ತಂದೆ ಬಾಹುವು; ಅಜ್ಜನು ವೃಕ.

ಬಾಹುರಾಯನು ಹೈಹಯ ಮತ್ತು ತಾಲಜಂಘಾದಿಗಳಿಂದ ರಾಜ್ಯಭ್ರಷ್ಟನಾದನು. ಸಗರನು ತನ್ನ ಮಲತಾಯಿಯು ತನ್ನ ತಾಯಿಗೆ ಹಾಕಿದ ಗರ್ಭಸ್ತಂಭ ವಿಷದ ಪರಿಣಾಮವಾಗಿ ಏಳು ವರ್ಷ ತಾಯಿಯ ಉದರದಲ್ಲೇ ಇದ್ದನು. ಬಾಹುರಾಯನು ಔರ್ವಮುನೀಶ್ವರನ ಆಶ್ರಮದಲ್ಲೇ ಕಾಲಧರ್ಮವನ್ನೈದಿದನು. ಮುಂದೆ ಔರ್ವನಿಂದ ಶಿಕ್ಷಿತನಾದ ಸಗರನು ಹೈಹಯರನ್ನು ನಿಶ್ಶೇಷವಾಗಿ ನಾಶಮಾಡಿ ಶಕ, ಯವನ, ಕಾಂಭೋಜ, ಪಾರದ ಮೊದಲಾದವರನ್ನು ಕೊಲ್ಲುವ ಸಮಯದಲ್ಲೇ ಅವರೆಲ್ಲ ವಸಿಷ್ಠಮುನಿಯನ್ನು ಮರೆಹೊಕ್ಕು 'ತ್ರಾಹಿ, ತ್ರಾಹಿ' ಎಂದುದರಿಂದ ಮುನಿಯು ಸಗರನೊಡನೆ 'ವತ್ಸಾ, ನನಗೆ ಶರಣುಬಂದ ಈ ಜೀವನ್ಮೃತರನ್ನು ವಧೆ ಮಾಡತಕ್ಕದ್ದು ಯೋಗ್ಯವಲ್ಲ. ಇವರು ಕ್ಷಾತ್ರಧರ್ಮವನ್ನು ಪರಿತ್ಯಾಗ ಮಾಡಿದವರು ಎನ್ನಲು, ಸಗರನು ಗುರುವಾಕ್ಯವನ್ನು ಅಂಗೀಕರಿಸಿ ಅವರ ಪೂರ್ವವೇಷವನ್ನು ಬಿಡಿಸಿ ವೇಷಾಂತರವನ್ನು ಮಾಡಿಸಿದನು. ಅಂದಿನಿಂದ ಯವನರ ತಲೆ ಬೋಳಾಯಿತು; ಶಕರು ಅರ್ಧ ಬೋಳಾದರು; ಪಾರದರು ಕೆದರಿದ ತಲೆಯವರಾದರು; ಪಪ್ಲವರು ಗಡ್ಡಮೀಸೆಗಳನ್ನು ಬೆಳೆಸತೊಡಗಿದರು. ಇವರೆಲ್ಲ ಅಧ್ಯಯನ, ಅಗ್ನಿಹೋತ್ರ, ಸ್ವಾಹಾ, ಸ್ವಧಾ, ವಷಟ್ಕಾರವರ್ಜಿತರಾಗಿ ಮ್ಲೇಂಛರಾದರು. ಸಗರ ಚಕ್ರವರ್ತಿಯು ಸಪ್ತದ್ವೀಪವತಿಯಾದ ಭೂಮಂಡಲವನ್ನು ಚೆನ್ನಾಗಿ ಪರಿಪಾಲನೆ ಮಾಡಿದನು (ವಿಷ್ಣುಪು.).

ಸಗರನ ಪತ್ನಿಯರಾದ ಸುಮತಿ ಮತ್ತು ಕೇಶಿನಿಯರು ಸಂತಾನಾರ್ಥವಾಗಿ ಔರ್ವಋಷೀಶ್ವರನ ಸೇವೆಮಾಡಿದರು. ಮುನಿಯ ಅನುಗ್ರಹದಿಂದ ಸುಮತಿಯು ೬೦,೦೦೦ ಕುಮಾರರನ್ನು ಪಡೆದಳು. ಕೇಶಿನಿ ಅಸಮಂಜಸನೆಂಬ ಒಬ್ಬ ಮಗನನ್ನು ಪಡೆದಳು. ಅಸಮಂಜಸನು ದುಶ್ಚರಿತನಾದುದರಿಂದ ತಂದೆಯು ಆತನನ್ನು ಬಿಟ್ಟನು. ಮುಂದೆ ಅಸಮಂಜಸನ ಕೃತ್ಯವನ್ನೇ ಅರುವತ್ತುಸಾವಿರ ಮಂದಿ ಬಾಲಕರೂ ಅನುಸರಿಸಲು ಅವರಿಂದ ಯಜ್ಞಾದಿ ಷಟ್ಕರ್ಮಗಳೆಲ್ಲ ನಾಶವಾದುವು. ಆಗ ದೇವತೆಗಳೆಲ್ಲ ಪುರುಷೋತ್ತಮನ ಅಂಶಭೂತನಾದ ಕಪಿಲ ಮಹಾಮುನಿಗೆ ನಮಸ್ಕರಿಸಿ ಪ್ರಾರ್ಥಿಸಲು ಕಪಿಲಮಹರ್ಷಿಯು 'ಸ್ವಲ್ಪ ಕಾಲದಲ್ಲೇ ಅವರೆಲ್ಲ ನಾಶವನ್ನು ಹೊಂದುವರು' ಎಂದನು. ಸ್ವಲ್ಪ ಕಾಲದಲ್ಲೇ ಸಗರ ಚಕ್ರವರ್ತಿಯು ಅಶ್ವಮೇಧಯಾಗವನ್ನು ಕೈಕೊಳ್ಳಲು ಅರವತ್ತುಸಾವಿರಮಂದಿ ಸಾಗರರು ಕುದುರೆಯ ರಕ್ಷಕರಾಗಿ ಸಾಗುತ್ತಿರಲು ಆ ಅಶ್ವವನ್ನು ಇಂದ್ರನು ಅಪಹರಿಸಿ ಬಿಲವನ್ನು ಪ್ರವೇಶಿಸಿದನು. ಸಾಗರರು ಭೂಮಿಯಲ್ಲೆಲ್ಲೂ ಅಶ್ವವನ್ನು ಕಾಣದೆ ಪಾತಾಳವನ್ನು ಶೋಧಿಸಬೇಕೆಂದು

ಪ್ರತಿಯೊಬ್ಬರೂ ಯೋಜನ ಪ್ರಮಾಣ ಭೂಮಿಯನ್ನಗೆದು, ಪಾತಾಳ ಪ್ರವೇಶಮಾಡಿ ಅಲ್ಲಿ ಶರತ್ಕಾಲದ ಸೂರ್ಯನಂತೆ ಪ್ರಜ್ವಲಿಸುತ್ತಿದ್ದ ಕಪಿಲಋಷಿಯನ್ನು ಕಂಡು, ಈತನೇ ಕುದುರೆ ಕಳ್ಳನೆಂದು ಹೊಡೆಯಲು ಆಯುಧಗಳನ್ನೆತ್ತಲು, ಕಪಿಲಮಹರ್ಷಿಯು ಅವರನ್ನೆಲ್ಲ ತೆರೆದ ಕಣ್ಣಿನಿಂದ ನೋಡಲು, ಸಾಗರರ ದೇಹದಿಂದಲೇ ಅಗ್ನಿಯು ಉತ್ಪತ್ತಿಯಾಗಿ ಎಲ್ಲರೂ ದಗ್ಧರಾಗಿ ಹೋದರು (ವಿಷ್ಣುಪು). ನೋ.--ಅಂಶುಮಂತ. ಸಗರರ ರಾಜಧಾನಿ. ಅಯೋಧ್ಯೆ. ಈತನ ಗುರು ಔರ್ವಮಹರ್ಷಿ.

ಸಂಕರ್ಷಣ --ಬಲರಾಮನ ಒಂದು ಹೆಸರು. ದೇವಕಿಯ ಗರ್ಭದಿಂದ ರೋಹಿಣಿಯ ಗರ್ಭಕ್ಕೆ ಸಂಕ್ರಮಿಸಿದನಾದುದರಿಂದ ಈತನಿಗೆ ಸಂಕರ್ಷಣನೆಂದು ಹೆಸರು. ನೋ--ಬಲರಾಮ. ದೇವಕಿಯ ಏಳನೇ ಗರ್ಭವನ್ನು ಏಳನೇ ತಿಂಗಳಲ್ಲೇ ಯೋಗಮಾಯೆಯು ಸಂಕರ್ಷಣಮಾಡಿ ರೋಹಿಣಿಯ ಗರ್ಭಾಗಾರಕ್ಕೆ ಸ್ಥಳಾಂತರಿಸಿದಳು. ಅದೇ ವೇಳೆಯಲ್ಲೇ ರೋಹಿಣಿಯು ರಜಸ್ವಲೆಯಾಗಿ ಗರ್ಭಪಾತವಾದುದರಿಂದ ಮಧ್ಯರಾತ್ರಿಯಲ್ಲಿ ಎಚ್ಚರತಪ್ಪಿ ಮಲಗಿದ್ದಳು. ಅವಳಿಗೆ ಕನಸಿನಲ್ಲಿ ತನ್ನ ಗರ್ಭ ಬಿದ್ದು, ಅದರ ಸ್ಥಾನದಲ್ಲಿ ಮತ್ತೊಂದು ಗರ್ಭವನ್ನು ಉದರದಲ್ಲಿ ಸ್ಥಾಪಿಸಿದಂತಾಯಿತು. ಅವಳು ಎಚ್ಚರವಾಗಿ ನೋಡುವಾಗ ಆ ಕತ್ತಲಲ್ಲೇ ಯೋಗಮಾಯೆಯು--ರೋಹಿಣೀ, ಮೊದಲಿನ ನಿನ್ನ ಗರ್ಭಪಾತವಾದರೂ ಅದರ ಸ್ಥಾನದಲ್ಲಿ ಇನ್ನೊಂದನ್ನು ಕರ್ಷಣಮಾಡಿ ತಂದಿಟ್ಟಿದ್ದೇನೆ. ಕಲ್ಯಾಣೀ, ಮುಂದೆ ನಿನಗೆ ಸಂಕರ್ಷಣನೆಂಬ ಕುಮಾರನು ಜನಿಸುವನು, ಎಂದು ಆಶ್ವಾಸನೆಯಿತ್ತಳು (ಹರಿ.,ಮ.ಸ.).

ಸಂಗವ (ಸಮಂಗ) -- ಒಬ್ಬ ಋಷಿ (ಮ.ಶಾಂ).

ಸಂಗ್ರಾಮಜಿತ್ -- ಯುಧಿಷ್ಠಿರನ ಸಭೆಯ ಒಬ್ಬ ರಾಜ (ಮ.ಸ.).

ಸಂಜಯ --೧. ವಿದುಲೆಯ ಮಗ. ಹಸ್ತಿನಾವತಿಗೆ ಸಂಧಾನಕ್ಕೆ ಹೋದ ಶ್ರೀಕೃಷ್ಣನು ಕುಂತಿಯನ್ನು ಕಂಡಾಗ ಆಕೆಯು ಕೃಷ್ಣನಿಗೆ ಈ ಕಥೆಯನ್ನು ಹೇಳಿದಳು:

ಕ್ಷತ್ರಧರ್ಮವನ್ನು ಮೆಚ್ಚಿದವಳೂ, ರಾಜನೀತಿಯನ್ನು ಬಲ್ಲವಳೂ ಆದ ವಿದುಲೆಯು ತನ್ನ ಮಗನಾದ ಸಂಜಯನಿಗೆ ರಾಜನೀತಿಯನ್ನು ತಿಳಿಸಿದಳು. ಸಂಜಯನು ಸಿಂಧುರಾಜನಿಗೆ ಸೋತು ದೀನನಾಗಿ ಮಲಗಿದ್ದನು. ನೋ--ವಿದುಲೆ (ಮ.ಉ). ೨. ಜಯದ್ರಥ --ನೋ -- ಜಯದ್ರಥ (ಮ.ವ.,ಉ) ೨. ಗವಲ್ಗಣನೆಂಬ ಧೃತರಾಷ್ಟ್ರನ ಮಂತ್ರಿ ಮತ್ತು ಸಾರಥಿಯಮಗ. ಪಾಂಡವರು ಉಪಪ್ಲವ್ಯ ನಗರದಲ್ಲಿದ್ದಾಗ ಧೃತರಾಷ್ಟ್ರನು ಈತನನ್ನು ಸಂಧಾನಕ್ಕಾಗಿ ಪಾಂಡವರಲ್ಲಿಗೆ

ಕಳುಹಿಸಿದ್ದನು. ಅವನು ಪಾಂಡವರ ಅಭಿಪ್ರಾಯವನ್ನು ತಿಳಿದು ಹಸ್ತಿನಾವತಿಗೆ ಬಂದು ಧೃತರಾಷ್ಟ್ರನೊಡನೆ -- 'ನಾನು ಅತಿ ತ್ವರೆಯಿಂದ ಪ್ರಯಾಣ ಮಾಡಿದುದರಿಂದ ತುಂಬ ಬಳಲಿದ್ದೇನೆ. ನಾಳೆ ಒಡ್ಡೋಲಗಕ್ಕೆ ಬಂದು ಮಿತ್ರಾಮಾತ್ಯಸಮೇತನಾದ ಯುಧಿಷ್ಠಿರನು ಹೇಳಿದ ವಾಕ್ಯವನ್ನು ಹೇಳುತ್ತೇನೆ ಎಂದು ಧೃತರಾಷ್ಟ್ರನ ಅಪ್ಪಣೆ ಪಡೆದು ತನ್ನ ಮನೆಗೆ ಹೋದನು. ಆ ರಾತ್ರಿ ಧೃತರಾಷ್ಟ್ರನಿಗೆ ನಿದ್ರೆ ಬಾರದೆ ವಿದುರನನ್ನು ಕರೆಸಿ ಆತನಿಂದ ನೀತಿಯನ್ನು ಕೇಳಿದನು. ಆಮೇಲೆ ವಿದುರನ ಸೂಚನೆಯಂತೆ ಸನತ್ಸುಜಾತನು ಧೃತರಾಷ್ಟ್ರನಿಗೆ ತತ್ತ್ವೋಪದೇಶವನ್ನು ಮಾಡಿದನು. ಮರುದಿನ ಸಭೆಗೆ ಬಂದು ಸಂಜಯನು 'ಪಾಂಡವರೊಡನೆ ಕೌರವರಿಗೆ ದ್ವೇಷ ಸಲ್ಲದು' ಎಂದು ಹೇಳಿದನು. ಈತನು ಧೃತರಾಷ್ಟ್ರನಿಗೆ ಯುದ್ಧರಂಗದಲ್ಲಿ ನಡೆದ ವಿಷಯಗಳನ್ನೆಲ್ಲ ವ್ಯಾಸಮುನಿಯ ಅನುಗ್ರಹದಿಂದ ಕಥೆಯಾಗಿ ಹೇಳಿದನು. ಯುದ್ಧಾನಂತರ ಸಂಜಯನಿಗೆ ಈ ಶಕ್ತಿಯು ಲೋಪವಾಯಿತು. ಭಾರತಯುದ್ಧದ ೧೮ನೇ ದಿನ ಈತನು ಕೌರವಪಕ್ಷದಲ್ಲಿ ಯುದ್ಧ ಮಾಡುತ್ತಿದ್ದಾಗ ಸಾತ್ಯಕಿಯು ಈತನನ್ನು ಕೊಲ್ಲುವ ಸನ್ನಾಹದಲ್ಲಿರಲು ವ್ಯಾಸಮುನಿ ಬಿಡಿಸಿದನು. ಧೃತರಾಷ್ಟ್ರ, ಗಾಂಧಾರಿ, ಕುಂತಿಯರು ಕಾಳ್ಗಿಚ್ಚಿಗೆ ತುತ್ತಾದ ಅನಂತರ ಇವನು ಹಿಮವತ್ಪರ್ವತದ ಕಡೆಗೆ ತಪಸ್ಸಿಗೆ ಹೋದನು (ಮ.ಆ.,ಸ.,ಉ.,ಭೀ.,ದ್ರೋ.ಶ.,ಸೌ.,ಆಶ್ರಮ.). ೪.ಧೃತರಾಷ್ಟ್ರನ ಮಗನೊಬ್ಬ (ಮ.ಶ).

ಸಂಜೀವನಮಣಿ -- ಗರುಡನಿಂದ ಸಂಹೃತರಾದ ನಾಗರನ್ನು ಬದುಕಿಸಲು ಶೇಷನು ಶಿವನಿಂದ ಈ ರತ್ನವನ್ನು ಪಡೆದನು. ಇದರಿಂದ ಉಲೂಪಿಯು ಅರ್ಜುನನನ್ನು ಬದುಕಿಸಿದಳು (ಮ.ಅಶ್ವ).

ಸಂಜೀವಿನೀ ಲತೆ -- ಇದು ಮುದ್ಗಲಮುನಿಯ ಆಶ್ರಮದಲ್ಲಿದ್ದ ಒಂದು ಲತೆ. ಭರತನಿಗೆ ಮೂರ್ಛೆಯುಂಟಾದಾಗ ಶ್ರೀರಾಮನು ಈ ಲತೆಯನ್ನು ಮುದ್ಗಲರ ಆಶ್ರಮದಿಂದ ತರಿಸಿ ಅವನನ್ನು ಬದುಕಿಸಿದನು. ಅವನು ಹೇಮೆಯ ಸ್ವಯಂವರಕ್ಕೆ ಬಂದು ಚಿತ್ರರಥನೊಡನೆ ಹೋರಾಡಿ ಮೂರ್ಛಿತನಾದನು. ರಾಮನ ಅಪ್ಪಣೆಯಂತೆ ಮಾರುತಿಯು ಮುದ್ಗಲರ ಆಶ್ರಮಕ್ಕೆ ಹಾರಿ ಈ ಔಷಧವನ್ನು ತಂದು ಲವನನ್ನು ಕಾಪಾಡಿದನು. ಇದು ದ್ರೋಣಗಿರಿಯಲ್ಲಿರತಕ್ಕ ಲತೆ. ಹಿಂದೆ ಗರುಡನು ತಾಯಿಗಾಗಿ ಅಮೃತವನ್ನು ತರುವಾಗ ಒಂದು ಅಮೃತಬಿಂದು ಈ ದ್ರೋಣಲತೆಯಲ್ಲಿ ಬಿತ್ತು. ಅದು ಮುದ್ಗಲರ ತಪಃಶಕ್ತಿಯಿಂದ ಲೋಕೋಪಕಾರಕ್ಕಾಗಿ ಲತೆಯಾಯಿತು (ಅನಂ.ರಾ.).

ಸತೀ -- ದಕ್ಷಬ್ರಹ್ಮನ ಮಗಳು. ನೋ -- ದಾಕ್ಷಾಯಣಿ. ಈಕೆ ಶಿವನ ಪತ್ನಿ (ಶಿವಪು).

ಸತೀಕುಂಡ -- ಹರಿದ್ವಾರದಿಂದ ೨ ಮೈಲು ದೂರದಲ್ಲಿದೆ. ಇಲ್ಲಿ. ನೀಲಾ, ಧಾರಾ ಮತ್ತು ಗಂಗಾ ನದಿಗಳ ಸಂಗಮವಿದೆ. ದಾಕ್ಷಾಯಣಿಯು (ಸತೀ) ತಂದೆಯಿಂದ ತಿರಸ್ಕೃತಳಾದಮೇಲೆ ಕ್ರೋಧಸಂತಪ್ತಳಾಗಿ ಅಗ್ನಿಗೆ ಆಹುತಿಯಾದಳು. ಇಲ್ಲೇ ಸತೀಕುಂಡ ಇದೆ.

ಸತ್ಯ -- ೧. ಶ್ರೀಮನ್ನಾರಾಯಣನ ಒಂದು ಹೆಸರು (ಮ.ಅ.). ೨. ಕಲಿಂಗರಾಜನ ಸೇನಾಪತಿ. ಇವನು ಭೀಮನಿಂದ ಹತನಾದನು (ಮ.ಭೀ). ೩. ಉಂಛವೃತ್ತಿಯ ಬ್ರಾಹ್ಮಣನೊಬ್ಬ; ಈತನ ಪತ್ನಿ ಪುಷ್ಕರಮಾಲಿನಿ (ಮ.ಶಾಂ).

ಸತ್ಯಕ -- ಚಂದ್ರವಂಶದ ಯದುಕುಲೋತ್ಪನ್ನನಾದ ಶಿನಿಯ ಮಗ. ಈತನ ಮಗನೇ ಸಾತ್ಯಕಿ ಅಥವಾ ಯುಯುಧಾನ. ನೋ.--ಯುಯುಧಾನ (ಮ.ಆ.,ಸ.).

ಸತ್ಯಕರ್ಮ -- ೧, ತ್ರಿಗರ್ತದೇಶದ ರಾಜಪುತ್ರ; ಅರ್ಜುನನಿಂದ ಹತನಾದನು (ಮ.ಶ.) ೨. ಚಂದ್ರವಂಶದ ಬೃಹನ್ಮನ ರಾಜನ ಎರಡನೇ ಹೆಂಡತಿ ಸತ್ಯೆಗೆ ವಿಜಯನೆಂಬ ಸತ್ಪುತ್ರನು ಹುಟ್ಟಿದನು. ಮುಂದೆ ಈ ವಂಶದಲ್ಲಿ ಧೃತಿ, ಧೃತವ್ರತ, ಸತ್ಯಕರ್ಮ ಮೊದಲಾದವರು ರಾಜರಾದರು. ಇವರಲ್ಲಿ ಸತ್ಯಕರ್ಮನಿಗೆ ಬ್ರಾಹ್ಮಣಸ್ತ್ರೀಯಲ್ಲಿ ಸೂತರ ಜಾತಿಯ ಅಧಿರಥನು ಹುಟ್ಟಿದನು. ಮುಂದೆ ಈ ವಂಶದಲ್ಲಿ ಧೃತಿ, ಧೃತವ್ರತ, ಸತ್ಯಕರ್ಮ ಮೊದಲಾದವರು ರಾಜರಾದರು. ಇವರಲ್ಲಿ ಸತ್ಯಕರ್ಮನಿಗೆ ಬ್ರಾಹ್ಮಣಸ್ತ್ರೀಯಲ್ಲಿ ಸೂತರ ಜಾತಿಯ ಅಧಿರಥನು ಹುಟ್ಟಿದನು. ಈ ಅಧಿರಥನೇ ಕರ್ಣನನ್ನು ಸಾಕಿದನು (ಹರಿ).

ಸತ್ಯಕೇತು -- ೧. ಕಾಶ್ಮೀರದೇಶದ ರಾಜನೊಬ್ಬ. ಇವನಿಗೆ ಪ್ರತಾಪಭಾನು ಮತ್ತು ಅರಿಮರ್ದನರೆಂಬ ಮಕ್ಕಳಿದ್ದರು. ಪ್ರತಾಪಭಾನು ಅರಸನಾದಮೇಲೆ ಅವನಿಂದ ಪರಾಜಿತನಾದ ರಾಜನೊಬ್ಬ ಮುನಿಯಾಗಿದ್ದ. ಕಾಲಕೇತು ಎಂಬ ರಾಕ್ಷಸನು ಈ ರಾಜನಿಗೆ ಸಹಾಯಕನಾಗಿ ಪ್ರತಾಪಭಾನುವಿನ ನಾಶಕ್ಕಾಗಿ ಸಮಯ ಕಾಯುತ್ತಿದ್ದನು. ಒಮ್ಮೆ ಪ್ರತಾಪಭಾನು ಬೇಟೆಯಾಡುತ್ತ, ಆ ಕಪಟಮುನಿಯ ಆಶ್ರಮಕ್ಕೆ ಹೋಗಿ, ಅವನೇ ಮೋಸಕ್ಕೆ ವಶನಾಗಿ ಬ್ರಾಹ್ಮಣರಿಂದ ರಾಕ್ಷಸನಾಗುವಂತೆ ಶಾಪಹೊಂದಿದನು. ಆ ಶಾಪದ ಮೇರೆಗೆ ಪ್ರತಾಪಭಾನುವು ರಾವಣನಾಗಿಯೂ, ಅರಿಮರ್ದನನು ಕುಂಭಕರ್ಣನಾಗಿಯೂ, ಪುರೋಹಿತನಾದ ಧರ್ಮರುಚಿಯು ವಿಭೀಷಣನಾಗಿಯೂ ಹುಟ್ಟಿದರು. ನೋ.-- ಪ್ರತಾಪಭಾನು (ತುಲಸೀರಾ). ೨. ಮಹಾಬ್ರಾಹ್ಮಣನೊಬ್ಬ. ನೋ.ಸತ್ಯಜಿತ್.

ಸತ್ಯಜಿತ್--೧. ದ್ರುಪದರಾಜನ ಮಗ. ಇವನು ಅತಿರಥ. ಇವನು ದ್ರೋಣಾಚಾರ್ಯನಿಂದ ಹತನಾದನು (ಮ.ಆ.,ಉ.,ದ್ರೋ.). ೨.ಬ್ರಾಹ್ಮಣನೊಬ್ಬ. ಇವನು ಸತ್ಯಕೇತು ಎಂಬ ಬ್ರಾಹ್ಮಣನಲ್ಲಿ ಊಟ ಮಾಡದೇ ಹೋದುದರಿಂದ ಇವನನ್ನು ಕಂಡು ಗಂಗಾನದಿಯು ಅದೃಶ್ಯಳಾದಳು. ಕೊನೆಗೆ ಇವನು ಸತ್ಯಜಿತು ಎಂಬ ಮಹಾಬ್ರಾಹ್ಮಣನಲ್ಲಿ ಊಟ ಮಾಡಬೇಕಾಯಿತು (ಕಾರ್ತಿ.ಮ.).

ಸತ್ಯಂತಪ -- ಋಷಿಯೊಬ್ಬ. ಒಂದು ದಿನ ಕೌರವ ಮತ್ತು ಕರ್ಣರು ಬೇಟೆಯಾಡಲು ಕಾಡಿಗೆ ಹೋದಾಗ, ಸ್ವಲ್ಪ ವಿಶ್ರಾಂತಿ ಪಡೆಯಲು ಈ ಋಷಿಗಳ ಆಶ್ರಮಕ್ಕೆ ಹೋದರು. ಅವರಿಬ್ಬರನ್ನೂ ಸಮಾನವಾಗಿ ಗೌರವಿಸಿದರು. ಇದರಿಂದ ಕೌರವನಿಗೆ ಬೇಸರವಾಗಿ ಕರ್ಣನು ಆಚೆ ಹೋದಾಗ ಮುನಿಯೊಡನೆ -- ಇಬ್ಬರನ್ನೂ ಸಮಾನವಾಗಿ ಗೌರವಿಸಿದ ಕಾರಣವನ್ನು ಕೇಳಿದಾಗ, ಅವರು ದುರ್ಯೋಧನನಿಗೆ ಕರ್ಣನ ಜನ್ಮಕಥೆಯನ್ನು ಹೇಳಿ, ಅವನು ನಿನಗೆ ಅಣ್ಣನೆಂದನು. ಹೀಗೆ ಕೌರವನಿಗೆ ಕರ್ಣನ ಜನ್ಮವೃತ್ತಾಂತ ತಿಳಿಯಿತು (ಪಂ.ಭಾ).

ಸತ್ಯದೇವ -- ೧. ಕಳಿಂಗರಾಜನ ಸೇನಾಪತಿ. ಇವನು ಭೀಮನಿಂದ ಹತನಾದನು (ಮ.ಭೀ). ೨. ತ್ರಿಗರ್ತದೇಶದ ರಾಜ. ಇವನು ಅರ್ಜುನನಿಂದ ಹತನಾದ (ಮ.ಕ).

ಸತ್ಯಧೃತಿ--೧. ದ್ರೌಪದಿಯ ಸ್ವಯಂವರಕ್ಕೆ ಬಂದ ಕ್ಷತ್ರಿಯ. ೨.ಪಾಂಡವಪಕ್ಷೀಯನಾದ ಒಬ್ಬ ರಾಜ. ಇವನು ಸುಚಿತ್ತನ ಪುತ್ರನಾದುದರಿಂದ ಇವನಿಗೆ ಸೌಚಿತ್ತಿ ಎಂಬ ಹೆಸರಿದೆ. ಇವನು ಮಹಾರಥ (ಮ.ಆ.,ಉ.,ಕ.).

ಸತ್ಯಭಾಮಾ -- ಶ್ರೀಕೃಷ್ಣನ ಒಬ್ಬಳು ರಾಣಿ. ಈಕೆ ಯದುವಂಶದ ಸತ್ರಾಜಿತನ ಮಗಳು. ಈಕೆಗೆ ಭಾನು, ಸುಭಾನು, ಸ್ವರ್ಭಾನು, ಪ್ರಭಾನು, ಭಾನುಮಂತ, ಚಂದ್ರಭಾನು, ಬೃಹದ್ಭಾನು, ಅತಿಭಾನು, ಶ್ರೀಭಾನು, ಪ್ರತಿಭಾನು ಎಂಬ ಗಂಡುಮಕ್ಕಳೂ ಒಬ್ಬಳು ಮಗಳೂ ಇದ್ದರು. ಒಮ್ಮೆ ರುಕ್ಮಿಣಿಯು ಉಪವಾಸವ್ರತವನ್ನು ಕೈಗೊಂಡಿದ್ದಾಗ ಕೃಷ್ಣನು ಆಕೆಯ ಬಳಿಯಲ್ಲೇ ಇದ್ದು ಆಕೆಯೊಡನೆ ಅನೇಕ ದಾನಧರ್ಮಗಳನ್ನು ಮಾಡಿದನು. ಆಗ ನಾರದನು ಬಂದು ಶ್ರೀಕೃಷ್ಣನಿಗೆ ಒಂದು ಪಾರಿಜಾತದ ಹೂವನ್ನು ಕೊಡಲು ಶ್ರೀಕೃಷ್ಣನು ಅದನ್ನು ಪಕ್ಕದಲ್ಲಿದ್ದ ರುಕ್ಮಿಣಿಗೆ ಕೊಟ್ಟನು. ಇದರಿಂದ ಸಿಟ್ಟುಗೊಂಡ ಸತ್ಯಭಾಮೆಗೆ ಶ್ರೀಕೃಷ್ಣನು ಸ್ವರ್ಗದಿಂದ ಪಾರಿಜಾತ ವೃಕ್ಷವನ್ನೇ ತಂದುಕೊಟ್ಟನು (ಹರಿ). ಶ್ರೀಕೃಷ್ಣನು ನರಕಾಸುರನನ್ನು ವಧಿಸಿ, ಆತನಿಂದ ಅದಿತಿಯ ಕುಂಡಲಗಳನ್ನು

ಪಡೆದು ಅವನು ಆಕೆಗೆ ಕೊಡುವುದಕ್ಕಾಗಿ ಸ್ವರ್ಗಕ್ಕೆ ಹೋದಾಗ ಆತನು ಸತ್ಯಭಾಮೆಯನ್ನು ಕರೆದುಕೊಂಡು ಹೋಗಿದ್ದನು. ನೋ--ಗುಣವತಿ, ಅದಿತಿ.

ಮಾಯಾನಗರಿಯಲ್ಲಿ ದೇವಶರ್ಮನೆಂಬ ಬ್ರಾಹ್ಮಣನಿಗೆ ಗುಣವತಿ ಎಂಬ ಮಗಳು ಇದ್ದಳು. ಇವಳನ್ನು ಆ ಬ್ರಾಹ್ಮಣನು ಚಂದ್ರನೆಂಬ ತನ್ನ ಶಿಷ್ಯನಿಗೆ ಕೊಟ್ಟು ಮದುವೆ ಮಾಡಿದನು. ಒಂದು ದಿನ ಈ ಮಾವ -- ಅಳಿಯರಿಬ್ಬರೂ ಸಮಿತ್ಕುಶಗಳನ್ನು ತರುವುದಕ್ಕಾಗಿ ಹಿಮವತ್ಪರ್ವತದ ಸಮೀಪದ ಅಡವಿಗೆ ಹೋದರು. ಅಲ್ಲಿದ್ದ ರಾಕ್ಷಸಿಯೊಬ್ಬಳು ಅವರಿಬ್ಬರನ್ನೂ ಕೊಂದಳು. ಅವರಿಬ್ಬರು ಜೀವನವೆಲ್ಲ ನಡೆಸುತ್ತಿದ್ದ ಸೂರ್ಯೋಪಾಸನೆಯ ಫಲವಾಗಿ ವೈಕುಂಠವನ್ನು ಸೇರಿದರು. ತಂದೆ ಮತ್ತು ಪತಿಯು ಮೃತರಾದ ವಾರ್ತೆಯನ್ನು ಕೇಳಿ ಗುಣವತಿಯು ದುಃಖಿಸುತ್ತ ಅವರ ಔರ್ಧ್ವದೈಹಿಕ ಕ್ರಿಯೆಗಳನ್ನು ಮುಗಿಸಿ, ತಾನು ಭಿಕ್ಷಾವೃತ್ತಿಯಿಂದ ಜೀವನ ನಡೆಸತೊಡಗಿದಳು. ಅವಳು ತನ್ನ ಜೀವಮಾನದಲ್ಲಿ ನಡೆಸಿದ ಅನೇಕ ವ್ರತಗಳಲ್ಲಿ ಏಕಾದಶಿ, ಕಾರ್ತೀಕ -- ಮಾಘ -- ಚೈತ್ರಮಾಸಗಳಲ್ಲಿ ತೀರ್ಥಸ್ನಾನ, ವಿಷ್ಣುಪೂಜೆ-- ಇವು ಮುಖ್ಯವಾಗಿದ್ದವು. ಅವಳು ಅನೇಕ ದಿನಗಳವರೆಗೆ ರಾಮತೀರ್ಥದಲ್ಲಿ ಸ್ನಾನಮಾಡಿ, ಪೂಜಾದ್ರವ್ಯಗಳನ್ನು ತೆಗೆದುಕೊಂಡು ಶ್ರೀರಾಮನ ಸಂದರ್ಶನಕ್ಕಾಗಿ ಬಂದಳು. ಆಕೆ ಸೀತಾಲಕ್ಷ್ಮಣರಿಂದ ಕೂಡಿದ ಶ್ರೀರಾಮನನ್ನು ಕಂಡು ಪರಮಾನಂದದಿಂದ ಸ್ತುತಿಸಿದಳು. ಶ್ರೀರಾಮನು ಆಕೆಯ ಸ್ತೋತ್ರಕ್ಕೆ ಮೆಚ್ಚಿ, ಆಕೆಯ ಮನಸ್ಸಿನ ಕೋರಿಕೆ ಯಾವುದೆಂದು ಕೇಳಿದನು. ಗುಣವತಿಯು ಕಣ್ಣುಗಳಲ್ಲಿ ನೀರು ತುಂಬಿಕೊಂಡು -- 'ಮಹಾಪ್ರಭು, ನಿನ್ನ ಸಾವಿರಾರು ಜನ ದಾಸಿಯರೊಡನೆ ಈ ಅನಾಥಳನ್ನೂ ಸೇರಿಸಿಕೊಂಡು 'ಉದ್ಧಾರಮಾಡು' ಎನ್ನಲು ಶ್ರೀರಾಮನು 'ಗುಣವತಿಯೇ, ನೀನು ಬ್ರಾಹ್ಮಣಪುತ್ರಿಯಾಗಿರುವೆ. ಇಂತಹ ನೀನು ಈ ಜನ್ಮದಲ್ಲೆಂದೂ ದಾಸಿಯಾಗಲಾರೆ. ಮುಂದಿನ ಜನ್ಮದಲ್ಲಿ ದೇವಶರ್ಮನು ಸತ್ರಾಜಿತನಾಗಿಯೂ, ನೀನು ಆತನ ಮಗಳಾದ ಸತ್ಯಾಭಾಮೆಯಾಗಿಯೂ ಹುಟ್ಟಿ ನನ್ನ ಮುಖ್ಯ ಪತ್ನಿಯಾಗುವೆ' ಎಂದನು. ಮುಂದೆ ಗುಣವತಿಯು ಹರಿದ್ವಾರದಲ್ಲಿದ್ದು, ಜ್ವರಪೀಡಿತಳಾಗಿ ದೇಹತ್ಯಾಗಮಾಡಿ, ಸತ್ಯಭಾಮೆಯಾಗಿ ಹುಟ್ಟಿದಳು (ಆನಂ.ರಾ.).

ಸತ್ಯರಥ -- ತ್ರಿಗರ್ತದೇಶದ ರಾಜಕುಮಾರ; ಸಂಶಪ್ತಕರಲ್ಲೊಬ್ಬ. ನೋ--ಸಂಶಪ್ತಕ (ಮ.ಆ.,ದ್ರೋ.ಕ.).

ಸತ್ಯವತಿ -೧. ಗಾಧಿರಾಜನ ಮಗಳು. ಋಷೀಕ ಋಷಿಯ ಪತ್ನಿ. ಈಕೆ ಜಮದಗ್ನಿಯ ತಾಯಿ; ವಿಶ್ವಾಮಿತ್ರನ ಸೋದರಿ. ಋಚೀಕ ಮುನಿಯು ತನ್ನ ಅತ್ತೆಗೂ (ಹೆಂಡತಿಯ ತಾಯಿ), ಹೆಂಡತಿಗೂ ಸಂತಾನವಾಗುವುದಕ್ಕಾಗಿ

ಮಂತ್ರಶಕ್ತಿಯಿಂದ ಎರಡು ಚರುಗಳನ್ನು ಬೇರೆ ಬೇರೆ ಸಿದ್ಧಮಾಡಿದನು. ಹೆಂಡತಿಯಾದ ಸತ್ಯವತಿಯಲ್ಲಿ ತಪಸ್ವೀ ಪುತ್ರನು ಹುಟ್ಟುವಂತೆಯೂ, ಗಾಧಿಯ ಪತ್ನಿಯಲ್ಲಿ ಜಗಜ್ಜೇತನೂ ಪರಾಕ್ರಮಿಯೂ ಆದ ಮಗನು ಹುಟ್ಟುವಂತೆಯೂ ಆ ಚರುವಿನಲ್ಲಿ ಶಕ್ತಿ ಇಟ್ಟಿದ್ದನು. ಒಮ್ಮೆ ಗಾಧಿಯು ಮಗಳನ್ನು ನೋಡಲು ಋಚೀಕನ ಆಶ್ರಮಕ್ಕೆ ಬಂದಾಗ ಗಾಧಿಯ ಪತ್ನಿಯು ಮಗಳ ಚರುವನ್ನೂ, ಸತ್ಯವತಿ ತನ್ನ ತಾಯಿಯ ಚರುವನ್ನೂ ತಿಂದರು. ಮುಂದೆ ಇಬ್ಬರೂ ಗರ್ಭಿಣಿಯಾದರು. ಋಚೀಕನು ಗರ್ಭಿಣಿಯಾದ ಪತ್ನಿಯ ಮುಖವನ್ನು ನೋಡಿ 'ನೀನು ನಿನ್ನ ತಾಯಿಗಿಟ್ಟಿರುವ ಚರುವನ್ನು ತಿಂದಿರುವೆ. ಅದರಿಂದ ಕ್ಷತ್ರಿಯಾಂತಕನಾದ ಮಗುವನ್ನು ಹೆರುವೆ. ನಿನ್ನ ತಾಯಿಗೆ ಬ್ರಹ್ಮಜ್ಞಾನಿ ಮತ್ತು ಬ್ರಹ್ಮರ್ಷಿಯಾದ ಮಗನು ಹುಟ್ಟುವನು' ಎಂದನು. ಮುಂದೆ ಸತ್ಯವತಿಯ ಪ್ರಾರ್ಥನೆಯಂತೆ ಆಕೆಗೆ ಬ್ರಹ್ಮರ್ಷಿಯಾದ ಜಮದಗ್ನಿಯು ಹುಟ್ಟಿದನು (ಹರಿ., ಮ.ವ., ಶಾಂ., ಅನು., ರಾಮಾ.ಬಾಲ., ಭಾಗ.,). ನೋ -- ಋಚೀಕ. ೨. ಸೂರ್ಯವಂಶದ ತ್ರಿಶಂಕುವಿನ ಪತ್ನಿ; ಈಕೆ ಕೇಕಯ ರಾಜಪುತ್ರಿ, ಈಕೆಯ ಮಗನೇ ಹರಿಶ್ಚಂದ್ರ (ಮ.ಸ) ೩. ಅಗಸ್ತ್ಯಮುನಿಪತ್ನಿಯಾದ ಲೋಪಾಮುದ್ರೆಯ ಇನ್ನೊಂದು ಹೆಸರು. ಇವಳು ವಿದರ್ಭರಾಜನ ಮಗಳು. ಈಕೆಯನ್ನು ಯಾವ ರಾಜಪುತ್ರನೂ ವರಿಸದಿದ್ದಾಗ ಲೋಪಾಮುದ್ರೆಯೇ ಅಗಸ್ತ್ಯನನ್ನು ಮೆಚ್ಚಿ ವರಿಸಿದಳು (ಮ.ವ) ೪. ಉಪರಿಚರವಸುವಿನ ಮಗಳು. ಈತನ ವೀರ್ಯವನ್ನು ನುಂಗಿದ ಮೀನಿನ ಹೊಟ್ಟೆಯಲ್ಲಿ ಈಕೆಯು ಹುಟ್ಟಿದಳು. ಈಕೆಗೆ ಮತ್ಸ್ಯಗಂಧಿ, ಗಂಧವತಿ, ಯೋಜನಗಂಧಿ, ಕಾಳಿ ಎಂಬ ಹೆಸರೂ ಇತ್ತು. ಮೀನಿನ ವಾಸನೆಯುಳ್ಳ ಈಕೆ ಪರಾಶರರ ಅನುಗ್ರಹದಿಂದ ಯೋಜನಗಂಧಿ, ಗಂಧವತಿ ಎನ್ನಿಸಿದ್ದಳು. ಪರಾಶರ ಮುನಿಯಿಂದ ಈಕೆಗೆ ವೇದವ್ಯಾಸಮುನಿಯು ಯಮುನೆಯ ನಡುಗಡ್ಡೆಯಲ್ಲಿ ಜನಿಸಿದನು. ಪರಾಶರನು ಈಕೆಗೆ ಕನ್ಯಾಧರ್ಮವು ಲೋಪವಾಗದಂತೆ ವರವಿತ್ತನು. ಪೂರ್ವಜನ್ಮದಲ್ಲಿ ಈಕೆ ಬರ್ಹಿಷದರೆಂಬ ಪಿತೃದೇವತೆಗಳ ಮಗಳಾಗಿದ್ದಳು. ಆಗ ಈಕೆಗೆ ಅಚ್ಛೋದೆ ಎಂಬ ಹೆಸರಿತ್ತು. ಇವಳು ಶಾಪದಿಂದ ಮನುಷ್ಯಲೋಕದಲ್ಲಿ ಜನ್ಮವೆತ್ತಿದಳು. ಭೀಷ್ಮನು ಈಕೆಯನ್ನು ತಂದು ತನ್ನ ತಂದೆ ಶಂತನುವಿಗೆ ವಿವಾಹ ಮಾಡಿಸಿದನು. ನೋ. -- ಶಂತನು, ಭೀಷ್ಮ. ಶಂತನುವಿನಿಂದ ಈಕೆಗೆ ಚಿತ್ರಾಂಗದ ಮತ್ತು ವಿಚಿತ್ರವೀರ್ಯರೆಂಬ ಮಕ್ಕಳು ಜನಿಸಿದರು. ಚಿತ್ರಾಂಗದ -- ವಿಚಿತ್ರವೀರ್ಯರು ಮಕ್ಕಳಿಲ್ಲದೆ ಸಾಯಲು ವೇದವ್ಯಾಸರಿಂದ ಭಾರತವಂಶೋದ್ಧಾರವಾಗಲು ಮುಂದೆ ಸತ್ಯವತಿಯು ವ್ಯಾಸ ಮತ್ತು ತನ್ನ ಸೊಸೆಯರೊಂದಿಗೆ ತಪೋವನವನ್ನು ಪ್ರವೇಶಿಸಿದಳು. ೫. (ಮ.ಆ.,ಶಿವಪು) ಅರುಂಧತಿಯ ಒಡಹುಟ್ಟಿದ ನಾರದನೆಂಬ ಮುನಿಯ ಹೆಂಡತಿ .(ಲಿಂಗಪು., ಮ.ಉ).

ಭೃಗುಮುನಿಯು ತನ್ನ ಸೊಸೆಯಾದ ಸತ್ಯವತಿಗೆ -- 'ನಿನಗೂ ನಿನ್ನ ತಾಯಿಗೂ ಪುತ್ರರಾಗುವಂತೆ ವರ ಕೊಟ್ಟಿದ್ದೇನೆ. ಸತ್ಯವತಿಯೇ, ನೀನು ಋತುಸ್ನಾನ ಮಾಡಿದ ದಿನ ಗರ್ಭದಾನಾರ್ಥವಾಗಿ ಅತ್ತಿಮರವನ್ನೂ, ನಿನ್ನ ತಾಯಿ ಅರಳಿಮರವನ್ನೂ ಆಲಿಂಗನ ಮಾಡಿಕೊಳ್ಳತಕ್ಕದ್ದು. ನಾನು ವಿರಾಟ್ ಪುರುಷನನ್ನು ಬಹುಪ್ರಕಾರವಾಗಿ ಅನುಸಂಧಾನಮಾಡಿ ಅಧಿಕವಾದ ಪ್ರಯತ್ನದಿಂದ ಈ ಎರಡು ಚರುಗಳನ್ನು ಸಾಧಿಸಿರುವೆನು' ಎಂದು ಕೊಟ್ಟನು. ಆದರೆ ಮುಂದೆ ತಾಯಿ -- ಮಗಳು ವೃಕ್ಷಾಲಿಂಗನೆ ಮತ್ತು ಚರುಭಕ್ಷಣೆಯಲ್ಲಿ ವ್ಯತ್ಯಾಸ ಮಾಡಿದರು. ನೋ -- ಜಮದಗ್ನಿ, ವಿಶ್ವಾಮಿತ್ರ.

ಸತ್ಯವಾಕ್ -- ದೇವಗಂಧರ್ವನೊಬ್ಬ (ಮ.ಆ.).

ಸತ್ಯವಂತ -- ೧. ದುರ್ಯೋಧನನ ಪಕ್ಷದ ವೀರನೊಬ್ಬ. ಇವನು ಅತಿರಥನಾದ ಬಾಹ್ಲೀಕನ ಸೇನಾಪತಿ (ಮ.ವಿ) ೨. ಸಾಲ್ವದೇಶಾಧಿಪತಿಯಾದ ದ್ಯುಮತ್ಸೇನನ ಮಗನು. ಈತನು ಮದ್ರದೇಶದ ರಾಜನಾದ ಅಶ್ವಪತಿಯ ಮಗಳು ಸಾವಿತ್ರಿಯನ್ನು ವಿವಾಹವಾದ. ಈತನಿಗೆ ಚಿತ್ರಾಶ್ವನೆಂಬ ಬೇರೊಂದು ಹೆಸರಿದೆ. ಈತನ ತಂದೆ ತಾಯಿಗಳು ಸತ್ಯವಾದಿಗಳಾದುದರಿಂದ ಬ್ರಾಹ್ಮಣರು ಈತನಿಗೆ ಸತ್ಯವಂತನೆಂದೇ ನಾಮಕರಣ ಮಾಡಿರುವರು. ಇವನು ಚಿಕ್ಕಂದಿನಿಂದಲೂ ಕುದುರೆಗಳಲ್ಲಿ ವಿಶೇಷ ಪ್ರೀತಿಯುಳ್ಳವನಾಗಿ ಯಾವಾಗಲೂ ಕುದುರೆಯನ್ನೇ ನೋಡುತ್ತ, ಮಣ್ಣಿನಿಂದ ಕುದುರೆಗಳನ್ನು ಮಾಡುತ್ತಿದ್ದನು. ಚಿತ್ರದಲ್ಲಿಯೂ ಕುದುರೆಗಳನ್ನು ಬರೆಯುತ್ತಿದ್ದನು. ಇದರಿಂದ ಇವನಿಗೆ ಚಿತ್ರಾಶ್ವನೆಂಬ ಹೆಸರು ಬಂತು. ಇವನು ವಿವಾಹಾನಂತರ ಒಂದು ದಿನ ಕಟ್ಟಿಗೆ ತರಲು ಕಾಡಿಗೆ ಹೋಗಿದ್ದನು. ಈತನನ್ನು ಸಾವಿತ್ರಿಯೂ ಅನುಸರಿಸಿದಳು. ಅಲ್ಲಿ ಸತ್ಯವಂತನಿಗೆ ಮರಣ ಪ್ರಾಪ್ತವಾಯಿತು. ಅಷ್ಟರಲ್ಲೇ ಸಾವಿತ್ರಿಯ ಮುಂದೆ ಕೆಂಪು ಬಟ್ಟೆಯನ್ನುಟ್ಟು, ಪಾಗನ್ನು ಸುತ್ತಿಕೊಂಡು, ಸೂರ್ಯನಂತೆ ಪ್ರಕಾಶಿಸುತ್ತ ಕೆಂಪಾದ ಕಣ್ಣುಗಳುಳ್ಳವನಾಗಿ ಶ್ಯಾಮವರ್ಣನಾಗಿ ಕೈಯಲ್ಲಿ ಪಾಶ ಹಿಡಿದು ಭಯಂಕರನಾಗಿರುವ ಯಮನು ಕಾಣಿಸಿಕೊಂಡ -- 'ನಾನು ಸತ್ಯವಂತನ ಪ್ರಾಣವನ್ನು ಕೊಂಡು ಹೋಗಲು ಬಂದಿದ್ದೇನೆ' ಎನ್ನಲು ಸಾವಿತ್ರಿಯು ಪತಿಯ ಪ್ರಾಣವನ್ನು ಕೊಂಡು ಹೋಗುವ ಯಮನನ್ನನುಸರಿಸಿದಳು. ಆಗ ಯಮನಿಂದ ಸಾವಿತ್ರಿಯು ಕ್ರಮವಾಗಿ ದ್ಯುಮತ್ಸೇನನಿಗೆ ಕಣ್ಣುಗಳು ಮತ್ತು ರಾಜ್ಯವು ಪುನಃ ಬರುವಂತೆಯೂ, ತಂದೆಯಾದ ಅಶ್ವಪತಿಗೆ ವಂಶಾಭಿವೃದ್ಧಿಕರರಾದ ನೂರು ಮಂದಿ ಔರಸಪುತ್ರರಾಗುವಂತೆಯೂ, ಸತ್ಯವಂತನಿಂದ ಸಮರ್ಥರಾದ ನೂರು ಮಂದಿ ಮಕ್ಕಳು ತನಗಾಗುವಂತೆಯೂ ವರಪಡೆದು, ಪುನಃ ಸತ್ಯವಂತನನ್ನು ಯಮನಿಂದ ಹಿಂದಕ್ಕೆ ಪಡೆದು ಆತನೊಡನೆ ಆಶ್ರಮಕ್ಕೆ ಬಂದಳು. ಮುಂದೆ

ಸಾವಿತ್ರಿಗೆ ಯಮನು ಕೊಟ್ಟ ವರಗಳೆಲ್ಲಾ ಸತ್ಯವಾದವು (ಮ.ವ).

ಸತ್ಯವ್ರತ -- ೧. ಇಕ್ಷ್ವಾಕುವಂಶದ ತ್ರಯ್ಯಾರುಣ ಮಹಾರಾಜನ ಮಗ. ಇವನು ಅಯೋಧ್ಯೆಯಲ್ಲಿದ್ದ ಲಾವಣ್ಯವತಿಯಾದ ಕನ್ಯೆಯೊಬ್ಬಳನ್ನು ಬಲಾತ್ಕಾರದಿಂದ ವಿವಾಹವಾಗಲು, ಮಹಾರಾಜನು ಮಗನೆಂದು ಭಾವಿಸದೆ ಅವನನ್ನು ಧರ್ಮಾಸನದ ಮುಂದೆ ತಂದು ನಿಲ್ಲಿಸಿದನು. ಇಲ್ಲಿ ಸತ್ಯವಾಕ್ಯನು ಅನೇಕ ಸ್ಮೃತಿವಾಕ್ಯಪ್ರಮಾಣಗಳನ್ನು ಉದಾಹರಿಸಿ 'ಸಖಾ ಸಪ್ತಪದೀ ಭವ' ಎಂಬ ಮಂತ್ರೋಚ್ಚಾರಣದ ವಿಧಿ ಮುಗಿಯುವವರೆಗೆ ವಿವಾಹ ಪೂರ್ತಿಯಾಗುವುದಿಲ್ಲ. ನಾನು ಅದಕ್ಕಿಂತ ಮೊದಲೇ ಅವಳನ್ನು ಅಪಹರಿಸಿದ್ದೇನೆ. ಕನ್ಯಾಹರಣವು ರಾಜಕುಮಾರರಿಗೆ ದೋಷವಲ್ಲ. ಇದರಿಂದ ನಾನು ನಿರಪರಾಧಿ ಎಂದು ತನ್ನ ಪಕ್ಷವನ್ನು ಸಮರ್ಥಿಸಿಕೊಂಡನು. ಆದರೆ ರಾಜನು ಅವನ ಮಾತುಗಳನ್ನು ಮೆಚ್ಚದೆ, ಆತನನ್ನು ರಾಜಧಾನಿಯಿಂದ ಹೊರಗೆ ಹಾಕಿದನು. ಸತ್ಯವ್ರತನು ತಂದೆಯ ಅಪ್ಪಣೆಯಂತೆ ಮುಂದೆ ಅಯೋಧ್ಯೆಯ ಹತ್ತಿರದ ಅರಣ್ಯದಲ್ಲಿ ಚಂಡಾಲಕೇರಿಯ ಹತ್ತಿರವೇ ಒಂದು ಗುಡಿಸಲು ಕಟ್ಟಿಕೊಂಡು ಇರಹತ್ತಿದನು. ಆ ಕಾಲದಲ್ಲಿ ಕೋಸಲ ದೇಶದಲ್ಲೇ ಬರಗಾಲವುಂಟಾಗಿ, ದೇಶದ ಹಾದಿಬೀದಿಗಳೆಲ್ಲ ಹೆಣಗಳ ಹಾಸಿಗೆಯನ್ನೇ ಹಾಸಿಕೊಂಡವು. ರಾಜಧಾನಿ ಅಯೋಧ್ಯೆಯು ಜೀವನ್ಮೃತರ ಪ್ರೇತಪುರಿಯಾಯಿತು. ಆಗ ಮಹರ್ಷಿ ವಿಶ್ವಾಮಿತ್ರರು ತಮ್ಮ ಹೆಂಡತಿ ಕೌಶಿಕಿಯನ್ನೂ, ಸಣ್ಣ ಸಣ್ಣ ಮೂರು ಮಕ್ಕಳನ್ನೂ ಅಯೋಧ್ಯೆಯಲ್ಲಿರಿಸಿ ಹನ್ನೆರಡು ವರ್ಷದ ದೀರ್ಘ ತಪೋನುಷ್ಠಾನಕ್ಕೆಂದು ಸಾಗರಾನೂಪಕ್ಕೆ ಹೋಗಿದ್ದರು. ಕೌಶಿಕಿಯು ಈ ಬರಗಾಲದಲ್ಲಿ ಮೂರು ಮಕ್ಕಳನ್ನು ರಕ್ಷಿಸಲಾರದೆ ಕಿರಿಯ ಮಗನಾದ ಗಾಲವನನ್ನು (ಗಲ= ಕೊರಳು. ತಾಯಿ ಅದಕ್ಕೆ ಕಟ್ಟಿಕೊಂಡು ಮಾರಹೊರಟದ್ದರಿಂದ ಗಾಲವನಾದನು) ಮಾರಲು ಹೊರಟಾಗ ಸತ್ಯವ್ರತನು ಅದನ್ನು ತಪ್ಪಿಸಿ, ವಿಶ್ವಾಮಿತ್ರನು ಬರುವವರೆಗೆ ಆ ಸಂಸಾರವನ್ನು ರಕ್ಷಿಸಿಕೊಂಡಿದ್ದನು. ಈತನಿಗೆ ತಂದೆಯ ಅತೃಪ್ತಿ, ಗುರುವಿನ ಗೋವಧೆ, ಶುದ್ಧೀಕರಿಸದ ಪದಾರ್ಥೋಪಯೋಗವೆಂಬ ಮೂರು ವಿಧದ ದುಃಖಕಾರಣಗಳಿಂದ ದೋಷಗಳುಂಟಾಗಿ ತ್ರಿಶಂಕುವೆಂಬ ಹೆಸರಾಯಿತು. ಈ ತ್ರಿಶಂಕುವು ಗುರುವಾದ ವಸಿಷ್ಠನ ಶಾಪದಿಂದ ಚಾಂಡಾಲತ್ವವನ್ನು ಹೊಂದಿ, ಆಮೇಲೆ ವಿಶ್ವಾಮಿತ್ರನ ತಪಃ ಪ್ರಭಾವದಿಂದ ಸುಶರೀರಿಯಾಗಿ ಸ್ವರ್ಗಾರೋಹಣವನ್ನು ಮಾಡುತ್ತಿರಲು ಚಂಡಾಲನಿಗೆ ಸ್ವರ್ಗಪ್ರವೇಶ ವಾಗಬಾರದೆಂದು ದೇವತೆಗಳು ಅವನನ್ನು ಕೆಳಗೆ ತಳ್ಳಿದರೂ ವಿಶ್ವಾಮಿತ್ರನ ತಪೋಮಹಿಮೆಯಿಂದ ನೂತನ ಸ್ವರ್ಗದಲ್ಲಿ ನಿಲ್ಲುವವನಾಗಿ ಈಗಲೂ

ನಕ್ಷತ್ರರೂಪದಿಂದ ಪ್ರಕಾಶಿಸುತ್ತಿರುವವನು. ಈತನ ಪತ್ನಿಯೇ ಕೇಕಯ ವಂಶದ ಸತ್ಯವತಿ, ಮಗನೇ ಸತ್ಯಸಂಧನಾದ ಹರಿಶ್ಚಂದ್ರ ರಾಜರ್ಷಿ. ನೋ.--ತ್ರಿಶಂಕು, ಹರಿಶ್ಚಂದ್ರ, ವಿಶ್ವಾಮಿತ್ರ, ಗಾಲವ (ದೇವೀಭಾ.). ೨. ದುರ್ಯೋಧನನ ಪಕ್ಷೀಯನಾದ ತ್ರಿಗರ್ತರಾಜ (ಮ.ಭೀ.).

ಸತ್ಯವ್ರತಾ -- ಗಾಂಧಾರಿಯ ಒಬ್ಬಳು ಸೋದರಿ; ಧೃತರಾಷ್ಟ್ರನ ಹೆಂಡತಿ. ನೋ -- ಗಾಂಧಾರಿ (ಮ.ಆ).

ಸತ್ಯಸಂಧ -- ಧೃತರಾಷ್ಟ್ರನ ಒಬ್ಬ ಮಗ (ಮ.ಆ.).

ಸತ್ಯಸೇನ -- ಕರ್ಣನ ಮಗ. ಇವನು ನಕುಲನಿಂದ ಯುದ್ಧದ ಹದಿನೆಂಟನೇ ದಿನ ಮೃತನಾದ (ಮ.ಶ.,ಕ).

ಸತ್ಯಸೇನಾ -- ಗಾಂಧಾರಿಯ ಸೋದರಿ; ಧೃತರಾಷ್ಟ್ರನ ಪತ್ನಿ (ಮ.ಆ.).

ಸತ್ಯಾ--೧. ಬೃಹದ್ರಥನ ಹಿರಿಯ ಹೆಂಡತಿ. ಈಕೆ ಜರಾಸಂಧನ ಅರ್ಧದೇಹವನ್ನೂ, ಇನ್ನೊಬ್ಬಳು ಅರ್ಧದೇಹವನ್ನೂ ಹೆತ್ತಳು (ಮ.ಅ,ಸ.). ೨.ಶ್ರೀಕೃಷ್ಣನ ಅಷ್ಟ ಮಹಿಷಿಯರಲ್ಲಿ ನೀಲೆ ಎಂಬುವಳ ಇನ್ನೊಂದು ಹೆಸರು. ನೋ.--ಕೃಷ್ಣ. ಈಕೆಗೆ ವೀರಚಂದ್ರ, ಅಶ್ವಸೇನ, ಚಿತ್ರಗು, ವೇಗವಂತ, ವೃಷ, ಅಮ, ಶಂಕು, ಕುಂತಿ ಎಂಬ ಮಕ್ಕಳಿದ್ದರು (ಭಾಗ.).

ಸತ್ಯೇಯು --ಚಂದ್ರವಂಶದ ಪುರುವಿನ ಮೊಮ್ಮಗ; ರೌದ್ರಾಶ್ವನ ಮಗ. ನೋ.--ರೌದ್ರಾಶ್ವ. ಈತನ ತಾಯಿ ಮಿಶ್ರಕೇಶಿ ಎಂಬ ಅಪ್ಸರೆ (ಮ.ಆ).

ಸತ್ಯೇಷು--ತ್ರಿಗರ್ತರಾಜಪುತ್ರನೊಬ್ಬ. ಸುಶರ್ಮನ ಸೋದರ. ಈತನು ಅರ್ಜುನನನ್ನು ಕೊಂದಲ್ಲದೆ ಯುದ್ಧರಂಗದಿಂದ ಹಿಂದಿರುಗೆನೆಂದು ಪ್ರತಿಜ್ಞೆಮಾಡಿ ತನ್ನ ಸೋದರರೊಂದಿಗೆ ಅರ್ಜುನನಿಂದ ಹತನಾದ. ನೋ.--ಸಂಶಪ್ತಕ (ಮ.ಶ.).

ಸತ್ರಾಜಿತ -- ಯದುವಂಶದ ನಿಮ್ನನ ಮಗ (ಭಾಗ.) ಸತ್ವತನ ವಂಶದ ನಿಘ್ನನ ಮಗ. ಇವನಿಗೆ ಪ್ರಸೇನಜಿತು, ಸತ್ರಾಜಿತು ಎಂಬಿಬ್ಬರು ಮಕ್ಕಳು (ವಿಷ್ಣುಪು.). ಸೂರ್ಯನನ್ನು ಕುರಿತು ಸತ್ರಾಜಿತನು ತಪಸ್ಸುಮಾಡಿ ಸ್ಯಮಂತಕ ರತ್ನವನ್ನು ಪಡೆದನು. ಇದಕ್ಕೆ ಪ್ರತಿದಿನ ಎಂಟು ಭಾರ ಚಿನ್ನವನ್ನು ಕೊಡುವ ಮತ್ತು ಅಶುಚಿಯಾದಾಗ ಧರಿಸಿದರೆ ಧರಿಸಿದವನನ್ನು ಕೊಲ್ಲುವ ಶಕ್ತಿಯಿತ್ತು. ಶ್ರೀಕೃಷ್ಣನು ಈ ರತ್ನವನ್ನು ಉಗ್ರಸೇನನು ಧರಿಸಲು ಯೋಗ್ಯವೆಂದು ಸತ್ರಾಜಿತನಿಂದ ಕಿತ್ತುಕೊಳ್ಳಲು ಸಮರ್ಥನಾದರೂ ಆ ಕೆಲಸ ಮಾಡಲಿಲ್ಲ.

ಇದನು ತಿಳಿದು ಸತ್ರಾಜಿತನು ಈ ರತ್ನವನ್ನು ತನ್ನ ತಮ್ಮನಾದ ಪ್ರಸೇನಜಿತ್ತಿಗೆ ಕೊಟ್ಟನು. ಇವನು ಇದನ್ನು ಧರಿಸಿ ಬೇಟೆಗೆ ಹೋಗಿರಲು ಸಿಂಹವೊಂದರಿಂದ ಹತನಾದನು. ಜಾಂಬವನು ಸಿಂಹದಿಂದ ಆ ರತ್ನವನ್ನು ಕಿತ್ತುಕೊಂಡು ತನ್ನ ಗುಹೆಗೆ ಹೋದನು. ಪ್ರಸೇನನು ಬೇಟೆಯಿಂದ ಹಿಂದೆ ಬಾರದುದರಿಂದ ಶ್ರೀಕೃಷ್ಣನೇ ಆತನನ್ನು ಕೊಂದನೆಂದು ಯಾದವರು ಹೇಳತೊಡಗಿದರು. ಶ್ರೀಕೃಷ್ಣ ಈ ಅಪವಾದವನ್ನು ಕಳೆದುಕೊಳ್ಳುವುದಕ್ಕಾಗಿ ಕಾಡಿಗೆ ಹೋಗಿ ಜಾಂಬವನಿಂದ ಆ ಮಣಿಯನ್ನು ಪಡೆದು ಬಂದನು. ನೋ.--ಜಾಂಬವ, ಜಾಂಬವತಿ. ಸತ್ರಾಜಿತನು ಕೃಷ್ಣನು ನಿರಪರಾಧಿ ಎಂದು ತಿಳಿದೊಡನೆಯೇ ಆತನಿಗೆ ತನ್ನ ಮಗಳಾದ ಸತ್ಯಭಾಮೆಯನ್ನು ಕೊಟ್ಟನು. ನೋ.ಸತ್ಯಭಾಮೆ. ಕೃಷ್ಣನು ದ್ವಾರಕೆಯಲ್ಲಿ ಇಲ್ಲದಿರುವ ಸಮಯ ಶತಧನ್ವನು ಮಲಗಿದ್ದ ಸತ್ರಾಜಿತನನ್ನು ಕೊಂದು ಸ್ಯಮಂತಕವನ್ನು ಅಪಹರಿಸಿದನು. ಶ್ರೀಕೃಷ್ಣನು ಹಸ್ತಿನಾವತಿಯಿಂದ ಬಂದಮೇಲೆ ಸತ್ಯಭಾಮೆಯು ಅಳುತ್ತ ತಂದೆ ಮರಣದ ವಿಚಾರವನ್ನು ಆತನಿಗೆ ತಿಳಿಸಲು, ಕೃಷ್ಣನು ಬಲರಾಮನೊಡನೆ ಶತಧನ್ವನನ್ನು ಬೆನ್ನಟ್ಟಲು, ಆತನು ಕೃತವರ್ಮ ಮತ್ತು ಅಕ್ರೂರರ ಸಹಾಯವನ್ನು ಅಪೇಕ್ಷೆ ಮಾಡಿದನು. ಆದರೆ ಅವರು ಶ್ರೀಕೃಷ್ಣನೊಡನೆ ದ್ವೇಷಕಟ್ಟಲು ಹೆದರಿ ವಿಮುಖರಾದರು. ಆಗ ಶತಧನ್ವನು ಸ್ಯಮಂತಕರತ್ನವನ್ನು ಅಕ್ರೂರನ ಕೈಗೊಪ್ಪಿಸಿ, ತಾನು ದ್ವಾರಕೆಯನ್ನು ಬಿಟ್ಟೋಡಿದನು. ಶ್ರೀಕೃಷ್ಣನು ಆತನನ್ನು ಹಿಂಬಾಲಿಸಿ ಚಕ್ರಾಯುಧದಿಂದ ಆತನನ್ನು ಕೊಂದನು. ಮುಂದೆ ಅಕ್ರೂರನು ಈ ರತ್ನದ ಪ್ರಭಾವದಿಂದ ಅನೇಕ ಯಜ್ಞಗಳನ್ನು ಮಾಡಿದನು. ಕೊನೆಗೆ ಈ ರತ್ನವು ಶ್ರೀಕೃಷ್ಣನಿಂದ ಅಕ್ರೂರನಿಗೆ ಕೊಡಲ್ಪಟ್ಟಿತು (ಭಾಗ., ವಿಷ್ಣುಪು.).

ಸತ್ವ -- ಕ್ಷತ್ರಿಯ; ಧೃತರಾಷ್ಟ್ರನ ಪುತ್ರ (ಮ.ಆ.).

ಸದ -- ಧೃತರಾಷ್ಟ್ರನ ಒಬ್ಬ ಮಗ (ಮ.ಆ.).

ಸದಶ್ವ -- ಯಮಸಭಾವಾಸಿಯಾದ ಒಬ್ಬ ಕ್ಷತ್ರಿಯ (ಮ.ಸ.).

ಸದಾನೀರಾ -- ಅಯೋಧ್ಯೆಯ ರಂಗಪುರ ಮತ್ತು ದಿನಾಜಪುರ ಜಿಲ್ಲೆಗಳಲ್ಲಿ ಹರಿಯುವ ಕರತೋಯಾ ಎಂಬ ನದಿ (ಮ.ಭೀ., ಮತ್ಸ್ಯಪು.).

ಸದ್ಯುಮ್ನ -- ನೋ.--ಲಿಖಿತ, ಲಿಖಿತನ ಕೈಗಳನ್ನು ಕತ್ತರಿಸಿದ ರಾಜನೊಬ್ಬ. ಸನಕ, ಸನಂದನ, ಸನತ್ಕುಮಾರ ಮತ್ತು ಸನತ್ಸುಜಾತ -- ಇವರು ನಾಲ್ವರಲ್ಲದೆ ಸ್ಕಂದ ನಾರದ, ರುದ್ರರೂ ಬ್ರಹ್ಮನ ಮಾನಸಪುತ್ರರು. ಇವರೆಲ್ಲ ನಾರಾಯಣನನ್ನು

ಹಗಲಿರುಳೂ ಧ್ಯಾನಮಾಡುವವರು. ಇವರಲ್ಲಿ ಸನತ್ಕುಮಾರನು ಜ್ಯೇಷ್ಠ; ರುದ್ರನು ಬ್ರಹ್ಮನ ಕೋಪದ ಕಾಲದಲ್ಲಿ ಜನಿಸಿದವನು, ನೋ.--ಜಯ, ವಿಜಯ. ಇವರು ಏಳು ಮಂದಿ ಮಹರ್ಷಿಗಳೂ 'ನಾರಾಯಣಾತ್ಮಕರು' (ಹರಿ).

ಈ ನಾಲ್ವರು ಮುನಿಗಳು ಯಾವಾಗಲೂ ಕೌಮಾರಾವಸ್ಥೆಯಲ್ಲೇ ಇರುವವರು. ಇವರು ಜಯವಿಜಯರೆಂಬ ವೈಕುಂಠದ ದ್ವಾರಪಾಲಕರಿಗೆ ರಾಕ್ಷಸರಾಗಿ ಭೂಮಿಯಲ್ಲಿ ಜನಿಸುವಂತೆ ಶಾಪವಿತ್ತರು (ಭಾಗ.). ಸನತ್ಸುಜಾತನು ಧೃತರಾಷ್ಟ್ರನಿಗೆ ತತ್ತ್ವೋಪದೇಶವನ್ನು ಮಾಡಿದನು. ನೋ.--ಸಂಜಯ. ಇದಕ್ಕೆ ಭಾರತದಲ್ಲಿ ಸನತ್ಸುಜಾತೀಯ ಎಂದು ಹೆಸರು.

ಒಮ್ಮೆ ರಾವಣನು ಸನತ್ಕುಮಾರನನ್ನು ಕಂಡು --'ಮಹರ್ಷಿಗಳೇ, ದೇವತೆಗಳಲ್ಲಿ ಶ್ರೇಷ್ಠರು ಯಾರು? ಎನ್ನಲು ಮಹರ್ಷಿಯು 'ವಿಷ್ಣುವೇ ಶ್ರೇಷ್ಠ' ಎಂದನು. 'ಆತನ ಕೈಯಿಂದ ಮರಣಹೊಂದಿದವರು ಯಾವ ಗತಿಯನ್ನು ಹೊಂದುತ್ತಾರೆ? ನಾನು ಹೇಗೆ ಆತನಿಂದ ಮರಣಹೊಂದಿಯೇನು?' ಎನ್ನಲು ಮಹರ್ಷಿಯು -- ಆತನಿಂದ ಮರಣಹೊಂದಿದವರು ವೈಕುಂಠವನ್ನು ತಲಪುವರು. ತ್ರೇತಾಯುಗದಲ್ಲಿ ವಿಷ್ಣುವು ಅಯೋಧ್ಯಾಧಿಪನಾದ ದಶರಥನ ಮಗನಾಗಿ ಶ್ರೀರಾಮನೆಂಬ ಹೆಸರಿನಿಂದ ಹುಟ್ಟುವನು. ಅರಣ್ಯಕ್ಕೆ ಬಂದ ಆತನ ಪತ್ನಿಯನ್ನು ಅಪಹಾರ ಮಾಡಲು ಶ್ರೀರಾಮನು ನಿನ್ನನ್ನು ಬೇಗ ಕೊಲ್ಲುವನು' ಎಂದನು (ಆನಂ.ರಾ).

ಸದಾಕಾಂತಾ -- ನದಿಯೊಂದು (ಮ.ಭೀ.)

ಸದಾನಿರಾಮಯಾ -- ನದಿಯೊಂದು (ಮ.ಭೀ)

ಸಂಧ್ಯಾ -- ೧. ನದಿಯೊಂದು (ಮ.ಸ.). ೨. ಪುಲಸ್ತ್ಯಋಷಿಯ ಪತ್ನಿ (ಮ.ಉ.).

ಸನ್ನತಿಕ್ಷೇತ್ರ -- ಭಾರತದ ಶಕ್ತಿಪೀಠಗಳಲ್ಲಿ ಇದೊಂದು. ಇದು ಮೈಸೂರು ರಾಜ್ಯದ ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನಲ್ಲಿದೆ. ಈ ಕ್ಷೇತ್ರವು ಭೀಮಾತಟದಲ್ಲಿದೆ. ಇಲ್ಲಿ ಚಂದ್ರಲಾಪರಮೇಶ್ವರಿ ಮತ್ತು ರುದ್ರಾಂಕಿತ ಪಾದಗಳಿವೆ. ಶ್ರೀರಾಮನು ರಾವಣನನ್ನು ವಧಿಸಿ ಅಯೋಧ್ಯೆಯಲ್ಲಿ ಪಟ್ಟಾಭಿಷಿಕ್ತನಾದನು. ಆ ಪಟ್ಟಾಭಿಷೇಕ ಸಮಾರಂಭಕ್ಕೆ ನರ ವಾನರ ರಾಕ್ಷಸರಿಗೆಲ್ಲ ಆಮಂತ್ರಣವಿದ್ದರೂ, ಸಮುದ್ರರಾಜನಿಗೆ ಮಾತ್ರ ಆಮಂತ್ರಣ ಹೋಗಿರಲಿಲ್ಲ. ಇದರಿಂದ ಕೋಪಗೊಂಡ ಸಮುದ್ರರಾಜನು ಅಯೋಧ್ಯೆಗೆ ಬಂದು ಶ್ರೀರಾಮನನ್ನು ಆಕ್ಷೇಪಿಸಿದ. ಈ ಕುರಿತು ರಾಮನು ಮಾರುತಿಯನ್ನು ವಿಚಾರಿಸಿದಾಗ -- 'ಸಮುದ್ರರಾಜನು ಅಹಂಕಾರದಿಂದ ಈ ಶುಭಕಾರ್ಯಕ್ಕೆ ಉಪದ್ರವಕಾರಿಯಾಗಿದ್ದಾನೆಂದು ಹೇಳಲಿಲ್ಲ' ಎಂದನು ಮಾರುತಿ. ಇದರಿಂದ

ಕೋಪಗೊಂಡ ಸಮುದ್ರರಾಜನು - 'ನಾನು ನಿನಗೆ ಸಹಾಯಕನಾಗದಿದ್ದರೆ ನೀನು ರಾವಣನ ವಧೆಯನ್ನು ಹೇಗೆ ಮಾಡುತ್ತಿದ್ದಿ? ಸೀತಾಮಾತೆಯನ್ನು ಹೇಗೆ ತರುತ್ತಿದ್ದಿ? ಈಗ ನಾನೇ ಆಕೆಯನ್ನು ಸೆಳೆದೊಯ್ಯುತ್ತೇನೆ.' ಎನ್ನಲು ಸೀತೆಯು ಕೋಪದಿಂದ -- 'ಎಲಾ, ಕ್ಷುದ್ರ, ನಿನ್ನನ್ನು ಮುಂದಿನ ಜನ್ಮದಲ್ಲಿ ಭೃಂಗಗಳಿಂದ ಕೊಲ್ಲುತ್ತೇನೆ' ಎಂದು ಶಾಪವಿತ್ತಳು.

ನಾರಾಯಣನು ಕಲಿಯುಗದ ಆದಿಯಲ್ಲಿದ್ದ ದೇವದತ್ತರಾಜನ ಪುತ್ರನು. ಚಂದ್ರಲೆಯು ರಾಜಸೇನನೆಂಬ ರಾಜನ ಕುಮಾರಿಯು. ನಾರಾಯಣನು ರಾಜಕುಮಾರನಾಗಿದ್ದರೂ ಅರಣ್ಯದಲ್ಲಿ ಆಶ್ರಮ ಕಟ್ಟಿಕೊಂಡು ಆಧ್ಯಾತ್ಮ ಚಿಂತನೆಯಲ್ಲಿ ಕಾಲಕಳೆಯುತ್ತಿದ್ದನು. ಆಗ ಸನ್ನತಿ ರಾಜ್ಯದಲ್ಲಿ ಸೇತುರಾಜನು ಆಳುತ್ತಿದ್ದನು. ರಾಜಸೇನನು ತನ್ನ ಸ್ವಪ್ನದೃಷ್ಟಾಂತದಂತೆ ನಾರಾಯಣಮುನಿಗೆ ಚಂದ್ರಲೆಯನ್ನಿತ್ತು ವಿವಾಹ ಮಾಡಿದನು. ಒಂದು ದಿನ ನಾರಾಯಣಮುನಿ ಆಶ್ರಮದಲ್ಲಿಲ್ಲದಿರುವಾಗ ಸೇತುರಾಜನು ಅವನ ಆಶ್ರಮಕ್ಕೆ ಬಂದು ಚಂದ್ರಲೆಯನ್ನು ಬಲಾತ್ಕಾರದಿಂದ ತನ್ನ ರಾಜಧಾನಿಗೆ ಎತ್ತಿಕೊಂಡು ಹೋದನು. ನಾರಾಯಣಮುನಿ ಅಂತರ್ಜ್ಞಾನದಿಂದ ಸೇತುರಾಜನ ದುರುದ್ದೇಶವನ್ನರಿತು ತನ್ನ ಕುಲದೇವತೆಯಾದ ಹಿಂಗುಳಾಂಬಾದೇವಿಯನ್ನು ಒಲಿಸಿಕೊಂಡು, ಆಕೆಯನ್ನು ಸೇತುರಾಜನ ದಮನಕ್ಕಾಗಿ ಸನ್ನತಿಗೆ ಬರಬೇಕೆಂದು ಪ್ರಾರ್ಥಿಸಿದನು. ಆಕೆಯು -- 'ನೀನು ಸನ್ನತಿ ಮುಟ್ಟುವವರೆಗೆ ಹಿಂದೆ ನೋಡಬಾರದು. ಹಿಂದೆ ನೋಡಿದರೆ ಅಲ್ಲೇ ನಿಂತು ಬಿಡುವೆನು' ಎಂದಳು. ನಾರಾಯಣ ಮುನಿಯು ಭೀಮಾನದಿಯ ಸಂಗಮಸ್ಥಾನದಲ್ಲಿ ಹಿಂಗುಳಾಂಬೆಯ ನೂಪುರದ ಧ್ವನಿ ಕೇಳಿಸದಿರಲು ಹಿಂದೆ ನೋಡಿದ. ದೇವಿ ಅಲ್ಲೇ ನಿಂತಳು. ಅದೇ ಹೊನಗುಂಟೆ ಕ್ಷೇತ್ರ.

ನಾರಾಯಣಮುನಿಯು ಪುನಃ ಆಕೆಯನ್ನು ಸನ್ನತಿಗೆ ಬರುವಂತೆ ಪ್ರಾರ್ಥಿಸಿದರೂ ಆಕೆ ಒಪ್ಪದೆ ಮುನಿಗೆ ಒಂದು ತೆಂಗಿನಕಾಯಿಯನ್ನು ಕೊಟ್ಟು ಸೇತುರಾಜನ ಬಳಿಗೆ ಹೋಗಿ 'ನಿನ್ನ ಪತ್ನಿಯನ್ನು ಬಿಡುವಂತೆ ಹೇಳು. ಆತನು ಒಪ್ಪದಿದ್ದರೆ ಈ ಕಾಯಿಯನ್ನು ಅವನ ಮುಂದೆ ಒಡೆದುಬಿಡು. ಅವನ ನಾಶವಾಗುವುದು' ಎಂದಳು. ನಾರಾಯಣಮುನಿಯು ಸನ್ನತಿಗೆ ಹೋಗಿ ಸೇತುರಾಜನೊಡನೆ ದೇವಿ ಹೇಳಿದ ಮಾತನ್ನು ಹೇಳಲು, ಅವನು ತಿರಸ್ಕಾರದಿಂದ ನಕ್ಕನು. ಆಗ ಆ ಮುನಿಯು ಈ ಕಾಯಿಯನ್ನು ಒಡೆಯಲು ಅದರಿಂದ ಐದು ಗುಂಗಿಹುಳಗಳು ಹೊರಬಂದು ಅವನನ್ನು ಹಿಂಸಿಸತೊಡಗಿದವು. ಅವನು ಆ ವೇದನೆಯನ್ನು ಸಹಿಸಲಾರದೆ ಭೀಮಾ ನದಿಯ ಮಡುವಿಗೆ ಹಾರಿ ಪ್ರಾಣಾರ್ಪಣೆ

ಮಾಡಿದನು. ಇತ್ತ ಚಂದ್ರಲೆಯು ಅಲ್ಲೇ ಇದ್ದ ಸೋಮೇಶ್ವರನಲ್ಲಿ ಐಕ್ಯಳಾದಳು. ಈ ಚಂದ್ರಲೆಯೇ ಸೀತೆ. ನಾರಾಯಣಮುನಿಯೇ ಶ್ರೀರಾಮ. ಸೇತುರಾಜನು ಸಮುದ್ರರಾಜ. ಇಲ್ಲಿ ಚಂದ್ರಲಾ ಪರಮೇಶ್ವರರ ದೇವಾಲಯವಿದೆ. ಚೈತ್ರ ಬಹುಳ ಪ್ರತಿಪದೆಯಿಂದ ಒಂದು ವಾರದವರೆಗೆ ಇಲ್ಲಿ ಜಾತ್ರೆಯಿದೆ. ಇದು ಶಕ್ತಿಪೀಠವಾಗಿದ್ದರೂ ವಾಮಾಚಾರಕ್ಕೆ ಎಡೆಯಿಲ್ಲ (ಸ್ಕಾಂ.ಪು., ಮಾರ್ಕಂ.ಪು.ರಾಮಾ.ಉತ್ತರ.).

ಸನ್ನತೇಯು -- ಚಂದ್ರವಂಶದ ಪೂರುವಿನ ಮೊಮ್ಮಗ. ರೌದ್ರಾಶ್ವ ಮತ್ತು ಮಿಶ್ರಕೇಶಿಯರು ಈತನ ತಂದೆತಾಯಿಗಳು (ಮಾ.ಅ).

ಸಪ್ತಗೋದಾವರಿ--ರಾಜಮಹೇಂದ್ರದ ಸಮೀಪದ ಒಂದು ಕ್ಷೇತ್ರ. ಗೋದಾವರಿಯು ಕೃಷ್ಣೆಯಂತೆ ಅನೇಕ ಮುಖಗಳಿಂದ ಸಮುದ್ರಕ್ಕೆ ಇಲ್ಲಿ ಕೂಡುತ್ತದೆ. ರೈಲ್ವೆ ಸ್ಟೇಷನ್ನಿನ ಹತ್ತಿರ ಗೋದಾವರಿಯು ನಾಲ್ಕು ಧಾರೆಯಾಗಿ ಹರಿದಿರುತ್ತದೆ. ಸ್ಟೇಷನ್ನಿನಿಂದ ಕೋಟಪಲ್ಲಿ ತನಕ ಸಪ್ತಗೋದಾವರಿ ತೀರ್ಥವೆನ್ನುತ್ತಾರೆ. ಇಲ್ಲಿ ಗೋದಾವರಿಯು ಸಮುದ್ರಕ್ಕೆ ಕೂಡುವಾಗ ಏಳು ಶಾಖೆಗಳಾಗಿ ಹರಿಯುತ್ತದೆ. ಗೋದಾವರಿ ಸ್ಟೇಷನ್‌ನಿಂದ ಒಂದು ಮೈಲು ದೂರದಲ್ಲಿ ಕೋಟಿತೀರ್ಥವಿದೆ. ಅಲ್ಲಿ ಕೋಟಿ ಶಿವಲಿಂಗಗಳಿವೆ. ಹನ್ನೆರಡು ವರ್ಷಕ್ಕೊಮ್ಮೆ ಇಲ್ಲಿ ದೊಡ್ಡ ಜಾತ್ರೆ ಜರುಗುತ್ತದೆ. ಇದಕ್ಕೆ ಪುಷ್ಕರಕ್ಷೇತ್ರ ಎನ್ನುವರು (ಮ.ವ).

ಸಪ್ತಜನಾಶ್ರಮ -- ಏಳು ಮಂದಿ ಋಷಿಗಳು ನೀರಿನಲ್ಲಿ ನಿಂತು ತಪಸ್ಸು ಮಾಡುತ್ತಿದ್ದ ಸ್ಥಳ. ಈ ಸ್ಥಳದ ವಿಚಾರವನ್ನು ಸುಗ್ರೀವನು ಶ್ರೀರಾಮನಿಗೆ ಹೇಳಿದನು. (ರಾಮಾ. ಕಿಷ್ಕಿಂ)

ಸಪ್ತಪುರಿ -- ಅಯೋಧ್ಯಾ, ಮಥುರಾ, ಹರಿದ್ವಾರ (ಮಾಯಾ). ಕಾಶಿ, ಕಾಂಚಿ, ಅವಂತಿಕಾ, ದ್ವಾರಕಾ -- ಇವನ್ನು ಸಪ್ತಪುರಿಗಳೆನ್ನುತ್ತಾರೆ.

೧. ಅಯೋಧ್ಯಾ - ಶ್ರೀರಾಮಚಂದ್ರನ ರಾಜಧಾನಿ. ಇಲ್ಲಿ ಶ್ರೀರಾಮಾವತಾರವಾಯಿತು. ಇಲ್ಲಿ ಶ್ರೀರಾಮಚಂದ್ರನಿಂದ ಕ್ರಿಮಿಕೀಟಗಳೂ ಸಹ ಉದ್ಧಾರವಾದವು. ಅವನ ಅನಂತರ ಅಯೋಧ್ಯಾ ಪಟ್ಟಣವು ಹಾಳುಬಿತ್ತು. ನೋ.--ಕುಶ. ಅವನ ವೈಭವವೆಲ್ಲ ನಷ್ಟವಾಯಿತು. ಇದರಿಂದ ಕುಶನು ಹೊಸ ಪಟ್ಟಣವನ್ನು ನಿರ್ಮಿಸಿಕೊಂಡು ಅಲ್ಲಿ ವಾಸ್ತವ್ಯವಿಟ್ಟನು. ಅಯೋಧ್ಯೆಯ ಪ್ರಜೆಗಳೆಲ್ಲ ಆತನ ದರ್ಶನಕ್ಕೆ ಅಲ್ಲಿಗೆ ಹೋಗಬೇಕಾಯಿತು. ಮುಂದೆ ವಿಕ್ರಮಾದಿತ್ಯನು ಆ ಮಹಾನಗರವನ್ನು ಜೀರ್ಣೋದ್ಧಾರ ಮಾಡಿದನು.

ಅವನೊಮ್ಮೆ ದೇಶಾಟನೆ ಮಾಡುತ್ತ ಸರಯೂತೀರಕ್ಕೆ ಬಂದು ಅಲ್ಲಿ ಶಿಬಿರವನ್ನು ಸ್ಥಾಪಿಸಿದನು. ಆಗ ಅಲ್ಲಿ ದಟ್ಟವಾದ ಕಾಡು ಇತ್ತು. ಇವನು ಅಲ್ಲಿ ದೇವಮಂದಿರ ಮತ್ತು ಸರೋವರವನ್ನು ನಿರ್ಮಾಣ ಮಾಡಿದನು. ಮುಂದೆ ಮುಸಲ್ಮಾನರ ಆಳ್ವಿಕೆಯಲ್ಲಿ ಪುನಃ ಅಯೋಧ್ಯೆಯು ಹೇಳಹೆಸರಿಲ್ಲದೆ ಹೋಯಿತು. ಇದರ ಹತ್ತಿರವೇ ಮೂರು ಮೈಲುಗಳಾಚೆ ಫೈಜಾಬಾದ್ ಎಂಬ ಹೊಸ ಪಟ್ಟಣ ಸ್ಥಾಪಿತವಾಯಿತು. ಇದೇ ಈಗ ದೊಡ್ಡ ರೈಲ್ವೆ ಜಂಕ್ಷನ್ ಆಗಿದೆ.

ಅಯೋಧ್ಯೆ ಕಾಶಿಯಿಂದ ೧೨೦ ಮೈಲು ದೂರದಲ್ಲಿದೆ. ಇದು ಇಂದು ಸಾಧುಗಳ ಪಟ್ಟಣವಾಗಿದೆ; ಇಲ್ಲಿ ಅನೇಕ ಸಾಧುಗಳ ಮಠಗಳೂ, ಧರ್ಮಶಾಲೆಗಳೂ ಇವೆ. ಇಲ್ಲಿ ಮಂಗಗಳ ಹಾವಳಿ ತುಂಬ ಇದೆ. ಈ ಪಟ್ಟಣವು ಸರಯೂ (ಘಾಘರ) ನದಿಯ ದಕ್ಷಿಣತೀರದಲ್ಲಿದೆ. ಈ ನದಿಯಲ್ಲಿ ಮಳೆಗಾಲದಲ್ಲಿ ಸ್ಟೀಮರುಗಳು ಓಡಾಡುತ್ತವೆ. ಬೇಸಿಗೆಯಲ್ಲಿ ನೀರು ಕಡಿಮೆಯಿರುತ್ತದೆ. ನದಿಗೆ ಘಾಟೂ ಇದೆ. ಆದರೆ ಈಗ ನದಿಯು ಘಾಟಿನಿಂದ ದೂರ ಇದೆ.

ಇದು ಶ್ರೀರಾಮನ ಜನ್ಮಭೂಮಿ; ಆತನು ಬೆಳೆದ ಸ್ಥಳ. ಕೈಕೆಯ ಕೋಪಗೃಹ; ಇಲ್ಲಿ ಕನಕಭವನ, ಹನುಮನ ಗುಡಿ ಇದೆ. ಕನಕಭವನ ಅಯೋಧ್ಯೆಯ ಮುಖ್ಯಮಂದಿರ. ಇದು ವಿಶಾಲವಾಗಿ ಭವ್ಯವಾಗಿದೆ. ಇಲ್ಲಿರುವ ಅಮಾವಾ ಸ್ಟೇಟ್ ಮಂದಿರವನ್ನು ಅಮಾವಾ ಸಂಸ್ಥಾನದ ರಾಜನು ಕಟ್ಟಿಸಿದ್ದಾನೆ. ಇದರಲ್ಲಿ ಹದಿನೈದು ವಿಗ್ರಹಗಳಿದ್ದು ತುಂಬಾ ಪ್ರೇಕ್ಷಣೀಯವಾಗಿದೆ. ಶ್ರೀರಾಮನ ಜನ್ಮಸ್ಥಳದಲ್ಲಿದ್ದ ಪ್ರಾಚೀನ ಮಂದಿರವನ್ನು ಬಾಬರನು ಕೆಡವಿ ಅಲ್ಲೊಂದು ಮಸೀದಿಯನ್ನು ಕಟ್ಟಿಸಿರುವನು. ಆದರೆ ಈಗ ಅಲ್ಲಿ ಶ್ರೀರಾಮನ ಮೂರ್ತಿಯನ್ನು ಸ್ಥಾಪಿಸಿರುವರು. ಇಲ್ಲಿ ಸದಾ ಪೋಲೀಸು ಕಾವಲು ಇದೆ.

ಅಯೋಧ್ಯೆಯಿಂದ ೧೬ ಮೈಲುಗಳ ದಕ್ಷಿಣಕ್ಕೆ ನಂದಿಗ್ರಾಮವಿದೆ. ಇಲ್ಲೇ ಭರತನು ಶ್ರೀರಾಮನ ವನವಾಸದ ಕಾಲದಲ್ಲಿ ೧೪ ವರ್ಷ ನಾರುಡೆಯನ್ನುಟ್ಟು ತಪಸ್ಸನ್ನು ಮಾಡಿದನು. ಇಲ್ಲಿ ಭರತನ ಮಂದಿರವೂ, ಭರತಕುಂಡವೆಂಬ ಸರೋವರವೂ ಇದೆ. ಈಗ ಅಯೋಧ್ಯಾನಗರವು ಕೇವಲ ಮುಸಲ್ಮಾನ ಪದ್ಧತಿಯ ಕಟ್ಟಡಗಳಿಂದ ತುಂಬಿದೆ.

೨. ಮಥುರಾ -- ಈ ಕ್ಷೇತ್ರವು ಯಮುನಾತೀರದಲ್ಲಿದೆ. ಇಲ್ಲಿ ನದಿಗೆ ಇಪ್ಪತ್ತನಾಲ್ಕು ಘಾಟುಗಳಿವೆ. ಮಥುರೆಯಲ್ಲಿ ಶ್ರೀಕೃಷ್ಣನು ಕಂಸನನ್ನು

ವಧೆಮಾಡಿದ ಸ್ಥಳ; ಕುಬ್ಜೆಯನ್ನು ಉದ್ಧಾರಮಾಡಿದ ಸ್ಥಳ; ಅರುಂಧತಿ ಸಹಿತ ಸಪ್ತರ್ಷಿಗಳು ತಪಸ್ಸು ಮಾಡಿದ ಸ್ಥಳ ; ಧ್ರುವನು ತಪಸ್ಸು ಮಾಡಿದ ಸ್ಥಳ ಇದೆ. ಇಲ್ಲಿ ಶುಕ್ರಾಚಾರ್ಯರ ವಿಗ್ರಹ, ಮಥುರಾನಾಥ ಮತ್ತು ದ್ವಾರಕಾನಾಥರ ಮಂದಿರಗಳು ಪ್ರೇಕ್ಷಣೀಯವಾದ ದೇವಾಲಯಗಳಾಗಿವೆ. ಇಲ್ಲಿ ತುಂಬಾ ಧರ್ಮಶಾಲೆಗಳಿವೆ. ಇಲ್ಲಿಂದ ಆರು ಮೈಲು ಉತ್ತರಕ್ಕೆ ವೃಂದಾವನವಿದೆ. ಈ ಪ್ರದೇಶವು ಶ್ರೀಕೃಷ್ಣನ ಬಾಲಲೀಲೆಗಳನ್ನು ನೆನಪಿಗೆ ತರುತ್ತದೆ. ವೃಂದಾವನವು ಮಂದಿರಗಳ ನಗರ. ಇಲ್ಲಿಂದ ಗೋಕುಲಕ್ಕೆ ಆರು ಮೈಲು ದೂರವಿದೆ. ಇದು ನಂದಗೋಪನ ವಾಸಸ್ಥಳ. ವಸುದೇವನು ಬಾಲಕೃಷ್ಣನನ್ನು ಗೋಕುಲಕ್ಕೆ ಸಾಗಿಸಿ, ಯಶೋದೆಯ ಬಳಿಯಲ್ಲಿ ಮಲಗಿಸಿ ಅಲ್ಲಿ ಮಲಗಿದ್ದ ದುರ್ಗೆಯನ್ನು ಮಥುರೆಗೆ ತಂದನು. ಈಗಲೂ ಮಥುರೆಯಿಂದ ಗೋಕುಲಕ್ಕೆ ಹೋಗಬೇಕಾದರೆ ಯಮುನಾ ನದಿಯನ್ನು ದಾಟಿಯೇ ಹೋಗಬೇಕು. ಈಗ ಇಲ್ಲಿ ಸೇತುವೆ ಇದೆ. ಈಗಲೂ ಇಲ್ಲಿ ದೊಡ್ಡ ದೊಡ್ಡ ಹುಲ್ಲುಗಾವಲುಗಳಿವೆ. ಇಲ್ಲಿ ನಂದಗೋಪನ ಮನೆ, ಪೂತನಾ ಸಂಹಾರದ ಸ್ಥಳವಿದೆ. ಮಥುರೆಯಿಂದ ಗೋವರ್ಧನ ಪರ್ವತಕ್ಕೆ ೧೬ ಮೈಲುದೂರವಿದೆ. ಮಥುರೆಯಿಂದ ೩೫ ಮೈಲು ದೂರದಲ್ಲಿ ರಾಧೆಯ ಜನ್ಮಭೂಮಿಯಾದ ಬರಸಾನಾ (ಬ್ರಹ್ಮಸಾನು, ವೃಷಭಾನುಪುರ) ಇದೆ.

೩. ಹರಿದ್ವಾರ (ಮಾಯಾ) -- ಇದನ್ನು ಪ್ರಾಚೀನ ಕಾಲದಲ್ಲಿ ಮಾಯಾಪುರಿ ಎನ್ನುತ್ತಿದ್ದರು. ಇದಕ್ಕೆ ಈಗ ಹರಿದ್ವಾರ, ಹರಿದ್ವರ, ಗಂಗಾದ್ವಾರಗಳೆಂಬ ಹೆಸರುಗಳಿವೆ. ಯಾಕೆಂದರೆ ಈ ಕ್ಷೇತ್ರವು ಬದರಿ, ಕೇದಾರ, ಗಂಗೋತ್ರಿ ಎಂಬ ಮೂರು ಕ್ಷೇತ್ರಗಳಿಗೆ ಹೋಗುವ ಮಹಾದ್ವಾರವಾಗಿದೆ. ಹಿಮಾಲಯ ಪರ್ವತದ ಅಂಚಿನಲ್ಲಿ ಹರಿದ್ವಾರವಿದೆ. ಇಲ್ಲಿ ಗಂಗಾದ್ವಾರ, ಕುಶಾವರ್ತ, ಬಿಲ್ವಕೇಶ್ವರ, ಕನಖಲ ಮತ್ತು ನೀಲಪರ್ವತವೆಂಬ ಐದು ಪ್ರಾಮುಖ್ಯ ಸ್ಥಳಗಳಿವೆ. ಇಲ್ಲಿ ನದಿಯು ಬಹಳ ವೇಗವಾಗಿ ಹರಿಯುತ್ತದೆ. ಇಲ್ಲಿ ನದಿಯ ಮೆಟ್ಟಲಿನ ಮೇಲೆಯೇ ಕುಳಿತು ತಂಬಿಗೆಯಿಂದ ಸ್ನಾನ ಮಾಡಬೇಕಾಗುತ್ತದೆ. ಇದಕ್ಕೆ ಪ್ರವಾಹದ ವೇಗ ಮತ್ತು ನೀರಿನ ತಂಪೇ ಕಾರಣ. ಇಲ್ಲಿ ಗಂಗಾನದಿಯ ಕೆಲವೊಂದು ಭಾಗಕ್ಕೆ ಬ್ರಹ್ಮಕುಂಡವೆನ್ನುತ್ತಾರೆ. ಇದಕ್ಕೆ ಇಲ್ಲಿಯ ಜನರು ಹರೀಕಿ ಪಾಯರಿ ಎನ್ನುತ್ತಾರೆ. ಇಲ್ಲಿ ನದೀಘಾಟಿನ ಮೇಲೆ ಗಂಗಾಮಾತೆಯ ಮಂದಿರವಿದೆ. ಇದಲ್ಲದೆ ಗಾಯತ್ರೀ, ರಾಮಚಂದ್ರ, ಬದರೀನಾರಾಯಣ, ಲಕ್ಷ್ಮೀನಾರಾಯಣ, ಮಾಯಾದೇವಿ, ಕಾಲಭೈರವ ಮೊದಲಾದ ಮಂದಿರಗಳಿವೆ. ಯಾತ್ರಿಕರು ಸಾಯಂಕಾಲ ಇಲ್ಲಿ ಭಕ್ತಿಯಿಂದ

ಗಂಗಾಮಾತೆಯನ್ನು ಪೂಜಿಸಿ ನದಿಗಳಲ್ಲಿ ದೀಪವನ್ನು ತೇಲಿಬಿಡುವರು. ಇವುಗಳಲ್ಲಿ ಯಾರ ದೀಪವು ನದಿಗಳಲ್ಲಿ ನಂದದೇ ದೂರ ಹೋಗುವುದೋ ಅವರು ದೀರ್ಘಾಯುಷಿಗಳೆಂದು ಭಾವಿಸುತ್ತಾರೆ. ಒಂದು ದೀಪಕ್ಕೆ ಇನ್ನೊಂದು ದೀಪ ಘರ್ಷಣೆಯಾಗದೆ ತೇಲಿದರೆ ಜೀವನವು ಸುಸೂತ್ರವಾಗಿ ಸಾಗುವುದೆಂದು ಭಾವಿಸುತ್ತಾರೆ. ಇಲ್ಲಿರುವ ಕುಶಾವರ್ತ ಘಾಟಿನಲ್ಲಿ ದತ್ತಾತ್ರೇಯನು ಹತ್ತುಸಾವಿರ ವರ್ಷಗಳವರೆಗೆ ಒಂದೇ ಕಾಲಿನಲ್ಲಿ ನಿಂತು ತಪಸ್ಸನ್ನು ಆಚರಿಸಿದ್ದನಂತೆ! ಈಗಲೂ ಅಲ್ಲಿ ದತ್ತಾತ್ರೇಯ ಕುಶ, ದಂಡ, ಕಮಂಡಲುಗಳನ್ನು ಘಾಟಿನ ಮೇಲೆ ಕಾದಿರಿಸಿದ್ದಾರೆ. ಬಿಲ್ವಕೇಶ್ವರ ಪರ್ವತದ ಮೇಲೆ ಹೋಗಿ ಕುಳಿತರೆ ಹರಿದ್ವಾರವೆಲ್ಲ ನಯನ ಮನೋಹರವಾಗಿ ಕಾಣಿಸುವುದು. ಹರಿದ್ವಾರದಿಂದ ಎರಡು ಮೈಲಿನ ಮೇಲೆ ಕನಖಲ ಕ್ಷೇತ್ರವಿದೆ. ಇಲ್ಲಿ ನೀಲಾ, ಧಾರಾ ಮತ್ತು ಗಂಗಾನದಿಯ ಸಂಗಮವಿದೆ. ಇಲ್ಲೇ ದಾಕ್ಷಾಯಣಿಯು ತಂದೆಯ ಮೇಲಿನ ಕೋಪದಿಂದ ತನ್ನ ದೇಹವನ್ನು ಅಗ್ನಿಗೆ ಆಹುತಿಯಿತ್ತಳು. ನೀಲಪರ್ವತದ ಹತ್ತಿರ ಹರಿಯುವ ಗಂಗಾ ಪ್ರವಾಹಕ್ಕೆ ನೀಲಧಾರಾ ಎನ್ನುತ್ತಾರೆ.

ಹರಿದ್ವಾರದಲ್ಲಿ ದಕ್ಷೇಶ್ವರ, ರಾಧಾಕೃಷ್ಣ, ರಾಮಜಾನಕಿ, ಮೋಟೇಶ್ವರ ಮತ್ತು ವೇದವ್ಯಾಸರ ಗುಡಿಗಳು ಪ್ರೇಕ್ಷಣೀಯವಾಗಿವೆ. ಪ್ರತಿ ಹನ್ನೆರಡು ವರ್ಷಕ್ಕೊಮ್ಮೆ ಇಲ್ಲಿ ಕುಂಭಮೇಳವೆಂಬ ಜಾತ್ರೆ ಜರುಗುವುದು. ಇಲ್ಲಿಂದ ಹದಿನೈದು ಮೈಲು ದೂರದಲ್ಲಿರುವುದೇ ಋಷೀಕೇಶ ಕ್ಷೇತ್ರ.

೪. **ಕಾಶಿ** -- **ನೋ** -- **ಕಾಶಿ.**

೫. **ಕಾಂಚಿ** -- **ನೋ** -- **ಕಾಂಚಿ.**

೬. ಅವಂತಿಕಾ -- ನೋ. -- ಅವಂತಿ, ಉಜ್ಜಯಿನಿ. ಅವಂತಿಕಾನಗರಕ್ಕೆ ಉಜ್ಜಯಿನಿ ಎಂದು ಹೇಳುತ್ತಾರೆ. ಇಲ್ಲಿ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಮಹಾಕಾಲೇಶ್ವರ ಲಿಂಗವಿದೆ. ೫೧ ಶಕ್ತಿಪೀಠಗಳಲ್ಲಿ ಇದೂ ಒಂದು. ಇಲ್ಲಿ ಭಗವಾನ್ ವಿಷ್ಣುವಿನ ಶರೀರದಿಂದ ಉತ್ಪನ್ನವಾದ ಸಿಪ್ರಾನದಿಯು ಹರಿಯುತ್ತದೆ. ಇಲ್ಲಿ ಮಹಾಕಾಲ ಮಂದಿರವು ಮುಖ್ಯವಾದುದು. ಇದರಲ್ಲಿ ಓಂಕಾರೇಶ್ವರ ಮತ್ತು ಮಹಾಕಾಲ ಲಿಂಗಗಳಿವೆ. ಇಲ್ಲಿ ದೇವಸ್ಥಾನಕ್ಕೆ ಐದು ಅಂತಸ್ತುಗಳಿವೆ. ಇಲ್ಲಿ ದೇವಾಲಯದ ಹತ್ತಿರ ಕೋಟಿತೀರ್ಥ ಎಂಬ ಸರೋವರವಿದೆ.

೭. ದ್ವಾರಕಾ -- ನೋ. -- ದ್ವಾರಕಾ. ಶ್ರೀಕೃಷ್ಣನು ಪ್ರಭಾಸ ಕ್ಷೇತ್ರದಲ್ಲಿ ಸ್ವಧಾಮಕ್ಕೆ ತೆರಳಿದ ಮೇಲೆ ಸಮುದ್ರವು ದ್ವಾರಕೆಯನ್ನು ಮುಳುಗಿಸಿತೆಂದು

ಭಾರತ, ಭಾಗವತಗಳಲ್ಲಿದೆ. ಆದರೆ ಭಗವನ್ಮಂದಿರ ಒಂದು ಮಾತ್ರ ಉಳಿಯಿತು. ಅದನ್ನೇ ಈಗ ದ್ವಾರಕೆ ಎನ್ನುತ್ತಾರೆ. ಪಶ್ಚಿಮ ಭಾರತದಲ್ಲಿ, ಸೌರಾಷ್ಟ್ರ ಪ್ರದೇಶದ ಕೊನೆಯ ಪಶ್ಚಿಮ ಸಮುದ್ರತೀರದಲ್ಲಿ, ಓಖಾಮಂಡಲದಲ್ಲಿ ಗೋಮತಿ ನದಿಯು ಸಮುದ್ರಕ್ಕೆ ಸಂಗಮವಾಗುವಲ್ಲಿ ಈ ಕ್ಷೇತ್ರವಿದೆ.

ದ್ವಾರಕೆಯಲ್ಲಿ ಒಂದು ದೊಡ್ಡ ತಗ್ಗು ಇದ್ದು ಅಲ್ಲಿ ಸಮುದ್ರದ ಜಲವು ತುಂಬಿ ನಿಂತಿರುತ್ತದೆ. ಆ ಸ್ಥಳವನ್ನು ಗೋಮತಿ ಎನ್ನುತ್ತಾರೆ. ಇಲ್ಲಿದ್ದ ದ್ವಾರಕಾಧೀಶನ ಮಂದಿರವು ಏಳು ಅಂತಸ್ತಿನದು. ಈ ದೇವಾಲಯವನ್ನು ಶ್ರೀಕೃಷ್ಣನ ಮೊಮ್ಮಗನಾದ ವಜ್ರನು ವಿಶ್ವಕರ್ಮನಿಂದ ಕಟ್ಟಿಸಿದನೆನ್ನುತ್ತಾರೆ. ಇಲ್ಲಿ ವರ್ಷಕ್ಕೆ ಏಳು-ಎಂಟು ಇಂಚು ಮಳೆ ಮಾತ್ರ ಬರುತ್ತದೆ. ಇಲ್ಲಿ ಸಿಹಿನೀರಿನ ಅಭಾವ ತುಂಬ ಇದೆ.

ದ್ವಾರಕೆಯಿಂದ ಹದಿನೆಂಟು ಮೈಲು ದೂರದಲ್ಲಿ ದ್ವಾರಕಾದ್ವೀಪವಿದೆ. ಇಲ್ಲೇ ಸಮೀಪದಲ್ಲಿ ಗೋಪೀತಲಾವ ಎಂಬಲ್ಲಿ ಶುಭ್ರವಾದ ಗೋಪಿಚಂದನ ದೊರೆಯುತ್ತದೆ. ಇಲ್ಲೇ ಗೋಪಿಕಾಸ್ತ್ರೀಯರು ಶ್ರೀಕೃಷ್ಣನ ವಿಯೋಗ ದುಃಖವನ್ನು ಸಹಿಸದೆ ತಮ್ಮ ಪಾರ್ಥಿವದೇಹವನ್ನು ತ್ಯಜಿಸಿದರು. ಇಲ್ಲಿ ದೊರೆಯುವ ಗೋಪಿಚಂದನದೊಳಗೆ ಚಕ್ರಾಯುಧದ ಗುರುತಿದೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ರಜತಪೀಠ (ಉಡುಪಿ), ಕುಮಾರಾದ್ರಿ (ಸುಬ್ರಹ್ಮಣ್ಯ), ಕುಂಭಕಾಶಿ, ಧ್ವಜೇಶ್ವರ (ಕೋಟೇಶ್ವರ), ಕ್ರೋಢ (ಶಂಕರನಾರಾಯಣ), ಗೋಕರ್ಣ, ಮೂಕಾಂಬಾ (ಕೊಲ್ಲೂರು) -- ಇವು ಸಪ್ತಕ್ಷೇತ್ರಗಳಾಗಿವೆ.

ಸಪ್ತಪುಣ್ಯನದಿಗಳು -- ೧. ಗಂಗಾ, ೨. ಯಮುನಾ, ೩. ಗೋದಾವರಿ, ೪. ಸರಸ್ವತಿ, ೫. ಕಾವೇರಿ, ೬. ನರ್ಮದಾ, ೭. ಸಿಂಧು.

ಸಪ್ತಕ್ಷೇತ್ರಗಳು -- ೧. ಕುರುಕ್ಷೇತ್ರ (ಪಂಜಾಬು), ೨. ಹರಿಹರಕ್ಷೇತ್ರ (ಸೋನಪುರ), ೩. ಪ್ರಭಾಸಕ್ಷೇತ್ರ (ವೇರಾವಳ). ೪. ರೇಣುಕಾಕ್ಷೇತ್ರ (ಉತ್ತರಪ್ರದೇಶ - ಮಧುರೆಯ ಹತ್ತಿರ), ೫. ಭೃಗುಕ್ಷೇತ್ರ (ಭರೋಚ), ೬. ಪುರುಷೋತ್ತಮ ಕ್ಷೇತ್ರ (ಜಗನ್ನಾಥಪುರಿ), ೭. ಸೂಕರಕ್ಷೇತ್ರ (ಸೋರೋ).

ಸಪ್ತರಾವ -- ಗರುಡನ ಮಗನೊಬ್ಬ (ಮ.ಉ.).

ಸಪ್ತರ್ಷಿಗಳು -- ಕಶ್ಯಪ. ಅತ್ರಿ, ಭರದ್ವಾಜ, ವಿಶ್ವಾಮಿತ್ರ, ಗೌತಮ, ಜಮದಗ್ನಿ, ವಸಿಷ್ಠ, (ಭಾರ ಕಲ್ಕರ್ಶ) ಮರೀಚಿ, ಅತ್ರಿ, ಅಂಗಿರಸ್ಸು, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ -- ಇವರಿಗೆ ಚಿತ್ರಶಿಖಂಡಿಗಳೆಂದೂ (ಚಿತ್ರವರ್ಣದ ಜುಟ್ಟುಗಳುಳ್ಳವರು)

ಸಪ್ತಋಷಿಗಳೆಂದೂ ಹೇಳುತ್ತಾರೆ. ಈ ಮುನಿಗಳು ಬೇರೆಬೇರೆ ಕಲ್ಪಗಳಲ್ಲಿದ್ದವರು. ಇವರು ಕಾಶೀ ದೇಶದ ವೃಷದರ್ಭರಾಜನ ಮಗನೊಡನೆ ಧರ್ಮಾಧರ್ಮದ ಕುರಿತು ಸಂಭಾಷಿಸಿದರು. ಒಮ್ಮೆ ಅಗ್ನಿಯು ಸಪ್ತರ್ಷಿಗಳ ಪತ್ನಿಯರನ್ನು ಕಾಮಿಸಲು ಈತನ ಪತ್ನಿಯಾದ ಸ್ವಾಹಾದೇವಿಯು ಆರುಂಧತಿಯ ರೂಪವನ್ನು ಬಿಟ್ಟು ಇತರರ ರೂಪದಿಂದ ಅಗ್ನಿಯನ್ನು ತೃಪ್ತಿಪಡಿಸಲು, ವಸಿಷ್ಠನನ್ನು ಬಿಟ್ಟು ಉಳಿದವರು ತಮ್ಮ ಪತ್ನಿಯರ ಮೇಲೆ ಕೋಪಗೊಂಡು ಅವರನ್ನು ತ್ಯಜಿಸಲು, ವಿಶ್ವಾಮಿತ್ರನು ಉಳಿದ ಮುನಿಗಳೊಡನೆ ಅದು ಸ್ವಾಹಾದೇವಿಯ ಕೃತ್ಯವೆಂದು ಹೇಳಿದರೂ, ಉಳಿದ ಮುನಿಗಳು ಲೋಕಾಪವಾದಕ್ಕೆ ಭಯಪಟ್ಟು ತಮ್ಮ ಪತ್ನಿಯರನ್ನು ತ್ಯಜಿಸಿದರು (ಮ.ವ.,ಅನು.,ಶಾಂ.ಶ).

ಸಮಂತಪಂಚಕ--ಒಂದು ಪವಿತ್ರ ಕ್ಷೇತ್ರ. ಇದು ಪರಶುರಾಮನಿಂದ ನಿರ್ಮಿತವಾಯಿತು. ಇದಕ್ಕೆ ಕಾಲಾಂತರದಲ್ಲಿ ಕುರುಕ್ಷೇತ್ರವೆಂಬ ಹೆಸರೂ ಬಂತು. ಜಯದ್ರಥನ ತಂದೆ ವೃದ್ಧಕ್ಷತ್ರನು, ಇದರ ಬಳಿಯಲ್ಲೇ ತಪಸ್ಸು ಮಾಡುತ್ತಿದ್ದಾಗ ಅರ್ಜುನನಿಂದ ಕತ್ತರಿಸಲ್ಪಟ್ಟ ಸೈಂಧವನ ರುಂಡವು ಇವನ ಹಸ್ತದ ಮೇಲೆ ಬೀಳಲು ಇವನು ಅದನ್ನು ನೆಲಕ್ಕೆ ಕೆಡವಿದನು. ಪರಶುರಾಮನು ಕ್ಷತ್ರಿಯರನ್ನು ಕೊಂದು ಇಲ್ಲಿಯೇ ಅವರ ರಕ್ತದ ಐದು ಮಡುಗಳನ್ನು ನಿರ್ಮಿಸಿ ಋಚೀಕಾದಿ ಪಿತೃಗಳಿಗೆ ರಕ್ತದಿಂದ ತರ್ಪಣ ಕೊಟ್ಟನು.

ಕುರುಕ್ಷೇತ್ರದಲ್ಲಿ ಧರ್ಮಕ್ಷೇತ್ರ ಮತ್ತು ಕುರುಕ್ಷೇತ್ರವೆಂಬೆರಡು ಭಾಗಗಳಿದ್ದು ಸಮಂತಕ ಪಂಚಕವು ಧರ್ಮಕ್ಷೇತ್ರದಲ್ಲಿದೆ. ಇವು ಈಗ ಎರಡು ಸರೋವರಗಳಾಗಿವೆ. ಇವುಗಳಲ್ಲಿ ಒಂದು ಸರೋವರವು ಒಂದು ಮೈಲುದ್ದ, ಮುಕ್ಕಾಲು ಮೈಲು ಅಗಲವಿದೆ. ಇದರ ಮೂರು ದಿಕ್ಕಿಗೆ ಅನೇಕ ಘಾಟುಗಳೂ, ದೊಡ್ಡ ದೊಡ್ಡ ದೇವಮಂದಿರಗಳೂ ಇವೆ. ನೋ.--ಕುರುಕ್ಷೇತ್ರ. ಸಮಂತಚಕಕ್ಕೆ ಸ್ಯಮಂತಪಂಚಕವೆನ್ನುತ್ತಾರೆ. ಇಲ್ಲೇ ಮೊದಲು ಕೌರವ -- ಪಾಂಡವರಿಗೆ ಯುದ್ಧ ನಡೆಯಿತು (ಮ.ಆ.). ಸಮಂತಪಂಚಕವೆಂಬ ಮಡುವಿನ ಸುತ್ತಲಿನ ಪ್ರದೇಶಕ್ಕೆ ಸಮಂತಪಂಚಕ ಕ್ಷೇತ್ರವೆನ್ನುತ್ತಾರೆ. (ಮ.ಆ.,ಶ.,ವ.,ದ್ರೋ).

ಸಪ್ತಸಾರಸ್ವತ -- ತೀರ್ಥವೊಂದು. ಸುಪ್ರಭಾ (ಸುಭದ್ರೆ), ಕಾಂಚನಾಕ್ಷಿ, ವಿಶಾಲಾ, ಮನೋರಮಾ, ಓಘವತಿ, ಸುರೇಣು, ವಿಮಲೋದಕವೆಂಬ ಏಳು ಶಾಖೆಗಳಾಗಿ ಸರಸ್ವತಿ ನದಿಯು ಹರಿಯುವ ಸ್ಥಳ. ಇದರ ತೀರದಲ್ಲಿ ಮಂಕಣ ಮುನಿಯ ಆಶ್ರಮವಿದೆ. ನೋ -- ಮಂಕಣ (ಕ). ಬ್ರಹ್ಮದೇವನೇ ಯಜ್ಞದೀಕ್ಷೆಯನ್ನು ವಹಿಸಿದ ಯಜ್ಞದಲ್ಲಿ ಪುಷ್ಕರ ತೀರ್ಥದಲ್ಲಿ -- ದೇವತೆಗಳು ತೃಪ್ತಿಹೊಂದಿದರೂ ಸರಸ್ವತಿ ನದಿಯು ಕಾಣಿಸದಿರಲು, ಬ್ರಹ್ಮನು ಅವಳನ್ನು ಸ್ಮರಿಸಲು

ಸುಭದ್ರೆಯು ಆ ಕ್ಷೇತ್ರದಲ್ಲಿ ಹರಿಯಲಾರಂಭಿಸಿದಳು (ಮ.ಶ.,ವ.) ನೋ.--ಸಾರಸ್ವತ ಸಪ್ತ.

ಸಭೆ -- ಸಭೆಗಳಲ್ಲಿ ಯುಧಿಷ್ಠಿರನ, ಇಂದ್ರನ, ಯಮನ, ವರುಣನ, ಕುಬೇರನ ಮತ್ತು ಬ್ರಹ್ಮನ ಸಭೆಗಳು ಮುಖ್ಯವಾದವು. ಇಂದ್ರನ ಸಭೆಯನ್ನು ಸುಧರ್ಮ, ಯುಧಿಷ್ಠಿರನ ಸಭೆಯನ್ನು ರಾಕ್ಷಸರ ಶಿಲ್ಪಿಯಾದ ಮಯನು ಪಾಂಡವರಿಗೆ ನಿರ್ಮಿಸಿಕೊಟ್ಟನು. ನೋ.--ಮಯ, ಶಂತನು, ಮಹಾಭಿಷ. ಈ ಸಭೆಯು ಸಾಮಾನ್ಯವಾದುದಲ್ಲ. ಅದರ ನೆಲ ಮತ್ತು ಗೋಡೆಯೆಲ್ಲ ಥಳಥಳಿಸುತ್ತಿದ್ದವು. ಗೋಡೆಯ ಮೇಲೆ ಒಂದು ಕಡೆ ಬಿಡಿಸಿದ ಚಿತ್ರವು ಇನ್ನೊಂದು ಕಡೆ ಪ್ರತಿಬಿಂಬಿಸುತ್ತಿತ್ತು. ಈ ಪ್ರತಿಬಿಂಬದ ಮಹಿಮೆಯಿಂದ ನಿಜವಾದ ದ್ವಾರವು ಎಲ್ಲಿರುವುದೆಂದು ಭೇದಿಸಿ ತಿಳಿಯಲು ಕಷ್ಟವಾಗುತ್ತಿತ್ತು. ಅಲ್ಲದೆ ಅದರ ನೆಲದಲ್ಲಿ ಅಲ್ಲಲ್ಲಿ ಕೃತ್ರಿಮ ಸರಸ್ಸುಗಳನ್ನೂ ಕಲ್ಪಿಸಿದ್ದನು. ಆ ಕೃತ್ರಿಮ ಸರಸ್ಸುಗಳಲ್ಲಿ ಕೃತ್ರಿಮ ತಾವರೆಗಳು ಅರಳಿ ಕೃತ್ರಿಮ ಸುಗಂಧವನ್ನು ನಾಲ್ಕು ಕಡೆಗೂ ಬೀರುತ್ತಿತ್ತು. ಈ ಸುಗಂಧಕ್ಕೆ ಕೃತ್ರಿಮ ತುಂಬಿಗಳು ಮುಕುರುತ್ತಿದ್ದವು. ಒಟ್ಟಿನ ಮೇಲೆ ಆ ಸಭೆಯ ಸ್ಫಟಿಕಮಯವಾದ ನೆಲವನ್ನೂ ನೀರನ್ನೂ ಭೇದಿಸಿ ತಿಳಿಯಬೇಕಾದರೆ ಪಾಂಡಿತ್ಯವೇ ಬೇಕಾಗಿತ್ತು. ಇದೇ ಸಭೆಯಲ್ಲಿ ನಡೆದಾಡಿ ದುರ್ಯೋಧನನು ಪಾಂಡವರಿಂದ ಅಪಹಾಸ್ಯಕ್ಕೆ ಗುರಿಯಾದನು (ಮ.ಆ.,ಸ.,ಶಾಂ.).

ಸಮ -- ಧೃತರಾಷ್ಟ್ರನ ಒಬ್ಬ ಮಗ (ಮ.ಆ.,ಭೀ.,ಕ.).

ಸಮಂಗ--ಮುನಿಯೊಬ್ಬ. ಇವನು ಮೊದಲು ಅಷ್ಟಾವಕ್ರನಾಗಿದ್ದು ಸಮಂಗಾನದಿಯಲ್ಲಿ ಸ್ನಾನಮಾಡಿದ ಮೇಲೆ ದೇಹದ ವಿಕಾರವನ್ನು ಕಳೆದುಕೊಂಡು ಋಜ್ವಂಗ ಅಥವಾ ಸಮಂಗನೆಂದು ಕರೆಯಲ್ಪಟ್ಟನು. ಜ್ಞಾನವೊಂದೇ ಸಕಲ ದುಃಖಗಳನ್ನು ಕಳೆಯಬಲ್ಲುದೆಂದು ಈತನ ಅಭಿಪ್ರಾಯವಾಗಿತ್ತು (ಮ.ವ.).

ಸಮಂಗಾ -- ೧. ಪುಣ್ಯನದಿಯೊಂದು. ನೋ.--ಸಮಂಗ (ಮ.ವ). ೨. ದೇಶವೊಂದು.

ಸಮರಥ --ಮಹಾರಾಜನಾದ ವಿರಾಟನ -- ಮತ್ಸ್ಯರಾಜನ ಸೋದರ (ಮ.ದ್ರೋ.).

ಸಮಶೌರಭ -- ಜನಮೇಜಯನ ಸರ್ಪಸತ್ರದ ಸದಸ್ಯನೊಬ್ಬ (ಮ.ಆ.).

ಸಮಾಧಿ -- ೧. ಅಷ್ಟಾಂಗಯೋಗದಲ್ಲಿ ಕೊನೆಯ ಮೆಟ್ಟಲು. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ -- ಇವು ರಾಜಯೋಗಕ್ಕೆ ಸೇರಿದವುಗಳು. ಸಮಾಧಿಯಲ್ಲಿ ಸವಿಕಲ್ಪ -- ನಿರ್ವಿಕಲ್ಪ ಸಮಾಧಿಗಳೆಂದು ಮುಖ್ಯವಾಗಿ ಎರಡು ವಿಧಗಳಿವೆ (ವಿ.ರಾ.). ೨. ಒಬ್ಬ ವೈಶ್ಯನ ಹೆಸರು. ಧನಲೋಭದಿಂದ ಇವನ ಹೆಂಡಿರುಮಕ್ಕಳು ಇವನನ್ನು ಅರಣ್ಯಕ್ಕೆ

ಅಟ್ಟಲು, ಸುಮೇಧಸನೆಂಬ ಮುನಿಯ ಸಹಾಯದಿಂದ ಮೂರು ವರ್ಷ ದೇವಿಯನ್ನಾರಾಧಿಸಿ ವೈರಾಗ್ಯ ಹೊಂದಿ ಈತನು ಮುಕ್ತಿಯನ್ನು ಪಡೆದನು (ದೇವೀಭಾ., ಮಾರ್ಕಂ.ಪು.).

ಸಮೀಕ -- ದ್ರೌಪದಿಯ ಸ್ವಯಂವರಕ್ಕಾಗಿ ಬಂದ ಕ್ಷತ್ರಿಯನೊಬ್ಬ (ಮ.ಆ.,ಸ.).

ಸಮೀಚೀ -- ಅಪ್ಸರೆಯೊಬ್ಬಳು. ಈಕೆ ಶಾಪದಿಂದ ಮೊಸಳೆಯಾಗಿ ಅರ್ಜುನನಿಂದ ಶಾಪವಿಮೋಚನೆ ಹೊಂದಿದಳು. ನೋ.--ನಾರೀತೀರ್ಥ (ಮ.ಆ.).

ಸಮುದ್ರ -- ಲವಣ (ಉಪ್ಪು), ಇಕ್ಷು (ಕಬ್ಬಿನ ರಸ). ಸುರಾ (ಹೆಂಡ), ಸರ್ಪಿ (ತುಪ್ಪ), ದಧಿ (ಮೊಸರು), ಕ್ಷೀರ (ಹಾಲು), ಜಲ (ನೀರು) ಸಮುದ್ರಗಳೆಂಬ ಏಳು ಸಮುದ್ರಗಳಿವೆ. ಸಮುದ್ರರಾಜನ ಪತ್ನಿ ಗಂಗೆ. ಕಾಲೇಯರೆಂಬ ದೈತ್ಯರ ನಾಶಕ್ಕಾಗಿ ಅಗಸ್ತ್ಯರು ಸಮುದ್ರವನ್ನು ಪಾನಮಾಡಿದರು. ಭಗೀರಥನು ಸಾಗರರ ಹಿತಕ್ಕಾಗಿ ತಂದ ಗಂಗೆಯಿಂದ ಸಮುದ್ರವು ತುಂಬಿ ಬಂತು. ದೇವತೆಗಳು ಅಮೃತವನ್ನು ಪಡೆಯಲು ಸಮುದ್ರವನ್ನು ಮಥಿಸಿ, ಕಾಮಧೇನು, ಕಲ್ಪವೃಕ್ಷ, ಉಚ್ಚೈಶ್ರವಸ್ಸು, ಲಕ್ಷ್ಮಿ, ಕೌಸ್ತುಭ, ಪಾರಿಜಾತ, ಸುರ, ಧನ್ವಂತರಿ, ಚಂದ್ರ, ಐರಾವತ, ಅಪ್ಸರಸ್ತ್ರೀಯರು, ಹಾಲಾಹಲ. ಶಾರ್ಙ್ಗ, ಪಾಂಚಜನ್ಯ, ಅಮೃತ ಮುಂತಾದ ವಸ್ತುಗಳನ್ನು ಪಡೆದರು. ನೋ.-- ಗಂಗೆ.-- ಭಗೀರಥ, ಅಗಸ್ತ್ಯ (ನಾನಾ.ಶ.).

ಸಮುದ್ರಸೇನ--ಪಾಂಡವಪಕ್ಷದ ರಾಜನಾಗಿದ್ದು ತನ್ನ ಪಕ್ಷದ ಚಿತ್ರಸೇನರಾಜನನ್ನು ಕೊಂದನು. ಸಮುದ್ರಸೇನನ ಮಗನೇ ಚಂದ್ರಸೇನ. ಇವನು ಅಶ್ವತ್ಥಾಮನಿಂದ ಹತನಾದನು (ಮ.ಆ,ಸ.,ಉ.,ಕ.,ದ್ರೋ.).

ಸಂಪತ್ಕರಿ --ಒಬ್ಬಳು ದೇವತೆ. ಈಕೆ ತ್ರಿಪುರಸುಂದರಿಯ ಗಜಗಳ ನಾಯಿಕೆ. ಈಕೆ ಲಲಿತಾಪರಮೇಶ್ವರಿಯ ಅಂಕುಶಾಸ್ತ್ರದಿಂದ ಉದ್ಭವಿಸಿದಳು (ಲಲಿತಾಸ).

ಸಂಪಾತಿ --೧. ಅರುಣನ ಮಗ. ಈತನ ಸಹೋದರ ಜಟಾಯು; ಮಗ ಸುಪಾರ್ಶ್ವ. ಸೂರ್ಯನಿಂದ ಗರಿಸುಟ್ಟುಕೊಂಡ ಈತನು ಶ್ರೀರಾಮನ ಅನುಚರರಾದ ಕಪಿಗಳಿಗೆ ಸೀತಾದೇವಿಯು ಇದ್ದ ಸ್ಥಾನವನ್ನು ತಿಳಿಸಿದನು (ಮ.ಆ.,ವ.,ರಾಮಾ.ಕಿಷ್ಕಿಂ.) ಚಂದ್ರನೆಂಬ ಮುನಿಯು ಈತನಿಗೆ 'ಸೀತಾ ಸಂಶೋಧನೆಗೆ ಹೊರಟ ವಾನರರಿಗೆ ಲಂಕೆಯ ಮಾರ್ಗದರ್ಶನ ಮಾಡಿದೊಡನೆ ರೆಕ್ಕೆ ಚಿಗುರುವುದು' ಎಂದನು. ಹಾಗೇ ಆಯಿತು (ಮನಂ.ರಾ). ೨. ಮಾಲಿ ಎಂಬ ರಾಕ್ಷಸನ ಮಗ. ನೋ.--ಮಾಲಿ.

ಸಂಪ್ರಿಯಾ -- ಚಂದ್ರವಂಶದ ಕುರುರಾಜನ ಸೊಸೆ. ವಿದೂರಥನ ಪತ್ನಿ. ಈಕೆ ಮಗಧ ರಾಜನ ಮಗಳು (ಮ.ಆ.).

ಸಂಭಲಗ್ರಾಮ -- ನೋ.--ಶಂಭಲಗ್ರಾಮ, ಕಲ್ಕಿ, ವಿಷ್ಣುವು ಕಲ್ಕಿರೂಪದಲ್ಲಿ ಇಲ್ಲಿ ಅವತರಿಸಿದನು (ಮ.ಆ.,ವ.).

ಸಮ್ಮೋಹನಾಸ್ತ್ರ--ಅರ್ಜುನನು ಬಲ್ಲ ಒಂದು ಮಹಾಸ್ತ್ರ. ಉತ್ತರಗೋಗ್ರಹಣದಲ್ಲಿ ಅರ್ಜುನನು: ಈ ಅಸ್ತ್ರದಿಂದ ಕುರುಸೇನೆಯನ್ನು ಗೆದ್ದನು. ಇದು ಭೀಷ್ಮರನ್ನು ಬಿಟ್ಟು ಉಳಿದೆಲ್ಲರನ್ನೂ ಎಚ್ಚರತಪ್ಪಿಸಿತು (ಮ.ವಿ.).

ಸಂಯುಗ್ವ -- ನೋ. -- ರೈಕ್ವ.

ಸಂಯಮಿನಿ -- ನೋ. -- ಶ್ಯಮಿನಿ. ಇದು ಯಮನ ರಾಜಧಾನಿ (ಮ.ವ.).

ಸಂಹ್ಲಾದ -- ನೋ. -- ಸಂಹ್ರಾದ.

ಸರಮಾ--೧. ಶ್ರೀರಾಮನ ರಾಜ್ಯಭಾರಕಾಲದಲ್ಲಿ ಸರ್ವಾರ್ಥಸಿದ್ಧನೆಂಬ ಭಿಕ್ಷುಕನು ಹೊಡೆದ ನಾಯಿ. ಇದು ಶ್ರೀರಾಮನಿಗೆ ದೂರು ಕೊಟ್ಟು, ಆ ಭಿಕ್ಷುಕನನ್ನು ದೇವಾಲಯದ ಅಧಿಕಾರಿಯನ್ನಾಗಿ ಮಾಡಿತು (ರಾಮಾ.ಉತ್ತರ.). ೨. ಪರೀಕ್ಷಿತನ ಮಗ. ಜನಮೇಜಯನ ಯಾಗಶಾಲೆಗೆ ಬಂದ ನಾಯಿಯ ತಾಯಿ. ಇದರ ಮರಿ ಸರಮೇಯವನ್ನು ಜನಮೇಜಯನ ಸೋದರರು ಹೊಡೆದಟ್ಟಲು, ಅದು ಸರಮೆಯೊಡನೆ ಜನಮೇಜಯನಿಗೆ ದೂರುಕೊಡಲು ಅವನು ಈ ಅಪರಾಧಕ್ಕಾಗಿ ಶಾಂತಿಕರ್ಮವನ್ನು ಮಾಡಿಸಿದನು. ನೋ.-ಜನಮೇಜಯ (ಮ.ಸ.,ಆ.). ೩. ವಿಭೀಷಣನ ಪತ್ನಿ. ಈಕೆ ಶೈಲೂಷನೆಂಬ ಗಂಧರ್ವನ ಮಗಳು. ಈಕೆ ರಾಮರಾವಣರ ಯುದ್ಧವಿಚಾರವನ್ನು ಸೀತೆಗೆ ಆಗಾಗ ಹೇಳುತ್ತ ಸೀತೆಯ ದುಃಖವನ್ನು ಸಮಾಧಾನಪಡಿಸುತ್ತಿದ್ದಳು (ರಾಮಾ.ಉತ್ತರ., ಯುದ್ಧ).

ಈಕೆ ವಿಭೀಷಣನ ತಂಗಿ. ರಾವಣನು ಹೋಮ ಮಾಡುವ ಗುಹೆಯ ಬಾಗಿಲನ್ನು ಈಕೆ ವಿಭೀಷಣನಿಗೆ ತೋರಿಸಿದಳು (ನಂ.ರಾ.).

ಸರಯೂ -- ನೋ.-ಸಪ್ತಪುರಿ. ಇದು ಅಯೋಧ್ಯೆ ಸಮೀಪ ಹರಿಯುವ ನದಿ. ಇದನ್ನು ಗೋಗ್ರಾ ನದಿಯೆನ್ನುತ್ತಾರೆ. ಇದು ಹಿಮಾಲಯದ ಸರಸ್ಸೊಂದರಲ್ಲಿ ಹುಟ್ಟಿದುದರಿಂದ ಇದನ್ನು ಸರಯೂ ಎನ್ನುತ್ತಾರೆ. ಶ್ರೀರಾಮನು ಅವತಾರವನ್ನು ಸಮಾಪ್ತಿಗೊಳಿಸುವಾಗ ತನ್ನ ಪರಿವಾರ ಮತ್ತು ಪ್ರಜೆಗಳೊಡನೆ ಈ ನದಿಯಲ್ಲಿ ಮುಳುಗಿದನು. ಇದರಲ್ಲಿ ಶ್ರೀರಾಮನು ಕಪಿಗಳು ಮತ್ತು ರಾಕ್ಷಸರೊಡನೆ ಮುಳುಗಿದ ಸ್ಥಳಕ್ಕೆ ಈಗ ಗೋಪ್ರತರಾಖ್ಯ (ದನಗಳ ಗುಂಪಿನಂತೆ ದಾಟಿಹೋಗುತ್ತ ಮುಳುಗಿದ ಸ್ಥಳ) ತೀರ್ಥವೆನ್ನುತ್ತಾರೆ (ಮ.ಸ.ಭೀ.,ರಾಮಾ.ಉತ್ತರ.,ಬಾಲ.).

ವಿಷ್ಣುವು ಮತ್ಸ್ಯಾವತಾರವನ್ನು ಮಾಡಿ, ನಾಲ್ಕು ವೇದಗಳನ್ನು ಅಪಹಾರ ಮಾಡಿದ ಶಂಖಾಸುರನನ್ನು ಕೊಂದು ವೇದಗಳನ್ನು ಬ್ರಹ್ಮನಿಗೆ ಕೊಟ್ಟನು. ಆದೇ

ಕಾಲದಲ್ಲಿ ವಿಷ್ಣುವಿನ ನೇತ್ರಗಳಿಂದ ಆನಂದಾಶ್ರುಗಳು ಸುರಿದು, ಬಿಂದುಸರೋವರದಲ್ಲಿ ಬಿದ್ದವು. ಆಮೇಲೆ ಆ ನೀರು ಮಾನಸ ಸರೋವರಕ್ಕೆ ಹರಿದು ಬಂತು. ಮುಂದೆ ಜಲಸೌಕರ್ಯವಿಲ್ಲದೆ ಅಯೋಧ್ಯೆಯಲ್ಲಿ ವೈವಸ್ವತ ಮನುವು ಯಜ್ಞಮಾಡಲು ಅಪೇಕ್ಷಿಸಲು ವಸಿಷ್ಠನ ಸೂಚನೆಯಂತೆ ಅಯೋಧ್ಯೆಯ ಬಳಿಯಲ್ಲಿ ನೀರಿನ ಅನುಕೂಲತೆಯನ್ನು ಉಂಟುಮಾಡಬೇಕೆಂದು ಮನುವು ಮಾನಸ ಸರೋವರಕ್ಕೆ ಬಾಣವನ್ನು ಹೊಡೆಯಲು ಆ ಸರೋವರದಿಂದ ಬಾಣದ ಮಾರ್ಗವನ್ನೇ ಅನುಸರಿಸಿ ನದಿಯೊಂದು ಹರಿದು ಬಂತು. ಶರಪ್ರಯೋಗದಿಂದ ಬಂದುದರಿಂದ ಶರಯೂ ನದಿಯೆಂದೂ, ಸರೋವರದಿಂದ ಬಂದುದರಿಂದ 'ಸರಯೂ ನದಿಯೆಂದೂ ಹೆಸರಾಯಿತು (ಅನಂ.ರಾ.).

ಸರಸ್ವತಿ -- ೧. ಇದು ಸಿರ್‌ಮೂರ್ (sirmur) ಬೆಟ್ಟಗಳಲ್ಲಿ ಹುಟ್ಟುವ ನದಿ. ಇದು ಸ್ಥಾನೇಶ್ವರದ ಪಶ್ಚಿಮದಲ್ಲಿ ಹರಿದು ವಿನಶನತೀರ್ಥದಲ್ಲಿ ಅದೃಶ್ಯವಾಗುತ್ತದೆ. ವಿಶ್ವಾಮಿತ್ರನು ವಸಿಷ್ಠನ ಕೊಲೆಗಾಗಿ ಈ ನದಿಯನ್ನು ನಿರ್ಮಿಸಿದನು. ಸರಸ್ವತಿಯು ವಸಿಷ್ಠನನ್ನು ತನ್ನ ಪ್ರವಾಹದಿಂದ ತೇಲಿಸಿಕೊಂಡು ಹೋದರೂ ಕೊಲ್ಲದುದರಿಂದ ವಿಶ್ವಾಮಿತ್ರನು ಈಕೆಗೆ ರಕ್ತಮಯವಾಗುವಂತೆ ಶಾಪವಿತ್ತನು. ಅಂದಿನಿಂದ ಈಕೆ ಅರುಣಾ ಎಂಬ ಹೆಸರನ್ನು ಪಡೆದಳಲ್ಲದೆ ಏಳು ಭಾಗವಾಗಿ ಹರಿದು ಸಪ್ತಸಾರಸ್ವತವೆಂಬ ಹೆಸರನ್ನು ಪಡೆದಳು. ನೋ. - ಸಪ್ತಸಾರಸ್ವತ. ೨. ಬ್ರಹ್ಮನ ಪತ್ನಿಯ ಒಂದು ಹೆಸರು. ಸರಸ್ಸುಗಳುಳ್ಳ ನದಿಯ ಹೆಸರು. ಈಕೆ ವಿದ್ಯಾಧಿದೇವತೆ. ಈಕೆಯನ್ನು ನವರಾತ್ರಿಯ ಕೊನೆಯ ಮೂರು ದಿನಗಳಲ್ಲಿ ಪೂಜಿಸುತ್ತಾರೆ. ಈಕೆಯು ಬ್ರಹ್ಮನ ಮಗಳೂ ಹೌದು. ನದಿ ತ್ರಿವೇಣಿಯಲ್ಲಿ ಸರಸ್ವತಿಯೊಬ್ಬಳು. ೩. ಸ್ವಾಯಂಭುವ ಮನುವಿನ ಪತ್ನಿ. ಶತರೂಪೆಯ ಇನ್ನೊಂದು ಹೆಸರು. ೪. ಚಂದ್ರವಂಶದ ಅಂತ್ಯನಾರನ ಪತ್ನಿ. ಈಕೆಯ ಮಗ ತ್ರಸ್ನು. ೫. ಸಾತ್ಯಕಿಯ ಪತ್ನಿ (ಮ.ಸ.,ಮ.,ಭೀ.,ಶಾಂ.,ಶಅ.,ಮೌ.,).

ಸರಿದ್ವೀಪ -- ಗರುಡನ ಮಗ (ಮ.ಉ).

ಸರೋವರ--ಪುರಾಣಕಾಲದ ಸರೋವರಗಳಲ್ಲಿ ಮಾನಸ ಸರೋವರ, ವೈಶಂಪಾಯನ ಸರೋವರ, ಪಂಪಾಸರೋವರ ಮತ್ತು ಅಚ್ಛೋದ ಸರೋವರಗಳು ಮುಖ್ಯವಾದುವು. ಮಾನಸಸರೋವರವು ರಾಕ್ಷಸತಲಾವ ಸರೋವರದಿಂದ ಎಂಟು ಮೈಲುಗಳ ದೂರದಲ್ಲಿ ಮಾಂಧಾತ ಪರ್ವತದಡಿ ಆರಂಭವಾಗುತ್ತದೆ. ಈ ಸರೋವರದ ನೀರು ಅತಿ ಸ್ವಚ್ಛ; ದೂರದಿಂದ ನೀಲವಾಗಿ ಕಾಣಿಸುತ್ತದೆ. ಇದರಲ್ಲಿ ತುಂಬ ಹಂಸಪಕ್ಷಿಗಳಿವೆ ಸಿಂಧು, ಸಟ್ಲೆಜ್,

ಬ್ರಹ್ಮಪುತ್ರಾ ನದಿಗಳು ಇಲ್ಲಿಯೇ ಹುಟ್ಟುತ್ತವೆ. ಇದರ ದಂಡೆಯ ಮೇಲೆ ಎಂಟು ಮರಗಳಿದ್ದು ಕೆಲವು ಮರಗಳಲ್ಲಿ ಹಿಂದೂ ಮೂರ್ತಿಗಳಿವೆ. ಈ ಸರೋವರದ ಸುತ್ತಳತೆ ೨೦೦ ಮೈಲು ಎನ್ನುತ್ತಾರೆ. ಇದು ಸಮುದ್ರಮಟ್ಟದಿಂದ ಹದಿನೈದು ಸಾವಿರ ಅಡಿ ಎತ್ತರವಿದೆ. ತಿಬೇಟದ ಜನರು ಈ ಸರೋವರಕ್ಕೆ ಭೋಮಾಪಾನವೆನ್ನುತ್ತಾರೆ. ಈ ಸರೋವರದವಲ್ಲಿ ಬಿಳಿಯ ಮತ್ತು ಕರಿಯ ರಾಜಹಂಸಗಳಿವೆ. ಈ ಪ್ರದೇಶದಲ್ಲಿ ಶ್ವಾಸೋಚ್ಛ್ವಾಸ ನಡೆಸುವುದು ಕಷ್ಟವಾಗುವುದು. ಇದರಲ್ಲಿ ಮೀನುಗಳಿದ್ದರೂ ಅವನ್ನು ಹಿಡಿಯಲು ಬಿಡುವುದಿಲ್ಲ. ಮಧ್ಯಾಹ್ನ ಹನ್ನೆರಡು ಗಂಟೆಗೆ ಇಲ್ಲಿ ೨೦ ಡಿಗ್ರಿ ಸೆಕೆ ಇದೆ. ಇಲ್ಲಿ ಶೀತಹವೆಯಿಂದ ದೇಹಕ್ಕೆ ತ್ರಾಸವಾಗುವುದಿಲ್ಲ. ಬ್ರಹ್ಮನ ಪುತ್ರರಿಗೆ ಇಲ್ಲಿ ತಪಸ್ಸು ಮಾಡುವಾಗ ನೀರಿನ ಅವಶ್ಯಕತೆಯುಂಟಾದುದರಿಂದ ಬ್ರಹ್ಮನು ಇದನ್ನು ಸೃಷ್ಟಿಸಿದನೆಂದು ಸ್ಕಂದಪುರಾಣದಲ್ಲಿ ಹೇಳಿದೆ. ಇದರಲ್ಲಿ ಕಮಲಪತ್ರಗಳು ತುಂಬಾ ಬೆಳೆಯುತ್ತಿವೆ. ಇದರ ದಡದಲ್ಲಿ ಒಂದು ಜಾತಿಯ ಗಿಡಗಳು ಹಸಿಯಾಗಿರುವಾಗಲೇ ಚೆನ್ನಾಗಿ ಬೆಂಕಿ ಹಿಡಿದು ಉರಿಯುತ್ತವೆ. ಈ ಸರೋವರದ ಹತ್ತಿರ ಕೈಲಾಸಪರ್ವತವಿದೆ. ಇಲ್ಲೇ ದೊಡ್ಡ ದೊಡ್ಡ ಕಾಗೆಗಳು (ಕಾಕಬುಶುಂಡಿ) ಕಾಣಸಿಕ್ಕುತ್ತವೆ.

ಕುರುಕ್ಷೇತ್ರದಲ್ಲಿ ಸ್ಯಮಂತಪಂಚಕ, ವೈಶಂಪಾಯನ ಸರೋವರಗಳಿವೆ. ನೋ.-- ಸಮಂತಪಂಚಕ. ದುರ್ಯೋಧನನು ಯುದ್ಧದ ಹದಿನೆಂಟನೆಯ ದಿನ ವೈಶಂಪಾಯನ ಕೊಳದಲ್ಲಿ ಅಡಗಿದ್ದು ಕೊನೆಗೆ ಭೀಮನಿಂದ ಹೊರಡಿಸಲ್ಪಟ್ಟು ಕೊಲ್ಲಲ್ಪಟ್ಟನು. ನೋ.--ದುರ್ಯೋಧನ. ಈತನು ದೈತ್ಯಮಾಯಾಬಲದಿಂದ ದ್ವೈಪಾಯನ ಕೊಳದಲ್ಲಿ (ಸರೋವರದಲ್ಲಿ) ಅಡಗಿಕೊಂಡನೆಂದೂ ಇದೆ.

ಪಂಪಾಸರೋವರವು ಹಂಪೆಯಲ್ಲಿದೆ. ಶ್ರೀರಾಮನು ಇದರ ದಡದಲ್ಲೇ ಸೀತೆಯ ಸಂಪೂರ್ಣ ವಿಯೋಗ ದುಃಖವನ್ನು ಅನುಭವಿಸಿದನೆಂದು ಶ್ರೀಮದ್ವಾಲ್ಮೀಕಿ ರಾಮಾಯಣವು ಹೇಳುವುದು.

ಅಚ್ಛೋದಸರಸ್ಸೆಂಬುದು ಹಿಮಾಲಯದಲ್ಲಿತ್ತೆಂದು ಹೇಳುತ್ತಾರೆ.

ಸರ್ಪ --೧. ಏಕಾದಶರುದ್ರರಲ್ಲೊಬ್ಬ. (ಮ.ಆ.). ೨. ಕಶ್ಯಪಮುನಿಯ ಪತ್ನಿಯಾದ ಕದ್ರುವಿನಲ್ಲಿ ಹುಟ್ಟಿದ ಮಕ್ಕಳು. ಇವರಲ್ಲಿ ಅನಂತ, ವಾಸುಕಿ, ಪದ್ಮ, ಮಹಾಪದ್ಮ, ತಕ್ಷಕ, ಕರ್ಕೋಟಕ, ಕುಳಿಕ, ಶಂಖರೆಂಬ ಎಂಟು ಮಂದಿ ಸರ್ಪರಾಜರು (ತ್ರಿ.ಶೇ.). ಇವರಲ್ಲಿ ಅನಂತನನ್ನು ಬಿಟ್ಟು ಉಳಿದವರೊಮ್ಮೆ ತಾಯಿಯಾದ ಕದ್ರುವಿಗೆ ಬೇಸರವನ್ನುಂಟುಮಾಡಿದುದರಿಂದ ಈಕೆಯು ಕೋಪದಿಂದ ಸರ್ಪಗಳಿಗೆ 'ನೀವೆಲ್ಲಾ ಜನಮೇಜಯನ ಸರ್ಪಯಾಗದಲ್ಲಿ ಆಹುತಿಯಾಗಿರಿ' ಎಂದು ಶಾಪವಿತ್ತಳು. ಮುಂದೆ ಸರ್ಪಯಾಗವು ನಡೆಯುವ

ಕಾಲದಲ್ಲಿ ಸರ್ಪಗಳ ಸೋದರಳಿಯನಾದ ಆಸ್ತೀಕನು ಜನಮೇಜಯನನ್ನು ಪ್ರಾರ್ಥಿಸಿ ಸರ್ಪಗಳನ್ನುಳಿಸಿದನು. ನೋ. -- ಕದ್ರು, ಅನಂತ, ವಾಸುಕಿ, ಶೇಷ, ಗರುಡ- ಇವು ಸಂಚರಿಸುವುದರಿಂದ ಇವಕ್ಕೆ ಸರ್ಪವೆಂದು ಹೆಸರು. ನೋ. ಸರ್ಪಸತ್ರ.

ಸರ್ಪದರ್ವಿ -- ಒಂದು ತೀರ್ಥ (ಮ.ವ).

ಸರ್ಪಸತ್ರ (ಸರ್ಪಯಾಗ) -- ಪರಿಕ್ಷಿತನ ಮರಣಕ್ಕಾಗಿ ಮುನಿದ ಈತನ ಮಗ ಜನಮೇಜಯನು ಈ ಯಾಗವನ್ನು ಮಾಡಿ ಅನೇಕ ಸರ್ಪಗಳನ್ನು ಕೊಂದನು. ನೋ. -- ಉತ್ತಂಕ (ಉದಂಕ). ಕೊನೆಗೆ ತಕ್ಷಕನ ಸರದಿ ಬರಲು ಅವನು ಭಯದಿಂದ ಇಂದ್ರನ ಮರೆಹೊಕ್ಕಿದ್ದರೂ ಮಂತ್ರದೇವತೆಗಳು ಅವರಿಬ್ಬರನ್ನೂ ಅಗ್ನಿಗೆ ಕೆಡೆಯುತ್ತಿರುವಾಗ ಸರ್ಪಗಳ ಅಳಿಯ ಆಸ್ತೀಕನು ಈ ಯಾಗವನ್ನು ನಿಲ್ಲಿಸಿದುದರಿಂದ ಕೆಲವು ಸರ್ಪಕುಲಗಳು ಮಾತ್ರ ಉಳಿದವು. ಈ ಯಾಗದಿಂದ ಜನಮೇಜಯನಿಗೆ ಕುಷ್ಠ ರೋಗವಾರಂಭವಾಗಲು ವೈಶಂಪಾಯನ ಮುನಿಯಿಂದ ಭಾರತಕಥೆಯನ್ನು ಕೇಳಿ ಆರೋಗ್ಯ ಪಡೆದನು. ನೋ.--ಜನಮೇಜಯ. ಮುಂದೆ ಆಸ್ತೀಕ ಎಂಬ ಪದವು ಸರ್ಪಭಯವನ್ನು ನಿವಾರಿಸುವುದೆಂದು ಆಸೀಕಮುನಿಯು ಜನಮೇಜಯನಿಗೆ ಭರವಸೆ ಇತ್ತನು (ಮ.ಆ.).

ಸರ್ಪಾಂತ -- ಗರುಡನ ಒಬ್ಬ ಮಗ (ಮ.ಉ.).

ಸರ್ವಕರ್ಮ -- ಋತುಪರ್ಣನ ಮೊಮ್ಮಗ. ಇವನ ತಂದೆಯ ಹೆಸರು ಸೌದಾಸ. ಇವನು ಪರಶುರಾಮನಿಗೆ ಭಯಪಟ್ಟು ಪರಾಶರ ಮುನಿಯ ಆಶ್ರಮದಲ್ಲಿ ವಾಸಮಾಡುತ್ತ ಅಲ್ಲಿನ ಸರ್ವಕರ್ಮಗಳನ್ನೂ ತಾನು ನಿರ್ವಹಿಸುತ್ತಿದ್ದುದರಿಂದ ಈತನಿಗೆ ಸರ್ವಕರ್ಮನೆಂಬ ಹೆಸರಾಯಿತು. ಪರಶುರಾಮನು ಕಶ್ಯಪನಿಗಿತ್ತ ಭೂಮಿಯನ್ನು ಭೂದೇವಿಯ ಸೂಚನೆಯಂತೆ ಸರ್ವಕರ್ಮನಿಗಿತ್ತನು (ಮ.ಶಾಂ).

ಸರ್ವಕಾಮದುಘೆ -- ಕಾಮಧೇನುವಿನ ಮಗಳು (ಮ.ಉ.).

ಸರ್ವತೋಭದ್ರ -- ಕೌರವರ ಸೇನೆಯ ವ್ಯೂಹವೊಂದು (ಮ.ಭೀ).

ಸರ್ವದಮನ -- ದುಷ್ಯಂತ - ಶಕುಂತಳೆಯರ ಮಗನಾದ ಭರತನ ಬಾಲ್ಯದ ಹೆಸರು. ಇವನು ಹತ್ತುಸಾವಿರ ಆನೆಗಳ ಬಲವುಳ್ಳವನಾಗಿದ್ದನು (ಹರಿ). ನೋ.--ಭರತ, ಶಕುಂತಳೆ.

ಸರ್ವಸೇನ--ಬ್ರಹ್ಮದತ್ತರಾಜನ ಮಗ. ನೋ.--ಪೂಜನೀ. ಸರ್ವಸೇನ ರಾಜಕುಮಾರನು ಪೂಜನಿಪಕ್ಷಿಯ ಮರಿಯನ್ನು ಕೊಂದುದರಿಂದ ಈ ಪಕ್ಷಿಯು ರಾಜಕುಮಾರನನ್ನು ಕುರುಡುಮಾಡಿ ಹಾರಿಹೋಯಿತು (ಮ.ಶಾಂ., ಹರಿ.).

ಸರ್ವೋಚಿಸ -- ನೋ.--ವರೂಥಿನಿ. ಈಕೆಗೆ ಸ್ವರೋಚಿಯೆಂಬ ಹೆಸರೂ ಇದೆ. ಈಕೆಯ ಮಗನೇ ಸರ್ವೋಚಿಸ್. ಈತನು ಮಹಾತೇಜಸ್ವಿ (ಮಾರ್ಕಂಪು.ಪು.).

ಸವನ -- ಮುನಿಯೊಬ್ಬ. ಈತನ ತಂದೆ ಭೃಗುಮುನಿ; ತಾಯಿ ಪುಲೋಮೆ.

ಸವರ್ಣೆ -- ಸೂರ್ಯನ ಮೂರನೇ ಪತ್ನಿ; ಇವಳ ಮಗ ಸಾವರ್ಣಿ ಎಂಬ ಮನು.

ಸವಿತಾ -- ೧. ದ್ವಾದಶಾದಿತ್ಯರಲ್ಲೊಬ್ಬ (ಮ.ಆ.). ೨. ಸೂರ್ಯ (ಮ.ಆ.). ನಿದ್ದೆ ಹೋಗುವವರನ್ನು ಏಳುವಂತೆ ಪ್ರೇರಿಸುವವನು ಸವಿತಾ.

ಸವ್ಯಸಾಚಿ -- ಎಡಗೈಯಿಂದಲೂ ಬಾಣ ಹೊಡೆಯಬಲ್ಲವ, ಅರ್ಜುನ. ನೋ.-ಅರ್ಜುನ. (ಮ.ವಿ.).

ಸಹ -- ಧೃತರಾಷ್ಟ್ರನ ಒಬ್ಬ ಮಗ. ಇವನು. ಭೀಮನಿಂದ ಹತನಾದ (ಮ.ಆ.,ಶ.).

ಸಹಜನ್ಯಾ -- ಅಪ್ಸರೆಯೊಬ್ಬಳು (ಮ.ಆ.,ಸ.).

ಸಹದೇವ -- ೧. ಪಾಂಡುರಾಜನ ಕಿರಿಯ ಮಗ; ಈತನ ತಾಯಿ ಮಾದ್ರೀದೇವಿ; ಅಶ್ವಿನೀದೇವತೆಗಳಿಂದ ಜನಿಸಿದವ. ದ್ರೌಪದಿಯ ಸ್ವಯಂವರದ ಕಾಲದಲ್ಲಿ ದುಶ್ಶಾಸನನು ಈತನಿಂದ ಪರಾಜಯ ಹೊಂದಿದನು. ಈತನ ಪತ್ನಿ ದ್ರೌಪದಿ, ಈಕೆಯ ಮಗ ಶ್ರುತಸೇನ. ಈತನ ಇನ್ನೊಬ್ಬಳು ಪತ್ನಿಯು ಶಲ್ಯನ ಮಗಳಾದ ವಿಜಯೆ; ಈಕೆಯ ಮಗ ಸುಹೋತ್ರ. ಇವನು ಮೂರನೆಯ ಹೆಂಡತಿ ಭಾನುವಿನ ಮಗಳಾದ ಭಾನುಮತಿ (ಹರಿ.). ಇವನು ರಾಜಸೂಯಯಾಗ ಕಾಲದಲ್ಲಿ ದಕ್ಷಿಣಭಾರತದ ವಿಜಯಯಾತ್ರೆಯಲ್ಲಿ ಶೂರಸೇನ, ಮಾಹಿಷ್ಮತಿ (ಮೈಸೂರು) ಮೊದಲಾದ ದೇಶಗಳನ್ನು ಗೆದ್ದನು. ಇವನು ಘಟೋತ್ಕಚನನ್ನು ಲಂಕೆಗೆ ಕಳುಹಿಸಿ, ವಿಭೀಷಣನಿಂದ ಕಪ್ಪವನ್ನು ತರಿಸಿಕೊಂಡನು. ರಾಜಸೂಯಯಾಗ ಮುಗಿದಮೇಲೆ ಭೀಷ್ಮನ ಅಭಿಪ್ರಾಯದಂತೆ ಶ್ರೀಕೃಷ್ಣನಿಗೆ ಅಗ್ರಪೂಜೆ ಸಲ್ಲಿಸಿದನು. ದ್ಯೂತಸಭೆಯಲ್ಲಿ ಇವನು ಶಕುನಿಯನ್ನು ಕೊಲ್ಲುವೆನೆಂದು ಪ್ರತಿಜ್ಞೆಮಾಡಿ, ಭಾರತಯುದ್ಧದ ಹದಿನೆಂಟನೇ ದಿನ ತನ್ನ ಪ್ರತಿಜ್ಞೆಯನ್ನು ಪೂರೈಸಿದನು. ಅಜ್ಞಾತವಾಸಕಾಲದಲ್ಲಿ ಇವನು ತಂತ್ರೀಪಾಲನೆಂಬ ಹೆಸರಿನಿಂದ ವಿರಾಟನ ರಾಜಧಾನಿಯಲ್ಲಿ ಗೋರಕ್ಷಕನಾಗಿದ್ದನು. ಆಗ ಈತನಿಗೆ ಜಯದ್ಬಲನೆಂಬ ಗುಪ್ತನಾಮವಿತ್ತು. ಈತನಿಗೆ ಭೂತಭವಿಷ್ಯದ್ವಿಚಾರಗಳನ್ನು ತಿಳಿಯುವ ಶಕ್ತಿಯಿತ್ತು. ಮಹಾಪ್ರಸ್ಥಾನಕಾಲದಲ್ಲಿ ದ್ರೌಪದಿಯ ಅನಂತರ ಈತನು ನೆಲಕ್ಕೊರಗಿದನು. ಸ್ವರ್ಗದಲ್ಲಿ ಧರ್ಮರಾಜನು ಅಶ್ವಿನೀದೇವತೆಗಳ ಬಳಿಯಲ್ಲಿ ಕುಳಿತಿದ್ದ ಈತನನ್ನು ಕಂಡು ಸಂತೋಷಪಟ್ಟನು.

ಇವನು ನೀತಿಶಾಸ್ತ್ರಗಳನ್ನು ದೇವೇಂದ್ರನಿಂದ ಪಡೆದನು. ಇವನು

ಯುದ್ಧಕಾರ್ಯದಲ್ಲಲ್ಲದೆ ಆನೆ ಕುದುರೆಗಳನ್ನು ಪಳಗಿಸುವುದರಲ್ಲಿ ಸಮರ್ಥನು (ಮ.ಆ.,ಸ.,ವಿ.,ದ್ರೋ.,ಶ.,ಮಹಾಪ್ರ). ೨. ಮಗಧ (ದಕ್ಷಿಣ ಬಿಹಾರ್) ದೇಶಾಧಿಪತಿಯಾದ ಜರಾಸಂಧನ ಮಗ. ಇವನ ರಥಕ್ಕೆ ಚಿತ್ರವರ್ಣದ ಕುದುರೆಗಳಿದ್ದವು. ಭಾರತಯುದ್ಧದಲ್ಲಿ ಈತನು ದ್ರೋಣಾಚಾರ್ಯರಿಂದ ಹತನಾದನು. ಈತನ ಮಗನೇ ಮೇಘಸಂಧಿ. ಇವನ ಸಹೋದರಿಯರು ಅಸ್ಥಿಪ್ರಾಸ್ಥಿಯರು (ಮ.ಸ.,ದ್ರೋ.).

ಸಹಸ್ರಕಂಠ -- ಸುಮಾಲಿ ಎಂಬ ರಾಕ್ಷಸನಿಗೆ ಕೈಕಸೆ ಎಂಬ ಮಗಳಿದ್ದಳು. ಈಕೆಯ ಪತಿ ವಿಶ್ರವಸು. ಈ ದಂಪತಿಗಳಿಗೆ ಸಹಸ್ರಕಂಠ, ದಶಕಂಠ ಎಂಬಿಬ್ಬರು ಮಕ್ಕಳು. ಇವರಲ್ಲಿ ಸಹಸ್ರಕಂಠನು ದಿಕ್ಪಾಲಕರನ್ನು ಓಡಿಸಿ ಪುಷ್ಕರದ್ವೀಪವನ್ನೇ ತನ್ನ ರಾಜ್ಯವನ್ನಾಗಿ ಮಾಡಿಕೊಂಡು ಆಳತೊಡಗಿದನು. ಇವನ ಪರಾಕ್ರಮಕ್ಕೆ ಅಂಜಿ ದೇವತೆಗಳು ಪಾದಸೇವಕರಾದರು; ನಾಗರು ಹರಿಕಾರರಾದರು; ಬ್ರಹ್ಮನು ಪಂಚಾಂಗವನ್ನು ಹೇಳುವ ಜೋಯಿಸನಾದನು; ಶಿವನು ದ್ವಾರಪಾಲಕನಾದನು. ಇವನನ್ನು ಜಯಿಸಲು ಹನುಮ, ಜಾಂಬವ, ನೀಲ, ನಳ, ಸುಗ್ರೀವ, ಅಂಗದ ಮೊದಲಾದ ಕಪಿವೀರರಿಗೂ, ರಾಮ, ಲಕ್ಷ್ಮಣ, ಭರತ, ಶತ್ರುಘ್ನರಿಗೂ ಅಸಾಧ್ಯವಾಗಲು ಸೀತೆಗೆ ಹೊಳೆವ ಹಲ್ಲು ನೀಳಹಲ್ಲುಗಳಾಗಲು, ನಗೆಗಣ್ಣು ಗುಳಿಗಣ್ಣಾಗಲು, ನಗುಮುಖ ಉರಿಮುಖವಾಗಲು ತಳಿರಿನಂತಿದ್ದದ ನಾಲಗೆ ಜೋಲುನಾಲಗೆಯಾಗಲು, ಸೀತೆ ಕರಾಳಚಂಡಿಯಾಗಿ ಸಹಸ್ರಕಂಠ ರಾಕ್ಷಸನನ್ನೂ ಅವನ ಸೇನಾಪತಿಗಳಾದ ಕೌಣಪ, ಕಾಲವೇಗ, ಶರಣ, ಹಲೀಮುಖರನ್ನೂ ಕೊಂದಳು. ಸಹಸ್ರಕಂಠ ರಾವಣನಿಗೆ ಚಿತ್ರದೇವ, ಸುಪ್ರಸಾದ, ಕಿರೀಟ, ಕಲಶೋದರ, ಕಾಲಕಕ್ಷ ಮೊದಲಾದ ಮಕ್ಕಳಿದ್ದರು (ಅದ್ಭು.ರಾ.).

ಸಹಸ್ರಕವಚ -- ನೋ. -- ನರ.

ಸಹಸ್ರಚಿತ್ಯ--ರಾಜರ್ಷಿಯೊಬ್ಬ; ಕೇಕಯರಾಜ. ಈತನ ಮೊಮ್ಮಗನೇ ಶತಯೂಪ (ಮ.ಅಶ್ರ).

ಸಹಸ್ರಜ್ಯೋತಿ -- ವಿವಸ್ವತನ ಮಗ (ಮ.ಆ.) ಸೂರ್ಯ.

ಸಹಸ್ರನಾಮ -- ಶ್ಲೋಕರೂಪವಾದ ದೇವರ ಸಹಸ್ರ ಹೆಸರುಗಳು. ಇವುಗಳ ಅರ್ಥತಿಳಿದು ಕ್ರಮವಾಗಿ ಪಾರಾಯಣ ಮಾಡುವುದರಿಂದ ಮನುಷ್ಯನಲ್ಲಿ ಆಧ್ಯಾತ್ಮಿಕ ಶಕ್ತಿಯು ವೃದ್ಧಿಯಾಗುವುದು.

೧. ವಿಷ್ಣುಸಹಸ್ರನಾಮ -- ಇದು ಮಹಾಭಾರತದ ಅನುಶಾಸನ ಪರ್ವದಲ್ಲಿ ಭೀಷ್ಮನು ಯುಧಿಷ್ಠಿರನಿಗೆ ಹೇಳಿದ ವಿಷಯವು. ಇದರಲ್ಲಿ ವಿಷ್ಣುವಿನ ಸಹಸ್ರ ಹೆಸರುಗಳಿವೆ. ಕೆಲವು ನಾಮಗಳು ಪುನಃ ಪುನಃ ಶ್ಲೋಕಗಳಲ್ಲಿ ಬಂದಂತೆ ಕಂಡರೂ ಅವುಗಳಲ್ಲಿ ಅರ್ಥವ್ಯತ್ಯಾಸವಿದೆ.

೨. ಶಿವಸಹಸ್ರನಾಮ -- ಇದು ಮಹಾಭಾರತದ ಅನುಶಾಸನ ಪರ್ವದಲ್ಲಿ ಬಂದ ವಿಷಯ; ಶಿವಭಕ್ತರ ಮೆಚ್ಚಿನ ಸಹಸ್ರನಾಮವಿದು.

೩. ಲಲಿತಾಸಹಸ್ರನಾಮ -- ನೋ.ಲಲಿತಾ, ಶ್ರೀಚಕ್ರ. ಇದು ಬ್ರಹ್ಮಾಂಡ ಪುರಾಣದ ವಿಷಯ. ಇದನ್ನು ಹಯಗ್ರೀವನು ಅಗಸ್ತ್ಯನಿಗೆ ತಿಳಿಸಿದನು. ಇದು ಶಾಕ್ತೇಯರಿಗೆ ಅತ್ಯಂತ ಪ್ರಿಯವಾದ ಸಹಸ್ರನಾಮ.

೪. ಸುಬ್ರಹ್ಮಣ್ಯಸಹಸ್ರನಾಮ -- ಇದು ಸ್ಕಾಂದಪುರಾಣದ ಅಗಸ್ತ್ಯ -- ನಾರದರ ಸಂವಾದ ವಿಷಯ. ಇದರಲ್ಲಿನ ಹೆಚ್ಚಿನ ಶ್ಲೋಕಗಳ ಆರಂಭವು ಅಕ್ಷರಮಾಲೆಗೆ ಹೊಂದಿಕೆಯಾಗಿ ವಿಚಿತ್ರವಾಗಿದೆ.

೫. ಗಣಪತಿ ಸಹಸ್ರನಾಮ -- ಇದು ಗಣೇಶಪುರಾಣದ ಈಶ್ವರ -- ಗಣೇಶರ ಸಂವಾದದಲ್ಲಿ ಬಂದ ವಿಷಯ. ಇದರಲ್ಲಿಯೂ ನಾಮಗಳು ಅಕ್ಷರಮಾಲೆಯನ್ನನುಸರಿಸಿ ಬಂದಿದೆ.

೬. ದುರ್ಗಾ ಸಹಸ್ರನಾಮ -- ಇದು ಸ್ಕಾಂದ ಪುರಾಣದ ಸ್ಕಂದ -- ನಾರದರ ಸಂವಾದದ ವಿಚಾರ. ಶಾಕ್ತೇಯರಿಗೆ ಪ್ರಿಯವಾದ ಸಹಸ್ರನಾಮ.

೭. ರಾಮ ಸಹಸ್ರನಾಮ -- ಇದು ಶಿವಪುರಾಣದ ಉಮಾ -- ಮಹೇಶ್ವರ ಸಂವಾದದ ವಿಚಾರ.

೮. ಆಂಜನೇಯ ಸಹಸ್ರನಾಮ -- ಇದನ್ನು ಶ್ರೀರಾಮನು ವಿಭೀಷಣನಿಗೆ ಉಪದೇಶಿಸಿರುವನೆಂದು ಹೇಳುವರು. ಇದನ್ನು ಶಿವನು ಪಾರ್ವತಿಗೆ ಉಪದೇಶಿಸಿದನು. ಇನ್ನೂ ಸೂರ್ಯಸಹಸ್ರನಾಮ, ಗಕಾರಗಣಪತಿಸಹಸ್ರನಾಮ ಮೊದಲಾದ ಹಲವು ಸಹಸ್ರನಾಮಗಳಿವೆ. ಇವುಗಳೆಲ್ಲ ಭಗವಂತನ ಮಹಿಮೆಯನ್ನು ಸಾರಿ ಜನರನ್ನು ಭಕ್ತಿಮಾರ್ಗಕ್ಕೆ ತರತಕ್ಕವುಗಳು.

ಸಹಸ್ರಪಾದ (ಸಹಸ್ರಪಾಲ) -- ವಿನೋದಪ್ರಿಯನಾದ ಬ್ರಾಹ್ಮಣನೊಬ್ಬ ಒಮ್ಮೆ **ಸರ್ಪದಂತೆ** ಹುಲ್ಲನ್ನು ಹೊಸೆದು ಖಗಮನೆಂಬ ಸಹಪಾಠಿ ಮುನಿಯ ಮೇಲೆಸೆಯಲು ಅವನು ಮೊದಲು ಭಯಪಟ್ಟು ಆಮೇಲೆ ನಿಜಸಂಗತಿಯನ್ನು ತಿಳಿದು ಸಹಸ್ರಪಾದನಿಗೆ ಮುಳಿದು, 'ನೀನು ವಿಷವಿಲ್ಲದ ಸರ್ಪಾಕಾರದಿಂದ ನನ್ನನ್ನು ಭಯಗೊಳಿಸಿದುದರಿಂದ ಡುಂಡುಭವಾಗಿ (ನೀರೊಳ್ಳೆ) ಜನಿಸು' ಎಂದು

ಶಾಪವಿತ್ತನು. ಇದರಿಂದ ಸಹಸ್ರಪಾದನು ವ್ಯಸನಹೊಂದಿ, ಶಾಪವಿಮೋಚನೆಯ ಕುರಿತು ಕೇಳಲು ಮುನಿಯು, 'ಪ್ರಮತಿಯ ಪುತ್ರನಾದ ರುರುವಿನಿಂದ ಶಾಪವಿಮೋಚನೆ ಯಾಗುತ್ತದೆ' ಎಂದನು. ನೋ.--ರುರು.

ಖಗನೆಂಬ ಬ್ರಾಹ್ಮಣನು ಅಗ್ನಿಕಾರ್ಯ ಮಾಡುತ್ತಿರುವಾಗ ಹುಲ್ಲಿನಿಂದ ಹಾವನ್ನು ಮಾಡಿ ಅದರಿಂದ ಈತನು ಭಯಪಡಿಸಿದನು. ಇದರಿಂದ 'ನಿರ್ವಿಷವಾದ ಹಾವಾಗಿಹುಟ್ಟು, ಎಂದು ಖಗನು ಶಾಪವಿತ್ತು,'ಪ್ರಮತಿಯ ಮಗನಾದ ರುರುವಿನ ದರ್ಶನದಿಂದ ನಿನಗೆ ಶಾಪವಿಮೋಚನೆಯಾಗುವುದು' ಎಂದನು (ಮ.ಆ.).

ಸಹಸ್ರವಾಕ್ -- ಧೃತರಾಷ್ಟ್ರನ ಒಬ್ಬ ಮಗ (ಮ.ಆ).

ಸಹೃದಯ -- ಘಟೋತ್ಕಚನ ಮಗ. ನೋ -- ಬರ್ಬರೀಕ, ಕಾಮಕಟಂಕಟೆ.

ಸಂಕಾಶ್ಯ -- ಇಂದ್ರದೇಶದ ರಾಜಧಾನಿ. ಇದು ಇಕ್ಷುಮತಿ ನದೀತೀರದಲ್ಲಿತ್ತು. ಈ ನದಿಯು ಈಗ ರೋಹಿಲ ಖಂಡದಲ್ಲಿ ಹರಿಯುತ್ತಿದ್ದು ಇದನ್ನು ಕಾಳೀನದಿ ಎನ್ನುತ್ತಾರೆ. ಜನಕನು (ಸೀರಧ್ವಜನು) ಇಲ್ಲಿಯ ರಾಜನಾದ ಸುಧನ್ವನನ್ನು ಕೊಂದು ತನ್ನ ತಮ್ಮನಾದ ಕುಶಧ್ವಜನನ್ನು ಇಲ್ಲಿಗೆ ಅರಸನನ್ನಾಗಿ ಮಾಡಿದನು (ರಾಮಾ.ಬಾಲ).

ಸಹ್ಯ -- ೧. ಕುಲಪರ್ವತಗಳಲ್ಲೊಂದು. ಇದಕ್ಕೆ ಸಹ್ಯಾದ್ರಿ ಅಥವಾ ಪಶ್ಚಿಮ ಘಟ್ಟವೆನ್ನುತ್ತಾರೆ. ಇದರ ದಕ್ಷಿಣ ತುದಿಗೆ ಮಲಯಪರ್ವತವೆನ್ನುತ್ತಾರೆ. ಈ ಮಲಯಪರ್ವತದ ಸಾನುವಿನಲ್ಲಿ (ಆಳದಲ್ಲಿ) ಇರುವ ಪ್ರದೇಶ ಮಲೆಯಾಳ (ಮಲಬಾರು). ಈ ಪರ್ವತದಲ್ಲಿ ಬೆಳೆಯುವಷ್ಟು ಶ್ರೀಗಂಧ ವೃಕ್ಷಗಳು ಬೇರೆಲ್ಲಿಯೂ ಬೆಳೆಯುವುದಿಲ್ಲ. ಮಲಯಮಾರುತ ಅಥವಾ ತೆಂಕಣಗಾಳಿಯು ಈ ಪರ್ವತದಿಂದಲೇ ಬೀಸಿಕೊಂಡು ಬರುವುದು. ಶ್ರೀಗಂಧವೃಕ್ಷದಿಂದಲೇ ಕರ್ನಾಟಕಕ್ಕೆ ಈ ಹೆಸರು (ಕಮ್ಮಿತು+ ನಾಡು= ಕನ್ನಾಡು) ಬಂತೆಂದು ಮೈ.ವಾ. ತಾತಾಚಾರ್ಯರ ಅಭಿಪ್ರಾಯವಿದೆ. ಕರ್ನಾಟಕವನ್ನು ಈ ಪರ್ವತವು ಫಲವತ್ತಾದ ರಾಷ್ಟ್ರವನ್ನಾಗಿ ಮಾಡಿದೆ. ಇಲ್ಲಿಂದಲೇ ಗೋದಾವರಿ, ಕೃಷ್ಣಾ, ತುಂಗಭದ್ರಾ, ಕಾವೇರಿ ಮೊದಲಾದ ನದಿಗಳು ಹುಟ್ಟಿ ಬಂಗಾಳಕೊಲ್ಲಿಗೂ. ಶರಾವತಿ, ಗಂಗೊಳ್ಳಿ, ಸೀತಾ, ಸುವರ್ಣಾ, ನೇತ್ರಾವತಿ, ಚಂದ್ರಗಿರಿ ಮೊದಲಾದ ನದಿಗಳು ಹುಟ್ಟಿ, ಅರಬ್ಬಿ ಸಮುದ್ರಕ್ಕೂ ಸೇರುತ್ತವೆ. ಈ ಪರ್ವತಪ್ರದೇಶವು ವಿದ್ಯುತ್ತಿನ ಖನಿ, ಕಾಡುತ್ಪತ್ತಿಗಳ ಆಗರ. ಈ ಪರ್ವತದಲ್ಲಿ ಮಹಾಬಲೇಶ್ವರ, ಕೊಲ್ಹಾಪುರ, ಶೃಂಗೇರಿ ತಲಕಾವೇರಿ, ಸುಬ್ರಹ್ಮಣ್ಯ, ಕೊಲ್ಲೂರು ಮೊದಲಾದ ಕ್ಷೇತ್ರಗಳಿವೆ (ಮತ್ಸ್ಯಪು.).

೨. ಸಹ್ಯಾದ್ರಿಯೆಂಬುದು ದಕ್ಷಿಣಕನ್ನಡದ ಪ್ರಾಚೀನ ಹೆಸರು.

ಸಾಂಕಾಶ್ಯ -- ಯಮಸಭಾವಾಸಿಯಾದ ರಾಜರ್ಷಿಯೊಬ್ಬ.

ಸಾಂಕೃತಿ -- ೧. ಚಂದ್ರವಂಶದ ಸಂಕೃತಿರಾಜನ ಮಗ ರಂತಿದೇವನ ಇನ್ನೊಂದು ಹೆಸರು. ಈತನು ಮಹಾದಾನಿ. ನೋ -- ರಂತಿದೇವ (ಮ. ಅನು., ಭಾಗ). ೨.ಅತ್ರಿವಂಶದ ಬ್ರಾಹ್ಮಣನೊಬ್ಬ (ಮ. ಶಾಂ).

ಸಾಂಯಮನಿ --ಚಂದ್ರವಂಶದ ಬಾಹ್ಲಿಕನ ಪುತ್ರನಾದ ಸೋಮದತ್ತನ ಇನ್ನೊಂದು ಹೆಸರು. ಈತನ ಪಕ್ಷದಲ್ಲಿ ಹೋರಾಡಿ ಸಾತ್ಯಕಿಯಿಂದ ಮೃತನಾದನು. ನೋ -- ಸೋಮದತ್ತ.

ಸಾಂಖ್ಯಶಾಸ್ತ್ರ -- ಕಪಿಲ ಋಷಿ ಬರೆದ ತತ್ವಶಾಸ್ತ್ರ (ಮ. ಶಾಂ. ಅನು.). ಈ ಶಾಸ್ತ್ರವು ವೇದಾಂತವನ್ನು ಒಪ್ಪುವುದಾದರೂ ದೇವರಿಂದ ಈ ಭೂಮಿಯು ಹುಟ್ಟಿತು ಮತ್ತು ಆಳಲ್ಪಡುತ್ತಿದೆ ಎಂಬುದನ್ನು ಒಪ್ಪುವುದಿಲ್ಲ.

ಸಾಂಖ್ಯಾಯನ -- ಸನಕಾದಿಗಳ ಶಿಷ್ಯನಾಗಿ ಜಗತ್ತಿನಲ್ಲಿ ಸನ್ಯಾಸಧರ್ಮವನ್ನು ಪ್ರಚಾರಮಾಡಿದ ಒಬ್ಬ ಮಹರ್ಷಿ (ಭಾಗ).

ಸಾಗರರು -- ಸೂರ್ಯವಂಶದ ಸಗರನ ಅರವತ್ತು ಸಾವಿರ ಮಕ್ಕಳು. ನೋ. -- ಸಗರ, ಭಗೀರಥ (ಮ. ವ.,)

ಸಾತ್ಯಕಿ -- ಯದುವಂಶದ ಶಿನಿಯನ ಮೊಮ್ಮಗ; ಸತ್ಯಕನ ಮಗ. ಈತನಿಗೆ ಯುಯುಧಾನನೆಂಬ ಇನ್ನೊಂದು ಹೆಸರಿದೆ. ನೋ. -- ಯಯುಧಾನ. ಇವನಿಗೆ ಹತ್ತುಮಂದಿ ಮಕ್ಕಳು. ಇವರನ್ನೆಲ್ಲ ಭೂರಿಶ್ರವನು ಕೊಂದನು.

ಸಾತ್ವತ --೧. ಕೃತವರ್ಮನ ಇನ್ನೊಂದು ಹೆಸರು. ಇವನು ಭೋಜರಾಜನಾದ ಹೃದಿಕನ ಮೂರನೆಯ ಮಗ. ಇವನಿಗೆ ಹಾರ್ದಿಕನೆಂಬ ಹೆಸರೂ ಇದೆ. ನೋ.-- ಕೃತವರ್ಮ. ೨ ಶ್ರೀಕೃಷ್ಣನ ಒಂದು ಹೆಸರು.

ಸಾಧ್ಯ-- ದೇವತೆಗಳಲ್ಲಿ ಒಂದು ಭೇದ. ಇವರು ಹನ್ನೆರಡು ಮಂದಿ. ಮನು, ಹನುಮಂತ, ವಿಷ್ಣು, ಧರ್ಮ, ನಾರಾಯಣ ಮೊದಲಾದವರು. ಇವರು ಆರಾಧಿಸಲ್ಪಡುವವರು ಮತ್ತು ಸಿದ್ಧಿಯುಳ್ಳವರು.

ಧರ್ಮಪ್ರಜಾಪತಿಯ ಮಗಳಾದ ದಾಕ್ಷಾಯಣಿಗೆ ಸಾಧ್ಯಾ ಎಂಬ ಹೆಸರಿದೆ. ಈಕೆಯಲ್ಲಿ ಜನಿಸಿದ ಮಕ್ಕಳು ಸಾಧ್ಯರು (ಮ., ಸ., ಮತ್ಸ್ಯಪು).

ಸಾಂದೀಪಿನಿ -- ಅವಂತಿಪುರದಲ್ಲಿ (ಮಾಳವ) ವಾಸಿಸುತ್ತಿದ್ದ ಒಬ್ಬ ತಪಸ್ವಿ ಮತ್ತು ವಿದ್ವಾಂಸನಾದ ಬ್ರಾಹ್ಮಣ. ಇವನು ಶ್ರೀಕೃಷ್ಣ ಮತ್ತು ಬಲರಾಮರ ಗುರು.

ಒಮ್ಮೆ ಗುರು ಪ್ರಭಾಸಕ್ಷೇತ್ರಕ್ಕೆ ಸಂಸಾರದೊಡನೆ ಹೋದಾಗ ಈತನ

ಮಗನನ್ನು ಪ್ರಹ್ಲಾದನ ತಮ್ಮ ಸಂಹ್ಲಾದನ ಮಗನಾದ ಪಂಚಜನನು ಎತ್ತಿಕೊಂಡು ಸಮುದ್ರವನ್ನು ಪ್ರವೇಶಿಸಿದನು. ಸಾಂದೀಪಿನಿಯ ಮನದಲ್ಲಿ ಈ ಕೊರಗು ಸದಾ ಇತ್ತು. ಇತ್ತ ಶ್ರೀ ಕೃಷ್ಣನು ಗುರುವಿನಲ್ಲಿ ಅರವತ್ನಾಲ್ಕು ಕಲೆಗಳನ್ನೂ ಅಭ್ಯಾಸಮಾಡಿದ ಮೇಲೆ ಗುರುದಕ್ಷಿಣೆಯನ್ನು ಕೇಳಬೇಕೆಂದು ಬೇಡಿದನು. ಗುರುವು (ಗುರುಪತ್ನಿಯು) ಮೃತಪುತ್ರನನ್ನು ಯಾಚಿಸಿದನು (ಳು). ಶ್ರೀಕೃಷ್ಣನು ಸಮುದ್ರನ ಸೂಚನೆಯಂತೆ ಪಂಚಜನನಿರುವ ಸ್ಥಳವನ್ನು ತಿಳಿದು ಸಮುದ್ರವನ್ನು ಪ್ರವೇಶಿಸಿ ಪಂಚಜನನನ್ನು ಕೊಂದರೂ ಅಲ್ಲಿ ಗುರುಪುತ್ರನನ್ನು ಕಾಣದೆ ಆ ರಾಕ್ಷಸನ ಮೂಳೆಯಿಂದ ಪಾಂಚಜನ್ಯವೆಂಬ ಶಂಖವನ್ನು ನಿರ್ಮಿಸಿಕೊಂಡು ಯಮಲೋಕಕ್ಕೆ ಹೋಗಿ ಅಲ್ಲಿದ್ದ ಗುರುಪುತ್ರನನ್ನು ತಂದು ಗುರುವಿಗೊಪ್ಪಿಸಿ ಗುರುದಕ್ಷಿಣೆ ಸಲ್ಲಿಸಿದನು. (ಮ. ಸ., ಭಾಗ., ವಿಷ್ಣುಪು.).

ಸಾಭ್ರಮತಿ (ಸಬರಮತಿ) -- ಒಂದು ನದಿ. ಇದು ಅರ್ಬುದ ಪರ್ವತದಲ್ಲಿ (ಅಬೂಪರ್ವತದಲ್ಲಿ) ಹುಟ್ಟಿ ಮುಂಬಯಿ., ಬರೋಡಾ ಪ್ರಾಂತಗಳಲ್ಲಿ ಹರಿಯುತ್ತದೆ. ಈ ನದಿಯು ಹುಟ್ಟುವ ಅಬೂಪರ್ವತವು ೧೪ ಮೈಲುದ್ದವಾಗಿಯೂ, ೨೦೪ ಮೈಲು ಅಗಲವಾಗಿಯೂ ಇದೆ. ಈ ಪರ್ವತವು ಹಿಮಾಲಯದ ಪುತ್ರನು. ಇಲ್ಲಿ ವಸಿಷ್ಠಮಹರ್ಷಿಗಳ ಆಶ್ರಮವಿತ್ತು. ಶ್ರೀಕೃಷ್ಣನು ಮಥುರಾದಿಂದ ದ್ವಾರಕೆಗೆ ಹೋಗುವಾಗ ಇಲ್ಲಿ ಇಳಿದುಹೋಗುತ್ತಿದ್ದನು. ಇಲ್ಲಿರುವ ಋಷಿಕೇಶಮಂದಿರಕ್ಕೆ ದ್ವಾರಕೆಯ ದ್ವಾರವೆನ್ನುತ್ತಾರೆ. ಇಲ್ಲಿಯೇ ಶ್ರೀಕೃಷ್ಣನು ರಾತ್ರಿಕಾಲದಲ್ಲಿ ವಿಶ್ರಮಿಸುತ್ತಿದ್ದನು; ಇಲ್ಲಿ ಅಂಬರೀಷನ ಆಶ್ರಮವಿದೆ (ಪದ್ಮಪು.).

ಸಾಂಬ -- ೧. ಯದುವಂಶದ ಶ್ರೀಕೃಷ್ಣನ ಮಗ. ಈತನ ತಾಯಿ ಜಾಂಬವತಿ. ದುರ್ಯೋಧನನ ಪುತ್ರಿ ಲಕ್ಷಣೆಯು ಈತನ ಪತ್ನಿ (ಭಾಗ) ದ್ವಾರಕೆಗೆ ಬಂದ ಕಣ್ವಮುನಿಗಳ ಪರೀಕ್ಷೆಗಾಗಿ ಈತನಿಗೆ ಯಾದವರು ಗರ್ಭಿಣಿಸ್ತ್ರೀಯ ವೇಷಹಾಕಿ, ಆ ಮುನಿಗಳಲ್ಲಿಗೆ ಕರೆದುಕೊಂಡು ಹೋಗಿ-- 'ಈಕೆಯು ಎಂತಹ ಮಗುವನ್ನು ಹಡೆಯುವಳು?' ಎಂದು ಹೇಳಲು 'ನಿಮ್ಮ ವಂಶನಾಶಕವಾದ ಮುಸಲರನ್ನು ಹಡೆಯುವಳು' ಎಂದು ಹೇಳಿ ಹೋದರು. ಮುಂದೆ ಮುನಿವಾಕ್ಯದಂತೆ ಸಾಂಬನು ಹೆತ್ತ ಮುಸಲದಿಂದ ಯದುವಂಶವು ನಾಶವಾಯಿತು (ಮ. ಮೌ).

ಇವನು ದುರ್ಯೋಧನನ ಪುತ್ರಿ ಲಕ್ಷಣೆಯ ಸ್ವಯಂವರ ಮಂಟಪಕ್ಕೆ ಹೋಗಿ ಆಕೆಯನ್ನು ಅಪಹರಿಸಿಕೊಂಡು ಬರುವ ಪ್ರಯತ್ನಮಾಡಲು ಕೌರವರು ಅವನನ್ನು ಸೆರೆಹಿಡಿದು ಕಾರಾಗೃಹದಲ್ಲಿಟ್ಟರು. ಇದನ್ನು ಕೇಳಿ ಬಲರಾಮನು

ತನ್ನ ನೇಗಿಲನ್ನು ಬ್ರಹ್ಮಾಸ್ತ್ರದಿಂದ ಅಭಿಮಂತ್ರಿಸಿ ಹಸ್ತಿನಾವತಿಯನ್ನೇ ಎತ್ತಿ ಗಂಗೆಯಲ್ಲಿ ಮುಳುಗಿಸುವ ಯತ್ನ ನಡೆಸಲು ಕೌರವರು ಭಯಪಟ್ಟು ಸಾಂಬ -- ಲಕ್ಷಣೆಯರನ್ನು ಬಲರಾಮನಿಗೆ ಅರ್ಪಿಸಿದರು (ಹರಿ)

ಶ್ರೀಕೃಷ್ಣಪುತ್ರನಾದ ಸಾಂಬನಿಗೆ ಕುಷ್ಠರೋಗ ಪ್ರಾರಂಭವಾಗಿ ಅನಾರೋಗ್ಯದಿಂದ ಆತನು ತುಂಬ ನರಳಿದನು. ಕೊನೆಗೆ ಭಾರತದ ಪುಣ್ಯಕ್ಷೇತ್ರಗಳಲ್ಲಿ ಸಂಚರಿಸುತ್ತ ಸುಬ್ರಹ್ಮಣ್ಯದ ಕುಮಾರಧಾರಾ ನದಿಯ ದಡಕ್ಕೆ ಬಂದು ಆ ನದಿಯಲ್ಲಿ ಮಿಂದು ಸಂಪೂರ್ಣ ರೋಗ ಕಳೆದುಕೊಂಡನು.

ತ್ರಿಲೋಕ ಸಂಚಾರಿಯಾದ ನಾರದನು ಆಗಾಗ ದ್ವಾರಕೆಗೆ ಬರುತ್ತಿದ್ದನು. ಸಾಂಬನು ಅವನು ಬಂದಾಗಲೆಲ್ಲ ಆತನಿಗೆ ಅಭಿವಾದನವನ್ನು ಮಾಡದೆ ತಿರಸ್ಕಾರದಿಂದಿರುತ್ತಿದ್ದನು. ಒಮ್ಮೆ ನಾರದನು ಇವನಿಗೆ ಬುದ್ಧಿ ಕಲಿಸಬೇಕೆಂದು, ಶ್ರೀಕೃಷ್ಣನು ಪತ್ನಿಯರೊಂದಿಗೆ ಜಲಕ್ರೀಡೆಯಾಡಿ ಆಯಾಸಪರಿಹಾರಕ್ಕಾಗಿ ಸ್ತ್ರೀಯರೊಡನೆ ಮಧುಪಾನ ಮಾಡುತ್ತಿರುವಾಗ ಸಾಂಬನನ್ನು ಅಲ್ಲಿಗೆ ಕರೆದೊಯ್ದನು. ಅಲ್ಲಿದ್ದ ಸ್ತ್ರೀಯರಿಗೆ ಸಾಂಬನ ಸೌಂದರ್ಯವನ್ನು ಕಂಡು ಮನಸ್ಸು ವಿಚಲಿತವಾಯಿತು. ಅವರ ವಸ್ತ್ರಗಳು ಸಡಿಲಿದುವು. ಇದನ್ನು ಕಂಡ ಕೃಷ್ಣನು ಕೋಪದಿಂದ ಆತನಿಗೆ ಕುಷ್ಠರೋಗವು ಪ್ರಾಪ್ತವಾಗುವಂತೆ ಶಾಪವಿತ್ತನು. ಆಗ ಸಾಂಬನು ತಾನು ನಿರಪರಾಧಿಯೆಂದು ಸೂಚಿಸಲು ಕೃಷ್ಣನು ಅವನಿಗೆ ಮೈತ್ರೇಯ ವನಕ್ಕೆ ಹೋಗಿ ಸೂರ್ಯನನ್ನು ಆರಾಧಿಸಿದರೆ ರೋಗಮುಕ್ತನಾಗುವಿಯೆಂದು ಅಭಯವಿತ್ತನು. ಮುಂದೆ ಸಾಂಬನು ಸೂರ್ಯಾರಾಧನೆ ನಡೆಸಿ ರೋಗದಿಂದ ಬಿಡುಗಡೆ ಹೊಂದಿದನು (ಭಾಗ., ವಿಪು., ಮ. ವ., ಮೌ).

೨. ರಾವಣನ ತಂಗಿಯಾದ ಶೂರ್ಪನಖೆಯ ಮಗ. ಇವನು ಬ್ರಹ್ಮನನ್ನು ಕುರಿತು ತಪಸ್ಸು ಮಾಡುತ್ತಿರುವಾಗ, ಬ್ರಹ್ಮನು ಮೆಚ್ಚಿ ಒಂದು ಖಡ್ಗವನ್ನು ಕೊಟ್ಟು ಹೋದನು. ಸಾಂಬನು ಇದನ್ನು ನೋಡಲೇ ಇಲ್ಲ. ಲಕ್ಷ್ಮಣನು ಕಂದಮೂಲಗಳಿಗಾಗಿ ಸಂಚರಿಸುತ್ತಿರುವಾಗ ಈ ಖಡ್ಗ ಅವನಿಗೆ ಸಿಕ್ಕಿತು. ಅವನು ಕಾಡಿನಲ್ಲಿದ್ದ ದುಷ್ಟಪ್ರಾಣಿಗಳನ್ನು ಕೊಲ್ಲುವಾಗ ಈ ಸಾಂಬನನ್ನು ಕೊಂದನು. ಇವನು ಬ್ರಾಹ್ಮಣ ವೇಷದಿಂದಿದ್ದುದನ್ನು ಕಂಡು ಲಕ್ಷ್ಮಣನು ಚಿಂತಿಸುತ್ತಿರುವಾಗ ಶ್ರೀರಾಮನು ಅವನ ನಿಜವೃತ್ತಾಂತವನ್ನು ಹೇಳಿದನು (ಆನಂ. ರಾ).

ಸಾಂಬಪುರ-- ಒಂದು ಪಟ್ಟಣ. ಇದನ್ನು ಶ್ರೀಕೃಷ್ಣನ ಪುತ್ರನಾದ ಸಾಂಬನು ನಿರ್ಮಿಸಿದನು. ಇದಕ್ಕೆ ಮೊದಲು ಕಶ್ಯಪಪುರ, ಅನಂತರ ಹಂಸಪುರ, ತರುವಾಯ ಭಗಪುರ ಎಂದು ಹೆಸರು ಬಂದು ಆ ಮೇಲೆ ಸಾಂಬಪುರವಾಯಿತು. ಈಗ ಇದನ್ನು ಮೂಲಸ್ಥಾನ ಅಥವಾ ಮುಲ್ತಾನವೆನ್ನುತ್ತಾರೆ.

ಸಾಮವೇದ -- ಮೂರನೆಯ ವೇದ. ಇದು ಬ್ರಹ್ಮನ ಪಶ್ಚಿಮ ಮುಖದಿಂದ ಹೊರಟಿತು. ಗಾಂಧರ್ವವೇದವು ಇದರ ಉಪವೇದ. ನೋ. - ವೇದ. ಕೃಷ್ಣದ್ವೈಪಾಯನ.

ಸಾರನಾಥ--ಬುದ್ಧಗಯೆಯಂತೆ ಇದೂ ಬೌದ್ಧರ ಕ್ಷೇತ್ರ ಮತ್ತು ಸರ್ವಪ್ರೇಕ್ಷಣೀಯ ಸ್ಥಳ. ಇದು ಕಾಶಿಗೆ ಉತ್ತರದಲ್ಲಿ ೫ ಮೈಲುಗಳ ದೂರದಲ್ಲಿದೆ. ಕಾಶಿ ಹಿಂದೂ ವಿಶ್ವ ವಿದ್ಯಾನಿಲಯದಿಂದ ೧೦ ಮೈಲು ದೂರದಲ್ಲಿದೆ. ಇಲ್ಲಿಯ ಅಶೋಕಸ್ತಂಭದ ಮೇಲಿನ ಸಿಂಹದ ಮೂರ್ತಿಯು ಆಕರ್ಷಣೀಯವಾದುದು. ಇಲ್ಲಿ ಬುದ್ಧನ ಮೂರ್ತಿ ಇರುವ ಬುದ್ಧಮಂದಿರವಿದೆ. ಇಲ್ಲಿರುವ ಧರ್ಮೇಖಸ್ತೂಪ, ಚೌಖಂಡೀಸ್ತೂಪ, ಜೈನಮಂದಿರ, ಮೂಲಗಂಧಕುಟಿ ಮತ್ತು ನವೀನವಿಹಾರಗಳು ದರ್ಶನೀಯವಾಗಿವೆ.

ಸಾರಣ--೧. ಶ್ರೀಕೃಷ್ಣನ ಸೋದರನೊಬ್ಬ. ೨. ರಾವಣನ ರಾಕ್ಷಸಮಂತ್ರಿ. ಸೀತಾಪಹಾರವನ್ನು ಮಾಡಿದ ರಾವಣನಿಗೆ ಇವನು ವಿವೇಕವನ್ನು ಹೇಳಿದ್ದಲ್ಲದೆ ಪ್ರಬಲವಾದ ವಾನರಸೇನೆಯನ್ನು ತೋರಿದನು. ಅಲ್ಲದೆ ರಾವಣನ ಅಪ್ಪಣೆಯಂತೆ ಸುವೇಲಪರ್ವತದ ತಪ್ಪಲಿನಲ್ಲಿದ್ದ ರಾಮನ ಸೇನೆಯನ್ನು ಕಪಿವೇಷದಿಂದ ಬಂದು ನೋಡಿ ಹೋದನು. ; ಇವನ ಜೊತೆಯಲ್ಲಿ ಶುಕನೆಂಬ ಇನ್ನೊಬ್ಬ ರಾಕ್ಷಸಮಂತ್ರಿಯು ಇದ್ದನು. ನೋ.-- ಶುಕ, ರಾಮ, ವಿಭೀಷಣ (ಮ.ವ).

ಸಾರಸ-- ಗರುಡನ ಒಬ್ಬ ಮಗ (ಮ. ಉ).

ಸಾರಸ್ವತ -- ೧. ಅಥರ್ವಣ ಋಷಿಪುತ್ರನಾದ ದಧೀಚಿಯು ಅಲಂಬುಸೆ ಎಂಬ ಅಪ್ಸರೆಯನ್ನು ಕಂಡು ಮೋಹಿತನಾಗಿ ಸರಸ್ವತಿನದಿಯಲ್ಲಿ ವೀರ್ಯವನ್ನು ಬಿಡಲು ಅಲ್ಲಿಂದ ಜನಿಸಿದ ಮಹರ್ಷಿ. ಈತನು ದುರ್ಭಿಕ್ಷಕಾಲದಲ್ಲಿ ಮುನಿಗಳನ್ನು ಕಾಪಾಡಿದನು (ಮ. ಶ).೨. ಮಹಾವಿಷ್ಣುವಿನ ವಾಗಂಶದಿಂದ ಹುಟ್ಟಿದ ಮಹರ್ಷಿ. ಇವನಿಗೆ ಅಪಾಂತರತಮ ವೇದಾಚಾರ್ಯ ಮತ್ತು ಪ್ರಾಚೀನಗರ್ಭನೆಂಬ ಹೆಸರೂ ಇದೆ (ಮ. ಶಾಂ).

ಸಾರಸ್ವತಸಪ್ತ -- ನೋ-- ಸಪ್ತಸಾರಸ್ವತ. ಹಿಂದೆ ಸರಸ್ವತಿಯು ಬ್ರಹ್ಮದೇವನ ಕೋರಿಕೆಯಂತೆ ಪುಷ್ಕರಕ್ಷೇತ್ರದಲ್ಲಿ ಹರಿಯಲಾರಂಭಿಸಿದಳು. ಇದನ್ನೇ

ಸುಭದ್ರೆಯೆಂದೂ ಕರೆಯುವರು. ನೈಮಿಷಕ್ಷೇತ್ರದಲ್ಲಿ ಸತ್ರಯಾಗದಲ್ಲಿದ್ದ ಮಹರ್ಷಿಗಳ ಸಹಾಯಕ್ಕಾಗಿ ಸರಸ್ವತೀ ನದಿಯು ಅಲ್ಲಿ ಪ್ರವಹಿಸಬೇಕೆಂದು ಆಕೆಯನ್ನು ಮನಸ್ಸಿನಲ್ಲಿ ಸ್ಮರಿಸಿದರು. ಆಗ ಆಕೆಯು ಅಲ್ಲಿ ಪ್ರವಹಿಸಿ ಕಾಂಚನಾಕ್ಷಿ ಎಂಬ ಹೆಸರಿನಿಂದ ಪ್ರಸಿದ್ಧಳಾದಳು. ಗಯಾಕ್ಷೇತ್ರದಲ್ಲಿ ಗಯನು ಯಜ್ಞಮಾಡುತ್ತಿದ್ದಾಗ ಕಠಿಣವ್ರತವುಳ್ಳ ಅನೇಕ ಮಹರ್ಷಿಗಳು ಅಲ್ಲಿಗೆ ಕರೆಯಲು ಆಕೆ ಆ ಕ್ಷೇತ್ರದಲ್ಲಿ ವಿಶಾಲೆ ಎಂಬ ಹೆಸರಿನಿಂದ ಪ್ರವಹಿಸತೊಡಗಿದಳು. ಔದ್ದಾಲಕಿ ಎಂಬ ಮಹರ್ಷಿಯು ಒಂದು ದೊಡ್ಡ ಯಾಗವನ್ನು ಮಾಡುತ್ತಿದ್ದಾಗ ಅವನ ಕೋರಿಕೆಯಂತೆ ಯಾಗಶಾಲೆಯ ಸಮೀಪದಲ್ಲಿ ಪ್ರವಹಿಸತೊಡಗಿದ ಆ ನದಿಗೆ ಮನೋರಮೆ ಎಂಬ ಹೆಸರಾಯಿತು. ಅಲ್ಲಿದ್ದ ಋಷಿಗಳು ಮನಸ್ಸಿನಿಂದ ಆ ನದಿಯನ್ನು ಆದರಿಸಿದುದರಿಂದಲೇ ಅದಕ್ಕೆ ಆ ಹೆಸರು ಬಂತು. ಪವಿತ್ರವಾದ ಋಷಭದ್ವೀಪದಲ್ಲಿ ಅನೇಕ ರಾಜರ್ಷಿಗಳು ಸೇರಿದ್ದಾಗ ಅಲ್ಲಿ ಸರಸ್ವತೀ ನದಿಯು ಸುರೇಣು ಎಂಬ ಹೆಸರಿನಿಂದ ಪ್ರವಹಿಸಿತು. ಕುರುರಾಜನು ಯಜ್ಞಮಾಡುತ್ತಿದ್ದಾಗ ವಸಿಷ್ಠರಿಂದ ಆಹ್ವಾನಮಾಡಲ್ಪಟ್ಟ ಸರಸ್ವತೀ ನದಿಯು ಓಘವತಿ ಎಂಬ ಹೆಸರಿನಿಂದ ಪ್ರವಹಿಸಿತು. ಗಂಗಾದ್ವಾರದಲ್ಲಿ ದಕ್ಷನು ಯಾಗ ಮಾಡುತ್ತಿದ್ದಾಗ ಅಲ್ಲಿ ಅವನಿಂದ ಆಹ್ವಾನ ಮಾಡಲ್ಪಟ್ಟ ಆ ನದಿಯು ಸುವೇಣಿ ಎಂಬ ಹೆಸರಿನಿಂದ ಪ್ರಸಿದ್ಧಿಗೊಂಡಿತು. ಬ್ರಹ್ಮನು ಮತ್ತೊಮ್ಮೆ ಹಿಮಾಲಯ ಪರ್ವತದಲ್ಲಿ ಯಾಗಮಾಡುತ್ತಿದ್ದಾಗ ಸರಸ್ವತೀ ನದಿಯನ್ನು ಧ್ಯಾನಿಸಲು ಆಕೆಯು ವಿಮಲೋದೆ ಎಂಬ ಹೆಸರಿನಿಂದ ಅಲ್ಲಿ ಪ್ರವಹಿಸತೊಡಗಿದಳು. ಹೀಗೆ ಬೇರೆ ಬೇರೆ ಮಹಾತ್ಮರಿಂದ ಕರೆಯಲ್ಪಟ್ಟ ಸರಸ್ವತಿ ನದಿಯ ಪ್ರವಾಹಗಳು ತಿರುಗಿ ಒಂದಾಗಿ ಸೇರಿದ ಪ್ರದೇಶವೇ ಸಪ್ತಸಾರಸ್ವತವೆಂಬ ಹೆಸರಿನಿಂದ ಪ್ರಸಿದ್ಧವಾದ ಪುಣ್ಯತೀರ್ಥವೆನ್ನಿಸಿದೆ. (ಮ. ಶ).

ಸಾರಿಕ --ಯುಧಿಷ್ಠಿರನ ಸಭೆಯಲ್ಲಿದ್ದ ಋಷಿ (ಮ. ಸ.).

ಸಾರಿಮೇಜಯ-- ವೃಷ್ಣಿಕುಲೋತ್ಪನ್ನನಾದ ಯಾದವ (ಮ. ಆ).

ಸಾರಿಸೃಕ್ಕ -- ಮಂದಪಾಲ ಋಷಿಯ ಪುತ್ರನಾದ ಶಾರ್ಙ್ಗಕ ಪಕ್ಷಿ. ಈತನ ತಾಯಿ ಶಾರ್ಙ್ಗಜರಿತೆ. ಖಾಂಡವವನ ದಹನಕಾಲದಲ್ಲಿ ಇದು ಅಗ್ನಿಯನ್ನು ಸ್ತುತಿಸಿ ಆ ಬೆಂಕಿಯಿಂದ ಪಾರಾಯಿತು. ನೋ.-- ಮಂದಪಾಲ, ಜರಿತೆ(ಮ. ಆ.).

ಸಾರ್ವಭೌಮ-- ೧. ಚಂದ್ರವಂಶದ ಅಹಂಯಾತಿಯ ಮಗ. ಈತನ ತಾಯಿ ಭಾನುಮತಿ ; ಪತ್ನಿ ಕೇಕಯರಾಜ ಪುತ್ರಿಯಾದ ಸುಂದರಾ; ಈಕೆಯ ಮಗ ಜಯತ್ಸೇನ (ಮ. ಆ). ೨. ಉತ್ತರ ದಿಕ್ಕಿನ ದಿಗ್ಗಜ ; ಇದರ ಪತ್ನಿ ಅಂಜನೆ. ಇದು ಭೂಮಿಯಲ್ಲೆಲ್ಲ ತಿಳಿಯಲ್ಪಟ್ಟ ಆನೆಯಾದುದರಿಂದ

ಸಾರ್ವಭೌಮನೆಂದಾಯಿತು.

ಸಾಲಕಟಂಕಟೆ-- ಹೇತಿ ಎಂಬ ರಾಕ್ಷಸನ ಸೊಸೆ; ವಿದ್ಯುತ್ಕೇಶನ ಪತ್ನಿ. ಈಕೆಯ ಮಗ ಸುಕೇಶ; ತಾಯಿ ಸಂಧ್ಯಾದೇವಿ. ನೋ -- ವಿದ್ಯುತ್ಕೇಶ. ಸುಕೇಶ (ರಾಮಾ. ಉತ್ತರ).

ಹಿಡಿಂಬೆಯ ಇನ್ನೊಂದು ಹೆಸರು. ಈಕೆ ಭೀಮನ ಪತ್ನಿ; ಈಕೆಯ ಮಗ ಘಟೋತ್ಕಚ. ಈಕೆಗೆ ಕಮಲಪಾಲಿಕೆ ಎಂಬ ಹೆಸರೂ ಇದೆ (ಮ. ಆ.).

ಸಾಲಗ್ರಾಮ (ಸಾಲಿಗ್ರಾಮ)-- ಪಶ್ಚಿಮ ಕರಾವಳಿಯ ಒಂದು ಕ್ಷೇತ್ರ. ಇಲ್ಲಿ ಕೋಟ ಬ್ರಾಹ್ಮಣರ ಗುರುದೇವಸ್ಥಾನವಿದೆ. ಇಲ್ಲಿ ನರಸಿಂಹ ದೇವಸ್ಥಾನವೂ, ಆಂಜನೇಯ ಮಂದಿರವೂ ಇದೆ. ಇದು ಉಡುಪಿ ಮತ್ತು ಕುಂದಾಪುರಗಳಿಗೆ ನಡುವೆ ಇದೆ. ಇದಕ್ಕೆ ಪ್ರಾಚೀನಕಾಲದಲ್ಲಿ ಗಜಪುರಿ ಎಂಬ ಹೆಸರಿತ್ತು. ಇಲ್ಲಿ ನರಸಿಂಹನಿಂದ ಗಜಾಸುರನ ವಧೆಯಾಗಿದೆ. ಭಟ್ಟಪಾದರು ಈ ದೇವಾಲಯದ ಸ್ಥಾಪಕರು. ಇಲ್ಲಿ ಶಿವಳ್ಳಿ ಬ್ರಾಹ್ಮಣರು ಕಡಿಮೆ; ಕೋಟ ಬ್ರಾಹ್ಮಣರು ತುಂಬ ಇದ್ದಾರೆ.

ಸಾಲಂಕಾಯನ-- ವಿಶ್ವಾಮಿತ್ರಮುನಿಯ ಒಬ್ಬ ಮಗ (ಮ. ಅನು.).

ಸಾಲಪೋತಕ --ಸರ್ಪರಾಜನೊಬ್ಬ. ನೋ. -- ನಂದ.

ಸಾಲ್ವ-- ೧. ಬ್ರಹ್ಮದತ್ತನೆಂದು ಇವನ ಹೆಸರು. ಇವನು ಸಾಲ್ವದೇಶದ ರಾಜ. ಭೀಷ್ಮನು ಕಾಶೀರಾಜನ ಅಂಬೆ ಮೊದಲಾದ ಮೂವರು ಕನ್ಯೆಯರನ್ನು ಸ್ವಯಂವರ ಮಂಟಪದಿಂದ ಬಲಾತ್ಕಾರದಿಂದ ಒಯ್ಯುವಾಗ ಈತನು ತಡೆದು ಯುದ್ಧಮಾಡಿ ಸೋತನು. ಇವನು ಶಿಶುಪಾಲನ ಮಿತ್ರ. ಶ್ರೀಕೃಷ್ಣನು ಹಸ್ತಿನಾವತಿಯಲ್ಲಿರುವಾಗ ದ್ವಾರಕೆಯನ್ನು ಮುತ್ತಿ ಕೊನೆಗೆ ಶ್ರೀಕೃಷ್ಣನಿಂದ ಹತನಾದನು. ಇವನಿಗೆ ಕ್ಷೇಮವೃದ್ಧಿ, ವೇಗವಂತರು ಸೇನಾಧಿಪತಿಗಳು. ವಿವಂಧ್ಯನು ಸ್ನೇಹಿತನು. ನೋ.-- ಬ್ರಹ್ಮದತ್ತ, ಕೃಷ್ಣ (ಮ. ವ., ಆ.).

೨. ಮ್ಲೇಚ್ಛದೇಶದ ರಾಜನೊಬ್ಬ. ಇವನು ಭಾರತಯುದ್ಧದಲ್ಲಿ ಕೌರವಪಕ್ಷದಲ್ಲಿ ನಿಂತು ಹೋರಾಡಿ ಸಾತ್ಯಕಿಯಿಂದ ಮೃತನಾದನು (ಮ. ಶ.).

೩. ಒಂದು ದೇಶ. ನೋ.-- ಸಾಲ್ವ, ಸಾವಿತ್ರಿ. ದ್ಯುಮತ್ಸೇನ (ಮ. ಉ., ಭೀ.)

ಸಾವರ್ಣಿ-- ೧. ಕೃತಯುಗದಲ್ಲಿ ಶಿವನ ಕುರಿತು ಅರವತ್ತು ಸಾವಿರವರ್ಷ ತಪಸ್ಸುಮಾಡಿ ಈತನು ಅವನನ್ನು ಮೆಚ್ಚಿಸಿದನು (ಮ. ಅನು., ಸಭಾ). ೨.ಸೂರ್ಯನಿಂದ ಛಾಯೆಯಲ್ಲಿ ಹುಟ್ಟಿದ ಎಂಟನೆಯ ಮನು. ನೋ.-- ಮನು (ಭಾಗ. ಮಾರ್ಕಂ. ಪು.).

ಸಾವರ್ಣ್ಯ--ರಾಜರ್ಷಿಯೊಬ್ಬ. ಇವನು ಸೂರ್ಯನಿಂದ ಮಣ್ಣಿನ ಹೆಣ್ಣು ಬೊಂಬೆಯಲ್ಲಿ ಜನಿಸಿದವ (ಮ. ಅನು).

ಸಾವಿತ್ರ -- ಸವಿತೃನ (ಸೂರ್ಯ) ಮಗ ಕರ್ಣ (ಮ. ಆ.).

ಸಾವಿತ್ರಿ-- ೧. ಗಾಯತ್ರಿದೇವತೆ. ನೋ.-- ಗಾಯತ್ರಿ. (ಮ. ವನ) ೨.ಮದ್ರದೇಶಾಧಿಪತಿಯಾದ ಅಶ್ವಪತಿಯ ಮಗಳು; ಮಾಳವಿಯು ಈಕೆಯ ತಾಯಿ. ಸಾಲ್ವರಾಜನಾದ ದ್ಯುಮತ್ಸೇನನ ಮಗ ಸತ್ಯವಂತನು ಈಕೆಯ ಪತಿ. ನೋ.-- ಸತ್ಯವಂತ. ಪತಿಯ ಆಯುಷ್ಯ ಮತ್ತು ವಿಪತ್ತನ್ನು ತಿಳಿದ ಸಾವಿತ್ರಿ ಒಂದು ದಿನ ಸೌದೆ ತರಲು ಹೊರಟ ಗಂಡನನ್ನು ಅನುಸರಿಸಿದಳು. ಅಲ್ಲಿ ಮೃತ್ಯುವಶನಾದ ಗಂಡನನ್ನು ಪುನಃ ಪಡೆದಳು ಈಕೆ. ಮಹಾಪತಿವ್ರತೆ ಮತ್ತು ಭಾರತೀಯರಿಗೆ ಆದರ್ಶ ಸ್ತ್ರೀ (ಮ. ವ., ಮತ್ಸ್ಯಪು.).೩. ಪರಶಿವನ ಪತ್ನಿ. ಈಕೆ ಸವಿತೃವಿಗೆ ಪ್ರಕಾಶವನ್ನು ಕೊಡುವುದರಿಂದಲೂ, ಜಗತ್ತನ್ನು ಪ್ರಸವಿಸಿದುದರಿಂದಲೂ ಸಾವಿತ್ರಿ ಎನ್ನಿಸಿದಳು (ಭಾ. ಸ್ಕ.).ಪುಷ್ಕರತೀರ್ಥದ ಅಧಿಷ್ಠಾತ್ರಿಗೆ ಸಾವಿತ್ರಿ ಎಂದು ಹೆಸರು.

ಸಾವೈನಸ-- ಗೃತ್ಸಮದ ಋಷಿಯ ಪುತ್ರ (ಮ. ಅನು).

ಸ್ವಾದಿ (ಸೋದೆ)-- ಇಲ್ಲಿ ವಾದಿರಾಜಸ್ವಾಮಿಗಳ ಮಠವಿದೆ. ಇಲ್ಲೇ ಭಗವಾನ್ ಹಯಗ್ರೀವ ಮಂದಿರವಿದೆ. ವೈಷ್ಣವರಿಗೆ ಇದು ಪವಿತ್ರ ಕ್ಷೇತ್ರ.

ಸಿಂಧುರ-- ೧. ತ್ರಿಪುರಸುಂದರಿಯ ಗಜಗಳು. ಇವುಗಳ ಒಡತಿ ಸಂಪತ್ಕರಿ (ಲಲಿತಾಸ.). ೨. ಕೌರವಪಕ್ಷದ ಮಲ್ಲನೊಬ್ಬ. ಇವನು ಜೀಮೂತನೆಂಬ ಮಲ್ಲನ ಜೊತೆಯಲ್ಲಿ ಬಂದವನು. ಇವನು ಭೀಮನಿಂದ ಹತನಾದನು (ಮ.ವಿ.).

ಸಿಂಹ-- ಮೃಗಗಳ ರಾಜ; ಕಂಠೀರವ. ಇವಕ್ಕೆ ಮೂಲಪುರುಷನೇ ಕಶ್ಯಪ. ಇವನ ಪತ್ನಿಯಾದ ಕ್ರೋಧವಶೆಯ ಮಗಳಾದ ಶಾರ್ದೂಲಿಯಲ್ಲಿ ಈ ಪ್ರಾಣಿವರ್ಗ ಜನಿಸಿತು (ಮ. ಆ.).

ಸಿಂಹಕೇತು -- ಪಾಂಡವಪಕ್ಷದ ಪಾಂಚಾಲನೊಬ್ಬ (ಮ. ದ್ರೋ.).

ಸಿಂಹಚಂದ್ರ -- ಪಾಂಡವಪಕ್ಷದ ಪಾಂಚಾಲನೊಬ್ಬ (ಮ.ದ್ರೋ)

ಸಿಂಹಪುರ-- ಕಾಶ್ಮೀರ ದೇಶದ ಒಂದು ಪಟ್ಟಣ. ರಾಜಸೂಯಯಾಗದ ನಿಮಿತ್ತ ದಿಗ್ವಿಜಯಕ್ಕಾಗಿ ಅರ್ಜುನ ಇಲ್ಲಿಗೆ ಬಂದಿದ್ದ (ಮ. ಸ.).

ಸಿಂಹಬಲ-- ಕೀಚಕನ ಇನ್ನೊಂದು ಹೆಸರು. ನೋ.-- ಕೀಚಕ.

ಸಿಂಹಸೇನ-- ಪಾಂಡವಪಕ್ಷದ ಪಾಂಚಾಲರಾಜನಾದ ಗೋಪತಿಯ ಮಗ; ಇವನು ಭಾರತಯುದ್ಧದಲ್ಲಿ ದ್ರೋಣನಿಂದ ಹತನಾದ (ಮ. ದ್ರೋ. ಕ).

ಸಿಂಹಿಕಾ-- ೧. ದಕ್ಷಪ್ರಜಾಪತಿಯ ಕನ್ಯೆ; ಕಶ್ಯಪಮುನಿಯ ಪತ್ನಿ. ಈಕೆಯ ಮಕ್ಕಳೇ ರಾಹು, ಸುಚಂದ್ರ, ಚಂದ್ರಹಾರ್ತ, ಚಂದ್ರಮರ್ದನರೆಂಬ ನಾಲ್ವರು. ನೋ.--ವಿಪ್ರಚಿತ್ತಿ, ವಾತಾಪಿ, ಇಲ್ವಲ (ಮ. ಆ.). ೨. ಹನುಮಂತನು ಸೀತಾಶೋಧನೆಗೆ ಲಂಕೆಗೆ ಪ್ರಯಾಣ ಬೆಳಸಿದಾಗ ಈಕೆ ಆತನ ನೆರಳಿನಿಂದಲೇ ಅವನನ್ನು ತನ್ನೆಡೆಗೆ ಸೆಳೆದುಕೊಂಡು ಕೊನೆಗೆ ಅವನಿಂದ ಹತಳಾದಳು. ಈಕೆಗೆ ಛಾಯಾಗ್ರಾಹಿ ಎಂಬ ಹೆಸರಿದೆ (ರಾಮಾ. ಸುಂದರ.). ೩. ಹಿರಣ್ಯಕಶಿಪುವಿನ ಸೋದರಿ. ಈಕೆಯ ಪತಿ ವಿಪ್ರಚಿತ್ತಿ ಎಂಬ ದಾನವ. ನೋ.-- ವಿಪ್ರಚಿತ್ತಿ.

ಸಿತಾ-- ವಿಶ್ವಾಮಿತ್ರ ಋಷಿಯ ಒಬ್ಬ ಮಗ (ಮ. ಅನು).

ಸಿದ್ಧ--೧. ಗಂಧರ್ವನೊಬ್ಬ. ಈತನ ತಂದೆ ಕಶ್ಯಪ; ತಾಯಿ ಪ್ರಾಧೆ. ೨.ದೇವತೆಗಳಲ್ಲಿ ಒಂದು ವರ್ಗ (ಮ. ಆ., ಸ.).

ಸಿದ್ಧಪುರ (ಮಾತೃಗಯಾ)-- ಅಹ್ಮದಾಬಾದಿನಿಂದ ಅರವತ್ತುನಾಲ್ಕು ಮೈಲುಗಳ ದೂರದಲ್ಲಿ ಸಿದ್ಧಪುರ ರೈಲ್ವೆ ಸ್ಟೇಷನ್ ಇದೆ. ಇಲ್ಲಿಂದ ಒಂದು ಮೈಲು ದೂರದಲ್ಲಿ ಈ ಊರಿದೆ. ಈ ಊರಿನ ಹತ್ತಿರ ಹರಿಯುವ ಸರಸ್ವತಿ ನದಿಯು ಸಮುದ್ರಕ್ಕೆ ಸಂಗಮವಾಗದೆ ಕಚ್ಛಮರುಭೂಮಿಯಲ್ಲಿ ಇಂಗಿಹೋಗುವುದು. ಪಿತೃಗಳ ಶ್ರಾದ್ಧಕ್ಕಾಗಿ ಗಯಾ ಪ್ರಸಿದ್ಧವಾಗಿರುವಂತೆ ಮಾತೃಶ್ರಾದ್ಧಕ್ಕಾಗಿ ಈ ಸಿದ್ಧಪುರವು ಪ್ರಸಿದ್ಧವಿರುತ್ತದೆ. ಅದಕ್ಕಾಗಿಯೇ ಇದನ್ನು ಮಾತೃಗಯಾ ಎನ್ನುತ್ತಾರೆ. ಇದಕ್ಕೆ ಪ್ರಾಚೀನ ಕಾಲದಲ್ಲಿ ಶ್ರೀಸ್ಥಲವೆಂಬ ಹೆಸರಿತ್ತು. ಇಲ್ಲಿಯೇ ಮಹರ್ಷಿ ಕರ್ದಮರ ಆಶ್ರಮವಿತ್ತು. ಇಲ್ಲೇ ಭಗವಾನ್ ಕಪಿಲಮಹರ್ಷಿಗಳ ಅವತಾರವಾಯಿತು.

ಸಿದ್ಧಾಶ್ರಮ--ಅದಿತಿ-- ಕಶ್ಯಪರು ತಪಸ್ಸುಮಾಡಿ ಸಿದ್ಧಿಪಡೆದ ಸ್ಥಳ. ವಿಶ್ವಾಮಿತ್ರನೂ ಇದೇ ಆಶ್ರಮದಲ್ಲೇ ತಪಸ್ಸುಮಾಡುತ್ತಿದ್ದ. ಶ್ರೀರಾಮಲಕ್ಷ್ಮಣರು ವಿಶ್ವಾಮಿತ್ರನ ಯಜ್ಞರಕ್ಷಣೆಗೆ ಬಂದಾಗ ಇಲ್ಲೇ ಸುಬಾಹು- ತಾಟಕಿಯರನ್ನು ಕೊಂದು ಮಾರೀಚನನ್ನು ದೂರ ಅಟ್ಟಿದರು. ದ್ವಾಪರಯುಗದಲ್ಲಿ ಇಲ್ಲೇ ಪೌಂಡ್ರಕ ವಾಸುದೇವನೆಂಬ ರಾಜನು ರಾಜ್ಯಭಾರ ಮಾಡುತ್ತಿದ್ದನು. ಇವನು ಕೃಷ್ಣನಿಂದ ಕೊಲ್ಲಲ್ಪಟ್ಟನು. ಈ ಸ್ಥಳಕ್ಕೆ ಈಗ ಬಕ್ಸಾರವೆನ್ನುತ್ತಾರೆ. ಮೊಗಲ್ ಸರಾಯಿ ಮತ್ತು ಪಾಟ್ನ ಮಾರ್ಗದಲ್ಲಿ ಈ ಬಕ್ಸಾರ್ ಇದೆ (ರಾಮಾ. ಬಾಲ).

ಸಿದ್ಧಿ -- ೧. ಅಗ್ನಿವಿಶೇಷ-- ವೀರನೆಂಬ ಅಗ್ನಿಯ ಮಗ (ಮ. ವ.).

೨. ಅಷ್ಟಸಿದ್ಧಿಗಳು.-- ೧. ಅಣಿಮಾ, ೨. ಮಹಿಮಾ, ೩. ಲಘಿಮಾ, ೪.ಗರಿಮಾ, ೫. ಪ್ರಾಪ್ತಿ, ೬. ಪ್ರಾಕಾಮ್ಯ, ೭. ಈಶತ್ವ, ೮. ವಶತ್ವ,

೩. ಅಪ್ಪಪಾರ್ಥಿವಸಿದ್ಧಿ-- ೧. ಸ್ಥೂಲವಾಗುವುದು, ೨. ಸೂಕ್ಷ್ಮವಾಗುವುದು, ೩. ಬಾಲಕನಾಗುವುದು, ೪. ಯುವಕನಾಗುವುದು. ೫. ವೃದ್ಧನಾಗುವುದು, ೬. ನಾನಾಜಾತಿಯ ರೂಪವ್ಯೆದುವುದು, ೭. ಪೃಥ್ವಿಹೊರತಾಗಿ ಮಿಕ್ಕ ನಾಲ್ಕುಭೂತಗಳಿಂದಲೇ ದೇಹ ಧರಿಸುವುದು, ೮. ನಿತ್ಯಸುಗಂಧ ಸೇವಿಸುವುದು.

೪. ೧. ಮಿಥುನೋತ್ಪತ್ತಿಸಿದ್ಧಿ-- ಸ್ತ್ರೀಯಿಲ್ಲದೆ ವಿಷಯಾನಂದ ಅನುಭವಿಸುವುದು.

೨. ರಸೋಲ್ಲಾಸಸಿದ್ಧಿ-- ತಲೆಯ ಮೇಲೆ ಚಂದ್ರನು ಅಮೃತ ಸುರಿದಂತೆ ಆನಂದವನ್ನುಂಟುಮಾಡುವುದು.

೩. ಸಕೃದ್ವೃಷ್ಟಿಮಯಸಿದ್ಧಿ -- ಒಂದೇ ಮಳೆಯಿಂದ ಗಿಡಮರಬಳ್ಳಿಗಳು ಫಲಿಸುವಂತೆ ಮಾಡುವುದು.

೪. ಗೃಹವೃಕ್ಷಾತ್ಮಕಸಿದ್ಧಿ -- ಮನಸ್ಸಿನಂತೆ ಮನೆ ಮಠಗಳನ್ನು ಕಟ್ಟಿಸಿಕೊಳ್ಳುವುದು.

೫. ಸಂಕಲ್ಪಸಿದ್ಧಿ -- ಎಲ್ಲ ಬಯಕೆಗಳನ್ನು ಕೈಗೂಡಿಸಿಕೊಳ್ಳುವುದು.

೬. ಕಲ್ಪವೃಕ್ಷಾತ್ಮಕಸಿದ್ಧಿ-- ಬಯಕೆಗಳನ್ನೆಲ್ಲಾ ಪೂರೈಸಿ ಸ್ವರ್ಗಸುಖವನ್ನು ಪಡೆಯುವುದು.

೭. ಪ್ರಕಾಮವೃಷ್ಟಿ ಸಿದ್ಧಿ -- ಬೇಕಾದಂತೆ ಸಮೃದ್ಧಿ ಮಳೆ ಸುರಿಸುವುದು.

೮. ಅಕೃಷ್ಟಪಚ್ಯುಸಿದ್ಧಿ-- ನೆಲವನ್ನು ಉತ್ತುಬಿತ್ತದೆ ಫಲ ಪಡೆಯುವುದು ಇಂತಹ ಹಲವು ಸಿದ್ಧಿಗಳು ಯೋಗಿಗೆ ವಶವಾಗುತ್ತವೆ (ವಿಷ್ಣುಪು.).

ಸಿನೀವಾಲಿ-- ಅಂಗಿರಸ ಋಷಿಯ ಪುತ್ರಿ (ಮ. ವ).

ಸಿಂಧು-- ೧. ಹಿಮಾಲಯದಲ್ಲಿ ಹುಟ್ಟಿ ಅರಬಿ ಸಮುದ್ರಕ್ಕೆ ಸೇರುವ ನದಿ. ಇದು ಮಾನಸ ಸರೋವರದ ಸಮೀಪ ಹುಟ್ಟುತ್ತದೆ. ಸಿಂಧೂನದಿಯಿಂದಲೇ ಭಾರತ ದೇಶಕ್ಕೆ ಹಿಂದೂ ದೇಶವೆಂಬ ಹೆಸರು ಬಂತು (ಮ. ಸ., ಭೀ). ೨. ಸೌವೀರ ದೇಶದ ಸಮೀಪ ದೇಶ. ವೃದ್ಧಕ್ಷತ್ರ, ಜಯದ್ರಥರು ಇಲ್ಲಿಯ ರಾಜರು. ಇದು ಇಂದು ಸಿಂಧು ಮತ್ತು ಜೀಲಂ ನದಿಗಳ ನಡುವಣ ಪ್ರಾಂತ (ಮ. ಭೀ).

ಸಿಂಧುದ್ವೀಪ-- ೧. ಚಂದ್ರವಂಶದ ಜಹ್ನುರಾಜನ ಮಗ. ಇವನು ಕ್ಷತ್ರಿಯನಾಗಿ ಜನಿಸಿ, ತಪಸ್ಸಿನಿಂದ ಬ್ರಾಹ್ಮಣ್ಯವನ್ನು ಪಡೆದು ಮಂತ್ರಗಳನ್ನು ಸೃಷ್ಟಿಸಿದವ. ಈತನ ಮಗನೇ ಬಲಾಕಾಶ್ವ (ಮ. ಶ.). ಇವನು ಸರಸ್ವತೀನದಿಯ ಪೃಥೂದಕ ತೀರ್ಥದಲ್ಲಿ ಮಿಂದು ಬ್ರಾಹ್ಮಣ್ಯವನ್ನು ಪಡೆದನು (ಮ. ಶ.).

೨.ಸೂರ್ಯವಂಶದ ಋತುಪರ್ಣ ಮಹಾರಾಜನ ಮಗ (ಭಾಗ., ಹರಿ.).

ಸಿಂಧುರಾಜ -- ೧. ಸಮುದ್ರರಾಜ ; ವರುಣ ;ಇವನು ಪಶ್ಚಿಮ ದಿಕ್ಕಿನ ಒಡೆಯ ನೋ. --ವರುಣ. ೨. ಸಿಂಧುದೇಶದ ಒಡೆಯ ;, ಸೈಂಧವ. ವೃದ್ಧಕ್ಷತ್ರ-- ಈತನ ಮಗ ಜಯದ್ರಥ. ನೋ --ಜಯದ್ರಥ.

ಸೀತಾ -- ೧. ನದಿಯೊಂದು. ಇದು ಪಶ್ಚಿಮಘಟ್ಟದ ಹೊಡೆಯಲ್ಲಿ ಹುಟ್ಟಿ ಕೊಕ್ಕರಣೆ, ಬಾರಕೂರುಗಳನ್ನು ದಾಟಿ, ಬಾಳೇಕುದುರು (ರಂಭಾಪುರಿ) ಗ್ರಾಮವನ್ನು ಸುತ್ತಿ ಸುವರ್ಣನದಿಯನ್ನು ಹಂಗಾರಕಟ್ಟೆಯ ಬಳಿ ಸೇರಿ ಅಲ್ಲೇ ಅರಬೀ ಸಮುದ್ರಕ್ಕೆ ಸಂಗಮವಾಗುತ್ತದೆ. ನಂದಿನಿ ಮತ್ತು ನಳಿನಿಯರು ಈಕೆಯ ಸೋದರಿಯಾಗಿದ್ದು ನದಿಯಾಗಿ ಹರಿದರು. ೨. ಪೂರ್ವ ತುರ್ಕಿಸ್ಥಾನದ ಯಾರ್ಕಂಡ ಪಟ್ಟಣದ ಬಳಿ ಹರಿಯುವ ಯಾರ್ಕ್ ನದಿಗೆ ಸೀತಾ ಎಂಬ ಹೆಸರಿತ್ತು (ಮ. ಭೀ).೩. ಸೀರಧ್ವಜ ಜನಕನ ಸಾಕುಮಗಳು. ನೋ. ವೇದವತಿ. ವೇದವತಿಯು ಅಗ್ನಿಪ್ರವೇಶ ಮಾಡಿದ ಮೇಲೆ ಲಂಕೆಯ ಒಂದು ಸರೋವರದಲ್ಲಿ ಕಮಲದಿಂದ ಜನಿಸಿದಳು. ಆಗ ರಾವಣನು ಇದನ್ನು ಕಂಡು ಆಶ್ಚರ್ಯಪಡಲಾಗಿ, ಜೋಯಿಸರು 'ಇದೊಂದು ಉತ್ಪಾತಸೂಚಕ ' ವೆಂದರು. ಆಗ ರಾವಣನು ಆ ಮಗುವನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಮುಚ್ಚಿ ಸಮುದ್ರದಲ್ಲಿ ತೇಲಿಬಿಟ್ಟನು. ಅದು ತೇಲುತ್ತ ತೇಲುತ್ತ ಜನಕ ರಾಜನ ಕೈಸೇರಿತು. ಜನಕನು ಇವಳನ್ನು ಮಗಳೆಂದು ಭಾವಿಸಿ ರಕ್ಷಿಸಿದನು. ಈಕೆಯೇ ಸೀತೆ (ದೇವೀಭಾ). ಖರದೂಷಣರ ಸಂಹಾರವಾದ ಮೇಲೆ ಶ್ರೀರಾಮನು ಸೀತೆಯೊಡನೆ-- 'ಪ್ರಿಯೆ, ನಿನಗೆ ಮುಂದೆ ಬಹಳ ಕಷ್ಟ ಪ್ರಾಪ್ತವಾಗುವ ಯೋಗವಿದೆ. ಅದಕ್ಕಾಗಿ ಸಾತ್ವಿಕರೂಪದಿಂದ ನನ್ನ ತೊಡೆಯ ಮೇಲೂ, ರಾಜಸ ರೂಪದಿಂದ ಅಗ್ನಿಯಲ್ಲೂ ತಾಮಸ ರೂಪದಿಂದ ನಮ್ಮ ಆಶ್ರಮದಲ್ಲಿರು' ಎಂದನು. ಆಗ ಸೀತೆಯು ತ್ರಿರೂಪಗಳನ್ನು ಧರಿಸಿದಳು (ಆನಂ. ರಾ.).

ಶ್ರೀರಾಮನ ಹೆಂಡತಿ. ಅಯೋನಿಜೆ. ಕುಶಲವರು ಈಕೆಯ ಮಕ್ಕಳು (ಮ. ಸ.ಪ.). ಜನಕನು ಸಂತಾನಾರ್ಥವಾಗಿ ಯಜ್ಞಮಾಡಲು ಭೂಮಿಯನ್ನು ನೇಗಿಲಿನಿಂದ ಉಳುತ್ತಿದ್ದಾಗ ನೇಗಿಲಿನ ಗೆರೆಯಿಂದ ಹುಟ್ಟಿದವಳೇ ಸೀತೆ. ಜನಕನು ಶಿವಧನುಸ್ಸಿಗೆ ಹೆದೆಯೇರಿಸಿದವನಿಗೆ ಸೀತೆಯನ್ನು ವಿವಾಹಮಾಡುವುದಾಗಿ ನಿಶ್ಚಯಿಸಿದನು. ರಾಮನು ಆ ಪಣವನ್ನು ಗೆದ್ದು ಸೀತೆಯನ್ನು ವಿವಾಹವಾದನು (ರಾಮಾ. ಬಾ..). ರಾಮನು ಅರಣ್ಯವಾಸಕ್ಕೆ ಹೊರಡುವನೆಂದು ಕೇಳಿ ಸೀತೆಯು ತಾನೂ ಆತನ ಅನುಮತಿಯನ್ನು ಪಡೆದು ಹೊರಟಳು. ಸೀತಾರಾಮರು ಚಿತ್ರಕೂಟದಲ್ಲಿ ವಾಸಮಾಡುತ್ತಿರುವಾಗ ಕೌಸಲ್ಯೆ

ಮೊದಲಾದವರು ಅವರ ದರ್ಶನಕ್ಕೆ ಬಂದು ವ್ಯಸನಪಟ್ಟರು. ಅರಣ್ಯವಾಸ ಕಾಲದಲ್ಲಿ ಸೀತೆಯನ್ನು ರಾವಣನು ಅಪಹರಿಸಿಕೊಂಡು ಲಂಕೆಗೆ ಹೋದನು. (ರಾಮಾ. ಅರ.). ರಾಮನು ಮಾರೀಚನ ಮಾಯಾಮೃಗವನ್ನು ಕಂಡು ರಾವಣನ ತಂತ್ರವೆಂದು ತಿಳಿದು ಸೀತೆಯೊಡನೆ 'ಪ್ರಿಯೆ, ನೀನು ನಿನ್ನ ಪ್ರತಿಬಿಂಬವನ್ನು ಇಲ್ಲಿರಿಸು ಒಂದು ವರ್ಷಕಾಲ ಅಗ್ನಿಯಲ್ಲಿ ವಾಸಮಾಡು. ರಾವಣವಧಾ ನಂತರ ನಿನ್ನನು ಸ್ವೀಕರಿಸುವೆನು' ಎಂದನು (ಅಧ್ಯಾ. ಅರ). ರಾವಣನು ಸೀತಾಪಹಾರ ಮಾಡುವಾಗ ತಾನಿದ್ದ ಸ್ಥಳವು ರಾಮನಿಗೆ ತಿಳಿಯಬೇಕೆಂಬ ಉದ್ದೇಶದಿಂದ ಸೀತೆ ತನ್ನ ಸೆರಗನ್ನು ಹರಿದು ಅಭರಣಗಳನ್ನು ಅದರಲ್ಲಿ ಗಂಟುಕಟ್ಟಿ ಋಷ್ಯಮೂಕ ಪರ್ವತದಲ್ಲಿ ಕುಳಿತಿದ್ದ ಸುಗ್ರೀವ -- ಹನುಮಂತರ ಮುಂದೆ ಅದನ್ನು ಎಸೆದಳು.

ಸೀತೆ ಲಂಕೆಯಲ್ಲಿದ್ದಾಗ ಬ್ರಹ್ಮನ ಸೂಚನೆಯಂತೆ ಇಂದ್ರನು ಆಕೆಗೆ ದಿವ್ಯಪಾಯಸವನ್ನು ತಂದುಕೊಟ್ಟು, 'ಇದನ್ನು ತಿನ್ನುವುದರಿಂದ ನಿನಗೆ ಒಂದು ವರ್ಷದವರೆಗೆ ಹಸಿವು, ನೀರಡಿಕೆ, ನಿದ್ರೆಗಳಿಲ್ಲದೆಯೂ ಶರೀರಕಾಂತಿ ಕುಗ್ಗದೆಯೂ ದಿವ್ಯ ಸೌಂದರ್ಯವತಿಯಾಗಿಯೇ ಇರುವೆ'ಎಂದನು (ರಾಮಾ, ಕಿಷ್ಕಿಂ.). ಆದರೆ ಸೀತೆಗೆ ಬಹುದಿನ ಆಹಾರವಿಲ್ಲದಿದ್ದರೆ ಆಕೆ ತುಂಬ ಕೃಶಳಾಗಬಹುದೆಂದು ಅಥವಾ ಸಾಯಬಹುದೆಂದು ಇಂದ್ರನು ದಿವ್ಯ ಹವಿಸ್ಸನ್ನು ನಿದ್ರಾದೇವಿಯ ವಶ ಒಪ್ಪಿಸಿ, ಆಕೆಯನ್ನು ಕರೆದುಕೊಂಡು ರಾಕ್ಷಸಿಯರಿಗೆ ನಿದ್ರೆಯನ್ನು ಕಲ್ಪಿಸಿ, ತಾನು ಸೀತೆಗೆ ನಮಸ್ಕರಿಸಿ ರಾಮಲಕ್ಷ್ಮಣರು ಕುಶಲರಾಗಿರುವರೆಂದು ತಿಳಿಸಿ ತಾನು ಇಂದ್ರನೆಂಬುದನ್ನೂ ಆಕೆಗೆ ದೃಢಪಡಿಸಿ ಆ ಹವಿಸ್ಸನ್ನು ಆಕೆಗೆ ತಿನ್ನಿಸಿದನು. ಮುಂದೆ ಸುಗ್ರೀವನು ಸೀತಾ ಶೋಧನೆಗೆ ಕಪಿಸೇನೆಯನ್ನು ಕಳಿಸಿದನು (ರಾಮಾ. ಕಿಷ್ಕಿಂ). ಹನುಮಂತನು ಲಂಕೆಯಲ್ಲಿ ಸೀತೆಯನ್ನು ಕಂಡು ರಾಮನ ಉಂಗುರವನ್ನು (ಚೂಡಾಮಣಿ) ಆಕೆಯಿಂದ ಪಡೆದು ಲಂಕೆಯನ್ನು ಸುಟ್ಟು, ಸಮುದ್ರವನ್ನು ದಾಟಿ ಶ್ರೀರಾಮನ ಸನ್ನಿಧಿಗೆ ಬಂದು ಶುಭವಾರ್ತೆಯನ್ನು ತಿಳಿಸಿದನು. ಮುಂದೆ ರಾಮನು ರಾವಣನನ್ನು ಕೊಂದು ಸೀತೆಯನ್ನು ಅಗ್ನಿಮೂಲಕ ಪರೀಕ್ಷಿಸಿ ಸ್ವೀಕರಿಸಿದನು. ಮುಂದೆ ಆಕೆಯು ಕುಶಲವರನ್ನು ವಾಲ್ಮೀಕಿ ಆಶ್ರಮದಲ್ಲಿ ಹೆತ್ತು, ಪುನಃ ಶ್ರೀರಾಮನನ್ನು ಸೇರಿದಳು (ರಾಮಾ, ಉತ್ತರ).

ಸೀತೆಯು ಜನಕನಂದಿನಿಯೆಂದು ವಾಲ್ಮೀಕಿ ರಾಮಾಯಣವೂ, ಮಹಾಭಾರತವೂ ಹೇಳುತ್ತದೆ. ಜೈನರಾಮಾಯಣಗಳಲ್ಲಿ ಅತಿ ಪ್ರಾಚೀನವೆಂದು ಪರಿಗಣಿತವಾಗಿರುವ ವಿಮಲಸೂರಿಕೃತ 'ಪಉಮ ಚರಿಯ' ದಲ್ಲಿ ಜನಕನ ಪತ್ನಿಯ ಹೆಸರು ವಿಧೇಹೆ ಎಂದೂ ಈ ದಂಪತಿಗಳಿಗೆ ಸೀತೆ ಮತ್ತು ಪ್ರಭಾಮಂಡಲರೆಂಬ ಅವಳಿಮಕ್ಕಳಿದ್ದರೆಂದೂ ಹೇಳಿದ್ದಾರೆ. ವಾಲ್ಮೀಕಿ

ರಾಮಾಯಣದಲ್ಲಿ ಸೀತೆಯ ಸಹೋದರನ ಹೆಸರೇ ಇಲ್ಲ. ಆದರೆ ವಿಷ್ಣುಪುರಾಣ, ಬ್ರಹ್ಮಾಂಡ ಪುರಾಣ ಮತ್ತು ವಾಯುಪುರಾಣಗಳಲ್ಲಿ ಸೀತೆಯ ಸಹೋದರನ ಹೆಸರು ಭಾನುಮಂತನೆಂದಿದೆ.

ಸೀತೆಯು ಭೂಮಿಜೆಯೆಂದು ವಾಲ್ಮೀಕಿ ರಾಮಾಯಣದಲ್ಲಿದೆ. ಯಜ್ಞಕ್ಕಾಗಿ ಜನಕನು ನೇಗಿಲಿನಿಂದ ಭೂಮಿಯನ್ನು ಉಳುತ್ತಿರುವಾಗ ನೇಗಿಲಿನ ಕೊನೆಯಲ್ಲಿ ಒಂದು ಹೆಣ್ಣುಮಗು ದೊರಕಿದುದರಿಂದ ಅದಕ್ಕೆ ಸೀತೆಯೆಂದು ಹೆಸರಿಟ್ಟರೆಂದಿದೆ. ವಿಷ್ಣುಪುರಾಣದಲ್ಲಿ ಮತ್ತು ಪದ್ಮಪುರಾಣದಲ್ಲಿ ಪುತ್ರಾರ್ಥವಾಗಿ ಯಜ್ಞಮಾಡಲಿದ್ದ ಜನಕನಿಗೆ ಸೀತೆ ದೊರೆತಳೆಂದಿದೆ. ಸೀತಾ ಎಂಬ ಹೆಸರಿನ ನೇಗಿಲರೇಖೆಯ ಅಧಿದೇವತೆಯ ಪೂಜೆ ಋಗ್ವೇದದಲ್ಲಿದೆ. ವೇದಗಳ ಕಾಲದಲ್ಲೇ ಸೀತಾ ಎಂದು ಹೆಣ್ಣುಮಕ್ಕಳಿಗೆ ಹೆಸರಿಡುವ ಪದ್ಧತಿ ಇತ್ತು (ತೈ. ಬ್ರಾ., ಕೃ. ಯ.. ೨.೩.೧೦). ಇಲ್ಲಿ ಸೀತಾ ಮತ್ತು ಶ್ರದ್ಧಾ ಇಬ್ಬರು ಪ್ರಜಾಪತಿಯರ ಪುತ್ರಿಯರು. ಗೌಡೀಯ ಮತ್ತು ಕಾಶ್ಮೀರಿ ಪಾಠಾಂತರಗಳಲ್ಲಿ ಜನಕನು ದಿವ್ಯಾಪ್ಸರೆ, ಮೇನಕೆಯನ್ನು ಮೋಹಿಸಲಾಗಿ ನೆಲದಿಂದ ಸೀತೆ ಹುಟ್ಟಿಬಂದಳೆಂದಿದೆ. ಕೃತ್ತಿವಾಸನ ರಾಮಾಯಣದಲ್ಲಿ ಮೇನಕೆಯ ಬದಲು ಊರ್ವಶಿ ಎಂದಿದೆ. ಕ್ಷೇಮೇಂದ್ರನ ರಾಮಾಯಣ ಮಂಜರಿಯಲ್ಲೂ ಈ ಕಥೆ ಬಂದಿದೆ.

ಸೀತೆಯು ರಾವಣನ ಮಗಳೆಂದು ಭಾರತ, ಟಿಬೆಟ್, ಪೂರ್ವ ತುರ್ಕಿಸ್ಥಾನದ ಖೋಟಾನ್, ಇಂಡೋನೇಷ್ಯಾ ಮತ್ತು ಇಂಡೋಚೀನಾದ ರಾಮಕಥಾಸಾಹಿತ್ಯಗಳಲ್ಲಿ ಉಲ್ಲೇಖ ದೊರೆಯುತ್ತಿದೆ. ದೇವೀಭಾಗವತ ಪುರಾಣದಲ್ಲೂ ಇದೇ ಕಥೆ ಇದೆ. ಕಾಶ್ಮೀರೀ ರಾಮಾಯಣ ಕಥೆಯಲ್ಲಿ ರಾವಣನಿಲ್ಲದೆ ಇದ್ದಾಗ ಮಂಡೋದರಿ ಗರ್ಭಿಣಿಯಾಗಿ ಒಂದು ಹೆಣ್ಣುಮಗುವನ್ನು ಹೆತ್ತಳೆಂದೂ, ಜೋಯಿಸರು ಈ ಮಗುವಿನಿಂದ ರಾವಣನ ನಾಶವಾಗುವುದೆಂದೂ ಹೇಳಿದಾಗ, ಅದರ ಕತ್ತಿಗೆ ಕಲ್ಲು ಕಟ್ಟಿ ನದಿಯಲ್ಲಿ ಬಿಟ್ಟಳೆಂದೂ ಅದು ಜನಕನಿಗೆ ಸಿಕ್ಕಿತೆಂದೂ ಹೇಳಿದೆ.

ಸೀತೆಯು ಪದ್ಮೋದ್ಭವೆಯೆಂದೂ ಹೇಳಿಕೆಯಿದೆ. ಕ್ಷೇಮೇಂದ್ರನ ದಶಾವತಾರ ಚರಿತೆಯಲ್ಲಿ ಈ ಕಥೆ ಬಂದಿದೆ. ಸೀತೆ ಋಷಿರಕ್ತಸಂಭವೆಯೆಂದು ಅದ್ಭುತ ರಾಮಾಯಣದಲ್ಲಿದೆ. ಸೀತೆ ಅಗ್ನಿಸಂಭವೆಯೆಂದು ಆನಂದರಾಮಾಯಣ ಹೇಳುತ್ತದೆ. ಸೀತೆ ದಶರಥನ ಸುತೆಯೆಂದು ಬೌದ್ಧ ದಶರಥ ಜಾತಕದಲ್ಲಿದೆ. ಇದರಲ್ಲಿ ರಾಮ, ಲಕ್ಷ್ಮಣ, ಸೀತೆ - ಇವರೆಲ್ಲ ದಶರಥನ ಮಕ್ಕಳೆಂದಿದೆ. ಇದರಲ್ಲಿ ಶ್ರೀರಾಮನು ಹನ್ನೆರಡು ವರ್ಷ ವನವಾಸ

ಕಳೆದಮೇಲೆ ಸೀತೆಯನ್ನು ಮದುವೆಯಾದನೆಂದಿದೆ. ಜಾವಾ ರಾಮನ ಕಥೆಯಲ್ಲಿ ಮಂಡೋದರಿಯು ದಶರಥನ ಪತ್ನಿ. ಈಕೆಯನ್ನು ರಾವಣನು ಪ್ರಾರ್ಥಿಸಿ ಪಡೆದನು. ಆಮೇಲೆ ದಶರಥನು ಮಂಡೋದರಿಯ ಶಯ್ಯಾಗೃಹದಲ್ಲಿ ಒಂದು ರಾತ್ರಿ ಇದ್ದು ಹೊರಟುಹೋದನು. ಮಂಡೋದರಿ ಗರ್ಭಿಣಿಯಾಗಿ ಒಂದು ಹೆಣ್ಣುಶಿಶುವನ್ನು ಹೆತ್ತಳು. ಆ ಮಗುವೇ ಸೀತೆ.

ರಾಮನು ಒಂದು ದಿನ ಜನಕನೊಡನೆ -- 'ಸ್ವಾಮೀ, ನಾನು ಸೀತೆಯನ್ನು ಬಿಟ್ಟು ಒಂದು ಕ್ಷಣವಾದರೂ ಇರಲಾರೆನು. ಆದರೆ ಶಾಸ್ತ್ರವು ಪತ್ನಿಯು ಗರ್ಭಿಣಿಯಾದ ಐದನೇ ತಿಂಗಳಿನಿಂದ ಬೇರೆ ಶಯ್ಯೆಯಲ್ಲಿ ಶಯನ ಮಾಡಬೇಕೆಂದು ಹೇಳಿರುವುದು. ಶಾಸ್ತ್ರವಚನವನ್ನು ಮಾನ್ಯಮಾಡಬೇಕಾದುದು ನನ್ನ ಕರ್ತವ್ಯ. ಅಯೋಧ್ಯೆಯಲ್ಲಿ ನಾವಿಬ್ಬರೂ ಜೊತೆಯಲ್ಲಿದ್ದರೆ ಶಾಸ್ತ್ರವಚನವನ್ನು ನಾವು ಮೀರಲೇಬೇಕಾಗುವುದು. ಅದಕ್ಕಾಗಿ ಸೀತೆಯನ್ನು ವಾಲ್ಮೀಕಿ ಆಶ್ರಮದ ಬಳಿ ಬಿಟ್ಟು, ಆಕೆಗೆ ಹೆರಿಗೆ ಆದಮೇಲೆ ಐದು ವರ್ಷಗಳವರೆಗೆ ಅಲ್ಲೇ ಬಿಟ್ಟಿರಬೇಕೆಂದು ಮಾಡಿರುವೆನು. ಅದಕ್ಕಾಗಿ ಲೋಕಾಪವಾದವನ್ನು ಅವಲಂಬಿಸುವೆನು. ನಿನ್ನ ಮಗಳ ಪ್ರಸೂತಿ ಕಾಲದಲ್ಲಿ ಕುಟುಂಬಸಹಿತರಾಗಿ ಸೀತೆಯ ಪಕ್ಕದಲ್ಲಿರಬೇಕು' ಎನ್ನಲು ಜನಕಮಹಾರಾಜನು ಸಂತೋಷದಿಂದ ಕುಟುಂಬದೊಡನೆ ವಾಲ್ಮೀಕಿಯ ಆಶ್ರಮಕ್ಕೆ ಪ್ರಯಾಣ ಮಾಡಿದನು. ಅದಕ್ಕೆ ಹೊಂದಿಕೆಯಾಗಿ ಕೌಸಲ್ಯೆಯು ಮಗನೊಡನೆ-- 'ಸೀತಾದೇವಿಗೆ ಸೀಮೋಲ್ಲಂಘನ ಮಾಡಿಸಬೇಕು' ಎಂದು ಹೇಳಿದಳು. ಶ್ರೀರಾಮನು ತಾನು ನಿರ್ಧರಿಸಿದ ವಿಷಯವನ್ನು ಆಕೆಗೆ ಹೇಳಿದನು. ಸೀತಾದೇವಿಗೂ ಆ ವಿಚಾರವನ್ನು ಶ್ರೀರಾಮನು ತಿಳಿಸಿ, 'ಐದು ವರ್ಷಗಳ ನಂತರ ನಿನ್ನನ್ನು ಪುನಃ ಅಯೋಧ್ಯೆಗೆ ಕರೆಸಿಕೊಳ್ಳುವೆನು. ನಿನಗೆ ಕುಶನೆಂಬ ಪರಾಕ್ರಮಿಯಾದ ಮಗನು ಜನಿಸುವನು. ಮುನಿಯ ತಪಃಪ್ರಭಾವದಿಂದ ಲವನೆಂಬ ಮತ್ತೊಬ್ಬ ಮಗನು ಜನಿಸುವನು. ನಿನ್ನ ಸುಖಕ್ಕಾಗಿ ಜನಕ ಮತ್ತು ಸುಮೇಧೆಯರು ವಾಲ್ಮೀಕಿಯ ಆಶ್ರಮದಲ್ಲೇ ಇರುವರು. ನೀನು ಸಾತ್ವಿಕ ರೂಪದಿಂದ ನನ್ನ ಪರ್ಯಂಕದಲ್ಲೇ ವಾಸಮಾಡು ರಾಜಸ, ತಾಮಸ, ರೂಪದಿಂದ ವಾಲ್ಮೀಕಿಯ ಆಶ್ರಮಕ್ಕೆ ಪ್ರಯಾಣಮಾಡು' ಎನ್ನಲು ಲೋಕಶಿಕ್ಷಣದ ದೃಷ್ಟಿಯಿಂದ ಸೀತೆ ಒಪ್ಪಿದಳು. ಮುಂದೆ ರಜಕನೊಬ್ಬನು -- 'ಏಳು ತಿಂಗಳವರೆಗೆ ರಾವಣನ ಅರಮನೆಯಲ್ಲಿ ವಾಸಮಾಡಿದ ತರುಣಿಯನ್ನು ಶ್ರೀರಾಮನು ಸ್ವೀಕರಿಸಿದನು. ವ್ಯಭಿಚಾರಿಣಿಯಾದ ನೀನು ನನ್ನ ಮನೆಯ ಬಳಿಗೂ ಬರಬಾರದು' ಎಂದು ತನ್ನ ಪತ್ನಿಗೆ ಹೇಳಿದ ಅಪವಾದದ ಮಾತುಗಳನ್ನು ವಿಜಯನೆಂಬ ಗೂಢಚಾರನು ಹೇಳಲು ಶ್ರೀರಾಮನು ಸೀತೆಯನ್ನು ಪರಿತ್ಯಜಿಸಲು ನಿರ್ಧರಿಸಿದನು.

ಸೀತೆಯೊಂದು ದಿನ ಕೈಕೆಯ ಮನೆಗೆ ಬಂದಿದ್ದಾಗ ಕೈಕೆಯು 'ಸೀತೆಯೇ ನೀನು ರಾವಣನನ್ನು ನೋಡಿರುವೆಯಷ್ಟೆ ! ಅವನ ಚಿತ್ರವನ್ನು ಆ ಗೋಡೆಯ ಮೇಲೆ ಬರೆದು ತೋರಿಸು' ಎನ್ನಲು ಸೀತೆಯು ' ಕಪಟಸನ್ಯಾಸಿಯ ವೇಷದಿಂದ ಬಂದ ಆತನ ಪಾದಗಳ ಹೆಬ್ಬೆರಳನ್ನು ಮಾತ್ರ ಕಂಡಿರುವೆ' ಎನ್ನಲು ಕೈಕೆಯು 'ಅದನ್ನೇ ಬಿಡಿಸಿ ತೋರಿಸು' ಎನ್ನಲು ಸೀತೆಯು ಗೋಡೆಯ ಮೇಲೆ ಅದನ್ನು ಬರೆದು ತನ್ನ ಅಂತಃಪುರಕ್ಕೆ ಹೋದಳು. ಕೈಕೆಯು ಆ ಚಿತ್ರದ ಆಧಾರದಿಂದ ರಾವಣನ ಸಮಸ್ತ ದೇಹದ ಚಿತ್ರವನ್ನು ಬಿಡಿಸಿದಳು. ಆಗ ಕೈಕೆಯ ಅರಮನೆಗೆ ಬಂದ ಶ್ರೀರಾಮನು ರಾವಣನ ಚಿತ್ರವನ್ನು ಜಾನಕಿಯು ಬಿಡಿಸಿದುದೆಂದು ಕೈಕೆಯ ಬಾಯಿಂದ ಕೇಳಿ, ಆಕೆಯನ್ನು ಮರುದಿನವೇ ಅರಣ್ಯಕ್ಕೆ ಕಳುಹಿಸಬೇಕೆಂದು ನಿರ್ಧರಿಸಿದನು (ಆನಂ.ರಾ).

ಅಂತಃಪುರದಲ್ಲಿ ಸೀತೆಯು ಕೈಕೆಯು ಹೇಳಿದಂತೆ ರಾವಣನ ಹೆಬ್ಬೆರಳನ್ನು ಮಾತ್ರ ಬಿಡಿಸಿ ಬಂದುದನ್ನು ಹೇಳಲು ಕೈಕೆಯ ಕೌಶಲ್ಯಕ್ಕೆ ಶ್ರೀರಾಮನು ಬೆರಗಾದನು (ಆನಂ. ರಾ.).

ಸೀತೆಯು ಶುಭಲಗ್ನದಲ್ಲಿ ಒಬ್ಬ ಬಾಲಕನನ್ನು ಹೆತ್ತಳು. ಆ ದಿನ ರಾತ್ರಿ ಶ್ರೀರಾಮನು ಪುಷ್ಪಕ ವಿಮಾನದಲ್ಲಿ ಕುಳಿತು ವಾಲ್ಮೀಕಿ ಆಶ್ರಮಕ್ಕೆ ಬಂದಿದ್ದನು. ಆ ಬಾಲಕನಿಗೆ ಕುಶನೆಂದು ಹೆಸರಿಟ್ಟರು (ಆನಂ. ರಾ.).

ವಾಲ್ಮೀಕಿಯು ಸೀತೆ ಮತ್ತು ಕುಶಲವರನ್ನು ರಾಮನಿಗೊಪ್ಪಿಸಲು ರಾಜಸಭೆಗೆ ಕರೆತಂದಾಗ ಸೀತೆಯು -- 'ಎಲೈ ಭೂದೇವಿಯೇ, ನಾನು ತ್ರಿಕರಣಗಳಲ್ಲಿ ಶ್ರೀರಾಮನನ್ನಲ್ಲದೆ ಅನ್ಯರನ್ನು ಗಮನಿಸದೆ ಇದ್ದುದು ಸತ್ಯವಾದರೆ ನನ್ನನ್ನು ನಿನ್ನೊಳಗೇ ಸೇರಿಸಿಕೋ' ಎನ್ನಲು ಭೂಮಿಯು ಬಿರಿದು ಅದರಿಂದ ಒಂದು ಸಿಂಹಾಸನ ಮತ್ತು ಭೂದೇವಿಯು ಕಾಣಿಸಿಕೊಂಡು, ಸೀತೆಯನ್ನು ಆಲಂಗಿಸಿಕೊಂಡು ಭೂಮಿಯೊಳಗೆ ಅದೃಶ್ಯವಾಗುವ ಪ್ರಯತ್ನಪಡಲು, ಶ್ರೀರಾಮನು ಭೂಮಿಯನ್ನು ಹೀರಲು ಮೌರ್ವಿಯನ್ನು ಬಿಗಿದುದನ್ನು ಕಂಡು ಭೂದೇವಿ ಭಯದಿಂದ ಸೀತೆಯನ್ನು ಶ್ರೀರಾಮನಿಗೆ ಒಪ್ಪಿಸಿ ಅದೃಶ್ಯಳಾದಳು (ಆನಂ. ರಾ.).ನೋ. -- ಸನ್ನತಿಕ್ಷೇತ್ರ, ಕೌಂಡ್ರಕ, ಶತಮುಖರಾವಣ.

ಸೀತೆಯ ತಾಯಿ ಸುಮೇಧೆ. ಸೀತೆಯು ಗರ್ಭಿಣಿಯಾಗಿರುವಾಗ ಉಪವನದಲ್ಲಿ ವಾಸಮಾಡುವ ತನ್ನ ಬಯಕೆಯನ್ನು ಶ್ರೀರಾಮನಲ್ಲಿ ತೋಡಿಕೊಂಡಳು. ಮುಂದೆ ಅಯೋಧ್ಯೆಗೆ ಬಂದ ಮೇಲೆ ಏಳನೆಯ ತಿಂಗಳಲ್ಲಿ ಆಕೆಗೆ ಸೀಮಂತೋನ್ನಯನ ಸಂಸ್ಕಾರ ವಿಧಿಪೂರ್ವಕವಾಗಿ ನಡೆಯಿತು (ಆನಂ.ರಾ.).

ಸೀತೆಯ ಹಸ್ತವನ್ನು ಕಂಡ ಜ್ಯೋತಿಷಿಯೊಬ್ಬನು 'ಆಕೆ ೧೪ ವರ್ಷಗಳವರೆಗೆ ವನವಾಸ ಮಾಡಬೇಕಾದ ಸಂಭವವಿದೆ ' ಎಂದಿದ್ದನು.

ಅರಣ್ಯದ ಋಷಿಯೊಬ್ಬನು ಲಕ್ಷ್ಮಿಯನ್ನೇ ಮಗುವನ್ನಾಗಿ ಪಡೆಯಬೇಕೆಂದು ನೀರನ್ನು ಮಂತ್ರಿಸಿ ಕಲಶದಲ್ಲಿಟ್ಟಿರಲು, ದಿಗ್ವಿಜಯಕ್ಕಾಗಿ ಬಂದ ರಾವಣನು ಅದನ್ನು ತೆಗೆದುಕೊಂಡು ಹೋಗಿ ಮಂಡೋದರಿಯ ಕೈಯಲ್ಲಿಟ್ಟು ಅದು ವಿಷವೆಂದು ಸೂಚಿಸಿದ್ದನು. ಮುಂದೆ ರಾವಣನು ದಿನ ಹೋದಂತೆ ಪರದಾರಾಸಕ್ತನಾಗುತ್ತ ಬರಲು ಮಂಡೋದರಿಯು ಇದನ್ನು ಕೇಳಿ ವ್ಯಸನದಿಂದ ಸಾಯಬೇಕೆಂದು ರಾವಣನು ಕೊಟ್ಟಿದ್ದ ಆ ಮಂತ್ರಪೂತ ಜಲವನ್ನು ವಿಷವೆಂದು ಕುಡಿಯಲು ಸಾಯುವ ಬದಲು ಆಕೆ ಗರ್ಭಿಣಿಯಾದಳು. ಇದರಿಂದ ಮಂಡೋದರಿಗೆ ವ್ಯಸನ ಹೆಚ್ಚಿ ಪುಷ್ಪಕ ವಿಮಾನದಲ್ಲಿ ಕುಳಿತು ಮಿಥಿಲೆಯ ಬಳಿ ಬರುವಾಗ ಹೆತ್ತಳು. ಆಗ ಆ ಮಗುವನ್ನು ಆಕೆ ಭೂಮಿಯಲ್ಲಿ ಹೂತಿಟ್ಟು ಲಂಕೆಗೆ ಹಿಂದಿರುಗಿದಳು. ಈ ಮಗುವೇ ಜನಕನು ಚಿನ್ನದ ನೇಗಿಲಿನಿಂದ ಭೂಮಿಯನ್ನು ಉಳುತ್ತಿರುವಾಗ ಸಿಕ್ಕಿದವಳು. ಇವಳೇ ಸೀತೆ (ಅದ್ಭು. ರಾ.). ನೋ. -- ರಾಮ, ಶ್ರೀಮತಿ, ಸುಗ್ರೀವ, ಹನುಮಂತ.

ಸೀತೆಯ ಸ್ವಯಂವರದ ಮೊದಲು ಉದ್ಯಾನದಲ್ಲಿ ವಿಹರಿಸುತ್ತಿದ್ದಾಗ ಹೆಣ್ಣು -- ಗಂಡುಗಿಳಿಗಳೆರಡು ಒಂದು ಮರದ ಮೇಲೆ ಕುಳಿತು ರಾಮಾಯಣ ಕಥೆಯನ್ನು ಹೇಳುತ್ತಿದ್ದುವು. ಸೀತೆಯು ತನ್ನ ಸಖಿಯರಿಂದ ಅವನ್ನು ಹಿಡಿತರಿಸಿ ಅವು ವಾಲ್ಮೀಕಿಯ ಆಶ್ರಮದ ಗಿಳಿಗಳೆಂದು ತಿಳಿದು ಶ್ರೀರಾಮನು ತನ್ನನ್ನು ವಿವಾಹವಾಗುವವರೆಗೆ ಬಿಡೆನೆಂದು ಹೇಳಿ ಕಡೆಗೆ ಗಂಡುಗಿಳಿಯನ್ನು ಮಾತ್ರ ಬಿಟ್ಟಳು. ಆಗ ಗರ್ಭಿಣಿಯಾದ ಹೆಣ್ಣುಗಿಳಿಯು ಕೋಪದಿಂದ 'ನೀನೂ ಗರ್ಭಿಣಿಯಾಗಿರುವಾಗ ಪತಿಯಿಂದ ಪರಿತ್ಯಕ್ತೆಯಾಗು' ಎನ್ನುತ್ತ ಪ್ರಾಣ ಬಿಟ್ಟಿತು. ಗಂಡುಗಿಳಿಯು 'ಶ್ರೀರಾಮನು ನಿನ್ನನ್ನು ತ್ಯಾಗಮಾಡಲಿ ' ಎಂದು ಗಂಗೆಗೆ ಹಾರಿ ಪ್ರಾಣಬಿಟ್ಟಿತು. ಈ ಗಂಡುಗಿಳಿಯೇ ಕ್ರೋಧನನೆಂಬ ಅಗಸನಾಗಿ ಜನ್ಮವೆತ್ತಿತು (ಪದ್ಮಪು., ಆನಂ. ರಾ.). ನೋ.-- ಹರಧನಸ್ಸು ಶ್ರೀರಾಮನು ಹರಧನುವನ್ನೆತ್ತಿ ತನ್ನನ್ನು ವಿವಾಹವಾದರೆ ೧೪ ವರ್ಷ ಅರಣ್ಯವಾಸಮಾಡುವೆನೆಂದು ಸೀತೆ ಹರಕೆ ಹೊತ್ತಿದ್ದಳು (ಆನಂ. ರಾ.).

ಸೀತೆಯಮನೆಗುಡ್ಡ (ಸೀತಾಗಿರಿ)-- ಹುಬ್ಬಳ್ಳಿ-- ಸೋಲ್ಲಾಪುರ ರೈಲ್ವೆ ಮಾರ್ಗದಲ್ಲಿರುವ ಒಂದು ಕ್ಷೇತ್ರ. ಇದು ಹುಬ್ಬಳ್ಳಿಯಿಂದ ೧೧೧ ಮೈಲು ದೂರವಿದೆ. ಶ್ರೀರಾಮನು ಅರಣ್ಯವಾಸಕ್ಕೆ ಹೊರಟು ಪತ್ನಿ ಮತ್ತು ಸಹೋದರರೊಡನೆ ಕೃಷ್ಣವೇಣಿ ನದಿಯನ್ನು ದಾಟಿ ರಮ್ಯವಾದ ಸೀತಾಗಿರಿಗೆ (ಇದರ ಮೊದಲಿನ ಹೆಸರು ಗೊತ್ತಾಗುವುದಿಲ್ಲ) ಬಂದನು. ಇಲ್ಲಿ

ಸೀತಾಹ್ರದವೆಂಬ ತೀರ್ಥವಿದೆ. ಇಲ್ಲಿಯೇ ಶೂರ್ಪನಖಿಯ ಮಾನಭಂಗವೂ, ಸೀತಾಪಹರಣವೂ ನಡೆಯಿತು. ಮುಂದೆ ಇಲ್ಲಿದ್ದ ವೆಂಕಟೇಶಮೂರ್ತಿಯು ಸೀತಾದೇವಿಯ ಪಾವಿತ್ರ್ಯವನ್ನು ಶ್ರೀರಾಮನ ಮುಂದೆ ಹೊಗಳಿದನು. ಶ್ರೀರಾಮನು ಇಲ್ಲಿಯೇ ಸೀತಾದೇವಿಯ ಪ್ರಾರ್ಥನೆಯಂತೆ ಸಹೋದರರೊಡನೆ ವಾಸಿಸುವೆನೆಂದೂ, ಈ ಪರ್ವತಕ್ಕೆ ಸೀತಾಗಿರಿ ಎಂಬ ಹೆಸರು ಬರುವಂತೆಯೂ ವರವಿತ್ತನು. ಇಂದೂ ಅಲ್ಲಿ ವೆಂಕಟೇಶಮಂದಿರ, ರಾಮಮಂದಿರ, ರಾಮತೀರ್ಥಗಳಿವೆ (ವಾಸಿ. ರಾ.).

ಸೀಮಂತಿನಿ--ಚಿತ್ರವರ್ಮನು ಪಾತಾಳದ ತಕ್ಷಕನೆಂಬ ಸರ್ಪರಾಜನ ಸ್ನೇಹಿತನು. ಈತನ ಮಗಳಾದ ಸೀಮಂತಿನಿಯು ಬಾಲವಿಧವೆಯಾಗುವಳೆಂದು ತಿಳಿದು, ವೈಧವ್ಯಪರಿಹಾರಕ್ಕಾಗಿ ಯಾಜ್ಞವಲ್ಕ್ಯ ಮುನಿಪತ್ನಿಯಾದ ಮೈತ್ರೇಯಿಯ ಸೂಚನೆಯಂತೆ, ಪ್ರತಿ ಸೋಮವಾರ ಪ್ರದೋಷ ವ್ರತವನ್ನು ನಡೆಸುತ್ತ ಬಂದಳು. ಮುಂದೆ ಸೀಮಂತಿನಿಗೆ ನಿಷಧದೇಶಾಧಿಪತಿಯ ಮಗನಾದ ಚಂದ್ರಾಂಗದನೊಡನೆ ವಿವಾಹವಾಯಿತು. ಈತನು ಯಮುನಾನದಿಯಲ್ಲಿ ದೋಣಿಯಲ್ಲಿ ವಿಹರಿಸುವಾಗ ದೋಣಿ ನದಿಯಲ್ಲಿ ಮುಳುಗಿಹೋಯಿತು. ಚಂದ್ರಾಂಗದನನ್ನು ನಾಗಕನ್ಯೆಯರು ಪಾತಾಳಕ್ಕೆ ಮುಟ್ಟಿಸಿದರು. ಅಲ್ಲಿಂದ ತಕ್ಷಕರಾಜನ ಮೂಲಕ ಪುನಃ ಈತನು ಭೂಮಿಗೆ ಬಂದು ಪತ್ನಿಯನ್ನು ಸೇರಿ ಸುಖವಾಗಿದ್ದನು (ಸ್ಕಾಂ. ಪು).

ಸುಕನ್ಯಾ -- ಈಕೆ ಶರ್ಯಾತಿ ರಾಜನ ಪುತ್ರಿ; ಚ್ಯವನಮುನಿಯ ಪತ್ನಿ. ಈಕೆಯ ಮಗ ಪ್ರಮತಿ. ಶರ್ಯಾತಿ ರಾಜನೊಮ್ಮೆ ಬೇಟೆಗೆ ಹೊರಟಾಗ ಮಗಳಾದ ಸುಕನ್ಯೆಯನ್ನೂ ಕರೆದುಕೊಂಡು ಹೋದನು. ಸುಕನ್ಯೆಯು ತನ್ನ ಸಖಿಯರೊಡನೆ ಕಾಡಿನಲ್ಲಿ ಸುತ್ತಾಡುತ್ತ ಒಂದು ಹುತ್ತದಲ್ಲಿ ಹೊಳೆಯುವ ಎರಡು ವಸ್ತುಗಳನ್ನು ಕಂಡು ಮುಳ್ಳಿನ ತುದಿಯಿಂದ ಚುಚ್ಚಲು ಆ ಹುತ್ತದಿಂದ ಎರಡು ರಕ್ತಪ್ರವಾಹಗಳು ಹೊರಟವು. ಸುಕನ್ಯೆಯು ಇದನ್ನು ಕಂಡು ಭೀತಳಾಗಿ ತನ್ನ ತಂದೆಯ ಪಾಳಯಕ್ಕೆ ಬಂದು ಬಿಟ್ಟಳು. ಇದರಿಂದ ಶರ್ಯಾತಿರಾಜನ ಸೇನೆಗೆ ಮಲಮೂತ್ರ ಬಂಧಿಸಿ ಬಹಳ ಕಷ್ಟವಾಯಿತು. ರಾಜನು ಇದರ ಕಾರಣವನ್ನು ಶೋಧಿಸಿದಾಗ, ಆ ಹುತ್ತದಲ್ಲಿದ್ದ ಚ್ಯವನಮಹರ್ಷಿಯ ಸಂತಾಪವೇ ಇದಕ್ಕೆ ಕಾರಣವೆಂದು ತಿಳಿದು, ಆತನ ಕಣ್ಣನ್ನು ಕುರುಡುಮಾಡಿದ ಮಗಳನ್ನು ಆತನಿಗೇ ಧಾರೆಯೆರೆದು ಕೊಟ್ಟನು. ಸುಕನ್ಯೆಯು ಅಶ್ವಿನೀದೇವತೆಗಳ ಸಹಾಯದಿಂದ ಚ್ಯವನನಿಗೆ ಯೌವನ ದೊರಕಿಸಿಕೊಟ್ಟು ಆತನ ಪ್ರೀತಿಗೆ ಪಾತ್ರಳಾದಳು. ನೋ. -- ಚ್ಯವನ (ಭಾಗ., ಮ. ಅ., ವ.,).

ಸುಕರ್ಣೆ -- ವಿದ್ಯಾಧರಿಯೊಬ್ಬಳು. ನೋ -- ವಿಧೂಮ.

ಸುಕರ್ಮ -- ಯುಧಿಷ್ಠಿರನ ಸಭೆಯಲ್ಲಿದ್ದ ಒಬ್ಬ ರಾಜ (ಮ. ಸ.).

ಸುಕುಂಡಲ -- ಧೃತರಾಷ್ಟ್ರನ ಮಗನೊಬ್ಬ (ಮ. ಆ.).

ಸುಕುಮಾರ -- ೧. ಮತ್ಸ್ಯದೇಶದ ಸಮೀಪ ದೇಶದ ಕ್ಷತ್ರಿಯನೊಬ್ಬ. ರಾಜಸೂಯಯಾಗದ ಸಂದರ್ಭದಲ್ಲಿ ಸಹದೇವ ಇವನನ್ನು ಜಯಿಸಿದ (ಮ. ಸ.).

೨. ಸರ್ಪರಾಜನೊಬ್ಬ (ಮ.ಅ). ೩. ಪುಲಿಂದನಗರದ ರಾಜ. ರಾಜಸೂಯ ಯಾಗದ ಕಾಲದಲ್ಲಿ ಭೀಮನು ಇವನನ್ನು ಜಯಿಸಿದನು (ಮ. ಸ.).

ಸುಕುಮಾರಿ -- ೧. ಶೈಬ್ಯರಾಜನ ಮಗನಾದ ಸೃಂಜಯನ ಪುತ್ರಿ. ಈಕೆ ನಾರದನ ಪತ್ನಿ (ಮ. ಶಾಂ). ೨. ಚಂದ್ರವಂಶದ ಪರೀಕ್ಷಿತರಾಜ ಪುತ್ರನಾದ ಭೀಮಸೇನನ ಪತ್ನಿ. ಈಕೆಯ ಮಗನೇ ಪರಿಶ್ರವ ;ಈತನಿಗೆ ಪ್ರತೀಪನೆಂಬ ಹೆಸರೂ ಇದೆ (ಮ.ಆ.).

ಸುಕೃಶ -- ನೋ. -- ಧರ್ಮಪಕ್ಷಿ.

ಸುಕೇತು -- ೧. ಸಗರನ ಒಬ್ಬ ಮಗ. ಕಪಿಲಮಹರ್ಷಿಯ ಕೋಪದಿಂದ ಸುಟ್ಟು ಉಳಿದ ನಾಲ್ವರಲ್ಲಿ ಒಬ್ಬನು ಇವನು ; ಬರ್ಹಕೇತು, ಧರ್ಮರಥ ಪಂಚಜನರು ಉಳಿದರು. ೨. ಪಾಂಚಾಲರಾಜನಾದ ದ್ರುಪದನ ಮೊಮ್ಮಗ. ಚಿತ್ರಕೇತುವಿನ ಮಗ. ಇವನು ಕೃಪಾಚಾರ್ಯನಿಂದ ಹತನಾದ (ಮ. ಆ., ಸ.). ೩. ಚೇದಿ ದೇಶಾಧಿಪತಿಯಾದ ಶಿಶುಪಾಲನ ಮಗ. ಇವನಿಗೆ ಧೃಷ್ಟಕೇತು ಮತ್ತು ಶರಭನೆಂಬ ಸಹೋದರರಿದ್ದರು. ಇವನು ಕೃಪಾಚಾರ್ಯನಿಂದ ಹತನಾದ (ಮ. ಕ).೪. ಯಕ್ಷನೊಬ್ಬ. ಇವನು ಬ್ರಹ್ಮನನ್ನು ತಪಸ್ಸಿನಿಂದೊಲಿಸಿ, ಸಾವಿರ ಆನೆಗಳ ಬಲವುಳ್ಳ ತಾಟಕಿ ಎಂಬ ಮಗಳನ್ನು ಪಡೆದನು. ಈಕೆಯನ್ನು ಸುಂದನೆಂಬ ಯಕ್ಷನು ಮದುವೆಯಾದನು. ಸುಬಾಹು ಈಕೆಯ ಮಗ. ನೋ. -- ತಾಟಕಿ, ಸುಂದ (ರಾಮಾ. ಬಾಸ.).

ಸುಕೇಶ -- ರಾಕ್ಷಸನೊಬ್ಬ. ಈತನ ತಂದೆ ವಿದ್ಯುತ್ಕೇಶ; ತಾಯಿ ಸಾಲಕಟಂಕಟೆ. ನೋ. -- ವಿದ್ಯುತ್ಕೇಶ (ರಾಮಾ. ಉತ್ತರ).

ಸುಕೇಶಿ -- ೧. ಶ್ರೀಕೃಷ್ಣನ ಒಬ್ಬಳು ಪತ್ನಿ. ಈಕೆ ಗಾಂಧಾರ ರಾಜಪುತ್ರಿ (ಮ. ಸ.). ೨. ಅಪ್ಸರೆಯೊಬ್ಬಳು (ಮ. ಅನು.).

ಸುಕ್ಷೇತ್ರ -- ಕೋಸಲ ರಾಜನ ಮಗ (ಮ. ದ್ರೋ).

ಸುಗ್ರೀವ -- ೧. ಸೂರ್ಯಪುತ್ರನಾದ ವಾನರ. ಈತನ ಪತ್ನಿ ತಾರನೆಂಬ ವಾನರನ ಮಗಳಾದ ರುಮೆ; ಸಹೋದರ ವಾಲಿ. ನೋ-- ವಾಲಿ ಕಪಿರಾಜನಾದ

ಋಕ್ಷರಜನು ಒಂದು ಕೊಳದಲ್ಲಿ ಮಿಂದಾಗ ಸ್ತ್ರೀಯಾದನು. ಈತನನ್ನು ಕಂಡು ಸೂರ್ಯ ಮತ್ತು ಇಂದ್ರರು ಮೋಹಗೊಂಡರು. ಇವರಿಬ್ಬರಿಂದ ಕ್ರಮವಾಗಿ ಸುಗ್ರೀವ ಮತ್ತು ವಾಲಿಗಳು ಜನಿಸಿದರು. ಮುಂದೆ ಇವನು ಬ್ರಹ್ಮನ ಅನುಗ್ರಹದಿಂದ ಪುರುಷನಾಗಿ ಕಿಷ್ಕಿಂಧೆಯಲ್ಲಿ ರಾಜನಾಗಿ ಆಳಿದ. ಮುಂದೆ ವಾಲಿಸುಗ್ರೀವರು ಇಲ್ಲೇ ರಾಜ--ಯುವರಾಜರಾದರು. ಒಮ್ಮೆ ಮಾಯಾವಿಯೆಂಬ ರಾಕ್ಷಸನು ವಾಲಿಯೊಡನೆ ಒಂದು ಗುಹೆಯಲ್ಲಿ ಯುದ್ಧ ಮಾಡುತ್ತಿದ್ದಾಗ ರಕ್ತಪ್ರವಾಹವು ಗುಹೆಯಿಂದ ಹೊರಗೆ ಹರಿದು ಬರಲು ವಾಲಿಯು ಸ್ವರ್ಗಸ್ಥನಾದನೆಂದು ಸುಗ್ರೀವನು ಅವನಿಗೆ ಉತ್ತರಕ್ರಿಯೆಯನ್ನು ಮಾಡಿ ಪ್ರಜೆಗಳ ನಿರ್ಬಂಧದಂತೆ ರಾಜನಾದನು. ಸ್ವಲ್ಪ ಕಾಲದ ಮೇಲೆ ವಾಲಿಯು ಗುಹೆಯಿಂದ ಹೊರಬಂದು ಸಿಂಹಾಸನದಲ್ಲಿ ಕುಳಿತ ಸುಗ್ರೀವನನ್ನೋಡಿಸಿ ತಾನು ಸಿಂಹಾಸನವನ್ನೇರಿದನು. ಸುಗ್ರೀವನು ಹನುಮ ಮೊದಲಾದವರೊಡನೆ ಓಡುತ್ತ ಋಷ್ಯಮೂಕಪರ್ವತವನ್ನು ಸೇರಿದನು. ಶ್ರೀರಾಮನು ಸೀತಾದೇವಿಯನ್ನು ಹುಡುಕುತ್ತ ಅಲ್ಲಿಗೆ ಬಂದಾಗ ಈತನೊಡನೆ ಸ್ನೇಹ ಬೆಳೆಸಿದನು. ಸುಗ್ರೀವನು ಸೀತಾಶೋಧನೆಗಾಗಿ ಕಪಿನಾಯಕರನ್ನು ದಿಕ್ಕುದಿಕ್ಕಿಗೆ ಕಳುಹಿಸಿದನು. ಇವರಲ್ಲಿ ಹನುಮಂತನು ಲಂಕೆಯಲ್ಲಿ ಸೀತೆಯನ್ನು ಕಂಡು ಬಂದ ಮೇಲೆ ಸುಗ್ರೀವನ ಸೇನೆಯು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ ಲಂಕೆಗೆ ಹೋಗಿ ಅಲ್ಲಿ ರಾಕ್ಷಸರೊಡನೆ ಯುದ್ಧಮಾಡಿತು. ಸುಗ್ರೀವನು ಶ್ರೀರಾಮನ ಸಹಾಯದಿಂದ ವಾಲಿಯನ್ನು ಕೊಂದನು; ರಾವಣ ಕುಂಭಕರ್ಣರೊಡನೆ ಯುದ್ಧಮಾಡಿದನು. ಶ್ರೀರಾಮಪಟ್ಟಾಭಿಷೇಕ ಕಾಲದಲ್ಲಿ ಕಪಿನಾಯಕರಿಂದ ನಾಲ್ಕು ಸಮುದ್ರಗಳ ನೀರು ತರಿಸಿದನು. ಶ್ರೀರಾಮನು ಅವತಾರ ಬಿಡುವ ಕಾಲದಲ್ಲಿ ಅಂಗದನಿಗೆ ಕಿಷ್ಕಿಂಧೆಯಲ್ಲಿ ಪಟ್ಟಕಟ್ಟಿ ತಾನೂ ದಿವ್ಯದೇಹಧಾರಿಯಾಗಿ ಸದ್ಗತಿಪಡೆದನು. ನೋ.-- ವಾಲಿ (ಮ. ಸ., ರಾಮಾ. ಕಿಷ್ಕಿಂ ಸುಂದರ., ಉತ್ತರ., ಯುದ್ಧ.). ೨. ಶ್ರೀಕೃಷ್ಣನ ರಥಾಶ್ವಗಳಲ್ಲಿ ಒಂದು (ಮ. ವ., ಅಶ್ವ.). ೩. ಶುಂಭ -- ನಿಶುಂಭರೆಂಬ ದೈತ್ಯರ ದೂತ. ಈ ರಕ್ಕಸರು ತ್ರಿಪುರಸುಂದರಿಯ ಸೌಂದರ್ಯಕ್ಕೆ ಮೋಹಿಸಿ ಆಕೆಯನ್ನು ಲಗ್ನವಾಗುವಂತೆ ಸುಗ್ರೀವನೆಂಬ ದೂತನನ್ನು ದೇವಿಯ ಬಳಿಗೆ ಕಳುಹಿಸಲು ದೇವಿಯು ತನ್ನನ್ನು ಗೆದ್ದವನನ್ನು ಮಾತ್ರ ವಿವಾಹವಾಗುವೆನೆಂದು ಈ ದೂತನೊಡನೆ ಹೇಳಿ ಕಳುಹಿಸಿದನು. ನೋ. -- ನಿಶುಂಭ (ದೇವೀಭಾ. ಮಾರ್ಕಂ. ಪು.).

ರಾವಣನು ಸೀತೆಯನ್ನು ಬಿಟ್ಟುಕೊಡುವುದಿಲ್ಲವೆಂದು ಕೇಳಿ ಲಂಕೆಗೆ ಹಾರಿ ಸಿಂಹಾಸನದಲ್ಲಿ ಕುಳಿತಿದ್ದ ರಾವಣನನ್ನು ತನ್ನ ಮುಷ್ಟಿಯ ಹೊಡೆತದಿಂದ ಕೆಳಗೆ ಕೆಡೆದನು. ಬಳಿಕ ಇಬ್ಬರಿಗೂ ಬಾಹುಯುದ್ಧವಾಗಿ ರಾವಣನು ಸೋತನು.

ಇದನ್ನು ತಿಳಿದ ಶ್ರೀರಾಮನು -- ಇನ್ನು ಮೇಲೆ ಯಾರೂ ತನ್ನ ಅಪ್ಪಣೆ ಇಲ್ಲದ ಲಂಕೆಗೆ ಹೋಗಬಾರದು-- ಎಂದು ಕಟ್ಟುಮಾಡಿದನು (ಆನಂ. ರಾ).

ಸುಘೋಷ -- ಮಾದ್ರೀಪುತ್ರನಾದ ನಕುಲನ ಶಂಖ (ಮ. ಭೀ.).

ಸುಚಂದ್ರ -- ೧. ಪ್ರಾಧೆಯ ಮಗನಾದ ಗಂಧರ್ವ (ಮ. ಆ.). ೨. ಸಿಂಹಿಕೆಯ ಒಬ್ಬಮಗ; ರಾಹುವಿನ ಸಹೋದರನೊಬ್ಬ (ಮ. ಆ.).

ಸುಚಾರು-- ಧೃತರಾಷ್ಟ್ರನ ಒಬ್ಬ ಮಗ (ಮ. ಭೀ).

ಸುಚಿತ್ರ -- ೧. ಧೃತರಾಷ್ಟ್ರನ ಮಗನೊಬ್ಬ; ೨ ಪಾಂಡವಪಕ್ಷದ ಪಾಂಚಾಲನೊಬ್ಬ. ಇವನು ದ್ರೋಣನಿಂದ ಹತನಾದನು. ಇವನ ಮಗ ಚಿತ್ರವರ್ಮ. ಈತನೂ ದ್ರೋಣನಿಂದ ಹತನಾದನು (ಮ. ಭೀ).

ಸುಜಾತ-- ಧೃತರಾಷ್ಟ್ರನ ಮಗನೊಬ್ಬ. ಇವನು ಭೀಮನಿಂದ ಹತನಾದನು (ಮ.ಶ).

ಸುಜಾತಾ--ಉದ್ದಾಲಕ ಋಷಿಯ ಮಗಳು; ಈಕೆ ಕಹೋಲ ಮುನಿಯ ಪತ್ನಿ. ಈಕೆಯ ಮಗನೇ ಅಷ್ಟಾವಕ್ರ ಮಹರ್ಷಿ (ಮ. ವ).

ಸುಜಿಹ್ವ -- ಇವನು ಮಿಹಿರಗೋತ್ರದ ಬ್ರಾಹ್ಮಣ. ಇವನ ಪತ್ನಿ ನಿಕ್ಷುಭೆ ಪರಮಸುಂದರಿಯಾಗಿದ್ದಳು. ಸೂರ್ಯನು ಇವಳನ್ನು ಮೋಹಿಸಿ ಮದುವೆಯಾದನು. ಈ ದಂಪತಿಗಳಿಗೆ ಜರಶಸ್ತ್ರ ಅಥವಾ ಜರಶಬ್ದನೆಂಬ ಪುತ್ರನು ಜನಿಸಿದನು. ಇವನೇ ಪಾರಸಿಮತ ಸ್ಥಾಪಕನಾದ ಜರತುಷ್ಟ್ರ. ಇವನ ತತ್ವಗಳು ಜೆಂದ್ -- ಅವೆಸ್ತವೆಂಬ ಗ್ರಂಥದಲ್ಲಿ ಅಡಕವಾಗಿವೆ. ಇವನ ವಂಶಜರೇ ಮಗಬ್ರಾಹ್ಮಣರು. ಇವರು ಅವ್ಯಂಗವೆಂಬ ಕಟಿಬಂಧವನ್ನು ಧರಿಸುತ್ತಿದ್ದರು. ಇದನ್ನು ಸರ್ಪರಾಜನಾದ ವಾಸುಕಿಯು ಸೂರ್ಯನಿಗೆ ಅರ್ಪಿಸಿದನು (ಭವಿ. ಪು).

ಸುತನು.-- ೧. ಯದುವಂಶದ ಆಹುಕನ ಮಗಳು ; ಈಕೆ ಅಕ್ರೂರನ ಪತ್ನಿ (ಮ. ಸ.).೨. ವಸುದೇವನ ಭೋಗಪತ್ನಿ.

ಸುತಸೋಮ-- ಪಾಂಡವರಲ್ಲಿ ಭೀಮನ ಮಗ. ಈತನ ತಾಯಿ ದ್ರೌಪದಿ. ಇವನು ಯುದ್ಧದ ಹದಿನೆಂಟನೇ ದಿನ ಶಿಬಿರದಲ್ಲಿ ಅಶ್ವತ್ಥಾಮನಿಂದ ಹತನಾದ. ಇವನೂ, ಇವನ ಸಹೋದರರೂ ಮಹಾರಥರು. ಇವನು ಭಾರತಯುದ್ಧದ ಹದಿನಾರನೇ ದಿನ ಶಕುನಿಯೊಂದಿಗೆ ಯುದ್ಧಮಾಡಿದ (ಮ. ಆ., ಕ., ಸೌ.).

ಸುತೀಕ್ಷ್ಣ--ದಂಡಕಾರಣ್ಯದಲ್ಲಿದ್ದ ಒಬ್ಬ ಮಹರ್ಷಿ. ಶ್ರೀರಾಮನು ವನವಾಸಕಾಲದಲ್ಲಿ ಇವನ ಸೂಚನೆಯಂತೆ ಅಗಸ್ತ್ಯಾಶ್ರಮಕ್ಕೆ ಹೋದನು (ರಾಮಾ. ಅರ.).

ಸುತೇಜನ -- ಪಾಂಡವಪಕ್ಷದ ರಾಜನೊಬ್ಬ (ಮ. ದ್ರೋ).

ಸುದಕ್ಷಿಣ --ಕಾಂಭೋಜದ ರಾಜ. ದುರ್ಯೋಧನನ ಪಕ್ಷದವ. ಇವನು ಭಾರತಯುದ್ಧದಲ್ಲಿ ಅರ್ಜುನನಿಂದ ಹತನಾದನು. ಈತನು ಏಕರಥ (ಮ. ಆ., ಉ., ದ್ರೋ., ಕ.,).

ಸುದರ್ಶನ -- ೧. ಇಕ್ಷ್ವಾಕುವಂಶದ ದುಯೋಧನನ ಮಗಳಾದ ಸುದರ್ಶನೆಯ ಮಗ; ಈತನ ತಂದೆ ಅಗ್ನಿ; ಪತ್ನಿ ಓಘವತಿ (ಮ. ಅನು.). ೨. ದುರ್ಯೋಧನನ ಪಕ್ಷದ ಕ್ಷತ್ರಿಯನೊಬ್ಬ. ಇವನು ಸಾತ್ಯಕಿಯಿಂದ ಹತನಾದನು (ಮ. ಸ., ದ್ರೋ). ೩. ಧೃತರಾಷ್ಟ್ರನ ಮಗನೊಬ್ಬ. ಇವನು ಭೀಮನಿಂದ ಹತನಾದನು (ಮ. ಭೀ., ದ್ರೋ., ಶ.). ೪. ಧ್ರುವಸಂಧಿ ರಾಜನ ಮಗ (ದೇವೀಭಾ). ನೋ.-- ಮನೋರಮಾ. ೫. ವಿಷ್ಣುವಿನ ಚಕ್ರಾಯುಧ. ನೋ. -- ವಿವಸ್ವಾನ್. ಕ್ಷುಪ. ಕಾರ್ತಿಕ ಶುಕ್ಲಚತುದರ್ಶಿಯ ದಿನ ವಿಷ್ಣುವು ಕಾಶೀಕ್ಷೇತ್ರವನ್ನು ಸೇರಿ, ಸಾವಿರ ಕಮಲಗಳಿಂದ ಶಿವನನ್ನು ಭಕ್ತಿಯಿಂದ ಪೂಜಿಸುತ್ತಿರುವಾಗ, ಶಿವನು ಆ ಕಮಲಗಳಿಂದ ಒಂದನ್ನು ಅದೃಶ್ಯಮಾಡಲು, ವಿಷ್ಣುವು ಕಡಿಮೆಯಾದ ಕಮಲಪುಷ್ಪದ ಬದಲಿಗೆ ತನ್ನ ಕಮಲನೇತ್ರದಿಂದಲೇ ಶಿವನನ್ನು ಅರ್ಚಿಸಲು, ತಾನು ಜಲಂಧರ ದೈತ್ಯನನ್ನು ಕೊಂದ ಚಕ್ರಾಯುಧವನ್ನು ವಿಷ್ಣುವು ಕರುಣಿಸಿದನು. ಇದರಿಂದ ಈ ದಿನಕ್ಕೆ ವೈಕುಂಠಚತುರ್ದಶಿ ಎಂದು ಹೆಸರಾಯಿತು (ಶಿವಪು., ಸ್ಕಾಂ. ಪು.).

ಸುದರ್ಶನಾ -- ೧. ಸೂರ್ಯವಂಶದ ದುರ್ಯೋಧನನಿಗೆ ನರ್ಮದಾನದಿಯಲ್ಲಿ ಹುಟ್ಟಿದ ಮಗಳು. ಈಕೆ ಅಗ್ನಿಯ ಪತ್ನಿ. ಮಗ ಸುದರ್ಶನ (ಮ. ಅನು.). ನೋ. -- ಸುದರ್ಶನ. (೧). ೨. ಮಾಹಿಷ್ಮತಿಯ ರಾಜನಾದ ನೀಲನ ಮಗಳು ; ಅಗ್ನಿಯ ಪತ್ನಿ (ಮ. ಸ).

ಸುದಾಮ -- ೧. ದಶಾರ್ಣದೇಶದ ರಾಜ. ಚೇದಿದೇಶದ ರಾಜನಾದ ಸುಬಾಹುವಿನ ತಾಯಿಯೂ, ನಳನ ಪತ್ನಿಯಾದ ದಮಯಂತಿಯ ತಾಯಿಯೂ ಈತನ ಮಕ್ಕಳು. (ಮ. ಆ.). ೨. ಮೋದಾಪುರದ ರಾಜ. ೨. ಕರ್ಣನ ಮಗ. ವೃಷಸೇನನ ಒಬ್ಬ ತಮ್ಮ. ದ್ರೌಪದಿಯ ಸ್ವಯಂವರ ಕಾಲದಲ್ಲಿ ನಡೆದ ಯುದ್ಧದಲ್ಲಿ ಅರ್ಜುನನಿಂದ ಈತನು ಮಡಿದನು (ಮ. ಆ.) ೪. ಶ್ರೀಕೃಷ್ಣನ ಸಹಪಾಠಿಯಾದ ಕುಚೇಲನಿಗೂ ಈ ಹೆಸರಿತ್ತು. ನೋ. -- ಕುಚೇಲ. ತಾರಣ (ಭಾಗ). ೫. ಮಧುರೆಯ ಹೂವಾಡಿಗನೊಬ್ಬ. ಇವನು ಶ್ರೀಕೃಷ್ಣನಿಗೆ ಹೂಮಾಲೆಗಳನ್ನಿತ್ತು ಆತನಿಂದ ಅನುಗ್ರಹಿಸಲ್ಪಟ್ಟನು.

ಸುದೇವ --೧. ವಿದರ್ಭದೇಶದ ಶ್ವೇತರಾಜನ ತಂದೆ. ನೋ -- ಶ್ವೇತ (ರಾಮಾ. ಉತ್ತರ.). ೨. ಅಂಬರೀಷನ ಸೇನಾಪತಿಯೊಬ್ಬ (ಮ. ಶಾಂ). ೩. ಕಾಶೀರಾಜನಾದ

ಹರ್ಯಶ್ವನ ಮಗ. ಇವನು ವೀತಹವ್ಯನಿಂದ ಪರಾಜಿತನಾದ. ಈತನ ಮಗ ದಿವೋದಾಸ (ಮ. ಅನು.).೪. ಭೀಷ್ಮಕನು ತನ್ನ ಅಳಿಯನಾದ ನಳ ಮತ್ತು ದಮಯಂತಿಯನ್ನು ಹುಡುಕಲು ಕಳುಹಿಸಿದ ಒಬ್ಬ ಬ್ರಾಹ್ಮಣ. ಇವನು ಚೇದಿ ದೇಶದ ಸುಬಾಹು ರಾಜನ ಅರಮನೆಯನ್ನು ಪ್ರವೇಶಿಸಿ, ಅಲ್ಲಿ ಬ್ರಾಹ್ಮಣರು ಪುಣ್ಯಾಹವಾಚನೆಯನ್ನು ಮಾಡುವ ಸಮಯದಲ್ಲಿ ಸುನಂದೆಯೆಂಬ ರಾಜಪುತ್ರಿಯೊಡನೆ ಇದ್ದ ದಮಯಂತಿಯನ್ನು ಗುರುತಿಸಿ, ಆಕೆಗೆ ತನ್ನ ಪರಿಚಯವನ್ನು ತಿಳಿಸಿ, ಆಕೆಯ ತಂದೆ, ತಾಯಿ ಮತ್ತು ಮಕ್ಕಳ ಕ್ಷೇಮವನ್ನು ತಿಳಿಸಿ, ತಾನು ಬಂದ ಕಾರಣವನ್ನು ಹೇಳಿದನು. ಇವನೇ ದಮಯಂತಿಯನ್ನು ತಂದೆಯ ಮನೆಗೆ ಕರೆದುಕೊಂಡು ಹೋದನು. ಇದರಿಂದ ಸಂತುಷ್ಟನಾದ ಭೀಮ ಭೂಪಾಲಕನು ಈ ಬ್ರಾಹ್ಮಣನಿಗೆ ಸಾವಿರ ಗೋವುಗಳನ್ನೂ, ಒಂದು ದೊಡ್ಡ ಗ್ರಾಮವನ್ನೂ, ಅನೇಕ ದ್ರವ್ಯಗಳನ್ನೂ ಕೊಟ್ಟನು. ಪರ್ಣಾದನೆಂಬ ಬ್ರಾಹ್ಮಣನು ಋತುಪರ್ಣನ ಬಳಿಯಲ್ಲಿ ನಳನಿದ್ದ ವಿಚಾರವನ್ನು ಹೇಳಲು, ದಮಯಂತಿಯು ಸುದೇವನನ್ನೇ ಅಯೋಧ್ಯೆಗೆ ಕಳುಹಿಸಿ --'ದಮಯಂತಿಗೆ ಪುನಃ ಸ್ವಯಂವರ' ಎಂಬ ವಾರ್ತೆಯನ್ನು ಋತುಪರ್ಣನಿಗೆ ಮುಟ್ಟಿಸಿ ಋತುಪರ್ಣ ಮತ್ತು ಬಾಹುಕನನ್ನು ವಿದರ್ಭನಗರಕ್ಕೆ ಕರೆಸಿಕೊಂಡಳು (ಮ. ವ.).

ಸುದೇಷ್ಣಾ--೧. ಮತ್ಸ್ಯದೇಶದ ರಾಜನಾದ ವಿರಾಟನ ಮಹಿಷಿ; ಕೀಚಕನೂ, ಈಕೆಯೂ ಅಕ್ಕತಂಗಿಯರ ಮಕ್ಕಳು. ಈಕೆಯ ತಂದೆ ಕೇಕಯದ ರಥಕಾರನೆಂಬ ರಾಜ. ಈಕೆಯ ತಾಯಿ ಈತನ ಎರಡನೇ ಹೆಂಡತಿಯಾದ ಮಾಲವಿ. ಕೀಚಕಾದಿಗಳು ಮೊದಲನೇ ಹೆಂಡತಿಯ ಮಕ್ಕಳು. ಉತ್ತರ -- ಉತ್ತರೆಯರು ಸುದೇಷ್ಣೆಯ ಮಕ್ಕಳು. ದ್ರೌಪದಿಯು ಮಾಲಿನಿ ಎಂಬ ಹೆಸರಿನಿಂದ ಅಜ್ಞಾತವಾಸಕಾಲದಲ್ಲಿ ಈಕೆಯ ಸೇವೆ ಮಾಡಿಕೊಂಡಿದ್ದಳು. ಈಕೆಯು ದ್ರೌಪದಿಯ ಮೇಲೆ ಕೋಪಗೊಂಡು, ಆಕೆಯನ್ನು ಅರಮನೆಯಿಂದ ಹೊರಗೆ ಕಳುಹಿಸುವ ಪ್ರಯತ್ನ ಮಾಡಿ, ಕೊನೆಗೆ ಭಯದಿಂದ ಸುಮ್ಮನಾದಳು. (ಮ. ವಿ).೨. ಗಾಂಧಾರರಾಜನಾದ ಸುಬಲನ ಮಗಳು. ಈಕೆ ಗಾಂಧಾರಿಯ ತಂಗಿ. ಈಕೆಯೂ ಧೃತರಾಷ್ಟ್ರನ ಪತ್ನಿ (ಮ. ಆ.).೩. ಚಂದ್ರವಂಶದ ಅನುಕುಲೋತ್ಪನ್ನನಾದ ಶಿಬಿರಾಜನ ಸೊಸೆ, ಬಲಿರಾಜನ ಹೆಂಡತಿ. ಈಕೆಗೆ ದೀರ್ಘತಮನೆಂಬ ಋಷಿಯಿಂದ ಅಂಗ, ವಂಗ, ಕಲಿಂಗ, ಪುಂಡ್ರ, ಸುಹ್ಮ ಎಂಬ ಐವರು ಮಕ್ಕಳಿದ್ದರು. ನೋ. --ದೀರ್ಘತಮ, ಬಲಿ (ಮ. ಆ., ಭಾಗ., ಹರಿ).೪. ಒಂದು ದೇಶ (ಮ. ಭೀ).

ಸುದ್ಯುಮ್ನ -- ಸೂರ್ಯವಂಶದ ಯುವನಾಶ್ವನ ತಂದೆ. ಲಿಖಿತಮುನಿಯು ತನ್ನ ಕಳ್ಳತನದ ಶಿಕ್ಷೆಗಾಗಿ, ಈತನ ಮುಂದೆ ತನ್ನ ಕೈಗಳನ್ನು ಕತ್ತರಿಸಿಕೊಂಡನು. ನೋ. -- ಲಿಖಿತ (ಮ. ಶಾಂ).

ಸುಧನ್ವ--೧. ಹಂಸಧ್ವಜನ ಮಗ. ಚಂಪಕಾವತಿಯು ಈತನ ರಾಜಧಾನಿ. ಯುಧಿಷ್ಠಿರನ ಅಶ್ವಮೇಧದ ಕುದುರೆಯನ್ನು ಈತನು ಕಟ್ಟಿದುದರಿಂದ ಕುದುರೆಯ ಬೆಂಗಾವಲಿಗೆ ಬಂದಿದ್ದ ಅರ್ಜುನನಿಗೂ ಈತನಿಗೂ ಯುದ್ಧ ಸಂಭವಿಸಿತು. ಈತನು ಯುದ್ಧದ ಮೊದಲು ಪತ್ನಿಯಾದ ಪ್ರಭಾವತಿಯ ಅಂತಃಪುರವನ್ನು ಪ್ರವೇಶಿಸಿದನು. ಹೊತ್ತಿಗೆ ಸರಿಯಾಗಿ ಯುದ್ಧರಂಗಕ್ಕೆ ಬಾರದುದರಿಂದ ಹಂಸಧ್ವಜನು ಪುರೋಹಿತರಾದ ಶಂಖ-- ಲಿಖಿತರ ಸೂಚನೆಯಂತೆ ಮಗನನ್ನು ಕುದಿಯುವ ಎಣ್ಣೆಕೊಪ್ಪರಿಗೆಗೆ ಹಾಕಿದನು. ಸುಧನ್ವನು ಪರಮಕೃಷ್ಣಭಕ್ತನು. ಕೃಷ್ಣನ ಧ್ಯಾನದಿಂದ ಕುದಿಯುವ ಎಣ್ಣೆ ಕೊಪ್ಪರಿಗೆಯಲ್ಲೂ ಅಪಾಯ ಹೊಂದದೆ ಹೊರಗೆ ಬಂದು, ತಂದೆಯ ಅಪ್ಪಣೆಯಂತೆ ಮುಖ್ಯ ಸೇನಾಪತಿಯಾಗಿ ಅರ್ಜುನನ ಸೇನೆಯ ವೃಷಕೇತು, ಪ್ರದ್ಯುಮ್ನ, ಕೃತವರ್ಮ, ಅನುಸಾಲ್ವ, ಸಾತ್ಯಕಿಗಳನ್ನು ಗೆದ್ದು ಅರ್ಜುನನನ್ನು ಯುದ್ಧರಂಗದಲ್ಲಿ ಗಾಬರಿಗೊಳಿಸಿದನು. ಅರ್ಜುನನು ಶ್ರೀಕೃಷ್ಣನನ್ನು ಧ್ಯಾನಿಸಿ, ತನ್ನ ರಥದ ಸಾರಥಿಯನ್ನಾಗಿ ಮಾಡಿಕೊಂಡು, 'ಮೂರು ಬಾಣಗಳಿಂದ ಸುಧನ್ವನನ್ನು ಕೊಲ್ಲುವೆ' ನೆಂದು ಪ್ರತಿಜ್ಞೆಮಾಡಿ ತನ್ನ ಪ್ರತಿಜ್ಞೆಯನ್ನು ನೆರವೇರಿಸಿಕೊಂಡನು. ಸುಧನ್ವನು 'ಅರ್ಜುನನ ಮೂರೂ ಬಾಣಗಳನ್ನು ತುಂಡರಿಸುವೆ' ನೆಂದು ಪ್ರತಿಜ್ಞೆಮಾಡಿ, ತನ್ನ ಪ್ರತಿಜ್ಞೆಯನ್ನು ಈಡೇರಿಸಿಕೊಂಡನು. ಆದರೆ ತುಂಡರಿಸಿದ ಬಾಣದ ತುಂಡಿನಿಂದಾಗಿ ಸುಧನ್ವನು ಸ್ವರ್ಗಸ್ಥನಾದನು (ಜೈ. ಭಾ). ೨. ಸಾಂಕಾಶ್ಯದ ರಾಜ. ಸೀತೆಯನ್ನು ವಿವಾಹವಾಗಲು ಈತನು ಜನಕನ ಮೇಲೆ ದಂಡೆತ್ತಿಹೋಗಿ ಯುದ್ಧಭೂಮಿಯಲ್ಲಿ ಸ್ವರ್ಗಸ್ಥನಾದನು (ರಾಮಾ. ಬಾಲ.).

೩. ರಾಮಲಕ್ಷ್ಮಣರಿಗೆ ಧನುರ್ವಿದ್ಯೆಯನ್ನು ಕಲಿಸಿದ ಒಬ್ಬ ಬ್ರಾಹ್ಮಣ (ರಾಮಾ. ಅಯೋ).೪. ಪಾಂಡವಪಕ್ಷದ ಪಾಂಚಾಲನೊಬ್ಬ. ಇವನು ದ್ರೋಣನಿಂದ ಹತನಾದನು (ಮ. ದ್ರೋ).೫. ಅಂಗಿರಸಮುನಿಯ ಪುತ್ರ. ಪ್ರಹ್ಲಾದನ ಮಗ ವಿರೋಚನನೂ ಇವನೂ ಕೇಶಿನಿ ಎಂಬ ಕನ್ಯೆಗಾಗಿ ತಮ್ಮಲ್ಲಿ ಶ್ರೇಷ್ಠರಾರೆಂದು ನಿರ್ಧರಿಸುವುದಕ್ಕಾಗಿ ಪ್ರಹ್ಲಾದನ ಬಳಿಗೇ ಹೋಗಿ ಸಂದೇಹವನ್ನು ಪರಿಹರಿಸಿಕೊಂಡರು.

ಸುಧನ್ವ ಮತ್ತು ವಿರೋಚನರು ಈ ಸ್ಪರ್ಧೆಯಲ್ಲಿ ತಮ್ಮ ಪ್ರಾಣವನ್ನೇ ಪಂಥಕ್ಕೆ ಒಡ್ಡಿ ಪ್ರಹ್ಲಾದನ ಬಳಿಗೆ ಬಂದರು. ಆಗ ಪ್ರಹ್ಲಾದನು ಸೂರ್ಯನ ಸಂಗಡ ಬರುತ್ತಿರುವ ಧೃತರಾಷ್ಟ್ರವೆಂಬ ಹಂಸಪಕ್ಷಿಯನ್ನು ನೋಡಿ -- 'ಪಕ್ಷಿಯೇ, ಬ್ರಾಹ್ಮಣ ಮತ್ತು ಮಗನಿಗೆ ಬಂದ ವಿವಾದವನ್ನು ಹೇಗೆ ಪರಿಹರಿಸಿದರೆ ಧರ್ಮಕ್ಕೆ ವಿರೋಧವಾಗುವುದಿಲ್ಲ ?' ಎನ್ನಲು ಹಂಸವು -- ಎಲೈ ಪ್ರಹ್ಲಾದನೇ, ಮಗನಿಗೆ ಭೂಮಿಯನ್ನೂ ಮತ್ತು ಬೇಕಾದ ಧನಗಳನ್ನೂ ಕೊಡಬೇಕೇ ಹೊರತು, ಇಬ್ಬರ ವಿವಾದವನ್ನು ತೀರಿಸುವಾಗ ಧರ್ಮವನ್ನೇ ನುಡಿಯಬೇಕು' ಎನ್ನಲು ಪ್ರಹ್ಲಾದನು-- 'ಬ್ರಾಹ್ಮಣೋತ್ತಮನೆ, ವಿರೋಚನನಿಗಿಂತ ನೀನೇ ಶ್ರೇಷ್ಠನು. ನಿನಗಿಂತ ನಿನ್ನ ತಂದೆಯೇ ಮಹಾನುಭಾವನು. ಈತನ ತಾಯಿಗಿಂತ ನಿನ್ನ ತಾಯಿಯೇ ಪೂಜ್ಯಳು. ನೀನೇ ಜಯಿಸಿದೆ. ಇದು ಸತ್ಯ' ಎಂದು ಮಗನ ಕಡೆಗೆ ತಿರುಗಿ, 'ಮಗೂ, ಈತನಿಂದ ನೀನು ಪರಾಜಿತನಾದೆ. ನಿನ್ನ ಪ್ರಾಣಗಳು ಈತನ ಅಧೀನಗಳಾದವು. ಎಲೈ ಬ್ರಾಹ್ಮಣೋತ್ತಮನೇ, ವೀರೋಚನನ ಜೀವವನ್ನು ಕೊಟ್ಟರೆ ಮಗನನ್ನು ನಿನ್ನಿಂದ ಪಡೆದವನಾಗುತ್ತೇನೆ ಎಂದು ಪ್ರಾರ್ಥಿಸಿದನು. ಸುಧನ್ವನು ರಾಕ್ಷಸರಾಜನ ಮಾತುಗಳನ್ನು ಮೆಚ್ಚಿ, ' ನೀನು ಸತ್ಯವನ್ನೇ ಹೇಳಿದುದರಿಂದ ನಾನು ಸಂತೋಷಪಟ್ಟೆ. ನಿನ್ನ ಮಗನ ಪ್ರಾಣವನ್ನು ನಿನಗೇ ಒಪ್ಪಿಸಿದ್ದೇನೆ. ಆದರೆ ವಿರೋಚನನು ಕೇಶಿನಿಯ ಸಮಕ್ಷಮದಲ್ಲಿ ನನ್ನ ಪಾದಪ್ರಕ್ಷಾಳನವನ್ನು ಮಾಡಬೇಕು' ಎನ್ನಲು ವಿರೋಚನನು ಹಾಗೇ ನಡೆದನು (ಮ. ಅನು., ಸ., ಉ.,).

ಸುಧರ್ಮ-- ೧. ದುರ್ಯೋಧನನ ಪುರೋಹಿತ (ಮ. ಶಾಂ.). ೨. ಪಾಂಡವಪಕ್ಷದ ರಾಜನೊಬ್ಬ (ಮ. ಸ.). ೩. ದಶಾರ್ಣದೇಶದ ರಾಜ. ಈತನು ಭೀಮಸೇನನ ಸೇನಾಪತಿ. ರಾಜಸೂಯಯಾಗದ ಕಾಲದಲ್ಲಿ ದಿಗ್ವಿಜಯಕ್ಕೆ ಮೆಚ್ಚಿ, ಈತನನ್ನು ತನ್ನ ಸೇನಾಪತಿಯನ್ನಾಗಿ ಮಾಡಿಕೊಂಡನು (ಮ. ಸ.). ೪. ಇಂದ್ರನ ಸಾರಥಿಯಾದ ಮಾತಲಿಯ ಪತ್ನಿ ಸುಧರ್ಮಾ. ಈಕೆಯ ಮಗಳು ಗುಣಕೇಶಿಯನ್ನು ಐರಾವತ ಕುಲದಲ್ಲಿ ಹುಟ್ಟಿದ ಆರ್ಯಕನ ಮೊಮ್ಮಗನಾದ ಮೇನಕನ ಮಗಳ ಮಗನಾದ ಚಿಕುರನ ಮಗನಾದ ಸುಮುಖನು ವಿವಾಹವಾದನು (ಮ. ಉ.).೫. ದೇವೇಂದ್ರನ ಸ್ವರ್ಗದ ಸಭೆಯ ಹೆಸರು (ಸುಧರ್ಮಾ). ಇಲ್ಲಿ ಉತ್ತಮ ಧರ್ಮವು ಪಾಲಿಸಲ್ಪಡುತ್ತಿದೆ. ನೋ. ಇಂದ್ರ ೬. ಚಂದ್ರಹಾಸನ ತಂದೆ. ಈತನಿಗೆ ಮೇಧಾವಿಯೆಂಬ ಹೆಸರೂ ಇದೆ (ಜೈ. ಭಾ.). ೭. ಶ್ರೀಕೃಷ್ಣನ ದ್ವಾರಕೆಯ ಸಭೆ (ಮ. ಸ.).

ಸುಧಾಮ-- ಸೀತೆಯ ತಂದೆಯಾದ ಜನಕನ ಮಂತ್ರಿ (ರಾಮಾ. ಬಾಲ.).

ಸುಧಾರ -- ಅನುಸಾಲ್ವನ ಮಂತ್ರಿ. ನೋ. --ಅನುಸಾಲ್ವ.

ಸುನಂದಾ-- ೧.ಮಗಧರಾಜಪುತ್ರಿ ಚಂದ್ರವಂಶದ ಪೂರುಪುತ್ರನಾದ ಜನಮೇಜಯನ ಹೆಂಡತಿ. ಈಕೆಯ ಮಗನೇ ಪ್ರಾಚೀನ್ವಂತ (ಮ. ಆ.). ೨. ನೋ. -- ಸುದೇವ. ದಮಯಂತಿ. ಇವಳು ಚೇದಿರಾಜನಾದ ಸುಬಾಹುವಿನ ಸೋದರಿ (ರಾಜಪುತ್ರಿ). ದಮಯಂತಿಯು ಕೆಲವು ಕಾಲ ಈಕೆಯ ದಾಸಿಯಾಗಿದ್ದಳು. ಮುಂದೆ ಸುದೇವನೆಂಬ ಬ್ರಾಹ್ಮಣನಿಂದ ಈಕೆ ದಮಯಂತಿಯ ವಿಷಯ ತಿಳಿದಳು (ಮ. ವ.).೩. ದುಷ್ಯಂತನ ಮಗನಾದ ಭರತನ ಪಟ್ಟದ ರಾಣಿ; ಈಕೆಯ ಮಗನೇ ಭುಮನ್ಯು ನೋ. -- ಭರತ (ಮ. ಆ.). ೪. ನೀಲಧ್ವಜನ ಹೆಂಡತಿ ಜ್ವಾಲೆಯ ಇನ್ನೊಂದು ಹೆಸರು (ಜೈ. ಭಾ. ಅಶ್ವ).

ಸುನಯ-- ಪದ್ಮಾಕರನ ಮಗ. ಈತನು ಭದ್ರಾಯುವಿನ ಸ್ನೇಹಿತ. ನೋ.-- ಮಂದರ.

ಸುನಸಾ-- ನದಿಯೊಂದು (ಮ. ಭೀ.).

ಸುನಾಭ-- ೧. ಕಟದೇಶದ ರಾಜ. ರಾಜಸೂಯ ದಿಗ್ವಿಜಯ ಕಾಲದಲ್ಲಿ ಇವನು ಅರ್ಜುನನಿಂದ ಹತನಾದನು (ಮ. ಸ.).೨. ಲಂಕೆಯ ಒಳಗಿನ ಒಂದು ಪರ್ವತ (ರಾಮಾ. ಸುಂದರ). ೩. ಧೃತರಾಷ್ಟ್ರನ ಒಬ್ಬ ಮಗ. ಇವನು ಭೀಮನಿಂದ ಹತನಾದನು (ಮ. ಆ., ಭೀ).

ಸುನಾಮ -- ಕಂಸನ ಸೋದರ. ಇವನು ಕಂಸನ ಅಶ್ವಸೇನೆಯ ಅಧಿಪತಿ. ಈ ಅರವತ್ತು ಸಾವಿರ ಅಶ್ವಸೇನೆಗೆ ಮಿಶ್ರಿಕೆ ಎಂದು ಹೆಸರು. ಇವನು ಬಲರಾಮನಿಂದ ಹತನಾದನು (ಮ. ಸ). ೨. ಗರುಡನ ಒಬ್ಬ ಮಗ (ಮ. ಉ.). ೩. ಸುಕೇತುರಾಜನ ಮಗ;ಇವನ ಸಹೋದರ ಸುವರ್ಚ (ಮ. ಆ).

ಸುನೀತಿ--ಉತ್ತಾನಪಾದರಾಜನ ಪಟ್ಟದ ರಾಣಿ. ರಾಜನು ಈಕೆಯನ್ನು ದೂರವಿಟ್ಟು ಸುರುಚಿ ಎಂಬ ರಾಣಿಯಲ್ಲೇ ಆಸಕ್ತನಾಗಿದ್ದನು. ಸುನೀತಿಯ ಮಗನೇ ಧ್ರುವ. ನೋ., ಧ್ರುವ , ಸುರುಚಿ, ಉತ್ತಾನಪಾದ (ವಿಷ್ಣುಪು., ಲಿಂಗಪು., ಮತ್ಸ್ಯಪು., ಸ್ಕಾಂಪು, ಭಾಗ.).

ಸುನೀಥ-- ಶಿಶುಪಾಲನ ಇನ್ನೊಂದು ಹೆಸರು (ಮ. ಸ.,).

ಸುನೀಥಾ --ಅಂಗರಾಜನ ಪತ್ನಿ; ಮೃತ್ಯುವಿನ ಮಗಳು. ಈಕೆ ರಂಭೆಯ ಸಹಾಯದಿಂದ ಅಂಗರಾಜನನ್ನು ಮದುವೆಯಾಗಿ ವೇನನನ್ನು ಮಗನನ್ನಾಗಿ ಪಡೆದಳು. ನೋ.-- ವೇನ (ಪದ್ಮಪು).

ಸುನೇತ್ರ -- ಗರುಡನ ಒಬ್ಬ ಮಗ (ಮ. ಉ).

ಸುಂದ -- ಹಿರಣ್ಯಕಶಿಪುವಿನ ವಂಶದ ನಿಕುಂಭನೆಂಬ ಅಸುರನ ಮಗ. ಈತನ

ಸಹೋದರ ಉಪಸುಂದ; ಪತ್ನಿ ತಾಟಕೆ; ಮಗ ಮಾರೀಚ ಮತ್ತು ಸುಬಾಹು ಸುಂದೋಪಸುಂದರು ಬ್ರಹ್ಮನನ್ನು ಕುರಿತು ತಪಸ್ಸುಮಾಡಿ, 'ಪರಸ್ಪರ ತಮ್ಮಿಂದ ತಮಗೆ ಮರಣವಾಗಬೇಕಲ್ಲದೆ ಅನ್ಯರಿಂದ ಅಸಾಧ್ಯವಾಗಲಿ' ಎಂದು ವರಪಡೆದರು. ಇವರು ಲೋಕಕಂಟಕರಾದರು. ಒಮ್ಮೆ ಇವರು ವಿಶ್ವಕರ್ಮನಿಂದ ನಿರ್ಮಿತಳಾದ ತಿಲೋತ್ತಮೆಯನ್ನು ಮೋಹಿಸಿ, ಅವಳನ್ನು ವಶಪಡಿಸಿಕೊಳ್ಳಲು ಪರಸ್ಪರ ಹೋರಾಡಿ ಮೃತರಾದರು ನೋ. --ಉಪಸುಂದ, ತಿಲೋತ್ತಮೆ (ಮ. ಆ., ರಾಮಾ. ಬಾಲ.).

ಸುಂದರಾ --ಕೇಕಯ ರಾಜಪುತ್ರಿ. ಈಕೆ ಚಂದ್ರವಂಶದ ಸಾರ್ವಭೌಮನ ಪತ್ನಿ. ಈಕೆಯ ಮಗ ಜಯತ್ಸೇನ (ಮ, ಆ).

ಸುಂದರೇಶ್ವರ -- ಶಿವಕ್ಷೇತ್ರ ಒಂದರ ಒಡೆಯ. ಒಮ್ಮೆ ಶಿವನು ಪಾಂಡ್ಯರಾಜನಾದ ಮನಾ ಊರಿನ (ಮಣಲೂರು) ಕುಲಶೇಖರನಿಗೆ ಸ್ವಪ್ನದಲ್ಲಿ ದರ್ಶನವಿತ್ತು ತನಗೆ ದೇವಾಲಯವನ್ನು ಕಟ್ಟಿಸುವಂತೆ ನಿರೂಪವಿತ್ತನು. ಆಗ ಈಶ್ವರನ ಜಟೆಯಿಂದ ಗಂಗಾಮೃತದ ಬಿಂದುಗಳು ನೆಲದ ಮೇಲೆ ತೊಟ್ಟಿಕ್ಕಿದುವು. ಆ ಅಮೃತಬಿಂದುಗಳ ಮಾಧುರ್ಯದಿಂದ ಆ ಸ್ಥಳಕ್ಕೆ ಮಧುರಾ ಎಂದು ಹೆಸರಾಯಿತು. ಇಲ್ಲಿಯ ಶಿವನಿಗೆ ಸುಂದರೇಶ್ವರನೆಂದು ಹೆಸರಾಯಿತು. ಪಾರ್ವತಿಯು ಮೀನಾಕ್ಷಿ. ಇಲ್ಲಿ ಕದಂಬವೃಕ್ಷದ ಹತ್ತಿರ ಸುಂದರೇಶ್ವರನು ಮೀನಾಕ್ಷಿಯ ಪ್ರಾಣಿಗ್ರಹಣವಾದನು.

ಸುಪರ್ಣ-- ೧. ಗರುಡನ ಇನ್ನೊಂದು ಹೆಸರು. ೨. ಋಷಿಯೊಬ್ಬ (ಮ. ಶಾಂ). ೩.ಪ್ರಾಧೆಯ ಮಗನಾದ ಗಂಧರ್ವನೊಬ್ಬ (ಮ. ಆ.).

ಸುಪರ್ಣ ಲೋಕ--ಗರುಡನ ಲೋಕ. ಇಂದ್ರನ ಸಾರಥಿಯಾದ ಮಾತಲಿಯು ತನ್ನ ಮಗಳಿಗೆ ವರವನ್ನು ಹುಡುಕುತ್ತ ಇಲ್ಲಿಗೆ ಬಂದನು. ಇಲ್ಲಿ ಗರುಡನ ಸುಮುಖ, ಸುದಾಮ, ಸುನೇತ್ರ, ಸುವರ್ಚ, ಸುರೂಪ, ಸುನಖ ಎಂಬ ಆರು ಮಂದಿ ಮಕ್ಕಳಿಂದ ಗರುಡನ ವಂಶವು ವೃದ್ಧಿಯಾಗಿರುವುದು. ಇವರೆಲ್ಲ ವಿಷ್ಣುವನ್ನೇ ನಿತ್ಯವೂ ಹೃದಯದಲ್ಲಿ ಭಜಿಸುತ್ತಿರುವರು (ಮ. ಉ).

ಸುಪರ್ಣವ್ಯೂಹ-- ಕೌರವಪಕ್ಷದವರು ನಿರ್ಮಿಸಿದ ವ್ಯೂಹವೊಂದು (ಮ. ದ್ರೋ). ಅದನ್ನು ಗರುಡವ್ಯೂಹವೆಂದು ಕರೆಯುತ್ತಾರೆ. ಧರ್ಮರಾಜನನ್ನು ಹಿಡಿಯುವ ಉದ್ದೇಶದಿಂದ ದ್ರೋಣನು ಇದನ್ನು ನಿರ್ಮಿಸಿದನು (ಮ. ದ್ರೋ).

ಸುಪರ್ವ-- ಪಾಂಡವಪಕ್ಷದ ಪರ್ವತರಾಜ. ಇವನು ಕೌರವ ಪಕ್ಷದ ರುಚಿಪರ್ವನನ್ನು ಕೊಂದನು (ಮ. ದ್ರೋ).

ಸುಪಾರ್ಶ್ವ-- ೧. ದಿತಿಗೆ ಮಹಿಷಾಕಾರದ ಪುತ್ರನು ಹುಟ್ಟುವನೆಂದ ಮುನಿ. ನೋ.--

ಮಹಿಷಾಸುರ ೨. ರಾವಣನ ಮಂತ್ರಿ. ಇಂದ್ರಜಿತುವಿನ ವಧೆಯಿಂದ ಕೋಪಗೊಂಡು ರಾವಣನು ಸೀತೆಯನ್ನು ಕೊಲ್ಲಲು ಯತ್ನಿಸಲು, ಈತನು ಸ್ತ್ರೀವಧೆ ಮಾಡಬಾರದೆಂದು ತಡೆದನು. ೩. ಕ್ಷತ್ರಿಯನೊಬ್ಬ (ಮ. ಆ.).

ಸುಪ್ರತೀಕ -- ೧. ದಿಗ್ಗಜಗಳಲ್ಲೊಂದು. ಇದು ಈಶಾನ್ಯದಿಕ್ಕಿನ ಆನೆ. ಇದರ ಪತ್ನಿ ಅಂಜನಾವತಿ. ೨. ಭಗದತ್ತನ ಆನೆ. ಇದು ದ್ರೋಣನ ದ್ವಿತೀಯ ಯುದ್ಧದ ದಿನ ಭೀಮನು ವಂಗರಾಜನನ್ನು ಕೊಂದ ಮೇಲೆ ಭಗದತ್ತನು ಈ ಮಹಾಗಜವನ್ನು ಹತ್ತಿ ಪಾಂಡವಸೇನೆಯನ್ನು ಪ್ರವೇಶಿಸಿದನು. ಈ ಗಜವು ಪಾಂಡವಸೇನೆಯನ್ನು ಚಿಗುಳಿ ತುಳಿಯಹತ್ತಿತ್ತು. ಭೀಮನು ಈ ಆನೆಯನ್ನು ಅಡ್ಡಗಟ್ಟಿದನು. ಸುಪ್ರತೀಕವು ಭೀಮನನ್ನು ತನ್ನ ಸೊಂಡಿಲಿನಿಂದ ಸುತ್ತಿಹಿಡಿಯಿತು. ಆಗ ಧರ್ಮರಾಜನು ಪಾಂಚಾಲರೊಡನೆ ಭೀಮನ ಸಹಾಯಕ್ಕೆ ಬಂದನು. ಆ ಆನೆಯು ದಾಶಾರ್ಣರಾಜನನ್ನು ತುಳಿದುಕೊಂದು ಸಾತ್ಯಕಿಯ ರಥವನ್ನು ಪುಡಿಮಾಡಿತು. ಭೀಮನಿಗೆ ಆ ಗಜವನ್ನು ತಡೆಯುವುದು ಅಸಾಧ್ಯವಾಗಲು ಪಾಂಡವಸೇನೆಯಲ್ಲಿ ಹಾಹಾಕಾರವೆದ್ದಿತು. ಆಗ ಅರ್ಜುನನು ವಜ್ರಾಸ್ತ್ರದಿಂದ ತ್ರಿಗರ್ತರನ್ನು ಸೀಳಿ ಭಗದತ್ತನನ್ನು ತಡೆದನು. ಕೃಷ್ಣನು ಅರ್ಜುನನ ರಥವನ್ನು ಚಮತ್ಕಾರದಿಂದ ಹಿಂದೆ ಮುಂದೆ ನಡೆಸುತ್ತ ಆ ಆನೆಯನ್ನು ಸೋಲಿಸಿದನು. ಅರ್ಜುನನು ಮೊನೆಯಾದ ಬಾಣಗಳಿಂದ ಸುಪ್ರತೀಕ ಗಜವನ್ನು ಸೀಳಿದನು (ಮ. ಭೀ., ದ್ರೋ.). ೩. ವಿಭಾವಸುಮುನಿಯ ಸೋದರ. ಈತನು ಶಾಪದಿಂದ ಆನೆಯಾದ. ಅಮೃತವನ್ನು ತರಲು ಹೊರಟ ಗರುಡನು ಇವನನ್ನು ತಿಂದನು (ಮ. ಆ.).

ಸುಪ್ರಭಾ -- ೧. ವದಾನ್ಯ ಋಷಿಯ ಮಗಳು. ಅಷ್ಟಾವಕ್ರ ಋಷಿಯ ಪತ್ನಿ (ಮ. ಅನು.). ೨. ಸರಸ್ವತಿ ನದಿಯ ಏಳು ಶಾಖೆಗಳಲ್ಲೊಂದು (ಮ. ಶ) ೨.ಯದುವಂಶದ ಶೂರನ ಮಗಳು. ಈಕೆಗೆ ವಸುದೇವನೆಂಬ ಅಣ್ಣನೂ, ಕುಂತಿಯೆಂಬ ಅಕ್ಕನೂ ಇದ್ದರು.

ಸುಪ್ರವೃದ್ಧ -- ಸೌವೀರದೇಶಾಧಿಪತಿಯಾದ ಜಯದ್ರಥನ ಸೋದರ (ಮ. ವ.).

ಸುಪ್ರಿಯಾ -- ಅರಿಷ್ಟೆಯೆಂಬ ಅಪ್ಸರೆಯ ಮಗಳು (ಮ. ಆ.).

ಸುಬಲ -- ಸಿಂಧುದೇಶದ ರಾಜ. ಇವನು ಗಾಂಧಾರಿ ಶಕುನಿ ಮೊದಲಾದವರ ತಂದೆ ನೋ.-- ಗಾಂಧಾರಿ. ಶಕುನಿ (ಮ. ಆ.).

ಸುಬಾಲ -- ಕಾಮಶಾಸ್ತ್ರವನ್ನು ಬಾಭ್ರವ್ಯನೆಂದು ಹೆಸರು ಪಡೆದವನೊಬ್ಬನು ಬರೆದನು. ಇವನಿಗೆ ಇಬ್ಬರು ಮಕ್ಕಳು.

ಸುಬಾಹು -- ೧. ಕಿರಾತರಾಜನೊಬ್ಬ. ಗಂಧಮಾದನ ಪರ್ವತದಿಂದ ಪಾಂಡವರು ಹಿಂದಿರುಗುವಾಗ ಅವರಿಗೆ ತುಂಬ ಸಹಾಯ ಮಾಡಿದನು (ಮ. ವ.). ೨.ಕುಲಿಂದ

ದೇಶದ ರಾಜನೊಬ್ಬ (ಮ. ವ.). ೩. ಸರ್ಪವೊಂದು (ಮ. ಆ.). ೪.ಅಪ್ಸರೆಯೊಬ್ಬಳು (ಮ. ಆ.). ೫. ಧೃತರಾಷ್ಟ್ರನ ಮಗ. ಇವನು ಭೀಮಸೇನನಿಂದ ಹತನಾದನು (ಮ. ಆ., ಭೀ., ಕ.) ೬. ಕೌರವಪಕ್ಷದಿಂದ ಹೋರಾಡಿದ ವೀರನೊಬ್ಬ; ಇವನು ಯುದ್ಧಕಾಲದಲ್ಲಿ ಪಾಂಡವಪಕ್ಷವನ್ನು ಸೇರಿದ ಧೃತರಾಷ್ಟ್ರನ ದಾಸೀಪುತ್ರನಾದ ಯುಯುತ್ಸುವಿನಿಂದ ಎರಡೂ ಕೈಗಳು ಕತ್ತರಿಸಲ್ಪಟ್ಟು ಹತನಾದ (ಮ. ದ್ರೋ.). ೭. ತಾಟಕೆಯ ಮಗ; ಮಾರೀಚನ ಸೋದರ. ಈತನ ತಂದೆ ಸುಂದನೆಂಬ ರಾಕ್ಷಸ. ಸಿದ್ಧಾಶ್ರಮದಲ್ಲಿ ಯಜ್ಞ ಮಾಡಲು ತೊಡಗಿದ ವಿಶ್ವಾಮಿತ್ರನಿಗೆ ಈತನ ಉಪಟಳವನ್ನು ಸಹಿಸಲಾಗದೆ ಶ್ರೀರಾಮನಿಂದ ಇವನನ್ನು ಕೊಲ್ಲಿಸಿದನು (ಮ. ಸ., ರಾಮಾ. ಬಾಲ.). ೮.ಸಂಶಪ್ತಕರಲ್ಲೊಬ್ಬ (ಮ. ದ್ರೋ). ೯. ಇವನು ಶತ್ರುಘ್ನನ ಹಿರಿಯ ಮಗ. ನೋ.-- ಪಂಚಾಕ್ಷರ. ಇವನು ಮಥುರೆಯ ಪ್ರಥಮ ರಾಜ. ೧೦. ಚೇದಿದೇಶದ ರಾಜ. ಈ ದೇಶವು ಇಂದಿನ ಜಬ್ಬಲ್‌ಪುರ-- ವಿಲಾಸಪುರಗಳ ಪ್ರದೇಶ. ಈ ರಾಜನ ಅರಮನೆಯಲ್ಲಿ ಕೆಲವು ಕಾಲ ದಮಯಂತಿಯು ಸೈರಂಧ್ರಿಯಾಗಿ ವಾಸವಾಗಿದ್ದಳು (ಮ. ವ).

ಸುಬ್ರಹ್ಮಣ್ಯ-- ೧. ದಕ್ಷಿಣಕನ್ನಡದ ಪುತ್ತೂರು ತಾಲೂಕಿನ ಒಂದು ಕ್ಷೇತ್ರ. ಇದರ ಸಮೀಪದಲ್ಲಿ ಕುಮಾರಧಾರಾ ನದಿಯು ಹರಿಯುತ್ತಿದೆ. ಈ ದೇವಾಲಯದ ಬಳಿಯಲ್ಲೇ ಕುಮಾರಪರ್ವತವು ತಲೆಯೆತ್ತಿ ನಿಂತಿದೆ. ಇಲ್ಲಿಯ ಅರಣ್ಯಗಳಲ್ಲಿ ಆನೆಗಳೂ ತುಂಬ ಇವೆ.

ಇದು ಮಂಗಳೂರಿನಿಂದ ೮೨ ಮೈಲುಗಳ ದೂರದಲ್ಲಿದೆ. ಸ್ಕಾಂದ ಪುರಾಣದಲ್ಲಿ ಈ ಕ್ಷೇತ್ರಕ್ಕೆ ತುಂಬ ಪ್ರಾಮುಖ್ಯತೆ ಇದೆ. ಇಲ್ಲಿ ಮಯೂರವಾಹನ ಭಗವಾನ್ ಸುಬ್ರಹ್ಮಣ್ಯನ ವಿಶಾಲಮಂದಿರವಿದೆ. ಭಗವಾನ್ ಶೇಷನ ಮೂರ್ತಿಯೂ ಇದರಲ್ಲಿದೆ. ಇಲ್ಲಿದ್ದ ನಾಗರಾಜ ವಾಸುಕಿಯ ಭೀಷಣ ವಿಷಜ್ವಾಲೆಯನ್ನು ಶಾಂತಮಾಡುವುದಕ್ಕಾಗಿ ದೇವಾಲಯದ ಇದಿರಿನಲ್ಲೇ ಗರುಡಸ್ತಂಭವಿದೆ. ಇಲ್ಲಿ ಸುಬ್ರಹ್ಮಣ್ಯಷಷ್ಠಿಯ ದಿನ ಜಾತ್ರೆ ಜರಗುತ್ತದೆ. ೨. ಕುಮಾರಸ್ವಾಮಿಯ ಒಂದು ಹೆಸರು. ಸ್ವಾಹಾದೇವಿಯು ಸಪ್ತ ಋಷಿಪತ್ನಿಯರಲ್ಲಿ ಅರುಂಧತಿಯನ್ನು ಬಿಟ್ಟು ಉಳಿದ ಮುನಿಪತ್ನಿಯರ ರೂಪದಿಂದ ಅಗ್ನಿಯೊಡನೆ ವಿಹರಿಸಿದಳು. ಆಗ ಅಗ್ನಿಗೆ ರೇತಸ್ಸು ಸ್ಖಲನವಾಗಲು ಸ್ವಾಹಾದೇವಿಯು ಅದನ್ನು ಚಿನ್ನದ ಕುಂಭದಲ್ಲಿ ಆರು ಭಾಗ ಮಾಡಿ ಹಾಕಲು ಅದರಿಂದ ಕುಮಾರಸ್ವಾಮಿಯು ಹುಟ್ಟಿದನು. ಈತನು ಬ್ರಹ್ಮಚಾರಿ (ಕುಮಾರ) ಎಂದೂ, ಗೃಹಸ್ಥನೆಂದೂ ಇದೆ. ಇವನು ದೇವತೆಗಳಲ್ಲಿ ಶ್ರೇಷ್ಠನೆನಿಸಿ ಇಂದ್ರನು ಸೂಚಿಸಿದ ದಕ್ಷಬ್ರಹ್ಮನ ಮಗಳಾದ ದೇವಸೇನೆಯನ್ನು

ಷಷ್ಠಿಯ ದಿನ ವಿವಾಹವಾದನು. ಈ ದಿನವನ್ನೇ 'ಸ್ಕಂಧಷಷ್ಠಿ' ಎನ್ನುತ್ತಾರೆ.

ಸುಬ್ರಹ್ಮಣ್ಯಷಷ್ಠಿ--೧. ಯುದ್ಧದೇವತೆಯಾದ ಸುಬ್ರಹ್ಮಣ್ಯನು ಬ್ರಹ್ಮನ ಶಾಪದಿಂದ ಭಯಂಕರ ವಿಷವುಳ್ಳ ಘಟಸರ್ಪವಾದನು. ಪಾರ್ವತಿ ತನ್ನ ಮಗನನ್ನು ಮೊದಲಿನ ರೂಪದಲ್ಲಿ ಪಡೆಯಲು ೧೦೮ ಷಷ್ಠಿಗಳನ್ನೂ, ಉಪವಾಸವ್ರತವನ್ನೂ ಆಚರಿಸಿದಳು. ಈ ವ್ರತದ ಉದ್ಯಾಪನಕ್ಕೆ ವಿಷ್ಣು ಮೊದಲ್ಗೊಂಡು ಎಲ್ಲ ದೇವತೆಗಳೂ ಬಂದಿದ್ದರು. ಸ್ಕಂದನೂ ಅಲ್ಲಿಗೆ ಘಟಸರ್ಪದ ರೂಪದಿಂದಲೇ ಬಂದಿದ್ದನು. ಅಲ್ಲಿ ಅವನು ವಿಷ್ಣುವಿನ ಸ್ಪರ್ಶದಿಂದ ಮೊದಲಿನ ರೂಪವನ್ನೇ ಹೊಂದಿದನು. ಪಾರ್ವತಿಯು ಆಚರಿಸಿದ ಷಷ್ಠಿಯೇ ಸುಬ್ರಹ್ಮಣ್ಯಷಷ್ಠಿ.

ಕುಮಾರಸ್ವಾಮಿ ಮತ್ತು ದೇವಸೇನೆಯ ವಿವಾಹದ ದಿನವೇ ಸುಬ್ರಹ್ಮಣ್ಯಷಷ್ಠಿ. ಈ ದಿನಕ್ಕೆ ಸಿನೀವಾಲಿ, ಕುಹೂ, ಸದ್ವೃತ್ತಿ ಮತ್ತು ಅಪರಾಜಿತೆ ಎನ್ನುತ್ತಾರೆ. ಈ ಕ್ಷೇತ್ರದಲ್ಲಿ ರಥವೆಳೆಯುವ ಮೊದಲು ಗರುಡಪಕ್ಷಿಯು ರಥದ ಸುತ್ತಲೂ ಹಾರಿ ಹೋಗಬೇಕು. ಇಲ್ಲಿನ ರಥವು ಜಿಲ್ಲೆಯಲ್ಲೇ ದೊಡ್ಡದು. ಇಲ್ಲಿ ರಥವೆಳೆಯುವ ಹಗ್ಗ ನಾಗರಬೆತ್ತದ್ದು. ರಥವೆಳೆದ ಮೇಲೆ ಹಗ್ಗದ ಚೂರುಗಳನ್ನು ಬಂದವರೆಲ್ಲ ತೆಗೆದುಕೊಂಡು ಹೋಗುತ್ತಾರೆ. ಇಲ್ಲಿ ದೇವಮೂರ್ತಿಯ ಫೋಟೋ ತೆಗೆಯಲು ಬಿಡುವುದಿಲ್ಲ (ಕ್ಷೇತ್ರದ.). ನೋ.-- ಪಿಶಿತಾಶಿನಿ.

ಸುಭಗ -- ಶಕುನಿಯ ಒಬ್ಬ ಸೋದರ. ಇವನು ಭಾರತಯುದ್ಧದಲ್ಲಿ ಭೀಮನಿಂದ ಹತನಾದ (ಮ. ದ್ರೋ.).

ಸುಭಾಗಾ-- ಪ್ರಾಧೆಯ ಮಗಳು; ಈಕೆ ಅಪ್ಸರಸೆ (ಮ. ಆ.).

ಸುಭದ್ರೆ--೧. ವಸುದೇವ -- ದೇವಕಿಯರ ಮಗಳು;. ಅರ್ಜುನನ ಪತ್ನಿ; ಅಭಿಮನ್ಯುವಿನ ತಾಯಿ. ಯುಧಿಷ್ಠಿರ ಮತ್ತು ದ್ರೌಪದಿಯರು ಏಕಾಂತದಲ್ಲಿದ್ದಾಗ ಅರ್ಜುನನಿಗೆ ಕಾಣಬೇಕಾದ ಸಂದರ್ಭ ಬಂತು. ಇದು ನಾರದನ ಸಂಕೇತಕ್ಕೆ ವಿರುದ್ಧವಾದುದರಿಂದ ಅರ್ಜುನನು ಹನ್ನೆರಡು ವರ್ಷ ತೀರ್ಥಯಾತ್ರೆ ಮಾಡುತ್ತ ಯತಿರೂಪದಿಂದ ದ್ವಾರಕೆಯನ್ನು ಪ್ರವೇಶಿಸಿ, ಸುಭದ್ರೆಯ ಅಂತಃಪುರದಲ್ಲಿ ವಾಸಿಸಿ, ಶ್ರೀಕೃಷ್ಣನ ಸೂಚನೆಯಂತೆ ಆಕೆಯನ್ನು ಅಪಹರಿಸಿಕೊಂಡು ಇಂದ್ರಪ್ರಸ್ಥಕ್ಕೆ ಹೋದನು.

ಅರ್ಜುನನು ತೀರ್ಥಯಾತ್ರೆ ಮಾಡುತ್ತ ಪ್ರಭಾಸಕ್ಷೇತ್ರಕ್ಕೆ ಬಂದನು. ಇಲ್ಲಿ ತನ್ನ ಮಾವನ ಮಗಳಾದ ಸುಭದ್ರೆಯನ್ನು ಬಲರಾಮನು ದುರ್ಯೋಧನನಿಗೆ ಕೊಡುವ ಪ್ರಯತ್ನದಲ್ಲಿರುವುದನ್ನು ಕೇಳಿದನು. ಈ ಸಂಬಂಧವು ಸುಭದ್ರೆಯ

ಬಂಧುವರ್ಗದಲ್ಲಿ ಯಾರಿಗೂ ಇಷ್ಟವಿರಲಿಲ್ಲ. ಅರ್ಜುನನಿಗೆ ಆಕೆಯನ್ನು ವಿವಾಹವಾಗುವ ಆಸೆಯಾಗಿ ಯತಿವೇಷದಿಂದ ತ್ರಿದಂಡವನ್ನು ಹಿಡಿದು ದ್ವಾರಕೆಯ ಬಳಿಗೆ ಬಂದನು. ಅಲ್ಲೇ ಮಳೆಗಾಲದಲ್ಲಿ ನಾಲ್ಕು ತಿಂಗಳಿದ್ದನು. ಬಲರಾಮನು ಇವನ ನಿಜಸ್ಥಿತಿಯನ್ನು ತಿಳಿಯದೆ, ಸನ್ಯಾಸಿ ಎಂದೇ ನಂಬಿ, ಅವನನ್ನು ಭಿಕ್ಷೆಗಾಗಿ ಅರಮನೆಗೆ ಕರೆಸಿದನು. ಇಲ್ಲಿ ಲೋಕಮೋಹನೆಯಾದ ಸುಭದ್ರೆಯು ಅರ್ಜುನನ ಕಣ್ಣಿಗೆ ಗೋಚರಿಸಿದಳು. ಅಲ್ಲಿ ಅರ್ಜುನ ಸುಭದ್ರೆಯರಿಗೆ ಪರಸ್ಪರ ಪ್ರೇಮವುಂಟಾಯಿತು. ಒಂದು ದಿನ ವಸುದೇವಾದಿಗಳೊಡನೆ ಸುಭದ್ರೆಯು ಪಟ್ಟಣದ ಕೋಟೆಯ ಹೊರಗೆ ದೊಡ್ಡ ಜಾತ್ರೆ ನೋಡಲು ಬಂದಿದ್ದಳು. ಅಲ್ಲಿ ಅರ್ಜುನನು ವಸುದೇವ, ದೇವಕಿ ಮತ್ತು ಕೃಷ್ಣನ ಒಪ್ಪಿಗೆಯನ್ನು ಪಡೆದು ಸುಭದ್ರೆಯನ್ನು ಅಪಹರಿಸಿಕೊಂಡು ಹೋದನು. ಇದನ್ನು ಕೇಳಿ ಬಲರಾಮನಿಗೆ ಕೋಪವುಕ್ಕಿ ಬಂತು, ಕೃಷ್ಣನೂ ಆತನ ಬಂಧುಗಳೂ ಬಲರಾಮನನ್ನು ಆತನ ಕೋಪದಿಂದ ಶಾಂತಗೊಳಿಸಿದರು (ಭಾಗ.).

ಚಿತ್ರಾ ಎಂಬ ಅಪ್ಸರೆಯು ಒಬ್ಬ ಮುನಿಯ ತಪಸ್ಸಿಗೆ ವಿಘ್ನಮಾಡಲು ಹೋಗಿ ಗರ್ಭವಾಸದ ದುಃಖವನ್ನನುಭವಿಸುವಂತೆ ಶಪಿತಳಾದಳು. ಇವಳು ಆ ಶಾಪದಂತೆ ವಸುದೇವನ ಪತ್ನಿಯಾದ ರೋಹಿಣಿಯ ಹೊಟ್ಟೆಯಲ್ಲಿ ಹುಟ್ಟಿ, ತಕ್ಷಣ ಮೃತವಾಗಿ ಸ್ವರ್ಗವನ್ನು ಸೇರಿದಳು. ಮುಂದೆ ಶ್ರೀಕೃಷ್ಣನು ಯಾದವರಲ್ಲಿ ಅವತಾರ ಮಾಡಿದ್ದನ್ನು ಕಂಡು, ತಾನು ಯದುವಂಶದಲ್ಲಿ ಹುಟ್ಟಿ ಅದನ್ನು ಬಿಟ್ಟುಬಂದುದಕ್ಕಾಗಿ ಪಶ್ಚಾತ್ತಾಪಪಟ್ಟು ಶ್ರೀಕೃಷ್ಣನ ಬಾಲಲೀಲೆಗಳನ್ನು ಕಾಣುವುದಕ್ಕಾಗಿ ಅವಳು ಮತ್ತೊಮ್ಮೆ ಅದೇ ರೋಹಿಣಿಯ ಮಗಳಾಗಿ ಹುಟ್ಟಿದಳು. ಇವಳೇ ಸುಭದ್ರೆ (ಮ. ಆ., ವ., ವಿ. ದ್ರೋ., ಅಶ್ವ.). ೨.ಕಾಮಧೇನುವಿನ ಮಗಳು (ಮ. ಉ).

ಸುಭೂಮಿಕಾ -- ಸರಸ್ವತೀ ನದೀತೀರದಲ್ಲಿ ಸೂರ್ಯಾನುಯಾಯಿಯಾದ ಸ್ಕಂದನ ಪಾರ್ಷದ (ಮ. ಶ.).

ಸುಭ್ರಾಟ್-- ವೈವಸ್ವತ ಮನುವಿನ ಮಗ (ಮ. ಆ.).

ಸುಮತಿ-- ೧. ಸಗರಚಕ್ರವರ್ತಿಯ ಪಟ್ಟದ ರಾಣಿ. ಈಕೆ ಸಾಗರರೆಂಬ ಅರವತ್ತು ಸಾವಿರ ಮಂದಿ ಮಕ್ಕಳನ್ನು ಹೆತ್ತಳು. ನೋ. -- ಸಗರ ೨. ರಾಕ್ಷಸನೊಬ್ಬ (ಮ. ಸ.) ೨. ಪ್ರಿಯವ್ರತನ ವಂಶದ ಭರತರಾಜನ ಐವರು ಮಕ್ಕಳಲ್ಲಿ ಹಿರಿಯವನು. ಈತನ ಪತ್ನಿ ಧ್ರುವಸೇನೆ; ಮಗ ದೇವಜಿತ (ಭಾಗ). ೪. ಮದಕಲೆಯೆಂಬ ವಿದ್ಯಾಧರೆಯ ಪತಿ. ನೋ.-- ಮದಕಲೆ. ೫. ಇಕ್ಷ್ವಾಕುರಾಜ ಮತ್ತು ಅಲಂಬುಸೆಯರಿಂದ ಹುಟ್ಟಿದ ವಿಶಾಲನೆಂಬ ರಾಜನ ವಂಶದವ. ಶ್ರೀರಾಮನು

ಮಿಥಿಲೆಗೆ ವಿಶ್ವಾಮಿತ್ರನೊಂದಿಗೆ ಹೋಗುವಾಗ ಈ ವಂಶದ ಸುಮತಿ ಎಂಬ ರಾಜನು ರಾಜ್ಯಭಾರ ಮಾಡುತ್ತಿದ್ದನು. ಶ್ರೀರಾಮನು ಒಂದು ರಾತ್ರಿ ಈ ನಗರದಲ್ಲಿ ಉಳಿದಿದ್ದನು. ಈತನು ಗೌತಮಮುನಿಯ ಶಿಷ್ಯ. ನೋ.-- ಸುಮತಿ.

ಸುಮನಾ -- ೧. ಒಂದು ಸರ್ಪ (ಮ. ಆ.). ೨. ಕೇಕಯ ದೇಶದ ಒಬ್ಬಳು ಸ್ತ್ರೀ (ಮ. ಅನು). ೩. ರಾಕ್ಷಸನೊಬ್ಬ (ಮ. ಸ). ೪. ರಾಜರ್ಷಿಯೊಬ್ಬ (ಮ.ಸ). ೫. ಕಿರಾತರಾಜನೊಬ್ಬ (ಮ. ಸ) ೬. ದಶಾರ್ಣದೇಶದ ಚಾರುವರ್ಮನ ಮಗಳು. ಈಕೆಯ ಪತಿ ನರಿಷ್ಯಂತರಾಜನ ಮಗ ದಮ. ನೋ. -- ನರಿಷ್ಯಂತ ದಮ.

ಸುಮಂತು-- ವ್ಯಾಸಮಹರ್ಷಿಯ ಶಿಷ್ಯನೊಬ್ಬ. ಇವನು ಮೊತ್ತಮೊದಲು ವ್ಯಾಸನಿಂದ ಅಥರ್ವವೇದವನ್ನು ಉಪದೇಶ ಪಡೆದನು ನೋ.-- ನರಿಷ್ಯಂತ, ದಮ.

ಸುಮಂತ್ರ --೧. ದಶರಥನ ಮುಖ್ಯಮಂತ್ರಿ. ಇವನಿಗೆ ಶ್ರೀರಾಮನಲ್ಲಿ ತುಂಬ ಭಕ್ತಿ. ದಶರಥನು ಮಾಡಲು ನಿಶ್ಚಯಿಸಿದ ಪುತ್ರಕಾಮೇಷ್ಟಿಗೆ ಇವನೇ ಋಷ್ಯಶೃಂಗನನ್ನು ಅಯೋಧ್ಯೆಗೆ ಕರೆದುಕೊಂಡು ಬಂದನು (ರಾಮಾ. ಬಾಲ., ಅಯೋ). ಸುಮಂತ್ರ ಮರಣಹೊಂದುವಾಗ ಆತನಿಗೆ ೯,೯೯೯ ವರ್ಷಗಳು, ಹನ್ನೊಂದು ತಿಂಗಳುಗಳು, ಇಪ್ಪತ್ತೊಂದು ದಿನಗಳಾಗಿದ್ದವು. ತ್ರೇತಾಯುಗದಲ್ಲಿ ಮನುಷ್ಯನ ಆಯುಷ್ಯ ಹತ್ತುಸಾವಿರ ವರ್ಷಗಳಾಗಿದ್ದವು. ಸುಮಂತ್ರನು ಒಂಬತ್ತು ದಿನ ಮೊದಲು ಸತ್ತದ್ದರಿಂದ ಶ್ರೀರಾಮನು ಯಮದೂತರಿಂದ ಆತನ ಜೀವವನ್ನು ಎಳೆದು ತಂದನು. ಇದರಿಂದ ಸುಮಂತ್ರನು ಬದುಕಿದನು. ಮುಂದೆ ಯಮನು ಶ್ರೀರಾಮನ ಕಾರ್ಯದಿಂದ ಕೋಪಗೊಂಡು ರಾಮನ ಮೇಲೆ ದಂಡೆತ್ತಿಹೋಗಲು ದೇವತೆಗಳ ಮತ್ತು ನವಗ್ರಹಗಳ ಸಹಾಯವನ್ನು ಕೇಳಿದರೂ ಯಾರೂ ಒಪ್ಪಲಿಲ್ಲ. ಆಗ ಯಮನು ತನ್ನ ಸೇನೆಗಳೊಡನೆ ಬಂದು ಅಯೋಧ್ಯೆಯನ್ನು ಮುತ್ತಿದನು. ಯಮನೊಡನೆ ಲವನು ಯುದ್ಧಕ್ಕೆ ತೊಡಗಿದನು. ಯಮನು ಲವನನ್ನು ಗೆಲ್ಲಲಾರದೆ ತನ್ನ ದಂಡವನ್ನು ಅವನ ಮೇಲೆ ಪ್ರಯೋಗಿಸಲು ಲವನು ಪ್ರತಿಯಾಗಿ ಬ್ರಹ್ಮಾಸ್ತ್ರವನ್ನೆಸೆದನು. ಬ್ರಹ್ಮಾಸ್ತ್ರವನ್ನು ನೋಡಿ ದಂಡ ಹಿಂದೆ ತಿರುಗಿತು. ಆಗ ಸೂರ್ಯನು ಬಂದು ಲವನೊಡನೆ ಬ್ರಹ್ಮಾಸ್ತ್ರವನ್ನು ಹಿಂದೆ ತೆಗೆದುಕೊಳ್ಳುವಂತೆ ಹೇಳಿ ಯಮನನ್ನು ಬದುಕಿಸಿದನು. ಹಿಂದೆ ಸುಮಂತ್ರನು ತಾಯಿಯ ಗರ್ಭದಿಂದ ತಲೆ ಹೊರಗೆ ಹಾಕಿ ಒಂಬತ್ತು ದಿನ ಹಾಗೆಯೇ ಇದ್ದ ಮೇಲೆ ಜನಿಸಿದನು. ಯಮದೂತರು ಗರ್ಭದಿಂದ ತಲೆ ಹೊರಗೆ ಬಂದಂದಿನಿಂದ ಆತನ ಆಯುಷ್ಯವನ್ನೆಣಿಸಿದರು. ಶ್ರೀರಾಮನು 'ಇನ್ನು ಮುಂದೆ ಸಂಪೂರ್ಣ ಜನನವಾದ ಗಳಿಗೆಯಿಂದ ಆಯುಷ್ಯವನ್ನು ನಿರ್ಣಯಿಸಬೇಕೆಂದಿದ್ದನು.....

ಮುಂದೆ ಒಂಬತ್ತು ದಿನಗಳ ಅನಂತರ ಸುಮಂತ್ರ ಸ್ವರ್ಗಸ್ಥನಾದನು. ಆಮೇಲೆ ಅವನ ಮಗ ಸುಮಂತ್ರನು ತಂದೆಯ ಉತ್ತರಕ್ರಿಯೆಗಳನ್ನೆಲ್ಲ ನಡೆಸಿದನು (ಅಸಂ. ರಾ.). ೨. ಯುಧಿಷ್ಠಿರನ ಸಭಾಸದನಾದ ಸೌವೀರರಾಜ (ಮ. ಆ.). ೩. ದ್ರುಪದರಾಜನ ಒಬ್ಬ ಮಗ. ದ್ರೌಪದಿಯ ಸ್ವಯಂವರಕಾಲದಲ್ಲಿ ನಡೆದ ಯುದ್ಧದಲ್ಲಿ ಇವನು ಜಯದ್ರಥನಿಂದ ಹತನಾದನು. ಇವನಿಗೆ ಸೌಮಿತ್ರನೆಂಬ ಹೆಸರೂ ಇದೆ (ಮ. ಆ.). ೪. ಅಭಿಮನ್ಯುವಿನ ಸಾರಥಿ; ಸುಮಿತ್ರನೆಂದು ಇವನಿಗೆ ಇನ್ನೊಂದು ಹೆಸರೂ ಇದೆ. (ಮ. ದ್ರೋ). ೫. ಫೇನಪನೆಂಬ ಮಹರ್ಷಿಯ ಇನ್ನೊಂದು ಹೆಸರು. ನೋ.-- ಫೇನಪ.

ಸುಮಾಲಿ--ರಾಕ್ಷಸನೊಬ್ಬ. ಮಾಲಿ ಮತ್ತು ಮಾಲ್ಯವಂತರು ಈತನ ಸಹೋದರರು. ನೋ.-- ಮಾಲಿ, ಮಾಲ್ಯವಂತ. ಇವನು ಇಂದ್ರನೊಡನೆ ಯುದ್ಧ ಮಾಡಿ ಸೋತು, ಪಾತಾಳದಲ್ಲಿ ವಾಸವಾಗಿದ್ದ. ನರ್ಮದೆ ಎಂಬ ಗಂಧರ್ವಸ್ತ್ರೀಯ ಮಗಳಾದ ಕೇತುಮತಿಯು ಈತನ ಪತ್ನಿ. ಇವನಿಗೆ ಪ್ರಹಸ್ತ, ಅಕಂಪನ, ಧೂಮ್ರಾಕ್ಷ, ಸುಪಾರ್ಶ್ವ ಎಂಬ ನಾಲ್ವರು ಗಂಡುಮಕ್ಕಳೂ, ಪುಷ್ಪೋತ್ಕಟೆ, ಕೈಕಸಿ, ಕುಂಭೀನಸಿ, ಭಾಲೆ ಎಂಬ ನಾಲ್ವರು ಹೆಣ್ಣುಮಕ್ಕಳೂ ಇದ್ದರು. ರಾವಣನು ಕುಬೇರನಿಂದ ಲಂಕೆಯನ್ನು ಕಿತ್ತುಕೊಂಡು ತನ್ನ ರಾಜಧಾನಿಯಾಗಿ ಮಾಡಿಕೊಂಡಮೇಲೆ ಈತ ಲಂಕೆಯಲ್ಲೇ ವಾಸವಾಗಿದ್ದ (ರಾಮ. ಉತ್ತರ.).

ಸುಮಿತ್ರ -- ೧. ದಿಗ್ವಿಜಯ ಕಾಲದಲ್ಲಿ ಅರ್ಜುನನು ಈ ಸೌವೀರರಾಜನನ್ನು ಜಯಿಸಿದನು. ೨. ಅಭಿಮನ್ಯುವಿನ ಸಾರಥಿ (ಮ. ದ್ರೋ.). ೩. ಭಾರ್ಗವ ವಂಶೋತ್ಪನ್ನನಾದ ಋಷಿ (ಮ. ಸ., ಅನು.) ೪. ಅಗ್ನಿವಿಶೇಷ (ಮ. ವ). ೫. ಇಕ್ಷ್ವಾಕುವಂಶದ ಸುರಥನ ಪುತ್ರ. ಇವನು ಈ ವಂಶದ ಕೊನೆಯ ರಾಜ.

ಸುಮಿತ್ರಾ --ಸೂರ್ಯವಂಶದ ದಶರಥರಾಜನ ದ್ವಿತೀಯಪತ್ನಿ. ಈಕೆ ಮಗಧ ರಾಜನಾದ ಶೂರನ ಮಗಳು. ಲಕ್ಷ್ಮಣ ಶತ್ರುಘ್ನರು ಈಕೆಯ ಮಕ್ಕಳು. ಶ್ರೀರಾಮನು ಜನಿಸಿದ ಮೂರನೆಯ ದಿನ ಆಶ್ಲೇಷಾ ನಕ್ಷತ್ರದ ನಾಲ್ಕನೆಯ ಪಾದ ಕರ್ಕಾಟಕ ಲಗ್ನದಲ್ಲಿ ಲಕ್ಷ್ಮಣ ಶತ್ರುಘ್ನರು ಜನಿಸಿದರು. ನೋ.-- ಕೈಕೆ (ಮ. ವ., ರಾಮಾ. ಬಾಲ., ಅಯೋ).

ಸುಮೀಢ--ಚಂದ್ರವಂಶದ ಸುಹೋತ್ರನ ಮಗ. ಅಜಮೀಢ ಮತ್ತು ಪುರುಮೀಢರು ಈತನ ಸೋದರರು (ಮ. ಆ.).

ಸುಮುಖ -- ನೋ.-- ಗುಣಕೇಶಿ. ೧. ಒಂದು ಸರ್ಪ (ಮ. ಆ). ೨. ಈತನು ಇಂದ್ರ ಸಾರಥಿಯಾದ ಮಾತಲಿಯ ಮಗಳು ಗುಣಕೇಶಿಯನ್ನು ವಿವಾಹವಾದನು (ಮ. ಉ.). ೩. ಗರುಡನ ಮಗನೊಬ್ಬ (ಮ. ಉ., ಭೀ.).

ಸುಮುಖಿ-- ಅಪ್ಸರೆಯೊಬ್ಬಳು (ಮ. ಅನು.).

ಸುಮೇಧ --೧. ಒಬ್ಬ ಋಷಿ. ನೋ.-- ಸುರಥ, ಸಮಾಧಿ, ೨. ತುಳಸಿಯಲ್ಲಿ ಭಕ್ತಿಯುಳ್ಳ ಕಾಶ್ಮೀರಿ ಬ್ರಾಹ್ಮಣನೊಬ್ಬ. ಇವನ ಮಿತ್ರ ಹರಿಮೇಧ. ಸುಮೇಧನು ದಾರಿಯಲ್ಲಿದ್ದ ತುಲಸೀವನಕ್ಕೆ ಪ್ರದಕ್ಷಿಣೆ ಬಂದು ನಮಸ್ಕರಿಸಿದನು. ಇವನು ಹರಿಮೇಧನಿಗೆ ತುಲಸಿಯ ಮಹಿಮೆಯನ್ನು ಹೇಳುತ್ತ ಒಂದು ಆಲದ ಮರದ ಕೆಳಗೆ ಕುಳಿತಿರಲು ಆ ಮರದಲ್ಲಿದ್ದ ಶಾಪದಿಂದ ಬ್ರಹ್ಮರಾಕ್ಷಸನಾಗಿದ್ದ ಅಸ್ತಿಕನು ಈ ಪುಣ್ಯವಿಚಾರಗಳನ್ನು ಕೇಳಿ ಶಾಪದಿಂದ ಬಿಡುಗಡೆ ಹೊಂದಿದನು. ನೋ.-- ಅಸ್ತಿಕ (ಸ್ಕಾಂ. ಪು.).

ಸುಮೇಧಾ -- ಜನಕನ ಹೆಂಡತಿ (ಅನಂ. ರಾ.). ನೋ. --ಸೀತೆ.

ಸುಯಜ್ಞಾ --ಚಂದ್ರವಂಶದ ಮಹಾಭೌಮನ ಪತ್ನಿ. ಈತನ ಪುತ್ರ ಅಯುತನಾಯೀ (ಮ. ಆ).

ಸುಯೋಧನ -- ನೋ.-- ದುರ್ಯೋಧನ. ಯೋಧರಿಗೆ ಯುದ್ಧದಲ್ಲಿ ಸುಖವನ್ನುಂಟು ಮಾಡುವವನು ಸುಯೋಧನ; ದುಃಖವನ್ನುಂಟುಮಾಡುವವನು ದುರ್ಯೋಧನ (ಮ. ದ್ರೋ.).

ಸುರಕೃತ್-- ವಿಶ್ವಾಮಿತ್ರನ ಒಬ್ಬ ಮಗ (ಮ. ಅನು.).

ಸುರಜಾ-- ಅಪ್ಸರೆಯೊಬ್ಬಳು (ಮ. ಆ.).

ಸುರತಾ -- ಅಪ್ಸರೆಯೊಬ್ಬಳು (ಮ. ಆ.).

ಸುರಥ-- ೧. ಕೃಪಾಚಾರ್ಯನ ಅಧೀನದಲ್ಲಿದ್ದ ಒಬ್ಬ ಸೇನಾಪತಿ (ಮ. ವಿ.) ೨.ಜಯದ್ರಥನ ಮಗ ; ಬಹಳ ಪುಕ್ಕ. ಈತನ ತಾಯಿ ದುಶ್ಶಳೆ. ಅರ್ಜುನನು ಅಶ್ವಮೇಧ ತುರಗದ ರಕ್ಷಣೆಗಾಗಿ ಬಂದ ವಾರ್ತೆಯನ್ನು ಕೇಳಿದೊಡನೆಯೇ ಈತ ಭಯದಿಂದ ಮೃತನಾದ (ಮ. ಅಶ್ವ.). ೩. ದ್ರುಪದರಾಜನ ಪುತ್ರನೊಬ್ಬ. ಇವನು ಅಶ್ವತ್ಥಾಮನಿಂದ ಹತನಾದ (ಮ. ದ್ರೋ. ಶ.). ೪. ಶಿಬಿವಂಶದ ರಾಜ; ಕೋಟಿಕಾಸ್ಯನ ತಂದೆ (ಮ. ವ.). ೫. ಸ್ವಾರೋಚಿಷ ಮನ್ವಂತರದ ಒಬ್ಬ ರಾಜ. ಮ್ಲೇಚ್ಛರು ತನ್ನ ರಾಜ್ಯವನ್ನಾಕ್ರಮಿಸಲು ಹತಾಶನಾಗದೆ ಈತನು ಅರಣ್ಯವನ್ನು ಸೇರಿ ದೇವಿಯನ್ನಾರಾಧಿಸುತ್ತ ಮೃತನಾಗಲು ಮುಂದಿನ ಜನ್ಮದಲ್ಲಿ ಸಾವರ್ಣಿಮನುವಾಗಿ ಜನಿಸಿದನು. ನೋ.-- ಸಮಾಧಿ (ಶಿವಪು. ದೇವೀಭಾ.,ಮಾರ್ಕಂಪು.).

ಸುರಥಾ -- ವಿರಾಟರಾಜನ ಪಟ್ಟದ ರಾಣಿ. ಶ್ವೇತ ಮತ್ತು ಶಂಖರಿಬ್ಬರು ಮಕ್ಕಳು (ಮ. ವಿ.).

ಸುರಪ್ರವೀರ -- ಅಗ್ನಿವಿಶೇಷ (ಮ. ವ.).

ಸುರಭಿ-- ೧. ದಕ್ಷಪ್ರಜಾಪತಿಯ ಮಗಳು ; ಈಕೆ ಕಶ್ಯಪನ ಪತ್ನಿ; ಈಕೆಯ ಮಗಳು ವಸಿಷ್ಠನ ಧೇನುವಾದ ನಂದಿನಿ (ಮ. ಆ., ಸ., ವ. ಉ.). ೨. ಕಾಮಧೇನು ; ದೇವಲೋಕದ ದನ. ಇದು ಸಮುದ್ರಮಥನದ ಕಾಲದಲ್ಲಿ ಹುಟ್ಟಿತು. ಶ್ರೀಕೃಷ್ಣನಿಗೆ ಬಲಿಪಾಡ್ಯದ ದಿನ ವಿಶೇಷ ಹಾಲು ಕುಡಿಯಲು ಆಸೆಯಾಗಲು ತನ್ನ ಎಡಭಾಗದಿಂದ ಒಂದು ದನ ಮತ್ತು ಒಂದು ಕರುವನ್ನು ನಿರ್ಮಿಸಿ, ಅದನ್ನು ಕರೆಯಲು, ಅದು ಒಂದು ಹರವಿಯಷ್ಟು ಹಾಲು ಕೊಟ್ಟಿತು. ಅಂದು ಶ್ರೀಕೃಷ್ಣರಾಧೆಯರು ತೃಪ್ತಿಯಾಗುವಷ್ಟು ಹಾಲು ಕುಡಿದರು. ಆ ಹರವಿಯು ಒಡೆದು, ಹಾಲು ಸುತ್ತಲು ಹರಿದು ಒಂದು ಸರೋವರವಾಯಿತು. ಶ್ರೀಕೃಷ್ಣನು ಈ ಸರೋವರದಲ್ಲಿ ರಾಧೆಯೊಡನೆ ಜಲಕ್ರೀಡೆಯಾಡಿದನು. ಆ ಗೋವಿನ ಮೈಯಿಂದ ಆಗ ಕೋಟಿಗಟ್ಟಲೇ ದನಗಳು ಉತ್ಪತ್ತಿಯಾಗಲು ಶ್ರೀಕೃಷ್ಣನು ವೈಭವದಿಂದ ಅವುಗಳನ್ನು ಪೂಜಿಸಿದನು. ಇದೇ ಗೋಪೂಜೆಯ ಮೂಲಕಥೆ (ದೇವೀಭಾ.).

ರಸಾತಲವು ಕಾಮಧೇನುವಿನ ವಾಸಸ್ಥಾನ. ಈಕೆ ಅಮೃತಪಾನ ಮಾಡಿದ ಬ್ರಾಹ್ಮಣನ ಮುಖದಿಂದ ಹುಟ್ಟಿದಳು. ಈಕೆಯ ಹಾಲಿನ ನೊರೆಯನ್ನು ಆಹಾರಮಾಡಿಕೊಂಡಿದ್ದ ಮುನಿಗಳಿಗೆ ಫೇನಪರೆಂದು ಹೆಸರು. ಈ ಧೇನುವಿನ ಸಂತತಿಯಲ್ಲೇ ಸುರೂಪೆ, ಹಂಸಿಕೆ, ಸುಭದ್ರೆ, ಸರ್ವಕಾಮದುಘೆ ಎಂಬ ಕಾಮಧೇನುವಿಗೆ ಸಮಾನವಾದ ದನಗಳು ಹುಟ್ಟಿದವು.

ಸುರಸಾ-- ೧. ದಕ್ಷಬ್ರಹ್ಮನ ಮಗಳು. ಕಶ್ಯಪನ ಒಬ್ಬಳು ಪತ್ನಿ ; ಯಕ್ಷರು ಮತ್ತು ನಾಗರ ತಾಯಿ. ಈಕೆ ದೇವತೆಗಳ ಸೂಚನೆಯಂತೆ ಸೀತಾಸಂಶೋಧನೆಗೆ ಹೊರಟ ಆಂಜನೇಯನ ಶಕ್ತಿಯನ್ನು ಪರೀಕ್ಷಿಸಲು ಘೋರರಾಕ್ಷಸಿಯ ರೂಪವನ್ನು ಧರಿಸಿ, ಆತನನ್ನು ಅಡ್ಡಗಟ್ಟಿದಳು. ಹನುಮನು ಈಕೆಯ ಅಪೇಕ್ಷೆಯಂತೆ ಈಕೆಯ ಹೊಟ್ಟೆಯನ್ನು ಹೊಕ್ಕು ಹೊರಹೊರಟನು. ಸುರಸೆಯು ಹನುಮನ ಸಾಹಸವನ್ನು ಮೆಚ್ಚಿ, ಆತನನ್ನು ಆಶೀರ್ವದಿಸಿದಳು (ಮ. ಆ., ಸ., ಉ., ರಾಮ. ಸುಂದರ.). ೨. ಲಂಕೆಯನ್ನು ಪಾಲಿಸುತ್ತಿದ್ದ ವಿಷ್ಣುಭಕ್ತೆಯಾದ ರಕ್ಕಸಿ. ಶ್ರೀರಾಮನು ರಾವಣನನ್ನು ವಧಿಸಿದ ಮೇಲೆ ಈಕೆಯನ್ನು ಅಯೋಧ್ಯೆಗೆ ಕೊಂಡುಹೋಗಿ, ಆ ನಗರದ ರಕ್ಷಕಿಯಾಗಿಟ್ಟನು (ಸ್ಕಾಂ. ಪು. ರಾಮಾ.).

ಸುರಾ --ಮದ್ಯಾಭಿಮಾನದೇವತೆ. ಇವಳು ಅಮೃತಮಥನ ಕಾಲದಲ್ಲಿ ಹುಟ್ಟಿದಳು (ಮ. ಆ.).

ಸುರಾರಿ-- ಪಾಂಡವ ಪಕ್ಷದ ಕ್ಷತ್ರಿಯ (ಮ. ಉ).

ಸುರಾಷ್ಟ್ರ-- ೧. ಇಂದಿನ ಸೂರತ್ (ಮ.ಸ.,ಕ.). ೨. ಸೌರಾಷ್ಟ್ರದ ರಾಜಧಾನಿ. ಗುಜರಾತಿಗೆ ಹಿಂದೆ ಸೌರಾಷ್ಟ್ರವೆಂದು ಹೆಸರಿತ್ತು (ಮ. ಕ.).

ಸುರುಕ್ -- ಗರುಡನ ಒಬ್ಬ ಮಗ (ಮ. ಉ.).

ಸುರುಚಿ-- ಉತ್ತಾನಪಾದನ ಕಿರಿಯ ಹೆಂಡತಿ; ಈಕೆಯ ಮಗ ಉತ್ತಮ. ನೋ-- ಧ್ರುವ, ಉತ್ತಾನಪಾದ, ಸುನೀತಿ, ಉತ್ತಮ. ಈಕೆ ಹಿಮಾಲಯ ಪ್ರಾಂತದಲ್ಲಿ ತೀರಿಕೊಂಡಳು (ವಿಷ್ಣುಪು., ಲಿಂಗಪು., ಮತ್ಸ್ಯಪು., ಸ್ಕಾಂಪು, ಭಾಗ.).

ಸುರೂಪಾ -- ಕಾಮಧೇನುವಿನ ಇನ್ನೊಂದು ಹೆಸರು (ಮ. ಉ.).

ಸುರೇಣು-- ೧. ಸರಸ್ವತೀ ನದಿಯ ಏಳು ಶಾಖೆಗಳಲ್ಲೊಂದು (ಮ. ಶ.). ೨.ವಿಶ್ವಕರ್ಮನ ಮಗಳು. ಶರಣ್ಯು ಎಂಬುದರ ರೂಪಾಂತರವೇ ಸುರೇಣು.

ಸುರೋಧ--ಚಂದ್ರವಂಶದ ತಂಸು ರಾಜನ ಮಗ. ಇವನು ಬ್ರಹ್ಮಜ್ಞಾನಿ ಮತ್ತು ಧಾರ್ಮಿಕ. ಈತನ ಪತ್ನಿ ಉಪದಾನವಿ. ಈಕೆಗೆ ದುಷ್ಯಂತ, ಸುಶ್ರುತ, ಪ್ರವೀರ ಮತ್ತು ಅನಘರೆಂಬ ನಾಲ್ವರು ಮಕ್ಕಳು. ಈ ದುಷ್ಯಂತನೇ ಭರತನ ತಂದೆ (ಹರಿ.).

ಸುಲಭಾ-- ಪ್ರಧಾನನೆಂಬ ರಾಜರ್ಷಿಯ ಮಗಳು. ಈಕೆ ಸನ್ಯಾಸಿನಿ. ಈಕೆ ಧರ್ಮಧ್ವಜ ಜನಕನೊಡನೆ ಬ್ರಹ್ಮವಿದ್ಯೆಯ ಕುರಿತು ಸಂಭಾಷಿಸಿದಳು (ಮ. ಶಾಂ.).

ಸುಲೋಚನ--ಭೀಮನಿಂದ ಹತನಾದ ಚಂದ್ರವಂಶದ ಕ್ಷತ್ರಿಯನೊಬ್ಬ (ಮ. ಆ.,ಭೀ.).

ಸುಲೋಚನಾ-- ಇಂದ್ರಜಿತುವಿನ ಪತ್ನಿ. ಲಕ್ಷ್ಮಣನು ಇಂದ್ರಜಿತುವಿನ ಎಡಗೈಯನ್ನು ಕತ್ತರಿಸಲು ಅದು ಅವನ ಪತ್ನಿಯಾದ ಸುಲೋಚನೆಯ ಅಂತಃಪುರದಲ್ಲಿ ಹೋಗಿ ಬಿತ್ತು. ಆಗ ಆ ತರುಣಿಯು ಬಹಳ ಶೋಕ ಮಾಡುವುದನ್ನು ಕಂಡು ಆ ಹಸ್ತವು. 'ಎಲೌ ಸುಂದರಿಯೇ, ನಾನು ಪರಮಾತ್ಮನಿಂದ ಮರಣಹೊಂದಿದೆನು. ವ್ಯಸನಪಡಬೇಡ. ಶ್ರೀರಾಮನಲ್ಲಿಗೆ ಹೋಗಿ ಅಲ್ಲಿರುವ ನನ್ನ ಶಿರಸ್ಸನ್ನು ತಂದು ಸಹಗಮನ ಮಾಡು. ಆಗ ನಿನಗೆ ನನ್ನ ದರ್ಶನ ದೊರೆಯುವುದು' ಎನ್ನಲು ಆಕೆ ಹಾಗೆಯೇ ಮಾಡಿ ವೈಕುಂಠ ಸೇರಿದಳು (ಆನಂ. ರಾ).

ಸುವರ್ಚಲಾ --ದೇವಲ ಋಷಿಯ ಮಗಳು; ಶ್ವೇತಕೇತುವಿನ ಪತ್ನಿ. ಈಕೆ

ಶ್ವೇತಕೇತುವಿನೊಡನೆ ಆಧ್ಯಾತ್ಮದ ವಿಚಾರ ಸಂಭಾಷಿಸಿದಳು. ನೋ.-- ಶ್ವೇತಕೇತು (ಮ. ಶಾಂ.).

ಸುವರ್ಚಾ (ಸುವರ್ಚಸ್) ೧. ಸೂರ್ಯವಂಶದ ಕರಂಭರಾಜಪುತ್ರನಾದ ಖನೀನೇತ್ರನ ಮಗ; ಈತನ ಮಗ ಕರಂಧಮ. ಇವನು ತನ್ನ ಹಸ್ತಗಳನ್ನು ಬೀಸದ ಹಾಗೆ ಮಾಡಿ ಊದಿ, ದೊಡ್ಡ ಸೈನ್ಯವನ್ನು ಉತ್ಪನ್ನ ಮಾಡಿಕೊಂಡುದರಿಂದ ಕರಂಧಮನಾದನು (ಮ. ಅಶ್ವ). ೨. ಅಭಿಮನ್ಯುವಿನಿಂದ ಮಡಿದ ಕೌರವಪಕ್ಷದ ವೀರ (ಮ. ದ್ರೋ) ೩. ಗರುಡನ ಒಬ್ಬ ಮಗ (ಮ. ಉ.).೪. ಸುಕೇತುವೆಂಬ ಒಬ್ಬ ರಾಜ. ಈತನ ಸೋದರ ಸುನಾಮ. ಇವನು ದ್ರೌಪದಿಯ ಸ್ವಯಂವರಕ್ಕೆ ಬಂದಿದ್ದನು (ಮ. ಆ.).೫. ಬ್ರಹ್ಮರ್ಷಿಯೊಬ್ಬ (ಮ. ವ.). ೬. ಧೃತರಾಷ್ಟ್ರನ ಮಗನೊಬ್ಬ. ಈತನು ಭೀಮನಿಂದ ಹತನಾದನು (ಮ. ಆ., ಕ.,). ೭.ದಧೀಚಿ ಋಷಿಯ ಪತ್ನಿ. ಈಕೆಯ ಮಗನೇ ಪಿಪ್ಪಲಾದ. ಸುವರ್ಚೆಯು ತನ್ನ ಗರ್ಭಪಿಂಡವನ್ನು ಅಶ್ವತ್ಥಮರದ ಗೂಡಿನಲ್ಲಿಟ್ಟು ಸತಿ ಹೋದಳು. ಆ ಪಿಂಡದಿಂದ ಹುಟ್ಟಿದ ಬಾಲಕನನ್ನು ಪಿಪ್ಪಲ ಫಲದಿಂದ ಪಕ್ಷಿಗಳು ರಕ್ಷಿಸಿದುದರಿಂದ ಆ ಬಾಲಕನು ಪಿಪ್ಪಲಾದನಾದನು. ಇವನೊಬ್ಬ ಮಹರ್ಷಿ.

ಸುವರ್ಣ-- ಋಷಿಯೊಬ್ಬ (ಮ. ಅನು).

ಸುವರ್ಣಕದಳೀವನ -- ಗಂಧಮಾದನ ಪರ್ವತದ ಸಮೀಪದ ವನ. ಇದರಲ್ಲಿ ರಾಮಾಯಣದ ವೀರನಾದ ಹನುಮಂತನ ವಾಸ್ತವ್ಯವಿದೆ. ಭೀಮನಿಗೆ ಆಂಜನೇಯನು ಇಲ್ಲೇ ಪ್ರತ್ಯಕ್ಷನಾದನು (ಮ. ವ.).

ಸುವರ್ಣಖನಿ-- ಅಯೋಧ್ಯೆಯಲ್ಲಿದ್ದ ಒಂದು ತೀರ್ಥ. ನೊ.-- ರಘು (ರಾಮಾ. ಅಯೋ. ಸ್ಕಾಂಪು.).

ಸುವರ್ಣಚೂಡ-- ಗರುಡನ ಒಬ್ಬ ಮಗ (ಮ.ಉ.).

ಸುವರ್ಣವರ್ಮ-- ಕಾಶೀದೇಶದ ರಾಜ. ಈತನ ಪುತ್ರಿ ವಪುಷ್ಟಮೆ. ಈಕೆ ಅಭಿಮನ್ಯುವಿನ ಪತ್ನಿ (ಮ. ಆ.).

ಸುವರ್ಣಷ್ಠೀವಿ--ನಾರದನೆಂಬ ಬ್ರಹ್ಮರ್ಷಿಯ ಭಾವನೆಂಟ; ಈತನ ತಂದೆ ಸೃಂಜಯ ರಾಜ; ಸಹೋದರಿ ದಮಯಂತಿ; ಈಕೆಯೇ ನಾರದನ ಪತ್ನಿ. ಸುವರ್ಣಷ್ಠೀವಿಯು ಉಗುಳಿದಲ್ಲೆಲ್ಲ ಚಿನ್ನವಾಗುತ್ತಿದ್ದುದರಿಂದ ಈತನಿಗೆ ಈ ಹೆಸರು ಬಂತು. ಈತನ ಮಲಮೂತ್ರಗಳೂ ಚಿನ್ನವಾಗುತ್ತವೆ ಎಂಬ ಭ್ರಾಂತಿಯಿಂದ ಈತನನ್ನು ಕೊಂಡು ಹೋಗಿ ಕೊಂದರು (ಮ. ಶಾಂ., ದ್ರೋ., ದೇಭಾ.).

ಸುವರ್ಮ-- ೧. ತ್ರಿಗರ್ತರಾಜನಾದ ಸುಶರ್ಮನ ಸಹೋದರ (ಮ. ಆ.). ೨.ಧೃತರಾಷ್ಟ್ರನ ಮಗನೊಬ್ಬ; ಇವನು ಭೀಮನಿಂದ ಹತನಾದನು (ಮ. ಆ., ಭೀ. ದ್ರೋ).

ಸುವ್ರತ-- ನೋ. -- ನೃಮೇಧ.

ಸುವಾಕ್-- ಧೃತರಾಷ್ಟ್ರನ ಮಗನೊಬ್ಬ (ಮ. ಆ).

ಸುವಾಜಿ-- ಇಲ್ವಲನೆಂಬ ಅಸುರನ ರಥದ ಕುದುರೆ (ಮ. ವ.).

ಸುವೀರ-- ಸೂರ್ಯವಂಶದ ದ್ಯುತಿಮತನ ಮಗ. ಈತನ ಮಗ ದುರ್ಜಯ (ಮ. ಅನು.).

ಸುವೇಗ-- ಭದ್ರಾವತಿ ನಗರದ ರಾಜನಾದ ಯೌವನಾಶ್ವನ ಮಗ. ವೃಷಕೇತು ಯೌವನಾಶ್ವರು ಯುದ್ಧಭೂಮಿಯಿಂದ ಮುಂದೆ ಬಂದು ಅಲ್ಲಿ ಭೀಮನೊಡನೆ ಯುದ್ಧ ಮಾಡುತ್ತ ಸುವೇಗನನ್ನು ಸಮಾಧಾನಪಡಿಸಿದರು. ಭೀಮನು ಯೌವನಾಶ್ವನಲ್ಲಿದ್ದ ಅಶ್ವಮೇಧದ ಕುದುರೆಯನ್ನು ಹಸ್ತಿನಾವತಿಗೆ ಒಯ್ದನು (ಜೈ. ಭಾ.).

ಸುವೇಲ -- ಲಂಕೆಯ ಒಂದು ಪರ್ವತ. ಶ್ರೀರಾಮನು ಕಪಿಸೇನೆಯೊಡನೆ ಸಮುದ್ರವನ್ನು ದಾಟಿದೊಡನೆ ಈ ಪರ್ವತದ ಸಾನುಪ್ರದೇಶದಲ್ಲೇ ಶಿಬಿರ ಬಿಟ್ಟನು (ರಾಮಾ. ಯುದ್ಧ).

ಸುವೇಷಾ-- ಚಂದ್ರವಂಶದ ಪರೀಕ್ಷಿತನ ಪತ್ನಿ. ಈಕೆಗೆ ಬಾಹುಕಾ ಎಂಬ ಹೆಸರೂ ಇದೆ. ಈಕೆಯ ಮಗನೇ ಭೀಮಸೇನ (ಮ. ಆ.).

ಸುಶರ್ಮ-- ೧. ತ್ರಿಗರ್ತದೇಶದ ರಾಜ. ಪಾಂಡವರ ಅಜ್ಞಾತವಾಸಕಾಲದಲ್ಲಿ ಇವನು ದುರ್ಯೋಧನನಿಂದ ದಕ್ಷಿಣಗೋಗ್ರಹಣಾರ್ಥವಾಗಿ ವಿರಾಟನಗರಿಗೆ ಕಳುಹಿಸಲ್ಪಟ್ಟನು. ದಕ್ಷಿಣಗೋಗ್ರಹಣ ಸಂಬಂಧವಾಗಿ ವಿರಾಟನಿಗೂ ಸುಶರ್ಮನಿಗೂ ಯುದ್ಧವಾಗಿ ವಿರಾಟನು ಸುಶರ್ಮನಿಗೆ ಸೆರೆಸಿಕ್ಕಲು ಭೀಮನು ಅವನಿಂದ ವಿರಾಟನನ್ನು ಬಿಡಿಸಿದನು. ಇವನು ಭಾರತಯುದ್ಧದ ದ್ರೋಣನ ಸೇನಾಧಿಪತ್ಯದ ಕಾಲದಲ್ಲಿ ಅರ್ಜುನನಿಂದ ಹತನಾದನು (ಮ. ಆ., ವಿ., ದ್ರೋ).೨. ಕರ್ಣನ ಒಬ್ಬ ಮಗ; ಇವನು ಭಾರತ ಯುದ್ಧದ ಹದಿನೆಂಟನೆಯ ದಿನ ನಕುಲನಿಂದ ಹತನಾದನು (ಮ. ಶ.).೩. ಪಾಂಚಾಲ ವೀರನೊಬ್ಬ. ಇವನು ಕರ್ಣನಿಂದ ಹತನಾದನು (ಮ. ಕ.). ೪. ಒಬ್ಬ ಬ್ರಾಹ್ಮಣ. ನಿದ್ರೆಯಲ್ಲಿ ಈತನ ಪತ್ನಿಯನ್ನು ಅದ್ರಿ ಎಂಬ ರಾಕ್ಷಸನ ಮಗ ಬಲಾಕನು ಅಪಹರಿಸಲು ಬ್ರಾಹ್ಮಣನು ಉತ್ತಾನಪಾದರಾಜನ ಮಗ ಉತ್ತಮನ ಸಹಾಯದಿಂದ ಪುನಃ

ಪಡೆದನು (ಮಾರ್ಕಂಪು.). ೫. ಬಹುಳೆಯೆಂಬ ಸುಂದರಿಯ ಪತಿ. ಈತ ನಂದೆಯ ಮೂಕತ್ವವನ್ನು ಹೋಗಲಾಡಿಸಿದನು. ನೋ.-- ನಂದೆ (ಮಾರ್ಕಂ. ಪು.).

ಸುಶೋಭನಾ-- ಆಯುವೆಂಬ ಮಂಡೂಕರಾಜನ ಮಗಳು. ಇಕ್ಷ್ವಾಕುವಂಶದ ಪರೀಕ್ಷಿತನ ಪತ್ನಿ. ನೋ.-- ಪರೀಕ್ಷಿತ (ಮ. ವ.).

ಸುಶ್ರವಾ-- ೧. ಚಂದ್ರವಂಶದ ಜಯತ್ಸೇನನ ಪತ್ನಿ ಈಕೆಯ ಮಗ ಪರಾಚೀನ (ಮ. ಆ.). ೨. ಶಕುನಿಯ ಸೋದರಿ; ಧೃತರಾಷ್ಟ್ರನನ್ನೇ ಈಕೆ ವಿವಾಹವಾದಳು. (ಮ. ಆ.).

ಸುಶ್ರುತ-- ೧. ವಿಶ್ವಾಮಿತ್ರ ಋಷಿಯ ಮಗನೊಬ್ಬ (ಮ. ಅನು.). ೨. ಸಂಸ್ಕೃತದಲ್ಲಿ ಒಬ್ಬ ಪ್ರಸಿದ್ಧ ವೈದ್ಯ.

ಸುಷೇಣ-- ೧. ವಾಲಿಯ ಮಾವ. ಲಕ್ಷ್ಮಣನು ರಾವಣನ ಶಕ್ತ್ಯಾಯುಧದಿಂದ ಮೂರ್ಛೆಹೋದಾಗ ಈತನ ಸೂಚನೆಯಂತೆ ಹನುಮಂತನು ಔಷಧಿಪರ್ವತವನ್ನು ತಂದನು (ಮ. ವ.). ೨. ಜಮದಗ್ನಿ ಋಷಿಯ ಮಗ. ಈತನ ತಾಯಿ ರೇಣುಕೆ. ಈತನಿಗೆ ಪರಶುರಾಮ ಮೊದಲಾದ ನಾಲ್ವರು ಸಹೋದರರು. ತಂದೆಯ ಆಜ್ಞೆಯನ್ನು ಪಾಲಿಸದ ಈತನಿಗೆ ಜಡತ್ವವು ಪ್ರಾಪ್ತವಾಗಿ ಕೊನೆಗೆ ಪರಶುರಾಮನಿಂದ ಪರಿಹಾರವಾಯಿತು (ಮ. ವ.). ೩. ವಾನರನೊಬ್ಬ. ಶ್ರೀರಾಮನು ದಿಗ್ವಿಜಯ ಕಾಲದಲ್ಲಿ ಹಸ್ತಿನಾವತಿಯ ಚಂದ್ರವಂಶದ ಪುರೂರವನನ್ನು ಗೆದ್ದು ಸುಷೇಣನನ್ನು ಅಲ್ಲಿಗೆ ರಾಜನನ್ನಾಗಿ ಮಾಡಿದನು (ಆನಂ. ರಾ.). ೪. ಕರ್ಣನ ಮಗನೊಬ್ಬ. ಇವನು ಭಾರತಯುದ್ಧದ ಹದಿನೇಳನೆಯ ದಿನ ಭೀಮನಿಂದ ಹತನಾದನು (ಮ. ಕ.). ೫. ಧೃತರಾಷ್ಟ್ರನ ಮಗನೊಬ್ಬ. ಇವನು ಭೀಮನಿಂದ ಹತನಾದನು (ಮ. ಆ., ಭೀ., ದ್ರೋ.) ೬. ಒಂದು ಸರ್ಪ (ಮ. ಆ.). ೭. ಕ್ಷತ್ರಿಯನೊಬ್ಬ. ಈತನು ದುರ್ಯೋಧನನ ಪಕ್ಷೀಯನು (ಮ. ಆ., ಶ.). ೮. ಶ್ರೀಮನ್ನಾರಾಯಣ; ಸುಂದರವಾದ ಪಾರ್ಷದ ಸಮೂಹ ಉಳ್ಳವನು.

ಸುಸಾಮ-- ಯುಧಿಷ್ಠಿರನ ರಾಜಸೂಯದಲ್ಲಿ ಋತ್ವಿಕ್ಕಾದ ಮಹರ್ಷಿ(ಮ. ಸ.).

ಸುಸ್ವರ-- ಗರುಡನ ಒಬ್ಬ ಮಗ (ಮ. ಉ.).

ಸುಹಸ್ತ-- ಧೃತರಾಷ್ಟ್ರನ ಒಬ್ಬ ಮಗ. ಇವನು ಭೀಮನಿಂದ ಹತನಾದನು (ಮ. ಆ. ದ್ರೋ).

ಸುಹೋತ್ರ-- ೧. ಚಂದ್ರವಂಶದ ಭುಮನ್ಯು ರಾಜನ ಮಗ. ಈತನ ಪತ್ನಿ ಜಯಂತಿ; ಪುತ್ರ ಅಜಮೀಢ ಮತ್ತು ಹಸ್ತಿ. ಈತನು ಅನೇಕ ಯಜ್ಞಗಳನ್ನು ಮಾಡಿದುದರಿಂದ ಇಂದ್ರನು ಈತನ ರಾಜ್ಯದಲ್ಲಿ ಸುವರ್ಣವೃಷ್ಟಿಯನ್ನು

ಸುರಿಸಿದ. ಈತನ ಮಕ್ಕಳು ಅಜಮೀಢ, ಸಮೀಢ, ಪುರುಮೀಢರು (ಮ.ಆ.,ವ.). ೨. ಈತನು ಪುಷ್ಕರಿಣಿಯಲ್ಲಿ ಹುಟ್ಟಿದವ; ಈತನ ತಂದೆ ಭುಮನ್ಯು, ಸಹೋದರರು ಸುಹೋತ್ರ, ಸುಹವಿಸ್ಸು, ಸುಯಜಸ್ಸು ಮತ್ತು ಋಷೀಕರು (ಮ. ಆ.). ೨. ಮಾದ್ರೇಯನಾದ ಸಹದೇವನ ಮಗ. ಈತನ ತಾಯಿ ವಿಜಯ (ಮ. ಆ). ೪. ಷೋಡಶ ಮಹಾರಾಜರಲ್ಲೊಬ್ಬ (ಮ. ದ್ರೋ., ಶಾಂ.). ೫. ಈತನ ತಂದೆ ಕಾಂಚನಪ್ರಭ. ಇವನು ಪ್ರಬಲ ಪ್ರತಾಪಿ ಮತ್ತು ಮಹಾಪಂಡಿತ. ಈತನ ಪತ್ನಿ ಕೇಶಿನಿ; ಮಗ ಜಹ್ನು (ಹರಿ.).

ಸುಹ್ಮ-- ಶಿಬಿರಾಜನ ಪತ್ನಿಯಾದ ಸುದೇಷ್ಣೆಗೆ ಮಕ್ಕಳಿಲ್ಲದಿರಲು ಪತ್ನಿ ಮತ್ತು ಮಕ್ಕಳಿಂದ ಹೊರಗೆ ನೂಕಲ್ಪಟ್ಟ ದೀರ್ಘತಮನೆಂಬ ಋಷಿಯು ಶಿಬಿರಾಜನ ಮೂಲಕ ಆತನ ಅರಮನೆಯನ್ನು ಸೇರಿ ರಾಜನ ಒಪ್ಪಿಗೆಯಿಂದ ರಾಣಿಯಲ್ಲಿ ಅಂಗ, ವಂಗ, ಕಲಿಂಗ, ಸುಹ್ಮ, ಪುಂಡ್ರ, ಆಂಧ್ರರೆಂಬ ಮಕ್ಕಳನ್ನು ಪಡೆದನು.

ಸುಹ್ಮಾ-- ಸಿಂಧೂ ನದಿಯ ಪ್ರಾಂತದ ಒಂದು ದೇಶ (ಮ. ಸ.).

ಸೂಚಿವ್ಯೂಹ-- ಇದನ್ನು ಸೂಚಿಮುಖವ್ಯೂಹವೆಂದೂ ಹೇಳುತ್ತಾರೆ. ಶತ್ರುಸೈನ್ಯವು ಅಧಿಕವಾಗಿದ್ದರೆ ತನ್ನನ್ನಿದಿರಿಸುವ ಶತ್ರುವೀರರೆದುರಿಗೆ ಈ ವ್ಯೂಹವು ಉತ್ತಮವಾದದ್ದು (ಮ. ಭೀ.).

ಸೂತ-- ೧. ವಿಶ್ವಾಮಿತ್ರ ಋಷಿಯ ಮಗನೊಬ್ಬ (ಮ. ಅನು.) ೨. ನೈಮಿಷಾರಣ್ಯ ವಾಸಿಗಳಾದ ಋಷಿಗಳಿಗೆ ಇತಿಹಾಸ -- ಪುರಾಣಗಳನ್ನು ಹೇಳಿದ ಮಹರ್ಷಿ. ಈತನಿಗೆ ರೋಮಹರ್ಷಣನೆಂಬ ಹೆಸರಿದೆ (ಮ. ಆ.)ನೋ.-- ಬಲರಾಮ, ರೋಮಹರ್ಷಣ. ೩. ಕೀಚಕನ ತಂದೆ. ಬ್ರಾಹ್ಮಣಿತಿಗೆ ಕ್ಷತ್ರಿಯನಿಂದ ಹುಟ್ಟಿದವನೇ ಸೂತ (ಮ. ವಿ). ೪. ಕರ್ಣನ ಸಾಕುತಂದೆ. ಅಧಿರಥ (ಮ. ಆ.). ಬ್ರಾಹ್ಮಣ ಸ್ತ್ರೀಯರಲ್ಲಿ ಕ್ಷತ್ರಿಯ ಬೀಜದಿಂದ ಹುಟ್ಟಿದ ಸಂತತಿ (ಯಾಜ್ಞ. ಸ್ಮೃ.).ಪೃಥುಚಕ್ರವರ್ತಿಯು ಯಾಗಮಾಡುವಾಗ ಇಂದ್ರನಿಗಾಗಿ ಕೊಟ್ಟ ಹವಿಸ್ಸೂ, ಬೃಹಸ್ಪತಿಗಾಗಿ ಕೊಟ್ಟ ಹವಿಸ್ಸೂ ಸೇರಿ ಹೋಮ ಮಾಡಲ್ಪಟ್ಟಿರುವುದರಿಂದ ಸೂತಕುಲ ಉಂಟಾಯಿತು (ವಾಯುಪು.).

ಸೂತಪುತ್ರ -- ನೋ. ಕರ್ಣ. ಎಲ್ಲರ ಕಿವಿಯಲ್ಲಿ ಈತನ ಹೆಸರು ಹರಡಿದುದರಿಂದ ಕರ್ಣನಾದನು. (ಕು. ವ್ಯಾಭಾ.)

ಸೂನೃತಾ--ಉತ್ತಾನಪಾದರಾಜನ ಪತ್ನಿ. ಈಕೆಯನ್ನು ಧರ್ಮನು ಅಶ್ವಮೇಧಯಾಗದಲ್ಲಿ ಪಡೆದನು. ಈಕೆಗೆ ಧ್ರುವ, ಕೀರ್ತಿ, ಮಂತ, ಆಯಸ್ಪತಿ ಎಂಬ ಮಕ್ಕಳಿದ್ದರು. ಅತ್ರಿ ನಾಮಕ ಪ್ರಜಾಪತಿಯು ಉತ್ತಾನಪಾದನನ್ನು ದತ್ತಕ್ಕೆ ತೆಗೆದುಕೊಂಡನು. ಸೂನೃತೆಗೆ ಸುನೀತಿ ಎಂಬ ಹೆಸರಿದೆ. ನೋ.-- ಧ್ರುವ, ಸುನೀತಿ.

ಸೂರ್ಯ -- ಕಶ್ಯಪ - ಅದಿತಿಯರ ಮಗ. ನೋ.--ಆದಿತ್ಯಮಾರ್ತಾಂಡ, ವಿವಸ್ವಾನ್, ಈತನಿಗೆ ರೈವತನ ಮಗಳಾದ ರಾಜ್ಞಿ ಪತ್ನಿಯಾಗಿದ್ದಳು. ಈಕೆಗೆ ರೇವತನೂ, ಪ್ರಭೆ ಎಂಬ ಪತ್ನಿಗೆ ಪ್ರಭಾತನೂ ಮಕ್ಕಳು. ನೋ.-ಅಶ್ವಿನೀದೇವತೆಗಳು, ವಸಿಷ್ಠ, ಋಕ್ಷರಜ ಕುಂತಿ ಶ್ರೀಯನ್ನುಂಟುಮಾಡುವವನು ಸೂರ್ಯ (ಸೂತೇ ಶ್ರಿಯಮ್ ಇತಿ ಸೂರ್ಯಃ). ಈತನ ತಾಯಿ ಅದಿತಿ; ತಂದೆ ಕಶ್ಯಪ. ಸೂರ್ಯನಿಗೆ ವೈವಸ್ವತನೆಂದು ಕರೆಯಲ್ಪಡುವ ಯಮನೂ, ಯಮಿಯೆಂಬ ಹೆಸರುಳ್ಳ ಯಮುನಾನದಿಯೂ ಹುಟ್ಟಿದರು. ಮಹಾಜ್ಞಾನಿಯಾದ ಮನುವೂ ಸೂರ್ಯಪುತ್ರನೇ. ಧರ್ಮಾತ್ಮನಾದ ಮನುವು ಮನುವಂಶಕ್ಕೇ ಮೂಲಾಧಾರ. ಬ್ರಹ್ಮ, ಕ್ಷತ್ರಿಯ ಮೊದಲಾದ ನಾಲ್ಕುವರ್ಣದವರೂ ಮನುಸಂತತಿಯವರಾದುದರಿಂದ ಮಾನವರೆಂದು ಕರೆಯಲ್ಪಡುವರು (ಮ.ಆ).

ಅದಿತಿಯು ಗರ್ಭಿಣಿಯಾಗಿರುವಾಗ ಒಂದು ದಿನ ಕಶ್ಯಪರು ಗಂಗಾಸ್ನಾನಕ್ಕೆ ಹೋಗಿದ್ದರು. ಅದಿತಿಯು ದೇವರ ಮನೆಯಲ್ಲಿ ಕುಳಿತಿದ್ದಳು. ಹೊರಗಿನಿಂದ ಬುಧನು 'ಭವತಿ ಭಿಕ್ಷಾಂ ದೇಹಿ!' ಎಂದು ಕೂಗಿದನು. ಅದಿತಿಯು ಭಿಕ್ಷೆ ತರುವುದರೊಳಗೆ ಬುಧನು ಕೋಪದಿಂದ 'ಶಿಶುವು ನಿನ್ನ ಗರ್ಭದಲ್ಲಿ ಸತ್ತುಹೋಗಲಿ' ಎಂದು ಶಾಪವಿತ್ತು ಹೊರಟುಹೋದನು. ಶ್ರೀಹರಿಯ ಮಹಿಮೆಯಿಂದಲೂ, ಕಶ್ಯಪನ ತಪಃ ಪ್ರಭಾವದಿಂದಲೂ ಮಗುವು ಮೃತ ಅಂಡದಂತೆ ಕಾಣಿಸಿದರೂ ಬದುಕಿತು. ಸೂರ್ಯನಿಗೆ ಇದಕ್ಕಾಗಿ ಮಾರ್ತಾಂಡನೆಂಬ ಹೆಸರು ಬಂತು.

ಸೂರ್ಯನಿಗೆ ತ್ವಷ್ಟೃವಿನ ಮಗಳಾದ ಸಂಜ್ಞಾದೇವಿಯಲ್ಲಿ ಯಮ, ಮನು, ಯಮುನೆಯರೂ, ಛಾಯಾದೇವಿಯಲ್ಲಿ ಸಾವರ್ಣ, ಶನೈಶ್ಚರ ಎಂಬಿಬ್ಬರು ಮಕ್ಕಳೂ ಹುಟ್ಟಿದರು (ಭಾಗ.,ಹರಿ., ವಿಷ್ಣುಪು., ಬ್ರಹ್ಮಪು., ಪದ್ಮಪು., ವಾಯುಪು., ಮತ್ಸ್ಯಪು., ಶಿವಪು).

ಸೂರ್ಯನಿಂದ ಕುಂತಿ ಕರ್ಣನನ್ನು ಪಡೆದಳು. ದೇವತೆಗಳು ಸೂರ್ಯನಿಗೆ ಅರುಣನನ್ನು ಸಾರಥಿಯನ್ನಾಗಿ ಮಾಡಿದರು (ಮ.ಆ.). ಈತನ ಅಂಶದಿಂದ ಸುಗ್ರೀವನು ಜನಿಸಿದನು (ರಾಮಾ.ಉತ್ತರ.). ಯುಧಿಷ್ಠಿರನು ಸೂರ್ಯನನ್ನು ಸ್ತುತಿಸಿ ಅಕ್ಷಯಪಾತ್ರೆಯನ್ನು ಪಡೆದನು (ಮ.ವ.).

ಸೂರ್ಯದತ್ತ -- ವಿರಾಟನ ಸೋದರ (ಮ.ವಿ.,ದ್ರೋ.).

ಸೂರ್ಯನೇತ್ರ -- ಗರುಡನ ಒಬ್ಬ ಪುತ್ರ (ಮ.ಉ.).

ಸೂರ್ಯಧ್ವಜ--ದ್ರೌಪದಿಯ ಸ್ವಯಂವರಕ್ಕಾಗಿ ಬಂದ ಕ್ಷತ್ರಿಯನೊಬ್ಬ (ಮ.ಆ.).

ಸೂರ್ಯಪ್ರಭ -- ಶ್ರೀಕೃಷ್ಣನ ಪತ್ನಿಯಾದ ಲಕ್ಷಣೆಯೆಂಬುವಳ ಅರಮನೆ (ಮ.ಸ.).

ಸೂರ್ಯವರ್ಚ -- ಗಂಧರ್ವನೊಬ್ಬ (ಮ.ಆ).

ಸೂರ್ಯವರ್ಮ--ತ್ರಿಗರ್ತದೇಶದ ರಾಜ ಅರ್ಜುನನು ಅಶ್ವಮೇಧದ ಕುದುರೆಯೊಡನೆ ಮೊದಲು ಸಂಧಿಸಿದ ದೇಶ. ಇಲ್ಲಿಯ ರಾಜನಾದ ಸೂರ್ಯವರ್ಮ ತಮ್ಮನಾದ ಕೇತುವರ್ಮನೊಡನೆ ಕೂಡಿ ಅರ್ಜುನನೊಡನೆ ಯುದ್ಧಮಾಡಿ ನೆಲಕ್ಕುರಳಿದನು. ಮುಂದೆ ಈತನ ಇನ್ನೊಬ್ಬ ತಮ್ಮನಾದ ಧೃತವರ್ಮನು ಅರ್ಜುನೊಡನೆ ಹೋರಾಡತೊಡಗಿದನು. ಇವನ ಹಸ್ತಲಾಘವಕ್ಕೆ ಅರ್ಜುನನೂ ಬೆರಗಾದನು (ಮ.ಅಶ್ವ.).

ಸೂರ್ಯೆ -- ಸೂರ್ಯನ ಮಗಳು. ಇವಳನ್ನು ಸೂರ್ಯನು ಸೋಮನಿಗೆ ಕೊಡಲು ನಿಶ್ಚಯಿಸಿದನು. ಆಗ ಎಲ್ಲ ದೇವತೆಗಳು ಆಕೆಯನ್ನು ಬಯಸಲು ಅವರೇ ತಮ್ಮಲ್ಲಿ 'ಸೂರ್ಯನನ್ನು ಯಾರು ಬೇಗ ತಲುಪುತ್ತಾರೋ ಅವರೇ ಆ ಕನ್ಯೆಯನ್ನು ವಿವಾಹವಾಗಬೇಕು' ಎಂದು ನಿರ್ಧರಿಸಿದರು. ಆಗ ಅಶ್ವಿನೀದೇವತೆಗಳು ಈ ಸ್ಪರ್ಧೆಯಲ್ಲಿ ಗೆದ್ದುದರಿಂದ ಸೂರ್ಯೆಯು ಅವರ ರಥದಲ್ಲಿ ಕುಳಿತಳು (ಋ).

ಸೃಗಾಲ--ಕರವೀರಪುರಾಧಿಪ. ಸೃಗಾಲ ವಾಸುದೇವ. ನೋ--ವಾಸುದೇವ. ಸ್ತ್ರೀರಾಜ್ಯಕ್ಕೆ ಅಧಿಪತಿಯಾದ ಮಹಾರಾಜ (ಮ.ಶಾ.,ಅನು.,ಹರಿ.).

ಸೃಂಜಯ -- ಶೈಬ್ಯರಾಜನ ಮಗ. ಈತನ ಪತ್ನಿ ಕೈಕಯೀ; ಮಗ ಸುವರ್ಣಷ್ಠೀವಿ. ಈತನ ಮಗಳು ಸುಕುಮಾರಿಯನ್ನು (ದಮಯಂತಿ) ನಾರದನು ವಿವಾಹವಾದನು. ನೋ.--ದಮಯಂತಿ, ನಾರದ, ಸುಕುಮಾರಿ. ಸುವರ್ಣಷ್ಠೀವಿ (ಮ.ಸ.,ಶಾ.,ದೈವೀಭಾ.).

ಸೇಕ--ಚರ್ಮಣ್ವತಿ ಮತ್ತು ಪಾಟಲಾವತಿ ನದಿಗಳ ದೇಶ. ಈ ದೇಶವು ಚರ್ಮಣ್ವತಿನದಿಯ ದಕ್ಷಿಣದಲ್ಲೂ ಅವಂತಿಯ (ಮಾಳವ) ಉತ್ತರದಲ್ಲೂ ಇದೆ. ರಾಜಸೂಯ ಯಾಗಕಾಲದಲ್ಲಿ ಸಹದೇವನು ಇಲ್ಲಿಗೆ ಬಂದಿದ್ದನು (ಮ.ಸ.).

ಸೇತು (ಸೇತುಬಂಧನ) -- ಶ್ರೀರಾಮನು ಲಂಕೆಗೆ ಕಪಿಸೇನೆಯನ್ನೊಯ್ಯಲು ಮಾಡಿದ ಸಮುದ್ರದ ಮೇಲಿನ ಸೇತುವೆ. ಶ್ರೀರಾಮನು ರಾವಣನನ್ನು ಸಂಹರಿಸಿ ಲಂಕೆಯಿಂದ ಸೀತಾಲಕ್ಷ್ಮಣರೊಡನೆ ಹಿಂದೆ ಬರುವಾಗ ವಿಭೀಷಣನು ರಾಮನೊಡನೆ 'ದೇವಾ, ನೀವು ಸೇತುವೆಯನ್ನು ಕಟ್ಟಿರುವುದರಿಂದ ಭಾರತದ ರಾಜರು ನಮ್ಮ ಮೇಲೆ ಮೇಲಿಂದ ಮೇಲೆ ದಾಳಿಮಾಡುವರು. ಆದಕಾರಣ ಈ ಸೇತುವೆಯನ್ನು ನಾಶಮಾಡಿ' ಎನ್ನಲು ಶ್ರೀರಾಮನು ಧನುಸ್ಸಿನ ಕೋಟಿಯಿಂದ ಸೇತುವೆಯನ್ನು ಭಂಗಮಾಡಿ ಸಮುದ್ರದಲ್ಲಿ ಮುಳುಗಿಸಿದನು. ಈ ಸ್ಥಾನಕ್ಕೆ

ಈಗಲೂ ಧನುಷ್ಕೋಟಿ ಎಂದು ಎನ್ನುತ್ತಾರೆ. ಇಲ್ಲಿ ಸ್ನಾನಮಾಡುವುದರಿಂದ ಮನುಷ್ಯನು ಸಕಲ ಪಾಪಗಳಿಂದ ಮುಕ್ತನಾಗುತ್ತಾನೆ. ಧನುಷ್ಕೋಟಿಯು ರಾಮನಾಡಿನಿಂದ ೪೨ ಮೈಲು ದೂರದಲ್ಲಿದೆ (ಕ್ಷೇತ್ರದ.).

ಸೇತುಬಂಧನ ಕಾಲದಲ್ಲಿ ಶ್ರೀರಾಮನು ಗಣಪತಿ, ನವಗ್ರಹಗಳೇ ಮೊದಲಾದ ದೇವತೆಗಳನ್ನು ಪೂಜಿಸಿ, ಕಾಶಿಯಿಂದ ಉತ್ತಮವಾದ ಶಿವಲಿಂಗವೊಂದನ್ನು ತರುವಂತೆ ಹನುಮಂತನಿಗೆ ಆಜ್ಞಾಪಿಸಿದನು. ಹನುಮನು ಆಕಾಶಮಾರ್ಗವಾಗಿ ಕಾಶಿಗೆ ಬಂದು ಶ್ರೀರಾಮನ ಅಪ್ಪಣೆಯನ್ನು ಪರಮೇಶ್ವರನಿಗೆ ಸೂಚಿಸಲು ಅವನು ಒಂದು ಶಿವಲಿಂಗವನ್ನು ಶ್ರೀರಾಮನಿಗೂ, ಮತ್ತೊಂದನ್ನು ಹನುಮನಿಗೂ ಕೊಟ್ಟು ಅಗಸ್ತ್ಯನಿಗೆ ಮಾತು ಕೊಟ್ಟಂತೆ, ದಕ್ಷಿಣಕ್ಕೆ ಬರುವೆನೆಂದು ಹೇಳಿದನು. ಹೇಳಿದಂತೆ ಬರುವೆನು ಎಂದು ಹನುಮನನ್ನು ಕಳುಹಿಸಲು ಅವನು ಎರಡು ಶಿವಲಿಂಗಗಳನ್ನು ಶ್ರೀರಾಮನಿಗೆ ತಂದುಕೊಡಲು ವೇಗವಾಗಿ ಬರುತ್ತಿದ್ದನು. ಆಗ ಶ್ರೀರಾಮನು ಮಾರುತಿಯ ಗರ್ಭಭಂಗಕ್ಕಾಗಿ, ಅವನು ಮುಹೂರ್ತಕ್ಕೆ ಸರಿಯಾಗಿ ಬರಲಿಲ್ಲವೆಂದು ಸುಗ್ರೀವನಿಗೆ ತಿಳಿಸಿ ಮಳಲಿನ ಲಿಂಗವೊಂದನ್ನು ಅಲ್ಲಿ ಸ್ಥಾಪಿಸಿ ಪೂಜಿಸಿದನು. ಆ ಲಿಂಗಕ್ಕೆ ತನ್ನ ಕೌಸ್ತುಭ ರತ್ನದಿಂದ ಅಲಂಕರಿಸಿದನು. ಅಷ್ಟರಲ್ಲಿ ಬಂದು ಮಾರುತಿಯು ಶ್ರೀರಾಮನ ಕಾರ್ಯದಿಂದ ಬೇಸರಗೊಂಡು, ಎರಡೂ ಲಿಂಗಗಳನ್ನು ಒಪ್ಪಿಸಿದನು. ಶ್ರೀರಾಮನು ಹನುಮನ ಬೇಸರವನ್ನು ತಿಳಿದು, ತಾನು ಸ್ಥಾಪಿಸಿದ ಮಳಲಿನ ಲಿಂಗವನ್ನು ಕಿತ್ತು ಆ ಸ್ಥಾನದಲ್ಲಿ ಮಾರುತಿಯು ತಂದ ಲಿಂಗವನ್ನು ಸ್ಥಾಪಿಸುವಂತೆ ಹೇಳಿದನು. ಮಾರುತಿಯು ಗರ್ವದಿಂದ ಆ ಲಿಂಗಕ್ಕೆ ತನ್ನ ಬಾಲವನ್ನು ಸುತ್ತಿ ಎಳೆಯಲು ಲಿಂಗವು ಅಲ್ಲಾಡದೆ ಹನುಮನ ಬಾಲವು ತುಂಡಾಗಿ ಎಚ್ಚರತಪ್ಪಿಬಿದ್ದನು. ಆಗ ಶ್ರೀರಾಮನು ಅವನನ್ನು ಎಚ್ಚರಗೊಳಿಸಿ ಹನುಮನು ತಂದ ಶಿವಲಿಂಗಕ್ಕೆ ವಿಶ್ವನಾಥನೆಂದು ಹೆಸರಿಟ್ಟು, ಅಲ್ಲೇ ಸ್ಥಾಪಿಸಿ, ತನಗೆ ಶಿವನು ಕೊಟ್ಟ ಲಿಂಗವನ್ನು ಆ ಮಳಲಿನ ಲಿಂಗದ ಹತ್ತಿರ ಇಟ್ಟನು. ಈಗಲೂ ಈ ಲಿಂಗವೂ ಮಳಲಿನ ಲಿಂಗದ ಬಳಿಯಲ್ಲಿ ರಾಮೇಶ್ವರದಲ್ಲಿದೆ (ಅಸಂ.ರಾ).

ರಾಮನಾಥದಿಂದ ದರ್ಭಶಯನಕ್ಕೆ ಆರು ಮೈಲುಗಳಿವೆ. ಇಲ್ಲಿಂದ ಮೂರು ಮೈಲುದೂರದಲ್ಲಿ ಸಮುದ್ರವಿದೆ. ಹನುಮಂತನು ಲಂಕೆಯನ್ನು ಸುಟ್ಟು ಮೊದಲು ಇಲ್ಲಿ ಬಂದಿಳಿದನು. ಇಲ್ಲಿ ಆಂಜನೇಯ ಗುಡಿ ಇದೆ. ದರ್ಭಶಯನ ಮಂದಿರದಲ್ಲಿ ದ್ವಿಭುಜಸುಂದರ ವಿಶಾಲವಿಗ್ರಹನಾದ ರಾಮನು ದರ್ಭೆಯ ಶಯ್ಯೆಯ ಮೇಲೆ ಮಲಗಿದ್ದಾನೆ. ಸಮುದ್ರನು ಅವನಿಗಿನ್ನೂ ಲಂಕೆಗೆ ಹೋಗುವ ಮಾರ್ಗವನ್ನು ತಿಳಿಸಿಲ್ಲ.

ಧನುಷ್ಕೋಟಿಯಲ್ಲಿ ಸಮುದ್ರವು ಬಹಳ ಆಳವಾಗಿದ್ದು ಸದಾ ಗರ್ಜಿಸುತ್ತಿರುತ್ತದೆ. ಇದರ ಒಂದು ಕಡೆ ಬಂಗಾಲ ಉಪಸಾಗರ, ಮತ್ತೊಂದು ಕಡೆ ಹಿಂದೂಸಾಗರವಿದೆ. ಇಲ್ಲಿ ಸ್ನಾನಮಾಡಿ ಜನರು ಪಿತೃಶ್ರಾದ್ಧ ಮಾಡುತ್ತಾರೆ (ರಾಮಾ.ಯುದ್ಧ.,ಅಧ್ಯಾ.ರಾಮದ್ಧ.,ಮ.ಸ.,ವ.).

ಸೇತುಮಾಧವ - ಚಂದ್ರವಂಶದ ಅರಸನಾದ ಪುಣ್ಯನಿಧಿಯು ವಿಷ್ಣುಭಕ್ತನಾಗಿದ್ದ. ಒಮ್ಮೆ ವಿಷ್ಣುವು ಇವನನ್ನು ಲಕ್ಷ್ಮಿಯ ಮುಂದೆ ಹೊಗಳಲು, ಆಕೆಯು ಇವನನ್ನು ಪರೀಕ್ಷಿಸಲು, ಎಂಟು ವರ್ಷದ ಕನ್ಯೆಯಾಗಿ ಧನುಷ್ಕೋಟಿತೀರ್ಥಕ್ಕೆ ಮೀಯಲು ಬಂದಳು. ಆಗ ಪುಣ್ಯನಿಧಿಯು ಅಲ್ಲಿಗೆ ಸ್ನಾನಕ್ಕೆ ಬಂದಿದ್ದು ಈಕೆಯನ್ನು ವಿಚಾರಿಸಲು 'ನಾನು ಅನಾಥೆ. ನನಗೆ ಆಶ್ರಯ ಕೊಡಬೇಕು' ಎಂದು ಬೇಡಿದಳು. ರಾಜನು ಅವಳನ್ನು ತನ್ನ ಅರಮನೆಗೆ ಕರೆತಂದು, ತನ್ನ ಪತ್ನಿಯಾದ ವಿಂಧ್ಯಾವಳಿಗೆ ಒಪ್ಪಿಸಿದನು. ಒಂದು ದಿನ ಲಕ್ಷ್ಮಿಯು ಉದ್ಯಾನದಲ್ಲಿ ಹೂ ಕೊಯ್ಯುತ್ತಿರುವಾಗ ವಿಷ್ಣುವು ಶೈವ ಬ್ರಾಹ್ಮಣ ರೂಪದಿಂದ ಬಂದು ಆಕೆಯ ಕೈ ಹಿಡಿದನು. ಆಗ ಲಕ್ಷ್ಮಿಯು ಕೂಗಿದಳು. ರಾಜನು ಓಡಿಬಂದು ಆ ಬ್ರಾಹ್ಮಣನನ್ನು ಬಂಧಿಸಿದನು. ಆ ರಾತ್ರಿ ರಾಜನಿಗೆ ಸ್ವಪ್ನದಲ್ಲಿ ಆ ಬಾಲೆ ಲಕ್ಷ್ಮಿ ಎಂದೂ, ಬ್ರಾಹ್ಮಣನು ಹರಿ ಎಂದೂ ತಿಳಿದು, ಬೆಳಗ್ಗೆ ಆ ಬ್ರಾಹ್ಮಣನನ್ನು ಬಂಧನದಿಂದ ವಿಮೋಚನೆಗೊಳಿಸಿದುದಲ್ಲದೆ ಆ ಕ್ಷೇತ್ರದಲ್ಲಿ ಸ್ಥಿರವಾಗಿ ನಿಲ್ಲಬೇಕೆಂದು ಹರಿಯನ್ನು ಪ್ರಾರ್ಥಿಸಲು ಅವನು ಸೇತುಮಾಧವನೆಂಬ ಹೆಸರಿನಿಂದ ಅಲ್ಲಿ ನಿಂತನು.

ಸೇದುಕ -- ವೃಷದರ್ಭರಾಜನ ಸಹೋದರ (ಮ.ವ).

ಸೇನಜಿತ್ -- ಚಂದ್ರವಂಶದ ವಿಶದನೆಂಬ ರಾಜನ ಮಗ. ಈತನಿಗೆ ರುಚಿರಾಶ್ವ, ದೃಢಹನು, ಕಾಶ್ಯ ಮತ್ತು ವತ್ಸರೆಂಬ ನಾಲ್ವರು ಮಕ್ಕಳಿದ್ದರು. ಈತನು ತನ್ನ ಮಕ್ಕಳಿಗೆ ರಾಜನೀತಿಯನ್ನು ತಿಳಿಸಿದನು. ಲೋಕದಲ್ಲಿ ದುಃಖದ ಹಿಂದೆ ಸುಖವೂ, ಸುಖದ ಹಿಂದೆ ದುಃಖವೂ ಸುತ್ತಿ ಸುತ್ತಿ ಬರುತ್ತಿರುವುದು (ಮ.ಶಾಂ.).

ಸೇನಾನಿ -- ೧. ಧೃತರಾಷ್ಟ್ರನ ಒಬ್ಬ ಮಗ. ಇವನು ಭೀಮನಿಂದ ಹತನಾದನು (ಮ.ಆ.). ೨. ಷಣ್ಮುಖ ನೋ.--ಕುಮಾರ.

ಸೇನಾಪತಿ -- ೧. ಧೃತರಾಷ್ಟ್ರನ ಒಬ್ಬ ಮಗ. ಇವನು ಭೀಮನಿಂದ ಹತನಾದನು. (ಮ.ಆ.,ಭೀ.). **೨.** ಕೌರವಸೇನೆಯ ಸೇನಾಪತಿಗಳು; ೧. ಮಹಾರಥನಾದ ಕೃಪ, ೨. ದ್ರೋಣ, ೩. ಶಲ್ಯ, ೪. ಸೈಂಧವ, ೫. ಸುದಕ್ಷಿಣ, ೬. ಕೃತವರ್ಮ, ೭.ಅಶ್ವತ್ಥಾಮ, ೮. ಕರ್ಣ, ೯. ಶಕುನಿ, ೧೦. ಬಾಹ್ಲಿಕ, ೧೧. ಭೂರಿಶ್ರವಸ್ಸು (ಮ.ಭೀ.). ೩. ಪಾಂಡವಸೇನೆಯ ಸೇನಾಪತಿಗಳು; ೧. ವಿರಾಟ, ೨. ದ್ರುಪದ,

೩. ಧೃಷ್ಟದ್ಯುಮ್ನ, ೪. ಧೃಷ್ಟಕೇತು, ೫. ಸಾತ್ಯಕಿ, ೬. ಶಿಖಂಡಿ, ೭.ಮಾಗಧಸಹದೇವ.

ಸೇನಾಬಿಂದು -- ಪಾಂಡವಪಕ್ಷೀಯನಾದ ಪಾಂಚಾಲ ರಾಜನೊಬ್ಬ. ಇವನು ಭಾರತ ಯುದ್ಧದ ಹನ್ನೊಂದನೆಯ ದಿನದ ಯುದ್ಧದಲ್ಲಿ ಕರ್ಣನಿಂದ ಮಡಿದ (ಮ.ಆ.,ಸ.,ಕ.).

ಸೇಯನ -- ವಿಶ್ವಾಮಿತ್ರಋಷಿಯ ಮಗನೊಬ್ಬ (ಮ.ಅನು).

ಸೈಂಧವ - ಸಿಂಧೂದೇಶದ ರಾಜ, ಇವನಿಗೆ ಜಯದ್ರಥನೆಂಬ ಹೆಸರಿದೆ. ನೋ. ಜಯದ್ರಥ (ಮ.ಆ.)

ಸೈಂಧವಾಯನ - ವಿಶ್ವಾಮಿತ್ರ ಋಷಿಯ ಮಗನೊಬ್ಬ (ಮ. ಅನು)

ಸೈರಂಧ್ರಿ--(ಸೈರಂ= ಸ್ವಾತಂತ್ರ್ಯವನ್ನು, ಧ್ರೀ = ಹೊಂದಿರುವವಳು = ಇನ್ನೊಬ್ಬರ ಮನೆಯಲ್ಲಿ ಸ್ವಾತಂತ್ರ್ಯದಿಂದಿರುವ ದಾಸಿ) ಇತರರ ಮನೆಯಲ್ಲಿ ವೇತನಕ್ಕಾಗಿ ಕೆಲಸ ಮಾಡುವವಳು (ಮ.ವಿ.). ೧. ಅಜ್ಞಾತವಾಸಕಾಲದಲ್ಲಿ ದ್ರೌಪದಿಯು ವಿರಾಟನ ಪತ್ನಿಯ ಬಳಿಯಲ್ಲಿ ಸೈರಂಧ್ರಿ ಕೆಲಸ ಮಾಡುತ್ತ ಮಾಲಿನಿ ಎಂಬ ಹೆಸರನ್ನಿಟ್ಟುಕೊಂಡಿದ್ದಳು (ಮ.ವಿ). ೨. ದಮಯಂತಿಯು ಚೇದಿದೇಶದ ರಾಣಿಯ ಬಳಿಯಲ್ಲಿ ಸೈರಂಧ್ರಿಯಾಗಿದ್ದಳು (ಮ.ವ).

ಸೊಂಡೂರು -- ಬಳ್ಳಾರಿಯಿಂದ ಸೊಂಡೂರಿಗೆ ೪೦ ಮೈಲು ದೂರ. ಇಲ್ಲಿ ಕಾರ್ತಿಕ ಸ್ವಾಮಿಯ ದೇವಾಲಯವಿದೆ. ಇಲ್ಲಿ ಸ್ತ್ರೀಯರು ಕಾರ್ತಿಕಸ್ವಾಮಿಯ ದರ್ಶನ ತೆಗೆದುಕೊಳ್ಳುವುದಿಲ್ಲ. ಇಲ್ಲಿ ಕುಮಾರಸ್ವಾಮಿಯ ಶುಭ್ರ ಭಸ್ಮ ಪ್ರಸಿದ್ಧವಾದುದು (ಕ್ಷೇತ್ರದ.).

ಸೋಮ -- ೧. ಚಂದ್ರ. ನವಗ್ರಹಗಳಲ್ಲೊಬ್ಬ. ಅತ್ರಿಮುನಿಯು ತಪಸ್ಸು ಮಾಡುತ್ತಿದ್ದಾಗ ಆತನ ಕಣ್ಣಿನಿಂದ ಹೊರಟ ತೇಜಸ್ಸನ್ನು ಹತ್ತು ದಿಕ್ಕುಗಳು, ಕ್ಷೀರಸಮುದ್ರದಲ್ಲಿ ಬಿಟ್ಟವು. ಬ್ರಹ್ಮನು; ಅದರಿಂದ ಚಂದ್ರನನ್ನು ನಿರ್ಮಿಸಿದನು (ಮ.ಆ.,ಬ್ರ.,ಪು.,). ೨. ಅಷ್ಟವಸುಗಳಲ್ಲೊಬ್ಬ. ಈತನ ತಾಯಿ ಮನಸ್ವಿನಿ; ಮಗ ವರ್ಚಸ್ ಎಂಬವ (ಮ.ಆ.,ಶ.,ಮತ್ಸ್ಯಪು.,ಲಿಂಗಪು). ೩.ಕುಬೇರನಿಗೂ ಈ ಹೆಸರಿದೆ. ಸೌಮ್ಯ ಎಂಬ ಉತ್ತರ ದಿಕ್ಕಿನ ಒಡೆಯನಾದುದರಿಂದ ಕುಬೇರನಿಗೆ ಸೋಮನೆಂಬ ಹೆಸರು ಬಂತು (ದೇವೀಭಾ.,ವ.). ೪. ಯಜ್ಞಕಾರ್ಯಕ್ಕೆ ಬೇಕಾದ ಒಂದು ಬಳ್ಳಿ. ೫. ಈಶ್ವರನ ಒಂದು ಹೆಸರು; ಉಮೆಯಿಂದ ಸಹಿತನಾದವನು (ಸ+ ಉಮಾ.).

ಸೋಮಕ -- ಚಂದ್ರವಂಶದ ಪಾಂಚಾಲರಾಜನಾದ ಸಹದೇವನ ಮಗ. ಈತನಿಗೆ ನೂರು ಮಂದಿ ಹೆಂಡಿರು. ಇವರಲ್ಲಿ ಹಿರಿಯ ರಾಣಿಗೆ ಜಂತು ಎಂಬ ಮಗನಿದ್ದನು. ಈತನಿಗೆ ಒಮ್ಮೆ ಇರುವೆ ಕಚ್ಚಲು ಆ ನೋವಿನಿಂದ ಇವನು ಬಹಳ

ಗೋಳಾಡಿದನು. ಆಗ ರಾಜನು ಋತ್ವಿಜರ ಸೂಚನೆಯಂತೆ ಆ ಬಾಲಕನನ್ನು ಪಶುವಾಗಿ ಮಾಡಿ ಒಂದು ಯಜ್ಞ ಮಾಡಿದನು. ಇದರಿಂದ ಅವನಿಗೆ ನೂರು ಮಂದಿ ಮಕ್ಕಳು ಹುಟ್ಟಿದರು. ಇವನು ದಿವೋದಾಸನ ಮೊಮ್ಮಗ; ಈತನ ಮಗ ಪೃಷತ (ಮ.ವ.,ಸ.ವಿ.,ಭಾಗ.,ಹರಿ.).

ಸೋಮಕೀರ್ತಿ -- ಧೃತರಾಷ್ಟ್ರನ ಒಬ್ಬ ಮಗ (ಮ.ಆ.).

ಸೋಮತೀರ್ಥ -- ಪ್ರಭಾಸತೀರ್ಥದ ಇನ್ನೊಂದು ಹೆಸರು. ಇದಕ್ಕೆ ಸೋಮಕುಂಡ ಎಂದೂ ಹೇಳುತ್ತಾರೆ. ಅತ್ರಿಪುತ್ರನಾದ ಚಂದ್ರನು ಗ್ರಹ, ನಕ್ಷತ್ರ, ಓಷಧಿ, ತರುಲತೆ, ಬ್ರಾಹ್ಮಣರಿಗೆ ಅಧಿಪತಿಯಾಗಬೇಕೆಂದು ಸುಮಾರು ಒಂದೂವರೆ ಲಕ್ಷ ವರ್ಷ ತಪಸ್ಸು ಮಾಡಿ ಚಂದ್ರಪದವಿಯಲ್ಲಿ ಅಭಿಷೇಕ ಹೊಂದಿದನು. ಚಂದ್ರನು ತಪಸ್ಸುಮಾಡಿದ ತೀರ್ಥಕ್ಕೆ ಸೋಮತೀರ್ಥವೆನ್ನುತ್ತಾರೆ (ಸ್ಕಾಂ.ಪು.).

ಸೋಮನು, ಸ್ವತಃ ರಾಜಸೂಯ ಯಾಗವನ್ನು ಮಾಡಿದ ಸ್ಥಳ. ಈ ಯಾಗದಲ್ಲಿ ಬ್ರಹ್ಮಪುತ್ರನಾದ ಅತ್ರಿಯೇ ಹೋತೃಸ್ಥಾನದಲ್ಲಿದ್ದನು. ಯಾಗ ಮುಗಿದಾಗ ದೈತ್ಯ, ದಾನವ, ರಾಕ್ಷಸರಿಗೆ ದೇವತೆಗಳೊಡನೆ ಪ್ರಬಲವಾದ ಯುದ್ಧ ನಡೆಯಿತು. ಇಲ್ಲಿಯೇ ತಾರಕಾಸುರನನ್ನು ಕೊಲ್ಲುವುದಕ್ಕಾಗಿ ಷಣ್ಮುಖನು ಮಹಾಸೇನನೆಂಬ ಬಿರುದನ್ನು ಪಡೆದು. ದೇವಸೇನಾಧಿಪತ್ಯದಲ್ಲಿ ಅಭಿಷೇಕಿಸಲ್ಪಟ್ಟು, ತಾರಕಾಸುರನನ್ನು ಅವನ ಪರಿವಾರದೊಡನೆ ಕೊಂದನು (ಮ.ಸ.,ವ.).

ಸೋಮದತ್ತ--ಚಂದ್ರವಂಶದ ಬಾಹ್ಲೀಕರಾಜನ ಮಗ. ಈತನಿಗೆ ಭೂರಿ, ಭೂರಿಶ್ರವ, ಶಲರೆಂಬ ಮೂವರು ಮಕ್ಕಳಿದ್ದರು. ಇವನು ಕೌರವಪಕ್ಷದವನಾಗಿ ಹೋರಾಡಿ ಸಾತ್ಯಕಿಯಿಂದ ಮೃತನಾದನು (ಮ.ಆ.,ದ್ರೋ.,ಭಾಗ.).

ಸೋಮಪದ -- ಒಂದು ಪುಣ್ಯಕ್ಷೇತ್ರ (ಮ.ವ.).

ಸೋಮಭೋಜನ -- ಗರುಡನ ಒಬ್ಬ ಮಗ (ಮ.ಉ.).

ಸೋಮವಂಶ -- ಚಂದ್ರವಂಶ

ಸೋಮಶ್ರವ -- ಅಭಿಮನ್ಯುವಿನ ಮೊಮ್ಮಗನಾದ ಜನಮೇಜಯನ ಪುರೋಹಿತ. ಈತನ ತಂದೆ ಶ್ರುತಶ್ರವಸ; ತಾಯಿ ಸರ್ಪಿಣಿ. ಶ್ರುತಶ್ರವಸನ ರೇತಸ್ಸನ್ನು ಒಂದು ಹೆಣ್ಣು ಹಾವು ಕುಡಿದು ಗರ್ಭನಿಂತು ಈತನನ್ನು ಹೆತ್ತಿತು (ಮ.ಆ.).

ಸೋಮಾ -- ಅಪ್ಸರೆಯೊಬ್ಬಳು (ಮ.ಆ.).

ಸೌಗಂಧಿಕ--ಬಹಳ ಪರಿಮಳವುಳ್ಳ ಕಮಲಪುಷ್ಪ. ಪಾಂಡವರು ಬದರಿಕಾಶ್ರಮದಲ್ಲಿರುವಾಗ ಒಂದು ದಿನ ಗಾಳಿಯು ತಂದುಹಾಕಿದ ದಿವ್ಯವಾದ ಕಮಲಪುಷ್ಪವನ್ನು ಕಂಡು ದ್ರೌಪದಿಯು ಭೀಮನೊಡನೆ -- 'ನನಗೆ [illegible] ಅಂತಹ ಹೂಗಳನ್ನು ತಂದುಕೊಡಬೇಕು' ಎನ್ನಲು ಭೀಮನು ಅವುಗಳನ್ನು

ಹುಡುಕುತ್ತ, .. ಗಂಧಮಾದನ ಪರ್ವತದಲ್ಲಿ ಮುಂದರಿಯುತ್ತಿರುವಾಗ ಹನುಮಂತನನ್ನು ಕಂಡು, ಅವನಿಂದ ವರ ಪಡೆದು ಕುಬೇರನ ಉದ್ಯಾನದ ಕೊಳದಲ್ಲಿದ್ದ ಸೌಗಂಧಿಕಪುಷ್ಪಗಳನ್ನು ಆತನ ಒಪ್ಪಿಗೆಯಿಂದ ದ್ರೌಪದಿಗೆ ತಂದುಕೊಟ್ಟನು. ಈ ಸೌಗಂಧಿಕಪುಷ್ಪಗಳಿದ್ದ ಕುಬೇರನ ಒಂದು ಉದ್ಯಾನಕ್ಕೆ ಸೌಗಂಧಿಕವನವೆಂದು ಹೆಸರು (ಮ.ವ).

ಸೌಚಿತ್ತಿ -- ಸುಚಿತ್ತಿರಾಜನ ಮಗ. ಈತನಿಗೆ ಸತ್ಯಧೃತಿ ಎಂಬ ಇನ್ನೊಂದು ಹೆಸರಿದೆ. ಇವನು ಮಹಾರಥನು. ಇವನು ದ್ರೌಪದಿಯ ಸ್ವಯಂವರಕ್ಕಾಗಿ ಪಾಂಚಾಲ ನಗರಕ್ಕೆ ಬಂದಿದ್ದನು. ಇವನು ಭಾರತಯುದ್ಧದಲ್ಲಿ ಪಾಂಡವಪಕ್ಷದಿಂದ ಹೋರಾಡಿ, ಕರ್ಣನ ಸೇನಾಧಿಪತ್ಯದ ಕಾಲದಲ್ಲಿ ಸ್ವರ್ಗಸ್ಥನಾದನು (ಮ.ಆ.,ಉ.,ಕ.).

ಸೌತಿ --ರೋಮಹರ್ಷಣ ಮಹರ್ಷಿಯ ಮಗ. ಇವನು ತಂದೆಯಂತೆ ಪುರಾಣಪುಣ್ಯ ಕಥೆಗಳನ್ನು ಹೇಳುವುದರಲ್ಲಿ ಸಮರ್ಥ. ಉಗ್ರಶ್ರವನೆಂಬುದು ಇವನ ಹೆಸರು. ನೈಮಿಷಾರಣ್ಯವಾಸಿಗಳಾದ ಮುನಿಗಳಿಗೆ ಈತನು ಭಾರತ ಮೊದಲಾದ ಅನೇಕ ಪುಣ್ಯಕಥೆಗಳನ್ನು ಹೇಳಿದನು. ನೋ. -- ಸೂತ, ಬಲರಾಮ (ಮ.ಆ.,ಭಾಗ).

ಸೌತ್ರಾಮಣಿ -- ೧. ಒಂದು ಯಜ್ಞವಿಶೇಷ. ೨. ದ್ರುಪದನ ಪತ್ನಿ; ಈಕೆಗೆ ಕೌಸವಿ ಎಂಬ ಹೆಸರೂ ಇದೆ (ಮ.ಆ.).

ಸೌದಾಸ--ನೋ.--ಕಲ್ಮಾಷಪಾದ. ಇವನು ಬ್ರಹ್ಮಹತ್ಯೆಯ ನಿವಾರಣೆಗಾಗಿ ಕ್ಷೇತ್ರಯಾತ್ರೆಯನ್ನು ಮಾಡುತ್ತ ಗೋಕರ್ಣಕ್ಕೆ ಬಂದು ಅಲ್ಲಿ ಮಹಾಬಲೇಶ್ವರನನ್ನು ಪೂಜಿಸಿ, ಬ್ರಹ್ಮಹತ್ಯೆಯಿಂದ ಮುಕ್ತನಾದನು. ನೋ.--ಮಿತ್ರಸಹ.

ಸೂರ್ಯವಂಶದ ಋತುಪರ್ಣನ ಮಗನಾದ ಸುದಾಸನ ಪುತ್ರ. ಈತನಿಗೆ ಕಲ್ಮಾಷಪಾದನೆಂಬ ಹೆಸರಿದೆ. ಈತನ ಪತ್ನಿ ಮದಯಂತಿ. ಒಮ್ಮೆ ಸೌದಾಸನು ಬೇಟೆಗೆ ಹೋದಾಗ ಇಬ್ಬರು ರಾಕ್ಷಸರನ್ನು ಕಂಡನು. ಅವರಲ್ಲಿ ಒಬ್ಬನನ್ನು ಕೊಲ್ಲಲು ಮತ್ತೊಬ್ಬನು ಓಡಿಹೋದನು. ಇವನು ಸೌದಾಸನು ಯಜ್ಞದೀಕ್ಷಿತನಾಗಿರುವಾಗ ವಸಿಷ್ಠನ ವೇಷದಿಂದ ಅಲ್ಲಿಗೆ ಬಂದು ಅಲ್ಲಿನ ಮಾಂಸವನ್ನು ತಿಂದು, ನರಮಾಂಸವನ್ನಿಟ್ಟು ಹೊರಟುಹೋದನು. ಸೌದಾಸನು ವಸಿಷ್ಠನಿಗೆ ನರಮಾಂಸವನ್ನು ಬಡಿಸಲು, ಅವನು ಕೋಪಗೊಂಡು -- 'ನೀನು ಹನ್ನೆರಡು ವರ್ಷಗಳವರೆಗೆ ನರಮಾಂಸ ಭಕ್ಷಕನಾದ ರಾಕ್ಷಸನಾಗು' ಎಂದು ಶಾಪವಿತ್ತನು. ಈತನು ನಿರಪರಾಧಿಯಾದ ತನಗೆ ಶಾಪ ಬಂದುದಕ್ಕಾಗಿ ಕೋಪಿಸಿ ವಸಿಷ್ಠನಿಗೆ ಪ್ರತಿಶಾಪ ಕೊಡಲು ಸಿದ್ಧನಾದಾಗ, ಆತನ ಪತ್ನಿ ಮದಯಂತಿಯು ಪತಿಯೊಡನೆ --'ಹಾಗೆ ಮಾಡಬಾರದು' ಎಂದು ಪ್ರಾರ್ಥಿಸಲು ಆ ಶಾಪೋದಕವನ್ನು ತನ್ನ ಪಾದಗಳ ಮೇಲೆಯೇ ಬಿಟ್ಟುಕೊಂಡನು. ಇದರಿಂದ

ಪಾದವು ಕಪ್ಪಾಗಿ ಕಲ್ಮಾಷಪಾದನಾದನು (ಮ.ಆ.,ಹರಿ.,ರಾಮಾ. ಉತ್ತರ.,ವಿಷ್ಣುಪುಭಾಗ.).

ವಿಶ್ವಾಮಿತ್ರನು ರಾಕ್ಷಸ ರೂಪದ ಈ ರಾಜನ ದೇಹದಲ್ಲಿ ಕಿಂಕರನೆಂಬ ಇನ್ನೊಬ್ಬ ರಾಕ್ಷಸನು ಪ್ರವೇಶಿಸುವಂತೆ ಮಾಡಿ ಈತನಿಂದ ವಸಿಷ್ಠನ ನೂರುಮಂದಿ ಮಕ್ಕಳನ್ನು ಕೊಲ್ಲಿಸಿದನು.

ಗೌತಮಮುನಿಯ ಶಿಷ್ಯನಾದ ಉದಂಕನು ಗುರುದಕ್ಷಿಣೆಗಾಗಿ ಮದಯಂತಿಯ (ವಿಧೃತೆ) ಕುಂಡಲಗಳನ್ನು ಅಹಲ್ಯೆಗೆ ತಂದುಕೊಟ್ಟನು.

ಇವನು ರಾಕ್ಷಸನಾಗಿರುವಾಗ ಹೊಸ ದಂಪತಿಗಳಲ್ಲಿ ವರನನ್ನು ತಿನ್ನಲು ವಧುವು 'ನೀನು ಸ್ತ್ರೀಸಂಗಮಾಡಿದಾಗ ನಿನಗೆ ಮರಣ ಸಂಭವಿಸಲಿ' ಎಂಬ ಶಾಪವಿತ್ತಳು. ವಸಿಷ್ಠನ ಶಾಪವಿಮೋಚನೆಯಾದ ಮೇಲೆ ಸೌದಾಸನು ಒಂದು ರಾತ್ರಿ ಪತ್ನಿಯ ಸಂಯೋಗಕ್ಕೆ ಹೋದಾಗ ಅವಳು ಬ್ರಹ್ಮಹತ್ಯೆಯ ಪಾಪನಿವಾರಣೆಯು ಮೊದಲಾಗಬೇಕೆಂದು ಗಂಡನೊಡನೆ ತೀರ್ಥಕ್ಷೇತ್ರಯಾತ್ರೆಮಾಡಿ, ಪರಿಶುದ್ಧರಾಗಿ, ವಸಿಷ್ಠನ ಅನುಗ್ರಹ ಪಡೆದು ಅಶ್ಮಕನೆಂಬ ಮಗನನ್ನು ಪಡೆದರು.

ಸೌಬಲ -- ಗಾಂಧಾರದ ಸುಬಲನ ಮಕ್ಕಳು. ಶಕುನಿ ಮತ್ತು ಈತನ ಸಹೋದರರು.

ಸೌಬಲೀ -- ಸುಬಲನ ಮಗಳು; ಗಾಂಧಾರಿ. ಈಕೆ ಧೃತರಾಷ್ಟ್ರನ ಪತ್ನಿ.

ಸೌಭ--ಸಾಲ್ವರಾಜನ ಆಕಾಶದಲ್ಲಿದ್ದ ವಿಮಾನಾಕಾರದ ಬೇಕಾದ ಸ್ಥಳಕ್ಕೆ ಚಲಿಸುವ ಪಟ್ಟಣ. ನೋ. --ಸಾಲ್ವ. ಇದರ ನಾಶ ಕೃಷ್ಣನಿಂದಾಯಿತು (ಮ.ಆ.).

ಸೌಭದ್ರ -- ಸುಭದ್ರೆಯ ಮಗ ಅಭಿಮನ್ಯು. ನೋ.--ಅಭಿಮನ್ಯು (ಮ.ಆ).

ಸೌಭದ್ರತೀರ್ಥ -- ನೋ.--ನಾರೀತೀರ್ಥ. ಸೌಭದ್ರ, ಪೌಲೋಮ, ಅಗಸ್ತ್ಯ, ಕಾರಂಧಮ, ಭಾರದ್ವಾಜವೆಂಬ ಐದು ತೀರ್ಥಕುಂಡಗಳು (ಮ.ಆ.).

ಸೌಭರಿ -- ಮಹರ್ಷಿಯೊಬ್ಬ. ಜಲದಲ್ಲಿ ತಪಸ್ಸು ಮಾಡುತ್ತಿದ್ದ ಸೌಭರಿಮುನಿಯು ಮೈಥುನಕಾರ್ಯದಲ್ಲಿ ತೊಡಗಿದ್ದ ಗಂಡು--ಹೆಣ್ಣು ಮೀನುಗಳನ್ನು ಕಂಡು, ತಾನು ಗೃಹಸ್ಥಾಶ್ರಮಿಯಾಗಬೇಕೆಂದು, ಮಾಂಧಾತರಾಜನಲ್ಲಿಗೆ ಬಂದು ಅವನ ಐವತ್ತು ಹೆಣ್ಣುಮಕ್ಕಳನ್ನು ಮದುವೆಯಾಗಿ ಸಾವಿರಾರು ಮಕ್ಕಳನ್ನು ಪಡೆದು, ಕೊನೆಗೆ ಪತ್ನಿಯರೊಂದಿಗೆ ವೈರಾಗ್ಯ ಪಡೆದು ಸದ್ಗತಿಹೊಂದಿದನು. ಸೌಭರಿ ಸಂತಾನವೆಂಬುದು ಇವನ ಸಂಸಾರಕ್ಕೆ ಸಂಬಂಧಪಟ್ಟ ವಿಷಯ.

ಮಾಂಧಾತಚಕ್ರವರ್ತಿಯು ತನ್ನ ಐವತ್ತು ಮಂದಿ ಹೆಣ್ಣುಮಕ್ಕಳನ್ನು ಸೌಭರಿ ಮುನಿಗೆ ಗೌರೀಕುಂಡ ಪ್ರದೇಶದಲ್ಲಿ ಕೊಟ್ಟು ವಿವಾಹಮಾಡಿದನು. ಒಮ್ಮೆ

ಸೌಭರಿ ಮುನಿಯು ಯಮುನಾ ನದೀತೀರದಲ್ಲಿ ತಪಸ್ಸುಮಾಡುತ್ತಿದ್ದಾಗ, ನದಿಯಲ್ಲಿದ್ದ ಮೀನುಗಳನ್ನು ಗರುಡನು ಕೊಂದು ತಿನ್ನುತ್ತಿರಲು, ಸೌಭರಿಯು ಅವುಗಳನ್ನು ಹಿಂಸಿಸಬಾರದೆಂದು ಗರುಡನನ್ನು ಆಕ್ಷೇಪಿಸಿದರೂ ಅವನು ಕೇಳದುದರಿಂದ -- 'ಈ ಜಲಾಶ್ರಯದ ಜಲಚರಗಳನ್ನು ಇನ್ನು ಮುಂದೆ ನೀನು ತಿಂದರೆ ತಕ್ಷಣ ಮೃತನಾಗು' ಎಂದು ಶಾಪವಿತ್ತನು. ಈ ಜಲಾಶ್ರಯದಲ್ಲೇ ಕಾಳಿಯನೆಂಬ ಸರ್ಪರಾಜನು ಆಶ್ರಯಪಡೆದಿದ್ದನು (ಭಾಗ.).

ಸೌಮದತ್ತಿ--ನೋ.--ಭೂರಿಶ್ರವ. ಇವನು ದ್ರೌಪದಿಯ ಸ್ವಯಂವರಾನಂತರ ಪಾಂಡವರ ಮೇಲೆ ದಂಡೆತ್ತಿಹೊರಟ ಕೌರವರನ್ನು ತಡೆದನು (ಮ.ಆ.).

ಸೌಮಿತ್ರಿ -- ಸುಮಿತ್ರೆಯ ಮಗ ಲಕ್ಷ್ಮಣ. ನೋ.ಲಕ್ಷ್ಮಣ

ಸೌಮಿನಿ -- ಕೇಕಯದೇಶದ ಬ್ರಾಹ್ಮಣನ ಮಗಳು. ಈಕೆ ತನ್ನ ಪತಿಯ ವಿಯೋಗಾ ನಂತರ ವ್ಯಭಿಚಾರಿಣಿಯಾದುದರಿಂದ, ಮಾಂಸಾಹಾರದ ಆಸೆಯಿಂದ ದನದ ಕರುವನ್ನು ಕೊಂದಳು. ಅವಳು ಮುಂದಿನ ಜನ್ಮದಲ್ಲಿ ಕುಷ್ಠರೋಗದ ಹೊಲತಿಯಾಗಿ ಹುಟ್ಟಿ, ಶಿವಪೂಜೆಯಿಂದ ಸದ್ಗತಿಹೊಂದಿದಳು (ಬ್ರ.ಖ.).

ಸೌಮ್ಯ -- ಭರತಚಕ್ರವರ್ತಿಯ ಮೊಮ್ಮಗ. ನೋ.--ಶತಶೃಂಗ

ಸೌರಭ -- ಅಗ್ನಿವಿಶೇಷ (ಮ.ವ.).

ಸೌರಭೇಯ -- ದೀರ್ಘತಮನೆಂಬ ಮುನಿಯ ಗುರು (ಮ.ಸ.)

ಸೌರಭೇಯೀ -- ಒಬ್ಬಳು ಅಪ್ಸರೆ. ನೋ.--ನಾರೀತೀರ್ಥ (ಮ.ಆ.,ಸ.).

ಸೌವೀರ -- ಸಿಂಧು ಮತ್ತು ಜೀಲಂ ನದಿಗಳ ನಡುವಿನ ದೇಶ (ಮ.ಭೀ.).

ಸೌಶ್ರುತಿ -- ತ್ರಿಗರ್ತರಾಜ; ಅರ್ಜುನನಿಂದ ಹತನಾದನು (ಮ.ಕ.).

ಸ್ಕಂದ -- ೧. ಕುಮಾರಸ್ವಾಮಿ; ಶಿವಪುತ್ರ. ಶಿವನು ಅಗ್ನಿಯನ್ನು ಪ್ರವೇಶ ಮಾಡಿದ ಕಾಲದಲ್ಲಿ ಹುಟ್ಟಿದವ. ನೋ.--ಕುಮಾರ, ಸುಬ್ರಹ್ಮಣ್ಯ, ಷಣ್ಮುಖ. (ಮ.ವ.ಶಾಂ., ಅನು.ಶ.). ೨. ಬ್ರಹ್ಮನ ಮಾನಸಪುತ್ರರಲ್ಲೊಬ್ಬ. ನೋ.--ಸನಕ (ಹರಿ.).

ಸ್ತಂಬಮಿತ್ರ -- ಮಂದಪಾಲ ಋಷಿಯಿಂದ ಹರಿತಾ ಎಂಬ ಹೆಸರುಳ್ಳ ಶಾರ್ಙ್ಗ ಎಂಬ ಪಕ್ಷಿಯಲ್ಲಿ ಹುಟ್ಟಿದವ. ಖಾಂಡವವನ ದಹನಕಾಲದಲ್ಲಿ ಇವನು ಬದುಕಿದನು. ನೋ.-- ಜರಿತಾ, ಶಾರ್ಙ್ಗ (ಮ.ಆ.).

ಸ್ಥಪತಿ--ಶಿಲ್ಪಶಾಸ್ತ್ರವನ್ನು ಬಲ್ಲವ. ಜನಮೇಜಯನ ಸಾರಥಿ. ಇವನಿಗೆ ಲೋಹಿತಾಕ್ಷನೆಂಬ ಹೆಸರೂ ಇದೆ (ಮ.ಆ.).

ಸ್ಥಂಡಿಲೇಯು -- ಚಂದ್ರವಂಶದ ರೌದ್ರಾಶ್ವನ ಮಗ (ಮ.ಆ.).

ಸ್ಥಾಣು--ಏಕಾದಶರುದ್ರರಲ್ಲೊಬ್ಬ; ಶಿವ. ಇವನು ಪ್ರಳಯಕಾಲದಲ್ಲೂ ಇರುವವನು (ಮ.ಆ.,ಶಾಂ.).

ಸ್ಥೂಣ -- ವಿಶ್ವಾಮಿತ್ರನ ಒಬ್ಬ ಮಗ (ಮ.ಅನು)

ಸ್ಥೂಣಾಕರ್ಣ -- ಕುಬೇರನ ಅನುಚರನಾದ ಯಕ್ಷನೊಬ್ಬ. ದ್ರುಪದನ ಮಗನಾದ ಶಿಖಂಡಿ ಹೆಣ್ಣಾಗಿ ಹುಟ್ಟಿದರೂ ತಂದೆತಾಯಿಗಳಿಂದ ಗಂಡಾಗಿ ಪೋಷಿಸಲ್ಪಟ್ಟು ದಶಾರ್ಣದೇಶಾಧಿಪತಿಯಾದ ಹಿರಣ್ಯವರ್ಮನ ಮಗಳನ್ನು ವಿವಾಹವಾದನು. ಕೊನೆಗೆ ಹಿರಣ್ಯವರ್ಮನಿಗೆ ತನ್ನ ಅಳಿಯನು ಹೆಣ್ಣೆಂದು ತಿಳಿದು ಆಕೆಯ ಪರೀಕ್ಷೆಗಾಗಿ ದಂಡೆತ್ತಿಬರಲು, ಶಿಖಂಡಿಯು ಭಯದಿಂದ ಕಾಡಿಗೆ ಓಡಿಹೋಗಿ ಸ್ಥೂಣಾಕರ್ಣನಿಂದ ಪುಂಸ್ತ್ವವನ್ನು ಸ್ವಲ್ಪಕಾಲದ ಮಟ್ಟಿಗೆಂದು ಕಡವಾಗಿ ಪಡೆದು ಪಟ್ಟಣಕ್ಕೆ ಹಿಂತಿರುಗಿ, ಅಲ್ಲಿ ಮಾವನ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದನು. ಇತ್ತ ಕುಬೇರನಿಂದ ಆ ಯಕ್ಷನಿಗೆ ಸ್ತ್ರೀತ್ವವೂ, ಶಿಖಂಡಿಗೆ ಪುರುಷತ್ವವೂ ಸ್ಥಿರವಾಯಿತು. ಮೀಸೆಯಿಲ್ಲದವನು ಶಿಖಂಡಿ (ಮ.ಉ.).

ಸ್ಥೂಲಕೇಶ--ಪ್ರಮದ್ವರೆಯನ್ನು ಕಾಪಾಡಿದ ಮಹರ್ಷಿ, ವಿಶ್ವಾವಸು ಗಂಧರ್ವನಿಂದ ಘೃತಾಚಿಯಲ್ಲಿ ಹುಟ್ಟಿದ ಪ್ರಮದ್ವರೆಯನ್ನು ಪ್ರಮತಿಯ ಪುತ್ರನಾದ ರುರುಮಹರ್ಷಿಗೆ ಮದುವೆ ಮಾಡಿಕೊಟ್ಟನು. ನೋ.--ರುರು, ಪ್ರಮದ್ವರೆ (ಮ.ಆ.,ಅನು.).

ಸ್ಥೂಲಶಿರ--೧. ವಿಶ್ವಾವಸು ಎಂಬ ಗಂಧರ್ವನು ಈ ಮಹರ್ಷಿಯನ್ನು ಹಾಸ್ಯಮಾಡಿ ಕಬಂಧನೆಂಬ ರಾಕ್ಷಸನಾಗಿ ಹುಟ್ಟಿ, ಶ್ರೀರಾಮನಿಂದ ಶಾಪವಿಮೋಚನೆ ಹೊಂದಿದನು ನೋ.--ಕಬಂಧ (ರಾಮಾ.ಅರಣ್ಯ.,ಮ.ವ). ೨.ಚಂದ್ರವಂಶದ ಶತಾನೀಕನೊಂದಿಗೆ ಯುದ್ಧಮಾಡಿದ ರಾಕ್ಷಸ. ನೋ.--ವಿಧೂಮ್ರ, ಶತಾನೀಕ.

ಸ್ಯಮಂತಕಮಣಿ -- ಸೂರ್ಯನಿಂದ ಸತ್ರಾಜಿತನು ಪಡೆದ ಒಂದು ರತ್ನ. ಇದು ಪ್ರತಿದಿನವೂ ಎಂಟು ಭಾರ ಚಿನ್ನವನ್ನು ಕೊಡುವ ಶಕ್ತಿಯುಳ್ಳದ್ದು. ಅಶುಚಿಯು ಇದನ್ನು ಧರಿಸಿದರೆ ಆತನನ್ನು ಕೊಲ್ಲುವ ಶಕ್ತಿಯುಳ್ಳದ್ದು. ಇದು ಸತ್ರಾಜಿತನಿಂದ ಪ್ರಸೇನನಿಗೂ, ಜಾಂಬವಂತನಿಗೂ ಸೇರಿ ಆಮೇಲೆ ಅಕ್ರೂರನ ವಶವಾಯಿತು. ಇದು ಶ್ರೀಕೃಷ್ಣನ ಕೈಯ ರತ್ನ (ಮ.ಸ.,ಭಾಗ.,ಹರಿ.).

ಸ್ಯಮಂತಪಂಚಕ -- ನೋ.--ಸಮಂತಪಂಚಕ.

ಸ್ಯಾನಂದೂರು -- ಕೇರಳದ ಅನಂತಶಯನಕ್ಷೇತ್ರ. ಅರ್ಜುನನು ತೀರ್ಥಯಾತ್ರೆ ಮಾಡುತ್ತ ಇಲ್ಲಿಗೆ ಬಂದಿದ್ದನು. ಇದಕ್ಕೆ ತಿರುವನಂತಪುರವೆನ್ನುತ್ತಾರೆ.

ಪುರಾಣದಲ್ಲಿ ಇದಕ್ಕೆ ಅನಂತಶಯನವೆಂಬ ಹೆಸರಿದೆ. ಕೇರಳದ ರಾಜಧಾನಿ. ನಾಗರಕೋಯಿಲದಿಂದ ಈ ಪಟ್ಟಣವು ೪೦ ಮೈಲು ದೂರದಲ್ಲಿದೆ. ಇಲ್ಲಿ ಪದ್ಮನಾಭ ದೇವಾಲಯದಲ್ಲಿ ಆತನು ಶೇಷಶಾಯಿಯಾಗಿದ್ದಾನೆ. ಈ ದೇವಾಲಯದಲ್ಲಿ ಭಗವಾನನ ಮುಖದರ್ಶನವು ಒಂದು ಬಾಗಿಲಿನಿಂದ ವೃಕ್ಷಸ್ಥಲದರ್ಶನವು ಇನ್ನೊಂದು ಬಾಗಿಲಿನಿಂದ, ಚರಣದರ್ಶನವು ಮೂರನೆಯ ಬಾಗಿಲಿನಿಂದಾಗುತ್ತಿದೆ. ಈ ಕ್ಷೇತ್ರಮಹಾತ್ಮೆಯು ಬ್ರಹ್ಮಾಂಡಪುರಾಣ ಮತ್ತು ಮಹಾಭಾರತಗಳಲ್ಲಿ ಬಂದಿದೆ. ಇದು ಮಲೆಯಾಳದ ಮುಖ್ಯ ಪಟ್ಟಣ ಮತ್ತು ಕ್ಷೇತ್ರ (ಕ್ಷೇತ್ರದ.).

ಸ್ಯೂಮರಶ್ಮಿ -- ಒಬ್ಬ ಮಹರ್ಷಿ. ಈತನು ಬಹುರೂಪವನ್ನು ಹೊಂದಿ ಪಾತಾಳಕ್ಕೆ ಹೋಗಿ ಕಪಿಲ ಮಹರ್ಷಿಯೊಡನೆ ನಿಷ್ಕಾಮಕರ್ಮ ಕುರಿತು ಸಂವಾದ ಮಾಡಿದನು. ಇದಕ್ಕೆ ಕಪಿಲ ಗೋಸಂವಾದವೆನ್ನುತ್ತಾರೆ (ಮ.ವ.).

ಸ್ವನ -- ನಿಷ್ಕೃತಿಯೆಂಬ ಹೆಸರುಳ್ಳ ಅಗ್ನಿಯ ಮಗ (ಮ.ವ.).

ಸ್ವನಯ--ಇವನೊಬ್ಬ ರಾಜ. ಈತನ ಮಗಳು ಮನೋರಮೆ. ಈಕೆ ಚತುರ್ದಂತವುಳ್ಳ ಬಿಳಿ ಆನೆಯನ್ನೇರಿ ಬಂದವನನ್ನು ವಿವಾಹವಾಗುವೆನೆಂದು ನಿರ್ಧರಿಸಲು ದೀರ್ಘತಮ ಮುನಿಯ ಮಗ ಕಕ್ಷೀವಂತನು ತನ್ನ ತಪೋಮಹಿಮೆಯಿಂದ ಇಂತಹ ಆನೆಯನ್ನೇರಿ ಬಂದು ಈಕೆಯನ್ನು ವಿವಾಹವಾದನು. ಒಡನೆಯೇ ಆ ಆನೆಯು ನೀರಿನಲ್ಲಿ ಮುಳುಗಿ ಅದೃಶ್ಯವಾಯಿತು (ಸ್ಕಾಂ.ಪು.).

ಸ್ವಯಂಪ್ರಭಾ -- ಶಾಂಡಿಲ್ಯಮುನಿಯ ಮಗಳು. ಈಕೆ ತಪಸ್ವಿನಿ. ದೇವಶಿಲ್ಪಿಯಾದ ಮಯನು ತನ್ನ ಪತ್ನಿಯಾದ ಹೇಮೆಯೆಂಬ ಅಪ್ಸರೆಗಾಗಿ ಒಂದು ಸುಂದರ ವನ ಮತ್ತು ಗುಹೆಗಳನ್ನು ನಿರ್ಮಿಸಿ ಸುಖವನ್ನನುಭವಿಸುತ್ತಿದ್ದು ಹೇಮೆ ಸ್ವರ್ಗಕ್ಕೆ ಹೋದಮೇಲೆ ಈಕೆಯ ಸಖಿ ಸ್ವಯಂಪ್ರಭೆ ಇಲ್ಲಿ ವಾಸವಾಗಿದ್ದಳು. ಹನುಮದಾದಿಗಳು ಸೀತಾಶೋಧನೆಗಾಗಿ ಇಲ್ಲಿ ಬಂದು ಈಕೆಯಿಂದ ಸತ್ಕೃತರಾಗಿ ಹಿಂದಿರುಗಿದರು. ಗರುಡನು ಈಕೆಯ ಆಗ್ರಹಕ್ಕೆ ಪಾತ್ರವಾಗಿ ಗರಿಗಳನ್ನು ಕಳೆದುಕೊಂಡು, ಪುನಃ ಈಕೆಯ ಅನುಗ್ರಹಕ್ಕೆ ಪಾತ್ರವಾಗಿ ಗರಿಗಳನ್ನು ಪಡೆದನು. ನೋ.--ಹೇಮೆ, ಶಾಂಡಿಲಿ (ಮ.ಅನು.).

ವಿಶ್ವಕರ್ಮನ ಮಗಳಾದ ಹೇಮೆಯು ಪರಮೇಶ್ವರನನ್ನು ನರ್ತನದಿಂದ ಮೆಚ್ಚಿಸಿದುದರಿಂದ ಆತನು ಈ ನಗರವನ್ನು ನಿರ್ಮಾಣ ಮಾಡಿಕೊಟ್ಟಿದ್ದನು (ಅನಂ.ರಾ.).

ಸ್ವರೋಚಿ -- ನೋ.--ವರೂಥಿನಿ. ಈತನ ತಾಯಿ ವರೂಥಿನಿ ಎಂಬ ಅಪ್ಸರೆ; ತಂದೆ ಕಲಿ ಎಂಬ ಗಂಧರ್ವ. ಇವನು ಅರಣ್ಯದೇವತೆಯನ್ನು ವಿವಾಹವಾಗಿ ದ್ಯುತಿಮಂತನೆಂಬ ತೇಜಸ್ವಿಯಾದ ಮಗನನ್ನು ಪಡೆದನು. ಇವನು

ಸ್ವರೋಚಿಸ್ಸನ ಮಗನಾದುದರಿಂದ ಸ್ವಾರೋಚಿಷನೆಂಬ ಹೆಸರು ಬಂದು ಈತನು ಮನ್ವಂತರಾಧಿಪತಿಯಾದನು. ಸ್ವರೋಚಿಯು ತನ್ನ ಪತ್ನಿಯರೊಂದಿಗೆ ಬಹುಕಾಲ ಅರಣ್ಯದಲ್ಲಿ ತಪಸ್ಸು ಮಾಡಿ ಸದ್ಗತಿ ಪಡೆದನು (ಮಾರ್ಕಂ.ಪು.).

ಸ್ವರ್ಗ --ದೇವತೆಗಳೂ ಪುಣ್ಯವಂತರೂ ವಾಸಮಾಡುವ ಲೋಕ. ನಹುಷನು ನೂರು ಯಜ್ಞಗಳನ್ನು ಮಾಡಿ ಸ್ವರ್ಗಾಧಿಪತಿಯಾದನು. ರಾಜರು ರಾಜಸೂಯಯಾಗವನ್ನು ಮಾಡಿ ಸ್ವರ್ಗ ಪಡೆಯಬಹುದಿತ್ತು. ಪಾಂಡವರು ರಾಜಸೂಯಯಾಗವನ್ನು ಮಾಡಿ ತಮ್ಮ ತಂದೆಯನ್ನು ಯಮಲೋಕದಿಂದ ಸ್ವರ್ಗಕ್ಕೆ ಕಳುಹಿಸಿದರು. ನೋ--ವರ್ಚಾ.

ಧರ್ಮರಾಜನು ದೇವಗಂಗೆಯಲ್ಲಿ ಸ್ನಾನಮಾಡಿ ಮನುಷ್ಯದೇಹವನ್ನು ಕಳಚಲು ಆತನಿಗೆ ದಿವ್ಯದೇಹ ಬಂತು. ಮನಸ್ಸಿನಿಂದ ವೈರ ತೊಲಗಿತು; ಸಂತಾಪ ಹೋಯಿತು. ಅವನು ಇಂದ್ರನ ಹಿಂದೆಯೇ ಹೋಗಲು ಪಾಂಡವರು ಮತ್ತು ಕೌರವರು ತಾವು ಯಾರ ಯಾರ ಅಂಶದಿಂದ ಹುಟ್ಟಿದ್ದರೋ ಅವರವರ ಬಳಿಯಲ್ಲೇ ಅವರು ಇರುವುದನ್ನು ಕಂಡನು. ಆಗ ಭೀಮನು ವಾಯುವಿನ ಬಳಿಯಲ್ಲೂ, ಅರ್ಜುನನು ಇಂದ್ರನ ಸಿಂಹಾಸನದ ಪಕ್ಕದಲ್ಲೂ, ನಕುಲಸಹದೇವರು ಅಶ್ವಿನೀದೇವತೆಗಳ ಬಳಿಯಲ್ಲೂ, ದ್ರೌಪದಿಯು ಶಚೀದೇವಿಯ ಹತ್ತಿರವೂ, ಕರ್ಣನು ಸೂರ್ಯಮಂಡಲದಲ್ಲೂ, ಅಭಿಮನ್ಯುವು ಚಂದ್ರಬಿಂಬದಲ್ಲೂ, ಧೃತರಾಷ್ಟ್ರನು ಗಂಧರ್ವರಾಜನ ಹತ್ತಿರವೂ, ಭೀಷ್ಮನು ವಸುಗಳ, ದ್ರೋಣನು ಬೃಹಸ್ಪತಿಯ, ಕೃತವರ್ಮನು ಮರುತ್ತುಗಳ, ಪ್ರದ್ಯುಮ್ನನು ಸನತ್ಕುಮಾರನ, ವಿರಾಟ, ದ್ರುಪದ, ಧೃಷ್ಟಕೇತು, ಅಕ್ರೂರ, ಸಾಂಬ, ಭೂರಿಶ್ರವ ಮತ್ತು ಉತ್ತರ ಮೊದಲಾದವರು ವಿಶ್ವದೇವತೆಗಳ ಬಳಿಯಲ್ಲೂ, ಶಕುನಿಯು ದ್ವಾಪರನ, ಧೃಷ್ಟದ್ಯುಮ್ನನು ಅಗ್ನಿಯ ಬಳಿಯಲ್ಲೂ ಕಾಣಿಸಿಕೊಂಡು ಅವರವರ ಮೂಲವ್ಯಕ್ತಿಗಳಲ್ಲಿ ಅದೃಶ್ಯರಾದರು.

ಪಾಂಡವರು ಸ್ವರ್ಗಕ್ಕೆಂದು ಹಿಮಾಲಯವನ್ನು ಏರಿಹೋದುದರಿಂದ ಸ್ವರ್ಗವು ಹಿಮಾಲಯ ಪ್ರಾಂತದಲ್ಲಿದ್ದಿರಬಹುದು. ಟಿಬೇಟು ಎಂಬುದು ತ್ರಿವಿಷ್ಟಪವೆಂಬುದರ ತದ್ಭವವಾದುದರಿಂದ ಟಿಬೇಟೇ ಸ್ವರ್ಗವಾಗಿದ್ದಿರಬಹುದು. ಆ ಕಾಲದಲ್ಲಿ ಈ ಪ್ರಾಂತದ ಹವಾಗುಣವು ಈಗಿನಂತಿರಲಿಲ್ಲ. ಸ್ವರ್ಗಸುಖವನ್ನು ತರುವಷ್ಟು ಆಹ್ಲಾದಕರವಾಗಿತ್ತು. ಸ್ವರ್ಗವು ಪೂರ್ವದಲ್ಲಿದೆ ಎನ್ನುವುದುಂಟು. ಪಂಜಾಬಿನಲ್ಲಿದ್ದ ವೇದದ ಕಾಲದ ಆರ್ಯರಿಗೆ ಟಿಬೇಟು ಪೂರ್ವದಿಕ್ಕಾಗುವುದು. ಪಾಂಡವರ ಕಾಲದಲ್ಲಿ ಹಿಮಾಲಯದ ಆಚೆಗೆ ದೇವಭೂಮಿಯಾಗಿತ್ತೆಂದು ಭಾರತವೇ ಹೇಳುತ್ತದೆ (ಮ.ವ.).

ಸ್ವರ್ಭಾನವಿ -- ಚಂದ್ರವಂಶದ ಪುರೂರವಸನ ಮಗನಾದ ಆಯುವಿನ ಪತ್ನಿ; ಈಕೆಯ ಮಗನೇ ನಹುಷ (ಮ.ಆ.).

ಸ್ವರ್ಭಾನು -- ದನುವಿನ ಮಗನಾದ ರಾಹು; ಈತನ ತಂದೆ ಕಶ್ಯಪ. ನೋ.--ರಾಹು (ಮ.ಆ.).

ಸ್ವಸ್ತ್ಯಾತ್ರೇಯ -- ಅತ್ರಿವಂಶದ ಒಬ್ಬ ಋಷಿ (ಮ.ಆ.).

ಸ್ವಾತಿ -- ದಕ್ಷಪ್ರಜಾಪತಿಯ ಮಗಳು; ಚಂದ್ರನ ಒಬ್ಬಳು ಹೆಂಡತಿ (ಮ.ಆ.,ಭಾಗ.,ವಿಷ್ಣುಪು.).

ಸ್ವಾರೋಚಿಷ -- ನೋ.--ಸ್ವರೋಚಿ. ಒಬ್ಬ ಮನು; ಈತನ ತಾಯಿ ಶಾಪದಿಂದ ಜಿಂಕೆ ರೂಪ ಧರಿಸಿದ ವನದೇವತೆ; ತಂದೆ ಸ್ವರೋಚಿ. ಇವನು ಎರಡನೆಯ ಮನ್ವಂತರದ ಒಡೆಯ ನೋ.--ಕಲಾವತಿ. ಈತನು ಇಂದೀವ ರಾಕ್ಷಸನೆಂಬ ಗಂಧರ್ವನ ಮಗಳಾದ ಮನೋರಮೆಯನ್ನು ರಾಕ್ಷಸಬಾಧೆಯಿಂದ ತಪ್ಪಿಸಿ ಮದುವೆಯಾದನು; ಅಲ್ಲದೆ ಆಕೆಯ ಗೆಳತಿಯಾದ ವಿಭಾವರಿ ಮತ್ತವಾರನೆಂಬ ಮುನಿಯ ಮಗಳಾದ ಕಲಾವತಿಯನ್ನು ವಿವಾಹವಾಗಿ, ಅವರಿಗೆ ಮುನಿಯೊಬ್ಬನ ಶಾಪದಿಂದ ಕುಷ್ಠರೋಗ ಮತ್ತು ಕ್ಷಯರೋಗ ಪ್ರಾಪ್ತವಾದುದನ್ನು ತಿಳಿದು ತಾನು ಅರಿತ ಆಯುರ್ವೇದದ ಪ್ರಭಾವದಿಂದ ಅವರನ್ನು ಆರೋಗ್ಯವಂತರನ್ನಾಗಿ ಮಾಡಿ, ಕಲಾವತಿಯಿಂದ ಪದ್ಮಿನೀವಿದ್ಯೆಯನ್ನೂ, ವಿಭಾವರಿಯಿಂದ ಸಕಲ ಪ್ರಾಣಿಭಾಷೆಯನ್ನೂ ಅಭ್ಯಾಸಮಾಡಿದನು (ಮಾರ್ಕಂ.ಪು.).

ಸ್ವಾಹಾ -- ೧. ಬೃಹಸ್ಪತಿಯ ಮಗಳು. ಈಕೆಗೆ ಕಾಮ, ಅಮೋಘ, ಉಕ್ಥ್ಯರೆಂಬ ಮೂವರು ಮಕ್ಕಳು (ಮ.ವ.). ೨. ಅಗ್ನಿವಿಶೇಷ (ಮ.ವ). ೩. ದಕ್ಷಪ್ರಜಾಪತಿಯ ಮಗಳು; ಅಗ್ನಿಯ ಹೆಂಡತಿ. ಸಪ್ತರ್ಷಿಗಳ ಪತ್ನಿಯರಿಗೆ ಮೋಹಿತನಾದ ಗಂಡನನ್ನು ತೃಪ್ತಿಪಡಿಸುವುದಕ್ಕಾಗಿ ಈಕೆಯು ಅರುಂಧತಿಯನ್ನು ಬಿಟ್ಟು ಉಳಿದ ಮುನಿ ಪತ್ನಿಯರ ರೂಪದಿಂದ ತನ್ನ ಪತಿಯನ್ನು ಸಂತೋಷಪಡಿಸಿದಳು (ಮ.ವ.).

ಸ್ವಿಷ್ಟಕೃತ್ -- ಬೃಹಸ್ಪತಿಯ ಆರನೆಯ ಮಗ; ಪ್ರಾಯಶ್ಚಿತ್ತಾಗ್ನಿ ವಿಶೇಷ (ಮ.ವ.).

ಹ

ಹಂಪೆ(ಕಿಷ್ಕಿಂಧಾ)-- ಪ್ರಸಿದ್ಧ ಶಿವಕ್ಷೇತ್ರ. ಇಲ್ಲಿ ವಾಲಿಸುಗ್ರೀವರ ರಾಜಧಾನಿಯಾದ ಕಿಷ್ಕಿಂಧೆ ಇದೆ. ಇಲ್ಲೇ ವಿರೂಪಾಕ್ಷನ ಭವ್ಯದೇವಾಲಯವಿದೆ. ಇದರ ಮಹಾದ್ವಾರದ ಮೇಲೆ ಹನ್ನೊಂದು ಅಂತಸ್ತಿನ ಗೋಪುರವಿದೆ. ಇಲ್ಲಿ ಕೃಷ್ಣಸ್ವಾಮಿ ದೇವಾಲಯ ಕೋದಂಡರಾಮನ ಗುಡಿ

ಮೊದಲಾದ ಹಲವು ದೇವಾಲಯಗಳಿವೆ. ಇಲ್ಲಿ ಋಷ್ಯಮೂಕಪರ್ವತವಿದೆ. ಇದರ ಶಿಖರದ ಮೇಲೆ ಮತಂಗಋಷಿಯ ಆಶ್ರಮವಿದ್ದಿತು. ಇಲ್ಲಿ ತುಂಗಭದ್ರೆಯ ಎರಡು ಸೀಳುಗಳ ನಡುವೆ ವೈಷ್ಣವರ ಒಂಬತ್ತು ಸ್ವಾಮಿಗಳ ವೃಂದಾವನವಿದೆ. ಇಲ್ಲೇ ಶಬರಿಯ ಆಶ್ರಮ ಉಂಟು. ನೋ.--ಕಿಷ್ಕಿಂಧಾ. ಇಲ್ಲಿ ಪಂಪಾ ಸರೋವರವಿದೆ. ಇಲ್ಲಿ ಕಪಿಗಳ ಹಾವಳಿ ತುಂಬ.

ಹಂಸ--೧. ಡಿಬಿಕನೆಂಬ ರಾಕ್ಷಸನ ಸಹೋದರ, ಜರಾಸಂಧನ ಸ್ನೇಹಿತ, ಕರೂಷದೇಶದ ರಾಜ. ಈತನನ್ನು ಬಲರಾಮನು ಕೊಂದನು. ನೋ.--ಬಲರಾಮ. ಹಂಸನೆಂಬ ರಾಜನು ಬಲರಾಮನಿಂದ ಹತನಾಗಲು ಡಿಬಿಕನು ತನ್ನ ಅಣ್ಣ ಸತ್ತನೆಂದು ತಾನು ಯಮುನಾ ನದಿಗೆ ಹಾರಿ ಸತ್ತನು. ಡಿಬಿಕನು ಸತ್ತನೆಂದು ಹಂಸನೂ ಯಮುನಾ ನದಿಗೆ ಹಾರಿ ಸತ್ತನು (ಮ.ಸ.). ೨. ನೋ.--ಸ್ವರ್ಗ. ಕಶ್ಯಪಮುನಿಯಿಂದ ಅರಿಷ್ಟೆಯಲ್ಲಿ ಹುಟ್ಟಿದ ಗಂಧರ್ವ. ಧೃತರಾಷ್ಟ್ರನು ಈ ಗಂಧರ್ವನ ಅಂಶದವನು (ಮ.ಆ.).

ಹಂಸಕಥೆ -- ಅಗ್ರಪೂಜೆಯ ಸಂದರ್ಭದಲ್ಲಿ ಶಿಶುಪಾಲನು ಭೀಷ್ಮನಿಗೆ ಈ ಕಥೆಯನ್ನು ಹೇಳಿದನು (ಮ.ಸ.).

ಹಂಸಕಾಗೆಗಳ ಕಥೆ--ಇದಕ್ಕೆ ಕಾಕಪೌರುಷದ ಕಥೆ ಎನ್ನುವುದೂ ಉಂಟು. ಯುದ್ಧಭೂಮಿಯಲ್ಲಿ ಕರ್ಣನ ಉತ್ಸಾಹಭಂಗಮಾಡುವುದಕ್ಕಾಗಿ ಶಲ್ಯನು ಹೇಳಿದ ಕಥೆ. 'ಕಾಗೆಯೊಂದು ಸಮುದ್ರದ ಮೇಲೆ ಹಾರುವ ಸ್ಪರ್ಧೆಗೆ ಹಂಸದೊಡನೆ ನಿಂತಿತು. ಮೊದಲು ಕಾಗೆ ವೇಗವಾಗಿ ಹಾರಿ ಕಡೆಗೆ ಸೋತುಹೋಯಿತು. ಕರ್ಣನ ಪೌರುಷವೂ ಅರ್ಜುನನ ದರ್ಶನ ಪರಿಯಂತ ಕಾಗೆಯ ಸಾಹಸದಂತಿದೆ' ಎಂದು ಶಲ್ಯನು ಚುಚ್ಚುಮಾತನ್ನಾಡಿದನು (ಮ.ಕ.).

ಹಂಸಧ್ವಜ -- ಈತನಿಗೆ ಮರಾಳಧ್ವಜನೆಂಬ ಹೆಸರೂ ಇದೆ. ಇವನು ಸುಧನ್ವನ ತಂದೆ; ಚಂದನಾವತಿಯ ರಾಜ. ಈತನಿಗೆ ಧನಬಲ, ಚಂದ್ರಸೇನ, ಚಂದ್ರಕೇತು, ಚಂದ್ರದೇವ, ವಿಡೂರಥ, ಧರ್ಮವಾಹ, ನ್ಯಾಯವರ್ತಿ ಎಂಬ ಏಳು ಮಂದಿ ತಮ್ಮಂದಿರೂ ಸುದರ್ಶನ ಸುಧನ್ವ, ಸುಮನ, ಸುರಥ ಎಂಬ ನಾಲ್ವರೂ ಮಕ್ಕಳೂ ಇದ್ದರು. ಶಂಕು ಲಿಖಿತರೆಂಬ ಸಹೋದರರು ಈತನ ಪುರೋಹಿತರು. ನೋ.-- ಶಂಖ, ಲಿಖಿತ. ಈ ಸಹೋದರರು ಶಂಖಲಿಖಿತಸ್ಮೃತಿಯನ್ನು ಬರೆದಿದ್ದಾರೆ. ಹಂಸಧ್ವಜನು ಯುಧಿಷ್ಠಿರನ ಅಶ್ವಮೇಧದ ಕುದುರೆಯನ್ನು ಕಟ್ಟಿ, ಅರ್ಜುನನೊಂದಿಗೆ ಯುದ್ಧಹೂಡಿ, ತನ್ನ ಮಕ್ಕಳಲ್ಲಿ ಸುಧನ್ವ, ಸುರಥರನ್ನು ಕಳೆದುಕೊಂಡು, ಅರ್ಜುನನೊಂದಿಗೆ ಸಂಧಾನಮಾಡಿ, ಧರ್ಮರಾಜನ ಅಶ್ವಮೇಧಕ್ಕೆ ನೆರವಾಗುವನು. ನೋ. -- ಸುಧನ್ವ, ಸುರಥ (ಜೈ.ಭಾ.).

ಹಂಸಿಕಾ -- ಕಾಮಧೇನುವಿನ ಮಗಳು (ಮ.ಉ.).

ಹಂಸಿ -- ಭಗೀರಥನ ಮಗಳು. ಈಕೆ ವರತಂತು ಮಹರ್ಷಿಯ ಶಿಷ್ಯನಾದ ಕೌತ್ಸನ ಹೆಂಡತಿ. ನೋ.-- ಕೌತ್ಸ (ಮ.ಅನು.).

ಹನುಮಂತ(ಹನೂಮಂತ)--ವಾಯುವಿನಿಂದ ಅಂಜನೆಯಲ್ಲಿ ಜನಿಸಿದ ಮಹಾವೀರ. ಶಿವನು ಪಾರ್ವತಿಯ ಗರ್ಭವನ್ನು ಆಕೆಯ ಹೊಕ್ಕಳ ಪ್ರದೇಶದಿಂದ ಹೊರತೆಗೆದು ವಾಯುವಿನ ಮೂಲಕ ಗೌತಮನ ಮಗಳಾದ -- ಪುತ್ರನಿಗಾಗಿ ತಪಸ್ಸುಮಾಡುತ್ತಿದ್ದ -- ಅಂಜನೆಯ ಕೈಯಲ್ಲಿಡಲು, ಅದನ್ನು ಆಕೆ ನುಂಗಲು ಹುಟ್ಟಿದ ವೀರನೇ ಆಂಜನೇಯ. ಇವನು ಶಿವನ ಅಂಶದಿಂದ ಜನಿಸಿದವನು. ಈತನು ಬಾಲ್ಯದಲ್ಲಿ ಸೂರ್ಯನನ್ನು ಹಣ್ಣೆಂಬ ಭ್ರಾಂತಿಯಿಂದ ತಿನ್ನಹೋಗಲು ಇಂದ್ರನು ಈ ಅನರ್ಥವನ್ನು ತಪ್ಪಿಸಲು ವಜ್ರಾಯುಧದಿಂದ ಆಂಜನೇಯನ ಮುಖಕ್ಕೆ ಹೊಡೆಯಲು, ಆತನ ಮುಖವು ಜಜ್ಜಿಹೋಗಿ ಬಾಲ ಆಂಜನೇಯನು ನೆಲಕ್ಕೊರಗಿದನು. ಇದನ್ನು ತಿಳಿದ ವಾಯುವು ಪುತ್ರಶೋಕದಿಂದ ಅಡಗಲು ಜಗತ್ತು ನಾಶದ ದಾರಿಯನ್ನು ಹಿಡಿಯಿತು. ಇದನ್ನು ಕಂಡ ಬ್ರಹ್ಮನು ಆಂಜನೇಯನನ್ನು ಬದುಕಿಸಿ -- ' ಇನ್ನು ಮುಂದೆ ಯಾವ ಆಯುಧಗಳಿಂದಲೂ ನಿನಗೆ ಮರಣ ಬರದಿರಲಿ' ಎಂದು ವರವನ್ನು ದಯಪಾಲಿಸಿದನು. ಆಂಜನೇಯನು ಅಂದಿನಿಂದ ಹನುಮಂತನಾದನು. ಇವನು ಬಾಲ್ಯದಲ್ಲಿ ಋಷ್ಯಾಶ್ರಮವನ್ನು ಹೊಕ್ಕು ಮುನಿಗಳನ್ನು ತುಂಬ ಪೀಡಿಸುತ್ತಿರಲು, ಅವರು ಕೋಪಗೊಂಡರೂ, ಅವರು ಇವನ ಭವಿಷ್ಯವನ್ನು ತಿಳಿದು -- 'ಶ್ರೀರಾಮನ ಸಂದರ್ಶನವಾಗುವವರೆಗೆ ನಿನ್ನ ಶಕ್ತಿಯ ಅರಿವು ನಿನಗೆ ಇರದಿರಲಿ' ಎಂದು ಶಾಪಕೊಟ್ಟರು. ಇದರಿಂದ ವಾಲಿಯ ಭಯದಿಂದ ಸುಗ್ರೀವನೊಡನೆ ಹನುಮಂತನೂ ಓಡುತ್ತಿದ್ದನು. ಹನುಮನು ಮುಂದೆ ಸೂರ್ಯನಿಂದ ಸಮಸ್ತ ವಿದ್ಯಾಪಾರಂಗತನಾದನು. ಇವನು ಸುಗ್ರೀವನಿಗೆ ಮಂತ್ರಿಯಾಗಿ, ಶ್ರೀರಾಮಭಕ್ತನಾಗಿ, ಅವನಿಗೆ ಸೀತಾಶೋಧನೆಯಲ್ಲಿ ನೆರವಾದನು. ಇವನು ಲಂಕಾಪಟ್ಟಣವನ್ನು ಪ್ರವೇಶಿಸುವಾಗ ಸಿಂಹಿಕೆಯನ್ನು ಕೊಂದು, ಸುರಸೆಯನ್ನು ಮೆಚ್ಚಿಸಿ, ಲಂಕಿಣಿಯನ್ನು ಗೆದ್ದು, ಅಶೋಕವನದಲ್ಲಿ ಸೀತೆಯನ್ನು ಕಂಡು, ರಾವಣನ ಪಕ್ಷದವರ ಶಕ್ತಿಯನ್ನು ತೂಕಮಾಡಲು ಯುದ್ಧಹೂಡಿ, ಅಕ್ಷಕುಮಾರನನ್ನು ಕೊಂದು, ಇಂದ್ರಜಿತುವಿನ ಬ್ರಹ್ಮಾಸ್ತ್ರಕ್ಕೆ ಉದ್ದೇಶಪೂರ್ವಕ ಸಿಕ್ಕಿದನು. ಆಮೇಲೆ ಸೀತೆಯಿಂದ ಚೂಡಾಮಣಿಯನ್ನು ಪಡೆದು, ಆಕೆಗೆ ಶ್ರೀರಾಮನ ಮುದ್ರೆಯುಂಗುರವನ್ನಿತ್ತು, ಲಂಕೆಯನ್ನು ಸುಟ್ಟು ಶ್ರೀರಾಮನ ಬಳಿಗೆ ಸುಖವಾಗಿ ಬಂದನು (ರಾಮಾ.ಕಿಷ್ಕಿಂ.ಸುಂದರ.).

ರಾಜನೀತಿಯಲ್ಲಿ, ರಾಜನು ಹಗೆಗಳ ಪಟ್ಟಣವನ್ನೂ, ಊರನ್ನೂ, ಗ್ರಾಮವನ್ನೂ ವಾಡಿಕೆಯಾದ ಬಾಗಿಲಿನಿಂದ ಹೋಗಬಾರದೆಂದು ರಾಜನೀತಿ ಇರುವುದರಿಂದ ಪೌಳಿಗೋಡೆಯನ್ನು ಹಾರಿ ಹನುಮನು ಲಂಕೆಯನ್ನು ಪ್ರವೇಶಿಸಿದನು. ರಾಜನು ಪ್ರಯಾಣಕಾಲದಲ್ಲೂ, ಗೃಹಪ್ರವೇಶದಲ್ಲೂ, ಮದುವೆಯ ಕಾಲದಲ್ಲಿ ಹಸೆಮಣೆಯ ಮೇಲೆ ಕೂಡುವಾಗಲೂ ಬಲದ ಹೆಜ್ಜೆಯನ್ನೂ, ಹಗೆಯ ಪುರವನ್ನು ಪ್ರವೇಶಿಸುವಾಗ ಎಡಹೆಜ್ಜೆಯನ್ನೂ ಮುಂದಿಡಬೇಕೆಂದು ಬೃಹಸ್ಪತಿಯ ಅಭಿಪ್ರಾಯವಿರುವುದರಿಂದ ಹನುಮನು ಎಡದ ಹೆಜ್ಜೆಯನ್ನೇ ಮುಂದಿಟ್ಟು ಲಂಕೆಯನ್ನು ಪ್ರವೇಶಿಸಿದನು. (ರಾಮಾ.ಸುಂದರ).

ವಿಷ್ಣುವಿನ ಮೋಹಿನಿಯ ವೇಷಕ್ಕೆ ಮರುಳಾದ ಶಿವನ ವೀರ್ಯ ಜಾರಲು, ಅದನ್ನು ಸಪ್ತಋಷಿಗಳು ಅಂಜನೆಗೆ ಅರ್ಪಿಸಿದರು. ಅದರಿಂದ ಮಾರುತಿಯು ಹುಟ್ಟಿದರು. ಇವನು ಮುಂದೆ ಸೂರ್ಯನ ಸೂಚನೆಯಂತೆ ಸುಗ್ರೀವನ ಮಂತ್ರಿಯಾಗಿ ಋಷ್ಯಮೂಕಪರ್ವತದಲ್ಲಿರುವಾಗ ಅಲ್ಲಿ ಶ್ರೀರಾಮಲಕ್ಷ್ಮಣರ ಸಂದರ್ಶನವಾಯಿತು.

ಪುಂಜಿಕಸ್ಥಲಿ ಎಂಬ ಅಪ್ಸರೆ ಶಾಪದಿಂದ ಕುಂಜರನೆಂಬ ಕಪಿನಾಯಕನ ಮಗಳಾಗಿ ಅಂಜನೆ ಎಂಬ ಹೆಸರಿನಿಂದ ಪ್ರಸಿದ್ಧಳಾಗಿ, ಕೇಸರಿ ಎಂಬ ವಾನರವೀರನನ್ನು ವಿವಾಹವಾದಳು. ಒಮ್ಮೆ ವಾಯುವು ಈಕೆಯ ರೂಪಕ್ಕೆ ಮೋಹಿಸಿ, ಈಕೆಯನ್ನು ಬಲಾತ್ಕಾರದಿಂದ ಕೂಡಲು ಆಂಜನೇಯನು ಜನಿಸಿದನು.

ಹನುಮಂತನು ಯುದ್ಧರಂಗದಲ್ಲಿ ಧೂಮ್ರಾಕ್ಷ, ನಿಕುಂಭ ಮೊದಲಾದ ರಾಕ್ಷಸರನ್ನು ಕೊಂದನು. ಲಕ್ಷ್ಮಣನು ರಾವಣನ ಶಕ್ತ್ಯಾಯುಧದಿಂದ ಮೂರ್ಛೆ ಹೋದಾಗ ಈತನು ಸಂಜೀವಿನಿ ಮೂಲಿಕೆಯಿದ್ದ ಪರ್ವತವನ್ನೇ ಯುದ್ಧರಂಗಕ್ಕೆ ತಂದನು. ಅಗ್ನಿಪ್ರವೇಶ ಮಾಡಲು ಸಿದ್ಧನಾದ ಭರತನಿಗೆ ಶ್ರೀರಾಮನ ಆಗಮನದ ವಿಚಾರವನ್ನು ತಿಳಿಸಿದನು. ನೋ.--ರಾಮೇಶ್ವರ.

ಅಶ್ವಮೇಧದ ಕುದುರೆಯನ್ನು ಕಟ್ಟಿದ ಕುಶಲವರೊಡನೆ ಇವನು ಯುದ್ಧಮಾಡಿ, ಸೋತು, ಆ ಬಾಲಕರಿಂದ ಸೆರೆಹಿಡಿಯಲ್ಪಟ್ಟು, ಸೀತೆಯ ಬಳಿಗೆ ಕರೆತರಲ್ಪಡುವನು (ಜೈ.ಭಾ.).

ಶ್ರೀರಾಮನಿಂದ ಈತನಿಗೆ ಮುಂದಿನ ಬ್ರಹ್ಮಪಟ್ಟ ದೊರಕಿತು; ಅಲ್ಲದೆ ಈ ಕಲ್ಪಾಂತ್ಯದವರೆಗೆ ಬದುಕುವ ಆಶೀರ್ವಾದ ದೊರಕಿತು.

ಭೀಮನು ಸೌಗಂಧಿಕ ಪುಷ್ಪವನ್ನು ತರಲು ಹೊರಟಾಗ, ಆತನನ್ನು ದಾರಿಯಲ್ಲೇ ತಡೆದು, ವಿಶ್ವರೂಪವನ್ನು ತೋರಿಸಿ, ವರಗಳನ್ನು ಕೊಟ್ಟು ಮಾರ್ಗದರ್ಶಕನಾದನು (ಮ.ಆ.). ಈತನು ಶ್ರೀರಾಮನ ನಿಸ್ಸೀಮಭಕ್ತನೋ.--ಕೈಕೆ. ಹನುಮದ್ವೀಪದ ಒಡೆಯ; ಶೂರ್ಪನಖಿಯ ಅಳಿಯ; ಈತನಿಗೆ ೧೦೦೦ ಪತ್ನಿಯರು; ಕಪಿಧ್ವಜನು; ಕಪಿಯಲ್ಲ (ಜೈ.ರಾಮಾ).

ಲಂಕಾದಹನ ಮಾಡಿದ ಆಂಜನೇಯನು ತನ್ನ ಶಕ್ತಿಗೆ ತಾನೇ ಗರ್ವಿತನಾಗಿ ಬರುವಾಗ ಮಾರ್ಗದಲ್ಲಿ ಒಬ್ಬ ತಪಸ್ವಿಯು ಕುಳಿತು ತಪಸ್ಸು ಮಾಡುತ್ತಿದ್ದನು. ಆಗ ಮಾರುತಿಯು ತಾನು ಬಹಳ ಬಳಲಿ ಬಾಯಾರಿಕೆಯುಳ್ಳವನಾದುದರಿಂದ ದಯವಿಟ್ಟು ತನಗೆ ಜಲಾಶಯವನ್ನು ತೋರಿಸಬೇಕೆಂದನು. ಆಗ ವಾಯುನಂದನನು ತನ್ನಲ್ಲಿದ್ದ ಮುದ್ರಿಕೆ, ಮಣಿ ಮತ್ತು ಬ್ರಹ್ಮನು ಕೊಟ್ಟ ಪತ್ರವನ್ನು ಆ ಮುನಿಯ ಮುಂದಿಟ್ಟು, ಮುನಿಯು ತೋರಿದ ಕೊಳದ ನೀರನ್ನು ಕುಡಿದು ಹಿಂದಕ್ಕೆ ಬಂದಾಗ ಮಣಿ ಮತ್ತು ಪತ್ರ ಮಾತ್ರವಿತ್ತು; ಮುದ್ರಿಕೆಯಿರಲಿಲ್ಲ. ಇದರಿಂದ ಮಾರುತಿಯು ಮುನಿಯೊಡನೆ ಮುದ್ರಿಕೆಯನ್ನು ಪ್ರಸ್ತಾಪಿಸಲು ಮುನಿಯು 'ಮುಂದಿನ ಕೊಳದಲ್ಲಿದೆ' ಎಂದನು. ಮಾರುತಿ ಆ ಕೊಳದ ನೀರನ್ನು ಬತ್ತಿಸಿ ನೋಡುವಾಗ ಅದರಲ್ಲಿ ಅಸಂಖ್ಯ ಮುದ್ರಿಕೆಗಳಿದ್ದವು. ಎಲ್ಲವೂ ಒಂದೇ ರೀತಿಯಾಗಿದ್ದವು. ಇದರಿಂದ ಹನುಮನು ಮುನಿಯೊಡನೆ ಈ ಮುದ್ರಿಕೆಗಳ ವಿಚಾರವನ್ನು ಕೇಳಲು, 'ಪೂರ್ವದಲ್ಲಿ ಸಾವಿರಾರು ರಾಮಾವತಾರಗಳಾಗಿ ಲಂಕೆಯಿಂದ ಬಂದ ಹನುಮರು ತನ್ನನ್ನು ಕಂಡು, ನೀರನ್ನು ಕುಡಿದು ಹೋಗಿರುವರೆಂದೂ, ಈ ಮುದ್ರಿಕೆಗಳೆಲ್ಲ ಅವರದು' ಎಂದು ಹೇಳಲು ಅಂಜನೇಯನ ಗರ್ವವಿಳಿದು ಮುನಿಯ ಆಶೀರ್ವಾದ ಪಡೆದು ಶ್ರೀರಾಮನ ಸಾನ್ನಿಧ್ಯಕ್ಕೆ ಹೊರಟನು (ಅನಂ.ರಾ.).

ಹಯಗ್ರೀವ--೧. ವಿಷ್ಣುವಿನ ಅವತಾರ. ಲಕ್ಷ್ಮಿಯೊಡನೆ ಹರಿಯು ವಿನೋದದಿಂದಿರುವಾಗ ಅವನು ಆಕೆಯನ್ನು ಹಾಸ್ಯಮಾಡಲು, ಆಕೆ ಕೋಪದಿಂದ -- 'ನಿನ್ನ ತಲೆ ಉರುಳಲಿ' ಎಂದು ಶಾಪವಿತ್ತಳು.

ಮಧುಕೈಟಭರ ಹಾವಳಿಯನ್ನು ತಡೆಯಲಾರದೆ ದೇವತೆಗಳು ವಿಷ್ಣುವಿನ ಸನ್ನಿಧಿಗೆ ಬಂದಾಗ, ಕ್ಷೀರಸಮುದ್ರದಲ್ಲಿ ಮಹಾಶೇಷನನ್ನೇ ಹಾಸಿಗೆ ಮಾಡಿಕೊಂಡು ಶಾರ್ಙ್ಗ ಧನುಸ್ಸನ್ನು ತನ್ನ ದಿಂಬುಮಾಡಿಕೊಂಡು ಮಲಗಿದ್ದನು. ಆಗ ದೇವತೆಗಳಿಗೆ ವಿಷ್ಣುವನ್ನು ಎಚ್ಚರಿಸಲು ಉಪಾಯ ತೋರದೆ, ಗೆದ್ದಲುಹುಳುಗಳಿಗೆ -- 'ಯಜ್ಞದಲ್ಲಿ ಹವಿರ್ಭಾಗ ಕೊಡುತ್ತೇನೆ. ಶಾರ್ಙ್ಗಧನುವಿನ ಹೆದೆಯನ್ನು ಕತ್ತರಿಸಬೇಕು' ಎನ್ನಲು ಅವುಗಳು ಕೂಡಿ ಹಾಗೇ

ಮಾಡಿದವು. ಆಗ ಹೆದೆ ತುಂಡಾದ ಬಿಲ್ಲು ಸಿಡಿದು ವಿಷ್ಣುವಿನ ತಲೆ ಹಾರಿಸಿತು. ಆಗ ದೇವತೆಗಳು ಒಂದು ಕುದುರೆಯ ಮುಖವನ್ನು ವಿಷ್ಣುವಿನ ದೇಹಕ್ಕೆ ಜೋಡಿಸಿದರು. ಆಗ ವಿಷ್ಣುವು ಹಯಗ್ರೀವನಾದನು (ದೇವೀಭಾ., ಮ.ಉ.). ೨.ಒಬ್ಬ ರಾಕ್ಷಸ. ನರಕಾಸುರನ ಸೇನಾಪತಿಯೊಬ್ಬ. ಶ್ರೀಕೃಷ್ಣನು ಮುರಾಸುರನನ್ನು ಕೊಂದಮೇಲೆ, ಹಯಗ್ರೀವಾಸುರನು ದೊಡ್ಡ ಮರವನ್ನೆತ್ತಿಕೊಂಡು ಕೃಷ್ಣನಿಗೆ ಹೊಡೆಯಲು ಬರಲು ಕೃಷ್ಣನು ತನ್ನ ಬಾಣಗಳಿಂದ ಕೊಂದನು (ಹರಿ). ೩. ಒಬ್ಬ ರಾಕ್ಷಸ. ಇವನು ದೇವಿಯೊಡನೆ, ತನ್ನ ಹೆಸರಿನವನಿಂದ ಮಾತ್ರ ತನಗೆ ಮರಣ ಪ್ರಾಪ್ತವಾಗಲಿ -- ಎಂದು ವರಪಡೆದನು. ವಿಷ್ಣುವು ಹಯಗ್ರೀವಾವತಾರದಿಂದ ಇವನನ್ನು ಕೊಂದನು (ದೇವೀಭಾ., ಮ.ಶಾಂ.). ೪. ವೃಕಾ (ತ್ರಾ) ಸುರನ ಪರಿವಾರಕ್ಕೆ ಸೇರಿದ ಒಬ್ಬ ರಾಕ್ಷಸ (ಮತ್ಸ್ಯಪು. ಭಾಗ.). ೫. ಒಬ್ಬ ಮುನಿ. ಇವನು ಲಲಿತಾಸಹಸ್ರನಾಮವನ್ನು ಅಗಸ್ತ್ಯನಿಗೆ ಉಪದೇಶ ಮಾಡಿದನು (ಲಲಿತಾಸ). ೬.ರಾಜನೊಬ್ಬ. ಇವನು ಶತ್ರುಗಳೊಡನೆ ಯುದ್ಧಕ್ಕೆ ನಿಂತು, ಅಸಹಾಯನಾಗಿ ಅನೇಕ ಶತ್ರುಗಳನ್ನು ಕೊಂದು, ಯುದ್ಧದಲ್ಲಿ ಹತನಾಗಿ ಉತ್ತಮಗತಿಯನ್ನು ಹೊಂದಿದನು. ರಾಜರಿಗೆ ಯುದ್ಧವೇ ಪವಿತ್ರವಾದ ಯಜ್ಞ (ಮ.ಶಾಂ.). ೭.ಉಡುಪಿಯ ವಾದಿರಾಜ ಸ್ವಾಮಿಗಳಿಗೆ ಶ್ರೀಕೃಷ್ಣನು ಹಯಗ್ರೀವ ಸ್ವರೂಪದಿಂದ ಸಂದರ್ಶನವಿತ್ತನು.

ಹರ -- ೧. ಶಿವ. ೨. ಮಾಲಿ ಎಂಬ ರಕ್ಕಸನ ಮಗ. ನೋ.--ಮಾಲಿ

ಹರಧನುಸ್ಸು -- ಧನುರ್ವಿದ್ಯಾಭ್ಯಾಸ ಕಾಲದಲ್ಲಿ ಶಿವನು ಇದನ್ನು ತನ್ನ ಶಿಷ್ಯನಾದ ಪರಶುರಾಮನಿಗೆ ಕೊಟ್ಟನು. ಈ ಬಿಲ್ಲಿನಿಂದಲೇ ಪರಶುರಾಮನು ಕಾರ್ತವೀರ್ಯಾರ್ಜುನನನ್ನು ಕೊಂದುದ್ದಲ್ಲದೆ, ಇಪ್ಪತ್ತೊಂದು ಸಾರಿ ಕ್ಷತ್ರಿಯರನ್ನೂ ನಾಶಮಾಡಿದ. ಒಂದು ದಿನ ಈ ಭಾರವಾದ ಬಿಲ್ಲನ್ನು ವಿದೇಹರಾಜನ ಅರಮನೆಯ ಹೊರಗಿಟ್ಟು ಕಾರ್ಯಾಂತರದಿಂದ ಅರಮನೆಯೊಳಗೆ ಬಂದಿರಲು, ಸೀತಾದೇವಿಯು ಆ ಬಿಲ್ಲನ್ನು ಕುದುರೆಯನ್ನಾಗಿ ಮಾಡಿಕೊಂಡು ಆಡುತ್ತಿದ್ದಳು. ಇದನ್ನು ಕಂಡು ಪರಶುರಾಮನು -- 'ಈ ಕನ್ಯಾರತ್ನವು ಮಹಾಲಕ್ಷ್ಮಿಯೇ ಸೈ' ಎಂದು ತಿಳಿದು, 'ಈ ಧನುಸ್ಸಿಗೆ ಹೆದೆ ಬಿಗಿದವರಿಗೆ ಮಾತ್ರ ನಿನ್ನ ಮಗಳನ್ನು ಮದುವೆಮಾಡಿಕೊಡು' ಎಂದು ಹೇಳಿ ಧನುಸ್ಸನ್ನು ಜನಕನಿಗೆ ಒಪ್ಪಿಸಿ ಹೊರಟುಹೋದನು (ಅನಂ.ರಾ).

ಹರಿ -- ೧. ನಾರಾಯಣ. ೨. ತಾರಕಾಕ್ಷನ ಮಗ. ೩. ಪಾಂಡವಪಕ್ಷದ ಚೇದಿ ರಾಜ. ಇವನು ಕರ್ಣನಿಂದ ಹತನಾದನು (ಮ.ಕ.). ೪. ಅಕಂಪನರಾಜನ ಮಗ (ಮ.ದ್ರೋ.,ಶಾಂ). ೫. ಗರುಡನ ಒಬ್ಬ ಮಗ (ಮ.ಉ.). ೬. ಶ್ರೀಕೃಷ್ಣನ

ಪತ್ನಿಯಾದ ಸುಮಿತ್ರೆ, ವಿಜಯೆಯ ಅರಮನೆ (ಮ.ಸ.).

ಹರಳುಕೋಟೆ--ಇದನ್ನು ಬಭ್ರುವಾಹನನ ರಾಜಧಾನಿಯಾದ ಮಣಿಪುರವೆನ್ನುತ್ತಾರೆ. ಇಲ್ಲೇ ಚಿತ್ರಾಂಗದೆ ಮತ್ತು ಅರ್ಜುನನಿಗೆ ಮದುವೆಯಾಯಿತು. ಇದು ಮೈಸೂರಿನ ಚಾಮರಾಜನಗರದ ನೈಋತ್ಯದಲ್ಲಿದೆ.

ಹರಿಕೇಶ -- ಪೂರ್ಣಭದ್ರನೆಂಬ ಯಕ್ಷನ ಮಗ. ತಂದೆಯಿಂದ ತಿರಸ್ಕರಿಸಲ್ಪಟ್ಟ ಈತನು ಕಾಶಿಯನ್ನು ಸೇರಿ, ಉಗ್ರವಾಗಿ ತಪಸ್ಸು ಮಾಡಿ, ಶಿವನ ಅನುಗ್ರಹದಿಂದ ಕ್ಷೇತ್ರಪಾಲನೆಂಬ ಗಣಾಧೀಶ್ವರನಾದ (ಮತ್ಸ್ಯಪು.).

ಹರಿಣಾಶ್ವ -- ಸೂರ್ಯವಂಶದ ಕ್ಷತ್ರಿಯ (ಮ.ಶಾಂ.).

ಹರಿಣೆ -- ಹಿರಣ್ಯಕಶಿಪುವಿನ ಮಗಳು; ಈಕೆ ಅಗ್ನಿಯನ್ನು ಮದುವೆಯಾಗಿದ್ದಳು (ಮ.ವ.).

ಹರಿದ್ವಾರ -- ನೋ.--ಸಪ್ತಕ್ಷೇತ್ರ. ಬದರಿನಾರಾಯಣನ ಸಂದರ್ಶನಕ್ಕೆ ಇದು ಮಹಾದ್ವಾರವಾದುದರಿಂದ ಹರಿದ್ವಾರವೆಂದೂ ಇದನ್ನು ಕರೆಯುತ್ತಾರೆ.

ಹರಿಬಭ್ರು -- ಋಷಿಯೊಬ್ಬ (ಮ.ಸ.)

ಹರಿಮಿತ್ರ ---ವಿಷ್ಣುಭಕ್ತನೊಬ್ಬ. ನೋ.--ಭುವನೇಶ.

ಹರಿಮೇಧಾ -- ೧. ಧ್ವಜವತಿಯ ತಂದೆ. ನೋ.--ಸುಮೇಧ (ಮ.ಉ.). ೨. ಶ್ರೀ ನಾರಾಯಣ ನೋ.-- ಐತರೇಯ, ಸುಮೇಧ (ಮ.ವ.).

ಹರಿವರ್ಷ -- ೧. ಜಂಬೂ ದ್ವೀಪದ ಒಂದು ಖಂಡ (ಮ.ಸ.,ಭೀ). ೨. ರಾಜನೊಬ್ಬ. ಈತನು ಹೇಮಕೂಟ ಮತ್ತು ನಿಷಧಪರ್ವತಗಳ ನಡುವಣ ಭೂಭಾಗದ ರಾಜ. ಅಗ್ನೀಧ್ರ ಮತ್ತು ವಿಪ್ರಚಿತ್ತಿ ಎಂಬ ಅಪ್ಸರೆಯ ಒಂಬತ್ತು ಮಂದಿ ಮಕ್ಕಳಲ್ಲಿ ಈತನು ಮೂರನೆಯವನು. ಇವನು ಕಾಪಾಡುವ ಭೂಭಾಗಕ್ಕೆ ಹರಿವರ್ಷವೆಂದು ಹೆಸರು. ಈತನ ಪತ್ನಿ ಮೇರುಪುತ್ರಿಯಾದ ಉಪದಂಷ್ಟ್ರಿ (ಮ.ಸ.,ಭೀ., ವಿಷ್ಣುಪು.,ಭಾಗ.).

ಹರಿಶ್ಚಂದ್ರ -- ಸೂರ್ಯವಂಶದ ತ್ರಿಶಂಕುವಿನ ಮಗ; ಈತನ ತಾಯಿ ಸತ್ಯವ್ರತೆ; ಮಗ ರೋಹಿತ; ಪತ್ನಿ ಚಂದ್ರಮತಿ.

ಹರಿಶ್ಚಂದ್ರನು ಚಂದ್ರಮತಿಯನ್ನು ವಿವಾಹವಾಗಿ ವರುಣನ ವರದಿಂದ ರೋಹಿತನೆಂಬ ಮಗನನ್ನು ಪಡೆದನು. ಮುಂದೆ ವರುಣನು ರೋಹಿತನನ್ನು ತನಗೆ ಬಲಿಯಾಗಿ ಅರ್ಪಿಸಬೇಕೆನ್ನಲು ಹರಿಶ್ಚಂದ್ರನು ಅವಧಿಯನ್ನು ಮುಂದೆಹಾಕುತ್ತ ಬಂದು ಜಲೋದರ ರೋಗಿಯಾದನು. ಇದನ್ನು ತಿಳಿದ ರೋಹಿತನು ಹೆದರಿ

ಅರಣ್ಯಕ್ಕೆ ಹೋಗಿ ಕೆಲವು ವರ್ಷ ಅಡಗಿದ್ದು, ಋಚೀಕ ಋಷಿಯ ಮಗನಾದ ಶುನಶ್ಶೇಫನನ್ನು ಬೆಲೆಕೊಟ್ಟು ಪಡೆದು ವರುಣನ ಬಲಿಗಾಗಿ ಆತನನ್ನು ತಂದು ತಂದೆಗೆ ಒಪ್ಪಿಸಿದನು. ನೋ.--ರುಚೀಕ, ಶುನಶ್ಶೇಫ. ವರುಣನಿಗೆ ಈತನನ್ನು ಬಲಿಯಾಗಿ ಕೊಟ್ಟು ರೋಹಿತನು ತನ್ನ ತಂದೆಯ ಜಲೋದರ ರೋಗವನ್ನು ಗುಣಪಡಿಸಿದನು (ಹರಿ.,ಭಾಗ.).

ಸ್ವರ್ಗದಲ್ಲಿ ಇಂದ್ರನು --'ಭೂಲೋಕದಲ್ಲಿ ಸತ್ಯವಂತರು ಯಾರು?' ಎಂದು ವಸಿಷ್ಠನನ್ನು ಕೇಳಲು, ಆತನು 'ಹರಿಶ್ಚಂದ್ರನೇ ಸತ್ಯವಂತನು' ಎನ್ನಲು ವಿಶ್ವಾಮಿತ್ರನು ಆ ಮಾತನ್ನು ಅಲ್ಲಗಳೆದನು. ಮುಂದೆ ವಿಶ್ವಾಮಿತ್ರನು ಹರಿಶ್ಚಂದ್ರನ ಸತ್ಯಪರೀಕ್ಷೆಗಾಗಿ ಅವನ ರಾಜ್ಯವನ್ನೆಲ್ಲ ದಾನ ಪಡೆದನು. ಇನ್ನೂ ಆ ದಾನಕ್ಕೆ ತಕ್ಕ ದಕ್ಷಿಣೆ ಕೇಳಲು ರಾಜನು ಆತನಿಗೆ ದಕ್ಷಿಣೆ ಸಲ್ಲಿಸುವುದಕ್ಕಾಗಿ ಕಾಶೀಕ್ಷೇತ್ರದ ಒಬ್ಬ ಬ್ರಾಹ್ಮಣನಿಗೆ ತನ್ನ ಹೆಂಡತಿಮಕ್ಕಳನ್ನು ಮಾರಿ, ತನ್ನನ್ನು ಒಬ್ಬ ಹೊಲೆಯನಿಗೆ ಮಾರಿಕೊಂಡನು. ಮುಂದೆ ಮುನಿಯು, ರೋಹಿತನು ಹಾವು ಕಚ್ಚಿ ಸಾಯುವಂತೆಯೂ, ಚಂದ್ರಮತಿಗೆ ಕೊಲೆಯ ಅಪಾದನೆ ಬರುವಂತೆಯೂ ಮಾಡಿ ಹರಿಶ್ಚಂದ್ರನೇ ಪತ್ನಿಯ ಕೊಲೆ ಮಾಡಬೇಕಾಗಿ ಬಂದರೂ ಹಿಂಜರಿಯದೆ, ರಾಜನು ಸತ್ಯವನ್ನು ಪಾಲಿಸಿ, ಸತ್ಯಹರಿಶ್ಚಂದ್ರನೆಂಬ ಹೆಸರನ್ನು ಪಡೆದನು. ಈ ಸತ್ಯವ್ರತ ಪಾಲನೆಯಲ್ಲಿ ಹರಿಶ್ಚಂದ್ರನಿಗೆ ಶಿವನು ಪ್ರತ್ಯಕ್ಷನಾದನು (ಮ.ವ.,ಭಾ.,ಮಾರ್ಕಂ.ಪು.).

ಹರಿಶ್ಚಂದ್ರನ ಕಥೆಯು ವೇದ -- ಪುರಾಣ -- ಸಾಹಿತ್ಯಗಳಲ್ಲಿ ಪ್ರಸಿದ್ಧವಾಗಿದೆ. ಈ ಕಥೆಯು ಐತರೇಯ ಬ್ರಾಹ್ಮಣ, ಸಾಂಖ್ಯಾಯನ ಶ್ರೌತಸೂತ್ರ, ವೇದಾರ್ಥದೀಪಿಕೆ ಎಂಬ ವೈದಿಕ ಗ್ರಂಥಗಳಲ್ಲಿ ಬಂದಿದೆ. ಇನ್ನು ಪುರಾಣಗಳಲ್ಲಿ ಬ್ರಹ್ಮಾಂಡ, ವಾಯು, ಮತ್ಸ್ಯ, ಬ್ರಹ್ಮವೈವರ್ತ, ಶೈವ, ವಾಮನ, ಭಾಗವತ, ಮಾರ್ಕಂಡೇಯ, ಬ್ರಹ್ಮಪುರಾಣ ಮತ್ತು ಪದ್ಮಪುರಾಣದಲ್ಲೂ ಈ ಉಪಾಖ್ಯಾನವು ಬಂದಿದೆ. ನೋ.-- ವಿಶ್ವಾಮಿತ್ರ, ರೋಹಿತ, ಸತ್ಯವ್ರತ.

ಹರಿಶ್ರವ -- ಧೃತರಾಷ್ಟ್ರನ ಒಬ್ಬ ಮಗ (ಮ.ಆ.).

ಹರಿಹರ -- ಪುಣೆ -- ಬೆಂಗಳೂರು ಮಾರ್ಗದಲ್ಲಿ ಹುಬ್ಬಳ್ಳಿಯಿಂದ ೮೧ ಮೈಲು ದೂರವಿದೆ. ಇದು ತುಂಗಭದ್ರಾನದಿಯ ತೀರದಲ್ಲಿದೆ. ಈ ಕ್ಷೇತ್ರದ ಪ್ರಾಚೀನ ಹೆಸರು ಗುಹಾರಣ್ಯ ಇಲ್ಲಿ ಹರಿಹರೇಶ್ವರ ದೇವಾಲಯವಿದೆ. ಮಾಘಪೂರ್ಣಿಮೆಗೆ ಇಲ್ಲಿ ರಥೋತ್ಸವವಾಗುತ್ತದೆ. ಇಲ್ಲಿ ದೇವಾಲಯದ ಮೂರ್ತಿಯ ಅರ್ಧರೂಪ ಶಿವನದ್ದೂ, ಅರ್ಧರೂಪ ವಿಷ್ಣುವಿನದೂ

ಆಗಿರುತ್ತದೆ. ಇಲ್ಲಿ ನದಿಯಲ್ಲಿ ಹನ್ನೊಂದು ತೀರ್ಥಗಳಿವೆ (ಕ್ಷೇತ್ರದ.)

ಹರೀ -- ಕಶ್ಯಪನ ಪುತ್ರಿ; ಈಕೆಯ ತಾಯಿ ದಕ್ಷಪುತ್ರಿಯಾದ ಕ್ರೋಧವಶೆ. ವಾನರರು ಮತ್ತು ಗೋಲಾಂಗೂಲಗಳು (ದನಗಳಂತೆ ಉದ್ದ ಬಾಲದ ಕಪಿ) ಈಕೆಯ ಮಕ್ಕಳು (ಮ.ಆ)

ಹರ್ಯಶ್ವ -- ೧. ಸೂರ್ಯವಂಶದ ಅನರಣ್ಯನ ಮಗ. ಇವನಿಗೆ ಯಯಾತಿರಾಜನ ಮಗಳಾದ ಮಧುಮತಿಯಲ್ಲಿ ವಸುಮನನೆಂಬ ಮಗನೂ, ಮಧು ಎಂಬ ರಾಕ್ಷಸನ ಮಗಳಾದ ಮಧುಮತಿಯಲ್ಲಿ ಯದು ಎಂಬ ಮಗನೂ ಇದ್ದರು. ನೋ.-ಅನರಣ್ಯ (ಮ.ಉ.,ಹರಿ.). ೨. ಕಾಶೀರಾಜನೊಬ್ಬ. ಈತನ ಮಗ ಸುದೇವ; ಮೊಮ್ಮಗ ದಿವೋದಾಸ (ಮ.ಆ.,). ೩. ದಕ್ಷನ ಅಸಿಕ್ನಿ ಎಂಬ ಪತ್ನಿಯಲ್ಲಿ ಜನಿಸಿದ ಪುತ್ರರು. ಇವರೆಲ್ಲ ನಾರದರಿಂದ ಉಪದೇಶ ಹೊಂದಿ ಮೋಕ್ಷವನ್ನು ಸಂಪಾದಿಸಿದರು. ನೋ.-- ಶಬಲಾಶ್ವ, ನಾರದ, ತಕ್ಷ (ಭಾಗ.,ಹರಿ.,ವಿಷ್ಣುಪು.,ವಾಯುಪು.,).

ಹರ್ಯಂಗ -- ಚಂದ್ರವಂಶದ ರಾಜನೊಬ್ಬ. ಇವನು ಚಂಪಾ ರಾಜಧಾನಿಯನ್ನು ನಿರ್ಮಾಣ ಮಾಡಿದ ಚಂಪನ ಮಗ. ಇವನಿಗಾಗಿ ಋಷ್ಯಶೃಂಗನು ತನ್ನ ಮಂತ್ರ ಸಾಮರ್ಥ್ಯದಿಂದ ಇಂದ್ರನ ಐರಾವತವನ್ನು ಭೂಮಿಗಿಳಿಸಿದನು. ನೋ.--ಐರಾವತ.

ಹರ್ಷ -- ಧರ್ಮಪ್ರಜಾಪತಿಯ ಮಗ; ಈತನ ಪತ್ನಿ ನಂದಾ (ಮ.ಆ.).

ಹಲಾಯುಧ -- ಬಲರಾಮ; ನೇಗಿಲಿನಂತಹ ಆಯುಧ ಉಳ್ಳವನು (ಮ.ಆ.).

ಹವಿಷ್ಮತೀ -- ಅಂಗಿರಸ ಮುನಿಯ ಪುತ್ರಿ (ಮ.ವ.).

ಹಸ್ತಾ -- ದಕ್ಷನ ಮಗಳು; ಚಂದ್ರನ ಪತ್ನಿ. ಒಂದು ನಕ್ಷತ್ರ (ಮ.ಆ.,ವಿಷ್ಣುಪು.). ನೋ.ದಕ್ಷ.

ಹಸ್ತಿ -- ೧. ಚಂದ್ರವಂಶದ ಬೃಹತ್‌ಕ್ಷತ್ರನ ಮಗ. ಇವನು ಹಸ್ತಿನಾವತಿಯನ್ನು ನಿರ್ಮಿಸಿದನು (ಭಾಗ). ೨. ಚಂದ್ರವಂಶದ ಸುಹೋತ್ರನ ಮಗ. ಈತನ ತಾಯಿ ಜಯಂತಿ; ಮಗ ವಿಕುಂಜನ; ಪತ್ನಿ ಯಶೋದಾ. ಇವನು ಹಸ್ತಿನಾವತಿ ಪಟ್ಟಣವನ್ನು ನಿರ್ಮಿಸಿದನು (ಮ.ಆ.).

ಈ ಹಸ್ತಿನಾವತಿಯನ್ನೀಗ ದಿಲ್ಲಿ ಎನ್ನುತ್ತಾರೆ. ಈಗ ದಿಲ್ಲಿಯಲ್ಲಿ ಪಾಂಡವರ ಕಾಲದಕುರುಹು ಯಾವುದೂ ಸಿಕ್ಕುವುದಿಲ್ಲ. ಕುತುಬ್ ಮಿನಾರದ ಹತ್ತಿರ ಪಾಂಡವರ ಇಂದ್ರಪ್ರಸ್ಥನಗರವು ಇತ್ತು. ಈಗ ಈ ಪ್ರದೇಶ ನಿರ್ಮಾನುಷವಾಗಿದೆ. ಈಗ ಅಲ್ಲಿ ಪಾಂಡವರ ಕಾಲದಿಂದಲೂ ಇದ್ದ

ಯೋಗೇಶ್ವರೀ ದೇವಿಯ ಗುಡಿಯೊಂದು ನೋಡಲು ದೊರೆಯುತ್ತದೆ. ಮೀರತ್ ಮತ್ತು ದಿಲ್ಲಿಗಳ ನಡುವೆ ಹಸ್ತಿನಾಪುರವು ವಿಸ್ತಾರವಾಗಿತ್ತೆಂದು ಹೇಳುತ್ತಾರೆ. ಇಲ್ಲಿಯ ಸ್ಥಳೀಕರು ಪಾಂಡವರ ಅರಮನೆ, ಮಯನ ಸಭೆ ಇವುಗಳ ವಿವರಗಳನ್ನು ಹೇಳುತ್ತಾರೆ. ನೋ.--ನಳ.

ಹಹಾ -- ನೋ. -- ಹುಹಾ. ಅರಿಷ್ಟೆಯೆಂಬ ಅಪ್ಸರೆಯ ಮಕ್ಕಳಾದ ದೇವಗಂಧರ್ವರು (ಮ.ಆ.).

ಹಾರೀತ -- ಅಂಗಿರಸನ ಕುಲೋತ್ಪನ್ನನಾದ ಋಷಿ (ಮ.ಶಾಂ.).

ಹಾರ್ದಿಕ್ಯ -- ಚಂದ್ರವಂಶದ ಯದುಕುಲೋತ್ಪನ್ನನಾದ ಹೃದೀಕನ ಮಗ; ಕೃತವರ್ಮ (ಮ.ಆ.,ದ್ರೋ).

ಹಾಸಿನೀ -- ಅಪ್ಸರೆಯೊಬ್ಬಳು (ಮ.ಅನು).

ಹಾಲಾಹಲ -- ೧. ಸಮುದ್ರದಿಂದ ಉತ್ಪನ್ನವಾದ ವಿಷ. ದೇವದಾನವರು ಅಮೃತಕ್ಕಾಗಿ ಸಮುದ್ರವನ್ನು ಕಡೆಯುವಾಗ ಮೊದಲು ವಿಷ ಹುಟ್ಟಿತು. ಇದನ್ನು ಶಿವನು ತನ್ನ ಕೊರಳಲ್ಲಿ ಧರಿಸಿ, ವಿಷಕಂಠನಾದ; ನೀಲಕಂಠನೆನಿಸಿದ (**ಲಿಂಗಪು.**,ಭಾಗ). ೨. ಒಬ್ಬ ರಾಕ್ಷಸನ ಹೆಸರು. ವಿಷ್ಣುಶಿವರು ಇಬ್ಬರೂ ಸೇರಿ ಇವನನ್ನು ಕೊಂದರು (ದೇವೀಭಾ).

ಹಾಹಾ -- ನೋ.ಹಹಾ. ಇವನು ಗಂಧರ್ವರಲ್ಲಿ ಉತ್ತಮ ಗಾಯಕ. 'ಹಾ' ಎಂದು ಆಲಾಪನೆ ಮಾಡುವವ (ಮ.ಆ.).

ಹಿಡಿಂಬ -- ಕಿಮ್ಮೀರನ (ಕಿರ್ಮೀರ) ಸಹೋದರ; ಭೀಮನಿಂದ ಹತನಾದ. ಈತನ ತಂಗಿ ಹಿಡಿಂಬೆ ಅಥವಾ ಕಮಲಪಾಲಿಕೆಯನ್ನು ಭೀಮನು ವ್ಯಾಸರ ಅನುಮತಿಯಂತೆ ವಿವಾಹವಾಗಿ ಏಳು ತಿಂಗಳ ಮೇಲೆ ಘಟೋತ್ಕಚನೆಂಬ ಮಗನನ್ನು ಪಡೆದನು (ಮ.ಆ.).

ಹಿಡಿಂಬೆ -- ಹಿಡಿಂಬನ ಸೋದರಿ. ನೋ.--ಹಿಡಿಂಬ. ಈಕೆಯು ಭೀಮನೊಡನೆ ಹಗಲೆಲ್ಲ ವಿಹರಿಸುತ್ತಿದ್ದು, ರಾತ್ರಿ ಕುಂತಿಯ ಬಳಿ ಬಂದು ಆತನನ್ನು ಬಿಡುತ್ತಿದ್ದಳು (ಮ.ಆ.).

ಹಿಮವಂತ -- ಹಿಮಾಲಯ ಪರ್ವತ; ಇದರ ಅಭಿಮಾನಿದೇವತೆಗೂ ಇದೇ ಹೆಸರು. ಈತನ ಪತ್ನಿ ಪಿತೃದೇವತೆಗಳ ಕನ್ಯೆಯಾದ ಮೇನೆ; ಮಗ ಮೈನಾಕ ಪರ್ವತ. ಹಿಮವಂತನಿಗೆ ಅಪರ್ಣಾ, ಏಕಪರ್ಣ ಏಕಪಾಟಲಾ ಎಂಬ ಮೂವರು ಮಕ್ಕಳು. ಇದರಲ್ಲಿ ಅಪರ್ಣೆ ಶಿವನನ್ನೂ ಏಕಪರ್ಣೆ, ಅಸಿತಮುನಿಯನ್ನೂ, ಏಕಪಾಟಲೆ ಜೈಗೀಷವ್ಯ ಮುನಿಯನ್ನೂ ವಿವಾಹವಾದರು (ಹಂ). ಹಿಮಾಲಯದ ಉತ್ತರ ಭಾಗ ದೇವಭೂಮಿಯೆನ್ನಿಸಿತ್ತು.

ಹಿಮಾಲಯವೆಂಬುದು ಹಿಮವಂತನ ಈಗಿನ ಹೆಸರು. ಇದು ದೇವತಾತ್ಮವೆಂದೇ ಇಂದೂ ನಮ್ಮವರ ಭಾವನೆ. ಮನುಷ್ಯರಾದ ಯೋಗಿಗಳೂ, ಸಿದ್ಧರೂ ದೇವತಾ ಸಾನ್ನಿಧ್ಯವನ್ನು ಬಯಸಿ ಹಿಮಾಲಯದ ಗಿರಿಕಂದರಗಳಲ್ಲಿ ತಪಶ್ಚರ್ಯ ಮಾಡಲು ತಂಗುವುದು ತುಂಬ ಹಿಂದಿನಿಂದ ಬಂದ ಭಾರತೀಯ ಪದ್ಧತಿ. ಮನುಷ್ಯಲೋಕಕ್ಕೆ ಅತೀತರೆನ್ನಿಸಿದ ಕಿನ್ನರರೂ ಗಂಧರ್ವರೂ ಈ ಪ್ರದೇಶದಲ್ಲಿ ವಿಹರಿಸುತ್ತಿದ್ದರೆಂಬುದು ಜನರ ನಂಬಿಕೆ. ಹಿಮಾಲಯವು ದೇವಭೂಮಿ. ನೋ.--ಸ್ವರ್ಗ. ಅದರಲ್ಲಿದ್ದ ಒಂದು ಶಿಖರವಾದ ಕೈಲಾಸದ ಮೇಲೆ ಸ್ವಯಂ ಶಿವನೇ ಮನೆಮಾಡಿದ್ದಾನೆಂದು ಭಾರತೀಯರ ಭಾವನೆ. ಹಿಮವಂತನೇ ಒಬ್ಬ ದೇವತೆ. ಈ ಪರ್ವತಕ್ಕೇ ಪೂಜೆಪುರಸ್ಕಾರಗಳು ಸಲ್ಲುತ್ತಿವೆ. ಈ ಭಾವನೆಯು ಟಿಬೆಟ್ ಮತ್ತು ಚೀನಿಯರಲ್ಲೂ ಉಂಟು. ಹವಿಸ್ಸನ್ನು ಹಿಮಾಲಯಕ್ಕೆ ಅರ್ಪಿಸುವ ವಿಚಾರವು ಋಗ್ವೇದದಲ್ಲಿದೆ. ಎಲ್ಲ ದುಷ್ಟಶಕ್ತಿಗಳನ್ನು ಭಂಜನ ಮಾಡುವ ಅಂಜನವು ಹಿಮಾಲಯದ ತ್ರಿಕಕುದ ಎಂಬೆಡೆಯಲ್ಲಿ ಉಂಟಾಗುತ್ತದೆಂದು ಅಥರ್ವವೇದದಲ್ಲಿದೆ. ಈ ಹಿಮಾಲಯ ಪೂರ್ವದಲ್ಲಿ ಅಸ್ಸಾಂ ರಾಜ್ಯದ ಉಶಾಯ್ ಎಂಬ ಬೆಟ್ಟದಿಂದ ಪಶ್ಚಿಮದಲ್ಲಿ ಹಿಂದುಕುಶ್ ಬೆಟ್ಟದವರೆಗೆ ಸು.೧೫೦೦ ಮೈಲುಗಳಷ್ಟು ವಿಸ್ತಾರವನ್ನು ಈ ಪರ್ವತಶ್ರೇಣಿಯು ತುಂಬಿದೆ. ವಾಯು, ಕೂರ್ಮಪುರಾಣಗಳು--ಹಿಮಾಲಯದ ಎಲ್ಲ ಭಾಗವೂ ಪುಣ್ಯಪ್ರದೇಶವೆಂದೂ, ಬ್ರಹ್ಮಪುರಾಣವು ಹಿಮಾಲಯದಿಂದ ಹುಟ್ಟಿದ ಭಾಗೀರಥಿ, ನರ್ಮದಾ, ಯಮುನಾ, ಸರಸ್ವತಿ, ವಿಶೋಕಾ, ವಿತಸ್ತಾ ಎಂಬ ಈ ಆರು ನದಿಗಳು ದೇವತೀರ್ಥಗಳೆಂದೂ ಹೇಳಿದೆ. ಪದ್ಮಪುರಾಣದಲ್ಲಿ ಹಿಮಾಲಯದ ಭಾಗವಾದ ಬದರಿಕಾಶ್ರಮದ ವರ್ಣನೆಯಿದೆ.

ಬದರಿಕಾಶ್ರಮದಲ್ಲೇ ನರನಾರಾಯಣರೂ, ನಾರದರೂ ತಪಸ್ಸು ಮಾಡಿ ಸಿದ್ಧಿಯನ್ನು ಹೊಂದಿದರು. ಇಲ್ಲೇ ವ್ಯಾಸರು ಹದಿನೆಂಟು ಪುರಾಣಗಳನ್ನು ರಚಿಸಿದರು. ವ್ಯಾಸರು ಪುರಾಣಗಳನ್ನು ಬರೆದ ವ್ಯಾಸಗುಹೆ ಇನ್ನೂ ಇದೆ. ಈ ಪರ್ವತಾವಳಿಗಳಲ್ಲಿ ಅಮರನಾಥ, ಕೇದಾರನಾಥ, ದೇವಪ್ರಯಾಗ, ಗಂಗೋತ್ರಿ, ಯಮುನೋತ್ರಿ ಮೊದಲಾದ ಪವಿತ್ರ ಕ್ಷೇತ್ರಗಳಿವೆ. ಗಂಗೆಯ ಪಾವಿತ್ರ್ಯಕ್ಕೆ ಹಿಮಾಲಯವೇ ಹಿನ್ನೆಲೆ. ಇಷ್ಟು ಪ್ರಾಶಸ್ತ್ಯ ಪಾವಿತ್ರ್ಯ, ಪುಣ್ಯ ಪಡೆದ ಪರ್ವತ ಜಗತ್ತಿನಲ್ಲಿ ಇದೊಂದೇ. ಭೂಮಿಗೆ ಹೇಗಾದರೂ ಇರಲಿ, ನಮ್ಮ ಸಂಸ್ಕೃತಿಗೆ ಹಿಮಾಲಯವೇ ಮಾನದಂಡ (ಮ.ಭೀ.,ಮತ್ಸ್ಯಪು.ಲಿಂಗಪು., ಮ.ಶಾಂ.,). ಪಾಂಡವರು ಮಹಾಪ್ರಸ್ಥಾನಕ್ಕೆ ಹಿಮಾಲಯದ ಮೇಲೆಯೇ ಪ್ರವಾಸ ಮಾಡಿದರು (ಮ.ಸ್ವ).

ಹಿಂಸ್ರ--ವಿಶ್ವಾಮಿತ್ರನ ಮಗನೊಬ್ಬ. ಇವನ ಸಹೋದರರಾದ ವಾಗ್ದುಷ್ಟ, ಕ್ರೋಧನ, ಪಿಶುನ, ಕವಿ, ಖಸ್ರಮ, ಪಿತೃವರ್ತಿ ಎಂಬ ಆರು ಮಂದಿ ಹಿಂಸ್ರರೊಡನೆ ಕುರುಕ್ಷೇತ್ರದಲ್ಲಿ ವಾಸಮಾಡುತ್ತಿದ್ದು, ಮಹರ್ಷಿ ಗಾರ್ಗ್ಯರ ಶಿಷ್ಯರಾಗಿ ಅಧ್ಯಯನ ಮಾಡುವಾಗ ಒಮ್ಮೆ ಕವಿ ಮತ್ತು ಖಸ್ರುಮರನ್ನು ಬಿಟ್ಟು ಉಳಿದವರು ಗುರುಗಳ ಗೋವುಗಳನ್ನು ಕೊಂದು ತಿಂದುದರಿಂದ, ಅನೇಕ ಜನ್ಮ ಹೊಂದಿ ಕೊನೆಗೆ ಸದ್ಗತಿ ಪಡೆದರು (ಹಂ).

ಹಿರಣ್ಮಯವರ್ಷ -- ಈತನ ತಂದೆ ಅಗ್ನೀಧ್ರ ಮಹಾರಾಜ; ತಾಯಿ ಪೂರ್ವಚಿತ್ತಿ ಎಂಬ ಅಪ್ಸರೆ. ಈತನ ರಾಜ್ಯ ಶ್ವೇತ ಮತ್ತು ಶೃಂಗವಂತ ಪರ್ವತಗಳ ನಡುವಿನ ಭಾಗ. ಆಗ್ನೀಧ್ರನು ತನ್ನ ಒಂಬತ್ತು ಮಕ್ಕಳಿಗೆ ಜಂಬೂ, ನಾಭಿ, ಕಿಂಪುರುಷ, ಹರಿ, ಇಲಾವೃತ, ರಮ್ಯಕ, ಕುರು, ಭದ್ರಾಶ್ವ, ಕೇತುಮಾಲವೆಂಬ ಒಂಬತ್ತು ಖಂಡಗಳನ್ನು ಹಂಚಿದನು. (ಮ.ಸ.,ಭೀ.,ಭಾಗ.,ವಿಷ್ಣುಪು.).

ಹಿರಣ್ಯಕಶಿಪು -- ೧. ಈತನ ತಂದೆ ಕಶ್ಯಪ; ತಾಯಿ ದಿತಿ; ಅಣ್ಣ ಹಿರಣ್ಯಾಕ್ಷ (ತಮ್ಮನೆಂದೂ ಇದೆ). ತಂಗಿ ಸಿಂಹೆ; ಪತ್ನಿ ಜಂಭನೆಂಬ ರಾಕ್ಷಸನ ಪುತ್ರಿಯಾದ ಕಯಾಧು; ಮಕ್ಕಳು ಪ್ರಹ್ಲಾದ, ಸಂಹ್ಲಾದ (ಸಹ್ರಾದ), ಅನುಹ್ಲಾದ, ಶಿಬಿ ಮತ್ತು ಭಾಷ್ಕಲ; ಮಗಳು ಹರಿಣಿ (ರೋಹಿಣಿ). ಈಕೆ ವಿಶ್ವಪತಿ ಎಂಬ ಅಗ್ನಿಯ ಭಾರ್ಯೆ.

ಹಿರಣ್ಯಾಕ್ಷನನ್ನು ವರಾಹಾವತಾರದಿಂದ ಹರಿಯು ಕೊಂದಮೇಲೆ ಈತನ ತಮ್ಮ ಹಿರಣ್ಯಕಶಿಪುವಿಗೆ ಹರಿಯಲ್ಲಿ ಮತ್ತೂ ದ್ವೇಷ ಹೆಚ್ಚಿತು. ಈತನ ಮಗ ಪ್ರಹ್ಲಾದ ಹರಿಭಕ್ತನಾಗಿದ್ದ. ಪ್ರಹ್ಲಾದನು ಹರಿಭಕ್ತಿಯಿಂದ ವಿಮುಖನಾಗುವಂತೆ ಹಿರಣ್ಯನು ಮಗನಿಗೆ ಹಲವು ಚಿತ್ರಹಿಂಸೆಗಳನ್ನಿತ್ತರೂ ಮಗನ ಹರಿಭಕ್ತಿ ಹೆಚ್ಚಿತು. ಆಗ ರಾಕ್ಷಸ ರಾಜನು ಮಗನನ್ನು ಕೊಲ್ಲಲು ಯತ್ನ ನಡೆಸಿದಾಗ ಕಂಬದಿಂದ ನರಸಿಂಹನು ಹೊರಬಂದು ಸಂಧ್ಯಾಕಾಲದಲ್ಲಿ ಹೊಸ್ತಿಲ ಮೇಲೆ ತಾನು ಕುಳಿತು ತನ್ನ ತೊಡೆಯ ಮೇಲೆ ಅವನನ್ನು ಮಲಗಿಸಿಕೊಂಡು ಸೀಳಿ ಕೊಂದನು. ಹಿರಣ್ಯಕಶಿಪುವು ಬ್ರಹ್ಮನೊಡನೆ ತನಗೆ ಪ್ರಪಂಚದ ಯಾವ ಪ್ರಾಣಿಗಳಿಂದಲೂ, ಹಗಲೂ ರಾತ್ರಿಯೂ, ಒಳಗೂ ಹೊರಗೂ, ಯಾವ ಆಯುಧದಿಂದಲೂ ಮರಣವಾಗದಂತೆ ವರಪಡೆದನು. ಅಂತೆಯೇ ನರಸಿಂಹನು ಸಂಧ್ಯಾಕಾಲದಲ್ಲಿ ಹೊಸ್ತಿಲಿನ ಮೇಲೆ ಕೆಡೆದುಕೊಂಡು ಉಗುರಿನಿಂದ ಸೀಳಿ ಕೊಂದನು (ವಿಷ್ಣುಪು.ಭಾಗ.,ಮ.ಆ.,ವ.,ದೇವೀಭಾ.). ನೋ.-- ಜಯ, ವಿಜಯ.

ಮತ್ಸ್ಯಪುರಾಣದಲ್ಲಿ ಪ್ರಹ್ಲಾದನನ್ನು ಹಿರಣ್ಯಕಶಿಪುವು ಹಿಂಸಿಸಿದಂತೆ ಹೇಳಿಲ್ಲ. ಲೋಕಪೀಡೆಯೇ ನರಸಿಂಹಾವತಾರಕ್ಕೆ ಕಾರಣವಾಯಿತು ಎಂದು ಹೇಳಿದೆ. ನೋ.--ಹೋಳಿ (ಮತ್ಸ್ಯಪು.). ನೋ.-- ಪ್ರಹ್ಲಾದ. ಹಿರಣ್ಯಾಕ್ಷ. ೨.ಕಶ್ಯಪಮುನಿಂದ್ರ ದನು ಎಂಬಾಕೆಯಲ್ಲಿ ಹುಟ್ಟಿದವ. ಇವನು ಬ್ರಹ್ಮನಿಂದ ವರಪಡೆದು ಇಂದ್ರಾದಿ ಲೋಕಪಾಲಕರನ್ನು ಗೆದ್ದು, ಹತ್ತುಕೋಟಿ ವರ್ಷ ನ್ಯಾಯದಿಂದ ರಾಜ್ಯಭಾರಮಾಡಿದನು. ಇವನ ಮಗ ಮಂದಾರ; ಈತನು ಮಹಾಪರಾಕ್ರಮಿ (ಮ.ಅನು).

ಹಿರಣ್ಯಧನು (ಧೇನು) -- ಏಕಲವ್ಯನೆಂಬ ಬೇಡನ ತಂದೆ. ನೋ.--ಏಕಲವ್ಯ, ದ್ರೋಣ (ಮ.ಆ.).

ಹಿರಣ್ಯಪುರ -- ಪಾತಾಳಲೋಕದ ಕಾಲಕೇಯ ಮತ್ತು ಪೌಲೋಮರೆಂಬ ರಾಕ್ಷಸರ ಪಟ್ಟಣ. ಸ್ವರ್ಗದಿಂದ ಇಂದ್ರನ ರಥದಲ್ಲಿ ಹಿಂತಿರುಗಿದ ಅರ್ಜುನನು ಇವರನ್ನೆಲ್ಲ ನಾಶಮಾಡಿದನು. ಮಾತಲಿಯು ಅಳಿಯನನ್ನು ಹುಡುಕುತ್ತ ಇಲ್ಲಿಗೆ ಬಂದಿದ್ದನು (ಮ.ಆ.,ಉ.,).

ಹಿರಣ್ಯ ಬಿಂದು -- ಹಿಮಾಲಯದ ಪಾರ್ಶ್ವದಲ್ಲಿದ್ದ ಒಂದು ತೀರ್ಥ. ಇಲ್ಲಿಗೆ ಅರ್ಜುನನು ತೀರ್ಥಯಾತ್ರಾಕಾಲದಲ್ಲಿ ಬಂದಿದ್ದನು. ಇಲ್ಲೊಬ್ಬ ಈ ಹೆಸರಿನ ಮಹರ್ಷಿ ಇದ್ದನು (ಮ.ಆ.).

ಹಿರಣ್ಯರೇತಸ್ಸು -- ಪ್ರಿಯವ್ರತನ ಮಗ. ಈತನು ತನ್ನ ಏಳು ಮಂದಿ ಮಕ್ಕಳಿಗೆ ಕುಶದ್ವೀಪವನ್ನು ಏಳು ಪಾಲು ಮಾಡಿ ಹಂಚಿದನು. ಇವನಿಗೆ ವಸು, ವಸುದಾನ ದೃಢರುಚಿ, ನಾಭಿಗುಪ್ತ, ಸತ್ಯವ್ರತ, ವಿವಿಕ್ತ, ವಾಮದೇವರೆಂಬ ಏಳು ಮಂದಿ ಮಕ್ಕಳಿದ್ದರು (ದೇವೀಭಾ.ಭಾಗ).

ಹಿರಣ್ಯರೋಮ -- ೧. ರುಕ್ಮಿಣಿಯ ತಂದೆಯಾದ ಭೀಷ್ಮಕನ ಇನ್ನೊಂದು ಹೆಸರು (ಮ.ಉ.). ೨. ಜನಕವಂಶದ ಒಬ್ಬ ರಾಜ. ನೋ.--ಜನಕ (ರಾಮಾ.ಬಾಲ).

ಹಿರಣ್ಯವರ್ಮ -- ದ್ರುಪದನ ಮಗನಾದ ಶಿಖಂಡಿಯ ಮಾವ; ಇವನು ದಶಾರ್ಣದೇಶದ ರಾಜ. ನೋ. ಶಿಖಂಡಿ - (ಮ.ಉ.)

ಹಿರಣ್ಯಹಸ್ತ -- ೧. ಕಾಲವೃಕ್ಷನೆಂಬ ಮಹರ್ಷಿಯಿಂದ ಶಕುಂತಿಯಲ್ಲಿ (ಪಕ್ಷಿ) ಜನಸಿದ ಮಹರ್ಷಿ. ಈತನ ಪತ್ನಿ ಮದಿರಾಶ್ವ ರಾಜಪುತ್ರಿಯಾದ ಸುಮಧ್ಯಮೆ (ಮ.ಶಾಂ.ಅನು). ೨. ವಧ್ರಿಮತಿಯೆಂಬ ರಾಜಪುತ್ರಿಗೆ ಅಶ್ವಿನೀದೇವತೆಗಳ ಅನುಗ್ರಹದಿಂದ ಹುಟ್ಟಿದವ. ನೋ.--ವಧ್ರಿಮತಿ.

ಹಿರಣ್ಯಾಕ್ಷ -- ೧. ಹಿರಣ್ಯಕಶಿಪು ಎಂಬ ರಾಕ್ಷಸನ ಸಹೋದರ. ನೋ.--ಹಿರಣ್ಯಕಶಿಪು, ಜಯ, ವಿಜಯ., ಈತನ ಪತ್ನಿ ರುಶದ್ಭಾನು (ರುಷಾಭಾನು); ಈತನಿಗೆ ಶಕುನಿ,

ಶಂಬರ, ದೃಷ್ಟಿ, ವೃಕ, ಕಾಲನಾಭ, ಉತ್ಕಟ ಮೊದಲಾದ ಹಲವರು ಮಕ್ಕಳಿದ್ದರು. ಈತನು ಬ್ರಹ್ಮನ ವರದಿಂದ ಲೋಕಕಂಟಕನಾಗಿರುವಾಗ ಶ್ರೀವಿಷ್ಣು ವರಾಹಾವತಾರದಿಂದ ಕೊಂದನು. ನೋ.--ವರಾಹ.

ಆದಿವರಾಹನಿಗೆ ನಾಲ್ಕು ವೇದಗಳೇ ನಾಲ್ಕು ಕಾಲುಗಳು; ಯಜ್ಞದ ಯೂಪಸ್ತಂಭವೇ ಕೋರೆಹಲ್ಲುಗಳು; ಯಾಗಗಳೆಲ್ಲಾ ಇವನ ದಂತಗಳು; ಚಯನವೆಂಬ ಅಗ್ನಿವೇದಿಕೆಯೇ ಇವನ ಮುಖ; ಅಗ್ನಿಯೇ ನಾಲಗೆ; ದರ್ಭೆಗಳೇ ರೋಮಗಳು; ಬ್ರಹ್ಮಸ್ಥಾನದಲ್ಲಿರುವ ಋತ್ವಿಕ್ಕೇ ಇವನ ತಲೆ; ಅಹೋರಾತ್ರಿಗಳೆರಡೂ ಇವನ ಕಣ್ಣುಗಳು; ವೇದವೇ ಇವನ ಒಡಲು, ಸ್ವರಗಳೇ ಆಭರಣಗಳು; ಆಜ್ಯವೇ ಮೂಗು, ಸ್ರುವವೆಂಬ ಯಜ್ಞದರ್ವಿಯೇ ಅವನ ಮೂರ್ತಿ; ಸಾಮವೇದಘೋಷವೇ ಅವನ ಧ್ವನಿ; ಪ್ರಾಯಶ್ಚಿತ್ತವೇ ಮುಖವು; ಯಜ್ಞಪಶುವೇ ಅವನ ಜಾನು; ಧರ್ಮವೇ ಮೂರ್ತಿ; ಸಾಮಗಾನದೊಡನೆ ಉದ್ಗಾತೃವು ಮಾಡತಕ್ಕ ಹೋಮವೇ ಅವನ ಪುರುಷಲಿಂಗ; ಪಶುಗಳೂ ಸೋಮಲತೆಗಳೂ ಬೀಜಗಳು; ಮಂತ್ರಗಳೇ ಅಸ್ಥಿಗಳು; ಯಾಗವೇದಿಕೆಯೇ ಅವನ ತೋಳುಗಳು; ಹವಿಸ್ಸೇ ದೇಹ ಗಂಧವು; ಹವ್ಯಕವ್ಯಗಳೇ ಮಲಮೂತ್ರಗಳು; ಯಾಗದೀಕ್ಷೆಯೇ ಅವನ ಬಲವು; ದಕ್ಷಿಣೆಯೇ ಅವನ ಹೃದಯವು! (ಮ.ಸ.) ಇಂತಹ ದಿವ್ಯಮೂರ್ತಿಯು ಹಿರಣ್ಯಾಕ್ಷನನ್ನು ನಾಶಮಾಡಿದನು (ಮ.ಶಾಂ.,ಭಾಗ., ವಾಯುಪು.,ಮತ್ಸ್ಯಪು.,ಲಿಂಗಪು.,ಪದ್ಮಪು.,). ೨.ವಿಶ್ವಾಮಿತ್ರನಿಗೆ ಶಾಲಾವತಿಯೆಂಬ ಪತ್ನಿಯಲ್ಲಿ ಜನಿಸಿದ ಹಿರಿಯ ಮಗ. ನೋ.--ಶಾಲಾವತಿ.

ಹಿರಣ್ವತಿ -- ಕುರುಕ್ಷೇತ್ರದ ಸಮೀಪದಲ್ಲಿ ಹರಿಯುವ ಒಂದು ನದಿ (ಮ.ಉ.,ಅನು.,ಭೀ.,ಆ.).

ಹೀಕ -- ಪಿಶಾಚವೊಂದು (ಮ.ಕ.).

ಹುಂಡ -- ಈ ರಾಕ್ಷಸನು ಅಶೋಕಸುಂದರಿಯನ್ನು ನಹುಷ ವಿವಾಹವಾಗಬಾರದೆಂದು ಆತನು ಹುಟ್ಟಿದೊಡನೆ ತಂದೆತಾಯಿಗಳ ಬಳಿಯಿಂದ ಆತನನ್ನು ಅಗಲಿಸಿ ವಸಿಷ್ಠಾಶ್ರಮದ ಬಳಿಯಲ್ಲಿ ಆತನನ್ನು ಬಿಸುಟುಹೋದನು. ಮುಂದೆ ನಾರದರಿಂದ ಆಯು ಮಹಾರಾಜನು ನಹುಷನ ವಿಚಾರವನ್ನು ತಿಳಿದು ಆತನನ್ನು ತಂದು ಜಾಗ್ರತೆಯಿಂದ ರಕ್ಷಿಸಿದನು. ನಹುಷನು ದೊಡ್ಡವನಾಗಿ ಹುಂಡ ದಾನವನನ್ನು ಕೊಂದು ಅಶೋಕ ಸುಂದರಿಯನ್ನು ವಿವಾಹವಾದನು (ಪದ್ಮಪು.).

ಹೂಣ -- ದೇಶವೊಂದು (ಮ.ಭೀ.). ಬರ್ಬರರು; ಕಾಡುಮನುಷ್ಯರು; ಪ್ರಾಚೀನ ಕಾಲದ ಯುರೋಪಿನ ಒಂದು ಜನವರ್ಗ.

ಹೂಹೂ -- ಅರಿಷ್ಟೆಯ ಪುತ್ರರಾದ ಗಂಧರ್ವರು. ದೇವಲ ಋಷಿಯ ಶಾಪದಿಂದ

ಇವರು ಮೊಸಳೆಯಾಗಿ ಗಜೇಂದ್ರನನ್ನು ಹಿಡಿದಾಗ ಹರಿಯಿಂದ ಶಾಪ ವಿಮೋಚನೆಯಾಯಿತು. ಇವರು ದೇವಗಾಯಕರು. 'ಹೂ' ಎಂದು ಆಲಾಪನೆ ಮಾಡುವವರು. ನೋ.--ಹಾಹಾ (ಮ.ಆ.,ಭಾಗ.).

ಹೃದಿಕ -- ಚಂದ್ರವಂಶದ ಯಾದವನೊಬ್ಬ. ಇವನ ಮಗ ಕೃತವರ್ಮ (ಮ.ಆ.).

ಹೃಷೀಕೇಶ -- ೧. ಇಂದ್ರಿಯಗಳ ಒಡೆಯನಾದ ನಾರಾಯಣ (ಹೃಷೀಕ = ಇಂದ್ರಿಯಗಳಿಗೆ, ಈಶ = ಒಡೆಯ). (ಮ.ಶಾಂ.). ೨. ಹಿಮಾಲಯದ ಒಂದು ಪುಣ್ಯಕ್ಷೇತ್ರ. ಇದು ಹರಿದ್ವಾರದಿಂದ ೧೫ ಮೈಲುಗಳ ದೂರದಲ್ಲಿದೆ. ಇದು ಋಷಿಗಳ ವಾಸಸ್ಥಾನವಾದುದರಿಂದ ಋಷಿಕೇಶವೆನ್ನುತ್ತಾರೆ. ಇದು ದೊಡ್ಡ ಹಳ್ಳಿ ಇದ್ದಂತಿದೆ. ಊರಿನ ಹತ್ತಿರ ಗಂಗಾನದಿ ಹರಿಯುತ್ತಿದೆ. ಇಲ್ಲಿ ಅನೇಕ ದೇವಾಲಯಗಳಿವೆ (ಮ.ಶಾಂ.).

ಹೇಮಕೂಟ -- ಸಪ್ತಕುಲಪರ್ವತಗಳಲ್ಲೊಂದು. ಇದರ ಶಿಖರದಲ್ಲಿ ಸರಸ್ವತಿ ನದಿಯು ಹುಟ್ಟುತ್ತದೆ. ಕೈಲಾಸವು ಈ ಪರ್ವತದ ಒಂದು ಶಿಖರ. ಈ ಶಿಖರದಲ್ಲಿ ಕುಬೇರನ ಪಟ್ಟಣವಾದ ಅಲಕಾನಗರವಿದೆ (ಮ.ಶ.,ಸ.,ಭೀ.,).

ಹೇಮವರ್ಣ -- ೧. ಗರುಡನ ಒಬ್ಬ ಮಗ (ಮ.ಭೀ.). ೨. ರೋಚಮಾನನ ಮಗ ನೋ. ರೋಚಮಾನ (ಮ.ದ್ರೋ)

ಹೇಮಾ -- ಒಂದು ನದಿ (ಮ.ಭೀ.). ೨. ಮಯಾಸುರನ ಪತ್ನಿ. ಮಯನು ಸುಂದರವಾದ ಅರಮನೆ, ಉದ್ಯಾನಗಳನ್ನು ರಚಿಸಿಕೊಂಡು ಐದುನೂರು ವರ್ಷಗಳವರೆಗೆ ಹೇಮೆಯೊಂದಿಗೆ ವಿಷಯ ಸುಖಗಳನ್ನನುಭವಿಸುತ್ತಿದ್ದು, ಮಾಯಾವಿ ಮತ್ತು ದುಂದುಭಿ ಎಂಬ ಇಬ್ಬರು ಗಂಡುಮಕ್ಕಳನ್ನೂ ಮಂಡೋದರಿ ಎಂಬ ಮಗಳನ್ನೂ ಪಡೆದನು. ಹೇಮೆಯು ಸ್ವರ್ಗಕ್ಕೆ ಹೊರಟುಹೋದಮೇಲೆ ಮಯಾಸುರನು ತನ್ನ ಅರಮನೆಯನ್ನು ಬಿಟ್ಟು ಬರುತ್ತಿರುವಾಗ, ರಾವಣನನ್ನು ಕಂಡು ಮೆಚ್ಚಿ, ಮಂಡೋದರಿಯನ್ನು ಆತನಿಗೆ ವಿವಾಹಮಾಡಿಕೊಟ್ಟನು. ನೋ.--ಮಯ, ಮಾಯಾವಿ, ದಂದುಭಿ, ಶಾಂಡಿಲಿ, ಸ್ವಯಂಪ್ರಭಾ (ರಾಮ.ಉತ್ತರ). ೩. ಕುಶನ ಮಗಳು. ಅವಂತಿರಾಜನ ಮಗನಾದ ಚಿತ್ರರಥನು ಈಕೆಯನ್ನು ವಿವಾಹವಾದನು (ಆನಂ.ರಾ.).

ಹೈಡಿಂಬ -- ಭೀಮ ಮತ್ತು ಹಿಡಿಂಬೆಯಲ್ಲಿ ಜನಿಸಿದ ವೀರರಾಕ್ಷಸ. ಈತನಿಗೆ ಘಟೋತ್ಕಚನೆಂದು ಹೆಸರು. ಈತನು ಅಭಿಮನ್ಯುವಿಗೆ ಬಲರಾಮನ ಮಗಳಾದ ಶಶಿರೇಖೆಯನ್ನಿತ್ತು ವಿವಾಹ ಮಾಡಲು ಕಾರಣನು. ಈತನು ದ್ರೋಣನ ಸೇನಾಧಿಪತ್ಯದ ಕಾಲದಲ್ಲಿ ರಾತ್ರಿ ಯುದ್ಧದಲ್ಲಿ ಕರ್ಣನಿಗೆ ಇಂದ್ರನು ಕೊಟ್ಟ ಒಂದು ಶಕ್ತ್ಯಾಯುಧದಿಂದ ಮೃತನಾದನು.

ಈತನಿಗೆ ಒಂದು ಅಕ್ಷೋಹಿಣಿ ರಕ್ಕಸಸೇನೆಯ ಬೆಂಬಲವಿತ್ತು. ಕರ್ಣ ಆ

ರಾತ್ರಿಯುದ್ಧದಲ್ಲೂ ಪಾಂಡವಸೇನೆಯನ್ನು ಕೊಲ್ಲುತ್ತಿದ್ದ ವೀರರಿಗೆ ಭಯವನ್ನುಂಟುಮಾಡುತ್ತಿರಲು, ಶ್ರೀಕೃಷ್ಣನು ಘಟೋತ್ಕಚನನ್ನು ನೋಡಿ -- 'ಎಲೈ ವೀರನೇ, ನಿನ್ನ ಪರಾಕ್ರಮವನ್ನು ತೋರಿಸುವುದಕ್ಕೆ ಇದೇ ಸಮಯ ' ಎನ್ನಲು, ನೀಲವರ್ಣದ ಮೇಘದಂತೆ ಮೈಕಾಂತಿಯುಳ್ಳ ಘಟೋತ್ಕಚನು ಪರ್ವತದಂತೆ ತನ್ನ ಮೈಯನ್ನು ಬೆಳೆಸಿಕೊಂಡು, ಉದ್ದವಾದ ಬಿಲ್ಲನ್ನು ಹಿಡಿದು ಕರ್ಣನಿಗೆ ಇದಿರಾದನು. ಆ ವೇಳೆ ಜಟಾಸುರನ ಮಗನಾದ ಅಲಂಬುಸನು ದುರ್ಯೋಧನನೊಡನೆ ಅಪ್ಪಣೆ ಪಡೆದು ಘಟೋತ್ಕಚನನ್ನು ಬಂದು ತಡೆದನು. ಘಟೋತ್ಕಚನು ಅವನನ್ನು ಬಿಗಿದಪ್ಪಿ ಹಿಚುಕಿ ಕೊಂದುಬಿಟ್ಟನು. ಮುಂದೆ ಬಕಾಸುರನ ಮಿತ್ರನಾದ ಅಲಾಯುಧನೂ ಘಟೋತ್ಕಚನೊಡನೆ ಹೋರಾಡಿ ತಲೆ ಕಳೆದುಕೊಂಡನು.

ಕೂಡಲೇ ಇವನು ಕರ್ಣನ ಮೇಲೆ ಬಿದ್ದು ಮಾಯಾಯುದ್ಧಕ್ಕೆ ತೊಡಗಿದನು. ಕರ್ಣನ ರಥ ನುಚ್ಚುನೂರಾಯಿತು. ಒಮ್ಮೊಮ್ಮೆ ಘಟೋತ್ಕಚನು ಸಾವಿರ ಘಟೋತ್ಕಚರಂತೆಯೂ, ಇನ್ನೊಮ್ಮೆ ಸಿಂಹವ್ಯಾಘ್ರಗಳಂತೆಯೂ ಮಾಯಾಯುದ್ಧವನ್ನು ಮಾಡುತ್ತಿರಲು, ದುರ್ಯೋಧನನ ಸೇನೆಯ ಮಾತು ಹಾಗಿರಲಿ; ಮೂರು ಲೋಕವು ಕಂಪಿಸತೊಡಗಿತು. ಆಗ ದುರ್ಯೋಧನನು ಕರ್ಣನ ಬಳಿಗೆ ಬಂದು --' ಅರ್ಜುನನಿಗಾಗಿ ಕಾದಿಟ್ಟ ಶಕ್ತಿಯನ್ನು ಈತನ ಮೇಲೆ ಪ್ರಯೋಗಿಸು' ಎನ್ನಲು ಕರ್ಣನು ಆ ದಿವ್ಯವಾದ ಐಂದ್ರಶಕ್ತಿಯನ್ನು ಈ ರಾಕ್ಷಸನ ಮೇಲೆ ಎಸೆದನು. ಆ ಶಕ್ತಿಯು ಘಟೋತ್ಕಚನ ಎದೆಯನ್ನು ಸೀಳಿ ಉಚ್ಚಳಿಸಿತು. ಘಟೋತ್ಕಚನು ದೊಡ್ಡ ಬೆಟ್ಟದಂತೆ ನೆಲದ ಮೇಲೆ ಪ್ರಾಣ ಬಿಟ್ಟನು (ಮ.ಭೀ.ದ್ರೋ.).

ಹೈಮವತಿ -- ೧. ಹಿಮಾಲಯದಲ್ಲಿ ಹುಟ್ಟಿದ ನದಿಯೊಂದು; ಶತದ್ರು ನದಿಗೆ ಈ ಹೆಸರಿದೆ. ನೋ. --ಶತದ್ರು, ವಸಿಷ್ಠ (ಮ.ಆ.,ಸ.,ಭೀ.,). ೨. ವಿಶ್ವಾಮಿತ್ರನ ಪತ್ನಿ ೩.ಹಿಮವಂತನ ಮಗಳಾದ ಪಾರ್ವತಿ (ಶಿವಪು., ಲಿಂಗಪು).

ಹೈಹಯ -- ಸೂರ್ಯವಂಶದ ಶರ್ಯಾತಿಯ ಪುತ್ರ. ನೋ.--ವೀತಹವ್ಯ, ಕಾರ್ತವೀರ್ಯಾರ್ಜುನ ಶರ್ಯಾತಿ (ಮ.ಅನು).

ಹೋತ್ರವಾಹನ -- ೧. ಕಾಶೀರಾಜನ ಮಾವ; ಅಂಬೆ, ಅಂಬಿಕೆ, ಅಂಬಾಲಿಕೆಯರ ತಾಯಿಯ ತಂದೆ. ಈತ ರಾಜರ್ಷಿ (ಮ.ಉ.,ವ.). ೨. ಅಂಬೆಯನ್ನು ಪರಶುರಾಮನಲ್ಲಿ ಕಳುಹಿಸಿದನು. ಶೈಖಾವತ್ಯಮುನಿಯ ಆಶ್ರಮದಲ್ಲಿದ್ದ ಅಂಬೆಯು ಮುಂದೇನು ಮಾಡಬೇಕೆಂದು ಯೋಚಿಸುತ್ತಿರುವಾಗ ಆ ಆಶ್ರಮಕ್ಕೆ ಹೋತ್ರವಾಹನನೆಂಬ ರಾಜಋಷಿಯು ಬಂದನು. ಈತನು ಅಂಬೆಯ ಮಾತಾಮಹ. ಇವನು ಆ ಆಶ್ರಮದಲ್ಲಿರುವಾಗಲೇ ಪರಶುರಾಮನಿಗೆ

ಇಷ್ಟನಾದ ಅಕೃತವ್ರಣನು ಅಲ್ಲಿಗೆ ಬಂದನು. ಅವನೊಡನೆ ಮಾತಾಡುತ್ತಿರುವಾಗ ಶಿಷ್ಯರೊಡನೆ ಪರಶುರಾಮನೂ ಅಲ್ಲಿಗೆ ಬಂದನು. (ಮ.ಉ.,ವ.).

ಹೋಳಿ -- ೧. ಭಾರತದ ಒಂದು ಜನಪ್ರಿಯವಾದ ಹಬ್ಬ. ಇದು ಚಳಿಗಾಲದ ಕೊನೆಯಲ್ಲಿ ವಸಂತಋತುವಿನ ಆರಂಭದಲ್ಲಿ ಹೋಳಿಹುಣ್ಣಿಮೆಯ ದಿನ ಬರುವುದು. ಮಥುರೆಯಲ್ಲಿ ರಾಧಾಕೃಷ್ಣರ ಪ್ರೇಮದಾಟದ ಆಚರಣೆಯನ್ನೇ ಹೋಳಿಹಬ್ಬವೆನ್ನುತ್ತಾರೆ. ಉತ್ತರ ಪ್ರದೇಶದಲ್ಲಿ ಈ ದಿನ ಕೃಷ್ಣ ಮೂರ್ತಿಯನ್ನಿಟ್ಟು ಪೂಜಿಸುವರಲ್ಲದೆ, ಗೀತನೃತ್ಯಗಳ ಕಾರ್ಯಕ್ರಮವನ್ನೂ ನೆರವೇರಿಸುವರು. ರಾಜಸ್ಥಾನದಲ್ಲಿ ದಕ್ಷಿಣ ಭಾರತೀಯರಂತೆ ಎಳೆಯರೆಲ್ಲ ಓಕುಳಿಯಾಡುವರು. ಶ್ರೀಕೃಷ್ಣರಾಧೆಯರ ಪ್ರಣಯದಾಟದಲ್ಲಿ ಓಕುಳಿಯಾಟವೂ ಒಂದಾಗಿತ್ತೆಂಬುದನ್ನು ನಾವೂ ಮರೆಯಬಾರದು. ಸುಗ್ಗಿಯ ಕೊನೆಯ ದಿನಗಳಲ್ಲಿ ಈ ಹಬ್ಬ ಬರುವುದರಿಂದ ರೈತರೆಲ್ಲಾ ಉತ್ಸಾಹದಿಂದ ಇದನ್ನು ಆಚರಿಸುತ್ತಾರೆ.

ಹೋಳಿ ಅಥವಾ ಹೋಳಿಕೆ ಎಂಬುವಳೊಬ್ಬಳು ರಾಕ್ಷಸಿ. ಇವಳು ಶಿವನ ವರದಿಂದ ಪ್ರಬಲಳಾಗಿ ಮಕ್ಕಳನ್ನು ತಿನ್ನುತ್ತ ಜನರಿಗೆ ಬಹು ಕೆಡಕನ್ನುಂಟುಮಾಡುತ್ತಿದ್ದಳು. ಆಗ ಜನರೆಲ್ಲ ಕೂಡಿ ವಸಿಷ್ಠ ಮಹರ್ಷಿಯನ್ನು ಪ್ರಾರ್ಥಿಸಲು, ವಸಿಷ್ಠರು ಫಾಲ್ಗುಣ ಹುಣ್ಣಿಮೆಯಂದು ಆ ರಾಕ್ಷಸಿಯ ಆಕಾರ ಮಾಡಿ ಉರಿವ ಬೆಂಕಿಯಲ್ಲಿ ಒಗೆದು ಅವಳ ಹೆಸರಿನಲ್ಲಿ ಅವಾಚ್ಯಶಬ್ದಗಳನ್ನೆಲ್ಲ ಅನ್ನಿರಿ. ಇದರಿಂದ ಅವಳಿಗೆ ಜೀವನದಲ್ಲೇ ಜಿಗುಪ್ಸೆಯುಂಟಾಗಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಬಯ್ಯುತ್ತ ಅವಳ ಬೆನ್ನಹತ್ತಿರಿ' ಎಂದನು. ಇಂದಿಗೂ ಜನರು ತಮ್ಮ ತೊಂದರೆಗಳನ್ನು ರಾಕ್ಷಸಿಯ ರೂಪದಲ್ಲಿ ಬೆಂಕಿಯೊಳಗೆ ಒಗೆಯುವರು. ೨. ಹಿರಣ್ಯಕಶಿಪುವಿನ ತಂಗಿ ಹೋಳಿ. ಈ ಸಹೋದರ ಸಹೋದರಿಯರು ಹರಿಭಕ್ತನಾದ ಪ್ರಹ್ಲಾದನಿಗೆ ತುಂಬ ಹಿಂಸೆ ಕೊಟ್ಟರೂ ಆತನಿಗೆ ಹರಿಯಲ್ಲಿದ್ದ ಭಕ್ತಿ ಕಿಂಚಿತ್ತೂ ಕಡಿಮೆಯಾಗಲಿಲ್ಲ. ಕೊನೆಗೆ ಅಗ್ನಿಭಯವಿಲ್ಲದಿದ್ದ ಹೋಳಿಯು ಪ್ರಹ್ಲಾದನನ್ನು ಕರೆದುಕೊಂಡು ಉರಿಯುವ ಬೆಂಕಿಗೆ ಹಾರಿದಳು. ಆಗ ದುಷ್ಟಳಾದ ಹೋಳಿಯು ಬೆಂಕಿಯಲ್ಲಿ ದಗ್ಧಳಾದಳು. ಪ್ರಹ್ಲಾದನು ಏನೂ ಅಪಾಯ ಹೊಂದದೆ ಹೊರಗೆ ಬಂದನು. ಇದರಿಂದ ಇಂದೂ ಬೆಂಕಿಯ ಜ್ವಾಲೆಯೊಳಗೆ ಹಾಯ್ದು ಹಾರಿಬಂದಲ್ಲಿ ಶುದ್ಧರಾಗುತ್ತೇವೆ ಎಂದು ಜನರು ನಂಬಿ ಹಾಗೆ ಆಚರಿಸುತ್ತಾರೆ. ದೈವಸ್ಥಾನಗಳಲ್ಲೂ ಕೆಂಡ ತುಳಿಯುವುದಕ್ಕೆ ಇದೇ ಮೂಲ. ೩. ಈ ದಿನ ದಕ್ಷಿಣ ಹಿಂದುಸ್ಥಾನದಲ್ಲಿ ಕಾಮದಹನವನ್ನಾಚರಿಸುವರು. ನೋ.--ಮದನ. ತಪಸ್ಸಿನಲ್ಲಿ ನಿರತನಾಗಿದ್ದ ಶಿವನನ್ನು ಎಚ್ಚರಗೊಳಿಸಿ, ತಾರಕಾಸುರನ ಸಂಹಾರಕ್ಕಾಗಿ ಆತನಿಂದಲೇ

ದೇವಸೇನಾನಿಯಾದ ಕಾರ್ತಿಕೇಯನನ್ನು ಪಡೆಯಬೇಕಿತ್ತು. ಆಗ ಗಿರಿಜೆಯು ಶಿವಾರಾಧನೆಯಲ್ಲಿ ತತ್ಪರಳಾಗಿದ್ದಳು. ಒಂದು ಸುಂದರ ಸನ್ನಿವೇಶದಲ್ಲಿ ಕಾಮನು ಪುಷ್ಪಶರಗಳನ್ನು ಬಿಟ್ಟು, ಶಿವನ ಮನಸ್ಸನ್ನು ಚಂಚಲಗೊಳಿಸಲು ಯತ್ನಿಸಿ, ಆತನ ಫಾಲನೇತ್ರದಿಂದ ದಹಿಸಿಹೋದನು. ಇದೇ ಹೋಳಿ ಹಬ್ಬಕ್ಕೆ ಮೂಲವೆನ್ನುತ್ತಾರೆ.

ಹ್ರಸ್ವರೋಮ -- ಜನಕವಂಶದ ಈ ರಾಜನಿಗೆ ಸೀರಧ್ವಜ ಮತ್ತು ಕುಶಧ್ವಜರೆಂಬ ಇಬ್ಬರು ಮಕ್ಕಳು. ಸೀರಧ್ವಜ ಜನಕನು ಸೀತೆಯ ಸಾಕು ತಂದೆ (ರಾಮಾ.ಉತ್ತರ.,ಬಾಲ.,).

ಹ್ರಾದಿನೀ -- ೧. ಒಂದು ನದಿ. ಇದು ಸುದಾಮ ಪರ್ವತದಲ್ಲಿ ಹುಟ್ಟುತ್ತದೆ. (ರಾಮಾಅಯೋ.). ೨. ದೇವೇಂದ್ರನ ವಜ್ರಾಯುಧ. ಇದು ಮೊರೆಯುವುದರಿಂದ ಹ್ರಾದಿನೀ ಎಂದು ಹೆಸರು ಬಂತು (ಹ್ಲಾದಿನಿ -- ಎಂಬ ರೂಪವೂ ಇದೆ); ಮಿಂಚು.

ಹ್ರೀ -- ದಕ್ಷಪ್ರಜಾಪತಿಯ ಮಗಳು. ಧರ್ಮಪ್ರಜಾಪತಿಯ ಹೆಂಡತಿ. ಈಕೆ ಮಹಾಲಕ್ಷ್ಮಿಯ ಅಂಶಭೂತಳು (ಮ.ಆ.).

ಹ್ರೀಂ -- ಶಕ್ತಿಸ್ವರೂಪಿಣಿಯಾದ ಭಗವತಿಯ ಹೆಸರು. ಮಂತ್ರಗಳಲ್ಲಿ ಇದೊಂದು ಪ್ರಧಾನಾಕ್ಷರ.

ಕ್ಷ

ಕ್ಷತ್ರದೇವ -- ಇವನು ಪಾಂಚಾಲರಾಜಪುತ್ರ; ಮಹಾರಥ (ಮ.ಉ.).

ಕ್ಷುಪ--ಹರಿಭಕ್ತನಾದ ರಾಜ. ಒಮ್ಮೆ ಇವನು ದಧೀಚಿಮುನಿಯೊಡನೆ ಲೆತ್ತವಾಡುತ್ತ, 'ನೀನು ಸೋತರೆ ಹರಿಭಕ್ತನಾಗು; ನಾನು ಸೋತರೆ ಹರಭಕ್ತನಾಗುವೆ' ಎಂದು ಮಾತಾಡಿ ಆಡುತ್ತಿರಲು ಕ್ಷುಪನು ಸೋತನು. ಮಾತುಕೊಟ್ಟಂತೆ ರಾಜನು ಹರಭಕ್ತನಾಗಬೇಕಾಯಿತು. ಆದರೆ ರಾಜನು ತನ್ನ ಮಾತನ್ನು ನಡೆಸದೆ ಮುನಿಯನ್ನೇ ತನ್ನ ಅರಮನೆಯಿಂದ ಹೊರಗೆ ಹಾಕಿದನು. ಮುನಿಯು ಶಿವನನ್ನು ಕುರಿತು ತಪಸ್ಸು ಮಾಡಿ ವಜ್ರಕಾಯವನ್ನು ಪಡೆದು, ರಾಜನೊಡನೆ ಯುದ್ಧಮಾಡಿ, ಆತನನ್ನು ಸೋಲಿಸಿ ಅವನನ್ನು ಬೆನ್ನಟ್ಟಲು ಕ್ಷುಪನು ವಿಷ್ಣುವಿನ ಮೊರೆಹೊಕ್ಕನು. ಆಗ ವಿಷ್ಣುವು ಮುನಿಗೆ ಚಕ್ರಾಯುಧವನ್ನು ಬಿಡಲು ಮುನಿಯು ಅದನ್ನು ಮುರಿದು ಚೆಲ್ಲಿದನು. (ಶಿವಪು.ಮ.ಸ.,ಅನು.,)
ನೋ.--ಶ್ರೀವತ್ಸ, ಚಕ್ರ, ಸುದರ್ಶನ.

(ಉಳಿದ 'ಕ್ಷ'ಕಾರ ಪದಗಳು 'ಕ'ಕಾರದ ಅಂತ್ಯದಲ್ಲಿವೆ.)

॥ ಶ್ರೀ ಕೃಷ್ಣಾರ್ಪಣಮಸ್ತು ॥

ಆಧಾರ ಗ್ರಂಥಗಳು

೧. ರಾಮಾಯಣ (ವಾಲ್ಮೀಕಿ ಕೃತ)
೨. ಮಹಾಭಾರತ (ವ್ಯಾಸ ಕೃತ)
೩. ಜೈಮಿನಿ ಭಾರತ
೪. ಆನಂದ ಪುರಾಣ
೫. ವಾಸಿಷ್ಠ ರಾಮಾಯಣ
೬. ಪದ್ಮ ಪುರಾಣ
೭. ಲಿಂಗ ಪುರಾಣ
೮. ಶಿವ ಪುರಾಣ
೯. ಋಗ್ವೇದ
೧೦. ಮಾರ್ಕಂಡೇಯ ಪುರಾಣ
೧೧. ವಿಷ್ಣು ಪುರಾಣ
೧೨. ಹರಿವಂಶ
೧೩. ವಾಯು ಪುರಾಣ
೧೪. ದೇವೀ ಭಾಗವತ
೧೫. ಲಲಿತಾಸಹಸ್ರನಾಮ
೧೬. ಭಾಗವತ
೧೭. ಮತ್ಸ್ಯ ಪುರಾಣ
೧೮. ಭವಿಷ್ಯ ಪುರಾಣ
೧೯. ತುಲಸೀ ರಾಮಾಯಣ
೨೦. ಜೈನ ರಾಮಾಯಣ
೨೧. ಸ್ಕಾಂದ ಪುರಾಣ
೨೨. ಕುಮಾರವ್ಯಾಸ ಭಾರತ
೨೩. ಬ್ರಹ್ಮ ಪುರಾಣ
೨೪. ಅದ್ಭುತ ರಾಮಾಯಣ
೨೫. ವೆಂಕಟೇಶ ಮಹಾತ್ಮೆ
೨೬. ಆಧ್ಯಾತ್ಮ ರಾಮಾಯಣ
೨೭. ಪಂಪಭಾರತ
೨೮. ಕಾಳಿಕಾ ಪುರಾಣ
೨೯. ಗರುಡ ಪುರಾಣ
೩೦. ಮನುಸ್ಮೃತಿ

ಪುಸ್ತಕ ಪ್ರಾಧಿಕಾರದ ಪ್ರಕಟಣೆಗಳು

ಜನಪ್ರಿಯ ಪುಸ್ತಕ ಮಾಲೆ

೧.	ದಕ್ಷಿಣ ಕನ್ನಡ ಜಿಲ್ಲೆಯ ಹರಿಜನ ಮತ್ತು ಗಿರಿಜನ ಸಾಮಾಜಿಕ ಇತಿಹಾಸ	ಪಿ. ಕಮಲಾಕ್ಷ	೧೨.೦೦
೨.	ಖಾಸನೀಸರ ಕತೆಗಳು*	ರಾಘವೇಂದ್ರ ಖಾಸನೀಸ	೧೪.೦೦
೩.	ಸಂಗೀತ ಕಲಾನಿಧಿ ಟಿ. ಚೌಡಯ್ಯ*	ಎಸ್. ಕೃಷ್ಣಮೂರ್ತಿ	೧೦.೦೦
೪.	ವೈದ್ಯನ ವಿದೇಶಿ ಪ್ರವಾಸ*	ಡಾ॥ ಜಿ. ಗೋಪಾಲ್	೧೧.೦೦
೫.	ಭಾವೈಕ್ಯ ದೀಪಿಕೆ*		
೬.	ಪುರಾಣ ಭಾರತಕೋಶ	ಯಜ್ಞನಾರಾಯಣಉಡುಪ	೨೦೦.೦೦
೭.	ಕಲೆಯ ಗೊಂಚಲು	ಬಿ.ವಿ.ಕೆ. ಶಾಸ್ತ್ರಿ	೨೩.೦೦
೮.	ಬಹುರೂಪಾ ವಸುಂಧರಾ	ಗುರುಮೂರ್ತಿ ಪೆಂಡಕೂರ	೧೬.೦೦
೯.	ಪಂಜರವಳ್ಳಿಯ ಪಂಜು	ಕಡಿದಾಳ್ ಮಂಜಪ್ಪ	೧೮.೦೦
೧೦	ಬಾಗಲೋಡಿ ದೇವರಾಯರ ಆಯ್ದು ಕತೆಗಳು*	ಬಾಗಲೋಡಿ ದೇವರಾಯ	೧೦.೦೦
೧೧.	ಭಾರತೀಯ ಕಾವ್ಯಮೀಮಾಂಸೆ*	ಪ್ರೊ॥ ತೀ.ನಂ. ಶ್ರೀಕಂಠಯ್ಯ	೧೫.೦೦
೧೨.	ಶೂನ್ಯ ಸಂಪಾದನೆಯ ಪರಾಮರ್ಶೆ*	ಭೂಸನೂರಮಠ	೧೫.೦೦
೧೩.	ಪ್ರೀತಿ*	ಗೌರೀಶ ಕಾಯ್ಕಿಣಿ	೧೦.೦೦
೧೪.	ಪ್ರಹಾರ	ಪಾ.ವೆಂ. ಆಚಾರ್ಯ	೧೧.೦೦
೧೫.	ಹಕ್ಕಿನೋಟ	ದ.ಬಾ. ಕುಲಕರ್ಣಿ	೧೦.೦೦
೧೬.	ಮಲ್ಲಿಗೆದಂಡೆ (ಜಾನಪದ ಗೀತಸಂಗ್ರಹ)*	ಕಾಪಸೆ ರೇವಪ್ಪ	೧೫.೦೦
೧೭.	ಭಾರತ ಸ್ವಾತಂತ್ರ್ಯ ಚಳುವಳಿ ೧೮೫೭-೧೯೪೭*	ಎ.ಪಿ. ಶ್ರೀನಿವಾಸಮೂರ್ತಿ	೧೭.೦೦
೧೮.	ಅಪೂರ್ವ ವರ್ತಮಾನ ಕಾಲ	ಡಾ॥ ಶಂಕರಮೊಕಾಶಿ ಪುಣೇಕರ	೧೪.೦೦
೧೯.	ಋಗ್ವೇದದಲ್ಲಿ ವಿಶ್ವಸಾಮರಸ್ಯ	ಪ್ರೊ॥ ಜಿ.ಎನ್. ಚಕ್ರವರ್ತಿ	೧೮.೦೦
೨೦.	ನಕ್ಷತ್ರಗಾನ	ಡಿ.ಎಸ್. ಕರ್ಕಿ	೧೧.೦೦
೨೧.	ವಚನಾನುಭವ*	ಪ್ರೊ॥ ಆರ್. ರಾಜಪ್ಪ	೧೩.೦೦
೨೨.	ಗಾಂಧಿ ಪ್ರಭಾವ ಸೌರಭ	ಕೆ.ಎಸ್. ನಾರಾಯಣಸ್ವಾಮಿ	೧೩.೦೦
೨೩.	ಪಟ್ಟೋಲೆ ಪಳಮೆ*	ನಡಿಕೇರಿಯಂಡ ಚಿಣ್ಣಪ್ಪ	೪೮.೦೦
೨೪.	ಅನ್ವಯಿಕ ಜಾನಪದ	ಡಾ॥ ಬಿ.ಎ. ವಿವೇಕ ರೈ	೧೬.೦೦
೨೫.	ನಕ್ಷತ್ರ ದರ್ಶನ	ಆರ್.ಎಲ್. ನರಸಿಂಹಯ್ಯ	೨೪.೦೦
೨೬.	ದಲಿತ ಸಾಹಿತ್ಯ ನೆಲೆ ಮತ್ತು ಹಿನ್ನೆಲೆ*	ಡಾ॥ ಅರವಿಂದ ಮಾಲಗತ್ತಿ	೩೦.೦೦
೨೭.	ಭಾರತೀಯ ಚಿತ್ರಕಲೆ	ಡಾ॥ ಶಿವರಾಮಕಾರಂತ	೪೦.೦೦
೨೮.	ಪತಿಯಲ್ಲ ಪರಮವೈರಿ	ಎನ್ಕೆ	೪೩.೦೦

೨೯.	ನಗೆಮುಗಿಲು*	ಅ.ರಾ.ಸೇ.	೧೮.೦೦
೩೦.	ನಾಲ್ಕನೆಯ ಆಯಾಮ*	ಕುಸುಮಾಕರ ದೇವರಗಣ್ಣೂರು	೧೪.೦೦
೩೧.	ಮಹಿಳೆಯರ ಅಲಂಕಾರ	ಶಾಂತದೇವಿ ಮಾಳವಾಡ	೨೫.೦೦
೩೨.	ಜೀವನ	ಕೃಷ್ಣಕುಮಾರ	೨೫.೦೦
೩೩.	ಸಾಲಿ ರಾಮಚಂದ್ರರಾಯರ ಸಮಗ್ರ ಕಾವ್ಯ	ಸಂ॥ ಸಿದ್ದಲಿಂಗ ಪಟ್ಟಣಶೆಟ್ಟಿ	೫೦.೦೦
೩೪.	ಭಗವಂತ ಫಾಟ್	ನಡಿಕೇರಿಯಂಡ ಚಿಕ್ಕಣ್ಣ	೨೩.೦೦
೩೫.	ಕನ್ನಡ-ಕನ್ನಡಿಗ-ಕರ್ನಾಟಕ	ಸಂ॥ ಎಂ. ಚಿದಾನಂದಮೂರ್ತಿ	೪೦.೦೦
೩೬.	ವರಪ್ರದಾನ*	ಕುದಗಲ್ಲ ಹಣಮಂತರಾಯ	೨೧.೦೦
೩೭.	ದೇವುಡು ಅವರ ಆಯ್ದ ಕತೆಗಳು*	ಸಂ॥ ಲಿಂಗರಾಜು	೪೦.೦೦
೩೮.	ಹಾಸ್ಯ ಕಸ್ತೂರಿ*	ಸಂ॥ ಕೆ.ಬಿ. ಪ್ರಭುಪ್ರಸಾದ್ ಎಚ್.ಎಲ್. ಕೇಶವಮೂರ್ತಿ	೬೦.೦೦
೩೯.	ಆಯ್ದ ಕವಿತೆಗಳು*	ಡಾ॥ ಸಿದ್ಧಲಿಂಗಯ್ಯ	೨೦.೦೦
೪೦.	ಮೂರು ನಾಟಕಗಳು	ಬಿ. ಪುಟ್ಟಸ್ವಾಮಯ್ಯ	೫೫.೦೦
೪೧.	ಆಯುರ್ವೇದ ಸಾರ ಭಾಗ- ೧*	ಪ. ರಾಮಕೃಷ್ಣಯ್ಯ	೧೦೦.೦೦
೪೨.	ಆಯುರ್ವೇದ ಸಾರ ಭಾಗ- ೨*	ಪ. ರಾಮಕೃಷ್ಣಯ್ಯ	೧೦೦.೦೦
೪೩.	ಬೇಟೆಯ ನೆನಪುಗಳು	ಕೆಂದ್ರಬಾಡಿಕಜತ್ತಪ್ಪರೈ	೨೫.೦೦
೪೪.	ಈ ಶತಮಾನದ ನೂರು ಇಂಗ್ಲಿಷ್ ಕವನಗಳು	ಡಾ॥ ಬಿ.ಸಿ.ರಾಮಚಂದ್ರಶರ್ಮ	೪೫.೦೦
೪೫.	ಶಂ.ಬಾ. ಜೋಶಿಯವರ ಆಯ್ದ ಲೇಖನಗಳು	ಸಂ. ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ	೫೫.೦೦
೪೬.	ರಂಗ-ಅಂತರಂಗ (ಕೊಟ್ಟೂರಪ್ಪನವರ ಜೀವನ ವೃತ್ತಾಂತ)	ಡಾ॥ ಕೆ.ಬಿ. ಪ್ರಭುಪ್ರಸಾದ್	೨೫.೦೦
೪೭.	ಸಾಹಿತ್ಯ ಮತ್ತು ರಾಜಕಾರಣ	ಪ್ರೊ॥ಬರಗೂರುರಾಮಚಂದ್ರಪ್ಪ	೫೦.೦೦
೪೮.	ನಂದೇ ನಾನೋದಿದೆ	ಜೋಳದ ರಾಶಿ ದೊಡ್ಡಣ್ಣಗೌಡ	೧೦೦.೦೦
೪೯.	ಹೆತ್ತೊಡಲು	ಸಂ. ಕರೀಗೌಡ ಬೀಚನಹಳ್ಳಿ	೫೦.೦೦
೫೦.	ಬಾಳಸಂಜೆಯ ಹಿನ್ನೋಟ	ಸಿಂಪಿ ಲಿಂಗಣ್ಣ	೮೦.೦೦
೫೧.	ಹೊಸತು ಹೊಸತು	ಡಾ॥ ಎಂ. ಚಿದಾನಂದಮೂರ್ತಿ	೧೦೦.೦೦
೫೨.	ಹಸಿಮಾಂಸ ಮತ್ತು ಹದ್ದುಗಳು	ಪ್ರೊ॥ ಗೀತಾ ನಾಗಭೂಷಣ	೨೦.೦೦
೫೩.	ಕನ್ನಡ ಸಿನಿಮಾ ಇತಿಹಾಸ ಪುಟಗಳಲ್ಲಿ	ಗಂಗಾಧರ ಮೊದಲಿಯಾರ್	೨೭೫.೦೦
೫೪.	ಬಿತ್ತರ	ಡಾ॥ ಕಮಲಾ ಹಂಪನಾ	
೫೫.	ಗಾಂಧಿ ಎಂಬುವ ಹೆಸರು	ಸಂ. ಡಾ॥ ಚಂದ್ರಶೇಖರ ಪಾಟೀಲ ಶಶಿಕಲಾ ವೀರಯ್ಯಸ್ವಾಮಿ	೭೫.೦೦
೫೬.	ಭುಜಂಗಯ್ಯನ ದಶಾವತಾರಗಳು	ಶ್ರೀ ಕೃಷ್ಣ ಆಲನಹಳ್ಳಿ	೮೫.೦೦
೫೭.	ಕುರುಮಯ್ಯ ಮತ್ತು ಅಂಕುಶ	ದೊಡ್ಡಿಜಂಬಣ್ಣ ಅಮರಚಿಂತ	೨೮.೦೦

೫೮.	ಕರ್ನಾಟ ಭಾರತ ಕಥಾಮಂಜರಿ (ಕುಮಾರವ್ಯಾಸ ಕಾವ್ಯ)	ಸಂ. ಮಾಸ್ತಿವೆಂಕಟೇಶ ಅಯ್ಯಂಗಾರ್ ಮತ್ತು ಕುವೆಂಪು	೯೦.೦೦
೫೯.	ಸಟೀಕಿನ ಶಬ್ದಮಂಜರಿ ಕೋಶ	ಗಂಗಾಧರ ಮಡಿವಾಳೇಶ್ವರ ತುರುಮರಿ	೧೦೦.೦೦
೬೦.	ಸಿರಿಗನ್ನಡ ಗ್ರಂಥಕರ್ತರ ಚರಿತ್ರಕೋಶ	ವೆಂಗಟೇಶ ಸಾಂಗಲಿ	೭೦.೦೦
೬೧.	ಶ್ರೀವತ್ಸ ನಿಘಂಟು	ಪ್ರೊ|| ಟಿ.ವಿ. ವೆಂಕಟಾಚಲಶಾಸ್ತ್ರಿ	೭೦.೦೦
೬೨.	ಪ್ರೊ|| ಬಿ. ಕೃಷ್ಣಪ್ಪನವರ ಚಿಂತನಗಳು ಮತ್ತು ಬರಹಗಳು	ಪ್ರೊ|| ಬಿ. ಕೃಷ್ಣಪ್ಪ	೫೦.೦೦
೬೩.	ಬೆಳ್ದಿಂಗಪ್ಪನ ಪೂಜೆ	ಅಗ್ರಹಾರ ಕೃಷ್ಣಮೂರ್ತಿ	೧೮.೦೦
೬೪.	ಮಹಾಯಾನ	ವೀ. ಚಿಕವೀರಯ್ಯ	೬೫.೦೦
೬೫.	ಕಳೆದ ಆ ದಿನಗಳು	ಎನ್. ಮಲ್ಲಪ್ಪ	೬೦.೦೦
೬೬.	ಅರುಣೋದಯ ನವೋದಯ ನಂತರ	ಡಾ|| ಹು.ಕಾ. ಜಯದೇವ್	೫೦.೦೦
೬೭.	ಕರ್ನಾಟಕ ರಂಗಭೂಮಿ	ಡಾ|| ಎಚ್.ಕೆ. ರಂಗನಾಥ್	೧೦೦.೦೦
೬೮.	ಹಳಗನ್ನಡ ಕವಿಕಾವ್ಯ ಮಹೋನ್ನತಿ	ಡಾ|| ಶ್ರೀನಿವಾಸ ಹಾವನೂರು	೫೫.೦೦
೬೯.	ಕನ್ನಡ ಸಾಹಿತ್ಯ ಸಮೀಕ್ಷೆ*	ಡಾ|| ಜಿ.ಎಸ್. ಶಿವರುದ್ರಪ್ಪ	೪೫.೦೦
೭೦.	ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ಸಮೀಕ್ಷೆ	ಡಾ|| ಕೋ. ಚನ್ನಬಸಪ್ಪ	೧೦೦.೦೦
೭೧.	ರಾಷ್ಟ್ರಕವಿ ಕುವೆಂಪು	ಡಾ|| ದೇ. ಜವರೇಗೌಡ	೧೦೦.೦೦
೭೨.	ಛಲದಂಕಮಲ್ಲ ಹಳ್ಳಿಕೇರಿ ಗುದ್ಲೆಪ್ಪನವರು	ಡಾ|| ಚಂದ್ರಮೌಳಿ ಎಸ್. ನಾಯ್ಕರ್	೩೫.೦೦
೭೩.	ಸತ್ಯಾನ್ವೇಷಕ ಡಾ|| ಶಂ.ಬಾ. ಜೋಶಿ	ಪ್ರೊ|| ಜ್ಯೋತಿ ಹೊಸೂರ	೪೫.೦೦
೭೪.	ಗ್ರಾಮಾಂತರ	ಪ್ರೊ|| ಎಚ್.ವಿ. ನಾಗೇಶ್	೮೦.೦೦
೭೫.	ಬುದ್ಧದೇವ	ಜಿ. ವೆಂಕಟೇಶ	೩೫.೦೦
೭೬.	ಗಿಲ್ಗಮೆಶ್ ಮಹಾಕಾವ್ಯ	ಡಾ|| ಬಸವರಾಜ ನಾಯ್ಕರ್	೨೬.೦೦
೭೭.	ಕರ್ನಾಟಕ ಸಂಗೀತ ಮತ್ತು ಮೈಸೂರು ಒಡೆಯರು	ಪ್ರೊ|| ವಿ. ರಾಮರತ್ನಂ	೭೦.೦೦
೭೮.	ಕಲೆ ಎಂದರೇನು ?	ಡಾ|| ಸಿ.ಪಿ.ಕೆ.	೫೦.೦೦
೭೯.	ಮರುಭೂಮಿ ಚಿಗುರಿತು	ಮತ್ತಿಹಳ್ಳಿ ನಾಗರಾಜರಾವ್	೬೦.೦೦
೮೦.	ಸಬರದ ಆಯ್ದ ಕವಿತೆಗಳು	ಡಾ|| ಬಸವರಾಜ ಸಬರದ	೬೫.೦೦
೮೧.	ಕಾವ್ಯಾನಂದರ ಆಯ್ದ ಕವಿತೆಗಳು	ಸಂ.ಡಾ|| ಶೈಲಜಾ ಉಡಚಣ	೬೦.೦೦
೮೨.	ದೊಡ್ಡರಂಗೇಗೌಡರ ಆಯ್ದ ಕವಿತೆಗಳು	ಸಂ.ಡಾ|| ನಲ್ಲೂರು ಪ್ರಸಾದ್	೬೦.೦೦
೮೩.	ಹೊಸಗನ್ನಡ ಅರುಣೋದಯ	ಪ್ರೊ|| ಶ್ರೀನಿವಾಸ ಹಾವನೂರ	೨೦೦.೦೦
೮೪.	ಶಿವಪ್ರಕಾಶರ ಆಯ್ದಕವಿತೆಗಳು*	ಡಾ|| ಎಚ್.ಎಸ್. ಶಿವಪ್ರಕಾಶ್	೬೦.೦೦
೮೫.	ಪ್ರೊ|| ಕೆ.ಎಸ್. ನಿಸಾರ್ ಅಹ್ಮದ್ ಅವರ ಪ್ರಾತಿನಿಧಿಕ ಕವನಗಳು*	ಪ್ರೊ||ಕೆ.ಎಸ್.ನಿಸಾರ್‌ಅಹ್ಮದ್	೧೦೦.೦೦

೮೬.	ಅಲೆಮಾರಿಯ ಹೆಜ್ಜೆಗಳು (ಪ್ರವಾಸ ಕಥೆ)	ಎಂ.ವೆಂಗಟಸ್ವಾಮಿ	೫೦.೦೦
೮೭.	ಮಹಾಭಾರತ್*	ಪ್ರೊ॥ ಎ.ಆರ್. ಕೃಷ್ಣಶಾಸ್ತ್ರಿ	೭೦.೦೦
೮೮.	ಹರಪನಹಳ್ಳಿ ಭೀಮವ್ವನವರ ಹಾಡುಗಳು	ಸರಿತಾಸುಕುಮಾಕರ ದೇಸಾಯಿ	೭೦.೦೦
೮೯.	ಅವಲೋಕನ ಸಂಶೋಧನ	ಪ್ರೊ॥ ಡಿ.ಕೆ. ಭೀಮಸೇನರಾವ್	೮೦.೦೦
೯೦.	ಶಿವೇಶ್ವರ ದೊಡ್ಡಮನಿ	ಶಾಮಸುಂದರ ಬಿದರಕುಂದಿ	೬೦.೦೦
೯೧.	ಸುಧಾಕರ ಅವರ ಆಯ್ದಕತೆಗಳು	ಸುಧಾಕರ	೬೦.೦೦
೯೨.	ಡಾ॥ ಎ. ವೆಂಕಟಸುಬ್ಬಯ್ಯನವರ ಸಂಶೋಧನ ಲೇಖನಗಳು*	ಸಂ. ಡಾ॥ ವಿ. ವೆಂಕಟಾಚಲಶಾಸ್ತ್ರಿ	೧೨೦.೦೦
೯೩.	ಅನುಭಾವ; ಸಾಂಸ್ಕೃತಿಕ ಸಮಸ್ಯೆಗಳು ಮತ್ತು ಹುಡುಕಾಟ	ಡಾ॥ ಬಸವರಾಜ ಕಲ್ಗುಡಿ	೭೦.೦೦
೯೪.	ಸಮಾಜ ಕಾರ್ಯ	ಡಾ॥ ಎಚ್.ಎಂ. ಮರುಳಸಿದ್ದಯ್ಯ	೪೦.೦೦
೯೫.	ಚಿತ್ತಚಿತ್ತಾರಗಳು	ಡಾ॥ ಶ್ರೀನಿವಾಸಕುಲಕರ್ಣಿ	೪೫.೦೦
೯೬.	ತಪನಿಂದ ತಾವರೆ (ಬಿ.ಎಸ್. ಸನದಿ ಅವರ ಆಯ್ದ ಕವನ ಸಂಕಲನ)	ಸಂ. ಡಾ॥ ಬಸವರಾಜ ಸಾದರ	೧೦೦.೦೦
೯೭.	ಕರ್ನಾಟಕ ಸಂಗೀತ ವಾಹಿನಿ	ಡಾ॥ ರಾ. ಸತ್ಯನಾರಾಯಣ	೨೦೦.೦೦
೯೮.	ಸ್ವಾತಂತ್ರ್ಯ ಸಂಗ್ರಾಮದ ನೋವು ನಲಿವುಗಳು	ನರಸಿಂಹ ದಾಬಡೆ	೪೦.೦೦
೯೯.	ಟಾಲ್‌ಸ್ಟಾಯ್ ಅವರ ಕತೆಗಳು	ಎಲ್. ಗುಂಡಪ್ಪ	೧೦೦.೦೦
೧೦೦.	ಕೊಡಗಿನ ಗೌರಮ್ಮನ ಕಥೆಗಳು	ಸಂ: ಪ್ರೊ. ಕಾಳೇಗೌಡ ನಾಗವಾರ	೧೦೦.೦೦

ಜಾಗತಿಕ ಚಿಂತಕರು ಮಾಲೆ

೧.	ಶ್ರೀ ಬಸವೇಶ್ವರು	ಡಾ॥ ದೇ. ಜವರೇಗೌಡ	೨೫.೦೦
೨.	ಕೌಟಿಲ್ಯ	ಪ್ರೊ॥ ಜಿ.ಎಸ್. ಸದಾನಂದ	೨೫.೦೦
೩.	ಲೋಕಾಯತವಾದ	ಡಾ॥ ಎಚ್.ಎನ್. ಮಂಜುರಾಜ್	೨೫.೦೦
೪.	ಇಮ್ಯಾನ್ಯುಯಲ್ ಕಾಂಟ್	ಡಾ॥ ವಿ.ಎನ್. ಭಟ್	೨೦.೦೦
೫.	ಶ್ರೀ ಅರವಿಂದರು	ಡಾ॥ ಗುರುಲಿಂಗ ಕಾಪಸೆ	೨೫.೦೦
೬.	ನಾರಾಯಣಗುರು	ಕೆ.ಕೆ. ನಾಯರ್ ಮೋಹನ್ ಕೋಟ್ಯಾನ್	೨೫.೦೦
೭.	ಜಯಪ್ರಕಾಶ ನಾರಾಯಣ	ಜ.ಹೊ. ನಾರಾಯಣಸ್ವಾಮಿ	೨೫.೦೦
೮.	ವೇದಕಾಲೀನ ಚಿಂತಕರು	ಡಾ॥ ಮೀರ ಚಕ್ರವರ್ತಿ	೨೦.೦೦
೯.	ಎಂ.ಎನ್. ರಾಯ್	ಪ್ರೊ॥ ವಿಘ್ನೇಶ್ ಎನ್. ಭಟ್	೨೫.೦೦
೧೦.	ಗುರುನಾನಕ್	ಡಾ॥ ಡಿ.ಬಿ. ರಾಮಚಂದ್ರಾಚಾರ್	೨೫.೦೦
೧೧.	ಮೆಕಿಯಾವೆಲ್ಲಿ	ಪ್ರೊ॥ ಎಚ್.ಆರ್. ದಾಸೇಗೌಡ	೨೫.೦೦
೧೨.	ಸ್ವಾಮಿ ವಿವೇಕಾನಂದ	ಜ.ಹೊ. ನಾರಾಯಣಸ್ವಾಮಿ	೨೦.೦೦

೧೩.	ಆಚಾರ್ಯತ್ರಯರು	ಡಾ|| ಕೆಳದಿ ವೆಂಕಟಾಜೋಯಿಸ್	೨೫.೦೦
೧೪.	ಏಸುಕ್ರಿಸ್ತ	ಡಾ|| ಬಿ.ಎಸ್. ತಲ್ವಾಡಿ	೨೫.೦೦
೧೫.	ವೇಮನ	ಪ್ರೊ|| ಜಿ.ಎಸ್. ಮೋಹನ್	
೧೬.	ಚಾರ್ಲ್ಸ್ ಡಾರ್ವಿನ್	ಕೈವಾರ ಗೋಪಿನಾಥ್	೨೫.೦೦

ಪಂಪ ಪ್ರಶಸ್ತಿ ಮಾಲೆ

೧.	ಶ್ರೀ ರಾಮಾಯಣ ದರ್ಶನಂ	ಡಾ|| ಕುವೆಂಪು	೪೦.೦೦
೨.	ಸುವರ್ಣ ಪುತ್ಥಳಿ	ಪ್ರೊ|| ಗೋಪಾಲಕೃಷ್ಣ ಅಡಿಗ೧೫.೦೦	
೩.	ಶ್ರೀ ಹರಿಚರಿತೆ	ಡಾ|| ಪುತಿನ	೧೫.೦೦
೪.	ಪಂಪನ ಸಮಸ್ತ ಭಾರತ ಕಥಾಮೃತ*	ಡಾ|| ಎಲ್. ಬಸವರಾಜು	೧೫.೦೦

ಆಕರ ಗ್ರಂಥಮಾಲೆ

೧.	ಕೋಟಿ ಚೆನ್ನಯ ಪಾರ್ದನ ಸಂಪುಟ	ಸಂ|| ದಾಮೋದರ ಕಲ್ಮಾಡಿ	೨೦೦.೦೦
೨.	ದಲಿತ ಮಾರ್ಗ	ಸಂ|| ಅರವಿಂದ ಮಾಲಗತ್ತಿ	೧೫೦.೦೦
೩.	ಲಿಪಿಯ ಹುಟ್ಟು ಮತ್ತು ಬೆಳವಣಿಗೆ	ಡಾ|| ದೇವರ ಕೊಂಡಾರೆಡ್ಡಿ	೧೫೦.೦೦
೪.	ಡಿ.ಆರ್. ನಾಗರಾಜ್ ಸಂಸ್ಕೃತಿ ಕಥನ	ಸಂ|| ಅಗ್ರಹಾರ ಕೃಷ್ಣಮೂರ್ತಿ	೨೦೦.೦೦
೫.	ಸಂವಹನ	ಪ್ರೊ|| ಸುಜನಾ	೧೫೦.೦೦
೬.	ಪ್ರಾಚೀನ ಕನ್ನಡ ಗ್ರಂಥ ಸಂಪಾದನೆ-ಇತಿಹಾಸ	ಬಿ.ಎಸ್. ಸಣ್ಣಯ್ಯ	೨೦೦.೦೦
೭.	ಪು.ತಿ.ನ. ಸಮಗ್ರ ಗದ್ಯ ಸಂಪುಟ	ಸಂ|| ಜಿ.ಎಸ್. ಶಿವರುದ್ರಪ್ಪ ಎಚ್.ಎಸ್. ವೆಂಕಟೇಶಮೂರ್ತಿ	೪೦೦.೦೦
೮.	ಅನ್ಯ	ಪ್ರೊ. ಹಂ. ಪ. ನಾಗರಾಜಯ್ಯ	೧೦೦.೦೦
೯.	ಶಾಸ್ತ್ರ ಭಾರತೀ	ಪ್ರೊ. ಲಕ್ಷ್ಮೀನಾರಾಯಣ ಭಟ್ಟ	೧೦೦.೦೦
೧೦.	ಕನ್ನಡ ನಿಘಂಟು ಪರಿವಾರ	ಡಾ|| ಜಿ. ವೆಂಕಟ ಸುಬ್ಬಯ್ಯ	೧೦೦.೦೦

ಹೊರನಾಡ ಕನ್ನಡ ಸಂಸ್ಕೃತಿ ಮಾಲೆ

೧.	ಮಿಥಿಲೆಯಲ್ಲಿ ಕರ್ನಾಟರು	ಮೂಲ : ಸಿ.ಪಿ.ಎನ್. ಸಿನ್ಹಾ ಅನು : ಡಾ. ಸದಾನಂದ ಕನವಳ್ಳಿ	೧೫೦.೦೦
೨.	ವಿಠ್ಠಲ ಸಂಪ್ರದಾಯ : ಒಂದು ಮಹಾ ಸಮನ್ವಯ	ಮೂಲ : ಎಸ್.ಕೆ. ಢೇರೆ ಅನು : ಚಂದ್ರಕಾಂತ ಪೋಕಳೆ	೨೦೦.೦೦

ಪುರಾಣ ಭಾರತ ಕೋಶ

ಐರೋಡಿ ಯಜ್ಞನಾರಾಯಣ ಉಡುಪ ಅವರು ಮಹಾಭಾರತದ ಕಥನ ಪ್ರಪಂಚದಲ್ಲಿ ಬರುವ ವ್ಯಕ್ತಿಗಳು, ಪ್ರಾಣಿ, ಪಕ್ಷಿಗಳು, ನದಿಗಳು ಇತ್ಯಾದಿ ಜೀವ ವಿಶೇಷಗಳಿಗೆ, ಘಟನೆಗಳಿಗೆ ಸಂಬಂಧಿಸಿದಂತೆ ವಿವರಣಾತ್ಮಕ ಪರಿಚಯ ನೀಡಿರುತ್ತಾರೆ. ಇದು ಮಹಾಭಾರತಕ್ಕೆ ಸಂಬಂಧಿಸಿದ ವಿಷಯ ವಿಶ್ವಕೋಶ. ಈ ಮಹಾ ಕಥಾ ಪ್ರಪಂಚದ ಸೂಕ್ಷ್ಮಾತಿಸೂಕ್ಷ್ಮ ವಿವರಗಳು ತಿಳಿಯದವರಿಗೆ ಇದೊಂದು ಅಪರೂಪದ ಆಕರ ಗ್ರಂಥ. ಭರತ ಖಂಡದ ಜನಮಾನಸದಲ್ಲಿ ಪರಂಪರೆಯ ಉಸಿರಿನಂತೆ ಮಹಾಭಾರತ ಜೀವಂತವಾಗಿದೆ. ಭೌಗೋಳಿಕ ವ್ಯಾಪ್ತಿಯಲ್ಲಿ ಮಹಾಭಾರತದ ಘಟನೆಗಳು ಇಂದಿಗೂ ಸಾಕ್ಷಿ ರೂಪದೊಳಗೆ ಐತಿಹ್ಯ, ನಂಬಿಕೆಗಳ ಮಾದರಿಯಲ್ಲಿ ಸಂಚಲನದಲ್ಲಿವೆ. ಆದರೆ, ಆಧುನಿಕತೆ ಬೆಳೆದಂತೆ ಕಾಲ ಕಳೆದಂತೆ ಮಹಾಭಾರತದ ಕತೆ ಮುಂದಿನ ಜನಾಂಗದಲ್ಲಿ ಪರಂಪರೆಯ ಉಸಿರಾಗಿ ಉಳಿಯುವುದರ ಬಗ್ಗೆ ಬೆಳೆಯುವುದರ ಬಗ್ಗೆ ನಂಬಿಕೆಯೇ ಕಳೆದುಹೋಗುತ್ತಿದೆ. ಕಾರಣ ಈ ಹೊತ್ತು ಕತೆ ಹೇಳುವ, ಕತೆ ಕೇಳುವ ಪರಂಪರೆ ನಮ್ಮ ನಡುವೆ ಉಳಿದಿಲ್ಲ. ಎಲ್ಲದಕ್ಕೂ ಅಕ್ಷರ ಮಾಧ್ಯಮವನ್ನೇ ಅವಲಂಬಿಸಬೇಕಾಗಿದೆ. ಇದರ ಮಧ್ಯೆ ದೃಶ್ಯ ಮಾಧ್ಯಮಗಳು ಪ್ರಬಲವಾಗುತ್ತಿವೆ. ಇಂಥ ಸನ್ನಿವೇಶಗಳಲ್ಲಿ ಮಹಾಭಾರತದ ಸೂಕ್ಷ್ಮಗಳು ಕಳೆದುಹೋಗದಂತಿರಬೇಕಾದರೆ, ಪುರಾಣ ಭಾರತ ಕೋಶದಂಥ ಕೃತಿಗಳು ಹೆಚ್ಚು ಸಹಾಯಕವಾಗುತ್ತವೆ.

ಪ್ರೊ॥ಎಸ್.ಜಿ.ಸಿದ್ಧರಾಮಯ್ಯ
ಅಧ್ಯಕ್ಷರು